## ಸೆರೆಮನೆಯಲ್ಲಿ ಹೇಗಿರಬೇಕು?

RFGISTERED No B 1589.

ವಾರ್ಷಿಕ ವರ್ಗಣಿ ರೂ. ೪-೦-೦
ಆರು ತಿಂಗಳಿಗೆ ,, ೨-೦-೦
ಬಿಡಿ ಸಂಚಿಕೆ ೦-೧-೨
ಮಾದರಿ ಸಂಚಿಕೆ ಬೇಕಾದವರು ೦-೧-೬ ತಿಕೀಟ ಕಳಿಸಬೇಕು

ಜಾಹೀರಾತಿನ ದರ-

'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂಪಾಯಿ ಕಾಯಮ ಜಾಹೀರಾತಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

# ಶ್ರೀ. ಕನ್ನಡ ನವಜೀವನ

ಮಹಾತ್ಮಾಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾ ಂತರಿಸುವದೇ ಈ ವಾರ ಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟ ಪೌಷ್ಯ ಶುದ್ಧ ೭ ಶಕೆ ೧೮೫೧. ಗುರುವಾರ ತಾ. ೯ ನೇ ಜಾನೇವಾರಿ ೧೯೩೦ ಇಸ್ವಿ. | ಸಂಚಿಕೆ ೨

### ಸವಿನಯ ಸೂಚನೆ.

೧ ಕನ್ನಡ ನವಜೀವನವನ್ನು ವ್ಹಿ. ಪಿ ಯಿಂದ ಕಳಿಸುವ ಪದ್ಧತಿಯು ನಮ್ಮಲ್ಲಿಲ್ಲ. ಹೊಸದಾಗಿ ವರ್ಗಣಿದಾರರಾಗಲಿಚ್ಛಿಸುವವರೆಲ್ಲ ಚಂದಾ ಹಣವನ್ನು ಮನಿಯಾರ್ಡರದಿಂದ ಮುಂಗಡ ಸಲ್ಲಿಸತಕ್ಕದ್ದು. ಹೆಸರು ವಿಳಾಸವನ್ನು ಸ್ಪಷ್ಟವಾಗಿ ಸುವಾಚ್ಯ ಅಕ್ಷರಗಳಿಂದ ಮನಿಯಾರ್ಡರ ಕೂಪನದಲ್ಲಿಯೇ ಬರೆಯತಕ್ಕದ್ದು. ಮನಿಯಾರ್ಡರ ನಮ್ಮ ಹಸ್ತಗತವಾದ ಮೇಲೆ ಅದರ ಮುಂದಿನ ವಾರದಿಂದ ಸಂಚಿಕೆಗಳು ಕಳಿಸಲ್ಪಡುವವು. ಆ ಸಂಚಿಕೆಯಿಂದಲೇ ಅದರ ವರ್ಷ ಪ್ರಾರಂಭವಾಯಿತೆಂದು ತಿಳಿಯತಕ್ಕದ್ದು

೨. ನಮ್ಮಲ್ಲಿ ಹಿಂದಿನ ಸಂಚಿಕೆಗಳು ಶಿಲ್ಕು ಇರುವದಿಲ್ಲ. ಅವೆಲ್ಲ ಆಗಿಂದಾಗ್ಗೆ ಖರ್ಚಾಗಿ ತೀರಿವೆ. ಆದ್ದರಿಂದ ಹಿಂದಣ ಸಂಚಿಕೆಗಳನ್ನು ಯಾರಿಗೂ ಕಳಿಸುವದು ಶಕ್ಯವಿಲ್ಲ.

೩. ಮಾದರೀ ಸಂಚಿಕೆ ಬೇಕಾದವರೆಲ್ಲರು ಆರು ಬಿಲ್ಲೆಯ ತೀಕೀಟನ್ನು ಕಳಿಸತಕ್ಕದ್ದು; ಪುಕ್ಕಟೆಯಾಗಿ ಕೊಡುವದು ಶಕ್ಯವಿಲ್ಲ.

೪. "ನಮ್ಮ ವಾಚನಾಲಯವು ಬಾಲ್ಯಾವಸ್ಥೆಯಲ್ಲಿದೆ; ನಮ್ಮ ಸಂಸ್ಥೆಯು ಬಡತನ ಸ್ಥಿತಿಯಲ್ಲಿದೆ; ಆದ್ದರಿಂದ ಪುಕ್ಕಟೆಯಾಗಲೀ ಅರ್ಧ ಬೆಲೆಗಾಗಲೀ" ನಮಗೆ ಸಂಚಿಕೆಗಳನ್ನು ಕಳುಹಿಸಿರೆಂದು ನಮಗೆ ನೂರಾರು ಜನರು ಈಗಾಗಲೇ ಕೇಳಿಕೊಂಡಿದ್ದಾರೆ ಕನ್ನಡ ನವಜೀವನವೇ ಈಗ ಹುಟ್ಟಿದೆ. ಇನ್ನೂ ಪೂರಾ ಕಣ್ಣು ಕೂಡಾ ತೆರೆದಿಲ್ಲ. ಇಷ್ಟರಲ್ಲಿಯೇ ಧರ್ಮಾರ್ಥವಾಗಿ ನೂರಾರು ಸಂಚಿಕೆಗಳನ್ನು ಕಳಿಸಿದರೆ ತೀರಿತು; ಅದು ಜೀವ ಹಿಡಿದು ನಿಲ್ಲಲಾರದು. ಆದ್ದರಿಂದ ಈ ತರದ ಸಂಸ್ಥೆಯವರೆಲ್ಲ ನಮ್ಮನ್ನು ಕ್ಷಮಿಸಬೇಕೆಂದು ವಿನಂತಿಯದೆ

ವ್ಯವಸ್ಥಾಪಕ
ಕನ್ನಡ ನವಜೀವನ ಬಾಗಲಕೋಟ.

---

## ಟಿಪ್ಪಣಿಗಳು

### ಪಿಕೆಟಿಂಗದ ಹಕ್ಕು

ಮುಂಬೈ ಜನರು ಸರಾಯಿ ಅಂಗಡಿಗಳ ಪಿಕೆಟಿಂಗ ನಿಲ್ಲಿಸಿದ್ದರಿಂದ ಉಳಿದ ಎಲ್ಲ ಸ್ಥಳಗಳ ಜನರು ಹಾಗೇ ಮಾಡುವರೆಂದು ಸರಕಾರದವರು ತಿಳುಕೊಂಡಿರಬಹುದು. ಆದರೆ ಪಿಕೆಟಿಂಗವು ನಿರಪರಾಧವಾದ ಕಾರಣದ ಹೊರತು ನಿಲ್ಲಿಸಬಾರದಂಥ ಹಕ್ಕು ಇರುವದೆಂದು ಪುಣೆಯ ಜನರು ತೋರಿಸಿ ಕೊಟ್ಟಿದ್ದಾರೆ. ಪಿಕೆಟಿಂಗವನ್ನು ನಿಷೇಧಿಸಲಿಕ್ಕೆ ಆಜ್ಞೆಯಾದ ಕೂಡಲೆ 'ನಾವು ಆ ಆಜ್ಞೆಯನ್ನು ಮುರಿಯಬೇಕೆಂಬದರ ನಿಶ್ಚಯ ಮಾಡಿದೆವು. ಮತ್ತು ಈ ದಿವಸವೇ ವಿಶಿಷ್ಟ ಸ್ಥಳದಲ್ಲಿ, ವಿಶಿಷ್ಟ ವೇಳೆಗೆ ನಾವು ಈ ಆಜ್ಞಾಭಂಗ ಮಾಡಲಿಕ್ಕೆ ಪ್ರಯತ್ನಿಸುವೆವೆಂದು ಈ ಹೊತ್ತು ಮುಂಜಾನೆ ಜಿಲ್ಹಾಧಿಕಾರಿಗಳಿಗೆ ಜಾಹೀರ ನೋಟೀಸು ಕಳಿಸಿದೆವು. ನಾನು, ನನ್ನ ಮಗ ಮತ್ತು ನನ್ನ ಮಿತ್ರರಾದ ಫೋಪಟಕರ, ಗೋಖಲೆ, ಪರಾಂಜಪೆಯವರಲ್ಲದೆ ಸುಮಾರು ಬೇರೇ ೧೬ ಜನರು ಕೂಡಿ ಮೊದಲನೆಯ ಪಥಕವಾಗುವೆವು. ಹಿಂದುಳಿದವರೂ ನಮ್ಮನ್ನು ಹಿಂಬಾಲಿಸುವರೆಂದು ನನಗೆ ಪೂರ್ಣ ನಂಬಿಗೆ ಅದೆ. ಪುಣೆಯ ಜನರು ಈ ವಿಷಯದಲ್ಲಿ ತಮ್ಮ ಕೆಲಸವನ್ನು ಎಷ್ಟರ ಮಟ್ಟಿಗೆ ಪೂರ್ಣ ಮಾಡುವರೆಂಬದನ್ನು ನೋಡೋಣ" ಎಂದು ಶ್ರೀ|| ಕೇಳಕರರು ತಿಳಿಸುತ್ತಾರೆ.

ಈ ಜನರು ಪಿಕೆಟಿಂಗ ಮಾಡಲಿಕ್ಕೆ ಹೋದರು, ಹಿಡಿಯಲ್ಪಟ್ಟರು; ಇವರ ಹೆಸರುಗಳನ್ನು ಬರೆಕೊಂಡು ಬಿಟ್ಟು ಬಿಟ್ಟರು. ಅಂದಿನಿಂದ ನೇಮದಿಂದ ಪಿಕೆಟಿಂಗ ಮಾಡಲಿಕ್ಕೆ ಹೋಗುತ್ತಿದ್ದ ಉಳಿದ ಪಥಕಗಳ ಹಾಡಾದರೂ ಇದೇ. ಮಹಾರಾಷ್ಟ್ರವು ದುಃಖ ಸಹಿಸುವದರಲ್ಲಿ ನಿಜವಾಗಿ ಎಂದೂ ಹಿಂದುಳಿಯಲಾರದು. ಹಿಂದುಸ್ತಾನದಲ್ಲಿ ಅತಿ ಬಲಿಷ್ಠ ಕೆಲಸ ಮಾಡುವವರು ಮಹಾರಾಷ್ಟ್ರದಲ್ಲಿರುವರು. ಪ್ರತಿಯೊಂದು ಪ್ರಾಂತದಲ್ಲಿ ಮೇಲಿನ ವರ್ಗದ ಮುಂದಾಳುಗಳು ಅತ್ಯಂತ ಕಷ್ಟ ಸಹಿಸಿರುವದು ಇದು ಗೌರವದ ಸಂಗತಿಯು. ಆದರೆ ಶ್ರೀ|| ಕೇಳಕರ ಮತ್ತು ಅವರ ಸಂಗಡದ ಜನರಿಗೆ ಬಂದೀವಾಸದಲ್ಲಿರುವ ಸುದೈವವಿರದಿದ್ದರೂ ಅಜವಿಹಾರದ ಜನರಿಗೆ ಆ ಸುದೈವವು ಒದಗಿರುವದು. ಪಿಕೆಟಿಂಗವನ್ನು ನಿಷೇಧಿಸುವ ನೋಟೀಸುಗಳು ಹೊರಟ ಕೂಡಲೆ ಪಿಕೆಟಿಂಗವು ತಮ್ಮ ಪವಿತ್ರವಾದ ಧರ್ಮವೆಂ

ದು ತ್ರಿಳಿಕೊಳ್ಳುವ ಕೆಲಸ ಮಾಡುವ ಜನರು ಆ ಆಹ್ವಾನವನ್ನು ಸ್ವೀಕರಿಸಿದರು. “ಸ್ವರಾಜ್ಯ ಸೇನೆಯ ಸ್ವಯಂಸೇವಕರನ್ನು ಎಲ್ಲ ಸರಾಯಿ ಅಂಗಡಿಗಳ ಮೇಲೆ ನೇಮಿಸಿದರು. ಸರಕಾರದವರು ಸಹ ತಮ್ಮ ಪೋಲೀಸರಿಗೂ ಮತ್ತು ಕಾಮರೆಯ ಸ್ವಾತರಿಗೂ ಪಿಕೆಟಿಂಗ ಮಾಡುವ ಸ್ವಯಂ ಸೇವಕರನ್ನು ಹಿಡಿಯಬೇಕೆಂದು ಆಜ್ಞಾಪಿಸಿ ಎಲ್ಲ ಸರಾಯಿ ಅಂಗಡಿಗಳ ಮೇಲೆ ಅವರನ್ನು ನೇಮಿಸಿದರು. ಸ್ವಯಂಸೇವಕರ ಒಂದು ಪಥಕವು ಹಿಡಿಯಲ್ಪಟ್ಟಕೂಡಲೆ ಕಾದಿಡಲ್ಪಟ್ಟ ಸ್ವಯಂಸೇವಕರು ಅವರ ಸ್ಥಳಗಳಲ್ಲಿ ಬಂದರು. ಪೋಲೀಸರು ೧೭ ಜನ ಸ್ವಯಂ ಸೇವಕರನ್ನು ಮಾತ್ರ ಹಿಡಿದು, ಸಂಕ್ಷೇಪ ಚೌಕಶಿಯಿಂದ ( Summary trial ) ಅವರಿಗೆ ೪ ತಿಂಗಳ ಮತ್ತು ಮೂರು ವಾರದ ಕಠಿಣ ಶಿಕ್ಷೆಯನ್ನು ವಿಧಿಸಿದರು.” ಎಂದು ಪಂಡಿತ ಚಂದಕರಣ ಸರ್ದಾ ಇವರು ತಿಳಿಸುತ್ತಾರೆ. ಅವರು ತಮ್ಮ ಸಂರಕ್ಷಣೆ ಮಾಡಿಕೊಳ್ಳಲಿಲ್ಲ. ಅಜಮೀರದಲ್ಲಿ ಇವರ ಹೊರ್ತು ಪೆಟ್ಟಿಗೆ ಜನರು ಹಿಡಿಯಲ್ಪಟ್ಟಿಲ್ಲ. ಹಿಂಸೆಯಿಲ್ಲದೆ ಮತ್ತು ಸರಾಯಿಗಾರರ ವಿರುದ್ಧ ಇಲ್ಲವೆ ಸರಾಯಿ ಕುಡಿಯುವವರ ವಿರುದ್ಧ ದ್ವೇಷಬುದ್ಧಿಯಿಲ್ಲದೆ ಪಿಕೆಟಿಂಗ ನಡೆಸುವದು ನಮ್ಮ ನಿಶ್ಚ ಕರ್ತವ್ಯವಿರುವದು. ಎರಡನೇ ಯಾವ ಉಪಾಯದಿಂದಲೂ ಆಗದೆ ಇದ್ದಷ್ಟು ಹಿತವಾನವನ್ನು ಈ ಪಿಕೆಟಿಂಗವು ಬೆಳೆಸಿರುವದೆಂಬುದನ್ನು ಯಾರೂ ನಿಷೇಧಿಸಲಾರರು. ಐರಂಸದದಲ್ಲಿ ಧೇಡರು ಕ್ರಿಶ್ಚನ್ನರು ಪಿಕೆಟಿಂಗದ ಮೂಲಕ ಮದ್ಯಪಾನವನ್ನು ತಮ್ಮ ತಮ್ಮ ಸಮಾಜದಿಂದ ಹೊರಡಿಸಿರುವರೆಂದು ಅವರು ಕೃತಜ್ಞತಾಪೂರ್ವಕ ತಿಳಿಸುತ್ತಾರೆ. ಅಮಂಗಳಕರವಾದ ನವ್ಹೆಂಬರ ೧೭ನೇ ತಾರೀಖಿನ ದಿವಸ ಮತ್ತು ಮುಂದಿನ ಎರಡು ದಿವಸ ಮುಂಬೈಜನರು ಸ್ವೇಚ್ಛೆಯಿಂದ ಮತ್ತು ಕುತ್ಸಿತ ಬುದ್ಧಿಯಿಂದ ಪಾರ್ಸಿ ಜನರ ಅಂಗಡಿಗಳನ್ನು ಹಾಳುಮಾಡಿದ್ದರಿಂದಲೂ, ಮತ್ತು ಪಾರ್ಸಿ ಹಾಗೂ ಕ್ರಿಶ್ಚನ್ ಜನರ ಮೇಲೆ ಮಾಡಿದ ಅತ್ಯಾಚಾರದ ದೆಶೆಯಿಂದಲೂ, ಮುಂಬೈಜನರು ಪಿಕೇಟಿಂಗದ ತನ್ನ ಹಕ್ಕನ್ನು ಸದ್ಯಕ್ಕೆ ಕಳಕೊಂಡಿರುವರು ಆದಾಗ್ಯೂ ಪಿಕೇಟಿಂಗ ಎಲ್ಲೆಲ್ಲಿ ಮಾಡಲ್ಪಡುವದೋ ಆಯಾ ಸ್ಥಳಗಳಲ್ಲಿ ಅದನ್ನು ನಿರೋಕ್ಷಿಗಳಾದ ಸ್ತ್ರೀಪುರುಷರಿಗೆ ಒಪ್ಪಿಸುವರೆಂದೂ ಮತ್ತು ಸ್ನೇಹಭಾವದಿಂದ ಅದನ್ನು ನಡೆಸುವರೆಂದೂ ನಾನು ಕೋರುತ್ತೇನೆ. ಜನರನ್ನು ಒತ್ತಾಯದಿಂದ ಸನ್ಮಾರ್ಗಕ್ಕೆ ಹಚ್ಚುವದು ನಮಗೆ ಬೇಕಾಗಿಲ್ಲ.

---

## ವ್ಹಾಯಿಸರಾಯರ ವಿಷಯಕ್ಕೆ

ಪಂಡಿತ ಮದನ ಮೋಹನ ಮಾಲವಿಯವರು ಬುದ್ಧ ಶಿಷ್ಯ ಮಂಡಳಕ್ಕೆ ಉತ್ತರ ಕೊಡುವಾಗ ವ್ಹಾಯಿಸರಾಯರು ಒಂದು ಭಾಷಣವನ್ನು ಮಾಡಿದರು. ಆ ಭಾಷಣದ ವಿಷಯವಾಗಿ ಮಹಾತ್ಮರ ಅಭಿಪ್ರಾಯವು ಏನಿರುತ್ತದೆಂಬುದನ್ನು ಅರಿತು ಕೊಳ್ಳುವ ಸಲುವಾಗಿ ಅಸೋಸಿಯೇಟೆಡ್ ಪ್ರೆಸ್ಸದ ಪ್ರತಿನಿಧಿಯು ಮಹಾತ್ಮರ ಕಡೆಗೆ ಹೋಗಿದ್ದನು. ಮಹಾತ್ಮರು ಈ ಪ್ರಕಾರ ಹೇಳಿದರು. ವ್ಹಾಯಿಸರಾಯರ ಭಾಷಣವನ್ನು ಓದಿ ನನಗೆ ಬಹಳ ವ್ಯಸನವಾಯಿತು. ವ್ಹಾಯಿಸರಾಯರು ಬುದ್ಧಿಪೂರ್ವಕವಾಗಿಯೂ ಅವಿಚಾರತನದಿಂದಲೂ ಈ ಕಾಂಗ್ರೆಸ ಖಿಲಾಫತ ಕಮಿಟಿಗಳು ಯುವರಾಜರ ಆಗಮನದ ವಿಷಯವಾಗಿ ಸ್ವೀಕರಿಸಿದ ಧೋರಣದ ವಿಪರ್ಯಾಸವನ್ನು ಮಾಡುವರೆಂದು ನನಗೆ ಅನಿಸಿದ್ದಿಲ್ಲ. ಮೇಲೆ ಹೇಳಿದ ಪ್ರತಿಯೊಂದು ಸಂಸ್ಥೆಯವರೂ ಭಾಷಣಕಾರರೂ ಯುವರಾಜರ ವ್ಯಕ್ತಿ ವಿಷಯವಾಗಿ ಎಳ್ಳಷ್ಟಾದರೂ ವೈರಭಾವವು ಇರುವದಿಲ್ಲವೆಂದು ಎಷ್ಟೋ ಠರಾವುಗಳನ್ನು ಪಾಸ ಮಾಡಿದ್ದಾರೆ. ಮತ್ತು ಪದೇ ಪದೇ ಸಾರ್ವಜನಿಕ ಸಭೆಗಳಲ್ಲಿ ಹೇಳಿದ್ದಾರೆ. ಯಾವ ನವಕರಶಾಹಿಯ ಆಳಿಕೆಯಿಂದ ಹಿಂದುಸ್ತಾನವು ದರಿದ್ರವಾಯಿತೋ ದಾಸ್ಯತ್ವದಲ್ಲಿ ಮುಳಗಿತೋ ಅಂಥ ನವಕರಶಾಹಿಯ ಆಳಿಕೆಯನ್ನು ಈ ದೇಶದಲ್ಲಿ ದೃಢ ಪಡಿಸಬೇಕೆಂಬ ಉದ್ದೇಶದಿಂದ ಯುವರಾಜರಿಗೆ ಇಲ್ಲಿ ಬರಲಿಕ್ಕೆ ನವಕರಶಾಹಿಯವರು ಆಮಂತ್ರಣ ಕೊಟ್ಟರೆಂದು ನಾನು ಅಭಿಪ್ರಾಯ ಪಡುತ್ತೇನೆ. ನನ್ನ ಅಭಿಪ್ರಾಯವು ತಪ್ಪಾದದ್ದೆಂದು ಯಾರಾದರೂ ಸಿದ್ಧ ಮಾಡಿ ಕೊಟ್ಟರೆ ನಾನು ಕ್ಷಮಾ ಬೇಡಿ ಕೊಳ್ಳಲಿಕ್ಕೆ ತಯಾರಿದ್ದೇನೆ.

ಯುವರಾಜರ ಆಗಮನಕ್ಕೆ ಬಹಿಷ್ಕಾರ ಹಾಕಿ ಬ್ರಿಟಿಶ ಜನರಿಗೆ ಅಪಮಾನ ಮಾಡುತ್ತಾರೆಂದು ವ್ಹಾಯಿಸರಾಯರು ಅನ್ನುವದಾದರೂ ಮರ್ಮವಶ ಸಂಗತಿಯಾಗಿದೆ. ಬ್ರಿಟಿಶ ಜನರೂ ಹಿಂದುಸ್ತಾನವನ್ನು ಆಳುವವರೂ ಒಂದೇ ಅನ್ನುವದು ಬ್ರಿಟಿಶ ಜನರಿಗೆ ಎಷ್ಟು ಅಪಮಾನಕರವಾದದ್ದೆಂದು ವ್ಹಾಯಿಸರಾಯರು ತಿಳಿದು ಕೊಳ್ಳುವದಿಲ್ಲ. ಇಲ್ಲಿಯ ನವಕರಶಾಹಿಯವರು ಬ್ರಿಟಿಶ ಜನರ ಪ್ರತಿನಿಧಿಗಳೆಂದೂ ನವಕರ ಶಾಹಿಯವರ ವಿರುದ್ಧವಾಗಿ ಚಳವಳಿ ಮಾಡುವದರಿಂದ ಬ್ರಿಟಿಶ ಜನರಿಗೆ ಅಪಮಾನವಾಗುತ್ತದೆಂದೂ ವ್ಹಾಯಿಸರಾಯರು ಮತ ಪಟ್ಟರೆ ಮಾತ್ರ, ನಾನು ಅಪರಾಧಿ ಇದ್ದೇನೆಂದು ಒಪ್ಪಿಕೊಳ್ಳುತ್ತೇನೆ ಹಾಗಾದರೆ ಹಿಂದುಸ್ತಾನದಲ್ಲುಂಟಾದ ರಾಷ್ಟ್ರೀಯ ಜಾಗ್ರತೆಯ ಮರ್ಮವು ವ್ಹಾಯಿಸರಾಯರಿಗೆ ತಿಳಿದಿಲ್ಲವೆಂದು ನನಗೆ ವಿನಯ ಪೂರ್ವಕವಾಗಿ ಅನ್ನಬೇಕಾಗುತ್ತದೆ. ಬಹಿಷ್ಕಾರದ ಉದ್ದೇಶವು ಯಾವದಾದರೊಂದು ರಾಷ್ಟ್ರಕ್ಕಾಗಲಿ ಅಥವಾ ವ್ಯಕ್ತಿಗಾಗಲೀ ಅಪಮಾನ ಮಾಡಬೇಕೆಂದಿರುವದಿಲ್ಲವೆಂದು ಸಾವಿರಸಾರೆ ಹೇಳುತ್ತೇನೆ. ಹಿಂದುಸ್ತಾನದ ಈಗಿನ ರಾಜ್ಯ ಪದ್ಧತಿಯ ವಿರುದ್ಧ ನಮ್ಮ ಚಳವಳಿಯು ಇರುತ್ತದೆ. ವ್ಹಾಯಿಸರಾಯರಾಗಲಿ ಅವರ ಮತ್ಯಾವನಾಗಲಿ ಚಳವಳಿಯನ್ನು ಬೆದರಿಕೆ ಹಾಕಿ ಮುರಿಯಲಾರರೆಂದು ನಾನು ಖಂಡಿತವಾಗಿ ಹೇಳುತ್ತೇನೆ.

ನಾವೇನು ಕಾಲ್ಕು ಕೆದರಿ ಜಗಳ ತೆಗದಿಲ್ಲವೆಂದು ಲಾರ್ಡ ರೊನಾಲ್ಡಶೇ ಸಾಹೇಬರಿಗೆ ಉತ್ತರ ಕೊಡುವಾಗ ಸ್ಪಷ್ಟ ಹೇಳಿದ್ದೇನೆ. ನಾವು ಬಿಡಬೇಕಾದದ್ದು ಏನೂ ಇಲ್ಲ. ಆದರೆ ಅತ್ಯಾಚಾರ ರಹಿತವಾದ ಅಹಿಂಸಾಮಯ ಚಳವಳಿಯ ವಿರುದ್ಧವಾಗಿ ಹೂಡಿದ ಈ ದಬ್ಬಾಳಿಕೆಯನ್ನು ಸರಕಾರದವರು ಬಿಡಲಿಕ್ಕೆಬೇಕು. ಈ ದೇಶದಲ್ಲಿ ಶಾಂತತೆಯನ್ನು ಹಬ್ಬಿಸಬೇಕಾದರೆ ಹಿಂದುಸ್ತಾನ ಸರಕಾರದವರೇ ಹಾಟ್ಟಿಸತಕ್ಕದ್ದು. ನಾವೇ ತಯಾರ ಮಾಡಿದ ಮದ್ದಿನ ಮನೆಯಲ್ಲಿ ಬೆಂಕಿಯನ್ನು ಹಚ್ಚಲಿ ಇನ್ನೂ ಯಾಕೆ ಉರಿಯ ಎಳವಲ್ಲದೆಂದು ಹಿಂದುಸ್ತಾನ ಸರಕಾರವು ಆಶ್ಚರ್ಯ ಪಡುತ್ತದೆ. ಈಗ ಸದ್ಯಕ್ಕೆ ನಾವು ಮಾಡಬೇಕಾದದ್ದು ಬಾಧಕ್ರಿಯೆಗಳ ನಿವಾರಣೆಯಲ್ಲ; ಸಾರ್ವಜನಿಕ ಸಭೆಗಳನ್ನು ಕೂಡಿಸುವ ಮತ್ತು ಸಂಸ್ಥೆಗಳನ್ನು ಸ್ಥಾಪಿಸುವ ಹಕ್ಕುಗಳನ್ನು ಕಾಯ್ದು ಕೊಳ್ಳುವದು ನಮ್ಮ ಕೆಲಸವಿರುತ್ತದೆ. ಆದ್ದರಿಂದ ಈ ಹಕ್ಕನ್ನು ಸಂರಕ್ಷಿಸುವ ಸಲುವಾಗಿ ಎಲ್ಲ ರಾಜಕೀಯ ಪಂಗಡದವರ ಮತಿಯಿಂದ ಈ ಯವನ್ನು ಹೂಡಿದ್ದೇವೆ ಕಾಯಿದೆ, ಮತ್ತು

ಸುವ್ಯವಸ್ಥೆಯು ಮುಖ್ಯ ಸಂರಕ್ಷಣೆಯಲ್ಲಿ ಕೂಡ ಆ ಕಾಯಿದೆಗಳ ಬಗ್ಗೆ ಸ್ವಲ್ಪವಾದರೂ ಆದರವಿಲ್ಲವೆಂದು ಕಂಡುಬಂದಾಗ್ಯೂ ಅವರ ಕೃತಿಗಳನ್ನು ಮೂಕರಂತೆ ಸಹಿಸಬೇಕೆಂದು ವ್ಹಾಯಿಸರಾಯರ ಅಭಿಪ್ರಾಯವಿದ್ದಂತೆ ತೋರುತ್ತದೆ. ನಿಷ್ಕಾರಣವಾಗಿ ನಿರಪರಾಧಿ ಜನಗಳನ್ನು ಹಿಂಸೆಗೆ ಈಡು ಮಾಡಿದ ಎಷ್ಟೋ (ಬಂಗಾಲ, ಪಂಜಾಬ, ಸಂಯುಕ್ತ ಪ್ರಾಂತ ಇಲ್ಲಿ) ಉದಾಹರಣೆಗಳನ್ನು ತೋರಿಸಿ ಕೊಡುತ್ತೇನೆ ದಬ್ಬಾಳಿಕೆಯು ನಿರಂಕುಶವಾಗಿ ಹೆಚ್ಚಾದಂತೆ ಈ ದೇಶದಲ್ಲಿ ಅನ್ಯಾಯವೂ ಜುಲುಮೆಯೂ ಹೆಚ್ಚಾಗುತ್ತವೆ. ಅಸಹಕಾರವಾದಿಗಳಿಗೆ ಅದೇಕೆ ಹಿಂದೀ ಜನರಿಗೆ ಒಂದೇ ಒಂದು ಮಾರ್ಗವು ಉಳಿದಿರುತ್ತದೆ. ಸಾರ್ವಜನಿಕ ಸಭೆಗಳನ್ನು ಕೂಡಿಸುವ ಹಕ್ಕನ್ನು ನಾವು ಎಂದೂ ಕಳೆದುಕೊಳ್ಳತಕ್ಕದ್ದಲ್ಲ.

ಒಪ್ಪಂದ ಮಾಡಿಕೊಳ್ಳಲಿಕ್ಕೆ ನಾನಾದರೂ ಬಹಳ ಆತುರಪಡುತ್ತೇನೆ. ನನಗೂ ರಾವುಂಡ ಟೇಬಲ ಕಾನಫರನ್ಸ ಬೇಕು. ನಾನೇನು ಕರಾರುಗಳನ್ನು ಹಾಕುವದಿಲ್ಲ. ಆದರೆ ಮೊದಲೇ ಕೆಲವು ಕರಾರುಗಳು ನಮಗೆ ಹಾಕಲ್ಪಟ್ಟಿರುತ್ತವೆ. ಆ ಕರಾರುಗಳನ್ನು ಚನ್ನಾಗಿ ಪರೀಕ್ಷಿಸಿ ಅವು ಘಾತಕವಾದವುಗಳೆಂದು ಕಂಡುಬಂದರೆ ಮಾತ್ರ, ನಾನು ಅವುಗಳನ್ನು ನಿರಾಕರಿಸುತ್ತೇನೆ. ಜನರ ಮತ್ತು ಸರಕಾರದ ನಡುವೆ ಈಗ ಹುಟ್ಟಿದ ವೈಮನಸ್ಸಿಗೆ ಹಿಂದುಸ್ಥಾನ ಸರಕಾರವೇ ಕಾರಣವಾಗಿರುವದರಿಂದ ಅವರೇ ಅದನ್ನು ಹೋಗಲಾಡಿಸಲಿಕ್ಕೆ ಪ್ರಯತ್ನ ಮಾಡತಕ್ಕದ್ದು.

---

### ನಮ್ಮ ಸಂಪಾದಕರು.

ಇಂಡಿಪೆಂಡೆಂಟದ ಸಂಪಾದಕರಾದ ಶ್ರೀಯುತ ದೇಸಾಯಿ ಇವರಿಗೆ ಒಂದು ವರ್ಷದ ಕಠಿಣ ಶಿಕ್ಷೆಯಾಗಿ, ಮೇಲೆ ನೂರು ರೂಪಾಯಿ ದಂಡವಾಯಿತು "ಇಂಡಿಪೆಂಡಂಟ" ಪತ್ರದ ಜಾಮೀನ ಹಣವನ್ನು ಸರಕಾರವು ತನ್ನ ಬೊಕ್ಕಸಕ್ಕೆ ಸಲ್ಲಿಸಿಕೊಂಡು ಬಿಟ್ಟಿತು ಇಷ್ಟಾದರೂ ದೇಸಾಯಿ ಇವರು ಅಂಜದೆ ಧೈರ್ಯದಿಂದ ಕೈಯಿಂದ ಬರೆದು ಸರಕಾರದಲ್ಲಿ "ರಜಿಸ್ಟರ" ಮಾ[illegible] ಪಡಿಸಿದರು. ಎರಡು ದಿವಸಗಳಲ್ಲಿಯೇ ಇದರಲ್ಲಿ ಅವರಿಗೆ ಯಶಸ್ಸು ಬಂತು. ಇದೇ ಅವರ [illegible] ಹಸ್ತ ಪ್ರತಿಗಳು ಬಿಸಿ ಹೋಳಿಗೆಗಳಂತೆ ಅಲಾಹಾಬಾದದಲ್ಲಿ ಮಾರಹತ್ತಿದವು. ಇದು ಸರಕಾರಕ್ಕೆ ಸಹಿಸಲಿಲ್ಲ. ಯಹುದಿಯರು ದೋಷಾರೋಪಣೆಯನ್ನು ಮಾಡಿ ಅದನ್ನು ಕಾಡಿಗೆ ಅಟ್ಟಿದಂತೆ ಸರಕಾರವು ಶೀಘ್ರವಾಗಿಯೇ ಅವರನ್ನು ತುರಂಗಕ್ಕೆ ಅಟ್ಟಿ ಬಿಟ್ಟಿತು ಇದರ ಅರ್ಥವೇನೆಂಬುವದು ಸ್ಪಷ್ಟವಿದೆ. ತನ್ನ ಬಲವು ಕುಂದುತ್ತ ನಡೆದಿದೆ ಎಂಬುವದು ಸರಕಾರಕ್ಕೆ ಅನಿಸಿ ಹೋಗಿರುತ್ತದೆ ಆದ್ದರಿಂದಲೇ ಗುಣ ದೋಷಗಳನ್ನು ಬಯಲಿಗೆಳೆಯುವದು ಅದಕ್ಕೆ ಸಹನವಾಗುವದಿಲ್ಲ. ಸದ್ಯದಲ್ಲಿ ನಮ್ಮ ಕರ್ತವ್ಯವು ಸ್ಪಷ್ಟವಿದೆ ಕಠಿಣ ಶಿಕ್ಷೆಯನ್ನು ವಿಧಿಸಿ, ಬಹುಕಾಲ ತುರಂಗದಲ್ಲಿ ಸರಕಾರವು ನಮ್ಮನ್ನು ಇಟ್ಟರೂ ನಾವು ಆ ವರಿಗೆ ಅಂಜಿ ನಮೋ ಅನ್ನತಕ್ಕದ್ದಲ್ಲ. ನಮ್ಮ ವರ್ತನವು ಹೇಗಿರತಕ್ಕದ್ದು ಎಂಬುವದನ್ನು ದೇಸಾಯಿಯವರು ಕೋರ್ಟಿನಲ್ಲಿಯ ತಮ್ಮ ಜವಾಬಿನಲ್ಲಿ ಸ್ಪಷ್ಟವಾಗಿ ಹೇಳಿ ಬಿಟ್ಟಿದ್ದಾರೆ ಮತ್ಸರ ಬುದ್ಧಿಯಿಂದ ಪ್ರೇರಿತರಾಗದೆ ಸರಕಾರದ ದೋಷಗಳನ್ನು ಯಥಾ ಯೋಗ್ಯವಾಗಿ ಬಯಲಿಗೆಳೆಯುವದೇ ನಮ್ಮ ಕರ್ತವ್ಯವು ಈ ಮಾರ್ಗವು ಸರಳವಾದದ್ದಿದ್ದು ಕಾರ್ಯಸಾಧಕವಾದದ್ದಿರುತ್ತದೆ.

---

## ಮಹಾತ್ಮರ ಭಾಷಣವು.

ಮಹಾತ್ಮಾ ಗಾಂಧಿಯವರು ಅಸಹಕಾರದ ಠರಾವನ್ನು ಕಾಂಗ್ರೆಸದಲ್ಲಿ ತಂದರು. ಅವರು ಅಂದದ್ದೇನಂದರೆ ವರ್ಕಿಂಗ ಕಮಿಟಿಯ ಮತ್ತು ಅಖಿಲಭಾರತ ಕಾಂಗ್ರೆಸ ಕಮಿಟಿಯ ಠರಾವುಗಳನ್ನು ಯಾರು ಓದಿರುತ್ತೀರಿ ಮತ್ತು ಕೇಳಿರುತ್ತೀರಿ ಅಂಥವರಿಗೆ ಈ ಠರಾವು ಹೊಸದಾಗಿ ತೋರುವದಿಲ್ಲ. ಕಳೆದ ೧೫ ತಿಂಗಳುಗಳಲ್ಲಿ ನಡೆಸಿದ ಚಳವಳಿಯ ಸ್ವಾಭಾವಿಕ ಫಲವೇ ಈ ಠರಾವು ಇರುತ್ತದೆ. ವ್ಹಾಯಿಸರಾಯರು ದಬ್ಬಾಳಿಕೆಯನ್ನು ಪ್ರಾರಂಭಿಸಿ ದೇಶಕ್ಕೆ ಆಹ್ವಾನ ಮಾಡಿರುತ್ತಾರೆ ಅವರ ಆಹ್ವಾನಕ್ಕೆ ಸ್ವಾಭಿಮಾನವುಳ್ಳ ರಾಷ್ಟ್ರವು ಈ ಠರಾವಿನ ರೂಪದಿಂದ ಉತ್ತರ ಕೊಡತಕ್ಕದ್ದು. ಸ್ವಾವಲಂಬನ ಮಾರ್ಗವನ್ನು ಹಿಡಿದಿರುತ್ತದೆಂದೂ ದೇವರ ಹೊರ್ತು ಅನ್ಯರ ಸಹಾಯವನ್ನು ಅಪೇಕ್ಷಿಸುವದಿಲ್ಲವೆಂದೂ ರಾಷ್ಟ್ರವು ತನ್ನ ಪ್ರತಿನಿಧಿಗಳ ಮುಖಾಂತರವಾಗಿ ಈ ಠರಾವನ್ನು ಪಾಸ ಮಾಡಿ ಸಾರಿ ಹೇಳುತ್ತದೆ. ಈ ಠರಾವು ರಾಷ್ಟ್ರದ ದೃಢ ನಿಶ್ಚಯವನ್ನು ತೋರಿಸುತ್ತದೆ. ಮತ್ತು ವಿನಯಪೂರ್ವಕವಾಗಿ ಸರಕಾರಕ್ಕೆ ಹೇಳುತ್ತದೆ. ನೀವು ನಮ್ಮನ್ನು ಎಷ್ಟು ಒತ್ತಿದಾಗ್ಯೂ ನಾವು ಒಂದಿಲ್ಲೊಂದು ದಿವಸ ನಿಮ್ಮನ್ನು ನಿಮ್ಮ ಕೃತಿಗಳ ಸಲುವಾಗಿ ಪಶ್ಚಾತ್ತಾಪ ಪಡಲಿಕ್ಕೆ ಹಚ್ಚುತ್ತೇವೆ. ನೀವು ಏನು ಮಾಡಲಿಕ್ಕೆ ಹತ್ತಿರುತ್ತೀರಿ ಎಂಬುದರ ಸಲುವಾಗಿ ನಿಮಗೆ ಎಚ್ಚರ ಕೊಡುತ್ತೇವೆ. ಮೂವತ್ತು ಕೋಟಿ ಜನರೆಲ್ಲರು ನಿಮ್ಮ ವೈರಿಗಳಾಗದಂತೆ ವರ್ತಿಸಿರಿ. ಸರಕಾರದವರು ಮನಃಪೂರ್ವಕವಾಗಿ ಒಪ್ಪಂದ ಮಾಡಿಕೊಳ್ಳುವದಿದ್ದರೆ ಅಗತ್ಯವಾಗಿ ಬರಲಿಕ್ಕೆ ಈ ಠರಾವು ಯಾವ ರೀತಿಯಿಂದಲೂ ಪ್ರತಿಬಂಧಿಸುವದಿಲ್ಲ. ಮವಾಳ ಬಂಧುಗಳು ಕಾಂಗ್ರೆಸ ಭಕ್ತರಾಗಿ ರಾಷ್ಟ್ರದ ಹಿತವನ್ನು ಇಚ್ಛಿಸುವರೆ ಹಾಗೆ ಮಾಡಲಿಕ್ಕೆ ಈ ಠರಾವು ಅಡ್ಡಿ ಮಾಡುವದಿಲ್ಲ. ಸರಕಾರದವರ ಮನಸ್ಸಿನಲ್ಲಿ ನ್ಯಾಯ ಕೊಡುವದು ಇದ್ದರೆ, ಲಾರ್ಡ ರೀಡಿಂಗ ದೊರೆಗಳು ನ್ಯಾಯದಿಂದ ಆಳಲಿಕ್ಕೆ ಈ ದೇಶಕ್ಕೆ ಬಂದಿದ್ದರೆ, ನಾನು ದೇವರ ಸಾಕ್ಷಿ ಇಟ್ಟು ಅವರಿಗೆ ತಿಳಿಸುವದೇನಂದರೆ ಈ ಠರಾವು ಅವರನ್ನು ಆದರಪೂರ್ವಕವಾಗಿ ಬರಮಾಡಿಕೊಳ್ಳುತ್ತದೆ. ಆದರೆ ಅವರ ಮನಸ್ಸಿನಲ್ಲಿ ಅನ್ಯಥಾ [illegible] ಮಾತ್ರ ಅವರನ್ನು ಒಳಗೊಡಲಾರದು. [illegible] ಒಪ್ಪಂದ ಪರಿಷತ್ತನ್ನು ನೆರೆಸಲಿಕ್ಕೆ ಈಗ [illegible] ಬಹಳ ಒಳ್ಳೇ ಪ್ರಸಂಗವಿರುತ್ತದೆ. ಆದರೆ ಅದು ಸದುದ್ದೇಶದಿಂದ ಪ್ರೇರಿಸಲ್ಪಟ್ಟಿರಬೇಕು ನಾವು ದಡಪಶಾಹಿಗೆ ಎಳ್ಳಷ್ಟಾದರೂ ಹೆದರುವದಿಲ್ಲ. ನಾನು ಪುನಃ ವ್ಹಾಯಿಸರಾಯರಿಗೆ ಹೇಳುವದೇನಂದರೆ ಒಪ್ಪಂದ ಮಾಡಿಕೊಳ್ಳಲಿಕ್ಕೆ ಬಾಗಿಲವು ತೆರೆದಿಟ್ಟಿರುತ್ತದೆ. ನಾವು ಎಳ್ಳಷ್ಟಾದರೂ ಸೊಕ್ಕಿನ ವರ್ತನವನ್ನು ತೋರಿಸುವದಿಲ್ಲ. ನಾವು ಇದನ್ನೆಲ್ಲ ವಿನಯಪೂರ್ವಕವಾಗಿಯೂ ನಮ್ರತನದಿಂದಲೂ ಹೇಳುತ್ತೇವೆ. ಅಧಿಕಾರದಿಂದ ಉನ್ಮತ್ತರಾದವರಿಗೆ ಮಾತ್ರ ಈ ಠರಾವು ಆಹ್ವಾನ ಮಾಡುತ್ತದೆ ಮತವ್ಯಕ್ತ ಮಾಡಲಿಕ್ಕೆ ಪ್ರತಿಬಂಧ ಮಾಡಲಿಚ್ಛಿಸುವಂಥ ಮತ್ತು ಸಂಸ್ಥೆಗಳ ಪ್ರತಿಬಂಧವನ್ನು ಮಾಡುವಂಥ ಅಧಿಕಾರದವರು. ಇದರ ಕೂಡ ಮಾತ್ರ ಈ ಠರಾವು ಸಡ್ಡು ಹೊಡೆಯುತ್ತದೆ ಜೀವನಕ್ಕೆ ಶ್ವಾಸೋಚ್ಛ್ವಾಸವು ಹೇಗೆ ಅವಶ್ಯವೋ ಹಾಗೇ ಸ್ವಾತಂತ್ರ್ಯಕ್ಕೆ ಮತವನ್ನು ವ್ಯಕ್ತ ಮಾಡುವ ಹಕ್ಕು ಅವಶ್ಯವಾದದ್ದು. ಈ ದೇಶದಲ್ಲಿ ಯಾರಾದರೂ ಭಾಷಣಸ್ವಾತಂತ್ರ್ಯವನ್ನೂ ಮತಸ್ವಾತಂತ್ರ್ಯವನ್ನೂ ಮುರಿಯಲಿಚ್ಛಿಸಿದರೆ ಅವರನ್ನು ಅದರ ಸಲುವಾಗಿ ಪಶ್ಚಾತ್ತಾಪ ಪಡಿಸಲಿಕ್ಕೆ ಹಿಂದೀ ರಾಷ್ಟ್ರಕ್ಕೆ ಸೇರಿದ ಪ್ರತಿಯೊಬ್ಬ ಗಂಡಸಾಗಲಿ ಹೆಂಗಸಾಗಲಿ ಭೂತಲದಿಂದ ನಾಮಶೇಷವಾಗುವ ವರೆಗೆ ಹೋರಾಡುತ್ತಾರೆಂದು ಈ ರಾಷ್ಟ್ರೀಯ ಸಭೆಯಲ್ಲಿ ನಿಂತು ಇದನ್ನು ಗಟ್ಟಿಯಾಗಿ ಹೇಳುತ್ತೇನೆ. ನನಗಾದರೂ ಶಾಂತತೆಯು ಬೇಕು ಆದರೆ ಸ್ವಾಭಿಮಾನವನ್ನು ಮಾರಿಕೊಂಡು ಶಾಂತತೆಯನ್ನು ಕಾಯಲಿಚ್ಛಿಸುವದಿಲ್ಲ. ಇಡೀ ಮಾನವ ಜಾತಿಯ ಹೃದಯದಲ್ಲಿ ಶಾಂತತೆಯೂ ಸಮಾಧಾನವೂ ನೆಲೆಗೊಳ್ಳಲಿಕ್ಕೆ ಬೇಕು. ಇದಕ್ಕಿಂತ ಹೆಚ್ಚಿಗೆ ಹೇಳಬಪೇಕ್ಷಿಸುವದಿಲ್ಲ.

(ಕರ್ನಾಟಕ ವೈಭವದಿಂದ)

# ಶ್ರೀಮತಿ ಊರ್ಮಿಳಾದೇವಿಯ ದರ್ಶನವು

ಚಿತ್ತರಂಜನದಾಸರವರ ಭಗಿನಿಯಾದ ಊರ್ಮಿಳಾದೇವಿಯು ಯಂಗ ಇಂಡಿಯಾ ಪತ್ರದ ಓರ್ವ ಪ್ರತಿನಿಧಿಗೆ ಚಿಟ್ಟಿ ಯಾಗಿ ಸದ್ಯದ ಸ್ಥಿತಿಯನ್ನು ಕುರಿತು ನಾಲ್ಕು ಮಾತುಗಳನ್ನಾಡಿದಳು. ಈಗಿನ ಚಳವಳಿಯ ಬೆಳವಣಿಗೆಯು ಸಾಧಾರಣವಾಗಿ ಬಂಗಾಲದಲ್ಲಿ ಹ್ಯಾಗೆ ನಡೆದಿದೆ ಇದು ವಿಚಾರಿಸಲು ಅವಳು ಚಕಿತಳಾಗಿ ಉತ್ತರ ಕೊಟ್ಟಳು. "ಅದರ ಬೆಳವಣಿಗೆಯು ವಿಸ್ಮಯಕಾರಕವಾಗಿದೆ. ನಾವಾದರೂ ಅದರ ಹೆಚ್ಚುವಿಕೆಯಲ್ಲಿ ಪರಮಾಶ್ಚರ್ಯ ಭರಿತರಾಗಿದ್ದೇವೆ ದಿಲ್ಲಿಯಲ್ಲಿ ಕೂಡಿದ ಕಳೆದ ಅಖಿಲಭಾರತೀಯ ಪರಿಷತ್ತಿನಲ್ಲಿ ಬಂಗಾಲ ಪ್ರಾಂತಕ್ಕಾಗಿ ನನಗೆ ಸ್ವಲ್ಪ ವಿಷಾದವೆನಿಸಿತ್ತು. ಈ ಚಳವಳಿಯ ಹಚ್ಚಳಕ್ಕಾಗಿ ಬಂಗಾಲವು ಯೋಗ್ಯ ಸಾಹಸವನ್ನು ಮಾಡಲಿಲ್ಲವೆಂಬದೆ ಅದರ ಕಾರಣವು ಆದರೆ ಈಗ ಮಾತ್ರ ನನ್ನಲ್ಲಿ ಯಾವ ತರದ ಸಂಶಯವಿಲ್ಲ. ಬಂಗಾಲವು ತನ್ನ ಮೊದಲಿನ ಸ್ಥಾನವನ್ನು ದೊರಕಿಸಿತು."

ಪ್ರ:- ಈ ಆಕಸ್ಮಿಕ ಬದಲಾಗುವಿಕೆಗೆ ಕಾರಣವಾವುದೆಂದು, ತಾಯಿಯೇ, ನಾನು ವಿಚಾರಿಸಬಹುದೋ?

ಉ:- ಒಳ್ಳೇದು; ಅನೇಕ ಕಾರಣಗಳೆಷ್ಟೋ ಇಂಟು ಆದರೂ ಇತ್ತೀಚೆಗಿನ ಮುಖ್ಯ ಕಾರಣಗಳು ಎರಡಿರುವವು ಮತ್ತು ಅವುಗಳಲ್ಲಿ ಮೊದಲನೇದು, (ನಾನನ್ನ ಬೇಕಾದರೆ,) ಅದು ಕುಲೀನಸ್ತ್ರೀಯರನ್ನು ಬಂಧಿಸುವದು ಮತ್ತು ಎರಡನೇಯದು, ಶ್ರೀ. ಸೀ. ಆರ್ ದಾಸ, ಮೌಲಾನಾ ಅಬುಲ್ ಕಲಾಮು ಅಝುದ ಮತ್ತು ಕೆಲವರನ್ನು ಬಂಧಿಸಿದ್ದು

ಪ್ರ:- ತಾಯಿಯೇ, ಕೈದು ಮಾಡಿದವರಲ್ಲಿ ನೀನೋರ್ವಳಿರುವಿ. ಆದರೂ ನಿನ್ನಷ್ಟಕ್ಕೆ ನೀನೇ ಈ ರಣಧುರವನ್ನು ಹೊರುವಂತೆ ಮಾಡಿದ ಕಾರಣವಾದರೂ ಅವುದು?

ಉ:- ಇರಲಿ. ನಾವು ಬಹಳ ಹೊತ್ತು ವಿಚಾರಿಸಿ, ಇತ್ತೀಚೆಗಾಗಿ ಅಲ್ಲಿ ಕೊಡುವ ಹುಕುಮುಗಳನ್ನು ಮಾಡುವ ಸರಕಾರದ ಆಜ್ಞೆಗಳನ್ನು ಉಲ್ಲಂಘಿಸಬೇಕೆಂದು ನಿಶ್ಚಯ ಮಾಡಿದೆವು ಆದರೆ, ಬಂಗಾಲವು ಸಹಾನುಭೂತಿಯುಳ್ಳದ್ದಾದರೂ ಅದು, ಒಂದು ಪ್ರಕಾರದ ಸಹನಶೀಲತೆಯ ಲಕ್ಷಣವೆಂದು ನಮಗೆನಿಸಿತು.

ಈ ಸಹಾನುಭೂತಿಗೆ ಒಂದು ವಿಶೇಷವಾದ ಶಕ್ತಿಯನ್ನು ಕೊಡುವದೆಂದರೆ ಬಂಗಾಲವು ಖಂಡಿತವಾಗಿ ಸ್ವಾರ್ಥತ್ಯಾಗವೆಂಬ ವಿಶಿಷ್ಟ ವಾದ ಉಪಾಯವನ್ನು ಕಾಣಬೇಕೆಂದು ನಾವು ವಿಚಾರಿಸಿದೆವು. ನಿಶ್ಚಯ ಪ್ರಕಾರ ನಮ್ಮ ಪ್ರತಿಬಂಧನೆಯು ನಾವು ಇಚ್ಛಿಸಿದ ಕಾರ್ಯದ ಫಲವನ್ನು ತಂದು ಕೊಟ್ಟಿತು. ಇದರ ಪರಿಣಾಮವನ್ನು ಪೂರೈಸುವದಕ್ಕಾಗಿ ಸರಕಾರವು ನಮ್ಮನ್ನು ಇನ್ನೂ ಸ್ವಲ್ಪ ಹೆಚ್ಚು ವೇಳೆ ಬಂದಿಖಾನೆಯಲ್ಲಿಡುವದೆಂದು, ನಾವು ಇಚ್ಛಿಸುತ್ತೇವೆ ಯಾಕಂದರೆ, ನಮ್ಮ ಬಂಧನೆಯಿಂದ ಬಂಗಾಲ ಪ್ರಾಂತದ ಮನಸ್ಸಿಗೆ, ಸ್ವದೇಶಿ ವ್ರತದ ವೃದ್ಧಿಗಾಗಿಯೂ ಅಸಹಯೋಗ ವ್ರತವನ್ನೊಳಗೊಂಡ ಮಿಕ್ಕ ಕಾರಣಗಳಿಗಾಗಿಯೂ ಅವರಲ್ಲಿ ಚಟುವಟಿಕೆಯು ಹುಟ್ಟಿ ಅದು ಒಳ್ಳೇ ಜಾಗ್ರತೆಯಿಂದ ರಾಷ್ಟ್ರಕಾರ್ಯವೆಸಗುವದು ನಮ್ಮ ಮಿತವಾದಿ ಮಿತ್ರರ ಮನವಾದರೂ ಕರಗುವದು. ಬಂಗಾಲದಲ್ಲಿ ಯಾವ ತರದ ಒಣಗಳಿರುವದಿಲ್ಲ ಇದ್ದರೆ, ಅದೇ ಈ ಅನೀತಿಯುಕ್ತವಾದ ಸರಕಾರದ ವಿರುದ್ಧವಾಗಿ ಬಡದಾಡುವ ಬಣವೇ ಹೊರತು ಬೇರೆಯಿಲ್ಲ.

ಪ್ರ:- ಕಲಕತ್ತೆಯಲ್ಲಿ ಪ್ರತಿ ದಿವಸ ಎಷ್ಟೋ ಸ್ವಯಂಸೇವಕರ ಸಂಗಡಿಗಳನ್ನು ಸೆರೆ ಹಿಡಿಯುವರೆಂದು ಪತ್ರಗಳಲ್ಲಿ ಓದುತ್ತೇವೆ ಈ ಸ್ವಯಂಸೇವಕರ ವಿಷಯಕ್ಕಾಗಿ ಏನಾದರೂ ದಯಮಾಡಿ ಹೇಳುವಿಯಾ?

ಉ:- ಹೇಳುವೆನು ಸ್ವಯಂಸೇವಕರ ಪಂಕ್ತಿಯಲ್ಲಿ ನಮ್ಮನ್ನು ಸೇರಿಸಿಕೊಳ್ಳಿರಿ ಎಂದು ಹಾತೊರೆಯುವ ಜನರಿಂದ ಪ್ರತಿ ದಿವಸವೂ ಕಾಂಗ್ರೆಸ ಕಚೇರಿಯು ಮುತ್ತಲ್ಪಡುವದೆಂದು ನಾನೇನು ಅತಿಶಯೋಕ್ತಿಯಾಗಿ ಹೇಳುವದಿಲ್ಲ ಅವರನ್ನು ಕೈದು ಮಾಡುವ ಪೂರ್ವದಲ್ಲಿ ಹಾಗೇನು ಇದಿಲ್ಲ ಆದರೆ ನಂತರ ಎಲ್ಲ ಸಂಗತಿಗಳೇ ತಿರುಗಿದಂತಾಗಿವೆ

ಪ್ರ:- ಸಾಧಾರಣತ: ಅವರು ಯಾವ ವರ್ಗಕ್ಕೆ ಸೇರಿದವರು?

ಉ:-- ಎಲ್ಲ ವರ್ಗಕ್ಕೆ ಸೇರಿದವರು. ಮೊದಲು ಕಲಿತಂಥ ಜನರೇ ಮುಂದೊರೆಯುತ್ತಿದ್ದರು. ಆದರೆ ಈಗ ಮಾತ್ರ ಕೂಲಿಕಾರರು ಮನೆಯಾಳುಗಳು ಎಲ್ಲರೂ, ಸೆರೆಮನೆಗೆ ಹೋಗುವ ತಮ್ಮ ಉತ್ಕಟೇಚ್ಛೆಯನ್ನು ವ್ಯಕ್ತಪಡಿಸುತ್ತಲಿದ್ದಾರೆ.

ಪ್ರ:- ತಾಯಿಯೇ, ಸ್ವಯಂಸೇವಕರೆಂದೆನಿಸಿಕೊಳ್ಳುವ ಈ ಜನರಿಂದ ದಂಗೆಯ ಭಯವಿರುವದೆಂದು ನೀನೇನು ತಿಳಿಯುವದಿಲ್ಲವೋ

ಉ:- ತಿಲ ಮಾತ್ರವಿಲ್ಲ; ಕಂಡಿಯಾ! ಈ ಶಾಂತತಾಮಯ ಜ್ಯೋತಿಯು ಎಷ್ಟು ಆಶ್ಚರ್ಯಕರವಾಗಿದೆಯೆಂದು ನೋಡತಕ್ಕ ಮಾತಾಗಿದೆ ಎಷ್ಟೋ ಪೋಲೀಸ ಫೌಜದಾರರಿಗೂ ಇದರ ಮರ್ಮವು ಗೊತ್ತಾಗಿದೆ. ಈ ತತ್ವವನ್ನು ತಿಳಿಯಲು ಅಸಮರ್ಥನಾದ ಒಬ್ಬ ಶುದ್ಧ ಟೊಣಪ ಸ್ವಯಂಸೇವಕನ ಉತ್ತೇಗೆಯನ್ನು ಫೌಜದಾರನು ಹಿಡಿದೆಳೆಯಲಾಗ್ಗೆ ಅವನು ಬೈಯುವದನ್ನು ಕಂಡು ಫೌಜದಾರನೇ ಆ ಟೊಣಪನಿಗೆ, ಎಲೇ, ನಿನಗೆ ಈ ಅಸಹಯೋಗ ತತ್ವದ ನಿಜವಾದ ಅರ್ಥವು ತಿಳಿದಿಲ್ಲವೆಂದು ಉದಾರ ತೆಗೆದನಂತೆ.

ಪ್ರ:- ಕಲಕತ್ತೆಯ ಹರತಾಳದ ಬಗ್ಗೆ ನಿನಗೆ ಏನಾದರೂ ಗೊತ್ತಿದೆಯೋ?

ಉ:- ಹರತಾಳದ ದಿನಕ್ಕಿಂತ ಮುಂಚೆಯೆ ಆ ಪಟ್ಟಣವನ್ನು ಬಿಟ್ಟೆನು ಆದರೂ ಎಲ್ಲ ವರ್ಗದವರು ನಮ್ಮ ಕಡೆಗಿದ್ದದರಿಂದ ಆ ಕೆಲಸದಲ್ಲಿ ಜಯ ದೊರೆಯುವದೆಂದು ನನಗೆ ನಂಬಿಗೆಯದೆ. ಅಪ್ರಾಲೋಚನೆಯ ಪರಿಷತ್ತಿಗಾಗಿ ಬಂಗಾಲದ ಚಿತ್ತವೃತ್ತಿಯು ಹೇಗಿರುವದೆಂದು ನಿನಗೆ ಅನಿಸುವದು?

ಉ:- ಬಂಗಾಲವು ಇದಕ್ಕೆ ಧಟ್ಟ ಮುಟ್ಟಾಗಿದೆ. ನಮ್ಮ ಎಲ್ಲ ಮುದ್ದೆಗಳು ಕೈಗೂಡುವವರೆಗೆ ಬಂಗಾಲವು ದಬ್ಬಾಳಿಕೆಯ ನೌಕರಶಾಹಿಯ ಗೂಡ ಯಾವ ಪ್ರಕಾರದ ಒಪ್ಪಂದಕ್ಕೆ ಎಂದಿಗೂ ಮನವೆಳಿಸದು

ಪ್ರ:- ಬಂಗಾಲ ಸರಕಾರದ ಮನಸ್ಸು ಹ್ಯಾಗಿದೆಯೆಂದು ನಿನಗೆ ಅನಿಸುವದ!

ಉ:- ಇದನ್ನು ಹೇಳುವದು ಕಠಿಣವಾಗಿದೆ. ಅದಕ್ಕೆ ಬಹಳೇ ತ್ರಾಸವಾಗಿದೆಯೆಂದು ಅನಿಸಹತ್ತಿದೆ ಯಾಕಂದರೆ ಎಲ್ಲ ಸೆರೆಯಾಳುಗಳಿಗೆ ಸ್ಥಳ ಕೊಡುವದೂ ಚಳಿಗಾಲದ ಬಟ್ಟೆಗಳನ್ನು ಅವರಿಗೆ ಪೂರೈಸುವದೂ ಸರಕಾರಕ್ಕೆ ದುಸ್ತರವಾಗಿದೆ ಎಲ್ಲ ಸೆರೆಮನೆಗಳು ವಂದೇ ಮಾತರಮ್ ಎಂಬ ನಾದ ಗರ್ಜನೆಯಿಂದ ಗಡುಬಿಕ್ಕಿವೆ. ವಿದ್ಯಾರ್ಥಿಗಳು ಕಾರಾಗ್ರಹವಾಸವನ್ನು ಸಂತೋಷದಿಂದ ಸಹಿಸುತ್ತಿರುವರೆಂದೂ ಅದರ ಆನಂದದಲ್ಲಿ ಮಗ್ನರಾಗಿ ರಾತ್ರಿಯಲ್ಲಿ ಕೂಡ ಅವರು ಮಲಗುವದಿಲ್ಲವೆಂದೂ ನಮ್ಮ ಅಣ್ಣನು ನನಗೆ ಹೇಳಿದ್ದನೆ

ಪ್ರ:-- ತಾಯಿಯೇ! ಹೀಗೆ ನಡೆಯುವದು ಶರೆಮನೆಯ ಸಿಸ್ತಿನ ವಿರುದ್ಧವಾಗಿ ನಡೆದಂತಲ್ಲವೇ ಇದು? ನಾವು ಅಲ್ಲಿಗೆ ದು:ಖವನ್ನು ಸಹಿಸಲಿಕ್ಕೆ ಹೋಗಬೇಕು; ಸುಖಕ್ಕೆಂದಲ್ಲ

ಉ:- ನನಗೆ ಗೊತ್ತಿದ್ದ ಮಟ್ಟಿಗೆಯಂತೂ ಸಿಸ್ತಿಗೆ ಭಂಗತರುವ ಉಪಹರಣಗಳಿಲ್ಲ. ಅದ್ದರೂ ಇದ್ದರೂ ಅದು ಒಂದೇ ಹುಡುಗರನ್ನು ಸೆರೆಹಿಡಿದು ಎಳೆದೊಯ್ಯುವ ಗಾಡಿಯಲ್ಲಿ ತುಂಬಿ ಬಹಳೇ ಕ್ರೂರತನದಿಂದ ನಡಿಸಿಕೊಳ್ಳುವ ಮುಂದೆ ಮಾತ್ರ ಸಿಸ್ತಿಗೆ ಭಂಗ ಬಂತು. ನಮ್ಮ ಧ್ಯೇಯವು ಕೈಗೂಡುವ ವರೆಗೆ ಇಂಥ ಸೆರೆ ಹಿಡಿಯುವ, ದಂಗೆಯನ್ನೆಬ್ಬಿಸುವ ಗಲಿಬಿಲಿ ಮಾಡುವ ಪ್ರಸಂಗಗಳನ್ನು ನಾವು ದಾಟಲೇ ಬೇಕಾಗುವದೆಂದು ನಮ್ಮ ಅಣ್ಣನು ಹೇಳುತ್ತಿರುವದು ನನಗೆ ಗೊತ್ತಿದೆ. ಮೊದಲನೇ ಪಾವಟಿಗೆಯನ್ನು ಚನ್ನಾಗಿ ದಾಟಿರುವೆವು ಎರಡನೇ ಮೆಟ್ಟಿಗೆ ಬಂದಿರುವೆವು. ಇನ್ನು ಮುಂದೆ ಗೋಳಿಬಾರಿಗೆ ಗುರಿಯಾಗುವ ಮೂರನೆ ಮೆಟ್ಟು ಉಳಿದಿದೆ. ಇದಕ್ಕೆ ಧೈರ್ಯದಿಂದ ಎದೆ ತಟ್ಟಿ ನಿಂತರೆ, ದಬ್ಬಾಳಿಯ ಹೆಸರಿಕೆಯನ್ನು ಅಳಿದು ಸ್ವರಾಜ್ಯವನ್ನು ಪಡೆಯುವೆವು.

(ಯಂಗ ಇಂಡಿಯಾದ ಕಾಂಗ್ರೆಸ್ಸ ಸಪ್ಲಿಮೆಂಟದಿಂದ)

## ಸೆರೆಮನೆಯನ್ನು ಸೇರುವದು ಎಷ್ಟು ಆನಂದಕರವು

ಶ್ರೀ ಸೀ. ರಾಜಗೋಪಾಲಾಚಾರ್ಯರ ಪತ್ರವು.

ತಾ|| ೧೮|೧೨|೨೧

### ನನ್ನ ಪ್ರೀತಿಯ ಮಹಾತ್ಮಾಜೀ.

೧೫ ನೇ ತಾರೀಖಿನ ದಿವಸ ನಾನು ವೆಲ್ಲೂರ ಜಿಲ್ಹಾಧಿಕಾರಿಯ ಕೋರ್ಟಿಗೆ ಹಾಜರಾದೆನು. ನನ್ನ ಒಪ್ಪಿಗೆಯನ್ನು ಕೇಳಿದನು. ಅಂದು ಒಬ್ಬ ಸಾಕ್ಷೀದಾರನನ್ನು ಚರ್ಚಿಸಿ ಮುಂದಿನ ಕೆಲಸವನ್ನು ಮರು ದಿವಸ ಹಾಕಿದನು. ಇಂದು ರಾತ್ರಿ ನಾನು ಅಲ್ಲಿಗೆ ಹೋಗುವೆನು. ಜಾಮೀನನ್ನು ಕೊಡಲು ನಾನು ನಿರಾಕರಿಸಿದರೂ ಅವನು ನನ್ನನ್ನು ಪನಃ ಅಟುಕಿನಲ್ಲಿಡಲಿಲ್ಲ.

ನಿಮ್ಮ ಪತ್ರಗಳೂ ತಾರುಗಳೂ ನನ್ನ ಹತ್ತರ ಇದ್ದವು. ಜೇಲಿಗೆ ಹೋಗುವದು ಎಷ್ಟು ಆನಂದಕರವಾಗಿರುವದು! ನಿಮ್ಮ ಚಿಂತೆಯನ್ನೂ ಏಕಾಂತವಾಸವನ್ನೂ ನಾನು ತಿಳಿದು ನೋಡಲು, ನಿಮ್ಮನ್ನು ಅಗಲಿದ ಅಪರಾಧಿಯೆಂದು ನನಗೆ ಅನಿಸಹತ್ತಿದೆ. ನನ್ನನ್ನು ಕ್ಷಮಿಸುವಿರೆಂದು ನಂಬಿರುವೆನು.

ಸರಕಾರದ ಕಾರಸ್ಥಾನದಲ್ಲಿ ಬದಲಾಗುವದೆಂದು ನನಗೆ ಪೂರ್ಣ ವಿಶ್ವಾಸವಿದೆ. ಮಿತವಾದಿಗಳು ಮಿಸಕ್ಯಾಡಲಾರಂಭಿಸುವದು ಉಪ ಸಭೆಗಳನ್ನು ಬಯಸುತ್ತಿರುವರು. ನಮ್ಮ ಒಯುಕೆಯು ಅಕಾಲದಲ್ಲಿಯೇ ಪೂರ್ಣವಾಗಹತ್ತಿರುವದು. ಒಪ್ಪಂದದ ಪರಿಷತ್ತುಗಳಿಂದ ನಮಗೆ ಅಷ್ಟೇನೂ ಲಾಭವಾಗದು. ನಾವು ಮಾಡಿದ ಸ್ವಾರ್ಥತ್ಯಾಗವು ಎಷ್ಟೋ ಪ್ರಮಾಣದಿಂದ ಕಡಿಮೆಯಾಗಿರುವದು; ಅದೂ ಅವರಿಂದ ದೊರಕಿಸತಕ್ಕದು ಬಹಳ ದೊಡ್ಡದಾಗಿದೆ.

ಈಗ ಮಾತ್ರ ನೀವು ಒಬ್ಬರೇ ಆಗಿದ್ದರೂ ದೇವರು ನಿಮ್ಮ ಕೂಡ ಸಂಚರಿಸುತ್ತಿರುವನು ಕಾರಣ ನೀವು ಸಮರ್ಥರಿರುವಿರಿ.

ನಮ್ಮ ಕಾರ್ಯಕ್ರಮದಲ್ಲಿ ಯಾವ ತರದ ಬದಲಾವಣೆಯನ್ನು ಮಾಡಕೂಡದು. ಮಾಡಿದರೆ, ಸವಿನಯ ಆಜ್ಞಾಭಂಗವ್ರತವನ್ನು ಸ್ವೀಕರಿಸುವದು ಒಂದೇ. ರಾಷ್ಟ್ರಧುರೀಣರೆಲ್ಲರೂ ಅಟುಕಿನಲ್ಲಿದ್ದದರಿಂದ ಮವಾಳಿಗರು ಈ ನಮ್ಮ ಚಳವಳಿಯಲ್ಲಿ ಸಡಿಲು ಹುಟ್ಟಿಸಲು ತಮ್ಮ ಕೈಯಿಂದಾದಷ್ಟು ಪ್ರಯತ್ನಿಸುತ್ತಿರುವರು. ಆದರೆ ಅವರಿಗೆ ಆಸ್ಪದ ಕೊಟ್ಟು ಕಾರ್ಯಕ್ರಮದಲ್ಲಿ ಬದಲಾಯಿಸುವದೇ ನಮ್ಮ ಮರಣವೆಂದು ತಿಳಿಯತಕ್ಕದ್ದು. ಜನತೆಯಲ್ಲಿ ಈಗ ಒಂದು ತರದ ಹೊಸ ಜ್ಯೋತಿಯು ಹುಟ್ಟಿರುವದರಿಂದ ನಿಮ್ಮ ಸವಿನಯ ಆಜ್ಞಾಭಂಗವ್ರತವು ಕೈಗೂಡುವದು.

ಡಾ|| ರಾಜನ್ನರವರು ಅಹ್ಮದಾಬಾದಿಗೆ ಬರುವರು, ಬಂದು ಅಲ್ಲಿ ತಮ್ಮ ಕೆಲಸವನ್ನು ಜರಗಿಸುವದು.

ಕ್ರಿಮಿನಲ್ ಲಾ. ಅಮೆಂಡಮೆಂಟ ಆಕ್ಟಿನ ಪ್ರಕಾರ ಸರಕಾರದ ಉಪಟಳವನ್ನು ... ಮನಸ್ಸಿನಿಂದ ಸಹಿಸಲು ಯೋಗ್ಯ ಸಂಧಿಯು ದೊರೆದಂತಾಗಿದೆ.

ಮೋಪ್ಲಾದಿಂದ ತಿರುಗಿ ಬಂದ ಕೆಲವು ಆಂಗ್ಲ ಶಿಪಾಯಿಗಳನ್ನು ಸ್ವಲ್ಪ ದರ್ಶಾವಿಸಿದೆನು "ಮವಾಳ ಜನರು ಎರಡು ಗುಡ್ಡಗಳನ್ನು ಸೇರಿರುವರು ಅವರನ್ನು ತಮ್ಮ ಸೈನ್ಯವು ಸುತ್ತುಗಟ್ಟುತ್ತಲಿರುವದು." ಎಂದು ಅವರು ನನಗೆ ತಿಳಿಸಿದರು. ಈ ತಿಂಗಳೊಳಗಾಗಿಯೇ ಮೋಪ್ಲಾ ಜನರಿಲ್ಲದಂತೆ ಮಾಡುವದು ಆ ಶಿಪಾಯರ ಅಪೇಕ್ಷೆಯು. ಯಾವ ಪ್ರಕಾರದ ಒಪ್ಪಂದವಿಲ್ಲದೆ, ಮರಣಾಂತ್ಯದ ವರೆಗೂ ಈ ಯುದ್ಧವು ನಡೆಯುವದು.

ಶ್ರೀ ಜೋಸಫ ವರು ಆಗ್ರಾ ಜೇಲಿನಲ್ಲಿ ಆನಂದದಿಂದಿರುವರೆಂದು ಅವರ ಪತ್ನಿಯು ತಿಳಿಸುವಳು. ಅವಳಿಗೆ ಮುಂದೇನು ಮಾಡಬೇಕೆಂಬದು ಅರಿಯದಂತಾಗಿದೆಯಂತೆ ನೀವು ನಿಮಗೆ ಯೋಗ್ಯ ವೇಳೆ ದೊರೆತಾಗ್ಗೆ ಅವಳಿಗೆ ಒಂದ ಪತ್ರ ಬರೆದು ಏನು ಮಾಡಬೇಕೆಂಬದನ್ನು ಉಪದೇಶಿಸುವಿರೆಂದು ನಾನು ಇಚ್ಛಿಸುವೆನು.

ನಿಮ್ಮ ನಂಬಿಗೆಯ.

ಶ್ರೀ. ರಾಜಗೋಪಾಲಾಚಾರ್ಯ.

---

### ದ್ರವಿಡ ದೇಶದ ಕಾಂತಾರವು.

ಮದ್ರಾಸ ಮತ್ತು ಆಂಧ್ರ ದೇಶಗಳು ರಾಷ್ಟ್ರಕಾರ್ಯದಲ್ಲಿ ಸಾವಕಾಶವಾಗಿ ಅಂಬೇಗಾಲಿ ಹತ್ತು ನಡೆದಿದ್ದರೂ ಅವು ಒಮ್ಮೆ ಇಟ್ಟ ತಮ್ಮ ಹೆಜ್ಜೆಗಳನ್ನು ಹಿಂದೊಗೆಯದಷ್ಟು ನಿಶ್ಚಯಾತ್ಮಕವಾಗಿರುವವು. ೧೫೦೦ ಸೆರೆಯಾಳುಗಳನ್ನು ಈಗಿಗ ಒದಗಿಸಿಕೊಟ್ಟು ತನ್ನ ಕೀರ್ತಿಯನ್ನು ಕಾಯ್ದುಕೊಂಡ ಮಂಗೇಯರನ್ನು ಈ ದ್ರಾವಿಡಿಗರು ಸರಿಗಟ್ಟುವದು ನನಗೇನೂ ಆಶ್ಚರ್ಯದ ಮಾತಾಗಿಲ್ಲ. ಮಿತವ್ಯಯದಲ್ಲಿ ಏರೋಡವು ಒಂದೇ ತನ್ನ ಎದೆಗಾರಿಕೆಯನ್ನು ತೋರಿಸಿದೆ. ಶ್ರೀ ರಾಮಸ್ವಾಮಿ ನಾಯಕರವರು ಒಂದು ತಿಂಗಳ ಸಾಧಾ ಶಿಕ್ಷೆಯಿಂದ ಸಂಭಾವಿಸಲ್ಪಟ್ಟಿರುವರು. ಕಳೆದ ಹದಿನೈದು ದಿನಗಳಲ್ಲಿ ಈ ಸಣ್ಣ ಪಟ್ಟಣವು ೩೭ ಸೆರೆಯಾಳುಗಳನ್ನು ಒದಗಿಸಿಕೊಟ್ಟಿದೆ. ಇವರ ಪತ್ನಿಯೂ ಭಗಿನಿಯೂ ಪಿಕೆಟಿಂಗ ಕೆಲಸವನ್ನು ಕೈಕೊಳ್ಳುವವರಿದ್ದರೆ. ಅಲ್ಲಿ, ಕ್ರಿಮಿನಲ್ ಲಾ ಅಮೆಂಡಮೆಂಟ ಆಕ್ಟವು ಪ್ರಚಾರದಲ್ಲಿ ತರಲ್ಪಟ್ಟದೆ. ಲಾರ್ಡ ವಿಲಿಂಗ್ಡನ್ನರು ತಮ್ಮ ಕಾರಸ್ಥಾನವನ್ನು ಹುಬಿಬಿಟ್ಟದ್ದಾರೆ, ಸರ ಹಾರ್ ಕೋರ್ಟ ಬಟ್ಲರಂತೆ ಇವರಿಗಾದರೂ ತಮ್ಮ ಕಾಯಿದೆ ಕಾನೂನಗಳ ಮಾನವನ್ನು ಕಾಯ್ದುಕೊಳ್ಳಬೇಕಾಗಿದೆ. ತಂಗಾಳಿಯಂತೆ ಬೀಸುವ ಈಗಿನ ಕ್ಷೇಮವೆಯು ವಾತಾವರಣವು, ಬಿಮ್ಮಿಲ್ಲೊಮ್ಮೆ ಸೊಂಟರ ಗಾಳಿಯಂತೆದ್ದು ಗಿಮಿಗಿಮಿ ತಿರುಗಬಹುದೆಂದು ನಾವು ನಿರೀಕ್ಷಿಸಬಹುದು. ಶ್ರೀ ರಾಜಗೋಪಾಲಾಚಾರ್ಯ ಮತ್ತು ಶ್ರೀ ಸುಬ್ರಮಣ್ಯ ಶಾಸ್ತ್ರಿಗಳ ಖಟ್ಲೆಗಳು ಇನ್ನೂ ಸಮನ್ಸಿನಲ್ಲಿ ... ಬಹುತೇಕವಾಗಿ ಮುಗಿದಂತಾಗಿದೆ. ರಾಜಗೋಪಾಲಾಚಾರ್ಯರು ಒಂದು ಭಯಂಕರ ಶಿಕ್ಷೆಗೆ ಗುರಿ ಮಾಡಲ್ಪಟ್ಟಿರುವರು. ಮ್ಯಾಜಿಸ್ಟ್ರೇಟರು ಇವರ ಮೇಲೆ ದಯವಿಟ್ಟು ವ್ಯಾಧಿಗ್ರಸ್ತವಾದ ಇವರ ಶರೀರ ಪೋಷಣೆಯ ಕೆಲಸವನ್ನು ಜೇಲರ ಸಾಹೇಬರಿಗೆ ಒಪ್ಪಿಸುವರೆಂದು ನಾನು ಅಪೇಕ್ಷಿಸುವೆನು. ಪಂಡಿತ ಮೋತೀಲಾಲಜಿಯವರಂತೆ ಇವರಾದರೂ ಅಸಹಯೋಗವ್ರತದ ಆರಂಭದಿಂದ ತಮ್ಮ ದೇಹವನ್ನು ಎಡಬಿಡದೆ ಸವೆಸಹತ್ತಿರುವರು. ಈಗ ಉಳಿದ ಡಾ. ಅನಸೂರಿಯವರು ಕಾಂಗ್ರೆಸ ಕಮಿಟೀಯ ಸಂಪೂರ್ಣ ಸೆಕ್ರೆಟರಿಗಳಾಗಿರುವರು. ಇವರಾದರೂ ತಮ್ಮ ಶ್ರೇಯಸ್ಕರವಾದ ದೇಶ ಸೇವೆಗಾಗಿ ಪಾರಿತೋಷಿಕವನ್ನು ಪಡೆಯಲಿಕ್ಕಿಲ್ಲವೆಂದು ನನಗೆ ಸಂಶಯವಿಲ್ಲ. ಇನ್ನು ಕಾಂಗ್ರೆಸ ಮತ್ತು ಖಿಲಾಫತ್ತ ಕಮಿಟಿಗಳು ಕಾಯ್ದೆಗೆಟ್ಟ ಸಂಘಗಳೆಂದು ಸರಕಾರವು ಕಟಕಡೆಗೆ ಪ್ರಕಟಿಸುವ ಸಂಪೂರ್ಣ ತಯಾರಿಯಲ್ಲಿದೆ. ಆ ಮೇಲೆ ಈ ಸಂಘಗಳಲ್ಲಿ ಅಂಗಕೊಟ್ಟ ಪ್ರತಿಯೊಂದು ವ್ಯಕ್ತಿಯು ತನ್ನಷ್ಟಕ್ಕೆ ತಾನೇ ಅಪರಾಧಿಯೆಂದು ಹೇಳಲು ಯೋಗ್ಯನಾಗುವದು. ಪ್ರೊಸೀಜರದ ಪದ್ಧತಿಯಿಂದ ಇಂಥ ಪ್ರಕಟಣೆಗಳಾದರೂ ವಿಶ್ವಸನೀಯವಲ್ಲ. ರಾಷ್ಟ್ರೀಯ ಸಭೆಯು ಶಾಂತತಾಮಯವಾದ ತನ್ನ ಗತಿಯನ್ನು ಕಾಯ್ದಿಟ್ಟುಕೊಂಡ ನಡೆದರೆ, ಆಗಿದ್ದ ಸರಕಾರವು ತಾನಾಗಿಯೇ ಹಣ್ಣಿಗೆ ಬರುವದು ತನ್ನ ಅಸ್ತಿತ್ವವು ಒಳ್ಳೇ ಚಿತ್ರಯುಳ್ಳದ್ದೆಂದು ರಾಷ್ಟ್ರೀಯ ಸಭೆಗೆ ಅನಿಸಿದರೆ, ಅದು ತನ್ನ ಗತಿಯಲ್ಲಿ ಒಂದು ಕೂದಲೆಳೆಯಷ್ಟು ಸಹ ಹಿಮ್ಮೆಟ್ಟಲಿಕ್ಕಾಗದು. ನಮ್ಮ ಮಹಾ ರಾಷ್ಟ್ರೀಯ ಸಭೆಯು ಈಗಿನ ಪರೀಕ್ಷೆಯ ಪ್ರಸಂಗದಲ್ಲಿ ಬರೆಗಲ್ಲಾಗಿ ಉಳಿಯಲಿಕ್ಕೆ ಸ... ಕಾರವು ತಂದು ಕೊಡುವ ಮುಖಾನುಭವಗಳು ಕಾರಣವಲ್ಲ. ಆದರೆ, ಜನತೆಯ ಮೇಲೆ ... ಕ್ಕಂತಾದ ರಾಷ್ಟ್ರೀಯ ಸಭೆಯ ಅನುಪನೀಯವಾದ ವರ್ಚಸ್ಸಿನ ಭಾರವೇ ಅದಕ್ಕೆ ಕಾರಣವು. ಈ ದೃಷ್ಟಿಯಿಂದು ನಿರೀಕ್ಷಿಸಲು, ಸರಕಾರವು ಈ ಚಳವಳಿಯನ್ನು ಮುರಿಯಲಿಕ್ಕೆ ಎಷ್ಟು ಸತ್ತು ಹೊಡೆದು ನಿಂತಾಗ್ಯಾದರೂ ನಮ್ಮ ರಾಷ್ಟ್ರೀಯ ಸಭೆಯು ಅದಕ್ಕೆ ಈಡಾಗಿ ... ಯುವದೇ ಸ್ವರಾಜ್ಯವೆಂದು ಕರೆಯಲ್ಪಡುವ...

---

### ವಿಶಿಷ್ಟ ಪ್ರತಿಜ್ಞೆಯು.

ದಿಲ್ಲಿಯಲ್ಲಿ ಶಾಂತತೆಯನ್ನು ಸ್ಥಿರವಡಿಸುವದಕ್ಕಾಗಿ ಮಾಡಿದ ಉದ್ಯೋಗದ ನಿಜವ ಸ್ವರೂಪವನ್ನು ತೋರಿಸುವದಕ್ಕಾಗಿ ಅ... ಅಲ್ಲಿಯವರು ಇನ್ನೂ ೫೦ ಜನರ ಸಂಗ... ರಕಾರದಿಂದ ಹಿಡಿಯಲ್ಪಡುವದಕ್ಕಾಗಿ ಮ... ರಿದಾಗ ಬರೆದ ಪತ್ರದಲ್ಲಿಯ ಅವರ ವಿ... ಪ್ರತಿಜ್ಞೆಯನ್ನು ಕೆಳಗೆ ಕೊಡುತ್ತೇನೆ—

(೧) "ಶಾಂತತ ಯುಕ್ತ ಸಾಧನಗ... ಸ್ವರಾಜ್ಯವನ್ನು ಗಳಿಸುವದು. (೨) ... ಸ್ತಾನದ ವಿವಿದ ಜಾತಿ ಧರ್ಮಗಳ ಅನು... ಯಿಗಳಲ್ಲಿ ಐಕ್ಯವನ್ನು ಸ್ಥಿರಪಡಿಸಿ ಜ...

ವು; (೩) ಯಾವದೇ ಜಾತಿಯವನ್ನಾಗಲಿ ಸಮಾಜವನ್ನಾಗಲಿ ಅಸ್ಪೃಶ್ಯ ಅಥವಾ ನಿಂದ್ಯರೆಂದು ಎಣಿಸದೆ ಇರುವದು, (೪) ಮಾತೃಭೂಮಿಯ ಹಿತ ಮತ್ತು ಅಭಿಮಾನಕ್ಕಾಗಿ ನನ್ನ ಜೀವನ-ಸರ್ವಸ್ವವನ್ನು ಅರ್ಪಿಸುವದು, (೫) ಸ್ವದೇಶದಲ್ಲಿ ಕೈನೂಲಿನಿಂದ ಕೈಮಗ್ಗದ ಮೇಲೆ ತೆಗೆದ ಬಟ್ಟೆಗಳನ್ನು ಧರಿಸುವದು; (೬) ಅಧಿಕಾರಿಗಳ ಅಪ್ಪಣೆಗಳನ್ನು ಪ್ರತೀಕರಿಸದೆ ಪಾಲಿಸುವದು; (೭) ನಾನು ಸ್ವಯಂ ಸೇವಕರ ಸಂಘದಿಂದ ಮುಕ್ತ ಮಾಡಲ್ಪಡದೆ ಇರುವವರೆಗೆ (ಇಲ್ಲವೆ ರಾಷ್ಟ್ರೀಯ ಸಭೆಯು ಈ ಧೋರಣವನ್ನು ಅನುಸರಿಸಲಿಕ್ಕೆ ಆಜ್ಞಾಪಿಸುವವರೆಗೆ) ಸ್ವತಃ ಅಹಿಂಸೆಯ ತತ್ವವನ್ನು ಅನುಸರಿಸುವದು ಮತ್ತು ಉಳಿದವರನ್ನು [illegible] ಮಾಡಲಿಕ್ಕೆ ಉಪದೇಶಿಸುವದು (೮) ರಾಷ್ಟ್ರೀಯ ಸ್ವಯಂ ಸೇವಕರ ಸಂಘದ ಗೂ ನನ್ನ ಸಂಬಂಧ ವಿರುವವರೆಗೆ ನನಗೆ ಒದಗಬಹುದಾದ ಕೊರತೆ ಕಷ್ಟಗಳನ್ನು ನಾನು ಆನಂದದಿಂದ ಸಹಿಸುವೆನು ಮತ್ತು ನಾನಾಗಲಿ ಇಲ್ಲವೆ ನನ್ನ ಮೇಲಿನ ಅವಲಂಬಿಗಳಾಗಲಿ ಮತ್ತು ನನ್ನ ಆಪ್ತರಾಗಲಿ ಈ ಬಗ್ಗೆ ಏನೂ ಪ್ರತಿಫಲಗಳನ್ನು ತೆಗದು ಕೊಳ್ಳಬಯಸುವದಿಲ್ಲ.

ಇವು ನನ್ನ ಪವಿತ್ರ ಕರ್ತವ್ಯಗಳೆಂದು ಸರ್ವಜ್ಞನಾದ ಪರಮೇಶ್ವರನಲ್ಲಿ ಪೂರ್ಣ ವಿಶ್ವಾಸವಿಟ್ಟು ನಾನು ಇವನ್ನು ಪ್ರಸಿದ್ಧಮಾಡುತ್ತೇನೆ.

---

## ಕನ್ನಡ ನವಜೀವನ.

# ಸೆರೆಮನೆಯಲ್ಲಿ ಹೇಗಿರಬೇಕು?

ಪೌಷ್ಯ ಶು॥ ೬ ಗುರುವಾರ ಶಕೆ ೧೮೪೩

---

“ಅಸಹಯೋಗವ್ರತವನ್ನು ಸ್ವೀಕರಿಸಿದ್ದಕ್ಕಾಗಿ ಬಂಧಿಸಲ್ಪಟ್ಟ ಸೆರೆಯಾಳುಗಳು, ಸೆರೆಮನೆಯ ಶಿಸ್ತಿನ ನಿಯಮವನ್ನುಲ್ಲಂಘಿಸಿ ಸೆರೆಮನೆಯಲ್ಲಿ ಸಿಕ್ಕುವಿಕ್ಕ ಕೈಮುಗಳನ್ನು ಅತ್ಯಾಚಾರಕ್ಕೆಳಸುವಂಥ ‘ವಂದೇ ಮಾತರಂ’ ಎಂಬಿ ಗಜಘೋಷಗಳನ್ನು ಜೇಲಿನಲ್ಲಿ ಮಾಡಬಹುದೋ? ತಮಗೆ ಕೊಡತಕ್ಕ ಆಹಾರದಲ್ಲಿ ಸುಧಾರಣೆಯನ್ನು ಮಾಡುವ ಬಗ್ಗೆಯೂ, ಮಿಕ್ಕ ಸೌಕರ್ಯಗಳನ್ನು ಪಡೆಯುವ ಬಗ್ಗೆಯೂ, ಉಪವಾಸ ವ್ರತವನ್ನು ಅಸಹಯೋಗಿಗಳು ಕೈಕೊಳ್ಳಬಹುದೋ? ಹಬ್ಬಗಳ ದಿನಗಳಲ್ಲಿಯೂ ಮಿಕ್ಕ ದಿನಗಳಲ್ಲಿಯೂ ಜೇಲಿನಲ್ಲಿಯ ತಮ್ಮ ಕೆಲಸಕ್ಕಾಗಿ ಅವರು ಸಂಪು ಮಾಡಬಹುದೋ? ಸೆರೆಮನೆಯ ಶಿಸ್ತನ್ನು ಕಾಯ್ದುಡುವ ನಿಯಮಗಳು ತಮ್ಮ ಸದಸದ್ವಿವೇಕ ಬುದ್ಧಿಗೆ ಭಂಗ ಬರುವಂಥವುಗಳಿದ್ದರೆ ಅವುಗಳನ್ನು ಮೀರಿ ನಡೆಯಲಿಕ್ಕೆ ಅಸಹಯೋಗಿಗಳಿಗೆ ಅಧಿಕಾರವುಂಟೋ?” ಹೀಗೆ ಕಲಕತ್ತೆಯ ಜೇಲಿನಲ್ಲಿದ್ದ ನನ್ನ ಓರ್ವ ಅಸಹಯೋಗಮಿತ್ರನು ತಂತಿಯಿಂದ ನನಗೆ ಕೇಳಿರುವನು. ಹೀಗೆಯೇ ಬೇರೊಬ್ಬ ಮಿತ್ರನು ನನಗೆ ಪ್ರಶ್ನೆ ಮಾಡಿದ್ದಾನೆ. ಇದಕ್ಕೆ ವಿರುದ್ಧವಾಗಿ ಎಷ್ಟೋ ಸೆರೆಯಾಳುಗಳು ಜೇಲಿನ ನಿಯಮಗಳನ್ನು ಒಳ್ಳೇ ಜಾಗರೂಕತೆಯಿಂದ ಪಾಲಿಸುವರೆಂದು ನನಗೆ ಗೊತ್ತಿದೆ.

ಸಾವಿರಾರು ಜನರು ಕಾರಾಗೃಹವನ್ನು ಪ್ರವೇಶಿಸುತ್ತಿರುವ ಸಮಯದಲ್ಲಿ ಅಹಿಂಸಾತ್ಮಕ ಆಣೆಯನ್ನಿಟ್ಟುಕೊಂಡ ಅಸಹಯೋಗಿಗಳು ತಾವು ಮುಂದೆ ಸ್ವೀಕರಿಸುವ ಉಪಾಯಗಳನ್ನು ಗೊತ್ತು ಮಾಡಿಕೊಳ್ಳುವದು ಅವಶ್ಯವಿದೆ. ಅಸಹಯೋಗವ್ರತವು ನಿಯಮಬದ್ಧವಾಗಿರುವದಿಲ್ಲವೆಂದು ತಿಳಿದುಕೊಂಡು ಮನಬಂದಂತೆ ನಡೆದರೆ ಅದು ಕರ್ತವ್ಯವೆಂದೆನಿಸದೆ ಅಪರಾಧವೆನಿಸುತ್ತದೆ. ನೀತಿ ಅನೀತಿಗಳನ್ನು ವಿಂಗಡಿಸುವ ಮಧ್ಯರೇಖೆಯು ಯಾವಾಗಲೂ ಕಾಣಬರಲಾರದಷ್ಟು ಸೂಕ್ಷ್ಮವಾಗಿರುವದು. ಆದರೂ ಅದು ದ್ವಿಭಾಜಕವಾಗಿ ವ್ಯಕ್ತವಾದದ್ದಿರುವದು.

ಈಗಿನ ಕಾಲದಲ್ಲಿ ಎಷ್ಟೋ ನಿರಪರಾಧಿಗಳೂ ಅಪರಾಧಿಗಳೂ ಕೂಡಿಯೇ ಜೇಲಿನಲ್ಲಿರುತ್ತಾರೆ. ಅವರ ಉಡುಪು ತೊಡಪುಗಳೂ ಒಂದೇ. ಒಂದೇ ತರದ ಅನ್ನವನ್ನು ಅವರು ಉಣ್ಣುವರು. ಬಹಿರಂಗವಾಗಿ ಅವರು ಒಂದೇ ಪ್ರಕಾರದ ಶಿಸ್ತಿಗೆ ಒಳಪಟ್ಟಿರುತ್ತಾರೆ. ಆದರೆ ಅಪರಾಧಿಗಳು ಜೇಲಿನ ನಿಯಮಗಳನ್ನು ಮನಸ್ಸಿಲ್ಲದೆ ಪಾಲಿಸುವರು. ಪ್ರಸಂಗ ವಿಶೇಷದಲ್ಲಿ ಅವುಗಳನ್ನು ಮೀರಿ ನಡೆಯಲಿಕ್ಕೆ ಸಹ ಯತ್ನಿಸುವರು. ನಿರಪರಾಧಿಗಳು ಆ ನಿಯಮಗಳನ್ನು ಬಹು ದಕ್ಷತೆಯಿಂದ ಪಾಲಿಸುತ್ತಾರೆ. ಎಷ್ಟೋ ಪ್ರಸಿದ್ಧ ಸೆರೆಯಾಳುಗಳು ಜೇಲಿನಲ್ಲಿರುವದರಿಂದಲೇ ಅವರ ಕೈಕೊಂಡ ಕಾರ್ಯದ ಪೂರ್ತಿಗೆ ಅವರಿಂದ ಹೆಚ್ಚು ನೆರವಾಗುತ್ತದೆ. ಅವರ ಕೆಲಸಗಳಲ್ಲಿಯ ದೃಢಭಾವನೆಯು ಹೆಚ್ಚಾದಂತೆ ಅದರ ಪ್ರಮಾಣವಾದರೂ ಹೆಚ್ಚಾಗುವದು. ಇಂಥ ಕೆಲಸದ ಕಡೆಕಡೆಯಲ್ಲಿಯೇ ಜೇಲಿನ ಶಿಸ್ತು ಇರುವದು.

ಸೆರೆಮನೆಯ ಶಬ್ದವನ್ನೇ ನಾವು ತೆಗೆದು ಹಾಕಲು ಹಾತೊರೆಯುವದಿಲ್ಲವೆಂದು ನೆನಪಿನಲ್ಲಿಡತಕ್ಕ ಮಾತು. ನಮಗೆ ಸ್ವರಾಜ್ಯ ಸಿಕ್ಕ ಮೇಲೆ ಸೆರೆಮನೆಗಳನ್ನು ಇಡಬೇಕಾಗುವದೆಂಬ ಭೀತಿಯು ನನ್ನಲ್ಲಿದೆ. “ಸ್ವರಾಜ್ಯ ಸಿಕ್ಕ ಮೇಲೆ ನಾವು ಬಿಡುಗಡೆಯಾಗುವೆವು; ಆವಾಗ ಇವರೆಲ್ಲ ಒಳ್ಳೇ ರೀತಿಯಿಂದ ನಮ್ಮನ್ನು ನಡೆಯಿಸಿಕೊಳ್ಳುವರು” ಎಂಬೀ ಭಾವನೆಯು [illegible]ನಾದ ಅಪರಾಧಿಗಳಲ್ಲಿ ಹುಟ್ಟದಂತೆ ಮಾಡುವದು ನಮಗೆ ಕಠಿಣವಾದ ಮಾತಾಗಿದೆ. ನಮ್ಮ ಸ್ವರಾಜ್ಯದ ಸುಧಾರಣೆಯಲ್ಲಿ ಪ್ರತಿಯೊಂದು ಸೆರೆಮನೆಯು ಪುನಃ ಸ[illegible]ಸ ಬೇಕೆಂದು ನಾನು ಇಚ್ಛಿಸುವೆನು. ಆಗ ಅಂತಹ ಸೆರೆಮನೆಯಲ್ಲಿಯು ಕೂಡ ಶಿಸ್ತಿನ ನಿಯಮಗಳಿಗಾಗಿ ನಾವು ವಿಶೇಷ ಕಾಳಜಿ ತಕ್ಕೊಳ್ಳುವೆವು. ಅಪರಾಧಿಗಳನ್ನು ಶಿಸ್ತು ಇಡಲಿಕ್ಕೆ ಒತ್ತಾಯ ಮಾಡುತ್ತೇವೆ. ಮತ್ತು ಅವರ ಕಡೆಯಿಂದ ಇವನ್ನು ತೆಕ್ಕೊಳ್ಳುತ್ತೇವೆ. ‘ಬೇಸಿಸ್ತಿಗೆ’ ನಾವು ಆಶ್ರಯಕೊಟ್ಟರೆ, ಸ್ವರಾಜ್ಯದ ಮುಂದೋಟದಲ್ಲಿ ನಿಜವಾಗಿ ಹಿಂದಡಿ ಇಟ್ಟಂತಾಗುವದು. ನಾವು ಸುಧಾರಿಸಿದವರಾದ್ದರಿಂದ ಸ್ವಲ್ಪಾವಕಾಶದಲ್ಲಿಯೇ ಒಳ್ಳೇ ಧೋರಣವನ್ನು ನೆಲಗೊಳಿಸುವೆವೆಂಬ ನಂಬಿಗೆಯಲ್ಲಿಯೇ ನಿಜವಾಗಿ ನಮ್ಮ ಸ್ವರಾಜ್ಯ ಕಾರ್ಯಕ್ರಮದ ಚಪಲತೆಯಿರುವದೆಂದು ತಿಳಿಯತಕ್ಕದ್ದು.

ಇವಲ್ಲದೆ ಅನ್ಯಾಯವಾದಂಥ ಮತ್ತು ನೀತಿಗೆಟ್ಟಂಥ ದೇಶದ ಕಟ್ಟಳೆಗಳನ್ನು ಮೀರಿ ನಡೆಯಲಿಕ್ಕೆ ನಮ್ಮ ಸವಿನಯ ಆಜ್ಞಾಭಂಗ ವ್ರತವು ಸಾರಿ ಹೇಳುವದು. ಅಂತಹ ಕಟ್ಟಳೆಗಳನ್ನು ಹಾರಿಸಿ ಒಗೆಯಲಿಕ್ಕೆ ಎಲ್ಲರೂ ಯತ್ನಿಸುವರು. ಅಂದಮೇಲೆ ಮೀರಿನಡೆದ ತಪ್ಪಿಗೆ ನಮ್ರತನದಿಂದಲೂ ಸ್ವೇಚ್ಛೆಯಿಂದಲೂ ಒಪ್ಪಿ ನಡೆಯಲಿಕ್ಕಬೇಕು. ಕಾರಣ ಸೆರೆಮನೆಯಲ್ಲಿಯ ಧೋರಣಕ್ಕೂ ಅಲ್ಲಿಯ ಬಿಗಿಗೆಲಸಕ್ಕೂ ಆನಂದದಿಂದ ಒಪ್ಪಿ ನಡೆಯಲು ಬೇಕು.

ಇನ್ನು ನೈತಿಕ ಧೈರ್ಯವಾದಿಯ ವಿರೋಧಿಸುವಿಕೆಯು ಬಲಗುಂದುವದೆಂದು ಸ್ಪಷ್ಟವಾದಂತಾಯಿತು. ಅದರಂತೆಯೇ ಅವನ ವಿಧೇಯತ್ವವು, ಅವನು ಒಬ್ಬರ ಅಧೀನದಲ್ಲಿದ್ದದ್ದಕ್ಕೆ ಆವಶ್ಯಕವಾದದ್ದೆಂಬುದು ಸ್ಪಷ್ಟವು. ಬಂಧಿಸಲ್ಪಟ್ಟಾಗ್ಗೆ ಅವನಲ್ಲಿ ಯಾವತರದ ಅಧಿಕಾರವು ಹುಟ್ಟದು. ಆಜ್ಞೆಯನ್ನು ಮೀರಿ ನಡೆಯುವದರಲ್ಲಿಯ ಅವನ ಸ್ವತಂತ್ರತನವೇ ಇದಕ್ಕೆ ಕಾರಣವು. ಅವನು ಸೆರೆಮನೆಯಲ್ಲಿ ತನ್ನ ಸುತ್ತಲೂ ಇರುವ ಅಪರಾಧಿಗಳನ್ನು ಕೂಡ ತನ್ನ ಅನುಕರಣೀಯ ಸ್ವಭಾವದ ಬಲದಿಂದ ಸುಧಾರಿಸಬಹುದು. ಇಂತಹ ಆದರ್ಶಭೂತವಾದ ಸ್ವಭಾವದ ಬಲದಿಂದಲೇ ಅವನು ಸೆರೆಮನೆಯ ಮೇಲ್ವಿಚಾರಕರ ಅಂತಃಕರಣವನ್ನು ಕರಗಿಸುವನು. ಆತ್ಮಬಲದಿಂದಲೂ [illegible]ಬಲದಿಂದಲೂ ಹುಟ್ಟಿದಂಥ ಇಂತಹ ಸಾಧುವೃತ್ತಿಯ ಸ್ವಭಾವದಿಂದಲೇ ಅವನು ಕ್ರೂರಾಧಿಕಾರಿಯ ಕ್ರೂರಾಚರಣೆಯನ್ನು ಸಂಪೂರ್ಣವಾಗಿ ಮುರಿದೊಗೆಯುವನು. ದುರ್ನೀತಿಯನ್ನೂ ದುಷ್ಪ್ರಯೋಗವನ್ನೂ ಹೊಡೆದೋಡಿಸುವ ತೀವ್ರವಾದ ತರುಣೋಪಾಯವು ಒಮ್ಮನಸ್ಸಿನಿಂದ ಸಂಕಟಗಳನ್ನು ಅನುಭೋಗಿಸುವದೇ ಹೊರ್ತು ಬೇರೆಯಲ್ಲವೆಂಬ ನನ್ನ ಮನೋಭಾವನೆಗೆ ಇದೇ ಕಾರಣವು.

ಇನ್ನು ಸೆರೆಮನೆಯ ಧೋರಣದ ನಿಯಮಗಳನ್ನು ಮೀರಿನಡೆಯುವದರಲ್ಲಿಯೂ, ‘ವಂದೇ ಮಾತರಂ’ ಎಂದು ಒದರುವದರಲ್ಲಿಯೂ ಅಸಹಕಾರಿಗಳು ಮನವಿರಿಸಿದರೆ ಅವರು ಅಪರಾಧಿಗಳೆಂದು ನಿಶ್ಚಿತವಾಯಿತು. ಸೆರೆಮನೆಯ

ಜೇಲಿನ ಕಟ್ಟಳೆಗಳನ್ನು ಕಳ್ಳತನದಿಂದ ಪಾಲಿಸದಿರುವದಾದರೂ ಇಷ್ಟೇ ಅಪರಾಧಕ್ಕೆ ಗುರಿಮಾಡುವದು, ಅಸಹಕಾರಿಯು ತನ್ನ ಮಿತ್ರರಂತಿರ್ದ ಬೇರೆ ಸೆರೆಮನುಷ್ಯರನ್ನು ಯಾವತರದಿಂದಲೂ, ದುರ್ನೀತಿಗೆಳೆಸಲ ಗಮ್ಯಭೂತದಯೆಗೆ ಬಾಧೆಬರುವಂಥ ಪ್ರಸಂಗಗಳಲ್ಲಿಯೂ, ಸೆರೆಯಾಳುಗಳ ಸುರಕ್ಷಿತತೆಯ ನಿಯಮಗಳನ್ನು ಕಾವಲುಗಾರರೇ ನಿರಾಕರಿಸದೆಯುವಂಥ ಪ್ರಸಂಗಗಳಲ್ಲಿಯೂ (ಇಂಥ ಪ್ರಸಂಗಗಳು ಮೋತಿಂದಮೇಲೆ ಕಟ್ಟುನವು) ಮಾನವೀ ಪಚನ ಕ್ರಿಯೆಗೆ ಅಯೋಗ್ಯವಾದಂಥ ಆಹಾರವನ್ನು ಕೊಡುವ ಪ್ರಸಂಗಗಳಲ್ಲಿಯೂ (ಇದು ಹಾಗೆಯೇ) ಜೇಲಿನ ಕಟ್ಟಳೆಗಳನ್ನು ಮುರಿಯಲಿಕ್ಕಬೇಕು ಮತ್ತು ಅಗ್ಗ ಉಪವಾಸವ್ರತವನ್ನು ಪಾಲಿಸಲಿಕ್ಕೆಬೇಕು. ಮೇಲಿನ ಮೂರೇ ಪ್ರಸಂಗಗಳಲ್ಲಿ ಮಾತ್ರ ಈ ಉಪಾಯವು. ಅವಶ್ಯವಾದ ಧಾರ್ಮಿಕಾರ್ಥ ಪ್ರಸಕ್ತಿಯಲ್ಲಿಯೂ ಸವಿನಯ ಆಜ್ಞಾಭಂಗ ನಿಯಮವು ಸಂಭವಿಸುವದು

(ಯಂಗಇಂಡಿಯಾ ಮೋ. ಕ. ಗಾಂಧಿ.)

---

## ಸೆರೆಮನೆಯ ಕೆಲಸವು.

ನೂರಾರು ಜನರಿಗೆ ಸೆರೆಯಾಳಾಗುವ ಸುಸಂಧಿಯನ್ನು ಸರಕಾರವು ತಂದು ಕೊಟ್ಟೀತು ಮತ್ತು ಅದಕ್ಕಾಗಿ ಸಾವಿರಾರು ಜನರು ಒಪ್ಪಿರಲು ಸೆರೆಮನೆಗಳಲ್ಲಿ ಸ್ವಲ್ಪಾದರೂ ಕೆಲಸ ಮಾಡಲು ಉಪೇಕ್ಷಿಸುವದು ಇಂಥ ಸೆರೆಯಾಳುಗಳಿಗೆ ನೆಟ್ಟಗಾಗಲಿಕ್ಕಿಲ್ಲವೋ?" ಎಂದು ಓರ್ವ ಮಾನನೀಯ ಮಿತ್ರನು ನನಗೆ ಪ್ರಶ್ನೆ ಮಾಡಿದ್ದಾನೆ. ಈ ಸೂಚನೆಯು ನೈತಿಕ ಪ್ರಮಾಣದ ತಪ್ಪು ತಿಳುವಳಿಕೆಯಿಂದ ಸಂಭವಿಸಿರುವದೆಂದು ನನಗೆ ಭೀತಿಯುಂಟು. ಸೆರೆಮನೆಗಳನ್ನು ಸಂಸ್ಥೆಗಳೆಂದು ನಿರ್ಮೂಲವಮಾಡಲು ನಮ್ಮ ಇಚ್ಛೆಯಲ್ಲ. ನಮ್ಮ ಸ್ವರಾಜ್ಯದಾಡಳಿತೆಯಲ್ಲಿ ಸಹ ನಮಗೆ ನಮ್ಮ ನಮ್ಮ ಸ್ವಂತ ಸೆರೆಮನೆಗಳ ಅವಶ್ಯಕತೆಯುಂಟು. ನೀತಿಗೆಟ್ಟ ಕಟ್ಟಳೆಗಳನ್ನು ಮುರಿಯೋಗುವಂತೆ ಸವಿನಯ ಆಜ್ಞಾಭಂಗ ವ್ರತವು ಪಾಲಿಸಲ್ಪಡಬೇಕು. ನೈತಿಕ ಧೈರ್ಯದಿಂದ ಕಟ್ಟಳೆಗಳನು ಮುರಿಯುವದೆಂದರೆ, ಸೆರೆಮನೆಯ ಹೋಣಿಕೆ ಪ್ರೀತಿಯಿಂದ ಒಪ್ಪಿದಂತೆಯೇ ಸರಿ. ಯಾಕಂದರೆ, ಇಂಥದೇ ಒಂದು ಕಟ್ಟಳೆಯನ್ನು ವಿರೋಧ ನಡೆಯುವದು ಆ ಕಟ್ಟಳೆಯನ್ನು ಮುರಿಯಬಾರದ ಹಾಗೆ ಪ್ರತಿಬಂಧಿಸಿದ ಅನುಮತಿಗೆ ಒಪ್ಪಿಗೆಯನ್ನಿತ್ತಂತೆಯೇ ಸರಿ. ಮತ್ತು ಕೂಡಲೇ ಜನರು ಮೂಲ ನಿಯಮಕ್ಕಾಗಿಯೂ ಆ ನಿಯಮದ ಉಲ್ಲಂಘನದ ರೀತಿಗಾಗಿಯೂ ವಾದಿಸುವರು. ಅವರು ನಮ್ರತೆಯನ್ನು ಬಿಡುವರು. ಅರಾಜಕತೆಯ ಗೊಂದಲವನ್ನೆಬ್ಬಿಸುವರು. ಇನ್ನು ಸವಿನಯ ಆಜ್ಞಾಭಂಗವಾದಿಯು (ಈ ಹೆಸರನ್ನು ಪಡೆಯಲಿಚ್ಛಿಸುವವನು) ಲೋಕೋಪಕಾರಿಯೂ ರಾಷ್ಟ್ರದ ಪರಮ ಮಿತ್ರನೂ ಆಗಿರುವನು. ಅರಾಜಕತೆಯನ್ನು ಬಯಸುವವನು ದೇಶದ ವೈರಿಯಿದ್ದು ದೇಶದ್ರೋಹಿಯೆಂದು ಕರೆಯಲ್ಪಡುವನು.

ರಾಜಕೀಯ ಚಳವಳಿಯ ಶುದ್ಧವಾಗಿರುವ ಮೂಲ ಮಂತ್ರವು ಸವಿನಯ ಆಜ್ಞಾಭಂಗ ವ್ರತವೇ ಎಂದು ನನ್ನ ದೃಢವಾದ ಅಭಿಪ್ರಾಯವಿದೆ. ಅಹಿಂಸಕತೆಯು ಶುದ್ಧಭಾವನೆಗೆ ಒಪ್ಪಿಗೆಯಿದ್ದ ಮೇಲೆ, ಎಂಥಾ ಉಗ್ರವಾದ ಆಜ್ಞಾಭಂಗಕ್ಕೆ ಪ್ರವೃತ್ತರಾದ ತಪ್ಪಿಗೆ ನಾವು ಹೊಣೆಗಾರರಲ್ಲ. ಯಾಕಂದರೆ ಇದರಲ್ಲಿ ಅತ್ಯಾಚಾರ ರಕ್ಕೆಳೆಸುವಂಥ ಆಚರಣೆಯು ಸಂಭವವೇ ಇರುವದಿಲ್ಲ. ಧೈರ್ಯದಿಂದ ಗಂಡಾಂತರಕ್ಕೆ ಗುರಿಯಾದ ಹೊರತು ನಮ್ಮಿಂದ ಎಂಥ ಭಯಂಕರವಾದ ಚಳವಳಿ ಎನ್ನು ಒಳ್ಳೇ ಜೋರಿನಿಂದ ನಡೆಸಲು ಆಗುವದಿಲ್ಲ. ಗಂಡಾಂತರದಲ್ಲಿ ಬೀಳುವದೇ ತನ್ನ ಜೀವನ ರಹಸ್ಯದ ಗುಟ್ಟು. ಗಂಡಾಂತರಕ್ಕೆ ಗುರಿಯಾಗುವ ಆತುರತೆಯನ್ನು ತೋರಿಸದ ಜೀವನವು ಜೀವನವಲ್ಲವೆಂದು ಜಗತ್ತಿತಿಹಾಸವು ಸಾರಿ ಹೇಳುವದಿಲ್ಲವೇ? ಜನತೆಯು ಅಧೋಗತಿಗಿಳಿಯುವ ಸಮಯದಲ್ಲಿ, ತೀರ ಕ್ಷುಲ್ಲಕವಾದ ಸಂಕಟಗಳು ಸಂಭವಿಸಲು ಇಲ್ಲವೇ ಅತ್ಯಾಚಾರವು ಒದಗುತ್ತಿರಲು, ಅಷ್ಟಕ್ಕೆ ಸು ಕೋಪಾವಿಷ್ಟರಾಗಿ ಇವುಗಳ ನಾಶಕ್ಕೆಳಿಸುವ ಜನತೆಯು ಮುಂದಾಳುಗಳೂ ಮಾನನೀಯರೂ ಹುಟ್ಟಿ ಬರುವದು ಸ್ಪಷ್ಟವಾದ ಮಾತು. ಮನುಷ್ಯನನ್ನು ನಪುಂಸಕತೆಗೆ ಗುರಿಮಾಡುವದು ನಮಗೆ ಬೇಡವಾಗಿದ್ದರೂ ಅವನಲ್ಲಿಯ ಪಶುತ್ವವನ್ನು ಹೊರದೂಡುವ ಮನಸ್ಸಿಗೆ ಇಷ್ಟವಾದದ್ದು. ಜಗತ್ತಿನಲ್ಲಿ ಸಿಸ್ತನ್ನು ಕಾಯ್ದುಕೊಳ್ಳಲಿಕ್ಕೆ ನೈತಿಕ ಧೈರ್ಯವಾದಿಯಂತೆ ನಾವು ಪ್ರಯತ್ನಿಸತಕ್ಕದ್ದು. ಜೇಲ ಸರಕಾರವೇ ಅನೀತಿಗೂ ನಿಂದ್ಯಗೂ ಪ್ರವೃತ್ತವಾಗುವವರೆಗೆ ನಾವು ಸೆರೆಮನೆಯ ಓರಣಕ್ಕಾಗಿದ್ದ ನಿಯಮಗಳಿಗೆ ಒಪ್ಪಲಿಕ್ಕಬೇಕು. ಸೌಕರ್ಯಗಳನ್ನು ಒದಗಿಸಿಕೊಡದಿರುವದರಿಂದಲೂ ಇದೇ ಪ್ರಕಾರದ ತೊಂದರೆಗಳನ್ನುಂಟು ಮಾಡುವದರಿಂದಲೂ ಜೇಲ ಸರಕಾರವು ಅನೀತಿಗೆ ಗುರಿಯಾದಂತೆ ಆಗುವದಿಲ್ಲ. ಸೆರೆಯಾಳುಗಳು ಭೂತದಯವಿದ್ದೆ ನಡೆಯಿಸಿಕೊಂಡಾಗ್ಗೆ, ಹೊಲಸು ಗವಿಗಳಲ್ಲಿ ಅವರನ್ನು ಇಟ್ಟಾಗ್ಗೆ, ಮತ್ತು ಮಾನವೀ ಪಚನ ಕ್ರಿಯೆಗೆ ಸರಿ ಬಾರದಂಥ ಅನ್ನವನ್ನು ಅವರಿಗೆ ಹಾಕಿದಾಗ್ಗೆ ಮಾತ್ರ, ಜೇಲ ಸರಕಾರವು ನಿಂದ್ಯಗೆ ಗುರಿಯಾಗುವದು. ಸೆರೆಮನೆಯಲ್ಲಿದ್ದ ಪ್ರತಿಯೊಬ್ಬ ಅಸಹಯೋಗಿಯ ಸ್ವಭಾವವು ತೀರ ಅಚ್ಚುಕಟ್ಟಾದದ್ದೂ ವಿನಯವುಳ್ಳದ್ದೂ ಆಗಿರಬೇಕು. ಜೇಲರ ಸಾಹೇಬರನ್ನೂ ಕಾವಲುಗಾರರನ್ನೂ, ಭೂತದಯವಿಲ್ಲದಂಥ ನಮ್ಮ ವೈರಿಗಳೆಂದು ಎಣಿಸಕೂಡದು. ಆದರೆ ಅವರು ನಮ್ಮಂತೆಯೆ ಸಹಾನುಭೂತಿಯುಳ್ಳ ಮನುಷ್ಯಗಣದವರೆಂದು ತಿಳಿಯತಕ್ಕದ್ದು. ನಮ್ಮ ಸದ್ವರ್ತನವೇ ಅಂಥ ವೈರಭಾವವನ್ನು ಅಳಿಯಿಸುವದು. ಈ ಪ್ರಕಾರದ ಶಿಸ್ತನ್ನು ಕಾಯ್ದುಕೊಳ್ಳುವ ಒಂದು ಬದಿಯ ದ್ವಾರಿಯೂ, ಕೋಪಾವಿಷ್ಟರಾಗಿ ಸಿಸ್ತನ್ನು ಮೀರಿ ನಡೆಯುವ ಬೇರೊಂದು ಮಾರ್ಗವೂ ದಾಟಿ ಹೋಗಲು ತೀರ ದುಸ್ತರವಾದಂಥವು. ಅವರೆ ಸ್ವರಾಜ್ಯ ಸಂಪಾದನೆಗೆ ಬೇರೆ ರಾಜಮಾರ್ಗವಿಲ್ಲ. ಈ ರಾಷ್ಟ್ರವು ಒಳ್ಳೇ ಜಾಗ್ರತೆಯಿಂದ ಸರಳವಾದ ಒಳದಾರಿಯನ್ನು ಹುಡುಕತಕ್ಕದ್ದು. ಅಡ್ಡ ಹಾದಿಯನ್ನು ಹಿಡಿಯದೇ ಈ ಸರಳವಾದ ರಾಜಮಾರ್ಗದಿಂದ ನಡೆಯಬೇಕಾದರೆ ನಮ್ಮಲ್ಲಿ ಓರಣವನ್ನು ಕಾಯ್ದುಕೊಳ್ಳುವ ಸ್ಥಿರಭಾವನೆಯು ಅತ್ಯವಶ್ಯಕವಾಗಿ ಬೇಕಾಗಿರುತ್ತದೆ. ಶ್ರೀ. ಸೀ. ಆರ್. ದಾಸ ಮತ್ತು ಶ್ರೀ. ಮೋತೀಲಾಲ ನೇಹರು ಇವರಂಥ ಸ್ವಾರ್ಥತ್ಯಾಗಿಗಳಾದ ಕಾರ್ಯ ಧುರೀಣರನ್ನು ನೋಡಿ ನನ್ನ ಮನಸ್ಸು ಕನಿಕರದಿಂದ ಕರಗಿ ಎದೆಯು ಹಾರಹೊಡೆಯುವದು. ಕಂಪವು ಉತ್ಪನ್ನವಾಗಿರುವದು. ಸುಖಾಸ್ವಾದನ ಲೋಲುಪರಾಗಿ ಒಳ್ಳೇ ಐಶ್ವರ್ಯ ವಿಲಾಸವುಳ್ಳ ರಾಜವಾಡೆಗಳ ಸಂಪತ್ತಿನ ವೈಭವ ಶಿಖರದಲ್ಲಿದ್ದ ಈ ರಾಷ್ಟ್ರಭಕ್ತರು ಈಗ ಸೆರೆಯಾಳುಗಳ ಕೈಕಾಲೊಳಗಿನ ಸಪಳಿಯ ಸಪ್ಪಳದಿಂದ ಕಾಲಹರಣ ಮಾಡುತ್ತಿರುವದನ್ನು ಕಂಡು ಯಾರ ಅಂತಃಕರಣವು ಕರುಣಾರಸದಿಂದ ಉಕ್ಕೇರಿ ಬರಲಿಕ್ಕಿಲ್ಲ! ಇಂಥ ದೇಶಬಂಧುಗಳ ನಿಸ್ಸೀಮ ಸ್ವಾರ್ಥತ್ಯಾಗದಿಂದಲೂ, ಅಪ್ರತಿಮ ಸಹನಶೀಲತೆಯಿಂದಲೂ ನಮ್ಮ ಸ್ವರಾಜ್ಯ ದೇವತೆಯು ಸಂತೈಸಿ ಬರುವಳು. ಆದರೆ, ದಕ್ಷಿಣ ಅಫ್ರಿಕಾ, ಕ್ಯಾನಡಾ, ಇಂಗ್ಲಂಡ, ಫ್ರಾನ್ಸ, ಜರ್ಮನೀ ಮೊದಲಾದ ದೇಶಗಳಲ್ಲಿಯ ಪ್ರಸಿದ್ಧ ರಾಷ್ಟ್ರಭಕ್ತರ ಸ್ವಾರ್ಥತ್ಯಾಗಕ್ಕಿಂತಲೂ ನಾವೀಗ ತೋರಿಸಿದ ಸ್ವಾರ್ಥತ್ಯಾಗವು ಅಷ್ಟೇನು ಹೆಚ್ಚಿನದಲ್ಲ!

(ಯುಂಗ ಇಂಡಿಯಾ) (ಮೋ. ಕ. ಗಾಂಧಿ.)
ತಾ ೨೯—೧೨—೨೧.

---

## ಲಾಲಾ ಲಜಪತರಾಯರ ಉಪವಾಸ ವ್ರತವು

ಸೆರೆಮನೆಯಲ್ಲಿ ಕೊಡುವ ಕೀಳ ತರದ ಕದನ್ನದ ನಿಷೇಧ ಪ್ರದರ್ಶನೆಗಾಗಿ ಕಳೆದ ಶನಿವಾರ (ತಾ|| ೨೪ ನೆಯ ಡಿಸೆಂಬರ ೧೯೨೧) ದಿಂದ ಲಾಲಾ ಲಜಪತರಾಯರು ಕಠಿಣತರವಾದ ಉಪವಾಸ ವ್ರತವನ್ನು ಸ್ವೀಕರಿಸಿದ್ದಾರೆ. ಇದಕ್ಕೆ ಸಹಾನುಭೂತಿಗಳಾದ ೬೭ ರಾಜಕೀಯ ಸೆರೆಯಾಳುಗಳು ನಿರಾಹಾರಿಗಳಾಗಿರುವರು.

---

# The Karnatak Trading Association.

**ಉಳಿಸಿರಿ! ಮುಂಬಯಿ ಖರ್ಚು ಉಳಿಸಿರಿ !!**

ಇನ್ನು ಮುಂದೆ ಖರೀದಿಗಾಗಿ ಮುಂಬಯಿಗೆ ಯಾರೂ ಸ್ವತಃ ಬರುವ ಕಾರಣವಿಲ್ಲ. ದಿ ಕರ್ನಾಟಕ ಟ್ರೇಡಿಂಗ ಅಸೋಸಿಯೇಶನ್‌ದವರು ಮುಂಬಯಿ ಪೇಟೆಗಳನ್ನೆಲ್ಲ ನಿಮ್ಮ ಮನೆಯ ಬಾಗಿಲಕ್ಕೆ ತಂದು ಇಡಲು ಟೊಂಕ ಕಟ್ಟಿದ್ದಾರೆ ಒಂದು ದುಡ್ಡಿನ ಕಾರ್ಡು ಹಚ್ಚಿದರೆ ಸಾಕು. ಉಲಟ ಟಪಾಲಿನಿಂದಾಗಲಿ, ರೇಲ್ವೆ ಪಾರ್ಸಲಿನಿಂದಾಗಲಿ, ಗೂಡ್ಸ ಪಾರ್ಸಲಿನಿಂದಾಗಲಿ, ನಿಮ್ಮ ಇಚ್ಛಾನುಸಾರ ನಿಮ್ಮ ಸಾಮಾನಗಳು ಭದ್ರವಾಗಿ ವ್ಯಾಳ್ಯಕ್ಕಾಗಿ ನಿಮ್ಮ ಮನೆಯು ಹಾದಿ ಹಿಡಿಯುತ್ತವೆ. ಪೇಟೆಯ ಅತ್ಯುತ್ತಮವಾದ ಪರಿಚಯವೇ ನಮ್ಮ ಗುಟ್ಟು ಅದರ ಮೂಲಕವಾಗಿಯೇ ಉತ್ತಮವಾದ ಸಾಮಾನಗಳನ್ನು ಅತ್ಯಂತ ಸೋಯಿಸ್ಕರವಾಗಿ ಕೊಳ್ಳಲಿಕ್ಕೆ ನಮಗೆ ಸಾಧ್ಯವಾಗುತ್ತದೆ. ಕಾರಣ ಮುಂಬಯಿ ಖರೀದಿ ಬಂದ ಕೂಡಲೆ ನಮ್ಮ ಸ್ಮರಣ ಮಾಡಿಕೊಳ್ಳಿರಿ.

ಪತ್ತೆ—ದಿ ಕರ್ನಾಟಕ ಟ್ರೇಡಿಂಗ ಅಸೋಶಿಯೇಶನ ಜನರಲ್ ಮರ್ಚಂಟ ಕಮಿಶನ್ ಅಂಡ ನ್ಯೂಜ ಏಜಂಟ್ಸ.

ಹಿರಾ ಬಿಲ್ಡಿಂಗ ಕಾರ್ನಾಕ್ ರೋಡ ಮುಂಬಯಿ

ತಾರೀನ ಪತ್ತೆ—"ಕಾರ್ಟೋನ್ಸ್ಸು"

---

**ತ್ವರೆ ಮಾಡಿರಿ!** **ತ್ವರೆ ಮಾಡಿರಿ!!**

**ಪ್ರತಿಗಳು ಸ್ವಲ್ಪೇ ಉಳಿದಿರುವವು**

**ಬೇರೆ ಬೇರೆ ರಾಷ್ಟ್ರಗಳಲ್ಲಿಯ**

# ಅಸಹಕಾರ

ಎಂಬ ಗ್ರಂಥವು ಅಚ್ಚಾಗುತ್ತಲಿದೆ ಬೇಗನೆ ಕೊಂಡುಕೊಳ್ಳುವದು, ,, Non-co-operation in other lands '' ಇದರ ಭಾಷಾಂತರ ಮುದ್ದಾಮ ಕನ್ನಡಿಗರ ದಶೆಯಿಂದ ಬರೆಯಲ್ಪಟ್ಟಿದೆ. ಬೇಗನೇ ಹೆಸರು ನೋಂದಾಯಿಸಿರಿ. ಶುದ್ಧವಾದ ಅಚ್ಚುಗನ್ನಡ ಭಾಷೆ! ಅಂದವಾದ ಮುದ್ರಣ. ಬೆಲೆ-೧ ರೂ.

ಪ್ರಸ್ತಾವನಾ ಲೇಖಕ— ರಂಗನಾಥ ದಿವಾಕರ ಎಮ್. ಏ. ಸಂಪಾದಕ ಕರ್ಮವೀರ

ವಿಳಾಸ:— ಸರಶಿಂಹ ಶ್ರೀನಿವಾಸ ಕಮಲಾಪೂರ

ಮಂಗಳವಾರ ಪೇಟೆ ಧಾರವಾಡ

---

**ಕನ್ನಡಿಗರೇ!!** **ಓದಿರಿ ಆಶ್ರಯ ಕೊಡಿರಿ.**

## ಗದಗಿನಲ್ಲಿ

ಸಾಮಾಜಿಕ, ರಾಜಕೀಯ, ನೈತಿಕ, ಧಾರ್ಮಿಕ ವಿಷಗಳನ್ನು ಪ್ರತಿಪಾದಿಸುವ

# ಕರ್ನಾಟಕ ಸಿಂಹ.

| ವರ್ಗಣಿ ಸ್ಥಳೀಕರಿಗೆ ರೂ. ೩-೦-೦ | ಎಂಬ ಕನ್ನಡ ವಾರಪತ್ರಿಕೆಯು. | ವರ್ಗಣಿ ಪರಸ್ಥಳದವರಿಗೆ ಅಂಚೆ ವೆಚ್ಚ ಸಹಿತ ರೂ. ೩-೧೨-೦ |
|---|---|---|

ಆವೃತ್ತಿಯಿಂದ ಮೂರು ತಿಂಗಳ ಒಳ ಹೊರಗೆ ಹೊರುಡುವದು ಮೇಲೆ ವಿವರಿಸಿದ ವಾರ ಪತ್ರಿಕೆಯು ಬಾಲ್ಯದಿಂದ ಭಾಷಾ ಸೇವೆಯನ್ನು ಮಾಡುತ್ತಿದ್ದ ಹಾಗೂ ಮೈಸೂರ ಮತ್ತು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಬಹುಮಾನಗಳನ್ನು ಪಡೆದ ಮಿ॥ ಅಚ್ಯುತರಾವ ಕೃಷ್ಣರಾವ ಎರಿಯಲಗೋಳ ಇವರ ಸಂಪಾದಕತ್ವದ ಕೆಳಗೆ ನಡೆಯುವದಲ್ಲದೆ, ಅಬಾಲ ವೃದ್ಧರಿಗೆ ಸಹ ತಿಳಿಯುವಂಥ ತಿಳಿಗನ್ನಡ ಭಾಷೆಯಲ್ಲಿ ಬರೆದ ಲೇಖಗಳನ್ನು ಅದರಲ್ಲಿ ಕೊಡುವೆವು. ಗ್ರಾಹಕರು ತಮ್ಮ ಸಂಪೂರ್ಣ ಹೆಸರನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಬೇಕಾಗಿ ನಮ್ಮ ಸವಿನಯ ವಿನಂತಿ ಇರುತ್ತದೆ

ವಿಳಾಸ—ಶಾಂತಪ್ಪಾ ಶಿವೋನೆಪ್ಪಾ ಭಲಗುಂದಿ

ಮಾಲಕ ಸ್ವಮನ ಪ್ರೆಸ್ ಗದಗ, ಜಿಲ್ಲಾ ಧಾರವಾಡ.

---

## ವೀರ ವಿಲಾಸಿನಿ.

ಹಾಸ್ಯ ಪ್ರಧಾನವಾದ ಅದ್ಭುತ ವಿಷಯ ಪ್ರಕಾಶಕವಾದ, ಗಂಭೀರ ಗರ್ಭಿತವಾದ ಕನ್ನಡ ವಾರ ಪತ್ರಿಕೆ! ಇದೇ ಡಿಶಂಬರ ೧೫ನೆಯ ತಾರೀಖಿನಿಂದ ಆರಂಭವಾಗತಕ್ಕದ್ದು. ಈ ಅವಧಿಯೊಳಗಾಗಿ ಆರ್ಡರಗಳನ್ನು ಕೊಡುವವರಿಗೆ ಭೆಟ್ಟಿಯಾಗಿ ವರ್ಷಕಾಲ ಪತ್ರಿಕೆಯನ್ನು ಕಳುಹಿಸುವೆವು. ಅಂಚೆಯ ವೆಚ್ಚಕ್ಕಾಗಿ ೧೫ ಆಣೆ ಮಾತ್ರ, ಮುಂಗಡ ಕಳಿಸಬೇಕು. ಯಾರಿಗೂ ವ್ಹಿ. ಪಿ. ಇಲ್ಲ. ಸಹಜವಾದ ವಾರ್ಷಿಕ ಚಂದಾ ೧-೧೨-೦ ಈ ಪತ್ರಿಕೆಯು ಒಲು ಆಂದವಾಗಿ ಅಲಂಕೃತವಾಗುವದು. ಪ್ರಸಿದ್ಧವಾದ "ನಕಳಿಯು" ಪತ್ರಿಕೆ!!

ವಿಳಾಸ— ಮ್ಯಾನೇಜರ ವೀರವಿಲಾಸಿನಿ,

ನಂ. ೧೦೪ ೪ ನೇ ಬೀದಿ ಚಾಮರಾಜ ಪೇಟೆ

ಬೆಂಗಳೂರು ಸಿಟಿ.

---

## ಮಹತ್ವದ ಸೂಚನೆಯು.

ಕನ್ನಡ ನವಜೀವನದ ಕಚೇರಿಯು ಬಾಗಲಕೋಟೆಯಲ್ಲಿರುವದು. ಅದಕ್ಕೆ ಸಂಬಂಧಿಸಿದ ಪತ್ರ ವ್ಯವಹಾರ ಮನಿಯಾರ್ಡರ ಮೊದಲಾದವುಗಳೆಲ್ಲ ಕೆಳಗಿನ ವಿಳಾಸಕ್ಕೆ ಕಳಿಸಲ್ಪಡಬೇಕು

"ವ್ಯವಸ್ಥಾಪಕ ಕನ್ನಡ ನವಜೀವನ"

**ಬಾಗಲಕೋಟೆ ಜಿಲ್ಲಾ ವಿಜಾಪೂರ.**

---

## ದಿ ಸವನೂರ ಸ್ಟೇಟ ಪ್ರಿಂಟಿಂಗ ಪ್ರೆಸ್

ನಮ್ಮಲ್ಲಿ ಕನ್ನಡ, ಮರಾಠೀ, ಇಂಗ್ಲೀಷ ಭಾಷೆಗಳಲ್ಲಿ ಕೆಲಸವು ಚನ್ನಾಗಿ ಮಾಡಲ್ಪಡುವದು. ಎಲ್ಲರ ಸಮಾಧಾನವಾಗುವಂತೆ ವೇಳ್ಯಕ್ಕೆ ಸರಿಯಾಗಿ ಕೆಲಸ ಮಾಡುವದೇ ನಮ್ಮ ಗುಟ್ಟು! ಮೋಘಕ ದರಗಳು!

ಕೆಳಗಿನ ವಿಳಾಸಕ್ಕೆ ಬರೆದು ಕೊಳ್ಳಬೇಕು:—

ಚನ್ನಬಸಪ್ಪಾ ಗೋಡಿ ಮಾಲಕ 'ದಿ ಸವಣೂರ ಸ್ಟೇಟ ಪ್ರಿಂಟಿಂಗ ಪ್ರೆಸ್'

ಸಂಸ್ಥಾನ ಸವಣೂರ ಜಿಲ್ಲಾ ಧಾರವಾಡ.


---

ಈ ಪತ್ರವನ್ನು ಮಿ॥ ಗುಂಡೇರಾವ ರಾಮಚಂದ್ರ ಮಣೂರಕರ ಇವರು ತಮ್ಮ ವಿಜಾಪೂರ ಗ್ರಾಮಾಧಿಕಾರೀ ಮುದ್ರಾಲಯದಲ್ಲಿ ಮುದಿಸಿ, ಮಾಲಕ ಶ್ರೀನಿವಾಸ ರಾಜೇರಾವ ಮಂಗಳವೇಢೇ ಬಾಗಲಕೋಟ ಇವರು ಗೋಲ್ಡರ ವಿಜಾಪೂರದಲ್ಲಿ ಪ್ರಸಿದ್ಧ ಮಾಡಿದರು.

ಸ್ವತಂತ್ರತೆಯು.

ವಾರ್ಷಿಕ ವರ್ಗಣಿ ರೂ. ೪-೦-೦
ಆರು ತಿಂಗಳಿಗೆ ,, ೨-೦-೦
ಬಿಡಿ ಸಂಚಿಕೆ ೦-೧-೩
ಮಾದರಿ ಸಂಚಿಕೆ ಬೇಕಾದವರು
೦-೧-೬ ತಿಕೀಟ ಕಳಿಸಬೇಕು.

REGISTERED No B 1509.

ಜಾಹೀರಾತಿನ ದರ:-

'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂಪಾಯಿ ಕಾಯಮು ಜಾಹೀರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರವಿಚಾರಿಸಿ ಕೊಳ್ಳಬೇಕು.

ಶ್ರೀ.

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾಷಾಂತರಿಸುವದೇ
ಈ ವಾರ ಪತ್ರಿಕೆಯ ಮುಖ್ಯೋದ್ದೇಶವು

ವರ್ಷ ೧ | ಬಾಗಲಕೋಟ ಪೌಷ್ಯ ಶುದ್ಧ ೧೪ ಶಕೆ ೧೮೪೩. ಗುರುವಾರ ತಾ. ೧೨ ನೇ ಜಾನೇವಾರಿ ೧೯೨೨ ಇಸ್ವಿ | ಸಂಚಿಕೆ ೮


## ಟಿಪ್ಪಣಿಗಳು

### ಆತ್ಮ-ಜ್ಯೋತಿಯು ಅಮರವು.

'ಇಂಡಿಪೆಂಡೆಂಟ' ಪತ್ರದ ಸಂಪಾದಕರಾದ ಶ್ರೀ. ದೇಶಾಯಿಯವರು ತಮ್ಮ ಹಿಂದೆ, ತಮ್ಮ ಆತ್ಮ ಜ್ಯೋತಿಯನ್ನು ಬಿಟ್ಟಿರುವರೆಂದು ಹಾಚಕರಿಗೆ ಸಾರಿ ಹೇಳುವೆವು. ತುರ್ತಾಗಿ ಸಂಪಾದಕತ್ವವನ್ನು ತಮ್ಮ ತಮ್ಮನಿಗೆ ಒಪ್ಪಿಸಿರುವರು ಇದಲ್ಲದೆ ದೇಸಾಯಿಯವರು ಕೈಗೊಂಡ ಕರ್ತವ್ಯವನ್ನು ಕೊನೆಗಾಣಿಸಲಿಕ್ಕೆ ಒಬ್ಬರಿಂದೊಬ್ಬರು ಮುಂದೆ ಬೀಳುವಂದವರಿರುವರು ನಮೆಲ್ಲರನ್ನು ಒಮ್ಮೆಲೆ ಗಟ್ಟಿನ ಸುರಿಗಲಿಕ್ಕೆ ಮೇಲಧಿಕಾರಿಗಳಿಗೆ ಶಕ್ಯವಿರುವದೆಂದು ನಾವೇನೂ ವಿಚಾರಿಸಿಲ್ಲ ನಮ್ಮಲ್ಲಿಯ ಪ್ರತಿಯೊಬ್ಬನ ದಾಸ್ಯತ್ವವು ಅಳಿದು ಹೋಗುವ ವರೆಗೆ, ಸರಕಾರದ ವರ್ತಮಾನ ಪತ್ರಗಳ ಯಾದಿಯಲ್ಲಿ ನಮೂದವಾಗದಂಥ ಈ ವರ್ತಮಾನ ಪತ್ರವು ಹಾಗೆಯೇ ವಾಚಕರ ಕೈಸೇರುವದು. ಈಗಿನ ಚಮತ್ಕಾರದ ದಿವಸಗಳಲ್ಲಿ, ಅಶಕ್ಯವಾದ ವಸ್ತುಗಳು ಶಕ್ಯವಾಗುವವು. ಈ ಪತ್ರವು ಸ್ವಾತಂತ್ರ್ಯ ಘಾತುಕಿಗಳ ಕೈಯಿಂದ ಬಿಳ್ಳೀ ವಿರಾಜ ಮಾನ್ಯವಾದ ಮರಣವನ್ನು ಬಾಲ್ಯದಲ್ಲಿಯೇ ಹೊಂದ ಬಹುದು. ಈಗ ಮಾತ್ರ, ನಮ್ಮ ವಾಚಕರು, ತಮ್ಮ ಶ್ರಾಳ್ಕೆಯನ್ನು, ಹಾವು ಇಲ್ಲಿಯವರಿಗೆ ಇಟ್ಟುಕೊಂಡಂತೆ, ಇನ್ನು ಮುಂದೆಯಾದರೂ ಕಾಯ್ದುಕೊಳ್ಳುವರೆಂದು ನಮಗೆ ನಂಬಿಗೆಯಿದೆ.

## ಸ್ವರಾಜ್ಯದ ಸಾರವು.

ರಾಷ್ಟ್ರೀಯ ಮಹಾ ಸಭೆಯ ಸಪ್ತಾಹವು ಆನಂದದ ಮತ್ತು ಉತ್ಸವದ ಸಪ್ತಾಹವಾಗಿದ್ದಿತು. ಸ್ವರಾಜ್ಯವು ದೊರೆತಿಲ್ಲೆಂಬ ವಿಚಾರವು ಯಾರ ಅಂತಃಕರಣದಲ್ಲಿಯೂ ಇರಲಿಲ್ಲ. ಪ್ರತಿಯೊಬ್ಬರಲ್ಲಿ ವಿಶ್ವಾಸವೂ ಆಶೆಯೂ ಇದ್ದಿತೆಂದು ಅವರ ಮುಖದ ಮೇಲಿಂದ ವ್ಯಕ್ತವಾಗುತ್ತಿತ್ತು. ಸ್ವಾಗತ ಮಂಡಲದವರು ಮಹಾಸಭೆಯ ಮಂಟಪದಲ್ಲಿ ಒಂದು ಲಕ್ಷ ಜನ ಪ್ರೇಕ್ಷಕರಿಗೆ ಅನುಕೂಲ ದೊರೆಯುವ ವ್ಯವಸ್ಥೆಯನ್ನು ಮಾಡಿದ್ದರು. ಆದರೆ ಪ್ರೇಕ್ಷಕರ ಸಂಖ್ಯೆಯು ಎರಡು ಲಕ್ಷಕ್ಕಿಂತ ಕಡಿಮೆಯಿರಲಿಲ್ಲ. ಲೆಕ್ಕವಿಲ್ಲದ ಜನರು ಬಂದದ್ದರಿಂದ ಸೀಝನ್ ಟಿಕೀಟುಗಳನ್ನಾಗಲಿ ಪ್ರವೇಶ ಟಿಕೀಟುಗಳನ್ನಾಗಲಿ ತೆಗೆಯುವದು ಅಸಾಧ್ಯವಾಯಿತು. ಜನರಲ್ಲಿ ಹೆದರಿಕೆಯನ್ನು ಹುಟ್ಟಿಸುವದಕೋಸ್ಕರ ನಾನಾ ಬಗೆಯ ಸುಳ್ಳು ಸುದ್ದಿಗಳು ಹೊರಡಿಸಲ್ಪಡದಿದ್ದರೆ, ಈಗಲೇ ಕಲ್ಪನಾತೀತವಾಗಿದ್ದ ಲೋಕಸಂಖ್ಯೆಯು ಇದಕ್ಕೂ ಹೆಚ್ಚುತ್ತಿತ್ತು. ನೇತೃ ಜನರ ಹಾಗೂ ಇತರ ದೇಶ ಸೇವಕರ ಕಾರಾವಾಸವು ಅವರ ಧೈರ್ಯವನ್ನೂ ಜನರ ಅಂತಃಕರಣಗಳನ್ನು ಹೊಸ ಆಕಾಂಕ್ಷೆಯಿಂದಲೂ ಹೊಸ ಉತ್ಸಾಹದಿಂದಲೂ ತುಂಬಿಬಿಟ್ಟವು. ಆತ್ಮ ಯಜ್ಞವು ಸ್ವರಾಜ್ಯವನ್ನು ಪಡೆಯಲು ನಿಶ್ಚಿತವಾದ ಸಾಧನವೆಂದೂ ಸ್ವಾತಂತ್ರ್ಯಲಾಲಸೆಯನ್ನು ಹತ್ತಿಕ್ಕಲು ಉಪಯೋಗಿಸಲ್ಪಡುವ ಮಹಾದಾರುಣವಾದ ಬಲವನ್ನು ನಾಶಗೊಳಿಸಲು ಅತಿ ತೀಕ್ಷ್ಣವಾದ ಶಸ್ತ್ರವೆಂದೂ ಜನರು ಕಂಡು ಹಿಡಿದಿರುವರೆಂಬದು ತಿಳಿದು ಬರುತ್ತಿತ್ತು.

ಹೊಸ ಘಟನೆಯ ಪ್ರಕಾರ ರಾಷ್ಟ್ರೀಯ ಸಭೆಯ ಕೆಲಸವು ಪ್ರಾರಂಭವಾಗಿ ಒಂದು ವರುಷವಾಯಿತು ಮತ್ತು ಈ ಹೊಸ ಘಟನೆಯು ಪೂರ್ಣ ಯಶಸ್ವಿಯಾಗಿದೆಂದು ನನ್ನ ಅಭಿಪ್ರಾಯವಿರುವದು. ವಿಷಯ ನಿಯಾಮಕ ಮಂಡಳಿಯು ವಿಷಯಗಳನ್ನು ಚರ್ಚಿಸುವದಕ್ಕೆ ಸಾಕಷ್ಟು ವೇಳೆಯು ದೊರೆತಿತು. ಮತ್ತು ಅಲ್ಲಿಯ ಎಲ್ಲ ಕೆಲಸವು ಬಹು ಗಂಭೀರ ರೀತಿಯಿಂದ ನಡೆಸಲ್ಪಟ್ಟಿತು ಈ ಮಂಡಲದ ಸಭಾಸದರು ಏನೋ ಒಂದು ಅನಿಯಮಿತ ಪದ್ಧತಿಯಿಂದ ಆರಿಸಲ್ಪಟ್ಟವರಾಗಿರಲಿಲ್ಲ. ಆದರೆ ಕಾಯದೆ ಶಾಸ್ತ್ರೋಕ್ತ ಮತದಾರರಿಂದ ಆರಿಸಲ್ಪಟ್ಟವರಾಗಿದ್ದರು. ರಾಷ್ಟ್ರೀಯ ಮಹಾಸಭೆಯೂ ಬಹು ಪರಿಣಾಮಕಾರಕವಾದ ದೃಶ್ಯವಾಗಿ ಪರಿಣಮಿಸಿತು. ದೇಶಬಂಧು ಚಿತ್ತರಂಜನದಾಸರವರ ಸ್ಥಳದಲ್ಲಿ ಹಕೀಮ ಅಜಮಲಖಾನರವರು ಅತ್ಯಂತ ಯೋಗ್ಯರಾದ ಹಾಗು ಶಾಂತ ಸ್ವಭಾವದ ಅಧ್ಯಕ್ಷರಾಗಿದ್ದರು. ಪ್ರತಿನಿಧಿಗಳು ಪೂರ್ವಪಕ್ಷ ಉತ್ತರ ಪಕ್ಷಗಳನು ಚನ್ನಾಗಿ ಅರಿತುಕೊಂಡು ತಮ್ಮೆಲ್ಲ ಸಂಶಯಗಳು ದೂರಾದ ಮೇಲೆಯೇ ತಮ್ಮ ಮತ ಕೊಡುತ್ತಿದ್ದರು. ಸಭೆಯಲ್ಲಿ[redacted]ತ್ತಿದ್ದ ಎಲ್ಲ ಸಂಗತಿಗಳನ್ನು ಒಳಿತಾಗಿ ತಿಳಿದುಕೊಳ್ಳಲು ಆಗ್ರಹ ಪಡುತ್ತಿದ್ದರು.

ಸ್ವಾಗತ ಮಂಡಳದ ಅಧ್ಯಕ್ಷರಾದ ಶ್ರೀ. ವಲ್ಲಭಭಾಯಿ ಪಟೇಲರವರು ತಮ್ಮ ಹಿಂದೀ ಭಾಷಣವನ್ನು ಓದಿ ಮುಗಿಸಲು ಹದಿನೈದು ಮಿನಿಟುಗಳಿಗಿಂತ ಹೆಚ್ಚಿಗೆ ವೇಳೆಯನ್ನು ತೆಗೆದು ಕೊಳ್ಳಲಿಲ್ಲ. ಮಹಾ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಅಧ್ಯಕ್ಷರನ್ನು ಸೂಚಿಸುವದು ಅಗತ್ಯಬೀಳಲಿಲ್ಲ. ಆದೆಲ್ಲ ಕೆಲಸವು ಅಖಿಲ ಭಾರತೀಯ ಮಹಾಸಭಾ ಮಂಡಳದಿಂದ ಮೊದಲೇ ನೆರವೇರಿಸಲ್ಪಟ್ಟಿತ್ತು. ಇದರಿಂದ ಹನ್ನೆರಡು ಸಾವಿರ ಪ್ರತಿನಿಧಿಗಳ ಹಾಗು ಪ್ರೇಕ್ಷಕರ ಎರಡು ತಾಸುಗಳಾದರೂ ಪಿನಿಲ್ಲಿಂಗರೂ ಉಳಿದವು. ಪ್ರತಿಯೊಂದು ಭಾಷಣವು ಪ್ರತಿಪಾದ್ಯ ವಿಷಯವನ್ನಿಟ್ಟು ಅತ್ತಿತ್ತಾಗಲಿಲ್ಲ. ಗೊಡ್ಡು ರಗಳೆಯಲ್ಲಿ ಒಂದು ಕ್ಷಣವಾದರೂ ಕಳೆಯಲ್ಪಡಲಿಲ್ಲ.

ವಸ್ತುತಃ ಹೀಗಾಗಿಯೇ ತೀರತಕ್ಕದ್ದು. ಯಾವತ್ತು ಠರಾವುಗಳು ರಾಷ್ಟ್ರವನ್ನು ಉದ್ದೇಶಿಸಿಯೇ ಹೇಳಲ್ಪಟ್ಟವು. ಜಗತ್ತಿನಲ್ಲಿ ತನ್ನ ಯೋಗ್ಯ ಸ್ಥಾನವನ್ನು ಹೊಂದಲು ಸಿದ್ಧವಾದ ಅತ್ಯವಶ್ಯವಾಗಿ ನೆರವೇರಿಸಬೇಕಾದ ಕಾರ್ಯಕ್ರಮವೇ ಯಾವದೆಂಬುದು ಆ ಠರಾವುಗಳಿಂದ ಹೇಳಲ್ಪಟ್ಟಿತು.

ಆದ್ದರಿಂದ ವಿಷಯ ನಿಯಾಮಕ ಸಭೆಯಲ್ಲಾಗಲಿ ಮಹಾ ಸಭೆಯಲ್ಲಾಗಲಿ ಯಾವದೊಂದು ಠರಾವಿನ ಬಗ್ಗೆ ಮತ ತೆಗೆದುಕೊಳ್ಳುವ ಮೊದಲು ಆ ಠರಾವನ್ನು ಎಲ್ಲರಿಗೂ ಸ್ಪಷ್ಟವಾಗುವಂತೆ ತಿಳಿಸಿ ಕೊಡುವ ವಿಷಯದಲ್ಲಿ ಅತ್ಯಂತ ಕಾಳಜಿಯನ್ನು ತೆಗೆದು ಕೊಳ್ಳುವದರಲ್ಲಿ ಬರುತ್ತಿತ್ತು.

ಇದು ಕಾರ್ಯ ಪದ್ಧತಿಯ ಚಿತ್ರವಾಯಿತು.

**ಪ್ರದರ್ಶನವು:—**

ಬಹಿರ್ದೃಶ್ಯವಾದರೂ ಚಿರಸ್ಮರಣೀಯವಾಗಿತ್ತು. ಮಂಟಪವು ಖಾದಿಯಿಂದ ಮಾಡಲ್ಪಟ್ಟ ಬಹು ಭವ್ಯವಾದ ಮಂದಿರವಾಗಿದ್ದಿತ್ತು. ಕಮಾನುಗಳು ಖಾದಿಯಿಂದ ನಿರ್ಮಿತವಾಗಿದ್ದವು. ವಿಷಯ ನಿಯಾಮಕ ಮಂಡಳದ ಕಾರ್ಯಾಲಯವೂ ಖಾದಿಯಿಂದಲೇ ಮಾಡಲ್ಪಟ್ಟಿತ್ತು. ಮಂಟಪದ ಎದುರಿಗೆ ಸಸ್ಯ ತೃಣಗಳಿಂದ ಆಚ್ಛಾದಿತವಾದ ಭೂಭಾಗದ ಮಧ್ಯದಲ್ಲಿ ಕಾರಂಜಿಯೊಂದು ಕಂಗೊಳಿಸುತ್ತಿತ್ತು. ಭಾಗದಲ್ಲಿ ಮತ್ತೊಂದು ವಿಶಾಲವಾದ ಮಂಟಪವು ತಯಾರಿಸಲ್ಪಟ್ಟಿತ್ತು. ಮಹಾಸಭೆಯ ಮಂಡಪದಲ್ಲಿ ಪ್ರವೇಶವು ದೊರೆಯದಿದ್ದ ಸಹಸ್ರಾವಧಿ ಸ್ತ್ರೀಪುರುಷರು ಈ ಸಭಾ ಮಂದಿರದಲ್ಲಿ ಕೂತು ಮಹಾಸಭೆಯಲ್ಲಿ ಚರ್ಚಿಸಲ್ಪಡುತ್ತಿರುವ ಯಾವತ್ತು ವಿಷಯಗಳ ಚರ್ಚೆಯನ್ನು ಕೇಳುತ್ತಿದ್ದರು.

ರಾತ್ರಿಯಲ್ಲಿ ಯಾವತ್ತು ಸ್ಥಳವು ವಿದ್ಯುತ್ ಪ್ರಕಾಶದಿಂದ ಥಳಥಳಿಸುತ್ತಿತ್ತು. ನದಿಯ ದಂಡೆಯ ಮೇಲೆ ಎಲಿಸ್ ಬ್ರಿಜ್ಜದ ಹತ್ತರ ಈ ಸ್ಥಳವು ಇದ್ದದರಿಂದ ರಾತ್ರಿಯಲ್ಲಿ ಅದರ ಭವ್ಯತೆಯನ್ನೂ ಅದರ ಸೌಂದರ್ಯವನ್ನೂ ಸಹಸ್ರಾವಧಿ ಜನರು ನೋಡಿ ನೋಡಿ ವಿಸ್ಮಯಭರಿತರಾಗುತ್ತಿದರು.

ಪ್ರದರ್ಶನ ಭೂಮಿಯೂ ಸಮೀಪದಲ್ಲಿಯೇ ಇತ್ತು. ಅದನ್ನು ನೋಡುವ ಉದ್ದೇಶದಿಂದ ಅದರ ಕಡೆಗೆ ಜನ ಪ್ರವಾಹವು ಒಂದೇ ಸಮನೇ ಬರುತ್ತಿದ್ದಿತು. ಪ್ರದರ್ಶನವು ಪೂರ್ಣ ಯಶಸ್ವಿಯಾಗಿದ್ದಿತು. ಕಲ್ಪನಾತೀತ ಜನರು ಅದನ್ನು ನೋಡಲಿಕ್ಕೆ ಬಂದರು. ದಿನಾಲು ಏನಿಲ್ಲೆಂದರೂ ನಾಲ್ವತ್ತು ಸಾವಿರ ಜನರು ಅಲ್ಲಿಗೆ ಬರುತ್ತಿದ್ದರು. ಹಿಂದುಸ್ಥಾನದಲ್ಲಿ ಹುಟ್ಟುವ ವಸ್ತುಗಳ ಅನುಪಮವಾದ ಸಂಗ್ರಹವು ಅದಾಗಿತ್ತು. ಈ ಪ್ರದರ್ಶನದಲ್ಲಿ ಅತ್ಯಂತ ದರ್ಶನೀಯವಾದ ಸಂಗತಿಯೆಂದರೆ ಚಿಕಾಕೋಲದಿಂದ ಬಂದಂಥ ರಾಟಿಯಿಂದ ಕೈನೂಲು ತೆಗೆಯುವ ಜನರ ಪರಿವಾರವು ಹತ್ತಿಯನ್ನು ಹಸನ ಮಾಡುವ ಕೆಲಸವನ್ನಾರಂಭ ಮಾಡಿ ನೂರು ನಂಬರಿನ ನೂಲು ತೆಗೆಯುವ ವರೆಗೆ ನಡೆಯುವ ಯಾವತ್ತು ಕಾರ್ಯಗಳು ಅಲ್ಲಿ ನೋಡಲು ದೊರೆಯುತ್ತಿದ್ದವು. ಆಂಧ್ರ ಲಲನೆಯರು ತಮ್ಮ ಕೋಮಲವಾದ ಬೆರಳುಗಳಿಂದ ಮತ್ಸ್ಯದಂತಹ ಸಹಾಯದಿಂದ ನಿರ್ಮಿಸುತ್ತಿದ್ದ ಹಿಮದಂತೆ ಕಂಗೊಳಿಸುವ ಹಂಜಿಗಳನ್ನು ಯಾವ ಯಂತ್ರಕ್ಕೆ ಮಾಡಲು ಸಾಧ್ಯವಾದೀತು? ಎಡೆಬಿಡದೆ ವೇಗದಿಂದ ತಿರುಗುತ್ತಲಿದ್ದ ಕದರಿನಿಂದ ಹೊರಡುವ ಕರ್ಣಮನೋಹರವಾದ ಮಂಜುಲಗಾನವನ್ನು ಯಾರು ತಾನೇ ವರ್ಣಿಸಬಲ್ಲರು. ಒಂದು ವರ್ಷದಲ್ಲಿ ಖಾದಿಯು ಎಷ್ಟೊಂದು ಸ್ಥಿತ್ಯಂತರವನ್ನು ಹೊಂದಿದೆಂಬುದು ಒಂದು ಭಾಗದಲ್ಲಿ ಸಂಗ್ರಹಿಸಿಟ್ಟ ಎಲ್ಲ ಬಗೆಯ ಖಾದಿಯನ್ನು ನೋಡಿ ಪರೀಕ್ಷಿಸಿದರೆ ತಿಳಿದು ಬರುತ್ತಿತ್ತು. ಶಾಂತಿನಿಕೇತನದಿಂದ ಮತ್ತು ಬೇರೆಕಡೆಗಳಿಂದ ಬಂದಂಥ ಚಿತ್ರಗಳೂ ಶ್ರೀಗಂಧ ಹಾಗು ಹಸ್ತಿದಂತಗಳಿಂದ ಮಾಡಲ್ಪಟ್ಟ ಚಿತ್ತಮನೋಹರವಾದ ಕೈಗಾರಿಕೆಯ ವಸ್ತುಗಳೂ ಕಲಾಭಿಜ್ಞರ ಮತ್ತು ಇತರರ ಮನಸ್ಸನ್ನು ಆಕರ್ಷಿಸುತ್ತಿದ್ದವು. ಈ ವಸ್ತುಗಳಿಂದ ಸರ್ವರಿಗೂ ಒಂದು ಬಗೆಯ ಶಿಕ್ಷಣವು ದೊರೆಯುತ್ತಿತ್ತು. ಹಿಂದುಸ್ಥಾನದ ಎಲ್ಲ ಭಾಗಗಳಿಂದ ಬಂದ ಹೆಸರಾದ ಗಾಯಕರ ಸಂಗೀತವನ್ನು ಕೇಳಲು ಸಂಗೀತ ಮಂದಿರದಲ್ಲಿ ಸಾವಿರಾರು ಜನರು ನೆರೆಯುತ್ತಿದ್ದರು.

## ಶ್ರೀಯುತ ದೇಸಾಯಿಯವರ ಜವಾಬು.

ನಾವು ಪ್ರತ್ಯಕ್ಷವಾಗಿ ಯುದ್ಧ ಮಾಡಿದ್ದೇವೆ. ನಾನು ಯುದ್ಧದ ಕೈದಿಯಾಗಿ ನಿಮ್ಮ ಮುಂದೆ ನಿಂತಿದ್ದೇನೆ. ಅಸಹಕಾರ ವಾದಿಗಳಾದ ನಾವು ನಿಮ್ಮಂತೆ ಪಾಶವೀ ಶಕ್ತಿಯ ಪೂಜಕರಾಗಿದ್ದರೆ, ನೀವು ಅಥವಾ ನಿಮ್ಮಲ್ಲಿಯ ಕೆಲವರು ಯುದ್ಧದ ಕೈದಿಗಳಾಗಿ ನಮ್ಮ ಮುಂದೆ ನಿಲ್ಲುತ್ತಿದ್ದಿರೆಂಬುವದರಲ್ಲಿ ಏನೂ ಸಂಶಯವಿಲ್ಲ. ಮನುಷ್ಯ ಪ್ರಾಣಿಯನ್ನು ಯುದ್ಧದಲ್ಲಿ ಸೆರೆಹಿಡಿದು ದೇವರ ದ್ರೋಹವನ್ನು ಕಟ್ಟಿಕೊಳ್ಳುವ ಪ್ರಸಂಗವನ್ನು ದೇವಾ! ನಮ್ಮಮೇಲೆ ಎಂದೂ ತರಬೇಡ.

ನನ್ನನ್ನು ಜೇಲಿಗೆ ಹಾಕಬೇಕೆಂದು ನಾನು ಕೋರ್ಟಿಗೆ ಸಹಾಯಮಾಡುತ್ತಲಿದ್ದೇನೆ. ಆದರೆ ನಿಮ್ಮಮೇಲೆ ಉಪಕಾರ ಮಾಡಬೇಕೆಂದಲ್ಲ. ನಾವೆಲ್ಲರೂ ಬಂಡಖೋರರು. ನಿಮ್ಮ ಯಾವ ಕಾಯಿದೆಗಳೂ ನಮಗೆ ಬಂಧನಕಾರಕವಾಗಲಾರದೆಂದು ನಾವು ಹೇಳುತ್ತೇವೆ. ಇದು ದೊಡ್ಡ ಅಪರಾಧವಿರುತ್ತದೆ. ಇದನ್ನು ಬಿಟ್ಟು ಸಣ್ಣಪುಟ್ಟ ಅಪರಾಧದ ಸಲುವಾಗಿ ನಮ್ಮ ಮೇಲೆ ಖಟ್ಲೆಮಾಡುವ ನಿಮ್ಮ ಪ್ರವೃತ್ತಿಯು ಅತ್ಯಂತ ಆಶ್ಚರ್ಯಕರವಾದದ್ದಿರುತ್ತದೆ. ನಿಮ್ಮ ಕ್ರಿಮಿನಲ್ ಲಾ ಅಮೆಂಡಮೆಂಟ ಆಕ್ಟು ನಮಗೆ ಸಮ್ಮತವಿರುವದಿಲ್ಲ. ಇಷ್ಟೇ ಅಲ್ಲ, ಗವ್ಹರ್ನರ ಜನರಲ್ ಇವರ ದೊಡ್ಡ ದೊಡ್ಡ ಕಾಯ್ದೆಗಳನ್ನು ಸಹ ನಾವು ಅಂಗೀಕರಿಸುವದಿಲ್ಲ. ಆದ್ದರಿಂದ ನೀವು ಶಕ್ಯವಿದ್ದಷ್ಟು ಕಠೋರಶಿಕ್ಷೆಯನ್ನು ಕೊಡಿರಿ. ಅದನ್ನು ಭೋಗಿಸಲು ನಾನು ಸಿದ್ಧನಾಗಿಯೇ ನಿಂತಿದ್ದೇನೆ. ನೀವು ನರಕದಲ್ಲಿಯ ಘೋರಯಾತನೆಗಳಿಗೆ ನಮ್ಮನ್ನು ಗುರಿಮಾಡಿದರೂ, ನಮ್ಮಲ್ಲಿಯ ಸತ್ವಮಯವಾದ ವಿರೋಧಭಾವವು ಉಳಿದು, ಅದರ ಸ್ಥಾನದಲ್ಲಿ ಈ ನಿಂದ್ಯವಾದ ರಾಜ್ಯಪದ್ಧತಿಯ ವಿಷಯದಲ್ಲಿ ದಾಂಭಿಕ ನಿಷ್ಠೆಯು ಉತ್ಪನ್ನವಾಗುವದು ಶಕ್ಯವಿದೆಯೆಂದು ನನಗಂತೂ ಅನಿಸುವದಿಲ್ಲ.

ಬಾನಶಹರ ಅತಿಥಿಯಾಗುವದಕ್ಕಿಂತ ಪೂರ್ವದಲ್ಲಿ ನಾನು ಒಂದೆರಡು ಶಬ್ದಗಳಲ್ಲಿ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ. ಯಥಾರ್ಥವಾಗಿಯೂ, ಮತ್ಸರಭಾವವಿಲ್ಲದೆಯೂ, ಸರಕಾರದಮೇಲೆ ಟೀಕೆಯನ್ನು ಮಾಡುವ ಕಠಿಣವಾದ ಕರ್ತವ್ಯಭಾರವು ನನ್ನ ತಲೆಯಮೇಲಿಂದ ಇಳಿಯಿತೆಂದು ನಿಸ್ಸಂದೇಹವಾಗಿ ನಿಶ್ಚಿಂತನಾಗಿದ್ದೇನೆ. ಈ ಯೋಗ್ಯತೆಯು ನನ್ನ ಗುರುಶ್ರೇಷ್ಠರೊಬ್ಬರಿಗೇ ಪ್ರಾಪ್ತವಾಗಿರುತ್ತದೆ ನೀ೯ ನೆ ನಿಯಮಾಧಿಕಾರದ ಕೂಡ ನನ್ನ ಹೋರಾಟವು ಇನ್ನು ಮುಂದೆ ತಪ್ಪಿತೆಂದು ನಾನು ನಿಜವಾಗಿಯೇ ಕೃತಜ್ಞನಿದ್ದೇನೆ. ತುರಂಗದ ನಿಮ್ಮ ನಿಯಮಗಳು ನನಗೆ ಅಡ್ಡಿಯನ್ನು ಮಾಡದಿದ್ದರೆ, ಇದಕ್ಕಿಂತಲೂ ಹೆಚ್ಚು ಶ್ರೇಯಸ್ಕರವಾದ ಕಾರ್ಯಗಳಲ್ಲಿ ನಾನು ಪ್ರವೃತ್ತನಾಗುವೆನು. ಅಂದರೆ ನೂಲನ್ನು ತೆಗೆಯುವದರಲ್ಲಿ ತೊಡಗುವೆನು. ತುರಂಗದ ನಿಯಮಗಳು ಇದರಲ್ಲಿ ಅಡ್ಡವಾಗದಲಿ ಪೂರ್ಣ ನಮ್ರಭಾವದಿಂದ ನಾನು ಸೃಷ್ಟಿಕರ್ತನ ಧ್ಯಾನವನ್ನು ಮಾಡುವೆನು. ನಾನು ನಿಮಗೆ ಕೃತಜ್ಞನಿದ್ದೇನೆ.'

---

## ನ್ಯಾಯವಂತ ಸುಲಗೆಯು.

ಸಹಸ್ರಾವಧಿ ಅಸಹಯೋಗಿಗಳು ಸೆರೆಯಾಳಾಗುವದನ್ನೂ, ತಪ್ಪಿಸಿಕೊಳ್ಳುವದಕ್ಕೆ ಬಾರದಂಥ ಅವರ ಬಿಗಿಗಲಗಳನ್ನೂ ಕಂಡು ನನಗೆ ಅತ್ಯಾನಂದವಾಗುವದು ನಿಜವು. ಇವು ನಮ್ಮನ್ನು ಸ್ವರಾಜ್ಯ ದೇವತೆಯ ಸಮೀಪಕ್ಕೆ ಒಯ್ಯುತ್ತಿದ್ದರೂ ನಾನು ವಿವಾದಿಸುವ ಕೆಳಗಿನ ಸಂಗತಿಗಳು ನನಗೆ ದುಃಖವನ್ನು ಕೊಟ್ಟಂ ಕೊಡುತ್ತಲಿವೆ. ಸರಕಾರದ ಅನ್ಯಾಯಾಚರಣೆಗಳು ನನಗೆ ದುಃಖಗೊಟ್ಟರೂ ಅಷ್ಟು ದುರ್ಬುದ್ಧಿಯಿಂದ ಅವುಗಳನ್ನು ನಾನೇನೂ ವಿಚಾರಿಸದೆ ಸಂತೋಷದಿಂದ ಚರ್ಚಿಸುವೆನು.

ಕಲಕತ್ತೆಯಲ್ಲಿಯ ಹರತಾಳ ವ್ರತವು ಕೇವಲ ಅಲ್ಪಾಬಾಧಿನಂತೆಯೇ ಸಂಭವಿಸಲಟ್ಟಿತು. ಶಾಂತತೆಗೆ ಭಂಗ ತಂದ ತಪ್ಪಿಂದ ಜನರು ಭಯಂಕರ ಸಂಕಟದಲ್ಲಿ ಬಿದ್ದ ನ್ಯಾನಾಗರಿಕರು ಮಾತ್ರ ಮುಂಬಯಿ ಪಟ್ಟಣಿಗರಂತೆ ಮೂರ್ಖರಾಗಲಿಲ್ಲ. ಅವರ ಶಾಂತಮಯ ವೃತ್ತಿಯು ಅನುಕರಣೀಯವಾಗಿತ್ತು. ಅವರ ಕಾರ್ಯದರ್ಶಿಗಳಾದ ಬಾಬು ಶಕರೂ ದಿವತಿ ರಾಯರು, ಸರದಾರ ಲಕ್ಷ್ಮಣ ಸಿಂಹರು ಮತ್ತು ಸ್ವಾಮಿ ವಿಶ್ವಾನಂದರು ನಿಶ್ಶಸ್ತ್ರ ಪ್ರಮತ್ತ ಒಳಗಾಗಿಟ್ಟರು ಅವರ ಅಪರಾಧವಾದರೂ ಏನು? ಜನತೆಯಲ್ಲಿ ಶುದ್ಧ ಶಾಂತವೃತ್ತಿಯನ್ನು ನೆಲೆಸಲಿಕ್ಕೆ ಯತ್ನಿಸಿದ್ದೇ ಹೊರತು ಬೇರೆಯಿಲ್ಲ. ಅಂದರೂ ಜನತೆಯು ಶಾಂತಮಯವಾಗಿತ್ತು ನಮ್ಮ ದೇಶಿಗರು ಮುಂದಾಳುಗಳಿಲ್ಲದೆ ಕಾರ್ಯ ನಡಿಸುವರೆಂದು ಹೇಳಲು ಶಕ್ಯವುಂಟು. ಅವರೆಲ್ಲರೂ ಮುಂದಾಳುಗಳೇ ಸೈ.

ಒಳ್ಳೇ ಜೋರಿನಿಂದ ಹೆಚ್ಚುತ್ತ ನಡೆದ ಈ ಹರತಾಳ ವ್ರತವು ಇವನ್ನು ಮುರಿಯಲಿಕ್ಕೆ ಯತ್ನಿಸಿದ ಭೀಮ ಪರಾಕ್ರಮದ ಸರವೆಯಿಲ್ಲದೆ ಜನರಲ್ಲಿ ಕೋಪಾತಿರೇಕವನ್ನು ಹುಟ್ಟಿಸದೆ ಅವರನ್ನು ಶಾಂತ ವೃತ್ತಿಯಲ್ಲಿ ಉಳಿಸಿತು. ಇದರಿಂದ **ವಿನೀತ ರಕ್ಷಕರು** (Civil guards) ಮುಖ್ಯವಾಗಿ ಆಂಗ್ಲ ವರ್ಗದವರು ಬಹಳೇ ಸಿಟ್ಟಿಗೆದ್ದರು. ಈ ಸಿಟ್ಟಿಗೆ ವ್ಹಾಯಿಸರಾಯರೇ ಹೊಣೆಗಾರರು. ಇವರು ಯುವರಾಜರನ್ನು ಕರೆತರ್ಕದ್ದಿದ್ದಿಲ್ಲ. ಅಂದರೂ ಅವರನ್ನು ಕರೆ ತಂದರು. ಇರಲಿ; ಅವರು ಹೋದ ಹೋದಲ್ಲೆಲ್ಲ ಅವರಿಗೆ ಸ್ವಾಗತ ಸಮಾರಂಭವನ್ನು ಜರುಗಿಸಲಿಕ್ಕೆ ಇವರ ಪ್ರಯತ್ನವು. ಇದರಲ್ಲಿ ನಿರಾಶೆಯಾದರೆ ಯುವರಾಜರಿಗೂ ಬ್ರಿಟಿಶ ರಾಷ್ಟ್ರಕ್ಕೂ ವೈರಿಯೆಂದು ಈ ಬಹಿಷ್ಕಾರ ವೃತಕ್ಕೆ ಹೆಸರಿಡುತ್ತ, ಯುವರಾಜರು ಆಂಗ್ಲವರ್ಗಹಿತಿಗರ ಕೋಪವಕ್ಕೆಳಸಿದರು ಆ ಮೇಲಿನ ಸಂಗತಿಗಳು ನಿರೀಕ್ಷಿಸದಂತೆ ಜರಗತೊಡಗಿದವು. ಪೋಲಿಸರೂ ವಿನೀತ ರಕ್ಷಕರೂ ತಮ್ಮ ಇಚ್ಛಾನುಸಾರವಾಗಿ ಬೇಕಾದ್ದು ಮಾಡಲಿಕ್ಕೆ ತಮಗೆ ಅಧಿಕಾರವುಂಟೆಂದು ನಾನಾ ಪ್ರಕಾರದ ಪ್ರಕಟಣೆಗಳನ್ನು ರಚಿಸಿದರು. ಅವರು ಅಂಗಡಿಗಳನ್ನು ಸುಲಿದರು. ಮಸೀದೆಗಳನ್ನು ಜೋಡುಗಳಿಂದಲೇ ಒಳನುಗ್ಗಿದರು ಕಳವು ಮಾಡಿದರು. (ಸ್ಟೇಟ್ಸ್‌ಮನ್ ಪತ್ರವು ತಿಳಿಸಿದ ಸಂಗತಿಗಳು ನಿಜವಿದ್ದರೆ,) ನಿರಪರಾಧಿಗಳು ದೇಹಪೀಡೆಗೆ ಒಳಗಾದರು; ಇವರಲ್ಲಿ ಕೆಲವರಂತೂ ಮರಣ ಹೊಂದಿದರು. ಜನತೆಯಂತೂ ಒಳ್ಳೇ ಸಹನಶೀಲತೆಯಿಂದ ಈ ನ್ಯಾಯವಂತ ದುರ್ನಡತೆಗಳನ್ನು ಸಹಿಸಿತು. ಅದು ಕೇವಲ ಯೋಗ್ಯ ಮಾರ್ಗವನ್ನೇ ಆಚರಿಸಿತು. ತಿರಸ್ಕರಿಸುವವನ ಜೋಡುಗಳಿಂದ ಮಸೀದೆಗೆ ಮೈಲಿಗೆಯಾಗುವದಿಲ್ಲವೆಂದು ನನ್ನ ಅಭಿಪ್ರಾಯವು. ಆಶ್ಚರ್ಯ ಪಡುವಂಥ ಇಂಥ ಸಹನಶೀಲತೆಯಿಂದ ಕಾಜಿಗಳು ತಮ್ಮ ಮಸೀದೆಗೆ ಹೆಚ್ಚು ಪವಿತ್ರತೆಯನ್ನು ತಂದು ಕೊಟ್ಟರು. ಇದೊಂದು ಧರ್ಮ ಯುದ್ಧವೆಂದು ಅವರು ಸಿದ್ಧಾಂತ ಪಡಿಸಿದರು.

ಅಧಿಕಾರಿಗಳು ಬಿಹಾರ ಪ್ರಾಂತದಲ್ಲಿ ಒಳ್ಳೇ ವರ್ತನದಿಂದ ನಡೆಯಲಿಲ್ಲ. ರಾ. ರಾ. ರಾಷ್ಟ್ರೀಯ ಸಂಘದ ಕಾರ್ಯದರ್ಶಿಯು ಕೆಳಗೆ ಕೊಟ್ಟಂತೆ ಬರೆಯುತ್ತಾನೆ.

“೧೯೨೧ ನೇಯ ಇಸ್ವಿಯ ದಿಶೆಂಬರ ೭ನೇಯ ತಾರೀಖಿನ ದಿವಸ ಮಧ್ಯಾಹ್ನದ ಮೂರು ಗಂಟೆಯ ಸುಮಾರಕ್ಕೆ ೧೦ ಜನ ಸ್ವಯಂ ಸೇವಕರು ತಮ್ಮ ಸಂಗಡಿಗರೊಡನೆ “೨೦ ತಾರೀಖಿನ ದಿವಸ ಯುವರಾಜರ ಆಗಮನಕ್ಕಾಗಿ ಸಂಪೂರ್ಣ ಹರತಾಳ ವ್ರತವನ್ನು ಪಾಲಿಸಬೇಕು” ಎಂದು ಅಂಗಡಿಕಾರರಿಗೆ ಬೇಡಿಕೊಳ್ಳುತ್ತ ಬೀದಿಗಳಲ್ಲಿ ತಿರುಗುತ್ತಿದ್ದರು. ಈ ಪಂಗಡವು ಹಾಗೆಯೇ ತಿರುಗುತ್ತ ಸೋನಪುರದ ಪೋಲಿಸ ಠಾಣೆಗೆ ಬಂದ ಕೂಡಲೆ ಅಲ್ಲಿ ಯುವರಾಜರ ಆಗಮನದ ಕಾರ್ಯಕ್ಕೆಂದು ನಿಂತಿದ್ದ ಪೋಲಿಸ ಸುಪರಿಂಟೆಂಡರು (ಶ್ರೀ ಪಾರ್ಕಿನ್ಸ) ನೂರು ಶಿಪಾಯರೊಡನೆ ಹೊರಗೆ ಬಂದು ಸ್ವಯಂ ಸೇವಕರ ಧ್ವಜಗಳನ್ನೂ ಪತಾಕೆಗಳನ್ನೂ ಅವರು ತೊಟ್ಟ ಅರಿವೆಗಳನ್ನೂ ಬಿಡದೆ, ಹರಿದು ಚೂರು ಚೂರು ಮಾಡಿದರು.

“ಕೂಡಲೆ, ಅವರು ಬಡಿಗೆಗಳನ್ನು ಹಿಡಿದ ಕೆಲವು ಶಿಪಾಯರ ಪಥಕದೊಡನೆ ಸಭಾ ಕಾರ್ಯಾಲಯಕ್ಕೆ ತೆರಳಿದರು. ಕಾಂಗ್ರೆಸ್ ಕಚೇರಿಯನ್ನು ಮುಟ್ಟಿದರು. ಕೂಡಲೆ ಪಾರ್ಕಿನ್ಸರು ಸುರಿಯಲಿಕ್ಕೆ ಅವರಿಗೆ ಹುಕುಂ ಕೊಟ್ಟರು. “ಒಡೆಯಿರಿ, ಲೂಟಿಯಿಸಿರಿ” ಎಂಬವು ಅವರು ಉಪಯೋಗಿಸಿದ ಶಬ್ದಗಳು. ಈ ಅಪ್ಪಣೆಗಳಿಗನುಗಾಗಿ ಬಡಿಗೆಯ ಶಿಪಾಯರು ಬಾಗಿಲವನ್ನು ಮುರಿದು, ಸ್ವಯಂಸೇವಕದ್ವಾರಪಾಲಕರನ್ನು ಬೇಕಾದಂತೆ ನೂಗಿಸುತ್ತ, ಅವರಿಗೆ ಜಡಿಯುತ್ತ ಕಾರ್ಯಾಲಯವನ್ನು ಪ್ರವೇಶಿಸಿದರು. ಶ್ರೀ. ಪಾರ್ಕಿನ್ಸರು ಕಚೇರಿ ತುಂಬೆಲ್ಲ ಹುಡುಕಿದರು. ಅಲಮಾರಿಗಳನ್ನೂ ಪೆಟ್ಟಿಗೆಗಳನ್ನು ಮುರಿದರು. ಹಳೇ ಕಾಗದ ಪತ್ರಗಳನ್ನಿಟ್ಟ ಅಲ್ ಮೀರಾವನ್ನ ಮುರಿದು ಬಿಟ್ಟರು. ಮುಂದೆ ಅವೆಲ್ಲವುಗಳನ್ನು ಬೀದಿಗೆಳೆತಂದರು ಕಚೇರಿಯಲ್ಲಿಟ್ಟ ಗಾಂಧಿ ತಾಗೆಗಳನ್ನೂ ರಾಷ್ಟ್ರೀಯ ಪಂಚಾಂಗ ಪಟವನ್ನೂ (National calendar) ಚಿತ್ರಗಳನ್ನೂ ಖಾದಿ ಟೊಪ್ಪಿಗೆಗಳನ್ನು ರಾಮಾಯಣ ಭಗವದ್ಗೀತೆ ಮೊದಲಾದ ಧಾರ್ಮಿಕ ಗ್ರಂಥಗಳನ್ನೂ ಬೀದಿಗೆಳೆತಂದು ಕಚೇರಿಯ ಮುಂದೆ ಸುಟ್ಟರು. ಅವರು ಒಯ್ದ ರೂಪಾಯಿಗಳು ಒಟ್ಟು ೧೫೦ ಇದ್ದವು. ಅವುಗಳನು ಕಂದುಗಟ್ಟಿದ ಜನರಲ್ಲಿ ಹಂಚಲಿಕ್ಕೆಂದೂ ರಾಷ್ಟ್ರೀಯ ಶಾಲೆಗೆ ಕೂಡುವ ಸಹಾಯಕ ಧನವೆಂದೂ ಇಲ್ಲಿಯ ಜಿಲ್ಲಾ ಸಭಾ ಕಾರ್ಯಾಲಯಕ್ಕೆ ಕಳುಹಿಸಿರುವರು.

ಧರ್ಮ ಬದ್ಧವಾದ ಕಟ್ಟಳೆಗಳಿಂದ ಆಳುವೆನೆಂದು ಜಂಬ ಬಡಿಯುವ ಇದೇ ಸರಕಾರವು ಹಗಲಿನಲ್ಲ ಹಾದೀ ಬಡಿದದ್ದರ ವರ್ಣನೆಯನ್ನು ಬನಾರೆಸ ವೃತ್ತವು ಕೆಳಗೆ ಕೊಟ್ಟಂತೆ ತೋರಿಸುತ್ತದೆ.

“ಕಳೆದ ಮೂರು ವಾರಗಳಿಂದ ಸ್ವಯಂ ಸೇವಕರು ಕಾರಾಗೃಹವಾಸಕ್ಕೆ ಹೊಕ್ಕು ಹೊರಗಳಲ್ಲಿ ಅಡ್ಡಾಡಲಿಲ್ಲ. ದಸ್ತಗಿರಿ ಹೊಂದಲ್ಪಟ್ಟವರ ಒಟ್ಟು ಸಂಖ್ಯೆಯು ೧೫೦ ಕ್ಕೆ ಬಂದಿದೆ. ಅವರೆಲ್ಲರೂ ಸಾಧಾರಣವಾಗಿ, ೩೪

೬೩ ನೇ ಪುಟ ನೋಡಿರಿ

ಕನ್ನಡ ನವಜೀವನ.

ಪೌಷ್ಯ ಶು|| ೧೪ ಗುರುವಾರ ಶಕೆ ೧೮೪೩

## ಸ್ವತಂತ್ರತೆಯು.

ಮೌಲಾನಾ ಹಜರತ ಮೋಹಿನಿಯವರು ಖಿಲ್ಲೇ ದೈ ಯವ್ವ್ಲ ಸ್ವಾತಂತ್ರ್ಯಯುದ್ಧದ ಪ್ರಶ್ನೆಯನ್ನು ರಾಷ್ಟ್ರೀಯ ಮಹಾ ಸಭೆಯ ಮಂಟಪದ ಸಭಾಸ್ಥಾನಕ್ಕೆ ತಂದರು. ಸುದೈವದಿಂದ ಅವರು ಈ ವಿಷಯದಲ್ಲಿ ಕ್ಷಣಕ್ಷಣಕ್ಕೆ ಸೋಲುತ್ತಿದ್ದರು. ಸನಾತನಸ್ವಂದರಾಗಿಯೂ ಸಮುಧಾರಿಗಳಾಗಿಯೂ ಆಂಗ್ಲೇಯರೊಡನೆಯ ಸಖ್ಯದಲ್ಲಿಯ ಎಲ್ಲತರದ ಬಳಿಕೆಯನ್ನು ಬೇರುಸಹಿತವಾಗಿ ಕಿತ್ತಿಹಾಕಲು ಅವರಿಗೆ ಬೇಕಾಗಿರುವದು. ಮತ್ತು ಖಿಲಾಫತ್ ಪ್ರಶ್ನೆಯು ನಮ್ಮ ಮನಃಪೂರ್ವಕವಾಗಿ ಬಿಡಿಸಲ್ಪಟ್ಟರೂ ಅವರ ಸಂಸರ್ಗವು ನಮಗೆ ಬೇಡ ಎಂಬದೂ ಅವರ ಇಷ್ಟವು. ಸಂಪೂರ್ಣ ಸ್ವಾತಂತ್ರ್ಯವು ದೊರೆತವಿನಾ ಖಿಲಾಫತ್ ಪ್ರಶ್ನೆಯು ಎಂದೂ ಬಿಡಿಸಲ್ಪಡದೆಂದು ಒತ್ತಾಯ ಮಾಡಲೂ ಬೇಡ. ನಮ್ಮದು ಕೇವಲ ತಾತ್ವಿಕ ವಾದವು. ಇನ್ನು ನಮಗೆ ಸಂಪೂರ್ಣ ಸ್ವತಂತ್ರತೆಯು ಸಿಕ್ಕಹೊರತು ಖಿಲಾಫತ್ತ ಪ್ರಶ್ನೆ ಬಿಡಿಸಲ್ಪಡುವದಿಲ್ಲ; ಅಂದರೆ ಇಸ್ಲಾಮೀ ಧರ್ಮಾಭಿಮಾನಿಗಳೊಡನೆ ಆಂಗ್ಲೇಯರು ತಮ್ಮ ವೈರಭಾವವನ್ನು ಹಾಗೆಯೇ ಕಾಯ್ದುಕೊಂಡರೆ, ಮುಂದೆ ನಾವು ಮಾಡುವದಾದರೂ ಸಂಪೂರ್ಣ ಸ್ವತಂತ್ರತೆಯನ್ನು ಪಡೆಯಲಿಕ್ಕೆ ಹೆಣಗಾಡುವದೇ ಹೊರತು ಬೇರೆಯಿಲ್ಲ. ಇದೇ ಸಾಮಾನ್ಯವಾದ ಕಾರಣವು ಭಾರತಮಾತೆಯು ತನ್ನ ನೈತಿಕ ಸಹಾಯವನ್ನು ಆಂಗ್ಲಸ್ತ್ರೀಯಳಿಗೆ ಕೊಡಲು ಅಸಮರ್ಥಳು ಮತ್ತು ಯಾವುವೇಳೆ ಅವಳು ಇಸ್ಲಾಮೀ ಧರ್ಮಕ್ಕಾಗಿ ವಿಶ್ವನಾಶ್ಯವನ್ನು ಕೋರ್ಪಡಿಸಲು ಮನವೊಲಿಸಿದ್ದರೆ ಅವಳ (ಆಂಗ್ಲಸ್ತ್ರೀಯಳ) ನೈತಿಕ ಸಹಾಯವಿಲ್ಲದೆ ಮತ್ತು ವಸ್ತು ಸಾಹಿತ್ಯಗಳ ಸಹಾಯವಿಲ್ಲದೆ ತಾನು (ಭಾರತಮಾತೆಯು) ಎದೆತಟ್ಟಿನಿಲ್ಲಬೇಕು.

ಆದರೆ ಗ್ರೇಟಬ್ರಿಟನ್ನವು ತನ್ನ ಮನೋಭಾವನೆಯನ್ನು, ನನ್ನ ಇಚ್ಛೆಯಂತೆ ಭಾರತಮಾತೆಯು ಬಲವಂತಳಾದರೆ ಬದಲಿಸುವದೆಂದು ತಿಳಿಯುವಾ ಆಗ್ಗೆಮಾತ್ರ ಸ್ವತಂತ್ರ್ಯಕ್ಕಾಗಿ ಒತ್ತಾಯಮಾಡುವದು ನಮ್ಮ ಧರ್ಮದೃಷ್ಟಿಯಿಂದ ವಿರುದ್ಧವಾದ ಮಾತು. ಯಾಕಂದರೆ, ಹೀಗೆಮಾಡುವದು ನಮ್ಮಲ್ಲಿಯ ವೈಮನಸ್ಯಕ್ಕೂ ಕೋಪಕ್ಕೂ ಕಾರಣವಾಗುವದು. ಪರಮಾತ್ಮನನ್ನೇ ಅಲ್ಲಗಳೆದಂತಾಗುವದು. ಹ್ಯಾಗಂದರೆ, ಮಾನವಾಂತರ್ಗತನಾದ ಶ್ರೀಪರಮಾತ್ಮನ ವಚನಗಳಿಗೆ ಆಂಗ್ಲೇಯರು ಪ್ರತಿವಚನಗಳನ್ನು ಕೊಡಲು ಅಶಕ್ತರು ಎಂಬ ತಿಳುವಳಿಕೆಯೇ ಮೇಲ್ಮಾಣಿಸಿದ ನಿಷೇಧಪ್ರವೃತ್ತಿಯ ಮೂಲಬೀಜವು. ತಮ್ಮ ಧರ್ಮಗಳಲ್ಲಿ ವಿಶ್ವಾಸವುಳ್ಳ ಹಿಂದೂ ಮುಸಲ್ಮಾನರಿಬ್ಬರಿಗೂ ಇಂತಹ ಸ್ಥಿತಿಯು ನಿರ್ವಹಿಸಕೂಡದಂಥದಾಗಿರುವದು.

ನಮಗೆ ಸಿಕ್ಕ ಮೊದಲನೆಯ ಪ್ರಸಂಗದಲ್ಲಿ ಹಿಂದುಸ್ತಾನದಿಂದ ಹೊರಗೆ ದಬ್ಬಲಿಕ್ಕೆ ಪಾತ್ರರಾದ ದೀರ್ಘದ್ವೇಷಿಗಳೆಂದು ಆಂಗ್ಲೇಯರನ್ನು ಅನಾದರಿಸುವದರಲ್ಲಿಯೇ ಭಾರತೀಯರ ವಿಶಾಲವಾದ ವೈಭವವು ವಾಸಿಸದೆ, ಜಗತ್ತಿನಲ್ಲಿ ಜಗಿಜಿದ್ದು ಅಶಕ್ತರಾದಂಥ ಮುಂಬೀಳದಂಥ ಎಲ್ಲಜಾತಿ ಜನಾಂಗಗಳ ಪರಿಶೋಧನೆಗೆ ಆಧಾರಭೂತವಾದ ಸಾಮ್ರಾಜ್ಯ ಪದವಿಯಲ್ಲಿ ಪ್ರಸ್ಥಾಪಿಸಲ್ಪಡುವ ರಾಷ್ಟ್ರಗಳ ಹೊಸ ಪ್ರಜಾಪ್ರಭುತ್ವದಲ್ಲಿಯು ನಮ್ಮ ಮಿತ್ರವರ್ಗದಲ್ಲಿಯೂ ಪಾಲುಗಾರರಲ್ಲಿಯೂ ಆ ಆಂಗ್ಲೇಯರನ್ನು ದಬ್ಬಿಕೊಳ್ಳುವದರಲ್ಲಿಯೇ ಮೇಲ್ಮಾಣಿಸಿಷ್ಟ ವೈಭವವು ವಾಸಿಸುವ ಪ್ರಶ್ಯಾಕೆಯುಂಟು.

ಇನ್ನು ಆಂಗ್ಲರ ಅಂತರ್ಗತ ಸ್ವರಾಜ್ಯವೇನೆಂಬುವದನ್ನು ಸ್ಪಷ್ಟವಾಗಿ ನೋಡೋಣ. ಭಾರತೀಯರು ಸ್ವತಂತ್ರತೆಯನ್ನು ಪಡೆಯಲಿಚ್ಛಿಸಿದರೆ ಆ ಸ್ವಾತಂತ್ರ್ಯವನ್ನು ಪ್ರಸಿದ್ಧಿಗೊಳಿಸುವ ಅವರ ಸಾಮರ್ಥ್ಯವು. ಅದರ ನಿಜವಾದ ಅರ್ಥವು. ಕಾರಣ ಪಾರ್ಲಮೆಂಟ ಸಭೆಯು ಆತ್ಮಸಂತೋಷದಿಂದ ಕೊಡುವಂಥ ದಾನವು ನಮ್ಮ ಸ್ವರಾಜ್ಯವಲ್ಲ. ಭಾರತೀಯರ ಸಂಪೂರ್ಣ ಮನೋಭಿಪ್ರಾಯದ ನಿಶ್ಚಯವಾದ ಪ್ರಕಟನೆಯೇ ಅದಾಗಿರುವದು. ಹೀಗೆ ಪ್ರಕಟಿಸುವದು ಮಾತ್ರ ಪಾರ್ಲಮೆಂಟ ಸಭೆಯ ಮುಖಾಂತರವಾಗಿ ನಿಜವು. ಆದರೆ ಹಿಂದನಿವಾಸಿಗಳು ಸ್ವೇಚ್ಛೆಯಿಂದ ಬಹಿರ್ಪಡಿಸಿದ ಈ ಪ್ರಕಟನೆಯು ಕೇವಲ ವಿನಯವುಳ್ಳದ್ದಾಗಿರುವದು. ಒಪ್ಪಂದದ ಈ ವಿಚಾರಣೆಯಲ್ಲಿ ಸಲ್ಲದ ಕ್ರಿಯಾವಿಶೇಷಣೆಗಳೆಂದು ಹೌಸ ಆಫ ಕಾಮನ್ಸರು ಅವುಗಳಲ್ಲಿ ಬದಲಾಯಿಸತಕ್ಕದ್ದಲ್ಲ. ನಮ್ಮ ವಿಷಯಕ್ಕಿದ್ದ ಪ್ರಕಟನೆಯೇ ಒಪ್ಪಂದವು. ಇದಕ್ಕೆ ಆಂಗ್ಲರು ಬಂಧ ಪಕ್ಷದವರು.

ಇಂತಹ ಸ್ವರಾಜ್ಯವು ಈ ವರುಷದಲ್ಲಿ ದೊರೆಯಲಿಕ್ಕಿಲ್ಲ; ನಮ್ಮ ಈಗಿನ ಪೀಳಿಗೆಗೂ ಸಿಗಲಿಕ್ಕಿಲ್ಲ. ಆದರೆ ಇದಕ್ಕೂ ಕಡಿಮೆಯಾಗಿ ನಾನೇನೂ ಚಿಂತಿಸಿಲ್ಲ. ಆಂಗ್ಲರ ಪಾರ್ಲಮೆಂಟ ಸಭೆಯು ಒಪ್ಪಂದಕ್ಕೆ ಬಂದವೇಳೆ ಹಿಂದವಾಸಿಗಳ ಇಚ್ಛೆಗಳನ್ನು ತಮ್ಮ ದಬ್ಬಾಳಿಕೆಯ ಬಲದಿಂದ ನಿರ್ಧರಿಸದೆ, ಸಂತೋಷದಿಂದ ಆರಿಸಲ್ಪಟ್ಟ ಜನತೆಯ ಪ್ರತಿನಿಧಿಗಳ ಮುಖಾಂತರವಾಗಿ ಅವುಗಳನ್ನು ನಿರ್ಧರಿಸುವದು.

ಸ್ವರಾಜ್ಯವೆಂದರೆ ಒಂದು ಜನಾಂಗವು ಸ್ವಸಂತೋಷದಿಂದ ಬೇರೊಂದು ರಾಷ್ಟ್ರಕ್ಕೆ ಕೊಡುವ ದಾನವಲ್ಲ. ಅದು ರಾಷ್ಟ್ರದ ಅತ್ಯುತ್ತಮವಾದ ಜೀವನ್ಮಣಿಗಳ ರುಧಿರವನ್ನು ಕೊಟ್ಟು ಕೊಳ್ಳುವಂಥ ವಸ್ತುವಾಗಿರುವದು. ಇದರ ಬೆಲೆಯನ್ನು ನಾವು ಹೆಚ್ಚಿಸಿದೆವೆಂದರೆ ಅದು ದಾನವೆಂದು ಕರೆಯಲ್ಪಡುವದಿಲ್ಲ. "ಶಸ್ತ್ರಪಾಣಿಗಳಾದ ಹೊರತು ಪಾರ್ಲಮೆಂಟ ಸಭೆಯಿಂದ ಸ್ವರಾಜ್ಯವು ಸಿಗದು" ಎಂಬ ತಿಳುವಳಿಕೆಯಿಂದ ವ್ಹಾಯಿಸರಾಯರಿಗೆ ದಿಂಗುಬಿದ್ದಿರುವದು. ದುಃಖಗಳನ್ನು ಸಹಿಸುವದರಲ್ಲಿಯ ನೈತಿಕಬಲವನ್ನು ಇಂಗ್ಲಂಡವು ಗಣನೆಗೆ ತಾರಲಿಯಾದೆಂದು ಸಿದ್ಧಾಂತಪಡಿಸಲು, ವ್ಹಾಯಿಸರಾಯರು ತಮ್ಮ ಸಭಾಸದರಿಗೆ ಅನುವುಕೊಟ್ಟಾಗ್ಗೆ, ಅವರು ತಮ್ಮ ದೇಶದ ತೊಂದರೆಗಳನ್ನು ತೋರಿಸಲಿಲ್ಲ. ಇದಲ್ಲದೆ ಅವರು, 'ಪಾರ್ಲಮೆಂಟ ಸಭೆಯ ಮನಸ್ಸಿಗೆ ಸ್ವರಾಜ್ಯವನ್ನು ಕೊಡಬೇಕೆಂದು ಬಂದರೆ ಅದು ಹಿಂದೂಜನರ ಇಚ್ಛೆಗಳನ್ನೂ ಉತ್ಸಾಹವನ್ನೂ ಪರೀಕ್ಷಿಸಿ ಕೊಡುವದು" ಎಂದು ಹೇಳುತ್ತ ಸಭಾಸದರ ಬುದ್ಧಿಯನ್ನು ತಬ್ಬೀಕರಿಸಿದರು. ಆದರೆ ಆ ಕೊನೆಯಿಲ್ಲದ ದುಃಖವನ್ನು ಅನುಭವಿಸುವದರಲ್ಲಿಯ ಅಪರಿಮಿತ ಶ್ರಮದ ಪ್ರತಿಫಲವೇ ನಮ್ಮ ಸ್ವರಾಜ್ಯವೆಂದು ಕಟ್ಟಿಟ್ಟ ಮಾತು.

ಖಡ್ಗಕ್ಕೆ ಬದಲಾಗಿ ಬೇರೆ ಯಾವುದು ವಸ್ತುವನ್ನು ಉಪಯೋಗಿಸುವ ರೂಢಿಯು ವ್ಹಾಯಿಸರಾಯರಿಗೆ ಗೊತ್ತಿಲ್ಲ. ಈ ಕಾರಣ, ನಮ್ಮಲ್ಲಿಯ ವಾದವಿವಾದದ ಕುಶಲತೆಯಿಂದ ಲೆಜಿಸ್ಲೆಟಿವ್ಹ ಕೌನ್ಸಿಲಗಳಮೇಲೆ ಅಧಿಕಾರ ನಡೆಸಿ, ಒಂದಿಲ್ಲೊಂದು ದಿನ ನಮ್ಮ ಇಚ್ಛೆಗನುಸಾರವಾಗಿ ನಮಗೆ ಸ್ವರಾಜ್ಯಕೊಡಲು ಪಾರ್ಲಮೆಂಟ ಸಭೆಯ ಮನಸ್ಸಿಗೆ ಹೇಳಿಸಿ ತೋರಿಸಲು ನಾವು ಸಮರ್ಥರಾಗಿಯೇ ತೀರುವೆವೆಂದು ಆ ವ್ಹಾಯಿಸರಾಯರು ಬಹುಶಃ ತಿಳಿವೇ ತಿಳಿದಿರುವರು. ವಿಶಿಷ್ಟಕರವಾದ ಮತ್ತು ಒಳ್ಳೇ ಪರಿಣಾಮಕಾರಕವಾದ ಬೇರೊಂದು ಶಕ್ತಿಯು ಆ ಖಡ್ಗಕ್ಕೆ ಪ್ರತಿಯಾಗಿರುವದೆಂದು ಅವರಿಗೆ ಶೀಘ್ರವಾಗಿಯೇ ಗೊತ್ತಾಗವದು. ಅಂತಹ ಶಕ್ತಿಯೇ ನಮ್ಮ ಕಾರ್ಯಕ್ರಮದ ಸವಿನಯ ಆಜ್ಞಾಭಂಗ ವ್ರತವು. ಭಾರತಮಾತೆಯು ತನ್ನ ಪೂರ್ವಸ್ಥಿತಿಗೆ ಬರುವ ಪೂರ್ವದಲ್ಲಿ ಅವಳನ್ನು ದುಃಖಕ್ಕೆ ಗುರಿಮಾಡಿ ಆ ದುಃಖದ ದಾರಿಯಿಂದಲೇ ಅವಳನ್ನು ಈ ವ್ರತವು ದಾಟಿಸುತ್ತದೆಂಬದು ಒಳ್ಳೇ ಹೆಚ್ಚಳವಾಗಿ ಒಡೆದುಕಾಣುತ್ತಿದೆ.

ಮೊದಲಿನ ಸ್ಥಿತಿಗೆ ಇನ್ನೂ ನಾವು ಬಂದಿಲ್ಲ. ಹಿಂದೂ ಮುಸಲ್ಮಾನರ ಪರಸ್ಪರರ ಅವಿಶ್ವಾಸವು ಅಳಿದುಹೋಗಿಲ್ಲ. ಹಿಂದೂ ಜನರ ಪ್ರಕಾಶಿತ ಸ್ಪರ್ಶಶಾಂತಿಯ ಹೊಳಪಿನ ಅನುಭವವು ಅಸ್ಪೃಶ್ಯರಿಗೆ ಆಗಿಲ್ಲ. ಸ್ವರಾಜ್ಯದಲ್ಲಿಯ ನಿಶ್ಚಿತವಾದ ಧೋರಣದ ಜ್ಞಾನವು ಪಾರ್ಶೀಜನರಲ್ಲಿಯೂ ಹಿಂದುಸ್ತಾನದ ಕ್ರಿಶ್ಚಿಯನ್ನರಲ್ಲಿಯೂ ಇನ್ನೂ ಗೋಚರಿಸಿಲ್ಲ. ನಮ್ಮ ದೇಶದ ಕಟ್ಟಳೆಗಳನ್ನು ಪರಿಪಾಲಿಸುವದರಲ್ಲಿಯ ಅವಶ್ಯಕತೆಯನ್ನು ಗೊತ್ತುಮಾಡಿಕೊಳ್ಳುವ ಕಲ್ಪ

ಯನ್ನು ನಾವಾರೂ ಇನ್ನೂ ಕಲಿತಿಲ್ಲ. ನಮ್ಮ ಗೃಹಗಳಲ್ಲಿ ತನ್ನ ಚಿರಸ್ಥಾಯಿಕವಾದ ಸ್ಥಳವನ್ನು ಸ್ವಚ್ಛತೆಯು ಇನ್ನೂ ಕಂಡಿಲ್ಲ. ಖಾದಿಯು ರಾಷ್ಟ್ರೀಯ ವಸ್ತ್ರವಾಗಿಲ್ಲ. ಒಟ್ಟಿನಮೇಲೆ ಸ್ವಸಂರಕ್ಷಣೆಯ ಕುಶಲತೆಯನ್ನು ನಾವು ಇನ್ನೂ ಅರಿತಿರುವದಿಲ್ಲ.

ಆದಾಗ್ಯೂ ಹಿಂಸಾಕ್ರಿಯೆಗಳಿಂದಲೇ ನಮಗೆ ಸ್ವರಾಜ್ಯವು ಸಿಗುವದು ಎಂಬ ಭಾವನೆಯುಳ್ಳ ಒಂದು ಸಂಘವು ಇರುವದು. ಅಹಿಂಸಾತತ್ವವನ್ನೂ ಹಿಂಸಾತತ್ವವನ್ನೂ ಕೂಡಿಯೇ ಪಾಲಿಸಬೇಕೆಂದು ಅವರ ದುರಾಗ್ರಹವು. ನಮ್ಮ ಕಾರ್ಯಕ್ರಮದ ಅಹಿಂಸಾತತ್ವವು ಹಿಂಸಾಶಕ್ತಿಯನ್ನು ಉಪಯೋಗಿಸಲು ಸಾಧನೀಭೂತವಾಗಿದ್ದೆಂದು ಅವರು ಎಣಿಸುವರು. ಈ ತರದ ವಿಚಾರಸಂತತಿಗೆ ತಮ್ಮ ಆಚರಣೆಯು ಇಡೀ ಜಗತ್ತನ್ನೇ ಮೋಸಗೊಳಿಸುವದೆಂದು ಗೊತ್ತಿರುವದಿಲ್ಲ. ಅಹಿಂಸಾತತ್ವದಿಂದ ಬದ್ಧರಾದ ನಾವು ನಮ್ಮ ಸಂಕೇತಾರ್ಥವನ್ನು ತೀವ್ರವಾಗಿ ಗಳಿಸುವದಕ್ಕೋಸುಗ ಆ ತತ್ವದ ಸರಿ ಪೂರ್ಣತೆಯಲ್ಲಿ ಪೂರ್ಣ ವಿಶ್ವಾಸವನ್ನಿರಿಸಲೇಬೇಕೆಂದು ಆ ತತ್ವಕ್ಕೆ ಬೇಕಾಗಿದೆ. ಈ ಅಹಿಂಸಾತ್ಮಕ ತತ್ವವು ಕಡೆತನಕ ಉಳಿಯುವಂಥ ಪ್ರಮಾಣವಾಗಿರುವದು ಇನ್ನೊಂದು ಶಕ್ಯ ಯುಕ್ತಿಯಿರುವದು ಯಾಕೆಂದರೆ ಇದೊಂದು ಪ್ರಕಾರದ ಪ್ರಯೋಗವು. ಈ ರೀತಿಯಿಂದ ಬದ್ಧರಾದ ನಾವು ಈ ತತ್ವದಲ್ಲಿ ವಿಶ್ವಾಸವಿಡಬೇಕಲ್ಲದೆ ಅದರಂತೆ ಆಚರಿಸಲಿಕ್ಕೆ ಬೇಕು. ಇದಲ್ಲದೆ ಈ ತತ್ವವನ್ನು ಸ್ವೀಕರಿಸಲಿಕ್ಕೆ ಉಳಿದವರಿಗೆ ಬೆನ್ನು ಹತ್ತಿ ಉಪದೇಶ ಮಾಡಲಿಕ್ಕೆ ಬೇಕು ಮತ್ತು ಅತ್ಯಾಚಾರಗಳನ್ನು ಕಳೆಗುಂದಿಸಲಿಕ್ಕೆ ಬೇಕು. ಇನ್ನೂ ನಾವು ನಮ್ಮ ಗುರಿಯನ್ನು ಕಂಡಿಲ್ಲವೆಂದು ನನಗೆ ಪೂರ್ಣ ಅನಿಸುತ್ತಿದೆ. ರಾಷ್ಟ್ರೀಯ ಸಭೆಯ ಆಜ್ಞೆಗಳಿಗೆ ಒಪ್ಪಿಗೆಯನ್ನು ಕೊಟ್ಟ ನಾವು, ಆ ಆಜ್ಞೆಗಳನ್ನು ಆಚರಣೆಯಲ್ಲಿ ತರಲು ಯತ್ನಿಸಿಲ್ಲ.

(ಯಂಗ ಇಂಡಿಯಾ) (ಮೋ. ಕ. ಗಾಂಧಿ)

---

## ಮೊದಲನೆಯ ಕೆಲಸವು.

ಸ್ವರಾಜ್ಯ, ಖಿಲಾಫತ ಮತ್ತು ಪಂಜಾಬ ಈ ವಿಷಯಗಳಿಗಿಂತ ಸರಕಾರವು ಈಗ ನಮ್ಮ ದೇಶದ ಮೇಲೆ ತಂದ ಆಪತ್ತನ್ನು ಹೇಗೆ ನೀಗಬೇಕೆಂಬ ಮಾತಿನ ಕಡೆಗೆ ನಾವು ಹೆಚ್ಚು ಲಕ್ಷ್ಯಗೊಡುವದು ಅಗತ್ಯವಾಗಿದೆ. ನಮ್ಮ ಧ್ಯೇಯವನ್ನು ಸಂಪಾದಿಸಲು ಮುಂದೆ ಸಾಗುವ ಮೊದಲು ನಮ್ಮ ಭಾಷಣ ಸ್ವಾತಂತ್ರ್ಯ ಮತ್ತು ಸಂಘ ಸ್ವಾತಂತ್ರ್ಯಗಳು ನಷ್ಟವಾಗದಂತೆ ಯತ್ನಿಸುವದು ಅವಶ್ಯವು. ಸರಕಾರವು ನುಗ್ಗಲಿದೆ ನಿಂತು ನಮ್ಮ ಮೇಲೆ ಪ್ರಹಾರ ಮಾಡಬಹುದು. ಭಾಷಣ ಸ್ವಾತಂತ್ರ್ಯ ಮತ್ತು ಸಂಘ ಸ್ವಾತಂತ್ರ್ಯಗಳನ್ನು ಸುರಕ್ಷಿತವಾಗಿಟ್ಟುಕೊಳ್ಳುವದು ನಮ್ಮಿಂದಾಗದಿದ್ದರೆ ನಾವೊಂದು ಭಯಂಕರವಾದ ಗಂಡಾಂತರಕ್ಕೀಡಾಗುವದು ನಿಜವು. ಸರಕಾರಕ್ಕೆ ನಮ್ಮ ಶಾಂತತಾ ಪ್ರಧಾನವಾದ ಚಳುವಳಿಗಳನ್ನು (ಅವು ಅದಕ್ಕೆ ಎಷ್ಟೋ ಅಪಾಯಕರವಾಗಿರುವಲ್ಲವೇಕೆ) ಮುರಿದುಗೆಯ್ಯಗೊಟ್ಟರೆ ಸ್ವೇಮಸ್ತರೆನಿಸಿಕೊಳ್ಳುವವರ ಕೆಲಸವೂ ಕೂಡ ನಿಂತು ಹೋಗುವದು.

ಆದರಿಂದ ಸಾರ್ವಜನಿಕ ಹಿತವನ್ನು ಉದ್ದೇಶಿಸಿ ನಮ್ಮೀ ಜನ್ಮಸಿದ್ಧವಾದ ಅಧಿಕಾರಗಳನ್ನು ಜೀವ ಕೊಟ್ಟಾದರೂ ಕಾಯ್ದುಕೊಳ್ಳುವದು ನಮ್ಮ ಕರ್ತವ್ಯವು. ಸರಕಾರದ ಧಬ್ಬಾಳಿಕೆಗೆ ಹೆದರಿ ನಾವು ಯುವರಾಜರಿಗೆ ಸ್ವಾಗತ ಮಾಡ ಕೂಡದು ಇಲ್ಲವೆ ಸ್ವಯಂಸೇವಕರ-ದಲಗಳನ್ನು ಮುರಿಯಕೂಡದು. ಅಥವಾ ಉನ್ನತಿಗೆ ಅವಶ್ಯವೆಂದು ನಮಗೆ ತೋರುವ ಯಾವದೇ ಚಳುವಳಿಯನ್ನು ಬಿಡಕೂಡದು.

ಈ ಅಧಿಕಾರಗಳನ್ನು ಕಾಯ್ದುಕೊಳ್ಳುವ ಅತ್ಯಂತ ಸುರಕ್ಷಿತ ಮತ್ತು ನಿಶ್ಚಿತವಾದ ಮಾರ್ಗವಾವುದೆಂದರೆ ಇವುಗಳನ್ನು ನಿರ್ಮೂಲಗೊಳಿಸುವ ಉದ್ದೇಶದಿಂದ ಸರಕಾರವು ಮಾಡುವ ಆಜ್ಞೆಗಳನ್ನು ಲೆಕ್ಕಿಸದಿರುವದು. ಗುಂಡಿನ ಮಳೆಯು ನಮ್ಮ ಮೇಲೆ ಬೀಳುತ್ತಿದ್ದರೂ ನಾವು ಸತ್ಯವನ್ನು ಅರಿತಕ್ಕದ್ದು. ಸಂಗೀನುಗಳಿಂದ ತಿವಿಯಲ್ಪಟ್ಟರೂ ಸಂಘಗಳನ್ನು ನಿರ್ಮಿಸತಕ್ಕದ್ದು. ಈ ಜೀವನ ಸರ್ವಸ್ವವಾದ ಅಧಿಕಾರಗಳಿಗಾಗಿ ಎಷ್ಟು ಬೆಲೆ ಕೊಟ್ಟರೂ ಕಡಿಮೆಯೇ! ಈ ಅಧಿಕಾರಗಳನ್ನು ಕಾಯ್ದುಕೊಂಡು ಮುಂದಿನ ಶಿಷ್ಟಾಚಾರದ ಇಲ್ಲವೆ ಒಡಂಬಡಿಕೆಯ ಮಾತುಗಳನ್ನು ಆಡುವಾ. ಒಡಂಬಡಿಕೆಯ ಮಾತು ಪ್ರಾರಂಭವಾಗುವ ಮೊದಲು ಸ್ವಯಂಸೇವಕರ ದಲಗಳನ್ನು ಮುರಿಯಲು ಹಾಗು ಸಂಘಗಳನ್ನು ಏರ್ಪಡಿಸುವ ಕೆಲಸವನ್ನು ನಿಲ್ಲಿಸಲು ತೆಗೆದ ಆಜ್ಞಾಪತ್ರಗಳನ್ನು ಸರಕಾರವು ತಿರುಗಿ ತೆಗೆದುಕೊಳ್ಳಲಿಕ್ಕೆ ಬೇಕು; ಮತ್ತು ಶಾಂತತಾಮಯವಾದ ಚಳುವಳಿಗಳಲ್ಲಿ ಸೇರಿದ್ದಕ್ಕಾಗಿ ಕಾರಾಗೃಹದಲ್ಲಿ ಇಡಲ್ಪಟ್ಟ ಎಲ್ಲ ಜನರನ್ನು ಬಿಟ್ಟು ಬಿಡಲಿಕ್ಕೆ ಬೇಕು. ನಮಗೆ ಸ್ವತಂತ್ರ ಪುರುಷ ಸ್ತ್ರೀಯರಂತೆ ಇರುವದು ಅಸಾಧ್ಯವಾದರೆ ಆನಂದದಿಂದ ಮೃತ್ಯುವನ್ನು ಅವಲಂಬಿಸಬೇಕು.

ಸವಿನಯ ಆಜ್ಞಾಭಂಗವನ್ನು ಮಾಡಲು ಪ್ರತಿಯೊಬ್ಬ ನಾಗರಿಕನಿಗೆ ಜನ್ಮಸಿದ್ಧವಾದ ಅಧಿಕಾರವು ಉಂಟೆಂಬ ಮಾತನ್ನು ಪ್ರತಿಯೊಬ್ಬನಿಗೆ ಮನಗಾಣಿಸಿ ಕೊಡಬೇಕೆಂದೆಣಿಸುವೆನು. ಈ ಅಧಿಕಾರವನ್ನು ಅವನು ಬಿಟ್ಟುಕೊಟ್ಟರೆ ಅವನ ಮನುಷ್ಯತ್ವವೇ ಇಲ್ಲದಾಗುವದು. ಸವಿನಯ ಆಜ್ಞಾಭಂಗದಿಂದ ಅರಾಜಕತೆಯು ಉಂಟಾಗದು. ಉದ್ಧತ ಆಜ್ಞಾಭಂಗವು ಅರಾಜಕತೆಗೆ ಕಾರಣವಾಗುವದು. ಉದ್ಧತ ಆಜ್ಞಾಭಂಗವನ್ನು ಪ್ರತಿಯೊಂದು ಸರಕಾರವು ಒತ್ತಾಯದಿಂದ ಅಡಗಿಸುವದು, ಹಾಗೆ ಮಾಡದಿದ್ದರೆ ಅದು ನಷ್ಟವಾಗುವದು. ಆದರೆ ಸವಿನಯ ಆಜ್ಞಾಭಂಗವನ್ನು ಹತ್ತೊತ್ತುವದು, ಧರ್ಮಬುದ್ಧಿಯನ್ನು ( Conscience ) ಬಂಧನಗೊಳಿಸಲು ಹವಣಿಸಿದಂತೆಯೇ ಸೈ. ಸವಿನಯ ಆಜ್ಞಾಭಂಗದಿಂದ ಸಾಮರ್ಥ್ಯವು ಹುಟ್ಟುವದು ಮತ್ತು ಆತ್ಮಶುದ್ಧಿಯು ಉಂಟಾಗುವದು. ಸವಿನಯ ಆಜ್ಞಾಭಂಜಕನು ಶಸ್ತ್ರಗಳನ್ನು ಎಂದೂ ಉಪಯೋಗಿಸನು. ಆದಕಾರಣ ಲೋಕಮತವನ್ನು ಲೆಕ್ಕಿಸುವ ಸರಕಾರಕ್ಕೆ ಅವನಿಂದ ಹಾನಿಯು ತಪ್ಪುವದು. ಆದರೆ ಅನಿಯಂತ್ರಿತವಾದ ಸರಕಾರಕ್ಕೆ ಅವನಿಂದ ಭಯಂಕರವಾದ ಹಾನಿಯು ಒದಗುವದು ನಿಶ್ಚಯವು. ಯಾಕೆಂದರೆ ಯಾವ ಮಾತಿನ ಸಲುವಾಗಿ ಅವನು ಸರಕಾರಕ್ಕೆ ವಿರೋಧಿಸುವನೊ ಆ ಮಾತಿನ ಬಗ್ಗೆ ಲೋಕಮತವನ್ನು ಕೇಂದ್ರೀಕರಿಸಿ ಆ ಸರಕಾರವನ್ನು ನಾಶಕ್ಕೆ ಗುರಿ ಮಾಡುವನು. ಯಾವಾಗ್ಗೆ ಸರಕಾರವು ನೀತಿಭ್ರಷ್ಟ (Lawless) ವಾಗಿ ಅಪಾಯಕಾರಕವಾಗುವದೊ ಆಗ್ಗೆ ಸವಿನಯ ಆಜ್ಞಾಭಂಗವು ಪವಿತ್ರವಾದ ಕರ್ತವ್ಯವಾಗುವದು. ಯಾವನಾದರೊಬ್ಬ ನಾಗರಿಕನು ಸ್ವಾರ್ಥ ಸಾಧಿಸಲೋಸುಗ ಇಂಥ ಸರಕಾರವು ಹೇಳಿದಂತೆ ಕುಣಿದರೆ ಅವನಾದರೂ ಆ ಸರಕಾರದ ನೀತಿಭ್ರಷ್ಟತೆಯ ಪಾಪದಲ್ಲಿ ಪಾಲುಗಾರನಾಗುವನು.

ಸರಕಾರದ ಯಾವದೊಂದು ವಿಶಿಷ್ಟವಾದ ಕೃತಿಯ ದೆಸೆಯಿಂದಾಗಲಿ ಅಥವಾ ನಿಯಮದ ದೆಸೆಯಿಂದಾಗಲಿ ಸವಿನಯ ಆಜ್ಞಾಭಂಗವನ್ನು ಮಾಡುವದು ಜಾಣತನವೋ ಅಲ್ಲವೋ ಎಂಬ ಮಾತಿನ ಬಗ್ಗೆ ಮತಭೇದನಾಗುವದು ಶಕ್ಯವಿದೆ. ಅದರಂತೆಯೇ 'ಸವಿನಯ ಆಜ್ಞಾಭಂಗವನ್ನು ಮಾಡುವದಾದರೆ ಸ್ವಲ್ಪ ತಡೆದು ನೋಡಿ ಮಾಡಿರಿ' ಎಂದು ಎರಡನೆಯದು ನಮಗೆ ಉಪದೇಶಿಸಬಹುದು. ಆದರೆ ಸವಿನಯ ಆಜ್ಞಾಭಂಗವನ್ನು ಮಾಡಲು ಪ್ರತಿಯೊಬ್ಬನಿಗಿರುವ ಅಧಿಕಾರವನ್ನು ಮಾತ್ರ ಯಾರೂ ಅಲ್ಲಗಳೆಯರು. ಈ ಅಧಿಕಾರವನ್ನು ಬಿಟ್ಟು ಕೊಟ್ಟರೆ ಸ್ವಾಭಿಮಾನವೇ ನಷ್ಟವಾಗುವದು.

ಸವಿನಯ ಆಜ್ಞಾಭಂಗವನ್ನು ಮಾಡಲು ಪ್ರತಿಯೊಬ್ಬನಿಗೆ ಅಧಿಕಾರವಿದೆಂಬುವದೇನೋ ನಿಜ! ಆದರೆ ಅಧಿಕಾರವನ್ನು ಉಪಯೋಗಿಸುವಾಗ್ಗೆ ಅದಕ್ಕಿರುವ ಮರ್ಯಾದೆಗಳನ್ನೆಲ್ಲ ಲಕ್ಷ್ಯದಲ್ಲಿಟ್ಟುಕೊಂಡು ಮುಂದೆ ಸಾಗುವದು ಅವಶ್ಯವು. ಶಾಂತತಾಭಂಗವಾಗದಂತೆಯೂ ಜನರು ಉನ್ಮಾದಿಗಳು Lawless ಆಗದಂತೆಯೂ ಶಕ್ಯವಿದ್ದ ಉಪಾಯ ಮತ್ತು ಯೋಜನೆಗಳನ್ನು ಕಲ್ಪಿಸಬೇಕು. ಸವಿನಯ ಆಜ್ಞಾಭಂಗವನ್ನು ಮರ್ಯಾದಿತ ಸ್ಥಳದಲ್ಲಿಯೇ ಮರ್ಯಾದಿತ ಸ್ವರೂಪದಲ್ಲಿಯೇ ಅವಶ್ಯವಿದ್ದಷ್ಟರ ಮಟ್ಟಿಗಷ್ಟೇ ಮಾಡ

ತಕ್ಕದ್ದು. ಆದ್ದರಿಂದ ಈಗಿನ ಸಂದರ್ಭದಲ್ಲಿ ಭಾಷಣ ಸ್ವಾತಂತ್ರ್ಯ ಮತ್ತು ಸಂಘ ಸ್ವಾತಂತ್ರ್ಯಗಳ ಬಗ್ಗೆ ಇರುವ ನಮ್ಮ ಅಧಿಕಾರವನ್ನು ಸ್ಥಿರ ಪಡಿಸುವದಕ್ಕೋಸ್ಕರವೇ ನಾವು ಸವಿನಯ ಆಜ್ಞಾಭಂಗವನ್ನು ಮಾಡಬೇಕು. ಬೇರೆ ಬಗೆಯಿಂದ ಹೇಳುವದೆಂದರೆ ಎಲ್ಲಿಯ ವರೆಗೆ ಅಸಹಯೋಗವು ಶಾಂತತಾ ಪ್ರಧಾನವಾಗಿ ಉಳಿಯುವದೋ ಅಲ್ಲಿಯ ವರೆಗೆ ಯಾವ ಆತಂಕವಿಲ್ಲದೆ ಅದು ಸಾಗಲಿಕ್ಕೆ ಬೇಕು. ಹೀಗೆ ನಮಗೆ ಹೋರಾಡಲು ಬಂದ ಮೇಲೆಯೇ ಖಿಲಾಫತ, ಪಂಜಾಬ ಮತ್ತು ಸ್ವರಾಜ್ಯ ಈ ವಿಷಯಗಳನ್ನು ಚರ್ಚಿಸಿ ಕೊನೆಯ ನಿರ್ಣಯವನ್ನು ಮಾಡುವ ಕುರಿತು ಪ್ರತಿನಿಧಿಗಳ ಒಂದು ಬೈಠಕಿಯ ಸಭೆಯು ಕೂಡಲು ಅನುವಾಗುವದು. ಅಲ್ಲಿಯ ವರೆಗೆ ಆಗದು.

(ಯಂಗ ಇಂಡಿಯಾ) (ಮೋ. ಕ. ಗಾಂಧಿ)

---

(೫ನೇ ಪುಟದಿಂದ ಮುಂದೆಸಾಗಿದ್ದು)

ತಪಸುಗಳಲ್ಲಿಯೇ ಮುಕ್ತರಾಗಿರುವರು. ಇಲ್ಲವೆ ೧೦ ರೂಪಾಯಿಯ ದಂಡಕ್ಕೆ ಪಾತ್ರರಾಗಿರುವರು. ಇದಕ್ಕೆ ತಪ್ಪಿದಲ್ಲಿ ಅವರ ಕಂಬಳಿಗಳು, ಅಂಗಿಗಳು, ಟೊಪ್ಪಿಗೆಗಳು, ಮೊಜ್ಜಿಗಳು, ಸಣ್ಣ ಗಡಿಯಾರಗಳು ಕೊಸೆದುಕೊಳ್ಳುವದರಲ್ಲಿ ಬಂದವು"

ಹೊಲೆಗಾರರ ಇಂಥ ಹೂಲಿಗಳನ್ನು ಪ್ರತಿಯೊಬ್ಬರು ಕೇಳಿರ ಬಹುದು. ಕಾಯಿದೆಯ ದೃಷ್ಟಿಯಿಂದ, ನಾಗರಿಕರ ಶರೀರವೂ ಅವರ ಆಸ್ತಿಯೂ ಯಾವ ರೀತಿಯಿಂದಲೂ ಮುಟ್ಟಕೂಡದಷ್ಟು ಪವಿತ್ರವಾಗಿರುತ್ತವೆ. ಕಾಯಿದೆಯು ಅಷ್ಟೇ ಹಾಗಿದ್ದರೆ ಮಾತ್ರ ಉಪಯೋಗವಿಲ್ಲ. ಎಷ್ಟೋ ಜನ ಸಾಲಗಾರರು ತಮ್ಮ ವಿರುದ್ಧವಾಗಿ ದಾವೆಯು ನಿಕಾಲಿಯಾಗಿದ್ದರೂ ಅವರು ತಮ್ಮ ಕಿಸೆಯ ಮೇಲೆ ಗಡಿಯಾರದ ಸರಪಳಿಗಳನ್ನು ತೂಗಾಡಿಸುತ್ತ ಕೋರ್ಟಿನಲ್ಲಿ ಹಾಯ್ದು ಹೋಗುವದನ್ನು ನಾನು ನೋಡುತ್ತಿದ್ದೆನು. ಇದರಂತೆಯೇ ಫೌಜದಾರಿ ಅಪರಾಧಿಗಳು ದಂಡಕ್ಕೆ ಗುರಿಯಾಗಿದ್ದರೂ ಆ ದಂಡದ ಬೆಲೆಯಷ್ಟು ಬಾಳುವ ವಜ್ರದ ಉಂಗುರಗಳನ್ನು ಬೆರಳಿನಲ್ಲಿಟ್ಟುಕೊಂಡು ತಿರುಗುವವರನ್ನಾದರೂ ನಾನು ನೋಡಿರುವೆನು. ಇಂಥ ಎಲ್ಲ ಪ್ರಸಂಗಗಳಲ್ಲಿ ಚಿಟ್ಟಿದಾರರಿಗೆ ಫೋಷಲ್ಲು ಸೂಚನೆಗೊಟ್ಟು, ಅವರ ಹಣವು ಸಾರ್ವತ್ರಿಕ ಜಪ್ತಿಯಾಗಿ ಮಾರಾಟವಾದ ಮೇಲೆ ಬಂದ ಹಣದಿಂದ ದಂಡದ ವಸೂಲಿಯನ್ನು ತುಂಬಿಕೊಳ್ಳತಕ್ಕದ್ದು. ಆದರೆ ಇತ್ತೀತ್ತಲಾಗಿ ಅಸಹಕಾರಿಗಳ ಮೇಲೆ ಉಪಯೋಗಿಸುವ ಕಾಯಿದೆಗಳು ಯಾವ ಪ್ರಕಾರದ ಅಡ್ಡಿಗೆ ಗುರಿಯಾಗಿರುವದಿಲ್ಲ. ಅಮಲದಾರರ ಬುದ್ಧಿಯು ಹಿಂದುಸ್ಥಾನದ ಎಲ್ಲ ಕಾಯಿದೆಯನ್ನು ತೋರ್ಪಡಿಸುತ್ತಿರುವದು. ಯುದ್ಧದ ಕಾಯಿದೆಯ ದೃಷ್ಟಿಯಿಂದ ಸಂಭವಿಸುವವೆಂದು ಹೇಳಲ್ಪಡುವ ಸಂಗತಿಗಳಾದರೂ ಇಷ್ಟೇನು ಧಮಗೆಟ್ಟ ರೀತಿಯಿಂದ ನಡೆಯುತ್ತಿದ್ದಿಲ್ಲವೆಂದು ನನಗೆ ಅನಿಸುವದು.

(ಯಂಗಇಂಡಿಯಾ)
(ಮೋಹನದಾಸ ಕರಮಚಂದ ಗಾಂಧಿ)

---

## ಕಾರಾಗೃಹದ ಕಷ್ಟಗಳು.

—:( o ):—

ದಿಲ್ಲಿಯ ಲಾಲಾ ಶಂಕರಲಾಲರವರ ವಿಷಯಕ್ಕೆ ಮಿತ್ರನೊಬ್ಬನು ಬರೆದಿರುವದೇನಂದರೆ-

"ಮೊಪ್ಲಾ ಜನರ ಮೃತ್ಯುವಧದಬಗ್ಗೆ ನಾವು ಕೇಳಿರುವೆವು. ಆದರೆ ಹಿಂದುಸ್ಥಾನದ ಅತ್ಯಂತ ಉಜ್ವಲ ಹಾಗು ಉದಾರಚರಿತರಾದ ದೇಶಭಕ್ತರನ್ನು ಬಂಧಿಸಿಟ್ಟ ದಿಲ್ಲಿಯ ಕಾರಾಗೃಹವು ಅಸಹಯೋಗಿಗಳನ್ನು ಪೀಡಿಸುವದಕ್ಕೋಸ್ಕರ ನಿರ್ಮಿಸಲ್ಪಟ್ಟ ಮೃತ್ಯು ಹಾಗು ಸೈತಾನರ ದರಬಾರವೇ ಆಗಿರುವದು. ವಿಚಾರತರಂಗಗಳಿಂದ ನನ್ನ ಕಂಠವು ತುಂಬಿಬರುತ್ತದೆ. ನಮ್ಮ ಸುಂದರ ಹಾಗು ಪ್ರೇಮದ ಮಾತೃಭೂಮಿಯಲ್ಲಿ ಶಂಕರಲಾಲರವರಂಥ ಅನೇಕ ಮಾನಧನರ ಬಾಯಿಂದ ಹೊರಡುವ ಕೈಗಳೇ ಸನ್ನಸುಭಗವಾದ ಧ್ವನಿಯನ್ನು ಹತ್ತಿಕ್ಕುತ್ತಿವೆಯೋ? ಅಸಹಯೋಗಿಗಳನ್ನು ಕೈಸೋಲುವವರೆಗೆ ಬೆತ್ತದಿಂದ ಹೊಡೆಯುವದೂ, ಸವಿನಯ ಆಜ್ಞಾಭಂಗ ಮಾಡುವವರ ಮೈಮೇಲಿನ ಅರಿವೆಗಳನ್ನೆಲ್ಲ ತೆಗೆದಿಡುವದೂ ಅವರಿಗೆ ಉಣ್ಣಲು ದೂಷಿತ ಹಾಗು ತಿನ್ನಲಿಕ್ಕೆ ಬಾರದಂಥ ಅನ್ನವನ್ನು, ಹೊರಲಿಕ್ಕೆ ಕೊಡುವದು ಹೊಲಸಾಗಿರುವ ಬಟ್ಟೆಗಳನ್ನಿಟ್ಟುಕೊಟ್ಟು ವ್ಯತ್ಯಾಸಕ್ಕೆ ಹಚ್ಚುವದೂ, ಇಂಥ ಹೃದಯದ್ರಾವಕವಾದ ಸುದ್ದಿಗಳು ನನ್ನ ಕಿವಿಗೆ ಬಿದ್ದಿರುವವು."

ಮೇಲಿನ ಲೇಖಕನು ಸುಶಿಕ್ಷಿತ ಹಾಗು ಪರದುಃಖವನ್ನು ಸಹಿಸಲಾರದಂಥ ತರುಣನಿರುವನು. ಆ ಪತ್ರದೊಳಗಿನ ಕೆಲವು ವರ್ಣನಾತ್ಮಕವಾದ ಭಾಗಗಳನ್ನು ನಾನು ಬಿಟ್ಟುಕೊಟ್ಟಿರುವೆನು; ಕಷ್ಟಗಳನ್ನ ಅರಿಯದ ಆ ಗೃಹಸ್ಥನು ದಿಲ್ಲಿಯ ಕಾರಾಗೃಹದಲ್ಲಿ ಅಸಹಯೋಗಿಗಳನ್ನು ಕ್ರೂರತನದಿಂದ ನಡೆಸಿಕೊಳ್ಳುವದನ್ನು ಕಂಡು ಅತ್ಯಂತ ವಿಹ್ವಲನಾಗಿರುವನು. ಅವನು ಮಾಡುವ ಆರೋಪದಲ್ಲಿ ಸತ್ಯಾಂಶವುಂಟು ಯಾಕಂದರೆ ಬೇರೆ ಅನೇಕ ಸ್ಥಳಗಳಿಂದ ಈ ಬಗೆಯ ಸುದ್ದಿಗಳು ಬಂದಿರುತ್ತವೆ. ಸರಕಾರವು ಅಸಹಯೋಗಿಗಳನ್ನು ಕಾರಾಗೃಹದಲ್ಲಿ ಕಳುಹಿಸಿ ಅವರ ತೇಜೋಭಂಗ ಮಾಡಲು ಇಲ್ಲವೆ ಅವರನ್ನು ಕ್ಷಮೆ ಬೇಡಲಿಕ್ಕೆ ಹಚ್ಚಲು ಅಸಮರ್ಥ ಇದ್ದದ್ದರಿಂದ ಶಾರೀರಿಕ ಪೀಡೆ ಉಂಟು ಮಾಡಲಿಕ್ಕೆ ಸಜ್ಜಾಗಿದೆಯೆಂತೆ ತೋರುತ್ತದೆ. ಶರೀರಕ್ಕೆ ಅತಿಶಯ ವೇದನೆಗಳು ಆಗುತ್ತಿರಲು ಸೋತು ತಾಳದೆ ಆತ್ಮ ಸಂಯಮವನ್ನು ಕಳಕೊಂಡು ಮನುಷ್ಯನು ಹತವಿಲಿಪ್ತನಾಗಿ ದುಃಖದಿಂದ ಮೂರ್ಛಿತನಾಗುವದುಂಟು. ಮನುಷ್ಯನ ಈ ದೌರ್ಬಲ್ಯವನ್ನರಿತ ಅಧಿಕಾರಿಗಳು ಅಸಹಕಾರಿಗಳ ಉಜ್ವಲವಾದ ಸ್ವಾಭಿಮಾನವನ್ನು ನಾಶಗೊಳಿಸುವದಕ್ಕಾಗಿ ಅವರನ್ನು ಕ್ಲೇಶಗಳಿಗೆ ಒಳಪಡಿಸುವರು. ಈ ಬಗೆಯ ಅಮಾನುಷ ಯಾತನೆಗಳನ್ನು ಸಹಿಸಲಾರದೆ ಅವುಗಳನ್ನು ತಪ್ಪಿಸುವದಕ್ಕೋಸ್ಕರ ಯಾರಾದರೂ ಕ್ಷಮೆಯನ್ನು ಬೇಡಿದರೆ ನನಗೆ ಆಶ್ಚರ್ಯವೆನಿಸುವದಿಲ್ಲ.

ಆದರೆ ಕೆಲವರು ಶಾರೀರಿಕ ಯಾತನೆಗೆ ಬಳಹಟ್ಟು ಹತವೀರ್ಯರಾಗುವದು ನಿಜವಿದ್ದರೂ, ಮರಣಾಂತಿಕ ಕ್ಲೇಶಗಳನ್ನು ತಾಳಿಕೊಂಡು ಆತ್ಮತೇಜದಿಂದ ಪ್ರಕಾಶಿಸುವ ಪುಣ್ಯಾತ್ಮರು ಉಂಟೆಂಬುದಾದರೂ ನಿಜವು. ಮುಂಚಿತವಾಗಿಯೇ ಸಾಕಷ್ಟು ಮನಸ್ಸಿನ ಸಿದ್ಧತೆಯಾಗಿದ್ದರೆ ಅತ್ಯಂತ ತೀವ್ರವಾದ ಯಾತನೆಯೂ ಕೂಡ ಸಹಿಸಲು ಶಕ್ಯವಾಗುತ್ತವೆ. ಸ್ವದೇಶ ಸ್ವಧರ್ಮಗಳ ಸೇವೆಯನ್ನು ಮಾಡುವದರಿಂದುಂಟಾಗುವ ಆನಂದದಲ್ಲಿ ಸೇವೆಯನ್ನು ಮಾಡುತ್ತಿರಲು ಒದಗುವ ಯಾವತ್ತು ಕಷ್ಟಗಳು [illegible]ಗುತ್ತವೆ.

ಎಲ್ಲ ಶಾರೀರಿಕ ಯಾತನೆಗಳನ್ನು ತಾಳಿಕೊಳ್ಳುವದು ಸವಿನಯ ಆಜ್ಞಾಭಂಗವಾದಿಯ ಕರ್ತವ್ಯವು. ಆದರೆ ಅನಾರೋಗ್ಯಕರ ಹಾಗು ಮಾನಚ್ಯುತಿಯನ್ನು ಪ್ರತಿರೋಧಿಸುವದಾದರೂ ಅವನ ಕರ್ತವ್ಯವು. ಬೇರಿನ ಪೆಟ್ಟುಗಳನ್ನು ಅವನು ಆನಂದದಿಂದ ಸಹಿಸಬೇಕು; ಆದರೆ ಅವನು ಹೊಟ್ಟೆಹೊರೆಯಕೂಡದು ಅರಿವೆಯಿಲ್ಲದೆ ಚಳಿಯಲ್ಲಿ ನಡುಗಿ ಸಂತೋಷದಿಂದ ಸಾಯಬೇಕು ಆದರೆ ಕೂರಿಗಳಿಂದ ತುಂಬಿದ ಹೊಲಸು ಕಂಬಳಿಗಳನ್ನಾಗಲಿ ಅರಿವೆಗಳನ್ನಾಗಲಿ ಕೊಳ್ಳಲಿಕ್ಕೆ ಬಂದರೆ ಅವುಗಳಿಗೆ ಕೈ ಸಹ ಹಚ್ಚಬಾರದು. ಆಹಾರವಿಲ್ಲದೆ ಇರಬಹುದು ಆದರೆ ಹೇಳುಗಳಿಂದ ತುರಿಜದ ರೊಟ್ಟಿಯನ್ನಾಗಲಿ ಬೇಳೆಯನ್ನಾಗಲಿ ಗ್ರಹಿಸಕೂಡದು. ಸ್ನಾನವಿಲ್ಲದೆ ಇರಬಹುದು ಆದರೆ ಹೊಲಸು ನೀರಿನಲ್ಲಿ ಸ್ನಾನಮಾಡಲು ಒಪ್ಪಕೂಡದು ಯಾವವಾಕಿಗೆ ಒಪ್ಪುವವರಿಂದ ಹೀನತನವು ಬರುವದೋ ಆ ಮಾತನ್ನು ನಡೆಸಿರುವದು ಕರ್ತವ್ಯವಾಗದು,

ಸವಿನಯ ಆಜ್ಞಾಭಂಗ ಮಾಡುವವರಿಗೆ ಸ್ವೇಚ್ಛಾಪೂರ್ವಕವಾಗಿ ಕ್ಲೇಶಗಳನ್ನು ಸಹಿಸುವ ಸಂಪ್ರದಾಯವು ಸುದೈವದಿಂದ ದೊರೆತಿದೆ ಇದೊಂದು ಪುಣ್ಯತಮವಾದ ಕಾರ್ಯವಿದೆ.

...ವನು ಕಾರಾಗೃಹಗಳನ್ನು ಪಾವನ ಮಾಡುವರು ಪಾಪಿಷ್ಠನನ್ನು ಕೂಡ ಮನುಷ್ಯನನ್ನಾಗಿ ನಡಿಸಿಕೊಳ್ಳುವರು ಇದೇ ಧರ್ಮವು. ಅಧಿಕಾರಿಗಳು ಬೇಕಾದಷ್ಟು ಸಾದಾ ಆಹಾರವನ್ನು, ಬೇಕಾದಷ್ಟು ಸಾದಾ ವಸ್ತ್ರಗಳನ್ನು ಕೊಡಲಿ; ಆದರೆ ಅವು ಸ್ವಚ್ಛ ಮತ್ತು ಸಾಕಷ್ಟು ಇರಲಿಕ್ಕೆಬೇಕು.

ಈ ಬಗೆಯ ಅಮಾನುಷವಾದ ಕ್ರೂರತನದ ಪದ್ಧತಿಯನ್ನು ಪ್ರಸಿದ್ಧ ಮಾಡುವದರಲ್ಲಿ ನನಗೆ ಸುಖವಿಲ್ಲ. ಮಾನವ ಪ್ರಾಣಿಗಳು ಈ ಪ್ರಕಾರ ಪಶು ವ್ಯಕ್ತಿಗಳಾಗುವರೆಂದು ನಂಬಲಶಕ್ಯ ಮನಸ್ಸು ಪಡುವೆನು. ಆದರೆ ನನ್ನ ಟೇಬಲ ಮೇಲೆ ಬಿದ್ದ ಸುದ್ದಿಗಳಂತೂ, ವಸ್ತುಸ್ಥಿತಿಯು ಹೀಗಿರುವದೆಂದು ಸಿದ್ಧ ಮಾಡಿ ತೋರಿಸುತ್ತವೆ. ಉಭಯ ಪಕ್ಷದವರು ಈ ಯುದ್ಧವನ್ನು ಪ್ರಮಾಣಿಕತನದಿಂದ ನಡೆಸಿದ್ದು ನೋಡಬೇಕೆಂದೆಣಿಸುತ್ತೇನೆ. ಮಾನವೀ ಪ್ರಾಣಿಗಳು ಪ್ರಮಾಣಿಕತನವನ್ನು ಬಿಟ್ಟುಕೊಟ್ಟು ಪಶುಗಳಂತೆ ಆಚರಿಸುವದನ್ನು ಕಂಡು ನನಗೆ ಮರ್ಮಾಂತಿಕ ವೇದನೆಯಾಗುತ್ತದೆ.

ಆದರೆ ವಿರುದ್ಧ ಪಕ್ಷದವರು ಅಪ್ರಮಾಣಿಕರಾದರೆ ಆಗಲಿ, ಅಸಹಕಾರಿಗಳು ಮಾತ್ರ ಸತ್ಯವನ್ನು ಬಿಡದೆ ಬಂದಂಥ ಆಪತ್ತಿಗೆ ಎದೆಗೊಟ್ಟು ಧೈರ್ಯದಿಂದ ಮಾರ್ಗ ಕ್ರಮಣ ಮಾಡುವದೇ ಶ್ರೇಯಸ್ಕರವು. ಜಪಾನಿ ಜನರು ಯುದ್ಧದಲ್ಲಿ ಶತ್ರುಗಳ ಮೇಲೆ ಸಾಗಿ ಹೋಗುವಾಗ್ಗೆ ಮಾರ್ಗದಲ್ಲೇನಾದರೂ ದಾಟಲಿಕ್ಕೆ ಬಾರದಂಥ ತಗ್ಗುಗಳಿದ್ದದ್ದು ಕಂಡು ಬಂದರೆ ಅನೇಕ ಜನ ಸೈನಿಕರು ತಟ್ಟನೆ ಅದರಲ್ಲಿ ಹಾರಿಕೊಂಡು ಕೂಡಲೇ ಅದನ್ನು ತಮ್ಮ ಮೃತ ದೇಹಗಳಿಂದ ತುಂಬಿ ಉಳಿದವರಿಗೆ ಮುಂದೆ ಸಾಗಲಿಕ್ಕೆ ಹಾದಿಯನ್ನು ಮಾಡಿಕೊಡುತ್ತಿದ್ದರೆಂಬ ವೃತ್ತಾಂತವನ್ನು ನಾವು ಕೇಳಿಲ್ಲವೋ? ಅಹಿಂಸೆಯ ಪ್ರತಿಜ್ಞೆಯನ್ನು ತೊಟ್ಟ ನಾವಾದರೂ ಇದಕ್ಕೂ ಕಡಿಮೆ ಸ್ವಾರ್ಥತ್ಯಾಗವನ್ನು ಮಾಡಿದರೆ ಸಾಗುವದೋ? ನಮ್ಮ ಪ್ರತಿಜ್ಞೆಯನ್ನು ಪೂರ್ಣ ಮಾಡಿಕೊಳ್ಳುವದಾದರೆ ಜಪಾನ ಸೈನಿಕರಿಗಿಂತ ಹೆಚ್ಚಿನ ಸ್ವಾರ್ಥ ತ್ಯಾಗವನ್ನು ನಾವು ಮಾಡಲಿಕ್ಕೆ ಬೇಕು. ನಾವು ನಮ್ಮ ಪ್ರತಿಪಕ್ಷಿಗಳ ಮೈಗೆ ಕೆಚ್ಚದೆ ಯುದ್ಧದ ಜ್ವಾಲೆಗಳೊಳಗಿಂದ ಹಾಯ್ದು ಹೋಗಲಿಕ್ಕೆಬೇಕು.

ನಮ್ಮ ಲೇಖಕನು ಮಾಡಿದ ಆರೋಪ ಗಂಭೀರವಾಗಿದೆ. ಇದನ್ನು ಪುಷ್ಟೀಕರಿಸಲು ಬೇರೆ ಪುರಾವೆಗಳು ನನ್ನಲ್ಲಿವೆ. "ಇಂಡಿಪೆಂಡಂಟ" ಪತ್ರದ ಸಂಪಾದಕರಾದ ಶ್ರೀ. ಮಹಾದೇವ ದೇಸಾಯಿ ಇವರನ್ನು ಹೇಗೆ ನಡಿಸಿಕೊಳ್ಳುತ್ತಾರೆಂಬ ಸುದ್ದಿಯು ನನಗೆ ಬಂದಿದೆ. ಅತ್ಯಂತ ಶಾಂತತನದಿಂದ ಕೆಲಸ ಮಾಡುವವರಲ್ಲಿ ಶ್ರೀ ದೇಸಾಯಿಯವರೊಬ್ಬರಾಗಿರುವರು. ಒಬ್ಬ ಮಿತ್ರನು ದೇಸಾಯಿಯವರ ಧರ್ಮ ಪತ್ನಿಯವರೊಡನೆ ಕಾರಾಗೃಹಕ್ಕೆ ಹೋಗಿ ಅವರನ್ನು ಕಂಡು ಅವರ ವೃತ್ತಾಂತವನ್ನೆಲ್ಲ ತಿಳಿದು ಈ ಪ್ರಕಾರ ಬರೆದಿರುವನು.

"ಶ್ರೀ ಮಹಾದೇವ ದೇಸಾಯಿಯವರು ಆನಂದದಿಂದ ಕಾರಾಗೃಹಕ್ಕೆ ಹೋದರು. ನಾವು ನಿನ್ನಿನ ದಿವಸ ಅವರನ್ನು ನೋಡಲಿಕ್ಕೆಂದು ಹೋದೆವು ಆದರೆ ಜೇಲರನು ನಮಗೆ ಒಳಗೆ ಬಿಡಲಿಲ್ಲ. ದೇಸಾಯಿಯವರಿಗೆ ಕೊಡಲಿಕ್ಕೆಂದು ಅನ್ನ ವಸ್ತ್ರ ಮತ್ತು ಪುಸ್ತಕಗಳನ್ನು ಒಯ್ದಿದ್ದೆವು ಆದರೆ ಕೊಡಲಿಕ್ಕೆ ಜೇಲರನು ಸಮ್ಮತಿಸಲಿಲ್ಲ. ಈವತ್ತು ಮುಂಜಾನೆ ಅವರನ್ನು ಕಾಣಲು ನಮಗೆ ಅಪ್ಪಣೆಯು ದೊರೆಯಿತು. ಅವರನ್ನು ಇತರ ಗುನ್ಹೆಗಾರರೊಂದಿಗೆ ಇಟ್ಟಿರುವರು ಮತ್ತು ಆ ಗುನ್ಹೆಗಾರರನ್ನು ನಡಿಸಿಕೊಂಡಂತೆ ಅವರನ್ನು ನಡಿಸಿಕೊಳ್ಳುವರು. ಮೈ ಮೇಲಿ ಜೇಲಿನ ಅರಿವೆಗಳಿದ್ದವು. ಅರಿವೆಗಳು ಅತ್ಯಂತ ಹೊಲಸಾಗಿದ್ದು ಅವುಗಳಿಗೆ ದುರ್ಗಂಧ ವಾಸನೆಯು ಬರುತ್ತಿತ್ತು. ಎರಡು ತಿಂಗಳ ನೀರು ಕಾಣದ ಹೊಲಸಾದ ಎರಡು ಕಂಬಳಿಗಳು ಅವರಿಗೆ ಕೊಡಲ್ಪಟ್ಟಿದ್ದವು. ಅವುಗಳಿಗೆ ಕೂರಿ ಬಿದ್ದದ್ದು ಕಂಡು ಬಂದಿತು. ನೀರಿಗಾಗಿ ತೆರೆದು ಇಟ್ಟಿದ ಕಬ್ಬಿಣದ ಪಾತ್ರೆಯೊಂದು ಅವರ ಬಳಿಯಲ್ಲಿತ್ತು. ಆ ಪಾತ್ರೆಯಲ್ಲಿ ಸ್ವಲ್ಪ ಹೊತ್ತು ನೀರು ಉಳಿದರೆ ಆ ನೀರು ಕುಡಿಯಲಿಕ್ಕೆ ಬಾರದಾಗುವದು. ರಾತ್ರಿಯಲ್ಲಿ ನೀರು ತುಂಬಿಟ್ಟು ಬೆಳಗಾದ ಮೇಲೆ ಅದನ್ನು ನೋಡಿದರೆ ಕಿಲುಬಿ ಹೋಗಿ ಅದು ಹಳ್ಳಗಾಗಿ ಕಾಣುವದು. ಸ್ನಾನ ಮಾಡುವಾಗ್ಗೆ ತೊಯಿಸಲಿಕ್ಕೆಂದು ಲಂಗೋಟಿಯನ್ನು ಕೊಡುವರು. ಮೈ ಒರಿಸಿಕೊಳ್ಳಲು ಪಂಜೆ ಮುಂತಾದ್ದು ಕೊಡುವದಿಲ್ಲ. ಬಿಸಿಲಿನಲ್ಲಿ ಮೈ ಒಣಗಿಸಿಕೊಂಡು ಅವೇ ಹೊಲಸು ಬಟ್ಟೆಗಳನ್ನು ಪುನಃ ಹಾಕಿಕೊಳ್ಳಬೇಕು. ಆ ಬಟ್ಟೆಗಳನ್ನು ಸ್ವಚ್ಛ ಮಾಡಿಕೊಳ್ಳಬೇಕಾದರೆ ಅವುಗಳನ್ನು ಒಗೆದು ಅವು ಒಣಗುವ ವರೆಗೆ ಬರಿ ಮೈಲೆ ಚಳಿಯಲ್ಲಿ ನಿಲ್ಲಬೇಕಾಗುವದು. ಮಹಾದೇವ ಭಾಯಿಯವರ ಅಶಕ್ತ ಪ್ರಕೃತಿಗೆ ಹೀಗೆ ಚಳಿಯಲ್ಲಿ ನಿಲ್ಲುವದು ಅಶಕ್ಯವಾಗುವದು. ಜೇಲಿನ ಆಹಾರವನ್ನೇ ಅವರು ಉಣ್ಣಬೇಕಾಗುವದು. ಅನ್ನದಲ್ಲಿ ಕಸಕಡ್ಡಿಗಳೂ ಹರಳುಗಳೂ ಇರುವವು. ಕುಡಿಯುವ ಪಾತ್ರೆಯಲ್ಲಿಯೇ ಶೌಚದ ಕೆಲಸಕ್ಕೆ ನೀರು ಒಯ್ಯಬೇಕಾಗುವದು. ರಾತ್ರಿಯಲ್ಲಿ ಮೂತ್ರದ ಸಲುವಾಗಿ ಒಂದು ಮುಚ್ಚಳಿಕೆಯಿಲ್ಲದ ಪಾತ್ರೆಯನ್ನು ಕೊಡುವರು. ಈ ವರೆಗೂ ಅವರಿಗೆ ಆಗದೆ ಉಳಿದ, ಒಂದು ಮಾತೆಂದರೆ ಅವರಿಗೆ ಸಂಕೋಲಿಗಳನ್ನು ತೊಡಿಸಿಲ್ಲ!"

ಮಹಾದೇವ ದೇಸಾಯಿಯವರು ಸರಕಾರದ ಆಜ್ಞೆಯನ್ನು ಉಲ್ಲಂಘಿಸಿ ಇಂಡಿಪೆಂಡೆಂಟ ಪತ್ರವನ್ನು ಪ್ರಸಿದ್ಧಿಸಿದ್ದರ ಕಾರಣ ಅವರನ್ನು ವಿಶೇಷವಾಗಿ ಕೆಟ್ಟ ರೀತಿಯಿಂದ ನಡೆಸಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚನೆಗಳು ಬಂದಿರುವವೆಂದು ನನಗೆ ತಿಳಿಯುತ್ತದೆ.

ಮಹಾದೇವ ದೇಸಾಯಿಯವರು ಜೇಲಿನೊಳಗಿನ ಶಾರೀರಿಕ ಯಾತನೆಗಳನ್ನೆಲ್ಲ ಸಹಿಸಿ ತಮ್ಮ ಸ್ವತಂತ್ರತೆಯನ್ನು ಕಾಯ್ದುಕೊಳ್ಳುವರೆಂಬ ಮಾತಿನಲ್ಲಿ ನನಗೆ ಸಂದೇಹವಿಲ್ಲ. ಮಹಾದೇವ ಭಾಯಿಯವರ ಅಂತಃಕರಣವು ಪ್ರೇಮಮಯವಾಗಿರುವದು. ಶತ್ರುಗಳ ಬಗ್ಗೆ ಸಹ ಅವರಿಗೆ ಪ್ರೇಮವೆನಿಸುವದು. ಅವರು ಭಾವಿಕರೂ ಶ್ರದ್ಧಾವಂತರೂ ಇರುವರು. ಇದರಿಂದ ಅವರಿಗೆ ಎಷ್ಟು ಕ್ಲೇಶಗಳು ಬಂದರೂ ಅವೆಲ್ಲವನ್ನು ಸಹಿಸುವರು. ಭಜನೆಯ ಕಲೆಯೆಂದರೂ ಅವರಿಗೆ ಅವಗತವಿರುತ್ತದೆ. ಸಾಧ್ವೀ ಮೀರಾಬಾಯಿಯು ತನ್ನ ಗಂಡನು ತನಗೆ ಎಷ್ಟು ಉಪದ್ರವ ಕೊಟ್ಟರೂ ಅದೆಲ್ಲವನ್ನು ಈಶಭಜನೆಯ ಸಹಾಯದಿಂದ ತಾಳಿಕೊಂಡು ಹೋಗುತ್ತಿದ್ದಳು ಸ್ವಲ್ಪಾದರೂ ಕ್ಲೇಶವು ಅವಳಿಗಾಗುತ್ತಿದ್ದಿಲ್ಲ. ದೇವರಲ್ಲಿರುವ ಅವಳ ಭಕ್ತಿಯೂ ದೇವರ ನಾಮಸ್ಮರಣವೂ ಅವಳನ್ನು ಯಾವಾಗಲು ಉಲ್ಹಾಸ ವೃತ್ತಿಯುಳ್ಳವಳನ್ನಾಗಿ ಮಾಡುತ್ತಿದ್ದವು. ರಾಮನ ನಾಮಸ್ಮರಣೆ ಮಾಡುತ್ತ ರಜಪೂತ ಲಲನೆಯರು ಆನಂದದಿಂದ ಅಗ್ನಿಕುಂಡದಲ್ಲಿ ಹೇಗೆ ಹಾರಿಕೊಳ್ಳುತ್ತಿದ್ದರೆಂಬುದನ್ನು ನಾನು ಕಲ್ಪಿಸಬಲ್ಲೆನು. ಪ್ರಲ್ಹಾದನು ಗಂಭೀರ ವೃತ್ತಿಯನ್ನು ತಾಳಿ ಅಗ್ನಿಯ ಮಧ್ಯದಲ್ಲಿ ಹೋಗಿ ನಿಂತಾಗ್ಗೆ ಅವನಿಗೆ ಎಳ್ಳಷ್ಟೂ ಕ್ಲೇಶವಾಗಲಿಲ್ಲ. ಪರಮಾತ್ಮನಲ್ಲಿ ಹಾಗು ಅವನ ನ್ಯಾಯಬುದ್ಧಿಯಲ್ಲಿ ದೃಢ ಭಕ್ತಿಯುಳ್ಳವನಾಗಿದ್ದದರಿಂದ ಅವನು ತಾಪತ್ರಯದಿಂದ ಮುಕ್ತನಾಗಿದ್ದನು. ದೈವಿ ಚಮತ್ಕಾರಗಳ ಯುಗವು ಮುಗಿದಿಲ್ಲ. ಪರಮಾತ್ಮನಲ್ಲಿ ಸ್ವಚ್ಛ ಶ್ರದ್ಧೆಯೂ ಅವನು ಭಕ್ತರ ಪರಿಪಾಲಕನಿರುವನೆಂಬ ಮಾತಿನಲ್ಲಿ ನಂಬಿಗೆಯೂ ನಮ್ಮಲ್ಲಿ ಇದ್ದರೆ ಎಂಥ ಅಸಹ್ಯ ಕ್ಲೇಶಗಳಿಂದಲೂ ನಮಗೆ ಹಾನಿಯಾಗದೆಂಬುದು ನಿಶ್ಚಯವು. ಕೈಕೊಂಡ ಕಾರ್ಯದಲ್ಲಿ ಶ್ರದ್ಧೆಯುಳ್ಳವನಾದ ಸತ್ಯಾಗ್ರಹಿಯು ಅತ್ಯಂತ ಕಠಿಣವಾದ ಪರೀಕ್ಷೆಯ ಪ್ರಸಂಗವು ಬರಲು ಪರಮಾತ್ಮನು ತನ್ನನ್ನು ಸಹಾಯದಿನೆಂಬ ಮಾತಿನ ಬಗ್ಗೆ ಸಂಶಯವುಳ್ಳವನಾಗಕೂಡದು.

ಮಹಾದೇವ ಭಾಯಿಯು ತಮ್ಮ ವಿನಯಪೂರ್ಣ ಹಾಗು ಗಂಭೀರ ವರ್ತನೆಯಿಂದ ತಮ್ಮನ್ನು ಪೀಡೆಗೊಳಪಡಿಸುವ ಜೇಲರ ಕಲ್ಲೆದೆಯನ್ನು ಕರಗಿಸದಿರರೆಂದು ನನಗೆ ವಿಶ್ವಾಸವಿದೆ.

(ಯಂಗಇಂಡಿಯಾ) ಮೊ. ಕ. ಗಾಂಧಿ.

# The Karnatak Trading Association.

**ಉಳಿಸಿರಿ! ನಿಮ್ಮ ಹಣ ಉಳಿಸಿರಿ!**

ಇನ್ನು ಮುಂದೆ ಖರೀದಿಗಾಗಿ ಮುಂಬಯಿಗೆ ಬರಬೇಕೆಂಬ ಸ್ವಲ್ಪವೂ ಕಾರಣವಿಲ್ಲ. ದಿ ಕರ್ನಾಟಕ ಟ್ರೇಡಿಂಗ ಅಸೋಸಿಯೇಶನ್‌ದವರು ಮುಂಬಯಿ ಪೇಟೆಗಳನ್ನೆಲ್ಲ ನಿಮ್ಮ ಮನೆಯ ಬಾಗಿಲಕ್ಕೆ ತಂದು ಇಡುವ ಟೊಂಕ ಕಟ್ಟಿದ್ದಾರೆ. ಒಂದು ದುಡ್ಡಿನ ಕಾರ್ಡ ಹಚ್ಚಿದರೆ ಸಾಕು. ಉಲಟ ಟಪಾಲಿನಿಂದಾಗಲಿ, ರೇಲ್ವೆ ಪಾರ್ಸಲಿನಿಂದಾಗಲಿ, ಗೂಡ್ಸ ಪಾರ್ಸಲಿನಿಂದಾಗಲಿ, ನಿಮ್ಮ ಇಚ್ಛೆಯಂತೆ ನಿಮ್ಮ ಸಾಮಾನುಗಳು ಭದ್ರವಾಗಿ ವ್ಯವಸ್ಥೆಯಿಂದ ನಿಮ್ಮ ಮನೆಗೆ ಹಾದಿ ಹಿಡಿಯುತ್ತವೆ. ಪೇಟೆಯು ಅತ್ಯುತ್ತಮವಾದ ಪಂಚಿಕೆಯ ನಿಮ್ಮ ಗುಟ್ಟು ಅದರ ಮೂಲಕವಾಗಿಯೇ ಉತ್ತಮವಾದ ಸಾಮಾನುಗಳನ್ನು ಅತ್ಯಂತ ಸೋಯಿಸ್ಕರವಾಗಿ ಕೊಳ್ಳಲಿಕ್ಕೆ ನಮಗೆ ಸಾಧ್ಯವಾಗುತ್ತದೆ. ಕೂಡಲೆ ಮುಂಬಯಿ ಖರೀದಿ ಬಂದ ಕೂಡಲೆ ನಮ್ಮ ಸ್ಮರಣ ಮಾಡಿರಿ.

ಪತ್ರ—ದಿ ಕರ್ನಾಟಕ ಟ್ರೇಡಿಂಗ ಅಸೋಸಿಯೇಶನ ಜನರಲ್ ಮರ್ಚಂಟ ಕಮಿಶನ್ ಏಜಂಟ್ಸ್.

ಹಿರಿ ವಿಟ್ಠಲ ಶಾನ್ವಾರ್ ರೋಡ ಮುಂಬಯಿ

ತಾರೀಕಿನ ಪತ್ರ ೩... ರು ಕಟ್ಟಿರಬೇಕು.


---


**ತ್ವರೆ ಮಾಡಿರಿ!** **ತ್ವರೆ ಮಾಡಿರಿ!!**

ಪ್ರತಿಗಳು ಸ್ವಲ್ಪೇ ಉಳಿದಿರುವವು

ಬೇರೆ ಬೇರೆ ರಾಷ್ಟ್ರಗಳಲ್ಲಿಯ

# ಅಸಹಕಾರ

ಎಂಬ ಗ್ರಂಥಿತ ಅಭ್ಯಾಗತರಿಗೆ ಬೇಗನೆ ಹೋಗಬೇಕಾಗಿದೆ; „Non-co-operation in other lands" ಇದರ ಭಾಷಾಂತರ ಮಾಡಿಸಿ ಕನ್ನಡದಲ್ಲಿ ಬರೆದು ಬಿಟ್ಟಿದೆ. ಬೇಗನೆ ಕೊಂಡು ತರಿಸಿರಿ. ಕಿ.ಪ್ರಮಾಣದ ಅಭ್ಯಾಗತರ ಭಾಷೆ! ಅಂದವಾದ ಮುದ್ರಣ. ಬೆಲೆ ೧ ರು.

ಪ್ರಾಪ್ತಿಸ್ಥಾನ ಲೇಖಕ— ರಂಗನಾಥ ದಿವಾಕರ ಎಮ್. ಎ. ಸಂಪಾದಕ ಕರ್ಮವೀರ

ವಿಳಾಸ ೩— ನರಸಿಂಹ ಶ್ರೀನಿವಾಸ ಕಮಲಾಪೂರ

ಮಂಗಳವಾರ ಪೇಟ ಧಾರವಾಡ


---


**ಕನ್ನಡಿಗರೇ!!** **ಒದಿರಿ ಆಶ್ರಯ ಕೊಡಿರಿ.**

## ಗದಗಿನಲ್ಲಿ

ಸಾಮಾಜಿಕ, ರಾಜಕೀಯ, ನೈತಿಕ, ಧಾರ್ಮಿಕ ವಿಷಯಗಳನ್ನು ಪ್ರತಿಪಾದಿಸುವ

# ಕರ್ನಾಟಕ ಸಿಂಹ.

| ವರ್ಗಣಿ ಸ್ಥಳೀಕರಿಗೆ ರು. ೩—೦—೬ | ಎಂಬ ಕನ್ನಡ ವಾರ ಪತ್ರಿಕೆಯು. | ವರ್ಗಣಿ ಪರ ಸ್ಥಳದವರಿಗೆ ಅಂಚೆ ವೆಚ್ಚ ಸಹಿತ ರು. ೩—೧೨—೦ |
|---|---|---|

ಅಷ್ಟರಿಂದ ಮೂರು ತಿಂಗಳ ಒಳ ಹೊರಗೆ ಹೊರಡುವದು. ಮೇಲೆ ವಿವರಿಸಿದ ವಾರ ಪತ್ರಿಕೆಯು ಬಹಳದಿಂದ ಭಾಷಾ ಸೇವೆಯನ್ನು ಮಾಡುತ್ತಿದ್ದ ಹಾಗೂ ಮೈಸೂರ ಮತ್ತು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಈ ನಾಮಗಳನ್ನು ಪಡೆದ ಮಿ|| ಅಭ್ಯಂಕರ ಕೃಷ್ಣರಾವ ರಾಯಬಾಗಕರ ಇವರ ಸಂಪಾದಕತ್ವದ ಕೆಳಗೆ ಹೊರಡುವದಲ್ಲದೆ, ಅಬಾಲ ವೃದ್ಧರಿಗೆ ಸಹ ತಿಳಿಯುವಂಥ ತಿಳಿಗನ್ನಡ ಭಾಷೆಯಲ್ಲಿ ಬರೆದ ಲೇಖನಗಳನ್ನು ಅದರಲ್ಲಿ ಕೊಡುವರು. ಗ್ರಾಹಕರು ತಮ್ಮ ಸ್ವೀಕಾರ ಪತ್ರವನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಬೇಕೆಂದು ನಮ್ಮ ವಿನಯ ವಿನಂತಿ ಇರುತ್ತದೆ.

ವಿಳಾಸ—ಶಾಂತಪ್ಪ ಶಿಪೋಶೆಟ್ಟಿ ಬಳಿಗುಂದಿ

ಮಾಲಕ ಸೈಯದ ಪ್ರೆಸ್ ಗದಗ, ಜಿಲ್ಹಾ ಧಾರವಾಡ,


---


## ವೀರ ವಿಲಾಸಿನಿ.

ಹಾಸ್ಯ ಪ್ರಧಾನವಾದ ಅದ್ಭುತ ವಿಷಯ ಪ್ರಕಾಶಕವಾದ, ಗಂಭೀರ ಗಭೀರವಾದ ಕನ್ನಡ ವಾರ ಪತ್ರಿಕೆ! ಇದೇ ಡಿಶಂಬರ ೧೫ ನೆಯ ತಾರೀಖಿಗೆ ಆರಂಭವಾಗುವುದು. ಈ ಅವಧಿಯೊಳಗಾಗಿ ಹೆಸರುಗಳನ್ನು ಕೊಡುವವರಿಗೆ ಭೆಟಿಯಾಗಿ ವರ್ಷಕಾಲ ಪತ್ರಿಕೆಯನ್ನು ಕಳುಹಿಸುವೆವು. ಅಂಚೆಯ ವೆಚ್ಚಕ್ಕಾಗಿ ೧೫ ಆಣೆ ಮಾತ್ರ ಮುಂಗಡ ರವಾನಿಸಬೇಕು. ಯಾವುದೂ ವ್ಹಿ. ಪಿ. ಇಲ್ಲ ಇದರ ನಿಯವಾದ ವಾರ್ಷಿಕ ಚಂದಾ ೧-೧೫ ಆಣೆ. ಪತ್ರಿಕೆಯು ಬಲು ಅಂದವಾಗಿ ಆ. ಪುಟಗಳುಳ್ಳದ್ದು. ಪ್ರಸಿದ್ಧವಾದ "ನಕಲಿಯ" ಪತ್ರಿಕೆ!!

ವಿಳಾಸ— ಮ್ಯಾನೇಜರ್ ವೀರ ವಿಲಾಸಿನಿ.

ನಂ. ೧೦೪ ೪ ನೇ ಬೀದಿ ಚಾಮರಾಜ ಪೇಟೆ

ಬೆಂಗಳೂರ ಸಿಟಿ.


---


## ಮಹತ್ವದ ಸೂಚನೆಯು.

ಕನ್ನಡ ನವಜೀವನದ ಕಚೇರಿಯು ಬಾಗಲಕೋಟೆಯಲ್ಲಿರುವದು. ಅದಕ್ಕೆ ಸಂಬಂಧಿಸಿದ ಪತ್ರ ವ್ಯವಹಾರ ಮನಿಯಾರ್ಡರ ಮೊದಲಾದವುಗಳೆಲ್ಲ ಕೆಳಗಿನ ವಿಳಾಸಕ್ಕೆ ಕಳಿಸಲ್ಪಡಬೇಕು

„ವ್ಯವಸ್ಥಾಪಕ ಕನ್ನಡ ನವಜೀವನ"

**ಬಾಗಲಕೋಟೆ ಜಿಲ್ಹಾ ವಿಜಾಪೂರ.**


---


## ದಿ ಸವನೂರ ಸ್ಟೇಟ ಪ್ರಿಂಟಿಂಗ ಪ್ರೆಸ್

ನಮ್ಮಲ್ಲಿ ಕನ್ನಡ, ಮರಾಠೀ, ಇಂಗ್ಲೀಷ ಭಾಷೆಗಳಲ್ಲಿ ಕೆಲಸವು ಹಾಗಿ ಮಾಡಲ್ಪಡುವದು. ಎಲ್ಲರ ಸಮಾಧಾನವಾಗುವಂತೆ ಪ್ರೀತ್ಯಗ ನಿಯಮಾಗಿ ಕೆಲಸ ಮಾಡುವದೇ ನಮ್ಮ ಗುಟ್ಟು! ಮೋಘಳ ದರಗಳು!!

ಕೆಳಗಿನ ವಿಳಾಸಕ್ಕೆ ಬರೆದು ಕೊಳ್ಳಬೇಕು:—

ಚನ್ನಬಸಪ್ಪ ಗೋಡಿ ಮಾಲಕ 'ದಿ ಸವಣೂರ ಸ್ಟೇಟ ಪ್ರಿಂಟಿಂಗ ಪ್ರೆಸ್'

ಸಂಸ್ಥಾನ ಸವಣೂರ ಜಿಲ್ಹಾ ಧಾರವಾಡ.


---

ಈ ಪತ್ರವನ್ನು ಮಿ|| ಗುಂಡೇರಾವ ರಾಮಚಂದ್ರ ಮುನವಳ್ಳಿಯವರು ತಮ್ಮ ವಿಜಾಪೂರ ಗಣ್ಯವಾಥಿಕಾರೀ ಮುದ್ರಾಲಯದಲ್ಲಿ ಮುದ್ರಿಸಿ, ಮಾಲಕ ಶ್ರೀನಿವಾಸ ರಾಜೇರಾವ ಮುಂಗೇರಿ ದೇಶ ಬಾಗಲಕೋಟ ಇವರ ಗೋಸ್ಕರ ವಿಜಾಪುರದಲ್ಲಿ ಪ್ರಸಿದ್ಧ ಮಾಡಿದರು.

ಗುಜರಾಥವು ಒಳಿತು ಮಾಡಿತು; ಮುಂದೆ?

REGISTERED No B 1589.

ವಾರ್ಷಿಕ ವರ್ಗಣಿ ರೂ. ೪-೦-೦
ಆರು ತಿಂಗಳಿಗೆ ,, ೨-೧-೦
ಬಿಡಿ ಸಂಚಿಕೆ ೦-೧-೬
ಪ್ರಾಯಿ ಸಂಚಿಕೆ ಬೇಕಾದವರು ೦-೧-೬ ರ ತಿಕೀಟ ಕಳಿಸಬೇಕು.

ಶ್ರೀ.

# ಕನ್ನಡ ನವಜೀವನ

ಜಾಹೀರಾತಿನ ದರ:-
'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂಪಾಯಿ. ಕಾಯಮು ಜಾಹೀರಾತಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾಷಾಂತರಿಸುವದೇ
ಈ ವಾರ ಪತ್ರಿಕೆಯ ಮುಖ್ಯೋದ್ದೇಶವು

ವರ್ಷ ೧ | ಬಾಗಲಕೋಟ ಪೌಷ್ಯ ವದ್ಯ ೬ ಶಕೆ ೧೮೪೩. ಗುರುವಾರ ತಾ ೧೯ ನೇ ಜಾನೇವಾರಿ ೧೯೨೨ ಇಸ್ವಿ | ಸಂಚಿಕೆ ೯

## ಸವಿನಯ ವಿನಂತಿ.

'ಕನ್ನಡ ನವಜೀವನ'ವು ತೀರ ಹೊಸ ಪತ್ರಿಕೆಯಾಗಿದ್ದರಿಂದಲೂ, ನಮ್ಮ ಮುಖ್ಯ ಚಾಲಕರಲ್ಲಿ ಈರ್ವರು ಅಹ್ಮದಾಬಾದ ಕಾಂಗ್ರೆಸ್ಸಕ್ಕೆ ಪ್ರತಿನಿಧಿಗಳಾಗಿ ಹೋಗಿದ್ದರಿಂದಲೂ ಕಳೆದ ೨-೩ ವಾರಗಳಲ್ಲಿ ನಮ್ಮಲ್ಲಿ ಕೊಂಚ ಅವ್ಯವಸ್ಥೆಯುಂಟಾಗಿದೆ. ಇದಕ್ಕೆ ಚಂದಾದಾರರ ಕ್ಷಮೆ ಬೇಡಿಕೊಳ್ಳುತ್ತೇವೆ.

೨ ಹಲಕೆಲವರಿಗೆ ಹಿಂದಿನ ಸಂಚಿಕೆಗಳು ಮುಟ್ಟಲಿಲ್ಲೆಂದು ತಕರಾರುಗಳು ಬಂದಿವೆ. ನಮಗೆ ಶಕ್ಯವಿದ್ದಮಟ್ಟಿಗೆ ಈ ಜನರಿಗೆಲ್ಲ ಹಿಂದಿನ ಸಂಚಿಕೆಗಳನ್ನು ಪುನಃ ಕಳಿಸುವಬಗ್ಗೆ ಪ್ರಯತ್ನ ಒಡುವೆವು.

೩. ಬೇರೆ ಬೇರೆ ಜನರು ಬೇರೆ ಬೇರೆ ತರದ ಚೌಕಶೀ ಮಾಡಿದರು. ಈ ಪತ್ರಗಳಿಗೆಲ್ಲ ಕೂಡಲೇ ಉತ್ತರ ಕಳಿಸುವೆವು.

೪ ನಾವು ಇನ್ನು ಮೇಲೆ ಹೆಸರು ವಿಳಾಸಗಳನ್ನು ಮುದ್ರಿಸ ತಕ್ಕವರಿದ್ದೇವೆ. ಆದ್ದರಿಂದ ವಿಳಾಸಗಳಲ್ಲಿ ತಪ್ಪು ತಡೆಗಳೇನಾದರೂ ಇದ್ದಲ್ಲಿ ನಮಗೆ ತಪ್ಪಿಲ್ಲದೇ ಬರೆದು ತಿಳಿಸಬೇಕು.

೫. ಎಲ್ಲ ವರ್ಗಣೀದಾರರಿಗೂ ಈ ಸಾರೆ ಬೇರೆ ನಂಬರುಗಳು ಕೊಡಲ್ಪಟ್ಟಿವೆ. ಈ ನಂಬರುಗಳೇ ಇನ್ನು ಮುಂದೆ ಬರುವವು. ಆದ್ದರಿಂದ ನಮ್ಮ ಸಂಗಡ ಪತ್ರವ್ಯವಹಾರ ಮಾಡುವವರೆಲ್ಲ ಇನ್ನು ಮೇಲೆ ಈ ಸಾರೆಯಿಂದ ಬರುವ ನಂಬರುಗಳನ್ನೇ ಕೊಡುತ್ತ ಹೋಗಬೇಕು. ನಂಬರುಗಳನ್ನು ಕೊಡದೇ ಪತ್ರವ್ಯವಹಾರ ಮಾಡಿದವರಿಗೆ ಕಾಲಕ್ಕೆ ಸರಿಯಾಗಿ ಯೋಗ್ಯ ಉತ್ತರ ದೊರೆಯದು. ಆದ್ದರಿಂದ ಎಲ್ಲರೂ ಇತ್ತಕಡೆಗೆ ಗಮನ ಕೊಡಬೇಕೆಂದು ವಿನಂತಿಯದೆ.

೬ ನಾವು ಕಾಲಕಾಲಕ್ಕೆ ಸಂಚಿಕೆಗಳನ್ನು ಕಳಿಸಿದ್ದರೂ ಕೂಡ ಕೆಲವರಿಗೆ ಮುಟ್ಟುವದಿಲ್ಲ. ಪೋಸ್ಟ ಆಫೀಸಿನಲ್ಲಿ ಏನು ಗೊಂದಲ ನಡೆಯುವದೋ ತಿಳಿಯದು. ನಾವು ಪೋಸ್ಟಿನಲ್ಲಿ ಚೌಕಶೀ ಮಾಡಿದ್ದೇವೆ. ಚಂದಾದಾರರಾದರೂ ತಮ್ಮಲ್ಲಿಯ ಪೋಸ್ಟಿನವರಿಗೆ ಬರೆದು ಚೌಕಶೀ ಮಾಡಬೇಕು.

ವ್ಯವಸ್ಥಾಪಕ.

---

## ಮಹತ್ವದ ಸೂಚನೆ.

ಹಲಕೆಲವು ವರ್ಗಣೀದಾರರು ಮನಿಯಾರ್ಡರ ಕಳುಹಿಸಿದ್ದರೂ ಕೂಡ ಅವರಿಗೆ ಸಂಚಿಕೆಗಳು ಮುಟ್ಟಿಲ್ಲೆಂದು ಗೊತ್ತಾಗುತ್ತದೆ. ಇಂಥವರಿಗೆ ತತ್ಕಾಲದಲ್ಲಿ ಸಂಚಿಕೆಗಳನ್ನು ಕಳಿಸಿದೆ. ಆದರೂ ಇದಕ್ಕೆ ಅಪವಾದಗಳೇನಾದರೂ ಇದ್ದರೆ ಅವರೆಲ್ಲ ದಯವಿಟ್ಟು ನಮ್ಮನ್ನು ಕ್ಷಮಿಸಿ ಬೇಗನೇ ನಮಗೆ ತಮ್ಮ ಹೆಸರು, ವಿಳಾಸ, ಮನಿಯಾರ್ಡರ ಪಾವತಿಯ ತಾರೀಖು ಮೊದಲಾದವುಗಳನ್ನು ಅರುಹಬೇಕೆಂದು ವಿನಂತಿಯದೆ.

ವ್ಯವಸ್ಥಾಪಕ.

---

## ಟಿಪ್ಪಣಿಗಳು

### ಮಾಲವಿಯಾ ಕುಟುಂಬವು

ಆಶ್ಚರ್ಯಕರವಾದ ಅಸಹಕಾರ ಚಳವಳಿಯಲ್ಲಿಯ ಎಲ್ಲಕ್ಕೂ ಆಶ್ಚರ್ಯಕರವಾದ ಸಂಗತಿಯೆಂದರೆ ಅದು ಒಂದೇ ಕುಟುಂಬದಲ್ಲಿ ಮತಭೇದವನ್ನುಂಟು ಮಾಡಿದ್ದು. ಆದರಲ್ಲಿಯಂತೂ ಮಾಲವಿಯಾ ಕುಟುಂಬದಲ್ಲಿ ಉಂಟಾದ ಮತಭೇದವು ಚೆನ್ನಾಗಿ ಒಡೆದು ಕಾಣಿಸುವಂಥ ದಾ

ತಾಗಿದೆ. ಮತ ಸಹಿಷ್ಣುತೆ ಮತ್ತು ಕಾಯದೇಭಂಗ ಈ ವಿಷಯಗಳಲ್ಲಿ ಇಡೀ ಹಿಂದುಸ್ಥಾನಕ್ಕೆ ಇದು ಒಳ್ಳೇ ದೃಷ್ಟಾಂತವಾಗಿದೆ ಪಂಡಿತ ಮಾಲವಿಯಾ ಇವರ ಮತಸಹಿಷ್ಣುತೆಯು ಅದ್ವಿತೀಯವಾಗಿದೆಂಬದರಲ್ಲಿ ಸಂಶಯವಿಲ್ಲ. ಸೆರೆಮನೆಗೆ ಹೋಗಲು ಆತುರರಾಗಿರಬೇಕೆಂಬ ಮಾತಿಗೆ ಅವರು ವಿರೋಧಿಗಳಿದ್ದಾರೆಂಬದು ನನಗೆ ಗೊತ್ತಿದೆ. ಈ ಮಾತಿನಲ್ಲಿ ಅವರ ವಿಶ್ವಾಸವಿದ್ದರೆ ಸೆರೆಮನೆಗೆ ಹೋಗಲು ಅವರು ಸ್ವಲ್ಪಾದರೂ ಹಿಂದೆ ಮುಂದೆ ನೋಡರೆಂಬದೂ ನನಗೆ ಗೊತ್ತುಂಟು. ಸ್ವರಾಜ್ಯ ಪ್ರಾಪ್ತಿಗಾಗಿ ನಾವು ಪಡುತ್ತಿರುವ ಕಷ್ಟವು ಮರ್ಯಾದಿತವಾಗಿ ಬೆಳೆದು, ಬ್ರಿಟಿಶ ನ್ಯಾಯದೇವತೆಯಲ್ಲಿಯ ಅವರ ವಿಶ್ವಾಸವು ನನ್ನಂತೆ ಅಳಿದು ಹೋಯಿತೆಂದರೆ ಸೆರೆಮನೆಗೆ ಹೋಗಲು ಅವರು ಅಗ್ರಗಣ್ಯರಾಗಿ ನಿಲ್ಲಬಹುದು. ಸಧ್ಯಕ್ಕೆ ಸವಿನಯ ಕಾಯದೇಭಂಗದ ವಿರೋಧಿಗಳಾಗಿದ್ದರೂ ಕೂಡ, ಅವರು ಕಾಯದೇಭಂಗ ಮಾಡಿದ ತಮ್ಮ ಮಗನಿಗೆ ಯತ್ಕಿಂಚಿತ್ತಾದರೂ ಅಡ್ಡಿಯನ್ನುಂಟು ಮಾಡಿಲ್ಲ. ಅಲ್ಲದೇ ತಂದೆಯ ಕರಳು ಮತ್ತು ಹಿರಿಯತನ ಇವುಗಳ ಅಧಿಕಾರವನ್ನು ತಮ್ಮ ಮಗನ ಮೇಲೆ ನಡಿಸಲಿಕ್ಕೆ ಬಧ್ಯರಿದ್ದಾಗ್ಯೂ ಅವರು ಹಾಗೆ ಮಾಡಿಲ್ಲ. ತಮ್ಮ ಮನೋದೇವತೆಯು ಹೇಳಿದಂತೆ ಅವಶ್ಯವಾಗಿ ನಡೆಯಬೇಕೆಂದು ಅವರು ತಮ್ಮ ಮಕ್ಕಳಿಗೆ ಪೂರ್ಣ ಸ್ವತಂತ್ರತೆಯನ್ನು ಕೊಟ್ಟಿದ್ದಾರೆ. ಗೋವಿಂದನ ಸವಿನಯ ಕಾಯದೇಭಂಗವು ಮಾಣಿಕ್ಯದಕಿಂತ ಹೆಚ್ಚಿನದಾಗಿದೆ. ತಮ್ಮ ಸೌಮ್ಯ ಮತ್ತು ಅಂತಃಕರುಣ ಯುಕ್ತವಾದ ಸ್ವಭಾವದಿಂದ ಆ ಶೂರ ತರುಣನು ಕಾಯದೇಭಂಗ ಮಾಡಬಾರದೆಂದು ಉಪದೇಶಿಸಿದನು. ಕಡೆತನಕ ತಮ್ಮ ತಂದೆಯವರ ಇಚ್ಛೆಯ ಮೇರೆಗೆ ನಡೆಯಬೇಕೆಂದು ಗೋವಿಂದನು ಪ್ರಯತ್ನ ಬಟ್ಟನು. ಆದರೆ ಒಂದು ಬದಿಗೆ ಪಿತೃ ಸೇವೆ ಮತ್ತೊಂದು ಬದಿಗೆ ದೇಶ ಸೇವೆ ಇವುಗಳಲ್ಲಿ ಹೆಚ್ಚಿನದಾವದೆಂಬದು ಅವನಿಗೆ ಗೊತ್ತಾಗಲಿಲ್ಲ ಈ ಎರಡೂ ಕರ್ತವ್ಯಗಳ ಅಡಕಿನಲ್ಲಿ ಸಿಗಿಬಿದ್ದನು. ಎನೂ ತೋಚದಂತಾಯಿತು. ದೇವರಲ್ಲಿ ಮೊರೆಯಿಟ್ಟನು. ತಂದೆ ಮಕ್ಕಳಾದ ನೆಹರೂರವರನ್ನು ಹಿಡಿದಿದ್ದು ಅವನಿಗೆ ಸಹನವಾಗಲಿಲ್ಲ, ಕೂಡಲೇ ಈ ತರುಣನು ಪ್ರಖ್ಯಾತರೂ ವಿಶಾಲ ಹೃದಯದವರೂ ಆದ ತಮ್ಮ ತಂದೆಯವರು ತನ್ನನ್ನು ಆಶೀರ್ವದಿಸಬೇಕೆಂದು ಬೇಡಿಕೊಂಡು ಈ ಯುದ್ಧದಲ್ಲಿ ಸೇರಿಕೊಂಡನು. ಗೋವಿಂದ ಮಾಲವಿಯಾನಗಿಂತ ಹೆಚ್ಚಿಗೇ ಪ್ರಫುಲ್ಲಿತವಾದ ಹೃದಯವು ಈಗ್ಗೆ ಜೇಲಿನಲ್ಲಿ ಯಾರದು ಇರಲಿಕ್ಕಿಲ್ಲ. ಸವಿನಯ ಕಾಯದೇಭಂಗ ಮಾಡಿದ್ದರಿಂದ ಅವನು ಪಿತೃ ಸೇವೆ ಮತ್ತು ರಾಷ್ಟ್ರ ಸೇವೆಗಳನ್ನೆರಡೂ ಒಳ್ಳೇ ಸಮಾಧಾನಕ ರೀತಿಯಿಂದ ಮಾಡಿರುವನೆಂದು ನಾನು ದಿಟ್ಟತನದಿಂದ ಹೇಳಬಲ್ಲೆ. ಕರ್ತವ್ಯ ಯುಕ್ತರಾದ ಮಕ್ಕಳು ತಮ್ಮ ತಂದೆಯವರ ಸಂಗಡ ಸವಿನಯ ಕಾಯದೇಭಂಗ ಮಾಡಬೇಕಾಗಿದ್ದರೆ ಗೋವಿಂದನ ಈ ಉದಾಹರಣೆಯನ್ನು ಕಣ್ಣದುರಿಗೆ ಇಟ್ಟುಕೊಳ್ಳತಕ್ಕದ್ದು. ತಂದೆ ಮಕ್ಕಳ ನಡುವೆ ಯಾವತರದ ದುಷ್ಟಬುದ್ಧಿಯೂ ಇರುವದಿಲ್ಲೆಂಬದನ್ನು ನಾನು ಬಲ್ಲೆ. ಸೆರೆಮನೆಗೆ ಹೋಗಬೇಕೆನ್ನುವದನ್ನು ಸಿಕ್ಷಯಿಸಿದ ಮೊದಲು ತಮ್ಮ ಮಗನ ಬಗ್ಗೆ ಎಷ್ಟು ಅಭಿಮಾನವೆನಿಸುತ್ತಿತ್ತೋ ಅದರ ಇಮ್ಮಡಿಯಷ್ಟು ಅಭಿಮಾನವು ಈಗ್ಗೆ ಮಾಲವಿಯಾಜೀಯವರಿಗೆ ಅನಿಸುತ್ತಿರಬಹುದು. ಇಂಥ ಸತ್ಯ ಯುಕ್ತ ಕೃತಿಗಳಿಂದಲೇ ನಮ್ಮ ಯುದ್ಧದ ಧಾರ್ಮಿಕ ಸ್ವರೂಪವು ಸಿದ್ಧವಾಗುತ್ತದೆ. ಕೋರ್ಟಿನ ಮುಂದೆ ಗೋವಿಂದನು ಕೊಟ್ಟ ಧಿಟ್ಟತನದ ಜವಾಬನ್ನು ನಾನು ಇಲ್ಲಿ ಕೊಡದೇ ಇರಲಾರೆ.

ಕೋರ್ಟಿನವರಿಗೆ ನಾನು ಹೇಳುವದೇನಂದರೆಃ--ಈ ಬಿಟ್ಲೆಯು ಹೇಗೆ ಕೊನೆಗಾಣಬೇಕೆಂಬದನ್ನೂ ನಿರ್ಣಯವು ಯಾವ ಪ್ರಕಾರದ್ದಿರಬೇಕೆಂಬದನ್ನೂ, ಅಪರಾಧಿಗಳನ್ನು ದಂಡಿಸುವದಕ್ಕಲ್ಲದೇ ಜನರ ನ್ಯಾಯ ಸಮ್ಮತವಾದ ರಾಷ್ಟ್ರೀಯ ಆಕಾಂಕ್ಷೆಗಳನ್ನು ಮುರಿದು ಬದಿಗೊತ್ತುವದಕ್ಕಾಗಿಯೇ ನೀವು ದಿನೇದಿನೇ ಕುಂದಿ ಹೋಗುತ್ತಿರುವ ನಿಮ್ಮ ಅಧಿಕಾರವನ್ನು ಉಪಯೋಗಿಸುತ್ತಿರುವರೆಂಬದನ್ನು ಯಾರೂ ಅಲ್ಲಗಳೆಯರು ಅದ್ದರಿಂದ ನಾನು ನಿಮ್ಮ ಕಾಯದೇ ಕಾನೂನುಗಳಿಗೆ ಸಮ್ಮತಿಸುವದಿಲ್ಲ. ಅದಕ್ಕಾಗಿ ಹೆಚ್ಚಿಗೇ ನಾನು ಏನೂ ಹೇಳಲಿಚ್ಛಿಸುವದಿಲ್ಲ, ನಮ್ಮನ್ನು ಮುರಿಬಡಿಯಲಿಕ್ಕೆ ನೀವು ಸಿದ್ಧರಾದದ್ದು ನಿಜ. ಅದೇ ಪ್ರಕಾರವಾಗಿ, ನಿಮಗೂ ನಿಮಗೆ ಸಂಬಂಧಿಸಿದವರಿಗೂ, ಅಖಂಡ ಜಗತ್ತಿಗೂ ೩೦ ಕೋಟಿ ಜನರ ಅಧ್ಯಾತ್ಮ ಬಲವು ಶುದ್ಧವಾಗಿಯೂ ಪಶು ಬಲದ ಮೇಲೆ ಅವಲಂಬಿಸಿರುವ ನಿಮ್ಮ ಸರಕಾರದ ಬಲಕ್ಕಿಂತ ಶ್ರೇಷ್ಠವಾಗಿದೆಂಬದನ್ನು ಸಿದ್ಧ ಮಾಡಲಿಕ್ಕೆ ನಾವೂ ಸಿದ್ಧರಾಗಿದ್ದೇವೆ. ಇದೇ ಉದ್ದೇಶದಿಂದ ನಿಮಗೂ ನಿಮ್ಮ ಸರಕಾರಕ್ಕೂ ನಾನು ಹೇಳುವದೇನಂದರೆಃ--ನನ್ನಂಥ ಕ್ಷುದ್ರ ಮನುಷ್ಯನನ್ನೇ ಆಗಲಿ ಇಲ್ಲವೇ ಬೇರೆ ದೊಡ್ಡ ಮನುಷ್ಯರನ್ನಾಗಲಿ ಬಂಧಿಸಿದರೂ ನಮ್ಮ ರಾಷ್ಟ್ರ ಕಾರ್ಯವು ನಿಲ್ಲದು. ನಮ್ಮ ನಶ್ವರವಾದ ಈ ದೇಹಕ್ಕೆ ನೀವು ಬೇಕಾದಂಥ ಕಠೋರ ಯಾತನೆಗಳನ್ನುಂಟು ಮಾಡಬಹುದು. ಆದರೆ ನಮ್ಮಲ್ಲಿರುವ ಆತ್ಮವೂ, ಸ್ವರಾಜ್ಯವನ್ನು ದೊರಕಿಸಿಯೇ ಬಿಡುವದೆಂದು ನಮ್ಮಲ್ಲಿ ನಿಶ್ಚಿತವಾದ ಧೈರ್ಯವೂ, ನಿಮಗೇ ಆಗಲಿ ಬೇರೆಯವರಿಗೆ ಆಗಲಿ ಸರ್ವಥಾ ವಶ ಹೋಗದು. ನಮ್ಮಲ್ಲಿ ಉತ್ಸಾಹವನ್ನು ಹುಟ್ಟಿಸಿ ಸ್ವಸಂತೋಷದಿಂದ ಇಲ್ಲಿಗೆ ನನ್ನನ್ನು ತಗೆದುಕೊಂಡು ಬಂದಂಥ ಶಕ್ತಿಯು ಅಸಹಯೋಗಿಗಳ ದಿಷ್ಟೇ ಅಲ್ಲ; ಆದರೆ ನಮ್ಮ ರಾಷ್ಟ್ರದಲ್ಲಿಯ ಪ್ರತಿಯೊಬ್ಬನ ಮನದಲ್ಲಿಯೂ ಆ ಜ್ಯೋತಿಯು ನೆಲೆಗೊಂಡಿದೆ ನಮ್ಮ ಈ ಭೌತಿಕ ಶರೀರಗಳನ್ನು ಸೆರೆಮನೆಯಲ್ಲಿರಿಸುವದರಿಂದ ನನಗೂ ನನ್ನ ದೇಶಬಾಂಧವರಿಗೂ ಒಳ್ಳೇ ಉಚ್ಚತರದ ನೈತಿಕ ಸಾಮರ್ಥ್ಯವನ್ನು ಸಂಪಾದಿಸಲಿಕ್ಕೆ ನೀವು ಸಹಾಯ ಮಾಡುತ್ತಿರುವಿರಿ ನೀವು ಈಗ್ಗೆ ಅನುಸರಿಸಿದ ಈ ಅಧೋಮಾರ್ಗವನ್ನು ಇನ್ನೂ ಕೆಲಕಾಲದವರೆಗೆ ಹಿಡಿದು ಹೋಗುವ ಸುಬುದ್ಧಿಯು ನಿಮಗೆ ಉಂಟಾದರೆ ಸಾಕಿದೆ. ನಾವು ಶೀಘ್ರದಲ್ಲಿಯೇ ನಿಮ್ಮ ಈ ದುಷ್ಟ ರಾಜ್ಯಪದ್ಧತಿಯನ್ನು ಧ್ವಂಸಮಾಡಿ ಸ್ವತಂತ್ರರಾಗಿ ಸುಖದಿಂದ ಬಾಳುವೆವು, ನೀವು ಇದೆ ಮಾರ್ಗವನ್ನು ಹಿಡಿಯುವಿರೆಂದು ಆಶಿಸಿ ನನ್ನ ಮತ್ತು ನನ್ನ ದೇಶ ಬಾಂಧವರ ಅಂತಃಕರಣ ಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ. ‘ವಂದೇಮಾತರಂ’

ತಂದೆ ಮಕ್ಕಳನ್ನಿಬ್ಬರ ಅಭಾರವನ್ನು ವಾಚಕರು ಮನ್ನಿಸುವರೆಂದು ಆಶಿಸುತ್ತೇನೆ. ಇವರಿಬ್ಬರ ಬಗ್ಗೆಯ ಅಭಿ

ಮಾನವನ್ನು ಇಡೀ ರಾಷ್ಟ್ರವೇ ಹಿಡಿಯುವದು. ಗೋವಿಂದನು ತೋರಿಸಿದಂಥ ಧೈರ್ಯವನ್ನ ಎಲ್ಲ ಯುವಕರೂ ತೋರಿಸಹತ್ತಿದರೆ ಈ ನಮ್ಮ ಯುದ್ಧದಲ್ಲಿ ಜಯವು ನಮಗೆ ಬಂದೇ ಬರುವದು.

## ಜಪ್ತೀ ವಾರಂಟು.

ಜಪ್ತಿ ವಾರಂಟು ತೆಗೆದರೆ ಮತ್ತು ದಂಡ ಮಾಡಿದರೆ ಹೇಗೆ ಮಾಡಬೇಕೆಂದು ಎಷ್ಟೋ ಜನರು ಪ್ರಶ್ನೆ ಕೇಳುತ್ತಾರೆ. ಪ್ರತಿಯೊಬ್ಬನು ಜೇಲಿಗೆ ಹೋಗಲಿಕ್ಕೆ ತಯಾರಿರುತ್ತಾನೆ ಆದರೆ ಆಸ್ತಿಯನ್ನು ಕಳೆದು ಕೊಳ್ಳಲಿಕ್ಕೆ ತಯಾರಿರುವದಿಲ್ಲ. ನಮಗೆ ವಸ್ತುಗಳ ಮೇಲೆ ಬಹಳ ಪ್ರೀತಿ ಇರುವದರಿಂದ ನಾವು ಜೇಲಿನ ಯಾತನೆಗಳನ್ನು ಸಹಿಸಲಿಕ್ಕೆ ತಯಾರಿದ್ದರೂ ಆಸ್ತಿಯನ್ನು ಬಿಡಲಿಚ್ಛಿಸುವದಿಲ್ಲ ಶಾರೀರಿಕ ಸೌಖ್ಯವನ್ನು ಇಹಲೋಕದ ಸುಖಕ್ಕೆ ಬೇಕಾಗುವ ವಸ್ತುಗಳನ್ನು ತ್ಯಾಗ ಮಾಡಲಿಕ್ಕೆ ತಯಾರಾಗದಿದ್ದರೆ ನಮಗೆ ಯಶಸ್ಸು ಸಿಗುವದಿಲ್ಲವೆಂದು ನಾವು ತಿಳಿದು ಕೊಳ್ಳತಕ್ಕದ್ದು. ಯಾವ ವಸ್ತುವಿನ ಮೋಹವನ್ನು ಆಶ್ರಯಿಸಿ ಸರಕಾರದವರು ನಮ್ಮನ್ನು ದಾಸ್ಯತ್ವದಲ್ಲಿಡಲು ಯತ್ನಿಸುತ್ತಾರೋ ಅಂಥ ಪ್ರತಿಯೊಂದು ವಸ್ತುವನ್ನು ತ್ಯಾಗ ಮಾಡಿದರೆ ಈ ಯುದ್ಧದಲ್ಲಿ ನಮಗೆ ಜಯ ಸಿಗುತ್ತದೆ. ಆದ್ದರಿಂದ ನಾವು ಆಸ್ತಿಯನ್ನೂ ನೆಲವನ್ನೂ ಕಳೆದುಕೊಳ್ಳಲಿಕ್ಕೆ ಆನಂದದಿಂದ ತಯಾರಾಗತಕ್ಕದ್ದು. ಸರಕಾರದವರು ನಮ್ಮ ಆಸ್ತಿಯನ್ನು ಮಾರಲಿಕ್ಕೆ ಬೇಸರಿಯುವರೆಂದು ನಮಗೆ ಅನಿಸಲಿಕ್ಕೆ ಬೇಕು. ಕಳೆದುಕೊಂಡ ಆಸ್ತಿಯೂ ನೆಲವೂ ಸ್ವರಾಜ್ಯ ಸಿಕ್ಕ ಮೇಲೆ ನಮಗೆ ತಿರುಗಿ ಸಿಗುತ್ತವೆ. ಆದರೆ ಸ್ವರಾಜ್ಯವನ್ನು ಗಳಿಸಿಯೇ ತೀರುತ್ತೇವೆಂಬ ಆತ್ಮ ವಿಶ್ವಾಸವ ಮಾತ್ರ ನಮ್ಮಲ್ಲಿರಬೇಕು. ಯುದ್ಧದಲ್ಲಿ ಜರ್ಮನ್ನರು ಬೆಲ್ಜಿಯಮ ದೇಶವನ್ನು ತಮ್ಮ ವಶದಲ್ಲಿ ತೆಗೆದುಕೊಂಡಾಗ್ಯೂ ಬೆಲ್ಜಮ ದೇಶದ ಜನರು ತಮ್ಮ ದೇಶವು ತಮಗೆ ಮರಳಿ ಸಿಗುತ್ತದೆಂದು ನಿಶ್ಚಯವಾಗಿ ತಿಳಿದು ಕೊಂಡಿದ್ದರು ದಕ್ಷಿಣ ಆಫ್ರಿಕಾದಲ್ಲಿ ಜನರಲ್ ಬೋಥರೆಂಬ ಗೃಹಸ್ಥನು ಸಾವಿರಾರು ಎಕರೆ ಭೂಮಿಯನ್ನೂ ಬೆಲೆಯುಳ್ಳ ಆಸ್ತಿಯನ್ನು ಕಳೆದು ಹೋರಾಡಿದನು. ಮುಂದೆ ಅವನ ಆಸ್ತಿಯೆಲ್ಲ ಅವನಿಗೆ ಸಿಕ್ಕಿತು.

ಈ ಆತ್ಮ ಯಜ್ಞದ ಯುದ್ಧದಲ್ಲಿ ಬೆಲ್ಜಮ ಮತ್ತು ಬೋಅರ ಜನರು ಮಾಡಿದಷ್ಟು ಆತ್ಮಯಜ್ಞವನ್ನಾದರೂ ನಾವು ಮಾಡಲಿಕ್ಕೆಬೇಕು. ನಮ್ಮ ದೇಶದಲ್ಲಿಯ ದಾರಿದ್ರ್ಯವನ್ನು ಹಿಡಿಸಬೇಕಾದರೆ ಮೊದಲು ನಾವು ಸ್ವಸಂತೋಷದಿಂದ ಸ್ವಲ್ಪಕಾಲ ದಾರಿದ್ರ್ಯ ವ್ರತವನ್ನು ಸ್ವೀಕರಿಸಬೇಕು. ನಮ್ಮ ಪವಿತ್ರವಾದ ದೇಶದ ಏಳ್ಗೆಯ ರೂಪದಿಂದ ನಮಗೆ ಸಿಗತಕ್ಕ ಪಾರಿತೋಷಿಕವನ್ನು ನಮ್ಮಲ್ಲಿಯ ಸ್ವಲ್ಪದರೂ ಜನರು ಮಾಡಿದ ಆತ್ಮಯಜ್ಞವನ್ನು ತುಲನೆ ಮಾಡಿ ನೋಡಿದರೆ ನಮ್ಮ ಆತ್ಮ ಯಜ್ಞೆಯು ತೀರ ಅಲ್ಪವಿರುತ್ತದೆಂದು ಕಂಡು ಬರುತ್ತದೆ.

## ಈಗ ಸ್ವತಂತ್ರರೇ ನಾವು

ಯಂಗ ಇಂಡಿಯಾ ಪತ್ರದ ವಾಚಕರಿಗೆ ಮಿ. ಪೀಯರ್ಸನ್‌ರ ಹೆಸರು ಅಪರಿಚಿತವಲ್ಲ. ಶಾಂತಿನಿಕೇತನದಲ್ಲಿದ್ದು ಇವರು ಜಗತ್ಪ್ರಸಿದ್ಧರಾದ ಟ್ಯಾಗೂರರವರ ಗ್ರಂಥಾವಲೋಕನ ಮಾಡಿದ್ದಾರೆ. ಭಾರತೀಯರ ಸ್ವದೇಶಭಾವನೆಯ ವಿಷಯದಮೇಲೆ ಒಂದು ಪುಸ್ತಕವನ್ನು ಬರೆದಕಾರಣ ಇವರನ್ನು ಗಡಿಪಾರು ಮಾಡಿದ್ದರು. ಇತ್ತಿತ್ತಲಾಗಿ ಇವರಿಗೆ ಶಾಂತಿನಿಕೇತನಕ್ಕೆ ತಿರುಗಿ ಹೋಗಿ ತಮ್ಮ ಕೆಲಸವನ್ನು ಕೈಕೊಳ್ಳಲಿಕ್ಕೆ ಅಪ್ಪಣೆದೊರತಿದೆ. ಮಿ. ಅಂಡ್ರ್ಯೂಜರವರ ಮುಖಾಂತರವಾಗಿ ಇವರು ಶಾಂತಿನಿಕೇತನದಿಂದ ಕಾಂಗ್ರೆಸ್ ವಾರದಲ್ಲಿ ಒಂದು ಸಂದೇಶವನ್ನು ಕಳುಹಿಸಿರುವರು. ಅದು ಕೆಳಗೆ ಕೊಟ್ಟಿದೆ.

“ಈಗಿನ ಸೂಕ್ಷ್ಮಪ್ರಸಂಗದಲ್ಲಿ ಮಹಾತ್ಮಾಜೀಯವರಿಗೆ ಒಳ್ಳೇ ನೈತಿಕ ಬಲವು ಸಿಕ್ಕಿದೆ. ಈ ಸ್ವಾತಂತ್ರ್ಯ ಯುದ್ಧದಲ್ಲಿ ತಮ್ಮ ಕೂಡ ನಾನು ಮನಃಪೂರ್ವಕವಾಗಿ ಹೋರಾಡುವೆನು. ನೀವು ಕೈಕೊಂಡ ನಿಮ್ಮ ಕಾರ್ಯವು ವೃಕ್ಷಕ್ಕೆ ಹಣ್ಣಾಗತೊಡಗಿವೆ. ಯಾಕೆಂದರೆ, ಹಿಂದುಸ್ತಾನವು ಎಂದಿನಿಂದಲೂ ಸ್ವತಂತ್ರವಾಗಿಯೇ ಇರುವದು. ಅದರ ಆತ್ಮಜ್ಯೋತಿಯು ಆವುದಕ್ಕೂ ಹೊಣೆಯಾಗಿಲ್ಲ

ಪ॥ ಷ ನಿನ್ನಾತ್ಮವು ಕೇ—।
ಳಿನ್ನರಳಲಿ ಗಡ! ।
ನಿನ್ನತಿಗಳ್ಳುಕ್ತವೆ! ನೋಡೈ ॥
ನಿನ್ನಯ ಬಂಧನೆ ।
ನಿನ್ನಯ ನಂಬಿಕೆ ।
ಯಿನ್ನೊಂದಾಗಿಯೆ ನೆಲೆಸಿಹವು ॥

ಸ್ವಿನ್‌ಬರ್ನನು ತನ್ನ ಪದಮಾಲಿಕೆಯಲ್ಲಿ ಗ ರಾಮನನ್ನುಪದೇಶಿಸಿ ಹೀಗೆ ಹೇಳಿರುವನು ಕಾರಣ, ಹಿಂದಮಾತೆಯ ಅಂಧಕಾರವು ಅಳಿದು ಹೋಗಿದೆ. ಆವಳು ಬಂಧನದಿಂದ ಮುಕ್ತಳಾಗಿದ್ದಾಳೆ. ಇದರಲ್ಲಿ ತಿಲಮಾತ್ರ ಸಂದೇಹವಿಲ್ಲ.”

“ಸಂಪೂರ್ಣ ಸ್ವರಾಜ್ಯವಂತೂ ಸಿಗುವದು ನಿಶ್ಚಯವು. ಆದರೆ, ಆಮೇಲೆ, ಅದರ ಸುಧಾರಣೆಯಲ್ಲಿ ಸಮಾಜದ ಸಾಯು ಬಲವನ್ನು ಹೆಚ್ಚಿಸಬೇಕು. ಐರ್ಲಂಡದ ಬಂಧವಿಮೋಚನೆಗೆ ಅದರ ಸಮಾಜ ಸುಧಾರಣೆಯೇ ಒಳ್ಳೇ ಬಲವಾದ ಕಾರಣವಾಗಿದೆ ಅದರಂತೆಯೇ ಅಪ್ರಕಾರದ ಸುಧಾರಣೆಯೂ ಒಕ್ಕಲತನದ ಮಹತ್ವವೂ ಹಿಂದುಸ್ತಾನದಲ್ಲಿ ನೆಲೆಗೊಳ್ಳುವದು ಅತ್ಯವಶ್ಯವಾಗಿದೆ.”

ಹಿಂದಮಾತೆಯು ಈ ಮೊದಲೇ ಬಂಧಮುಕ್ತಳಾಗಿರುವಳೆಂಬ ಇವರ ಭಾವನೆಯಂತೆಯೆ ನನ್ನ ಭಾವನೆಯು. ದೇ. ಲಾಲಾಜೀ, ಪಂಡಿತ ನೇಹರು ಚಿತ್ತರಂಜನದಾಸ ಮತ್ತು ಅಬುಲ್ ಕಲಮ್ ಅಝಾದ್ ಮುಂತಾದವರು ಬಂಧಿಸಲ್ಪಟ್ಟ ಕೂಡಲೇ ಅವಳು ಪೂರ್ಣ ಸ್ವತಂತ್ರಳಾಗಿದ್ದಾಳೆ. ದಬ್ಬಾಳಿಕೆಯು ದಂಗೆಗಳ ಪರಿವೆಯಿಲ್ಲದೆ ಸಾರ್ವಜನಿಕ. ಸಂಘಗಳನ್ನೂ ಸಭೆಗಳನ್ನೂ ಸ್ಥಾಪಿಸುವದರಿಂದಲೇ ಅವಳು ಸಂಪೂರ್ಣ ಸ್ವತಂತ್ರತೆಯನ್ನು ಪಡೆದಿರುವಳೆಂಬದು ಸ್ಪಷ್ಟವು. ಸ್ವಾತಂತ್ರ್ಯಕ್ಕೆ ಬೇಕುವ ಬೆಲೆಯನ್ನು ಕೊಟ್ಟ ಮೇಲೆ ಸ್ವತಂತ್ರತೆಯು ನಮ್ಮ ಒಡವೆಯಾಯಿತು ನಮ್ಮಲ್ಲಿಯ ಭಿನ್ನಮತಾಭಿಪ್ರಾಯಗಳ ಸಮ್ಮೇಲನವು ಮುಂದೂಡಬಹುದು ಸ್ವತಂತ್ರತೆಯು ಸರ್ಟಿಫೀಕೇಟಿನ ಅವಶ್ಯಕತೆಯು ನಮ್ಮಲ್ಲಿರುವವರೆಗೆ ನಾವು ಸ್ವತಂತ್ರರು ಎಂದೆನ್ನಕೂಡದು. ರೋಗಿಯು ತಾನು ನಿರೋಗಿಯಾಗಿರುವನೆಂಬ ಸಿಫಾರಸಿನ ಪತ್ರವಿದ್ದ ಹೊರತು ನಿರೋಗಿಯೆಂದೆನಿಸಿಕೊಳ್ಳನು. ರಾಷ್ಟ್ರೀಯ ಮಹಾಸಭೆಗೆ ಬಂದ ಪ್ರತಿಯೊಂದು ಸ್ತ್ರೀಪುರುಷವ್ಯಕ್ತಿಯು ಸ್ವಾತಂತ್ರ್ಯದ ಪ್ರಕಾಶಕಿರಣವನ್ನು ಕಂಡಿರಬಹುದು—

ಹಿಂದುಸ್ತಾನದ ವಾತಾವರಣದಲ್ಲಿ ವಿದ್ಯುತ್ಪ್ರೇರಣೆಯನ್ನು ಮಿ. ಪಿಯರ್ಸನ್ನರು ಕಂಡಿದ್ದರೂ ಇಲ್ಲಿಯ ಚಳವಳಿಯ ರಚನೆಯ ವಿಷಯಕ್ಕೆ ಅವರು ತಪ್ಪುತಿಳಿದಿರುವರು. ಸ್ವಾತಂತ್ರ್ಯಜ್ಯೋತಿಯು ಒಂದು ತರದ ನೊರೆಗಟ್ಟುವ ವಸ್ತುವಾಗಿದೆ ಈ ಚಳವಳಿಯ ಬಾಳುವಿಕೆಯ ಬಲವು ಇನ್ನೂ ಗೊತ್ತಾಗುವಂತಿಲ್ಲ. ಸಾವಿರಾರು ಕುಟುಂಬಗಳು ಸಾವಕಾಶವಾಗಿಯೂ ನಿಶ್ಚಯವಾಗಿಯೂ ಈ ಚಳವಳಿಯ ಹೆಚ್ಚುವಿಕೆಯಲ್ಲಿ ತೊಡಗತಕ್ಕಂಥವಿರುವವೆಂಬದು ಸಾಕ್ಷಿಸತಕ್ಕ ಮಾತು. ಸ್ವದೇಶಿ ವ್ರತದಲ್ಲಿಯೂ ಕೆಲ್ಲಾಟಿಯಲ್ಲಿಯೂ ಇದರ ಮಹತ್ವವನ್ನು ಕಾಣಬಹುದು. ಕೈ ನೂಲು ತೆಗೆಯುವ ಕಲೆಯಲ್ಲಿ ಹಿಂದುಸ್ಥಾನವು ನಿಷ್ಣಾತವಾದ ಮೇಲೆ ಸಂಪೂರ್ಣ ಸ್ವಾತಂತ್ರ್ಯವು ನೆಲೆಗೊಳ್ಳುವದು. ಹಿಂದ

೭೦ ಪುಟ ನೋಡಿರಿ.

## ಕನ್ನಡ ನವಜೀವನ.

ಪೌಷ್ಯ ಶು॥ ೬ ಗುರುವಾರ ಶಕೆ ೧೮೪೯


## ಗುಜರಾಥವು ಒಳಿತು ಮಾಡಿತು; ಮುಂದೆ?

ಗುಜರಾಥವು ಒಳಿತು ಮಾಡಿತೆಂದು ಹೇಳಲಭ್ಯಂತರವಿಲ್ಲ ಮೂರುವರೆ ಲಕ್ಷ ರೂಪಾಯಿಗಳ ಬೆಲೆಯ ಖಾದಿಯಿಂದ ನಗರ ಮಂಡಪಗಳು ತಯಾರಿಸಲ್ಪಟ್ಟವು, ವಿದ್ಯುದ್ದೀಪಗಳು ಹಚ್ಚಲ್ಪಟ್ಟವು; ಸುಂದರವಾದ ಪ್ರದರ್ಶನವು ನೆರವೇರಿಸಲ್ಪಟ್ಟಿತು; ಭಜನಿ ಕೀರ್ತನೆಗಳ ಸಮಾರಂಭವಾಯಿತು ಹಿಂದುಸ್ತಾನದ ಸಂಗೀತ ಕಲೆಯ ಮಹಿಮೆಯು ವ್ಯಕ್ತವಾಯಿತು; ಹಿಂದು ಮುಸಲ್ಮಾನರು ಮನೆ ಮಾಡಿಕೊಂಡು ಒಕ್ಕಟ್ಟಿಗಿದ್ದರು. ಒಬ್ಬರೊಬ್ಬರ ನಡುವೆ ಅಪಶಬ್ದಗಳು ಹೊರಡಲಿಲ್ಲ; ಗುಜರಾಥದ ಸ್ತ್ರೀಯರು ಸ್ವಯಂ ಸೇವಿಕೆಯರಾದರು. ಗುಜರಾಥದ ಯುವಕರು ಭಂಗಿಯ ಕೆಲಸವನ್ನು ಕೂಡ ಮಾಡಿ ಪ್ರತಿನಿಧಿಗಳ ಸೇವೆಯನ್ನು ಮಾಡಿದರು; ಸ್ತ್ರೀಯರದು ದೊಡ್ಡ ಸಭೆಯು ನೆರೆಯಿತು; ವ್ಯಾಖ್ಯಾನಗಳಾದವು. ಮಹಾ ಸಭೆಯ ಮಂಡಪದಲ್ಲಿ ಅರ್ಥಶಾಸ್ತ್ರದ ನಿಯಮಗಳನ್ನನುಸರಿಸಿ ಎಲ್ಲರೂ ಅವಶ್ಯವಿದ್ದಷ್ಟೇ ಭಾಷಣಗಳನ್ನು ಮಾಡಿದರು. ಯಾರೂ ವಿರುದ್ಧ ಭಾಷಣಗಳನ್ನು ಮಾಡಲಿಲ್ಲ ಸರಕಾರದ ಮನಸ್ಸಿನ ಮೇಲೆ ಬಿಂಬಿಸುವಂತೆ ಸರಕಾರವು ಪ್ರಾರಂಭಿಸಿದ ದಬ್ಬಾಳಿಕೆಗೆ ಉತ್ತರವಾಗುವಂತೆ ಉತ್ಕೃಷ್ಟ ಹಾಗು ಮರ್ಯಾದಿತ ಪ್ರಬಂಧಗಳು ನಿರ್ಧರಿಸಲ್ಪಟ್ಟವು

ಇದೆಲ್ಲವನ್ನು ನೆರವೇರಿಸಿ ಗುಜರಾಥವು ತನಗೆ ಮತ್ತು ಹಿಂದುಸ್ತಾನಕ್ಕೆ ಶೋಭೆಯನ್ನುಂಟು ಮಾಡಿತೆಂಬ ಮಾತಿನಲ್ಲಿ ಸಂಶಯವಿಲ್ಲ; ಇನ್ನು ಮುಂದಿನ ಕಾರ್ಯ ಕ್ರಮದಲ್ಲಿಯಾದರೂ ಹೀಗೆಯೇ ಶೋಭೆಯನ್ನು ತರುವದೋ? ಶೃಂಗಾರ ಶೋಭೆಗಳಲ್ಲೇನೂ ಕಡಿಮೆಯಾಗಲಿಲ್ಲ ಸ್ಫೂರ್ತಿ ಪೂರ್ಣವಾದ ಭಾಷಣಗಳನ್ನು ಮಾಡುವವರಲ್ಲಿಯೂ ಕೊರತೆಯಾಗಲಿಲ್ಲ. ಆದರೆ ಇನ್ನೂ ಬೌದ್ಧದ ಕಾರ್ಯಗಳನ್ನು ಮಾಡುವದೋ? ಬಂಗಾಲ ಸಂಯುಕ್ತಪ್ರಾಂತ, ಮತ್ತು ಪಂಜಾಬ ಪ್ರಾಂತಗಳನ್ನು ಸರಿಗಟ್ಟುವದೋ? ಕಾರಾಗೃಹಗಳಿಂದ ಕೈದಿಗಳನ್ನು ಮುಕ್ತ ಮಾಡಿ ಸ್ವರಾಜ್ಯವನ್ನು ಸಂಪಾದಿಸುವ ಮಹತ್ಕಾರ್ಯದಲ್ಲಿ ಖುಶಿಯನ್ನು ತೋರಿಸುವದೋ? ಅಥವಾ ಆನಂದದಿಂದ ಜೇಲಿಗೆ ಹೋಗುವದೋ? ಕಾಪಿಗೊಳ್ಳದೆ ಪೆಟ್ಟುಗಳನ್ನು ತಿನ್ನಬಹುದೋ? ಸಾಯಲು ಸಿದ್ಧವಾಗಬಹುದೋ?

ನಾವು ಮನಸ್ಸು ಮಾಡಿದರೆ ಈ ಎಲ್ಲ ಮಾತುಗಳು ಮಾಡಲಿಕ್ಕೆ ಬಹು ಸುಲಭವಾಗಿ ಕಾಣುವವು. ಮನಸ್ಸು ಮಾಡದಿದ್ದರೆ ಪಾರಿಗುತ್ತವನ್ನು ತೋರುವದು ಹೇಗೆ ಕಠಿಣವೋ ಹಾಗೆಯೇ ಕಠಿಣವಾಗಿ ತೋರುವವು.

ಮನೋವಾಕ್ಕಾಯಗಳಲ್ಲಿಯೂ ನಾವು ಶಾಂತರಾಗಿರಬೇಕು ಭಂಗಿಗಳನ್ನು ಕೂಡ ಒಡಹುಟ್ಟಿದವರಂತೆ ಎಣಿಸಬೇಕು. ಪಾರಿಸಿ, ಯಹುದಿ, ಕ್ರೈಸ್ತ, ಸಹಕಾರಿ ಮೊದಲಾದವರೊಡನೆ ವಿವೇಕದಿಂದಲೂ ಪ್ರೇಮದಿಂದಲೂ ನಡೆಯಬೇಕು. ನಮ್ಮ ನೆರೆಯಲ್ಲಿ ಯಾವನಾದರೂ ಇಂಗ್ಲಿಶ್ ಮನುಷ್ಯವಿದ್ದರೆ ಅವನೊಡನೆ ಯಾವನೂ ಮಮತೆಯಿಂದ ಇರಬೇಕು. ಸ್ವದೇಶಿ ವ್ರತವನ್ನು ಪಾಲಿಸಬೇಕು; ಖಾದಿಯನ್ನೆ ಧರಿಸಬೇಕು ಸತ್ಯಾಗ್ರಹಕ್ಕಾಗಿ ಜೇಲಿಗೆ ಹೋಗಬೇಕು ಹೊಡೆತಗಳನ್ನು ತಿನ್ನಬೇಕು ಸಾಯಲು ಸಿದ್ಧವಾಗಬೇಕು ಇದು ನಮ್ಮ ಧರ್ಮವು

ಈ ಘೋರವಾದ ಪ್ರತಿಜ್ಞೆಯನ್ನು ಪಾಲಿಸಿ ಪ್ರಾಣಗಳನ್ನು ಅರ್ಪಿಸುವ ಮಹಾತ್ಮನೇ ಚಿರಕಾಲವಾಗಿ ಬಾಳುವನು ಮತ್ತು ದೇಶವನ್ನು ಬದುಕಿಸುವನು ಎರಡನೇ ಅನೇಕ ಜನರು ಮಡಿದಿರುವರು. ಎರತನೇಯವರು ತಲೆಗಳನ್ನು ಒಡೆಸಿ ಜೇಲಿಗೆ ಹೋಗಿರುವರು ಅವರಿಂದ ಹಿಂದುಸ್ತಾನಕ್ಕೆ ಶೋಭೆಯು ಬರಲಿಲ್ಲ ಅವರು ಹಿಂದುಸ್ತಾನವನ್ನು ಬದುಕಿಸಲಿಲ್ಲ. ಆದರೆ ಅವರೆಲ್ಲರೂ ಲೋಕನಿಂದೆಗೆ ಪಾತ್ರರಾದರು. ಅಪರಾಧಿಗಳ ದುಃಖದಿಂದಾಗಲಿ ಅವರ ಕಣ್ಣೀರುಗಳಿಂದಾಗಲಿ, ಹಿಂದುಸ್ತಾನದ ರೋಗವು ಅಳಿಯುವದಿಲ್ಲ ನಿರ್ದೋಷಿಗಳ ಆತ್ಮಯಜ್ಞವೇ ಹಿಂದುಸ್ತಾನದ ರೋಗಕ್ಕೆ ತಕ್ಕ ಔಷಧವು

ಸತೀ ಸೀತಾದೇವಿಯನ್ನು ರಾವಣನು ಕದ್ದೊಯ್ದನು ಆದರಿಂದ ರಾಕ್ಷಸರಾಜ್ಯವು ನಷ್ಟವಾಯಿತು. ಅವನು ಒಬ್ಬ ವೇಶ್ಯೆಯನ್ನು ಒಯ್ದಿಟ್ಟುಕೊಂಡಿದ್ದರೆ ಇಂದಿಗೆ ವೇಶ್ಯೆಯನ್ನು ಆರಾಧಿಸುತ್ತಿದ್ದ ರಾವಣನ ಸ್ಮರಣವಾದರೂ ಯಾರಿಗೂ ಇರುತ್ತಿದ್ದಿಲ್ಲ. ದುಷ್ಟರು ಕಠಿಣವಾದ ಶಿಕ್ಷೆಯನ್ನು ಅನುಭವಿಸುವರೆಂದು ಜಗತ್ತಿಗೆ ಹೆದರಿಕೆಯಿಲ್ಲ. ಆದರೆ ನಿರ್ದೋಷಿಗಳ ಕೂದಲೆಳೆಗಾದರೂ ಹಾನಿ ತಟ್ಟಿದರೆ ಜಗತ್ತು ಅದನ್ನು ಒಂದು ಕ್ಷಣ ಹೊತ್ತು ಸಹ ಸೈರಿಸದು.

ಆದರೆ ನಾವು ನೋಡಿದೆನೇನು? ಚಿಕ್ಕೋಡಿಯಲ್ಲಿ ಎಣಿಸಲ್ಪಡುವ ಗುಜರಾಥದ ಪ್ರತಿನಿಧಿಯೊಬ್ಬನು ಮಹಾ ಸಭೆಯೊಳಗೆ ಬರುವದಕ್ಕೋಸ್ಕರ ಪ್ರವೇಶ ತಿಕೀಟನ್ನು ಕೇಳಿದ. ಸ್ವಯಂ ಸೇವಕರ ಅನವಶ್ಯಕತೆ ... ನನ್ನ ಬಳಿಗೆ ತಂದರು ನನಗೆ ನಾಚಿಕೆಯಿಂದು ಗುಜರಾಥದೊಳಗಿಂದ ಓಡಿ ಹೋಗಬೇಕೆಂಬಂತೆ ಅನಿಸಿತು. ಸ್ವರಾಜ್ಯೋತ್ಸವದ ಇಷ್ಟು ಪ್ರಯಾಸವಾದರೂ ಏಕೆ ಬೇಕೆಂಬಂತೆ ಒಂದು ಕ್ಷಣ ಹೊತ್ತು ಅನಿಸಿತು. ಈ ಗೃಹಸ್ಥನು ಜೇಲಿಗೆ ಹೋಗುವದರಿಂದ ಪ್ರಜೆಗಳಿಗೆ ಲಾಭವಾವುದು! ಈ ಸಂಗತಿಯು ನನಗೆ ಕ್ಷುಲ್ಲಕವಾಗಿ ತೋರಲಿಲ್ಲ ಈ ಗಾಳಿ ಹಾಗೆ ಕ್ರೂರವಿದ್ದು ವ್ಯಾಧಿ ಎಷ್ಟಾದರೂ ಒಂದು ಸಣ್ಣ ಗಡ್ಡೆಯಿದ್ದರೆ ಅದಾದರೂ ದೈವವಶಾತ್ ಮಾರಕವಾಗಬಹುದು. ಏನಕ್ಕೂ ಮರಾಠಿಯಲ್ಲಿ ಒಂದು ... ಆ ಹಾಲು ಕೆಲಸಕ್ಕೆ ಬಾರದಾಗುವದು ... ತುಂಬಿಸ್ಟ ಹಾಲಿಗೆ ... ಅದನ್ನು ಚೆಲ್ಲಿ ಬಿಡುವರು.

ಗುಜರಾಥವು ಬಂಧುಭಾವನೆ ... ಈ ಸಂಗತಿಯಿಂದ ಕಲಿಯತಕ್ಕದ್ದನ್ನು ಕಲಿಯಲಿ ಕಷ್ಟಪಟ್ಟು ದೊರಕಿಸಿದ ಫಲವನ್ನು ಕ್ಷಣದಲ್ಲಿ ಕಳೆದು ಕೊಳ್ಳತಕ್ಕದ್ದಲ್ಲ. ಈ ಯುದ್ಧದಲ್ಲಿ ಆಕ್ಷೇಪಕ್ಕೆ ಆಸ್ಪದವಿಲ್ಲ; ಸಾಹಸಿತ್ವಕ್ಕೆ ... ಮೋಸಕ್ಕೆ ಸ್ಥಾನವಿಲ್ಲ ನಿಮ್ಮ ಮೇಲೆ ಜವಾಬದಾರಿಯು ದೊಡ್ಡದಿದೆ. ನಮ್ರತೆ, ಸಭ್ಯತೆ, ಸತ್ಯ, ಶೌರ್ಯ, ಔದಾರ್ಯ, ಸ್ವಾರ್ಥತ್ಯಾಗ, ಸದ್ಭಾವನೆ ಮುಂತಾದ ಸದ್ಗುಣಗಳಿಂದಲೇ ಈ ಯುದ್ಧದಲ್ಲಿ ವಿಜಯವನ್ನು ಸಂಪಾದಿಸುವೆವು.

ಯಾರಲ್ಲಿ ಪಾಪ ... ಆದರೆ ಪಾಪಕ್ಕೆ ... ಅಪರಾಧಿಗೆ ಗುಜರಾಥದಲ್ಲಿಯೂ ... ಆದರೆ ಪಾಪವು ... ಸತ್ಯವನ್ನು ಪಾಲಿಸಲಾಗದೋ ಅಂಥವರೆ ಬೇರೆಯಾಗಿ ನಿಲ್ಲಬೇಕು. ಸತ್ಯವನ್ನು ಪಾಲಿಸಲಾರದವರು ಮುಂದಾಳುಗಳಾಗಿರುವದು ಸರಿಯಲ್ಲ. ಇದರಿಂದ ಅವರ ಸುಳ್ಳು ಮಾತಾದ ... ಇಲ್ಲದಾಗುವದು ಯಾಕೆಂದರೆ ಮಾತಾಡುವದನ್ನೇ ಬಿಟ್ಟು ... ಅವರಿಗೆ ... ಎಂಬದು. ... ಸಭೆಯಲ್ಲಿ ಬರುವ ಅವಶ್ಯಕತೆಯಾದರೂ ಏನಿತ್ತು? ಅಲ್ಲಿ ನೋಡುವದೇನಾದರೂ ಏನಿತ್ತು?

ಮಹಾ ಸಭೆಯಲ್ಲಿ ಧರಿಸಲ್ಪಟ್ಟ ಪ್ರಸ್ತಾವಗಳ ಶಬ್ದಗಳು ... ನನ್ನ ಕಿವಿಗೆ ಬೀಳುತ್ತಿರುವದು ಆದರೆ ಹೊಸದೇನೂ ... ನನಗೆ ತೋರುವದಿಲ್ಲ.

ಕಲ್ಕತ್ತೆಯಲ್ಲಿಯೂ ನಾಗಪೂರದಲ್ಲಿಯೂ ನಿರ್ಧರಿಸಲ್ಪಟ್ಟ ಹಾಗೂ ನಾನೆರಡು ಭಾಷಣಗಳಲ್ಲಿ ತಿಳಿಸಿ ಹೇಳಲ್ಪಟ್ಟ ಶರತ್ತುಗಳೇ ಈ ನಾಡಿಯ ಪ್ರತಿಜ್ಞೆಯಲ್ಲಿರುವವು. ಈಗ ಪ್ರತಿಯೊಬ್ಬನು ತನ್ನ ನಿಶ್ಚಯವನ್ನು ಸ್ಪಷ್ಟವಾಗಿ ವ್ಯಕ್ತ ಮಾಡತಕ್ಕದ್ದು. ಆದರೆ ಇದರಿಂದ ನಾವು ಅಂಜಿ ಹೋಗತಕ್ಕದ್ದೇ? ಇಷ್ಟು ದಿವಸ ನಾವು ಕೇವಲ ಡಂಭವನ್ನೇ ಮಾಡಿದೆವೋ? ನಾವು ಸತ್ಯದಿಂದಲೂ, ವಿಶ್ವಾಸದಿಂದಲೂ ನಡೆದು ಅಸ್ಪೃಶ್ಯತೆಯ ಪಾಪವನ್ನು ತೊಳೆದುಕೊಂಡು ಚರಖೆಯನ್ನು ಹಿಡಿದು ಸ್ವರಾಜ್ಯವನ್ನು ದೊರಕಿಸತಕ್ಕದ್ದಿಲ್ಲವೋ? ಈ ಶರತ್ತುಗಳು ನಮ್ಮ ... ಆದರೆ ... ಗಾಗಿ ... ನಾವು ತಿಳಿಯತಕ್ಕದ್ದೋ?

ಗುಜರಾಥದ ಸಂಸಾರಿಗಳೆಲ್ಲರು ಚರಖಾ ತಿರುವಿ ನೋಡಿ ಈ ಅತ್ಯಾವಶ್ಯಕ ಕಾರ್ಯದಲ್ಲಿ ಪಾಲುಗಾರರಾಗಲು ಮನಮುಟ್ಟಿ ಸಿದ್ಧರಿರಬೇಕೆಂದು ನನ್ನ ಸಲಹೆ. ಬಾರಡೋಲಿ ಮತ್ತು ಆನಂದಗಳು ಬಂದು ಶೀಘ್ರದಲ್ಲಿ ಸಿದ್ಧವಿರದಿದ್ದರೆ ಇರಬೇಕು. ಆದರೆ ಅಷ್ಟು ಸಿದ್ಧವಾಗದೆ ಇರಲಿಕ್ಕಾಗದು. ವ್ಯಕ್ತಿಗತ ಸವಿನಯ ಭಂಗವನ್ನಾದರೂ ಈ ಹೊತ್ತು ಮಾಡತಕ್ಕವ್ರು ಹಳ್ಳಿ ಹಳ್ಳಿಯಲ್ಲಿಯೂ ನಗರ ನಗರದಲ್ಲಿಯೂ ಈ ಪ್ರಕಾರ ಸಿದ್ಧರಾದ ವ್ಯಕ್ತಿಗಳು ದೊರೆಯಲಿಕ್ಕೆ ಬೇಕು. ಇನ್ನು ಮೇಲೆ ನಾವು ಸವಿನಯ ಭಂಗವನ್ನು ಮಾಡಿ ಜೇಲುಗಳನ್ನು ತುಂಬಿ ಬಿಡಲಿಕ್ಕೆ ಬೇಕು.

ಎಲ್ಲಿಯವರೆಗೆ ಗುಜರಾಥ ಜನರು ಜೇಲುಗಳನ್ನು ತುಂಬುವದಿಲ್ಲವೋ ಅಲ್ಲಿಯವರೆಗೆ ಶಾಂತತೆಯಾಗಬಾರದೆಂದೂ ಒಬ್ಬ ಕೈದಿಯಾದರೂ ಸೆರೆಮನೆಯಿಂದ ಬಿಡುಗಡೆ ಹೊಂದಬಾರದೆಂದೂ ನನ್ನ ಇಚ್ಛೆಯಿಂದೆ. ಆದರೆ ನನ್ನೀ ನಿರ್ಣಯವಾದ ಇಚ್ಛೆಯಲ್ಲಿಯೂ ಒಂದು ತಕ್ಕನಿದೆ; ಅದಾವುದೆಂದರೆ ಸ್ವೇಚ್ಛೆಯಿಂದ ಕಾರಾಗೃಹಕ್ಕೆ ಹೋದ ಯಾವ ಮನುಷ್ಯನಾದರೂ ಕಾರ್ಯ ಸಿದ್ಧಿಯಾಗದವರೆಗೆ ಹೊರಗೆ ಬರಲು ಇಚ್ಛಿಸಕೂಡದು. ನಮ್ಮ ಕಾರ್ಯ ಸಿದ್ಧಿಯಾಗಬೇಕಾದರೆ ಇನ್ನೂ ಎಷ್ಟೆಷ್ಟೊ ಕ್ಲೇಶಗಳನ್ನು ನಾವು ಅನುಭವಿಸತಕ್ಕದ್ದಿರುವದು. ಈ ಕ್ಲೇಶಗಳನ್ನು ಗುಜರಾಥವು ಸಹಿಸದಿದ್ದರೆ ಸಹಿಸುವವರಾರು! ಅತ್ಯಲ್ಪ ಪ್ರಮಾಣದಲ್ಲಿ ಕ್ಲೇಶಗಳನ್ನು ಸಹಿಸುವ ಮಾರ್ಗವು ಒಂದೇ ಒಂದಾಗಿರುವದು; ಅದಾವುದೆಂದರೆ ಉತ್ತಮೋತ್ತಮ ಸ್ತ್ರೀ ಪುರುಷರು ಅಧಿಕಾಧಿಕ ಕ್ಲೇಶಗಳನ್ನು ಸಹಿಸಬೇಕು. ಆದ್ದರಿಂದ ಗುಜರಾಥದ ಪ್ರತಿಯೊಬ್ಬ ಪುರುಷನು ಸ್ವಯಂ ಸೇವಕರ ಪ್ರತಿಜ್ಞೆಯ ಅರ್ಥವನ್ನು ಚನ್ನಾಗಿ ಅರಿತುಕೊಂಡು ಅದಕ್ಕೆ ರುಜು ಹಾಕಬೇಕೆಂದು ನನ್ನ ವಿನಂತಿಯಿದೆ. ಸಹಿ ಮಾಡಿ ಜೇಲಿಗೆ ಹೋಗಲು ಅನೇಕ ಶುಭ್ರ ಪ್ರಸಂಗಗಳು ಈಗ ನಮಗೆ ಸಿದ್ಧವಾಗಿರುವವು. ಅವುಗಳ ಉಪಯೋಗವನ್ನು ನಾವು ಮಾಡಿಕೊಳ್ಳಬೇಕು.

(ನವಜೀವನ)

ಮೋಹನದಾಸ ಕರಮಚಂದ ಗಾಂಧಿ.

---

## ಖಿಲಾಫತ ಪರಿಷತ್ತು.

ರಾಷ್ಟ್ರೀಯ ಮಹಾಸಭೆಯೊಡನೆಯೇ ಖಿಲಾಫತ ಪರಿಷತ್ತಿನ ಹಾಗು ಮುಸ್ಲಿಮ ಲೀಗದ ಸಭೆಗಳಾದರೂ ಆದವು. ಇವೆಲ್ಲವುಗಳಿಂದ ಹಿಂದು ಮುಸಲ್ಮಾನರಿಗೆ ಮುಖ್ಯವಾಗಿ ಬೋಧವು ದೊರೆತಿತು ಮತ್ತು ಪರಸ್ಪರರಲ್ಲಿ ಮಿತ್ರತ್ವವನ್ನು ಬೆಳಿಸುವ ಸಂಧಿಯು ಪ್ರಾಪ್ತವಾಯಿತು. ಖಿಲಾಫತ ಪರಿಷತ್ತಿನ ಅಧ್ಯಕ್ಷರೇ ಅನಾಯಾಸವಾಗಿ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾದದ್ದು ನೋಡಿ ನನ್ನಹಾಗೆ ಶ್ರದ್ಧಾಳುಗಳಾದವರು ಈ ಸಂಗತಿಯಲ್ಲಿ ಈಶ್ವರೀ ಸಂಕೇತವನ್ನು ಕಾಣಬಹುದು. ದೇಶಬಂಧು ದಾಸರವರು ಮಹಾಸಭೆಯಲ್ಲಿ ಬಂದು ಎಷ್ಟು ಕೆಲಸವನ್ನು ಮಾಡುತ್ತಿದ್ದರೋ ಅದಕ್ಕೂ ಹೆಚ್ಚಿಗೆ ಕೆಲಸವನ್ನು ಅವರು ಕಾರಾಗೃಹಕ್ಕೆ ಹೋಗುವದರಿಂದ ಮಾಡಿದರು. ಶ್ರೀ ಹಕೀಮ ಅಜಮಲ್ ಖಾನರವರು ತಮ್ಮ ಮೇಲೆ ಖಿಲಾಫತ ಪರಿಷತ್ತಿನ ಭಾರವಿರುತ್ತಿದ್ದರೂ ಮಹಾಸಭೆಯ ಅಧ್ಯಕ್ಷ ಕಾರ್ಯವನ್ನಾದರೂ ಜರಗಿಸಿದರು ಮತ್ತು ಹಿಂದು ಮುಸಲ್ಮಾನರ ಐಕ್ಯವನ್ನು ವೃದ್ಧಿಗೊಳಿಸಿದರು. ಖಿಲಾಫತ ಮತ್ತು ಮಹಾಸಭೆಗಳ ನಡುವಿನ ಸಂಬಂಧವು ಅತಿ ನಿಕಟವಾಗಿದ್ದದ್ದು ಕಂಡು ಬಂದಿತು. ಒಂದರಿಂದೊಂದು ಅವು ಭಿನ್ನವಾಗಿವೆಯೆಂದು ಯಾರಿಗೂ ಅನಿಸುವದಿಲ್ಲ.

ಈ ಎಲ್ಲ ಸಂಗತಿಗಳನ್ನು ಲಕ್ಷ್ಯದಲ್ಲಿ ತಂದು ಮೌಲಾನಾ ಅಬ್ದುಲ ಕೈಯುಬಜಿಯವರು ಇನ್ನು ಮುಸ್ಲಿಮಲೀಗದ ಬೇರೊಂದು ಸಂಸ್ಥೆಯೇ ಇರಲು ಕಾರಣವು ಉಳಿಯಲಿಲ್ಲೆಂದು ಸೂಚಿಸಿದರು. ಹಿಂದು ಮುಸಲ್ಮಾನರ ಅಂತಃಕರಣಗಳು ಒಂದಾಗಿರಲು ಬೇರೊಂದು ರಾಜಕೀಯ ಸಂಸ್ಥೆಯ ಅವಶ್ಯಕತೆಯೇನು? ಇಷ್ಟರೂ ತಮ್ಮ ತಮ್ಮ ಹಕ್ಕುಗಳ ಬೆಳೆಯಿಂದ ಒಡಬಾಡುತ್ತಿದ್ದಾಗ ಎರಡು ಸಂಸ್ಥೆಗಳ ಅವಶ್ಯಕತೆಯಿತ್ತು. ಧಾರ್ಮಿಕ ಪ್ರಶ್ನೆಗಳನ್ನು ಬಿಡಿಸುವದಕ್ಕೋಸ್ಕರ ಮುಸಲ್ಮಾನರಿಗೆ ಖಿಲಾಫತ ಕಮೀಟಿಯೊಂದಿದ್ದರಾಯಿತು. ರಾಜಕೀಯ ಪ್ರಶ್ನಗಳ ವಿಷಯವಾಗಿ ಬೇರೊಂದು ಮುಸ್ಲಿಮಲೀಗದ ಸಂಸ್ಥೆಯು ಬೇಡ.

ಹೀಗೆ ಮುಸ್ಲಿಮಲೀಗವನ್ನು ನಿಲ್ಲಿಸಿ ಬಿಡುವ ವಿಚಾರದ ಕಾರಣವು ಅತಿ ಸ್ಪಷ್ಟವಾಗಿಯೂ ಸುಲಭವಾಗಿಯೂ ಉಂಟು. ಆದರೆ ಎಲ್ಲಿಯವರೆಗೆ ಮುಸಲ್ಮಾನರ ಅಭಿಪ್ರಾಯವು ಈ ವಿಷಯದಲ್ಲಿ ಪೂರ್ಣವಾಗಿ ದೃಢವಾಗಿಲ್ಲವೋ ಅಲ್ಲಿಯವರೆಗೆ ಮುಸ್ಲಿಮಲೀಗವನ್ನು ಬಂದು ಮಾಡುವ ವಿಚಾರವನ್ನು ಮಾಡದಿರುವದು ಶ್ರೇಯಸ್ಕರವು.

ಖಿಲಾಫತ ಪರಿಷತ್ತಿನಲ್ಲಿಯೂ ಮುಸ್ಲಿಮಲೀಗದ, ಸಭೆಯಲ್ಲಿಯೂ ಪ್ರತಿಯೊಂದು ಸಂಗತಿಯಲ್ಲಿ ಬ್ರಿಟಿಶರ ಸಂಬಂಧವನ್ನು ಕಡೆದುಕೊಳ್ಳುವ ಕುರಿತು ಬಹು ಚರ್ಚೆಯಾಯಿತು. ಇದರ ವಿಷಯಕ್ಕೆ ನಾನು ಈ ಮೊದಲೇ ಬರೆದಿರುವದರಿಂದ ಹೆಚ್ಚಿಗೆ ಹೇಳುವದೇನೂ ಅವಶ್ಯಕತೆಯಿಲ್ಲ. ಖಿಲಾಫತ ಪರಿಷತ್ತು ಮತ್ತು ಮುಸ್ಲಿಮಲೀಗಗಳು ಹಿಂದು ಮುಸಲ್ಮಾನರ ನಡುವೆ ದಿನಕ್ಕೊಂದು ಚಂದದಂತೆ ಬೆಳೆಯುತ್ತಿರುವ ಪ್ರೇಮದ ಅನುಭವವು ಸರ್ವರಿಗೂ ಆಯಿತು. ಅದರ ವಿಷಯಕ್ಕೆ ನಾನು ಬರೆಯಲಿಚ್ಛಿಸುತ್ತೇನೆ. ಮಹಾಸಭೆಯ ಉಚ್ಚಾಸನದ ಮೇಲೆ ಮುಸಲ್ಮಾನರೂ, ಖಿಲಾಫತ ಪರಿಷತ್ತು ಮತ್ತು ಮುಸ್ಲಿಮಲೀಗಗಳ ಉಚ್ಚಾಸನಗಳ ಮೇಲೆ ಹಿಂದು ಜನರೂ ಅಂತಃಕರಣ ಪೂರ್ವಕವಾಗಿ ಒಬ್ಬರಿಗೊಬ್ಬರು ಕೂಡಿಕೊಂಡು ಕೆಲಸ ಮಾಡುತ್ತಿರುವದು ಕಂಡು ಬಂದಿತು. ಈ ಭವ್ಯವಾದ ದೃಶ್ಯವು ಸ್ಮರಣೆಯಲ್ಲಿಡಲು ತಕ್ಕಾದದು.

ಹಿಂದು ಮುಸಲ್ಮಾನರ ಅಂತಃಕರಣವು ಈಗ ಶುದ್ಧವಾಗುತ್ತ ನಡೆದಿರುವದೇನೋ ನಿಜ, ಆದರೂ ನಮ್ಮ ಮಾರ್ಗವು ಈ ವರೆಗೂ ಸುರಕ್ಷಿತವಾಗಿಲ್ಲ. ನಡುನಡು ತಗ್ಗು ದಿನ್ನೆಗಳಿವೆ. ಗಿಡಗಂಟಿಗಳಿವೆ. ಕಲ್ಲು ಮುಳ್ಳುಗಳಿವೆ. ಇವೆಲ್ಲವುಗಳನ್ನು ತೆಗೆದು ಹಾಕಿ, ನೆಲವನ್ನು ಹಸ್ತಿ ಹದವ

ಗಳನ್ನು ಚಲ್ಲಿ ಮೇಲೆ ರೋಲರವನ್ನು ಆಡಿಸಿ ನೆಲವನ್ನು ಸಮ ಮಾಡುವದಿದೆ. ಈ ಐಕ್ಯವನ್ನು ದೃಢ ಪಡಿಸಲು ಎಷ್ಟು ಸಾಧನಗಳಿವೆಯೋ ಅಷ್ಟೆಲ್ಲವುಗಳನ್ನು ನಾವೀಗ ಉಪಯೋಗಿಸಿಕೊಳ್ಳುವದು ಅತ್ಯವಶ್ಯವಿದೆ; ಆ ಸಾಧನಗಳಾವವೆಂಬದನ್ನು ನಾವು ಸ್ಪಷ್ಟವಾಗಿ ತಿಳಕೊಳ್ಳತಕ್ಕದ್ದಿದೆ.

೧ ನಾವು ಪರಸ್ಪರರ ಸುಖದುಃಖಗಳಲ್ಲಿ ಪಾಲುಗಾರರಾಗಬೇಕು.

೨ ಪರಸ್ಪರರನ್ನು ಪ್ರೀತಿ ಪೂರ್ವಕವಾಗಿ ಆದರಿಸಬೇಕು

೩ ಪರಸ್ಪರ ಭೀತಿಯನ್ನು ಬಿಟ್ಟು ಕೊಡಬೇಕು.

೪ ಇಬ್ಬರ ಹಿತವೂ ಯಾವ ಮಾತಿನಲ್ಲಿ ಅಡಕಿಕೊಂಡಿದೆಯೋ ಆ ಮಾತನ್ನು ಬಹು ಜಾಗ್ರತೆಯಿಂದ ಕಾಯ್ದುಕೊಳ್ಳಬೇಕು.

ಖಿಲಾಫತ ಪ್ರಕರಣದಿಂದ ಮೊದಲನೇ ಮಾತನ್ನು ನೆರವೇರಿಸುವ ಮಾರ್ಗವು ಸುಲಭವಾಗಿದೆ.

ಹಿಂದು ಮುಸಲ್ಮಾನರು ಒಬ್ಬರೊಬ್ಬರ ಧಾರ್ಮಿಕ ಕ್ರಿಯೆಗಳಲ್ಲಿ ಕೈಹಾಕುವದನ್ನು ಬಿಟ್ಟುಕೊಟ್ಟರೆ ಪರಸ್ಪರರಲ್ಲಿ ಪ್ರೇಮವೂ ಆದರವೂ ಬೆಳೆಯುವದು.

ಹಿಂದುಗಳ ಸಂಖ್ಯೆಯು ಹೆಚ್ಚಿರುವದೆಂದು ಮುಸಲ್ಮಾನರು ಹೆದರ ಕೂಡದು; ಇದರಂತೆಯೇ ಮುಸಲ್ಮಾನೀ ರಾಜ್ಯಗಳ ಸಹಾಯದಿಂದ ಮುಸಲ್ಮಾನರು ತಮ್ಮನ್ನು ಉಪದ್ರವಿಸುವರೆಂಬ ಭೀತಿಯನ್ನು ಹಿಂದುಗಳು ಬಿಟ್ಟು ಕೊಡತಕ್ಕದ್ದು.

ಸ್ವದೇಶಿಯ ಪ್ರಸಾರದಲ್ಲಿ ( ರಾಟಿಯ ಉಪಯೋಗದಲ್ಲಿ ) ಎರಡೂ ಸಮಾಜಗಳ ಹಿತವು ಅಡಕವಾಗಿದೆ. ಸ್ವದೇಶಿಯ ತತ್ವವನ್ನು ಚನ್ನಾಗಿ ತಿಳಿದು ಜೀವನವೆಲ್ಲ ಸ್ವದೇಶಿ ಮಯವಾಗಿ ಮಾಡಲೆತ್ನಿಸಿದರೆ ಐಕ್ಯತೆ ಬೆಳೆಯಲಿಕ್ಕೆ ಬಹು ಅನುಕೂಲವಾಗುವದು.

ಆದರೆ ಇವೆಲ್ಲವುಗಳಿಗಿಂತ ಐಕ್ಯವನ್ನು ಹೆಚ್ಚಿಸುವ ಅತ್ಯಂತ ಸುಲಭವಾದ ಉಪಾಯವಿನ್ನೊಂದಿರುವದು. ಅದಾವುದೆಂದರೆ- ಹಿಂದುಗಳೂ ಮುಸಲ್ಮಾನರೂ ಇತರ ಸಣ್ಣಸಣ್ಣ ಸಮಾಜಗಳ ಸಂರಕ್ಷಣೆಯ ಕಾರ್ಯದಲ್ಲಿ ಯಾವಾಗಲೂ ತತ್ಪರರಾಗಿರತಕ್ಕದ್ದು. ಈ ಎರಡೂ ಸಮಾಜಗಳು ಪಾರಸಿ ಜನರನ್ನೂ ಕ್ರೈಸ್ತರನ್ನೂ ಪ್ರೀತಿಸಬೇಕು, ಅವರನ್ನು ಆದರಿಸಬೇಕು; ಅವರ ರಕ್ಷಣೆಯನ್ನು ಮಾಡಬೇಕು. ಸ್ವಪ್ನದಲ್ಲಿಯೂ ಕೂಡ ಅವರನ್ನು ಪೀಡಿಸುವ ಇಲ್ಲವೆ ಹತ್ತಿಕ್ಕುವ ವಿಚಾರವನ್ನು ಮಾಡಬಾರದು.

ಹೀಗೆ ಮಾಡುತ್ತ ಹೋದರೆ ಎರಡೂ ಸಮಾಜದವರಿಗೆ ಪರಸ್ಪರರ ರಕ್ಷಣೆಯನ್ನು ಮಾಡುವ ಮತ್ತು ಪರಸ್ಪರ ಸೇವೆಯನ್ನು ಮಾಡುವ ಅಭ್ಯಾಸವು ಬೀಳುವದು. ನಮ್ಮಲ್ಲಿ ಸೇವಾ ಭಾವವು ಬೆಳೆಯುತ್ತ ಹೋದಂತೆ ಐಕ್ಯವಾದರೂ ಬೆಳೆಯುತ್ತ ಹೋಗುವದು.

ಮನುಷ್ಯನು ಯಾವ ಪ್ರಮಾಣದಲ್ಲಿ ತನ್ನ ಕರ್ತವ್ಯವನ್ನು ನೆರವೇರಿಸುವನೋ, ಆ ಪ್ರಮಾಣದಲ್ಲಿ ಅವನು ಪ್ರೇಮ ಪಾತ್ರನಾಗುವನು. ಹಕ್ಕುಗಳನ್ನೇ ಹುಡುಕುತ್ತ ತಿರುಗುವವನು ಕರ್ತವ್ಯದಿಂದ ಚ್ಯುತನಾಗಿ ಕಟ್ಟಕಡೆಗೆ ಹಕ್ಕುಗಳನ್ನು ಕಳೆದುಕೊಳ್ಳುವನು. ತನ್ನ ಹಕ್ಕುಗಳ ವಿಚಾರದಲ್ಲಿಯೇ ಮಗ್ನನಾದವನು ಪರಪೀಡಕನಾಗುವನು. ಸರಕಾರಕ್ಕೆ ವಿರುದ್ಧವಾಗಿ ನಿಲ್ಲಲಿಕ್ಕೆ ಬೇಕು. ಯಾಕಂದರೆ, ಸರಕಾರವು ಕೇವಲ ತನ್ನ ಹಕ್ಕುಗಳ ವಿಚಾರವನ್ನೇ ಮಾಡುತ್ತಿರುವದು. ಪ್ರಜೆಗಳ ಬಗ್ಗೆ ತನ್ನ ಕರ್ತವ್ಯವೇನಿದೆಂಬದನ್ನು ತಿಳಿದು ನೋಡಲು ಅದು ಮನಸ್ಸನ್ನೇ ಮಾಡುವದಿಲ್ಲ.

ಹಿಂದೂ ಮುಸಲ್ಮಾನರು ಒಬ್ಬರೊಬ್ಬರ ಮೇಲೆ ಹಿರೇತನವನ್ನು ನಡಿಸಹೋದರೆ ಕಡೆಗೆ ಅವರು ಶತ್ರುಗಳಾಗುವರು. ಆದರೆ ಒಬ್ಬರೊಬ್ಬರ ಸೇವಕರಾಗಿ ನಡೆಯ ಹತ್ತಿದರೆ ಸ್ನೇಹ ಗ್ರಂಥಿಯು ದಿನದಿನಕ್ಕೆ ದೃಢವಾಗಿ ಅದನ್ನು ಬಿಚ್ಚಲೆತ್ನಿಸಿದರೆ ಅದು ಬಿಚ್ಚದು; ಸುಡಲೆತ್ನಿಸಿದರೆ ಸುಡದು ಮತ್ತು ನೆನಿಸಲೆತ್ನಿಸಿದರೆ ನೆನೆಯದು. ಈ ಬಗೆಯಾಗಿ ಹಿಂದೂ ಮುಸಲ್ಮಾನರಲ್ಲಿ ಪ್ರೇಮವು ಉಂಟಾಗಲು ಸ್ವರಾಜ್ಯ ಪುಷ್ಪವು ಸಂಪೂರ್ಣವಾಗಿ ವಿಕಾಸಗೊಳ್ಳುವದು ಮತ್ತು ಆ ಮೇಲೆ ನಮಗೆ (ಇಂಡಿಪೆಂಡನ್ಸ) ಸಂಪೂರ್ಣ ಸ್ವತಂತ್ರ್ಯವುಬೇಕೊ ಅಥವಾ ಬ್ರಿಟಿಶರೊಂದಿಗೆ ಮಿತ್ರತ್ವದಿಂದಿರುವದಬೇಕೊ? ನಾವು ಸಶಸ್ತ್ರರಾಗಿ ಯುದ್ಧ ಮಾಡಬೇಕೊ, ಅಥವಾ ಶಾಂತಿಯಿಂದಲೇ ಸ್ವರಾಜ್ಯವನ್ನುಗಳಿಸಲೆತ್ನಿಸಬೇಕೋ? ಎಂಬ ವಿಚಾರವನ್ನೇ ಮಾಡುವ ಕಾರಣವು ಉಳಿಯುವದಿಲ್ಲ. ಇಂಥ ಶುಭ ಪ್ರಸಂಗವು ಬಂದೊಡನೆಯೇ ನಮಗೆ ಬೇಕಾದದ್ದು ದೊರತೇ ತೀರುವದು. ಆದ್ದರಿಂದ ನಾವು ಭವಿಷ್ಯದ ವಿಚಾರವನ್ನು ಬಿಟ್ಟುಕೊಟ್ಟು ವರ್ತಮಾನಸ್ಥಿತಿಯನ್ನೇ ಸರಿಪಡಿಸಿಕೊಳ್ಳುವ ಆಲೋಚನೆಯನ್ನು ಮಾಡುವದು, ಹಿಂದು ಮುಸಲ್ಮಾನ, ಕ್ರೈಸ್ತ, ಪಾರಸೀ, ಯಹುದೀ ಮೊದಲಾದ ಯಾವತ್ತು ಸಮಾಜದವರ ಧರ್ಮವಿದೆ. ಈ ಧರ್ಮಪಾಲನೆಯ ಕಾರ್ಯದಲ್ಲಿ ಪರಮೇಶ್ವರನು ನಮಗೆ ನೆರವಾಗಲಿ!

( ನವಜೀವನ )

ಮೋಹನದಾಸ ಕರಮಚಂದ ಗಾಂಧಿ.

---

೬೩ ಪುಟದಿಂದ ಮುಂದೆಸಾಗಿದ್ದು

ಸ್ಥಾನದಲ್ಲಿರುವ ಅವಿಭಕ್ತ ಕುಟುಂಬದ ರಚನೆಯೂ ಇಳಿಯು ಇತರ ವಿಶಿಷ್ಟ ಲಕ್ಷಣಗಳೂ ಕೃಷಿಕರ್ಮ ಸುಧಾರಣೆಯ ಸತ್ವರತೆಯನ್ನು ಅಶಕ್ಯವನ್ನಾಗಮಾಡುವವು. ಕೇವಲ ಒಕ್ಕಲತನದ ಸುಧಾರಣೆಯಿಂದ ನಮ್ಮ ಬಡತನವು ಹೋಗದು. ಆದರೆ, ಮೂಲೆಗೆ ಬಿದ್ದ ಕೈರಾಟೆಗಳನ್ನು ಬೈಲಿಗೆ ತಂದು ಪೂರ್ವಕಾಲದಲ್ಲಿಯ ಅವುಗಳ ವೈಭವವನ್ನು ಹೆಚ್ಚಿಸಿದೆವೆಂದರೆ, ಅದೇ ಒಕ್ಕಲತನದಲ್ಲಿಯ ಸುಧಾರಣೆಯು. ಅತ್ಯಗತ್ಯವೆಂದೆನಿಸಿದ ಅವಶ್ಯಕತೆಯನ್ನು ಪೂರೈಸಿಕೊಡುವದೇ ಅದರಾಶಯವು. ನಮ್ಮ ಕುಟುಂಬಗಳ ಚರಿತಾರ್ಥವನ್ನು ಸಾಗಿಸುವದೇ ಅದು. ಮನ್ ಸೂನಗಾಳಿಗಳನ್ನು ಹೊಡೆದೊಡಿಸುವದೇ ಅದು. ಗಂಡಾಂತರಗಳಿಗಾಗಿ ಕಾಯ್ದಿಡುವ ವಿಮೆಯೇ ನಮ್ಮ ಕೈರಾಟೆಯು. ಔದ್ಯೋಗಿಕ ಕೌಶಲತೆಯ ಸ್ಫೂರ್ತಿಯನ್ನು ಪ್ರೇರೇಪಿಸುವ ವಸ್ತು ಅದೇ. ಈ ಸ್ವಾತಂತ್ರ್ಯಯುದ್ಧದಲ್ಲಿ ಜಯ[illegible]ಡುವದು ಅದೇ. ಖಾದಿಯ ಪ್ರಸಾರವು ಮೊದಲಿನ ಹಳ್ಳಿಯ ಜೀವನಕ್ರಮದ ಪುನರಾವೃತ್ತಿಯನ್ನುಂಟುಮಾಡುತ್ತ ವ್ಯಕ್ತಿ ಮಾತ್ರದಲ್ಲಿ ನಂಬಿಗೆಯನ್ನು ಹುಟ್ಟಿಸುತ್ತಲಿದೆ. "ಕೈ ರಾಟೆಯಿಂದಲೇ ನಮಗೆ ಮೋಕ್ಷವು ದೊರೆಯುವದು ನಮ್ಮ ವಿಶ್ರಾಂತಿ ಸಮಯದಲ್ಲಿ ಅದನ್ನು ತಕ್ಕೊಂಡು ನೂಲು ತೆಗೆಯಲುಬೇಕು" ಎಂದು ಉಪದೇಶಿಸುವ, ಡಾ. ರಾಯರವರ ಅಭಿಪ್ರಾಯದಲ್ಲಿ ಆಶ್ಚರ್ಯವೇನು? ಇದಲ್ಲದೆ, ಅವರು ಇನ್ನು ಒಂದೇ ಆರು ತಿಂಗಳ ಅವಧಿಯಲ್ಲಿ ಎಲ್ಲ ಹಳ್ಳಿಹಳ್ಳಿಗಳಲ್ಲಿ ವಾಸಿಸುವ ಜನರು ತಮ್ಮ ಬಟ್ಟೆಗಳನ್ನು ತಾವೇ ತೆಗೆದ ನೂಲಿನಿಂದ ತಾವೇ ನೇಯಿಸಿ ಧರಿಸುವರೆಂದು ಖಂಡಿತವಾಗಿ ಸಾರಿ ಹೇಳುವರು.

**ರಾಷ್ಟ್ರೀಯ ಸಭಿಕರೇ, ಎಚ್ಚರಿಕೆ.**

ಈ ಖಾದಿಯ ಚಳವಳಿಯ ಪ್ರಗತಿಯಲ್ಲಿಯೇ ಕಾಂಗ್ರೆಸ್ ಖಿಲಾಫತ್ ಕಮಿಟಿಗಳ ಕಾರ್ಯದರ್ಶಿಗಳು ಸ್ವದೇಶಿ ವ್ರತದಲ್ಲಿ ಶಿಥಿಲತೆಯನ್ನು ಹುಟ್ಟಿಸದಂತೆ ಅವರಿಗೆ ಎಚ್ಚರಿಕೆಯನ್ನು ಕೊಡಲು ಇಚ್ಛಿಸಿದ್ದೇನೆ. ಸವಿನಯ ಆಜ್ಞಾಭಂಗವ್ರತದಲ್ಲಿ ತಲ್ಲೀನರಾಗುವದರಿಂದ

ನಮ್ಮಲ್ಲಿಯ ಸ್ವದೇಶೀ ವ್ರತದ ಉತ್ಸಾಹವು ಇಮ್ಮಡಿಯಾದಂತಾಗುವದು ಸ್ವದೇಶೀ ವ್ರತವಿಲ್ಲದ ಸವಿನಯ ಅಜ್ಞಾಭಂಗವು ಮನಜೀವಿಸುವ ಆಕ್ಷೆಯಿಲ್ಲದ ಮರಣದಂತೆಯಾಗಿರುವದು ಬೀಜವನ್ನು ಬಿತ್ತುವ ಲವಲವಿಕೆಯಿಲ್ಲದೇ ಹೊಲವನ್ನು ಹಸನಮಾಡುವಂತೆಯೆ ಸೈ. ಖಾದೀಪ್ರಸಾರದ ಚಳವಳಿಗೆ ಸವಿನಯ ಅಜ್ಞಾಭಂಗವು ಕವು ಹೊಸತರದ ಸ್ಫೂರ್ತಿಯನ್ನು ಹುಟ್ಟಿಸುವದು. ಸೆರೆಮನೆಯಲ್ಲಿ ಬೀಳದೆ ಉಳಿದ ಎಲ್ಲ ಸ್ತ್ರೀಪುರುಷ ಬಾಲಕರು ತಮ್ಮ ಉತ್ಸಾಹವನ್ನು ವ್ಯರ್ಥವಾಗಿ ನಿಮುಷಮಾತ್ರಗಳೆಂಬದೆ, ಕೈನೂಲು ತೆಗೆಯುವದರಲ್ಲಿ ಕಳೆವಡಿಬೇಕು. ಖಾದಿಯುಪ್ರಸಾರವನ್ನು ಹೆಣಗಾಡಿ ತಮ್ಮ ರಾಷ್ಟ್ರಬಾಂಧವರಲ್ಲಿ ಹೆಚ್ಚಿಸಬೇಕು: ಕುಂದುಕೊರತೆಗಳಿಲ್ಲದ ಅಂದವಾದ ಸ್ವದೇಶೀಯ ವ್ರತವೇ ಸ್ವರಾಜ್ಯಕ್ಕೆ ಕಾರಣವೆಂಬ ನನ್ನ ದೃಢವಾದ ನಂಬಿಗೆಯು ಎಂದಿನಿಂದಲೂ ಬಳಚಕಿತವಾಗಿರುತ್ತದೆ. ವ್ಯಕ್ತಿಗೆ ಅಂತಃಶುದ್ಧಿಯು ಅವಶ್ಯಕತೆಇದ್ದಂತೆ, ರಾಷ್ಟ್ರಕ್ಕೆ ಸ್ವದೇಶೀ ವ್ರತದ ಅತ್ಯವಶಕತೆಯಿರವದು.

( ಯಂಗ ಇಂಡಿಯಾ )

ಮೋಹನದಾಸ ಕರಮಚಂದ ಗಾಂಧಿ.

---

## ನಡಿಯಾದದ ಪ್ರಯತ್ನಗಳು.

ನಡಿಯಾದದಲ್ಲಿ ಅಬಾಸ ತಯಬಜಿ ಸಾಹೇಬರವರೂ ಅವರ ಪರಿವಾರದವರೂ ಕಾರಾಗೃಹಕ್ಕೆ ಹೋಗಲು ಯತ್ನಿಸಿದರು. ಆದರೆ ಅವರ ಪ್ರಯತ್ನವು ನಿಷ್ಫಲವಾಯಿತು ಕೋರ್ಟಿನಲ್ಲಿ ಹಲಗೆಯನ್ನು ಕಟ್ಟಿಕೊಂಡರು. ಆದರೆ ಕಾರಾಗೃಹವು ದೊರೆಯಲಿಲ್ಲ ಅದರಿಂದ ಅವರಿಗೆ ನಿರಾಶೆಯಾಯಿತು. ಆದರೆ ಸತ್ಯಾಗ್ರಹಿಯು ಎಂದೂ ಹತಾಶನಾಗನು. ಅವನು ಯಾವಾಗಲೂ ಪ್ರಯತ್ನ ಮಾಡುವ ಮತ್ತು ಈಶ್ವರನಲ್ಲಿ ನಂಬಿಗೆಯುಳ್ಳವನಾಗಿರುವನು ಫಲವನ್ನು ಕೊಡುವವನು ಈಶ್ವರನು. ಅವನು ತನ್ನ ಇಚ್ಛೆಯಂತೆ ಫಲವನ್ನು ಕೊಡುವನು ಅವನ ಇಚ್ಛೆಯಲ್ಲಿ ಸ್ವೇಚ್ಛಾಚಾರವಿರದು, ಅವನಿಂದ ತಪ್ಪಾಗುವದು ಅಸಂಭವವು ಅವನ ಇಚ್ಛೆಯಲ್ಲಿ ಶುದ್ಧನ್ಯಾಯವೇ ಇರುವದು. ನಮ್ಮ ಪ್ರಯತ್ನಕ್ಕೆ ಯೋಗ್ಯವಾದದ್ದನ್ನೇ ಆ ನ್ಯಾಯಧೀಶನು ದಯಪಾಲಿಸುವನು.

ಒಂದು ಫಲವಂತೂ ದೊರೆಕಿತು. ಅಬ್ಬಾಸ ಸಾಹೇಬರು ಕೋರ್ಟಿನಲ್ಲಿ ಹಲಗಿಯನ್ನು ಕಟ್ಟಿಕೊಂಡು ತಿರುಗಿದ ಸಂಗತಿಯು ಕ್ಷುಲ್ಲಕವಾದದ್ದಲ್ಲ. ತಾವು ಜಜ್ಜರಿರುವಾಗ್ಗೆ ಎರಡೆಯುವರ ಹೃದಯದಲ್ಲಿ ಭೀತಿಯನ್ನು ಹುಟ್ಟಿಸುವ ಅಬ್ಬಾಸ ತಯಬಜಿ ಸಾಹೇಬರವರು ಈಗ ಕೋರ್ಟಿನಲ್ಲಿ ಹಲಗೆಯನ್ನು ಕಟ್ಟಿಕೊಂಡು ತಿರುಗುವ ಕಾಲಕ್ಕೆ ಯಾವನಾದರೂ ಸಿಪಾಯಿಯೊಬ್ಬನು ಪೆಟ್ಟುಗಳನ್ನು ಕೊಟ್ಟರೆ ಅವುಗಳನ್ನು ಶಾಂತ ಮನಸ್ಸಿನಿಂದ ತಾಳಿಕೊಂಡು ಹೋಗಲು ನಿಶ್ಚಯ ಮಾಡಿದ್ದರೆಂಬದು ಸಣ್ಣ ಮಾತಲ್ಲ.

ಇದಲ್ಲದೆ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ವಿಲಕ್ಷಣವಾದ ಪರಿಣಾಮವಾಯಿತೆಂಬ ಮಾತು ಬೇರೆಯೇ ಇರುವದು. ಈ ವರೆಗೂ ತಮ್ಮ ಕರ್ತವ್ಯವನ್ನು ಮಾಡದಿದ್ದ ವಿದ್ಯಾರ್ಥಿಗಳು ನಾಚಿಕೊಂಡರು. ತಾಯಿ ತಂದೆಗಳು ವಿಚಾರದಲ್ಲಿ ಬಿದ್ದರು. ಯಾವ ಸರಕಾರವು ಕೋರ್ಟಿನ ಅಪ್ಪಣೆಯನ್ನು ದೊರಕಿಸದೆ ನಮ್ಮ ಮನೆಗಳ ಕೀಲಿಯನ್ನು ಮುರಿದು ಬಾಗಿಲ ತೆರೆದು ಒಳ ಸೇರುವದೊ, ಆ ಸರಕಾರದ ಶಾಲೆಗಳಲ್ಲಿ ಬೇಕಾದಂಥ ಶಿಕ್ಷಣವು ದೊರೆಯಬಹುದು ಆದರೆ ಅದರಿಂದ ಪ್ರಯೋಜನವೇನು? ಈ ಶಿಕ್ಷಣದ ಸಲುವಾಗಿ ಕೊಡಬೇಕಾಗುವ ವೇತನವು ( Fees ) ಸಣ್ಣ ಮಟ್ಟದಾಗಿರುವದಿಲ್ಲ. ನಮ್ಮ ಮಾನವು ನಷ್ಟವಾಗುವದು. ನಮ್ಮ ಸ್ವತ್ವವು ಹಾಳಾಗುವದು ಇಷ್ಟು ಬೆಲೆಯನ್ನು ಕೊಟ್ಟು ಕಲಿಯುವದರಲ್ಲಿ ಅರ್ಥವೇನು?

\+ \+ \+

ಶಿಕ್ಷಣವಂತೂ ಅವಶ್ಯವು ! ಅಕ್ಷರ ಜ್ಞಾನವು ಬೇಕು ಆದರೆ ಅಕ್ಷರ ಜ್ಞಾನವೆಂದರೆ ಸರ್ವಸ್ವವೇನಲ್ಲ; ಅದೇನು ಸಾಧ್ಯವಲ್ಲ, ಅದೊಂದು ಕೇವಲ ಸಾಧನವಾಗಿರುತ್ತದೆ. ತಿಳುವಳಿಕೆಯುಳ್ಳವರಿಗೆ ಅಕ್ಷರ ಜ್ಞಾನವಿಲ್ಲವಿದ್ದರೆ ಹಾನಿಯೇನು ? ಜಗತ್ತಿನ ಮಹಾ ಮಹಾ ಶಿಕ್ಷಕರು— ಮಹಾತ್ಮರು— ಅಕ್ಷರಜ್ಞರಿದ್ದಿಲ್ಲ. ಭಗವಾನ ಯೇಸು ಕ್ರಿಸ್ತನಿಗೆ ಹಾಗು ಮಹಮ್ಮದ ಪೈಗಂಬರನಿಗೆ ಅಕ್ಷರ ಜ್ಞಾನವಿದ್ದಿಲ್ಲ; ಆದರೂ, ಜಗತ್ತಿಗೆ ಅವರಿಂದಾದಷ್ಟು ಉಪಕಾರವನ್ನು ಮಹಾನ್ ತತ್ವಶೋಧಕರಿಂದಾಗಲಿ ಅರ್ಥಶಾಸ್ತ್ರಜ್ಞರಿಂದಾಗಲಿ ಆಗಿಲ್ಲ ಬೋಅರ ಜನರ ಪ್ರೆಸಿಡೆಂಟರಾದ ಕ್ರೂಗರರವರಿಗೆ ಅಕ್ಷರಜ್ಞಾನವು ಒಳಿತಾಗಿರಲಿಲ್ಲ. ಸಹಿಮಾಡಬೇಕಾದರೆ ಅವರಿಗೆ ಪ್ರಯಾಸವಾಗುತ್ತಿತ್ತು. ಅಫಗಾನಿಸ್ತಾನದ ಮಾಜಿ ಅಮೀರರ ಅಕ್ಷರಜ್ಞಾನವು ಇದೇಬಗೆಯಾಗಿತ್ತು. ಆದರೇನು! ಇವರ್‍ಬ್ಬರ ತಿಳುವಳಿಕೆಯು ಅಪಾರವಾಗಿತ್ತು.

ಆದರೆ ಇದು ಅಸಾಮಾನ್ಯ ಪುರುಷರಬಗ್ಗೆ ಮಾತಾಯಿತೆಂದು ಯಾರಾದರೂ ಹೇಳಬಹುದು. ಇದು ನಿಜವು. ಆದರೆ ಇಲ್ಲಿ ಸಂಗತಿಗಳಿಂದ ಅಕ್ಷರಜ್ಞಾನವಿಲ್ಲದೆ ಕೆಲಸವು ಸಾಗದೆಂದೆಂಬ ಮಾತು ಸ್ಪಷ್ಟವಾಗುತ್ತದೆ ಈವತ್ತಿಗೂ ಭೂಮಿಯ ಬಹುಭಾಗದಲ್ಲಿ ಶಿಕ್ಷಣಜ್ಞಾನವಿಲ್ಲ; ಅದಾಗ್ಯೂ ಆದರಿಂದ ಅದು ಚೇತನ ರಹಿತವಾಗಿಲ್ಲ ಜನರು ಜೀವಿಸಿರುವರು ಅವರಿಗೆ ಸಾಮಾನ್ಯಜ್ಞಾನವಿರುವದು. ಅವರ ಸಂಸಾರ ಚಕ್ರವು ಸಾಗಿರುವದು ಇದೆಲ್ಲವನ್ನು ಬರೆಯುವದರ ತಾತ್ಪರ್ಯವೇನೆಂದರೆ— ಯುದ್ಧವು ನಡೆದಾಗ ನಮ್ಮ ಹುಡುಗರು ಶಿಕ್ಷಣವಿಲ್ಲದಿರುವದರಿಂದ ಅವರಿಗೂ ಪ್ರಜೆಗಳಿಗೂ ಲಾಭವೇ ಇರುವದು ಯಾವ ಮನೆಯಲ್ಲಿಯ ಹವೆಯು ದೂಷಿತವಾಗಿದೆಯೊ ಆ ಮನೆಯ ಹವೆಯು ಶುದ್ಧವಾಗುವತನಕ ಅದನ್ನು ಬಿಟ್ಟುಕೊಡುವದು ಹೇಗೆ ಒಳಿತೊ, ಹಾಗೆಯೇ ದೂಷಿತವಾತಾವರಣವುಳ್ಳ ಸರಕಾರೀ ನಿಯಂತ್ರಣದೊಳಗಿನ ಶಾಂತಿಗಳನ್ನು ಬಿಟ್ಟುಕೊಡುವದು. ಈ ತತ್ವವನ್ನರಿಯದ ತಂದೆ ತಾಯಂದಿರ ಅಂತಃಕರಣವು ಸ್ವರಾಜ್ಯದ ಸಲುವಾಗಿ ಆತುರವಾಗಿಲ್ಲವೆಂದೇ ತಿಳಿಯತಕ್ಕದ್ದು ಸರಕಾರವು ನದಿಯಾದ ಮ್ಯುನ್ಸಿಪಲ ಸ್ಕೂಲುಗಳನ್ನು ಬಲಾತ್ಕಾರದಿಂದ ತನ್ನ ವಶದಲ್ಲಿತೆಗೆದುಕೊಂಡಬಳಿಕ ನಾವು ನಮ್ಮ ಮಕ್ಕಳನ್ನು ಸರಕಾರೀ ಶಾಲೆಗಳಿಗೆ ಕಳಿಸಿ ಸರಕಾರವು ಮಾಡಿದ ಈ ಅವಮಾನಕ್ಕೆ ಪಾತ್ರರಿದ್ದೇವೆಂಬಂತಾಯಿತು.

ಸುರತ, ಅಮದಾಬಾದ ಮತ್ತು ನದಿಯಾದ ಶಹರಗಳ ಸಾಮರ್ಥ್ಯವು ಒಳಿತಾಗಿಯೇ ಇದೆ. ಶಿಕ್ಷಣದ ವಿಷಯದಲ್ಲಿ ಈ ಮೂರು ಶಹರಗಳ ಮುನಸಿಪಾಲಿಟಿಗಳು ಅಸಹಕಾರವನ್ನು ಮಾಡಿವೆ; ಈ ಮೂರು ಶಹರಗಳಲ್ಲಿ ಲೋಕನಿಯುಕ್ತ ಪ್ರತಿನಿಧಿಗಳು ಮುನಸಿಪಾಲಿಟಿಯಿಂದಾ ಕೊಡಲ್ಪಡುವ ಶಿಕ್ಷಣವನ್ನು ರಾಷ್ಟ್ರೀಯವನ್ನಾಗಿ ಮಾಡಿರುವರು. ವಿದ್ಯಾಮಂದಿರಗಳನ್ನು ಸರಕಾರವು ಜಪ್ತಮಾಡಿರುವ ಸಂಗತಿಯು ಸಹಜವಾಗಿ ತಾಳಿಕೊಳ್ಳಲು ಬರುವಂತಿಲ್ಲ

ಸರಕಾರದ ಈ ಲೂಟಿಯು ನಿಷ್ಫಲವಾಗುವಂತೆ ಮಾಡುವದು ಜನರ ಕೈಯಲ್ಲಿಯೇ ಇರುವದು. ತಾಯಿತಂದೆಯಂದಿರು ತಮ್ಮಮಕ್ಕಳನ್ನು ಸರಕಾರದ ಹೆಸರಿನಿಂದ ನಡೆಯುತ್ತಿರುವ ಶಾಲೆಗಳಿಗೆ ಕಳಿಸಕೂಡದು; ಶಿಕ್ಷಕರು ಇಂಥ ಶಾಲೆಗಳಲ್ಲಿ ಕಲಿಸಲು ಹೋಗಕೂಡದು. ಇದರಿಂದ ಸರಕಾರವು ಕೀಲಿಮುರಿದು ತನ್ನ ಕಬ್ಜೆಯಲ್ಲಿ ತೆಗೆದ ಶಾಲೆಗಳು ಬರಿದಾಗ ಉಳಿಯುವವು. ಮತ್ತು ಸರಕಾರದಿಂದ ತೆಗೆದುಕೊಂಡ ಹಣವಾದರೂ ತಿರುಗಿ ದೊರೆಯುವದು. ಸರಕಾರದ ಈ ಲೂಟಿಗೆ ನಾವು ಸೊಪ್ಪು ಹಾಕದೆ ನಿರ್ಭಯರಾಗಿದ್ದು ಕೊಂಡು ಸರಕಾರವು ತೆಗೆದುಕೊಂಡ ವಿದ್ಯಾಮಂದಿರಗಳನು ತಿರುಗಿ ದೊರಕಿಸಲಿಕ್ಕೆ ಬೇಕೆಂಬ ನಿಶ್ಚಯವು ನಮ್ಮದಿರಲಿಕ್ಕೆಬೇಕು.

ಆದರೆ ಆ ಸಮಯವು ಬರುವವರೆಗೆ ಬಾಲಕರ ಗತಿಯೇನು? ಜನರಲ್ಲಿ ತಿಳುವಳಿಕೆ ಇದ್ದರೆ ಅವರ ಮನೆ ಮುಂತಾದವುಗಳ ಉಪಯೋಗವನ್ನು ಮಾಡಲು ನಮಗೆ ದೊರೆಯುವದು. ಅವುಗಳಲ್ಲಿ ನಮ್ಮ ಬಾಲಕರಿಗೆ ಶಿಕ್ಷಣವು ದೊರೆಯಬಹುದು ಆದರೆ ಅವು ದೊರೆಯದಿದ್ದರೆ ಬೈಲುಗಳಲ್ಲಿ ಗಿಡದಕೆಳಗೆ ಶಾಲೆಗಳನ್ನು ಹಾಕುವಾ ಹುಡುಗರಿಂದ ಅಲ್ಲಿ ನೂಲಿಸೋಣ; ಈ ಶಭಜನೆಯನ್ನು ಮಾಡಿಸೋಣ;- ವಾಕ್ಯ ಅವರಿಗೆ ಶವಾಯಿತು ಕಲಿಸೋಣ. ಮಹಾಸಭೆಯು ಪ್ರಸ್ತಾವವನ್ನು ಆಸೇಕರಿಸುವ ಶಿಕ್ಷಕರು ಕಾರಾಗೃಹದ ಯಾತ್ರೆಗಾಗಿ ಸಿದ್ಧತೆಯನ್ನು ಮಾಡುತ್ತಿರುವರು. ಅದರಿಂದ ಅತ್ಯಲ್ಪಜನ ಶಿಕ್ಷಕರಿಂದ ನಮ್ಮ ಶಿಕ್ಷಣಕಾರ್ಯವಾಗುವಂತೆ ನಾವು ನಮ್ಮ ಶಿಕ್ಷಣದ ಸ್ವರೂಪವನ್ನು ಯೋಜಿಸತಕ್ಕದ್ದು

ಮೋಹನದಾಸ ಕರಮಚಂದ ಗಾಂಧಿ.

# "ಬಾಲಮಿತ್ರ"

ಎಂಬ ಮಾಸಿಕ ಪುಸ್ತಕವು ಜನವರಿ (೧೯೩೦) ದಿಂದ ಒಳ್ಳೇ ರೂಪ ದಿಂದ ಹೊರಡುತ್ತಿರುವದು. ಇದು ವರೆಗೆ ೧೨ ಚಿತ್ರಗಳು ೧೩ ಯಂತ್ರಗಳು ೧೭ ಚಲೋ ಕತೆಗಳು, ೧೨ ಐತಿಹಾಸಿಕ, ೯ ಶಾಸ್ತ್ರೀಯ ಸಂಗತಿಗಳು; ೯ ನಿಬಂಧಗಳು ಇದಲ್ಲದೆ ಪ್ರತಿಸಾರೆ ನಗೆ ಮಾತು, ತಿಂಗಳ ಸುದ್ದಿ, ಒಗಟು ಕೂಟ ಪ್ರಶ್ನೆಗಳು ಬರುವವು. ಇಂತಹ ಉಪಯುಕ್ತ ಮಾಸಿಕ ಕಡಿಮೆ ಬೆಲೆಯ ... ಮತ್ತೊಂದು ಹೊರಡುವದಿಲ್ಲ. ಬೇಗ ಹೊಸ ವರ್ಷದ ಚಂದಾದಾರರಾಗಿರಿ.

ವಾರ್ಷಿಕ ಚಂದಾ ೧ ೮-೦ (ಟ. ಹಾ. ಸಹಿತ)

ವಿಳಾಸಃ—ಮ. ಮು. ಶೆಟ್ಟಿ ಹೆ. ಮಾ. ಪ್ರಾ. ಸ್ಕೂ.
ಟ್ರೇನಿಂಗ ಕಾಲೇಜ ಧಾರವಾಡ.

---

**ಕನ್ನಡಿಗರೇ!!** **ಓದಿರಿ ಆಶ್ರಯ ಕೊಡಿರಿ.**

## ಗದಗಿನಲ್ಲಿ

ಸಾಮಾಜಿಕ, ರಾಜಕೀಯ, ನೈತಿಕ, ಧಾರ್ಮಿಕ ವಿಷಯುಗಳನ್ನು ಪ್ರತಿಪಾದಿಸುವ

# ಕರ್ನಾಟಕ ಸಿಂಹ.

| | | |
|---|---|---|
| ವರ್ಗಣಿ ಸ್ಥಳೀಕರಿಗೆ ರು. ೩-೦-೦ | ಎಂಬ ಕನ್ನಡ ವಾರಪತ್ರಿಕೆಯು. | ವರ್ಗಣಿ ಪರಸ್ಥಳದವರಿಗೆ ಅಂಚೆ ವೆಚ್ಚ ಸಹಿತ ರು. ೩ ೧೨-೦ |

ಇವತ್ತಿನಿಂದ ಮೂರು ತಿಂಗಳ ಒಳ ಹೊರಗೆ ಹೊರಡುವದು ಮೇಲೆ ನಿವೇದಿಸಿದ ವಾರಪತ್ರಿಕೆಯು ಬಹಳ ದಿವಸದಿಂದ ಭಾಷಾ ಸೇವೆಯನ್ನು ಮಾಡುತ್ತಿದ್ದ ಹಾಗೂ ಸ್ವತಃ ಪತ್ರ ಧುರೀಣರಾದ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಬಹುಮಾನಗಳನ್ನು ಪಡೆದ ಮಿ|| ಚಿತ್ರಹುರಾವ ಕೃಷ್ಣರಾವ ತಾಮಾಲಗೇರಿ ಇವರ ಸಂಪಾದಕತ್ವದಲ್ಲಿ ಹೊರಡುವದಿದ್ದು, ಬಾಲ ವೃದ್ಧರಿಗೆ ಸಹ ತಿಳಿಯುವಂಥ ಶೈಲಿಯಲ್ಲಿ ... ಲೇಖಗಳನ್ನು ಅದರಲ್ಲಿ ಕೊಡುವೆವು. ಗ್ರಾಹಕರು ತಮ್ಮ ಸಂಪೂರ್ಣ ಹೆಸರನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಬೇಕಾಗಿ ನಮ್ಮ ಸವಿನಯ ವಿನಂತಿ ಇರುತ್ತದೆ.

**ವಿಳಾಸಃ—ಶಾಂತಪ್ಪಾ ಶಿವೋಜೆಪ್ಪಾ ಬಲಗುಂದಿ**
**ಮಾಲಕ ಸ್ವಮತ ಪ್ರೆಸ್ ಗದಗ. ಜಿಲ್ಲಾ ಧಾರವಾಡ.**

---

## ಜಾಹೀರಾತು

ಆ. ಮುತಾಲಿಕ ಹಂಗಾಮಿ ಮ್ಯುನಿಸಿಪಾಲಿಟಿ ಕಚೇರಿಯಿಂದ—

ಯಾವತ್ತು ಜನರಿಗೆ ತಿಳಿಸುವದೇನಂದರೆ- ಮುಂದ ಸಾರಿ ಚಾಲು ಸಾಲ ಸ್ಟ್ರೀಟ ರಾಜ ಬಾಗ ದೇವರ ಊರು ತಾ|| ೧೬-೩-೧೯೩೩ ನೇ ದಿವಸ ಆಗುತ್ತಿದ್ದ ಲೇ ಬಾಬತು ಪಟ್ಟಿ ಪ್ರತಿ ವರ್ಷದಂತ ನಂತರಗಳನ್ನು ಕಟ್ಟಿ ತಾರೀಖು ೧೭-೩-೧೯೩೩ ನೇ ರಾತ್ರಿ ಘಂಟೆ ೧೨ ರಿಂದ ತಾರೀಖು ... ರಾತ್ರಿ ೧೨ ಘಂಟೆಯವರೆಗೆ ದರ ಒಬ್ಬ ಮನುಷ್ಯನಿಗೆ ೧ ಆಣೆಯಂತೆ ಕರ ವಿದ್ದು ಇದನ್ನು ೦-೩-೦ ಮಾಡಿ ಮಂಜೂರಿಗೆ ಕಳಿಸಿರುತ್ತದೆ. ಮಂಜೂರ ಬಂದ ವರದಂತೆ ಮುನಸಿಪಾಲ್ಟಿಯಿಂದ ಸರಕಾರು ವಸೂಲು ಮಾಡುವದರಲ್ಲಿ ಬರುವದು. ಯಾತ್ರೆಯಲ್ಲಿ ನೀರಿನ ಪೂರೈಕೆ ವಿಪುಲವಾಗಿದ್ದು ನಳಗಳ ಸೋಯಿ ಮಾಡಲ್ಪಟ್ಟಿದೆ. ಅಲ್ಲಿ ಆಜುಬಾಜು ಗ್ರಾಮಗಳಲ್ಲಿಯೂ ರೋಗ ವಗೈರೆ ಇರುವದಿಲ್ಲ ತಿಳಿಯುವದು.

ನವಲಗುಂದ. ತಾ. ೨೮|೧|೧೯೩೩. B S. Patil ಪ್ರೆಸಿಡೆಂಟ ಮ್ಯು. ಮುನಸಿಪಾಲ್ಟಿ.

---

# ನೋಟೀಸು

ಮ್ಯುನಸಿಪಾಲಿಟಿ ನವಲಗುಂದ ಮುನಸಿಪಾಲಿಟಿ ಕಚೇರಿಯಿಂದ—

ಯಾವತ್ತು ಜನರಿಗೆ ತಿಳಿಸುವದೇನಂದರೆ- ಸನ್ ೧೯೩೩-೩೪ ನೇ ಸಾಲಿನ ಮಾರ್ಕೆಟ ತಿಂಗಳ ತಾರೀಖು ೧೫ ರಿಂದ ಸರಕಾರು ೩೦ ರವರೆಗೆ ಯಾವ ಸಾಲಿನಲ್ಲಿ ಪ್ರಿ ಬಜಾರಗಳನ್ನು ಲೀಲಾವು ಮಾಡುವ ಅಗತ್ಯದ ಸರಿ ಬಾರಿಕ ಜಕಾತಿಯಿಂದ ವಸೂಲಲ್ಲಿ (೧) ಹಂದಾ ಪಟ್ಟಿ ಪಾಲು. (೨) ಗ್ಯಾಸ ಬಿಂದಿಗೆ ಮತ್ತು ... ಪತ್ರಗಳ ಮತ್ತೆ ಬಾಬತುಗಳು ತಾರೀಖು ೮-೨-೧೯೩೩ ನೇ ದಿವಸ ಮಧ್ಯಾಹ್ನ ೧ ಘಂಟೆಕ್ಕೆ ಪ್ರೆಸಿಡೆಂಟ ಸಾಹೇಬರವರ ಸಮಕ್ಷಮ ಜಾಹೀರ ಲಿಲಾವು ಮಾಡುವದರಲ್ಲಿ ಬರುವದು. ಮಾತ್ರ ಅರ್ಜಂಟ ಮತ್ತು ಮುಂಜೂರ ಮಾಡುವದರಲ್ಲಿ ಬರುವದು.

ಲಿಲಾವಿನ ಶರ್ತುಗಳು ಲಿಲಾವಿನ ವೇಳೆಕ್ಕೆ ಓದಿ ಹೇಳುವದರಲ್ಲಿ ಬರುವದು. ತಿಳಿಯುವದು,

ನವಲಗುಂದ. ತಾ|| ೨೦|೧|೧೯೩೩ B S. Patil ಪ್ರೆಸಿಡೆಂಟ ಮ್ಯು. ಮುನಸಿಪಾಲ್ಟಿ.

---

# ನೋಟೀಸು

ಮ್ಯುನಸಿಪಾಲಿಟಿ ನವಲಗುಂದ ಮುನಸಿಪಾಲಿಟಿ ಕಚೇರಿಯಿಂದ

ಯಾವತ್ತು ಜನರಿಗೆ ಈ ನೋಟೀಸಿನಿಂದ ತಿಳಿಸುವದೇನಂದರೆ ದರ ಸಾಲ ಮಾಮೂಲ ರೀತಿಯಲ್ಲಿ ಜಕಾತಿ ವಸೂಲ ಮಾಡುವ ಹಕ್ಕು ಬರುವ ೧೯೩೩. ಸಾಲ ೧೯೩೪ ರ ವರೆಗಿನ ಲಿಲಾವಿನಿಂದ ಗುತ್ತಿಗೆ ಕೊಡುವದರಲ್ಲಿ ಬರುವದು. ಸದರ ಗುತ್ತಿಗೆ ಲಿಲಾವ ಮಾಡುವದಕ್ಕೆ ತಾರೀಖು ೧೦-೩-೧೯೩೩ ನೇ ತಾರೀಖಿನ ದಿವಸ ನವಲಗುಂದ ಮುನಸಿಪಲ ಆಫೀಸಿನಲ್ಲಿ ಮಧ್ಯಾಹ್ನ ೩ ಘಂಟೆಕ್ಕೆ ಮುನಸಿಪಾಲಿಟಿಯ ಪ್ರೆಸಿಡೆಂಟರ ಸಮಕ್ಷಮ ಜಾಹೀರ ರೀತಿ ಲಿಲಾವ ಮಾಡುವದರಲ್ಲಿ ಬರುವದು. ಲಿಲಾವಿನಲ್ಲಿ ಬೇಕಾಕ್ಕವರು ತಮ್ಮ ಠೇವ ಮಾಡುವದಾದರ ಮಾಮೂಲಗಾರ ಇವರ ಕಡೆಯಿಂದ ತಿಳಿದು ... ಲಿಲಾವಿನ ಶರ್ತುಗಳು ಲಿಲಾವಿನ ವೇಳೆಕ್ಕೆ ಓದಿ ಹೇಳಲ್ಪಡುವವು ತಿಳಿಯಬೇಕು ತಾರೀಖು

M I- Gous sahib Khudavanda
Vice President
B- S. Patil
President,

---

ಈ ಪತ್ರವನ್ನು ಮಿ|| ಗುಂಡೇರಾವ ರಾಮಚಂದ್ರ ಮುನವಳ್ಳಿಕರ ಇವರು ಶಕ್ತಿ ವಿಜಾಪೂರ ಗ್ರಾಮಾಧಿಕಾರಿ ಮುದ್ರಾಲಯದಲ್ಲಿ ಮುದ್ರಿಸಿ, ಮಾಲಕ ಶ್ರೀನಿವಾಸ ರಾಘವೇಂದ್ರ ಮಂಗಳವೇಢೇ ಬಾಗಲಕೋಟ ಇವರ ಗೋಸ್ಕರ ವಿಜಾಪೂರದಲ್ಲಿ ಪ್ರಸಿದ್ಧ ಮಾಡಿದರು.

ಶ್ರೀಯುತ ಭಾರತ.

ವಾರ್ಷಿಕ ವರ್ಗಣಿ ರೂ. ೪-೦-೦
ಆರು ತಿಂಗಳಿಗೆ ,, ೨-೦-೦
ಬಿಡಿ ಸಂಚಿಕೆ ೦-೧-೩
ಮಾದರಿ ಸಂಚಿಕೆ ಬೇಕಾದವರು
೦-೧-೬ ತಿಕೀಟ ಕಳಿಸಬೇಕು

ಶ್ರೀ.

# ಕನ್ನಡ ನವಜೀವನ

REGISTERED No B 1589.

ಜಾಹೀರಾತಿನ ದರಃ-

'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂಪಾಯಿ ಕಾಯಮು ಜಾಹೀರಾತಗಳ ಬ ಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ಠರಾ ಯಿಸಿ ಕೊಳ್ಳಬೇಕು.

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾಷಾಂತರಿಸುವದೇ ಈ ವಾರ ಪತ್ರಿಕೆಯ ಮುಖ್ಯೋದ್ದೇಶವು

ವರ್ಷ ೧ | ಬಾಗಲಕೋಟ ಪೌಷ್ಯ ವದ್ಯ ೧೪ ಶಕೆ ೧೮೪೩. ಗುರುವಾರ ತಾ. ೨೬ ನೇ ಜಾನೇವಾರಿ ೧೯೨೨ ಇಸ್ವಿ. | ಸಂಚಿಕೆ ೧

## ಟಿಪ್ಪಣಿಗಳು

### ಮಾಲವೀಯ ಪರಿಷತ್ತು.

ಒಂದು ದೃಷ್ಟಿಯಿಂದ ನೋಡಿದರೆ ಮಾಲವಿಯಾ ಪರಿಷತ್ತು ಜಯಶಾಲಿಯಾಯಿತು. ಇನ್ನೊಂದು ದೃಷ್ಟಿಯಿಂದ ನೋಡಿದರೆ ಜಯಶಾಲಿಯಾಗಲಿಲ್ಲ. ಈಗಿನ ಕಠಿಣ ಪ್ರಸಂಗವನ್ನು ಶಾಂತ ರೀತಿಯಿಂದ ದೂರ ಮಾಡಬೇಕೆಂಬ ಉದ್ದೇಶದಿಂದ ಸಭಿಕರೆಲ್ಲರೂ ಒಳ್ಳೇ ಕುತೂಹಲರಾಗಿ ಬಂದ ಸಂಗತಿಯೂ ಬೇರೆ ಬೇರೆ ಮತದ ಜನರು ಒಂದೇ ಕಡೆಗೆ ಸಭೆ ಸೇರಿಕೊಂಡ ಸಂಗತಿಯೂ ನಮಗೆ ಯಶಸ್ಸನ್ನು ಕೊಡುತ್ತಿವೆ. ಹಲ ಕೆಲವು ಸಂಗತಿಗಳು ನಿರ್ಣಯಿಸಲ್ಪಟ್ಟಿದ್ದರೂ ಕೂಡ ಸದ್ಯಃಸ್ಥಿತಿಯ ನಿಜವಾದ ಮರ್ಮವನ್ನು ಎಲ್ಲ ಸಭಿಕರೂ ತಿಳಿದು ಕೊಂಡಿಲ್ಲವೆಂದು ನನಗೆ ಭಾಸವಾಗಿದೆ ಈ ದೃಷ್ಟಿಯಿಂದ ಆ ಪರಿಷತ್ತಿಗೆ ಜಯ ದೊರೆಯಲಿಲ್ಲವೆಂದೆನ್ನ ಬೇಕಾಗುತ್ತದೆ. 'ರಾವುಂಡ ಟೇಬಲ' ಪರಿಷತ್ತಿನಗಿಂತ ಭಾಷಣ ಸ್ವಾತಂತ್ರ್ಯ, ಸಂಘಸ್ವಾತಂತ್ರ್ಯ ಮತ್ತೂ ಲೇಖನ ಸ್ವಾತಂತ್ರ್ಯಗಳು ಹೆಚ್ಚಿಗೇ ಮಹತ್ವವಾದವುಗಳೆಂಬದನ್ನು ಸಾರ್ವಜನಿಕ ಮತನಂತೆ, ಹಕ್ಕಿನಿಂದ ಪ್ರಸ್ಥಾಪಿಸುವದನ್ನು ಬಿಟ್ಟು, ರಾವುಂಡ ಟೇಬಲ್ ಪರಿಷತ್ತಿನ ಬಗ್ಗೆಯೇ ಸಭಿಕರು ಉತ್ಸುಕರಾಗಿದ್ದಂತೆ ತೋರಿತು. ಅಸಹಯೋಗ ಚಳವಳಿಯ ಪದ್ಧತಿಯ ಬಗ್ಗೆ ಎಷ್ಟೋ ಮತಭೇದವಿದ್ದರೂ ಅವನ್ನು ಲಕ್ಷಿಸದೆ, ಜನರ ಜನ್ಮ ಸಿದ್ಧವಾದ ಸ್ವಾತಂತ್ರ್ಯದ ಹಕ್ಕನ್ನು ಕಾದಿಡುವದಕ್ಕಾಗಿ ಗಟ್ಟಿ ಮನಸ್ಸಿನಿಂದ ತಮ್ಮ ನಿಶ್ಚಿತವಾದ ಧೋರಣವನ್ನು ಸ್ವತಂತ್ರ ಮತವಾದಿಗಳು ಸಾರಿ ಹೇಳುವರೆಂದು ನಾನು ನಿರೀಕ್ಷಿಸುತ್ತಲಿದ್ದೆ. ಅದ್ದರಿಂದಲೇ ಆ ಹಕ್ಕನ್ನು ಅವಶ್ಯ ಬಿದ್ದರೆ ಸವಿನಯ ಕಾಯಿದೆ ಭಂಗದಿಂದ ಸಂರಕ್ಷಿಸಿಕೊಳ್ಳುವರೆಂದೂ ತಿಳಿದಿದ್ದೆನು ಆದರೆ ಈ ವಿಷಯದಲ್ಲಿ ಸಭಿಕರು ಮನಸ್ಸನ್ನು ಹಾಕಲಿಲ್ಲ 'ರಾವುಂಡ ಟೇಬಲ ಪರಿಷತ್ತಿನ ಬಗ್ಗೆಯೇ ವಾದವು ನಡೆಯಿತು.

(ಈ ಪರಿಷತ್ತಿನಲ್ಲಿ ನಿರ್ಣಯಿಸಲ್ಪಟ್ಟ ಠರಾವುಗಳನ್ನು ಮಹಾತ್ಮರು ಸಾರಾಂಶ ರೂಪದಿಂದ ಮುಂದೆ ಬರೆದಿದ್ದಾರೆ. ಈ ಠರಾವುಗಳು ಎಲ್ಲ ಕನ್ನಡ ವಾರ ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿದ್ದರಿಂದಲೂ ಬೇರೆ ಮಹತ್ವದ ಮಹಾತ್ಮರ ಲೇಖಗಳನ್ನು ಕೊಡಬೇಕಾಗಿದ್ದರಿಂದಲೂ ಆ ವಿಷಯವನ್ನು ಕನ್ನಡ ನವಜೀವನದಲ್ಲಿ ಪ್ರಸಿದ್ಧಿಸಿಲ್ಲ.)

ಸಂಪಾದಕ ಕ. ನ.

'ರಾವುಂಡ ಟೇಬಲ" ಪರಿಷತ್ತು ನೆರವೇರಿಸಲ್ಪಟ್ಟರೂ ಸಹ ನಾವು ಸವಿನಯ ಕಾಯಿದೇ ಭಂಗದ ಸಿದ್ಧತೆಯನ್ನು ತ್ವರೆಯಿಂದ ಮಾಡಲೇಬೇಕು ಯಾಕಂದರೆ ಅದು ಯಾರಿಗೂ ಮುರಿ ಬಡೆಯಲಿಕ್ಕೆ ಬಾರದಂಥ ನಮ್ಮ ಹಕ್ಕು ಇರುತ್ತದೆ. ಕಾಯಿದೆ ಭಂಗದ ಸಿದ್ಧತೆಯಂದರೆಃ —

೧ ಸ್ವಯಂ ಸೇವಕರನ್ನು ಕಲೆ ಹಾಕಬೇಕು.

೨ ಸ್ವದೇಶೀ ವ್ರತವನ್ನು ಜೋರಿನಿಂದ ಪ್ರಚಾರದಲ್ಲಿ ತರಬೇಕು.

೩ ಅಸ್ಪೃಶ್ಯತೆಯನ್ನು ದೂರ ಮಾಡಬೇಕು.

೪ ಆಚಾರ ವಿಚಾರ ಕೃತಿಗಳಲ್ಲಿ ಅಹಿಂಸೆಯೇ ವ್ಯಾಪಿಸಿ ಗೊಳ್ಳುವಂತೆ ಮಾಡಬೇಕು.

೫ ಎಲ್ಲ ತರದ ಜಾತಿ ಪಂಥಗಳಲ್ಲಿ ಐಕ್ಯವು ನೆಲೆಗೊಳ್ಳಬೇಕು.

ಖಾದೀ ಅರಿವೆಯನ್ನು ಧರಿಸದೇ ಇದ್ದಂಥ ಸಂಪೂರ್ಣವಾಗಿ ಅಹಿಂಸಾ ತತ್ವದಲ್ಲಿ ವಿಶ್ವಾಸವಿರದ ಅಥವಾ ಹಿಂದೂ ಜಾತಿಯವರಿದ್ದ ಪಕ್ಷದಲ್ಲಿ ಅಸ್ಪೃಶ್ಯತೆಯು ಮಾನವೀ ಧರ್ಮದ ದೊಡ್ಡ ಅಪರಾಧವೆಂದು ತಿಳಿಯದೇ ಇದ್ದಂಥ ಅನೇಕ ಜನರನ್ನು ಸ್ವಯಂ ಸೇವಕರ ಪಥಕದಲ್ಲಿ ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿಯೂ ಸೇರಿಸಿಕೊಳ್ಳಹತ್ತಿರುವರೆಂದು ನಾನು ಕೇಳುತ್ತೇನೆ ನಾವು ಗೊತ್ತುಪಡಿಸಿಕೊಂಡಂಥ ನಿರ್ಣಯಗಳನ್ನು ನಾವೇ ಪಾಲಿಸದಿದ್ದರೆ ತೀರಿತು ಅದರಲ್ಲಿ ಕೊಂಚ ತಪ್ಪು ತಡೆಗಳಾದರೂ ನಮ್ಮ ವಿಳಿಗೆಯನ್ನೇ ಕುಂಠಿಸುವದು ನಾವು ಶುದ್ಧವಾದ ಅಂತಃಕರಣದಿಂದಲೇ ಕೆಲಸ ಮಾಡಿದರೂ ಸಹ, ಈಶ್ವರನು ಸಂತುಷ್ಟನಾಗುವನು ಕೆಟ್ಟ ಬುದ್ಧಿಯಿಂದ ಬಹಳ ಕಾರ್ಯವಾದರೂ ಅವನು ಸಂತುಷ್ಟನಾಗನು. ಮುಸಲ್ಮಾನನೇ ಆಗಲೀ ಹಿಂದುವೇ ಆಗಲಿ ಬರಿ ಮಾತಿನಿಂದ ಸ್ವರ್ಗವನ್ನು ಪಡೆಯಲಾರನು. ಒಳ್ಳೇ ಶೀಲವಂತನಾದ ಮುಸಲ್ಮಾನನಿದ್ದರೆ

ಇಸ್ಲಾಮ ಧರ್ಮವೇನು ಅವನಗಿಂತ ಹೆಚ್ಚಿನದೆನಿಸದು. ಸಾವಿರಗಟ್ಲೇ ಜನರು ಹಿಂದೂ ಧರ್ಮದ ಅನುಯಾಯಿಗಳಾಗಿದ್ದರೂ ಕೂಡ ತಮ್ಮ ಧರ್ಮದಂತೆ ನಡಿಯದೇ ಧರ್ಮಕ್ಕೆ ಕಲಂಕವನ್ನುಂಟು ಮಾಡಿದ್ದಾರೆ. ಸತ್ಯವಂತನೂ ಪೂರ್ಣಪ್ರಜ್ಞನೂ ಆದ ಹಿಂದೂ ಧರ್ಮಿಯು ಒಂಟಿಗನಾಗಿದ್ದರೆ ಸಾಕಿದೆ; ಅಖಂಡ ಜಗತ್ತು ಹಿಂದು ಧರ್ಮದ ಮೇಲೆ ಏರಿ ಬಂದರೂ ಸಹ ಯಾವಾಗಲೂ ಅದನ್ನು ರಕ್ಷಿಸ ಬಲ್ಲನು ಅದರಂತೆಯೇ ಲಕ್ಷಾವಧಿ ಜನರು ಹೆಸರಿಗೆ ಅಸಹಯೋಗಿಗಳಾಗಿರುವದರಕಿಂತ ಸತ್ಯವಂತನೂ ಪೂರ್ಣ ಪ್ರಜ್ಞನೂ ಆದ ಅಸಹಯೋಗಿಯು ಒಬ್ಬನಾದರೂ ಸಿದ್ಧನಾಗುವದು ಯಾವಾಗಲೂ ಲೇಸು. ನಮ್ಮಲ್ಲಿಯೂ ನಮ್ಮ ನೆರೆ ಹೊರೆಯವರಲ್ಲಿಯೂ ವಿನಯ ಅಂದರೆ ಸತ್ಯ ಮತ್ತು ಅಹಿಂಸಾ ತತ್ವ ನೆಲೆಗೊಳ್ಳುವರಿತೆ ಮಾಡುವದೇ ಸವಿನಯ ಕಾಯದೇ ಭಂಗದ ಮೇಲಾದ ಸಿದ್ಧತೆಯು.

---

**ತೆರಿಗೆಯನ್ನು ಕೊಡಬಾರದು.**

ಸರಕಾರದವರಿಗೆ ಕೊಡತಕ್ಕ ತೆರಿಗೆಯನ್ನು ಬಂದು ಮಾಡಿಸಿ ಸಮುದಾಯಕ ಕಾಯದೇ ಭಂಗವನ್ನು ಈಗಾಗಲೇ ಪ್ರಾರಂಭಿಸಬೇಕೆಂದು ಕೆಲವು ಭಾಗಗಳಲ್ಲಿ ಜನರು ಆತುರರಾಗಿದ್ದಾರೆಂಬದನ್ನು ನಾನು ಕಂಡಿದ್ದೇನೆ. ಇಂಥ ಕಠಿಣವಾದ ಸಾಹಸದ ಕಾರ್ಯವನ್ನು ಪ್ರಾರಂಭಿಸುವ ಮೊದಲು ಜನರು ಬಹಳೇ ಜಾಗರೂಕರಾಗಿರತಕ್ಕದ್ದೆಂಬದನ್ನು ನಾನು ಆಗ್ರಹದಿಂದ ಹೇಳಬೇಕಾಗಿದೆ ಹಿಂಸಾಕೃತಿಗಳು ಆದರೆ ಆಗಲಿ ಎಂದು ನಾವು ಉದಾಸೀನರಾಗಕೂಡದು; ಮತ್ತೂ ಹೊಲದಲ್ಲಿಯ ಪೈರನ್ನಾಗಲಿ ದನಕರಗಳನ್ನಾಗಲಿ ಇಲ್ಲವೇ ಇತರ ಬೇರೆ ವಸ್ತುಗಳನ್ನಾಗಲಿ ಸರಕಾರವು ಅಪಹಾರ ಮಾಡಿಕೊಂಡು ಹೋದದ್ದನ್ನು ಕಂಡಾಗ್ಯೂ ಜನರೆಲ್ಲರೂ ಯತ್ಕಿಂಚಿತ್ತಾದರೂ ಧೈರ್ಯಗುಂದದೇ ತಮ್ಮ ಮನಸ್ಸನ್ನು ಬಿಗಿ ಹಿಡಿಯಲಿಕ್ಕೆ ಸಮರ್ಥರಿರುವರೋ ಹೇಗೆಂಬದನ್ನು ನಾವು ಮೊದಲು ಕಂಡು ಹಿಡಿಯಬೇಕು. ತೆರಿಗೆಯನ್ನು ಬಂದು ಮಾಡಿದರಾಯಿತು ಸರಕಾರವನ್ನು ನಿರ್ಮೂಲವಾಗಿ ಕಿತ್ತಿ ಹಾಕುವ ಕಾರ್ಯವು ತಾನೇ ಸಿದ್ಧಿ ಹೊಂದುವದು ನಾವು ಜಯಶಾಲಿಗಳಾಗುವಂತೆ ತೆರಿಗೆಯನ್ನು ಬಂದು ಮಾಡುವ ಶಕ್ತಿಯೂ ಶಿಸ್ತೂ ನಮ್ಮಲ್ಲಿ ಈ ವರೆಗೆ ಬಂದಿಲ್ಲೆಂಬದನ್ನೂ ನಾನು ಚನ್ನಾಗಿ ಬಲ್ಲೆ. ಇಡೀ ಹಿಂದುಸ್ಥಾನದಲ್ಲಿ ಒಂದಾದರೂ ತಾಲೂಕ ಈ ವರೆಗೆ ತೆರಿಗೆಯನ್ನು ಬಂದು ಮಾಡುವಷ್ಟು ಸಾಮರ್ಥ್ಯವನ್ನು ತಂದು ಕೊಂಡಿಲ್ಲ; ಬರ್ಡೋಲಿ ಆನಂದ ತಾಲೂಕಗಳು ಮಾತ್ರ ಕದಾಚಿತ್ ಇದಕ್ಕೆ ಅಪವಾದಗಳಾಗಬಹುದು. ಇಂಥ ತಾಲೂಕಗಳಲ್ಲಿ ನೂರಕ್ಕೆ ಐವತ್ತರಕಿಂತಲೂ ಹೆಚ್ಚಿಗೇ ಜನರು ಅಸ್ಪೃಶ್ಯತೆಯ ಪಾಪ ಕರ್ಮದಿಂದ ದೂರರಾಗಿರಬೇಕು; ತಮ್ಮ ತಾಲೂಕಿನಲ್ಲಿಯೇ ಹುಟ್ಟಿದ ಖಾದೀ ಅರಿವೆಯನ್ನು ಹೊತ್ತಿರಬೇಕು, ಆಚಾರ ವಿಚಾರ ಕೃತಿಗಳಲ್ಲಿ ಅಹಿಂಸಾ ಧರ್ಮವನ್ನು ಪಾಲಿಸಿರಬೇಕು ಮತ್ತೂ ತಮ್ಮ ನೆರೆಹೊರೆಯರಾದವರು ಅಸಹಕಾರಿಗಳೇ ಇರಲಿ ಸಹಕಾರಿಗಳೇ ಇರಲಿ ಅವರ ಸಂಗಡ ಒಳ್ಳೇ ಗೆಳತನದಿಂದಿರಬೇಕು. ಅವಶ್ಯಕವಾದ ಈ ತರದ ಸಿದ್ಧತೆಯಿಲ್ಲದೆ ತೆರಿಗೆಯನ್ನು ಬಂದು ಮಾಡುವದೆಂದರೆ ಅಕ್ಷಮ್ಯವಾದ ಹುಚ್ಚತನವೇ ಸರಿ ಅದರಿಂದ ನಮಗೆ ಸ್ವರಾಜ್ಯವು ದೊರೆಯುವದಿಲ್ಲವೆಂಬದಿಷ್ಟೇ ಅಲ್ಲ ಆದರೆ ಯಾವ ರಾಜ್ಯವೂ ದೊರೆಯುವದಿಲ್ಲ. ಆದ್ದರಿಂದ ಈ ವಿಷಯದಲ್ಲಿ ನಾನು ಅನೇಕ ಸಾರೆ ಎಚ್ಚರಿಕೆಯನ್ನು ಕೊಟ್ಟಿದ್ದರೂ ಪುನಃ ಇನ್ನೊಂದು ಸಾರೆ ಎಚ್ಚರವನ್ನೀಯದೇ ಇರೆನು. ಮುಖ್ಯವಾಗಿ ನನ್ನ ಸ್ವಂತ ನೇತೃತ್ವದ ಕೆಳಗೆ ಮಾತ್ರ ಸಮುದಾಯಕ ಸವಿನಯ ಕಾಯಿದೇ ಭಂಗದ ಕಾರ್ಯವು ನಡೆಯತಕ್ಕದ್ದು. ಇನ್ನು ದಿಲ್ಲಿಯಲ್ಲಿ ನಿರ್ಣಯಿಸಲ್ಪಟ್ಟ ಕರಾರುಗಳನ್ನು ಪಾಲಿಸುವ ಸಾಮರ್ಥ್ಯವು ನಮ್ಮಲ್ಲಿ ಇರದೇ ಹೋದರೆ ಸರ್ವಥಾ ಅದರ ಗೊಡವೆಗೆ ಹೋಗತಕ್ಕದ್ದಲ್ಲ.

(ಯಂಗ ಇಂಡಿಯಾ)

ಮೋಹನದಾಸ ಕರಮಚಂದ ಗಾಂಧಿ.

---

## ಲೇಖನ ಸ್ವಾತಂತ್ರ್ಯ

ಜನತೆಯಲ್ಲಿ ಅನುಕರಣೀಯವಾದ ವಿಶ್ವಾಸವನ್ನು ಹುಟ್ಟಿಸಿ, ಅದರ ಬೇಡಿಕೆಯ ಸ್ವಾತಂತ್ರ್ಯವನ್ನೂ ಸವಲತ್ತಯನ್ನೂ ಕೊಡಲಿಕ್ಕೆ ಸುಧಾರಣೆಗಳೇ ಕಾರಣವೆಂದು ನಂಬಬಡಿಯುವ ಸರಕಾರದ ಪ್ರಯತ್ನಗಳು ಸಧ್ಯದ ಪರಿಸ್ಥಿತಿಯ ಉಪಸ್ಥಿತಿಗಳ ಹೆಚ್ಚಾಟದಿಂದ ಕಳೆಗುಂದುತ್ತಲಿವೆ. ಎಂಥ ಬಿಕ್ಕಟ್ಟಿನ ಪ್ರಸಂಗಗಳಿಗೂ ಎದುರಾಗಿ ನಿಲ್ಲುವದಕ್ಕೆ ಬಲವುಳ್ಳ ಸುಧಾರಣೆಗಳೇ ನಿಜವಾದ ಅಭಿಮಾನಪಡುವ ಮಾತುಗಳು. ಮನನೋಯುವಂಥ ಭಾಷಣಗಳಿದ್ದರೂ ಹಾಗೆಯೇ ಭಾಷಣಮಾಡುವ ಅಧಿಕಾರವೇ ಭಾಷಣ ಸ್ವಾತಂತ್ರ್ಯವು. ಭಾಷಣ ಸ್ವಾತಂತ್ರ್ಯದಲ್ಲಿ ಮುಖ್ಯವಾದ ಅಂಗವು ಮುದ್ರಣವು. ಭಾಷಣಸ್ವಾತಂತ್ರ್ಯದಿಂದ ವಸ್ತುಸ್ಥಿತಿಯನ್ನು ಕಂಡಂತೆ ಕಟುತ್ವ ಶಬ್ದಗಳಿಂದ ಟೀಕಿಸಿ, ಮುದ್ರಿಸಲು ಅಧಿಕಾರವು ಹುಟ್ಟುತ್ತಾಗೆ. ಕೆಳಗೆ ಸಹಿಮಾಡದೆ ಎಷ್ಟೋಜನರ ಕಳಿಸುವ ಸುದ್ದಿಗಳ ವಿಮರ್ಶೆಯನ್ನು ಮಾಡಿ ಅವುಗಳನ್ನಾದರೂ ಮುದ್ರಿಸಬಹುದು. ಇಂತಹ ಪ್ರಸಂಗಗಳಲ್ಲಿ ಯಾವತರದ ಅವ್ಯಾಪಾರಗಳಾಗಕೂಡದು. ನಿಜವಾದ ಅಪರಾಧಿಯನ್ನೇ ಶಿಕ್ಷೆಗೆ ಗುರಿಮಾಡಲಿಕ್ಕೆ ಬೇಕು. ಅವರ ಸಹಿಗಳಿಲ್ಲದ ಲೇಖಗಳಿಂದ ಮುದ್ರಣಕ್ಕೆ ಸಮಾಪ್ತಿಯನ್ನು ತರಕೂಡದು. ಈ ಎಲ್ಲ ಕ್ರಿಯಗಳು ಭಾಷಣ ಸ್ವಾತಂತ್ರ್ಯದಲ್ಲಿಯೇ ಅಡಕವಾಗಿರುವವು. ಸಂಘ ಸ್ವಾತಂತ್ರ್ಯವಾದರೂ ಇದೇ ಪ್ರಕಾರದ್ದು. ಜನಾಭಿಪ್ರಾಯಗಳನ್ನವಲಂಬಿಸುವ ಸಂಘಗಳು ರಾಜಕ್ರಾಂತಿಯ ತರುಣೋಪಾಯಗಳನ್ನು ಚರ್ಚಿಸಲಿಕ್ಕೆ ಬೇಕು.

ಹಿಂದುಸ್ಥಾನದ ಆಧುನಿಕ ರಾಜ್ಯಸೂತ್ರವು, ಜನತೆಯ ಅಭಿಪ್ರಾಯಗಳನ್ನು ನೆಲೆಗೊಳಿಸುವ ರಥದ ಮೂರು ಬಲವುಳ್ಳ ಚಕ್ರಗಳನ್ನು ಮುರಿದು ಮೂಲೆಗೊತ್ತಬೇಕನ್ನುತ್ತದೆ. ಇದೇ ಅದರ ಕಡೆಯ ಪ್ರಯತ್ನವೆಂದು ಸಂತೋಷದಿಂದನ್ನಬೇಕಾಗಿದೆ. ಸ್ವರಾಜ್ಯ, ಖಿಲಾಫತ, ಪಂಜಾಬ ಈ ಮೂರು ಪ್ರಕರ್ಣಗಳಿಗಾಗಿ ಹೆಣಗಾಡುವದೇ ಈಗಿನ ಧರ್ಮಯುದ್ಧದ ಗುಟ್ಟು; ಬೇರೆಯಾವದೂ ಇಲ್ಲ.

(ಇಂಡಿಪೆಂಡೆಂಟ) ಪತ್ರವು ಇನ್ನು ಮುದ್ರಿಸಿ ಹೊರಡಲಾರದು. 'ಡೆಮೋಕ್ರಾಟ' ಪತ್ರವಂತೂ ನಾಮಶೇಷವಾಯಿತು. ಲಾಹೋರದ ಪ್ರತಾಪ ಮತ್ತು ಕೇಸರಿಯ ಮೇಲೆ ಈಗ ಖಡ್ಗಪ್ರಹಾರವಾಗುತ್ತಲಿದೆ. ಲಾಲಾಜೀಯವರ ಕಂದಮ್ಮನಂತಿರ್ದ ವಂದೇಮಾತರಮ್. ಪತ್ರವು ಆತರದ ಪ್ರಹಾರಗಳನ್ನು ೨೦೦೦ ರೂಪಾಯಿ ಹೊಣೆಯ ಘಾಯಿಂದ ಹಿಮ್ಮೆಟ್ಟಿದೆ. ಮೊದಲಿನ ಎಳೆ

ಡು ಪತ್ರಗಳ ಮುಂಚಿನ ಹೊಣೆಯನ್ನು ಪ್ರೆಸ್ ಅಕ್ಟವು ನುಂಗಿಬಿಟ್ಟಿತು. ಈಗ ಮಾಸಃ ಹತ್ತುದಿನಗಳಲ್ಲಿಯೇ ೧೦೦೦೦ ರೂಪಾಯಿಯ ಜಾಮೀನು ಹಣವನ್ನು ಹಾಜರ ಪಡಿಸಬೇಕು. ಇಲ್ಲವಾದರೆ, ಮುದ್ರಣ ಕಾರ್ಯವನ್ನು ಮುಗಿಸಬೇಕ." ಎಂದು ನೋಟೀಸು ಹೊರಟಿದೆ. ಈ ಹೊಣೆಯ ಹಣವನ್ನು ನಿರಾಕರಿಸುವರೆಂದು ನನಗೆ ನಂಬಿಗೆಯದೆ.

"ಅಗ್ರಾ ಮತ್ತು ಔಧ ಪ್ರಾಂತಗಳಲ್ಲಿಯೂ ಪಂಜಾಬ ಪ್ರಾಂತದಲ್ಲಿಯೂ ಸಂಭವಿಸುವ ಪ್ರಸಂಗಗಳೇ, ಮಿಕ್ಕಪ್ರಾಂತಗಳಲ್ಲಿ ಆ ಆ ಪ್ರಾಂತನಿವಾಸಿಗಳು ಈ ಪಿಡುಗನ್ನು ಹೊಡೆದೋಡಿಸಲಿಕ್ಕೆ ಪ್ರಯತ್ನಿಸದಿದ್ದರೆ, ತೀವ್ರವಾಗಿಯೇ ಈ ಪಿಡುಗು ಹಿಂದುಸ್ಥಾನ ತುಂಬೆಲ್ಲ ಸಂಭವಿಸಿ, ಪಸರಿಸುವದೆಂದು ನನಗೆ ತಿರುತಿರುಗಿ ಹೇಳಬೇಕಾಗುತ್ತದೆ.

ಮೊದಲನೆಯ ಉಪಾಯವೆಂದರೆ, ಎಲ್ಲ ಸಂಪಾದಕರು ಇಂಡಿಪೆಂಡೆಂಟ ಪತ್ರದ ಉದಾಹರಣೆಯನ್ನು ಮುಂದಿಟ್ಟುಕೊಂಡು ತಮ್ಮ ವಿಚಾರಗಳನ್ನು ಬರೆದು ಸಿದ್ಧಗೊಳಿಸುತ್ತಿರಬೇಕೆಂದು ನಾನು ಒತ್ತಾಯಮಾಡಬೇಕೆಂದಿಚ್ಛಿಸುವೆನು. ಸತ್ಯಕ್ಕಾಗಿ ಹೆಣಗಾಡುವ ಪ್ರತಿಯೊಬ್ಬ ಸಂಪಾದಕನು ತನಗೆ ತಿಳಿಸಿ ಹೇಳಬೇಕಾದ ಮಹತ್ವದ ಸಂಗತಿಗಳನ್ನು ತನ್ನ ದೇಹವು ಸ್ವತಂತ್ರದಿಂದಿರುವ ವರೆಗೆ, ಜನತೆಗೆ ತಿಳಿಸಲು ಯಾವನಿಂದಲೂ ನಿರ್ಬಂಧಿಸಲ್ಪಡನೆಂಬ ನನ್ನ ವಿಶ್ವಾಸವು. ಪ್ರಖ್ಯಾತರಾದ ಲೋಕಮಾನ್ಯರು ತಮ್ಮ ವಿಚಾರಗಳನ್ನು ಕೇಸರಿಯ ಮುಖಾಂತರವಾಗಿ ಸ್ಪಷ್ಟಮಾಡಿ ತೋರಿಸಿದ್ದರಕಿಂತಲೂ ಮಂಡಾಲೆಯಲ್ಲಿಯ ಕೋಟೆಯಲ್ಲಿದ್ದುಕೊಂಡು ಆ ಸುವಿಚಾರಗಳನ್ನು ಹೆಚ್ಚು ಸ್ಪಷ್ಟವಾಗಿಯೂ ಹೃದಯದ್ರಾವಕವಾಗಿಯೂ ಮಾಡಿ ತೋರಿಸಿರುವರು. ಕಾರಾಗೃಹವಾಸವು ಇವರ ಇಭ್ರತ್ತಿಯ, ಮಹಿಮೆಯನ್ನು ಸಾವಿರಾರು ಪಾಲು ಹೆಚ್ಚಿಸಿತು. ಇವರ ಭಾಷಣಗಳೂ, ಭಾಷಾ ವೈಖರಿಯು ಇವರ ಲೇಖನಿಯು ತುರಂಗದಿಂದ ಇವರು ಬಿಡುಗಡೆಯಾದಮೇಲೆ ಹೆಚ್ಚು ಸಾಮರ್ಥ್ಯವನ್ನು ಪಡೆದವು. ಜನತೆಯು ತಮ್ಮ ತಮ್ಮ ಜೀವಿಕಾಕಲ್ಪನೆಯನ್ನು ಕಾಣುವಳೆಂಬ ಅವಳ ಪವಿತ್ರವಾದ ದೃಢ ನಂಬಿಗೆಯಿಂದಲೇ ಇವರು ದೇಹವಿಟ್ಟಾಗ್ಯೂ ಕೂಡ ತಮ್ಮ ಪತ್ರವನ್ನು ಹಾಗೆಯೇ ಬರೆಯುತ್ತಲಿರುವರು. ಇವರು ಬಂಡುವೇಳೆ ಜೀವದಿಂದಿದ್ದರೆ ಇದಕ್ಕೂ ಹೆಚ್ಚಿನ ಪ್ರಗತಿಯನ್ನಿನ್ನೇನೂ ಮಾಡುತ್ತಿದ್ದಿಲ್ಲ. ಈ ನಿಶ್ಚಿತಾರ್ಥವನ್ನು ಕಂಡುಹಿಡಿಯುವಲ್ಲಿ ನನ್ನಂತೆ ಟೀಕಾತತ್ಪರತರು ತಪ್ಪು ತೆಗೆಯುವದರಲ್ಲಿ ಮಗ್ನರಾಗಬಹುದು. ಈಗ ಮಾತ್ರ ಎಲ್ಲಪ್ರಕಾರದ ಚರ್ಚಾತ್ಮಕಟೀಕೆಗಳೂ ಅಳಿದು ಹೋಗಿವೆ. ಲೋಕಮಾನ್ಯರ ಮಂತ್ರವೊಂದೇ ಲಕ್ಷೋಪಲಕ್ಷ ಹಿಂದನಿವಾಸಿಗಳ ಅಂತರ್ಗತವನ್ನು ಆಳುತ್ತಲಿದೆ. ತಮ್ಮ ಜೀವನ ಯಾತ್ರೆಯಲ್ಲಿಯೇ, ಆ ಮಹಾತ್ಮರ ಮಂತ್ರವನ್ನು ಉಚ್ಚರಿಸುತ್ತ ಇವರ ಚಿರಸ್ಥಾಯಕವಾದ ಶಿಲಾಮೂರ್ತಿಯನ್ನು ಸ್ಥಾಪಿಸುವದಕ್ಕೆ ಎಲ್ಲರೂ ನಿಶ್ಚಿತರಾಗಿದ್ದಾರೆ.

ಕಾರಣ ಮುದ್ರಣಮೂರ್ತಿಯನ್ನು ಅವಳ ಅಂಗಗಳಾದ ಮೊಳೆಗಳಿಂದ ಮೊದಲು ಮುರಿದೊಗೆಯೋಣ. ನಮ್ಮ ಕೈಗಳಗವು ನಮಗೆ ಬೇಕಾದಂಥ ಅಕ್ಷರಗಳ ಆಗರವಾಗಿರುವದು. ಅತುರತೆಯಿಂದ ಬರೆದು ಕೊಡುವ ಲೇಖನ ಪ್ರವೀಣರ ಹಸ್ತಗಳೇ ಮುದ್ರಿಕಾ ಯಂತ್ರವು. ನಮ್ಮ ದೇಹಾತ್ಮಿಕಾ ಮುದ್ರಣ ಯಂತ್ರವನ್ನು ನಮ್ಮ ನಿರಂಕುಶ ವಿಚಾರಗಳನ್ನು ವ್ಯಕ್ತಪಡಿಸುವಲ್ಲಿ, ನಮ್ಮ ಕೈಲಾದಮಟ್ಟಿಗೆ ನಾವು ಉಪಯೋಗಿಸಬೇಕು. ಮುದ್ರಣದ ಮುಖ್ಯಾಂಗಗಳನ್ನು ನಮ್ಮ 'ಪಿತೃವಂಶ' ಸರಕಾರವು ಸೆಳೆದೊಯ್ದರೂ ನಾವು ನಿರಾಶಕರಾಗಕೂಡದು.

ಕೈಬರಹದ ವರ್ತಮಾನ ಪತ್ರಗಳನ್ನು ಪ್ರಕಟಿಸುವದು ಈ ಪೀಡಾದೇಶಿಯಗಳ್ಗನುಕೂಲವಾದ ತರುಣೋಪಾಯವೆಂದು ನಾನು ಒಪ್ಪುತ್ತೇನೆ. ಮೊಳೆಜೋಡಿಸುವವನ ಕೈಯೊಳಗಿನ ಮೊಳೆಪಟ್ಟಿಯನ್ನೂ ಛಾಪಿಸತಕ್ಕತೋಲಿಯನ್ನು ನಾವು ದುರ್ಲಕ್ಷಿಸಬೇಕು.

ಏನಾದರೂ ಇದಕ್ಕು ಹೆಚ್ಚಿನ ಕಾರ್ಯವನ್ನು ಮಾಡಿ ತೋರಿಸಲಿಕ್ಕೆ ಬೇಕು. ಇಲ್ಲಿಯೂ ಸವಿನಯ ಅಜ್ಞಾಭಂಗ ವ್ರತವೆ ಬರುವದು. ಲೇಖನಸ್ವಾತಂತ್ರ್ಯ ಭಾಷಣ ಸ್ವಾತಂತ್ರ್ಯ ಮತ್ತು ಸಂಘಸ್ವಾತಂತ್ರ್ಯ ಈ ಮೂರು ಅವಯವಗಳೇ ಸ್ವರಾಜ್ಯಾಂಗನೆಯ ... ಮುಖ್ಯಾಂಗಗಳು. ಈ ಕಾಸುಬೆಲೆಯುಳ್ಳ ಸಂಗತಿಗಳಿಗೆ ನಾವು ಲಕ್ಷಗೊಟ್ಟರೆ, ಮುಂದೆ ನಮ್ಮಲ್ಲಿಯ ಕೋಶ ಬೆಳೆಬೆಳೆಸುವ ಪಂಜಾಬ, ಖಿಲಾಫತ, ಸ್ವರಾಜ್ಯ ಈ ಪ್ರಕರಣಗಳು ತಾವಾಗಿಯೇ ಸಿದ್ಧಿಗೆ ಹೋಗುವವು.

ಯಂಗಇಂಡಿಯಾ

ಮೋಹನದಾಸ ಕರಮಚಂದ ಗಾಂಧಿ.

## ಮದ್ರಾಸದ ಹೂಲಿಯು.

——:೦:——

ಮದ್ರಾಸದಲ್ಲಿಯ ಹರ್ತಾಳದ ೧೩ ನೇ ತಾರೀಖಿನ ದಿವಸ ನಡೆದ ಡಾ॥ ರಾಜನ್ನರ ಪತ್ರವು ಕೆಳಗೆ ಬರೆದಂತೆ ಅದೆ

“ಮದ್ರಾಸದ ಹರತಾಳ ವ್ರತವು ಸಂಪೂರ್ಣ ಯಶಸ್ವಿಯಾಯಿತು. ಪಟ್ಟಣವು ಆ ದಿನದಲ್ಲಿ ಶಾಂತಮಯವಾಗಿತ್ತು. ಯಾವ ತರದ ಗಾಡಿಗಳೂ ನಡೆಯುತ್ತಿರಲಿಲ್ಲ. ಟ್ರಾಮ ಗಾಡಿಗಳ ಓಡಾಟವಿರಲಿಲ್ಲ. ಹಲಕೆಲವು ಓಡ್ಯಾಡಿದರೂ ಪ್ರವಾಸಿಕರ ಅಭಾವದಿಂದ ಅವೂ ಒಂದಾದವು. ಸಶಸ್ತ್ರ ಪೋಲಿಸರೂ ಸಿಪಾಯಿಗಳೂ, ಶಾಂತವೃತ್ತಿಯವರಾಗಿದ್ದರು. ಕೆಳಗೆ ಬರೆದ ಗಂಡಾಂತರಗಳು ಆ ಮುಖ್ಯವಾದ ಹರ್ತಾಳ ದಿನದಲ್ಲಿ ಸಂಭವಿಸುವವೆಂದು ನನ್ನ ಕನಸಿನಲ್ಲಿ ಗೊತ್ತ ಇದ್ದಿಲ್ಲ. ಇಂಥ ದೊಡ್ಡ ಪಟ್ಟಣದ ಸಣ್ಣ ಓಣಿಗಳಲ್ಲಿ ಸಹ ಶಾಂತತೆಯು ವಾಸಿಯಾಗಿತ್ತೆಂದು ಬಹಳೇ ಅಭಿಮಾನದಿಂದ ನಾವು ಹೇಳುತ್ತೇವೆ. ಆದರೆ ಕೂಡಿದ ಜನ ಸಂಮರ್ದನದ ಮನಸ್ಸು ಒಮ್ಮೆ ಕೋಪವಕ್ಕೆಳಸುತ್ತಿತ್ತು ಒಮ್ಮೆ ಶಾಂತ ವೃತ್ತಿಯನ್ನವಲಂಬಿಸುತ್ತಿತ್ತು. ಜನಾಭಿಪ್ರಾಯವನ್ನು ಮೀರಿ ನಡೆದ ಜನರ ಪ್ರವೃತ್ತಿಗಾಗಿ ಜನಸಮುದಾಯವು ಸಿಟ್ಟಿಗೆದ್ದರೂ, ಗಾಂಧೀ ಪಕ್ಷದವರಾಗಿದ್ದ ಜನರ ಸಭ್ಯ ವರ್ತನದಿಂದಲೂ ಮೃದು ನುಡಿಗಳಿಂದಲೂ, ಆ ಪ್ರತೀತ ಕೋಪಾಗ್ನಿಯು ಆರಿಸಲ್ಪಡುತ್ತಿತ್ತು. ಸಶಸ್ತ್ರ ಸಿಪಾಯರ ಪಥಕವನ್ನು ನೋಡಿದೊಡನೆಯೇ ಅದರ ಸಿಟ್ಟು ಉಕ್ಕೇರುತ್ತಿತ್ತು. ಒಬ್ಬ ಸಣ್ಣ ಹುಡುಗನು ಬರ್ಚಿಯಿಂದ ಚುಚ್ಚಲ್ಪಟ್ಟನು. ಮೌಂಟ ರೋಡದ ಹತ್ತರ ಇಬ್ಬರು ಕೊಲ್ಲಲ್ಪಟ್ಟರೆಂದು ತಿಳಿದು ಬರುತ್ತದೆ. ಸ್ವಯಂಸೇವಕರು ಬಹಳೇ ಉತ್ಸುಕತೆಯಿಂದ ತಮ್ಮ ಕರ್ತವ್ಯವನ್ನು ಕೊನೆಗಾಣಿಸಿದರು. ಒಟ್ಟು ೫೦೦ ಸ್ವಯಂಸೇವಕರಲ್ಲಿ. ೩೦೦ ಮುಸಲ್ಮಾನರಿದ್ದರು.

ನಮ್ಮ, ಆಳರಸರ, ಇಂತೂ ಕೌನ್ಸಿಲ್ ಮಂತ್ರಿಗಳ ನಡತೆ ವಿಸ್ಮಯಕರವೂ ನೋಡತಕ್ಕಂಥವಾಗಿತ್ತು; ವಿಲಿಂಗ್ಡನ್ನ ದೊರೆಗಳೂ ಸರ್ ಪಿ. ತ್ಯಾಗರಾಜ ಶೆಟ್ಟಿಯವರೂ, ಪಟ್ಟಣದ ಮಧ್ಯಭಾಗಿಯಾದ ಕೋತವಾಲ ಬಜಾರಕ್ಕೆ ತಾವೇ ತೆರಳಿ ಬಂದಿದ್ದರು. ಲಷ್ಕರೀ ಪಥಕ

(೩೦ ಪುಟ ನೋಡಿರಿ)

ಕನ್ನಡ ನವಜೀವನ.

ಪೌಷ್ಯ ವ|| ೧೪ ಗುರುವಾರ ಶಕೆ ೧೮೬೩

# ಸ್ತ್ರೀಯರ ಭಾಗವು.

ಈ ಯುದ್ಧದಲ್ಲಿ ಸ್ತ್ರೀಯರಾದರೂ ಸಂಪೂರ್ಣವಾಗಿ ಭಾಗ ತೆಗೆದುಕೊಳ್ಳಲಿಕ್ಕೆಬೇಕು. ಸ್ತ್ರೀಯರು ಸ್ವಯಂಸೇವಿಕೆಯರಾಗಿ ಮಹಾಸಭೆಗೆ ಶೋಭೆಯನ್ನು ತಂದರು. ಮಹಾಸಭೆಯ ಇಡೀ ಆಯುಷ್ಯದಲ್ಲಿ ಸ್ತ್ರೀಯರು ಮುಂದು ವರೆದು ಬಂದದ್ದು ಇದೇ ಮೊದಲನೇ ಸಾರೆ. ಗುಜರಾಥದ ಭಗಿನಿಯರಿಗೆ ಈ ಸದ್ಭಾಗ್ಯವು ಮೊದಲು ದೊರೆತದ್ದು ಗುಜರಾಥಕ್ಕೆ ಅನುಪದ ಮಾತೇ ಸೈ. ಹೆಂಗಸರು ದೇಶ ಸೇವೆ ಮಾಡಲು ಟೊಂಕ ಕಟ್ಟಿ ಮುಂದೆ ಬಂದದರಿಂದ ಅನೇಕರ ಮನಸ್ಸಿನ ಮೇಲೆ ಬಹು ಸೊಗಸಾದ ಪರಿಣಾಮವಾಯಿತು. ಪ್ರತಿಯೊಂದು ದೋಷರಹಿತವಾದ ಸೇವಾಕಾರ್ಯದಲ್ಲಿ ಹೆಂಗಸರೂ ತಮ್ಮ ತಮ್ಮ ಭಾಗದ ಕೆಲಸವನ್ನು ಮಾಡಲು ಕೈಕೊಂಡರೆ ನಮ್ಮ ಕಾರ್ಯ ಮಾಡುವ ಶಕ್ತಿಯು ಇಮ್ಮಡಿಯಾಗುವದು.

ಸರಕಾರವು ಸ್ತ್ರೀಯರನ್ನು ಒಮ್ಮಿಗೇ ಹಿಡಿದು ಹಾಕಲು ನಿಶ್ಚಯ ಮಾಡದು ಎಂಬುದನ್ನು ನಾವು ತಿಳಿದಿರಬೇಕು. ಪುರುಷರಾದರೂ ಒಂದೇ ಸವನೆ ಹಿಡಿಯಲ್ಪಡುತ್ತಿರುವರು. ಆದ್ದರಿಂದ ಪುರುಷರು ಮಾಡತಕ್ಕ ಎಷ್ಟೋ ಕಾರ್ಯಗಳನ್ನು ಸ್ತ್ರೀಯರು ತಾವೇ ನೆರವೇರಿಸಲು ಸಿದ್ಧರಾಗಬೇಕು

**ನಿರ್ಭಯತೆಯ ಅವಶ್ಯಕತೆಯು:—**

ಈ ವಿಷಯದಲ್ಲಿ ನಿರ್ಭಯತೆಯು ಮಾತ್ರ ಅತ್ಯವಶ್ಯವಾದದ್ದು. ಪವಿತ್ರತೆಯ ದೃಷ್ಟಿಯಿಂದ ನಿರ್ಭಯತೆಯು ಸಂಭವಿಸುವದು. ನಮ್ಮ ಮನಸ್ಸು ಬಹು ಮಲಿನವಾಗಿರುವದಾದ್ದರಿಂದ ಸ್ತ್ರೀಯರ ಪವಿತ್ರತೆಯ ವಿಷಯದಲ್ಲಿ ಯಾವಾಗಲೂ ನಾವು ಭೀತಿಯುಳ್ಳವರಾಗಿರುವೆವು. ಸ್ತ್ರೀಯರಲ್ಲಿ ತಮ್ಮ ಪವಿತ್ರತೆಯನ್ನು ಕಾಯ್ದುಕೊಳ್ಳಲು ಯೋಗ್ಯತೆಯಿಲ್ಲೆಂದು ನಾವು ತಿಳಿಯುತ್ತೇವೆ. ನಾವು ಅವರ ಸಾಮರ್ಥ್ಯದ ಬಗ್ಗೆ ಇಷ್ಟು ಅವಿಶ್ವಾಸವುಳ್ಳವರಾಗಿರುವೆವು. ಪುರುಷರು ಪರಸ್ತ್ರೀಯರನ್ನು ಕೆಟ್ಟ ಕಣ್ಣಿನಿಂದಲೇ ನೋಡುವರೆಂದು ನಾವು ತಿಳಿಯುತ್ತೇವೆ. ಪುರುಷರು ಇಷ್ಟು ಪಂಡಿತರಾಗಿರುವರೆಂದು ನನ್ನ ಕಲ್ಪನೆಯಿರುವದು. ನಮ್ಮ ಸ್ತ್ರೀಪುರುಷರು ಈ ರೀತಿಯವರಾಗಿದ್ದದ್ದೇ ನಿಜವಿದ್ದರೆ ನಾವು ಸ್ವರಾಜ್ಯಕ್ಕೆ ಸಂಪೂರ್ಣವಾಗಿ ಅಯೋಗ್ಯರಿರುವೆವೆಂದು ಒಪ್ಪಿಕೊಳ್ಳಬೇಕಾಗುವದು. ಇಂಗ್ಲೀಶ ಜನರಲ್ಲಿ ಸ್ತ್ರೀಪುರುಷರು ಮರ್ಯಾದೆಯನ್ನು ಅರಿಯದವರಾಗಿರುವರೆಂದು ನಾವು ತಿಳಿಯಲು ಯಾವದೂ ಕಾರಣವಿಲ್ಲ. ಇಂಗ್ಲಿಶ ಸ್ತ್ರೀಯರು ಅನೇಕ ಪರೋಪಕಾರದ ಕಾರ್ಯಗಳಲ್ಲಿ ಆಸಕ್ತರಾಗುವರು. ಆದರೆ ನಮ್ಮಲ್ಲಿ ನಮಗೊಬ್ಬಳು 'ನರ್ಸ' ಬೇಕಾದರೆ ದೊರೆಯುವದು ಬಹು ಕಷ್ಟವಾಗುವದು.

ಸ್ವರಾಜ್ಯವು ನಿಜವಾಗಿ ಸಮೀಪವದಲ್ಲಿಯೇ ಬಂದಿದ್ದರೆ ನಮ್ಮ ಹೆಂಗಸರು ತಮ್ಮ ಪವಿತ್ರತೆಯನ್ನು ಕಾಯ್ದುಕೊಳ್ಳಲು ದಿನ ದಿನಕ್ಕೆ ಹೆಚ್ಚೆಚ್ಚಿಗೆ ಸಿದ್ಧರಾಗುತ್ತ ನಡೆಯಬೇಕು. ಅವರು ಮನಸ್ಸಿನೊಳಗಿನ ಭೀತಿಯು ನಷ್ಟವಾಗಲಿಕ್ಕೆಬೇಕು. ಹೆಂಗಸು ತನ್ನ ಪವಿತ್ರತೆಯನ್ನು ರಕ್ಷಿಸಿಕೊಳ್ಳಲಾರಳೆಂಬ ಮಾತು ಸುಳ್ಳದ್ದು, ಅನುಭವಕ್ಕೆ ವಿರುದ್ಧವಾದದ್ದು, ಸ್ತ್ರೀಪುರುಷರಿಬ್ಬರಿಗೂ ಲಜ್ಜಾಸ್ಪದವಾದದ್ದು ಇರುವದು. ಸ್ತ್ರೀಯರ ಮೇಲೆ ಬಲಾತ್ಕಾರ ಮಾಡುವಂಥ ನರಪಶುಗಳು ಭೂಮಿಯ ಮೇಲೆ ಜೀವಿಸುತ್ತಿರುವದೇನೋ ನಿಜ. ಆದರೆ ಯಾವಳು ತನ್ನ ಪವಿತ್ರತೆಯ ಬಗ್ಗೆ ಬಹು ಜಾಗ್ರತಳಾಗಿರುವಳೋ ಆ ಸ್ತ್ರೀಯಳ ಮೇಲೆ ಬಲಾತ್ಕಾರ ಮಾಡಲು ಧೈರ್ಯ ಮಾಡಿದಂಥ ಒಬ್ಬ ಮನುಷ್ಯನಾದರೂ ಈ ವರೆಗೆ ಹುಟ್ಟಿಲ್ಲ. ಮುಂದಾದರೂ ಹುಟ್ಟುವದಿಲ್ಲ. ಪ್ರತಿಯೊಬ್ಬ ಸ್ತ್ರೀಯಳಲ್ಲಿ ಇಷ್ಟೊಂದು ಯೋಗಬಲವೂ ಇಷ್ಟೊಂದು ಪವಿತ್ರತೆಯು ಇಲ್ಲೆಂಬ ಮಾತು ನಿಜವು. ಇದಕ್ಕೆಲ್ಲ ಪುರುಷರೇ ಕಾರಣರು! ಹೆಣ್ಣು ಹುಡುಗೆಗೆ ನಾವು ಮೊದಲಿನಿಂದಲೇ ವಿಪರೀತವಾದ ಶಿಕ್ಷಣವನ್ನು ಕೊಡುತ್ತೇವೆ. ಆದರಿಂದ ಅವರು ತಮ್ಮ ಶೀಲವನ್ನು ಕಾಯ್ದುಕೊಳ್ಳಲು ಅಸಮರ್ಥರಾಗುವರು. ಕಡೆಗೆ ಅವರು ದೊಡ್ಡವರಾದ ಮೇಲೆ ಈ ಬಗೆಯ ಶಿಕ್ಷಣದಿಂದ ಅಥವಾ ಕುಶಿಕ್ಷಣದಿಂದ ಅವರ ಮನಸ್ಸಿನ ಮೇಲೆ ವಿಲಕ್ಷಣವಾದ ಸಂಸ್ಕಾರವಾಗಿ ಅವರು ಎಂಥ ಪುರುಷರೇ ಇರಲಿ ಅವನ ಕೈಯಲ್ಲಿ ಅಸಹಾಯರಾಗಿ ನಿಲ್ಲುವರು. ಆದರೆ ಸತ್ಯ ಮತ್ತು ಪವಿತ್ರತೆಯೆಂಬುವು ಜಗತ್ತಿನಲ್ಲಿದ್ದುದು ನಿಜವಿದ್ದರೆ, ಸ್ತ್ರೀಯಳಲ್ಲಿ ಆತ್ಮರಕ್ಷಣೆ ಮಾಡಿಕೊಳ್ಳಲು ಸಾಕಷ್ಟು ಶಕ್ತಿಯಿದೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಸಂಕಟ ಸಮಯದಲ್ಲಿ ಈಶ್ವರನನ್ನು ಅನನ್ಯ ಭಾವದಿಂದ ಸ್ಮರಿಸುವಂಥ ಸ್ತ್ರೀಯಳನ್ನು ಈಶ್ವರನು ರಕ್ಷಿಸದಿರನು. ಮರಣಕ್ಕೆ ಸಿದ್ಧಳಾದ ಸ್ತ್ರೀಯಳಿಗೆ ಒಂದು ಅವಶಿಷ್ಟವನ್ನಾದರೂ ಯಾವ ದುಷ್ಟನಿಂದ ಆಗುವದಾದೀತು! ಅವಳ ಕಣ್ಣುಗಳಲ್ಲಿ ಅತ್ಯಂತ ಪ್ರಖರವಾದ ತೇಜಸ್ಸು ಪ್ರಕಾಶಿಸಲಾರಂಭಿಸುವದು. ಆ ಸಮಯದಲ್ಲಿ ಅವಳೆದುರಿಗಿದ್ದ ವ್ಯಭಿಚಾರಿಯು ಆ ತೇಜಸ್ಸಿನ ದರ್ಪದಿಂದ ಕಲ್ಲಾಗಿ ನಿಲ್ಲುವನು.

ಎಲ್ಲರಲ್ಲಿ ಸಾಯಲು ಸಾಮರ್ಥ್ಯವಿರುವದು. ಆದರೆ ಎಲ್ಲರಲ್ಲಿ ಸಾಯಲು ಇಚ್ಛೆ ಮಾತ್ರ ಇರದು.

ಯಾವಳೊಬ್ಬ ಸ್ತ್ರೀಯಳನ್ನು ಯಾವನಾದರೊಬ್ಬ ಪುರುಷನು ಕೆಡಿಸಬೇಕೆನ್ನಿಸಿದರೆ, ಅವನು ಪಶುವೃತ್ತಿಯನ್ನು ತಾಳಿ ವಿಷಯಾಂಧನಾಗಿ ಬಲಾತ್ಕಾರ ಮಾಡಲೆಳಸಿದರೆ, ಆ ಸಮಯದಲ್ಲಿ ಆತ್ಮಘಾತ ಮಾಡಿಕೊಳ್ಳುವದು ಇಬ್ಬರದೂ ಕರ್ತವ್ಯವಿರುವದು ಎನ್ನೋಣ. ಬಲ್ಲವರು ಹೀಗೆ ಆತ್ಮಘಾತವನ್ನು ಮಾಡಿಕೊಳ್ಳಬಲ್ಲರು. ಬಲಿಷ್ಠರಾದವರ ಕೈಯಲ್ಲಿ ಸ್ತ್ರೀಯಾಗಲಿ ಪುರುಷನಾಗಲಿ ಸಿಕ್ಕು ಮಾನಹೋಗುವ ಪ್ರಸಂಗವೊದಗಿದರೆ ಅಗ್ಗ ತನ್ನ ನಾಲಿಗೆಯನ್ನು ಕಚ್ಚಿಕೊಂಡಾಗಲಿ, ಕೈಗಳು ಸ್ವತಂತ್ರವಿದ್ದರೆ ಕುತ್ತಿಗೆಯನ್ನು ಹಿಚುಕಿಕೊಂಡಾಗಲಿ ಪ್ರಾಣತ್ಯಾಗ ಮಾಡಬಹುದು. ದುರ್ಬಲರಿಗೆ ತಮ್ಮ ಪ್ರಾಣವು ಪ್ರಿಯವಾಗಿದ್ದರಿಂದ ಆತ್ಮಘಾತವನ್ನು ಮಾಡಿಕೊಳ್ಳಲು ಅವರಲ್ಲಿ ಸಾಕಷ್ಟು ಸಾಮರ್ಥ್ಯವಿರುವದಿಲ್ಲಾದ ಕಾರಣ ಬಲವಂತರಿಗೆ ದುರ್ಬಲರನ್ನು ವಶವಲ್ಲಿಟ್ಟುಕೊಳ್ಳಲು ಬರುವದು. ಬೆಕ್ಕಿಕ್ಕೆ ಅಂಟಿಕೊಂಡ ಕಟ್ಟರಿವೆಯನ್ನು ಯಾರಾದರೂ ಹಿಡಿಯ ಹೋದರೆ ತನ್ನ ಕಾಲನ್ನಾದರೂ ಅಲ್ಲಿಯೇ ಕಡಿದುಕೊಂಡು ಮುಂದೆ ಹೋಗಲೆತ್ನಿಸುವದಲ್ಲದೆ ಬಲಾತ್ಕಾರಕ್ಕೆ ವಶವಾಗಲೊಲ್ಲದು. ಮಗುವು ನಮ್ಮ ಕೈಯಲ್ಲಿರುವಾಗ ಕಸುವಿನಿಂದ ಕೈ ಜಗ್ಗಿಕೊಂಡು ಪಾರಾಗಲೆತ್ನಿಸಿದರೆ ಅದರ ಕೈ ಮುರಿದೀತೆಂಬ ಭಯದಿಂದ ನಾವಾಗಿಯೇ ಮೆಲ್ಲನೆ ಕೈ ಬಿಟ್ಟುಕೊಡುವೆವು. ಪ್ರತಿಯೊಬ್ಬ ಮನುಷ್ಯನಲ್ಲಿ ತನ್ನದೊಂದಿಲ್ಲೊಂದು ಅಂಗವನ್ನು ಕಡಿದುಕೊಳ್ಳಲು ಬರುತ್ತಿರುವದು. ಆದರೆ ಹಾಗೆ ಮಾಡಿಕೊಳ್ಳುವಾಗ, ಇಲ್ಲವೆ ಪ್ರಾಣಘಾತ ಮಾಡಿಕೊಳ್ಳುವಾಗ ಆಗುವ ದುಃಖವನ್ನು ಸೈರಿಸಲು ಅವನು ಸಿದ್ಧನಿರುವದಿಲ್ಲ. ಆದರೆ ಈ ಬಗೆಯ ಸಿದ್ಧತೆಯನ್ನು ಮಾಡಿಕೊಳ್ಳುವದು ಪ್ರತಿಯೊಬ್ಬ ಸ್ವರಾಜ್ಯವಾದಿಯಾದ ಪುರುಷನ ಮತ್ತು ಸ್ತ್ರೀಯಳ ಧರ್ಮವಿದೆ. ಇಂಥ ಶಕ್ತಿಯನ್ನು ದಯಪಾಲಿಸೆಂದು ದಿನಾಲು ಈಶ್ವರನಿಗೆ ಬೇಡಿಕೊಂಡಲ್ಲಿ ಅದು ಅವಶ್ಯವಾಗಿ ದೊರೆಯುವದು. ಪ್ರತಿಯೊಬ್ಬ ಭಗಿನಿಯು ದಿನಾಲು ಪ್ರಾತಃಕಾಲದಲ್ಲೆದ್ದು ಈಶ್ವರನಿಗೆ ಮುಂದೆ ಹೇಳಿದಂತೆ ಬೇಡಿಕೊಳ್ಳಬೇಕೆಂದು ನನ್ನ ಪ್ರಾರ್ಥನೆಯಿದೆ.

' ಹೇ ಪರಮೇಶ್ವರಾ! ನೀನು ನನ್ನನ್ನು ಶುದ್ಧೆ ವ ಪವಿತ್ರಳನ್ನಾಗಿಡು. ನನ್ನ ಸತಿತ್ವವನ್ನು ರಕ್ಷಿಸಿಕೊಳ್ಳಲು ಬೇಕಾಗುವ ಶಕ್ತಿಯನ್ನು ನನಗೆ ದಯಪಾಲಿಸು, ಮತ್ತು ನಾನು ಪ್ರಾಣತ್ಯಾಗವನ್ನಾದರೂ ಮಾಡಿ ನನ್ನ ಪವಿತ್ರತೆಯನ್ನು ಕಾಯ್ದುಕೊಳ್ಳಲು ಸಿದ್ಧಳಾಗುವಂತೆ ನನಗೆ ಸಾಮರ್ಥ್ಯವನ್ನು ಕೊಡು. ಭಕ್ತವತ್ಸಲನಾದ ನೀನೆನ್ನ ಸಂರಕ್ಷಕನಿರಲು ನನಗಾವ ಮಾತಿನಿಂದ ಭೀತಿಯುಂಟಾಗಬಲ್ಲದು? " ಸದ್ಭಾವದಿಂದ ಮಾಡಿದ ಈ ಪ್ರಾರ್ಥನೆಯು ಪ್ರತಿಯೊಬ್ಬ ಸ್ತ್ರೀಯಳನ್ನು ರಕ್ಷಿಸದಿರದು.

## ಆದರೆ ಗಂಡಸು?

ಮೇಲೆ ಬರೆದ ವಿಚಾರಗಳು ನನ್ನ ಮನಸ್ಸಿನಲ್ಲಿ ಬಂದಹತ್ತಲು ನಾನು ಗಂಡಸಿರುವೆನೆಂಬ ಮಾತಿನಿಂದ ನಾಚಿಕೆಯು ಉಂಟಾಗುವದು. ಯಾವನು ತನ್ನ ತಾಯಿಯ ಉದರದಿಂದ ಜನ್ಮ ತಾಳಿದನೋ, ಯಾವನ ಭಾರವನ್ನು ತಾಯಿಯು ಒಂಭತ್ತು ತಿಂಗಳು ಹೊತ್ತಳೊ, ಯಾವನಿಗಾಗಿ ತಾಯಿಯು ಸದೈವ ಚಿಂತಾತುರಳಾಗಿರುವಳೊ, ಯಾವನನ್ನು ಹಾಡಿ ಮಲಗಿಸಿ ತಾನು ಮಲಗುವಳೊ, ಯಾವನಿಗೆ ಉಣಿಸಿ ತಾನು ಉಣ್ಣುವಳೋ ಅಂಥ ಪುರುಷನು ತನ್ನ ತಾಯಿಯ ಜಾತಿಯವರಾದ ಸ್ತ್ರೀಯರ ದ್ರೋಹ ಮಾಡುವವನಲ್ಲವೇ? ಸ್ತ್ರೀ ಜಾತಿಯು ಪುರುಷನಿಗೆ ಹೆದರಿಕೊಂಡಿರಬೇಕಾಗುವದಲ್ಲವೆ? ಹುಲಿಯನ್ನು ಕಂಡು ಹೆದರಿ ಓಡುವ ಸ್ತ್ರೀಯು ಪುರುಷನ ವ್ಯಭಿಚಾರಪ್ರವೃತ್ತಿಗೆ ಹೆದರಿ ಓಡುವಳು! ಆತ್ಮಬಲದ ಸಲುವಾಗಿ ಪರಮೇಶ್ವರನನ್ನು ಬೇಡಿಕೊಳ್ಳಲು ಸ್ತ್ರೀಯರಿಗೆ ನಾನು ಹೇಳಿಕೊಂಡೆನು. ಪುರುಷರಿಗಾದರೂ ಹಾಗೆ ಮಾಡಿರೆಂದು ಹೇಳಿಕೊಳ್ಳಲಿಚ್ಛಿಸುತ್ತೇನೆ. ತನ್ನ ತಾಯಿಯ ಜಾತಿಯವರಾದ ಸ್ತ್ರೀಯರ ಭೀತಿಯನ್ನು ದೂರ ಮಾಡಲು ಪುರುಷನು ಸಿದ್ಧನಿಲ್ಲವೊ? ಅವನಾದರೂ ಕೆಳಗೆ ಹೇಳಿದಂತೆ ನಿರಂತರವಾಗಿ ಪ್ರಾರ್ಥನೆಯನ್ನು ಮಾಡಕೂಡದೋ?

"ಯಾವ ಹೆಂಗಸನ್ನಾದರೂ ಕೆಟ್ಟ ಕಣ್ಣಿನಿಂದ ನೋಡಿದೊಡನೆಯೇ, ಹೇ ಪರಮೇಶ್ವರಾ! ನನ್ನ ಪ್ರಾಣಗಳನ್ನು ತೆಗೆದುಕೊಂಡು ಬಿಡು! ವ್ಯಭಿಚಾರ ಬುದ್ಧಿಯು ಬಂದೊಡನೆಯೇ ಹೇ ದಯಾಘನಾ! ನನಗೆ ಪ್ರಾಣತ್ಯಾಗ ಮಾಡಲು ಸಾಮರ್ಥ್ಯವನ್ನು ಕೊಡು; ಪತಿತ ಪಾವನಾ! ನನ್ನ ಹೃದಯದೊಳಗಿನ ಯಾವತ್ತು ದುಷ್ಟ ವಿಕಾರಗಳನ್ನು ತೆಗೆದೊಗೆದು ನನ್ನನ್ನು ಪವಿತ್ರ ಮಾಡು! ಹೇ ದೀನಬಂಧೊ! ಯಾವ ಸ್ತ್ರೀಯೂ ನನ್ನನ್ನು ನೋಡಿ ಹೆದರದೆ ನನ್ನನ್ನು ತನ್ನ ಬಂಧುವೆಂದು ತಿಳಿದು ಸುರಕ್ಷಿತಳಾಗುವಂತೆ ಮಾಡು" ಎಲ್ಲಿಯವರೆಗೆ ಹಿಂದುಸ್ಥಾನದ ಪುರುಷರು ಸ್ತ್ರೀ ಸಮಾಜದ ರಕ್ಷಣೆಯನ್ನು ಮಾಡಲು ಅಸಮರ್ಥರಾಗಿರುವರೋ ಅಲ್ಲಿಯವರೆಗೆ ದೇವರು ಅವರನ್ನು ದಾಸ್ಯದಲ್ಲಿಯೇ ಇಡಲೆಂದು ನಾನು ಪ್ರಾರ್ಥಿಸುವೆನು. ಯಾವ ದೇಶದ ಗಂಡಸರು ತಮ್ಮ ಹೆಂಗಸರನ್ನು ಕಾಪಾಡಲಾರದರೋ, ಆ ದೇಶದ ಗಂಡಸರು ಗಂಡಸರಲ್ಲ ಅವರು ಜೀತಗಾರರೇ ಸೈ!

## ನನ್ನ ನಂಬಿಗೆ

ಆದರೆ ಹಿಂದುಸ್ಥಾನದ ಸ್ತ್ರೀ ಪುರುಷರಿಬ್ಬರೂ ಈಗ ತಮ್ಮ ಮರ್ಯಾದೆಯನ್ನರಿತಿರುವರೆಂದೂ, ಪವಿತ್ರತೆಯ ಸ್ವಾದವನ್ನು ತಿಳಿದಿರುವರೆಂದೂ ನನ್ನ ನಂಬಿಗೆಯಿದೆ. ಒಬ್ಬ ಬಾಲಿಕೆಯು ಎಲಿಸ್ ಬ್ರಿಜ್‌ದೆದುರಿಗೆ ನಿರ್ಭಯಳಾಗಿ ಖಾದೀ ಟೊಪ್ಪಿಗೆಗಳನ್ನು ಮಾರುತ್ತನಿಂತದ್ದು ಕಂಡು ನನ್ನ ಮೈಯಲ್ಲಿ ಒಂದು ಶೇರು ರಕ್ತವು ಹೆಚ್ಚಿತು. ಅವಳಿಗಾವುದರ ಭೀತಿಯಿದ್ದಿತೊ? ಎಲ್ಲ ಪುರುಷರು ತನ್ನ ಬಂಧು ಸಮಾನರೆಂದು ಅವಳು ತಿಳಿದಿದ್ದಳು. ನಾವು ಒಳ್ಳೆತಾಗಿದ್ದರೆ ಜಗತ್ತು ಒಳಿತಾಗಿರುವದು. ಮಹಾಸಭೆಯ ಮಂಡಪದಲ್ಲಿ ಬಂದ ಸಾವಿರಗಟ್ಟಲೆ ಸ್ತ್ರೀಯರು ಸಂಪೂರ್ಣವಾಗಿ ನಿರ್ಭಯರಾಗಿ ಬಂದಿದ್ದರು. ಸ್ತ್ರೀಯರು ಯಾವತ್ತೂ ನಿರ್ದೋಷವಾದ ಕಾರ್ಯಗಳಲ್ಲಿ ತೊಡಗಿರಲಿಲ್ಲೆಂಬುದೇನೋ ನಿಜ. ಆದರೆ ಇದಕ್ಕೆ ಕಾರಣವು ಪುರುಷರ ಸ್ವಾರ್ಥವು. ಇಲ್ಲವೆ ಸ್ತ್ರೀಯರ ಆಲಸ್ಯವು; ಅಥವಾ ಅಜ್ಞಾನವು. ಸ್ತ್ರೀಯರಿಗೆ ತಮ್ಮ ಮನೆಗೆಲಸಗಳಿಂದ ಬಿಡುಗಡೆ ಹೊಂದಿ ಹೊರಗೆಬರುವದಾಗದಿದ್ದರೆ, ಇಲ್ಲವೆ ಒಸ್ತು ಒಡವೆಗಳ ಗೊತ್ತುರಗಳೆಯನ್ನು ಬಿಟ್ಟು ಬರುವದಾಗದಿದ್ದರೆ ಅವರು ದೇಶಸೇವೆ ಮಾಡುವರೆಂತು?

(ನ. ಜೀ) ಮೋ. ಕ. ಗಾಂಧಿ.

---

# ಲಷ್ಕರೀ ಕಾಯ್ದೆಗಿಂತ ಹೀನವಾದುದು!

**ಸರಕಾರದ ಆಸುರೀ ದಮನ—**ನೀತಿಯು (Repression) ನಿಲ್ಲುವವರೆಗೆ 'ಯಂಗಇಂಡಿಯಾ' ಪತ್ರವನ್ನು ದಬ್ಬಾಳಿಕೆಯ ವಿಶ್ವಸನೀಯವಾದ ಸುದ್ದಿಗಳಿಂದ ತುಂಬುವದವಶ್ಯವಾಗಿದೆ. ಈ ದಮನನೀತಿಯು ಅಡಗಬೇಕಾದರೆ ಹಿಂದುಸ್ಥಾನವು ಅಪರಿಮಿತವಾದ ಸ್ವಾರ್ಥತ್ಯಾಗವನ್ನು ಮಾಡಲಿಕ್ಕೆಬೇಕು. ಈ ದಮನ ನೀತಿಯು ಭಾವನಾಹೀನವಾದುದೂ, ಸ್ವಚ್ಛಂದವಾದುದೂ ಅಸಭ್ಯವಾದುದೂ ಕ್ರೂರವಾದುದೂ ಇರುವದರಿಂದ ಇದಕ್ಕೆ ಆಸುರೀ ದಮನ ನೀತಿಯೆಂಬ ಹೆಸರು ಯೋಗ್ಯವಾಗಿದೆ. ಅಸಹಕಾರಿಗಳು ಹರತಾಳವಲಿ ಯಶಸ್ವಿಯಾಗಿ ಮಾಡುವದಕ್ಕೋಸ್ಕರ ಜನರನ್ನು ಬೆದರಿಸುವರೆಂದೂ ಅವರನ್ನು ಉಪದ್ರವಿಸುವರೆಂದೂ ಕಲ್ಪಿಸುವಾ. ಆದರೆ ಇಂಥ ಅಪರಾಧಿಗಳನ್ನು ಕಂಡುಹಿಡಿದು ಅವರನ್ನು ಶಿಕ್ಷಿಸುವ ಕೆಲಸವು ಕಠಿಣವಾದುದೊ? ಸರಕಾರವು ಸ್ವಕೃತ್ಯ ಸಮರ್ಥನೆಗಾಗಿ ಸಾಕ್ಷಿಗಳನ್ನು ದೊರಕಿಸಲು ಅಸಮರ್ಥವಾದರೆ ಯಾವತ್ತು ಪ್ರಜಾಜನರು ಈ ಅಪರಾಧಿಗಳ ಬೆಂಬಲಕಾಗಿ ನಿಂತಿರುವರೆಂಬ ಮಾತು ಸ್ಪಷ್ಟವಾಗುವದಿಲ್ಲವೊ? ಯಾವದೇಒಂದು ಸಂಗತಿಯು ಅದು ಎಷ್ಟೇ ನಿಂದ್ಯವಿದ್ದರೂ- ಅದಕ್ಕೆ ಜನತೆಯ ಸಂಪೂರ್ಣ ಸಮ್ಮತಿಯಿದ್ದರೆ, ಅದು ಶಿಕ್ಷೆಗೆ ಯೋಗ್ಯವಾದ ಅಪರಾಧವಾಗದು. ಅದ್ದರಿಂದ ಬೇಜವಾಬ್ದಾರಿಯಾದ ಸರಕಾರವು ಕೈಕೊಂಡ ದಮನನೀತಿಯು ಜನತೆಗೆ ಸಮ್ಮತವಾದ ಕೃತ್ಯವಾಗಲರಿಯದು; ಹಾಗು ಅದು ಜನತೆಯ ಸಂರಕ್ಷಣಕ್ಕಾಗಿ ಯೋಜಿಸಲ್ಪಟ್ಟಿದ್ದೆಂದು ಹೇಳಲಾಗದು. ಆದರೆ ನಿಜವಾಗಿ ನೋಡಿದರೆ, ಅಸಹಕಾರಿಗಳು ಬೆದರಿಸುವರೆಂಬುದೂ ಕೇವಲ ಸುಳ್ಳೇ ಆಗಿರುವದು. ಪರಿಸ್ಥಿತಿಯು ಹೀಗಿರಲು ಸರಕಾರವು ಕೈಕೊಂಡ ದಮನನೀತಿಯು ಕೇವಲ ತನ್ನ ದುಷ್ಕೃತ್ಯಗಳ ವಿರುದ್ಧವಾಗಿ ಹಬ್ಬುತ್ತಿರುವ ಸಾತ್ವಿಕ ಚಳವಳಿಯನ್ನು ಹತ್ತಿಕ್ಕಲು ಯೋಜಿಸಲ್ಪಟ್ಟದ್ದೆಂದು ಹೇಳಬೇಕಾಗುತ್ತದೆ. ಅದ್ದರಿಂದ ಈ ದಮನನೀತಿಯು ಇಮ್ಮಡಿಯಾಗಿ ಅಕ್ಷಮ್ಯವಾದದಾಗಿದೆ. ರಲಿ; ಸರಕಾರದ ದಮನನೀತಿಯು ಅಸಮರ್ಥನೀಯತೆಯನ್ನು ವ್ಯಕ್ತಪಡಿಸುವದು ಈ ಲೇಖದ ಉದ್ದೇಶವಿಲ್ಲ. ಆದರೆ ಅದರ ಆಸುರೀ ಸ್ವರೂಪವನ್ನು ಬೈಲಿಗೆತಂದು ಅದು ಲಷ್ಕರೀ ಕಾಯ್ದೆಗಿಂತ ಹೀನವಾದುದೆಂದು ತೋರಿಸುವದು ಈ ಲೇಖದ ಉದ್ದೇಶವಾಗಿದೆ.

ಪಂಜಾಬದಲ್ಲಿ ಲಷ್ಕರೀ ಕಾಯ್ದೆಯು ಈ ದಮನನೀತಿಗಿಂತಲೂ ಎಷ್ಟೋ ಅಂಶದಿಂದ ಹೆಚ್ಚು ಸಭ್ಯವಾಗಿತ್ತು. ಮತ್ತು ಲಷ್ಕರೀ ಕಾಯ್ದೆಯೆಂಬ ಹೆಸರಿನಿಂದೇ ಅದು ಪ್ರವೃತ್ತವಾಗಿದ್ದರಿಂದ, ಅದರಿಂದ ಆಗಬೇಕಾದ ಪರಿಣಾಮವಾದರೂ ಆಯಿತು ಜನರಲ್ಲಿ ಒಂದುಬಗೆಯ ಹೆದರಿಕೆಯು ಉಂಟಾಯಿತು. ಆದರೆ ಪ್ರಚಲಿತವಾದ ಸರಕಾರದ ಕೃತ್ಯಗಳು ಸಾಧಾ ಕಾಯ್ದೆಗಳ ಹೆಸರಿನಿಂದ ಮಾತ್ರ ಪ್ರವೃತ್ತವೆಂಬುದೇನೋ ನಿಜ; ಆದರೆ ನಿಜವಾಗಿ ನೋಡಿದರೆ ಯಾವ ಕಾಯ್ದೆಯ ಬೆಂಬಲವೂ ಇಲ್ಲದೆ ಅವುಗಳಿಗೆ ಯಾವಬಗೆಯ ಪ್ರತಿಬಂಧವೂ ಇಲ್ಲ. ಲಷ್ಕರೀ ಕಾಯ್ದೆಗೆ ಒಂದಿಲ್ಲೊಂದು ಬಗೆಯ ನಿರ್ಬಂಧವಿರುವದು ಆದರೆ ಸರಕಾರವು ಈಗ ನಡಿಸಿದ ಬೇಕಾಯ್ದೇಶೀರತನಕ್ಕೆ ಇದೂ ಇಲ್ಲ.

ಉದಾಹರಣಾರ್ಥವಾಗಿ ಧರೀವಪುರದಲ್ಲಿಯ ಘಟಕೀ ಶಿಕ್ಷೆಯನ್ನು ನೋಡಿರಿ. ಡಾ ಮೈತ್ರರೆಂಬುವರು ಕಲಕತ್ತೆಯಲ್ಲಿ ಹೆಸರಾದ ವೈದ್ಯರು. ಅವರು ಯಾವ ಪಕ್ಷಕ್ಕೂ ಸೇರಿದವರಲ್ಲ. ಅವರು ಧರೀವಪುರದ ಜೇಲಿಗೆ ಹೋದಾಗ ಅಲ್ಲಿನಡೆದ ಸಂಗತಿಗಳನ್ನು ಕಣ್ಣಾರೆ ಕಂಡು ಸುಸ್ತ್ರವಾದ ರಿಪೋರ್ಟುಮಾಡಿರುವರು. ಇಬ್ಬರು ಸುಶಿಕ್ಷಿತಜನರು—ಅವರೊಳಗಿನವರೊಬ್ಬರು ಮುಖ್ಯಾಧ್ಯಾಪಕರಿರುವರು-ಒಂದು ಕಟ್ಟಿಗೆಯ ಫ್ರೇಮಿಗೆ ಕಟ್ಟಲ್ಪಟ್ಟ ಚಿತ್ರದಿಂದ ಥಳಿಸಲ್ಪಟ್ಟರು. ಜೇಲಿನ ಅಧಿಕಾರಿಗಳಿಗೆ ಸಲಾಂ ಮಾಡಲಿಲ್ಲವೆಂಬುದೇ ಅವರ ಮಹದಪರಾಧವು!! ಜೇಲಿಗೆ ಹೋದಾಗ್ಗೆ ಡಾ ಮೈತ್ರರವರಿಗೆ ಈ ಸಂಗತಿಯು ಕಾಗದ ಸೋರಿದಾಯಿಸಲ್ಪಡದೇ ಇದ್ದದ್ದು ಕಂಡುಬಂದಿತು! ಅನೇಕ ಕೈದಿಗಳು—ಅವರಲ್ಲಿ ಅಂಡರ ಟ್ರಾಯಲ್ ಕೈದಿಗಳೂ ಇದ್ದರು—ರಾತ್ರಿಯಲ್ಲಿಯೂ ಕೂಡ ಕೈ-ಸಂಕೋಲೆಗಳನ್ನು ತೊಟ್ಟುಕೊಂಡೇ ಉಳಿದಿದ್ದರು. ಒಬ್ಬನಿಗೆ ಮೂರು ದಿವಸಗಳವರೆಗೆ ನಿಂತಿರಬೇಕಾದ ಕೈಸಂಕೋಲೆಗಳನ್ನು ತೊಡಿಸಿದ್ದರು. ಜೇಲಿನ ಕೆಲವು ವಿಶಿಷ್ಟ ಕೋಠಡಿಗಳಲ್ಲಿ ಎಷ್ಟಿರಬೇಕೋ ಅದಕ್ಕೂ ಸುಮಾರು ಇಮ್ಮಡಿಯಷ್ಟು ಜನರ

ನ್ನು ತುಂಬಿಟ್ಟಿದ್ದರು. ಮತ್ತು ಅವರ ಅನ್ನವಸ್ತ್ರ ಮತ್ತು ಹಾಸಿಗೆಗಳ ಬಗ್ಗೆ ಸಾಕಷ್ಟು ಲಕ್ಷ್ಯವು ಕೊಡಲ್ಪಟ್ಟಿದ್ದಿಲ್ಲ. ಈ ಎಲ್ಲ ಸಂಗತಿಗಳ ಬಗ್ಗೆ ಬಂಗಾಲ ಸರಕಾರದವರು ಏನನ್ನುವರು? ಮೇಲೆ ಹೇಳಿದ ಸಂಗತಿಗಳಲ್ಲಿ ಒಂದನ್ನಾದರೂ ಅವರು ಅಲ್ಲಗಳೆಯುವದಿಲ್ಲ. ಆದರೆ ಶಿಸ್ತು ಇಡ್ಡುವದಕ್ಕಾಗಿ ಹೀಗೆ ಮಾಡುವದು ಅವಶ್ಯವಾಗುತ್ತದೆಂದು ಅವುಗಳನೆಲ್ಲ ಸಮರ್ಥಿಸುವರು.

"ಈ ಶಿಕ್ಷೆಗಳಿಂದ ಇಷ್ಟವಾದ ಪರಿಣಾಮವಾಯಿತು. ಮತ್ತು ಆಗಿನಿಂದ ಶಿಸ್ತು ಚನ್ನಾಗಿ ಉಳಿದಿರುವದು." ಎಂದು ಸರಕಾರದವರು ಹೊರಡಿಸಿದ ಪತ್ರಿಕೆಯು ಹೇಳುತ್ತದೆ.

ಇನ್ನು ನಾವು ಅಲ್ಲಾಬಾದದ ಕಡೆಗೆ ತಿರುಗುವಾ. ಶ್ರೀ ಮಹಾದೇವ ದೇಸಾಯಿಯವರು ತನ್ನನ್ನೀಗ ಜೇಲಿನಲ್ಲಿ ಚನ್ನಾಗಿ ನಡೆಸಿಕೊಳ್ಳುವರೆಂದು ಸತ್ಯವಾಗಿ ಹೇಳಬಲ್ಲರು. ಆದರಿಂದ ಸಂ. ಪ್ರಾ. ದ ಸರಕಾರಕ್ಕೆ ಎದ್ವತದ್ವ ವರ್ತನದ ಬಗ್ಗೆ ವಿಚಾರಿಸ ಪತ್ರವೊಂದು ದೊರೆತಂತಾಗಿದೆ. ಆದರೆ ಅದೇ ಮಹಾದೇವ ದೇಸಾಯಿಯವರು ನೈನೀ ಜೇಲಿನಲ್ಲಿಯ ಕೈದಿಗಳು ಘಟಕೀ ಶಿಕ್ಷೆ ಮಾಡಲಾದ ನಿರ್ಘೃಣವಾದ ಹಿಂಸಾ ಪ್ರಕಾರಗಳನ್ನು ಹೇಗೆ ಸಹಿಸಬೇಕಾಗುತ್ತದೆಂಬುದನ್ನು ವರ್ಣಿಸಿರುವರು. ಆ ವರ್ಣನೆಯನ್ನು ಓದುವದರಿಂದ ಮೈ ಜುಮ್ಮೆನ್ನುವದು.

ಸೀತಾಮಾಧಿ ನಿವಾಸಿಗಳಿಗೆ ೩೦೦೦೦ ರೂ. ಗಳ ದಂಡವನ್ನು ಹಾಕಿ ಅವರ ಮೇಲೆ ಪ್ಯೂನಿಟಿವ್ಹ ಪೋಲೀಸರ ದಳವನ್ನು ನೇಮಿಸಿರುವರು. ಸೀತಾಮಾಧಿಯು ಬಿಹಾರ ಪ್ರಾಂತದ ಒಂದು ಸಬ್ ಡಿವ್ಹಿಜನ್ ವಾಗಿದೆ. ಈ ದಂಡದೊಡನೆಯೂ ಪ್ಯುನಿಟಿವ್ಹ ಪೋಲೀಸರ ದಳದಿಂದಲೂ ಸೀತಾಮಾಧಿಯ ನಿವಾಸಿಗಳಿಗೆ ಬಹಳ ವಿಪತ್ತುಗಳನ್ನು ಮುರಿದುಕೊಂಡು ಬೀಳುವ ಪ್ರಸಂಗವು ಬಿರುವದು. ಸಿಹೂರಿಯಾ, ಚಾಂಡಸುರ ಮತ್ತು ಭರತಿಪಾ ಎಂಬಲ್ಲಿ ಸಂಭವಿಸಿದ ಲೂಟಿಯ ವೃತ್ತಾಂತವನ್ನು 'ಮದರಲ್ಯಾಂಡ' ಪತ್ರದಲ್ಲಿ ನೋಡಬಹುದು. "ಅಪರಾಧಿಗಳಾದ ಪೋಲಿಸರೂ, ಅವರ ಮೇಲಧಿಕಾರಿಯೂ, ಪ್ರಾಕ್ತನಿಕ ವ್ಯವಸ್ಥಾಪಕನೂ ಈ ಲೂಟಿಯಲ್ಲಿ ಸೇರಿದ್ದರೆಂದು ವರ್ತಮಾನವಿದೆ. ಹೀಗೆ ಮತ್ತು ಬೇಗಾರವನ್ನು ಕೊಡಲಿಲ್ಲವೆಂಬುದೇ ಈ ಹಳ್ಳಿಗಳ ತಪ್ಪು; ಕಾಂಗ್ರೆಸ್ಸಿನ ಕಾರ್ಯವನ್ನು ಮಾಡುತ್ತಿರುವ ಶ್ರೀ ಅವಧ ಬಿಹಾರಿ ಶರಣರೆಂಬವರನ್ನು ಕೈಕಾಲು ಕಟ್ಟಿ ಚಲ್ಲಿದರು. ಪ್ರಾಕ್ತರಿಯ ಜವಾಬುದಾರನು ಸ್ವಯಂಸೇವಕರನ್ನು ಬೆತ್ತದಿಂದ ಹೊಡೆಯಲು ಪೋಲೀಸರಿಗೆ ಹೇಳಿದನು. ಪ್ರತಿಯೊಬ್ಬ ಸ್ವಯಂಸೇವಕನಿಗೆ ಬೆತ್ತದ ಪೆಟ್ಟುಗಳು ಬಿದ್ದವು. ಅವರ ಟೆಂಟುಗಳೂ [illegible] ಸೀಥನಲ್ಲಿಯ ಇದೇ ಹಾಡು, ಸಿಂಧ ಕಾಂಗ್ರೆಸ ಕಮಿಟಿಯಿಂದ ಬಂದ ಪತ್ರವು ಕೆಳ ಕಂಡಿದ್ದು ಬರೆದಿದೆ.

"ಪಂಜಾಬ ಲಷ್ಕರೀ ಕಾಯ್ದೆಯ ಕೈದಿಯಾದ ಶ್ರೀ ರಹಮತ ರಸೂಲರೆಂಬವರನ್ನು ಅವರೊಡನೆ ಶಿಕ್ಷಿಸಲ್ಪಟ್ಟ ಬೇರೆಯವರನ್ನು ಹೈದರಾಬಾದಿನ ಸೆಂಟ್ರಲ್ ಪ್ರಿಜನದಲ್ಲಿಟ್ಟಿರುವರು. ಶ್ರೀ ರಸೂಲರವರು ಒಂದು ಬಿಚ್ಚು ಪತ್ರವನ್ನು "ಹಿಂದು" ವೃತ್ತ ಪತ್ರವು ಪ್ರಸಿದ್ಧಿಸಿರುತ್ತದೆ. ಆ ಪತ್ರದ ಆಶಯವು ಇಂತಿಷ್ಟು— ಹೋದ ನವೆಂಬರ ತಿಂಗಳಲ್ಲಿ ಅಂಜುಮಾನದಿಂದ ಅವರು ಇಲ್ಲಿ ತರಲ್ಪಟ್ಟನಂತರ ಮರಣ ಶಿಕ್ಷೆ ವಿಧಿಸಲ್ಪಟ್ಟ ಕೈದಿಗಳನ್ನಿಡುವ ಕೊಠಡಿಯಲ್ಲಿ ಅವರನ್ನಿಟ್ಟು ಮೂರು ದಿವಸಗಳವರೆಗೆ ಅವರಿಗೆ ಅನ್ನವನ್ನೇ ಕೊಡಲಿಲ್ಲ. ಮೆಡಿಕಲ್ ಆಫೀಸರನು ಬಂದು ಅವರನ್ನು ನೋಡಿ ಅವರಿಗೆ ಅನ್ನವನ್ನು ಕೊಡಿಸಿದನು. ನಂತರ ಕೆಲವು ದಿನಗಳಾದವು. ಯಾವ ಯಾವಾಗ್ಗೆ ಸುಪರಿಂಟೆಂಡೆಂಟನು ಅವರ ಕಡೆಗೆ ಬರುತ್ತಿದ್ದನೊ ಆ ಎಲ್ಲ ಸಮಯಗಳಲ್ಲಿ ಅವರಿಗೆ ಮುಸಲ್ಮಾನರು ನಿವಾಜಿನ ಕಾಲಕ್ಕೆ ಹೇಗೆ ಕೈ ಮಾಡುವರೊ ಹಾಗೆ ಕೈ ಮಾಡಿ, 'ಸರಕಾರ ಏಕ ಹೈ' ಎಂದು ಅನ್ನಲು ಆಜ್ಞೆಯಾಗುತ್ತಿತ್ತು. ಇಸ್ಲಾಮಿ ಧರ್ಮದ ಮೂಲ ತತ್ವಕ್ಕೆ ವಿರುದ್ಧವಾದ ಹಾಗು ಅನೀತಿ ಮೂಲಕವಾದ ಈ ಆಜ್ಞೆಯನ್ನು ಪಾಲಿಸಲು ರಹಮತ ರಸೂಲರವರು ಒಪ್ಪಿಕೊಳ್ಳಲಿಲ್ಲ. ಅವರು ಸುಪರಿಂಟೆಂಡೆಂಟರಿಗೆ "ಈಶ್ವರನು ಮಾತ್ರ ಒಬ್ಬನಾಗಿರುವನು. ಈಶ್ವರನನ್ನು ಪ್ರಾರ್ಥಿಸುವ ಸಮಯದಲ್ಲಿಯಷ್ಟೇ ನಾನು ಕೈಗಳನ್ನು ಮೇಲಕ್ಕೆತ್ತುವೆನು" ಎಂಬ ಉತ್ತರವನ್ನು ಕೊಟ್ಟರು. ಇದನ್ನು ಕೇಳಿ ಸುಪರಿಂಟೆಂಡೆಂಟರು ಗರ್ವದಿಂದ 'ನಾನು ಸರಕಾರದ ಪ್ರತಿನಿಧಿಯಿರುವದರಿಂದ ಜೇಲಿನಲ್ಲಿ ನಾನು ನಿಮ್ಮ ದೇವರಾಗಿರುವೆನೆಂದು ಹೇಳಿದರು. ಜೇಲ ಕಮಿಟಿಯು ಶ್ರೀ ರಹಮತ ರಸೂಲರಿಗೆ ಜೇಲದ ಅಧಿಕಾರಿಗಳು ಹೇಳಿದ ಮಾತನ್ನು ಅವರು ಮಾಡಲಿಕ್ಕೆ ಬೇಕೆಂದು ನಿರ್ಣಯಿಸಿತು. ಅವರು, ನನ್ನ ಧರ್ಮ ಮಾರ್ಗದಿಂದ ಚ್ಯುತನಾಗಲು ಸರ್ವಥಾ ಇಚ್ಛಿಸುವದಿಲ್ಲೆಂದು ದಿಟ್ಟತನದಿಂದ ಹೇಳಿದರು. ಇದಕ್ಕಾಗಿ ಅವರಿಗೆ ಘಟಕೀ ಕತ್ತರಿಬೋಡಿ ಮೊದಲಾದ ಐದು ವಿಧದ ಭಯಂಕರ ಶಿಕ್ಷೆಯು ವಿಧಿಸಲ್ಪಟ್ಟಿತು. ಅಧಿಕಾರಿಗಳು ರಾಜಕೀಯ ಕೈದಿಗಳೊಡನೆ ಯಾವಬಗೆಯಾಗಿ ನಡೆದುಕೊಳ್ಳುತ್ತಾರೆಂಬದರ ಬಗ್ಗೆ ಇದೊಂದು ಉದಾಹರಣೆಯಾಗುತ್ತದೆ. ಮತ್ತು ರಾಜಕೀಯ ಕೈದಿಗಳು ಇಂಥ ಕೈದಿಗಳಂತೆ ಕೆಟ್ಟ ರೀತಿಯಿಂದ ನಡಿಸಲ್ಪಡುವರು. ನಿನ್ನೆ ನಾವು ಶ್ರೀ ಹರಾನಂದರೆಂಬ ಒಬ್ಬ ದೇಶಭಕ್ತರನ್ನು ಕಾಣಬೇಕೆಂದು ಜೇಲಿಗೆ ಹೋದಾಗ್ಗೆ ಅವರೊಡನೆ ನಮ್ಮ ಮಾತುಕಥೆ ಕೇವಲ ೧೨ ಐದು ಮಿನಿಟಗಳಲ್ಲಿಯೇ ಮುಗಿಸಬೇಕಾಯಿತು. ಜೇಲಿನ ನಿಯಮಗಳನ್ನು ನೋಡಿದರೆ ಹದಿನೈದು ಮಿನಿಟುಗಳು ದೊರೆಯುವದು ಯೋಗ್ಯವು.

"ಮಾ[illegible]ಯಾರಿ ಎಂಬ ಊರಲ್ಲಿ ವಿಶೇಷರು ನಿರಪರಾಧಿಯಾದ ಜನರ ಮೇಲೆ ಗುಂಡಿನ ಮಳೆಗರೆದು ಒಬ್ಬನನ್ನು ಕೊಂದು ಇತರ ಅನೇಕರನ್ನು ಗಾಯಗೊಳಿಸಿದರೆಂಬ ಮಾತು ಯಾರೂ ಇನ್ನೂ ಮರೆತಿರಲಿಕ್ಕಿಲ್ಲ. ಈ ಸಂಗತಿಯನ್ನು ವಿಚಾರಿಸುವದಕ್ಕೋಸ್ಕರ ಸರಕಾರದಿಂದ ಯೋಜಿಸಲ್ಪಟ್ಟ ವಿಚಾರಣಾ ಮಂಡಳವು ಒಂದು ರಿಪೋರ್ಟನ್ನು ತಯಾರಿಸಿ ಕಳಿಸಿರುವದು. ಆದರೆ ಈ ವರೆಗೂ ಬೈಲಿಗೆ ಬರದೆ ಮುಂಬೈ ಸೆಕ್ರೆಟೆರಿಯೆಟದ ದಫ್ತರದಲ್ಲಿ ಬಿದ್ದುಕೊಂಡಿರುವದು. ಆ ಗುಂಡಿನ ಮಳೆಗರೆಯುವ ಕಾರ್ಯದಲ್ಲಿ ಸೂತ್ರಧಾರನಾಗಿದ್ದ ಸಬ್ ಇನ್ಸಪೆಕ್ಟರನಿಗೆ ಅವನ ಅಪರಾಧಕ್ಕಾಗಿ ಸ್ವಲ್ಪವಾದರೂ ಶಿಕ್ಷೆ ಯಾಗದಿದ್ದುದರಿಂದ ಉತ್ತೇಜನವು ದೊರೆತಂತಾಗಿ ಕಂಡಾರ ಎಂಬಲ್ಲಿ ಮನಸ್ಸಿಗೆ ಬಂದಂತೆ ನಡೆಯಲಾರಂಭಿಸಿರುವನು.

ಸ್ವಲ್ಪ ದಿವಸಗಳ ಹಿಂದೆ ಶಿಕ್ಷೆಯನ್ನನುಭವಿಸುತ್ತಿದ್ದ ಒಬ್ಬ ಅಸಹಯೋಗಿಯು ಕೊಡತಕ್ಕ ದಂಡದ ಹಣವನ್ನು ವಸೂಲು ಮಾಡಲಿಕ್ಕೆಂದು ಈ ಸಬ್ ಇನ್ಸಪೆಕ್ಟರನು ಅವನ ಮನೆಯನ್ನು ಹೊಕ್ಕು ಹೆಂಗಸರ ವಶದಲ್ಲಿರುವ ಅವನ ಬೆಂದಗೆಯನ್ನು ಬಲತ್ಕಾರದಿಂದ ತನ್ನ ವಶಕ್ಕೆ ತೆಗೆದುಕೊಂಡನು. ಹೆಂಗಸರೆಲ್ಲರು ಘೋಷಾದಲ್ಲಿದ್ದರು. ಇದೇ ಸಬ್ ಇನ್ಸಪೆಕ್ಟರನು ಲಕ್ಷಿಸದೆ [illegible] ಕೈಗೆ ಸಿಕ್ಕ ಪದಾರ್ಥಗಳನ್ನು ತೆಗೆದುಕೊಂಡು ಕಡೆಗೆ ಒಬ್ಬ ಸ್ತ್ರೀಯಳ ಮೂಗಿನಲ್ಲಿಯ ಮೂಗುತಿಯನ್ನು ಹಿಡಿದುಕೊಂಡನು! ಸ್ತ್ರೀಯೊಬ್ಬನು ಆ ಅಸಹಾಯಳಾದ ಸ್ತ್ರೀಯಳ ಸಂರಕ್ಷಣೆಗಾಗಿ ಧಾವಿಸಿ ಬರಲು ಅವನ ಮೈಮೇಲೆ ಬಳಿತಾದ ಏಟುಗಳು ಬಿದ್ದವು. ಆ ಸದ್ಗೃಹಸ್ಥನು ಸ್ತ್ರೀಯರನ್ನೆಲ್ಲ ಆ ಮನೆಯಲ್ಲಿಯ ಒಂದು ಸುರಕ್ಷಿತವಾಗಿರುವ ಖೋಲಿಯಲ್ಲಿ ಕಳಿಸಿದರವರೆಗೆ ಪೋಲೀಸರು ಒಳಗೆ ಹೋಗಕೂಡದೆಂದು ವಿನಂತಿಯಿಂದ ಹೇಳಿದಾಗ್ಯೂ ಈ ಅಧಿಕಾರಿಯು ಅದನ್ನು ಲಕ್ಷಿಸದೆ ಮನೆಯನ್ನು ಹೊಕ್ಕು ಮೇಲೆ ಹೇಳಿದಂತೆ ಅತ್ಯಾಚಾರವನ್ನು ಮಾಡಿದನು."

ಸರಕಾರದ ಆಳಿಕೆಯಲ್ಲಿ ನ[illegible] ಜೀಸಿತವಾಗಲಿ, ಆಸ್ತಿಯಾಗಲೀ ಸುರಕ್ಷಿತವಾಗಿ ಉಳಿದಿಲ್ಲ. ಗಂಡಸರೂ ಹೆಂಗಸರೂ ಗಂಡಾಂತರದಲ್ಲಿರುವರು. ಕಾರಾಗೃಹದಲ್ಲಿಯೂ ಜೀವನವು ಬಹು ಅಸಹ್ಯವಾಗಿರುವದು. ಕೇವಲ ನಮ್ಮ ದೇಹಗಳನ್ನು ಕಾರಾಗೃಹದಲ್ಲಿಡುವದರಿಂದ ಸರಕಾರಕ್ಕೆ ತೃಪ್ತಿಯಾಗದಾಗಿದೆ. ಕಾರಾಗೃಹದ ಬಂಧನವೊಂದಿಗೆ ನಾವು ಯಾತನೆಗಳನ್ನು ತಾಳಬೇಕಾಗುತ್ತದೆ ಮಾನಹಾನಿಯನ್ನು ಸಹಿಸಬೇಕಾಗುತ್ತದೆ.

ಈ ಬಗೆಯಾಗಿ ನಾವು ಲಷ್ಕರೀ ಕಾಯ್ದೆಯ ಕೆಳಗೇ ಇದ್ದಂತಾಗಿದೆ. ಕೇವಲ ಚಾಲಿಯನ ವಾಲಾ ಬಾಗದ ಕೊಲೆಯಂಥ ಕೊಲೆಯಾಗುವದೊಂದುಳಿದದೆ. ಆದರೆ ಈ ಸ್ಥಿತಿ

ಯು ಪಂಜಾಬಿನ ಲಷ್ಕರೀ ಕಾಯ್ದೆಗಿಂತಲೂ ಹೀನವಾದದು. ಜಲಿಯನ್ ಬಾಗದಲ್ಲಿ ಆದ ಕೊಲೆಯು ಅತ್ಯಂತ ಭಯಂಕರವಾದುದೆಂಬುದೇನೋ ನಿಜ, ಆದರೆ ಅದರಿಂದ ಸರಕಾರದ ಉದ್ದೇಶವೇನಿದ್ದಿತೆಂಬುವದು ಸ್ಪಷ್ಟವಾಗಿ ಹೊರಬಿದ್ದಿತು, ಮತ್ತು ನಮ್ಮೆಲ್ಲರಿಗೆ ಅವಶ್ಯವಾದ ಎಚ್ಚರಿಕೆಯುಂಟಾಯಿತು ಮತ್ತು ಆ ಕೃತ್ಯಗಳಲ್ಲಿ ಯಾವದೂ ಮುಚ್ಚುಮರೆಯಾಗಿದ್ದಿಲ್ಲ ಎಲ್ಲವೂ ಪ್ರಕಾಶದಲ್ಲಿ ನಡೆಯಿತು. ಆದರೆ ಈಗ ಸರಕಾರದ ಯಾವತ್ತು ದುಷ್ಕೃತ್ಯಗಳು ಜೇಲಿನ ಗೋಡೆಯ ಒಳಮಗ್ಗಲಿನಲ್ಲಿಯೂ ಅಪ್ರಸಿದ್ಧವಾದ ಸಣ್ಣ ಸಣ್ಣ ಹಳ್ಳಿಗಳಲ್ಲಿಯೂ ನಡೆಯುತ್ತಲಿರುವವು. ಕತ್ತಲೆಯಲ್ಲಿ ಹಿಂಸೆಯು ನಡೆಯುವದರಿಂದ ಅದರ ಯಥಾರ್ಥಜ್ಞಾನವು ಜನರಿಗೆ ಆಗದೆ ಸರಕಾರದ ನಿಜ ಸ್ವರೂಪವು ಪೂರ್ಣವಾಗಿ ವ್ಯಕ್ತವಾಗುವದಿಲ್ಲ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಕರ್ತವ್ಯವೇನಿದೆಯೆಂಬುದನ್ನು ಚನ್ನಾಗಿ ಅರಿತುಕೊಳ್ಳವಾ ಸರಕಾರವು ಮಾಡಲಿಚ್ಛಿಸುವ ದುಷ್ಕೃತ್ಯಗಳನ್ನು ಬೈಲಿನಲ್ಲಿ ಮಾಡಲಿಕ್ಕೆ, ಅದಕ್ಕೆ ನಾವು ಅಗತ್ಯ ಪಡಿಸಲಿಕ್ಕೆಬೇಕು ಮತ್ತು ಹೆಜ್ಜೆಹೆಜ್ಜೆಗೆ ಧೈರ್ಯವಂತರಾಗಿ, ಗಿರ್ಗಾಂವಿನಲ್ಲಿ ಹೇಗೆ ಬಂದೂಕಿಗಳಿಂದ ಗುಂಡುಗಳು ಬರಹತ್ತಲು ಭಯಭೀತರಾಗಿ ಜೀವನನ್ನುಳಿಸಿಕೊಳ್ಳಲು ಬೆನ್ನು ತೋರಿಸುತ್ತ ಓಡಿಹೋಗಲಾರಂಭಿಸಿದೆವೋ ಹಾಗೆ ಮಾಡದೆ, ಈಗ ನಿರ್ಭಯರಾಗಿ ಶುದ್ಧ ಅಂತಃಕರಣದಿಂದ ಗುಂಡಿನ ಮಳೆಗೆ ಎದೆಗೊಟ್ಟು ಎದುರಾಗಿ ನಿಲ್ಲಲಿಕ್ಕೆಬೇಕು. ಇದೇ ನಮ್ಮ ಕರ್ತವ್ಯವು.

(ಯಂ. ಇ.) (ಮೋ. ಕ. ಗಾಂಧಿ)

---

(೭೫ ಪುಟದಿಂದ ಮುಂದೆ ಸಾಗಿದ್ದು)

ಸಹಾಯದ ಪಟಸಪ್ಪಿತ್ತು ಅಂಗಡಿಕಾರರು ಹರತಾಳದ ವ್ರತಕ್ಕೆ ಮನಸೋತು ಅಂಗಡಿಗಳನ್ನು ತೆರೆಯಬಾರದೆಂದು ವ್ಯವಸ್ಥಾಪಕ ಮಂಡಲದವರು ಅವರನ್ನು ಬೆದರಿಸಿದ್ದರು. ಆದರೆ ಒಂದೂ ಅಂಗಡಿಯು ತೆರೆದಿದ್ದಿಲ್ಲ

ಮುಂದೆ ವಾಲ್ಫಂಟ ರೋಡಿಗೆ ನಾನು ನಡೆದು ಹೋದೆನು. ಅಲ್ಲಿಟ್ಟ 'ವೆಲಿಂಗಟನ್' ಚಲನ ಚಿತ್ರಪಟ (ಸಿನೆಮಾ) ಮಂದಿರದ ನೋಟವು ದುಃಖಕಾರಕವಾಗಿದ್ದಿತು ಈ ಮಂದಿರದ ಯಜಮಾನನನ್ನು ಬೆದರಿಸುವ ಜನರ ಪಟ್ಟಣೆಯು ಅಲ್ಲಿ ಕೂಡಿತ್ತು. ಕೆಲವು ಕಲ್ಲುಗಳು ಬಿದ್ದವು. ಆ ಪಾರಸೀ ಗೃಹಸ್ಥನು ಗೋಳೀಬಾರ ಮಾಡಿದನು, ಅದರಲ್ಲಿ ಒಬ್ಬನು ಸತ್ತನು. ಇಬ್ಬರಿಗೆ ಘಾಯವಾಯಿತಂತೆ ಕೂಡಿದ ಜನರು ಸಿಟ್ಟಿಗೆದ್ದು ಆ ನಾಟಕಗೃಹವನ್ನು ಒಳನುಗ್ಗಿದರು. ಒಮ್ಮೊಮ್ಮೆ ಅವರು ಶಾಂತವೃತ್ತಿಯನ್ನು ತಾಳುತ್ತಿದ್ದರು. ಲಷ್ಕರೀ ರಕ್ಷಣೆಯಿಂದ ಆ ಓಣಿಯು ತುಂಬಿ ಬಿಟ್ಟಿತು. ಅಲ್ಲಲ್ಲಿ ಸಶಸ್ತ್ರ ಸವಾರರು ಓಡಾಡ ತೊಡಗಿದರು. ಅದೇ ಓಣಿಯಿಂದಲೇ ಯುವರಾಜರು ಬರತಕ್ಕವರಿದ್ದರು. ಅಷ್ಟರಲ್ಲಿಯೇ ಅವರ ದಾರಿಯು ತಿರುಗಿತು.

ಸರ ತ್ಯಾಗರಾಜರ ಮನೆಗೂ ಕೂಡಲೇ ಮುತ್ತಿಗೆ ಹಾಕಿದರೆಂದು ತಿಳಿಯಬಂತು ಕಾರಣ, ಯುವರಾಜರು ಬಂದ ಆ ದಿವಸ ಅವರು ಕೌನ್ಸಿಲ್ಲಿಗೆ ಹೋಗಲಿಲ್ಲ. ಕೂಡಲೇ ಆ ಜನರ ಪಟ್ಟಣೆಯಲ್ಲಿ ಸೇರಿ ನಾನು ಅದನ್ನು ಚದರಿಸಿದೆನು ಈ ಸಂಗತಿಗಳು ಬಹಳೇ ದುಃಖಕಾರಕವಾಗಿವೆ. ಆದರೆ, ಯಾವತರದ ಅನಿಷ್ಟಗಳು ಒದಗದಿದ್ದದ್ದಕ್ಕಾಗಿ ನನಗೆ ಆನಂದವೆನಿಸಿದೆ ತ್ಯಾಗರಾಜನ ಶರೀರಕ್ಕೆ ಯಾವತರದ ಧಕ್ಕೆಯಾಗಲಿಲ್ಲ. ಹಾಗೂ ಆಗುವಂತಿದ್ದಿಲ್ಲ"

ಹರತಾಳ ದಿನವು ಯಶಸ್ವಿಯಾಯಿತೆಂದು ಮದ್ರಾಸ ಇಲಾಖೆಯನ್ನು ಅಭಿನಂದಿಸುವ ಉದ್ದೇಶದಿಂದಲೇ ಡಾ|| ರಾಜನ್ನರ ಪತ್ರದ ಸಾರಾಂಶವನ್ನು ನಾನು ಪ್ರಸಿದ್ಧಿಸಿಲ್ಲ ಆದರೆ, ಆ ದಿನದಲ್ಲಿ ಹುಟ್ಟಿದ ಹೂಲಿಯನ್ನು ಕಂಡು ದುಃಖಿ ಪಡುವ ಸಂಗತಿಯೆಂದು ಮುದ್ರಿಸಬೇಕಾಯಿತು ಈ ತರದ ಹೂಲಿಯೂ, ಹರತಾಳವೂ ಇದ್ದಿಲ್ಲವೆಂದರೆ ನೆಟ್ಟಗಾಗುತ್ತಿತ್ತು. ಹೂಲಿಗಾರರ ಅವಿಚಾರ ವೃತ್ತಿಯು ಹೀಗೆ ಮಾಡಿಸಿತೆಂದು ಹೇಳುವದು ಸ್ವಸಂರಕ್ಷಣೆಯ ಲಕ್ಷಣವಲ್ಲ. ಯಾಕಂದರೆ, ಇಂತಹ ವರ್ತನದಿಂದ ಮದ್ರಾಸ ಇಲಾಖೆಯ ಅಸಹಯೋಗಿಗಳು ತಮ್ಮಲ್ಲಿ ಆಳುವಂಥ ಶಕ್ತಿಯು ಇಲ್ಲವೆಂದು ಸ್ಪಷ್ಟವಾಗಿ ತೋರಿಸಿದಂತಾಯಿತು ಅಸಹಯೋಗ ಮತಾಧಿಪತ್ಯವನ್ನು ಪಡೆಯಲಿಚ್ಛಿಸುವವರು ಎಲ್ಲ ತರದ ಅವಿಚಾರ ಕೃತಿಗಳನ್ನು ನಿರ್ಬಂಧಿಸುವಷ್ಟು ಶಕ್ತರಾಗಿತಕ್ಕವರು. ಹರತಾಳ ಪ್ರಕರವು ಶಾಂತತಾಮಯವಾಗಿದ್ದಿಲ್ಲ. ಚಲನ ಚಿತ್ರ ಪಟ ಯಂತ್ರವನ್ನಿಟ್ಟ ಮನುಷ್ಯನಂತೆಯೇ ಬೇರೆ ಯಾರಾದರೂ ತಮ್ಮ ಅಂಗಡಿಗಳನ್ನು ತೆರೆದಿಟ್ಟದ್ದಾಗ್ಗೆ, ಅವರಿಗಾದರೂ, ಸಂಕಟಕ್ಕೊಳಗಾಗಬೇಕಾಗುತ್ತಿತ್ತು. ಅವನು ಗೋಳೀಬಾರು ಮಾಡಿದ್ದಿಲ್ಲವೆಂದರೆ, ಅವನ ಚಿತ್ರಪಟ ಮಂದಿರವು ನಾಶವಾಗುತಿತ್ತೆಂಬ ದೃಷ್ಟಿಯಿಂದ ಆ ಚಲನ ಚಿತ್ರಪಟದ ಯಜಮಾನನು ಅಪರಾಧಿಯಲ್ಲ ಜನಸಂಮರ್ದನೆಯು ಅತಿಕೋಪವು ಉದ್ಧಾಮ ವೃತ್ತಿಯ ಪ್ರಕೋಪವನ್ನೂ ಪ್ರಕಟಗೊಳಿಸುತ್ತಿತ್ತು. ಸರ್ ತ್ಯಾಗರಾಜರ ಮನೆಯನ್ನು ಮುತ್ತುವವರಿಂದ ಅವರ ವ್ಯಕ್ತಿ ಸ್ವಾತಂತ್ರ್ಯದಲ್ಲಿ ಕೈ ಹಾಕಿದಂತಾಯಿತು.

ಯುವರಾಜರಿಗೆ ಮಾನವನ್ನರ್ಪಿಸುವ ರಣಮುಕ್ರೀಣ (Knight) ಪದವೀಧರನ ಕೆಲಸಕ್ಕೆ ಅಡ್ಡಿಯಾದ್ದರಿಂದ ಜನಸಂಮರ್ದನವು ತನ್ನ ಕಿಮ್ಮತ್ತನ್ನು ಕಳಕೊಂಡಿತು. ತ್ಯಾಗರಾಜರ ಮಾನಪತ್ರದ ಬೆಲೆಯನ್ನು ಹೆಚ್ಚಿಸಿದಂತಾಯಿತು ಇದು ಕೂಡಿದವರ ತಪ್ಪೆಂದು ನಿಜವಾದ ಅಸಹಯೋಗಿಗಳು ಉದಾಸೀನರಾಗಿದ್ದದ್ದು ಅವರ ವ್ರತಕ್ಕೆ ಕಲಂಕವನ್ನು ತಂದಿತು.

ಡಾ. ರಾಜನ್ನರು ತಮ್ಮ ಅನುಯಾಯಿಗಳೊಡನೆ ಒಂದಾಪದೂ ಕಲ್ಲೊಗೆಯದೆ, ಹರತಾಳ ದಿನವನ್ನು ಶಾಂತಮಯವಾಗಿರಿಸಿದರು ಇವರಿಗೆ, ಸೆ ಆ ಕೆಲಸದ ಜಯಾಭಿನಂದನವು ಮುಂಬಯಿ ಪಟ್ಟಣದಂತೆಯೇ ಮದ್ರಾಸ ಪಟ್ಟಣವಾದರೂ ಒಂದು ಉದಾಹರಣೆಯನ್ನು ಹಾಕಿಕೊಟ್ಟಿತು. ಸ್ವರಾಜ್ಯ ವಾತಾವರಣೆಯನ್ನು ಕಾಣುವ ಪೂರ್ವದಲ್ಲಿ ನಾವು ಮಾಡತಕ್ಕದ್ದು ಬಹಳವಾಗಿರುವದು. ಶಾಂತತಾ ವೃತ್ತಿಯ ಜಯಶಾಲಿಯಲ್ಲಿ ವಿಶ್ವಾಸವಿಡಬೇಕೋ ಇಲ್ಲವೇ ಹಿಂಸಾ ವೃತ್ತಿಗೆ ಈ ಅಹಿಂಸಾತತ್ವವು ಸಾಧನೀಭೂತವಾದದ್ದೆಂಬ ಸಂಗತಿಯಲ್ಲಿ ವಿಶ್ವಾಸವಿಡಬೇಕೋ ಇದು ಅರಿಯದ ಮಾತಾಗಿದೆ ಈ ಎರಡನೇ ಮಾರ್ಗದಿಂದಲೇ ನಿಜವಾದ ವಸ್ತುಸ್ಥಿತಿಯು ಗೊತ್ತಾಗುತ್ತಿದ್ದಾಗ್ಗೆ, ನಮ್ಮ ಜನಾಂಗವು ಹಿಂದಿರುಗಲಿ. ಹಿಂದುಮಾತೆಯ ಆತ್ಮಜ್ಯೋತಿಯು ಅಹಿಂಸಾಮಯವಾಗಿರುವದು. ಮತ್ತು ಇದೇ ಹೆಸರಾದ ಮಾರ್ಗವು ಎಂದು ನನ್ನ ಸಂಪೂರ್ಣ ವಿಶ್ವಾಸವಿದೆ. ಅಸಹಯೋಗಿಗಳು ಅಹಿಂಸಾ ಧರ್ಮದಿಂದಲೇ ತಮ್ಮ ಕೆಲಸವನ್ನು ಪಾಲಿಸುತ್ತಿರುವರು. ಅಮೃತಸರ, ಲಾಹೋರ, ಅಲೀಗಢ, ಅಲ್ಲಾಬಾದ, ಕಲಕತ್ತಾ ಬಾರಿಸಾಲ, ಮೊದಲಾದ ಪಟ್ಟಣದ ಅಸಂಖ್ಯ ಉದಾಹರಣೆಗಳು ಆ ನಾಗರಿಕ ಅಸಹಯೋಗಿಗಳ ಸಹನಶೀಲತೆಯನ್ನು ತೋರಿಸುವ ಅನುಕರಣೀಯವಾದವುಗಳಾಗಿರುತ್ತವೆ ಆದರೆ ಮದ್ರಾಸ ಇಲಖೆಯಲ್ಲಿ ಮಾತ್ರ ಹಿರಣತನ್ನರಿಯದ ಜನರ ದಟ್ಟಣೆಯೇ ಹೆಚ್ಚಾಯಿತು. ಅಸಹಯೋಗಿಗಳಲ್ಲಿ ಆತ್ಮಸಂಯಮನದ ಶಕ್ತಿಯಿದ್ದಿಲ್ಲ ಆದರಿಂದ ಮದ್ರಾಸದ ಹೊತೆಯಿಂದ ನಾವೇನೂ ನಿರಾಶರಾಗಬಾರದು ಹಡೋಸಯಲ್ಲಿ ಮಿ. ಬೇಕರನ್ನು ಎಳೆಹೋದ ಸಂಗತಿಯಾದರೂ ಇಷ್ಟೇ ದುರ್ದೈವಕರವಾಗಿದೆ. ಸುದೈವದಿಂದಲೇ ಅವರು ಜನರ ಕೈಯೊಳಗಿಂದ ಪಾರಾದರು. ಕ್ರೂರಾಚರಣೆಯ ಉದ್ದಾಮತನವನ್ನು ಕಂಡು ಸೈರಿಸಲಾರದಷ್ಟು ಕಠಿಣವಾಗಿದೆ. ಈ ಪ್ರಕಾರದ ಅತ್ಯಾಚಾರವು, ಅಸಹಯೋಗಿಗಳ ಸಂಗಡಕ್ಕೆ ಸಂಬಂಧಿಸದ ಬೇರೆ ಜನರಿಂದ ಸಂಭವಿಸಿರುವವೆಂದು ನಾನಂತೂ ಸಂಶಯವಿಲ್ಲದೇ ಹೇಳುವೆನು ಇಂತಹ ಪ್ರಸಂಗಗಳನ್ನಾದರೂ ನಾವು ದಾಟಿಹೋಗಬಹುದ. ಅಹಿಂಸಾಮಯ ವಾತಾವರಣದಲ್ಲಿ ಇಂತಹ ಸಂಗತಿಗಳು ಅಸಂಭವವು ಇಂಥಾ ಸ್ಥಿತಿಗೆ ನಾವಿನ್ನೂ ಮುಟ್ಟಿಲ್ಲವೆಂದು ಖಂಡಿತವಾಗಿ ಒಪ್ಪಬೇಕು ಹಿಂಸಾವೃತ್ತಿಯನ್ನು ನಮ್ಮ ವಿಚಾರದಿಂದ ಬಹಿಷ್ಕರಿಸಿದ ಮಾತ್ರಕ್ಕೆಯೇ ನಮಗೆ, ಅಂತಹ ಸ್ಥಿತಿಯು ಕಾಣಬರುವದು.

ಯಂಗ ಇಂಡಿಯಾ

ಮೋಹನದಾಸ ಕರಮಚಂದ ಗಾಂಧಿ.

---

# The Karnatak Trading Association.

**ಉಳಿಸಿರಿ! ಮುಂಬಯಿ ಖರ್ಚು ಉಳಿಸಿರಿ!**

ಇನ್ನು ಮುಂದೆ ಖರೀದಿಗಾಗಿ ಮುಂಬಯಿಗೆ ಯಾರಿಗೂ ಸ್ವತಃ ಬರುವ ಕಾರಣವಿಲ್ಲ. ದಿ ಕರ್ನಾಟಕ ಟ್ರೇಡಿಂಗ ಅಸೋಸಿಯೇಶನ್‌ದವರು ಮುಂಬಯಿ ಪೇಟೆಗಳನ್ನೆಲ್ಲ ನಿಮ್ಮ ಮನೆಯ ಬಾಗಿಲಕ್ಕೆ ತಂದು ಇಡಲು ಟೊಂಕ ಕಟ್ಟಿದ್ದಾರೆ. ಒಂದು ದುಡ್ಡಿನ ಕಾರ್ಡು ಚೆಲ್ಲಿದರೆ ಸಾಕು. ಉಲಟ ಟಪಾಲಿನಿಂದಾಗಲಿ, ರೇಲ್ವೆ ಪಾರ್ಸಲಿನಿಂದಾಗಲಿ, ಗೂಡ್ಸ ಪಾರ್ಸಲಿನಿಂದಾಗಲಿ, ನಿಮ್ಮ ಇಚ್ಛೆಯಂತೆ ನಿಮ್ಮ ಸಾಮಾನುಗಳು ಭದ್ರವಾಗಿ ಪ್ಯಾಕಾಗಿ ನಿಮ್ಮ ಮನೆಯ ಹಾದಿ ಹಿಡಿಯುತ್ತವೆ. ಪೇಟೆಯ ಅತ್ಯುತ್ತಮವಾದ ಪರಿಚಯವೇ ನಮ್ಮ ಗುಟ್ಟು. ಅದರ ಮೂಲಕವಾಗಿಯೇ ಉತ್ತಮವಾದ ಸಾಮಾನುಗಳನ್ನು ಅತ್ಯಂತ ಸೋವಿಯಾಗಿ ಕೊಡಲಿಕ್ಕೆ ನಮಗೆ ಸಾಧ್ಯವಾಗುತ್ತದೆ. ಕಾರಣ ಮುಂಬಯಿ ಖರೀದಿ ಬಂದ ಕೂಡಲೆ ನಮ್ಮ ಸ್ಮರಣ ಮಾಡಿಕೊಳ್ಳಿರಿ.

ಪತ್ತೆ—ದಿ ಕರ್ನಾಟಕ ಟ್ರೇಡಿಂಗ ಅಸೋಸಿಯೇಶನ ಜನರಲ್ ಮರ್ಚಂಟ ಕಮಿಶನ್ ಎಂಡ ನ್ಯೂಜ ಏಜಂಟ್ಸ

ಹಿರಾ ಬಿಲ್ಡಿಂಗ ಕಾರ್ನಾಕ್ ರೋಡ ಮುಂಬಯಿ

ತಾರಿನ ಪತ್ತೆ:—"ಕಾಟ್ರೂಸ್ಸು"



ತ್ವರೆ ಮಾಡಿರಿ! ತ್ವರೆ ಮಾಡಿರಿ!!

**ಪ್ರತಿಗಳು ಸ್ವಲ್ಪೇ ಹೊರಟಿರುವವು**

**ಬೇರೆ ಬೇರೆ ರಾಷ್ಟ್ರಗಳಲ್ಲಿಯ**

# ಅಸಹಕಾರ

ಎಂಬ ಗ್ರಂಥವು ಅಚ್ಚಾಗಿದೆ. ಬೇಗನೆ ಪ್ರತಿಗಳು ತೀರುವವು. 'Non-co-operation in other lands' ಇದರ ಭಾಷಾಂತರ ಮುದ್ದಿಯು ಕನ್ನಡಿಗರ ದಶೆಯಿಂದ ಬರೆಯಲ್ಪಟ್ಟಿದೆ. ಬೇಕಾದವರು ತೀವ್ರವಾಗಿ ಕೆಳಗಿನ ಪತ್ತೆಗೆ ಬರೆಯಿರಿ. ಶುದ್ಧವಾದ ಅಚ್ಚಗನ್ನಡ ಭಾಷೆ! ಅಂದವಾದ ಮುದ್ರಣ. ಬೆಲೆ-೧ ರು.

ಪ್ರಸ್ತಾವನಾ ಲೇಖಕ— ರಂಗನಾಥ ದಿವಾಕರ ಎಮ್. ಎ. ಸಂಪಾದಕ ಕರ್ಮವೀರ

ವಿಳಾಸ:— ನರಸಿಂಹ ಶ್ರೀನಿವಾಸ ಕಮಲಾಪೂರ.

ಮಂಗಳವಾರ ಪೇಟೆ, ಧಾರವಾಡ.



**ಕನ್ನಡ ಬಾಲ ಬಾಲಿಕೆಯರಿಗೂ ಪ್ರೌಢರಿಗೂ ಮನೋರಂಜನ-ಜ್ಞಾನಾಭಿವೃದ್ಧಿಗೊಳಿಸುವ ಚಿತ್ರಪಟಯುಕ್ತ ಹಾಗು ಸುಲಭ ಭಾಷೆಯ**

# "ಬಾಲಮಿತ್ರ"

ವೆಂಬ ಮಾಸಿಕ ಪುಸ್ತಕವು ಜನವರಿ (೧೯೨೦) ಯಿಂದ ಒಳ್ಳೇ ನಿಯಮಿತವಾಗಿ ಹೊರಡುತ್ತಿರುವದು. ಇದು ವರೆಗೆ ೧೨ ಚರಿತ್ರೆಗಳು ೧೨ ಹಾಡುಗಳು ೧೭ ಚಲೋ ಕತೆಗಳು, ೧೩ ಐತಿಹಾಸಿಕ, ೯ ಶಾಸ್ತ್ರೀಯ ಸಂಗತಿಗಳು; ೯ ನಿಬಂಧಗಳು ಇದಲ್ಲದೆ ಪ್ರತಿಸಾರೆ ನಗೆ ಮಾತು, ತಿಂಗಳ ಸುದ್ದಿ, ಒಗಟು ಕೂಟ ಪ್ರಶ್ನಗಳು ಬರುವವು. ಇಂತಹ ಉಪಯುಕ್ತ ಹಾಗು ಕಡಿಮೆ ಬೆಲೆಯ ಮಾ. ಪು. ವು ಬೇರೊಂದಿಲ್ಲ. ಬೇಗ ಹೊಸ ವರ್ಷದ ಚಂದಾದಾರರಾಗಿರಿ.

ವಾರ್ಷಿಕ ಚಂದಾ ೧ ರೂ.೦ (ಟ. ಹಾ. ಸಹಿತ)

ವಿಳಾಸ:—ವ. ಮ. ಶಟ್ಟಿ ಹೆ. ಮಾ. ಪ್ರಾ. ಸ್ಕೂ. ಟ್ರೇನಿಂಗಕಾಲೇಜ ಧಾರವಾಡ.



## ವೀರ ವಿಲಾಸಿನಿ.

ಹಾಸ್ಯ ಪ್ರಧಾನವಾದ ಅದ್ಭುತ ವಿಷಯ ಪ್ರಕಾಶಕವಾದ, ಗಂಭೀರ ಗರ್ಭಕವಾದ ಕನ್ನಡ ವಾರ ಪತ್ರಿಕೆ! ಇದೇ ಡಿಸಂಬರ ೧೨ ನೆಯ ತಾರೀಖಿಗೆ ಆರಂಭವಾಗುವುದು. ಈ ಅವಧಿಯೊಳಗಾಗಿ ಹೆಸರುಗಳನ್ನು ಕೊಡುವವರಿಗೆ ಭೆಟಿಯಾಗಿ ಐವತ್ತಾಲ ಪತ್ರಿಕೆಯನ್ನು ಕಳುಹಿಸುವೆವು. ಅಂಚೆಯ ವೆಚ್ಚಕ್ಕಾಗಿ ೧೨ ಆಣೆ ಮಾತ್ರ ಮುಂಗಡ ಕಳಿಸಬೇಕು. ಯಾರಿಗೂ ವ್ಹಿ. ಪಿ. ಇಲ್ಲ. ಇದರ ನಿಜವಾದ ವಾರ್ಷಿಕ ಚಂದಾ ೧-೧೨ ಆಣೆ. ಪತ್ರಿಕೆಯು ಬಲು ಅಂದವಾಗಿ ಲ... ಗಳಿರುವದು. ಪ್ರಸಿದ್ಧವಾದ "ನಕಲಿಯು" ಪತ್ರಿಕೆ!!

ವಿಳಾಸ— ಮ್ಯಾನೇಜರ್ ವೀರ ವಿಲಾಸಿನಿ.

ನಂ. ೧೬೪ ೪ ನೇ ಬೀದಿ ಚಾಮರಾಜ ಪೇಟೆ

ಬೆಂಗಳೂರ ಸಿಟಿ.



## ನಂಬರ ೧ ನೇ ನಿರ್ಮಲವಾದ

ಏಜಂಟರು ಬೇಕು. ಏಜಂಟರು ಬೇಕು

# ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾದ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳೇ ಸೋವಿಯ ದರದಲ್ಲಿ ತೈಲವು ಸಿಗುವದು. ಸಿಕ್ಕಿ ಎಂ ಔನ್ಸು ತೈಲದ ಬಾಟ್ಲಿ ಅಥವಾ ಜಟ್ಟಿ ೧ಕ್ಕೆ ರೂಪಾಯಿ ೩. ಡಜನಕ್ಕೆ ೩೦. ವಿಶೇಷ ಮಾಹಿತಿ ಪತ್ರದ್ವಾರ.

ದಿ ಏ ಪಿ ಕಂಪನಿ ಪೊ. ಹೊನ್ನಾವರ ಜಿಲ್ಹಾ ಉತ್ತರ ಕಾನಡಾ.



## ಉತ್ತಮ ಆರ್ಯ ಔಷಧಗಳು.

| | | |
|---|---|---|
| ಸುವರ್ಣ ರಾಜವಂಗ ತೊಲಿ ೧ | ರು | ೫ |
| ಶೃಂಗ ಪ್ರಭಾ | ,, | ,, ೧ |
| ಅಮೃತ ಸತ್ವ | ,, | ,, ೩॥೪॥೦ |
| ಸಾಯಿರಪ್ ಪಾಕಳ ಔನ್ಸು ೪ | | ,, ೧ |
| ಬ್ರಾಹ್ಮ ಸಾಯರಪ್ | ,, | ೧ |
| ಪಾಚ ೧ ಅಮೃತಾದಿಕ್ವಥ ವಟಿ ೧೦೦ ಕ್ಕೆ | | ೧ |
| ಮೃದು ವಿರೇಚಕ ವಟಿ | | ,, ॥ |

ಇದಲ್ಲದೆ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಯಾವತ್ತು ಔಷಧಗಳು ನಮ್ಮಲ್ಲಿ ಸುಲಭ ದರದಿಂದ ಸಿಗುವವು.

Karnatak Ayurvedic Pharmaceutical works Bagalkot Dt. Bijapur



ಈ ಪತ್ರವನ್ನು ಮಿ॥ ಗುಂಡೇರಾವ ರಾಮಚಂದ್ರ ಮಣೂರಕರ ಇವರು ತಮ್ಮ ವಿಜಾಪೂರ ಗ್ರಾಮಾಧಿಕಾರೀ ಮುದ್ರಾಲಯದಲ್ಲಿ ಮುದ್ರಿಸಿ ಮಹಾಲಕ ಶ್ರೀನಿವಾಸ ರಾಘವೇಂದ್ರ ಮಂಗಳವೇಢೆ ಬಾಗಲಕೋಟ ಇವರಿಗೋಸ್ಕರ ಇದೇ ಮುದ್ರಾಲಯದಲ್ಲಿ ಪ್ರಸಿದ್ಧ ಪಡಿಸಿದರು.

ಸ್ವರಾಜ್ಯವು ಎಲ್ಲಿದೆ?

ವಾರ್ಷಿಕ ವರ್ಗಣಿ ರೂ. ೪-೦-೦
ಆರು ತಿಂಗಳಿಗೆ ,, ೨-೦-೦
ಬಿಡಿ ಸಂಚಿಕೆ ೦-೧-೩
ಮಾದರಿ ಸಂಚಿಕೆ ಬೇಕಾದವರು ೦-೧-೬ ತಿಕೀಟ ಕಳಿಸಬೇಕು

ಶ್ರೀ.

ಕನ್ನಡ

# ನವಜೀವನ

REGISTERED No B 1587.

ಜಾಹೀರಾತಿನ ದರ:-

'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂಪಾಯಿ ಕಾಯಮು ಜಾಹೀರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾಷಾಂತರಿಸುವದೇ ಈ ವಾರ ಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟ ಮಾಘ ಶು|| ೫ ಶಕೆ ೧೮೪೩. ಗುರುವಾರ ತಾ. ೨ ನೇ ಫೇಬ್ರುವಾರಿ ೧೯೨೨ ಇಸ್ವಿ. | ಸಂಚಿಕೆ ೧೧

## ಟಿಪ್ಪಣಿಗಳು

**ಆಂಗ್ಲ ಸ್ತ್ರೀಯಳ ಆಶೀರ್ವಾದವು.** ತನ್ನ ಹೆಸರು ವಿಳಾಸಗಳನ್ನು ತಿಳಿಸಿದ ಓರ್ವ ಆಂಗ್ಲ ಸ್ತ್ರೀಯಳು ಕಲಕತ್ತೆಯಿಂದ ಬರೆಯುವದೇನಂದರೆ:-

" ನಮ್ಮ ದಯಾಳು ಸರಕಾರದವರು ದಿನಾಲು ಆಚರಣೆಯಲ್ಲಿ ತರುತ್ತಿರುವಂಥ ಕ್ರೂರ ಕೃತಿಗಳನ್ನು ನಮ್ಮ ಕಣ್ಣೆದುರಿನಲ್ಲಿಟ್ಟು, ಆ ಬಗ್ಗೆ ನಮ್ಮಲ್ಲಿ ತಿಳುವಳಿಕೆಯನ್ನು ಹುಟ್ಟಿಸಿ, ಸತ್ಯದ ಕಡೆಗೆ ನಮ್ಮ ಮನಸ್ಸು ಒಲಿಯುವಂತೆ ಆಕರ್ಷಕವಾದ ಪದ್ಧತಿಯಿಂದ ಶ್ರೀ. ಗಾಂಧಿಯವರು ತಮ್ಮ ಕೆಲಸವನ್ನು ಮಾಡುತ್ತಿರುವ ಸಂಗತಿಯು ನಮ್ಮನ್ನು ಉನ್ನತ ಪದವಿಗೆ ಏರಿಸುತ್ತಲಿದೆ. ಓರ್ವ ಇಂಗ್ಲೀಷ ಧರ್ಮೋಪದೇಶಕಳು ಹಿಂದಕ್ಕೆ ಬರೆದ ಪತ್ರವಂತೂ ಎಲ್ಲರನ್ನೂ ಮೆಚ್ಚಿಸುತ್ತದೆ. ಅವಳಂತೆಯೇ ವಿಚಾರವುಳ್ಳವರು ಅನೇಕರಿದ್ದಾರೆ. ಆದರೆ ಅವರು ತಮ್ಮ ಅಭಿಮಾನವನ್ನು ಬಿಡಲಿಕ್ಕೆ ಒಲ್ಲರು. ಅಂತೆಯೇ ಶ್ರೀ. ಗಾಂಧಿಯವರು ನಡಿಸಿರುವ ಉತ್ಕೃಷ್ಟತರ ಕಾರ್ಯಕ್ಕೆ ತಲೆದೂಗರು. ಗಾಂಧಿಯವರ ಶಾಂತ ಸ್ವಭಾವವೂ, ಅವರ ಕಾರ್ಯವೂ, ನೆಲದೊಳಗೆ ಅಡಗಿಕೊಂಡಿದ್ದ ನೀರಿನ ಝರಿಯಂತಿರುತ್ತವೆ. ಜಗತ್ತು ಏನೇ ಅನ್ನಲಿ; ಅವರಿಗೆ ಮಾತ್ರ ಈಶ್ವರನು ಅವರು ಅಪೇಕ್ಷಿಸಿದಕ್ಕಿಂತ ಹೆಚ್ಚಿಗೆ ಯಶಸ್ಸನ್ನು ಕೊಡುವನು. ಇಲ್ಲದ ಗೊಂದಲವನ್ನು ಮಾಡದೇ ಶಾಂತರೀತಿಯಿಂದ ಕೆಲಸ ಮಾಡುವ ಶ್ರೀ. ಗಾಂಧಿಯವರಿಗೆ ಫಲವು ದೊರೆಯುವದು ನಿಶ್ಚಯವು. ಲಕ್ಷಾವಧಿ ಜನರು ಗಾಂಧಿಯವರನ್ನು ಸೂಕ್ಷ್ಮರೀತಿಯಿಂದ ನಿರೀಕ್ಷಿಸುತ್ತಲಿದ್ದಾರೆ; ಅಲ್ಲದೇ ಅವರ ಬೆಲೆಯನ್ನೂ ಕಟ್ಟುತ್ತಲಿದ್ದಾರೆ. ಈ ಎಲ್ಲ ಜನರ ಮೇಲೆ ಅವರ ಕಾರ್ಯವನ್ನು ನಿರೀಕ್ಷಿಸುತ್ತ ಬೆಲೆ ಕಟ್ಟುವಂಥ ಸರ್ವಶಕ್ತನಾದ ಪರಮಾತ್ಮನೇ ಇದ್ದಾನೆ. ಅವನು ಸಂತುಷ್ಟನಾದರೆ ಆಯಿತು. ಶ್ರೀ. ಗಾಂಧಿಯವರ ಶ್ರಮವೂ ಯುದ್ಧವೂ ಕೊನೆಗಂಡು, ಅವರ ಕೀರ್ತಿಯು ಅಮರವಾಗುವದು. ಅವರ ಘನವಾದ ಶ್ರಮದಿಂದ ಸ್ವಾತಂತ್ರ್ಯವನ್ನು ದೊರಕಿಸಿದ ಕೋಟ್ಯಾವಧಿ ದೇಶಬಾಂಧವರು ದೇವರಂತೆ ಅವರನ್ನು ಪೂಜಿಸುವರು. ದೇವರು ಅವರಿಗೆ ಆಶೀರ್ವದಿಸಿ, ಅವರಿಗೂ ಅವರ ಕುಟುಂಬದವರಿಗೂ ಆಯುರಾರೋಗ್ಯವನ್ನು ಕೊಟ್ಟು ಈ ಘನಘೋರ ಸಂಗ್ರಾಮದಲ್ಲಿ ಅವರು ಜಯಶಾಲಿಗಳಾಗುವಂತೆ ಅವರಿಗೆ ಸಾಮರ್ಥ್ಯವನ್ನು (ಅವರು ತೀವ್ರವೇ ಜಯಶಾಲಿಗಳಾಗುವದರಲ್ಲಿ ಸಂಶಯವಿಲ್ಲ) ಈಯಲಿ! "

ಅಂಜುತ್ತಂಜುತ್ತ ನಾನು ಈ ಪತ್ರವನ್ನು ವಾಚಕರೆದುರಿನಲ್ಲಿ ಇಟ್ಟಿರುವೆನು. ತೃತೀಯ ಪುರುಷದಲ್ಲಿ ಬರೆಯಲ್ಪಟ್ಟಿದ್ದರೂ ನನ್ನ ಬಗ್ಗೆ ವೈಯಕ್ತಿಕ ಭಾವನೆಯು ಅದರಲ್ಲಿ ತುಂಬಿಕೊಂಡಿದೆ. ಅದರಿಂದ ನನ್ನಲ್ಲಿ ಕಿಂಚಿತ್ತಾದರೂ ಹೆಮ್ಮೆಯು ಬಂದಿಲ್ಲವೆಂದು ಅನಿಸುತ್ತದೆ. ಇದರಲ್ಲಿ ನನ್ನ ಅಪಾತ್ರತೆಯೇ ಹೆಚ್ಚಿಗೆ ಅದೆಯೆಂದು ನನಗೆ ತೋರುತ್ತದೆ. ಪರಮಾತ್ಮನಲ್ಲಿಯೂ, ಅವನ ಸಾಮರ್ಥ್ಯ ಪ್ರೀತಿಗಳಲ್ಲಿಯೂ ಇದ್ದ ನನ್ನ ವಿಶ್ವಾಸವು ವಿಳ್ಳಷ್ಟಾದರೂ ಕದಲದೇ ಸಿರವಾಗಿದೆ. ಈಶ್ವರನೆಂಬ ಕುಂಬಾರನ ಕೈಯಲ್ಲಿಯ ಮಣ್ಣಿನ ಮುದ್ದೆಯಂತೆ ನಾನಿರುವೆನು. ಎರಡನೇದವರು ನಮಗೆ ವಂದನೆಗಳನ್ನರ್ಪಿಸಿದರೆ ಅವನ್ನೆಲ್ಲ ಆ ಪರಮಾತ್ಮನ ಚರಣದಲ್ಲಿಯೇ ಇರಿಸಬೇಕೆಂದು ಗೀತೆಯು ಹೇಳುತ್ತದೆ. ಮೇಲೆ ಬರೆದಂಥ ಆಶೀರ್ವಾದೋಕ್ತಿಗಳು ಉತ್ತೇಜನವನ್ನು ಕೊಡುತ್ತವೆಂಬದನ್ನು ನಾನು ಒಪ್ಪುತ್ತೇನೆ. ನಿಜವಾದ ಅಸಹಯೋಗಿಗಳಿಗೆ ಉತ್ಸಾಹವುಂಟಾಗಬೇಕೆಂದೂ ಹೆಸರಿಗೆ ಅಸಹಯೋಗಿಗಳಾದವರಿಗೆ ಅವರ ತಪ್ಪು ತಿಳಿಯಬೇಕೆಂದೂ ನಾನು ಮೇಲಿನ ಪತ್ರವನ್ನು ಪ್ರಸಿದ್ಧಿಸಿರುವೆನು. ಖಂಡಿತವಾಗಿ ನಮ್ಮದು ಘನಘೋರವಾದ ಸಂಗ್ರಾಮವು. ದ್ವೇಷಬುದ್ಧಿಯುಳ್ಳ ಜನರು ಈ ಯುದ್ಧದಲ್ಲಿ ಹಲಕೆಲವರು ಇದ್ದರು ಸಹ ಅದರ ಯೋಜನೆಯು ದ್ವೇಷಬುದ್ಧಿಯಿಂದ ಮಾಡಲ್ಪಟ್ಟಿರುವದಿಲ್ಲ. ಪವಿತ್ರವಾದ ಮತ್ತೂ ಯಾವ ತರದ ಕಲಂಕವಿಲ್ಲದ ಪ್ರೇಮದಿಂದಲೇ ಈಗಿನ ಯುದ್ಧವು ಪ್ರಾರಂಭಿಸಲ್ಪಟ್ಟದೆ. ಇಂಗ್ಲೀಷರ ಬಗ್ಗೆ ಯಾಗಲಿ, ಅಂಥರಾದ ಅಧಿಕಾರಿಗಳ ಸಂಗಡ ಅಂಧತನದಿಂದ ಕೂಡಿಕೊಂಡವರ ಬಗ್ಗೆ ಯಾಗಲಿ, ದ್ವೇಷಬುದ್ಧಿಯು ನನ್ನಲ್ಲಿದೆ, ಯೆಂದು ನನಗೆ ಅನಿಸಹತ್ತಿದರೆ, ಕೂಡಲೇ ನಾನು ಈ ಸಂಗ್ರಾಮದಿಂದ ಹೊರಬೀಳುವ ಶಕ್ತಿಯು ನನ್ನಲ್ಲಿದೆ. ಈಶ್ವರನಲ್ಲಿಯೂ, ಈಶ್ವರನ ದಯಾಶೀಲತೆಯಲ್ಲಿಯೂ, ಈ ಶೀಲತೆಯೇ ಅವನ ನ್ಯಾಯ ಬುದ್ಧಿಯು— ಅಣುಮಾತ್ರ ವಿಶ್ವಾಸವಿದ್ದವರು ಯಾವ ಮನುಷ್ಯನನ್ನೂ ದ್ವೇಷಿಸರು; ಮನುಷ್ಯನ ಹೀನ ನಡತೆಯನ್ನು ಮಾತ್ರ ಅವರು ದ್ವೇಷಿಸಲಿಕ್ಕೆಬೇಕು. ತಮ್ಮಲ್ಲಿನೇ

ದುರಾಚಾರವನ್ನು ತುಂಬಿಕೊಂಡಂಥವುತ್ತು ಯಾವಾಗಲೂ ಪರರ ಸಹಾಯದ ಕೊರತೆಯಲ್ಲಿರುವಂಥ ಮನುಷ್ಯನು, ಬೇರೆಜನರಲ್ಲಿ ಕೆಟ್ಟ ನಡತೆಯನ್ನು ಕಂಡರೂ ಸಹ ಅವರನ್ನು ದ್ವೇಷಿಸಬಾರದು ಅದ್ದರಿಂದ ಈ ಇಂಗ್ಲಿಷರನ್ನೂ ಅಖಂಡ ಜಗತ್ತನ್ನೂ ಗೆಳೆಯರನ್ನಾಗಿ ಮಾಡಿಕೊಳ್ಳುವದೇ ಈಗಿನ ಸಂಗ್ರಾಮದ ಉದ್ದೇಶವು. ಬರಿ ಮುಖಸ್ತುತಿಯಿಂದ ಅದು ಸಫಲವಾಗದು; ಆದರೆ "ನಿಮ್ಮ ನಡತೆ ಬಹು ಹೀನವಾದದ್ದು; ಅದ್ದರಿಂದ ನಿಮ್ಮ ಸಂಗಡ ನಾವು" ಸಹಕಾರಿಗಳಾಗಿರವದು ಶಕ್ಯವಿಲ್ಲವೆಂದು ಸ್ಪಷ್ಟವಾಗಿ ಹಿಂದುಸ್ಥಾನದಲ್ಲಿಯ ಇಂಗ್ಲಿಷರಿಗೆ ಹೇಳುವದರಿಂದಲೇ ಕಾರ್ಯವಾಗುವದು. ನಮ್ಮೀ ವಿಚಾರವು ತಪ್ಪಾಗಿದ್ದರೆ ದೇವರು ನಮ್ಮನ್ನು ಕ್ಷಮಿಸದೇ ಇರನು; ಯಾಕಂದರೆ ಆ ಜನರಿಗೆ ಯಾವ ತರದ ಕೇಡನ್ನು ಬಯಿಸದೇ, ಅವರ ಕೈಯಿಂದಲೇ ಉಂಟಾಗುವ ಎಲ್ಲ ತರದ ಕಷ್ಟವನ್ನು ಸಹಿಸಲಿಕ್ಕೆ ನಾವು ಸಿದ್ಧರಾಗಿರುವೆವು. ಇನ್ನು ನ್ಯಾಯವೇ ನಮ್ಮ ಕಡೆಗೆ ಇದ್ದರೆ, ನಮ್ಮ ಕಷ್ಟದಿಂದ ಹಿವರ ಇಂಗ್ಲಿಷ ಸ್ತ್ರೀಯು, ಎಚ್ಚತ್ತಂತೆ, ಅವರಾದರೂ ಎಚ್ಚರಿಯುವರೆಂಬದು ನಿಚ್ಚಯವು. ಆ ನಾರಿಯೋರ್ವಳೇ ದೃಷ್ಟಾಂತವೆಂತಲ್ಲ. ನನ್ನ ಪ್ರವಾಸದಲ್ಲಿ ಅನೇಕ ಇಂಗ್ಲಿಷ ಜನರು ನನಗೆ ಭೆಟ್ಟಿಯಾಗುತ್ತಾರೆ. ಅವರ ಪರಿಚಯವು ನನಗೆ ಇಲ್ಲದಿದ್ದರೂ ಕೂಡ, ಮನಃಪೂರ್ವಕವಾಗಿ ಅವರು ನನ್ನನ್ನು ವಂದಿಸಿ, ನಿಮಗೆ ಜಯಸಾಗಲೆಂದು ಹೇಳಿ ಮುಂದೆ ಜ್ಜೆಯನ್ನಿಕ್ಕುತ್ತಾರೆ. ಇಪ್ಪತ್ತು ಜನರು ನನಗೆ ಈ ಪ್ರಕಾರವಾಗಿ ಆಶೀರ್ವದಿಸಿದರೆ, ನೂರು ಜನರು ನನ್ನನ್ನು ಶಪಿಸುವದೂ ನಿಜವು. ಈ ಶಾಪಗಳನ್ನಾದರೂ ನಾನು ಈಶ್ವರನ ಪಾದದಲ್ಲಿಯೇ ಇರಿಸುವೆನು. ಯಾಕಂದರೆ ತಿಳುವಳಿಕೆಯಿಲ್ಲದ್ದರಿಂದ ಅವರು ಶಪಿಸುತ್ತಾರೆ. ಅನೇಕ ಆಂಗ್ಲೇಯರೂ ಹಲಕೆಲವು ಹಿಂದೀಯರೂ, ನಾನಾಗಲೀ ನನ್ನ ಕಾರ್ಯವಾಗಲೀ ಕಿಡಿಗೇಡಿತನದ್ದೆಂದು ತಿಳಿಯುತ್ತಾರೆ. ಈ ನುಡಿಗಳನ್ನು ಸಹ ಅಸಹಯೋಗಿಗಳು ತಡೆದುಕೊಳ್ಳಬೇಕು. ಸಿಟ್ಟಿಗೆದ್ದು ಅವರು ಸೇಡು ತೆಗೆದುಕೊಂಡರೆ ನಾವು ಸೋಲುವದು ಉಚಿತವು. ಆದರೆ ಸಹನಶೀಲತೆಯಿಂದ ಕಷ್ಟ ಬಟ್ಟರೆ ನಾವು ತಪ್ಪಲ್ಲದೇ ಮತ್ತು ತಪ್ಪದೇ ಜಯಶಾಲಿಗಳಾಗುವದು ಕಟ್ಟಿಟ್ಟ ಮಾತು. ನಮ್ಮಲ್ಲಿ **ಅನೇಕ ದೋಷಗಳಿದ್ದದರಿಂದಲೇ ಜಯವು ತಡವಾಗಹತ್ತಿದೆಂಬದನ್ನು ನಾನು ಮನಗಂಡಿದ್ದೇನೆ.** ನಾವು ಸದಾ ಅಹಿಂಸಾ ವ್ರತವನ್ನು ಪಾಲಿಸುವದಿಲ್ಲ. ನಮ್ಮ ವ್ರತಕ್ಕೆ ವ್ಯತ್ಯಾಸ ಉಂಟಾಗುವಂತೆ ದ್ವೇಷ ಬುದ್ಧಿಯನ್ನು ತೋರ್ಪಡಿಸಿದ್ದೇವೆ. ನಮ್ಮ ವಿರೋಧಿಗಳಾದ ಇಂಗ್ಲಿಷ ಅಧಿಕಾರಿಗಳೂ, ಅವರ ಸಂಗಡ ಸಹಕಾರ ಮಾಡುವವರೂ, ತಾಲೂಕದಾರರೂ, ಸಂಸ್ಥಾನಿಕರೂ, ನಮ್ಮನು ನಂಬುವದಿಲ್ಲ; ಮತ್ತು ನಮ್ಮನ್ನು ಕಂಡರೆ ಅವರಿಗೆ ಭಯವೂ ಉತ್ಪನ್ನವಾಗುತ್ತದೆ ಅವರನ್ನು ಸಂಪೂರ್ಣವಾಗಿ ಸಂರಕ್ಷಿಸಬೇಕೆಂದು ನಾವು ನಮ್ಮ ವ್ರತದಿಂದ ಬದ್ಧರಾಗಿದ್ದೇವೆ. ದರಿದ್ರರನ್ನೂ ನಿರಾಶ್ರಿತರನ್ನೂ ಹಿಂಡಿಕೊತ್ತಿ ಅದರಿಂದ ಲಾಭ ಹೊಂದಬೇಕೆಂದರೆ ನಾವು ಅವರಿಗೆ ಸಹಾಯ ಮಾಡಬಾರದೆಂಬದು ಸತ್ಯವು; ಆದರೆ ಅವರಿಗೆ ನಾವು ಸರ್ವಥಾ ಅಪಾಯವನ್ನುಂಟು ಮಾಡಬಾರದು. ಅವರು ಅಲ್ಪ ಸಂಖ್ಯಾಕರಿದ್ದದ್ದು ನಿಜ; ಆದದ್ದರಿಂದ ನಮಗೆ ಕನಿಕರ ಬರುವದೂ ನಿಜ ಅದರಿಂದಲೇ, ಢಾಲು ಕತ್ತಿಗಳ ಆಶ್ರಯದಲ್ಲಿರುವದಕಿಂತ ನಮ್ಮ ಮಧ್ಯದಲ್ಲಿರುವದರಿಂದಲೇ ಅವರು ಹೆಚ್ಚು ಸಂರಕ್ಷಿತರಾಗುತ್ತಾರೆಂಬದನ್ನು ನಾವು ಅವರಿಗೆ ನಮ್ಮ ಕೃತಿಯಿಂದ ತೋರಿಸತಕ್ಕದ್ದು. ನಾವೇ ಕನಿಕರ ಹುಟ್ಟಿಸುವಂಥ ಸ್ಥಿತಿಯಲ್ಲಿದ್ದರೆ ಬಳಿಕಾಗಿತ್ತು; ಯಾಕಂದರೆ ನಮ್ಮ ಶ್ರದ್ಧೆಯಿಂದ ಅವರಿಗೆ ನಮ್ಮ ಬೆಲೆಯಾದರೂ ಗೊತ್ತಾಗುತ್ತಿತ್ತು. ಆದರೆ ವಸ್ತುಸ್ಥಿತಿಯು ಬೇರಿದೆ. ನಮ್ಮ ಬಹು ಸಂಖ್ಯೆಯೇ ನಮ್ಮನ್ನು ಕಾಡಿಸುತ್ತದೆ ಸದ್ಯದ ರಾಜ್ಯಕ್ರಮದ ಬಗ್ಗೆ ನಮ್ಮಲ್ಲಿ ಎಲ್ಲರಲ್ಲಿಯೂ ತಿರಸ್ಕಾರ ಹುಟ್ಟಿದ್ದು ಸರ್ವಸಮ್ಮತವದೆ.

ಆದರೆ ಅಹಿಂಸೆಯಲ್ಲಿ ಉತ್ಕಟವಾದ ವಿಶ್ವಾಸವು ಇರಬೇಕೆಂಬದು ಸರ್ವ ಸಮ್ಮತವಿಲ್ಲ. ಮದ್ರಾಸದಲ್ಲಿ ಸಂಭವಿಸಿದ ಅಪಮಾನಕರವಾದ ಸಂಗತಿಗಳು ಪುನಃ ಒದಗುವದು ಅಶಕ್ಯವೆಂಬದನ್ನು ಸಿದ್ಧಮಾಡಿ ತೋರಿಸುವವರೆಗೆ ನಾವು ಸಮಾಧಾನ ಹೊಂದತಕ್ಕದ್ದಲ್ಲ. ಅಹಿಂಸಾ ವ್ರತಧಾರಿಗಳೆಂದು, ಬಾಯಿಂದ ನುಡಿದು ಕೈಯಿಂದ ದರ್ಬಾರ ಪ್ರಸಂಗಗಳಲ್ಲಿ ಆತಂಕವನ್ನುಂಟು ಮಾಡುವದು. ಸರ್ವಥಾ ಉಚಿತವಲ್ಲ. ಸೆರೆಮನೆಗೆ ಹೋಗಬೇಕೆಂದು ನಾವು ಆತುರರಾಗಿರಬೇಕು; ಅದು ಶಕ್ಯವಿರದಿದ್ದರೆ, ಅದರ ಗೋಜಿಗೆ ಹೋಗಕೂಡದು, ಇನ್ನು ನಾವು ಆತುರರಾಗಿದ್ದೇ ಆದರೆ ಸರಕಾರದವರು ತಮ್ಮ ಮನ ಬಂದಂತೆ ಬೇಕಾದಷ್ಟು ಶೀಘ್ರದಲ್ಲಿ ನಮ್ಮನ್ನು ತೆಗೆದುಕೊಂಡು ಹೋಗಲಿಕ್ಕೆ ಅವಕಾಶವನ್ನುಂಟುಮಾಡಿ ಕೊಡಬೇಕು. ಅಹಿಂಸಾ ಧರ್ಮದ ಗೂಢಾರ್ಥವನ್ನು ತಿಳಿದುಕೊಳ್ಳುವದರಲ್ಲಿ ನಾವು ತಪ್ಪಿದರೆ, ಆ ತಪ್ಪಿಗೆ ತಕ್ಕಂತೆ ನಮ್ಮ ಸಂಗ್ರಾಮವು ಬೆಳೆಯುತ್ತ ಹೋಗುವದು.

**ಅರಮನೆಯ ಭೋಜನ ಶಾಲೆ.**

ಈಗಣ ನಮ್ಮ ಯುದ್ಧದ ರಹಸ್ಯದ ಬಗ್ಗೆ ಯಾರಲ್ಲಿಯಾದರು ಸಂಶಯಗಳಿದ್ದರೆ, ಅವೆಲ್ಲ ಕೆಳಗೆ ಕೊಟ್ಟ ಬಾಬೂ ಪ್ರಸನ್ನ ಕುಮಾರ ಸೆನ್ನರ ಪತ್ರದಿಂದ ದೂರವಾಗುವವೆಂದು ನನ್ನ ಆಶೆಯದೆ:—

"ಎರಡೂವರೆ ವರ್ಷಗಳ ಪರ್ಯಂತರ ನಾನು ಅರಮನೆಯ ಭೋಜನ ಶಾಲೆಯಲ್ಲಿರುವಂತೆ ಅಪ್ಪಣೆಯಾಗಿದೆ. ಈಗ ನಾಲ್ಕೈದು ವರ್ಷಗಳಿಂದ ವಕೀಲೀ ಕೆಲಸವನ್ನು ಬಿಟ್ಟು (ಸಾವಕಾಶವಾಗಿ ನನಗೆ ತಿಳಿಯದಂತೆ ಅದು ನನ್ನನ್ನು ಪಿನಾಲು ನರಕಕ್ಕೆ ಎಳೆದೊಯ್ಯುತ್ತಿತ್ತು) ಹಿಮಾಲಯದಲ್ಲಿಯ ಹೃಷೀಕೇಶಕ್ಕೆ ಹೋಗಿ ಆಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಳ್ಳುವದರಲ್ಲಿ ಕಾಲ ಕಳೆಯಬೇಕೆಂದು ಮಾಡಿದ್ದೆನು. ಆದರೆ ಸಂಸಾರದ ತೊಡಕಿನಲ್ಲಿ ಶಿಕ್ಕಿಕೊಂಡದ್ದರಿಂದ ಆ ಬಗೆಯ ನನ್ನ ವಿಚಾರಕ್ಕೆ ಮೂರ್ತಸ್ವರೂಪವನ್ನು ಕೊಡುವದಾಗಿದ್ದಿಲ್ಲ ಈಗ ಮಾತ್ರ ಬಹು ದಯಾವಂತನಾದ ಆ ಪರಮಾತ್ಮನ ಅನನ್ಯ ಆಶೀರ್ವಾದಗಳಿಂದ, ಪ್ರಾಪಂಚಿಕ ಕೋಲಾಹಲದಿಂದ ದೂರನಾಗಿ, ಈ ಸೆರೆಮನೆಯ ಕೋಣೆಯಲ್ಲಿ ಸಂಪೂರ್ಣವಾಗಿ ಶಾಂತಿಯನ್ನು ಹೊಂದಿರುವೆನು. ನನ್ನ ಜೀವಿತದ ಬಗ್ಗ ನಾನು ಬಹು ದಿನಗಳಿಂದ ಯೋಜಿಸಿಟ್ಟ ನನ್ನ ಲವಲವಿಕೆಯು ಇನ್ನು ಮೇಲೆ ಸಫಲವಾಗುವದೆಂದು ಆಶಿಸುತ್ತೇನೆ.

"ಪರಮಾತ್ಮನ ಕೃಪೆಯಿಂದ ನನಗೆ ಇಲ್ಲಿ ದೊರೆತ ಶಾಂತಿ ಸುಖ ಸಮಾಧಾನಗಳು ಅದ್ವಿತೀಯವಾಗಿವೆ; ಹಿಂದೆ ಎಂದೆಂದಿಗೂ ನಾನು ಈ ತರದ ಮನಃಸ್ಥಿತಿಯನ್ನು ಹೊಂದಿರಲಿಲ್ಲ ನನ್ನ ಪ್ರಿಯ ಮಹಾತ್ಮಾಜೀಯವರೇ, ಆ ಪರಮಾತ್ಮನ ದಯದಿಂದಲೂ, ತಮ್ಮ ಆಶೀರ್ವಾದದಿಂದಲೂ, **ಅಶಾಶ್ವತ ನಿರ್ವಾಣ ಪದವಿಯನ್ನು** ಹೊಂದಲಿಕ್ಕೆ ನಾನು ಈ ಸೆರೆಮನೆಯಲ್ಲಿ ಪಾತ್ರನಾಗುವನೆಂದು ನನ್ನ ಮನಸು ನಿಶ್ಚಯದಿಂದ ಹೇಳುತ್ತಲಿದೆ." ಸೆರೆಮನೆಯಲ್ಲಿ ಅತ್ಯುನ್ನತವಾದ ಪದವಿ

ಲನ್ನು ಪಡೆಯಬೇಕೆಂಬ ಪ್ರಸನ್ನ ಬಾಬುರಾವರ ಇಚ್ಛೆಯು ಸ್ಪಷ್ಟಲಭ್ಯವಾದುದೆಂದು ಯಾರೂ ತಿಳಿಯತಕ್ಕದ್ದಲ್ಲ. ಆ ಪದವಿಯನ್ನು ಅಲ್ಲಿ ಲಭಿಸುವದು ಶಕ್ಯವಿದೆಯೆಂದು ನನ್ನ ನಂಬಿಗೆಯಿದೆ. ಹೃಷೀಕೇಶವನ್ನು ನಾನು ಬಲ್ಲೆ. ಋಷಿವರ್ಯರಿರುವಂತೆ ಈ ಭೂಲೋಕದ ಅಧಮರಿದ್ದರೂ ಅಲ್ಲಿರುವರು. ಸೆರೆಮನೆಯ ಸಂಸಾರವನ್ನೂ ನಾನು ಬಲ್ಲೆ. ದಕ್ಷಿಣ ಆಫ್ರಿಕೆಯಲ್ಲಿ ಒಂದಾವರ್ತಿ ನಾನು ಸೆರೆಮನೆಯಲ್ಲಿ ಘೋರ ಅಪರಾಧಿಯಾದ ಓರ್ವ ಕೊಲೆಗಡುಕನ ಸಹವಾಸಿಯಾಗಿದ್ದೆನು. ಅವನಿಗೂ ನನಗೂ ನಡುವೆ ಒಳ್ಳೇ ಕತ್ತಲೆಯುಳ್ಳ ಒಂದು ಗೋಡೆಯು ಮಾತ್ರ ಇದ್ದಿತ್ತು. ನಾವೀರ್ವರು ಸಮಾಜದ ಭಯಂಕರ ವೈರಿಗಳೆಂದು ನಿರ್ಣಯಿಸಿ ನಮ್ಮನ್ನು ಗೂಗೆಯಂತೆ ಬೇರೆ ಬೇರೆ ಕತ್ತಲೆ ಕೋಣೆಯಲ್ಲಿ ಇರಿಸಿದ್ದರು. ಎರಡು ತಿಂಗಳವರೆಗೆ ಆ ಕತ್ತಲೆಕೋಣೆಯಲ್ಲಿ ನಾನು ಬಹು ಕಷ್ಟ ಪಡಬೇಕಾಯಿತು. ಕಷ್ಟವು ಹೆಚ್ಚಾದಂತೆ ನನ್ನ ಜ್ಞಾನವೂ ಹೆಚ್ಚುತ್ತ ಹೋಯಿತು. ಆ ಸಮಯವೆ ನನಗೆ ಒಳ್ಳೇ ಆನಂದವನ್ನೀಯುವಂಥ ಸುಗ್ಗಿಯು. ಕಷ್ಟ ಬಡುವಾಗ ಮಾತ್ರ ಅದನ್ನು ಸಹಿಸುವದೆಂದರೆ ಅತಿಶಯ ಕಠಿಣವಾಗುತ್ತಿತು. ಆದರೆ ಈಗ್ಗೆ ವಿಚಾರಿಸಿದರೆ ಅದು ನನ್ನ ಜೀವಿತದಲ್ಲಿಯ ಬಹು ಅಮೌಲ್ಯವಾದ ಕಾಲವೆಂದು ನನ್ನ ನಂಬಿಗೆಯಾಗಿದೆ. ಸ್ವಾತಂತ್ರ್ಯಪ್ರಿಯ ಜನರಿಗೆ ಈಗ್ಗ ಸೆರೆಮನೆಯೆಂದರೆ ಸ್ವರ್ಗವಾಗಿ ಹೋಗಿದೆ. ಇನ್ನು ಮೇಲೆ ನಿರ್ವಾಣ ಸುಖವನ್ನು ಪಡೆಯಲಿಕ್ಕೆ ಸಹ ಸೆರೆಮನೆಗಳು ಯೋಗ್ಯವಾದ ಸ್ಥಳಗಳಾಗುವಂತೆ ನಾವು ಮಾಡಬೇಕು. ಯಾವ ಸೆರೆ ಮನೆಯ ಕತ್ತಲೆ ಕೋಣೆಯಲ್ಲಿ ಸಾಕ್ರೆಟೀಸನು ವಿಷ ಪಾನ ಮಾಡಿ ಪ್ರಾಣತ್ಯಾಗ ಮಾಡಿದನೋ ಅದು ಖಂಡಿತವಾಗಿ ಅವನಿಗೆ ನಿರ್ವಾಣ ಸುಖಕ್ಕೆ ಮಾರ್ಗವೇ ಆಯಿತು. ಆ ಪ್ರಸಂಗವನ್ನು ಯಾರೂ ಎಂದಿಗೂ ಮರೆಯಲಾರರು. ಅದರಿಂದ ಅವನು ಈಗ್ಗೆ ಮೃತಪಟ್ಟಿದ್ದರೂ ಜೀವಂತನಾಗಿಯೇ ಇರುವನು.

ಯಂಗ ಇಂಡಿಯಾ

ಮೋಹನದಾಸ ಕರಮಚಂದ ಗಾಂಧಿ.

## "ಸರಕಾರ ಏಕ ಹೈ!"

ಸಿಂಧದಿಂದ ಒಂದು ಕಾಗದವು ಬಂದಿದೆ. ಅದರಲ್ಲಿ ಒಂದು ಸುದ್ದಿ ಇದೆ. ಜೇಲಿನೊಳಗಿನ ಕೈದಿಗಳ ಮುಖದಿಂದ "ಸರಕಾರ ಏಕ ಹೈ" ಎಂದು ಅನಿಸುವರಂತೆ! ಯಾವನಾದರೊಬ್ಬ ಅಮಲದಾರನು ಬಂದೊಡನೆ ಕೈದಿಗಳು ಎದ್ದು ನಿಂತು 'ಸರಕಾರ ಏಕ ಹೈ' ಎಂದು ಅನ್ನತಕ್ಕದ್ದಂತೆ. ಮತ್ತೊಂದು ಸ್ಥಳದಿಂದ ಬೇರೊಂದು ಸುದ್ದಿ ಬಂದಿದೆ. ಅಲ್ಲಿ ಕೈದಿಗಳು 'ಸರಕಾರ ಸಲಾಂ" ಎಂದು ಅನ್ನಬೇಕಂತೆ! ಸಿಂಧದ ಶ್ರೀ. ಜೇರಾಮದಾಸರು ಈಗ ಸಾಬರಮತಿ ಜೇಲಿನಲ್ಲಿರುವರು.

ಯಾವನೊಬ್ಬ ಅಮಲದಾರನು ಅವರ ಬಳಿಗೆ ಹೋದಾಗ್ಗೆ ಅವನೆದುರಿಗೆ ಅವರು ಕೈ ಜೋಡಿಸಿ ನಿಲ್ಲತಕ್ಕದ್ದೆಂದು ಆಜ್ಞೆಯಾಯಿತು; ಆದರೆ ಆ ಆಜ್ಞೆಯನ್ನು ಅವರು ಮನ್ನಿಸದಿದ್ದದರಿಂದ, ಅವರಿಗೆ ಮೊದಲಿನಂತೆ ಓದಲಿಕ್ಕೆ ಪುಸ್ತಕಗಳ ದೊರೆಯುವದು ನಿಂತುಹೋಯಿತು. ಮತ್ತೊಂದು ಸ್ಥಳದಲ್ಲಿ ಯಾವನೊಬ್ಬ ಅಮಲದಾರನು ಕೈದಿಗಳ ಸಮೀಪಕ್ಕೆ ಬಂದ ಕೂಡಲೆ ಅವರು ಮೋರೆಯನ್ನು ಕೆಳಗೆ ಮಾಡಿ ಕೈಗಳನ್ನು ಕೆಳಗೆ ಬಿಟ್ಟು ಕೂತುಕೊಂಡಿರತಕ್ಕದ್ದಂತೆ?

ಈ ಬಗೆಯ ಆಜ್ಞೆಗಳನ್ನು ಮನ್ನಿಸಬೇಕೋ ಹೇಗೆ ಎಂದು ನನಗೆ ಜನರು ಕೇಳಿರುವರು. "ಯಂಗ ಇಂಡಿಯಾದಲ್ಲಿ" "ಆದರ್ಶ ಕೈದಿಯು" ಎಂಬ ಲೇಖವು ಬಂದ ಮೇಲೆ ಜನರ ಮನಸ್ಸಿನಲ್ಲಿ ಸಂಶಯಗಳು ಹುಟ್ಟಹತ್ತಿವೆ. ಈ ಸಂಶಯವೆಲ್ಲ ಸಮಾಧಾನವು ಬಹು ಸುಲಭವಾಗಿದೆ. ಯಾತರಲ್ಲಿ ಹೀನತನವಿದೆಯೋ, ಯಾವ ಕಾಯ್ದೆಯ ಉದ್ದೇಶವು ಮನುಷ್ಯತ್ವಕ್ಕೆ ಕುಂದು ತರಬೇಕೆಂದಿದೆಯೋ, ಅದನ್ನು ಸರ್ವಥಾ ಮನ್ನಿಸಲಾಗದೆಂಬುವದು ನಮ್ಮ ಸೂತ್ರವಾಗಿರತಕ್ಕದ್ದು.

ಕಾರಾಗೃಹದಲ್ಲಿ ಸ್ವತಂತ್ರತೆಯಿರದು. ಸಾಮಾನ್ಯತಃ ನೀತಿಯ ವಿರುದ್ಧ ಅಪರಾಧ ಮಾಡಿದಂಥ ಅಸಭ್ಯ ಮನುಷ್ಯರ ಸಲುವಾಗಿ ಕಾರಾಗೃಹಗಳು ನಿರ್ಮಿಸಲ್ಪಟ್ಟಿರುವವು. ಆದರೆ ಕಾರಾಗೃಹಗಳು ಸದ್ಯಃಕಾಲದಲ್ಲಿಯೇ ಸ್ವತಂತ್ರತೆಯ ದ್ವಾರಗಳಾಗಿ ಮಾಡಲ್ಪಟ್ಟಿವೆ.

ಈಶ್ವರ [illegible] ನಾಗಿರುವನು. ಈಶ್ವರನ ವಿಷಯದಲ್ಲಿಯೇ ಮಾತ್ರ ಯಥಾರ್ಥವಾಗಿರುವ ವಚನವನ್ನು ಸರಕಾರದ ಬಗ್ಗೆ ಉಪಯೋಗಿಸಲು ಆಜ್ಞೆಯಾದರೆ ಸ್ವಾಭಿಮಾನಿಯೂ ಧರ್ಮನಿಷ್ಠನೂ ಆದ ಮನುಷ್ಯನು ಆ ಆಜ್ಞೆಯನ್ನು ಮನ್ನಿಸುವದೆಂತು? ಈ ಬಗೆಯ ಹುಕುಂಗಳನ್ನು ಅಂಜಿಕೆ ಬಿಟ್ಟು ಮುರಿದೇ ತೀರತಕ್ಕದ್ದು. ಇದರಿಂದ ಜೇಲಿನಲ್ಲಿ ಹೆಚ್ಚಿಗೆ ತೊಂದರೆಯಾಗಬಹುದು. ಕತ್ತಲೆ ಕೋಣೆಯಲ್ಲಿ ಇಳಿಯುವ ಪ್ರಸಂಗವು ಬರಬಹುದು. ಬೆನ್ನಿನ ಮೇಲೆ ಬೆತ್ತದ ಪೆಟ್ಟುಗಳು ಬೀಳಬಹುದು. ಹಸಿವೆಯಿಂದ ಸಾಯುವ ಹೊತ್ತು ಬರಬಹುದು. ಆದರೇನು! ಇವೆಲ್ಲ ಶಿಕ್ಷೆಗಳನ್ನು ಸಹಿಸಿದರೂ ಹೀನತೆಯಿಂದ ಕೂಡಿದಂಥ ಆಜ್ಞೆಗಳನ್ನು ವಿನಯಪೂರ್ವಕವಾಗಿ ಅನಾದರಿಸುವದೇ ನಮ್ಮ ಕರ್ತವ್ಯವು. ಛಲವೇ ಈ ರಾಜ್ಯಕ್ಕೆ ಆಧಾರವಾಗಿರುವದು. ಸ್ವಲ್ಪ ಜನರನ್ನು ಹಿಗ್ಗಿಸಿ ಕೂಡಿಸಿ ಬಹು ಜನರನ್ನು ಕಷ್ಟಕ್ಕೆ ಗುರಿ ಮಾಡುವ ನ್ಯಾಯವು ಎಲ್ಲಿ ನಡೆಯುತ್ತದೆಯೋ ಅಲ್ಲಿ ರಾಕ್ಷಸ ನೀತಿಯ ಪ್ರಾಬಲ್ಯವಿರುವದೆಂದು ನಾವು ತಿಳಿಯತಕ್ಕದ್ದು.

ಜೇಲಿನ ಹೊರಗೆ ಯಾವ ಪ್ರಕಾರದ ವರ್ತನವು ಇರುವದವಶ್ಯವೋ ಅದೇ ಪ್ರಕಾರದ ವರ್ತನವು ಜೇಲಿನೊಳಗಾದರೂ ಇರತಕ್ಕದ್ದು. ಜೇಲಿನೊಳಗೂ ಸಭ್ಯತೆ ಹಾಗು ಬಲ ಇವುಗಳ ಅವಶ್ಯಕತೆ ಇರುವದು. ಒಂದೆಡೆಗೆ ಸಭ್ಯತೆಯು ಬೇಕು, ಮತ್ತೊಂದೆಡೆಗೆ ಸಂಪೂರ್ಣ ಬಲವು ಬೇಕು. ಯಾವದೇ ಕೆಲಸವನ್ನು ನಾವು ವಿವೇಕದಿಂದ ಮಾಡಿದರೆ ಅದರಲ್ಲಿ ನಮಗೆ ಯಶಸ್ಸು ದೊರೆಯುವದುಂಟು. ಜೇಲಿನೊಳಗಿನ ಅಮಲದಾರರ ಅನುಕಂಪನೀಯ ಸ್ಥಿತಿಯನ್ನಾದರೂ ನಾವು ಲಕ್ಷ್ಯದಲ್ಲಿ ತಾತಕ್ಕದ್ದು. ಅವರು ಯಾವಾಗಲೂ ಗುನ್ಹೆಗಾರರ ಸಹವಾಸದಲ್ಲಿಯೇ ಇರಬೇಕಾದುದರಿಂದ ಅವರ ನಡೆನುಡಿಗಳಲ್ಲಿ ಅವಿವೇಕವೂ ಕಠೋರತೆಯೂ ಕಂಡು ಬರುವವು. ಸಭ್ಯ ಕೈದಿಗಳ ಸಹವಾಸವು ಸಂಭವಿಸಿದೊಡನೆ ವಾರ್ಡರ ಮೊದಲಾದವರ ವರ್ತನವು ಒಮ್ಮಿಂದೊಮ್ಮೆ ಸೆಟ್ಟಾಗುವ ಸಂಭವವಿಲ್ಲ. ಜೇಲಿನ ಕಾಯ್ದೆಗಳನ್ನು ಅಮಲಿನಲ್ಲಿ ತರಲು ಅವರು ಬದ್ಧರು. ಈ ಕಾರಣಗಳಿಂದ ಜೇಲಿನಲ್ಲಿಯ ಎಷ್ಟೋ ಅನಾನುಕೂಲತೆಗಳನ್ನು ಸಹಿಸಿಯೇ ತೀರಬೇಕು. ಆದ್ದರಿಂದ ನಮ್ಮ ಪ್ರತಿಯೊಂದು ವಿರೋಧದಲ್ಲಿ ವಿವೇಕವೂ ವಿಚಾರವೂ ಅವಶ್ಯವಾಗಿರಬೇಕು. ಉದಾಹರಣಾರ್ಥ:—

"ಸರಕಾರ ಸಲಾಂ" ಎಂಬ ವಚನವನ್ನು ನಾವೆಂದಿಗೂ ಉಚ್ಚರಿಸಕೂಡದು. ಆದರೆ ಅಮಲದಾರನಿಗೆ ನಾವು ಅವಶ್ಯವಾಗಿ ಸಲಾಮ ಮಾಡಬೇಕು, ಅವನ ಸನ್ಮಾನ ಮಾಡಬೇಕು. ಹಾಗು ಅವನು ಬಂದ ಕೂಡಲೇ ಎದ್ದು ನಿಲ್ಲಬೇಕು. ಕೈದಿಗಳು ಕೈದಿಗಳೇ ಆಗಿರುವರು. ಜೇಲಿನಲ್ಲಿ ಯಾವ ಬಗೆಯ ವರ್ತನವಿರುವದು ಅವಶ್ಯವೋ, ಜೇಲಿನಲ್ಲಿ ಯಾವ ಬಗೆಯ ಮರ್ಯಾದೆಯಿರುವದು ಅವಶ್ಯವೋ ಅವುಗಳನ್ನು ಸರ್ವಥಾ ನಾವು ದುರ್ಲಕ್ಷಿಸಕೂಡದು. ಕಡೆಯ ಮಾತೊಂದೇನೆಂದರೆ ನಾವು ನಮ್ಮ ಸದ್ವರ್ತನದಿಂದ ಜೇಲಿನ ಅಮಲದಾರರನ್ನು ಸರಲಸ್ವಭಾವದವರನ್ನಾಗಿಯೂ ದಯಾಂವತರನ್ನಾಗಿಯೂ ಮಾಡತಕ್ಕದ್ದು.

ನವಜೀವನ

(ಮೋ. ಕ. ಗಾಂಧಿ)

ಕನ್ನಡ ನವಜೀವನ.

ಮಾಘ ಶು॥ ೫ ಗುರುವಾರ ಶಕೆ ೧೮೪೩

# ಸ್ವರಾಜ್ಯವು ಎಲ್ಲಿದೆ-

ಏನಾಯಿತೆಂಬುದು ಭಗವಂತನು ಬಲ್ಲನು, ಆದರೆ ಲಾಲಾಜಿ, ದಾಸ, ನೇಹರು, ಮೌಲಾನಾ ಅಬ್ದುಲ್ ಕಾಲಮ ಮೊದಲಾದವರು ಕಾರಾಗೃಹಕ್ಕೆ ಹೋದಂದಿನಿಂದ ಜನರು— "ಸ್ವರಾಜವು ಎಲ್ಲಿದೆ?" ಎಂದು ನನಗೆ ಪ್ರಶ್ನೆ ಮಾಡುವದನ್ನೇ ಬಿಟ್ಟು ಕೊಟ್ಟಿರುವರು! ನನ್ನ ಮನಸ್ಸಿನಲ್ಲಿ ಕಟಿಯುತಲಿದ್ದ ಚಿಂತೆಯು ದೂರವಾಯಿತು; ಇನ್ನು ಮುಂದೆ ಯಾರೂ ನನಗೆ ಈ ಬಗೆಯ ಪ್ರಶ್ನವನ್ನು ಕೇಳರೆಂದು ನಾನು ತಿಳಿಯುತ್ತೇನೆ ಹಲಕೆಲವು ಜನರಂತೂ "ಸ್ವರಾಜ್ಯ ಪ್ರಾಪ್ತಿಯ ಬಗ್ಗೆ ನಾವು ನಿಮ್ಮನ್ನು ಅಭಿನಂದಿಸುವೆವು" ಎಂದು ತಾರುಗಳನ್ನಾದರೂ ನನಗೆ ಮಾಡಿರುವರು ಪಾಲ್ ರಿಶರರವರು ಡಿಶೆಂಬರ ೩೧ ನೇ ತಾರೀಖಿನ ಸಭೆಯಲ್ಲಿ ಮಾತಾಡುವಾಗ್ಗೆ ನವಯುಗವು ಆರಂಭವಾಯಿತೆಂದು ಹೇಳಿದರು ಶ್ರೀ. ಟೀಕರ್ಸವರು ಶಾಂತಿನಿಕೇತನದಿಂದ, "ಐವ. ವರ್ಷದ ಪ್ರವಾಸದ ನಂತರ ಇಲ್ಲಿಗೆ ಬಂದು ಹಿಂದುಸ್ಥಾನವು ಸ್ವತಂತ್ರವಾದದ್ದನ್ನು ನೋಡುತ್ತೇನೆ:" ಎಂದು ಬರೆದಿರುವರು.

ಸ್ವರಾಜ್ಯವು ಒಂದು ಮನಸ್ಸಿನ ಸ್ಥಿತಿಯು ಈ ಮನಸ್ಥಿತಿಯು ನಮ್ಮಲ್ಲಿ ಮನೆ ಮಾಡಿಕೊಂಡರೆ ಸ್ವರಾಜ್ಯ ಪ್ರತಿಮೆಯು ಪ್ರತಿಷ್ಠಿತವಾಗುವದು ಆದರೆ ಎಂದು ನಮ್ಮ ಮನಸ್ಥಿತಿಯಲ್ಲಿ ಪರಿವರ್ತನೆಯಾಯಿತೋ ಅಂದಿನಿಂದಲೇ ಸ್ವರಾಜ್ಯವು ನಮ್ಮ ಹಸ್ತಗತವಾಗಿರುವದು.

ಸಮಾಧಾನವು ದೊರೆಯುವಂತಿದ್ದರೆ, ಆ ಪ್ರಸಂಗವನ್ನು ನಾನು ಹೋಗಗೊಡಲಿಚ್ಛಿಸುವದಿಲ್ಲ ಅದಾಗ್ಯೂ ಹಿಂದುಸ್ಥಾನದ ಸಾಮರ್ಥ್ಯವೆಷ್ಟಿದೆಂಬುದನ್ನು ನಾನು ಅರಿತಿರುವೆನಾದ್ದರಿಂದ ಸಮಾಧಾನ ಹೊಂದಲು ಹೆದರುತ್ತೇನೆ ಪೂರ್ಣತ್ವವನ್ನು ಹೊಂದುವ ಮೊದಲು ಸಮಾಧಾನ ಪಟ್ಟರೆ ನಮ್ಮ ಪಾಡೇನು? ಪೂರ್ಣ ವಿಕಾಸಗೊಳ್ಳದೆ ದಿನ ತುಂಬುವದರೊಳಗೆ ಗರ್ಭದಿಂದ ಹೊರಬಿದ್ದು ಸ್ವಲ್ಪ ಕಾಲದಲ್ಲಿಯೇ ಸಾಯುವ ಶಿಶುವಿನಂತೆ ನಮ್ಮ ಸ್ಥಿತಿಯಾಗುವದು!

ಪೋರ್ತುಗಾಲದಲ್ಲಿ ಅಲ್ಪಸಮಯದಲ್ಲಿ ವಿಪ್ಲವಂಟಾಗಿ ಮಹಾ ರಾಜ್ಯ ಕ್ರಾಂತಿಯೊದಗಿತು. ಆದ್ದರಿಂದ ಈಗಲಾ ದೇಶದಲ್ಲಿ ಒಂದೇ ಸವನೆ ವಿಪ್ಲವಗಳಾಗಹತ್ತಿವೆ. ಯಾವ ಬಗೆಯ ರಾಜ್ಯತಂತ್ರವಾದರೂ ಅಲ್ಲಿ ನೆಲೆಗೊಳ್ಳಲೊಲ್ಲದು.

೧೯೦೭ ರಲ್ಲಿ, ತುರ್ಕಸ್ಥಾನದಲ್ಲಿ ಒಮ್ಮಿಂದೊಮ್ಮೆ ರಾಜ್ಯಕ್ರಾಂತಿಯಾದದ್ದನ್ನು ಕಂಡು ಯಾವತ್ತರೂ ಅದನ್ನು ಅಭಿನಂದಿಸಿದರು ಆದರೆ ಹೊಸ ರಾಜ್ಯ ತಂತ್ರ ಕಿರಾಕ ಪಟ್ಟಿಯು ರಾಜ್ಯದಂತೆ ಅಲ್ಪ ಕಾಲವಿದ್ದು ನಷ್ಟವಾಯಿತು. ಹೊಸ ಆಡಳಿತವು ಸ್ವಪ್ನ ಸೃಷ್ಟಿಯಂತೆ ಆಗಿ ಹೋಯಿತು! ಆಗಿನಿಂದ ತುರ್ಕಸ್ಥಾನವು ಅನೇಕ ದುಃಖಗಳನ್ನು ಸೋಸಬೇಕಾಯಿತು. ಆ ಶೂರ ದೇಶವು ಇನ್ನೂ ಎಷ್ಟು ಸಂಕಟಗಳಿಗೆ ಒಳಗಾಗಬೇಕಾಗುವದೋ ಅದನ್ನು ಯಾರು ಬಲ್ಲರು?

ಈ ಅನುಭವಗಳಿಂದ ನಾನು ವಿಚಾರ ಮಗ್ನನಾಗಿ ನನಗೆ ಒಳಿತಾವುದೆಂಬುದು ತಿಳಿಯದಾಗಿದೆ ಈ ಸಮಯದಲ್ಲಿ ನನ್ನ ಹೃದಯವು ಭೀತಿಯಿಂದ ಕಂಪಿಸುತ್ತಿದೆ. ಈಗ ನಾವು ಸಮಾಧಾನ ಪಟ್ಟರೆ ನಮ್ಮ ಗತಿಯೇನು?

ಸ್ವರಾಜ್ಯ ಪ್ರಾಪ್ತಿಯಾಗಬೇಕಾದರೆ ಒಳ್ಳೇ ಪರಿಸ್ಥಿತಿಯು ಅವಶ್ಯವಾಗಿಬೇಕು ತಿರಸ್ಕಾರಕ್ಕೂ ಭೀತಿಗೂ ಅಸ್ಪದವಿರಕೂಡದು ಹಳ್ಳಿಗಾಡದ ಕೆಂಚನಿಗೂ ಅದರವು ದೊರೆಯಲಿಕ್ಕಬೇಕು. ನಿರ್ದೋಷಿಯಾದ ಚಿಕ್ಕ ಕುಮಾರಿಕೆಗೆ ಬೀದಿಯಲ್ಲಿ ಸ್ವಸ್ಥ ಚಿತ್ತದಿಂದ ಅಡ್ಡಾಡಲು ಅನುಕೂಲವಾಗಬೇಕು. ಅಂದರೇನೇ ಸ್ವರಾಜ್ಯವು ಪ್ರಾಪ್ತವಾಗುವದು.

ಇದೇ ಮೊದಲಾದ ಮಾತು ಜನರಿಗೆ ಈ ವರೆಗೂ ಚನ್ನಾಗಿ ತಿಳಿದಿಲ್ಲ ಆದಾಗ್ಯೂ ಇದೇ ಬಗೆಯ ಪರಿಸ್ಥಿತಿಯಿಂದಲೇನೇ ಸ್ವರಾಜ್ಯವು ಕೈ ಸೇರುವದು. ಬೇರೊಂದು ಪಾಯವಿಲ್ಲ, ಎಂಬೀ ಮಾತು ದಿನ ದಿನಕ್ಕೆ ನನಗೆ ಹೆಚ್ಚೆಚ್ಚು ಸ್ಪಷ್ಟವಾಗಹತ್ತಿದೆ.

ನಿಜವಾದ ಲೋಕ ಶಿಕ್ಷಣವು ಅಕ್ಷರ ಜ್ಞಾನದಲ್ಲಿರದೆ ಶೀಲದಕ್ಷತೆಯೂ ಶಾರೀರಕ ಪರಿಶ್ರಮದಲ್ಲಿಯೂ ಇರುತ್ತದೆಂಬುದರ ಬಗ್ಗೆ ಜನರಲ್ಲಿ ಇದುವರೆಗೆ ಖಾತ್ರಿಯೆಲ್ಲಿದೇ? ಹಿಂದುಸ್ಥಾನದ ಜನರಿಗೆ ಇನ್ನೂ ಅಕ್ಷರ ಜ್ಞಾನಕ್ಕೆ ಸ್ಥಾನ ವಾವುದೆಂಬುದು ತಿಳಿದಿಲ್ಲ. ಬಾಲಕರಿಗೆ ಮೊದಲು ನೀತಿಯನ್ನು ಕಲಿಸಬೇಕು, ಆಮೇಲೆ ಅವರ ಶರೀರವನ್ನು ಗಟ್ಟಿ ಮಾಡಬೇಕು ಮತ್ತು ಹೊಟ್ಟೆಯನ್ನು ತುಂಬಿಕೊಳ್ಳುವದಕ್ಕೊಂದು ವ್ಯವಸಾಯವನ್ನು ಕಲಿಸಬೇಕು. ಇಷ್ಟೆಲ್ಲವೂ ಆದ ಮೇಲೆ ಅವರ ಮನಃ ಶಕ್ತಿಯನ್ನು ವಿಕಾಸಗೊಳಿಸಲು ಯತ್ನಿಸಬೇಕು; ಮತ್ತು ಮನಸ್ಸಿನ ಅಲಂಕಾರವೆಂದು ಅಕ್ಷರ ಜ್ಞಾನವನ್ನ ಮಾಡಿಕೊಡಬೇಕು. ಇದೇ ಲೋಕ ಶಿಕ್ಷಣದ ಮೂಲ ತತ್ವವು ಆದರೆ ಈ ತತ್ವಕ್ಕೆ ನಮ್ಮ ಜನರು ಇನ್ನೂ ಒಪ್ಪಿಕೊಳ್ಳುವದಿಲ್ಲ

ತಮ್ಮ ಮಕ್ಕಳನ್ನು ಸರಕಾರೀ ಶಾಲೆಗಳಿಂದ ಬಿಡಿಸಲು ಈವರೆಗೂ ತಾಯಿ ತಂದೆಗಳು ಮನಸ್ಸು ಮಾಡರೆಂಬುದನ್ನು ನಾನು ಬಲ್ಲೆನು ವಿದ್ಯಾರ್ಥಿಗಳ ಮನಃಸ್ಥಿತಿಯನ್ನ ಸರಿಪಡಿಸಬೇಕೆಂಬ ಹಾಗೂ ಸ್ವತಂತ್ರತೆಯ ಶಿಕ್ಷಣವು ದೊರೆಯಬೇಕೆಂಬ ಉದ್ದೇಶದಿಂದ ರಾಷ್ಟ್ರೀಯ ವಿದ್ಯಾಲಯಗಳು ನಿರ್ಮಿತವಾಗಿವೆ; ಆದರೆ ಈ ವಿದ್ಯಾಲಯಗಳಿಗೆ ತಮ್ಮ ಮಕ್ಕಳನ್ನು ಕಳಿಸಿ ಕೊಡಲು ತಂದೆ ತಾಯಿಂದಿರು ಈ ವರೆಗೂ ಸಿದ್ಧರಿಲ್ಲ!

ವಕೀಲರವಂತೂ ಕೇಳುವದೇನ ? ಅವರಿನ್ನೂ ಕೋರ್ಟುಗಳ ಮೋಹ ಬಿಡಲೊಲ್ಲದವರಾಗಿರುವರಲ್ಲಿ? ನಮ್ಮ ನ್ಯಾಯನಿಗದಿಗಳನ್ನು ನಮ್ಮಲ್ಲಿಯೇ ತೀರಿಸಿಕೊಳ್ಳುವ ಕೆಲಸವನ್ನು ನಾವು ಆರಂಭಿಸಿರುವೆವೋ? ಸಾಂಪ್ರತದಲ್ಲಿ ನ್ಯಾಯವು ಬಹು ತುಟ್ಟಿಯಾಗಿದೆ. ಅದರೆ ಅದು ಹಾಗಾಗಬಾರದೆಂಬುದು ನಮ್ಮೆಲ್ಲರಿಗೆ ತಿಳಿದದೆಯೊ? ಈಗಲೂ ಧರ್ಮಕ್ಕೆ ಆಧಾರ ಭೂತರೆಂದೆನಿಸಿಕೊಳ್ಳುವ ಭಿನ್ನ ಭಿನ್ನ ಸಂಪ್ರದಾಯಗಳ ಧರ್ಮಾಧಿಕಾರಿಗಳು ತಮ್ಮ ತಮ್ಮ ಧಾರ್ಮಿಕ ವ್ಯಾಜ್ಯಗಳನ್ನು ಪ್ರಿವ್ಹಿ ಕೌನ್ಸಿಲಿನ ವರೆಗಾದರೂ ಹೋಗಿ ತಮ್ಮಂತೆ ಮಾಡಿಕೊಳ್ಳಬೇಕೆಂಬ ಆಶೆಯುಳ್ಳವರಾಗಿರುವರು ಮನಬಲ್ಲಂತೆ ಪಕ್ಷಕಾರರ ಕಡೆಯಿಂದ ಫೀ ರೂಪದಿಂದ ಹಣವನ್ನು ಹರಿಯುವ ಮೋಹವು ನಮ್ಮ ವಕೀಲರನ್ನು ಈ ವರೆಗೂ ಬಿಟ್ಟಿಲ್ಲ ಇದರಿಂದ ನ್ಯಾಯವನ್ನು ಚಿನದಿಂದ ತೂಗುವ ಹೊತ್ತು ಬಂದಿದೆ! ಈ ಅವಸ್ಥೆಯಲ್ಲಿ ನಾವು ಸಮಾಧಾನ ಪಡಲಿಚ್ಛಿಸಿದರೆ ಕೋರ್ಟುಗಳು ಈಗ ಹೇಗೋ ಹಾಗೇ ನಡೆಯುವವು ಆವುಗಳಲ್ಲಿಯ ಜೀವವು ಈಗಿನಂತೆಯೇ ಸ್ಫುರಣಗೊಳ್ಳುತ್ತಲೇ ಉಳಿಯುವದು. ಆವೇಳೆ ರಾಮರಾಜ್ಯವೆಲ್ಲಿ? ರಾಮರಾಜ್ಯದಲ್ಲಿ ನ್ಯಾಯದ ಮಾರಾಟವು ಆಗುತ್ತಿರುವದಿಲ್ಲ!

ಹಿಂದು ಮುಸಲ್ಮಾನರ ನಡುವೆ ಪೂರ್ಣ ಐಕ್ಯವು ನೆಲೆಗೊಂಡಿದೆಯೋ? ಒಬ್ಬರೊಬ್ಬರ ಭೀತಿಯನ್ನು ಅವರು ತೊರೆದಿರುವರೋ? ಅವರಿಬ್ಬರ ರಾಷ್ಟ್ರೀಯ ಆದರ್ಶವೂ ಆಕಾಂಕ್ಷೆಗಳೂ ಒಂದಾಗಿವೆಯೊ? ಇಬ್ಬರ ನಡುವೆ ಪೂರ್ಣ ಮಿತ್ರತೆಯಿರಬೇಕೆಂಬ ಮಾತಿನ ಮಹತ್ವವು ಇಬ್ಬರಿಗೂ ತಿಳಿದಿರುವದೇನೋ ನಿಜ; ಆದರೆ ಇಬ್ಬರ ಹೃದಯಗಳು ಈವರಿಗೂ ಒಂದಾಗಿಲ್ಲ; ಆಗ ಹತ್ತಿವೆ. ಈಗಲೇ ನಾವು ಸಮಾಧಾನವನ್ನು ತಾಳಿದರೆ ಈ ಕ್ರಿಯೆಯು ನಿಂತು ಹೋಗುವದು. ಇಬ್ಬರೂ ಒಂದಾಗುವ ವರೆಗೆ ಸ್ವರಾಜ್ಯದ ಮಾತುಗಳನ್ನಾಡುವದು ವ್ಯರ್ಥವದೆ. "ಎಲ್ಲಿಯ ವರೆಗೆ ಆತ್ಮತತ್ವವು ಹೊಳೆದಿಲ್ಲವೋ ಅಲ್ಲಿಯ ವರೆಗೆ ಎಲ್ಲ ಸಾಧನಗಳು ವ್ಯರ್ಥ ವಾದವುಗಳೇ" ಎಂಬ ವಚನವು ಸತ್ಯವಿದೆ. ಸ್ವರಾಜ್ಯದ ವಿಷಯದಲ್ಲಂತೂ ಈ ವಚನವು ಸಂಪೂರ್ಣವಾಗಿ ಯಥಾರ್ಥವಿದೆ. 'ಆತ್ಮ' ಶಬ್ದದ ಸ್ಥಳದಲ್ಲಿ 'ಸ್ವರಾಜ್ಯ' ಶಬ್ದವನ್ನು ಇಟ್ಟು ನೋಡಿದರೆ ಅರ್ಥವು ಚನ್ನಾಗಿ ವ್ಯಕ್ತವಾಗುವದು. ಸ್ವರಾಜ್ಯದ ತತ್ವವನ್ನು ಇನ್ನೂ ನಾವು ಚನ್ನಾಗಿ ಅರಿತುಕೊಳ್ಳಬೇಕಾಗಿದೆ. ಹಿಂದು ಮುಸಲ್ಮಾನರ ಮಿತ್ರತೆಯ ಅರ್ಥವು, ಪಾರಸೀ ಕ್ರೈಸ್ತ ಮತ್ತು ಯಹುದಿಗಳ ವೈರವೆಂದಾದರೆ, ಆ ಮಿತ್ರತೆಯು ಇಡೀ ಪ್ರಪಂಚದ ನಾಶಕ್ಕೆ ಕಾರಣವಾಗದಿರದು! ಆದ್ದರಿಂದ ಎಲ್ಲಿಯ ವರೆಗೆ ಹಿಂದು ಮು-

ಪಲ್ಯಾನದ ಪ್ರತಿಯ ಅರ್ಥವನ್ನು ನಾವು ಚೆನ್ನಾಗಿ ಅರಿತಿಲ್ಲವೋ, ಅಲ್ಲಿಯ ವರೆಗೆ ಸಮಾಧಾನಪಡಿಸುವದು ಮೂರ್ಖತನವೇ ಸೈ!

ಮತ್ತು ಶಾಂತಿಯ ನಮ್ಮಲ್ಲಿ ಚಳವಳಿಯು ಅತ್ಯವಾಗಿದೆ ಆದರೆ ನಾವದನ್ನು ಪ್ರಶಸ್ತ ಮಾಡಿಕೊಂಡಿವೆಯೋ? ಅಸಹಯೋಗವು ಶಾಂತಿ ಪೂರ್ಣವಾದುದು; ಮತ್ತು ಶಾಂತಿಯು ಸತ್ಯ ಶಕ್ತಿಯ ಸೂಚಕವಾಗಿರುವದು, ಎಂಬ ಮಾತಿಗೆ ನಮ್ಮ ಒಪ್ಪಿಗೆಯಿದೆಯೆ? ಶಾಂತಿಯನ್ನು ದುರ್ಬಲರ ಶಸ್ತ್ರವೆಂದೆಣಿಸಿ ನಾವು ಅದರ ಬೆಲೆಯನ್ನೇ ಕುಂದಿಸುವವರಾಗಿರುವೆವು. ರತ್ನಕ್ಕೆ ಕಾಜಿನ ಬೆಲೆಯನ್ನೀವ ಮೂರ್ಖನಂತೆ ನಾವಾಗಿರುವೆವು. ಶಾಂತಿಯು ವೀರನ ಶಸ್ತ್ರವಾಗಿರುವದು, ಮತ್ತು ಅವನ ಕೈಯಲ್ಲಿಯೇ ಅದು ಶೋಭಿಸುವದು. ಶಾಂತಿಯ ಅರ್ಥವು ಕ್ಷಮೆಯು; ಮತ್ತು ಕ್ಷಮೆಯು ವೀರನ ಅಲಂಕಾರವು. ತಿನ್ನಲು ನಮ್ಮ ಬಳಿಯಲ್ಲಿ ಏನೂ ಇಲ್ಲದ್ದರಿಂದ ನಾವು ಉಪವಾಸ ಬಿದ್ದರೆ, ಆ ಉಪವಾಸದ ಪುಣ್ಯವು ನಮಗೆ ಲಭಿಸದು. ಯಾವನಾದರೂ ತನ್ನ ಕೈಯಿಂದ ಎರಡನೇಯವರನ್ನು ಹೊಡೆಯುವದಾಗದ್ದರಿಂದ ಹೊಡೆಯುವದನ್ನು ಬಿಟ್ಟರೆ ಅವನೇನು ಪುಣ್ಯ ಮಾಡಿದಂತಾಗದು. ಬಾರಡೋಲಿ ಆಣಂದಗಳಲ್ಲಿ ಸ್ವರಾಜ್ಯ ಯುದ್ಧಕ್ಕೆ ಸಿದ್ಧರಾದ ಯೋಧ ಜನರು ಒಬ್ಬ ಪಾರಸೀಯನ್ನಾದರೂ, ಒಬ್ಬ ಇಂಗ್ಲಿಷನನ್ನಾದರೂ, ಒಬ್ಬ ಸಹಕಾರಿಯನ್ನಾದರೂ ಪೀಡಿಸಲಿಚ್ಛಿಸದಿದ್ದರೆ ಅವರು ಶಾಂತಿ ಸೈನ್ಯದಲ್ಲಿ ಸೈನಿಕರಾಗಲು ಯೋಗ್ಯರೆಂದು ತಿಳಿಯಲ್ಪಡುವರು. ಶಾಂತಿಯ ಹೆಸರಿನಿಂದ ಅಶಾಂತಿಯ ಕೆಲಸವನ್ನು ಮಾಡಬೇಕೆಣಿಸುವ ಮನುಷ್ಯನು ದೇಶದ್ರೋಹಿ ಯಾಗುವನಲ್ಲದೆ ಜಗದ್ದ್ರೋಹಿಯಾದರೂ ಆಗುವನೆಂಬದರಲ್ಲಿ ಸಂದೇಹವಿಲ್ಲ. ನಾವು ಶಾಂತಿ ಶಸ್ತ್ರದ ಉಪಯೋಗವನ್ನು ಹೇಗೆ ಮಾಡುವೆವೆಂಬುದನ್ನು ಇಡೀ ಸಂಸಾರವು ತೃಷಾತುರ ನಯನಗಳಿಂದ ಒಂದೇ ಸವನೆ ಎದುರು ನೋಡುತ್ತಲಿದೆ. ಎಲ್ಲಿಯ ವರೆಗೆ ಹಿಂದುಸ್ಥಾನವು ಶಾಂತಿಯನ್ನು ಬಲವಂತರ ಶಸ್ತ್ರದಂತೆ ಉಪಯೋಗಿಸಲು ಕಲಿಯುವದಿಲ್ಲವೋ ಅಲ್ಲಿಯ ವರೆಗೆ ನಾವು ಸಮಾಧಾನವಡೆಯಬೇಕೆಂಬ ಮಾತನ್ನು ಕನಸಿನಲ್ಲಿಯೂ ಎಣಿಸಕೂಡದು.

ಇನ್ನು ನನ್ನ ಹಿಂದು ವಾಚಕರಿಗೆ ಏನನ್ನು ಹೇಳಲಿ? ಎಲ್ಲಿಯ ವರೆಗೆ ನಾವು ಅಂತ್ಯಜರನ್ನು ನಮ್ಮ ಬಂಧುಗಳೆಂದೆಣಿಸುವದಿಲ್ಲವೋ ಅಲ್ಲಿಯ ವರೆಗೆ ನಾವು ನಿಜವಾದ ಹಿಂದುಗಳೇ ಅಲ್ಲೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಎಂದು ನಮ್ಮ ಹಿಂದುಗಳು ತಮ್ಮ ಅಂತ್ಯಜ ಬಾಂಧವರನ್ನು ಪ್ರೇಮದಿಂದ ಆಲಿಂಗಿಸಲು ಮುಂದುವರಿಯುವರೋ ಅಂದು ಆಕಾಶದಿಂದ ಪುಷ್ಪ ವೃಷ್ಟಿಯು ಆಗುವದು! ಮತ್ತು ಅವತ್ತಿನ ದಿನವೇ ನಿಜವಾದ ಗೋರಕ್ಷೆಯ ಕಾರ್ಯವು ನೆರವೇರುವದು? ಮನುಷ್ಯನ ಹೃದಯದಲ್ಲಿ ತಿರಸ್ಕಾರವೂ ದಯೆಯೂ ಏಕ ಕಾಲಕ್ಕೆ ಕೂಡಿರಲಾರವು. ನಾವು ನಮ್ಮ ಪ್ರೇಮದ ಬಲದಿಂದ ಅಂತ್ಯಜರಲ್ಲಿ ಕಂಡು ಬರುವ ದೋಷಗಳನ್ನು ತೆಗೆದು ಹಾಕಲು ಸಮರ್ಥರಾಗುವೆವು. ಶ್ರೀ ಆನಂದ ಶಂಕರ ಧ್ರುವ ಇವರ ಶಬ್ದಗಳು ನನ್ನ ಅಂತಃಕರಣದಲ್ಲಿ ದೃಢ ಮೂಲವಾಗಿ ನಿಂತಿವೆ. ನಮ್ಮ ಹೃದಯದಲ್ಲಿನ ಕುವಿಚಾರಗಳು ನಮ್ಮ ಶತ್ರುಗಳಾಗಿದ್ದು ಅವೇ ಅಸ್ಪೃಶ್ಯವಾದವುಗಳಾಗಿರುವವು ಯಾವ ದೇಹಧಾರಿಗಳನ್ನು ನಾವು ಅಸ್ಪೃಶ್ಯರೆಂದು ತಿಳಿದಿರುವೆವೋ ಅವರು ನಮ್ಮ ಅತ್ಯಂತ ಪ್ರಿಯ ಜನರಿರುವರು. ಅವರ ಸ್ಪರ್ಶದಿಂದಲೂ, ಅವರ ಸೇವೆಯಿಂದಲೂ ನಮಗೆ ಪುಣ್ಯವು ಪ್ರಾಪ್ತವಾಗುವದು ಕರ್ಮನಿಷ್ಠನಾದ ಬ್ರಾಹ್ಮಣನು ಕೃಷ್ಣ ಸರ್ಪವನ್ನು ಕಂಡರೆ ಹೇಗೋ ಹಾಗೆ ಅಂತ್ಯ ಜನನನ್ನು ಕಂಡು ಹಿಂದೆ ಸರಿಯದೆ ಅವನನ್ನು ಪ್ರೇಮದಿಂದ ಮುಟ್ಟಿ ಸ್ನಾನ ಮಾಡದೆ ಮಂದಿರವನ್ನು ಸೇರಿದರೆ ಆ ಮಂದಿರವು ನಿಜವಾಗಿ ಪವಿತ್ರವಾಗುವದು. ಎಲ್ಲಿಯ ವರೆಗೆ ನಾವು ಅಸ್ಪೃಶ್ಯತೆಯೆಂಬ ಅಶ್ವತ್ಥವನ್ನು ಬೇರು ಸಹಿತ ಕಿತ್ತಿ ಹಾಕಿಲ್ಲವೋ ಹಾಗು ಶ್ರೀ ಧ್ರುವರಂತೆ ಅಸ್ಪೃಶ್ಯತೆಯ ನಿಜವಾದ ಅರ್ಥವನ್ನು ಅರಿತಿಲ್ಲವೋ ಅಲ್ಲಿಯವರೆಗೆ ಸಮಾಧಾನವನ್ನಿಚ್ಛಿಸಕೂಡದು

ಈ ಬಗೆಯ ಮಹಾನ್ ಕಾರ್ಯವನ್ನು ಈ ತರದ ಆತ್ಮ ಶುದ್ಧಿಯನ್ನೂ ಕಷ್ಟಗಳನ್ನು ಸಹಿಸಿಯೇ ಸಾಧಿಸಬಲ್ಲೆವು ಇಚ್ಛೆಯಿಲ್ಲದೆ ಅವಶನಾಗಿ ಸತ್ತು ಹೋದವನಿಗೆ ಅವಗತಿಯು ಪ್ರಾಪ್ತವಾಗುವದು. ಆದರೆ ಇಚ್ಛಾಪೂರ್ವಕವಾಗಿ ಮರಣವನ್ನು ಅಂಗೀಕರಿಸಿದವನಿಗೆ ಮೋಕ್ಷವು ಲಭಿಸುವದು ಅದರಂತೆಯೇ ನಾವು ಮೇಲ್ಕಾಣಿಸಿದ ಸಾಧನಗಳನ್ನು ಉಪಯೋಗಿಸುತ್ತ ಬಂದ ಸಂಕಟಗಳಿಂದ ಎದೆಗುಂದದೆ ಮರಣಕ್ಕೂ ಕೂಡ ಹೆದರದೆ ಸ್ವಕಾರ್ಯನಿರತರಾದರೆ ನಮಗೆ ಸ್ವಾತಂತ್ರ್ಯವೂ ಸ್ವರಾಜ್ಯವೂ ದೊರೆಯುವದು ದಾಸ, ಲಾಲಾಜಿ, ಮೋತಿಲಾಲಜಿ, ಮೌಲಾನಾ ಅಬ್ದುಲ್ ಕಲಾಮ ಆಝುದ ಮೊದಲಾದ ವೀರಶ್ರೇಷ್ಠರು ನಮಗೆ ಮರಣದ ಮಂತ್ರವನ್ನು ಉಪದೇಶಿಸಿರುವರು ನಾವಾದರೂ ಆ ಮಂತ್ರವನ್ನು ಕಲಿತಿರುವೆವೆಂಬಂತೆ ತೋರುತ್ತದೆ ಆದ್ದರಿಂದ ಸ್ವರಾಜ್ಯವು ಎಲ್ಲಿದೆಯೆಂದು ಈಗ ಯಾರು ಪ್ರಶ್ನ ಮಾಡುವದಿಲ್ಲ. ನಮ್ಮಲ್ಲಿ ಇಚ್ಛಾಪೂರ್ವಕವಾಗಿ ಸಾಯಲು ಸಾಮರ್ಥ್ಯವು ಬಂದ ದಿನವೇ ಸ್ವರಾಜ್ಯವು ನಮ್ಮ ಕೈಸೇರಿತೆಂದು ಎಲ್ಲರೂ ಹೇಳುತ್ತಿರುವರು ಉಳಿದೆಲ್ಲ ಮಾತು ಮೃಗಜಲಕ್ಕೆ ಸರಿಯಾದುದೇ ಸೈ

ನವಜೀವನ

ಮೋಹನದಾಸ ಕರಮಚಂದ ಗಾಂಧಿ

---

## ತೆರಿಗೆಯನ್ನು ಕೊಡದಿರುವದು

ತೆರಿಗೆಯನ್ನು ಕೊಡಬಾರದೆಂಬ ವಿಚಾರವು ದಟ್ಟವಾಗಿ ನಾಲ್ಕುಕಡೆಗೆ ಎದ್ದಿದೆ. ಹಿಂದುಸ್ಥಾನದೊಳಗಿನ ಉಳಿದ ಎಲ್ಲ ಪ್ರಾಂತಗಳಕಿಂತ ಆಂಧ್ರ ದೇಶದವರು ಈ ವಿಷಯವನ್ನು ಎಲ್ಲರಮುಂದೆ ಹಾಡುತ್ತಿರುವರು, ಮಹಾಸಭೆಯು ಎಲ್ಲಪ್ರಾಂತಗಳಿಗೆ ಸ್ವಯಂ ನಿರ್ಣಾಯಕತತ್ವವನ್ನು ಕೊಟ್ಟಿದ್ದರೂ ನನ್ನ ಸ್ವಾಂ[illegible]ಲ್ಲಿ ವಿಚಾರಣೆಗೊಳಪಟ್ಟಂಥ ಕೆಲವೊಂದು [illegible]ಷ್ಟ ಪ್ರದೇಶದಲ್ಲಿ ಈ ತರದ ಪ್ರಯೋಗವ[illegible] ನಾನು ಸ್ವತಃ ಮಾಡುವ ಪೂರ್ತ[illegible] ಯಾವ ಪ್ರಾಂತಗಳೂ ತೆರಿಗೆ ನಾಕರಿಸ[illegible] ಯುದ್ಧವನ್ನು ಸುರುವು ಮಾಡಬಾರದೆಂ[illegible] ನಾನು ಎಚ್ಚರಿಕೆಯನ್ನು ಕೊಟ್ಟಿದ್ದೇನೆ. ಮತ್ತೊಮ್ಮೆ ನಾನು ಅದೇ ಎಚ್ಚರಿಕೆಯನ್ನು ಕೊಡಬೇಕೆನ್ನುತ್ತೇನೆ. ಜಾನೇವರಿ ೩೧ನೇ ತಾರೀಖಿನ ಪರ್ಯಂತ ನಾವು ಈ ಆಕ್ರಾಮಕ ಸ್ವರೂಪದ ಕಾಯಿದೇ ಭಂಗವನ್ನು ಪ್ರಾರಂಭ ಮಾಡತಕ್ಕದ್ದಲ್ಲವೆಂದು ನಾನು ಜನರ ಲಕ್ಷ್ಯಕ್ಕೆ ತಂದು ಕೊಡಲಿಚ್ಛಿಸುತ್ತೇನೆ ಅದಕ್ಕೂ ಮೊದಲು ಸುರುವು ಮಾಡಬೇಕಾಗಿದ್ದರೆ ಮಾಲವೀಯ ಪರಿಷತ್ತಿನ ಕಮೀಟಿಯವರು ತಮ್ಮ ಪ್ರಯತ್ನವು ನಿಷ್ಫಲವಾಯಿತು; ಮತ್ತು ರವುಂಡಟೇಬಲ್ ಪರಿಷತ್ತು ಕೂಡ್ರುವದಿಲ್ಲವೆಂದು ಸ್ಪಷ್ಟವಾಗಿ ಹೇಳುವದು ಅವಶ್ಯವದೆ. ಮಾಲವೀಯ ಕಮೀಟಿಯವರು ನಡೆಸಿದ ಸಂಧಾನದ ಪರಿಣಾಮವು ತಿಳಿಯುವಹೊರ್ತು ತೆರಿಗೆ ಕೊಡದಿರುವದೆಂದರೆ ಕೆಲವು ವೇಳೆಯ ತನಕ ಮಾತ್ರ ತೆರಿಗೆಯ ಚಳವಳಿಯು ಬಂದುಮಾಡಲ್ಪಟ್ಟಿದೆಯೆಂತಲೇ ತಿಳಿಯಬೇಕು. ೩೧ನೇ ಜಾನೇವರಿಯೂ ಸಮೀಪಿಸ ಹತ್ತಿದೆ. ಮತ್ತು ತೆರಿಗೆಯ ನಿರಾಕರಣದ ಪ್ರಶ್ನೆಯನ್ನೂ ಮತ್ತು ಅದರ ಎಲ್ಲ ಪರಿಣಾಮಗಳನ್ನೂ ವ್ಯಾಪಕ ದೃಷ್ಟಿಯಿಂದ ವಿಚಾರ ಮಾಡಲಿಕ್ಕೆ ಬೇಕಾಗಿದೆ.

ಈಗಿನ ರಾಷ್ಟ್ರೀಯ ಚಳವಳಿಯ ವಿಷಯಕ್ಕೆ ಅತಿಶಯ ಸಹಾನುಭೂತಿಯುಳ್ಳ ಮತ್ತು ಅದರ ಇಂಗಿತವನ್ನು ಚನ್ನಾಗಿ ಅರಿತಂಥ ಮಿತ್ರನೊಬ್ಬನು ಈ ವಿಷಯದಲ್ಲಿ ತನ್ನ ಮನಸ್ಸಿನಲ್ಲಿಯ ಅಂಜಿಕೆಗಳನ್ನು ಈ ಪ್ರಕಾರ ಬಿಚ್ಚಿ ಹೇಳಿದ್ದಾನೆ:–

“ತೆರಿಗೆಯ ನಿರಾಕರಣ ಸ್ವರೂಪವನ್ನು, ತಾ[illegible] ಕಾಯಿದೆ ಭಂಗವನ್ನು ಸುರುವು ಮಾಡಿದ ಮೇಲೆ ಅಸಹಕಾರವು ಧರ್ಮದ ಮರ್ಯಾದೆಯನ್ನು ಎಷ್ಟರಮಟ್ಟಿಗೆ ದಾಟಿ ಹೋಗುತ್ತದೆಂಬದರಬಗ್ಗೆ ನಾನು ಬಹಳ ವಿಚಾರ ಮಾಡುತ್ತೇನೆ. ಯಾಕಂದರೆ ನನ್ನೀ ಚಳವಳಿಯು ವಿಶೇಷತಃ ಧಾರ್ಮಿಕ ಸ್ವರೂಪದ್ದಿರುತ್ತದೆ ಮತ್ತು ಮಹಾತ್ಮಾಗಾಂಧಿಯವರ ಕಲ್ಪನೆಯಾದರೂ ಈ ತರದ್ದೇ ಇರುತ್ತದೆ. ಸಂಪೂರ್ಣವಾಗಿ ಅಹಿಂಸೆಯ ತತ್ವವು ಪ್ರತಿಯೊಬ್ಬನ ಅಂತಃಕರಣದಲ್ಲಿ ನೆಲೆಗೊಳ್ಳದಿದ್ದಂಥ ಜನರು ಕೂಡ ಕರಕೊಡುವದನ್ನು ನಾಕರಿಸುವದರಿಂದ ದಾಗೆ ಧೋಪೆಗಳಾಗಿ ಈ ಚಳವಳಿಯ ಧಾರ್ಮಿಕ ಸ್ವರೂಪಕ್ಕೆ ಕುಂದು ಬರಬಹುದೇನು? ಮತ್ತು ಅಹಿಂಸೆಯ ತತ್ವವು ಯಾರ ಹೃದಯಾಂತಃಕರಣದಲ್ಲಿ ನೆಲೆಗೊಂಡಿಲ್ಲವೋ ಅಂಥ ಜನರನ್ನು ಈ ಚಳವಳಿಯಲ್ಲಿ ತರಬಹುದೇನು? ಪ್ರಾಧಾನ್ಯತಃ ಆಧ್ಯಾತ್ಮಿಕಸ್ವರೂಪವುಳ್ಳ ಈ ಚಳವಳಿಯಲ್ಲಿ–ಸಹಜ

ನಾಗಿಯೇ ಆಗಮೊಲ್ಲಿವೇಕೆ ಐಹಿಕಾಶೆಯನ್ನು ಬೆರಸಿಲ್ಲವೇ? ಮತ್ತು ಸರಿಬರಕಿ ಚಳವಳಿಯಿಂದ ಈ ಸರಕಾರವನ್ನು ಗೆಡೆಯಲಿಕ್ಕೆ ಅವರು ಪ್ರಯತ್ನಿಸುತ್ತಿರುವದಿಲ್ಲವೋ? ಮೊನ್ನೆ ಮೊನ್ನೆ ಸಂಭವಿಸಿದ ಸಂಗತಿಗಳಿಂದ ಹೊಡಿಬಡಿ ಕಡಿ ಇರಿ ಎಂಬ ಮನಃಪ್ರವೃತ್ತಿಯೂ ಮತ್ತು ದಂಡೆಲಾಪಾಯದಲ್ಲಿಯ ವಿಶ್ವಾಸವೂ ಸಂಪೂರ್ಣವಾಗಿ ತೊಲೆದು ಹೋಗಿಲ್ಲವೆಂದು ತಿಳಿದುಕೊಳ್ಳಬಹುದು. ಕಾರಣ ತೆರಿಗೆಯನ್ನು ಕೊಡಲಿಕ್ಕೆ ನಿರಾಕರಿಸುವದೆಂದರೆ ಅಂಥಃ ಕಾರಕುತೆಯಲ್ಲಿ ಧುಡುಂ ಪ್ರವೇಶಮಾಡಿದಂತಾಗುವದು. ಇಷ್ಟೇ ಅಲ್ಲ ಆದರೆ ಬಹಳೇ ಗಂಡಾಂತರಗಳೂ ಒದಗುವವೆಂದು ನನ್ನ ಮತವಿರುತ್ತದೆ. ಕಾರಣ ಮಹಾತ್ಮಾಜಿಯವರು ಈ ಕಾರ್ಯಕ್ರಮವನ್ನು ಕೈಕೊಳ್ಳಬಾರದೆಂದು ನಾನ ಹೇಳುತ್ತೇನೆ."

ರೋಮರೋಮಗಳಲ್ಲಿ ಕೂಡ ಅಹಿಂಸೆಯ ತತ್ವವು ಬೇರಿಡಸದೆ ಇದ್ದಂಥವರು ಈ ಕರನಿರಾಕರಣದ ಚಳವಳಿಯಲ್ಲಿ ಸೇರುವದೆಂಬದೊಂದೇ ಸಂಗತಿಯಲ್ಲಿ ಮಾತ್ರ ಪ್ರತಿಪಕ್ಷೀಯರ ಶಂಕಾಸ್ಥಾನಕ್ಕೆ ಆಸ್ಪದವಿರುತ್ತದೆ. ಈ ಮಾತು ಮಾತ್ರ ದಿಟವಿರುತ್ತದೆ, ಆ ಕಾರಣವೇ ಕರನಿರಾಕರಣೆಯ ಕಾರ್ಯಕ್ರಮವು ಐಹಿಕ ಲಾಲಸೆಯ ಆಶೆಯನ್ನು ಜನರಿಗೆ ಹಚ್ಚುತ್ತದೆಂಬುದು ನಿಜ. ಆದ್ದರಿಂದ ಜನರು ಬಹುಮಟ್ಟಿಗೆ ಸಿದ್ಧರಾಗಬಹುದೆಂಬ ಮಾತ್ರಕ್ಕೆ ನಾವು ಕರ ನಿರಾಕರಣೆಯ ಕಾರ್ಯಕ್ರಮವನ್ನು ಕೈಕೊಳ್ಳಬಾರದು. ಈ ಸಿದ್ಧತೆಯು ನಮ್ಮನ್ನು ಅಪ್ರ ದಾರಿಗೆ ಎಳೆದೊಯ್ಯಬಹುದು. ಈ ತರಹ ಕರನಿರಾಕರಿಸುವದೆಂದರೆ ಅದು ನಾಗರಿಕತೆಗೆ ಒಪ್ಪುವದೂ ಮತ್ತು ಶಾಂತತಾಮಯವೂ ಆಗಲಿಕ್ಕಿಲ್ಲ. ಇಷ್ಟೇ ಅಲ್ಲ ಆದರೆ ಅದು ಅಕ್ಷರಶಃ ಗುಸ್ತಿಯಾಗುವದು. ಶಾಂತತಾ ಭಂಗವಾಗುವ ಗಂಡಾಂತ ಒದಗಬಹುದು. ಶಾಂತವಾಗಿಯೇ ನಡೆಯುತ್ತೇವೆಂದು ಪ್ರತಿಜ್ಞೆ ಮಾಡಿದ ಮೇಲೂ ಕೂಡ ಮುಖಂಡರಾದ ಜವಾಹರಲಾಲ ನೇಹರೂ ಇವರು ಹೇಳಿದರೆ ಸಾಕು ತಾವು ಸಂಪೂರ್ಣವಾಗಿ ಹಿಂಸಾ ಕೃತಿಗಳನ್ನು ಮಾಡಲಿಕ್ಕೆ ತಯಾರಿದ್ದೇವೆಂದು ಸಂಯುಕ್ತ ಪ್ರಾಂತದಲ್ಲಿಯ ರೈತರು ಹೇಳಿದ್ದನ್ನು ನಾವು ಮರೆಯತಕ್ಕದ್ದಲ್ಲ. ತಾವು ತೆರಿಗೆಯನ್ನು ಕೊಡಲಿಕ್ಕೆ ಯಾಕೆ ಒಲ್ಲೆನ್ನುತ್ತಿರುತ್ತೇವೆಂಬದರ ಕಾರಣವನ್ನೂ ಮತ್ತು ಸವಿನಯ ತೆರಿಗೆಯ ನಿರಾಕರಣದ ಮರ್ಮವನ್ನು ಸರಿಯಾಗಿ ಅರಿಯದ ಹೊರತು ಮತ್ತು ಸಮುಚಿತವಾಗಿ ತಮ್ಮ ಜಿಂದಿಗೆಯು ಹೋಬೆಯುರ ನಾಶವಾದನ್ನೂ (ಆ ಜಿಂದಿಗೆಯು ಕಡೆತನಕ ನಮ್ಮನ್ನು ಬಿಟ್ಟು ಹೋಗಲಾರದೆಂದು ನಾನು ನಂಬುತ್ತೇನೆ) ತಮ್ಮ ದನಕರಗಳೂ ಗಂಟುಮೂಟೆಗಳೂ ಮಾರಾಟವಾಗಿ ಹೋಗುವದನ್ನು ಶಾಂತಚಿತ್ತರಾಗಿ ನೋಡಿಕೊಳ್ಳುವ ಶಕ್ತಿಯು ಬರದಹೊರತು ರೈತರು ತೆರಿಗೆ ಕೊಡಲಿಕ್ಕೆ ಒಲ್ಲೆನ್ನುವ ಅಭ್ಯಾಸ ಮಾಡಕೂಡದು. ಚ ತ್ರಿಪಾಲದ ನಾಲಿಸ್ಟ್ರೈನದಲ್ಲಿ ಸಂಭವಿಸಿದ ಸಂಗತಿಯನ್ನು ಅವರ ಮುಂದೆ ಸ್ವಚ್ಛವಾಗಿ ಹೇಳತಕ್ಕದ್ದು. ಕೆಲವು ಅಟಬರು ದಂಡಿಸಲ್ಪಟ್ಟರು. ಸೈನಿಕರು ಕೆಲವರನ್ನು ಮುತ್ತಿದರು. ವಿಮಾನಗಳು ಅವರ ತಲೆಯಮೇಲೆ ಗಿರಿಗಿರಿ ತಿರುಗಹತ್ತಿದವು. ಮತ್ತು ಆ ಶೂರಜನರಿಂದ ದನಕರಗಳು ಕಸಿಯಲ್ಪಟ್ಟವು. ಆವುಗಳನ್ನು ಪಡ್ಡಿಯಲ್ಲಿ ತುರುಕಿ ಅವುಗಳಿಗೆ ಮೇವು ಕಣಿಕಿಯನ್ನು ಕೊಡದೆ ನೀರಕ್ಕೆ ನೀರು ಸಹ ಇತರ ಅವನ್ನು ಹಾಯ್ಲಾಗಿ ಮಾಡಿದರು. ಮತ್ತು ದೈವಬಿಟ್ಟಂತಾಗಿ ಏನೂ ಮುಂದುಗಾಣದ ಆ ಜನ ಮಂಡವನ್ನು ಶಿಕ್ಷಿಸಿ ಮುಂದೆ ಈ ರಾಜನಿಷ್ಠೆಗೆ ಇನ್ನಾವುದೋ ಏನೋ ಅನ್ನುವಂತೆ ಅವರಿಗೆ ಅವರ ದನಗಳು ತಿರುಗಿ ಕೊಡಲ್ಪಟ್ಟವು. ಆದರೆ ದಡ್ಡಿಗೆ ಬಂದು ನೋಡುತ್ತಾರೆ ದನಗಳಲ್ಲಿ ಕೆಲವು ಸತ್ತಿದ್ದವು ಮತ್ತು ಉಳಿದವು ಸಾಯಲಾಗಿದ್ದವು. ಇದಕ್ಕೂ ಭಯಂಕರ ಸಂಗತಿಗಳು ನಮ್ಮ ಹಿಂದುಸ್ಥಾನದಲ್ಲಿ ಸಂಭವಿಸಲಿಕ್ಕೆ ಆಸ್ಪದವಿರುವದು ಮತ್ತು ಬಹಳಮಾಡಿ ಸಂಭವಿಸೇ ಸಂಭವಿಸುವವು.

ಕೂಳಿಲ್ಲದೇ ನೀರಿಲ್ಲದೇ ಸಾಯಹೊಡೆಯಲಿಕ್ಕೇ ಎಂದು ಸರಕಾರದವರು ದನಕರಗಳನ್ನು ಹೊಡೆದುಕೊಂಡು ಹೋದರೂ ಶಾಂತವೃತ್ತಿಯಿಂದ ಇರಲಿಕ್ಕೆ ನಮ್ಮಲ್ಲಿಯ ರೈತರು ತಯಾರಿರುವರೋ? ಈ ತರದ ಉದಾಹರಣೆಗಳು ಅಂಧ್ರದೇಶದಲ್ಲಿ ಎಷ್ಟೋ ಆಗಿಹೋಗಿವೆ. ಇವೆಲ್ಲ ವಿಷಯಗಳನ್ನು ಚನ್ನಾಗಿ ಅರಿತುಕೊಂಡು ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿಯೂ ಮನಃಪೂರ್ವಕವಾಗಿ ಶಾಂತತೆಯನ್ನು ಪಾಲಿಸಲಿಕ್ಕೆ ಸಿದ್ಧರಾದರೆಂದರೆ ಕರ ನಿರಾಕರಣೆಮಾಡಲಿಕ್ಕೆ ಆ ಜನರು ಬಹುಮಟ್ಟಿಗೆ ಯೋಗ್ಯರಾಗುವರೆಂದು ನನ್ನ ಮತವಿರುತ್ತದೆ.'

ಇಷ್ಟಾದರೂ " ಬಹುಮಟ್ಟಿಗೆ " ಎಂಬ ಶಬ್ದವನ್ನು ನಾನು ಬೇಕೆಂದು ಉಪಯೋಗಿಸಿರುವೆನು. ಯಾಕಂದರೆ ಕರ ನಿರಾಕರಣೆಯಿಂದ ನೌಕರಶಾಹಿಯ ಕೈಯಲ್ಲಿಯ ಅಧಿಕಾರವು ಹೋಗಿ ಅದು ನಮ್ಮ ಕೈಯಲ್ಲಿಯೇ ಬರುತ್ತದೆ. ಆ ಕಾರಣ ರೈತರು ಶಾಂತತಾಮಯ ಉಳ್ಳವರಾಗುವದರಿಂದಿಷ್ಟೇ ನನ್ನ ಕೆಲಸವು ಸಾಗುವದಿಲ್ಲ. ಶಾಂತತೆಯಿಂದ ೧೯೨೧ನೇ ಕಾಳಗವು ಗೆಲಿಸಲ್ಪಟ್ಟರೂ ಮೇಲಿನ ನಾಲ್ಕು ಪೈಕಾಳಗವು ಉಳಿಯುತ್ತದೆ. ರೈತರೆಲ್ಲರು ಅಂತ್ಯಜರನ್ನು ತಮ್ಮ ಬಂಧುಗಳಂತೇ ನಡೆಸಿಕೊಳ್ಳಲಿಕ್ಕೆ ತಯಾರಾಗಿರಲಿಕ್ಕಿಲ್ಲ. ಮತ್ತು ಹಿಂದು ಮುಸಲ್ಮಾನ ಪಾರ್ಶಿ ಯಹೂದಿ ಕ್ರಿಶ್ಚನ್ನ ಜನರು ತಮ್ಮ ತಮ್ಮೊಳಗೆ ಐಕ್ಯಮತದಿಂದ ನಡಕೊಳ್ಳುತ್ತಿರಲಿಕ್ಕಿಲ್ಲ. ನೈತಿಕೋನ್ನತಿಗೂ ಸಾಂಪತ್ತಿಕ ಏಳ್ಗೆಗೂ ಅರಿವೆಯು ಮತ್ತು ಖಾದಿಯು ಎಷ್ಟು ಅವಶ್ಯವಿದೆ ಎಂಬದನ್ನು ಅವರು ಸಂಪೂರ್ಣವಾಗಿ ಮನಗಂಡಿರಲಿಕ್ಕಿಲ್ಲ. 'ಇದರ ಮಹತ್ವವು ಅವರಿಗೆ ತಿಳಿಯದಿದ್ದರೆ ಅವರಿಗೆ ಸ್ವರಾಜ್ಯವು ದೊರೆಯಲಾರದು. ಕಡುತರವಾದ ತಪಶ್ಚರ್ಯ ಮತ್ತು ಆತ್ಮಶುದ್ಧಿಯ ತೆರುವಾಯವೇ ತೆರಿಗೆ ನಿರಾಕರಣ ಮಾಡುವ ಬಹುಮಾನವು ದೊರೆಯುವದು. ಗುಜ್ಜರಾತಿನ ಸವಿನಯ ಕಾಯಿದೆ ಭಂಗವು ಹೇಗೆ ಅಶಕ್ಯವೋ ಅದರಂತೆಯೇ ಕ್ರೌರ್ಯದಿಂದ ತೆರಿಗೆಯನ್ನು ನಿರಾಕರಿಸುವದು. ಸಣ್ಣ ಸಣ್ಣ ಕಾರಣದ ಸಲುವಾಗಿ ತೆರಿಗೆಯನ್ನು ಕೊಡುವದಿಲ್ಲೆಂದು ಜಗಳ ತೆಗೆಯುತ್ತಿದ್ದ ಜನರಿಗೆ ಅಶಕ್ಯವದಾಕೇ. ಸೌಜನ್ಯದಿಂದ ತೆರಿಗೆಯನ್ನು ನಿರಾಕರಿಸುವದು ಅಸಹಕಾರಿತೆಯ ಕಾರ್ಯಕ್ರಮದಲ್ಲಿ ಕಡೆಯ ಮೆಟ್ಟು. ಉಳಿದ ಎಲ್ಲತರದ ಕಾಯಿದೇ ಭಂಗಗಳನ್ನು ಆಶ್ರಯಿಸಿ ನಿರಾಶರಾದ ಹೊರತು ನಾವು ಈ ಕಡೆಯ ಉಪಾಯವನ್ನವಲಂಬಿಸಬಾರದು. ಪ್ರಾರಂಭದಲ್ಲಿ ಬೇರೆ ಸ್ಥಳಗಳಲ್ಲಿಯಾಗಲೀ ಅಥವಾ ಬಹು ವಿಸ್ತೀರ್ಣ ಪ್ರದೇಶದಲ್ಲಿಯಾಗಲೀ ಕರನಿರಾಕರಣೆಯ ಕಾರ್ಯವನ್ನು ಕೈಕೊಳ್ಳುವದೆಂದರೆ ನಮ್ಮ ಮೂರ್ಖತನದ ಪರಮಾವಧಿಯೆಂದೇ ಹೇಳಬೇಕು.

ಕೆಲವರು ಜಮೀನದಾರರಿಗೆ ಭೂಭಾಡೆಯನ್ನು ನಿರಾಕರಿಸಬೇಕೆಂಬ ಯೋಚನೆಯಲ್ಲಿರುವರೆಂಬ ಸುದ್ದಿಯು ನನ್ನ ಕಿವಿಗೆ ಬಂದು ಮುಟ್ಟಿದೆ. ಹಿಂದೀ ಜಮೀನದಾರರೇ ಆಗಲಿ ಪರಕೀಯ ಜಮೀನದಾರರೇ ಆಗಲಿ ನಾವು ಈ ಜನರೊಡನೆ ಅಸಹಕಾರವನ್ನು ಮಾಡುವದಿಲ್ಲವೆಂಬದನ್ನು ಮರೆಯತಕ್ಕದ್ದಲ್ಲ. ನಮ್ಮನ್ನೂ ಈ ಜಮೀನದಾರರನ್ನೂ ಕೂಡಿಯೇ ಗುಲಾಮರನ್ನಾಗಿ ಮಾಡಿದ ಒಬ್ಬ ದೊಡ್ಡ ಜಮೀನದಾರನಾದ ಈ ನೌಕರಶಾಹಿಯ ಕೂಡವೇ ನಮ್ಮ ಅಸಹಕಾರಿತೆಯು ಇರುತ್ತದೆಂಬದನ್ನು ನಾವು ಲಕ್ಷದಲ್ಲಿ ತರಬೇಕು. ಜಮೀನದಾರರು ನಮ್ಮ ಮತಕ್ಕೆ ಒಲಿಯುವಂತೆ ನಾವು ಪ್ರಯತ್ನ ಮಾಡಬೇಕು. ಅವರು ನಮ್ಮ ಮಾತನ್ನು ಕೇಳದಿದ್ದರೆ ಅವರ ಕೂಡ ತಾಳ್ಮೆಯನ್ನು ಧರಿಸಬೇಕು. ಅವರನ್ನು ಸಮಾಜದಿಂದ ಹೊರಗಿಡುವದೂ ಯೋಗ್ಯವಲ್ಲ. ಹಜಾಮರೂ ಅಗಸರೂ ಅವರ ಕೆಲಸ ಮಾಡಲಿಕ್ಕೆ ಒಲ್ಲೆನ್ನಬಾರದು. ಕಾಯಮು ತರೀಖ ತೆರಿಗೆಯ ತರಾವಿದ್ದಲ್ಲಿ ಕರನಿರಾಕರಣ ಕಾರ್ಯಕ್ರಮದ ಪ್ರಶ್ನೆಯೇ ಬರುವದಿಲ್ಲ. ಯಾಕಂದರೆ ಅಲ್ಲಿ ಕೂಡುವ ಜಮೀನದಾರರಿಗೇ ಕೊಡತಕ್ಕದ್ದಿರುತ್ತದೆ ಮತ್ತು ಪ್ರತ್ಯಕ್ಷ ರೀತಿಯಿಂದ ಸರಕಾರಕ್ಕೆ ಕೊಡತಕ್ಕ ಭಾಗದಲ್ಲಿ ಮಾತ್ರ ಈ ಕಾರ್ಯಕ್ರಮವನ್ನು ಕೈಕೊಳ್ಳತಕ್ಕದ್ದಿರುತ್ತದೆ. ಇವೆಲ್ಲವುಗಳನ್ನು ವಿಚಾರಮಾಡಲಾಗಿ ಕಾಂಗ್ರೆಸದ ಆಕಾಂಕ್ಷೆಯ ಕಕ್ಷೆದೊಳಗಿರುವ ಕರನಿರಾಕರಣೆಯ ಕಾರ್ಯವನ್ನು ಸದ್ಯಕ್ಕೆ ನನಗೇ ಒಪ್ಪಿಸಿದರೆ ಒಳಿತೆಂದು ನನಗೆ ತೋರುತ್ತದೆ, ಮತ್ತು ಈ ವೇಳೆಯಲ್ಲಿ ಕೆಲಸ ಮಾಡುವವರೆಲ್ಲರೂ ತಮ್ಮ ತಮ್ಮ ಜಿಲ್ಹೆಗಳಲ್ಲಿ ಸಂಘಟನಾತ್ಮಕ ಕೆಲಸವನ್ನು ಮಾಡುತ್ತಿರಬೇಕು. ಮತ್ತು ಬೇರೆ ರೀತಿಯಿಂದ ಸಾಮುದಾಯಿಕ ಕಾಯಿದೇ ಭಂಗ ಮಾಡುವ ಹಂಚಿಕೆಯನ್ನು ಹುಡುಕಿ ಅದರಂತೆ ಮಾಡಬೇಕು. ಮತ್ತು ಜನರಲ್ಲಿಯ ತಿಳುವಳಿಕೆಯೂ ಆತ್ಮಶುದ್ಧಿಯೂ ಬೆಳೆದಹಾಗೆಲ್ಲ ಜನರನ್ನು ಕ್ರಮಶಃ ಮುಂದೆಯೊಯ್ಯುತ್ತ ಮತ್ತು ಕರನಿರಾಕರಣ

ಯ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಬಹು ತೀಕ್ಷ್ಣತೆಯಿಂದ ಸಿದ್ಧತೆಯಾಗಿರುವ ಆಂಧ್ರ ದೇಶದೊಳಗಿನ ಜನರ ಉತ್ಸಾಹವನ್ನು ನಾನು ಕುಗ್ಗಿಸಲಿಚ್ಛಿಸುವದಿಲ್ಲ. ದಿಲ್ಲಿಯ ಠರಾವುಗಳನ್ನು ಸಂಪೂರ್ಣಗೊಳಿಸಿದ್ದು ಮತ್ತು ಸೇಡು ತೀರಿಸಿಕೊಳ್ಳದೆ ಕಷ್ಟವನ್ನು ಸಹಿಸಲಿಕ್ಕೆ ಅವರು ತಯಾರಿದ್ದರೆ ದೇವರು ಈ ಕೈಕೊಂಡ ಸಾಹಸದಲ್ಲಿ ಜಯಶಾಲಿಗಳಾಗುವ ಶಕ್ತಿಯನ್ನು ಈ ಗಟ್ಟಿಗರಾದ ಆಂಧ್ರ ಜನರಿಗೆ ಕೊಡಲೆಂದು ಹರಿಸುತ್ತೇನೆ. ಏನಾದರೂ ಅನಿಷ್ಟವು ಸಂಭವಿಸಿದರೆ ಅದರ ಸಂಪೂರ್ಣ ಜವಾಬುದಾರಿಯು ಅವರ ತಲೆಯಮೇಲೆಯೇ ಇರುತ್ತದೆ. ತೆರಿಗೆ ನಿರಾಕರಣದ ಕಾರ್ಯಕ್ರಮವನ್ನು ಕೈಕೊಳ್ಳದಿದ್ದರೆ ಮಾತ್ರ ಅವರಿಗೆ ಯಾರೂ ದೋಷ ಕೊಡುವದಿಲ್ಲ.

(ಯಂಗ ಇಂಡಿಯಾ)

ಮೋಹನದಾಸ ಕರಮಚಂದ ಗಾಂಧಿ

---

## ಉತ್ತರ ದಕ್ಷಿಣ

ಸರಕಾರದ ಪ್ರಾಮಾಣಿಕತನದ ಬಗ್ಗೆ ನನ್ನಲ್ಲಿ ಅವಿಶ್ವಾಸವು ಇದ್ದೇ ಇರುವದು. ಆದ್ದರಿಂದಲೇ ಇಷ್ಟರಲ್ಲಿ ಶಾಂತತಾ ಪರಿಷತ್ತಿನಿಂದ (ರೌಂಡ ಟೇಬಲ್ ಕಾನಫರನ್ಸ) ಏನಾದರೂ ಲಾಭವಾದೀತೆಂಬ ವಿಶ್ವಾಸವು ನನ್ನಲ್ಲಿಲ್ಲ. ಮೊನ್ನೆ ದಿಲ್ಲಿಯಲ್ಲಿ ಸೇರಿದ ಧಾರಾ ಸಭೆಯಲ್ಲಿಯೂ (Assembly) ಮತ್ತು ರಾಷ್ಟ್ರ ಸಭೆಯಲ್ಲಿಯೂ [Council of State] ಆದ ವಾದವಿವಾದವನ್ನು ನೋಡಿದರೆ ಆ ನನ್ನ ಅವಿಶ್ವಾಸಕ್ಕೆ ಪುಷ್ಟಿಯೇ ದೊರೆಯುತ್ತದೆ. ರಾಷ್ಟ್ರೀಯ ಮಹಾಸಭೆಯವರ ಎಲ್ಲ ಆಕಾಂಕ್ಷೆಗಳು ಅಶಕ್ಯವಾಗಿರುವವೆಂದೂ ಅಸಹಯೋಗ ಚಳವಳಿಯನ್ನು ನಷ್ಟಪಡಿಸಲಿಕ್ಕೆ ದಬ್ಬಾಳಿಕೆಯೊಂದೇ ತರುಣೋಪಾಯವೆಂದೂ ಸರಕಾರ ಪಕ್ಷವನ್ನು ಸಮರ್ಥಿಸುವ ಜನರೆಲ್ಲರೂ ಪ್ರತಿಪಾದಿಸಹತ್ತಿರುವರು. ಮಹಾಸಭೆಯ ಆಕಾಂಕ್ಷೆಗಳೆಲ್ಲ ಅಸಂಭವನೀಯವಾದವುಗಳು; ಮತ್ತು ಈ ಅಸಂಭವನೀಯ ಆಕಾಂಕ್ಷೆಗಳನ್ನು ಮುರಿದೊತ್ತಲಿಕ್ಕೆ ಪಶುಬಲವೇ ಯುಕ್ತ ಉಪಾಯವೆಂಬುದನ್ನು ನಾನು ಮನಗಂಡಿದ್ದರೆ ನಾನಾದರೂ ಅವರಂತೆಯೇ ಸರಕಾರ ಪಕ್ಷವನ್ನು ಸಮರ್ಥಿಸುತ್ತಿದ್ದೆನು. ಆದ್ದರಿಂದ ಸರಕಾರದ ಮತ್ತು ಸರಕಾರದ ಬೆಂಬಲವನ್ನಿತ್ತ ಜನರ ಧೋರಣವನ್ನು ತಿಳಿದುಕೊಳ್ಳಲಿಕ್ಕೂ ಅದರಲ್ಲಿಯ ಗುಣವನ್ನು ತೂಗಲಿಕ್ಕೂ ನನಗೆ ಕಠಿಣವಾಗುವದಿಲ್ಲ.

ಆದರೆ ಸರಕಾರದ ನಿಜ ಧೋರಣವನ್ನು ನಾನು ಚನ್ನಾಗಿ ಅರಿತವನಾಗಿದ್ದರಿಂದ ಅದರಲ್ಲಿ ಕಿಂಚಿತ್ತಾದರೂ ವಿಶ್ವಾಸವನ್ನಿಡಲಾರೆ. ಅಂತೆಯೇ ನಾನು ಸರಕಾರದ ವಿರೋಧಿಯಾಗಿರುವೆನು. ಸರಕಾರದವರು ಯಾವ ದಾರಿಯನ್ನು ತೋರಿಸುವರೋ ಆ ದಾರಿಯನ್ನು ಹಿಡಿದರೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವು ಎಂದೂ ದೊರೆಯಲಾರದು. ಒಳ್ಳೆಯದು, ಯಾವ ಮಾರ್ಗವು ಉಚಿತವಿರುವದನ್ನು ನೋಡುವಾ.

ಖಿಲಾಫತ್ತದ ಬಗ್ಗೆ ನಮ್ಮಲ್ಲಿದ್ದ ಆಕಾಂಕ್ಷೆಗಳು ಅಸಂಭವವೇಕೆ? ಹಿಂದುಸ್ಥಾನ ಸರಕಾರದವರೂ ಸಾಮ್ರಾಜ್ಯ ಸರಕಾರದವರೂ, ಜನರ ಸಹಕಾರವು ತಮಗೆ ಇರಬೇಕೆಂದು ಇಚ್ಛಿಸುತ್ತಿದ್ದರೆ ಈ ಆಕಾಂಕ್ಷೆಗಳನ್ನು ಪೂರ್ಣಿಸಲಿಕ್ಕೆ ಜನರ ಸಂಗಡ ತಾವೂ ಕೆಲಸ ಮಾಡಬೇಕೆನ್ನುವದೇ ಮಹಾಸಭೆಯ ಮುಖ್ಯವಾದ ಕೋರಿಕೆ. ಆದ್ದರಿಂದ ಜನರ ಬಗ್ಗೆ ತಮ್ಮ ಕೃತಜ್ಞತೆಯನ್ನು ತೋರಿಸಿ, ಅವರ ನಿಜವಾದ ಕಷ್ಟಗಳನ್ನು ದೂರ ಮಾಡಲಿಕ್ಕೆ ಉತ್ಸಾಹದಿಂದ ಅವರೂ ಕೆಲಸ ಮಾಡಲಿಕ್ಕಬೇಕು. ಡೋವ್ಹರ ಪಟ್ಟಣವನ್ನು ಇಂಗ್ಲಿಷರಿಂದ ಸುಳಿದುಕೊಳ್ಳಲಿಕ್ಕೆ ಫ್ರಾನ್ಸದ ಜನರು ಪ್ರಯತ್ನ ಬಿಡಹತ್ತಿದರೆ ಮತ್ತು ಹಿಂದುಸ್ಥಾನವು ಫ್ರಾನ್ಸಕ್ಕೆ ಗುಪ್ತವಾಗಿ ಸಹಾಯ ಮಾಡಿದರೆ ಅಥವಾ ಡೋವ್ಹರ ನಗರವನ್ನು ತಮ್ಮ ವಶದಲ್ಲಿಯೇ ಇಟ್ಟುಕೊಳ್ಳಬೇಕೆಂದು ಇಂಗ್ಲಿಷರು ಪ್ರಯತ್ನ ಬಡುವಾಗ ಪ್ರತ್ಯಕ್ಷರೀತಿಯಿಂದ ಹಿಂದುಸ್ಥಾನವು ಅವರಿಗೆ ವಿರೋಧಿಯಾದರೆ ಇಲ್ಲವೆ ಅವರ ಬಗ್ಗೆ ಉದಾಸೀನ ವೃತ್ತಿಯನ್ನು ತಳೆದರೆ ಸಾಮ್ರಾಜ್ಯ ಸರಕಾರದವರು ಸುಮ್ಮನೆ ಕುಳಿತುಕೊಳ್ಳುವರೊ? ಅದರಂತೆಯೇ ಖಿಲಾಫತವು ತುಂಡು ತುಂಡಾಗಿ ಹೋಗುವ ಕಾಲದಲ್ಲಿ ಹಿಂದುಸ್ಥಾನವು ಸೋವಾರಿಯಂತೆ ಸುಮ್ಮನೆ ಕುಳಿತುಕೊಳ್ಳುವದು ಉಚಿತವೇ?

ಒಳ್ಳೇದು; ಪಂಜಾಬದ ವಿಷಯದಲ್ಲಿ ರಾಷ್ಟ್ರೀಯ ಸಭೆಯವರು ಬೇಡುವ ಯಾವ ಸಂಗತಿಗಳು ಅಸಂಭವನೀಯವಾಗಿವೆ? ಈ ಪ್ರಕರಣದಲ್ಲಿ ಕಾಯದೇ ಕಾನೂನುಗಳು ಹೂಳಿಯನ್ನೇಕೆ ಎಬ್ಬಿಸಿದ್ದಾರೆ? ನೈತಿಕ ಪ್ರಶ್ನೆಯೊಂದನ್ನು ಪಾಲಿಸಿದರೆ ಸಾಕಿದೆ; ಕಾಯದೇ ಕಾನೂನುಗಳು ತಾವೇ ಸರಿ ಹೊಂದುವವು. ಕಾನೂನು ಮತ್ತು ನ್ಯಾಯಗಳ ನಡುವೆ ವಿರೋಧ ಉತ್ಪನ್ನವಾದರೆ, ನ್ಯಾಯದ ಪ್ರಶ್ನೆಗೆ ಮಾತ್ರ ಪ್ರಾಧಾನ್ಯವು ದೊರೆಯಬೇಕೆಂಬ ಗಾದೆಯ ಮಾತನ್ನು ನಾನು ಸಣ್ಣವನಿರುವಾಗಲೇ ಓದಿದ್ದೆನು. ನನ್ನ ವಿಷಯದಲ್ಲಿ ಓದುವ ಸಿದ್ಧಾಂತವು ಬೇರೆ, ಕೃತಿಯಲ್ಲಿ ತರುವ ಸಿದ್ಧಾಂತವು ಬೇರೆ ಎಂಬ ಭೇದವಿಲ್ಲ. ಪೆನಶನ್ ಅಂದರೆ ಯಾರ ಉಪಕಾರಕ್ಕೆ ಕೊಡತಕ್ಕ ಸಂಬಳವಾಗದೆ ಅದು ಮುಂದೆ ಪಾನಾಗಿಯೇ ಬರತಕ್ಕ ವೇತನವಾಗಿದ್ದರಿಂದ ಪೇನಶನ್ ಬಿಡದೆ ಮಾಡುವ ಕೃತಿಯು ಅನೀತಿಯುಕ್ತವಾಗುವದೆಂದು ನನಗೆ ಹೇಳುತ್ತಾರೆ. ಹಾಗಿದ್ದರೆ ಈ "ಮುಂದೆ ಬರತಕ್ಕ ವೇತನವು" ಸರದಾರ ಗೋಹರಸಿಂಗನಿಗೆ ಯಾಕೆ ಬಂದು ಸೇರಬಾರದು? ನೀವು ಈ ಅಸಹಯೋಗ ಚಳವಳಿಯಲ್ಲಿ ಸೇರಿಕೊಂಡರೆ ನಿಮ್ಮ ಪೆನಶನ್ನು ಬಂದು ಮಾಡಲ್ಪಡುವದು ಎಂದು ಉಳಿದ ಪೇನಶನ್‌ದಾರರಿಗೆ ಯಾಕೆ ಬೆದರಿಕೆಯನ್ನು ಹಾಕುತ್ತಿರುವದು? ಯಾವ ಸೇವಕನು ತನ್ನ ಯಜಮಾನನನ್ನು ದೂಷಿಸಿ ಅವನಿಗೆ ಕಲಂಕವನ್ನುಂಟು ಮಾಡುವನೋ ಅವನಿಗೆ ಸಂಬಳವಾಗಲೀ ಪೆನಶನ್ ಆಗಲಿ ದೊರೆಯಬಹುದೋ?

ಸರ ಮಾಯ್ಕೇಲ ಓಡ್ವಾಯರರಾಗಲಿ, ಜನರಲ್ ಡಾಯರರಾಗಲಿ ತಮ್ಮ ತಪ್ಪು ತಿಳುವಳಿಕೆಯನ್ನು (Error of judgement) ಒಪ್ಪಿಕೊಂಡಿರುವರೊ? ಜಲಿಯನವಾಲಾ ಬಾಗದಲ್ಲಿ ಕೊಲ್ಲಲ್ಪಟ್ಟ ನಿರಪರಾಧಿಗಳಾದ ಜನರ ಮಕ್ಕಳಾಗಲಿ, ತಮ್ಮದೇನೂ ತಪ್ಪಿಲ್ಲದೆ ನಿಷ್ಕಾರಣವಾಗಿ ಭಯಂಕರವಾದ ಯಾತನೆಗಳಿಗೆ ಗುರಿಮಾಡಲ್ಪಟ್ಟ ಹಾಗು ಹೊಟ್ಟೆಯ ಮೇಲೆ ಹರಿಯಲಿಕ್ಕೆ ಹಚ್ಚಲ್ಪಟ್ಟ ಜನರಾಗಲಿ ತಮ್ಮ ಮೇಲೆ ಅತ್ಯಾಚಾರಮಾಡಿದಂಥ ಜನರಿಗೆ ಸಂಬಳವನ್ನೇಕೆ ಕೊಡಬೇಕು? ತಮ್ಮ ದುಷ್ಕೃತ್ಯಗಳಬಗ್ಗೆ ಪಶ್ಚಾತ್ತಾಪವನ್ನು ತಾಳದ ಜನರಿಗೆ ಯಾವ ನೈತಿಕ ತತ್ವವನ್ನನುಸರಿಸಿ ಪೆನ್ಶನ್ನವನ್ನು ಸಾಗಿಸತಕ್ಕದ್ದೆಂಬುದನ್ನು ನಾನಂತೂ ಅರಿಯೆನು. ಉಭಯ ಪಕ್ಷಗಳ ದೃಷ್ಟಿಬಿಂದುಗಳು ತೀರ ಭಿನ್ನವಾಗಿರುವವು. ಯಾವದು ಒಬ್ಬರಿಗೆ ನ್ಯಾಯವಾಗಿಯೂ ನೀತಿಯುಕ್ತವಾಗಿಯೂ ಕಾಣುವದೊ ಅದು ಮತ್ತೊಬ್ಬರಿಗೆ ಅನ್ಯಾಯವಾಗಿಯೂ ಅನೀತಿಯುಕ್ತವಾಗಿಯೂ ತೋರುವದು. ಡಾಯರ ಓಡ್ವಾಯರ ಮೊದಲಾದವರಿಗೆ ಪೇನಶನ್ ಕೊಡುವದನ್ನು ನಿಲ್ಲಿಸಬೇಕೆಂದು ರಾಷ್ಟ್ರೀಯ ಮಹಾಸಭೆಯು ಕೇಳಿದರೆ ಅದು ನ್ಯಾಯವಾದುದು. ಈ ಮಾತಿನಲ್ಲಿ ಸ್ವಲ್ಪಾದರೂ ಸೇಡು ತೀರಿಸಿಕೊಳ್ಳಬೇಕೆಂಬ ಬುದ್ಧಿಯು ಇರುವದಿಲ್ಲೆಂದೂ ನಾನು ಸತ್ಯವಾಗಿ ಹೇಳುತ್ತೇನೆ. ಅವರಮೇಲೆ ಖಟ್ಲೆ ನಡೆಸುವ ಹಾಗು ಅವರನ್ನೇ ಶಿಕ್ಷೆಗೆ ಗುರಿಮಾಡುವ ತನ್ನ ಹಕ್ಕನ್ನು ಅದು ಬಿಟ್ಟುಗೊಟ್ಟಿದೆ. ಕೇವಲ ಅದು ಅವರಿಗೆ ಪೇನಶನ್ನವನ್ನು ಸಾಗಿಸಿ ಅವರುಮಾಡಿದ ಪಾಪದಲ್ಲಿ ಅಂಶಭಾಗಿಯಾಗಲು ಒಪ್ಪಿಗೆಯನ್ನೀಯದು. ಈ ವಿಷಯದಲ್ಲಿ ನಿಜವಾದ ವಾದ ಬೇರೆಯೇ ಇರುವದು. ಅದೇನಂದರೆ ಸರಕಾರವು ಈ ಉಭಯ ಅಪರಾಧಿಗಳನ್ನು ಸಾಮ್ರಾಜ್ಯದ ಶ್ರೇಷ್ಠರಾದ ಸನ್ಮಾನಾರ್ಹ ಅಧಿಕಾರಿಗಳೆಂದು ತಿಳಿದಿರುವದು. ಸರಕಾರದ ಈ ಪ್ರವೃತ್ತಿಯು ಬದಲಾದ ಮೇಲೆಯೇ ಪಂಜಾಬ ಪ್ರಕರಣದ ಪುನರಾವೃತ್ತಿಯಾಗುವದು ಅಸಂಭವನಾಗಬಲ್ಲದು. ಆದರೂ ಮೊದಲಿಲ್ಲ.

ಮುಂದಿನವಾರ ಸಾಗುವದು.

# The Karnatak Trading Association.

ಉಳಿಸರಿ! ಮುಂಬಯಿ ಖರ್ಚು ಉಳಿಸರಿ!

ತಮ್ಮ ಮುಂದೆ ಖರೀದಿಗಾಗಿ ಮುಂಬಯಿಗೆ ಬಾರಿ ಸ್ವತಃ ಬರುವ ಕಾರಣವಿಲ್ಲ ದಿ ಕರ್ನಾಟಕ ಟ್ರೇಡಿಂಗ ಅಸೋಸಿಯೇಶನದವರು ಮುಂಬಯಿ ಪೇಟೆಯನ್ನೆಲ್ಲ ನಿಮ್ಮ ಮನೆಯ ಬಾಗಿಲಿಗೆ ತಂದು ಇಡಲು ಟೊಂಕ ಕಟ್ಟಿದಾರೆ ಒಂದು ದುಡ್ಡಿನ ಕಾರ್ಡು ಬರೆದರೆ ಸಾಕು. ಉಲಟ ಟಪಾಲಿನಿಂದಾಗಲಿ, ರೇಲ್ವೆ ಪಾರ್ಸಲಿನಿಂದಾಗಲಿ. ಗಾಡ್ಸ ಪಾರ್ಸಲಿನಿಂದಾಗಲಿ, ನಿಮ್ಮ ಇಚ್ಛೆಯಂತೆ ನಿಮ್ಮ ಸಾಮಾನುಗಳು ಭದ್ರವಾಗಿ ವ್ಯಾಕಾಗಿ ನಿಮ್ಮ ಮನೆಯು ಹಾದಿ ಹಿಡಿಯುತ್ತವೆ ಪೇಟೆಯು ಅತಿ ಉತ್ತಮವಾದ ಪರಿಚಯವೇ ನಮ್ಮ ಗಟ್ಟಿ ಆದರ ಮೂಲಕವಾಗಿಯೇ ಉತ್ತಮವಾದ ಸಾಮಾನುಗಳನ್ನು ಅತ್ಯಂತ ಸೋಯಿಸ್ಕರವಾಗಿ ಕೊಳ್ಳಲಿಕ್ಕೆ ನಮಗೆ ಸಾಧ್ಯವಾಗುತ್ತದೆ. ಕಾರಣ ಮುಂಬಯಿ ಖರೀದಿ ಬಂದ ಕೂಡಲೆ ನಮ್ಮ ಸ್ಮರಣ ಮಾಡಿರಿ.

ಪತ್ತೆ—ದಿ ಕರ್ನಾಟಕ ಟ್ರೇಡಿಂಗ ಅಸೋಶಿಯೇಶನ ಜನರಲ್ ಮರ್ಚಂಟ ಕಮಿಶನ್ ಏಂಡ ನ್ಯೂಜ ಏಜಂಟ್ಸ.

ಹಿರಾ ಬಿಲ್ಡಿಂಗ ಕಾರ್ನಾಕ್ ರೋಡ ಮುಂಬಯಿ

ತಾರೀನ ಪತ್ತೆ—"ಕಾರ್ಟೂನ್ಸ"



ವೀರ ವಿಲಾಸಿನಿ.

ಹಾಸ್ಯ ಪ್ರಧಾನವಾದ ಅದ್ಭುತ ವಿಷಯಗಳು ಪ್ರಕಾಶಕವಾದ, ಗಂಭೀರ ಗರ್ಭಿತವಾದ ಕನ್ನಡ ವಾರ ಪತ್ರಿಕೆ! ಜನೇವರಿ ತಿಂಗಳಲ್ಲಿ ಆರಂಭವಾಗಿರವುದು. ಈ ಅವಧಿಯೊಳಗಾಗಿ ಹೆಸರುಗಳನ್ನು ಕೊಟ್ಟವರಿಗೆ ಭೆಟ್ಟಿಯಾಗಿ ವರ್ಷಕಾಲ ಪತ್ರಿಕೆಯನ್ನು ಕಳುಹಿಸಹತ್ತುವೆವು. ಯಾರಿಗೂ ಸ್ಥಾನವಿಲ್ಲ ಇದರ ನಿಜವಾದ ವಾರ್ಷಿಕ ಚಂದಾ ೧-೧೨ ರೂ ಪತ್ರಿಕೆಯು ಒಳ್ಳೆ ಅಂದವಾಗಿ ಅಚ್ಚಾಗಿರುವದು. ಪ್ರಸಿದ್ಧವಾದ "ಸಕಲಿಯು" ಪತ್ರಿಕೆ!!

ವಿಳಾಸ— ಮ್ಯಾನೇಜರ್ ವೀರ ವಿಲಾಸಿನಿ.

ನಂ. ೧೦೪ ೪ ನೇ ಬೀದಿ ... ಪೇಟೆ

ಬೆಂಗಳೂರ ಸಿಟಿ.



ಕನ್ನಡಿಗರೇ!! ಓದಿರಿ ಆಶ್ರಯ ಕೊಡಿರಿ.

ಗದಗಿನಲ್ಲಿ

ಸಾಮಾಜಿಕ, ರಾಜಕೀಯ, ನೈತಿಕ, ಧಾರ್ಮಿಕ ವಿಷಯಗಳನ್ನು ಪ್ರತಿಪಾದಿಸುವ

# ಕರ್ನಾಟಕ ಸಿಂಹ.

| ವರ್ಗಣಿ ಸ್ಥಳೀಕರಿಗೆ ರು. ೩-೦-೦ | ಎಂಬ ಕನ್ನಡ ವಾರಪತ್ರಿಕೆಯು. | ವರ್ಗಣಿ ಪರಸ್ಥಳದವರಿಗೆ ಅಂಚೆ ವೆಚ್ಚಸಹಿತ ರು. ೩-೧೨-೦ |
|---|---|---|

ಇವತ್ತಿನಿಂದ ಮೂರು ತಿಂಗಳ ಒಳ ಹೊರಗೆ ಹೊರಡುವದು ಮೇಲೆ ವಿವರಿಸಿದ ವಾರಪತ್ರಿಕೆಯು ಬಾಲ್ಯದಿಂದ ಭಾಷಾ ಸೇವೆಯನ್ನು ಮಾಡುತ್ತಿದ್ದ ಹಾಗೂ ಮೈಸೂರ ಮತ್ತು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಈನಾಮಗಳನ್ನು ಪಡೆದ ಮಿ॥ ಅಚ್ಯುತರಾವ ಕೃಷ್ಣರಾವ ತಾಯಿಲಗೋಳ ಇವರ ಸಂಪಾದಕತ್ವದ ಕೆಳಗೆ ಹೊರಡುವದಲ್ಲದೆ, ಆಬಾಲವೃದ್ಧರಿಗೆ ಸಹ ತಿಳಿಯುವಂತೆ ತಿಳಿಗನ್ನಡ ಭಾಷೆಯಲ್ಲಿ ಬರೆದ ಲೇಖಗಳನ್ನು ಅದರಲ್ಲಿ ಕೊಡುವೆವು. ಗ್ರಾಹಕರು ತಮ್ಮ ಸಂಪೂರ್ಣ ಹೆಸರನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಬೇಕಾಗಿ ನಮ್ಮ ಸವಿನಯ ವಿನಂತಿ ಇರುತ್ತದೆ

ವಿಳಾಸ—ಶಾಂತಪ್ಪಾ ಶಿವಲೋನಪ್ಪಾ ಬಲಗುಂದಿ

ಮಾಲಕ ಸ್ಯಮನ ಪ್ರೆಸ್ ಗದಗ, ಜಿಲ್ಹಾ ಧಾರವಾಡ.



ಕನ್ನಡ ಬಾಲ ಬಾಲಿಕೆಯರಿಗೂ ಪ್ರೌಢರಿಗೂ ಮನೋರಂಜನ-ಜ್ಞಾನಾಭಿವೃದ್ಧಿಗೊಳಿಸುವ ಅತ್ಯುಪಕಯುಕ್ತ ಹಾಗು ಸುಲಭ ಭಾಷೆಯ

"ಬಾಲಮಿತ್ರ"

ವೆಂಬ ಮಾಸಿಕ ಪುಸ್ತಕವು ಜನವರಿ (೧೯೨೨) ಯಿಂದ ಒಳ್ಳೆ ಸಿಯಮಿತವಾಗಿ ಹೊರಡುತ್ತಿರುವದು ಇದು ವರೆಗೆ ೧೨ ಚರಿತ್ರೆಗಳು ೧೨ ಹಾಡುಗಳು ೧೭ ಚಲೋ ಕತೆಗಳು, ೧೨ ಐತಿಹಾಸಿಕ, ೯ ಶಾಸ್ತ್ರೀಯ ಸಂಗತಿಗಳು; ೯ ನಿಬಂಧಗಳು. ಇದಲ್ಲದೆ ಪ್ರತಿಸಾರೆ ನಗೆ ಮಾತು, ತಿಂಗಳ ಸುದ್ದಿ, ಒಗಟು ಕೂಟ ಪ್ರಶ್ನಗಳು ಬರುವವು. ಇಂತಹ ಉಪಯುಕ್ತ ಹಾಗು ಕಡಿಮೆ ಬೆಲೆಯ ಮಾಸಿಕ ಪುಸ್ತಕ ವೊಂದಿಲ್ಲ. ಬೇಗ ಹೊಸ ವರ್ಷದ ಚಂದಾದಾರರಾಗಿರಿ.

ವಾರ್ಷಿಕ ಚಂದಾ ೧ ರೂ-೦ (ಟ. ಹಾ. ಸಹಿತ.)

ವಿಳಾಸ—ವ. ಮ ಶೆಟ್ಟಿ ಶಿ. ವಾ. ಪ್ರಾ. ಸ್ಕೂ

ಟ್ರೇನಿಂಗಕಾಲೇಜ ಧಾರವಾಡ



ನಂಬರ ೧ ನೇ ನಿರ್ಮಲವಾದ

ಏಜಂಟರು ಬೇಕು. ಏಜಂಟರ ಬೇಕ

# ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹೆಸರಾದ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ ವ್ಯಾಪಾರಸ್ಥರಿಗೆ ಬಹಳೇ ಕಡಿಮೆ ದರದಲ್ಲಿ ತೈಲವು ಸಿಗುವದು. ನಿಕ್ಕಿ ೪ ಔನ್ಸು ತೈಲದ ಬಾಟ್ಲಿ ಅಥವಾ ಡಬ್ಬಿ ೧ಕ್ಕೆ ರೂಪಾಯಿ ೩ ಡಜನಕ್ಕೆ ೩೦. ವಿಶೇಷ ಮಾಹಿತಿ ಪುಸ್ತಿಕೆ ಉಚಿತ.

ಬಿ ವಿ ಪೈ ಕಂಪನಿ ಹೊ ಹೊನ್ನಾವರ ಜಿಲ್ಹಾ ಉತ್ತರ ಕಾನಡಾ.



ಉತ್ತಮ ಆಯುರ್ವೇದ ಔಷಧಗಳು.

| | | |
|---|---|---|
| ಸುವರ್ಣ ರಾಜವಂಗ ತೊಲಿ ೧ | ,, | ೮ |
| ಶೃಂಗ ಪ್ರಭಾ | ,, | ,, ೧ |
| ಅಮೃತ ಸತ್ವ | ,, | ,, ೦॥೦ |
| ಸಾಯಿರಪ್ ವಾಸಕ ಔನ್ಸು ೪ | ,, | ೧ |
| ಬ್ರಾಹ್ಮ ಸಾಯಿರಪ್ | ,, | ೧ |
| ವಾಜಿ ಅಮೃತಾದಿಕ್ವಥ ವಟಿ ೧೦೦ ಕ್ಕೆ | | ೧ |
| ಮೃದು ವಿರೇಚನ ವಟಿ | | ,, ೬ |

ಇದಲ್ಲದೆ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಯಾವತ್ತೂ ಔಷಧಗಳು ನಮ್ಮಲ್ಲಿ ಸುಲಭ ದರದಿಂದ ಸಿಗುವವು.

Karnatak Ayurvedic Pharmaceutical works Bagalkot Dt. Bijapur


ಈ ಪತ್ರವನ್ನ ಮಿ॥ ಗುಂಡೇರಾವ ರಾಮಚಂದ್ರ ಮಣೂರಕರ ಇವರು, ತಮ್ಮ ವಿಜಯಪೂರ ಗ್ರಾಮಾಧಿಕಾರೀ ಮುದ್ರಾಲಯದಲ್ಲಿ ಸ್ಮುದಿ ಸಿ ಮಾಲಕ ಶ್ರೀನಿವಾಸ ರಾಜೇರಾವ ಮಂಗಳವೇಡೇ ಬಾಗಲಕೋಟೆ ಇವರ ಗೋಷ್ಠಿ ವಿಜಯಪುರದಲ್ಲಿ ಪ್ರಸಿದ್ಧ ಮಾಡಿದರು.

REGISTERED No B 1589

ಬಾರ್ಡೋಲಿಯ ನಿಶ್ಚಯವು.

ವಾರ್ಷಿಕ ವರ್ಗಣಿ ರೂ. ೪-೦-೦
ಆರು ತಿಂಗಳಿಗೆ ,, ೨-೮-೦
ಬಿಡಿ ಸಂಚಿಕೆ ೦-೧-೬
ಮಾದರಿ ಸಂಚಿಕೆ ಬೇಕಾದವರು ೦-೧-೬ ತಿಕೀಟ ಕಳಿಸಬೇಕು.

ಜಾಹೀರಾತಿನ ದರ:—
'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂಪಾಯಿ ಕೊಡುವದು. ಜಾಹೀರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

# ಶ್ರೀ. ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾಷಾಂತರಿಸುವದೇ ಈ ವಾರ ಪತ್ರಿಕೆಯ ಮುಖ್ಯೋದ್ದೇಶವು

ವರ್ಷ ೧ | ಬಾಗಲಕೋಟ ಮಾಘ ಶು|| ೧೨ ಶಕೆ ೧೮೪೩. ಗುರುವಾರ ತಾ ೯ ನೇ ಫೇಬ್ರುವಾರಿ ೧೯೨೨ ಇಸ್ವಿ. | ಸಂಚಿಕೆ ೧೨

## ಟಿಪ್ಪಣಿಗಳು.

### ಕೊಬ್ಬಿದ ಅಣ್ಣನಿಂದ.

ಮೌಲಾನಾ ಶೌಕತ ಅಲಿಯವರು ತಮ್ಮ ಮಗನಿಗೆ ಬರೆದ ಪತ್ರವನ್ನು ಓದಿ ವಾಚಕರು ಅದಕ್ಕೆ ತಲೆದೂಗದೇ ಇರಲಾರರು:—

ಕರಾಚಿ ೨೧-೧-೧೯೨೨

ನನ್ನ ಪ್ರಿಯ ಕುಮಾರನೇ,

ನಿನ್ನ ಪತ್ರವನ್ನು ಕಂಡು ಆನಂದಪಟ್ಟೆನು. ಅಮೀಯೂ ನೀನೂ ಸೋಮಾರಿಯಾಗಿರದೆ ಈ ಮಹಾಯುದ್ಧದಲ್ಲಿ ನಿಮ್ಮ ಕೈಯಿಂದಾದ ಮಟ್ಟಿಗೆ ಭಾಗ ತೆಗೆದುಕೊಂಡುದನ್ನು ನೋಡಿ ಸಂತೋಷಪಟ್ಟೆನು. ಇಂಥ ಪುಣ್ಯ ಕಾರ್ಯದಲ್ಲಿ ಸೇರುವದು ಎಂದರೆ ಮಹತ್ ಭಾಗ್ಯವೆಂದೇ ತಿಳಿಯಬೇಕು. ಸ್ತ್ರೀಯಾಗಲಿ, ಪುರುಷನಾಗಲಿ, ನಮ್ಮ ಕುಟುಂಬದಲ್ಲಿ ಎಲ್ಲರೂ ತಮ್ಮ ಯೋಗ್ಯತಾನುಸಾರ ನೆರವಾಗಲಿಕ್ಕೇಬೇಕು. ಪುರುಷರಷ್ಟೇ ಅಲ್ಲದೇ, ಸ್ತ್ರೀಯರೂ ಸಣ್ಣ ಹುಡುಗಿಯರೂ ಸಹ, ಎಲ್ಲ ತರದ ಅನಾನುಕೂಲತೆಗಳನ್ನು ಸಹಿಸಲಿಕ್ಕೆ ಸಿದ್ಧರಾಗಬೇಕು. ನಾನು ಇಲ್ಲಿ ಹೆಂಗಸರ ಕೋಣೆಯ ಸಮೀಪದಲ್ಲಿಯೇ ಇರುವೆನು. ನನ್ನ ತಾಯಿಯಾಗಲಿ, ಅಮೀಯಾಗಲಿ ಇಲ್ಲವೇ ರಾಷ್ಟ್ರಕಾರ್ಯ ಮಾಡುವ ಬೇರೆ ಸ್ತ್ರೀಯಾಗಲಿ, ಇಲ್ಲಿಗೆ ಬಂದು ಆ ನಮ್ಮ ಭಗಿನಿಯರನ್ನು ಉದ್ಧಾರ ಮಾಡಬೇಕೆಂದು ನನ್ನ ಇಚ್ಛೆಯಿದೆ. ಒಂದೇ ಗೋಡೆಯ ಆಚೆಗೆ ಅದಿರುವೆನು, ನಾನು ಮಾತಾಡಿದ್ದನ್ನು ಸಹ ಅವರು ಕೇಳಬಲ್ಲರು. ಇದರಿಂದ ಅವರ ಮೇಲೆ ಸ್ವಲ್ಪಾದರೂ ಪರಿಣಾಮವಾಗಿದೆ; ನಾನು ದಿನಾಲು ನಮಾಜು ಮಾಡುವದನ್ನು ಕೇಳಿ ಅವರೂ ತಮ್ಮ ತಮ್ಮ ಪ್ರಾರ್ಥನೆಗಳನ್ನು ಪ್ರಾರಂಭಿಸಿದ್ದಾರೆ.

ಇಲ್ಲಿ ನಮಗೆ ಎಲ್ಲ ಸುದ್ದಿಯೂ ತಿಳಿಯುತ್ತದೆ ಏನೇ ಆಗಲಿ, ಈ ರಾವ್ಲಂಡ ಜೇಬಿಲ್ ಪರಿಷತ್ತಿನ ಹಕೀ ಬರಹವು ಒಂದಾವರ್ತಿ ಗೊತ್ತಾಯಿತು, ಅದರಿಂದ ನಮ್ಮ ಮಾರ್ಗವೂ ಸ್ಪಷ್ಟವಾಯಿತೆಂಬದು ಆನಂದದ ಮಾತು. ಶಾಂತತೆಯನ್ನು ನೆಲೆಗೊಳ್ಳಬೇಕೆಂದು ನಾವು ವಿಶ್ವಪ್ರಯತ್ನಪಟ್ಟಿರುವೆವು; ಆದರೆ ಈಶ್ವರನಿಗೆ ಸಹ ಹೆದರದ ಈ ಸರಕಾರಕ್ಕೆ ಹಾಗೆ ಮಾಡುವದು ಬೇಕಾಗಿಲ್ಲ. ಅವರ ಪಾಪ ಕುಂಡವಾದರೂ ತುಂಬಿ ಬಂದಿದೆ, ನಾವು ಸಿಬ್ಬಲರೂ ದು'ಸಾಕ್ರಾಂತರೂ ಆದ ಪ್ರಾಣಗಳಾದರೂ ನಮ್ಮಗೋಸ್ಕರವೇ ದೇವರು ಅವರಿಗೆ ಶಿಕ್ಷೆಯನ್ನು ವಿಧಿಸುವನು.

ನೀನು ನಿನ್ನ ದೇಹ ಸ್ಥಿತಿಯ ಕಡೆಗೆ ಲಕ್ಷಕೊಡ. ಅಶಕ್ತನಾದವನು ಈಶ್ವರನ ಒಳ್ಳೇ ಸೈನಿಕನಾಗನು.

ನಾನೊಂದು ಮಹತ್ವದ ವಿಷಯವನ್ನು ಇಲ್ಲಿ ಪ್ರತಿ ಪ ದಿವಸವೇ ಕಗಿದೆ. ಈ ಪತ್ರವನ್ನು ಮಹಾತ್ಮಾಜಿಯವರಿಗೆ ತೋರಿಸು. ಹಿಂದುಸ್ಥಾನದ ನಿಜವಾದ ಸ್ಥಿತಿಯು ಅವರಿಗೆ ಗೊತ್ತಿರಲಿಕ್ಕಿಲ್ಲ. ನಮ್ಮಂಥ ಸ್ಥಿತಿಯಲ್ಲಿದ್ದವರಿಗೆ ವಿಶೇಷವಾಗಿ ತ್ರಾಸ ಕೊಡುವ ಧೈರ್ಯವು ಯಾರಿಗೂ ಆಗದೆಂಬದು ನಿಜವು. ಆದರೂ ಇಲ್ಲದ ಕಾರಣ ಚೇಷ್ಟೆಗಳು ದಿನಾಲು ಸಂಭವಿಸುತ್ತವೆ. ಮತ್ತು ಪ್ರತಿಯೊಂದು ನಿಯಮದ ಅರ್ಥವು ನಮಗೆ ವಿರುದ್ಧವಾಗುವಂತೆಯೇ ಮಾಡಲ್ಪಡುತ್ತದೆ. ನಮ್ಮನ್ನು ಕಷ್ಟಕ್ಕೆ ಗುರಿ ಮಾಡಬೇಕೆಂದು ಅವರ ಇಚ್ಛೆಯು ತೋರುತ್ತದೆ. ಆದರೆ ಹಾಗೆ ಮಾಡುವ ಧೈರ್ಯವು ಅವರಿಗಿಲ್ಲ. ನಮ್ಮನ್ನು ಬಿಟ್ಟ ರಾಷ್ಟ್ರ ಕಾರ್ಯ ಮಾಡುವ ಬೇರೆ ಜನರಿಗೆ ಬಹಳೇ ಉಪದ್ರವನ್ನುಂಟು ಮಾಡುವರು; ಅಪಮಾನಕ್ಕೆ ಸಹ ಅವರನ್ನು ಗುರಿ ಮಾಡುತ್ತಾರೆ. ಆದ್ದರಿಂದ ಅವರಿಗೆ ಎಲ್ಲ ಸಂಗತಿಗಳನ್ನು ತಿಳಿಸಿ ಕೊಡಬೇಕು. ಅಂದರೆ ಸೆರೆಮನೆಗೆ ಬರುವಾಗ ಅವರು ಸಿದ್ಧರಾಗಿ ಇರುವದಕ್ಕೆ ಅನುಕೂಲವಾಗುವದು. ಒಂದಾವರ್ತಿ ಸೆರೆಮನೆಗೆ ಹೋದರೆ ನಮ್ಮ ಕರ್ತವ್ಯವೂ ಕಾರ್ಯವೂ ನೆರವೇರಿದಂತಾಗಲಿಲ್ಲ. ಇಲ್ಲಿ ನಮ್ಮ ಕಾರ್ಯದ ಒಂದು ಭಾಗವು ತೀರಿ ೨ನೇ ಭಾಗವು ಪ್ರಾರಂಭವಾಗುವದು. ನಾವು ಅಲ್ಲಿ ಆನಂದ ವೃತ್ತಿಯಿಂದ ಇರಬೇಕು. ಮುಕ್ಕರೂ ಶೀಲ... ತರೂ ಆದ ಮನುಷ್ಯರು ನಾವಲ್ಲ, ಆದರೆ ... ಧೈರ್ಯದಿಂದ ಶಾಂತರಾಗಿ ನಮ್ಮ ಧರ್ಮವನ್ನು ರಾಷ್ಟ್ರವನ್ನು ಸ್ವತಂತ್ರವಾಗಿ ಮಾಡುವ ಸಾಮರ್ಥ್ಯವುಳ್ಳವರೆಂಬದನ್ನು ನಮ್ಮ ಕಷ್ಟದಿಂದಲೂ ಅಚಲವಾದ ಧೈರ್ಯದಿಂದಲೂ ನಾವು ಸರಕಾರಕ್ಕೆ ಸಿದ್ಧ ತೋರಿಸಿಕೊಡುವೆವು. ನಮಗೆ ಅಪಮಾನವಾಗುವಂಥ ಸಂಗತಿಗಳನ್ನು ಕಂಡು, ಮನಗುಂದಿದವರಾಗಿ ಅವರ ಪಕ್ಕಡಾವರ್ತ್ಯ ನಾವು ಅನ್ಯರಿಗೆ ಉತ್ಸಾಹವನ್ನು ಕೊಟ್ಟು ಹಾಗುವದು, ನಾವು ಇದಕ್ಕೆ ಕಾರಣ

ರೂ ಸದ್ಗುಣಿಗಳೂ ಎಂಬದಾಗಿ ಸರಕಾರದವರು ಸೋಗು ಹಾಕಿರುವರು. ಅದು ಹೊರಟು ಹೋಗುವಂತೆ ಅವರಿಗೆ ಅವಕಾಶವನ್ನುಂಟು ಮಾಡಿ ಕೊಡುವದು ಒಂದು ದೃಷ್ಟಿಯಿಂದ ಹಿತಕರವು. ಅಂಥದೆ ಅವರ ನಿಜವಾದ ಸ್ವರೂಪವು ಹೊರಬಿದ್ದು, ಅವರ ಹೃದಯ ಮತ್ತು ಆತ್ಮ ಈ ಎರಡೂ ವಸ್ತುಗಳ ಹೊಲಸು ತಾನೇ ಕಂಡು ಬರುವದು. ಎಲ್ಲ ದೇಶ ಸೇವಕರಿಗೆ ಕೆಳಗೆ ಕಾಣಿಸಿದ ಸಂಗತಿಗಳನ್ನು ತಿಳಿಸಿರಬೇಕೆಂದು ನನ್ನ ಸೂಚನೆಯಿದೆ:-

(೧) ಎಲ್ಲ ಜನರ ಸಂಗಡ- ವಿಶೇಷವಾಗಿ ತಮ್ಮ ಸಂಗಡಿಗರಾದ ಕೈದಿಗಳ ಸಂಗಡ ಮತ್ತು ನಿರ್ಬಲರೂ, ಗತಿಯಿಲ್ಲದವರೂ, ಕೀಳು ಕೆಲಸವನ್ನು ಸಹ ಮಾಡಬೇಕೆಂದು ಲಜ್ಜಾಸ್ಪದರಾದವರೂ ಆದ ಹಿಂದೀ ವಾರ್ಡರುಗಳ ಸಂಗಡ- ವಿನಯದಿಂದ ನಡೆದುಕೊಳ್ಳಬೇಕು. ಅವರನ್ನು ಸದ್ಗುಣಿಗಳನ್ನಾಗಿ ಮಾಡಿ, ಅವರಲ್ಲಿ ನಿಜವಾದ ಧೈರ್ಯವನ್ನು ತುಂಬಿ ಸ್ವದೇಶಾಭಿಮಾನ ಶಿಸ್ತುಗಳೆಂದರೇನೆಂಬದನ್ನು ಅವರಿಗೆ ಕಲಿಸಬೇಕು. ಅಲ್ಲದೇ ನಮ್ಮ ಆತ್ಮ ಶಕ್ತಿಯಲ್ಲಿಯೂ, ಕಷ್ಟಗಳನ್ನು ಸಹಿಸುವದರಲ್ಲಿಯೂ ನಾವು ವಿಶ್ವಾಸವುಳ್ಳವರಾಗಿರಬೇಕು.

(೨) ತಿನಸು ಬಟ್ಟೆ ಮತ್ತು ಹಾಸಿಗೆ ಹೊದಿಕೆಗಳು ನಿರ್ಮಲವಾಗಿರಬೇಕೆಂದು ನಾವು ಕೇಳಿಕೊಳ್ಳಬೇಕು. ಆದರೆ ಈ ಮಾತಿಗೆ ವಿಶೇಷವಾಗಿ ಮಹತ್ವವನ್ನು ಕೊಡತಕ್ಕದ್ದಲ್ಲ. ಮಹತ್ವದ ಸಂಗತಿಗಳನ್ನು ಮುಂದೆ ಹೇಳತಕ್ಕದ್ದದೆ.

(೩) ನಮ್ಮ ಆರೋಗ್ಯವು ನಷ್ಟವಾಗದಂತೆ ನಮ್ಮ ಕೈಲಾದ ಮಟ್ಟಿಗೆ ನಾವು ಅಲ್ಲಿ ಕೆಲಸ ಮಾಡತಕ್ಕದ್ದು. ನಮ್ಮ ಶಕ್ತಿಯನ್ನು ಮೀರಿದಂಥ, ಅಥವಾ ಅನ್ಯಪರಿಸ್ಥಿತಿಗಳ ಮೂಲಕ ನಮಗೆ ಮಾಡಲಿಕ್ಕೆ ಬಾರದಂಥ ಕೆಲಸಗಳನ್ನು ಮಾಡ ಹೇಳಿದರೆ, ನಾವು ಹಾಗೆ ಮಾಡಲಿಕ್ಕೆ ನಿಶ್ಚಯವಾಗಿ ನಿರಾಕರಿಸತಕ್ಕದ್ದು. ನಿರಾಕರಿಸುವದೊಂದು ಶಸ್ತ್ರವು ನಮ್ಮ ಕೈಯಲ್ಲಿದೆ. ಆ ಶಸ್ತ್ರವೆಂದರೆ ಬಹು ತೀಕ್ಷ್ಣವಾದದ್ದು. ಆದ್ದರಿಂದ ಅದನ್ನು ನಾವು ಬಹು ಜಾಣತನದಿಂದ ಉಪಯೋಗಿಸತಕ್ಕದ್ದು. ಆ ಶಸ್ತ್ರದಿಂದ ಸೆರೆಮನೆಯ ಅಧಿಕಾರಿಗಳಿಗೆ ಎಚ್ಚರಿಕೆಯುಂಟಾಗುವದೇನೋ ನಿಜವು. ಆದರೆ ಅದರ ಉಪಯೋಗವನ್ನು ಚೆನ್ನಾಗಿ ಮಾಡಿಕೊಳ್ಳುವದು ಬಹು ಕಠಿಣವು. ಅಧಿಕಾರಿಗಳು ನಮಗೆ ಕೊಟ್ಟ ಶಿಕ್ಷೆಯನ್ನು ನಾವು ಆನಂದದಿಂದ ಸಹಿಸಬೇಕು. ಮತ್ತು ಕಷ್ಟಗಳನ್ನು ಸಹಿಸುವದರಿಂದಲೇ ಅಧಿಕಾರಿಗಳನ್ನು ಸೋಲಿಸಬೇಕು. ಎರಡನೇ ಶಸ್ತ್ರವೆಂದರೆ ಉಪವಾಸವ್ರತವನ್ನು ಕೈಕೊಳ್ಳುವದು. ಆದರೆ ಅದು ಬಲಹೀನವಾದದ್ದು ಅದನ್ನು ಮುಸಲ್ಮಾನರು ಉಪಯೋಗಿಸಲಾರರು. ನಮ್ಮ ಶಾರೀರಿಕ ಮತ್ತು ಆಧ್ಯಾತ್ಮಿಕ ಬಲಗಳನ್ನು ನಾವು ಯಾವಾಗಲೂ ಹೆಚ್ಚಿಸತಕ್ಕದ್ದು. ಆದರೆ ಉಪವಾಸ ವ್ರತದಿಂದ ಆ ಬಲಗಳು ಕ್ಷೀಣವಾಗುತ್ತವೆ. **ಬೇಕಾದಹಾಗೆ ಬಲತ್ಕಾರವನ್ನುಂಟು ಮಾಡಲಿ ಇಲ್ಲವೆ ಬೆದರಿಕೆಯನ್ನು ಹಾಕಲಿ ನಾವು ಮಾತ್ರ ನಮ್ಮ ಇಚ್ಛೆಯ ವಿರುದ್ಧ ಯಾವ ಕೆಲಸವನ್ನೂ ಮಾಡತಕ್ಕವರಲ್ಲೆಂಬದನ್ನು ಸೆರೆಮನೆಯಲ್ಲಿರುವಾಗಲೂ ಅದರ ಹೊರಗೆ ಇರುವಾಗಲೂ ಈ ಸರಕಾರಕ್ಕೆ ನಮ್ಮ ಕೃತಿಯಿಂದ ತೋರಿಸುತ್ತಿರಬೇಕು.** ಹಾಗೆ ಮಾಡುವಾಗ ಮಾತ್ರ ನಾವು ಮೈಗಳ್ಳತನದಿಂದ ಕೆಲಸವನ್ನು ತಪ್ಪಿಸಕೂಡದು; ಮತ್ತು ಕಷ್ಟಗಳನ್ನು ಸಹಿಸಲಿಕ್ಕೆ ಅಪಾತ್ರರೆಂಬದನ್ನು ತೋರಿಸಬಾರದು. ಜೇಲಿನಲ್ಲಿನ ನಮಗೆ ಅಪಮಾನವಾಗುವಂಥ ಹಲ ಕೆಲವು ಪದ್ಧತಿಗಳುಂಟು ಅಂಥವುಗಳನ್ನು ನಾವು ನಿರಾಕರಿಸಲಿಕ್ಕೇಬೇಕು ಅವು ಯಾವೆಂದರೆ:-

(ಅ) ಪ್ರತಿದಿನ ಸಾಯಂಕಾಲಕ್ಕೆ ನಾವು ಎಲ್ಲ ಬಟ್ಟೆಗಳನ್ನು ತೆಗೆದಿಟ್ಟು ಸಣ್ಣದಾದ ಲಂಗಟವನ್ನು ಮಾತ್ರ ಧರಿಸಿ, ನಮ್ಮ ಪೋಷಾಕಿನಲ್ಲಿ ಯಾವದನ್ನು ಬಚ್ಚಿಟ್ಟು ಕೊಂಡಿಲ್ಲವೆಂಬದನ್ನು ತೋರಿಸಬೇಕಾಗುತ್ತದೆ.

(ಬ) ನಮ್ಮ ಸ್ವಾಭಿಮಾನಕ್ಕೆ ಭಂಗ ಬರುವಂಥ ಕೃತಿಗಳಿಂದ ಕೂಡಿದ ಸೆರೆಮನೆಯ ಕವಾಯಿತು ಮತ್ತು ಶಿಸ್ತು ಈ ಹೆಸರಿನಿಂದ ನಮ್ಮನ್ನು ಪಶುಗಳನ್ನಾಗಿ ಮಾಡುವದು.

(ಕ) ಅನೇಕ ಜನರ ಗುಂಪಿನಲ್ಲಿ ಕುಳಿತು ಮೂತ್ರಾದಿ ವಿಧಿಗಳನ್ನು ತೀರಿಸಿಕೊಳ್ಳುವದು, ಈ ಸಮಯದಲ್ಲಿಯೂ ವಾರ್ಡರರು ನಮ್ಮನ್ನು ಕಾಯುವದು, ಇತ್ಯಾದಿ.

(ಡ) ಪ್ರಾರ್ಥನಾ ಕಾಲದಲ್ಲಿ ಪ್ರತಿದಿವಸ ಐದು ಸಾರೆ ಬಹಿರಂಗದಲ್ಲಿಯೇ ನಮಾಜು ಮಾಡಬೇಕು. ನಮಾಜು ಮಾಡುವದನ್ನು ನಿಲ್ಲಿಸಬೇಕೆಂದು ಹೇಳಿದರು. ಆದರೆ ಅದನ್ನು ನಾನು ನಿಲ್ಲಿಸುವದು ಶಕ್ಯವೇ ಇಲ್ಲವೆಂದೂ, ಆ ಬಗ್ಗೆ ನನ್ನ ಕೂಡ ಮಾತನ್ನೆತ್ತ ಕೂಡದೆಂದೂ ನೀಗ ಮುಖದಿಂದ ಮೇಲಧಿಕಾರಿಗೆ ತಿಳಿಸಿದೆನು. ಅವನು ಸುಮ್ಮನಾದನು. ಅದರ ಪರಿಣಾಮವು ಆಗಿದೆ. ಈಗ್ಗೆ ದಿನಾಲು ನಾಲ್ಕು ಜನರು ಪ್ರಾರ್ಥನೆಗಳನ್ನು ಅನ್ನುತ್ತಾರೆ ಆ ನಮಾಜಿನ ಇಂಪಾದ ಧ್ವನಿಯು ನಾಲ್ಕು ಸಾರೆ ಕೇಳಬರುತ್ತದೆ. ಹಿಂಸೆ[illegible] ಕೆಲಸದ್ದಲ್ಲವೆಂಬದನ್ನು ನಾವು ಅರಿತವರಾಗಿರಬೇಕು. ಇಲ್ಲಿಯ ಇತರ ಕೈದಿಗಳು ಕೂಡ ಅಹಿಂಸಾ ವ್ರತಧಾರಿಗಳಾಗಿದ್ದಾರೆಂಬದನ್ನು ನಮ್ಮ ಮುಖ್ಯ ಸೇನಾಧಿಪತಿಗೆ ಅರುಹು. ಆ ಕೈದಿಗಳು ನಮ್ಮನ್ನು ಪ್ರೀತಿಸುತ್ತಾರೆ, ನಮಗೆ ಆದರವನ್ನೂ ತೋರುತ್ತಾರೆ; ಮತ್ತು ನಾವು ಹೇಳಿದ ಮಾತನ್ನು ಆನಂದದಿಂದ ಕೇಳುವರೆಂದು ನನಗೆ ಅನಿಸುತ್ತದೆ. ಎಲ್ಲ ರಾಜಕೀಯ ಕೈದಿಗಳ ಆಚರಣೆಯು ನನ್ನಂತೆ ಇದ್ದರೆ ತನ್ನ ಕೆಲಸವು ಬಹಳೇ ಹಗುರಾಗುವದೆಂದು ಮೇಲಧಿಕಾರಿಯು ಅನ್ನುತ್ತಾನೆ. ನಾನೆಂದೂ ತಕ್ರಾರ ಮಾಡುವದಿಲ್ಲ; ಇಂಥದೇ ಬೇಕೆಂದೂ ಕೇಳುವದಿಲ್ಲ. ಯಾವಾಗಲೂ ನಗುತ್ತ ಹಾಡುತ್ತ ಕಾಲಕಳೆಯುತ್ತೇನೆ.

**ಇತಿ ಆಶೀರ್ವಾದ**

(ಸಹಿ) ಶೌ. ಅ.

ಕಾಜಾಕಲವು ನಾವೆಲ್ಲರೂ ಆರೋಗ್ಯದಿಂದಿರುವೆವು ಮಹಮ್ಮದ ಅಲ್ಲೀ, ಜಫ್ಫರ ಮತ್ತು ಪೀರಸಾಹೇಬ ಇವರೆಲ್ಲ ಒಂದೆಡೆಯಲ್ಲಿರುತ್ತಾರೆ. ಪ್ರತಿ ದಿನವು ಒಬ್ಬರಿನ್ನೊಬ್ಬರ ಭೆಟ್ಟಿಯನ್ನು ತೆಗೆ ಕೊಳ್ಳುತ್ತಾರೆ. ಆದರೆ ನಾವಿಬ್ಬರೂ ಣ್ಣ ತಪ್ಪಿಂದರು ಭೆಟ್ಟಿಯಾಗಬಾರದಂತೆ! ಇದು ಸೋಜಿಗವಲ್ಲವೇ? ನಮ್ಮನ್ನು ಇಲ್ಲಿಂದ ಬೇರೆಕಡೆಗೆ ಒಯ್ಯುಕ್ಕವರಿದ್ದರು; ಆದರೆ ಹಾಗೇನೂ ಮಾಡಲಿಲ್ಲ ಒಂದು ಜೇಲಿನಿಂದ ಮತ್ತೊಂದು ಜೇಲಿಗೆ ಒಯ್ಯುವದರಿಂದ ಅಧಿಕಾರಿಗಳು ನಮ್ಮ ಕಾರ್ಯದಲ್ಲಿ ಅಡ್ಡಿಯನ್ನುಂಟು ಮಾಡುತ್ತಾರೆ. ಆದ್ದರಿಂದ ಮಹಾತ್ಮಾಜಿಯವರು ಎಲ್ಲರಿಗೂ ಹೇಗೆ ನಡೆದುಕೊಳ್ಳಬೇಕೆಂಬದರ ಒಂದೇ ಪಾರ್ದಿಯ ನಿಯಮಗಳನ್ನು ಕಿ ಕೊಡಬೇಕೆಂದು ಸೂಚಿಸಿರುವೆ ಇದರಿಂದ ಎಂಥ ಪರಿಸ್ಥಿತಿಯೊಳಗಿದ್ದ ಪುರುಷಾರ್ಥವನ್ನು ಹೇಗೆ ಕಾದಿಟ್ಟು ಡು ನಡೆಯಬೇಕೆನ್ನುವದು ತರುಣ ಕ ಸೇವಕರಿಗೆ ಗೊತ್ತಾಗುವದು. ಕದಲ್ಲಿದ್ದುಕೊಂಡು ಯುದ್ಧಮಾಡು ವ ಸೈನಿಕನೇ ನಾನು ಎಂಬ

ನೆಯು ನನ್ನಕ್ಷೀಯಂತೂ ಸಂಪೂರ್ಣವಾಗಿ ತುಂಬಿಕೊಂಡಿದೆ ಅದಕ್ಕಾಗಿಯೇ ನಾನು ಯಾವದನ್ನು ಬೇಡುವದಿಲ್ಲ ಮತ್ತು ಯಾತಕ್ಕೂ ತಕ್ರಾರು ಮಾಡುವದಿಲ್ಲ ವೈರಿಯು ನನ್ನನ್ನು ಕೀರ ಕಾಡಿಸಬಹುದು. ಆದಗೂ ನಾನೇ ಜಯಶಾಲಿಯಾಗುವಂತೆ ಚನ್ನಾಗಿ ಪ್ರಯತ್ನಿಸುವೆನು. ಅವನು ಹಿಂಸಾ ಕೃತಿಗಳಿಂದ ನನ್ನನ್ನು ಪೀಡಿಸುವನು; ನಾನು ಮಾತ್ರ ತಾಳ್ಮೆ ಧೈರ್ಯ ಮೊದಲಾದ ಸದ್ಗುಣಗಳಿಂದ ಉತ್ತರ ಕೊಡುವೆನು. ಕಾಳಗವು ಉಗ್ರ ಸ್ವರೂಪವನ್ನು ಧರಿಸುವದೊಂದೇ ತಡ. ಕೂಡಲೇ ನಾವಾದರೂ ಅಹಿಂಸಾ ಕೃತಿಗಳಿಂದಲೇ ಸರಕಾರವನ್ನು ಜೊಡಕಿನಲ್ಲಿ ಕೆಡವಬಲ್ಲೆವು. ಆಗ್ಗೆ ಮಾತ್ರ ಇನ್ನೇನು ಮಾಡಬೇಕೆಂದು ವೈರಿಯು ದಿಙ್ಮೂಢನಾಗಿ ಕುಳಿತುಕೊಳ್ಳುವನು. ಆಂಥ ಕಾಲದಲ್ಲಿ ನಮ್ಮನ್ನು ತುರಂಗಕ್ಕೆ ಕಳಿಸಲು ಅವರೇನು ಆತುರರಾಗರು. ನಾನಾದರೂ ಇಲ್ಲಿಯ ಆಹಾರದ ಲಾಭ ತೆಗೆದುಕೊಂಡು ಸಜ್ಜುಗೊಂಡಿರುವೆನು. ನನ್ನ ತೂಕವನು ನಾಲ್ವತ್ತು ಪೌಂಡಿನಷ್ಟು ಕಡಿಮೆ ಮಾಡಿಕೊಂಡಿರುವೆನು. ಆದರಿಂದ ಬಲಬಂದಂತಾಗಿ ಸುಖಿಯಾಗಿದ್ದೇನೆ. ಕಾರಾಗೃಹವಾಸವನ್ನು ಎರಡು ಸಾರೆ ಹಿಂದೆ ಮುಗಿಸಿರುವೆನು. ತುರಂಗದಲ್ಲಿ ಎಲ್ಲ ಕಡೆಗೂ ನನ್ನ ನಮಸ್ಕಾರವು ತಿಳಿಸುತ್ತದೆ. ತುರಂಗವಾಸಿಗಳ ಜಾತನ; ಅವರ್ಣನೀಯವಾಗಿದೆ. ಮತ್ತು ರಾಷ್ಟ್ರೀಯ ಚಳವಳಿಯ ಸಂಗತಿಗಳನ್ನು ತಿಳಿದುಕೊಳ್ಳಲು ಅವರೆಲ್ಲ ಆತುರರಿದ್ದಾರೆ ಇಲ್ಲಿ ಮುಸಲ್ಮಾನರ ಸಂಖ್ಯೆ ಹೆಚ್ಚಿದೆ ಕೆಳಗಿನ ಅಧಿಕಾರಿಗಳೆಲ್ಲ ಹಿಂದೂ ಜನರಿದ್ದು, ಅವರೆಲ್ಲರೂ ಒಳ್ಳೇ ಸ್ವಭಾವವುಳ್ಳವರಾಗಿದ್ದಾರೆ. ನಮ್ಮನ್ನೆಲ್ಲರನ್ನೂ ಅವರು ಬಹು ಪ್ರೀತಿಯಿಂದ ನಡೆಸಿಕೊಳ್ಳುತ್ತಾರೆ. ನನ್ನ ಕೆಲಸವನ್ನು ಮಾಡುತ್ತ ಪ್ರಾರ್ಥನೆಯನ್ನು ಪಠಿಸುತ್ತ ಮತ್ತು ತಾಸುಗಳವರೆಗೆ ನಿದ್ದೆ ಮಾಡುತ್ತ ಸುಖದಿಂದಿದ್ದೇನೆ. ನನಗೆ ದೊರೆತ ಈ ವಿಶ್ರಾಂತಿಯನ್ನು ತಿಳಿದು ಮಹಾತ್ಮಾಜಿಯವರು ಅಸೂಯೆಪಡಬಹುದು. ಎಲ್ಲರಿಗೂ ನನ್ನ ಪ್ರೇಮವನ್ನರ್ಪಿಸು. ಧೈರ್ಯಶಾಲಿಯಾಗು ನಿನ್ನ ಕೈಯಿಂದಾಗುವ ಕಾರ್ಯವನ್ನು ಕೈಕೊಂಡು ಇಲ್ಲದ ಚಿಂತೆಯನ್ನು ತೊರಿಸಬೇಡ. ಶ್ರಮ ಬಿಟ್ಟು ಕಾರ್ಯ ಮಾಡು.

(ಸಹಿ) ಶ್ರೀ. ಮ.

ಪತ್ರದಲ್ಲಿದ್ದ ಸಂಗತಿಗಳ ಜೋಡು ಹೆಚ್ಚಿಗೆ ಉಪದೇಶವೇನೂ ಇದ್ದಂತೆ ತೋರುವದಿಲ್ಲ. ಈ ಪತ್ರವು ಉಪದೇಶಪರ ನಿಯಮಗಳನ್ನಂತೂ ಹಾಕಿಕೊಟ್ಟಿದೆ ಇನ್ನೂ ಒಂದು ಸಂಗತಿಯು ಅಲ್ಲಿ ಅಡಕವಾಗಿದೆ ಅಲ್ಲೀ ಬಂಧುಗಳ ದೃಷ್ಟಿಕೋನವು ಹೇಗೆ ದೆಹೋ ಎಂದು ಬಿನೋಸರು ಸರಿ ತೆಯ ಗೊಳ್ಳುತ್ತಿದ್ದರ. ಇದ ಒನ ಅ 'ಲ್ಲ ಸಂಶಯಗಳು ಹಾರಿಹೋಗುತ್ತವೆ ಅವರು ಅನಾರಾಧ್ಯರಿಲ್ಲ. ನ್ಯಾಯವನ್ನು ಗೊತ್ತಿದೆ ಯೋಗ್ಯವಿಚಾರಗಳೇ ಅವರಲ್ಲಿ ತುಂಬಿಕೊಂಡಿವೆ. ಆದರೆ ದೇವರ ಅನುಗ್ರಹದಿಂದ ಅವರು ಧೃಡಸ್ವಭಾವದವರಾಗಿದ್ದಾರೆ. ಅವರು ತಮ್ಮ ದೌರ್ಬಲ್ಯದಿಂದ ಎಂದಿಗೂ ಯಾರಿಗೂ ವಶರಾಗರು. ಯೋಗ್ಯ ವಿಚಾರಗಳಿಗೆ ಮಾತ್ರ ಅವರು ಸರ್ವಸ್ವವನ್ನು ವಶೀಕರಿಸುವರು ಅವರು ಪಾಪಭೀರುಗಳಾದ್ದರಿಂದ ತಮ್ಮ ವಿರೋಧಿಗಳ ನಿಜವಾದ ತೊಡಕುಗಳನ್ನು ಅರಿಯಲು ಸಾಮರ್ಥ್ಯವುಳ್ಳವರಿದ್ದಾರೆ ವಿರೋಧಿಯು ಶುದ್ಧ ಸ್ವಭಾವದವನಾಗಿದ್ದು ತನ್ನ ತಪ್ಪು ತಡೆಗಳನ್ನು ಒಪ್ಪಿಕೊಂಡು ಯೋಗ್ಯಮಾನದಿಂದ ನಡೆಯಲೊಪ್ಪಿದರೆ ಅವರಿಂದ ಭೀತಿಯಂಬುದೇಕೆಂದು ಯಾರೂ ತಿಳಿಯಕೂಡದು ಮತ್ತು ಅವರು ಅವಿಶ್ವಾಸಿಗಳಲ್ಲೊಂಬುದೂ ಗೊತ್ತಾಗುವದು. ಅಲ್ಲೀ ಬಂಧುಗಳನ್ನು ಸಮಾಧಾನಪಡಿಸದೇ ಮುಸಲ್ಮಾನರನ್ನು ಸಮಾಧಾನಪಡಿಸುವದೆಂದರೆ ಹಿಂದುಸ್ಥಾನದಲ್ಲಿಯ ಮುಸಲ್ಮಾನೀ ಧರ್ಮವನ್ನು ಮರೆಯುವದೇ ಸೈ

(ಯಂಗ ಇಂಡಿಯಾ) ಮೋ. ಕ. ಗಾಂಧೀ

× × +

---

( ಕಳೆದ ವಾರದಲ್ಲಿಯ ೮೭ ನೇ ಪುಟದಿಂದ ಮುಂದೆ ಸಾಗಿದ್ದು )

ಪಂಜಾಬದಂತೆಯೇ ಸ್ವರಾಜ್ಯದ ಮಾತು. ಯಾವದು ಹಕ್ಕಿನಿಂದ ಹಿಂದುಸ್ತಾನದ್ದಿರುವದೊ ಅದನ್ನು ತಿರುಗಿ ಕೊಡಬೇಕೆಂಬುವದು ಸರಕಾರಕ್ಕೆ ಅಶಕ್ಯವಾಗಿ ತೋರುತ್ತದೆ "ಸುಧಾರಣೆಗಳು ಸಾವಕಾಶವಾಗಿ ಕೊಡಲ್ಪಡದೇ ಕ ಎಂಬುದು ಅವರ ಸಿದ್ಧಾಂತ—ವಚನವಿದ್ದಂತೆ ತೋರುತ್ತದೆ. ಕೊಡುವಹೊರತು ನಿರ್ವಾಹವಿಲ್ಲೆಂಬ ಪ್ರಸಂಗವು ಬಂದರೆನೇ ಕೈಯಿಂದೇನಾದರೂ ಕೊಡಬೇಕು ಇಲ್ಲದಿದ್ದರೆ ಇಲ್ಲ ಎಂಬೀ ವಿಚಾರವು ತಲೆಯಲ್ಲಿರುವದರಿಂದಲೇನೇ ಪ್ರೀಕಿನ ಸಿದ್ಧಾಂತ—ವಚನವು ಅಸ್ತಿತ್ವದಲ್ಲಿ ಬಂದಿರುವದು. ಈ ವಿಷಯದಲ್ಲಿ ನಮ್ಮ ಸ್ತ್ರಿರ ಮತಗಳಲ್ಲಿ ಮಹದಂತ ವ್ಯಂಟು. ನನಗಂತೂ ಖಿಲಾಫತ, ಮತ್ತು ಪಂಜಾಬ ಪ್ರಕರಣಗಳಲ್ಲಿ ನ್ಯಾಯವು ದೊರೆಯುವ ಮೊದಲು ಸ್ವರಾಜ್ಯದ ಬಗ್ಗೆ ವಿಚಾರಮಾಡಲು ಸಮಯವುಂಟಾಗುತ್ತದೆ. ಖಿಲಾಫತ ಮತ್ತು ಪಂಜಾಬದ ಪ್ರಶ್ನಗಳು ಬಹು ಸುಲಭವಿದ್ದಂತೆ ತೋರುತ್ತವೆ. ಆದರೆ ಸ್ವರಾಜ್ಯದ ಪ್ರಶ್ನದಷ್ಟೇ ಅವು ಕಠಿಣವಾಗಿರುವವು ಯಾಕಂದರೆ ಈ ಪ್ರಕರಣಗಳಲ್ಲಿ ಆದ ಅನ್ಯಾಯದ ಪರಿಮಾರ್ಜನೆ ಮಾಡುವದೆಂದರೆ ಹಿಂದೀ ಲೋಕಮತಕ್ಕೆ ತಲೆ ಬಾಗಿಸುವದೇ ಸೈ

ಇದೆಲ್ಲವು ಒಂದು ಯುಕ್ತಿವಾದವಾಯಿತು. ನಮ್ಮ ಬೇಡಿಕೆಗಳ ವಿಷಯದಲ್ಲಿ ಅಸಂಭವವಾದುದೇನೂ ಇಲ್ಲ. ಸತ್ತಾಧಾರಿಗಳಿಗೆ ಮಾತ್ರ ಅವು ಅಸಂಭವವಾಗಿ ತೋರಬಲ್ಲವು. ಯಾಕಂದರೆ ಅಧಿಕಾರವಿಲ್ಲದೆ ತಮ್ಮ ಕೈಯಲಿಟ್ಟುಕೊಂಡ ರಾಜ್ಯಸತ್ತೆಯನ್ನು ಬಿಟ್ಟುಕೊಡುವದೆಂದರೆ ಅವರಿಗೆ ತಮ್ಮ ಜೀವದಮೇಲಿನ ಪ್ರಸಂಗವು ಒಂದಂತೆ ಅನಿಸುತ್ತದೆ.

ಸರಕಾರವು ಕೇವಲ ತನ್ನ ಕರ್ತವ್ಯವನ್ನು ಪಾಲಿಸುತ್ತ ನಡೆದರೆ ಪ್ರಜಾಭಿಲಾಷೆಗೆಲ್ಲಿ ಅವಕಾಶವುಂಟು. ಸಾಮುದಾಯಿಕ ಸವಿನಯ ಆಜ್ಞಾಭಂಗವನ್ನು ಕೊನೆಗೊಳಿಸಿದರೆ ಜನರು ಅತ್ಯಾಚಾರಕ್ಕೆ ಪ್ರವೃತ್ತರಾಗುವರೆಂದು ಇಟ್ಟುಕೊಳ್ಳುವಾ ಅವರೆ ಅತ್ಯಾಚಾರಕ್ಕೆ ಹೆದರಿ ವ್ಯಕ್ತಿಗಳ ಹಕ್ಕುಗಳನ್ನು ಮುರುಗಿಸತಕ್ಕದ್ದೊ? ಸತ್ಯಾಗ್ರಹಿಗಳು ಸವಿನಯ ಆಜ್ಞಾಭಂಗವನ್ನು ಕೈಕೊಂಡು ದೇಶಕ್ಕೆ ಕಠಿಣವಾದ ಪ್ರಸಂಗವನ್ನುಂಟುಮಾಡುವರೆಂದು ಸರಕಾರದವರು ಅವರಿಗೆ ದೋಷವನ್ನು ಕೊಡುತ್ತಿರುವರು.

ಆದರೆ ಈ ಬೆದರಿಕೆಯನ್ನು ಮಾಡುವ ಸರಕಾರದವರು ಸರಕಾರದ ಅನ್ಯಾಯವನ್ನು ಎತ್ತಿ ಹಿಡಿಯುವವರಲ್ಲದೆ ಸತ್ಯಾಗ್ರಹಿಗಳ ಅಪಮಾನವನ್ನೂ ಮಾಡುವರು. ಈ ಮಾತು ಅಸಹಕಾರಿಗಳ ಮನಸ್ಸಿಗೆ ಹೊಳೆಯುವದಿಲ್ಲ. ಸರಕಾರವು ಬುದ್ಧಿಪೂರ್ವಕವಾಗಿ ಕಠಿಣ ಪ್ರಸಂಗವನ್ನು ತರುತ್ತಿದೆ. ಸತ್ಯಾಗ್ರಹಿಗಳಲ್ಲ. ಜನತೆಯಮೇಲೆ ಅಲ್ಪಸ್ವಲ್ಪ ಪ್ರಭಾವವಿದ್ದ ಮತ್ತು ಜನತೆಯನ್ನು ಅತ್ಯಾಚಾರದಿಂದ ದೂರಿಡಲು ಸಮರ್ಥನಾದ ಪ್ರತಿಯೊಬ್ಬ ಮನುಷ್ಯನನ್ನು ಸರಕಾರವು ಕಾರಾಗೃಹಕ್ಕೆ ಅಟ್ಟಿ ಕಠಿಣಪ್ರಸಂಗವನ್ನು ತರಲೆ ಗೊಳಿಸುತ್ತಲಿದೆ. ಹಸಿದ ಮನುಷ್ಯನಿಗೆ ಅನ್ನವನ್ನು ಕೊಡದೆ ಅವನೇನಾದರೂ ಹಸಿವೆಯನ್ನು ಹಿಂಗಿಸುವದಕ್ಕೆ ಅತ್ತಿತ್ತ ಯತ್ನಿಸಿದರೆ ಅವನನ್ನು ಗುಂಡುಹಾಕಿ ಕೊಲ್ಲುವ ರೀತಿಯನ್ನು ಹಾಕುವ ಬಿಗಿ ಗೇರಿಯ ಕೃತಿಯಂತೆ ಸರಕಾರದ ಕೃತಿಯಾಗಿರುವದೆಂಬುದು ಸರ್ಕಾರದವರ ಲಕ್ಷದಲ್ಲಿಲ್ಲ.

ಮನುಷ್ಯತ್ವವನ್ನು ನಾಶಗೊಳಿಸುವ ಈ ಸ್ಥಿತಿಯಲ್ಲಿ ಅಸಹಕಾರಿಯು ಕಾರ್ಯವೇನಿದೆಂಬುದು ಸ್ಪಷ್ಟವಿದೆ. ಅವನು ಸಕಲರಿಗೆ ಆದರ್ಶಭೂತನಾಗುವಂತೆ ತ್ಯಾಗಿಯೂ ನಿರ್ಭಯನಾಗಲಿಕ್ಕೆಬೇಕು. ವಿಶೇಷವಾಗಿ ಯಾವ ಕಾರ್ಯವನ್ನಾದರೂ ಅವನು ಸತ್ಯಾಗ್ರಹದ ದೃಷ್ಟಿಯಿಂದ ಕೈಕೊಳ್ಳಬೇಕು.

(ಯಂ. ಇ. ಮಹಾತ್ಮಾ ಗಾಂಧೀ)

ಕನ್ನಡ ನವಜೀವನ.

ಜುಲೈ ತಾ॥ ೧೨ ಗುರುವಾರ ೧೯೨೮ನೇ ಇಸ್ವಿ.

## ಬಾರಡೋಲಿಯ ನಿಶ್ಚಯವು.

(೩೦ ನೇ ಜಾನೇವಾರಿ ಸನ್ ೧೯೨೮ ಇಸ್ವಿ)

ಬಾರಡೋಲಿಯು ಬಹು ಮಹತ್ವದ ನಿಶ್ಚಯವನ್ನು ಮಾಡಿದೆ. ಇದು ಇದರ ಕೊನೆಯ ನಿಶ್ಚಯವು; ತನ್ನ ನಿಶ್ಚಯದಿಂದ ಅದಿನ್ನು ಪರಾವೃತ್ತವಾಗಲರಿಯದು. ಬಾರಡೋಲಿ ತಾಲೂಕಿನ ಪ್ರತಿನಿಧಿಗಳ ಪರಿಷತ್ತಿನಲ್ಲಿ ಅಧ್ಯಕ್ಷರಾದ ಶ್ರೀ ವಿಠಲಭಾಯಿ ಪಟೇಲರವರು ಬಹು ಗಂಭೀರವಾದ ಭಾಷಣವನ್ನು ಮಾಡಿದರು. ಮುಂದಿನ ಕಾರ್ಯಕ್ರಮವು ಸುಲಭವಾದುದಿಲ್ಲ, ಅದರಲ್ಲಿ ಅನೇಕ ಗಂಡಾಂತರಗಳುಂಟು, ಆದ್ದರಿಂದ ಬಹು ಎಚ್ಚರದಿಂದ ಮುಂದೆ ಕಾಲಿಡಬೇಕು ಎಂಬರ್ಥವಾಗಿ ಅವರು ಹೇಳಿದರು. ತಮ್ಮ ಭಾಷಣದಲ್ಲಿ ಅವರು ದೊಡ್ಡ ದೊಡ್ಡ ಬಣ್ಣ ಮಾತುಗಳನ್ನು ಹೇಳುತ್ತ ಕೂಡದೆ ಅವಶ್ಯವಿದ್ದ ಹಾಗು ಯೋಗ್ಯವಾದ ಮಾತುಗಳನ್ನಷ್ಟೇ ಆಡಿದರು. ಪರಿಷತ್ತಿಗೆ ನಾಲ್ಕು ಸಾವಿರ ಜನರು ಖಾದಿಯ ಉಡುಪಿನಲ್ಲಿ ಬಂದಿದ್ದರು. ಐನೂರು ಜನ ಸ್ತ್ರೀಯರಿದ್ದರು. ಬಹು ಜನ ಸ್ತ್ರೀಯರು ಖಾದಿಯನ್ನು ಧರಿಸಿದ್ದರು. ಪರಿಷತ್ತಿನಲ್ಲಿನ ಯೋಗ್ಯ ಭಾಷಣಗಳನ್ನು ಅವರು ಬಹು ಲಕ್ಷ್ಯದಿಂದ ಕೇಳುತ್ತಿದ್ದರು. ಶ್ರೋತೃ ಸಮುದಾಯದ ಸ್ತ್ರೀ ಪುರುಷರೆಲ್ಲರೂ ತಮ್ಮ ಮೇಲಿನ ಜವಾಬದಾರಿಯನ್ನರಿತವರಾಗಿದ್ದರು. ವಿಠಲಭಾಯಿಯವರ ತರುವಾಯ ನಾನು ಭಾಷಣವನ್ನು ಮಾಡಿದೆನು. ರಾಷ್ಟ್ರೀಯ ಮಹಾಸಭೆಯು ನಿರ್ಧರಿಸಿದ ಸಾಮುದಾಯಿಕ ಸವಿನಯ ಆಜ್ಞಾಭಂಗದ ಶರ್ತುಗಳನ್ನೆಲ್ಲ ಒಂದೊಂದನ್ನಾಗಿ ವಿವೇಚಿಸಿ ಪ್ರತಿಯೊಂದು ಶರ್ತಿನ ವಿಷಯದಲ್ಲಿ ಪ್ರತಿನಿಧಿಗಳ ಅಭಿಪ್ರಾಯವು ಹೇಗಿದೆಂಬಿದನ್ನು ಅರಿತುಕೊಂಡೆನು.

ಎಲ್ಲರಿಗೂ ಹಿಂದು ಮುಸಲ್ಮಾನ ಪಾರಸೀ ಕ್ರಿಶ್ಚನ ಐಕ್ಯದ ಮರ್ಮವು ತಿಳಿದಿರುವದು. ಅಹಿಂಸೆಯ ತತ್ವವನ್ನೂ ಮಹತ್ವವನ್ನೂ ಅವರು ಚನ್ನಾಗಿ ಬಲ್ಲರು. ಅಸ್ಪೃಶ್ಯತಾ ನಿವಾರಣ ಅದರೇನೆಂಬದನ್ನು ಅವರು ಅರಿತಿರುವರು. ಅಸ್ಪೃಶ್ಯ ಬಾಲಕರನ್ನು ರಾಷ್ಟ್ರೀಯ ವಿದ್ಯಾಲಯಗಳಲ್ಲಿ ಸೇರಿಸಿಕೊಳ್ಳಲು, ಹಾಗು ಅವರಲ್ಲಿ ರಾಷ್ಟ್ರೀಯ ವಿದ್ಯಾಲಯಗಳಿಗೆ ಸೇರಬೇಕೆಂಬ ಇಚ್ಛೆಯನ್ನು ಹುಟ್ಟಿಸಲು ಯತ್ನ ಮಾಡಲಿಕ್ಕೆ ಸಿದ್ಧರಿರುವರು. ತಾವು ಬಳಸುತ್ತಿರುವ ಭಾವಿಗಳಿಂದ ಅಸ್ಪೃಶ್ಯರಿಗೆ ನೀರು ಒಯ್ಯಗೊಡಲು ಸಿದ್ಧರಿರುವರು. ನಾನು ಹೇಳಿದಂತೆ ಸಂಪೂರ್ಣ ಐಕ್ಯವು ಆಗುವವರೆಗೆ ತಿರಿಗೆ ..., ಕೊಡುವ ಹಾಗು ಜೇಲಿಗೆ ಹೋಗುವ ಸವಿನಯ ಭಂಗವನ್ನು ಆಚರಿಸುವ ಸನ್ನಾಹವು ತಮಗೆ ಸರ್ವಥಾ ದೊರೆಯದೆಂಬ ಮಾತನ್ನು ಅವರು ಚನ್ನಾಗಿ ಬಲ್ಲರು.

ಸೋಮಾರಿತನವನ್ನು ಬಿಟ್ಟು ಸತತ ಉದ್ಯೋಗಿಯಾಗಿ ತಮಗೆ ಬೇಕಾದ ಅರಿವೆಗಳನ್ನು ಮನೆಯಲ್ಲಿಯೇ ನೂತು ನೇಯಬೇಕೆಂಬದನ್ನಾದರೂ ಅವರು ಬಲ್ಲರು. ಮನೆ ಮಾರುಗಳನ್ನೂ ದನಕರಗಳನ್ನೂ ಸರಕಾರವು ಜಪ್ತ ಮಾಡಿದರೆ ಅದನ್ನು ಶಾಂತ ಚಿತ್ತದಿಂದ ಸೈರಿಸಲು ಅವರು ಸಿದ್ಧರಿರುವರು. ಕಾರಾವಾಸವನ್ನು ಭೋಗಿಸಲಿಕ್ಕೂ ಪ್ರಸಂಗ ಬಿದ್ದರೆ ಮೃತ್ಯು ಮುಖದಲ್ಲಿ ಬೀಳಲಿಕ್ಕೂ ಮನಸ್ಸು ಗಟ್ಟಿ ಮಾಡಿರುವರು.

ಅಸ್ಪೃಶ್ಯತೆಯ ವಿಷಯದಲ್ಲಿ ಮಾತ್ರ ಒಬ್ಬ ಮುಪ್ಪಿನ ಮನುಷ್ಯನು ತನ್ನ ವಿರೋಧವನ್ನು ವ್ಯಕ್ತಗೊಳಿಸಿದನು. ನಾನನ್ನುವದೆಲ್ಲ ತತ್ವತಃ ಸತ್ಯವಿದ್ದರೂ ವ್ಯವಹಾರದಲ್ಲಿದ್ದ ರೂಢಿಯನ್ನು ಒಮ್ಮೆಲೇ ಬದಿಗೊತ್ತುವದು ಬಹು ಕಠಿಣವಾದದ್ದು, ಎಂದು ಅವನ ಅಭಿಪ್ರಾಯವಿತ್ತು. ಅಮೇಲೆ ನಾನು ಆ ವಿಷಯದ ಬಗ್ಗೆ ವಿಶದವಾಗಿ ಚರ್ಚಿಸಿದೆನು.

ಈ ಪರಿಷತ್ತು ಸೇರಿಯುವ ಮೊದಲು ಸುಮಾರು ೩೦ ಜನ ಪ್ರಮುಖರನ್ನು ಕಂಡು ಅವರೊಡನೆ ಮಾತುಕಥೆಗಳನ್ನಾಡಿದ್ದೆನು. ಆಗ ವಲ್ಲಭಭಾಯಿ ಪಟೇಲ, ಕೆಲವು ದೇಶಭಕ್ತರು ಮತ್ತು ನಾನು ಕೂಡಿಕೊಂಡು, ಎಲ್ಲ ವಿಷಯಗಳ ಬಗ್ಗೆ ಚನ್ನಾಗಿ ಚರ್ಚಿಸಿ, ೧೫ ದಿನಗಳ ವರೆಗೆ ಸವಿನಯ ಆಜ್ಞಾ ಭಂಗದ ಕಾರ್ಯವನ್ನು ಮುಂದರಿಸುವದು ಯೋಗ್ಯವೆಂದು ಭಾವಿಸಿಕೊಂಡೆವು. ಯಾಕೆಂದರೆ ಸ್ವದೇಶೀ ಕಾರ್ಯಕ್ರಮವನ್ನು ಪೂರ್ಣವಾಗಿ ನೆರವೇರಿಸಲು ಹಾಗು ಎಲ್ಲ ೧೦ ರಾಷ್ಟ್ರೀಯ ವಿದ್ಯಾಲಯಗಳಲ್ಲಿ ಅಸ್ಪೃಶ್ಯ ಬಾಲಕರನ್ನು ತೆಗೆದುಕೊಂಡು, ಅಸ್ಪೃಶ್ಯತೆಯನ್ನು ತೆಗೆದು ಹಾಕಲು ನಮಗೆ ಸಾಕಷ್ಟು ವೇಳೆಯು ದೊರೆಯಬೇಕೆಂದು ನಮ್ಮ ಉದ್ದೇಶವಿದ್ದಿತು. ಆದರೆ ಶೂರರೂ ಆಸ್ತಿಯುಳ್ಳವರೂ ಆದ ಬಾರ್ಡೋಲಿಯ ದೇಶಭಕ್ತರು ಆಜ್ಞಾಭಂಗದ ಕಾರ್ಯಕ್ರಮವನ್ನು ಮುಂದೊರಿಸಲು ಒಪ್ಪಿಕೊಳ್ಳಲಿಲ್ಲ. ನೂರಕ್ಕೆ ೫೦ ರಂತೆ ಹಿಂದೂ ಜನರು ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ಪೂರ್ಣವಾಗಿ ಸಿದ್ಧರಿರುವರೆಂದೂ, ತಮಗೆ ಬೇಕಾದ ಖಾದಿಯನ್ನು ತಯಾರಿಸಲು ತಮ್ಮಲ್ಲಿ ಸಾಮರ್ಥ್ಯ ಉಂಟೆಂದೂ ಅವರು ಅಭಿಪ್ರಾಯಪಟ್ಟರು. ಸರಕಾರದೊಂದಿಗೆ ಯುದ್ಧ ಮಾಡಿ, ತಮ್ಮ ದೈವ ಪರೀಕ್ಷೆಯನ್ನು ನೋಡಿಕೊಳ್ಳಲು ಕೃತನಿಶ್ಚಯರಾಗಿದ್ದರು. ವಲ್ಲಭಭಾಯಿ ಪಟೇಲರವರು ತಂದ ಪ್ರತಿಯೊಂದು ವಿರೋಧವನ್ನು ಖಂಡಿಸಿದರು. ಪರಿಷತ್ತಿನಲ್ಲಿದ್ದ ಜನರು ಮತ್ತು ... ನಾಯಕರು ಎಚ್ಚರಿಕೆಯನ್ನು ಅಸ್ಪೃಶ್ಯರ ಬಗ್ಗೆ ಉಪದೇಶಿಸಿದರು. ಅದರೆ ತಮ್ಮ ನಿಶ್ಚಯವನ್ನು ಪ್ರತಿ ಜನರು ಎಳ್ಳಷ್ಟಾದರೂ ಸಡಿಲಿಸಲು ಮನಸ್ಸು ಮಾಡಲಿಲ್ಲ. ಇದರಿಂದ ಕೆಳಗಿನ ಠರಾವನ್ನು ಸರ್ವಾನುಮತದಿಂದ ಪಾಸು ಮಾಡಲಾಯಿತು:—

"ಸಾಮುದಾಯಿಕ ಸವಿನಯ ಕಾಯಿದೆ ಭಂಗವನ್ನು ಪ್ರಾರಂಭಿಸಲು ಅವಶ್ಯವಾಗಿ ಪಾಲಿಸಬೇಕಾಗುವ ಶರ್ತುಗಳನ್ನು ಚನ್ನಾಗಿ ಅರಿತುಕೊಂಡು ಮತ್ತು ಅವುಗಳನ್ನು ಸಂಪೂರ್ಣವಾಗಿ ವಿವೇಚಿಸಿ ಬಾರಡೋಲಿ ತಾಲೂಕದ ಈ ಪರಿಷತ್ತು ಸಾಮುದಾಯಿಕ ಆಜ್ಞಾಭಂಗವನ್ನು ಆಚರಿಸಲು ಈ ತಾಲೂಕಿನ ಜನರು ಸಿದ್ಧರಾಗಿಯೇ ಇದ್ದಾರೆಂದು ನಿರ್ಣಯಿಸುತ್ತದೆ.

ಈ ಪರಿಷತ್ತಿನ ಅಭಿಪ್ರಾಯವು ಕೆಳಗೆ ಕಾಣಿಸಿದಂತೆ ಇರುತ್ತದೆ:—

(ಅ) ಹಿಂದುಸ್ಥಾನದ ದುಃಖಗಳ ನಿವಾರಣೆಯಾಗಬೇಕಾದರೆ ಹಿಂದೂ-ಮುಸಲ್ಮಾನ ಪಾರ್ಸಿ-ಕ್ರಿಶ್ಚನ ಮತ್ತು ಇತರ ಧರ್ಮದವರ ನಡುವೆ ಪೂರ್ಣ ಐಕ್ಯವು ನೆಲೆಗೊಳ್ಳುವದು ಅವಶ್ಯವಿದೆ.

(ಆ) ಅಹಿಂಸೆ, ಶಾಂತಿ, ಮತ್ತು ಸಹನಶೀಲತೆ ಈ ಮೂರು ಗುಣಗಳಿಂದಲೇ ಅದು ದುಃಖಗಳ ನಿವಾರಣೆಯಾಗುವದು.

(ಇ) ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಸಂಪಾದಿಸಬೇಕಿದ್ದರೆ, ಪ್ರತಿಯೊಂದು ಕುಟುಂಬದಲ್ಲಿ ರಾಟಿಯು ಅವಶ್ಯವಾಗಿರತಕ್ಕದ್ದು, ಮತ್ತು ಪ್ರತಿಯೊಬ್ಬ ವ್ಯಕ್ತಿಯು ಇತರ ಎಲ್ಲ ವಸ್ತ್ರಗಳನ್ನು ತ್ಯಾಗಮಾಡಿ ಕೇವಲ ಕೈನೂಲಿನಿಂದ ಕೈಮಗ್ಗದಮೇಲೆ ನೆಯ್ದ ಅರಿವೆಗಳನ್ನೇ ಅವಶ್ಯವಾಗಿ ಧರಿಸತಕ್ಕದ್ದು.

(ಈ) ಹಿಂದೂಜನರು ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ತೆಗೆದುಹಾಕಿದ ಹೊರತು ಸ್ವರಾಜ್ಯವು ಅಶಕ್ಯ ಕೋಟಿಯೊಳಗಿನ ಮಾತು.

(ಉ) ಜನರ ಉನ್ನತಿಗೆ ಹಾಗೂ ಸ್ವಾತಂತ್ರ್ಯ ಸಂಪಾದನೆಗೆ ಸ್ವಂತದ ಜಂಗಮ ಆಸ್ತಿಯನ್ನು ಆಹುತಿಕೊಡಲು ಮತ್ತು ಕಾರಾಗೃಹವಾಸವನ್ನು ಭೋಗಿಸಲು ಪ್ರಸಂಗಬಿದ್ದರೆ ಮೃತ್ಯುವನ್ನಾದರೂ ಸ್ವೀಕರಿಸಲು ಸಿದ್ಧರಿರಬೇಕೆನ್ನುವದು ಅತ್ಯವಶ್ಯವಾದ ಮಾತು.

"ಮೇಲ್ಕಾಣಿಸಿದ ಆತ್ಮಯಜ್ಞವನ್ನು ಪ್ರಾರಂಭಿಸುವ ಮೊದಲನೇ ಮಾನವು ಬಾರಡೋಲಿಗೆ ದೊರೆಯಬೇಕೆಂದು ಈ ಪರಿಷತ್ತು ಬಯಸುವದು, ಮತ್ತು ವರ್ಕಿಂಗ ಕಮೀಟಿಯು ಸವಿನಯ ಆಜ್ಞಾಭಂಗವನ್ನು ಈಗಿನಿಂದಲೇ ಪ್ರಾರಂಭಿಸಲು ಅನುಮತಿ ಕೊಟ್ಟರೆ ಹಾಗೂ ಆ ತಂಡಕ್ಕೆ ಬರಿ ಪರಿಷತ್ತು ನೇಮಿಸಿದ್ದರೆ ಮಾತ್ರ ಸಾಮುದಾಯಿಕ ಸವಿನಯ ಆಜ್ಞಾಭಂಗದ ವಿಚಾರವನ್ನು ಬಿಡತಕ್ಕದ್ದು. ಇಂಥ ಪ್ರಸಂಗವು ಒದಗೇ

ತೆಂದರೆ ನಾವು ಈಗಿನಿಂದಲೇ ಶಾಸನ ಭಂಗವನ್ನು ಪ್ರಾರಂಭಿಸುವೆವೆಂದು ಈ ಪರಿಷತ್ತಿನವರು ವರ್ಕಿಂಗ ಕಮೀಟಿಗೆ ತಿಳಿಸುತ್ತಾರೆ

" ರಾಷ್ಟ್ರೀಯ ಸಭೆಯು ನಿರ್ಣಯಿಸಿದ ಸಾಮುದಾಯಿಕ ಅಜ್ಞಾಭಂಗದ ಶರ್ತುಗಳನ್ನು ಪಾಲಿಸಲಿಕ್ಕೆ ಸಿದ್ಧರಿದ್ದು ಹಾಗೂ ಇಚ್ಛೆಯುಳ್ಳ ಬಾರ್ಡೋಲೀ ತಾಲೂಕದ ರೈತರು ಮುಕ್ತ್ಯಾದ ಸೂಚನೆಯು ದೊರೆಯುವವರೆಗೆ ಸರಕಾರಕ್ಕೆ ಸಲ್ಲತಕ್ಕ ತೆರಿಗೆಯನ್ನು ಕೊಡಸಕೂಡದೆಂದು ಈ ಪರಿಷತ್ತಿನ ಸೂಚನೆಯು."

ಇದು ಹೇಗೆ ಕೊನೆಗೊಳ್ಳುವದೆಂಬುದನ್ನು, ಹಾಗು ಸರಕಾರದವರು ಮಾಡಬಹುದಾದ ಘಟನೆಯನ್ನು ಬಾರ್ಡೋಲಿಯ ಸ್ತ್ರೀಪುರುಷರೆಲ್ಲರು ಸಹಿಸಲ್ಲರೋ ಇಲ್ಲವೋ ಎಂಬುದನ್ನು ಈಶ್ವರನೇ ಬಲ್ಲನು. ಪರಮಾತ್ಮನ ನಾಮಸ್ಮರಣಪೂರ್ವಕವಾಗಿ ಈ ಯುದ್ಧವು ಪ್ರಾರಂಭಿಸಲ್ಪಟ್ಟಿದೆ. ಅದನ್ನು ಕೊನೆಗಾಣಿಸುವದು ಅವನನ್ನೇ ಕೂಡಿದೆ.

ಸರಕಾರದವರ ಈವರೆಗಿನ ವರ್ತನವು ಆದರ್ಶನೀಯವಾಗಿದ್ದಿರುವದು ಅವರು ಪರಿಷತ್ತನ್ನೇ ನಿಲ್ಲಿಸಬಹುದಾಗಿತ್ತು ಆದರೆ ಅವರು ಹಾಗೆ ಮಾಡಲಿಲ್ಲ. ಈ ರಾಷ್ಟ್ರಕಾರ್ಯ ಮಾಡುವ ಜನರು ಯಾರೆನ್ನುವದನ್ನು ಅವರು ಹಿಡಿಯಲು ಇಚ್ಛೆಯುಳ್ಳವರಾದರೆ ಅವರನ್ನು ಎಂದಿಗೂ ಬಂಧನದಲ್ಲಿರಿಸುತ್ತಿದ್ದರು. ಆದರೆ ಹಾಗೆ ಮಾಡಲಿಲ್ಲ. ಜನರ ಚಳವಳಿಯಲ್ಲಿ ಅವರು ಕೈಹಾಕಿಲ್ಲ ಎಲ್ಲಾತರದ ಸ್ವತಂತ್ರತೆಯನ್ನು ಉಪಯೋಗಿಸಲಿಕ್ಕೆ ಆಸ್ಪದವನ್ನಿತ್ತಿರುವರು. ಅವರ ಈ ವರ್ತನವನ್ನು ನಾನು ವಿಸ್ಮಯಪೂರ್ವಕವಾಗಿಯೂ ಆದರಪೂರ್ವಕವಾಗಿಯೂ ನಿರೀಕ್ಷಿಸುತ್ತಲಿದ್ದೇನೆ. ಉಭಯ ಪಕ್ಷದವರು ಪೂರ್ವಕಾಲದ ಉದಾರಚರಿತರಾದ ಕ್ಷತ್ರಿಯರಂತೆ ಆಚರಿಸುತ್ತ ಬಂದಿರುವರು. ಈ ಶಾಂತಿಯುದ್ಧದಲ್ಲಿ ಹೀಗಿರತಕ್ಕದ್ದೇ ವಿಹಿತವು. ಇದೇರೀತಿಯಾಗಿ ಯುದ್ಧವು ಸಾಗಿದರೆ ಬಾರ್ಡೋಲಿಯ ೮೭೦೦೦ ಸ್ತ್ರೀಪುರುಷರು ಯಾವಪಕ್ಷವನ್ನು ಆಚರಿಸುವರೋ ಆ ಪಕ್ಷಕ್ಕೇ ಜಯವು ದೊರೆಯುವದೆಂದು ನಿಶ್ಚಯಪೂರ್ವಕವಾಗಿ ಹೇಳಬಹುದು.

ವರ್ಕಿಂಗ ಕಮೀಟಿಯು ಬಾರ್ಡೋಲಿಯವರು ಮಾಡಿದ ನಿಶ್ಚಯದ ಬಗ್ಗೆ ತಮ್ಮ ಮತವನ್ನು ಇಷ್ಟರಲ್ಲಿಯೇ ವ್ಯಕ್ತಗೊಳಿಸತಕ್ಕವರಿದ್ದಾರೆ. ವ್ಹಾಯಿಸರಾಯರಿಗೆ ವಿಚಾರಿಸಲಿಕ್ಕೆ ಈಗಾದರೂ ಅವಕಾಶವಿದೆ, ಮುಂದಾದರೂ ಅವಕಾಶವನ್ನು ಕೊಡಲ್ಪಡುವದು ಸ್ಥಿತಿಮುತ್ತೂ ಪರಿಪಕ್ವವಾಗಲಿಲ್ಲದೇ ಗಡಿಬಿಡಿಯಿಂದ ಅಸಭ್ಯರಂತೆ ಯುದ್ಧವನ್ನು ಪ್ರಾರಂಭಿಸಿದರೆಂಬ ಆಕ್ಷೇಪವನ್ನು ಬಾರ್ಡೋಲೀ ಜನರಮೇಲೆ ಹೊರಿಸಲಿಕ್ಕೆ ಕಿಂಚಿತ್ತಾದರೂ ಆಸ್ಪದವಿಲ್ಲ.

( ಯಂಗ ಇಂಡಿಯಾ )

ಮೋಹನದಾಸ ಕರಮಚಂದ ಗಾಂಧಿ.

---

## ಕಾಶೀಯಲ್ಲಿಯ ಕ್ರೂರತನವು

ಕಾಶೀ ಪಟ್ಟಣದಿಂದ ನನಗೊಂದು ತಂತಿಯು ಕಳಿಸಲ್ಪಟ್ಟಿತ್ತು. ಆದರೆ ಅದು ಆಕ್ಷೇಪಣೆಗೆ ಆಸ್ಪದವಾಗುವದೆಂದು ತಾರ ಕಚೇರಿಯವರಿಂದ ನಿರಾಕರಿಸಲ್ಪಟ್ಟಿತು. ಆ ತಂತಿಯು ಹೀಗಿರುವದು:

"ಅಧಿಕಾರಿಗಳು ಜನರನ್ನು ಹೊಡೆದು ಬಡಿದು ಬತ್ತಲೇ ಮಾಡಿ ಇಂಥ ಥಂಡಿಯ ದಿವಸದಲ್ಲಿ ಸಹ ಮಧ್ಯರಾತ್ರಿಯಲ್ಲಿ ವನಗೆ ಅಟ್ಟುತ್ತಾರೆ ಸ್ತ್ರೀಯರಿಗೆ ಸ್ವಯಂಸೇವಕರಿಗಂತೂ ಹೇಳಿ ಕೊಳ್ಳಲಿಕ್ಕಾಗದಷ್ಟು. ನಿರ್ಲಜ್ಜತನದ ಚೇಷ್ಟೆಗಳಿಂದ ಪೀಡಿಸುತ್ತಾರೆ. "ಹಿಂದೂ ಪರಿಷತ್ತು" ಎಂಬುವ ಸಾರ್ವಜನಿಕ ಮೊದಲು ದೇಶಾಭಿಮಾನಿಗಳು ಈ ತೊಂದರೆಗಳಿಲ್ಲದಂತೆ ಮಾಡಲಾರರೆ?

ಇಂಥ ಕ್ರೂರಾಚರಣೆಗಳು ನಡೆದ ಸಮಯದಲ್ಲಿ ಒಬ್ಬಂದನ ಬಗ್ಗೆ ಪ್ರಯತ್ನಿಸುವ ದೇಶಾಭಿಮಾನಿಗಳ ಬಗ್ಗೆ ಯಾವ ತರದ ಶಿಕ್ಷೆ ಮಾಡಲ್ಪಟ್ಟಿದೆಂಬುದನ್ನು ವಾಚಕರು ಲಕ್ಷ್ಯದಲ್ಲಿಡಬೇಕು, ಪೋಲೀಸ ಠಾಣೆಯಲ್ಲಿ ನಿರ್ದೇಶಿಸಲ್ಪಟ್ಟ ಸಂಗತಿಗಳನ್ನು ವಿಶದವಾಗಿ ಬರೆದ ಒಂದು ಪತ್ರವನ್ನೂ ಅದರ ಸಂಗಡ ಕಳಿಸಿರುವರು. ಆದರೆ ಆ ಪತ್ರವನ್ನು ಪ್ರಸಿದ್ಧಿಸಲಿಕ್ಕೆ ಇನ್ನೂ ಬರುವಂತಿಲ್ಲ. ಈ ತಾರನ್ನು ಬರೆದು ಅಪರಾಧ ಮಾಡಿದ, ಮತ್ತು ಅದರಲ್ಲಿ ಉಲ್ಲಿಖಿತವಾದ ಕ್ರೂರಾಚರಣೆಗಳು ಇಲ್ಲವಂತೆ ಮಾಡಲಿಕ್ಕೆ ಪ್ರಯತ್ನಿಸಿದ ಪ್ರೊಫೇಸರ ಶಿವಪ್ರಸಾದರು ತುರುಂಗದಲ್ಲಿ ಈಗಾಗಲೇ ಹೋಗಿ ಕುಳಿತಿದ್ದಾರೆ

ತುರುಂಗದ ಹೊರಗಿರುವವರ ಮಾರ್ಗವಂತೂ ಸರಳವಾಗಿದೆ ಕೋಪ ಮತ್ತು ಭ್ರಮಿಕ ಆತುರದಿಂದ ಯಾವ ಲಾಭವೂ ಇಲ್ಲ. ಈಗಿನ ಪರಿಸ್ಥಿತಿಯ ನಿಜಸ್ವರೂಪವನ್ನು ನಾವು ತಿಳಿದುಕೊಂಡಬೇಕು ಮೊದಲು ಹೆಚ್ಚಿನಂತೆ ನಮ್ಮ ಸ್ವಾರ್ಥತ್ಯಾಗವೂ, ಆತ್ಮಶುದ್ಧಿಯೂ ಹೆಚ್ಚಾಗಬೇಕ. ಪೋಲೀಸ ಜನರನ್ನು ದೂಷಿಸುವದರಿಂದ ನಮಗೇನೂ ದೊರೆಯದು ಅವರೇನೋ ಪರಿಸ್ಥಿತಿಯಂತೆ ನಿರ್ಮಿತರಾದ ಪ್ರಾಣಿಗಳು ಅವರಿಗೆ ದೊರೆತ ಶಿಕ್ಷಣದಿಂದ ಅವರ ಹುಟ್ಟ ಸ್ವಭಾವವೇನೂ ಸುಧಾರಿಸಿಲ್ಲ; ಅದು ಹೆಚ್ಚು ಕೆಟ್ಟ ಸ್ಥಿತಿಯನ್ನು ಹೊಂದಿದೆಂದರೂ ಸಲ್ಲುವದು.

ಉಚ್ಚಧ್ಯೇಯವುಳ್ಳವರೂ ಸುಸಂಸ್ಕೃತರೂ ಆದ ತಮ್ಮ ದೇಶಬಾಂಧವರ ಮೇಲೆ ಅಧಿಕಾರ ನಡಿಸುವ ಪ್ರಸಂಗವು ಅವರಿಗೆ ದೊರೆಕದ್ದು ಇದೇ ಮೊದಲನೇ ಸಾರೆ. ಯುಗ್ಗನೇ ಪೊಲೀಸರ ನಡತೆಯಲ್ಲಿ ಸುಧಾರಣೆಯಾಗಬೇಕೆಂದು ನಾವು ಆಶಿಸಬಾರದು ನಮ್ಮ ತಾಳ್ಮೆ ಮತ್ತು ಸುಸ್ವಭಾವಗಳಿಂದ ಅವರು ಸದ್ಗುಣಿಗಳಾಗಿ ತಮ್ಮಂತೆಯೇ ಪರರನ್ನು ಬಗೆಯಬೇಕೆಂಬ ಭಾವನೆಯನ್ನು ತಳೆಯುವರು. ನಮ್ಮ ದೊಡ್ಡ ದೊಡ್ಡ ಮುಖಂಡರು ಸೆರೆಮನೆಗೆ ಹೋದಾಕ್ಷಣವೇ ಸ್ವರಾಜ್ಯವು ಪ್ರಾರಂಭವಾಯಿತೆಂದು ನನಗಂತೂ ಅನಿಸುತ್ತದೆ. ಆಗಿನಿಂದಲೇ ನಮ್ಮ ಬಲವೂ ಸುಧಾರಣೆಯೂ ಸುವ್ಯವಸ್ಥಿತವಾಗಿ ನಡೆದಿವೆ. ಯಾವದಾದರೊಂದು ಒಪ್ಪಂದದಿಂದ ನಮ್ಮ ಏಳ್ಗೆಯಾಗದು ನಿಜವಾದ ತತ್ವವುಳ್ಳ ಮತ್ತು ದಿನೇ ದಿನೇ ವೃದ್ಧಿ ಹೊಂದುವ ಸುಧಾರಣೆಯಿಂದಲೇ ಏಳ್ಗೆಯು. ಪೋಲೀಸರ ಕ್ರೂರಾಚರಣೆಗಾಗಿ ನಾವೇ ನಮ್ಮನ್ನು ಯಾಕೆ ದೂಷಿಸಿಕೊಳ್ಳಬಾರದು? ಅನೇಕ ದಿನಗಳಿಂದ ಅವರನ್ನು ದುರ್ಲಕ್ಷಿಸಿ, ಅವರನ್ನು ಕಂಡರೆ ಭಯಪಟ್ಟು, ಅವರ ಬಗ್ಗೆ ಪ್ರೇಮಬುದ್ಧಿಯನ್ನು ತಳೆದು ಅವರು ಸುಧಾರಿಸುವರು ಶಕ್ಯವೇ ಇಲ್ಲವೆಂದು ನಾವು ತಿಳಿದುಕೊಂಡಿರಲಿಲ್ಲವೋ? ನಾವು ಸಹಜವಾಗಿ ಆದೇ ಬಗೆಯಾಗಿ ತಿಳಿಯುತ್ತ ಹೋದರೆ, ಜಗತ್ತಿನಲ್ಲಿಯ ಅನೇಕ ಸಂಗತಿಗಳನ್ನು ಸುಧಾರಿಸುವ ಆಶೆಯೇ ಇಲ್ಲದಂತಾಗಿ ಸದ್ಗುಣ ಮಣಿಗಳೆಂದರೆ ನಾವೇ, ಪೂರ್ಣ ಭ್ರಷ್ಟರೆಂದರೆ ನಾವೇ, ಉಳಿದವರ ಸಂಬಂಧವು ಏನೂ ಇಲ್ಲವೆಂದೆನ್ನಬೇಕಾಗುವದು. ಸದ್ಗುಣದ ಬಗ್ಗೆ ಈ ತರದ ವ್ಯಾಪಕತೆಯ ತಿಳುವಳಿಕೆಯು ಉತ್ಪನ್ನವಾದರೆ ತೀರಿತು. ಮುಂದೆ ಸ್ವರಾಜ್ಯವೇ ಇಲ್ಲವೆನ್ನಬೇಕಾಗುತ್ತದೆ. ಇದ್ದರಿಂದ ಪೋಲೀಸರ ಮಾರ್ಗದ ದೋಷದ ಕೆಲಭಾಗವನ್ನೂ ನಮ್ಮ ಚಿತ್ತಲೂ ಹಬ್ಬಿದ ಪರಿಸ್ಥಿತಿಯ ದೌರ್ಬಲ್ಯವನ್ನೂ ನಾವೇ ನಮ್ಮ ತಲೆಯ ಮೇಲೆ ಹೊತ್ತುಗೊಳ್ಳುವಾ. ಸುಖಸಂಪತ್ತುಗಳ ಲಾಲಸೆಯನ್ನು ನಮ್ಮ ಮನದಿಂದ ತಳ್ಳಿ ದುಃಖಬಡುವ ಮತ್ತೂ ಕಷ್ಟಸಹಿಸುವ ಲಾಲಸೆಯನ್ನು ನಮ್ಮಲ್ಲಿ ತಂದುಕೊಂಡರೆ ಮಾತ್ರ ಶಾಂತಿಯು ನಮ್ಮಲ್ಲಿ ನೆಲೆಗೊಂಡದ್ದರ ಸಾರ್ಥಕವಾಗುವದು. ಪ್ರತಿದಿನ ಹೆಚ್ಚು ಹೆಚ್ಚು ಕಠೋರವಾದ ಸುದ್ದಿಗಳು ಬರುತ್ತಿವೆ ಇಂಥ ಕಾಲದಲ್ಲಿ ನಮ್ಮ ಯೋಗ್ಯತಾನುಸಾರವಾಗಿ ಈ ರಾಷ್ಟ್ರಕಾರ್ಯದಲ್ಲಿ ನಾವು ನೆರವಾದರೆ ಮಾತ್ರ ನಾವು ಸುಖದಿಂದಿರಲಿಕ್ಕೆ ಆಸ್ಪದವಿದೆ. ಏನೇ ಆಗಲಿ ಇದರ ಪರಿಣಾಮವನ್ನು ದೇವರಿಗೆ ಬಿಟ್ಟುಬಿಡತಕ್ಕದ್ದು.

( ಯಂಗ ಇಂಡಿಯಾ) ಮೋ. ಕ. ಗಾಂಧಿ

(೯ನೇ ಪುಟದಿಂದ ಸಾಗಿದ್ದು)

ಪ್ರಯೋಗ ಮಾಡಲು ಅವರಿಗೆ ಸಾಮರ್ಥ್ಯವಿಲ್ಲ ವೊ ಆ ಸ್ಥಳದಲ್ಲಿ ಸಂಗ್ರಾಮವನ್ನು ಅವರು ಸ್ವೀಕರಿಸಕೂಡದು. ನಮ್ಮನ್ನು ಶಾಂತಪ್ರವೃತ್ತಿಗಳನ್ನಾಗಿ ಮಾಡುವದೂ ನಾವು ಹಾಗಾಗಲೆಕ್ಷಿಸಿದರೆ ನಮಗೆ ಸೆರವಾಗುವದೂ ಸರಕಾರದವರ ಕೆಲಸವಲ್ಲ. ಅತ್ಯಾಚಾರವನ್ನು ನಿಲ್ಲಿಸಲು ಅವರು ಯೋಜಿಸುತ್ತಿರುವ ಉಪಾಯಗಳೂ ಕೂಡ ಅ[illegible] ಹಿಂಸಾತ್ಮಕವಾಗಿರುವವು. ಒಂದು ವ[illegible]ಲ್ಲಿ ನಾವು ಅವರಿಗೆ ಪ್ರತಿಜ್ಞಾ[illegible]ಗಿರುವದವಶ್ಯವು. ಸರಕಾರದವರು [illegible] ದುತ್ತಿರುವ ಪ್ರತಿವಾದಗಳಿಂದಲೂ [illegible] ಟೀಕಾ ಟಿಪ್ಪಣಿಗಳಿಂದ [illegible] ಯು ಸ್ಪಷ್ಟವಾಗಿ ವ್ಯಕ್ತವಾಗುತ್ತಲಿದೆ. [illegible] ವುದೆಂದರೆ, ನನ್ನ ಪ್ರತಿಜ್ಞೆ [illegible] ಗಿ ಕಾರ್ಯ ಮಾಡುವ ಹಿಡಿತವು ನಮ[illegible]ನ್ನಾಗಿ ಸಿಕ್ಕಿಲ್ಲವೆಂಬದು ಮತ್ತು ಯಶಸ್ವಿ[illegible]ಯಿಂದ ಶಸ್ತ್ರಗಳಿಂದ ಪ್ರಹರಮಾಡಲು ನಾವು ತೀರ ಅಯೋಗ್ಯರಿರುವೆವೆಂಬುದು. ಇವೆರಡೂ ಮಾತುಗಳನ್ನು ನಾವು ಒಪ್ಪಿಕೊಳ್ಳುವಾ ನಾವು ನನ್ನ ಪ್ರತಿಜ್ಞೆಯ ವಿಷಯದಲ್ಲಿ [illegible]ರಾಗಿರತಕ್ಕದ್ದು. ಸರಕಾರವು ತಾನೇ ಹಾದಿಗೆ ಬರುವದು, ತನ್ನ ಶಸ್ತ್ರಗಳನ್ನು ಕೆಳಗಿಡುವದು; ಯಾಕಂದರೆ ಶಾಂತಿಯು ಸರಕಾರಕ್ಕೂ ನಮಗೂ ಇಷ್ಟವಾದುದು. ಯಾರಿಗೆ ನಮ್ಮ ಪ್ರತಿಜ್ಞೆಯಲ್ಲಿ ಅರ್ಥಾತ್ ಅಹಿಂಸಾತತ್ತ್ವದಲ್ಲಿ ವಿಶ್ವಾಸವಿಲ್ಲವೋ ಅವರು ಅತ್ಯಾಚಾರವನ್ನು ಅತ್ಯಾಚಾರದಿಂದ ನಾಶಗೊಳಿಸಲು ಹಿಂದುಸ್ಥಾನಕ್ಕೆ ಸಾಮರ್ಥ್ಯವೂ ಇಲ್ಲ ಇಚ್ಛೆಯೂ ಇಲ್ಲ ಎಂಬ ಮಾತನ್ನಾದರೂ ತಿಳಿಯತಕ್ಕದ್ದು. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವು ದೊರೆಯಬೇಕಾದರೆ ಹಿಂಸೆಗೆ ನಾವು ಪ್ರವೃತ್ತರಾಗಲಿಕ್ಕೇ ಬೇಕೆಂದು ಯಾರಿಗೆ ಅನಿಸುತ್ತದೆಯೋ ಆ ಜನರು ನನ್ನ ಮಾತಿನ ಸತ್ಯತೆಯನ್ನು ಕಂಡು ಹಿಡಿಯಬೇಕೆಂದು ನನ್ನ ಇಚ್ಛೆಯಿದೆ.

ಹಿಂಸೆ ಮಾಡಲು ತಮಗೆ ಇಚ್ಛೆಯೂ ತಮ್ಮ ಸಿದ್ಧತೆಯೂ ಇಲ್ಲವೆಂದು ಯಾವತ್ತು ಹಿಂದುಸ್ಥಾನದ ಸ್ಥಿತಿಯಾದರೂ ಹಾಗಿರಬೇಕೆಂದೂ ಅವರು ತಿಳಿಯತಕ್ಕದ್ದಲ್ಲ. 'ಹಿಂದುಸ್ಥಾನವು ದುರ್ಬಲನಿದೆಂದು ಸಿದ್ಧವಿಲ್ಲೆಂತಲ್ಲ, ಆದರೆ ಹಿಂಸೆ ಮಾಡಲು ಇಚ್ಛೆಯಿಲ್ಲದ್ದರಿಂದ ಅದು ಸಿದ್ಧವಿಲ್ಲೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಆದ್ದರಿಂದ ಅಹಿಂಸಾ ತತ್ತ್ವವು ನಾವು ಇಚ್ಛಿಸಿದಕಿಂತಲೂ ಹೆಚ್ಚಿಗೆ ಯಶಸ್ವಿಯಾಗುತ್ತಿ ನಡೆದದೆ. ಹಿಂಸಾ ತತ್ತ್ವವು ಈ ಬಗೆಯಾಗಿ ಯಶಸ್ವಿಯಾಗುತ್ತಿದ್ದಿಲ್ಲ. ಹಿಂದುಸ್ಥಾನದ ಜನರಿಗೆ ಅತ್ಯಂತ ಪುರಾತನ ಕಾಲದಿಂದ ಹಿಂಸಾ ತತ್ತ್ವಕ್ಕೆ ಪ್ರತಿಕೂಲವಾದ ಶಿಕ್ಷಣವೇ ದೊರೆಯುತ್ತ ಬಂದಿದೆ. ಹಿಂದುಸ್ಥಾನದ ಜನತೆಯ ಸ್ವಭಾವವು ಉಚ್ಚತರವಾದ ಪ್ರಗತಿಯನ್ನು ಹೊಂದಿದೆ. ಹಿಂಸಾ ತತ್ತ್ವವು ಅದಕ್ಕೆ ಸ್ವೈಸರ್ಗಿಕವಾಗಿ ಕಾಣದೇ ಅಹಿಂಸಾತತ್ತ್ವವೇ ಅದಕ್ಕೆ ಸ್ವೈಸರ್ಗಿಕವಾಗಿ ಕಾಣುತ್ತದೆ. ಮುಂಬಯಿ ಮತ್ತು ಮದ್ರಾಸಗಳಲ್ಲಿ ಯಾವ ಸಂಗತಿಗಳ ಅನುಭವದಿಂದ ನಾನು ಆಡುವ ಮಾತು ಸಿದ್ಧವಾಗುತ್ತದೆ. ಹಿಂದುಸ್ಥಾನದ ಜನರ ಸ್ವಭಾವಧರ್ಮವು ಹಿಂಸೆಯೇ ಆಗಿದ್ದರೆ, ಇಡೀ ಹಿಂದುಸ್ಥಾನದಲ್ಲಿ ಆರಿಸಲಿಕ್ಕೆ ಬರದಂಥ ಉರಿಯ ನೈಚ್ಛಿ ಸಲಿಕ್ಕೆ ಬೇಕಾದಷ್ಟು ಸಾಮುಗ್ರಿಯು ಮುಂಬಯಿ ಮದ್ರಾಸುಗಳಲ್ಲಿ [illegible]ಲವಾಗಿದ್ದಿತು. ಸಂಪೂರ್ಣವಾಗಿ ಶಾಂತವಾಗಿದ್ದ ವಾತಾವರಣವು ಪ್ರಕ್ಷುಬ್ಧವಾಗಲು ಸ್ವಲ್ಪ ಅತ್ಯಾಚಾರವು ಸಾಕು. [illegible]ಸ್ಥಾನದ ಸ್ವಭಾವಕ್ಕೆ ಅತ್ಯಾಚಾರ[illegible]ಯು ವಸ್ತುವಾದದರಿಂದ ಅದರ [illegible] ವಾಗಲಿಲ್ಲ. ಹಿಂದುಸ್ಥಾನ [illegible] ಕಾರ್ಯಕ್ಕೆ ಸಿದ್ಧ ಮಾಡಿ ಹಿಂಸೆಯಿಂ[illegible] ಸ್ವಾತಂತ್ರ್ಯವನ್ನು ಗಳಿಸಬೇಕೆಂದರೆ [illegible] ವಿಲ ವರ್ಷಗಳಾದರೂ ಸಾಧಿ[illegible] ಈಗ ಕಂಡ ಬರುವ ಆ[illegible] ಚೈತನ್ಯವೂ ರಾಷ್ಟ್ರೀಯ [illegible] ಅಹಿಂಸಾ ತತ್ತ್ವದ ಪ್ರಗತಿಯ ಫಲವೆಂದು ನಾನು ನಿಶ್ಚಯವಾಗಿ ನಂಬುತ್ತೇನೆ. ಜನರು ತಮ್ಮ ಸಾಮರ್ಥ್ಯವನ್ನು ಅರಿತಿರುವರು. ಈ ಸಮಯದಲ್ಲಿ ಅವಿವೇಕತನದಿಂದ ಏನಾದರೆ ಸಂಬಂಧವಿಲ್ಲದ ಕೆಲಸವನ್ನು ಮಾಡಿ ನಾವು ನಮ್ಮ ಪ್ರಗತಿಗೆ ಅಡೆಯನ್ನುಂಟು ಮಾಡುವದು ಏಹಿತವಲ್ಲ.

ಯಂಗ ಇಂಡಿಯಾ

ಮೋಹನದಾಸ ಕರಮಚಂದ ಗಾಂಧಿ

---

## ಸಾಮೋಪಚಾರ

ಯೋದ್ಧಾ ಜನರ ಅಂಗದಲ್ಲಿ ಬಲವು ಸರಿ ಪೂರ್ಣವಾಗಿ ವಿಕಾಸ ಗೊಂಡಿದ್ದರೆ ಅವರು ಅತಿಶಯವಾಗಿ ನಮ್ರರಾಗುವದೆಂಬದು ಸಭ್ಯ ಯುದ್ಧದ ನಿಯಮವಿದೆ. ಎಂಥ ಪ್ರಸಂಗದಲ್ಲಿಯೂ ವಿನಯವನ್ನು ಅವರು ಬಿಡ್ಡರರು. ಯುದ್ಧವನ್ನು ಪ್ರಾರಂಭಿಸುವ ಮೊದಲು ಅವರು ತಮ್ಮ ಪ್ರತಿನಿಧಿಯ ಮುಖಾಂತರವಾಗಿ ಪರಪಕ್ಷಕ್ಕೆ ಎಚ್ಚರಿಕೆಯನ್ನು ಕೊಡುವರು. ಪರಪಕ್ಷದವರಿಗೆ ತಮ್ಮ ತಪ್ಪನ್ನು ಸರಿಪಡಿಸಿಕೊಳ್ಳಲಿಕ್ಕೆ ಹಾಗು ಯುದ್ಧದ ಕಾರಣವನ್ನು ದೂರ ಮಾಡಲಿಕ್ಕೆ ವಿನಂತಿಯನ್ನು ಮಾಡಿಕೊಳ್ಳುವರು.

ಈ ಬಗೆಯ ವಿನಂತಿಯನ್ನು ರಾಮನು ರಾವಣನಿಗೆ ಮಾಡಿಕೊಂಡಿದ್ದನು. ರಾಮಚಂದ್ರನ ಸೇತೂ ಬಂಧದ ಕೆಲಸವು ರಾಮೇಶ್ವರದವರೆಗೆ ಮುಟ್ಟಿದ ಮೇಲೆ ಅವನು ತನ್ನ ವಾನರ ಸೇನೆಯನ್ನು ಸಮುದ್ರತಟ್ಟಿಗೆ ಕರೆದು ರಾವಣನಿಗೆ ಎಚ್ಚರಿಕೆಯನ್ನು ಕೊಡುವ ಕೆಲಸವನ್ನು ಜರುಗಿಸತಕ್ಕವರು ಯಾರೆಂಬವರ ಬಗ್ಗೆ ವಿಚಾರ ಮಾಡತೊಡಗಿದನು. ಅನೇಕರಿಗೆ ರಾವಣನಿಗೆ ಎಚ್ಚರಿಕೆಯನ್ನು ಕೊಡಬೇಕೆಂಬ ಮಾತೇ ಅನವಶ್ಯಕವಾಗಿ ತೋರಿತು. ಅನೇಕರು ಹೀಗೆ ಹೇಳುವದು: ದುರ್ಬಲತೆಯ ಲಕ್ಷಣವೆಂದು ಅಭಿಪ್ರಾಯ ಪಟ್ಟರು. ರಾವಣನಂಥ ದುರಭಿಮಾನಿಯಾದ ಮನುಷ್ಯನಿಗೆ ವಿನಂತಿಯನ್ನು ಮಾಡಿಕೊಳ್ಳುವದರಿಂದ ಅವನ ದುರಭಿಮಾನಕ್ಕೆ ಉತ್ತೇಜನವನಿತ್ತಂತೇ ಸೈ ಎಂದು ಅನೇಕರು ಅಂದರು. ರಾಮನು ಇದನ್ನೆಲ್ಲ ಆದರ ಪೂರ್ವಕವಾಗಿ ಕೇಳಿಕೊಂಡು, ರಾವಣನ ಮನಸ್ಸಿನ ಮೇಲೆ ಸಾಮೋಪಚಾರದ ಮಾತುಗಳ ಪರಿಣಾಮವು ಆಗುವದೋ ಇಲ್ಲೋ ಇದರ ವಿಚಾರವನ್ನು ವಾನರ ಸೇನೆಯು ಮಾಡುವ ಆವಶ್ಯಕತೆಯಿಲ್ಲೆಂದು ಹೇಳಿದನು. ಸಭ್ಯಾಚಾರವನ್ನು ಮನ್ನಿಸುವದು ವಾನರರ ಕರ್ತವ್ಯವು. ಅದರಿಂದ ರಾವಣನ ಗರ್ವವು ಹೆಚ್ಚಾದರೆ ಅದರ ಫಲಭೋಗವನ್ನು ಅವನು ಉಣ್ಣಬಹುದು. ಅದರಲ್ಲಿ ರಾಮನದೇನು ಕೇಡು? ಎಚ್ಚರಿಕೆಯನ್ನು ಕೊಡಲು ಸ್ವೀಕೃತನಾದ ರಾಮಚಂದ್ರನ ಆಚರಣವು ಧರ್ಮಕ್ಕೆ ಸಮ್ಮತವಾದದರಿಂದ ಅವನ ಸಾಮರ್ಥ್ಯವು ಹೆಚ್ಚಾಗುವದು. ರಾಮನು ಬಲವಂತನೂ, ಧೈರ್ಯವಂತನೂ ವಿನಯವಂತನೂ ಆದ ಅಂಗದನನ್ನು ಈ ಕೆಲಸಕ್ಕೆ ತಕ್ಕವನೆಂದು ಯೋಚಿಸಿ ಅವನನ್ನು ರಾವಣನ ಬಳಿಗೆ ಕಳುಹಿದನು, ಅಂಗದನು ತನ್ನ ಕಾರ್ಯವನ್ನು ನೆರವೇರಿಸಿದನು. ರಾವಣನು ಕೋಪ ಗೊಂಡನು. ಅವನು ಸಾಮೋಪಚಾರವನ್ನು ಮನ್ನಿಸುವವನೇ ಆದರೆ ಅವನು ಸರ್ವಸ್ವವನ್ನು ಕಳಕೊಂಡನು.

ಸಭ್ಯತೆಯ ಈ ಪ್ರಾಚೀನ ನಿಯಮವನ್ನನುಸರಿಸಿ ನಾವು ವ್ಹಾಯಿಸರಾಯ ಸಾಹೇಬರಿಗೆ ಸಾಮೋಪಚಾರದ ಪತ್ರವನ್ನು ಬರೆದಿರುವೆವು. ಅವರದನ್ನು ಮನ್ನಿಸದಿದ್ದರೆ. ನಮ್ಮದೇನು ಹೋಗುವದು? ಅದರಿಂದ ನಮ್ಮ ಬಲವು ಮಾತ್ರ ಹೆಚ್ಚುವದು. ಮತ್ತು ಪ್ರಸಂಗವು ನಮ್ಮ ಪಕ್ಷವನ್ನು ವಹಿಸುವದು.

ಈ ಸಾರೆ ನಮ್ಮ ಉದ್ದಿಷ್ಟವು ದೇಶವಾಗಿರುವದು. ಖಿಲಾಫತ, ಪಂಜಾಬ ಮತ್ತು ಸ್ವರಾಜ್ಯಗಳ ಬಗ್ಗೆ ಕೊನೆಯ ನಿರ್ಣಯವನ್ನು ಮಾಡಿಕೊಳ್ಳುವ ಮೊದಲು ಸರಕಾರದೊಡನೆಗೆ ಹಾಗು ಅವರ ಸಂಗಡಿಗರೊಂದಿಗೆ ಒಂದು ಮಾತಿನ ನಿಶ್ಚಯ ಮಾಡಿಕೊಳ್ಳತಕ್ಕದ್ದಿತ್ತು.

ಈ ಸರಕಾರವು ಜನರಿಗೆ ತಿಳಿಯುವಂತೆ ತನ್ನ ಸತ್ತೆಯನ್ನು ಪ್ರಸ್ಥಾಪಿಸಿರುವದು. ಬೇನೆಯು ಬಂದಿದ್ದರೆ ಅದಕ್ಕ ಕೊಡುವ ಔಷಧ ಬೇರೊಂದಾಗಿರುವದು. ಬಂಗಾಲಿಗಳಿಗೆ [illegible] ದ್ದು ವಂಗಭಂಗದ ಬೇನೆಯು. ಅದರಿಂದ [illegible] ವರು ಬಾಂಬು ಗುಂಡುಗಳನ್ನು ತಯಾರಿಸಿ [illegible] ಪ್ರಗಳನ್ನು ತಮ್ಮ ಎದುರಾಳಿಗಳಮೇಲೆ [illegible]ದರು. ಸರಕಾರವು ಬಂಗಾಲಿಗಳಿಗೆ ಬಾಂಬ ಗುಂಡಿನ ಬೇನೆಯಾಗಿದೆಂದು ಹೇಳಿ ನಿಜ[illegible]ದ ಬೇನೆ ಯಾವದೆಂಬದರ ಬಗ್ಗೆ ಜನರ [illegible]ಲ್ಲಿ ಮಣ್ಣು ಚೆಲ್ಲಲೆತ್ನಿಸಿತು. ಮತ್ತು [illegible] ಬು ಗುಂಡುಗಳ ಸೆಪವನ್ನು ತೋರಿಸುತ್ತ [illegible] ದ್ರೋಹಿಗಳನ್ನು ಬಹು ಹರದಿಯಿಂದ [illegible] ಸಿತು ಮತ್ತು ಜನರನ್ನು ನಿಃಸಂಶಕರನ್ನಾಗಿ ಮಾಡುವಂತೆ ಯೋಜನೆಗಳನ್ನು ಕಲ್ಪಿಸಿ[illegible] ಕಾಲೇಟ ರೌಲೆಟ್ಟಿಯ ಕಮೀಶನ್ನಿಗ[illegible]ಗೆ ಯಾದದ್ದು. ಈ ಬೇನೆಯ ಯೋಗ[illegible] ಪಂಜಾಬಕ್ಕೆ ಸನ್ನಿಪಾತವಾಯಿತು. ಈ [illegible] ಪಾತದ ನಿವಾರಣೆಗಾಗಿ ಸರಕಾರವು [illegible] ಕರವಾದ ಹತ್ಯಾಕಾಂಡವನ್ನು ರಚಿಸಿ[illegible]

ಸ್ತ್ವ ವ ಋಬರೋಗವನ್ನು ವ. ಚ್ಚಿಡಲು ಬುತ್ತಿಸಿತು. ಸದ್ಯಕ್ಕೆ ಖಿಲಾಫತ ಪಂಜಾಬ ಮತ್ತು ಸ್ವರಾಜ್ಯ ಈ ತ್ರಿವಿಧ ತಾಪದಿಂದ ಹಿಂದುಸ್ಥಾನವು ಪೀಡಿತವಾಗಿದೆ. ವ್ಯಥೆಯಿಂದ ಶೂನ್ಯವಾಗಿದೆ. ಅಂತರಾಗ್ನಿಯ ಪ್ರಾಬಲ್ಯದಿಂದ ಏರಿದೆ ನಾರಿ ವಿಚ್ಛಿದ್ರತನ್ನು ಪಚ್ಚೆದ್ದು ಕಾಣಿಯಿತು ಈ ಹುಚ್ಚತನವನ್ನೇ ಸರಕಾರವು ಮೂಲರೋಗವೆಂದು ಹೇಳ ತ್ತ ಅದಕ್ಕೆ ತಕ್ಕ ಔಷಧವೆಂದು ದಮನನೀತಿಯನ್ನು (Repression) ಕೈಕೊಂಡಿದೆ ಈ ಬಗೆಯಾಗಿ ಮೂಲರೋಗವನ್ನು ದುರ್ಲಕ್ಷಿಸುವದು, ಅದರ ಪರಿಣಾಮವನ್ನು ವ ಋಬರೋಗವೆಂದು ತಿಳಿಯುವದು, ಮತ್ತು ಅದನ್ನು ನಿವಾರಿಸಲು ದಮನನೀತಿಯನ್ನು ಕೈಕೊಳ್ಳುವದು; ಇದೇ ರಾಜ ಪರಿಪಾಠವು ಬಿದ್ದುಹೋಗಿದೆ.

ಇನ್ನುಮುಂದೆ ಈ ಬಗೆಯಾಗಿ ಜನರ ಕಣ್ಣಲ್ಲಿ ಮಣ್ಣುತೂರಲು ಸರಕಾರಕ್ಕೆ ಅವಕಾಶವನ್ನು ದೊರಿಯಗೊಡಬಾರದೆಂಬ ಮಾತನ್ನು ನಾವೀಗ ಅನುಭವದಿಂದ ಕಲಿತಿರುವೆವು ಮೂಲರೋಗವು ನಷ್ಟವಾಯಿತೊ ಇಲ್ಲವೊ ಎಂಬ ಮಾತು ಚಿತ್ತಕ್ಕೆ ಉಳಿಯಬಲ್ಲದು. ಅವರೆ ಮೂಲ ರೋಗದಿಂದೊದಗುವ ಉಪದ್ರವನ್ನೇ ನಿಜವಾದ ರೋಗವೆಂದು ಕಲ್ಪಿಸಿ ಅದನ್ನು ಹತ್ತೊತ್ತಲು ಸರಕಾರವು ಯತ್ನಿಸ ಪ್ರಾರಂಭಿಸಿದರೆ ನಾವದನ್ನು ಸರ್ವಥಾ ನಡೆಯಗೊಡಬಾರದು. ಈಬಗೆಯ ಪ್ರಯತ್ನಗಳಿಂದಲೇ ಸರಕಾರವು ಈ ವರೆಗೆ ತನ್ನ ಸತ್ತೆಯನ್ನು ಬಲಪಡಿಸುತ್ತ ಬಂದಿದೆ. ತನ್ನ ಅಜ್ಞಾನದಿಂದಾಗಲಿ ಸ್ವೇಚ್ಛಾಚಾರದಿಂದಾಗಲಿ ಜನರಿಗೆ ಕಷ್ಟಗಳೊದಗಿ ಆ ಬಗೆಯನ್ನು ಅವರು ತಾಳದೆ, ಅವೇಕ ತನಕ್ಕೆ ಪ್ರವೃತ್ತರಾದದ್ದು ಕಂಡು ಸರಕಾರವು ಸ್ವಚ್ಛಂದ ವೃತ್ತಿಯನ್ನು ತಾನೆ ತಾನು ಮಾಡುವದಿಲ್ಲವೊ ನ್ಯಾಯವನ್ನು ತವಹದೆಂದು ತಿಳುವಳಿಕೆಯನ್ನು ಹುಟ್ಟಿಸಹತ್ತಿಸುವ ಅದರ ಪದ್ಧತಿಯನ್ನು ನಾವು ಇಂದು ಗೊತ್ತೆಬಾರದ . ಸ ... ಶಸ್ತ್ರವನ್ನು ಕಾಯಮವಾಗಿ ನಾವು ಕಸಿದಿಟ್ಟು ಕೊಂಡರೆ ಮುಂದೆ ಅದು ಸ್ವೇಚ್ಛಾಚಾರಿಯಾಗುವ ಸಂಭವವೇ ಉಳಿಯದು. ಎಲ್ಲಿ ದಮನನೀತಿಯು ನಷ್ಟವಾಗುವದೊ ಅಲ್ಲಿ ಸ್ವೇಚ್ಛಾಚಾರವು ಇಲ್ಲದಾಗಿ ಲೋಕಮತದ ರಾಜ್ಯವು ಪ್ರಾದುರ್ಭವಿಸವದು

ನಮ್ಮ ಸ್ವರಾಜ್ಯದಿಂದಲೇನೇ ಸರಕಾರವು ದಮನನೀತಿಯನ್ನು ಪ್ರಾರಂಭಿಸಿ ಈ ಪ್ರಶ್ನೆಯನ್ನೂ ಉಪಸ್ಥಿತಮಾಡಿದೆ. ನಾವಿನ್ನು ಟೊಂಕಟ್ಟಿ ಸಿದ್ಧರಾಗಲಿಕ್ಕೆ ಬೇಕು. ಸರಕಾರವು ಬೇಕಾದಂಥ ಕಷ್ಟಗಳಿಗೆ ನಮ್ಮನ್ನೂ ಗುರಿಮಾಡಲೊಲ್ಲದೇಕೆ? ನಾವು ನಮ್ಮ ಈಗಿನ ತ್ರಿವಿಧ ವಿಷಯಗಳಲ್ಲಿ ಈ ನಾಲ್ಕನೇದೊಂದು ವಿಷಯವನ್ನು 'ಕೂಡಿಸತಕ್ಕದ್ದು. ಅದಕ್ಕೆ ಎಲ್ಲಕ್ಕೂ ಹೆಚ್ಚು ಮಹತ್ವವನ್ನು ಕೊಡತಕ್ಕದ್ದು. ಸರಕಾರಕ್ಕೆ ತಾನು ದಮನನೀತಿಯನ್ನು ಆಚರಿಸುವದು. ಅಶಕ್ಯವೇ ಆಗುವಂತೆ ನಾವು ಮಾಡತಕ್ಕದ್ದು

ನಮ್ಮ ಬಾಯಿಗೆ ಬೀಗವನ್ನಿಕ್ಕುವದು, ನಮ್ಮ ಸಭಾಸಮ್ಮೇಲನಗಳನ್ನು ಮುರಿಯುವದು, ನಮ್ಮ ವೃತ್ತ ಪತ್ರಗಳನ್ನು ನಿಲ್ಲಿಸುವದು ಇವೇ ಮೊದಲಾದುವೇ ದಮನ ನೀತಿ ಎನಿಸುವವು ಆಳುವವರ “ವಂದೇ ಮಾತರಂ” ಪತ್ರವು ನಿಲ್ಲಿಸಲ್ಪಟ್ಟ ಸಂಗತಿಯು ಸಹಸ್ರಮಾಡಲು ಬರುವಂತಿದೆಯೋ? ಪಂಜಾಬಿನ ಹಕೀಮರವರ “ಮದರಲ್ಯಾಂಡ ಪತ್ರ”ವನ್ನು ಬಂದು ಮಾಡಿದ್ದು ಶಾಂತ ಚಿತ್ತದಿಂದ ನೋಡುವದಾಗುವದೇ? ಜಾಫರ ಅಲ್ಲಿ ಖಾನರವರ “ಜಮೀನದಾರ” ಪತ್ರವು ನಿಂತಿತು! ಹಬೀಬಖಾನರವರ “ಸಿಯಾಸತ್”ವು ನಿಂತಿತು! ರಾಧಾಕಿಸನರವರ “ಪ್ರತಾಪ” ಪತ್ರವೂ ನಿಂತಿತು!

‘ಇಂಡಿ ಪೆಂಡೆಂಟ’ ಪತ್ರವು ... ನಿಲ್ಲಿಸಲ್ಪಟ್ಟಿತು. ಪ್ರಯಾಗದ “ಸ್ವರಾಜ್ಯ” ಪತ್ರವೂ ಕೂಡ ನಿಲ್ಲಿಸಲ್ಪಟ್ಟಿತು. ಇದಲ್ಲದರ ಪ್ರತಿಕಾರವು ನಮ್ಮ ಕೈಯಲ್ಲಿ ಇರುವದತ್ತ ... ತಕ್ಕದ್ದು. ಈ ದಮನನೀತಿಯನ್ನು ಸಾಗಗೊಡಬಾರದು,

ಲೋಕಮತಕ್ಕೆ ಅಧೀನವಾಗಿ ಇರಲು ಮನಸ್ಸುಮಾಡದ ಸರಕಾರವು ಯಾವಾಗಲೂ ಜನರಬಾಯಿಗೆ ಬೀಗವನ್ನಿಕ್ಕಲು ಯತ್ನಿಸುತ್ತದೆ ಹೀಗೆ ಮಾಡುವದು ಅದಕ್ಕೆ ಅಶಕ್ಯವಾದರೆ ಅದಕ್ಕೆ ಅಪಯಶಸ್ಸು ಉಂಟಾಗುವದು, ಅದ್ದರಿಂದ ಬಾರಡೋಲಿಯಿಂದ ಕಳಿಸಲ್ಪಟ್ಟ ಸಾಮೋಪಚಾರ ಪತ್ರದಲ್ಲಿ ದಮನನೀತಿಯನ್ನು ನಿಲ್ಲಿಸಬೇಕೆಂಬ ಶರ್ತಿಗೆ ಪ್ರಧಾನ ಪದವು ಕೊಡಲ್ಪಟ್ಟಿದೆ ನಮ್ಮ ಬಾಯಿಗೆ ಇಕ್ಕಿದ ಬೀಗವು ತೆಗೆಯಲ್ಪಟ್ಟು ನಾವು ಮಾತಾಡಲು ಸ್ವತಂತ್ರರಾದೊಡನೆ, ನಮ್ಮ ವೃತ್ತಪತ್ರಗಳೆಲ್ಲವೂ ಆತಂಕವಿಲ್ಲದೆ ಮುದ್ರಿಸಲ್ಪಡಲು ಪ್ರಾರಂಭವಾದ ಕೂಡಲೆ ಹಾಗು ನಮ್ಮ ಸಭಾಸಮ್ಮೇಲನಗಳು ನಿರ್ವಿಘ್ನವಾಗಿ ನೆರೆಯಲಾರಂಭಿಸಿದ ಕ್ಷಣವೆ ನಮಗೆ ಸ್ವಾತಂತ್ರ್ಯವು ದೊರೆತಂತೇ ಆಗುವದು ಆಗ್ಗೆ ಮುಕ್ಕಾಲು ಪಾಲು ಸ್ವರಾಜ್ಯವು ಸ್ಥಾಪಿತವಾಗುವದು.

ನಮ್ಮ ಇಚ್ಛಾನುಸಾರವಾಗಿ ನಮಗೆ ನಡೆಯಲೂ ನುಡಿಯಲೂ ಆತಂಕವಿಲ್ಲದಾದರೆ ಅದೊಂದು ಬಗೆಯ ಸ್ವರಾಜ್ಯವೇ. ಸೈ ಉಸ್ಮಾಗಿಗಳೂ ಅತ್ಯಾಚಾರಿಗಳೂ ಆದ ಜನರ ಮೇಲೆಯೇ ಅಂಕುಶದ ಉಪಯೋಗವು ಸ್ವರಾಜ್ಯದಲ್ಲಿ ಅತ್ಯಾಚಾರಿಗಳ ಸ್ವೈರಾಚಾರಕ್ಕೆ ಅಸ್ಪದವು ದೊರೆಯದು.

ಶಾಂತ ತನದಿಂದ ಕೆಲಸ ಮಾಡುತ್ತಿರುವ ಅನೇಕ ದೇಶಭಕ್ತರನ್ನು ಸರಕಾರವು ಅನ್ಯಾಯವಾಗಿ ಜೇಲಿಗೆ ಕಳಿಸಿರುವದು. ಈ ದೇಶ ಭಕ್ತರನ್ನು ಕಾರಾಗೃಹದಿಂದ ಮುಕ್ತಮಾಡಿ ತಾನು ಕೈಕೊಂಡ ದಮನ ನೀತಿಯನ್ನು ಸರಕಾರವು ಬಿಟ್ಟುಕೊಟ್ಟರೆ ನಾವಾದರೂ ಸವಿನಯ ಅಜ್ಞಾ ಭಂಗವನ್ನು ಸದ್ಯಕ್ಕೆ ನಿಲ್ಲಿಸುತ್ತೇವೆಂದು ನಾವು ನಮ್ಮ ಸಾಮೋಪಚಾರ ಪತ್ರದಲ್ಲಿ ಸೂಚಿಸಿರುವೆವು. ಆಕ್ರಾಮಕ (offensive) ಸವಿನಯ ಭಂಗವೆಂದರೆ, ವ್ಯಕ್ತಿಯಾಗಲಿ ಸಮುದಾಯವಾಗಲಿ ಸರಕಾರದ ಸತ್ತೆಯನ್ನು ಇಚ್ಛಾ ಪೂರ್ವಕ ಅನಾದರಿಸುವದಕ್ಕೋಸ್ಕರ ನಿರ್ಯೋಜಿತವಾದ ಮನುಷ್ಯಕೃತ ಕಾಯ್ದೆಗಳನ್ನು ವಿನಯ ಪೂರ್ವಕವಾಗಿ ಮುರಿಯುವದು. ಹಿಂದುಸ್ಥಾನದಲ್ಲಿ ಈಗ ಆಚರಿಸಲ್ಪಡುತ್ತಿರುವ ಸವಿನಯ ಭಂಗವು ಅನಿವಾರ್ಯವಾಗಿದುವದರಿಂದ ಅದು ನಮ್ರ ಭಂಗವೆಂದು ಎನಿಸುವದು. ಈ ನಮ್ರ ಭಂಗವನ್ನು ನಾವು ಆಚರಿಸದಿದ್ದರೆ ನಮ್ಮ ಕೆಲಸವೇ ಮುಂದೆ ಸಾಗದಂತಾಗುವದು. ಸರಕಾರವು ನಮ್ಮ ಬಾಯಿಬಂದು ಮಾಡಲಿಚ್ಛಿಸಿದರೆ ನಾವು ಮಾತಾಡಿಯೇ ತೀರಬೇಕು, ಸಭೆಗಳನ್ನು ಮಾಡಬೇಡಿರೆಂದು ಹೇಳಿದರೆ ನಾವು ಮಾಡಿಯೇ ತೀರಬೇಕು ವೃತ್ತಪತ್ರಗಳನ್ನು ಮುದ್ರಿಸುವದನ್ನೂ ಸರಕಾರವು ನಿಲ್ಲಿಸಹತ್ತಿದರೆ ನಾವು ಕೈಯಿಂದ ಬರೆದು ಅವುಗಳನ್ನು ಪ್ರಸಿದ್ಧಿಸಿಯೇ ತೀರಬೇಕು. ಇವೆಲ್ಲವೂ ನಮ್ರ ಸವಿನಯ ಭಂಗವು. ಇದನ್ನೂ ನಾವು ಮಾಡುತ್ತಿರುವೆವು, ಮತ್ತು ಎಲ್ಲಿಯವರೆಗೆ ಸರಕಾರವು ನಮ್ಮ ಸ್ವಾತಂತ್ರ್ಯವನ್ನು ನಷ್ಟಗೊಳಿಸಲಿಕ್ಕೆಂದು ಅವಿವೇಕ ತನದ ಹುಕುಂಗಳನ್ನುಮಾತ ವಡೆಯೋ ಅಲ್ಲಿಯವರೆಗೆ ಈನಮ್ರ ಸವಿನಯ ಭಂಗವನ್ನು ಆಚರಿಸುವ ಹೊರ್ತು ಅನ್ಯ ಮಾರ್ಗವಿಲ್ಲ ನಮ್ಮ ಸ್ವಾತಂತ್ರ್ಯದ ಮೇಲೆ ಸರಕಾರವು ಗದೆಯನ್ನು ತಂದರೆ ಅದನ್ನು ಕಾಯ್ದುಕೊಳ್ಳಲಿಕ್ಕೆಂದು ಈ ನಮ್ರ ಸವಿನಯ ಭಂಗವನ್ನು ನಾವು ಆಚರಿಸ ತಕ್ಕದ್ದಾಗುವದು.

ನಾವು ಸಾಮೋಪಚಾರದ ಪತ್ರದಲ್ಲಿ ಸವಿನಯ ಭಂಗವನ್ನು ನಿಲ್ಲಿಸುವೆವೆಂದು ಸೂಚಿಸಿರುವೆವು ಅದರೆ ನಾವು ಸೂಚಿಸಿರುವದು ನಮ್ರ ಭಂಗವಲ್ಲ ಸರಕಾರವನ್ನು ಪೀಡಿಸುವದಕ್ಕೋಸ್ಕರ ಬಂದಾಯ ... ರೂಪದಿಂದ ಮಾಡತಕ್ಕ ತೀವ್ರ ಭಂಗವನ್ನು ಸರಕಾರವು ದಮನ ನೀತಿಯನ್ನು ನಿಲ್ಲಿಸಿದರೆ ನಾವು ನಿಲ್ಲಿಸುವೆವು. ಸರಕಾರವು ಈ ಶರ್ತವಾಲಿಸದಿದ್ದರೆ ನಾವಾದರೂ ತೀವ್ರ ಭಂಗವನ್ನು ಬಿಟ್ಟು ... ನಿಶ್ಚಿತವೆಂದು ನನಗೆ ತಿಳಿಯುತ್ತದೆ ಯಾಕಂದರೆ ಸರಕಾರವು ನಮ್ಮ ... ಸ್ವಾತಂತ್ರ್ಯ ... ಸ್ವತಂತ್ರ ಮೇಲೆ ಎತ್ತಿದನ್ನು ಬಿಟ್ಟುಕೊಟ್ಟರೆ ನಾವೀಗ ಬೇರ ಮನೆ ... ಕಾಲದಲ್ಲಿಯೇ ಕೊಟ್ಟು ತೀರಬೇಕಾಗುವದು

ಈ ನಮ್ಮ ಯೋಧಾಜನರನ್ನು ಕಾರಾಗೃಹದಿಂದ ಬಿಡಿಸಿಕೊಂಡು ಬರುವ ಮತ್ತು ದಮನ ನೀತಿಯನ್ನು ಬಂದು ಮಾಡಲು ಸರಕಾರಕ್ಕೆ ಅಗತ್ಯ ಪಡಿಸುವ ಭಾರವು ಬಾರ್ಡೋಲಿಯ ಮೇಲಿರುವದು. ಈ ಕಾರ್ಯವನ್ನು ಬಾರಡೋಲಿಯು ನೆರವೇರಿಸಿದರೆ ತನ್ನ ಕರ್ತವ್ಯವನ್ನೂ ಸಂಪೂರ್ಣವಾಗಿ ಮಾಡಿತೆಂದು ಹೇಳ ಬಹುದು.

ಮುಂದಿನವಾರ ಸಾಗುವದು.

ಕನ್ನಡ ಬಾಲ ಬಾಲಿಕೆಯರಿಗೂ ಪ್ರೌಢರಿಗೂ ಮನೋರಂ
ಜನ-ಜ್ಞಾನಾಭಿವೃದ್ಧಿಗೊಳಿಸುವ ಅತ್ಯುಪಯುಕ್ತ
ಹಾಗು ಸುಲಭ ಭಾಷೆಯ

## "ಬಾಲಮಿತ್ರ"

ವೆಂಬ ಮಾಸಿಕ ಪುಸ್ತಕವು ಜನವರಿ (೧೯೩೦) ಯಿಂದ ಒಳ್ಳೇ ಸಿಂ [illegible] ತವಾಗಿ ಹೊರಡುತ್ತಿರುವದು. ಇದು [illegible] ಚಿತ್ರಗಳು [illegible] ಚಲೋ ಕತೆಗಳು, [illegible] ಸಂಗತಿಗಳ, [illegible] ಇದಲ್ಲದೆ ಪ್ರತಿಸಾರೆ [illegible], ತಿಂಗಳ ಸುದ್ದಿ, [illegible] ಪ್ರಶ್ನೆಗಳು [illegible]. ಇಂಥ ಉಪಯುಕ್ತ ಹಾಗು ಕಡಿಮೆ ಬೆಲೆ [illegible] ಬೇಗ ಹೊಸ ವರ್ಷದ ಚಂದಾದಾರ ರಾಗಿರಿ.

ವಾರ್ಷಿಕ ಚಂದಾ ೧ ೮-೦ ( ಟ. ಹಾ. ಸಹಿತ. )
ವಿಳಾಸಃ—ವ. ಮ. [illegible]
[illegible] ಧಾರವಾಡ.



ಕನ್ನಡಿಗರೇ!! ಓದಿರಿ ಆಶ್ರಯ ಕೊಡಿರಿ.

ಗದಗಿನಲ್ಲಿ
ಸಾಮಾಜಿಕ, ರಾಜಕೀಯ, ನೈತಿಕ, ಧಾರ್ಮಿಕ ವಿಷಯಗಳನ್ನು ಪ್ರತಿಪಾದಿಸುವ

# ಕರ್ನಾಟಕ ಸಿಂಹ.

| | | |
|---|---|---|
| ವರ್ಗಣಿ ಸ್ಥಳೀಕರಿಗೆ ರು. ೩-೦-೦ | ಎಂಬ ಕನ್ನಡ ವಾರಪತ್ರಿಕೆಯು. | ವರ್ಗಣಿ ಪರಸ್ಥಳದವರಿಗೆ ಅಂಚೆವೆಚ್ಚ ಸಹಿತ ರು. ೩-೧೨-೦ |

ಇವತ್ತಿನಿಂದ ಮೂರು ತಿಂಗಳ ಒಳಗೆ ಹೊರಡುವದು. ಮೇಲೆ [illegible] ರಿಸಿದ ವಾರಪತ್ರಿಕೆಯು ಬಾಲ್ಯದಿಂದ [illegible] ಹಾಗೂ ಮೈಸೂರ ಮತ್ತು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ [illegible] ಪಡೆದ ವಿ॥ [illegible] ಕೃಷ್ಣರಾವ [illegible] ಇವರ ಸಂ ಪಾದಕತ್ವದ [illegible] ಕನ್ನಡ ಭಾಷೆಯಲ್ಲಿ [illegible] ಸಂಪೂರ್ಣ ಹೆಸರನ್ನು [illegible] ವಿಳಾಸಕ್ಕೆ [illegible] ವಿನಂತಿ ಇದ್ದತ್ತದೆ

ವಿಳಾಸಃ—ಶಾಂತಪ್ಪಾ ಶಿವಯೋಗೆಪ್ಪಾ ಬಿಗಗುಂದಿ
ಮಾಲಕ [illegible] ಪ್ರೆಸ್ ಗದಗ ಜಿಲ್ಲಾ ಧಾರವಾಡ.



# ಉತ್ತಮ ಆಯುರ್ವೇದ ಔಷಧಗಳು.

## ಸುವರ್ಣರಾಜವಂಗ ತೊಲಿ ೧. ರೂ. ೫

| | | |
|---|---|---|
| ಸಮೀರಪನ್ನಗ | ತೊಲಿ | ರೂ. ೫ |
| ಪ್ರವಾಳ | ,, | ರೂ. ೩ |
| ಚಂದ್ರಪ್ರಭಾ | ,, | ರೂ. ೧ |
| [illegible] ವಸಂತ | ,, | |
| [illegible] | ,, | ಆಣೆ ೮ |
| [illegible] | ಔನ್ಸ ೪ | ರೂ. ೧ |
| [illegible] | ,, | ರೂ. ೧ |
| [illegible] | ನೂರಕ್ಕೆ | ರೂ. ೧ |
| [illegible] | ,, | ಆಣೆ ೮ |
| [illegible] | ೧೦ ತೊಲಿ | ರೂ. ೧ |

ಇದಲ್ಲದೇ [illegible] ಔಷಧಗ [illegible] ದಿಂದ ಸಿಗುವವು.

Karnatak Ayurvedic Phar-maceutical Works.
Bagalkot. Dt. Bijapur.



[illegible]



ಸಂಬರ ೧ ನೇ ನಿರ್ಮಲವಾ [illegible]
[illegible] ಬೇಕು, [illegible] ಬೇಕ

# ನೀಲಗಿರಿ ತೈಲವು.

ನಮ್ಮಲ್ಲಿ [illegible] ನೀಲಗಿರಿ ತೈಲವು [illegible] ತೈಲ [illegible]

ಬಿ [illegible] ಕಂಪನಿ ಮೊ. ಹೊನ್ನಾವ [illegible]
ಜಿಲ್ಲಾ ಉತ್ತರ ಕಾನಡಾ.



ಹೊಸ ಪುಸ್ತಕ! ಅವಶ್ಯ ಓದಿರಿ

## ವಿವಿಧಲೇಖಸಂಗ್ರಹ

ಈ ಪುಸ್ತಕದಲ್ಲಿ [illegible] ಅತ್ಯುತ್ತಮವಾ ಲೇಖಗಳು ಅವೆ. ಸುಂದರವಾದ ಮುದ್ರ [illegible] ಭಾಷೆ, ಬೆಲೆ [illegible] ಪುಸ್ತಕವನ್ನು [illegible]

ಪತ್ತೆ:—ವ್ಹಿ. ಎಸ್. ರಂಗೈಶೇ [illegible]
[illegible]

"ಈ ಪತ್ರವನ್ನು ವಿ॥ ಗುಂಡೋ [illegible] ಮುದ್ರಣಾಲಯದಲ್ಲಿ [illegible] ಬಾಗಲಕೋಟ ಇದ [illegible] ಜಾಗದಲ್ಲಿ ಪ್ರಸಿದ್ಧ ಮಾಡಿದನು.

ುರತದಲ್ಲಿಯು ನನ್ನ ಭಾಷಣವು

REGISTERED No B 1583.

ಜಾಹೀರಾತಿನ ದರ:-

'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂಪಾಯಿ ಕಾಯಮು ಜಾಹೀರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು

ರ್ಷಿಕ ವರ್ಗಣಿ ರೂ. ೪-೦-೦
ರು ತಿಂಗಳಿಗೆ ,, ೨-೦-೦
ಡಿ ಸಂಚಿಕೆ ೦-೧-೩
ದರಿ ಂಚಿಕೆ ಬೇಕಾದವರು ೧-೬ ತಿಕೀಟ ಕಳಿಸಬೇಕು.

# ಶ್ರೀ.

# ಕನ್ನಡ ನವಜೀವನ

ಮಹಾತ್ಮಾಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾಷಾಂತರಿಸುವದೇ ಈ ವಾರ ಪತ್ರಿಕೆಯ ಮುಖ್ಯೋದ್ದೇಶವು

ರ್ಷ ೧ | ಬಾಗಲಕೋಟೆ ಮಾಘ ವ|| ೫ ಶಕೆ ೧೮೪೩. ಗುರುವಾರ ತಾ. ೧೬ ನೇ ಫೇಬ್ರುವಾರಿ ೧೯೨೨ ಇಸ್ವಿ. | ಸಂಚಿಕೆ ೧೨

## ವಿನಂತಿ.

ಅನೇಕ ಜನ ಚಂದಾದಾರರು ನಮಗೆ ಬರೆಯುವಾಗ ತಮ್ಮ ಹೆಸರಿನ ದೆ ಹಾಕಿದ ನಂಬರನ್ನು ತಿಳಿಸುವ . ಅದ್ದರಿಂದ ನಮಗೆ ಬಹು ತೊಂಯಾಗುತ್ತದೆ ಅಲ್ಲದೆ ನಂಬರು ತಿದಿದ್ದರೆ ಚಂದಾದಾರರ ಹೆಸರುಗಳ ಹುಡಿಕಿ ತೆಗೆಯಲು ವೇಳೆ ಹತ್ತು ು ಇದರಿಂದ ಯೋಗ್ಯ ಕಾಲಕ್ಕೆ ಗ್ರಾರಿಗೆ ಉತ್ತರವನ್ನು ಕೊಡುವದಾಗು ಲ್ಲ ಆದ್ದರಿಂದ ಇನ್ನು ಮೇಲೆಯಾ ಎಲ್ಲ ಚಂದಾದಾರರು ಪತ್ರವ್ಯಾರ ಮಾಡುವಾಗ್ಗೆ ದಯವಿಟ್ಟು ತ ನಂಬರಗಳನ್ನು ನಮಗೆ ಅರುಹುಕೆಂದು ಪ್ರಾರ್ಥಿಸುತ್ತೇವೆ.

ವ್ಯವಸ್ಥಾಪಕ
ಕನ್ನಡ ನವಜೀವನ.

---

## ಟಿಪ್ಪಣಿಗಳು

### ುಂದೆ ಬರತಕ್ಕ ವೇತನ.

ಪೆನಶನ್ ಅಂದರೆ ಹಿಂದೆ ಸಂಬಳದಲ್ಲಿ ದುಕೊಂಡ ಮತ್ತೂ ಮುಂದೆ ತಾನಾಗಿ ಬರತಕ್ಕ ವೇತನವೆಂಬದಾಗಿ ಈ ಹೆಸರು ಬಂದಿದೆ. ಧಾರವಾಡದ ಶ್ರೀ ುಕರಾವ ಜೋಶೀಯವರ ಈ ವೇತನವನ್ನು ಬಂದು ಮಾ ಸರಕಾರದವರಿಗೆ ಯತ್ ಕಿಂಚಿತ್ತಾ ಅಡ್ಡಿ ಕಂಡು ಬರಲಿಲ್ಲ. ತಮ್ಮ ದ ಸೇವೆಯನ್ನು ಮೊದಲಿಕ್ಕೆ ಪ್ರ ಪ್ಪೇ ಅವರ ಅಪರಾಧವು ಆದರೆ ಅದೇ ಅತ್ತ ನೋಡಿರಿ! ಸುಶಿಕ್ಷಿತ ಹಿಂದು ನಿವಾಸಿಗಳನ್ನು ಯಾವಾಗಲೂ ಬಾಯಿಗೆ ಬಂದಂತೆ ಬಯ್ಯುತ್ತ ಮತ್ತೂ ಹಿಂದ ರೈತರೆಂದರೆ ತಿಳುವಳಿಕೆಯಿಲ್ಲದ ಸಣ್ಣ ಹುಡುಗರು; ಅದ್ದರಿಂದ ಹಿರಿಯರಂತೆ ಮಾತಾಡಿ ಸರಕಾರದವರು ಯಾವಾಗಲೂ ಅವರ ಪರಿಪಾಲನೆ ಮಾಡಿ ಆಶೀರ್ವಾದಿಸಬೇಕಾಗುತ್ತದೆಂದು ಸೊಕ್ಕಿನಿಂದ ನುಡಿಯುತ್ತ ಕಾಲ ಕಳೆಯುತ್ತಿರುವ ಆ ಸರ್ ಮೈಕಾಯಾಲ ಓಡಾಯರನೂ ಮತ್ತೂ ಜಾಲಿಯನ್ ವಾಲಾಬಾಗದಲ್ಲಿ ನಿರ್ದೋಷಿಗಳಾದ ಜನರ ಕೊಲೆ ಮಾಡಿ ನಾನು ನನ್ನ ಕರ್ತವ್ಯವನ್ನೇ ಮಾಡಿರುವೆನೆಂದು ಈಗೂ ಕೂಡ ನಂಬಿರುವ ಜನರಲ್ ಡಾಯರನೂ ಈ ವೇತನವನ್ನು ದೊರಕಿಸುತ್ತಲೇ ಇದ್ದರೆ ಈ ಸಾಹೇಬರ ಪೆನಶನ್ ಬಂದು ಮಾಡಬೇಕೆಂದರೆ ಕಾಯಿದೇ ಕಾನೂನುಗಳು ಅಡ್ಡ ಬರುತ್ತವೆಂದೂ ಹೇಗಾದರೂ ಮಾಡಿ ಈ ಕಾನೂನುಗಳನ್ನು ಬದಿಗೊತ್ತಿದರೆ ಪೆನಶನ್ ಬಂದು ಮಾಡುವಂಥ ಸಾಹಸವು ನೀತಿಚ್ಯುತವಾದ ಮಾರ್ಗವೆಂತಲೂ ಹೇಳುತ್ತಿರುವರು ಖಂಡಿತವಾಗಿ ಹಿಂದ ನಿವಾಸಿಗಳಿಗೆ ಬೇರೆ ಕಾಯದೇ ಇಂಗ್ಲೀಷರಿಗೆ ಬೇರೆ ಕಾಯದೇ ಎನ್ನುವದು ತಾನೇ ವ್ಯಕ್ತವಾಗುತ್ತದೆ ಅದೇ ರೀತಿಯಲ್ಲಿ ಸ್ವದೇಶಾಭಿಮಾನಿಗಳಿಗೊಂದು ಕಾಯಿದೇ ಬೇರೆ ಇಲ್ಲದ ಉಪದ್ರ ಕೊಡುವ ಪ್ರಜಾ ಪೀಡಕನಿಗೊಂದು ಕಾಯಿದೇ ಬೇರೆ ಒಬ್ಬನ ವಿಷಯದಲ್ಲಿ ಒಂದು ಸಂಗತಿಯು ನೀತಿಯುಕ್ತವಾದರೆ ಇನ್ನೊಬ್ಬನ ವಿಷಯದಲ್ಲಿ ಅದೇ ಸಂಗತಿಯು ನೀತಿಚ್ಯುತವಾಗುತ್ತದೆ! ಇತ್ತ ದೇಶ ಸೇವೆ. ಅತ್ತ ನೋಡಿದರೆ ಪೆನಶನ್ ಇಟ್ಟುಕೊಳ್ಳುವದು; ಇಂಥ ಮೋಹಕವಾದ ಪರಿಸ್ಥಿತಿಯಲ್ಲಿ ತಮ್ಮ ಉಜ್ವಲವಾದ ದೇಶಾಭಿಮಾನದಿಂದ ಪೆನಶನ್ ಧಿಕ್ಕರಿಸಿ ಒಳ್ಳೇ ಧೈರ್ಯವನ್ನು ತೋರ್ಪಡಿಸಿದ್ದಕ್ಕಾಗಿಯೂ ಸರಕಾರಕ್ಕೆ ಚಕನ್ನಾಗಿ ಸತ್ವಯುಕ್ತವಾದ ಉತ್ತರವನ್ನು ಕೊಟ್ಟದ್ದಕ್ಕಾಗಿಯೂ ನಾನು ಶ್ರೀ ಜೋಶೀಯವರನ್ನು ಅಭಿನಂದಿಸುತ್ತೇನೆ. ಶ್ರೀ. ಜೋಶೀಯವರ ಸ್ವಾರ್ಥತ್ಯಾಗವು ಹಿಂದ ನಿವಾಸಿಗಳ ಪಕ್ಷವನ್ನು ಪುಷ್ಟಿಗೊಳಿಸುತ್ತದೆ. ಅವರ ಭೌತಿಕ ನಷ್ಟವೆಂದರೆ ಅಖಂಡ ಹಿಂದುಸ್ತಾನದ ನೈತಿಕ ಲಾಭವು.

ಯಂಗ ಇಂಡಿಯಾ
ಮೋಹನದಾಸ ಕರಮಚಂದ ಗಾಂಧಿ.

---

### ಪೆನಶನ್.

ಪೆನಶನ್‌ದ ವಿಷಯಕ್ಕೆ ಜನರಲ್ ರೂಲಿನಲ್ಲಿಯ ೧೫ ನೇ ಅಧ್ಯಾಯದಲ್ಲಿಯ ಮೊದಲನೆಯ ಪ್ರಕರಣದ ೩೫೧ ನೇಯ ವ್ಯಾಖ್ಯಾದಲ್ಲಿ ಬರೆದ ಸಂಗತಿಯನ್ನು ನಾಸೀಗ ದೊರಕಿಸಿದ್ದೇನೆ ಈ ಕಲಮಿನಂತೆಯೆ ಧಾರವಾಡದ ಶ್ರೀಯುತ ಜೋಶೀಯವರ ಪೆನಶನ್ ಬಂದು ಮಾಡಲ್ಪಟ್ಟಿದೆ. ಆ ಕಲಮಿನಲ್ಲಿ ಹೀಗೆ ಬರೆದಿದೆ:-

" ಪ್ರತಿಯೊಬ್ಬ ಪೆನಶನದಾರನ ಆಚರಣೆಯು ಮುಂದೆ ಸಹ ಒಳಿತಾಗಿರಬೇಕೆಂಬ ಸಂಗತಿಯು ಪೆನಶನ್ ಸಲ್ಲಿಸತಕ್ಕ ಸಮಯದಲ್ಲಿ ಯಾವಾಗಲೂ ಗ

ರ್ಭಿತವಾಗಿರುತ್ತದೆ ಘೋರವಾದ ಅಪರಾಧದಿಂದ ಶಿಕ್ಷಿಸಲ್ಪಟ್ಟ ಅಥವಾ ಬಹು ನಿಂದ್ಯವಾದ ಆಚರಣೆಯಿಂದ ಪಾತಕಿಯೆಂದು ಗಣಿಸಲ್ಪಟ್ಟ ಪೆನಶನ್‌ದಾರನ ಅಖಂಡ ಸಂಬಳವನ್ನು ಇಲ್ಲವೆ ಅದರ ಭಾಗವನ್ನು ತಾತ್ಪೂರ್ತಿಕವಾಗಿ ನಿಲ್ಲಿಸುವ ಅದವಾ ಕಡೆತನಕ ಬಂದು ಮಾಡುವ ಅಧಿಕಾರವನ್ನು ಪ್ರಾಂತಿಕ ಸರಕಾರದವರೂ ಹಿಂದುಸ್ಥಾನ ಸರಕಾರದವರೂ ಭಾರತ ಮಂತ್ರಿ ಮಂಡಲದವರೂ ನಿಶ್ಚಯವಾಗಿ ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ.

ಈ ಕಲಮಿನ ಪ್ರಕಾರ ಅಖಂಡ ಪೆನಶನ್‌ವನ್ನಾಗಲಿ ಅದರ ಭಾಗವನ್ನಾಗಲಿ ತಾತ್ಪೂರ್ತಿಕವಾಗಿ ನಿಲ್ಲಿಸುವ ಅಥವಾ ಕಡೆತನಕ ಬಂದು ಮಾಡುವ ಅಧಿಕಾರವನ್ನು ಭಾರತ ಮಂತ್ರಿ ಮಂಡಲದವರು ಯೋಚಿಸಿ ನಿರ್ಣಯಿಸಿದರೆ ತೀರಿತು. ಅದೇ ಸಂಶಯಚ್ಛೇದಿಯೆಂದೂ ಅಪರಿವರ್ತನೀಯವೆಂದೂ ಗಣಿಸಲ್ಪಡುವದು ”

ಪೆನಶನ್ನಾಗಲಿ ಸಂಬಳದಲ್ಲಿ ಹಿಡಿದುಕೊಂಡ ಹಣವಾಗಲಿ ಇಲ್ಲವೇ ಬೇರೆ ಯಾವ ಹೆಸರನ್ನು ಕೊಟ್ಟಾಗಲಿ ಅದರ ಇಂಗಿತವೆಲ್ಲ ಒಂದೇ ಎಂದು ಸಾಮಾನ್ಯ ಜನರ ಕಲ್ಪನೆಯದೆ ತನ್ನ ಕರ್ತವ್ಯವನ್ನು ನೆರವೇರಿಸತಕ್ಕ ಸಮಯದಲ್ಲಿ ಅಪ್ರಮಾಣಿಕನೆಂದು ಹಿಡಿಯಲ್ಪಟ್ಟ ಅಥವಾ ತನ್ನ ಕೆಲಸವು ಮುಗಿದ ಮೇಲೆ ಮುಂದೆ ತನ್ನ ನಡತೆಯಿಂದ ಅಪಾತ್ರನೆಂದು ತೋರಿಸಿಗೊಂಡಂಥ ನೌಕರನಿಗೆ ಅದನ್ನು ಸಲ್ಲಿಸುವದು ಶಕ್ಯವಿಲ್ಲ ಒಂದು ದೃಷ್ಟಿಯಿಂದ ನೋಡಿದರೆ ಕೆಲಸ ಮಾಡುತ್ತಿರುವ ನೌಕರನಿಗಿಂತ ಪೆನಶನ ಹೊಂದಿದ ನೌಕರನೇ ತನ್ನ ಆಚರಣೆಯ ಬಗ್ಗೆ ಹೆಚ್ಚು ಜಾಗರೂಕನಾಗಿರತಕ್ಕದ್ದು ಯಾಕಂದರೆ ಕೆಲಸ ಮಾಡುತ್ತಿರುವಾಗ ಮೇಲಾಧಿಕಾರಿಗಳು ಅವನನ್ನು ನಿರೀಕ್ಷಿಸುತ್ತಿರುತ್ತಾರೆ. ಆದರೆ ಅದೇ ಕೆಲಸದಿಂದ ನಿವೃತ್ತನಾದರೆ ಅವನ ಪ್ರಾಮಾಣಿಕ ಬುದ್ಧಿಯಲ್ಲಿ ಮಾತ್ರ ವಿಶ್ವಾಸವಿಡಬೇಕಾಗುವದು. ಈ ತಾತ್ವಿಕ ತಕ್ಕಡಿಯಿಂದ ತೂಗಿ ಶ್ರೀ ಜೋಶೀಯವರೆಂದರೆ ಸಾರ್ವಜನಿಕ ಸೇವಕರೆಂಬದನ್ನು ವಿಚಾರಿಸಿದರೆ ಅವರ ಆಚರಣೆಯು ಕಿಂಚಿತ್ತಾದರೂ ದೂಷಣೀಯವಾಗಿರದೇ ಯಾವದೇ ಕಾಲೀನ ಮನುಷ್ಯನಿಗೆ ಒಪ್ಪುವಂಥಾದ್ದಾಗಿದೆಂದು ಕಂಡು ಬರುವದು. ಸಾರ್ವಜನಿಕ ಕೆಲಸದಿಂದ ನಿವೃತ್ತರಾಗಿ ವಿಶ್ರಾಂತಿ ಸುಖವನ್ನು ಭೋಗಿಸುವದಕ್ಕೆ ಅವರು ಕಾಯದೇ ದೃಷ್ಟಿಯಿಂದ ಸರ್ವಥಾ ಬಾಧ್ಯರಿದ್ದಾಗ್ಯೂ ಕೂಡ ತಮ್ಮ ಮುಪ್ಪಿನಕಾಲದಲ್ಲಿ ಸಹ ಪರಮೇಶ್ವರನು ತಮಗೆ ದಯಪಾಲಿಸಿದ ಬುದ್ಧಿಯನ್ನು ಸಂಪೂರ್ಣವಾಗಿ ರಾಷ್ಟ್ರ ಸೇವೆಗಾಗಿ ಒಪ್ಪಿಸಿದ್ದಾರೆ ರಾಷ್ಟ್ರ ಮತದಂತೆ ನಡೆಯುವ ಸರಕಾರವು ರಾಷ್ಟ್ರೀಯವಾಗಿಲ್ಲವೆಂದನ್ನಲಿಕ್ಕೆ ಬರಲಾಗದು ಇಂಥ ಸರಕಾರದ ಸರ್ವಸ್ವವೂ ರಾಷ್ಟ್ರ ಕಲ್ಯಾಣಕ್ಕಾಗಿಯೇ ಇರತಕ್ಕದ್ದು ಆದ್ದರಿಂದ ಶ್ರೀ ಜೋಶಿಯವರು ಎಲ್ಲರಂತೆ ರಾಷ್ಟ್ರದಲ್ಲಿ ನಡೆದ ಚಳವಳಿಯಲ್ಲಿ ಭಾಗ ತೆಗೆದುಕೊಂಡು ಸರಕಾರದ ಸೇವೆಯನ್ನೂ ರಾಷ್ಟ್ರ ಸೇವೆಯನ್ನೂ ಕೂಡಿಯೇ ಮಾಡುತ್ತಲಿದ್ದಾರೆ ಯಾವ ಸಾರ್ವಜನಿಕ ನೌಕರಿಯಲ್ಲಿ ಶ್ರೀ ಜೋಶೀ ಅಥವಾ ಮೌಲಾನ ಶೌಕತ ಅಲ್ಲೀಯವರು ನಿಯೋಜಿತರಾಗಿದ್ದರೋ ಮತ್ತು ಯಾವ ಮಾನ್ಯವಾದ ಕಾಯದೇ ಕಾನೂನಿನಿಂದ ಅವರು ನಿರ್ಬಂಧಿಸಲ್ಪಟ್ಟಿದ್ದರೊ ಅದೇ ಸಾರ್ವಜನಿಕ ನೌಕರಿಯಲ್ಲಿ ಸರ ಮೆಕಾಯಲ ಓಡಾಯರರು ನಿಯೋಜಿತರಾಗಿದ್ದರೆ ಮತ್ತು ಅದೇ ಮಾನ್ಯವಾದ ಕಾಯಿದೇ ಕಾನೂನಿಂದ ಅವರೂ ನಿರ್ಬಂಧಿಸಲ್ಪಟ್ಟಿದ್ದರೆ ತಮ್ಮ ಮುಖದಿಂದ ಹೊರಗೆಡವಿದ ನುಡಿಗಳಿಂದಲೇ ಓಡಾಯರ ಸಾಹೇಬರು ಅಪರಾಧಿಗಳೆಂದು ಸ್ವಯಂ ಸಿದ್ಧವಾಗುವದು. ಈ ಕಾರಣದಿಂದಲೂ ತಮ್ಮ ಯಜಮಾನರಾದ ಹಿಂದ ರೈತರನ್ನು ಸದಾ ಸರ್ವದಾ ಘೋರತರವಾದ ಅಪಶಬ್ದಗಳಿಂದ ದೂಷಿಸುತ್ತಿರುವದರಿಂದ ತಾವು ಅವರ ಮನ್ನಣೆಗೆ ಸರ್ವಥಾ ಅಪಾತ್ರರೆಂದು ಸ್ವಯಂ ಕೃತಿಯಿಂದ ಸಿದ್ಧಮಾಡಿ ಕೊಟ್ಟದ್ದರಿಂದಲೂ ಮೇಲೆ ನಾನು ಅವತರಿಸಿದ ಕಲಮಿನಂತೆ ಸರ ಮೆಕಾಯಲರ ಪೆನಶನ್‌ವನ್ನು ಅವಶ್ಯಮೇವ ಬಂದು ಮಾಡತಕ್ಕದ್ದು ತಾವು ನುಡಿಯುವದೆಲ್ಲ ಸತ್ಯವೆಂದು ಓಡ್ವಾಯರರ ದೃಷ್ಟಿಗೆ ಇರಬಹುದು. ಸುಶಿಕ್ಷಿತ ಹಿಂದ ನಿವಾಸಿಗಳೆಲ್ಲ ಮೂರ್ಖ ಶಿರೋಮಣಿಗಳು ಇಲ್ಲವೇ ರಾಷ್ಟ್ರ ದ್ರೋಹಿಗಳೆಂದೂ ಅಶಿಕ್ಷಿತ ರೈತರೆಲ್ಲ ಶುದ್ಧ ಪಶುಗಳಾದ್ದರಿಂದ ಪಶುಗಳಂತೆಯೇ ಅವರನ್ನು ನಡಿಸಿಕೊಳ್ಳತಕ್ಕದ್ದೆಂದೂ ಅವರು ಪ್ರಾಮಾಣಿಕತನದಿಂದ ನಂಬಿರಬಹುದು ಆದರೆ ಅದೆಲ್ಲ ಕೆಲಸದ್ದಲ್ಲ; ಆ ತರದ ನ್ಯಾಯವೂ ನಮಗೆ ಬೇಕಾಗಿಲ್ಲ. ಪ್ರತಿಯೊಬ್ಬ ಮನುಷ್ಯನ ಮನದಲ್ಲಿಯ ಇಂಗಿತವನ್ನು ಆ ಪರಮೇಶ್ವರನೇ ಬಲ್ಲನು ಆದರೆ ಮನುಷ್ಯನು ಅನ್ಯೋನ್ಯರನ್ನು ಅವನ ಕೃತಿಯಿಂದ ಮಾತ್ರ ಕಂಡು ಹಿಡಿಯಲು ಶಕ್ಯವಿದೆ. ಅಸಹಯೋಗಿಗಳು ತಮ್ಮ ಇಂಗಿತವನ್ನು ಪ್ರತಿಜ್ಞಾ ಪತ್ರದಲ್ಲಿ ಕಾಣಿಸಿದ್ದರೂ ಕೂಡ ಮತ್ತು ಸಾವಿರಾರು ಸಭೆಗಳಲ್ಲಿ ಅದನ್ನು ಸಾರಿದ್ದರೂ ಕೂಡ ಇಂಗಿತವನ್ನು ಬದಿಗಿರಿಸಿ ಅವರ ಮತ್ತು ಅವರ ಸಹಾಯಕರ ಕೃತಿಗಳಿಂದಲೇ ಅಸಹಯೋಗಿಗಳನ್ನು ಬಹು ಸೂಕ್ಷ್ಮವಾಗಿ ಪರೀಕ್ಷಿಸಿ– ಈ ಸೂಕ್ಷ್ಮ ಪದ್ಧತಿಯೇ ಬಹು ಯೋಗ್ಯವಾದದ್ದು– ಅವರ ಬೆಲೆ ಕಟ್ಟಿದಂತೆ ಪೆನಶನ್ ಜನರ ಅಥವಾ ಬೇರೆಯವರ ಬೆಲೆಯನ್ನಾದರೂ ಅವರ ಕೃತಿಗಳಿಂದಲೇ ಕಟ್ಟಬೇಕಲ್ಲದೇ ಅವರ ವಿಚಾರದಿಂದ ಇಲ್ಲವೆ ಇದೇ ನಮ್ಮ ವಿಚಾರವೆಂದು ಅವರು ಹೇಳುವ ನುಡಿಯಿಂದ ಕಟ್ಟತಕ್ಕದ್ದಲ್ಲ.

† †

**ಕಾಯಿದೆಭಂಗ ವಿಷಯವಾಗಿ ಎಚ್ಚರಿಕೆ**

ಯಾವದಾದರೊಂದು ಜಿಲ್ಹೆಯಲ್ಲಿ ಅಲ್ಲಿಯ ಅಧಿಕಾರಿಗಳು ಕಾಂಗ್ರೆಸ ಕೆಲಸ ಮಾಡುವವರನ್ನು ಜೇಲಿಗೆ ಕಳಿಸದಿದ್ದರೆ ನಾವಾಗಿಯೇ ಜೇಲಿಗೆ ಹೋಗುವ ಪ್ರಯತ್ನ ಮಾಡಬೇಕೋ ಹೇಗೆ ಎಂದು ಲಾಲಕಾಮಲಾಲರು ಕೇಳುತ್ತಾರೆ. ನಮ್ಮ ಶಾಂತತಾಮಯ ಚಳವಳಿಯಲ್ಲಿ ಅಧಿಕಾರಿಗಳು ಕೈಹಾಕದಿದ್ದರೆ ನಾವು ಮುದ್ದಾಂ ಜೇಲಿಗೆ ಹೋಗುವ ಪ್ರಯತ್ನಮಾಡಬಾರದು. ನಮ್ಮ ಕ್ಷೇತ್ರದ ಹೊರಗೆ ಹೋಗಿ ಜೇಲಿಗೆ ಹೋಗಲಿಚ್ಛಿಸಿದರೆ ಅದು ಆಕ್ರಾಮಿಕ ಕಾಯಿದೆಭಂಗವೆನಿಸಿಕೊಳ್ಳುತ್ತದೆ. ಉದ್ಧಾಮತನದ ಕಾಯಿದೆಭಂಗವನ್ನು ನಾವು ಎಂದೂ ಮಾಡತಕ್ಕದ್ದಲ್ಲ. ಕಾಯಿದೆ ಭಂಗವನ್ನು ಅವಶ್ಯತೋರಿದಲ್ಲಿ ಮಾತ್ರ ಮಾಡಬೇಕು. ಕಾಯದೆ ಭಂಗದ ಪೂರ್ಣ ತಯಾರಿಯನ್ನುಮಾಡಿ ಪ್ರಸಂಗ ಬಂದಾಗ ಮಾತ್ರ ಅದನ್ನು ಆಚರಿಸಬೇಕು. ಕಾಯಿದೆಭಂಗ ಶಸ್ತ್ರವು ಬಹಳ ತೀಕ್ಷ್ಣವಾದದ್ದಿರುತ್ತದೆ. ಅದನ್ನು ಬಹಳ ಎಚ್ಚರದಿಂದ ಉಪಯೋಗಿಸಬೇಕು. ಶಾಂತತಾಮಯ ಶಸ್ತ್ರಗಳಲ್ಲಿ ಈ ಶಸ್ತ್ರವು ಬಹು ಪರಿಣಾಮಕಾರಕವಿರುತ್ತದೆ. ಕಾಯಿದೆ ಭಂಗ ಮಾಡಲಿಕ್ಕೆ ರಾಷ್ಟ್ರವು ಇನ್ನೂ ಸಾಕಷ್ಟು ತಯಾರಾಗಿರಾವದಿಲ್ಲವೆಂದು ನಾನು ಮನಗಂಡಿರುತ್ತೇನೆ. ನಮಗೆ ಮನಸಿಕ ತ್ರಾಸದವರೂ ಆತ್ಮಶುದ್ಧಿಯು ಅವಶ್ಯವಾದದ್ದು. ಕಾಯಿದೆಭಂಗಕ್ಕೆ ನಾವು ಪೂರ್ಣ ತಯಾರಾಗಬೇಕಾದರೆ ಮೊ

ಲು ಉಗ್ರವಾದ ತಪಸ್ಸು ಮಾಡಲಿಕ್ಕೆ ಬೇಕು. ಆ ತರದ ತಪಸ್ಸು ಇನ್ನೂ ಮಾಡಿಲ್ಲ. ಪೂರ್ಣ ತಯಾರಾಗದೆ ಕಾಯಿದೆ ಭಂಗವನ್ನು ಪ್ರಾರಂಭಿಸಿದರೆ ಬಹಳ ಅನರ್ಥಗಳುಂಟಾಗುತ್ತವೆ. ಅಂಥ ಅನರ್ಥಗಳನ್ನು ನಾವು ತಪ್ಪಿಸಲಿಕ್ಕೆ ಬೇಕು. ಈ ಕಾಯಿದೆ ಭಂಗದ ಪ್ರಯೋಗವನ್ನು ನಾನು ಮಾಡುವ ತನಕ ಎಲ್ಲರೂ ಸ್ವಲ್ಪ ತಡೆಯತಕ್ಕದ್ದು. ವೈಯಕ್ತಿಕ ಅಥವಾ ಸಾಮುದಾಯಿಕ ಕಾಯಿದೆ ಭಂಗವನ್ನು ಎರಡನೇ ಕಡೆಗೆ ಪ್ರಾರಂಭಮಾಡಿದರೆ ಅದರಿಂದ ದೇಶಕ್ಕೆ ಹಾನಿ ಪಟ್ಟುತ್ತದೆ. ಆ ಎಲ್ಲ ಅಸಹಕಾರವಾದಿಗಳು ವರ್ಕಿಂಗ ಕಮಿಟೀಯ ಠರಾವನ್ನು ಲಕ್ಷದಲ್ಲಿಡಬೇಕು. ನನ್ನ ಪರವಾನಗಿ ತೆಗೆದು ಕೊಳ್ಳದ ಹೊರ್ತು ಯಾರೂ ಪ್ರಾರಂಭಿಸಬಾರದು. ಕಾಯಿದೆಭಂಗವನ್ನು ಪ್ರಾರಂಭಿಸಲು ಆಂಧ್ರ ದೇಶದಲ್ಲಿ ಒಂದು ನೂರು ಹಳ್ಳಿಗಳಿಗೆ ಮಾತ್ರ ನಾನು ಅಪ್ಪಣೆಯನ್ನು ಕೊಡಬಹುದು. ಆಕ್ರಾಮಿಕ ಕಾಯಿದೆ ಭಂಗವನ್ನು ಅದನ್ನು ತಪ್ಪಿಸಬೇಕೆಂದು ಶ್ರೀ ಕೊಂಡ ವೆಂಕಟಪ್ಪಯ್ಯನವರಿಗೆ ಬರೆದಿರುತ್ತೇನೆ. ಆಂಧ್ರ ದೇಶವು ಶಾಂತತೆಯನ್ನು ಕಾಯಲಿಕ್ಕೂ ದಿಲ್ಲಿ ಕಾಂಗ್ರೆಸ ಕಮಿಟಿಯ ಕರಾರುಗಳನ್ನು ಪಾಲಿಸಲಿಕ್ಕೂ ತಯಾರಿದ್ದರೆ ಅವಶ್ಯವಿದ್ದಲ್ಲಿ ಮಾತ್ರ ಆಕ್ರಾಮಿಕ ಕಾಯಿದೆ ಭಂಗವನ್ನು ಪ್ರಾರಂಭಿಸಬೇಕು. ದೇಶದಲ್ಲಿ ಆಗತಕ್ಕಷ್ಟು ಖಾದೀ ಪ್ರಸಾರವು ಆಗಿಲ್ಲವೆಂದೂ ಅಸ್ಪೃಶ್ಯತೆಯು ಹೋಗಿಲ್ಲವೆಂದೂ ನನಗೆ ಸಂಶಯ ಬರುತ್ತದೆ. ಜೇಲಿಗೆ ಹೋಗುವ ಸಾಮರ್ಥ್ಯವು ಅಷ್ಟು ಮಹತ್ವವಾದದ್ದಲ್ಲ. ಹಿಂದೂ ಮುಸಲ್ಮಾನ ಸಿಖ ಪಾರಶೀ ಕ್ರಿಶ್ಚಿಯನ ಜನರಲ್ಲಿ ಒಕ್ಕಟ್ಟನ್ನು ಬೆಳೆಸಲಿಕ್ಕೆ ಪ್ರಯತ್ನ ಮಾಡುವದು ಬಹಳ ಮಹತ್ವವಾದದ್ದಿರುತ್ತದೆ. ಈ ಎಲ್ಲ ಕರಾರುಗಳನ್ನು ಪಾಲಿಸದೆ ಜೇಲಿಗೆ ಹೋದರೆ ಲಾಭವಾಗಲಾರದು. ಜೇಲಿಗೆ ಹೋಗುವದರಲ್ಲಿ ಆತ್ಮಶುದ್ಧಿಯನ್ನು ಮಾಡಿಕೊಳ್ಳುವ ಉದ್ದೇಶವಿರುತ್ತದೆ. ಸರಕಾರವನ್ನು ಪೇಚಿನಲ್ಲಿ ತರುವದು ಗೌಣ ಉದ್ದೇಶವಿರುತ್ತದೆ. ಒಬ್ಬ ಅಶ್ರಿತ ನಿರಪರಾಧಿ ಮನುಷ್ಯನನ್ನು ಜೇಲಿನಲ್ಲಿ ಹಾಕುವದರಿಂದಾಗಲಿ ಅಥವಾ ಕೊಲ್ಲಕ್ಕೇರಿಸುವದರಿಂದಾಗಲಿ ಸರಕಾರಕ್ಕೆ ಏನೂ ತ್ರಾಸವಾಗಲಿಕ್ಕಿಲ್ಲ. ವಿನಾ ವ.ದಲ್ಲಿ ಸರಕಾರದ ಅಪಕಾರವೇ ಆಗಿದೆಯೆಂದು ತಿಳಿಯಬೇಕು. ಗೂಢವಾದ ಅಂಧಃಕಾರವನ್ನು ಒಂದೇದೀಪವು ಓಡಿಸಬಹುದು. ಸವಿನಯ ಕಾಯಿದೆಭಂಗಕ್ಕೆ ಅವಶ್ಯವಾಗಿರುವ ಎಲ್ಲ ಕರಾರುಗಳನ್ನು ಅಸಹಕಾರ ವಾದಿಗಳು ಪಾಲಿಸಲಿಕ್ಕೇ ಬೇಕೆಂದು ನಾನು ಆಗ್ರಹದಿಂದ ಹೇಳುತ್ತೇನೆ. ಸ್ವರಾಜ್ಯವನ್ನು ಸಂಪಾದಿಸಲಿಕ್ಕೂ ಅದನ್ನು ಕಾಯ್ದುಕೊಳ್ಳಲಿಕ್ಕೂ ಎಲ್ಲ ಜನಾಂಗಗಳಲ್ಲಿ ಐಕ್ಯವು ಅವಶ್ಯವಾಗುತ್ತದೆಂದು ಯಾವನು ನಂಬುತ್ತಾನೋ ಅಸ್ಪೃಶ್ಯತೆಯನ್ನು ಯಾವನು ಪುನಃಪೂರ್ವಕವಾಗಿ ಬಿಟ್ಟಿರುತ್ತಾನೋ ಯಾವನು ಖಾದಿ ಅರಿವೆಯನ್ನು ಧರಿಸುತ್ತಾನೋ ಮತ್ತು ಯಾವನು ಕಾಯಾವಾಚಾ ಮನಸಾ ಅಹಿಂಸಾ ವ್ರತವನ್ನು ಪಾಲಿಸುತ್ತಾನೋ ಅವನು ಕಾಯಿದೆ ಭಂಗಕ್ಕೆ ಯೋಗ್ಯನಾಗುತ್ತಾನೆ.

## ಆಕ್ರಾಮಿಕ ವಿರುದ್ಧ ಸಂರಕ್ಷಕ

ಆಕ್ರಾಮಿಕ ಕಾಯಿದೆ ಭಂಗ ಸಂರಕ್ಷಕ ಕಾಯಿದೆ ಭಂಗ ಇವುಗಳಲ್ಲಿರುವ ಭೇದವನ್ನು ತಿಳಿದು ಕೊಳ್ಳುವದು ಅವಶ್ಯವಿರುತ್ತದೆ. ಆಕ್ರಾಮಿಕ ಕಾಯಿದೇ ಭಂಗವು ಅಹಿಂಸಾಮಯವಿರುತ್ತದೆ, ಆದರೆ ಅನೀತಿ ಮಯವಿರುವದಿಲ್ಲ. ಸರಕಾರದ ಶಾಸನಗಳನ್ನು ಉಲ್ಲಂಘನ ಮಾಡುವದು ಒಂದು ತರದ ಬಂಡಾಯವೇ ಇರುತ್ತದೆ. ಭೂಮಿಯ ಕರಿಗೆಯ ದೆಸೆಯಿಂದಾಗಲಿ ಅಥವಾ ಅನುಕೂಲತೆಯ ದೆಸೆಯಿಂದಾಗಲಿ ಮಾಡಿದ ಕಾಯಿದೆಗಳನ್ನು ಉಲ್ಲಂಘನಮಾಡುವದರಲ್ಲಿ ಶಾರೀರಕ ಯಾತನೆಯು ಇಲ್ಲವಿದ್ದಾಗ್ಯೂ ಅದು ಆಕ್ರಾಮಿಕ ಕಾಯಿದೆ ಭಂಗವೆಂದೆನಿಸಿಕೊಳ್ಳುತ್ತದೆ.

ಮಾನವ ಜಾತಿಯ ಗೌರವಕ್ಕೂ ಸ್ವಾಭಿಮಾನಕ್ಕೂ ವ್ಯತ್ಯಾಸ ಕೆಟ್ಟ ಕಾಯಿದೆಗಳನ್ನು ನಿರುಪಾಯರಾಗಿ ಶಾಂತರೀತಿಯಿಂದ ಉಲ್ಲಂಘನ ಮಾಡುವದು ಸಂರಕ್ಷಕ ಕಾಯಿದೆಭಂಗವೆನಿಸಿಕೊಳ್ಳುತ್ತದೆ. ಮನಾಯಿ ಇದ್ದಾಗ್ಯಾದರೂ ಸ್ವಯಂ ಸೇವಕರ ಪಥಕಗಳನ್ನು ತಯಾರ ಮಾಡುವದು ಸಾರ್ವಜನಿಕ ಸಭೆಗಳನ್ನು ಕೂಡಿಸುವದು ಮತ್ತು ಲೇಖಗಳನ್ನು ಬರೆಯುವದು ಸಂರಕ್ಷಕ ಕಾಯಿದೆ ಭಂಗದ ವರ್ಗದೊಳಗೆ ಬರುತ್ತವೆ. ಮೇಲೆ ಹೇಳಿದ ಕರಾರುಗಳನ್ನು ಪಾಲಿಸುವದು ಆಕ್ರಾಮಿಕ ಮತ್ತು ಸಂರಕ್ಷಕ ಎರಡೂ ತರದ ಕಾಯಿದೆ ಭಂಗಕ್ಕೆ ಅವಶ್ಯವಿರುತ್ತದೆ.

( ಕಳೆದ ವಾರದಲ್ಲಿಯ ೯೫ ನೇ ಪುಟದಿಂದ ಮುಂದೆ ಸಾಗಿದ್ದು )

ಆದರೆ ಇಷ್ಟು ಕುರಿತ ವ್ಹಾಯಿಸರಾಯರು ಮಾಡದಿದ್ದರೆ ಮುಂದೆ? ಲೋಕಮತವನ್ನು ವ್ಯಕ್ತಗೊಳಿಸುವ ನಮ್ಮ ಅಧಿಕಾರವನ್ನು ಅವರು ಮಾನ್ಯಮಾಡದಿದ್ದರ, ತೀವ್ರ ಸವಿನಯ ಭಂಗವನ್ನು ಕೈಕೊಳ್ಳುವ ಹೊರ್ತು ಬೇರೊಂದು ಮಾರ್ಗವಿದೆಯೋ? ಕೆಲವೊಂದು ಮುಹೂರ್ತದೆಯುವರೆಗೆ ಮನುಷ್ಯನು ಕೇವಲ ಆತ್ಮ ರಕ್ಷಣೆಯ ಕೆಲಸವನ್ನೇ ಮಾಡ ಬಹುದು, ಆದರೆ ಕಟ್ಟಕಡೆಗೆ ಅವನು ತನ್ನ ಮೇಲೆ ಕೈಯೆತ್ತಿದ ಎದುರಾಳಿಯ ಮೇಲೆ ಏರಿ ಹೋಗುವನು. ತೀವ್ರ ಭಂಗವು ಒಂದು ಪ್ರಕಾರದ ಶಾಂತ ಯುದ್ಧವೆಂದು ಎಣಿಸಲ್ಪಡುತ್ತದೆ.

ಈ ಎಲ್ಲ ಸಾಮೋಪಚಾರದ ಮಾತುಗಳನ್ನು ನಾವು ವ್ಹಾಯಿಸರಾಯರೊಡನೆ ಸ್ಪಷ್ಟವಾಗಿ ಆಡಿರುವೆವು. ಈ ಸಾಮೋಪಚಾರದಿಂದ ನಾವು ನಮ್ಮ ಸಭ್ಯತೆಯನ್ನು ವ್ಯಕ್ತಗೊಳಿಸಿರುವೆವು. ಫೇಬ್ರುವರಿ ತಿಂಗಳದ ೧ ನೇ ತಾರೀಖಿನೊಳಗಾಗಿ ವ್ಹಾಯಿಸರಾಯರವರು ನಾವು ಬಾರಡೋಲಿಯ ಮುಖಾಂತರವಾಗಿ ಮಾಡಿದ ನಮ್ಮ ಬೇಡಿಕೆಗಳಿಗೆ ಮಾನ್ಯತೆಯನ್ನಿತ್ತರೆ ಬಾರಡೋಲಿಯು ಮಾಡಬೇಕೆಂದೆಣಿಸುವ ಸವಿನಯ ಭಂಗವನ್ನು ಸದ್ಯಕ್ಕೆ ನಿಲ್ಲಿಸ ವದವಲ್ಲಿ ಬರುವೆವು. ನಮ್ಮ ಯೋಧ್ಧಾ ಜನರು ಬಿಟ್ಟು ಬಂದ ಮೇಲೆ ಎಲ್ಲರೂ ಕಲೆತು ಯುದ್ಧವನ್ನು ಯಾವ ಬಗೆಯಾಗಿ ಮುಂದೆ ಸಾಗಿಸಬೇಕೆಂದು ನಿಶ್ಚಯಿಸುವರೋ ಆ ಬಗೆಯಾಗಿ ನಾವು ಸಾಗಿಸುವಾ. ನಮ್ಮ ಬೇಡಿಕೆಗಳನ್ನು ಸರಕಾರವು ಮಾನ್ಯ ಮಾಡಿದರೆ ನಮಗೆ ಸಾಮುದಾಯಿಕ ಸವಿನಯ ಭಂಗವನ್ನು ಮಾಡುವ ಪ್ರಸಂಗವು ಒದಗಬಾರದೆಂದು ನನಗೆ ತೋರುತ್ತದೆ. ನಮ್ಮ ಬೇಡಿಕೆಗಳನ್ನು ಮನ್ನಿಸುವದೆಂಬದರ ಅರ್ಥವು ಬೇರೊಂದಿರದು. ಅದರಿಂದ ನಾವು ಬೇಡುವ ಭಾಷಣ ಸ್ವಾತಂತ್ರ್ಯ, ಲೇಖನ ಸ್ವಾತಂತ್ರ್ಯ ಹಾಗು ಸಂಘ ಸ್ವಾತಂತ್ರ್ಯಗಳಿಗೆ ಮಾನ್ಯತೆಯು ದೊರೆಯಬಹುದೆಂಬ ಮಾತು ಬಹುಶಃ ಅಸಂಭವವಾಗಿ ನನಗೆ ತೋರುತ್ತದೆ.

ಬಾರಡೋಲಿಯು ಎಲ್ಲ ಬಗೆಯಿಂದ ಸಿದ್ಧತೆಯನ್ನು ಮಾಡಿಕೊಳ್ಳುವದು ಅವಶ್ಯವಿದೆ. ಇನ್ನೂ ಅಲ್ಲಲ್ಲಿ ಸೇರಿಕೊಂಡಿದ್ದ ನ್ಯೂನತೆಗಳನ್ನೇ ತೆಗೆದು ಹಾಕಿ ಪ್ರತಿಯೊಬ್ಬ ಸ್ತ್ರೀಪುರುಷರು ಈ ಮಹಾ ಯಜ್ಞದಲ್ಲಿ ತನ್ನ ಸರ್ವಸ್ವವನ್ನು ಆಹುತಿಯಾಗಿ ಕೊಡಲು ತನಗೆ ಸಾಮರ್ಥ್ಯವನ್ನೀಯಬೇಕೆಂದು ಅನನ್ಯ ಭಾವದಿಂದ ಪರಮೇಶ್ವರನನ್ನು ನಿರಂತರ ಪ್ರಾರ್ಥಿಸಬೇಕು.

(ನ. ಜೀ.) ಮೋ. ಕ. ಗಾಂಧೀ

ಕನ್ನಡ ನವಜೀವನ.

ಮಾಘ ವ|| ೫ ಗುರುವಾರ. ಶಕೆ ೧೮೪೩.

# ಸುರತದಲ್ಲಿಯ ನನ್ನ ಭಾಷಣವು

ಎರಡನೇ ಜನರ ಹಾಗು ನನ್ನ ಭಾಷಣಗಳ ಸಾರಾಂಶವನ್ನು ಕೊಡುವದು ನನ್ನ ಮನಸ್ಸಿಗೆ ಬರುತ್ತದೆ ಹಾಗೆ ಮಾಡಲು ನಾನು ಬಲ್ಲೆನೆಂದು ನನಗೆ ವಿಶ್ವಾಸ ಉಂಟು, ಆದರೆ ಅದರಂತೆ ಮಾಡಲು ನನಗೆ ಉಚಿತವಾಗಿಯೇ ಅವಕಾಶವು ದೊರೆಯುವದು. ಸುರತದಲ್ಲಿ ೩೧ ನೇ ತಾರೀಖಿನ ದಿವಸ ನಾನು ಮಾಡಿದ ಭಾಷಣದ ಸಾರವನ್ನು ಕೊಡಬೇಕೆಂದು ಬಯಸುತ್ತೇನೆ; ಮತ್ತು ಹಾಗೆ ಮಾಡಲು ಈಗ ನನಗೆ ಅವಕಾಶವಾದರೂ ಇರುವದು.

ಆ ಸ್ತ್ರಿನ ದಿವಸ ಸುರತದಲ್ಲಿ ಕಾರ್ಯಕಾರೀ ಮಂಡಲದ (Working Committee) ಸಭೆಯು ನೆರದಿತ್ತು. ಹಕೀಮಜೀ ಅಜಮಲಖಾನ್, ಮಿಯಾ ಛೋಟಾನಿ, ಡಾ. ಅನಸಾರಿ, ಡಾ. ಚೋಯಿತರಾಮ, ಶ್ರೀ ಕೌಜಲಗಿ, ಶ್ರೀ ವಿಠ್ಠಲಭಾಯಿ ಪಟೇಲ, ಇಷ್ಟು ಜನ ಸಭಾಸದರು ಸಭೆಗೆ ಬಂದಿದ್ದರು. ನಾನು ಹಾಜರಿದ್ದೆನು. ಈ ಪ್ರಸಂಗದ ಲಾಭ ತೆಗೆದುಕೊಂಡು ಸುರತದ ನಾಗರಿಕರು ಒಂದು ಜಾಹೀರ ಸಭೆಯನ್ನು ಕೂಡಿಸಿದ್ದರು. ನಾನು ಈ ಸಭೆಗೆ ಹೋಗಬಾರದೆಂದು ಮೊದಲೇ ಗೊತ್ತಾಗಿದ್ದರಿಂದ ನಾನು ನನ್ನ ಕೆಲಸದಲ್ಲಿ ತೊಡಗಿದ್ದೆನು. ಅಷ್ಟರಲ್ಲಿ ಭಾಯಿ ದಯಾಳಜಿಯವರು ನನ್ನ ಕಡೆಗೆ ಬಂದು ಸಭಿಕರು ನಾನು ಸಭೆಗೆ ಬರಬೇಕೆಂದು ಆಗ್ರಹಪಟ್ಟವರಾಗಿರುವರೆಂದು ಹೇಳಿದರು. ಡಾ. ಚೋಯಿತರಾಮ ಮುಂತಾದವರು, ಸರಕಾರದವರು ನನ್ನನ್ನು ಹತ್ತು ಹನ್ನೆರಡು ದಿವಸಗಳಲ್ಲಿ ಹಿಡಿದೊಯ್ಯಬಹುದೆಂದು ಸಭೆಯಲ್ಲಿ ಹೇಳಿದ್ದರಿಂದ ಸಭಿಕರೆಲ್ಲರೂ, 'ಹಾಗಾದರೆ ನಮಗೀಗ ಗಾಂಧಿಯವರನ್ನು ತಂದು ಭೆಟ್ಟಿ ಮಾಡಿಸಬೇಕು,'' ಎಂದು ಆಗ್ರಹ ತೊಟ್ಟ ಕಾರಣ ಭಾಯಿ ದಯಾಳಜೀಯವರು ನನ್ನ ಕಡೆಗೆ ಬರಬೇಕಾಯಿತು. ನಾನು ಅವರೊಡನೆ ಸಭೆಗೆ ಹೋದೆನು.

ಸಾಮಾನ್ಯತಃ ನಾನು ಮಾತಾಡತಕ್ಕ ವಿಷಯದ ಮೇಲೆ ಚನ್ನಾಗಿ ವಿಚಾರ ಮಾಡಿ ಅದರ ಸಾರವನ್ನು ಮನಸ್ಸಿನಲ್ಲಿ ಮಾಡಿಟ್ಟುಕೊಂಡಿರುವದು ನನ್ನ ವಾಡಿಕೆಯಾಗಿದೆ. ಆದರೆ ಈ ಸಾರೆ ಯಾವ ವಿಚಾರವನ್ನು ನಾನು ಮಾಡಿರಲಿಲ್ಲ. ಆದರೆ ಈಗ ಅನೇಕ ದಿವಸಗಳಿಂದ ಒಂದು ಮಾತು ಯಾವಾಗಲೂ ನನ್ನ ಮನಸ್ಸಿನಲ್ಲಿ ಅಚಲನಾಗಿ ನಿಂತಿರುತ್ತದೆ, ಆ ಮಾತು ಈ ಪ್ರಸಂಗದಲ್ಲಿ ನನ್ನ ಕಣ್ಣಮುಂದೆ ಇದ್ದದರಿಂದ ಅದನ್ನೇ ಸುರತದ ರಹಿವಾಸಿಗಳ ಮುಂದೆ ಅತ್ಯಂತ ಸ್ಪಷ್ಟವಾಗಿ ಹೇಳಿದೆನು. ಇದಕ್ಕೂ ಮೊದಲು ಈ ಮಾತನ್ನು ಇಷ್ಟು ಸ್ಪಷ್ಟವಾಗಿ ನಾನು ಎಲ್ಲಿಯೂ ಯಾವಾಗಲೂ ಆಡಿರಲಿಲ್ಲ. ಆ ಹೊತ್ತು ನಾನು ಮಾಡಿದ ಭಾಷಣವು ಯಾವತ್ತರೂ ತಿಳಿದುಕೊಳ್ಳಲು ಯೋಗ್ಯವಿದೆಂದು ನನಗೆ ತೋರುತ್ತದೆ.

ಆವತ್ತು ನನ್ನ ಮುಖದಿಂದ ಹೊರಟ ಉದ್ಗಾರಗಳು ಎಲ್ಲರಿಗೋಸ್ಕರ ಇರುವವಾದ್ದರಿಂದ ಆ ಭಾಷಣದ ಸಾರವನ್ನು ಎಲ್ಲರ ಮುಂದಿಡಬೇಕೆಂಬ ಇಚ್ಛೆಯು ನನಗಾಗಿದೆ.

ಹಿಂದಕ್ಕೆ ನಾನು ಕಾರಾಗೃಹವಾಸಕ್ಕಾಗಿ ಬಹು ಆತುರನಾಗಿರುತ್ತಿದ್ದೆನು. ಆದರೆ ಸಾಂಪ್ರತದಲ್ಲಿ ಕಾರಾಗೃಹಕ್ಕೆ ಹೋಗಬೇಕೆಂಬ ಇಚ್ಛೆಯು ನನ್ನಲ್ಲಿ ಉಳಿದಿಲ್ಲ. ಜೇಲಿನಲ್ಲಿ ಹೋಗಿರುವದು ಕೇವಲ ಆರಾಮವಾಗಿಯೂ ಸ್ವೇಚ್ಛಾಚಾರವಾಗಿಯೂ ನನಗೆ ತೋರುತ್ತದೆ. ಸರಕಾರವು ನನ್ನನ್ನು ಜೇಲಿಗೆ ಅಟ್ಟಿದರೆ ಅಲ್ಲಿ ನನಗೆ ಕ್ಲೇಶಗಳನ್ನು ಅನುಭವಿಸಬೇಕಾಗುವದೆಂಬ ಭಯವು ಸ್ವಲ್ಪಾದರೂ ನನಗಿಲ್ಲ. ಎರಡನೇ ಅನೇಕ ಜನರು ಜೇಲಿನಲ್ಲಿಯ ಕ್ಲೇಶಗಳನ್ನು ಬಹಳಷ್ಟು ಸ್ವಲ್ಪ ಪ್ರಮಾಣದಲ್ಲಿ ಸಹಿಸುತ್ತಿರುವರು; ಮತ್ತು ಅಷ್ಟರ ಮಟ್ಟಿಗೆ ಅವರ ಜನ್ಮವು ಸಾರ್ಥಕವಾಗುತ್ತಿರುವದು. ಆದ್ದರಿಂದ ನಾನು ಕೆಳಗಿನ ಉದ್ಗಾರಗಳನ್ನು ತೆಗೆದೆನು

“ಹತ್ತು ಹನ್ನೆರಡು ದಿವಸಗಳಲ್ಲಿ ಸರಕಾರವು ನನ್ನನ್ನು ಹಿಡಿದೊಯ್ಯಬಹುದೆಂದು ಡಾ. ಚೋಯಿತರಾಮ ಇವರು ನಿಮಗೆ ಹೇಳಿದ್ದರಿಂದ ನೀವೆಲ್ಲರೂ ನನ್ನನ್ನು ಕಾಣಬೇಕೆಂದು ಬಯಸಿದಿರಿ. ಆದರೆ ನಾನು ನಿಮಗೆ ಹೇಳುವದೇನಂದರೆ:—ಜೇಲಿಗೆ ಹೋಗಲಿಕ್ಕೆ ನಾನು ಆತುರನಿಲ್ಲ. ನಾನು ಗುಂಡಿನಿಂದ ಸಾಯಲು ಇಚ್ಛಿಸುತ್ತೇನೆ ಮತ್ತು ಫಾಸಿಯನ್ನೇರಲು ಇಚ್ಛಿಸುತ್ತೇನೆ. ಅನೇಕ ಗುಜರಾಥಿಗಳೂ ಇದನ್ನೇ ಇಚ್ಛಿಸುವರೆಂದು ನಾನೆಣಿಸುತ್ತೇನೆ. ಈ ಸರಕಾರದ ಕೈಯಿಂದ ನನಗೆ ಮರಣವು ಪ್ರಾಪ್ತವಾಗಬೇಕೆಂದು ಈಗ ಬಹು ದಿವಸಗಳಿಂದ ಪ್ರಭುವಿಗೆ ಬೇಡಿಕೊಳ್ಳುತ್ತಲಿದ್ದೇನೆ.

ಹಿಂದುಸ್ಥಾನದ ಬೇರೆ ಬೇರೆ ಪ್ರಾಂತಗಳಲ್ಲಿ ಭಾರತವಾಸಿಗಳು ಭೋಗಿಸುತ್ತಿರುವ ಕ್ಲೇಶಗಳ ಕಥೆಯನ್ನು ಕೇಳಿ ಅದನ್ನು ಸಹಿಸುವದು ದುಷ್ಕರವಾಗಿದೆ. ಕೆಲವರ ಜಿಂದಿಗೆಯು ಜಪ್ತ ಮಾಡಲ್ಪಟ್ಟಿವೆ, ಹಲವರಿಗೆ ಫಟಕಿಯ ಪೆಟ್ಟುಗಳು ಬಿದ್ದಿವೆ. ಸರಕಾರವು ಜನರನ್ನು ಹೊಡೆದು ದೂಡಿ ಸಭೆಗಳನ್ನು ಮುರಿಯುತ್ತಿದೆ. ಇವೆಲ್ಲವನ್ನು ಸಹಿಸುವದೆಂತು? ಇವುಗಳ ನಿವಾರಣೆಯ ಉಪಾಯವು ಕಾರಾಗ್ರಹವಲ್ಲ, ಆದರೆ ಜಲಿಯನ್‌ವಾಲಾ ಬಾಗವು. ಸರಕಾರದ ಈ ಉಪದ್ರವು ತೀವ್ರವಾಗಿ ನಿಲ್ಲದಿದ್ದರೆ ಜಲಿಯನ್‌ವಾಲಾ ಬಾಗದ ಎಷ್ಟೋ ಆವೃತ್ತಿಗಳನ್ನು ಗುಜರಾಥದಲ್ಲಿ ಮಾಡಿಸಬೇಕೆಂದು ನಾನು ಬಯಸುತ್ತೇನೆ.

ಆದರೆ ಇನ್ನಾಗುವ ಜಲಿಯನ್‌ವಾಲಾ ಬಾಗದ ಪುನರಾವೃತ್ತಿಗಳು ಈಗಾಗಿ ಹೋದ ಜಲಿಯನ್‌ವಾಲಾ ಬಾಗದಂತಾಗಲಿಕ್ಕಾಗದು. ಭೇದವು ದೊಡ್ಡದಿರಲಿಕ್ಕೆಬೇಕು. ಅಲ್ಲಿ ಜಲಿಯನ್‌ವಾಲಾ ಬಾಗದಲ್ಲಿ ಜನರು ಸಹಜಗತ್ಯಾ ಹೋಗಿದ್ದರು. ತಮ್ಮ ಮೇಲೆ ಗುಂಡುಗಳು ಬೀಳಬಹುದೆಂಬ ಅರಿವು ಅವರಿಗಿರಲಿಲ್ಲ. ಗುಂಡುಗಳಿಂದ ತಾವು ಸಾಯಬೇಕೆಂದು ಅವರು ಇಚ್ಛಿಸಿರಲಿಲ್ಲ. ಗುಂಡುಗಳು ಬೀಳುವವೆಂದು ಅವರಿಗೆ ಮೊದಲೇ ತಿಳಿದಿದ್ದರೆ ಅವರು ಅಲ್ಲಿಗೆ ಹೋಗುತ್ತಿರಲಿಲ್ಲ. ಆದರೆ ನಾನೀಗ ಇಚ್ಛಿಸುವದೇನಂದರೆ ನಾವೆಲ್ಲರೂ ಇಚ್ಛಾಪೂರ್ವಕವಾಗಿ ಗುಂಡುಗಳಿಗೆ ಗುರಿಯಾಗಬೇಕು. ಜನರಲ್ ಡಾಯರ್‌ನು ತನ್ನ ಸಿಪಾಯಿಗಳೊಂದಿಗೆ ನಮ್ಮೆದುರಿಗೆ ಬಂದು ನಿಲ್ಲಲಿ; ಹೊಡಲು ನನಗೆ ಎಚ್ಚರಿಕೆಯನ್ನು ಕೊಡದಲೆ ಗುಂಡು ಹಾರಿಸಲು ಪ್ರಾರಂಭಿಸಲಿ! ಆಗ ನಾನು ಯಾವ ಬಗೆಯಾಗಿ ಪ್ರಫುಲ್ಲಚಿತ್ತದಿಂದ ತಮ್ಮೆಲ್ಲರಿಗೆ ಭಾಷಣ ಮಾಡುತ್ತಿರುವೆನೋ ಆಗಲೂ ಅದೇ ಬಗೆಯಾಗಿ ಭಾಷಣ ಮಾಡಲು ನನ್ನಲ್ಲಿ ಸಾಮರ್ಥ್ಯವಿರಬೇಕು. ಈಗ ತಾವೆಲ್ಲರೂ ಹೇಗೆ ಶಾಂತರಾಗಿ ಭಾಷಣವನ್ನು ಕೇಳುತ್ತ ಕುಳಿತಿರುವಿರೋ, ಹಾಗೆಯೇ ಆ ಸಮಯದಲ್ಲಿಯೂ ಗುಂಡಿನ ಮಳೆಯ ಕೆಳಗೆ ಶಾಂತರಾಗಿ ಕೂಡಲು ತಮ್ಮಲ್ಲಿ ಸಾಮರ್ಥ್ಯವು ಇರಬೇಕೆಂದೂ ದೇವರನ್ನು ಪ್ರಾರ್ಥಿಸುತ್ತೇನೆ. ಆ ಸಮಯದಲ್ಲಿ ನಿಮ್ಮೆಲ್ಲರ ಕಿವಿಗಳು ನನ್ನ ಕಡೆಗಿರಬೇಕು; ನಿಮ್ಮೆಲ್ಲರ ಬೆನ್ನು ನನ್ನ ಕಡೆಗಿರಬೇಕು. ಆದರೆ ನಿಮ್ಮೆಲ್ಲರ ಎದೆಯೂ ಕಣ್ಣುಗಳೂ ಗುಂಡುಗಳ ಕಡೆಗಿದ್ದು ಅವುಗಳನ್ನು ಆನಂದದಿಂದ ಸ್ವೀಕರಿಸಬೇಕು. ಈ ಬಗೆಯದಾದ ಇಚ್ಛೆಯು ಗುಜರಾಥಕ್ಕೆ ಇರುವದು ಯೋಗ್ಯವು. ಗುಜರಾಥವು ಪುಷ್ಕಳವಾಗಿ ಮಾತಾಡಿತು. ಅನೇಕ ಠರಾವುಗಳನ್ನೂ ಮಾಡಿತು. ಆದರೆ ಈಗ ಅಖಿಲ ಹಿಂದುಸ್ಥಾನವು ಕ್ಲೇಶಗಳನ್ನು ಸಹಿಸುತ್ತಿರುವ ಸಮಯದಲ್ಲಿ ನಮಗಾವ ಕ್ಲೇಶವೂ ಬಂದಿರುವದಿಲ್ಲ. ನಾವು ನಮ್ಮ ಕರ್ತವ್ಯವನ್ನು ಬರಗಿಸುವ ಕೆಲಸದಲ್ಲಿ ಇತರರಕಿಂತ ಹಿಂದೆ ಉಳಿದಿರುವೆವೆಂತಲ್ಲ. ಮಾಯಿಬಾಯಿ ಸರಕಾರವು ನಮ್ಮನ್ನು ಜೇಲಿಗೆ ಎಳೆದಿಲ್ಲೆಂದು ನಾವು ಜೇಲಿನಲ್ಲಿಲ್ಲ. ನಮ್ಮ ಹಣೆಬರಹದಲ್ಲಿ ಕಾರಾಗೃಹವಿರದೆ ಗುಂಡಿನ ಮಳೆಯಿರುವದೆಂದು ನನ್ನ ನಂಬಿಗೆಯಿದೆ.

ಈ ಪ್ರಕಾರ ನಮ್ಮ ಮನಸ್ಸಿನ ಇಚ್ಛೆಯಿದ್ದಲ್ಲಿ ನೀವು ವಿದ್ಯಾಭಿಮಾನಿಗಳಾಗುವ ಸ್ಥಿತಿಯಿರುವದು. ಈ ಬಗೆಯ ಇಚ್ಛೆಯನು ನಮ್ಮ ತಾಳಿಯೇ ತೀರತಕ್ಕದ್ದು. ಈ ಇಚ್ಛೆಯಿಂದಿಗೆ ನಮ್ಮ ಆತ್ಮ ಶುದ್ಧಿಯು ದಿನ ದಿನಕ್ಕೆ ಬೆಳೆಯತಕ್ಕದ್ದು. ಹಿಂದು ಮುಸಲ್ಮಾನರಲ್ಲಿ

...ನ್ನರ ವಿಷಯದಲ್ಲಿ ವಿಶ್ವಾಸವು ಸಂಪೂರ್ಣವಾಗಿ ನೆಲೆ ನಿಂತಿಲ್ಲ ಇನ್ನೂ ಒಬ್ಬರಿಗೊಬ್ಬರ ಒಗ್ಗೆ ಹೆದರಿಕೆಯುಂಟು. ಈ ಹೆದರಿಕೆಯು ಇಲ್ಲವಾಗಬೇಕು. ಪಾರಸೀ ಜನರಿಗೂ ಕ್ರೈಸ್ತರಿಗೂ ಹಿಂದು ಮುಸಲ್ಮಾನರ ಬಗ್ಗೆ ಈ ಗಲೂ ಹೆದರಿಕೆಯೇನಿಸವಹು. ಇದು ಹೋಗಲಿಕ್ಕಬೇಕು ಸುರತದ ನಾಗರಿಕರು ಎಷ್ಟೋ ಕೆಲಸ ಮಾಡಿರುವರು; ಆದರೆ ಇನ್ನೂ ಮಾಡತಕ್ಕದ್ದಿರುವದು. ಸುರತದ ಸ್ತ್ರೀಯರಿಗೆ ಹಾಗೂ ಪುರುಷರಿಗೆ ಇನ್ನೂ ಖಾದಿಯ ವಿಷಯದಲ್ಲಿ ಅವರಿಗಿನ್ನೂ ಹೇಸರವುಂಟು. ಜೆಸುಗಾಪ ಹಿಂದೇ ... ಹಾಗು ... ವಸ್ತ್ರಗಳ ಬಗ್ಗೆ ಅವರಿಗೀಗ ಪ್ರೇಮವುಂಟು. ಕೆಲವರು ಖಾದಿಯ ಅಂಗಿಯನ್ನು ಖಾದಿಯ ಟೊಪ್ಪಿಗೆಯನ್ನು ಹಾಕಿಕೊಳ್ಳಲು ಸಿದ್ಧರಿರುವರು, ಆದರೆ ಖಾದಿಯ ಧೋತರವನ್ನು ಉಟ್ಟುಕೊಳ್ಳಲು ಸಿದ್ಧರಿಲ್ಲ. "ಅಸ್ಪೃಶ್ಯ"ರ ಬಗ್ಗೆ ಅವರ ತಿರಸ್ಕಾರವು ಕಡಿಮೆಯಾಗುತ್ತ ನಡೆದಿರುವದು ನಿಜವು ಆದರೆ ಅವರನ್ನು ತಮ್ಮ ಒಡಹುಟ್ಟಿದವರಂತೆ ಆದರಿಸಲು ಅವರು ಸಿದ್ಧರಿಲ್ಲ. ಯಾವನಾದರೊಬ್ಬ ಅಸ್ಪೃಶ್ಯನಿಗೆ ಹಾವು ಕಚ್ಚಿದರೆ ಅವನಲ್ಲಿಯ ವಿಷವನ್ನು ಬಾಯಿಯಿಂದ ಹೀರಿ ತೆಗೆಯಲು ಯಾರಾದರೂ ಮುಂದೆ ಬರುವರೋ? ಅವನಿಗೆ ಕಾಯಿಲೆಯಾದರೆ ತಮ್ಮ ತಂದೆ ತಾಯಿಗಳನ್ನೂ ಸಹೋದರರನ್ನೂ ಶುಶ್ರೂಷಿಸುವಂತೆ ಅವನ ಶುಶ್ರೂಷೆ ಮಾಡಲು ಎಷ್ಟು ಜನರು ಮುಂದೆ ಬರುವರು?

ಸರಕಾರಕ್ಕೆ ಏನೇನು ಬಗ್ಗೆ ... ಬೇಕಾದರೆ ನಮ್ಮನ್ನೇ ಬಯ್ದುಕೊಳ್ಳತಕ್ಕದು. ಯಾಕಂದರೆ ಎಷ್ಟೋ ಪಾಪಗಳನ್ನು ತಿಂದರೂ ನಾವಿನ್ನೂ ಸರಿಯಾಗಿ ... ನಿಲ್ಲ ... ಅವಶ್ಯವಿದ್ದ ಆತ್ಮಶುದ್ಧಿಯನ್ನು ಮಾಡಿಕೊಂಡಿಲ್ಲ; ಎಷ್ಟು ಬೇಕೋ ಅಷ್ಟು ಸ್ವಾರ್ಥತ್ಯಾಗವನ್ನು ಮಾಡಿಲ್ಲ. ಪೂರ್ಣರೀತಿಯಿಂದ ಆತ್ಮ ... ವನ್ನು ಮಾಡಿಲ್ಲ ... ಸಾಲು ನಮ್ಮಲ್ಲಿ ಸಾಮರ್ಥ್ಯವಿದ್ದರೆ, ದೇಶಸೇವೆಗಾಗಿ ಪ್ರಾಣಗಳನ್ನು ಅರ್ಪಿಸಿಯೇ ನಾವು ನಮ್ಮ ಸಾಮರ್ಥ್ಯವನ್ನು ವ್ಯಕ್ತಪಡಿಸುವರೇ? ನಮ್ಮಲ್ಲಿ ಉಳಿದಿರುವ ಅನೇಕ ಪ್ರಭೇದ ದೋಷಗಳನ್ನೂ ಭಯವನ್ನೂ ಹೊಡೆದೋಡಿಸಲು ನಾವು ಸಮರ್ಥರಾಗೆವು ನಮಗಿನ್ನೂ ಸಂಪೂರ್ಣವಾಗಿ ದಣಿವುಗಳು ಬಂದಿಲ್ಲ. ಅದ್ದರಿಂದ ನನ್ನ ಮತ್ತು ಗುಜರಾಥದ ಮೂಲವಾಗಿ ಎರಡನೇ ಪ್ರಾಂತಗಳ ಜನರು ಅನುಭವಿಸಬೇಕಾಗುತ್ತಿರುವ ಕ್ಲೇಶಗಳಿಗಿಂತ ಹೆಚ್ಚಿಗೆ ಕ್ಲೇಶಗಳು ನಮಗೆ ಬರಲೆಂದು ನಾನು ಬೇಡಿ ಕೊಳ್ಳುತ್ತೇನೆ. ಈ ಎಲ್ಲ ಕ್ಲೇಶಗಳನ್ನು ಸಹಿಸಿ ಆತ್ಮ ಶಕ್ತಿಯನ್ನು ಹೊಂದಿದ ಭಾರತವೇ ಭೂಮಿಯು ಮೇಲೆ ಮಿನುಗಲು ಯೋಗ್ಯವಾಗುತ್ತದೆ. ಇಂಥ ಆತ್ಮಶುದ್ಧಿಯಿಂದ ಬಂದ ಶಕ್ತಿಯಿಂದಲೇ ಮುಸಲ್ಮಾನರ ಹಾಗು ಪಂಜಾಬದ ಗಾಯಗಳನ್ನು ಮಾಯಿಸಲು ನಾವು ಸಮರ್ಥರಾಗುತ್ತೇವೆ. ಇದರಲ್ಲಿಯೇ ನಮ್ಮ ಸ್ವರಾಜ್ಯವಿದೆ.

ಸಾರಾಂಶ ಸರಕಾರವು ನನ್ನನ್ನು ಹಿಡಿದೊಯ್ದರೆ ಜಯ ... ದರಿಂದ ನಾವು ವಸ್ತ್ರವನ್ನು ಮಾಡಿಕೊಳ್ಳಬಾರದು; ಹಾಗು ಆಕಾಂತರಾಗಿ ಮುಚ್ಚಿದ ... ಗಳು ನನ್ನನ್ನು ಹಿಡಿದೊಯ್ದ ಮೇಲೆ ನಮ್ಮಲ್ಲಿ ಈ ವರೆಗೂ ಉಳಿದಿರುವ ... ಇಲ್ಲದಾಗುವದರಿಂದ ಯಾವತ್ತು ಬಂಧು ಭಗಿನಿಯರು ಸ್ವಯಂಸೇವಕರಾಗುವರೆಂದೂ, ನಾನು ಇಚ್ಛಿಸುತ್ತೇನೆ. ನೀವೆಲ್ಲ ಆ ಕೈಮಗ್ಗಗಳು ತೆಗೆಯುತ್ತ ಕೈನೂಲಿನಿಂದ ನಡೆದ ಬಟ್ಟೆಗಳನ್ನೇ ಹಾಕಿಕೊಂಡು ಪೂರ್ಣವಾಗಿ ನಿರ್ಭಯರಾಗಿರತಕ್ಕದ್ದು.

ಸುರತದ ಮ್ಯುನಿಸಿಪಾಲಿಟಿಯು ಒಳ್ಳೇ ಸಾಮರ್ಥ್ಯವನ್ನು ತೋರಿಸಿದೆ ಯಾವತ್ತು ನಾಗರಿಕರು ಸಾವಧಾನಗಳೂ ತಮ್ಮ ಪ್ರತಿನಿಧಿಗಳಿಗೆ ಬೆಂಬಲವಾಗಿ ರುವದು ಅತ್ಯವಶ್ಯವು. ನೀವು ಶಿಕ್ಷಣವನ್ನು ಸ್ವತಂತ್ರ ಮಾಡಿರುವಿರಿ ಬಿಡದು ನಿಜ, ... ಇಷ್ಟರಿಂದ ಸಾಕಾಗದು. ಯುಕ್ತಿಯೂ ಆತ್ಮವಿಶ್ವಾಸವೂ ಒಬ್ಬರಿಗೆ ಒಬ್ಬರಿಗೆ ನಂಬಿಗೆಯೂ ಅವಶ್ಯವಾಗಿರತಕ್ಕದು. ನಮ್ಮ ಪಾಠಶಾಲೆಗಳನ್ನೂ ಬೀದಿಗಳನ್ನೂ ಸ್ವಚ್ಛವಾಗಿಡತಕ್ಕದ್ದು. ಬೇನೆಯವನ್ನು ಶುಶ್ರೂಷಿಸತಕ್ಕದ್ದು, ಮತ್ತು ಈ ಎಲ್ಲ ಕೆಲಸಗಳಿಗಾಗಬೇಕಾಗುವ ಹಣವನ್ನು ಕೂಡಿಸಿ ಅದನ್ನು ಯೋಗ್ಯ ರೀತಿಯಿಂದ ವೆಚ್ಚ ಮಾಡತಕ್ಕದ್ದು.

ಈ ಕಾರ್ಯದಲ್ಲಿ ಸರಕಾರದ ಇಲ್ಲವೆ ಸರಕಾರಿ ಶಾಲೆಗಳ ಅವಶ್ಯಕತೆಯೇನಿರುವದು? ದುರ್ಭಾಗ್ಯದಿಂದ ನಮ್ಮ ಆತ್ಮವಿಶ್ವಾಸವು ನಾಶವಾಗಿತ್ತು, ಮಹಾಜನಗಳು ... ಆಗಿದ್ದರು, ಇತರ ಜನರು ... ಗಳಾಗಿದ್ದರು. ಇದರಿಂದ ಸರಕಾರ ತನ್ನ ಇಷ್ಟವನ್ನು ಸಾಧಿಸಿಕೊಂಡಿತು. ಸುರತದ ನಗರಿಕರು ನನ್ನಿಗೆ ವಿಚಾರ ಮಾಡಿ ಸ್ವೇಚ್ಛಾಪೂರ್ವಕವಾಗಿ ನಿರ್ಧರಿಸಿದಷ್ಟು ಹಣವನ್ನು ಮಹಾಜನಗಳಿಗೆ ಒಪ್ಪಿಸಬೇಕು, ಮತು ಆ ಹಣವನ್ನು ಮಹಾಜನಗಳು ನಾನು ತೋರಿಸಿದ ಮಾರ್ಗದಿಂದ ... ಪ್ರಾಮಾಣಿಕತನದಿಂದಲೂ ಜಾಣತನದಿಂದಲೂ ವೆಚ್ಚ ಮಾಡುತ್ತ ಹೋಗಬೇಕು. ಅಂದರೆ ನಿಮ್ಮ ಮ್ಯುನಿಸಿಪಾಲಿಟಿಯು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿದಂತಾಗುವದು. ಸ್ವಾಧೀನತೆಯನ್ನು ಮಾಡಿಕೊಂಡು ಪರಾಧೀನತೆಯನ್ನು ತೆಗೆದುಕೊಂಡರೆ ಅದು ಪ್ರಜೆಗಳ ಮ್ಯುನಿಸಿಪಾಲಿಟಿಯೆನಿಸದು ಅದು ಸರಕಾರೀ ಮುನಿಸಿಪಾಲಿಟಿಯೇ ಆಗುವದು.

ಸುರತದ ರಹಿವಾಸಿಗಳೆಲ್ಲರು ತಮ್ಮ ನಿಷ್ಠೆಯನ್ನು ದೃಢವಾಗಿಟ್ಟುಕೊಂಡು ಈಗಿನ ಪರಿಗೆ ನಡೆದ ಕೆಲಸಕ್ಕಿಂತ ಹೆಚ್ಚಿನ ಕೆಲಸವನ್ನು ಮಾಡಿ ಸುರತದ, ಗುಜರಾಥದ ಮತ್ತು ಅಖಿಲ ಭಾರತದ ಕೀರ್ತಿಯನ್ನು ಬೆಳಗುವರೆಂದು ನಾನು ಆಶಿಸುತ್ತೇನೆ.

(ನವಜೀವನ) ಮೋ. ಕ. ಗಾಂಧಿ.

## ಅಲ್ಲೀಬಂಧುಗಳು

ಅಧಿಕಾರಿಗಳು ಕೆಳಗೆ ಕಾಣಿಸಿದ ಕರಾಚಿಯ ಹಂತಿಯನ್ನು ನಿರಾಕರಿಸಿದ್ದರಿಂದ ಅಪ್ರೋಕ್ಷನಿಂದ ನನಗೆ ತಿಳಿದಿದೆ:—

"ಮೌಲಾನಾ ಮಹಮ್ಮದ ಅಲ್ಲೀಯವರ ತೂಕವು ೨೫ ಪೌಂಡಿನಷ್ಟು ಕಡಿಮೆಯಾದೆ. ರಾತ್ರಿಯಲ್ಲಿ ದೀಪವನ್ನು ಕೊಡಬೇಕೆಂದು ಮ್ಯಾಜಿಸ್ಟ್ರೇಟರೂ ಡಾಕ್ಟರರೂ ಶಿಫಾರಸು ಮಾಡಿದ್ದರೂ ಕೂಡಾ ಜೇಲದ ಅಧಿಕಾರಿಯು ಅದಕ್ಕೆ ವಿರೋಧಿಯಾಗಿದ್ದು ಹಾಗೆ ಮಾಡಲು ಅಪ್ಪಣೆಯನ್ನು ಕೊಟ್ಟಿರುವದಿಲ್ಲ.

"ಮೌಲಾನಾ ಮಹಮ್ಮದಲ್ಲಿಯವರು ಮಧುಮೇಹಗ್ರಸ್ತರಾಗಿದ್ದರಿಂದ ಅವರಿಗೆ ಭೈಮುನಗನ್ನಾಗಲೀ "ಎಕ್‌ಸ್ಟ್ರಾಕ್ಟ ಆಫ ಬೀಜನ್ನಾಗಲೀ" ಕೊಡಬೇಕೆಂದ ಡಾಕ್ಟರರು ಹೇಳಿದ್ದಾರೆ ಆದರೆ ಆ ಮೇಲಧಿಕಾರಿಯು ಅದಕ್ಕೆ ಅಪ್ಪಣೆ ಕೊಡನು. ಕಡೆಗೆ ಪ್ರತಿದಿನ ಒಂದಾಣೆ ಬೆಲೆಬಾಳುವ ಭೈಮುಗನ್ನು ಕೊಟ್ಟಿರುವನು. ಪುನಃ ಮೌಲಾನರವರ ಆಗ್ರಹದ ಮೂಲಕ ಎಂಡಾಣೆ ಬೆಲೆಬಾಳುವಷ್ಟು ಕೊಡುತ್ತಿರುವನು. ಇದೇ ಅವರ ಮುಂಜಾನೆಯ ಊಟವು.

"ಇಷ್ಟುದಿನ ನಡೆದ ಪದ್ಧತಿಯನ್ನು ಬಿಟ್ಟು ಶನಿವಾರ ೨ನೇ ತಾರೀಖಿನಿಂದ ಜೇಲಿನಲ್ಲಿಯ ಅಪರಾಧಯುಕ್ತರಾದ ಸಾಮಾನ್ಯ ಕೈದಿಗಳಂತೆ ಮೌಲಾನಾ ಶೌಕತಲ್ಲೀ ಡಾ. ಕಿಚಲೂ ಮೌಲ್ವೀ ಅನಸಾರಿ ಅಹ್ಮದ ಮತ್ತು ಪೀರ ಗುಲಾಮ ಮಜೀದ ಇವರೆಲ್ಲ ಲಂಗಟಿ ವನ್ನೊಂದೇ ಧರಿಸಿ ತಮ್ಮ ದೇಹವನ್ನು ತೋರಿಸಬೇಕೆಂದು ಅಪ್ಪಣೆಮಾಡಿದರು. ಕೈದಿಗಳೆಲ್ಲ ಹೀಗೆ ಬತ್ತಲೆಯಾಗಿ ಲಂಗಟವನ್ನೂ ಸಹ ಸಡಿಲಾಗಿ ಕಳಕ್ಕೆ ಇಳಿಬಿಟ್ಟು ತಮ್ಮ ಎರಡೂ ಕೈಗಳನ್ನು ಮೇಲಕ್ಕೆತ್ತಿ ಮುಖವನ್ನು ತೆರೆದು ಎಲ್ಲಿಯೂ ಏನನ್ನೂ ಬಚ್ಚಿಕೊಂಡಿಟ್ಟಿರುವದಿಲ್ಲವೆಂಬದನ್ನು ತೋರಿಸಬೇಕಾಗುತ್ತದೆ ಈ ಕಾಲದ ವರೆಗೆ ಇಂಥ ಅಪಮಾನಕ್ಕೆ ಗುರಿಯಾಗುವ ಪ್ರಸಂಗವನು ಮೌಲಾನಾ ಶೌಕತಅಲ್ಲೀ ಮತ್ತೂ ಅವರ ಮಿತ್ರರಿಗೆ ಉಂಟು ಮಾಡಿರಲಿಲ್ಲ ಶನಿವಾರ ೨ನೇ ತಾರೀಖಿನ ದಿನ ಅವರು ಈ ಬಗೆಯಿಂದ ನಡೆಯಲು ನಿರಾಕರಿಸಿದರು. ಸೋಮವಾರ ೩ನೇ ತಾರೀಖಿನವಿನ ಅವರ ದೇಹವನ್ನು ಬಲಾತ್ಕಾರದಿಂದ ಪರೀಕ್ಷಿಸಿದರು. ವಕ್ರ ಹೃದಯದ್ವಾವಕವಾದ ಈ ತರದ ಅಪಮಾನಕ್ಕೆ ಸ್ವಸಂತೋಷದಿಂದ ಗುರಿಯಾಗಲು ನಿರಾಕರಿಸಿದರೆಂದು ಮೇಲೆ ಹೇಳಿದ ಮುಖಂಡರು ಒಂದು ತಿಂಗಳವರೆಗೆ ಒಂಟಿಗರಾಗಿ ಬೇರೆ ಬೇರೆ ನಿರ್ಜನ ಕೋಣೆಯಲ್ಲಿರತಕ್ಕದ್ದೆಂದು ಶಿಕ್ಷಿಸಿದ್ದಾನೆ. ಹೀಗೆ ನಿರ್ಜನ ಸ್ಥಳದಲ್ಲಿ ಒಂಟಿಗರಾಗಿರುವಾಗ ರಾತ್ರಿಕಾಲದಲ್ಲಿ ಮಾತ್ರ ಹಾಸಿಗೆಯನ್ನು ಕೊಡುತ್ತಾರೆ ಅದಾದರೂ ಸಂಕಷ್ಟಾಗಿರುವದಿಲ್ಲ. ಅದ್ದರಿಂದ ತಮ್ಮ ಧರ್ಮಮಾರ್ಗಕ್ಕೆ ವಿರುದ್ಧವಾಗಿ ಸ್ತ್ರೀ...

ಸಿರದ ಸ್ಥಳದಲ್ಲಿಯೇ ಮೌಲಾನಾ ಶೌಕತ ಅಲೀ ಮತ್ತು ಅವರ ಮಿತ್ರರು ತಮ್ಮ ಪ್ರಾರ್ಥನೆಯನ್ನು ಮಾಡಬೇಕಾಯಿತು ಮೌಲ್ವಿ ನಿಸಾರ ಅಹ್ಮದರವರು ಪ್ರಾರ್ಥನೆ ಮಾಡ ಬಾಗಲೇ ಮೇಲೆ ಹೇಳಿದಂತೆ ಪರೀಕ್ಷಿಸಲ್ಪಟ್ಟರು.

“ಮೌಲಾನಾ ಮಹಮ್ಮದ ಅಲ್ಲಿಯವರು ತಮ್ಮನ್ನಾದರೂ ಅದೇ ತರದಿಂದ ನಡೆಸಿಕೊಳಬೇಕೆಂಬುದೂ ಈ ಬಗೆಯ ಭಿನ್ನ ಆಚರಣೆಯು ಸರಿಯಲ್ಲವೆಂದೂ ಒತ್ತಿ ಹೇಳಿದ್ದಾರೆ

“ಹಿಂದನಿವಾಸಿಗಳೆಂಬ ಅದೇಕೆ? ಮಾನವೀ ಪ್ರಾಣಿಗಳೆಂಬ ಅಭಿಮಾನದ ದೃಷ್ಟಿಯಿಂದ ತಮ್ಮ ಮಾನಕ್ಕೂ ಯೋಗ್ಯತೆಗೂ ಮುಖ್ಯವಾಗಿ ಧರ್ಮಕ್ಕೂ ಕಿಂಚಿತ್ತಾದರೂ ಭಂಗಉಂಟಾಗದೇ ಇರುವಂಥ ಸೆರೆಮನೆಯ ಎಲ್ಲ ಕಟ್ಟಳೆಗಳನ್ನೂ ಮನ್ನಿಸಲಿಕ್ಕೆ ಮುಸಿಂಡರು ಸಿದ್ಧರಿದ್ದಾರೆ.

“ಈ ವಿಷಯವನ್ನು ಸರಕಾರಕ್ಕೆ ಅರುಹಿ ಆಮೇಲೆ ಅದನ್ನು ಅಮಲಿನಲ್ಲಿ ತರಬೇಕೆಂದು ಎಷ್ಟು ವಿಧವಾಗಿ ಹೇಳಿದರೂ ಕೂಡ ಜೇಲಿನ ಅಧಿಕಾರಿಗಳು ಹಾಗೆ ಮಾಡಲು ನಿರಾಕರಿಸಿದರು.”

ಜಾಣತನದ ವಿವೇಕ ನೀತಿಯನ್ನು ಬದಿಗಿರಿಸಿ ಸೆರೆಮನೆಯ ಕಟ್ಟಳೆಗಳನ್ನು ಬಲಾತ್ಕಾರದಿಂದ ಅಮಲಿನಲ್ಲಿ ತರಲೇಬೇಕೆಂಬ ಹೊಯ್ದು ಕಬ್ಬಿಣದಂತೆ ಗಟ್ಟಿಯಾದ ಕಠೋರ ನೀತಿಯನ್ನೇ ಅನುಸರಿಸಬೇಕೆಂದು ಜೇಲ ಅಧಿಕಾರಿಗಳಿಗೆ ಆಜ್ಞೆಯಾಗಿದೆಂಬುದು ಇದರಿಂದ ಸ್ಪಷ್ಟವಿದೆ. ಮೌಲಾನಾ ಶೌಕತಅಲೀ ಯವರಾಗಲೀ ಇಲ್ಲವೇ ಉನ್ನತವಾದ ಭಾವನಾಸಂಪನ್ನರಾದ ಉಳಿದ ಕೈದಿಗಳಾಗಲೀ ಜೇಲಕಸ ಎದುರಿನಲ್ಲಿಯೂ ತಮ್ಮ ತಮ್ಮೊಳಗೂ ಬತ್ತಲೆಯಾದಂತೆ ನಿಂತು ತಮ್ಮ ಮಾನಕ್ಕೆಚನ್ನಾಗಿ ಭಂಗತರುವಂಥ ಪರೀಕ್ಷೆಗೆ ಒಳಗಾಗುವದೆಂದರೇನು? ನೀವೇ ವಿಚಾರಿಸಿರಿ; ಸಾಧಾರಣವಾಗಿ ಜೇಲಿನ ಕಟ್ಟಳೆಗಳೆಂದರೆ ಘೋರವಾದ ಅಪರಾಧಮಾಡಿದ ಜನರಬಗ್ಗೆ ಪಾಲಿಸತಕ್ಕಂಥವು ಮತ್ತು ಆ ಜನರಿಗೆ ಅವುಗಳ ಅವಶ್ಯಕತೆಯೂ ಉಪಯುಕ್ತತೆಯೂ ಇರುವದೆಂಬುದನ್ನು ನಾನು ತಿಳಿಯಬಲ್ಲೆ. ಆದರೆ ರಾಜಕೀಯ ಚಳವಳಿಯಲ್ಲಿ ಭಾಗ ತೆಗೆದುಕೊಂಡಿದ್ದರೂ ಕೂಡ ಒಳ್ಳೇ ಸ್ವಭಾವದ ನಾಗರಿಕರೆಂದೂ ಇನ್ನು ಕೆಲವರು ಪ್ರತಿಷ್ಠಿತ ರಾಷ್ಟ್ರಭಕ್ತರೆಂದೂ, ಗೊತ್ತಾಗಿದ್ದ ಜನರಮೇಲೆ ಸಹ ಇಂಥ ಕಟ್ಟಳೆಗಳನ್ನು ಬಲಾತ್ಕಾರದಿಂದ ನಡಿಸುವದೆಂದರೆ ಶುದ್ಧವಾಗಿ ಹುಚ್ಚತನವೇ ಎಂದೆನ್ನಬೇಕಾಗುತ್ತದೆ. ಈ ಕಟ್ಟಳೆಗಳಂತೆ ನಡೆಸಿಕೊಳ್ಳುವದೆಂದರೆ ವಸ್ತುಸ್ಥಿತಿಯನ್ನು ಲಕ್ಷ್ಯಕ್ಕೇ ಇಲ್ಲದ ದುರ್ದಶೆಗೆ ಚೆಲ್ಲಿ ನಕೊಡುವದೇ ಸರಿ. ಎಂಥ ಸದ್ಗುಣಿಯಿದ್ದರೂ ಸೆರೆಮನೆಯ ಆಳಾದನೆಂದರೆ ಅವನನ್ನು ಸರ್ವ-ಸಾಧಾರಣವಾದ ಜೇಲಿನ ಕಟ್ಟಳೆಗಳಿಗೆ ಗುರಿಮಾಡತಕ್ಕದ್ದು ಸರಿಯಾಗಿದೆ. ಅವರು ತಾವಾಗಿಯೇ ಸೆರೆಮನೆಗೆ ಹೋಗುವಂತೆ ಪ್ರಯತ್ನ ಬಟ್ಟವರಂತೂ ಯಾತೀ ಇಲ್ಲ ಅನಾನುಕೂಲತೆಯು ಒದಗುವದೆಂಬುದನ್ನು ಮೊದಲೇ ಕಂಡುಹಿಡಿದು ಅದರಬಗ್ಗೆ ಸ್ವಲ್ಪಾದರೂ ಚಿಂತಿಸಕೂಡದು. ಸ್ವಲಿಖಿತವಾಗಿ ಸ್ವಸಂತೋಷದಿಂದ ಅವರು ಜೇಲ ಅಧಿಕಾರಿಗಳಿಗೆ ಮನ್ನಣೆಯನ್ನು ಕೊಡದಿದ್ದರೆ ಬಲಾತ್ಕಾರದಿಂದ ಅದನ್ನು ಅವರಿಂದ ತೆಗೆದುಕೊಳ್ಳತಕ್ಕದ್ದು ಸರಿ ಆದರೆ ಶಿಸ್ತು ಕಟ್ಟಳೆಗಳೆಂಬ ಹೆಸರಿನಿಂದ ಕೈದಿಗಳನ್ನು ಅಪಮಾನಕ್ಕೆ ಗುರಿಮಾಡುವದು ಒಳಿತಲ್ಲ. ಅನಾನುಕೂಲತೆಯೆಂದರೆ ಯಾತನೆಯಲ್ಲ. ಮತ್ತೂ ಮನ್ನಣೆಯೆಂದರೆ ಹೊಟ್ಟೆ ಸರಿಯಲಿಕ್ಕೆ ಹಚ್ಚಿಸುವದಲ್ಲ. ಆದ್ದರಿಂದ ಬೇಡಿಹಾಕಲಿ, ನಿರ್ಜನ ಸ್ಥಳದಲ್ಲಿ ಬಂಧಿಸಿ ಇಡಲಿ ಅಥವಾ ಗುಡಾಣದಲ್ಲಾದರೂ ಹಾಕಲಿ, ಈ ಎಲ್ಲತರದ ಕಷ್ಟಕ್ಕೆ ಎದೆಕೊಟ್ಟು ಅಸಹಯೋಗಿಗಳಾದ ಕೈದಿಗಳು ಶಿಸ್ತೆಂಬ ಹೆಸರಿನಿಂದ ಬತ್ತಲೆಯಾಗಲು ಹೇಳಿದರೆ ಅವಶ್ಯವೇವ ನಿರಾಕರಿಸಬೇಕು. ಅನಾನುಕೂಲತೆಯೆಂಬ ಹೆಸರಿನಿಂದ ಗೊಡ್ಡನಾತ ಹೊರಡುವ ಬಟ್ಟೆಯನ್ನು ಧರಿಸಲು ಹೇಳಿದರೆ, ಇಲ್ಲವೆ ಅಶುದ್ಧವಾದ ಅಥವಾ ಪಚನಕ್ರಿಯೆಗೆ ಅಯೋಗ್ಯವಾದ ಆಹಾರವನ್ನು ಕೊಟ್ಟರೆ ಸರ್ವಥಾ ನಿರಾಕರಿಸಬೇಕು. ಮತ್ತೂ ಮನ್ನಣೆಯೆಂಬ ಹೆಸರಿನಿಂದ ಕೈಯನ್ನೆತ್ತಿ ಅಥವಾ ದೇಹವನ್ನು ಸುತ್ತಿ ಕುಳಿತುಕೊಂಡು ಅಥವಾ “ಸರಕಾರ ಏಕ ಹೈ” “ಸರಕಾರ ಸಲಾಮು” ಎತಿ ಕೂಡಾಗಿ ಜೇಲ ಅಧಿಕಾರಿಯು ಹಾದು ಹೋಗುವಾಗ ನಮಸ್ಕರಿಸಬೇಕೆಂದು ಹೇಳಿದರೆ ಅದನ್ನು ಸಹ ನಿರಾಕರಿಸತಕ್ಕದ್ದು. ಸೆರೆಮನೆಯಲ್ಲಿಯೇ ನಮ್ಮ ಬಲವನ್ನು ಪರೀಕ್ಷಿಸಲು ಕಠಿಣತರವಾದ ಯಾತನೆಗಳಿಗೆ ನಮ್ಮನ್ನು ಸರಕಾರದವರು ಗುರಿಮಾಡಿ ಅದರಿಂದ ನಮ್ಮನ್ನು ಹತವೀರ್ಯರನ್ನಾಗಿ ಮಾಡಬೇಕೆಂದಿಟ್ಟಿದ್ದಾರೆ ಅಪಮಾನಕ್ಕೆ ಈಡಾಗುವಂಥ ಎಲ್ಲ ಪ್ರಸಂಗಗಳನ್ನೂ ನಾವು ಆದರ ಭಾವದಿಂದ ಸರ್ವದಾ ನಿರಾಕರಿಸತಕ್ಕದ್ದು; ಮತ್ತೂ ವ್ಯವಸ್ಥಿತ ರೀತಿಯಿಂದ ನಮ್ಮ ಮಾನಭಂಗ ಮಾಡಬೇಕೆಂದು ಸರಕಾರದವರು ಏರ್ಪಾಡು ಮಾಡಿದ್ದಕ್ಕೆ ಸಜವಾದರು ಎದೆಕೊಟ್ಟು ನಿಂತುಗೊಳ್ಳಲಿಕ್ಕೂ ಎಲ್ಲತರದ ಶಾರೀರಕ ಯಾತನೆಗಳನ್ನು ಸಹಿಸಲಿಕ್ಕೂ ನಮಗೆ ಸಾಮರ್ಥ್ಯವನ್ನು ಕೊಡುವದಕ್ಕಾಗಿ ನಾವು ದೇವರಲ್ಲಿ ಮೊರೆ ಇಡಬೇಕು. ಅಭಿಮಾನ ಶಾಲಿಗಳಾದ ಅಲಿಬಂಧುಗಳೂ, ಅವರ ಮಿತ್ರರೂ ಕರಾಚೀ ಜೇಲನ್ನು ಪವಿತ್ರವನ್ನಾಗಿ ಮಾಡಲಿ ಮತ್ತು ಆ ಅಭಿಮಾನಶಾಲಿಯಾದ ಸಿಂಧೀ ಪ್ರೊಫೇಸರ ಕಿಶಾಲನೀಯವರು ಕಾಶಿಯಲ್ಲಿ ಆ ಜೇಲನ್ನು ಪವಿತ್ರವನ್ನಾಗಿ ಮಾಡಲಿ; ಯಾಕೆಂದರೆ ಕಾಶೀ ಜೇಲಿಗೆ ಒಯ್ಯಲ್ಪಟ್ಟ ಅಸಹಕಾರಿಗಳನ್ನು ಇಲ್ಲದ ಸಲ್ಲದ ಅಪಮಾನಕ್ಕೆ ಹೇಳ ಹೆಸರಿಲ್ಲದಂತೆ ಗುರಿಮಾಡುವವರಿಂದ ಇದನ್ನು ನೋಡುವ ಸಹ ಪ್ರೊಫೆಸರ ಕಿಶಾಲನೀ ಮತ್ತು ರ ತಿಸ್ಯರಿಗೆ ಅಸಹ್ಯವಾಗಿದೆಯೆಂದು ಉತ್ತರ ಸಂಯುಕ್ತ ಪ್ರಾಂತದಲ್ಲಿ ರಾಜಯ ಕೈದಿಗಳ ಸ್ಥಿತಿಯು ಈಗ್ಗೆ ಬಹು ಮಾರ್ಗದಾಗಿದೆಂದು ಜನರ ಕಲ್ಪನೆಯಿರಲು ವಿಲಾಗಿ ಆಗ್ರಾ ಮತ್ತು ಲಖನೌ ಪಟ್ಟಣಗಳ. ಸ್ಥಿತಿಯು ತುಸು ತೃಪ್ತಿಕರವಾಗಿ ಯಾ ಸಮಾಧಾನಕರವಾಗಿರಲು ಕಾಶಿಯಲ್ಲಿ ಇತರ ಸ್ಥಳಗಳಲ್ಲಿಯೂ ಹಾಗಿರದೇ ಇರುವ ನಮ್ಮನ್ನು ಮುಗ್ಧ ಮತಿಗಳನ್ನಾಗಿ ಮಾಡಡೆ. ಸ್ಥಾನಿಕ ಅಧಿಕಾರಿಗಳು ಯ ವಶದಲ್ಲಿಯೂ ಇರದೇ, ಮೇಲಧಿಕಾರಿಗಳ ಆಜ್ಞೆಯನ್ನು ಕೂಡ ಮನ್ನಿಸದೇ, ಸ್ವೇಚ್ಛಾಚಾರಿಗಳಾಗಿ ತಾವೇ ಕಟ್ಟಳೆಗಳನ್ನು ಮಾಡುತ್ತಾರೆಂಬುದೇ ಅದರ ಇಂಗಿತವೋ? ಇದು ಹಿಂದುಸ್ಥಾನದ ಕಾರಾಗೃಹಗಳಲ್ಲಿ ಸಾಮಾನ್ಯ ಅಪರಾಧಿಗಳಾದ ಕೈದಿಗಳು ಯಾವ ಗೆಯ ಅವರ್ಣನೀಯವಾದ ಯಾತನೆಗಳ ಸಹಿಸಬೇಕಾಗುತ್ತದೆಂಬುದನ್ನು ವಾಚಕರೇ ಕಿಸಲಿ, ರಾಜಕೀಯ ಕೈದಿಗಳಿಗೆ ಮಾ ಈತರದ ಉಪದ್ರವನ್ನು ಕೊಡುತ್ತಾರೆಂದು ನೇನು ನಂಬಲಾರೆ ಆದರೆ ಅದು ವಿಶ್ವ ವಾಗಿ ನಾನು ನಂಬುವದೇನಂದರೆ, ನಿಜ ಗಿ ಅಪರಾಧ ಮಾಡಿದ ಸಾಮಾನ್ಯ ಕೈ ಗಳನ್ನು ಇದಕ್ಕೂ ಹೆಚ್ಚು ಕೀಳು ರೀತಿ ದ ನಡಿಸಿಕೊಳ್ಳುತ್ತಾರೆ. ಯಾಕೆಂದರೆ ಬ ವಾಸದಲ್ಲಿ ಬೆದರುತ್ತಾ ಮತ್ತು ಜೇಲರರೂ ದರೂ ಸಾಮಾನ್ಯವಾಗಿ ತಮ್ಮ ಯೋಗ್ಯತೆಯ ತಿಳಿಯದೇ ಯಂತ್ರಿತರಾಗಿದ್ದವರಿಂದ ಅವರು ಜನ ಕರಾಗಿ, ಬಹು ನಿರ್ದ ದಿಂದ ನಡಸಿಕೊಳ್ಳುತ್ತಾರೆ ರಗ ನಾತ್ರವನ್ನು ಗಲೀ ರ್ಥ ಈ ಸರಕಾರದ ಪದ್ಧತಿಯನ್ನು ಸಮರ್ಥಿಸುತ್ತ ಈ ಸರಕಾರವೆಂದರೆ ಪದ್ಧತಿ ಅತಿಶಯ ಕ್ಷುಲ್ಲಕವಾದ ಖ್ಯಾಕವಾಗಿದ್ದರೂ ಲಕ್ಷಗಟ್ಟಲೆ ಪ್ರಾಣಿಗಳನ್ನು ಅದು ತನ್ನ ವಶದಲ್ಲಿರಿಸಿಕೊಂಡು ಕಟ್ಟಳೆ ಶಾಂತತೆ ಎಂಬ ಹೆಸರಿನಲ್ಲಿ ಇ ಸೋಗನ್ನು ಹಾಕಿಕೊಂಡು ನಿಜವಾಗಿ ತಾ ಅಲ್ಪ ಸಂಖ್ಯಾಕರಾಗಿದ್ದರಿಂದ ತನ್ನ ಸ್ವಾರ್ಥ ನ್ನ ಸಾಧಿಸುತ್ತಬಂದು ಅಖಂಡ ಮಾನ ಧರ್ಮದ ಮಹಾಪಾತಕಿಯಾಗಿದೆ.—ಈ ಪಾಪಾತಿಕೀ ಕೃತಿಗಳು ಜನರಿಗೆ ಗೊತ್ತಾದೇ ಸಹ ಹೋಗುತ್ತಿದ್ದವು ಆದರೆ ಅಸಹಯೋಗಿಗಳ ಉಪಮರ್ದನದಿಂದ ಅವುಗಳ ನೀಚ ತಿಗಳು ಬೈಲಿಗೆ ತಾವಾಗಿಯೇ ಬರಹ ಇಂಥ ಸರಕಾರವನ್ನು ನಾವು ಅಪ್ರಿಯ ಕ್ಕಾಗಿ ಖಂಡಿತವಾಗಿಯೂ ನಾವು ನಮ್ಮ ನಿರ್ಮಾಣಮಾಡಿದ ಆ ಜಗದೀಶನೆ

# “ಗುಂಡಿನ ಹೊಡತದಿಂದ ಸಾಯಬೇಕೆಂದಿಚ್ಛಿಸುತ್ತೇನೆ.”

ಜೇಲಿಗೆ ಹೋಗಲಿಕ್ಕೆ ನಾನು ಈಗ ಆತುರನಿಲ್ಲ ನಾನು ಗುಂಡಿನಿಂದ ಸಾಯಲು ಇಚ್ಛಿಸುತ್ತೇನೆ ಮತ್ತು ಫಾಸಿಯನ್ನೇರಲು ಇಚ್ಛಿಸುತ್ತೇನೆ ಅನೇಕ ಗುಜರಾಥಿಗಳೂ ಇದನ್ನೇ ಇಚ್ಛಿಸುವರೆಂದು ನಾನೆಣಿಸುತ್ತೇನೆ ಈ ಸರಕಾರದ ಕೈಯಿಂದ ನನಗೆ ಮರಣವು ಪ್ರಾಪ್ತವಾಗಬೇಕೆಂದು ಈಗ ಬಹು ದಿವಸಗಳಿಂದ ಪ್ರಭುವಿಗೆ ಬೇಡಿಕೊಳ್ಳುತ್ತಲಿದ್ದೇನೆ.

ಹಿಂದುಸ್ಥಾನದ ಬೇರೆ ಬೇರೆ ಪ್ರಾಂತಗಳಲ್ಲಿ ಭಾರತವಾಸಿಗಳು ಭೋಗಿಸುತ್ತಿರುವ ಕ್ಲೇಶಗಳ ಕಥೆಯನ್ನು ಕೇಳಿ ಅದನ್ನು ಸಹಿಸುವದು ದುಷ್ಕರವಾಗಿದೆ. ಕೆಲವರ ಜಿಂದಿಗೆಯು ಜಪ್ತ ಮಾಡಲ್ಪಟ್ಟದೆ ಹಲವರಿಗೆ ಛಟಿಕೆಯ ಪೆಟ್ಟುಗಳು ಬಿದ್ದಿವೆ ಸರಕಾರವು ಜನರನ್ನು ಹೊಡೆದು ದೂಡಿ ಸಭೆಗಳನ್ನು ಮುರಿಯುತ್ತಿದೆ ಇವೆಲ್ಲವನ್ನು ಸಹಿಸುವದೆಂತು? ಇವುಗಳ ನಿವಾರಣೆಯ ಉಪಾಯವು ಕಾರಾಗೃಹವಲ್ಲ, ಆದರೆ ಜಲಿಯನ್‌ವಾಲಾ ಬಾಗವು ಸರಕಾರದ ಈ ಉಪದ್ರವು ತೀವ್ರವಾಗಿ ನಿಲ್ಲದಿದ್ದರೆ ಜಲಿಯನ್‌ವಾಲಾ ಬಾಗದ ಪುನಃ ಆವೃತ್ತಿಗಳನ್ನು ಗುಜರಾಥದಲ್ಲಿ ಮಾಡಿಸಬೇಕೆಂದು ನಾನು ಬಯಸುತ್ತೇನೆ.

( ಅಗ್ರಲೇಖ ನೋಡಿ.) ಮೋಹನದಾಸ ಕರಮಚಂದ ಗಾಂಧಿ

---

...ತುಕೊಂಡು ಅವನಿಗೆ ಸಮರ್ಪಕವಾದ ಉತ್ತರವನ್ನು ಕೊಡಬೇಕಾಗುವದು.

ಕೈದಿಗಳನ್ನು ಅಪಮಾನಕ್ಕೆ ಗುರಿಮಾಡುವದನ್ನು ಇತ್ತ ನೋಡಿದರೆ, ಅತ್ತ ಮೌಲಾನಾ ...ಹಮ್ಮದ ಅಲ್ಲಿಯವರು ಜಡ್ಡಿನಿಂದ ಬಳಲುತ್ತಿರುವದಕ್ಕಾಗಿ ಜೇಲಿನ ಡಾಕ್ಟರರು ಹೇಳಿದಂಥ ಪಥ್ಯಕರವಾದ ಆಹಾರವನ್ನು ಸಹ ಅವರಿಗೆ ಕಂಪನಿಯ ಅಧಿಕಾರಿಗಳು ಪೂರೈಸಿಕೊಡದಿರುವ ಹೀನಕೃತಿಯನ್ನು ಟೀಕಿಸುವದೆಂದರೆ ಕ್ಷುದ್ರವಾಗಿ ತೋರುತ್ತದೆ. ಮೌ...ನರವರಿಗೆ ಚಾಜನ್ನಾಗಲೀ ಸಾಕಷ್ಟು ಧೈಮೂ...ನ್ನಾಗಲಿ ಪೂರೈಸಿಕೊಟ್ಟಿಲ್ಲವೆಂಬ ಸುದ್ದಿಯು ಸತ್ಯವಾಗಿದೆಯೆಂದೂ ಅದಬಗ್ಗೆ ಏನಾದರೂ ಸಮಾಧಾನಕರವಾದ ಉತ್ತರವಿದೆಯೆಂದೂ ನಾನು ಆಶಿಸುತ್ತೇನೆ.

ಅಲ್ಲಿ ಏನೇ ಸಂಭವಿಸಲಿ; ಜೇಲಿನ ಹೊರಗೆ ...ದ್ದ ಜನರ ಮಾರ್ಗವು ಸ್ಪಷ್ಟವಿದೆ. ನಾವು ...ತಿಬಿತಿಯಿಂದಾಗಲೀ ಅಸತ್ಯ ಮಾರ್ಗದಿಂ...ದಾಗಲೀ ಕೋಪಿಸಕೂಡದು. ಅಂತರ್ಭಾಗದಲ್ಲಿ ಸಹ ಕೊಳೆತಂಥ ಮತ್ತು ಇಂಗ್ಲೀಷರೇ ...ಗಲಿ ಹಿಂದವಾಸಿಗಳೇ ಆಗಲಿ ತಮ್ಮ ಕೃತಿಯಿಂದ ಮಾನವ ಜಾತಿಯನ್ನು ಭ್ರಷ್ಟಮಾಡಿದಂಥ ಪದ್ಧತಿಯ ವಿರುದ್ಧ ನಮ್ಮ ಯುದ್ಧವು ಪ್ರಾರಂಭವಾಗಿದೆ. ಒಂದು ಕೆಟ್ಟ ರೋಗದ ವಿರುದ್ಧವಾಗಿ ನಮ್ಮ ಯುದ್ಧವಿದೆ.

ಇಂಗ್ಲೀಷರೇ ಆಗಲಿ ಹಿಂದೀಯರೇ ಆಗಲಿ ...ಜ್ಞಾನಪೂರ್ವಕವಾಗಿ ಸೈತಾನೀ ವೃತ್ತಿಯನ್ನು ...ಳೆಯುವದು ಶಕ್ಯವಿದೆಯೆಂದು ವಿಚಾರಿಸಲು ನಾನು ನಿರಾಕರಿಸುತ್ತೇನೆ. ಇದಲ್ಲದೇ ತಾವು ...ನಾವ ಮಾರ್ಗವನ್ನು ಹಿಡಿದಿರುವರೆಂಬ ಅ...ವೇ ಅವರಿಗಿಲ್ಲವೆಂದು ನಾನು ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ. ಅವರಲ್ಲಿ ಅನೇಕರು ತಾವು ತಪ್ಪುಗಾರರೆಂಬ ಕಲ್ಪನೆಯನ್ನು ...ಕಿಂಚಿತ್ತಾದರೂ ಧರಿಸಿಲ್ಲವೆಂಬುದೂ ನಿಜವು. ...ದಾಕೆಂದರೆ ಕೆಲಕೆಲವು ಪ್ರಸಂಗಗಳಲ್ಲಿ ಭೀತಿಯನ್ನು ಹುಟ್ಟಿಸಿ, ನಡೆದುಕೊಳ್ಳುವದು ಪ...ಪಕಾರ ಶೀಲವಾದದ್ದೆಂದು ಅವರಲ್ಲಿ ಅನೇಕರು ತಿಳಿದುಕೊಂಡಿರುವ ಶಕ್ಯವಿದೆ. ಇದೇ ಬಗೆಯಾಗಿ ನಾವಾದರೂ ಕೆಲಕೆಲವು ಸಾರಿ ಆತುರತೆಯಿಂದ ಆಚರಿಸುತ್ತೇವೆ. ಹೀಗೆ ಕೆಂದು ಕೇಳಿದರೆ ಆ ತರದ ಅವಶ್ಯಕತೆಯಿದ್ದಿತೆಂಬದೊಂದು ಉತ್ತರವನ್ನು ಕೊಡುತ್ತೇವೆ.

ಮೇಲಿನ ಸಂಗತಿಗಳನ್ನು ಬರೆದ ಮೇಲೆ, ಅಲಿಬಂಧುಗಳು ಬತ್ತಲೆಯಾಗಿ ತಮ್ಮ ದೇಹವನ್ನು ಪರೀಕ್ಷಿಸಿಕೊಳ್ಳಲು ನಿರಾಕರಿಸಿದರೆಂದೂ ಬಲಾತ್ಕಾರದಿಂದ ಅವರ ದೇಹವನ್ನು ಪರೀಕ್ಷಿಸಿದರೆಂದೂ, ಅವರಿಗೆ ನಿರ್ಜನ ಕೋಣೆಯಲ್ಲಿ ಹಾಕುವ ಶಿಕ್ಷೆಯನ್ನು ವಿಧಿಸಿದರೆಂದೂ, ಅಲ್ಲಿಯ ಅಧಿಕಾರಿಗಳು ಅತಿಶಯ ಅಸಭ್ಯ ರೀತಿಯಿಂದ ಆಚರಿಸುತ್ತಿರುವರೆಂದೂ ಪುನಃ ಸುದ್ದಿ ಬಂದಿದೆ ಇದೆಲ್ಲ ಸತ್ಯವಾಗಿದೆಂಬುದು ಸಿದ್ಧವಾದರೆ ನನಗೆ ಬಹಳೇ ದುಃಖವಾಗುವದು. ಪ್ರಸಿದ್ಧರಾದ ಪ್ರಮುಖ ಜನರನ್ನು ತುರಂಗದಲ್ಲಿ ಸರಕಾರದವರು ಒಳ್ಳೇ ಸಭ್ಯವಾದ ರೀತಿಯಿಂದ, ನಡೆಸಿಕೊಳ್ಳುವರೆಂದೂ ಅವರನ್ನು ಯಾವತರದ ಉಪೇಕ್ಷೆಗೆ ಗುರಿಮಾಡಲಾರರೆಂದೂ ತಿಳಿಯಲು ಅವಕಾಶವಿದ್ದಿತು. ಅಲೀ ಬಂಧುಗಳನ್ನು ಇಂಥ ಕೆಟ್ಟ ಬುದ್ಧಿಯಿಂದ ಆಚರಿಸಿಕೊಳ್ಳುವದು ಸತ್ಯವಾಗಿದ್ದರೆ, ಮತ್ತೂ ಅದರಿಂದ ಇಗಿನ ಚಳವಳಿಗೆ ಒಳ್ಳೇ ಕಳೆ ಏರಿದರೆ ಸರಕಾರವು ತನ್ನನ್ನು ತಾನೇ ಅಭಿನಂದಿಸಿಗೊಳ್ಳಬೇಕಾಗುವದು.

ಅಸಹಯೋಗಿಗಳನ್ನು ದೇವರು ಚನ್ನಾಗಿ ಪರೀಕ್ಷಿಸಿ ನೊಡಬೇಕೆಂದು ವಿಚಾರಿಸಿದ್ದು ಈಗಂತೂ ಸ್ಪಷ್ಟವಾಗಿದೆ. ಅಲೀ ಬಂಧುಗಳು ಈ ಸತ್ವ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಬರುವಷ್ಟು ಧೈರ್ಯಶಾಲಿಗಳಾಗಿದ್ದಾರೆಂಬುದನ್ನೂ ಅವರು ಎಳ್ಳಷ್ಟಾದರೂ ಕುಂದದೇ ಜಯಶಾಲಿಗಳಾಗಿ ಬರುವರೆಂಬದನ್ನೂ ನಾನು ಬಲ್ಲೆ. ಕರಾಚಿಯ ಎಲ್ಲ ಕೈದಿಗಳೂ ಆರಿಸಿ ತೆಗೆದಂಥ ಉತ್ತಮ ವೀರರಿದ್ದಾರೆ ಮತ್ತು ತಮ್ಮ ಸಂರಕ್ಷಣೆಯನ್ನು ತಾವೇ ಮಾಡಿಕೊಳ್ಳುವಷ್ಟು ಶಕ್ತಿವಂತರೂ ಇದ್ದಾರೆ. ಅಲೀ ಬಂಧುಗಳೂ ಡಾ ಕಿಚಲೂರವರೂ, ಪೀರ ಗುಲಾಮ ಮಜಾದೀದ ಮತ್ತು ಅವರ ಮಿತ್ರರೂ ಸರಕಾರದವರಿಂದ ಹೇರಳವಾಗಿ ಉಪಮರ್ದಿಸಲ್ಪಟ್ಟ ಕಾರಣಕ್ಕಾಗಿ ಜನರಲ್ಲಿ ತೀವ್ರವಾಗಿ ಹಳಹಳಿಸುವರೆಂಬದರಲ್ಲಿ ಸಂದೇಹವಿಲ್ಲ ಮೂಢತನದ ಕೋಪ ಸಂತಾಪಗಳಿಂದ ಉದ್ವಿಗ್ನರಾಗದೇ ನಾವು ನಮ್ಮ ವಿವೇಕ ಬುದ್ಧಿಯ ವಶದಲ್ಲಿರತಕ್ಕದ್ದು. ನಮ್ಮ ಪ್ರತಿಜ್ಞೆಯನ್ನು ಕಿಂಚಿತ್ತಾದರೂ ಹಿಂದೆ ಮುಂದೆ ನೋಡದೇ ಪಾಲಿಸುವವರಿಂದಲೇ ನಮ್ಮ ಮುಕ್ತಿಯಾಗುವದು. ನಮಗೆ ಬಹಳೇ ವ್ಯಸನವಾಗಿದ್ದರೆ, ನಾವು ಅಹಿಂಸಾ ವ್ರತವನ್ನು ಹೆಚ್ಚು ಹುರುಪಿನಿಂದ ಪಾಲಿಸಬೇಕು. ಸವಿನಯ ಕಾಯಿದೇ ಭಂಗವನ್ನು ಪಾಲಿಸಲು ನಾವು ಸಜ್ಜುಗೊಳ್ಳುವಾ. ಮತ್ತು ಆಜ್ಞಾಭಂಗಕ್ಕೆ ಅವಶ್ಯವಿದ್ದ ಎಲ್ಲ ಕರಾರುಗಳನ್ನು ಕೂಡಲೇ ಪೂರ್ತಿಗೊಳಿಸುವಾ; ಹಿಂದೂ ಮುಸಲ್ಮಾನ ಮತ್ತು ಇತರ ಧರ್ಮದವರು ಹೆಚ್ಚಿಗೆ ಐಕ್ಯವನ್ನು ಪಡೆಯುವಂತೆ ಮಾಡುವಾ ನಮ್ಮಲ್ಲಿ ಇನ್ನೂ ಅಡಗಿಕೊಂಡಿದ್ದ ಪರದೇಶೀ ಅರಿವೆಯನ್ನು ಬೀಸಾಟ ಬಿಡುವಾ. ಮತ್ತೂ ಕೈನೂಲಿನ ಖಾದೀ ಒಟ್ಟೆಯನ್ನು ಸಿದ್ಧ ಮಾಡಲಿಕ್ಕೆ ಹೆಚ್ಚು ಉತ್ಸಾಹವನ್ನು ಉಪಯೋಗಿಸುವಾ. ನಾವೇ ತಯಾರಿಸಿದ ಕಾರ್ಯಕ್ರಮವನ್ನು ಶಾಂತರೀತಿಯಿಂದ ಪೂರೈಸುವದರಿಂದಲೇ ನಮ್ಮ ಏಳಿಗೆಯಾಗುವದು. ಆದರೆ ವ್ಯರ್ಥವಾಗಿ ಕೋಪಿಸಿಕೊಳ್ಳುವದರಿಂದಲೂ ವ್ಯಸನಹೊಂದುವದರಿಂದಲೂ ಏನೂ ಆಗದು. ತುರಂಗದಲ್ಲಿದ್ದವರ ಸ್ಥಿತಿಯು ಕಾಡಾಗಿವೆಂಬುದರ ಬಗ್ಗೆ ನಾವು ಚಿಂತಾಕುಲರಾಗಿರುವದು ಕೆಲಸವಲ್ಲ. ಇಂಥದೇ ಆ ಕರಣೆಯನ್ನಿಡಬೇಕೆಂದು ಸರಕಾರದವರ ಸಂಗಡ ನಮ್ಮದೇನೂ ಕರಾರವಿಲ್ಲ, ದೇವರು ನಮಗೆ ಸಾಮರ್ಥ್ಯವನ್ನು ಕೊಟ್ಟರೆ ನಾವು ಕಿಂಚಿತ್ತಾದರೂ ಅಲುಕದೇ ನಮ್ಮನ್ನು ತುಂಡು ತುಂಡಾಗಿ ಕಡಿದರೂ ಸಹ ಆತಂಕವಿಲ್ಲದೆಂದೇ ಸಂಪೂರ್ಣವಾಗಿ ಯಾವ ಬಗೆಯ ಕರಾರನ್ನು ಮಾಡದೇ ನಾವು ನಮ್ಮ ದೇಹವನ್ನರ್ಪಿಸಿದ್ದೇವೆ. ಆದ್ದರಿಂದ ಯಾವ ಕಾರಣದಿಂದಲೂ ನಾವು ನಮ್ಮ ವಿವೇಕಬುದ್ಧಿಯನ್ನು ಕಳೆದುಕೊಳ್ಳಬಾರದು

ಯಂಗ ಇಂಡಿಯಾ ಮೋ. ಕ

ಕನ್ನಡ ಬಾಲ ಬಾಲಿಕೆಯರಿಗೂ ಪ್ರೌಢರಿಗೂ ಮನೋರಂ
ಜನ-ಜ್ಞಾನಾಭಿವೃದ್ಧಿಗೊಳಿಸುವ ಅತ್ಯುಪಕಯುಕ್ತ
ಹಾಗು ಸುಲಭ ಭಾಷೆಯ

## "ಬಾಲಮಿತ್ರ"

ವೆಂಬ ಮಾಸಿಕ ಪುಸ್ತಕವ ಜನವರಿ (೧೯೨೦) ಯಿಂದ ಒಳ್ಳೇ ಸಿಬ ವಿ ತವಾಗಿ ಹೊರಡುತ್ತಿರುವದು. ಇದು ... ಬಾಲ್ಯ ... ಹಾದ ಗಳು ... ಚಿತ್ರ ..., ... ಐತಿಹಾಸಿಕ, ... ಸಂಗೀತ ... ಒಂದೊಂ ... ಇದಲ್ಲದೆ ಪ್ರತಿಸಾರೆ ... ಟ ಪ್ರಶ್ನೆಗಳ ... ಯು ಎಷ್ಟು ವು ಬೇರೊಂದಿಲ್ಲ ಬೇಗ ... 
ವಾರ್ಷಿಕ ಚಂದಾ ೧ ೮-೦ ( ...)
ವಿಳಾಸ:- ... 
... 

## ಕನ್ನಡಿಗರೇ!! ಓದಿರಿ ಆಶ್ರಯ ಕೊಡಿರಿ.

## ಗದಗಿನಲ್ಲಿ

ಸಾಮಾಜಿಕ, ರಾಜಕೀಯ, ನೈತಿಕ, ಧಾರ್ಮಿಕ ವಿಷಯಗಳನ್ನು ಪ್ರತಿಪಾದಿಸುವ

# ಕರ್ನಾಟಕ ಸಿಂಹ.

| ವರ್ಗಣಿ ಸ್ಥಳೀಕರಿಗೆ ರು. ೩-೦-೦ | ಎಂಬ ಕನ್ನಡ ವಾರಪತ್ರಿಕೆಯು. | ವರ್ಗಣಿ ಪರ ಸ್ಥ ಳದವರಿಗೆ ಅಂಚೆ ವೆಚ್ಚಸಹಿತ ರು. ೩-೧೨-೦ |
|---|---|---|

ಇವತ್ತಿನಿಂದ ಮೂರು ತಿಂಗಳ ಒಳ ಹೊರಗ ಹೊರಡುವದು ಮೇಲೆ ವಿವ ರಿಸಿದ ವಾರ ಪತ್ರಿಕೆಯು ಬಾಲ್ಯದಿಂದ ಭಾಷಾ ಸೇವೆಯನ್ನು ಮಾಡುತ್ತಿದ್ದ ಹಾಗೂ ಮೈಸೂರ ವತ್ತು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಈ ನಾ ವಗಳನ್ನು ಪಡೆದ ಮಿ॥ ಅಚ್ಯುತರಾವ ಕೃಷ್ಣರಾವ ಶಾನಭಾಗರವರ ಇವರ ಸಂ ಪಾದಕತ್ವದ ಕೆಳಗೆ ಹೊರಡ ವದಲ್ಲದೆ, ಆಬಾಲವೃದ್ಧರಿಗೆ ಸಹ ತಿಳಿಯುವಂತೆ ತಿಳಿ ಗನ್ನಡ ಭಾಷೆಯಲ್ಲಿ ಬರೆದ ಲೇಖಗಳನ್ನು ಇದರಲ್ಲಿ ಕೂಡ ವವು. ಗ್ರಾಹಕರು ತ ಮ್ಮ ಸಂಪೂರ್ಣ ಹೆಸರನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಬೇಕಾಗಿ ನಮ್ಮ ಸ ವಿನಯ ವಿನಂತಿ ಇರುತ್ತದೆ

ವಿಳಾಸ:—ಶಾಂತಪ್ಪಾ ಶಿವೋನೆಪ್ಪಾ ಬಲಗುಂದಿ
ಮಾಲಕ ಸ್ವೈಮನ ಪ್ರೆಸ್ ಗದಗ. ಜಿಲ್ಲಾ ಧಾರವಾಡ.

# ಉತ್ತಮ ಆರ್ಯ ಔಷಧಗಳು.

## ಸುವರ್ಣರಾಜವಂಗ ತೊಲಿ ೧. ರೂ. ೫

| | | |
|---|---|---|
| ಸಮೀರಪನ್ನಗ | | |
| ಪ್ರವಾಳ | ತೊಲಿ | ರೂ. ೫ |
| ಚಂದ್ರಪ್ರಭಾ | " | ರೂ. ೩ |
| ಲಘು ಮಾಲಿನಿ ವಸಂತ | " | ರೂ. ೧ |
| ಅಮೃತ ಸತ್ವ | " | |
| ನಾಯರವ್ ಪಾಪಕ್ | " | ಆಣೆ ೮ |
| ಬ್ರಾಹ್ಮೀ ಸಾಯರಪ್ | ಔಂಸ ೪ | ರೂ ೧ |
| ಪಾಚಕ ವಟಿ | " | ರೂ. ೧. |
| ವ್ರಣ ವಿರೋಚಕವಟಿ | ನಂ. ಕ್ಕೆ | ರೂ ೧. |
| ಸಿತೋಪಲಾದಿ ಚೂರ್ಣ | " | ಆಣೆ ೮ |
| | ೧೦ ತೊಲಿ | ರೂ. ೧ |

ಇದಲ್ಲದೇ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಯಾವತ್ತೂ ಔಷಧಗ ಳ್ಳಲ್ಲಿ ಸುಲಭ ದರದಿಂದ ಶಿಗುವವು.

Karna'ak Ayurvedic Pharmaceutical Works,
Bagalkot Bijapur.

ಚಿಕ್ಕೋಡಿ
... 

## ಮಂಬರಿ ೧ ನೇ ನಿರ್ಮಲವಾದ

ಎಲ್ಲ ಕಡೆ ... ಏಜಂಟರು ಬೇಕ

# ನೀಲಗಿರಿ ತೈಲವು.

ನಮ್ಮಲ್ಲಿ ಒಳ್ಳೇ ಹ... ದ ನಂ ೧ ನೇ ... ಶಿಗುತ್ತದೆ ವ್ಯಾಪಾ ರಕ್ಕಾಗಿ ಒಳ್ಳೇ ಸೋಯಿ ದ ದಲ್ಲಿ ತೈಲ ವು ಸಿಗುವದು ... ಔಂಸು ತೈಲದ ಬಾಟ್ಲಿ ಇದವ ... ಜನಕ್ಕೆ ... ವಿಶೇಷ ಮಾಹಿತಿ ಮು ದ್ರಿಸಲ್ಪ...
ಬಿ ವಿ ಪೈ ಕಂಪನಿ ನಂ. ಹೊನ್ನಾವರ
ಜಿಲ್ಲಾ ಉತ್ತರ ಕಾನಡಾ.

## ಹೊಸ ಪುಸ್ತಕ! ಅವಶ್ಯ ಓದಿರಿ!!

ಬೆಲೆ ] ವಿವಿಧಲೇಖಸಂಗ್ರಹ [ ೩ ಆಣೆ.

ಈ ಪುಸ್ತಕದಲ್ಲಿ ಬ ಅತ್ಯುತ್ತಮವಾದ ಲೇಖಗಳು ಇವೆ. ಸುಂದರ ವಾದ ಮುದ್ರಣ ಸ್ಫೂರ್ತಿದಾಯಕವಾದ ಭಾಷೆ, ಬೆಲೆ ಸ್ವಲ್ಪ. ಪ್ರತಿಗಳು ಸ್ವಲ್ಪವೇ ಇರುವವು. ಒಳ್ಳೆ ೩॥ ಆಣೆ ಸ್ಟಾಂಪನ್ನು ಕಳಿಸುವವರಿಗೆ ಬುಕ್ ಪೋಸ್ಟಿನಿಂದ ಈ ಪುಸ್ತಕವನ್ನು ರವಾನಿಸು ವೆವು.

ಪತ್ತೆ:-ವ್ಹಿ. ಎಸ್. ರಂಗೈ ಶೇಣವಿ
ಪೋಸ್ಟ ಯಲ್ಲಾಪೂರ ಜಿಲ್ಲಾ ಕಾರವಾರ

ಈ ಪತ್ರವನ್ನು ಮಿ॥ ಗುಂಡೇರಾವ ರಾಮಚಂದ್ರ ಮಣ್ಣೂರಕರ ಇವರು ತಮ್ಮ ವಿಜಾಪೂರ ಗ್ರಾಮಾಧಿಕಾರೀ ಮುದ್ರಾಲಯದಲ್ಲಿ ಮುದ್ರಿಸಿ ಮಾಲಕ ಶ್ರೀನಿವಾಸ ರಾಜೇರಾವ ಮಂಗಳವೇಢೇಕರ ಬಾಗಲಕೋಟ ಇವರ ... ಪ್ರಸಿದ್ಧ ಪಡಿಸಿದರು.

ಚೌರೀ ಚೌರಾದಲ್ಲಿಯ ಅಪರಾಧವು

ವಾರ್ಷಿಕ ವರ್ಗಣಿ ರೂ. ೪-೦-೦
ಆರು ತಿಂಗಳಿಗೆ ,, ೨-೦-೦
ಬಿಡಿ ಸಂಚಿಕೆ ೦-೧-೬
ಮಾದರಿ ಸಂಚಿಕೆ ಬೇಕಾದವರು ೧ ಆ. ತಿಕೀಟ ಕಳಿಸಬೇಕು

ಶ್ರೀ.

ಕನ್ನಡ

# ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾಷಾಂತರಿಸುವದೇ ಈ ವಾರ ಪತ್ರಿಕೆಯ ಮುಖ್ಯೋದ್ದೇಶವು

REGISTERED NoB 1389

ಜಾಹೀರಾತಿನ ದರ.

'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂಪಾಯಿ ಕಾಯಮು ಜಾಹೀರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ವರ್ಷ ೧ | ಬಾಗಲಕೋಟ ಮಾಘ ವ|| ೧೦ ಶಕೆ ೧೮೪೩. ಗುರುವಾರ ತಾ ೨೩ ನೇ ಫೇಬ್ರುವಾರಿ ೧೯೨೨ ಇಸ್ವಿ. | ಸಂಚಿಕೆ ೧೪

## ಟಿಪ್ಪಣಿಗಳು.

### ಅಹಮ್ಮದಾಬಾದ ವ ಸುರತ

ಸರಕಾರದವರು ಅಹಮ್ಮದಾಬಾದ ಮತ್ತು ಸುರತ ಮುನಸಿಪಾಲಿಟಿಗಳನ್ನು ಅಲ್ಲಿ ಅವ್ಯಸ್ಥಿತನವು ತೋರಿದ್ದಕ್ಕಾಗಿ ಬಂದು ಮಾಡಿರುವರು. ಇವೆರಡು ಮ್ಯುನಿಸಿಪಾಲಿಟಿಗಳೂ ಹಾಗು ನದಿಯಾಡ ಮ್ಯುನಿಸಿಪಾಲಿಟಿಯೂ ಸರಕಾರದವರ ಒಣ ಕಾರಭಾರದ ಹಾಗು ಅನವಶ್ಯಕ ಸತ್ತೆಯ ವಿರುದ್ಧವಾಗಿ ವ್ಯವಸ್ಥಿತ ರೀತಿಯಿಂದ ಚಾತುರ್ಯದ ಹಾಗು ಗೌರವಯುಕ್ತ ಸಂಗ್ರಾಮವನ್ನೇ ನಡೆಸಿರುವರು. ಪ್ರಾಥಮಿಕ ಶಿಕ್ಷಣದ ಮೇಲಿನ ಸರಕಾರೀ ಸತ್ತೆಯನ್ನು ತೆಗೆದುಹಾಕಿದ್ದೇ ಅವುಗಳ ಮಹಾಪರಾಧವಾಗಿದೆ. ಆ ಮ್ಯುನಿಸಿಪಾಲಿಟಿಗಳು ಸರಕಾರದ ಸಹಾಯವನ್ನು ಕೂಡ ಬಿಟ್ಟುಕೊಟ್ಟಿರುತ್ತವೆ. ಲೋಕನಿಯುಕ್ತ ಸಭಾಸದರು ಎಲ್ಲ ಪ್ರಸಂಗಗಳಲ್ಲಿ ಕರಕೊಡುವವರ ಗೂಡ ಪೂರ್ಣವಿಚಾರಮಾಡಿ ಈ ಕಾರ್ಯದಲ್ಲಿ ತೊಡಗಿರುವರೆಂಬುದನ್ನು ಲಕ್ಷದಲ್ಲಿಡತಕ್ಕದ್ದು. ಆದರೆ ಇದೇ ಸರಕಾರದವರಿಗೆ ಸ್ವಲ್ಪಾದರೂ ಸೇರುವದಿಲ್ಲ. ಯಾಕಂದರೆ ಇದರಿಂದ ಲೋಕಮತದ ಪ್ರಾಬಲ್ಯವು ಬೆಳೆಯುವದು.

ಈಗ, ಸಭಾಸದರ ಹಾಗು ಚುನಾಯಿಸುವವರ ಕರ್ತವ್ಯವು ಬಹಳೇ ಸುಲಭವಾಗಿದೆ. ಈಗಿಂದ ಅವರು ಪ್ರಾಥಮಿಕ ಶಿಕ್ಷಣದ ಮೇಲಿನ ತಮ್ಮ ಅಧಿಕಾರವನ್ನು ರಕ್ಷಿಸಿಕೊಳ್ಳಲಿಕ್ಕೆಬೇಕು. ಸರಕಾರದವರಿಂದ ಹೇರಲ್ಪಡುವ ಸರಕಾರನಿಯುಕ್ತ ಸಭಾಸದರಿಗೆ ಕರವನ್ನು ನಿರಾಕರಿಸಿ ಎಲ್ಲರೂ ತಮ್ಮ ಮಕ್ಕಳ ರಾಷ್ಟ್ರೀಯ ಶಿಕ್ಷಣದ ಸಲುವಾಗಿ ಹಣವನ್ನು ಕೊಡಲಿಕ್ಕೆ ಬೇಕು. ಸಭಾಸದರು ತಮ್ಮಲ್ಲಿ ಐಕ್ಯಭಾವವನ್ನು ತಳೆದು ಶಕ್ಯವಿದ್ದಷ್ಟು ಮಟ್ಟಿಗೆ ರಾಷ್ಟ್ರೀಯ ಮ್ಯುನಿಸಿಪಾಲಿಟಿಯನ್ನು ಸ್ಥಾಪಿಸುವಂತೆ ಮಾಡಬೇಕು. ಸುಶಿಕ್ಷಿತ ಜನರು ಸರಕಾರದ ಸಹಾಯವಿಲ್ಲದೆ ಯಾವದಾದರೂ ಸಂಸ್ಥೆಯನ್ನು ನಡೆಸಲಿಕ್ಕೆ ಶಕ್ಯವಿದ್ದರೆ ಅದು ಮ್ಯುನಿಸಿಪಾಲಿಟಿಯೇ ಎಂದು ನನ್ನ ಮತವಿದೆ. ಸರಕಾರದ ಮೇಲೆ ಅವಲಂಬಿಸದೆ ಅಹಮ್ಮದಾಬಾದದವರಾಗಲಿ, ಸುರತದವರಾಗಲಿ, ನಡಿಯಾದದವರಾಗಲಿ, ತಮ್ಮಲ್ಲಿಯ ಓಣಿ ಬೀದಿಗಳನ್ನು ಸ್ವಚ್ಛವಿಡಲಿಕ್ಕೂ, ಬೆಳಕಿನ ವ್ಯವಸ್ಥೆಯನ್ನು ಮಾಡಲಿಕ್ಕೂ, ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಲಿಕ್ಕೂ, ರೋಗಿಗಳಿಗೆ ಔಷದೋಪಚಾರದ ವ್ಯವಸ್ಥೆಯನ್ನು ಮಾಡಲಿಕ್ಕೂ ತಮಗೆ ನೀರಿನ ವ್ಯವಸ್ಥೆಯನ್ನು ಮಾಡಿಕೊಳ್ಳಲಿಕ್ಕೂ ಸಮರ್ಥರಿಲ್ಲಬಾರದೆಂಬುದಕ್ಕೆ ಯಾವ ಕಾರಣವೂ ಇಲ್ಲ. ಪೋಲಿಸರಮೇಲೆ ಅವರ ಅಧಿಕಾರವಿಲ್ಲವೆಂಬುದು ನಿಜ. ಆದರೆ ಅವರಿಗೆ ಸರಕಾರದ ಸಹಾಯವು ಕರವನ್ನು ವಸೂಲಮಾಡಿಕೊಳ್ಳುವದರ ಸಲುವಾಗಿ ಮಾತ್ರ ಬೇಕಾದರೆ ಬೇಕಾಗಬಹುದು. ಆದರೆ ಸರಕಾರದ ಸಹಾಯದ ಬದಲು ಲೋಕಮತದ ಸಹಾಯವನ್ನು ತೆಗೆದುಕೊಂಡರೆ ಕರವನ್ನು ಕೂಡಿಸುವ ಅಧಿಕಾರವು ಅವರಿಗೆ ದೊರೆಯುವದು. ಅಹಮ್ಮದಾಬಾದದಲ್ಲಿ ಜೋರಾವರಿಯಿಂದ ವಸೂಲಾಗತಕ್ಕ ಹಣಕ್ಕಿಂತ ಹೆಚ್ಚು ಹಣವು ಸ್ವಯಂಸ್ಫೂರ್ತಿಯಿಂದಲೇ ಕೊಡಲ್ಪಡುತ್ತಿರುವದು. ಹಾಗೂ ಈ ಜಾಗೃತವಾದ ಸಂಸ್ಥೆಗಳಲ್ಲಿ ಜರುಗುತ್ತಿರುವ ಲೋಕನಿಯುಕ್ತ ಪ್ರತಿನಿಧಿಗಳ ಹಾಗು ಸರಕಾರನಿಯುಕ್ತ ಮಂಡಲದವ ನಡುವಿನ ಕುಸ್ತಿಯನ್ನು ಜನರು ಕುತೂಹಲದಿಂದ ನೋಡುತ್ತಿರುವರು.

### ಕಾಂಗ್ರೆಸ ಕಮಿಟಿಗಳನ್ನು ಬೇಕಾಯ್ದೆ ಶೀರ ಮಾಡಬೇಕೆಂಬ ಹವಣಿಕೆ.

ಫರೀದಪುರ ಕಾಂಗ್ರೆಸ ಕಚೇರಿಯ ಕಾರ್ಯದರ್ಶಿಯವರ ಕಡೆಯಿಂದ ಬಂದ ಕೆಳಗಿನ ವರದಿಯೂ ತನ್ನ ಕಥೆಯನ್ನು ತಾನೇ ಹೇಳುತ್ತದೆ.

ಸ್ವಯಂಸೇವಕ ಪಥಕವನ್ನಷ್ಟೇ ಅಲ್ಲ ಆದರೆ ಕಾಂಗ್ರೆಸ ಕಮಿಟಿಯನ್ನೂ ಕೂಡ ಬೇಕಾಯಿದೇಶೀರ ಮಾಡಬೇಕೆಂಬ ಹುಚ್ಚು ಇಲ್ಲಿಯ ಮೆ|| ಬಾವಿಂದ ಕಲೆಕ್ಟರ ಗೊರೆಗಳವರ ತಲೆತಿನ್ನಹತ್ತಿದೆ. ಪೋಲೀಸರ ಒತ್ತಾಯದಿಂದ ಎಲ್ಲ ಕಾಂಗ್ರೆಸ ಕಚೇರಿಗಳನ್ನು ಮುರಿದುಬಿಟ್ಟಿಗ್ದಾರೆ. ನಡುರಾತ್ರಿಯಲ್ಲಿ ಎಲ್ಲ ಸ್ವಯಂಸೇವಕರು ಗಾಢ ನಿದ್ದೆಯಲ್ಲಿರುವಾಗ ಈ ಮಹನೀಯರು ತಮ್ಮ ಈ ಕುಚೋದ್ಯವನ್ನು ಸಾಧಿಸಿರುವ ಸ್ವಯಂಸೇವಕರನ್ನು ಚನ್ನಾಗಿ ಬಡಿಸಿದರು. ಆದರೂ ಸ್ವಯಂಸೇವಕರು ತಮ್ಮ ಶಾಂತವೃತ್ತಿಯನ್ನು ಬಿಡಲಿಲ್ಲ.

ಕಾಂಗ್ರೆಸ ಕಚೇರಿಗಳಿರುವ ಮನೆಯ ಮಾಲಕರಿಗೂ ಕೂಡ ಈ ದಿನವು ಬಿಡಿ ದರೆ ಅವರಿಗೆ ಜೇಲಿಗೆ ಹಾಕಬೇಕೆಂದೂ ಮತ್ತು ನಿಮ್ಮ ಆಸ್ತಿಯನ್ನು ಕಸಕೊಳ್ಳು ವೆವೆಂದೂ ಪೋಲೀಸರು ಹೆದರಿಸ ಹತ್ತಿದ್ದಾರೆ.

ಅವರಿಗೆ ಕೊಟ್ಟ ನೋಟೀಸಿನ ಭಾಷಾಂತರವು ಹೀಗೆ ಇರುತ್ತದೆ:-

ನೋಟೀಸು ನಂ||೧|| ಜನರಿಗೆ ಪ್ರಕಟಿಸಿ ಇದ ತಿಳಿಸುವದೇನಂದರೆ ನಿಮ್ಮ ವಸ್ತ್ರ ಕಾಟ್ಟೆಗಳನ್ನು ಬಿಟ್ಟಿರುವ ಕಾರಣ ಕಾಂಗ್ರೆಸ ಕಮಿಟಿಗಳೆಲ್ಲ "ಬೇಕಾಯ್ದೇಶೀರ" ಕೋಟಿಯಲ್ಲಿ ಸೇರಿರುತ್ತವೆ ಕಾರಣ ಯಾರಾದರೂ ಈ ಸರಕಾರದ ವಿರುದ್ಧವಾಗಿ ಪಕಾಶಿಸಿದಾಗಲಿ, ಸರಕಾರ ಸೌಕರಿಯನ್ನು ಬಿಡೆಂಬ ಉಪದೇಶ ದಿಂದಾಗಲಿ ತೆರಗೆಯನ್ನು ಕೊಡದಿರುವ ದಂದಾಗಲಿ ಅಥವಾ ಮತ್ತಾವರೀತಿಯಿಂದಾಗಲಿ ಇದರ ಕಾರ್ಯಕ್ಕೆ ವಿಘ್ನತರುವ ಚಳವಳಿಯನ್ನು ನಡೆಸುವ ಜನರನ್ನೆಲ್ಲ ಗುನ್ಹೆಗಾರರೆಂದು ತಿಳಿದು ಅವರಿಗೆ ಶಿಕ್ಷೆ ಆಗಿರಿಸಲ್ಪಡಲಾದೀತು.

ಆಜ ಜನರಿಗೆ ಎಚ್ಚರಿಕೆ ಕೊಡುವದಕ್ಕಾಗಿ ಪೋಲಿಸ ಪ್ರಕಟನೆಯು ಜಾರಿಗೆ ಮಾಡಲ್ಪಟ್ಟಿದೆ ಈ ಕಾಯಿದೆ ವಿರುದ್ಧ ಚಳವಳಿಯಲ್ಲಿ ಸೇರಿದವರ ಕವಡಾಬಾರವನ್ನು ಜಪ್ತಾಗಿಯೇ ತೆಗೆದುಕೊಳ್ಳಲಾದೀತು. ನೋಟೀಸಂ ೨. ಕಾಂಗ್ರೆಸ ಕಮಿಟಿಗಳ ಸಲುವಾಗಿ ಮನೆಬಾಡಿಗೆ ಕೊಟ್ಟ ಮನೆಯ ಮಾಲಕರಿಗೂ ಪೋಲಿಸ ಕಲಮು ಲಾಗು ಆಗುತ್ತದೆ. ಕಾರಣ ಅವರೂ ಜೋಕೆಯಿಂದಿರತಕ್ಕದ್ದು.

ಸಹಿ:— ಗ. ವ. ಹಾಗ

ಕಲೇಕ್ಟರ ಧರೀದವರ.

ಮೇಲ್ಕಾಣಿಸಿದ ಪ್ರಕಾರ ಉಚ್ಚಾಟಿತನದ ಆರೇ ದಾವಿಯನ್ನು ಸರಕಾರವು ನಡೆಸಿದಾಗ ನಾವು ಏನುಮಾಡಬೇಕೆಂಬದನ್ನು ಹೇಳುವದು ಬಹಳೇ ಕಠಿಣವಾಗಿದೆ. ಈ ಜಗತ್ತಿನಲ್ಲಿ ಉಳಿಯಬೇಕೋ ಅಥವಾ ಅಳಿಯಬೇಕೋ ಎಂಬದೊಂದೇ ಪ್ರಶ್ನೆಉಳಿದಂ ತಾಯಿತು. ಮನೆಯ ಮಾಲಿಕರು ಹೆದರಿ ಕಾಂಗ್ರೆಸ ಕಚೇರಿಗಳಿಗೆ ಸ್ಥಳವನ್ನು ಇಂದು ಮೇಲೆ ಕೊಡಲಿಕ್ಕಿಲ್ಲ. ಕೊಡದಿದ್ದರೆ ನಾವು ಬೀದಿಗೆ ತನಕ ಬೈಲಲ್ಲಿಯಾದರೂ ನಮ್ಮ ಸ್ವರಾಜ್ಯ ಕಚೇರಿಗಳನ್ನು ಕಟ್ಟಿಸತಕ್ಕದ್ದು. ನಮ್ಮನ್ನುಜೇಲಿಗೆ ಒಯ್ದು ಹಾಕಿದರೂ ಕೂಡ ಅಲ್ಲಿಯೂ ಕೂಡಿ ಪರಿಶೀಲಿಸ ಪ್ರಯತ್ನ ಮಾಡಬೇಕು. ಮತ್ತು ಆಗ್ರ್ರಿಯಲ್ಲಿಯ ಜನರ ಉದಾಹರಣೆಯನ್ನು ಮುಂದಿಟ್ಟುಕೊಂಡು ಸಾರ್ವಜನಿಕ ಕೀರ್ತನೆ ಭಜನೆಗಳನ್ನು ನಡೆಯಿಸಬೇಕು. ನೂಲುತೆಗೆಯಬೇಕು ಮತ್ತು ಜೇಲಿನ ನಿಯಮಗಳಿಗೆ ವಿರುದ್ಧವಾಗದ ಹಾಗೆ ಎಲ್ಲರೂ ಒಟ್ಟಾಗಿ ಸಿಂದಲೇ ಜೇಲುಗಳಲ್ಲಿ ಕೂಡಿಯೇ ಕೆಲಸ ಮಾಡತಕ್ಕದ್ದು ನಮ್ಮನ್ನು ಜೊತೆಯು ಕೂಡೆನು ಬೇಕು. ಸಂತರ ನಾ ಸರಕಾರಿಯು ನಮ್ಮನ್ನು ಗಂಡು ಹಾಕಲಿಕ್ಕೆ ಪ್ರಯತ್ನಿಸುವದು. ಮತ್ತು ಅವರು ಗುಂಡು ಹಾಕುವದನ್ನು ಕೈಕೊಂಡರೆ ನಾವು ಆ ಜಗನ್ನಿಯಾಮಕನ ನಾಮವೇ ಬಾರಣೆಯನ್ನು ಮಾಡುತ್ತಾ "ಅಂಜಿಕೆಯ್ಯಾತಯ್ಯಾ ಸಜ್ಜನರಿಗೆ ಸಕಲ ದುರಿತಹರಣ ನರಸಿಂಹ ಮಂತ್ರವಿರಲು" ಎಂದು ಹಾಡುತ್ತ ನಾವ ಗುಂಡಿನ ಮಳೆಗೆ ಎದೆಗೊಟ್ಟು ನಿಲ್ಲತಕ್ಕದ್ದು. ಈ ತರದ ಧೈರ್ಯ ನಮ್ಮ [illegible] ಸಹಿಷ್ಣುತೆಯನ್ನೂ ತೋರಿಸುವದೇ ನಿಜವಾದ ಸ್ವರಾಜ್ಯವು

"ಎಲ್ಲರೂ ಸೇವಿಸುತ್ತಾರೆಂದು ನಾವೂ ತಿನ್ನುತ್ತೇನೆ."

ಥೋರೆ ವಿನ್ಸೆಂಟ ಸಾಹೇಬರು ತಮ್ಮ ಭಾಷಣದಲ್ಲಿ ನಾವು ಮಾಡು ಅನ್ಯಾಯನ್ನೆಲ್ಲ ನ್ಯಾಯವೆಂದು ಪ್ರತಿಪಾದಿಸಿದರು. ನಾನು ಮೇಲ್ಕಾಣಿಸಿದ ಅತಿ ಕಠಿಣ ಪ್ರಸಂಗದ ವರ್ಣನೆಯನ್ನು ಮಾಡುತ್ತಿದ್ದಿಲ್ಲ. ಈಗ ಇಷ್ಟು ದಿವಸ ತೋರಿಕೆಗಾದರೂ ಕೇಳುತ್ತಿರುವ ನ್ಯಾಯ ಪಕ್ಷಪಾತಿತ್ವ ಸುಧಾರಣೆಯು ಹೋಗುತನ ಇವೆಲ್ಲವನ್ನು ಹೊರಗೆ [illegible] ಸೂರಿ ಸಾಹೇಬರು ಹೊರಗೆಡವಿದ್ದಾರೆ. ಅವರು ಮೊನ್ನಿನ ಬಾಷಣದಲ್ಲಿ ಅನ್ನುವದೇನಂದರೆ—

"ಎಲ್ಲ ದೇಶಗಳಲ್ಲಿಯಂತೆಯೇ ನಾವು ಕಾಯಿದೆ ವಿರುದ್ಧ ಕೂಡಿದ ಸಭೆಗಳನ್ನು ಮುರಿಯುವದು ಈ ನ್ಯಾಯದಿಂದಲೇ ನಡೆಯುತ್ತೇನೆ ಇಂಥ ಪ್ರಸಂಗದಲ್ಲಿ ದಂಡುಕಟ್ಟಿಯು ಕೊರ್ಟು ಸಂಸ್ಥಾನಿ ಇಲ್ಲ ಅವರಾತ್ರಿಯು ಹೇಳುತ್ತಿ ಕಾಂಗ್ರೆಸ ಚೇರಿಗಳನ್ನು ಮಾಡಬಾರದೆಂದ ಎಷ್ಟೋ ಜನರು ಅನ್ನುತ್ತಾರೆ ಅದರ ಸರ - ರದವರು ಈ ತೆರ ಸಿರ್ಬಂಧಕ್ಕೆ ಎಂದೂ ಒಪ್ಪರು" ಇತ್ಯಾದಿ

ಈ ಸ್ಪಷ್ಟೋಕ್ತಿಯ ವಿಷಯಕ್ಕೆ ನಾನು ಸಾಹೇಬರಿಗೆ ಆಭಾರಿ ಇದ್ದೇನೆ ತಮ್ಮ ದಂಡ ಕಾಕ ಹಿ ಯ.ಕೈಯಿಂ-ನ್ನ [illegible] ತಿಯಲ್ಲಿ ತೋರಿಸಿದರೇನು ಅಜವಾ ಮಟ್ಟಿ ಮಟ್ಟ ವ್ಯಾಖ್ಯಾನದಲ್ಲಿ ತೋರಿಸಿದರೇನು ಎಲ್ಲವೂ ಒಂದೇ ಸರಿ. ಮೇಲಿನನೋಕ್ತಿಯಿಂದ ಈ ಸರಕಾರವು ಅಸಹ್ಯವೂ ಅತಿ ದುಷ್ಟವೂ ಇರುತ್ತದೆಂದು ಸ್ಪಷ್ಟವಾಗುತ್ತದೆ ಈ ಪ್ರಕಾರ ತನ್ನ ನಿಜರೂಪವನ್ನ ಕಟಿಸಿ ತಾವು ಮಾಡ ವದನ್ನು ಸ್ಪಷ್ಟವಾಗಿ ಎಂದಾದರೂ ಅತಿ ತೋರಿಸಲೇ ಬೇಕಾಗುತ್ತು ಯಾಕಂದರೆ ಜೇನ ಅಂಜಿಕೆಯು ಜನರಿಗೆ ಇಲ್ಲದ ಕಾರಣ ಕೊಡೆತ ಬೆತಗಳ ಅಂಜಿಕೆಯನ್ನು ಹಾಕುವದು ಸರಕಾರಕ್ಕೆ ಸಹಜವಾಗಿದೆ. ಕಾರಣ ನಾವು ಇದಕ್ಕೂ ಹೆಚ್ಚಿನ ಶಿಕ್ಷೆ ನ್ನು ಸುಭೋಗಿಸಲಿಕ್ಕೆ ಸಿದ್ಧರಿರಲಿಕ್ಕೆಬೇಕು.

ಎಲ್ಲ ದೇಶಗಳಲ್ಲಿ ಈ ತರಹ ನಡೆದಿರುತ್ತಿರುವಂತ ವಿನ್ಸೆಂಟ ಸಾಹೇಬರು ತಮ್ಮ ಕೃತ್ಯಗಳಿಗೆ ನ್ಯಾಯದ ಹೊದಿಕೆಯನ್ನು ಹೊದಿಸಬೇಕೆಂದಿದ್ದಾರೆ. ಆದರೆ ಯಾವ ದೇಶದಲ್ಲಿಯೂ ಈ ತರದ ಅನ್ಯಾಯಗಳಾಗುವದಿಲ್ಲೆಂದು ನಾನು ಸಾರಿ ಸಾರಿ ಹೇಳುತ್ತೇನೆ ಈ ಪ್ರಾಥಾಕ ನಮ್ಮ ದುರ್ದೈವಿ ಹಿಂದುಸ್ಥಾನದಲ್ಲಿಯೇ ಮಾತ್ರ ನಡೆದಿರುತ್ತದೆ ಹಿಂಸೆಯನ್ನು ಹೊಡಿಬಾಳೆಂಬ ಉಂಡಿಗತನವನ್ನುತೋರಿಸಿದ ಹೊರ್ಸ ಲಂಡನದಲ್ಲಿ ಅಥವಾ ಪಾರಿಸದಲ್ಲಿ ಸಭಾ ಬರಬಾರದು ಮಾಡುವದು ಅಶಕ್ಯ ವಿರುತ್ತದೆ ಸಭಿಕರನ್ನು ಪಶು ಹಾಡುವವರನ್ನು ಕೈದು ಮಾಡಬಹುದು ಆದರೆ [illegible] ಕಾಲವದೆಂದರೆ ಸ್ಪಷ್ಟಾ [illegible] ಸಕಾರನೆ ಕಥಿ

ವಿಶ್ವಾಸ ಪಾತ್ರ ಸೇವಕನೇಕೆಂದು?

"ನೀನ ನಾ. ವ್ಹಾಯಿಸರಾಯರವರಿಗೆ ಬರೆದ ಪತ್ರದಲ್ಲಿ ಕೆಳಗೆ ಸಹಿಮಾಡುವಾಗ್ಗೆ ' [illegible] ವಿಶ್ವಾಸಪಾತ್ರ ಸೇವಕ ಮತ್ತು ಮಿತ್ರ'ರೆಂದು ಬರೆದಿರುವಿ. ನೀವು ಬುದ್ಧಿಪೂರ್ವಕವಾಗಿ ' ಸೇವಕ ' ಶಬ್ದವನ್ನು ಬರೆದಿರಲಿಕ್ಕಿಲ್ಲ. ಆ ಶಬ್ದದ ಪ್ರವಾದದಿಂದ [illegible] ಬಾಯಲ್ಪಟ್ಟಂಬಹುದೆಂದು ನನ್ನ ನಂಬಿಗೆಯದೆ." ಎಂದು ಒಬ್ಬ ಗೃಹಸ್ಥನು ನನಗೆ ಬರೆದಿರುವನು. ನಾನು ' ಸೇವಕ ' ಶಬ್ದವನ್ನು ಬುದ್ಧಿಪೂರ್ವಕವಾಗಿ ಬರೆದಿರುವೆನೆಂದು ಹೇಳಿದರೆ ಈ ಸದ್ಗೃಹಸ್ಥನಿಗೆ ಅಸಮಾಧಾನವಾಗಲಿಕ್ಕಿಲ್ಲೆಂದು ನಾನು ಆಶಿಸುತ್ತೇನೆ. ನಾ. ವ್ಹಾಯಿಸರಾಯರವರು ಒಬ್ಬ ದೊ

ಷ್ಟ ಹದೇವಾರಾದ ಸರದಾರರಿರ ವತು ಅಂಥವರಿಗೆ ಬರೆಯುವಾಗ್ಗೆ ಆವಾಚಿನ ಸ್ಥಿತಿಗೆ ಸರಿಯಾದ ಸಭ್ಯಭಾಷೆಯನ್ನು ಉಪಯೋಗಿಸದಿರುವದು ನನ್ನ ಮನಸ್ಸಿಗೆ ಬರುವದಿಲ್ಲ. ಅಸಹಕಾರವೆಂದರೆ ಅಸಭ್ಯತೆಯಲ್ಲ! ಅಸಭ್ಯ ಪುರುಷನಿಗೆ ಅಸಹಕಾರವನ್ನು ಮಾಡಲು ಅಧಿಕಾರವಿರದು. ಮತ್ತು ಯಾರೊಡನೆ ನಾವು ಅಸಹಕಾರವನ್ನು ಮಾಡಬೇಕೋ ಅವರೊಡನೆಯಂತೂ ಇಚ್ಛಾಪೂರ್ವಕವಾಗಿ ಹೆಚ್ಚಿಗೆ ವಿನಯದಿಂದ ನಡೆಕೊಳ್ಳಬೇಕು. ಹೀಗೆ ವರ್ತಿಸುವದ ಶಾಂತಿಮಯ ಅಸಹಕಾರದ ಶಾಸ್ತ್ರವಿರುವದು. ಆದ್ದರಿಂದ ಅಸಹಕಾರಿಗಳ ಪರವಾಗಿ ಸರ್ ವ್ಹಾಯಿಸರಾಯರವರಿಗೆ ಬರೆದ ಪತ್ರದಲ್ಲಿ ಸಭ್ಯಭಾಷೆಯನ್ನು ಉಪಯೋಗಿಸಲು ನಾನು ಬಯಸಿದ್ದೆನು. ಸೇವಕ ಶಬ್ದದೊಂದಿಗೆ 'ಮಿತ್ರ' ಶಬ್ದವನ್ನು ಇಚ್ಛಾಪೂರ್ವಕವಾಗಿ ಪ್ರಯೋಗಿಸಿರುವೆನು. ಈ ಶಬ್ದಗಳ ಪ್ರಯೋಗದಿಂದ ನಾನು ಸೂಚಿಸಿರುವದೇನೆಂದರೆ, ನಾನು ಸೇವಕನೇನೋ ನಿಜ ಆದರೆ ಗುಲಾಮನಲ್ಲ. 'ಸೇವಕ' ಶಬ್ದದ ಉಪಯೋಗ ಮಾಡುತ್ತಿದ್ದರೂ ಮನುಷ್ಯನ ಶತ್ರುವಾಗಬಲ್ಲೆನು ಆದರೆ ನಾನು ಯಾರ ಶತ್ರುವೂ ಆಗಲಿಚ್ಛಿಸೆನು. ಇದ ನನ್ನ ಧರ್ಮವು. ಈ ನನ್ನ ಧರ್ಮವು ನಾನು ಬರೆದ 'ಮಿತ್ರ' ಶಬ್ದದಲ್ಲಿ ವ್ಯಕ್ತವಾಗಿದೆ. ನಾನು ಇಂಗ್ಲೀಷ್ ಜನರಿಗಿಂತ ಕೀಳಾಗಿರದೆ ಅವರ ಸಮಾನಸ್ಕಂಧನಾಗಿರುವೆನೆಂಬ ನನ್ನ ಹೃದ್ಗತವನ್ನು ಮಿತ್ರಶಬ್ದದಿಂದ ತೋರಿಸಿರುವೆನು. "ವಿಶ್ವಾಸಪಾತ್ರ" ಎಂಬ ಸಮಾನಶಬ್ದವನ್ನು ಪ್ರಯೋಗಿಸಿ ನಾನು ನನ್ನ ಅಹಿಂಸಾ ಧರ್ಮವನ್ನು ಸೂಚಿಸಿರುವೆನು; ಮತ್ತು ನನ್ನಿಂದ ಎಂದಿಗೂ ಅವರ ಜಾತಿಯವರಿಗೂ ಕಿಂಚಿತ್ತಾದರೂ ಭಯವುಂಟಾಗುವ ಸಂಭವವಿಲ್ಲೆಂದು ತಿಳಿಸಿ ಅವರಿಗೆ ನಾನು ಅಭಯದಾನ ಮಾಡಿರುವೆನು. ನಾನು ಉಪಯೋಗಿಸಿದ ಈ ಶಬ್ದಗಳು ಸಭ್ಯರೀತಿಯನ್ನು ಅನುಸರಿಸುವಂಥವಿದ್ದರೂ ಇಚ್ಛಾಪೂರ್ವಕವಾಗಿಯೂ ಸಾರ್ಥಕವಾಗಿಯೂ ಇರುವವು.

(ನವಜೀವನ) ಮೋ. ಕ. ಗಾಂಧೀ.

## ಬಾರಡೋಲಿಯ ಪ್ರಜೆಗಳಿಗೆ

ನೀವು ದುಷ್ಕಳ ಕಾರ್ಯವನ್ನು ಮಾಡಿದಿರಿ. ನಿಮ್ಮ ತಪ್ಪಿಗಾಗಿ ಸವಿನಯಭಂಗವನ್ನು ನಿಲ್ಲಿಸಲಿಲ್ಲ. ನಿಲ್ಲಿಸಿದ್ದು ಗೋರಖಪುರದ ತಪ್ಪಿಗಾಗಿ. ಆದರೆ ನೀವೆಲ್ಲರೂ ಭಾರತವರ್ಷದವರ ಪೈಕಿ ಇದ್ದದರಿಂದ ಗೋರಖಪುರದ ತಪ್ಪಿನ ಪರಿಣಾಮವನ್ನು ಪ್ರೀತಿಯಾಗಿ ನೀವು ಸ್ವೀಕರಿಸಿದ್ದು [illegible].

ಶಿಷ್ಯರುಗಳ ವಿಷಯದಲ್ಲಿ ಗುರುವು ಮಾಡುವದನ್ನೂ ಯೋಗ್ಯವಾದದ್ದನ್ನೂ ಒಂದೇ ಪಾದದವರೆ ಮಾಡಬೇಕು; ಒಡೆಯರಿಬ್ಬರೂ ಬೇಕು; ಇದು ಅವರ ಧರ್ಮವು. ಕಾರ್ಯಕಾರಿ ಮಂಡಳಿಯ (Working Committee) ಠರಾವಿನ ಮೇರೆಗೆ ದ ಹೊಣೆಯಿಂದ ಬಾರಡೋಲಿ ಬಿಡೆಯುತ್ತಿದ್ದು ಹಾಗು ತಾನು [illegible] ತೆರಿಯನು ಕೊಟ್ಟು ಬಿಟ್ಟು ತನ್ನ ತಿದ್ದಿಕೊಳ್ಳಲಿಕ್ಕೆ ಸಿದ್ಧವಾದದ್ದು.

ಸವಿನಯಭಂಗವು ತಾತ್ಕಾಲಿಕವಾಗಿ ನಿಲ್ಲಿಸಲ್ಪಟ್ಟಿತು. ಆದರೆ ಸತ್ಯಾಗ್ರಹವು ಎಂದೂ ನಿಲ್ಲಲಾರದು. ಸತ್ಯಾಗ್ರಹವು ನಮ್ಮ ಪ್ರಾಣವಾಗಿರತಕ್ಕದ್ದು. ಆದ್ದರಿಂದ ನಾವು ಜನ್ಯಭಾವದಿಂದ ಸತ್ಯವನ್ನೇ ಆಗ್ರಹಿಸತಕ್ಕದ್ದು [illegible] ದಂತೆ ಹಾಗು ನಮ್ಮ ಸತ್ಯದ ರಕ್ಷಣೆ ಮಾಡುವೆನೆಂದು [illegible] ನಿಶ್ಚಯಪೂರ್ವಕವಾಗಿ ತಿಳಿಯತಕ್ಕದ್ದರಿಂದ [illegible] ಮಂಡಳಿಯು ನಿರ್ಧರಿಸಿದ ಠರಾವುಗಳನ್ನು ನಾವು ಸನ್ಮಾನಿಸುವದ ನಮ್ಮ ಧರ್ಮವು.

ಬಾರಡೋಲಿ ಜನರುಗಳು ಸವಿನಯಭಂಗವನ್ನು ಮಾಡಬೇಕೆಂದು ದೃಢನಿಶ್ಚಯಮಾಡಿದ್ದರೆಂಬದು ನಿಜ, ಆದರೂ ಅವರಲ್ಲಿ ಇನ್ನೂ ದೋಷಗಳಿದ್ದವು. ಆ ಎಲ್ಲ ದೋಷಗಳನ್ನು ತೆಗೆದು ಶಾಂತಿ ಸವಿನಯಭಂಗಕ್ಕಾಗಿ ಹೆಚ್ಚಿಗೆ ಯೋಗ್ಯತೆಯನ್ನು ಸಂಪಾದಿಸುವರೆಂದು ನಾನು ಆಶಿಸುತ್ತೇನೆ.

ಈಗ ನಾನು ಬಾರಡೋಲಿಯಲ್ಲಿಯೇ [illegible] ದೃಷ್ಟಿಯಿಂದ ಇಲ್ಲಿಯ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡಿರುವೆನು. ಇಲ್ಲಿಯ ಹಿಂದುಳಿದ ಜನರ ಸ್ಥಿತಿಯು ಕರುಣಾಸ್ಪದವಾಗಿದೆ. ಅವರು ಒಡೆಯರ ಗುಲಾಮರ ಸ್ಥಿತಿಯಲ್ಲಿಯೇ ಇರುತ್ತಾರೆ. ಅವರನ್ನು ಉದ್ಧರಿಸುವದು ಮುಂದೆ ಬರುವವರ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ಅವರು ನೆರವೇರಿಸಿದರೇನೇ ಅವರು ಮುಂದೆ ಬಂದದ್ದರ ಸಾರ್ಥಕವು. ಹಿಂದುಳಿದ ಜನಾಂಗದವರ [illegible] ಪ್ರವೇಶವಾಗುವಂತೆ [illegible] ಆ ಜನಾಂಗದವರ ಮಕ್ಕಳಿಗೆ ರಾಷ್ಟ್ರೀಯ ವಿದ್ಯಾಲಯಗಳಲ್ಲಿ ಶಿಕ್ಷಣವು ದೊರೆಯುವಂತೆ ವ್ಯವಸ್ಥೆ ಮಾಡತಕ್ಕದ್ದು.

ಬಾರಡೋಲಿಯ ಪ್ರಜೆಗಳು [illegible] ಯಾವತ್ತು ಕಾರ್ಯಗಳನ್ನು [illegible] ಪಾಲಿಸಿ ಹೆಚ್ಚಿಗೆ ಯೋಗ್ಯತೆಯನ್ನು ಹೊಂದುವರೆಂದು ಆಶಿಸುತ್ತೇನೆ.

[illegible] ಶಾಂತಿ ಬಿಗಡಾಯಿಸಿದರೆ [illegible] ಆದ ತಪ್ಪು [illegible] ಕೂಡಲೇ ನಮ್ಮಲ್ಲಿ ತಿಳಿಸಬೇಕು.

ಈ ಹೊತ್ತೇ ನಾವು ಬಾಹ್ಯ ವಸ್ತ್ರಗಳನ್ನು [illegible] ಗಳನ್ನು ತೀರಿಸಿ ಕೊಟ್ಟರೆ [illegible] ಲೆಕ್ಕ ರಾಷ್ಟ್ರೀಯ ವಿದ್ಯಾಲಯಗಳಲ್ಲಿ [illegible] ಶಕ್ಯವಿದೆ, [illegible] ನಿಮ್ಮ ಪ್ರತಿಯೊಂದು [illegible] ಯಂತೆ ಹಾಗೆ ಹಿಂದುಳಿದ ಕೆಲಸವನ್ನು [illegible] ದುವಂತೆ ನಿಮ್ಮ ಆದಾಯ [illegible] ಅಧಿಕ ಸ್ವಾತಂತ್ರ್ಯ [illegible] ಸಂಪಾದಿಸುವದು ಶಕ್ಯವಿದೆ; [illegible] ಶುಭವಾದರೇ ನಿಮ್ಮ ಸತ್ಯಾಗ್ರಹ [illegible] ಯುಗದ, ಸುಖಶಾಂತಿ [illegible] ಸ್ವದೇಶಿಯ ಕಾರ್ಯಗಳಲ್ಲಿ ನಡೆಸಲು ಶಕ್ಯವಿದೆ.

ಇದರ ಮಾರ್ಗವನ್ನಾದರೂ [illegible] ಸಭೆಯು ನಿಮಗೆ ತೋರಿಸಿದೆ. ಸ್ತ್ರೀ ಪುರುಷ [illegible] ಮತ್ತು ಗಂಡಸು ಮಕ್ಕಳು ಸಹ [illegible] ಸವನಾಗಿದು ಒಂದು ಸಾಧನವು, ಮತ್ತು [illegible] ಸ್ವರಾಜ್ಯನಿಧಿಗೆ ನಿಮ್ಮ ಹೊಲದ [illegible] ಬಂದ ಸೂಕ್ತಾಂಶ ಭಾಗವನ್ನು ಅರ್ಪಿಸುವದು ಇನ್ನೊಂದು ಸಾಧನವು. ಹೀಗೆ ಮಾಡಲು ನೀವು ಸಮರ್ಥರಾದರೆ ನಿಮ್ಮ [illegible] ಸ್ವಾತಂತ್ರ್ಯವು [illegible] ದಿಂದ ಈ ಕಾರ್ಯವನ್ನು [illegible] ದಿಂದ ಸಾಧ್ಯವಾಗುವದು [illegible] ಈ ಕಾರ್ಯವನ್ನು [illegible] ಮಾಡಿದರೇನೇ ನೀವು ಸವಿನಯ ಭಂಗವನ್ನು ಕೈಕೊಳ್ಳಲು ಯೋಗ್ಯರೆಂದು ಹೇಳಬಹುದು.

(ನವಜೀವನ)

ಮೋಹನದಾಸ ಕರಮಚಂದ ಗಾಂಧಿ

ಕನ್ನಡ ನವಜೀವನ.

ಮಾಘ ವ॥ ೧೨ ಗುರುವಾರ. ಶಕೆ ೧೮೪೩.

## ಚೌರೀ ಚೌರಾದಲ್ಲಿಯ ಅಪರಾಧವು.

ದೇವರು ನನ್ನ ಮೇಲೆ ಪರಮ ದಯಾಳುವಾಗಿದ್ದಾನೆ. ಅವನು ಸಾಮುದಾಯಿಕ ಸವಿನಯ ಕಾಯ್ದೆ ಭಂಗಕ್ಕೆ ಅತ್ಯವಶ್ಯವಿರುವ ನ್ಯಾಯಮಯ ಅಹಿಂಸಾತ್ಮಕ ವಾತಾವರಣವು ಹಿಂದುಸ್ಥಾನದಲ್ಲಿ ಇನ್ನೂ ಬಂದಿಲ್ಲವೆಂದು ನನಗೆ ಮೂರನೇ ಸಾರೆ ಸೂಚಿಸಿದ್ದಾನೆ. ಸತ್ಯ, ಪ್ರಾಮಾಣಿಕ, ಸವಿನಯ, ಸಜ್ಞಾನ, ಹಟ ಸಹಿತವಾಗಿದ್ದರೂ ಪ್ರೇಮಪೂರ್ವಕವಿದ್ದು ಪಾಪ ಮತ್ತು ದ್ವೇಷಾಸಂಬದ್ಧವಾದ್ದೇ ಸವಿನಯ ಆಜ್ಞಾಭಂಗವು. ಮೊದಲಿಗೆ ಆ ಪರಮಾತ್ಮನು ೧೯೧೯ನೇ ಇಸ್ವಿಯಲ್ಲಿ ರೌಲೆಟ್ ಬಿಲ್ಲಿನ ಸಂಬಂಧ ಚಳವಳಿಯು ನಡೆದಾಗ್ಗೆ ನನಗೆ ಸೂಚಿಸಿದನು. ಅಹಮ್ಮದಾಬಾದ, ವಿರಂಗಮ್ ಮತ್ತು ಖೇಡಾ ಜಿಲ್ಲೆಗಳು ತಪ್ಪು ಮಾಡಿದವು, ಕಾಸೂರ, ಅಮೃತಸರಗಳಾದರೂ ತಪ್ಪಿದವು ಆಗ್ಗೆ ನಾನು ನನ್ನ ಹೆಜ್ಜೆಗಳನ್ನು ಹಿಂದೆಗೆದು, ಅದಕ್ಕೆ ಹಿಮಾಲಯದಂಥ ತಪ್ಪೆಂದು ಕರೆದು ದೇವ ಮನುಷ್ಯರ ಮುಂದೆ ಬಾಗಿದೆನು. ಮತ್ತು ಸಾಮುದಾಯಿಕ ಕಾಯಿದೇ ಭಂಗವನ್ನು ನಿಲ್ಲಿಸಿದೆನಲ್ಲದೆ, ಸವಿನಯ ಮತ್ತು ಶಾಂತತಾಮಯವಾಗಿದ್ದರೂ ನನ್ನ ವೈಯಕ್ತಿಕ ಕಾಯಿದೇ ಭಂಗವನ್ನು ಕೂಡ ನಾನು ನಿಲ್ಲಿಸಿದೆನು.

ಎರಡನೇ ಸಾರೆ ಅವನು ಮುಂಬಯಿಯಲ್ಲಿ ಸಂಭವಿಸಿದ ಸಂಗತಿಗಳ ದ್ವಾರಾ ನನಗೆ ಬಹಳ ಭಯಂಕರವಾದ ಎಚ್ಚರಿಕೆ ಕೊಟ್ಟನು. ನವ್ಹಂಬರ ೧೭ನೇ ತಾರೀಖಿನ ದಿವಸ ಮುಂಬಯಿಯ ಜನರು ಮಾಡಿದ ಅತ್ಯಾಚಾರಗಳಿಗೆ ನನ್ನನ್ನು ಸಾಕ್ಷಿಯನ್ನಾಗಿ ಮಾಡಿದನು. ಆ ಜನರು ಅಸಹಕಾರ ಚಳವಳಿಗೆ ಸಂಬಂಧಿಸಿದವರಾಗಿದ್ದರು. ಕಾರಣ ನಾನು ಬಾರ್ಡೋಲಿಯಲ್ಲಿ ಶೀಘ್ರವಾಗಿಯೇ ಶುರುವು ಮಾಡಬೇಕೆಂದು ಗೊತ್ತಾಗಿದ್ದ ಕಾಯ್ದೆ ಭಂಗವನ್ನು ನಿಲ್ಲಿಸಬೇಕೆಂದು ನನ್ನ ಅಭಿಪ್ರಾಯವನ್ನು ಜಾಹೀರ ಮಾಡಿದೆನು. ಆಗ್ಗೆ ರಕ್ತಕಾರುವಂಥ ಈಗ್ಗೆ ಆದ ಅಪಮಾನವು ಹೆಚ್ಚಿನದ. ಆದರೆ ಆದರಿಂದ ನನಗೆ ಹಿತವೇ ಆಯಿತು, ನಿಲ್ಲಿಸುವದರಿಂದ ರಾಷ್ಟ್ರಕ್ಕೂ ಹಿತವಾಯಿತೆಂದು ನನಗೆ ಮನವರಿಕೆ ಯಾಗಿದೆ. ಮತ್ತು ಅದರಿಂದ ಹಿಂದುಸ್ಥಾನದ ಧ್ಯೇಯವು ಸತ್ಯ ಮತ್ತು ಅಹಿಂಸೆಯಿರುವನೆಂದು ವ್ಯಕ್ತವಾಗುತ್ತದೆ.

ಆದರೆ ಅತ್ಯಂತ ಖೇದ ಜನಕವಾದ ಅಪಮಾನವು ಇನ್ನು ಬರತಕ್ಕದ್ದಿತ್ತು. ಮದ್ರಾಸದ ಅಪ್ಪಣೆಯಲ್ಲಿಯೇ ಎಚ್ಚರ ಕೊಟ್ಟಿತು. ಆದರೆ ನಾನು ಅವಕ್ಕೆ ಲಕ್ಷ್ಯಗೊಡಲಿಲ್ಲ. ಪುನಃ ದೇವರು ಚೌರಿಚೌರಾದ ದ್ವಾರಾ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದನು. ಸರ್ಕಾರದಿಂದ ತುಂಡು ತುಂಡಾಗಿ ಬಂಧಿಸಲ್ಪಟ್ಟ ಪೋಲೀಸರು ಜನರನ್ನು ಸಿಟ್ಟಿಗೆಬ್ಬಿಸಿದ್ದರೆಂಬುದು ನನಗೆ ಗೊತ್ತದೆ. ಅವರು ಜನರಿಗೆ ತ್ರಾಸ ಕೊಡುವದಿಲ್ಲವೆಂದು ವಚನ ಕೊಟ್ಟು ಇನ್ಸ್ಪೆಕ್ಟರನ ಮೇಲೂ ತಿರುಗಿ ಬಿದ್ದ ಮೆರವಣಿಗೆಯ ನಂತರ ಕೆಲ ಅಪರಾಧಿಗಳನ್ನು ಕಾಲಕಸರಿ ಬೈಯಹತ್ತಿದರು. ಆ ಜನರು ತಮ್ಮ ಜನರ ಸಹಾಯವನ್ನು ಬೇಡಿದರು. ಜನಕೆ ಬೆಂಕಿಯೂ ತಿರುಗಿತು. ಪೋಲೀಸರು ಗುಂಡು ಹಾರಿಸಿದರು. ತಮ್ಮಲ್ಲಿದ್ದ ಸಾಮಗ್ರಿಯು ತೀರಿದ ಮೇಲೆ ಅವರು ಆತ್ಮ ರಕ್ಷಣೆಗಾಗಿ ಠಾಣೆಗೆ ತೆರಳಿದರು. ಆಗ್ಗೆ ಜನರು ನನ್ನ ಸುದ್ದಿಗಾರನ ಸುದ್ದಿಯ ಪ್ರಕಾರ ಠಾಣೆಗೆ ಬೆಂಕಿ ಹಚ್ಚಿದರು. ಒಳಗೆ ಸಿಕ್ಕಿದ್ದ ಪೋಲಿಸರು ತಮ್ಮ ಪ್ರೀತಿಯ ಜೀವರಕ್ಷಣೆಗೆ ಹೊರಗೆ ಬಂದರು. ಕೂಡಲೇ ಜನರು ಅವರನ್ನು ಚೂರು ಚೂರಾಗಿ ಕಡಿದ ತುಂಡುಗಳನ್ನೆಲ್ಲ ಧಗಿಧಗಿ ಉರಿಯುವ ಜ್ವಾಲೆಯಲ್ಲಿ ಒಗೆದರು.

ಅಸಹಕಾರದ ಸ್ವಯಂಸೇವಕರು ಈ ಕ್ರೂರ ಕೃತ್ಯದಲ್ಲಿ ಸೇರಿಕೊಂಡಿದ್ದರು ಮತ್ತು ಆ ಜನರಿಗೆ ಕ್ಷಣ ಪೂರ್ವದಲ್ಲಿ ಪೋಲೀಸರಿಂದ ಸಾಕಷ್ಟು ತ್ರಾಸವಾಗಿತ್ತಿಲ್ಲವೆ—ಚಿಟ್ಟಿಯ ಪೋಲೀಸರ ಉಪದ್ರವಗಳು, ಕ್ರೂರತನ, ಇವುಗಳ ಬಗ್ಗೆ ಅವರಿಗೆ ಸಾಮಾನ್ಯತಃ ಗೊತ್ತಿತ್ತೆಂದೂ, ಹೇಳುತ್ತಾರೆ. ಆದರೆ ಅಂಥ ತ್ರಾಸವಾಗಿದ್ದರೂ ಅನಾಥರಾದ ಅರ್ಥಾತ್ ತರೆಣಬಂದ ಜನರ ಬಗ್ಗೆ ಈ ಕ್ರೂರ ಕೋಪವು ಎಂದೂ ನ್ಯಾಯ ಸಮ್ಮತವಾಗಲಾರದು. ಅಷ್ಟಲ್ಲದೆ ಹಿಂದುಸ್ಥಾನವು ಶಾಂತತಾಮಯವಾಗಿದ್ದು ಅಹಿಂಸಾತ್ಮಕ ಸಾಧನದಿಂದ ಸ್ವಾತಂತ್ರ್ಯ ಸಿಂಹಾಸನವನ್ನು ಏರಲು ಆಶಿಸಿದಾಗ್ಗೆ, ಅಸತ್ಯ ಕ್ರೋಧ ಉದ್ದೀಪನವಾಗಿದ್ದರೂ ಅದಕ್ಕೆ ಪ್ರತ್ಯುತ್ತರವಾದ ಜನತಾ ಕೊಲೆಯು ದುಶ್ಚಿಹ್ನವೆಂದು ತಿಳಿಯತಕ್ಕದ್ದು. ಒಂದು ವೇಳೆ ದೇವರು ಬಾರ್ಡೋಲಿಯಲ್ಲಿ ಸವಿನಯ ಕಾಯಿದೇ ಭಂಗವನ್ನು ಮಾಡಗೊಟ್ಟಿದ್ದರೆ ಮತ್ತು ಸರಕಾರದವರು ಬಾರ್ಡೋಲಿಯ ವೀರರ ಕೈಯಲ್ಲಿ ತಮ್ಮ ಹಕ್ಕುಗಳನ್ನೆಲ್ಲ ಬಿಟ್ಟುಗೊಟ್ಟಿದ್ದರೆ ಆಗ್ಗೆ ಕೋಪಕ್ಕೆ ಪ್ರತಿಯಾಗಿ ಹಿಂಸೆಗೈಯುವ ಜನರ ನಿರ್ಗಲ ವರ್ತನವನ್ನು ಯಾರು ನಿಲ್ಲಿಸುವರು? ಅಹಿಂಸೆಯಿಂದ ಸ್ವರಾಜ್ಯವನ್ನು ಗೆಲ್ಲುವದೆಂದರೆ ದೇಶದಲ್ಲಿ ಅಹಿಂಸಾ ಪ್ರವೃತ್ತಿಯು ಹಿಂಸೆಯನ್ನು ತಡೆದು ನಿಲ್ಲಿಸಬೇಕೆಂದು ಬೇರೆ ಹೇಳಬೇಕಾಗಿಲ್ಲ. ಶಾಂತಿಮಯ ಅಸಹಕಾರಿಗಳಿಗೆ ಹಿಂದುಸ್ಥಾನದ ಪುಂಡರ ಮಂಡಾಟವನ್ನು ನಿಲ್ಲಿಸಿದ ಹೊರತು ಜಯವು ಸಿಗುವದು. ಅಂದರೆ ಅಸಹಕಾರ ಚಳವಳಿಯು ಇರುವವರೆಗಾದರೂ ಪುಂಡರು ರಾಷ್ಟ್ರಹಿತವನ್ನೂ ಧರ್ಮಬುದ್ಧಿಯನ್ನೂ ಲಕ್ಷಕ್ಕೆ ತಂದು ಹಿಂಸೆ ಮಾಡುವದನ್ನು ಬಿಡಬೇಕು. ಅದ್ದರಿಂದ ಚೌರಿಚೌರಾದಲ್ಲಿಯ ಕೊಲೆಯು ನನಗೆ ಸಂಪೂರ್ಣವಾಗಿ ಎಚ್ಚರ ಕೊಟ್ಟಿತು.

ಆದರೆ ನೀನು ವ್ಯಾಕುಲನಾಗಿಯೇ ಇದ್ದ ಜಾಹೀರನಾಮೆ ಅವರ ಉತ್ತರಕ್ಕೆನ ಪ್ರತ್ಯುತ್ತರ ಇದುಗಳ ಗತಿಯೇನು? ಎಂದು ಕಲಿಯ ಧ್ವನಿಯು ಕೇಳಬರುತ್ತದೆ. ಈ ಸಂಗತಿಯು ನಿಜವಾಗಿ ಅಸಹ್ಯವಾದದ್ದು. ನನ್ನನ್ನು ಟೀಕೆ ಮಾಡುತ್ತವೆ. ಮುನಿಸಿನ ಬಡಿಗೆಯ ಜನರಿಗೆ ವಚನಕೊಟ್ಟು, ಸಂಕಷ್ಟಗಳಂಥ ಬೆದರಿಕೆಗಳನ್ನು ಹಾಕಿ ಈಗ ಹಿಂದೆಯುವವನೆಂದರೆ ಕೇವಲ ಮೂರ್ಖತನವು ಎಂಬ ಕಲಿಯುವಜನವನ್ನು ಲಕ್ಷ್ಯಕ್ಕೆ ತಂದರೆ ಸ್ವಾರ್ಥ ದಕ್ಕಾಗಿಯೇ ಧರ್ಮ, ದೇವರೂ ಇದು ನಾಸ್ತಿ ಎಂದು ಅನ್ನಬೇಕಾಗುತ್ತದೆ. ನಾನು ನನ್ನ ಸಂಶಯಗಳನ್ನೂ ಅಡಚಣಿಗಳನ್ನು ನನ್ನ ಸವಿನಯದಲ್ಲಿ ಇತರ ಜೊತೆಗಾರರು, ಕಾರ್ಯಕಾರಿ ಮಂಡಳ Working Committee ಇವುಗಳ ಮುಂದೆ ಇಟ್ಟೆನು. ಅವರು ಎಲ್ಲರೂ ಮೊದಲಿಗೆ ನನ್ನ ಮಾತಿಗೆ ಒಪ್ಪಲಿಲ್ಲ. ಕೆಲವರು ಬಹುಶಃ ಈಗಲೂ ಒಪ್ಪವದಿಲ್ಲ. ಆದರೆ ಕ್ಷಮಾಶೀಲ, ವಿಚಾರಶೀಲ ಮಿತ್ರರಿಂದ ನನ್ನಷ್ಟು ಧನ್ಯನ ಯಾರೂ ಇಲ್ಲವೆಂದು ಅನ್ನಬಹುದು. ಅವರು ನನ್ನ ಅಡಚಣಿಗಳನ್ನು ತಿಳಿದುಕೊಂಡು ನನ್ನ ವಿಚಾರಸರಣಿಗೆ ಸಮ್ಮತಿಕೊಟ್ಟರು. ಆದರೆ ಪರಿಣಾಮವು ಕಾರ್ಯಕಾರಿ ಮಂಡಳದ ಠರಾವು ಲೋಕವಾಗಿ ಜಾಹೀರ ಮಾಡಲ್ಪಟ್ಟದೆ, ನೀತಿವಿರುದ್ಧ ಕಾಯಿದೆ ಭಂಗದ ಕಾರ್ಯಕ್ರಮವನ್ನು ಒಮ್ಮೆಲೇ ರದ್ದು ಪಡಿಸಿದ್ದು ಮೂರ್ಖ ಲಕ್ಷಣವೂ, ರಾಜಕೀಯ ದೃಷ್ಟಿಯಿಂದ ಮಹಾ ಅಪರಾಧವೂ ಆಗಬಹುದು; ಆದರೆ ಧರ್ಮದೃಷ್ಟಿಯಿಂದ ಇದು ನ್ಯಾಯವಿದೆ ಎಂಬಲ್ಲಿ ಸಂದೇಹವಿಲ್ಲ. ಈಗ ನಾನು ವಿನಯದಿಂದ ತಪ್ಪು ಒಪ್ಪಿಕೊಳ್ಳುವದರಿಂದ ದೇಶಕ್ಕೆ ನಿಶ್ಚಯವಾಗಿ ಲಾಭವಾಗುವದೆಂದು ನಾನು ಎದೆ ತಟ್ಟಿ ಹೇಳುವೆನು.

ನನ್ನಲ್ಲಿ ಸತ್ಯ ಪ್ರಿಯತೆ ಮತ್ತು ಅಹಿಂಸೆ ಎಂಬಿವೆರಡೇ ಗುಣಗಳು ಇರುವವೆಂದು ನಾನು ಹೇಳುವೆನು. ಅಮಾನುಷ ಶಕ್ತಿಯು ನನ್ನಲ್ಲಿ ಅದೆ ಎಂದು ನಾನು ಹೆಮ್ಮೆ ತೋರುವದಿಲ್ಲ; ನನಗೆ ಅದು ಬೇಕಾಗಿಯೇ ಇಲ್ಲ. ನನ್ನ ದೇಶಬಾಂಧವರಲ್ಲಿ ತೀರ ಅಶಕ್ತನಂತೆ ನನಗೂ ಅಷ್ಟೇ ಸದೋಷ ದೇಹದಸಂಬಂಧವಿರುತ್ತದೆ. ಅದ್ದರಿಂದ ನಾನೂ ಅಷ್ಟೇ ಸ್ಖಲನ ಶೀಲನಿದ್ದೇನೆ. ನನ್ನ ರಾಷ್ಟ್ರಸೇವೆಗಳಲ್ಲಿ ಅನೇಕ ದೋಷಗಳಿರುತ್ತವೆ. ದೇವರು ಆ ಕುಂದುಗಳಿಗೆ ಲಕ್ಷಗೊಡದೆ ಅವುಗಳನ್ನೆಲ್ಲ ಜಯವನ್ನು ಕೊಟ್ಟಿದ್ದಾನೆ. ಯಾಕೆಂದರೆ ತಪ್ಪು ಒಪ್ಪಿಕೊಳ್ಳುವದು ಕಸಬರಿಗೆಯಂತೆ ಹೊಲಸನ್ನೆಲ್ಲ ಪ

ಉ ಪಾತಿ ವೇಲ್ಪಾಗನನ್ನು ಹೆಚ್ಚು ಸ್ಪಷ್ಟ ವಾಗಿ ಮಾಡುತ್ತದೆ. ಈ ಒಪ್ಪಿಗೆಯಿಂದ ನನ್ನಲ್ಲಿ ಹೆ ಚ್ಚು ಸಾಮರ್ಥ್ಯ ಬಂದಿದೆ ಎಂದು ಅನಿಸು ತ್ತದೆ. ಪತ್ತು ಇದು ನನ್ನ ಧ್ಯೇಯಕ್ಕೆ ಪೋಷ ಕವಾಗಿಯೇ ಇದೆ. ಸತ್ಯಪಥವನ್ನು ಬಿಟ್ಟು ನಡೆ ದನೆಗೆ ಎಂದೂ ಇಷ್ಟ ಸಿದ್ಧಿಯಾಗಿಲ್ಲ.

ಚೌರಿ ಚೌರಾದಲ್ಲಿಯ ಸಂಗತಿಗಳು ಬಾ ರ್ಡೋಲಿಗೆ ಏನೂ ಸಂಬಂಧವಿಲ್ಲೆಂದು ಕೆಲ ವರ ಆಕ್ಷೇಪವಿದೆ. ಒಂದು ವೇಳೆ ಅದರ ಸಂಬ ಕ್ಷ ಬಾರ್ಡೋಲಿ ತಗಲಿ ಅಲ್ಲಿ ಹಿಂಸೆ ಯಾ ಗುವ ಸಂಭವವಿದ್ದರೆ ಮಾತ್ರ ಅನರ್ಥವಾ ಗುವದೆಂದ ಅವರು ಪ್ರತಿಪಾದಿಸುತ್ತಾರೆ. ಈ ವಿಷಯದಲ್ಲಿ ನನಗೆ ಸಂಶಯವಿಲ್ಲ. ಬಾರ್ಡೋ ಲಿಯ ಜನರ ಹಿಂದುಸ್ಥಾನದ ಉಳಿದ ಭಾಗ ಗಳಲ್ಲಿಯ ಗಿಂತ ಹೆಚ್ಚು ಶಾಂತತೆಯಿಂದಿರು ತ್ತಾರೆಂದು ನನ್ನ ಅಭಿಪ್ರಾಯವದೆ. ಆದರೆ ಬಾ ರ್ಡೋಲಿಯು ಹಿಂದುಸ್ಥಾನದ ನಕಾಶದಲ್ಲಿ ಒಂದು ಕಣವಿರುತ್ತದೆ. ಉಳಿದ ಪ್ರಾಂತಗಳ ಸಹಾಯವು ದೊರಕದ ಹೊರತು ಬಾರ್ಡೋ ಲಿಯ ಪ್ರಯತ್ನಗಳು ಸಫಲವಾಗಲರಿಯವು. ಹಿಂದುಸ್ಥಾನದ ಉಳಿದ ಭಾಗಗಳಲ್ಲಿ ಶಾಂತ ತೆಯು ನೆಲೆಗೊಂಡರೇನೇ ಬಾರ್ಡೋಲಿಯು ಕಾಯಿದೇ ಭಂಗವು ಸವಿನಯ ವಾಗುವ ದು. ಹಾಲಿನ ಪಾತ್ರೆಯಲ್ಲಿ ವಿಷಕರಣ ಮಿಶ್ರವಾದರೆ ಹೇಗೆ ಆ ಹಾಲು ಅಭಕ್ಷ್ಯವೋ ಅದ ರಂತೆ ಚೌರಿ ಚೌರಾದ ವಿಘಾತಕ ವಿಷ ದಿಂದ ಬಾರ್ಡೋಲಿಯ ಶಾಂತತೆಯು ಅಗ್ರಾ ಹ್ಯವಾಗುವದು. ಬಾರ್ಡೋಲಿಯಂತೆ ಚೌರಿ ಚೌರಾವು ದರೂ ಹಿಂದುಸ್ಥಾನದ ಸ್ಥಿತಿಯನ್ನು ನಿರೂಪಿಸ ವದು.

ಹೇಗೇ ಇರಲಿ—ಚೌರಿಚೌರಾ ಸ್ಪಷ್ಟ ಸ್ವರೂಪವನ್ನು ಹೊರಗೆಡವಿ ಒತ್ತನೆ. ದಬ್ಬು ಳಿಕೆ ಈಡಾದ ಭಾಗಗಳಲ್ಲಿ ಶಾರೀರಿಕ ಅಥವಾ ಮಾನಸಿಕ ಹಿಂಸೆಯು ಆಗೇ ಇಲ್ಲವೆಂದು ನಾ ನ ತಿಳಿದಿಲ್ಲ; ಆದರೆ ಈಗೂ ಹಿಂಸೆಯು ಅದೇ ಎಂದು ನನ್ನ ಪೂರ್ಣ ಅಭಿಪ್ರಾಯ ನಿಲ್ಲುವದು. ಆ ಐಂಗ ಇಂಡಿಯಾದ ಗತ ಸಂಚಿಕೆಗಳಿಂ ದ ವ್ಯಕ್ತವಾಗುವದೇನಂದರೆ ದ ಬ್ಬಾಳಿಕೆಯು ಪ್ರದೇಶಗಳಲ್ಲಿಯ ಜನರ ಹಿಂಸೆ ಯು ದಬ್ಬಾಳಿಕೆಗಿಂತ ಅನರಿಷ್ಟ ಪಟ್ಟ ಕ್ಷು ದ್ರವಿರುತ್ತದೆ. ಬಂದೀ ಹುಕುಮುಗಳಿದ್ದ ಪ್ರ ದೇಶಗಳಲ್ಲಿ ಹಟದಿಂದ ಸಭೆ ಕೂಡಿಸ ವದಕ್ಕೆ ನಾನು ಹಿಂಸೆಎನ್ನಲಾರೆನು. ಒಂದೆರಡು ಸಂ ಗತಿಗಳಲ್ಲಿ ನಿದರ್ಶನಕ್ಕೆ ಬಂದ ಜುಲ ಮೆ, ಬೆ ದರಿಕೆ, ಕಲ್ಲು ಎಸೆಯು ಒಗೆಯೋಣಗಳೇ ನನ್ನ ಅಭಿಪ್ರಾಯದಂತೆ ಹಿಂಸೆ ಯಾಗ ವದು. ನಿಜವಾಗಿ ಹೇಳಬೇಕೆಂದರೆ ಸವಿನಯ ಕಾಯಿ ದೇಭಂಗದಲ್ಲಿ ವಾತಾವರಣವು ಸ್ವಲ್ಪ ಸಹ ಪ್ರಕ್ಷುಬ್ಧವಾಗಬಾರದು. ಈ ಕಾಯಿದೇ ಭಂ ಗವು ಶಾಂತಿಯಿಂದ ದುಃಖ ಸಹಿಷ್ಣು ಯು ಮೂರ್ತಿ ತರುವಾರಿ ಇರುತ್ತದೆ. ಅದರ ಪರಿಣಾ ಮವು ಅಪ್ರತ್ಯಕ್ಷವಿದ್ದರೂ ಒಳ್ಳೇ ಅದ್ಭುತ ವೂ ಗೌರವವೂ ಇರುತ್ತದೆ.

ಸ್ಪಷ್ಟವುಟ್ಟಿಗಾದರೂ ಆದರ್ಕೈಶೀಭವ ಅನಿವಾ ರ್ಯವೆಂದೂ ಪ್ರಸಾದದಿಂದಾದ ಹಿಂಸೆಯು ಪಕ್ಷ ಪ್ಯವೆಂದು ನಾನು ನಂಬಿದ್ದೇನು; ಅಂದರೆ ಸ್ವಲ್ಪ ಅಪೂರ್ಣತಾ ದಶೆಯಲ್ಲಿ ಕಾಯಿದೇ ಭಂಗ ಅಶಕ್ಯವೆಂದು ನಾನ ತಿಳಿದಿಲ್ಲಿ. ಪೂರ್ಣ ತಾ ದಶೆಯಲ್ಲಿ ಕಾಯಿದೇ ಭಂಗವು ಸವಿನಯ ವಿದ್ದರೆ ಅದರ ಅಸ್ತಿತ್ವವೇ ಪ್ರಶ್ನೆಗೆ ಬರುವದಿಲ್ಲ. ಆದರೆ ಸದ್ಯದ ಕಾಲವಳಿಯು ನಾಕಷ್ಟು ವಿಭಿನ್ನ ಪರಿಸ್ಥಿತಿಯಲ್ಲಿ ಸುಗ್ರಷ್ಟು ಆದರೆ ಸಂಶಯವಾ ಗಿ ಭಯಂಕರವಿ ದ್ದದೆ.

ಚೌರಿಚೌರಾದ ಕೊಲೆಯ ವೃತ್ತಿ ಗ್ರಾಹ ಕನ್ನಾಗಿಯ ಹಿಂದುಸ್ಥಾನದ ಪ್ರವೃತ್ತಿಯ ನ್ನೂ ಯೋಗ್ಯ ಉಪಾಯಗಳನ್ನು ಯೋಜಿಸಿ ದ್ದರೆ ಅದರ ಸಹಜ ಪರಿಣಾಮವನ್ನೂ ವ್ಯಕ್ತ ಮಾಡುತ್ತದೆ. ಅಹಿಂಸೆಯು ಹಿಂಸೆಯಲ್ಲಿ ಪ ರಿಣಮಿಸಬೇಕೆಂದು ನಮ್ಮ ಇಚ್ಛೆಯಿಲ್ಲದಿದ್ದರೆ ಸ್ಪಷ್ಟವಾಗಿ ನಾವು ನಮ್ಮ ಹೆಜ್ಜೆಯನ್ನು ಹಿಮ್ಮೆ ಟ್ಟಿ ತೀವ್ರವಾಗಿಯೇ ಶಾಂತತಾಮಯ ವಾ ತಾವರಣವನ್ನು ತಿರುಗಿ ಪಡೆದು ವಿಸತಕ್ಕದ್ದು ಮತ್ತು ನಮ್ಮ ಕಾರ್ಯಕ್ರಮದಲ್ಲಿ ಬಸಲಾವ ಣೆಗಳನ್ನು ಮಾಡಿ ಕಾಯಿದೇಭಂಗದಿಂದ, ಸರ ಕಾರದವರು ಎಷ್ಟು ತ್ರಾಸಕೊಟ್ಟರೂ ಶಾಂ ತತಾಭಂಗ ವಾಗುವದಿಲ್ಲವೆಂದು ಮನಗಾಣು ವವರೆಗೆ ಕಾಯದೇಭಂಗವನ್ನು ಪ್ರಾರಂಭಿ ಸುವ ವಿಚಾರವನ್ನು ಮಾಡಬಾರದ. ವರಿಷ್ಠ ಹುದ್ದೆ ಯ ಆಜ್ಞೆಯಿಲ್ಲದೆ ಎಂದೂ ಸಾಮುದಾಯಿಕ ಕಾ ಯಿದೇ ಭಂಗವು ಸುರುವು ಆಗುವದಿಲ್ಲವೆಂ ಬಗ್ಗೆ ನಾವು ಮೊದಲು ಮನವರಿಕೆ ಮಾಡಿ ಕೊಡಬೇಕು.

ಸದ್ಯಕ್ಕೆ ರಾಷ್ಟ್ರೀಯ ಸಭೆಯು ರಚನೆಯು ಇನ್ನು ಸದೋಷವಿದ್ದು ಅದರ ಆಜ್ಞೆಗಳು ಇನ್ನೂ ಪೂರ್ಣತ್ವೇನ ಪಾಲಿಸಲ್ಪಡುವದಿಲ್ಲ. ನಾತ್ರ ಇನ್ನು ಪ್ರತಿಯೊಂ ದು ಹಳ್ಳಿಯಲ್ಲಿ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿಲ್ಲ. ಸ್ಥಾಪಿಸಿದ್ದರೆ ಅವು ನಮ್ಮ ಆಜ್ಞೆ ಗೆ ಪೂರ್ಣ ಒಳಗಾಗಿಲ್ಲ. ಬಹುಶಃ ೧ ಕೋಟಿ ಹೆಚ್ಚು ಜನರು ಸಭಾಸದಪಟ್ಟಿಯಲ್ಲಿಸ ಮಾವೇಶ ರಾಗಿಲ್ಲ. ಫೇಬ್ರುವರಿ ತಿಂಗಳವು ಅಧ ಗಿಂತ ವಾಗಿ ಹೋದರೂ ಈ ವರ್ಷದ ನಾಲ್ಕಾಣೆ ಪ ಟ್ಟಿಯನ್ನು ಅನೇಕರು ಕೊಟ್ಟಿಲ್ಲ. ಮನಸ್ಸಿಗೆ ಒಂದವರು ಸ್ವಯಂ ಸೇವಕರಾಗಿರುತ್ತಾರೆ. ಅ ವರು ಪ್ರತಿಜ್ಞಾಲೇಖದ ಎಲ್ಲ ಕರಾರುಗಳಿಗೆ ತಮ್ಮ ಒಪ್ಪಿಗೆಯನ್ನು ಕೊಟ್ಟಿಲ್ಲ. ಅವರು ಕೈ ನೂಲಿನ ಕೈಮಗ್ಗದ ಬಟ್ಟೆಗಳನ್ನು ಸಹ ಧರಿ ಸುವದಿಲ್ಲ. ಎಲ್ಲ ಹಿಂದೂ ಸ್ವಯಂ ಸೇವಕರು ಅಸ್ಪೃಶ್ಯದೋಷವನ್ನು ಬೇರು ಸಹ ಕಿತ್ತಿಹಾಕಿ ಲ್ಲ. ಎಲ್ಲರೂ ಹಿಂಸಾಭಾವದಿಂದ ಮುಕ್ತರಾಗಿ ಲ್ಲ. ಅವರ ಬಂಧೀವಾಸದಿಂದ ನಮಗೆ ಸ್ವರಾ ಜ್ಯವಾಗಲಿ, ವಿಬಾಫತದ ಪವಿತ್ರಸೇವೆಯಾ ಗಲಿ, ಅವಿಶ್ವಸ್ಥ ನೌಕರಿಗೆ ಸಲ್ಲತಕ್ಕ ಮಗಾರ ವನ್ನು ನಿಲ್ಲಿಸಲಿಕ್ಕೆ ತ್ರಾಣವಾಗಲಿ ಬರಲಾರ ದು. ಕೆಲವರು ಕೃತಪ್ಪಿ ತಪ್ಪುಮಾಡುತ್ತಾರೆ.

ಕೆಲವರು ಮನಃಪೂರ್ವಕವಾಗಿ ಪಾಪಮಾ ಡುತ್ತಾರೆ. ಅವರು ಶಾಂತರಿಲ್ಲ, ಆಗಲಿಕ್ಕೂ ಇಚ್ಛಿಸುವದಿಲ್ಲ ಇದನ್ನು ತಿಳಿದಾದರೂ ಸ್ವ ಯಂ ಸೇವಕಸಂಘಕ್ಕೆ ದಾಖಲ ಆಗುತ್ತಾರೆ. ಸರಕಾರದಂತೆ ನಾವಾದರೂ ಅಪ್ರಾಮಾಣಿ ಕರಿದ್ದೇವೆ. ಸತ್ಯ ಅಹಿಂಸೆಗಳಲ್ಲಿ ಢೊಂಗಿವಿ ಶ್ವಾಸವಿಟ್ಟರೆ ನಾವು ಸ್ವಾತಂತ್ರ್ಯ ರಾಜ್ಯದಲ್ಲಿ ಪ್ರವೇಶಿಸಲು ಶಕ್ಯರಾಗಲಾರೆವು.

ಸಾಮುದಾಯಿಕ ಕಾಯಿದೇ ಭಂಗವನ್ನನಿಲ್ಲಿ ಸಿ ಶಾಂತಿಯನ್ನು ನೆಲೆಗೊಳ್ಳಿಸ ವದು ವಿಂ ದಿನ ನಿಗೆ ವಕತ ನಿರುತ್ತರ, ಅಥವಾ ಅಧಿಕಾರಿಗಳನ್ನು ಕದ್ದೆ ಬದವಕ್ಷಾರೂ ಆ ತ್ಯಾಚಾರವಿರುತ್ತದೆ ... ಪ್ರತಿಕೊಟ್ಟ ರಾಷ್ಟ್ರೀಯ ಸಭೆ ದನು ... ಆಗಲಿ ಕ್ಕಾ ಆಗಲಿ— ... ಪ್ರತಿಸುವನ ಲ್ಲ; ಇಷ್ಟೇ ಅಲ್ಲ, ನನಗೆ ಅಧರ್ಮ ... ಅಸತ್ಯ, ರಾಷ್ಟ್ರದ್ರೋಹ ... ಸಳಿದ ಆ ನಂದವು ದೊರೆಯುವದು.

ನನ್ನ ಪ್ರತಿಕಾರಿಗಳು ಸೋಲಿನಂತೆ ಕಾ ಣಿಸುವ ಈ ನನ್ನ ಅನವರ್ಣದಲ್ಲಿ ಸಂತೋ ಷವಾಗಲಿ ದೇಶದ್ರೋಹ ಪ್ರತಿಜ್ಞಾ ಭಂಗವೆಂ ಬ ದೋಷಗಳಿಗೆ ಈ ದ ... ಹೇ ಡಿಯೆಂದು ನಿಂದಿಸಿಸಿಕೊಳ್ಳುವದು ಲೇಸು ನಿ ಜವಾಗಿ ಅಪ್ರಮಾಣಿ ರಾಗುವದಕ್ಕಿಂತ ಈ ನನಿಗೆ ಅಪ್ರಮಾಣಿ ರಂತ ತೋರುವನು ಲಕ್ಷ ಪಾಲಿಗೆ ... ಚೌರಿಚೌರಿಯ ಜನರ ಅ ತ್ಯಾಚಾರ ರಥಿ ಕಾರಣ (ಎಂಥ ಮ ಎವರ ಯಂದಾದ ೫) ನ ದಕ್ಕೆ ಹಿಂಸಾ ಪ್ರಸಂ ಗವಾದ ಸಾಮುದಾಯಿಕ ಕಾಯಿದೆಭಂಗ ಮ ತ್ತು ಇತರ ಚಳವಳಗಳನ್ನು ನಿಲ್ಲಿಸುವದಿಷ್ಟೇ ನನಗೆ ಪಶ್ಚಾತ್ತಾಪ ರೂಪವ ಗದಾರದು. ಅದ ರಿ ನಾನು ದೇಹ ಆತ್ಮ ಶುದ್ಧಿಯನ್ನು ಹೊಂದ ತಕ್ಕದ್ದು. ನನ್ನ ಇತ್ತೀಲಿ ವ ನೈತಿಕ ವಾತಾ ವರಣದಲ್ಲಿ ಅತಿ ಸೂಕ್ಷ್ಮವಾದ ಬದಲಾವಣೆ ಗಳನ್ನು ಚ ಗಿನ ಮ ಅನ ಕಾಲವಾದ ಅ ಧಿಕಾರವು ನನ್ನಲ್ಲಿ ಬರತಕ್ಕದ್ದು. ನನ್ನ ಪ್ರಾ ರ್ಥನೆಗಳಲ್ಲಿ ಈಗಿನಗಿಂತ, ಹೆಚ್ಚು ಗಾಂಭೀ ರ್ಯ, ಪ್ರಮಾಣಿಕತನ, ವಿನಯಗಳು ಇರ ತಕ್ಕದ್ದು. ನನಗಂತು ಯೋಗ್ಯ ಜ್ಞಾನ ಪೂ ರ್ವಕವಾದ ಉಪವಾಸವನ್ನು, ಹಿತಕರವೂ, ಶುದ್ಧಿಕಾರಿಯೂ ಬೇರೆ ಯಾವದೂ ತೋರು ವದಿಲ್ಲ.

ಮನುಷ್ಯನನ್ನೈತಿಕಭಾವನೆಯು ಸರ್ವಸಮರ್ಥ ವಿರುತ್ತೆಂದು ನನಗೆ ಗೊತ್ತದೆ. ಪಕ್ಷಿಗಳಿಗೆ ಲಿಗಿ ಲಿಸ್ವರದಂತೆ ಪ್ರಾರ್ಥನೆಯು ರಲಬಹಿರಾ ವಾ ಗಲು ಶಕ್ಯವದೆ. ಇದರಂತೆ ಉಪವಾಸ ವಾ ದರೂ ಕೇವಲ ದೇಹ ಮೋಕ್ಷವನ್ನುಂಟು ಮಾ ಡಬಹುದು. ಇಂಥಬಾಹ್ಯ ಸಾಧನಗಳು ಉದ್ದೇ ಶ ಸಿದ್ಧಿಗೆ ನಿಷ್ಪ್ರಯೋಜಕವಾಗುವವು ಮ ತ್ತು ಬಾಹ್ಯ ಯಂತ್ರ ಘೋಷವು ಧ್ವನಿಯಲ್ಲ ಸೌ ಖ್ಯವನ್ನುಂಟು ಮಾಡುವಂತೆ ಕೇವಲ ಉ ಪವಾಸವು ದೇಹವನ್ನು ಶುದ್ಧ ಮಾಡಬಹುದು. ಈ ಎರಡೂ ಪ್ರಸಂಗಗಳಲ್ಲಿ ಅಂತರಾತ್ಮ ಶು ದ್ಧಿಯೇ ಆಗುವದಿಲ್ಲ.

ಆತ್ಮಾಭಿವೃದ್ಧಿಗಾಗಿ, ಅಸುರೀ ಶಕ್ತಿಯ ಮೇಲೆ ದೈವೀ ಶಕ್ತಿಯ ಅಧಿಕಾರವನ್ನು ಸಂಪಾದಿಸುವದಕ್ಕಾಗಿ ಮಾಡಿದ ಉಪವಾಸವು, ಮನುಷ್ಯನ ಕ್ರಾಂತಿಯಲ್ಲಿ ಒಂದು ಅತಿಶಯ ಮಹತ್ವದ ಅಂಗವಾಗಿದೆ. ಅದರಿಂದ ಸಂಪೂರ್ಣ ವಿಚಾರ ಮಾಡಿ ಕೇವಲ ನೀರಿನ ಮೇಲೆ ಇದ್ದು ಸತತ [illegible] ದಿವಸಗಳವರೆಗೆ ಉಪವಾಸ ಮಾಡುವದನ್ನು [illegible] ನೆ ಆದಿತ್ಯವಾರ ಸಂಜೆಗೆ ಪ್ರಾರಂಭವಾಗಿ ಶುಕ್ರವಾರ ಸಂಜೆಗೆ ಮುಗಿಯುವದು. ನಾನು ಇಷ್ಟು ಮಾಡುವದು [illegible] ಅಲ್ಪವೇ ಸರಿ. [illegible] ದಿನಗಳಲ್ಲಿ ಕೂಡುವ ನಿಖಿಲ ರಾಷ್ಟ್ರೀಯ ಸಭಾಮಂಡಳದ ಸಭೆಯನು ನಾನು [illegible] ನನ್ನ ಐದ ದಿವಸದ ಉಪವಾಸವು ನನ್ನ ಮಿತ್ರರಿಗೆ ದುಃಖ ಕೊಡಬಹುದು. ಆದರೆ ನಾನು ಅದನ್ನು ಮುಂದಕ್ಕೆ ಹಾಕಲಾರೆನು. [illegible] ಕಡಿಮೆ ಯ ದರ್ [illegible] ಮಾಡಲಾರೆನು.

ನನ್ನ ಸಹಕಾರಿಗಳು ಈ ವಿಷಯದಲ್ಲಿ ನನ್ನನ್ನು ಅನುಕರಿಸಬಾರದೆಂದು ನಾನು ಆಗ್ರಹಪೂರ್ವಕವಾಗಿ ಹೇಳುತ್ತೇನೆ. ಅವರಲ್ಲಿ ಉಪವಾಸಕ್ಕೆ ಯೋಗ್ಯವಾದ ಹೇತುವು ಸಿಗಲಾರದು. ಅವರ ಕಾಯದೆ ಭಂಗ ಚಳವಳಿಯು ಉತ್ಸಾಹದಲ್ಲಿ ನನ್ನ [illegible] ನಿಜವಾಗಿ ಭಯಂಕರವಾದ [illegible] ವಿಸರ್ಜನವು [illegible] ವಿಷಾದಕರ [illegible] ಪ್ರಯೋಜ್ಯವಾದ ಈ [illegible] ನನಗೆ ಅವಶ್ಯವು ಅನಿವಾರ್ಯವೂ [illegible] ಪ್ರತಿಯೊಬ್ಬ ಮಂಬಿಯನು [illegible] ಡಲವು [illegible] ಸಿಪಾಯಿ [illegible] ಯಾಗುವದು ಅವಶ್ಯವು. ದ [illegible] ಪ್ರಾಯಶ್ಚಿತ್ತವು ಇದೇನ ಸಾಧಾರಣ ಪಾಪ ಸಂ [illegible] ದನ್ನು ನಾನು [illegible] ಹೃದಯದಲ್ಲಿ ತುಂಬಿರುವ ಉಪವಾಸದಕ್ಕಿಂತ [illegible] ಹೆಚ್ಚು ಸಾರ್ಥಕವೂ, ಹಿತಕರವೂ [illegible] ಮನೋಮಾತ್ರ್ಯ [illegible] ಅಹಿಂಸೆಯಲ್ಲಿ ನಂಬಿ ಅದಕ್ಕೆ ಪ್ರಚಾರ ಗೊಳಿಸುವಂಥ ಫಲಸಾಧಕ ಮಾರ್ಗವು ಯಾವದೂ ನನ್ನ ಬಾಂಧವರು ಈ [illegible] ಚೊಕ್ಕವಾದದ್ದು [illegible] ಕಾಲ ಕಳೆಯದೆ [illegible] ಕಾರಿ ಮುಂದಿನವನು [illegible] ಪಡಿಸಿದ ಕೆಳಗಿನ ಕಾರ್ಯಕ್ರಮವನ್ನು ಅವಲಂಬಿಸಲ್ಲಿ ತುಂಬಿದ ನನಗೆ ಊಟಕ್ಕೆ ಹಾಕಿದಕ್ಕಿಂತ ಹೆಚ್ಚು ಸಂತೋಷವನ್ನುಂಟು ಮಾಡುವದು:— ಸ್ವರಾಜ್ಯ ಪ್ರಾಪ್ತಿಗೆ ಅವಶ್ಯವಿರುವ ಸತ್ಯ [illegible] ಹಿಂಸೆಗಳಲ್ಲಿ ಪೂರ್ಣ ವಿಶ್ವಾಸವಿರುವ [illegible] ರಾಷ್ಟ್ರೀಯ ಸಭಾದ [illegible] ನಿಷ್ಠೆಯಿಂದ [illegible] ಸೈನ್ಯದಲ್ಲಿ ಸೇರಿಯಿರುವವರೆಗೆ [illegible] ೧೦೦ ಮೈಲು ತಿರುಗಿ ಖಾದಿ ಪ್ರಚಾರ ಮಾಡುವ [illegible] ಸ್ವಾತಂತ್ರ್ಯ [illegible] ದಿನ [illegible] ಪ್ರತಿದಿನ [illegible] ಪ್ರತ್ಯೇಕ ಮನೆಗೆ ಹೋಗಿ ಅವರ ಆವಶ್ಯಕತೆಗಳನ್ನು ಹುಡುಕಿ

ತೆಗೆಯುವದು. [illegible] ವಿದ್ಯಾರ್ಥಿಗಳನ್ನು ರಾಷ್ಟ್ರೀಯ ಶಾಲೆಗಳಲ್ಲಿ ಒಂದು ಗೂಡಿಸಿಕೊಳ್ಳುವದು [illegible] ಯಟ್ಟ ಗಂತ ಹೆಣ್ಣು ಮಕ್ಕಳಿಗೆ ಸಾಧಾರಣ ಸಮಾಜ ಸೇವಾ ಸಂಘಗಳನ್ನು ಸ್ಥಾಪಿಸುವದು. ಗುಲಾಮಗಿರಿಯಿಂದ ಹಾಳಾಗುವ ಮನೆಗಳಿಗೆ ಹೋಗಿ ಬೋಧಿಸುವದು. [illegible] ಪಂಚಾಯತ ಕೋರ್ಟುಗಳನ್ನು ಸ್ಥಾಪಿಸುವದು. ಈ ರಾಷ್ಟ್ರೀಯ ಚಳವಳಿಗಳನ್ನು ಮಾಡದೆ ಕೇವಲ ಉಪವಾಸ ಮಾಡಿದರೆ ನನಗೆ ತೃಪ್ತಿ ಯಾಗಲಾರದು. ಉಪವಾಸದ ಆಧ್ಯಾತ್ಮಿಕ ಮಹತ್ವವನ್ನರಿಯದ ಯಾಗಲಿ ನನ್ನ ಮೇಲಿನ ಸುಳ್ಳು ಪ್ರೀತಿಯಿಂದಾಗಲಿ ಯಾರೂ ಉಪವಾಸ ಮಾಡಬೇಕಿಲ್ಲವೆಂದು ನನ್ನ ಆಶೆಯದೆ.

ಪ್ರಾಯಶ್ಚಿತ್ತವೂ ದಂಡನೆಯೂ ಎಲ್ಲಿ ಉಪವಾಸಗಳೂ ಎಲ್ಲಿ ತಪ್ಪುಗಳ ತಿಳಿಸಲ್ಪಡುವ [illegible] ಗೊಪ್ಪದ್ದಾರಿತಕ್ಕೆ [illegible] ಪರಿ ನನ್ನ ಉಪವಾಸವು. ತಪ್ಪು [illegible] ಪ್ರಾಯಶ್ಚಿತ್ತ, ದಂಡನೆ [illegible] ತಕ್ಕದ್ದು ಇದು ನನ್ನ ವ್ಯಕ್ತಿಯ ಉದಾಗಿ ತಪ್ಪು [illegible] ಯಾರ ಸಹವಾಸ [illegible] ನಾವರಿಂದ ಪ್ರಾಣಕೆ [illegible] ಸಹ ತಯಾರಿದ್ದೇನೂ ಎಂಥ [illegible] ಸಲುವಾಗಿ ದಂಡನೆಯೂ ಇರುವದು. ಆದನು ರಾಷ್ಟ್ರೀಯ ಸಭೆಯ ಮೇಲೆ ಕ್ರಿಯಾ ಪೂರ್ವವಾಗಿದ್ದ ನಿಕಟ ಸಂಬಂಧಿಗಳಾಗಿದ್ದೂ ಆ ರಾಷ್ಟ್ರೀಯ ಸಭೆಯ ನಿಯಮ ಗಳ ವಿರುದ್ಧ ಕೃತ್ಯಗಳನ್ನು ಮಾಡಿರುತ್ತಾರೆ ಒಹುದು ಅವರು ನನ್ನ ಹೆಸರನ್ನು ಉಚ್ಚರಿಸ ಮಾಡುತ್ತ ತಮ್ಮ ದೇಶಬಾಂಧವರೂ ಸಮಾಜಸ್ಯಂಧರೂ ಅಸಹಕಾರಿಗಳೂ ಸ್ವತಃಂ ದುತುಂಡಾಗಿ [illegible] ದರ ಪೆಮದಿಂದ ಅವರನ್ನು ಶಿಕ್ಷಿಸುವದೆಂದರೆ ಸ್ವತಃ ನಾನೇ ದಃಖ ಅನುಭವಿಸುವದು. ಆ ಜನರನ್ನು ಬಂದೀಖಾನೆಯಲ್ಲಿ ಹಾಕಿಸಲು ನಾನು [illegible] ಸುವದಿಲ್ಲ. ಆದರೆ ಅವರ ಅಪರಾಧಕ್ಕಾಗಿ ನಾನು ಶಿಕ್ಷೆಯನ್ನು ಅನುಭವಿಸುತ್ತೇನೆ. ಅವರಿಗೆ ತಿಳಿದರೆ ಸಾಕು. ಅಧಿಕಾರಿಗಳು ಅತ್ಯಂತ ಸಂತೋಷದಿಂದ ಸರಕಾರದ ಮುಂದೆ ತಮ್ಮ ತಪ್ಪು ಒಪ್ಪಿಕೆಯ ದಂಡನೆಗಾಗಿ ಅವರನ್ನು [illegible] ಗಬೇಕು. ಮುಂಬಯಿ ಶಹರದಲ್ಲಿ ದಂಗೆಗಾರರನ್ನು ಹುಡುಕಿ ಅವರನ್ನು ಸರಕಾರದ ಅಧೀನ ಮಾಡಲಿಕ್ಕೆ ಬೇಕಷ್ಟು ಪ್ರಯತ್ನ [illegible] ಸದಸ್ಯರ [illegible] ನಾನು ನಂಬಿದ್ದೇನೆ. ಆ [illegible] ನನ್ನ ಉಪದೇಶವನ್ನು ಕೇಳಲಿ ಬಿಡಲಿ, ಸ್ವರಾಜ್ಯದ ಚಳವಳಿಗೆ ವಿಶೇಷ ಪ್ರತಿಬಂಧಗಳನ್ನು ತಂದು ಬಿ

ಡೋ ಲಿಯ ಚಳವಳಿಯನ್ನು ನಿಲ್ಲಿಸಲಿಕ್ಕೆ ಕಾರಣವಾಗಿ ತಮ್ಮ ಕಾಲಮೇಲೆ ತಾವೇ ಕಲ್ಲು ಹಾಕಿಕೊಂಡರು. ಅವರಿಗೆ ಗೊತ್ತಾಗತಕ್ಕದ್ದು ಈ ಚಳವಳಿಯು ಹಿಂಸಾತ್ಮಕವಾಗಿ [illegible] ರಗೊಳಿಸಲಿಕ್ಕೆ ಒಂದು ನಿಮಿತ್ತವೂ ಪೂರ್ವ ತಯಾರಿಯೂ ಇರುವದಿಲ್ಲವೆಂದು ಅವರ ತಿಳಿಯತಕ್ಕದ್ದು. ಈ ಚಳವಳಿಯು ಹಿಂಸಾತ್ಮಕವಾಗಲೇ ಇರಲಿಕ್ಕೆ ಅಥವಾ ಹಿಂಸೆಗೆ ಪೋಷಕವಾಗಿ ಆಗಲಿ ಇರಲಿಕ್ಕೆ ನಾನು ಬೇಕಾದ ಉಪವಾಸವನ್ನು ದಂಡನೆಯನ್ನು ಮರಣವನ್ನು ಸಹ ಅನುಭವಿಸಲು ತಯಾರಾಗಿದ್ದೇನೆ.

ಇಷ್ಟಲ್ಲದೆ ನನ್ನ ತಪ್ಪು [illegible] ಜಾಹೀರ ಮಾಡಲಿಕ್ಕೆ ಕಾರಣವೇನೆಂದರೆ ಈಗ ನಾನು ಬಂದೀವಾಸದಲ್ಲಿದ್ದ ಜನರ ದುಃಖಕ್ಕೆ ಭಾಗಿಯಾಗಲಿಕ್ಕೆ [illegible] ಪ್ರಾರಂಭವನ್ನು ಧೀಕಾರ ಹತ್ತಿರ [illegible] ಕಾರ್ಯಕ್ರಮವಿಡು [illegible] ತಮ್ಮ ಮೇಲೆ [illegible] ಬಂದೀ [illegible] ಸಿಗಸಲಿಕ್ಕೆ ಸಯತ್ನ [illegible] ಪ್ರ [illegible] ಮಾಡಲಾ[illegible] ವು [illegible] ದ [illegible] ದ ಕಾಲಿಗಾಗಿ [illegible] ಗಳನ್ನು ಸುಭಿಸಿದ ಕ್ಕದ್ದು. ಈ ಸಂಗತಿಯು [illegible] ಮನಸಿನಲ್ಲಿಲ್ಲ, ಇದರಿ [illegible] ಮನ [illegible] ಜೀವಿತ [illegible] ಎಲ್ಲರು ಸರಕಾರದ [illegible] ಹದ [illegible] ತಕದ್ದು [illegible] ಉಪವಾಸ [illegible] ಆದರಿಂದ [illegible] ದ [illegible] ಗ ಚಾವ ಮೇಲೆ [illegible] ಆಧಿಕಾರ ತ ನೀತಿವರಾಗ [illegible] ಪ್ರ [illegible] ತ್ತರಾಗುವರು ಈ [illegible] ಯಶ್ಚಿತ್ತ [illegible] ಕೂ [illegible] ವದು [illegible] ಲೋರವ [illegible] ಗೆ ಒದ [illegible] ಅರುಣ [illegible] ನನ್ನಲ್ಲಿ [illegible] ಇನ್ನು [illegible] ಸುವಷ್ಟು ಬಂದೀಹು [illegible] ಸತ್ಯ [illegible] ಮಾಡ ಅತ್ಮ ವಿಶ್ವಾಸವು [illegible] ಈ [illegible] ಶಿಯೆಂದ [illegible] ಮಾಡಾವ ಮನ್ನು, ಪ್ರಾಣ ಕ್ಷೇಪಿಸಿವರೆ ನನಗೆ [illegible] ತವನ್ನು ಸಮೃತ್ತವಾಗಿ ಮಾಡಬೇಕ್ಕೆ [illegible] ಮನಸೂ ವಾಚಾ ಸತ್, [illegible] ಉಳಿದು ಸದೇಶಿ ಆಂದರೆಯ [illegible] ಕಾರ್ಯಕ್ರಮವನ್ನು ಸಂಪೂರ್ಣವಾಗಿ ಜಯಕಾರಿಯ ಗುಣಕಿಕಿ ಮಾಡಿದ ಒಬ್ಬರಿಗೂ ಕಾಯದ ಭಂಗ ಮಾಡುವ ಪ್ರಸಂಗ ಬರದೆ ನನಗೆ [illegible] ಪ್ರಶ್ನೆಯ ಸಮಾಧಾನಕರವಾಗಿ [illegible] ಪಂಜಾಬಿದ ಅತ್ಯಾಚಾರ [illegible] ನಗದೀತ [illegible] ಸಂಪೂರ್ಣ ಸ್ವರಾಜ್ಯವೇ ಸಿಗುವದು.

ಯಂಗ ಇಂಡಿಯಾ

**ಮೋಹನದಾಸ ಕರಮಚಂದ ಗಾಂಧಿ.**

# ಸರಕಾರದ ಉತ್ತರವು.

ನನ್ನ ಬಾರಡೋಲಿ ಠರಾವ ಪತ್ರಿಕೆಗೆ ಸರಕಾರದವರು ಉತ್ತರವನ್ನು ಕೊಟ್ಟಿರು. ಅದನ್ನು ಓದಿ ನನಗೆ ವ್ಯಸನ ವಾಯಿತು. ಅದರಲ್ಲಿ ಪಶ್ಚಾತ್ತಾಪವು ವ್ಯಕ್ತ ವಾಗಿಲ್ಲ ತಪ್ಪುಗಳನ್ನು ಒಪ್ಪಿಕೊಂಡಿಲ್ಲ ಅದರ ಮೊದಲಿನಿಂದ ಕೊನೆ ವರೆಗೆ ಸರಕಾರವು ತಾನು ನಿರ್ದೋಷಿ ಯಾಗಿದೆ ಯೆಂದು ತೋರಿಸಿದೆ. ಎತ್ತಿಸಿದೆ ಮತ್ತು ಅಸಹಕಾರಿಗಳ ಮೇಲೆ ಯಾವತ್ತು ತಪ್ಪು ಹೊರಿಸಿದೆ.

ಈ ಉತ್ತರವನ್ನು ಓದಿದ ಮೇಲೆ ನನಗೆ ಎರಡು ವಿಚಾರಗಳು ಬಂದವು ಇಚ್ಛಾಪೂರ್ವಕವಾಗಿ ಅದರಲ್ಲಿ ಅಸತ್ಯ [illegible] ಬರೆಯಲ್ಪಟ್ಟಿರಬಹುದು, ಇಲ್ಲವೆ ಈ ಉತ್ತರವನ್ನು [illegible] ಅಧಿಕಾರಿಗಳು ತಮಗೆ ಸು[illegible] ಪೂರೈಸುವ ಅವರ ಲಕ್ಷ್ಯದ ವಿಷಯದಲ್ಲಿ ಅವರ ಕೈಯಿಂದ ತಪ್ಪಾಗುವದು ಅಶಕ್ಯವೆಂದು ತಿಳಿದು ಅವರು ಹೇಳಿದ ಮಾತುಗಳನ್ನು ಕಣ್ಣುಮುಚ್ಚಿ ನಂಬಿ ಆ ಮಾತುಗಳ ಆಧಾರದಿಂದ ಈ ಉತ್ತರವನ್ನು ತಯಾರಿಸಿರಬಹುದು.

**ಮನುಷ್ಯ ಜಾತಿಯ** ಸನ್ಮಾನಕ್ಕಾಗಿ ನಾನು ಮೊದಲಿನ ವಿಚಾರವನ್ನು ಬಿಟ್ಟುಕೊಟ್ಟು ಎರಡನೇ ವಿಚಾರವನ್ನು ಹಿಡಿದು ಕೂಡಿರುವೆನು. ಎರಡು ಮಾತುಗಳು ಭಯಂಕರವಾಗಿರುವವು. ಇಚ್ಛಾಪೂರ್ವಕವಾಗಿ ಅಸತ್ಯ ಹೇಳುವದು ಹಾಗು ಅಸತ್ಕಾರ್ಯ ಮಾಡುವದು, ಮತ್ತು ತನ್ನಲ್ಲಿಯ ದೋಷಗಳನ್ನು ಕಾಣದೆ ತಾನು ನಿರ್ದೋಷಿ ಯಾಗಿರುವೆನೆಂಬ ಭ್ರಮದಲ್ಲಿ ಇರುವದು ಈ ಎರಡೂ ಮಾತುಗಳಿಂದ ಹಾನಿಯಾಗುವದು ಒಂದೇ ಅದಿಂದಲೂ ಸಾವು ಬರತಕ್ಕದ್ದು.

ಸರಕಾರವು ಇಂಥ ಬಗೆಯ ತಪ್ಪು ಮಾಡಿದೆಯೆಂದು ನಾನು ತಿಳಿಯುತ್ತೇನೆ ಯಾಕಂದರೆ ಮನುಷ್ಯನು ಅಜ್ಞಾನದಿಂದ ಹೆಚ್ಚು ತಪ್ಪುಗಳನ್ನು ಮಾಡುವನು ಅಸಹಕಾರಿಗಳಿಗೆ ತಮ್ಮ ದೋಷಗಳು ಹೇಗೆ ಕಾಣುವದಿಲ್ಲವೋ ಹಾಗೆಯೇ ಸರಕಾರಕ್ಕೂ ದೋಷಗಳು ಕಾಣುವದಿಲ್ಲೆಂದು ನಾನೇ ತಿಳಿಯಬಾರದು ನಮ್ಮ ಸ್ವಂತ ದೋಷಗಳನ್ನು ನೋಡತಕ್ಕದಾದರೆ ನಾವು ಸೂಕ್ಷ್ಮದರ್ಶಕ ಯಂತ್ರವನ್ನು ಉಪಯೋಗಿಸತಕ್ಕದ್ದು. ಪರರ ದೋಷಗಳನ್ನು ನೋಡತಕ್ಕವಾದರೆ ದುರ್ಬೀನನ್ನು ಉಪಯೋಗಿಸತಕ್ಕದ್ದು ಇದು ನಮ್ಮ ಧರ್ಮವು. ಹೀಗೆ ನಾವು ಮಾಡಿದ ಬಹಳ ಪ್ರಯಾಸವಿಲ್ಲದೆ ನಮ್ಮ ದೋಷಗಳು ನಮಗೆ ಕಾಣುವವು ಹೀಗೆ ಮಾಡುವಂಥ ವ್ಯಕ್ತಿಯಾಗಲಿ ಸಮಾಜವಾಗಲಿ ಸದಾ ಸುಖಿಯಾಗಿರುತ್ತದೆ. ಯಾವಾಗ ದೋಷಗಳು ಗುಡ್ಡಗಳಂತೆ ತೋರುವವೋ ಅವನಿಗೆ ಎರಡನೆಯವರ ತಪ್ಪುಗಳನ್ನು ಹುಡುಕಲು ಸಮಯವೇ ದೊರೆಯುವದಿಲ್ಲ. ಮನುಷ್ಯನು ಗುಡ್ಡದಂಥ ತನ್ನ ತಪ್ಪುಗಳನ್ನು ಕಂಡು ದುಃಖಿತನಾಗುವನು. ಆದರೆ ದುಃಖವು ಸ್ವಭಾವತಃ ಯಾರಿಗೂ ಬೇಕಾದ ಮಾತಲ್ಲದ್ದರಿಂದ ಮನುಷ್ಯನು ತನ್ನ ದೋಷಗಳನ್ನು ನಿರ್ಮೂಲಗೊಳಿಸಲು ಅವಶ್ಯವಾಗಿ ಯತ್ನಿಸುವನು.

ನಾನು ಮೇಲಿನ ನಿಯಮಗಳನ್ನು ಅನುಸರಿಸಿ ಸರಕಾರದ ದೋಷಗಳನ್ನು ನೋಡುವದಕ್ಕಾಗಿ ಕಣ್ಣಿಂದೆ ದುರ್ಬೀನನ್ನು ಇಟ್ಟುಕೊಳ್ಳುತ್ತೇನೆ ವಾಚಕರು ದುರ್ಬೀನದ ಒಂದು ವಿಶಿಷ್ಟವಾದ ಲಕ್ಷಣವನ್ನು ಧ್ಯಾನದಲ್ಲಿ ತರತಕ್ಕದ್ದು ದುರ್ಬೀನು ಕೇವಲ ದೂರದಲ್ಲಿರುವ ಪದಾರ್ಥಗಳನ್ನಷ್ಟೇ ನಮಗೆ ತೋರಿಸುವದು ಮತ್ತು ಅವು ಅಗಾಧವಾದರೂ ನಮಗೆ ಸಣ್ಣವಾಗಿಯೇ ಕಾಣುವವು. ಇಷ್ಟೇ ಅಲ್ಲ ಆದರೆ ಸಮೀಪದಲ್ಲಿದ್ದ ಪದಾರ್ಥಗಳು ನಮಗೆ ಕಾಣುವದೇ ಇಲ್ಲ ಸರಕಾರದ ಸಣ್ಣ ಸಣ್ಣ ತಪ್ಪುಗಳನ್ನು ದುರ್ಲಕ್ಷಿಸುತ್ತ ಬಂದಿರುವೆನು ಆದರೆ ಈಗಾದರೆ ಸರಕಾರವು ಮರ್ಯಾದೆಯನ್ನು ದಾಟಹೋಗಿದೆ. ತಾನು ಕಳಿಸಿದ ಉತ್ತರದಲ್ಲಿ ಸರಕಾರವು ತನ್ನ ಎಷ್ಟೋ ತಪ್ಪುಗಳನ್ನು ಗುಣದ ರೂಪದಿಂದ ತೋರಿಸಿರುತ್ತದೆ ಹಾಗೆ ಯಾವ ತಪ್ಪುಗಳನ್ನು ಹೀಗೆ ಮಾಡಲಿಕ್ಕೆ ಬಾರದಂತೆ ಇಲ್ಲವೋ ಅವುಗಳ ಬಗ್ಗೆ ಮಾತನ್ನೇ ಎತ್ತಿಲ್ಲ ಉದಾಹರಣಾರ್ಥ – ಸಭೆಗಳನ್ನು ನೆರಿಸಕೂಡದೆಂತಲೂ ಭಾಷಣಗಳನ್ನು ಮಾಡಕೂಡದೆಂತಲೂ ನೋಟೀಸುಗಳು ಪ್ರಕಟಿಸಲ್ಪಟ್ಟವು; ಈ ವಿಷಯದಲ್ಲಿ ಸರಕಾರವು ಹೇಳುವದೇನಂದರೆ, ಅಸಹಕಾರಿಗಳ ತುಂಟತನವನ್ನು ನಿಲ್ಲಿಸುವದಕ್ಕಾಗಿಯೇ ಈ ಬಗೆಯ ನೋಟೀಸುಗಳು ಹೊರಡಿಸಲ್ಪಟ್ಟವು; ಆದರೆ ಅಸಹಕಾರಿಗಳು ತುಂಟತನವನ್ನು ಮಾಡಿದರೆಂಬ ಬಗ್ಗೆ ಸರಕಾರದ ಬಳಿಯಲ್ಲಿ ಸಾಕಷ್ಟು ಸಬಲವಾದ ಆಧಾರಗಳಿಲ್ಲ ಅವಾಗ್ಯೂ ಒಂದೆರಡು ಸ್ಥಳಗಳಲ್ಲಿ ಉಂಟಾದ ಸಂಗತಿಗಳ ಆಧಾರದಿಂದ ತನಗೆ ಈ ಬಗೆಯ ನೋಟೀಸುಗಳನ್ನು ಪ್ರಕಟಿಸಲು ಅನುಕೂಲವಾದದ್ದು ಕಂಡು ಸರಕಾರವು ತಾನು ಮಾಡಿದ ತಪ್ಪನ್ನು ಗುಣದ ರೂಪದಿಂದ ತೋರಿಸಿರುತ್ತದೆ. ಆದರೆ ಅಧಿಕಾರಿಗಳು ಲೂಟಿಯನ್ನು ಮಾಡಿದರು ಜನರನ್ನು ಹೊಡೆದರು, ಬಾವಿಯನ್ನು ಕಟ್ಟಿದರು ಮಧ್ಯರಾತ್ರಿಯಲ್ಲಿ ಮಹಾಸಭೆಯ ಆಫೀಸುಗಳಲ್ಲಿ ಸೇರಿ ಝಡತಿ ಮಾಡಿದರು ಈ ಎಲ್ಲ ದುಷ್ಕೃತ್ಯಗಳನ್ನು ಸರಕಾರಕ್ಕೆ ಸಮರ್ಥಿಸಲು ಏನಂತಿಲ್ಲ ಜನರು ಒಂದು ವೇಳೆ ಅಪರಾಧ ಮಾಡಿದರೆ ಸರಕಾರದ ಅಮಲ್ದಾರರು ಕಾಯ್ದೆಶೀರ ರೀತಿಯಿಂದ ಅವರ ಮನೆಗಳನ್ನು ಲೂಟಿ ಮಾಡಬಲ್ಲರೇನು? ಹಾಗು ಅವರನ್ನು ಹೊಡೆಯಬಲ್ಲರೇ? ಆದರೆ ಅಮಲ್ದಾರರ ಈ ಕೃತಿಗಳ ಬಗ್ಗೆ ಸರಕಾರವು ಬಾಯಿ ಮುಚ್ಚಿಕೊಂಡು ಕುಳಿತಿದೆ. ಅದರಂತೆಯೇ ಎರಡನೇ ಅನೇಕ ಗಂಭೀರವಾದ ಸಂಗತಿಗಳ ಬಗ್ಗೆ ಸರಕಾರವು ತನ್ನ ಉತ್ತರದಲ್ಲಿ ಅತಿಶಯೋಕ್ತಿಯನ್ನು ಮಾಡಿದೆ. ಇಲ್ಲವೆ ಮೌನವನ್ನು ತಾಳಿದೆ. ಈ ಉತ್ತರವನ್ನು ಆಮೂಲಾಗ್ರ ವಿವೇಚಿಸಿ ನೋಡುವ ವೇಳೆ ಎನ್ನು ತೆಗೆದುಕೊಳ್ಳಲ ನಾನಿಚ್ಛಿಸುವದಿಲ್ಲ ಉತ್ತರವಂತೂ ಬರುವದವಶ್ಯವಿತ್ತು. ಅದರಲ್ಲಿ ಮಹತ್ವದ ಮಾತುಗಳೇನೂ ಇರಲಾರವೆಂದು ನಾನು ಮೊದಲೇ ತಿಳಿದಿದ್ದೆನು. ಆದರೆ ಅದರಲ್ಲಿ ಈ ಬಗೆಯಾಗಿ ನಿರ್ಲಜ್ಜತನವು ನೋಡಲು ದೊರೆಯುತ್ತದೆಂದು ನಾನು ಎಂದೂ ತಿಳಿದಿಲ್ಲ. ಸರಕಾರದವರಿಗೆ ಶಾಂತಿ ಯೋಗ್ಯವೆಂಬ ಅದರ ಲಕ್ಷಣವಾದರೆ ಬೇಡವೆಂದು ನಾನು ತಿಳಿದಿದ್ದೆನು ಆದರೆ ಅವರ ಉಪಯೋಗವಿಲ್ಲ. ಮತ್ತು ಅಸಹಕಾರಿಗಳಬಗ್ಗೆ ಮೊದಲಿನಿಂದ ಹೇಗೋ ಹಾಗೆಯೇ ಈ ಸಂದರ್ಭದಲ್ಲಿ ಯಾವದೂ ಸವಿವರವಾದ ತಿಳುವಳಿಕೆಯುಳ್ಳ ಜನರಿಗೆ ಸರಕಾರದ ಅಸ್ಪೃಶ್ಯತೆಯ ಬಗ್ಗೆ ಇದಕ್ಕೆ ಹೆಚ್ಚಿನ ಪ್ರಮಾಣದ ಅವಶ್ಯಕತೆಯಿರಬಲ್ಲದೋ?

(ನವಜೀವನ)

ಮೋ. ಕ. ಗಾಂಧಿ

---

**ಚಂದಾದಾರರಾಗಿರಿ! ಪ್ರೋತ್ಸಾಹಿಸಿರಿ!**

## ಕರ್ನಾಟಕ ಸಭಾಗ್ರಂಥಮಾಲೆ

ಪ್ರತಿ ಮೂರುತಿಂಗಳಿಗೊಮ್ಮೆ ಕನ್ನಡ ಕಥಾ ಕಾದಂಬರಿ, ಕಾವ್ಯ, ಪ್ರಬಂಧ ನಾಟಕಾದಿ ಮೊದಲಾದ ಗ್ರಂಥಗಳಲ್ಲಿ ಯಾವದಾದರೊಂದು ಪೂರ್ಣ ಪುಸ್ತಕವೂ, ಇತರ ಲೇಖನಗಳೂ ಪ್ರಕಟವಾಗುವ ಈ ಗ್ರಂಥಮಾಲೆಗೆ ವಾರ್ಷಿಕ ಚಂದಾ ಅಂಚೆವೆಚ್ಚದೊಡನೆ ಅಣೆ ೧೨ ಮಾತ್ರ ಇಟ್ಟಿರುವೆವು ಈಗಲೇ ೧೨ ಅಣೆಯನ್ನು ಕಳುಹಿಸಿ ಚಂದಾದಾರರಾಗಿ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ ದ್ವಿತೀಯ ಸಂಪುಟದ ಬಾಬತ್ತು ಈಗಾಗಲೇ ಮೂರು ಪುಸ್ತಕಗಳು ಅಚ್ಚಾಗಿವೆ. ೧ ಘೋಷಯಾತ್ರೆ ೨ ಗಾಂಧಿ ಸಂದೇಶ ೩ ವಸ್ತ್ರಾಹರಣ. ಹೆಚ್ಚಿನವಿಚಾರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೆಜರ ಕ. ಸ. ಗ್ರಂಥ ಮಾಲೆ

ಉರ್ವ ಪೋ. ಮಂಗಳೂರ

---

ಕನ್ನಡ ಬಾಲ ಬಾಲಿಕೆಯರಿಗೂ ಪ್ರೌಢರಿಗೂ ಮನೋರಂಜನ-ಜ್ಞಾನಾಭಿವೃದ್ಧಿಗೊಳಿಸುವ ಅತ್ಯುಪಯುಕ್ತ ಹಾಗು ಸುಲಭ ಭಾಷೆಯ

## "ಬಾಲಮಿತ್ರ"

ವೆಂಬ ಮಾಸಿಕ ಪುಸ್ತಕವು ಜನವರಿ (೧೯೪೦) ಯಿಂದ ಬಳ್ಳಾರಿ ನಿಯಮಿತವಾಗಿ ಹೊರಡುತ್ತಿರುವದು. ಇದು ಪರಿಗೆ ೧೬ ಚಿತ್ರಗಳು ೧೬ ಹಾಡುಗಳು ೧೭ ಚಿಲ್ಲರೆ ಕತೆಗಳು, ೧೨ ಐತಿಹಾಸಿಕ, ೯ ಶಾಸ್ತ್ರೀಯ ಸಂಗತಿಗಳು; ೯ ನಿಬಂಧಗಳು ಇದಲ್ಲದೆ ಪ್ರತಿಸಾರೆ [illegible] ತಿಂಗಳ ಸುದ್ದಿ, ಒಗಟು ಕೂಟ ಪ್ರಶ್ನೆಗಳು ಒಳಗೊಂಡಿವೆ. ಇಂಥಹ ಉಪಯುಕ್ತ ಹಾಗು ಕಡಿಮೆ ಬೆಲೆಯ [illegible] ಬೇಗ ಹೊಸ ವರ್ಷದ ಚಂದಾದಾರರಾಗಿರಿ.

ವಾರ್ಷಿಕ ಚಂದಾ ೧ ರೂ-೦ (ಟ ಹಾ. ಸಹಿತ)

ವಿಳಾಸ —ಪ ಮ, ತಟ್ಟಿ ಹಿ. ಮಾ. ಪ್ರಾ ಸ್ಕೂ. ಟ್ರೇನಿಂಗಕಾಲೇಜ ಧಾರವಾಡ

---

ಕನ್ನಡಿಗರೇ!! ಓದಿರಿ ಆಶ್ರಯ ಕೊಡಿರಿ.

## ಗದಗಿನಲ್ಲಿ

ಸಾಮಾಜಿಕ, ರಾಜಕೀಯ, ನೈತಿಕ, ಧಾರ್ಮಿಕ ವಿಷಯಗಳನ್ನು ಪ್ರತಿಪಾದಿಸುವ

# ಕರ್ನಾಟಕ ಸಿಂಹ.

| ವರ್ಗಣಿ ಸ್ಥಳೀಕರಿಗೆ ರೂ. ೩-೦-೦ | ಎಂಬ ಕನ್ನಡ ವಾರಪತ್ರಿಕೆಯು | ವರ್ಗಣಿ ಪರಸ್ಥಳದವರಿಗೆ ಅಂಚೆ ವೆಚ್ಚ ಸಹಿತ ೩-೧೨-೦ |
|---|---|---|

ಅಪೆಕ್ಷೆಯಿಂದ ಮೂರು ತಿಂಗಳ ಒಳಗೆ ಹೊರಗೆ ಹೊರಡುವದು. ಸಾಲೆ ವಿಷ [illegible] ವಾರ ಪತ್ರಿಕೆಯು ಬಾಲ್ಯದಿಂದ ಭಾಷಾ ಸೇವೆಯನ್ನು ಮಾಡ [illegible] ಹಾಗೂ ಮೈಸೂರು ಪತ್ರ ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಬಹುಮಾನಗಳನ್ನು ಪಡೆದ ವಿ|| ಅಚ್ಯುತರಾವ ಕೃಷ್ಣರಾವ ತಾಮಿಲಗೋಳ ಇವರ ಸಂಪಾದಕತ್ವದ ಕೆಳಗೆ ಹೊರ ಬರುತ್ತದೆ. [illegible] ಕನ್ನಡ ಭಾಷೆಯಲ್ಲಿ ಬರೆವ ಲೇಖಕರನ್ನು ಅವರಲ್ಲ [illegible] ನಮ್ಮ ಸಂಪೂರ್ಣ ಹೆಸರನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಬೇಕಾಗಿ ನಮ್ಮ ಸವಿನಯ ವಿನಂತಿ ಇರುತ್ತದೆ.

ವಿಳಾಸ—ಶಾಂತಪ್ಪಾ ಶಿವಯೋಗೆಪ್ಪಾ ಬಲಗುಂದಿ ವಾಲಿಕ ಸ್ವೈಮನ ಪ್ರೆಸ್ ಗದಗ. ಜಿಲ್ಲಾ ಧಾರವಾಡ.

---

## ಉತ್ತಮ ಆರ್ಯ ಔಷಧಗಳು,

### ಸುವರ್ಣರಾಜವಂಗ ತೊಲಿ ೧. ರೂ. ೫

| | | |
|---|---|---|
| ನವರತ್ನಗ | | |
| ಪ್ರವಾಳ | ತೊಲಿ | ರೂ. ೫ |
| ಚಂದ್ರಪ್ರಭಾ | ,, | ರೂ ೨ |
| ಲಘು ಮಾಲಿನಿ ವಸಂತ | ,, | ರೂ. ೧ |
| ಅನ್ನಭೇದಿ ಸತ್ವ | ,, | |
| ಸಾಯಿರಪ್ ಪಾಕ | ,, | ಆಣೆ ೮ |
| ಬ್ರಾಹ್ಮೀ ಸಾಯಿರಪ್ | ಔನ್ಸ ೪ | ರೂ. ೧ |
| ಶ್ವಾಸಕ ವಟ್ಟಿ | ,, | ರೂ. ೧. |
| ಮೃದು ವಿರೇಚಕವಟಿ | ನೂರಕ್ಕೆ | ರೂ ೧. |
| ಸಿತೋಪಲಾದಿ ಚೂರ್ಣ | ,, | ಆಣೆ ೮ |
| | ೧೦ ತೊಲಿ | ರೂ ೧ |

ಇದಲ್ಲದೇ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಯಾವತ್ತೂ ಔಷಧಗಳು ಕಡಿಮೆ ದರದಿಂದ ಸಿಗುವವು.

Karnatak Ayurvedic Pharmaceutical Works. Bagalkot. Dt. Bijapur.

---

## ಹಿಂದೂ ಸ್ತ್ರೀ

[illegible]

---

ನಂಬರ ೧ ನೇ ನಿರ್ಮಲವಾದ

ಏಜಂಟರು ಬೇಕು, ಏಜಂಟರು ಬೇಕು

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಳೆಯದು [illegible] ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಕ್ಕಾಗಿ ಬಹಳೇ ಸೋಯಿ ದವಲ್ಲಿ ತೈಲವು ಸಿಗುವದು. [illegible] ತೈಲದ ಬಾಟ್ಲಿ ಅಥವಾ ಡಬ್ಬಿ [illegible] ರೂಪಾಯಿ [illegible] ದಜನಕ್ಕೆ ೩೦. ವಿಶೇಷ ಮಾಹಿತಿ ಬರೆದು ತಿಳಿ.

ಬಿ. ವಿ ಪೈ ಕಂಪನಿ ಹೊ ಹೊನ್ನಾವರ ಜಿಲ್ಲಾ ಉತ್ತರ ಕಾನಡಾ.

---

ಹೊಸ ಪುಸ್ತಕ! ಅವಶ್ಯ ಓದಿರಿ!!

ಬೆಲೆ ]ವಿವಿಧ ಲೇಖ ಸಂಗ್ರಹ[ ೩ ಆಣೆ

ಈ ಪುಸ್ತಕದಲ್ಲಿ ೮ ಅತ್ಯುತ್ತಮವಾದ ಲೇಖಗಳು ಇವೆ. ಸುಂದರವಾದ ಮುದ್ರಣ ಸ್ಫೂರ್ತಿದಾಯಕವಾದ ಭಾಷೆ, ಬೆಲೆ ಸ್ವಲ್ಪ, ಪುಟಗಳು ಸ್ವಲ್ಪವೇ ಇರುವವು. ಒಲ್ಲೆ ೩|| ಆಣೆ [illegible] ಕಳಿಸಿದವರಿಗೆ ಬುಕ್ ಪೋಸ್ಟಿನಿಂದ ಈ ಪುಸ್ತಕವನ್ನು ರವಾನಿಸಲಾಗುವದು.

### ಪತ್ತೆ:-ವ್ಹಿ. ಎಸ್. ರಂಗೈ ಶೆಣವಿ

ಪೋಸ್ಟ ಯಲ್ಲಾಪೂರ ಜಿಲ್ಲಾ ಕಾರವಾರ

---

ಈ ಪತ್ರವನ್ನು ವಿ|| ಗುಂಡೇರಾವ ರಾಮಚಂದ್ರ ಮಣೂರಕರ ಇವರು, ತಮ್ಮ ವಿಜಾಪೂರ ಗ್ರಾಮಾದಿಕಾರಿ ಮುದ್ರಣಾಲಯದಲ್ಲಿ ಮುದ್ರಿಸಿ ಮತ್ತು ಶ್ರೀನಿವಾಸ ರಂಗೇರಾವ ಮಾಂಡವೇಕರ ಬಾಗಲಕೋಟ ಇವರು ಗೋಪ್ಯರವರ ಹಾರೂದದಲ್ಲಿ ಪ್ರಸಿದ್ಧ ಮಾಡಿದರು.

ಎಚ್ಚರಿಕೆ!

ವಾರ್ಷಿಕ ವರ್ಗಣಿ ರೂ. ೪-೦-೦
ಆರು ತಿಂಗಳಿಗೆ ೨-೦-೦
ಬಿಡಿ ಸಂಚಿಕೆ ೦-೧-೩
ಮಾದರಿ ಸಂಚಿಕೆ ಬೇಕಾದವರು ೦-೧-೬ ತಿಕೀಟ ಕಳಿಸಬೇಕು

REGISTERED NoB 1589.

ಜಾಹೀರಾತಿನ ದರ-

'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂಪಾಯಿ ಕಾಯಮು ಜಾಹೀರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

# ಶ್ರೀ.
# ಕನ್ನಡ
# ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾಷಾಂತರಿಸುವದೇ
ಈ ವಾರ ಪತ್ರಿಕೆಯ ಮುಖ್ಯೋದ್ದೇಶವು

ವರ್ಷ ೧
ಬಾಗಲಕೋಟೆ ಫಾಲ್ಗುಣ ಶು॥ ೪ ಶಕೆ ೧೮೪೩.
ಗುರುವಾರ ತಾ ೨ನೇ ಮಾರ್ಚ ೧೯೨೨ ಇಸ್ವಿ
ಸಂಚಿಕೆ ೧೫

## ಟಿಪ್ಪಣಿಗಳು.

### ಅಧ್ಯಕ್ಷರಿಗೆ ಆರೇ ತಿಂಗಳು!

ಜೇಗನ್ನು ಅಖಿಲ ಕಲಮು ಅಝಾದ ಮತ್ತು ಸ್ವತಃ ಮೌಲಾನಾ ಇವರು ತಮಗಾದ ಶಿಕ್ಷೆಯು ಬಹಳೇ ಹಗುರಾದದ್ದು ಎಂಬದಾಗಿ ಆಕ್ಷೇಪ ತೆಗೆದುಕೊಳ್ಳಬೇಕಾಯಿತೆಂಬವಮೇಲೆ ಕಾಂಗ್ರೆಸದ ಅಧ್ಯಕ್ಷರಿಗೆ ಆರೇ ತಿಂಗಳಿನ ಸಾದಾ ಕೈದು ಆದರೆ ಎಷ್ಟು ಆಶ್ಚರ್ಯವಾಗಬಾರದು! ವಿಶಿಷ್ಟ ರಹಸ್ಯವೇನೂ ಈ ಶಿಕ್ಷೆಯಲ್ಲಿರದಿದ್ದರೆ, ಈ ಕಟ್ಲೆಯನ್ನು ಇಷ್ಟು ದಿನಗಳವರೆಗೆ ಅತ್ತಿತ್ತ ಜಗ್ಗಾಡಿ ಲೇಪವನ್ನು ವಿಂಗಡಿಸುತ್ತ ಬಂದ ಕಾರಣವನ್ನು ಸರಕಾರದವರೇ ಬಲ್ಲರು. ಮೌಲಾನಾ ಇವರನ್ನೂ ದೇಶಬಂಧುಗಳನ್ನೂ ಬಿಡುಗಡೆ ಮಾಡಲು ತಕ್ಕ ಸಮಯವನ್ನು ಸರಕಾರದವರು ಹುಡುಕುತ್ತಿದ್ದರೆಂದು ನನಗೆ ನಾಡು ಸುದ್ದಿಯೊಂದು ಬಂದಿತ್ತು ...... ಅಧ್ಯಕ್ಷರೆ ಆಗಲಿ ಯಾರೇ ಆಗಲಿ ಬಂದದ್ದನ್ನು ನಾವು ಅನುಭವಿಸಲೇಬೇಕು. ಭೋಳೆತನ ನಿರ್ದಯತ್ವ ಚಂಚಲತ್ವ ಇಂಥ ಗುಣಗಳು ತುಂಬಿವೆಂದು ಅನೇಕರು ನನ್ನನ್ನು ತೀವ್ರವಾಗಿ ದೂಷಿಸುತ್ತ ಪತ್ರ ಬರೆದಿದ್ದಾರೆ ಕೆಲವರಂತೂ ನಾನು ಸೆರೆಯಾಳುಗಳ ಪಕ್ಷವನ್ನು ಮಾಡಿ ಕೊಂಡು ಬಿಟ್ಟಿರುವೆನೆಂದು ನನಗೆ ಹೇಳಿದ್ದಾರೆ. ನಾನು ಅಸಹಕಾರದ ವಿಚಾರಗಳನ್ನೆಲ್ಲ ಬದಿಗಿಟ್ಟು ಕಾಂಗ್ರೆಸದ ಅಧ್ಯಕ್ಷರ ವಿಶ್ವಾಸಕ್ಕೆ ಅಪಾತ್ರನಾಗಿರುವೆನೆಂದು ಬೇರೆ ಕೆಲವರು ಹೇಳುತ್ತಾರೆ. ಅನೇಕ ವರುಷಗಳಿಂದ ನಾನು ರಾಷ್ಟ್ರ ಸೇವೆ ಮಾಡುತ್ತ ಬಂದಿದ್ದರಿಂದ ಸುದೈವದಿಂದ ನನ್ನ ಎದೆಯು ಸಾಕಷ್ಟು ಕಲ್ಲಾಗಿದೆ. ಆದ್ದರಿಂದ ಈ ತರದ ಟೀಕಾಮಯ ಬಾಣಗಳು ನನ್ನನ್ನು ಖಂಡಿಸಲಾರವು. ಆದರೂ ನಾವು ಮಾಡಿದ ಠರಾವುಗಳಿಂದ ಅಸಹಕಾರ ತತ್ವದ ಒಂದು ಕಣವಾದರೂ ಬಿಡಲ್ಪಟ್ಟಿಲ್ಲವೆಂದು ನಾನು ನಿಶ್ಚಯಪೂರ್ವಕವಾಗಿ ಹೇಳುವೆನು. ಅದೇಕೆ? ಪರಮೇಶ್ವರನಿಂದ ನಮಗೆ ಕೊಡಲ್ಪಟ್ಟ ಎಚ್ಚರಿಕೆಯನ್ನು ಲೆಕ್ಕಿಸಗೇ ನಾವು ಸಾಮುದಾಯಿಕ ಸವಿನಯ ಕಾಯದೇ ಭಂಗವನ್ನು ತಾತ್ಪೂರ್ತಿಕವಾಗಿ ನಿಲ್ಲಿಸಲು ನಿರಾಕರಿಸಿದ್ದರೆ ಖಂಡಿತವಾಗಿಯೂ ನಮ್ಮ ಅಸಹಕಾರ ತತ್ವವನ್ನೇ ಮುಖ್ಯವಾಗಿ ತ್ಯಜಿಸಿದಂತಾಗುತ್ತಿತ್ತು. ರಾಜಕೀಯ ಕೈದಿಗಳ ಬಿಡುಗಡೆ ಯಾಗಬೇಕೆಂಬದು ನಾನು ಹಠಾತ್ ಮುಂದೆ ಮುಂದೆ ಇರಿಸಿದ್ದೆನು ಯಾಕಂದರೆ ಆಗ್ಗೆ ರಾಷ್ಟ್ರೀಯ ಗೌರವವು ಮಹತ್ವದ್ದಾಗಿದ್ದಿತು. ಭಾಷಣ, ಲೇಖನ ಮತ್ತು ಸಂಘ ಸ್ವಾತಂತ್ರ್ಯದ ಪ್ರಶ್ನೆಯು ಖಿಲಾಫತ ಪಂಜಾಬ ಮತ್ತು ಸ್ವರಾಜ್ಯ ತ್ರಿಕೂಟವನ್ನು ಕೆಲಕಾಲದವರೆಗೆ ಮುಚ್ಚು ಹಾಕಿ ಹಿಂದೆ ಸರಿದ್ದರಿಂದ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವದು ಅತ್ಯವಶ್ಯದ ಸಂಗತಿಯಾಯಿತು. ಆದರೆ ಚೌರಿಚೌರಾದ ಪ್ರಕರಣವು ಅಕಸ್ಮಾತ್ತಾಗಿ ಉದ್ಭವಿಸಿ ಎಲ್ಲವನ್ನು ಹಿಂದರಿಸಿ ಹೊಸದೊಂದು ಪ್ರಶ್ನೆಯನ್ನು ಉದ್ಭವ ಮಾಡಿತು. ಅದಾವದೆಂದರೆ ಭಯಂಕರವಾದ ಪಶ್ಚಾತ್ತಾಪ ಮತ್ತು ಘನ ಘೋರವಾದ ಚಿತ್ತಶುದ್ಧಿ, ಮತ್ತು ಈ ಪಶ್ಚಾತ್ತಾಪ ಯುಕ್ತವಾದ ಚಿತ್ತಶುದ್ಧಿಯೆಂದರೆ ಸೆರೆಯಾಳುಗಳಾದ ನಮ್ಮ ದೇಶ ಭಕ್ತರನ್ನು ಯಜ್ಞಕುಂಡಕ್ಕೆ ಅರ್ಪಿಸುವದು ಮತ್ತು ಜಾಗ್ರತೆಯು ಜನಕವಾದ ಈಗಿನ ಚಳವಳಿಯು ಅನೇಕ ಭಾಗಗಳನ್ನು ಬದಿಗಿರಿಸುವದು. ಎಲ್ಲ ಯುದ್ಧಗಳಲ್ಲಿ ಈ ತರದ ಪ್ರಸಂಗಗಳು ಸಂಭವಿಸಲೇಬೇಕು. ಧರ್ಮ ಯುದ್ಧದಲ್ಲಿ ಯಂತೂ ಮೊದಲು ಸಂಭವಿಸುತ್ತವೆ. ನಮ್ಮದು ಧರ್ಮಯುದ್ಧವೇ ಅಲ್ಲದ ಮೇರೆ ಕೇಳುವದೇನು? ನಮ್ಮ ಧ್ಯೇಯ ಸಾಧನೆಗಾಗಿ ಶಾರೀರಿಕ ಸಾಮರ್ಥ್ಯವನ್ನು ಸ್ವಲ್ಪವಾದರೂ ಉಪಯೋಗಿಸಬಾರದೆಂದು ನಾವು ನಿಶ್ಚಯಿಸಿದ್ದರಿಂದ ನಾನು ಇದಕ್ಕೆ ಧರ್ಮಯುದ್ಧವೆಂದು ಕರೆಯುತ್ತೇನೆ. ನಮ್ಮ ಆಧಾರ ಸ್ತಂಭ ದಿಂದ ಚ್ಯುತರಾಗಿ ನಾವು ಅತ್ತಿತ್ತ ಹರಿದಾಡುವ ಗಂಡಾಂತರದಲ್ಲಿದ್ದೇವೆ; ಆದ್ದರಿಂದ ಪರತಿ ಆ ಸ್ತಂಭಕ್ಕೆ ಬರುವದು ಅವಶ್ಯವಾಗಿದ್ದಿತು. ಹೀಗೆ ಮಾಡುವದರಿಂದ ನನ್ನಲ್ಲಿ ಹೆಚ್ಚಿನ ಪವಿತ್ರತೆಯೂ ಜ್ಞಾನಪ್ರಾ ಬಂದವು. ಅರ್ಥಾತ್ ಹೆಚ್ಚಿನ ಸ್ವಾತಂತ್ರ್ಯವು ಬಂದಂ

ಹಾಗೆನೆದು ಅಸಹಕಾರಿಗಳು ಈ ರಾಷ್ಟ್ರೀಯ ಯುದ್ಧದಲ್ಲಿ ಚೊಕ್ಕಟವಾಗಿ ಸಜ್ಜುಗೊಂಡ ಸೈನಿಕರಾಗ ಬಯಸಿದ್ದರೆ. ನಮ್ಮ ಪೂರ್ವ ಸಿದ್ಧತೆಯನ್ನು ಸಂಪೂರ್ಣವಾಗಿ ಮಾಡಿಕೊಳ್ಳುವದು ಬಹಳ ಮಹತ್ವವಾಗಿದೆಂಬದನ್ನು ಕಂಡು ಹಿಡಿಯುವರು. ಪೂರ್ವ ಸಿದ್ಧತೆಗಾಗಲಿ ಬೇರೆ ಕಾರಣಕ್ಕಾಗಲಿ ಕೆಲಕಾಲ ತಡೆಯುವವನು ಮೂರು ಪೂಟ ಉದ್ದವಾದ ಕೊಳ್ಳದಲ್ಲಿ ನಿಂತು ಯುದ್ಧ ಮಾಡುವ ಸೈನಿಕನಷ್ಟೇ ಮಹತ್ವದ ಕಾರ್ಯ ಮಾಡುವನು ಶಾರೀರಿಕ ಸಾಮರ್ಥ್ಯವನ್ನೊಳಕೊಂಡ ಯುದ್ಧವಾಗಲಿ ಧರ್ಮ ಯುದ್ಧವಾಗಲಿ, ಯುದ್ಧಶಾಸ್ತ್ರದ ಈ ಮುಖ್ಯ ಸಂಗತಿಗಳನ್ನು ನಾವು ತಿಳಿದಿರದಿದ್ದರೆ ನಾವು ಕಷ್ಟ ಬಟ್ಟದ್ದೆಲ್ಲ ವ್ಯರ್ಥವಾಗಿ ಹೋಗುವದು.

**ಸಡಿಲು ಬಿಡುವದೇಕೆ?**

ಪಾತ್ರಾ ಪಾತ್ರತೆಯನ್ನು ವಿಚಾರಿಸದೇ ಅಲಹಾಬಾದದಲ್ಲಿ ಮತ್ತು ಕಾಶಿಯಲ್ಲಿ ಸ್ವಯಂಸೇವಕರನ್ನು ಪಥಕದಲ್ಲಿ ಸೇರಿಸಿಕೊಂಡಿರುವರೆಂದು ಓರ್ವ ವಿಶ್ವಸನೀಯ ಸದ್ಗೃಹಸ್ಥನು ಬರೆಯುತ್ತಾನೆ. ನಖಶಿಖಾಂತದಲ್ಲಿಯೂ ಸೈನಿಕನ ಖಾದೀಯ ಬಟ್ಟೆಯನ್ನು ಧರಿಸಿದಂಥ ಜನರನ್ನು ಸಹ ಕಾಣುವದು ದುರ್ಲಭವೆಂತ ಕಣ್ಣಿಗೆ ಕಾಣಿಸುವಂಥ ಮೇಲಿನ ಬಟ್ಟೆಗಳನ್ನು ಮಾತ್ರ ಖಾದೀಯಿಂದ ತಯಾರಿಸಿ ಉಳಿದ ಎಲ್ಲ ಬಟ್ಟೆಯನ್ನು ಪರದೇಶೀ ಅರಿವೆ ಎಂಬಲೇ ಮಾಡಿಸುತ್ತಾರೆ. ಕೆಲ ಕೆಲವು ಸ್ವಯಂ ಸೇವಕರಂತೂ ಪಿಕೆಟಿಂಗ್ ಪ್ರಸಂಗದಲ್ಲಿ ಸೆರೆ ಕೂಡಿಯಲಿಕ್ಕೂ ಹಿಂಜರಿಯುವದಿಲ್ಲ; ಮತ್ತು ಅಹಿಂಸಾ ವ್ರತದಲ್ಲಿ ಅವರ ವಿಶ್ವಾಸವಿದ್ದ ಬಗ್ಗೆ ಅವರ ಪರೀಕ್ಷೆಯೂ ಮಾಡಲ್ಪಡುವದಿಲ್ಲ. ಸ್ಥಾನಿಕ ಕಾಂಗ್ರೆಸ ಅಧಿಕಾರಿಗಳ ವರ್ಚಸ್ಸು ಅವರ ಮೇಲೆ ಸ್ವಲ್ಪವಾದರೂ ನಡೆಯುವದಿಲ್ಲ ಸಂಯುಕ್ತ ಪ್ರಾಂತದಲ್ಲಿ ೯೬,೦೦೦, ಸ್ವಯಂಸೇವಕರಿದ್ದಾರೆಂದು ಕಾಂಗ್ರೆಸಿನವರೇ ಹೇಳುತ್ತಾರೆ. ಸ್ವಯಂ ಸೇವಕರ ಸಂಖ್ಯೆಯು ಇಷ್ಟು ದೊಡ್ಡದಿದ್ದು ಅವರಲ್ಲಿ ಬಹು ಜನರು ಕಾಂಗ್ರೆಸಿನ ಕಟ್ಟಳೆಗಳನ್ನು ಪಾಲಿಸುವದಿಲ್ಲನೆಂಬದು ನಿಜವಿದ್ದರೆ, ಇದು ಯಾವ ಕೆಲಸಕ್ಕು ಬಾರದ್ದೇ ಸರಿ ನನಗೆ ಆ ಬಗ್ಗೆ ಅನೇಕ ಕ್ಷೇಪಗಳನ್ನು ಹೇಳಿದ್ದಾರೆ ಆದರೆ ಅಲ್ಲಿ ನಾನು ಅವೆಲ್ಲವನ್ನೂ ಇಲ್ಲ ಹೇಳಿರುವದಿಲ್ಲ. ಕಲಕತ್ತೆಯಿಂದಾದರೂ ಅದೇ ಸುದ್ದಿ ಆದಾದರೂ ವಿಶ್ವಸನೀಯವಾಗಿದೆ ನೂರಾರು ಜನರೀಸೋ ಸೆರೆಮನೆಗೆ ಹೋಗಿದ್ದಾರೆ, ಆದರೆ ಅವರಿಗೆ ಪ್ರತಿಜ್ಞೆಯು ಅರಿವೇ ಇಲ್ಲ; ಅವರು ಖಾದಿಯನ್ನು ತೊಟ್ಟಿಲ್ಲ; ಹಿಂದೀ ಗಿರಣಿಯ ಬಟ್ಟೆಯನ್ನು ಸಹ ಅವರು ತೊಡುವದಿಲ್ಲ ಪರದೇಶೀ ಅರಿವೆಯನ್ನೇ ಧರಿಸಿ ಅವರು ಸೆರೆಗೆ ಹೋಗಿರುವರು; ಅಹಿಂಸಾ ವ್ರತದ ಬಗ್ಗೆ ಅವರಿಗೆ ಯಾವ ಬಗೆಯ ಶಿಕ್ಷಣವೂ ಕೊಡಲ್ಪಟ್ಟಿಲ್ಲ; ಎಂದಾಗಿ ಕಲಕತ್ತೆಯ ಸುದ್ದಿಯಿದೆ ರೋಹಟಕದಲ್ಲಿಯೂ ಸಹ ಹಾಗೇ. ಆ ಜಿಲ್ಲೆಯ ಅನೇಕರು ಸ್ವಯಂ ಸೇವಕರು ಕಾಂಗ್ರೆಸದವರ ಉಪದೇಶವನ್ನು ಕೇಳುವದೇ ಇಲ್ಲ; ಇದರಿಂದ ಕಾಂಗ್ರೆಸಿನವರ ಸ್ಥಿತಿಯು ಬಹು ಕಠಿಣವಾಗಿದೆ

ಮೇಲಿನ ಆಕ್ಷೇಪಣೆಗಳಲ್ಲಿಯ ಒಂದು ಹತ್ತಾಂಶ ಭಾಗವಾದರು ಸತ್ಯವಿದ್ದಗ್ಗೇ ಆದರೆ ಕಾಂಗ್ರೆಸ್ಸಿನ ಅಂತರ್ವ್ಯವಸ್ಥೆಯು ಚನ್ನಾಗಿಲ್ಲವೆಂದು, ಇಷ್ಟು ಜಾಗ್ರತೆಯು ನಮ್ಮಲ್ಲಿ ಉತ್ಪನ್ನವಾಗಿದ್ದರೂ ಕೂಡ ಆ ಜಾಗ್ರತಿ ತಕ್ಕಂತೆ ಎಲ್ಲರನ್ನೂ ವಶಪಡಿಸಿಕೊಳ್ಳುವ ಸಾಮರ್ಥ್ಯವು ನಮ್ಮಲ್ಲಿ ಬಂದಿಲ್ಲವೆಂಬುದೂ ಅನ್ನಬೇಕಾಗುತ್ತದೆ. ವಸ್ತುಸ್ಥಿತಿಯು ಹೀಗಿದ್ದದ್ದು ಸರಿ. ಆದರೆ ನಾವು ಸರಕಾರನ್ನು ದೂಷಿಸುವದು ಶಕ್ಯವಿಲ್ಲ ಸ್ವಯಂಸೇವಕರ ಮೇಲೆಯೂ ಸಾರ್ವಜನಿಕ ಸಭೆಯ ಬಗ್ಗೆಯೂ ಸರಕಾರದವರು ಹೊರಡಿಸಿದ ಕಟ್ಟಳೆಗಳನ್ನು ಅಮಲಿನಲ್ಲಿ ತಂದು ಬಹಳ ತೀಕ್ಷ್ಣತರವಾದ ಕ್ಷೋಭೆಯನ್ನುಂಟು ಮಾಡಿದರೆಂಬದು ನಿಜವು ಅದರಿಂದಲೇ ನಾವು ಸರ್ವ ಹೊಡೆತ ನಿಲ್ಲಿಸಬೇಕಾಯಿತು. ನಾವು ದಿನಾ ಹಾಗೆ ಸನ್ನದ್ಧರಾಗಿಯೇ ನಿಂತೆವು ಇದರಿಂದ ಹೊಸಬರೂ ಅನುಭವಿಕರೂ ಅದ ಜನರು ಮುಖಂಡತ್ವವನ್ನು ವಹಿಸಬೇಕಾಯಿತು ಎಲ್ಲಜನರಿಗೂ ದೀವಟಿಗೆಯನ್ನು ತೋರಿಸುತ್ತ ಸುವ ಸಿದ್ಧ ಮುಖಂಡರು ಹಿಂದೆ ಒಯ್ಯಲ್ಪಟ್ಟಿದ್ದರಿಂದ ಅವರಿಗೆ ಪಹರೆಯವಾಗಿ ನಿಲ್ಲಲು ಬಿರುಸಾಗಿರುವಂಥ ಪ್ರಸಂಗದ ಎದುರಿಗೆ ಈ ಹೊಸಬರು ಎದೆಕೊಟ್ಟು ನಿಲ್ಲಬೇಕಾಯಿತು.

**ನನ್ನ ಪತ್ರೆಲ್ಲ ಹೋಯಿತು**

ಲಾಹೋರದ ಒಬ್ಬ ಮಿತ್ರನು ತನ್ನ ಹೆಸರು ಪ್ರಕಟವಾಗದ ಕೆಳಗಿನ ಗದ್ದರಿಸುವ ಪತ್ರವನ್ನು ಬರೆದಿದ್ದಾನೆ:

"ವರ್ತಮಾನ ಪತ್ರಗಳನೇ ಶಾಂತಿಯ ದಿವಸ ಟ್ರಿಬ್ಯೂನ ವೃತ್ತಪತ್ರವನ್ನು ಓದುವಾಗ ಅದರಲ್ಲಿ ನಿಖಿಲ ಭಾರತೀಯ ರಾಷ್ಟ್ರೀಯ ಸಭೆಯ ಕಾರ್ಯಕಾರೀ ಠರಾವುಗಳನ್ನು ನೋಡಿದೆನು. ಸೋಮವಾರ ದಿವಸವೇ ಕಚೇರಿಯಿಂದ ಬಂದ ವೇಳೆ ಮಹಾತ್ಮಾಜಿಯವರು ಸಾಮುದಾಯಿಕ ಕಾಯದೇ ಭಂಗವನ್ನು ಮುಂದೆ ಹಾಕಿದರೆಂದು ಹಾರಿಕೆಯ ಸುದ್ದಿಯನ್ನು ಕೇಳಿದೆನು, ಆದರೆ ಆಗ ನನಗೆ ಅದರಲ್ಲಿ ತಥ್ಯವಿದ್ದಂತೆ ತೋರಲಿಲ್ಲ ಸ್ವಲ್ಪ ಹೊತ್ತಿನ ಮೇಲೆ ನನ್ನ ಒಬ್ಬ ಮಿತ್ರನು ಒಂದು ನನ್ನನ್ನು ಒಡನೆಯಾಗಿ ನಾವಿಬ್ಬರೂ ಕೂಡಿ ಪೇಟೆಗೆ ಹೋದೆವು. ಅವನ ಮುಖವು ದಿನದಕಿಂತ ಸ್ವಲ್ಪ ಹೆಚ್ಚು ಬಾಡಿದಂತೆ ಇತ್ತು. ನಾನು ಹೀಗೆ ಆದದ್ದರ ಕಾರಣವನ್ನು ಕೇಳಿದೆನು. ಸಂಪೂರ್ಣವಾಗಿ ಬೇಸತ್ತು ಈ ಚಳವಳಿಯನ್ನು ಬಿಟ್ಟು ಕೊಡಬೇಕೆಂದು ಮಾಡಿರುವೆನೆಂದು ಅವನು ಹೇಳಿದನು. ಮಹಾತ್ಮಾಜಿಯವರು ಮುಖಂಡತ್ವವನ್ನು ಬಿಟ್ಟು ಕೊಟ್ಟಿರುವರಲ್ಲದೆ ಅವರು ಹೆಚ್ಚಿಗೆ ಸ್ವಯಂ ಸೈನಿಕರನ್ನ ಸೇರಿಸಿಕೊಳ್ಳಬಾರದೆಂದು ಎಲ್ಲ ಪ್ರಾಂತಿಕ ಕಾಂಗ್ರೆಸ ಕಮೀಟಿಗಳಿಗೆ ತಿಳಿಸಿರುವರು ಮುಂದೆ ಏನೂ ಮಾಡಬೇಕೆಂಬುವದನ್ನು ನಿಖಿಲ ಭಾರತೀಯ ಕಾಂಗ್ರೆಸ ಕಮೀಟಿಯವರು ವಿಶಿಷ್ಟ ಅಧಿವೇಶನದಲ್ಲಿ ನಿರ್ಣಯಿರುವವರೆಗೆ ಯಾವ ತರದ ಪಿಕೆಟಿಂಗನ್ನ ಕೈಕೊಳ್ಳತಕ್ಕದ್ದಲ್ಲ

ನೀವು ಬೆನ್ನು ತೋರಿಸಿ ಚಂಚಲ ಮನಸ್ಕರಾಗಿರುವಿರೆಂದು ಜನರ ಅಭಿಪ್ರಾಯವು. ಏನೂ ಕಾರದೆ ಮುಂದೆ ನೋಡದೆ ಆವರು ಸರಕಾರದ ಗೂಢ ಸಹಕಾರವಾದಿ ಯುವರಾಜರ ಆಗಮನ ಸಂಭ್ರಮದಲ್ಲಿ ಭಾಗ ತೆಗೆದ ಕೊಳ್ಳುವದು ಹರತಾಳ ಮಾಡುವದನ್ನು ಬಿಟ್ಟು ಕೊಟ್ಟು ಯುವರಾಜರಿಗೆ ಮನಃಪೂರ್ವಕವಾಗಿ ಸ್ವಾಗತ ಮಾಡುವೆವೆಂದು ಕೆಲವರು ಅನ್ನುತ್ತಾರೆ

ಎಲ್ಲ ಶೆರಿಯ ಅಂಗಡಿಗಳ ವಿಷಯವಾಗಿಯೂ ವಿದೇಶೀ ವಸ್ತ್ರದ ವಿಷಯವಾಗಿಯೂ ಎಲ್ಲ ತರದ ನಿರ್ಬಂಧಗಳನ್ನು ನೀವು ದೂರ ಮಾಡಿರುವಿರೆಂದು ಕೆಲವು ವ್ಯಾಪಾರಸ್ಥರ ಅಭಿಪ್ರಾಯವಾಗಿದೆ.

ನಿಜವಾಗಿ ಹೇಳಬೇಕಾದರೆ ಲಾಹೋರದ ಪ್ರತಿಯೊಬ್ಬ ನಾಗರಿಕನು ಪೇಟೆಗಳಲ್ಲಿಯಾಗಲಿ ಮನೆಗಳಲ್ಲಿ ಯಾಗಲಿ ನೆರೆದು ನಿಖಿಲ ಭಾರತೀಯ ಕಾಂಗ್ರೆಸ ಕಮೀಟಿಯವರ ಕೃತ್ಯವನ್ನ ನಿಷೇಧಿಸುವನೆಂದು ಧೈರ್ಯದಿಂದ ನಾನು ಹೇಳಿದ್ದಕ್ಕಾಗಿ ನನ್ನನ್ನು ಕ್ಷಮಿಸಬೇಕು.

ಈಗ ನಾನು ನನ್ನ ಸ್ವತಃದ ಸಲುವಾಗಿ ಕೆಳಗಿನ ಪ್ರಶ್ನೆಯನ್ನು ಕೇಳುವೆನು

(೧) ನೀವು ಈಗ ಈ ಚಳವಳಿಯ ಮುಖಂಡತ್ವವನ್ನು ಬಿಟ್ಟು ಬಿಡುವಿರೋ ಬಿಟ್ಟರೆ ಏಕೆ?

(೨ ಎಲ್ಲ ಪ್ರಾಂತಿಕ ಕಾಂಗ್ರೆಸ ಕ ಮಿಟಿಗಳಿಗೆ ಮೇಲೆ ಕಾಣಿಸಿದ ಸೂಚನೆ ಗಳನ್ನು ಯಾಕೆ ಮಾಡಿರುವಿರೆಂಬುದನ್ನು ದಯವಿಟ್ಟು ನನಗೆ ತಿಳಿಸುವಿರೋ? ಒಪ್ಪಂ ದದ ಒ... ಸಂಯುಕ್ತ ಪರಿಷತ್ತಿನ ಸಲು ಹೆ... ಪಂಡಿತ ಮಾಲವೀಯರವರಿಗೆ ವಾ ಗ್ದಾ... ಕೊಟ್ಟಿರ ಸಿರೋ? ಅಥವಾ ಕರಾರಾದವರು. ನಾವು ಕೊಟ್ಟ ವಚನ ದಂತೆ ನಡೆಯದಿದ್ದರೆ ಪಂಡಿತ ಮಾಲವೀ ಯರವರು ನಿಮ್ಮ ಚಳವಳಿಯನ್ನು ಸ್ವೀ ಕರಿಸಲಿಕ್ಕೆ ಒಪ್ಪಿರುವರೋ?

(೩) ಒಪ್ಪಂದದ ವ್ಯವಸ್ಥೆ ಯಾಗಿ, ಖಿ ಲಾಫತ ಮತ್ತು ಪಂಜಾಬಿನ ಅನ್ಯಾಯಗ ಳು ದೂರ ಮಾಡಲ್ಪಟ್ಟು ಮತ್ತು ಸ್ವರಾ ಜ್ಯದ ವಿಷಯವಾಗಿ ಸರಕಾರದವರ ಈ ಗಿನ ಕ ರಾರಗಳನ್ನು ಹೆಚ್ಚಿಸಲಿಕ್ಕೆ ಒಪ್ಪಿ ದರೆ ನೀವು ಸಂತುಷ್ಟರಾಗುವಿರೋ. ಇ ಲ್ಲವೆ ಸಂಪೂರ್ಣ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವು ದೊರಕುವವರಿಗೆ ನಿಮ್ಮ ಚ ಳವಳಿಯನ್ನು ಸಾಗಿಸುವಿರೋ?

೪) ಏನೂ ನಿರ್ಣಯವಾಗಲಿಲ್ಲೆಂದು ತಿಳಿಯುವಾ. ಪಂಡಿತ ಮಾಲವೀಯರವ ರು ಹಾಗು ಈ ಪರಿಷತ್ತಿಗೆ ಸಂಬಂಧಿಸಿ ದ ಇತರ ಮುಖಂಡರು ನಿಮ್ಮ ಪಕ್ಷಕ್ಕೆ ಬಂದು ಸೇರುವರೇನು ಇಲ್ಲವೆ ಈಗಿನಂ ತೆ ಅಂತರದಲ್ಲಿ ಉಳಿಯುವರೋ?

(೫, ಏನೂ ನಿರ್ಣಯವಾಗದಿದ್ದಲ್ಲಿ, ಅತ್ಯಾಚಾರದ ಅಂಜಿಕೆಯಿದ್ದರೆ ನವಿನ ಯಾ... ಭಂಗದ ನಿಮ್ಮ ವಿಚಾರ ವನ್ನು ಬಿಟ್ಟು ... ಡುವಿರೇ?

(೬) ಈಗಿನ ... ಸೈನಿಕ ಸಂ ಘಗಳನ್ನೆಲ್ಲ ಮುರಿದು, ನೂಲಲಿಕ್ಕೆ ಕಲಿ ತಂಥ ಮತ್ತು ಕೈನೂಲಿನ ಹಾಗು ಕೈಮ ಗ್ಗದ ಬಟ್ಟೆಯನ್ನು ಧರಿಸುವಂಥ ಸ್ವಯಂ ಸೇವಕರ ಸಂಘವನ್ನು ಸ್ಥಾಪಿಸುವದು ಈಗ ನಿಮ್ಮ ಉದ್ದೇಶವಿರುವದೋ?

(೭ ನೀವು ಸಾಮುದಾಯಿಕ ಕಾಯ ದೇ ಭಂಗವನ್ನು ಸುರುವು ಮಾಡಿದ ಮೇ ಲೆ ಅತ್ಯಾಚಾರಗಳಾಗಹತ್ತಿದವೆಂದು ಕಲ್ಪಿಸುವಾ ಆಗ ನೀವು ಏನು ಮಾಡುವಿ ರಿ? ಅದೇ ಕ್ಷಣಕ್ಕೆ ನೀವು ನಮ್ಮ ಚಳವ ಳಿಯನ್ನು ಬಂದು ಮಾಡುವಿರೋ?

ನಾನು ಇಲ್ಲಿ ಕೊಟ್ಟಿದ್ದರಕಿಂತ ಹೆಚ್ಚಿ ನ ಟೀಕೆಯು ಈ ಪತ್ರದಲ್ಲಿದೆ, ಜನರು ಬಹಳ ಜೇಕಿಪೂರ್ವಕ ಸಹಕಾರಿಗಳಾಗು ವರೆಂದು ಅಂಜಿಸುವರೆಂದೂ ಲಾಲಾ ಲ ಜಪತರಾಯ, ದೇಶಬಂಧು ಚಿತ್ತರಂಜನ ದಾಸ, ಪಂಡಿತ ಮೋತೀಲಾಲ ನೇಹರು ಅಲ್ಲೀ ಬಂಧುಗಳು ಮುಂತಾದವರನ್ನು ನಾನು ಮಾರಿಕೊಂಡೆನೆಂದ ಜನರ ನು ತನಾಗಿರುವದೆಂದೂ ನಾನು ಧರಿಣಾತ್ಮ ವನ್ನು ಬಿಟ್ಟುಕೊಟ್ಟಲ್ಲಿ ಮಾಪರಾಧ, ಆತ್ಮ ಘಾತವನ್ನು ಮಾಡಿಕೊಂಡು ಜಗತ್ತಿನಿಂ ದ ತೆರಳುವರೆಂದೂ ಈ ಲೇಖಕನು ಬ ರೆಯುತ್ತಾನೆ. ಸಾಮಾನ್ಯತ: ಪಂಜಾಬದ ಜನರಿಗೆ ಮತ್ತು ವಿಶೇಷತ: ಲಾಹೋರದ ನಾಗರಿಗೆ ಅವರ ಸಂಬಂಧಿಯ ಈ ಮಾ ತುಗಳನ್ನು ನಾನು ನಂಬುವದಿಲ್ಲೆಂದು ಆ ಶ್ವಾಸನ ಕೊಡುತ್ತೇನೆ. ಲಷ್ಕರೀ ಕಾಯಿ ದೆಯ ಕಾಲದಲ್ಲಿ ನಾನು ಸತ್ಯಾಗ್ರಹವನ್ನೇ ಬಿಟ್ಟದ್ದಕ್ಕಾಗಿ ಇದೇ ಮಾದರಿಯ ಪ ತ್ರಗಳು ನನಗೆ ಬರುತ್ತಿದ್ದವು ಆದರೆ ಅ ವುಗಳಮೇಲೆ ನಾನು ವಿಶ್ವಾಸವನ್ನು ಇ ಡಲಿಲ್ಲ ... ಅಕ್ಟೋಬರದಲ್ಲಿ ನಾ ನು ಪಂಜಾಬಕ್ಕೆ ಹೋದಾಗ ಪಂಜಾಬ ದ ಜನರಬಗ್ಗೆ ನಾನು ಮಾಡಿಕೊಂಡ ವಿ ಚಾರಗಳೇ ನಿಜವಿರುವವೆಂದು ನಾನು ಕಂಡುಹಿಡಿದೆನು ಮತ್ತು ನನ್ನ ಕೃತ್ಯವು ಅಯೋಗ್ಯವಾಗಿತ್ತೆಂದು ಅನ್ನುವರು ಯಾ ರೂ ಇದ್ದಿಲ್ಲೆಂಬದನ್ನು ನಾನು ನನಗಂ ಡೆನು. ಕಾರ್ಯಕಾರೀ ಮಂಡಳದ ನಿರ್ಣ ಯವು ಯೋಗ್ಯವಾಗಿರುವದೆಂದು ನಾನು ಆದಕ್ಕಿಂತಲೂ ಹೆಚ್ಚು ಧೈರ್ಯದಿಂದ ಹೇ ಳುವೆನು. ಆದರೆ ರಾಷ್ಟ್ರವು ನನ್ನ ಮತವ ನ್ನು ನಿರಾಕರಿಸುವದೆಂದು ತೋರಿದರ ನಾನು ಅದನ್ನು ಲಕ್ಷಿಸುವದಿಲ್ಲ. ನಾನು ನನ್ನ ಕರ್ತವ್ಯವನ್ನಷ್ಟು ಮಾಡುವೆನು ಎಲ್ಲತರದ ವಿಚಾರಿಗಳುಳ್ಳ ಜನರ ಮ ಧ್ಯದಲ್ಲಿದ್ದ ಮುಖಂಡನು ತನ್ನ ಸದಸದ್ವಿ ವೇಕ ಬುದ್ಧಿಗೆ ತೋಚಿದಂತೆ ನಡೆಯದಿದ್ದ ರೆ ಅವನಿಗೆ ನಿಶ್ಚಲವಾಗಿ ಹಿಡಿಯ ಲಿಕ್ಕೆ ಮಾರ್ಗ ತೋರಿಸಲಿಕ್ಕೂ ಅವನಿ ಗೆ ಸದಸದ್ವಿವೇಕ ಬುದ್ಧಿಯು ಮತ್ತೂ ನೀ ತಿಯು ಇರದಿದ್ದರ ಚಕ್ಕಾಣಿಯಿಲ್ಲದ ಹಡಗಿನಂತ ಎತ್ತಬೇಕಾದತ್ತ ಅವನು ಹೊರಳಾಡುವನು. ಮುಖ್ಯವಾಗಿ ಜಗತ್ತಿ ನ ನಿಷೇಧವನ್ನು ನಾನು ಸಹಜವಾಗಿ ತಾಳಿಕೊಳ್ಳಬಹುದು ಆದರೆ ಪರಮಾ ತ್ಮನನ್ನು ಬಿಟ್ಟುಕೊಡುವ ವಿಚಾರದ ಸೊ ಲಿಕೂ ಸಹ ನನ್ನ ಕನಸು ಮನಸ್ಸಿನಲ್ಲಿ ಬರಲಾರದು. ಸಂಗ್ರಾಮದ ಈ ತೀಕ್ಷ್ಣ ಪ್ರಸಂಗದಲ್ಲಿ ನಾನು ಕೊಟ್ಟ ಉಪದೇಶ ವನ್ನು ಕೊಡದಿದ್ದರೆನಾನುಸತ್ಯವನ್ನೂ ಪರ ಮಾತ್ಮನನ್ನೂ ಬಿಟ್ಟುಕೊಟ್ಟಂತೆಯೇ ಆಗು ವದು. ದೇಶದ ಎಲ್ಲ ಭಾಗಗಳಿಂದ ಅಸಹಕಾ ರವಾದಿಗಳಿಂದ ಹಾಗು ಅಸಹಕಾರ ವಾದಿಗಳಿಂದ ಬರುವ ಪತ್ರಗಳೂ ತಂ ತಿಗಳೂ ಬಾರ್ಡೋಲಿಯ ನಿ ರ್ಣಯಕ್ಕೆ ತುಂಬಾ ತಲೆದೂಗುವದೆಂ ಬ ನನ್ನ ವಿಶ್ವಾಸವನ್ನು ಪುಷ್ಟೀ ಕರಿಸುತ್ತವೆ. ಮತ್ತು ಒಮ್ಮೆಲೇ ಮೊದ ಲಿನ ವಿಚಾರಗಳಿಗೆಲ್ಲ ದಾಳಿಯನ್ನಿತ್ತ ತಂ ದ ಬಾರ್ಡೋಲಿಯ ನಿರ್ಣಯದ ಬಗ್ಗೆ ಅವಶ್ಯವಾಗಿ ಜರುಗುವ ಒಣಹರಟೆಗಳಿ ಗೆ ಲಾಹೋರದ ಲೇಖಕನು ಅನವಶ್ಯ ಮಹತ್ವವನ್ನು ಕೊಟ್ಟಿದ್ದಾನೆ. ಮೊದಲನೇ ಆಘಾತದ ಪರಿಣಾಮವನ್ನು ನಾನು ಬ ಲ್ಲೆನು ಆದರೆ ಕುಂತಿಯಲ್ಲಿ ಅಂತರ್ಭೂ ತವಾದ ವಿಚಾರಗಳನ್ನು ವಿಚಾರ ಮಾ ಡಿದರೆ ಜನರು ಕಾರ್ಯಕಾರೀ ಮಂಡಲದ ವರ ನಿರ್ಣಯವನ್ನು ಬಿಟ್ಟು ಬೇರೆ ನಿರ್ಣ ಯವನ್ನು ಮಾಡಲಾರರೆಂದು ನನಗೆ ಪೂ ರ್ಣವಿಶ್ವಾಸವದೆ.

ಇನ್ನು ಪತ್ರಕರ್ತರ ಪ್ರಶ್ನೆಗಳ ಬಗ್ಗೆ.

(೧) ಜನರು ನಾನು ಮುಖಂಡತ್ವವ ನ್ನು ಬಿಟ್ಟು ಕೊಡಬೇಕೆಂದು ಸ್ಪಷ್ಟವಾ ಗಿ ಲಕ್ಷಣವನ್ನು ತೋರಿಸದ ಹೊರತು ನಾನು ಈ ಚಳವಳಿಯ ಮುಖಂಡತ್ವವ ನ್ನು ಬಿಡುವದಿಲ್ಲ. ಕಾರ್ಯಕಾರೀ ಮಂ ಡಲದವರಾಗಲಿ ನಿಖಿಲಭಾರತೀಯ ಕಾಂ ಗ್ರೆಸ ಕಮಿಟಿಯವರಾಗಲಿ ನನ್ನ ವಿರುದ್ಧ ಮತಕೊಡುವದೆಂದರೆ ಅದರದೊಂದು ಲಕ್ಷಣವು.

(೨) ನಾನು ನಿರ್ಣಯವನ್ನು ಮಾಡು ವದರಲ್ಲಿ ಪಂಡಿತ ಮಾಲವೀಯರವರು ಯಾವತರದ ಅಂಗವು ಇದ್ದಿಲ್ಲವೆಂದು ಜ ನರಿಗೆ ಆಶ್ವಾಸನವನ್ನು ಕೊಡುತ್ತೇನೆ. ಬಹಳ ಸಾರೆ ಪಂಡಿತಜೀಯವರಿಗೆ ನಾ ನ ಸೋತಿರುವೆನು ಮತ್ತು ಶಕ್ಯ ಶಕ್ಕ ವಿದ್ದ ... ಗೆ ಸೋಲಲಿಕ್ಕೆ ನನಗೆ ... ಆನಂದವೆನಿಸುವದು ಮ ತ್ತು ಸಾರ್ವಜನಿಕಸೇವೆಯಲ್ಲಿ ಆನುವನು ಕೇತಿಯ. ಳ್ಳ ಮತ್ತು ನಿಸ್ವಾರ್ಥತ್ಯಾಗದ ಮಹತ್ತೀಯವಾದ ಮಾಲವೀಯರವರ ವಿ ರುದ್ಧ ಹೋಗುವಾಗ ನನಗೆ ಬಹಳೇ ವ್ಯ ಸನ ವಾಗುತ್ತದೆ. ಅಪೂರ್ಣ

ಕನ್ನಡ ನವಜೀವನ.

ಫಾಲ್ಗುಣ ಶು|| ೪ ಗುರುವಾರ. ಶಕೆ ೧೮೪೩.

## ಎಚ್ಚರಿಕೆ.

ಮನುಷ್ಯನು ಒಮ್ಮೆ ತಪ್ಪುಮಾಡಿದರೆ ಕ್ಷಮೆಯಾ ಒಲ್ಲದು! ಎರಡು ಸಾರೆ ಮಾಡಿದರೂ ಉದಾರ ಜನರು ಅವನನ್ನು ಕ್ಷಮಿಸುವರು ಆದರೆ ಮೂರುಸಾರೆ ಮಾಡಿದರೆ? ಜನರು ಅವನನ್ನು ತುಚ್ಛೀಕರಿಸುತ್ತಿರುವರೇನು ಮಾಡಬೇಕು?

ಒಮ್ಮೆ ನಾವು ಮೋಸಹೋದರೆ ಜನರು ನಮ್ಮನ್ನು ಸಾದಾ ಜನರೆಂದು ಕರೆಯಬಹುದು; ಎರಡುಸಾರೆ ಮೋಸಹೋದರೆ ಭೋಳೇಜನರೆಂದೆನ್ನಬಹುದು ಮೂರುಸಾರೆ ಮೋಸ ಹೋದರೆ ನಮ್ಮನ್ನು ಮೂರ್ಖರೆಂದೆಣಿಸದೆ ಇರುತ್ತೇನೆಂದೆಣಿಸುವರೇ?

ಬಾರ್ಡೋಲಿಯ ಸವಿನಯ ಭಂಗವು ಸ್ವಪ್ನದಂತಾಯಿತು! ಯಾವ ಮುಹೂರ್ತಕ್ಕೆ ನಾವು ಪ್ರಾರಂಭಿಸಬೇಕೆಂದಿದ್ದೆವೋ ಅದೇ ಮುಹೂರ್ತದಲ್ಲಿಯೇ ನಾವು ದಸ್ತು ಬಿಟ್ಟು ಕಾಲಿದ್ದೇಕಾಗಿ ಅಶ ಸಂತೋಷ ... ರಾಮಚಂದ್ರನಂಥ ನವ ರಾಜ್ಯಾಭಿಷೇಕದ ಮುಹೂರ್ತವು ವನವಾಸಾವಲಂಬನದ ಮುಹೂರ್ತವಾಗಿ ಪರಿಣಮಿಸಿತ. ಸ್ವದ್ರವ್ಯದ ಬಾರಡೋಲಿಯ ಬಿದ್ದೇನು? ಈ ಬಗೆಯಾಗಿ ಸತ್ಯವೆಂದು ಕನಸುಕಾಣುವಂಥ ಮಾತುಗಳು ಅನೇಕ ವೇಳೆ ಸ್ಪಷ್ಟವಾಗುತ್ತಿದ್ದರೇನೇ ಸ್ವರಾಜ್ಯದ ನಿಜವಾದ ಅರ್ಥವು ನಮಗೆ ತಿಳಿದು ಬರುವದು. ಈಗಂತೂ ಬಾರ್ಡೋಲಿಯ ಅರ್ಥವು ನಿಜವಾದದ್ದೆಂದು ನನಗೆ ತೋರುತ್ತದೆ. ಸ್ವರಾಜ್ಯವನ್ನು ಪಡೆಯಲು ಮಾಡುವ ಪ್ರಾಮಾಣಿಕ ಪ್ರಯತ್ನವೇ ಸ್ವರಾಜ್ಯವಾಗಿರುವದು. ಅದನ್ನು ನಾವು ಹಿಂಬಾಲಿಸುತ್ತ ಹೋದಂತೆ ಅದು ನಮ್ಮಿಂದ ದೂರ ದೂರಾಗಿಯೇ ಹೋಗುತ್ತದೆ.

ಎಲ್ಲ ಆದರ್ಶಗಳು ಈ ಬಗೆಯಾಗಿರುವವು. ಮನುಷ್ಯನು ಸತ್ಯಾಚರಣೆಯಾಗುತ್ತ ಹೋದಂತೆ ಸತ್ಯವು ಅವನಿಂದ ದೂರ ದೂರವಾಗಿಯೇ ಮುಂದ ಓಡುತ್ತದೆ ಯಾಕೆಂದರೆ ಯಾವುದನ್ನು ನಾನು ವಿಚಾರವಿಲ್ಲದೆ ತತ್ಕಾಲದಲ್ಲಿ ಸತ್ಯವೆಂದು ತಿಳಿದಿರುವೆನೋ ಸ್ವಲ್ಪ ಹೊತ್ತಿನಲ್ಲಿ ಅದು ಅವನಿಗೆ ಅಸತ್ಯವಾಗಿ ಕಾಣುವದು.

ಆದ್ದರಿಂದ ಸತ್ಯಾಚರಣೆಯು - ಸದಾಚರಣೆಯು—ಯಾವಾಗಲೂ ನಮ್ರನಾಗಿರುವನು. ಪ್ರತಿನಿತ್ಯದಲ್ಲಿ ತನ್ನ ನ್ಯೂನತೆಗಳನ್ನು ಹೆಚ್ಚಿಗೆ ತಿಳಿಯುತ್ತ ಹೋಗುವನು ಬ್ರಹ್ಮಚಾರಿಯಿಂದ ಬ್ರಹ್ಮಚರ್ಯವು ದೂರ ಓಡುತ್ತಿರುತ್ತದೆ. ಯಾಕೆಂದರೆ, ಪ್ರಾಮಾಣಿಕನಾದ ಬ್ರಹ್ಮಚಾರಿಗೆ ತನ್ನಲ್ಲಿ ವಿಷಯಲಾಲಸೆಯು ಗೂಢವಾಗಿದ್ದುಕೊಂಡಿರುವದೆಂಬುದು ತಿಳಿಯುತ್ತ ಹೋಗುವದು ಸ್ಥೂಲ ಬ್ರಹ್ಮಚರ್ಯದಿಂದ ಅವನಿಗೆ ಸಂತೋಷವು ಉಂಟಾಗದು. ಮೋಕ್ಷಾರ್ಥಿಯಾದವನಿಂದಲೂ ಮೋಕ್ಷವು ದೂರ ಸರಿಯುತ್ತಿರುತ್ತದೆ ಅದ್ದರಿಂದಲೇ “ನೇತಿ” ಎಂಬ ಮಹಾಶಬ್ದವು ಪ್ರಚಾರದಲ್ಲಿ ಬಂದಿತು. ಅನೇಕ ಪ್ರಾಚೀನ ಮಹರ್ಷಿಗಳು ಮೋಕ್ಷದ ಸಲುವಾಗಿ—ಆತ್ಮಶೋಧದ ಸಲುವಾಗಿ—ಯತ್ನಿಸಿದರು ಕೆಲವರು ಕಂದರಗಳನ್ನು ಸೇರಿದರು, ಹಲವರು ಗುಡ್ಡ ಹತ್ತಿದರು, ಮತ್ತೆ ಕೆಲವರು ಮುಳ್ಳ ಹಾದಿ ತುಳಿಯುತ್ತ ಹೋದರು. ಆದರೆ ಕಡೆಗೆ “ಇದಲ್ಲ” ವೆಂದು ಅವರು ತಿಳಿದರು ಅದರಲ್ಲಿ ಎಷ್ಟು ಜನರಿಗೆ ಮೋಕ್ಷವು ದೊರೆತಿತೆಂಬವನಾರು ಬಲ್ಲರು? ಆದರೂ ಅವರು ಒಳ್ಳೇ ಶೋಧಕರಿದ್ದರು. ಬಹು ಚತುರರಿದ್ದರು. ಅವರ ಮೋಸ ಹೋಗಲಿಲ್ಲೆಂಬವನ್ನು ನಾವೆಲ್ಲರೂ ಬಲ್ಲೆವು

ಆದ್ದರಿಂದ ನಮ್ಮ ಸ್ವರಾಜ್ಯವು ನಮ್ಮ ಪ್ರಯತ್ನದಲ್ಲಿಯೇ ಇರುವದೆಂಬ ಮಾತನ್ನು ದಿನದಿನಕ್ಕೆ ನಾನು ಹೆಚ್ಚೆಚ್ಚು ಕಲಿಯುತ್ತಲಿದ್ದೇನೆ.

ಸನ್ ೧೯೧೯ನೇ ಇಸ್ವಿಯಲ್ಲಿ ಅಮದಾಬಾದ ಮತ್ತು ವೀರಗಾಂವು, –ಅಮೃತಸರ ಮತ್ತು ಕಸೂರ ಇವುಗಳು ನನ್ನ ತಪ್ಪನ್ನು ಜಗತ್ತಿನ ನಿದರ್ಶನಕ್ಕೆ ತಂದವು ತತ್ಕಾಲದಲ್ಲಿ ಸತ್ಯಾಗ್ರಹವು ನಿಲ್ಲಿಸಲ್ಪಟ್ಟಿತು ಹೋದ ನವೆಂಬರದಲ್ಲಿ ನಾನು ಮುಂಬಯಿಯಲ್ಲಿ ಮನುಷ್ಯರ ಪಶುವೃತ್ತಿಯನ್ನು ಕಣ್ಣಾರೆ ಕಂಡೆನು ಮತ್ತೊಮ್ಮೆ ಸಾಮುದಾಯಿಕ ಸವಿನಯ ಭಂಗವು ನಿಲ್ಲಿಸಲ್ಪಟ್ಟಿತು. ಆದಾಗ್ಯೂ ಇವುಗಳಿಂದ ನಾನು ಸಂಪೂರ್ಣ ಎಚ್ಚರಿಕೆಯನ್ನು ಹೊಂದಲಿಲ್ಲ ಈಗ ಚೌರೀ ಚೌರವು ಒಳಿತಾಗಿ ಎಚ್ಚರಿಕೊಟ್ಟಿತು. ನನ್ನ ಜೀವಿತದಲ್ಲಿ ನಾನೆಷ್ಟು ಎಷ್ಟು ಪೆಟ್ಟುಗಳನ್ನು ತಿನ್ನತಕ್ಕದ್ದು ದೈವಯೋಗದಲ್ಲಿ ಬರೆದಿತ್ತು? ಈಗ ಜನರೆಲ್ಲರು ನನ್ನನ್ನು ತುಚ್ಛೀಕರಿಸಿದರೆ ಅಥವಾ ಮೂರ್ಖನೆಂದೆಣಿಸಿದರೆ ಅವರದೇನು ತಪ್ಪಿಲ್ಲ

ಮನುಷ್ಯ ಸ್ವಭಾವವನ್ನು ನಾನು ಅರಿತಿರದಿದ್ದರೆ ಇಂಥ ಕೆಲಸದಲ್ಲಿ ನಾನೇಕೆ ಕೈಹಾಕಬೇಕಿತ್ತು?

ತಪ್ಪಾದಮೇಲೆ ನಾನು ಒಪ್ಪಿಕೊಳ್ಳದೆ ಇರಲಿಲ್ಲ. ಜನರು ನನ್ನನ್ನು ತುಚ್ಛೀಕರಿಸಲಿ ಇಲ್ಲವೆ ಮೂರ್ಖನೆಂದೆಣಿಸಿದರೆ ನನಗೆ ಚಿಂತೆಯಿಲ್ಲ! ಅವರೆ ದೋಷಗಳ ಮಲಿನವನ್ನು ಶರೀರದಲ್ಲಿಟ್ಟುಕೊಂಡು ಆತ್ಮವನ್ನು ಮಲಿನವಾಗಗೊಡಲು ನಾನು ಸರ್ವಥಾ ಒಪ್ಪೆನು.

ಎಂದು ಮೀರಾಬಾಯಿಯು ಹೇಳಿದ್ದನ್ನು ... ಇಲ್ಲವೋ ನನಗೆ ಗೊತ್ತಿಲ್ಲ, ಆದರೆ ಅವಳು ತನ್ನ ... ಗೆ ಆಚರಿಸಿ ತೋರಿಸಿದಳು. ಜಗತ್ತಿನಲ್ಲಿ ನಮ್ಮನ್ನು ಬಿಟ್ಟು ದೂರ ಅತ್ತಿಯಿಲ್ಲ. ಆದರೆ ನಾವು ಈಶ್ವರನ ಅಪರಾಧಿಗಳಾಗಕೂಡದು ಅವನ ಎಚ್ಚರಿಕೆಯನ್ನು ಮನ್ನಿಸುವದು ನಮ್ಮ ಧರ್ಮವು.

‘ಕಾಯಮುನಿಗರೆ ಮುಕ್ತಿರಾಜ್ಯವನು ಬಿಡ ಬಹುದು | ಕಾಯಜನ ಪಿತನಡಿಯ ಗಳಿಗೆ ಬಿಡಲಾಗದು || (ಶ್ರೀ ಕನಕದಾಸ)

ಗೋರಖಪುರದಿಂದ ಎಚ್ಚರಿಕೆ ಯು ದೊರೆತ ಮೇಲೆಯೂ ಬಾರ್ಡೋಲಿಯಲ್ಲಿ ಸಾಮೂಹಿಕ ಸವಿನಯ ಭಂಗವನ್ನು ಪ್ರಾರಂಭಿಸಿದ್ದರೆ ಸ್ವಲ್ಪ ಅವಧಿಯೊಳಗೇ ನಮಗೆ ಪಶ್ಚಾತ್ತಾಪದಿಂದ ಕೈತಿಕ್ಕುತ್ತ ಕೂಡಬೇಕಾಗಿತ್ತು ... ಗೆ ಭಯಂಕರವಾದ ಹಾನಿಯು ತಟ್ಟುತ್ತಿತ್ತು ಮತ್ತು ಸತ್ಯಕ್ಕೂ ಶಾಂತಿಗೂ ನಾವು ... ಕೆಲಸ ಮಾಡುವ ಮಾತಿನ ... ನಾವು ಹೇಡಿಗಳೆಂದು ಕರೆಯಲ್ಪಡುತ್ತಿದ್ದೆವು ಮತ್ತು ಅಸತ್ಯಾಚರಣೆಗಳೆಂದು ಎಣಿಸಲ್ಪಡುತ್ತಿದ್ದೆವು. ಹಿಂದುಸ್ಥಾನದ ಉಳಿದೆಲ್ಲ ಭಾಗಗಳಲ್ಲಿ ಪೂರ್ಣ ಶಾಂತಿಯು ನೆಲೆಗೊಂಡಿರಬೇಕು ಮತ್ತು ಬಾರಡೋಲಿಯಲ್ಲಿ ನಾವು ಸವಿನಯ ಭಂಗವನ್ನು ಪ್ರಾರಂಭಿಸಬೇಕು; ಹೀಗಿತ್ತು ಈ ಬಗೆಯ ಶರ್ತು ಇತ್ತು ಈ ಶರ್ತನ್ನು ... ದಿಗೊತ್ತಿ ಬಾರಡೋಲಿಯವರು ಸವಿನಯ ಭಂಗವನ್ನು ಪ್ರಾರಂಭಿಸಿದ್ದರೆ ಬಾರಡೋಲಿಯು ... ಯಾಗಿ ಉಳಿಯುತ್ತಿತ್ತು

ಈ ಪ್ರಕಾರದ ಶಾಂತಿಯು ಯಾವ ಕಾಲಕ್ಕೂ ಬಾರದೆಂದ ಕೆಲವರು ಹೇಳಬಹುದು ... ದರೆ ಹೀಗೆ ಹೇಳುವದೆಂದರೆ ಸತ್ಯಾಗ್ರಹದ ... ಗು ವಿನಯದ ಮಾರ್ಗವನ್ನು ಬಿಟ್ಟು ಕೊಟ್ಟಂತೆಯೇ ಸೈ ವಿನಯ ಮಾರ್ಗವನ್ನು ಬಿಟ್ಟು ಹಿಂದುಸ್ಥಾನವು ಬೇಕಾದ್ದು ಮಾಡಲಿ; ಆದರೆ ಸತ್ಯದ ಹೆಸರಿನಿಂದ ಅಸತ್ಯವನ್ನು ... ಸಲಾಗದು. ಶಾಂತಿಯ ಹೆಸರಿನಿಂದ ಶಾಂತಿ ಭಂಗವನ್ನು ಮಾಡಲಾಗದು, ಈ ಮಾತನ್ನು ನಾವು ಪೂರ್ಣ ಲಕ್ಷ್ಯದಲ್ಲಿಡತಕ್ಕದ್ದು ಬಾರಡೋಲಿಯು ಈ ಮಾತನ್ನು ಸರಿಯಾಗಿ ... ತಿತ್ತು ನಾನಾದರೂ ಈ ವ್ರತವನ್ನು ಚನ್ನಾಗಿ ಪಾಲಿಸಿದೆನು. ನಾವಿಬ್ಬರೂ ಜನಸೇವೆಯನ್ನು ಮಾಡಿದೆವು. ನಾನಂತೂ ಹೀಗವಲ್ಲ ಲೋಕಸೇವಕನಾಗಿರಲು ನನ್ನ ಯೋಗ್ಯತೆಯನ್ನು ಸಿದ್ಧ ಮಾಡಿರುವೆನೆಂದು ನನ್ನ ವಿಶ್ವಾಸವಿದೆ ತಪ್ಪು ಒಪ್ಪಿಕೊಳ್ಳುವದರಿಂದ ಜನರ

[illegible] ಆಗುವದಿಲ್ಲ, ಅಧಃಪಾತವು ಎಂದಿಗೂ ಆಗದು.

ಸ್ವಭಾವತಾಗಿ ಈಶ್ವರನೇ ನಮ್ಮ ನಂಬಿಕೆಯನ್ನು ಕಾಯ್ದನು. ನಾನು ಮದ್ರಾಸದಲ್ಲಿ ಒದಗಿದ ಪ್ರಸಂಗಗಳಿಂದ ಎಚ್ಚರಿಕೆ ಹೊಂದತಕ್ಕದ್ದಿತ್ತು; ನಮ್ಮ ಚಳವಳಿಯ ವಿರೋಧಕರೂ ಕೆಲವು ಅಸಹಕಾರಿಗಳೂ ನನಗೆ ಕಳಿಸಿದ ಪತ್ರಗಳನ್ನೋದಿಯಾದರೂ ನಾನು ಸಾವಧಾನನಾಗತಕ್ಕದ್ದಿತ್ತು. ಆದರೆ ನನಗೆ ಎಚ್ಚರಿಕೆಯುಂಟಾಗಲಿಲ್ಲ ಆದರೇನು? ಯಾರ ಮೇಲೆ ಪರಮೇಶ್ವರ ಕೃಪೆಯಿರುವದೋ ಅವರನ್ನು ನಾನಾವಿಧದಿಂದ ಅವನು ಎಚ್ಚರಿಸುವನು. ನಗಾರಿಯನ್ನು ಬಾರಿಸುವನು ಘೋರಗರ್ಜನೆಯನ್ನುಂಟುಮಾಡುವನು ಪ್ರಸಂಗಬಂದರೆ ಸಿಡಿಲು ಕೆಡವುವನು ಹೇಗಾದರೂ ಮಾಡಿ ಎಚ್ಚರಿಕೆಯನ್ನು ಹುಟ್ಟಿಸುವನು. ನಾವೀಗ ಸಹಜವಾಗಿ ಧರ್ಮವನ್ನು ಪರಿಪಾಲಿಸಿ ದೊಡ್ಡ ಭೀತಿಯಿಂದ ನಮ್ಮನ್ನು ರಕ್ಷಿಸಿಕೊಂಡಿರುವೆವು

ನಾವು ಹಿಂದೆಗೆದೆವು; ನಾವು ಬಗ್ಗಿದ್ದು ಹೇಗೆ ನಾವೆದ್ದು ಜೋರಿನಿಂದ ಮುಂದಕ್ಕೆ ಬರಬೇಕೆಂಬ ಉದ್ದೇಶದಿಂದಲೇ ಅಲ್ಲವೇ? ದಾರಿಯನ್ನು ತಪ್ಪಿದವನು ಹಿಂದಿರುಗುವದು ನಿಜವಾದ ದಾರಿಯ ಮೇಲೆ ಬರಬೇಕೆಂದಲ್ಲವೇ?

ಆದರೆ ಇಷ್ಟೇ ಪ್ರಾಯಶ್ಚಿತ್ತವು ನನ್ನ ವಿಷಯದಲ್ಲಿ ಸಾಕಾಗಲಿಲ್ಲ. ಇದಕ್ಕೂ ಹೆಚ್ಚಿನ ಪ್ರಾಯಶ್ಚಿತ್ತಕ್ಕೆ ಒಳಗಾಗತಕ್ಕದ್ದಿತ್ತು. ಗೋರಖಪುರದಿಂದ ತಾರು ಬಂದಾಗಿನಿಂದಲೇ ನನ್ನ ಮಾನಸಿಕ ವ್ಯಥೆಯು ಪ್ರಾರಂಭಿಸಿತು. ಆದರೆ ದೇಹದಂಡನದ ಅವಶ್ಯಕತೆ ತೋರುತ್ತಿತ್ತು. ನನ್ನ [illegible]ದಿಂದ ಐದು ದಿವಸದ ಉಪವಾಸವು ಸಾಕಷ್ಟಲ್ಲ. ಹದಿನಾಲ್ಕು ದಿನ ಉಪವಾಸ ಮಾಡಬೇಕೆಂದು ನನ್ನ ಇಚ್ಛೆಯಿತ್ತು. ಆದರೆ ಈಗ ಐದು ದಿನದ ಉಪವಾಸದಿಂದಲೇ ಸಾಕುಮಾಡುವೆನು. ಈಗಿನ ನನ್ನ ಪ್ರಾಯಶ್ಚಿತ್ತವು ಅಲ್ಪವಾಗಿದ್ದರೆ ಅದರ ಚಕ್ರಬಡ್ಡಿಸಹಿತ ಪೂರ್ಣಗೊಳಿಸುವೆನು. ತಾನ ಕೊಡತಕ್ಕ ಸಾಲದ ಹಣವು ಎಷ್ಟೆಂಬದನ್ನು ಲೆಕ್ಕದಿಂದ ತಿಳಿದು ನೋಡಿ ಕೂಡಲೇ ಕೊಟ್ಟುಬಿಟ್ಟರೆ ಅವನು ಹೆಚ್ಚಿನ ಋಣದಿಂದ ಮುಕ್ತನಾಗುವನು

ನನ್ನ ಪ್ರಾಯಶ್ಚಿತ್ತದ ಬಗ್ಗೆ ಡಂಗುರ ಸಾರುವದು ನನ್ನ ಇಷ್ಟವಿಲ್ಲ. ಆದಾಗ್ಯೂ ನನ್ನ ಪ್ರಾಯಶ್ಚಿತ್ತದ ಬಗ್ಗೆ ಬಾಹೀರ ರೀತಿಯಿಂದ ಹೇಳಿದ್ದಕ್ಕೆ ಕಾರಣವುಂಟು ನನ್ನ ಉಪವಾಸವು ನನ್ನ ವಿಷಯದಲ್ಲಿ ಪ್ರಾಯಶ್ಚಿತ್ತವಾಗಿರುವದು; ಮುಖ್ಯ ಚೌರಿಚೌರಾದಲ್ಲಿಯ ಗೂ[illegible]ಷಯುಕ್ತರಾದ ಜನರಿಗೆ ಅದು ದಂಡವಾಗಿರುವದು. ಪ್ರೀತಿಯ ದಂಡನೆಯು ಇದೇ ಬಗೆಯಾಗಿರುತ್ತದೆ. ಯಾರಾದರೂ ಅಪರಾಧ ಮಾಡಿ ತನ್ನನ್ನು ಪ್ರೀತಿಸುವವನ ಮನಸ್ಸನ್ನು ನೋಯಿಸಿದರೆ ಆ ಪ್ರೇಮಿ ಮನುಷ್ಯನು ಅಪರಾಧಿಯನ್ನು ಶಿಕ್ಷಿಸದೆ ತಾನೇ ಶಿಕ್ಷೆಯನ್ನು ಭೋಗಿಸುವನು; ಸ್ವತಃ ಉಪವಾಸದ ಕ್ಲೇಶವನ್ನು ಸಹಿಸುವನು. ಮತ್ತು ತಲೆವಡೆದುಕೊಳ್ಳುವನು ಅವನ ಪ್ರಿಯ ಜನರಿಗೆ ಅವನ ಕೃತ್ಯವು ತಿಳಿಯುತ್ತದೋ ಇಲ್ಲವೋ ಎಂಬವರ ಬಗ್ಗೆ ಅವನು ನಿಶ್ಚಿಂತನಾಗಿರುವನು

ನಾನು ನನ್ನ ಉಪವಾಸವನ್ನು ಬಾಹೀರ ರೀತಿಯಿಂದ ಪ್ರಕಟಿಸುವದಲ್ಲಿ ಅದರಿಂದ ಯಾವತ್ತು ಜನರಿಗೆ ಎಚ್ಚರಿಕೆಯು ದೊರೆಯಬೇಕೆಂಬದೊಂದು ಉದ್ದೇಶವಿದೆ. ನನಗೆ ಬೇರೊಂದು ಮಾರ್ಗವಿಲ್ಲ ಅಸಹಕಾರಿಗಳು ನನ್ನನ್ನು ಮೋಸಗೊಳಿಸಿದರೆ —(ನಾನು ಪ್ರಾಯಃ ಅಖಿಲ ಹಿಂದುಸ್ತಾನವನ್ನೇ ಅಸಹಕಾರಿಯೆಂದು ತಿಳಿಯುವೆನು)— ಅವರ ವಿಶ್ವಾಸಘಾತವನ್ನು ನೋಡುವ ಹಿಂದುಸ್ತಾನಕ್ಕೆ ಇನ್ನಾವ ದ್ರೋಹದ ಅಸ್ತಿತ್ವವು ಬೇಕಾಗಿದೆ. ನಾನು ತಿಳಿದಿರುವೆನು (ನನ್ನ ಭ್ರಮದ ಮೂಲಕ ನನಗೀಬಗೆಯು ತಿಳಿಯಬಹುದು) ನನ್ನ ದೇಹದ ಅಸ್ತಿತ್ವವು ಅವಶ್ಯವಾಗಿದ್ದರೆ ನಾನೀ ದೇಹವನ್ನು ದಂಡನವನ್ನು ಮೋಸಗೊಳಿಸದು ಅಖಿಲ ಹಿಂದುಸ್ತಾನಕ್ಕೆ ಸೂಚಿಸಬಯಸುತ್ತೇನೆ. ಬೇಕಾದರೆ ಜನರು 'ಶಾಂತಿ' ಪದವನ್ನು ಬದಿಗೊತ್ತಿ ನನ್ನನ್ನು ತ್ಯಾಗಮಾಡಲಿ ಆದರೆ ಎಲ್ಲಿಯವರೆಗೆ ನನ್ನ ಸೇವೆಯನ್ನು ಅವರಿಗೆ ಸ್ವೀಕರಿಸತಕ್ಕದ್ದಿದೆಯೋ ಅಲ್ಲಿಯವರೆಗೆ ಶಾಂತಿಯನ್ನೂ ಸತ್ಯವನ್ನೂ ಅವರು ಸ್ವೀಕರಿಸಲಿಕ್ಕೇಬೇಕು.

ಈಗಂತೂ ನಾನು ಐದು ದಿನದ ಉಪವಾಸದಿಂದಲೇ ಮುಗಿಸುವೆನು. ಆದರೆ ಜನರು ಇದರಿಂದ ಎಚ್ಚರಿಯದರೆ ಐದು ದಿನದ ಉಪವಾಸವನ್ನು ಹದಿನೈದು [illegible]ವೆನು ಪ್ರಸಂಗಬಂದರೆ ಐವತ್ತು ದಿನದವರೆಗೆ ತಂದು ಪ್ರಾಣವನ್ನಾದರೂ ಬಿಡುವೆನು.

ಈ ಲೇಖನವನ್ನು ನಾನು ಉಪವಾಸದ ಮೂರನೇ ದಿನ ಬರೆಯುತ್ತಲಿದ್ದೇನೆ ಹಿಂದು, ಮುಸಲ್ಮಾನ, ಕ್ರೈಸ್ತ, ಪಾರಸೀ ಮೊದಲಾದ ಯಾವತ್ತು ಭಾರತೀಯರು ಸತ್ಯ ಮತ್ತು ಶಾಂತಿಯ ಮಾರ್ಗದಿಂದಲೇ ಸ್ವರಾಜ್ಯವನ್ನು ದೊರಕಿಸಬಹುದೆಂದೂ ಅದೇ ಮಾರ್ಗದಿಂದಲೇ ಖಿಲಾಪತದ ಕಾರ್ಯವು ನೆರವೇರಬಲ್ಲದೆಂದೂ ಪಂಜಾಬದ ಗಾಯವು ಮಾಯಬಲ್ಲದೆಂದೂ ನನ್ನ ಅಂತರಾತ್ಮವು ನನಗೆ ಹೇಳುತ್ತದೆ [illegible] ಖಿಲಾಪತದ ಪ್ರಶ್ನೆ ಇದೇ ಮಾರ್ಗಕ್ಕೆ ಒಪ್ಪಿಗೆಯನ್ನು ಕೊಡುತ್ತದೆ ಹೀಗಿರಲು ನಾವೀ ಮಾರ್ಗವನ್ನು ಬಿಟ್ಟುಕೊಟ್ಟರೆ ನಾವು ಧರ್ಮದ ಸಲುವಾಗಿ ಇಲ್ಲವೆ [illegible]ನ ಸಲುವಾಗಿ ಯುದ್ಧ ಮಾಡಿದಂತಾಗುವದಿಲ್ಲ ಆದರೆ ಅಧರ್ಮದ ಸಲುವಾಗಿ ಇಲ್ಲವೆ ಸೈತಾನನ ಸಲುವಾಗಿ ಮಾಡಿದಂತಾಗುತ್ತದೆ

ಎರಡನೆಯವರ ಗೊಡವೆ ನಮಗೆ ಬೇಡ. ಗಾಝೀ ಮುಸ್ತಫಾ ಕಮಾಲ ಪಾಶ್ಯಾ ಇವರ ಗೊಡವೆಯೂ ನಮಗೆ ಬೇಡ. ಪ್ರಾಣಿಗಳು ತಮ್ಮ ಪ್ರಕೃತಿಯನ್ನು ಅನುಸರಿಸಿ ನಡೆಯುವವು. ಜಾತ್ಯಾ ತನ್ನ ಸ್ವಭಾವವನ್ನನುಸರಿಸಿ ನಡೆಯುತ್ತಿರಲು ಬಲಾತ್ಕಾರದ ಉಪಯೋಗವೇನು? ಹಿಂದುಸ್ತಾನವು ಶರೀರ ಬಲದಿಂದ ಸ್ವರಾಜ್ಯವನ್ನು ಹೊಂದಲರಿಯದೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಹಿಂದುಸ್ತಾನವು ತನಗೆ ಬೇಕಾದುದನ್ನು ಶರೀರ ಬಲದಿಂದಲೇ ದೊರಕಿಸಿಕೊಳ್ಳಬೇಕೆಂದು ಹೇಳಿದರೆ ಅದರ ಮೇಲೆ ಬಲಾತ್ಕಾರ ಮಾಡಿದಂತಾಗುವದು. ಹಿಂದುಸ್ತಾನವು ಸ್ವಭಾವತಃ ಶಾಂತತಾಪ್ರಿಯವಾದುದು. ಅದ್ದರಿಂದಲೇ ಹಿಂದುಸ್ತಾನವು ಶಾಂತಿಯುಕ್ತ ಸತ್ಯಯುಕ್ತವಾದ ಅಸಹಯೋಗವನ್ನೂ ದೃಢವಾಗಿ ಅವಲಂಬಿಸಿದೆ. ಅಹಮದಾಬಾದ ಮತ್ತು ವೀರಮಗಾಮು ಗಳ ಹುಚ್ಚುಮಂಗಾಟ ಮಾತನ್ನು ಯಾರೂ ಈ ಸಂದರ್ಭದಲ್ಲಿ ತಂದಿಡಬಾರದು. ಅದರಂತೆಯೇ ಚೌರೀಚೌರಾದ ತಲೆತಿರುಗಿದ ಮಾತನ್ನು ಮುಂದೆ ತರಬಾರದು. ಅವರ ತಲೆತಿರುಗಿದ ತನವು ಹಿಂದುಸ್ತಾನದ ಸ್ವಭಾವವಲ್ಲ, ಅದು ಅದರ ರೋಗವಿದೆ. ಮುಸ್ತಫಾ ಕಮಾಲ ಪಾಶ್ಯಾರವರು ಸ್ತುತ್ಯ ಕೆಲಸವನ್ನು ನಡೆಸಿರುತ್ತಾರೆ; ಏಕೆಂದರೆ, ಪ್ರತಿಯೊಬ್ಬ ತುರ್ಕನ ರೋಮರೋಮಾಂತರದಲ್ಲಿ ಶರೀರ ಬಲವು ತುಂಬಿಕೊಂಡಿದೆ. ತುರ್ಕೀ ಜನರು ನೂರಾರು ವರ್ಷಗಳಿಂದ ಯುದ್ಧ ಮಾಡುತ್ತ ಬಂದಿರುವರು. ಹಿಂದುಸ್ಥಾನದ ಜನರು ಸಾವಿರಾರು ವರ್ಷಗಳಿಂದ ಶಾಂತರಾಗಿದ್ದುಕೊಂಡಿರುವರು ತುರ್ಕೀ ಜನರ ಅನುಕರಣೆಯು ಒಳಿತಾದುದೋ ಎಂದು ವಿವೇಚಿಸುವ ಕಾರಣವಿಲ್ಲ ಜಗತ್ತಿನಲ್ಲಿ ಹಿಂಸೆಗೂ ಸ್ಥಾನವುಂಟು. ಅಹಿಂಸೆಗೂ ಸ್ಥಾನವುಂಟು. ಶರೀರವೂ ಆತ್ಮವೂ ಹೋರಾಡಿಯೇ ಇರುತ್ತ ಬಂದಿರುವವು. ಆದರೆ ಕಡೆಗೆ ವಿಜಯವು ಶರೀರಕ್ಕೆ ದೊರೆಯುವದೋ ಆತ್ಮಕ್ಕೆ ದೊರೆಯುವದೋ ಎಂಬ ಮಾತಿನ ವಿಚಾರಕ್ಕೆ ಈಗ ಸಮಯವಿಲ್ಲ ಈ ಮಾತಿನ ವಿಚಾರವನ್ನು ಬೇಕಾದರೆ ಸ್ವರಾಜ್ಯವು ದೊರೆತ ಮೇಲೆ ಮಾಡುವ; ಸದ್ಯಕ್ಕಂತೂ ಅತ್ಯಂತ ಸುಲಭವಾದ ಉಪಾಯದಿಂದಲೇ ಸ್ವರಾಜ್ಯವನ್ನು ಗಳಿಸುವಾ! ಒಂದು ಕ್ಷಣದಲ್ಲಿ ಹಿಂದುಸ್ತಾನದ ಸ್ವಭಾವವನ್ನು ತಿರುಗಿಸಲಾಗದು ಶಸ್ತ್ರದಿಂದ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ತಂದು ಕೊಡಬೇಕೆಂಬವರಿಗೆ ಒಂದು ಯುಗವು ಸಾಕಾಗದೆಂದು ನನ್ನ ನಂಬಿಗೆಯಿದೆ.

ಹಿಂದುಸ್ಥಾನದ ಮುಸಲ್ಮಾನರು ಮುಸ್ತಫಾ ಕಮಾಲ ಪಾಶ್ಯಾರವರ ಅನುಕರಣ ಮಾಡಿದರೆ ಇಸ್ಲಾಮಕ್ಕೆ ಕಲಂಕವನ್ನು ಹಚ್ಚುವರು. ಇಸ್ಲಾಮದಲ್ಲಿ ಶಾಂತಿಗೆ ಮಹತ್ವದ ಸ್ಥಾನವುಂಟು. ಕೋಪ ಮತ್ತು ಶಸ್ತ್ರಗಳಿಗಿಂತಲೂ ತಾಳ್ಮೆಗೆ ಮಹತ್ವವು ಹೆಚ್ಚಿಗಿರುವದು. ಹಿಂದು

ಸ್ಥಾನದ ಜನತೆಯು ಬಹಕಾಲದಿಂದ ಶಾಂತಿ ಸತ್ಯಗಳನ್ನು ಸನ್ಮಾನಿಸುತ್ತ ಬಂದಿರುವದು ಹಿಂದುಸ್ಥಾನ ಬೇಕಾದರೆ ಶಾಂತಿ ಸತ್ಯಗಳನ್ನು ಅವಲಂಬಿಸಿ ಈವತ್ತೇ ಸ್ವರಾಜ್ಯ ಸಂಪಾದಿಸಲಿ; ಇಲ್ಲವಿದ್ದರೆ ಅವುಗಳನ್ನು ತ್ಯಜಿಸಿ ದಾಸ್ಯದಲ್ಲಿ ಉಳಿಯಲಿ! ಮನುಷ್ಯನು ಪ್ರತಿ ಕಾಲದಲ್ಲಿ ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ನಡೆಯಬಹುದು; ಪಶ್ಚಿಮದ ಮಾರ್ಗವು ಅಶಾಂತಿಯು ಹಾಗು ನಾಸ್ತಿಕತೆಯು ಎಂದು ಈಗಲೇ ಗೊತ್ತಾಗಿದೆ. ಪೂರ್ವದ ಮಾರ್ಗವು ಶಾಂತಿಯು, ಧರ್ಮದ ಹಾಗು ಆಸ್ತಿಕತೆಯದೆಂದು ಬಹುಕಾಲದಿಂದ ಪ್ರಸಿದ್ಧವಿದೆ. ಸದ್ಯಕ್ಕೆ ಪಶ್ಚಿಮದ ಮಧ್ಯಬಿಂದುವು ಇಂಗ್ಲಂಡವಾಗಿರುವದು. ಪೂರ್ವದ ಮಧ್ಯಬಿಂದುವು ಅನಾದಿಕಾಲದಿಂದ ಹಿಂದುಸ್ಥಾನವೇ ಆಗಿರುವದು. ಇಂಗ್ಲಂಡವು ಸಾಮ್ರಾಜ್ಯವನ್ನು ಉಪಭೋಗಿಸುತ್ತಿರುವದೆಂದು ಹಿಂದುಸ್ಥಾನವು ಅದರ ಗುಲಾಮಗಿರಿಯದೆಂದೂ ಜಗತ್ತು ಈ ಕಾಲದಲ್ಲಿ ತಿಳಿದಿರುವದು. ಈ ದಾಸ್ಯದಿಂದ ಮುಕ್ತವಾಗುವದಕ್ಕಾಗಿಯೇ ಈಗಿನ ನಮ್ಮ ಪ್ರಯತ್ನಗಳಿರುತ್ತವೆಷ್ಟೇ. ಹಿಂದುಸ್ಥಾನವು ದಾಸ್ಯದಿಂದ ಮುಕ್ತವಾಗಲಿಚ್ಛಿಸಿದರೆ ಪೂರ್ವದ ಶಸ್ತ್ರಗಳಿಂದಲ್ಲ ಶಾಂತಿ ಸತ್ಯ ಶಸ್ತ್ರಗಳಿಂದಲೇ ಎಂದು ಮುಕ್ತವಾಗಬಲ್ಲದು.

ಶರೀರಬಲದಲ್ಲಿ ಹಿಂದುಸ್ಥಾನಕ್ಕಿಂತಲೂ ದುರ್ಬಲವಾದ ಒಂದು ದೇಶವಾದರೂ ಸಧ್ಯಕಾಲದಲ್ಲಿ ಭೂಮಿಯ ಮೇಲಿಲ್ಲ. ಚಿಕ್ಕದಾದ ಅಫಗಾಣಿಸ್ತಾನವೂ ಕೂಡ ಹಿಂದುಸ್ಥಾನವನ್ನು ಹೆದರಿಸಬಲ್ಲದು.

ಹಿಂದುಸ್ಥಾನವು ಯಾವ ಸಹಾಯದ ಬಲದಿಂದ ಇಂಗ್ಲಂಡದೊಂದಿಗೆ ಬಡಿದಾಡಬೇಕು? ಸಿಪಾಯಿಗಳ ಸಹಾಯವನ್ನು ಕೇಳತಕ್ಕದ್ದೋ! ಅಥವಾ ಕಾಬೂಲಿಗಳ ಸಹಾಯವನ್ನು ಕೇಳತಕ್ಕದ್ದೋ? ಯಾರ ಸಹಾಯದಿಂದ ಹಿಂದುಸ್ಥಾನವು ಬಡಿದಾಟಕ್ಕೆ ನಿಲ್ಲುವದೂ ಅವರ ದಾಸ್ಯವನ್ನು ಕಟ್ಟಕಡೆಗೆ ಅದು ಸ್ವೀಕರಿಸತಕ್ಕದ್ದೇ. ಆದ್ದರಿಂದ ಹಿಂದುಸ್ಥಾನಕ್ಕೆ ಅಲ್ಪಾವಧಿಯಲ್ಲಿಯೇ ಸ್ವಾತಂತ್ರ್ಯವು ದೊರೆಯಬೇಕೆಂದಿದ್ದರೆ ಪರಮೇಶ್ವರನ ಸಹಾಯವನ್ನಲ್ಲದೆ ಬೇರಾವ ಸಹಾಯವನ್ನು ಅದು ಅಪೇಕ್ಷಿಸತಕ್ಕದ್ದು? ಪರಮೇಶ್ವರನು ಕೇವಲ ಶಾಂತಿ ಸತ್ಯಗಳ ಪಕ್ಷವನ್ನೇ ವಹಿಸುವನು. ಆದ್ದರಿಂದ ನಮಗೆ ಸತ್ಯ ಸಹಿತ ಶಾಂತಿಯು ಕೈಗೂಡಬೇಕೆಂಬ ಇಷ್ಟವಿದ್ದರೆ ನವಜೀವನ ಪತ್ರಿಕೆಯ ಆಶ್ರಯಿಸಬೇಕೆಂದು ... ನನಗೆ ದೊರೆತಿರುವ ... ಹೇಳುತ್ತೇನೆ.

(ನವಜೀವನ)

(ಮೋ. ಕರಮಚಂದ ಗಾಂಧಿ)

---

# ಶ್ರೀ. ಗೋವಿಂದಜಿ ವಸನಜಿ ಯವರ ಖಟ್ಲೆಯು.

ಮುಂಬಯಿಯ ಪ್ರಖ್ಯಾತ ವ್ಯಾಪಾರಿಗಳಾದ ಶ್ರೀ ಗೋವಿಂದಜಿ ವಸನಜಿಯವರು ಜೇಲಿನಲ್ಲಿ ವಿರಾಜಮಾನರಾಗಿರುವರು. ಈ ಖಟ್ಲೆಯ ವಿಚಾರವನ್ನು ನಾನು ಈ ಮೊದಲೇ ಮಾಡತಕ್ಕದ್ದಿತ್ತು. ಆದರೆ ಖಟ್ಲೆಯ ಕಾಗದಪತ್ರಗಳು ನನ್ನ ಬಳಿಯಲ್ಲಿರಲಿಲ್ಲದ್ದರಿಂದ ವಿಚಾರ ಮಾಡುವದು ಹಾಗೇ ಉಳಿಯಿತು. ಅವು ಈಗಲೇ ನನ್ನ ಕೈಸೇರಿರುವವು.

ಶ್ರೀ ಗೋವಿಂದಜಿಯವರಿಗೆ ಆರು ತಿಂಗಳವರೆಗೆ ಜೇಲಿನಲ್ಲಿ ಆರಾಮು ದೊರೆಯತಕ್ಕದ್ದಿದೆ. ಅವರಿಗೆ ಕಠಿಣ ಸಜೆಯಾಗಿದೆ. ಇದಕ್ಕಾಗಿ ನಾನು ಅವರನ್ನು ಆನಂದಪೂರ್ವಕವಾಗಿ ಅಭಿನಂದಿಸುತ್ತೇನೆ. ಸಾದಾ ಸಜೆಯಾದವರು ಜೇಲನ್ನು ಅನುಭವಿಸಲಾರರೆಂಬುದು ನನ್ನ ಅನುಭವದ ಮಾತು. ಕಠಿಣ ಸಜೆಯಾದವರಿಗೇನೇ ಜೇಲಿನ ಅನುಭವವು ಚನ್ನಾಗಿ ದೊರೆಯುವದು. ಸಾದಾ ಸಜೆಯಾದವರಿಗೆ ಕಂಟಾಳಿಕೆ ಬರುವ ಸಂಭವವಿದೆ. ಕಠಿಣ ಸಜೆಯಾದವರ ದಿವಸಗಳು ಆನಂದದಿಂದ ಹೋಗುವವು. ಮನಸ್ಸು ಶರೀರಗಳನ್ನು ಆರಾಮವುಳ್ಳವನ್ನಾಗಿ ಮಾಡಬಲ್ಲದು. ಆದರೆ ಒಂದೇ ಸವನೆ ಶರೀರವನ್ನು ವಿಚಾರವನ್ನೇ ಮಾಡುತ್ತ ಕುಳಿತರೆ ಕಾರಾವಾಸವು ಬಹು ಕಷ್ಟದಾಯಕವಾಗುವದು. ಅಸಹಕಾರಿಗಳಿಗೆ ಕಾರಾವಾಸವು ಕಷ್ಟದಾಯಕವೆನಿಸಿದರೆ ಅವರು ಅಸಹಕಾರಿಗಳೆಂದು ಎಣಿಸಲ್ಪಡಲಾರರು. ನಿಮ್ಮಂಥವರಿಗೆ ವಿಷದ ಬಟ್ಟಲು ಅಮೃತದಂತೆ ತೋರಿತು. ಸಾಕ್ರೇಟೀಸನು ತನ್ನ ಕೈಯಲ್ಲಿ ವಿಷದ ಬಟ್ಟಲವನ್ನು ಹಿಡಿದ ಆತ್ಮದ ಅಮರತೆಯ ಬಗ್ಗೆ ತನ್ನ ಪ್ರಿಯ ಶಿಷ್ಯರಿಗೆ ಒಂದು ಸರಸವಾದ ವ್ಯಾಖ್ಯಾನವನ್ನು ಕೊಟ್ಟನು. ಅವನು ಆಗ ಆಡಿದ ನುಡಿಗಳು ಪ್ರಪಂಚದಲ್ಲಿ ಶಾಶ್ವತವಾಗಿ ಉಳಿದಿರುವವು. ಬಟ್ಟಲವನ್ನು ತಂದು ಕೊಟ್ಟ ಆ ಮನುಷ್ಯನ ವಿಷಯದಲ್ಲಿಯಾಗಲಿ ವಿಷವನ್ನು ಕುಡಿಯುವ ಶಿಕ್ಷೆಯನ್ನು ವಿಧಿಸಿದ ನ್ಯಾಯಾಧೀಶನ ವಿಷಯದಲ್ಲಿಯಾಗಲಿ ಆ ಮಹಾತ್ಮನ ಅಂತಃಕರಣದಲ್ಲಿ ಸ್ವಲ್ಪಾದರೂ ದ್ವೇಷವಾಗಲಿ ಕೋಪವಾಗಲಿ ಇಲ್ಲಿಲ್ಲೆಂಬುದು ಅವನ ಮಧುರ ಭಾಷೆಯಿಂದಲೇ ಸಿದ್ಧವಾಗುತ್ತದೆ. ಇಂಥ ಅನೇಕ ಉದಾಹರಣೆಗಳು ಪ್ರಪಂಚದ ಇತಿಹಾಸದಲ್ಲಿ ದೊರೆಯುವದುಂಟು.

ಅಸಹಕಾರಿಗಳು ನ್ಯಾಯದ ಕಚೇರಿಗಳನ್ನೂ ಬಹಿಷ್ಕರಿಸಬೇಕೆಂಬುದು ಕೇವಲ ರಾಜಕೀಯ ಗುಟ್ಟಿನ ವಿಷಯವಷ್ಟೇ ಅಲ್ಲ. ತನ್ನ ಮೇಲೆ ಅಪವಾದ ಬಂದಾಗ್ಯೂ ಅಸಹಕಾರಿಯು ತ್ಯಾಜ್ಯವಾದ ನ್ಯಾಯ ಕಚೇರಿಯಲ್ಲಿ ತನ್ನ ರಕ್ಷಣೆಯನ್ನು ಮಾಡಿಕೊಳ್ಳಲಾಗದು. ದುಃಖವು ಅಪರಾಧ ಮಾಡದವರಲ್ಲುಂಟು. ಜಗತ್ತು ತನ್ನನ್ನು ಅಪರಾಧಿಯೆಂದೆಣಿಸಿದರೆ ಎಣಿಸಲಿ ಎಂದೆಂಬ ಮಾತಿನಲ್ಲಿ ತಮ್ಮ ಪ್ರಾಣಗಳನ್ನು ಒಪ್ಪಿಸಿಕೊಂಡ ಅನೇಕ ಮಹಾತ್ಮರು ಧರ್ಮಧುರಂಧರರೆಂದೆಣಿಸಲ್ಪಟ್ಟು ಭೂಮಿಗೆ ಭಾರರಾಗಿ ಮೆರೆಯುವತ್ತಿರುವರು. ಆದರಿಂದ ಅವರು ವಿಜಯಗಳೆಂದು ಕರೆಯಲ್ಪಡಬಲ್ಲರೋ ಆದ್ದರಿಂದೆಂಬ ವಿಶೇಷಣವೇ ಅವರಿಗೆ ಸಲ್ಲುವದು.

ನ್ಯಾಯ ಕಚೇರಿಗಳಲ್ಲಿ ಯಾರಿಗೆ ಸಜೆಯು ದೊರೆತಿದೆಯೋ ಅವರೆಲ್ಲರೂ ಅಪರಾಧಿಗಳಿರುವರೆಂದು ನಾವು ತಿಳಿಯುವದಿಲ್ಲ. ನ್ಯಾಯ ಕಚೇರಿಗಳಲ್ಲಿ ಎಷ್ಟೋ ನಿರಪರಾಧಿಗಳು ಶಿಕ್ಷೆಗೆ ಪಾತ್ರರಾಗುತ್ತಿರುವರೆಂದೂ ಅನೇಕ ಅಪರಾಧಿಗಳು ಯಾವ ಬಗೆಯ ಶಿಕ್ಷೆಗೆ ಒಳಗಾಗದೆ ಪಾರಾಗುವರೆಂದೂ ನಮ್ಮ ಅನುಭವವು ನಮಗೆ ಹೇಳುವದಿಲ್ಲವೋ? ವಕೀಲಿಕೆಯ ... ನಾನು ಇಂಥ ಅನೇಕ ಉದಾಹರಣೆಗಳನ್ನು ಕಣ್ಣಾರೆ ನೋಡಿದ್ದೇನೆ. ನ್ಯಾಯ ಮಾಡುವದೂ ಪಗಡಿಯ ಆಟದಂತೆ ಒಂದೇ? ಕೆಲವರಿಗೆ ಬಯಸಿದಂತೆ ಆಟವು ಬರುವದು. ಕೆಲವರಿಗೆ ಏನಾದರೂ ಆಟವೇ ಬರುವದಿಲ್ಲ. ... ಕೆಯಂತೆ ಪಡೆಗಳು ಬೀಳುವವೋ ... ಯಾರೆಂದು ತಿಳಿಯಲಿಕ್ಕೆ ... ಕೆಲವರ ... ಹೋಗಹತ್ತಿದರೆ ಅವರು ಎಷ್ಟು ಹಣಗಿದರೂ ವ್ಯರ್ಥವೇ ಆಗುವದು. ಈ ಬಗೆಯ ಉದಾಹರಣೆಗಳು ಪ್ರತಿಯೊಬ್ಬ ಪಗಡಿ ಆಡುವವರಿಗೆ ಗೊತ್ತಿರುವದುಂಟು. ಆಟದಲ್ಲಿ ದುರ್ಯೋಧನು ಗೆದ್ದನು. ಪಾಂಡವರು ಸೋತರು. ಇದರಿಂದ ಪಾಂಡವರು ಆಟವನ್ನು ಅರಿತಿರಲಿಲ್ಲೆಂದು ಊಹಿಸಲಿಕ್ಕಾಗದು. ದುರ್ದೈವಿಯಾದ ಯುಧಿಷ್ಠಿರನು ಪ್ರಯತ್ನ ಮಾಡುವದರಲ್ಲಿ ಎಳ್ಳಷ್ಟು ಕಡಿಮೆ ಮಾಡಲಿಲ್ಲ. ಆದಾಗ್ಯೂ ಸೋಲು ಅವನಿಗೆ ತಪ್ಪಲಿಲ್ಲ. ಆದರೆ ಪಾಂಡವರಿಗೆ ಅಮರತ್ವವು ದೊರೆಯತಕ್ಕದ್ದಿತ್ತು. ಧರ್ಮದಿಂದ ಯಾವಾಗಲೂ ದುಃಖವು ಇರುತ್ತಿರುವದೆಂಬ ಪಾಠವು ಮನಃಸಿದ್ಧವಾಗತಕ್ಕದ್ದಿತ್ತು. ಆದ್ದರಿಂದ ಪಾಂಡವರು ಸೋತರು. ಸೋತಂಥ ಪಾಂಡವರನ್ನು ಇಂದು ಜಗತ್ತು ಪೂಜಿಸುತ್ತಿರುವದು.

ಶ್ರೀ ಗೋವಿಂದಜಿಯವರ ಮಿತ್ರರೆಲ್ಲರು ಅವರ ವಿಷಯದಲ್ಲಿ ಯಾವ ಅಭಿಪ್ರಾಯವನ್ನು ತಾಳಿರುವರು. ಅವರನ್ನು ಅಪರಾಧಿಯೆಂದೆಣಿಸುವ ಅವರ ಒಬ್ಬ ಮಿತ್ರನನ್ನಾದರೂ ನಾನು ಈ ವರೆಗೂ ಕಾಣಲಿಲ್ಲ. ಕ

ಷ್ಟರಿಂದ ತೊಗ್ಗು ಅವರ ಮುಖವು ನನ್ನ ಕಣ್ಣದುರಿಗೆ ಈಗಲೂ ಎಂತಿರೆ ತಮ್ಮ ಮೇಲೆ ಖಟ್ಲೆಯು ನಡೆಯುವುದೋ ಹೇಗೆಂಬುದು ಅವರಿಗಿನ್ನೂ ತಿಳಿದಿರಲಿಲ್ಲ ಆಗ್ಗೆ ಅವರು ನನ್ನ ಸಂಶಯವನ್ನು ದೂರ ಮಾಡಬೇಕೆಂದು ಅಸ್ಪೃಷ್ಟತೆಯ ಮೂಲಕ ಹಾಸಿಗೆಯನ್ನು ಹಿಡಿದ್ದಿದ್ದರೂ ನನ್ನ ಕಡೆಗೆ ಬಂದು ಜನರನ್ನು ಶಾಂತಗೊಳಿಸುವ ಕಾರ್ಯದಲ್ಲಿ ಸ್ವಲ್ಪವಾದರೂ ತಮ್ಮ ಅಂಗವಿಲ್ಲೆಂದು ಕಣ್ಣು ತುಂಬ ನೀರು ತಂದು ಗದ್ಗದ ಸ್ವರದಿಂದ ಹೇಳಿದರು. "ಪಾರಸಿ ಜನರೊಡನೆ ನನ್ನ ವ್ಯವಹಾರವುಂಟು ಅನೇಕರು ನನ್ನ ಮಿತ್ರರಿರುವರು

ಪಾರಸೀ ಜನರು ನನ್ನ ಗಿರಾಕಿಗಳಿರುವರು ಅವರ ದುಡ್ಡಿನಿಂದ ನಾನು ಧನವಂತನಾಗಿ ಏನು ಹೀಗಿರಲು ಪಾರಸೀ ಜನರ ವಿರುದ್ಧವಾಗಿ ಯಾರನ್ನಾದರೂ ನಾನು ಉತ್ತೇಜಿಸಿದ್ದರೆ ಪರಮೇಶ್ವರನ ವನೆಯಲ್ಲಿ ನಾನ ತಪ್ಪಗಾರನೆಂದು ಎಣಿಸಲ್ಪಟ್ಟೇನು ಈ ಮಾತಿನ ಸುವರ್ಣದ ನಾನು ಶತ್ರುವಾಗಿ ಇರುವೆನೆಂದು ತಪ್ಪ ತಿಳಿಯಬೇಕು. ಈ ಪ್ರಕಾರ ಶ್ರೀ ಗೋವಿಂದಜಿಯವರು ಆ ಹೊತ್ತು ನನ್ನ ಮುಂದೆ ಬಂದು ಹೇಳಿದರು ಇಂಥ ಎಷ್ಟನೇ ಅನೇಕ ಮಾತುಗಳಿಂದ ತಾವು ನಿರ್ದೋಷಿಗಳೆಂಬ ಬಗ್ಗೆ ಅವರು ನನಗೆ ಖಾತ್ರಿ ಮಾಡಿ ಕೊಟ್ಟರು.

ಶ್ರೀ ಗೋವಿಂದಜಿಯವರು ನ್ಯಾಯ ಕಚೇರಿಯಲ್ಲಿ ಆತ್ಮ ರಕ್ಷಣೆ ಮಾಡಿಕೊಳ್ಳಲು ಒಲ್ಲದಿದ್ದರೆ ಅವರು ಜಡುಗಡೆ ಹೊಂದುತ್ತಿದ್ದರೆಂದು ನನಗೆ ಅನಿಸುತ್ತದೆ ಕುಶಲರಾದ ವಕೀಲರು ಅವರ ವತಿಯಿಂದ ವಕೀಲಿಯನ್ನು ನಡಿಸಲು ಮುಂದೆ ಬಂದಿದ್ದರು ಆದರೆ ಅವರ ಕರ್ತವ್ಯನಿಷ್ಠರಾದ ತಾಯಿ ಮತ್ತು ಅವರ ಮಾತಿಗೆ ಒಪ್ಪಲಿಲ್ಲ ನನ್ನ ಮಗನು ಸತ್ಯಾಗ್ರಹಿಯಿರುವನು ಅವನು ನಿರ್ದೋಷಿಯಾಗಿರುವನೆಂಬುದನ್ನು ನಾನು ಬಲ್ಲೆನು ಅವನ ಕೋರ್ಟಿನಲ್ಲಿ ಆತ್ಮ ರಕ್ಷಣೆಯನ್ನು ಮಾಡಿಕೊಳ್ಳದಿದ್ದರೆ ಜೇಲಿಗೆ ಹೋಗುವ ಸಂಭವವುಂಟು. ಆದರೆ ಅವನೀಗ ಮಾಡಿದ ಪ್ರತಿಜ್ಞೆಯನ್ನು ಮುರಿದರೆ ಅವನು ನನಗೂ ನನ್ನ ಕುಲಕ್ಕೂ ಕಲಂಕ ಹಚ್ಚಿದಂತಾಗುವದು. ಆದ್ದರಿಂದ ಅವನು ಕೋರ್ಟಿನಲ್ಲಿ ಆತ್ಮ ರಕ್ಷಣೆಯನ್ನು ಕೂಡಿ ಕೊಳ್ಳಬೇಕೆಂಬ ಮಾತು ನನಗೆ ಇಷ್ಟವಿಲ್ಲ ಇವೇ ಮೊದಲಾದ ಶಬ್ದಗಳಿಂದ ಅವಳು ತನ್ನ ಮಗನ ಹೃದಯವನ್ನು ಹೆಚ್ಚಿಗೆ ಧೃಢ ಪಡಿಸಿದಳು. ತಾಯಿಯ ಬಲವೂ ತಾಯಿಯ ಆಶೀರ್ವಾದವೂ ದೊರೆಯದಿದ್ದರೆ ಶ್ರೀ ಗೋವಿಂದಜಿಯವರು ಒಂದು ವೇಳೆ ಹಿಂದೆಗೆಯುವ ಸಂಭವವಿದ್ದಿತು. ಆದರೆ ಅವರು ಈ ರಾಜ್ಯಹವನದಲ್ಲಿ ಸ್ವೀಕರಿಸಿ ತಮ್ಮ ಪ್ರತಿಜ್ಞೆಯನ್ನು ಪಾಲಿಸಿದರು. ನಾನು ಶ್ರೀ ಗೋವಿಂದಜೀಯವರಿಗೆ ಅನೇಕ ಧನ್ಯವಾದಗಳನ್ನು ಸಮರ್ಪಿಸುತ್ತೇನೆ ಅವರ ಉದಾಹರಣೆಯು ಅನುಕರಣೀಯವಾದದ್ದೆಂದು ತಿಳಿಯುತ್ತೇನೆ.

"ಶ್ರೀ ಗೋವಿಂದಜಿಯವರು ಆತ್ಮ ರಕ್ಷಣೆ ಮಾಡಿಕೊಂಡಿದ್ದರೆ ಅವರಿಗೆ ಬಿಡುಗಡೆಯಾಗುತ್ತಿದ್ದ ಪಕ್ಷದಲ್ಲಿ ಅವರು ನ್ಯಾಯ ಕಚೇರಿಯನ್ನು ಬಹಿಷ್ಕರಿಸಿದ್ದು ಜಾಣತನವೆಂತು? ರಾಜಕೀಯ ಅಪರಾಧಗಳಿಲ್ಲದೆ ಇತರ ಅಪರಾಧಗಳು ತಮ್ಮ ಮೇಲೆ ಬಂದರೂ ಆತ್ಮ ರಕ್ಷಣೆ ಮಾಡಿಕೊಳ್ಳಲು ಆಸ್ಪದವೇಕಿರಬಾರದು? ಎಂಬೀ ಪ್ರಶ್ನೆಯನ್ನು ಯಾರೂ ಮಾಡಲಿಕ್ಕಿಲ್ಲೆಂದು ನಾನು ಆಶಿಸುತ್ತೇನೆ ಈ ಬಗೆಯ ಮಾಯಾ ಪರವಶತೆಯಿಂದಲೇ ಪ್ರಪಂಚದಲ್ಲಿ ಸುಳ್ಳು ವೈಮನಸಗಾರಿಕೆ ಮುಂತಾದವುಗಳು ಬೆಳೆಯಲು ಶಕ್ಯವುಂಟಾಗಿರುವದು ಬ್ರಿಟಿಶ್ ನ್ಯಾಯ ಕಚೇರಿಗಳಲ್ಲಿ ಯಾವ ಕಲಕ್ಕೂ ನ್ಯಾಯವು ದೊರೆಕಿಲ್ಲೆಂದು ಯಾರೂ ಹೇಳರು ಆದರೆ ರಾಜಕೀಯ ಪ್ರಕರಣಗಳಲ್ಲಿ ನ್ಯಾಯವು ದೊರೆಯುವದು. ಬಹುಶಃ ಅಸಂಭವವೇ ಎಂದು ಅರಿಯದ ಹಿಂದೀ ಮನುಷ್ಯನಾರು? ತಿಲಕ ಮಹಾರಾಜರು ಆತ್ಮ ರಕ್ಷಣೆಗಾಗಿ ಸ್ವಲ್ಪ ಎತ್ನಿಸಿದರೇ ಆಗಿನ ಕಾಲದಲ್ಲಿ ಆತ್ಮ ರಕ್ಷಣೆಯನ್ನು ಮಾಡಿಕೊಳ್ಳುವದು ದೋಷವೆಂದು ನಮ್ಮ ಎಣಿಸುತ್ತಿರಲಿಲ್ಲ. ಆಗ್ಗೆ ಆತ್ಮ ರಕ್ಷಣೆಯನ್ನು ಮಾಡಿಕೊಂಡದ್ದೇ ಧರ್ಮವೆಂದು ತಿಳಿಯಲ್ಪಡುತ್ತಿತ್ತು. ಆದರೆ ತಿಲಕ ಮಹಾರಾಜರಿಗೆ ನ್ಯಾಯವು ಸಿಕ್ಕಿತೊ? ಪಂಜಾಬದಲ್ಲಿ ಲಾಲಾ ಹರಿಕಿಶನಲಾಲ ಮುಂತಾದವರು ಆತ್ಮ ರಕ್ಷಣೆಯನ್ನು ಮಾಡಿಕೊಳ್ಳುವದಕ್ಕಾಗಿ ವಕೀಲರಿಗಾಗಿ ನೀರಿನಂತೆ ದುಡ್ಡನು ವೆಚ್ಚ ಮಾಡಿದರು ಆದರೆ ಅವರ ಇಷ್ಟವು ಕೈಗೂಡಿತೊ? ಲಾಲಾ ಲಜಪತರಾಯ ಚಿತ್ತರಂಜನದಾಸ ಮೌಲಾನಾ ಅಬ್ದುಲ್ ಕಲಮು ಅಝಾದ ಮೊದಲಾದ ದೇಶ ಭಕ್ತರು ಸರ್ವಸ್ವ ನಿರ್ದೋಷಿಗಳಾಗಿರುವರೆಂಬುದನ್ನೂ ನಾವೆಲ್ಲರೂ ಬಲ್ಲೆವು. ಮತ್ತು ಅವರು ಒಳ್ಳೊಳ್ಳೆ ಕುಶಲರಾದ ವಕೀಲರನ್ನು ಕೊಟ್ಟಿದ್ದರೂ ಕೂಡ ಅವರಿಗೆ ನ್ಯಾಯವು ದೊರೆಯುತ್ತಿದ್ದಿಲ್ಲೆಂಬುದನ್ನಾದರೂ ನಾವು ಬಲ್ಲೆವು. ಆದ್ದರಿಂದ ಎಲ್ಲ ರಾಜ್ಯ ಸತ್ತೆಯು ಮದಾಂಧವಾಗಿರುವದೋ ಅಲ್ಲಿ ನಮಗೆ ಸ್ವಲ್ಪ ಲಾಭವಾಗುವ ಸಂಭವವಿದ್ದರೂ ಅದನ್ನು ತ್ಯಜಿಸುವದು ನಮ್ಮ ಧರ್ಮವು ನ್ಯಾಯ ಕಚೇರಿಗಳು ರಾಜ್ಯ ಸತ್ತೆಯ ಅತ್ಯಂತ ಬಲಿಷ್ಠವಾದ ಆಧಾರ ಸ್ತಂಭವಾಗಿರುವವು ಸಾಮಾನ್ಯ ಸ್ಥಿತಿಯಲ್ಲಿ ಜನರು ಈ ಸ್ತಂಭಗಳ ಸಹಾಯವನ್ನು ತೆಗೆದುಕೊಳ್ಳಬಲ್ಲರು ಆದರೆ ಬುದ್ಧಿವಂತರು ಇಂಥ ಪ್ರಲೋಭನಗಳಿಗೆ ಮರುಳು ಹೋಗದಿರುವದು ವಿಹಿತವು.

ನವಜೀವನ,

( ಮೋಹನದಾಸ ಕರಮಚಂದ ಗಾಂಧಿ )

---

**ಚಂದಾದಾರರಾಗಿರಿ! ಪ್ರೋತ್ಸಾಹಿಸಿರಿ!**

## ಕರ್ನಾಟಕ ಸಭಾಗ್ರಂಥಮಾಲೆ

---

ಪ್ರತಿ ಮೂರುತಿಂಗಳಿಗೊಮ್ಮೆ ಕನ್ನಡ ಕಥಾ ಕಾದಂಬರಿ, ಕಾವ್ಯ, ಪ್ರಬಂಧ ನಾಟಕವೇ ಮೊದಲಾದ ಗ್ರಂಥಗಳಲ್ಲಿ ಯಾವದಾದರೊಂದು ಪೂರ್ಣಪುಸ್ತಕವೂ, ಇತರ ಲೇಖನಗಳೂ ಪ್ರಕಟವಾಗುವ ಈ ಗ್ರಂಥಮಾಲೆಗೆ ವಾರ್ಷಿಕ ಚಂದಾ ಅಂಚೆವೆಚ್ಚದೊಡನೆ ಅಣೆ ೧೨ ಮಾತ್ರ ಇಟ್ಟಿರುವೆವು ಈಗಲೇ ೧೨ಅಣೆಯನ್ನು ಕಳುಹಿಸಿ ವರ್ಗಣೀದಾರರಾಗಿ ಎನ್ನಿತರರನ್ನೂ ಪ್ರೋತ್ಸಾಹಿಸಬೇಕಾಗಿ ವಿನಂತಿ ಮುದ್ರಣದ ಸಂಗ್ರದ ಬಾಬತ್ತು ಈಗಾಗಲೇ ಮೂರು ಪುಸ್ತಗಳು ಆಚ್ಚಾಗಿವೆ. ೧ ಘೋಷಯಾತ್ರೆ ೨ ಗಾಂಧಿ ಸರೆ ದೇಶ ೩ ವಸ್ತ್ರಾಹರಣ. ಹೆಚ್ಚಿನವಿಚಾರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಮ್ಯಾನೆಜರ ಕ. ಸ ಗ್ರಂಥ ಮಾಲೆ**
**ಬಲ್ಮಠ ಪೋ. ಮಂಗಳೂರ**

---

### ವಾಙ್ಮಯ ವಿಚಾರ

---

೧ ಮಹರ್ಷಿ ಅರವಿಂದ ಘೋಷರ ಚರಿತ್ರೆ ಉಜ್ವಲ ಸ್ವದೇಶಾಭಿಮಾನಿಗಳಾದ ಮಹರ್ಷಿ ಅರವಿಂದರು ಭರತಖಂಡದ ಸೇವೆಗಾಗಿ ಮರಳಿ ಬರುವ ಕಾಲದಲ್ಲಿ ಶ್ರೀ ಜೋಶಿಯವರು ಬಾಬೂಗಳ ಚರಿತ್ರೆಯನ್ನು ಬರೆದು ಕರ್ನಾಟಕದ ಸೇವೆ

ಮಾಡಲು ಸಿದ್ಧರಾದದ್ದಕ್ಕೆ ನಾವು ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ.

ಈ ಪುಸ್ತಕವನ್ನು ರಚಿಸಲಿಕ್ಕೆ ಶ್ರೀ. ಜೋಶಿಯವರು ಬಹು ಶ್ರಮ ತೆಗೆದುಕೊಂಡಿದ್ದಾರೆಂಬುದು ಅದನ್ನು ಓದುವದರಿಂದಲೇ ವ್ಯಕ್ತವಾಗುತ್ತದೆ. ಇವರು ಅನೇಕ ಸಂಗತಿಗಳನ್ನು ತಾತ್ವಿಕ ದೃಷ್ಟಿಯಿಂದ ವಿವೇಚಿಸಿದ್ದು ಬಹು ರಮ್ಯವಾಗಿದೆ ಕನ್ನಡದಲ್ಲಿ ಸುಂದರವೂ ಈ ಹೊಸ ಪದ್ಧತಿಯ ಚರಿತ್ರೆಗಳು ಇಲ್ಲವೇ ಇಲ್ಲ ಭಾಷೆಯು ಸೊಗಸಾಗಿದೆ. ಆದ್ದರಿಂದ ಕನ್ನಡಿಗರು ಈ ಪುಸ್ತಕವನ್ನು ಓದಿಯೇ ತೀರಬೇಕೆಂದು ನಮ್ಮ ಆಗ್ರಹಪೂರ್ವಕವಾದ ವಿನಂತಿ ಇದೆ.

ಗ್ರಂಥಕಾರರು ಮುಸಲ್ಮಾನರಿಗೆ ಹಳ್ಳರೆಂದೂ ಸರಕಾರಿ ನೌಕರರಿಗೆ ನಿರ್ಲಜ್ಜರೂ ಸ್ವಾಭಿಮಾನಶೂನ್ಯರೂ ತಮ್ಮ ಗೇಣು ಹೊಟ್ಟೆಗಾಗಿ ದೇಶದ್ರೋಹದ ಮಹಾಪಾತಕವನ್ನು ಮಾಡಲಿಕ್ಕೆ ಹೇಸದವರು ಎಂದೂ, ಮಂದ ಪಕ್ಷದವರು ಘೋರತರದ ಪಾಪಿಗಳು, ನಿರ್ಲಜ್ಜ ಕರ್ಮ ಮಾಡಿದವರೆಂದೂ ೫ ನೇ ಪ್ರಕರಣದಲ್ಲಿ ಬಹುವಿಧವಾಗಿ ನಿಂದಿಸಿದ್ದಾರೆ. ಈ ಸಂಗತಿಗಳನ್ನಾದರೂ ಅವರು ತಾತ್ವಿಕ ದೃಷ್ಟಿಯಿಂದ ಪರೀಕ್ಷಿಸಿದ್ದರೆ ಒಳಿತಾಗುತ್ತಿತ್ತು. ಗ್ರಂಥಕಾರರು ರಾಷ್ಟ್ರೀಯ ಪಕ್ಷದವರೆಂಬುದನ್ನು ಬಲ್ಲೆವು ಆದರೂ ಪರಮತದವರನ್ನು ನಿಂದಿಸುವದೇಕೆ?

ಈ ಪುಸ್ತಕದ ಮುದ್ರಣವೂ ಅಂದವಾಗಿದೆ. ಬೆಲೆ ೧೨ ಆಣೆಗಳು ಮತ್ತು ಮೇಲೆ ಶ್ರೀ ಆಲೂರವರ ಸ್ಫೂರ್ತಿದಾಯಕ ಪ್ರಸ್ತಾವನೆ ಆದ್ದರಿಂದ ಪ್ರತಿಯೊಬ್ಬ ಕನ್ನಡಿಗನು ಈ ಪುಸ್ತಕವನ್ನು ಸಂಗ್ರಹಿಸತಕ್ಕದ್ದು. ಪುಸ್ತಕ ದೊರೆಯುವ ಸ್ಥಳ:—ಕರ್ನಾಟಕ ಟ್ರೇಡಿಂಗ ಕಂಪನಿ ಧಾರವಾಡ.

೩ ನವೀನ ಕಲ್ಪ ಕನ್ನಡ ವಾಙ್ಮಯದಲ್ಲಿ ಹೆಸರು ಪಡೆದ ಶ್ರೀ. ಚಿದಂಬರಯ್ಯನವರೇ ಈ ಹೊಸ ನಾಟಕದ ಕರ್ತರು. ಪಾಶ್ಚಿಮಾತ್ಯ ಸುಧಾರಣೆಯ ತಳಹದಿಯಾದ ಭೌತಿಕ ಸುಖದ ಬೆಳವಿಗೆ ಬಿದ್ದವರು ಹೇಗೆ ನೀತಿಭ್ರಷ್ಟರಾಗುತ್ತಾರೆ ನಮ್ಮ ಆರ್ಯ ಸಂಸ್ಕೃತಿಯ ಸಮಾಜ ರಚನೆಯಲ್ಲಿ ಹೇಗೆ ಕಲಂಕವನ್ನುಂಟು ಮಾಡುತ್ತಾರೆ-ಸುರಾಪಾನ ವ್ಯಭಿಚಾರಗಳಿಗೆ ಕೂಡ ಹೇಗೆ ಹೇಸುವದಿಲ್ಲ, ಆತ್ಮೋನ್ನತಿಯನ್ನು ಹೇಗೆ ತಳ್ಳಿಬಿಟ್ಟಿದ್ದಾರೆಂಬ ಅನೇಕ ನೈತಿಕ ವಿಷಯಗಳನ್ನು ನಾಟಕ ರೂಪದಿಂದ ಬಹು ಚೆನ್ನಾಗಿ ಕನ್ನಡಿಗರ ಮುಂದೆ ಇಟ್ಟಿದ್ದಾರೆ ಈ ತರದ ಹೊಸ ಕಲ್ಪನೆಯ ನಾಟಕಗಳು ಕನ್ನಡದಲ್ಲಿ ತೀರ ವಿರಳ ಭಾಷೆಯು ಬಹು ರುಚಿಕಟ್ಟಾಗಿದೆ

ಈ ನಾಟಕವನ್ನೋದುತ್ತಲೇ ನಮ್ಮ ಗದಗಿನ ಶ್ರೀ. ಹುಯಿಲಗೋಳ ನಾರಾಯಣರಾಯರ 'ಸ್ತ್ರೀ ಧರ್ಮ ರಹಸ್ಯ' ನಾಟಕವು ಕಣ್ಣೆದುರಿಗೆ ಬಂದು ನಿಲ್ಲುತ್ತದೆ. ಈ ಎರಡೂ ನಾಟಕಗಳು ಕರ್ನಾಟಕದಲ್ಲಿ ಕ್ರಾಂತಿಯನ್ನುಂಟು ಮಾಡಿ ಸುಧಾರಕರ ಕಣ್ಣಿನ ಪಟ್ಟಿಯನ್ನು ಹೊಡೆದೋಡಿಸಲೆಂದು ಆಶಿಸುತ್ತೇವೆ ಆದರೆ ಕರ್ನಾಟಕದಲ್ಲಿ ಆ ಯೋಗ್ಯತೆಯ ನಾಟಕ ಮಂಡಲಿಯೇ ಇಲ್ಲವೆಂಬುದು ನೆನೆದಾಗ ವ್ಯಸನವಾಗುತ್ತದೆ ಇರಲಿ

ನವೀನ ಕಲ್ಪದಲ್ಲಿ ಶೋಕ ರಸವು ಚೆನ್ನಾಗಿ ಸಾಧಿಸಿ ಪಾರ್ವತಿ ಕಲಾವತಿ ಕಾಂತರೂ ಮೊದಲಾದವರ ಅಪಚಾರದಿಂದ ಶೋಕರಸವನ್ನು ಎದ್ದು ಕಾಣುವಂತೆ ಸೇರಿಸಬೇಕಾದಾಗಿತ್ತು ಅಂದರೆ ಜನರ ಮೇಲೆ ಪರಿಣಾಮವು ಒಳ್ಳೆಯಾಗುತಿತ್ತು ಅದೇನೇ ಇದ್ದರೂ ಕನ್ನಡಿಗರೆಲ್ಲ ವಿಶೇಷವಾಗಿ ಸಮಾಜ ಸುಧಾರಕರೆಲ್ಲ ಇದನ್ನು ಒಂದಾವರ್ತಿಯಾದರೂ ಓದಿಯೇ ತೀರಬೇಕು ಬೆಲೆ ೮ ಆಣೆ ವಿಳಾಸ ಭಕ್ತ ಬಂಧೂ ಕಾರ್ಯಾಲಯ ಬೆಂಗಳೂರ ಶಹರ.

೪ ರಾಷ್ಟ್ರೀಯ ಪದ್ಯ ಮಾಲೆ ಕರ್ನಾಟಕ ವಾಙ್ಮಯಕ್ಕೆ ಪರಿಚಿತರಾದ ಬೆಳಗಾವಿಯ ಕವಿ ಭೂಷಣ ಬೆಟಗೆರಿಯವರಿಂದ ರಚಿತವಾದ ಇದೊಂದು ಚಿಕ್ಕ ಪದ್ಯಾವಳಿಯು ಪ್ರತಿಯೊಂದು ಪದ್ಯದಲ್ಲಿಯೂ ಕವಿಯ ಅಂತಃಕರಣದಿಂದ ಹೊರಬಿದ್ದ ರಾಷ್ಟ್ರೀಯ ಭಾವನೆಯು ವಾಚಕರಲ್ಲಿಯೂ ಉತ್ಸಾಹವನ್ನು ತುಂಬುತ್ತದೆ. ವಿಶೇಷತಃ ಬೆಳಗಾವಿಯಲ್ಲಿ ನಮ್ಮ ಕರ್ನಾಟಕದ ತರುಣ ಮಿತ್ರರು ಈ ತರದ ವಾಙ್ಮಯ ಸೇವೆಯು ಬೇಕೆಂದು ಟೊಂಕ ಕಟ್ಟಿದ್ದರಿಂದ ಅವರನ್ನು ಇಲ್ಲಿ ಅಭಿನಂದಿಸದೇ ಇರಲಾರೆವು ಬೆಲೆ ೧|| ಆಣೆ ವಿಳಾಸ:— ಆನಂದ ಮಜಲಿ ಟಿಳಕ ವಿದ್ಯಾಲಯ ಪೋಸ್ಟ ಟಿಳಕವಾಡಿ ಬೆಳಗಾವಿ

೫ ದೀನ ಬಂಧು ಅಂಡ್ರೂಸರ ಅಸಹಕಾರ ಪತ್ರಗಳು. ಶ್ರೀ ಅಂಡ್ರೂಸರ ಅಮೌಲ್ಯವಾದ ವಿಚಾರಗಳು! ಮೇಲೆ ಶ್ರೀ ಕೇ ಭಾರದ್ವಾಜರ ಭಾಷೆ ಮಂಗಳೂರಿನ ಹೆಸರಾದ ಮುದ್ರಣ! ಕೇಳುವದೇನು! ಈ ಅಸಹಕಾರ ಯುಗದಲ್ಲಿ ಎಲ್ಲರೂ ಇದನ್ನು ಓದಿಯೇ ತೀರತಕ್ಕದ್ದು. ಬೆಲೆ ೬ ಆಣೆ ವಿಳಾಸ:— ಕೆ. ಎಮ್ ದಾಸ ಪ್ರಭೂ ಎಂಡ್ ಸನ್ಸ ರಥ ಬೀದಿ ಮಂಗಳೂರ

೬ ವಿವಿಧ ಲೇಖ ಸಂಗ್ರಹ ಯಲ್ಲಾಪೂರ ಕರ್ನಾಟಕ ಗೌರವ ಗ್ರಂಥ ಮಾಲೆಯ ೭ ನೇ ಪುಷ್ಪವು ಈ ಅವಧಿಯಲ್ಲಿ ಈ ಗ್ರಂಥ ಮಾಲೆಯೂ ಅದರ ಉತ್ಪಾದಕರೂ ಕನ್ನಡಿಗರಿಗೆ ಪರಿಚಿತರಾಗಿಯೇ ಇದ್ದಾರೆ ಭಾಷೆಯು ಚನ್ನಾಗಿದೆ ರಾಷ್ಟ್ರ ವೀರರ ಸಂಕ್ಷಿಪ್ತ ಚರಿತ್ರಗಳು ಬಾಲಕರಿಗಂತೂ ಸ್ಫೂರ್ತಿಯನ್ನು ಕೊಡದೇ ಇರಲಾರವು.

೧೮೫೭ ನೇ ಇಸ್ವಿಯ ಬಂಡಾಯಕ್ಕೆ ಶ್ರೀ ರಂಗ್ಯಶೇಣವಿಯವರು ಶಿಪಾಯರ ಹಾವಳಿ ಎಂಬುದಾಗಿ ಕರೆದಿದ್ದನ್ನು ಕಂಡು ಆಶ್ಚರ್ಯವಾಗುತ್ತದೆ ಮಿಸೆಸ್ ನಾಯಡೂ ಅನ್ನುವದರ ಬದಲು ಶ್ರೀಮತಿ ನಾಯುಡೂ ಎಂದೆನ್ನುವದೇ ಲೇಸು ಬೆಲೆ ೩ ಆಣೆ.

೭ ಪದ್ಯ ರತ್ನಾಕರ

ಬಿಂದುರಾವ ಕೊಲ್ಹಾರ ಇವರಿಂದ ವಿರಚಿತವಾದದ್ದು ಇನ್ನೂ ತರುಣರಾಗಿದ್ದರೂ ಕೂಡ ಕವಿತ್ವದ ರಹಸ್ಯವನ್ನು ಕವಿಯು ಒಳಿತಾಗಿ ಕಂಡು ಹಿಡಿದಿರುವನೆಂದು ಕಾಣುತ್ತದೆ ಇದರಲ್ಲಿ ವಿವಿಧ ವಿಷಯಗಳಿದ್ದರೂ ಎಲ್ಲವು ಸೊಗಸಾಗಿ ವಿವೇಚಿಸಲ್ಪಟ್ಟಿದೆ ವೃತ್ತ ಛಂದಸ್ಸಿನ ರುಚಿತವು ಈ ತರುಣನಿಗೆ ಚನ್ನಾಗಿ ಸಿಕ್ಕಿದೆ.

ಬೆಲೆ ೬ ಆಣೆ ವಿಳಾಸ ಗ್ರಂಥಕಾರ
C/o ಅಪ್ಪಾಜಿ ಕಟ್ಟಿ ವಕೀಲ ವಿಜಾಪೂರ

---

ಈ ಪತ್ರವನ್ನ ಮಿ|| ಗೋವಿಂದರಾವ ರಾಮಚಂದ್ರ ಮಣೂರಕರ ಇವರು ಕವ್ಯ ವಿಜಾಪೂರ ಗ್ರಂಥಾಧಿಕಾರೀ ಮುದ್ರಾಲಯದಲ್ಲಿ ಮುದ್ರಿಸಿ ಮಾಲಕ ಶ್ರೀನಿವಾಸ ರಾಘೋರಾವ ಮಂಗಳವೇಢೇ ಬಾಗಲಕೋಟ ಇವರ ಗೋಪ್ಸರ ವಿಜಯ ಸದನದಲ್ಲಿ ಪ್ರಸಿದ್ಧ ಮಾಡಿದರು.

ಮಹಾಸಭೆಯ ಕರವು.

REGISTERED No B 1689.

ವಾರ್ಷಿಕ ವರ್ಗಣಿ ರೂ. ೪-೦-೦
ಆರು ತಿಂಗಳಿಗೆ ,, ೨-೦-೦
ಬಿಡಿ ಸಂಚಿಕೆ ೦-೧-೩
ಮಾದರಿ ಸಂಚಿಕೆ ಬೇಕಾದವರು ೦-೨-೬ ತಿಕೀಟ ಕಳಿಸಬೇಕು.

ಜಾಹೀರಾತಿನ ದರ:-

'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂಪಾಯಿ ಕಾಯಮು ಜಾಹೀರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಿಕೊಳ್ಳಬೇಕು.

# ಶ್ರೀ. ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾಷಾಂತರಿಸುವದೇ ಈ ವಾರ ಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟೆ ಫಾಲ್ಗುಣ ಶು॥ ೧೦ ಶಕೆ ೧೮೪೩. ಗುರುವಾರ ತಾ. ೯ನೇ ಮಾರ್ಚ ೧೯೨೨ ಇಸ್ವಿ. | ಸಂಚಿಕೆ ೧೬


## ಟಿಪ್ಪಣಿಗಳು.

### ಕಾಂಗ್ರೆಸ್ಸು ಹುಡುಗಾಟಿಕೆಯೇ?

ನಾವು ಕಾಂಗ್ರೆಸ್ಸು ಹುಡುಗಾಟಿಕೆಯೆಂದು ತಿಳಕೊಳ್ಳುವದನ್ನು "ಗತಾನುಗತಿಕೋ ಲೋಕೋ" ಎಂಬಂತೆ ಅನುಸರಿಸುವದನ್ನು ನಾವು ಬಿಡಬೇಕು. ಪ್ರತಿಯೊಬ್ಬನು ಕಾಂಗ್ರೆಸಕ್ಕೆ ಸಭಾಸದನಾಗುವದೂ ಮತ್ತು ಜ್ಞಾನ ಪೂರ್ವಕವಾಗಿ ಕಾಂಗ್ರೆಸ್ಸಿನ ಠರಾವುಗಳಿಗೆ ಸ್ವಸಂತೋಷದಿಂದ ಮಾನ್ಯತೆಯನ್ನು ಕೊಡುತ್ತಿರುವದೂ ನನಗೆ ಬೇಕಾದ ಮಾತಾಗಿದೆ. ಆದರೆ ಕಾಂಗ್ರೆಸ್ಸು ಬಹಳೇ ಹಳೇ ಮತ್ತು ಮಹತ್ವದ ಸಂಸ್ಥೆಯಿರುವದೆಂಬ ಮಾತ್ರಕ್ಕೆ ಅದಕ್ಕೆ ಹಿಂಬಲರೆಂದು ತಮ್ಮ ಹೆಸರು ನೊಂದಾಯಿಸಿಕೊಳ್ಳುವದೂ ಮತ್ತು ತಮ್ಮ ಮನಸ್ಸಿಗೆ ಬರಲಿ, ಬರದಿರಲಿ ಅದರ ಠರಾವುಗಳಿಗೆ ಮಾನ್ಯತೆಯನ್ನು ಕೊಡತಕ್ಕದೆಂಬ ವಿಚಾರವು ನನಗೆ ತೀರ ಸೇರದ ಮಾತಾಗಿದೆ. ಬಹುಮತಕ್ಕೆ ಮಾನ್ಯತೆಯನ್ನು ಕೊಡತಕ್ಕದ್ದೆಂಬ ತತ್ವವು ತೀರ ಸಂಕುಚಿತ ಕ್ಷೇತ್ರದಲ್ಲಿ ಹುಟ್ಟಿದೆ. [illegible] ದ ನಂತರ [illegible] ರಹದಿಂದ ವ್ಯವಹಾರ [illegible] ಬೇಕೆಂಬ [illegible] ಇಲ್ಲದ [illegible] ಮಾತ್ರ ಆದರೆ ಬಹುಮತದಿಂದ ಏನು ಬೇಕಾದ್ದೇ ಠರಾವುಗಳಾಗಲೊಲ್ಲವೇಕೆ; ಅವುಗಳನ್ನೆಲ್ಲ ಶಿರಸಾವಹಿಸಲಿಕ್ಕೆ ಸಿದ್ಧರಾಗುವದೆಂದರೆ ಇದೊಂದು ಮನಸ್ಸಿನ ದಾಸ್ಯ ವೃತ್ತಿಯೆಂದು ನನಗೆ ತೋರುತ್ತದೆ. ಕಾಯಿದೇ ಕೌನ್ಸಿಲ್‌ಗಳು ಸಾಧಾರಣತಃ ನೋಡಲಾಗಿ ಚಲೋ ಸಂಸ್ಥೆಗಳಿರುವವೆಂಬ ನಂಬಿಗೆಯುಳ್ಳವರು, ಕಾಂಗ್ರೆಸ್ಸು ವಿರುದ್ಧ ಠರಾವು ಮಾಡಿದಾಗ್ಯೂ ಕೂಡ, ಕೌನ್ಸಿಲ್ ಬಿಟ್ಟುಕೊಡುವದು ನನ್ನ ಮತದಿಂದ ತೀರ ತಪ್ಪಾದ ಮಾತಾಗಿದೆ. ಕುರಿಗಳಂತೆ ವಿಚಾರ ಮಾಡದೆ ಒಬ್ಬರನ್ನೊಬ್ಬರು ಹಿಂಬಾಲಿಸುವ ಅವಸ್ಥೆಗೆ ಪ್ರಜಾಸತ್ತಾಕ ರಾಜ್ಯವೆಂದು ಎಂದಿಗೂ ಅನ್ನಲಾಗದು. ಪ್ರಜಾಸತ್ತಾಕ ರಾಜ್ಯದಲ್ಲಿ ವೈಯಕ್ತಿಕ ಮತ ಸ್ವಾತಂತ್ರ್ಯವೂ ಆಚರಣೆ ಸ್ವಾತಂತ್ರ್ಯವೂ ಕೂದಲು ಕೊಂಕದಂತೆ ರಕ್ಷಿಸಲ್ಪಡುತ್ತವೆ. ಕಾಂಗ್ರೆಸ್ಸದ ಹೆಸರು ತಕ್ಕೊಂಡು ಮಾತ್ರ ತಮ್ಮ ಕಾರ್ಯವನ್ನು ಸಾಧಿಸುವದನ್ನು ಬಿಟ್ಟುಕೊಟ್ಟು ಅಲ್ಪ ಸಂಖ್ಯಾತ [illegible] ವರು ಬಹುಸಂಖ್ಯಾತ ಜನರಿಂದ ವಿಭಿನ್ನತೆಯನ್ನು ಕೈಕೊಳ್ಳಲಿಕ್ಕೆ ಅವರಿಗೆ ಸಂಪೂರ್ಣ ಅಧಿಕಾರವಿರುತ್ತದೆ. ವಕೀಲಿಯನ್ನು ಸೋಡಬಿಟ್ಟ ವಕೀಲರು ಕಾಂಗ್ರೆಸ್ಸಕ್ಕೆ ಸಭಾಸದರಾಗಬಹುದು; ಆದರೆ ಅಸಹಕಾರಿಗಳೆಂಬ ಅಭಿಧಾನವು ಮಾತ್ರ ಅವರಿಗೆ ಸಲ್ಲಲಾರದು. ಅಖಿಲ ಭಾರತೀಯ ಸಮಿತಿಯಲ್ಲಿ ಅವರು ಮೆಂಬರರಾಗಿ ಇರಬಾರದು. ಮತ್ತು ಇರುವದು ಯೋಗ್ಯವೂ ಅಲ್ಲ. ಅದರಂತೆಯೇ ಅಚ್ಚ ಖಾದಿಯನ್ನು ಹೊರದವರೂ ಬಹಾದ್ದೂರಕೀ ಬಿರುದನ್ನು ಬಿಡದವರೂ ಕೌನ್ಸಿಲದಲ್ಲಿ ಸೇರಿದವರೂ ಕಾಂಗ್ರೆಸ್ ಮೆಂಬರರಾದಾಗ್ಯೂ ಅವರು ಅಸಹಕಾರವಾದಿಗಳಾಗಲಾರರು.

ಕಾಂಗ್ರೆಸ ಧರ್ಮದ ವಿರುದ್ಧ ಹೋಗದೆಯೂ, ಅದರವರಾಗಿಯೂ ಮತ್ತು ಕಾಂಗ್ರೆಸದ ಹೆಸರಿನಿಂದ ಕೆಲಸ ಮಾಡದೆಯೂ ಇರುವವನಾದ ಪ್ರತಿಯೊಬ್ಬ ಕಾಂಗ್ರೆಸ ಮೆಂಬರನು ತನ್ನ ಮನಸ್ಸಿಗೆ ಬರದೆ ಇದ್ದ ಠರಾವುಗಳಿಂದ ನಿರ್ಬಂಧಿಸಲ್ಪಟ್ಟಿರುವದಿಲ್ಲ. ಕಾಂಗ್ರೆಸ್ಸು ಹಾಕಿದ ನಿರ್ಬಂಧನೆಗಳು ಜೀವನ ಸ್ವಾತಂತ್ರ್ಯಕ್ಕೆ ಆಗಿ ಬರದಂಥವೂ ಮತ್ತು ಆದರೆ ಪ್ರಕೃತಿಗೆ ಮಾನಿಸದಂಥವೂ ಇರುತ್ತವೆಂದು ತಿಳಿಯೋಣ. ತನ್ನ ಗೃಹ ವ್ಯವಸ್ಥೆಯ ಕಾಳಜಿಯನ್ನು ತಾನು ಚನ್ನಾಗಿ ಮಾಡಬಲ್ಲೆನೆಂಬ ಆತ್ಮ ವಿಶ್ವಾಸವುಳ್ಳದಾಗಿ ಆ ನಿರ್ಬಂಧನೆಗಳ ವಿರುದ್ಧ ತನ್ನ ಮತವನ್ನು ಪ್ರಕಟಿಸಿರುತ್ತದೆಂದು ತಿಳಿಯೋಣ. ಅಂದ ಮೇಲೆ ಆ ಪ್ರಾಂತವು ತನ್ನ ಕೆಲವಂಶ [illegible] ವನ್ನು ಮುಂದೆ

ಸಾಗಿಸಿ ಜಯವನ್ನು ಸಂಪಾದಿಸಿ ತನ್ನ ಕರ್ತವ್ಯವನ್ನು ಯೋಗ್ಯವೆಂದು ಸಿದ್ಧಪಡಿಸಿಕೊಳ್ಳಬಹುದು. ಎಲ್ಲ ಕಡೆಯಲ್ಲಿರುವ ಯೋಗ್ಯತೆಯು ಧೃಡ ಭಾಜಕವನ್ನು ತೆಗೆದು ದೇಶದ ಸರಾಸರಿ ತಯಾರಿಯನ್ನು ನಿರ್ಣಯಿಸುವದು ಕಾಂಗ್ರೆಸದ ಕೆಲಸವಾಗಿದೆ. ಮುಂದೆ ಹೋದ ಪ್ರಾಂತದ ಯೋಗ್ಯತೆಯನ್ನು ನೋಡ ಹೋದರೆ ಈ ಸರಾಸರಿ ಯೋಗ್ಯತೆಯು ಬಹಳೇ ಕೆಳಗಿನ ನಂಬರಿನದೆಂದು ಅನಿಸಬಹುದು. ಕಾಂಗ್ರೆಸಕ್ಕೆ ಹಾನಿಯನ್ನು ತರದೆ ಇದ್ದ ಪಕ್ಷಕ್ಕೆ ಮತ್ತು ತನ್ನಲ್ಲಿ ಆತ್ಮ ವಿಶ್ವಾಸ ವಿದ್ದ ಪಕ್ಷಕ್ಕೆ ತನ್ನ ಜವಾಬುದಾರಿಯ ಮೇಲೆ ಸ್ವತಃ ಬೇರೆ ಕಾರ್ಯಕ್ರಮವನ್ನು ಕೈಕೊಳ್ಳಬಹುದು. ಅಪಯಶ ಹೊಂದಿದಲ್ಲಿ ಮಾತ್ರ ಕಾಂಗ್ರೆಸದ ಕಡೆಯಿಂದ ದೋಷವನ್ನು ಹೊತ್ತು ಅಪರಾಧಿಯನಿಸಿಕೊಳ್ಳುವ ಜವಾಬುದಾರಿಯನ್ನೂ ಹೊರಬೇಕಾಗುವದು. ಈ ತರದ ಆಚರಣ ಸ್ವಾತಂತ್ರ್ಯತೆಯಿರುವದೇ (ಸ್ವರಾಜ್ಯದ ಮತ್ತು ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯ ಲಕ್ಷಣವು. ಗೃಹ ಕೃತ್ಯದಲ್ಲಿ ಆಚರಿಸಬಹುದಾದ ಕಾಯಿದೆ ಭಂಗದ ಮಾಪದರೀಯನ್ನು ಮೇಲೆ ತೋರಿಸಿರುತ್ತೇನೆ. ಈ ರೀತಿ ಆಚರಣೆ ಮಾಡಿದರೇನೆ ನಾವು ಮೂಢ ಮತ್ತು ಅಂಧ ಶ್ರದ್ಧೆಯಿಂದ ಪಾರಾಗಬಹುದು.

ಖಿಲಾಫತ್ ಕಮಿಟಿಗಳೂ ಕಾಂಗ್ರೆಸ್ಸ ಖಿಲಾಪತ್ತಿಗೆ ಮೆಂಬರರಾದವರೂ ಸ್ವಯಂಸೇವಕರೂ ಶಪಥ ಪೂರ್ವಕ ತೊಡತಕ್ಕ ಕಾಂಗ್ರೆಸ್ ವಚನಕ್ಕೆ ತಮ್ಮ ಒಪ್ಪಿಗೆಯನ್ನೀಯುವದಿಲ್ಲೆಂದೂ ಮತ್ತು ಅದರ ವಿಷಯಕ್ಕೆ ಧಾರ್ಮಿಕ ಶಂಕೆಗಳನ್ನು ತೆಗೆಯುತ್ತಾರೆಂದೂ ನನಗ ಬಹಳ ಕಡೆಯಿಂದ ತಕರಾರುಗಳು ಬಂದಿವೆ. ಆದರೆ ಪ್ರಸಿದ್ಧ ಸುಪ್ರಸಿದ್ಧ 'ಉಲೇಮೊ' ಜನರೆಲ್ಲ ಕೂಡಿ ಈ ಧಾರ್ಮಿಕ ಶಂಕೆಗಳ ವಿಷಯಕ್ಕೆ ಸಂಪೂರ್ಣ ವಿಚಾರ ಮಾಡಿರುವರು ಮತ್ತು ಅವರ ಅನುಮತಿಯಿಂದಲೇ ಈ ವಚನ ಪತ್ರಿಕೆಯು ತಯಾರು ಮಾಡಲ್ಪಟ್ಟಿರುವದೆಂದು ನಾನು ಎಲ್ಲ ಮುಸಲ್ಮಾನ ಬಾಂಧವರಿಗೆ ಮತ್ತೊಮ್ಮೆ ಆಶ್ವಾಸನ ಕೊಡುತ್ತೇನೆ. ಕಾರಣ ಪ್ರತಿಯೊಂದು ಖಿಲಾಫತ್ ಕಮಿಟಿಯು ಕಾಂಗ್ರೆಸ್ಸಿಗೆ ತನ್ನ ಸಂಪೂರ್ಣ ಸಹಾಯವನ್ನೂ ಸಹಾನುಭೂತಿಯನ್ನೂ ತೋರಿಸಬೇಕೆಂದು ನಾನು ಹೇಳುತ್ತೇನೆ. ಖಿಲಾಫತ ಕಮಿಟಿಗೆ ಮೆಂಬರನಾದ ಪ್ರತಿಯೊಬ್ಬ ಮುಸಲ್ಮಾನನು ಕಾಂಗ್ರೆಸಿಗೆ ಮೆಂಬರನಾಗುವದು ತನ್ನ ಆದ್ಯ ಕರ್ತವ್ಯವೆಂದು ತಿಳಿಯತಕ್ಕದ್ದು. ಇಡಿ ದೇಶಕ್ಕೆಲ್ಲ ಒಂದೇ ಒಂದಾದ ರಾಷ್ಟ್ರೀಯ ಸಂಸ್ಥೆಯು ಇರತಕ್ಕದ್ದು ಮತ್ತು ಆ ರಾಷ್ಟ್ರೀಯ ಸಂಸ್ಥೆಯೆಂದರೆ ಕಾಂಗ್ರೆಸ್ಸು ಮತ್ತು ಹಿಂದೂ ಜನರು ಕಾಂಗ್ರೆಸನ್ನು ಎಷ್ಟು ಹಚ್ಚಿಕೊಂಡು ತಮ್ಮದೆಂದು ತಿಳಕೊಳ್ಳುತ್ತಾರೋ ಅಷ್ಟೇ ಪ್ರೀತಿಯಿಂದ ಮುಸಲ್ಮಾನರು ತಮ್ಮದೆಂದು ಹಚ್ಚಿಕೊಳ್ಳಲಿಕ್ಕೆ ಪ್ರಯತ್ನ ಮಾಡತಕ್ಕದ್ದು ಹಿಂದೂ ಮುಸಲ್ಮಾನರ ಐಕ್ಯದ ತೀರ ಕಡಿಮೆ ಕಡಿಮೆ ದ್ಯೋತಕವೆಂದು ಇಷ್ಟಾದರೂ ಆಗತಕ್ಕದ್ದು.

"ನಿಶೇದ ಅವಶ್ಯಕತೆ"

ಈ ಚಳವಳಿಯು ಮುಂದೆಸಾಗಬೇಕಾದರೆ ಜನರಿಗೆ ಹೊಸ ಹೊಸ ಹುರುಪಿನ ಅವಶ್ಯಕತೆಯಿರುತ್ತದೆಂದ ನನ್ನ ಕೆಲವುಗೆಳೆಯರು ಪ್ರತಿಪಾದಿಸುತ್ತಿರುವರು ಆದರೆ ಯಾವ ಮನುಷ್ಯನೇ ಆಗಲಿ ಅಥವಾ ರಾಷ್ಟ್ರವೇ ಆಗಲಿ ಬರೇ ಉತ್ತೇಜಕಗಳ ಮೇಲೆ ಎಂದೂ ಜೀವಿಸಲಾರದು ಈಗೀಗಂತೂ ನಮಗೆ ಈ ತರದ ಉತ್ತೇಜಕಗಳ ತಲೆನಾಕರಿಕೆ ಇಟ್ಟರುತ್ತದೆ. ಸ್ವಲ್ಪ ನಿತ್ರಾಣಾಗುವ ಔಷದಥ ಜರೂರಿ ಇರುತ್ತದೆ. ಸಂಕ್ರಮಣಶೀಲ ಚಳವಳಿಯನ್ನು ಬಂದು ಮಾಡಿದ ಕಾರಣ ಜನರು ನಿರಾಶರಾಗಿ ನಮ್ಮ ಕೈ ಬಿಡ ಹತ್ತಿದರೆ ನಮ್ಮ ಕಾರ್ಯವು ಹಿಂದು ಬೀಳುವದಿಲ್ಲ. ಇಷ್ಟೇ ಅಲ್ಲ ಆದರೆ ಅದರಿಂದ ನಮ್ಮ ಕಾರ್ಯವು ಮುಂದೆಬೀಳುತ್ತದೆ ಯಾಕೆಂದರೆ ಆ ವೇಳೆಯಲ್ಲಿ ಚೌರಾ ಚೌರಿಯಂಥ ಅತ್ಯಾಚಾರಿಗಳ ಜವಾಬದಾರಿಯನ್ನು ನಾವು ಹೊರಬೇಕಾಗುವದಿಲ್ಲ. ಹಿಂದೆ ಸರಿಯುವ ಅಂಜಿಕೆಯಿಲ್ಲದೆ ನಾವು ಸಾವಕಾಶವಾಗಿ ಮುಂದೆ ಸಾಗಬಹುದು. ಈ ಹೈರಾಣಾಗುವ ಪರಿಸ್ಥಿತಿಯಲ್ಲಿ ಕೂಡ ನಾವು ಸ್ಥಿರವಾಗಿನಿಂತು ಜನರನ್ನು ನಮ್ಮ ಕೂಡ ಕಾಯ್ದುಕೊಂಡರೆ ಜನರು ಅಹಿಂಸೆಯ ಮರ್ಮವನ್ನು ತಿಳಿದು ಕೊಂಡಿರುತ್ತಾರೆಂದೂ ಮತ್ತು ಸಂಹಾರ ಶೀಲ ಚಳವಳಿಯನ್ನೂ ಕೆಲಸವನ್ನೂ ಮಾಡಲಿಕ್ಕೆ ಶಕ್ತರಿದ್ದಷ್ಟೇ ಪೋಷಣಾತ್ಮಕ ಮತ್ತು ಸಂವರ್ಧನ ಶೀಲ ಕೆಲಸವನ್ನು ಕೊನೆಗಾಣಿಸಲಿಕ್ಕೆ ಶಕ್ತರಿರುವರೆಂದು ಜಗತ್ತಿನ ನಿದರ್ಶನಕ್ಕೆ ತಂದುಕೊಟ್ಟಂತಾಗುವದು. ಏನಾದರೂ ಪರಿಣಾಮವಾಗಲೊಲ್ಲದೇಕೆ? ಈಗ ಕಂಡು ಬರುವ ಉನ್ಮಾದೋದ್ರೇಕಗಳು ತಣ್ಣಗಾಗಲಿಕ್ಕೆಬೇಕು.

---

## ಕಾರಣವಿಲ್ಲದ ಅಂಜಿಕೆ

ಕೆಲವು ಹಿಂದು ಮತ್ತು ಮುಸಲ್ಮಾನರು ಅಹಿಂಸೆಯತತ್ವವನ್ನು ನಾನು ನಿಷ್ಠುರತೆಯಿಂದ ಪ್ರತಿಪಾದಿಸುತ್ತಿರುವದರಿಂದ ಅವರ ಧರ್ಮಕ್ಕೆ ಧಕ್ಕೆ ಹಚ್ಚುತ್ತಿರುವೆನೆಂದೂ, ಹಿಂದುಸ್ಥಾನಿಗೆ ಎಂದೂ ತಿದ್ದಲಿಕ್ಕೆ ಬಾರದಂಥ ಅಪಾಯವನ್ನು ಸಹ ಮಾಡುತ್ತಿರುವೆನೆಂದು ಅಂಜಿಕೊಳ್ಳುವದನ್ನು ನೋಡಿ ನನಗೆ ವ್ಯಸನವಾಗುತ್ತದೆ. ಹಿಂಸೆಯೇ ತಮ್ಮ ಧರ್ಮವೆಂಬದಾಗಿ ಅವರು ಸೂಚಿಸುವಂತೆ ತೋರುತ್ತದೆ. ಅವರ ಸಮಕ್ಷಮ ಶುದ್ಧ ಅಹಿಂಸೆಯ ಬಗ್ಗೆ ನಾನು ಮಾತಾಡಿದರೆ ಮೈಮೇಲಿನ ಗಾಯಿಗೆ ಕೈಹಚ್ಚಿದಂತಾಗುತ್ತದೆ ಹಿಂಸೆಯನ್ನು ಅನುಮತಿಸುವ ಅಥವಾ ಅದನ್ನು ಸ್ತುತಿಸುವ ಮಹಾಭಾರತ ಕುರಾಣಗಳಲ್ಲಿಯ ವಚನಗಳನ್ನು ತೋರಿಸಿ ನನ್ನನ್ನು ಗೊಂದಲದಲ್ಲಿ ಕೆಡುವುತ್ತಾರೆ ಮಹಾಭಾರತದ ವಿಷಯವಾಗಿ ನಿರ್ಣಯವಾಗಿ ನನಗೆ ಬರೆಯಲಿಕ್ಕೆ ಬರುವದು, ಆದರೆ ಪೈಗಂಬರರ ಸಂದೇಶವನ್ನು ತಿಳಕೊಳ್ಳುವ ಅಧಿಕಾರವನ್ನು ಒಳ್ಳೇ ನಿಷ್ಠೆಯ ಮುಸಲ್ಮಾನನಾದರೂ ನನಗೆ ಅಲ್ಲಿಗಳೆಯಲಿಕ್ಕಿಲ್ಲೆಂದು ನನಗೆ ಅನಿಸುತ್ತದೆ. ಯಾವ ಧರ್ಮದ್ದೂ ಹಿಂಸೆಯು ಮುಖ್ಯ ಉದ್ದೇಶವಿಲ್ಲೆಂದು ಹೇಳುವ ಧಾರ್ಷ್ಟ್ಯವನ್ನು ನಾನು ಮಾಡುತ್ತೇನೆ. ಬಹುತರ ಎಲ್ಲ ಪ್ರಸಂಗಗಳಲ್ಲಿ ಅಹಿಂಸೆಯು ಬಂಧವ ಕಾರಕವಿದ್ದು ಕೆಲವು ಸ್ಥಳಗಳಲ್ಲಿಯೇ ಹಿಂಸೆಗೆ ಧರ್ಮಗಳಿಂದ ಅನುಮತಿ ಸಿಕ್ಕಿರುತ್ತದೆ. ಶುದ್ಧ ಆಕಂತಿಕ ಅಹಿಂಸೆಯತತ್ವವನ್ನು ನಾನು ಹಿಂದುಸ್ಥಾನದ ಮುಂದೆ ಇಟ್ಟಲ್ಲಿ ಕಾಂಗ್ರೆಸ ಸಭೆಗಳೊಳಗಿಂದ ನಾನು ಪ್ರತಿಪಾದಿಸುವ ಅಹಿಂಸೆಯು ಈಗಿನ ಪ್ರಸಂಗಕ್ಕೆ ತಕ್ಕಾದ ರಾಜನೀತಿಯೊಂದೇ ಇರುತ್ತದೆ. ರಾಜ ನೀತಿಗಳಲ್ಲಾದರೂ

ವಿಚಾರದಿಂದ ಶಬ್ದದಿಂದ ಮತ್ತು ಕೃತಿಯಿಂದ ಪ್ರಾಮಾಣಿಕತನದಿಂದ ಆಗಳನ್ನು ಅನುಸರಿಸುವದು ಅವಶ್ಯವಿರುತ್ತದೆ. ಪ್ರಾಮಾಣಿಕತನವೇ ಎಲ್ಲಿ ಶ್ರೇಷ್ಠ ನೀತಿಯೆಂದು ನನ್ನ ನಂಬಿಗೆಯಿದ್ದರೆ, ಎಲ್ಲಿಯವರೆಗೆ ಹೀಗೆ ನನ್ನ ವಿಶ್ವಾಸವಿರುತ್ತದೆಯೋ ಅಲ್ಲಿಯವರೆಗೆ ವಿಚಾರದಿಂದ ಶಬ್ದದಿಂದ, ಕೃತಿಯಿಂದ ಪ್ರಾಮಾಣಿಕನಿರುವದು ಅವಶ್ಯವಿರುತ್ತದೆ. ಇಲ್ಲದಿದ್ದರೆ ನನಗೆ ಠಕ್ಕನೆನ್ನಲಿಕ್ಕೆ ಅಡ್ಡಿಯಿಲ್ಲ. ಅಹಿಂಸೆಯ ನೀತಿಯೆಂದರೆ ಅದು ಯಶಸ್ಕರ ಅಥವಾ ಪರಿಣಾಮಕಾರಕ ಆಗುವದಿಲ್ಲೆಂದು ಕಂಡು ಬಂದರೆ ಯೋಗ್ಯ ನೋಟೀಸು ಕೊಟ್ಟು ಬಿಡಲಿಕ್ಕೆ ಬರುತ್ತದಂತೆಯೇ ಅರ್ಥವು. ಸರಳ ಧರ್ಮನೀತಿಗೆ ಅನುಸಾರವಾಗಿ ಒಂದು ರಾಜನೀತಿಯನ್ನೇ ಹಿಡಿದರೆ, ಅದನ್ನು ಅಂತಃಕರಣಪೂರ್ವಕವಾಗಿ ಅನುಸರಿಸುವದು ಅವಶ್ಯ. ಒಂದೇ ಹಾದಿಯಿಂದ ನಡೆಯುವದು ಸರಳ ನ್ಯಾಯವಿರುತ್ತದೆ. ಆದರೆ ಯಾವನಾದರೂ ಸೈನಿಕನು ಸ್ಖಲಿಸಿದರೆ, ಅವನನ್ನು ಒಮ್ಮೆಲೇ ದೂರ ಮಾಡಲಿಕ್ಕೆ ಬೇಕು. ಅಹಿಂಸೆಯ ನೀತಿಯಲ್ಲಿ ಅವನ ವಿಶ್ವಾಸ ವಿರದಿದ್ದರೆ, ಅದರ ತಪ್ಪನ್ನು ಅವರು ಹೊರಗೆತ್ತವಬೇಕು. ಆದರೆ ತನ್ನ ಮನಸ್ಸು ಅಲ್ಲಗಳೆಯುವಾಗ್ಗೆ, ಈ ನೀತಿಯಲ್ಲಿ ವಿಶ್ವಾಸ ಅದೆಯೆಂದು ಹೇಳಬಾರದು. ಹಿಂಸೆಯಲ್ಲಿ ವಿಶ್ವಾಸವಿಂದ, ಹಿಂಸೆಯ ಪಕ್ಷಕ್ಕೆ ಸೇರಿ ವಿಕಲ ಹೃದಯದಿಂದ ಒಂದು ತಾಬಾಕಿಯನ್ನು ತಕ್ಕೊಂಡರೆ ಎಷ್ಟು ಭಯಂಕರವಾಗುವದು! ಒಂದು ನೋಣವನ್ನು ಕೊಲ್ಲುವಷ್ಟು ಶಕ್ತಿಯು ನನ್ನಲ್ಲಿ ಇರುವದೆಂದು ಯಾರಿಗೂ ಸಂಶಯವಿರಲಿಕ್ಕಿಲ್ಲ. ಆದರೆ ನೋಣಗಳನ್ನು ಸಹ ಕೊಲ್ಲಬಾರದೆಂದು ನನ್ನ ಮತವದೆ. ನೋಣಗಳನ್ನು ಕೊಲ್ಲುವದು ಅವಶ್ಯವಿದ್ದಿರತ್ತಗೆಂದು ತಿಳಿದು ಅವುಗಳನ್ನು ಕೊಲ್ಲುವದಕ್ಕೆ ತಯಾರಾಗಿರುತ್ತೇವೆಂದು ತಿಳಿದುಕೊಳ್ಳೋಣ. ನೋಣಗಳನ್ನು ಕೊಲ್ಲುವ ತಯಾರಿ ಮಾಡುವದಕ್ಕಿಂತ ಪೂರ್ವದಲ್ಲಿ ಅವು ಶಾಪವಾಗಿಯೇ ನಾಶವಾಗುವಂತೆ ಉಪಾಯವನ್ನು ಯೋಜಿಸುವದು ನನ್ನ ಕರ್ತವ್ಯವಲ್ಲವೇನು? ಕಾಂಗ್ರೆಸ ಮತ್ತು ಖಿಲಾಫತ ಪಂಥಕ್ಕೆ ಸೇರಿದವರು ಮಾತಿನ ಸತ್ಯತೆಯನ್ನು ಕಂಡು ಹಿಡಿದರೆ ನಾವು ಈ ಯುದ್ಧವನ್ನು ಈ ವರ್ಷದಲ್ಲಿಯೇ ಮುಗಿಸಬೇಕಾಗಾಗುವದು ಇಲ್ಲವೇ ಅಹಿಂಸಾತತ್ವಕ್ಕೆ ಬೇಸತ್ತು ಅದನ್ನು ಬಿಟ್ಟು ಎರಡನೇ ಕಾರ್ಯಕ್ರಮವನ್ನು ಕೈಕೊಳ್ಳಬೇಕಾಗುವದು.

ಸ್ವಾಮಿ ಶ್ರದ್ಧಾನಂದರ ಮೇಲೆ ಅವರು ತಂಬೇಕೆನ್ನುವ ಠರಾವದ ಸಲುವಾಗಿ ಜನರು ವ್ಯರ್ಥವಾಗಿ ಟೀಕೆಯನ್ನು ಮಾಡುತ್ತಾರೆಂದು ನನ್ನ ಮತವಿದೆ. ಅವರ ಅಭಿಪ್ರಾಯವು ಪ್ರಾಮಾಣಿಕತನದ್ದಿರುತ್ತದೆ. ನಮ್ಮೆಲ್ಲರಿಗೂ ಅಹಿಂಸಾತತ್ವದಲ್ಲಿ ಪೂರ್ಣ ವಿಶ್ವಾಸ ವಿರುವದಿಲ್ಲವೆಂದು ಅವರು ತಿಳಿಯುತ್ತಾರೆ. ಆದ್ದರಿಂದ ನಾವು ಅಹಿಂಸಾಮಯವಾದ ಕಾರ್ಯಕ್ರಮವನ್ನು ಎಂದೂ ನೆರವೇರಿಸಲಾರೆವು. ಆದ್ದರಿಂದ ಕಾವುನ್ಸಿಲಗಳಿಗೆ ಹೋಗೋಣ. ಸಿಕ್ಕಷ್ಟು ತೆಗೆದುಕೊಳ್ಳೋಣ. ಮೇಲೆ ಮಾತ್ರ ಅಹಿಂಸಾತತ್ವದ ಮೇಲೆ ವಿಶ್ವಾಸವಿರುತ್ತದೆಂದು ತೋರಿಸಿ ಒಳಗೆ ಅತ್ಯಾಚಾರದ ಹೊರ್ತು ನಮ್ಮ ಉದ್ಧಾರವಾಗುವದಿಲ್ಲವೆಂದು ನಂಬುವವರ ಅಸಂಬದ್ಧತೆಯನ್ನು ಹೊರಗೆಡವದರ ಸಲುವಾಗಿ ಅವರು ಪ್ರಯತ್ನ ಮಾಡುತ್ತಿದ್ದರು. ಕಾಂಗ್ರೆಸ ಪಕ್ಷದವರು ಅಹಿಂಸಾತತ್ವವನ್ನು ನಿಜವಾಗಿ ನಂಬದೆ ಹೊರಗೆ ಮಾತ್ರ ನಂಬುತ್ತೇವೆಂದು ತೋರಿಸುವದು ದೇಶ ಹಿತಕ್ಕೆ ಘಾತುಕವಿರುತ್ತದೆಂದು ನಾನು ಗಟ್ಟಿಯಾಗಿ ಹೇಳುತ್ತೇನೆ. ಭಾವೀ ಸರಕಾರದ ಕಟ್ಟಡಕ್ಕೆ ಅತ್ಯಾಚಾರವೇ ತಳಹದಿಯಾಗಬೇಕಾಗಿದ್ದರೆ ಈಗಿನ ಕಾವುನ್ಸಿಲಮೆಂಬರರು ಚತುರರೆಂದು ನಿಃಸಂದೇಹವಾಗಿ ಹೇಳಬಹುದು.

ಯಾಕಂದರೆ ಈಗಿರುವ ಹಿಂಸಾತ್ಮಕ ಸತ್ತೆಯನ್ನು ಕೌನ್ಸಿಲ್ ಮೆಂಬರರು ಕೌನ್ಸಿಲ್ ದ್ವಾರಾ ಕಸುಕೊಳ್ಳಬೇಕೆಂಬ ಪ್ರಯತ್ನ ನಡಿಸಿದ್ದಾರೆ. ಶಸ್ತ್ರಾಸ್ತ್ರಗಳೇ ಸಾಧನವೆಂದು ನಂಬುವವರಿಗ ಈ ತರದಿಂದ ಬರೇ ಮಾತಿನ ಪೂರ್ತೆಯೇ ಅಹಿಂಸೆಯನ್ನು ನಂಬುವದರಿಂದ ಏನೂ ಲಾಭವಾಗಲಾರದು. ಆದ್ದರಿಂದ ಅಹಿಂಸೆಯಲ್ಲಿ ವಿಶ್ವಾಸವಿರದಿದ್ದವರು ಕಾಂಗ್ರೆಸ್ಸನ್ನು ಬಿಟ್ಟು ಕೊಟ್ಟು ತಮ್ಮ ಮನಸ್ಸಿಗೆ ಬಂದರೆ ಕೌನ್ಸಿಲಕ್ಕೆ ಹೋಗಬೇಕು ಇಲ್ಲವೆ ಕೋರ್ಟಿನಲ್ಲಿ ತಮ್ಮ ವಕೀಲಿ ಸುರುವು ಮಾಡಬೇಕು. ಮತ್ತು ಕಾಲೇಜ ಬಿಟ್ಟವರು ಕಾಲೇಜಕ್ಕೆ ತಿರುಗಿ ಹೋಗಬಹುದು. ಆದರೆ ಸಶಸ್ತ್ರ ಬಂಡಿನಿಂದ ಸ್ಥಾಪಿಸಲ್ಪಡುವ ಸ್ವರಾಜ್ಯಕ್ಕೂ ನಿಃಶಸ್ತ್ರ ಬಂಡಿನಿಂದ ನಾವು ಸ್ಥಾಪಿಸುವ ಸ್ವರಾಜ್ಯಕ್ಕೂ ಮಹದಂತರವಿರುತ್ತದೆಂದು ನಾವು ಚೆನ್ನಾಗಿ ತಿಳಕೊಳ್ಳತಕ್ಕದ್ದು. ಪೋಲಿಸರು ಮತ್ತು ಶಿಕ್ಷೆಗಳು ಸ್ವರಾಜ್ಯದಲ್ಲಿ ಉಳಿಯುವದು ನಿಶ್ಚಯ. ಆದರೆ ಈಗ ನಡೆದಿರುವ ಅತ್ಯಾಚಾರ ಅಥವಾ ಸರಕಾರದ ಅತ್ಯಾಚಾರಗಳಾಗಲಿ ನಡೆಯುವ ಸಂಭವವಿಲ್ಲ. ಧೋರಣವೆಂದಾದರೂ ಅಹಿಂಸೆಯಲ್ಲಿ ವಿಶ್ವಾಸವಿರುವ ಹಿಂದೂ ಮುಸಲ್ಮಾನರೂ ಅಸಹಕಾರವನ್ನೂ ಅಹಿಂಸೆಯನ್ನೂ ಬಿಟ್ಟುಕೊಟ್ಟು ದೂರ ಹೋಗತಕ್ಕದ್ದು. ಶಸ್ತ್ರಾಸ್ತ್ರಗಳನ್ನು ತೊಟ್ಟು ವಿಜಯ ಭೇರಿಯನ್ನು ಹೊಡಯಿಸಬೇಕೆಂದು ಮಹಾಭಾರತದಲ್ಲೂ ಹೇಳಿಲ್ಲ, ಕುರಾನದಲ್ಲೂ ಹೇಳಿಲ್ಲ. ಸೃಷ್ಟಿಯಲ್ಲಿ ಬಡದಾಟಗಳಿದ್ದಾಗ್ಯೂ ಪರಸ್ಪರ ಪ್ರೇಮವೇ ಸೃಷ್ಟಿಕ್ರಮವನ್ನು ಮುಂದೆ ನಾಗಿಸಿರುತ್ತದೆ. ಬರೇ ಮಂದಿಯ ಲುಕಸಾನ ಮಾಡುತ್ತ ಇರುವದು ಮನುಷ್ಯನಿಗೆ ಸಾಧ್ಯವಿಲ್ಲ. ಆತ್ಮ ಪ್ರೀತಿಯು ಪರಪ್ರೀತಿಯನ್ನು ಹುಟ್ಟಿಸುತ್ತದೆ. ರಾಷ್ಟ್ರಗಳು ಒಂದಕ್ಕೊಂದು ಕೂಡಿಕೊಂಡಿರುವದು ಸಾಧವಾಗಿದ್ದರ ಕಾರಣವೆಂದರೆ ಅವರಲ್ಲಿಯ ವ್ಯಕ್ತಿಗಳು ಪರಸ್ಪರನ್ನು ಆದರಿಸುತ್ತಾರಂತೇ. ಒಂದಿಲ್ಲೊಂದು ದಿನ ನಾವು ಕುಟುಂಬಗಳಿಗೆ ಹತ್ತುವ ಈ ಕಾಯಿದೆಯನ್ನು ರಾಷ್ಟ್ರಗಳಿಗೆ ನಾವು ಹಚ್ಚಲಿಕ್ಕೆಬೇಕು. ಹಿಂದುಸ್ತಾನವು ಈ ತರದ ರಾಷ್ಟ್ರವಾಗಬೇಕೆಂದು ದೇವರ ಇಚ್ಛೆಯದೆ. ಯಾಕಂದರೆ ಎಷ್ಟುಬೇಕಾದಷ್ಟು ವಿಚಾರಿಸಿದರೂ ಹಿಂದುಸ್ತಾನವು ಶಸ್ತ್ರದಿಂದ ಎಷ್ಟೋ ಪೀಳಿಗೆಗಳವರೆಗೆ ಸ್ವತಂತ್ರವಾಗಲಾರದು. ರಕ್ತಪಾತದಿಂದ ದೂರ ಇದ್ದರೇನೆ ಅವಕ್ಕೆ ಸ್ವಾತಂತ್ರ್ಯ ಸಿಗುವದು. ಮತ್ತು ಈ ದಂಡುಕಠಾಯಿಯ ವಿಷಯಕ್ಕೆ ನಾವೆಲ್ಲರು ಬೇಸತ್ತಿದ್ದೇವೆ. ಈ ವಿಶಾಲ ಹಿಂದುಸ್ತಾನದ ಸಂದೇಶವು ಇದೇ ಎಂದು ನನಗೆ ಅನಿಸುತ್ತದೆ. ಈ ವೈಭುದೇಶವಾಸಿಜನರಿಗೆ ಶಸ್ತ್ರಾಸ್ತ್ರಗಳ ಉಪಯೋಗವು ಗೊತ್ತಿಲ್ಲ. ಸ್ವತಂತ್ರರಾಗಬೇಕೆಂಬ ಇಚ್ಛೆಯಿದ್ದ ಕಾರಣ ನಾವು ಸ್ವತಂತ್ರರಾಗಲಿಕ್ಕೆ ಬೇಕು. ಮು ಂ ಗ್ಯೆ ಜೋ ರಿ ನ ಮೇ ಲೆ (ಮುಂಗೈ ಜೋರಿನ ಮೇಲೆ) ನಡೆಯುವ ಸತ್ತೆಯಿಂದ ಬರೇ ಕಷ್ಟವೇ ಬೆಳೆಯುತ್ತದೆಂದು ನಮ್ಮೆಲ್ಲರಿಗೆ ತಿಳಿದು ಹೋಗಿರುತದೆ.

ಏನೇ ಆಗಲಿ ಈ ತರದ ವಿಚಾರಗಳಿಂದ ನಾವು ಅಹಿಂಸೆಯು ಧರ್ಮವೆಂದಾಗದಿದ್ದರೂ ಧೋರಣವೆಂದು ಸ್ವೀಕಸಿರಿದ್ದೇವೆ. ಹೊಸ ಬಡಕಗಳ ಮೇಲೆ ವಿಶ್ವಾಸವಿಟ್ಟಾಗ್ಯೂ ನಾವು ಮನೆಯಲ್ಲಿ ಹೇಗೆ ಪ್ರೀತಿಯಿಂದಲೂ ಸಮಾಧಾನದಿಂದಲೂ ಎಲ್ಲ ಕಲಹವನ್ನು ಸಾಗಿಸಿಕೊಂಡು ಹೋಗುವಂತೆಯೋ ಈ ರಾಷ್ಟ್ರದಲ್ಲಿದ್ದ ಎಲ್ಲ ತಂಡ ಜನರೊಡನೆ (ಇದರಲ್ಲಿ ಇಂಗ್ಲಿಷರೂ ಬರುತ್ತಾರೆಂದು ನಾನು ಹೇಳಬೇಕಾಗಿಲ್ಲ.) ಶಾಂತವೃತ್ತಿಯನ್ನು ಪರಿಪಾಲಿಸಿ ಮುಂದೆ ಸಾಗತಕ್ಕದ್ದು. ಈ ಧೋರಣದಲ್ಲಿ ವಿಶ್ವಾಸವಿಲ್ಲದವರೂ ಮತ್ತು ಸಂಪೂರ್ಣವಾಗಿ ಧೋರಣದಂತೆ ನಡೆಯಲಾರದವರೂ ಕಾಂಗ್ರೆಸ ವರ್ಧದಲ್ಲಿ ಉಳಿದುಕೊಂಡು ಈ ಚಳವಳಿಗೆ ಬಹಳೇ ಹಾನಿಯನ್ನುಂಟು ಮಾಡುವರು.

ಕನ್ನಡ ನವಜೀವನ.

ಫಾಲ್ಗುಣ ಶು॥ ೧೦ ಗುರುವಾರ ಶಕೆ ೧೮೪೫.

## ಮಹಾಸಭೆಯ ಕರವು

ಘೋರ ವಿಷಯಕ್ಕೆ ಜನತೆಯಲ್ಲಿ ಆದರವಿರುವದೂ ಅವರಿಗೆ ಕರವು ದೊರೆಯುತ್ತಿರುವದು. ಹಿಂದುಸ್ಥಾನದಲ್ಲಿ ದೊಡ್ಡ ದೊಡ್ಡ ದೇವಾಲಯಗಳುಂಟು. ಅವುಗಳ ಯಾವತ್ತು ವೆಚ್ಚವನ್ನು ಭಾವಿಕ ಜನರು ಆಯಾಸವಿಲ್ಲದೆ ಸಾಗಿಸುತ್ತಿರುವರು. ಕಾಶೀ ವಿಶ್ವನಾಥ ದೇವರ ಮಂದಿರದ ಮೇಲೆ ಹೊನ್ನಿನ ಕಳಸವಿರುತ್ತದೆ. ಅದಕ್ಕೆ ಬೇಕಾದ ಹಣದ ದೆಸೆಯಿಂದ ಸ್ವಯಂಸೇವಕರು ಬೀದಿ ಬೀದಿ ತಿರುಗಲಿಲ್ಲ, ಶ್ರದ್ಧಾವಂತ ಜನರು ತಾವಾಗಿಯೇ ಬಂದು ಹಣವನ್ನಿತ್ತರು. ಅಮೃತಸರದ ಶೀಖ ಮಂದಿರದಲ್ಲಿ ಸಂಗಮರವರೀ ಕಲ್ಲಿನ ಹಾಸಿಗೆಯುಂಟು, ಬೆಳ್ಳಿಯ ಬಾಗಿಲುಗಳುಂಟು, ಗುಮಟಿನ ಮೇಲೆ ಬಂಗಾರದ ತಗಡನ್ನು ಹೊದ್ದಿಸಿರುವರು; ಇದರಿಂದ ಅದಕ್ಕೆ ಸುವರ್ಣ ಮಂದಿರವೆಂಬ ಹೆಸರು ಬಂದಿದೆ. ಇವೆಲ್ಲವುಗಳಿಗೆ ವೆಚ್ಚಾದ ಹಣವನ್ನೆಲ್ಲ ಭಕ್ತಿವಂತರಾದ ಶೀಖ ಜನರು ಸ್ವೇಚ್ಛೆಯಿಂದ ಅರ್ಪಿಸಿರುವರು. ಅಲ್ಲಲ್ಲಿ ಭವ್ಯವಾದ ಮಸೀದಿಗಳನ್ನು ನಾವು ನೋಡುವೆವು. ಅವುಗಳಿಗೆ ಬೇಕಾದ ಹಣದ ಸಲುವಾಗಿ ಮನೆ ಮನೆ ತಿರುಗಬೇಕಾಗಲಿಲ್ಲ. ಇದರಂತೆಯೇ ಮಹಾ ಸಭೆಯಾದರೂ ಆಗಲಿಕ್ಕೆ ಬೇಕು. ಜನರು ಮಹಾಸಭೆಯನ್ನು ಧರ್ಮ ಮತ್ತು ಕರ್ಮಗಳ ಸಾಧನವೆಂದು ತಿಳಿದಿದ್ದರೆ, ಮುಸಲ್ಮಾನರು ಮಹಾಸಭಾರಾಜ್ಯವೆಂದರೆ ಖಿಲಾಫತದ ವಿಜಯವೂ ಮುಸಲ್ಮಾನರ ಸ್ವತಂತ್ರತೆಯೂ ಎಂದೂ ಹಿಂದುಗಳು ಮಹಾಸಭಾ ರಾಜ್ಯವೆಂದರೆ ಗೋವುಗಳ ರಕ್ಷಣೆಯೂ ಹಿಂದುಗಳ ಸ್ವತಂತ್ರ್ಯವೂ ಎಂದೂ ಪಾರಸೀ ಜನರು ಮಹಾಸಭಾ ರಾಜ್ಯವೆಂದರೆ ಅಗ್ನಿಮಂದಿರಗಳ ರಕ್ಷಣೆಯೂ ಪಾರಸೀ ಜನರ ಸ್ವತಂತ್ರತೆಯೂ ಎಂದೂ ತಿಳಿದಿದ್ದರೆ, ಅದರಂತೆ ಹಿಂದುಸ್ಥಾನದೊಳಗಿನ ಕ್ರೈಸ್ತ ಯಹುದಿ ಮುಂತಾದವರು ತಿಳಿದಿದ್ದರೆ, ಅವರೆಲ್ಲರೂ ಸ್ವಾರ್ಥದ ಸಲುವಾಗಿಯಾಗಲಿ ಧರ್ಮವೆಂದಾಗಲಿ ಮಹಾ ಸಭೆಯ ವೆಚ್ಚವನ್ನು ನಡಿಸುವದೆಂದರೆ ಅದಕ್ಕೆ ಕರವನ್ನು ಕೊಡುವದೇ ಸೈ. ಈ ಮಹಾ ಸಂಸ್ಥೆಯು ಲೋಕ ಪ್ರಿಯವಾಗಿದ್ದದ್ದೇ ನಿಜವಿದ್ದರೆ ಅದಕ್ಕೆ ದುಡ್ಡಿನ ಕೊರತೆಯು ಆಗಕೂಡದು. ಈ ಸಂಸ್ಥೆಯು ಲೋಕಮಾನ್ಯವಿದೆಯೋ ಇಲ್ಲವೋ ಎಂಬುದರ ನಿರ್ಣಯವು ಅಲ್ಪಾವಧಿಯಲ್ಲಿ ತಿಳಿದುಬರುವದು.

ಈ ಸಾರೆ ಮಹಾಸಭೆಯು ಕರವನ್ನು ಕೂಡಿಸುತ್ತದೆ. ಸಭಾಸದನಿದ್ದವನು ಮುಖ್ಯ ಮತದಾರನಾಗಲಿಚ್ಛಿಸುವವನು ವರ್ಷಕ್ಕೆ ನಾಲ್ಕಾಣೆ ಕರವನ್ನು ಕೊಡತಕ್ಕದೆಂಬುದು ಹೋದ ವರ್ಷವೇ ನಿಶ್ಚಿತವಾಗಿದೆ. ಈ ಕರವನ್ನಂತೂ ಸಲ್ಲಿಸತಕ್ಕದ್ದಿದ್ದೇ ಇರುವದು. ಇದಲ್ಲದೆ ಎರಡನೇದೊಂದು ಕರವನ್ನು ಸಲ್ಲಿಸತಕ್ಕದ್ದಿದೆ. ಈ ಕರವನ್ನು ಯಾವತ್ತೂ (ಸಭಾಸದರಿರಲಿ ಇಲ್ಲದಿರಲಿ)—ನೌಕರ ವರ್ಗವೂ ಸಹಿತ—ಕೊಡತಕ್ಕದ್ದು. ಯಾರಿಗೆ ಮಹಾಸಭೆಯು ಮಾನ್ಯವಿರುವದೋ, ಯಾರಿಗೆ ತಿಲಕ ಮಹಾರಾಜರು ಪೂಜ್ಯರಾಗಿರುವರೋ, ಯಾರು ಸ್ವರಾಜ್ಯವನ್ನು ದೊರಕಿಸುವದೇ ಅವರ ಅತ್ಯಂತ ದೊಡ್ಡದಾದ ಸ್ಮಾರಕವೆಂದು ತಿಳಿದಿರುವರೋ, ಅವರೆಲ್ಲರೂ ಈ ಕರವನ್ನು ಕೊಡತಕ್ಕದ್ದಿದೆ.

ಹೋದ ವರುಷದ ಆದಾಯದ ನೂರಕ್ಕೆ ಒಂದು ರೂಪಾಯಿಯಂತೆ ಈ ಕರವಿರುತ್ತದೆ. ಅಂದರೆ, ಯಾವ ಮನುಷ್ಯನ ಒಂದು ವರ್ಷದ ಸಂಬಳವು ಒಟ್ಟುಗೂಡಿ ಒಂದುನೂರು ರೂಪಾಯಿಯಾಗುವದೋ ಅವನಿಗೆ ಮಹಾಸಭೆಯು ಒಂದು ರುಪಾಯಿಯನ್ನು ಬೇಡುತ್ತದೆ. ಈ ಕರವು ಅತ್ಯಂತ ಹಗುರಾದದ್ದೆಂದು ನಾನೆಣಿಸುತ್ತೇನೆ. ಸರಕಾರವು ಲೆಕ್ಕದ ಪುಸ್ತಕಗಳನ್ನು ತಪಾಸಿಸುತ್ತದೆ. ಮಹಾಸಭೆಯು ಹೃದಯವನ್ನು ಪರೀಕ್ಷಿಸುತ್ತದೆ ಯಾರಿಗೆ ಎಷ್ಟು ಆದಾಯವಿರುವದೋ, ಅವರು ಆ ಪ್ರಮಾಣದಿಂದ ಮಹಾಸಭೆಗೆ ಕರವನ್ನು ಸಲ್ಲಿಸತಕ್ಕದ್ದು.

ಈ ಲೇಖವನ್ನು ಬರೆಯುವದರಲ್ಲಿ ನನ್ನದೊಂದು ವಿಶೇಷವಾದ ಉದ್ದೇಶವಿರುವದು. ವಾರಕ್ಕೆ ಸುಮಾರು ೩೫೦೦೦ "ನವಜೀವನ"ದ ಪ್ರತಿಗಳು ಹೊರಬೀಳುವವು ಒಂದು ಪ್ರತಿಯನ್ನು ಓದುವವರು ಏನಿಲ್ಲೆಂದರೂ ಮೂರು ಜನರಿರುವರೆಂದು ತಿಳಿದರೆ, ೧೦೫೦೦೦ ಸಾವಿರ ಜನರು "ನವಜೀವ"ನದ ವಾಚಕರಾಗುವರು. ನಾನೀಗ ಅವರೆಲ್ಲರ ಪರೀಕ್ಷೆಯನ್ನು ಮಾಡಬೇಕೆಂದು ಇಚ್ಛಿಸುತ್ತೇನೆ. ಅವರೆಲ್ಲರಿಗೆ ಮಹಾಸಭೆಯ ಕಾರ್ಯವು ಸಮ್ಮತವಾಗಿದ್ದರೆ ತಮ್ಮ ತಮ್ಮ ಕರವನ್ನು "ನವಜೀವನ"ದ್ವಾರಾ ಮುಟ್ಟಿಸಬೇಕು. ಪ್ರತಿಯೊಬ್ಬನು ತನ್ನ ಕರವನ್ನು ಪ್ರತ್ಯೇಕವಾಗಿ ಮುಟ್ಟಿಸಬಹುದು. ಇಲ್ಲವೆ ಪ್ರತಿಯೊಂದು ಶಹರದ ನವಜೀವನದ ವಾಚಕನು ತನ್ನ ಮಿತ್ರರ ಕಡೆಯಿಂದ- ತಿಳಿಯದಿದ್ದವರ ಕಡೆಯಿಂದ ಸರ್ವಥಾ ಅಲ್ಲ- ಹಣವನ್ನು ವಸೂಲು ಮಾಡಿ 'ನವಜೀವನ'ದ ಕಾರ್ಯಾಲಯಕ್ಕೆ ಮುಟ್ಟಿಸಬೇಕು ಯಾರ ಕಡೆಯಿಂದ ಎಷ್ಟು ಹಣವು ಬಂದಿತೆಂಬುದು 'ನವಜೀವನ'ದಲ್ಲಿ ಪ್ರಕಟಿಸಲ್ಪಡುವದು, ಮತ್ತು ಬಂದ ಹಣವನ್ನೆಲ್ಲ ಪ್ರಾಂತಿಕ ಕಮಿಟಿಯ ಮಂತ್ರಿಗೆ ಒಪ್ಪಿಸಲ್ಪಡುವದು.

ಎಲ್ಲರೂ ಪ್ರಾಮಾಣಿಕತನದಿಂದ ತಮ್ಮ ತಮ್ಮ ಆದಾಯದ ಭಾಗವನ್ನು ಕೊಟ್ಟುಕೊಳ್ಳತಕ್ಕದ್ದು. ಹೆಚ್ಚಿಗೆ ಬೇಕಾದಷ್ಟು ಕೊಡಬಹುದು. ಕಡಿಮೆ ಯಾರೂ ಕೊಡಲಾಗದು. ಕಡಿಮೆ ಕೊಡತಕ್ಕವನು ತನ್ನ ಅಲ್ಪ ಸೇವೆಯೆಂದು ಬೇಕಾದರೆ ಕೊಡಬಹುದು. ಆದರೆ ಈ ಕರವನ್ನು ಸಲ್ಲಿಸಲಿಚ್ಛಿಸುವವನು ತಿಲಕ ಸ್ವರಾಜ್ಯ ನಿಧಿಗೆ ಕನಿಷ್ಠ ಪಕ್ಷಕ್ಕೆ ನೂರಕ್ಕೆ ಒಂದು ರೂಪಾಯಿಯಂತೆ ಸಲ್ಲಿಸತಕ್ಕದ್ದು. ಹೆಚ್ಚಿಗೆ ಬೇಕಾದಷ್ಟು ಕೊಡಬಹುದು. ಹೆಚ್ಚಿಗೆ ಕೊಡಲಿಚ್ಛಿಸುವವರು ಅವಶ್ಯವಾಗಿ ಕೊಡಬೇಕು ಇದರಿಂದ ಯಾರಿಗೆ ಕೊಡಲು ಸಾಮರ್ಥ್ಯವಿರುವದಿಲ್ಲವೋ ಅವರ ಪಾಲಿನ ಹಣವೂ ಮಹಾಸಭೆಗೆ ಮುಟ್ಟಿದಂತಾಗುತ್ತದೆ ಹೆಚ್ಚಿಗೆ ಕೊಡುವವರು ಎರಡನೇ ಜನರ ಪರವಾಗಿ ಕೊಡುವರೆಂದು ತಿಳಿಯಲ್ಪಡುವದು

ಈ ಹಣದ ಉಪಯೋಗವು ಸಧ್ಯಕ್ಕೆ ಮುಖ್ಯತಃ ಮೂರು ಕಾರ್ಯಗಳಿಗಾಗಿಯೇ ಮಾಡಲ್ಪಡುವದು ಯಾರಿಗೆ ಹೇಗೆ ಬೇಕೋ ಹಾಗೆ ಉಪಯೋಗಿಸಬಹುದು. (೧) ಖಾದಿ ಅಥವಾ ರಾಟಿಯ ಪ್ರಸಾರ, (೨) ಶಿಕ್ಷಣ, ಮತ್ತು (೩) ಅಂತ್ಯಜ ಸೇವೆ ಈ ವರ್ಷ ಶಿಕ್ಷಣದ ಕಾರ್ಯವನ್ನು ಬಾಯಾ ಶುದ್ಧವಾಗಿ ಮಾಡಿಯೇ ತೀರತಕ್ಕದ್ದು ಸರಕಾರೀ ಶಾಲೆಗಳಲ್ಲಿ ಒಬ್ಬನಾದರೂ ಹುಡುಗನು ಉಳಿದರೆ ಅದು ತಮ್ಮ ವಿಷಯದಲ್ಲಿ ಲಜ್ಜಾಸ್ಪದವಾದದೆಂದು ನಾನು ತಿಳಿಯುತ್ತೇನೆ. ನಾವು ನಮ್ಮ ವಿದ್ಯಾಲಯಗಳ ಸ್ಥಿತಿಯನ್ನು ಸರಿ ಪಡಿಸಿ ಪ್ರತಿಯೊಬ್ಬ ಬಾಲಕನನ್ನೂ ಬಾಲಿಕೆಯನ್ನೂ ಅವುಗಳಲ್ಲಿ ಸೇರಿಸಿಕೊಳ್ಳುವದು ಶಕ್ಯವಿದೇ. ನಮ್ಮ ಸಾಲೆಗೆ ಬರದಿದ್ದವನು ಒಬ್ಬ ಬಾಲಕರೂ ಇದ್ದದ್ದು ಕಂಡುಬಂದರೆ ಅದಾದರೂ ಲಜ್ಜಾಸ್ಪದವಾದುದೆಂದೇ ನಾನು ತಿಳಿಯುತ್ತೇನೆ.

ಈ ಎರಡೂ ವಿಭಾಗಗಳು ಬಹು ಮಹತ್ವವುಳ್ಳವುಗಳಾಗಿರುವವು. ಅವುಗಳ ಕಾರ್ಯವು ಒಳ್ಳೇ ಪ್ರಾಮಾಣಿಕತನದಿಂದ ಸಾಗಿದೆ. ಪ್ರತಿಯೊಬ್ಬ ಕರಕೊಡುವವನಿಗೆ ಅದರಂತೆ ಯಾವತ್ತು ಜನತೆಗೆ ಒಂದಕ್ಕೆ ಹತ್ತು ಸಹಜವಾಗಿ ತಿರಿಗಿ ಬರುವದು. ಈ ವರ್ಷ ಅಂತ್ಯಜ ಸೇವೆಯ ಕಾರ್ಯದಲ್ಲಿ ಹೆಚ್ಚಿಗೆ ಹಣವನ್ನು ವೆಚ್ಚ ಮಾಡತಕ್ಕದ್ದಿದೆ. ಭಾರತ ವಾಸಿಗಳಿಗೆ ಮಹಾಸಭೆಯ ಕಾರ್ಯವು ಸಂತೋಷ ಜನಕವಾದದ್ದಿರುವದೆಂದು ಕಂಡುಬಂದರೆ ಅವರು ಹೆಚ್ಚಿ

...ಕೊಂಡಿತ್ತು ಕಡಿಮೆ ಕೊ... ಮತ್ತೆ ಸ್ಥಾಪಿಸಲು ಪ್ರಯತ್ನ ... ಯಾಗಿತ್ತಿದ್ದು. ಮಹಾಸಭೆಯ ಬಗ್ಗೆ ಜನತೆಯಲ್ಲಿ ಅವರ ವಿರುವವೇಳೆ ಇಲ್ಲವೋ ಎಂಬ ಮಾತಿನ ಮೊದಲನೇ ಪರೀಕ್ಷೆಯ ಕಾಲವು ಈಗ ಬಂದಿದೆ. ಎರಡನೇಯವರು ಖಾದೀ ನೋತವೆ ಪ್ರತಿಯೊಬ್ಬನು ತಾನು ಸಲ್ಲಿಸತಕ್ಕ ಹಣವನ್ನು ತೀವ್ರವೇ ಸಲ್ಲಿಸಿ ಬಿಡುವನೆಂದು ನಾನು ಅಪೇಕ್ಷಿಸುತ್ತೇನೆ.

ನವಜೀವನ

(ಮೋಹನದಾಸ ಕರಮಚಂದ ಗಾಂಧಿ)

---

## ವ್ಯಾಪಾರಸ್ಥರ ಚಿಂತೆಯು.

—.೦.—

ವ್ಯಾಪಾರಸ್ಥರು ಈಗ ಗಾಬರಿಗೊಂಡಿರುವ ಚಿಂತೆ ಕಂಡು ಬರುತ್ತದೆ ಈಗ ನಡೆದಿರುವ ಚಳುವಳಿಯಿಂದ ವ್ಯಾಪಾರವು ಮುಳುಗಿ ಹೋಗುತ್ತವೆಂದು ಅವರಿಗೆ ಅನಿಸುತ್ತಿರುವದು. ಆದರೆ ಅವರೀ ವಿಚಾರವು ಸರಿಯಾದದ್ದಲ್ಲ. ಈ ಚಳುವಳಿಯು ವ್ಯಾಪಾರದ ಇಲ್ಲವೆ ವ್ಯಾಪಾರಸ್ಥರ ವಿರುದ್ಧವಾಗಿ ನಡೆಸಲ್ಪಟ್ಟಿಲ್ಲ, ಅವರ ಹಿತಕ್ಕಾಗಿಯೇ ನಡೆಸಲ್ಪಟ್ಟಿದೆ. ಈಗಿನ ವ್ಯಾಪಾರದಿಂದ ಇಲ್ಲಿಯ ವ್ಯಾಪಾರಸ್ಥರಿಗೆ ನೂರಕ್ಕೆ ಐದು ರುಪಾಯಿಗಳು ದೊರೆತು ಉಳಿದದ್ದೆಲ್ಲ ಹೊರಗಿನವರ ಕೈಸೇರುತ್ತಿರುವದು. ನಮ್ಮ ಚಳುವಳಿಯು ಯಶಸ್ವಿಯಾದರೆ ವ್ಯಾಪಾರಸ್ಥರು ತಮ್ಮ ಕೈಯಲ್ಲಿಯೇ ನೂರಕ್ಕೆ ನೂರು ಇಟ್ಟುಕೊಳ್ಳುವರು, ಇಲ್ಲವೆ ತಮ್ಮ ಕೈಯಲ್ಲಿ ನೂರಕ್ಕೆ ಐದು ಇಟ್ಟುಕೊಂಡು ಉಳಿದದ್ದನ್ನು ಬಡ ಜನರ ಮನೆಯಲ್ಲಿಡುವರು.

ವ್ಯಾಪಾರಸ್ಥರು ಕೇವಲ ನಿರ್ಭಯರಾಗಿರತಕ್ಕದ್ದು. ಅವರು ಸ್ವಲ್ಪ ಶ್ರದ್ಧೆಯುಳ್ಳವರಾಗುವದು ಅವಶ್ಯವು ಅದರಂತೆ ಅವರು ಸ್ವಲ್ಪ ಸಾಹಸವನ್ನಾದರೂ ಮಾಡುವದವಶ್ಯವು. ಸರಕಾರವು ವ್ಯಾಪಾರವನ್ನು ಮಾಡಿಸುತ್ತಿರುವದಿಲ್ಲ. ಅದು ಗುಲಾಮಗಿರಿಯನ್ನು ಬಹಳಾದರೆ ದಲಾಲಿಯನ್ನು ಮಾಡಿಸುತ್ತದೆ ಅದು ಒಬ್ಬ ಹಿಂದೀ ಮನುಷ್ಯನನ್ನು ಕೋಟ್ಯಾಧೀಶನಾಗಗೊಟ್ಟರೆ ಅತ್ತ ಯುರೋಪದಲ್ಲಿ ನೂರು ಜನರನ್ನು ಕೋಟ್ಯಾಧೀಶರನ್ನಾಗಿ ಮಾಡುತ್ತದೆ ಈ ಸರಳವಾದ ಲಕ್ಷ್ಯವನ್ನು ತಿಳಿದ ವ್ಯಾಪಾರಸ್ಥರು ಈ ಯುದ್ಧದಲ್ಲಿ ಸೇರಿಕೊಳ್ಳುವರು. ಮತ್ತು ಈ ಮಾತನ್ನು ವ್ಯಾಪಾರೀ ವರ್ಗವು ಚನ್ನಾಗಿ ಅರಿತು ಕೊಂಡರೆ ಶೀಘ್ರದಲ್ಲಿಯೇ ಈ ಯುದ್ಧವು ಸಮಾಪ್ತವಾಗಿ ಅವರಿಗೂ ದೇಶಕ್ಕೂ ನಿಶ್ಚಿಂತತನದಿಂದ ತಮ್ಮ ಕೆಲಸವನ್ನು ಮಾಡಲು ಅನುಕೂಲವಾಗುತ್ತದೆ.

ಅರಿವೆಯ ವ್ಯಾಪಾರಸ್ಥರಂತೂ ಹೆಚ್ಚು ಸಾಹಸವನ್ನು ಮಾಡುವದು ಅವಶ್ಯವಾದದ್ದು, ವಿಲಾಯತೀ ಮತ್ತು ಗಿರಣಿಯ ಅರಿವೆಗಳನ್ನು ಬಿಟ್ಟುಕೊಟ್ಟು ಕೇವಲ ಶುದ್ಧ ಖಾದಿಯ ವ್ಯಾಪಾರವನ್ನೇ ಅವರು ಮಾಡತಕ್ಕದು.

ಖಾದಿಯ ವ್ಯಾಪಾರವಾದರೂ, ಅದನ್ನು ಪ್ರಾಮಾಣಿಕತನದಿಂದ ನಡೆಸಿದರೆ, ಒಳಿತಾಗಿ ಸಾಗುತ್ತದೆ. ಅದರಿಂದ ನೂರಾರು ಜನರ ವೃತ್ತಿಯು ನಡೆಯುತ್ತದೆ. ಮತ್ತು ಲೋಕಕಲ್ಯಾಣವಾಗುತ್ತದೆ. ವ್ಯಾಪಾರಸ್ಥರಾದರೂ ಪ್ರಾಮಾಣಿಕರಾಗಿರಲಾರರೆಂದು ತಿಳಿಯಲು ಕಾರಣವಿಲ್ಲ ವ್ಯಾಪಾರಸ್ಥರು ತಮ್ಮ ಧನ ಲೋಭಕ್ಕೆ ಮರ್ಯಾದೆಯನ್ನು ಇಟ್ಟುಕೊಂಡರೆ ಅವರಿಗೆ ಅಸತ್ಯವನ್ನಾಶ್ರಯಿಸುವ ಅವಶ್ಯಕತೆಯೇ ಉಂಟಾಗದೆಂದು ಅವರಿಗೆ ಅನುಭವದಿಂದ ತಿಳಿದು ಬರದಿರಲಾರದು.

ನವಜೀವನ. ಮೋ. ಕ. ಗಾಂಧಿ.

---

### ಸೂಚನೆಯು.

ಹೋಳಿಯ ಹುಣ್ಣಿವಿಯ ಹಬ್ಬದ ಮೂಲಕ ಛಾಪಖಾನೆಯಲ್ಲಿ ಕೆಲಸವು ನಡೆಯುವದಿಲ್ಲ ಆದ್ದರಿಂದ ಮುಂದಿನ ವಾರದ ಸಂಚಿಕೆಯು ಹೊರಡುವದಿಲ್ಲ.

ವ್ಯವಸ್ಥಾಪಕ ಕ. ನ.

## ವಿಧಾಯಕ ಕಾರ್ಯಕ್ರಮವು.

ಈಗ ವಿಧಾಯಕ ಕಾರ್ಯಕ್ರಮವು ತಯಾರಿಸಲ್ಪಟ್ಟಿರುತ್ತದೆ. ಅದು ಸಂಘಟನಾ ಶಕ್ತಿಯನ್ನು ಜಾಗ್ರತಗೊಳಿಸುತ್ತದೆ. ಉದ್ಯೋಗಿಗಳನ್ನಾಗಿ ಮಾಡುತ್ತದೆ ಸ್ವರಾಜ್ಯಕ್ಕೆ ಯೋಗ್ಯರನ್ನಾಗಿ ಮಾಡುವದು. ಮತ್ತು ತಮ್ಮ ತಿಟ್ಟನ್ನು ಇಳಿಸುವದು. ನಾವು ತಿರಸ್ಕರಿಸಲ್ಪಡಬಹುದು, ಶಪಿಸಲ್ಪಡಬಹುದು. ಮತ್ತು ಜನರು ನಮಗೆ ಅಪಮಾನ ಮಾಡಬಹುದು. ಅಹಿಂಸಾ ತತ್ವವನ್ನು ಪ್ರತಿಜ್ಞಾ ಪೂರ್ವಕವಾಗಿ ಸ್ವೀಕರಿಸಿದಂಥ ನಾವು ಮನಸ್ಸಿನಲ್ಲಿ ಸಹ ಸಿಟ್ಟಿನ ಕಲ್ಪನೆಯನ್ನು ತರಲಾರದು ಎಲ್ಲ ಅಪಮಾನವನ್ನು ಸಹಿಸಿಗೊಳ್ಳಬೇಕು. ವಿಚಾರ ಪೂರ್ವಕವಾಗಿ ನಮ್ಮ ಹೆಜ್ಜೆಯನ್ನು ಹಿಂದಕ್ಕೆ ತೆಗೆದುಕೊಳ್ಳದ ಹೊರತು ಅಹಿಂಸಾ ತತ್ವವನ್ನು ಪುನಃ ಪೂರ್ವಕವಾಗಿ ಪಾಲಿಸದ ಹೊರತು ಮತ್ತು ಖಾದಿಯನ್ನು ಹೆಚ್ಚು ಪ್ರಮಾಣದಿಂದ ತಯಾರಿಸದ ಹೊರತು ವಿಲಾಯತಕ್ಕೆ ನಾವು ಸಹಾಯವನ್ನು ಮಾಡಲಾರೆವೆಂದೂ ಪಂಜಾಬದ ಅನ್ಯಾಯವನ್ನು ಪರಿಮಾರ್ಜನೆ ಮಾಡಲಾರೆವೆಂದೂ ಸ್ವರಾಜ್ಯವನ್ನು ಗಳಿಸಲಾರೆವೆಂದೂ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ವಿಧಾಯಕ ಕಾರ್ಯಕ್ರಮವನ್ನು ನೆರವೇರಿಸುವದು ಅತ್ಯವಶ್ಯ ವಿರುತ್ತದೆಂದು ಸರ್ವರಿಗೂ ಮನಗಾಣದಿದ್ದರೆ ನನ್ನ ಮುಖಂಡತ್ವವು ನಿರುಪಯೋಗಿಯಾಗುವದು ಶಾಂತ ಹಾಗೂ ಸತ್ಯವಾದ ಮಾರ್ಗದಿಂದ ಸ್ವರಾಜ್ಯವನ್ನು ದೊರಕಿಸುವದು ಶಕ್ಯವಿರುತ್ತದೆಂದು ನಂಬುವಂಥವರು ೧ ಕೋಟಿ ಜನರು ಈ ದೇಶದಲ್ಲಿ ಸಿಗುವರೋ ಹ್ಯಾಗೆ ಎಂಬದನ್ನು ಅರಿತುಕೊಳ್ಳಬೇಕು. ಸ್ವದೇಶೀ ವ್ರತದ ಪ್ರಸಾರಕ್ಕಾಗಿ ಹಣವನ್ನು ದೊರಕಿಸಲಿಕ್ಕೆಬೇಕು. ಟಿಳಕ ಸ್ಮಾರಕ ಸ್ವರಾಜ್ಯ ಫಂಡಿಗೆ ತಮ್ಮ ಉತ್ಪನ್ನದ ಒಂದು ನೂರಾಂಶ ದಷ್ಟಾದರೂ ಸ್ವಸಂತೋಷದಿಂದ ಕೊಡತಕ್ಕವರು ಎಷ್ಟು ಜನರಿರುವರೆಂಬದನ್ನು ತಿಳಿದುಕೊಳ್ಳಬೇಕು.

ಖಾದಿಯ ಪ್ರಸಾರ ರಾಟಿಗಳ ಪ್ರಸಾರಗಳ ಸಲುವಾಗಿ ನಾವು ನೀರಿನಂತೆ ಹಣವನ್ನು ವೆಚ್ಚ ಮಾಡಲಿಕ್ಕೆಬೇಕು. ನಾವು ಬಹಳ ದಿವಸಗಳಿಂದ ನಮ್ಮ ಅಸ್ಪೃಶ್ಯ ಬಾಂಧವರನ್ನು ಬಹು ಅನಾದರಿಸಿದ್ದೇವೆ ಅವರು ನಮ್ಮ ಗುಲಾಮಗಿರಿಯಲ್ಲಿ ಬಹಳ ದಿವಸ ಕಳೆದಿದ್ದಾರೆ ನಾವು ಈಗ ಅವರ ಸೇವೆಯನ್ನು ಮಾಡತಕ್ಕದ್ದು ಶರಾಬಿಂದಿಗಳ ಪಿಕೆಟಿಂಗದಿಂದ ಸಾಕಷ್ಟು ಲಾಭವಾಗದಿದ್ದರೂ ಅಲ್ಪಸ್ವಲ್ಪವಾದರೂ ಆದರೆ ಮನೆಮನೆಗೆ ಹೋಗಿ ವ್ಯಸನಾಧೀನರನ್ನು ಪರಾವರ್ತಗೊಳಿಸಲಿಕ್ಕೆ ಪ್ರಯತ್ನ ಮಾಡಬೇಕು. ಶರಾಬಿಂದಿಗಳನ್ನು ಯಾಕೆ ಕುಡಿಯುತ್ತಾರೆಂಬದನ್ನೂ ಅದಕ್ಕೆ ಬದಲಾಗಿ ಯಾವ ಪದಾರ್ಥವನ್ನು ಏರ್ಪಡಿಸಬೇಕೆಂಬದನ್ನೂ ಕುಡುಕರ ಸಂಖ್ಯೆಯನ್ನೂ ಗೊತ್ತು ಹಚ್ಚತಕ್ಕದ್ದು.

ಸಮಾಜ ಸೇವೆಯು ಬಹು ತಿರಸ್ಕರಿಸಲ್ಪಟ್ಟಿದೆ ಅಸಹಕಾರ ಚಳವಳಿಯು ಮಾತ್ಸರ್ಯ ಪ್ರೇರಿತವಾಗಲ್ಪಡಬಾರದ್ದರಿಂದ ಸಮಾಜ ಸೇವೆಯ ಕಾರ್ಯಕ್ರಮವನ್ನು ಅದರಲ್ಲಿ ಸೇರ್ಪಡಿಸುವದು ಅವಶ್ಯವಾದದ್ದು ಆಪತ್ತಿನಲ್ಲಿ ಮಿತ್ರರ ಹಾಗೂ ಶತ್ರುಗಳ ಸೇವೆಯನ್ನು ಏಕೀಭಾವದಿಂದ ಮಾಡತಕ್ಕದ್ದು. ಹೀಗೆ ಮಾಡುವದರಿಂದ ರಾಜಕೀಯ ವಿಷಯದಲ್ಲಿ ಮತಾಂತರವಿದ್ದರೂ ಎಲ್ಲರ ಗೂಢ ಸ್ನೇಹ ಭಾವವನ್ನು ಬೆಳೆಸಲಿಕ್ಕೆ ಸಮರ್ಥರಾಗುತ್ತೇವೆ.

ಯಂಗ ಇಂಡಿಯಾ.

ಮೋಹನದಾಸ ಕರಮಚಂದ ಗಾಂಧಿ.

# ಸ್ವದೇಶಿಯೂ ಖಾದಿಯೂ.

— ೪೦೪ —

'ಸ್ವದೇಶೀ' ಶಬ್ದವು ಅತಿಶಯ ಪರಿಚಿತವಾದದ್ದಿದೆ. ಈ ಶಬ್ದವು ವ್ಯಾಪಕವಾದದ್ದಿದೆ. ಇದರ ಪರಿಣಾಮವು ಹಿತಕರವಾಗಿಯೂ ಆಗಬಲ್ಲದು, ಹಾನಿಕಾರಕವಾಗಿಯೂ ಆಗಬಲ್ಲದು, ಸಮುದ್ರವು ವ್ಯಾಪಕವಾಗಿರುತ್ತದೆ. ಅದು ಹಾಗೆ ಇರದಿದ್ದರೆ ನಮಗೆ ಪ್ರಾಣವಾಯುವೆ ದೊರೆಯುತ್ತಿದ್ದಿಲ್ಲ. ಆದರೆ ಸಮುದ್ರವು ಅಗ್ನಿಯಂತೆ ಸರ್ವಭಕ್ಷಕ ವಿರುವದು. ಅಳತೆ ಇಲ್ಲದಷ್ಟು ಹೊಲಸು ನಿತ್ಯಶಃ ಅದರಲ್ಲಿ ಹೋಗಿ ಬೀಳುತ್ತದೆ ಆದಾಗ್ಯೂ ಅದು ವಿಶುದ್ಧವಾಗಿರುವದು ದಂಡೆಯನ್ನು ಬಿಟ್ಟು ಸ್ವಲ್ಪ ದೂರ ಹೋದರೆ ಅದರಲ್ಲಿಯ ನೀರು ಕಾಜಿನಂತೆ ಪಾರದರ್ಶಕವಾಗಿ ಕಾಣುವದು. ಸೂರ್ಯನ ಕಿರಣಗಳಿಂದ ಅದರಮೇಲಿನ ನೊರೆಯು ರತ್ನಮುತ್ತುಗಳಂತೆ ಲಕಲಕ ಹೊಳೆಯುತ್ತದೆ ಆದರೆ ರತ್ನಮುತ್ತುಗಳ ತೇಜವು ಅದರ ಸ್ವತಃದ ಬಳಿಯಲ್ಲಿ ಯಾವಾಗಲೂ ಇರುವದಿಲ್ಲ. ಸಮುದ್ರದ ತರಂಗಗಳಮೇಲೆ ನೌಕೆಗಳು ಕ್ರೀಡಿಸುತ್ತವೆ ಆದರೇನು? ಯಾವನಾದರೂ ನೀರಡಿಸಿ ಅದರನೀರನ್ನು ಕುಡಿದರೆ ತತ್ಕಾಲದಲ್ಲಿ ಶಾಂತಿಯಾಗದೆ ಇರದು. ಕುಡಿಯುವ ನೀರು ಬಾವಿಗಳಲ್ಲಿ ಕೆರೆಗಳಲ್ಲಿ ಸಣ್ಣಸಣ್ಣ ಝರಿಗಳಲ್ಲಿ ದೊರೆಯುತ್ತದೆ ಅಲ್ಲಿ ಅದು ಅತ್ಯಂತ ಸವಿಯಾಗಿರುತ್ತದೆ. ಅದರಂತೆ ಸ್ವದೇಶಿಯು ಸಮುದ್ರದಂತಿರುವ ಮಹಾಸಾಗರದಂತಿದ್ದು ಅದರ ಸಹಜ ಪಾಲನದಿಂದ ದೇಶವು ವಿಪತ್ತುಗಳಿಂದ ಮುಕ್ತವಾಗುತ್ತದೆ ವ್ಯಾಪ್ತಿಯಲ್ಲಿ ಆ ಶಬ್ದವು ಶೋಭಿಸುತ್ತದೆ. ಆದರೆ ಈಗಲೇ ನಾವು ಅದರಲ್ಲಿ ಹಾರಿಕೊಂಡರೆ ನಾವು ಮುಳುಗಿ ಹೋಗುವ ಸಂಭವವಿರುತ್ತದೆ. ಅದೀಗ ನಮ್ಮ ಅಳತಿಯೊಳಗಿನ ಮಾತಲ್ಲ.

ಸ್ವದೇಶಿಯ ಹೆಸರಿನಿಂದ ಕೆಲವರು ಹೇಳುವದೇನಂದರೆ ಸ್ವದೇಶೀ ಕೀಲಿಗಳನ್ನು ತಯಾರಿಸೋಣ ಮತ್ತು ಅವುಗಳನ್ನೇ ತೆಗೆದುಕೊಳ್ಳೋಣ; ರಾಜೇಸ ಚಾಕುವನ್ನು ಬಿಟ್ಟುಕೊಟ್ಟು ಬೆಣ್ಣೆ ಕೊಯ್ಯಲಿಕ್ಕೆ ಬಾರದಷ್ಟು ಮೊಂಡವಿದ್ದರೂ ಸ್ವದೇಶೀ ಚಾಕುವನ್ನೇ ಕೊಳ್ಳೋಣ, ಅಥವಾ ಹೊಸವುಗಳನ್ನು ನಿರ್ಮಿಸಲು ಯತ್ನಿಸೋಣ ಕೆಲವರಿಗೆ ಸ್ವದೇಶೀ ಕಾಗದಗಳು ಬೇಕು ಹಲವರಿಗೆ ಸ್ವದೇಶೀ ಮಶಿಯು ಬೇಕು, ಒಬ್ಬರಿಗೆ ಟಾಕುಗಳುಬೇಕು, ಮತ್ತೊಬ್ಬನಿಗೆ ಟಾಚಣಗಳು ಬೇಕು, ಹೀಗೆ ಪ್ರತಿಯೊಬ್ಬನು ತನ್ನ ಇಚ್ಛೆಗೆ ಬಂದ ಸ್ವದೇಶೀ ಪದಾರ್ಥಗಳನ್ನು ಬೇಡುವನು, ಮತ್ತು ತನಗೆ ಸರಿದೋರಿದ ಸ್ವದೇಶೀ ಭಾವನೆಯನ್ನು ಪೋಷಿಸುವನು. ಆದರೆ ಇದರಿಂದ ದೇಶದ ಕೆಲಸವು ಆಗದು ಇದರಿಂದ ದೇಶದ ಕೆಲಸವೂ ಹೆಸರೂ ಭ್ರಷ್ಟವಾಗುವವು.

ಮನೆಯನ್ನು ಕಟ್ಟುವ ಶಿಲ್ಪಿಯು ಆರಂಭದಿಂದಲೇ ಕಟ್ಟಿ ಕಿಂಡಿ, ಬಾಗಿಲ, ಚೌಕಟ್ಟು ಮುಂತಾದವುಗಳನ್ನು ತಯಾರಿಸುವ ಕೆಲಸದಲ್ಲಿ ತೊಡಗುವದಿಲ್ಲ. ಮೊದಲು ಅವನು ತಳ ಶೋಧಿಸುವನು, ಆಮೇಲೆ ಗೋಡೆಗಳನ್ನು ಕಟ್ಟುವನು ಮತ್ತು ಈ ಪ್ರಕಾರ ಮನೆಯನ್ನು ಕಟ್ಟುವದು ಮುಗಿದಮೇಲೆ ಗವಾಕ್ಷಿ ಮುಂತಾದ್ದನ್ನು ಮಾಡಿಕೊಳ್ಳುವನು. ಸ್ವದೇಶೀ ರಚನೆಯ ಕೆಲಸವಾದರೂ ಇದರಂತೆಯೇ ಇರುತ್ತದೆ

ಈಗ ನಮಗೆ ಸ್ವದೇಶೀಯ ನಿಜವಾದ ಮತ್ತು ವಿಶೇಷ ಅರ್ಥವ ತಿಳಿಯುವಷ್ಟು ನಾವು ಸ್ವದೇಶೀಯ ರಹಸ್ಯವನ್ನು ಬಲ್ಲವರಾಗಿರುವೆವು, ಅದರ ವ್ಯವಹಾರಿಕ ಉಪಯೋಗವು ನಮಗೆ ಗೊತ್ತಾಗಿರುವದು. ಸ್ವದೇಶೀಯ ಹೆಸರಿನಿಂದ ಈ ವರೆಗೆ ನಾವು ಅನೇಕಸಾರೆ ಮೋಸಹೋದೆವು ಮತ್ತು ಅದರ ಅರ್ಥದಲ್ಲಿ ಬದಲು ಮಾಡುತ್ತ ಬಂದೆವು ಸ್ವದೇಶೀಯೆಂದರೆ ಸ್ವದೇಶದಲ್ಲಿ ತಯಾರಾದ ಅರಿವೆಯೆಂದು ನಮ್ಮ ಮೊದಲನೇ ಅರ್ಥವಿತ್ತು' ಆದರೆ ಹಿಂದಿನಿಂದ ಪರದೇಶಿ ನೂಲಿನಿಂದ ದೇಶದಲ್ಲಿ ನೇಯ್ದ ಅರಿವೆಗಳು ನಿಜವಾದ ಸ್ವದೇಶಿ ಅರಿವೆಗಳಲ್ಲೆಂದೂ ಅದರಿಂದ ದೇಶಕ್ಕೆ ಆಗುವ ಲಾಭವು ಅತ್ಯಲ್ಪವಾದದ್ದೆಂದೂ ತಿಳಿದೆವು

ಮುಂದೆ, ದೇಶೀಗಿರಣಿಗಳಲ್ಲಿ ಹೊರಡುವ ನೂಲಿನಿಂದ ದೇಶೀಗಿರಣಿಗಳಲ್ಲಿ ತಯಾರಾಗುವ ಅರಿವೆಗಳು ಸ್ವದೇಶೀ ಅರಿವೆಗಳೆಂದು ಎರಡನೇ ಅರ್ಥ ಮಾಡಿಕೊಂಡೆವು ಆದರೆ ಇದು ನಿಜವಾದ ಅರ್ಥವಲ್ಲೆಂದು ನಮ್ಮ ಅನುಭವದಿಂದ ತಿಳಿದೆವು. ಈ ಅರ್ಥದ ಅನಿಷ್ಟವಾದ ಪರಿಣಾಮವೇನಾಯಿತೆಂದರೆ ಗಿರಣಿ ಅರಿವೆಗಳ ಬೆಲೆಯು ಮಿತಿಮೀರಿ ಬೆಳೆಯಿತು, ಇದಲ್ಲದೆ ಅರಿವೆಯು ಕೊಂತೆಯೂ ಹೆಚ್ಚಿತು.

ದೇಶೀ ಗಿರಣಿಯು ನೂಲಾದರೂ ಚಿಂತೆಯಿಲ್ಲ ಆದರೆ ಕೈಮಗ್ಗದ ಮೇಲೆ ನೇಯ್ದದ್ದಾಗಿರಬೇಕು ಈ ಬಗೆಯಾಗಿ 'ಸ್ವದೇಶೀ' ಶಬ್ದದ ಮೂರನೇ ಅರ್ಥವಾಯಿತು. ಇದರಿಂದಲೂ ನಮಗೆ ಸ್ವದೇಶಿಯ ಮರ್ಮವು ದೊರೆಯಲಿಲ್ಲ.

ಈಗ ನಾವು ನಾಲ್ಕನೇ ಅರ್ಥವನ್ನು ಮಾಡಿರುವೆವು. ಸ್ವದೇಶಿಯೆಂದರೆ ಕೈನೂಲಿನಿಂದ ಕೈಮಗ್ಗದ ಮೇಲೆ ಮಾಡಿದ ಅರಿವೆಯೇ ಇದರ ಹೊರತು ಉಳಿದದ್ದೆಲ್ಲ ಸಲ್ಲಾದದ್ದೂ ನಿರರ್ಥಕವಾದದ್ದೂ ಇರುತ್ತದೆ.

ಖಾದಿ ಎಂದರೆ ರಾಟಿಯು ರಾಟಿಯಿಲ್ಲದಿದ್ದರೆ ಖಾದಿಯಾಗುವದೆಂತು? ಖಾದಿಯು ಸ್ವರಾಜ್ಯದಂತೆ ನಮ್ಮ ಜನ್ಮಸಿದ್ಧವಾದ ಹಕ್ಕು ಇರುತ್ತದೆ. ಅದನ್ನೇ ಉಜನ್ನ ಉಪಯೋಗಿಸುವದು ನಮ್ಮ ಕರ್ತವ್ಯವು ಈ ಕರ್ತವ್ಯವನ್ನು ನಾವು ಪಾಲಿಸದಿದ್ದರೆ ಸ್ವರಾಜ್ಯದ ಅರ್ಥವೇ ನಮಗೆ ತಿಳಿದಿಲ್ಲೆಂದು ಹೇಳಬೇಕಾಗುತ್ತದೆ.

ಹಿಂದುಸ್ತಾನದ ಕ್ಷುಧೆಯಿಂದ ಪೀಡಿತರಾದ ಜನರ ಹೊಟ್ಟೆಯು ತುಂಬಬೇಕೆಂದೂ, ಹಿಂದುಸ್ಥಾನದೊಳಗಿಂದ ದುರ್ಭಿಕ್ಷೆಯು ಹೋಗಬೇಕೆಂದೂ, ಹಿಂದುಸ್ಥಾನದೊಳಗಿನ ಸ್ತ್ರೀಯರ ನೀತಿಯ ರಕ್ಷಣೆಯಾಗಬೇಕೆಂದೂ ಹಿಂದುಸ್ಥಾನದ ಬಾಲಕರಿಗೆ ಹಾಲಿನ ಗುಟುಕು ದೊರೆಯಬೇಕೆಂದೂ ಸ್ವದೇಶೀ ಇಲ್ಲವೆ ಸ್ವರಾಜ್ಯದ ಹೇತುವಿರುವದಲ್ಲವೇ? ಈ ಹೇತುವಲ್ಲದೆ ಇನ್ನೊಂದು ಹೇತು ಇಲ್ಲ.

ಎಲ್ಲಿಯವರೆಗೆ ಹಿಂದುಸ್ತಾನದಲ್ಲಿ ಪ್ರತಿಯೊಂದು ಮನೆಯಲ್ಲಿ ಒಲೆಯಂತೆ ರಾಟಿಯು ನೆಲೆಗೊಳ್ಳುವದಿಲ್ಲವೊ ಅಲ್ಲಿಯವರೆಗೆ ಅದು ಉಂಡುಟ್ಟು ಸುಖದಿಂದಿರಲಾರದು.

ಇಂದು ಹಿಂದುಸ್ತಾನವು ಸ್ವೇಚ್ಛೆಯಂತೆ ... ತಿರಸಬಲ್ಲದೆಂದು ತಿಳಿಯುವಾ ಹಿಂದುಸ್ತಾನಕ್ಕೆ ಹೊರಗಿನಿಂದ ಅತ್ಯಂತ ಅಗ್ಗವಾದ ಅರಿವೆಯನ್ನು ತರಿಸುವದೆಂದು ತಿಳಿಯುವಾ. ಹಿಂದುಸ್ತಾನವು ತನ್ನ ಮತ್ತು ವಿಲಾಯತಿಯ ಗಿರಣಿಗಳಲ್ಲಿರುವ ವಿರೋಧವನ್ನು ಲಕ್ಷಿಸದೆ ಮುಕ್ತದ್ವಾರದ ವ್ಯಾಪಾರ ಪದ್ಧತಿಯನ್ನು ಅನುಸರಿಸುವದೆಂದು ತಿಳಿಯುವಾ. ಇದರಿಂದೇನಾದರೂ ಹಿಂದುಸ್ತಾನದ ಸ್ಥಿತಿಯು ಈಗಿನ ಕಿಂತಲೂ ಒಳಿತಾಗುವದೋ? ಹೆಚ್ಚಿಗೆ ಕೆಡುತ್ತದೆಂಬ ಮಾತಿನಲ್ಲಿ ಸಂದೇಹವುಂಟೋ?

ಹಿಂದುಸ್ತಾನಕ್ಕೆ ಯಾರಾದರೂ ರೊಕ್ಕವಿಲ್ಲದೆ ಅಡಿಗೆ ಮಾಡಿ ಊಟಕ್ಕೆ ಹಾಕುವೆಂದು ಹೇಳಿದರೆ, ಅದು ತನ್ನಲ್ಲಿಯ ಯಾವತ್ತು ಒಲೆಗಳನ್ನು ಮುರಿದು, ಬಿಸಾಕಿದರೆ ಅದಕ್ಕೆ ಒಳಿತಾಗುವದೋ? ಎಂದಿಗೂ ಒಳಿತಾಗದು. ರಾಟಿಯ ಮಾತಾದರೂ ಅದರಂತೆಯೇ ಇರುತ್ತದೆ. "ಒಲೆಯ ಕೆಲಸಕ್ಕೆ ಎಷ್ಟು ಉಪಾಧಿಗಳು! ಮನೆಮನೆಗೆ ಒಲೆಯು ಮನೆಮನೆಯಲ್ಲಿ ಹೊಗೆಯು ಎಂಥ ಅನರ್ಥವಿದು? ಪ್ರಾತಃಕಾಲವಾದೊಡನೆಯೇ ಪ್ರತಿಯೊಬ್ಬ ಗೃಹಿಣಿಯು ಹೊಗೆ ನುಂಗುತ್ತ ಕೂಡಬೇಕು! ಎಂಥ ಅತ್ಯಾಚಾರವಿದು!" ಈ ಬಗೆಯ ಮೋಹಕವಾದ ಯುಕ್ತಿವಾದದಿಂದ ಮರುಳಾಗಿ ನಾವು ನಮ್ಮಲ್ಲಿಯ ಒಲೆಗಳನ್ನು ಮುರಿದೊಗೆದು ಊರೂರಿಗೆ ಒಂದೊಂದು ಭೋಜನ ಗೃಹವನ್ನು ಸ್ಥಾಪಿಸಿ ಎಲ್ಲರೂ ಅಲ್ಲಿಯೇ ಊಟಕ್ಕೆ ಹೋಗಹತ್ತಿದರೆ ಹಿಂದುಸ್ಥಾನದೊಳಗಿನ ಯಾವತ್ತು ಬಾಲಕರು ... ಹೊಟ್ಟೆಗಾಗಿ ಓಣಿಓಣಿ ತಿರುಗುತ್ತ ... ಗಬೇಕಾಗುವದೆಂಬ ಮಾತಿನಲ್ಲಿ ಯಾರಿಗಾದರೂ ಸಂದೇಹವುಂಟೋ? ಒಲೆಗಳ ನಾಶವು ಅರ್ಥಶಾಸ್ತ್ರವಲ್ಲ, ಅದು ಅನರ್ಥದ ... ತ್ತದೆ ಅದಕ್ಕೆ ಅರ್ಥ ಶಾಸ್ತ್ರವೆಂಬ ಹೆಸರು ಕೊಡಸಲ್ಲದು.

ರಾಟಿಯನ್ನು ನಾಶ ಗೊಳಿಸಿ ನಾವು ಹಸಿವೆಯನ್ನು ವ್ಯಭಿಚಾರವನ್ನೂ ನಮ್ಮ ಮನೆಗೆ ಕರೆತಂದವು. ಬಳಿಯನ್ನು ನಾಶ ಗೊಳಿಸಿದರಂತೂ ಕೇಳುವದೇನು? ವ್ಯಕ್ತಿತ್ವವು ನಷ್ಟ ಬಾಗಿಲಲ್ಲಿದೆ! ರಾಟಿಯನ್ನು ಪುನಃಪಿ ನೆಲೆಗೊಳಿಸಿದರೆ ಬೀಳಾದ ನಮ್ಮ ಮನೆಯು ಏಳುವದು ಮತ್ತು ಅದರಲ್ಲಿ ಸ್ವಲ್ಪಾವಧಿಯಲ್ಲಿಯೇ ಸುಖ ಶಾಂತಿಗಳ ನಲಿದಾಡುವವು.

( ಅಪೂರ್ಣ )

---

(ಹೋದ ಸಂಚಿಕೆಯ ೧೯೫ ನೇ ಪುಟದಿಂದ ಮುಂದೆ ಸಾಗಿದ್ದು.)

ಆದರೆ ಮುಂದೆ ಹಾಕುವ ನಿರ್ಣಯದ ವಿಷಯಕ್ಕೆಂದರೆ ನಾನು ಕ್ರಾನಿಕಲ್ ಪತ್ರದಲ್ಲಿ ಚೌರಿಚೌರಿದಂಗೆಯ ಬಗ್ಗೆ ಸಮಗ್ರ ವೃತ್ತಾಂತವನ್ನು ಓದಿದ ಮೇಲೆ ನಿರ್ಣಯಿಸಿದೆನು. ಕಾರ್ಯಕಾರೀ ಮಂಡಲದ ಸಭೆಯನ್ನು ಕರೆಯುವದಕ್ಕೆ ತಾರುಗಳನ್ನು ಬಾರಡೋಲಿಯಿಂದಲೇ ಕಳಿಸಿದೆನು ಮತ್ತು ಕಾರ್ಯಕಾರಿ ಮಂಡಲದ ಸಭಾಸದರಿಗೆ ಸವಿನಯ ಕಾಯಿದೇ ಭಂಗವನ್ನು ಮುಂದೆ ಹಾಕಬೇಕೆಂಬ ನನ್ನ ವಿಚಾರವನ್ನು ಪತ್ರದಿಂದ ತಿಳಿಸಿದ್ದು ಬಾರಡೋಲಿಯಿಂದಲೇ. ಪಂಡಿತಜಿಯವರ ಪತ್ರದಂತೆ ಆ ಮೇಲೆ ನಾನು ಮುಂಬಯಿಗೆ ಹೋದೆನು. ಪಂಡಿತಜಿಯವರು ಹಾಗು ಮಾಲವೀಯ ಪರಿಷತ್ತಿನ ಅವರ ಮಿತ್ರರು ಮುಂದೆ ಹಾಕುವದಕ್ಕೆ ನನ್ನ ಮನ ಒಲಿಸುವ ಕುರಿತು ಸಂಶಯವಾಗಿ ಉತ್ಕಟರಿದ್ದರು ಮತ್ತು ನಾನು ನನ್ನ ಸ್ವಂತ ಮನಸ್ಸು ಮುಂದೆ ಹಾಕುವದನ್ನು ನಿಶ್ಚಯಿಸಿದ್ದರೂ, ಕಾರ್ಯಕಾರೀ ಮಂಡಲದ ಸಭಾಸದರ ಗೂಢ ಕಾ ವಿಷಯದ ಸಂಪೂರ್ಣ ಪೃಚ್ಛಾಪೃಚ್ಛೆಯನ್ನು ಮಾಡುವ ಕುರಿತು ನನ್ನ ಮನಸ್ಸನ್ನು ನಿಷ್ಪಕ್ಷಪಾತವಾಗಿ ಮಾಡಿರುವೆನೆಂದು ಹೇಳಲಾಗಿ ಅವರಿಗೆ ಸಹರ್ಷ ಆಶ್ಚರ್ಯವಾಯಿತು. ಮುಂದೆ ಹಾಕಿದ್ದಕ್ಕೂ ಸಂಯುಕ್ತ ಪರಿಷತ್ತಿಗೂ ಒಪ್ಪಂದಕ್ಕೂ ಯಾವ ಸಂಬಂಧವಿಲ್ಲ ಸಂಯುಕ್ತ ಪರಿಷತ್ತು ವ್ಯರ್ಥವಾಗುವದೆಂದು ನನ್ನ ಅಭಿಪ್ರಾಯವದೆ. ದೇಶದೊಳಗಿನ ಪರಿಸ್ಥಿತಿಯನ್ನು ಕಂಡು ಹಿಡಿದು ಅದರ ನಿಜವಾದ ವರ್ಣನೆಯನ್ನು ಮಾಡಲಿಕ್ಕೆ ಲಾರ್ಡರೀಡಿಂಗರು ತೋರಿಸಿದಕ್ಕಿಂತ ಹೆಚ್ಚು ಸಾಮರ್ಥ್ಯವುಳ್ಳ ನ್ಯಾಯಿಸರಾಯರು ಬೇಕು ಪಂಡಿತಮಾಲವೀಯಜೀಯವರು ಈಗ ಚಳವಳಿಯಲ್ಲಿ ಸೇರಿರುವರೆಂದು ನನಗೆ ನಿಃ ಸಂದೇಹವಾಗಿ ಅನಿಸುತ್ತದೆ, ಅವರಿಗೆ ರಾಷ್ಟ್ರೀಯ ಸಭೆಯನ್ನಾಗಲಿ, ಗಂಡಾಂತರವನ್ನಾಗಲಿ ಬಿಟ್ಟು ದೂರ ಉಳಿಯುವದು ಶಕ್ಯವಿಲ್ಲ ಆದರೆ ಬಾರಡೋಲಿಯ ನಿರ್ಣಯವು ಕೇವಲ ಪರಿಸ್ಥಿತಿಯ ಮೇಲಿಂದಲೇ ಆಗಿರುವದು. ಚೌರಿಚೌರಾ ದಂಗೆಯಿಂದ ನನ್ನ ನಾಡಿಗಳು ಮಂದವಾಗದಿದ್ದರೆ ನನ್ನ ಮೊದಲಿನ ಉದ್ದೇಶವನ್ನು ನಾನೂ ಎಂದೂ ಬಿಡುತ್ತಿದ್ದಿಲ್ಲ

(೩) ನನ್ನ ಸ್ವಂತ ದೃಷ್ಟಿಯಿಂದ ಸಂಪೂರ್ಣ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದಕಿಂತ ಎಳ್ಳಷ್ಟಾದರೂ ಕಡಿಮೆ ಯಾದರೆ ನಾನು ತೃಪ್ತನಾಗಲಾರೆನು ಮತ್ತು ಖಿಲಾಫತ ಹಾಗು ಪಂಜಾಬದ ಅನ್ಯಾಯಗಳು ದೂರ ವಾಗದಿದ್ದರೆ ಸಂಪೂರ್ಣ ಸ್ವರಾಜ್ಯ ವಿಲ್ಲದೆ ನಾನು ಸಂತುಷ್ಟನಾಗಲಾರೆನು. ಆದರೆ ಸ್ವರಾಜ್ಯದ ನಿಜರೂಪವು ನನ್ನ ಮೇಲೆ ಅವಲಂಬಿಸಿಲ್ಲ ಅದರ ಬಗ್ಗೆ ಸಂಪೂರ್ಣ ನಿರ್ದಿಷ್ಟವಾದ ವಿಚಾರವೇನೂ ಇಲ್ಲ. ಜನರ ಪ್ರತಿನಿಧಿಗಳಿಂದ ಅದು ಗೊತ್ತು ಮಾಡಲ್ಪಡಬೇಕು.

(೪) ಸದ್ಯದ ಸ್ಥಿತಿಯಲ್ಲಿ ಒಪ್ಪಂದದ ಪ್ರಶ್ನವೇನೂ ಇಲ್ಲ ಆದ್ದರಿಂದ ಪಂಡಿತಜೀಯವರಾಗಲಿ ಇತರರಾಗಲಿ ಏನುಮಾಡುವರೆಂಬ ಪ್ರಶ್ನೆಯು ಅಯೋಗ್ಯವಿರದಿದ್ದರೂ ಅಪ್ರಾಸಂಗಿಕವದೆ. ಆದರೆ ಪಂಡಿತಜೀಯವರು ಪರಿಷತ್ತನ್ನು ಕೂಡಿಸಿ ನಾವು ಮಾಡಿದ ಠರಾವುಗಳನ್ನು ಸಂಚಾರದವರು ಹುಟ್ಟಿಸಿದರೆ, ಪಂಡಿತಜೀಯವರೂ ಇತರರೂ ಅಂಥ ಪ್ರಸಂಗಗಳಲ್ಲಿ ಎಲ್ಲ ಸ್ವಾಭಿಮಾನವುಳ್ಳ ಜನರು ಹೇಗೆ ವರ್ತಿಸುವರೋ ಅದರಂತೆಯೇ ನಡೆಯುವರು

(೫) ಬೇಕಾದಂಥ ಅತ್ಯಾಚಾರದ ಅಂಜಿಕೆಯಿದ್ದರೂ ನಾನು ಸವಿನಯ ಕಾಯಿದೆಭಂಗದ ವಿಚಾರವನ್ನು ಎಂದೂ ಬಿಡುವದಿಲ್ಲ ಆದರೆ ಅತ್ಯಾಚಾರವಾಗುವ ಭೀತಿಯಿದ್ದರೆ ನಾನು ಸಾಮುದಾಯಿಕ ಕಾಯಿದೆಭಂಗವನ್ನು ಪ್ರಾರಂಭಿಸುವ ವಿಚಾರವನ್ನು ಬಿಟ್ಟು ಕೊಡುವೆನು. ವ್ಯಕ್ತಿಗತ ಸವಿನಯ ಕಾಯಿದೆಭಂಗದ ಮಾತು ಬೇರೆ.

(೬) ಸ್ವಯಂ ಸೈನಿಕ ಪಥಕವನ್ನು ಮುರಿಯುವ ಪ್ರಶ್ನೆಯೇ ಇಲ್ಲ. ಆದರೆ ರಾಷ್ಟ್ರೀಯ ಸಭೆಯ ಪ್ರತಿಜ್ಞೆಯಂತೆ ಯಾರು ನಡೆಯುವದಿಲ್ಲವೋ ಅವರ ಹೆಸರುಗಳನ್ನು ನಾವು ಪ್ರಾಮಾಣಿಕರಿರಬೇಕಾದರೆ, ನಿಜವಾಗಿ ತೆಗೆದು ಹಾಕಬೇಕು

(೭) ಶಾಂತತೆಯ ಮುಖ್ಯ ಅಂಗಗಳು ನಮಗ ತಿಳಿದಿದ್ದರೆ ಸಾರ್ವತ್ರಿಕ ಅತ್ಯಾಚಾರವು ಒದಗಿತೆಂದರೆ ಮತ್ತು ನನ್ನ ಮತದಂತೆ ಚೌರಿಚೌರಾದ ಅತ್ಯಾಚಾರವು ನಮ್ಮ ಕೆಲಸಕ್ಕೆ ಸಾರ್ವತ್ರಿಕವದೆ ಸಾಮುದಾಯಿಕ ಕಾಯಿದೆಭಂಗವು ತನ್ನಷ್ಟಕ್ಕೆತಾನೆ ನಿಲ್ಲುವದೆಂಬುವ ಒಂದೇ ನಿರ್ಣಯವನ್ನು ನಾವು ಮಾಡುತ್ತೇವೆ ದೇಶದ ಉಳಿದ ಎಲ್ಲ ಭಾಗಗಳು ಶಾಂತತೆಯ ಮಂತ್ರವನ್ನು ಉದಾರತನದಿಂದ ಸ್ವೀಕರಿಸಿದ್ದು ಒಳ್ಳೇದು ಆದರೆ ಒಬ್ಬ ಮನುಷ್ಯನು ಅಗ್ನಿ ಮಾಡಲಾಗಿ ಇಲ್ಲವೆ ಗೊಂದಲ ಹಾಕಲಾಗಿ ಅತ್ಯಂತ ಶಾಂತವಾದ ಸಭೆಗೆ ಕೂಡ ಹೇಗೆ ಅಡ್ಡಿಯಾಗುವದೋ ಅದರಂತೆಯೇ ಸಾಮುದಾಯಿಕ ಕಾಯದೇ ಭಂಗವನ್ನು ಇಂಥ ಪ್ರಸಂಗದಲ್ಲಿ ಮುಂದೆ ನಡಿಸುವದು ಒಳಿತಲ್ಲ. ಸಾಮುದಾಯಿಕ ಕಾಯಿದೇ ಭಂಗವು ಯಶಸ್ವಿಯಾಗಬೇಕಾದರೆ ಶಾಂತತಯ ವಾತಾವರಣವು ಬೇಕು ಅದನ್ನು ಒಂದೇ ಸಣ್ಣ ಕ್ಷೇತ್ರಕ್ಕೆ ನಿರ್ಬಂಧಿಸುವದರ ಕಾರಣವು ಉಳಿದ ಭಾಗಗಳಲ್ಲಿ ಅತ್ಯಾಚಾರಗಳನ್ನು ತಡೆಯಲಿಕ್ಕೆ. ಆದ್ದರಿಂದ ಒಂದು ವಿಶಿಷ್ಟ ಕ್ಷೇತ್ರದಲ್ಲಿ ಸಾಮುದಾಯಿಕ ಕಾಯಿದೇ ಭಂಗವು ಶಕ್ಯವಾಗಬೇಕಾದರೆ ಉಳಿದ ಎಲ್ಲ ಕ್ಷೇತ್ರಗಳು ಶಾಂತವಾಗಿ ಉಳಿದು ಆ ಕ್ಷೇತ್ರಕ್ಕೆ ಕೇವಲ ಸಹಾಯವನ್ನು ಮಾಡಲಿಕ್ಕೆ ಬೇಕು.

(ಯಂಗ ಇಂಡಿಯಾ)

ಮೊ. ಕ. ಗಾಂಧೀ

ಕನ್ನಡ ಬಾಲ ಬಾಲಿಕೆಯರಿಗೂ ಪ್ರೌಢರಿಗೂ ಮನೋರಂಜನ-ಜ್ಞಾನಾಭಿವೃದ್ಧಿಗೂ
ಕಾರಣವಾದ ಅತ್ಯುಪಯುಕ್ತ ಹಾಗು ಸುಲಭ ಭಾಷೆಯುಳ್ಳ

# ಬಾಲಮಿತ್ರ

ಎಂಬ ಮಾಸಿಕ ಪುಸ್ತಕವು ಜನವರಿ (೧೯೨೦) ಯಿಂದ ಒಳ್ಳೇ ನಿಯಮಿತ
ವಾಗಿ ಹೊರಡುತ್ತಿರುವದು ಇದುವರೆಗೆ ೧೨ ಚರಿತ್ರೆಗಳು ೧೨ ಖಂಡಗಳು ೧೭
ಚಲೋ ಕತೆಗಳು; ೧೨ ಐತಿಹಾಸಿಕ, ೯ ಶಾಸ್ತ್ರೀಯ ಸಂಗತಿಗಳು ೯ ನಿಬಂಧಗ
ಳು ಇದಲ್ಲದೆ ಪ್ರತಿ ಸಾರೆ ನಗೆ ಮಾತು ತಿಂಗಳ ಸುದ್ದಿ ಒಟ್ಟು ಕೂಡಿ ಪೃಷ್ಠಗಳು
೬೦ ವವು. ಇಂಥ ಉಪಯುಕ್ತ ಹಾಗೂ ಕಡಿಮೆ ಬೆಲೆಯ ಮಾ. ಪು ವು ಬೇರೊಂ
ದಿಲ್ಲ ಬೇಗ ಹೊಸ ವರ್ಷದ ಚಂದಾದಾರರಾಗಿರಿ

ವಾರ್ಷಿಕ ಚಂದಾ ೧-೮-೦ (ಟಪಾಲ ಸಹಿತ)

ವಿಳಾಸ:— ವ. ಮ. ಶೆಟ್ಟಿ ಹೆಡ ಮಾಸ್ತರ ಸ್ಕೂ
ಟ್ರೇನಿಂಗ ಕಾಲೇಜ ಧಾರವಾಡ.

## ವೀರ ವಿಲಾಸಿನಿ.

ಹಾಸ್ಯ ಪ್ರಧಾನವಾದ ಅದ್ಭುತ ವಿಷಯ ಪ್ರಕಾಶಕವಾದ, ಗಂಭೀರ ಗ
ರ್ಭಿತವಾದ ಕನ್ನಡ ವಾರ ಪತ್ರಿಕೆ! ಜನೇವರಿ ತಿಂಗಳಲ್ಲಿ ಆರಂಭ
ವಾಗಿರುವದು. ಆ ಅವಧಿಯೊಳಗಾಗಿ ಹೆಸರುಗಳನ್ನು ಕೊಟ್ಟವರಿಗೆ ಧರ್ಮಾರ್ಥವಾಗಿ
ಪಕ್ಷ ಕಾಲ ಪತ್ರಿಕೆಯನ್ನು ಕಳುಹಿಸುತ್ತಿರುವೆವು. ಯಾರಿಗೂ ವ್ಹಿ. ಪಿ. ಇಲ್ಲ ಇಷ್ಟ
ಸ್ವಲ್ಪವಾದ ವಾರ್ಷಿಕ ಚಂದಾ ೧-೧೨ —ಗೆ ಪತ್ರಿಕೆಯು ಬಲು ಅಂದವಾಗಿ ಆ ಮು
ದ್ರಿತವಾದ ಪ್ರಸಿದ್ಧವಾದ "ಸಕಲಿಯು" ಪತ್ರಿಕೆ!!

ವಿಳಾಸ— ಮ್ಯಾನೇಜರ್ ವೀರ ವಿಲಾಸಿನಿ.
ನಂ. ೧೦೪ ೪ ನೇ ಮೇನ ರೋಡು ಮಾರಾಟ ಪೇಟೆ
ಬೆಂಗಳೂರ ಸಿಟಿ.

ಕನ್ನಡಿಗರೇ!! ಓದಿರಿ ಆಶ್ರಯ ಕೊಡಿರಿ.

## ಗದಗಿನಲ್ಲಿ

ಸಾಮಾಜಿಕ, ರಾಜಕೀಯ, ನೈತಿಕ, ಧಾರ್ಮಿಕ. ವಿಷಯಗಳನ್ನು ಪ್ರತಿಪಾದಿಸುವ

# ಕರ್ನಾಟಕ ಸಿಂಹ.

| ವರ್ಗಣಿ ಸ್ಥಳೀಕರಿಗೆ ರೂ. ೩-೦-೦ | ಎಂಬ ಕನ್ನಡ ವಾರಪತ್ರಿಕೆಯು. | ವರ್ಗಣಿ ಪರಸ್ಥ ಳದವರಿಗೆ ಅಂಚೆ ವೆಚ್ಚ ಸಹಿತ ರೂ. ೩-೧೨-೦ |
| --- | --- | --- |

ಇವತ್ತಿನಿಂದ ಮೂರು ತಿಂಗಳ ಬಳಿ ಹೊರಗೆ ಹೊರಡುವದು ಮೇಲೆ ವಿವ
ರಿಸಿದ ವಾರ ಪತ್ರಿಕೆಯು ಬಾಲ್ಯದಿಂದ ಭಾಷಾ ಸೇವೆಯನ್ನು ಮಾಡುತ್ತಿದ್ದ ಹಾ
ಗೂ ಮೈಸೂರ ಮತ್ತು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಬಹು ಮಾ
ನಗಳನ್ನು ಪಡೆದ ಮಿ॥ ಅಚ್ಯುತರಾವ ಕೃಷ್ಣರಾವ ಶಾನಭಾಗರೊಳ ಇವರ ಸಂ
ಪಾದಕತ್ವದ ಕೆಳಗೆ ನಡೆಯಿತು ಇದಲ್ಲದೆ, ಅಬಾಲ ವೃದ್ಧರಿಗೆ ಸಹ ತಿಳಿಯುವಂಥ ತಿಳಿ
ಗನ್ನಡ ಭಾಷೆಯಲ್ಲಿ ಒರೆದ ಲೇಖಗಳನ್ನು ಇದರಲ್ಲಿ ಕೊಡುವೆವು. ಗ್ರಾಹಕರು ತ
ಮ್ಮ ಸಂಪೂರ್ಣ ಹೆಸರನ್ನು ಕೆಳಗಿನ ವಿಳಾಸಕ್ಕೆ ಒರೆದು ಕಳಿಸಬೇಕಾಗಿ ನಮ್ಮ ಸ
ವಿನಯ ವಿನಂತಿ ಇರುತ್ತದೆ

ವಿಳಾಸ:—ಶಾಂತಪ್ಪಾ ಶಿವಯೋಗೆಪ್ಪಾ ಬಲಗುಂದಿ
ಮಹಾಲಕ್ಷ್ಮೀ ಸೈಮನ ಪ್ರೆಸ್ ಗದಗ, ಜಿಲ್ಹಾ ಧಾರವಾಡ.

# ಉತ್ತಮ ಆಯುರ್ ಔಷಧಗಳು.

## ಸುವರ್ಣರಾಜವಂಗ ತೊಲಿ ೧. ರೂ. ೫.

| | | |
| --- | --- | --- |
| ಮಕ್ಕರಧ್ವಜ | ತೊಲಿ | ರೂ. ೪ |
| ಪ್ರವಾಳ | ,, | ರೂ. ೩ |
| ಚಂದ್ರಪ್ರಭಾ | ,, | ರೂ ೧ |
| ಲಘು ಮಾಲಿನಿ ವಸಂತ | ,, | |
| ಅಮೃತ ಸತ್ವ | ,, | ಆಣೆ ೮ |
| ಕಾಯುರ್ವೇದ ವಾಸಕ | ಔಂಸ ೪ | ರೂ. ೧ |
| ಬ್ರಾಹ್ಮೀ ಸಾರ ರಸ | ,, | ರೂ. ೧. |
| ಪಾಚಕ ವಟಿ | ನೂರಕ್ಕೆ | ರೂ ೧। |
| ನ್ಯರು ವಿರೋಧಕವಟಿ | ,, | ಆಣೆ ೮ |
| ಸಿತೋಪಲಾದಿ ಚೂರ್ಣ | ೧೦ ತೊಲಿ | ರೂ. ೧ |

ಇದಲ್ಲದೇ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಯಾವತ್ತು ಔಷಧಗ
ಳು ಇಲ್ಲಿ ಸುಲಭ ದರದಿಂದ ಸಿಗುವವು.

Karnatak "Ayurvedic" Phar-maceutical Works.
Bagalkot. Dt. Bijapur.

ಸಂಬರಗಿ ಸೇ ... ವಾಡೆ
ಎಜ.ಟಪು ಬೇಳಾ. ... ಬೇಳ

# ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾಗಿ ... ಶು
ದ್ಧ ನೀಲಗಿರಿ ತೈಲವು ... ವ್ಯಾಪಾ
ರಸ್ಥರಿಗೆ ಬಹಳೇ ಸೋವಿ ದರದಲ್ಲಿ ತೈಲ
ವು ಸಿಗುವದು. ಸಿಕ್ಕಿ ... ತೈಲದ
ಬಾಟ್ಲಿ ಅಥವಾ ... ರೂಪಾಯಿ
... ಪೂರ್ತಿ ಮಾಹಿತಿ ಮ
ಕ್ರಿದ್ದಾರೆ.

ಬಿ ಪಿ ಕೈ ಕಂಪನಿ ಪೊ. ಹೊನ್ನಾವರ
ಜಿಲ್ಲಾ ಉತ್ತರ ಕಾನಡಾ.

ಹೊಸ ಪುಸ್ತಕ! ... ಓದಿರಿ!!

... ] ವಿದ್ಯಾರ್ಥಿ ಸಂಗ್ರಹ [ ...

ಈ ಪುಸ್ತಕದಲ್ಲಿ ... ಅತ್ಯುತ್ತಮವಾದ
ಲೇಖಗಳು ... ಸುಂದರವಾದ ಮುದ್ರಣ
ಸ್ಫೂರ್ತಿದಾಯಕವಾದ ಭಾಷೆ, ಬೆಲೆ ಸ್ವಲ್ಪ,
ಪ್ರತಿಗಳು ಸ್ವಲ್ಪವೇ ಇರುವವು. ಒರೇ ...
ಆನೆ ಸ್ಟ್ಯಾಂಪನ್ನು ಕಳಿಸುವವರಿಗೆ ಬುಕ್
ಪೋಸ್ಟಿನಿಂದ ಈ ಪುಸ್ತಕವನ್ನು ರವಾನಿಸು
ವೆವು.

ಪತ್ತೆ:- ವ್ಹಿ. ಎಸ್. ಸಂಗ್ಮೆಶೇಣವಿ
ಪೋಸ್ಟ ಯಲ್ಲಾಪೂರ. ಜಿಲ್ಹಾ ಕಾರವಾರ.

ಈ ಪತ್ರವನ್ನು ಮಿ॥ ಗುಂಡೋ ರಾಮಚಂ
ದ್ರ ಮುನ್ನೂರಕರ ಇವರು ಕನ್ನಡ ವಿಜಾಪುರ
ಗ್ರಾಮಾಧಿಕಾರೀ ಮುದ್ರಾಲಯದಲ್ಲಿ ಮುದ್ರಿ
ಸಿ ಮಾಲಕ ಶ್ರೀನಿವಾಸ ರಾಘೋರಾವ ಮುಂಗ
ರವಾಡೀ ಬಾಗಲಕೋಟೆ ಇವರಗೋಸ್ಕರ ವಿ
ಜಾಪೂರದಲ್ಲಿ ಪ್ರಸಿದ್ಧ ಪಡಿಸಿದರು.

ಮಹಾತ್ಮರ ಜಬಾನಿಯು.

ವಾರ್ಷಿಕ ವರ್ಗಣಿ ರೂ. ೪-೦-೦
೬ ತಿಂಗಳಿಗೆ ,, ೨-೦-೦
೧ ಸಂಚಿಕೆ ೦-೧-೩
ಮಾದರಿ ಸಂಚಿಕೆ ಬೇಕಾದವರು
೧-೬ ತಿಕೀಟ ಕಳಿಸಬೇಕು.

REGISTERED NoB 1589.

ಜಾಹೀರಾತಿನ ದರ.

'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂಪಾಯಿ ಕಾಯಮ ಜಾಹೀರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಶ್ರೀ.

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ'ಗಳನ್ನು ಭಾಷಾಂತರಿಸುವದೇ ಈ ವಾರ ಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟ ಫಾಲ್ಗುಣ ವ॥ ೧೦ ಶಕೆ ೧೮೪೩. ಗುರುವಾರ ತಾ. ೨೩ನೇ ಮಾರ್ಚ ೧೯೨೨ ಇಸ್ವಿ. | ಸಂಚಿಕೆ ೧೨

## ಕನ್ನಡ ನವಜೀವನದ ಹೊಸ ವ್ಯವಸ್ಥೆಯು.

ಮಹಾತ್ಮಾ ಗಾಂಧಿಯವರಿಗೆ ಶಿಕ್ಷೆಯಾಯಿತು. ಕನ್ನಡ ನವಜೀವನವು ಇನ್ನು ಮೇಲೆ ಬಂದು ಬೀಳಬಹುದು. ಆ ಮೇಲೆ ನಮ್ಮ ಚಂದಾ ಹಣದ ವಿಚಾರವೇನೆಂದು ಚಂದಾದಾರರು ಕೇಳಬಹುದು. ಆದರೆ ಈ ಬಗೆಯ ಸಂಶಯಗಳನ್ನು ಚಂದಾದಾರರು ಹಿಡಿಯುವ ಪ್ರಸಂಗವನ್ನು ನಾವೇನೂ ಉಂಟು ಮಾಡುವದಿಲ್ಲ ಮಹಾತ್ಮರನ್ನು ಹಿಡಿದೊಯ್ದರೂ ಮಹಾತ್ಮರ ತೇಜಃಪುಂಜವಾದ ಲೇಖಗಳು ಇದ್ದೇ ಇರುತ್ತವೆ. ಮೇಲಾಗಿ 'ಯಂಗ ಇಂಡಿಯಾ "ನವಜೀವನ" ಪತ್ರಿಕೆಗಳೂ ನಡೆಯುತ್ತವೆ ಅಂದ ಮೇಲೆ ಕನ್ನಡ ನವಜೀವನದ ಬಗ್ಗೆ ಸಂಶಯಗೊಳ್ಳಲು ಆಸ್ಪದವೆಲ್ಲಿ?

ಬಹಳಾದರೆ ಸರಕಾರದವರು ಕನ್ನಡ ನವಜೀವನದ ಸಂಪಾದಕರನ್ನು ಸೆರೆಮನೆಗೆ ಕಳಿಸಬಹುದು. ಒಬ್ಬರು ತುರಂಗಕ್ಕೆ ತೆರಳಿದರೆ ಅವರ ಹಿಂದೆ ಮತ್ತೊಬ್ಬರು ಸಿದ್ಧರಾಗಿಯೇ ಇರುವರು ಆದ್ದರಿಂದ ಚಂದಾ ಹಣದ ವಿಷಯದಲ್ಲಿ ಕಿಂಚಿತ್ತಾದರೂ ಸಂಶಯವು ಇರಕೂಡದು.

'ಯಂಗ ಇಂಡಿಯಾ' 'ನವಜೀವನ'ಗಳ ಹಿಂದಿನ ಎರಡು ವರ್ಷದ ಎಲ್ಲ ಸಂಚಿಕೆಗಳನ್ನು ನಾವು ಸಂಗ್ರಹಿಸಿದ್ದೇವೆ ಮಹಾತ್ಮರ ಹಿಂದಿನ ಲೇಖಗಳಾದರೂ ಈ ಹೊತ್ತೇ ಬರೆದ ಲೇಖಗಳಂತೆ ಸತ್ವಯುಕ್ತವಾಗಿವೆ ಅವರ ತೇಜಸ್ವಿ ಲೆಕ್ಕಣಿಕೆಯಿಂದ ಬರಿಯಲ್ಪಟ್ಟ ಪ್ರತಿಯೊಂದು ಲೇಖವೂ ಸತ್ಯ, ಸ್ವಾರ್ಥತ್ಯಾಗ, ಅಹಿಂಸಾ, ವೀರ್ಯ, ಶೌರ್ಯ, ಮೊದಲಾದ ಅಮೌಲ್ಯ ಸದ್ಗುಣಗಳಿಂದ ತುಂಬಿ ತುಳುಕುತ್ತವೆ ಅವರ ತಪಶ್ಚರ್ಯದ ಪ್ರಭಾವವೇ ಅಷ್ಟೊಂದು ಮಹತ್ವದ್ದಿರುತ್ತದೆ. ಆದುದರಿಂದ ಅವರ ಹಿಂದಿನ ಲೇಖಗಳನ್ನು ಇನ್ನು ಮೇಲೆ ಕನ್ನಡಿಸುತ್ತ ಹೋಗುವೆವು ಅಲ್ಲದೇ ಯಂಗ ಇಂಡಿಯಾ ನವಜೀವನಗಳೂ ಪ್ರತಿವಾರ ಹೊರಟೇ ಹೊರಡುತ್ತವೆ. ಅವುಗಳಲ್ಲಿಯ ಮಹತ್ವದ ಲೇಖಗಳನ್ನೂ ಕನ್ನಡಿಸುವೆವು ಮೇಲಾಗಿ ಸ್ವತಂತ್ರ ಲೇಖಗಳನ್ನೂ ಹೊಸ ಹೊಸ ಸುದ್ದಿಗಳನ್ನೂ ಕರ್ನಾಟಕಕ್ಕೆ ಸಂಭಂಧಿಸಿದ ವಿಶಿಷ್ಟ ಪ್ರಶ್ನೆಗಳ ಚರ್ಚೆಯನ್ನೂ ಸಹ ಕನ್ನಡ ನವಜೀವನದಲ್ಲಿ ಇನ್ನು ಮೇಲೆ ಸೇರಿಸುವೆವು.

ಹೀಗಾಗಿ ಕನ್ನಡ ನವಜೀವನದ ಉದ್ದೇಶದಲ್ಲಿ ಮೂರು ಭಾಗಗಳನ್ನು ಕಲ್ಪಿಸಿದ್ದೇವೆ.

೧ ಮಹಾತ್ಮಾ ಗಾಂಧಿಯವರ ಹಿಂದಿನ ಲೇಖಗಳನ್ನು ಕನ್ನಡಿಸುವದು.

೨ ಯಂಗ ಇಂಡಿಯಾ ನವಜೀವನಗಳಲ್ಲಿ ಪ್ರತಿವಾರ ಪ್ರಸಿದ್ಧವಾಗುವ ಲೇಖಗಳಲ್ಲಿ ಮಹತ್ವವಾದವುಗಳನ್ನು ಕನ್ನಡಿಸುವದು.

೩ ಬೇರೆ ಬೇರೆ ವಿಷಯಗಳ ಮೇಲೆ ಸ್ವತಂತ್ರ ಲೇಖಗಳನ್ನೂ ಹೊಸ ಹೊಸ ಸುದ್ದಿಗಳನ್ನೂ ಪ್ರಸಿದ್ಧಿಸುವದು ಕರ್ನಾಟಕದ ವಿಶಿಷ್ಟ ಪ್ರಶ್ನೆಗಳನ್ನು ಚರ್ಚಿಸುವದು.

ಈ ಉದ್ದೇಶಗಳಲ್ಲಿ ಏನಾದರೂ ಹೆಚ್ಚು ಕಡಿಮೆ ಮಾಡತಕ್ಕದ್ದೆಂದು ನಮ್ಮ ವಾಚಕರಿಗೆ ಅನಿಸಿದ ಪಕ್ಷದಲ್ಲಿ ಅವರು ತಮ್ಮ ಸೂಚನೆಗಳನ್ನು ಅವಶ್ಯವಾಗಿ ನಮಗೆ ಶೀಘ್ರದಲ್ಲಿ ಬರೆದು ತಿಳಿಸಬೇಕು. ಆ ಸೂಚನೆಗಳು ಯೋಗ್ಯವಿದ್ದರೆ ಅವುಗಳನ್ನು ನಾವು ಆನಂದದಿಂದ ಸ್ವೀಕರಿಸುವೆವು.

ಕನ್ನಡ ನವಜೀವನದ ಬಗ್ಗೆ ಇನ್ನೊಂದು ಆನಂದದ ಸಂಗತಿಯನ್ನು ನಾವು ವಾಚಕರಿಗೆ ಅರುಹದೇ ಇರಲಾರೆವು. ಇಷ್ಟು ದಿವಸಗಳ ವರೆಗೆ ಕನ್ನಡ ನವಜೀವನವು ಶ್ರೀಯುತ ಮಂಗಳವೇಢೇ ಶ್ರೀನಿವಾಸರಾಯರ ಸ್ವಂತ ಮಾಲಕಿಯಲ್ಲಿದ್ದಿತು ಆದರೆ ಈಗ್ಗೆ ಒಂದು ವ್ಯವಸ್ಥಾಪಕ ಮಂಡಲವನ್ನು ಸ್ಥಾಪಿಸಿ ಅವರ ವಶಕ್ಕೆ ಈ ಪತ್ರವು ಕೊಡಲ್ಪಟ್ಟದೆ ಈ ವರೆಗೆ ಒಬ್ಬರೇ ಲೇಖಗಳನ್ನು ಬರೆಯುವವರು ಅವರೇ ಹಾಳೆ ಕಾಗದಗಳನ್ನು (ಪ್ರೂಫ) ಪರೀಕ್ಷಿಸುವವರು ಅವರೇ ಮನಿಯಾರ್ಡರ ಸ್ವೀಕರಿಸುವವರು ಸ್ವಲ್ಪದರಲ್ಲಿ ಹೇಳಬೇಕಾದರೆ ಆಳುಮಗನ ಕೆಲಸವನ್ನೂ ಕಾರಕೂನನ ಕೆಲಸವನ್ನೂ ಸಂಪಾದಕರ ಕೆಲಸವನ್ನೂ ಒಬ್ಬರೇ ನೋಡಬೇಕಾಗುತ್ತಿತ್ತು. ಆದ್ದರಿಂದ ಒಂದೇ ವ್ಯಕ್ತಿಗೆ ಬಹಳೇ ತ್ರಾಸವಾಗಿ ಯಾವ ಕೆಲಸವು ಸಮಾಧಾನಕರವಾಗಿ ಆಗುತ್ತಿರಲಿಲ್ಲ. ಆದ್ದರಿಂದ ನಮ್ಮ ಚಂದಾದಾರರು ಈ ನಾಲ್ಕು ತಿಂಗಳ ಅವಧಿಯಲ್ಲಿ ಅನೇಕ ಬಗೆಯ ತೊಂದರೆಗಳಿಗೆ ಈಡಾಗಬೇಕಾಯಿತು, ಅವ

ಕ್ಕಾಗಿ ಚಂದಾದಾರರು ನಮ್ಮನ್ನು ಕ್ಷಮಿಸಬೇಕೆಂದು ಪ್ರಾರ್ಥನೆಯಿದೆ. ಸಂಪಾದಕ ದೃಷ್ಟಿಯಿಂದ ನಾವಾದರೂ ಮನಃಪೂರ್ವಕವಾಗಿ ಎಲ್ಲ ಚಂದಾದಾರ ಆಭಾರವನ್ನು ಮನ್ನಿಸುತ್ತೇವೆ.

ಮೇಲೆ ಹೇಳಿದ ಕನ್ನಡ ನವಜೀವನ ಮಂಡಲದವರು ಒಂದು ಸ್ವತಂತ್ರವಾದ ಮುದ್ರಾಮಂದಿರವನ್ನು ಕೊಂಡಿದ್ದಾರೆ. ಈ ಮಂದಿರದ ಪ್ರಾರಂಭಮಹೋತ್ಸವವು ನಾಳಿನ ಚೈತ್ರ ಶುದ್ಧ ಪ್ರತಿಪದೆಯಲ್ಲಿ ನೆರವೇರುವದು. ಆ ಮೇಲೆ ಕನ್ನಡ ನವಜೀವನವೂ ಅಲ್ಲಿಯೇ ಮುದ್ರಿಸಲ್ಪಡುವದು ಈಗ್ಯೆ ವಿಜಾಪೂರದಲ್ಲಿ ಮುದ್ರಿಸಿ ಅಲ್ಲಿಯೇ ಪ್ರಸಿದ್ಧವಾಗುತ್ತದೆ, ಇನ್ನು ಮೇಲೆ ಬಾಗಲಕೋಟೆಯಲ್ಲಿ ಸ್ವತಂತ್ರ ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟು ಅದು ಬಾಗಲಕೋಟೆಯಲ್ಲಿಯೇ ಪ್ರಸಿದ್ಧಸಲ್ಪಡುವದು. ವಿಜಾಪೂರದಿಂದ ಬಾಗಲಕೋಟೆಗೆ ತೆಗೆದುಕೊಂಡು ಹೋಗಿ ಅಲ್ಲಿ ಎಲ್ಲ ತರದ ಹೊಸ ವ್ಯವಸ್ಥೆಯನ್ನು ಮಾಡಬೇಕಾಗುವದರಿಂದ ಕದಾಚಿತ್ ಒಂದೆರಡು ವಾರಗಳ ವರೆಗೆ ಕನ್ನಡ ನವಜೀವನವು ಬಂದು ಬೀಳುವ ಪ್ರಸಂಗವು ಬಂದದ್ದೇ ಆದರೆ ಚಂದಾದಾರರು ದಯವಿಟ್ಟು ಕ್ಷಮಿಸಬೇಕು. ಆ ಪ್ರಸಂಗವು ಬಾರದಂತೆ ನಾವು ಜಾಗ್ರತರಾಗಿದ್ದೇವೆ. ಆದರೂ ಪ್ರಸಂಗವಶಾತ್ ಅದು ಸಂಭವಿಸಿದ್ದೇ ಆದರೆ ಸಹಿಷ್ಣುತೆಯಿಂದ ನಮ್ಮನ್ನು ಕ್ಷಮಿಸಬೇಕೆಂದು ವಿನಂತಿಯದೆ.

ಸಂಪಾದಕ.

## ನೈರಾಶ್ಯ.

ಸವಿನಯ ಭಂಗವನ್ನು ನಿಲ್ಲಿಸಿದ್ದರಿಂದ ಜನರಲ್ಲಿ ನೈರಾಶ್ಯವು ಉತ್ಪನ್ನವಾಗಿರುವದು ಈ ನೈರಾಶ್ಯಕ್ಕೆ ಎರಡು ಅರ್ಥಗಳಾಗಬಹುದು. ೧ ಜನರು ತಾತ್ಕಾಲಿಕ ಸ್ವರಾಜ್ಯವನ್ನು ಬಯಸುತ್ತಿದ್ದರು, ಅದು ಅವರಿಗೆ ದೊರೆಯಲಿಲ್ಲ ೨. ಶಾಂತಿ ಅಶಾಂತಿಗಳ ಬಗ್ಗೆ ಜನರು ಉಪೇಕ್ಷೆಯುಳ್ಳವರಾಗಿದ್ದರು.

ಮೊದಲನೇ ಅರ್ಥವು ನಿಜವಿದ್ದರೆ ಜನರಿಗೆ ಸ್ವರಾಜ್ಯದ ಅರ್ಥವೇ ನೆಟ್ಟಗೆ ಆಗಿಲ್ಲೆಂದು ಹೇಳಬೇಕಾಗುತ್ತದೆ. ಸ್ವರಾಜ್ಯವು ನಮ್ಮ ಸ್ವಾನುಭವದಿಂದ ತಿಳಿಯುವ ಒಂದು ಪ್ರಕಾರದ ಸ್ಥಿತಿಯಿರುತ್ತದೆ. ಅದನ್ನು ನಾವು ಆತ್ಮ ಬಲದಿಂದ ಸಂಪಾದಿಸತಕ್ಕದ್ದಿರುವದು. ಇದು ನಿಜವಿದ್ದರೆ ನೈರಾಶ್ಯವು ಹುಟ್ಟಲಿಕ್ಕೆ ಕಾರಣವೇ ಇಲ್ಲ. ಸ್ವರಾಜ್ಯವು ನಮ್ಮ ಪ್ರಯತ್ನದಲ್ಲಿಯೇ ಇರುವದು. ಒಮ್ಮೆ ಪ್ರಯತ್ನಿಸಲು ಅದು ದೊರೆಯದಿದ್ದರೆ ಎರಡನೇ ಸಾರೆ ಯತ್ನಿಸಬೇಕು. ಆಗಲೂ ದೊರೆಯದಿದ್ದರೆ ಮೂರನೇ ಸಾರೆ ನಾಲ್ಕನೇ ಸಾರೆ, ಅನೇಕ ಸಾರೆ ಯತ್ನಿಸತಕ್ಕದ್ದು. ನಾವು ಯತ್ನಿಸುತ್ತ ಹೋದಂತೆ ಸ್ವರಾಜ್ಯದ ಸ್ಥಿತಿಯನ್ನೂ ಹೆಚ್ಚು ಹೆಚ್ಚು ಅನುಭವಿಸುತ್ತ ಹೋಗುವೆವು. ಹದಿನೈದು ತಿಂಗಳುಗಳಿಂದವು ನಾವು ಸ್ವರಾಜ್ಯಕ್ಕಾಗಿ ಯತ್ನಿಸುತ್ತಿದ್ದೇವೆ. ಇದೆಲ್ಲ ನಮ್ಮ ಪ್ರಯತ್ನವು ವ್ಯರ್ಥವಾಯಿತೋ?

ನೈರಾಶ್ಯವೆಂದರೆ ನಮಗೆ ನಮ್ಮ ದಿಶೆಯು ಚನ್ನಾಗಿ ಕಾಣದಿರುವದು. ಶಾಂತಿಯ ಮಾರ್ಗದಿಂದಲೇ ಸ್ವರಾಜ್ಯವು ನಮಗೆ ದೊರೆಯತಕ್ಕದ್ದಿದೆಂದು ನಾವು ಚನ್ನಾಗಿ ಅರಿತಿದ್ದರೆ, ಮತ್ತು ಎಲ್ಲಿ ನಾವು ಶಾಂತಿಯದೆಯೆಂದು ತಿಳಿದಿದ್ದೆವೋ ಅಲ್ಲಿ ಅಶಾಂತಿಯಿರುವದೆಂದು ಕಂಡು ಬಂದರೆ; ಸವಿನಯಭಂಗವನ್ನು ನಿಲ್ಲಿಸುವದರಲ್ಲಿಯೇ ನಮ್ಮ ನಿಜವಾದ ಪ್ರಗತಿಯುಂಟೆಂದು ನಾವು ತಿಳಿಯತಕ್ಕದ್ದು. ಮಾರ್ಗವು ಸರಿಯಾಗಿದೆಂದು ಹೋಗುತ್ತಿರುವ ಸೈನ್ಯವು ನಡುವೇ ತಗ್ಗು ಬರಲು ಅದರಲ್ಲಿ ಬಿದ್ದು ಮೋಸ ಹೋಗುವದರಿಂದ ಪ್ರಗತಿಯಾಗುವದೋ. ಇಲ್ಲವೆ ಆ ಹಾದಿಯನ್ನು ಬಿಟ್ಟು ಸರಿಯಾದ ಹಾದಿಯನ್ನು ಶೋಧಿಸುವದರಿಂದಾಗಲಿ ಅಥವಾ ಆ ತಗ್ಗಿನ ಮೇಲೆ ಪೂಲು ಕಟ್ಟಿ ಮುಂದೆ ಸಾಗುವದರಿಂದಾಗಲಿ ಪ್ರಗತಿಯಿರುವದೋ; ತಗ್ಗು ಬರಲು ಅದನ್ನು ನೋಡಿ ನೈರಾಶ್ಯವನ್ನು ತಾಳಿ ಸೈನ್ಯವು ಕಣ್ಣೀರಿನಿಂದ ನೆಲವನ್ನು ತೋಯಿಸ ತೊಡಗಿದರೆ ಆ ಸೈನ್ಯದ ವಿಷಯಕ್ಕೆ ಇತಿಹಾಸವು ಏನು ಹೇಳುವದು?

ಹೀಗೆ ನೈರಾಶ್ಯವನ್ನು ತಾಳುವದೆಂದರೆ ಅಸಹಕಾರವನ್ನು ಅರಿಯದಿರುವದೇ ಸೈ! ನಾವು ಅಸಹಕಾರ ಅರ್ಥವನ್ನು ಅವಲಂಬಿಸಿದ ಕ್ಷಣವೇ ವಿಜಯಸ್ತಂಭವನ್ನು ಊರಲುಉಪಕ್ರಮಿಸಿದೆವೆಂದು ಹೇಳಬಹುದು. ಸರದಾರನಿಗೆ ಸಲಾಮುಮಾಡುವದನ್ನು ಬಿಟ್ಟು ಕೊಟ್ಟ ಗುಲಾಮನು ಅಂದಿನಿಂದಲೇ ಸ್ವತಂತ್ರನಲ್ಲವೊ? ಸರದಾರನು ಗುಲಾಮನನ್ನು ನೈಮುರಿ ಥಳಿಸಬಹುದು, ಅವನಿಗೆ ಅಪಶಬ್ದಗಳನ್ನು ಆಡಬಹುದು; ಮತ್ತು ಅವನನ್ನು ಗಲ್ಲಿಗೆ ಏರಿಸ ಬಹುದು. ಆದರೇನು? ಗುಲಾಮನು ಸಲಾಮು ಮಾಡುವದನ್ನು ಬಿಟ್ಟು ಕೊಟ್ಟರೆ ಅವನಿಗೆ ತನ್ನ ಪರತಂತ್ರತೆಯ ಅರಿವು ಉಂಟಾಯಿತೆಂದು ನಾವು ತಿಳಿಯತಕ್ಕದ್ದಲ್ಲವೋ? ಸರದಾರನು ಆ ಗುಲಾಮನ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳದಿದ್ದರೆ ಅದರಿಂದ ಗುಲಾಮನಿಗೇನು? ಹೇಗೆ ಹೇಗೆ ಸರದಾರನ ವಿರೋಧವು ಹೆಚ್ಚಾಗುವದೋ, ಹಾಗೆ ಹಾಗೆ ಗುಲಾಮನ ಬಲವು ಹೆಚ್ಚುವದು. ಯಾಕಂದರೆ ಸರದಾರನ ವಿರೋಧದಿಂದ ಗುಲಾಮನ ಸತ್ವವು ಸಿದ್ಧವಾಗುವದು.

ಎಲ್ಲಿಯ ವರೆಗೆ ನಮ್ಮ ನಿಶ್ಚಯವು ಕಾಯಮವಾಗಿರುವದೋ ಅಲ್ಲಿಯ ವರೆಗೆ ಪಂಜಾಬ ಅನ್ಯಾಯವನ್ನು ದೂರ ಮಾಡುವದು, ಖಿಲಾಫತದ ಗಾಯ ವನ್ನು ಮಾಯಿಸಲಿಕ್ಕೂ ಸ್ವರಾಜ್ಯವನ್ನು ದೊರಕಿಸಲಿಕ್ಕೂ ಎಡೆಬಿಡದೆ ಯತ್ನಿಸತಕ್ಕದ್ದು. ನಮ್ಮ ಉದ್ದೇಶವು ಕೈಗೂಡುವ ವರೆಗೆ ನಾವು ಅಸಹಕಾರವನ್ನು ಅವಲಂಬಿಸತಕ್ಕದ್ದು. ಅಂದ ಮೇಲೆ ನೈರಾಶ್ಯಕ್ಕೆ ಆಸ್ಪದವೆಲ್ಲಿದೆ?

ಜರ್ಮನಿಯೊಂದಿಗೆ ಯುದ್ಧವು ಪ್ರಾರಂಭವಾದ ಮೇಲೆ ಎರಡು ತಿಂಗಳುಗಳಲ್ಲಿಯೇ ಯುದ್ಧವನ್ನು ಮುಗಿಸಬಲ್ಲೆವೆಂದು ಇಂಗ್ಲಿಷರು ತಿಳಿದಿದ್ದರು. ಲಾರ್ಡ ಕರ್ಝನ್ ಸಾಹೇಬರವರು ಕ್ರಿಸ್ತಮಸದ ಮೇಜವಾನಿಯನ್ನು ಬರ್ಲಿನದಲ್ಲಿ ತೀರಿಸಿಕೊಳ್ಳುವ ಉಮೇದವನ್ನು ಹಿಡಿದಿದ್ದರು: ೧೯೧೪ ನೇ ದಿಸೆಂಬರ ತಿಂಗಳದವರೆಗೆ ಯುದ್ಧವು ನಡೆಯಿತು. ಆದರೇನು ಅದರಿಂದ ಇಂಗ್ಲಿಷ ಜನತೆಯು ನಿರಾಶೆಗೊಂಡಿತೆಂದು ಹೇಳಬಹುದೋ? ಲೀಜ ಹೋಯಿತು ನಾಮೂರ ಕೈ ಬಿಟ್ಟಿತು, ಪ್ಯಾರಿಸ್ ಪಟ್ಟಣದ ವರೆಗೆ ಜರ್ಮನಿಯ ದಂಡು ಬಂದಿತು; ಆದರೆ ಫ್ರಾನ್ಸವು ಹತಾಶವಾಯಿತೋ? ಎಲ್ಲಿಯ ವರೆಗೆ ಯುದ್ಧವು ನಡೆದಿರುವದೋ ಅಲ್ಲಿಯ ವರೆಗೆ ಜಯಾಪಜಯದ ಪ್ರಶ್ನವೇ ಉದ್ಭವಿಸಲರಿಯದು. ಮಧ್ಯಂತರದಲ್ಲಿ ಅನೇಕ ವ್ಯೂಹಗಳು ರಚಿಸಲ್ಪಡಬಹುದು. ಕಿಲ್ಲೆಗಳು ಕಟ್ಟಲ್ಪಡಬಹುದು. ಗುಡ್ಡಗಳು ಪೊಳ್ಳು ಮಾಡಲ್ಪಡಬಹುದು. ತಗ್ಗುಗಳ ಮೇಲೆ ಪೂಲುಗಳು ಕಟ್ಟಲ್ಪಡಬಹುದು ಈ ಪರಿಶ್ರಮದಿಂದಲೇ ಮನುಷ್ಯನು ಕಾರ್ಯಕ್ಷಮನಾಗಬಲ್ಲನು, ಜನತೆಯಲ್ಲಿ ಪೌರುಷವು ಸೆಲೆಗೊಳ್ಳುವದು. ಪ್ರಯತ್ನಮಾಡುತ್ತಿರುವ ಮನುಷ್ಯನು ಹಿಂದಿರುಗಿದರೆ "ಅವನ ಅಧಃಪಾತವಾಗುವದೋ?" ಎಂದು ಅರ್ಜುನನು ಪ್ರಶ್ನ ಮಾಡಲು ಭಗವಾನ್ ಶ್ರೀ ಕೃಷ್ಣನು ಅತ್ಯಂತ ಪ್ರೇಮದಿಂದ ಅವನನ್ನು ಸಂಬೋಧಿಸಿ, 'ಪ್ರಯತ್ನ ಮಾಡುತ್ತಿರುವ ಮನುಷ್ಯನಿಗೆ ಸರ್ವಥಾ ದುರ್ಗತಿಯೊದಗದು, ಆದರೆ ಸಂಶಯಾತ್ಮರೇ ವಿನಾಶಕ್ಕೀಡಾಗುವರು" ಎಂದು ಉತ್ತರವನ್ನಿತ್ತನು. ಅಸಹಕಾರದ ವಿಷಯದಲ್ಲಿ ನಮಗೆ ವಿಶ್ವಾಸವಿದ್ದರೆ ನಾವು ಕೆಲಸವನ್ನು ಆರಂಭಿಸಿದಾಗಿನಿಂದಲೇ ಸೂಶಿರುವೆವೆಂದು ಹೇಳಬಹುದು.

೧೯೩೦-ಲ್ಲಿ ಕಲಕತ್ತೆಯಲ್ಲಿ ಪ್ರಾರಂಭವಾದ ಯುದ್ಧವು ನಾಟಕವಲ್ಲ. ಅದು ಜನತೆಯು ಅಚಲವಾದ ನಿಶ್ಚಯವಾಗಿತ್ತು. ಅಹಮದಾಬಾದದ ಮಹಾಸಭೆಯು ಅದಕ್ಕೊಂದು ದೃಢವಾದ ಆಗ್ರಹವಿತ್ತು. ಇಂಥ ಚಳವಳಿಯು

ಉದ್ದೇಶವು ಕೈಗೂಡಲು ಹತ್ತು ದಿವಸಗಳೆತ್ತಬಹುದು, ಇಲ್ಲವೆ ಇಪ್ಪತ್ತು ದಿವಸಗಳು ಹತ್ತಬಹುದು. ದೃಢ ನಿಶ್ಚಯಗಳು ಈಶ್ವರನೊಂದಿಗೆ ಪಣವನ್ನು ಕಟ್ಟುವವರೊ?

ಕೆಲವರು ನಾವು ನಮ್ಮ ಮಕ್ಕಳನ್ನು ಏಕೆ ಈಗ ರಾಷ್ಟ್ರೀಯ ವಿದ್ಯಾಲಯಗಳಿಗೆ ಕಳುಹಿಸಬೇಕೆಂದು ಒಂದು ವರ್ಷದ ಆಶೆಯಿಂದಲೇ ಅವರನ್ನು ಸಂಶಯದಿಂದ ಹಿಡಿಸಿದೆವು ಎಂದು ಹೇಳುತ್ತಿದ್ದಾರೆ. ಜನರು ಇದೇ ವಿಚಾರವುಳ್ಳವರಾಗಿದ್ದರೆ ಒಂದು ವರ್ಷದಲ್ಲಿ ನಮ್ಮ ಕಾರ್ಯವು ಪೂರ್ಣವಾಗಿದೆ ಇವರು ನೆಟ್ಟಗಾಯಿತೆಂದು ನಾನು ತಿಳಿಯುತ್ತೇನೆ. ನಮ್ಮ ಕಾರ್ಯವು ಪೂರ್ಣವಾಗಿದ್ದರೆ ಈ ಜನರ ಸ್ಥಿತಿಯೂ ಹಿಂದುಸ್ಥಾನದ ಸ್ಥಿತಿಯೂ ಅತ್ಯಂತ ಕರುಣಾಸ್ಪದವಾಗುತ್ತಿತ್ತು!

ಒಂದು ವರ್ಷದಲ್ಲಿ ನಮ್ಮ ಕೈಯಲ್ಲಿ ಸತ್ತೆಯು ಬರಲಿಲ್ಲೆಂದು, ಯಾವ ಶಾಲೆಗಳನ್ನು ಮೊದಲು ನಾವು ತ್ಯಾಜ್ಯವೆಂದು ತಿಳಿದಿದ್ದೇವೋ ಅವೇ ಶಾಲೆಗಳು ಈಗ ಯಾವ ನ್ಯಾಯದಿಂದ ಗ್ರಾಹ್ಯವಾಗಿರುವವು? ಅಥವಾ ನನ್ನ ಮಾತುಗಳಿಂದ ಮೋಸಹೋಗಿ ತಾಯಿತಂದೆಗಳು ಅಗ್ಗ ತಮ್ಮ ಮಕ್ಕಳನ್ನು ಸರಕಾರೀ ಶಾಲೆಗಳಿಂದ ಬಿಡಿಸಿ ರಾಷ್ಟ್ರೀಯ ವಿದ್ಯಾಲಯಗಳ ಕಳಿಸುವರೋ? ಹೀಗಿದ್ದರೆ ಅವಶ್ಯವಾಗಿ ನಾನು ಕ್ಷಮೆ ಬೇಡುತ್ತೇನೆ. ತಮ್ಮ ತಮ್ಮ ಮಕ್ಕಳನ್ನು ರಾಷ್ಟ್ರೀಯ ವಿದ್ಯಾಲಯಗಳಿಂದ ಬಿಡಿಸಿ ಸರಕಾರೀ ಶಾಲೆಗೆ ಕಳುಹಿರೆಂದು ತಾಯಿತಂದೆಗಳಿಗೆ ಹೇಳುತ್ತೇನೆ. ನನ್ನ ಮತ್ತು ಅಸಹಕಾರದ ತತ್ವವನ್ನು ಅರಿತಂಥ ಜನರ ಕರ್ತವ್ಯವು ಸ್ಪಷ್ಟವಿದೆ. ಒಂದು ವರ್ಷ ಹತ್ತಲಿ ಒಂದು ನೂರು ವರ್ಷ ಹತ್ತಲಿ ಎಲ್ಲಿಯವರೆಗೆ ಸರಕಾರವು ಪಶ್ಚಾತ್ತಾಪವನ್ನು ವ್ಯಕ್ತಪಡಿಸಿ ನಡೆಯಲು ಸಿದ್ಧವಾಗುವದಿಲ್ಲವೋ ಅಲ್ಲಿಯವರೆಗೆ ಸರಕಾರದ ಶಾಲೆಗಳಲ್ಲಿ ಹೊನ್ನಿನ ನಾಣ್ಯಗಳನ್ನು ಸೂರಿ ಮಾಡಿದರೂ ಅವು ತ್ಯಾಜ್ಯವೇ ಸೈ!

ಈ ನಮ್ಮ ಮಾರ್ಗದಲ್ಲಿ ವಿಘ್ನವು ಬಂದದ್ದು ಗುಣವೇ ಆಯಿತೆಂದು ನಾನು ಅವಶ್ಯವಾಗಿ ತಿಳಿಯುತ್ತೇನೆ. ಇದರಿಂದ ನಮ್ಮ ಸತ್ವಪರೀಕ್ಷೆಯಾಗುವದು, ನಿಜವಾದುದೂ ಸುಳ್ಳು ಆವುದೂ ತಿಳಿಯುವದು; ಧೈರ್ಯವಂತರಾರು ಕಾತರರಾರು; ಬಂಟರಾರು ಹೇಡಿಗಳಾರು; ತಿಳಿದು ಬಂದವರಾರು. ತಿಳಿಯದೆ ಬಂದವರಾರು, ಕಾರ್ಯ ಮಾಡುವಂಥರು ಪ್ರೇಕ್ಷಕರಾರು ಇದೆಲ್ಲವೂ ನಮಗೀಗ ತಿಳಿಯುವದು. ಇಂಥ ಪರಿಸ್ಥಿತಿಯು ಅವಶ್ಯವಾಗಿ ಬೇಕಾಗಿತ್ತು.

ರಾಷ್ಟ್ರೀಯ ವಿದ್ಯಾಲಯಗಳು ನಮ್ಮ ಸತ್ವಪರೀಕ್ಷೆಯ ಬಲವಾದ ಸಾಧನಗಳು ಎಲ್ಲಿ ರಾಷ್ಟ್ರೀಯ ವಿದ್ಯಾಲಯಗಳು ನಡೆಯುವವೋ ಅಲ್ಲಿಯ ಜನರು ಸ್ವಸಾಮರ್ಥ್ಯದಿಂದಲೇ ಅವುಗಳನ್ನು ನಡೆಸತಕ್ಕದ್ದು. ಶಾಲೆಗಳನ್ನು ಹಾಕಲು ಮನೆಗಳು ದೊರೆಯದಿದ್ದರೆ ಗಿಡಗಳ ಕೆಳಗೆ ಹಾಕತಕ್ಕದ್ದು. ಶಿಕ್ಷಕರಿಗೆ ಸಂಬಳವು ದೊರೆಯದಿದ್ದರೆ ಭಿಕ್ಷಾವೃತ್ತಿಯನ್ನು ಕೈಕೊಂಡು ಬಂದ ಧಾನ್ಯದಿಂದ ನಿರ್ವಾಹ ಮಾಡಿಕೊಳ್ಳತಕ್ಕದ್ದು. ಈ ಬಗೆಯ ತಪವನ್ನಾಚರಿಸಿ ಬಾಲಕರಿಗೆ ವಿದ್ಯಾದಾನ ಮಾಡತಕ್ಕದ್ದು. ಇಂಥ ತಪಃ-ಪ್ರಭಾವದಿಂದಲೇ ಜನತೆಯು ಪವಿತ್ರತೆಯನ್ನು ಹೊಂದುವದು.

ನವಜೀವನ

ಮೋ. ಕ. ಗಾಂಧೀ

## ಕೇಶರದ ಅಪವಿತ್ರತೆ.

ನಾವು ಪೂಜೆಯಲ್ಲಿಯೂ ಪಕ್ವಾನ್ನಗಳಲ್ಲಿಯೂ ಉಪಯೋಗಿಸುತ್ತಿರುವ ಕೇಶರವು ಹೊರಗಿನಿಂದ ಬರುತ್ತದೆಂದೂ ಅದರಲ್ಲಿ ನೆಣವು ಮಿಶ್ರಿತವಾಗಿರುತ್ತದೆಂದೂ ನಾನು ಈವರೆಗೂ ಅರಿತಿರಲಿಲ್ಲ. ಶ್ರೀ. ಮೂಲಚಂದ ಉತ್ತಮಚಂದ ಪರೇಖ ಇವರು ಬರೆದಿರುವದೇನೆಂದರೆ— ಕೇಶರದ ಬಹುಭಾಗವು ಸ್ಪೇನದಿಂದ ಬರುತ್ತಿದೆ ಅದರಲ್ಲಿ ರಕ್ತ ಮತ್ತು ನೆಣದ ಮಿಶ್ರಣವಿರುತ್ತದೆ. ಪ್ರತಿ ತಿಂಗಳಿಗೆ ಸ್ಪೇನದಿಂದ ೧॥ ಲಕ್ಷ ರೂಪಾಯಿಯ ಕೇಶರವು ಬರುತ್ತದೆ ಸ್ವದೇಶೀ ಕೇಶರವು ಕೇವಲ ಕಾಶ್ಮೀರದಲ್ಲಿಯೇ ಬೆಳೆಯುವದು. ತಿಂಗಳಿಗೆ ೨೦೦ ತೊಲೆ ಮಾತ್ರ ಹೊರಡುವದೆಂದು ತಿಳಿಯುತ್ತದೆ. ಕಾಶ್ಮೀರದ ಕೇಶರವೆಂದು ನಮಗೆ ದೊರೆಯುವ ಬೇರೆ ಎರಡು ಮೂರು ತರದ ಕೇಶರವು ನನ್ನ ಪ್ರಯೋಗ ಶಾಲೆಯಲ್ಲಿ ಪರೀಕ್ಷಿಸಲ್ಪಟ್ಟವು; ಅವರ ಅದೆಲ್ಲವೂ ಕೃತಿಮವಾದದ್ದೆಂದು ತಿಳಿದು ಬಂದಿತು. ಅದು ಕೇಶರವೇ ಅಲ್ಲ."

ಕೇಶರದ ಅಪವಿತ್ರತೆಯ ಬಗ್ಗೆ ನಮಗೆ ಗೊತ್ತಾದ ಮೇಲೆ ಪೂಜಾ ಕಾರ್ಯದಲ್ಲಿಯೂ ಪಕ್ವಾನ್ನಗಳಲ್ಲಿಯೂ ಇದನ್ನು ಉಪಯೋಗಿಸಿದರೆ ಪುಣ್ಯದ ಹೆಸರಿನಿಂದ ಪಾಪವನ್ನು ಮಾಡಿದಂತಾಗುತ್ತೆಂದು ಬೇರೆ ಹೇಳುವ ಕಾರಣವಿಲ್ಲ.

ನವಜೀವನ

ಮೋ. ಕ. ಗಾಂಧೀ

## ಒಕ್ಕಲಿಗನು ಮತ್ತು ನೇಕಾರನು.

ನಿಮ್ಮ ಉದ್ಯೋಗವಾವದೆಂದ ಕೇಳಿದಾಗ್ಗೆ ಕೋರ್ಟಿನಲ್ಲಿ ಮಹಾತ್ಮರು 'ಒಕ್ಕಲಿಗನು ಮತ್ತು ನೇಕಾರನು" ಎಂಬ ಮೂರು ಶಬ್ದಗಳನ್ನು ಮೆಲ್ಲನೇ ಸ್ಪಷ್ಟವಾಗಿ ಧೀರಯುಕ್ತ ಧ್ವನಿಯಲ್ಲಿ ನುಡಿದರು. ನ್ಯಾಯಾಧೀಶರಿಗೆ ಆಶ್ಚರ್ಯವಾದಂತೆ ತೋರಿತು; ಯಾಕೆಂದರೆ ಆ ತರದ ಉತ್ತರವು ಸ್ವಾಭಾವಿಕವಾದದ್ದಲ್ಲ. ಆ ಶಬ್ದಗಳನ್ನು ಬರೆದುಕೊಳ್ಳುವ ಮೊದಲು ಅವರು ಕಿಂಚಿತ್ ಸ್ತಬ್ಧರಾಗಿದ್ದರು. ಆ ಬಗೆಯ ಸ್ಪಷ್ಟವಾದ ಉದ್ಗಾರವನು ತೆಗೆದಿದ್ದಲ್ಲಿ ಮಹಾತ್ಮರು ನಿಶ್ಚಯಶೀಲರಾಗಿರುವರೋ ಹೇಗೆಂಬುದನ್ನು ತಿಳಿದುಕೊಳ್ಳುವದಕ್ಕಾಗಿ ಅವರು ಹಾಗೆ ಸ್ತಬ್ಧರಾಗಿರಬಹುದು. ಉದ್ಯೋಗ ಮತ್ತು ಪ್ರಪಂಚಗಳ ಸಂಪೂರ್ಣ ತತ್ವವು ಮಹಾತ್ಮರಿಂದ ಆ ಮೂರು ಶಬ್ದಗಳಲ್ಲಿಯೇ ಯೋಜಿಸಲ್ಪಟ್ಟಿದೆಂಬುದನ್ನೂ, ಪಾಶ್ಚಿಮಾತ್ಯರು ಹಿಂದುಸ್ಥಾನದ ಸರಕುಗಳ ಮೇಲೆ ನಡೆಸಿದ ಹಲ್ಲೆ ಮತ್ತು ಸುಲಿಗೆಯ ವಿರುದ್ಧವಾಗಿಯೂ ಪಾಶ್ಚಿಮಾತ್ಯ ಆಚಾರ ವಿಚಾರಗಳ ವಿರುದ್ಧವಾಗಿಯೂ ಹಿಂದುಸ್ಥಾನದ ಬಂಡಾಯದ ಸಂಜ್ಞಾತ್ಮಕ ಶಬ್ದಗಳೇ ಅದರಲ್ಲಿ ಅಡಕವಾಗಿವೆಂಬುದನ್ನೂ ಅವರೇನು ಬಲ್ಲರು?

ಯಂಗ ಇಂಡಿಯಾ

## ನವೀನ ಬಂಧುಗಳ ಸ್ವಾಗತವು

೧ ವೀರ ವಿಲಾಸಿನಿ. ೨ ವಿದ್ವಾನ್ ೩ ಅನುಭವ ಚಿಂತನೆ ಈ ಮೂರು ವಾರಪತ್ರಿಕೆಗಳು ಹೊಸದಾಗಿ ಬೆಂಗಳೂರಲ್ಲಿ ಹುಟ್ಟಿರುವವು. ವೀರವಿಲಾಸಿನಿಯಲ್ಲಿ ಹಾಸ್ಯಯುಕ್ತ ಲೇಖಗಳು ಮಾತ್ರ ಕಂಗೊಳಿಸುತ್ತವೆ. 'ಯಾವ ಜಾತಿಯವರಿಗೂ ಅಸಮಾಧಾನವುಂಟಾಗದಂತೆ ಲೇಖಗಳನ್ನು ಪ್ರಸಿದ್ಧಿಸುವದರ ಕಡೆ.' ಇದರ ಚಾಲಕರು ಹೆಚ್ಚಿಗೆ ಲಕ್ಷ ಕೊಟ್ಟರೆ ಒಳಿತಾಗುವದು ವಾರ್ಷಿಕ ಚಂದಾ ೧॥ 'ವಿದ್ವಾನ್' ಪತ್ರಿಕೆಯನ್ನು ಸುಪ್ರಸಿದ್ಧ ಅಡಿಸನ್ನನ ಹೇಬ "Spectator" ಈ ವಾರ್ತಾಪತ್ರಿಕೆಯಾಕಾರದಲ್ಲಿ ಹೊರಡಿಸುವ ವಿಚಾರನ್ನು ಇದರ ಸಂಪಾದಕರು ಕಲ್ಪಿಸಿದ್ದಾರೆ, ಅದು ಎಷ್ಟರ ಮಟ್ಟಿಗೆ ಸಫಲವಾಗುವದೋ ನೋಡಬೇಕು, ಚಂದಾದರ— ವ್ಹಿ. ಪಿ. ಯಿಂದ ಪ್ರತಿತಿಂಗಳಿಗೆ ॥ ಆಣೆ ಕಡೆಯದಾದ ಅನುಭವ ಚಿಂತನೆಯೆಂಬ ಪತ್ರಿಕೆಯಲ್ಲಿ ತತ್ವಜ್ಞಾನದ ವಿಷಯಗಳು ಮಾತ್ರ ವಿವೇಚಿಸಲ್ಪಡುವವು ವಾರ್ಷಿಕ ಚಂದಾ ೫ರೂ.

ಸಂಪಾದಕ

## ಚಿರಸ್ಮರಣೀಯ ಖಟ್ಲೆ



# ಮಹಾತ್ಮರ ಭಾಷಣ.

ತಾವು ಬರೆದು ತಂದ ಜಬಾನಿಯನ್ನು ಕೋರ್ಟಿನಲ್ಲಿ ಓದಿ ಹೇಳುವ ಮೊದಲು ಮಹಾತ್ಮರು ಕೆಳಗೆ ಬರೆದಂತೆ ಪ್ರಾಸ್ತಾವಿಕ ಭಾಷಣ ಮಾಡಿದರು:—

ನಾನು ಬರೆದುತಂದ ಜವಾಬನ್ನು ಓದುವದರ ಮೊದಲು ನಾನು ಕೆಲವು ಸಂಗತಿಗಳನ್ನು ಹೇಳಲಿಚ್ಛಿಸುತ್ತೇನೆ. ನನ್ನ ದೀನವಾದ ಈ ಶರೀರದ ಬಗ್ಗೆ ಅಡ್ವೋಕೇಟ ಜನರಲ್ಲರವರು ಮಾಡಿದ ಎಲ್ಲ ಚರ್ಚೆಯೂ ಸರಿಯಾಗಿದೆ. ನನ್ನ ಬಗ್ಗೆ ಅವರು ನುಡಿದ ಎಲ್ಲ ಸಂಗತಿಗಳೂ ನನಗೆ ಒಪ್ಪುವಂತೆಯೇ ಇರುತ್ತವೆ. ಯಾಕೆಂದರೆ ಈಗ್ಗೆ ರೂಢವಾಗಿದ್ದ ರಾಜ್ಯಪದ್ಧತಿಯ ವಿರುದ್ಧವಾಗಿ ಅಪ್ರೀತಿಯನ್ನು ಹುಟ್ಟಿಸಬೇಕೆಂದು ನನ್ನಲ್ಲಿ ತೀಕ್ಷ್ಣವಾದ ಮನೋವೃತ್ತಿಯುಂಟಾಗಿದೆ. ಈ ಸಂಗತಿಯನ್ನು ನಾನು ಎಳ್ಳಷ್ಟಾದರೂ ಮುಚ್ಚಿಡುವದಿಲ್ಲ. ಆ ಸಂಗತಿಯು ಖಂಡಿತವಾಗಿಯೂ ನಿಜವದೆ. 'ಯಂಗ ಇಂಡಿಯಾ'ಕ್ಕೂ ನನಗೂ ಸಂಬಂಧವು ಉಂಟಾಗುವದರ ಮೊದಲೇ ಸರಕಾರದ ವಿರುದ್ಧ ಅಪ್ರೀತಿಯನ್ನು ಹುಟ್ಟಿಸುವದರಲ್ಲಿ ನಾನು ನಿಯೋಜಿತನಾಗಿದ್ದೆನೆಂದು ಅಡ್ವೋಕೇಟ ಜನರಲ್ಲರವರು ನುಡಿದದ್ದು ಸತ್ಯವಿದೆ. ಮತ್ತು ಅಡ್ವೋಕೇಟರು ಹೇಳಿದ ಕಾಲದಕಿಂತ ಮುಂಚಿತವಾಗಿಯೇ ನಾನು ಅಪ್ರೀತಿಯನ್ನು ಹುಟ್ಟಿಸುವದರಲ್ಲಿ ತೊಡಗಿದ್ದೆನೆಂಬದನ್ನು ಈ ಕೋರ್ಟಿಗೆ ಕೊಡತಕ್ಕ ನನ್ನ ಜಬಾನಿಯಲ್ಲಿ ಒಪ್ಪುವೆನೆಂದು ಇಲ್ಲಿ ದುಃಖದಿಂದ ಹೇಳುತ್ತೇನೆ ಆದರೆ ನನ ಹೆಗಲ ಮೇಲೆ ಹೊತ್ತ ಜವಾಬದಾರಿಯ ಭಾರವನ್ನು ಅರಿತುಕೊಂಡೇ ಆ ಕರ್ತವ್ಯವನ್ನು ಮಾಡುತ್ತೇನೆ.

ಮುಂಬೈ, ಮದ್ರಾಸ, ಚೌರೀ ಚೌರಾಗಳಲ್ಲಿ ಸಂಭವಿಸಿದ ಪುಂಡಾಟಿಕೆಗಳ ಅಪರಾಧಗಳ ಜವಾಬದಾರಿಯನ್ನು ಅಡ್ವೋಕೇಟರು ನನ್ನ ಮೇಲೆ ಹೊರಿಸಿದಂತೆ ನಾನಾದರೂ ಅದನ್ನು ನನ್ನ ಮೇಲೆಯೇ ತೆಗೆದು ಕೊಳ್ಳುತ್ತೇನೆ. ಮುಂಬೈಯಲ್ಲಿಯ ಹುಚ್ಚಾಟಿಕೆಯು ಅತ್ಯಾಚಾರಗಳಿಂದಲೂ, ಚೌರೀಚೌರಾದಲ್ಲಿಯ ರಾಕ್ಷಸೀ ಅಪರಾಧಗಳಿಂದಲೂ ನಾನು ಮುಕ್ತನಾಗುವದು ಅಶಕ್ಯವಿದೆಂದು, ಗೂಢವಾಗಿ ವಿಚಾರಿಸಿ, ಅನೇಕ ರಾತ್ರಿಗಳಲ್ಲಿ ನಿದ್ರೆ ಮಾಡದೇ ಅವನ್ನೇ ಪರೀಶೀಲಿಸಿ, ಮತ್ತೂ ನನ್ನ ಹೃದಯವನ್ನು ನಿರೀಕ್ಷಿಸಿ ನಾನು ಹಾಗೆ ನಿರ್ಣೈಸಿರುವೆನು. ನನ್ನ ಜವಾಬದಾರಿಯನ್ನು ತಿಳಿದುಕೊಂಡು, ಹಿಳ್ಳೇ ಶಿಕ್ಷಣವನ್ನು ಸಂಪಾದಿಸಿದ್ದನ್ನು ಲಕ್ಷಕ್ಕೆ ತಂದು ಮತ್ತೂ ಈ ಜಗತ್ತಿನ ಅನುಭವದ ನನ್ನ ಭಾರವನ್ನಾದರೂ ಅರಿತುಕೊಂಡು ನಾನು ನನ್ನ ಕೃತಿಯು ಪ್ರತಿಯೊಂದು ಹೆಜ್ಜೆಯನ್ನು ತಿಳಿದು ನೋಡತಕ್ಕದ್ದೆಂದು ಅವರು ಹೇಳಿದ್ದಾದರೂ ನಿಜವಿದೆ. ಆ ಸಂಗತಿಗಳನ್ನೆಲ್ಲ ನಾನು ತಿಳಿದವನಾಗಿರುವೆನು. ನಾನು ಸಾಕ್ಷಾತ್ ಬೆಂಕಿಯ ಕೂಡ ಆಡುತ್ತಿದ್ದೆನೆಂಬದನ್ನಾದರೂ ತಿಳಿದಿದ್ದೇನೆ, ಆದರೂ ಕೂಡ ನಾನು ಆ ಸಂಕಟದಲ್ಲಿ ತೊಡಗಿ ಕೊಂಡೆನು; ಮತ್ತೂ ಈ ಹೊತ್ತು ಬಂಧಮುಕ್ತನಾದರೂ ನಾನು ಅದರಲ್ಲಿಯೇ ತೊಡಗಿಕೊಳ್ಳುವೆನು. ನಾನು ಹಾಗೆ ಮಾಡದಿದ್ದರೆ ನನ್ನ ಕರ್ತವ್ಯವನ್ನು ತ್ಯಜಿಸಿದಂತಾಗುವದು. ನಾನು ಈವರೆಗೆ ನುಡಿದದ್ದನ್ನೆಲ್ಲ ನುಡಿಯದಿದ್ದ... ನ್ನ ಕರ್ತವ್ಯದಿಂದ ಪರಾಙ್ಮುಖನ ದಂತ... ವದೆಂದು ಈ ಹೊತ್ತು ಮುಂಜಾನೆಸಲ್ಲ... ನನಗೆ ಅನಿಸಿತು. ಹಿಂಸೆಯನ್ನು ಬಿಟ್ಟು ... ವದು ನನಗೆ ಬೇಕಾಗಿತ್ತು; ಈಗೂ ಹಿಂಸೆ... ನ್ನು ಬಿಡುವದು ಬೇಕಾಗಿದೆ ಅಹಿಂಸೆ... ನನ್ನ ಪ್ರಾಮುಖ್ಯವಾದ ಕರ್ತವ್ಯ. ... ನನ್ನ ಅಂತಿಮ ಕರ್ತವ್ಯ ಆದರೆ ನಾನೇ... ನ್ನ ಮನೋವೃತ್ತಿಯನ್ನು ಪರೀಕ್ಷಿಸಬೇಕಾ... ತು. ನನ್ನ ನಾಡಿಗೆ ಅಪ್ರತಿಕಾರ್ಯವಾದ... ನಿಯನ್ನುಂಟು ಮಾಡಿದ ರಾಜ್ಯ ಪದ್ಧತಿಗೆ... ತ್ತ ವಶನಾಗಬೇಕು; ಇಲ್ಲವೇ ಅತ್ತ ... ಬಾಯಿಯಿಂದ ಸತ್ಯನನ್ನರಿತು ನನ್ನ ಮೇ... ಪ್ರದೀಪ್ತವಾದ ಮನೋವಿಕಾರದಿಂದ ಹು... ಬೀಳುವ ನನ್ನ ದೇಶಬಾಂಧವರ ಜ್ವಾಲಾಗ್ನಿ... ತಿರುವ ಕೋಪಕ್ಕಾದರೂ ವಶನಾಗಬೇ... ಗಿತ್ತು. ಅನೇಕ ಸಲ ನನ್ನ ಬಾಂಧವರು ಮ... ಭ್ರಷ್ಟರಾಗಿರುವರೆಂಬದನ್ನಾದರೂ ನಾನು... ಲ್ಲೆ. ಅದಕ್ಕಾಗಿ ನನಗೆ ಬಹಳೇ ವಿಷಾದ... ಗುತ್ತದೆ, ಅದುದರಿಂದ ಹಗುರಾದ ಶಿಕ್ಷೆಯ... ನನಗೆ ವಿಧಿಸಲ್ಪಡಬೇಕೆಂದು ಸ್ವಲ್ಪಾದ... ನಾನು ಇಚ್ಛಿಸುವದಿಲ್ಲ; ಆದರೆ ಅತಿಶಯ... ದ ಘೋರ ಶಿಕ್ಷೆಗೆ ಮಾತ್ರ ಈಡಾಗಬೇ... ದು ಇಚ್ಛಿಸುತ್ತೇನೆ. ನನ್ನ ಮೇಲೆ ದಯವ... ತೋರಿಸಬೇಕೆಂದು ನಾನೇನು ಕೇಳಿ ಕೊ... ವದಿಲ್ಲ. ನನ್ನ ಅಪರಾಧದ ಪ್ರಕ್ಷಾಲನವನ್ನು... ನಾನು ಕಿಂಚಿತ್ತಾದರೂ ಮಾಡುವದಿಲ್ಲ. ನಾ... ಗರಿಕನ ಆದ್ಯ ಕರ್ತವ್ಯವೆಂದು ನಾನು ... ಯುವಂಥಾದ್ದು ಕಾಯದೇ ದೃಷ್ಟಿಯಿ... ಹಟಾತ್ ಮಾಡಿದ ಅಪರಾಧವೆಂದು ... ಯಲ್ಪಡುವದರಿಂದ ಅತಿಶಯ ಘೋರವಾ... ಶಿಕ್ಷೆಯನ್ನು ನನಗೆ ವಿಧಿಸಬೇಕೆಂದು ನಾನು... ಲ್ಲಿ ಹೇಳುತ್ತೇನೆ. ಜಜ್ಜ ಸಾಹೇಬರೇ, ನಾನು ... ಪ್ರದಲ್ಲಿ ನನ್ನ ಜಬಾನಿಯಲ್ಲಿ ತೋರಿಸುವ... ತೆ, ನೀವು ನಿಮ್ಮ ಕೆಲಸಕ್ಕೆ ರಾಜೀನಾಮೆಯ... ನ್ನಾದರೂ ಕೊಡಬೇಕು; ಇಲ್ಲವೇ ನನ... ಅತಿಶಯ ಘೋರವಾದ ಶಿಕ್ಷೆಯನ್ನಾದರೂ... ವಿಧಿಸಬೇಕು ಇದರ ಹೊರ್ತು ಗತ್ಯಂತರವಿಲ್ಲ... ನೀವು ಸಹಾಯ ಮಾಡುತ್ತಿರುವ ರಾಜ್ಯಪದ್ಧ... ತಿಯೂ ಕಾನೂನುಗಳೂ ಜನರ ಕಲ್ಯಾಣ... ಕ್ಕಾಗಿಯೇ ಇರುವವೆಂದು ನಿಮ್ಮ ನಂಬಿಗೆ ... ದ್ದರೆ ನೀವು ಹಾಗೆ ರಾಜೀನಾಮೆಯನ್ನು ಕೊ... ಡುವದು ಅವಶ್ಯವಿಲ್ಲ. ಆದರೆ ನಾನು ನನ... ಜಬಾನಿಯನ್ನು ಮುಗಿಸುವ ಅವಧಿಯಲ್ಲಿ... ಯಾವ ತರದ ಉದ್ವಿಗ್ನತೆಯು ನನ್ನ ಹೃದಯದ... ಲ್ಲಿ ಇರುತ್ತದೆಂಬದು ನಿಮಗೆ ಗೊತ್ತಾಗಿನಾನು ಈ ತರದಹುಚ್ಚು ಉದ್ಯೋಗಕ್ಕೆ ಯಾಕೆ ಹತ್ತಿರುವೆನೆಂಬ ಸಂಗತಿಯಾದರೂ ಕಿಂಚಿತ್ ನಿವೇದಿತವಾಗಬಹುದು.

ಕನ್ನಡ ನವಜೀವನ.

ಫಾಲ್ಗುಣ ವ| ೧೦ ಗುರುವಾರ ಶಕೆ ೧೮೪೩.

## ಮಹಾತ್ಮರ ಜಬಾನಿಯು.

ಸಾಮ್ರಾಜ್ಯನಿಷ್ಠ ಮತ್ತು ಪೂರ್ಣ ಸಹಕಾರಿಯಾದ ನಾನು ಸರಕಾರದ ವಿಷಯಕ್ಕೆ ಅಪ್ರೀತಿಯನ್ನು ಹುಟ್ಟಿಸುವವನೂ ಅಸಹಕಾರಿಯೂ ಯಾಕೆ ಆದೆನು ಎಂಬ ಬಗ್ಗೆ ಹಿಂದುಸ್ಥಾನದ ಪ್ರಜೆಗಳಿಗೂ ಯಾರ ಸಮಾಧಾನಕ್ಕಾಗಿ ಈ ಖಟ್ಲೆಯು ಮಾಡಲ್ಪಟ್ಟಿದೆಯೋ ಅಂಥ ಇಂಗ್ಲಂಡದ ಪ್ರಜೆಗಳಿಗೂ, ಸ್ಪಷ್ಟವಾಗಿ ತಿಳಿಸುವದು ನನ್ನ ಕರ್ತವ್ಯವೆಂದು ನಾನು ತಿಳಿಯುತ್ತೇನೆ. ಅದರಂತೆ ಅಪ್ರೀತಿಯನ್ನು ಹುಟ್ಟಿಸುವ ಆರೋಪಕ್ಕೆ ನಾನು ಏಕೆ ಒಪ್ಪಿಕೊಳ್ಳುತ್ತೇನೆಂಬುದರ ಮರ್ಮವನ್ನು ಕೋರ್ಟಿಗೆ ತಿಳಿಸುವದು ಅವಶ್ಯವೆಂದು ಕಂಡುಬರುತ್ತದೆ.

ದಕ್ಷಿಣ ಆಫ್ರಿಕೆಯು ತಾಪತ್ರಯವನ್ನು ಪಡುವಾಗ ಸನ್ನ ೧೮೯೩ನೇ ಇಸ್ವಿಯಲ್ಲಿ ನನ್ನ ಸಾರ್ವಜನಿಕ ಆಯುಷ್ಕ್ರಮವು ಪ್ರಾರಂಭವಾಯಿತು. ಅಲ್ಲಿಯ ಬ್ರಿಟಿಶ ಅಧಿಕಾರಿಗಳ ನನ್ನ ಮೊದಲನೇ ಸಹವಾಸವು ಸೌಖ್ಯದಾಯಕವೆಂದೆನಿಸಿಲಿಲ್ಲ. ಯಾಕೆಂದರೆ ನಾನು ಹಿಂದವಾಸಿಯನಾದದ್ದರಿಂದ ಮನುಷ್ಯತ್ವದ ಹಕ್ಕುಗಳು ನನಗೆ ಇರುವದಿಲ್ಲೆಂದು ನಾನು ಕಂಡೆನು

ಆದರೆ ನಾನು ಹತಾಶನಾಗಲಿಲ್ಲ. ಹಿಂದುಸ್ಥಾನದ ಜನರನ್ನು ಕೆಟ್ಟ ರೀತಿಯಿಂದ ನಡೆಸಿಕೊಳ್ಳಲಿಕ್ಕೆ ಏನೋ ಒಂದು ಬಾಹ್ಯ ದೋಷವೇ ಹೊರತು ಅದಾಜ್ಯಪದ್ಧತಿಯು ಸ್ವಭಾವತಃ ಮತ್ತು ಸಾಮಾನ್ಯವಾಗಿ ಹಿತಕರವಾಗಿಯೇ ಇರುವದೆಂದು ನಾನು ನಂಬಿಕೊಂಡೆನು, ಆದುದರಿಂದ ನನ್ನ ೧೮೯೯ ನೇ ಇಸ್ವಿಯಲ್ಲಿ ಬೋಅರ ಯುದ್ಧವು ಪ್ರಾರಂಭವಾದಾಗ್ಗೆ ಬ್ರಿಟಿಶ ಸಾಮ್ರಾಜ್ಯದ ಸಹಾಯಕ್ಕಾಗಿ ನಾನು ಟೊಂಕ ಕಟ್ಟಿದೆನು. ಮತ್ತು ಆರೋಗ್ಯ ಸಂರಕ್ಷಕ ಪಥಕವನ್ನು ತಯಾರಿಸಿದೆನು. ಲೇಡಿಸ್ಮಿಥ ಪಟ್ಟಣವನ್ನು ತಿರುಗಿ ವಶಮಾಡಿಕೊಳ್ಳುವ ಸಲುವಾಗಿ ಆದ ಅನೇಕ ಕಾಳಗಗಳಲ್ಲಿ ನಾನು ಸಹಾಯ ಮಾಡಿದೆನು, ಅದರಂತೆ ಸನ್ನ ೧೯೦೬ ರಲ್ಲಿ ಝುಲು ಜನರು ದಂಗೆಯನ್ನು ಮಾಡಿದ ವೇಳೆಯಲ್ಲಿ ಬ್ರಿಟಿಶ ಸರಕಾರಕ್ಕೆ ಸಹಾಯ ಮಾಡಿದೆನು. ಈ ಎರಡೂ ಪ್ರಸಂಗಗಳಲ್ಲಿ ನನ್ನ ಕೆಲಸದ ಬಗ್ಗೆ ಲಾರ್ಡ ಹಾರ್ಡಿಂಜರವರು ಕೈಸರ-ಈ-ಹಿಂದ ಸುವರ್ಣ ಪದಕವನ್ನು ಅರ್ಪಿಸಿದರು ಸನ್ನ ೧೯೧೪ ನೇ ಇಸ್ವಿಯಲ್ಲಿ ಇಂಗ್ಲಂಡ ಮತ್ತು ಜರ್ಮನಿ ದೇಶಗಳ ನಡುವೆ ಯುದ್ಧವೆಸಗಲು ನಾನು ಲಂಡನದಲ್ಲಿಯ ಹಿಂದು ವಿದ್ಯಾರ್ಥಿಗಳ ಆರೋಗ್ಯ ಸಂರಕ್ಷಕ ಪಥಕವನ್ನು ತಯಾರ ಮಾಡಿದೆನು, ಆ ಪಥಕವು ಉತ್ಕೃಷ್ಟ ಕಾರ್ಯವನ್ನು ಮಾಡಿತೆಂದು ಅಧಿಕಾರಿಗಳು ಹೊಗಳುತ್ತಾರೆ ಸನ್ನ ೧೯೧೮ ನೇ ಇಸ್ವಿಯಲ್ಲಿ ಕೂಡಿದ ಯುದ್ಧಪರಿಷತ್ತದಲ್ಲಿ ಲಾರ್ಡ ಚೆಮ್ಸಫೋರ್ಡರು ಸೈನ್ಯ ಭರತಿಗೆ ಜನರು ಬೇಕೆಂದು ಕೇಳಿಕೊಳ್ಳಲು ಖೇಡಾ ತಾಲೂಕಿನಲ್ಲಿ ಸೈನ್ಯ ಭರತಿಯ ಕಾರ್ಯಕ್ಕೆ ಪ್ರಯತ್ನಪಟ್ಟೆನು ಈ ಎಲ್ಲ ಪ್ರಯತ್ನಗಳನ್ನು ಮಾಡುವಾಗ್ಗೆ ಇಂಥ ಪ್ರಯತ್ನಗಳಿಂದ ನನ್ನ ದೇಶಬಾಂಧವರಿಗೆ ಬ್ರಿಟಿಶ ಸಾಮ್ರಾಜ್ಯದಲ್ಲಿ ಸಮಾನ ಹಕ್ಕುಗಳು ಪ್ರಾಪ್ತವಾಗುವವೆಂದು ನನ್ನ ವಿಶ್ವಾಸವಿತ್ತು.

ಆದರೆ ಪ್ರಜೆಗಳ ನಿಜ ಸ್ವಾತಂತ್ರ್ಯವನ್ನು ನಾಶ ಪಡಿಸುವ ರೌಲೆಟ ಕಾಯಿದೆಯಿಂದ ನನ್ನ ವಿಶ್ವಾಸಕ್ಕೆ ಮೊದಲನೇ ವಜ್ರಾಘಾತವಾಯಿತು. ಇದಾದ ನಂತರ ಜಾಲಿಯನ ವಾಲಾಬಾಗದಲ್ಲಿ ಕೊಲೆಯಾಯಿತು ಮುಖ್ಯ ಪ್ರಧಾನರು ತುರ್ಕಸ್ಥಾನದ ಬಗ್ಗೆ ಮುಸಲ್ಮಾನರಿಗೆ ಅವರ ಧರ್ಮಸ್ಥಳಗಳ ಸಂರಕ್ಷಣೆಯ ಬಗ್ಗೆ ಕೊಟ್ಟ ವಚನವು ಪಾಲಿಸುವದರಲ್ಲಿ ಬರಲಿಲ್ಲ ಇಂಥ ಸ್ಥಿತಿಯಲ್ಲಿ ಸಹ ನನ್ನ ಮಿತ್ರರು ನನ್ನನ್ನು ವಿರೋಧಿಸುತ್ತಿದ್ದರೂ ಸರಕಾರದ ಕೂಡ ಸಹಕಾರಿತೆಯನ್ನು ಮಾಡಿ ಮಾಂಟೆಗ್ಯೂ ಸುಧಾರಣೆಗಳನ್ನು ಯಶಸ್ವಿಯಾಗಿ ಮಾಡಬೇಕೆಂದು ಅಮೃತಸರದ ಕಾಂಗ್ರೆಸಿನಲ್ಲಿ ಹೋರಾಡಿದೆನು. ಯಾಕೆಂದರೆ ಮುಸಲ್ಮಾನರಿಗೆ ಕೊಟ್ಟ ವಚನವನ್ನು ಮುಖ್ಯ ಪ್ರಧಾನರು ಪಾಲಿಸುವರೆಂದು ನಂಬಿದೆನು ಮತ್ತು ಸುಧಾರಣೆಗಳು ಅಸಮಾಧಾನಕಾರಕ ವಿದ್ದಾಗ್ಯೂ ಅವುಗಳಿಂದ ಹಿಂದುಸ್ಥಾನದ ಪ್ರಗತಿಯಾಗುವದೆಂದು ನಂಬಿದೆನು.

ಈ ನನ್ನ ನಂಬಿಗೆಯು ಹಾಳಾಯಿತು. ಖಿಲಾಫತ್ತ ವಚನವು ಈಡೇರಲಿಲ್ಲ. ಪಂಜಾಬಿ ಅತ್ಯಾಚಾರದಲ್ಲಿ ಭಾಗವನ್ನು ತೆಗೆದುಕೊಂಡ ಅಧಿಕಾರಿಗಳಿಗೆ ಶಿಕ್ಷೆಯಾಗುವದು ಒತ್ತಟ್ಟಿಗೆ ಉಳಿದು ಅವರನ್ನು ನವಕರಿಯಿಂದ ಸಹ ದೂರ ಮಾಡಲಿಲ್ಲ. ಅವರಲ್ಲಿ ಕೆಲವರಿಗೆ ಹಿಂದುಸ್ಥಾನದ ತಿಜೋರಿಯಿಂದ ಪೆನಶನ ದೊರಕಿದ್ದಲ್ಲದೆ ಕೆಲವರಿಗೆ ಇನಾಮು ಸಹ ಕೊಡಲ್ಪಟ್ಟಿತು. ಸುಧಾರಣೆಗಳಿಂದ ಅಧಿಕಾರಸ್ಥರ ವರ್ತನದಲ್ಲಿ ಏನೂ ಬದಲು ಆಗಲಿಲ್ಲ. ಸುಧಾರಣೆಗಳು ಹಿಂದುಸ್ಥಾನ ದೇಶದ ದಾಸ್ಯತ್ವವನ್ನು ದೀರ್ಘಕಾಲದ ವರೆಗೆ ಬೆಳೆಯಿಸುವ ಮತ್ತು ಆದೇಶದ ದ್ರವ್ಯ ಶೋಷಣೆಯನ್ನು ಮಾಡುವ ಸಾಧನಗಳೆಂದು ನನ್ನ ಮನವರಿಕೆಯಾಯಿತು.

ಬ್ರಿಟಿಶ ಜನರ ಸಂಬಂಧವು ಹಿಂದುಸ್ಥಾನ ದೇಶವನ್ನು ಮೊದಲಿಗಿಂತ ಆರ್ಥಿಕ ಮತ್ತು ರಾಜಕೀಯ ಸ್ಥಿತಿಯಲ್ಲಿ ಹೆಚ್ಚು ದುರ್ಬಲವಾಗಿ ಮಾಡಿತೆಂದು ನಾನು ಮನಗಂಡೆನ ನಿಶಸ್ತ್ರವಾಗಿ ಮಾಡಲ್ಪಟ್ಟ ಹಿಂದೂ ದೇಶವು ರಣಾಂಗಣದಲ್ಲಿ ಪ್ರಬಲವಾದ ಸಶಸ್ತ್ರ ಶತ್ರುವಿನ ಕೂಡ ಹೋರಾಡುವದು ಶಕ್ಯವಿಲ್ಲೆಂದು ನಾನು ಹಿಡಿದೆನ, ಈ ದೃಷ್ಟಿಯಿಂದ ನನ್ನ ದೇಶಬಾಂಧವರಲ್ಲಿ ಕೆಲವು ಜ್ಞಾನಿಗಳು ಹಿಂದುಸ್ಥಾನಕ್ಕೆ ವಸಾಹತಿನ ಸ್ವರಾಜ್ಯವು ಪ್ರಾಪ್ತವಾಗಬೇಕಾದರೆ ಬಹು ಶತಮಾನಗಳು ಬೇಕೆಂದು ತಿಳಿಯುವರು. ಹಿಂದುಸ್ಥಾನ ದೇಶವು ಅತಿದರಿದ್ರವಾಗಿದೆ. ದುಷ್ಕಾಳಗಳ ಪ್ರತೀಕಾರ ಮಾಡುವ ಸಾಮರ್ಥ್ಯವು ಅದರಲ್ಲಿಲ್ಲ. ಬ್ರಿಟಿಶರು ಬರುವ ಪೂರ್ವದಲ್ಲಿ ಹಿಂದುಸ್ಥಾನವು ತನ್ನ ಕೋಟ್ಯವಧಿ ಗುಡಸಲಗಳಲ್ಲಿ ನೇಯುವ ಮತ್ತು ನೂಲುವ ಕೆಲಸವನ್ನು ಮಾಡಿ ತನ್ನ ಕೃಷಿಯ ಉತ್ಪನ್ನವನ್ನು ಮಾಡಿಕೊಳ್ಳುತ್ತಿತ್ತು. ಇಂಗ್ಲಿಷ ಜನರೇ ವರ್ಣಿಸಿದಂತೆ ರಾಷ್ಟ್ರದ ಜೀವಿತಕ್ಕೆ ಅವಶ್ಯಕವಾದ ಈ ಉದ್ಯೋಗವು ನಿರ್ದಯತನದಿಂದ ನಾಶ ಪಡಿಸುವದರಲ್ಲಿ ಬಂದಿತು. ಅರ್ಧ ಉಪವಾಸದಿಂದ ಇರುವ ಗ್ರಾಮವಾಸಿಗಳು ದಿನ ದಿನಕ್ಕೆ ಹೇಗೆ ಆಸನ್ನಮರಣವಾಗಹತ್ತಿದರೆಂಬುವ ಕಲ್ಪನೆಯು ನಗರವಾಸಿಗಳಿಗೆ ಆಗಲಾರದು. ನಗರ ವಾಸಿಗಳು ಅನುಭವಿಸುವ ನೀಚ ಸುಖ ಸಂಪತ್ತು ಪರದೇಶದವರು ಮಾಡುವ ದ್ರವ್ಯ ಶೋಷಣೆಯ ದಲಾಲಿಯಿರುತ್ತದೆಂದು ಅವರಿಗೆ ಕಲ್ಪನೆ ಸಹ ಆಗುವದಿಲ್ಲ ಎಷ್ಟು ಶಬ್ದಾಡಂಬರ ಮಾಡಿದರೂ, ಅಂಕಿಗಳ ಕೋಷ್ಟಕಗಳನ್ನು ತೋರಿಸಿದರೂ ನಮ್ಮ ಕಣ್ಣಿಗೆ ಕಾಣುವ ಎಲುಬಿನ ಹಂದರದಂತೆ ಇರುವ ಗ್ರಾಮ ನಿವಾಸಿಗಳನ್ನು ಮರೆಯುವದು ಅಸಾಧ್ಯವು. ಈ ರೀತಿಯಿಂದ ಬಡವರ ಅಪರಾಧ ಮಾಡಿದ ಬಗ್ಗೆ ದೇವರು ಇದ್ದದ್ದೇ ನಿಜವಿದ್ದರೆ ಅವನ ಮುಂದೆ ಇಲ್ಲಿಯ ನಗರವಾಸಿಗಳು ಮತ್ತು ಇಂಗ್ಲಂಡವು ಜವಾಬ ಕೊಡಬೇಕಾಗುವದೆಂಬುದು ನಿಶ್ಚಿತವಾದ ಮಾತು. ಪರದೇಶದವರು ಮಾಡುವ ದ್ರವ್ಯ ಶೋಷಣೆಗೆ ಅನುಕೂಲವಾಗುವಂತೆ ಕಾಯಿದೆಯು ಉಪಯೋಗವು ಮಾಡಲ್ಪಡುತ್ತದೆ. ಪಂಜಾಬದ ಲಷ್ಕರೀ ಕಾಯಿದೆ ಕೋರ್ಟುಗಳಿಂದ ಶಿಕ್ಷೆ ಹೊಂದಿದವರಲ್ಲಿ ೧೦೦ ಕ್ಕೆ ೯೫ ಜನರು ನಿರಪರಾಧಿಯೆಂದು ನನ್ನ ನಿಷ್ಪಕ್ಷಪಾತ ಬುದ್ಧಿಯು ಹೇಳುತ್ತದೆ. ರಾಜಕೀಯ ಅಪರಾಧಿಗಳೆಂದು ಶಿಕ್ಷಿಸಲ್ಪಟ್ಟ ಹತ್ತು ಜನರಲ್ಲಿ ೯ ಜನರು ನಿರಪರಾಧಿಯಿರುವರೆಂದು ನನ್ನ ಸ್ವಾನುಭವವು ನನಗೆ ಸಾಕ್ಷಿಯಾಗಿದೆ ತಮ್ಮ ಮಾತೃಭೂಮಿಯ

ಪೋಲಿಸ ಪ್ರೇಮವೇ ಅವರು ಮಾಡಿದ ಅಪರಾಧವು. ಹಿಂದುಸ್ಥಾನದ ಕೋರ್ಟುಗಳಲ್ಲಿ ಹಿಂದಿ ಮತ್ತು ಬ್ರಿಟಿಶ ಇವರ ನಡುವೆ ನ್ಯಾಯವಿದ್ದಾಗ್ಗೆ ೧೦೦ ಕ್ಕೆ ೯೯ ಖಟ್ಲೆಗಳಲ್ಲಿ ಹಿಂದೂಗಳಿಗೆ ನ್ಯಾಯ ಸಿಗುವದು ದುರ್ಲಭವು. ಈ ಚಿತ್ರದಲ್ಲಿ ಅತಿಶಯೋಕ್ತಿಯು ಇರುವದಿಲ್ಲ. ಈ ಯುವೆ ೨ ಅನುಭವಿ ವಣಿಯು ತಿಳಿದಾಗಲಿ ತಿಳಿಸುವದೇ ಪರೀಕ್ಷೆಯು ಮಾಡುವ ಗ್ರಸ್ತ ಶೋಷಕರಿಗಾಗಿ ಅನುಕೂಲ ಮಾಡಲ್ಪಡುತ್ತದೆಂದು ನನ್ನ ಅಭಿಪ್ರಾಯವು. ಇಂಗ್ಲಿಷ ಅನರು, ಮತ್ತು ಅವರ ದಾಸ್ಯವಾದಿಗಳಿಗೆ ಸಹಾಯ ಮಾಡುವ ಹಿಂದುಗಳು ನಾನು ಮೇಲೆ ವರ್ಣಿಸಿದ ಪಾಪ ಕೃತ್ಯದಲ್ಲಿ ಭಾಗೀದಾರರು ಇರುವರೆಂದು ತಿಳಿಯದೇ ಇರುವರು. ದೇಶದ ದೊತ್ತ ದುರ್ಭಾಗ್ಯವು ಹೀಗಿದ್ದು ಜನ ಇಂಗ್ಲಿಷ ಮತ್ತು ಹಿಂದು ಅಧಿಕಾರಿಗಳು ಜಗತ್ತಿನಲ್ಲಿ ಅತ್ಯುತ್ಕೃಷ್ಟವಾದ ರಾಜ್ಯ ಪದ್ಧತಿಯು ಇರುವದ ತನ್ನ ರೂಢನಾಗಿ ಮತ್ತು ಹಿಂದುಸ್ಥಾನ ದೇಶದಲ್ಲಿ ಸಾವಕಾಶವಾದ ಎತ್ತರವಾಗಿ ಪ್ರಗತಿಯಾಗುತ್ತದೆಂದು ಪ್ರಾಮಾಣಿಕತನದಿಂದ ತಿಳಿಯುತ್ತಾರೆಂಬುದು ನನಗೆ ಮನವರಿಕೆಯಾಗಿದೆ ಒತ್ತಟ್ಟಿಗೆ ಶಕ್ತಿಯ ಆಡಂಬರವು ಮತ್ತು ಸೂಕ್ಷ್ಮರೀತಿಯಿಂದ ಜನರನ್ನು ಅಂಜಿಕೆಯಲ್ಲಿ ಇಡುವ ಪದ್ಧತಿಯು ಎದುರಿಸಕಡೆಗೆ ಸ್ವಸಂರಕ್ಷಣೆಯನ್ನು ಮಾಡಿಕೊಳ್ಳಲಿಕ್ಕೆ ಹಕಹುಲದಾದ ಪ್ರಜೆಗಳು ಆದುದರಿಂದ ಪ್ರಜೆಗಳು ಅಂಗಹೀನ ಬಲಪ್ರವೃತ್ತಿಯುಳ್ಳವರು. ಇದು ಸ್ವಾಭಾವಿಕವು ಈ ದುಷ್ಟ ವೃತ್ತಿಯಿಂದ ಅಧಿಕಾರಸ್ಥರಲ್ಲಿ ಅಜ್ಞಾನವೂ ಮೋಹವೂ ಹುಟ್ಟಿವೆ. ನಾಗರಿಕರ ಸ್ವತಂತ್ರತೆಯನ್ನು ನಾಶಪಡಿಸುವ ಇಂಡಿಯನ ಪಿನಲ ಕೋಡಿನಲ್ಲಿ ಇದ್ದ ರಾಜಕೀಯ ಕಲಮುಗಳಲ್ಲಿ ೧೨೪ ಅ ಕಲಮು ಒಂದಾಗಿದೆ ಇಂಥ ಕಲಮಿನನ್ವಯ ನನ್ನಮೇಲೆ ಆರೋಪ ಇಟ್ಟದ್ದರಿಂದ ನನಗೆ ಆನಂದವಾಗಿದೆ ಪ್ರೇಮ ಎಂಬ ವಸ್ತುವು ಕಾಯಿದೆಯಿಂದ ನಿರ್ಮಾಣವಾಗಲು ಶಕ್ಯವಿಲ್ಲ ಒಬ್ಬನಿಗೆ ವ್ಯಕ್ತೊಬ್ಬನ ವಿಷಯಕ್ಕೆ ಪ್ರೇಮವಿರದಿದ್ದರೆ ಅದನ್ನು ವ್ಯಕ್ತಮಾಡಲಿಕ್ಕೆ ಅವನಿಗೆ ಅಧಿಕಾರವಿರಲಿಕ್ಕೆಬೇಕು. ಆದರೆ ಅದನ್ನು ವ್ಯಕ್ತಪಡಿಸುವಾಗ್ಗೆ ಅತ್ಯಾಚಾರದ ಉದ್ದೇಶವು ಅಥವಾ ಅತ್ಯಾಚಾರಕ್ಕೆ ಉದ್ಯುಕ್ತ ಮಾಡುವ ಉದ್ದೇಶವಿರದಿದ್ದರಾಯಿತು. ನನ್ನ ಮತ್ತು ಶ್ರೀಯುತ ಬ್ಯಾಂಕರರ ಮೇಲೆ ಇರುವ ಆರೋಪವು ಅಪ್ರೀತಿಯನ್ನು ಪಸರಿಸುವ ಸಲುವಾಗಿಯೇ ಮಾತ್ರ ಇರುವದು.

ಈ ಕಲಮಿನನ್ವಯ ಆದ ಖಟ್ಲೆಗಳನ್ನ ನಾನು ನಿರೀಕ್ಷಿಸಿರುತ್ತೇನೆ ಈ ಕಲಮಿನನ್ವಯ ಅತ್ಯಂತ ಶೀಲ ದೇಶಭಕ್ತರು ಶಿಕ್ಷೆಯನ್ನು ಹೊಂದಿರುವರೆಂಬ ಮಾತು ನನಗೆ ಗೊತ್ತದೆ. ಆದುದರಿಂದ ಈ ಕಲಮಿನನ್ವಯ ನನ್ನಮೇಲೆ ಖಟ್ಲೆ ಮಾಡುವದೆಂದರೆ ನನ್ನ ಸನ್ಮಾನವೆಂದು ನಾನು ತಿಳಿಯುತ್ತೇನೆ. ನನ್ನ ಅಪ್ರೀತಿಯ ಕಾರಣಗಳನ್ನು ನಾನು ಸ್ವಲ್ಪದರಲ್ಲಿ ಹೇಳುತ್ತೇನೆ. ನನ್ನ ಮನಸ್ಸಿನಲ್ಲಿ ಯಾವ ವ್ಯಕ್ತಿಯ ವಿಷಯಕ್ಕೂ ದ್ವೇಷಭಾವವಿರುವದಿಲ್ಲ. ಅಂದ ಮೇಲೆ ಬಾದಶಹನ ವಿಷಯಕ್ಕೆ ಅಪ್ರೀತಿ ಇರುವದು ತೀರ ಅಸಂಭವವು. ಆದರೆ ಯಾವ ರಾಜ್ಯಪದ್ಧತಿಯಿಂದ ಮೊದಲಿನ ಸರಕಾರಕ್ಕಿಂತ ಪದ್ಧತಿಗಳಿಗಿಂತಲೂ ಹೆಚ್ಚಿಗೆ ಅಕಲ್ಯಾಣವಾಗುತ್ತದೆಯೋ ಅಂಥ ರಾಜ್ಯಪದ್ಧತಿಯ ವಿಷಯವಾಗಿ ಅಪ್ರೀತಿಯನ್ನು ಹುಟ್ಟಿಸುವದು ನಾನು ಸದ್ಗುಣವೆಂದು ತಿಳಿಯುತ್ತೇನೆ.

ಪುರಾವೆ ಯಂದು ಕೋರ್ಟದಲ್ಲಿ ದಾಖಲ ಮಾಡಿದ ಲೇಖಗಳನ್ನು ಬರೆಯುವಂಥ ಮಾನವು ನನಗೆ ಸಿಕ್ಕಿತೆಂದು ಅನಿಸುತ್ತದೆ. ಇಂಗ್ಲಂಡ ಮತ್ತು ಹಿಂದುಸ್ಥಾನ ಇವೆರಡೂ ದೇಶಗಳು ಅಸ್ವಾಭಾವಿಕ ಬಂಧನದಲ್ಲಿ ಸಿಕ್ಕು ಒದ್ದಾಡ ಹತ್ತಿರುತ್ತವೆ. ಅವುಗಳನ್ನು ಈ ಬಂಧನದೊಳಗಿಂದ ಮುಕ್ತ ಮಾಡಲಿಕ್ಕೆ ಅಸಹಕಾರಿತೆಯೇ ಉಪಾಯವೆಂದು ತೋರಿಸಿಕೊಟ್ಟು ಎರಡೂ ದೇಶಗಳ ಸೇವೆಯನ್ನು ಮಾಡಿರುತ್ತೇನೆ. ಅತ್ಯಾಚಾರ ಅಸಹಕಾರದಿಂದ ದೇಶಕ್ಕೆ ಭಯಂಕರ ಹಾನಿ ತಪ್ಪುತ್ತದೆಂದು ನನ್ನ ದೇಶ ಬಾಂಧವರಿಗೆ ತಿಳಿಸಿ ಹೇಳಿದೆನು. ಈ ನನ್ನ ಕರ್ತವ್ಯವನ್ನು ಮಾಡುವದು ಕಾಯಿದೆ ದೃಷ್ಟಿಯಿಂದ ಅಪರಾಧವೆಂದು ತಿಳಿದುಕೊಳ್ಳಲ್ಪಡುತ್ತಿದ್ದರೆ ಅದಕ ಸಲುವಾಗಿ ಎಷ್ಟು ಕಠಿಣ ಶಿಕ್ಷೆ ಹೇಳಿರುತ್ತದೋ ಅಷ್ಟೇ ಕಠುತರವಾದ ಶಿಕ್ಷೆಯನ್ನು ನನಗೆ ಕೊಡಬೇಕೆಂದು ಕೋರ್ಟಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಆ ಶಿಕ್ಷೆಯನ್ನು ಅನುಭವಿಸಲಿಕ್ಕೆ ಆನಂದದಿಂದ ಸಿದ್ಧನಿರುತ್ತೇನೆ. ನ್ಯಾಯಾಧಿಕಾರೀ ಮತ್ತು ಅಸೇಸರರೇ ನೀವು ಅಮಲಬಜಾವಣಿ ಮಾಡುವ ಕಾಯಿದೆಯು ದುಷ್ಟವಾದದ್ದಿರುತ್ತದೆಂದು ನಿಮಗೆ ಅನಿಸಿದರೆ ನಿಮ್ಮ ಜಾಗಕ್ಕೆ ರಾಜೀನಾಮೆಯನ್ನು ಕೊಟ್ಟು ದೋಷಮುಕ್ತರಾಗಬೇಕು. ಇಲ್ಲವೆ ಈ ಕಾಯಿದೆಯು ನಮ್ಮ ದೇಶಕ್ಕೆ ಹಿತಾವಹವಾಗಿರುತ್ತದೆಂದೂ ನಾನು ಹೇಳುವ ತತ್ವವು ಅಪಾಯಕಾರಕವಿರುತ್ತದೆಂದೂ ನಿಮಗೆ ಅನಿಸಿದರೆ ನನಗೆ ಅತ್ಯಂತ ಕಠುತರವಾದ ಶಿಕ್ಷೆಯನ್ನು ಕೊಡಬೇಕು.

( ಮೋಹನದಾಸ ಕರಮಚಂದ ಗಾಂಧಿ)

---

## ಮಹಾತ್ಮರ ಖಟ್ಲೆಯ ತೀರ್ಪು

ಜಡ್ಜಸಾಹೇಬ ರಾವ ಸಿ. ಎ. ಬ್ರೂಮಫೀಲ್ಡ್ಸ ಕೆಳಕ್ಕೆ ಬರೆದ ಪ್ರಕಾರ ತೀರ್ಪನ್ನು ಹೇಳಿದರು–

ಶ್ರೀಯುತ ಗಾಂಧಿಯವರೇ, ನಿಮ್ಮ ಮೇಲೆ ಹೊರಿಸಿದ ಅಪರಾಧವನ್ನು ನೀವೇ ಒಪ್ಪಿಕೊಂಡು ಒಂದು ರೀತಿಯಿಂದ ನನ್ನ ಕೆಲಸದ ಭಾರವನ್ನು ನೀವು ಹಗುರಾಗಿ ಮಾಡಿರುವಿರಿ. ಇನ್ನು ಮೇಲೆ ಉಳಿದ ಕಾರ್ಯವೆಂದರೆ ತೀರ್ಪನ್ನು ಹೇಳುವದು. ಹಿಂದುಸ್ಥಾನದಲ್ಲಿ ಸಮರ್ಪಕವಾದ ತೀರ್ಪನ್ನು ಹೇಳುವದೆಂಬದೆ ಅದೊಂದು ಬಹು ಕಠಿಣವಾದ ಕೆಲಸವೇ ಇರಬಹುದು. ಎಂಥ ಯೋಗ್ಯತೆಯ ಪುರುಷನಿದ್ದರೂ ಕಾಯಿದೆಯು ಅವನನ್ನು ಕಾಯಿದೆ ದೃಷ್ಟಿಯಿಂದ ನೋಡಲೇ ಬೇಕಾಗುತ್ತದೆ. ಆದರೂ ಸಹ ನಿಮ್ಮಂಥವರ ಮಾತೆ ಬೇರೆ; ನಾನು ಇಷ್ಟು ದಿವಸಗಳವರೆಗೆ ವಿಚಾರಿಸಿದ ಮತ್ತು ಇನ್ನು ಮೇಲೆ ವಿಚಾರಿಸಬಹುದಾದ ಅಪರಾಧಿ ಜನರ ಮಾತೇ ಬೇರೆ. ಈ ಸಂಗತಿಯನ್ನು ದುರ್ಲಕ್ಷಿಸುವದು ಅಶಕ್ಯವೇ ಸರಿ ನೀವು ಅಸಾಧಾರಣರಾದ ದೇಶಭಕ್ತರೆಂದೂ, ಒಳ್ಳೇ ಹಿರಿಯರಾದ ಮುಖಂಡರೆಂದೂ ನಿಮ್ಮ ಸ್ವದೇಶ ಬಾಂಧವರಲ್ಲಿ ಲಕ್ಷಾವಧಿ ಜನರು ನಿಮ್ಮನ್ನು ಪೂಜಿಸುತ್ತಿರುವರೆಂಬುದನ್ನೂ ಕೂಡ ಯಾರೂ ಅಲ್ಲಗಳೆಯುವದು ಶಕ್ಯವಿಲ್ಲ. ರಾಜಕಾರಣದಲ್ಲಿ ನಿಮ್ಮಗೂಡ ಮತಭೇದವಿದ್ದವರು ಸಹ, ನೀವು ಒಳ್ಳೇ ಸದ್ಗುಣಯುಕ್ತರಾದ ಪುರುಷರೆಂದೂ, ವಿನಯ ಶೀಲರೆಂದೂ ಆದರ್ಶ ಋಷಿಗಳೆಂದೂ ಸಹ ನಿಮ್ಮನ್ನು ಗಣಿಸುತ್ತಾರೆ. ನಾನು ಮಾತ್ರ ನಿಮ್ಮನ್ನು ಒಂದೇ ದೃಷ್ಟಿಯಿಂದ ನೋಡಬೇಕಾಗಿದೆ. ಆದೃಷ್ಟಿಯು ಒಂದು ಬಿಟ್ಟು ಉಳಿದ ಯಾವದೃಷ್ಟಿಯಿಂದಲೂ ನಾನು ನಿಮ್ಮ ಟೀಕೆಯನ್ನಾಗಲಿ ಗುಣ ಗೌರವವನ್ನಾಗಲಿ ಮಾಡಲಾರೆ, ಮತ್ತು ಹಾಗೆ ಮಾಡುವದೂ ನನ್ನ ಕರ್ತವ್ಯವಲ್ಲ ಕಡುತರವಾದ ರಾಜದ್ರೋಹಾತ್ಮಕ ಕೃತಿಗಳನ್ನು ಮಾಡಿ, ಅವುಗಳನು ಮಾಡಿದ ಬಗ್ಗೆ ಎಲ್ಲವನ್ನು ಒಪ್ಪಿಕೊಂಡು ಸರಕಾರದ ಕಟ್ಟಳೆಗಳಿಗೆ ಈಡಾದ ಮನುಷ್ಯನನ್ನು ವಿಚಾರಿಸುವದು ಮಾತ್ರ ನನ್ನ ಕರ್ತವ್ಯವು. ನೀವು ಒಂದೇಸವನೆ ಅಹಿಂಸಾ ಕೃತಿಗಳ ವಿರುದ್ಧವಾಗಿ ಉಪದೇಶಿಸಿರುವಿರೆಂಬುದನ್ನು ಹಿಂಸೆಗಳನ್ನು ದೂರ ಮಾಡಲಿಕ್ಕೆ ಬಹು ಶ್ರಮಬಟ್ಟಿರುವಿರೆಂಬುದನ್ನು ಸಂಗತಿಯಲ್ಲಿಯ ನನ್ನ ವಿಶ್ವಾಸವನ್ನೂ ನಾನೇನು ಮರೆಯುವದಿಲ್ಲ, ಆದರೆ ನಿಮ್ಮ ರಾಜಕೀಯ ಉಪದೇಶದ ಸ್ವರೂಪವನ್ನೂ, ನಿಮ್ಮ ಉಪದೇಶವನ್ನೂ ಕೇಳುವ ಜನರ ಸ್ವಭಾವವನ್ನೂ ನೀವು ಅರಿತುಕೊಂಡು ಕಷ್ಟಪಡಗಾದರೂ ಹಿಂಸಾ ಕೃತಿಗಳು ಸಂಭ

ವಿಸಲಾದವೆಂಬದರಲ್ಲಿ ನಿಮ್ಮ ನಂಬಿಗೆಯು ಹೇಗೆ ಸ್ಥಿರವಾಗಿ ಕೆಂಬದನ್ನು ಮಾತ್ರ ಲಕ್ಷ್ಯದಲ್ಲಿ ತಂದರೆ ನನ್ನ ಮುಂದಿಯ ವಿಚಾರ ಶೂನ್ಯ ವಾಗುತ್ತದೆ. ನಿಮ್ಮನ್ನು ಸ್ವತಂತ್ರಿಯನ್ನಾಗಿರಿಸುವದು ಅಶಕ್ಯ ವಾಗುವ ಹಾಗೆ ನೀವು ಸರಕಾರದ ವಿರೋಧಿಗಳಾಗಿದ್ದನ್ನು ಕಂಡು ಬೇದಬಡದ ಜನರು ವಿರಳ. ಅದು ಏನೇ ಇರಲಿ ವಸ್ತು ಸ್ಥಿತಿಯು ಹೀಗಿದೆ. ಸಾರ್ವಜನಿಕ ಹಿತ ದೃಷ್ಟಿಯಿಂದ ನಿಮಗೆ ಯೋಗ್ಯವಾದ ಯಾವ ಶಿಕ್ಷೆಯನ್ನು ವಿಧಿಸಬೇಕೆಂಬ ಬಗ್ಗೆ ನಾನು ಬಹಳ ವಿಚಾರಿಸಿದ್ದೇನೆ. ಸುಮಾರು ಹನ್ನೆರಡು ವರ್ಷಗಳ ಹಿಂದೆ ಈ ನಿಮ್ಮ ಪ್ರಕರಣಕ್ಕೆ ಬಹುಅಂಶದಿಂದ ಹೋಲುತ್ತಿರುವಂಥದೊಂದು ಪ್ರಕರಣವು ಉದ್ಭವವಾಗಿದ್ದಿತು ಈಗ್ಗೆ ನಾನು ಅದನ್ನೇ ಅನುಸರಿಸಬೇಕೆನ್ನುತ್ತೇನೆ. ಈ ಕಲಮಿನ ಕೆಳಗಿನದೇ ಆದ ಶ್ರೀಯುತ ಬಾಳಗಂಗಾಧರ ಟಿಳಕರ ಪ್ರಕರಣವೇ ಅದು. ಆರು ವರ್ಷಗಳವರೆಗೆ ಸಾದಾ ಕಾರಾಗೃಹವಾಸವು ಅವರಿಗೆ ವಿಧಿಸಲ್ಪಟ್ಟಿತ್ತು. ಶ್ರೀಯುತ ಟಿಳಕರವರಂತೆಯೇ ನಿಮ್ಮನ್ನು ನಡೆಸಿಕೊಂಡರೆ ಅದೇನು ಅನುಚಿತವಾಯಿತೆಂದು ನೀವು ತಿಳಿಯುವದಿಲ್ಲವೆಂದು ನನ್ನ ವಿಚಾರವಿದೆ. ಅಂದರೆ ಪ್ರತಿಯೊಂದು ಅಪರಾಧಕ್ಕೆ ಎರಡುವರ್ಷಗಳ ಸಾದಾ ಶಿಕ್ಷೆಯನ್ನು ನಿಮಗೆ ವಿಧಿಸುವದು ನನ್ನ ಕರ್ತವ್ಯವೆಂದು ನನ್ನ ಭಾವನೆಯದೆ ಮತ್ತು ಹೀಗೆ ಮಾಡುವಾಗ್ಗೆ ನಾನು ಒಂದು ಸಂಗತಿಯನ್ನು ಉಲ್ಲೇಖಿಸುವೆನು. 'ಹಿಂದುಸ್ಥಾನದ ಈಗಿನ ಪರಿಸ್ಥಿತಿಯು ಬದಲಾಗಿ ನಿಮ್ಮನ್ನು ಬಿಡುಗಡೆ ಮಾಡುವ ಸುಪ್ರಸಂಗವು ಉಂಟಾದರೆ ನನಗೆ ಅದಷ್ಟು ಆನಂದವು ಯಾರಿಗೂ ಆಗದು.

---

ಹೋದ ಸಂಚಿಕೆಯ ೧೭೬ನೇ ಪುಟದಿಂದ ಮುಂದೆ ಸಾಗಿದ್ದು.

ಅದ್ದರಿಂದ ಸಾಂಪ್ರತದಲ್ಲಿ ನಮ್ಮ ವಿಶೇಷ ಹಾಗು ಸರ್ವಶ್ರೇಷ್ಠವಾದ ಧರ್ಮವು ಖಾದಿಯೇ ಇರುವದು. ತುಪ್ಪವನ್ನು ಹೇಗೋ ಹಾಗೆಯೇ ಖಾದಿಯನ್ನು ಬಪ್ಪಿಸಿ ಉಪಯೋಗಿಸಬೇಕು ಕೈನೂಲನ್ನು ಹಾಲಿನಂತೆ ಎಣಿಸಬೇಕು ರಾಟೆಯು ನಮ್ಮ ವಿಷಯದಲ್ಲಿ ಪೂಜ್ಯವಾ ಗೋವು. ಗೋವು ಇಲ್ಲದ ಮನೆಗೆ ಶೋಭೆ ಇಲ್ಲ. ಅದರಂತೆ ರಾಟೆಯುಳ್ಳದಮನೆಗೆ ಶೋಭೆಯಿಲ್ಲ. ಸಣ್ಣವರಿರಲಿ, ದೊಡ್ಡವರಿರಲಿ, ಆಕವನ್ನು ಕಳೆಯುವದು ಹೀನತನವೆಂದು ಯ ಲಿಯುವ ಅದರಂತೆಯೇ ಸಣ್ಣವರೂ ದೊಡ್ಡವರೂ ರಾಟೆಯನ್ನು ನಡೆಸುವದು ಹೀನತನವೆಂದು ತಿಳಿಯುವ ದೊಡ್ಡಸ್ತಿಕೆಯೊಂದು ತಿಳಿಯತಕ್ಕದ್ದು ಆಕಳವು ಒಮ್ಮೊಮ್ಮೆ ಒದಿಯುವದುಂಟು ಆದರೆ ನಮ್ಮ ರಾಟೆಯು ಬಹು ಪರೋಪಕಾರಿಯಾದದ್ದಿದೆ ಅದೆಂದಿಗೂ ಯಾರನ್ನೂ ಒದೆಯದು ಆಕಳವು ಮೇವು ಬೇಡುವದು ನಮ್ಮ ರಾಟೆಗೆ ಮೇವು ಮುಂತಾದ್ದು ಬೇಡ. ರಾಟೆಯಿಂದ ಬೆಳಗಿನ ಹಾಲಿನಂತೆ ಬೇಕಾದಹಾಗೆ ನೂಲನ್ನು ತೆಗೆಯಲು ಬರುತ್ತದೆ ಆಕಳವು ತನ್ನ ಶಕ್ತಿಯಂತೆ ಹಾಲನ್ನೀಯುತ್ತದೆ ಆದರೆ ರಾಟೆಯು ನಮ್ಮ ಶಕ್ತಿಯಂತೆ ನೂಲನ್ನೀಯುತ್ತದೆ ರಾಟೆಯ ರಕ್ಷಣೆಯು ಗೋರಕ್ಷಣೆಯಿರುವದು ಸ್ವದೇಶಿಯ ಭಕ್ತರು ಉದ್ಧ ಅ[illegible] ಅರಿವೆಯನ್ನೇ ಧರಿಸುವದು ಅವಶ್ಯವು.

ಪ್ರಾಂತಿಕ ಸಭೆಗಳಿಗೆ ಜನರಿಗೆ ಖಾದಿಯನ್ನು ಹಾಕಿಕೊಳ್ಳಿರೆಂದು ಹೇಳಬೇಕಾಗುತ್ತಿರುವದೆಂಬದನ್ನು ನೋಡಿ ನನಗೆ ನಾಚಿಕೆಯಾಗುತ್ತದೆ. ಪರದೇಶಿ ವಸ್ತ್ರ ಗಿರಣಿಯ ಅರಿವೆಗಳು ನಿಲ್ಲದೆ ಮಾರಲ್ಪಡುವದೂ ಕೈನೂಲಿನ ಖಾದಿಯು ಹಾಗೇ ಬೀಳುವದೂ ಹಿಂದುಸ್ಥಾನದ ಉದಯದ ಲಕ್ಷಣವಲ್ಲ ಗೋದಿಯನ್ನು ಚೆಲ್ಲಿ ಹೊಟ್ಟು ತಿಂದಂತೆ ಇದಾಗಿರುತ್ತದೆ.

ರಾಟೆಯ ಉದ್ಧಾರವಾಗದಿದ್ದರೆ ಗೋರಕ್ಷಣೆಯ ಕೆಲಸವು ಬಹುಶಃ ಅಸಂಭವವಾಗುವದು ಹಿಂದುಸ್ಥಾನದ ಒಕ್ಕಲಿಗರ ಬಳಿಯಲ್ಲಿ ಹಣವಿರುವದಿಲ್ಲಾದ್ದರಿಂದ ಅವರಿಗೆ ತಮ್ಮ ದನಕರುಗಳನ್ನು ಮಾರಿ ಹೊಟ್ಟೆ ಹೊರಕೊಳ್ಳಬೇಕಾಗುತ್ತದೆ. ಹಿಂದುಸ್ಥಾನದ ಜನರು ಹೇಗೆ ದುರ್ಬಲರೋ ಹಾಗೆಯೇ ಅವರ ದನಕರುಗಳಾದರೂ ದುರ್ಬಲವಾದವುಗಳು ಹಿಂದುಸ್ಥಾನಕ್ಕೆ ಸಾಕಷ್ಟು ಪ್ರಾಣವಾಯುವು ದೊರೆಯುದಿಲ್ಲ ಆದ್ದರಿಂದ ಅವರಿಗೆ ಉಸುಲು ಕಟ್ಟಿದಂತಾಗುತ್ತದೆ ಹಿಂದೀರೈತರಿಗೆ ವರ್ಷದಲ್ಲಿ ನಾಲ್ಕುತಿಂಗಳು ಉಪಾಯವಿಲ್ಲದೆ ನಿರುದ್ಯೋಗಿಯಾಗಬೇಕಾಗುತ್ತದೆ ಹೀಗೆ ಉಪಾಯವಿಲ್ಲದೆ ನಿರುದ್ಯೋಗಿ ಯಾದವರ ಪಾಲಿಗೆ ನಾಶವು ಕಟ್ಟಿಟ್ಟದ್ದೇ. ಒಕ್ಕಲತನದ ಕೆಲಸವಿಲ್ಲದಾಗ ಕೋಟ್ಯಾವಧಿ ಒಕ್ಕಲಿಗರಿಗೆ ರಾಟೆಯೇ ಒಂದು ಉದ್ಯೋಗವು, ಬೇರೊಂದಿಲ್ಲ.

( ನವಜೀವನ )

( ಮೋಹನದಾಸ ಕರಮಚಂದ ಗಾಂಧಿ. )

---

## ವಾಙ್ಮಯ ವಿಚಾರ.

**ಪರರಾಷ್ಟ್ರಗಳಲ್ಲಿಯ ಅಸಹಕಾರಿತೆಯು**

ಇದನ್ನು ಧಾರವಾಡದ ಶ್ರೀ. ನರಸಿಂಗರಾವ ಕಮಲಾಪೂರವರು ಬರೆದಿದ್ದಾರೆ. ಈಗಿನ ರಾಷ್ಟ್ರೀಯ ಚಳವಳಿಗೆ ಈ ಗ್ರಂಥವು ಅವಶ್ಯವಾಗಿದೆ. ತಮ್ಮ ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಬೇರೆ ಬೇರೆ ರಾಷ್ಟ್ರಗಳಲ್ಲಿಯ ಜನರು ಹೇಗೆ ಕಷ್ಟಪಡಬೇಕಾಯಿತೆಂಬದನ್ನು ಹಿಂದೀಯರು ಈಗ್ಗೆ ತಿಳಿದುಕೊಳ್ಳುವದು ಅಗತ್ಯವಿದೆ. ಮೊದಲನೇ ಪ್ರಯತ್ನವಾದರೂ ಭಾಷಾಂತರವು ನೆಟ್ಟಗೆ ಸಾಧಿಸಿದೆ. ಕರ್ನಾಟಕವೀರ ದಿವಾಕರರು ಇದರ ಪ್ರಸ್ತಾವನಾ ಲೇಖಕರು ಕನ್ನಡಿಗರು ಈ ಗ್ರಂಥವನ್ನು ಒಂದಾವರ್ತಿಯಾದರೂ ಓದತಕ್ಕದ್ದು ಬೆಲೆ ೧ ರೂಪಾಯಿ ವಿಳಾಸ:- ಕರ್ನಾಟಕ ಪ್ರಿಂಟಿಂಗ ಕಂಪನಿ ಧಾರವಾಡ

**೨. ಚಿತ್ತರಂಜನ ದಾಸರ ಚರಿತ್ರೆಯು** ಇದನ್ನಾದರೂ ಶ್ರೀ. ಕಮಲಾಪೂರವರೇ ಬರೆದಿದ್ದಾರೆ. ದಾಸರವರ ಚರಿತ್ರೆಯು ಈ ಚಿಕ್ಕ ಪುಸ್ತಕದಲ್ಲಿ ಚನ್ನಾಗಿ ಬರೆಯಲ್ಪಟ್ಟಿದೆ. ಬೆಲೆ ೨ ಆಣೆ. ವಿಳಾಸ:-ವಿಜಯ ಕಾರ್ಯಾಲಯ ಧಾರವಾಡ.

**೩. ಸಚಿತ್ರ ಬಾಲಭಾರತ.** ( ೨ನೇ ಆವೃತ್ತಿ ಬೆಲೆ ೧೦ ಆಣೆ. ಮತ್ತು **೪. ಸಚಿತ್ರ ಬಾಲರಾಮಾಯಣ.** ( ೨ ನೇ ಆವೃತ್ತಿ ) ಬೆಲೆ ೫ ಆಣೆ. ಕನ್ನಡ ವಾಙ್ಮಯದಲ್ಲಿ ಹೆಸರುಪಡೆದ ಶ್ರೀ. ಹೊನ್ನಾಪೂರ ಮಠದ ಗದಿಗೆಯ್ಯನವರು ಈ ಎರಡೂ ಗ್ರಂಥಗಳ ಕರ್ತರು. ಮೊದಲನೇ ಆವೃತ್ತಿಯು ತೀರಿ ಹೋದ್ದರಿಂದ ಎರಡನೇ ಸಾರೆ ಇವುಗಳನ್ನು ಮುದ್ರಿಸಬೇಕಾಯಿತು ಇದರಿಂದಲೇ ಈ ಗ್ರಂಥಗಳ ಉಪಯುಕ್ತತೆಯು ಸಿದ್ಧವಾಗುತ್ತದೆ. ವಿಳಾಸ:- ಚಂದ್ರೋದಯ ಮುದ್ರಾಲಯ ಧಾರವಾಡ.

೫. ಹಿಂದೀ ಭಾಷಾಸಾರ ಕನ್ನಡಿಗರ ಸಲುವಾಗಿ ಶ್ರೀ. ಡಿ. ಕೆ. ಭಾರದ್ವಾಜರು ಈ ಗ್ರಂಥವನ್ನು ರಚಿಸಿದ್ದಾರೆ. ಆಯಾಸವಿಲ್ಲದೇ ಹಿಂದೀ ಭಾಷೆಯನ್ನು ಈ ಗ್ರಂಥಾವಲೋಕನದಿಂದ ಕಲಿತುಕೊಳ್ಳಲು ಅನುಕೂಲವಿದೆ. ರಾಷ್ಟ್ರೀಯ ಶಾಲೆಗಳಿಗಂತೂ ಇದು ಬಹು ಅವಶ್ಯವಾದದ್ದು. ವಾ ನಿಯಮಗಳು ಚನ್ನಾಗಿ ತಿಳಿಸಲ್ಪಟ್ಟಿವೆ. ಹಿಂದೀ ಭಾಷೆಯನ್ನು ಕಲಿಯಲಿಚ್ಛಿಸುವ ಕನ್ನಡಿಗರು ಅವಶ್ಯವಾಗಿ ಇದನ್ನು ಸಂಗ್ರಹಿಸಬೇಕು ಬೆಲೆ ೫ ಆಣೆ ವಿಳಾಸ:— ಕೆ. ಎಮ್ ದಾಸಪ್ರಭು ಎಂಡ್ ಸನ್ಸ್ ಮಂಗಳೂರ.

೬ ರಾಷ್ಟ್ರೀಯ ಕರ್ಮ ಲೇಖಕ ಭಾರತ ಪುತ್ರ. ಗಾಂಧಿ ಟಿಳಕ ಮೊದಲಾದ ಭಾರತ ವೀರರ ವಚನಗಳು ಇದರಲ್ಲಿ ಗ್ರಥಿತವಾಗಿವೆ. ಚಿಕ್ಕ ಚಿಕ್ಕ ಬಾಲಕರಿಗೆ ಇದನ್ನೋದುವದರಿಂದ ಸ್ವದೇಶಾಭಿಮಾನವು ಸ್ವಾಭಾವಿಕವಾಗಿ ನೆಲೆಗೊಳ್ಳುವದು. ಬೆಲೆ ಮೂರಾಣೆಯೆಂದರೆ ಸ್ವಲ್ಪ ಹೆಚ್ಚಾಯಿತು. ವಿಳಾಸ:- ಕೆ. ಎಮ್. ದಾಸಪ್ರಭು ಎಂಡ್. ಸನ್ಸ್ ಮಂಗಳೂರ

೭ ಗಂಗಾಧರರಾವ ದೇಶಪಾಂಡೆಯವರ ಚರಿತ್ರೆ. ಕರ್ನಾಟಕದ ಈ ಸುಪ್ರಸಿದ್ಧ ದೇಶಭಕ್ತರ ಚರಿತ್ರೆಯನ್ನು ಸಕಾಲಕ್ಕೆ ಪ್ರಸಿದ್ಧಗೊಳಿಸಿದ್ದಕ್ಕಾಗಿ ಕರ್ನಾಟಕವು ಇದರ ಕರ್ತೃಗಳಾದ ಪಾರ್ಥಮಿತ್ರರಿಗೆ ಋಣಿಯಾಗಿದೆ. ಕನ್ನಡಿಗರು ಅವಶ್ಯವಾಗಿ ಇದನ್ನು ಓದತಕ್ಕದ್ದು.

ಗ್ರಂಥಕಾರರು ಮವಾಳರನ್ನು ಬಹಳವಾಗಿ ಹಳಿದಿದ್ದಾರೆ: ರಾಷ್ಟ್ರೀಯ ಪಕ್ಷದವರು ಮತ ಸಹಿಷ್ಣುಗಳಾಗಿರುವದೇ ಚಂದವು. ಲೋಕಮಾನ್ಯರಲ್ಲಿ ಗಂಗಾಧರರಾಯರ ಭಕ್ತಿಯು ಹೇಗೆ ನೆಲೆಗೊಂಡಿತೆಂಬದನ್ನು ಹೆಚ್ಚು ವಿಶದವಾಗಿ ಬರೆದಿದ್ದರೆ ವಾಚಕರಿಗೆ ಹೆಚ್ಚು ಆನಂದವಾಗುತ್ತಿತ್ತು. ಕನ್ನಡ ಮರಾಠಿಯ ಬಗ್ಗೆ ಬರೆಯುವಾಗ್ಗೆ 'ದುರಾರಾಧ್ಯ' ಮೊದಲಾದ ಶಬ್ದಗಳನ್ನು ಉಪಯೋಗಿಸದಿದ್ದರೆ, ಚನ್ನಾಗಿತ್ತು. ಕನ್ನಡ ಮರಾಠೀ ಬಗ್ಗೆ ಉಲ್ಲೇಖವನ್ನೇ ಇದರಲ್ಲಿ ಮಾಡಿರದ್ದಿದರಂತೂ ಬಹು ಚಂದಾಗುತ್ತಿತ್ತು. ಬೆಲೆ ೫ ಆಣೆ ವಿಳಾಸ:- ಮಾತೃ ಭೂಮಿ ಕಾರ್ಯಾಲಯ ಬೆಳಗಾವಿ.

೮ ಸಂಘ ವ್ಯಾಯಾಮ. ಈ ಚಿಕ್ಕ ಹಿಂದೀ ಪುಸ್ತಕವು ಪ್ರೊ ಮಾಣಿಕರಾಯರಿಂದ ರಚಿತವಾಗಿದೆ ಕವಾಯತ ಮಾಡುವಾಗ್ಗೆ ಇಂಗ್ಲೀಷ ಶಬ್ದಗಳನ್ನು ಉಪಯೋಗಿಸುವ ರೂಢಿಯು ನಮ್ಮಲ್ಲಿ ಇದ್ದಿತು. ಈ ಗ್ರಂಥದಲ್ಲಿ ಹಿಂದೀ ಶಬ್ದಗಳನ್ನು ಹುಡುಕಿ ತೆಗೆದಿದ್ದರಿಂದ ಇನ್ನು ಮೇಲೆ ಶಾಲೆಗಳಲ್ಲಿ ಹುಡುಗರಿಗೆ ಕವಾಯಿತು ಮಾಡಿಸುವಾಗ್ಗೆ ಇಂಗ್ಲೀಷ ಶಬ್ದಗಳನ್ನು ಉಪಯೋಗಿಸುವ ಅವಶ್ಯಕತೆಯಿಲ್ಲ ರಾಷ್ಟ್ರೀಯ ಶಾಲೆಗಳಲ್ಲಿಯಂತೂ ಈ ಪುಸ್ತಕದ ಉಪಯುಕ್ತತೆಯು ಬಹಳವಾಗಿದೆ ಬೆಲೆ ೦-೧-೬ ವಿಳಾಸ:- ದಾಮೋದರ ಸುಂದರದಾಸ ವರ್ಮಾ ಹೋಲಿ ಚಕಲಾ, ಕೋಟ ಮುಂಬಯಿ.

೯ ಕನ್ನಡ ಪದ್ಯರತ್ನಾವಳೀ— ಇದೊಂದು ಚಿಕ್ಕದಾದ ಪದ್ಯ ಪುಸ್ತಕವು ಇದನ್ನು ಬರೆದವರು ಶ್ರೀ. ಜಿ. ಎಸ್ ಲಕ್ಷ್ಮಣ ಪೈ ಎಂಬವರು ಬೆಲೆ ಮೂರು ಆಣೆ ಪ್ರತಿಗಳು ದೊರೆಯುವ ಸ್ಥಳ ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ಈ ಪುಸ್ತಕದಲ್ಲಿ ಇಪ್ಪತ್ತು ಪಾಠಗಳಿರುವವು ಮನೋರಂಜಕ ಹಾಗು ನೀತಿ ಬೋಧಕವಾದ ಕಥೆಗಳು ಪದ್ಯರೂಪದಲ್ಲಿ ಬರೆಯಲ್ಪಟ್ಟಿವೆ. ಭಾಷೆಯು ಸರಳವಾಗಿಯೂ ಸುಂದರವಾಗಿಯೂ ಇದೆ ಪದ್ಯಗಳು ಸರಸವಾಗಿಯೂ ಚಿಕ್ಕ ಮಕ್ಕಳಿಗೆ ಬಹು ಪ್ರಯೋಜನವುಳ್ಳವುಗಳಾಗಿಯೂ ಇವೆ ಕೊನೆಯ ಪುಟಗಳಲ್ಲಿ ಕ್ಲಿಷ್ಟ ಪದಗಳ ಅರ್ಥವೆಂಬ ವಿಭಾಗವಿದೆ. ಪದ್ಯಗಳ ಅರ್ಥವನ್ನು ಚನ್ನಾಗಿ ತಿಳಿಸಿ ಹೇಳಲು ಇದರಿಂದ ನವೀನ ಶಿಕ್ಷಕರಿಗೆ ಅನುಕೂಲವಾಗುವದು.

(೧೦) **ಭಾರತ ವೈಭವ.** ಮೇಲ್ಕಾಣಿಸಿದ ಶ್ರೀ. ಪೈ ಯವರೇ ಈ ಚಿಕ್ಕ ಪದ್ಯಪುಸ್ತಕವನ್ನು ಬರೆದಿರುವರು. ಈ ಪುಸ್ತಕದಲ್ಲಿ ಮ. ಗಾಂಧಿಯವರ ತತ್ವಗಳನ್ನು ಪದ್ಯದಲ್ಲಿ ಕಿವಿಗೆ ಇಂಪಾದ ಭಾಷೆಯಲ್ಲಿ ಶ್ರೀ ಪೈಯವರು ಹೇಳಿರುವರು. ಈ ಪುಸ್ತಕದಲ್ಲಿಯ ಪದ್ಯಗಳನ್ನೋದಿ ಮಹಾತ್ಮರ ಬಗ್ಗೆ ಜನರಲ್ಲಿ ಅನುರಾಗವೂ ಸ್ವದೇಶದ ಬಗ್ಗೆ ಪ್ರೇಮವೂ ಹೆಚ್ಚುವವೆಂಬುದರಲ್ಲಿ ನಮಗೆ ಸಂದೇಹವಿಲ್ಲ. ಈ ಪುಸ್ತಕದ ಬೆಲೆಯು ೧|| ಆಣೆ ಯಾಗಿರುವದರಿಂದ ಎಲ್ಲ ಕನ್ನಡದ ಅಭಿಮಾನಿಗಳು ಇದನ್ನು ತರಿಸಿ ಒಮ್ಮೆ ಯಾದರೂ ಓದಿ ತೀರುವರೆಂದು ಕೋರುತ್ತೇವೆ.

ಒಪ್ಪಿಗೆ.

(೧) ೧೯೨೨ ನೇ ಇಸ್ವಿಯ ಕ್ಯಾಲೆಂಡರ ಎಂ. ಎಸ್ ಶಿದ್ಧಪ್ಪ ಅಂಡ್ ಬ್ರದರ್ಸ ಮೈಸೂರು ಇವರು ಇದನ್ನು ರಚಿಸಿದ್ದಾರೆ ಈ ಕ್ಯಾಲೆಂಡರನಲ್ಲಿ ಪಂಚಾಂಗ ಮಾಹಿತಿಯೂ ಅಡಕವಾಗಿದೆ. ಮಧ್ಯದಲ್ಲಿ ಮೈಸೂರ ಮಹಾರಾಜರ ಮತ್ತು ಯುವರಾಜರ ಛಾಯಾಚಿತ್ರಗಳು ಹಾಕಲ್ಪಟ್ಟಿವೆ ಬೆಲೆ ೧ ಆಣೆ.

(೨) ವೃತ್ತಾಂತ ಪತ್ರಿಕೆಯ ಕ್ಯಾಲೆಂಡರ ೧೯೨೨ ದಪ್ಪಾದ ಕಾಗದ ಮೇಲೆ ಜಾರ್ಜ ಬಾದಶಹರ ಛಾಯಾಚಿತ್ರಗಳು ಇವನ್ನೆಲ್ಲ ನಮಗೆ ಕಳಿಸಿದ್ದಕ್ಕಾಗಿ ಹಾಕಲ್ಪಟ್ಟಿವೆ ಆ ಆ ಸಂಪಾದಕರ ಆಭಾರ ಮನ್ನಿಸುತ್ತೇವೆ

ಸಂಪಾದಕ

ಚಂದಾದಾರರಾಗಿರಿ! ಪ್ರೋತ್ಸಾಹಿಸಿರಿ!

## ಕರ್ನಾಟಕ ಸಭಾಗ್ರಂಥಮಾಲೆ

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ ಕಾದಂಬರಿ ಕಾವ್ಯ ಪ್ರಬಂಧ ನಾಟಕ ಮೊದಲಾದ ಗ್ರಂಥಗಳಲ್ಲಿ ಯಾವುದಾದರೊಂದು ಪೂರ್ಣ ಪುಸ್ತಕವು ಇತರ ಲೇಖನಗಳೂ ಪ್ರಕಟವಾಗುವ ಈ ಗ್ರಂಥ ಮಾಲೆಗೆ ವಾರ್ಷಿಕ ಚಂದಾ ಅಂಚೆ ವೆಚ್ಚ ಸಹಿತ ೧೨ ಆಣೆ ಮಾತ್ರ ಇಟ್ಟಿರುವೆವು. ಈಗಲೇ ೧೨ ಆಣೆಯನ್ನು ಕಳುಹಿಸಿ ಚಂದಾದಾರರಾಗಿ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ ದುರ್ಮತಿ ಸಂವತ್ಸರದ ಚಾಲತು ಈಗಾಗಲೇ ಮೂರು ಪುಸ್ತಗಳು ಅಚ್ಚಾಗಿವೆ ೧ ಘೋಷಯಾತ್ರೆ ೨ ಗಾಂಧಿ ಸಂದೇಶ ೩ ವಸ್ತ್ರಹರಣ ಹೆಚ್ಚಿನ ವಿಚಾರಗಳಿಗೆ ಈ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ಕ. ಸ. ಗ್ರಂಥ ಮಾಲೆ
ಉರ್ವ ಪೋ ಬೆಂಗಳೂರ

## ಆತ್ಮೋದ್ಧಾರವೆಂಬ
### ಹೊಸ ಮಾಸ ಪತ್ರಿಕೆ.

ಉತ್ತರ ಕಾನಡಾ ಜಿಲ್ಹೆಯಲ್ಲಿ ಮೊದಲನೇಯ ಉಚ್ಚ ಧಾರ್ಮಿಕ ಸಾಮಾಜಿಕ ರಂಜಕೀಯ ವಿಷಯಗಳಿಂದ ಕೂಡಿದ್ದು ಎಲ್ಲ "ಸ್ವಾಭಿಮಾನಿ" ಗಳು ವಿಶೇಷತಃ ವಿದ್ಯಾರ್ಥಿಗಳು ಅತ್ಯವಶ್ಯವಾಗಿ ಓದತಕ್ಕದ್ದು.

ವಾರ್ಷಿಕ ವರ್ಗಣಿ ವ್ಹಿ. ಪಿ. ಸಹಿತ ೨ರೂ ೧೪ ಆ. ಮಾತ್ರ
ಬಿಡಿ ಸಂಚಿಕೆ ೩|| ಆಣೆ,

ವಿಳಾಸ-
ವಾಮನ ಅನಂತ ಹೊದ್ಧೆ ರಾಷ್ಟ್ರೀಯ ಶಾಲಾ ಅಧ್ಯಾಪಕ ಶಿರಸಿ, ಉ. ಕಾನಡಾ.

## ನಂಬರ ೧ ನೇ ನಿರ್ಮಲವಾದ
ಏಜಂಟರು ಬೇಕು. ಏಜಂಟರ ಬೇಕ
## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾದ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ ವ್ಯಾಪಾರಸ್ಥರಿಗೆ ಬಹಳೇ ಸೋಯಿ ದರದಲ್ಲಿ ತೈಲವು ಸಿಗುವದು. ಸಿಕ್ಕೆ ಹಾಕಿದ ಬೆಂಡು ತೈಲದ ಬಾಟ್ಲಿ ಅಥವಾ ಡಬ್ಬಿ ೧ಕ್ಕೆ ರೂಪಾಯಿ ೩-೦ ಡಜನಕ್ಕೆ ೩೦, ವಿಶೇಷ ಮಾಹಿತಿ ಪತ್ರದ್ವಾರ.

ಬಿ ಪಿ ಪೈ ಕಂಪನಿ ಪೋ. ಹೊನ್ನಾವರ
ಜಿಲ್ಹಾ ಉತ್ತರ ಕಾನಡಾ.

ಈ ಪತ್ರವನ್ನ ಮಿ|| ಗುಂಡೇರಾವ ರಾಮಚಂದ್ರ ಮಣೂರಕರ ಇವರು ತಮ್ಮ ವಿಜಾಪೂರ ಗ್ರಾಮಾಧಿಕಾರೀ ಮುದ್ರಾಲಯದಲ್ಲಿ ಮುದ್ರಿಸಿ ಮಾಲಕ ಶ್ರೀನಿವಾಸ ರಾಜೇರಾವ ಮಂಗಳವೇಢೇ ಬಾಗಲಕೋಟ ಇವ. ಗೋಸ್ಪುರ ವಿಜಾಪೂರದಲ್ಲಿ ಪ್ರಸಿದ್ಧಪಡಿಸಿದರು.

REGISTERED No. B 1589

ನೂಲುವ ರಾಟಿಯು:

ವಾರ್ಷಿಕ ವರ್ಗಣಿ ೫ ರೂ
ಆರು ತಿಂಗಳಿಗೆ
ಬಿಡಿ ಸಂಚಿಕೆ
ಮಾದರಿ ಸಂಚಿಕೆ ಬೇಕಾದವರು
... ಕಳಿಸಬೇಕು

ಶ್ರೀ

ಜಾಹಿರಾತಿನ ದರ.

ಕನ್ನಡ ' ನವಜೀವನ ' ದ ಒಂದು ಕಾಲಮಿನ
ಒಂದು ಇಂಚಿಗೆ ಪ್ರತಿಯೊಂದು ಸಾರಿ ೧ ರೂ.
ಕಾಯಂ ಜಾಹಿರಾತುಗಳ ಬಗ್ಗೆ ಸಮಕ್ಷಮ ಅಥ
ವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ "ಯಂಗ ಇಂಡಿಯಾ" ಮತ್ತು "ನವಜೀವನ" ಗಳನ್ನು ಭಾಷಾಂತರಿಸುವದೇ
ಈ ವಾರ ಪತ್ರಿಕೆಯ ಮುಖ್ಯೋದ್ದೇಶವು.

ಬಾಗಲಕೋಟೆ ಚೈತ್ರ ವ॥ ೬ ಶಕೆ ೧೮೪೪ ಸಂಚಿಕೆ ೧೮

ವರ್ಷ ೧ ಶನಿವಾರ ತಾ॥ ೧೫ ಎಪ್ರಿಲ ೧೯೨೨

## ಸವಿನಯ ವಿನಂತಿ.

"ಕನ್ನಡ ನವಜೀವನ" ದ ಸೂಚನಾ ವಿನಂತಿ. ಬೇಡಿ ಕೆ ಪ್ರಾರ್ಥನೆಗಳಿಗೆ ವಾಚಕರು ಬೇಸತ್ತಿರಬಹುದು. ಇಂಥ ಪ್ರಸಂಗಗಳು ಅನೇಕಸಾರಿ ಉಂಟಾಗಿದ್ದೇನೋ ನಿಜವು. ಆದರೆ ಈ ಪ್ರಸಂಗಗಳೆಲ್ಲ ನಮ್ಮಿಂದ ಉತ್ಪನ್ನವಾದವೆಂಬುದು ನಿಜವು. ನಾವು ಪ್ರತಿಯೊಂದು ಬಾರಿಗೆ ಇದ್ದ ಸತ್ಯವನ್ನೇ ವಾಚಕರಿಗೆ ಅರಹುತ್ತ ಬಂದಿರುವೆವು. ಇದರಿಂದ ಚಂದಾ ದಾರರ ಸಹನಶೀಲತೆಯ ಮೇಲೆ ನಾವು ಅವಲಂಬಿಸಲು ಧೈರ್ಯ ಉಂಟಾಗಿದೆ.

ನಾವು ೧೭ ನೇ ಸಂಚಿಕೆಯಲ್ಲಿ ಬರೆದಂತೆ "ಕನ್ನಡ ನವಜೀವನ" ದ ಹೊಸ ವ್ಯವಸ್ಥೆಯು ಈಗ್ಗೆ ಪೂರ್ತಿಯಾಗಹತ್ತಿದೆ. "ನವಜೀವನದ" ಸ್ವಂತ ಮುದ್ರಾಮಂದಿರವು ಸ್ಥಾಪಿತವಾಗಿದೆ. ಆದರ ಬಗ್ಗೆ ಎಲ್ಲ ಪದಾರ್ಥಗಳನ್ನು ವ್ಯವಸ್ಥರೀತಿಯಿಂದ ಸಿದ್ಧಮಾಡಬೇಕಾದ್ದರಿಂದ ಈಗೆರಡು ವಾರಗಳ ಮಟ್ಟಿಗೆ 'ಕನ್ನಡ ನವಜೀವನ' ವು ಹೊರಬೀಳಲಿಲ್ಲ. ಹೀಗೆ ಬಂದುಬೀಳಬಾರದೆಂದು ನಾವು ಎಷ್ಟು ಪ್ರಯತ್ನಪಟ್ಟರೂ ಅನೇಕ ಎಡರುಗಳು ಒದಗಿಬಂದದ್ದರಿಂದ ನಮ್ಮ ಪ್ರಯತ್ನಗಳೆಲ್ಲ ನಿಷ್ಫಲವಾದವು. ಆದುದರಿಂದ ಎರಡುವಾರಗಳ ಮಟ್ಟಿಗೆ ಚಂದಾದಾರರು ನಿರಾಶೆ ಹೊಂದಬೇಕಾಯಿತು. ಇದಕ್ಕಾಗಿ ನಾವು ಚಂದಾದಾರರ ಕ್ಷಮೆ ಬೇಡುತ್ತೇವೆ. ಮತ್ತು ಇದರಿಂದ ಚಂದಾದಾರರಿಗೆ ಆದ ಹಾನಿಯನ್ನು ನಾವು ನಮುವೆ ಅನುಕೂಲವಿದ್ದಾಗ್ಗೆ ಪುಟಗಳನ್ನು ಹೆಚ್ಚಿಸಿ ಆಗಲಿ ಜಾದಾ ಸಂಚಿಕೆಯನ್ನು ತೆಗೆದಾಗಲಿ, ತುಂಬಿಕೊಡುವೆವು.

ಬಾಗಲಕೋಟೆಯಲ್ಲಿ ನಮ್ಮ ಸ್ವಂತ "ವಿದ್ಯಾರಣ್ಯ" ಮುದ್ರಾಮಂದಿರದ ವ್ಯವಸ್ಥೆಯು ಪೂರ್ತಿಗೊಳ್ಳುವವರೆಗೆ ನಾವು ಮೊದಲಿನಂತೆ ವಿಜಾಪುರದ "ಗ್ರಾಮಾಧಿಕಾರಿ" ಮುದ್ರಾಲಯದಲ್ಲಿಯೇ "ಕನ್ನಡ ನವಜೀವನ" ವನ್ನು ಮುದ್ರಿಸಬೇಕೆಂದು ಗೊತ್ತುಮಾಡಿದ್ದೆವು. ಆದರೆ "ಗ್ರಾಮಾಧಿಕಾರಿ" ಮುದ್ರಾಲಯದ ಮಾಲಕರಿಗೆ ಅಕಸ್ಮಾತ್ತಾಗಿ "... " ... ಬಂಧದ ... ಆವರ ಮುದ್ರಣಾಲಯದ ... ಪ್ರಕಾಶ ... ವಾಗಿದ್ದರಿಂದಲೂ ಆ ವರೆಗೆ ನಮ್ಮ 'ನವಜೀವನ' ವನ್ನು ಮುದ್ರಿಸಲಿಕ್ಕೆ ಆಸ್ಪದವಿರಲಿಲ್ಲ. ಇತ್ತ ನಮ್ಮ ಸ್ವಂತ ಮುದ್ರಾಮಂದಿರದ ವ್ಯವಸ್ಥೆಯೂ ಪೂರ್ಣವಾಗಿರಲಿಲ್ಲ. ಹೀಗಾಗಿ ಬಂದಿಲ್ಲೆಂದು ಎರಡು ... ಉಂಟಾದ್ದರಿಂದ "ನವಜೀವನ" ವು ಈಗೆರಡುವಾರ ಹೊರಬೀಳುವದು ಅಶಕ್ಯವಾಯಿತು.

ಈ ಎಲ್ಲ ಸಂಗತಿಗಳನ್ನು ಅರಿತುಕೊಂಡು ಚಂದಾದಾರರು ನಮ್ಮನ್ನು ಅವಶ್ಯವಾಗಿ ಕ್ಷಮಿಸುವರೆಂದು ಆಶಿಸುತ್ತೇವೆ.

—ವ್ಯವಸ್ಥಾಪಕ.

## ನವಜೀವನದ ಬಗ್ಗೆ ನಾಲ್ಕು ಮಾತುಗಳು.

ನವಜೀವನದ ಗತಿಯೇನು? ನವಜೀವನವು ನಡೆಯುವದೊ ಇಲ್ಲವೆ ಬೀಳುವದೊ? ಸರಕಾರವು ನಡೆಗೊಡುವದೊ? ಗಾಂಧಿಯವರನ್ನು ಕಾರಾಗೃಹಕ್ಕೆ ಒಟ್ಟಿದ ಮೇಲೆ ನವಜೀವನವನ್ನೆಂತು ನಡೆಗೊಡಬಲ್ಲದು?

ಈ ಬಗೆಯ ಪ್ರಶ್ನೆಗಳು ಜನರಲ್ಲಿ ಸ್ವಾಭಾವಿಕವಾಗಿಯೇ ಉದ್ಭವಿಸುತ್ತಿರುವವು. ಇವುಗಳ ಉತ್ತರಗಳನ್ನಾದರೂ ಜನರು ತಮ್ಮ ತಮ್ಮೊಳಗೇ ಕೊಡುತ್ತಿರುವರು. ನಾವಾದರೂ ಯಥಾಶಕ್ತಿ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಲು ಯತ್ನಿಸುತ್ತೇವೆ.

ನವಜೀವನವನ್ನು ನಡಿಸೇತೀರುವೆವು. ಮುದ್ರಾಲಯದ ಶ್ಲೆಯ ಧಾತುವಿನ ಮೊಳೆಗಳಿಂದ ನವಜೀವನವನ್ನು ಮುದ್ರಿಸುವದನ್ನು ನಿಲ್ಲಿಸುವದು ಸರಕಾರಕ್ಕೆ ಸುಲಭವಾದದ್ದಾಗಬಹುದು. ಆದರೆ ನವಜೀವನವನ್ನು ಪ್ರಜೆಗಳಿಂದ ಕಸೆದುಕೊಂಡು ಹೋಗುವದು ಸುಲಭವಾದದ್ದೋ ಇದನಾ ಕಷ್ಟಸಾಧ್ಯವಾದದ್ದೋ ನೋಡಬೇಕಾಗಿದೆ

ಸರಕಾರವು ನವಜೀವನದ ಚಾಲಕರಿಂದ ಜಾಮೀನು ಬೇಡಿದೊಡನೆಯೇ ನವಜೀವನವನ್ನು ಮುದ್ರಿಸಿ ತೆಗೆಯುವದನ್ನು ನಿಲ್ಲಿಸುವದತ್ಯವಶ್ಯವು. ನವಜೀವನದ ಚಾಲಕರು ಜನರ ದಾಸಾನುದಾಸರಿರುವರು. ಜನರು ಎಲ್ಲಿಯವರೆಗೆ ನವಜೀವನದ ಸೇವೆಯನ್ನು ಬೇಡುತ್ತಿರುವರೋ ಅಲ್ಲಿಯವರೆಗೆ ಚಾಲಕರು ನವಜೀವನವನ್ನು ನಡಿಸೇ ನಡಿಸುವರು. ಭಾರತೀಯರಿಗೆ ನವಜೀವನವು ಪ್ರಿಯವಾಗಿದ್ದರೆ ಕೈಯಿಂದಾದರೂ ನವಜೀವನವನ್ನು ಬರೆದು ಊರೂರಿಗೆ ಮುಟ್ಟುವಂತೆ ಮಾಡುವೆವು. ಮನೆಮನೆಯಲ್ಲಿ ನವಜೀವನದ ಶುದ್ಧವಾದ ನಕಲುಗಳುಂಟಾಗಿ ಮೂವತ್ತು ಸಾವಿರ ಬದಲು ಅರವತ್ತು ಸಾವಿರ ನವಜೀವನದ ಪ್ರತಿಗಳು ಲೋಕಸೇವೆಗಾಗಿ ದೊರಬೀಳುವವು. ನವಜೀವನದ ಸೇವೆಯನ್ನು ಯಾರೂ ನಿಲ್ಲಿಸಲರಿಯರು!

ಈ ಬಗೆಯಾಗಿ ಮೊದಲು ಸರಕಾರವು ನವಜೀವನವನ್ನು ನಡೆಗೊಡುವದೋ ಇಲ್ಲವೋ ಎಂಬ ಪ್ರಶ್ನವೇ ಅಪ್ರಸ್ತುತವಾದದ್ದೆಂದು ತೋರುವದು. ಜನರಲ್ಲಿ ದೃಢನಿಶ್ಚಯವಿದ್ದರೆ ನವಜೀವನವನ್ನು ನಿಲ್ಲಿಸುವ ಸರಕಾರದ ಪ್ರಯತ್ನಗಳೆಲ್ಲವೂ ನಿಷ್ಫಲವಾಗದಿರವು.

ಮಹಾತ್ಮಾ ಗಾಂಧಿಯವರ ವಾಣಿಯು ನವಜೀವನದಲ್ಲಿ ವಾರಕ್ಕೊಮ್ಮೆ ಬರುವದು ನಿಂತಿತೆಂಬುದು ನವಜೀವನದ ವಿಷಯದಲ್ಲಿ ದೊಡ್ಡದೊಂದು ಆಪತ್ತೆಂಬುದೇನೋ ನಿಜ, ಆದರೂ ಇಷ್ಟು ದಿವಸ ಗಾಂಧಿಯವರು ಹಾಕಿಕೊಟ್ಟ ಸತ್ಯ, ಅಹಿಂಸಾ, ನಿರ್ಭಯತೆ ಇವುಗಳ ಪರಂಪರೆಯನ್ನೇ ನಾವಾದರೂ ಅನನ್ಯಭಾವದಿಂದ ಆಶ್ರಯಿಸಿ ಪ್ರಜಾ ಸೇವೆಯಲ್ಲಿ ನಿರತರಾಗಲು ಮನಮುಟ್ಟಿ ಯತ್ನಿಸುವೆವು. ಅದರಂತೆಯೇ ಯಾವ ರಾಜ್ಯ ತಂತ್ರದ ವಿರುದ್ಧ ಯುದ್ಧಮಾಡಲು ಮಹಾತ್ಮಾ ಗಾಂಧಿಯವರು ಹಗಲು ರಾತ್ರಿಯೆಂಬುದನ್ನು ನೋಡಲಿಲ್ಲವೋ, ಯಾವ ಧರ್ಮಭ್ರಷ್ಟ ರಾಜ್ಯವನ್ನು ಧರ್ಮನಿಷ್ಠವಾಗಿ ಮಾಡಲು ಇಲ್ಲವೆ ಅದನ್ನು ಮುಗ್ಗಿಸಲು ಅವರು ಅವಿಶ್ರಾಂತವಾಗಿ ಶ್ರಮಬಡುತ್ತಿದ್ದರೊ, ಮತ್ತು ಯಾವ ಧರ್ಮಭ್ರಷ್ಟ ರಾಜ್ಯತಂತ್ರದ ವಿರುದ್ಧ ಅಪ್ರೀತಿಯನ್ನು ಹಬ್ಬಿಸುವದು ಸರ್ವೋತ್ಕೃಷ್ಟ ಸದ್ಗುಣವೆಂದು ತಿಳಿದಿರುವರೊ, ಆ ರಾಜ್ಯತಂತ್ರವು ಎಲ್ಲಿಯವರೆಗೆ ನಷ್ಟವಾಗಿಲ್ಲವೊ ಅಥವಾ ಪ್ರಜೆಗಳ ಶುದ್ಧ ಚಾರಿತ್ರ್ಯಬಲದಿಂದ ಧರ್ಮನಿಷ್ಠವಾಗಿಲ್ಲವೋ ಅಲ್ಲಿಯವರೆಗೆ ಅದರ ಬಗ್ಗೆ ಜನತೆಯಲ್ಲಿ ಅಪ್ರೀತಿಯನ್ನು ಹುಟ್ಟಿಸುವ ಈ ರಾಜ್ಯತಂತ್ರವನ್ನು ನಿರ್ವೀರ್ಯಗೊಳಿಸಿ ಧರ್ಮರಾಜ್ಯವನ್ನು ಸ್ಥಾಪಿಸಲು ಅವಶ್ಯವಾದ ಸದ್ಗುಣಗಳನ್ನು ಪ್ರಜೆಗಳಲ್ಲಿ ಹುಟ್ಟಿಸಲೆತ್ನಿಸುವದು ನಮ್ಮ ಪರಮ ಧರ್ಮವೆಂದು ನಾವು ತಿಳಿಯುವೆವು.

ನಮ್ಮ ಕೊರತೆಗಳ ಅರಿವು ನಮಗೆ ಸಂಪೂರ್ಣವಾಗಿರುವದು. ಮ. ಗಾಂಧಿಯವರ ಹಾಗು ನಮ್ಮ ಅಧಿಕಾರಗಳ ನಡುವೆ ಅಂತರವು ಎಷ್ಟಿದೆಯೆಂಬುದನ್ನು ನಾವು ಚನ್ನಾಗಿಬಲ್ಲೆವು. ಅದರಂತೆಯೇ ಮ. ಗಾಂಧಿಯವರು ಕಾರಾಗೃಹಕ್ಕೆ ಹೋದದ್ದರಿಂದ ಅವರ ಅಲೌಕಿಕ ಪ್ರತಿಭೆಯಿಂದ ಕ್ಷಣಕ್ಷಣಕ್ಕೆ ಜನ್ಮಹೊಂದುತ್ತಿರುವ ಅಪೂರ್ವ ಅನೇಕ ಸ್ಫೂರ್ತಿದಾಯಕ ವಿಚಾರಗಳನ್ನು ವಾರಕ್ಕೊಮ್ಮೆ ಜನತೆಯು ಹೊಂದಿಡುವಭಾಗ್ಯವು ನಮಗಿಲ್ಲೆಂಬುದನ್ನಾದರೂ ನಾವು ತಿಳಿದಿರುವೆವು. ಆದರೂ ಅವರು ಸ್ಥಾಪಿಸಿದ ವಿಚಾರ ಸರಣಿಗೆ ಒಪ್ಪುವ ವಿಚಾರಗಳಿಂದಲೇ ಜನತೆಯ ಸೇವೆಯನ್ನು ಮಾಡಲು ನಾವು ಕೃತಸಂಕಲ್ಪರಾಗಿರುವೆವು. ನಮ್ಮ ಬಾಂಧವರು ಆಗಾಗ್ಗೆ ಕಡಿಮೆಯಾದರೆ ಅಷ್ಟು ಸ್ಥಳಗಳನ್ನು ನಾವು ಖಾಲಿ ಹಾಗೇ ಬಿಡುವೆವಲ್ಲದೆ ರೂಢಿವಶರಾಗಿ ದುರ್ಬಲವಾದ ಲೇಖಗಳಿಂದ ನವಜೀವನವನ್ನು ತುಂಬುವ ಹವ್ಯಾಸವನ್ನು ನಾವು ಆವ ಕಾಲಕ್ಕೂ ಮಾಡೆವು.

( ನವಜೀವನ ) ಸ್ವಾಮೀ ಆನಂದಾನಂದ
ಉಪತಂತ್ರಿ

---

## ನೂಲುವ ರಾಟೆಯು.

ಫೆಬ್ರುವರಿ ೧೫ ನೇ ತಾರೀಖಿನ ದಿವಸ ಮಹಾತ್ಮಾ ಗಾಂಧಿ ಅವರು ಸರ್ ಡ್ಯಾನಿಯಲ್ ಹ್ಯಾಮಿಲ್ಟನ ಎಂಬವರಿಗೆ ರಾಟೆಯ ವಿಷಯವನ್ನು ಕುರಿತು ಒಂದು ಪತ್ರವನ್ನು ಬರೆದಿದ್ದರು. ಆ ಪತ್ರವನ್ನೂ ಮತ್ತು ಹ್ಯಾಮಿಲ್ಟನ್ ಇವರ ಕೊಟ್ಟ ಉತ್ತರವನ್ನು ಕೆಳಗೆ ಕೊಡುವೆವು.

ರಾಯರೇ,

ನೀವು ನನ್ನಸಂಗಡ ಒಂದು ಘಂಟೆಯವರೆಗೆ ಮಾತನಾಡಲಿಚ್ಛಿಸುತ್ತಿರುವಿರೆಂದು ಮಿ. ಹೋಜ್ಜರು ನನಗೆ ಬರೆದು ತಿಳಿಸಿದರು. ನಾನೇ ಮೊದಲು ಮಾತಾಡಿಸಬೇಕೆಂದು ಅವರು ಸೂಚಿಸದಂತೆ ಮಾಡಲಿಕ್ಕೂ ನನಗೆ ಆನಂದ ವೆನಿಸುತ್ತದೆ. ನೂಲಿನ ರಾಟೆಯನ್ನು ಬಿಟ್ಟು ನನ್ನ ಎರಡನೇ ಯಾವ ಕಾರ್ಯವನ್ನು ನಿಮ್ಮ ಲಕ್ಷಕ್ಕೆ ತರುವದರಲ್ಲಿ ನಾನು ನಿಮ್ಮ ವೇಳೆಯನ್ನು ತೆಗೆದುಕೊಳ್ಳುವದಿಲ್ಲ. ದೃಶ್ಯವಾದ ನನ್ನ ಎಲ್ಲ ಕಾರ್ಯಗಳಲ್ಲಿ ರಾಟೆಯ ವಿಷಯವಾದ ಕಾರ್ಯವೇ ಸ್ಥಿರವಾಗಿ ಬಾಳಬಲ್ಲದು ಮತ್ತು ಎಲ್ಲಕ್ಕೂ ಹೆಚ್ಚು ಹಿತಕರವಾದದ್ದಾಗಿರುವದೆಂದು ನನ್ನ ದೃಢವಾದ ನಂಬಿಗೆಯು. ಹಿಂದುಸ್ಥಾನದ ಲಕ್ಷಾವಧಿ ಮನೆಗಳಲ್ಲಿ ನೆಲೆಗೊಂಡಿರುವ ಬಡತನದ ಗೋಳಾಟವನ್ನು ರಾಟೆಯೇ ದೂರಮಾಡಬಲ್ಲದೆಂಬದಾಗಿಯೂ ಬರಗಾಲವು ಬಾರದಂತೆ ಮಾಡಲಿಕ್ಕೆ ತಡೆಗೋಡೆಯೂ ಆಗಿರುವದೆಂದು ನನ್ನ ವಿಧಾನಕ್ಕೆ ಸಾಕಷ್ಟೆ ಆಧಾರಗಳು ಈಗ ದೊರೆತಿರುವವು,

ನಿಮಗೆ ಡಾ. ಪಿ. ಸಿ. ರೇ ಇವರಗೊತ್ತುಂಟು. ಆದರೆ ಅವರಾದರೂ ರಾಟೆಯ ವಿಷಯಕ್ಕೆ ಬಹಳ ಉತ್ಸಾಹವನ್ನು ವ್ಯಕ್ತಮಾಡಹತ್ತಿರುವದೆಂಬದನ್ನು ನೀವು ಅರಿತಿರಲಿಕ್ಕಿಲ್ಲ. ಹಿಂದುಸ್ಥಾನವನ್ನು ಈಗ ಪ್ರಚಲಿತವಾದ ವಿಚಾರದಂತೆ ಔದ್ಯೋಗಿಕವನ್ನಾಗಿ ಮಾಡುವ ಅವಶ್ಯವಿರುವದಿಲ್ಲ. ೧೯೦೦ ಮೈಲು ಉದ್ದ ೧೫೦೦ ಮೈಲು ಅಗಲುಳ್ಳ ವಿಸ್ತೀರ್ಣವಾದ ಹಿಂದುಸ್ಥಾನದ ಭೂಕ್ಷೇತ್ರದಮೇಲೆ ೭,೫೦,೦೦೦ ಹಳ್ಳಿಗಳು ಹರವಲ್ಪಟ್ಟಿರುವವು. ಕೃಷಿಕರ್ಮವೇ ಜನರ ಮೂಲಾಧಾರವಾಗಿರುವದು ಬಹುಸಂಖ್ಯಾಕರಾದ ಜನರು ತಮ್ಮ ದಿನಕೂಲಿಯಿಂದಲೇ ಆದಿನ ಮಧ್ಯಾಹ್ನದ ಹಸಿವೆಯ ಬಾಧೆಯನ್ನು ಹೇಗೊ ನೀಗುವರು. ಇದನ್ನು ಏನೇ ಹೇಳಿ ವಿರೋಧಿಸಿದರೂ ಆ ಸೇತು ಹಿಮಾಚಲದವರೆಗೆ ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿ ಅಪ್ರಮತ್ತನಾಗಿ ಪ್ರವಾಸಿದ ನಂತರ, ದೇಶದಲ್ಲಿ ದಾರಿದ್ರ್ಯವು ದಿನೇ ದಿನೇ ಹೆಚ್ಚುತ್ತಿರುವದೆಂಬದರಬಗ್ಗೆ ತಿಲಮಾತ್ರ ಸಂಶಯ ಉಳಿದಿರುವದಿಲ್ಲ.

ವರ್ಷದಲ್ಲಿ ಏನಿಲ್ಲೆಂದರೂ ನಾಲ್ಕು ತಿಂಗಳುಗಳ ವರೆಗೆ ಲಕ್ಷಾವಧಿ ಜನರ ಇಚ್ಛೆ ಇಲ್ಲದಿದ್ದರೂ ಉಪಾಯಗಾಣದೆ ನಿರುದ್ಯೋಗಿಗಳಾಗಿ ಕೈಮುಚ್ಚಿಕೊಂಡು ಕುಡ್ರಲೇ ಬೇಕಾಗುವದೂ ನಿಸ್ಸಂದೇಹವಾದದ್ದು. ಇದಕ್ಕಾಗಿ ನಾಗುವಳಿಯಲ್ಲಿ ಏನು ಕ್ರಾಂತಿಮಯವಾದ ಅದಲು ಬದಲು ಮಾಡಬೇಕ

(ಮುಂದೆ ಪುಟ ೧೪೧ ನೋಡಿರಿ)

ಕನ್ನಡ ನವಜೀವನ.

ಚೈತ್ರ ವದ್ಯ ೪ ಶನಿವಾರ ಶಕೆ ೧೮೪೪.

## ಕರ್ತವ್ಯವನ್ನು ಮರೆಯಬಹುದೋ?

ಜನರಲ್ಲಿ ಸ್ಮರಣ ಶಕ್ತಿಯು ಬಹಳ ಕಡಿಮೆ ಇರುತ್ತದೆಂದು ಕೆಲವರು ಅನ್ನುವರು. ಆದ್ದರಿಂದ ನಮಗೆ ಸಹಜವಾಗಿ ನೆನಪಿಗೆ ಬರಬೇಕೆಂದು ಪ್ರತಿವರ್ಷ ರಾಷ್ಟ್ರೀಯ ವಾರವನ್ನು ಪಾಲಿಸಬೇಕೆಂದು ಕಾಂಗ್ರೆಸವು ನಿಶ್ಚಿತ ಮಾಡಿಕೊಂಡಿತು. ಜಾಲಿಯನವಾಲಾ ಬಾಗದಲ್ಲಿ ಎಪ್ರಿಲ ತಿಂಗಳ ೧೩ ನೇ ತಾರೀಖಿನ ದಿವಸ ಆದ ಅಮಾನುಷ ಕೊಲೆಯ ಸೂತಕ ಚಿನ್ಹವೆಂದು ತಿಳಿದು, ಹಿಂದುಸ್ಥಾನದ ಎಲ್ಲ ಜನರು ಪ್ರತಿವರುಷ ೬ ತಾರೀಖಿನ ದಿವಸ, ಉಪೋಷಣ ಮಾಡುತ್ತಾ ಸರಿಯನ್ನು ಪಾಲಿಸಿ, ತಮ್ಮ ದುಃಖ ಕಾಮಕ್ರೋಧಾದಿಗಳನ್ನು ಸರ್ವಮಾತ್ಮಿಯಲ್ಲಿ ಆಹುತಿಕೊಡಬೇಕೆಂದು ಮಹಾತ್ಮರು ಆ ವ್ರತವನ್ನು ಪಾಲಿಸಲಿಕ್ಕೆ ಹೇಳಿದರು. ಅಕ್ರೋಧೇನ ಜಯೇತ್ ಕ್ರೋಧಮ್ ಅಸಾಧುನಾ ಜಯೇತ್ ಸಾಧು ಎಂಬ ಉಕ್ತಿಯಂತೆ, ಮಹಾತ್ಮರು ಎಪ್ರಿಲ ೬ ನೇ ತಾರೀಖಿನ ದಿವಸ ಸತ್ಯಾಗ್ರಹವನ್ನು ಸುರುವು ಮಾಡಿ ರೌಲೆಟ ಕಾಯದೆಗಳನ್ನು, ಕಾಯದೇ ಬುಕ್ಕಿನಲ್ಲಿದ್ದರೂ, ಅವುಗಳನ್ನು ನಿರುಪಯೋಗಿಗಳನ್ನಾಗಿ ಮಾಡಿದರು. ಆದರೆ ಸರಕಾರವು ಈ ಪ್ರಕಾರ ತನ್ನ ಪ್ರತಿಷ್ಠೆಯು ಹೋದದನ್ನು ನೀಗಿ ಸಹನ ಮಾಡಿತು! ಮಹಾತ್ಮರು ತೋರಿಸಿದ ನಿರ್ಮಲವಾದ ಸಾತ್ವಿಕ ರೀತಿಯನ್ನು ಅದರು ಗೊಳ್ಳುವದಕ್ಕೆ ತನ್ನಲ್ಲಿದ್ದ ಪಾಶವೀ ಶಕ್ತಿಯ ಉಪಯೋಗವನ್ನು ಮಾಡಬೇಕೆಂದು ನಿರ್ಧರಿಸಿ ದಬ್ಬಾಳಿಕೆಯ ಶಸ್ತ್ರವನ್ನು ಪ್ರಾರಂಭಿಸಿದರು. ಪಂಜಾಬದಂತೂ ಡಾಯರ, ಓಡಾಯರರಂಥ ಅಧಿಕಾರಸ್ಥರ ಕೈಯಲ್ಲಿದ್ದದರಿಂದ, ಆ ಸತ್ರದ ಮುಖ್ಯವಾದ ಯಜ್ಞಕುಂಡವಾಯಿತು. ಅಲ್ಲಿ ಜನರನ್ನು ನಿಷ್ಕಾರಣ ಹೊಡೆಬಡೆದು ಮೇಲೆ ಅವರಿಗೆ ಘಟಿಕೀ ಶಿಕ್ಷೆಯನ್ನು ಕೊಡುವದಾಯಿತು. ಹೆಂಗಸರನ್ನು ಅವಮಾನಮಾಡುವದರಲ್ಲಿ ಬಂದಿತು. ಹುಡುಗರನ್ನು ಬಿಸಿಲಿನಲ್ಲಿ ಬೆನ್ನ ಹುರಿಯು ಬಿದ್ದ ಹಾಗೆ ಬಡೆಯುವದಾಯಿತು. ಇಂಥ ಅನೇಕ ರಾಕ್ಷಸಿ ಕೃತ್ಯಗಳನ್ನು ಸರಕಾರದಿಂದ ಮಾಡಿಸಿ ಜನರನ್ನು ಮಿತಿಮೀರಿ ಸಿಟ್ಟಿಗೆಬ್ಬಿಸಿ ಅವರಲ್ಲಿಯ ಆತ್ಮಿಕ ಶಕ್ತಿಯ ಪರೀಕ್ಷೆಯನ್ನು ಮಾಡಬೇಕೆಂಬ ಈಶ್ವರೀ ಸಂಕಲ್ಪ ಇದ್ದಿರಬಹುದು! ಆಗ ಜನರಿಂದ ಸ್ವಲ್ಪ ಅತ್ಯಾಚಾರಗಳು ಜರುಗಿದವು. ಆದರೇ ಈ ಅತ್ಯಾಚಾರಗಳನ್ನು ಅನೇಕ ಪಾಲಿನಿಂದ ಮೀರಿಸುವಂಥ ಅಪ್ಪರೀ ಕಾಂಡದ ಅಮಾನುಷ ವ್ಯಾಪಾರಗಳನ್ನು ಸರಕಾರದಿಂದ ಮಾಡಿಸಿ ಅವರಲ್ಲಿದ್ದ ಅಲ್ಪಸ್ವಲ್ಪ ಪುಣ್ಯದ ಭಾಗವನ್ನು ಕಳೆದು, ಪಾಪವನ್ನು ಹೆಚ್ಚಿಸಿ, ಅವರ ಈ ಅನ್ಯಾಯದ ರಾಜ್ಯಪದ್ಧತಿಯನ್ನು ನಾಶಪಡಿಸಬೇಕೆಂದೂ ದೇವರ ಇಚ್ಛೆಯೂ ಇರಬಹುದು. ಅಂತೇ ಕಲಕತ್ತೆಯಲ್ಲಿ ಕೂಡಿದ ರಾಷ್ಟ್ರೀಯ ಸಭೆಯ ವಿಶಿಷ್ಟ ಅಧಿವೇಶನದಲ್ಲಿ ಅಹಿಂಸಾತ್ಮಕ ಅಸಹಕಾರದಂಥ ಉಜ್ವಲ ಮತ್ತು ಪವಿತ್ರವಾದ ಮಾರ್ಗವನ್ನು ಅವಲಂಬಿಸಬೇಕೆಂದು. ಮಹಾತ್ಮರ ಪುಣ್ಯಪ್ರಭಾವದಿಂದಲೂ, ಅವರ ಮೇಲಿನ ಈಶ್ವರೀ ವರಪ್ರಸಾದಾನುಗ್ರಹದಿಂದಲೂ ನಿರ್ಣಯವು ಪಾಸುಮಾಡಲ್ಪಟ್ಟಿತು. ಇದು ಈ ಸತ್ಯಾಗ್ರಹ ವಾರ ವ್ರತದ ಉತ್ಪತ್ತಿಯು.

ಪ್ರತಿಯೊಂದು ರಾಷ್ಟ್ರದ ಸ್ವಾತಂತ್ರ್ಯದ ಇತಿಹಾಸವನ್ನು ನಾವು ನೋಡಿದರೂ ರಾಷ್ಟ್ರೀಯ ದಿನಗಳ ಕಲ್ಪನೆಯು ಇದ್ದೇ ಇರುವದು. ಈ ಜಗತ್ತಿನಲ್ಲಿ ಯಾವಾಗಲೂ ಸತ್ಯ ಅಸತ್ಯಗಳ ನಡುವಿನ ಬಡಿದಾಟವು ನಡದೇ ಇರುವದು. ಅಸತ್ಯ ಪಕ್ಷದವರು ಸತ್ಯಪಕ್ಷದವರ ಮೇಲೆ ಕೆಲವು ದಿವಸಗಳ ಮಟ್ಟಿಗೆ ಅನ್ಯಾಯದ ಜುಲುಮೆಯನ್ನು ಮಾಡಿ ಅವರಲ್ಲಿಯ ಶಕ್ತಿಯು ಕುಂದುವಂತೆ ಮಾಡದೇ ಮಾಡುವರು. ಸತ್ಯಪಕ್ಷದವರು ಮಾತ್ರ ಆ ಅನ್ಯಾಯದ ಸ್ಮರಣೆಯನ್ನು ಪುನಃ ಪುನಃ ಮಾಡಿಕೊಂಡು, ಅದರ ಪ್ರತಿಕ್ರಿಯೆಗಾಗಿ ತಾವು ಯಾವಾಗಲೂ, ಅನ್ಯಾಯದ ಮಾರ್ಗವನ್ನು ಹಿಡಿಯದೇ ನ್ಯಾಯದಿಂದಲೇ ತಮ್ಮ ಧ್ಯೇಯವನ್ನು ಸಂಪಾದಿಸಿಕೊಳ್ಳುವರು. ಇದೇ ಧಾರ್ಮಿಕ ಯುದ್ಧದ ಮುಖ್ಯ ಲಕ್ಷಣವು. ಇದೇ ಈಶ್ವರೀ ಮಾರ್ಗವು. ಇದಕ್ಕಾಗಿ ನಾವು ಅನೇಕ ಉದಾಹರಣೆಗಳನ್ನು ಕೊಡಬಹುದು. ಆದರೆ ಒಂದೆರಡನ್ನು ಮಾತ್ರ ಇಲ್ಲಿ ಉದಾಹರಿಸುವೆವು. ಪ್ರಲ್ಹಾದನಂಥ ಪವಿತ್ರವಾದ ಭಕ್ತಶಿರೋಮಣಿ ಮೂರ್ತಿಯನ್ನು ನಾಶಗೊಳಿಸುವದಕ್ಕೆ, ಹಿರಣ್ಯಕಶಿಪುವು ತನ್ನಲ್ಲಿದ್ದ ಎಲ್ಲ ಪಾಶವೀ ಶಕ್ತಿಯ ಉಪಯೋಗವನ್ನು ಮಾಡಿದರೂ ಕಡೆಗೆ ಭಗವದನುಗ್ರಹದಿಂದ ಪ್ರಲ್ಹಾದನೇ ವಿಜಯಶಾಲಿಯಾದನು. ದುರ್ಯೋಧನಾದಿ ಕೌರವರು, ಧರ್ಮಾದಿ ಪಾಂಡವರಿಗೆ ನಾನಾಪರಿಯ ತೊಂದರೆಗಳನ್ನು ಕೊಟ್ಟು ಅವರ ನಾಶಕ್ಕಾಗಿ ಯತ್ನಿಸಿದರೂ. ಶ್ರೀ ಕೃಷ್ಣಕೃಪೆಯಿಂದ ಪಾಂಡವರ ನಾಶವಾಗದೆ, ಅವರೇ ಜಯವನ್ನು ಸಂಪಾದಿಸಿದರು. ಇಂಗ್ಲಂಡ, ಅಮೇರಿಕಾ, ಫ್ರಾನ್ಸ, ಇಟಲಿ, ಆಯರ್ಲಂಡ ಮುಂತಾದ ದೇಶಗಳ ಇತಿಹಾಸವಾದರೂ ನಮಗೆ ಇದೇ ಪಾಠವನ್ನು ಕಲಿಸುತ್ತದೆ. ಇರಲಿ.

ಕಾಂಗ್ರೆಸದವರು ಈ ಸತ್ಯಾಗ್ರಹವಾರದ ವ್ರತವನ್ನು ಪಾಲಿಸುವದಕ್ಕಾಗಿ ಹೇಳಿದ ಕಾರ್ಯಕ್ರಮವನ್ನು ರಾಷ್ಟ್ರವು ಪೂರ್ಣಮಾಡಲಿಕ್ಕೆ ಬೇಕು. ಎಲ್ಲ ಭಾಗಗಳಿಂದ ಈಗಿನವರೆಗೆ ಬಂದ ಸುದ್ದಿಗಳ ಮೇಲಿಂದ ನೋಡಲಾಗಿ ಈ ವಾರವು ಯಥಾಸ್ಥಿತಿಯಿಂದ ಪಾಲಿಸಲ್ಪಟ್ಟಿರುವದೆಂದು ಹೇಳಲಡ್ಡಿಯಿಲ್ಲ. ಹೋದ ವರುಷ ಮಹಾತ್ಮರ ಅಧ್ಯಕ್ಷತೆಯಲ್ಲಿ ಈ ವಾರವು ಸಂಪೂರ್ಣವಾಗಿ ಯಶಸ್ವಿಯಾಗಿತ್ತು. ಆದರೆ ಒಂದು ವರುಷದಲ್ಲಿ ಹಿಂದುಸ್ಥಾನದ ಪರಿಸ್ಥಿತಿಯಲ್ಲಿ ಅತ್ಯಂತ ಬದಲಾವಣೆಯು ಆಗಿರುವದು. ಹೋದಸಾರೆ ದೇಶದ ಎಲ್ಲ ಮುಂದಾಳುಗಳು ಸೆರೆಮನೆಯ ಹೊರಗಿದ್ದು ಎಲ್ಲ ಕಡೆಯಲ್ಲಿ ಸ್ವಾತಂತ್ರ್ಯದ ಬಿರುಗಾಳಿಯನ್ನು ಎಬ್ಬಿಸಿ, ಹಿಂದುಸ್ಥಾನದಲ್ಲಿ ಹೊಸ ಜಾಗ್ರತಿಯನ್ನು ಉಂಟುಮಾಡಿದರು. ಆದರೆ ಈ ಸಾರೆ ಮಹಾತ್ಮಾ ಗಾಂಧಿ ಮಹಾತ್ಮಾ, ಶೌಕತ ಅಲ್ಲಿ ಮಹಮುದ ಅಲ್ಲಿ ದೇಶಬಂಧು ದಾಸ, ಲಾಲಾ ಲಜಪತರಾಯ, ಪಂಡಿತ ಮೋತಿಲಾಲ ನೆಹರು, ದೇ. ಭ. ಗಂಗಾಧರರಾವ ದೇಶಪಾಂಡೆ, ಸುಜಲಿ, ದಿವಾಕರ ಮುಂತಾದ ಮುಖಂಡರು ತುರಂಗದ ಒಳಗೆ ಹೋಗಿ ಕುಳಿತು ರಾಷ್ಟ್ರಸೇವೆಯನ್ನು ಮಾಡುತ್ತಿರುವರು. ಈ ಒಂದು ವರ್ಷದಲ್ಲಿ ೨೫೦೦೦ ದ ಮೇಲೆ ಜನರು ಜೇಲಿನಲ್ಲಿ ಸೆರೆಯಾಗಿ ರಾಷ್ಟ್ರೋದಯಕ್ಕಾಗಿ ಕಷ್ಟಪಡುತ್ತಿರುವರು. ಸರಕಾರದವರು ಹೋದಸಾರೆಗಿಂತ ಹೆಚ್ಚು ಹುರುಪಿನಿಂದ ದೇಶಭಕ್ತರ, ಜನರ ಮುಖಂಡರನ್ನೆಲ್ಲ ತುರಂಗಕ್ಕೆ ಅಟ್ಟಲಿಕ್ಕೆ ಕಂಕಣಬದ್ಧರಾಗಿ ನಿಂತಿರುವರು. ಇಂಥ ಪರಿಸ್ಥಿತಿಯಲ್ಲಿ ಜನರು ಮಾತ್ರ ಎಷ್ಟೋ

ಬೆದರದೆ ಎದೆಗೊಟ್ಟು ನಿಲ್ಲಲು ... ಲ್ಲಿ ಬಾರ್ಡೋಲಿಯಲ್ಲಿ ಹಾಕಿದ ... ನಿಂದ ಮೊದಲಿನ ಉತ್ಸಾಹವು ಕಡಿಮೆಯಾದಂತೆ ತೋರು ತ್ತದೆ. ಯಾವ ಆಂಧ್ರ ಪ್ರಾಂತದಲ್ಲಿ ... ಯನ್ನು ಬಂದುಮಾಡಲಿಕ್ಕೆ ಕೂಡ ಸಿದ್ಧರಾಗಿದ್ದರೋ ಅಂಥವರು ರಾಷ್ಟ್ರೀಯ ಸಭೆಯ ಸಭಾಸದರು ... ಹಿಂದೆ ಮುಂದೆ ನೋಡುತ್ತಿರುವರಂತೆ. ನಮ್ಮ ಕರ್ನಾಟಕದಲ್ಲಿ ಕೂಡ ನಿರುತ್ಸಾ ಹದ ಗಾಳಿಯು ಸ್ವಲ್ಪ ಸೋಂಕಿದಂತೆ ತೋರುತ್ತದೆ. ಆದರೆ, ಈ ನಿರುತ್ಸಾಹದಿಂದ ದೇಶದ ಏಳಿಗೆಯು ಮಾತ್ರ ಹಿಂದೆ ಬೀಳುವ ಸಂಭವವಿದೆ. ಸೈನ್ಯದ ಮುಂದಾಳುಗಳನ್ನೆಲ್ಲ ಮೊದಲು ಆಹುತಿಮಾಡಿ, ಅವರು ಹೋದಮೇಲೆ ಉಳಿದ ಸೈನಿಕರು ಬೆದರಿ ಕಾಲು ತೆಗೆದರೆ ಆ ಸೈನಿಕರಿಗೆ ಶೋಭಿಸುವದೇ? ಅದು ಅವರ ಕರ್ತವ್ಯವೇ? ಅದೇ ಮಾತು ನಮಗಾದರೂ ಹತ್ತುವದು. ದೊಡ್ಡ ದೊಡ್ಡ ಮಾತುಗಳನ್ನಾಡಿ, ನಮ್ಮ ಮುಖಂಡರನ್ನೆಲ್ಲ ಮುಂದೆ ಬಿಟ್ಟು ನಾವು ಮಾತ್ರ ಅವರು ಹಾಕಿಕೊಟ್ಟ ಮಾರ್ಗವನ್ನು ಅವಲಂಬಿಸದೆ, ಹಿಂದೆ ಬಿದ್ದು ಓಡಿಹೋಗುವದು ಎಷ್ಟು ಮಾತ್ರವೂ ಸರಿಯಾಗಲಾರದು. ಇದರಿಂದ ನಮ್ಮಲ್ಲಿಯ ಮನುಷ್ಯತ್ವಕ್ಕೆ ಕುಂದು ಬರುವಂತಿದೆ. ಆದರೆ ನಮ್ಮ ವೀರರು ಮುಂದೆ ಹೋದರೆಂದು ದ್ವಿಗುಣಿತ ಉತ್ಸಾಹದಿಂದ ನಾವಾದರೂ ಅವರ ಬೆನ್ನು ಹತ್ತಿ ಸ್ವರಾಜ್ಯ ಸಂಪಾದನೆಯನ್ನು ಮಾಡುವದು ನಮ್ಮೆಲ್ಲರ ಆದ್ಯಕರ್ತವ್ಯವು. ಮಹಾತ್ಮರು ಹಾಕಿಕೊಟ್ಟ ವಿಧಾಯಕ ಕಾರ್ಯಕ್ರಮವನ್ನು ಸಂಪೂರ್ಣವಾಗಿ, ಪೂರ್ಣ ಮಾಡುವದರಿಂದ ಮಾತ್ರ ಮಹಾತ್ಮರ ಹಾಗೂ ಇತರ ದೇಶಭಕ್ತರ ಋಣದೊಳಗಿಂದ ನಾವು ಮುಕ್ತರಾಗಬಹುದು. ಇಲ್ಲವಾದರೆ ಕಡೆತನಕ ಋಣಿಗಳಾಗಿ ಉಳಿಯುವ ಸಂಭವವಿದೆ. ಆದ್ದರಿಂದ ಈ ರಾಷ್ಟ್ರೀಯ ವಾರವನ್ನು ಸ್ಮರಿಸಿ ಸ್ಮರಿಸಿ ಹೊಸ ಹುರುಪಿನಿಂದ, ಹೋದ ವರುಷಕ್ಕಿಂತ ಹೆಚ್ಚು ಉತ್ಸಾಹದಿಂದ ಎಲ್ಲರೂ ದೇಶಕಾರ್ಯಕ್ಕೆ ಮುಂದೆ ಬರುವರೆಂದು ನಂಬಿದ್ದೇವೆ. ಮತ್ತು ಈ ತರದ ಉತ್ಸಾಹವನ್ನು ಅವರಿಗೆ ಕೊಡಲೆಂದು ಪರಮಾತ್ಮನನ್ನು ಅನನ್ಯ ಭಾವದಿಂದ ಬೇಡಿಕೊಳ್ಳುತ್ತೇವೆ.

## ಟಿಪ್ಪಣಿಗಳು.

**೧೮ ನೇ ತಾರೀಖು.**

ವಿಭೂತಿಗಳೆಂಬುವರು, ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲದಲ್ಲಿಯೂ ಉಂಟು. ಪ್ರಾಚೀನ ಕಾಲದಲ್ಲಿ, ರಾಮ, ಹನುಮಂತ, ಭೀಷ್ಮ ಮೊದಲಾದ ದೊಡ್ಡ ದೊಡ್ಡ ಜನರು ತಮ್ಮ ಆತ್ಮಿಕ ಶಕ್ತಿಯಿಂದಲೂ, ಸತ್ಯನಿಷ್ಠತೆಯಿಂದಲೂ, ಜಗನ್ಮಾನ್ಯರಾಗಿ ಹೋದರು. ಇಂಥ ಸತ್ಪುರುಷರ ಜನ್ಮತಿಥಿಗಳು ಈಗಲೂ ಎಲ್ಲ ಹಿಂದೂ ಜನರಿಂದ ಅತ್ಯಾನಂದದಿಂದಲೂ, ಉತ್ಸಾಹದಿಂದಲೂ, ಪಾಲಿಸಲ್ಪಡುತ್ತಿವೆ.

ಅದರಂತೆಯೇ, ಈಗಿನ ಕಾಲದಲ್ಲಿ ... ರೆಂದು ಹೊಗಳಿಸಿಕೊಂಡ ಮಹಾತ್ಮಾ ಗಾಂಧಿಯವರ ಜನ್ಮತಿಥಿಯನ್ನು ಹಾಗೂ ಅವರಿಗೆ ಯಾವ ದಿವಸ ... ಬ್ರಿಟಿಶ ರಾಜ್ಯಪದ್ಧತಿಯಿಂದ, ಶಿಕ್ಷೆಯು ... ಇಂಥ ದಿವಸಗಳನ್ನು ಯಾವ ಹಿಂದೀ ... ಸ್ಮರಿಸಲಾರನೂ! ಅಂಥ ಚಿರಸ್ಮರಣೀಯವಾದ ದಿವಸವೆಂದರೆ ೧೮ ನೇ ತಾರೀಖು. ಮಹಾತ್ಮಾಜಿಯವರಿಗೆ ಶಿಕ್ಷೆ ಕೊಟ್ಟು ಜನರಲ್ಲಿ ... ಯನ್ನು ಹುಟ್ಟಿಸಿ ... ಸಲುವಾಗಿ ತಮ್ಮ ... ತ್ಯಾಗ ... ಎಂಬ ... ಮಂತ್ರವನ್ನು ... ಸುದಿವಸ ...

ಎಲ್ಲ ಜನರು ... ತಮ್ಮ ... ಭಾವವನ್ನು ವ್ಯಕ್ತಪಡಿಸುವದೆಂದರೆ ಅವರ ಸಲುವಾಗಿ ಒಂದು ರೀತಿಯಿಂದ ಹಬ್ಬವನ್ನು ಪಾಲಿಸಿದರೆ ಆಯಿತೆಂದು ತಿಳಿಯುತ್ತಾರೆ. ಆದರೆ ಇದು ಅವರಿಗೆ ಯೋಗ್ಯವಾದ ಸ್ಮಾರಕವು ಎಂದಿಗೂ ಆಗಲಾರದು. ಆದ್ದರಿಂದ ಮಹಾತ್ಮರ ಸ್ಮರಣೆಯನ್ನು ಈ ಪ್ರಕಾರ ಮಾಡುವದು ವಿಘಾತಕವಾದದು. ಯಾಕಂದರೆ ಯಾವ ಮಹಾತ್ಮರು ತಾವು ಕೈಕೊಂಡ ಕಾರ್ಯವನ್ನು ಜನರಮೇಲೆಯೇ ಒಪ್ಪಿಸಿ, ಆ ಕಾರ್ಯದ ಯಶಪ್ರಾಪ್ತಿಯ ಸಲುವಾಗಿ ತಪಸ್ಸು ಆಚರಿಸ ಹತ್ತಿರುವರೋ, ಅಂಥ ಮಹಾತ್ಮರಿಗೆ ಈ ತರದ ಶಾಬ್ದಿಕ ಮತ್ತು ಔಪಚಾರಿಕ ಮರ್ಯಾದೆಯಿಂದ ಎಂದಿಗೂ ತೃಪ್ತಿಯಾಗಲಾರದು.

ನಮ್ಮ ಕರ್ನಾಟಕದ ಜನರು ಮಾತ್ರ ಈ ದಿವಸವನ್ನು ಹೇಗೆ ಕಳೆಯಬೇಕೆಂಬುದನ್ನು ಇನ್ನೂ ವಿಚಾರಮಾಡಿದಂತೆ ತೋರುವದಿಲ್ಲ. ಆದರೆ ಬಾಂಧವರೇ ನೀವು ಆ ಹೊತ್ತಿನ ದಿವಸ ಮಹಾತ್ಮಾಜಿಯವರ ತಪಸ್ಸು ಉತ್ತಮರೀತಿಯಿಂದ ಸಾಗಲೆಂತಲೂ ಅವರು ಬಹಳ ಕಾಲದವರೆಗೆ ನಮ್ಮ ಮುಂದಾಳುಗಳಾಗಿ ಇರಲೆಂತಲೂ ಜಗದೀಶ್ವರನನ್ನು ಪ್ರಾರ್ಥಿಸಿರಿ. ಇದೇ ನಿಮ್ಮ ಮೊದಲನೇ ಕೆಲಸವು. ಎರಡನೇ ಕೆಲಸವೆಂದರೆ, ಆ ದಿವಸ ನಿಮಗೆ ಎಷ್ಟು ವೇಳೆಯು ದೊರೆಯುವದೋ ಅಷ್ಟು ವೇಳೆಯನ್ನು ಗೊಷ್ಟ ಹರಟೆಯಲ್ಲಿ ಕಳೆಯದೇ, ನೂಲು ತೆಗೆಯುವದರಲ್ಲಿ ಕಳೆಯಬೇಕು. ಮತ್ತು ನಿಮ್ಮ ಮೈಮೇಲೆ ಪರದೇಶೀ ಅರಿವೆಗಳು ಉಳಿದಿದ್ದರೆ, ಅವುಗಳನ್ನು ಕೂಡಲೇ ಅಗ್ನಿನಾರಾಯಣನಿಗೆ ಸಮರ್ಪಿಸಿರಿ. ಮತ್ತು ಖಾದಿಯನ್ನು ಧರಿಸಿರಿ. ಆವತ್ತಿನ ದಿವಸ ಯಾವತರದ ದುರ್ವಿಚಾರಗಳನ್ನು ಮನಸ್ಸಿನಲ್ಲಿ ತರದೇ ಕೇವಲ ನಿಮ್ಮ ಆತ್ಮಿಕ ಶಕ್ತಿಯನ್ನು ಬೆಳೆಸತಕ್ಕದ್ದು. ಮತ್ತು ಆವತ್ತಿನ ಮೊದಲ್ಗೊಂಡು ಖಾದಿಯ ಪ್ರಸಾರವನ್ನು ಮಾಡುವದಕ್ಕೆ ಹೆಚ್ಚು ಉತ್ಸಾಹದಿಂದ ಬದ್ಧಕಂಕಣರಾಗತಕ್ಕದ್ದು; ಮತ್ತು ಈ ದಿವಸದ ಉತ್ಪನ್ನವನ್ನು ಟಿಳಕ ಸ್ವರಾಜ್ಯ ಫಂಡಿಗೆ ಕೊಡತಕ್ಕದ್ದು. ಆದ್ದರಿಂದ ಎಲ್ಲ ಕರ್ನಾಟಕಸ್ಥರು ಈ ಗಾಂಧಿ ದಿವಸವನ್ನು ಪ್ರತಿತಿಂಗಳ ೧೮ ನೇ ತಾರೀಖಿಗೆ ಮನಸ್ಸಿನಿಂದ ಪಾಲಿಸುವರೆಂದು ನಂಬಿದ್ದೇವೆ.

**"ಹಾಲಿಲ್ಲ ಬಟ್ಟಲಿಲ್ಲ ಗುಟುಕ್ಕ" ಅಂದಂತೆಯೇ**

ಇತ್ತಿತ್ತಲಾಗಿ ವೃತ್ತಪತ್ರಗಳಲ್ಲಿ ಸ್ವರಾಜ್ಯದ ಪದ್ಧತಿಯ ಬಗ್ಗೆ ವಿಚಾರವು ನಡೆದಿರುವದು. ಈಗ ಅದರ ಬಗ್ಗೆ ಚರ್ಚೆ ನಡೆಸುವದೆಂದರೆ, ... ಕುದುರೆಯ ಮುಂದೆ ಬಂಡಿ ಹೂಡಿದಂತೆಯೇ ಸರಿ! ಸರಕಾರದವರು ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡಲಿಕ್ಕೆ ಕಂಕಣಬದ್ಧರಾಗಿ ನಿಂತು ಜನರಿಗೆ ಸ್ವರಾಜ್ಯವು ಎಂಥ ಬೇಕು ಹೇಳಿರೆಂದು ಆಹ್ವಾನ ಮಾಡಿದ್ದರೆ ಮಾತ್ರ ನಾವೆಲ್ಲರೂ ಆ ಬಗ್ಗೆ ವಿಚಾರಮಾಡಬೇಕಾಗಿತ್ತು. ಆದರೆ ಸರಕಾರದವರು ಅಸಹಕಾರದ ಚಳವಳಿಯನ್ನು ಮುರಿಯಲಿಕ್ಕೆ ಯುಕ್ತಿಪ್ರಯುಕ್ತಿಗಳಿಂದ ಪ್ರಯತ್ನಿಸುತ್ತಿರುವಾಗ ನಾವು ಸ್ವರಾಜ್ಯದ ವಿಚಾರದಲ್ಲಿ ತೊಡಗುವದು ಮೂರ್ಖತನವೇ ಸರಿ! ಸ್ವರಾಜ್ಯವು ದೊರೆಕಬೇಕಾದರೆ ನಮ್ಮಲ್ಲಿಯ ಆತ್ಮಶಕ್ತಿಯು ಬೆಳೆಯಲಿಕ್ಕೆ ಬೇಕು. ಸ್ವಾರ್ಥತ್ಯಾಗ ಬುದ್ಧಿಯು ಹೆಚ್ಚಬೇಕು. ದೇಶದ ಏಳಿಗೆಗಾಗಿ ತನುಮನಧನಗಳನ್ನು ಅರ್ಪಿಸಲು ಜನರು ಸಿದ್ಧರಾಗಬೇಕು.

ಆದ್ದರಿಂದ ನನ್ನಲ್ಲಿ [illegible] ಪಂಜಿವರ ಬಗ್ಗೆ [illegible] ರಬೇಕೆಂದು [illegible] ತನ್ನಲ್ಲಿ [illegible] ಕರ ಪ್ರಚಾರವನ್ನು [illegible] ಷವಾಗಿ [illegible] ಕಾರ್ಯಕ್ರಮವನ್ನು [illegible] ಕೈಮಗ್ಗದ [illegible] ರ ಮಾತ್ರ [illegible] ಸಿಗುವದು.

---

೧೯೪ ನೇ ಪಾನಿನಿಂದ ಮುಂದೆ ಸಾಗಿದ್ದು.

ಗಿಲ್ಲ. ಹಿಂದುಸ್ಥಾನದಲ್ಲಿಯ ಒಕ್ಕಲಿಗನಿಗೆ ಬೇಕಾದದ್ದೆಂದರೆ, ಇದರ ಜೋತೆಗೆ ಇನ್ನೊಂದು ಉದ್ಯೋಗವು ಅವನ ವ್ಯವಸಾಯದ ಮತ್ತು ಅವನ ಸ್ವಭಾವಕ್ಕೂ ಹೆಚ್ಚು ಒಪ್ಪುವ ಉದ್ಯೋಗವೆಂದರೆ, ರಾಟಿ ಯು. ಆದೇ ಕೈಮಗ್ಗವು ಆಗಲಾರದು ಯಾಕೆಂದರೆ ಇದನ್ನು ಪ್ರತಿಒಂದು ಮನೆಯಲ್ಲಿ ನಾಗಿಸಲಾರದು. ಆದರೆ ರಾಟಿಯನ್ನು ಮಾತ್ರ ಪ್ರತಿಒಂದು ಮನೆಯಲ್ಲಿ ನಡಿಸಲು ಶಕ್ಯವಿರುತ್ತದೆ ಆದೇಕೆ ನೂರು ವರ್ಷಗಳ ಹಿಯಲ್ಲಿ ಅದನ್ನು ಪ್ರತಿಒಂದು ಮನೆಯಲ್ಲಿ ಕಾಣಬಹುದಾಗಿತ್ತು. ಆರ್ಥಿಕ ಅವನತಿಯು ಮೂಲಕ ಇದು ಸ್ವಚ್ಛತವಾಗಿರದೇ, ಒಂದ್ದೆ ಪೂರ್ವಕವಾದ ವಿತ್ತಾಗಡಿಂದಲೂ ಯುಕ್ತಿ ಪ್ರಯುಕ್ತಿಗಳಿಂದಲೂ ಆದು ಮನೆಮನೆಗಳೊಳಗಿಂದ ಹೊರಗೆ ನೂಕಲ್ಪಟ್ಟಿರುವದೆಂದು ಹೇಳಲಿಕ್ಕೆ ವಿಸ್ವಸನೀಯವಾದ ಆ[illegible]ಗಳಿರುವವು. ರಾಟಿಯನ್ನು ಪುನರುಜ್ಜೀವಿಸುವದರಿಂದ ಹಿಂದುಸ್ತಾನ ದಸಾಂಪತ್ತಿಕ ದುರಾವಸ್ಥೆಯು ಕೂಡಲೆ ನೂರಾಗುವದು. ನೀವು ಹಿಂದುಸ್ತಾನವನ್ನು ಪ್ರೀತಿಸುತ್ತಿರುವದರಿಂದ ಈ ನನ್ನ ದೇಶದ ಸಾಂಪತ್ತಿಕ ಮತ್ತು ನೈತಿಕ ಉನ್ನತಿಯ ಬಗ್ಗೆ ಬಹಳೇ ಉತ್ಸಾಹಪೂರ್ವಕವಾಗಿರುವದೆಂಬುವದನ್ನೂ ಬಲ್ಲೆನು. ನೀವು ಜನರಲ್ಲಿ ಪ್ರತಿಷ್ಠೆಯುಳ್ಳವರೆಂಬುದು ನಾನು ಬಲ್ಲೆ ಮತ್ತು ಆ ನಿಮ್ಮ ದೊಡ್ಡಸ್ತನವನ್ನು ರಾಟಿಯ ವಿಷಯದಲ್ಲಿ ಖರ್ಚು ಮಾಡಲಿಕ್ಕೆ ಕೇಳಿಕೊಳ್ಳುವೆನು. ಸಹಕಾರಿ ಸಂಘಗಳನ್ನು ಹುಟ್ಟಿಸುವದರಲ್ಲಿ ಇದರ ಉಪಯುಕ್ತತೆಯು ಮಿಗಿಲಾದದ್ದು. ಲಕ್ಷಾಧಿಜನರ ಪ್ರಾಮಾಣಿಕ ಸಹಾಯವಿಲ್ಲದೆ ಈ ಸಹಸವು ಯಶಸ್ಸು ಆಗಲಾರದು. ಈಗಾಗಲೇ ಸಾವಿರಾರು ಸ್ತ್ರೀಯರನ್ನು ನಾಚಿಕೆಯನ್ನು ಬಿಟ್ಟು ಆಚರಿಸಬೇಕಾದ ಆಯಸ್ಸು [illegible]ಸುತ್ತಿರುವದರಿಂದ, ಇದು ಸಾಂಪತ್ತಿಕ ಏಳ್ಗೆಗೆ ಸಾಧನವಿದ್ದಂತೆಯೇ ನೈತಿಕ ಉನ್ನತಿಯ ಮಾರ್ಗವಾಗಿರುವದು.

ಯಂತ್ರಗಳ ವಿಷಯಕ್ಕೆ ನನ್ನ ವಿಲಕ್ಷಣವಾದ ವಿಚಾರಗಳನ್ನು ಅಂಶತಃ [illegible] ನೀವು ನಿಮ್ಮ ಮನಸ್ಸನ್ನು ಕಲುಷಿತವಾಗಿಸಿಡಲಿಕ್ಕಿಲ್ಲೆಂದು, ನಾನು [illegible] ಹಿಂದುಸ್ತಾನದಲ್ಲಿ ಯಂತ್ರ ಸಹಾಯದಿಂದ [illegible] ಯಾವುದು [illegible] ನ ವಿರೋಧಿಸುವದಿಲ್ಲ. [illegible] ಮಾಡಿಗುಂಟಾಗಿ [illegible] ಕಲವು [illegible]ಗಳಲ್ಲಿ ಮಾತ್ರ [illegible] ಯನ್ನು [illegible] ಗಳನ್ನು ತಯಾರಿಸಿ, [illegible] ದೇಶವೂ [illegible] ಹಿಂದುಸ್ಥಾನ [illegible] ದಲ್ಲಿಯ [illegible] ನಕ್ಕೆ ಬಟ್ಟೆಗಳನ್ನು [illegible] ಸಾಂಪತ್ತಿಕ [illegible] ದಿಂದ [illegible].

ನನ್ನ ಪ್ರಿಯಮಿತ್ರ
[illegible] ಎಮ್. ಕೆ. ಗಾಂಧಿ

[illegible]
[illegible]

ಪ್ರಿಯ ಮಿ. ಗಾಂಧಿ

[illegible] ಅನಂದವೆನಿಸುತ್ತದೆ. [illegible] ಹೋಜ್ಞರಿಗೆ ನಾನು [illegible]. ಮಹತ್ವವಾದ ಪತ್ರವು [illegible] ಅವರೂ ಇನ್ನೂ [illegible] ಇದ್ದದ್ದರಿಂದ, ಈ ಪತ್ರಿನ [illegible] ಉತ್ತರವನ್ನು ಬರಿಯದ ಇದ್ದದಕ್ಕಾಗಿ ನೀವು ದಯವಿಟ್ಟು ಕ್ಷಮಿಸುವಿರೆಂದು ಆಶಿಸುತ್ತೇನೆ. ಸ್ವಲ್ಪ ದಿವಸಗಳಲ್ಲಿಯೇ ಸಾಕಷ್ಟು ಬರೆಯಲಿಕ್ಕಾಗುವದೆಂದು ಆಶಿಸುವೆನು

ರಾಟಿಯ ವಿಷಯಕ್ಕೆ ನೀವು ಮಾಡಿದ ವಿಧಾನಗಳ ಬಗ್ಗೆ ನಾನಾದರೂ ಹಿಂದುಸ್ಥಾನದಲ್ಲಿಯ ಹಳ್ಳಿಗಾಡದ ಆಯುಷ್ಕ್ರಮದ ಬಗ್ಗೆ ನನಗಿದ್ದ ಪ್ರತ್ಯಕ್ಷ ಜ್ಞಾನದ ಬಲದಿಂದ ಯೋಗ್ಯ ಪರಿಸ್ಥಿತಿಯನ್ನು ಒದಗಿಸಿಕೊಟ್ಟಲ್ಲಿ ಈಗಿನ [illegible] ಸಹಾಯದಿಂದ ರಾಟಿಯು ಒಂದೇ ಏಕ ಕೈಮಗ್ಗವು ಸಹ ಗಿರಣಿಗಳ ಕೂಡ ಹೋರಾಡಿ, ಹಿಮ್ಮೆಟ್ಟಿಸಬಲ್ಲದೆಂದು ಹೇಳಬಹುದು. ಬೇಸಾಯದ ಕೆಲಸ ವಿಲ್ಲದಕ್ಕಾಗಿ ವ್ಯರ್ಥವಾಗಿ ಕಳೆದುಹೋಗುವ ಒಕ್ಕಲಿಗರ ನಾಲ್ಕು ತಿಂಗಳ ದುಡಿತವು ಪುಕ್ಕಟೆಯಾಗಿ ಸಿಗುವದೇ ಇದ್ದರ ಕಾರಣವು ಕೂಲಿಯ ವೆಚ್ಚವಿಲ್ಲದೆ ತಯಾರಿಸಿದ ನೂಲು ಅಥವಾ ಅರಿವೆಯುಗಿಂತ ಮತ್ತಾವ ಅರಿವೆಯು ಹೆಚ್ಚು ಸೋವಿಯಾಗಲಾರದು.

ಭವ್ಯವಾದ ಗಿರಣಿಗಳನ್ನು ನಡಿಸುವದರಿಂದ ಅನೇಕ ಅನಿಷ್ಟಗಳು ಸಂಭವಿಸುವವೆಂಬ ನಿಮ್ಮ ಅಭಿಪ್ರಾಯಕ್ಕೆ ನನ್ನ ಪೂರ್ಣ ಒಪ್ಪಿಗೆ ಇರುತ್ತದೆ. ಯಾವದೇ ಉದ್ಯೋಗದ ಬೆಲೆಯನ್ನು ಕ್ರಮದಿಂದ ದೂರ ಉಳಿಯುವ ಆ ವ್ಯವಸಾಯದ ಭಾಗೀದಾರರಿಗೆ ಕೊಡಲ್ಪಡುವ ಲಾಭದಿಂದ ಕಟ್ಟದೆ ಅಲ್ಲಿ ದುಡಿಯುತ್ತಿರುವ ಜನರ ಶರೀರ ಆತ್ಮಾ ಮತ್ತು ಮನಸ್ಸಿನ ಉತ್ಸಾಹದ ಮೇಲೆ ಆಗುವ ಪರಿಣಾಮದಿಂದ ಆ ಉದ್ಯೋಗದ ಗುಣಾವಗುಣಗಳನ್ನು ತಿಳಿದುಕೊಳ್ಳಬೇಕು. ಮುಂಬಯಿ ಚಾಳುಗಳಲ್ಲಿ ವಾಸಿಸುವಂಥ ಹೆಂಗಸರ ಹುಡುಗರ ಮತ್ತು ಮನುಷ್ಯರ ಜೀವಿತವನ್ನೇ ಅಗ್ರವಾಗಿ ತೊಳ್ಳುವವರಿಗೆ ಆ ಗಿರಣಿಗಳನ್ನು ಉಳಿಸಿದ ಮಾತ್ರದಲ್ಲಿ ಒಟ್ಟಿಯು ತುಟ್ಟಿ ಅಲ್ಲವೆಂದು ಅನ್ನಲಾರರು. ಯಾವ ಸ್ವರಾಜ್ಯದಿಂದ ಸಕಲ ಹಿಂದೀ ಜನರು ಆಯರಾರೋಗ್ಯದಿಂದ ಬಾಳಲನುಕೂಲವಾಗುವದೋ ಅಂಥ ಸ್ವರಾಜ್ಯವು ಹಿಂದುಸ್ಥಾನದಲ್ಲಿ ಬೇಕೆಂದು ನನ್ನ ಇಚ್ಛೆಯು. ಮ್ಮ ಸ್ವರಾಜ್ಯದ ವಿಚಾರವಾದ [illegible] ಆರೋಗ್ಯವಿಲ್ಲದಲೆ ಅವಿಷ್ಟಕರ [illegible] ರಾಶಿಯನ್ನು ಒದಗಿಸಿಕೊಡುವಂಥ ಸ್ವರಾಜ್ಯ [illegible].

[illegible]

[illegible] ಸ್ವರಾಜ್ಯವನ್ನು [illegible] ದೊರಕಿಸಬಲ [illegible] ಹಾಗಿರುವದಿಲ್ಲ ಭಕ್ತರು [illegible] ಧಾನ್ಯದ [illegible]

ವದು ಇದಕ್ಕಾಗಿ ಬೇಕಾಗುವ ಜನ ಸಹಾಯದ [illegible] ನೆಯನ್ನು ಮುಂದೆ ಮಾಡಬೇಕಾದರೂ ಈಗ [illegible] ರೆನು ಅವರಲ್ಲಿ ನೀವು ಸರಕಾರದ [illegible] ರುಗಲಿಕ್ಕಿಲ್ಲೆಂದು ಆಶಿಸುತ್ತೇನೆ [illegible] ಮೊಟ್ಟಮೊದಲು ಕಡ [illegible] ರುವೆನು [illegible] ಸರ್ಕಾರ [illegible] ವಧುವಿನ [illegible] ನನಗೆ [illegible] ದರೂ ಸರಿಯಿಂದಿರುವದಿಲ್ಲ.

[illegible] ಹಿಂದೆ [illegible] ನಾಳ [illegible] ರಾಷ್ಟ್ರದಾಗಲಿಕ್ಕೆ [illegible] ನನ್ನ ಬಿಡಿಸಿಕೊಳ್ಳಿ. ಇದೇ ಸರಕಾರವು ಹಿಂದುಸ್ಥಾನದಲ್ಲಿ ಕಡಿಮೆ ಹೋಗಲಿಕ್ಕೆ [illegible] ಸತ್ಯಾಗ್ರಹ [illegible] ನನಗೆ ಹೆಚ್ಚು [illegible] ಕಾರ್ಯದಲ್ಲಿ [illegible] ನನ್ನ [illegible]

[illegible]

## ಹಸ್ತವಿತರಣ

[illegible]

## ಇಹವೃತ್ತ

[illegible] ರಾಷ್ಟ್ರೀಯ [illegible] ಕೆಲಸವು [illegible] ಶಿಕ್ಷಕರು [illegible] ಮಾರ್ಗದಲ್ಲಿಯೇ [illegible] ಸ್ವರಾಜ್ಯ [illegible] ಜನರ ಕಡೆಗೆ [illegible] ಹೋಗಿ [illegible] ಹೋಗುವದು [illegible]

ಇಲ್ಲಿಯ ರಾಷ್ಟ್ರೀಯ ವಿದ್ಯಾಲಯವು ಇಷ್ಟು ದಿವಸಗಳವರೆಗೆ [illegible] ಸಲ್ಲುವಾಗಿ ಬಂದು ಇತ್ತು. ನಾಳೆ [illegible] ತಾರೀಖಿನಿಂದ ಪುನಃ [illegible] ವಿದ್ಯಾರ್ಥಿಗಳೆಲ್ಲರೂ ಆ ದಿವಸ ಮುಂಜಾನೆ [illegible] ಘಂಟೆಗೆ ಸರಿಯಾಗಿ ವಿದ್ಯಾಲಯಕ್ಕೆ ಬರಬೇಕೆಂದು ಮುಖ್ಯಾಧ್ಯಾಪಕರು ತಿಳಿಸುತ್ತಾರೆ.

---

**ಸ್ವದೇಶೀ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!**

# ಅತ್ಯುತ್ತಮ

ಮಸಿಅರ್ಕಿನ ಚೀಟಿಗಳು ಮತ್ತು ಗುಳಿಗೆಗಳು.

[illegible] ಚೀಟಿಗೆ ೧೪ ಆಣೆ, ೧೪೦ ಗುಳಿಗೆಗಳಿಗೆ [illegible] ಮಸಿ ಪುಡಿಗೆ ೪ ಆಣೆ. [illegible] ಮತ್ತು [illegible] ಬೇರೆ.

ಕರ್ನಾಟಕ ಇಂಕ ಕಂಪನಿ
**ಬಾಗಲಕೋಟೆ.**

---

[illegible] ಬೇಕು! [illegible] ಬೇಕು!!

ನೂರಾರು ರೋಗಗಳನ್ನು ನಿರ್ಮೂಲವಾದ

# ನೀಲಗಿರಿ ತೈಲವು.

[illegible] ನೀಲಗಿರಿ ತೈಲವು ಸಿಗುತ್ತದೆ [illegible] ತೈಲವು ಸಿಗುವದು [illegible] ತೈಲದ ಬಾಟ್ಲಿ [illegible] ೪-೦೦ [illegible] ಮಾಹಿತಿ ಪತ್ರದ್ವಾರ [illegible]

**[illegible] ಜೆಲ್ಲಾ ಉತ್ತರ ಕಾನಡಾ**

---

## ಆತ್ಮೋದ್ಧಾರಕನೆಂಬ

[illegible] ಉತ್ತರ ಕಾನಡಾ [illegible] ಸಾಮಾಜಿಕ ರಾಜಕೀಯ ವಿಷಯಗಳ [illegible] ಸ್ವಾಭಿಮಾನ [illegible] ವಿದ್ಯಾರ್ಥಿಗಳು [illegible] ಬಾಗಲಕೋಟೆ [illegible] ಉತ್ತರ ಕಾನಡಾ [illegible]

---

**[illegible] ಕರ್ನಾಟಕ ಸಹಾಯಕ [illegible]**

[illegible] ಗ್ರಂಥಗಳಲ್ಲಿ [illegible] ಗ್ರಂಥಮಾಲೆಗೆ ವಾರ್ಷಿಕ ಚಂದಾ [illegible] ಕಳುಹಿಸಿ [illegible] ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ [illegible] ಸಂವತ್ಸರದ [illegible] ಲೇ ಮೂರು ಪುಸ್ತಕಗಳು ಅಚ್ಚಾಗಿ [illegible] ಗಾಂಧಿ ಸಂದೇಶ [illegible] ವಿಚಾರಗಳ [illegible] ಪತ್ರವ್ಯವಹಾರ ಮಾಡಬೇಕು.

ಮ್ಯಾನೇಜರ [illegible]
ಉತ್ತರ [illegible] ಗದ್ದೂರ [illegible]

---

ಟೀಪು:— [illegible] ಈ ಸಾರೆ [illegible] ಮಾಡಿರುವೆವು [illegible] ಜೀವನವು [illegible]

**ವ್ಯವಸ್ಥಾಪಕ.**

---

ಈ ಪತ್ರವನ್ನು ಬಾಗಲಕೋಟೆ [illegible] ಮಂದಿರದಲ್ಲಿ ಶ್ರೀನಿವಾಸ [illegible] ಇವರು ಮುದ್ರಿಸಿದರು ಮತ್ತು ಅಲ್ಲಿಯೇ [illegible] ಇವರು ಪ್ರಸಿದ್ಧಿಸಿದರು.

ವರ್ಷದ ಮೂಲ್ಯವು.

[illegible]

REGISTERED No. B 1589

ಶ್ರೀ

ಜಾಹಿರಾತಿನ ದರ.

'ಕನ್ನಡ ನವಜೀವನ'ದ ಒಂದು ಕಾಲಮಿನ ಒಂದು ಸಾಲಿಗೆ ಪ್ರತಿಯೊಂದು ಸಾರೆ ೧ ಆಣಿ. ಜಾಹಿರಾತುಗಳ ಬಗ್ಗೆ ಸಮಸ್ತರು ಪತ್ರ ದ್ವಾರದಿಂದ ತಿಳಕೊಳ್ಳಬೇಕು.


# ಕನ್ನಡ ನವಜೀವನ


ಬಾಗಲಕೋಟ ಚೈತ್ರ ವ॥ ೧೧ ಶಕೆ ೧೮೪೪

ವರ್ಷ ೧ ಸಂಚಿಕೆ ೧೯

ಶನಿವಾರ ತಾ ೨೯ ಎಪ್ರಿಲ ೧೯೨೨


# ಮಹಾತ್ಮರ ಸಂದೇಶವು.

## "ಹಿಂದುಮುಸಲ್ಮಾನರ ಐಕ್ಯವು."

ಹಿಂದು ಮುಸಲ್ಮಾನರ ಐಕ್ಯಕ್ಕೋಸ್ಕರವಾಗಿ ನಾನು ವಿಶ್ವಾಸಪೂರ್ವಕವಾಗಿ ಕೆಲಸಮಾಡುತ್ತಿದ್ದರೂ, ಮುಸಲ್ಮಾನನ ಸಂಗಡ ಊಟಮಾಡಲಿಕ್ಕೆ ಅಥವಾ ಸ್ವಂತ ಮನೆಯಲಿಕ್ಕೆ ಮತ್ತು ನನ್ನ ಮಗಳನ್ನು ಅವನಿಗೆ ಕೊಟ್ಟು ಲಗ್ನಮಾಡಲಿಕ್ಕೆ ಯಾವತರದಿಂದಲೂ ಸಂಕೋಚ ತಗದುಕೊಳ್ಳತಕ್ಕದ್ದಲ್ಲ. ಈ ಪ್ರಕಾರವಾಗಿ ಮಿ॥ ಶಾಸ್ತ್ರಿಯವರು ಕೆಲವು ದಿವಸಗಳ ಹಿಂದೆ ಒಂದು ಪತ್ರದಾಗಿ ಮಹಾತ್ಮಜೀಯವರಿಗೆ ಕೇಳಿದರು. ಉಳಿದ ಕೆಲವು ಮಿತ್ರರಾದರೂ ಇದೇ ತರದ ಪ್ರಶ್ನೆಯನ್ನು ಬೇರೆ ರೀತಿಯಿಂದ ಪುನಃ ಕೇಳುತ್ತಾರೆ. ಹಿಂದು ಮುಸಲ್ಮಾನರ ಐಕ್ಯಕ್ಕೆ ಪಂಕ್ತಿಭೋಜನ ಮತ್ತು ಮಿಶ್ರವಿವಾಹಗಳು ಅವಶ್ಯವಾಗಿಲ್ಲವೇ? ಇವೆರಡೂ ಅಗತ್ಯವಿದ್ದರೆ [illegible] ಸನಾತನ ಪಂಥದವರು ಅವರ ಸಂಗಡ ಊಟಮಾಡಲಿಕ್ಕೆ ಒಪ್ಪುವದಿಲ್ಲ ಅಂದ ಮೇಲೆ ಮಿಶ್ರವಿವಾಹಕ್ಕೆ ಒಪ್ಪುವಂತೂ ದೂರ ಉಳಿಯಿತು ಎಂದು ಶಾಸ್ತ್ರಿಗಳು ಹೇಳುತ್ತಾರೆ.

ಜಾತಿಭೇದ ಕೇಡುಮಾಡುವಂಥ ಸಂಸ್ಥೆಯಲ್ಲವೆಂದು ಅನೇಕವೇಳೆ ಸಾರಿಹೇಳಿದ್ದೇನೆ. ಜಾತಿಯು ಮುಖ್ಯವಾಗಿ ಕಾಲಕ್ಕೆ ಒಂದು ಪವಿತ್ರವಾದ ಸಂಸ್ಥೆಯಿದ್ದು ಅದರಿಂದ ರಾಷ್ಟ್ರದ ಸಂಪತ್ತನ್ನು ಬೆಳೆಸಲಿಕ್ಕೆ ಬರುತ್ತಿತ್ತು. ನನ್ನ ಮತದಂತೆ ಪಂಕ್ತಿಭೋಜನ ಮತ್ತು ಮಿಶ್ರವಿವಾಹ ಇವು ರಾಷ್ಟ್ರದ ಅಭ್ಯುದಯಕ್ಕೆ ಅವಶ್ಯವಾದವುಗಳೆಂದು ಅನ್ನುವದು ಪಾಶ್ಚಿಮಾತ್ಯರ ಕಲ್ಪನೆಯೆಂದು ಅನಿಸುತ್ತದೆ. ಆರೋಗ್ಯವು ಜೀವಿತಕ್ಕೆ ಅವಶ್ಯವಿದ್ದಂತೆ ಊಟಮಾಡುವದಾದರೂ ಅವಶ್ಯವಾದದ್ದಿರುತ್ತದೆ. ಮತ್ತು ಮನುಷ್ಯನು ಉಚ್ಚರಿಸುವದರ ಬಗ್ಗೆ ಇಲ್ಲವೆ ಆರೋಗ್ಯವನ್ನು ಗಳಿಸುವ ಕ್ರಿಯೆಗಳನ್ನು ಮಾಡಿಕೊಂಡಿದ್ದಿಲ್ಲವೆಂದರೆ ಉಳಿದ ಅಪವಿತ್ರ ಕೆಲಸಗಳನ್ನು ಗುಪ್ತವಾಗಿ ಮಾಡುವಂತೆ ಇವನ್ನಾದರೂ ಏಕಾಂತವಾಗಿ ಮಾಡಲಿಕ್ಕೆ ಅವನಿಗೆ ಬರುತ್ತಿತ್ತು. ಹಿಂದೂಧರ್ಮದ ಶ್ರೇಷ್ಠವಾದ ತತ್ವಗಳಲ್ಲಿ ಈ ಪ್ರಕಾರ ಊಟಮಾಡುವದಾದರೂ ಬರುತ್ತದೆ. ಮತ್ತು ಎಂದೂ ಬೇರೆಯವರ ಎದುರಿನಲ್ಲಿ ಊಟಮಾಡದಿರುವಂಥ ಸಾವಿರಾರು ಹಿಂದುಜನರನ್ನು ನಾವು ಈಗಾದರೂ ಕಾಣಬಹುದು. ಏಕಾಂತದಲ್ಲಿ ಊಟಮಾಡುವ ಸುಶಿಕ್ಷಿತ ಸ್ತ್ರೀಪುರುಷರ ಹೆಸರುಗಳನ್ನು ನಾನು ಹೇಳಬಲ್ಲೆನು; ಆದರೆ ಅವರೆಲ್ಲರೂ ಯಾರಿಗೂ ಕೇಡು ಬಗೆಯುವದಿಲ್ಲ, ಇಷ್ಟೇ ಅಲ್ಲ ಅವರು ಎಲ್ಲರ ಸಂಗಡ ಅತಿ ಗೆಳೆತನದಿಂದಿರುತ್ತಾರೆ.

ಮಿಶ್ರವಿವಾಹದ ಪ್ರಶ್ನೆಯು ಇದಕ್ಕಿಂತ ಕಠಿಣತರವಾದದ್ದಿರುತ್ತದೆ. ಅಣ್ಣತಂಗಿಯರು ಪರಸ್ಪರ ವಿವಾಹವನ್ನು ಬಯಸದೆ ಪ್ರೀತಿಯಿಂದ ಇರಬಲ್ಲರಾದರೆ, ನನ್ನ ಮಗಳು ಯಾವನಾದರೊಬ್ಬ ಮುಸಲ್ಮಾನನಿಗೂ ಅಣ್ಣನೆಂತೆಯೂ ಅವರಂತೆಯೇ ಅವನು ನನ್ನ ಮಗಳ ಸಂಗಡ ತಂಗಿಯಂತೆಯೂ ನಡೆಕೊಳ್ಳಲಿಕ್ಕೆ ಯಾವ ತರದ ವ್ಯತ್ಯಾಸವು ಕಂಡುಬರುವದಿಲ್ಲ. ಧರ್ಮ ಮತ್ತು ವಿವಾಹ ಇವುಗಳ ವಿಷಯಕ್ಕೆ ಇದ್ದ ನನ್ನ ಮತವು ಪ್ರೌಢವಾದದ್ದಿರುತ್ತದೆ. ತಿನ್ನುವದು ಮತ್ತು ಮಿಶ್ರವಿವಾಹ ಮಾಡಿಕೊಳ್ಳುವದು ಇವುಗಳ ವಿಷಯಕ್ಕೆ ಇದ್ದ ನಮ್ಮ ಬಲವತ್ತರವಾದ ಇಚ್ಛೆಯನ್ನು ಪ್ರತಿಬಂಧಿಸಿದಷ್ಟು ನಾವು ಧಾರ್ಮಿಕದೃಷ್ಟಿಯಿಂದ ದೊಡ್ಡವರಾಗುತ್ತೇವೆ. ಯಾವನಾದರೊಬ್ಬ ತರುಣ ಮನುಷ್ಯನು ನನ್ನ ಮಗಳಸಂಗಡ ವಿವಾಹಮಾಡಿಕೊಳ್ಳುವದು ಮತ್ತು ನಾನು ಎಲ್ಲರಸಂಗಡ ಊಟಮಾಡುವದು ಜಗತ್ತಿನಲ್ಲಿ ಅವಶ್ಯವಾದದ್ದು ಎನಗೆ ಒಪ್ಪಬೇಕಾದಲ್ಲಿ ಯೋಗ್ಯವಾದದ್ದೆಂದೂ ನಾನು ಸಂಸಾರವು ನಿಸ್ಸಾರವಾದದ್ದೆಂದು ಅದನ್ನು ತುಚ್ಛೀಕರಿಸುತ್ತೇನೆ. ನಾನು ಅಖಿಲ ಜಗತ್ತಿನ ಸಂಗಡ ಗೆಳೆತನದಿಂದಿರುವೆನೆಂದು ಪ್ರಮಾಣಪೂರ್ವಕವಾಗಿ ಹೇಳುತ್ತೇನೆ. ನಾನು ಮುಸಲ್ಮಾನ ಅಥವಾ ಕ್ರಿಶ್ಚನರ ಸಂಗಡ ಎಂದಿಗೂ ಜಗಳಾಡಿಲ್ಲ, ಆದರೆ ಕೆಲ

ವು ಪರ್ಷ ಮುಸಲ್ಮಾನ ಮತ್ತು ಕ್ರಿಶ್ಚನರ ಮನೆಯೊಳಗಿಂದ ಫಕ್ತ ಹಣ್ಣು ಹಂಪಲುಗಳನ್ನು ತೆಗೆದುಕೊಂಡಿದ್ದೇನೆ. ನನ್ನ ಮಗನಸಂಗಡ ಒಂದೇ ಪಾತ್ರೆಯಲ್ಲಿ ಭೋಜನಮಾಡುವದು ಅಥವಾ ನನ್ನ ಮಗನು ನೀರುಕುಡಿದ ಪಾತ್ರೆಯನ್ನು ತೊಳೆಯುವ ಹೊರತು ಅದರೊಳಗಿಂದ ನೀರುಕುಡಿಯುವದು ಸಹ ನನಗೆ ಸೇರುವದಿಲ್ಲ. ಆದರೆ ಈ ಪ್ರಕಾರ ಮಾಡುವದರಿಂದ ಮುಸಲ್ಮಾನ, ಕ್ರಿಶ್ಚನ ಅಥವಾ ನನ್ನ ಮಕ್ಕಳ ಸಂಗಡ ನನ್ನ ಗೆಳೆತನಕ್ಕೆ ಯಾವ ತರಹದ ಬಾಧೆಯೂ ಬಂದಿರುವದಿಲ್ಲ.

ಆದರೆ ಮಿಶ್ರ ಭೋಜನ ಮತ್ತು ಮಿಶ್ರ ವಿವಾಹ ಇವು ಬಡಿದಾಟ ಅಪ್ರೀತಿ ಇವುಗಳನ್ನು ತೆಗೆದುಹಾಕಲಿಕ್ಕೆ ಎಂದೂ ಅಡ್ಡವಾಗಿಲ್ಲ. ಪಾಂಡವರಲ್ಲಿ ಮಿಶ್ರ ಭೋಜನ ಮತ್ತು ಮಿಶ್ರ ವಿವಾಹಗಳಿದ್ದರೂ, ಪರಸ್ಪರರು ಅತ್ಯಂತ ಕಠೋರತನದಿಂದ ಬಡಿದಾಡಿದರು. ಇಂಗ್ಲೀಶ ಮತ್ತು ಜರ್ಮನ್ನರ ನಡುವಿನ ಅಪ್ರೀತಿಯಾದರೂ ಕಡಿಮೆಯಾಗಿಲ್ಲ. ಮಿಶ್ರವಿವಾಹ ಮತ್ತು ಮಿಶ್ರ ಭೋಜನ ಇವು ಮಿತ್ರತ್ವ ಮತ್ತು ಐಕ್ಯ ಇವುಗಳ ಲಕ್ಷಣವಾಗಿದ್ದರೂ; ಅವುಗಳ ಮುಖ್ಯವಾದ ಸಾಧನಗಳಲ್ಲೆಂಬುದು ನಿಜವಾದದ್ದು. ಆದರೆ ಅವುಗಳಲ್ಲಿ ಯಾವದೊಂದರ ಬಗ್ಗೆ ಹಟಹಿಡಿಯುವದು ಹಿಂದು ಮುಸಲ್ಮಾನರ ಐಕ್ಯದ ಮುಖ್ಯವಾದ ಎಡರು ಆಗಿದೆ. ಪರಸ್ಪರ ಭೋಜನ ಮತ್ತು ವಿವಾಹ ಇವುಗಳ ಹೊರ್ತು ಹಿಂದು ಮುಸಲ್ಮಾನರಲ್ಲಿ ಐಕ್ಯವು ನೆಲೆಗೊಳ್ಳಲಾರದೆಂದೆಂದರೆ, ಎಂದಿಗೂ ತೆಗೆದುಹಾಕಲಿಕ್ಕೆ ಬಾರದಂಥ ಒಂದು ಕೃತ್ರಿಮವಾದ ವಿಘ್ನವನ್ನು ಹುಟ್ಟಿಸಲಿಕ್ಕೆ ನಾವು ಪ್ರಯತ್ನ ಮಾಡಿದಂತೆ ಆಗುತ್ತದೆ ಮುಸಲ್ಮಾನ ತರುಣರ ಹಿಂದೂ ಕನ್ನಿಕೆಯರನ್ನು ವಿವಾಹ ಮಾಡಿಕೊಳ್ಳುವದು ನ್ಯಾಯವಾದದ್ದೆಂದರೆ, ಪರಸ್ಪರರಲ್ಲಿ ಬೆಳೆಯುವ ಐಕ್ಯಕ್ಕೆ ಪ್ರತಿಬಂಧ ಮಾಡಿದಂತಾಗುತ್ತದೆ. ಹಿಂದೂ ಗೃಹಸ್ಥರು ಈಪ್ರಕಾರ ಒಮ್ಮೆ ಮುಸಲ್ಮಾನರ ವಿಷಯಕ್ಕೆ ಭಯಗ್ರಸ್ತರಾದರೆ, ಈಗ ಯಾವ ಪ್ರಕಾರ ಮುಸಲ್ಮಾನರನ್ನು ನಿರಾತಂಕವಾಗಿ ಮನೆಯಲ್ಲಿ ಬರಗೊಡುವರೋ ಆ ಪ್ರಕಾರ ಎಂದಿಗೂ ಮನೆಯಲ್ಲಿ ಬರಗೊಡಲಿಕ್ಕಿಲ್ಲ. ನನ್ನ ಮತದ ಪ್ರಕಾರ ಹಿಂದೂ ಮುಸಲ್ಮಾನ ತರುಣಜನರು ಈ ಪ್ರಕಾರ ನಿರ್ಬಂಧಗಳನ್ನು ಒಪ್ಪತಕ್ಕದ್ದು ಅತ್ಯವಶ್ಯವಾದದ್ದು.

ಹಿಂದೂ ಮುಸಲ್ಮಾನರಿಗೆ, ಪರಸ್ಪರ ಮಿಶ್ರವಿವಾಹವನ್ನು ಮಾಡಿಕೊಂಡು ತಮ್ಮ ತಮ್ಮ ಧರ್ಮದಂತೆ ಇರುವದು ಅಶಕ್ಯವಾದದ್ದೆಂದು ನನಗೆ ಅನಿಸುವದು. ಮತ್ತು ಹಿಂದೂ ಮುಸಲ್ಮಾನರ ಐಕ್ಯವೆಂದರೆ ಪರಸ್ಪರರ ಧರ್ಮದಂತೆ ಇದ್ದು ತಮ್ಮ ತಮ್ಮಲ್ಲಿ ನಿಜವಾದ ಪ್ರೇಮವನ್ನಿಡುವದೇ ಆಗಿದೆ. ನಾವು ಎಷ್ಟೇ ಧರ್ಮಿಷ್ಠರಾಗಿದ್ದಾಗ್ಯೂ, ಇಷ್ಟು ದಿವಸಗಳವರೆಗೆ ತಿಳಿದುಕೊಂಡಂತೆ ಹಿಂದು ಮುಸಲ್ಮಾನರು ವೈರಿಗಳೆಂದು ತಿಳಿದುಕೊಳ್ಳದೆ, ನಿಜವಾಗಿ ಪರಸ್ಪರರು ಗೆಳೆಯರೆಂದು ಭಾವಿಸಲಿಕ್ಕೆ ಶಕ್ತರಾಗತಕ್ಕದ್ದು.

ಅಂದಮೇಲೆ ಹಿಂದೂ ಮುಸಲ್ಮಾನರ ಐಕ್ಯವೆಂದರೇನು? ಮತ್ತು ಅದನ್ನು ಯಾವರೀತಿಯಿಂದ ಬೆಳೆಸತಕ್ಕದ್ದು? ನಮ್ಮ ಅವರ ಆಕಾಂಕ್ಷೆ ಧ್ಯೇಯ ಮತ್ತು ದುಃಖಗಳು ಒಂದೇ ಆಗಿರುವದೇ ಇದರ ಲಕ್ಷಣವು. ಒಂದೇ ಧ್ಯೇಯವನ್ನು ಸಾಧಿಸುವದರ ಸಲುವಾಗಿ, ಒಬ್ಬರೊಬ್ಬರು ಕೂಡಿ ನಡೆಯುವದರಿಂದ, ಇದನ್ನು ಹೆಚ್ಚಿಗೆ ಬೆಳೆಸಬಹುದು. ಪರಸ್ಪರರು ದುಃಖದಲ್ಲಿ ಪಾಲುಗಾರರಾಗೋಣ, ಮತ್ತು ಒಬ್ಬರೊಬ್ಬರಲ್ಲಿ ಸಹಿಷ್ಣುತಾ ಬುದ್ಧಿಯನ್ನು ಧಾರಣಮಾಡೋಣ ಮುಂತಾದವುಗಳಾದರೂ ಇದರ ಲಕ್ಷಣಗಳಾಗಿವೆ. ನಮ್ಮ ಅವರ ಧ್ಯೇಯವು ಒಂದೇ ಆಗಿದೆ. ನಮ್ಮ ಈ ದೇಶವು ಶ್ರೇಷ್ಠ ಮತ್ತು ಸ್ವತಂತ್ರವಾಗಲಿಕ್ಕೆ ನಾವು ಇಚ್ಛಿಸುತ್ತೇವೆ. ನಾವು ಅನುಭವಿಸತಕ್ಕ ದುಃಖಗಳಾದರೂ ಹೇರಳವಾಗಿವೆ. ಮತ್ತು ಈಗ ಮುಸಲ್ಮಾನರ ಮನಸ್ಸು ಖಿಲಾಫತದ ಸಲುವಾಗಿ ವ್ಯಗ್ರವಾಗಿದೆ. ಹಾಗೂ ಅದು ನ್ಯಾಯವಾದದ್ದಿದೆ. ಮುಸಲ್ಮಾನರ ಸಂಗಡ ಐಕ್ಯಬೆಳೆಸಲಿಕ್ಕೆ, ಅವರ ಅಧಿಕಾರಗಳನ್ನು ಒಮ್ಮನಸ್ಸಿನಿಂದ ಸಮರ್ಥಿಸುವಂಥ ಉತ್ತಮವಾದ ಸಾಧನವು ಹಿಂದುಗಳಿಗೆ ಬೇರೊಂದಿಲ್ಲ ಖಿಲಾಫತ ಪ್ರಶ್ನೆಗೆ ಸಹಾಯ ಮಾಡುವದರಿಂದಲೇ ನಮ್ಮ ಅವರಲ್ಲಿಯ ಐಕ್ಯವು ಬೆಳೆಯುವದಲ್ಲದೆ, ಪರಸ್ಪರರು ಒಂದೇ ಬಟ್ಟಲದಿಂದ ನೀರು ಕುಡಿಯೋಣವೆಂದಾಗಲಿ, ಒಂದೇ ಪಾತ್ರೆಯಿಂದ ಭೋಜನಮಾಡುವದರಿಂದಾಗಲಿ ನಾವೂ ಅವರೂ ಮಿತ್ರರಾಗಲಾರೆವು.

ಸಹಿಷ್ಣುತಾ ಬುದ್ಧಿಯು ಎಲ್ಲ ಜಾತಿಗಳಲ್ಲಿಯೂ ಎಲ್ಲ ಕಾಲದಲ್ಲಿಯೂ ಅವಶ್ಯವಾದದ್ದು. ಮುಸಲ್ಮಾನರ ದೇವಪೂಜಾಪದ್ಧತಿ ಅಥವಾ ಅವರ ರೀತಿನೀತಿಗಳನ್ನು ಹಿಂದುಗಳು ಸಹಿಸದಿದ್ದರೆ, ಅಥವಾ ಮುಸಲ್ಮಾನರು ಹಿಂದುಗಳ ಮೂರ್ತಿಪೂಜೆ ಗೋಪೂಜೆಗಳು ಅಸಹ್ಯವಾದವುಗಳೆಂದು ತಿಳಿದರೆ, ಹಿಂದೂ ಮುಸಲ್ಮಾನರು ಶಾಂತತೆಯಿಂದ ಎಂದಿಗೂ ಇರಲಾರರು. ಸಹಿಸುವಾಗ, ನಾವು ಯಾವದನ್ನು ಸಹಿಸುತ್ತೇವೋ ಅದು ನಮ್ಮ ಮನಸ್ಸಿಗೆ ಬರುವದು ಅವಶ್ಯವಿಲ್ಲ. ನೀರು ಕುಡಿಯೋಣ, ಮಾಂಸಭಕ್ಷಣ ಮತ್ತು ಸೇದೋಣ ಇವುಗಳನ್ನು ನಾನು ಮನಃಪೂರ್ವಕವಾಗಿ ತಿರಸ್ಕರಿಸುತ್ತಿದ್ದರೂ, ಹಿಂದೂ ಮುಸಲ್ಮಾನ ಕ್ರಿಶ್ಚನರಲ್ಲಿಯ ಇವೆಲ್ಲವುಗಳನ್ನು, ಇವುಗಳಿಂದ ಅಲಿಪ್ತರಾಗಿ ಉಳಿಯುವದು ಅವರಿಗೆ ಸೇರದಿದ್ದರೂ ಇವುಗಳಿಂದ ಅಲಿಪ್ತನಾದ ನನ್ನನ್ನು ಅವರು ಹೇಗೆ ಸಹಿಸುವರೋ, ಆ ಪ್ರಕಾರ ನಾನಾದರೂ ಸಹಿಸುವೆನು. ತಮ್ಮ ತಮ್ಮ ಮತಗಳಿಗೆ ಎರಡನೆಯವರನ್ನು ಜೋರಿನಿಂದ ಸಮ್ಮತಿಪಡಿಸುವದೇ ಹಿಂದು ಮುಸಲ್ಮಾನರ ನಡುವೆ ಈ ಪ್ರಕಾರ ಬಡಿದಾಟಗಳು ಹುಟ್ಟಲಿಕ್ಕೆ ಕಾರಣವು.

ಎಮ್. ಕೆ. ಗಾಂಧಿ.

(ಯಂಗ ಇಂಡಿಯಾ ತಾ- ೨೫-೨-೧೯೨೨)

---

## ಬಾಪು ಇವರ ರಹಸ್ಯ.

! ಯಂಗ ಇಂಡಿಯಾ !

ಮಹಾತ್ಮಾ ಗಾಂಧಿಗೆ ಅವನ ಭಕ್ತರು ಬಾಪು ಎಂದು ಕರೆಯುವರು "ಬಾಪು" ಎಂಬದರ ಅರ್ಥವು 'ತಂದೆ' ಅಂತ ಆಗುತ್ತದೆ.

ಹಿಂದುಸ್ಥಾನದ ಜನರು "ಬಾಪು" ನುಡಿದಂತೆ ನಡೆಯಲಿಕ್ಕೆ ಇಷ್ಟೊಂದು ಸಿದ್ಧರಿರುವದರ ರಹಸ್ಯವೇನಂದರೆ ಬಾಪುನು ಇವರನ್ನು ನಿಸ್ಸೀಮವಾಗಿ ಕೇವಲ ಅಂತಃಕರಣದಿಂದ ಪ್ರೀತಿಸುವದೇ, ಅವರ ಮೇಲಿನ ಈ ನಿರ್ವ್ಯಾಜ ಪ್ರೇಮದ ಮೂಲಕವೇ, ಅವನು, ಅವರಸಲುವಾಗಿ ವಿಶ್ರಾಂತಿಯಿಲ್ಲದೆ ಅನಂತವಾಗಿ ಸತತ ಶ್ರಮಪಡುತ್ತಿರುವದು ತನಗೆ ಒಪ್ಪಿಸಲ್ಪಟ್ಟಂಥ ಈ ನ್ಯಾಸದ ಭಾರವನ್ನು ಹೊರಲು ತಾನು ಅಸಮರ್ಥನೆಂದು ಅವನಿಗೆ ಅನಿಸಿದಾಗೆಲ್ಲ, ಉಪವಾಸ ಬಿದ್ದು ಜಗದೀಶನನ್ನು ಪ್ರಾರ್ಥಿಸುತ್ತ ಶಾಂತಚಿತ್ತದಿಂದ ದೇಹತ್ಯಾಗವನ್ನು ಮಾಡಲಿಕ್ಕೆ ಅವನು ಹಾರೈಸುವದರ ಮರ್ಮವಾದರೂ ಅವರ ಮೇಲಿನ ಅವನ ಈ ದೃಢವಾದ ಪ್ರೇಮವೇ ಆಗಿರುವದು.

ಮುಂಬಯಿ ಮತ್ತು ಚೌರೀಚೌರಾದಲ್ಲಿ ಸಂಭವಿಸಿದ ಆ ನಾಟಕಗಳ ಮೂಲಕ ಅವನ ಅಂತರಾತ್ಮಕ್ಕಾದ ಕಳಕಳಿಯನ್ನೂ ಮತ್ತು ಯಾರಸಲುವಾಗಿ ಅವನು ಏಕಪ್ರಕಾರವಾಗಿ ಶ್ರಮಪಡುತ್ತ ಬಂದಿದ್ದರೂ ಅವರನ್ನು ಉದ್ಧರಿಸುವದು ಇನ್ನೂ ಆಗಲಿಲ್ಲವೋ— ಅಂಥ ಜನರು ಮಾಡಿದ ಪಾತಕಗಳ ಕ್ಷಾಲನೆಗಾಗಿ ತಾನು ಕಾರಾಗೃಹದಲ್ಲಿ ಕಠೋರ ಶಿಕ್ಷೆಯನ್ನು ಅನುಭವಿಸಬೇಕೆಂಬಿರುವ ಅವನ ಇಚ್ಛೆಯ ಗಂಧವನ್ನೂ ಚನ್ನಾಗಿ ಅರಿತುಕೊಳ್ಳಲಿಕ್ಕೆ ಜನರ ಮೇಲಿನ ಅವನ ಈ ಅತುಲ ವಾತ್ಸಲ್ಯವನ್ನು ಸರಿಯಾಗಿ ಲಕ್ಷ್ಯಕ್ಕೆ ತರಬೇಕಾಗುವದು. ಬಡವರ ವಿಷಯಕ್ಕಿರುವ ಅವನ ಭಕ್ತಿ ಮತ್ತು ಪ್ರೇಮಾತಿಶಯಗಳ ಮೂಲಕ ಅವನು ಬಂಡಿಯನ್ನಾದರೂ ಉಡುವನು. ಬಡವರ ಗೋಳನ್ನು ಕೇಳಿ ಅವನ ಜೀವವು ಕಳವಳಗೊಂಡು ಜಗದೀಶನ ಬಳಿಗೆ ಧಾವಿಸಿ ಅವರನ್ನು ಉದ್ಧರಿಸೆಂದು ಅನಂತವಾಗಿ ಪ್ರಾರ್ಥಿಸುವದು; ಮತ್ತು ಅವರ ಬವಣೆಯನ್ನು ದೂರಮಾಡಲಿಕ್ಕೆ ಅನಂತವಾಗಿ ಕಷ್ಟ ಸಹಿಸುವದಕ್ಕೂ ಸಿದ್ಧವಾಗುವನು.

ಅವನು ಎಂದಿಗೂ ಯಾವನ ಯಾತನೆಯನ್ನಾಗಲಿ ಆಪತ್ತಿಯನ್ನಾಗಲಿ ನೋಡಿ ಸಹಿಸಲಾರನು. ಅವನ ದೇಶಾಭಿಮಾನವು ಪ್ರಕೃತಿಯಂತೆ ಸಂಕುಚಿತವಾದದ್ದಿರುವದಿಲ್ಲ. ತನ್ನನ್ನು ಒತ್ತಿ ಮುರಿಯುತ್ತಿರುವ ವೈರಿಯ ಮೇಲೆ ಕೂಡಾ ಬಾಪುನು ತನ್ನ ಕೋಮಲವಾದ ಕೈಬೆರಳನ್ನು ಸಹ ಎತ್ತಲಿಚ್ಛಿಸುವದಿಲ್ಲ. ಯಾಕಂದರೆ, ದುರುಳನೂ, ದುರ್ಗುಣಿಯೂ, ದುರ್ಮಾರ್ಗಿಯೂ ಆದರೂ ಅವನು ತನ್ನ ಬಾಂಧವನೇ ಆಗಿರುವನೆಂಬದನ್ನು ಅವನು ಮರೆಯಲಾರನು. ಬಾಪೂನ ಭೂತದಯೆಯು ವಿಶ್ವವ್ಯಾಪಿಯಾಗಿರುವದು. ಯಾಕಂದರೆ ಪಕ್ಷಪಾತರಹಿತನಾದ ಜಗದೀಶನಮೇಲಿನ ಅವನ ಪ್ರೇಮವೇ ಅಂಥದಾಗಿರುವದು. ಅವನು ಯಾರನ್ನೂ ದ್ವೇಷಿಸುವದಿಲ್ಲ. "**ಬಾಪು**" ಹಿಂದುಸ್ಥಾನವನ್ನು ಪ್ರೀತಿಸುವನು. ಇದರ ಕಾರಣಗಳೇನಂದರೆ— ಹಿಂದೀಜನರ ಗೋಳಾಟವು ಬಹಳದಿವಸದ್ದಾಗಿರುವದು. ಅವರು ಬಡತನ ಪೀಡಿತರಾಗಿರುವರು. ಅವರು ತಮ್ಮ ಮನುಷ್ಯತ್ವವನ್ನೇ ಕಳೆದುಕೊಂಡಿರುವರು, ಅವರು ನಿರಾಶಿಗಳಾಗಿರುವರು; ಮತ್ತು ನಿರಾಧಾರಿಗಳಾದರೂ ಆಗಿರುವರು. ಇವಲ್ಲದೆ ಹಿಂದುಸ್ಥಾನವು, ತನ್ನ ಮೊದಲಿನ ಸ್ಥಾನವನ್ನು ಆಕ್ರಮಿಸಿದಲ್ಲಿ, ಇಡೀ ಜಗತ್ತಿಗೆ ಮಾರ್ಗದರ್ಶಕವಾದ ಸಂಸ್ಕೃತಿಯನ್ನು ಹಾಕಿಕೊಡಬಲ್ಲದೆಂದು ಅವನ ವಿಶ್ವಾಸವು.

ಹಿಂದುಸ್ಥಾನದ ವಿಷಯಕ್ಕೆ ಬಾಪೂನು ಪಡುತ್ತಿರುವ ವ್ಯಸನ ಮತ್ತು ಉದ್ವೇಗಗಳಲ್ಲಿ ದ್ವೇಷದ ಲವಲೇಶವಾದರೂ ಇಲ್ಲದ್ದರಿಂದ ಅವನ ವ್ಯಸನೋದ್ವೇಗಗಳು ದೈವಿಕವಾದವುಗಳೆಂದು ಹೇಳಬಹುದು. ಅವನ ಈ ವ್ಯಸನಾನುತಾಪಗಳೇ ಹಿಂದುಸ್ಥಾನದ ಜೀವವನ್ನು ಉಳಿಸುವದಕ್ಕೆ ಬಲವಾದ ಕಾರಣಗಳಾಗುವವು. ಆದ್ದರಿಂದಲೇ ಭಗವಂತನು ತನ್ನ ಭಕ್ತನನ್ನು ವಾಂಛಿತದ ವಿಷಯಕ್ಕಾಗಿ ಪೀಡಿಸುತ್ತಿರುವನು. ಹಿಂದು ಮುಸಲ್ಮಾನರ ಐಕ್ಯದ ವಿಷಯಕ್ಕಿದ್ದ ಅವನ ಉತ್ಕಟ ಭಕ್ತಿಯೂ, ಮತ್ತು ಅಸ್ಪೃಶ್ಯತೆಯ ನಿವಾರಣೆಯಬಗ್ಗೆ ಇರುವ ಅವನ ಆಗ್ರಹವೂ, ಇವನು ಮಿತ್ರನು, ಇವನು ಶತ್ರುವು, ಇವನು ಉಚ್ಚನು, ಇವನು ನೀಚನು, ಎಂದು ಭೇದ ಮಾಡದೆ, ಮನುಷ್ಯಪ್ರಾಣಿಯ ಮೇಲೆಯೇ ಇರುವ ಅವನ ಸ್ವಭಾವಜನ್ಯವಾದ ಮಮತೆಯಿಂದ ಉದಯ ಹೊಂದಿರುವವಲ್ಲದೆ ಬೇರೆ ಕಾರಣಗಳಿಂದಲ್ಲೆಂದು ಅವನ ಸ್ವಭಾವವನ್ನು ಚನ್ನಾಗಿ ಪರಿಶೀಲಿಸಿ ನೋಡಿದಲ್ಲಿ ಕಂಡುಬರುವದು. ಎಂದಿಗಾದರೂ ರಾಜಕೀಯ ವಿಷಯದಲ್ಲಿಯೇ ಅವನು ಕಾರ್ಯ ಮಾಡುತ್ತ ಬಂದಿದ್ದರೂ ಬಾಪೂನ ರಾಜಕಾರಣದಲ್ಲಿ ಈಗಿನವರ ಕೃತ್ರಿಮತನವೂ ಕುಟಿಲತನವೂ ಕಾಣುವದಿಲ್ಲ. ಸತ್ಯವನ್ನು ಹೇಳಬೇಕೆಂದರೆ, ಬಾಪೂನ ದೃಷ್ಟಿಯಿಂದ ಉತ್ಕೃಷ್ಟವಾದ ನೀತಿಮಾರ್ಗದಿಂದಲೇ— ಸ್ವಾರ್ಥವನ್ನು ತ್ಯಜಿಸಿ ಪರರಸಲುವಾಗಿ ಕಷ್ಟವನ್ನು ಸಹಿಸುವದರಿಂದಲೇ— ನಮ್ಮ ಈಗಿನ ಆರ್ಥಿಕ, ಸಾಮಾಜಿಕ, ಮತ್ತು ರಾಜಕೀಯ ಪ್ರಶ್ನೆಗಳ ತೊಡಕು ಬಿಡಿಸಿ, ಇಡೀ ಜಗತ್ತನ್ನೇ ಸುವ್ಯವಸ್ಥಿತವಾಗಿ ಮಾಡಬಹುದು. ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಸಂಪಾದಿಸುವದು (ಬಾಪೂನ ದೃಷ್ಟಿಯಿಂದ) ಅಧೋಗತಿಗೆ ಮುಟ್ಟಿ ಭ್ರಷ್ಟ ಮತ್ತು ಸ್ವಾರ್ಥ ಮದಾದಿಗಳಿಂದ ಹುದುಗಿನಲ್ಲಿ ಬಿದ್ದಿರುವ ಜಗತ್ತನ್ನೇ ಉದ್ಧರಿಸುವ ಉಚ್ಚಮಾರ್ಗವಾಗಿರುವದು.

ಇವೆಲ್ಲ ಸದ್ಗುಣಗಳ ಪ್ರಭಾವನಾಗಿದ್ದರೂ ತಾನು ಮಹಾತ್ಮನೆಂದು ಗಾಂಧಿಯು ತಿಳಿಕೊಳ್ಳುವದರ ಕಾರಣವೇನಂದರೆ, ಎಲ್ಲ ದೊಡ್ಡ ವಿಭೂತಿಗಳಂತೇ ಇವನಿಗೆ ದೊಡ್ಡತನದ ಹೆಮ್ಮೆಯ ಜ್ಞಾನವು ಇರುವದಿಲ್ಲ. ಬಾಪೂನು ಕೇವಲ ಕರುಣಾಕರನೂ, ಪ್ರೇಮಸಾಗರನೂ ಅನುಕಂಪಶಾಲಿಯೂ ಆಗಿದ್ದು, ನಮ್ಮೆಲ್ಲರನ್ನು ಕೂಡಿ ಸೃಷ್ಟಿಯನ್ನು ನಡಿಸುತ್ತಿದ್ದರೂ, ಅವನ ಪ್ರಾಣಗಳು ಸರ್ವವ್ಯಾಪಿಯಾಗಿರುವ ಆ ಜಗದೀಶನ ಧ್ಯಾನದಲ್ಲಿ ಮಗ್ನನಾಗಿರುವನು. ಇಂಥ ದೊಡ್ಡ ಮತ್ತು ತೇಜೋಮಯವಾದ ಜೀವನವನ್ನು ಪೂರ್ಣವಾಗಿ ತಿಳಕೊಳ್ಳುವದು ಕ್ಷುದ್ರಮಾನವರಿಗೆ ಅಶಕ್ಯವಿದ್ದು ನಮ್ಮ ನಮ್ಮ ದೃಷ್ಟಿಗೆ ಕಂಡಷ್ಟುಮಾತ್ರ ನೋಡಬಲ್ಲೆವು. ಬಾಪೂನು ಮೋಹಿನಿಯಿಂದಲೇ ನಮ್ಮನ್ನು ತನ್ನ ಕಡೆಗೆ ಎಳೆದುಕೊಳ್ಳುವನು. **ಬಾಪು** ಅಂದರೆ ಒಂದು ದೊಡ್ಡ ಶಕ್ತಿಯು- ನೈತಿಕ ಮತ್ತು ಆಧ್ಯಾತ್ಮಿಕ ಬಲವು. ಈ ಶಕ್ತಿಯು ಕಡೆತನಕ ಬಾಳಬಲ್ಲದು; ಇದರ ಬಲದಿಂದ ಜನಾಂಗಗಳ ಮತ್ತು ರಾಷ್ಟ್ರಗಳ ಭವಿತವ್ಯತೆಯನ್ನು ಬದಲುಮಾಡಲು ಶಕ್ಯ ಉಂಟು. ಕಾರಣವೇನಂದರೆ ಬಾಪೂನ ಬೆನ್ನುಕಟ್ಟುವವನು ಸಾಕ್ಷಾತ್ ಸರ್ವಶಕ್ತನಾದ ಭಗವಂತನೇ ಆಗಿರುವನು. ಗಾಂಧಿಯೂ ಅವನು ಆರಿಸಿ ಕಳಿಸಿದ ದೂತನೇ ಆಗಿರಬಹುದು.

**ಚಂದಾದಾರರಿಗೆ ಸೂಚನೆಯು-**

'ಕನ್ನಡ ನವಜೀವನದ ೧೭ನೇ ಸಂಚಿಕೆಯು ಮಾರ್ಚ ೨೩ನೇ ತಾರೀಖಿನ ದಿವಸ ಹೊರಬಿದ್ದಮೇಲೆ ಮುಂದೆ ಎರಡು ವಾರಗಳವರೆಗೆ 'ನವಜೀವನ'ವು ಹೊರಬೀಳಲಿಲ್ಲ. ೧೭ನೇ ಸಂಚಿಕೆಯಲ್ಲಿ ನಾವು ಈ ಬಗ್ಗೆ ಮುಂಚಿತವಾಗಿಯೇ ಸೂಚನೆಯನ್ನು ಕೊಟ್ಟಿದ್ದೆವು. ಆದರೂ ಕೂಡ ಅನೇಕ ಜನ ಚಂದಾದಾರರು ಈ ಎರಡು ವಾರ ಸಂಚಿಕೆಗಳು ಏಕೆ ಬರಲಿಲ್ಲ? ಹೀಗೇಕೆ ನಮಗೆ ಮೋಸಮಾಡುತ್ತೀರಿ? ಎಂಬದಾಗಿ ಬರೆದಿದ್ದಾರೆ. ಕೆಲವರಂತೂ ಅವಾಚ್ಯ ಶಬ್ದಗಳನ್ನು ತಮ ಪತ್ರದಲ್ಲಿ ಸೇರಿಸಿ ಬಿರುನುಡಿಗಳಿಂದ ನಮ್ಮನ್ನು ದೂಷಿಸಿದ್ದಾರೆ. ಆದರೆ ಈ ಮಹನೀಯರೆಲ್ಲ ೧೭ನೇ ಸಂಚಿಕೆಯಲ್ಲಿಯ ನಮ್ಮ "ಕನ್ನಡ ನವಜೀವನದ ಹೊಸ ವ್ಯವಸ್ಥೆಯು" ಎಂಬ ಲೇಖವನ್ನು ಓದಿರುವದಿಲ್ಲೆಂಬದು ಸ್ಪಷ್ಟವಿದೆ- ಆಲಸ್ಯದಿಂದ ನಾವು ಬರೆದ ಸೂಚನೆಗಳನ್ನೋದದೇ ಇಲ್ಲದ ಸಲ್ಲದ ಆಕ್ಷೇಪಗಳನ್ನು ಹೊರಿಸುವವರ ಜಾಣತನವೆಂಥದೋ ನಾವು ಕಾಣೆವು

ಏನೇ ಇರಲಿ; ಈ ಚಂದಾದಾರರೆಲ್ಲ ೧೭ನೇ ಸಂಚಿಕೆಯಲ್ಲಿಯ "ಕನ್ನಡ ನವಜೀವನದ ಹೊಸ ವ್ಯವಸ್ಥೆ"ಯೆಂಬ ಲೇಖವನ್ನೂ, ೧೮ನೇ ಸಂಚಿಕೆಯಲ್ಲಿಯ "ಸವಿನಯ ವಿನಂತಿ" ಎಂಬ ಲೇಖವನ್ನೂ, ಓದಿಕೊಳ್ಳಬೇಕಾಗಿ ಪ್ರಾರ್ಥಿಸುತ್ತೇವೆ. ಅಂದರೆ ಅವರಿಗೆ ಉತ್ತರವು ತಾನೇ ದೊರೆಯುವದು.

**ವ್ಯವಸ್ಥಾಪಕ.**

# ಕನ್ನಡ ನವಜೀವನ.

ಚೈತ್ರ ವದ್ಯ ೧೧ ಶನಿವಾರ ಶಕೆ ೧೮೪೪.


## ದಾಸ್ಯದ ಮೂಲವು.

" ಇಂಗ್ಲಿಶರ ರಾಜ್ಯಪದ್ಧತಿಯು ಒಳ್ಳೆದಾದದ್ದು ಇಂಗ್ಲಿಶರ ವ್ಯಾಪಾರವು ಒಳ್ಳೆದಾದದ್ದು, ಇಂಗ್ಲಿಶ್ ಶಿಕ್ಷಣವು ಲಾಭದಾಯಕವಾದದ್ದು, ಇಂಗ್ಲಿಶರ ಸಮಾಜ ರಚನೆಯು ಅತ್ಯಂತ ಸುಧಾರಿಸಿದ್ದು; ಕೇವಲ ಇಂಗ್ಲಿಶರ ಸ್ವಾರ್ಥವು ಮಾತ್ರ ಕೆಡಕಾದದ್ದು; ಈ ಸ್ವಾರ್ಥದ ಸಲುವಾಗಿಯೇ ಅವರು ನಮಗೆ ಹಾನಿಯನ್ನು ಮಾಡುವರು; ಆದ್ದರಿಂದ ನಾವು ಗಡಬಡಿ ಮಾಡಿ ಅವರ ಕೈಯೊಳಗಿನ ಅಧಿಕಾರಸೂತ್ರವನ್ನು ನಮ್ಮ ಕೈಯೊಳಗೆ ತಂದುಕೊಂಡರೆ ಆಮೇಲೆ ನಾವು ಮಾಡತಕ್ಕದ್ದೇನು ಉಳಿಯುವದಿಲ್ಲ. ಮುಂದೆ ಅವರು ಹಿಂದುಸ್ಥಾನಕ್ಕೆ ಈ ಒಂದುನೂರು ವರ್ಷ ಅವರಿಗೆ ಶಿಕ್ಷಣ, ಸಮಾಜರಚನೆ, ವ್ಯಾಪಾರ, ಸಂಪತ್ತಿಶಾಸ್ತ್ರ, ಕಲೆ, ವಿಜ್ಞಾನ, ರಾಜ್ಯತಂತ್ರ ಮೊದಲಾದ ವಿಷಯಗಳಲ್ಲಿ ಹಾಕಿಕೊಟ್ಟ ಮಾರ್ಗವನ್ನು ಸರಿಯಾಗಿ ಅನುಸರಿಸಿದರಾಯಿತು, " ಎಂದು ಅನೇಕರು ಅನ್ನುತ್ತಿರುವರು. ಈ ಜನರ ಸಂಪ್ರದಾಯ ಎಷ್ಟು ದೊಡ್ಡದನ್ನು ತಿಳಿದುಕೊಳ್ಳಲು ಅವಶ್ಯವಿಲ್ಲ. ಅವರ ಸಂಖ್ಯೆಯು ತೀರ ಅಲ್ಪವಿರಬಹುದು. ಆದರೂ ಪ್ರಚಲಿತ ಚಳವಳಿಯಲ್ಲಿ ಇವರನ್ನು ದುರ್ಲಕ್ಷಿಸಲು ಬರುವಂತಿಲ್ಲ. ಇವರಲ್ಲದೆ ಸಾಮಾನ್ಯಜನರಾದರೂ ಇದೇ ಬಗೆಯ ವಿಚಾರಸರಣಿಯುಳ್ಳವರಾಗಿರುವರು. ಯಾಕೆಂದರೆ ಯಾವದೊಂದು ವಿಷಯದ ಬಗ್ಗೆ ವಿಚಾರ ಮಾಡುವ ತೊಂದರೆಯನ್ನು ತೆಗೆದುಕೊಳ್ಳದಿರುವದು ಸನಾತನ ಧರ್ಮವೇ ಆಗಿದೆ!

ಆದರೆ ವಸ್ತುಸ್ಥಿತಿಯು ಹೀಗಿಲ್ಲ. ಇಂಗ್ಲಿಶರ ಸಾಮ್ರಾಜ್ಯವು ಬಹು ವಿಸ್ತೃತವಾದದ್ದು, ಪೃಥ್ವಿಯ ಮೇಲಿನ ಅನೇಕ ಸ್ಥಳಗಳಲ್ಲಿ ಅವರ ಸತ್ತೆಯು ನಡೆಯುತ್ತದೆ ಎಂಬ ಮಾತು ನಿಜವು. ಆದರೆ ಇಷ್ಟರಮೇಲಿಂದ ಜೀವಿತ ಸಾಫಲ್ಯದ ರಹಸ್ಯವು ಅವರಿಗೆ ದೊರಕಿದೆಂದು ತಿಳಿಯಲಾಗದು. ಅವರ ರಾಜ್ಯಪದ್ಧತಿಯು ಎಷ್ಟೋಬಗೆಯಾಗಿ ಸದೋಷವಾಗಿದೆ, ಅವರ ಸಮಾಜ ವ್ಯವಸ್ಥೆಯಲ್ಲಿ ಅನೇಕ ನ್ಯೂನತೆಗಳುಂಟು. ಅವರ ಶಿಕ್ಷಣ ಪದ್ಧತಿಯು ಅವರಿಗೇ ಸೇರದಂತಾಗಿದೆ. ಅವರು ವ್ಯಾಪಾರದಿಂದ ರಾಶಿರಾಶಿಯಾಗಿ ಧನವನ್ನು ಗಳಿಸಿದ್ದರೂ ಅವರ ರಾಷ್ಟ್ರೀಯಜೀವನವು ಕಳೆಗುಂದಿದಂಥದಾಗಿ ತೋರಿಬರುವದು. ಈ ಅಭಿಪ್ರಾಯವು ನಮ್ಮದೇ ಇದ್ದಂತಿಲ್ಲ. ಅವರಲ್ಲಿಯ ವಿಚಾರವಂತರೂ ಜಗತ್ಪ್ರಸಿದ್ಧರೂ ಆದ ಮಹಾಮಹಾ ಪಂಡಿತರೂ ಹೀಗೆಯೇ ಅಭಿಪ್ರಾಯಪಟ್ಟಿರುವರು. ಅಂದಮೇಲೆ ನಾವೇಕೆ ಇವರ ಅನುಕರಣವನ್ನು ಮಾಡಬೇಕು? ಸ್ವಾರ್ಥವಶರಾಗಿ ಇಂಗ್ಲಿಶರು ಅನೇಕ ಬಗೆಯಾಗಿ ನಮ್ಮ ಹಾನಿಯನ್ನು ಮಾಡಿರುವರು, ಆದರೆ ನಮಗೆ ಹಿತವನ್ನೇ ಮಾಡಬೇಕೆಂಬ ಇಚ್ಛೆಯಿಂದ, ಅವರು ಮಾಡಿದ ಕೃತಿಯಿಂದ ನಮಗೆ ಲಾಭವುಂಟಾಗುವದೆಂದು ಹೇಳಲು ಬರುವಂತಿಲ್ಲ. ತಮ್ಮ ಮಕ್ಕಳಿಗೆ ಹೊಡೆದು ಬಡಿದು ಹಿಂಡಿ ಹಿಂಸಿಸಲು ಯತ್ನಿಸುವ ತಿಳಿಗೇಡಿಗಳಾದ ಕುಟುಂಬಕರ ಹೇತುವು ಶುದ್ಧವಾಗಿಯೇ ಇರುತ್ತದೆ. ತಮಗೆ ದೊರೆಯುತ್ತಿರುವ ಅಲೌಕಿಕ ಆನಂದವನ್ನು ತಮ್ಮ ಪ್ರೇಮದ ಮಕ್ಕಳಿಗೇಕೆ ದೊರೆಯಗೊಡಬಾರದು? ಎಂಬೀ ವಿಚಾರವು ಅವರನ್ನು ಪರವಶ ಮಾಡುತ್ತದೆ. ನಗರದಲ್ಲಿ ಯುವರಾಜರು ದಯಮಾಡಿಸಿದಾಗ್ಗೆ ಅಲ್ಲಿ ಒಬ್ಬ ಇಂಗ್ಲಿಶ ಬ್ಯಾರಿಸ್ಟರರು ಅಂತ್ಯಜ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಅತ್ಯಂತ ಸದ್ಬುದ್ಧಿಯಿಂದ ಹೇಳಿದ್ದೇನಂದರೆ:— " ಬಂಧುಗಳೇ, ಈ ಜಾತಿಯ ಜನರು ಹಿಂದುಗಳಿಗೆ ನಿಮ್ಮಲ್ಲಿ ಅನ್ಯಾಯವಾಗಿ ಅಂಜಿಕೆಯನ್ನು ಹುಟ್ಟಿಸುತ್ತಿರುವರು. ಆದರೆ ನೀವು ಸ್ವಲ್ಪವೂ ಹೆದರಬೇಕಾದದ್ದಿಲ್ಲ. ಯೋಗ್ಯಪ್ರಮಾಣದಲ್ಲಿ ನೀವು ಅವಶ್ಯವಾಗಿ ಹೆಂಡ ಕುಡಿಯಿರಿ! "

ಇಂಗ್ಲಿಶರ ಆಚಾರ ವಿಚಾರಗಳೆಲ್ಲವು ನಿರ್ದೋಷವಾಗಿರುತ್ತವೆಂದು ಒಂದುವೇಳೆ ನಾವು ತಿಳಿದರೂ ಅವರವರಿಗೆ ಅವು ನಿರ್ದೋಷವಾಗಿರಬಹುದು. ಆದರೆ ನಮ್ಮ ಸ್ವಭಾವ, ನಮ್ಮ ಪರಂಪರೆ, ನಮ್ಮ ಆದರ್ಶ ಮೊದಲಾದ ಬಹುತರ ಎಲ್ಲ ವಿಷಯಗಳು ಅವರಿಂದ ತೀರ ಭಿನ್ನವಾಗಿರುವವು. ನಾವು ಸ್ವರಾಜ್ಯವನ್ನು ಹೊಂದಲು ಯತ್ನಿಸುವದು, ಕೇವಲ ನಮ್ಮ ಕೈಯಲ್ಲಿ ರಾಜ್ಯಸೂತ್ರಗಳು ಬರಬೇಕೆಂಬ ಉದ್ದೇಶದಿಂದಲ್ಲ, ಆದರೆ ನಮ್ಮ ರಾಷ್ಟ್ರದ ಉನ್ನತಿಯಾಗಬೇಕೆಂದು. ಯಾವಾಗ್ಗೆ ನಾವು ನಮ್ಮೆಲ್ಲರ ಮಾತುಗಳನ್ನು ರಾಷ್ಟ್ರೀಯ ಪದ್ಧತಿಯನ್ನು ಅನುಸರಿಸಿ ನಡಿಸ ಬಲ್ಲೆವೋ ಆಗಲೇ ನಮ್ಮ ನಿಜವಾದ ಉನ್ನತಿಯಾಗಬಲ್ಲದು. ನಾವು ನಮ್ಮ ಸರಕಾರದ ಮೇಲಿನ ಅನ್ಯಾಯವನ್ನು ಕಂಡು ಅವರೊಡನೆ ಅಸಹಕಾರವನ್ನು ಆರಂಭಿಸಿದೆವು. ಅವರ ರಾಜ್ಯತಂತ್ರವನ್ನು, ಅವರ ಕೋರ್ಟುಗಳನ್ನು ಮತ್ತು ವಿದ್ಯಾಮಂದಿರಗಳನ್ನು ನಾವು ತ್ಯಜಿಸಿದೆವು. ಸರಕಾರದ ತನ್ನ ಮಾನವಬಗ್ಗೆ ಸರ್ವತ್ರ ಅಸಮಾಧಾನವಾಗಿ ಪ್ರತಿಯುಕ್ತಿಯನ್ನು ಮಾಡಿದರೆ ನಾವು ನಮ್ಮ ಅಸಹಕಾರವನ್ನು ಇಲ್ಲಿಗೆ ನಿಲ್ಲಿಸಬೇಕೆಂಬುವದೇನೋ ನಿಜ. ಆದರೆ ಇದರ ಅರ್ಥವು, ಸರಕಾರವು ಹೊಸ ಪದ್ಧತಿಯಿಂದ ನಡೆಯುವದು ಮತ್ತು ನಾವು ಅವರ ಅನುಕರಣವನ್ನು ಮಾಡಬೇಕು ಎಂತಲ್ಲ. ಇಂಗ್ಲಿಶ ಪ್ರಜಾಪ್ರಭುತ್ವದೊಂದಿಗೆ ನಾವು ತತ್ಕಾಲವಾಗಿ ಅಸಹಕಾರವನ್ನು ಮಾಡಿರುವೆವು. ನಮ್ಮ ಶಿಕ್ಷಣವು ಇನ್ನುಮೇಲೆ ನಮ್ಮ ರಾಷ್ಟ್ರೀಯ ಪದ್ಧತಿಯನ್ನೇ ಅನುಸರಿಸಿ ನಡೆಯತಕ್ಕದ್ದು. ಸರಕಾರವು ಪಶ್ಚಾತ್ತಾಪದಿಂದ ದುಃಖಿತವಾಗಿ ನಮ್ಮೊಡನೆ ಒಪ್ಪಂದ ಮಾಡಿಕೊಳ್ಳಲು ಸಿದ್ಧವಾದರೆ, ಅದಕ್ಕೆ ನಾವು " ಇನ್ನು ಮುಂದೆ ರಾಷ್ಟ್ರೀಯ ಪದ್ಧತಿಯಂತೆ ನಮ್ಮ ಶಿಕ್ಷಣಕ್ರಮವು ಸಾಗತಕ್ಕದ್ದು; ನ್ಯಾಯಪದ್ಧತಿಯನ್ನು, ಪ್ರಜೆಗಳ ಉನ್ನತಿಯ ಮಾರ್ಗವು ಆವುದೆಂಬುದನ್ನು ನೋಡಿ ಅದನ್ನನುಸರಿಸಿ ನಡೆಸತಕ್ಕದ್ದು, " ಎಂದು ಹೇಳುವೆವು. ನಾವು ಇನ್ನು ರಾಜ್ಯಕಾರ್ಯದಲ್ಲಿ ಭಾಗ ತೆಗೆದುಕೊಳ್ಳಲು ಮನಸ್ಸುಮಾಡಿದಕ್ಷಣ ಪ್ರಜೆಗಳ ಪ್ರವೃತ್ತಿಗೆ ಅನುಕೂಲವಾಗುವಂಥ ಶಾಸನಪದ್ಧತಿಯನ್ನು (Constitution) ನಿರ್ಮಿಸುವೆವು. ಆಗ ಜನರಲ್ಲಿ ಆರ್ಯಸಂಸ್ಕಾರಗಳು ನೆಲೆಗೊಂಡಿರುವದನ್ನು ಕಂಡುಬರುವದೂ ಅಂಥವರಿಗೇನೇ ನಮ್ಮ ಸ್ವರಾಜ್ಯದಲ್ಲಿ ಬಹುಮಾನವು ದೊರೆಯುವದು. ಹೀಗಾದರೆ ಬಹುಮಾನವನ್ನು ಅರ್ಪಿಸುವರೂ, ಅದನ್ನು ಸ್ವೀಕರಿಸುವವರು ಇಬ್ಬರೂ ಪರಕೀಯರಾಗಿಯೇ ಮಾನಧನರೆನಿಸಿ ಎಣಿಸಲ್ಪಡುವರು.

ಪ್ರಬಲವಾದ ಪರಕಾರಕ್ಕೆ ತನ್ನ ಸಾಮ್ರಾಜ್ಯವನ್ನು ಸಾಧಿಸಿಕೊಳ್ಳುವ ಇಚ್ಛೆಯು ಇರುವವರೆಗೆ ಜನರಲ್ಲಿ ತಮ್ಮ ಸಂಸ್ಕೃತಿಯು ನಶಿಸಬಾರದೆಂಬ ಪ್ರಬಲವಾದ ಇಚ್ಛೆಯಿರುವ ತನಕ ಇಂಗ್ಲಿಶ ಸರಕಾರವು, ನಮ್ಮ ಧರ್ಮವನ್ನೂ [illegible] ನಮ್ಮ ನಡೆ ನುಡಿಗಳಲ್ಲಿ [illegible] ಹಾಗೆ ಸ್ವಾತಂತ್ರ್ಯದ ಲ್ಲಿಂಬನೆಯೋ ನಿಜ. ಆದರೆ ತನ್ನ ಶಿಕ್ಷಣ, ತನ್ನ ಗೋಷ್ಠಿ, ತನ್ನ ರಾಜ್ಯತಂತ್ರ ಮತ್ತು ತನ್ನ [illegible] ಇವುಗಳ ಬಲದಿಂದ ಹಿಂದೀ ಜನತೆಯು ಜೀವನದ ಮೇಲೆ [illegible] ಬೀರಿ ಮಾಡುವುದನ್ನು [illegible] ಬಿಡುವುದಿಲ್ಲ [illegible] ಹೀಗೆ [illegible] ಮೇಲೆ [illegible] ಕವಾಗಿ [illegible] ಪರಿಣಾಮವು [illegible] ದೊರಕುವದೋ [illegible] ಗಳ [illegible] ಕೂಟ, ರಾಜತಂತ್ರ, ಮತ್ತು ರಾಜನೀತಿಗಳ [illegible] ಹಿಂದೀ [illegible] ಜೀವ [illegible] ಆಗುತ್ತಿರುವ [illegible] ವಾದ [illegible] ಜಾತಿಯನ್ನಾಗಲಿ ರಾಷ್ಟ್ರವನ್ನಾಗಲಿ, ಶಿಕ್ಷಣ [illegible] ಯೋಗ್ಯವಾದ ಸ್ವಾಮಿತ್ವ [illegible] ಸಕಾರ [illegible] ಯನ್ನು ಮಾಡಲು ಇಚ್ಛಿಸುವದಿಲ್ಲ [illegible] ತಿಳಿಯುದು!

ನಮಗೆ ಜಗತ್ತಿನ [illegible] ನಮ್ಮ [illegible] ಪರಿಯು [illegible] ನಾವು ಆತ್ಮಸ್ಮೃತಿ [illegible] ಯಾಗಿ ಪರಾಜಯ [illegible] ಸೇವೆಯ [illegible] ನಡಿಸುವಿಕ್ಕೆ, ಈ ಉತ್ಪತ್ತಿಯಿಂದಾಗಿ ನಾವು [illegible] ಅಂಗೀಕಾರವನ್ನು ಮಾಡದೆ ತೀರದು. ಪಾಶ್ಚಾತ್ಯ [illegible] ರದ ಅಭಿಮಾನಿಗಳು ನಮ್ಮ ವಿಚಾರವನ್ನು ಹಂಗಲೀ ವಿಚಾರವೆಂದು ಕರೆಯಬಹುದು, ನಾವು ಇಂಗ್ಲಿಶಜಾತಿಯ ಶತ್ರುಗಳೆಂಬ ಆರೋಪವನ್ನಾದರೂ ನಮ್ಮ ಮೇಲೆ ಹೊರಿಸಬಹುದು. ಪ್ರಗತಿ ದೂರದ [illegible] ನಾವು ಹಿಂದೆ ತಿರುಗಿಸಲು ಯತ್ನಿಸುತ್ತೇವೆಂತಲೂ ಅವರು ಅನ್ನಬಹುದು. ಈ ಬಗೆಯ [illegible] ಅವರು ನಮ್ಮ ಉಪಹಾಸ ಮಾಡಬಹುದು, ಚೇಷ್ಟೆ ಮಾಡಿ ನಮ್ಮ ನಮ್ಮ [illegible] ಪ್ರತಿಷ್ಠೆಯನ್ನು ಕಳೆದು [illegible] ನಮ್ಮ ಆತ್ಮಾಭಿಮಾನವು [illegible] ವಾಗುವಂತೆ ಅವರು ಎಲ್ಲ ಬಗೆಯಿಂದ ಪ್ರಯತ್ನಿಸಬಹುದು. ನಮ್ಮನ್ನು ಭೂತಕಾಲದ ಉಪಾಸಕರೆಂದು ಹೇಳಿ [illegible] ಪ್ರಯಾಸಪಡಬಹುದು. ಆದರೆ ಇದರಿಂದ ನಾವು [illegible] ಧೈರ್ಯಗುಂದಲಾಗದು. ನಮ್ಮ ವಿಶ್ವಾಸವು ಪ್ರಸ್ತುತದ ಮೇಲೆ ಅಚಲವಾಗಿಯೂ ವಿಶ್ವವ್ಯಾಪಕವಾಗಿಯೂ ಇದೆ [illegible] ಭವಿಷ್ಯತ್ಕಾಲದ ನಿಜ ಉಪಾಸಕರು ನಾವೇ ಆಗಿರುವೆವು [illegible] ವಾದ ಯಾವ [illegible] ಕಾಲದಲ್ಲಿಯೂ [illegible] ಬದುಕಿರಲಿಕ್ಕಿಲ್ಲ [illegible] ನಾವೇ [illegible] ಭವಿಷ್ಯಕಾಲವು ನಮ್ಮದೇಯಾಗಿರುವದೆಂಬ ಮಾತಿನಲ್ಲಿ ಸಂದೇಹವು ಬೇಡ.

(ನವಜೀವನ) (ಶ್ರೀ ಕ್ಷಾತ್ರೀಂದ್ರರ)

× × × ×

## ಟಿಪ್ಪಣಿಗಳು.

**ಸಾಹಿತ್ಯ ಪತ್ರಿಕೆ,**

(ಬಂಗ ಅಂಶಿವಾ)

ರೇಶ್ಮೆ ಸಂಪಿನ ಒಗ್ಗೆ ಕಲಹವು ಹುಟ್ಟಿದ್ದು ಮೂಲಕ ಮಹಾತ್ಮರ ಕಡೆಗೆ ಅವರ ವಿಚಾರವು ನಡೆದಿದ್ದು ಹೋಗಿದ್ದವು. ಇಗತ್ತಿನ್ಲಕೆಂದು [illegible] ಸಿ. ಎಫ್ ಅಂಡ್ರೂಜರು ಅವರಿಗೊಂದು ಪತ್ರವನ್ನು ಬರೆದಿದ್ದರು. ಅದಕ್ಕೆ ಮಹಾತ್ಮಾಜಿ ಅವರು [illegible] ಕಾರಾಗೃಹದಿಂದ [illegible] ಉತ್ತರವನ್ನು ಕಳಿಸಿರುವರು ...

ಸಾಬರಮತಿ ಕಾರಾಗೃಹ
ಮಾರ್ಚ ೧೭

**ನನ್ನ ಪ್ರಿಯ ಚಾರ್ಲಿಯೆ,**

ನಿನ್ನ ಪತ್ರವು ಇದೀಗ ತಲ್ಪಿರುವದು. ಕೈಯಲ್ಲಿ ಹಿಡಿದ ಕೆಲಸವನ್ನು ಅಲ್ಲಿಯೇ ಬಿಟ್ಟು ಬಂದಿದ್ದದ್ದು ನಿನಗೆ ಬಹಳೇ ಒಳಿತು ಮಾಡಿದೆ. ಏನೂ ಆತಂಕ ವಿಲ್ಲದೆ ನೀನು ಗುರುದೇವನ ಬಳಿಗೆ ಹೋಗು. ನಿನ್ನ ಕಡೆಗಿದ್ದ ಅವನ ಕೆಲಸವು ತೀರುವವರೆಗೆ ಅವನಲ್ಲಿಯೇ ಉಳಿಯಬೇಕು. ಕೆಲಸವಿಲ್ಲದಾಗ [ಸಾಬರ ಮತಿ] ಆಶ್ರಮಕ್ಕೆ ಹೋಗಿ ಕೆಲವು ವೇಳೆ ನೀನು ಅಲ್ಲಿ [illegible] ಕಲ್ಲಿಸುವದು ನನ್ನ ಮನಸ್ಸಿಗೆ ಬರುತ್ತದೆ. ಆದರೆ ನನಗೆ ಭೆಟ್ಟಿಯಾಗಲಿಕ್ಕೆ ನೀನಿರುವ [illegible] ಬರಬಾರದೆಂದು ನನ್ನ ಅಭಿಲಾಷೆ ಇರುತ್ತದೆ. ಇಲ್ಲಿ ನಾನು ಪಕ್ಷಿಗಳಂತೆ ಉಲ್ಲಾ[illegible] ವಾಗಿರುವೆನು. ಉಚ್ಚತರ ಕಾರಾಗೃಹವು ನನ್ನ [illegible] ಅಂತೂ ಸ್ವಾತ್ರಿ [illegible] ಯಾದದ್ದು —ನನ್ನ [illegible] ಯಾಗ ಜಗತ್ತಿನ, ನಡೆದಿರುವ ಸಂಗತಿಗಳ [illegible] ದೂರ ಇಡಬೇಕು. ಭೆಟ್ಟಿಗಾಗಿ ಜನರನ್ನು ಬರಮಾಡಿಕೊಳ್ಳುವದು [illegible] ಉಂಟು ಆದರೆ ಸತ್ಯಾಗ್ರಹಿಯು ಇಂಥ ಹಕ್ಕುಗಳನ್ನು [illegible] ಉಪಯೋಗಿಸ [illegible] ದು ಹೀಗೆ [illegible] ಲಿಷ್ಟೆ ಕಳಿಸುವ [illegible] ಧರ್ಮಕ [illegible] ದಿಂದ ನನಗೆ ರಾಜಕೀಯ [illegible] ಧಾರ್ಮಿಕ ಪ್ರಯೋಜನವೆಯೇ [illegible] ಗರದೆ ಅದು ಅತಿ [illegible] ನನ್ನ [illegible].

ನಿನ್ನ ಪ್ರೀತಿಯ
ಮೋಹನ.

**ಅಸಹಕಾರದ ಮರ್ಮವು**

ಅಸಹಕಾರ ಚಳವಳಿಯ ಇಂಗಿತವು ಎಷ್ಟೋ ಜನರಿಗೆ ಇನ್ನೂ [illegible] ಸಂಗತಿಗಳ ಬಗ್ಗೆ [illegible] ದ ಮಿ [illegible] ಸಾಹೇಬರವರೂ [illegible] ಮರ್ಮವನ್ನು ಇನ್ನೂ ಕಂಡು ಹಿಡಿದಿಲ್ಲ. ಅವರು [illegible] "ನ್ಯೂ ಇಂಡಿಯಾ" ಕ್ಕೆ ಬರೆದು ಕಳಿಸಿದ [illegible] ಹಿಂದೂಸ್ಥಾನದಲ್ಲಿಯ ಬ್ರಿಟಿಶ ಸಾಮ್ರಾಜ್ಯದ ದಿನಗಳು [illegible] ಒಂದಿಯೂ [illegible] ಆದರೆ ಅಸಹಕಾರ ಚಳವಳಿಯ ನಿಜವಾದ ಉದ್ದೇಶವು ಜನಕ ಲಕ್ಷ್ಯವನ್ನು ಪಾಶ್ಚಾತ್ಯ ಸಂಸ್ಕೃತಿಯ [illegible] ತಿರುಗಿಸುವದು [illegible] ಗತಿಯನ್ನು ತಡೆಯುವದಕ್ಕೆಂದು ಅವರ ಅಭಿಪ್ರಾಯವು. ಪಾಶ್ಚಾತ್ಯ ಸಂಸ್ಕೃತಿಯು ಬೆನ್ನು ಹತ್ತಿದ ಹಿಂದೀರಾಷ್ಟ್ರದ ಕಲ್ಪನೆಗಳನ್ನು ತೆಗೆದು ಹಾಕುವದೇ ಅಸಹಕಾರ ಚಳವಳಿಯ ಮೂಲ ಉದ್ದೇಶವೆಂಬುದು ನಿಜ. ಅದರ ಬಗ್ಗೆ ಏನೂ ಸಂಶಯವಿಲ್ಲ. ಅದನ್ನು ಪ್ರತಿಪಾದಿಸಲಿಕ್ಕೆ ನಾವು ನಾಚುವ ಕಾರಣವೂ ಇಲ್ಲ. ನಮಗೇನು, ನಮ್ಮ ಸುಧಾರಣೆಯು ಇಲ್ಲವೇ? ನಮ್ಮ ಪ್ರಾಚೀನ ಸಂಸ್ಕೃತಿಯು ಹಾಳಾಗಿ ಹೋಗಿದೆಯೇ? ನಮ್ಮಲ್ಲಿ ಅಮೌಲ್ಯವಾದ ಗ್ರಂಥಗಳೂ, ಕಲಾಕೌಶಲ್ಯವೂ, ನೀತಿಗಳೂ ಇಲ್ಲವೇ? ಪಾಶ್ಚಾತ್ಯ ಇಷ್ಟೆ

ಲ್ಲಿ ಇಲ್ಲದ್ದರಿಂದಲೇ ನಾವು ಪಾಶ್ಚಾತ್ಯ ಸಂಸ್ಕೃತಿ ಶಿಕ್ಷಣ, ಕಲಾಕೌಶಲ್ಯಗಳನ್ನು ಅನುಕರಿಸಬೇಕೇ? ನಮಗೇನೂ ಪಾಶ್ಚಾತ್ಯ ಸುಧಾರಣೆಗಳ ಬಗ್ಗೆ ದ್ವೇಷವಿಲ್ಲ. ಪರರಲ್ಲಿರುವ ಗುಣಗಳನ್ನು ಗ್ರಹಣಮಾಡಿ, ಅವುಗಳನ್ನು ನಮ್ಮ ಸಂಸ್ಕೃತಿಯಲ್ಲಿ ಸೇರಿಸಿಕೊಳ್ಳಲು ನಾವು ಸಿದ್ಧರಿದ್ದೇವೆ. ಆದರೆ ಅವುಗಳನ್ನು ಸೇರಿಸಿಕೊಳ್ಳುವದಕ್ಕೂ ಸ್ವಲ್ಪ ಮಿತಿಯುಂಟು. ಕಂಡದನ್ನು ಅನುಕರಿಸುವದು ರಾಷ್ಟ್ರದ ಏಳಿಗೆಗೆ ಉಚಿತವಾಗಲಾರದು.

---

## ಕೊಡಗಿನ ಸಮಾಚಾರವೇನು ?

ಕರ್ನಾಟಕದಲ್ಲಿ ಎಷ್ಟೇಟ ಜಾಗ್ರತಿಯಾಗಿದ್ದರೂ ಅಖಂಡ ಕರ್ನಾಟಕದ ಬಗ್ಗೆ ಕಳಕಳಿಯಿಂದ ವಿಚಾರಮಾಡುವ ಜನರ ಸಂಖ್ಯೆಯು ಬಹು ಅಲ್ಪ ಪ್ರಮಾಣದಲ್ಲಿದೆಂದು ವಿಷಾದದಿಂದ ಹೇಳಬೇಕಾಗಿದೆ. ಸಧ್ಯದಲ್ಲಿ ಕೊಡಗಿನ ಉದಾಹರಣೆಯನ್ನೇ ನಾವು ಜನರ ಮುಂದೆ ಇಡುವೆವು.

ಮೊಂಟೇಗೂ ಸಾಹೇಬರು ಹಿಂದುಸ್ಥಾನಕ್ಕೆ ಬಂದಾಗಿನಿಂದ ಕೊಡಗಿನ ನಿವಾಸಿಗಳು ತಮಗೆ ಸ್ವತಂತ್ರವಾದ ಗವರ್ನರರ ಕೌನ್ಸಿಲನ್ನು ಕೊಡಬೇಕೇದೂ, ಅದು ಶಕ್ಯವಿರದಿದ್ದರೆ ಮದ್ರಾಸ ಪ್ರಾಂತದಲ್ಲಿಯಾದರೂ ತಮ್ಮನ್ನು ಸೇರಿಸಬೇಕೇಂದೂ ಒತ್ತಾಯದಿಂದ ಕೇಳಹತ್ತಿರುವರು. ಈ ವಿಷಯವು ಉದ್ಭವವಾದಂದಿನಿಂದ ಕೊಡಗಿನಲ್ಲಿ ಜಾಗ್ರತೆಯೂ ಹೆಚ್ಚು ಉಂಟಾಗಿದೆ. 'ಕೊಡಗು' ಪತ್ರಿಕೆಯು ಹೊರಡಲೂ ಈ ಜಾಗ್ರತಿಯೇ ಕಾರಣವು. ಈ ಪತ್ರಿಕೆಯು ಹೊರಟಾಗಿನಿಂದ ಈ ಕೌನ್ಸಿಲದ ವಿಷಯವನ್ನು ಅದು ಚನ್ನಾಗಿ ಪ್ರತಿಪಾದಿಸುತ್ತದೆ. ಅಲ್ಲದೇ ಈ ಪತ್ರಿಕೆಯಿಂದ ಅಲ್ಲಿಯ ಜಾಗ್ರತಿಗೆ ಹೆಚ್ಚು ಕಳೆ ಏರುವದೆಂಬದೂ ಆ ಪತ್ರಿಕೆಯನ್ನು ಓದುತ್ತಬಂದವರಿಗೆ ಗೊತ್ತಾಗದೇ ಇರದು.

ಈಗ್ಗೆ ಕೊಡಗಿಗೆ ಸ್ವತಂತ್ರವಾದದ್ದೊಂದು ಕೌನ್ಸಿಲನ್ನು ಕೊಡುವ ಪ್ರಶ್ನೆಗೆ ಫಲದೊರೆಯುವ ಚಿನ್ಹಗಳು ಕಾಣಿಸಹತ್ತಿವೆ. ಇಷ್ಟು ದಿವಸಗಳವರೆಗೆ ಮದ್ರಾಸಿನ ಅಧಿಸತ್ತೆಕಾರರೂ ನಮ್ಮನ್ನು ಒಳಪಡಿಸಿರೆಂದು ಕೊಡಗಿನ ಮಹಾಜನಗಳು ಎಷ್ಟೇ ಪ್ರಯತ್ನ ಬಟ್ಟರೂ ಸರಕಾರದವರು ಅದನ್ನು ಅಷ್ಟೊಂದು ಲಕ್ಷಪೂರ್ವಕವಾಗಿ ವಿಚಾರಿಸಿದ್ದಿಲ್ಲ; ಇದರಿಂದ ಕೊಡಗಿನಲ್ಲಿ ಬಹಳೇ ಅಶಾಂತತೆಯು ನೆಲೆಗೊಳ್ಳಹತ್ತಿತ್ತು. ಇಂಥ ಸಮಯದಲ್ಲಿ ನಿಮಗೊಂದು ಕೌನ್ಸಿಲನ್ನೇ ಕೊಡುವೆವೆಂದು ಸರಕಾರದವರು ಕೊಡಗಿನವರಿಗೆ ಹೇಳಿದ್ದಾರೆ. ಹೀಗೆ ಅಕಸ್ಮಾತ್ತಾಗಿ ಸರಕಾರದ ಧೋರಣವು ಬದಲಿಸಿದ ಕಾರಣವೇನು? ಇದರಲ್ಲಿ ರಹಸ್ಯವೇನಾದರೂ ಇರಲೇ ಬೇಕಲ್ಲವೆ?

ಎಂಥ ವಿಶ್ವ ಪ್ರಯತ್ನ ಬಟ್ಟರೂ ಆಗದ ಸಂಗತಿಯನ್ನು ಈ ಹೊತ್ತು ಸರಕಾರದವರು ತಾವಾಗಿಯೇ ಕೊಡಹತ್ತಿರುವದು ಆಶ್ಚರ್ಯವಲ್ಲವೆ? ಅಥವಾ ಆಶ್ಚರ್ಯವೆಲ್ಲಿಯದು? ರಾಜನೀತಿಗೆ ಆಶ್ಚರ್ಯ, ದಯ ಕರುಣ ಮೊದಲಾದ ವಿಕಾರಗಳು ಹೊಸವಲ್ಲ. ಕೊಡಗಿನವರಿಗೆ ಸ್ವತಂತ್ರವಾದ ಕೌನ್ಸಿಲನ್ನು ಕೊಡುವದರಲ್ಲಿ ರಾಜನೀತಿಯು ತುಂಬಿ ತುಳಕುತ್ತದೆ. ಇಂಗ್ಲೀಷರ ಮುತ್ಸದ್ದಿತನದ ಲಕ್ಷಣಗಳೆಲ್ಲ ಆ ಸರಕಾರದ ವಚನದಲ್ಲಿ ಅಡಕವಾಗಿವೆ. ಅವು ಹೇಗೆನ್ನುವದನ್ನು ವಿಚಾರಿಸುವಾ.

ಮದ್ರಾಸ ಪ್ರಾಂತವು ಕೊಡಗಿನಕಿಂತ ಹೆಚ್ಚು ಜಾಗ್ರತವಾಗಿದೆ. ಕೊಡಗು ಹಿಂದೆಬಿದ್ದ ದೇಶವು. ಮದ್ರಾಸದಲ್ಲಿ ಸ್ವರಾಜ್ಯದ ಆಕಾಂಕ್ಷೆಗಳು ಚನ್ನಾಗಿ ಕಾಲೂರಿ ನಿಂತಿವೆ; ಕೊಡಗಿನಲ್ಲಿ ಸ್ವರಾಜ್ಯದ ಗಾಳಿಯು ಈಗೀಗ ಬೀಸಹತ್ತಿರುತ್ತದೆ. ಮದ್ರಾಸದ ಮಹಾಜನರು ಚಳವಳಿಗಾರರು ಕೊಡಗಿನವರೋ ಸಾರ್ವಭೌಮರಾಜರ ಪ್ರೇಮದ ಪ್ರಜೆಗಳು. ಮದ್ರಾಸದ ಜನರು ರಾಜದ್ರೋಹಕ್ಕೆ ಹೆಚ್ಚಿದವರು; ಕೊಡಗಿನವರು ನಿಸ್ಸೀಮ ರಾಜನಿಷ್ಠರು. ಈ ತರದ ಕಲ್ಪನೆಯು ಸರಕಾರದವರ ಮನಸ್ಸಿನಲ್ಲಿ ಬಂದಿರಬೇಕು; ಮತ್ತು ಮದ್ರಾಸ ಪ್ರಾಂತದ ಜನಗಳ ಕೊಡಗಿನ ನಿವಾಸಿಗಳಿಗೂ ಇರುವ ಈ ಸೂಕ್ಷ್ಮ ಭೇದವನ್ನು ನಿರೀಕ್ಷಿಸಿರಬೇಕು. ಆದುದರಿಂದಲೇ ಕೊಡಗಿನವರು ಮದ್ರಾಸದಲ್ಲಿ ಸೇರಿಕೊಳ್ಳುಲಿಕ್ಕೆ ಸರಕಾರದವರಿಗೆ ರುಚಿಸಿರಲಿಕ್ಕಿಲ್ಲ. ಈ ಹೊತ್ತಿಗೆ ಕೊಡಗಿನ ಜನಗಳು ಶಾಂತರಾಗಿರುವರು. ಸಂಗತ ದೋಷದಿಂದ ನಾಳಿನ ದಿನ ಭ್ರಷ್ಟರಾದರೆ ಕೇ!! ಆದುದರಿಂದ ಕೊಡಗಿನವರನ್ನು ಮದ್ರಾಸದ ಅಧಿಸತ್ತೆಗೆ ಸೇರಿಸುವದು ಒಳಿತಲ್ಲವೆಂಬದು ಸರಕಾರದವರ ಮನಸ್ಸಿಗೆ ಹೊಳೆದಿರಬೇಕು. ಇನ್ನು ಮದ್ರಾಸಕ್ಕೆ ಸೇರಿಸದೇ ಈಗಿದ್ದ ಹಾಗೇ ಕೊಡಗಿನ ರಾಜ್ಯಪದ್ಧತಿಯನ್ನು ಮೈಸೂರ ರೆಸಿಡೆಂಟರ ಕೈಯಲ್ಲಿಡಬೇಕೆಂದರೆ ಅದು ಇತ್ತ ಕೊಡಗಿನ ಮಹಾಜನಗಳಿಗೆ ರುಚಿಸದು ಈಗಾಗಲೇ ಅವರು ಕ್ಷುಬ್ಧರಾಗಿದ್ದಾರೆ. ಇಂಥ ಬಿಕ್ಕಟ್ಟಿನ ಸ್ಥಿತಿಯಲ್ಲಿ ಏನು ಮಾಡಬೇಕು? ಎಂಬೀ ವಿಚಾರಗಳು ಸರಕಾರಕ್ಕೆ ತಲೆದೋರಿರಬೇಕು. ಅಂತೆಯೇ ಕೊಡಗಿನವರಿಗೆ ಮಹೋಪಕಾರ ಮಾಡಬೇಕೆಂದು ವಿಚಾರಿಸಿ ಸ್ವತಂತ್ರವಾದದೊಂದು ಕೌನ್ಸಿಲ್ ಕೊಟ್ಟು ಸಮಾಧಾನವನ್ನು ಮಾಡಿದರಾಯಿತೆಂಬ ರಾಜಮಾರ್ಗವನ್ನು ಸರಕಾರದವರು ಅವಲಂಬಿಸಿರಬಹುದು. ಇದರಿಂದ ಕೊಡಗು ಒಂದೇ ಈಗಿನಂತೆಯೇ ಒಂಟಿಯಾಗಿ ಉಳಿಯುವದು. ಮದ್ರಾಸದ ಚಳವಳಿಯೊ[illegible] ರಾಜದ್ರೋಹೀ ಜನರಿಂದ ಅಲಿಪ್ತವಾಗಿ ಉಳಿಯುವದು. ಅಂದರೆ ಆ ನಾಡಿನಲ್ಲಿ ಸ್ವರಾಜ್ಯದ ಮಹಾಮಂತ್ರದ ಬಿ[illegible] ಗಾಳಿಯು ಅಷ್ಟೊಂದು ಗಟ್ಟಿಯಾಗಿ ಬೀಸದೆಂದು ಸರಕಾರಕ್ಕೆ ಆನಂದವಾಗಿರಬಹುದು. ಇದಲ್ಲದೆ ಇತ್ತ ಕೊಡಗಿನವರ ಆಶೆಯನ್ನು ಪೂರ್ತಿಗೊಳಿಸಿದ್ದರಿಂದ ಅವರಿಗೆ ಸರಕಾರ[illegible] ದಯಾಳುವಾಗಿ ತೋರುವದು ಸಾಕಿದೆ. ಇಷ್ಟೊಂದಾದರೆ ಸರಕಾರದ ಅಭಿಲಾಷೆಯು ನೆರವೇರಿದಂತಾಗುವದು. ಈ ಬ[illegible]ಯ ಹರ್ಷಯುಕ್ತವಾದ ವಿಚಾರದಿಂದಲೇ ಕೊಡಗಿಗೆ ಸರಕಾರದವರು ಸ್ವತಂತ್ರ ಕೌನ್ಸಿಲನ್ನು ಕೊಡುವ ವಿಚಾರಮಾಡಿ[illegible]ಬೇಕು. ಇಲ್ಲದಿದ್ದರೆ ಜನಾಧಾಸವಾಗಿ ಪ್ರಜೆಗಳ ಆಕಾಂಕ್ಷೆಗಳನ್ನು ಪೂರೈಸುವ ಹವ್ಯಾಸಕ್ಕೆ ಇಂಗ್ಲೀಷ ರಾಜಧುರೀಣರು ಎಂದೂ ಕೈ ಹಾಕುತ್ತಿರಲಿಲ್ಲವೆಂಬದು ಬ್ರಿಟಿಶ ಹಿಂ[illegible]ಸ್ಥಾನದವರಿಗೆ ಅನುಭವದಿಂದ ಗೊತ್ತಾಗುವ ಮಾತಾ[illegible]

ಸರಕಾರದವರ ವಿಚಾರವು ಹಾಗಿರಲಿ. ಕೊಡಗಿನವ[illegible] ಸ್ವತಂತ್ರವಾದ ಕೌನ್ಸಿಲ್ಲ ದೊರೆತರೆ ಅವರಿಗೆ ಅದರಿಂದ ಹೆ[illegible] ಲಾಭವಿದೆ. ಯಾಕಂದರೆ ಕೌನ್ಸಿಲ್ಲದ ಎಲ್ಲ ತರದ ಅ[illegible]ವು ಕೊಡಗಿನವರಿಗೇ ಅದರಿಂದ ಸುಲಭವಾಗಿ ಉಂಟಾಗುವ[illegible] ಮದ್ರಾಸದಲ್ಲಿ ಅವರು ಸೇರಿ ಹೋಗಿದ್ದರೆ ಕೊಡಗಿನ ಮ[illegible] ಜನಗಳು ಅಲ್ಲಿ ಅಲ್ಪ ಸಂಖ್ಯಾಕರಾಗಿ ಉಳಿಯುತ್ತಿ[illegible] ಆದರಿಂದ ಅವರಿಗೆ ವಿಶೇಷವಾದ ಹಾನಿಯೇ ಉಂ[illegible]ತ್ತಿತ್ತು. ಅಲ್ಪ ಸಂಖ್ಯಾಕರಾದ ಜನರಬಗ್ಗೆ ಸರಕಾರ[illegible]ಕ್ಷವು ಕಡಿಮೆಯಾಗುತ್ತದೆಂಬವನ್ನು ನಮ್ಮ ಉತ್ತರ [illegible]ಟಕದ ಜನರು ಸ್ವಾನುಭವದಿಂದ ಹೇಳಬಹುದಾಗಿದೆ. ಮ[illegible]

ಸ್ವಾತಂತ್ರ್ಯವಾದ ಕೌನ್ಸಿಲ್ಲು ಇರುವದರಿಂದ ಒಂದೆರಡು ಸಾರಿ ತಪ್ಪು ಹೆಜ್ಜೆಗಳನ್ನಿಟ್ಟರೂ ಅದರಿಂದ ಜಾಣತನವು ಬೇಗನೇ ಬರುವದು. ಆದುದರಿಂದ ಸರಕಾರದವರು ಕೊಡಗಿಗೆ ಬೇರೊಂದು ಕೌನ್ಸಿಲ್ಲ ಕೊಟ್ಟರೆ ಅದರಿಂದ ಹೆಚ್ಚಿಗೆ ಲಾಭವೇ ಇರುತ್ತದೆ. ಸರಕಾರದ ವಿಚಾರವೇನೇ ಇರಲಿ; ಅವರ ಈ ಕೃತಿಯಿಂದ ನಮ್ಮ ಕರ್ನಾಟಕದ ಒಂದು ಭಾಗವಾದ ಕೊಡಗು ನಾಡಿಗೆ ಒಳಿತಾದ ಯೋಗವು ಬೇಗನೇ ಉಂಟಾಗಲೆಂದು ಆಶಿಸುತ್ತೇವೆ.

ಇನ್ನು ಉಳಿದ ಕರ್ನಾಟಕಸ್ಥರ ಬಗ್ಗೆ ವಿಚಾರಿಸುವಾ. ಈಗ್ಗೆ ಅನೇಕ ದಿನಗಳಿಂದ ಕೊಡಗಿನ ಮುಖಂಡರು ಈ ಕೌನ್ಸಿಲ್ಲಿನ ಬಗ್ಗೆ ಪ್ರಯತ್ನಪಡಹತ್ತಿದ್ದರೂ ಕೂಡ ಕೊಡಗಿನ ಹೊರಗೆ ನಿವಾಸಮಾಡಿಗಿದ್ದ ಕರ್ನಾಟಕಸ್ಥರು ಅವರ ಈ ಆಕಾಂಕ್ಷೆಗಳಬಗ್ಗೆ ಸ್ವಲ್ಪಾದರೂ ಸಹಾನುಭೂತಿಯನ್ನು ತೋರಿಸಿರುವದಿಲ್ಲ. ಅಖಂಡ ಕರ್ನಾಟಕದ ವಿಷಯದಲ್ಲಿ ಕನ್ನಡಿಗರೆಲ್ಲ ಜಾಗ್ರತರಾಗಿದ್ದರೆ ಆ ತರದ ಮೌನಭಾವವನ್ನು ತಳೆವದೇಕೆ? ಕರ್ನಾಟಕದ ಮುಖಂಡರು ಒಂದಾವರ್ತಿಯಾದರೂ ಕೊಡಗಿಗೆ ಹೋಗಿ ಅವರ ಸುಖದುಃಖಗಳ ವಿಚಾರವನ್ನು ಮಾಡಿರುವರೋ? ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯಲ್ಲಿ ಕೊಡಗಿನಿಂದ ಒಬ್ಬರಾದರೂ ಪ್ರತಿನಿಧಿಯಿಲ್ಲ ಆ ಬಗ್ಗೆ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧಿಕಾರಿಗಳಿಗೆ ಸ್ವಲ್ಪಾದರೂ ಚಿಂತೆಯದೆಯೋ? — -

ಇನ್ನು ಕರ್ನಾಟಕದ ವೃತ್ತಪತ್ರಗಳಾದರೂ ಎಷ್ಟು ಕುಳಿತಿರುವವು? ಕರ್ನಾಟಕದಲ್ಲಿ ಕರ್ನಾಟಕದ ಏಕೀಕರಣದ ಭಾವನೆಯು ಹೆಚ್ಚಾಗಿ ಹರಡುವಂತೆ ಮಾಡಲು ವೃತ್ತಪತ್ರಗಳೇ ಮುಖ್ಯವಾದ ಸಾಧನಗಳೆಂದಮೇಲೆ ಅವಾದರೂ ಕೊಡಗಿನವರ ಆಕಾಂಕ್ಷೆಗಳ ಬಗ್ಗೆ ಸಹಾನುಭೂತಿಯನ್ನು ತೋರಿ ಉಳಿದ ಕರ್ನಾಟಕಸ್ಥರಲ್ಲಿ ಕೊಡಗಿನಬಗ್ಗೆ ಜ್ಞಾನವನ್ನು ಹೆಚ್ಚಿಸಬೇಕಲ್ಲವೇ? ಅಖಂಡ ಕರ್ನಾಟಕದಬಗ್ಗೆ ಮುಚ್ಚಿದ ಉತ್ಸಾಹವನ್ನು ಮೊದಲಿನಿಂದಲೂ ತೋರಿಸುತ್ತ ಬಂದ "ಕರ್ನಾಟಕ ವೃತ್ತವು" ಈ ವಿಷಯದಲ್ಲಿ ಮೌನವನ್ನು ಧರಿಸಿದ್ದನ್ನು ಕಂಡು ನಮಗೆ ಖೇದವಾಗಿದೆ. ಕರ್ನಾಟಕದಲ್ಲಿ ಹೊಸ ಜೀವನವನ್ನು ತಾಳಿ ತನ್ನ ವೈಭವದ ಧ್ವಜವನ್ನಾರಿದ "ಕರ್ನಾಟಕವೈಭವ" ಕ್ಕ್ಯಾ ಈ ವಿಷಯವು ಬೇಡಾಯಿತೇ ? ಆ 'ಕರ್ಮವೀರ" ".ಕಂಠೀರವ" ಗಳಿಗೆ ಸಹ ಕೊಡಗಿನ ನೆನಪಾಗದು. ಅಂದಮೇಲೆ ಅಖಂಡ ಕರ್ನಾಟಕದ ಬಗ್ಗೆ ಒಳ್ಳೇ ಕಳಕಳಿಯ ಜಾಗೃತಿಯು ಪೇಟ್ಲರದ ಜನರಲ್ಲಿ ಸಹ ವಿಶೇಷವಾಗಿ ಇನ್ನೂ ನೆಲೆಗೊಂಡಿಲ್ಲವೆಂಬವನ್ನು ನಾವು ವಿಷಾದದಿಂದ ಒಪ್ಪಿಕೊಳ್ಳಬೇಕಲ್ಲವೇ ?

## ವಾಙ್ಮಯವಿಚಾರ.

೧. **ಸಂಕ್ಷೇಪಗೀತೆ.** ಕರ್ನಾಟಕ ವಾಙ್ಮಯದ ನಿಸ್ಸೀಮ ಭಕ್ತರಾದ ಶ್ರೀ. ಆತ್ಮಾರಾಮ ಶಾಸ್ತ್ರೀ ಓಕ್ಲಾಂನೆ ಇವರಿಂದ **ಈ ಸ್ವತಂತ್ರವಾದ ಗೀತೆಯು ಬರೆಯಲ್ಪಟ್ಟಿದೆ. ಗೀತೆಯಂಥ ಬಹು ಕಠಿಣ ವಿಷಯವು ಕೂಡ ಶಾಸ್ತ್ರಿಗಳಿಂದ ಬಲು ಸವಿಯಾದ ಮತ್ತು ಹಗುರಾದ ಭಾಷೆಯಲ್ಲಿ ಬರೆಯಲ್ಪಟ್ಟದ್ದೇ ಈ ಗ್ರಂಥದ ಮುಖ್ಯ ಲಕ್ಷಣವು. ಮೊದಲಿನ ಭಾಗವಾದ ಗೀತಾಧರ್ಮವು ಮಹತ್ವದ್ದಿದೆ. ಗೀತೆಯ ಎಲ್ಲ ತತ್ವಗಳನ್ನು ಇದರಲ್ಲಿ ಚನ್ನಾಗಿ ತಿಳಿಸಿದ್ದಾರೆ. ಹೊಸದಾಗಿ ಗೀತೆಯನ್ನು ಓದುವವರಿಗೂ ಶಾಲೆಗಳಿಗೂ ಇದು ಬಹಳೇ ಅನುಕೂಲವಾಗಿದೆ.**

**ಎರಡನೇ ಭಾಗದಲ್ಲಿ ಗೀತೆಯ ಭಾಷಾಂತರವನ್ನು ಮಾಡುವಾಗ್ಗೆ "ಯಾರು" ಈ ಸರ್ವನಾಮವು ಬಹು ವಿಚಿತ್ರವಾಗಿ** ಉಪಯೋಗಿಸಲ್ಪಟ್ಟಿದೆ. ಉದಾಹರಣೆ:— ಮರಣ ಸಮಯದಲ್ಲಿ **ಯಾರು** ಕೇವಲ ನನ್ನನ್ನು ಸ್ಮರಿಸುತ್ತ ಶರೀರವನ್ನು **ತ್ಯಜಿಸುವನೋ**, ಅವನು ಭಗವತ್ಸ್ವರೂಪವನ್ನು **ಹೊಂದುತ್ತಾನೆ.** [೧೦೭]

ಇದರಂತೆಯೇ ೬೪, ೭೧, ೭೫ ಮುಂತಾದ ಅನೇಕ ಶ್ಲೋಕಗಳು ಬರೆಯಲ್ಪಟ್ಟಿವೆ.

ಬಾಹ್ಯಾಂಗವಂತೂ ಮುದ್ದಾಗಿದೆ. ಬೆಲೆ ೧೦ ಆಣೆ.

**ವಿಳಾಸ:— ಶಾರದಾ ಛಾಪಖಾನೆ, ಮಂಗಳೂರ.**

೨ **ಶಾಂತಾಬಾಯಿ.** ಇದೊಂದು ಸಾಮಾಜಿಕ ಕಾದಂಬರಿಯಂತೆ ಆದರೆ ಕಾದಂಬರಿಗಳಿಗೆ ಅವಶ್ಯವಿದ್ದ ಗುಣಗಳು ಇದರಲ್ಲಿ ಕಾಣುವದಿಲ್ಲ. ಇದರ ಕರ್ತೃಗಳಾದ ವಿಠೋಬಾ ತೊರ್ಕೆಯವರು ತಮ್ಮ ಸ್ವಂತ ಅನುಭವದಿಂದ ಇದನ್ನು ರಚಿಸಿರುವರೆಂದು ಪ್ರಸ್ತಾವನೆಯಿಂದ ಗೊತ್ತಾಗುತ್ತದೆ. ಆದರೆ ಪೀನದ ಗಾಳನಾಗಲಿ, ದೆಂಗವರು ನದಿಯಲ್ಲಿ ಹರಟೆಕೊಚ್ಚುವವಾಗಲಿ ಬಹಳ ಹಳೇ ಸಂಗತಿಗಳು. ಇದಕ್ಕೆ ಯಾವ ಮಹತ್ವದ ಅನುಭವಗಳೆನ್ನಬೇಕು ?

ಶಾಂತಾಬಾಯಿಯು ೧೨ ನೇ ವಾಸಿನಲ್ಲಿ ಹುಟ್ಟಿರುವಳು. ಆದರೆ ೧೪ ನೇ ವಾಸಿನಲ್ಲಿಯೇ ತನ್ನ ಶಿಕ್ಷಕಿಗೆ ತಾನೇ ಉಪದೇಶಿಸ ಹತ್ತಿರುವಳು !

ಈ ಗ್ರಂಥದಲ್ಲಿ ಅಡಕವಾಗಿದ್ದ ನೀತಿಬೋಧವು ಚನ್ನಾಗಿದೆ ಆದರ ಅದನ್ನು ಗ್ರಂಥಕರ್ತರು ಉಪದೇಶ ಪರವಾದ ಪದ್ಧತಿಯಿಂದ ಕಾದಂಬರಿಯಲ್ಲಿ ಸ್ಪಷ್ಟವಾಗಿ ಹೇಳಕೂಡದು. ಪಾತ್ರಗಳ ಆಚಾರ ವಿಚಾರಗಳಲ್ಲಿಯೇ ನೀತಿಯನ್ನು ತುಂಬಿದ್ದರೆ, ಅದು ತಾನಾಗಿಯೇ ಓದುವವರ ಮನಸ್ಸಿನ ಮೇಲೆ ಪರಿಣಾಮವಾಗುತ್ತದೆ. ಮತ್ತು ಈ ತರದ ಪರಿಣಾಮವೇ ಮನದಲ್ಲಿ ಕ್ರಾಂತಿಯನ್ನುಂಟುಮಾಡುತ್ತದೆ.

ಕಾದಂಬರಿಯನ್ನು ಬರೆಯುವ ಲವಲವಿಕೆಯು ಶ್ರೀ. ತೊರ್ಕೆಯವರಲ್ಲಿ ಉಂಟಾಗಿದ್ದರೆ ಅವರು ಬೇರೆ ಬೇರೆ ಭಾಷೆಗಳಲ್ಲಿ ಸುಪ್ರಸಿದ್ಧ ಕಾದಂಬರಿಕಾರರು ಬರೆದ ಕಾದಂಬರಿಗಳ ಪದ್ಧತಿಯನ್ನು ಅಭ್ಯಾಸಿಸಬೇಕೆಂದು ಸೂಚಿಸುತ್ತೇವೆ. **ಬೆಲೆ.** ೫ ಆಣೆ. ವಿಳಾಸ ಕೆನರಾ ಛಾಪಖಾನೆ ಮಂಗಳೂರ.

### ೩ ಹಿಂದೂಮುಸಲ್ಮಾನರ ಐಕ್ಯ !

ಸದ್ಬೋಧಚಂದ್ರಿಕೆಯ ೧೫ ನೇ ವರ್ಷದ ಕಾಣಿಕೆಯ ಗ್ರಂಥವಿದು. ಇದರಲ್ಲಿಯ ಐತಿಹಾಸಿಕ ಪ್ರಸಂಗವು ಚನ್ನಾಗಿದೆ. '**ಚಂದ್ರಿಕೆಯ**' ಭಾಷೆಯಂತೂ ಕನ್ನಡಿಗರಿಗೆ ತೀರ ಪರಿಚಿತವಾಗಿದೆ.

ಕನ್ನಡ ಪುಸ್ತಕಗಳಲ್ಲಿ ಇಂಗ್ಲಿಷ ಅಂಕಿಗಳನ್ನು ಹಾಕುವದೊಂದು ಹುಚ್ಚು ಪದ್ಧತಿಯು ಪ್ರೈಸೂರಿನವರಲ್ಲಿ ನೆಲೆಗೊಂಡಿದೆ! ಆ ಭೂತವು ಆನಂದವನದಂಥ ಶುದ್ಧವಾದ ಆಶ್ರಮದಲ್ಲಿಯೂ ಯಾಕೆ ಸೇರಿಕೊಂಡಿತೋ ನಾವು ಅರಿಯೆವು. ಈ ಗ್ರಂಥದ ಪ್ರಕಾಶಕರು ಇತ್ತಕಡೆಗೆ ಲಕ್ಷ್ಯಕೊಡುವರೆಂದು ಆಶಿಸುತ್ತೇವೆ. ಬೆಲೆ ೪ ಆಣೆ. ವಿಳಾಸ: **ಆನಂದವನ ಗದಗ**

### ೪ ಶ್ರೀರಾಮಕೃಷ್ಣಾಶ್ರಮ ಗ್ರಂಥಮಾಲಾ.

**ಇದೊಂದು ದ್ವೈಮಾಸಿಕ ಧಾರ್ಮಿಕ ಗ್ರಂಥಮಾಲೆಯು. ಶ್ರೀ. ರಾಮಕೃಷ್ಣ ಪರಮಹಂಸರ ಸಂದೇಶ ಮತ್ತು ಸ್ವಾಮಿ ವಿವೇಕಾನಂದರ ಗ್ರಂಥಗಳನ್ನು ಕನ್ನಡಿಸುವದೇ ಈ ಗ್ರಂಥಮಾಲೆಯ ಮುಖ್ಯೋದ್ದೇಶವು. ಸ್ತುತ್ಯವಾದ ಕಾರ್ಯ! ಭಾಷೆಯು ಚನ್ನಾಗಿದೆ.** ವಾರ್ಷಿಕ ಚಂದಾ ೩ ರೂ. ವಿಳಾಸ: **ಶ್ರೀ. ರಾಮಕೃಷ್ಣಾಶ್ರಮ** ಬಸವನಗುಡಿ **ಬೆಂಗಳೂರಸಿಟಿ.**

ಸಂಪಾದಕ.

## ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆ.

೧ ಈ ಸಂಸ್ಥೆಯ ಹೆಸರು ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯು.

೨ ಯೋಗ್ಯ ಕಂಡ ಕನ್ನಡದ ಹೊಸ ಅಥವಾ ಹಳೇ ಪುಸ್ತಕಗಳನ್ನು ಮುದ್ರಿಸಿ, ಪ್ರಸಿದ್ಧಪಡಿಸುವದೇ ಈ ಸಂಸ್ಥೆಯ ಉದ್ದೇಶವು

೩ ಇದಕ್ಕೆ ಬೇಕಾಗುವ ಬಂಡವಲವು ಕನಿಷ್ಠ ಕಡಿಮೆಯೆಂದರೆ ೨೫೦೦ ರೂ. ಗಳು ೨೫೦ ರೂ. ಬೆಲೆ ಬಾಳುವ ೧೦೦ ಪಾಲುಗಳಲ್ಲಿ ಈ ಬಂಡವಲವನ್ನು ವಿಭಾಗಿಸಿದರೆ ೫೦ ರು. ಗಳದೊಂದು ಕಂತಿನಂತೆ ೫ ಕಂತುಗಳಿಂದ ಪಾಲಿನ ಹಣವನ್ನು ತುಂಬಿಸುವುದು

೪ ಮನಃಪೂರ್ವಕವಾಗಿ ಕನ್ನಡ ನುಡಿಯನ್ನು ಸೇವಿಸಲಿಚ್ಛಿಸುವವರೇ ಈ ಸಂಸ್ಥೆಯ ಪಾಲುಗಾರರಾಗುವದಕ್ಕೆ ಅರ್ಹರು.

೫ ಕೆಳಗೆ ಸಹಿಮಾಡಿದವರು ೧೦ ಪಾಲುಗಳನ್ನು ತೆಗೆದುಕೊಂಡು ಕರ್ನಾಟಕ ಸಿಂಹಾಸನ ಸ್ಥಾಪನೆ ಎಂಬ ಐತಿಹಾಸಿಕ ಕಾದಂಬರಿಯನ್ನು ಅಚ್ಚು ಹಾಕಿಸತೊಡಗಿದ್ದಾರೆ. ಕಾರ್ಯ ತ್ವರಿತ ಮಂಡಲಕ್ಕೆ ಸೇರಲಿಚ್ಛಿಸುವವರು ೪ ಅಥವಾ ಹೆಚ್ಚು ಪಾಲುಗಳನ್ನು ತೆಗೆದುಕೊಳ್ಳಬೇಕು.

೬ ಕನ್ನಡ ನುಡಿಯ ಏಳ್ಗೆಯನ್ನು ಬಯಸುವವರು ೫ ರೂ. ಗಳೊಡನೆ ತಮ್ಮ ಪಾಲಿನ ಅರ್ಜಿಗಳನ್ನು ಕಳಿಸಬಹುದು.

ಈ ವಿಷಯವಾಗಿ ಪತ್ರವ್ಯವಹಾರ ಮಾಡಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳಬೇಕು.

| | |
|---|---|
| ಮಾಳಮಡ್ಡಿ ಧಾರವಾಡ | ರಾ. ಹ ದೇಶಪಾಂಡೆ |
| ಶಕೆ ೧೮೪೪ ಚೈತ್ರ ಶು ೧ | ಶ್ರೀ ರಾ, ದೇಶಪಾಂಡೆ. |

ಚಂದಾದಾರರಾಗಿರಿ! ಪ್ರೋತ್ಸಾಹಿಸಿರಿ!!

### ಕರ್ನಾಟಕ ಸಭಾಗ್ರಂಥಮಾಲೆ

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ ಕಾದಂಬರಿ ಕಾವ್ಯ ಪ್ರಬಂಧನಾಟಕವೇ ಮೊದಲಾದ ಗ್ರಂಥಗಳಲ್ಲಿ ಯೋಗ್ಯವಾದ ಒಂದೊಂದು ಪೂರ್ಣ ಪುಸ್ತಕವೂ ಇತರ ಲೇಖನಗಳೂ ಪ್ರಕಟವಾಗುವ ಈ ಗ್ರಂಥಮಾಲೆಗೆ ವಾರ್ಷಿಕ ಚಂದಾ ಅಂಚೆವೆಚ್ಚದೊಡನೆ ೩ ರೂ. ಆಟೆ ಮಾತ್ರ ಇಟ್ಟಿರುವದು ಈಗಲೇ ೯ ಆಣೆಯನ್ನು ಕಳುಹಿಸಿ ವರ್ಗಣಿದಾರರಾಗಿ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ ರಾವುಸಾಹೇಬ ಸಂಪಾದಿತ ... ಈಗಾಗಲೇ ಮೂರು ಪುಸ್ತಕಗಳು ಅಚ್ಚಾಗಿವೆ. ೧ ಭಾರತೀಯ ಚರಿತ್ರೆ ೨ ಗಾಂಧಿ ಸಂದೇಶ ೩ ಪಸ್ತಾವರಣ ಹುಟ್ಟಿನ ವಿಚಾರಗಳಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು,

ವ್ಯವಸ್ಥಾಪಕರು ಕ. ಸ ಗ್ರಂಥಮಾಲೆ

ಉರ್ದು ಪೇಟೆ- ಬೆಂಗಳೂರ.

**ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!**

### ಅತ್ಯುತ್ತಮ

### ಮಸಿಅರ್ಕಿನ ಬಿಲ್ಲೆಗಳು ಮತ್ತು ಗುಳಿಗೆಗಳು.

೧೦೦ ಬಿಲ್ಲೆಗಳ ಅರ, ೧೪೪ ಗುಳಿಗೆಗಳಿಗೆ ೧ ಗ್ರೋಸ ೫ ಆಣೆ ೪೦ ಔನ್ಸ ಮಸಿ ಪುಡಿಗೆ ೪ ಆಣೆ- ಫೌಂಟನಪೇನ ಮಸಿ ... ಬಾಟ್ಲಿ ಮತ್ತು ಟ. ಪು ಬೇರೆ

ಕರ್ನಾಟಕ ಇಂಕ ಕಂಪನಿ

ಬಾಗಲಕೋಟ.

ಬೇಕು! ಬೇಕು! ಏಜಂಟರು ಬೇಕು!!

ನಂಬರ ೧ ನೇ ನಿರ್ಮಲವಾದ

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳ ಅಗ್ಗವಾಗಿ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳ ... ನೋಡುವದರಲ್ಲಿ ತೈಲವು ಸಿಗುವದು ... ಔನ್ಸ ಬಾಟ್ಲಿ ಅಥವಾ ... ೪-೦-೦ ದರ ... ವಿಶೇಷ ಮಾಹಿತಿ ಪತ್ರ ...

ವಿಳಾಸ:- ಬಿ. ಎ. ಪೈ ಕಂಪನಿ

ಮು ಹೊನ್ನಾವರ

ಜಿಲ್ಲಾ ಉತ್ತರ ಕಾನಡಾ

## ಉತ್ತಮ ಆರ್ಯ ಔಷಧಗಳು.

ಸುವರ್ಣ ರಾಜವಂಗ ತೊಲಿ ೧ ರೂ. ೫

| | | |
|---|---|---|
| ಸುವರ್ಣಮಾಸಿಗ | ತೊಲಿ | ರೂ. |
| ಪ್ರವಾಳ | ” | ರೂ. |
| ಚಂದ್ರಪ್ರಭಾ | ” | ರೂ. |
| ಲಘುಮಾಲಿನಿ ವಸಂತ | ” | |
| ಅಮೃತಸತ್ವ | ” | ಆಣೆ |
| ಸಾಯಿಜ್ ಪಾರ್ಸರ್ | ಔನ್ಸ ೫ | ರೂ. |
| ಬಸ್ಮೈಕ್ ಸಾಯಿಜನ್ | • | ರೂ |
| ಪಾಚಕವಟಿ | ನೂರಕ್ಕೆ | ಆಣೆ |
| ಪ್ಯಾಯವಿರೋಚಕವಟಿ | ನೂರಕ್ಕೆ | ಆಣೆ |
| ಸಿತೋಪಲಾದಿಚೂರ್ಣ | ೧೦ ತೊಲಿ | ರೂ |

ಇದಲ್ಲದೇ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಎಲ್ಲಾ ಔಷಧಗಳು ನಮ್ಮಲ್ಲಿ ಸುಲಭ ದರದಿಂದ ಸಿಗುವವು.

Karnatak Ayurvedic Pharmaceutical Works

Bagalkot Dt Bijapur

### ಆತ್ಮೋದ್ಧಾರವೆಂಬ

ಜೋಸಿ ಮಾಸಪತ್ರಿಕೆ

ಉತ್ತರಕಾನಡಾ ಜಿಲ್ಲೆಯಲ್ಲಿ ಮೊದಲನೆಯ ... ಕ ಸಾಮಾಜಿಕ ಧಾರ್ಮಿಕ ವಿಷಯಗಳಿಂದ ಕೂಡಿದ್ದು “ಸ್ವಾಭಿಮಾನಿ” ಗಳು ವಿಶೇಷತಃ ವಿದ್ಯಾರ್ಥಿಗಳು ಅವಶ್ಯವಾಗಿ ಓದತಕ್ಕದ್ದು.

ವಾರ್ಷಿಕ ವರ್ಗಣಿ ಕ್ಕಿ. ಪಿ. ಸಹಿತ ೨ ರೂಪಾಯಿ ೧ ಆಣೆ ಮಾತ್ರ ... ೪॥ ಆಣೆ.

ವಿಳಾಸ

ವಾಸುದೇವ ಅನಂತ ಹೊನ್ನ

ರಾಷ್ಟ್ರೀಯಶಾಲಾಧ್ಯಾಪಕ

ಶಿಂಸಿ ಉತ್ತರಕಾನಡಾ.

ಈ ಪತ್ರವನ್ನು ಬಾಗಲಕೋಟೆ ಪಂಕಜಟೀಕೆಯಲ್ಲಿ ... ಮುದ್ರಣಮಂದಿರದಲ್ಲಿ ಶ್ರೀನಿವಾಸ ... ವೇಣಿ ... ಮುದ್ರಿಸಿದರು ಮತ್ತು ... ಪ್ರಕಟಿಸಿದರು.

ವಿಪತ್ತಿಯಲ್ಲಿಯ ನಮ್ಮ ಕರ್ತವ್ಯವು.

REGISTFRED No. B 1589

ವಾರ್ಷಿಕ ವರ್ಗಣಿ ರೂ. ೬-೦-೦
ಆರು ತಿಂಗಳಿಗೆ ,, ೩-೦-೦
ಬಿಡಿ ಸಂಚಿಕೆ ೦-೧-೦
ಮಾದರಿ ಸಂಚಿಕೆ ಬೇಕಾದವರು ೦-೧-೦
ತಿಕೀಟು ಕಳಿಸಬೇಕು.

ಶ್ರೀ.

ಕನ್ನಡ

ಜಾಹೀರಾತಿನ ದರ.

ಕನ್ನಡ ... ಒಂದು ಕಾಲಮಿನ ಒಂದು ... ಸಾರೆ ೧ ರೂ. ... ಬಗ್ಗೆ ಸಂಪಾದಕರು ... ಪತ್ರವ್ಯವಹಾರ ಮಾಡಿಕೊಳ್ಳಬೇಕು.

# ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಭಾಷಾಂತರಿಸುವದೇ ಈ ವಾರಪತ್ರಿಕೆಯ ಮುಖ್ಯೋದ್ದೇಶವು

ವರ್ಷ ೧ ಬಾಗಲಕೋಟ ಚೈತ್ರ ವ॥ ೩೦ ಶಕೆ ೧೮೪೪ ಸಂಚಿಕೆ ೨೦
ಗುರುವಾರ ತಾ. ೬ ಎಪ್ರಿಲ ೧೯೨೨

## ಮಹಾತ್ಮರ ವಾಣಿಯು.

### ಹಿಂದುಸ್ತಾನದ ಸ್ತ್ರೀಸಮಾಜಕ್ಕೆ ಮಹಾತ್ಮರು ಮಾಡಿಕೊಂಡ ವಿಜ್ಞಾಪನೆ.

[ ಯಂಗ ಇಂಡಿಯಾ ೮-೧೧-೨೧ ]

ಪ್ರಿಯ ಭಗಿನಿಯರೆ,

ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯವರು ಸಪ್ಟಂಬರ ೩೦ ನೇ ತಾರೀಖಿನೊಳಗೆ ವಿದೇಶಿ ಅರಿವೆಗಳಿಗೆ ಬಹಿಷ್ಕರಿಸುವ ಕಾರ್ಯಕ್ರಮವನ್ನು ಮುಗಿಸಿಯೇ ತೀರಬೇಕೆಂಬ ಮಹತ್ವದ ನಿಶ್ಚಯವನ್ನು ಮಾಡಿರುವರು. ಇದು ಜುಲೈ ತಿಂಗಳ ೩೧ ನೇ ತಾರೀಖಿನ ದಿವಸ ಲೋಕಮಾನ್ಯರ ಸ್ಮರಣಾರ್ಥವಾಗಿ ಸುಡಲ್ಪಟ್ಟ ಪರದೇಶಿ ಅರಿವೆಗಳ ಹೋಳಿಯಿಂದ ಸುಮುಹೂರ್ತ ಮಾಡಲ್ಪಟ್ಟಿರುವದು. ಅಮೌಲ್ಯವಾದ ಸೀರೆಗಳಿಂದಲೂ, ಇಲ್ಲಿಯವರೆಗೆ ಪ್ರೀತಿಸುತ್ತಬಂದ ಇತರ ನಾನಾತರದ ಉಡಿಗೆತೊಡಿಗೆಗಳಿಂದಲೂ ಒಟ್ಟಿಲ್ಪಟ್ಟ ಪರ್ವತಪ್ರಾಯವಾದ ಅರವಿಯ ರಾಶಿಗೆ ಕೊಳ್ಳಿಕೊಡುವ ಸುದೈವವು ನನ್ನದಾಗಿತ್ತು. ಸ್ತ್ರೀಯರು ತಮ್ಮತಮ್ಮ ಬೆಲೆಯುಳ್ಳ ಪರದೇಶಿ ಸೀರೆಗಳನ್ನು ಸುಡಲಿಕ್ಕಾಗಿ ಕೊಟ್ಟದ್ದೇ ಒಳಿತುಮಾಡಿದರೆಂದು ನನಗೆ ಅನಿಸುತ್ತದೆ. ಅವುಗಳನ್ನು ನಾಶಿಸುವದೆಂದರೇ ಅವುಗಳ ಉಪಯೋಗವನ್ನು ಮಾಡಿಕೊಂಡಂತೆ. ಪ್ಲೇಗಿನ ಹುಳಗಳು ಸೇರಿಕೊಂಡಂಥ ಒಡವೆಗಳನ್ನು ಹಾಳುಮಾಡುವದೇ ಎಂತು ಹಿತಕರವೋ ಹಾಗೆಯೇ ಪರದೇಶಿ ಅರಿವೆಗಳನ್ನು ಧ್ವಂಸಿಸುವದೇ ಅವುಗಳ ಸದುಪಯೋಗ ಮಾಡಿಕೊಂಡಂತೆ. ಶರೀರದಲ್ಲಿ ಕೊಳೆಯುತ್ತಿದ್ದ ಭಾಗವನ್ನು ಕಡಿದು ಒಯ್ಯುವದೇ ಜಾಣತನದ ಲಕ್ಷಣವಾಗಿರುವಂತೆ ನಮ್ಮ ರಾಜಕೀಯ ಚಳವಳಿಯಲ್ಲಿ ಇದು ಅವಶ್ಯವಾದದ್ದು. ಹಿಂದುಸ್ತಾನದೊಳಗಿನ ಸ್ತ್ರೀಯರು ತಮ್ಮ ಮಾತೃಭೂಮಿಯ ಸಲುವಾಗಿ ಈ ಹನ್ನೆರಡು ತಿಂಗಳಲ್ಲಿ ಮಾಡಿದ ಕಾರ್ಯವನ್ನು ನೆನೆದರೆ ಆಗಾಧವೆನಿಸುವದು. ದಯೆಯುಳ್ಳ ದೇವತೆಗಳಂತೆ ಸದ್ದಿಲ್ಲದೆ ನೀವು ದುಡಿಯುತ್ತಿರುವಿರಿ. ನೀವು ನಿಮ್ಮ ಚಿತ್ರವಿಚಿತ್ರವಾದ ರತ್ನಾಲಂಕಾರಗಳನ್ನು ಆರ್ಯವರ್ತಿಗೆ ಅರ್ಪಣಮಾಡಿರುವಿರಿ; ನೀವು ಸ್ವರಾಜ್ಯನಿಧಿ ಕೂಡಿಸುವದಕ್ಕೆ ಮನೆಮನೆಗೆ ತಿರುಗಿದಿರಿ; ಮದ್ಯಪಾನವನ್ನು ನಿಷೇಧಿಸುವದರಲ್ಲಿಯೂ ನೀವು ಕೆಲವರು ಸಹಾಯ ಮಾಡಿದಿರಿ. ತಾಸುತಾಸಿಗೆ ವಿವಿಧವಾದ ಚಂದಾಚಂದದ ಪೈಯ್ಯರದ ಉಡುಪುಗಳಿಂದಲೇ ಭೂಷಣವನ್ನು ಹೊಂದುತ್ತ ಬಂದಿದ್ದ ನಿಮ್ಮಲ್ಲಿ ಅನೇಕರು ಅವುಗಳನ್ನೆಲ್ಲ ಅಗ್ನಿನಾರಾಯಣನಿಗೆ ಆಹುತಿಯಾಗಿ ಮಾಡಿ ನಿಮ್ಮ ಪರಿಶುದ್ಧವಾದ ಅಂತರಾತ್ಮದ ನಿರ್ಮಲತೆಯ ದ್ಯೋತಕವೆನೋ ಎಂಬಂತೆ ಭಾರವಾದ ಶುಭ್ರಖಾದಿಯನ್ನೇ ತೊಡಹತ್ತಿರುವಿರಿ. ಇದನ್ನೆಲ್ಲ ನೀವು ಹಿಂದುಸ್ತಾನದ ಸಲುವಾಗಿಯೂ ಖಿಲಾಫತದ ಸಲುವಾಗಿಯೂ ಪಂಜಾಬದ ಸಲುವಾಗಿಯೂ ನೀವು ಮಾಡಿರುವಿರಿ. ನೀವು ಮಾಡಿದುದೆಲ್ಲ ದೋಷರಹಿತವೂ ನಿಷ್ಕಲಂಕವೂ ಆಗಿರುವದು. ನೀವು ಅರ್ಪಿಸಿದ ಆಹುತಿಯು, ಕ್ರೋಧದ್ವೇಷಗಳ ಉದ್ವೇಗವಿಲ್ಲದೆ ನಿರ್ಮಲವಾಗಿರುವದರಿಂದ ಅತೀವ ಶುದ್ಧವಾಗಿರುವದು. ನಿಮ್ಮ ಅಂತಃಸ್ಫೂರ್ತಿಯಿಂದಲೂ ಪ್ರೇಮಾದರದಿಂದಲೂ ಹಿಂದುಸ್ತಾನದಲ್ಲಿ ನೀವು ನಡೆಸಿರುವ ಕಾರ್ಯವನ್ನು ನೋಡಿದರೆ ಸರ್ವಶಕ್ತನಾದ ಪರಮೇಶ್ವರನು ನಮ್ಮ ಪಕ್ಷವನ್ನೇ ವಹಿಸಿರುವನೆಂದು ನಂಬಲಿಕ್ಕೆ ನನಗೆ ಸ್ವಲ್ಪಾದರೂ ಸಂಶಯವೆನಿಸುವದಿಲ್ಲ. ನಾವು ನಮ್ಮ ಅಂತಃಶುದ್ಧಿಗಾಗಿಯೂ ಆತ್ಮೋನ್ನತಿಗಾಗಿಯೂ ಕಾದಾಡುತ್ತಿರುವೆವೆಂಬುವದಕ್ಕೆ, ಲಕ್ಷಾವಧಿ ಆರ್ಯವ ಹೆಣ್ಣುಮಕ್ಕಳು ಈ ಕಾರ್ಯದಲ್ಲಿ ನಮಗೆ ನೆರವಾಗಹತ್ತಿರುವರೆಂಬುವದರ ಹೊರತು ಬೇರೆ ಸಾಕ್ಷಿಗಳೇ ಬೇಡ.

ಇಷ್ಟೆಲ್ಲ ಮಾಡಿದರೂ, ನೀವು ಇನ್ನೂ ಹೆಚ್ಚಿಗೆ ಮಾಡಬೇಕಾಗಿರುವದು. ಟಿಳಕ ಸ್ವರಾಜ್ಯನಿಧಿಯ ಮುಖ್ಯಭಾರವನ್ನು ಗಂಡಸರು ವಹಿಸಿದರು. ಆದರೆ ಸ್ವದೇಶಿಯ ಕಾರ್ಯ

ಕ್ರಮವು ಪೂರ್ಣವಾಗಬೇಕಾದರೆ ಮುಖ್ಯವಾಗಿ ನೀವು ಭಾಗ್ಯ ತೆಗೆದುಕೊಳ್ಳಬೇಕು. ನೀವು ನಿಮ್ಮ ವಿದೇಶೀ [illegible] ಉಡಿಗೆ ತೊಡಿಗೆಗಳನ್ನು ಸರ್ವಸ್ವಿಯಾಗಿ ತ್ಯಜಿಸದಹೊರತು ಈ ಕಾರ್ಯವು ಯಶಸ್ವಿಯಾಗುವದೆಂತು !! ಆ ಅರಿವೆಗಳೇ. [illegible] ನಾ [illegible] ಹೋ ಹವು ನಿಮ್ಮನ್ನು ಅಂಟಿಕೊಂಡಿರುವವರೆಗೆ [illegible] ಸುವದು ಸಾಧ್ಯವಾದದ್ದಲ್ಲ; ಬಹಿಷ್ಕಾರ [illegible] ನ್ನು ಪೂರ್ಣ ತ್ಯಾಗಮಾಡುವದು. ಹಿಂದುಸ್ಥಾನ [illegible] ಹುಟ್ಟಿದಂಥ ಅರಿವೆಯಿಂದಲೇ ನಾವು ತುಚ್ಛರಾಗಿರಬೇಕೇ? ಜೀವರು ಕೊಟ್ಟಂಥ ನಮ್ಮ ಮಕ್ಕಳಿಂದ ನಾವು ತುಚ್ಛರಾಗುವದಿಲ್ಲವೇ? ನೆರೆಮನೆಯವರು ಕುರೂಪಿಯೆಂದು ಹೀಯಾಳಿಸುತ್ತಿದ್ದರೂ ಹೆತ್ತ ತಾಯಿಯು ಅದನ್ನು ಒಗೆಯಬಲ್ಲಳೆ? ಇದರಂತೆಯೇ ದೇಶಾಭಿಮಾನವುಳ್ಳ ಆರ್ಯ ಮಾನಿನಿಯರು ಹಿಂದುಸ್ಥಾನದಲ್ಲಿ ಹುಟ್ಟುವ ಒಡವೆಗಳ ವಿಷಯಕ್ಕೆ ಆದರಭಾವವುಳ್ಳವರಾಗಬೇಕು. ರಾಟಿಯಿಂದಲೇ ನೂತು ಕೈಮಗ್ಗದಮೇಲೆ ತಯಾರಿಸಿದ್ದಕ್ಕೆ ಮಾತ್ರ ದೇಶೀಯವೆನ್ನತಕ್ಕದ್ದು. ಇಂಥ ಸಂಧಿಯಕಾಲದಲ್ಲಿ ನಮಗೆ ಉರುಟು ಖಾದಿಯುಮಾತ್ರ ದೊರೆಯುವದು. ಅದನ್ನೇ ನೀವು ನಿಮ್ಮ ಕೌಶಲ್ಯದಿಂದ ನಿಮಗೆ ರುಚಿಸುವಂತೆ ಮಾಡಿಕೊಳ್ಳಬೇಕು. ಈಪ್ರಕಾರ ಕೆಲವು ದಿಂಗಳನ್ನು ಉರಟು ಖಾದಿಯೊಂದಿಗೆ ಕಳೆದರೆ, ಹಿಂದುಸ್ಥಾನವು ಜಗತ್ತಿಗೆ ಪ್ರಖ್ಯಾತವಾದ ತನ್ನ ಪ್ರಾಚೀನಕಾಲದ ನಿಪುಣತೆಯನ್ನು ಪುನಃ ತೋರಿಸಬಲ್ಲದು. ಆರು ತಿಂಗಳಗಳವರೆಗೆ ಹೀಗೆ ನೀವು ಸ್ವಸುಖ ನುಖವಿರಾದರೆ, ಈಗ್ಗೆ ನಿಮಗೆ ಚಂದಾಗಿ ತೋರುವಂಥ ಒಡುವೆಯೇ ಕಲುಷಿತವಾದದ್ದೆಂದು ಅನಿಸಹತ್ತಿ ನಿಜವಾದ ನಿಪುಣತೆಯ ಬೆಲೆಯು ಕೇವಲ ಆಕಾರಾ ಕೃತಿಯನ್ನು ಅವಲಂಬಿಸಿರುವದಿಲ್ಲವೆಂದು ನಿಮಗೆ ಹೊಳೆಯಹತ್ತುವದು. ಕಲಾಕುಶಲತೆಯಾದರೂ ದ್ವಿವಿಧವಾದದ್ದಿರುವದು. ಒಂದರಿಂದ ಜೀವನು ಪ್ರೋತ್ಸಾಹ ಹೊಂದುತ್ತಿದ್ದರೆ ಮತ್ತೊಂದರಿಂದ ಮುರಿಬಡೆಯಲ್ಪಡುವದು. ನಾವು ಧರಿಸುವ ಪರದೇಶದ ಸೂಕ್ಷ್ಮವಾದ ಅರಿವೆಗಳು ನಮ್ಮ ಲಕ್ಷಾವಧಿ ಬಂಧುಭಗಿನಿಯರ ಪ್ರಾಣಹತ್ಯೆಯನ್ನು ಮಾಡಿರುವವಲ್ಲದೇ ಲಕ್ಷಾವಧಿ ಭಗಿನಿಯರನ್ನು ಮರ್ಯಾದೆಹೀನರನ್ನಾಗಿ ಮಾಡಿರುವವು. ನಿಜವಾದ ಕಲಾಕುಶಲತನವು ಕೆಲಸಮಾಡಿದವರ ಸಂತೋಷವೃತ್ತಿಯ ಮತ್ತು ಅಂತಃಶುದ್ಧಿಯ ಸಾಕ್ಷಿಯಾಗಿರಬೇಕು. ಇಂಥ ಕಲಾಕುಶಲತೆಯು ನಮ್ಮಲ್ಲಿ ಬರಬೇಕಾದರೆ ಶ್ರೀಷ್ಠರಾದವರಂತೂ ಅವಶ್ಯವಾಗಿ ಖಾದಿಯನ್ನೇ ಧರಿಸತಕ್ಕದ್ದು.

ನಮ್ಮ ಸ್ವದೇಶೀ ಕಾರ್ಯಕ್ರಮವು ಯಶಸ್ವಿಯಾಗಬೇಕಾದರೆ ನಾವು ಖಾದಿಯನ್ನು ತೊಡಹತ್ತಿದರೆ ಸಾಲದು. ಆದರೆ ನಮ್ಮಲ್ಲಿ ಪ್ರತಿಯೊಬ್ಬಳು ತನ್ನ ತನ್ನ ವಿಶ್ರಾಂತಿಯ ವೇಳೆಯಲ್ಲಿ ನೂಲುವದು ಅತ್ಯವಶ್ಯವಾಗಿರುವದು. ನಾನು ಹುಡುಗರಿಗೂ ಕೂಡಾ ಇದನ್ನೇ ಸೂಚಿಸುವೆನು. ಅವರಲ್ಲಿ ಸಾವಿರಾರು ಜನರು ದಿನಾಲು ನೂಲುತ್ತಿರುವದನ್ನು ನಾನು ಬಲ್ಲೆನು. ಆದರೆ ನೂಲುವದರ ಮುಖ್ಯ ಭಾರವು ಹಿಂದಿನಂತೆ ನಿಮ್ಮಮೇಲೆಯೇ ಅವಶ್ಯವಾಗಿ ಬೀಳುವದು. ಇನ್ನೂರುವರ್ಷಗಳ ಪೂರ್ವದಲ್ಲಿ ಹಿಂದುಸ್ಥಾನದ ಹೆಂಗಸರು ತಮ್ಮ ದೇಶದ [illegible] ಶಾಲೆಗಳಿಗೆ ಕೂಡಾ ಸಾಕಾಗುವಷ್ಟು ನೂಲುತ್ತಿದ್ದರು. ಅವರು ಬರೆ ಉರುಟಾದ ನೂಲನ್ನು ತೆಗೆಯುತ್ತಿರಲಿಲ್ಲ ಆದರೆ ಅವರು ತೆಗೆಯುತ್ತಿದ್ದ ಸೂಕ್ಷ್ಮವಾದ ನೂಲು ಇವತ್ತಿಗೂ ಅದ್ವಿತೀಯವಾಗಿರುವದು. ನಮ್ಮ ಪೂರ್ವಜರು ತೆಗೆಯುತ್ತಿದ್ದಂಥ ಸೂಕ್ಷ್ಮವಾದ ನೂಲನ್ನು ಯಾವ ಯಂತ್ರದಿಂದಲೂ ಹೊರಡಿಸಲು ಶಕ್ಯವಾಗಿರುವದಿಲ್ಲ. ನಮಗೆ ಸಾಕಷ್ಟು ಖಾದಿಯನ್ನು ನಾವು ಹುಟ್ಟಿಸಬೇಕಾದಲ್ಲಿ, ನೀವು ನೂಲುವ ಸಂಘಗಳನ್ನು ಮಾಡಬೇಕು. ನೂಲುವವರಲ್ಲಿ ಹೋಲಾಟವನ್ನು ಆಗಾಗ್ಗೆ ಜರುಗಿಸಬೇಕು. ಹೀಗೆ ಮಾಡಿ ನಮ್ಮ ಬಾಜಾರಗಳನ್ನು ಕೈನೂಲಿನಿಂದ ತುಂಬಿಬಿಡಬೇಕು. ಇದಕ್ಕಾಗಿ ನಿಮ್ಮಲ್ಲಿ ಕೆಲವರು ನೂಲುವದರಲ್ಲಿಯೂ ಹಿಂಜುವದರಲ್ಲಿಯೂ ಮತ್ತು ರಾಟಿಯನ್ನು ಸರಿಪಡಿಸುವದರಲ್ಲಿಯೂ ಒಳ್ಳೇ ನಿಪುಣತೆಯನ್ನು ಸಂಪಾದಿಸಬೇಕು. ಅಂದರೆ ಇದೊಂದು ವಿಶ್ರಾಂತಿಯಿಲ್ಲದ ಕೆಲಸವಾಗುವದು. ರಾಟಿಯು ಹೊಟ್ಟೆಯ ಉದ್ಯೋಗವೆಂದು ನಿಮ್ಮ [illegible] ಮಧ್ಯಮಸ್ಥಿತಿಯವರ ಆದಾಯವನ್ನು ಇದು ತತ್ಕಾಲಕ್ಕೆ ಹೆಚ್ಚಿಸಬಲ್ಲದು. ಪ್ರತಿಯೊಬ್ಬ ಬಡವನಿಗೆ ಇದು [illegible] ವಾಗಿ, ಹೊಟ್ಟೆಯ ಉದ್ಯೋಗವಾಗಿರುವದು. ಹಿಂದಿನಂತೆ ಪ್ರತಿಯೊಬ್ಬ ವಿಧವೆಯಳಿಗೆ ಪ್ರೀತಿಯ ಸಹಚಾರಿಯಾಗಿರಬೇಕು. ಆದರೆ ನಿಮ್ಮಲ್ಲಿ ಯಾರು ಈ ಚಿನ್ನ [illegible] ನ್ನು ಹಿಡಿಯುತ್ತಿರೋ ಅವರು ಇದೊಂದು ಕರ್ತವ್ಯವು ಅಥವಾ ಧರ್ಮವೆಂದೇ ಭಾವಿಸತಕ್ಕದ್ದು. ಎಲ್ಲ ಶ್ರೀಮಂತ ಸ್ತ್ರೀಯರು ದಿನಾಲು ಸಲ್ಪಾದರೂ ನೂಲಹತ್ತಿದರೆ ನೂಲು ತೀವ್ರವೇ ಅಗ್ಗವಾಗುವದಲ್ಲದೆ ನೀವು ಬಯಸುತ್ತಿರುವ ಸೂಕ್ಷ್ಮತೆಯಾದರೂ ಅದಕ್ಕೆ ಪ್ರಾಪ್ತವಾಗುವದು.

---

## ಪ್ರೇಮವನ್ನು ತೋರಿಸಬೇಕಾದರೆ ಏನುಮಾಡಬೇಕು ?

ಯಾರ ಜಯಜಯಕಾರವನ್ನು ಉದ್ಘೋಷಿಸವರಿಗೆ ಕೋಟ್ಯಾವಧಿ ಹಿಂದೀಜನರು ಮಾಡುತ್ತಿದ್ದರೋ ಅಂಥವರನ್ನು ಸರಕಾರದವರು ಕಾರಾಗೃಹದಲ್ಲಿಟ್ಟಿರುವರು. ನಿಜವಾಗಿ ನೋಡಿದರೆ, ಹೀಗೆ ಮಾಡುವದರಿಂದ ಈ ದೊಡ್ಡ ರಾಷ್ಟ್ರದ ಹಾಗೂ ರಾಷ್ಟ್ರೀಯ ಜಾಗೃತಿಯ ಅಪಮಾನ ಮಾಡಿದಂತೆಯೇ ಸರಿ! ತುರುಂಗದಲ್ಲಿ ಹೋಗುವ ಸಂಧಿಯು ತಮಗೆ ದೊರೆಯಿತೆಂದು, ತಮ್ಮ ಕರ್ತವ್ಯವು ಪೂರ್ಣವಾಯಿತೆಂದು ಮಹಾತ್ಮಾ ಗಾಂಧಿಯವರಿಗೆ ಆನಂದವಾಗಿರಬಹುದು. ಅದರಂತೆಯೇ ಶತ್ರುಗಳ ಪುಣ್ಯದ ಅಂಶವೆಲ್ಲ ಸುಟ್ಟುಬೂದಿಯಾದದರಿಂದ, ಆನಂದೋತ್ಸವವನ್ನು ಮಾಡಬೇಕೆಂದು ಸ್ವರ್ಗದಲ್ಲಿಯ ದೇವತೆಗಳಿಗೆ ಅನಿಸಿರಬಹುದು. ಆದರೆ ಅದರಿಂದ ನಮಗೆಮಾತ್ರ ಶಾಂತತೆಯು ದೊರೆಯುವದು ಶಕ್ಯವಿಲ್ಲ. ಗಾಂಧಿಯವರಿಂದ, ಈ ಶಿಕ್ಷೆಗೆ ಪಾತ್ರವಾಗುವಂಥ ಅನೀತಿಯ ವರ್ತನವು ಸಂಭವಿಸಿರುವದೇ?

ಗಾಂಧಿಯವರನ್ನು ಹಿಡಿಯುವದರಿಂದ ಉಂಟಾದ ನಮ್ಮ ದುಃಖಕ್ಕೆ, ನಾವು ಯಾವ ಉಪಾಯವನ್ನು ಯೋಜಿಸತಕ್ಕದ್ದು? ಪಕ್ವಾನ್ನವನ್ನು ಉಂಡು, ನಮ್ಮ ಶೋಕವನ್ನು ವ್ಯಕ್ತಪಡಿಸುವದು ಹೇಗೆ ಶಕ್ಯವಿಲ್ಲವೋ ಅದರಂತೆಯೇ ಈಗ ಜನಾಂಗಕ್ಕಾದ ಅಪಮಾನದ ಸ್ಮಾರಕವನ್ನು, ಮನಬಂದಂತೆ ನಡೆಯುವದರಿಂದ, ಮಾಡುವದು ಶಕ್ಯವಿಲ್ಲ. ನಮ್ಮಮೇಲೆ ದುಃಖದ ಭಾರವು ಎಷ್ಟೆಷ್ಟು ಹೆಚ್ಚು ಬೀಳುವದೋ ಅಷ್ಟು ನಮ್ಮ ಮನಸನ್ನು ಗಟ್ಟಿಮಾಡಿ, ನಾವು ಸಂಯಮಿಗಳಾಗಲಿಕ್ಕೆಬೇಕು. ರಾಷ್ಟ್ರಕ್ಕಾದ ಈ ಅಪಮಾನವು ಕೊಳೆ ಸುರಿಗೆಗಳಿಂದ, ತೊಳೆದುಹೋಗುವಂತೆ ಇಲ್ಲ. ಆದರೆ ಹಾಗೆ

ಮಾಡಿದರಿಂದ, ನಮ್ಮ [illegible] ಹಾಗೂ ಮಹಾತ್ಮರ ಭಯಂಕರವಾದ ಆ [illegible] ಪಾತಕವು ಮಾತ್ರ ನಮಗೆ ಬರುವದು. ಈ ಸಂಗತಿಯು ಅರಿವು [illegible] ಲ್ಲರಿಗೂ ಆಗಿರುವದು. [illegible] ಎಲ್ಲರೂ [illegible] ಯವಾದ [illegible].

ಆದರೆ [illegible] ಇಷ್ಟರಿಂದಲೇ [illegible] ಗುವಂತಿಲ್ಲ. [illegible] ಸುಲಿಗೆಗ [illegible], ನಾವು [illegible] ಇಷ್ಟೇ [illegible], ಮತ್ತು ಅಷ್ಟ ರಮಟ್ಟಿಗೆ ನಮಗೆ [illegible] ಆದರೆ ಇ[illegible]ರಿಂದಲೇ [illegible] ನಾವು ಯಾವದನ್ನು ಮಾತತಕ್ಕದ್ದಿಲ್ಲವೋ ಅದನ್ನು ಎಂದಿಗೂ ಮಾಡಬಾರದು ಇಷ್ಟೇ ಅಲ್ಲ ಅದರ ಜೊತೆ [illegible] ನಾವು ಮಾಡತಕ್ಕದ್ದನ್ನು ಮಾಡದೇ [illegible] ನಮಗೆ ಗತ್ಯಂತರವಿಲ್ಲ.

ಅಹಮದಾಬಾದ, ಮುಂಬಯಿ, ಕಾಠೇವಾಡ, ಗುಜರಾಥ, ಮತ್ತು ಇತರಸ್ಥಳಗಳಲ್ಲಿರುವ, ಹಿಂದು, ಮುಸಲ್ಮಾನ ಪಾರ್ಶೀ ಕ್ರಿಶ್ಚನ ಮುಂತಾದ ಎಲ್ಲ ಸಮಾಜಗಳಿಗೆ ಗಾಂಧಿಯವರ ಬಗ್ಗೆ [illegible], ಪ್ರೇಮವನ್ನೂ, ಸ್ವರಾಜ್ಯ ಮತ್ತು ಖಿಲಾಫತ ಇವುಗಳ ಸಲುವಾಗಿ ತಮಗೆ ಇದ್ದ ತಳಮಳಿಯನ್ನೂ ತೋರಿಸತಕ್ಕ ಒಂದೇ ಒಂದು ಸಾಧನವೆಂದರೆ ಖಾದಿಪ್ರಸಾರವೇ. ಸ್ವರಾಜ್ಯಪ್ರಾಪ್ತಿಗೆ [illegible] ಯವೆಂದರೆ [illegible] ಹಿಂದುಮುಸಲ್ಮಾನರಿಗೆ ಜಯವಾಗಲಿ ಎಂದು ಘೋಷಣವನ್ನು ಮಾಡಿದ್ದರೆ ಆ [illegible] ಪೂರ್ಣತೆಯನ್ನು ನೀವು ಖಾದಿಯನ್ನು [illegible] ಹಾಗೂ [illegible] ತಿರುಗಿಸಿ, ಸಿದ್ಧಮಾಡಿ ತೋರಿಸಲಿಕ್ಕೇಬೇಕು. " ವಂದೇಮಾತರಂ " ಇದು ನಿಮಗೆ ಪವಿತ್ರಮಂತ್ರವಲ್ಲವೇ? ಹಾಗಿದ್ದರೆ ನಿಮ್ಮ ತಾಯಿಯ ಅಪಮಾನವನ್ನು [illegible] ನೀವು ಖಾದಿಯನ್ನು [illegible] ಅದನ್ನೇ [illegible]. [illegible] ಸರ್ವಶಕ್ತಿ ಮಂತ್ರವಲ್ಲ. [illegible] ಸರ್ವಶಕ್ತಿ [illegible] ಎಂಬ ವಾಕ್ಯದ ಸತ್ಯತೆಯನ್ನು [illegible]. ನೀವು ಪರದೇಶೀವಸ್ತ್ರಗಳ ತ್ಯಾಗಮಾಡಿ, [illegible] ಖಾದಿಯನ್ನು [illegible] ರಘುಮನ [illegible].

[illegible] ಭಾವನೆಯಂತೆ ಫಲವು [illegible]

ರೂಪಾಯಿಯು [illegible] ಸ್ನೊ, ಕೇಳಿ [illegible] ಸರ್ವಸಾಧಾರಣ ವಸ್ತುವನ್ನು [illegible] ನೋಡಿದ್ದೀರಿ? ಬಂಗಾರದ ಅಥವಾ ಮಧುರವಾದ [illegible] ಧ್ವನಿಯು [illegible] ಮಧುರವಾಗಿರುವದೋ ಹೇಗೆ? ಎಂದೂ ಆಗಲಾರದು; ಆದರೆ ಒಂದು ರೂಪಾಯಿಯನ್ನು ನೋಡಿದ್ದಲ್ಲಿ, ನಮಗೆ ಯಾವಯಾವ ವಸ್ತುಗಳನ್ನು ಕೊಳ್ಳಲಿಕ್ಕೆ ಬರುತ್ತವೆ, ಅದರಿಂದ ನಮ್ಮ ಯಾವಯಾವ [illegible] ತಿಗಳು [illegible] ಎಂಬುದರ [illegible] ಇಂಪಾಗಿ ತೋರುತ್ತದೆ. [illegible]

ತುಳಶೀಕಾಷ್ಠದಲ್ಲಿ ಏನು ಶಕ್ತಿಭಾವವು ತುಂಬಿರುವದೋ ಯಾರು ಬಲ್ಲರು! ಇವರಬಗ್ಗೆ ಯಾವನಾದರೊಬ್ಬ ವನಸ್ಪತಿ ಶಾಸ್ತ್ರಜ್ಞನನ್ನು ಅಥವಾ [illegible] ಕೇಳಿದರೆ ಆ ಬಡಪ್ರಾಣಿಯು, ಅವನಿಗೆ ಹೇಗೆ ತಿಳಿಸಿ ಹೇಳ್ಯಾನು? ಹೀಗಿದ್ದರೂ, ತುಳಸೀಮಣಿಯನ್ನು ಕೊರಳೊಳಗೆ ಹಾಕಿಕೊಳ್ಳುವದರಿಂದ ಪ್ರತಿಯೊಬ್ಬ ವೈಷ್ಣವನ ಅಂತಃಕರಣದಲ್ಲಿ ಭಕ್ತಿಭಾವವು ಉಕ್ಕುತ್ತದೆಂಬ ಮಾತು ಮಾತ್ರ ನಿಜವು. ಹ್ಯಾ [illegible] ವಿಶ್ವಾಸವನ್ನೇ ಅವಲಂಬಿಸಿದೆ ಫಲವು.—

[illegible] ಸಾಧನವಾ [illegible] ತರಣ [illegible] ಹಿಂದುಸ್ಥಾನ [illegible] ನದಲ್ಲಿ [illegible] ಇಂದಲೇ [illegible] ಸಾಮರ್ಥ್ಯವಾ ಗಿದ್ದೆ. [illegible] ಭಾವನೆಯ [illegible] ಕಾರದಲ್ಲಿರುವ ದಿದೋ. [illegible] ಯಾವ [illegible] ನಾಗಬೇಕಾ ದರೆ. [illegible] ದಿವಸಗಳವರೆಗೆ ಅದರ [illegible] ಅವಶ್ಯವದೆ. ಆದರೆ [illegible] ದೆ [illegible] ಅವಶ್ಯವ [illegible] ದ್ಧಿಯಾಗುತ್ತದೆ. ಇದೇ ಪ್ರಕಾರವಾಗಿ [illegible] ತಿರುಗಿಸುತ್ತ [illegible] ಬಗ್ಗೆ [illegible] ಬರುವಂತಿದ್ದ [illegible] ಯಿಂದಲೇ ಸ್ವರಾಜ್ಯ [illegible]! ಈ ಮೂರ್ತಿಯಲ್ಲಿ, ನಾವು ಯಾವಯಾವ ಭಾವನೆಯನ್ನು [illegible] ಆ ಭಾವನೆಯು, ರಾಟಿಯನ್ನು ತಿರುಗಿಸುವದರಿಂದ ಫಲಪ್ರದವಾಗುವದು.

[illegible] ನಕ್ಷತ್ರಗಳನ್ನೂ [illegible] ಧರಿಸುವದರಿಂದ, ಪ್ರತಿಯೊಬ್ಬ [illegible] ಖಿಲಾಫತದ ಸ್ಮರಣವೂ, [illegible] ಸ್ಮರಣವೂ [illegible] ಆಗುವದು. ಇದೇ ಪ್ರಕಾರ [illegible] ರಾಟಿಯನ್ನು [illegible] ಹಿಂದೂ ಮುಸಲ್ಮಾನರ [illegible] ನಾವು ತೆಗೆದುಕೊಂಡ ವ್ರತದ ಸ್ಮರಣೆಯಾಗುವಂತಿದೆ. ಹಿಂದುಮುಸಲ್ಮಾನರ ಐಕ್ಯವಿಲ್ಲದೆ ಸ್ವರಾಜ್ಯವು ಎಂದೂ ದೊರೆಯಲಾರದು. ಖಿಲಾಫತಿಗೆ ಎಲ್ಲಕ್ಕಿಂತಲೂ ದೊಡ್ಡ ಸಹಾಯವಾ[illegible] ಈ ಐಕ್ಯತೆ [illegible] ತತ್ವದ ಸ್ಮರಣೆಯ [illegible] ಗುತ್ತದೆ. [illegible] ದೇಶದೊಳಗೆ ಯಾವಾಗಲೂ ಜಾಗೃತವಾಗಿದಲಿಕ್ಕೆ [illegible] ರಾಟಿಯೇ.

ಹಿಂದುಮುಸಲ್ಮಾನರ ಐಕ್ಯ, [illegible] ಶ್ರೀಮಂತ ಹಾಗೂ ಬಡವರ ಸಂಗದ [illegible] ನರ್ತಿಸುವದು [illegible] ಇದೇ [illegible] ಗದ [illegible] ತತ್ವಗಳ [illegible] ಸ್ಯ [illegible] ರಾಟಿಯು [illegible] ವಾಗಿ ವ್ಯಾಪಲಿಕ್ಕೆ [illegible] ಬರುತ್ತಿದೆ. [illegible] ಭಾವನೆಗಳನ್ನು [illegible] ನಲ್ಲಿ ಹಿಡಿಯುವದೇ [illegible]. ರಾಟಿಯನ್ನು ನಡಿಸುವರೂ, ಅದರಿಂದ ದೇಶದಲ್ಲಿ ಪವಿತ್ರವಾದ [illegible] ಬೆಳೆದು, ಅಷ್ಟು [illegible] ಆರ್ಥಿಕ ಸ್ಥಿತಿಯಲ್ಲಿ [illegible] ರುವದು. [illegible] ದರಲ್ಲಿ [illegible] ಭಾಗಿ [illegible] ಕೊಡುತ್ತದೆ. [illegible] ಸಾಮಾನ್ಯ ಜನ [illegible] ಸ್ವರಾಜ್ಯ [illegible] ಸಲ್ಲ [illegible] ಹಾಗೂ ಅದರ [illegible] ಮತ್ತು [illegible] ಮನ [illegible].

ಮೇಲಿನ [illegible] ನೀವೆ [illegible] ಫಲವು [illegible] ಆರ್ಥಿಕ ದೃಷ್ಟಿಯ [illegible] ಬೆಳೆವಣಿಗೆ [illegible] ರಾಟಿಯ ಪ್ರತಿಯೊಂದು ಸುತ್ತಿನಿಂದ ನಮ್ಮ ಜೀವನವನ್ನು [illegible] ನಿಮಗೆ ದೊರೆಯುವಂತಿದೆ.

([illegible]) [ಶಾಲ್ಮಲಕರ]

# ಕನ್ನಡ ನವಜೀವನ.

ಚೈತ್ರ ವದ್ಯ ೩೦ ಗುರುವಾರ ಶಕೆ ೧೮೪೪.


## ವಿಶ್ರಾಂತಿಯಲ್ಲಿಯ ನಮ್ಮ ಕರ್ತವ್ಯವು.

ಮಹಾತ್ಮಾಜಿಯವರು ತಮ್ಮ ಶಾಂತಿಯುಕ್ತವಾದ ಸೈನಿಕರಿಗೆ, ಮುಂದೆ ಹೋಗುವದನ್ನು ತಡೆಯಲಿಕ್ಕೆ ಆಜ್ಞಾಪಿಸಿರುವರು; ಮತ್ತು ಆ ಸಮಯದಲ್ಲಿ ಸುವ್ಯವಸ್ಥಿತ ರೀತಿಯಿಂದ ಕಾರ್ಯವನ್ನು ಮಾಡಿ ತಮ್ಮಲ್ಲಿಯ ಯುದ್ಧ ನೈಪುಣ್ಯವನ್ನು ಹೆಚ್ಚಿಸಲಿಕ್ಕೆ ಇವರಿಗೆ ಹೇಳಿರುವರು. ಬಾಹುಬಲದಿಂದ ಜರಗುವ ಯುದ್ಧದಲ್ಲಿ, ಶತ್ರುಗಳಿಂದ ಕಪ್ತಾನನು ಹಿಡಿಯಲ್ಪಟ್ಟರೆ, ಭಯಂಕರವಾದ ಗಂಡಾಂತರವು ಒದಗಿದಂತೆಯೇ ಸರಿ! ನಮ್ಮಲ್ಲಿಯ ಬಹುಶಃ ಎಲ್ಲ ಜನರು ಮಹಾತ್ಮಾಜಿಯವರ ಶಾಂತಮಯ ಯುದ್ಧದ ಶಾಸ್ತ್ರವನ್ನು ಅರಿಯದವರಾಗಿದ್ದದರಿಂದಲೂ, ತೋಪು ಗುಂಡುಗಳಿಂದಲೂ ಕೋಲಿಸುಲಿಗೆಗಳಿಂದಲೂ ತುಂಬಿದ ಯುದ್ಧಗಳ ತತ್ವಗಳನ್ನೇ ಬಲ್ಲವರಾದ್ದರಿಂದಲೂ, ನಮ್ಮ ಪ್ರೀತಿಯ ಮುಖಂಡನನ್ನು ಹಿಡಿದು ತುರಂಗಕ್ಕೆ ಅಟ್ಟಿರುವದರಿಂದ ನಮಗೆ ಬಹಳೇ ಕಷ್ಟವಾಗಿರುವದಲ್ಲದೆ ನಾವು ಅದರಿಂದ ನಮ್ಮ ಚಳವಳಿಗೆ ಭಯಂಕರವಾದ ಆಪತ್ತೇ ಉಂಟಾಗಿರುವದೆಂದು ತಿಳಿದಿದ್ದೇವೆ.

ಆದರೆ ನಿಜವಾಗಿ ವಿಚಾರಮಾಡಿದರೆ ಪಾಶವೀಶಕ್ತಿಯಿಂದ ಕೂಡಿದ ಯುದ್ಧದಲ್ಲಿ ಯಾವ ಪರಿಣಾಮವು ವಿಪರೀತವೆಂದು ತಿಳಿಯಲ್ಪಡುವದೋ, ಅದೇ ಪರಿಣಾಮದ ಅರ್ಥವು ಶಾಂತಿಮಯ ಯುದ್ಧದಲ್ಲಿ ಅದರಿಂದ ತೀರ ಭಿನ್ನವಾಗಿರುವದು. ಶಾಂತಿಮಯ ಯುದ್ಧದ ತತ್ವಗಳೂ, ಬಾಹುಬಲದ ಯುದ್ಧದ ತತ್ವಗಳೂ, ಮುಖ್ಯವಾದ ವಿಷಯಗಳಲ್ಲಿ ತೀರ ಭಿನ್ನವಾಗಿರುವವೆಂಬದು ಸ್ಪಷ್ಟವದೆ. ಆದ್ದರಿಂದ, ಸರಕಾರದವರು ನಮಗೆ ಹತ್ತರಂಥ ನಿಯಮಗಳಿಂದ ನಡೆಯುತ್ತಿದ್ದು, ಅವರು ಮಾಡಿದ ಕೃತಿಯಿಂದ ನಮಗೆ ದುಃಖ ಅಥವಾ ಅಡ್ಡಿಯು ಆಗದೆ--ನೈತಿಕ ದೃಷ್ಟಿಯಿಂದ ಹೇಳಬೇಕಾದರೆ; ಅದರ ವಿರುದ್ಧವಾಗಿ, ನಮ್ಮಲ್ಲಿ ಪ್ರೀತಿಯಿಂದ ಸ್ವಾರ್ಥತ್ಯಾಗಮಾಡುವದಕ್ಕೂ, ಕಷ್ಟಗಳನ್ನು ಸಹಿಸುವದಕ್ಕೂ ಹೆಚ್ಚು ಯೋಗ್ಯತೆಯು ಬಂದು ಅದರಿಂದ ನಮ್ಮ ನೈತಿಕ ಶಕ್ತಿಯು ಬೆಳೆಯಲಿಕ್ಕೆ ಹೆಚ್ಚು ಸಹಾಯವಾಗತಕ್ಕದ್ದು. ಮದ್ದುಗುಂಡುಗಳುಳ್ಳ ದಾಳಿಯಲ್ಲಿ ಸೇನಾಪತಿಯು ಮಡಿದರೆ, ಸೈನ್ಯಕ್ಕೆ ಅಸಹ್ಯವಾದ ಆಪತ್ತು ಒದಗುವದು. ಆದರೆ ನಮ್ಮ ಶಾಂತಮಯ ಯುದ್ಧಗಳಲ್ಲಿ ಇದರ ವಿರುದ್ಧವಾಗಿ ಆಗತಕ್ಕದ್ದು. ಕಷ್ಟಬಡುವದಕ್ಕೆ ಸಿದ್ಧರೆ ಎಂಬ ನಮ್ಮ ಮುದ್ದನ್ನು ಹೆಚ್ಚು ವಿಸ್ತೃತವಾಗಿ ಬೆಳೆಸಲಿಕ್ಕೂ, ದೃಢೀಕರಿಸಲಿಕ್ಕೂ ಇದರಿಂದ ಸಹಾಯವಾಗುತ್ತದೆ; ಮತ್ತು ನಮ್ಮ ಸಾದಾಕವಾಯತವಾದ ಸ್ವಾವಲಂಬನವು ನಮ್ಮಲ್ಲಿ ಹುಟ್ಟುತ್ತದೆ; ಹಾಗು ಶಾಂತತೆಯ ಮೂಲ ಆಧಾರವಾದ ಪ್ರೇಮಭಾವವು ಬೆಳೆಯುತ್ತದೆ. ಎಲ್ಲಕ್ಕೂ ಹೆಚ್ಚಿನದೆಂದರೆ, ತುರಂಗದಲ್ಲಿ ಸಪ್ಪಟ್ಟ ಆ ಸಾಧುವಿನ ನಿರ್ಬಂಧಿಸಲಶಕ್ಯವಾದ ಆತ್ಮವು ತನ್ನ ಗೋಡೆಗಳಮೇಲೆ ಏರಿ, ನಮಗೆ ಸಹಾಯ ಮಾಡಲಿಕ್ಕೂ, ದಾರಿ ತೋರಿಸಲಿಕ್ಕೂ ಸಿದ್ಧನಾಗಿ ನಮ್ಮ ಸಂಗಡವೇ ಇರುವದು. ಆದ್ದರಿಂದ ನಮಗೆ ದೊರೆತಿರುವ ಸಮಯವನ್ನು, ನಮಗೆ ಪೂರ್ಣ ಹಿತವಾಗುವಂತೆ ಶೀಘ್ರವಾಗಿ ಉಪಯೋಗಿಸಿಕೊಳ್ಳಲಿಕ್ಕೆಬೇಕು.

ಕಾಂಗ್ರೆಸದ ಕೆಲಸ ಮಾಡುವವರ ಸದ್ಯದ ಕರ್ತವ್ಯವೆಂದರೆ ಕೆಳಗೆ ಬರೆದಂತೆಯೇ.

(೧) ದೇಶದ ತುಂಬೆಲ್ಲ ಶಾಂತಮಯ ಸಂಸ್ಥೆಗಳ ಏರ್ಪಾಡುಮಾಡಿ ಅದನ್ನು ಶೀಘ್ರವಾಗಿ ಹೆಚ್ಚು ಸಭಾಸದರನ್ನು ಸೇರಿಸಿಕೊಳ್ಳುವದು.

(೨) ಕಾಂಗ್ರೆಸದ ಎಲ್ಲ ಚಳವಳಿಗಳಿಗೆ ಬೇಕಾಗುವ ದ್ರವ್ಯವನ್ನು ಅಂದರೆ ಟಿಳಕ ಸ್ವರಾಜ್ಯ ನಿಧಿಯನ್ನು ಕೂಡಿಸುವದು.

(೩) ಎಲ್ಲಕ್ಕೂ ಹೆಚ್ಚಿನದೆಂದರೆ ಖಾದಿಯ ಉಪಯೋಗವನ್ನು ಸಾರ್ವತ್ರಿಕವಾಗಿ ಮಾಡುವದು.

(೪) ಬಾರ್ಡೋಲಿ ಮತ್ತು ದಿಲ್ಲಿಯಲ್ಲಿ ಸಾಮುದಾಯಿಕ ಕಾಯದೆಭಂಗವು ಮುಂದೆ ಹಾಕಲ್ಪಟ್ಟಿತು, ಮತ್ತು ವೈಯಕ್ತಿಕ ಕಾಯದೆಭಂಗವು, ರಾಜಕಾರಣದಿಂದ ಇಲ್ಲದಿದ್ದರೂ, ಮಹಾತ್ಮರ ಬಲವತ್ತರವಾದ ಉಪದೇಶದಿಂದ ಬಹುಶಃ ಮುಂದೆ ಹಾಕಲ್ಪಟ್ಟಿರುವದು. ನಮ್ಮಲ್ಲಿ ಸುಸಂಘಟಿತ ಶಕ್ತಿಯ ಅಭಾವವೂ, ಶಿಸ್ತಿನ ಅಭಾವವೂ ಇರುವದೇ ಇವುಗಳನ್ನು ಮುಂದೆಹಾಕಲಿಕ್ಕೆ ಕಾರಣವು. ದ್ವಿವಿಧರೂಪವಾದ ಈ ಕಾಯದೆಭಂಗವನ್ನು ಉಪಯೋಗಿಸುವ ಅವಶ್ಯಕತೆಯು ಬೀಳುವದಾಗಲಿ, ಬೀಳದಿರುವದಾಗಲಿ ಭವಿಷ್ಯತ್ಕಾಲದಮೇಲೆ ಅವಲಂಬಿಸಿರುವದು. ಯಾಕಂದರೆ ನಮ್ಮ ಗುಪ್ತಸಿದ್ಧ ಮುಂದಾಳುಗಳಾದ ಮಹಾತ್ಮರ ಮತದಿಂದ ಖಾದಿಯ ಮತ್ತು ಶಾಂತತೆಯ ಚಳವಳಿಯನ್ನು, ಸ್ವಲ್ಪಕೂಡ ನಿರುತ್ಸಾಹವಿಲ್ಲದೆ ಮುಂದೆ ಸಾಗಿಸುವದರಿಂದಲೇ, ನಮಗೆ ಜಯವು—ಸ್ವರಾಜ್ಯದ ಧ್ಯೇಯವು— ದೊರಕುವದು. ಆದರೆ ನಮಗೆ ಕಾಯದೆಭಂಗವನ್ನು ಕೈಕೊಳ್ಳುವ ಅವಶ್ಯಕತೆಯುಂಟಾದಲ್ಲಿ, ನಾವು ಈಗಲೇ ಶಾಂತತೆಯ ಶಿಸ್ತಿನ, ಹಾಗೂ ಸಂಘಟಿತತನದ ಅವಶ್ಯವಾದ ತಳಹದಿಯನ್ನು ಹಾಕದಹೊರ್ತು, ನಮಗೆ ಅದನ್ನು ಕೈಕೊಳ್ಳಲಿಕ್ಕೆ ಬರಲಾರದೆಂಬ ಮಾತು ಸ್ಪಷ್ಟವದೆ. ನಾವು ಮುಂದೆ ಹೋಗುವದಕ್ಕಿಂತ ಮೊದಲು, ನಮ್ಮ ಸಂಘಶಕ್ತಿಯನ್ನು ಒಟ್ಟುಗೂಡಿಸಬೇಕೆಂಬ ಮಹಾತ್ಮರ ಉಪದೇಶದಂತೆ ನಡೆಸುತ್ತಿರುವವರ ಮಹತ್ವವನ್ನು ಸಾಧಾರಣ ಜನರು ತಿಳಕೊಂಡಿರುವರೆಂಬದು ಪ್ರಶಂಸನೀಯವಾದ ಸಂಗತಿಯು. ಆದ್ದರಿಂದ ಮುಖಂಡರೂ, ಕಾಂಗ್ರೆಸದ ಕಾರ್ಯನಿರ್ವಾಹಕರೂ ಈ ಕೆಲಸಕ್ಕೆ ಹತ್ತಿದರೆ, ಕಾಂಗ್ರೆಸದ ಕೆಲಸದ ಸಲುವಾಗಿ ಮಹಾತ್ಮರು ತುರಂಗಕ್ಕೆ ಹೋಗುವಕಾಲಕ್ಕೆ ಪ್ರಕಟಿಸಿದ ಇಚ್ಛೆಯನ್ನು ಪೂರೈಸಲಿಕ್ಕೆ ಜನರ ಕಡೆಯಿಂದ ಸಹಾಯವು ದೊರೆಯಲಾರದೆಂಬ ಭೀತಿಯು ಇಲ್ಲವೆಂದು ಹೇಳಬಹುದು.

ಪ್ರತಿಯೊಂದು ಭಾಗದಲ್ಲಿ ಸಭಾಸದರನ್ನು ಮಾಡುವ ಕೆಲಸವು ನಡೆಯತಕ್ಕದ್ದು; ಮತ್ತು ಆ ಸಭಾಸದರು ತಮ್ಮ ಸಂಖ್ಯೆ ಗುಣಗಳಿಂದ ಕಾಂಗ್ರೆಸದವರು ಹಾಕಿಕೊಟ್ಟ ಮಾರ್ಗದಿಂದಲೇ ಸ್ವಲ್ಪಕೂಡ ತಪ್ಪದೆ, ಎಲ್ಲ ಚಳವಳಿಗಳನ್ನು ಯೋಗ್ಯರೀತಿಯಿಂದ ನಡೆಸಲಿಕ್ಕೆ ಸಮರ್ಥರಾಗುವರು; ಮತ್ತು ಯಾವದಾದರೊಂದು ರೂಪದ ಅತ್ಯಾಚಾರವನ್ನು ಅಪ್ರಶಸ್ತತನವನ್ನು ಬಂದುಮಾಡಲಿಕ್ಕೆ ಸಮರ್ಥರಾಗುವರು.

ಕಾಂಗ್ರೆಸದಲ್ಲಿ ಪಾಸಾದ ಠರಾವಿನಂತೆ ಸ್ವಯಂಸೇವಕರು ತೆಗೆದುಕೊಳ್ಳತಕ್ಕ ಶಪಥಗಳನ್ನು ಸಂಪೂರ್ಣವಾಗಿ ಆದರಃ ಪಾಲಿಸಲಿಕ್ಕೆ ಸಿದ್ಧರಾದಂಥ, ವಿಶೇಷವಾಗಿಯೂ ಚನ್ನಾಗಿಯೂ ಶಿಕ್ಷಿಸಲ್ಪಟ್ಟಂಥ ಸ್ವಯಂಸೇವಕರ ಸಂಘವನ್ನು ಪ್ರತಿಯೊಂದು ಭಾಗದಲ್ಲಿ ಸ್ಥಾಪಿಸಲಿಕ್ಕೆಬೇಕು.

ಸಭಾಸದರನ್ನು ಮಾಡಿಕೊಳ್ಳುವಾಗ ಕಾಂಗ್ರೆಸದ ಧ್ಯೇಯಕ್ಕೆ ಒಪ್ಪಿಗೆಯನ್ನು ಕೊಟ್ಟವನು ಸಭಾಸದನಾಗಲಿಕ್ಕೆ ಅರ್ಹನಿರುವನೆಂಬದನ್ನೂ, ಕಾಯದೇಭಂಗವಾಗಲಿ, ಅಸಹಕಾರವಾಗಲಿ, ಧ್ಯೇಯದ ಅವಶ್ಯವಾದ ಭಾಗವಲ್ಲೆಂಬದನ್ನೂ, ಸ್ವರಾಜ್ಯವನ್ನು ಎಲ್ಲ ನ್ಯಾಯವಾದ ಮತ್ತು ಶಾಂತರೀತಿಯಿಂದ ಗಳಿಸುವದೇ ರಾಷ್ಟ್ರೀಯ ಸಭೆಯ ಧ್ಯೇಯವೆಂಬದನ್ನೂ ಚನ್ನಾಗಿ ಲಕ್ಷದಲ್ಲಿಡತಕ್ಕದ್ದು.

ಈ ಸಾರೆ ಸಭಾಸದರನ್ನು ಮಾಡಿಕೊಳ್ಳುವ ಕೆಲಸವು, ರಾಷ್ಟ್ರೀಯ ಸಭೆಯ ಸಾಮಾನ್ಯ ಚಳವಳಿಯನ್ನು ಸಾಗಿಸುವದಕ್ಕೆಮಾತ್ರವಲ್ಲ; ಆದರೆ ಮಹಾತ್ಮರನ್ನು ಹಿಡಿದು ಕಾರಾಗೃಹಕ್ಕೆ ಅಟ್ಟುವದರಿಂದಲೂ, ಗಟ್ಟಿಗತನದ ಬೆದರಿಕೆ ಹಾಕುವದರಿಂದಲೂ, ಸರಕಾರವು ಕೊಟ್ಟ ಆಹ್ವಾನಕ್ಕೆ ಹೋದಸಾರೆಗಿಂತ ಹೆಚ್ಚು ಸಭಾಸದರನ್ನುಮಾಡಿ ರಾಷ್ಟ್ರವು ಸರಿಯಾದ ಉತ್ತರವನ್ನು ಕೊಡಬೇಕಾಗಿದೆ.

ರಾಷ್ಟ್ರೀಯ ಸಭೆಯ ಕಾರ್ಯಕ್ರಮವನ್ನು ಯಶಸ್ವಿರೀತಿಯಿಂದ ಸಾಗಿಸುವದರಸಲುವಾಗಿ, ಟಿಳಕ ಸ್ವರಾಜ್ಯನಿಧಿಯನ್ನು ಕೂಡಿಸುವ ಕೆಲಸವನ್ನು ಜೋರಿನಿಂದ ಮಾಡತಕ್ಕದ್ದು. ಕರವನ್ನು ಕೊಡಲಿಕ್ಕೆ ಸಿದ್ಧನಾಗದ ಹೊರತು, ರಾಷ್ಟ್ರವು ತನ್ನಮುಂದೆ ಇಟ್ಟುಕೊಂಡ ಉಚ್ಚವಾದ ಧ್ಯೇಯವನ್ನು ಎಂದೂ ಸಂಪಾದಿಸಲಾರದು. ಅಖಿಲ ಹಿಂದುಸ್ತಾನದ ರಾಷ್ಟ್ರೀಯ ಮಂಡಲದಲ್ಲಿಯಾಗಲಿ, ಕಾರ್ಯಕಾರೀ ಮಂಡಲದಲ್ಲಿಯೂ ಬೇರೆಬೇರೆ ಪಾಸಾದ ಠರಾವುಗಳನ್ನು ನೋಡಲಾಗಿ, ಈ ನಿಧಿಯ ಉಪಯೋಗವು ಸ್ಥಾನಿಕ ಕಾರ್ಯಗಳಿಗೆ ಎಷ್ಟಾಗುವದೆಂಬದೂ, ಮಧ್ಯವರ್ತಿನಿಧಿಯ ಉಪಯೋಗವು ಸ್ಥಾನಿಕ ನಿಧಿಯ ಸಹಾಯದ ಬಗ್ಗೆ ಹೇಗೆ ಆಗುವದೆಂಬದೂ ಸ್ಪಷ್ಟವಾಗಿ ತಿಳಿಯಬರುವದು.

ಪ್ರಾಂತಗಳಿಗೆ ಸ್ವತಂತ್ರತೆಯು ಇರಬೇಕೆಂಬ ತತ್ವಕ್ಕೆ ಉತ್ತೇಜನವನ್ನು ಕೊಡುವ ಬುದ್ಧಿಯಿಂದಲೂ, ಪ್ರತಿಯೊಂದು ಪ್ರಾಂತವು ತನ್ನಷ್ಟಕ್ಕೆ ತಾನೇ ಎಲ್ಲ ಕಾರ್ಯಗಳನ್ನು ನಿರ್ವಹಿಸಲು ಸಮರ್ಥವಾಗಬೇಕೆಂಬ ಹೇತುವಿನಿಂದಲೂ, ಕಾರ್ಯಕಾರೀ ಮಂಡಲದವರು ಪ್ರಾಂತಿಕ ನಿಧಿಯಿಂದ ನೂರರಲ್ಲಿ ಐದು ರೂಪಾಯಿಗಳನ್ನುಮಾತ್ರ ತೆಗೆದುಕೊಳ್ಳುವದನ್ನು ನಿಶ್ಚಯಿಸಿ, ಹೋದಸಾರೆಯಂತೆ ನೂರಕ್ಕೆ ಇಪ್ಪತ್ತೈದರಂತೆ ತೆಗೆದುಕೊಳ್ಳಬಾರದೆಂದು ನಿರ್ಧರಿಸಿದ್ದಾರೆ. ಟಿಳಕ ಸ್ವರಾಜ್ಯನಿಧಿಯನ್ನು ಕೂಡಿಸುವ ಕೆಲಸವು ಇಡೀ ವರ್ಷ ನಡೆಯುವದರಿಂದ, ಕಾರ್ಯಕಾರೀ ಮಂಡಲದವರು, ಮಹಾತ್ಮರು ನಮ್ಮಿಂದ ಅಗಲಿ ಇರುವವರೆಗೆ, ಪ್ರತಿ ತಿಂಗಳ ೧೮ನೇ ತಾರೀಖು ಸ್ವಾರ್ಥತ್ಯಾಗದ ಹಾಗೂ ಪ್ರಾರ್ಥನೆಯ ದಿವಸವೆಂದು ತಿಳಿಯಲ್ಪಡಬೇಕೆಂದೂ, ಪ್ರತಿಯೊಬ್ಬನು ಆ ದಿವಸದ ತನ್ನ ಉತ್ಪನ್ನವನ್ನು ಟಿಳಕ ಸ್ವರಾಜ್ಯ ನಿಧಿಗೆ ದಾನ ಮಾಡಬೇಕೆಂದೂ ನಿರ್ಣಯಿಸಿದ್ದಾರೆ.

ಖಾದೀ ಪ್ರಸಾರದ ಕೆಲಸವನ್ನು ನಾವು ಚನ್ನಾಗಿ ಮಾಡಿದ್ದಿಲ್ಲ, ನಮ್ಮ ಶ್ರೇಷ್ಠ ಮುಖಂಡನ ಆಕಾಂಕ್ಷೆಗಳನ್ನು ಪೂರೈಸುವದಕ್ಕೆ ನಮ್ಮಿಂದ ಆಗಿಲ್ಲೆಂದು ನಾವು ಒಪ್ಪಲಿಕ್ಕೆಬೇಕು. ಅವರು ನಮ್ಮನ್ನು ಬಿಟ್ಟು ಹೋಗುವಾಗ ಕೂಡ ಅವರ ಬಾಯಿಯಿಂದ ಖಾದೀ ಎಂಬ ಶಬ್ದವೇ ಹೊರಟಿತು. ರಾಷ್ಟ್ರಕಾರ್ಯಗಳ ಎಲ್ಲ ಭಾರವನ್ನು ನಮ್ಮ ಮೇಲೆ ಹೊರಿಸಿ, ಆನಂದದಿಂದ ಕಾರಾಗೃಹಕ್ಕೆ ತೆರಳುವಾಗ, ರಾಟಿಯಮೇಲಿನ ಅವನ ವಿಶ್ವಾಸವು—ಅಸ್ಪೃಶ್ಯತೆ, ಸೋಮಾರಿತನ, ರಾಷ್ಟ್ರಕಾರ್ಯಗಳ ಕಡೆಗೆ ದುರ್ಲಕ್ಷತನವೆಂಬ, ನಮ್ಮ ಪಾಪಗಳನ್ನೆಲ್ಲ ತೆಗೆದುಹಾಕುವಂಥ ಶಾಂತತೆಯ ಅಮೋಘವಾದ ಅಸ್ತ್ರವು ರಾಟಿಯೇ ಪರತು ನಮ್ಮ ಏಳಿಗೆಯೂ, ಶಾಂತಿಯೂ ಐಕ್ಯವೂ, ಸ್ವಾತಂತ್ರ್ಯವೂ ರಾಟಿಯಿಂದಲೇ ದೊರೆಯುವವೆಂಬ ಅವನ ವಿಶ್ವಾಸವು—ಬಹಳೇ ದೃಢವಾಗಿತ್ತು. ನಾವು ಅವನ ವಿಶ್ವಾಸಕ್ಕೆ ಪಾತ್ರರಾಗೋಣ; ರಾಷ್ಟ್ರದಲ್ಲಿ ವಿಶ್ವಾಸವುಳ್ಳ. ಹಾಗು ನಮ್ಮ ಮಾರ್ಗದರ್ಶಿಯಾದ ಮಾತ್ರ ಯಾವನ ಆತ್ಮವು ಈಗಾದರೂ ನಮಗೆ ಮಾರ್ಗದರ್ಶಿಯಾಗಿರುವದೋ ಅಂಥ ಮಹಾತ್ಮನಮೇಲೆ ಪ್ರೀತಿಯುಳ್ಳ ಪ್ರತಿಯೊಬ್ಬ ಸ್ತ್ರೀ ಪುರುಷನು, ನಿರಪರಾಧಿಯಾಗಲಿಕ್ಕೂ ಸ್ವತಂತ್ರವಾಗಲಿಕ್ಕೂ ರಾಷ್ಟ್ರವು ಮಾಡಿದ ನಿಶ್ಚಯದ ಕುರುಹೆಂದು "ಖಾದಿಯ" ಮೇಲೆ ವಿಶ್ವಾಸವನ್ನಿಡತಕ್ಕದ್ದು.

(ಯಂಗ ಇಂಡಿಯಾ) (ಸಿ. ರಾಜಗೋಪಾಲಾಚಾರ್ಯರು)

× × × ×

## ಟಿಪ್ಪಣಿಗಳು.

### ಮಹಾತ್ಮರ ಧರ್ಮಪತ್ನಿಯರಾದ ಕಸ್ತೂರಿಬಾಯಿಯವರ ಹಿಂದೀ ಬಡಜನರ ಮೇಲಿನ ಪ್ರೇಮ.

ನನ್ನ ಈ ಸಂದೇಶದ ವಾಚಕರು ಶ್ರೀಮಂತರಿರಬಹುದು. ಆದರೂ ನಿತ್ಯದಲ್ಲಿಯೂ ಉಪವಾಸದಿಂದ ಬಳಲುತ್ತಿರುವವರ ಸಂಖ್ಯೆಯೇ, ನಮ್ಮ ದೇಶದಲ್ಲಿ ಹೆಚ್ಚಾಗಿರುವದೆಂಬದನ್ನು ನಿಮ್ಮ ನೆನಪಿಗೆ ತಂದುಕೊಡಲೇನು ? ಇದನ್ನು ಸ್ವತಃ ಮನಗಾಣಬೇಕಾದಲ್ಲಿ ಹಳ್ಳಿಗಳಿಗೆ ಹೋಗಿ ನೋಡಿರಿ. ಮುಂಬಯಿ ಅಹಮದಾಬಾದ ಮೊದಲಾದ ಧನಾಢ್ಯ ಸ್ಥಳಗಳಲ್ಲಿ ಕೂಡಾ ನಮ್ಮ ಎಷ್ಟೋ ಬಾಂಧವರ ವಸವಾಸವು ದುಃಸಹವಾದದ್ದಾಗಿರುವದು.

ಅವರಿಗೆ ಕಿಂಚಿತ್ತಾದರೂ ಸಹಾಯಮಾಡದೇ ಇಂಥ ಪರಿಸ್ಥಿತಿಯನ್ನು ಹೀಗೆಯೇ ಸಾಗಗೊಟ್ಟಲ್ಲಿ, ಸಮಾಧಾನದಿಂದ ಜೀವನದ ಸಂಸಾರವನ್ನು ಈಗ ಸಾಗಿಸುತ್ತಿರುವವರಿಗೂ ಮುಂದೆ ಸ್ವಲ್ಪಕಾಲದಲ್ಲಿಯೇ ಜೀವದಿಂದ ಉಳಿಯುವದು ಸಹ ಕಷ್ಟಸಾಧ್ಯವಾಗುವದು. ಈ ಪರಿಯಾಗಿ ಅನಾದರಕ್ಕೆ ಗುರಿಯಾದ ಬಡಜನರಾದರೂ ತಮ್ಮ ದುಃಖಮಯವಾದ ಜೀವಿತವನ್ನು ಎಲ್ಲಿಯವರೆಗೆ ಎಳೆಯಬಲ್ಲರು! ಈ ಪರಿ ಗೋಳಾಟವನ್ನು ರಾಷ್ಟ್ರೀಯಂದ ತಾಳಿಕೊಳ್ಳುತ್ತಿರುವದು ಹಿಂದುಸ್ತಾನದಲ್ಲಿಯೇ ಮಾತ್ರ ದೃಷ್ಟಿಗೆ ಬೀಳುವದು, ಕಂಡಿರಾ! ಇವು ಈ ಆರ್ತಸ್ವರಕ್ಕೆ ಈಗಿನಿಂದಲೇ ನಾವು ಕಿವಿಗೊಡದಿದ್ದರೆ ನಮ್ಮ ದೇಶದ ದೈನ್ಯಾವಸ್ಥೆಯಾದಂತಾಯಿತು. ಅದ್ದರಿಂದ ನಮ್ಮ ಆಯುಷ್ಯಕ್ರಮವನ್ನೇ ನಾವು ಹೊಸದಾಗಿ ಸಂಘಟಿಸಬೇಕು. ಶ್ರೀಮಂತರಾದವರು ದುರಭಿಮಾನವನ್ನು ಬಿಟ್ಟು ಬಡವರೊಳಗೆ ಬೆರೆತು ಅವರು ಬದುಕುತ್ತಿರುವ ಭವಣೆಯನ್ನು ಚನ್ನಾಗಿ ಅರಿತುಕೊಳ್ಳಬೇಕು.

ಜನರು ಸೌಖ್ಯದಿಂದಿದ್ದರೇ ನಾವು ಸುರಕ್ಷಿತರಾಗಿರುವದೆಂಬದು ಒಡೆದು ತೋರುವ ಮಾತಾಗಿದ್ದರೂ ಅದನ್ನು ಸರಕಾರವು ಲಕ್ಷಿಸಲೊಲ್ಲದು; ಸರಕಾರದಂತೆ ಎಚ್ಚರದಪ್ಪಿದಂತೆ ತೋರುತ್ತದೆ. ಸರಕಾರಕ್ಕೆ ಧನಿಕರಾದವರು ಸಹ ಬಡಜನರನ್ನು ಅನಾದರಿಸುತ್ತ ಹೋದರೆ ಗೋವಿಂದ! ಈ ದೇಶ

ಹಾಡೇ [illegible] ವರೇ [illegible] ಒದ್ದಾಡುತ್ತಿದ್ದ [illegible] ನೋಡಿ [illegible] ವಿನಗಾ [illegible] ಸರಕಾರ [illegible] ತ್ರ್ಯದ [illegible] ರಾಷ್ಟ್ರ [illegible] ರೇನೆಂ [illegible] ರರೂ ಒಪ್ಪಲಿಕ್ಕಿಲ್ಲ [illegible] ಶದ ಅರಿವೇ [illegible] ತ್ತಿಯೇ ಆಗಿದೆ [illegible]

**ನನ್ನ ಪ್ರಿಯ ಭಗಿನಿಯರೇ,**

[illegible] ಅಪವಾದ ಪಾತಕವಾಗಿರುವೆನೆಂಬುದನ್ನು ನೀವು [illegible] ನಿಮಗೆ ಜನಗಾದ [illegible] ನೀವೇ ಜನನಿ [illegible] ತಗೆಯ [illegible] ನ್ನು ಪಾಲಿಸುವವರಲ್ಲ [illegible] ಯರೇ. ಹಿಂದುಸ್ಥಾನವು ಸ್ವರಾಜ್ಯವನ್ನು [illegible] ಯತ್ನಿಸುತ್ತಿದ್ದಾಗ [illegible] ಹೆಂಗಳೆಯರ [illegible] ನಿಮ್ಮ ಮಕ್ಕಳು [illegible] ಎಚ್ಚರಗೊಳ್ಳಿರಿ

**ಕರ್ನಾಟಕ ಸಾಹಿತ್ಯ ಸಮ್ಮೇಲನವು**

ಈ ಸಮ್ಮೇಲನವು [illegible] ಗಳಾಗಿಹೋದವು [illegible] ಯಲ್ಲಿ [illegible] ಇದರ [illegible] ಹೊರ [illegible] ಜನರೂ ಭಾಗ ತೆಗೆದುಕೊಂಡ [illegible] ಮೈಸೂರು [illegible] ಗಂತೂ [illegible] ಈಗಿನ ಹೊಸವ [illegible] ನ್ಯ ಪ್ರಜೆಗಳ [illegible] ರಾಜ್ಯಸೂತ್ರಗಳಿರದೆನ್ನುವ ಎಂದು [illegible] ಕಾರ [illegible] ರವು [illegible] ದೇಶದಲ್ಲಿ [illegible] ಅಲ್ಲಿಯ [illegible] ನಮ್ಮ [illegible] ಮೈಸೂರ [illegible] ಸ್ವಾತಂತ್ರ್ಯ [illegible] ಪವಾಗಿ [illegible] ಡೆಗೆ [illegible] ಸೂರ [illegible] ರೂಪಾಯಿಗಳ [illegible] ತ್ತಿದ್ದು [illegible] ದರೆ, [illegible] ಆದರೆ [illegible] ಸ್ವಾತಂತ್ರ್ಯ [illegible]

[illegible] ಪ್ರಸಂಗತವೇ ಆದ [illegible] ಕಾರಣಗಳನ್ನು ಮುಂದೆ ತಾರದೆ ಆ ಸಂ[illegible] ಸಭ್ಯಗಳನ್ನು [illegible] ಒಪ್ಪಿಸಿ [illegible] ಯನ್ನು [illegible] ರಿಗೆ [illegible] ವಿನಯ ಪ್ರಾರ್ಥನೆ [illegible] ದಾವಣಗೇರಿಗೆ ಬಹು ಸಂಖ್ಯಾಕರಾಗಿ ಹೋಗಿ, ಈ ತರದ ನಿರ್ಣಯವನ್ನು ಪಾಸುಮಾಡಿಕೊಂಡು, ಈ ಸಂಸ್ಥೆಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು, [illegible] ಕೊಡಬೇಕೆಂದು ನಮ್ಮ ಕೋರಿಕೆ

**[illegible]ತಸೇವಾಶ್ರಮ ಬಾಗಲಕೋಟೆ**

ಈ ಸಂಸ್ಥೆಯ ಕಾರ್ಯದರ್ಶಿಗಳು ತಮ್ಮ ಸಂಸ್ಥೆಯ ವರದಿಯನ್ನು ನಮ್ಮೆಡೆಗೆ ಕಳಿಸಿದ್ದಾರೆ [illegible] ರಾಷ್ಟ್ರೀಯ ಸೇವೆಯನ್ನು [illegible] ಸಂಸ್ಥೆಯ ಉದ್ದೇಶವು ಈ ಸಂಸ್ಥೆಯು [illegible] ಧರ್ಮಾರ್ಥ [illegible]ಚನಾಲಯವು ಸ್ಥಾಪಿಸಲ್ಪಟ್ಟಿದೆ [illegible] ಎಲ್ಲರೂ ಈ ಸಂಸ್ಥೆಗೆ ದ್ರವ್ಯ ಸಹಾಯವನ್ನು ಮಾಡಬೇಕೆಂದು ಕಾರ್ಯದರ್ಶಿಗಳು [illegible] ಈ ಸ್ತುತ್ಯ ಕಾರ್ಯಕ್ಕೆ [illegible] ಇನ್ನುಮುಂದೆ ಈ ಸಂಸ್ಥೆಗೆ [illegible] ಕೊಟ್ಟು ಇದು [illegible] ಕಾರ್ಯದರ್ಶಿಗಳಿಗೆ [illegible]

**[illegible] ವಬ್ಬಾಳಿಕೆಗೆ ಔಷಧವು [illegible]**

ಪ್ರಜಾ ಸಂರಕ್ಷಣವೇ ರಾಜನ [illegible] ಯಾವ ರಾಜರು ಈ ಧರ್ಮದಂತೆ ನಡೆಯ [illegible] ಪ್ರಜೆಗಳ ತಂದೆಯು, ಮತ್ತು ಯಾವರು [illegible] ಪಾಲಿಸುವದಿಲ್ಲವೋ, ಅವರು [illegible] ಅರ್ಹನಾಗಲಾರನು ಪ್ರಾಚೀನ ಗ್ರಂಥಗಳಲ್ಲಿ [illegible] ಎಂದು ಕೊಟ್ಟ [illegible] ಇದೇ [illegible] ಮಹಾರಾಜ [illegible] ಸ್ವಾತಂತ್ರ್ಯ [illegible] ಅವರು ಪ್ರಜೆಗಳ [illegible] ನಿಜವಾಗಿ ಅವರು ಪ್ರಜೆಗಳ ತಂದೆಯ [illegible] ಚೆನಕ [illegible] ಮಾತ್ರ [illegible] ಆದರೆ ರಾಜ್ಯ [illegible] ವಿಶೇಷಕರವಾಗಿರುತ್ತವೆ [illegible] ಪ್ರಜೆ [illegible] ಧರ್ಮ [illegible] ವಿಷಯಕ್ಕೆ [illegible] ಅವರು [illegible] ಜನರಿಗೆ [illegible]

ಇವರ ಸಲುವಾಗಿಯೇ ಹಿರಣ್ಯಕಶಿಪು ತನ್ನನ್ನು ವಧ ಸ್ತಂಭದಮೇಲೆ ಏರಿಸಿದಾಗ, ರಾಜ್ಯಾಭಿಲಾಷಿಯಾದ ತನ್ನ ಶಿಶ್ಯನಿಗೆ ಈ ಪ್ರಕಾರ ಉಪದೇಶ ಮಾಡಿರುವನು—

यौवनं धनसंपत्तिः प्रभुत्वमविवेकिता । एकैकमप्यनर्थाय किमु यत्र चतुष्टयम् ।

ಅಂದರೆ ತಾರುಣ್ಯ, ಧನಾಢ್ಯತೆ, ಪ್ರಭುತ್ವ ಮತ್ತು ಅವಿವೇಕತನವು ಇವುಗಳಲ್ಲಿ ಯಾವದಾದರೊಂದು, ಯಾವ ಮನುಷ್ಯನ ಹತ್ತರ ಇರುವದೋ ಅವನಿಗೆ ಅನರ್ಥ ಉಂಟಾಗುವದು. ಅಂದಮೇಲೆ ನಾಲ್ಕೂ ಒತ್ತಟ್ಟಿಗೆ ಕೂಡಿದವೆಂದರೆ ಕೇಳುವದೇನು!

ಈಗಿನ ನಮ್ಮ ಸರಕಾರದ ಸ್ಥಿತಿಯು ಈ ಪ್ರಕಾರ ಆಗಿಲ್ಲವೆಂದು ಯಾವನು ಹೇಳಬಲ್ಲನು? ಹಿಂದುಸ್ಥಾನದ ರಾಜ್ಯಸತ್ತೆ ಮತ್ತು ರಾಜ್ಯಲಕ್ಷ್ಮಿ ಇವುಗಳಮೇಲೆ ಇವರು ಲುಬ್ಧರಾಗಿರುವರು. ಹಿರಣ್ಯಕಶಿಪು, ವೇನ, ರಾವಣ ಮತ್ತು ದುರ್ಯೋಧನ ಮುಂತಾದವರ ಕಥೆಗಳು ಏಳು ಸಮುದ್ರದ ಆಚೆಯಲ್ಲಿ ಆದವು ಮತ್ತು ಎಂದೋ ದ್ವಾಪರಯುಗದಲ್ಲಿ ಆದವು ಎಂದು ಅನ್ನಬಹುದು. ಆದರೆ ಅವರ ವಸತಿಸ್ಥಾನದ ಸಮೀಪದಲ್ಲಿ— ಫ್ರಾನ್ಸದ ರಾಜ್ಯಕ್ರಾಂತಿಯು, ರಶಿಯಾದ ಝಾರರ ಆಳಿಕೆಯ ನಾಶವು, ಅಮೇರಿಕೆಯ ಸ್ವಾತಂತ್ರ್ಯವು, ರೋಮ, ಮತ್ತು ಯೂನಾನಗಳ ಏಳಿಗೆಯೂ ಲಯವು ಹಾಗೂ ಇಂಗ್ಲಂಡದಲ್ಲಿಯೇ ಚಾರ್ಲಸನನ್ನು ಗಲ್ಲಿಗೇರಿಸುವದು ಮುಂತಾದ ದೊಡ್ಡದೊಡ್ಡ ಸಂಗತಿಗಳಿಂದ ಇವರ ಕಣ್ಣು ತೆರೆಯತಕ್ಕವು. ಆದರೆ अन्यत्किंचित्प्रविष्यति ಎಂದು ಕಂಡುಬರುತ್ತದೆ. ಮೇಲೆ ವಿವರಿಸಿದ ಪ್ರಸಂಗಗಳಲ್ಲಿ, ಎಲ್ಲ ಶತ್ರುಗಳಹತ್ತರ ಶಸ್ತ್ರಬಲವೂ, ಸೇನಾಬಲವೂ ಇದ್ದುದರಿಂದಲೇ ಅವರಿಗೆ ಜಯ ಸಿಕ್ಕಿತೆಂದು ಇವರು ತಿಳಿಯುತ್ತಾರೆ. ಮತ್ತು " ಈ ಹಿಂದುಸ್ಥಾನವನ್ನಂತೂ ನಾವು ಪೂರ್ವದಲ್ಲಿಯೇ ನಿಃಶಸ್ತ್ರವನ್ನಾಗಿ ಮಾಡಿರುವೆವು. ಈ ಒಂದುವರೆನೂರು ವರ್ಷಗಳಲ್ಲಿ ಹಿಂದುಸ್ಥಾನವನ್ನು ನಾವು ನಿಃಶಸ್ತ್ರವಾಗಿ ಮಾಡಿರುತ್ತೇವೆ ಇಷ್ಟೇ ಅಲ್ಲ; ಆದರೆ ಧನಹೀನವನ್ನಾದರೂ ಮಾಡಿರುವೆವು. ಈಗ್ಗೆ ನಾವೇ ಸರ್ವ ಸಮರ್ಥರು. ಯಾವ ಹಿಂದೀ ಮನುಷ್ಯನು ತನ್ನ ತಲೆಯನ್ನು ಮೇಲಕ್ಕೆ ಎತ್ತುವನು ! ಯಾವನಾದರೂ ಎತ್ತಿದರೆ ನಮ್ಮ ಕಾಯದೆಗಳ ಧಾರೆಯು ಯಮನದಂಡದಂತೆ ಅವನಮೇಲೆ ಅಪ್ಪಳಿಸಿ ಬೀಳುವದರಿಂದ ನಮ್ಮ ಬೇಳೆಯು ಬೆಯ್ಯುವದು." ಈ ಪ್ರಕಾರದ ಇವರರಾಜ್ಯಮದ ಐಶ್ವರ್ಯಮದಗಳ ಆಸುರೀಕೃತಗಳನ್ನು ನಾವು ಇಂದು ನಮ್ಮ ಕಣ್ಣುತೆರೆದು ನೋಡಿದ್ದೇವೆ. ಈ ಸ್ವೈರವೃತ್ತಿಗಳಾದ ಆಳರಸರ ಮನಸ್ಸಿನಲ್ಲಿ ಒಂದು ವಿಚಾರ ತರಂಗವು ಹುಟ್ಟಿದ್ದೊಂದೇ ತಡ; ಸಾವಿರಾರು ಹಿಂದೀಜನರು ಕಾರಾಗೃಹವನ್ನು ಸೇರಬೇಕಾಯಿತು. ಈ ಗಾಂಧಿಯು ಹಿಂದುಸ್ಥಾನದ ಪ್ರೀತಿಯ ಮುಖಂಡನೆಂದು ತಿಳಿದಕೂಡಲೆ ಗಾಂಧಿಯನ್ನು ೬ ವರ್ಷಗಳ ವರೆಗೆ ಜೇಲಿಗೆ ಕಳಿಸಿದರು. ಪಂಜಾಬದಲ್ಲಿಯ ಅಕಾಲೀ ಶೀಖರು ತಮ್ಮ ಹುಕುಮನ್ನು ಬಜಾಯಿಸುವದಿಲ್ಲೆಂದು ಒಬ್ಬನಿಗೆ ಅನಿಸಿತು; ಕೂಡಲೆ ೧೭೦೦–೧೪೦೦ ಜನರನ್ನು ಎರಡೇ ವಾರಗಳಲ್ಲಿ ತುರಂಗಿಗೆ ಕಳಿಸಿದನು. ಅವರ ಸರದಾರನಾದ ಸರದಾರ ಖಡಕಸಿಂಗನಿಗೆ ಸ್ವಲ್ಪ ತಪ್ಪಿನಸಲುವಾಗಿ ಬೀಸಹಚ್ಚಿದರು. ತುರಂಗವು ಭರಭರ ತುಂಬಿಹೋಗಿರುವದು. ಕೈದಿಗಳಿಗೆ ಅನ್ನವಾದರೂ ಪೂರ್ಣ ಸಿಗುವದಿಲ್ಲ. ಅವರ ಹೊತ್ತುಕೊಳ್ಳುವದರಮೇಲೆ ಮತ್ತು ಹಾಸಿಕೊಳ್ಳುವದರಮೇಲೆ ರಕ್ತದಕಲೆಗಳು ಬಿದ್ದಿರುತ್ತವೆ.' ಆದರೆ ಇದರಿಂದ ನಮಗೇನು ? ನಮ್ಮ ಕಾಯದೆಯ– ನಮ್ಮ ಆಜ್ಞೆಗಳ ಉಲ್ಲಂಘನವನ್ನು ನೀವು ಏಕೆ ಮಾಡಿದಿರಿ ? ನಮ್ಮ ಮನಸ್ಸಿನಂತೆಯೇ ನೀವು ಏಕೆ ನಡಿಯುವದಿಲ್ಲ ? ನಮ್ಮ ರಾಜ್ಯಪದ್ಧತಿಯ ಇಭ್ರತೆಯನ್ನು ನೀವು ಏಕೆ ಕಳೆದಿರಿ ? ಬ್ರಿಟಿಶರ" ಕಠಿಣ ಬಾಹುಬಲದ "ಎದುರಿಗೆ ನೀವು ನಿಮ್ಮ ತಲೆಯನ್ನೆತ್ತಲು ಪ್ರಯತ್ನಮಾಡುವಿರೋ ? ನೋಡಿರಿ. ಮಹಾಜನರೇ ! ನಾವು ಅಖಿಲಜಗತ್ತಿನಲ್ಲಿ ಬಹಳ ನಿಸ್ಸೀಮ ಬಲರು ಇರುವೆವು ಜಮನಿಯು ಸಹ ನಮ್ಮನ್ನು ಯಾವ ಪ್ರಕಾರ ಪೂರ್ಣವಾಗಿ ಮಣಿಸಿದೆವೆಂಬುದು ನಿಮಗೆ ಗೊತ್ತಿಲ್ಲವೋ ? ನಿಮಗೆ ಜಾಸನಸಭೆಯ ಕಾಯಿದೆಯ ನಿರ್ಣಯಗಳ ಆವಶ್ಯಕತೆಯಿರ? ಲಜಪತರಾಯನಮೇಲೆ ನಿಮ್ಮ ಪ್ರೀತಿಯುಂಟೋ? ಅಲಿಬಂಧುಗಳ ಸಾಮರ್ಥ್ಯದಮೇಲೆ ಅವಲಂಬಿಸಿರುವಿರೋ! ನೇಹರೂ ಜೋರಿನಿಂದ ಇರುವಿರೋ? ಗಾಂಧಿಯ ಅಂಜಿಕೆಯನ್ನು ಅಸರಿಸುವಿರೋ? ನೋಡಿರಿ! ನಮ್ಮ ವಕ್ರದೃಷ್ಟಿಯ ಲಾಘವದಿಂದಲೇ ಅವರ ಸ್ಥಿತಿಯು ಏನಾಗಿರುವದೆಂಬದನ್ನು ನೋಡಿರೀ ನಮ್ಮನ್ನು ಕೇಳುವದಿಲ್ಲವೇ? ನಮ್ಮ ದುಃಶಾಸನಗಳ ಹಡಗುಗಳ, ಮತ್ತು ಸಂಗೀನಗಳ ಭಯವು ನಿಮಗೆ ಇಲ್ಲವೋ? ನಿಮ್ಮ ಮತ್ತು ನಿಮ್ಮ ದೇಶದ ಉದ್ಧಾರವನ್ನಿಚ್ಛಿಸುತ್ತಿದ್ದರೆ, ನಮ್ಮ ಹಿಂದೆ ಹಿಂದೆ ನಡೆಯುತ್ತಿರಿ ಕೇವಲ ನಿಮ್ಮ ಉದ್ಧಾರದ ಸಲುವಾಗಿಯೇ ಭಗವಂತನು ನಮ್ಮನ್ನು ಇಲ್ಲಿಗೆ ಕಳಿಸಿರುವನು." ಎಂದು ಅನ್ನುವರು

ಪ್ರತಿಯೊಬ್ಬ ಹಿಂದವಾಸಿಯು ಇದನ್ನು ಕೇಳಿ ನಗುವನು. ಮತ್ತು ಅನ್ನುವದೇನಂದರೆ " ನಮ್ಮ ದೇಶದಲ್ಲಿ ಈ ಪ್ರಕಾರದ ಎಷ್ಟೋ ಆಟಗಳನ್ನು ನೋಡಿರುವೆನು. ಕಠಿಣ ಬಾಹುಬಲದ ಅಂಜಿಕೆಯು ನನ್ನ ಮುಂದೆ ನಡೆಯಲಾರದು. ರಾಜ್ಯಮದದ ಎಷ್ಟೋ ಗರ್ವೋಕ್ತಿಗಳನ್ನು ಕೇಳಿರುವೆನು; ಮತ್ತು ಅವರ ಶಾಪಾವಸಾನವಾದರೂ ನನ್ನ ಕಣ್ಣಮುಂದೆಯೇ ಆದೆ ಈಶ್ವರೀ ಕಾಯದೆಗಳೇ ನಿಜವಾದ ಕಾಯದೆಗಳು. ನಾನು ಈಶ್ವರನ ದಾಸನಾಗಿರುವೆನು. ಅವನ ಅಜ್ಞೆಯಂತೆ ನಡೆಯುವೆನು. ಅವನ ಅಜ್ಞೆಯು ಸಿಗುವನೊಂದೇತಡ ಸಾವಿರಾರು ಗಾಂಧಿಗಳು ತಮ್ಮ ಪ್ರಾಣಕೊಡಲಿಕ್ಕೆ ಸಹ ಸಿದ್ಧರಾಗುವರು. ನಿಮ್ಮಲ್ಲಿ ಶಕ್ತಿ ಇದ್ದರೆ ನನ್ನ ೩೦ ಕೋಟಿ ಮಕ್ಕಳನ್ನು ತುರುಂಗಕ್ಕೆ ಕಳಿಸಿರಿ. ದಬ್ಬಾಳಿಕೆಯ ಅಂಜಿಕೆ ಹಾಕುವಿರೋ? ರಾಯೆದರ ಹಿಯು ಕ್ಕತಿಯನ್ನು ಮಾಡಬೇಕೆನ್ನುವಿರೋ. ನಾನು ನಿಃಶಸ್ತ್ರನೆಂದು ಇದು ನನ್ನ ಕವೆಗೆ ದುರ್ಲಕ್ಷ್ಯವೇ? ಆದರೆ ನನಗೆ ಸಾಹಸಿಕತ್ವದ ಶಸ್ತ್ರಾಸ್ತ್ರದ ನಿಃಸಾರತೆಯ ಅನುಭವವಾದರೂ ಬಂದು ಹೋಗಿರುವದು. ನಿಮ್ಮ ಇಚ್ಛೆಯಿದ್ದಂತೆ ನೀವು ತಿಳಿಯಿರಿ. ಆದರೆ ನಾನು ನಿಮ್ಮನ್ನು ಪಾರಂಶಜಾಂಧರೆಂದು ತಿಳಿಯುವೆನು. ನಾನೇನು ನಿಮ್ಮಮೇಲೆ ಏರಿಬರುವೆನೋ? ನಾನು ನಿಮ್ಮ ಹುಚ್ಚತನವನ್ನು ಕಂಡಿರುವೆನು ಶಸ್ತ್ರಾಸ್ತ್ರದಿಂದ ಜಗತ್ತಿನ ಶಾಂತತೆ ಅಥವಾ ಸ್ವಾತಂತ್ರ್ಯವು ಎಂದಿಗೂ ಸಿಗಲಾರದು. ನಿಮಗೆ ಈಶ್ವರನ ಅಂಜಿಕೆಯು ಇದ್ದರೆ, ನೀವಾದರೂ ಈ ಸತ್ಯದ ಅನುಭವವನ್ನು ತೆಗೆದುಕೊಳ್ಳಬಹುದು ಶಸ್ತ್ರಾಸ್ತ್ರದ ಅಂಜಿಕೆಯು, ಸದ್ಯ ಜನರಿಗೆ ಹೋಗಿಬಿಟ್ಟಿದೆ. ಅದರು ಕಸ್ತುತವೊಳಗೆ ಇನ್ನು ಪ್ರೇಮ ಐಕ್ಯವನ್ನು ಬೆಳಸಲು, ಸ್ವದೇಶಿಧರ್ಮವನ್ನು ಮನಸ್ಸಿನಿಂದ ಮಾಡಹತ್ತಲಿ; ಅಂದರೆ ನೀವು ನಿಮ್ಮ ಪಾಶವೀಶಕ್ತಿಯ ಉಪಯೋಗವನ್ನು ಪೂರ್ಣವಾಗಿ ಮಾಡಿದರೆ, ಹಿಂಸೆಯು ವಿಜಯಿ ಯಾಗುವದೋ ಅಥವಾ ಅಹಿಂಸೆಯೇ ಜಯವನ್ನು ಸಂಪಾದಿಸುವದೋ ನೋಡೋಣ! ಮತ್ತು ಇಮರ್ಣಯ ಬದಲಿಸುವರಣೆಯನ್ನು ತೋರಿಸುವಿರೋ? ಇದರ ರಹಸ್ಯವನ್ನು ಅಖಿಲ ಜಗತ್ತಿನವರು ತಿಳಿಯುವರು. ಪ್ರತಿಯೊಂದು ಕಡೆಗೆ ಈಗ ಈ ಮಾತು ಗೊತ್ತಿರುತ್ತದೆ.

ನೀವು ನನ್ನ ಉದ್ಧಾರದ ಚಿಂತೆಯನ್ನು ಬಿಟ್ಟುಬಿಡಿರಿ ನನಗೆ ನನ್ನ ಮಾರ್ಗವು ಗೊತ್ತುಂಟು. ನಿಮ್ಮ ಸಹಾಯ ಸ್ವಲ್ಪವಾಗಿ ನಿಮಗೆ ಧನ್ಯವಾದವನ್ನು ಕೊಡುವೆನು ಆದರೆ ಈ ನಿಶ್ಶಸ್ತ್ರವಾದ ಪಬ್ಬಾಳಿಕೆಯು ಮತ್ತು ಸವಿಚ್ಛೆಯು ಹೇಗೆ ಕೂಡಿನತೆಯುವದೆಂಬದು ನನಗೇನೂ ಗೊತ್ತಾಗಲಾರದು "

ನನ್ನ ಪ್ರೀತಿಯ ಮಕ್ಕಳೇ, ಸಾಕು ಈ ದೇಶದಲ್ಲಿ ನಡೆದ ದಬ್ಬಾಳಿಕೆಯ ರಹಸ್ಯವು ಈ ಪ್ರಶ್ನದಲ್ಲಿರುವದು. ನೀವು ಇದಕ್ಕೆ ಪೂರ್ಣಶಾಂತತೆಯಿಂದ ಮತ್ತು ಭಯವಿಲ್ಲದೆ, ಎದೆಗೊಟ್ಟು ನಿಂತರೆ ನನ್ನ ಹೃದಯವು ಆನಂದದಿಂದ ಪುಲಕಿತವಾಗುವದು. ನನ್ನ ಸ್ವರಾಜ್ಯ ಮತ್ತು ವಿಶ್ವಕುಟುಂಬದ ಬಗ್ಗೆ ಇದ್ದ ಮನೋರಾಜ್ಯವು ಸಫಲವಾಗುವ ಆಶೆಯು ಧೃಢವಾಗುತ್ತದೆ ಯಾವ ದಿವಸ ನೀವು ದ್ವೇಷಗಳನ್ನು ಪೂರ್ಣವಾಗಿ ಬಿಟ್ಟುಬಿಡುವಿರೋ ಅವತ್ತಿನ ದಿವಸವೇ ಈ ದಬ್ಬಾಳಿಕೆಯು ನಿಮ್ಮ ದಾಸವಾಗುವದು ಈ ರಾಕ್ಷಸ ಶಕ್ತಿಯು ನಿಮ್ಮ ಕಾಲುಮೇಲೆಯೇ ಬಿದ್ದು ಹೊರಳಾಡುವದು ಯಾವದಿವಸ ನಿಮ್ಮ ಸ್ವದೇಶೀ ಧರ್ಮ ಅಥವಾ ಖಾದಿಯ ಪ್ರಸಾರವು ನಿಮ್ಮ ಈ ಪ್ರತಿಪಕ್ಷಗಳ ಕಂಗಳಲ್ಲಿ ತಿಂಜಿನ ಹಾಕಲು ಸಮರ್ಥವಾಗುವದೋ ಅಂದೇ ಇವರಿಗೆ ಜ್ಞಾನವುಂಟಾಗಿ ಭಸ್ಮಾಸುರನ ಉತ್ತರಣೆಯಂತೆ, ಇವರ ದುರಭಿಮಾನವು ಕರಗಿನೀರಾಗಿ ಇವರು ನಿಮ್ಮ ಮಣಿಯಾಗುವರು. ಸಾಕು, ಇದೇ ಈ ದಬ್ಬಾಳಿಕೆಗೆ ರಾಮಬಾಣ ಔಷಧವು.

[ ನವಜೀವನ ]

## ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಘ.

೧ ಈ ಸಂಘವು ... ವಿದ್ಯಾರಣ್ಯ ... ಸಂಸ್ಥೆಯು

೨ ಯೋಗ್ಯವಾದ ಕನ್ನಡ ... ಪುಸ್ತಕಗಳನ್ನು ಬರೆಸಿ, ಪ್ರಸಿದ್ಧಪಡಿಸುವುದು ಈ ... ಮುಖ್ಯೋದ್ದೇಶವು

೩ ಇದಕ್ಕೆ ಬೇಕಾಗುವ ಬಂಡವಲವು ತೀರ ಕಡಿಮೆಯೆಂದರೆ ೨೫೦೦೦ ರೂ ... ೫. ಬೆಲೆ ಬಾಳುವ ೧೦೦ ಪಾಲುಗಳಲ್ಲಿ ... ವನ್ನು ವಿಭಾಗಿಸಿದರೆ ೫೦ ರೂ. ಗಳದೊಂದು ಕಂತಿನಂತೆ ೫ ಕಂತುಗಳಿಂದ ಪಾಲಿನ ಹಣವನ್ನು ಮುಟ್ಟಿಸಬಹುದು.

೪ ವಿಸ್ತಾರವಾಗಿ ಕನ್ನಡ ನುಡಿಯನ್ನು ಸೇವಿಸಲಿಚ್ಛಿಸುವವರು ಈ ಸಂಸ್ಥೆಯು ... ಗುವದಕ್ಕೆ ತಕ್ಕವರು.

೫ ಕೆಳಗೆ ಸಹಿಮಾಡಿದವರು ೧೦ ಪಾಲುಗಳನ್ನು ತೆಗೆದು ಕೊಂಡು ಕರ್ನಾಟಕ ಸಿಂಹಾಸನ ಸ್ಥಾಪನೆ ಎಂಬ ಐತಿಹಾಸಿಕ ಕಾದಂಬರಿಯನ್ನು ಬರೆ... ಪ್ರಸಿದ್ಧಪಡಿಸುವ ಕಾರ್ಯ ಕಾರಿ ಮುಂದಲಕ್ಷ್ಯ ... ಇರಲಿಚ್ಛಿಸುವವರು ೪ ಅದಕ್ಕಿಂತ ಹೆಚ್ಚು ಪಾಲುಗಳನ್ನು ತೆಗೆದುಕೊಳ್ಳಬೇಕು

೬ ಕನ್ನಡ ನುಡಿಗೆ ಏಳ್ಗೆಯನ್ನು ಬಯಸುವವರು ೫ ರೂ. ಗಳೊಡನೆ ತಮ್ಮ ಪಾಲಿನ ಅರ್ಜಿಗಳನ್ನು ಕಳಿಸಬಹುದು

ಈ ವಿಷಯವಾಗಿ ಪತ್ರವ್ಯವಹಾರ ಮಾಡಬಯಸುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕು

| | |
|---|---|
| ಮಾಳಮಡ್ಡಿ ಧಾರವಾಡ | ರಾ ಹ ದೇಶಪಾಂಡೆ |
| ಶಕೆ ೧೮೪೪ ಚೈತ್ರ ಶು ೧ | ಶ್ರೀ ರಾ, ದೇಶಪಾಂಡೆ |

---

ಚಂದಾದಾರರಾಗಿರಿ ! ಪ್ರೋತ್ಸಾಹಿಸಿರಿ ! !

## ಕರ್ನಾಟಕ ಸಭಾಗ್ರಂಥಮಾಲೆ

ಪ್ರತಿ ಮೂರುತಿಂಗಳಿಗೊಮ್ಮೆ, ಕನ್ನಡ ಕಥಾ ಕಾದಂಬರಿ ಕಾವ್ಯ ಪ್ರಬಂಧನಾಟಕವೇ ಮೊದಲಾದ ಗ್ರಂಥಗಳಲ್ಲಿ ಯಾವದಾದರೊಂದು ಪೂರ್ಣ ಪುಸ್ತಕವೂ ಇತರ ಲೇಖನಗಳೂ ಪ್ರಕಟವಾಗುವ ಈ ಗ್ರಂಥಮಾಲೆಗೆ ವಾರ್ಷಿಕ ಚಂದಾ ಅಂಚೆವೆಚ್ಚದೊಡನೆ ... ಮಾತ್ರ ಇಟ್ಟಿರುವರು ಈಗಲೇ ... ಕಳುಹಿಸಿ ವರ್ಗಣಿದಾರರಾಗಿ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ ದುರ್ಮತಿ ಸಂವತ್ಸರದ ಬಾಬತು ಈಗಾಗಲೇ ಮೂರು ಪುಸ್ತಗಗಳು ಅಚ್ಚಾಗಿವೆ. ೧ ಘೋಷಯಾತ್ರೆ ೨ ಗಾಂಧಿ ಸಂದೇಶ ೩ ವಸ್ತ್ರಾಹರಣ ಹೆಚ್ಚಿನ ವಿಚಾರಗಳಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು,

ಮ್ಯಾನೇಜರ ಕ ಸ ಗ್ರಂಥಮಾಲೆ
ಉರ್ವ ಪೇ ಮಂಗಳೂರ.

---

ಸ್ವದೇಶಿ ರಚನೆಗಳಿಗೆ ಉತ್ತೇಜನ ಕೊಡಿರಿ !

ಏಜಂಟರು ) **ಅತ್ಯುತ್ತಮ** ( ಬೇಕು

ಮಸಿ ಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | —೪—೦ | ಟಿ. ಖ. |
| ೧೦೦ ಚೀಟಿಗಳಿಗೆ | ೦—೧೪—೦ | |
| ೪೦ ರೆಂಸ ಮಸಿ ಪುಡಿಕೆ | ೦—೪—೦ | ಜೇಕಿ |

ವ್ಯಾಪಾರಸ್ಥರಿಗೂ, ಏಜಂಟರಿಗೂ ... ಕಮೀಶನ್

ವಿಳಾಸ—ಕರ್ನಾಟಕ ಇಂಕ ಕಂಪನಿ,
ಬಾಗಲಕೋಟೆ.

---


... ... ...
ನಂಬರ ೧ ನೇ ನಮೂನೆಯಾದ

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳ ಪಸಂದಾದ ನಂಬರ ೧ ನೇ ದರ್ಜೆ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳ ... ಸೋಯಿಯಾದ ದರದಲ್ಲಿ ತೈಲವು ಸಿಗುತ್ತದೆ. ... ಸಿಂಗ ತೈಲದ ಬಾಟ್ಲಿ ... ೪೦೦ ಡಜನ ... ಕೊಳ್ಳಬೇಕು ... ಪತ್ರವ್ಯವಹಾರ

ವಿಳಾಸ (ವಿ. ಎ.) ಪೈ ಕಂಪನಿ
ಮು ಹೊನ್ನಾವರ
ಜಿಲ್ಲಾ ಉತ್ತರಕನ್ನಡ


## ಉತ್ತಮ ಆಯುರ್ವೇದ ಔಷಧಗಳು.

ಸುವರ್ಣರಾಜವಂಗ ತೊಲಿ ೧ ರೂ. ೫

| | | |
|---|---|---|
| ಸುವರ್ಣವಸಂತ | ತೊಲಿ | ರೂ ೫ |
| ಪ್ರವಾಳ | | ರೂ ೨ |
| ಚಂದ್ರಪ್ರಭಾ | | ರೂ. ೧ |
| ಲಘುಮಾಲಿನಿ ವಸಂತ | | |
| ಅಮೃತಸತ್ವ | | ಆ ೮ |
| ಸಾರಿವಾದ್ಯ ವಾಸವ | ಬಾಟಲಿ | ರೂ. ೧ |
| ಬ್ರಾಹ್ಮೀ ಸಾಯಿರಪ | | ರೂ ೧ |
| ಪಾಚಕವಟಿ | ನೂರಕ್ಕೆ | ರೂ ೧ |
| ಮೃದುವಿರೇಚಕವಟಿ | ನೂರಕ್ಕೆ | ಆಣೆ ೮ |
| ಸಿತೋಪಲಾದಿಚೂರ್ಣ | ೧೦ ತೊಲಿ | ರೂ ೧ |

ಇನ್ನುಳಿದ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಯಾವತ್ತು ಔಷಧಗಳು ನಮ್ಮಲ್ಲಿ ಸುಲಭದರದಿಂದ ಸಿಗುವವು.

Karnatak Ayurvedic Pharmaceutical Works
Bagalkot D Bijapur

---

## ಆತ್ಮೋದ್ಧಾರವೆಂಬ

ಹೊಸ ಮಾಸಪತ್ರಿಕೆ

ಉತ್ತರಕನ್ನಡ ಜಿಲ್ಲೆಯಲ್ಲಿ ಮೊದಲನೆಯ ... ವಾರ್ಷಿಕ ಸಾಮಾಜಿಕ ರಾಜಕೀಯ ವಿಷಯಗಳಿಂದ ಕೂಡಿದ್ದು ಎಲ್ಲ "ಸ್ವಾಭಿಮಾನಿ"ಗಳು ವಿಶೇಷತಃ ವಿದ್ಯಾರ್ಥಿಗಳು ಆತಕ್ಕವಾಗಿ ಓದತಕ್ಕದ್ದು.

ವಾರ್ಷಿಕ ವರ್ಗಣಿ ವ್ಹಿ. ಪಿ. ಸಹಿತ ೨ ರೂಪಾಯಿ ೧ ಆಣೆ ಮಾತ್ರ ಬಿಡಿಸಂಚಿಕೆ ೩ ॥ ಆಣೆ.

ವಿಳಾಸ
ವಾಮನ ಅನಂತ ಹೊನ್ನಿ
ರಾಷ್ಟ್ರೀಯ ಶಾಲಾಧ್ಯಾಪಕ
ಶಿರಸಿ ಉತ್ತರಕನ್ನಡ.

---

ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ವಿದ್ಯಾರಣ್ಯ ... ಮುದ್ರಣಾಲಯದಲ್ಲಿ ಶ್ರೀನಿವಾಸ ರಾಘವೇಂದ್ರ ... ಇವರು ಮುದ್ರಿಸಿದರು ಮತ್ತು ಅಲ್ಲಿಯೇ ತಮ್ಮಣಾಚಾರ್ಯ ಬಂದಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ಶೌರ್ಯವೆಂದರೇನು?

REGISTERED No. B 1589.

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಭಾಷಾಂತರಿಸುವದೇ ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ — ಬಾಗಲಕೋಟೆ ಕ್ರೋಧಿ ನಾ॥ ಸಂ॥ ಶಕೆ ೧೮೪೬ — ಸಂಚಿಕೆ ೨೧

ಗುರುವಾರ ತಾ. ೪ ಸೆಪ್ಟೆಂ. ೧೯೨೪

## ಮಹಾತ್ಮರ ನುಡಿಯು.

### ಖಿಲಾಫತ್

ಮೊ. ಗಾಂಧಿ

(ಯಂಗ ಇಂಡಿಯಾ ತಾ. ೨೮-೮-೨೪)

ಮುಸಲ್ಮಾನರು ಖಿಲಾಫತ ಪ್ರಶ್ನೆಯ ಬಗ್ಗೆ ಅತಿ ಆತುರರಾಗಿ ಗಡಿಬಿಡಿ ಮಾಡುವದನ್ನು ಲಖನೌದಲ್ಲಿ ನಾನು ಕಂಡೆನು. ಮೌಲವೀ ಸಲಾಮತುಲ್ಲಾ ಇವರು ಅಂಗೋರಾ ಸರಕಾರದ ಬಗ್ಗೆ ಮಾಡುವ ಬ್ರಿಟಿಶ ಸರಕಾರದವರ ನಡಾವಳಿಯು ಅಸತ್ಯವಾಗುತ್ತಿರುವದೆಂದು ಸೌಮ್ಯಶಬ್ದಗಳಿಂದ ಜನರ ಮನೋಗತವಾದ ಅಭಿಪ್ರಾಯವನ್ನೇ ವ್ಯಕ್ತ ಮಾಡಿರುವರು. ತುರ್ಕರಸಂಗಡ ನಾವು ಸ್ನೇಹಭಾವದಿಂದ ವರ್ತಿಸುವೆವೆಂಬ ಬ್ರಿಟಿಶರ ಮಾತಿನ ಮೇಲಿನ ಜನರ ವಿಶ್ವಾಸವು ಅಳಿದು ಹೋಗುತ್ತಿರುವದೆಂಬುವದರಲ್ಲಿ ಸಂಶಯವಿಲ್ಲ. ಬ್ರಿಟಿಶರ ಹೇಳಿಕೆಯು ನಿಜವಾಗಿ ತ್ರಿಕರಣಪೂರ್ವಕವಾದದ್ದೆಂದು ಯಾರೂ ನಂಬುವದಿಲ್ಲ. ಅದರಂತೆ ಬ್ರಿಟಿಶರು ಈ ವಿಷಯದಲ್ಲಿ ಸಹಾಯಮಾಡಲು ಶಕ್ತರೆಂಬುವದಾದರೂ ಯಾರೂ ನಂಬದಮಾತು. ಈ ಪ್ರಕಾರ ಮುಸಲ್ಮಾನರು ಕ್ರೋಧಾತುರರಾಗಿ ಕಾಂಗ್ರೆಸ ಮತ್ತು ಖಿಲಾಫತ ಸಂಘಗಳು ಮಾಡುತ್ತಿರುವ ಕಾರ್ಯವು ನಾಳೆಕ್ಕೆ ಜೋರಿನಿಂದಲೂ ಮುನ್ನಡೆಯಲೂ ಸಾಗುವದಿಲ್ಲವೆಂದು ತಿಳಿಯುತ್ತಿರುವರು. ಖಿಲಾಫತ ಪ್ರಶ್ನೆಯಲ್ಲಿ ತಮ್ಮ ಇಚ್ಛೆಯನ್ನು ಸಾಧಿಸಿಕೊಳ್ಳುವಷ್ಟು ಸಾಮರ್ಥ್ಯವನ್ನು ಹಿಂದುಸ್ಥಾನವು ಸಂಪಾದಿಸುವದೇ ಮುಸಲ್ಮಾನರಿಗೆ ನಿಜವಾದ ಸ್ವರಾಜ್ಯವು.

ಇದರಿಂದಲೇ, ಸ್ವರಾಜ್ಯವು ಅಪೇಕ್ಷೆಯಿಲ್ಲದೆ ತಡವಾಗ ಹತ್ತಿದರೆ ತಾವು ತಡೆಯಲಾರೆವೆಂದೂ, ಮತ್ತು ಯುರೋಪಖಂಡದಿಂದ ತುರ್ಕಸ್ಥಾನವು ನಿರ್ನಾಮವಾಗಿ ಹೋಗುವದನ್ನು ನೋಡಿ ತಾವು ಹೇಡಿಗಳಂತೆ ಸುಮ್ಮನೆ ಅಲ್ಲದ ಕಾರ್ಯವನ್ನು ಮಾಡುತ್ತ ಕೂಡ್ರಲಾರೆವೆಂದೂ ಮುಸಲ್ಮಾನರು ಅನ್ನುತ್ತಿರುವರು.

ಈ ಜನರ ಮನಸ್ಥಿತಿಯನ್ನು ಕಂಡು ಅವರನ್ನು ಅನುಕಂಪಿಸದೆ ಇರುವದು ಹೇಗೆ!! ನನಗೆ ಯಾವದೇ ಶೀಘ್ರತರವಾದ ಉಪಾಯವು ತೋರಿದಲ್ಲಿ ನಾನು ಉತ್ಸಾಹದಿಂದ ಅದನ್ನೇ ಮಾಡಲು ಉದ್ಯುಕ್ತನಾಗುವೆನು. ಸ್ವರಾಜ್ಯವಿಲ್ಲದೆ ಖಿಲಾಫತದ ಪ್ರಶ್ನೆಯನ್ನು ಪರಿಹರಿಸುವದಾಗಿದ್ದರೆ, ಸ್ವರಾಜ್ಯದ ಬಗ್ಗೆ ಎಲ್ಲ ಉದ್ಯೋಗವನ್ನು ನಿಲ್ಲಿಸಿ ಖಿಲಾಫತದ ಬಗ್ಗೆ ಮಾತ್ರ ಸಾಹಸ ನಡಿಸಲಿಕ್ಕೆ ಎಲ್ಲರಿಗೂ ಹೇಳಿಕೊಳ್ಳುತ್ತಿದ್ದೆನು. ಏಕಾಏಕಿ ಮುಸಲ್ಮಾನರಿಗೆ ಆದ ಮನೋವ್ಯಥೆಯನ್ನು ಶಾಂತಮಾಡುವದಕ್ಕೆ, ಅಸಹಕಾರವಲ್ಲದೆ ಬೇರೆ ಯಾವದೇ ಮಾರ್ಗವು ನನಗೆ ತೋರಿದಲ್ಲಿ ಅದರಂತೆ ವರ್ತಿಸಲು ನಾನು ಸಿದ್ಧನಿರುವೆನು.

ಆದರೆ ನನ್ನ ಮತದಂತೆ, ಖಿಲಾಫತಿನ ಅನ್ಯಾಯವನ್ನು ಪರಿಹರಿಸಲಿಕ್ಕೆ, ಸ್ವರಾಜ್ಯಸಂಪಾದನೆಯೇ ಶೀಘ್ರತರ, ಶೀಘ್ರತಮವಾದ ಮಾರ್ಗವಾಗಿರುವದು. ಆದ್ದರಿಂದ ನನಗೆ ಸ್ವರಾಜ್ಯಸಂಪಾದನವೆಂದರೇ ಖಿಲಾಫತ, ಖಿಲಾಫತದ ಅನ್ಯಾಯ ಪರಿಮಾರ್ಜನವೆಂದರೇ ಸ್ವರಾಜ್ಯ. ದುಃಖಿತರಾದ ತುರ್ಕಿಜನರಿಗೆ ಸಹಾಯಮಾಡಬೇಕಾದರೆ ಹಿಂದುಸ್ಥಾನವು ತನ್ನ ಇಚ್ಛೆಯನ್ನೇ ನಡಿಸುವಷ್ಟು ಸಾಮರ್ಥ್ಯಶಾಲಿಯಾಗುವದು, ಒಂದೇ ಒಂದಾದ ಮಾರ್ಗವಾಗಿರುವದು. ಇನ್ನು ಅಲ್ಪಾವಧಿಯಲ್ಲಿಯೇ ಈ ಸಾಮರ್ಥ್ಯವನ್ನು ದೊರೆಕಿಸದಿದ್ದರೆ ಹಿಂದುಸ್ಥಾನವು ನಾಶವಾಗುವದು ಎಂಥ ಪಾತಕ!!! ಆಮೇಲೆ ಇದು ತನ್ನ ದುರ್ಧರವಾದ ಭವಿತವ್ಯಕ್ಕೆ ಬಲಿಯು ಹೋಗಬೇಕಾಗುವದು. ಆಘಾತಗೊಂಡ ಬೇನೆಬಿದ್ದವನು ತನ್ನ ನೆರೆಯವನಿಗೆ ನೆರವಾಗಬೇಕೆಂದು ಕೋರುತ್ತಿದ್ದಲ್ಲಿ, ಅವನು ಮೊದಲು ತನ್ನ ಬೇನೆಯನ್ನು ಕಳೆದುಕೊಳ್ಳುವದಕ್ಕೆ ಉಪಾಯ ಮಾಡಬೇಕಲ್ಲವೆ? ತಿಳಿಯದೆ ವಿಚಾರಹೀನನಾಗಿ, ಸಿಟ್ಟಿನ ಭರದಲ್ಲಿ ಹಿಂಸೆಮಾಡಲು ಪ್ರವೃತ್ತರಾಗುವದರಿಂದ, ತುರ್ಕಸ್ಥಾನಕ್ಕೆ ಕಿಂಚಿತ್ತಾದರೂ ಸಹಾಯವಾಗದೆ, ನಮ್ಮ ಕ್ರೋಧಾವೇಶಕ್ಕೆ ಮಾತ್ರ ಅನುವು ಕೊಟ್ಟಂತಾಗುವದು. ಇದರಿಂದ ನಮ್ಮ ಇಚ್ಛೆಯನ್ನೇ ನಡಿಸುವ ಸಾಮರ್ಥ್ಯವಾದರೂ ಹೆಚ್ಚಾಗಲಾರದು. ಮತ್ತು ಈ ಅತ್ಯಾಚಾರವನ್ನು ಮುರಿಬಡಿಯುವದಕ್ಕೆ ಯೋಜಿಸಲ್ಪಡುವ ಉಪಾಯಗಳಿಂದ ನಮ್ಮ ಈಗಿನ ವೇಗವು ಬಹಳ ಕುಂಠಿತವಾಗಬಹುದು.

ಆದರೂ ನಾವು ನಿರಾಶರಾಗಲಿಕ್ಕೆ ಕಾರಣವಿಲ್ಲ. ಖಿಲಾಫತದ ಸಂಕಟವನ್ನು ಪೂರ್ಣ ವಿಚಾರಿಸಿ ಅದನ್ನು ನಿವಾರಣ ಮಾಡುವದಕ್ಕಾಗಿಯೇ ಮಹಾಸಭೆಯ (ಕಾಂಗ್ರೆಸದ) ಕಾರ್ಯಕ್ರಮವು ಯೋಜಿಸಲ್ಪಟ್ಟಿರುವದು. ಎರಡು ತಿಂಗಳುಗಳಲ್ಲಿ ಸ್ವದೇಶೀ ಕಾರ್ಯಕ್ರಮವು ಮುಗಿಯಬೇಕೆಂದರೆ ಹಿಂದುಸ್ಥಾನವು ತನ್ನ ಎಲ್ಲ ಸುಕೃತವನ್ನು ವೆಚ್ಚ ಮಾಡಬೇಕಾಗುವದು. ಹಿಂದುಸ್ಥಾನವು ಸಪ್ಟಂಬರದೊಳಗೆ ಈ ಕಾರ್ಯಕ್ರಮವನ್ನು ಮುಗಿಸಿ ಅಕ್ಟೋಬರ ತಿಂಗಳಲ್ಲಿ ತನ್ನ ನಿಜಸ್ವರೂಪವನ್ನು ಧಾರಣಮಾಡಿದರೆ ಖಿಲಾಫತದ ವಿಷಯದಲ್ಲಿ ನನ್ನಂತೆ ಆತುರನಾದವ ಎಂಥ ಉತ್ಸಾಹಿಗೂ ಸಮಾಧಾನವಾಗದಿರದು.

ಆದರೆ ಇದ್ದ ಸ್ಥಿತಿಯನ್ನು ಹೇಳಬೇಕಾದರೆ, ಇಷ್ಟು ಅಲ್ಪಾವಧಿಯಲ್ಲಿಯೇ ಈ ಕಾರ್ಯಕ್ರಮವು ಪೂರ್ಣವಾಗುವದೆಂತು? ಪೂರ್ಣವಾದರೂ ಅದರಿಂದ ನಮ್ಮ ಇಚ್ಛಿತವು ಕೈಗೂಡುವ ಬಗೆ ಹೇಗೆ? ಎಂದು ನಮ್ಮಲ್ಲಿ ಕೆಲವರು ಸಂಶಯಗ್ರಸ್ತರಾಗಿರುವರು. ಇಂಥ ಸಂಶಯಾತ್ಮರು ತಾವು ಇದಕ್ಕೂ ಶ್ರೇಷ್ಠಮಾರ್ಗವನ್ನು ಹುಡಿಕಿ ರಾಷ್ಟ್ರದಲ್ಲಿ ಎಲ್ಲರೂ ಅದನ್ನೇ ಅನುಸರಿಸಲು ಒಪ್ಪುವವರೆಗೆ, ಒಂದೆಡೆಗೆ ಸರಿದು ನಿಲ್ಲಬೇಕು. ಇಲ್ಲವಾದರೆ ತಮ್ಮ ಸಂಶಯವನ್ನು ಒತ್ತಟ್ಟಿಗೆ ಇಟ್ಟು ಇದನ್ನೊಂದು ಮಾಡಿ ನೋಡೋಣವೆಂಬ ವಿಚಾರದಿಂದಾದರೂ ಈ ಕಾರ್ಯದಲ್ಲಿ ಮಗ್ನರಾಗಬೇಕು. ಹಿಂದುಸ್ಥಾನವು ಸ್ವದೇಶೀ ಕಾರ್ಯಕ್ರಮವನ್ನು ಮುಗಿಸಲಾರದೆಂಬ ಸಂಶಯವು ನಿಜವಾದಪಕ್ಷದಲ್ಲಿ, ಖಿಲಾಫತದ ವಿಷಯಕ್ಕೆ ಹಿಂದುಸ್ಥಾನಕ್ಕೆ ಅಷ್ಟೊಂದು ಅಭಿಮಾನವಿಲ್ಲ; ಇದ್ದರೂ ಅದರ ಸಲುವಾಗಿ ಏನನ್ನೂ ತ್ಯಾಗಮಾಡಲಿಚ್ಛಿಸುವದಿಲ್ಲವೆಂಬ ಮಾತು ಒಡೆದು ತೋರುವದಿಲ್ಲವೆ? ಎಲ್ಲ ಹಿಂದೂ ಮುಸಲ್ಮಾನರು ತಮ್ಮ ವಿದೇಶೀ ಅರಿವೆಗಳನ್ನ ಬಿಟ್ಟ ಖಾದಿಯನ್ನು ಮಾತ್ರ ಧರಿಸವದೇನು ದೊಡ್ಡ ಹಾನಿಯುಮಾತೆ? ಇಷ್ಟು ಕೂಡಾ ಹಿಂದುಸ್ತಾನದ ಕೈಯಿಂದ ಆಗದಿದ್ದರೆ ಇದಕ್ಕೂ ಹೆಚ್ಚಿನ ಸ್ವಾರ್ಥತ್ಯಾಗವನ್ನು ಮಾಡಿ ಅದು ತುರ್ಕಸ್ತಾನಕ್ಕೆ ನೆರವಾಗಲಾರದೆಂಬುವದು ಮೇಲೇ ತೋರುತ್ತದೆ. ನಾವೆಲ್ಲರೂ ಈ ಸ್ವದೇಶಿ ಕಾರ್ಯಕ್ರಮವನ್ನು ಪೂರ್ಣಮಾಡುವದಕ್ಕೂ; ಇದಕ್ಕೆ ಅವಶ್ಯವಾದ ಖಾದಿಯನ್ನು ಸಾಕಷ್ಟು ಪೂರೈಸುವದಕ್ಕೂ ಎಡೆಬಿಡದೆ ಕೆಲಸ ನಡಿಸೋಣ; ಅಂದರೆ ಸ್ವರ್ಗವೇ ನಮ್ಮ ಕಣ್ಣಿಗೆ ಕಾಣಹತ್ತುವದು. ಗ್ರೀಕರಮೇಲಿನ ನಮ್ಮ ಸಿಟ್ಟು ತೀರಿಸಿಕೊಳ್ಳುವದಕ್ಕಾಗಿ ಗ್ರೀಸದೇಶದ ರಾಯಲಿಬಂಧುಗಳ ಕಂಪನಿಯನ್ನು ನಾವು ಬಹಿಷ್ಕರಿಸಬೇಕೆಂದೂ ಪರದೇಶಗಳಿಗೆ ಹೊರಟು ನಿಂತಿರುವ ಹಡಗಗಳ ಮೇಲೆ ಸರಕುಗಳನ್ನು ಹೇರಕೂಡದೆಂದು ಕೂಲಿಕಾರರಿಗೆ ತಿಳಿಸಬೇಕೆಂದೂ ಲಖನೌದಲ್ಲಿ ಸೂಚನೆಗಳು ಬಂದಿದ್ದವು. ಈ ಸೂಚನೆಗಳು ಕೃತಿಯಲ್ಲಿ ಅಸಂಭವವಾಗಿರುವವಲ್ಲದೆ ಹುಚ್ಚುತನದ್ದಾದರೂ ಆಗಿರುವವು. ರಾಯಲಿ ಕಂಪನಿಯು ನಾಮಶೇಷವಾಯಿತೆಂದು ಕೆಲವು ಹೊತ್ತು ಗ್ರಹಿಸಿರಿ. ಆದರಿಂದ ಗ್ರೀಸದೇಶಕ್ಕೂ ಬಿಸಿ ಹತ್ತುವ ಬಗೆ ಎಂತು? ರಾಯಲಿ ಕಂಪನಿಯವರು ಎಲ್ಲ ಹಿಟ್ಟುಕ್ಕಿಗಳನ್ನು ಗ್ರೀಸದೇಶಕ್ಕೆ ಕಳಿಸುತ್ತಿರುವದಿಲ್ಲ. ಅವರ ವ್ಯಾಪಾರವು ಎಲ್ಲ ಜಗತ್ತಿನ ಸಂಗಡ ನಡೆದಿರುವದು ಅವರ ವ್ಯಾಪಾರಕ್ಕೆ ಕೈಹಚ್ಚುವದು ಸ್ವದೇಶೀ ಕಾರ್ಯಕ್ರಮಕ್ಕಿಂತಲೂ ದುಸ್ತರವಾದದ್ದು. ಇಂಥ ಯಾವದೇ ಪ್ರಯತ್ನದಿಂದ ( ಅದು ಮೂಲದಲ್ಲಿಯೇ ತಪ್ಪಾದದ್ದೊಂದು ಇರಲಿ ) ನಾವು ಅಪಹಾಸ್ಯಕ್ಕೆ ಮಾತ್ರ ಗುರಿಯಾಗುವೆವು. ಸರಕುಗಳನ್ನು ಹೇರುವ ಕೂಲಿಕಾರರನ್ನು ತಡೆಯುವದಾದರೂ ಬಲು ಮೋಜಿನ ಕಲ್ಪನೆಯಾಗಿರುವದು ಯಾಕಂದರೆ ಜನರು ಈ ಪರಿಯಾಗಿ ನಮಗೆ ಕೈವಶರಿದ್ದರೆ ಯುದ್ಧವನ್ನು ನಾವು ಎಂದೋ ಗೆದಿಯುತ್ತಿದ್ದೆವು

ಈ ಸರಕು ಹೇರುವದನ್ನು ನಿಲ್ಲಿಸುವದೆಂದರೆ, ಈಗ್ಗೆ ಅಲ್ಲಿ ತೊಡಗಿರುವ ಕೂಲಿಕಾರರು ಕಡೆತನಕ ಆ ಕೆಲಸ ಬಿಟ್ಟುಕೊಡಬೇಕು ಇಷ್ಟೇ ಅಲ್ಲ ಆದರೆ ಇತರ ಯಾವ ಕೂಲಿಕಾರರು ಅದನ್ನು ಮಾಡಲಿಕ್ಕೆ ಮುಂದೊರೆದು ಬಾರದಂತೆ ಮಾಡುವಷ್ಟು ಸಾಮರ್ಥ್ಯವು ನಮ್ಮಲ್ಲಿರಬೇಕಾಗುತ್ತದೆ. ಇಷ್ಟೊಂದು ಸಂಘಶಕ್ತಿಯು ನಮ್ಮಲ್ಲಿ ಇನ್ನೂ ಬಂದಿರುವದಿಲ್ಲವೆಂದು ನನ್ನ ಅಂಜಿಕೆಯು. ಅದ್ದರಿಂದ ಇಂಥ ಎಲ್ಲ ಪ್ರಯತ್ನಗಳಿಂದ ಅಪಾಯವೇನೂ ಆಗದಿದ್ದರೂ ಅವು ನಿಷ್ಫಲವಾಗದೇ ಇರವು.

ಶಾಂತಿಮಯ ಕಾಯಿದೆಭಂಗದ ಕಾರ್ಯಕ್ರಮವನ್ನು ಶೀಘ್ರ ಕೈಯಲ್ಲಿ ತೆಗೆದುಕೊಳ್ಳುವದೇ ಒಂದು ಇದಕ್ಕೂ ಯೋಗ್ಯವಾದ ಉಪಾಯವಾಗಿರುವದು. ಇದನ್ನು ಸಾರ್ವತ್ರಿಕ ದೊಡ್ಡ ಪ್ರಮಾಣದ ಮೇಲೆ ಸುರುವು ಮಾಡುವಷ್ಟು ದೇಶದಲ್ಲಿ ಸಿದ್ಧತೆಯು ಇಲ್ಲೆಂಬದನ್ನು ನಾನು ಬಲ್ಲೆನು. ಸ್ವದೇಶೀ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸಲಿಕ್ಕೆ ಬೇಕಾಗುವ ಸಂಘಶಕ್ತಿಯನ್ನೂ ಯುಕ್ತಿಪ್ರಯುಕ್ತಿಗಳನ್ನೂ ಶಿಸ್ತನ್ನೂ ದೇಶವು ವ್ಯಕ್ತಮಾಡಿದರೆ ಕಾಯದೆಭಂಗದ ಕಾರ್ಯಕ್ರಮವನ್ನು ಸುರಕ್ಷಿತ ರೀತಿಯಿಂದ ಉಪಕ್ರಮಿಸಬಹುದು.

ಈ ಪ್ರಕಾರದ ಸಿದ್ಧತೆಯನ್ನು ರಾಷ್ಟ್ರವು ತೋರಿಸೇತೀರುವದೆಂದು ನಂಬಿ ಅದಕ್ಕಾಗಿ ಪರಮಾತ್ಮನನ್ನು ನಿಶ್ಚಲ ಭಕ್ತಿಯಿಂದ ಪ್ರಾರ್ಥಿಸುವಾ.

# ಗಜೇಂದ್ರಮೋಕ್ಷ

'ಈಶ್ವರನು ನಮ್ಮ ಮುಖ್ಯ ಜನಕನಿರುವನು' ಎಂಬದು ಸರ್ವಸಮ್ಮತವಾದ ಸಂಗತಿಯು. ಆದರೆ ನಾವೆಲ್ಲರೂ ಅಣ್ಣತಮ್ಮಂದಿರು ಇರುವೆವೆಂಬದರ ವಿಶ್ವಾಸವು ಮಾತ್ರ ಪ್ರತಿಯೊಬ್ಬನಿಗೆ ಆಗುವದಿಲ್ಲ. ಸತ್ಯಾಗ್ರಹಿಯಾದವನು 'वसुधैव कुटुंबकम्' ( ಅಂದರೆ ಇಡೀ ಜಗತ್ತೇ ತನ್ನ ಕುಟುಂಬವೆಂದು ತಿಳಿಯೋಣ) ಎಂಬ ನಿಯಮವನ್ನು ಪಾಲಿಸುತ್ತಾನೆ. ಇದರಿಂದ ಅವನಿಗೆ ಯಾರೂ ವೈರಿಯು ಇರುವದಿಲ್ಲ. ಹೀಗೆಂದರೆ ಅವನ ಸಂಗಡ ಯಾರೂ ವೈರತ್ವವನ್ನು ಬೆಳಿಸುವದಿಲ್ಲೆಂಬ ಅರ್ಥವಲ್ಲ. ಅವನಿಗೆ ಬಹಳಮಂದಿ ಶತ್ರುಗಳಾಗಬಹುದು. ಅಧರ್ಮದಿಂದ ನಡೆಯುವವರೆಲ್ಲರೂ, ತಮ್ಮ ಮಾರ್ಗದಲ್ಲಿ ಧರ್ಮಾಚರಣೆಗಳು ವಿಘ್ನರೂಪಿಗಳಾಗಿರುವರೆಂದು ತಿಳಿಯುತ್ತಾರೆ. ಆದರೆ ಸತ್ಯಾಗ್ರಹಿಯು ತನ್ನ ಮನಸ್ಸಿನಲ್ಲಿ ಯಾರ ವಿಷಯಕ್ಕಾದರೂ, ಪ್ರೇಮವನ್ನು ಬಿಟ್ಟು, ಅನ್ಯಭಾವನೆಯನ್ನು ತಾಳುವದಿಲ್ಲ. ತನ್ನ ಬಾಂಧವರು ದುರ್ವಾಸನೆಗೆ ಒಳಗಾಗಿರುವರೆಂದು ತಿಳಿದಾಗೆಲ್ಲ, ಸತ್ಯಾಗ್ರಹಿಯು ಅವರನ್ನು ಪ್ರೀತಿಯಿಂದ ಅವಶ್ಯವಾಗಿ ವಿರೋಧಿಸುತ್ತಾನೆ. ಕೆಲವು ಪ್ರಸಂಗಗಳಲ್ಲಿ ಪ್ರೇಮವು ಕಠಿಣವಾಗಿ ತೋರುತ್ತದೆ. ದೌರ್ಬಲ್ಯದಲ್ಲಿ ಅಥವಾ ವ್ಯಾಮೋಹದಲ್ಲಿ ಇರುವ ಮಾರ್ದವವು ಪ್ರೇಮದಲ್ಲಿ ಇರುವದಿಲ್ಲ. ಆದರೆ ಸತ್ಯಾಗ್ರಹಿಯು ತನ್ನ ಬಾಂಧವರನ್ನು ವಿರೋಧಿಸಿದರೂ ಸಹ, ಅವರ ಹಿತವನ್ನೇ ಬಯಸುವನು. ಮತ್ತು ಆ ವಿರೋಧವಾದರೂ ಸ್ವಂತ ಕಷ್ಟಸಹನದಿಂದಲೇ ವ್ಯಕ್ತಮಾಡಲ್ಪಡುವದು. ಪ್ರೇಮದಿಂದೊಡಗೂಡಿದ ವಿರೋಧವು ಯಾವಾಗಲೂ ಸಫಲವಾಗುತ್ತದೆ. ಆದರೆ ಫಲವಾಗಲಿಕ್ಕೆ ಸ್ವಲ್ಪ ವಿಲಂಬವಾದರೂ ಆಗಬಹುದು; ವಿಜಯವು ಮಾತ್ರ ನಿಶ್ಚಿತವಾದದ್ದು. ಮತ್ತು ನಿಜವಾಗಿ ನೋಡಿದರೆ ಇದರಿಂದ ಶತ್ರುಗಳಿಗಾದರೂ ಜಯವು ಸಿಕ್ಕಂತೆಯೇ ಸರಿ ಯಾಕಂದರೆ ಆ ಅವಿಚಾರಿಯ ಕುತ್ಸಿತಭಾವನೆಗಳೆಲ್ಲವೂ ದೂರಾಗುವವು. ಅವನ ಆತ್ಮಕ್ಕಾದರೂ ಶಾಂತಿಯು ಸಿಗುವದು. ಇದಾದರೂ ಒಂದು ಅದ್ವಿತೀಯವಾದ ಜಯವೇ ಸರಿ. ಸತ್ಯಾಗ್ರಹ ಯುದ್ಧವು ಧರ್ಮಯುದ್ಧವೇ. ಆದ್ದರಿಂದ ಇದರ ಪರಿಣಾಮವು ಸರ್ವರಿಗೂ ಕ್ಷೇಮಕರವಾಗುವದು. ಯಾರಾದರೂ ಇಬ್ಬರು ಪರಸ್ಪರ ಸ್ವಾರ್ಥವಶರಾಗಿ ಜಗಳಾಡುತ್ತಿದ್ದಾಗ್ಗೆ ಒಬ್ಬನಿಗೆ ಜಯವೂ ಇನ್ನೊಬ್ಬನಿಗೆ ಅಪಜಯವೂ ಆಗುವದು. ಮತ್ತು ಈಶ್ವರನು ತಟಸ್ಥನಾಗಿ ನೋಡುತ್ತ ಅವರವರ ಕರ್ಮಾನುಸಾರವಾಗಿ ನಿರ್ಣಯಿಸುವನು. ಆದರೆ ಒಂದು ಪಕ್ಷವು ಸ್ವಾರ್ಥವನ್ನೆಲ್ಲ ಬಿಟ್ಟು ಧರ್ಮದಮೇ

ಲಿಯೇ ಅವಲಂಬಿಸಿದಾಗ, ಪರಮಾತ್ಮನು ಯಾವಾಗಲೂ ಸತ್ಪಕ್ಷಪಾತಿಯಾಗಿರುವದರಿಂದ, ಆ ಧರ್ಮಪಕ್ಷಕ್ಕೆ ಸೇರುವನು. ಸ್ವಾರ್ಥವನ್ನು ತ್ಯಜಿಸಿ, ಧರ್ಮವನ್ನು ಅನುಸರಿಸುವದು ಬಹು ಕಠಿಣ. ಧರ್ಮನಿಷ್ಠರಾದವರ ಪರೀಕ್ಷೆಮಾಡುವದರಲ್ಲಿ ಕೂಡ ಈಶ್ವರನು ಕಡಿಮೆಮಾಡುವದಿಲ್ಲ. ಧರ್ಮನಿಷ್ಠರಾದವರಿಗೂ ಅವರನ್ನು ವಿರೋಧಿಸುವವರಿಗೂ ಹಿತವನ್ನು ಮಾಡುವದೇ ಪರಮಾತ್ಮನ ನೀತಿಯಾದುದರಿಂದ, ಈ ಧರ್ಮಯುದ್ಧವು ಬಹುಕಾಲ ನಡೆಯುವದು. ಧರ್ಮನಿಷ್ಠರ ಪಾಪವೆಲ್ಲವೂ ತೊಳೆದು ಹೋದಕೂಡಲೇ ಅವರಿಗೆ ಜಯವು ಸಿಗುವದು. ಇಬ್ಬರೂ ವಿರೋಧಿಗಳು ತಮ್ಮ ತಮ್ಮ ವಿರೋಧವನ್ನು ನಿಲ್ಲಿಸಿ, ಮೊದಲಿನಂತೆ ಪರಸ್ಪರರು ಅಣ್ಣತಮ್ಮಂದಿರೆಂದು ತಿಳಿದು ವರ್ತಿಸುವದೇ, ಅವರ ಜಯದ ಮುಖ್ಯಭಾಗವು. ಈ ತತ್ವವು ಪುರಾಣಗಳಲ್ಲಿ ' ಗಜೇಂದ್ರಮೋಕ್ಷ ' ದ ಕಥೆಯಲ್ಲಿ ಹೇಳಲ್ಪಟ್ಟಿದೆ.

ಇಂದ್ರನ ದರಬಾರದಲ್ಲಿ ಹಾಹಾ, ಹೂಹೂ, ಎಂಬ ಇಬ್ಬರು ಗಾಯಕರಿದ್ದರು. ಎಲ್ಲಿಯವರೆಗೆ ಅವರ ಹೃದಯದಲ್ಲಿ ಮಾತ್ಸರ್ಯವು ಪ್ರವೇಶಮಾಡಿದ್ದಿಲ್ಲವೋ ಅಲ್ಲಿಯವರೆಗೆ ಅವರು ಬಹಳ ಪ್ರೇಮದಿಂದ ಇರುತ್ತಿದ್ದರು. ಆದರೆ ಅವರ ದುರ್ದೈವದಿಂದ ಅವರಲ್ಲಿ ಸ್ಪರ್ಧೆಯುಂಟಾಯಿತು. ಪ್ರತಿಯೊಬ್ಬನ ಮನಸ್ಸಿನಲ್ಲಿ ತಾನು ಶ್ರೇಷ್ಠನು ಮತ್ತು ತನಗೆ ಶ್ರೇಷ್ಠಸ್ಥಾನವು ದೊರೆಯಬೇಕೆಂಬ ಭಾವನೆಯು ಉತ್ಪನ್ನವಾಯಿತು. ಈಶ್ವರನ ದೃಷ್ಟಿಯಿಂದ ಎಲ್ಲರೂ ಸಮಾನರು, ಮತ್ತು ನಿಮ್ಮಿಬ್ಬರಲ್ಲಿ ಯಾವತರದ ಭೇದವೂ ನನಗೆ ಕಾಣಬರುವದಿಲ್ಲೆಂದು ಅವರ ಸ್ವಾಮಿಯಾದ ದೇವೇಂದ್ರನು ಹೇಳಿದರೂ ಸಹ ಅವರಿಗೆ ಸಮಾಧಾನವೆನಿಸಲಿಲ್ಲ. ಕಟ್ಟಕಡೆಗೆ ಇಂದ್ರನು ಅವರನ್ನು ದೇವಲ ಋಷಿಯ ಹತ್ತರ ಕಳುಹಿಸಿದನು. ಆ ಋಷಿಯು ಮಹಾ ಜ್ಞಾನಿಯಾಗಿದ್ದನು. ಅವನಿಗೆ ಎಲ್ಲವೂ ತಿಳಿಯುತ್ತಿತ್ತು. ಆದರೆ ಅವನು ಸಂಪೂರ್ಣ ಜ್ಞಾನಿಯಾಗಿದ್ದರೂ ಬಹುತರವಾಗಿ ಮೌನವನ್ನು ತಾಳುತ್ತಿದ್ದನು. ಅವನ ಮೌನವನ್ನು ನೋಡಿ, ಈರ್ಷೆಯಿಂದಲೂ ಮತ್ಸರದಿಂದಲೂ ತುಂಬಿದ ಆ ಈರ್ವರು "ಇವನು ಮಂದಮತಿಯಾಗಿರುವನು. ಇವನಿಗೆ ಏನೂ ತಿಳಿಯುವದಿಲ್ಲ." ಎಂದು ಅಂದರು, ಆಗ ಮುನಿಯು ತನ್ನ ಮೌನವನ್ನು ಬಿಟ್ಟು ದಯೆಯಿಂದ ಮಾತನಾಡಿದನು:—ನೀವು ಎಂಥ ಮೂರ್ಖರು! ಈರ್ಷೆಯಿಂದಲೂ, ಮಾತ್ಸರ್ಯದಿಂದಲೂ ನಿಮ್ಮ ಬುದ್ಧಿಯು ಕೆಟ್ಟಿರುವದು. ನಿಮ್ಮ ಹಣೇಬರಹದಲ್ಲಿ ಏನು ಬರೆದಿರುವದೆಂಬುದು ನಿಮಗೆ ಗೊತ್ತಿಲ್ಲ ಅದು ಗೊತ್ತಿದ್ದಲ್ಲಿ ನೀವು ಮದೋನ್ಮತ್ತರಾಗುತ್ತಿದ್ದಿಲ್ಲ. ದೇವರು ಪ್ರತಿಯೊಬ್ಬರ ಭವಿಷ್ಯವನ್ನು ಬರೆದಿಟ್ಟಿರುವನು; ಮತ್ತು ಕರ್ಮಗಳ ಫಲವನ್ನು ತೋರಿಸುವದರ ಸಲುವಾಗಿ ನಿಮಗೆ ನಾನು ಕ್ರೂರನೆಂದು ತೋರಿದರೂ ಕೂಡ, ನನ್ನ ದೃಷ್ಟಿಗೆ ಕಾಣುವವರೆಗೆ, ನನಗೆ ಗೊತ್ತಿದ್ದ ನಿಮ್ಮ ಭವಿಷ್ಯವನ್ನೆಲ್ಲ ನಿಮಗೆ ತಿಳಿಸಬೇಕೆಂದು ಇಚ್ಛಿಸುವೆನು. ನೀವು ಬಾಂಧವರಿದ್ದರೂ ಪರಸ್ಪರ ಮತ್ಸರವನ್ನು ತಾಳಿರುವಿರಿ. ಇದರ ಪರಿಣಾಮದಿಂದ ನೀವಿಬ್ಬರು ಸ್ವರ್ಗದಿಂದ ಕೆಳಗೆ ಬಿದ್ದು ತ್ರಿಕೂಟ ಪರ್ವತದ ಹತ್ತರ ಪಶುಯೋನಿಯಲ್ಲಿ ಹುಟ್ಟುವಿರಿ. ನಿಮ್ಮಲ್ಲಿ ಒಬ್ಬನು ಅರಣ್ಯದಲ್ಲಿ ವಾಸಿಸುವ ಆನೆಯೂ, ಇನ್ನೊಬ್ಬನು ಸರೋವರದಲ್ಲಿ ಇರುವ ಮೊಸಳೆಯೂ ಆಗುವಿರಿ. ಮತ್ತು ಅಲ್ಲಿಯವರೆಗೆ ನೀವು ಪಶುತುಲ್ಯ ವೈರಭಾವವನ್ನು ತಾಳುವಿರಿ; ಬಾಂಧವರಿದ್ದರೂ ಶತ್ರುಗಳಾಗುವಿರಿ.

ಆಯಿತು, ಇಬ್ಬರ ಮದವೂ ಇಳಿದು ಹೋಯಿತು! ಇಬ್ಬರಿಗೂ ಕ್ಷಣಿಕ ಪಶ್ಚಾತ್ತಾಪವಾಯಿತು. ಈರ್ವರೂ ಆ ಋಷಿಗಳ ಪಾದಗಳ ಮೇಲೆ ಬಿದ್ದು ನಮ್ಮಮೇಲೆ ದಯೆ ತೋರಿಸಬಾರದೇ ಎಂದು ಅನ್ನಹತ್ತಿದರು. "ಕರ್ಮದ ಫಲವು ನಿಶ್ಚಲವಾದದ್ದು. ಅದರಲ್ಲಿ ಯಾರಿಗೂ ದಯೆ ತೋರಿಸಲಿಕ್ಕೆ ಶಕ್ಯವಿಲ್ಲ. ಆದರೆ ಕರ್ಮದ ಫಲವಾದರೂ ಕಲ್ಯಾಣಕರವಿರುತ್ತದೆ. ಅದು ಎಷ್ಟು ಕಠೋರವಿರುವದೋ ಅಷ್ಟೇ ದಯಾಮಯವಾಗಿರುವದು. ಕರ್ಮದ ಫಲವು ದಂಡಿಸುವದಕ್ಕೆ ಅಲ್ಲ. ಆದರೆ ದುಷ್ಟರನ್ನು ದುರ್ಮಾರ್ಗದಿಂದ ಮುಕ್ತಮಾಡುವ ಸಾಮರ್ಥ್ಯವು ಅದರಲ್ಲಿ ಇರುವದು. ನಿಮ್ಮ ಇಬ್ಬರೊಳಗೆ ಒಬ್ಬನ ಮನಸ್ಸಿನಲ್ಲಿ ಪಶ್ಚಾತ್ತಾಪಬುದ್ಧಿಯು ಜಾಗೃತವಾಗಿದ್ದು ಅವನು ಧರ್ಮಮಾರ್ಗದಿಂದ ನಡೆಯುತ್ತಾನೆ. ಅವನು ಸಂಕಟ ಸಮಯದಲ್ಲಿ ಈಶ್ವರನನ್ನು ಸ್ಮರಿಸುವನು. ಇನ್ನೊಬ್ಬನ ಮನಸ್ಸಿನಲ್ಲಿ ಮತ್ಸರಭಾವವು ತುಂಬಿರುವದರಿಂದ ನೀಚನಾಗಿಯೇ ಉಳಿಯುವನು. ಆದರೆ ಅವನ ಉದ್ಧಾರವಾದರೂ ಆಗುವದು. ಅವನು ತನ್ನ ಬಾಂಧವನಗೂಡ ವಿರೋಧಿಸುವಾಗ ಅವನ ಹೃದಯದಲ್ಲಿ ಬಾಂಧವನ ಶ್ರದ್ಧೆಯು ಪ್ರವೇಶಿಸಿ ಅವನಲ್ಲಿಯೂ ಆಸ್ತಿಕ್ಯ ಬುದ್ಧಿಯು ಹುಟ್ಟುವದು. ಆ ಆಸ್ತಿಕತೆಯಿಂದ ಅವನ ಉದ್ಧಾರವಾದರೂ ಆಗುವದು." ಎಂದು ಮುನಿಯು ಅಂದನು.

ಭವಿಷ್ಯದ ಈ ಸ್ಥಿತಿಯನ್ನು (ಹಾಡನ್ನು) ಸ್ಪಷ್ಟವಾಗಿ ಹೇಳಿ ಆ ಮುನಿರಾಜನಾದ ದೇವಲನು ಪುನಃ ಮೌನದಲ್ಲಿ ಮಗ್ನನಾದನು. ಮತ್ತು ಹಾಹಾ, ಹೂಹೂ ಈ ಈರ್ವರು ಸ್ವರ್ಗದಿಂದ ಕೆಳಗೆ ಬಿದ್ದರು. ಒಬ್ಬನು ಅರಣ್ಯದಲ್ಲಿರುವ ಸರ್ವಗಜಗಳಿಗೆ ರಾಜನಾದನು. ಇನ್ನೊಬ್ಬನು ಸರೋವರದಲ್ಲಿ ಒಂದು ದೊಡ್ಡ ಮೊಸಳೆಯಾದನು. ಈರ್ವರಿಗೂ ಪೂರ್ವಜನ್ಮದ ವಿಸ್ಮರಣೆಯಾಯಿತು. ಪರಸ್ಪರವಿದ್ದ ಬಂಧುತ್ವವು ಮರೆತುಹೋಯಿತು. ಮೊಸಳೆಗೆ ಆನೆಯನ್ನು ಭಕ್ಷಿಸುವ ಇಚ್ಛೆಯು ಹುಟ್ಟಿತು. ಮತ್ತು ಆನೆಯು ಮೊಸಳೆಗೆ ಭಯಪಡಹತ್ತಿತು. ಆನೆಯು ತನ್ನ ಪಶುಗುಣಕ್ಕನುಸರಿಸಿ ವಿಲಾಸದಲ್ಲಿ ಮಗ್ನವಾಗ ತೊಡಗಿತು. ತನ್ನ ವೈರಿಯು ಯಾವ ಸ್ಥಳದಲ್ಲಿ ಇರುವನು ಮತ್ತು ಆ ವೈರಿಯ ಬಲವು ಎತರಲ್ಲಿ ಉಂಟು ಎಂಬ ಅರಿವು, ವಿಲಾಸತತ್ಪರತೆಯಲ್ಲಿ ಇಲ್ಲದಾಗ್ಗೆ, ಆ ಗಜವು ಸುಂದರ ಕರಿಣಿಗಳನ್ನೊಡಗೂಡಿ ಸರೋವರದಲ್ಲಿ ಪ್ರವೇಶಮಾಡಿತು. ಆಯಿತು; ಮೊಸಳೆಗೆ ಯೋಗ್ಯ ಸಮಯವು ಒದಗಿತು. ಅದು ಆ ಗಜರಾಯನ ಪಾದವನ್ನು ಗಟ್ಟಿಯಾಗಿ ಹಿಡಿಯಿತು. ಗಜವು ಪಾರಾಗಲಿಕ್ಕೆ ಬಹು ಪ್ರಯಾಸಪಟ್ಟಿತು. ಮತ್ತು ಏಕಸತತವಾಗಿ ಕಿರ್ ಎಂದು ಒದರಹತ್ತಿತು. ಕರಿಣಿಗಳಾದರೂ ಒದರಿದವು. ಇಷ್ಟಾದರೂ ಆನೆಯ ಸಾಮರ್ಥ್ಯವು ನೀರಿನಲ್ಲಿ ನಡೆಯಲಿಲ್ಲ. 'गजोग्रा-कर्षते तीरं ग्राहश्चाकर्षते जलम्' ಎಂಬಂತೆ, ಇತ್ತ ಆನೆಯು ಭೂಮಿಯ ಕಡೆಗೆ ಭರದಿಂದ ಓಡಹತ್ತಿತು. ಅತ್ತ ಮೊಸಳೆಯು ನೀರಿನ ಕಡೆಗೆ ಎಳೆಯಹತ್ತಿತು. ಹೀಗೆ ಅವುಗಳ ಯುದ್ಧವು ಹತ್ತು ಸಹಸ್ರ ವರ್ಷಗಳವರೆಗೆ ಸಾಗಿತು. ಕಟ್ಟಕಡೆಗೆ ಕೃಶ ಶರೀರವುಳ್ಳ ಮೊಸಳೆಯು ವಿಶಾಲವಾದ ಆನೆಯನ್ನು ಕಮಲವನದಲ್ಲಿಯೂ, ಕೆಸರಿನಲ್ಲಿಯೂ ಒಯ್ದು ಒಗೆಯಿತು. ಈಗಂತೂ ಆನೆಗೆ ಯಾವ ಆಶೆಯೂ ಉಳಿಯಲಿಲ್ಲ. ಹೃತ್ಕಮಲದಲ್ಲಿ ಇರುವ ಪರಮಾತ್ಮನೊಬ್ಬನೇ ತನ್ನನ್ನು ರಕ್ಷಿಸಲಿಕ್ಕೆ ಸಮರ್ಥನಿರುವನೆಂಬ ಜ್ಞಾನವು ಗಜರಾಜ

೧೬೪ ಪಾನಿನಲ್ಲಿ ನೋಡಿರಿ.

# ಕನ್ನಡ ನವಜೀವನ.

ವೈಶಾಖ ಶುದ್ಧ ೮ ಗುರುವಾರ ಶಕೆ ೧೮೪೪.

## ಶೌರ್ಯವೆಂದರೇನು ?

ಶೌರ್ಯವು ಆತ್ಮನ ಒಂದು ಗುಣವು-- ಆತ್ಮನ ಧರ್ಮವು. ಅಥವಾ ಆತ್ಮಿಕ ಶಕ್ತಿ. ಹೀಗೆ ಆಧ್ಯಾತ್ಮಿಕ ಪ್ರಕಾರದ ಹೆಸರಾದರೂ ಶೌರ್ಯವೆಂದು ಹೇಳಬಹುದು. ಇದು ಎರಡು ರೀತಿಯಿಂದ ಪ್ರಕಟವಾಗುತ್ತದೆ. ಆತ್ಮನ ದ್ವಾರದಿಂದ ಮತ್ತು ಶರೀರದಿಂದ. ಇದು ಆತ್ಮನ ದ್ವಾರದಿಂದ ಪ್ರಕಟವಾದಾಗ ಇದಕ್ಕೆ ಅಹಿಂಸೆಯೆಂದು ಹೆಸರು. ಮತ್ತು ಶರೀರ ದ್ವಾರ ದಿಂದ ಪ್ರಕಟವಾದಾಗ ಇದಕ್ಕೆ ವೀರತ್ವ ಎಂದು ಅನ್ನುವರು. ಯಾರಿಗಾದರೂ ದುಃಖವನ್ನಾಗಲೀ, ಹಾನಿಯನ್ನಾಗಲೀ, ಮಾಡಲಿಕ್ಕೆ, ವೀರತ್ವದ ಪ್ರಯೋಗವನ್ನು ಮಾಡಿದರೆ, ಅದು ವೀರತ್ವವಲ್ಲ. ಆಗ ಅದಕ್ಕೆ ಹಿಂಸೆಯೆಂದು ಹೆಸರು ಬರುತ್ತದೆ. ಶಾರೀರಿಕ ಮೋಹದ ಸಲುವಾಗಿಯಾಗಲೀ, ಸ್ವಾರ್ಥದ ಸಲುವಾಗಿಯಾಗಲೀ ಮಾಡಲ್ಪಟ್ಟ ಹಿಂಸೆಗೆ ದುಷ್ಟತ್ವ ಅಥವಾ ಅಂಜುಬುರುಕತನವೆಂಬ ಹೆಸರು.

ಮೋಹ ಮತ್ತು ಸ್ವಾರ್ಥವು ಅಜ್ಞಾನದಿಂದ ಹುಟ್ಟುತ್ತವೆ. ಆದ್ದರಿಂದಲೇ, ಅಜ್ಞಾನಿಯಾದವನೇ ದುಷ್ಟನಾಗಲೀ ಅಂಜುಬುರುಕನಾಗಲೀ ಆಗುತ್ತಾನೆ. ಅಂಜುಬುರುಕತನಕ್ಕಿಂತ ಹಿಂಸೆಯು ಶ್ರೇಷ್ಠವಾದದ್ದು; ಯಾಕಂದರೆ ಹಿಂಸೆಯೆಂದರೇನು? ವಿಕೃತಿಯನ್ನು ಹೊಂದಿದ ವೀರತ್ವವು. ಅದು ಅಂಜುಬುರುಕತನಕ್ಕಿಂತ ಸಾವಿರ ಪಾಲಿಗೆ ಬೇಕು. ಅದರಲ್ಲಿ ದೈಹಿಕ ಮೋಹವಾಗಲಿ, ಸ್ವಾರ್ಥವಾಗಲೀ ಎಷ್ಟೂ ಇರುವದಿಲ್ಲ. ಕೆಟ್ಟದಾಗಿದ್ದರೂ ಚಿಂತೆಯಿಲ್ಲ, ಅದು ಒಂದು ರೀತಿಯಿಂದ ಸಾಹಸದ ಅಥವಾ ಯುದ್ಧ ಕೌಶಲ್ಯದ ಪ್ರದರ್ಶನವಿರುತ್ತದೆ. ಆದರೆ ಅದಾದರೂ ಎಂದೂ ಶ್ರೇಷ್ಠವಾಗಲಾರದು. ಅದರಲ್ಲಿ ಇರುವ ಗುಣವು ಇಷ್ಟೇ-- ಕೇವಲ ಅಂಜುಬುರುಕುತನಕ್ಕಿಂತ ಉಚ್ಚತರದ ಕೆಡಕು. ಕೆಡಕು ಏಕೆಂದರೆ ಅದರಿಂದ ಎರಡನೇಯವರಿಗೆ ದುಃಖವಾಗಲೀ, ಪೀಡೆಯಾಗಲೀ ಆಗುವದಲ್ಲದೆ, आत्मनः प्रतिकूलानि न परेषां समाचरेत्। ಎಂಬ ತತ್ವಕ್ಕೆ ಅದು ವಿರುದ್ಧವಾಗಿರುವದು.

ಹಿಂಸೆಗೆ ಆತ್ಮರಕ್ಷಣೆಯಾಗಲೀ ಅಥವಾ ಎರಡನೆಯವರ ರಕ್ಷಣೆಯಾಗಲೀ ಈ ಎರಡೇ ಕಾರಣಗಳು. ಆತ್ಮರಕ್ಷಣೆಯನ್ನು ಮನುಷ್ಯನು ಯಾಕೆ ಮಾಡುವನು? ಮೃತ್ಯುವಿನ ಭಯದಿಂದಾಗಲೀ, ತನ್ನ ಜೀವವು ಉಪಯೋಗಿಯೆಂದು ತಿಳಿದುಕೊಂಡಾಗಲಿ. ಮರಣದ ಭಯವೆಂದರೆ ಅಂಜುಬುರುಕುತನವು. ಅದು ಅಜ್ಞಾನದಿಂದ ಹುಟ್ಟಿರುವದರಿಂದಲೇ ಮನುಷ್ಯನ ಅಧಃಪತನಕ್ಕೆ ಕಾರಣವಾಗುವದು. ಅದನ್ನು ನಾವು ಎಲ್ಲರೀತಿಯಿಂದಲೂ ಬಿಟ್ಟುಬಿಡತಕ್ಕದ್ದು. ಆದರೆ ತನ್ನ ಜೀವವು ಉಪಯೋಗಿಯಾದದ್ದೆಂದೂ, ಆದ್ದರಿಂದಲೇ ಅವಶ್ಯವೆಂದೂ ತಿಳಿದುಕೊಂಡು ಹಿಂಸೆಯನ್ನು ಮಾಡಿದರೆ, ಅದರಲ್ಲಿ ಏನಾದರೂ ಸ್ವಲ್ಪ ಅರ್ಥವುಂಟು.

ಒಬ್ಬ ಮನುಷ್ಯನು ನಿಮ್ಮ ಮೇಲೆ ಹಲ್ಲೆಯನ್ನು ಮಾಡಲಿಕ್ಕೆ ಬಂದಿರುವನೆಂದು ತಿಳಿಯಿರಿ. ನೀವು ಅಂಜುಬುರುಕರಲ್ಲ-- ಶರೀರ ಅಥವಾ ಪ್ರಾಣದ ಮೋಹವಾದರೂ ನಿಮಗಿಲ್ಲ. ಆದರೆ ನಿಮಗೆ, ನಿಮ್ಮ ಜೀವನದ ಉಪಯೋಗವು, ಅವನ ಜೀವಕ್ಕಿಂತ ಹೆಚ್ಚೆಂದು ಅನಿಸುತ್ತದೆ. ಆದ್ದರಿಂದ ನೀವು ಅವನಮೇಲೆ ಪ್ರಹಾರಮಾಡಿ ಅವಶ್ಯ ಬಿದ್ದರೆ, ಅವನ ಪ್ರಾಣವನ್ನಾಗಲಿ ಹರಣ ಮಾಡಿ, ನಿಮ್ಮ ರಕ್ಷಣವನ್ನು ಮಾಡಿಕೊಳ್ಳಬಲ್ಲಿಕ್ಕೆ ಬಯಸುತ್ತೀರಿ. ಈ ಹಿಂಸೆಯು ಅನುಚಿತವೇ? ಇದರ ಬಗ್ಗೆ ವಿಚಾರ ಮಾಡೋಣ. ಮೊದಲು ಮನುಷ್ಯನು ಸ್ವಭಾವದಿಂದ, ಕಾರಣವಿಲ್ಲದೆ, ಎರಡನೇಯವರಮೇಲೆ ಏರಿ ಬರುವದಿಲ್ಲ. ಯಾವನಾದರೂ ಹಾಗೆ ಮಾಡಿದರೆ ಅವನು ತರುಣ ಅಥವಾ ದರೋಡೆಯವರ ಪಂಕ್ತಿಯಲ್ಲಿಯಾಗಲಿ ಅತ್ಯಾಚಾರಿ ಅಥವಾ ವ್ಯಭಿಚಾರಿಗಳ ಮಾಲೆಯಲ್ಲಾಗಲಿ ಸೇರಲಿಕ್ಕೆ ಯೋಗ್ಯನಾಗಿರುವನು. ಆ ಎರಡೂ ಸ್ಥಿತಿಗಳಲ್ಲಿಯು ಮೂಲ ಕಾರಣವು ಅಜ್ಞಾನವೇ. ಈ ಅಜ್ಞಾನದ ಅಥವಾ ಪಾಪದ ಭಾಗಿಗಳಾದವರು ಯಾರು? ನಾವೇ ಅಥವಾ ನಮ್ಮ ಸಮಾಜವೇ. ನಾವು ಅವರಿಗೆ ಜ್ಞಾನ ದಾನವನ್ನು ಮಾಡುವ ಪ್ರಯತ್ನವನ್ನು ಮಾಡಿಲ್ಲ. ಆದರೆ ನಾವು ಅವರ ಅಪರಾಧಕ್ಕೆ ದಂಡನೆಯನ್ನು ಮಾತ್ರ ಮಾಡುತ್ತೇವೆ. ಇದು ನ್ಯಾಯವೇ? ಎರಡನೇ ಸಂಗತಿಯೆಂದರೆ, ಅವನ ಮೃತ್ಯುವಿನಿಂದ ಒಬ್ಬ ದುರಾಚಾರಿಯು ಅಥವಾ ಅತ್ಯಾಚಾರಿಯು ನಾಶವು ಈ ಜಗತ್ತಿನಲ್ಲಿ ಆಗುವದು. ಆದರೆ, ಅದರಿಂದ ಉತ್ಪನ್ನವಾಗುವಂಥ ಹಿಂಸೆಯ ಭಾವನೆಯಿಂದ, ಎರಡನೇ ಎಷ್ಟೋ ಅತ್ಯಾಚಾರಿಗಳು ಹುಟ್ಟುವದಿಲ್ಲವೆ? ಇದರಿಂದ, ನಾವು ಒಂದು ಉಪಯೋಗಿ ಜೀವನವನ್ನು ರಕ್ಷಿಸುವದರಿಂದ, ಎಷ್ಟೋ ದುರಾಚಾರಿಗಳ ಸಂಖ್ಯೆಯನ್ನು ಬೆಳೆಸಿದಂತೆ ಆಗುವದಿಲ್ಲವೋ? ಇದರ ವಿರುದ್ಧವಾಗಿ ನಾವು ಅಹಿಂಸಾತ್ಮಕ ಉಪಾಯಗಳಿಂದ ನಮ್ಮ ರಕ್ಷಣೆ ಮಾಡಿಕೊಳ್ಳಲು ಅಸಮರ್ಥರಾಗಿ, ಅವರ ಕೈಯಿಂದ ಮಡಿದರೆ, ಈ ನಮ್ಮ ಆತ್ಮಯಜ್ಞದಿಂದ, ಜಗತ್ತಿಗೆ ಹೆಚ್ಚು ಪ್ರಕಾಶವು ಸಿಗುವದಿಲ್ಲವೇ? ಅದೇ ಕಾಲಕ್ಕೆ ಅತ್ಯಾಚಾರಿಯ ಮನಸ್ಸಿನಮೇಲೆ, ಇದರ ಪ್ರಭಾವವು ಬೀಳದಿದ್ದರೂ, ಸ್ವಲ್ಪಕಾಲದಲ್ಲಿ, ಅವನ ಪಿತ್ತವು ಇಳಿದ ಮೇಲೆ, ಅವನ ಪಶು ವೃತ್ತಿಯು ಶಾಂತಿಯನ್ನು ಹೊಂದಿದಮೇಲೆ ಕೂಡ ಇದರ ಪರಿಣಾಮವು ಆಗುವದಿಲ್ಲವೇ? ಇದರ ಪ್ರಭಾವದಿಂದ ಸಮಾಜದಲ್ಲಿಯು ಅತ್ಯಾಚಾರವೃತ್ತಿಯು ವೇಗವು ಕಡಿಮೆಯಾಗುವದಿಲ್ಲವೇ? ಸ್ವಲ್ಪ ವಿಚಾರಮಾಡಿದರೆ, ಬುದ್ಧಿವಂತನಿಗೆ ಈ ಬಲಿದಾನದಿಂದ ಜಗತ್ತಿಗೆ ಎಷ್ಟು ಕಲ್ಯಾಣವಾಗುವದೆಂಬದು ತಿಳಿದುಬರುತ್ತದೆ. ಇಂಥ ಪ್ರಸಂಗದಲ್ಲಿ ಹಿಂಸೆಯನ್ನು ಮಾಡುವದು ಸಮಾಜದ ದೃಷ್ಟಿಯಿಂದ ಯೋಗ್ಯವಲ್ಲ. ಆದರೆ ಇಂಥ ಪ್ರಸಂಗದಲ್ಲಿ ನಾಶ ಮಾಡುವದು ಮೂರನೇ ವರ್ಗದಲ್ಲಿ ಸೇರುವದು.— ಪ್ರೇಮದಿಂದಾಗಲೀ, ಸಹನಶೀಲತೆಯಿಂದಾಗಲಿ ಮೊದಲನೇದು; ಅಜ್ಞಾನವನ್ನು ದೂರ ಮಾಡುವದು ಎರಡನೇದು. ಇವೆರಡೂ ನಿಷ್ಫಲವಾದಮೇಲೆ ಮೂರನೆಯದೆಂದರೆ ಪ್ರಹಾರವು. ಆದರೆ ಈ ಪ್ರಹಾರಕ್ಕಿಂತ ಶ್ರೇಷ್ಠ ಮಾರ್ಗವೆಂದರೆ ಆತ್ಮ ಬಲಿದಾನವು. ಇದೇ ಅಹಿಂಸೆಯು, ಇದೇ ನಿಜವಾದ ಶೌರ್ಯವು.

ಅಹಿಂಸೆಯಲ್ಲಿ ಅಂಜುಬುರುಕುತನಕ್ಕೆ ಆಸ್ಪದವಿಲ್ಲ. ಅಹಿಂಸೆಯ ಮೊದಲನೆಯ ಪಾಠವು ನಿರ್ಭಯತೆಯೋ. ಸಹಿಷ್ಣುತೆಯೂ, ಕ್ಷಮೆಯೂ, ಧೈರ್ಯವೂ ಅಹಿಂಸೆಯ ಅಂಗಗ

# ಬಾಗಲಕೋಟೆ ತಾಲೂಕಾ ಕಾಂಗ್ರೆಸ್ ಕಮೀಟಿಯು,

## ಪುರವಣಿ ಲೆಖ್ಖವು

(೨೦-೧-೨೩ ದಿಂದಾ ೩೦-೪-೨೩ ವರೆಗೆ)

ಜಮಾ

೫೦೦-೧೧-೪ (೧) ಶಿಲ್ಕು

೬೩೨-೧೦-೮ (೨) ಟಿಳಕ ಸ್ವರಾಜ್ಯ ಫಂಡು.

[illegible]

ಖರ್ಚು

[illegible]

## ಟಿಳಕ ರಾಷ್ಟ್ರೀಯ ವಿದ್ಯಾಲಯ ಬಾಗಲಕೋಟೆ.

([illegible] ವರೆಗೆ)

ಜಮಾ

[illegible]

ಖರ್ಚು

[illegible]

# ನೋಟಿಸಿನ ಉತ್ತರ

ಕುಲಕ ಗಂಡ ಹುಸೇನ ಚಿಕ್ತರಗಿ ಸಾ॥ ಕಮತಗಿ ತಾ॥ ಹುನಗುಂದ ಇವರಿಗೆ—

ಕೆಳಗೆ ಸಹಿ ಮಾಡುವವನ ಕಡೆಯಿಂದ ನೋಟಿಸಿನ ಉತ್ತರ ಕೊಡುವದರಲ್ಲಿ ಬರುತ್ತದಲ್ಲಾ ನೀನು ತಾರೀಖು ೪-೧೧-೨೨ ದಿವಸ ವಿಜಾಪುರ ಕರ್ನಾಟಕ ವೈಭವದಲ್ಲಿ ಕೊಟ್ಟ ನೋಟಿಸಿನ ಮಜಕೂರ ಅಷ್ಟೂ ಸುಳ್ಳು ಅದೆ. ನೀನು ನನ್ನ ಲಗ್ನದ ಹೆಂಡತಿ ಇರುತ್ತೀ ನನ್ನ ಕೂಡ ೫-೬ ವರ್ಷಗಳವರೆಗೆ ಚೆನ್ನಾಗಿ ಬಾಳ್ವೆ ಮಾಡಿಕೊಂಡು ಬಂದು ಇತ್ತೀಚೆಗೆ ನಿನ್ನ ಕೆಟ್ಟ ಸಂಗದವರ ಮಾತುಕೇಳಿ ಅಜಮಾಸು ೬ ತಿಂಗಳ ಕೆಳಗೆ ನಾನು ನನ್ನ ಮನೆಯಲ್ಲಿ ಇಲ್ಲದ ವೇಳೆಯಲ್ಲಿ ಓಡಿಹೋಗಿರುತ್ತೀ ಮತ್ತು ಹೋಗುವ ಮುಂದೆ ಕೆಳಗೆ ಬರೆದ ದಾಗೀನೆ ವ ಸೀರಿ, ರೋಖ ರೂಪಾಯಿ ತಗೊಂಡು ಓಡಿ ಹೋಗಿರುತ್ತೀ.

## ದಾಗೀನೆಗಳ ತಪಶೀಲು

| | |
|---|---|
| ನಡೆ ೨ ಬಂಗಾರದ ಗೀಜ ಬಳಿ ತೋಲೆ(೪) | ೧೮೦ |
| ನಡೆ ೨ ಬೆಳ್ಳಿವಂಕಿ | ೨೫ |
| ನಡೆ ೧ ಬೆಳ್ಳಿ ಸರಿಗೆ | ೨೦ |
| ನಡೆ ೧ ಬಂಗಾರದ ಗುಂಡಿನ ಟಿಕ್ಕಿ | ೬೦ |
| ನಡೆ ೨ ಸೀರಿ | ೨೦ |
| ರೋಖ ರೂಪಾಯಿ | ೧೫ |
| ಒಟ್ಟು | ೩೫೦ |

ಈ ಪ್ರಕಾರ ಸಾಮಾನುಗಳನ್ನು ತಗೊಂಡು ಹೋಗಿ ನಿನ್ನ ತವರು ಮನೆಯಲ್ಲಿ ಕೂತಿದಿ. ಈ ಬಗ್ಗೆ ನಾನೆ ಕರೆ ತರಲಿಕ್ಕೆ ಹೋಗಿದ್ದರೂ ಪ್ರಮುಖರ ಮುಂದೆ ಹೇಳಿದೆ ಆಗ್ಗೆ ಸದ್ರಿ ಪ್ರಮುಖರು ನಿನ್ನ ತಂದೆ ಅಮೀನಸಾಬನ್ನ ಕರಿಸಿ ಕೇಳಲು ಇನ್ನೊಂದು ತಿಂಗಳಿನ್ನತ್ತರಲ್ಲಿ ನನ್ನ ಮಗಳಿಗೆ ಬುದ್ಧೀ ಹೇಳಿ ಕಳಿಸುತ್ತೇನೆ ಅಂತಾ ಹೇಳಿದಾ ಸದರಿ ಪಂಚರು ಎರಡು ಮೂರು ಸಾರೆ ಕೇಳಿದರೂ ಹೀಗೆ ಬಾಳಾ ಬಾರಾ ಎಂದು ಹೇಳಿಕೋತ ಬಂದು ಈಗ ನಿನ್ನ ಕಡಿಂದ ಕರ್ನಾಟಕ ವೈಭವದಲ್ಲಿ ತಾ॥ ೧೭-೪-೨೨ ದಿವಸ ನೋಟಿಸ ಕೊಡಿಸಿರುತ್ತಾನೆ ನೀ. ಈ ನೋಟಿಸ ಮುಟ್ಟಿದ ಏಳು ದಿವಸಗಳಲ್ಲಿ ಮೇಲೆ ನಮೂದಿಸಿದ ಯಾವತ್ತು ದಾಗಿನೆ ಸೀರೆ ಮ ರೋಖ ರೂಪಾಯಿ ತಗೊಂಡು ಬಂದು ಚಲೋ ರೀತಿಯಿಂದ ಬಾಳ್ವೆ ಮಾಡತೀನಿ ಅಂತಾ ನಾಲ್ಕು ಮಂದಿ ಪ್ರಮುಖ ಜನರ ಸಮಕ್ಷಮ ಹೇಳಿ ಕಬೂಲ ಮಾಡಿ ನನ್ನ ಮನೆಗೆ ಬಂದು ಬಾಳ್ವೆ ಮಾಡದಿದ್ದಲ್ಲಿ ನಿನ್ನ ತಂದಿ ಮ ನಿನ್ನ ಮೇಲೆ ಯೋಗ್ಯ ಕೋರ್ಟಿನಲ್ಲಿ ದಾವಾ ಮಾಡತೀನಿ. ಈ ನೋಟಿಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ. ಅಂತಾ ಕೊಟ್ಟ ನೋಟಿಸಿನ ಉತ್ತರ ಸಹಿ ತಾರೀಖು ೨—೫—೧೯೨೨ ಇಸ್ವಿ

() ಈ ಎಡಗೈ ಹೆಬ್ಬೆಟ್ಟಿನ ಗುರ್ತ ಹುಸೇನ ವಲ್ಲದ ಮೋದಿನಸಾಬ ಚಿಕ್ತರಗಿ ಸಾ॥ ಕಮತಗಿ ಇವನ ದಸ್ತೂರದೆ

ಳಾಗಿದೆ. ನಿರ್ಭಯತ್ವವೂ, ಮುಕ್ತತನವೂ, ಒತ್ತಟ್ಟಿಗೆ ಇರುವದು ಅಸಂಭವವು. ಶಸ್ತ್ರಾಸ್ತ್ರ ಪ್ರಾವೀಣ್ಯತೆಯನ್ನಾಗಲಿ, ಹಿಂಸೆಯನ್ನಾಗಲಿ ಶೌರ್ಯವೆಂದು ತಿಳಿಯುವದು ಮೂರ್ಖತನವೇ. ಅದರಂತೆಯೇ, ಕೇವಲ ಅತ್ಯಾಚಾರವನ್ನು ಸಹನಮಾಡುವದಕ್ಕೆ ಅಹಿಂಸೆಯೆಂಬ ಹೆಸರು ಯೋಗ್ಯವಾಗಲಾರದು. ಅರವೆಡರ ಅಂದರೆ ಶಸ್ತ್ರಾಸ್ತ್ರ ಪ್ರವೀಣತೆ, ಅತ್ಯಾಚಾರಸಹಿಷ್ಣುತೆಗಳ ಒರೆಗಳು ತೀರ ಭಿನ್ನವಾಗಿರುವವು. ಅಹಿಂಸೆಯು ಮೊದಲನೆಯದರ ಒರೆಯು ನಿಷ್ಕ್ರಿಯ ಪ್ರತಿರೋಧವು ಎರಡನೆಯದರದು. (ನಿಷ್ಕ್ರಿಯ ಪ್ರತಿರೋಧವೆಂದರೆ ಸತ್ಯಾಗ್ರಹವು) ಅಹಿಂಸೆಯಿಲ್ಲದ ಶಸ್ತ್ರಪ್ರಾವೀಣ್ಯವು ಅಂಜುಬುರುಕತನವು. ಅದರಂತೆಯೇ ಸತ್ಯಾಗ್ರಹವಿಲ್ಲದ ಅತ್ಯಾಚಾರಸಹಿಷ್ಣುತೆಯಾದರೂ ಹೇಡಿತನವೇ. ಯಾಕೆಂದರೆ ನಿಜವಾದ ಶೌರ್ಯವಾದ ಪರೀಕ್ಷೆಯು ಅದರ ಅಹಿಂಸೆಯಿಂದೊಡಗೂಡಿದ ಪ್ರಯೋಗದಿಂದಲೇ ಹೇಗೆ ಆಗುವದೋ ಹಾಗೆಯೇ, ಅಹಿಂಸೆಯ ವ್ರತವನ್ನು ಆಚರಿಸುವವನ ಪರೀಕ್ಷೆಯು, ಸತ್ಯಾಗ್ರಹದಿಂದ ಅತ್ಯಾಚಾರವನ್ನು ಮಾಡುವವರ ಎಲ್ಲ ಅತ್ಯಾಚಾರಗಳನ್ನು ಅವ್ಮಾನಮಾಡಿ ಮಾಡಿ ಮೈಮೇಲೆ ತೆಗೆದುಕೊಂಡು ನಗುನಗುತ್ತ ಸಹನಮಾಡುವದರಿಂದಲೇ ಆಗುವದು. ಆದರೆ, ಅಹಿಂಸೆಯ ವ್ರತವನ್ನು ಆಚರಿಸುವವನ ಕಷ್ಟಸಹನವು ಶಸ್ತ್ರದಿಂದ ಪ್ರತಿರೋಧಿಸುವದಕ್ಕಿಂತ ಎಷ್ಟೋ ಪಾಲು ಹೆಚ್ಚು ಪರಿಣಾಮಕಾರಿಯಾಗುವದೆಂಬದನ್ನು ಚನ್ನಾಗಿ ಲಕ್ಷದಲ್ಲಿಡತಕ್ಕದ್ದು. ಯಾವ ಅತ್ಯಾಚಾರಿಯ ಹೃದಯದೊಳಗೆ ಪ್ರವೇಶಿಸಲಿಕ್ಕೆ ಶಸ್ತ್ರಬಲಕ್ಕಾಗಲಿ, ಪಶುಬಲಕ್ಕಾಗಲಿ ಸಾಮರ್ಥ್ಯವಿಲ್ಲವೋ, ಅಂಥ ಹೃದಯದಲ್ಲಿ ನಾವು ನಮ್ಮ ಮೂಕವಾದ ಸಹನ ಶಕ್ತಿಯ ಮುಖಾಂತರದಿಂದ ಒಳಗೆ ಹೋಗುವದಕ್ಕೆ ಸಮರ್ಥರಾಗುವದಲ್ಲದೆ, ಅವನ ಹೃದಯದಲ್ಲಿಯ ವಿಚಾರಗಳನ್ನೆಲ್ಲ ಅಲ್ಲೋಲ ಕಲ್ಲೋಲ ಮಾಡಿಬಿಡುವೆವು.

ಆದ್ದರಿಂದಲೇ ಯಾವಾದರೂ ಇಬ್ಬರು ಪ್ರತಿಸ್ಪರ್ಧಿಗಳ ಜೀವಿತ ಅಥವಾ ಮರಣದ ಪ್ರಶ್ನೆಯು ಉಪಸ್ಥಿತವಾದಾಗ ಒಬ್ಬ ಅತ್ಯಾಚಾರಿಯನ್ನು ಜಗತ್ತಿನಲ್ಲಿ ಇಲ್ಲದಂತೆ ಮಾಡುವದರಿಂದ ಹೆಚ್ಚು ಹಿತಕರವಾಗುವದೋ ಇಲ್ಲವೆ ಒಬ್ಬ ವಿಶುದ್ಧನಾದವನ ಬಲಿದಾನದಿಂದ ಹೆಚ್ಚು ಲಾಭವಾಗುವದೋ ಎಂಬದನ್ನು ನಾವು ನಮ್ಮ ಮನಸ್ಸಿನಲ್ಲಿ ವಿಚಾರಮಾಡಬೇಕು. ಯಾವದರಿಂದ ಹೆಚ್ಚು ಜಾಗೃತಿಯುಂಟಾಗುವದು? ಒಬ್ಬ ಪವಿತ್ರನಾದ ಜೀವನು ತನ್ನ ಸಿದ್ಧಾಂತಗಳ ರಕ್ಷಣೆಗಾಗಿ, ಜಗತ್ತಿನ ಕಲ್ಯಾಣಕ್ಕಾಗಿ ಸಾಯುವದರಿಂದ ಈ ಜಗತ್ತಿನಿಂದ ಒಬ್ಬ ಅತ್ಯಾಚಾರಿಯು ಮೃತನಾಗುವದಕ್ಕಿಂತ ಸಾವಿರಪಾಲು ಹೆಚ್ಚು ಜಾಗೃತಿಯಾಗುವದೆಂದು ನಮ್ಮದಂತೂ ಮತವು. ಆದರಿಂದ ಜಗತ್ತು ಹೆಚ್ಚಿಗೆ ಸನ್ಮಾರ್ಗ ಪ್ರವೃತ್ತವಾಗುವದು. ಆದರಿಂದ ಸ್ವತಃ ಅತ್ಯಾಚಾರಿಯ ಕಣ್ಣುಗಳು ಕೂಡ ತೆರೆಯುವವು ಮತ್ತು ಇದರಿಂದ ಅತ್ಯಾಚಾರಿಯಾದರೂ, ಅದೇ ಸಿದ್ಧಾಂತವನ್ನು ಅನುಸರಿಸುತ್ತ, ಜಗತ್ತನ್ನು ಮೊದಲಿನಕಿಂತ ಹೆಚ್ಚು ಸಧಾರಿಸಿದವನನ್ನಾಗಿ ಮಾಡುವನು. ಜ್ಞಾನಿಯಾದವನು ಅಜ್ಞಾನಿಯಮೇಲೆ ಕೈಎತ್ತುವದೆಂದರೆ ಹೇಡಿತನವಲ್ಲವೆ ಮತ್ತೇನು? ತನ್ನ ದೇಹದ ಅಥವಾ ಪ್ರಾಣದ ಮೋಹದಿಂದ ಎದುರಾಳಿಯಮೇಲೆ ಕೈ ಎತ್ತುವದಕ್ಕಿಂತ, ಒಬ್ಬ ಪವಿತ್ರನಾದ ಜೀವನು ತನ್ನ ತತ್ವಗಳ ಸಲುವಾಗಿ ಸಾಯುವದು ಹೆಚ್ಚು ಲಾಭದಾಯಕವಾಗಿದೆ. ಅದರಿಂದಲೇ ಜಗತ್ತಿಗೆ ಹೆಚ್ಚು ಶಿಕ್ಷಣವನ್ನು ಕೊಟ್ಟಂತಾಗುವದು. ಎದುರಾಳಿಯವರನ್ನು ಸಂರಕ್ಷಿಸುವ ಸಲುವಾಗಿ ಹಿಂಸೆಯನ್ನು ಆಚರಿಸತಕ್ಕದ್ದು, ಎಂಬ ಪ್ರಶ್ನೆಯೊಂದು ಉಳಿಯಿತು. ಪರರಕ್ಷಣೆಗಾಗಿ ಎದುರಾಳಿಯವರ ಪ್ರಾಣವನ್ನು ತೆಗೆದುಕೊಳ್ಳಲಿಕ್ಕೆ ನಮಗೆ ಅಧಿಕಾರವೆಲ್ಲಿಂದ ಬಂತು? ನಮ್ಮ ಶರೀರವು ನಮ್ಮ ವಸ್ತುವದೆ. ಅದರ ಬಲಿದಾನವನ್ನು ನಮಗೆ ಮಾಡಲಿಕ್ಕೆ ಬರುತ್ತದೆ.

ಗೋಮಾತೆಯು ನಮಗೆ ಬಹಳ ಪ್ರೀತಿಯ ಒಡವೆಯೆಂದು ನಾವು ಅನ್ನುವೆವು. ಆದರೆ ನಾವು ಅದರ ಸಲುವಾಗಿ ನಮ್ಮ ನಿಜವಾದ ಪ್ರೇಮವನ್ನೂ ಭಕ್ತಿಯನ್ನೂ ಏನು ತೋರಿಸುವೆವು? ಗೋಹತ್ಯೆಯನ್ನು ಮಾಡುವವನ ಎದುರಿನಲ್ಲಿ ಹೋಗಿ ವೀರ ದಿಲೀಪ ಮಹಾರಾಜನಂತೆ "ಎಲೋ ದುಷ್ಟನೇ, ಈ ಅಸಹಾಯವಾದ ಬಡ ಗೋಮಾತೆಯನ್ನು ಕೊಲ್ಲುವದಕ್ಕಿಂತ ಮೊದಲು ನನ್ನ ತಲೆಯನ್ನು ಈ ಶರೀರದಿಂದ ಕೆಳಗೆ ಇಳಿಸು" ಎಂದು ನಾವು ಎಂದಾದರೂ ಅಂದಿರುವೆವೋ? ಯಾವನಾದರೊಬ್ಬನು ಒಬ್ಬ ಪತಿವ್ರತೆಯ ಪಾತಿವ್ರತ್ಯವನ್ನು ಭಂಗಮಾಡುವ ವೇಳೆಯಲ್ಲಿ ಅವನಿಗೆ "ಎಲೈ ಪಾಪಿಯೇ, ನನ್ನ ಎದುರಿಗೆ ಈ ಸ್ತ್ರೀಯಮೇಲೆ ಅತ್ಯಾಚಾರಮಾಡುವದು ನಿನ್ನಿಂದಾಗದು. ಮೊದಲು ನನ್ನನ್ನು ಕೊಲ್ಲು; ಆಮೇಲೆ ನಿನ್ನ ಮನಬಂದಂತೆ ಮಾಡು" ಎಂದು ನಾವು ಎಂದಾದರೂ ಹೇಳಿರುವೆವೋ? ನಾವು ಹಿಂಸೆಯ ವಿರುದ್ಧ ಹಿಂಸೆಯನ್ನು ಉಪಯೋಗಿಸಲು ಪ್ರಯತ್ನಿಸುತ್ತೇವೆ. ಬೆಂಕಿಯಲ್ಲಿ ತುಪ್ಪವನ್ನು ಹಾಕಿ ನಾವು ಅದನ್ನು ಹೆಚ್ಚಿಗೆ ಹೊತ್ತಿಸುತ್ತೇವೆ. "ಅತೃಣೇ ಪತಿತೋ ವಹ್ನಿಃ ಸ್ವಯಮೇವ ವಿನಶ್ಯತಿ" ಅಂದರೆ "ಹುಲ್ಲು ಇಲ್ಲದಲ್ಲಿ ಬೆಂಕಿಯು ಬಿದ್ದರೆ ಅದು ತನ್ನಷ್ಟಕ್ಕೆ ತಾನೇ ನಂದುವದು" ಎಂಬದರ ಅರಿವು ನಮಗೆ ಆಗುವದಿಲ್ಲ. ಯಾವ ದೊಡ್ಡ ದೊಡ್ಡ ಅತ್ಯಾಚಾರಗಳ ಸಲುವಾಗಿ ಈ ಹೊತ್ತಿನವರೆಗೆ ಜಗತ್ತಿನಲ್ಲಿ ಕೋಟ್ಯವಧಿ ಜನರ ನಾಶವಾಗಿದೆಯೋ ಅದರ ಬದಲಾಗಿ ೧೦-೧೦ ಜನ ವಿಶುದ್ಧರಾದ ಜೀವಿಗಳು ರ. ತಮ್ಮ ಜೀವದಾನವನ್ನು ಮಾಡಿದ್ದರೆ ಜಗತ್ತಿನ ಸ್ಥಿತಿಗತಿಯು ತೀರ ಭಿನ್ನವಾಗಿರುತ್ತಿತ್ತು. ಯೇಸೂಕ್ರಿಸ್ತನು ಬದುಕಿ ಇರುವದರಿಂದ ಈ ಜಗತ್ತಿಗೆ ಎಷ್ಟು ಕಲ್ಯಾಣವನ್ನು ಮಾಡುತ್ತಿದ್ದನೋ ಅಷ್ಟೇ ಕಲ್ಯಾಣವನ್ನು, ಅವನ ಬಲಿದಾನದ ದ್ವಾರದಿಂದ ಅವನ ಆತ್ಮವು ಮಾಡಿರತ್ತದೆ. ಆದ್ದರಿಂದ ನಿಜವಾದ ಶೌರ್ಯವೆಂದರೆ ಅಹಿಂಸೆಯೇ; ಮತ್ತು ಅಹಿಂಸೆಯಿಂದಲೇ ಹಿಂದುಸ್ಥಾನದ ಹಾಗೂ ಜಗತ್ತಿನ ಉನ್ನತಿಯಾಗುವದು. ಜಗತ್ತಿನಲ್ಲಿ ಸಾಮುದಾಯಿಕ ಅಹಿಂಸೆಯ ಅಥವಾ ರಾಜನೀತಿಯ ಸಂಬಂಧವುಳ್ಳ ಅಹಿಂಸೆಯ ಉದಾಹರಣೆಯು ದೊರೆಯಲಿಕ್ಕಿಲ್ಲವೇನು? ಅದರ ಇತಿಹಾಸದಲ್ಲಿ ನಮಗೆ ಹೇಳುವಂಥ ಉದಾಹರಣೆಯನ್ನು ತಾಕಿಕೊಳ್ಳಲಿಕ್ಕೆ ಒದಗಿದಿಲ್ಲವೇ? ಈ ಹೊತ್ತಿನವರೆಗೆ ಜಗತ್ತು ಹಿಂಸೆಯ ಹಾಗೂ ಶಸ್ತ್ರಗಳ ಬಲದಮೇಲಿಂದಲೇ ನಡೆದಿರುವದೆಂದು ನೀವು ಅನ್ನುವಿರೋ? ಒಳ್ಳೇದು. ಆದರೆ ಆ ಮಾರ್ಗದಿಂದ ಜಗತ್ತಿಗೆ ಎಷ್ಟು ಲಾಭವಾಗಿದೆ? ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರದಗೂಡ ಯಾವಾಗಲೂ ಯುದ್ಧವನ್ನು ಮಾಡುವದರಲ್ಲಿಯೇ ತೊಡಗಿರುವದೆಂಬದಿಷ್ಟೇ ಅಲ್ಲವೇ? ಸ್ಥಿರವಾದ ಶಾಂತತೆಯ ಹೆಸರು ಸಹ ಕೇಳಬೇಡಿರಿ! ಎಲ್ಲಿ ಶಾಂತತೆಯಿಲ್ಲವೋ ಅಲ್ಲಿ ಸುಖವು ಹೇಗಾಗುವದು? ಯುಗಾಂತರದಿಂದ ಯುದ್ಧಗಳ ಪೆಟ್ಟು ತಿಂದು ತಿಂದು ಜನಸಮಾಜವು ಬೇಸತ್ತುಹೋಗಿದೆ. ಈಗ ಅದಕ್ಕೆ ಸ್ವಲ್ಪ ಅಹಿಂಸೆಯ ಪ್ರಯೋಗವನ್ನು ಮಾಡಿ ನೋಡಲಿಕ್ಕೆ ಅಸ್ಪದವನು ಕೊಡಿರಿ. ಈ ಪ್ರಯೋಗವು ಪ್ರತ್ಯೇಕವಾಗಿ ಇನ್ನು ೧೮-೧೯ ತಿಂಗಳುಗಳು ಮಾತ್ರ ಆಗುವವು. ಆದರೆ ಇಷ್ಟರಲ್ಲಿಯೇ

ಅದರ ವಿಜಯದಬಗ್ಗೆ ಎಲ್ಲಕಡೆಗೆ ಚರ್ಚೆಯು ಪ್ರಾರಂಭವಾ ಗಿದೆ. ಇಡೀ ಜಗತ್ತು ಆದರ ಮತ್ತು ಆಶ್ಚರ್ಯದೃಷ್ಟಿಯಿಂ ದ ಹಿಂದುಸ್ಥಾನದ ಕಡೆಗೆ ನೋಡಹತ್ತಿದ್ದು, ಆ ಪ್ರಯೋಗದ ವಿಜಯದ ಹಾದಿಯನ್ನೇ ನೋಡುತ್ತಿರುವದು; ಮತ್ತು ಆ ಹಿಂದುಸ್ಥಾನದ ಈ ನವೀನ, ಶಾಂತಿದಾಯಕ ಪ್ರಯೋಗದ ಬಗ್ಗೆ, ಈ ರಾಷ್ಟ್ರವನ್ನು ಹೊಗಳಹತ್ತಿದೆ.

ಆದರೆ ಎಷ್ಟೋ ಜನರಿಗೆ ಇದರ ವಿಷಯವಾಗಿ ಸಂ ಶಯವಿರುವದು. ಆವರು ಈ ತತ್ವದ ಸತ್ಯತೆಯ ವಿಷಯವಾಗಿ ಶಂಕೆಯನ್ನು ಮಾಡುವದಿಲ್ಲ. ಆದರೆ ಅದು ವ್ಯವಹಾರ್ಯವಾ ಗುವದರ ಸಂಬಂಧದಲ್ಲಿ ಸಂಶಯಗ್ರಸ್ತರಾಗಿರುವರು ಆದರೆ ಯಾರು ಈ ತತ್ವದ ವಿಜಯವನ್ನು ಮನ್ನಿಸಿ ಅದರ ವ್ಯವಹಾ ರ್ಯತೆಯ ವಿಷಯವಾಗಿ ಮಾತ್ರ ಸಂಶಯವನ್ನು ತೆಗೆದು ಕೊಳ್ಳುವರೋ ಅವರಿಗೆ ನಾವು ಎಲ್ಲ ತತ್ವಗಳ ಉತ್ಪತ್ತಿಯು ಹೇಗೆ ಆಗುವದೆಂದು ಪ್ರಶ್ನೆ ಮಾಡುವೆವು. ಆ ತತ್ವಗಳೇನೂ ಮನುಷ್ಯರ ಹಿತದ ಸಲುವಾಗಿ ಆಕಾಶದಿಂದ ಕೆಳಗ ಬಿದ್ದಿಲ್ಲ. ಆವಾದರೂ ವ್ಯವಹಾರದೊಳಗಿನ ಎಷ್ಟೋ ಉದಾಹರಣೆಗಳ ಪ್ರಯೋಗದಿಂದಲೇ ನಿಶ್ಚಯಿಸಲ್ಪಟ್ಟಿರುವವು ಮತ್ತು ಅವು ವ್ಯವಹಾರದಿಂದಲೇ ಉತ್ಪನ್ನವಾಗಿರುವದರಿಂದ ಹೇಗೆ ವ್ಯವ ಹಾರ್ಯವಾಗಲಾರವು? ಕುಟುಂಬದ ಉದಾಹರಣೆಯನ್ನಾದ ರೂ ತೆಗೆದುಕೊಳ್ಳೋಣ. ಕುಟುಂಬದ ಸುಖಶಾಂತಿಗಳು ಹಿಂ ಸೆಯ ಮೇಲೆ ಅವಲಂಬಿಸಿರುವವೋ ಇಲ್ಲವೆ ಅಹಿಂಸೆಯ ಮೇ ಲೆಯೋ? ಸಮಾಜವು ಕುಟುಂಬಗಳ ಸಮೂಹವಲ್ಲದೆ ಮತ್ತೇನು? ಆದ್ದರಿಂದಲೇ ಅಹಿಂಸೆಯ ತತ್ವವು ಸಫಲವಾಗು ವದರಲ್ಲಿ ಸಂದೇಹವಿಲ್ಲ. ವಿಜಯವು ನಿಶ್ಚಿತವೇ ನಾವು ಅದರಂತೆ ವ್ಯವಹರಿಸುವವರಲ್ಲಿಯೇ ಕುಂದುಂಟು. ಹಾಗು ನಾವು ಶಾಂತಿಯನ್ನೇ ಅವಲಂಬಿಸಿದ ಬಳಿಕ ಅದರ ವಿಜಯ ದ ವಿಷಯಕ್ಕೆ ಸಂದೇಹವು ಬರಲೇಬಾರದು. ಆದರೆ ಇದ ಕೆ ವಿರುದ್ಧವಾಗಿ ನಮ್ಮಲ್ಲಿ ಸ್ವಲ್ಪ ಅಧೈರ್ಯವು ಹುಟ್ಟಿತೆಂ ದರೆ ನಾವು ಮಾಡಿದ ಕೆಲಸಗಳೆಲ್ಲ ಕೆಟ್ಟುಹೋಗುವವು. ಇದರ ಸಲುವಾಗಿ, ಈ ವೇಳೆಯಲ್ಲಿ ನಾವು ವಿಜಯದ ಸಮೀ ಪಕ್ಕೆ ಮುಟ್ಟುವವರೆಗೆ ನಮಗೆ ಮತ್ತಿಷ್ಟು ಶಾಂತತೆಯ ಅವಶ್ಯಕತೆಯಿದೆ.

ಯಾವ ಶೌರ್ಯವನ್ನು ನಾವು ಅವಲಂಬಿಸಿರುವೆವೋ ಆ ಶೌರ್ಯವು ನಮ್ಮ ಪ್ರತಿಪಕ್ಷಿಗಳಲ್ಲಿ ಇಲ್ಲದಿರುವದೇ ನಮ್ಮ ವಿಜಯದ ಎರಡನೇ ಪ್ರಮಾಣವು ಬಹಳ ಮಾಡಿ ಶೂರ ಜನರು ತಮ್ಮ ಪ್ರತಿಪಕ್ಷಿಗಳಿಗೆ ವಿರೋಧಿಸಲು ಶಕ್ಯವಾದಂ ಥ ಶಸ್ತ್ರಗಳನ್ನು ಪ್ರಯೋಗಿಸುವದೇ ಸಾಮಾನ್ಯ ಯುದ್ಧಶಾ ಸ್ತ್ರದ ನಿಯಮವಿರುತ್ತದೆ. ಈಗ ಹಿಂದುಸ್ತಾನವು ತನ್ನ ಪ್ರತಿ ಪಕ್ಷಿಗಳಕೂಡ ಶಸ್ತ್ರಬಲದಿಂದ ಕಾದುವದು ಶಕ್ಯವಿಲ್ಲ. ಆದ ರೆ ನಿಜವಾದ ಶೌರ್ಯವಾದ ಅಹಿಂಸೆಯ ಬಲವು ನಮ್ಮ ಹತ್ತರಇದೆ, ಪ್ರತಿಪಕ್ಷಿಗಳ ಹತ್ತರ ಇದು ಇರುವದಿಲ್ಲ. ಆ ದುದರಿಂದ ಈ ಅಮೋಘಶಸ್ತ್ರವನ್ನು ನಾವು ಪ್ರಯೋಗಿಸಿದ ರೆ ನಮ್ಮ ವಿರೋಧಿಗಳು ನಮ್ಮ ಕಾಲುಗಳಮೇಲೆ ಬಿದ್ದು ಹೊರಳಾಡಬೇಕಾಗುವದು ಇದರ ಹೊರ್ತು ಈ ಅಸ್ತ್ರದ ಸಫಲವಾದ ಪ್ರಯೋಗದಿಂದ, ಕೇವಲ ಹಿಂದುಸ್ಥಾನಕ್ಕಷ್ಟೇ ಅಲ್ಲ ;ಆದರೆ ಇಡೀ ಜಗತ್ತಿಗೆ ಕಲ್ಯಾಣವಾಗುವಂಥ, ಶಾಂತಿ ಮಯ ಕ್ರಾಂತಿಯು ಜಗತ್ತಿನಲ್ಲಿ ಆಗುವದು.

[ ನವಜೀವನ ]

# ಟಿಪ್ಪಣಿಗಳು.

## ಕರ್ನಾಟಕ ಧ್ವಜಚಿನ್ಹವು.

ಕರ್ಮವೀರಪತ್ರದ ಕಳೆದ ಸಂಚಿಕೆಯಲ್ಲಿ ಈ ವಿಷ ಯದಬಗ್ಗೆ ಪ್ರಸಿದ್ಧವಾದ ಲೇಖವನ್ನೋದಿ ಮನಸಿಗೆ ಬಹು ವಿಷಾದವಾಯಿತು. ಅದರಲ್ಲಿ ಬರೆದ ಮಾತು ಸಂಪೂರ್ಣ ವಾಗಿ ನಿಜವಿರುವದೆಂದು ಹೇಳಲು ಅಡ್ಡಿಯಿಲ್ಲ. ಇಂಥ ವಿ ಷಯಗಳಕಡೆಗೆ ಕರ್ನಾಟಕಸ್ಥರು ಲಕ್ಷವನ್ನು ಪೂರೈಸುವ ದಿಲ್ಲೆಂಬದು ಖೇದಜನಕವಾದದ್ದಲ್ಲದೆ ಮತ್ತೇನು ! ಇಲ್ಲಿ ನ ಮ್ಮ ಪತ್ರದ ವಿಷಯವಾಗಿ ಬರೆಯಬೇಕೆಂದರೆ, ಮೊದಲ ನೇಸಾರೆ ಕರ್ಮವೀರದಲ್ಲಿ ಮ॥ ರಾ॥ ಆಲೂರವರ ಪತ್ರ ಪ್ರಸಿದ್ಧವಾದಮೇಲೆ, ಎರಡು ವಾರಗಳ ವರೆಗೆ ನಮ್ಮ ಪತ್ರ ವು ಹೊರಡಲಿಲ್ಲ. ಮೇಲಾಗಿ ಎಪ್ರಿಲ ತಿಂಗಳ ೩೦ ನೇ ತಾ ರೀಖಿನೊಳಗಾಗಿಯೇ ಸೂಚನೆಗಳನ್ನು ಕಳಿಸಬೇಕೆಂದು ನಿ ರ್ಬಂಧವಾದರೂ ಇತ್ತು. ಈ ಕಾರಣಗಳಮೂಲಕ, ನವ ಜೀವನದಲ್ಲಿ ಆ ಬಗ್ಗೆ ಸೂಚನೆಗಳನ್ನು ಪ್ರಸಿದ್ಧಿಸುವದು ಅವ ಶ್ಯವಾಯಿತು. ಆದರೆ ಈಗ ಅದರ ಬಗ್ಗೆ ಕರ್ಮವೀರದಲ್ಲಿ ಪುನಃ ಪ್ರಕಟನೆಯಾದ್ದರಿಂದ, ನಮ್ಮ ವಿಚಾರಗಳನ್ನು ಕ ಮೀಟಿಯವರ ಹಾಗೂ ವಾಚಕರ ಮುಂದೆ ಇಡುವದನ್ನು ನಿಶ್ಚಯಿಸಿದ್ದೇವೆ. ಆ ಸಂಬಂಧದಿಂದ ನಮ್ಮ ವಿಚಾರಗಳೆ ನ್ನೆಲ್ಲ ನಾವು ಬರೆದುಕೂಡ ಇಟ್ಟಿರುವೆವು. ಆದರೆ, ಅವುಗಳ ನ್ನೆಲ್ಲ ಬರೆದಂತೆ ಚಿತ್ರಿಸಲು ಶಕ್ಯವಿದೆಯೋ ಇಲ್ಲವೋ ಎಂ ಬ ವಿಚಾರದಲ್ಲಿ ಈಗ ತೊಡಗಿದ್ದೇವೆ. ಆದ್ದರಿಂದ ಮುಂ ದಿನ ಸಂಚಿಕೆಯವರೆಗೆ ಅವಕಾಶವನ್ನು ತೆಗೆದುಕೊಂಡು, ಮುಂದಿನವಾರದಲ್ಲಿ ನಮ್ಮ ಸೂಚನೆಗಳನ್ನು ನಿಶ್ಚಯವಾಗಿ ಮಾಡುವೆವು.

---

೧೩೧ ನೇ ಪಾನಿನಿಂದ ಮುಂದೆ ಸಾಗಿದ್ದು

ನಿಗೆ ಉತ್ಪನ್ನವಾಯಿತು. ಗಜರಾಯನು ಶಾಸ್ತ್ರವನ್ನು ಓದಿ ದ್ದಿಲ್ಲ. ಮತ್ತು ವೇದವನ್ನೂ ತಿಳಿದಿದ್ದಿಲ್ಲ. ಹೀಗಿದ್ದು ಈ ಉಚ್ಚ ಕುಲದಲ್ಲಿ ಜನ್ಮ ತಾಳಿದ್ದರಿಂದ ಆ ಗಜವು ನಾರಾ ಯಣ ಧ್ಯಾನದಲ್ಲಿ ತತ್ಪರವಾಯಿತು. ಆ ಭಕ್ತವತ್ಸಲನ ಕೀ ರ್ತನೆ ಸ್ತೋತ್ರತಗಳನ್ನೂಮಾಡಿತು.

शरण्यं शरणार्तानां प्रपद्ये भक्तवत्सलम् । प्रपद्ये मुक्तसङ्गानां यतीनां परमां गतिम् ॥

ಧ್ಯಾನವು ಪೂರ್ಣವಾಯಿತು, ಆತ್ಮಶಕ್ತಿಯು ವ್ಯಕ್ತ ವಾಯಿತು. ಹೃದಯದಲ್ಲಿ ವಿಶ್ವಾಸವು ಹೆಚ್ಚು ಗಟ್ಟಿಯಾಗಿ ನೆಲಸಿತು.

ಪರಮಾತ್ಮನು ಕಮಲಪತ್ರಾಕ್ಷನು. ಅವನ ದೃಷ್ಟಿಯು ಕಮಲದಂತೆಯೇ ಆಶಕ್ತಿ ( ಕಾಮ ) ರಹಿತವಾಗಿರುವದು. ಗಜರಾಜನು ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ ಶ್ವಾಸ ಬಿಡಲಿಕ್ಕೆ ಸೊಂಡಿಯ ಅಗ್ರಭಾಗವನ್ನು ನೀರಿನಮೇಲೆ ಎತ್ತಿ ಹಿಡಿದು ಅದರಿಂದ ಒಂದು ಕಮಲವನ್ನು ತೆಗೆದುಕೊಂಡು ನಿಶ್ಚಲ ಭಕ್ತಿಯಿಂದ ನಾರಾಯಣನಿಗೆ ಅರ್ಪಣಮಾಡಿದನು. ಕಮಲವಾದರೂ ಆ ನಿಷ್ಕಾಮ ಕರ್ಮದ (ಆಸಕ್ತಿ ರಾಹಿತ್ಯದ) ದ್ಯೋತಕವಿರುತ್ತದೆ. ಕೆಸರಿನಲ್ಲಿ ಅದರ ಉತ್ಪತ್ತಿಯು. ನೀರು ಅದರ ವಾಸಸ್ಥಾನವು. ಆದರೂ ಅದು ಬಹಳ ಶುದ್ಧ ಮತ್ತು ಪವಿತ್ರವಿರುತ್ತದೆ. ನೀರಿನಲ್ಲಿದ್ದು, ನೀರಿನಿಂದ ಅಲಿಪ್ತವಾಗಿ ರುತ್ತದೆ; ಮತ್ತು ಪ್ರಕಾಶಮಾನನೂ ಪ್ರತಾಪಶಾಲಿಯೂ ಆ ದ ಸೂರ್ಯನಾರಾಯಣನ ಧ್ಯಾನಮಾಡುತ್ತದೆ ಕಮಲದ

ಈ ವ್ಯಾಪಾರವನ್ನೇ ಸ್ವೀಕರಿಸಿ ಸರ್ವಶಕ್ತನಿಗೆ ಗಜರಾಜನು ಆಗ ಒಂದು ಕಮಲವನ್ನು ಅರ್ಪಿಸಿದನು. ಆಗ್ಗೆ ಭಗವಂತನು ಓಡಿಬರಬೇಕಾಯಿತು. ಪರಮಾತ್ಮನು ಅವರೀರ್ವರನ್ನು ನೀರಿನಿಂದ ಹೊರಗೆ ತೆಗೆದನು. ಭೂಮಿಯ ಮೇಲೆ ಬಂದನಂತರ ಮೊಸಳೆಯ ಶಕ್ತಿಯೂ ದುರ್ಬುದ್ಧಿಯೂ ದೂರವಾದವು ಸ್ವಾರ್ಥದಿಂದ ಮುಕ್ತವಾದ್ದರಿಂದ ಅದಕ್ಕೆ ಪಶ್ಚಾತ್ತಾಪವಾಯಿತು. ಆದುದರಿಂದ ಅಪ್ರಮೇಯನಾದ ಭಗವಂತನು ಈರ್ವರ ಉದ್ಧಾರ ಮಾಡಿದನು. ಭಗವದ್ದರ್ಶನ ಲಾಭದಿಂದ ಆರಿಗೆ ದುರ್ಗತಿ ಆಗುವದು? ಈರ್ವರ ಹೃದಯದ್ವಯವೂ ನಿರ್ಮಲವಾಯಿತು. ನಾವು ಆ ಒಬ್ಬ ಪರಮಾತ್ಮನ ಮಕ್ಕಳು. ನಾವೆಲ್ಲರೂ ಬಾಂಧವರು ಮತ್ತು ಸಮಾನರು.

ದृढबद्ध-धर्म मूलो वेदस्कंदः पुराण-शाखाढ्यः । क्रतु-कुसुमो मोक्ष-फलो मधुसूदन-पादपो जयति ॥ *

ಗಜೇಂದ್ರಮೋಕ್ಷದ ಈ ಕಥೆಯ ಶ್ರವಣದಿಂದ ದುಷ್ಟಸ್ವಪ್ನಗಳ ನಾಶವಾಗುವದೆಂದು ಮಹಾಭಾರತಕಾರರು ಬರೆಯುತ್ತಾರೆ. ಹೀಗೆ ಆದರೂ ಆಗಬಾರದೇಕೆ? ದೇವರು ಸಜ್ಜನ ಮತ್ತು ದುರ್ಜನ ಈ ಈರ್ವರ ಹಿತವನ್ನೂ ಮಾಡುತ್ತಾನೆ. ದೇವತೆಗಳೂ ದಾನವರೂ **ಅವನ** ಮಕ್ಕಳೇ. ಅವರು ತಮ್ಮ ತಮ್ಮ ಭಾವನೆಯಂತೆ, **ಅವನ** ಚರಣಾರವಿಂದವನ್ನು ಪೂಜಿಸುತ್ತಾರೆ:— सुरासुरार्चित पादपद्म सनातनं लोक गुरुं नमामि ।

---

*ಯಾವ ವೃಕ್ಷಕ್ಕೆ ಧರ್ಮವು ಮೂಲವೋ, ಆಧ್ಯಾತ್ಮಿಕ ಜ್ಞಾನವು ಶರೀರವೋ, ಪ್ರಾಚೀನ ಇತಿಹಾಸಗಳು ಟೊಂಗೆಗಳೋ, ಸ್ವಾರ್ಥತ್ಯಾಗವು ಪುಷ್ಪವೋ, ಸ್ವಾತಂತ್ರ್ಯವು ಫಲವೋ, ಅಂತಹ ಮಧುಸೂಧನನೆಂಬ ಕಲ್ಪವೃಕ್ಷಕ್ಕೆ ಜಯವೇ ಆಗುವದು. [ನವಜೀವನ] **ಕಾಲೇಲಕರ**

---

# ಕನ್ನಡ ನವಜೀವನವು

## ವೇಳೆಗೆ ಸರಿಯಾಗಿ ಏಕೆ

### ಹೊರಡುವದಿಲ್ಲ ?

ಹೀಗೆ ಹೊರಡದಿರುವದಕ್ಕೆ ಎರಡು ಕಾರಣಗಳುಂಟು. ನಮ್ಮ ಮುದ್ರಾಮಂದಿರವು ತೀರ ಹೊಸದಿರುವದರಿಂದ ಎಲ್ಲ ಯಂತ್ರ ಸಾಮಾನುಗಳು ಇನ್ನೂ ಸಜ್ಜಾಗಿರದೇ ಇದ್ದದ್ದು ಒಂದು ಕಾರಣವು. ನಮ್ಮ ಕಾರ್ಯಾಲಯವು ವಿಜಾಪುರದಿಂದ ಈಗ್ಗೆ ಸಂಪೂರ್ಣವಾಗಿ ಬಾಗಲಕೋಟೆಗೆ ಬಂದದ್ದರಿಂದ ನಾವು ಬಾಗಲಕೋಟೆಯಲ್ಲಿ ನವಜೀವನ ಸಂಚಿಕೆಗಳನ್ನು ಪೋಸ್ಟ ಮಾಡಲಿಕ್ಕೆ ಅಪ್ಪಣೆಯನ್ನು ಕೇಳಿದ್ದೇವೆ. ಆದರೆ ಒಂದಿಲ್ಲೊಂದು ಕಾರಣದಿಂದ ಪೋಸ್ಟಿನಿಂದ ನಮಗೆ ಆ ಅಪ್ಪಣೆಯು ಈ ವರೆಗೆ ದೊರೆತಿಲ್ಲ. ಆದ್ದರಿಂದ ಬಾಗಲಕೋಟೆಯಲ್ಲಿ ನವಜೀವನವು ಪ್ರಸಿದ್ಧವಾದನಂತರ ಎಲ್ಲ ಸಂಚಿಕೆಗಳನ್ನು ಪೋಸ್ಟಮಾಡಲು ವಿಜಾಪುರಕ್ಕೆ ಕಳಿಸಬೇಕಾಗುತ್ತದೆ. ಈ ದ್ರವಿಡಪ್ರಾಣಾಯಾಮದಿಂದ ಸಂಚಿಕೆಗಳು ಚಂದಾದಾರರ ಕೈಸೇರಲು ತಡವಾಗುತ್ತದೆ. ಈ ಬಗೆಯ ಎರಡೂ ತೊಂದರೆಗಳು ದೂರಾಗಲು ಒಂದು ತಿಂಗಳಾದರೂ ಬೇಕಾಗಬಹುದು ಅಲ್ಲಿಯವರೆಗೆ ಚಂದಾದಾರರು ನಮ್ಮನ್ನು ಕ್ಷಮಿಸಬೇಕಾಗಿ ವಿನಂತಿ ಇದೆ. **ವ್ಯವಸ್ಥಾಪಕ**

---

## ಹಂಪೆಯ ಪುರಾತನ ಕಟ್ಟಡಗಳ ದುರವಸ್ಥೆ.

**ವಿಜಯನಗರದ ಆಧಿಪತ್ಯದ ಕಾಲದಲ್ಲಿ ಸಿರಿಗೆ ನೆಲೆವೀಡಾಗಿದ್ದ ಹಂಪೆಯು ಈಗ ಹಾಳುಬಿದ್ದಿರುವದು ಇತಿಹಾಸ ಪ್ರಸಿದ್ಧವಾಗಿದೆ. ಆದರೆ ಆ ಮಹಾ ಕಟ್ಟಡಗಳನ್ನು ಆರೂಪಪಡಿಸುತ್ತಿರುವ ದುಷ್ಕೃತ್ಯಕ್ಕೆ ಶ್ರೀ। ನಿಹಾಲ್ ಸಿಂಗರವರು ಬಲವಾದ ಸಾಕ್ಷ್ಯವನ್ನು ಕೊಟ್ಟಿರುವರು.** ಇವರು ಈಚೆಗೆ ಹಂಪೆಯ ನಗರವನ್ನು ಸಂದರ್ಶಿಸಿದಾಗ ಅಲ್ಲಿ ಪ್ರತ್ಯಕ್ಷವಾಗಿ ನೋಡಿದ ಈ ಕೃತಘ್ನತೆಯ ಕಾರ್ಯಕ್ಕಾಗಿ ತುಂಬಾ ವಿಷಾದಿಸಿ ಇನ್ನಾದರೂ ಐತಿಹಾಸಿಕ ಸ್ಥಳವಾದ ಅಲ್ಲಿನ ಕಟ್ಟಡಗಳನ್ನು ಸರಿಯಾಗಿ ನೋಡಿಕೊಂಡಿರಬೇಕೆಂಬುದಾಗಿ ಮನವಿಮಾಡಿಕೊಂಡಿರುವರು. ಚಿತ್ರಪ್ರತಿಮೆಗಳಿಂದ ಕೊರೆಯಲ್ಪಟ್ಟಿದ್ದು ನೋಡುವವರಿಗೆ ಮಹಾಪ್ರದರ್ಶನಶಾಲೆಯಂತೆ ತೋರುತ್ತಿರುವ ಒಂದು ದೇವಾಲಯದಲ್ಲಿ ಅನೇಕ ಸ್ಥಳಗಳು ವಿರೂಪಿಸಲ್ಪಟ್ಟಿವೆ. ಪ್ರಯಾಣಿಕರಿಗೂ ಸಾಹೇಬರುಗಳಿಗೂ ಅನುಕೂಲವಾಗುವಂತೆ ಪವಿತ್ರವಾದ ಪೂಜಾಸ್ಥಳಗಳಲ್ಲಿ ಬಿಡಾರಗಳನ್ನೂ, ಸ್ನಾನಗೃಹಗಳನ್ನೂ ಕಟ್ಟಿರುವದು ಮೊದಲನೆಯ ದುಷ್ಕಾರ್ಯವು. ಕಂಬಗಳ ನಡುವೆ ಇರುವ ಸ್ಥಳಗಳಲ್ಲಿ ಗೋಡೆಗಳನ್ನಿಟ್ಟು ಕೋಣೆಗಳನ್ನು ಮಾಡಿರುವರು. ಮಾಡಿನ ಒಳಭಾಗದಲ್ಲಿ ಎಲ್ಲಾ ಕಡೆಗಳಲ್ಲಿಯೂ ಸುಣ್ಣಬಳಿದು ಆ ಚಿತ್ರವಿಚಿತ್ರವಾದ ಶಿಲಾಪ್ರತಿಮೆಗಳ ಸ್ವಾಭಾವಿಕ ಸೌಂದರ್ಯವನ್ನು ತೀರಾ ಕೆಡಿಸಿರುವರು. ಹಿಂದೆ ದೇವಾಲಯದ ಅಧಿದೇವತೆಯ ಗರ್ಭಗೃಹವಿದ್ದಲ್ಲಿ ಈಗ ಒಂದು ಸ್ನಾನಗೃಹವು ಏರ್ಪಟ್ಟಿರುವದು. ಇನ್ನೊಂದು ಕಡೆಯಲ್ಲಿ ದೇವತಾಪ್ರಾರ್ಥನೆ ಮಾಡುತ್ತಿದ್ದಂತೆ ತೋರುತ್ತಿರುವ ಕಲ್ಲಿನ ವಿಗ್ರಹಗಳು ಪ್ರೇಕ್ಷಕರ ಕಡೆಗೆ ಕೈಯನ್ನು ತೋರಿಸಿ ದೂರುತ್ತಿರುವಂತೆ ತೋರಿ ಬರುತ್ತಿದ್ದುದು ನಿಹಾಲ್ ಸಿಂಗರವರಲ್ಲಿ ತುಂಬಾ ವಿಷಾದವನ್ನುಂಟುಮಾಡಿತು.

ಈ ದುಷ್ಕಾರ್ಯದಲ್ಲಿ ಪ್ರವೃತ್ತರಾಗಿರುವವರಲ್ಲಿ ಶ್ರೀ। ನಿಹಾಲ್ ಸಿಂಗರವರು ಎರಡು ಪ್ರಭೇದಗಳನ್ನು ಮಾಡಿರುವರು. ಈಗೆ ೫೦೦ ವರ್ಷಗಳ ಹಿಂದೆ ಮುಸಲ್ಮಾನರು ತಮ್ಮ ಮತ ಪ್ರಸಾರದ ಗೋಸ್ಕರ ಹಂಪೆಯೊಳಗೆ ನುಗ್ಗಿ ಅಲ್ಲಿನ ಹಿಂದು ಶಿಲಾ ಪ್ರತಿಮೆಗಳನ್ನು ನುಗ್ಗು ನುರಿಯಾಗಿ ಒಡೆದರು. ಅನಂತರ ಬ್ರಿಟಿಷ್ ಉದ್ಯೋಗಸ್ಥರೊಬ್ಬರು ಆ ಹಾಳುಬಿದ್ದಿರುವ ದೇವಾಲಯವನ್ನು ಬಂಗ್ಲೆಯೇ ಮುಂತಾದ ವಾಸಯೋಗ್ಯವಾದ ಗೃಹವನ್ನಾಗಲೀ ಮಾಡ ಉಪಕ್ರಮಿಸಿರುವರು ಇವರಿಬ್ಬರಲ್ಲಿ ಮುಸಲ್ಮಾನರಾದರೂ ತಮ್ಮ ಸ್ವಭಾವದಂತೆ ಇಸ್ಲಾಮಿ ಧರ್ಮಪ್ರಚಾರದಲ್ಲಿ ನಿರತರಾಗಿ ಅವುಗಳನ್ನು ಕೆಡಹಿದರು. ಆದರೆ ಆಮೇಲೆ ಕೇವಲ ಸ್ವಪ್ರಯೋಜನಕ್ಕಾಗೋಸ್ಕರ ನಡೆದ ವಿಕೃತಿಯನ್ನೇನೆಂದು ಹೇಳಬೇಕು? ಹಿಂದುಗಳೂ ದ್ರವ್ಯದ ಆಶೆಯಿಂದ ದೊಡ್ಡ ದೊಡ್ಡ ಕಲ್ಲುಗಳನ್ನು ಪುಡಿ ಮಾಡಿರುವರು. ವಿಗ್ರಹಗಳ ಅಡಿಯಲ್ಲಿದ್ದ ನಿಧಿಗಳನ್ನು ಅಪಹರಿಸುವದಕ್ಕಾಗಿ ಬೈರಾಗಿವೇಷವನ್ನು ತಳೆದ ದುಷ್ಟಜನರಿಂದಲೇ ಈ ಕಾರ್ಯವು ಮಾಡಲ್ಪಟ್ಟಿದೆ. ಈಗ್ಗೆ ೩೦ ವರ್ಷಗಳ ಹಿಂದೆ ಹಂಪೆಯ ಕಟ್ಟಡಗಳ ಸುತ್ತಲೂ ಕಾಡುಗಿಡಗಳೂ ಮುಳ್ಳು ಬಳ್ಳಿಗಳೂ ಬೆಳೆದು ಪ್ರವೇಶವೂ ದುರ್ಲಭವಾಗಿದ್ದವು. ಆದರೆ ಆಗ್ಗೆ ವೈಸರಾಯರಾಗಿದ್ದ ಲಾರ್ಡ ಕರ್ಜನ್ನರವರು ಹಂಪೆಯ ಸಂದರ್ಶನವನ್ನು ಮಾಡಿ ಆ ಮುಳ್ಳುಗಿಡಗಳನ್ನು ನಾಶಗೊಳಿಸಿ, ಸರಿಯಾದ ದಾರಿಗಳನ್ನು ಮಾಡುವ ಏರ್ಪಾಡನ್ನು ಮಾಡಿದರು. "ಆರ್ಕಿಯೊಲೊಜಿಕಲ್ ಇಲಾಖೆಯ ಸುಪರಿಂಟೆಂಡೆಂಟರಾದ ಸರ್. ಜಾನ್ ಮಾರ್ಶಲರವರು ಈ ಕಾರ್ಯವನ್ನು ಸಾಗಗೊಳಿಸಿದರು. ಆದರೂ ಕೆಲವು ಶಿಲಾಪ್ರತಿಮೆಗಳು ಗಾಳಿ ಬೀಸಲು ಮಳೆಯ ಹೊಡತಕ್ಕೆ ಸಿಕ್ಕಿ ಪೂರಾ ಹಾಳಾಗಿ ಹೋಗುವ ಸಂದರ್ಭದಲ್ಲಿರುವವೆಂದು ನಿಹಾಲ್ ಸಿಂಗರು ಬರೆದಿರುವರು ಇವೆಲ್ಲಾ ಹಾಳಾಗಲು ಅಲ್ಲಿ ನಿಯುಕ್ತರಾದ ಉದ್ಯೋಗಸ್ಥರಲ್ಲಿ ಐತಿಹಾಸಿಕ ಅಭಿಮಾನವಾಗಲೀ ಕಲಾಕೌಶಲ್ಯಗಳಲ್ಲಿ ಅಭಿರುಚಿಯಾಗಲೀ ಇಲ್ಲದಿರುವದೇ ಕಾರಣವು. ಪಬ್ಲಿಕ್ ವರ್ಕ್ಸ ಇಲಾಖೆಯವರು ಇನ್ನೂ ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡಿದರೆ ಇವುಗಳನ್ನು ಯೋಗ್ಯರೀತಿಯಲ್ಲಿಟ್ಟಿರಲು ಯಾವ ಕಷ್ಟವೂ ಇಲ್ಲ. ಇದಲ್ಲದೆ ಕೆಲವು ಕಡೆಗಳಲ್ಲಿ ಅಗೆದರೆ ವಿಜಯನಗರದ ಚರಿತೆಗೆ ಸಂಬಂಧಿಸಿದ ಅನೇಕ ಕಟ್ಟಡಗಳೇ ಮುಂತಾದ ದಾಖಲೆಗಳು ಸಿಕ್ಕಬಹುದು. ಇನ್ನು ಮೇಲಾದರೂ ಇಲಾಖೆಯವರೂ ಅಲ್ಲಿನ ಹಿಂದುಜನರೂ ಅವುಗಳನ್ನು ಅಭಿಮಾನದಿಂದ ನೋಡಿಕೊಂಡಿರುತ್ತ ಆ ಪವಿತ್ರಸ್ಥಳಗಳಲ್ಲಿ ಸ್ನಾನಗೃಹ ಮತ್ತು ಬಂಗ್ಲೆಗಳನ್ನು ಕಟ್ಟಿಸಿ, ಚಿತ್ರನೆಯ ಕೆಲಸಗಳ ಮೇಲೆ ಸುಣ್ಣವನ್ನು ಬಳಿಯುವ ಈ ಅನಾಹುತಗಳು ನಡೆಯಗೊಡದಂತೆ ನೋಡುವರೆಂಬ ನಂಬುಗೆ ಇದೆ

[ ಕಂಠೀರವ- ]

ಚಂದಾದಾರರಾಗಿರಿ! ಪ್ರೋತ್ಸಾಹಿಸಿರಿ!!

## ಕರ್ನಾಟಕ ಸಭಾಗ್ರಂಥಮಾಲೆ

ಪ್ರತಿ ಮೂರು ತಿಂಗಳಿಗೊಮ್ಮೆ ಕನ್ನಡ ಕಥಾ ಕಾದಂಬರಿ ಕಾವ್ಯ ಪ್ರಬಂಧ ನಾಟಕವೇ ಮೊದಲಾದ ಗ್ರಂಥಗಳಲ್ಲಿ ಯಾವದಾದರೊಂದು ಪೂರ್ಣ ಪುಸ್ತಕವೂ ಇತರ ಲೇಖನಗಳೂ ಪ್ರಕಟವಾಗುವ ಈ ಗ್ರಂಥಮಾಲೆಗೆ ವಾರ್ಷಿಕ ಚಂದಾ ಅಂಚೆವೆಚ್ಚದೊಡನೆ ೧೩ ಆಣೆ ಮಾತ್ರ ಇಟ್ಟಿರುವರು. ಈಗಲೇ ೧೩ ಆಣೆಯನ್ನು ಕಳುಹಿಸಿ ವರ್ಗಣಿದಾರರಾಗಿ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ ಲೋಕಮಾನ್ಯ ಸಂವತ್ಸರದ ಬಾಬತು ಈಗಾಗಲೇ ಮೂರು ಪುಸ್ತಕಗಳು ಅಚ್ಚಾಗಿವೆ. ೧ ಘೋಷಯಾತ್ರೆ ೨ ಗಾಂಧಿ ಸಂದೇಶ ೩ ವಸ್ತ್ರಾಪಹರಣ ಹೆಚ್ಚಿನ ವಿಚಾರಗಳಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ವ್ಯವಸ್ಥಾಪಕರ ಕ. ಸ ಗ್ರಂಥಮಾಲೆ
ಉರ್ವ ಸ್ಟೋರ್ ಮಂಗಳೂರು.

---

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಏಜಂಟರು ) ## ಅತ್ಯುತ್ತಮ ( ಬೇಕು.

ಮಸಿ ಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೩—೦ | ಟಿ. ಖ. |
| ೧೦೦ ಚೀಟಿಗಳಿಗೆ | ೦—೧೪—೦ | |
| ೪೦ ಔಂಸ ಮಸಿ ಪುಡಿಕೆಗೆ | ೦—೪—೦ | ಬೇರೆ. |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್
ವಿಳಾಸ:—ಕರ್ನಾಟಕ ಇಂಕ ಕಂಪನಿ,
**ಬಾಗಲಕೋಟೆ.**

---

ವಾಹಿನಿಗಳ ದರ.

ಚಂದಾ ನಿರ್ಣಯ.

| | |
|---|---|
| ವಾರ್ಷಿಕ ವರ್ಗಣಿ ರೂ. | ೪—೦—೦ |
| ಆರು ತಿಂಗಳಿಗೆ ,, | ೨—೦—೦ |
| ಬಿಡಿ ಸಂಚಿಕೆ | ೦—೧—೩ |
| ಮಾದರಿ ಸಂಚಿಕೆ ಬೇಕಾದವರು ಟಿಕೇಟ ಕಳಿಸಬೇಕು. | ೦—೧—೬ |

---

## ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ.

ಮೂರು ತಿಂಗಳಿಗೊಂದಾವರ್ತಿ ಪ್ರಕಟವಾಗುವ ಈ ಪತ್ರಿಕೆಯಲ್ಲಿ ಕರ್ನಾಟಕದ ಎಲ್ಲ ಪ್ರಾಂತಗಳಿಗೂ ಸಂಬಂಧಪಟ್ಟ ಸಾಹಿತ್ಯ ವಿಷಯಕವಾದ ಪ್ರೌಢ ಲೇಖನಗಳು ಪಂಡಿತರುಗಳಿಂದ ರಚಿತವಾಗುತ್ತವೆ; ಅಲ್ಲದೆ ಕರ್ನಾಟಕದಲ್ಲಿ ಮುದ್ರಿತವಾಗುವ ಕನ್ನಡ ಗ್ರಂಥಗಳ ವಿಮರ್ಶೆಯೂ ಈ ಪತ್ರಿಕೆಯಲ್ಲಿ ಕಾಲಕಾಲಕ್ಕೆ ಬರುತ್ತವೆ.

ಇದರ ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ನಾಲ್ಕು ರೂಪಾಯಿಗಳು (ರೂ. ೪—೦—೦) ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಕಾರ್ಯದರ್ಶಿ,
ಕರ್ನಾಟಕ ಸಾಹಿತ್ಯ ಪರಿಷತ್ತು,
ಶಂಕರಪುರ. ಬೆಂಗಳೂರು ೩೮

---

ಏಜಂಟರು ಬೇಕು! ಏಜಂಟರು ಬೇಕು!

ನಂಬರ ೧ ನೇ ನಿರ್ಮಲವಾದ

## ನೀಲಗಿರಿ ತೈಲವು.

ನಮ್ಮಲ್ಲಿ ಜಪಳೀ ಹಸನಾದ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳ ಸೋಯಿಯಿಂದ ತೈಲವು ಸಿಗುವದು. ಸಿಕ್ಸ ೨೮ ಔಂಸ ತೈಲದಬಾಟ್ಲಿ ಅಥವಾ ಶೀಶೆ ೧ಕ್ಕೆ ರೂಪಾಯಿ ೩-೦-೦ ಡಜನಕ್ಕೆ ೩-೦-೩ ವಿಶೇಷ ಮಾಹಿತಿ ಪತ್ರದ್ವಾರ

ವಿಳಾಸ:— ಬಿ. ಎ. ಶೈ ಕಂಪನಿ
ಪೊ ಹೊನ್ನಾವರ.
ಜಿಲ್ಲಾ ಉತ್ತರ ಕಾನಡಾ

## ಉತ್ತಮ ಆಯುರ್ವೇದ ಔಷಧಗಳು.

ಸುವರ್ಣರಾಜವಂಗ ತೊಲಿ ೧ ರೂ. ೫

| | | |
|---|---|---|
| ಸುವೀರವನ್ನಂಗ | ತೊಲಿ | ರೂ. ೫ |
| ಪ್ರವಾಳ | " | ರೂ. ೨ |
| ಚಂದ್ರಪ್ರಭಾ | " | ರೂ. ೧ |
| ಲಘುಮಾಲಿನಿ ವಸಂತ | " | |
| ಅಮೃತಸತ್ವ | " | ಆಣೆ ೧ |
| ಸಾರಯುಕ್ತ ವಾಸಕ | ಔಂಸ ೫ | ರೂ. ೮ |
| ಬ್ರಾಹ್ಮೀ ಸಾರಯುಕ್ತ | " | ರೂ. ೧ |
| ಪಾಚಕವಟಿ | ನೂರಕ್ಕೆ | ರೂ. ೧ |
| ಮೃದುವಿರೋಚಕವಟಿ | ನೂರಕ್ಕೆ | ಆಣೆ ೮ |
| ಸಿತೋಪಲಾದಿಚೂರ್ಣ | ೧೦ ತೊಲಿ | ರೂ. ೧ |

ಇವಲ್ಲದೆ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಎಲ್ಲ ಔಷಧಗಳು ನಮ್ಮಲ್ಲಿ ಸಿಗುವವು.

Karnatak Ayurvedic Pha-maceutical Works
Bagalkot Dt. Bijapur

---

## ಆತ್ಮೋದ್ಧಾರವೆಂಬ

ಹೊಸ ಮಾಸಪತ್ರಿಕೆ

ಉತ್ತರಕಾನಡಾ ಜಿಲ್ಲೆಯಲ್ಲಿ ಹೊರಡುತ್ತಿರುವ ಉಚ್ಚ ಧಾರ್ಮಿಕ ಸಾಮಾಜಿಕ ರಾಜಕೀಯ ವಿಷಯಗಳಿಂದ ಕೂಡಿದ್ದು ಎಲ್ಲ "ಸ್ವಾಭಿಮಾನಿ"ಗಳು ವಿಶೇಷತಃ ವಿದ್ಯಾರ್ಥಿಗಳು ಅವಶ್ಯವಾಗಿ ಓದತಕ್ಕದ್ದು.

ವಾರ್ಷಿಕ ವರ್ಗಣಿ ವ್ಹಿ. ಪಿ. ಸಹಿತ ೨ ರೂಪಾಯಿ ೧ ಆಣೆ ಮಾತ್ರ ಬಿಡಿಸಂಚಿಕೆ ೩॥ ಆಣೆ.

ವಿಳಾಸ
ವಾಮನ ಅನಂತ ಜೋಷಿ
ರಾಷ್ಟ್ರೀಯ ಶಾಲಾ ಕಾರ್ಯಾಧ್ಯಕ್ಷ,
ಶಿರಸಿ ಉತ್ತರಕಾನಡಾ.


---

ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಶ್ರೀನಿವಾಸ ರಾಘವೇಂದ್ರ ಕುಲಕರ್ಣಿಯವರು ಮುದ್ರಿಸಿದರು, ಮತ್ತು ಅಲ್ಲಿಯೇ ಶಂಕರಾಚಾರ್ಯ ಬಂಡಾಚಾರ್ಯ ಪುರೋಹಿತ. ಇವರು ಪ್ರಸಿದ್ಧಿಸಿದರು.

ಬದಲಿಸುವ ಪ್ರಯತ್ನ.

REGISTERED NO. B 1589

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಭಾಷಾಂತರಿಸುವದೇ ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟೆ ವೈಶಾಖ ಶು|| ೧೫ ಶಕೆ ೧೮೪೪ ಗುರುವಾರ ತಾ. ೧೧ ಮೇ. ೧೯೨೨. | ಸಂಚಿಕೆ ೨೨

## ಮಹಾತ್ಮರ ನುಡಿಯು.

### ಅಸಹಕಾರಿಗಳ ಕರ್ತವ್ಯವು.

( ಯಂಗ ಇಂಡಿಯಾ ) ಎಮ್. ಕೆ. ಗಾಂಧಿ ೯-೩-೨೧

ದಬ್ಬಾಳಿಕೆಯ ಆಕಾರದಲ್ಲಿ ನಮ್ಮ ಕರ್ತವ್ಯವು ಸ್ಪಷ್ಟವಾದದ್ದಿರುತ್ತದೆ. ಪಂಜಾಬ ಖಿಲಾಫತ್ ಮತ್ತು ಸ್ವರಾಜ್ಯಗಳ ಸಲುವಾಗಿ ದುಃಖಬಡುವದನ್ನು ನಾವು ಕೈಕೊಂಡಿದ್ದೇವೆ. ಆದ್ದರಿಂದಲೇ ನಮ್ಮನ್ನು ಹಿಡಿದು, ಶಿಕ್ಷಿಸಿದರೂ, ಅದನ್ನು ನಾವು ಸಹಿಸಲೇ ಬೇಕು. ಯಾವದೇ ನ್ಯಾಯವಾದ ಚಳವಳಿಗೆ ದುರ್ಲಕ್ಷತೆ, ಅಪಹಾಸ್ಯ, ನಿಂದೆ, ದಬ್ಬಾಳಿಕೆ, ಮತ್ತು ಜಯ ಮುಂತಾದ ಐದು ಪಾಯರಿಗಳನ್ನು ದಾಟಬೇಕಾಗುತ್ತದೆ. ಕೆಲ ತಿಂಗಳುಗಳ ವರೆಗೆ ನಾವು ದುರ್ಲಕ್ಷಿಸಲ್ಪಟ್ಟೆವು. ಆಮೇಲೆ ವ್ಹಾಯಿಸರಾಯರು ಈ ಚಳವಳಿಯನ್ನು ಅಪಹಾಸ್ಯಮಾಡಿದರು. ಸದ್ಯಃ ಕಾಲದಲ್ಲಿ ಈ ಚಳವಳಿಯ ನಿಂದೆಯನ್ನು ಹಾಗೂ ಅದರ ಬಗ್ಗೆ ಜನರಲ್ಲಿ ತಪ್ಪು ತಿಳುವಳಿಕೆಯನ್ನು ಹುಟ್ಟಿಸುವದು ವಿಶೇಷವಾಗಿದೆ. ಪ್ರಾಂತಿಕ ಗವ್ಹರ್ನರರೂ ಅಸಹಕಾರಿತೆಯ ವಿರುದ್ಧವಿದ್ದ ಜನರೂ ಈ ಚಳವಳಿಯ ಬಗ್ಗೆ ತಮಗೆ ಶಕ್ಯವಿದ್ದಷ್ಟು ಅವಾಚ್ಯ ಶಬ್ದಗಳ ರಾಶಿಯನ್ನೇ ತೆಗಸರಿಸಿದ್ದಾರೆ. ಈಗ ದಬ್ಬಾಳಿಕೆಯ ಪ್ರಾರಂಭ ಕಾಲವು. ಅದು ಇನ್ನೂ ಪ್ರಖರವಾಗಿರದೆ, ಶಾಂತ ಸ್ಥಿತಿಯಲ್ಲಿಯೇ ಇದೆ.

ದಬ್ಬಾಳಿಕೆಯು ಶಾಂತವಾದದ್ದಿರಲಿ, ಅಥವಾ ಕಠೋರತೆಯನ್ನು ಹೊಂದಲಿ, ಯಾವದೇ ಚಳವಳಿಯು ಅದನ್ನು ದಾಟಿತೆಂದರೆ, ಆ ಚಳವಳಿಯು ಬೇಗನೇ ಯಶಸ್ವಿಯಾಗುವದು. ನಿಶ್ಚಯವಾಗಿ ನಾವು ಸತ್ಯನಿಷ್ಠರಾಗಿದ್ದಲ್ಲಿ, ಈ ದಬ್ಬಾಳಿಕೆಯು, ನಿಜವಾಗಿ ಮುಂದೆ ಸಿಗುವ ಜಯದ ಪೂರ್ವ ಚಿನ್ಹವೆಂದು ತಿಳಿಯತಕ್ಕದ್ದು. ಆದರೆ ನಾವು ಅಂಜದೆ, ಯಾವ ತರದ ಕೆಟ್ಟ ಶಬ್ದಗಳನ್ನು ಉಪಯೋಗಿಸಿ, ಶಾಂತತಾ ಭಂಗವನ್ನು ಮಾಡತಕ್ಕದ್ದಲ್ಲ. ಶಾಂತತಾ ಭಂಗವು,ಆತ್ಮ ಹತ್ಯವೇ ಸರಿ. ಶಕ್ತಿಯು ಬಲವು ತಾನಾಗಿಯೆ ನಾಶವಾಗಲಾರದು; ಆದ್ದರಿಂದಲೇ ಸರಕಾರವು, ತನ್ನ ಜೀವನದ ಸಲುವಾಗಿ, ದಬ್ಬಾಳಿಕೆಯಿಂದಾದರೂ ಟೀಕೆಯಲ್ಲಿ; ಕಟ್ಟಿ ಇಡೆದ. ಪ್ರಯತ್ನವನ್ನು ಮಾಡಹತ್ತಿರುವದು. ಸಂಪೂರ್ಣ ಆತ್ಮಸಂಯಮನವೇ ಇಂಥ ಕಠಿಣ ಪರಿಸ್ಥಿತಿಯಲ್ಲಿ, ವಿಜಯಕ್ಕೆ ಶೀವ್ರತರವಾದ ಮಾರ್ಗವಾಗಿರುವದು. ಹಾಗೂ ದಬ್ಬಾಳಿಕೆಯ ಆಘಾರವನ್ನು ಕಡಿಮೆ ಮಾಡಲಿಕ್ಕೆ, ಸುಲಭವಾದ ಮಾರ್ಗಗಳೆಂದರೆ. ಸರಕಾರೀ ಶಾಲೆ ಕಾಲೇಜಗಳನ್ನೂ . ಪರದೇಶೀ ಅರಿವೆಗಳನ್ನೂ , ಪೂರ್ಣವಾಗಿ ಬಹಿಷ್ಕರಿಸಿ, ಕೈನೂಲು ಕೈ ಮಗ್ಗಗಳ ವಸ್ತ್ರವನ್ನೂ ವಿಶೇಷವಾಗಿ ಪ್ರಸಾರ ಮಾಡುವದು ಅತ ವಶ್ಯಕವಾದದ್ದು.

---

## ಮಹಾತ್ಮರ ವಿಚಾರ ಪರಿಚಯ.

"ಶಾಸ್ತ್ರಿ ಮಹಾತ್ಮರಂತೆ ಪತಿವ್ರಾರಿ ಕುಣಿಯಹತ್ತಿದ್ದರಿಂದ ನಾವು ನಮ್ಮ ಸ್ವಾಭಿಮಾನವನ್ನು ಕಳೆದುಕೊಂಡುಬಿಟ್ಟಿರುವೆವು. ನಾವು ವಿಚಾರಮಾಡುವದನ್ನೂ ಮಾತಾಡುವದನ್ನೂ ಇಂಗ್ಲೀಷದಲ್ಲಿಯೇ ಮಾಡಹತ್ತಿರುವೆವು. ಇದರಿಂದ ನಮ್ಮ ಮಾತೃಭಾಷೆಗಳು ಅವನತ ಸ್ಥಿತಿಯನ್ನು ಹೊಂದಿರುವದಲ್ಲದೆ, ನಮ್ಮ ದೇಶಬಾಂಧವರಿಗೂ ನಮಗೂ ಬಳಿಕೆ ತಪ್ಪಿ ಹೋಗಿದ್ದು ಅವರನ್ನೊಬ್ಬರು ಪರಕೀಯರಂತೆ ಭಾವಿಸಹತ್ತಿರುವೆವು. ಮಾತೃಭೂಮಿಯ ಸೇವೆಗಾಗಿ ಇಂಗ್ಲಿಷಭಾಷೆಯ ಜ್ಞಾನವೇನೂ ಆವಶ್ಯವಾದದ್ದಲ್ಲ.

× ×

ಜಾತಿಯುವಿಷಯಕ್ಕೆ ಮಾತು ಹೊರಟಾಗ್ಗೆ ಅವರು ಅಂದದ್ದೇನಂದರೆ— 'ಜಾತಿಯು ಹಿಂದೂ ಧರ್ಮದ ಮರ್ಮವೂ ಮುಕ್ತಿ ಬಲವೂ ಆಗಿರುವದು.'

× ×

ಮಾತೃಭಾಷೆಯಲ್ಲಿ ವಾಙ್ಮಯವು ಬಲು ಮಹತ್ವಪೂರ್ಣವು; ಅದರ ಬಗ್ಗೆ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ ಒಂದು ದೊಡ್ಡ ಪುಸ್ತಕಾಲಯವನ್ನು ಮಾಡಲಿಚ್ಛಿಸುತ್ತೇನೆ. ಆದ್ದರಿಂದ ಇಂಥ ಪುಸ್ತಕಾಲಯಗಳನ್ನು ಸ್ಥಾಪಿಸಲಿಕ್ಕೆ ಹಣದ ಸಹಾಯ ಮಾಡಬೇಕೆಂದು ನನ್ನ ಮಿತ್ರರಿಗೆ ನಾನು ಕೇಳಿಕೊಳ್ಳುತ್ತೇನೆ.

× ×

ಆಧುನಿಕ ಸುಧಾರಣೆಯು ಹಿಂದುಸ್ಥಾನದಂತೆ ಯುರೋಪಕ್ಕಾದರೂ ದೊಡ್ಡ ಇದಿಯೇ ಆಗಿರುವದು. ಮಹಾಯುದ್ಧವು ಸಾಕ್ಷಾತ್ ಈ ಸುಧಾರಣಾರೂಪವಾದ ಇದಿಯ ಪರಿಣಾಮವೇ! ಪ್ರತಿಒಂದು ಬಲಾಢ್ಯ ರಾಷ್ಟ್ರವು ಯುದ್ಧದ ಸನ್ನಾಹವನ್ನೇ ಮಾಡುತ್ತಬಂದಿದ್ದವು.

× ×

ಹೆಣ್ಣು, ಹೊನ್ನು, ಹೊಲ ಇವು ಮೂರು ಅನಿಷ್ಟದ ಮೂಲವು. ಈ ಅನಿಷ್ಟಕ್ಕೆ ನಾವು ಎದುರಾಗಲಿಕ್ಕೆಬೇಕು. ವಿಷ ಆರಾಮ ಬಯಿಯುವವರಿಗಾಗಿ ನಾನು ಸ್ತ್ರೀ, ಭೂಮಿ, ಮತ್ತು ದ್ರವ್ಯವನ್ನು ಸಂಪಾದಿಸಬೇಕಾಗಿಲ್ಲ. ಎರಡನೇಯವರು ತಾಳತಪ್ಪಲಿಚ್ಛಿಸುವದಿಲ್ಲ. ವಾದ ವಿಚಾರದಂತೆ ಆಚರಿಸಹತ್ತಿ

ದರೆ ಇಂಥ ಕುವಿಚಾರ ಕುಕರ್ಮಗಳಿಗೆ ಆಸ್ಪದವೊರೆಯ ವಲ್ಲ. ಸಾರ್ವಜನಿಕ ಸಂಬಂಧವಾದ ನಮ್ಮ ಆಯುಷ್ಯಕ್ರಮವನ್ನು ತಿದ್ದಿ ಸರಿಪಡಿಸಬೇಕು.

ಪ್ರತಿಒಂದು ಪ್ರಮಾಣಪತ್ರ ಆಗಾಗ್ಗೆ ಕಟ್ಟಳೆಯನ್ನು ಬದಲು ಮಾಡಬೇಕಾಗುತ್ತದೆ. ಹಿಂದುಸ್ತಾನದಲ್ಲಿ ಹತ್ತೂವರಿ ಲಕ್ಷ ಸಾಧು ಜನರು ಇದ್ದಾರೆ, ಅವರೆಲ್ಲರು ತಮ್ಮ ಕರ್ತವ್ಯವನ್ನು ಮಾಡಿದರೆ ಹಿಂದುಸ್ತಾನಕ್ಕೆ ದೊಡ್ಡ ಲಾಭವೇ ಆಗುವದು. ಈಗ್ಗೆ ಜಗದ್ಗುರು ಶಂಕರಾಚಾರ್ಯರಿಗೆ ಆ ಅಭಿಧಾನವು ಒಪ್ಪುವದಿಲ್ಲ. ಯಾಕಂದರೆ, ಅವರಲ್ಲಿ ಆ ಶಕ್ತಿಯು ಉಳಿದಿರುವದಿಲ್ಲ

---

## ವಿದ್ಯಾರ್ಥಿಗಳಿಗೆ.

(ಭಾವನಗರದ ಶಹರಸಮಿತಿಯು ರಾಷ್ಟ್ರೀಯ ಸಪ್ತಾಹದಲ್ಲಿ ಪ್ರಸಿದ್ಧಿಸಿದ ಪತ್ರಿಕೆಯ ಭಾಷಾಂತರವು ಪತ್ರಿಕೆಯು ಅತ್ಯಂತ ಉಪಯುಕ್ತವಾದ್ದಾಗಿದ್ದರಿಂದ ನವಜೀವನದ ವಾಚಕರಿಗಾಗಿ ಅದನ್ನು ನಾವು ಕನ್ನಡಿಸಿರುವೆವು) (ಸಂಪಾದಕ)

ಈ ಯುಗದಲ್ಲಿ ಮತ್ತು ಈ ದೇಶದಲ್ಲಿ ನೀವು ಜನ್ಮವನ್ನು ತಾಳಿರುವದು ನಿಮ್ಮ ಮಹದ್ಭಾಗ್ಯದಿಂದಲೇ ಸ್ವಿಟ್ಝರ್ಲಂಡದಲ್ಲಿ ನಮ್ಮ ದೇಶದಲ್ಲಿ ಸ್ವತಂತ್ರತೆಯನ್ನು ಹೊಂದುವದಕ್ಕಾಗಿಯೂ ಮೋಕ್ಷವನ್ನು ಪಡೆಯುವದಕ್ಕಾಗಿಯೂ ದೇಶಭಕ್ತರು ಭಗೀರಥ ಪ್ರಯತ್ನಗಳನ್ನು ನಡಿಸಿರುವರು; ಈ ಸ್ವಾತಂತ್ರ್ಯ ಯಜ್ಞದಲ್ಲಿ ಅನೇಕ ಸ್ವಾರ್ಥತ್ಯಾಗಿಗಳು ಆತ್ಮಾಹುತಿಯನ್ನು ಕೊಡುತ್ತಿರುವರು; ಅನೇಕರು ರಾಜಗೃಹದಲ್ಲಿ ಹೊಗ್ಗಿ ಹಾಗೆ ಕಾರಾಗೃಹಗಳಲ್ಲಿ ನರಳಾಡುತ್ತಿರುವರು; ಮಹಾತ್ಮರಂಥ ನಾಯಕರು ಈ ಯಜ್ಞದಲ್ಲಿ ಅಧ್ವರ್ಯುತ್ವವನ್ನು ಸ್ವೀಕರಿಸಿರುವರು. ಇಂಥ ಕಾಲದಲ್ಲಿ ಈ ದೇಶದಲ್ಲಿ ಜನ್ಮವನ್ನು ಹೊಂದುವದು ಪರಮಭಾಗ್ಯದಿಂದಲ್ಲವೆ ಮತ್ತ್ಯಾತರಿಂದ? ಈ ತರದ ಪರಮಭಾಗ್ಯವು ನಿಮಗೆ ನಿಮ್ಮ ಪುಣ್ಯದಿಂದ ಪ್ರಾಪ್ತವಾಗಿದೆ

ಆದರೆ ನೀವು ಈ ಮಹದ್ಭಾಗ್ಯವನ್ನು ಅನುಭವಿಸಲು ಯೋಗ್ಯತೆಯನ್ನು ಗಳಿಸಿದಿರಾ? ಪರಮಾತ್ಮನು ನಿಮಗೆ ಬಂಗಾರದಂಥ ಸಂಧಿಯನ್ನು ಕೊಟ್ಟಿರುವನು. ಆದರ ಲಾಭವನ್ನು ನೀವು ಹೇಗೆ ಮಾಡಿಕೊಳ್ಳುವಿರಿ?

ನಾನೊಂದು ಪ್ರಶ್ನೆಯನ್ನು ಕೇಳುವೆನು. ನೀವು ಖಾದಿಯನ್ನು ಧರಿಸುವಿರೋ? ಆಕಸ್ಮಾತ್ತಾಗಿ ಖಾದಿಯಿಂದಲೇ ನೀವು ನಿಮ್ಮ ಶರೀರವನ್ನು ಅಲಂಕರಿಸುವಿರೋ? ವಿದ್ಯಾರ್ಥಿಗಳೆಂದರೆ ಖಾದೀ ಬಟ್ಟೆಯನ್ನೇ ಉಡುವವರು ಎಂಬಂಥ ಕೀರ್ತಿಯನ್ನು ಎಲ್ಲರಿಗೂ ನೀವು ತಿಳಿಸಬಲ್ಲಿರೋ?

ತಲೆಯ ಮೇಲೊಂದು ಬಿಳಿ ಟೊಪ್ಪಿಗೆಯನ್ನು ಇಟ್ಟರಾಯಿತೆಂದು ತಿಳಿಯಲಾಗದು. ಸರ್ವಾಂಗವೂ ಖಾದಿಯಿಂದ ಆಚ್ಛಾದಿತವಾಗಿದ್ದರೇನೇ ವಿದ್ಯಾರ್ಥಿ ಜೀವನಕ್ಕೆ ಶೋಭೆಯುಂಟಾಗುವದು; ವಿದ್ಯಾರ್ಥಿಗಳ ಜೀವನವು ಸಾದಾತನದ್ದಾಗಿಯೂ ಸಂಯಮಪೂರ್ಣವಾಗಿ ಬ್ರಹ್ಮಚರ್ಯದಿಂದ ಪವಿತ್ರವಾಗಿಯೂ ಇಂತು ಶುದ್ಧ ಖಾದಿಯನ್ನು ಧರಿಸುವದರಿಂದ ಸಂಯಮನ ವಿರುವದು; ಪವಿತ್ರತೆಯುಂಟಾಗುವದು ಮತ್ತು ಸಾದಾತನವಿರುವದು

ವಿದ್ಯಾರ್ಥಿ—ಆಶ್ರಮವು (ಬ್ರಹ್ಮಚರ್ಯಾಶ್ರಮವು) ಉಳಿದ ಆಶ್ರಮಗಳ ತಳಗಟ್ಟಿನಂತಿರುವದು. ವಿದ್ಯಾರ್ಥಿ ಜೀವನವು ಭಾವೀ ಪ್ರಜೆಗಳ ಆದರ್ಶವಿರುವದು. ಭವಿಷ್ಯವನ್ನು ನಿರ್ಮಿಸುವವರು ನೀವೇ ಆಗಿರುವಿರಿ. ಭವಿಷ್ಯದ ನಿಯಾಮಕರಾದರೂ ಅವರೇ; ಇಂಥ ವಿದ್ಯಾರ್ಥಿ ಜೀವನವು ಯಾತರಿಂದ ಶೋಭಿಸಬಲ್ಲದು? ಶುದ್ಧ ಶುಭ್ರವಾದ ಖಾದಿಯಿಂದಲ್ಲವೆ ಮತ್ತೇನು?

ನನ್ನ ಎರಡನೇ ಪ್ರಶ್ನವೇನಂದರೆ: —

ನೀವು ನೂಲುತ್ತಿರುವಿರೋ? ನಿತ್ಯದಲ್ಲಿಯೂ ಸ್ವಲ್ಪಾದರೂ ನೂಲುತ್ತಿರುವಿರೊ? ದೊರೆತ ವೇಳೆಯನ್ನೆಲ್ಲ ನೂಲುವದರಲ್ಲಿಯೇ ಉಪಯೋಗಿಸುತ್ತಿರುವಿರೊ?

ವಿದ್ಯಾರ್ಜನೆಗಾಗಿ ವಿದ್ಯಾರ್ಥಿ ಜೀವನವು. ನೂಲುವ ವಿದ್ಯೆಯನ್ನು ನೀನೇಕೆ ಕಲಿಯಲಾಗದು? ನೂಲುವದು ಒಂದು ವಿದ್ಯೆಯಿರುವದಲ್ಲದೆ ಅದೊಂದು ಕಲೆಯಾದರೂ ಇರುವದು; ಇಷ್ಟೇ ಅಲ್ಲ, ಇದೊಂದು ಜೀವನಯಾತ್ರೆಯ ಮಹಾಮಂತ್ರವಾಗಿರುವದು, ದೇಶೋದ್ಧಾರದ ಮಹತ್ಸಾಧನವಾಗಿರುವದು; ಆರ್ಥಿಕ ಸ್ವಾತಂತ್ರ್ಯದ ದಿವ್ಯವಾದ ಉಪಾಯವಾಗಿರುವದು; ಮತ್ತು ದರಿದ್ರರಿಗೆ ಕಾಮಧೇನುವಾಗಿರುವದು. ವಿದ್ಯಾರ್ಥಿಗಳು ಸ್ವತಂತ್ರ ರೀತಿಯಿಂದ ಕೈಕೊಳ್ಳತಕ್ಕ ಅತ್ಯಂತ ಪವಿತ್ರವಾದ ವ್ಯವಸಾಯವಿದು! ನೀವಿದನ್ನು ಕೈಕೊಳ್ಳದಿದ್ದರೆ ಮತ್ತಾರು ಕೈಕೊಳ್ಳಬೇಕು?

ಅನೇಕರು ನೂಲಲು ನಾಚುತ್ತಿರುವರು ಉಳಿದವರಿಗೆ ಬೇಸರಿಕೆ ಬರುತ್ತದೆ ಮುದುಕಿಗಳು ನೂಲುವರೊ? ವ್ಯಾಪಾರಸ್ಥರು ವ್ಯಾಪಾರವನ್ನು ಮಾಡುವರೊ ಅಥವಾ ನೂಲುವರೂ? ಕೂಲಿಕಾರರು ಕೂಲಿಯಿಂದ ಹೆಚ್ಚು ದೊರಕಿಸಬಲ್ಲರು. ಸ್ತ್ರೀಯರಿಗಂತು ಈ ಕೆಲಸವು ನಿರರ್ಥಕವಾಗಿ ತೋರುವದು. ಗಂಡಸರು ಅನ್ನುವರೇನಂದರೆ— ಈ ಕೆಲಸವು ಹೆಂಗಸರದು. ನಮ್ಮಿಂದೆಂದಾದರೂ ನೂಲುವದಾದೀತೋ?" ಆದರೆ ನೀವು ಈ ಬಗೆಯ ಸುಳ್ಳು ನಾಚಿಕೆಯನ್ನು ತಾಳಿರುವದಿಲ್ಲ, ನಿಮ್ಮಲ್ಲಿ ಆಲಸ್ಯವಿರುವದಿಲ್ಲ; ನಿಮ್ಮಲ್ಲಿ ಚೈತನ್ಯವು ಸಂಚರಿಸುತ್ತಿರುವದು; ನಿಮ್ಮ ಹೃದಯವು ಪರಿಶುದ್ಧವಾಗಿರುವದು; ಅದರಿಂದ ನೀವು ಸತ್ಯವನ್ನು ಕಂಡು ಹಿಡಿಯಬಲ್ಲಿರಿ, ನೀವು ನೂಲಲು ನಾಚಲಾಗದು. ಜನತೆಯ ಬಾಲಕರಾದ ನೀವು ಯಾವ ಕಾರ್ಯವನ್ನು ಸದ್ಬುದ್ಧಿಯಿಂದ ಕೈಕೊಳ್ಳುವಿರೊ, ಆ ಕಾರ್ಯದ ಪ್ರತಿಷ್ಠೆಯು ಹೆಚ್ಚುವದು. ಜನತೆಯಾದರೂ ಅದನ್ನು ಕೈಕೊಳ್ಳುವದು; ಮುಂದೆ ಆ ಕಾರ್ಯವನ್ನು ಮಾಡಲು ಯಾರಿಗೂ ನಾಚಿಕೆ ಬಾರದು ಮತ್ತು ಬೇಸರವೂ ಉಂಟಾಗದು.

ವಿದ್ಯಾರ್ಥಿಗಳು ಜನತೆಯ ಮಕ್ಕಳು, ಮಕ್ಕಳು ಆವುದನ್ನು ಪ್ರೇಮದಿಂದ ಮಾಡತೊಡಗುವರೊ, ಅದನ್ನು ತಾಯಿ—ತಂದೆಗಳು ಮಾಡಲಾರರೊ? ಹಿರಿಯರಿಂದ ಈ ಕೆಲಸವು ಆಗಬೇಕೆಂದಿದ್ದರೆ ವಿದ್ಯಾರ್ಥಿಗಳು ತಾವಾಗಿಯೇ ಈ ಕೆಲಸದಲ್ಲಿ ತೊಡಗತಕ್ಕದ್ದು. ಒಂದು ಕ್ಷಣವಾದರೂ ತಡಮಾಡಕೂಡದು. ಆದರೆ ತನ-ಮನದಿಂದ ಕಾರ್ಯ ಮಾಡತಕ್ಕದ್ದು

ಇನ್ನು ಮೂರನೇ ಪ್ರಶ್ನವು

ನೀವು ರಾಷ್ಟ್ರೀಯ ಶಿಕ್ಷಣದ ಉಪಾಸನೆಯನ್ನು ಮಾಡುವಿರಿ? ರಾಷ್ಟ್ರೀಯ ಶಿಕ್ಷಣವನ್ನು ದೊರಕಿಸಿಕೊಳ್ಳುವದಕ್ಕಾಗಿ ನೀವು ರಾಷ್ಟ್ರೀಯ ವಿದ್ಯಾಲಯಗಳಲ್ಲಿ ಸೇರಬಾರದೇಕೆ? ರಾಷ್ಟ್ರೀಯ ಶಿಕ್ಷಣವನ್ನು ಕೊಡುವ ರಾಷ್ಟ್ರೀಯ ವಿದ್ಯಾಲಯಗಳ ಲಾಭವು ನಿಮಗೆ ದೊರೆಯಬಾರದೇಕೆ? ನೀವು ಹಿಂದೀ ಭಾಷೆಯನ್ನು ಕಲಿಯಬಾರದೇಕೆ?

ರಾಷ್ಟ್ರೀಯ ಶಿಕ್ಷಣದ ವ್ಯವಸ್ಥೆಯು ಆಗಿದೆ. ಅದರ ಲಾಭವನ್ನು ನೀವು ತಕ್ಕೊಳ್ಳಕೂಡದೋ? ನಿಜವಾಗಿ ನಿಮಗೆ ರಾಷ್ಟ್ರದ ಸೇವಕರಾಗುವದಿದ್ದರೆ ರಾಷ್ಟ್ರೀಯ ಶಾಲೆಯ

ಲ್ಲಿಯೇ ನೀವು ಶಿಕ್ಷಣವನ್ನು ಹೊಂದತಕ್ಕದ್ದು. ರಾಷ್ಟ್ರೀಯ ವಿದ್ಯಾಪೀಠಗಳೇ ನಿಮ್ಮನ್ನು ಪರೀಕ್ಷಿಸಿ ನಿಮಗೆ ಯೋಗ್ಯತಾ ಪತ್ರಗಳನ್ನು ಕೊಡತಕ್ಕದ್ದು. ಇದರಿಂದಲೇ ನಿಮಗೆ ಭೂಷಣವು.

ನಾಲ್ಕನೇ ಪ್ರಶ್ನವು ಇಂತಿರುವದು —

ನೀವು ನಿಮ್ಮ ವೇಳೆಯನ್ನೆಲ್ಲ ದೇಶಸೇವೆಯಲ್ಲಿಯೇ ಕಳೆಯಬಹುದೋ ? ಸೇವೆಯ ಮಾರ್ಗಗಳು ಅನಂತವಾಗಿರುವವು. ಮಹಾಸಭೆಯ ಸಭಾಸದರನ್ನು ಮಾಡುವದೊಂದು ಕಾರ್ಯವು; ಟಿಳಕ ಸ್ವರಾಜ್ಯ ನಿಧಿಯನ್ನು ಕೂಡಿಸುವದು ಮತ್ತೊಂದು ಕಾರ್ಯವು; ಖಾದಿಯ ಪ್ರಸಾರವನ್ನು ಮಾಡುವದು ಇದೊಂದು ಕಾರ್ಯವು; ಸ್ವಯಂಸೇವಕರಾಗಿ ಉತ್ಸವ ಕಾರ್ಯಗಳಲ್ಲಿಯೂ ಸಭೆಗಳಲ್ಲಿಯೂ, ಶಾಂತಿಯನ್ನು ನೆಲೆಗೊಳಿಸುವದು ಬೇರೊಂದು ಕಾರ್ಯವು.

ಮೇಲ್ಕಾಣಿಸಿದ ಪ್ರತಿಯೊಂದು ಕೆಲಸವನ್ನು ದೇಶವತ್ಸಲನಾದ ವಿದ್ಯಾರ್ಥಿಯು ಮಾಡಬಲ್ಲನು. ಈ ಎಲ್ಲ ಕೆಲಸಗಳು ತಿಳಕೊಳ್ಳಲು, ಸುಲಭವಾಗಿಯೂ ಹಗುರಾಗಿಯೂ ಇರುವವು.

ಬಂಧುಗಳೇ, ಹೆಗಲಮೇಲೆ ಖಾದಿಯ ಗಂಟನ್ನು ಹೊತ್ತುಕೊಂಡು ಮನೆಮನೆಗೆ ಮಾರಲು ಹೊರಬೀಳಿರಿ. ಯಾವಾಗ್ಗೆ ನೀವು ಹೆಗಲಿನ ಮೇಲೆ ಖಾದಿಯ ಭಾರವನ್ನು ಹೊತ್ತುಕೊಂಡು, ಜನತೆಯನ್ನೆಲ್ಲ ಶುಭ್ರವಾದ ಖಾದಿಯ ಬಟ್ಟೆಯಿಂದ ಸಿಂಗರಿಸುವಿರೋ ಆಗ್ಗೆ ಜನತೆಯು ಎಚ್ಚರಿಯುವದು. ತಮ್ಮ ಮಕ್ಕಳು ಎಚ್ಚತ್ತು ಕರ್ತವ್ಯತತ್ಪರರಾದಾಗ್ಗೆ ತಾವಿನ್ನೂ ಮಲಗಿರುವೆವೆಂಬ ಅರಿವು ಯಾವತ್ತರಿಗೂ ಆಗುವದು. ನೀವು ತರುಣರಿರುವಿರಿ, ಹಾಗು ಉತ್ಸಾಹಿಗಳಾದರೂ ಇರುವಿರಿ; ನಿಮ್ಮ ಲಾಭವು ಮಾತೃಭೂಮಿಗಾಗದಿದ್ದರೆ ಮತ್ತಾರಿಗಾಗಬೇಕು ?

[ನವಜೀವನ]

---

## ವಿಘಾತಕ ಸೂಚನೆಯು.

ಕಲಕತ್ತೆಯ ವಿಶಿಷ್ಟ ರಾಷ್ಟ್ರೀಯ ಸಭೆಯಲ್ಲಿ, ಯಾವ ಠರಾವುಗಳು, ಯುಕ್ತಿಗಳಾಗಲಿಲ್ಲವೋ, ಅಂಥ ಠರಾವುಗಳ ಬಗ್ಗೆ, ರಾಜನೀತಿಜ್ಞರ, ಮನಸ್ಸಿನಲ್ಲಿ ಹೊಸ ಚೈತನ್ಯ ಹುಟ್ಟಲಿಕ್ಕೆ, ಬಂಗಾಲ ಪ್ರಾಂತಿಕ ಪರಿಷತ್ತಿನಲ್ಲಿ, ಶ್ರೀಮತಿ ದಾಸರವರು, ಅಧ್ಯಕ್ಷನಾತೆಯಿಂದ ಮಾಡಿದ, ಭಾಷಣದಲ್ಲಿಯ ಸೂಚನೆಯು ಕಾರಣವಾಗಿದೆ." ಅಸಹಕಾರಿಗಳು ಸಂಯುಕ್ತ ಸಂಸ್ಥಾನ ಲೋಕಲ ಬೋರ್ಡ್, ಡಿಸ್ಟ್ರಿಕ್ಟ ಬೋರ್ಡ್, ಮ್ಯುನಸಿಪಾಲಿಟಿಗಳಲ್ಲಿ ಪ್ರವೇಶ ಮಾಡತಕ್ಕದ್ದಿಷ್ಟೇ ಅಲ್ಲ. ಅಪರಿ ಅವಶ್ಯವಿದ್ದರೆ ಪ್ರಾಂತಿಕ ಕೌನ್ಸಿಲಗಳಲ್ಲಿ ಯಾದರೂ ಪ್ರವೇಶವನ್ನು ದೊರಕಿಸಬೇಕು. ಇವುಗಳಿಂದ ಅವರಿಗೆ ತಮ್ಮ ಬೇಡಿಕೆಗಳೇ ನಿಶ್ಚಯವಾಗಿ ದೊರೆಯದಿದ್ದರೂ, ಪ್ರತಿಯೊಂದು ಕೆಲಸದಲ್ಲಿ ಅಡ್ಡಿಯನ್ನು ಮಾಡದಂತಾಗುವದು. ಇದೇ ನಮ್ಮ ಕರ್ತವ್ಯವಾಗಿದೆ;" ಎಂದು ಅವರ ಮತವು.

ಹೊಸ ಸುಧಾರಣೆಯ ಕೌನ್ಸಿಲಗಳಲ್ಲಿಯ ಪ್ರವೇಶದ ವಿಷಯಕ್ಕೆ, ಉಳಿದ ಎಲ್ಲ ವಿಷಯಗಳಿಗಿಂತ, ಹೆಚ್ಚು ಚರ್ಚೆಯಾಗಿ, ಕಟ್ಟಕಡೆಗೆ ಈ ಠರಾವು ಸಪ್ಟಂಬರ ೧೯೨೦ರಲ್ಲಿ, ರಾಷ್ಟ್ರೀಯ ಸಭೆಯಲ್ಲಿ ಪಾಸಾದಸಾಯಿತು.

ಈ ಎರಡು ವರ್ಷಗಳಲ್ಲಿ, ನಮ್ಮ ಎಲ್ಲ ಚಳವಳಿಯು ಸುಧಾರಣಾ ಕೌನ್ಸಿಲಗಳ ಬಹಿಷ್ಕಾರದ ಮೇಲೆಯೇ ಸ್ಥಿತವಾಗಿರುತ್ತದೆ. ಈ ಅಸಹಕಾರ ಚಳವಳಿಯ ಮುಖ್ಯಾಂಗವಾದ ಕೌನ್ಸಿಲದ ಬಹಿಷ್ಕಾರದ ಬಗ್ಗೆ, ಕಲಕತ್ತಾ ಕಾಂಗ್ರೆಸ್ಸಿನ ಸ್ಪೆಶಲ್ ಅಧಿವೇಶನದ ಮೊದಲಿನಿಂದ ಮೇಲೆ ಮಹಾತ್ಮಾ ಗಾಂಧಿಯವರಿಂದ ವಿವರಿಸಲ್ಪಟ್ಟ ಸಯುಕ್ತಿಕ ಕಾರಣಗಳನ್ನು, ಪುನಃ ಪುನಃ ಹೇಳುವದು [illegible] ನವರಿಲಿಕ್ಕೆ ಇವುಗಳ ಸಂಗಡ ನಿಮ್ಮಗಳ ದ್ವಾರಾ ಅಸಹಕಾರ ಮಾಡುವವರ ನಿಂದಾರ್ಹ ಕೌನ್ಸಿಲಗಳಲ್ಲಿ ಸೇರಿದಂಥವರನ್ನು ನಾಚಿಸಿತು. ಕೋಪಿದರ ಅನುಭವದಿಂದ, ಮಹಾತ್ಮಾಜಿಯವರಿಂದ [illegible] ರತು ಅವು ಯಾವ ರೀತಿಯಿಂದಲೂ ಶಿಥಿಲವಾಗಿರುವದಿಲ್ಲ. ಆವರು ಕೌನ್ಸಿಲಗಳಲ್ಲಿ ಮಾಡುವ ಅಸಮರ್ಥವಾದ ಪ್ರತಿಬಂಧವೂ, ವ್ಯರ್ಥವಾದ ವಿರೋಧವೂ, ಎಲ್ಲ ಕೌನ್ಸಿಲ ಮತ್ತು ಹಿಂದುಸ್ಥಾನ ಅಸೆಂಬ್ಲಿಯಲ್ಲಿಯಾದರೂ, ಅರಸರ ಅಧಿಕಾರ ಸೂತ್ರವನ್ನೇ ವರ್ಧಿಸಿರುತ್ತವೆ. ಆವರೆ ನಾವು ಸಂಪೂರ್ಣ ಸ್ವರಾಜ್ಯದ ಆಶೆಯನ್ನು ಬಿಟ್ಟುಗೊಟ್ಟು, ಸ್ವರಾಜ್ಯವನ್ನು ಹಸ್ತೆಯಿಂದ ಪ್ರಾಪ್ತಿ ಮಾಡಿಕೊಳ್ಳಲಿಕ್ಕೆ ಒಪ್ಪಿದರೆ ಮಾತ್ರ ಕೌನ್ಸಿಲಗಳಲ್ಲಿ ನಮಗೆ ನಿಶ್ಚಯವಾಗಿ ಪ್ರವೇಶವುಂಟು. ಆ ಸಹಕಾರಿಗಳಲ್ಲಿ ಯಾರಿಗೆ, ಅಸಹಕಾರಿಗಳಾದ ನಾವು ಕೌನ್ಸಿಲಗಳಲ್ಲಿ ಸೇರಬಲ್ಲೆವು, ಎಂದು ಅನಿಸಿದರೂ, ಅವರು ಕೇವಲ ಕಾಂಗ್ರೆಸದ ಆಜ್ಞೆಗೆ ಅನುಸರಿಸಿ, ಮನಃಪೂರ್ವಕವಾಗಿ ಅಲ್ಲದೆ. ಕೌನ್ಸಿಲಗಳಲ್ಲಿ ಸೇರಿಲ್ಲವೋ ಅಂಥವರು ಮಾತ್ರ ಸಂಪೂರ್ಣವಾಗಿ ತಪ್ಪಿರುವರು. ಹಾಗೂ ಕೌನ್ಸಿಲಗಳ ಹೊರಗೆ ನಿಂತು ಬಡಿದಾಡುವವರಿಗಿಂತ ಹೆಚ್ಚು ಉತ್ತಮ ಕೆಲಸವನ್ನು ಕೌನ್ಸಿಲಗಳಲ್ಲಿ ಸೇರಿ, ಮಾಡಲಿಕ್ಕೆ ಸಮರ್ಥರಿದ್ದೇವೆ, ಅಂತಾ ಇನ್ನೂ ಯಾರಿಗೆ ಅನಿಸುವದೋ ಅವರಾದರೂ ಸಂಪೂರ್ಣವಾಗಿ ವಿವೇಕಭ್ರಷ್ಟರಾಗಿರುತ್ತಾರೆ. ಉಳಿದ ಕೆಲಸಗಳಂತೆ, ಈ ಬಾಬತಿಯಲ್ಲಿಯಾದರೂ ವೈರಿಗಳ ಮತಗಳನ್ನು ತಿಳಕೊಳ್ಳುವದು, ಜಾಣತನದ ಮಾತಾಗಿದೆ. ಅಸಹಕಾರ ಚಳವಳಿಯನ್ನು ಬಂದು ಮಾಡಬೇಕೆಂದು ಯಾವನು ಬಯಸುವನೋ ಅಂಥ ಪ್ರತಿಯೊಬ್ಬ ಮನುಷ್ಯನು ನಾವು ಕೌನ್ಸಿಲಗಳಲ್ಲಿ ಸೇರಬೇಕೆಂದು ಇಚ್ಛಿಸುತ್ತಾನೆ. ಕರ್ನಲ್ ವೆಜ್ವುಡ್ಡನು ಹಿಂದುಸ್ಥಾನದ ಮಿತ್ರನಾಗಿದ್ದರೂ, ‹ ಹಿಂದುಸ್ಥಾನಕ್ಕೆ ಏಕದಮ್ ಡೋಮಿನಿಯನ್ ಹೋಮ್ ರೂಲ ಸಿಗದೆ. ಹಪ್ತೇದ ಪ್ರಕಾರ ತಿಗತಕ್ಕದ್ದು. ' ಎಂದು ಅನ್ನುವ ಉದಾರಪಕ್ಷದ ಬ್ರಿಟಿಶ ಮುತ್ಸದ್ದಿಗಳಿಗಿಂತಲೂ, ಅವನಿಗೆ ಮೇಲಿನ ಮಾತಿನ ವಿಷಯಕ್ಕೆ ಖಾತ್ರಿಯಾಗಿದೆ. ನಮಗೆ ಗೊತ್ತಿದ್ದಂಥ ಯಾವದೇ ಮಾಂಟೆಗೂ ಪಕ್ಷದ ಮನುಷ್ಯನಂತೆ, ಇವನಾದರೂ ಸಂಪೂರ್ಣವಾಗಿ ಅಸಹಕಾರ ಚಳವಳಿಯನ್ನು ವಿರೋಧಿಸುತ್ತಾನೆ. ಲಂಡನ ಟಾಯಿಮ್ಸದಲ್ಲಿ ಅವನು ಕೊಟ್ಟ ವಿಚಾರ ಶೂನ್ಯವಾದ, ಅಸಹಕಾರಿತ್ವವೆಂಬ ಗಿರಣಿಗೆ, ಹಿಟ್ಟನ್ನು ಪೂರೈಸುವಂಥ ರಾಜ್ಯಪದ್ಧತಿಯ ವಿಚಾರವು ಪುನಃ ಆಗಬೇಕೆಂಬ ಸೂಚನೆಯು, ಮವಾಳರು ವಿಶೇಷವಾಗಿ ಸರಕಾರದವರ ತಾಳಿಗೆಯಲ್ಲಿ ಶಿಕ್ಕರೆಂಬ ಅವನಿಗಾದ ಆನಂದವು, ಹಾಗೂ, ಅಸಹಕಾರಿಗಳು ತಮ್ಮ ಚಳವಳಿಯನ್ನು ಪೂರ್ಣವಾಗಿ ಬಂದುಮಾಡದಹೊತ್ತು, ಅವರಿಗೆ ಯಾವದೇ ಥರದ, ಆಶ್ವಾಸನವನ್ನು ಕೊಡುವದು ಅಯುಕ್ತಿಕವಾದದ್ದಿರುತ್ತದೆಂಬ ಅವನ ಖಂಡಿತವಾದ ಮತವೇ, ಮೇಲಿನ ಮಾತಿನ ಸತ್ಯತೆಯ ಬಗ್ಗೆ ಸಾಕಷ್ಟು ಉದಾಹರಣೆಯಾಗುವದು. ಈ ಪ್ರಕಾರವಾಗಿ ಈ ಚಳವಳಿಗೆ ವಿರುದ್ಧವಾದಂಥ ಧೋರಣವನ್ನು ವಹಿಸಿ, ಅಸಹಕಾರಿಗಳು ಕೌನ್ಸಿಲಗಳಲ್ಲಿ ಹೋಗಬೇಕೆಂಬಂಥ ಸೂಚನೆಗಳನ್ನು ಹೇ

( [illegible] )

# ಕನ್ನಡ ನವಜೀವನ.

ವೈಶಾಖ ಶುದ್ಧ ೫ ಗುರುವಾರ ಶಕೆ ೧೮೪೪.


## ಬದಲಿಸುವ ಪ್ರಯತ್ನ.

ಮತಭೇದವು ರಾಷ್ಟ್ರದ ಬಲವು; ಆದರೆ ಕೃತಿಭೇದವು ರಾಷ್ಟ್ರದ ಬಲವನ್ನೆಲ್ಲ ಕಡಿಮೆಮಾಡುತ್ತದೆ. ರಾಷ್ಟ್ರವು ಸಂಕಟಕಾಲದಲ್ಲಿ ಇದ್ದಾಗ ಈ ಮಾತಿನ ಸತ್ಯತೆಯು ಮತ್ತಿಷ್ಟು ಅಧಿಕವಾಗಿ ವ್ಯಕ್ತವಾಗುತ್ತದೆ. ಹಿಂದುಸ್ಥಾನದ ಮೇಲೆ ಈಗ ವಿಪತ್ತಿಯ ಮೋಡವು ಕವಿದಿಲ್ಲೆಂದು ಯಾರು ಹೇಳುವರು? ಭಾರತ ಭೂಮಾತೆಯು ಎದುರಿನಲ್ಲಿ ಜೀವಿತ-ಮರಣಗಳ ಪ್ರಶ್ನೆಯು ಉಪಸ್ಥಿತವಾಗಿಲ್ಲವೇ? ಪ್ರತಿಪಕ್ಷಿಗಳು ಸಂಪೂರ್ಣ ಮಾಯಾವಿಗಳಾದ ಶಸ್ತ್ರಾಸ್ತ್ರಗಳನ್ನು ಉಪಯೋಗಿಸುವದನ್ನು ನಿಶ್ಚಯಿಸಿದ್ದಾರೆ. ಇದರಿಂದ ಆ ಜೀವನ-ಮರಣಗಳ ಪ್ರಶ್ನೆಯು ಹೆಚ್ಚು ಮಹತ್ವವನ್ನು ಹೊಂದಿದೆ. ಅವರು ಈ ಬಲದಿಂದ ನಮ್ಮ ಜೀವವನ್ನು ಕೂಡ ಹರಣಮಾಡುವ ಪ್ರಯತ್ನವನ್ನು ನಡಿಸಿದ್ದಾರೆ. ಅವರ ಹತ್ತರ ಅಧಿಕಾರಬಲವೂ, ಬಾಹುಬಲವೂ, ದ್ರವ್ಯಬಲವೂ, ನಮ್ಮ ಕೆಲವು ಬಾಂಧವರ ಸಹಕಾರದ ಬಲವೂ ಉಂಟು. ಮೊದಲಿನ ಮೂರು ಬಲಗಳಿಂದ ಹಿಂದಮಾತೆಗೆ ಎಷ್ಟು ಮಾತ್ರವೂ ಚಿಂತೆಯಿಲ್ಲ. ಆದರೆ ನಾಲ್ಕನೇ ಬಲವನ್ನು ಕಂಡು ಆವಳ ದುಃಖಿತವಾದ ನೇತ್ರಗಳಿಂದ ರಕ್ತಮಯವಾದ ಬಿಂದುಗಳು ಬೀಳುತ್ತವೆ. ಕೇವಲ ವೈರಿಗಳು ಬಲವಂತರಿರುವರೆಂದಿಷ್ಟೇ ಅಲ್ಲ, ಆದರೆ ತನ್ನಲ್ಲಿ ನಿರ್ಬಲತೆಯೂ ಇರುವದೆಂದು ಕಂಡು ಆವಳಿಗೆ ಈ ಪರಿ ದುಃಖವಾಗುತ್ತದೆ. ಮೇಲಾಗಿ ಪ್ರತಿಪಕ್ಷಿಗಳು " ಕಂಟಕೇನ ಕಂಟಕಮ್ " ಮುಳ್ಳಿನಿಂದಲೇ ಮುಳ್ಳು ತೆಗೆಯಬೇಕೆಂಬ ತತ್ವವನ್ನು ಅನುಸರಿಸುವದರಿಂದ, ದೇಶದಲ್ಲಿ ಒಂದು ಪ್ರಕಾರದ ಮಾನಸಿಕ ಹಾಗೂ ಬೌದ್ಧಿಕ "ಯಾದವೀ ಯುದ್ಧದ" ಪರಿಸ್ಥಿತಿಯನ್ನು ಉಂಟುಮಾಡುವ ಪ್ರಯತ್ನವನ್ನು ನಡಿಸಿರುವರೆಂಬದನ್ನಾದರೂ ಅವಳು ಕಂಡು ಹಿಡಿದಿದ್ದಾಳೆ.

ಈ ಕುಟಿಲನೀತಿಯ ಭಯಂಕರ ಸ್ವರೂಪವನ್ನು ಮಹಾತ್ಮರು ಚನ್ನಾಗಿ ಕಂಡು ಹಿಡಿದಿದ್ದಾರೆ. ಹಿಂದೂಮುಸಲ್ಮಾನರಲ್ಲಿ ಮತ್ತು ಸರ್ವಜಾತಿಗಳಲ್ಲಿ ಐಕ್ಯವನ್ನೂ ಸಹಕಾರಿಗಳ ಸಂಗಡ ಮಿತ್ರತ್ವವನ್ನೂ ಬೆಳಿಸುವದಕ್ಕೆ ಮಹಾತ್ಮರು ಮಾಡಿದ ಉಪದೇಶವು ಇದರ ಫಲವೇ. ಇಂಥ ಪ್ರಸಂಗದಲ್ಲಿ ನೌಕರಶಾಹೀ ಮತ್ತು ಅಸಹಕಾರಿಗಳು ಹೇಗೆ ಎರಡೇ ಪಂಥಗಳಾಗುವದು ಅವಶ್ಯವಿತ್ತು. ಆದರೆ ರಾಷ್ಟ್ರದ ದುರ್ದೈವದಿಂದ ಸಹಕಾರಿಗಳದೊಂದು ಪಂಗಡವಾಗಿದ್ದು, ಅಸಹಕಾರಿಗಳಲ್ಲಿ ಕೂಡ ಕೆಲವು ಜನರು ಈಗಿನ ಕಾರ್ಯಕ್ರಮವನ್ನೆಲ್ಲ ಬದಲು ಮಾಡುವ ಕುರಿತು ಚಂಚಲರಾಗಿದ್ದನ್ನು ನೋಡಿದವರಿಗಂತೂ, ಹಿಂದುಸ್ಥಾನದ ದುರ್ದೈವದ ಭಯಂಕರ ದುಃಖದಾಯಕವಾದ ದೊಡ್ಡ ಚಿತ್ರವು ಕಣ್ಣೆದುರಿನಲ್ಲಿ ಬಂದು ನಿಲ್ಲುವದು. ಪ್ರಾಚೀನ ಕಾಲದ ರೋಮು ಮತ್ತು ಬೆಬಿಲೋನಿಯಾದ ಸ್ಮರಣವಾಗುತ್ತದೆ. ಭಗವಂತನು ಹಿಂದುಸ್ಥಾನದ ಭಾರತೀಯತ್ವ ಮತ್ತು ಆರ್ಯಸಂಸ್ಕೃತಿಗಳನ್ನು ಕೇವಲ ಪ್ರಾಚೀನ ಇತಿಹಾಸ ವಸ್ತುಗಳಂತೆ, ಮಾಡಬೇಕೆಂದು ಮಾಡಿರಲಿಕ್ಕಿಲ್ಲವೇ? ಮತ್ತು ಮುಂದಿನ ಜನರೆಲ್ಲ ಈ ಇತಿಹಾಸದ ಕಡೆಗೆ ಕೇವಲ ಒಂದು ಆಶ್ಚರ್ಯದೃಷ್ಟಿಯಿಂದ ನೋಡಬೇಕೆಂದು ಆ ಪರಮಾತ್ಮನ ಇಚ್ಛೆಯಿರಲಿಕ್ಕಿಲ್ಲವೇ? ಎಂಬ ವಿಚಾರಗಳಿಂದ ಎದೆಯು ಹಾರಹತ್ತುತ್ತದೆ. ಯಾಕಂದರೆ ಭರತಖಂಡದ ಈ ಕಠಿಣ ಮತ್ತು ಗಂಡಾಂತರ ಕಾಲದಲ್ಲಿ ಹಿಂದುಸ್ಥಾನದ ಎಲ್ಲ ಪಂಗಡದವರು ಒಂದಾಗಿ ಒಮ್ಮನಸ್ಸಿನಿಂದ ಪ್ರತಿಪಕ್ಷಿಗಳ ಎದುರಿನಲ್ಲಿ ಎದೆಗೊಟ್ಟು ನಿಲ್ಲಲಿಕ್ಕೆ ಶಕ್ತರಾಗದಿದ್ದರೆ, ಹಿಂದುಸ್ಥಾನದ ಸರ್ವನಾಶವಾಗುವದೆಂಬದು ನಿಶ್ಚಯವು. ಭರತಖಂಡವು ಸೈತಾನನ ಅಭಿಮಾನಾಸ್ಪದವಾದ ಉತ್ತಮ ವಸ್ತುವಾದರೂ ಆಗಬಹುದು. ಆದರೆ ಈಶ್ವರನ ದೃಷ್ಟಿಯಿಂದ ಪತಿತನಾಗದೆ ಇರಲಿಕ್ಕಿಲ್ಲ. ಈ ಸಮಯದಲ್ಲಿ ನಮ್ಮ ನಮ್ಮೊಳಗಿನ ಭೇದಗಳಿಂದ ಹಿಂದುಸ್ಥಾನದ ಅಪಜಯವಾದಲ್ಲಿ — ಕೇವಲ ಇದರಿಂದಲೇ ಭಾರತದ ಅಪಜಯವು ಶಕ್ಯವಿರುತ್ತದೆ — ಹಿಂದೀ ಜನರು ಜಗತ್ತಿನಿಂದ ಅದೃಶ್ಯರಾಗುವರು ಅಥವಾ ದೇವರ ರಾಜ್ಯದ (*Kingdom of God*) ಸ್ಥಾಪನೆ ಎಂಬ ದೊಡ್ಡ ಹೆಸರಿನಿಂದ ತಮ್ಮ ಆಸುರೀ ಸಾಮ್ರಾಜ್ಯ ಲಾಲಸೆಯನ್ನು ತೃಪ್ತಿಪಡಿಸಿಕೊಳ್ಳುವವರ ಮೂರ್ತಿಗಳಾದರೂ ಆಗುವರು. ಈ ಎರಡೂ ಪ್ರಸಂಗಗಳಲ್ಲಿ ಭಾರತವು ಭಾರತವಾಗಿಯೇ ಉಳಿಯಲಾರದು.

ಕಾರ್ಯಕ್ರಮವು ಬೇಕಾದಷ್ಟು ವ್ಯಾಪಕವಿರಲಿ, ಬೇಕಾದಷ್ಟು ಸುಂದರ ಮತ್ತು ಸರ್ವಾಂಗಪೂರ್ಣವಾದದ್ದು ಇರಲೊಲ್ಲದೇಕೆ, ಆದರೆ ಅದನ್ನು ಅನುಸರಿಸಿ ಸಂಪೂರ್ಣವಾಗಿ ಕೃತಿಯನ್ನು ಮಾಡದ ಹೊರತು ಆ ಕಾರ್ಯಕ್ರಮವು ನಿಷ್ಫಲವಾಗದೆ ಇರಲಿಕ್ಕಿಲ್ಲ. ಈಗಿನ ನಮ್ಮ ಕಾರ್ಯಕ್ರಮವು ಫಲಪ್ರಾಪ್ತಿಯಾಗಲಿಲ್ಲವೆಂದು ಮೇಲಿಂದಮೇಲೆ ಬಡಬಡಿಸುವವರನ್ನು ಕುರಿತು ನಾವು ಕೇಳುವದೇನಂದರೆ " ನೀವು ನಿಮ್ಮ ಎದೆಯಮೇಲೆ ಕೈಯಿಟ್ಟುಕೊಂಡು ನಿಮ್ಮ ನಿಜವಾದ ಅಂತಃಕರಣದಿಂದ ಈ ಕಾರ್ಯಕ್ರಮವನ್ನು ಪೂರ್ತಿಮಾಡಲಿಕ್ಕೆ ಪ್ರಯತ್ನ ಮಾಡಿದಿರೆಂದು ಹೇಳಬಲ್ಲಿರೋ? ಮಾಡಿದ್ದಲ್ಲಿ ನೀವು ಅದರ ವಿವರಣೆಯನ್ನು ರಾಷ್ಟ್ರದ ಎದುರಿನಲ್ಲಿ ಮಾಡಿ ಅದು ಸಫಲವಾಗದಿದ್ದಕ್ಕೆ ಕಾರಣಗಳನ್ನು ಹೇಳಿರಿ; ನೀವು ಪ್ರಯತ್ನಮಾಡಿದ್ದಿಲ್ಲವಾದರೆ, ನೀವು ಇದರಲ್ಲಿ ಈಗ ಬದಲಾವಣೆಯನ್ನು ಮಾಡ ಹೊರಟಿರುವದೆಂದರೆ ಆತ್ಮಘಾತವಾಗಲಿಕ್ಕಿಲ್ಲವೇ ? "

ಸಫಲತ್ವಕ್ಕಾಗಲಿ, ವಿಜಯಕ್ಕಾಗಲಿ, ಸ್ವರಾಜ್ಯ ಅಥವಾ ಅಧೀರತೆಗೆ ಸಮಾನವಾದ ಶತ್ರುಗಳು ಬೇರೆ ಯಾವೂ ಇಲ್ಲ. ಎಲ್ಲಿಯವರೆಗೆ ನಾವು ನಮ್ಮ ಆತ್ಮತೇಜದ್ವಾರದಿಂದ ವಿಶ್ವಾಸಪೂರ್ವಕವಾಗಿ ನಮ್ಮ ಮಾರ್ಗದಲ್ಲಿ ದೃಢವಾಗಿ ಉಳಿಯುವದಿಲ್ಲವೋ ಮತ್ತು ಮೇಲಿಂದ ಮೇಲೆ ನಮ್ಮಲ್ಲಿಯ ಚಾಂಚಲ್ಯವನ್ನು ವ್ಯಕ್ತಮಾಡುತ್ತ ಹೋಗುವೆವೋ, ಅಲ್ಲಿಯವರೆಗೆ ನಾವು ನಮ್ಮ ಪ್ರತಿಪಕ್ಷಿಗಳ ದೃಷ್ಟಿಯಲ್ಲಿ ಹಾಸ್ಯಾಸ್ಪದರಾಗಿ ತೋರುವೆವಲ್ಲದೆ ಹೆಚ್ಚೆಚ್ಚು ಅವರ ಜಾಳಿಗೆಯಲ್ಲಿ ಶಿಕ್ಕು ಮೋಸ ಹೋಗುವೆವು.

ನಮ್ಮ ಈಗಿನ ಯುದ್ಧವು ಅಪೂರ್ವವಾಗಿದೆ. ಇದರಲ್ಲಿ ಆತ್ಮಿಕ ಬಲವೇ ನಮ್ಮ ಬಲವು. ಅನುಕೂಲ ಲೋಕಮತವೇ ನಮ್ಮ ಸೇನೆಯು. ಮಹಾತ್ಮಾ ಗಾಂಧಿಯವರು ಇದರ ಕಲ್ಪನೆಯ ಉತ್ಪಾದಕರೂ ಆಚಾರ್ಯರೂ ಇರುವರು. ಅವರೇ ನಮ್ಮ ಸೇನಾಪತಿಗಳು. ಅವರ ತೇಜ, ಪರಾಕ್ರಮ, ಪಾವಿತ್ರ್ಯ, ನಿರ್ಮಲ ಹೃದಯತೆ, ದೇಶ ಪ್ರೇಮ, ಅಪೂರ್ವ ತ್ಯಾಗ

ಶಾಂತಿ, ಮತ್ತು ನಿರ್ಭಯತೆಗಳ ಮೇಲೆ ಇಡೀ ಹಿಂದುಸ್ಥಾನದ ದೃಷ್ಟಿ ಅಷ್ಟೇ ಅಲ್ಲ ಆದರೆ ಪರದೇಶಗಳಲ್ಲಿಯ ವಿಚಾರವಂತರ ಪ್ರೇಮವೂ ಇರುತ್ತದೆ. ರಾಷ್ಟ್ರಕ್ಕೆ ಈ ಯುದ್ಧ ಕಲೆಯು ತೀರ ಹೊಸದಾಗಿದೆ. ಹಿಂಸಾತ್ಮಕ ಯುದ್ಧದಲ್ಲಿ ಕೂಡ ಸೇನಾಪತಿಯು ತೋರಿಸಿ ಕೊಟ್ಟ ಮಾರ್ಗದಂತೆ ಸೇನೆಯು ನಡೆಯದಿದ್ದರೆ, ವಿಜಯವು ಅಸಂಭವವಾದದ್ದು. ಆದರೆ ಈ ಯುದ್ಧದ ಆಚಾರ್ಯರು ಇವತ್ತಿನ ವರೆಗೆ ಮಹಾತ್ಮರೊಬ್ಬರೇ. ಅವರು ಒಂದು ವರೆ ವರ್ಷಗಳ ವರೆಗೆ ಮಾಡಿ ತೋರಿಸಿದ ಚಮತ್ಕಾರವು ರಾಷ್ಟ್ರದ ಮುಂದೆ ಅದೆ. ಇಂಥ ಪರಿಸ್ಥಿತಿಯಲ್ಲಿ ಅವರು ಹಾಕಿಕೊಟ್ಟ ಮಾರ್ಗವನ್ನು ಬಿಡಿಸಿ, ರಾಷ್ಟ್ರವನ್ನು ಎರಡನೇ ಮಾರ್ಗಕ್ಕೆ ಒಯ್ಯುವದಕ್ಕೆ ಪ್ರಯತ್ನಿಸುವದೆಂದರೆ ಈ ಹದಿನೆಂಟು ತಿಂಗಳುಗಳ ಅದ್ಭುತ ಆಶಾಮಯವಾದ ಇತಿಹಾಸವನ್ನು ಕಾಲಿನಿಂದ ಕೆಳಗೆ ದಬ್ಬಿದಂತೆಯೇ ಆಗುವದು. ಈಗ ಅವರು ಕಾರಾಗೃಹದಲ್ಲಿರುವರು. ಈ ಕಾರ್ಯಕ್ರಮವನ್ನು ಅನುಸರಿಸಿ ಕನಿಷ್ಟ ೨೫ ಸಾವಿರ ನಮ್ಮ ಬಾಂಧವರು ಬಂದಿವಾಸದ ಯಾತನೆಗಳನ್ನೆಲ್ಲ ಅರಮನೆಯಲ್ಲಿಯ ಸುಖಗಳಂತೆ ತಿಳಿದುಕೊಂಡು ಇರುತ್ತಾರೆ. ಅವರೆಲ್ಲರೂ ಇಲ್ಲದ ವೇಳೆಯಲ್ಲಿ, ಈ ಕಾರ್ಯಕ್ರಮದಲ್ಲಿ ಬದಲಾವಣೆಯನ್ನು ಮಾಡುವದು ಅಕೃತಜ್ಞತೆಯಲ್ಲವೇ?

ಪರಿವರ್ತನದ ಪ್ರಶ್ನೆಯು, ಮತಗಳನ್ನು ಪ್ರಕಟಿಸುವದರ ಅಂಜಿಕೆಯದಾಗಲಿ, ಅಪಜಯವೆಂದು ತಿಳಿಯುವದರದಾಗಲಿ ಮಹಾತ್ಮರ ಬಗ್ಗೆ ಅವಿಶ್ವಾಸವನ್ನು ತಾಳುವದರದಾಗಲಿ, ಪ್ರಶ್ನವಲ್ಲ. ಆದರೆ ಇದು ರಾಷ್ಟ್ರದ ಆವಶ್ಯಕತೆಯು, ಅದರ ಲಾಭ ಹಾನಿಯ ಪ್ರಶ್ನವಿರುವದು. ಯಾಕಂದರೆ ವೈದ್ಯ ಶಾಸ್ತ್ರದ ಭಾಷೆಯಲ್ಲಿ ಹೇಳಬೇಕಾದರೆ, ಗಾಂಧೀಜೀಯವರ ಔಷಧದಿಂದ ಸ್ವಲ್ಪ ದಿವಸಗಳಲ್ಲಿಯೇ ಹಿಂದುಸ್ಥಾನದ ರೋಗದ ಜಾಡ್ಯವು ಹೋಗಿ, ಅದರಲ್ಲಿ ಎಷ್ಟು ಬಲವೂ ಚೈತನ್ಯವೂ ಬಂದಿರುವದೋ, ಅದರ ಸಾದೃಶ್ಯ ಹಿಂದುಸ್ಥಾನದ ಆಧುನಿಕ ಇತಿಹಾಸದಲ್ಲಿ ಇನ್ನೂ ಇಲ್ಲ. ಹಿಂದುಸ್ಥಾನದ ತರುಣರ ಹೃದಯದಲ್ಲಿರುವ ಉತ್ತಮ ನಾಡಿಗಳು ಇಷ್ಟು ದಿವಸಗಳ ವರೆಗೆ ಮಂದವಾಗಿ, ಅದರಿಂದ ಅವುಗಳಿಗೆ ಆನಂದ ಸುಖಗಳ ಲೋಪವಾಗಿತ್ತು. ಆದರೆ ಮಹಾತ್ಮರ ವಿಚಾರದ ಔಷಧದಿಂದ ಅವು ಪುನಃ ಸಂಚಲನೆಯನ್ನು ಹೊಂದಿರುತ್ತವೆ. ನಿಯಮಿತ ಕಾಲದಲ್ಲಿ ನಮಗೆ ಸಂಪೂರ್ಣವಾದ ಲಾಭವಾಗಿರದಿದ್ದರೆ ಆ ದೋಷವು ಔಷಧದ್ದಾಗಲಿ ವೈದ್ಯರದಾಗಲಿ ಇರುವದಿಲ್ಲ. ಆದರೆ ಅದು ನಮ್ಮ ದೋಷವೇ– ನಮ್ಮಲ್ಲಿ ಮಿತಿ ಇಲ್ಲದ್ದರಿಂದ ನಾವು ಅದರ ಪಾನವನ್ನು ಚನ್ನಾಗಿ ಮಾಡದ್ದರಿಂದ. ಯಾವ ರೋಗಿಯು ವೈದ್ಯರ ಹೇಳಿಕೆಯಂತೆ ಔಷಧವನ್ನು ತೆಗೆದು ಕೊಳ್ಳುವದಿಲ್ಲವೋ ಮೇಲಿಂದ ಮೇಲೆ ವೈದ್ಯನನ್ನು ಬದಲಾಯಿಸುವನೋ, ಅವನ ರೋಗವು ಎಂದೂ ತೀವ್ರವಾಗಿ ಗುಣವಾಗುವದಿಲ್ಲ. ಆದ್ದರಿಂದಲೇ ನಾವು ಹಿಂದುಸ್ಥಾನಕ್ಕೆ ಎಚ್ಚರ ಕೊಡುವದೇನಂದರೆ, ಅದು ಅಂಜಿಕೆಗೆ ಬಲಿಯಾಗಿ, ಆತುರವಾಗಿ ಕೇವಲ ತರ್ಕವಾದದ ಬೆನ್ನು ಹತ್ತಿ ಈ ಔಷಧ– ಈಗಿನ ಕಾರ್ಯಕ್ರಮದ ವೈದ್ಯರು ಇಲ್ಲದ ವೇಳೆಯಲ್ಲಿ, ತ್ಯಾಗವನ್ನಾಗಲಿ, ಅದರಲ್ಲಿ ಯೋಗ್ಯವಾದ ಹೊಸ ಬದಲಾವಣೆಗಳನ್ನಾಗಲಿ, ಮಾಡುವ ಗೋಜಿಗೆ ಹೋಗಕೂಡದು; ಇಲ್ಲದಿದ್ದರೆ ಜನಕ್ಕೆ ಜೀವದ ಅಂಜಿಕೆಯು ಸಂಪೂರ್ಣವಾಗಿದೆ.

ಬುದ್ಧಿ ಮತ್ತು ಭಾವನೆಗಳು ಎರಡೂ ಕೂಡಿ ಮನುಷ್ಯನು ಆಗಿರುವನು. ಭಾವನೆಯು ಆತ್ಮನ ಮುಖ್ಯ ಅಂಗವದೆ. ಬುದ್ಧಿಯ ಉಪಯೋಗವು ಆ ಭಾವನೆಯ ಸಲುವಾಗಿ ಆಗತಕ್ಕದ್ದು. ಯಾವ ಜನರು ಭಾವನೆಯನ್ನು ನಿರಾದರಿಸಿ, ಬುದ್ಧಿಯು ಒಂದೇ ಇರುವದೆಂದು ತಿಳಿಯುವರೋ ಅವರು ನೀತಿ ಮತ್ತು ಧರ್ಮಗಳ ಅವಹೇಲನೆಯನ್ನು ಮಾಡಿ, ವ್ಯವಹಾರ ನೀತಿಗೆ ಪ್ರಧಾನವನ್ನು ಕೊಟ್ಟಂತೆಯೇ ಸರಿ. ಭಾವನೆಯಿಲ್ಲದ ಮನುಷ್ಯನು ಬುದ್ಧಿಯುಳ್ಳ ಕಲ್ಲು. ಬುದ್ಧಿಯ ಕಾರ್ಯವೆಂದರೆ ಕರ್ತವ್ಯ ಅಕರ್ತವ್ಯಗಳ ನಿರ್ಣಯವನ್ನು ಮಾಡುವದು. ಆದರೆ ಅದಕ್ಕೆ 'ಆಧಾರ' ವಿಲ್ಲದೆ ಇರುವದು ಶಕ್ಯವಿಲ್ಲ. ನಮ್ಮ ಆದರ್ಶವೇ ಅದರ ಆಧಾರವು. ಆದರ್ಶವೆಂದರೆ ಭಾವನೆಯಲ್ಲದೆ ಮತ್ತೇನು? ಆದ್ದರಿಂದ ಭಾವನೆಯನ್ನು ತಿರಸ್ಕರಿಸುವದೆಂದರೆ ನಮ್ಮ ಆದರ್ಶವನ್ನು ಕೆಳಗೆ ದೂಡಿದಂತೆಯೇ ಸರಿ. (ಆದರ್ಶವೆಂದರೆ ಧ್ಯೇಯವು)–ಆದ್ದರಿಂದ ಕೇವಲ ಬುದ್ಧಿಜಾಲದಲ್ಲಿ ಸಿಲುಕಿ, ನಮ್ಮ ಹೃದ್ಗತವಾದ ಉಚ್ಚ ಗುಣಗಳ ಅವಹೇಲನೆಯನ್ನು ಮಾಡಕೂಡದೆಂದೂ–ಕೇವಲ ಗಣಿತಶಾಸ್ತ್ರಸ್ಥಿತಿಯನ್ನು ತೋರಿಸಿ, ಜನರ ಭಾವನೆಯ ಮೇಲೆ ಅತ್ಯಾಚಾರವನ್ನು ಮಾಡಕೂಡದೆಂದೂ ನಾವು ಚನ್ನಾಗಿ ಲಕ್ಷ್ಯದಲ್ಲಿಡತಕ್ಕದ್ದು.

ಆದ್ದರಿಂದಲೇ ನಾವು ವೇಳೆಯ ಗಂಭೀರತೆಯನ್ನೂ, ಪರಿಸ್ಥಿತಿಯ ಆವಶ್ಯಕತೆಯನ್ನೂ, ದೇಶದ ಭಾವನೆಯನ್ನೂ, ಪ್ರತಿಪಕ್ಷಗಳ ಕುಟಿಲ ನೀತಿ ಮಾರ್ಗವನ್ನೂ, ನಮ್ಮ ಸೇನಾಪತಿಯ ಒಂದೇ ಒಂದು ಉಪಾಯವನ್ನೂ, ಹಿಂದಿನ ೧೮ ತಿಂಗಳುಗಳ ಅನುಭವವನ್ನೂ, ನಮ್ಮ ೨೫ ಸಾವಿರ ಬಂದಿವಾಸಿ ಬಾಂಧವರ ಮನಃಸ್ಥಿತಿಯನ್ನೂ. ಸ್ವಾರ್ಥತ್ಯಾಗವನ್ನೂ, ಚನ್ನಾಗಿ ಧ್ಯಾನದಲ್ಲಿಟ್ಟು, ಈ ಪ್ರಸಂಗದಲ್ಲಿ ಬದಲಾವಣೆಗಳ ಚರ್ಚೆಯಿಂದ ದೂರ ಸರಿದು ನಿಲ್ಲತಕ್ಕದ್ದು. ಈ ತರದ ಚರ್ಚೆಯಿಂದಾಗಲಿ, ಪ್ರಯತ್ನದಿಂದಾಗಲಿ, ನಮ್ಮ ರಾಷ್ಟ್ರದ ಶಕ್ತಿಯನ್ನು ಹರಿದು ಹಂಚಿದಂತಾಗುವದು; ಚಳವಳಿಯ ಗತಿಗೆ ಆಘಾತವನ್ನು ಕೊಟ್ಟಂತಾಗುವದು; ಮತ್ತು ನಮ್ಮ ಶತ್ರುಗಳಿಗೆ ಸುಸಂಧಿಯನ್ನು ಒದಗಿಸಿ ಕೊಟ್ಟಂತಾಗುವದು. ಇದರ ವಿರುದ್ಧವಾಗಿ ನಾವು ನಮ್ಮ ಎಲ್ಲ ಶಕ್ತಿಯನ್ನೂ ವಿಧಾಯಕ ಕಾರ್ಯಕ್ರಮದ ಪೂರ್ತಿಯಲ್ಲಿ ಉಪಯೋಗಿಸತಕ್ಕದ್ದು. ಯಾವ ರೋಗಿಯು ಕಹಿ ಔಷಧವನ್ನು ತೆಗೆದುಕೊಳ್ಳಲು ಹಿಂದೆ ಮುಂದೆ ನೋಡುತ್ತಾನೋ ಅವನ ರೋಗವು ಎಂದೂ ಗುಣವಾಗದಿದ್ದರೆ ಆಶ್ಚರ್ಯವಲ್ಲ. ನಾವು ಮೊದಲು ಎಲ್ಲ ಜಾತಿಗಳಲ್ಲಿ ಐಕ್ಯವನ್ನು ಮಾಡೋಣ, ಪೂರ್ಣ ಶಾಂತಿಯ ಸಾಮ್ರಾಜ್ಯವನ್ನು ಸ್ಥಾಪಿಸೋಣ, ಅಸ್ಪೃಶ್ಯತೆಯ ಕಲಂಕವನ್ನು ತೆಗೆದುಹಾಕೋಣ, ಇಡೀ ಹಿಂದುಸ್ಥಾನದಲ್ಲೆಲ್ಲ ಶುದ್ಧ ಬಿಳೀ ಖಾದೀ ವಸ್ತ್ರವೇ ಕಾಣುವಂತೆ ಮಾಡೋಣ. ಆ ಮೇಲೆ ಸ್ವರಾಜ್ಯವು ಕೈಸೇರುತ್ತ ತಾನಾಗಿಯೇ ನಮ್ಮ ಹತ್ತರ ಬರದಿದ್ದರೆ ನಾವೆಲ್ಲರೂ ನಮ್ಮ ಮನಸ್ಸಿನಂತೆ ಈ ಕಾರ್ಯಕ್ರಮವನ್ನು ರದ್ದು ಮಾಡಿ ಮತ್ತೊಂದು ಹೊಸ ಕಾರ್ಯಕ್ರಮವನ್ನು ರಚಿಸೋಣ. ಅದಕ್ಕೂ ಮೊದಲೇ ಹೀಗೆ ಮಾಡುವದೆಂದರೆ, ಅತ್ಯಂತ ಆತ್ಮಘಾತಕ [illegible] ಸಾಧಾರಣ ಗತಿಯನ್ನು [illegible] ಮಾಡಿದಂತಾಗುವದು.

( ನವಜೀವನ )

[illegible]

# ಟಿಪ್ಪಣಿಗಳು.

**ಕರ್ನಾಟಕದ ಧ್ವಜವು.**

ಹಿಂದಿನ ಸಂಚಿಕೆಯಲ್ಲಿ ಸೂಚಿಸಿದಂತೆ ಈ ಹೊತ್ತು ನಾವು ಕರ್ನಾಟಕದ ಬಗ್ಗೆ ನಮ್ಮ ಸೂಚನೆಯನ್ನು ಬೇರೆ ಕಡೆಗೆ ಪ್ರಕಟಿಸಿರುವೆವು. ನಾವು ಧ್ವಜದ ಕಮಿಟಿಯ ಮುಂದೆ ಎರಡು ಸೂಚನೆಗಳನ್ನು ಇಡುವೆವು. ಈ ಸಾರೆ ಸೂಚನೆ ನಂಬರ ೧ ಪ್ರಸಿದ್ಧಿಸಲ್ಪಟ್ಟಿದೆ. ಈ ಸೂಚನೆಯಲ್ಲಿ ಅನೇಕ ಸಂಗತಿಗಳು ಅಡಕವಾಗಿದ್ದು, ಅವನ್ನೆಲ್ಲ ನಾವು ಹೇಗಾದರೂ ಮಾಡಿ ಜಜ್ಜಿ ಜಜ್ಜಿ, ಕುಟ್ಟಿ ಕುಟ್ಟಿ ನಮ್ಮ ಸೂಚನೆಯಲ್ಲಿ ತುಂಬಿರುವೆವು. ಧ್ವಜದಲ್ಲಿ ಎಲ್ಲ ಸಂಗತಿಗಳು ಬಹು ಸಂಕ್ಷಿಪ್ತವಾಗಿರತಕ್ಕದ್ದು. ಆದರೆ, ಧ್ವಜಕಮಿಟಿಯ ಮುಂದೆ ಕಾರಣಗಳು ಬಹಳವಾಗಿದ್ದು, ಅವರ ಆಜ್ಞೆಯು ಬಹು ಕಠಿಣವಾಗಿದ್ದರಿಂದ, ನಾವು ಬೇರಾಗಿ ಎರಡು ಬೇರೆ ಬೇರೆ ಸೂಚನೆಗಳನ್ನು ಮಾಡಿರುವೆವು. ಈ ಮೊದಲನೇ ಸೂಚನೆಯಲ್ಲಿ, ಕಮಿಟಿಯವರು ಇಚ್ಛಿಸಿದಂತೆ ಧರ್ಮ, ಇತಿಹಾಸ ಪುರಾಣ, ಕಲಾಕೌಶಲ್ಯ, ಕರ್ನಾಟಕದ ವಿಶಿಷ್ಟ ಸ್ವಭಾವಗಳನ್ನೊಳಗೊಂಡು, ಇತರ ವಿಷಯ ಮೊದಲಾದವುಗಳನ್ನೆಲ್ಲ, ಸಾಧ್ಯವಾದಂತೆ ಸೇರಿಸಿರುವೆವು. ಈ ಸೂಚನೆಗಳಲ್ಲಿಯ ಸಂಗತಿಗಳನ್ನು ಓದಿಕೊಂಡಲೇ "ಈ ಸೂಚನೆಯು ಹನುಮಂತನ ಬಾಲದಂತೆ ಬೆಳೆಯುವದು. ಈ ಎಲ್ಲ ಸಂಗತಿಗಳನ್ನು ಧ್ವಜದಲ್ಲಿ ಸೇರಿಸುವದು ಬಹು ಕಠಿಣವೆಂಬದಾಗಿ ಹೊಳೆಯಬಹುದು. ಆದರೆ ಆ ಸಂಗತಿಗಳನ್ನೊಳಗೊಂಡಂತೆ ಧ್ವಜವನ್ನು ಚಿತ್ರಿಸಿ, ಆ ಚಿತ್ರವನ್ನು ನಮ್ಮ ಕಣ್ಣ ಮುಂದೆ ಇರಿಸಿಕೊಂಡರೆ, ಅದು ಅಷ್ಟೊಂದು ಕಠಿಣವಾಗಿ ತೋರದು. ಬಾಗಲಕೋಟೆಯಲ್ಲಿ ಚಿತ್ರಗಳ ಬ್ಲಾಕುಗಳನ್ನು ಸಿದ್ಧಪಡಿಸುವದಕ್ಕೆ ಸೌಕರ್ಯಗಳಿಲ್ಲದ್ದರಿಂದ, ಚಿತ್ರವನ್ನು ನಾವು ಪ್ರಸಿದ್ಧಿಸುತ್ತಿಲ್ಲ. ಇರಲಿ, ನಾವು ಕೈಯಿಂದ ಬರೆದ ಚಿತ್ರಪಟವನ್ನೊಂದು ಕಮಿಟಿಯವರಿಗೆ ಕಳಿಸುತ್ತೇವೆ. ಈ ನಮ್ಮ ಸೂಚನೆ ನಂಬರ ೧ ರಿಂದ ಕಮಿಟಿಯವರಿಗೆ ಧ್ವಜವನ್ನು ಗೊತ್ತು ಪಡಿಸುವದರಲ್ಲಿ ಸ್ವಲ್ಪವಾದರೂ ಸಹಾಯವು ದೊರೆತರೆ ಸಾಕು. ಅದರಿಂದಲೇ ನಮಗೆ ಆನಂದವಾಗುವದು. ಯಾಕಂದರೆ ಕಮಿಟಿಯವರಿಗೆ ಸಹಾಯ ಮಾಡುವದಕ್ಕಾಗಿ ಮಾತ್ರ ನಾವು ಈ ಸೂಚನೆಗಳನ್ನು ಮಾಡಿರುವೆವು.

ಯುರೋಪ, ಅಮೇರಿಕಾ, ಖಂಡಗಳ, ಧ್ವಜಗಳಲ್ಲಿಯಾದರೂ ಅನೇಕ ಸಂಗತಿಗಳು, ಚಿತ್ರಗಾರರ ಕುಶಲತೆಯಿಂದ, ಅಡಕವಾಗಿವೆ. ಅದರಂತೆ ಕರ್ನಾಟಕದ ಧ್ವಜವನ್ನಾದರೂ, ಚನ್ನಾಗಿ ಚಿತ್ರಿಸಬೇಕು.

ನಮ್ಮ ಎರಡನೇ ಸೂಚನೆಯನ್ನು ಮುಂದಿನ ಸಾರೆ ಪ್ರಸಿದ್ಧಿಸುವೆವು.

---

(೧೬೯ ನೇ ಪುಟದಿಂದ ಮುಂದೆ ಸಾಗಿದ್ದು)

ಕಿದ್ದನು. ಅವನು ಅನ್ನುವದೇನಂದರೆ, "ಈಗ ಕೌನ್ಸಿಲಗಳ ಹೊಸ ಚುನಾವಣೆಯನ್ನು ನೋಡಿದರೆ, ಅಸಹಕಾರ ಚಳವಳಿಯು, ಕೌನ್ಸಿಲಗಳ ಬಹಿಷ್ಕಾರದ ಬಗ್ಗೆಯಾದರೂ ಉಗ್ರವಿದೆಂದು ನನಗೆ ವಿಶ್ವಾಸವುಂಟು." ಈಗ ಹೊಸ ಚುನಾವಣೆಯಾದರೆ, ೧೯೨೦ ನೇ ಇಸ್ವಿಯಲ್ಲಾದ ಚುನಾವಣೆಯಂತೆ ಆಗಿ, ಈ ಜನರು ಪುನಃ ಕೌನ್ಸಿಲದ ಒಳಗೆ ಸೇರಿ, ವಿರುದ್ಧವಾಗಿ ಕೆಲಸ ನಡಿಸಿದರೆ, ಸ್ವಾತಂತ್ರ್ಯವು ನಡೆಯುಗಿ [illegible] ಆಗದು [illegible]

ಷ್ಟವಾದ ಪರಿಣಾಮವು ತೋರಿಯದೆ, ಸರಕಾರದ ಯಂತ್ರಕ್ಕೆ ಸಹಾಯವಾದಿಯೂ. ಅಸಹಕಾರವಾದಲಿಕ್ಕೆ ಒರುವದೇನು ಆಸಿಸುವದು. ಕೌನ್ಸಿಲಗಳಲ್ಲಿ ಸೇರುವ ಈ ವಿಶಿಷ್ಟ ಕಾರ್ಯವನ್ನು ಕೈಕೊಂಡರೆ, ಅಸಹಕಾರ ಚಳವಳಿಯು ಒಂದಾಗುವದೆಂದು ಹೇಳಲಿಕ್ಕೆ ಸ್ವಲ್ಪವಾದರೂ ಸಂದೇಹವಿಲ್ಲ. ಆದರೆ ಎಲ್ಲ ಜನರ ಮಾತವು ಈ ಸೂಚನೆಯು ವಿರುದ್ಧವಾದದ್ದು. ಬಂಗಾಲ ಪ್ರಾಂತಿಕ ಪರಿಷತ್ತಿನವರು, ಅಧ್ಯಕ್ಷರು, ವಿಚಾರ ಮಾಡಿದ ಮಾಡಿದಂಥ ಸೂಚನೆಯು ಸ್ವೀಕಾರದ ವಿಷಯಕ್ಕೆ ಯಾವ ಠರಾವನ್ನು ಪಾಸು ಮಾಡಿಲ್ಲ. ಇಷ್ಟೇ ಅಲ್ಲ; ಅವರ ಇದರ ವಿರುದ್ಧವಾಗಿ, ಲೋಕಲ ಬೋರ್ಡುಗಳಲ್ಲಿ ಸಹ ಪ್ರವೇಶ ಮಾಡಬಾರದು, ಎಂದು ಅವನ್ನು ಹೀಯಾಳಿಸಿ, ಸಾರ್ವಜನಿಕ ಕೆಲಸವಾಗುವ ಹಾಗೆ, ಸ್ವತಂತ್ರ ಲೋಕಲಬೋರ್ಡುಗಳನ್ನು ಸ್ಥಾಪಿಸಬೇಕೆಂದು ಸೂಚನೆಯನ್ನು ಪಾಸು ಮಾಡಿರುವರೆಂದು ತಿಳಿಸಲ್ಪಟ್ಟಿದ್ದು ನಮಗೆ ಆಶ್ಚರ್ಯವಾಗುತ್ತದೆ. ಮಹಾತ್ಮಾಜಿಯವರು, ಯಾವ ಲೋಕಲ್ ಬೋರ್ಡ, ಮ್ಯುನಿಸಿಪಾಲಿಟಿಗಳಲ್ಲಿ ಅಸಹಕಾರಿಗಳ ಸಂಖ್ಯೆಯು ಕಡಿಮೆ ಆದೆಯೋ, ಮತ್ತು ಉಳಿದ ಯಾವದೇ ಕಾರಣದಿಂದ ಎಲ್ಲ ತಮ್ಮ ನಿಶ್ಚಿತವಾದ ಕಾರ್ಯಕ್ರಮವನ್ನು ನೆರವೇರಿಸಲು ಅಶಕ್ಯವದೆಯೋ, ಅಂಥ ಲೋಕಲ ಬೋರ್ಡ ಮ್ಯುನಿಸಿಪಾಲಿಟಿಗಳಲ್ಲಿ ಸಹ ಅಸಹಕಾರಿಗಳು ಪ್ರವೇಶ ಮಾಡುವದು ಇಷ್ಟವಾದದ್ದಲ್ಲೆಂದು ಹಿಂದಕ್ಕೆಯೇ ಸ್ಪಷ್ಟವಾಗಿ ನಿವೇದಿಸಿರುತ್ತಾರೆ. ದ್ವಿವಿಧಭಾಗ ಪದ್ಧತಿಯನ್ನು ತಯಾರ ಮಾಡುವವರ ಉದ್ದೇಶವು, ಸರಕಾರದವರ ಸಂಗಡ ಸಹಕಾರ ಮಾಡುವವರಿಗಾಗಲಿ ಅಥವಾ ಅವರ ವಿರುದ್ಧ ಕೆಲಸ ನಡೆಸುವವರಿಗಾಗಲಿ, ಅಥವಾ ಸರಕಾರದ ಯೋಜನೆಯನ್ನೇ ಬದಲಾಯಿಸಬೇಕೆಂದು ಅನ್ನುವವರಿಗಾಗಲಿ, ಈ ಸುಧಾರಣಾ ಕೌನ್ಸಿಲಗಳಲ್ಲಿ ಸೇರಿ, ಯಾವ ತರದಿಂದಲೂ ಸರಕಾರದ ವಿರುದ್ಧ ಕೆಲಸ ನಡೆಸಲಿಕ್ಕೆ ಬರಬಾರದೆಂಬುದೇ ಆಗಿದೆ. ರಾಜಶಾಸನಾನುಸಾರವಾದ ಯಾವದೇ ಚಳವಳಿಗೆ ವಿರೋಧ ಮತ್ತು ಪ್ರತಿಬಂಧಗಳಿಂದ ಉತ್ತಮ ಸಹಾಯ ದೊರೆದರೂ ಅನಸಹಕಾರಿತೆಯಲ್ಲಿ ಅವುಗಳಿಗೆ ಸ್ವಲ್ಪವಾದರೂ ಇಂಬು ದೊರೆಯುವಂತಿಲ್ಲ. ಈ ವಿಷಯದಲ್ಲಿ ಅದಲು ಬದಲು ಮಾಡುವದೆಂದರೆ, ಈ ಚಳವಳಿಯು ತಳಹದಿಯನ್ನೇ ಕಿತ್ತಿಹಾಕಿದಂತಾಗುವದು.

ಸಿ. ರಾಜಗೋಪಾಲಾಚಾರ್ಯ.

( ಯಂಗ ಇಂಡಿಯಾ )

---

# ಜಯ ಕರ್ನಾಟಕ !

## ಕರ್ನಾಟಕದ ಧ್ವಜದಬಗ್ಗೆ ಕನ್ನಡನವಜೀವನದ ಸೂಚನೆಗಳು.

### ಸೂಚನೆ ೧.

೧. ಕೆಳಗೆ ವರ್ಣಿಸಿದಂಥ ಒಂದು ಕರ್ನಾಟಕದ ನಕಾಶವನ್ನು ಸಿದ್ಧಮಾಡಿ ಅದನ್ನು ಮಹಾತ್ಮಾ ಗಾಂಧಿಯವರು ಸಿದ್ಧಕ್ಕೆ ತಯಾರಿಸಿದ ಒಂದೇ ರಾಷ್ಟ್ರೀಯ ನಿಶಾನೆಯ ಕೋಲ್ಗಡದ ತುದಿಯ ಬಲಗಡೆಯಲ್ಲಿ ಒಂದು ನಾಲ್ಕಾಂಶಿನಷ್ಟು ಭಾಗವನ್ನು ಆಕ್ರಮಿಸುವಂತೆ ಇರಿಸಬೇಕು.

[ ಇದರಿಂದ ಒಂದೇ ರಾಷ್ಟ್ರದ ಚಿನ್ಹವನ್ನು ನಾವು ಕಣ್ಣುಮುಂದಿನಲ್ಲಿರಿಸಿಕೊಂಡೇ ನಮ್ಮ ಪ್ರಾಂತಿಕ ಚಿನ್ಹವನ್ನು ವ್ಯಕ್ತಗೊಳಿಸಿದಂತಾಗುವದು.]

೨. ಕರ್ನಾಟಕದ ನಕಾಶದಲ್ಲಿ ಶುಭ್ರ ವಸ್ತ್ರವನ್ನು ಧರಿಸಿದ ಮಾತೃ [illegible] ಮಹಾತ್ಮ [illegible]

[ಶುಭ್ರವಸ್ತ್ರವು ಕರ್ನಾಟಕದ ಪವಿತ್ರತೆಯು ಮತ್ತು ಶ್ರೇಷ್ಠ ಅಂತಃಕರಣದ ದ್ಯೋತಕವಾಗಿದೆ. ]

೩ ಕರ್ನಾಟಕಮಾತೆಯು ಬಲಗಡೆಯ ಮೇಲಿನ ಕೈಯಲ್ಲಿ ಒಂದು ಧರ್ಮಗ್ರಂಥವನ್ನೂ (ಹಳೇ ಪದ್ಧತಿಯ ವಾಲಿಗಳುಳ್ಳ) ಎಡಗಡೆಯ ಮೇಲಿನ ಕೈಯಲ್ಲಿ ವಾಙ್ಮಯಗ್ರಂಥವನ್ನೂ ಚಿತ್ರಿಸಬೇಕು ಬಲಗಡೆಯ ಕೈಯಲ್ಲಿ ಪುರಾಣದ ವಾಲಿಗಳನ್ನಿಟ್ಟು, ಆ ವಾಲಿಗಳ ಎರಡೂ ತುದಿಗಳಲ್ಲಿ (ಮಧ್ಯಭಾಗವು ಕೈಯಿಂದ ಮುಚ್ಚುವದು) ಒಂದೆಡೆಗೆ "ಧರ್ಮಗ್ರಂಥ" ವೆಂದು ಬರೆದು ಮತ್ತೊಂದು ತುದಿಯಲ್ಲಿ 'ಜೈನ' 'ಶೈವ' 'ವೀರಶೈವ' 'ವೈಷ್ಣವ' 'ವೀರವೈಷ್ಣವ' 'ಇಸ್ಲಾಮು' ವೆಂದು ಸಣ್ಣ ಅಕ್ಷರಗಳಿಂದ ಬರೆಯಬೇಕು. ಎಡಗಡೆಯ ಕೈಯಲ್ಲಿ ಓದುವ ಪುಸ್ತಕವನ್ನಿಟ್ಟು, ಅದರ ಮೇಲೆ ದೊಡ್ಡ ಅಕ್ಷರಗಳಿಂದ "ಕನ್ನಡ ವಾಙ್ಮಯ" ವೆಂಬದಾಗಿ ಬರೆಯಬೇಕು.

[ಇದರಿಂದ ಧರ್ಮ ಮತ್ತು ವಾಙ್ಮಯಗಳು ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದ ಮುಖ್ಯವಾದ ಅಂಗಗಳಾಗಿವೆಂಬದು ಧ್ವನಿತವಾಗುತ್ತದೆ. ]

೪ ಕರ್ನಾಟಕ ದೇವಿಯ ಕೆಳಗಿನ ಬಲಗೈಯಲ್ಲಿ ಒಂದು ಖಡ್ಗವನ್ನು ಕೊಡಬೇಕು ಮತ್ತು ಅದರಲ್ಲಿ 'ಕರ್ನಾಟಕದ ವೀರಶ್ರೀ' ಅಥವಾ 'ಕರ್ನಾಟಕದ ಕ್ಷಾತ್ರತೇಜ' ವೆಂದು ಬರೆಯಬೇಕು.

[ಇದರಿಂದ ಕರ್ನಾಟಕದ ಪ್ರಾಚೀನ ರಾಜರುಗಳ ಕ್ಷಾತ್ರತೇಜವು ವ್ಯಕ್ತವಾಗುತ್ತದೆ.]

೫ ಕರ್ನಾಟಕದ ಸುಪ್ರಸಿದ್ಧ ಕಟ್ಟಡಗಳ (ಕೈಲಾಸ ಪರ್ವತ, ವಿಜಯ ವಿಠ್ಠಲ ಗುಡಿ, ಹಳೇಬೀಡ, ವಿಜಾಪೂರ [illegible] ಮುಖ್ಯ ಕಟ್ಟಡಗಳನ್ನು ಮಾಡಿ ಅದನ್ನು ಕರ್ನಾಟಕದೇವಿಯ ಕೆಳಗಿನ ಎಡಗೈಯಲ್ಲಿ ಕೊಡಬೇಕು. ಈ ವಹಿಲಿಯ [illegible] ಸ್ಥಳಗಳಲ್ಲಿ ಕರ್ನಾಟಕದ ಬೇರೆ ಬೇರೆ ರಾಜರ ನಾಣ್ಯಗಳನ್ನು ಸೇರಿಸಬೇಕು.

[ಇದರಿಂದ ಕರ್ನಾಟಕದ [illegible] ಕಟ್ಟಡ ನಾಣ್ಯಗಳಲ್ಲಿಯ ವಿಶಿಷ್ಟ ಕಲೆಯೂ ಎಷ್ಟು [illegible].

೬. ನಾಟ್ಯದ ಕೊರಳಲ್ಲಿ [illegible] ಕರ್ನಾಟಕ ದೇವಿಯ ಕೊರಳೊಳಗೆ ಒಂದು [illegible] ತೂಗಬಿಟ್ಟು ಅದರಲ್ಲಿ 'ಕರ್ನಾಟಕ ರಾಗ' ವೆಂದು ಬರೆಯಬೇಕು.

[ಇದರಿಂದ ಕನ್ನಡ ನಾಡಿನ ವಿಶಿಷ್ಟ ಗಾಯನ ಕಲೆಯು ವ್ಯಕ್ತವಾಗುವದು.].

೭ ಕರ್ನಾಟಕ ಮಾತೆಯನ್ನು [illegible] ಸಬೇಕು ಅಥವಾ [illegible], ಅದರಲ್ಲಿ [illegible].

[ಕಮಲವು [illegible] ಜನರ ಪವಿತ್ರತೆ [illegible] ಶುಭ [illegible] ಧಾರ್ಮಿಕ [illegible] ಚೀನ ಅರಸರಾದ ಕದಂಬರು ಕಮಲವನ್ನು [illegible] ಗಳಲ್ಲಿ ಅಚ್ಚು ಹಾಕಿಸಿದ್ದರು. ಕದಂಬರೇ [illegible] ಲದಲ್ಲಿ ಕರ್ನಾಟಕದ ಮೊದಲನೇ ರಾಜ [illegible]. ಈ [illegible] ವಳಿಕೆಯಿದ್ದುದರಿಂದ, ಈ ರಾಜ [illegible] ನವು ಸ್ವೀಕರಿಸಿ, ಉಳಿದ ರಾಜರೆಲ್ಲರು [illegible] ಮಾನವರಾಗುವರೆಂದು [illegible].]

೮. (ಅ) ಪಶ್ಚಿಮ ಘಟ್ಟದಲ್ಲಿಯ ಗುಡ್ಡ [illegible] ನ್ನು ಕರ್ನಾಟಕ ನಕಾಶದಲ್ಲಿ ಚಿತ್ರಿಸಬೇಕು [illegible] ಸೌಂದರ್ಯವು ಚನ್ನಾಗಿ ಒಡೆದು ಕಾಣ [illegible] ಕಸಪ್ಪೆಯ ಜೋಗಳವೂ ಅದರಲ್ಲಿ ದೃಗ್ಗೋ [illegible]

[ಇದರಿಂದ ಕರ್ನಾಟಕದಲ್ಲಿಯ [illegible] ದ ಪ್ರಭಾವವು ಒಡೆದು ಕಾಣುವದು.]

(ಬ) ಈ ಗುಡ್ಡಗಳ ಒಂದೆರಡು ಭಾಗದಲ್ಲಿ ಗುಹೆಗಳನ್ನು ಚಿತ್ರಿಸಬೇಕು.

ಇದರಿಂದಲೂ ಕರ್ನಾಟಕದ ಪ್ರಾಚೀನ ಶಿಲ್ಪಿಗಳು ಗುಹೆಗಳನ್ನು ಕೊರೆದು ತೋರ್ಪಡಿಸಿದ ಕಲೆಯು ತೋರಬೇಕುವದು ]

[೯] (ಅ) ಈ ಗುಡ್ಡಗಳ ಸಾಲಿನ ಪೂರ್ವಭಾಗದಲ್ಲಿ ಶ್ರೀರಾಮ ದೇವರ ವಾಸಸ್ಥಾನವೆಂದು ಅಕ್ಷರಗಳನ್ನು ಬರೆಯಬೇಕು.

(ಬ) ಹಾನಗಲ್ಲ ಸ್ಥಳದಲ್ಲಿ 'ಪಾಂಡವರ ವಾಸಸ್ಥಾನ' ವೆಂದು ಬರೆಯಬೇಕು.

[ಇದರಿಂದ ಕರ್ನಾಟಕವು ಪೌರಾಣಿಕ ಕಾಲದಿಂದಲೂ ಪ್ರಸಿದ್ಧವಿದ್ದ ಸಂಗತಿಯು ಸ್ಮರಣೆಯಲ್ಲಿ ಬರುವದು.]

೧೦. ಕಾರವಾರಜಿಲ್ಲೆಯ [illegible] ಸಮುದ್ರದೊಳಗೆ ಒಂದು ಹಡಗವನ್ನು ಚಿತ್ರಿಸಬೇಕು.

[ಇದರಿಂದ ಪ್ರಾಚೀನಕರ್ನಾಟಕದ ಹಡಗುಗಳು [illegible] ಲಿ ಮತ್ತು ಸ್ಪೇನ, ಪೋರ್ತುಗಾಲ ಮೊದಲಾದವರ ಸಂಗಡ ಕರ್ನಾಟಕದವರು ಮಾಡಿದ ವಾಣಿಜ್ಯ ವ್ಯವಹಾರ [illegible] ದ್ಯೋತಕವಾಗುವವು. ಮೇಲಾಗಿ ಆಧುನಿಕ ಕಾಲದಲ್ಲಿ ಬಂದರಗಳನ್ನು ಸ್ಥಾಪಿಸುವ ಸೌಕರ್ಯಗಳು ಕರ್ನಾಟಕಕ್ಕೆ ಹೇರಳವಾಗಿರುವವೆಂಬುದು ಗೊತ್ತಾಗುವದು.]

೧೧. ಕರ್ನಾಟಕದ ನಕಾಶದಲ್ಲಿಯ ಪೂರ್ವದಿಕ್ಕಿನ ಕ್ಷೇತ್ರದಲ್ಲಿ ಹೊಲಗಳನ್ನು ಚಿತ್ರಿಸಬೇಕು.

ಇದರಿಂದ ಒಕ್ಕಲತನವು ಕರ್ನಾಟಕದ ಅಂಗವಾದುದು ವದೆಂಬದು ಗೊತ್ತಾಗುತ್ತದೆ.

೧೨ ಉತ್ತರ ದಕ್ಷಿಣಗಳಲ್ಲಿ ಕ್ರಮವಾಗಿ ಕೃಷ್ಣಾ ಮತ್ತು ಕಾವೇರೀ ನದಿಗಳನ್ನು ಚಿತ್ರಿಸಿ, ಅವುಗಳ ದಂಡೆಯಲ್ಲಿ ಒಂದೆರಡು ಕಡೆ ಆಶ್ರಮವನ್ನು ಕಲ್ಪಿಸಿ "ಪ್ರಾಚೀನ ಋಷಿವರ್ಯರ ವಾಸಸ್ಥಾನ" ವೆಂದು ಬರೆಯಬೇಕು. ಉತ್ತರ ದಕ್ಷಿಣದ ಉಳಿದ ದೇಶದಲ್ಲಿ ಹೊಲಗಳನ್ನೂ ಭತ್ತದ ಗದ್ದೆಗಳನ್ನೂ ಆಯಾ ಸ್ಥಳಗಳಲ್ಲಿ ಚಿತ್ರಿಸಬೇಕು. ಇದರಿಂದ ಕರ್ನಾಟಕದ ಸಮೃದ್ಧಿಯು [illegible] ಯಾಗುವದು.

೧೩. ಕರ್ನಾಟಕ ದೇವಿಯ ತಲೆಯ ಮೇಲ್ಭಾಗದಲ್ಲಿ "ಜಯ ಕರ್ನಾಟಕ" ವೆಂಬ ಕರ್ನಾಟಕದ ರಾಷ್ಟ್ರೀಯ [illegible] ವನ್ನು ದೊಡ್ಡ ಅಕ್ಷರಗಳಿಂದ ಬರೆಯಬೇಕು. -ಸಂಪಾದಕ

## ವಿವಿಧ ವಿಚಾರ.

ಪರದೇಶಿ ಅರಿವೆಗಳಲ್ಲಿ, [illegible], ಕುರಿ, ಮತ್ತು [illegible] ದಿ ಮುಂತಾದವುಗಳ ತೊಗಲು ಕೂಡಿಸುತ್ತಾರೆಂದು, ನಮ್ಮ ಕಡೆಗೆ ಬಂದ ಹಲವು ಪತ್ರಗಳಿಂದ ಕಂಡು ಬರುತ್ತದೆ. [illegible] ಗೂ ದಿಲ್ಲಿಯ ಒಂದು ಪತ್ರದಲ್ಲಿಯ ಸಹ ಈ ಮಾತು. ಪ್ರಸಿದ್ಧಿ [illegible] ಈ ಮಾತ ನಿಜವಾಗಿದ್ದರೆ, ಇದರ ಬಗ್ಗೆ ವಿಚಾರ ಮಾಡುವದು ಅತ್ಯವಶ್ಯಕವಾಗಿದೆ. ಸಾಮಾನ್ಯ [illegible] ಗೆ ವಸ್ತುಸ್ಥಿತಿಯು ತಿಳಿಯಲಸಂಭವವಾದ ಕಾರಣ, ಆ ಕೆಲವು [illegible] ಜನರು ನಿಜವಾದ ಮಾಹಿತಿಯನ್ನು ಕೊಟ್ಟರೆ, ಜನರಲ್ಲಿ ನಿಷ್ಕಾರಣವಾಗಿ ವಿಪರೀತ ಕಲ್ಪನೆಯು [illegible] ಗಲಿಕ್ಕಿಲ್ಲ [illegible] ಪದ್ಧತಿಯಲ್ಲಿ ಇದೇ ತರದ ಅಪವಿತ್ರ ಪದ ರ್ಥವು [illegible] ವೆಂದು, ಎಲ್ಲರಿಗೂ ಗೊತ್ತಿದ್ದದರಿಂದ, ವಸ್ತ್ರಗಳ [illegible] ಯಾದರೂ, ಜನರ ಮನಸ್ಸಿನಲ್ಲಿ ಇದೇ [illegible] ಉತ್ಪನ್ನವಾಗುವ ಸಂಭವವುಂಟು. ವಿದೇಶದವರಿಗೆ [illegible] ಉಪಯೋಗಿಸುತ್ತಿದ್ದರಂತೆ, [illegible] ಜನ [illegible] ಕ ಭಾವನೆಗೆ, ಘೂತಕಂಪ [illegible] ಧಕ್ಕೆಯು [illegible] ಜನರು. ಆದರಿಂದ ತಜ್ಞರು ತಮ್ಮ ಅಭಿ [illegible] ಪ್ರಸಿದಿಸಿ ಬೇಕಾಗುವದು. ಪರದೇಶಿ [illegible] ಉಪಯೋಗಿಸದಿದ್ದರೂ, ಅವಗಳನ್ನು [illegible] ಸ್ವೀಕರಿಸುವದು ಜನರಿಗೆ ಇಷ್ಟವಾದದ್ದೇ [illegible] ಪರದೇಶಿ ವಸ್ತ್ರಗಳಲ್ಲಿ ನಿಶ್ಚಯವಾಗಿ [illegible] ಪುರಾವೆಯಿಂದ ಸಿದ್ಧವಾದರೆ, ಅದೆ [illegible] ಬಹಿಷ್ಕಾರಕ್ಕೆ ಮತ್ತಿಷ್ಟು ಯೋಗ್ಯ ಮತ್ತು [illegible] ಆದ್ದರಿಂದ ಬಲ್ಲವರು ಈ [illegible] ನ್ನು [illegible] ಪಕ್ಷಪಾತ ಬುದ್ಧಿಯಿಂದ ಪ್ರಸಿದ್ಧಿಸಬೇಕು.

—ಕೇಸರಿ.

# ಕನ್ನಡ ನವಜೀವನವು

## ವೇಳೆಗೆ ಸರಿಯಾಗಿ ಏಕೆ
### ಹೊರಡುವದಿಲ್ಲ ?

ಹೀಗೆ ಹೊರಡದಿರುವದಕ್ಕೆ ಎರಡು ಕಾರಣಗಳುಂಟು. ನಮ್ಮ ಮುದ್ರಣಮಂದಿರವು ತೀರ ಹೊಸದಿರುವದರಿಂದ ಎಲ್ಲ ಯಂತ್ರ ಸಾಮಾನುಗಳು ಇನ್ನೂ ಸಜ್ಜಾಗಿರದೆ ಇದ್ದುದು ಒಂದು ಕಾರಣವು. ನಮ್ಮ ಕಾರ್ಯಾಲಯವು ವಿಜಾಪುರದಿಂದ ಈಗ್ಗೆ ಸಂಪೂರ್ಣವಾಗಿ ಬಾಗಲಕೋಟೆಗೆ ಬಂದದ್ದರಿಂದ ನಾವು ಬಾಗಲಕೋಟೆಯಲ್ಲಿ ನವಜೀವನ ಸಂಚಿಕೆಗಳನ್ನು ಪೋಸ್ಟ ಮಾಡಲಿಕ್ಕೆ ಅಪ್ಪಣೆಯನ್ನು ಕೇಳಿದ್ದೇವೆ. ಆದರೆ ಒಂದಿಲ್ಲೊಂದು ಕಾರಣದಿಂದ ಪೋಸ್ಟಿನಿಂದ ನಮಗೆ ಆ ಅಪ್ಪಣೆಯು ಈವರೆಗೆ ದೊರೆತಿಲ್ಲ. ಆದ್ದರಿಂದ ಬಾಗಲಕೋಟೆಯಲ್ಲಿ ನವಜೀವನವು ಪ್ರಸಿದ್ಧವಾದನಂತರ ಎಲ್ಲ ಸಂಚಿಕೆಗಳನ್ನು ಪೋಸ್ಟ ಮಾಡಲು ವಿಜಾಪುರಕ್ಕೆ ಕಳಿಸಬೇಕಾಗುತ್ತದೆ. ಈ ದ್ವಿವಿಧ ಪ್ರಯಾಸದಿಂದ ಸಂಚಿಕೆಗಳು ಚಂದಾದಾರರ ಕೈಸೇರಲು ತಡವಾಗುತ್ತದೆ. ಈ ಬಗೆಯ ಎರಡೂ ತೊಂದರೆಗಳು ದೂರಾಗಲು ಒಂದು ತಿಂಗಳಾದರೂ ಬೇಕಾಗಬಹುದು. ಅಲ್ಲಿಯವರೆಗೆ ಚಂದಾದಾರರು ನಮ್ಮನ್ನು ಕ್ಷಮಿಸಬೇಕಾಗಿ ವಿನಂತಿ ಇದೆ.

ವ್ಯವಸ್ಥಾಪಕ

---

### ಜಾಹಿರಾತಿನ ದರ.

ಕನ್ನಡ 'ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ [illegible] ರೂ. ಕಾಯಂ ಜಾಹಿರಾತುಗಳ ಬಗ್ಗೆ ಸವಲತ್ತು. ಅದನ್ನು ವ್ಯವಸ್ಥಾಪಕರಿಂದ ತಿಳಕೊಳ್ಳಬೇಕು.

### ಚಂದಾ ನಿರ್ಣಯ

| | |
|---|---|
| ವಾರ್ಷಿಕ ವರ್ಗಣಿ ರೂ. | [illegible] |
| ಆರು ತಿಂಗಳಿಗೆ ,, | [illegible] |
| ಬಿಡಿ ಸಂಚಿಕೆ | [illegible] |
| ಮಾದರಿ ಸಂಚಿಕೆ ಬೇಕಾದವರು | [illegible] |

[illegible] ಕಳಿಸಬೇಕು.

---

ಏಜಂಟರು ಬೇಕು! ಏಜಂಟರು ಬೇಕು!

## ನಂಬರ ೧ ನೆ, ನಿರ್ಮಲವಾದ
# ನೀಲಗಿರಿ ತೈಲವು.

ನಮ್ಮಲ್ಲಿ [illegible] ನಂಬರ ೧ ನೇ [illegible] ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ [illegible] [illegible] [illegible]

ವಿಳಾಸ- ಬಿ. ಎ. ಶೈ ಕಂಪನಿ
ಪೊ ಹೊನ್ನಾವರ
ಜಿಲ್ಲಾ ಉತ್ತರ ಕಾನಡಾ

---

# ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ.

ಮೂರು ತಿಂಗಳಿಗೊಂದಾವರ್ತಿ ಪ್ರಕಟವಾಗುವ ಈ ಪತ್ರಿಕೆಯಲ್ಲಿ ಕರ್ನಾಟಕದ ಎಲ್ಲ ಪ್ರಾಂತಗಳಿಗೂ ಸಂಬಂಧಪಟ್ಟ [illegible] ವಿಷಯಗಳನ್ನೊಳಗೊಂಡ ಪ್ರೌಢ ಲೇಖನಗಳು ಪಂಡಿತರುಗಳಿಂದ [illegible]ತವಾಗುತ್ತವೆ. ಅಲ್ಲದೆ ಕರ್ನಾಟಕದಲ್ಲಿ ಮುದ್ರಿತವಾಗುವ [illegible] ಗ್ರಂಥಗಳ ವಿಮರ್ಶೆಯೂ ಈ ಪತ್ರಿಕೆಯಲ್ಲಿ ಕಾಲಕಾಲಕ್ಕೆ ಬರುತ್ತದೆ.

ಇದರ ವಾರ್ಷಿಕ ಚಂದಾ (ಅಂಚೆವೆಚ್ಚ ಸಹಿತ) [illegible] (ರೂ. ೪ [illegible]) ಬೇಕಾದವರು [illegible] ವಿಳಾಸಕ್ಕೆ ಬರೆಯಬಹುದು. ಕಾರ್ಯದರ್ಶಿ,

**ಕರ್ನಾಟಕ ಸಾಹಿತ್ಯ ಪರಿಷತ್ತು,**
ಬಸವನಗುಡಿ, ಬೆಂಗಳೂರು ಸಿಟಿ.

---

# ಉತ್ತಮ ಆಯುರ್ವೇದ ಔಷಧಗಳು.

## ಸುವರ್ಣರಾಜವಂಗ ತೊಲಿ ೧ ರೂ. [illegible]

| | | |
|---|---|---|
| ಸಮೀರಪನ್ನಗ | ತೊಲಿ | ರೂ. [illegible] |
| ಪ್ರವಾಳ | ,, | ರೂ. [illegible] |
| ಚಂದ್ರಪ್ರಭಾ | ,, | ರೂ. [illegible] |
| ಲಘುಮಾಲಿನಿ ವಸಂತ | ,, | |
| ಅಮೃತಸತ್ವ | | [illegible] |
| [illegible] | ಔನ್ಸ [illegible] | [illegible] |
| [illegible] | | ರೂ. [illegible] |
| ಪಾಚಕವಟಿ | ನೂರಕ್ಕೆ | ರೂ. [illegible] |
| ಮೃದುವಿರೇಚಕವಟಿ | ನೂರಕ್ಕೆ | [illegible] |
| ಸಿತೋಪಲಾದಿ ಚೂರ್ಣ | ೧೦ ತೊಲಿ | ರೂ. [illegible] |

ಇವಲ್ಲದೆ ಶಾಸ್ತ್ರೋಕ್ತ [illegible] ತಯಾರಿಸಿದ [illegible] ಔಷಧಗಳು ನಮ್ಮಲ್ಲಿ [illegible] ಸಿಗುವವು.

Kirnatak Ayurv lic Pharmaceutical Works
Bagalk t Dt. Bijapur

---

ಸ್ವದೇಶಿ ಕಾರಖಾನೆಯ ಉತ್ತಮ [illegible]

ಏಜಂಟರು) **ಅತ್ಯುತ್ತಮ** ( [illegible]

[illegible]

| | | |
|---|---|---|
| [illegible] | [illegible] | [illegible] |
| [illegible] | [illegible] | |
| [illegible] | [illegible] | [illegible] |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸ:— **ಕರ್ನಾಟಕ ಇಂಕ ಕಂಪನಿ,**
**ಬಾಗಲಕೋಟೆ.**

---

## [illegible]
### [illegible]

[illegible]

[illegible]

[illegible] ಕಂಪನಿ [illegible]

[illegible]
[illegible]
**ಶಿರಸಿ ಉತ್ತರ ಕಾನಡಾ.**

---

ಈ ಪತ್ರವನ್ನು ಬಾಗಲಕೋಟೆ [illegible] ಮುದ್ರಣಮಂದಿರದಲ್ಲಿ [illegible] ಮುದ್ರಿಸಿದರು [illegible] ಪ್ರಕಾಶಿಸಿದರು [illegible]

ಮಹಾರಾಷ್ಟ್ರದ ಧೋರಣವು

# ಕನ್ನಡ ನವಜೀವನ

REGISTERED No. B 1589

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಭಾಷಾಂತರಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟ ವೈಶಾಖ ವ॥ ೭ ಶಕೆ ೧೮೪೪ | ಸಂಚಿಕೆ ೨೨

ಗುರುವಾರ ತಾ. ೧೮ ಮೇ ೧೯೨೨.

## ಮಹಾತ್ಮರ ನುಡಿಯು.

### ವಿದ್ಯಾರ್ಥಿ ಮತ್ತು ವಕೀಲರ ಕರ್ತವ್ಯ.

(ಯಂಗ ಇಂಡಿಯಾ ೨೭-೪-೧೯೨೨)

ಶಾಲೆ, ಕಾಲೇಜಗಳನ್ನು ಬಿಡದೆ ಇದ್ದಂಥ ವಿದ್ಯಾರ್ಥಿಗಳು ಮತ್ತು ವಕೀಲಿಯನ್ನು ಬಿಡದೇ ಇದ್ದ ವಕೀಲರು, ಈ ಅಸಹಕಾರ ಚಳವಳಿಗೆ ಯಾವ ರೀತಿಯಿಂದ ಸಹಾಯ ಮಾಡಬಹುದು, ಎಂದು ಹಲವರು ನನಗೆ ಪ್ರಶ್ನ ಮಾಡಿರುವರು. ಅಸಹಕಾರವನ್ನು ಮಾಡದೇ ಇದ್ದ ವಕೀಲ ಅಥವಾ ವಿದ್ಯಾರ್ಥಿಯು, ಈ ಚಳವಳಿಗೆ ಯಾವ ರೀತಿಯಿಂದಲೂ ಸಹಾಯ ಮಾಡಲಾರನೆಂಬ ಮಾತು ವಿಲಕ್ಷಣವಾದದ್ದು. ಕೇವಲ ಸಾಮರ್ಥ್ಯವಿಲ್ಲದ ಕಾರಣದಿಂದಲೇ, ನೂರಾರು ವಿದ್ಯಾರ್ಥಿಗಳು ತಮ್ಮ ಶಾಲೆ ಕಾಲೇಜಗಳನ್ನು ಬಹಿಷ್ಕರಿಸಿರುವದಿಲ್ಲ. ಹಾಗೂ ಅದರಂತೆಯೇ ವಕೀಲರು, ವಕೀಲಿಯನ್ನು ಬಿಟ್ಟಿರುವದಿಲ್ಲ ಎಂಬುವದು ಮಾತ್ರ ನಿಶ್ಚಿತವಾದದ್ದು. ವಕೀಲಿಯನ್ನು ಬಿಡದೇ ಇದ್ದ ವಕೀಲನು ನಿಶ್ಚಯವಾಗಿ ದುಡ್ಡಿನಿಂದ ಸಹಾಯ ಮಾಡಬಲ್ಲನು; ತನ್ನ ಕೆಲಸವನ್ನು ಮಾಡಿ ಉಳಿದ ವೇಳೆಯ ಉಪಯೋಗವನ್ನು ಸಾರ್ವಜನಿಕ ಕೆಲಸದಲ್ಲಿ ಮಾಡಬಲ್ಲನು; ತನ್ನ ಧಂಧೆಯಲ್ಲಿಯಾದರೂ, ಪ್ರಾಮಾಣಿಕ ಮತ್ತು ಸತ್ಯನಾಗಿಯೇ ಇರಬಲ್ಲನು; ಪಕ್ಷಗಾರರಿಂದಲೇ ತನ್ನ ಮಹತ್ವಾಕಾಂಕ್ಷೆಯನ್ನು ಪೂರೈಸುವದು ಅಯೋಗ್ಯವಾದದ್ದೆಂದು ತಿಳಿಯಬಲ್ಲನು; ಪಕ್ಷಗಾರರ ಸಲುವಾಗಿ ಯಾವಾಗಲೂ ಹಂಬಲಿಸುತ್ತ ಕೂಡ್ರಲಾರನು. ಪಂಚಾಯತಿಯಿಂದ ಖಟ್ಲೆಗಳನ್ನು ನಿಕಾಲ ಮಾಡಬಲ್ಲನು; ಪ್ರತಿದಿವಸ [illegible] ತಾನು ಎರಡು ತಾಸು ನೂಲಬಲ್ಲನು. ತನ್ನ ಕುಟುಂಬದ ಖರ್ಚನ್ನು ಕಡಿಮೆ ಮಾಡಬಲ್ಲನು; ತನ್ನ ಕುಟುಂಬದ ಎಲ್ಲ ಜನರಿಗೆ, ಕನಿಷ್ಠ ಪಕ್ಷಕ್ಕೆ ಕೆಲವು ವೇಳೆಯಾದರೂ ನೂಲಲಿಕ್ಕೆ ಉಪದೇಶಮಾಡಬಲ್ಲನು; ತಾನು ಸಂಪೂರ್ಣವಾಗಿ ಖಾದಿಯನ್ನು ಧರಿಸಿ ತನ್ನ ಕುಟುಂಬದವರಿಗಾದರೂ ಖಾದಿಯನ್ನೇ ಧರಿಸಲಿಕ್ಕೆ ಹಚ್ಚಬಲ್ಲನು. ವಕೀಲನಿಂದ ಮಾಡಬಹುದಾದ ಕೆಲಸಗಳಲ್ಲಿ ಕೆಲವುಗಳನ್ನು ನಾನು ಹೇಳಿದ್ದೇನೆ. ಅಸಹಕಾರಿತೆಯ ಒಂದು ಅಂಗವನ್ನು ನೆರವೇರಿಸಲು ಅಸಮರ್ಥನಾದವನು, ಉಳಿದವುಗಳನ್ನು ಮಾಡಲಿಕ್ಕೆ ನಾಚಬಾರದು. ಆದರೆ ಇಂಥ ವಕೀಲನಿಗೆ ಮೊದಲಿನಂತೆ ಇನ್ನು ಮೇಲೆ ಸಾರ್ವಜನಿಕ ಸಭೆಗಳಲ್ಲಿ ಮಾತಾಡಲು ಮಾತ್ರ ಬರುವದಿಲ್ಲ. ಅವನು ಮುಖಂಡನಾಗಿಯೂ ಕೆಲಸ ಮಾಡಲಾರನು. ವಕೀಲರ ವಿಷಯವಾಗಿ ಹೇಳಿದ ಎಲ್ಲ ಸೂಚನೆಗಳು ಶಾಲೆಯನ್ನು ಬಿಡದೇ ಇದ್ದ ವಿದ್ಯಾರ್ಥಿಗಳಿಗೂ ಹತ್ತುವವು. ಸ್ವಯಂಸೇವಕರಲ್ಲಿ ಬಹುತೇಕ ಜನರು ವಿದ್ಯಾರ್ಥಿಗಳೇ ಇರುವರು. ಸ್ವಯಂಸೇವಕರಾಗುವದು, ಒಂದು ವಿಶಿಷ್ಟ ಅಧಿಕಾರವಿದ್ದು. ಶಾಲೆ ಕಾಲೇಜಗಳನ್ನು ಬಿಡದೇ ಇದ್ದ ವಿದ್ಯಾರ್ಥಿಗಳು ರಾಷ್ಟ್ರದಿಂದ ಈ ಅಧಿಕಾರವನ್ನು ಪಡೆಯಲಾರರು. ಅವರಾದರೂ ಹಿಂದುಮಾತೆಯ [illegible] ಸೇವಕರಾಗುವ ಅಭ್ಯಾಸವನ್ನು ಬಿಟ್ಟು ತಮ್ಮ ಕೆಲಸವನ್ನು ಮಾಡಬೇಕು. ನಾವು ಶಾಲೆ ಕಾಲೇಜಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸದಿದ್ದರೂ ಅವುಗಳ ಮಹತ್ವವನ್ನಾದರೂ ಕಡಿಮೆ ಮಾಡಬೇಕು. ಈಗ್ಗೆ ಆ ಮಹತ್ವವೇನೋ ಕಡಿಮೆಯಾಗಿರುತ್ತದೆ, ಮತ್ತು ದಿನಾಲು ಕಡಿಮೆಯಾಗುತ್ತಿದೆ. ಅವು ರಾಷ್ಟ್ರೀಯ ಸಂಸ್ಥೆಗಳಾಗುವವರೆಗೆ, ನಾವು ಅವುಗಳ ಮಹತ್ವವನ್ನು ಪುನಃ ಪ್ರಸ್ಥಾಪಿಸಬಾರದು, ಮತ್ತು ಇದರಿಂದ ರಾಷ್ಟ್ರದೇವಿಯ ಬೇಡಿಕೆಗಳನ್ನು ಪೂರ್ಣಮಾಡತಕ್ಕದ್ದು.

---

### ರೇಲ್ವೆ ಖಾತೆಯಲ್ಲಿ ಕಳವು.

ಯಂಗ ಇಂಡಿಯಾ ೨೮ ಜುಲೈ ೧೯೨೧.

ರೇಲ್ವೆ ಖಾತೆಗಳಲ್ಲಿ ಹುಮುಗು ಲಂಚಗಳಿಗೆ ಮಿತಿಯೇ ಇಲ್ಲವೆಂದು ಎಷ್ಟೋ ತಕರಾರುಗಳನ್ನು ದಿನಾಲು ಕೇಳುತ್ತೇವೆ. ಇವೆಲ್ಲವುಗಳು ನಿಜವಾದವಿದ್ದು, ರಾಷ್ಟ್ರಕ್ಕೆ ಅತ್ಯಂತ ಲಜ್ಜಾಸ್ಪದವಾದ ಮಾತಾಗಿರುತ್ತದೆ. ಮತ್ತು ಎಲ್ಲ ಜನರು ಅತ್ಯಂತ ಬದ್ಧರಾಗುತ್ತಿರುವ ಕಾಲದಲ್ಲಿಯಂತೂ ಇದು ಬಹಳೇ ಖೇದಜನಕವಾಗಿರುತ್ತದೆ. ಇಂಥ ದುರಾಚಾರಗಳ ಬಗ್ಗೆ ಸರಕಾರದವರಿಗೆ ಏನೂ ಮಾಡಲಿಕ್ಕೆ ಬರುವಂತಿಲ್ಲ. ಎಲ್ಲ ಜವಾಬದಾರಿಯು ಜನರ ಮೇಲೆಯೇ ಅವಲಂಬಿಸಿರುವದು. ಬರಗಾಲದ [illegible] ಕಳಿಸಲಿಕ್ಕೆ ಬೇಕಾಗುವ ವ್ಯಾಗಿನಗಳಿಗಾದರೂ ಲಂಚವನ್ನು ಕೊಡಬೇಕಾಗುವದೆಂದು ಸಹ ನಾನು ಕೇಳಿದ್ದೇನೆ. [illegible] ರೇಲ್ವೆ ಪಾರ್ಸಲದಿಂದ ಬೇಕಾದದ್ದನ್ನು ಕಳಿಸಬಹುದು ಆದರೆ ಏನಾದರೂ ನಾಶವಾಗುವಂಥ ಪದಾರ್ಥಗಳನ್ನು ಕಳಿಸಬೇಕಾದರೆ ಲಂಚವನ್ನು ಕೊಡಬೇಕಾಗುವದು. ಮೊನ್ನೆ ಮೊನ್ನೆ ಒಬ್ಬ ಮುಂಬಯಿ ವ್ಯಾಪಾರಸ್ಥನು ಒಂದು ಖಾದಿಯ ಪಾರ್ಸಲವನ್ನು ತರಿಸಿದನು. ಆದರೆ ಅದರೊಳಗಿನ ಒಂದು ತಾಗೆಯೇ ಕಳವಾಗಿ ಹೋಗಿತ್ತು.

# ಕನ್ನಡ ನವಜೀವನವು

## ವೇಳೆಗೆ ಸರಿಯಾಗಿ ಏಕೆ

### ಹೊರಡುವದಿಲ್ಲ ?

ಹೀಗೆ ಹೊರಡದಿರುವದಕ್ಕೆ ಎರಡು ಕಾರಣಗಳುಂಟು. ನಮ್ಮ ಮುದ್ರಾಮಂದಿರವು ತೀರ ಹೊಸದಿರುವದರಿಂದ ಎಲ್ಲ ಯಂತ್ರ ಸಾಮಾನುಗಳು ಇನ್ನೂ ಸಜ್ಜಾಗಿರದೇ ಇದ್ದದ್ದು ಒಂದುಕಾರಣವು. ನಮ್ಮ ಕಾರ್ಯಾಲಯವು ವಿಜಾಪುರದಿಂದ ಈಗ್ಗೆ ಸಂಪೂರ್ಣವಾಗಿ ಬಾಗಲಕೋಟೆಗೆ ಬಂದದ್ದರಿಂದ ನಾವು ಬಾಗಲಕೋಟೆಯಲ್ಲಿ ನವಜೀವನ ಸಂಚಿಕೆಗಳನ್ನು ಪೋಸ್ಟ ಮಾಡಲಿಕ್ಕೆ ಅಪ್ಪಣೆಯನ್ನು ಕೇಳಿದ್ದೇವೆ. ಆದರೆ ಒಂದಿಲ್ಲೊಂದು ಕಾರಣದಿಂದ ಪೋಸ್ಟಿನಿಂದ ನಮಗೆ ಆ ಅಪ್ಪಣೆಯು ಈ ವರೆಗೆ ದೊರೆತಿಲ್ಲ. ಆದ್ದರಿಂದ ಬಾಗಲಕೋಟೆಯಲ್ಲಿ ನವಜೀವನವು ಪ್ರಸಿದ್ಧವಾದನಂತರ ಎಲ್ಲ ಸಂಚಿಕೆಗಳನ್ನು ಪೋಸ್ಟಮಾಡಲು ವಿಜಾಪುರಕ್ಕೆ ಕಳಿಸಬೇಕಾಗುತ್ತದೆ. ಈ ದ್ವಿವಿಡಪ್ರಯಾಣದಿಂದ ಸಂಚಿಕೆಗಳು ಚಂದಾದಾರರ ಕೈಸೇರಲು ತಡವಾಗುತ್ತದೆ. ಈ ಬಗೆಯ ಎರಡೂ ತೊಂದರೆಗಳು ದೂರಾಗಲು ಒಂದು ತಿಂಗಳಾದರೂ ಬೇಕಾಗಬಹುದು. ಅಲ್ಲಿಯವರೆಗೆ ಚಂದಾದಾರರು ನಮ್ಮನ್ನು ಕ್ಷಮಿಸಬೇಕಾಗಿ ವಿನಂತಿ ಇದೆ.

ವ್ಯವಸ್ಥಾಪಕ

---


### ಜಾಹಿರಾತಿನ ದರ.

ಕನ್ನಡ 'ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂ. ಕಾಯಂ ಜಾಹಿರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

### ಚಂದಾ ನಿರ್ಣಯ.

| | |
|---|---|
| ವಾರ್ಷಿಕ ವರ್ಗಣಿ ರೂ. | ೬-೦-೦ |
| ಆರು ತಿಂಗಳಿಗೆ ,, | ೩-೦-೦ |
| ಬಿಡಿ ಸಂಚಿಕೆ | ೦-೧-೬ |
| ಮಾದರಿ ಸಂಚಿಕೆ ಬೇಕಾದವರು ತಿಕೀಟು ಕಳಿಸಬೇಕು. | ೦ ೧ ೬ |


---


ಏಜಂಟರು ಬೇಕು! ಏಜಂಟರು ಬೇಕು!

## ನಂಬರ ೧ ನೇ ನಿರ್ಮಲವಾದ

# ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾದ ನಂಬರ ೧ ನೇ ದರದ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳೇ ಸೋಯಿಯಾದ ದರದಲ್ಲಿ ತೈಲವು ಸಿಗುವದು. ೪ ಔಂಸ ತೈಲದಬಾಟ್ಲಿ ಅಥವಾ ಒಟ್ಟು ರೂಪಾಯಿ ೩-೦-೦ ಡಜನಕ್ಕೆ ೩-೦-೩ ವಿಶೇಷ ಮಾಹಿತಿ ಪತ್ರದ್ವಾರ

ವಿಳಾಸ:- ಬಿ ಎ. ಶ್ಯೈ ಕಂಪನಿ
ಪೊ ಹೊನ್ನಾವರ.
ಜಿಲ್ಲಾ ಉತ್ತರ ಕಾನಡಾ



# ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ.

ಮೂರು ತಿಂಗಳಿಗೊಂದಾವರ್ತಿ ಪ್ರಕಟವಾಗುವ ಈ ಪತ್ರಿಕೆಯಲ್ಲಿ ಕರ್ನಾಟಕದ ಎಲ್ಲ ಪ್ರಾಂತಗಳಿಗೂ ಸಂಬಂಧಪಟ್ಟ ಸಾಹಿತ್ಯ ವಿಷಯಕವಾದ ಪ್ರೌಢ ಲೇಖನಗಳು ಪಂಡಿತರುಗಳಿಂದ ರಚಿತವಾಗುತ್ತವೆ; ಅಲ್ಲದೆ ಕರ್ನಾಟಕದಲ್ಲಿ ಮುದ್ರಿತವಾಗುವ ಕನ್ನಡ ಗ್ರಂಥಗಳ ವಿಮರ್ಶೆಯೂ ಈ ಪತ್ರಿಕೆಯಲ್ಲಿ ಕಾಲಕಾಲಕ್ಕೆ ಬರುತ್ತದೆ.

ಇದರ ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ನಾಲ್ಕು ರೂಪಾಯಿಗಳು (ರೂ. ೪ — ೦ — ೦.) ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು. ಕಾರ್ಯದರ್ಶಿ,

**ಕರ್ನಾಟಕ ಸಾಹಿತ್ಯ ಪರಿಷತ್ತು,**
ಬಸವನಗುಡಿ, ಬೆಂಗಳೂರು ಸಿಟಿ.


---


# ಉತ್ತಮ ಆರ್ಯ ಔಷಧಗಳು.

## ಸುವರ್ಣರಾಜವಂಗ ತೊಲಿ ೧ ರೂ. ೫

| | | |
|---|---|---|
| ಸುವೀರಪನ್ನಗ | ತೊಲಿ | ರೂ. ೫ |
| ಪ್ರವಾಳ | ,, | ರೂ. ೩ |
| ಚಂದ್ರಪ್ರಭಾ | ,, | ರೂ. ೧ |
| ಲಘುಮಾಲಿನಿ ವಸಂತ | ,, | |
| ಅಮೃತಸತ್ವ | ,, | ಆಣೆ ೧ |
| ಸಾಯರಪ್ ವಾಸಕ | ಔಂಸ ೫ | ರೂ. ೮ |
| ಬ್ರಾಹ್ಮೀ ಸಾಯರಪ್ | ,, | ರೂ. ೧ |
| ಪಾಚಕವಟಿ | ನೂರಕ್ಕೆ | ರೂ. ೧ |
| ಮೃದುವಿರೋಚಕವಟಿ | ನೂರಕ್ಕೆ | ಆಣೆ ೪ |
| ಸಿತೋಪಲಾದಿಚೂರ್ಣ | ೧೦ ತೊಲಿ | ರೂ. ೧ |

ಇವಲ್ಲದೇ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಯಾವತ್ತೂ ಔಷಧಗಳು ನಮ್ಮಲ್ಲಿ ಸುಲಭ ದರದಿಂದ ಸಿಗುವವು.

Kirnatak Ayurvedic Phar-maceutical Works
Bagalkot Dt. Bijapur



ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

## ಏಜಂಟರು) ಅತ್ಯುತ್ತಮ (ಬೇಕು.

ಮಸಿ ಗುಳಿಗೆಗಳು ಮತ್ತು ಟಿಕಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೮—೦ | ಟ. ಖ. |
| ೧೦೦ ಟಿಕಿಗಳಿಗೆ | ೦—೧೪—೦ | |
| ೪೦ ಔಂಸ ಮಸಿ ಪುಡಿಕೆಗೆ | ೦—೪—೦ | ಬೇರೆ. |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸ:—**ಕರ್ನಾಟಕ ಇಂಕ ಕಂಪನಿ,**
**ಬಾಗಲಕೋಟೆ.**



## ಆತ್ಮೋದ್ಧಾರವೆಂಬ

### ಹೊಸ ಮಾಸಪತ್ರಿಕೆ

ಉತ್ತರಕಾನಡಾ ಜಿಲ್ಹೆಯಲ್ಲಿ ಮೊದಲನೆಯ ಉಚ್ಚ ಧಾರ್ಮಿಕ ಸಾಮಾಜಿಕ ರಾಜಕೀಯ ವಿಷಯಗಳಿಂದ ಕೂಡಿದ್ದು ಎಲ್ಲ 'ಸ್ವಾಭಿಮಾನಿ'ಗಳು ವಿಶೇಷತಃ ವ್ಯಾಪಾರಿಗಳು ಅವಶ್ಯವಾಗಿ ಓದತಕ್ಕದ್ದು.

ವಾರ್ಷಿಕ ವರ್ಗಣಿ ಟ. ಖ. ಸಹಿತ ೨ ರೂಪಾಯಿ ೧ ಆಣೆ ಮಾತ್ರ ಬಿಡಿಸಂಚಿಕೆ ೩ ಆಣೆ. ವಿಳಾಸ

ವಾಮನ ಅನಂತ ಪೋದ್ದಾರ
ರಾಷ್ಟ್ರೀಯ ಶಾಲಾಧ್ಯಾಪಕ
**ಶಿರಸಿ ಉತ್ತರಕಾನಡಾ.**


---

ಈ ಪತ್ರವನ್ನು ಬಾಗಲಕೋಟೆ ವೆಂಕಟೇಶಪೇಟೆಯಲ್ಲಿ ವಿದ್ಯಾಕರ ಮುದ್ರಾ ಮಂದಿರದಲ್ಲಿ ಶ್ರೀನಿವಾಸ ರಾಜೇಂದ್ರ ಮುಂಗಳವೇಡೆ ಇವರು ಮುದ್ರಿಸಿದರು ಮತ್ತು ಅಲ್ಲಿಯೇ ತಮ್ಮಾಚಾರ್ಯ ಬಂಡಾಚಾರ್ಯ ಪುರಾಣಿಕ ಇವರು ಪ್ರಸಿದ್ಧಿಸಿದರು.

ಮಹಾರಾಷ್ಟ್ರದ ಧೋರಣವು. ಕನ್ನಡ

REGISTERED No. B 1589

# ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಭಾಷಾಂತರಿಸುವದೇ ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬೆಳಗಾವಿ ಕೋಟೆ ವೈಶಾಖ ವ|| ೭ ಶಕೆ ೧೮೪೪ | ಸಂಚಿಕೆ ೨೩.

ಗುರುವಾರ ತಾ. ೧೮ ಮೇ ೧೯೨೨.

## ಮಹಾತ್ಮರ ನುಡಿಯು.

### ವಿದ್ಯಾರ್ಥಿ ಮತ್ತು ವಕೀಲರ ಕರ್ತವ್ಯ.

(ಯಂಗ ಇಂಡಿಯಾ ೨೩-೩-೧೯೨೨)

ಶಾಲೆ, ಕಾಲೇಜಗಳನ್ನು ಬಿಡದೆ ಇದ್ದ ವಿದ್ಯಾರ್ಥಿಗಳು ಮತ್ತು ವಕೀಲಿಯನ್ನು ಬಿಡದೇ ಇದ್ದ ವಕೀಲರು, ಈ ಅಸಹಕಾರ ಚಳವಳಿಗೆ ಯಾವ ರೀತಿಯಿಂದ ಸಹಾಯ ಮಾಡಬಹುದು, ಎಂದು ಹಲವರು ನನಗೆ ಪ್ರಶ್ನೆ ಮಾಡಿರುವರು. ಅಸಹಕಾರವನ್ನು ಮಾಡದೇ ಇದ್ದ ವಕೀಲ ಅಥವಾ ವಿದ್ಯಾರ್ಥಿಯು, ಈ ಚಳವಳಿಗೆ ಯಾವ ರೀತಿಯಿಂದಲೂ ಸಹಾಯ ಮಾಡಲಾರನೆಂಬ ಮಾತು ವಿಲಕ್ಷಣವಾದದ್ದು. ಕೇವಲ, ಸಾಮರ್ಥ್ಯವಿಲ್ಲದ ಕಾರಣದಿಂದಲೇ, ನೂರಾರು ವಿದ್ಯಾರ್ಥಿಗಳು ತಮ್ಮ ಶಾಲೆ ಕಾಲೇಜಗಳನ್ನು ಬಹಿಷ್ಕರಿಸಿರುವದಿಲ್ಲ ಹಾಗೂ ಅದರಂತೆಯೇ ವಕೀಲರು, ವಕೀಲಿಯನ್ನು ಬಿಟ್ಟಿರುವದಿಲ್ಲ ಎಂಬುವದು ಮಾತ್ರ ನಿಶ್ಚಿತವಾದದ್ದು. ವಕೀಲಿಯನ್ನು ಬಿಡದೇ ಇದ್ದ ವಕೀಲನು ನಿಶ್ಚಯವಾಗಿ ದುಡ್ಡಿನಿಂದ ಸಹಾಯ ಮಾಡಬಲ್ಲನು; ತನ್ನ ಕೆಲಸವನ್ನು ಮಾಡಿ ಉಳಿದ [illegible] ಉದ್ಯೋಗಗಳನ್ನು ಸಾರ್ವಜನಿಕ ಕೆಲಸದಲ್ಲಿ ಮಾಡಬಲ್ಲನು; ತನ್ನ ಧಂಧೆಯ ಕ್ಷೇತ್ರದಲ್ಲಿ ಪ್ರಾಮಾಣಿಕ ಮತ್ತು ಸರಳನಾಗಿಯೇ ಇರಬಲ್ಲನು; ಪಕ್ಷಗಾರರಿಂದಲೇ ತನ್ನ ಮಹತ್ವಾಕಾಂಕ್ಷೆಯನ್ನು ಸಿದ್ಧಿಗೊಳಿಸುವದು ಅಯೋಗ್ಯವಾದದ್ದೆಂದು ತಿಳಿಯಬಲ್ಲನು; ಪಕ್ಷಗಾರರ ಸಲುವಾಗಿ ಯಾವಾಗಲೂ ಹಂಬಲಿಸುತ್ತ ಕೂತಿರಲಾರನು. ಪಂಚಾಯತಿಯಿಂದ ತಂಟೆಗಳನ್ನು ನಿರ್ಣಯ ಮಾಡಬಲ್ಲನು; ಪ್ರತಿದಿವಸ ನಿಷ್ಠೆಯಿಂದಲೂ ತಾನು ಎಷ್ಟು ನೂಲಬಲ್ಲನು. ತನ್ನ [illegible] ಖರ್ಚನ್ನು ಕಡಿಮೆ ಮಾಡಬಲ್ಲನು; ತನ್ನ [illegible] ಎಲ್ಲ ಜನರಿಗೆ. [illegible] ನೂಲುವದಕ್ಕೆ ಉಪದೇಶ ಮಾಡಬಲ್ಲನು; ತಾನು ಸಂಪೂರ್ಣವಾಗಿ [illegible] ತನ್ನ ಕುಟುಂಬದವರೆಲ್ಲರಿಗೆ [illegible] ಧರಿಸಲಿಕ್ಕೆ ಹಚ್ಚಬಲ್ಲನು. ವಕೀಲನಿಂದ ಮಾಡಬಹುದಾದ ಕೆಲಸಗಳಲ್ಲಿ ಕೆಲವುಗಳನ್ನು ನಾನು ಹೇಳಿರುವೆನು. ಅಸಹಕಾರಿತೆಯ ಒಂದು ಅಂಗವನ್ನು ಸ್ವೀಕರಿಸಲು ಅಸಮರ್ಥನಾದವನು, ಉಳಿದವುಗಳನ್ನು ಮಾಡಲಿಕ್ಕೆ ನಾಚಬಾರದು. ಆದರೆ ಇಂಥ ವಕೀಲನಿಗೆ ಮೊದಲಿನಂತೆ ಇನ್ನು ಮೇಲೆ ಸಾರ್ವಜನಿಕ ಸಭೆಗಳಲ್ಲಿ ಮಾತಾಡಲು ಪಾತ್ರ ಬರುವದಿಲ್ಲ. ಅವನು ಮುಖಂಡನಾಗಿಯೂ ಕೆಲಸ ಮಾಡಲಾರನು. ವಕೀಲರ ವಿಷಯವಾಗಿ ಹೇಳಿದ ನನ್ನ ಸೂಚನೆಗಳು ಶಾಲೆಯನ್ನು ಬಿಡದೇ ಇದ್ದ ವಿದ್ಯಾರ್ಥಿಗಳಿಗೂ ಹತ್ತುವವು. ಸ್ವಯಂಸೇವಕರಲ್ಲಿ ಬಹುಜನ ಜನರು ವಿದ್ಯಾರ್ಥಿಗಳೇ ಇರುವರು. ಸ್ವಯಂಸೇವಕರಾಗುವದು, ಒಂದು ವಿಶಿಷ್ಟ ಅಧಿಕಾರವಿದ್ದು. ಶಾಲೆ ಕಾಲೇಜಗಳನ್ನು ಬಿಡದೇ ಇದ್ದ ವಿದ್ಯಾರ್ಥಿಗಳು, [illegible] ಈ ಅಧಿಕಾರವನ್ನು ಪಡೆಯಲಾರರು. ಅವರು ಸಹ ಹಿಂದು ಸ್ಥಾನದ [illegible] ಸೇವಕರಾಗುವ [illegible] ಬಿಟ್ಟು ತಮ್ಮ ಕೆಲಸವನ್ನು ಮಾಡಬಹುದು. ನಾವು ಶಾಲೆ ಕಾಲೇಜಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸದಿದ್ದರೂ ಅವುಗಳ ಮಹತ್ವವನ್ನಾದರೂ ಕಡಿಮೆ ಮಾಡಬೇಕು. ಈಗ್ಗೆ ಆ ಮಹತ್ವವೇನೋ ಕಡಿಮೆಯಾಗಿರುತ್ತದೆ, ಮತ್ತು ದಿನಾಲು ಕಡಿಮೆಯಾಗುತ್ತಿದೆ. ಅವು ರಾಷ್ಟ್ರೀಯ ಸಂಸ್ಥೆಗಳಾಗುವವರೆಗೆ, ನಾವು ಅವುಗಳ ಮಹತ್ವವನ್ನು ಪುನಃ ಪ್ರಸ್ಥಾಪಿಸಬಾರದು, ಮತ್ತು ಇದರಿಂದ ರಾಷ್ಟ್ರದೇವಿಯ ಬೇಡಿಕೆಗಳು [illegible] ಪೂರ್ಣವಾಗತಕ್ಕದ್ದು.

### ರೇಲ್ವೆ ಖಾತೆಯಲ್ಲಿ ಕಳವು.

ಯಂಗ ಇಂಡಿಯಾ ೨೮ ಜುಲೈ ೧೯೨೧.

ರೇಲ್ವೆ ಖಾತೆಯಲ್ಲಿ ಹುಡುಗು ಲಂಚಗಳಿಗೆ ಮಿತಿಯೇ ಇಲ್ಲವೆಂದು ಎಷ್ಟೋ [illegible] ದಿನಾಲು ಕೇಳುತ್ತೇವೆ. ಇದೀಗ [illegible] ರಾಷ್ಟ್ರಕ್ಕೆ ಅತ್ಯಂತ ಲಜ್ಜಾಸ್ಪದವಾದ ಮಾತಾ [illegible] ಮತ್ತು ಎಲ್ಲ ಜನರು ಅದರಂತೆ [illegible] ಕಾಲದಲ್ಲಿಯಂತೂ ಇದು ಬಹಳೇ [illegible]. ಇಂಥ ದುರಾಚಾರಗಳ ಬಗ್ಗೆ ಸರಕಾರದವರಿಗೆ [illegible] ಮಾಡಲಿಕ್ಕೆ ಬರುವಂತಿಲ್ಲ. ಎಲ್ಲ [illegible] ಮಾರ್ಗವೇ ಅವಲಂಬಿಸಿರುವದು. [illegible] ಪ್ರಯಾಣಿಕರು [illegible] ಬೇಕಾಗುವ ವಾಗಿನಗಳಿಗಾದರೂ ಲಂಚ [illegible] ಕೊಡಬೇಕಾಗುವದೆಂದು ಸಹ ನಾನು ಕೇಳಿದ್ದೇನೆ. [illegible] ರೇಲ್ವೆ ಮಾರ್ಗದಿಂದ ಬೇಕಾದದ್ದನ್ನು ಕಳಿಸ ಬೇಕಾದರೆ [illegible] ನಾಶವಾಗುವಂಥ ಪದಾರ್ಥಗಳನ್ನು [illegible] ಲಂಚವನ್ನು ಕೊಡಬೇಕಾಗುವದು. ಮೊನ್ನೆ [illegible] ಮುಂಬಯಿ ವ್ಯಾಪಾರಸ್ಥನು ಒಂದು [illegible] ಪಾರ್ಸಲವನ್ನು ತರಿಸಿದನು. ಆದರೆ ಅದರೊಳಗಿನ ಒಂದು [illegible] ಗೆಯೇ ಕಳವಾಗಿ ಹೋಗಿತ್ತು.

ರೇಲ್ವೆ ಖಾತೆಯ ಜನರಿಗೆ ಅಕಸ್ಮಾತ್ ಈ ಲೇಖವು ಕಣ್ಣಿಗೆ ಬಿದ್ದರೆ, ಅವರಲ್ಲಿ ಎಲ್ಲ ಜನರ ಸಲುವಾಗಿ ಕಳಕಳ ಬುದ್ಧಿಯೂ, ತಮ್ಮ ಸಂಸಾರವನ್ನು ಸಾಗಿಸಲಿಕ್ಕೆ ಈ ಮಾರ್ಗವನ್ನು ಬಿಟ್ಟು ಬೇರೊಂದು ಮಾರ್ಗವನ್ನು ಹುಡುಕಲು ಪ್ರಯತ್ನಶೀಲಬುದ್ಧಿಯೂ, ಬರುವದರ ಸಲುವಾಗಿ ಮಾಡಿಕೊಂಡ ಈ ನನ್ನ ಪ್ರಾರ್ಥನೆಯ ಸಲುವಾಗಿ ಅವರು ಪೂರ್ಣ ವಿಚಾರ ಮಾಡಬೇಕು. ರೇಲ್ವೆ ಸೇವಕರ ಸಂಘಗಳಿಗೆ ನನ್ನ ವಿಜ್ಞಾಪನೆಯೇನಂದರೆ, ನೀವು ನಿಮ್ಮ ಅಧಿಕಾರಗಳ ಸಲುವಾಗಿ ಎಷ್ಟು ಜೋರು ಇಡುವಿರೋ ಅಷ್ಟೇ ಜೋರು ನಿಮ್ಮ ಜನರ ಕರ್ತವ್ಯ ತತ್ಪರತೆಯ ಮೇಲೆ ಇಡಿರಿ. ಸ್ವರಾಜ್ಯಸ್ಥಾಪನೆಯಾದ ಮೇಲೆಯೂ ಈ ತಕರಾರಗಳು ಅಸ್ತಿತ್ವದಲ್ಲಿ ಬಂದರೆ ಆಗಿನ ರಾಜ್ಯ ಪದ್ಧತಿಯಾದರೂ ಈಗಿನಷ್ಟೇ ಖರ್ಚಿನದಾಗುವದು. ಯಾವ ದೇಶದಲ್ಲಿ, ಸಮಾಜದ ಬಹು ಜನರು ನ್ಯಾಯನಿಷ್ಠ ಮತ್ತು ಸ್ವದೇಶಾಭಿಮಾನಿಗಳಾಗಿ, ದೇಶದ ಅಭಿವೃದ್ಧಿಯು ತಮ್ಮ ಎಲ್ಲ ಸುಖಗಳಿಗಿಂತಲೂ ಶ್ರೇಷ್ಠವಾದದ್ದೆಂದು ತಿಳಿಯ ಹತ್ತುವರೋ, ಅಂಥ ಸ್ಥಳದಲ್ಲಿಯೇ ಸ್ವರಾಜ್ಯವು ಸ್ಥಿರವಾಗಿ ನಿಲ್ಲಬಹುದು. ಸ್ವರಾಜ್ಯವೆಂದರೆ ಬಹು ಜನರಿಂದ ನಿರ್ಮಿತವಾದ ರಾಜ್ಯಪದ್ಧತಿಯು. ಯಾವ ದೇಶದಲ್ಲಿ ಬಹು ಜನರು ಅನೀತಿಶಾಲಿಗಳೂ ಸ್ವಾರ್ಥಲೋಲುಪಿಗಳೂ ಆಗಿರುವರೋ ಆ ದೇಶದಲ್ಲಿ ಅನಾಯಕ ಸ್ಥಿತಿಯಲ್ಲದೆ ಬೇರೆ ಯಾವ ಪರಿಸ್ಥಿತಿಯು ಪ್ರಾಪ್ತವಾಗಲಾರದು. ಈ ಚಳವಳಿಯಲ್ಲಿ ಎಷ್ಟೋ ಜನರು ನ್ಯಾಯ ಮತ್ತು ಸತ್ಯಪಕ್ಷಪಾತಿಗಳಾಗಿದ್ದರೂ, ಅವರು ಕೇವಲ ತಮ್ಮ ಭಯ ಮತ್ತು ನಿಷ್ಕಾಳಜಿಗಳಿಂದಲೇ, ತಮ್ಮ ಜನ್ಮಸಿದ್ಧ ಹಕ್ಕನ್ನು ಸಹ ಕಂಡುಹಿಡಿಯಲಾರರೆಂದು ನನಗೆ ಅನಿಸುತ್ತದೆ. ಮತ್ತು ಯಾವ ದಿವಸ ಅವರು ಸತ್ಯತೆಯ ಪ್ರಭಾವವನ್ನು ಮನನಮಾಡಿ ಅದರಂತೆ ವರ್ತಿಸಲು ಉಪಕ್ರಮಿಸುವರೋ, ಆ ಹೊತ್ತಿನ ದಿವಸವೇ ಅವರಿಗೆ ಸಂಪೂರ್ಣ ಜಯವು ಸಿಗುವದು.

ಮೋಹನದಾಸ ಕರಮಚಂದ ಗಾಂಧೀ

---

## ನಿಜವಾದ ಕಾರ್ಯಕ್ಷೇತ್ರವು.

ಭರತಖಂಡವು ಶಹರಗಳಲ್ಲಿಲ್ಲ. ಆದರೆ ಹಳ್ಳಿಗಳಲ್ಲಿಯೇ ಬಹಳ ಜನರು ವಾಸಿಸುವರು. ಇದರಲ್ಲಿ ಶಹರಗಳು ಎಲ್ಲಿಯೋ ೭೫೦ ಉಂಟು. ಆದರೆ ಹಳ್ಳಿಗಳು ೭೫೦೧೦೦ ಇರುತ್ತವೆ. ಪಟ್ಟಣಗಳಲ್ಲಿ ಬಹಳವಾದರೆ ವ್ಯಾಪಾರಿಗಳೂ, ಸರಕಾರೀ ನೌಕರರೂ, ವಕೀಲರೂ, ಡಾಕ್ಟರರೂ, ಕೂಲಿಕಾರರೂ ಇರುವರು. ಆದರೆ ಹಳ್ಳಿಗಳಲ್ಲಿ ನೂರಕ್ಕೆ ೯೫ ಜನರು ಹೊಲಮನೆಗಳನ್ನು ಮಾಡುವವರಾಗಲೀ, ಇಲ್ಲವೆ, ಅವರಿಗೆ ಸಹಕಾರಿಗಳಾದವರಾಗಲೀ (ಬಡಿಗ, ಕಮ್ಮಾರ ಮುಂ.) ಇರುವರು. ಈ ಹಳ್ಳಿಗಳ ಬಲದಿಂದಲೇ ನಗರನಿವಾಸಿಗಳು ಮೀಸೆಯನ್ನು ಹುರಿಹಾಕುತ್ತಾ ಮೆರೆಯುವರು; ಸರಕಾರವಾದರೂ ತಿಂದು ಉಂಡು ಪುಷ್ಟವಾಗಿ ಸೊಕ್ಕುವದು;

ಶಹರಗಳಲ್ಲಿಯ ವ್ಯಾಪಾರೀ ವರ್ಗಕ್ಕೆ, ತಮ್ಮ ಲಾಭವನ್ನು ಹೆಚ್ಚಿಸುವದರಲ್ಲಿ ವೇಳೆಯೇ ಸಿಗುವದಿಲ್ಲ; ಕಚೇರಿಗಳಿಗೆ (ಅಡತಿ ಮುಂ.) ಹೋದರೆ ಸಾಹೇಬರ ಹಸ್ತಾಂದೋಲನದ ಹೊರತು ಬೇರೊಂದು ಉಪಾಯವಿಲ್ಲ; ಅಂದಮೇಲೆ ಅವರಲ್ಲಿ ದೇಶಹಿತದ ಕಡೆಗೆ ಲಕ್ಷ್ಯವೆಲ್ಲಿಂದ? ಅವರಲ್ಲಿ ಖಾದಿಯು ಪ್ರವೇಶಿಸುವ ಬಗೆ ಎಂತು? ಸರಕಾರೀ ನೌಕರರ ಮಾತಿಯನ್ನಂತೂ ಕೇಳಲೇಬಾರದು. ಓ-

ದು ಬರೆದು ಬೇಸರಿಯುವರು. ಗ್ಯಾಝೆಟ್, ವೃತ್ತಪತ್ರಗಳನ್ನು ಓದುವರು. ಸಭೆಗಳಿಗೂ ಹೋಗುವರು. ಮನೆಯಲ್ಲಿ ಏಕಾಂತದಲ್ಲಿ ಕುಳಿತುಕೊಂಡಾಗ, ದೇಶದ ದುರವಸ್ಥೆಯ ಬಗ್ಗೆ ಒಂದೆರಡು ಉಸುರುಗಳನ್ನಾದರೂ ಹಾಕುವರು. ಆದರೆ ವೇಳೆಯಾದಕೂಡಲೇ ಕಚೇರಿಗಳಲ್ಲಿ ಸಾಹೇಬರ ಕಡೆಗೆ ಓಡಿಹೋಗಬೇಕಾಗುವದು. ದೇವರು ಹೊಟ್ಟೆಯನ್ನು ಕೊಟ್ಟು ಅನ್ಯಾಯ ಮಾಡಿದನು. ಸ್ವತಂತ್ರ ಅಸ್ತಿತ್ವವಂತೂ ಸರಕಾರೀ ನೌಕರರಿಗೆ ಇಲ್ಲ. ತಮ್ಮ ದೇಹವನ್ನು ಮಾರಿಬಿಟ್ಟದ್ದರಿಂದ ಅವರು ಸರಕಾರದ ಕೈಯಲ್ಲಿ ಗುಲಾಮರೇ ಆಗಿರುವರು. ಅಂದಮೇಲೆ ಅವರು ಖಾದಿಯನ್ನು ಹೇಗೆ ಧರಿಸುವರು? ಆದರೆ ಅವರ ಹೃದಯವನ್ನು ಬಿಚ್ಚಿ ನೋಡಲಾಗಿ, ರಕ್ತದಿಂದ ಬರೆಯಲ್ಪಟ್ಟ ಭಾರತಮಾತೆಯ ದೀನಾವಸ್ಥೆಯ ಚಿತ್ರವು ಕಾಣುವದು. ಅವರ ಆತ್ಮವು ನಿರ್ಬಲವಿರುತ್ತದೆ; ಹೊಟ್ಟೆಗೆ ಎರಡನೇ ಮಾರ್ಗವಿಲ್ಲ. ಅದ್ದರಿಂದ ಅವರು ತಮ್ಮ ದೇಹವನ್ನು ಮಾರಿಬಿಟ್ಟಿರುವರಲ್ಲದೆ, ತಮ್ಮ ದೇಶವು ಸಂಕಟಕ್ಕೊಳಗಾಗುವದಕ್ಕೆ ಸಹಾಯಕರಾದರೂ ಆಗಿರುವರು.

ವಕೀಲರೂ ಡಾಕ್ಟರರೂ ಸ್ವಲ್ಪ ಹೆಚ್ಚು ಸ್ವತಂತ್ರರಿರುವರು; ಮತ್ತು ಶ್ರೀಮಂತರೂ ಇರುವರು. ಇವರು ಸರಕಾರದ ಪ್ರತ್ಯಕ್ಷ ಗುಲಾಮರಲ್ಲವೆಂಬವೇ ಇದರ ಇಂಗಿತವು. ಆದರೆ ಅವರು ತಮ್ಮ ವ್ಯವಸಾಯಕ್ಕಾಗಿಯೂ ಸ್ವಾರ್ಥಕ್ಕಾಗಿಯೂ ಗುಲಾಮರಾ[illegible]ಂದ ಭಾರತಮಾತೆಯು ಖಾದಿಯ ಸಂದೇಶವನ್ನು ಅವರ ಮನೆಗೆ ತೆಗೆದುಕೊಂಡು ಹೋದರೂ, ಅವಳಿಗೆ ಪುನಃ ಅಲ್ಲಿಂದ ತಿರಿಗಿ ಬರಬೇಕಾಯಿತು.

ಕೂಲಿಕಾರರಂತೂ ನಿರಕ್ಷರಿಗಳು. ಅವರು ದೊಡ್ಡ ದೊಡ್ಡ ಕಾರಖಾನೆಗಳಲ್ಲಿದ್ದು, ಶಹರಗಳಲ್ಲಿಯ ದುರ್ವ್ಯಸನಗಳಿಗೆ ಒಳಗಾಗಿರುತ್ತಾರೆ. ಅಂದಮೇಲೆ ಅವರು ಗಿರಣಿಯ ಸುಲಭ ದರದ ವಸ್ತ್ರಗಳನ್ನು ಬಿಟ್ಟು ಖಾದಿಯನ್ನು ಹೇಗೆ ಧರಿಸಬೇಕು?

ಶಹರಗಳ ಸಾಮಾನ್ಯವಾದ ಅವಸ್ಥೆಯು ಹೀಗಿದ್ದರೂ ಕೂಡ ರಾಷ್ಟ್ರದ ಜಾಗೃತಿಯಲ್ಲಿ ಅವು ಎಲ್ಲಕ್ಕೂ ಮೊದಲು ಮುಂದೆ ಬಂದಿರುವವು. ಇದರಿಂದಲೇ ದೇಶದಲ್ಲಿ ಚೈತನ್ಯದ ಜ್ಯೋತಿಯ ಪ್ರಗತಿಯಾಗಿರುತ್ತದೆ. ಎಷ್ಟೋ ವ್ಯಾಪಾರೀ ಬಾಂಧವರು ಟಿಳಕ ಸ್ವರಾಜ್ಯಫಂಡಿಗೆ ದ್ರವ್ಯಸಹಾಯ ಮಾಡಿರುವರು. ವಿದೇಶೀ ವಸ್ತ್ರಗಳನ್ನು ಕೊಳ್ಳುವದಿಲ್ಲೆಂದು ಪ್ರತಿಜ್ಞೆ ಮಾಡಿರುತ್ತಾರೆ. ಎಂಥ ಶ್ರೀಮಂತರೂ ಸಹ ಖಾದಿಯನ್ನೇ ಧರಿಸುತ್ತಾರೆ. ಇದೇ ಪ್ರಕಾರ ಎಷ್ಟೋ ವಕೀಲರೂ ಡಾಕ್ಟರರೂ ಖಾದೀ ಪ್ರಸಾರ ಮಾಡುವದರಲ್ಲಿಯೂ ಇತರ ದೇಶಹಿತದ ಕೆಲಸಗಳಲ್ಲಿಯೂ ತಮ್ಮ ಭಾಗವನ್ನು ತೆಗೆದುಕೊಂಡಿದ್ದಾರೆ. ಮತ್ತು ಈಗ ಹಿಂದುಸ್ಥಾನದ ಪುಢಾರಿಗಳಲ್ಲಿ ಈ ವರ್ಗದ ಜನರ ಸಂಖ್ಯೆಯೇ ಅಧಿಕವಾಗಿರುವದು. ಕೆಲವು ಸರಕಾರೀ ನೌಕರರೂ ತಮ್ಮ ನೌಕರಿಯನ್ನು ಒದ್ದು, ತಮ್ಮಲ್ಲಿ ಆತ್ಮಿಕ ಬಲವು ಉಂಟೆಂಬ ಪರಿಚಯವನ್ನು ನಮಗೆ ಮಾಡಿ ಕೊಟ್ಟಿರುತ್ತಾರೆ. ಕೂಲಿಕಾರರಲ್ಲಿಯಾದರೂ ರಾಷ್ಟ್ರೀಯ ಭಾವನೆಗಳು ಪ್ರವೇಶಿಸಹತ್ತಿವೆ. ಮತ್ತು ಎಲ್ಲರೂ ಬಿಳೀ ಟೊಪ್ಪಿಗೆಯನ್ನು ತಮ್ಮ ಶಿರಸ್ತ್ರಾಣವನ್ನಾಗಿ ಮಾಡಿಕೊಂಡಿರುತ್ತಾರೆ. ಶಹರಗಳಲ್ಲಿಯ ಉದಾಹರಣೆಗಳಲ್ಲಿಯೂ ಭಾರತದ ಜಾಗೃತಿಯ ಚಿಹ್ನವು ಕಾಣಬರುತ್ತದೆ. ಆದರೆ ನಾವು ಹಳ್ಳಿಗಳೊಳಗೆ ಪ್ರವಾಸಮಾಡಹತ್ತಿದರೆ, ಈಗಿನ ರಾಜ್ಯಪದ್ಧತಿ ನಿಜವಾದ ನಗ್ನಸ್ವರೂಪವು ಒಡೆದು ಕಾಣಿಸುತ್ತದೆ.

ಲಸವನ್ನು ಹಿಂಡಿಕೊಂಡ ಮೇಲೆ ಉಳಿದ ಕಬ್ಬಿನ ಸಿಪ್ಪೆಯಂತೆ ಮಾವಿನ ಹಣ್ಣಿನಂತೆ, ನಿಸ್ಸಾರವಾದ ಹಾಗೂ ಹಸಿವೆಯಿಂದ ಬಳಲುವ ಹಳ್ಳಿಗಾಡ ಜನರ ದಯಾಜನಕವಾದ ನೋಟವು ದೃಷ್ಟಿಗೆ ಬಿದ್ದರೆ, ಹೃದಯವು ಕಳವಳಿಸುತ್ತದೆ. ಮಹಾತ್ಮಾ ಗಾಂಧಿಯವರ ನಾಮವು ಬಾಲಕರ ನಾಲಗೆಯ ಮೇಲೆ ಕೇಳಬರುತ್ತಿದ್ದರೂ ಅವರಿಗೆ ತಮ್ಮ ದುರ್ದಶೆಯು ಸ್ವತಃ ಅನುಭವವಿದ್ದರೂ ಕೂಡ ರಾಷ್ಟ್ರೀಯ ಭಾವನೆಗಳ ಪ್ರವೇಶವು ಅವರ ಹೃದಯದೊಳಗೆ ಬಹಳವಾಗಿ ಆಗಿಲ್ಲ. ಆವರೆ ದೇಶದ ನಿಜವಾದ ಆವಶ್ಯಕತೆಯನ್ನು ಕಂಡು ಹಿಡಿದು ಅದಕ್ಕನುಸರಿಸಿ ನಡೆಯುವದಕ್ಕೆ ನಿಶ್ಚಿತಪಡಿಸಿದ್ದ ಮಾರ್ಗದ ಮೇಲೆ ಮುಂದೆ ಬಂದು ಹೆಜ್ಜೆಯನ್ನಿಡಲಿಕ್ಕೆ ಅವರಲ್ಲಿ ಬೇಕಾಗುವ ಆತ್ಮತೇಜವೂ ಕಾರ್ಯಕಕ್ತಿಯೂ ಅಷ್ಟೊಂದು ಜಾಗೃತವಾಗಿಲ್ಲ. ನಮ್ಮ ಕಾರ್ಯಕರ್ತರಿಗೆ ಶಹರಗಳಲ್ಲಿ ಕೆಲಸ ಮಾಡಲಿಕ್ಕೆ ಎಷ್ಟು ಪ್ರಸಂಗಗಳು ದೊರೆಯುತ್ತವೆಯೋ ಅಷ್ಟು ಹಳ್ಳಿಗಳಲ್ಲಿ ದೊರೆಯುವದಿಲ್ಲ. ಆದರೆ ಹಳ್ಳಿಗಳೇ ನಮ್ಮ ಕಾರ್ಯಕ್ಷೇತ್ರವು. ಅವೇ ನಮ್ಮ ಶಕ್ತಿಯ ಉಗಮಸ್ಥಾನವು. ಹಳ್ಳಿಯ ಜನರು ಸ್ವಭಾವದಿಂದ ಸರಳರೂ ಸಾತ್ವಿಕರೂ ಇರುತ್ತಾರೆ. ಪಟ್ಟಣಗಳ ದೂಷಿತ ಹವೆಯು ಇನ್ನೂ ವರೆಗೆ ಅಲ್ಲಿ ಬಹಳ ಬೀಸಿಲ್ಲ. ಕಲಿತಂಥ ಅನಿಷ್ಟ ಸಂಗತಿಗಳನ್ನು ಮರೆತು ಬಿಟ್ಟು ಹೊಸ ಸಂಗತಿಗಳನ್ನು ಕಲಿಯುವದಕ್ಕೆ ಶಹರನಿವಾಸಿಗಳಿಗೆ ಎಷ್ಟು ಶ್ರಮವು ಹತ್ತುವದೋ ಅಷ್ಟು ಶ್ರಮವು ಇವರಿಗೆ ಹತ್ತುವದಿಲ್ಲ. ಕ್ಷೇತ್ರವು ಸಿದ್ಧವಾಗಿದೆ. ಬಿತ್ತುವದೊಂದೇ ತಡ. ಸಂಯುಕ್ತ ಪ್ರಾಂತ, ಮುಜಫ್ಫರ ನಗರ ಜಿಲ್ಲಾ ಲಾಂಕವೆಂಬ ಊರಿನಿಂದ ಒಬ್ಬ ಬಾಂಧವನು ಉತ್ತಮ ವೃತ್ತಾಂತವನ್ನು ತಿಳಿಸುತ್ತಾನೆ:—

“ಪ್ರಮುಖ ಮುಖಂಡರು ಹಳ್ಳಿಗಳ ಕಡೆಗೆ ಹೆಚ್ಚು ಲಕ್ಷ್ಯಗೊಡತಕ್ಕದ್ದು. ಯಾಕಂದರೆ ಇಲ್ಲಿ ಕೆಲಸಮಾಡುವವರು ಬಹಳ ಕಡಿಮೆ ಇರುವರು ಮತ್ತು ಜೇಲಿನಿಂದ ಹೊರಗೆ ಇದ್ದ ಮುಖಂಡರು ಇತ್ತ ಲಕ್ಷ್ಯಕೊಟ್ಟರೆ ಟಿಳಕ ಸ್ವರಾಜ್ಯ ಫಂಡು ಬಹಳವಾಗಿ ವಸೂಲಾಗಲಿಕ್ಕೆ ಶಕ್ಯವಿದ್ದಿತು. ಈ ಹಳ್ಳಿಗಳಲ್ಲಿ ಉತ್ತಮ ರೀತಿಯಿಂದ ಕೆಲಸ ಮಾಡಿದಲ್ಲಿ ಈ ಭಾಗವು ಬಾರ್ಡೋಲಿಯಂತೆ ತಯಾರಾಗಲಿಕ್ಕೆ ಶಕ್ಯವಿರುತ್ತದೆ. ಯಾವ ಗ್ರಾಮದಿಂದ ನಾನು ಪತ್ರ ಬರೆದಿರುವೆನೋ ಅಲ್ಲಿ ಕಾಂಗ್ರೆಸ್ ಕಮಿಟಿಯು ಸ್ಥಿರವಾಗಿದೆ. ಕಮಿಟಿಯು ಲೆಕ್ಕವನ್ನು ಮಾಡಿತು. ಈ ಹಳ್ಳಿಯಲ್ಲಿ ೩೦ ಮಗ್ಗಗಳೂ ೭೦೦ ರಾಟಿಗಳೂ ಇರುತ್ತವೆ. ಪ್ರತಿವಾರ ೭೦೦ ವಾರ ಖಾದಿಯು ತಯಾರಾಗುತ್ತದೆ.”

ಈ ವೃತ್ತಾಂತವು ನಿಜವಾಗಿದ್ದಲ್ಲಿ ಈ ಹಳ್ಳಿಗಳಲ್ಲಿ ತಯಾರಿಯು ಮತ್ತು ಹೆಚ್ಚು ವ್ಯವಸ್ಥಿತ ರೀತಿಯಿಂದ ಅಲ್ಲಿ ಕೆಲಸ ಮಾಡುವ ಆವಶ್ಯಕತೆಯೂ ಎಷ್ಟಿರುವದೆಂಬದು ಪ್ರಕಟವಾಗುತ್ತದೆ. ಯಾವ ಹಳ್ಳಿಗಳಲ್ಲಿ ಕಾಂಗ್ರೆಸ್ ಕಮಿಟಿಗಳಿಲ್ಲವೋ, ಮತ್ತು ಯಾವ ಗ್ರಾಮಗಳ ಜನರು ದಿವಾಣೀ ಖಟ್ಲೆಗಳನ್ನು ಪಂಚರದ್ವಾರಾ ತೀರಿಸಿಕೊಳ್ಳುವದಿಲ್ಲವೋ ಅಂತಹ ಯಾವ ಹಳ್ಳಿಗಳೂ ಭಾರತವರ್ಷದಲ್ಲಿರಕೂಡದು. ಶಾಂತಿಯ ಮತ್ತು ನಿರ್ಭಯತೆಯ ಪಾಠವನ್ನು ಅವರಿಗೆ ಚನ್ನಾಗಿ ಕಲಿಸಬೇಕು. ಖಾದಿಯ ಪ್ರಚಾರಕ್ಕೂ ಖಾದಿಯ ಉತ್ಪನ್ನಕ್ಕೂ ಹಳ್ಳಿಗಳಲ್ಲಿ ಎಷ್ಟು ಅನುಕೂಲವಿದೆಯೋ ಅಷ್ಟು ಶಹರಗಳಲ್ಲಿರುವದಿಲ್ಲ ಹಿಂದೂ ಮುಸಲ್ಮಾನರ ಐಕ್ಯವು ಅಲ್ಲಿ ಮೊದಲಿನಿಂದಲೇ ಉಂಟು. ಈ ಗ್ರಾಮದಲ್ಲಿ ಅದರ ಮಹತ್ವವು ಎಷ್ಟಿರುತ್ತದೆಂಬದನ್ನು ತಿಳಿಸಿಕೊಟ್ಟ ಮೇಲೆ, ಅದರಂತೆ ಅವರಿಗೆ ವರ್ತಿಸಲಿಕ್ಕೆ ಸಿಟ್ಟಿಗಾಗುವದು. ಅಸ್ಪೃಶ್ಯದ ಅನರ್ಥವು ಮದ್ರಾಸ ಕಡೆಗೆ ಎಷ್ಟು ಇರುತ್ತದೆಯೋ ಅಷ್ಟು ಬೇರೆಡೆಯಲ್ಲಿಲ್ಲ. ಆದರೆ ಉತ್ತರ ಹಿಂದುಸ್ತಾನದ ಹಳ್ಳಿಗಳೊಳಗೆ ಸ್ವಲ್ಪೇ ಪ್ರಯತ್ನದಿಂದ ಈ ಅನರ್ಥವು ದೂರವಾಗಲಿಕ್ಕೆ ಶಕ್ಯವಿರುತ್ತದೆ. ಹಳ್ಳಿಗಳೊಳಗೆ ಕೆಲಸ ಮಾಡುವವರು ಕಡಿಮೆ ಇರಕೂಡದು. ಶಹರ ಮತ್ತು ದೊಡ್ಡ ಪಟ್ಟಣಗಳಿಂದ, ಒಬ್ಬರು ಅಥವಾ ಇಬ್ಬರು ಕೆಲಸ ಮಾಡುವವರನ್ನು ಹಳ್ಳಿಗಳೊಳಗ ಕಳಿಸಿ ಅಲ್ಲಿ ಅವರಿಗೆ ಶಿಕ್ಷಣ ಕೊಟ್ಟು ಹೊಸ ಕಾರ್ಯಕರ್ತರನ್ನು ತಯಾರಮಾಡಬೇಕು ಅವರಿಗೆ ವಿಶೇಷವಾಗಿ ಮಹಾಸಭೆಯ ಧ್ಯೇಯವನ್ನೂ, ಅಹಿಂಸೆಯ ಮಹತ್ವವನ್ನೂ, ತಿಳಿಸಿಕೊಡಬೇಕು ಈ ಸಂಬಂಧದಲ್ಲಿ “ನಾವು ಏನೇನು ಮಾಡಬೇಕು” ಎಂಬ ಟಿಪ್ಪಣಿಯ ಕಡೆಗೆ ನಮ್ಮ ಕಾರ್ಯಕರ್ತರು ಲಕ್ಷ್ಯಗೊಡಬೇಕೆಂದು ನಾವು ಸೂಚಿಸುತ್ತೇವೆ ಕೆಲಸಮಾಡುವವರು ಉತ್ಸಾಹದಿಂದ ಮುಂದೆ ಬಂದರೆ ಮಹಾತ್ಮಾ ಗಾಂಧಿಯವರನ್ನೂ ಅನ್ಯ ಪುಢಾರಿಗಳನ್ನೂ ಇತರ ಕಾರ್ಯಕರ್ತರನ್ನೂ ಜೇಲಿನಲ್ಲಿಡುವದು ಸರಕಾರಕ್ಕೆ ಅಶಕ್ಯವಾಗುವದು. ಇಷ್ಟು ಮಹತ್ವದ ತಯಾರಿಯು ಎರಡೇ ತಿಂಗಳುಗಳಲ್ಲಿ ಆಗಲಿಕ್ಕೆ ಶಕ್ಯವಿರುತ್ತದೆ (ಕೆಲಸ ಮಾಡುವವರು ಮುಂದವರೆದರೆ ಮಾತ್ರ) ಮತ್ತು ಯಾವ ಹಳ್ಳಿಗಳಲ್ಲಿ ನಮ್ಮ ಖಾದಿಯ ಕಾರ್ಯಕ್ರಮವು ಪೂರ್ಣವಾಗಿದೆಯೋ ಆ ನಿರ್ಬಲ ಹಳ್ಳಿಗಳೊಳಗಿಂದ ಬಂದು ಅದ್ಭುತ ಶಕ್ತಿಯು ಪ್ರಕಟವಾಗುವದರಿಂದ ನಾವು ಸುಮ್ಮನೇ ಕುಳಿತರೂ ಸಹ ಸ್ವರಾಜ್ಯವು ನಮ್ಮ ಚರಣಚುಂಬನ ಮಾಡುವದು; ಮತ್ತು ಇದೇ ಸರಕಾರಕ್ಕೆ ಖಿಲಾಫತ್ ಮತ್ತು ಪಂಜಾಬದ ಘಾಯಗಳು ತೀವ್ರವೇ ಮಾಯುವಂತೆ ಮಾಡಬೇಕಾಗುವದು.

(ನವಜೀವನ) ತಾ|| ೩೦-೪-೧೯೨೨.

## ಸಿಂಧೂರ ಲಕ್ಷ್ಮಪ್ಪನವರು.

ವಿಜಾಪೂರ ಜಿಲ್ಹೆಯಲ್ಲಿ ವಿಶೇಷತಃ ಬಾಗಲಕೋಟೆ ತಾಲೂಕಿನಲ್ಲಿ ಸಿಂಧೂರ ಲಕ್ಷ್ಮಪ್ಪನವರ ಹೆಸರನ್ನು ಕೇಳದ ಮನುಷ್ಯನು ಈಗ್ಗೆ ಯಾವನೂ ಇಲ್ಲ. ಉತ್ತರ ಕರ್ನಾಟಕದ ಉಳಿದ ಜಿಲ್ಹೆಗಳಲ್ಲಿಯೂ, ಮುಧೋಳ, ಜತ್ತ, ಜಮಖಂಡಿ ಮೊದಲಾದ ಸ್ಥಳಗಳಲ್ಲಿಯೂ, ಲಕ್ಷ್ಮಪ್ಪನವರ ಚರಿತ್ರೆಯನ್ನು ಎಲ್ಲರೂ ಬಲ್ಲರು.

ಇತ್ತತ್ತಲಾಗಿ ಲಕ್ಷ್ಮಪ್ಪನವರ ಹೆಸರು ವಿಶೇಷವಾಗಿ ಬಾಗಲಕೋಟೆಯ ಸುತ್ತಲು ಕೇಳಬರುತ್ತಿದೆ ಶ್ರೀಮಂತರೂ ಬಡವರೂ ದಿನಾಲು ಅವರ ಹೆಸರನ್ನು ಒದರುತ್ತಿರುವರು. ಯಾವಾಗ್ಗೆ ಲಕ್ಷ್ಮಪ್ಪನವರು ತಮ್ಮ ಮನೆ ಹೊಕ್ಕು ದುಡ್ಡು ಕಸಿದುಕೊಳ್ಳುವರೋ ಎಂಬ ಅಂಜಿಕೆಯಿಂದ ಶ್ರೀಮಂತರು ಲಕ್ಷ್ಮಪ್ಪನವರನ್ನು ಚಿಂತೆಯಿಂದ ನೆನಸುತ್ತಿರುವರು. ದರಿದ್ರರೆನೋ ಆ ಪುಣ್ಯಪುರುಷನ ಬರುವನ್ನು ಕಂಡು, ಅವನಿಂದ ಚರಿತಾರ್ಥಕ್ಕಾಗಿ ಹಣಪಡೆದುಕೊಳ್ಳುವದಕ್ಕಾಗಿ ಅವನ ದರ್ಶನಾಪೇಕ್ಷೆಯುಳ್ಳವರಾಗಿರುವರು ಸಣ್ಣ ಹುಡುಗರಂತೂ ಬಲು ಆಶ್ಚರ್ಯದಿಂದ ಲಕ್ಷ್ಮಪ್ಪನವರ ಕೃತಿಗಳನ್ನು ಬಣ್ಣಿಸುತ್ತಿರುವರು.

ಇಂಥ ಈ ಬಂಟನು ಯಾವಾಗಿರಬಹುದೆಂದು ನಮ್ಮ ವಾಚಕರಲ್ಲಿ ಅನೇಕರು ಆತುರದಿಂದ ತಮ್ಮ ಮನದಲ್ಲಿ ಕೇಳಿಕೊಳ್ಳುತ್ತಿರಬಹುದು. ಸ್ವಲ್ಪದಲ್ಲಿ ಹೇಳಬೇಕಾದರೆ ಲಕ್ಷ್ಮಪ್ಪನವರ ಧೈರ್ಯಶಾಲಿಯೂ, ಪರಮ ಉದಾರನೂ, ಬಡು ಅಭಿಮಾನಿ... ಆದರೆ... ಏನು ಹೇಳಬೇಕು? ನಮಗೆ ... ದು. 'ಅವರೂ ಅವನಕೃತಿಯಿಂದ ಅವನನ್ನು ಗಣಿಸಿದರೆ ಪ್ರಖ್ಯಾತ ದರವಡೇಖೋರರಲ್ಲಿ ಅವನನ್ನು ಸೇರಿಸಬೇಕಾಗುವದು.

(೧೪ ನೇ ಪಾನಕ್ಕೆ ನೋಡಿರಿ.)

# ಕನ್ನಡ ನವಜೀವನ.

ವೈಶಾಖ ವದ್ಯ ೭ ಗುರುವಾರ ಶಕೆ ೧೮೪೪.

## ಮಹಾರಾಷ್ಟ್ರದ ಧೋರಣವು.

ಮಹಾರಾಷ್ಟ್ರದಲ್ಲಿಯ ಮುಖಂಡರು ಪ್ರಾರಂಭದಿಂದಲೇ ಅಸಹಕಾರಿತೆಯು ತಮಗೆ ಇಷ್ಟವಾದದ್ದಲ್ಲವೆಂದು ಸ್ಪಷ್ಟ ಅಥವಾ ಅಸ್ಪಷ್ಟ ರೀತಿಯಿಂದ ಪ್ರಕಟಿಸುತ್ತಾ ಬಂದರು. ಅಸಹಕಾರಿತೆಗೆ ಒಂದು ವಿಶಿಷ್ಟ ಸ್ವರೂಪವು ಪ್ರಾಪ್ತವಾಗುವ ಪೂರ್ವದಲ್ಲಿ ಲೋಕಮಾನ್ಯರು ಸ್ವರ್ಗವಾಸಿಗಳಾದರು. ಆದ್ದರಿಂದ ಮಹಾರಾಷ್ಟ್ರವು ಅಸಹಕಾರಿತೆಯಲ್ಲಿ ಯಾವ ತರಹದ ಮಾರ್ಗವನ್ನು, ಸಿದ್ಧಮಾಡಿಕೊಳ್ಳಬೇಕೆಂಬುವದು ಇನ್ನೂ ನಿಶ್ಚಿತವಾಗಿಲ್ಲ. ಆದರೆ ಲೋಕಮಾನ್ಯರು ಮಾತ್ರ ನನ್ನ ಜೀವನವೆಲ್ಲವೂ ಅಸಹಕಾರಮಯವಿದ್ದರೂ, ಜನರು ಮಾತ್ರ ಈ ಚಳವಳಿಯನ್ನು ಪೂರ್ಣಮಾಡಿಕೊಳ್ಳಿಸುವ ವಿಷಯದಲ್ಲಿ ನನಗೆ ಸಂಶಯವುಂಟಾಗಿದೆ; ಮತ್ತು ಜನಸಮ್ಮತಿಯಿಲ್ಲದೆ, ಕಾರ್ಯವನ್ನು ಪ್ರಾರಂಭಮಾಡಿ ಅದರೊಳಗೆ ಅಪಯಶವನ್ನು ದೊರಕಿಸುವದು ಯೋಗ್ಯವಾದದ್ದಲ್ಲವೆಂದು ಹೇಳಿದ್ದರು. ಅಸಹಕಾರದ ಪ್ರಾರಂಭದಿಂದಲೇ ಮಹಾರಾಷ್ಟ್ರೀಯ ಮುಖಂಡರು ಕಾಯದೇ ಕೌನ್ಸಿಲದಲ್ಲಿ ಹೊಗಿ ಸೇರುವ ತಮ್ಮ ಉತ್ಕಟೇಚ್ಛೆಯು ಸಫಲವಾಗುವದೆಂದು ತಿಳಿದಿದ್ದರು; ಮತ್ತು ಅದೇ ರೀತಿಯಿಂದ ಕೆಲಸವನ್ನಾದರೂ ಮಾಡಿದರು. ಇದು ನಿಜವು. ಲೋಕಮಾನ್ಯರ ನಿಧನದಿಂದಲೂ, ಕಾಯದೇ ಕೌನ್ಸಿಲದಲ್ಲಿ ಪ್ರವೇಶಿಸುವ ಇಚ್ಛೆಯಿಂದಲೂ, ಮಹಾರಾಷ್ಟ್ರದ ಮುಖಂಡರು ಅಸಹಕಾರವನ್ನು ಶುದ್ಧ ದೃಷ್ಟಿಯಿಂದ ನೋಡಲು ಶಕ್ತರಾಗಲಿಲ್ಲ.

ಚೆನ್ನಾಗಿ ವಿಚಾರಮಾಡಿದರೆ ಮಹಾರಾಷ್ಟ್ರದ ಲಕ್ಷವು ಅಸಹಕಾರಿತೆಯ ಮೇಲೆಯೇ ಉಂಟೆಂದು ಕಂಡುಬರುತ್ತದೆ. ಮಹಾರಾಷ್ಟ್ರದ ಜನರು ಸಾದಾ, ಧರ್ಮನಿಷ್ಠ ಮತ್ತು ಸ್ವಲ್ಪ ಸಿಟ್ಟಿನವರು ಇರುವರು. ಬ್ರಿಟಿಶರ ರಾಜನೀತಿ ಮತ್ತು ಅವರ ಕಾಯಿದೆಗಳ ವಿಷಯಕ್ಕೆ ಅವರ ವಿಶ್ವಾಸವು ಎಂದಿನಿಂದಲೂ ಇಲ್ಲ. ರಾಜಕಾರಣಕ್ಕಿಂತಲೂ ಲೋಕಜಾಗೃತಿಯಲ್ಲಿಯೇ ಮಹಾರಾಷ್ಟ್ರವು ಪ್ರಸಿದ್ಧಿಗೆ ಬಂದಿದೆ. ಆದರೆ ಅಸಹಕಾರ ಚಳವಳಿಯು ಅಸ್ತಿತ್ವದಲ್ಲಿ ಬಂದಕೂಡಲೇ ಮಹಾರಾಷ್ಟ್ರದ ಮುಖಂಡರ ಬುದ್ಧಿವಾದವೇ ಎಡವಟ್ಟಬಂದಿದೆ. ಆದರೂ ಆ ಜನರು ಶ್ರೇಷ್ಠರಿರುವರು. ಒಂದು ರೀತಿಯಿಂದ ರಾಷ್ಟ್ರೀಯ ಸಭೆಯ ಬೆಂಬಲವಾದರೂ ತಮಗೆ ದೊರೆಯುವದೆಂದೂ ಕಾಯದೇ ಕೌನ್ಸಿಲಗಳಲ್ಲಿ ತಪಶ್ಚರ್ಯವನ್ನು ಮಾಡುವ ಬಯಕೆಯು ಪೂರ್ಣವಾಗುವದೆಂದೂ ಅವರಿಗೆ ಅನಿಸಿತ್ತು. ಆದರೆ ಯಾವಾಗ್ಗೆ ಅವರಿಗೆ ಇವೆರಡೂ ಕಾರ್ಯಗಳು ಏಕ [illegible]ಲವಲ್ಲಿಯೇ ಕೈಗೂಡುವದು ಅಸಂಭವವೆಂದು ಕಂಡುಬಂದಿತೋ, ಆವಾಗ್ಗೆ ಅವರು ಕಾಯದೇ ಕೌನ್ಸಿಲಗಳ ಗೊಡವಿಗೆ ಹೋಗದೇ ರಾಷ್ಟ್ರೀಯ ಸಭೆಯ ಆಜ್ಞೆಯನ್ನು ಶಿರಸಾವಹಿಸಿ, ಅಸಹಕಾರ ಚಳವಳಿಯಲ್ಲಿ ಮಿಳಿತರಾದರು. ಆದರೆ ಕೌನ್ಸಿಲಗಳ ಬಹಿಷ್ಕಾರವನ್ನು ಭಕ್ತಿಪೂರ್ವಕವಾಗಿ ಮಾತ್ರ ಮಾಡಲಿಲ್ಲ. ಮತ್ತು ಶ್ರದ್ಧೆಯಿಲ್ಲದೆ ಮಾಡಿದ ಕಾರ್ಯವು ಕೈಗೂಡಲಾರದೆಂದು ಸನಾತನ ಸಿದ್ಧಾಂತವಿದೆ.

ಮಹಾರಾಷ್ಟ್ರದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ವಾದವು ಕಡಿಮೆಯಾಗಲಿಕ್ಕೆ ಕಾಯದೇ ಕೌನ್ಸಿಲಗಳ ಬಹಿಷ್ಕಾರವು ಬಹಳ ರೀತಿಯಿಂದ ಕಾರಣವಾಗಿದೆ. ಮದ್ಯಪಾನ ನಿಷೇಧ ಮತ್ತು ಖಾದಿಯ ಪ್ರಸಾರಗಳಿಂದ ಬ್ರಾಹ್ಮಣ ದೇಶಸೇವಕರು ಬ್ರಾಹ್ಮಣೇತರರಿಗೆ ಬಹ್ವಂಶದಿಂದ ಉಪಯೋಗಬೀಳಹತ್ತಿ, ಪರರಿಗೆ ಕಲ್ಯಾಣ ಮಾಡುವ ಬುದ್ಧಿಯಾದರೂ ಬ್ರಾಹ್ಮಣರಲ್ಲಿ ಜನಿಸಿತು. ಆದರೆ ಸರಕಾರದವರು ದಬ್ಬಾಳಿಯನ್ನು, ಕೌನ್ಸಿಲದ ಸಭಾಸದರ ಅನುಮತಿಯಿಂದಲೇ ಪ್ರಾರಂಭಮಾಡಿದ ಕೂಡಲೆ ಕೌನ್ಸಿಲಗಳ ಲಾಲಸೆಯುಳ್ಳ ಮಹಾರಾಷ್ಟ್ರೀಯರ ಹೃದಯವು ಸಂತಪ್ತವಾಯಿತು. ಈ ವೇಳೆಗೆ ನಾವು ಕೌನ್ಸಿಲಗಳಲ್ಲಿದ್ದರೆ, ಸರಕಾರದ ಈ ಅತ್ಯಾಚಾರವನ್ನು ಎಂದಿಗೂ ಸುರುವುಮಾಡಗೊಡುತ್ತಿದ್ದಿಲ್ಲ, ಹಾಗೂ ಅವರ ವಿರುದ್ಧ ಹೋರಾಡಿ ಈ ದಬ್ಬಾಳಿಕೆಯ ಅಬ್ಬರವು ಎಲ್ಲ ಜಗತ್ತಿಗೂ ತಿಳಿಯುವಂತೆ ಡಂಗುರವನ್ನು ಸಾರುತ್ತಿದ್ದೆವು, ಎಂದು ಮಹಾರಾಷ್ಟ್ರೀಯರ ಮತವು. ಮಹಾತ್ಮರ ಕಾರಾಗೃಹ ವಾಸದಿಂದಂತೂ ಅವರ ಹೃದಯವು ಹೆಚ್ಚುಹೆಚ್ಚು ಭಗ್ನವಾಗಹತ್ತಿದೆ. ಮತ್ತು ಇದರಿಂದಲೇ ಅಸಹಕಾರ ಚಳವಳಿಯ ವಿಚಾರವು ಪುನಃ ಆಗಬೇಕೆಂದು ಅವರು ಅನ್ನಹತ್ತಿರುವರು

ಈ ಪ್ರಕಾರ ಮಹಾರಾಷ್ಟ್ರೀಯ ಪುಢಾರಿಗಳ ಸ್ಥಿತಿಯು. ಆದರೆ ಸಾಮಾನ್ಯ ಜನರು ಮಾತ್ರ ಈ ಪ್ರಕಾರವಾಗಿ ಸಂತಪ್ತರಾಗಿರುವದಿಲ್ಲ. ಎಲ್ಲಿಯವರೆಗೆ ಮುಖಂಡರೆಂದೆನಿಸಿಕೊಳ್ಳುವವರು ರಾಷ್ಟ್ರೀಯ ಸಭೆಗೆ ಮರ್ಯಾದೆಯನ್ನು ಕೊಟ್ಟು, ಅಸಹಕಾರ ಚಳವಳಿಯನ್ನು ಶಿರಸಾವಹಿಸುವರೋ, ಅಲ್ಲಿಯವರೆಗೆ ಮಾತ್ರ ಜನರು ಅವರಿಗೆ ಉತ್ತಮರೆಂದು ಭಾವಿಸಿ, ಧೈರ್ಯದಿಂದ ವರ್ತಿಸಹತ್ತುತ್ತಾರೆ. ಜನರಿಗಂತೂ ಅಸಹಕಾರಿತೆಯ ಮೇಲೆ ಪ್ರೀತಿ ಬಹಳ. ಖಾದಿಯ ಸಂದೇಶವಂತೂ ಅವರ ಮನಸ್ಸಿಗೆ ಸಂಪೂರ್ಣವಾಗಿ ಬಂದಿದೆ. ಮಹಾತ್ಮರು ಜೇಲಿಗೆ ಹೋದದು ಆದ್ದರಿಂದ ಖಾದಿಯ ಪ್ರಸಾರವನ್ನು ಹೆಚ್ಚಿಗೆ ಮಾಡತಕ್ಕದ್ದೆಂಬ ಅರಿವು ಅವರಿಗೆ ಹುಟ್ಟಿದೆ. ಆದರೆ ಮುಖಂಡರಿಗೆ ಮಾತ್ರ ಇನ್ನೂ ಕಾಯಿದೆಕೌನ್ಸಿಲಗಳಲ್ಲಿಯ ಲೋಭವು ನಷ್ಟವಾಗಲೊಲ್ಲದು.

ಲೋಕಮಾನ್ಯರಲ್ಲಿ ತೇಜಸ್ಸು ಮತ್ತು ವ್ಯವಹಾರ ದಕ್ಷತೆಗಳ ಮಿಶ್ರಣವು ಅಲೌಕಿಕವಾದದ್ದಿತ್ತು. ಅವುಗಳಲ್ಲಿಯ ಮೊದಲನೇ ಗುಣವು ಅವರ ಶಿಷ್ಯರಾದ ಶ್ರೀ. ಖಾಡಿಲಕರರಲ್ಲಿಯೂ ಎರಡನೆಯದು ಶ್ರೀ. ಕೇಳಕರರಲ್ಲಿಯೂ ಸಮಾವಿಷ್ಟವಾಗಿವೆ. ಕಟ್ಟಕಡೆಗೆ ಮಾತ್ರ ಈ ಚಳವಳಿಯಿಂದ ಇವರಿಬ್ಬರೂ ಭಿನ್ನರಾಗಿರುತ್ತಾರೆ. ಹಾಗೂ ಟಿಳಕ ಮಹಾವಿದ್ಯಾಲಯದ ಕುಲಗುರುಗಳಾದ ವಿದ್ವಾನ ಚಿಂತಾಮಣರಾವ ವೈದ್ಯರವರು ಅಸಹಕಾರಿಗಳಿದ್ದು, ಶ್ರೀ. ಕೆಳಕರರ ವಿರುದ್ಧವಿದ್ದ ತಮ್ಮ ಮತವನ್ನು ಗುಪ್ತವಾಗಿಟ್ಟುಕೊಳ್ಳುವದು ಅವರಿಂದಾಗಲಿಲ್ಲ.

ಒಂದು ಕಾಲಕ್ಕೆ ಲೋಕಮಾನ್ಯರ ಸಹಜೋಡಿಯಾಗಿ ನಿಂತು ಕೆಲಸ ಮಾಡಿದ ಶ್ರೀ. ಶಿವರಾಮಪಂತ ಪರಾಂಜಪೆಯವರಾದರೂ ರಾಷ್ಟ್ರೀಯ ಸಭೆಯ ಕಾರ್ಯಕ್ರಮಕ್ಕೆ ಸಂಪೂರ್ಣವಾಗಿ ಒಪ್ಪಿ, ಅದರಲ್ಲಿ ಏನೂ ಹೆಚ್ಚುಕಡಿಮೆ ಮಾಡಕೂಡದೆಂಬ ಅಭಿಪ್ರಾಯದವರಿರುತ್ತಾರೆ.

ಹಾಗೂ ಯಾವ ಪ್ರಕಾರ ಮಹಾರಾಷ್ಟ್ರವು ಲೋಕಮಾನ್ಯರದೋ ಅದೇ ಪ್ರಕಾರ ಕರ್ನಾಟಕವಾದರೂ ಅವರದೇ ಆಗಿರುತ್ತದೆ. ಕರ್ನಾಟಕದ ಮುಖಂಡರಾದರೂ ಲೋಕಮಾನ್ಯರ ಶಿಷ್ಯರೆಂದೆನಿಸಿಕೊಳ್ಳುವದರಲ್ಲಿ ಗೌರವವನ್ನು ತಾಳುತ್ತಾರೆ. ಶ್ರೀ. ಗಂಗಾಧರರಾವ ದೇಶಪಾಂಡೆ ಹಾಗೂ ಶ್ರೀ. ಶ್ರೀನಿವಾಸರಾವ ಕೌಜಲಗಿಯವರು ಉಜ್ವಲ ಅಸಹಕಾರಿಗಳಿದ್ದಾರೆ. ಶ್ರೀ. ದೇಶಪಾಂಡೆಯವರು ಈಗ ತುರಂಗದಲ್ಲಿರುವರು; ಶ್ರೀ ಕೌಜಲಗಿಯವರು ತಮ್ಮ ಪ್ರಾಂತವನ್ನು ಪೂರ್ಣ ಜಾಗೃತಿಗೊಳಿಸಿ, ಅಸಹಕಾರ ತತ್ವವನ್ನು ಪ್ರತಿಯೊಂದು ಮನೆಗೆ ಮುಟ್ಟಿಸುವದರ ಸಲುವಾಗಿ ಅಖಂಡ ಪ್ರಯತ್ನ ಮಾಡಹತ್ತಿರುವರು.

ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತಗಳ ಸ್ಥಿತಿಯು ಈಪ್ರಕಾರದ್ದಿರುವದು. ಆದರೆ ಕೆಲವು ದಿವಸಗಳ ಹಿಂದೆ ಶ್ರೀ. ಖಾಡೀಲಕರರ ಅಧ್ಯಕ್ಷತೆಯ ಕೆಳಗೆ ಮಹಾರಾಷ್ಟ್ರ ಪ್ರಾಂತಿಕ ಪರಿಷದವು ಕೂಡಿದಾಗ್ಗೆ ಶ್ರೀ. ಕೇಳಕರರು ಅಸಹಕಾರದ ಕಾರ್ಯಕ್ರಮದಬಗ್ಗೆ ಪುನಃ ವಿಚಾರವಾಗಬೇಕೆಂಬ ಠರಾವವನ್ನು ತರಲು ಶಕ್ತರಾದರು. ಇದರಿಂದ ಅವರ ಕಾರ್ಯಕುಶಲತೆಯು ವ್ಯಕ್ತವಾಗಿ, ಜನರು ಅವರ ಸಂಗಡ ಎಷ್ಟು ವಿಶ್ವಾಸದಿಂದ ವರ್ತಿಸುತ್ತಾರೆಂಬುವದು ಗೊತ್ತಾಗುವದು.

ಆದರೆ ಇದರಿಂದ ಮಹಾರಾಷ್ಟ್ರದವರ ವಿಶ್ವಾಸವು ಮಹಾತ್ಮರ ಮೇಲೆ ಇಲ್ಲದೆ, ಕಾಯದೇ ಕೌನ್ಸಿಲಗಳ ಮೇಲೆಯೇ ಉಂಟೆಂದು ತಿಳಿದು ಕೊಳ್ಳಲು ಸ್ವಲ್ಪಾದರೂ ಅವಕಾಶವಿಲ್ಲ. ಪೇಣದ ಪರಿಷದವು ಮುಗಿಯಿತೋ ಇಲ್ಲವೋ, ಅಷ್ಟರಲ್ಲಿಯೇ ಲೋಕಮಾನ್ಯರ ಜನ್ಮಸ್ಥಾನವಾದ ರತ್ನಾಗಿರಿ ಜಿಲ್ಹೆಯ ಪರಿಷದವು ಮಾಲವಣದಲ್ಲಿ ಕೂಡಿ, ಅದರಲ್ಲಿ ಅಹ್ಮದಾಬಾದ ಸಭೆಯ ಮೊದಲನೇ ಠರಾವು, ಬಾರಡೋಲಿಯಲ್ಲಿಯ ವಿಧಾಯಕ ಕಾರ್ಯಕ್ರಮವು, ಮತ್ತು ದಿಲ್ಲಿಯಲ್ಲಿ ಆದ ಹೆಚ್ಚು ಕಡಿಮೆ, ಇವುಗಳ ಮೇಲೆ ಯಾವ ಸಿದ್ಧಾಂತದ ತತ್ವವು ಅವಲಂಬಿಸಿರುವದೋ, ಅದು ಎಲ್ಲ ರೀತಿಯಿಂದಲೂ ನಮಗೆ ಮಾನ್ಯವಾದದ್ದೆಂಬ ಠರಾವು ಸರ್ವಾನುಮತದಿಂದ ಪಾಸಾಗಿರುತ್ತದೆ

ಜಿಲ್ಲಾ ಸಭೆಯವರಂತೂ ಇದಕ್ಕಿಂತಲೂ ಮುಂದೆಹೋಗಿರುತ್ತಾರೆ. ಅಸಹಕಾರ ಚಳವಳಿಯಲ್ಲಿ ಬದಲಾವಣೆ ಆದದ್ದನ್ನು ನೋಡಲು ಸಹ ನಮ್ಮ ಜಿಲ್ಹೆಯು ಇಚ್ಛಿಸುವದಿಲ್ಲವೆಂದು ಅವರು ಅನ್ನುವರು. ಈ ಪರಿಷತ್ತಿನ ಅಧ್ಯಕ್ಷರು ಶ್ರೀ. ಕೌಜಲಗಿಯವರಿದ್ದರು. ಶ್ರೀ. ಚಿಂತಾಮಣರಾವ ವೈದ್ಯ ಹಾಗೂ ಸೊಲ್ಲಾಪೂರದ ಶ್ರೀ. ಸಾಮಂತರವರಾದರೂ ಸಭೆಗೆ ದಯಮಾಡಿಸಿದ್ದರು. ಪೇಣದಲ್ಲಿ ಯಾವ ಪ್ರಕಾರ ಅಸಹಕಾರ ಚಳವಳಿಯಲ್ಲಿ ಅಶ್ರದ್ಧೆಯು ಕಂಡು ಬಂದಿತೋ; ಅದೇ ಪ್ರಕಾರ ಇಲ್ಲಿಯೂ ವರೂ ಪ್ರಯತ್ನ ಮಾಡಲ್ಪಟ್ಟಿತು. ಆದರೆ ಜನಸಮ್ಮತಿಯು ಸಿಗಲಿಲ್ಲ. ಅಸಹಕಾರಚಳವಳಿಯನ್ನು ಎಷ್ಟು ಪಾಲಿನಿಂದ ನಾವು ಆಚರಿಸುತ್ತ ಬಂದಿರುವೆವೋ ಅಷ್ಟು ನಮಗೆ ಜಯವು ಸಿಕ್ಕದೆ ಎಂದು ನಮ್ಮ ಕಾರ್ಯವಾಹಕರಿಗೆ ತಿಳಿದು ಹೋಗಿದೆ. ಹಾಗೂ ಪೂರ್ಣ ಸ್ವರಾಜ್ಯವು ಪ್ರಾಪ್ತವಾಗದಿದ್ದದ್ದಕ್ಕೆ, ಅಸಹಕಾರಿತೆಯ ಯೋಜನೆಯಲ್ಲಿ ದೋಷವಿರದೆ, ನಾವು ಅದನ್ನು ಆಚರಣೆಯಲ್ಲಿ ತರುವದರಲ್ಲಿ ತೋರಿಸಿದ ನಿರುತ್ಸಾಹವೇ ಕಾರಣವಾಗಿದೆ. ಮಹಾತ್ಮರು ಕಾರಾಗೃಹಕ್ಕೆ ತೆರಳಿದರೆಂದು ದುಃಖಮಾಡುತ್ತ ಕೂಡದೆ, ಅವರ ಅಭಿನಂದನವನ್ನು ಮಾಡಿ, ನಾವು ಹೆಚ್ಚು ಕಾರ್ಯದಕ್ಷರಾಗಿ ಕೆಲಸಮಾಡತಕ್ಕದ್ದೆಂಬ ಠರಾವಸಾದರೂ, ಮಾಲವಣ ಪರಿಷತ್ತಿನಲ್ಲಿ ಪಾಸಾಯಿತು.

ಒಟ್ಟಿನಮೇಲೆ ಈ ಪರಿಷತ್ತಿನಿಂದ, ಮಹಾರಾಷ್ಟ್ರವು ಅಖಿಲ ಹಿಂದುಸ್ಥಾನದಿಂದ ಭಿನ್ನವಾಗಿರುವದೆಂದು ಗೊತ್ತಾಗುವದು. ಅಸಹಕಾರಿತೆಯ ಯಾವದೇ ಅಂಗದಲ್ಲಿ ಆ ಜನರ ಭಿನ್ನಾಭಿಪ್ರಾಯವಿಲ್ಲ. ಜನರಲ್ಲಿ ಕಾಯದೇ ಕೌನ್ಸಿಲಗಳಲ್ಲಿ ಸೇರುವದು ಅಥವಾ ಆ ಸಭೆಯಲ್ಲಿ ತಮ್ಮ ಪ್ರತಿನಿಧಿಗಳನ್ನು ಕಳಿಸಲಿಕ್ಕೆ ಸ್ವಲ್ಪಾದರೂ ಹವ್ಯಾಸವಿಲ್ಲ. ಹೀಗಿದ್ದರೂ ಪೇಣದ ಪರಿಷತ್ತನ್ನೆ ಮಹಾರಾಷ್ಟ್ರದ ಮತವೆಂದು ತಿಳಿದು, ಅವರಲ್ಲಿ ಅಶ್ರದ್ಧೆಯ ಆರೋಪವನ್ನು ಹೊರಿಸಲಿಕ್ಕೆ ದೇಶದಲ್ಲಿ ಯಾವ ಸಬಲ ಕಾರಣಗಳುಂಟು?

ಮಹಾರಾಷ್ಟ್ರೀಯರು ತಮ್ಮ ಪುಢಾರಿಗಳ ಮೇಲೆ ದೋಷ ಕೊಡುವದಕ್ಕಿಂತ ಅಸಹಕಾರದ ಕಾರ್ಯಕ್ರಮವನ್ನು ಪೂರ್ಣ ರೀತಿಯಿಂದ ಯಶಸ್ವಿಯಾಗಿ ಮಾಡುವದಕ್ಕಾಗಿಯೇ ಮುಂದೆ ಬಂದು, ಹಿಂದುಸ್ಥಾನಕ್ಕೆ ಮಹಾರಾಷ್ಟ್ರವು ಮಹಾರಾಷ್ಟ್ರವೇ ಆಗಿರುವದೆಂದು ಸಿದ್ಧಮಾಡಿತೋರಿಸುವರೆಂದು ನನಗೆ ಸಂಪೂರ್ಣ ನಂಬಿಗೆಯುಂಟು. ಮಹಾರಾಷ್ಟ್ರವು ಸ್ವರಾಜ್ಯ ಯುದ್ಧದಲ್ಲಿ ಎಂದಿಗೂ ಹಿಂದೆ ಬಿದ್ದಿಲ್ಲ. ಇಂದಿನ ವರೆಗೆ ಮಹಾರಾಷ್ಟ್ರವು ಮುಂದಿನ ಭಾಗದಲ್ಲಿಯೇ ಇರುವದು. ಮತ್ತು ನಾಗಪೂರದಲ್ಲಿಯಾದರೂ ಜನಮತವು ಮೇಲಿನಂತೆಯೇ ಜಾಹೀರವಾಗಿರುವದು. ಇದರ ಮೇಲಿಂದ ಅಲ್ಲಿಯ ಪುಢಾರಿಗಳು ಲೋಕಮತವನ್ನನುಸರಿಸಿ, ಕೌನ್ಸಿಲಗಳ ಹೊರಗೆ ಇದ್ದು, ದೇಶ ಸೇವೆಯನ್ನು ಮಾಡುವದರಲ್ಲಿಯೇ ತಮ್ಮ ಸಂತೋಷವನ್ನು ತಿಳಿಯುವರೆಂದು ಅನಿಸಲಿಕ್ಕೆ ಬರುವಂತಿದೆ.

ಯಾರಿಗೆ ಕಾಯದೆ ಕೌನ್ಸಿಲಗಳಿಗೆಯೇ ಹೋಗಿ ತಮ್ಮ ಶಕ್ತಿಯ ಮತ್ತು ದೇಶಭಕ್ತಿಯ ಉಪಯೋಗ ಮಾಡಿಕೊಳ್ಳುವದು ಯೋಗ್ಯವೆಂದು ಅನಿಸುವದೋ, ಅವರು ಕಾಯದೇ ಕೌನ್ಸಿಲಗಳಲ್ಲಿ ಸೇರಬೇಕು. ಆದರೆ ಅವರು ದೇಶ ಅಥವಾ ರಾಷ್ಟ್ರೀಯ ಸಭೆಯ ಹೆಸರಿನಿಂದ ಮಾತ್ರ ಕೌನ್ಸಿಲಗಳಲ್ಲಿ ಹೋಗಬಾರದು. ಅವರು ತಮ್ಮ ಅಶ್ರದ್ಧೆಗೆ, ಜನಮತವನ್ನು ಹುಡುಕುವದು ವ್ಯರ್ಥವಾದದ್ದೇಸರಿ!

ಇಂಥವರು ಯಾರಾದರೂ ಕೌನ್ಸಿಲಗಳಲ್ಲಿ ಹೋದರೆ ಜನರು ಅವರ ಅಪಮಾನವನ್ನು ಮಾಡಬಾರದು. ಅವರ ಪ್ರಾಮಾಣಿಕತನದ ವಿಷಯವಾಗಿ ಜನರಲ್ಲಿ ಸಂಶಯ ಬರುವ ಕಾರಣವಿಲ್ಲ. ಅವರ ಉಜ್ವಲ ದೇಶಭಕ್ತಿಯ ಸ್ತುತಿಯನ್ನೇ ಜನರು ಯಾವಾಗಲೂ ಮಾಡುವರು. ಮತ್ತು ಅವರ ವಿಷಯವಾಗಿ ನಮ್ಮಲ್ಲಿ ಆದರ ಬುದ್ಧಿಯು ಕಡಿಮೆ ಆಗಲಾರದು, ಯಾಕಂದರೆ ರಾಷ್ಟ್ರೀಯಸಭೆಯು ಕಾಯದೇಕೌನ್ಸಿಲಗಳಲ್ಲಿ ಹೋಗಬೇಕೆಂಬ ಠರಾವು ಪಾಸುಮಾಡಿದ್ದರೆ, ನಾವು ಅವರನ್ನೇ ಆರಿಸುತ್ತಿದ್ದೆವು ಆದರೆ ಕಾಯದೇಕೌನ್ಸಿಲಗಳಲ್ಲಿ ಹೋಗುವ ಜನರು ಈಗ ಮಾತ್ರ ನಮ್ಮ ಪ್ರತಿನಿಧಿಗಳಲ್ಲ. ಯಾಕಂದರೆ ನಾವು ಕೌನ್ಸಿಲಗಳಿಗೆ ಬಹಿಷ್ಕಾರವನ್ನು ಹಾಕಿದ್ದೇವೆ.

( ನವಜೀವನ. ) ( ಕಾಲೇಲಕರ. )

---

ಆರುತಿಂಗಳ ವರ್ಗಣೀದಾರರಿಗೆ

**ಸೂಚನೆಯು**

ಕನ್ನಡ ನವಜೀವನದ ಪ್ರಾರಂಭದಿಂದ. ಆರುತಿಂಗಳ ಮಟ್ಟಿಗೆ ಮಾತ್ರ ವರ್ಗಣೀದಾರರಾದವರ ಹಣವು ಒಂದೆರಡು ವಾರಗಳಲ್ಲಿಯೇ ಮುಟ್ಟುವದು. ಅದ್ದರಿಂದ ಆ ಚಂದಾದಾರರು ಇನ್ನೂ ವರ್ಗಣೀದಾರರಾಗಿ ಉಳಿದು, ತಮ್ಮ ವರ್ಗಣಿ ಹಣವನ್ನು ( ಆರುತಿಂಗಳ ರೂಪಾಯಿಗಳನ್ನು ) ಅದಷ್ಟು ಶೀಘ್ರ ಮನಿಆರ್ಡರು ಮಾಡಿ ಕಳುಹಿಸಬೇಕೆಂದು ಪ್ರಾರ್ಥನೆಯು.

ವ್ಯವಸ್ಥಾಪಕ.

# ಟಿಪ್ಪಣಿಗಳು.

## ಮಹಾತ್ಮರ ಸುಪುತ್ರರು.

ಮಹಾತ್ಮರ ಚಿರಂಜೀವರಾದ ದೇವೀದಾಸ ಗಾಂಧಿಯವರಿಗೆ ಕ್ರಿಮಿನಲ್ ಅಮೆಂಡಮೆಂಡಮೆಂಟ ಆಕ್ಟಿನನ್ವಯ ೧೮ ತಿಂಗಳ ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿತು. ಇವರು ತೀರ ಚಿಕ್ಕ ವಯಸ್ಸಿನವರು. ಇಷ್ಟು ತರುಣರಿರುವಾಗಲೇ ಇಂಡಿಪೆಂಡೆಂಟ ಎಂಬ ಇಂಗ್ಲಿಷ ದೈನಿಕ ಪತ್ರದ ಸಂಪಾದಕತ್ವವನ್ನು ವಹಿಸಿ ಆ ಕಾರ್ಯವನ್ನು ಒಳ್ಳೇ ಉತ್ಸಾಹದಿಂದ ಸಾಗಿಸಿದ್ದಲ್ಲದೆ ಉತ್ತಮ ಸಂಪಾದಕರೆಂದು ಹೆಸರಾಗಿರುವರು. ಮಹಾತ್ಮರು ಕಳೆದ ವರ್ಷ ಮೇ ತಿಂಗಳಲ್ಲಿ ಕರ್ನಾಟಕಕ್ಕೆ ಬಂದಾಗ ಇವರು ತಮ್ಮ ದರ್ಶನ ಲಾಭವನ್ನು ನಮ್ಮ ಕರ್ನಾಟಕಸ್ಥರಿಗೆ ಕೊಟ್ಟಿರುವರು. ಆಗ ಇವರ ಪರಿಚಯವು ನಮಗೆ ಆಗಿದೆ. ಇವರು ತಂದೆಯಂತೆ ಶಾಂತ ಮತ್ತು ಸರಳ ಸ್ವಭಾವದವರಿರುವರು. ಸ್ವಾವಲಂಬಿತನವು ಇವರ ಹುಟ್ಟುಗುಣವೋ ಏನೋ! ದಿನಾಲು ತಮ್ಮ ಬಟ್ಟೆಗಳನ್ನು ತಾವಾಗಿಯೇ ಒಗೆದು ಸ್ವಚ್ಛಮಾಡಿಕೊಳ್ಳುವರೆಂಬದೊಂದರ ಮೇಲಿಂದಲೇ ಇದು ವ್ಯಕ್ತವಾಗುವಂತಿದೆ. ದರಿದ್ರರ ಮೇಲೆ ಇವರ ಪ್ರೀತಿಯು ಬಹಳ. ಇಂಥ ಚಿಕ್ಕ ವಯಸ್ಸಿನಲ್ಲಿ ಕೂಡ ಇವರು ತೋರಿಸಿದ ಧೈರ್ಯವು ವರ್ಣನೀಯವಾಗಿದೆ. ಖಟ್ಲೆಯು ನಡೆವಾಗ ತಾವು ಅಪರಾಧಿಗಳಿರುವೆವೆಂದು ತಮ್ಮ ತಂದೆಯಂತೆ ಆಗಲೇ ಒಪ್ಪಿ ಶಿಕ್ಷೆಯನ್ನು ವಿಧಿಸಲಿಕ್ಕೆ ನ್ಯಾಯಾಧೀಶರಿಗೆ ಹೇಳುವದೆಂದರೆ ಸಾಮಾನ್ಯವೇ? ಇಂಥ ಸತ್ಪುತ್ರರನ್ನೆಲ್ಲ ಬಂದಿವಾಸದಲ್ಲಿರಿಸಿ ಪೀಡಿಸುವದರಿಂದ ಉಂಟಾಗುವ ಪಾಪದಿಂದಲೇ ಈ ದುಷ್ಟ ರಾಜ್ಯಪದ್ಧತಿಯ ನಾಶವು ನಿಶ್ಚಯವಾಗಿ ಬೇಗನೆ ಆಗುವದು. ಇರಲಿ, ಇಂಥ ಮಹನೀಯರ ಉದಾಹರಣೆಗಳನ್ನು ಚನ್ನಾಗಿ ಲಕ್ಷದಲ್ಲಿಟ್ಟುಕೊಂಡು, ನಮ್ಮ ಕರ್ನಾಟಕದ ತರುಣರು ದೇಶಸೇವೆಗಾಗಿ ಮುಂದೆ ಬರುವರೇ!

—ಸಂಪಾದಕ

× × × × × ×

## ದಬ್ಬಾಳಿಕೆಯ ಸತ್ರವು

(ಯಂಗ ಇಂಡಿಯಾ)

ನಮ್ಮ ಶಿಕ್ಷೆಯು, ಸಹನಶೀಲತೆ, ಮತ್ತು ಎಲ್ಲಕ್ಕೂ ಮಹತ್ವದ್ದೆಂದರೆ ನಮ್ಮ ನಿರ್ಣಯಶಕ್ತಿ ಇವುಗಳ ಪರೀಕ್ಷೆಯ ಸಮಯವಿದು. ನಾವು ವಿಧಾಯಕ ಕಾರ್ಯಕ್ರಮವನ್ನು ನೆರವೇರಿಸುವದರಿಂದ ಸುಸಂಘಟಿತರಾಗುವದರಲ್ಲಿ ಶಾಂತರೀತಿಯಿಂದ ತೊಡಗಿರುವಾಗ, ಸರಕಾರದವರು ಸಾರ್ವತ್ರಿಕವಾದ ದಬ್ಬಾಳಿಕೆಯ ಅಬ್ಬರದಲ್ಲಿ ತಮ್ಮ ಶಕ್ತಿಯ ಉಪಯೋಗವನ್ನು ಮಾಡುತ್ತಿರುವರು. ಹೀಗೆ ಮಾಡುವದರಲ್ಲಿ ಅವರ ಇಂಗಿತವು ಸ್ಪಷ್ಟವದೆ. ಚಳವಳಿಯನ್ನು ಮುರಿದಿಡಿಯುವದಕ್ಕೆ ಅವರು ಹರಿವೆಯಿಲ್ಲದೆ ಮಾಡುವ ಪ್ರಯತ್ನಗಳನ್ನೆಲ್ಲ ಮಲೆತಲ್ಲಿ ನಾವು ಶಾಂತ ರೀತಿಯಿಂದ ನಮ್ಮ ಕಾರ್ಯಕ್ರಮದಲ್ಲಿ ತೊಡಗಿರುವದರಿಂದ ಅವರ ಚಿತ್ತವು ವ್ಯತಿಪಸ್ತವಾಗಿರುತ್ತದೆ. [illegible] ಪೂರ್ವಸಿದ್ಧತೆಯು ಪೂರ್ಣವಾಗುವದಕ್ಕಿಂತ ಮೊದಲೇ ಸಾರ್ವತ್ರಿಕ ಯುದ್ಧವನ್ನು ಪ್ರಾರಂಭ ಮಾಡಬೇಕೆಂಬ ಉದ್ದೇಶದಿಂದ ನಮ್ಮನ್ನು ರೇಗಿಗೆಬ್ಬಿಸುವದಾಗಲಿ ಇಲ್ಲವೆ [illegible] ಕಾಳಗವನ್ನು ಪುನಃ ಪ್ರಾರಂಭಿಸಲಿಕ್ಕೆ ನಮ್ಮಲ್ಲಿ ಶಕ್ತಿಯು ಉಳಿಯಲಾರದಷ್ಟು ನಮ್ಮ ನೈತಿಕ ಬಲವನ್ನು ಕಡಿಮೆ ಮಾಡುವದಾಗಲಿ ಅವರ ಉದ್ದೇಶವಿರಬಹುದು! ಸಂಯುಕ್ತಪ್ರಾಂತದಲ್ಲಿಯೂ ಪಂಜಾಬದಲ್ಲಿಯೂ ನಡೆದ ಅಮಾನುಷ ದಬ್ಬಾಳಿಕೆಯು ಉದ್ದೇಶವಾದದ್ದೂ ಇದೇ. ನಾವು ನಮ್ಮ ತಲೆಯನ್ನು ಶಾಂತವಾಗಿಟ್ಟುಕೊಂಡು, ನಮ್ಮ ನಿಶ್ಚಿತವಾದ ಮಾರ್ಗವನ್ನು ಅನುಸರಿಸಿದರೆ, ನಾವು ಅವರ ಈ ದುಷ್ಟಪ್ರಯತ್ನಗಳನ್ನೆಲ್ಲ ಯಶಸ್ವೀರೀತಿಯಿಂದ ನಾಶಪಡಿಸುವೆವಲ್ಲದೆ ಸತ್ಯ ಹಾಗೂ ನ್ಯಾಯದ ಶಕ್ತಿಗಳು ಎಂದಿಗೂ ಜೋಗ್ಗಲಾರವೆಂದೂ ಕುಂದಲಾರವೆಂದೂ ಜಗತ್ತಿನ ನಿದರ್ಶನಕ್ಕೆ ತಂದುಕೊಡುವೆವು. ಸತ್ಯವನ್ನು ನಿಜವಾಗಿ ಅನುಸರಿಸುವದರಿಂದ ಎಂದೂ ದುಷ್ಪರಿಣಾಮಗಳಾಗುವದಿಲ್ಲ; ಮತ್ತು ಶಾಂತಮಯ ಅಸಹಕಾರಮಾರ್ಗಕ್ಕೆ ಅಂಟಿಕೊಳ್ಳುವ ಮಾತ್ರದಿಂದಲೇ, ನಮ್ಮ ಧ್ಯೇಯವನ್ನು—ಅದು ಸತ್ಯ ಮತ್ತು ನ್ಯಾಯವಿದ್ದದರಿಂದ—ನಾವು ಸಂಪಾದಿಸುವದರಲ್ಲಿ ಏನೂ ಸಂದೇಹವಿಲ್ಲ.

× * * * * *

## ಕರ್ನಾಟಕದ ವೃತ್ತಪತ್ರಗಳು ಎಲ್ಲಿವೆ?

ಕರ್ನಾಟಕದ ಧ್ವಜದಂಥ ಮಹತ್ವದ ವಿಷಯವನ್ನು ಯಾವ ವೃತ್ತಪತ್ರಗಳೂ ಚರ್ಚಿಸಕೊಳ್ಳವೆಂಬದನ್ನು ನೆನಿಸಿದರೆ ಕನ್ನಡ ನಾಡಿನಲ್ಲಿ ವೃತ್ತಪತ್ರಗಳು ಅವೆಯೋ ಇಲ್ಲವೋ ಎಂಬ ಬಗ್ಗೆ ಸಂಶಯವು ಬರುತ್ತದೆ. ಈ ಸಂಶಯದಿಂದ ನಮಗೆ ಬಹಳೇ ವ್ಯಥೆಯುಂಟಾಗಿದೆ. ಅಖಂಡ ಕರ್ನಾಟಕದ ಬಗ್ಗೆ ನಮ್ಮಲ್ಲಿ ಈಗ ಜಾಗೃತಿಯಾಗಿದೆಂದು ನಾವು ಆಗಾಗ್ಗೆ ಆನಂದಪಡುತ್ತಿದ್ದೆವು. ಆದರೆ ಈಗ ಆ ಆನಂದವನ್ನು ನಾವು ನಮ್ಮ ಕನಸಿನಲ್ಲಿ ಕಂಡಂತೆ ಭಾಸವಾಗುತ್ತದೆ. 'ಕರ್ನಾಟಕ(?)' ಎಂದು ಕೆಲ ಬಿನ್ನವಿಸಿದರೂ ಈ ವಿಷಯದ ಬಗ್ಗೆ ಚಕಾರ ಶಬ್ದವಾದರೂ ಕರ್ನಾಟಕದ ವೃತ್ತಪತ್ರಿಕೆಗಳಲ್ಲಿ ಹೊರಡದು! ಕಷ್ಟವು! ಬಹು ಕಷ್ಟವು!! ಹೀಗಿಯೇ ವೃತ್ತಪತ್ರಕಾರರು ಮೌನವನ್ನು ತಾಳಿದರೆ ಕರ್ನಾಟಕವು ಮುಂದೆ ಹೆಜ್ಜೆಯಿಡುವದು ಅಶಕ್ಯವೇ ಸರಿ. ಹೇಗಾದರೂ ಕರ್ನಾಟಕ ಮಾತೆಯ ಅನುಗ್ರಹದಿಂದ ನಮ್ಮ ನಾಡಿನ ಪತ್ರಿಕೆಗಳು ಎಚ್ಚರಿಯಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

---

# ಜಯ ಕರ್ನಾಟಕ!

## ಕರ್ನಾಟಕದ ಧ್ವಜದಬಗ್ಗೆ ಕನ್ನಡನವಜೀವನದ ಸೂಚನೆಯು

### ಸೂಚನೆ ನಂಬರ ೩.

ಅಖಿಲ ಭಾರತೀಯ ಧ್ವಜದಂತೆ - ಮೂರು ವರ್ಣಗಳಿಂದ ಯುಕ್ತವಾದ ಒಂದು ಧ್ವಜವನ್ನು ತೆಗೆಯಬೇಕು. ಆದರೆ ಕರ್ನಾಟಕದ ದ್ಯೋತಕವೆಂದು ತಿಳಿಯುವ ಕುರಿತು ಆ ಮೂರು ವರ್ಣಗಳ ಪಟ್ಟಿಗಳನ್ನು ವಕ್ರಾಕಾರವಾಗಿ ಅಂದರೆ ಮೂಲೆಯಿಂದ ಮೇಲೆ ಅನುಕ್ರಮವಾಗಿ ಎಳೆಯಬೇಕು. ಮೇಲ್ಭಾಗದ ಎಡಮೂಲೆಯಲ್ಲಿ ಸೂರ್ಯನ ಚಿತ್ರವನ್ನೂ ಕೆಳಭಾಗದ ಬಲಮೂಲೆಯಲ್ಲಿ ಚಂದ್ರನ ಚಿತ್ರವನ್ನೂ ತೆಗೆದು ಮಧ್ಯದಲ್ಲಿ ಗೋಮಾತೆಯ (ಆಕಳ) ಚಿತ್ರವನ್ನು ಬರೆಯಬೇಕು. ಮೇಲ್ಭಾಗದ ಬಲಮೂಲೆಯಲ್ಲಿ ಎರಡು ಖಡ್ಗಗಳನ್ನು ಕತ್ತರಿಯಾಗಿ ಇಟ್ಟು ಅವುಗಳ ಮಧ್ಯದಲ್ಲಿ ಕಿರೀಟವನ್ನು ಇರಿಸಬೇಕು. ಮತ್ತು ಕೆಳಭಾಗದ ಎಡಕ್ಕೆ ಕುಳಿತುಕೊಂಡ ಸಿಂಹದ ಚಿತ್ರವನ್ನು ತೆಗೆಯಬೇಕು. ಮತ್ತು ಮೇಲ್ಭಾಗದ ಮಧ್ಯದಲ್ಲಿ "ಜಯಕರ್ನಾಟಕ" ವೆಂದು ಕನ್ನಡ ಲಿಪಿಯಲ್ಲಿ ಬರೆಯಬೇಕು.

ವರ್ಣ:—ಬಿಳಿಯ ಪಟ್ಟಿಯಲ್ಲಿನ ಸೂರ್ಯನನ್ನು ಕೆಂಪು ವರ್ಣದಿಂದ ಮತ್ತು ಕೆಂಪು ಪಟ್ಟಿಯಲ್ಲಿದ್ದ ಚಂದ್ರನನ್ನು

ಬಿಳಿಯ ವರ್ಣದಿಂದ ಬರೆಯಬೇಕು ಆನೆಗಳು, ಸಿಂಹ, ಮೊದಲಾದವುಗಳು ಹಸರು ಪಟ್ಟಿಯಲ್ಲಿ ಬರುವದರಿಂದ ಯೋಗ್ಯವಾದ ಬಣ್ಣದಿಂದ ವರ್ಣಿಸಬೇಕು.

**ವಿವರಃ—** (೧) ಮೂರುವರ್ಣದಿಂದ ಶೋಭಿತವಾದ್ದರಿಂದ ಅಖಿಲಭಾರತಕ್ಕೆ ಒಳಪಟ್ಟಂತಾಯಿತು.

(೨) ಸೂರ್ಯನು ಹಿಂದುಗಳಿಗೂ ಚಂದ್ರನು ಮುಹಮ್ಮದೀಯರಿಗೂ ಪೂಜ್ಯರು

(೩) ಗೋಮಾತೆಯು ಬಸವೇಶ್ವರನ ತಾಯಿಯಾದ್ದರಿಂದಲೂ ಕರ್ನಾಟಕದ ಮುಖ್ಯ ಉದ್ಯೋಗವಾದ ಒಕ್ಕಲತನಕ್ಕೆ, ಆಧಾರಸ್ತಂಭಳಾದ್ದರಿಂದಲೂ ಪರಮ-ಪವಿತ್ರವಾದ್ದರಿಂದಲೂ ಸಕಲ ವರ್ಣದವರಿಗೆಲ್ಲ ಮಾನ್ಯಳು.

(೪) ಸಿಂಹವು ಬಹಳ ವೈಭವದಿಂದಲೂ ಅತಿಶಯ ಪರಾಕ್ರಮದಿಂದಲೂ ಆಳಿದ ಬಲ್ಲಾಳ ಅರಸರ ಧ್ವಜವು.

(೫) ಖಡ್ಗ ಕಿರೀಟವೆಂದರೆ ಕರ್ನಾಟಕದ ಎಲ್ಲ ರಾಜರು ತಮ್ಮ ರಾಜ್ಯವನ್ನು ಖಡ್ಗ ಬಲದಿಂದಲೇ ಗೆದ್ದರಲ್ಲದೆ ಮೋಸಗಾರಿಕೆಯಿಂದಲ್ಲ.

(೬) ಮತ್ತು ಕನ್ನಡಿಗರು ........................ ಸೂರ್ಯನಂತೆ ತೇಜಸ್ವಿಗಳೂ ಚಂದ್ರನಂತೆ ಶಾಂತರೂ ಆಕಳದಂತೆ ನಿರುಪದ್ರವಿಗಳೂ ಪರೋಪಕಾರಿಗಳೂ ಸಿಂಹನಂತೆ ಬಲಾಢ್ಯರೂ ಖಡ್ಗದಂತೆ ತೀಕ್ಷ್ಣಬುದ್ಧಿಯುಳ್ಳವರೂ ಎಂಬ ಅವರ ನೈಸರ್ಗಿಕ ಗುಣಗಳನ್ನು ವ್ಯಕ್ತಗೊಳಿಸಿದಂತಾಯ್ತು.

(೭) "ಜಯಕರ್ನಾಟಕ" ವೆಂದರೆ ಈ ಪ್ರಕಾರದ ಗುಣಗಳುಳ್ಳ ಪ್ರಶಾಂತರಾದ ಕನ್ನಡಿಗರಿಗೆ ಜಯಕಾರವಿರಲಿ ಎಂಬಾಯ್ತು.

(೮) ಈ ಪ್ರಕಾರದ ಧ್ವಜವು ಧ್ವಜನಿಯಾಮಕ ಕಮಿಟಿಯವರಿಗೆ ಯೋಗ್ಯವೆನಿಸಿದಲ್ಲಿ ಇದರ ಭಾವಪಟವನ್ನು ಬಣ್ಣದಿಂದ ತೆಗೆದು ಕಳಿಸುವೆವು. ಯೋಗ್ಯ ಸೂಚನೆಯು ಆದರಿಸಲ್ಪಡುವದು.

---

೧೭೭ ನೇ ಪಾನಿನಿಂದ ಮುಂದೆಸಾಗಿದ್ದು.

ಇಂಥ ಸದ್ಗುಣಿಯಾಗಿದ್ದರೆ ಲಕ್ಷ್ಮಪ್ಪನು ದರವಡೆ ಮಾಡುವಂಥ ಭಯಾನಕ ವೃತ್ತಿಯನ್ನು ಏಕೆ ಧರಿಸಿರುವನೋ ನಮಗೆ ತಿಳಿಯದು. ಶಾಂತವೃತ್ತಿಯಿಂದ ಸುಶೀಲನಾದ ನಾಗರಿಕನಾಗಿದ್ದರೆ ದೇಶಸೇವೆಯನ್ನು ಲಕ್ಷ್ಮಪ್ಪನು ಉತ್ಕೃಷ್ಟ ರೀತಿಯಿಂದ ಮಾಡಬಹುದಾಗಿತ್ತು. ಆದರೆ ನಮ್ಮ ದುರ್ದೈವದಿಂದ ಅವನು ಬೇರೆ ಮಾರ್ಗವನ್ನು ಹಿಡಿದಿರುವ ಈ ಲಕ್ಷ್ಮಪ್ಪನ ಕಥೆಯನ್ನು ಕೇಳಿದರೆ ನಮಗೆ ಹಿಂದಿನ ಕಾಲದ ಕಟ್ಟೀಚನ್ನ, ಸಾವಂತ, ಮೊದಲಾದವರ ನೆನಪಾಗುತ್ತದೆ.

ಈ ಲಕ್ಷ್ಮಪ್ಪನನ್ನು ಹಿಡಿಯುವದಕ್ಕಾಗಿ ಸಾಧಾರಣ ತಃ ಒಂದು ಒಂದೂ ವರೆ ತಿಂಗಳನಿಂದ ಸಾವಿರಗಟ್ಟಲೆ ಪೋಲೀಸರು ಅಲ್ಲಲ್ಲಿಗೆ ತಳವೂರಿ ನಿಂತಿರುವರು. ಕುದುರೆಯ ಸವಾರರೂ ಮೋಟಾರುಗಳೂ ದಿನಾಲು ಅವಕಾಶವಿಲ್ಲದೆ ಓಡಾಡುತ್ತಿರುವವು. ಪೊಲೀಸ ಇನ್‌ಸ್ಪೆಕ್ಟರ ಮೆ. ಪೋಲೀಸ ಸಾಹೇಬ ಮೊದಲಾದವರು ಬಾಗಲಕೋಟೆಯಲ್ಲಿಯೇ ಬಿಡಾರ ಹೊಡೆದಿರುವರು. ಆದರೂ ಕೂಡ ಲಕ್ಷ್ಮಪ್ಪನ ಸುಳುವು ಅವರಿಗೆ ಹತ್ತಲೊಲ್ಲದು. ಅಲ್ಲಲ್ಲಿ ದರವಡೆಗಳು ನಡೆದಿರುವವು. ಸಾವಿರಗಟ್ಟಲೆ ಪೋಲೀಸರು ತಿಂಗಳಗಟ್ಟಲೆ ಒಂದೆಡೆ ಕುಳಿ- [illegible] ನವರಿಗೆ ದೊರೆಯಲೊ-

ಲ್ಲನೆಂಬದನ್ನು ಕೇಳಿದರೆ ನಮ್ಮ ಸರಕಾರದ ಪೋಲೀಸರ ಬಗ್ಗೆ ನಮಗೆ ನಗೆ ಬರುತ್ತದೆ. ಸರಕಾರದ ಜಾಣತನವು ನಿಶ್ಚಯವಾಗಿ ಹೇಳಬೇಕಾದರೆ, ಇಂಥ ಸಮಯದಲ್ಲಿಯೇ ಹೊರಬೀಳಬೇಕು ಆದರೆ ಹೀಗೇನೂ ಆಗಲೊಲ್ಲದು. ಶಾಂತವೃತ್ತಿಯಿಂದ ದೇವರ ಹೊರ್ತಾಗಿ ಯಾರ ಸಹಾಯವಿಲ್ಲದೇ ಅಸಹಯೋಗವನ್ನು ಮಾಡುತ್ತಲಿರುವ ನಿರುಪದ್ರವೀ ದೇಶಭಕ್ತರನ್ನು ಹಿಡಿಯಲಿಕ್ಕೆ ಮಾತ್ರ ಸರಕಾರೀ ಪೋಲೀಸರು ಬಹು ಉತ್ಸುಕರಾಗಿರುತ್ತಾರೆ. ಪೇಟಾಗಿ ಅಸಹಯೋಗಿಗಳ ಮೇಲೆ ಗುಂಡು ಹಾರಿಸುವ ರಾಕ್ಷಸೀ ವೃತ್ತಿಯ ಫೌಜದಾರರಿಗೆ ಸರಕಾರದವರು ಪೋಲೀಸ ಪದಕವನ್ನು ಕೊಡಲು ಸಿದ್ಧರಾಗಿದ್ದಾರೆ. ಆದರೆ ಇಂಥ ಸಮಯದಲ್ಲಿ ತಮ್ಮ ಕರ್ತವ್ಯವನ್ನು ಮಾಡದೇ ಇದ್ದ ಪೋಲೀಸರನ್ನು ಸರಕಾರದವರು ಕೇಳುವದಿಲ್ಲ. ಸರಕಾರಕ್ಕೆ ಬಹು ಜಾಣನೆಂದು ಕಂಡು ಬಂದ ಆ ಸುಪ್ರಸಿದ್ಧ ಶಿವಲಿಂಗಪ್ಪನನ್ನೂ, ಮಾರ್ಕಡೆನ್ ಪೇಂಟರ ಸಾಹೇಬರನ್ನೂ ಸರಕಾರದವರು ಈಗ್ಗೆ ಲಕ್ಷ್ಮಪ್ಪನನ್ನು ಹಿಡಿಯಲಿಕ್ಕೆ ಏಕೆ ಕಳಿಸಬಾರದು? ಇಂಥ ಹೊತ್ತಿನಲ್ಲಿ ಶಿವಲಿಂಗಪ್ಪಾ ಮತ್ತು ಕಂಪನಿಯವರು ತಮ್ಮ ಜಾಣತನವನ್ನು ತೋರಿಸಲು ಸರಕಾರದವರು ಅನುಕೂಲ ಮಾಡಿಕೊಟ್ಟರೆ ಅವರ ನಿಜವಾದ ಬಣ್ಣವು ಹೊರಬೀಳುವದು.

ಹತ್ತೆಂಟು ಮಂದಿಯ ಪರಿವಾರದವನಾದ ಲಕ್ಷ್ಮಪ್ಪನಂಥ ದರವಡೇಖೋರನು ತಿಂಗಳಗಟ್ಟಲೆ ಸಾವಿರ ಜನ ಸರಕಾರೀ ಪೋಲೀಸರನ್ನು ತಡೆದು ನಿಂತಿರುವನೆಂಬ ಸಂಗತಿಯನ್ನು ಲಕ್ಷ್ಯಕ್ಕೆ ತಂದರೆ ನಮ್ಮ ಸರಕಾರದ ಬಲದ ಪರೀಕ್ಷೆಯು ತನಾಗಿಯೇ ಆಗುವದು. ಇಂಥ ಪೋಲೀಸರ ಗುಣಗೌರವವನ್ನು ಮಾಡುತ್ತ ಪೋಲೀಸ ಖಾತೆಗೆ ಹೆಚ್ಚು ದುಡ್ಡು ಬೇಕೆಂಬುವಾಗಿ ಮೊನ್ನೆ ಮೊನ್ನೆ ಮುಂಬಯಿ ಕೌನ್ಸಿಲ್ಲದಲ್ಲಿ ಬಲು ಉಬ್ಬಿನ ಮಾತುಗಳನ್ನಾಡಿದ ನಮ್ಮ ಎಗ್ಜೀಕ್ಯೂಟಿವ್ಹ ಕೌನ್ಸಿಲ್ಲರು ಈಗೆಲ್ಲಿ ಕುಳಿತುಕೊಂಡಿರುವರು? ಬೇಸಿಗೆಯ ಸಲುವಾಗಿ ಮಹಾಬಳೇಶ್ವರದ ತುದಿಯಲ್ಲಿ ಚಕ್ಕಂದದಿಂದ ಮೆರೆಯುವ ಆ ಕೌನ್ಸಿಲ್ಲರರಿಗೆ ಇದು ಗೊತ್ತಾಗುವ ಸಂಭವವಾದರೂ ಹೇಗೆ?

## ೫ ನೇ ಶ್ರೀಮದ್ವೀರಶೈವ ತರುಣರ ಸಮ್ಮೇಲನ ಬಾಗಲಕೋಟೆ

ವೀರಶೈವ ಬಾಂಧವರೇ ಮತ್ತು ಭಗಿನಿಯರೇ ಹೋದ ವರ್ಷ ಹುಬ್ಬಳ್ಳಿಯಲ್ಲಿ ಕೂಡಿದ ಸಮ್ಮೇಲನದಲ್ಲಿ ಮುಂದಿನ ವರ್ಷದ ೫ ನೇ ತರುಣರ ಸಮ್ಮೇಲನವನ್ನು ಇದೇ ಬಾಗಲಕೋಟೆಯಲ್ಲಿ ಕೂಡಿಸಬೇಕೆಂದು ನಿರ್ಧರವಾದ ಪ್ರಕಾರ ಇದೇ ಮೇ ತಿಂಗಳ ತಾ ೨೪ ಮತ್ತು ೨೫ ದಿವಸಗಳಲ್ಲಿ ಬಾಗಲಕೋಟೆಯಲ್ಲಿ ಜರಗುತ್ತದೆ, ಈ ಸಮ್ಮೇಲನಕ್ಕೆ ಹುಬ್ಬಳ್ಳಿಯ ಸುಪ್ರಸಿದ್ಧ ವಕೀಲರಾದ ಮ|| ರಾ|| ಸಿದ್ದಪ್ಪನವರು ಕಂಬಳಿ ಇವರು ಅಧ್ಯಕ್ಷಸ್ಥಾನವನ್ನು ವಹಿಸಲಿಕ್ಕೆ ಒಪ್ಪಿರುತ್ತಾರೆಂದು ತಿಳಿಸಲಿಕ್ಕೆ ಅತ್ಯಾನಂದವಾಗುತ್ತದೆ. ಆದ್ದರಿಂದ ತಾವೆಲ್ಲರೂ ತಪ್ಪದೆ ದಯಮಾಡಿಸಿ ತರುಣರಿಂದ ವಿಶೇಷ ಸಮಾಜಸೇವೆಯು ಜರಗುವಂತೆ ಮಾಡುವಿರೆಂದು ಪೂರಾ ನಂಬಿದ್ದೇವೆ.

ತಮ್ಮ ಸಮಾಜಸೇವಕರಾದ
ವೀರಪ್ಪಾ ಕಿಣಗಿ (ಜನರಲ್‌ಸೆಕ್ರೆಟರಿ.)
ಮುರಿಗೆಂದ್ರಪ್ಪಾ ಜಿಗಜಿನ್ನಿ,
[illegible] (ಸೆಕ್ರೆಟರಿಗಳು)
ಬಾಗಲಕೋಟೆ

# ಕನ್ನಡ ನವಜೀವನವು
## ವೇಳೆಗೆ ಸರಿಯಾಗಿ ಏಕೆ
## ಹೊರಡುವದಿಲ್ಲ ?

ಹೀಗೆ ಹೊರಡದಿರುವದಕ್ಕೆ ಎರಡು ಕಾರಣಗಳುಂಟು. ನಮ್ಮ ಮುದ್ರಾಮಂದಿರವು ತೀರ ಹೊಸದಿರುವದರಿಂದ ಎಲ್ಲ ಯಂತ್ರ ಸಾಮಾನುಗಳು ಇನ್ನೂ ಸಜ್ಜಾಗಿರದೇ ಇದ್ದದ್ದು ಒಂದುಕಾರಣವು. ನಮ್ಮ ಕಾರ್ಯಾಲಯವು ವಿಜಾಪುರದಿಂದ ಈಗ್ಗೆ ಸಂಪೂರ್ಣವಾಗಿ ಬಾಗಲಕೋಟೆಗೆ ಬಂದದ್ದರಿಂದ ನಾವು ಬಾಗಲಕೋಟೆಯಲ್ಲಿ ನವಜೀವನ ಸಂಚಿಕೆಗಳನ್ನು ಪೋಸ್ಟ ಮಾಡಲಿಕ್ಕೆ ಅಪ್ಪಣೆಯನ್ನು ಕೇಳಿದ್ದೇವೆ ಆದರೆ ಒಂದಿಲ್ಲೊಂದು ಕಾರಣದಿಂದ ಪೋಸ್ಟಿನಿಂದ ನಮಗೆ ಆ ಅಪ್ಪಣೆಯು ಈ ವರೆಗೆ ದೊರೆತಿಲ್ಲ. ಆದ್ದರಿಂದ ಬಾಗಲಕೋಟೆಯಲ್ಲಿ ನವಜೀವನವು ಪ್ರಸಿದ್ಧವಾದನಂತರ ಎಲ್ಲ ಸಂಚಿಕೆಗಳನ್ನು ಪೋಸ್ಟಮಾಡಲು ವಿಜಾಪುರಕ್ಕೆ ಕಳಿಸಬೇಕಾಗುತ್ತದೆ. ಈ ದ್ರವಿಡಪ್ರಾಣಾಯಾಮದಿಂದ ಸಂಚಿಕೆಗಳು ಚಂದಾದಾರರ ಕೈಸೇರಲು ತಡವಾಗುತ್ತದೆ. ಈ ಬಗೆಯ ಎರಡೂ ತೊಂದರೆಗಳು ದೂರಾಗಲು ಒಂದು ತಿಂಗಳಾದರೂ ಬೇಕಾಗಬಹುದು. ಅಲ್ಲಿಯವರೆಗೆ ಚಂದಾದಾರರು ನಮ್ಮನ್ನು ಕ್ಷಮಿಸಬೇಕಾಗಿ ವಿನಂತಿ ಇದೆ.

ವ್ಯವಸ್ಥಾಪಕ

---

### ಜಾಹಿರಾತಿನ ದರ.

ಕನ್ನಡ 'ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂಪಾಯಿ. ಜಾಹಿರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

### ಚಂದಾ ನಿರ್ಣಯ.

| | |
|---|---|
| ವಾರ್ಷಿಕ ವರ್ಗಣಿ ರೂ. | ೪—೦—೦ |
| ಆರು ತಿಂಗಳಿಗೆ ,, | ೨—೦—೦ |
| ಬಿಡಿ ಸಂಚಿಕೆ | ೦—೧—೩ |
| ಮಾದರಿ ಸಂಚಿಕೆ ಬೇಕಾದವರು | ೦—೧—೬ |

ತಿಕೀಟ ಕಳಿಸಬೇಕು.

---

ಏಜಂಟರು ಬೇಕು! ಏಜಂಟರು ಬೇಕು!

### ನಂಬರ ೧ ನೇ ನಿರ್ಮಲವಾದ
## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ [illegible] ನಂಬರ ೧ ನೇ [illegible] ನೀಲಗಿರಿ ತೈಲವು ಸಿಗುತ್ತದೆ ವ್ಯಾಪಾರಸ್ಥರಿಗೆ [illegible] [illegible] ತೈಲವು [illegible] [illegible] ೧ ಕ್ಕೆ ರೂಪಾಯಿ [illegible] ೧೦ [illegible] ವಿಶೇಷ [illegible]

ವಿಳಾಸ— ಬಿ. ಎ. ನೈ. ಕಂಪನಿ

ಮೊ. ಸೋಮನ್ನಾಪುರ.

ಜಿಲ್ಲಾ ಉತ್ತರ ಕಾನಡಾ

---

# ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ.

ಮೂರು ತಿಂಗಳಿಗೊಂದಾವರ್ತಿ ಪ್ರಕಟವಾಗುವ ಈ ಪತ್ರಿಕೆಯಲ್ಲಿ ಕರ್ನಾಟಕದ ಎಲ್ಲ ಪ್ರಾಂತಗಳಿಗೂ ಸಂಬಂಧಪಟ್ಟ ಸಾಹಿತ್ಯ ವಿಷಯಕವಾದ ಪ್ರೌಢ ಲೇಖನಗಳು ಪಂಡಿತರುಗಳಿಂದ ರಚಿತವಾಗುತ್ತವೆ; ಅಲ್ಲದೆ ಕರ್ನಾಟಕದಲ್ಲಿ ಮುದ್ರಿತವಾಗುವ ಕನ್ನಡ ಗ್ರಂಥಗಳ ವಿಮರ್ಶೆಯೂ ಈ ಪತ್ರಿಕೆಯಲ್ಲಿ ಕಾಲಕಾಲಕ್ಕೆ ಬರುತ್ತದೆ.

ಇದರ ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ನಾಲ್ಕು ರೂಪಾಯಿಗಳು (ರೂ. ೪ — ೦ — ೦.) ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಕಾರ್ಯದರ್ಶಿ,
ಕರ್ನಾಟಕ ಸಾಹಿತ್ಯ ಪರಿಷತ್ತು,
ಬಸವನಗುಡಿ, ಬೆಂಗಳೂರು ಸಿಟಿ.

---

# ಉತ್ತಮ ಆರ್ಯ ಔಷಧಗಳು.
## ಸುವರ್ಣರಾಜವಂಗ ತೊಲಿ ೧ ರೂ. ೫

| | | |
|---|---|---|
| ಸುವೀರಪನ್ನಗ | ತೊಲಿ | ರೂ. ೫ |
| ಪ್ರವಾಳ | " | ರೂ. ೨ |
| ಚಂದ್ರಪ್ರಭಾ | " | ರೂ. ೧ |
| ಲಘುಮಾಲಿನಿ ವಸಂತ | " | |
| ಅಮೃತಸತ್ವ | " | ಆಣೆ ೧ |
| [illegible] | ಔಂಸ [illegible] | ೮ |
| ಬ್ರಾಹ್ಮೀ ಸಾಯರಪ್ | " | ರೂ. ೧ |
| ಪಾಚಕವಟಿ | ನೂರಕ್ಕೆ | ರೂ. ೧ |
| [illegible]ಚಕವಟಿ | ನೂರಕ್ಕೆ | ಆಣೆ ೮ |
| ಸಿತೋಪಲಾದಿಚೂರ್ಣ | ೧೦ ತೊಲಿ | ರೂ. ೧ |

ಇದಲ್ಲದೇ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಯಾವತ್ತೂ ಔಷಧಗಳು ನಮ್ಮಲ್ಲಿ ಸುಲಭ ದರದಿಂದ ಸಿಗುವವು.

Karnatak Ayurvedic Pharmaceutical Works
Bagalkot Dt. Bijapur

---

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಏಜಂಟರು) **ಅತ್ಯುತ್ತಮ** (ಬೇಕು.

ಮಸಿಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೪—೦ | ಟ. ಖ. |
| ೧೦೦ ಚೀಟಿಗಳಿಗೆ | ೦—೧೪—೦ | |
| ೪೦ ಔಂಸ ಬಾಟಲಿ ಪುಡಿಕೆಗೆ | ೦—೪—೦ | ಬೇರೆ |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸ — ಕರ್ನಾಟಕ ಇಂಕ ಕಂಪನಿ,
ಬಾಗಲಕೋಟೆ.

---

## ಇಂಡಿಯಾ ಪ್ರಾವ್ಹಿಡೆಂಟ ಕಂ. ಲಿ. ಕಲಕತ್ತಾ.

[illegible] ಚಂದಾದಾರರಿಗೆ ಈ [illegible] [illegible] [illegible] ಕೊಡುವದು [illegible] ಆದ್ದರಿಂದ ಈ [illegible] [illegible] [illegible] [illegible] ರೂಪಾಯಿ [illegible]

[illegible] ತರಿಸಿಕೊಳ್ಳಿರಿ

V. S. PARVATIKER
General Agent, BAGALKOT.

---

ಈ ಪತ್ರವನ್ನು ಬಾಗಲಕೋಟೆ [illegible] ಯಲ್ಲಿ [illegible] ಮುದ್ರಾಮಂದಿರದಲ್ಲಿ ಶ್ರೀನಿವಾಸ [illegible] ಇವರು ಮುದ್ರಿಸಿದರು ಮತ್ತು ಅಲ್ಲಿಯೇ ತಮ್ಮಣಾಚಾರ್ಯ ಬಂಡಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ತಳಗಲ್ಲು.

REGISTERED No. B 1589

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಭಾಷಾಂತರಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು

[illegible]

ವರ್ಷ ೧ | [illegible] ೨೩ ನೇ ೧೯೨೩ | ಸಂಚಿಕೆ ೨೮

## ಮಹಾತ್ಮರ ಆಯುಷ್ಯಕ್ರಮವು.

### ಕೆಲವು ಸಂಸ್ಮರಣೀಯ ಪ್ರಸಂಗಗಳು

ಮಹಾತ್ಮರ [illegible] ಅಗಾಧವಾದ ಸ್ವ [illegible] ಒಂದು ಗಂಭೀರವಾದ ಪ್ರಸಂಗವನ್ನು ಈ ಸಮಯದಲ್ಲಿ [illegible] ಸ್ಮರಣೆಗೆ ತಂದುಕೊಡಬೇಕೆಂದು [illegible] ಮಹಾತ್ಮಾ ಗಾಂಧಿಯವರ ದಕ್ಷಿಣ ಆಫ್ರಿಕೆಯಲ್ಲಿಯ ಸತ್ಯಾಗ್ರಹದ ಇತಿಹಾಸದಲ್ಲಿ ತಾ॥ ೨೭-೧೨-೧೯೧೩ [illegible] ಆ ದಿವಸ ದರ್ಬಾನ ಶಹರದಲ್ಲಿಯು [illegible] ಹಿಂದೀಜನರಿಂದ ಅತಿಶಯ [illegible] ಆ ಮನೆಗೆ ಹತ್ತಿರವೇ [illegible] ಹೆಂಡಿರು [illegible]

[illegible] ಅವರು [illegible] ಸತ್ಯಾಗ್ರಹದ [illegible] ಎಲ್ಲರ ಕಡೆಗೆ ದೃಷ್ಟಿಯನ್ನಿಟ್ಟು [illegible] ಮಹಾತ್ಮರು [illegible] ಆಗ್ನಿಯೋಗೋಳಿಬಾರದಲ್ಲಿ [illegible] ಇವರು [illegible] ಆವರು [illegible] ಮಹಾತ್ಮಾಜೀಯವ [illegible] ಏಮಿಲಿನಶ್ಯಿ [illegible]

ದೇ ಸವನೆ ತಟಸ್ಥರಾಗಿ ನೋಡುತ್ತ ನಿಂತರು. ಈ ಪ್ರಸಂಗದಲ್ಲಿ ಅವರ ಅಂತಃಕರಣದಲ್ಲಿ ಯಾವ ಪ್ರಕಾರದ ಕಳವಳಿಯಾಯಿತೆಂಬುದರ ಕಲ್ಪನೆಯು, ಯಾರು ಯಾರು ಆ ಪ್ರಸಂಗವನ್ನು ತಮ್ಮ ಸ್ವಂತದೃಷ್ಟಿಯಿಂದ ನೋಡಿದರೋ ಅವರಿಗೇ ಆಗುವಂತೆ ಇದೆ. ಆ ವೇಳೆಯಲ್ಲಿ ವಿಧವೆಯಳ ನೇತ್ರಗಳಿಂದ ಅಶ್ರುಗಳು ಒಂದೇ ಸವನೆ ಹರಿಯುತ್ತಿದ್ದವು. ಆ [illegible] ತಾಳಿರಾದ ದುಃಖಿತ ವಿಧವೆಯರ ರೋದನದಲ್ಲಿ ಆ ಮಹಾಪುರುಷನಿಗೆ ಹಿಂದಮಾತೆಯ ಕಂಗಾಲ ನಿರ್ವೀರ್ಯ [illegible] ಕಾಣಿತು. ಆ ಮಹಾಪುರುಷನ ಮುಖಚರ್ಯದ [illegible] ದಿಂದ, ಅತ್ಯಂತ ದೀನಾವಸ್ಥೆಯಲ್ಲಿದ್ದ ಹಿಂದದೇವಿಯು ತನ್ನ ದೀನ ಪುತ್ರನ ಎದುರಿನಲ್ಲಿ ನಿಂತು ಹೃದಯಭೇದಕವಾದ ಆಕ್ರಂದನವನ್ನು ಮಾಡುತ್ತಿರುವಳೋ ಏನೋ ಎಂಬಂತೆ ಯಾರಿಗಾದರೂ ಅನಿಸುತ್ತಿತ್ತು. ತನ್ನ ದೇಶಬಾಂಧವರ ಮೇಲೆ ಆಗ [illegible] ಮಾಡುತ್ತಿರುವವರನ್ನೆಲ್ಲ ಮುಂಗಾಣಿರು ಕುಡಿಸುವ ಹೊತ್ತು ತಾನು ಶಾಂತನಾಗಲಾರನೆಂದು ಭೀಷ್ಮಪ್ರತಿಜ್ಞೆಯನ್ನು ಮಾಡುತ್ತಿರುವನೋ ಏನೋ ಎಂದು ಅವನ ನೇತ್ರಗಳಿಂದ ಸಹಜವಾಗಿ ಅನುಮಾನ ಮಾಡಲಿಕ್ಕೆ ಬರುವಂತಿತ್ತು. ಆ ವಿಧವೆಯು [illegible] ಬೆನ್ನು ಮೇಲಿನ ಕೈಯನ್ನು ತೆಗೆಯುದೆ [illegible] ಮತ್ತು ಗೋಡಾಳ್ವೀ ಇವೆರಡೂ [illegible] ಗೃಹಸ್ಥನನ್ನು ಎರಡೂ ಭಾಷೆಗಳ [illegible] ಮಾಡಲಿಕ್ಕೆ ಕರೆಯಿಸಿದನು. [illegible] ಆ ಸತ್ಪುರುಷನ ಬಾಯಿಯಿಂದ [illegible] ಉದ್ಗಾರಗಳು ಹೊರಬಿದ್ದವು.

[illegible] ನ ಸ್ವಸ್ಥಳಾಗು, ಅಳಬೇಡ, [illegible] ನಿನ್ನ [illegible] ನೋಡುವದಾಗುವದಿಲ್ಲ. ನಿನ್ನ [illegible] ಜನರ ಕಡೆಯಿಂದ ಮರಣ ಹೊಂದಿದನು! [illegible] ಈಶ್ವರನ ಚರಣ ಸನ್ನಿಧಿಯಲ್ಲಿ ಹೋಗಿ [illegible]. ಸ್ವದೇಶದ ಸಲುವಾಗಿ ಅವನು [illegible] ಆಹುತಿಯನ್ನು ಕೊಟ್ಟನು. ಅವನು ತನ್ನ [illegible] ಅಮರನಾಗಿ ಮಾಡಿಕೊಂಡು ಬಿಟ್ಟನು. ಆ [illegible] ರೋಗದಿಂದ ಜರ್ಜರನಾಗಿ [illegible] ಸಿಗೆಯ ಮೇಲೆ [illegible], ಮೃತ್ಯುದೇವತೆಯು ಅವನನ್ನು ಈ ಜಗತ್ತಿನಿಂದ ತೆಗೆದುಕೊಂಡು ಹೋಗಿದ್ದರೆ, [illegible] ಈ ರೀತಿಯಿಂದ ನಾನು ನಿನ್ನ [illegible]

ಬಂದು ನಿಲ್ಲುತ್ತೈನೆ! ಸರಕಾರಕ್ಕಾದರೂ ಅವರ ಸಂಬಂಧ ಏನೂ ಅನಿಸುತ್ತಿದ್ದಿಲ್ಲ. ಇಂಥ ವೇಳೆಯಲ್ಲಿ ಮರಣವನ್ನೈದು-ವರು ಬರಲಿ. ಆ ಪುಣ್ಯಾತ್ಮನಿಗೆ ಈ ಕೀರ್ತಿಶಾಲಿಯಾದ ಮರಣವು ದೊರೆಕಿರುವದು. ಅದ್ದರಿಂದಲೇ ನೀನು ದುಃಖ ಮಾಡಕೂಡದು. ಯಾರು ಈಗ ನಮ್ಮ ಮೇಲೆ ಜುಲುಮೆಯನ್ನು ಮಾಡುತ್ತಿರುವರೋ, ಅವರ ಕೈಯಿಂದ, ನಿನ್ನಂತೆ ನನ್ನ ಅಸಂಖ್ಯ ಮಾತೆಯರಿಗೂ, ಭಗಿನಿಯರಿಗೂ, ಈ ಪ್ರಕಾರದ ಶಾಪವಾಗಹತ್ತಿದಾಗ ಮಾತ್ರ, ಹಿಂದಮಾತೆಯು ಕಲ್ಯಾಣವಾಗುವದು. ಸ್ವಾರ್ಥತ್ಯಾಗದ ಹೊರತು ಏನೂ ಆಗುವಂತಿಲ್ಲ. ನಾನು ಈ ನನ್ನ ಶಿರಸ್ಸನ್ನು ಹಿಂದಮಾತೆಗಾಗಿ ಅರ್ಪಣ ಮಾಡಿಬಿಟ್ಟಿದ್ದೇನೆ. ಯಾವ ದಿವಸ ಈ ಜುಲುಮೆಗಾರರಿಂದ, ನನ್ನ ಶಿರಸ್ಸು ದೇಹದಿಂದ ಭಿನ್ನಮಾಡಲ್ಪಡುವದೋ ಮತ್ತು ಯಾವ ದಿವಸ ನನ್ನ ಹೆಂಡತಿಗೆ ನಿನ್ನಂತೆ, ಕಂಗಾಲ ಮತ್ತು ದುಃಖಿತವಾದ ಈ ವೈಧವ್ಯವು ಪ್ರಾಪ್ತವಾಗುವದೋ, ಆ ದಿವಸವೇ ನನ್ನ ಪ್ರತಿಜ್ಞೆಯು ಪೂರ್ಣವಾಯಿತೆಂದು ತಿಳಿಯುವೆನು. ನನ್ನ ಅಂತರಾತ್ಮನಿಗೆ ಆವಾಗಯೇ ಶಾಂತಿಯು ದೊರೆಕುವದು! ಆದ್ದರಿಂದ ತಾಯಿಯೇ, ನೀನು ದುಃಖಿತಳಾಗಬೇಡ. ನನ್ನ ತಲೆಯನ್ನು ನಾನು ನಿನ್ನ ಮುಂದೆ ಹೀಗೆ ಬಗ್ಗಿಸುತ್ತೇನೆ. ನಿನಗೆ ಈ ವೈಧವ್ಯ ದೆಶೆಯನ್ನು ತಂದು ಕೊಡಲಿಕ್ಕೆ ನಾನೇ ಕಾರಣನಾಗಿರುವೆನು. ಈ ಅಪರಾಧದ ಬಗ್ಗೆ ತನ್ನನ್ನು ಕ್ಷಮಿಸು; ಮತ್ತು ದುಃಖವನ್ನು ಬಿಟ್ಟು ಶಾಂತಳಾಗು.

ಈ ಪ್ರಕಾರ ಮಾತನಾಡಿ, ಮಹಾತ್ಮಾಜಿಯು, ವಿಧವೆಯ ಮುಂದೆ ತನ್ನ ಮಸ್ತಕವನ್ನು ಬಗ್ಗಿಸಿ ನಮಸ್ಕಾರ ಮಾಡಿ ಅಲ್ಲಿಂದ ಮುಂದೆ ಸಾಗಿದನು. ಸುತ್ತಮುತ್ತಲಿನ ಜನರು ಮಹಾತ್ಮರ ಈ ಅದ್ಭುತ ಶಬ್ದವನ್ನು ಕೇಳಿ, ಆ ಕರುಣಾಜನಕವಾದ ದೃಶ್ಯವನ್ನು ನೋಡಿ ಸ್ತಂಭಿತರಾದರು. ಕೆಲವರಂತೂ ಆ ದೃಶ್ಯವನ್ನು ನೋಡುವದಾಗದ್ದರಿಂದ ಅಲ್ಲಿಂದ ದೂರ ಹೋಗಿ ನಿಂತುಕೊಂಡರು. ಹಿಂದುಸ್ಥಾನದ ಮುಂದಾಳುಗಳಲ್ಲಿ ಈ ಪ್ರಕಾರದ ಪ್ರಜಾವಾತ್ಸಲ್ಯವುಳ್ಳ ಜನರು ಆಗದ ಹೊರತು ಅಂತಃಕರಣದಿಂದ ಶುದ್ಧ ಭಾವದ ಜನಸೇವೆಯು ಎಂದೂ ಆಗುವದಿಲ್ಲ.

( ಹಿಂದಿ ನವಜೀವನ )

## ಶ್ರೀಮತೀ ಕಸ್ತೂರಿಬಾಯಿ ಗಾಂಧಿಯವರ ಸಂದೇಶವು.

( ಯಂಗ ಇಂಡಿಯಾ )

ನನ್ನ ಪ್ರೀತಿಯ ಮಗನಾದ ದೇವೀದಾಸನಿಗೆ ಬಂದಿವಾಸವು ವಿಧಿಸಲ್ಪಟ್ಟ ಮೇಲೆ ನನಗೆ ಸಮಾಧಾನ ಹೇಳುವದಕ್ಕಾಗಿ ಎಷ್ಟೋ ಜನರು ಪತ್ರ ಬರೆದಿರುವರು. ಈ ರೀತಿಯಾಗಿ ನನ್ನನ್ನು ಅನುಕಂಪಿಸಿದ ಕರುಣಾಳುಗಳಿಗೆ ನಾನು ತುಂಬಾ ಋಣಿಯಾಗಿದ್ದೇನೆ.

ನನ್ನ ಮಕ್ಕಳಲ್ಲಿ ಈರ್ವರೇ ಮಾತ್ರ ಜೇಲಿನಲ್ಲಿ ಇರುವರು. ಆದರ ಹಿಂದಮಾತೆಯ ಸಾವಿರಾರು ವೀರಪುತ್ರರು ಕಾರಾಗೃಹದಲ್ಲಿ ಕೊಳೆಯುತ್ತಿರುವರು. ಇಷ್ಟು ಜನ ತರುಣರು ಪುತ್ರ ವತ್ಸಲರಾದ ತಮ್ಮ ತಾಯಂದಿರಿಂದ ಅಗಲಿಸಲ್ಪಟ್ಟಿರಲು, ನನ್ನ ಮಕ್ಕಳಿಗಾಗಿ ಕಣ್ಣೀರು ಉದುರಿಸಲಿಕ್ಕೆ ನಾನೆಂತು ಬಾಧ್ಯಳು? ಆರ್ಯಾವರ್ತದ ಪುತ್ರರೂ ಪುತ್ರಿಯರೂ, ಇಂಥ ಸ್ಥಿತಿಯಿಂದಲೇ ಸಮಾಧಾನಹೊಂದುತ್ತ, ಇನ್ನೂ ಎಲ್ಲಿಯ ತನಕ ಸುಮ್ಮನೆ ಕೈಮುಚ್ಚಿಕೊಂಡು ಕೂಡ್ರುವಿರಿ ಅಯ್ಯಾ! ಈಗ್ಗೆ ನೀವು ಎಚ್ಚರಗೊಳ್ಳದಿದ್ದರೆ, ನೀವು ಜಾಗೃತರಾಗುವದಾದರೂ ಎಂದು? ಏಳಿರಿ, ಗಾಂಧಿಯು ಪ್ರಾರಂಭಿಸಿದ ಕಾರ್ಯವನ್ನು ನಿಮ್ಮ ಕಾರುಣ್ಯಕ್ಕೆ ಉಚಿತವಾದ ಬುದ್ಧಿಶಕ್ತಿಯಿಂದಲೂ ಸಾಹಸದಿಂದಲೂ ಸಾಗಿಸಿರಿ; ನಿಮ್ಮ ಬಂಧುಗಳನ್ನು ಜೇಲಿನಿಂದ ಮುಕ್ತರನ್ನಾಗಿ ಮಾಡಿರಿ. ಇಲ್ಲವೆ ಆ ಜೇಲುಗಳು ನಿಮ್ಮಿಂದ ತುಂಬಿ ಹೊರಚೆಲ್ಲುವಂತೆ ಮಾಡಿರಿ. ಈ ಪ್ರಕಾರ ಭರತಭೂಮಿಯ ಪುತ್ರ ಪುತ್ರಿಯರೆಲ್ಲರಿಗೂ, ತನ್ನ ಸ್ವಾಭಿಮಾನವನ್ನು ಕಾಯ್ದು ಕೊಳ್ಳಲಿಕ್ಕೆ ಹಿಂದುಸ್ಥಾನವು ಕಂಕಣಬದ್ಧವಾಗಿರುವದೆಂದು ಜಗತ್ತಿಗೆ ಸಾರಿ ಹೇಳಿರಿ.

## ಒಕ್ಕಲಿಗರಿಗೆ.

ಪ್ರಿಯ ಬಾಂಧವರೇ,

ಈ ಜಗತ್ತಿನಲ್ಲಿ ಒಕ್ಕಲಿಗರಿಂದ ಎಷ್ಟು ಉಪಕಾರವಾಗುವದೋ ಅಷ್ಟು ಅನ್ಯ ಯಾರಿಂದಲೂ ಆಗುವದಿಲ್ಲ. ಒಕ್ಕಲಿಗರಿಂದಲೇ ಎಲ್ಲರಿಗೂ ಅನ್ನವು ದೊರೆಯುವದು. ಅದ್ದರಿಂದಲೇ ಮಹಾತ್ಮಾಜಿಯವರು ಜಗತ್ತಿಗೆ ತಾಯಿ ತಂದೆಗಳು ಅರ್ಥಾತ್ ಪಾಲಕರೆಂದು ತಮ್ಮನ್ನು ಕರೆಯುವರು. ಆಹಾ! ಎಂಥ ಗೌರವಪೂರ್ಣ ಮತ್ತು ಯಥಾರ್ಥವಾದ ನಾಮವಿದು! ಇದರಿಂದ ತಮ್ಮ ದೊಡ್ಡಸ್ತಿಕೆಯು ಮಾತ್ರ ತೋರಿಬರುತ್ತದೆಂತಲ್ಲ; ಆದರೆ ತಾವು ಈ ಜಗತ್ಕುಟುಂಬದ ಕುಟುಂಬದ ಸಲುವಾಗಿ, ಎಷ್ಟು ಕಷ್ಟಗಳನ್ನು ಅನುಭವಿಸುತ್ತೀರಿ ಎಂಬುವದಾದರೂ ವ್ಯಕ್ತವಾಗುತ್ತದೆ. ಒಂದು ಕುಟುಂಬದಲ್ಲಿ ಪ್ರೀತಿಯ ಚಿಕ್ಕ ಬಾಲಕರಿಗೆ ಯಾವದಾವದೊಂದು ವಸ್ತುವು ಬೇಕಾದರೆ, ಆ ವಸ್ತುವನ್ನು ದೊರಕಿಸಿಕೊಡಲಿಕ್ಕೆ ಎಷ್ಟು ಕಷ್ಟ ಸೋಸಬೇಕಾಗುವದು? ಎಷ್ಟು ಸಂಕಟಗಳಿಗೆ ಗುರಿಯಾಗಬೇಕಾಗುವದು? ಅದೇ ಪ್ರಕಾರ ತಾವು ಜಗತ್ತಿನ ಸಲುವಾಗಿ, ಅನ್ನವನ್ನು ದೊರಕಿಸುವಾಗ ಎಷ್ಟು ಸಂಕಟಗಳಿಗೆ ಒಳಗಾಗಬೇಕಾಗುವದು, ಎಷ್ಟು ಸ್ವಾರ್ಥ ತ್ಯಾಗವನ್ನು ಮಾಡಬೇಕಾಗುವದು, ಎಷ್ಟು ಕಷ್ಟಗಳನ್ನು ಸಹಿಸಬೇಕಾಗುವದು ಎಂಬುವದು ಸ್ಪಷ್ಟವಾಗಿ ಮಲಗಿಕೊಂಡು ವ್ಯರ್ಥ ವೇಳೆ ಕಳೆಯುವ ದೊಡ್ಡ ಜನರಿಗೆ ಹೇಗೆ ಗೊತ್ತಾದೀತು? ಒಕ್ಕಲಿಗರಿಗೆ ನಾವು ಅನ್ನದಾತೃಗಳೆಂದು ಕರೆದ ಮೇಲೆ ಸರಕಾರಕ್ಕೆ ಗರ್ವಿತರೆಂದು ಕರೆದರೆ ಅನುಚಿತವಾಗುವದಿಲ್ಲ. ಯಾಕಂದರೆ ಅವರ ಕೆಲಸವಾದರೂ ಒಡೆಯರವರಿಗೆ ಗೃಹಿಣಿಯ ರಕ್ಷಿಸುವಂತೆಯೇ ಇರುವದು. ಸ್ವಾಮಿಯ ಸಹಧರ್ಮಚಾರಿಣಿಯಾಗಿ, ಅವನ ಹಿತವನ್ನು ಚಿಂತಿಸುತ್ತಿರುವದೇ ಗೃಹಿಣಿಯ ಕರ್ತವ್ಯವು ಅಲ್ಲವೇನು! ಈ ಸರಕಾರವು ಹೀಗ ಮಾಡಿರುವದೇ? ತನಗೆ ಊಟಕ್ಕೆ ಹಾಕಿ ಸಂರಕ್ಷಿಸುವವರ ಬಗ್ಗೆ ಕೃತಜ್ಞತಾಬುದ್ಧಿಯು ಈ ಸರಕಾರಕ್ಕೆ ಇರುವದೇ? ಈ ದೇಶದ ರಾಜ್ಯಭಾರವನ್ನು ತನ್ನ ತಲೆಯ ಮೇಲೆ [illegible] ಹೊಂದಿದಂದಿನಿಂದ ದಿನ ದಿನಕ್ಕೆ ಈ ದೇಶವು ಬಡತನ ದಾರಿದ್ರ್ಯ ನಿರ್ಧನವಾಗಹತ್ತಿದೆ. ಅದರಲ್ಲಿ ಒಕ್ಕಲಿಗರು ಎಲ್ಲರಕಿಂತಲೂ ಹೆಚ್ಚು ದುರ್ಬಲರಾಗಿರುವರು. ಭರತಖಂಡದ ಧನಧಾನ್ಯ ಮತ್ತು ವಸ್ತ್ರಗಳ ತವರ ಮನೆಯು; ಮತ್ತು ಇವೆಲ್ಲವುಗಳ ಉತ್ಪಾದಕರು ಒಕ್ಕಲಿಗರೇ, ಆದರೆ ಈಗ ಅವರು ಎಲ್ಲರಿಗಿಂತಲೂ ಹೆಚ್ಚು ದುರ್ಬಲರೂ ದರಿದ್ರರೂ ಆಗಿರುವರು. ಒಕ್ಕಲಿಗರು ಎಷ್ಟು ಅತ್ಯಾಚಾರಗಳಿಗೆ ಒಳಗಾಗುವರೆಂಬವನ್ನು ಹೇಳಲು ಕಾರಣವಿಲ್ಲ. ಅದು ಪ್ರತಿದಿವಸ ತಾವು ನೋಡುತ್ತಿರುವ ಸಂಗತಿಯು. ಒಬ್ಬ ಸಂಜೆ ಸಿಪಾಯಿಯನ್ನು ನೋ

ದಲ್ಲೊಂದು ದೊಡ್ಡ ದೊಡ್ಡ ಗವರ್ನರರ ವರೆಗೆ ಎಲ್ಲರನ್ನು ತೃಪ್ತಿಪಡಿಸುವವರಲ್ಲಿ ತಾವು ದೇಶತ್ಯ ಹೋಗಿರುವಿರಿ. ಯಾರು ಇಡೀ ಜಗತ್ತಿಗೆ ಅನ್ನದಾತೃಗಳಿರುವಿರೋ ಅಂಥ ತಾವು ಅನ್ನವನ್ನು ನೀರು ನೀರು ಗತಿಯಾಗಿರುವಿರಲ್ಲವೇ! ಮತ್ತು ಯಾವ ತಾವು ಈ ಜಗತ್ತಿನಲ್ಲಿ ಸ್ತ್ರೀಪುರುಷರ ಶರೀರಗಳನ್ನು ವಸ್ತ್ರಗಳಿಂದ ಆಚ್ಛಾದಿಸುತ್ತ ಬಂದಿರುವಿರೊ, ಅಂಥ ತಮ್ಮ ಹೆಂಡಿರುಮಕ್ಕಳು, ಹರಕಚಿಂದಿ ಬಟ್ಟೆಗಳನ್ನುಟ್ಟುಕೊಂಡು. ಅರ್ಧ ನಗ್ನರಾಗಿ ದೇಶ ದೇಶ ತಿರುಗುತ್ತಿರುವರು. ಭಾರತಮಾತೆಯು, ತನ್ನ ಪ್ರೀತಿಯ ಮಕ್ಕಳು, ವೈಶಾಖ ಜ್ಯೇಷ್ಠಮಾಸಗಳಲ್ಲಿ ದುರ್ಬಲವಾದ ಎತ್ತುಗಳಹಿಂದ ಬಾಡಿದ ಮುಖದಿಂದ ಶರೀರವನ್ನು ಕಷ್ಟಪಡಿಸುತ್ತಿರುವದನ್ನು ನೋಡಲು, ಅವಳ ಹೃದಯವು ಒಡೆದು ನೀರಾಗಿ, ಅವಳ ಕಣ್ಣಿನಲ್ಲಿ ರಕ್ತದ ಹನಿಗಳು ತುಂಬಿ ಬರುವವು. ಅದಕೆ ಭರತಮಾತೆಗೆ ಒಬ್ಬ ಯೋಗ್ಯ ಸುಪುತ್ರನು ಜನಿಸಿರುವನು. ತನ್ನ ಬಾಂಧವರ ದುಃಖಗಳೇ ತನ್ನ ದುಃಖಗಳೆಂದು ತಿಳಿಯುವ ಮತ್ತು ಭೂಮಾತೆಗೆ ಪ್ರೇಮಾಸ್ಪದನಾದ ಮಗನು ಹುಟ್ಟಿರುವನು. ತಾವು ಒಣ ರೊಟ್ಟಿಗಳನ್ನು ತಿನ್ನುವವನ್ನು ನೋಡಿ, ಎಲ್ಲ ತರದ ಮಿಷ್ಟಾನ್ನಗಳನ್ನು ತ್ಯಜಿಸಿದನು. ತಾವು ನಗ್ನತ್ವದಿಂದ ಬಿಸಿಲಲ್ಲಿ ಬಳಲುತ್ತಿರುವದನ್ನು ನೋಡಿ, ಅವನೂ ಸಹ ಬೆಲೆಯುಳ್ಳ ವಸ್ತ್ರಗಳನ್ನು ಬಿಟ್ಟು ಲಂಗೋಟಿಯನ್ನು ಹಾಕಹತ್ತಿರುವನು. ಹಗಲೆನ್ನಲಿಲ್ಲ, ರಾತ್ರಿಯೆನ್ನಲಿಲ್ಲ, ದೇಶದ ತುಂಬೆಲ್ಲ ಅವಿಶ್ರಾಂತದಿಂದ ತಿರುಗಿ ತನ್ನ ದೇಶದ ಹಾಗೂ ಒಕ್ಕಲಿಗಬಾಂಧವರ ದುಃಖಗಳಿಗೆ ಉಪಾಯ ಚಿಂತಿಸಹತ್ತಿದನು. ಕೆಲವು ದಿವಸಗಳ ವರೆಗೆ ವಿಚಾರಮಗ್ನನಾಗಲು, ಅವನಿಗೆ ಕಟ್ಟಕಡೆಗೆ ಒಂದು ರಾಮಬಾಣ ಔಷಧವು ದೊರೆಯಿತು. ತಮ್ಮ ಪೂರ್ವಜರಾದ ತಂದೆ ಅಜ್ಜ ಮೊದಲಾದವರು ಧರಿಸುತ್ತಿದ್ದಂಥ ಶುದ್ಧಕೈನೂಲಿನ ಖಾದೀ ವಸ್ತ್ರವೇ ಈ ಔಷಧವು! ಎಂದಿನಿಂದ ನಾವು ಖಾದಿಯನ್ನು ಮರೆತುಬಿಟ್ಟೆವೋ, ಆ ಹೊತ್ತಿನಿಂದಲೇ ನಮ್ಮ ಮೇಲೆ ಸಂಕಟಗಳು ಪದೇ ಪದೇ ಬರಹತ್ತಿವೆ. ನಮ್ಮ ವ್ಯಾಪಾರವೆಲ್ಲ ಗೌರವರ್ಣದ ವ್ಯಾಪಾರಸ್ಥರ ಕಡೆಗೆ ಸಿಕ್ಕಿದ್ದರಿಂದ ನಾವು ನಮ್ಮ ರೊಟ್ಟಿ ಬಟ್ಟೆಗಳಿಗೂ ಸಹ ಅವರ ಅಧೀನರಾಗಿ ಬಿಟ್ಟಿರುವೆವು. ಈಗ ಹತ್ತು ಹದಿನೈದು ವರ್ಷಗಳಿಂದ, ಯಾರು ಉಪ್ಪು ತೆರಿಗೆವಡಿಸಿ ಯಾವ ಪದಾರ್ಥಗಳನ್ನು ಬಜಾರದಿಂದ ಕೊಂಡುಕೊಳ್ಳುತ್ತಿದ್ದೆವೋ, ಅಂಥವುಗಳಿಗೆ ಈಗ ನಾಲ್ಕು ಪಾಲು ಕ್ರಯವನ್ನು ಕೊಟ್ಟು, ಪರದೇಶೀ ಪದಾರ್ಥಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ಮತ್ತು ಈ ರೀತಿಯಿಂದ ಬಡವರ ಧನವೆಲ್ಲವೂ ವಿಲಾಯತಿಯ ವ್ಯಾಪಾರಿಗಳನ್ನು ಕೋಟ್ಯಾಧೀಶರನ್ನು ಮಾಡಿತು. ಈ ಮಾರ್ಗತಿಯಲ್ಲಿ ನೋಡಿ, ಮಹಾತ್ಮಾಜೀಯವರು ತಮಗೆ [illegible] — [illegible], ಮತ್ತು [illegible] ಒಂದೆ [illegible] ಸಾಧ್ಯವಿರುತ್ತದೆ. ಈ [illegible] ತಮಗೂ ಅಳರಸರಿಗೂ ಕೂಡಿಯೇ ಉಂಟು. ತಾವು ತಮ್ಮ ಪವಿತ್ರವಾದ [illegible] ಕಳಕ್ಕೆ ದಬ್ಬಿ ಅದರ [illegible] ತಪ್ಪದು. ತಾವು [illegible] ನಡೆದಂತೆ, [illegible] ಇದರ ಪರಿಣಾಮದಿಂದ ಆ [illegible] ಹೆಚ್ಚು [illegible] ನಮ್ಮ ತಲೆಯ [illegible] ಬರು [illegible] ಸ್ವೀಕರಿಸಬೇಕು. ತಮ್ಮ [illegible] ತಮ್ಮ ರಾಜ್ಯಕರ್ತರ [illegible] ಶಕ್ತಿವಂತರು ಆಗಬೇಕು [illegible] ಪರದೇಶೀ ಅರಿವೆಗಳನ್ನು ಬಿಟ್ಟು ಖಾದಿಯನ್ನೇ ಧರಿಸುವ ಪ್ರತಿಜ್ಞೆಯನ್ನು ಮಾಡಿರಿ. ಪೂರ್ಣವಾಗಿ ಶಾಂತತೆಯನ್ನು ಕಾಪಾಡಿರಿ. ಅನ್ಯಾಯಗಳಿಗೆ ಪ್ರತೀಕಾರ ಮಾಡಿರಿ. ತಮ್ಮ ಶಕ್ತಿಗೆ ಪಾರವೇ ಇಲ್ಲ. ಜಗತ್ತಿನಲ್ಲಿ ಇಂಥ ದೊಡ್ಡ ಜನಸಮೂಹವು. ತಮ್ಮ ಇಚ್ಛೆಯಿಲ್ಲದೆ, ದಾಸರಾಗಿಯೂ ಹೀಡಿತರಾಗಿಯೂ ಉಳಿಯುವದು ಶಕ್ಯವಿಲ್ಲ. ಅವರು ಹಿಡಿದ ಮಾರ್ಗದಲ್ಲಿ —ಸನ್ಮಾರ್ಗದಲ್ಲಿ— ಪ್ರತಿರೋಧವನ್ನು ಮಾಡುತ್ತಿರುವ ದೊಡ್ಡ ರಾಜ್ಯಶಕ್ತಿಗೂ ಎಲ್ಲಕ್ಕಿಂತ ಕಠಿಣವಾದ ಬಾಹುಬಲಕ್ಕೂ ಆ ತಮ್ಮ ಅಸಾಧಾರಣವಾದ ಆತ್ಮತೇಜದ ಎದುರಿನಲ್ಲಿ ಅವಶ್ಯವಾಗಿ ತಲೆಬೊಗ್ಗಿಸಬೇಕಾಗುವದು.—ತಮ್ಮ ಅನ್ಯಾಯಗಳನ್ನೆಲ್ಲ ಬಿಟ್ಟುಗೊಡಬೇಕಾಗುವದು — ದುರ್ಮಾರ್ಗದಿಂದ ನಿವೃತ್ತರಾಗಬೇಕಾಗುವದು.

ಖಾದಿಯಲ್ಲಿ ಅಪಾರವಾದ ಶಕ್ತಿಯನ್ನು -ಪರಮಾತ್ಮನು ಈ ಜಗತ್ತಿನಲ್ಲಿ ಸ್ಥಾಪಿಸಿಟ್ಟಿರುವನು. ಅದೇ ನಮ್ಮ ಬಲವು.- ಅದೇ ಈ ಸರಕಾರದ ಮರಣವು. ಅದೇ ಸ್ವತಂತ್ರತೆಯು.- ಅದೇ ಸ್ವರಾಜ್ಯವು. ಅದರಲ್ಲಿಯೇ ನಮ್ಮೆಲ್ಲರ ಐಕ್ಯವಿರುವದು. ಮತ್ತು ಅದರಿಂದಲೇ ಅಸ್ಪೃಶ್ಯ ಬಾಂಧವರ ಉದ್ಧಾರವಾಗುವದು. ಧನಧಾನ್ಯ ಸಮೃದ್ಧಿಯಾದರೂ ಅದರಲ್ಲಿಯೇ ಆತಕವಾಗಿರುವದು ಅದೇ ಸರ್ವರೋಗಗಳಿಗೆ ಔಷಧವು. ತಾವು ವರ್ಷದಲ್ಲಿ ನಾಲ್ಕು ತಿಂಗಳುಗಳವರೆಗೆ ಕೆಲಸಿಲ್ಲದೇ ಇರುವಿರಿ. ತಮ್ಮ ಹೆಂಡರೂ, ಮಕ್ಕಳೂ, ಅಕ್ಕತಂಗಿಯರೂ, ತಮ್ಮ ವೇಳೆಯನ್ನು ಒಣ ಹರಟೆಯಲ್ಲಿ ಕಳೆಯುತ್ತಿರುವರು. ಆವೇಳೆಯಲ್ಲಿ ರಾಟಿಯನ್ನು ತಿರುಗಿಸಿ, ಅದರ ಸ್ವರದಲ್ಲಿ ಸ್ವರವನ್ನು ಕೂಡಿಸಿ, ತಮ್ಮ ಆರ್ತಧ್ವನಿಯನ್ನು ಪರಮಾತ್ಮನ ದರಬಾರಕ್ಕೆ ಮುಟ್ಟಿಸಿರಿ. ಇದರಿಂದ ತಮಗೆ ಆತ್ಮಿಕ ಹಾಗೂ ಆರ್ಥಿಕವೆಂಬ ಎರಡೂ ಬಲವು ದೊರಕುವದು. ಮತ್ತು ತಮ್ಮ ಹಾಗೂ ತಮ್ಮ ಸಂಗಡ ಇಡೀ ಭರತಖಂಡದ ಉದ್ಧಾರವಾದರೂ ಆಗುವದು.

ನೋಡಿರಿ, ಸ್ವರಾಜ್ಯದ ಅರುಣೋದಯವು ಪೂರ್ವದಿಕ್ಕಿನಲ್ಲಿ ತೋರಹತ್ತಿದೆ. ದಾಸ್ಯದ ರಾತ್ರಿಯು ಅಂತವು ಆಗಹತ್ತಿದೆ. ಆದರೆ ಈ ವೇಳೆಯಲ್ಲಿಯೇ, ಅಸುರರ ನಿಸ್ತೇಜ ಮಾವ ಮಾಯೆಯಾದರೂ ಹಬ್ಬಿರುವದು. ಧೈರ್ಯದಿಂದ ಯುದ್ಧಮಾಡುವ ವೇಳೆಯಿದು ಸ್ವಲ್ಪ ಕಳೆದರೆ, ನಮ್ಮ ವಿಜಯವು ಸಿದ್ಧವಾಗಿದೆ ಮತ್ತು ತಾವು ಬಾಂಧವನಾದ ಮಹಾತ್ಮಾ ಗಾಂಧಿಯನ್ನು- ಯಾವ ಗಾಂಧಿಗೆ ಒಕ್ಕಲಿಗನೆಂದು ಹೇಳಲು ಅಭಿಮಾನವೆನಿಸುವದೋ ಅಂಥವನನ್ನು- ಕಾರಾಗೃಹದಿಂದ ಬೇಗನೆ ಬಿಡಿಸುವಿರಿ. ನಾವು ನಮ್ಮ ಖುನ ೩೫ ಸಾವಿರ ಬಾಂಧವರನ್ನು ಜೇಲಿನಿಂದ ಮುಕ್ತಮಾಡಿ, ರಾಮರಾಜ್ಯವನ್ನು ಸ್ಥಿರಪಡಿಸಬೇಕಾಗಿರುವದು. ಹಾಗು ಜಗತ್ತಿನಲ್ಲಿ ನಮ್ಮ ಇಭ್ರತಿಯನ್ನು ಕಾಯ್ದುಕೊಂಡಿರಬೇಕಾಗುವದು. ಅದರಂತೆಯೇ ನಮ್ಮ ತಾಯಂದಿರ ಹಾಗೂ ಅಕ್ಕತಂಗಿಯರ ಮಾನವನ್ನು ರಕ್ಷಿಸಬೇಕಾಗಿದೆ. ಆದ್ದರಿಂದ—

(೧) ಕಾಂಗ್ರೆಸದ ಸಭಾಸದರಾಗಿರಿ.
(೨) ಟಿಳಕ ಸ್ವರಾಜ್ಯನಿಧಿಗೆ ಹಣವನ್ನು ಕೊಡಿರಿ.
(೩) ಖಾದಿಯನ್ನು ಧರಿಸಿರಿ, ರಾಟಿಯನ್ನು ತಿರುಗಿಸಿರಿ.
(೪) ನಿಮ್ಮ ನಿಮ್ಮೊಳಗೆ ಐಕ್ಯವನ್ನು ಕಾಯಿರಿ ಮತ್ತು
(೫) ಸಂಪೂರ್ಣವಾಗಿ ಶಾಂತತೆಯನ್ನು ರಕ್ಷಿಸಿರಿ.

ಸಾಕು ಇಷ್ಟು ಮಾಡುವದರಿಂದಲೇ ತಮ್ಮ ಎಲ್ಲ ವಿಪತ್ತುಗಳು ದೂರವಾಗುವವು. ತಾವು ತಮ್ಮ ಮನೆಯ ನಿಜನಾ[illegible] ಆಗುವಿರಿ. ಮತ್ತು ಭಾರತ ಮಾತೆಯು ಹಣೆಯಲ್ಲಿನ ದಾಸ್ಯದ ಕಳಂಕವು ಶಾಶ್ವತವಾಗಿ ಇಲ್ಲದಂತೆ ನಾಶವಾಗುವದು.

—ನವಜೀವನ

ಬಂದು ನಿಲ್ಲುತ್ತಿದ್ದೆನು! ಸನಾಜಕ್ಕಾದರೂ ಅದರ ಸಂಬಂಧ ಏನೂ ಅನಿಸುತ್ತಿದ್ದಿಲ್ಲ. ಅಂಥ ವೇಳೆಯಲ್ಲಿ ಪುರಜನನ್ನೆಷ್ಟು ಪರರ ಬದಲು, ಆ ಪುಣ್ಯಾತ್ಮನಿಗೆ ಈ ಕೀರ್ತಿಕಾರಿಯಾದ ಮರಣವು ದೊರೆಕಿರುವದು. ಆದ್ದರಿಂದಲೇ ನೀನು ದುಃಖ ಮಾಡಕೂಡದು. ಯಾರು ಈಗ ತನ್ನ ಮೇಲೆ ಜುಲುಮೆಯನ್ನ ಮಾಡುತ್ತಿರುವರೋ, ಅವರ ಕೈಯಿಂದ, ನಿನ್ನಂತೆ ನನ್ನ ಅಸಂಖ್ಯ ನಾರಿಯರಿಗೂ, ಭಗಿನಿಯರಿಗೂ, ಈ ಪ್ರಕಾರದ ತಾಪವಾಗತಕ್ಕದ್ದಾಗ ಮಾತ್ರ, ಹಿಂದಮಾತೆಯ ಕಲ್ಯಾಣವಾಗುವದು. ಸ್ವಾರ್ಥತ್ಯಾಗದ ಹೊರತು ಏನೂ ಆಗುವಂತಿಲ್ಲ. ನಾನು ಈ ನನ್ನ ಶಿರಸ್ಸನ್ನು ಹಿಂದಮಾತೆಗಾಗಿ ಅರ್ಪಣ ಮಾಡಿಬಿಟ್ಟಿದ್ದೇನೆ. ಯಾವ ದಿವಸ ಈ ಜುಲುಮೆಗಾರರಿಂದ, ನನ್ನ ಶಿರಸ್ಸು ದೇಹದಿಂದ ಭಿನ್ನಮಾಡಲ್ಪಡುವದೋ ಮತ್ತು ಯಾವ ದಿವಸ ನನ್ನ ಹೆಂಡತಿಗೆ ನಿನ್ನಂತೆ, ಅಂಗಾಲ ಮತ್ತು ದುಃಖಿತವಾದ ಈ ವೈಧವ್ಯವು ಪ್ರಾಪ್ತವಾಗುವದೋ, ಆ ದಿವಸವೇ ನನ್ನ ಪ್ರತಿಜ್ಞೆಯು ಪೂರ್ಣವಾಯಿತೆಂದು ತಿಳಿಯುವೆನು. ನನ್ನ ಅಂತರಾತ್ಮನಿಗೆ ಆವಾಗಲೇ ಶಾಂತಿಯು ದೊರಕುವದು! ಆದ್ದರಿಂದ ತಾಯಿಯೇ, ನೀನು ದುಃಖಿತಳಾಗಬೇಡ. ನನ್ನ ತಲೆಯನ್ನು ನಾನು ನಿನ್ನ ಮುಂದೆ ಹೀಗೆ ಬಗ್ಗಿಸುತ್ತೇನೆ. ನಿನಗೆ ಈ ವೈಧವ್ಯ ದೀಕ್ಷೆಯನ್ನು ಕೊಡುವದಕ್ಕೆ ನಾನೇ ಕಾರಣನಾಗಿರುವೆನು. ಈ ಅಪರಾಧದ ಬಗ್ಗೆ ನನ್ನನ್ನು ಕ್ಷಮಿಸು; ಮತ್ತು ದುಃಖವನ್ನು ಬಿಟ್ಟು ಶಾಂತಳಾಗು.

ಈ ಪ್ರಕಾರ ಮಾತನಾಡಿ, ಮಹಾತ್ಮಾಜಿಯು, ವಿಧವೆಯ ಮುಂದೆ ತನ್ನ ಮಸ್ತಕವನ್ನು ಬಗ್ಗಿಸಿ ನಮಸ್ಕಾರ ಮಾಡಿ ಅಲ್ಲಿಂದ ಮುಂದೆ ಸಾಗಿದನು. ಸುತ್ತಮುತ್ತಲಿನ ಜನರು ಮಹಾತ್ಮರ ಈ ಅದ್ಭುತ ಶಬ್ದವನ್ನು ಕೇಳಿ, ಆ ಕರುಣಾಜನಕವಾದ ದೃಶ್ಯವನ್ನು ನೋಡಿ ಸ್ತಂಭಿತರಾದರು. ಕೆಲವರಂತೂ ಆ ದೃಶ್ಯವನ್ನು ನೋಡುವದಾಗದ್ದರಿಂದ ಅಲ್ಲಿಂದ ದೂರ ಹೋಗಿ ನಿಂತುಕೊಂಡರು. ಹಿಂದುಸ್ತಾನದ ಮುಂದಾಳುಗಳಲ್ಲಿ ಈ ಪ್ರಕಾರದ ಪ್ರಜಾವಾತ್ಸಲ್ಯವುಳ್ಳ ಜನರು ಆಗದ ಹೊರತು ಅಂತಃಕರಣದಿಂದ ಶುದ್ಧ ಭಾವದ ಜನಸೇವೆಯು ಎಂದೂ ಆಗುವದಿಲ್ಲ.

( ಮರಾಠಿ ನವಜೀವನ )

## ಶ್ರೀಮತೀ ಕಸ್ತೂರಿಬಾಯಿ ಗಾಂಧಿಯವರ ಸಂದೇಶವು.

( ಯಂಗ ಇಂಡಿಯಾ )

ನನ್ನ ಪ್ರೀತಿಯ ಮಗನಾದ ದೇವೀದಾಸನಿಗೆ ಬಂದಿವಾಸವು ವಿಧಿಸಲ್ಪಟ್ಟ ಮೇಲೆ ನನಗೆ ಸಮಾಧಾನ ಹೇಳುವದಕ್ಕಾಗಿ ಎಷ್ಟೋ ಜನರು ಪತ್ರ ಬರೆದಿರುವರು. ಈ ರೀತಿಯಾಗಿ ನನ್ನನ್ನು ಅನುಕಂಪಿಸಿದ ಕರುಣಾಳುಗಳಿಗೆ ನಾನು ತುಂಬಾ ಋಣಿಯಾಗಿದ್ದೇನೆ.

ನನ್ನ ಮಕ್ಕಳಲ್ಲಿ ಇಬ್ಬರೇ ಮಾತ್ರ ಜೇಲಿನಲ್ಲಿ ಇರುವರು. ಆದರೆ ಹಿಂದಮಾತೆಯ ಸಾವಿರಾರು ವೀರಪುತ್ರರು ಕಾರಾಗೃಹದಲ್ಲಿ ಕೊಳೆಯುತ್ತಿರುವರು. ಇಷ್ಟು ಜನ ತರುಣರು ಪುತ್ರವತ್ಸಲರಾದ ತಮ್ಮ ತಾಯಿಂದಿರಿಂದ ಅಗಲಿಸಲ್ಪಟ್ಟಿರಲು, ನನ್ನ ಮಕ್ಕಳಿಗಾಗಿ ಕಣ್ಣೀರು ಉದುರಿಸಲಿಕ್ಕೆ ನಾನೆಂತು ಬಾಧ್ಯಳು? ಆರ್ಯಾವರ್ತದ ಪ್ರಿಯಪುತ್ರರೇ, ಇಂಥ ಸ್ಥಿತಿಯಿಂದಲೇ ಸಮಾಧಾನಹೊಂದುತ್ತ ಇನ್ನೂ ಎಲ್ಲಿಯವರೆಗೆ ಸುಮ್ಮನೆ ಕೈಮುಚ್ಚಿಕೊಂಡು ಕೂಡ್ರುವಿರಿ! ಅಯ್ಯೋ! ಹಿಗ್ಗಿ ನೀವು ಎತ್ತರಗೊಳ್ಳುವಿದ್ದರೆ, ನೀವು ಜಾಗೃತರಾಗುವದಾದರೂ ಎಂದು? ಏಳಿರಿ, ಖಾದಿಯ ಪ್ರಸಾರದ ಕಾರ್ಯವನ್ನು ನಿಮ್ಮ ಕಾರ್ಯಕ್ಕೆ ಉಚಿತವಾದ ಉತ್ಸಾಹದಿಂದಲೂ ಸಾಹಸದಿಂದಲೂ ಸಾಗಿಸಿರಿ; ನಿಮ್ಮ ಬಂಧುಗಳನ್ನು ಜೇಲಿನಿಂದ ಮುಕ್ತರನ್ನಾಗಿ ಮಾಡಿರಿ. ಇಲ್ಲವೆ ಆ ಜೇಲುಗಳು ನಿಮ್ಮಿಂದ ತುಂಬಿ ಹೊರಚೆಲ್ಲುವಂತೆ ಮಾಡಿರಿ. ಈ ಪ್ರಕಾರ ಭರತಭೂಮಿಯ ಪ್ರಬಲ ಸುಪುತ್ರನಾಗಿಯು ಮರಣಗೂ. ತನ್ನ ಸ್ವಾಭಿಮಾನವನ್ನು ಕಾಯ್ದು ಕೊಳ್ಳಲಿಕ್ಕೆ ಹಿಂದುಸ್ಥಾನವು ಕಂಕಣಬದ್ಧವಾಗಿರುವದೆಂದು ಜಗತ್ತಿಗೆ ಸಾರಿ ಹೇಳಿರಿ.

---

## ಒಕ್ಕಲಿಗರಿಗೆ.

ಪ್ರಿಯ ಬಾಂಧವರೇ,

ಈ ಜಗತ್ತಿನಲ್ಲಿ ಒಕ್ಕಲಿಗರಿಂದ ಎಷ್ಟು ಉಪಕಾರವಾಗುವದೋ ಅಷ್ಟು ಅನ್ಯ ಯಾರಿಂದಲೂ ಆಗುವದಿಲ್ಲ. ಒಕ್ಕಲಿಗರಿಂದಲೇ ಎಲ್ಲರಿಗೂ ಅನ್ನವು ದೊರೆಯುವದು. ಆದ್ದರಿಂದಲೇ ಮಹಾತ್ಮಾಜಿಯವರು ಜಗತ್ತಿಗೆ ತಾಯಿ ತಂದೆಗಳು ಅರ್ಥಾತ್ ಪಾಲಕರೆಂದು ತಮ್ಮನ್ನು ಕರೆಯುವರು. ಆಹಹ! ಎಂಥ ಗೌರವಪೂರ್ಣ ಮತ್ತು ಯಥಾರ್ಥವಾದ ನಾಮವಿದು! ಇದರಿಂದ ತಮ್ಮ ದೊಡ್ಡಸ್ತಿಕೆಯು ಮಾತ್ರ ತೋರಿಬರುತ್ತದೆಂತಲ್ಲ; ಆದರೆ ತಾವು ಈ ಜಗತ್ತ್ರಿಯದ ಕುಟುಂಬದ ಸಲುವಾಗಿ, ಎಷ್ಟು ಕಷ್ಟಗಳನ್ನು ಅನುಭವಿಸುತ್ತೀರಿ ಎಂಬುವದಾದರೂ ವ್ಯಕ್ತವಾಗುತ್ತದೆ. ಒಂದು ಕುಟುಂಬದಲ್ಲಿ ಪ್ರೀತಿಯ ಚಿಕ್ಕ ಬಾಲಕರಿಗೆ ಯಾವದಾವದೊಂದು ವಸ್ತುವು ಬೇಕಾದರೆ, ಆ ವಸ್ತುವನ್ನು ದೊರಕಿಸಿಕೊಡಲಿಕ್ಕೆ ಎಷ್ಟು ಕಷ್ಟ ಸೋಸಬೇಕಾಗುವದು? ಎಷ್ಟು ಸಂಕಟಗಳಿಗೆ ಗುರಿಯಾಗಬೇಕಾಗುವದು? ಅದೇ ಪ್ರಕಾರ ತಾವು ಜಗತ್ತಿನ ಸಲುವಾಗಿ, ಅನ್ನವನ್ನು ದೊರಕಿಸುವಾಗ ಎಷ್ಟು ಸಂಕಟಗಳಿಗೆ ಒಳಗಾಗಬೇಕಾಗುವದು, ಎಷ್ಟು ಸ್ವಾರ್ಥ ತ್ಯಾಗವನ್ನು ಮಾಡಬೇಕಾಗುವದು, ಎಷ್ಟು ಕಷ್ಟಗಳನ್ನು ಸಹಿಸಬೇಕಾಗುವದು ಎಂಬುವದು ಸ್ಪಷ್ಟವಾಗಿ ಮಲಗಿಕೊಂಡು ವ್ಯರ್ಥ ವೇಳೆ ಕಳೆಯುವ ದೊಡ್ಡ ಜನರಿಗೆ ಹೇಗೆ ಗೊತ್ತಾದೀತು? ಒಕ್ಕಲಿಗರಿಗೆ ನಾವು ಅನ್ನದಾತ್ಯರೆಂದು ಕರೆದ ಮೇಲೆ ಸ್ವಲ್ಪವೂ ಗುಂಡಿಯೆಂದು ಕರೆದರೆ ಅನುಚಿತವಾಗುವದಿಲ್ಲ. ಬಾಕಂದರೆ ಅವರ ಕೆಲಸವು ದೇವರ ಪೂಜೆಯೇ ಇದ್ದ ಗೃಹಿಣಿಯರ ಕೆಲಸದಂತೆಯೇ ಇರುವದು. ಸ್ವಾಮಿಯ ಸಹಧರ್ಮಚಾರಿಣಿಯಾಗಿ, ತನ್ನ ಹಿತವನ್ನು ಚಿಂತಿಸುತ್ತಿರುವದೇ ಗೃಹಿಣಿಯ ಧರ್ಮವು ಅಲ್ಲವೇನು! ಈ ಸರಕಾರವು ಹೀಗೆ ಮಾಡುವದೇ? ನಮಗೆ ಊಟಕ್ಕೆ ಹಾಕಿ ಸಂರಕ್ಷಿಸುವವರ ಬಗ್ಗೆ ಕೃತಜ್ಞತೆಯು [illegible] ಈ ಸರಕಾರಕ್ಕೆ ಇದೆಯೇ? ಈ ಸರಕಾರದ ರಾಜ್ಯಭಾರವನ್ನು ತಪ್ಪು ತಲೆಯ [illegible] ಕೊಂಡದಿನಿಂದ ದಿನ ದಿನಕ್ಕೆ ಈ ದೇಶವು [illegible] ನಿರ್ಧನವಾಗುತ್ತದೆ. ಆದರೆ ಒಕ್ಕಲಿಗರು ಎಲ್ಲರಿಗಿಂತಲೂ ಹೆಚ್ಚು ದುರ್ಬಲರಾಗಿರುವರು. ಭರತಖಂಡದ ಧನಧಾನ್ಯ ಮತ್ತು ವಸ್ತ್ರಗಳ ತವರುಮನೆಯು, ಮತ್ತು ಇವೆಲ್ಲವುಗಳ ಉತ್ಪಾದಕರು ಒಕ್ಕಲಿಗರೇ; ಆದರೆ ಈಗ ಅವರು ಎಲ್ಲರಿಗಿಂತಲೂ ಹೆಚ್ಚು ದುರ್ಬಲರೂ ದರಿದ್ರರೂ ಆಗಿರುವರು. ಒಕ್ಕಲಿಗರು ಎಷ್ಟು ಅತ್ಯಾಚಾರಗಳಿಗೆ ಒಳಗಾಗುವರೆಂಬುವದನ್ನು ಹೇಳಲು ಕಾರಣವಿಲ್ಲ. ಅದು ಪ್ರತಿದಿವಸ ತಾವು ನೋಡುತ್ತಿರುವ ಸಂಗತಿಯು. ಒಬ್ಬ ಸಣ್ಣ ಸಿಪಾಯಿಯನ್ನು ನೋ

ಇಂಗ್ಲಂಡು ದೊಡ್ಡ ದೊಡ್ಡ ಗವ್ಹರ್ನರರ ವರೆಗೆ ಎಲ್ಲರನ್ನು ತೃಪ್ತಿಬಡಿಸುವವರಲ್ಲಿ ತಾವು ಬೇಸತ್ತು ಹೋಗಿರುವಿರಿ. ಯಾರು ಇಡೀ ಜಗತ್ತಿಗೆ ಅನ್ನದಾತೃಗಳಿರುವಿರೋ ಅಂಥ ತಾವು ಅನ್ನಕ್ಕೆ ನೀರು ನೀರು ಗತಿಯಾಗಿರುವಿರಲ್ಲವೇ! ಮತ್ತು ಯಾವ ತಾವು ಈ ಜಗತ್ತಿನಲ್ಲಿ ಸ್ತ್ರೀಪುರುಷರ ಶರೀರಗಳನ್ನು ವಸ್ತ್ರಗಳಿಂದ ಆಚ್ಛಾದಿಸುತ್ತ ಬಂದಿರುವಿರೊ, ಅಂಥ ತಮ್ಮ ಹೆಂಡಿರುಮಕ್ಕಳು, ಪರಕೀಯರ ಬಟ್ಟೆಗಳನ್ನುಟ್ಟುಕೊಂಡು, ಅರ್ಧ ನಗ್ನರಾಗಿ ದೇಶ ದೇಶ ತಿರುಗುತ್ತಿರುವರು. ಭಾರತಮಾತೆಯು, ತನ್ನ ಪ್ರೀತಿಯ ಮಕ್ಕಳು, ವೈಶಾಖ ಜ್ಯೇಷ್ಠಮಾಸಗಳಲ್ಲಿ ದುರ್ಬಲವಾದ ಎತ್ತುಗಳಿಂದ ಬಾಡಿದ ಮುಖದಿಂದ ಶರೀರವನ್ನು ಕಷ್ಟಬಡಿಸುತ್ತಿರುವದನ್ನು ನೋಡಲು, ಅವಳ ಹೃದಯವು ಒಡೆದು ನೀರಾಗಿ, ಅವಳ ಕಣ್ಣಿನಲ್ಲಿ ರಕ್ತದ ಹನಿಗಳು ತುಂಬಿ ಬರುವವು. ಆದರೆ ಭರತ ಮಾತೆಗೆ ಒಬ್ಬ ಯೋಗ್ಯ ಸುಪುತ್ರನು ಜನಿಸಿರುವನು. ತನ್ನ ಬಾಂಧವರ ದುಃಖಗಳೇ ತನ್ನ ದುಃಖಗಳೆಂದು ತಿಳಿಯುವ ಮತ್ತು ಭೂಮಾತೆಗೆ ಪ್ರೀತ್ಯಾಸ್ಪದನಾದ ಮಗನು ಹುಟ್ಟಿರುವನು. ತಾವು ಒಣ ರೊಟ್ಟಿಗಳನ್ನು ತಿನ್ನುವವನ್ನು ನೋಡಿ, ಎಲ್ಲ ತರದ ಮಿಷ್ಟಾನ್ನಗಳನ್ನು ತ್ಯಜಿಸಿದನು. ತಾವು ನಗ್ನತ್ವದಿಂದ ಬಿಸಿಲಲ್ಲಿ ಬಳಲುತ್ತಿರುವವನ್ನು ನೋಡಿ, ಅವನೂ ಸಹ ಬೆಲೆಯುಳ್ಳ ವಸ್ತ್ರಗಳನ್ನು ಬಿಟ್ಟು ಲಂಗೋಟಿಯನ್ನು ಹಾಕಹತ್ತಿರುವನು. ಹಗಲೆನ್ನಲಿಲ್ಲ, ರಾತ್ರಿಯೆನ್ನಲಿಲ್ಲ, ದೇಹದ ತುಂಬ ಅವಿಶ್ರಾಂತದಿಂದ ತಿರುಗಿ ತನ್ನ ದೇಶದ ಹಾಗೂ ಒಕ್ಕಲಿಗಬಾಂಧವರ ದುಃಖಗಳಿಗೆ ಉಪಾಯ ಚಿಂತಿಸಹತ್ತಿದನು. ಕೆಲವು ದಿವಸಗಳ ವರೆಗೆ ವಿಚಾರಮಗ್ನನಾಗಲು, ಅವನಿಗೆ ಕಟ್ಟಕಡೆಗೆ ಒಂದು ರಾಮಬಾಣ ಔಷಧವು ದೊರೆಯಿತು. ತಮ್ಮ ಪೂರ್ವಜರಾದ ತಂದೆ ಅಜ್ಜ ಮೊದಲಾದವರು ಧರಿಸುತ್ತಿದ್ದಂಥ ಶುದ್ಧಕೈನೂಲಿನ ಖಾದೀ ವಸ್ತ್ರವೇ ಈ ಔಷಧವು! ಎಂದಿನಿಂದ ನಾವು ಖಾದಿಯನ್ನು ಮರೆತುಬಿಟ್ಟೆವೋ, ಆ ಹೊತ್ತಿನಿಂದಲೇ ನಮ್ಮ ಮೇಲೆ ಸಂಕಟಗಳು ಪದೇ ಪದೇ ಬರಹತ್ತಿವೆ. ನಮ್ಮ ವ್ಯಾಪಾರವೆಲ್ಲ ಗೌರವರ್ಣದ ವ್ಯಾಪಾರಸ್ಥರ ಕಡೆಗೆ ಸಿಕ್ಕಿದ್ದರಿಂದ ನಾವು ನಮ್ಮ ರೊಟ್ಟಿ ಬಟ್ಟೆಗಳಿಗೂ ಸಹ ಅವರ ಅಧೀನರಾಗಿ ಬಿಟ್ಟಿರುವೆವು. ಈಗ ಹತ್ತು ಹದಿನೈದು ವರ್ಷಗಳಿಂದ, ಯಾರು ಬಹಳ ಕಷ್ಟಪಡಿಸಿ ಯಾವ ಪದಾರ್ಥಗಳನ್ನು ಬಾಜಾರದಿಂದ ಕೊಂಡುಕೊಳ್ಳುತ್ತಿದ್ದೆವೋ, ಅಂಥವರಿಗೆ ಈಗ ನಾಲ್ಕುಪಾಲು ಕ್ರಯವನ್ನು ಕೊಟ್ಟು, ಪರದೇಶೀ ಪದಾರ್ಥಗಳನ್ನು ಕೊಂಡುಕೊಳ್ಳಬೇಕಾಗುತ್ತದೆ. ಮತ್ತು ಈ ರೀತಿಯಿಂದ ಜನರ ಧನವೆಲ್ಲವೂ ವಿಲಾಯತಿಯ ವ್ಯಾಪಾರಿಗಳನ್ನು ಕೋಟ್ಯಾಧೀಶರನ್ನು ಮಾಡಿತು. ಈ ಮಾರ್ಗದಿಂದಲ್ಲ ನೋಡಿ, [illegible] ತಮಗೆ ಉಪದೇಶಿಸುತ್ತಾರೆ — ಬಾಂಧವರೇ, ಮತ್ಸರ ಮಬ್ಬಿನೆಡೆಗೆ [illegible] ಹೋಗುತ್ತದೆ. ಈ ಪಾಪವು ತಮ್ಮಲ್ಲಿ ಅಂತರವರೆಗೂ ಕೂಡಿಯೇ ಉಂಟು. ತಾವು ತಮ್ಮ ಪವಿತ್ರವಾದ ಅನ್ನವನ್ನು [illegible] ಅದರ [illegible] ತಮ್ಮದು. ತಾವು [illegible] ಒಗ್ಗಿ ನಡೆದಂತೆ, ದಬ್ಬಾಳಿಕೆಯನ್ನು [illegible] ಇದರ ಪರಿಣಾಮದಿಂದ ಅವರ [illegible] ಘೋರತರವಾಗುವದು. [illegible] ತಲೆಯ ಮೇಲಾದರೂ ಬರುವದು. [illegible] ತಮ್ಮ [illegible] ಆಗಬೇಕು. ಪರದೇಶೀ ಅರಿವೆಗಳನ್ನು ಬಿಟ್ಟು ಖಾದಿಯನ್ನೇ ಧರಿಸುವ ಪ್ರತಿಜ್ಞೆಯನ್ನು ಮಾಡಿರಿ. ಪೂರ್ಣವಾಗಿ ಶಾಂತತೆಯನ್ನು ಕಾಪಾಡಿರಿ. ಅನ್ಯಾಯಗಳಿಗೆ ಪ್ರತೀಕಾರ ಮಾಡಿರಿ. ತಮ್ಮ ಶಕ್ತಿಗೆ ಪಾರವೇ ಇಲ್ಲ. ಜಗತ್ತಿನಲ್ಲಿ ಇಂಥ ದೊಡ್ಡ ಜನಸಮೂಹವು, ತಮ್ಮ ಇಚ್ಛೆಯಿಲ್ಲದೆ, ದಾಸರಾಗಿಯೂ ಪೀಡಿತರಾಗಿಯೂ ಉಳಿಯುವದು ಶಕ್ಯವಿಲ್ಲ. ಅವರು ಹಿಡಿದ ಮಾರ್ಗದಲ್ಲಿ —ಸನ್ಮಾರ್ಗದಲ್ಲಿ ಪ್ರತಿರೋಧವನ್ನು ಮಾಡುತ್ತಿರುವ ದೊಡ್ಡ ರಾಜ್ಯಶಕ್ತಿಗೂ ಎಲ್ಲಕ್ಕಿಂತ ಕಠಿಣವಾದ ಬಾಹುಬಲಕ್ಕೂ ಆ ತಮ್ಮ ಅಸಾಧಾರಣವಾದ ಆತ್ಮತೇಜದ ಎದುರಿನಲ್ಲಿ ಅವಶ್ಯವಾಗಿ ತಲೆಬೊಗ್ಗಿಸಬೇಕಾಗುವದು.—ತಮ್ಮ ಅನ್ಯಾಯಗಳನ್ನೆಲ್ಲ ಬಿಟ್ಟುಕೊಡಬೇಕಾಗುವದು — ದುರ್ಮಾರ್ಗದಿಂದ ನಿವೃತ್ತರಾಗಬೇಕಾಗುವದು.

ಖಾದಿಯಲ್ಲಿ ಅಪಾರವಾದ ಶಕ್ತಿಯನ್ನು ಪರಮಾತ್ಮನು ಈ ಜಗತ್ತಿನಲ್ಲಿ ಸ್ಥಾಪಿಸಿಟ್ಟಿರುವನು. ಅದೇ ನಮ್ಮ ಬಲವು. ಅದೇ ಈ ಸರಕಾರದ ಮರಣವು. ಅದೇ ಸ್ವತಂತ್ರತೆಯು. ಅದೇ ಸ್ವರಾಜ್ಯವು. ಅದರಲ್ಲಿಯೇ ನಮ್ಮೆಲ್ಲರ ಐಕ್ಯವಿರುವದು. ಮತ್ತು ಅದರಿಂದಲೇ ಅಸ್ಪೃಶ್ಯ ಬಾಂಧವರ ಉದ್ಧಾರವಾಗುವದು. ಧನಧಾನ್ಯ ಸಮೃದ್ಧಿಯಾದರೂ ಅದರಲ್ಲಿಯೇ ಅತಕವಾಗಿರುವದು. ಅದೇ ಸರ್ವರೋಗಗಳಿಗೆ ಔಷಧವು. ತಾವು ವರ್ಷದಲ್ಲಿ ನಾಲ್ಕು ತಿಂಗಳಗಳವರೆಗೆ ಕೆಲಸಿಲ್ಲದೇ ಇರುವಿರಿ. ತಮ್ಮ ಹೆಂಡರೂ, ಮಕ್ಕಳೂ, ಅಕ್ಕತಂಗಿಯರೂ, ತಮ್ಮ ವೇಳೆಯನ್ನು ಒಣ ಹರಟೆಯಲ್ಲಿ ಕಳೆಯುತ್ತಿರುವರು. ಆ ವೇಳೆಯಲ್ಲಿ ರಾಟಿಯನ್ನು ತಿರುಗಿಸಿ, ಅದರ ಸ್ವರದಲ್ಲಿ ಸ್ವರವನ್ನು ಕೂಡಿಸಿ, ತಮ್ಮ ಆರ್ತಧ್ವನಿಯನ್ನು ಪರಮಾತ್ಮನ ದರಬಾರಕ್ಕೆ ಮುಟ್ಟಿಸಿರಿ. ಇದರಿಂದ ತಮಗೆ ಆತ್ಮಿಕ ಹಾಗೂ ಆರ್ಥಿಕವೆಂಬ ಎರಡೂ ಬಲವು ದೊರಕುವದು. ಮತ್ತು ತಮ್ಮ ಹಾಗೂ ತಮ್ಮ ಸಂಗಡ ಇಡೀ ಭರತಖಂಡದ ಉದ್ಧಾರವಾದರೂ ಆಗುವದು.

ನೋಡಿರಿ, ಸ್ವರಾಜ್ಯದ ಅರುಣೋದಯವು ಪೂರ್ವದಿಕ್ಕಿನಲ್ಲಿ ತೋರಹತ್ತಿದೆ. ದಾಸ್ಯದ ರಾತ್ರಿಯ ಅಂತವು ಆಗಹತ್ತಿದೆ. ಆದರೆ ಈ ವೇಳೆಯಲ್ಲಿಯೇ, ಅಸುರರ ನಿಸ್ಸೀಮವಾದ ಮಾಯೆಯಾದರೂ ಹಬ್ಬಿರುವದು. ಧೈರ್ಯದಿಂದ ಯುದ್ಧಮಾಡುವ ವೇಳೆಯಿದು. ಸ್ವಲ್ಪ ತಡೆದರೆ, ನಮ್ಮ ವಿಜಯವು ಸಿದ್ಧವಾಗಿದೆ. ಮತ್ತು ತಾವು ಬಾಂಧವನಾದ ಮಹಾತ್ಮಾ ಗಾಂಧಿಯನ್ನು— ಯಾವ ಗಾಂಧಿಗೆ ಒಕ್ಕಲಿಗನೆಂದು ಹೇಳಲು ಅಭಿಮಾನವೆನಿಸುವದೋ ಅಂಥವನನ್ನು—ಕಾರಾಗೃಹದಿಂದ ಬೇಗನೆ ಬಿಡಿಸುವಿರಿ. ನಾವು ನಮ್ಮ ಬಳಗದ ೨೫ ಸಾವಿರ ಬಾಂಧವರನ್ನು ಜೇಲಿನಿಂದ ಮುಕ್ತಮಾಡಿ, ರಾಮರಾಜ್ಯವನ್ನು ಸ್ಥಿರಪಡಿಸಬೇಕಾಗಿರುವದು. ಹಾಗು ಈ ಜಗತ್ತಿನಲ್ಲಿ ನಮ್ಮ ಇಬ್ರತಿಯನ್ನು ಕಾಯ್ದುಕೊಂಡಿರಬೇಕಾಗುವದು. ಅದರಂತೆಯೇ ನಮ್ಮ ತಾಯಂದಿರ ಹಾಗೂ ಅಕ್ಕತಂಗಿಯರ ಮಾನವನ್ನು ರಕ್ಷಿಸಬೇಕಾಗಿದೆ. ಅದ್ದರಿಂದ—

(೧) ಕಾಂಗ್ರೆಸದ ಸಭಾಸದರಾಗಿರಿ.
(೨) ಟಿಳಕ ಸ್ವರಾಜ್ಯನಿಧಿಗೆ ಹಣವನ್ನು ಕೊಡಿರಿ
(೩) ಖಾದಿಯನ್ನು ಧರಿಸಿರಿ, ರಾಟಿಯನ್ನು ತಿರುಗಿಸಿರಿ.
(೪) ನಿಮ್ಮನಿಮ್ಮೊಳಗೆ ಐಕ್ಯವನ್ನು ಕಾಯಿರಿ ಮತ್ತು
(೫) ಸಂಪೂರ್ಣವಾಗಿ ಶಾಂತತೆಯನ್ನು ರಕ್ಷಿಸಿರಿ.

ಸಾಕು ಇಷ್ಟು ಮಾಡುವದರಿಂದಲೇ ತಮ್ಮ ಎಲ್ಲ ವಿಪತ್ತುಗಳು ದೂರವಾಗುವವು. ತಾವು ತಮ್ಮ ಮನೆಯ ನಿಜವಾದ ಒಡೆಯರಾಗುವಿರಿ. ಮತ್ತು ಭಾರತ ಮಾತೆಯ ಹಣೆಯಲ್ಲಿರುವ ದಾಸ್ಯದ ಕಳಂಕವನ್ನು ಶಾಶ್ವತವಾಗಿ ಇಲ್ಲದಂತೆ ಮಾಡುವಿರಿ.

—ನವಜೀವನ

ಆರು ತಿಂಗಳ ವರ್ಗಣೀದಾರರಿಗೆ
ಸೂಚನೆಯು

ಕನ್ನಡ ನವಜೀವನದ ಪ್ರಾರಂಭದಿಂದ, ಆರು ತಿಂಗಳ ಮಟ್ಟಿಗೆ ಮಾತ್ರ ವರ್ಗಣಿ ದಾರರಾದವರ ಹಣವು ಬಂದಿದ್ದು ನಾಳಿನ ಸಂಚಿಕೆಗೆ ಮುಟ್ಟುವದು. ಆದ್ದರಿಂದ ಆ ಚಂದಾದಾರರು ಈ ಮುಂದೆ ವರ್ಗಣೀದಾರರಾಗಿ ಉಳಿದ, ತಮ್ಮ ವರ್ಗಣಿ ಹಣವನ್ನು ( ಅಂದರೆ ೪ ರೂಪಾಯಿಗಳನ್ನು ) ಆದಷ್ಟು ತ್ವರೆಯಿಂದ ಮನಿಆರ್ಡರು ಮಾಡಿ ಕಳುಹಿಸಬೇಕೆಂದು ಪ್ರಾರ್ಥನೆಯದೆ.

ವ್ಯವಸ್ಥಾಪಕ.

# ಕನ್ನಡ ನವಜೀವನ.

ವೈಶಾಖ ವದ್ಯ ೩ ಗುರುವಾರ ಶಕೆ ೧೮೪೪.

## ತೆಗಲು.

( ಯಂಗ ಇಂಡಿಯಾ )

**ಮತ್ತು ಇಂಗ್ಲೀಷರ ಸಂಬಂಧ** ಇಂಗ್ಲಂಡಗೂ ಹಿಂದುಸ್ತಾನಕ್ಕೂ ಇರುವ ಸಂಬಂಧವನ್ನು ಕಡಿದು ಹಾಕಲೇಬೇಕೆಂಬ ಉದ್ದೇಶದಿಂದ ಯಾರೂ ಅದನ್ನು ಕಡಿಯುವದಿಲ್ಲ. ಇಂಗ್ಲೀಷರ ಧೋರಣವು ಮುಸಲ್ಮಾನರ ಖಿಲಾಫತ್ ಪ್ರಶ್ನೆಯ ಬಗ್ಗೆ ವಿರುದ್ಧವಾಗಿದ್ದರೆ, ಅಥವಾ ಪಂಜಾಬದ ಬಗ್ಗೆ ಹಿಂದಿ ಜನರ ಭಾವನೆಗೆ ವಿರುದ್ಧವಾಗಿದ್ದರೆ, ಇಂಗ್ಲಂಡದ ಸಂಬಂಧವನ್ನು ಕಡಿದುಕೊಂಡು ಹಿಂದುಸ್ತಾನವು ಸ್ವಾತಂತ್ರ್ಯವನ್ನು ದೊರಕಿಸಬೇಕು. ಎಂಥ ಪ್ರಸಂಗಬಂದರೂ ಎರಡೂ ರಾಷ್ಟ್ರಗಳು ಪರಸ್ಪರರ ಪ್ರೀತಿ ಆದರ ಭಾವಗಳಿಂದ ಕೂಡಿಕೊಂಡು, ಸಮಾನಸ್ಕಂಧರಾಗಿರತಕ್ಕದ್ದು.

**ಹಿಂದುಸ್ತಾನವು ಇದಕ್ಕೆ ಪಾತ್ರವಾಗಿದೆಯೋ?** ಕಾಲನೇ ಇದನ್ನು ಸಿದ್ಧಮಾಡಿ ತೋರಿಸುವನು. ಹಿಂದುಸ್ತಾನವು ಇದಕ್ಕೆ ಪಾತ್ರವಿದೆಂದು ನನ್ನ ವಿಶ್ವಾಸವಿದೆ.

ಕಾಂಗ್ರೆಸ್ಸವು ಬೇಡುವಂಥ ಸ್ವರಾಜ್ಯವು ಇಂಗ್ಲೀಷರಿಂದ ನಮಗೆ ಲಭಿಸತಕ್ಕದ್ದಲ್ಲ. ದಕ್ಷಿಣ ಆಫ್ರಿಕದಂತೆ, ಹಿಂದೀ ರಾಷ್ಟ್ರವು ಇಂಥ ಸ್ವರಾಜ್ಯವು ಬೇಕೆಂಬದನ್ನು ನಿಶ್ಚಯಿಸಿ ಅದನ್ನು ದೊರಕಿಸಿಕೊಂಡೇ ಬಿಡತಕ್ಕದ್ದು.

× + × × × × ×

**ಘೋತರವೂ ಉಪ್ಪರಣೆಯೂ** ಈಗ್ಗೆ ಒಳ್ಳೇ ಕುಂಪು ಮಾತ್ರ ಒದಗಿಬಂದಿದೆ. ಧೋತರವನ್ನು ಉಪರಣೆಯನ್ನೂ ಧರಿಸಿಕೊಂಡು, ಓರ್ವ ಕೌನ್ಸಿಲರನು ಕೌನ್ಸಿಲಿಗೆ ಹೋಗಿ ಬಂಗಾಲೀ ಭಾಷೆಯಲ್ಲಿ ಪ್ರತಿಜ್ಞೆಯನ್ನು ಮಾಡುವೆನೆಂದು ಕೌನ್ಸಿಲದಲ್ಲಿ ನಿಶ್ಚಿತವಾಗಿ ಹೇಳಿದನಂತೆ. ಈ ಧೈರ್ಯವನ್ನು ತೋರಿಸಿದ್ದಕ್ಕಾಗಿ ಆ ಕೌನ್ಸಿಲರನನ್ನು ನಾವು

ಅಭಿನಂದಿಸತಕ್ಕದ್ದು. ಪ್ರತಿಯೊಂದು ಸಮಾರಂಭದಲ್ಲಿಯೂ ನಮ್ಮ ರಾಷ್ಟ್ರೀಯ ಉಡಪನ್ನು ಧರಿಸಿಕೊಳ್ಳುವದೇ ಸ್ವಾಭಾವಿಕವಾದ ಸಂಗತಿಯು. ಕೌನ್ಸಿಲಿಗೆ ಹೋಗತಕ್ಕವರೇ ನಾವು ಎಂದು [illegible] ಅಭಿಪ್ರಾಯವನ್ನು ಅನೇಕ [illegible] ಒಡಿಗೊತ್ತಿದಂಥ [illegible] ಕೌನ್ಸಿಲಿನ [illegible] ವಿಷಯಗಳಲ್ಲಿ [illegible] ಗಡ [illegible] ತೋರಿಸಲು [illegible] ಸಂಗತಿಗಳಲ್ಲಿ ಸಹಕಾರವನ್ನು ನಾವೇ ತೀರುವದೆಂದು ಅತಿ [illegible] ಸುತ್ತೇನೆ [illegible] ಕೊಂಡ. [illegible] ತ್ರಭಾಷೆಯಲ್ಲಿ [illegible] ನಿಶ್ಚಯಿಸಿ, [illegible] ದಿಂದ ಕೌನ್ಸಿಲಿನಲ್ಲಿ ಆ [illegible] ದರೆ [illegible] ರಾಷ್ಟ್ರಕ್ಕೆ [illegible] ಸೆಯನ್ನು [illegible] ನಮ್ಮ [illegible] ಜನರು ಇಂಗ್ಲಿಷಿನಲ್ಲಿ [illegible] ದವಕ್ಕಿಂತ, ಸ್ವಕೀಯ ಜನರಾದ ಇಂಗ್ಲೀಷರೇ ನಮ್ಮ ದೇಶಭಾಷೆಗಳಲ್ಲಿ ಮಾತನಾಡುವದು ಬಹಳೇ ಹಗುರಾಗುವದು

**–ಮೋಹನದಾಸ ಕರಮಚಂದ ಗಾಂಧೀ.**

## ಪ್ರಶ್ನೋತ್ತರಗಳು.

(ಕರ್ನಾಟಕದ ಸಿಂಹವೆಂದೆನಿಸಿಕೊಳ್ಳುವ ದೇ. ಭ. ಗಂಗಾಧರರಾವ ದೇಶಪಾಂಡೆಯವರ ಮತ್ತು ನವಜೀವನ ಪತ್ರದ ಪ್ರತಿನಿಧಿಯ ನಡುವೆ ಆದ ಪ್ರಶ್ನೋತ್ತರಗಳನ್ನು ಕನ್ನಡ ವಾಚಕರಿಗಾಗಿ ಇಲ್ಲಿ ಕೊಡುವೆವು. **–ಸಂಪಾದಕ.**)

ಪ್ರ— ಜೇಲಿನಲ್ಲಿ ನಿಮ್ಮ ಪ್ರಕೃತಿಯು ಹೇಗೆ ಇತ್ತು?

ಉ— ವಿಜಾಪೂರ ಜೇಲಿನಲ್ಲಿ ಇರುವವರೆಗೆ ನನ್ನ ಪ್ರಕೃತಿಯು ಚನ್ನಾಗಿ ಇತ್ತು. ನನ್ನನ್ನು ಯರವಡೆಗೆ ತಂದಮೇಲೆ, ಅಲ್ಲಿಯ ಮೇಲಧಿಕಾರಿಗಳಿಗೆ ನನಗೆ ವಿಜಾಪೂರ ಜೇಲಿನಲ್ಲಿ ಸಿಗುತ್ತಿದ್ದ ಆಹಾರವನ್ನು (ಅನ್ನ, ಹಾಲು ಮತ್ತು ರೋಟಿ) ಕೊಡಲಿಕ್ಕೆ ಕೇಳಿದೆನು. ಈ ಆಹಾರದಿಂದ ನನ್ನ ಪ್ರಕೃತಿಗೆ ಆರಾಮವಾಗಿ ನನಗೆ ಯಾವತರದ ಅಸ್ವಾಸ್ಥ್ಯವು ಆಗುವದಿಲ್ಲೆಂದು ಹೇಳಿದೆನು. 'ಇದು ಮಾನಾವಳಿಯಲ್ಲ' ಎಂದು ಉತ್ತರವು ದೊರೆಯಿತು; ಆಮೇಲೆ ಯಾವದನ್ನಾದರೂ ಬೇಡುವ ವಿಚಾರವನ್ನು ಬಿಟ್ಟುಕೊಟ್ಟೆನು. ನನಗೆ ಅರ್ಧವಾದ (ಪದರುಗಳು ಇಲ್ಲದಂಥ) ಗೋದಿಯ ರೊಟ್ಟಿಯನ್ನೂ ಜೇಲಿನ ಎಲ್ಲ ಜನರಿಗೆ ಕೊಡುವ ಆಹಾರವನ್ನೂ ಕೊಡಹತ್ತಿದರು. ಇವರ ಪರಿಣಾಮದಿಂದ ನನ್ನ ಪುಪ್ಪುಸವು ಕೆಟ್ಟಿತು. ನನಗೆ 'ಅನೀಮಿಯಾ' (ರಕ್ತಶೋಷಣೆ) ಆದದ್ದು ಡಾಕ್ಟರರು ಕಂಡುಹಿಡಿದರು. ನನ್ನ ತೂಕವು ೧೬ ಪೌಂಡು ಕಡಿಮೆಯಾಯಿತು. ಆದ್ದರಿಂದ, ನನ್ನನ್ನು ದವಾಖಾನೆಯಲ್ಲಿಡದಿದ್ದರೂ ರೋಗಿಗಳ ಆಹಾರವನ್ನು ಕೊಡಲಿಕ್ಕೆಹತ್ತಿದರು. ಈ ಮೂರುತಿಂಗಳ ವರೆಗೆ ನನ್ನನ್ನು ಅದೇ ಆಹಾರದ ಮೇಲೆ ಇಟ್ಟಿದ್ದರಿಂದ ನನ್ನ ತೂಕವು ಪುನಃ ೮ ಪೌಂಡು ಹೆಚ್ಚಾಯಿತು.

### ಮಹಾತ್ಮರಸಂದರ್ಶನ

ಪ್ರ— ಜೇಲಿನಲ್ಲಿ ಮಹಾತ್ಮರ ದರ್ಶನದ ಸಂಧಿಯೇನಾದರೂ ದೊರಕಿತೋ?

ಉ— ಒಂದು ದಿವಸ ಸುಪರಿಂಟೆಂಡೆಂಟ ಸಾಹೇಬರ ತಲೆಯಲ್ಲಿ ಎಲ್ಲ ರಾಜಕೀಯ ಕೈದಿಗಳನ್ನು ಕರೆದು ನಮ್ಮ ನಡಾವಳಿಯ ವಿಷಯವಾಗಿಯೂ, ಕಾರಾಗೃಹದಲ್ಲಿ ನಮಗೆ ಸಿಗುತ್ತಿದ್ದ ಸವಲತ್ತುಗಳ ವಿಷಯವಾಗಿಯೂ ಅವಮಾನಕರವಾದ ಪ್ರಶ್ನೆಗಳನ್ನು ಮಾಡಬೇಕೆಂಬ ಹುಚ್ಚು ಹೇರಿದಂತೆ ತೋರುತ್ತದೆ. ಇದರಿಂದ ಒಮ್ಮೆ ಮಹಾತ್ಮಾಜೀಯವರನ್ನೊಳಗೊಂಡು ನಾವೆಲ್ಲರೂ ಒಂದೇಕಡೆಯಲ್ಲಿ ಕೂಡುವ ಪ್ರಸಂಗ ಬಂದಿತು. ಸುಪರಿಂಟೆಂಡೆಂಟರ ವರ್ತನವು ನಮಗೆ ಎಷ್ಟೋ ನೀರಲಿಲ್ಲೆಂಬವನ್ನು ಬೇರೆ ಹೇಳುವ ಆವಶ್ಯಕತೆಯಿಲ್ಲ. ನಮ್ಮ ಸಂಬಂಧವಾಗಿ ಎಲ್ಲವೂ ರಜಿಸ್ಟರದಲ್ಲಿ ನಮೂದುಮಾಡಲ್ಪಟ್ಟದ್ದರಿಂದ ನಮ್ಮಕಿಂತ ನಿಮಗೇ ಹೆಚ್ಚು ಗೊತ್ತಿರುತ್ತದೆಂದು ನಾವು ಅವರಿಗೆ ಹೇಳಿದೆವು. ಅವರ ಪ್ರಶ್ನೆ[illegible] ಸಂಪೂರ್ಣವಾಗಿ ಅಪ್ರಾಸಂಗಿಕವಾಗಿದ್ದವು.

[illegible] ದಿವಸ ಮುಕ್ಕಾಲು ತಾಸಿನ ವರೆಗೆ ಮಹಾತ್ಮಾಜೀಯವರನ್ನು ನೋಡುವ ಸಂಧಿಯು [illegible] ನನ್ನನ್ನು ಇಂಜೆಕ್ಷನ ಸಲುವಾಗಿ ದವಾಖಾನೆಗೆ [illegible] ನನಗೆ ಎಷ್ಟೋ [illegible] ಮಹಾತ್ಮಾಜೀಯವರ ದರ್ಶನವು ದೂರಿನಿಂದ ಆಯಿತು. ನನ್ನ ಬಿಡುಗಡೆಯಾಗುವ ಕಾಲಕ್ಕೆ ಮಹಾತ್ಮಾಜಿಯವರ ದರ್ಶನ ಲಾಭವನ್ನು ತೆಗೆದುಕೊಳ್ಳುತ್ತೇನೆ ಸುಪರಿಂಟೆಂಡೆಂಟರ ಅಪ್ಪಣೆಯನ್ನು ಕೇಳಲು ಅವರು ನಿರಾಕರಿಸಿದರು. ನಾನು ಕೇವಲ ಪ್ರಣಾಮವನ್ನು ಮಾಡುವೆನಲ್ಲದೆ ಚಕಾರ ಶಬ್ದವನ್ನಾದರೂ ಮಾತಾಡುವದಿಲ್ಲವೆಂದು ಆಶ್ವಾಸನೆಯನ್ನು ಕೊಟ್ಟರೂ ಕೇಳಲಿಲ್ಲ. ಜೇಲಿನ ನಿಯಮಗಳಿಗೆ ಇದು ವಿರುದ್ಧವಾಗುವದಂತೆ!

ಪ್ರ.— ಮಹಾತ್ಮಾಜೀಯವರ ಪ್ರಕೃತಿಯು ಆಗ ಹೇಗೆ ಇತ್ತು?

ಉ— ನಿಮ್ಮ ಪ್ರಕೃತಿಯು ಹೇಗೆ ಇರುತ್ತದೆಂದು ನಾನು ಅವರಿಗೆ ಕೇಳಿದೆನು. ತಮಗೆ ಆರೋಗ್ಯವಾಗಿರುವದೆಂದು ಅವರು ಉತ್ತರವನ್ನಿತ್ತರು. ಮೊದಲು ಅವರು ಔಡಲ ಎಣ್ಣೆಯನ್ನು (Casteroil) ತಗೆದುಕೊಳ್ಳಬೇಕೆಂದು ಮಾಡಿದ್ದರಂತೆ. ಆದರೆ ಏನೆನಾದ ಉಪಯೋಗ ಮಾಡಬೇಕೆಂದು ಹಿಂದಿನಿಂದ ನಿಶ್ಚಯಿಸಲಾಗಿ, ಅದು ಅವರಿಗೆ ದೊರೆತಿತು. ವರ್ತಮಾನಪತ್ರಗಳಲ್ಲಿ ಪ್ರಸಿದ್ಧವಾದಂತೆ ಅವರ ಪುಪ್ಪುಸದಲ್ಲಿ ವಿಕಾರವಾಗಿರುವದೆಂದು ನನಗಂತೂ ತೋರುವದಿಲ್ಲ.

ಪ್ರ— ಶಂಕರಲಾಲ ಬ್ಯಾಂಕರರ ಬಗ್ಗೆ ಏನಾದರೂ ವೃತ್ತಾಂತವಿರುವದೇ?

ಉ— ಆ ದಿವಸವೇ ಅವರ ಭೆಟ್ಟಿಯನ್ನು ನಾನು ತೆಗೆದುಕೊಂಡೆನು. ಅವರ ತೂಕವು ಕಡಿಮೆಯಾಗಿದೆಂದು ನನಗೆ ತಿಳಿದುಬಂತು. ಅವನು ಸ್ವಲ್ಪ ಬಡಿದಂತೆ ಕಾಣುತ್ತಿದ್ದನು; ಆದರೆ ಅವನು ಒಳ್ಳೇ ಉಲ್ಹಾಸವೃತ್ತಿಯಲ್ಲಿದ್ದನು.

ಪ್ರ— ನಿಮ್ಮ ಮುಂದಿನ ಕಾರ್ಯದ ದಿಗ್ದರ್ಶನವನ್ನು ಸ್ವಲ್ಪ ಮಾಡುವಿರಾ?

ಉ— ನನ್ನ ಕಾರ್ಯಕ್ರಮವೇ– ಏಕೆ, ಮೊದಲಿನಂತೆಯೇ ಅದೆ. ಆದರೆ ನಾನು ಅದನ್ನು ಹೆಚ್ಚು ಉತ್ಸಾಹದಿಂದ ಮುಂದೆ ಸಾಗಿಸಬೇಕಾಗಿದೆ. ಇದರ ಹೊರ್ತು ಮತ್ತೇನು ಇರಬೇಕು?

### ಕೌನ್ಸಿಲಗಳಲ್ಲಿ ಸೇರಬೇಕೆಂಬ ಸೂಚನೆಗಳು–

ಪ್ರ— ಅಸಹಕಾರಿಗಳು ಕೌನ್ಸಿಲಗಳಲ್ಲಿ ಸೇರಬೇಕೆಂಬ ವಿಚಾರಕ್ಕೆ ತಮ್ಮ ಅಭಿಪ್ರಾಯವೇನು?

ಉ— ಛೆ ಇಲ್ಲ. ತತ್ವದ ಸಲುವಾಗಿಯಾಗಲಿ ಅಥವಾ ಪರಿಸ್ಥಿತಿಯ ಸಲುವಾಗಲಿ, ನಾವು ಕೌನ್ಸಿಲಗಳಲ್ಲಿ ಹೋಗಲಾರೆವು. ಸರಕಾರವು ಸ್ವಲ್ಪವಾದರೂ, ತನ್ನ ಧೋರಣವನ್ನು ಬದಲುಮಾಡಿರುವದಿಲ್ಲ. ಅಥವಾ ದಬ್ಬಾಳಿಕೆಯನ್ನಾದರೂ ಕಡಿಮೆಮಾಡಿರುವದಿಲ್ಲ. ಅಂದಮೇಲೆ ನಮ್ಮ ಕಾರ್ಯಕ್ರಮವನ್ನು ನಾವು ಹೇಗೆ ಬದಲಾಯಿಸಬೇಕು? ಹಾಗೆಮಾಡುವದೆಂದರೆ ನಮ್ಮ ಅವನತಿಯೇ.

ಸರಕಾರವು ಇಷ್ಟು ಬಲವತ್ತರವಾದ ಧೋರಣವನ್ನು ಧಾರಣಮಾಡಿದ ಕಾಲದಲ್ಲಿ ನಾವು ಕೌನ್ಸಿಲಗಳಲ್ಲಿ ಪ್ರವೇಶಿಸುವದೆಂದರೆ ತೀರ ನೀಚತನವು. ಅವರು ಮಹಾತ್ಮರನ್ನು ತುರಂಗಕ್ಕೆ ಅಟ್ಟಿದರು. ಅಲಿಬಂಧುಗಳು, ಲಾಲಾಜಿ, ನೆಹರು, ದಾಸ ಮುಂತಾದವರು ಕಾರಾಗೃಹದಲ್ಲಿರುವರು. ಇಂಥ ಸಮಯದಲ್ಲಿ ನಾವು ನಮ್ಮ ದೈನ್ಯಭಾವವನ್ನು ವ್ಯಕ್ತಪಡಿಸುವದಾದರೂ ಹೇಗೆ? ನಮ್ಮ ಕಾರ್ಯಕ್ರಮದಲ್ಲಿ ಕೌ

ನ್ಸಿಲಗಳ ಮೇಲಿನ ಬಹಿಷ್ಕಾರವೇ ಪೂರ್ಣ ರೀತಿಯಿಂದ ಯಶಸ್ವಿಯಾಗಿದೆಂದು ನನಗೆ ಅನಿಸುತ್ತದೆ. ಇಂಥ ಜಯವನ್ನು ನಾವೇಕೆ ನಾಶಪಡಿಸಬೇಕು?

ದಾಸ, ನೆಹರು, ಲಾಲಾಜಿ ಮತ್ತು ಉಳಿದ ಮುಖಂಡರು ತಿರುಗಿ ಬಂದ ಬಳಿಕ, ನಮ್ಮೆಲ್ಲರ ಮನಸ್ಸಿಗೆ ಬಂದರೆ ಪರಿಸ್ಥಿತಿಯನ್ನು ವಿಚಾರಿಸೋಣ. ಈಗ ವೃತ್ತಪತ್ರಗಳಲ್ಲಿ ನಡೆದ ಟೀಕೆಗಳಿಂದ, ನಮ್ಮ ದೇಶಕ್ಕೆ ಬಹಳೇ ಅಹಿತವಾದೀತೆಂದು ನನಗೆ ಅನಿಸುತ್ತದೆ. ಆದ್ದರಿಂದ ಅದು ಈಗಿಂದೀಗಲೇ ಬಂದಾಗಬೇಕು.

ಪ್ರ:— ಆದರೆ ಮಹಾರಾಷ್ಟ್ರದಲ್ಲಿಯ ಎರಡೂ ಪಂಗಡಗಳಲ್ಲಿ ಐಕ್ಯವುಂಟಾಗದಿದ್ದ ಪಕ್ಷದಲ್ಲಿ, ಎರಡೂ ಬಣದವರಿಗೆ ತಾವು ಮಾಡತಕ್ಕ ಉಪದೇಶವಾವುದು?

ಉ:— ಹೊಸ ಚುನಾವಣೆಯಾಗಲಿಕ್ಕೆ ಇನ್ನು ೧॥ ವರ್ಷಗಳ ಅವಧಿ ಇರುವದೆ. ಸರಕಾರದ ಮನಸ್ಸಿಗೆ ಬಂದರೆ, ಅದನ್ನು ಮತ್ತೊಂದು ವರ್ಷ ಕಟ್ಟಿಗೆ ಹಾಕಬಹುದು. ಆದ್ದರಿಂದ ಕೌನ್ಸಿಲಗಳ ಪ್ರವೇಶದ ಬಗ್ಗೆ ವೃಥಾ ಚರ್ಚಿಸುತ್ತ ಕೂಡ್ರುವದಕ್ಕಿಂತ, ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮವನ್ನು ಯಶಸ್ವಿ ಮಾಡುವದರಲ್ಲಿ ನಮ್ಮ ಉತ್ಸಾಹವನ್ನು ಖರ್ಚು ಮಾಡತಕ್ಕದ್ದು. ಹೊಸ ಚುನಾವಣೆಯ ಪೂರ್ವದಲ್ಲಿಯೇ ಸರಕಾರದವರು ಸಂಧಿಗೆ ಬರುವ ಸಂಭವವುಂಟು. ಆಮೇಲೆ ಭಿನ್ನಾಭಿಪ್ರಾಯಗಳಿಗೆ ಆಸ್ಪದವಿಲ್ಲದಂತಾಗುವದು. ಮಹಾತ್ಮರನ್ನು ಬಿಡುಗಡೆ ಮಾಡಬೇಕಾದರೆ, ಕೌನ್ಸಿಲಗಳ ಪ್ರಶ್ನೆಯು ವಿಶೇಷ ಮಹತ್ವವಾದದ್ದಲ್ಲವೆಂದು, ನನಗೆ ಅನಿಸುತ್ತದೆ. ಆದರೆ ಅವರ ಇಚ್ಛೆಯಂತೆ, ಕೆಲಸ ಮಾಡಿ ಅವರನ್ನು ಬಂಧಮುಕ್ತ ಮಾಡಬೇಕು.

ಪ್ರ:— ಅಸಹಕಾರಿಗಳು ಕೌನ್ಸಿಲಗಳಲ್ಲಿ ಪ್ರವೇಶಿಸುವದರಿಂದ ಆಗುವ ಪರಿಣಾಮದ ಬಗ್ಗೆ ನಿಮ್ಮ ಅಂಬೋಣವೇನಿದೆ?

ಉ:— ಅದರಿಂದ ಇಡೀ ರಾಷ್ಟ್ರದ ಅವಮಾನವಾಗುವದೆಂದು ನಾನು ಮೊದಲೇ ಹೇಳಿರುವೆನು ಮತ್ತು ನನ್ನ ಸ್ವಂತ ಪ್ರಾಂತದಲ್ಲಿ, ಸುದೈವದಿಂದ ಸ್ತಬ್ಧವಾದ ಬ್ರಾಹ್ಮಣ ಬ್ರಾಹ್ಮಣೇತರ ವಾದವು ಇದರಿಂದ ಹುಟ್ಟುವದು. ರಾಷ್ಟ್ರೋನ್ನತಿಯ ಕಾರ್ಯಕ್ರಮವನ್ನು ನೆರವೇರಿಸುವ ಉತ್ತಮ ಜನರಾದರೂ ಕೌನ್ಸಿಲಗಳ ಕೆಲಸದ ಕಡೆಗೆ ಲಕ್ಷ್ಯಗೊಡುವದರಿಂದ, ವಿಧಾಯಕ ಕಾರ್ಯಕ್ರಮವು ಸಾಗಲಾರದು. ಕಾಯದೇಭಂಗವು ಪ್ರಾರಂಭವಾದ ಕಾಲಕ್ಕೆ, ಜನರ ಪ್ರೀತಿಗೆ ಪಾತ್ರರಾದ ಮುಖಂಡರೇ ಕೌನ್ಸಿಲಗಳಲ್ಲಿರುವದರಿಂದ, ಕಾಯದೇಭಂಗದಲ್ಲಿರುವ ನೈತಿಕ ಬಲವು ನಾಶವಾಗುವದು. ನಾವು ಯಾವ ಕಾಯಿದೆಯನ್ನು ಕಿತ್ತಿಹಾಕಲು ಇಚ್ಛಿಸುವೆವೋ, ಅಂಥ ಕಾಯಿದೆಗಳ ಮೇಲೆ ನಮ್ಮ ಜನರನ್ನೇ ನಾವು ಹೇಗೆ ಕೂಡ್ರಿಸಬೇಕು?

ಮಹಾತ್ಮರನ್ನು ಬಿಡುಗಡೆ ಮಾಡುವ ಬಗ್ಗೆ.

ಪ್ರ:— ಮಹಾತ್ಮರು ಯಾವಾಗ ಬಿಡುಗಡೆಯಾಗುವರೆಂದು ನಿಮಗೆ ಅನಿಸುವದು?

ಉ:— ಅದು ನಮ್ಮ ಕೆಲಸದ ಮೇಲೆಯೇ ಅವಲಂಬಿಸುತ್ತದೆ. ಸರಕಾರದವರು ಅವರನ್ನು ಸ್ವಸಂತೋಷದಿಂದ ಬಿಡುವರೆಂದು ನನಗೆ ಅನಿಸುವದಿಲ್ಲ. ಹಾಗೂ ಮಹಾತ್ಮರು ಈ ರೀತಿಯಾಗಿ ಬಿಡುಗಡೆ ಹೊಂದಬೇಕೆಂದು ನಾನು ಇಚ್ಛಿಸುವದಿಲ್ಲ [illegible]. [illegible] ಬಿಡುಗಡೆಯನ್ನು ಸ್ವರಾಜ್ಯದಲ್ಲಿ [illegible]. ಅವರ ಮುಕ್ತತೆಯು ಸಲುವಾಗಿ ಕೆಲಸ ಮಾಡುವದು, ನಮ್ಮ ಅತ್ಯಂತ ಪವಿತ್ರವಾದ ಕೆಲಸವೆಂದು ನಾನು ತಿಳಿಯುತ್ತೇನೆ.

ಪ್ರ:— ನೀವು ಇದ್ದ ವೇಳೆಯಲ್ಲಿ ನಿಮ್ಮ ಪ್ರಾಂತದಲ್ಲಿ ಖಾದಿಯ ಪ್ರಗತಿಯು ಹೇಗೆ ನಡೆದಿತ್ತು?

ಉ:— ಅದು ಮಾಡತಕ್ಕಷ್ಟು [illegible] ನಾನು ಹೇಳಲಾರೆನು. ಆದರೆ ಅದು ನಾವಿದ್ದಷ್ಟೂ ವಿಶ್ವಾಸಪೂರ್ವಕವಾಗಿಯೂ ಉತ್ಸಾಹದಿಂದಲೂ ಮಾಡಿರುತ್ತಾರೆ. ಶ್ರೀ. ಮುಜಲಿಯವರಾದರೂ ತುರಂಗಕ್ಕೆ ಅಟ್ಟಲ್ಪಟ್ಟರೆಂಬುವದನ್ನು ವಿಚಾರಿಸಲಾಗಿ. ಉಳಿದ ಜನರು ಮಾಡಿದ ಕೆಲಸದಿಂದ ನಾನು ಸಂತುಷ್ಟನಾಗಿದ್ದೇನೆ.

ಪ್ರ:— ಹೋದ ವರ್ಷ, ಮುಂಬಯಿ ವಿದ್ಯಾರ್ಥಿಗಳಲ್ಲಿ ಬಹಳ ಕೆಲಸ ಮಾಡಿದಿರಿ. ಆದರೆ ಈಗ ಅವರಿಗೆ ನಿಮ್ಮ ಸಂದೇಶವೇನಿರುವದು?

ಉ:— ಪ್ರತಿದಿವಸ ಹೊಸ ಸಂದೇಶಗಳು ಇರಲಾರವು ಮೊದಲಿನಂತೆಯೇ ನನ್ನ ಸಂದೇಶವಿರುವದು. ವಿದ್ಯಾರ್ಥಿಗಳು ಖಾದಿಯ ಸಲುವಾಗಿ ಕೆಲಸ ಮಾಡಲಿಕ್ಕೆ ಸ್ವಯಂಸೇವಕರಾಗಬೇಕೆಂದು ನನ್ನ ಇಚ್ಛೆಯದೆ.

ನಿರಾಶೆಗೆ ಆಸ್ಪದವಿಲ್ಲ.

ಪ್ರ:— ಜನತೆಯ ಸಲುವಾಗಿ ನಿಮ್ಮ ಸಂದೇಶವೇನಾದರೂ ಉಂಟೋ?

ಉ:— ನನ್ನ ಎರಡು ವರ್ಷಗಳ ಅನುಭವದಿಂದಲೂ ೬ ತಿಂಗಳ ಶಾಂತತೆಯಿಂದಲೂ ನಮ್ಮ ಚಳವಳಿಗೆ ಯಾವ ರೀತಿಯಿಂದಲೂ ಅಪಜಯವುಂಟಾಗಿಲ್ಲೆಂಬದನ್ನು ನಾನು ಹೇಳಬಲ್ಲೆನು. ಇದರ ಸಲುವಾಗಿಯೇ ದುಃಖಪಟ್ಟಂಥ ಜನರ ಮುಖಮುದ್ರೆಯಿಂದ ಯಾವತರದ ನಿರಾಶೆ ಅಥವಾ ತ್ರಾಸವು ಕಂಡುಬಂದದ್ದನ್ನು ನಾನರಿಯೆನು. ನಾನು ತುರಂಗದಲ್ಲಿ ಹಾಗೂ ಹೊರಗೆ ಎಷ್ಟೋ ಜನರನ್ನು ಭೆಟ್ಟಿಯಾಗಿದ್ದೇನೆ. ಕಷ್ಟ ಅನುಭವಿಸಿದ್ದಕ್ಕಾಗಿ ಯಾರಿಗೂ ಪಶ್ಚಾತ್ತಾಪವಾಗಿರುವದಿಲ್ಲ. ಯಾರೂ ಅಂಜಿರುವದಿಲ್ಲ; ಇದರ ವಿರುದ್ಧ, ಕಾರ್ಯದಲ್ಲಿ ಅವರ ಉತ್ಸಾಹವು ಇಮ್ಮಡಿಯಾಗಿದೆ. ಆದ್ದರಿಂದ ನಮ್ಮ ಚಳವಳಿಯು ಮೊದಲಿನ ಮಾರ್ಗದಿಂದಲೇ, ಹೆಚ್ಚು ಉತ್ಸಾಹದಿಂದ ಸಾಗುವದೆಂದು ನನಗೆ ಪೂರ್ಣ ಖಾತ್ರಿಯಾಗಿರುತ್ತದೆ. ದೇಶದ ಹಿತವಾದರೂ ಅದೇ ಮಾರ್ಗದಲ್ಲಿಯೇ ಇರುತ್ತದೆ

---

## ಸಂಶೋಧಕರಿಗೆ ಸಹಾಯವು

ಮುಂಬೈ ವಿಶ್ವವಿದ್ಯಾಲಯದವರು ಸಂಶೋಧಕರಿಗೆ ದ್ರವ್ಯ ಸಹಾಯ ಮಾಡಲು ಮುಂದೊದಗುತ್ತಿರುವದೆಂಬದು ಆನಂದದಾಯಕ ಸಂಗತಿಯು. ಈ ಹೊತ್ತು ಬಾಂಬೆ ಹೀರಾತುಗಳ ಪುಟದಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ, ಬಂದ ನೋಟೀಸನ್ನು ಮುದ್ರಿಸಿರುವೆವು. ವಾಚಕರು ಅದನ್ನು ಅವಶ್ಯವಾಗಿ ಓದಬೇಕು. ಮತ್ತು ಸಂಶೋಧನದಲ್ಲಿ ಮನಸ್ಸು ಹಾಕಿರುವವರು ಕೂಡಲೇ ವಿಶ್ವವಿದ್ಯಾಲಯದವರಿಗೆ ಬರೆದುಕೊಳ್ಳಬೇಕು. ಸಂಶೋಧಕರು ಇಂಥ ವಿಷಯವನ್ನೇ ತೆಗೆದುಕೊಂಡಿರಬೇಕೆಂಬ ನಿರ್ಬಂಧವಿಲ್ಲ. ಯಾರಿಗೆ ಯಾವ ವಿಷಯದಲ್ಲಿ ಗತಿಯಿರುವದೋ ಆ ವಿಷಯದ ಸಹಾಯದ ಬಗ್ಗೆ ಬರೆದುಕೊಳ್ಳಬೇಕು.

ಕರ್ನಾಟಕದಲ್ಲಿ ಸಂಶೋಧನದ ಕಾರ್ಯವು ವಿಶೇಷವಾಗಿ ಹರಡಿಲ್ಲ. ಆದರೂ ಬೆಂಗಳೂರು ಮೈಸೂರು ಧಾರವಾಡಗಳಲ್ಲಿ ಒಳ್ಳೇ ನಿಷ್ಣಾತರಾದ ಹಲಕೆಲವು ಸಂಶೋಧಕರಿರುವರೆಂಬದನ್ನು ನಾವು ಬಲ್ಲೆವು. ಅವರಿಗೆ ದ್ರವ್ಯದ ಅನಾನುಕೂಲತೆಯಿದೆಂಬದೂ ನಮಗೆ ಅರಿಯದ ಸಂಗತಿಯಲ್ಲ. ಅವರಲ್ಲಿ—ವಿಶೇಷತಃ ಧಾರವಾಡದವರು—ಈ ಬಗ್ಗೆ ಇದರ ಲಾಭವನ್ನು ತೆಗೆದುಕೊಳ್ಳದೇ ಇರಬಾರದೆಂದು ನಾವು ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ.

ಧಾರವಾಡದ ಕರ್ನಾಟಕ ಇತಿಹಾಸ ಮಂಡಲದವರೂ, ಅದರ ಸಂಶೋಧನದ ಭಾಗದ ಪ್ರಮುಖ ಸಭಾಸದರಾದ ಆಲೂರ, ರಾಜಪುರೋಹಿತ, ನರಗುಂದಕರ ಮೊದಲಾದವರು ಈಗ್ಗೆ ಮುಂಬೈ ವಿಶ್ವವಿದ್ಯಾಲಯದವರು ಕೊಡಬೊಪ್ಪಿದ ಸಹಾಯವನ್ನು ಪಡೆದು, ಕರ್ನಾಟಕಕ್ಕೆ ತಮ್ಮ ಸಂಶೋಧಕ ಬುದ್ಧಿಯ ಲಾಭವನ್ನು ಮಾಡಿಕೊಡಬೇಕೆಂದು ವಿನಂತಿಸುವೆವು.

—ಸಂಪಾದಕ

### ಆರುತಿಂಗಳ ವರ್ಗಣೀದಾರರಿಗೆ ಸೂಚನೆಯು

ಕನ್ನಡ ನವಜೀವನದ ಪ್ರಾರಂಭದಿಂದ, ಆರುತಿಂಗಳ ವಸ್ತಿಗೆ ನಾತ್ರ ವರ್ಗಣೀದಾರರಾದವರ ಪಣವು ಒಂದೆರಡು ವಾರಗಳಲ್ಲಿಯೇ ಮುಟ್ಟುವದು. ಆದ್ದರಿಂದ ಆ ಚಂದಾದಾರರು ಕಾಯಮ ವರ್ಗಣೀದಾರರಾಗಿ ಉಳಿದು, ತಮ್ಮ ವರ್ಗಣಿ ಹಣವನ್ನು ( ಐಂದರ ರೂಪಾಯಿಗಳನ್ನು ) ಆದಷ್ಟು ತೀವ್ರ ಮನಿಆರ್ಡರು ಮಾಡಿ ಕಳುಹಿಸಬೇಕೆಂದು ಪ್ರಾರ್ಥನೆಯದೆ.

ಸಂಪಾದಕ


# ಕನ್ನಡ ನವಜೀವನ.

ಜ್ಯೇಷ್ಠ ಶುದ್ಧ ೬ ಗುರುವಾರ ಶಕೆ ೧೮೪೪


## ಶಾಂತಿಯ ಉಪಾಯವು

(ನವಜೀವನ)

ಯುರೋಪಖಂಡವು ಈಗಾದರೂ ಕಲಹಗಳ ಲೀಲಾಕ್ಷೇತ್ರವಾಗಿದೆ. ಎರಡು ವರ್ಷಗಳ ಹಿಂದಂತೂ ಅಲ್ಲಿಯ ಬಡಿದಾಟಗಳನ್ನೆಲ್ಲ ಇಡೀ ಜಗತ್ತೇ ನೋಡಿರುವದು. ಇಂಗ್ಲಂಡವಾದರೋ ಪರೋಪಕಾರಿಯೆಂದು ಗಣಿಸಲ್ಪಟ್ಟಿತು. ಸಣ್ಣಪುಟ್ಟ ರಾಷ್ಟ್ರಗಳ ಸ್ವತಂತ್ರತೆಯನ್ನೂ, ಶಾಂತತೆಯನ್ನೂ ಕಾಪಾಡುವದೇ ತನ್ನ ಕರ್ತವ್ಯವಿದ್ದು, ಅದರ ಸಲುವಾಗಿಯೇ ತಾವು ಯುದ್ಧದಲ್ಲಿ ಸೇರುವೆವೆಂದು ಇಂಗ್ಲಿಷರು ಹೇಳಿಕೊಳ್ಳುತ್ತಿದ್ದರು. ಅಮೇರಿಕೆಯ ಹೃದಯದಲ್ಲಿ 'ಬಂಧು ಭಾವವು ಉತ್ಪನ್ನವಾಯಿತು. ಅದರ ಸಹಾಯವು ದೊರಕುವದೊಂದೇ ತಡ, ಇಂಗ್ಲಂಡದ ಸಾಮ್ರಾಜ್ಯ ಲಾಲಸೆಯು ತನ್ನ ವಿರಾಟ ಮತ್ತು ಭಯಾನಕವಾದ ರೂಪವನ್ನು ಪ್ರಕಟಮಾಡಿತು. ಜರ್ಮನಿಯನ್ನು ತಳಕ್ಕೆ ಮೆಟ್ಟುವ ಸಿದ್ಧತೆಯು ನಡೆಯಿತು. ತುರ್ಕರಾಷ್ಟ್ರವನ್ನು ತುಂಡು ತುಂಡಾಗಿ ಹಂಚುವ ವಿಚಾರವಾದರೂ ಒತ್ತರದಿಂದ ಸಾಗಿತು. ಸಾಧಾರಣ ಇಡೀ ಜಗತ್ತಿಗೂ ಮತ್ತು ವಿಶೇಷವಾಗಿ ಮುಸಲ್ಮಾನರಿಗೂ ಇಂಗ್ಲಂಡ ದೇಶದ ಸತ್ತಾಧಾರಿಗಳು ಎಷ್ಟು ದೊಡ್ಡ ಜನರು ಇರುವರೆಂಬುದು ಗೊತ್ತಾಗಿ ಹೋಯಿತು. ಅವರು ನಿಜವಾಗಿ ಬ್ರಿಟಿಶ್ ಸಾಮ್ರಾಜ್ಯಕ್ಕೆ ಒಳಪಟ್ಟವರೂ ಇಂಗ್ಲೀಷ ಜಾತಿಯ ಅಭಿಮಾನಿಗಳೂ, ಯುರೋಪದ ಸಂಸ್ಕೃತಿಯನ್ನು ಪಡಕೊಂಡವರೂ ಆ ಮಹಾತ್ಮನಾದ ಏಸೂ ಕ್ರಿಸ್ತನ ಧರ್ಮದ ಪ್ರತಿನಿಧಿಗಳೂ ಆಗಿದ್ದರೆ, ಲಾಯಿಡ ಜಾರ್ಜಸಾಹೇಬರು ತಮ್ಮ ವಚನಗಳ ಭಂಗವನ್ನು ಮಾಡಿ, ಮೇಲೆ ನಿರ್ದಿಷ್ಟವಾದ ನಾಲ್ಕು ಸಂಗತಿಗಳ ಇಭ್ರತಿಯನ್ನು ಜಗತ್ತಿನಲ್ಲಿ ಎಷ್ಟು ಪಸರಿಸಿದರೆಂಬದರ ಬಗ್ಗೆ ಚನ್ನಾಗಿ ವಿಚಾರ ಮಾಡಲಿ.

ಲಾಯಿಡ ಜಾರ್ಜಸಾಹೇಬರ ಬುದ್ಧಿಮತ್ತೆಯು ಅಗಾಧವಾದದ್ದೆಂದೂ ಅವರು ರಾಜನೀತಿಯಲ್ಲಿ ಕೋವಿದರೆಂದೂ ಅವರಲ್ಲಿಯ ಗುಣಗಳನ್ನು ಹರಿಗಟ್ಟುವವರು ಜಗತ್ತಿನಲ್ಲಿಯೇ ಯಾರೂ ಇಲ್ಲವೆಂತಲೂ ಹೇಳಿಕೊಳ್ಳುತ್ತಾರೆ. ಮೊನ್ನೆ ಮೊನ್ನೆ ಜಿನೋವಾದಲ್ಲಿ ಒಂದು ದೊಡ್ಡ ಆಟವನ್ನು ಹೂಡಿದ್ದರು. ಇಂಗ್ಲಂಡದ ಪ್ರಧಾನರಾದ ಲಾಯಿಡ ಜಾರ್ಜ ಸಾಹೇಬರಿಗೆ ಯುರೋಪಖಂಡದ ಆರ್ಥಿಕ ಸಂಘಟನೆಯ ವಿಷಯವಾಗಿ ಒಳ್ಳೇ ಚಿಂತೆಯು ಬಿದ್ದದೆ. ಯುರೋಪವು ಈಗ ದರಿದ್ರವಾಗಿಬಿಟ್ಟಿದೆ ಇಂಗ್ಲಂಡವನ್ನು ಹೊರ್ತುಪಡಿಸಿ ಉಳಿದ ರಾಷ್ಟ್ರಗಳ ಒಳಿಯಲ್ಲಿ ರೋಖ ಹಣವು ಬಹಳೇ ಕಡಿಮೆ. ನೋಟುಗಳ ಮೇಲೆಯೇ ಎಲ್ಲ ವ್ಯವಹಾರವು ನಡೆದದೆ. ಒಂದು ರಾಷ್ಟ್ರದ ನೋಟುಗಳು ಮತ್ತೊಂದು ರಾಷ್ಟ್ರದಲ್ಲಿ ಬಹಳ ಕಡಿಮೆ ದರದಿಂದ ಮಾರುತ್ತವೆ ಹಣವಿಲ್ಲದ್ದರಿಂದ ಬಹುತರವಾಗಿ ಎಲ್ಲ ಕಾರಖಾನೆಗಳು ವಿಶ್ರಾಂತಿಯನ್ನು ಅನುಭವಿಸುತ್ತಿರುವವು. ವ್ಯಾಪಾರದ ಅವಸ್ಥೆಯಾದರೂ ಹಿಂದುಸ್ಥಾನದಲ್ಲಿಯ ದುಃಖಿತರ ಅವಸ್ಥೆಯಂತೆ ಆಗಿಬಿಟ್ಟಿರುವದು. ಬಹುಶಃ ಎಲ್ಲ ರಾಷ್ಟ್ರಗಳು ಸಾಲಗಾರವಾಗಿರುವವು. ಇಂಗ್ಲಂಡಕ್ಕಾದರೂ ಅಮೇರಿಕೆಯಲ್ಲಿ ಬಹಳ ಸಾಲವಾಗಿದೆ. ಭರತಖಂಡವಾದರೋ ಹೇಳಿ ಕೇಳಿ ದರಿದ್ರವು. ಇಂಗ್ಲಂಡಕ್ಕೆ ಅದು ಮಾತ್ರ 'ಅನ್ನಪೂರ್ಣದೇವಿಯ ಮಂದಿರ'ವಾಗಿಬಿಟ್ಟಿದೆ. ಇದರ ಬಲದ ಮೇಲಿಂದಲೇ ಬ್ರಿಟಿಶ ಸಿಂಹವು ಯುರೋಪಖಂಡದ ಮೈದಾನದಲ್ಲಿ ಗರ್ಜಿಸುತ್ತ ನಡೆದದೆ. ಜರ್ಮನೀ ಮತ್ತು ರಶಿಯಾ ದೇಶಗಳನ್ನು ಯುರೋಪದಲ್ಲಿ ಇಭ್ರತೆಯುಳ್ಳ ರಾಷ್ಟ್ರಗಳೆಂದು ಗಣಿಸಲಿಕ್ಕೆ ಇಂಗ್ಲಂಡವು ಸಿದ್ಧವಿದ್ದಿದ್ದಿಲ್ಲ. ಆ ಬಡ ರಾಷ್ಟ್ರಗಳು ನಿರ್ಜೀವಿಗಳೆಂದು ತಿಳಿಯಲ್ಪಡುತ್ತಿದ್ದವು. ಈ ಸ್ಥಿತಿಯನ್ನು ಕಂಡು ಅವು ತಮ್ಮತಮ್ಮೊಳಗೆ ಮಿತ್ರತ್ವವನ್ನು ಬೆಳೆಸಿದವು ಇಂಗ್ಲಂಡವು ಬೆದರಿಬಿಟ್ಟಿತು. ತುರ್ಕಸ್ಥಾನವನ್ನು ನೋಡಿ ಇಟಲಿಯು ಕನಿಕರಪಡುತ್ತದೆ. ತುರ್ಕಸ್ಥಾನವು ಇಂಗ್ಲಂಡದ ಪಕ್ಷವನ್ನು ಸ್ವೀಕರಿಸುವದೆಂತು? ಆಸ್ಟ್ರಿಯಾ ದೇಶವು ಜರ್ಮನಿಯ ಸೆರೆಯಲ್ಲಿರುವದಲ್ಲದೆ ಅದರಗೂಡ ಮಿತ್ರತ್ವವನ್ನು ತಾಳಿದೆ. ಹೀಗೆ ಯುರೋಪಖಂಡದ ಎರಡುಮೂರಾಂಶಕ್ಕಿಂತ ಹೆಚ್ಚು ಭಾಗವು ಒಂದಾಗಿ ಅರ್ಥಾತ್ ಇಂಗ್ಲೀಷರಿಗೆ ಪ್ರತಿಕೂಲವಾಗಿದೆ. ಫ್ರಾನ್ಸಕ್ಕೆ ಜರ್ಮನಿಯ ಅಂಜಿಕೆಯು ಬಹಳ. ಆದ್ದರಿಂದಲೇ ಮೊದಲಿನಿಂದ ಶತ್ರುವಾದರೂ ಇಂಗ್ಲಂಡದ ಕೂಡ ಮಿತ್ರತ್ವವನ್ನು ಬಯಸುತ್ತದೆ. ಆದರೆ ಜಿನೋವಾ ಪರಿಷತ್ತಿನಲ್ಲಿ ರಶಿಯನ್ನರು ವ್ಯಕ್ತಮಾಡಿದ ಧೋರಣದಿಂದ ಇಂಗ್ಲಂಡ ಮತ್ತು ಫ್ರಾನ್ಸಗಳಲ್ಲಿ ಕೂಡ ಪೃಥಕ್ಪೃಥಕ್ಯವು ನಡೆದದೆ. ಜರ್ಮನೀ ಮತ್ತು ರಶಿಯಾಗಳಲ್ಲಿಯ ಮಿತ್ರತ್ವವು ಹೇಗೆ ಮುರಿದೀತೆಂದೂ ಮೇಲೆ ಮಹಾಯುದ್ಧದ ಖರ್ಚಿನ ಹಣದ ಬಗ್ಗೆ ತಗಾದಿಯನ್ನು ಹಚ್ಚಿ ರಶಿಯಾದೇಶವನ್ನು ಹೇಗೆ ಕೆಳಗೆ ದಬ್ಬಬೇಕೆಂದೂ ಇಂಗ್ಲಂಡ ಮತ್ತು ಫ್ರಾನ್ಸದೇಶಗಳು ವಿಚಾರಿಸುತ್ತಿವೆ. ಆದರೆ ರಶಿಯಾದವರು ಅರ್ಥಾತ್ ಲೆನಿನ್‌ನ ಸೋವ್ಹಿಯಟ ಸರಕಾರದವರು ಆ ಹಣವನ್ನು ಕೊಡುವದಿಲ್ಲೆಂದು ಸ್ಪಷ್ಟವಾಗಿ ಹೇಳಿದ್ದಲ್ಲದೆ ಹೊಸ ಸಾಲವನ್ನು ಕೇಳಲಿಕ್ಕೂ, ಬಾಲ್ಶೆವ್ಹಿಕ್ ಸಿದ್ಧಾಂತಗಳ ಪ್ರಸಾರವನ್ನು ಯುರೋಪಖಂಡದ ಇತರ ರಾಷ್ಟ್ರಗಳಲ್ಲಿ ಮಾಡುವ ಬೆದರಿಕೆಯನ್ನು ಹಾಕುವದಕ್ಕೂ ಪ್ರಾರಂಭಮಾಡಿದ್ದಾರೆ. ಇತ್ತ ಇಟಲಿ ಮತ್ತು ತುರ್ಕಸ್ಥಾನಗಳ ನಡುವೆ ಒಪ್ಪಂದದ ಮಾತುಗಳು ನಡೆದಿವೆ. ಇನ್ನೆಲ್ಲ ಸಂಗತಿಗಳು ಇಂಗ್ಲಂಡಕ್ಕೆ ಪ್ರತಿಕೂಲವಾಗಿಬಿಟ್ಟವೆ ಕೆಲವು ದಿವಸಗಳ ಹಿಂದೆ ಲಾಯಿಡ ಜಾರ್ಜರು ವ್ಯಾಕುಲರಾಗಿ ಜಿನೋವಾ ಪರಿಷತ್ತಿನಲ್ಲಿ ಸಾಫಲ್ಯವು ದೊರೆಯದಿದ್ದರೆ ಯುರೋಪದಲ್ಲಿಯ ತಮ್ಮ ರಾಷ್ಟ್ರ

ವಲ್ಲಿ ಕೂಡ ರಕ್ತದ ನದಿಗಳು ಹರಿಯುವವೆಂದು ವಿಚಾರಮಾಡುತ್ತಿದ್ದರು. ಕಲಕತ್ತೆಯಲ್ಲಿ 'ಇಂಗ್ಲೀಷಮನ್" ಪತ್ರದ ಸುದ್ದಿಗಾರನು ಯುರೋಪದಲ್ಲಿ ಪುನಃ ಯುದ್ಧವು ಪ್ರಾರಂಭವಾಗುವ ಸಂಭವವಿರುತ್ತದೆಂಬದಾಗಿ ಜಿನೋವಾದಿಂದ ಬರೆದಿದ್ದಾನೆ. ಇವೆಲ್ಲ ಚಿತ್ರವನ್ನು ನೋಡಿ ಪೇಷ್ತನ್ನು ಮುಂದೆ ಹಾಕಿಸಿ, ರಶಿಯಾದ ಪ್ರಶ್ನವನ್ನು ವಿಚಾರಮಾಡುವ ಕುರಿತು ಒಂದು ಕಮೀಶನ್ ಕೂಡಿಸುವ ಹಂಚಿಕೆಯನ್ನು ತೆಗೆದು, ಅದರಂತೆ ನಿರ್ಣಯವನ್ನು ಲಾಯಿಡ ಜಾರ್ಜರು ಪಾಸುಮಾಡಿಸಿಕೊಂಡರು. ಇದಕ್ಕೆ ಇಂಗ್ಲೀಷ ವೃತ್ತಪತ್ರಕಾರರು ಪರಿಷತ್ತು ಒಳ್ಳೇ ಯಶಸ್ವಿಯಾಯಿತೆಂದು ತಿಳಿದುಕೊಂಡಿದ್ದಾರೆ. ಇನ್ನೇನು ಈ ಜಗತ್ತಿನ ಸಂಕಟಗಳೆಲ್ಲ ನಿವೃತ್ತವಾದವೆಂದು ಅವರ ನಂಬಿಗೆ. ಮುಂದಾಗುವದನ್ನು ದೇವರೇ ಬಲ್ಲ.

ಪರಿಷತ್ತಿನ ಕಾರ್ಯಕ್ರಮಗಳನ್ನೆಲ್ಲ ಸೂಕ್ಷ್ಮದೃಷ್ಟಿಯಿಂದ ವಿಚಾರಮಾಡಿ ನೋಡಿದಲ್ಲಿ ಯುರೋಪದಲ್ಲಿಯ ಎಲ್ಲ ರಾಷ್ಟ್ರಗಳು ತಮ್ಮ ತಮ್ಮ ಸ್ವಾರ್ಥದಲ್ಲಿ ಪೂರ್ಣವಾಗಿ ಮಗ್ನರಾಗಿರುವರೆಂಬುದು ಒಡೆದುಕಾಣುತ್ತದೆ. ಬಹುಶಃ ಎಲ್ಲರೂ ಪರರು ದುರ್ಬಲರಾದದ್ದನ್ನೂ ಎದೆಗುಂದಿದ್ದನ್ನೂ ನೋಡಿದ ಕೂಡಲೇ ತಮ್ಮ ಸಮಯವನ್ನು ಸಾಧಿಸಿಕೊಳ್ಳುವ ವಿಚಾರದಲ್ಲಿ ಇದ್ದಾರೆ. ಎಲ್ಲಿಯ ವರೆಗೆ ಇಂಗ್ಲಂಡವು ಯೂನಾನರೆಂಬ ತಿಕುಂಡಿಯನ್ನು ಮುಂದೆ ಮಾಡಿ ತುರ್ಕಸ್ಥಾನವನ್ನು ಪಾದಾಕ್ರಾಂತಮಾಡಲು ಪ್ರಯತ್ನಿಸುತ್ತದೆಯೋ ಮತ್ತು ಇಂಗ್ಲಂಡ ಫ್ರಾನ್ಸಗಳು ಕಲೆತು ಜರ್ಮನೀ ಮತ್ತು ರಶಿಯಾ ದೇಶಗಳಿಗೆ ಮಹಾಯುದ್ಧದ ಖರ್ಚಿನ ಹಾಗೂ ಕರದ ಹಂಚಿಕೆಯನ್ನು ಹೇರಿಸಿ ಆರ್ಥಿಕಸಂಘಟನದ ಮಧುರ ರಸವನ್ನು ಬೆರಸಿ ಇಡೀ ಯುರೋಪಖಂಡದಲ್ಲಿ 'ತಾವೇ ತಾವು' ಆಗಬೇಕೆಂದು ಬಯಸುವರೋ ಅಲ್ಲಿಯ ವರೆಗೆ ಜರ್ಮನಿ ಮತ್ತು ರಶಿಯಾದವರು ತಮ್ಮತಮ್ಮಲ್ಲಿಯ ಸಲಹೆಯನ್ನು ಕಂಡು ಇಂಗ್ಲೀಷರು ಭೀತರಾದದ್ದನ್ನು ನೋಡಿ, ತಮ್ಮ ವೈರತ್ವದ ಸೇಡು ತೀರಿಸಿಕೊಳ್ಳುವದರಲ್ಲಿಯೂ, ಇಂಗ್ಲಂಡದ ದಂತಭಗ್ನಮಾಡುವದರಲ್ಲಿಯೂ, ತೊಡಗಿರುವದು. ಇವರಲ್ಲಿ ಯಾರ ಪಕ್ಷದಲ್ಲಿ ನ್ಯಾಯ ಮತ್ತು ಸತ್ಯವಿರುವದೋ ಮತ್ತು ಯಾರ ಪಕ್ಷದಲ್ಲಿ ಇಲ್ಲವೋ ಎಂಬ ಪ್ರಶ್ನೆಯನ್ನು ಬಿಡಿಸುವಾಗ ಬಹುಶಃ ಎಲ್ಲರೂ ಎರಡನೆಯವರಿಂದ ಹರಕೊಳ್ಳಬೇಕೆಂಬವರಲ್ಲಿ ತೊಡಗಿರುವರಲ್ಲದೆ ಒಬ್ಬರೂ ಸ್ವಾರ್ಥವನ್ನು ಬಿಟ್ಟುಕೊಡತಕ್ಕ ತತ್ವಗಳನ್ನು ಸ್ವಲ್ಪಕೂಡ ಮನ್ನಿಸುವದಿಲ್ಲೆಂದು ನಿಃಸಂಶಯವಾಗಿ ಹೇಳಬಹುದು.

ಇಷ್ಟಾದರೂ ಇವರೆಲ್ಲರು ಶಾಂತತೆಯ ಸ್ವಪ್ನವನ್ನು ಕಂಡಂತೆ ಮಾಡುತ್ತಿರುವರೆಂಬುದು ಆಶ್ಚರ್ಯದ ಸಂಗತಿಯು. ಯುರೋಪದಲ್ಲಿ ಶಾಂತತೆಯ ಧ್ವನಿಯು ನಿಜವಾದ ಅಂತಃಕರಣದಿಂದ ಹುಟ್ಟಿರ , ಕಲ್ಲಿನ ಸಾಮ್ರಾಜ್ಯವಾದದ ಮಾಯಾವಿಯಾದ ಗೋಲಿಯಾದರೂ ಇರಲಿ. ಆದರೆ ಯಾವ ಆಧಾರದ ಮೇಲೆ ಸಂಧಿಗಳ ಇಮಾರತಿಯನ್ನು ಕಟ್ಟಬೇಕೆಂಬ ಪ್ರಯತ್ನವು ನಡೆದಿರುವದೋ ಆ ಆಧಾರವು ಅಗದೀ ಕೆಲಸಕ್ಕೆ ಬಾರದಂಥ ತಪ್ಪು ಮಾರ್ಗವೆಂದು ಹೇಳಲು ಏನೂ ಸಂಶಯವಿಲ್ಲ. ಎಲ್ಲಿಯ ವರೆಗೆ [illegible] ಪರಾಯಣತೆಯು ಹಮ್ಮ ಸ್ಥಿರವಾಗಿರುವದಿಲ್ಲವೋ, [illegible] ಮೈತ್ರಿಯ ಮೇಲೆ [illegible] ನೀತಿಯು [illegible] ಸ್ವತಂತ್ರ [illegible] ನಿಜವಾದ [illegible] ಹೊಂದಾಣಿಕೆಯು [illegible] ತಾಳ್ಮೆ [illegible] ವಾ

ತು ವ್ಯರ್ಥ, ಯುರೋಪದ ಉನ್ಮತ್ತರಾಷ್ಟ್ರಗಳ ಮತ್ತು ರಾಜನೀತಿಜ್ಞರ ನೇತ್ರಗಳು ಹೋದ ಮಹಾಯುದ್ಧದಿಂದ ಚನ್ನಾಗಿ ತೆರೆಯಲ್ಪಡಬೇಕಾಗಿತ್ತು, ಆದರೆ ಪರಮಾತ್ಮನು ಈ ಜಗತ್ತಿನಲ್ಲಿಯ ಜಡವಾದಿಗಳ ಮೇಲೆ ತನ್ನ ಸಂಪೂರ್ಣವಾದ ಕೋಪವನ್ನು ಪ್ರಕಟಮಾಡಬೇಕೆಂದು ಅಪೇಕ್ಷಿಸಿದಂತೆ ತೋರುತ್ತದೆ. ಬಹು ಜಾಗರೂಕತೆಯಿಂದ ಬರೆಯುವ ಮತ್ತು ಮಾತಾಡುವ ಜನರಿಗೆ ಕೂಡ ಶೀಘ್ರವಾಗಿ ಯುರೋಪದ ಸಮರಾಂಗಣದಲ್ಲಿ ರಣದೇವತೆಯ ನೃತ್ಯವನ್ನು ನೋಡುವ ಅಂಜಿಕೆಯು ಬರುತ್ತಿದೆಂದಮೇಲೆ ಭಗವಾನ್ ಶಂಕರನು ತನ್ನ ಮೂರನೇ ನೇತ್ರವನ್ನು ತೆಗೆಯಲಿಚ್ಛಿಸುವನೆಂದು ಹೇಳಿದರೆ ಸುಳ್ಳಾಗಲಿಕ್ಕಿಲ್ಲ. ಹಿಂದುಸ್ಥಾನವಾದರೂ ಎಲ್ಲಿಯವರೆಗೆ, ಸಾಧಾರಣವಾಗಿ ಯುರೋಪಖಂಡಕ್ಕೂ ವಿಶೇಷವಾಗಿ ಇಂಗ್ಲಂಡಕ್ಕೂ ಆ ಪಾಪಕೃತ್ಯಗಳಿಗೆ ಸಹಾಯಮಾಡುವದೋ ಅಲ್ಲಿಯವರೆಗೆ ಅದಕ್ಕೂ ಕೂಡ ಇವರ ಫಲವನ್ನು ಅನುಭವಿಸಬೇಕಾದಲ್ಲಿ ಆಶ್ಚರ್ಯವಿಲ್ಲ.

ಹಿಂದುಸ್ಥಾನಕ್ಕಾದರೋ ಒಂದೇ ಆಶೆ ಇರುತ್ತದೆ. ಪಾಶ್ಚಿಮಾತ್ಯ ರಾಷ್ಟ್ರಗಳ ದೈವಗತಿಯನ್ನು ನೋಡಿ, ಮೊದಲಿನಿಂದಲೇ, ಅವುಗಳ ಪಾಪಗಳಿಗೆ ಗುರಿಯಾಗಬೇಕಾದ ತನ್ನ ಕೈಗಳನ್ನು ಮಡಿಚಿಕೊಂಡು ಬಿಟ್ಟಿರುವದು — ಅಸಹಯೋಗವನ್ನು ಆರಂಭಿಸಿರುವದು, ಇಡೀ ಜಗತ್ತು ಯಾವ ಶಾಂತಿಯನ್ನು ಹುಡುಕಿ, ಅದರ ಉಪಾಸನೆಯನ್ನು ಮಾಡುವಾಗ, ನಿಜವಾದ ಶಾಂತತೆಗೆ ಉರುಲು ಹಾಕಿರುವದೋ ಅಂಥ ಶಾಂತಿಯೇ ಅಸಹಯೋಗದ ಮೂಲಾಧಾರವಾಗಿದ್ದು, ಆ ಶಾಂತತೆಯನ್ನು ಸಂಪೂರ್ಣವಾಗಿ ಪಾಲಿಸುವದು ಪ್ರತಿಯೊಬ್ಬ ಅಸಹಯೋಗಿಯು ತನ್ನ ಧರ್ಮವೆಂದು ತಿಳಿದುಕೊಳ್ಳುತ್ತಾನೆ. ಜಗತ್ತಿನಲ್ಲಿ ಯಾರಿಗಾದರೂ ದೃಷ್ಟಿಯಿದ್ದು, ನೋಡುವ ಅಪೇಕ್ಷೆ ಇದ್ದಲ್ಲಿ ಅವರು ಇಲ್ಲಿ ಬಂದು ಈ ನವ ಪ್ರಯೋಗವನ್ನು ನೋಡಿಕೊಳ್ಳಲಿ; ಯಾವ ಉಗ್ರವಾದ ಅತ್ಯಾಚಾರಗಳನ್ನು ಸಹನಮಾಡಬೇಕಾದರೂ ಅಪೂರ್ವಶಾಂತತೆಯನ್ನು ಆಚರಿಸುತ್ತಿರುವರೆಂಬದನ್ನೂ, ಯಾರು 'ಕಾಯಿದೆ ಮತ್ತು ಶಾಂತತೆ'ಯ ಹೆಸರಿನಿಂದ ಶಾಂತತೆಯುಗೂಡ ಶತ್ರುತ್ವವನ್ನು ಮಾಡುತ್ತಿರುವರೆಂಬದನ್ನೂ ಕಂಡುಹಿಡಿಯಲಿ. ಯುರೋಪದಲ್ಲಿ ಈ ಅಶಾಂತತೆಯ ಅಂಜಿಕೆಯನ್ನೂ, ಕಲಹವನ್ನೂ, ಅಸ್ವಾಸ್ಥ್ಯವನ್ನೂ ನೋಡಿ ನಮ್ಮ ವಿಶ್ವಾಸವು ಹೆಚ್ಚು ದೃಢವಾಗಬೇಕಾಗಿದೆ. ನಮ್ಮ ಹೃದಯದ ಪ್ರತಿಯೊಂದು ಪಟಲದಲ್ಲಿ ಹಿಂದುಸ್ಥಾನಕ್ಕೆ ಬಂದೇ ಒಂದು ರಾಜಮಾರ್ಗವಿರುವದೆಂಬ ಸಂಗತಿಯು — ಶಾಂತಿಮಯ ಅಸಹಯೋಗವು — ನಟ್ಟುಹೋಗಲಿಕ್ಕೆಬೇಕು. ಹಿಂದುಸ್ಥಾನಕ್ಕೆ ಈ ಪ್ರಯೋಗದಿಂದ ಜಯ ಸಿಕ್ಕಲ್ಲಿ, ಈಗಿನ ಈ ಮತ್ತವಾದ ಸಾಮ್ರಾಜ್ಯವನ್ನು ಹಿಂದಮಾತೆಯ ಚರಣದಲ್ಲಿ ಅರ್ಪಿಸಿ, —

अज्ञानान्धस्य लोकस्य ज्ञानांजनशलाकया ।
चक्षुरुन्मीलितं येन तस्मै गुरवे नमः ॥

ಅಂದರೆ, ಎಲೈ ಹಿಂದಮಾತೆಯೇ, ನೀನು [illegible] ನಮಗೆ ಮಾರ್ಗವನ್ನು ತೋರಿಸಿದಿ. ನೀನು ನಮ್ಮ ಗುರುವು. ನಿನಗೆ ನಮ್ಮ ನಮಸ್ಕಾರವಿರಲಿ, ಎಂದು ಅನ್ನಹತ್ತುವರು.

ಆದರೆ ಕೇವಲ ವಾಕ್ಪಾಂಡಿತ್ಯವನ್ನು ತೋರಿಸುವದರಿಂದ ಆ [illegible] ಸಫಲವಾಗುವದಿಲ್ಲೆಂಬವನ್ನು ಲಕ್ಷ್ಯದಲ್ಲಿಡತಕ್ಕದ್ದು. ಅದಕ್ಕೆ [illegible] ಮಾಡಿಯಬೇಕಾಗುತ್ತದೆ. ಮಹಾತ್ಮರು ತೋರಿಸಿಕೊಟ್ಟ ಸರಳವಾದ ಹಾದಿಯಲ್ಲಿ ನಾ[illegible] ಖಾದೀ ಪ್ರಚಾರ [illegible] ಹಿಂ

ದುಸ್ಥಾನವು ಕೈನೂಲು ಕೈಮಗ್ಗಗಳಿಂದಾದ ಹಳೇತರಹದ ಖಾದಿಯನ್ನು ಧರಿಸಲು ಸಿದ್ಧವಾಗದಿದ್ದರೆ, ಹಿಂದುಸ್ಥಾನದ ಹಳ್ಳಿಯ ತಾಯಂದಿರೂ ಅಕ್ಕತಂಗಿಯರೂ ಬಡತನದಿಂದ ಜೀವಿಸಲಿಕ್ಕೂ ನೂಲು ತೆಗೆಯಲಿಕ್ಕೂ ಒಪ್ಪದಿದ್ದರೆ, ಭರತಭೂಮಿಯ ವಿದ್ಯಾರ್ಥಿಗಳು ಗುಲಾಮಗಿರಿಯ ಗೊಬ್ಬರದ ಹುಳಗಳಾಗಿ, ಮಾಯಾವಿಯಾದ ಪಾತಕನೆಯ ಸ್ತನಪಾನವನ್ನು ಮಾಡಹತ್ತಿ, ನೂಲು ತೆಗೆಯಲಿಕ್ಕೂ, ಖಾದಿಯನ್ನು ಧರಿಸಲಿಕ್ಕೂ, ಮನೆಮನೆ ತಿರುಗಿ ಅದರ ಪ್ರಸಾರವನ್ನು ಮಾಡಲಿಕ್ಕೂ ಮುಂದೆ ಬಾರದಿದ್ದಲ್ಲಿ, ಭರತಖಂಡದ ಧರ್ಮಪ್ರಾಣರಾದ ವ್ಯಾಪಾರಸ್ಥರು ಪರದೇಶದಿಂದ ವಸ್ತ್ರಗಳನ್ನು ತರಿಸಿ ದಾಸ್ಯದ ಹುಳಗಳನ್ನು ಮನೆಮನೆಗೆ ಹಂಚುವ ಪಾಪವನ್ನು ಮಾಡಲಿಕ್ಕೆ ಏನೂ ಸಂಕೋಚತೆಗೊಳ್ಳದಿದ್ದಲ್ಲಿ ಭರತವಾಸಿಗಳಾದ ಸರಕಾರೀ ನೌಕರರು ತಮ್ಮ ಮನೆಯಲ್ಲಿ ಕೂಡ ಖಾದಿಯನ್ನು ಧರಿಸುವ ಧೈರ್ಯವನ್ನು ತೋರಿಸಲು ಶಕ್ತರಾಗದಿದ್ದರೆ, ಹಿಂದುಸ್ಥಾನವು ಜಗತ್ತಿನಿಂದಲೇ ಲುಪ್ತವಾಗುವದು. ಜಗತ್ತಿಗೆ ಮಾರ್ಗದರ್ಶಕವಾಗುವದಂತೂ ದೂರ ಉಳಿದು, ತಾನೇ ಪಾಪಿಷ್ಠರ ಪಂಜರದಲ್ಲಿ ಸಿಕ್ಕು ನುಚ್ಚುನೂರಾಗಿ ಹೋಗುವದು. ಮತ್ತು ಅದರ ಮುಂದಿನ ಸಂತತಿಯ ಜನರು ಇತಿಹಾಸದಲ್ಲಿ ಅದರ ರಾಷ್ಟ್ರೀಯತ್ವದ ನಾಶದ ಕಥೆಯನ್ನು ಓದಿ ಕಣ್ಣೀರು ಸುರಿಸಬೇಕಾಗುವದು

ಆದರೆ ಹಿಂದುಸ್ಥಾನದ ಹೃದಯದಲ್ಲಿ ಆಶೆಯು ತುಂಬಿತುಳುಕುತ್ತದೆ. ಅದರ ಹೃತ್ಕಮಲದಲ್ಲಿ ಪರಮಾತ್ಮನ ಜ್ಯೋತಿಯು ಹೊಳೆಯಹತ್ತಿದೆ. ಅದರ ಮಾರ್ಗವು ಧರ್ಮಮಾರ್ಗವು, ಪ್ರೀತಿಮಾರ್ಗವು. ಅದರ ಶರೀರವು ನಿರ್ಬಲವಿದ್ದರೇನು? ಅದರ ಆತ್ಮನಲ್ಲಿಯೇ ಶಕ್ತಿಯ ಅಖಂಡ ಪ್ರವಾಹವು ಹರಿಯಹತ್ತಿದೆ. ಅದು ಬಹಳ ದಿವಸಗಳ ವರೆಗೆ ಸಂಕಟದಲ್ಲಿ ಇರಲಾರದು. ಅದರ ಸ್ವತಂತ್ರತೆಯ, ಅದರ ಉದ್ಧಾರದ ಆಜ್ಞೆಯು ಪರಮಾತ್ಮನ ದರಬಾರದಿಂದ ಆಗಿ ಹೋಗಿಬಿಟ್ಟಿದೆ. ಹಿಂದುಸ್ಥಾನವು ತನ್ನ ಪ್ರತಿಜ್ಞೆಯಲ್ಲಿ ಅಚಲವಾಗಲಿ — ಇಷ್ಟರಿಂದಲೇ ಅದರ ಬೇಡಿಗಳೆಲ್ಲ ತಟತಟನೆ ಮುರಿದು ಹೋಗಿ, ಅದರಿಂದ ಜಗತ್ತಿನ ಬೇಡಿಗಳೂ ಕೂಡ ನಾಶವಾಗುವವು.

---

## ಟಿಪ್ಪಣಿಗಳು

**ಕಾಂಗ್ರೆಸದ ಅಧ್ಯಕ್ಷರು.**

ಈ ಸಾರೆ ಜರುಗುವ ರಾಷ್ಟ್ರೀಯ ಮಹಾಸಭೆಯ (ಕಾಂಗ್ರೆಸ್ಸಿನ) ಅಧ್ಯಕ್ಷಸ್ಥಾನದ ಮರ್ಯಾದೆಯನ್ನು ಯಾರಿಗೆ ಕೊಡಬೇಕೆಂಬದರ ಬಗ್ಗೆ ನಮ್ಮ ಕರ್ನಾಟಕದ ಮಂಡಳಿಗಳುಗಳ ವ ಗದಗ ಧಾರವಾಡ ದೇಶಪಾಂಡೆಯವರು ರಾಜಗೋಪಾಲಾಚಾರ್ಯರನ್ನೂ ಜಮುನಾಲಾಲ ಬಜಾಜರನ್ನೂ ಯೋಗ್ಯವಾದ ಸೂಚನೆಯೊಂದನ್ನು ಮಾಡಿದ್ದಾರೆ. ಎಲ್ಲ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಒಮ್ಮತದಿಂದ ಮೌಲಾನಾ ಮಹಮ್ಮದ ಅಲ್ಲಿ ವ ಶೌಕತ ಅಲ್ಲಿಯವರ ವೀರಮಾತೆಯಾದ ಬೈಗರ ಬೀ ಅಮ್ಮಾಬಾಯಿಯವರಿಗೇನೇ ಆ ಮರ್ಯಾದೆಯನ್ನು ಸಲ್ಲಿಸಬೇಕೆಂಬುದೇ ಅವರ ಸೂಚನೆಯು. ಬೀ ಅಮ್ಮಾಬಾಯಿಯವರ ಗುಣವರ್ಣನೆಯನ್ನು ಮಾಡುವ ಆವಶ್ಯಕತೆಯಿಲ್ಲ. ತಮ್ಮ ವೀರಪುತ್ರರ ಕಾರ್ಯವನ್ನು ನೆರವೇರಿಸುವಾಗ ಆಸ್ಥೆಯಲ್ಲ ಹೋದರು. ಅನೇಕ ಸಲ ಕಾರಾಗೃಹದ ಯಾತನೆಗಳನ್ನು ಅನುಭವಿಸಬೇಕಾದರೂ ಈ ವೀರಮಾತೆಯ ಉತ್ಸಾಹವು ಎಳ್ಳಷ್ಟು ಕುಂದದೆ ಪುನಃ ಆ ಉತ್ಸಾಹವು ಹೆಚ್ಚುತ್ತ ಉಕ್ಕೇರಹತ್ತಿರುವದು. ಪುರುಷರೆಂದೆನಿಸಿಕೊಳ್ಳುವವರಲ್ಲಿ ಕೂಡ ಇಷ್ಟು ಅಪ್ರತಿಮವಾದ ಧೈರ್ಯವಿರುವದೇ? ಮುಪ್ಪಿನ ವಯಸ್ಸಿನಲ್ಲಿ ಕೂಡ ಹಗಲಿರುಳೆನ್ನದೆ ದೇಶಸೇವೆಯನ್ನು ಕೈಕೊಂಡ ಈ ಮಹಾಮಹಿಮಳನ್ನು ನೋಡಿದರೆ ಪ್ರಾಚೀನಕಾಲದ ಶೂರ ಆರ್ಯ ಮಹಿಳೆಯರ ಸ್ಮರಣೆಯಾಗದೆ ಇರಲಾರದು. ಅಂದಮೇಲೆ ಇಂಥ ರತ್ನವು ಹಿಂದುಸ್ಥಾನಕ್ಕೆ ಏಕೆ? ಇಡೀ ಜಗತ್ತಿಗೆ ದೊರಕುವದು ಅತಿ ವಿರಳ. ಆದ್ದರಿಂದ ಬೀ ಅಮ್ಮಾಬಾಯಿಯವರನ್ನೇ ಎಲ್ಲ ಪ್ರಾಂತದವರೂ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ನಮ್ಮದಾದರೂ ಅಭಿಪ್ರಾಯವದೆ. ಕರ್ನಾಟಕ ಪ್ರಾಂತದವರಂತೂ ಅವರನ್ನೇ ಆರಿಸುವರೆಂಬದರಲ್ಲಿ ಸಂದೇಹವೇನೂ ಇಲ್ಲ. ಕರ್ನಾಟಕದಲ್ಲಿ ಈ ವೀರಮಾತೆಯು ಸಂಚರಿಸಿದಾಗ ಇವರು ಕರ್ನಾಟಕಸ್ಥರ ಹೃದಯವನ್ನು ಪೂರ್ಣವಾಗಿ ಎಳೆದುಕೊಂಡು ಬಿಟ್ಟಿರುವರು. ಮೇಲಾಗಿ, ಗಯಾಕ್ಷೇತ್ರದಲ್ಲಿ ಈ ಸಾರೆಯ ರಾಷ್ಟ್ರೀಯ ಸಭೆಯು ನೆರೆಯುವದು. ಗಯಾಕ್ಷೇತ್ರವೆಂದರೆ ಹಿಂದೂ ಜನರ ಪರಮ ಪುಣ್ಯಕ್ಷೇತ್ರವು. ಅಂಥ ಪವಿತ್ರಸ್ಥಳದಲ್ಲಿ ನೆರೆಯುವ ಸಭೆಗೆ, ಮುಸಲ್ಮಾನರ ಮಂದಾಳುವಾದ ಬೀ ಅಮ್ಮಾಬಾಯಿಯವರು ಅಧ್ಯಕ್ಷರಾಗುವದರಿಂದ ಹಿಂದೂಮುಸಲ್ಮಾನರ ಐಕ್ಯವು ಹೆಚ್ಚುವದೆಂಬದರಲ್ಲಿ ಏನು ಆಶ್ಚರ್ಯ! ಕಾರಣಗಳನ್ನೆಲ್ಲ ವಿಸ್ತರಿಸಹೋದರೆ ಒಂದು ದೊಡ್ಡ ಲೇಖವೇ ಆಗಬಹುದು. ಆದ್ದರಿಂದ ಪುನಃ ಅವರನ್ನೇ ಅಧ್ಯಕ್ಷಸ್ಥಾನವನ್ನಿತ್ತು ನಿಯೋಜಿಸಬೇಕೆಂದು ಸೂಚಿಸುತ್ತೇವೆ.

× × ×

**ವಿಭಾಕರ.**

ಗದಗ - ಹುಟಗಿ ರೇಲ್ವೇಲಾಯಿನದಲ್ಲಿ ಪ್ರವಾಸಿಕರಿಗೆ ಒದಗುತ್ತಿರುವ ಅಸಂಖ್ಯ ತೊಂದರೆಗಳ ಬಗ್ಗೆ ಕಳೆದ ವಾರದ ವಿಭಾಕರದಲ್ಲಿ ಒಂದು ಲೇಖವು ಪ್ರಸಿದ್ಧವಾಗಿದೆ. ಈ ರೇಲ್ವೇಲಾಯಿನದಲ್ಲಿ ಪ್ರವಾಸಿಕರ ಅಸಹ್ಯವಾದ ಅನಾನುಕೂಲತೆಗೆ ಈಡಾಗುತ್ತಿರುವರೆಂಬವನ್ನು ಈಗ್ಗೆ ೨೦ ೩೦ -- ೪೦ ವರ್ಷಗಳಿಂದ ಏಜಾಸ್ತೂರ ಚಿಸ್ತಿಯವರೂ, ಸರ್ವಸಾಧಾರಣವಾಗಿ ಉತ್ತರಕರ್ನಾಟಕದ ಎಲ್ಲ ಜನರು, ಸ್ವಾನುಭವದಿಂದ ಚನ್ನಾಗಿ ಬಲ್ಲರು. ಆದ್ದರಿಂದ ಇನ್ನು ಈ ಅನಾನುಕೂಲತೆಗಳ ಬಗ್ಗೆ ಬರೆಯುವದು ಅನಾವಶ್ಯಕವಾಗಿದೆ. ಈಗ್ಗೆ ಆ ತೊಂದರೆಗಳನ್ನು ಕಿತ್ತಿಹಾಕುವ ಒಂದು ಯೋಚಿಸಬೇಕು. ಅವನ್ನು ದೂರೆ ಮಾಡುವ ಉದ್ದೇಶದಿಂದಲೇ ವಿಭಾಕರವು ಆ ಲೇಖವನ್ನು ಪ್ರಸಿದ್ಧಮಾಡಿದೆ. ಆದರೆ ಇಂಥ ಲೇಖಗಳಿಂದ ರೇಲ್ವೆಕಂಪನಿಯವರಿಗೆ ಯತ್ಕಿಂಚಿತ್ತಾದರೂ ನಾಚಿಕೆ ಹುಟ್ಟುವದಿಲ್ಲ. ಈ ಲೇಖಗಳಿಗೆ ಅವರೆಂದೂ ಗಮನಕೊಡರು. ಇನ್ನು ಜನರೇ ಬೆಳಗಾಂವಿಯಂತೆ ರೇಲ್ವೇ ಕಷ್ಟನಿವಾರಕ ಮಂಡಳವನ್ನು ಸ್ಥಾಪಿಸುವಷ್ಟು ಜಾಗ್ರತಿಯು ನಮ್ಮ ಜಿಲ್ಲೆಯಲ್ಲಿ ಇನ್ನೂ ಉಂಟಾಗಿಲ್ಲ. ಆದ್ದರಿಂದ ಈಗ್ಗೆ ಬೇರೊಂದು ಮಾರ್ಗವಿದೆ. ಆ ಮಾರ್ಗವಾದರೂ ವಿಭಾಕರಕಾರರಿಗೆ ಸುಲಭವಾಗಿದೆ. ಅದಾವದೆಂದರೆ— ವಿಭಾಕರದ ಸಂಪಾದಕರಾದ ಶ್ರೀ ಜಿ. ಕೆ. ದ್ವಿವೇದೀ ಸಂಸ್ಥಾನದವರು ಕೌನ್ಸಿಲದಲ್ಲಿ ಈ ಬಗ್ಗೆ ಠರಾವುಗಳನ್ನು ತರುವದೇ ಸರಿ. ಶ್ರೀ. ಪಂಡಿತಪ್ಪನವರು ಈ ವಿಷಯದಲ್ಲಿ ವಿಶೇಷವಾಗಿ ಮನಸ್ಸನ್ನು ಹಾಕಿ ಒಂದೇಸವನೇ ಸರಕಾರಕ್ಕೆ ಬೆನ್ನುಹತ್ತಿ, ಕೌನ್ಸಿಲದಿಂದ ಈ ಕಷ್ಟಗಳನ್ನು ಸಂಪೂರ್ಣವಾಗಿ ದೂರಮಾಡುವರೆ ಅಖಂಡ ಕರ್ನಾಟಕವು ಅವರಿಗೆ ಋಣಿಯಾಗುವದು.

× × ×

ಅದೇ ವಿಭಾಕರದಲ್ಲಿ ಇನ್ನೂ ಒಂದು ಮಹತ್ವದ ವಿಷಯವು ಪ್ರತಿಪಾದಿಸಲ್ಪಟ್ಟಿದೆ. ಕರ್ನಾಟಕದ ಏಕೀಕರಣವೇ ಆ ವಿಷಯವು. ಈ ವಿಷಯದ ಮೇಲೆ ಲೇಖಾಂಕಗಳನ್ನು ಬರೆಯುವ ಅಭೀಷ್ಟೆಯು ವಿಭಾಕರಕ್ಕೆ ಇದ್ದಂತೆ ತೋರುತ್ತದೆ. 'ಸಂತೋಷದ ಮಾತು' ನಮ್ಮ ಲಿಂಗಾಯತ ಬಾಂಧವರಲ್ಲಿ ಕರ್ನಾಟಕದ ಏಕೀಕರಣದ ಕಲ್ಪನೆಯು ದೃಢವಾಗಿ ಬೇರೂರಿಕೊಂಡಿಲ್ಲವೆಂದು ಚಿಂತಾತುರರಾಗಿದ್ದೆವು. ಆದರೆ ವಿಭಾಕರದ ಲೇಖದಿಂದ ನಮ್ಮ ವೀರಶೈವ ಬಾಂಧವರಲ್ಲಿಯೂ ಈ ಕಲ್ಪನೆಯು ಬೇರೂರಹತ್ತಿದೆಂಬುದು ಒಡೆದು ತೋರುತ್ತದೆ.

ವಿಭಾಕರದ ಸಂಪಾದಕರಾದ ಶ್ರೀ ಪಂಡಿತಪ್ಪನವರೂ ಅವರ ಮಿತ್ರರೂ ಮುಂಬಯಿ ಕೌನ್ಸಿಲದಲ್ಲಿ ಕರ್ನಾಟಕದ ಏಕೀಕರಣದ ಬಗ್ಗೆ ಎವೆಬಿಡದೇ ಪ್ರಶ್ನೆಗಳನ್ನು ಹಾಕಿ, ಠರಾವುಗಳನ್ನು ತರಬೇಕೆಂದು ನಾವು ಶ್ರೀ ಪಂಡಿತಪ್ಪನವರಿಗೆ ಸೂಚಿಸುವೆವು. ಈ ಏಕೀಕರಣ ಪ್ರಶ್ನೆಯನ್ನು ತಮ್ಮ ಕೌನ್ಸಿಲರಶಿಪ್ ತೀರುವದರೊಳಗಾಗಿ ಶ್ರೀ ಪಂಡಿತಪ್ಪನವರು ಕರ್ನಾಟಕಕ್ಕೆ ಒಪ್ಪುವಂತೆ ಬಿಡಿಸಿದರೆ, ಅವರು ಕರ್ನಾಟಕಕ್ಕೂ ಹಿಂದುಸ್ತಾನಕ್ಕೂ ಒಂದು ಅತಿಶಯ ಮಹತ್ವದ ಸೇವೆಯನ್ನು ಮಾಡಿದಂತೆ ಆಗುತ್ತದೆ. ಈ ಸೇವೆಯನ್ನು ಮಾಡಲು ಅವರಿಗೆ ಸಮಯವು ಈಗ ಚನ್ನಾಗಿ ಕೂಡಿಬಂದಿದೆ. ಅದಾವೆಂದರೆ:- (೧) ಜಾಯಿಂಟ ಕಮಿಟಿಯವರು ಈ ಭಾಷಾವಾರ ಪ್ರಾಂತರಚನೆಗೆ ತಮ್ಮ ಒಪ್ಪಿಗೆಯನ್ನು ಕೊಟ್ಟಂತೆ ಹಿಂದುಸ್ತಾನ ಸರಕಾರದವರು ಅದನ್ನು ಅಮಲಿನಲ್ಲಿ ತರಲು ಸಿದ್ಧರಾಗಿರುವದು. (೨) ಶ್ರೀ. ಲಕ್ಷ್ಮೀಯವರು ಲೆಜಿಸ್ಲೇಟೀವ್ಹ ಅಸೆಂಬ್ಲಿಯಲ್ಲಿ ಈ ಬಗ್ಗೆ ಠರಾವು ತಂದಾಗ್ಗೆ ಪ್ರಾಂತಿಕ ಕೌನ್ಸಿಲ್ಲಿನ ಠರಾವುಗಳಂತೆ ತಾವು ಈ ಭಾಷಾವಾರ ಪ್ರಾಂತ ರಚನೆಯ ವಿಷಯದಲ್ಲಿ ನಡೆದುಕೊಳ್ಳುವೆವೆಂದು ಸರಕಾರದವರು ವಚನ ಕೊಟ್ಟದ್ದು (೩) ಒಡಿಸಾ ಪ್ರಾಂತದ ಏಕೀಕರಣದ ಕಾಲದಲ್ಲಿ ಆ ಪ್ರಾಂತದ ಸರಕಾರದವರು ತೋರ್ಪಡಿಸಿದ ಸಹಾನುಭೂತಿಯು ನಮ್ಮ ಕರ್ನಾಟಕದ ಏಕೀಕರಣಕ್ಕೆ ಬಲಕೊಟ್ಟದ್ದು. (೪) ಒಡಿಸಾ ಪ್ರಾಂತದ ಏಕೀಕರಣದ ವಿಷಯದಲ್ಲಿ ಪ್ರಶ್ನೆಮಾಡಿದಾಗ್ಗೆ ಹಿಂದುಸ್ತಾನ ಸರಕಾರವು ಪ್ರಾಂತ ರಚನೆಯ ಬಗ್ಗೆ ತನ್ನ ಅಭಿಪ್ರಾಯವನ್ನು ಅನುಕೂಲವಾಗಿ ಕೊಟ್ಟದ್ದು. ಇವೇ ಮೊದಲಾದವುಗಳು.

ಆದುದರಿಂದ ಶ್ರೀ. ಪಂಡಿತಪ್ಪನವರು ಈ ಅತ್ಯಂತ ಮಹತ್ವದ ವಿಷಯದ ಕಡೆಗೆ ಮನಸ್ಸು ಹಾಕಿ ಅವಶ್ಯ ಪ್ರಯತ್ನಪಡಬೇಕೆಂದು ಸೂಚನೆಯದೆ.

---

## ಶ್ರೀಮತೀ ಕಸ್ತೂರಿಬಾಯಿಯವರ ಭಾಷಣ

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು.)

**ಗುಜರಾಥದಲ್ಲಿಯ ಮುನಸಿಪಾಲಿಟಿಗಳು.**

ಗುಜರಾಥದಲ್ಲಿ ತಮ್ಮ ಸ್ವಂತ ಧೈರ್ಯವನ್ನು ತೋರಿಸಲಿಕ್ಕೆ ಇನ್ನೂ ಒಂದು ಸುಸಂಧಿಯುಂಟು. ಅಹಮ್ಮದಾಬಾದ ಮತ್ತು ಸೂರತ ಮುನಸಿಪಾಲಿಟಿಗಳು ಸರಕಾರದವರಿಂದ ಬರಖಾಸ್ತಮಾಡಲ್ಪಟ್ಟವು. ನಡಿಯಾದ ಮುನಸಿಪಾಲಿಟಿಯ ಕಡೆಗೆ ದೃಷ್ಟಿಯು ತಿರುಗಿದೆ. ಈ ಮೂರು ಪಟ್ಟಣಗಳ ನಾಗರಿಕರಿಗೆ "ಧೈರ್ಯವನ್ನು ತಾಳಿರಿ" ಎಂದು ನಾನು ಹೇಳುವೆನು.

ಬ್ರಿಟಿಶ ಸರಕಾರದಿಂದ ಇನ್ನು ವಸಾಹತುಗಳಂಥ ಸ್ವರಾಜ್ಯವನ್ನು ಪಡೆಯಬಹುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. [illegible] ಸ್ವಾಭಾವಿಕ ಸ್ವರಾಜ್ಯದ [illegible]ದು. ಆದರೆ ಆ ಸ್ವಾಭಾವಿಕ ಸ್ವರಾಜ್ಯವಾದರೂ ಎಲ್ಲಿದೆ? ಅಹಮ್ಮದಾಬಾದ ಮ್ಯುನಸಿಪಾಲಿಟಿಯನ್ನು ಬೆದರಿಸಲಿಕ್ಕೆ ಸರಕಾರದವರೇನು ಕಡಿಮೆ ಮಾಡಿರುವರೇ? ಸೂರತ ಮತ್ತು ನಡಿಯಾದದ ಜನರ ಮೇಲೆ ಎಷ್ಟು "ಜೋರು" ಹಾಕಲ್ಪಟ್ಟಿತು? ಸರಕಾರೀ ನೌಕರರು ನಿಸ್ಸಂಶಯವಾಗಿ ನಮ್ಮ ಬಂಧುಗಳೇ. ಆದರೆ ಯಾರು ತಮ್ಮ ಸ್ವಕೀಯರ ಮಾನಭಂಗಕ್ಕೂ ನಿರಪರಾಧಿ ಬಾಂಧವರನ್ನು ತುರುಂಗಕ್ಕೆ ಅಟ್ಟಲಿಕ್ಕೂ ಸಹಾಯ ಮಾಡುವರೋ ಅಂಥ ಬಾಂಧವರು ಯಾವ ತರಗತಿಗೆ ಸೇರುವರು? ಈ ಮೂರು ಪಟ್ಟಣಗಳ ನಾಗರಿಕರಿಗೆ ದೃಢನಿಶ್ಚಯಿಗಳಾಗಲಿಕ್ಕೆ ಹೇಳುತ್ತೇನೆ. ಇದು ನಮ್ಮ ಸಂಕ್ಷೋಭಕಾಲದ ಪರೀಕ್ಷೆಯು ಯಾವಾಗಲೂ ಕಠಿಣವೇ. ಆದರೆ ನಮ್ಮ ಸಂಕಟಗಳು ಕಡೆತನಕ ಇರಲಾರವು. ದಯಾಸಾಗರನಾದ ಪರಮಾತ್ಮನ ಕೃಪೆಯಿಂದ ಆ ಸಂಕಟಗಳನ್ನು ನಾವು ನಿಜವಾಗಿ ದಾಟುವೆವು. ಆದರೆ ಪರಮಾತ್ಮನು ದಯೆತೋರಿಸುವದೆಂದು? ಆಪತ್ತಿನ ಪರೀಕ್ಷೆಯಲ್ಲಿ ಉತ್ತೀರ್ಣರಾದ ದಿವಸವೇ. ನಾವು ನಮ್ಮ ನಿಷ್ಠೆಯನ್ನು ಬಿಟ್ಟುಕೊಡತಕ್ಕದ್ದಲ್ಲ. ಅಂದರೆ ಸುದಿನಗಳು ಮತ್ತೊಮ್ಮೆ ನಮಗೆ ಬರುವವು. ಆದರೆ ಒಮ್ಮೆ ಹೋದ ಮರ್ಯಾದೆಯು ತಿರುಗಿ ಎಂದೂ ದೊರೆಯಲಾರದು. ನಿಮ್ಮ ಪ್ರತಿಜ್ಞೆಯನ್ನು ಕಾಪಾಡಿರಿ ಅಂದರೆ ಪರಮಾತ್ಮನು ನಿಮಗೆ ಸಹಾಯ ಮಾಡುವನು.

ಹಿಂದುಸ್ತಾನವು ೩೦ ಕೋಟಿ ಮಕ್ಕಳ ತಾಯಿಯು. ಸರಕಾರದವರು ೨೦-೨೫ ಸಾವಿರ ಜನರನ್ನು ಮಾತ್ರ ತುರುಂಗಕ್ಕೆ ಅಟ್ಟುವದರಿಂದ ಈ ರಾಷ್ಟ್ರವನ್ನು ತಮ್ಮ ಆಧೀನದಲ್ಲಿಟ್ಟುಕೊಳ್ಳಬೇಕೆಂದು ಹವಣಿಸುವರೇ? ಸರಕಾರವು ಬೇಡಿ ಬೇಡಿದಂತೆ ನಾವು ಆಹುತಿಯನ್ನು ಕೊಡಲು ಸಿದ್ಧರಿದ್ದೇವೆ. ಸಹಜವಾಗಿ ದೊರಕಿಸಿದ ಸ್ವರಾಜ್ಯವು ಸಹಜವಾಗಿ ಹೋಗುವದು. ನಮಗೆ ಸ್ವರಾಜ್ಯವನ್ನು ಸಂಪಾದಿಸಬೇಕಾಗಿದೆ. ಸ್ವಾತಂತ್ರ್ಯ ದೇವತೆಯ ಇಚ್ಛೆಯನ್ನು ತೃಪ್ತಿಪಡಿಸಬೇಕಾಗಿದೆ. ತಂದೆತಾಯಿಗಳ ಹಾಗೂ ಮಕ್ಕಳ ಮೇಲಿನ ಪ್ರೀತಿಯನ್ನೆಲ್ಲ ಬದಿಗಿಟ್ಟು, ಎದುರು ನಿಲ್ಲಬೇಕಾಗಿದೆ. ಪ್ರಾಚೀನಕಾಲದ ವೀರತನದ ದಿವಸಗಳ ಸ್ಮರಣೆಯನ್ನು ನಿಮಗೆ ಮಾಡಿಕೊಡುತ್ತೇನೆ. ಅಣ್ಣತಮ್ಮಂದಿರನ್ನೂ ಮಕ್ಕಳನ್ನೂ, ಗಂಡಂದಿರನ್ನೂ ಗಟ್ಟಿಗರನ್ನಾಗಿ ಮಾಡಿ, ದೇಶದ ಸಲುವಾಗಿ ತಮ್ಮ ಸರ್ವಸ್ವವನ್ನು ಬಿಟ್ಟುಕೊಡುವ ನಿಶ್ಚಯವನ್ನು ತಾಳುವಂತೆ ಮಾಡಿರಿ. ಮತ್ತು ನೀವಾದರೂ ತ್ಯಾಗದಿಂದ ಜೀವನವನ್ನು ಕಳೆಯಲಿಕ್ಕೆ ಸಿದ್ಧರಾಗಿರಿ. ರಾಷ್ಟ್ರದಲ್ಲಿ ಗುಜರಾಥ ಪ್ರಾಂತವು ನಿಷ್ಕಾಳಜಿತನದಲ್ಲಿ ಹೆಸರಾದದ್ದು. ನಾವು ಆ ಕಳಂಕವನ್ನು ತೊಳೆದುಕೊಳ್ಳಬೇಕಾಗಿದೆ. ಆ ನಿಷ್ಕಾಳಜಿತನವು ನಮ್ಮ ನಿದ್ರೆಯಲ್ಲಿ ಅಡಗಿಕೊಂಡಿತ್ತೆಂಬುದನ್ನು ನಾವು ಹಿಂದುಸ್ತಾನಕ್ಕೂ ಇಡೀ ಜಗತ್ತಿಗೂ ತೋರಿಸಿಕೊಡುವಾ. ಈಗ ನೀವು ನಮ್ಮ ನಿಜವಾದ ಶೂರತನವನ್ನು ನೋಡಿರೆಂದು ಹೇಳುವಾ.

ಸ್ವರಾಜ್ಯವನ್ನು ಸಂಪಾದಿಸುವ ಭಾರವನ್ನು ಇಡೀ ಗುಜರಾಥಪ್ರಾಂತವೇ ವಹಿಸಬೇಕಾಗಿದೆ. ನಿಮ್ಮ ಬಾರ್ಡೋಲಿ ಮತ್ತು ಆನಂದತಾಲೂಕಗಳಿಗೆ ಮುಂದಾಳುತ್ವವು ದೊರಕಿದೆ. ಆ ಮರ್ಯಾದೆಯು ನಿಮಗೆ ಯೋಗ್ಯವಾಗಿದೆಯೆಂದು ಸಿದ್ಧಮಾಡುವದಕ್ಕೂ ಅದನ್ನು ಕಾಯ್ದುಕೊಳ್ಳುವದಕ್ಕೂ ನೀವು ಅವಿಶ್ರಾಂತವಾಗಿ ಶ್ರಮಪಡತಕ್ಕದ್ದು. ಸಾ ನಮಕಕಾಯಿದೆಭಂಗದ ಭಾಗ್ಯವು ಬಾರ್ಡೋಲಿಗೆ ಸಿಕ್ಕಾಗ್ಗೆ ಶ್ರೀ. ಅಬ್ಬಾಸಸಾಹೇಬರು ಆನಂದಕ್ಕೆ ನ್ಯಾಯವು ಸಿಗಲಿಲ್ಲೆಂದು ತಕರಾರು ಮಾಡಿದರು. ಇನ್ನು ನೀವೇ ನಿಮ್ಮ ಕೆಲಸವು. ಬಾಂಧವರೇ ಮತ್ತು ಭಗಿನಿಯರೇ, ನೀವು [illegible] [illegible] ನಿಮಗೆ ನೆನಪಾಗಲಿ!!

## ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರದ್ವಾರದಿಂದ, ಉತ್ತಮವಾದ ಸ್ವದೇಶೀ ಸಾಬಾಣವನ್ನು ಮಾಡುವದಕ್ಕೆ ಕಲಿಸುವೆವು.

ಫೀ. ರೂ. ೫. ಉದ್ಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು.

ಕಲಾಭುವನ — ರಾಷ್ಟ್ರೀಯ ಶಾಲಾ
ಧಾರವಾಡ.

## ಉತ್ತಮ ಆರ್ಯ ಔಷಧಗಳು.

### ಸುವರ್ಣರಾಜವಂಗ ತೊಲಿ ೧ ರೂ. ೫

| | | |
|---|---|---|
| ಸುವೀರಪನ್ನಗ | ತೊಲಿ | ರೂ. ೫ |
| ಪವಾಳ | " | ರೂ. ೨ |
| ಚಂದ್ರಪ್ರಭಾ | " | ರೂ. ೧ |
| ಲಘುಮಾಲಿನಿ ವಸಂತ | " | |
| ಅಮೃತಸತ್ವ | " | ಆಣೆ ೧ |
| ಸಾಯರಪ್ ವಾಸಕ್ | ಔಂಸ ೫ರೂ. ೮ | |
| ಬ್ರಾಹ್ಮೀ ಸಾಯರಪ್ | " | ರೂ. ೧ |
| ಪಾಚಕವಟಿ | ನೂರಕ್ಕೆ | ರೂ ೧ |
| ಮೃದುವಿರೋಚಕವಟಿ | ನೂರಕ್ಕೆ | ಆಣೆ ೮ |
| ಸಿತೋಪಲಾದಿಚೂರ್ಣ | ೧೦ ತೊಲಿ | ರೂ. ೧ |

ಇದಲ್ಲದೇ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಯಾವತ್ತೂ ಔಷಧಗಳು ನಮ್ಮಲ್ಲಿ ಸುಲಭ ದರದಿಂದ ಸಿಗುವವು.

Karnatak Ayurvedic Phar-maceutical Works
Bagalkot Dt. Bijapur

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಏಜಂಟರು) **ಅತ್ಯುತ್ತಮ** (ಬೇಕು

ನ ಶಿ ಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೪—೦ | ಟ. ಖ. |
| ೧೦೦ ಚೀಟಿಗಳಿಗೆ | ೦—೧೪—೦ | ಬೇರೆ. |
| ೫೦ ಔಂಸ ಮಶಿ ಭುಡಿಗೆ | ೦—೪—೦ | |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸ:— ಕರ್ನಾಟಕ ಇಂಕ ಕಂಪನಿ,
ಬಾಗಲಕೋಟ.

## ಇಂಡಿಯಾ ಪ್ರಾವ್ಹಿಡೆಂಟ ಕಂ. ಲಿ. ಕಲಕತ್ತಾ.

ಮಧ್ಯಮ ಸ್ಥಿತಿಯ ಕುಟುಂಬವಾರರಿಗೆ ಈ ಕಠಿಣ ಕಾಲದಲ್ಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಬಿಗಿಯಾಗಿರುವದು. ಅದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ನಿಮ್ಮ ಹೆಸರು ತಿಂಗಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿ ವರೆಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ.

V. J. PARVATIKER
General Agent BAGALKOT

ಏಜಂಟರು ಬೇಕು! ಏಜಂಟರು ಬೇಕು.

ನಂಬರ ೧ ನೇ ನಿರ್ಮಲವಾದ

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾದ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳೇ ಸೋಯಿದರದಲ್ಲಿ ತೈಲವು ಸಿಗುವದು. ಸಿಕ್ಕ ೨೪ ಔಂಸ ತೈಲದಬಾಟ್ಲಿ ಅಥವಾ ಸಲ್ವಿ ೧ ಕ್ಕೆ ರೂಪಾಯಿ ೩—೦—೦ ಡಜನ್ ವಿಶೇಷ ಮಾಹಿತಿ ಪತ್ರದ್ವಾರ

ಬಿ. ಎ. ಪೈ ಕಂಪನಿ.
ಪೋಷ್ಟ ಹೊನ್ನಾವರ.
ಜಿಲ್ಹಾ ಉತ್ತರಕಾನಡಾ

## ಜಾಹಿರಾತಿನ ದರ.

ಕನ್ನಡ 'ನವಜೀವನ' ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂ. ಕಾಯಂ ಜಾಹಿರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

### ಚಂದಾ ನಿರ್ಣಯ.

| | |
|---|---|
| ವಾರ್ಷಿಕ ವರ್ಗಣಿ ರೂ. | ೪—೦—೦ |
| ಆರು ತಿಂಗಳಿಗೆ ,, | ೨—೦—೦ |
| ಬಿಡಿಸಂಚಿಕೆ | ೦—೦—೩ |
| ಮಾದರಿ ಸಂಚಿಕೆ ಬೇಕಾದವರು | ೦—೦—೩ |
| ತಿಕೀಟ ಕಳಿಸಬೇಕು. | |

## UNIVERSITY OF BOMBAY.

### UNIVERSITY RESEARCH GRANTS.

The UNIVERSITY of Bombay has created a small Research Fund to assist investigators in various branches of knowledge. The Syndicate are prepared to receive applications from research workers for grants to help them in the work they are unddrtaking. Such grants will be made for expenses for purchase of material for local expenses where investigation demands them, for the copying of documents or inscriptions, for working up of results, and similar purposes

2. Applications giving full details regarding the research work which the applicants propose to undertake, their qualifications for the work, the probable amount of the grant required, should be addressed to the Univerity Registrar and forwarded so as to reach him not later than *Wednesday, the 5th July 1922.*

By order,
FARDUNJI M DASTUR,
University Registrar.

Bombay, 19th May, 1922

☞ ಈ ಪತ್ರವನ್ನು ಬಾಗಲಕೋಟ ವೆಂಕಟೇಶ ವಿದ್ಯಾಕಲ್ಪದ್ರುಮ ಮುದ್ರಣಾಲಯದಲ್ಲಿ ಶ್ರೀನಿವಾಸ ರಾಘವೇಂದ್ರ ಮುಗಳಿವೇಡೆ ಇವರು ಮುದ್ರಿಸಿದರು ... ಪ್ರಕಾಶಕ ಉಪಾಧ್ಯಾಯ ಬಂಡಾಚಾರ್ಯ ... ಪ್ರಸಿದ್ಧಿಪಡಿಸಿದರು.

ಅಸಹಕಾರದ ಮುಖವು.

R No. B 1589

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ ಈ ವಾರಪತ್ರಿಕೆಯ ಮುಖೋದ್ದೇಶವು.

ವರ್ಷ ೧ | ಬಾಗಲಕೋಟ ಜ್ಯೇಷ್ಠ ವ॥ ೬ ಶಕ ೧೮೪೪ | ಗುರುವಾರ ತಾ ೧೫ ಜೂನ ೧೯೨೨. | ಸಂಚಿಕೆ ೨೭

## ಮಹಾತ್ಮರ ನುಡಿಯು.

### ದೇವರು ಅರಸು ಮತ್ತು ರಾಷ್ಟ್ರದ ಸೇವೆಗಾಗಿ

( ಯಂಗ ಇಂಡಿಯಾ ೨೭-೪-೧೯೨೧ )

ನನ್ನ ಪ್ರವಾಸದಲ್ಲಿ ಒಮ್ಮೆ ನಾನು ಒಂದೇ ಶಿಸ್ತಿನ ಉಡುಪನ್ನು ಧರಿಸಿದ ಹುಡುಗರನ್ನು ಕಂಡು ಆ ವಿಶಿಷ್ಟ ತೊಡಿಗೆಯ ಅರ್ಥವೇನೆಂದು ಅವರನ್ನು ಕೇಳಲಾಗಿ ಅವರು ಅದು 'ಸ್ಕೌಟ' ಜನರು ಮಾಡುವ ತೊಡಿಗೆಯೆಂದು ಹೇಳಿದರು. ಸ್ಕೌಟರಾದವರು ಮಾಡತಕ್ಕ ಉದ್ಯೋಗವಾವುದು ಎಂದು ನಾನು ಕೇಳಿದ್ದಕ್ಕೆ ಅವರು 'ದೇವರು, ಅರಸು ಮತ್ತು ದೇಶದ ಸೇವೆಯಲ್ಲಿ ತತ್ಪರರಾಗಿ ಜೀವಿಸುವದೇ' ಎಂದು ನುಡಿದರು. ನಿಮ್ಮ ರಾಜನು ಯಾರು ಎಂದು ಕೇಳಲಾಗಿ ಅವರು 'ಜಾರ್ಜಭೂಪಾಲ' ನೆಂದು ಉತ್ತರಕೊಟ್ಟರು. ಆ ವೇಳೆ ನಾನು ಜಲಿಯನವಾಲಾದ ಬಗ್ಗೆ ಮಾತು ತೆಗೆದೆನು. 'ನೀವು ೧೯೧೯ನೇ ಇಸ್ವಿಯ ಎಪ್ರಿಲ್ ೧೩ನೇ ತಾರೀಖಿನ ದಿವಸ ಅಲ್ಲಿ ಇದ್ದರೆಂದು ತಿಳಿಯಿರಿ, ಮತ್ತು ಜನರಲ್ ಡಾಯರನು ಭಯಭೀತರಾದ ನಿಮ್ಮ ಬಾಂಧವರ ಮೇಲೆ ಗುಂಡು ಹಾರಿಸಹೇಳಿದ್ದರೆ ನೀವು ಏನು ಮಾಡುತ್ತಿದ್ದಿರಿ' ಎಂದು ಕೇಳಿದೆನು. 'ನಿಸ್ಸಂದೇಹವಾಗಿ ನಾವು ಆ ಆಜ್ಞೆಯನ್ನು ಪಾಲಿಸುತ್ತಿದ್ದಿಲ್ಲ.' ವೆಂದು ಅವರು ಹೇಳಿದರು. ಆದರೆ ಜನರಲ್ ಡಾಯರನು ರಾಜನ ಪೋಷಾಕವನ್ನೇ ಧರಿಸಿರಲಿಲ್ಲವೇ? ಇದ್ದರೆ; ಧರಿಸಿದರೇನಾಯಿತು? ಅವನು ಅಧಿಕಾರಿಯ ವರ್ಗಕ್ಕೆ ಸೇರಿದವನು. ಅವನನ್ನು ತೆಗೆದುಕೊಂಡು ನಮಗೇನು ಮಾಡುವದು !

ಈ ಪ್ರಕಾರ ಅರಸನು ಬೇರೆ, ಅವನ ಅಧಿಕಾರಿ ಜನರು ಬೇರೆ ಎಂದು ಪೃಥಕ್ಕರಿಸಲಿಕ್ಕೆ ಬಾರದೆಂದೂ, ಅರಸನೆಂದರೆ ಬ್ರಿಟಿಶ ಸಾಮ್ರಾಜ್ಯ ಕಲ್ಪನೆಯ ಮೂರ್ತಸ್ವರೂಪವೆ ಹೊರತು ಒಂದು ವ್ಯಕ್ತಿ ವಿಶೇಷವಲ್ಲವೆಂದೂ ಮತ್ತು ಈಗಿನ ಕಾಲಕ್ಕೆ ದೇವರಲ್ಲಿ ಭಕ್ತಿನಿಷ್ಠೆಯುಳ್ಳ ಯಾವ ಹಿಂದೀ ಮನುಷ್ಯನೂ ಈ ಸಾಮ್ರಾಜ್ಯಕ್ಕೆ ರಾಜನಿಷ್ಠನಾಗಿ ಉಳಿಯಲಾರನೆಂದೂ ನಾನು ಅವರಿಗೆ ಸೂಚನಾರೀತಿಯಾಗಿ ಹೇಳಿದೆನು. ಯಾವ ಸಾಮ್ರಾಜ್ಯವು ಶಾಂತರಾದ ನಿರಪರಾಧಿಗಳನ್ನು ಭೀಕರವಾದ ರೀತಿನ ಕಾನೂನಿನ ಪ್ರಕಾರ ಶಿಕ್ಷಿಸುತ್ತಿ ಜನರಲ್ಲಿ ಹಾಹಾಕಾರವನ್ನೆಬ್ಬಿಸುವದೋ, ಅದಕ್ಕಾಗಿ ಇನ್ನು ಪಶ್ಚಾತ್ತಾಪವನ್ನು ಕೂಡ ಹೊಂದಲಾರದೋ. ಮತ್ತು ಯಾವದು ದೇವರ ಸಾಕ್ಷಿಯಾಗಿ ಕೊಟ್ಟ ವಚನಗಳನ್ನು ಲಕ್ಷಿಸದೆ ಅವುಗಳಿಗೆ ಭಂಗತರುವಂಥ ಒಪ್ಪಂದಗಳಲ್ಲಿ ಗುಪ್ತವಾಗಿ ಸೇರಲೊಪ್ಪುವದೋ, ಇಂಥ ಈ ಸಾಮ್ರಾಜ್ಯವು ದೇವಲಂಡವಾಗಿರುವದೆಂದೇ ಗಣಿಸಬೇಕಲ್ಲವೇ ? ಇಂಥ ಸಾಮ್ರಾಜ್ಯಕ್ಕೆ ಭಕ್ತಿನಿಷ್ಠೆಗಳನ್ನು ತೋರಿಸುವದೆಂದರೆ ದೇವರು ದಿಂಡರನ್ನು ಒತ್ತಟ್ಟಿಗೆ ಕಟ್ಟಿ ಬಗೆದಂತೆಯೇ

ಇದನ್ನೆಲ್ಲ ಕೇಳಿ ಆ ಹುಡುಗರು ತೊಂದರೆಯಲ್ಲಿ ಬಿದ್ದರು.

ನಾನು ಹಾಗೇ ಮುಂದೆ ಸಾಗಿದೆನು. ಈಗ ತಿಳಿಯಿರಿ ನಮ್ಮ ರಾಷ್ಟ್ರವೇ ಧನಾಢ್ಯನಾಗಬೇಕೆಂಬ ಬುದ್ಧಿಯಿಂದ ದೇವರನ್ನು ಲಕ್ಷಿಸದೆ ಅಲ್ಲದ ಸಲ್ಲದ ಮಾರ್ಗವನ್ನವಲಂಬಿಸಹತ್ತಿದರೆ-ಎರಡನೇ ಜನಾಂಗದವರನ್ನು ತನ್ನ ಬಲಾಬಲಿಕೆಯಿಂದ ಸುಲಿಯ ಹತ್ತಿದರೆ, ಮಾದಕಪದಾರ್ಥಗಳ ವ್ಯಾಪಾರಕ್ಕೆ ಪ್ರೋತ್ಸಾಹನೆ ಕೊಡಹತ್ತಿದರೆ. ತನ್ನ ವ್ಯಾಪಾರವನ್ನು ಬೆಳಸುವ ಉದ್ದೇಶದಿಂದ ಪರರಾಷ್ಟ್ರಗಳನ್ನು ಪಾದಾಕ್ರಾಂತಮಾಡಹತ್ತಿದರೆ. ತನ್ನ ಸಾಮರ್ಥ್ಯವನ್ನೂ ವರ್ಚಸ್ಸನ್ನೂ ಸ್ಥಿರಪಡಿಸುವದಕ್ಕಾಗಿ ಕಪಟವನ್ನಾಚರಿಸಹತ್ತಿದರೆ-ಇಂಥ ನಮ್ಮ ದೇಶಕ್ಕೂ ಮತ್ತು ಸತ್ಯಪ್ರಿಯನಾದ ಜಗದೀಶನಿಗೂ ಏಕಕಾಲಕ್ಕೆ ಏನೂ ವ್ಯತ್ಯಾಸವಿಲ್ಲದೆ ಭಕ್ತಿನಿಷ್ಠೆಗಳನ್ನು ತೋರಿಸಲಿಕ್ಕಾಗುವದೋ ? ಎಂದೂ ಆಗದು. ಸೃಷ್ಟಿಕರ್ತನನ್ನು ಸೇವಿಸುವದಕ್ಕಾಗಿ ನಾವು ನಮ್ಮ ದೇಶದ ವಿಚಾರವನ್ನೇ ಬಿಡಬೇಕಲ್ಲವೇ ?. ಆದ್ದರಿಂದ ನಾನು ಸೂಚಿಸುವದೇನಂದರೆ ನೀವು ಕೇವಲ ಜಗದೊಡೆಯನೊಬ್ಬನಲ್ಲಿ ಮಾತ್ರ ನಿಷ್ಠೆಯುಳ್ಳವರಾಗಲಿಕ್ಕೆ ಬದ್ಧರಾಗಬೇಕಲ್ಲದೆ, ಅವನ ಜೊತೆಗೆ ಇನ್ನೊಬ್ಬರನ್ನು ಸೇರಿಸಲಿಕ್ಕೆ ಬಾರದು.

ಇವನ ಜೊತೆಗಾರರಾದ ಮಿಕ್ಕ ಹುಡುಗರೆಲ್ಲ ನಮ್ಮ ಸಂವಾದದಲ್ಲಿ ವೈಮನಸ್ಯಕರ ಹೋಗಿದ್ದರು. ಅವರ ಮುಖ್ಯಸ್ಥನೂ ಬಂದನು. ಅವನಿಗೆ ನಾನು ಅಂದದ್ದನ್ನೆಲ್ಲ ತಿರುಗಿ ಹೇಳಿ, ದಿನದಿನಕ್ಕೆ ಬೆಳೆಯುತ್ತಿರುವಂಥ ತರುಣರಲ್ಲಿ ಈತರದ ವಿಚಾರತರಂಗವು ಹುಟ್ಟುವಂತೆ ಪ್ರಯತ್ನಿಸಬೇಕೆಂದು ಅವನಿಗೆ ಹೇಳಿಕೊಂಡೆನು. ಈ ರೀತಿ ನಮ್ಮ ಹೃದಯಂಗಮವಾದ ಸಂವಾದವು ಮುಗಿಯುವಷ್ಟರಲ್ಲಿ ಗಾಡಿಯು ನಿಲ್ದಾಣವನ್ನು ಹೊಂದಿಯುತ್ತಾ ಹೊರಟಿತು ನನಗೆ ಈ ಧೀರೋದಾತ್ತರಾದ ಬಾಲಕರ ವಿಷಯಕ್ಕೆ ವಿನೋದವೆನಿಸಿತು; ಮತ್ತು ಅವರ ಚಳವಳಿಯ ಸೂತ್ರಾರ್ಥವು ಚನ್ನಾಗಿ ತೋಳಯಿತು ಮಾನವಪ್ರಾಣಿಗಳೆಲ್ಲ ಒಂದೇ ಒಂದಾದ ಧರ್ಮವು ಇರಲಿಕ್ಕೆ ಸಾಕು ಕೇವಲ ಜಗದೀಶನಲ್ಲಿ ಮಾತ್ರ ಏಕನಿಷ್ಠರಾಗಿ ಭಕ್ತಿ ನಿಷ್ಠೆ ನನ್ನ ಮನಸ್ಸಿಗೆ ಹೊಳೆಯಿತು

ವದೇ ಆ ಧರ್ಮವು. ಇದಕ್ಕೆ ಅನುಗುಣವಾಗಿದ್ದರೆ ಇದೊಂದರಲ್ಲಿ ರಾಜನಿಷ್ಠೆ, ದೇಶಭಕ್ತಿ, ಭೂತದಯೆ ಎಲ್ಲವೂ ಅಡಕವಾಗಿರುವವು. ಆದರೆ ಅನೇಕವೇಳೆ ಇವು ಇವೆಲ್ಲವನ್ನೂ ಹೊರ್ತುಪಡಿಸಬಹುದು. ನಮ್ಮ ತರುಣರು ಮತ್ತು ಅವರ ಅಧ್ಯಾಪಕರು ತಮಗೆ ಮನವರಿಕೆಯಾಗಿದ್ದರೆ 'ದೇವರು ಅರಸು ಮತ್ತು ದೇಶದ' ಸೇವೆಯ ವಿಷಯಕ್ಕೆ ಇದ್ದ ತಮ್ಮ ಮತವನ್ನೂ ಶ್ರದ್ಧೆಯನ್ನೂ ಪುನಃ ಪರೀಕ್ಷಿಸಿ ಅವನ್ನು ಬದಲುಮಾಡುವರೆಂದು ನಾನು ಆಶಿಸುತ್ತೇನೆ. ಸೂಕ್ಷ್ಮವಾಗಿ ವಿಚಾರಿಸಲು ಪರಿತೋರದಂಥ ಸೂತ್ರವಚನಗಳ ಛಾಪು ಸಣ್ಣ ಬಾಲಕರ ಮೇಲೆ ಬೀಳಗೊಡಬಾರದೇನು ಸಣ್ಣ ತಪ್ಪಲ್ಲ!

## ಸತ್ಯಾಗ್ರಹ, ಸವಿನಯಕಾಯಿದೇಭಂಗ ಶಾಂತವಾಗಿ ವಿರೋಧಿಸೋಣ ಮತ್ತು ಅಸಹಕಾರ.

ಯಂಗ ಇಂಡಿಯಾ ೨೩-೩-೨೨.

ರಾಷ್ಟ್ರವನ್ನು ಶುದ್ಧಗೈಯುತ್ತಿರುವ ಈ ಪ್ರಚಂಡವಾದ ಚಳವಳಿಯ ಮೂಲಕ ಉದ್ಭವಿಸುವ ನಾನಾತರದ ತೊಡಕಿನ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವದು ಅನೇಕವೇಳೆ ನನ್ನ ಪಾಲಿಗೆ ಬಂದಿರುತ್ತದೆ. ಈ ಟಿಪ್ಪಣಿಯ ಶಿರೋಭಾಗದಲ್ಲಿ ಬರೆದಿರುವ ಶಬ್ದಗಳ ಅನುವಾದವನ್ನು ಮಾಡಬೇಕೆಂದು ಅಸಹಕಾರಿಗಳಾದ ಕೆಲವು ಕಾಲೇಜ ವಿದ್ಯಾರ್ಥಿಗಳು ಕೇಳಿರುವರು. ಇಷ್ಟು ಕಾಲಗತಿ ಹೋದರೂ, ಇನ್ನೂ ಎಷ್ಟೋ ಜನರು 'ಸತ್ಯಾಗ್ರಹ' ವೆಂಬುವದರಲ್ಲಿ ಒಮ್ಮೊಮ್ಮೆ ಅಂದರೆ—ಜೀವದ ಪರವೆಯಿಲ್ಲದ ಕಾಮಾಂಧನೋರ್ವನು ನನ್ನ ತಂಗಿಯ ಮೇಲೆ ಬಲಾತ್ಕಾರ ಮಾಡಬಂದಂಥ—ಇದೇ ಮಾದರಿಯ ಸಮಯಗಳಲ್ಲಿ ಹಿಂಸಾತ್ಮಕವಾದ ಅತ್ಯಾಚಾರವನ್ನು ಕೂಡಾ ಆಶ್ರಯಿಸಬಹುದಲ್ಲೇನೆಂದು ನನ್ನನ್ನು ಬಹಳವಾಗಿ ಕೇಳುತ್ತಿರುವರು. ಆದರೆ ಕ್ರೋಧಾವೇಶಕ್ಕೆ ವಶನಾಗದೆ, ಆತನಿಂದ ಮರಣವನ್ನು ಸಹ ನಿರೀಕ್ಷಿಸುತ್ತ ನಿನ್ನ ತಂಗಿಯ ಮತ್ತು ಆ ಜುಲುಮುಗಾರನ ನಡುವೆ ಶಾಂತಚಿತ್ತದಿಂದ ನಿಲ್ಲುವದೇ ಅವಳನ್ನು ಪರಿಪೂರ್ಣವಾಗಿ ರಕ್ಷಣೆ ಮಾಡಿದಂತೆ ಎಂದು ಹೇಳುವ ಸಾಹಸ ಮಾಡಿರುವೆನು. ರಕ್ಷಿಸಿಕೊಳ್ಳುವ ಈ ನವೀನವಾದ ಆಚರಣೆಯಿಂದ ಬಲಾತ್ಕಾರ ಮಾಡಬಂದವನ ವಿಕಾರೋದ್ರೇಕವೆಲ್ಲ ಅಳಿದುಹೋಗಿ ನಿರ್ಮಲೆಯಾದ ಅಬಲೆಯನ್ನು ಬಲಾತ್ಕರಿಸಲು ಅವನು ಹೇಸಿ ನಾಚಿಗೊಂಡು ಓಡಿಹೋಗಹತ್ತುವನು. ಅವನು ಓಡಿಹೋಗದಿದ್ದರೂ ಅಣ್ಣನ ಪ್ರಶಂಸನೀಯವಾದ ಈ ಶೂರಕೃತ್ಯದಿಂದ ಧೈರ್ಯಗೊಂಡು ಪಶುಧರ್ಮಕ್ಕೆ ಸೇರಿದ ಆ ನರಾಧಮನನ್ನು ಆತ್ಮವೀರತನದಿಂದ ಎದುರಿಸಲು ಅವಳು ಸಿದ್ಧಳಾಗುವಳು. ಇನ್ನು ಇಷ್ಟೆಲ್ಲ ಸಂರಕ್ಷಣೆಯು ಉಪಯೋಗವಾಗದೆ ಆ ದುರಾಗ್ರಹಿಯ ಶಾರೀರಿಕ ಶಕ್ತಿಯೇ ಹೆಚ್ಚಾಗಿ ಆಗಬಾರದ್ದು ಸಂಭವಿಸಿದರೆ ಆ ಮಾನಭಂಗವು ಆ ದುರುಳನದೇ ಹೊರ್ತು ಆ ಮಾನಿನಿಯದಲ್ಲ. ಆ ಶುಭಾಂಗಿಯಾದ ಅಬಲೆಯು ಮತ್ತು ಅವಳ ಪಾತಿವ್ರತ್ಯವನ್ನು ಕಾಯುವದಕ್ಕಾಗಿ ಮಡಿದುಹೋದ ಅವಳ ವೀರಾಗ್ರಜನು ಜಗದೊಡೆಯನ ನ್ಯಾಯಾಸನದ ಮುಂದೆ ಪವಿತ್ರತೆಯನ್ನು ಹೊಂದುವರು. ಈ ರೀತಿ ನಾನು ಹೇಳುವದನ್ನು ಕೇಳಿ ಪ್ರಶ್ನೆಮಾಡಿದವನಿಗೂ ಮತ್ತು ಓದುವವರಿಗೂ ಇದರ ಮನವರಿಕೆಯಾಗುವದೆಂದು ನಾನು ನಂಬಿರುವದಿಲ್ಲ. ಜಗತ್ತು ಎಂದಿನಂತೆ ಯಥಾಪ್ರಕಾರವಾಗಿಯೇ ಸಾಗುವದನ್ನು ನಾನು ಬಲ್ಲೆನು. ಆದರೆ ಈ ಆತ್ಮಪರೀಕ್ಷೆಯ ವಾತಾವರಣ ಪ್ರಬಲವಾದ ಅಹಿಂಸಾ ಚಳವಳಿಯಲ್ಲಿ ಅಡಕವಾಗಿರುವ ಎಲ್ಲ ಸೂಕ್ಷ್ಮ ಆಚಾರ ವಿಚಾರಗಳನ್ನು ಅರಿತುಕೊಂಡು ಅವುಗಳನ್ನು ಮನನಮಾಡುತ್ತಿರುವದು ಒಳ್ಳೇದು. ಎಲ್ಲ ಧರ್ಮಗಳು ಶ್ರೇಷ್ಠವಾದ ಈ ಅಹಿಂಸಾ ತತ್ವಕ್ಕೆ ಪ್ರಾಮುಖ್ಯವನ್ನು ಕೊಟ್ಟೇ ಕೊಟ್ಟಿರುವವು ಆದರೆ ದುರ್ಬಲತೆಯನ್ನು ಲಕ್ಷಿಸಿ ಸ್ವಲ್ಪ ಹೆಚ್ಚು ಕಡಿಮೆ ಅದನ್ನು ಸಡಿಲಿಸಿರುವವು.

## ಮಹಾತ್ಮರ ವಿಚಾರ ಪರಿಚಯ.

**ಸತ್ಯಾಗ್ರಹ**— ಇದರ ಶಬ್ದಶಃ ಅರ್ಥವು ಸತ್ಯಕ್ಕೇನೇ ಅಂಟಿಕೊಂಡು ಕೂಡ್ರುವದು; ಆದುದರಿಂದ ಸತ್ಯಾಗ್ರಹವೆಂದರೆ ಕೇವಲ ಸತ್ಯದಬಲವಾಗಿರುವದು. ಸತ್ಯವೆಂದರೆ ಆತ್ಮಾ ಅಥವಾ ಚೇತನವು; ಕಾರಣ ಇದಕ್ಕೆ ಆತ್ಮಬಲವೆಂದೂ ಅನ್ನುವದುಂಟು. ಇದು ಹಿಂಸೆಯನ್ನು ನಿರಾಕರಿಸುವ ಕಾರಣವೇನಂದರೆ—ನಿತ್ಯವೂ ಅಬಾಧಿತವಾಗಿರುವ ಸತ್ಯವು ಇಂಥದೇ ಎಂದು ಖಂಡಿತವಾಗಿ ತಿಳಿದುಕೊಳ್ಳುವದು ಮನುಷ್ಯನಿಗೆ ಸಾಧ್ಯವಾದ ಮಾತಾಗಿಲ್ಲವಾದ್ದರಿಂದ ಪರರಿಗೆ ಶಾಸನವನ್ನು ವಿಧಿಸುವ ಅಧಿಕಾರವು ಅವನಿಗೆ ದೊರೆತಿರುವದಿಲ್ಲ. ಆಫ್ರಿಕಾದಲ್ಲಿಯು ಹಿಂದೂಜನರು ಶಾಂತಮಯರಾಗಿ ವಿರೋಧಿಸುತ್ತಿದ್ದದ್ದನ್ನು, 'ಸಫ್ರಿಗೆಟ' ಮೊದಲಾದ ಜನರ (ಕೈಯಿಂದಾಗುವ ಮೂಲಕ) ಶಾಂತವಾದ ವಿರೋಧಿಸುವ (ಪ್ಯಾಸಿವ್ಹ ರೆಝಿಸ್ಟನ್ಸ)ದರಿಂದ ವಿಂಗಡಿಸಬೇಕಾಗಿ ಈ ಶಬ್ದವು ಮೊದಲು ಅಲ್ಲಿ ಹುಟ್ಟಿತು. ಈ ಸತ್ಯಾಗ್ರಹವು ಕೈಯಿಂದಾಗದ ಹೇಡಿಗಳ ಶಸ್ತ್ರವೆಂದು ತಿಳಿಯಕೂಡದು.

× × ×

'ಶಾಂತವಾಗಿ ವಿರೋಧಿಸೋಣವು' (ಪ್ಯಾಸಿವ್ಹ ರೆಝಿಸ್ಟನ್ಸ) -ಇದನ್ನು ಬಹುತರ ಸಫ್ರೆಗೇಟ (ದುಃಖಪೀಡಿತರು) ಮತ್ತು ನಾನ್‌ಕನ್‌ಫರ್ಮಿಸ್ಟ (ಬೇರೆ ಆಚರಣೆಗಳಿಗೆ ಒಪ್ಪದವರು) ಈ ಚಳವಳಿಯ ಸಂಬಂಧವಾಗಿ ಉಪಯೋಗಿಸುವ ರೂಢಿಯು ಕೇವಲ ಬಲಹೀನರ ಶಸ್ತ್ರವೆಂದೇ ಇದರ ಉತ್ಪತ್ತಿಯಾಗಿ ಇಷತ್ತಿಗೂ ನಿರ್ಬಲರೇ ಬೇರೆ ಉಪಾಯಗಾಣದೆ ಅದನ್ನು ಆಶ್ರಯಿಸಬೇಕೆಂಬ ವಿಚಾರವು ರೂಢಿಗೊಂಡಿರುವದು. ಹಿಂಸೆಯನ್ನು ಮಾಡಲಿಕ್ಕೆ ಅಬಲರಲ್ಲಿಯ ಸಾಮರ್ಥ್ಯ ಅಭಾವ ಮೂಲಕವೇ ಅದನ್ನು ಮಾಡಬಾರದೆಂದೂ ಪ್ರಸಂಗ ದೊರಕಿದಾಗ ಹಿಂಸೆಮಾಡಲಿಕ್ಕೆ ಅಡ್ಡಿಯಿಲ್ಲವೆಂಬುವದೂ ಇದರ ಇಂಗಿತವು. ಆದಾಗ್ಯೂ ಶಸ್ತ್ರಧಾರಿಗಳಾದ ಬಂಡುಗಾರರ ರೀತಿಯಿಂದ ಇದು ಭಿನ್ನವಾಗಿರುವದು

× × ×

ಸವಿನಯ ಕಾಯಿದೆಭಂಗ — ಗರ್ಹ್ಯವಾದ ಕಾಯಿದೆಗಳಿಂದ ಬದ್ಧರಾಗಲಿಕ್ಕೆ ಒಪ್ಪಲಿಕ್ಕಿಲ್ಲವೆಂದು ವಿನಯಪೂರ್ವಕವಾದ ಆಚರಣೆಯಿಂದ ವ್ಯಕ್ತಮಾಡುವದೇ ಸವಿನಯ ಕಾಯಿದೆಭಂಗವು. ಗುಲಾಮರ ರಾಜ್ಯದಲ್ಲಿಯ ಕಾಯಿದೆಗಳನ್ನು ತಾನು ವಿರೋಧಿಸಿದ ರೀತಿಗೆ ಥೋರೋನು ಈ ಹೆಸರನ್ನು ಕೊಟ್ಟನು. ಅಂದಿನಿಂದಲೇ ಇದರ ಪ್ರಚಾರ. ಈ ಸವಿನಯ ಕಾಯಿದೆಭಂಗವನ್ನು ಕುರಿತು ಅವನು ದೊಡ್ಡದೊಂದು ಪುಸ್ತಕವನ್ನೇ ಬರೆದಿರುವನು. ಆದರೆ ಬಹಳಮಾಡಿ ಥೋರೋನು ಕೇವಲ ಅಹಿಂಸಾವಾದಿಯಾಗಿರಲಿಕ್ಕಿಲ್ಲ. ಮತ್ತು ಬಹುತರವಾಗಿ ಥೋರೋನ ಕಾಯಿದೆಭಂಗವು ಮುಖ್ಯವಾಗಿ ಅಂದರೆ ತೆರಿಗೆಯ ಸಂಬಂಧದ ಕಾಯಿದೆಗಳನ್ನಷ್ಟೇ ಸಂಬಧಿಸಿತ್ತು. ಆದರೆ ೧೯೧೯ನೇ ಇಸ್ವಿಯಲ್ಲಿ ಆಶ್ರಯಿಸಿದಂಥ ಕಾಯಿದೆಭಂಗವು ಎಲ್ಲ ಅನೀತಿಮಯ ಕಾಯಿದೆಗಳನ್ನು ಒಳಗೊಂಡಿತ್ತು. ಅದು ವಿರೋಧಿಯಾದವನ ಸವಿನಯ ಮತ್ತು ಶಾಂತವಾದ ಪುಂಡತನ

ನವನ್ನು ವ್ಯಕ್ತಮಾಡಿತು. ಕಾಯಿದೆಯಿಂದ ವಿಧಿಸಿದ ಶಿಕ್ಷೆಯನ್ನು ತಪ್ಪಿಸದೆ ಅವನು ಆನಂದದಿಂದ ಸೆರೆಮನೆಯ ವಾಸವನ್ನನುಭವಿಸಿದನು. ಇದು ಸತ್ಯಾಗ್ರಹದ ಶಾಖೆಯಾಗಿರುವದು.

: : :

**ಅಸಹಕಾರ**— ಎಂದರೆ ಮುಖ್ಯವಾಗಿ, ಯಾವ ರಾಜ್ಯತ್ರ ಅನ್ಯಾಯವಶ್ಲೆಂದು ನಮಗೆ ಅನಿಸುತ್ತದೋ ಆ ರಾಜ್ಯಕ್ಕೆ ಸಹಾಯಮಾಡದೆ ಮತ್ತು ಅದರಿಂದ ಸಹಾಯವನ್ನು ಹೊಂದದೆ ದೂರನಿಲ್ಲುವದು. ಇದರೊಳಗೆ ಮೇಲೆ ಹೇಳಿದ ಉಗ್ರತರವಾದ ಕಾಯದೇಭಂಗದ ಸಮಾವೇಶವಾಗುವದಿಲ್ಲ. ತಿಳಿಯಬಲ್ಲ ಹುಡುಗರೂ ಕೂಡಾ ಇದನ್ನು ಮಾಡಬಹುದ. ಮತ್ತು ಸಮಾಜವಾದರೂ ಕ್ಷೇಮವಾಗಿ ಇದನ್ನು ಆಚರಿಸಬಹುದು. ಸವಿನಯ ಕಾಯದೇಭಂಗ ಮಾಡಬೇಕಾದರೆ ಮೊದಲು ಕಾಯದೇಬದ್ಧರಾಗಲಿಕ್ಕೆ ನಾವು ಆನಂದದಿಂದ ಒಪ್ಪಿರಬೇಕು. ಅವುಗಳ ಶಾಸನಕ್ಕೆ ಅಂಜಿ ತಪ್ಪಿಸ್ಯಾಡಕೂಡದು. ಆದ್ದರಿಂದ ಇದನ್ನು ಬ್ರಹ್ಮಾಸ್ತ್ರವೆಂದು ಕಡೆಗೆ ಇಡಬೇಕು. ಮೊದಲೇ ಮಾಡುವದಾದಲ್ಲಿ ಪೂರ್ಣವಾಗಿ ಅಂತರಂಗವನ್ನು ಬಲ್ಲ ಕೆಲವು ಜನರು ಮಾತ್ರ ಕೈಕೊಳ್ಳಬಹುದು. ಅಸಹಕಾರವಾದರೂ ಸವಿನಯ ಕಾಯದೇಭಂಗದಂತೆ ಸತ್ಯಾಗ್ರಹದ ಒಂದು ಅಂಗವಾಗಿರುವದು. ಯಾಕೆಂದರೆ ಸತ್ಯವನ್ನು ಪಾಲಿಸುವದಕ್ಕಾಗಿ ಎಲ್ಲ ಶಾಂತಮಯವಾದ ಉಪಾಯಗಳು ಸತ್ಯಾಗ್ರಹದಲ್ಲಿ ಅಡಕವಾಗಿರುವವು

**ಮೋ. ಕ. ಗಾಂಧಿ.**

## ನವಜೀವನದ ಬಗ್ಗೆ.

ನವಜೀವನವನ್ನು ನಡೆಸುವಬಗ್ಗೆ ನೀವು ನನಗೆ ಕೆಲವು ಸೂಚನೆಗಳನ್ನು ಮಾಡಲಿಕ್ಕೆ ಕೇಳಿದಿರೇನೋ ಸರಿ. ಆದರೆ ಕೇಳುವದು ಸುಲಭವಾದಷ್ಟು ಉತ್ತರಕೊಡುವದು ಸುಲಭವಿಲ್ಲ. ಅಲ್ಲದೆ, ಆ ಬಗೆಯ ಅಧಿಕಾರವೂ ನನಗೆ ಇಲ್ಲ. ಆದಕಾರಣ ನನಗೆ ತೋರಿದ ತೋರಿಕೆಗಳನ್ನು ಮಾತ್ರ ತಮ್ಮಮುಂದೆ ಇಟ್ಟಿದ್ದೇನೆ. ಕನ್ನಡಿಗರೆಲ್ಲರು ಅವುಗಳ ವಿಷಯವಾಗಿ ವಿಚಾರಮಾಡುವರೆಂದು ನಂಬಿರುವೆನು

(೧) ವರ್ತಮಾನಪತ್ರವನ್ನು ನಡಿಸುವದೇ ಆಗಲಿ, ಮತ್ತಾವ ವಿಷಯವೇ ಆಗಲಿ, ಕರ್ನಾಟಕದ ಉದ್ಧಾರ ಮಾಡಲಿಕ್ಕಿರುವವರ ಮಾರ್ಗದಲ್ಲಿಯ ಮೊದಲನೆಯ ದೊಡ್ಡ ತೊಂದರೆಯೆಂದರೆ, ಕರ್ನಾಟಕದಲ್ಲಿ ಏಕೀಕರಣವಿಲ್ಲದಿರುವದೆಂಬದನ್ನು ಸ್ವಂತ ಅನುಭವದಿಂದ ನಾನು ಹೇಳಬಲ್ಲೆನು. ಅದನ್ನು ದೂರಮಾಡದಿದ್ದರೆ ನಮ್ಮ ಯಾವ ಕಾರ್ಯಕ್ಕೂ, ಹೇಳತಕ್ಕಷ್ಟು ಯಶವು ದೊರೆಯಲಾರದು. ಆದ್ದರಿಂದ, ವೃತ್ತಪತ್ರಕಾರರು ಕರ್ನಾಟಕದ ಏಕೀಕರಣಕ್ಕಾಗಿ ಹುಟ್ಟಿದ ಅಥವಾ ಹುಟ್ಟುವ ಸಂಸ್ಥೆಗಳಿಗೆ ತಮ್ಮ ಬರಹದಿಂದ ಉತ್ತೇಜನವನ್ನು ಕೊಡಬೇಕು.

(೨) ರಾಷ್ಟ್ರೀಯತ್ವ ಹಾಗು ಕರ್ನಾಟಕತ್ವ ಎಂಬೆರಡು ರೆಕ್ಕೆಗಳಿಂದ ನೀವು ಹಾರಬೇಕಾಗಿದೆ. ಅವುಗಳಲ್ಲಿ ಒಂದು ರೆಕ್ಕೆಯ ಕಸುವು ಕಡಿಮೆಯಾದರೆ, ದಪ್ಪನೆ ಕೆಳಗೆ ಬೀಳುವದೇ ನಿಶ್ಚಯ. ಇವೆರಡು ರೆಕ್ಕೆಗಳನ್ನು ಸಮನಾಗಿ ತೂಗಿಸಿಕೊಂಡು ಸಾಗುವ ಹದವನ್ನು ಸಂಪಾದಿಸಬೇಕು.

(೩) ವಾರಪತ್ರಿಕೆಗಳು ನವಜೀವನವನ್ನು ಹುಟ್ಟಿಸುವ ಪತ್ರಗಳು; ದೈನಿಕ ಪತ್ರಗಳು ಹುಟ್ಟಿದ ನವಜೀವನವನ್ನು ಹಬ್ಬಿಸುವ ಪತ್ರಗಳು. ಆದಕಾರಣ ಮೊದಲನೇ ತರದ ಪತ್ರಗಳಲ್ಲಿ ಸ್ವತಂತ್ರವಾದ ಹಾಗು ಗಂಭೀರವಾದ ಲೇಖಗಳು ಇರಬೇಕು. ಕೇವಲ ಜನರ ಸದ್ಯದ ಅಭಿರುಚಿಯ ಬೆನ್ನುಹತ್ತಬಾರದು. ಹೊಸ ಅಭಿರುಚಿಯನ್ನು ಹುಟ್ಟಿಸುವ ಸಾಹಸವನ್ನು ಮಾಡಬೇಕು. ದೈನಿಕ ಪತ್ರಗಳು ನವಜೀವನವನ್ನು ಹಬ್ಬಿಸುವ ಪತ್ರಗಳಾದುದರಿಂದ ಅವುಗಳಲ್ಲಿ ಸುದ್ದಿಗಳು ಸೂರೆಯಾಗಿರಬೇಕು. ಕರ್ನಾಟಕಕ್ಕೆ ಒಂದು ದೊಡ್ಡ ದೈನಿಕ ಪತ್ರಿಕೆಯ ಹೊರತು, ನವಜೀವನವು ಹಬ್ಬಲೊಲ್ಲದು. ನವಜೀವನವು ಹಬ್ಬಬೇಕಾದರೆ ಅದು ದೈನಿಕವಾಗಬೇಕು. ಒಂದು ದೈನಿಕ ಪತ್ರದ ಸದ್ಯದ ಕೊರತೆ.

(೪) ಬ್ರಾಹ್ಮಣೇತರರನ್ನೂ ಬ್ರಾಹ್ಮಣರನ್ನೂ ಏಕೀಕರಿಸುವದು, ಮೈಸೂರಿನವರನ್ನೂ ಇತರ ಕನ್ನಡಿಗರನ್ನೂ ಏಕೀಕರಿಸುವದು, ಇವೆರಡು ವಿಷಯಗಳನ್ನು ಮರೆಯಬಾರದು. ಏಕೀಕರಣವೇ ಕರ್ನಾಟಕದ ಮೂಲಮಂತ್ರವಾಗಿರಬೇಕೆಂದು ಹೇಳಬಹುದು. ಮರಾಠೀ ಕನ್ನಡಿಗರ ಏಕೀಕರಣ, ಮೈಸೂರು ಮಿಕ್ಕ ಕನ್ನಡಿಗರ ಏಕೀಕರಣ, ಬ್ರಾಹ್ಮಣ ಬ್ರಾಹ್ಮಣೇತರರ ಏಕೀಕರಣ, ಅನೇಕಬಗೆಯ ಧರ್ಮಜಾತಿಗಳ ಏಕೀಕರಣ, ಹೀಗೆ ಅನೇಕಬಗೆಯ ಭೇದಗಳಲ್ಲಿ ವ್ಯಕ್ತಿವಿಶಿಷ್ಟತ್ವವನ್ನು ಕಾಯ್ದುಕೊಂಡು ಏಕೀಕರಣವನ್ನುಂಟುಮಾಡುವ ಬಿಕ್ಕಟ್ಟಿನ ಪ್ರಶ್ನೆಯನ್ನು ಕರ್ನಾಟಕಕ್ಕೆ ಬಿಡಿಸಬೇಕಾಗಿದೆ. ಹಿಂದುಸ್ಥಾನವೇ ಮೊದಲಿಗೆ ವಿವಿಧತೆಯ ಆಗರವು. ಅದರಲ್ಲಿಯೂ ಕರ್ನಾಟಕದಷ್ಟು ವಿವಿಧತೆಯು ಮತ್ತಾವ ಪ್ರಾಂತಗಳಲ್ಲಿಯೂ ಕಂಡುಬರುವದಿಲ್ಲ. ಈ ವಿವಿಧತೆಯ ಐಕ್ಯದ ಸೂತ್ರವನ್ನು ಪೋಣಿಸುವ ಪುಣ್ಯವನ್ನು ಸಂಪಾದಿಸುವದು ಬಿಡುವದು ಕರ್ನಾಟಕದ ಪಾಲಿಗೆ ಬಂದಿದೆ.

(೫) ವೃತ್ತಪತ್ರದ ಭಾಷೆಯ ವಿಷಯಕ್ಕೆ ಇದೇ ತೊಂದರೆಯು; ಆದರೆ ಅದೇ ಉತ್ತರವು. ಕನ್ನಡಭಾಷೆಯಲ್ಲಿ ಎಷ್ಟು ಉಪಭಾಷೆಗಳು ಬೇರೆ ಭಾಷೆಗಳಲ್ಲಿ ಇಲ್ಲ, ಮಂಗಳೂರಿನ ಭಾಷೆಯು ಬೇರೆ, ಮೈಸೂರಿನವರದು ಬೇರೆ, ಆದರೆ ಅವರೆಲ್ಲರಿಗೂ ಸರಿಯಾಗುವ ಕನ್ನಡಭಾಷೆಯ ಹೊಸದೊಂದು ಪಡಿಯಚ್ಚನ್ನು ನಾವು ಹುಡುಕಬೇಕಾಗಿದೆ. ಹಾಗೂ ಹಾಗೆ ಮಾಡುವದು ಸಾಧ್ಯವಿದೆ.

(೬) ವೃತ್ತಕಾರರೆಲ್ಲರೂ ಮಿಲಿತರಾಗಿ, ಎಲ್ಲರೂ ಕೂಡಿ ಒಂದು ಮಾದರಿಯ ವಾರಪತ್ರವನ್ನೂ ಅಂತೆಯೊಂದೇ ದೈನಿಕ ಪತ್ರವನ್ನೂ ತೆಗೆಯುವ ಆಲೋಚನೆಯನ್ನು ಮಾಡದಿದ್ದರೆ, ಎಲ್ಲರೂ ಕೊರಗುತ್ತ ಕೂಡ್ರುವ ಸಂಭವವೇ ಹೆಚ್ಚು.

ಹೀಗೆ, ವಿಷಯ ಮತ್ತು ಭಾಷೆ ಇವುಗಳ ಬಗ್ಗೆ ಮಾಡಿದ ಸಾಮಾನ್ಯ ಸೂಚನೆಗಳ ವಿಚಾರವನ್ನು ಪತ್ರಕರ್ತರೆಲ್ಲರೂ ಮಾಡಬೇಕೆಂದು ಪ್ರಾರ್ಥನೆ.

ಬಾಗಲಕೋಟೆ
೬-೬-೨೨ } **ವೆಂಕಟೇಶ ಭೀಮರಾವ ಆಲೂರ**

## ಇಹವೃತ್ತ.

ಒಣಮೋಡಗಳೇನೋ ಆಗಿಂದಾಗ್ಗೆ ಆಕಾಶದಲ್ಲಿ ಆಡ್ಯಾಡುತ್ತವೆ. ಆದರೆ ಮಳೆಯಿಲ್ಲ.

ದೇಶಭಕ್ತ ಜಯರಾವ ದೇಶಪಾಂಡೆಯವರು ಬಿಮಾರಿಯಿಂದ ಮೈಯಲ್ಲಿ ಸ್ವಸ್ಥವಿಲ್ಲದಮೂಲಕ ಇಲ್ಲಿಗೆ ಬಂದಿರುವರು. ಇಲ್ಲಿ ಔಷಧೋಪಚಾರವು ನಡೆದಿದ್ದು ಈಗ್ಗೆ ಸ್ವಲ್ಪ ಗುಣವದೆ.

ಕಳೆದವಾರದಲ್ಲಿ ಶ್ರೀ: ವೆಂಕಟರಾವ ಆಲೂರ ಇವರು ಇಲ್ಲಿಗೆ ಆಗಮಿಸಿದ್ದರು ಕನ್ನಡ ನವಜೀವನ ಕಾರ್ಯಾಲಯವನ್ನು ವಿದ್ಯಾರಣ್ಯ ಮುದ್ರಾಮಂದಿರವನ್ನೂ ನೋಡಿ ಸಂತೋಷಪಟ್ಟರು. ಜನಲೀಡರ ಗಳನ್ನು ಸಂದರ್ಶಿಸಿ ಖಾದೀಪ್ರಸಾರವು ಇಲ್ಲಿ ಜಸ್ತಿದೆಯೆಂಬ ಅಭಿಪ್ರಾಯಪಟ್ಟು ಕೆಲವು ಖಾದೀ ಅರಿವೆಯನ್ನು ಕೊಂಡುಕೊಂಡರು. ಶ್ರೀ ವೆಂಕಟರಾಯರು ಕನ್ನಡ ನವಜೀವನಕ್ಕೆ ಒಂದು ಲೇಖವನ್ನು ಬರೆದುಕೊಟ್ಟಿದ್ದಾರೆ. ಅದು ಈ ವಾರದಲ್ಲಿ ಬೇರೆಕಡೆಗೆ ಪ್ರಸಿದ್ಧವಾಗಿದೆ.

## ಆರುತಿಂಗಳ ವರ್ಗಣೀದಾರರಿಗೆ ಸೂಚನೆಯು.

ಕನ್ನಡ ನವಜೀವನದ ಪ್ರಾರಂಭದಿಂದ, ಆರುತಿಂಗಳ ಮುಟ್ಟಿಗೆ ಮಾತ್ರ ವರ್ಗಣೀದಾರರಾದವರ ಹಣವು ಒಂದೆರಡು ವಾರಗಳಲ್ಲಿಯೇ ಮುಟ್ಟುವದು. ಆದ್ದರಿಂದ ಆ ಚಂದಾದಾರರು ಕಾಯಮ ವರ್ಗಣೀದಾರರಾಗಿ ಉಳಿದು, ತಮ್ಮ ವರ್ಗಣಿ ಹಣವನ್ನು (ಅಂದರೆ ೪ ರೂಪಾಯಿಗಳನ್ನು) ಅವಸ್ಯ ತೀವ್ರ ಮನಿಆರ್ಡರು ಮಾಡಿ ಕಳುಹಿಸಬೇಕೆಂದು ಪ್ರಾರ್ಥನೆಯದೆ.

ಸಂಪಾದಕ

# ಕನ್ನಡ ನವಜೀವನ.

ಜ್ಯೇಷ್ಠ ವದ್ಯ ೬ ಗುರುವಾರ ಶಕೆ ೧೮೪೪

## ಅಸಹಯೋಗದ ಮರ್ಮವು,

(ನವಜೀವನ)

ಅಸಹಯೋಗವನ್ನು ಕೇರದಿದ್ದರವಲ್ಲಿ ಹಾಗು ವಿರೋಧಿಸುವವರಲ್ಲಿ ಮೂರು ಭಾಗಗಳನ್ನು ಮಾಡಬಹುದು (೧) ನೌಕರಶಾಹಿಯೂ ಅದರ ಅಂಗ್ಲೋಇಂಡಿಯನ್ ಮಿತ್ರರೂ (೨) ಮವಾಳಪಕ್ಷದವರು (೩) ಮೂರನೇಪಂಗಡದವರಿಗೆ ವಿಶ್ವಕುಟುಂಬಿಗಳೆಂದು ಹೇಳಬಹುದು. ಅಸಹಕಾರ ಚಳವಳಿಯು ತಮಗೂ, ತಮ್ಮ ಸರಕಾರಕ್ಕೂ ತಮ್ಮ ರಾಷ್ಟ್ರಕ್ಕೂ ಬಹಳ ವಿಘಾತಕವಾಗಿರುವದೆಂದು ತಿಳಿದು ನೌಕರಶಾಹಿಯೂ ಅವರ ಅಣ್ಣತಮ್ಮಂದಿರೂ ಆ ಚಳವಳಿಯ ಬಗ್ಗೆ ಅಪ್ರಸನ್ನರಾಗಿದ್ದಾರೆ. ಅಸಹಯೋಗಿಗಳು ತಮ್ಮ ಈಗಿದ್ದ ಸರಕಾರವನ್ನು ಮುರಿಯಬೇಕೆಂದು ಮಾಡಿರುವರೋ ಇಲ್ಲವೇ ಬದಲುಮಾಡಬೇಕೆಂದು ಮಾಡಿರುವರೋ ಎಂಬದಾಗಿ ಅವರು ವಿಚಾರಮಾಡಹತ್ತಿರುವರು. ಎರಡೂ ಸಂದರ್ಭದಲ್ಲಿ ತಾವು ಈಗ್ಗೆ ಮನಬಂದಂತೆ ನಡಿಸುತ್ತಿದ್ದ ಸತ್ತೆಯು ತಮ್ಮ ಕೈಬಿಟ್ಟು ಹೋಗುವದಿಲ್ಲವೇ? ತಾವೂ ತಮ್ಮ ದೇಶದ ವ್ಯಾಪಾರಸ್ಥರೂ ಇಲ್ಲಿಯ ದ್ರವ್ಯಗಳನ್ನೂ ಸಂಪತ್ತಿಯನ್ನೂ ಸೆಳೆಯುವದು ನಿಲ್ಲುವದಿಲ್ಲವೇ? ಆದರಿಂದ ೩೦ ಕೋಟಿ ಹಿಂದನಿವಾಸಿಗಳ ಬೇಡಿಗಳು ಮುರಿದುಹೋಗಲೊಲ್ಲವೇಕೆ, ಇಡೀ ಜಗತ್ತಿಗೆ ಸ್ವರಾಜ್ಯದ ಹಾಗೂ ಸುಖಶಾಂತಿಯ ಮಾರ್ಗವನ್ನು ತೋರಿಸಿಕೊಟ್ಟಂತಾಗಲೊಲ್ಲದೇಕೆ, ಆದರೆ ತಮ್ಮರೊಟ್ಟಿಯೊಂದು ಹೋಗುತ್ತದಲ್ಲ ಮತ್ತು ತಾವು ಅನುಭವಿಸುತ್ತಿದ್ದ ಚೈನಿಯು ದೊರೆಯುವದಿಲ್ಲವಲ್ಲ? ಕಪ್ಪುಬಣ್ಣದ ಹಿಂದೀ ಗುಲಾಮರ ಗೂಡ ಸಮಾನತೆಯನ್ನು ತಾಳಿ ಇರಬೇಕಾಗುವದಲ್ಲ! ಯಾರನ್ನು ಈಗ ಸೊಟ್ಟಿಗೆಗಳಹತ್ತರ ನಿಲ್ಲಿಸುವೆವೋ, ಆಡುಕುರಿಗಳಂತೆ ಜೇಲುಗಳಲ್ಲಿ ನೂಕಿಬಿಡುವೆವೋ, ಪಶುಗಳಂತೆ ಹೊಡೆದು, ಬಡಿಯುವದನ್ನು ಮಾಡುವೆವೋ, ಮತ್ತು ಕಷ್ಟಬಡಿಸುವೆವೋ, ಅಂಥವರ ಸರಿಜೋಡಿಯಲ್ಲಿ ಕೂಡ್ರಬೇಕಾಗುವದಲ್ಲ! ಅವರ ಮನಸನ್ನು ಒಲಿಸುವಂತೆ ನಡೆಯಬೇಕಾಗುವದಲ್ಲ! ಬೂರಸುತ್ತ ರಾಜ್ಯ ಮನೆತನಕ್ಕೆ ಸೇರಿದ ಬ್ರಿಟಿಶರು - ಸುಂದರಗೌರವರ್ಣದಜನರು ಇಂಥ ಅವಮಾನವನ್ನು ಹೇಗೆ ಸಹನಮಾಡಬೇಕು? ಆದ್ದರಿಂದಲೇ ಅವರು ಈ ಚಳವಳಿಯು ತಮ್ಮ ಸಾಮ್ರಾಜ್ಯದ ಶತ್ರುವೆಂದು ತಿಳಿದುಕೊಂಡು, ಅದರ ಬೀಜವು ಕೂಡ ಉಳಿಯದಂತೆ ನಾಶಿಸಲು ಪ್ರಯತ್ನಿಸುತ್ತಿರುವರು.

ಮವಾಳಪಕ್ಷದವರು ಈ ಚಳವಳಿಯಿಂದ "ಶಮಗೆ ವ್ಯವಸ್ಥೆ ಮತ್ತು ಶಾಂತಿ" ಇವುಗಳಿಗೆ ಬಾಧಕವಿರುವದೆಂದು ತಿಳಿಯುವರು. ಇಂಗ್ಲಿಶರ ಸಾಮ್ರಾಜ್ಯದ ಛತ್ರಛಾಯೆಯಿಲ್ಲದೆ ಹಿಂದುಸ್ಥಾನದ ಉನ್ನತಿಯು, ಎಂದೂ ಆಗುವದಿಲ್ಲೆಂಬ ಅವರ ತಿಳುವಳಿಕೆಯು. ಭರತಖಂಡದ ಈಗಿನ ಅವಸ್ಥೆಯು ಅವರ ಉನ್ನತಿಯೆಂದು ಹೇಳಿಕೊಳ್ಳುತ್ತಾರೆ ಮತ್ತು ಅದು ಇಂಗ್ಲಿಶರ ಸುರಾಜ್ಯದ ಫಲವೆಂದು ಅವರ ಅಭಿಪ್ರಾಯವು. ನಿರಾಶೆಯಿಂದಾಗಲೀ ರಾಜನೈತಿಕ ಸೂಕ್ಷ್ಮಬುದ್ಧಿಯಿಂದಾಗಲೀ, ದೂರದೃಷ್ಟಿಯಿಂದಾಗಲಿ, ಇಂಗ್ಲಿಶರ ಮನವನ್ನು ಒಲಿಸಿ ಏನಾದರೂ ಸ್ವಲ್ಪ ತುಣುಕುಗಳು ಸಿಕ್ಕರೆ ಅವುಗಳನ್ನಷ್ಟೇ ತೆಗೆದುಕೊಳ್ಳುವದು - ಅವರ ಮನಸ್ಸಿಗೆ ಬರುತ್ತದೆ. ತಮ್ಮ ಪೌರುಷವನ್ನಾಗಲೀ ಪರಾಕ್ರಮವನ್ನಾಗಲೀ ತೋರಿಸುವದು ಯೋಗ್ಯವಲ್ಲೆಂದು ಅವರು ತಿಳಿಯುತ್ತಾರೆ. ಸ್ವರಾಜವನ್ನು ಕೊಡತಕ್ಕವರು ಇಂಗ್ಲಿಶ ಜನರು,–ಬ್ರಿಟಿಶ ಪಾರ್ಲಮೆಂಟಿನವರು ಎಂದು ಅವರು ಅನ್ನುತ್ತಾರೆ. ಅವರನ್ನು ಅಸಂತುಷ್ಟರನ್ನಾಗಿ ಮಾಡಿದರೆ ಸ್ವರಾಜ್ಯವು ದೊರೆಯುವ ಬಗೆಯೆಂತು! ಪಂಜಾಬದ ಅರಿವಿಗಳ ಹೋಳಿಯನ್ನು ಮಾಡಿ, ರಾಜಪುತ್ರನ ಅಪಮಾನವನ್ನು ಮಾಡಿ, ಕಾಯದೇಭಂಗವನ್ನು ಮೇರೆಯಿಲ್ಲದರೂ ಮಾಡಿ, ಅಸಹಯೋಗಿಗಳು, ಬ್ರಿಟಿಶ ಸಾಮ್ರಾಜ್ಯದ ಮತ್ತು ಬ್ರಿಟಿಶ ಜನರ ಅಸಂತುಷ್ಟತೆಯನ್ನು ಸಂಪಾದಿಸಿ ಹಿಂದುಸ್ಥಾನದಲ್ಲಿ ಅರಾಜಕತೆ ಹಾಗೂ ಅಶಾಂತತೆಯ ಬೀಜಗಳನ್ನು ಬಿತ್ತಿಬಿಟ್ಟಿರುವರು. ಆದ್ದರಿಂದ ಇವರ ಮರಣವು ಎಷ್ಟು ಶೀಘ್ರವಾಗಿ ಆಗುವದೋ ಅಷ್ಟು ಒಳ್ಳೇದು ಎಂದು ಅನ್ನುತ್ತಿರುವರು ಮತ್ತು ಅದರಂತೆ ಈ ಸರಕಾರಕ್ಕೆ ತಮ್ಮ ಬೆಂಬಲವನ್ನು ಕೊಡುತ್ತಿರುವರು ಹಾಗು ಕೊಡಹತ್ತಿರುವರು.

ಮೂರನೇ ವರ್ಗದ ಜನರಿಗೆ ನಾವು ವಿಶ್ವಕುಟುಂಬಿಗಳೆಂದು ಕರೆದಿದ್ದೇವೆ. ಅಸಹಯೋಗ ಚಳವಳಿಯಲ್ಲಿ ಪ್ರಾಚ್ಯಪಾಶ್ಚಾತ್ಯ ಸಂಸ್ಕೃತಿಯ, ಪ್ರಾಚ್ಯಪಾಶ್ಚಾತ್ಯ ಭಾವನೆಗಳ ಹಾಗೂ ಪಾಶ್ಚಿಮಾತ್ಯ ಆದರ್ಶಗಳ, ವಿಷಯವಾಗಿ ವಿರೋಧಭಾವವಿದ್ದದ್ದನ್ನೂ, ಖಾದಿಯಮೇಲೆ ವಿಶೇಷವಾಗಿ ಜೋರು ಕೊಟ್ಟಿದ್ದನ್ನೂ ನೋಡಿ, ಅವರ ಪಕ್ಷವು ಉದ್ಭವಿಸಿರುವದು. ಹಿಂದುಸ್ಥಾನವು ವಿಶ್ವಕುಟುಂಬಭಾವವನ್ನು ಬಿಟ್ಟುಕೊಟ್ಟು ಸಂಕುಚಿತವಾದ ರಾಷ್ಟ್ರೀಯಭಾವವನ್ನು ಧರಿಸುವದು ಡಿರುವದು. ಅದು ತನ್ನನ್ನಕ್ಕೆ ತಾನೇ ದೊಡ್ಡದೆಂದು ತಿಳಿದುಕೊಂಡಿರುವದು. ಎರಡನೆಯವರ ಸಂಗಡ ಅಸಹಯೋಗವನ್ನು ಮಾಡಬೇಕೆಂದು ಅದು ನಿರ್ಣಯಿಸಿರುವದು. ಜಗತ್ತಿನಲ್ಲಿ ಎಷ್ಟೋ ರಾಷ್ಟ್ರಗಳು ಇನ್ನತ್ತಿನವರೆಗೆ, ಎರಡನೇ ರಾಷ್ಟ್ರದವರ ಸಂಗಡ ಅಸಹಯೋಗವನ್ನು ನಡಿಸುವವು. ಅದರ ಕುಫಲವು–ಪರಸ್ಪರದಲ್ಲಿ ದ್ವೇಷವೂ ಕಲಹವೂ–ಜಗತ್ತಿನ ಎದುರಿನಲ್ಲಿ ಅದೆ. ಇಡೀ ಜಗತ್ತಿನ ಉನ್ನತಿ ಮತ್ತು ಸ್ವತಂತ್ರತೆಯ ಮೇಲೆ ಲಕ್ಷವನ್ನು ಇಟ್ಟರೆ ಕೇವಲ ಹಿಂದು ಹಿಂದುಸ್ಥಾನದ ಉನ್ನತಿಯಾಗಲಿ, ಸುಖಶಾಂತಿಯಾಗಲಿ, ಮುಕ್ತಿಯಾದ ಸಂಗತಿಯಾಗಲಾರದು. ನಿಜವಾದ ಅಧ್ಯಾತ್ಮವಾದಿಗಳೂ, ಪರೋಪಕಾರಿಗಳೂ, ತಮ್ಮ ಸುಖದುಃಖಗಳನ್ನೆಲ್ಲ ಮರೆತುಬಿಟ್ಟು ಎರಡನೆಯವರ ಹಿತದಲ್ಲಿ ಯಾವಾಗಲೂ ತತ್ಪರರಾಗಿರುವರು. ಭಾರತವು ವ್ಯರ್ಥವಾಗಿ, ತನ್ನನ್ನು ಗುಲಾಮನೆಂದು ತಿಳಿದುಕೊಂಡಿರುವದು. ಹಿಂದುಸ್ಥಾನವು, ತಾನು ಸೌಖ್ಯ

ವಲ್ಲಿದ್ದೇನೆಂದು ತಿಳಿದುಕೊಂಡಕೂಡಲೇ ಅದು ಸುಖಿಯಾಗುವದು. ಆದ್ದರಿಂದ ನಿಜವಾದ ಉನ್ನತಿಯೂ ಸಾಮಾಜಿಕ ಸುಖವೂ, ಸಹಯೋಗದಿಂದ ಜನಿಸುವವಲ್ಲದೆ, ಅಸಹಯೋಗವು ಕಾರಣವಿಲ್ಲೆಂದು ಈ ವಾದಿಗಳ ಮತವು. ಮತ್ತು ಹೀಗೆ ತಿಳಿದುಕೊಂಡು, ಅಸಹಯೋಗಕ್ಕೆ ದೂರದಿಂದಲೇ ನಮಸ್ಕಾರ ಮಾಡುವರು.

ನಾವು ಎಷ್ಟು ವಿಚಾರಮಾಡಿದರೂ, ಈ ಅಸಹಯೋಗದ ವಿರೋಧದ ಕಾರಣವು, ತಪ್ಪು ತಿಳುವಳಿಕೆಯಿಂದಿರುವದೋ, ಅಥವಾ ಅರ್ಥಕ್ಕೆ ಅನರ್ಥವನ್ನು ಮಾಡುವದರಿಂದ ಆಗುವದೋ ತಿಳಿಯಲೊಲ್ಲದು. ತಪ್ಪು ತಿಳುವಳಿಕೆಯು ಭ್ರಮದಿಂದಾಗಲಿ, ವಿಸ್ಮರಣೆಯಿಂದಾಗಲಿ, ಆಗವದು. ಮತ್ತು ಅರ್ಥದ ಅನರ್ಥವು ತಮ್ಮ ಮತಲಬಿಗಳನ್ನು ಸಾಧಿಸುವವರ ಕೈಲುವಾಗಿ ತಿಳಿದು ತಿಳಿದು ಮಾಡಲ್ಪಡುವದು. ಹಿಂದುಸ್ತಾನದ ನೌಕರಶಾಹಿಯವರಿಗೂ ಆಂಗ್ಲೋಇಂಡಿಯನರಿಗೂ ಸಂಬಂಧವಿರುವ ವರೆಗೆ ಕೇವಲ ತಪ್ಪುತಿಳುವಳಿಕೆಯಿಂದ ಇದು ಉಂಟಾಗಿರುವದಿಲ್ಲವೆಂದೂ ಅರ್ಥಕ್ಕೆ ಅನರ್ಥವು ಮಾಡಲ್ಪಟ್ಟಿರುವದೆಂದೂ ನಮ್ಮ ವಿಶ್ವಾಸವು. ಯಾಕಂದರೆ ಇವರಲ್ಲಿ ನಿಜವಾದ ಸ್ವಾರ್ಥಹಾನಿಯು ಕೇವಲ ಆ ಜನದವಷ್ಟೇ ಇರುವದು. ಮವಾಳಪಕ್ಷದವರಿಗೂ ವಿಶ್ವಕುಟುಂಬಿಜನರಿಗೂ ಅಸಹಯೋಗದ ಅರ್ಥವು ಏನೂ ತಿಳಿದಿರುವದಿಲ್ಲ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳನ್ನು ತೋರಿಸುವೆವು. ಕೆಲವು ಜನರು ತಮ್ಮ ಪ್ರಚಲಿತ ಮತಗಳಿಗೂ, ಸಿದ್ಧಾಂತಗಳಿಗೂ, ವಿರುದ್ಧವಾದ ಅನ್ಯರ ಮತಗಳನ್ನು ಕೇಳುವದಕ್ಕಾಗಲಿ, ಅವುಗಳಬಗ್ಗೆ ನಿರ್ವಿಕಾರಭಾವದಿಂದ ವಿಚಾರಮಾಡುವದಕ್ಕಾಗಲಿ, ಸಿದ್ಧರಿರುವದಿಲ್ಲೆಂಬದು ಮೊದಲನೆಯದು. ಸಾಧಾರಣ ಮನುಷ್ಯರ ದೃಷ್ಟಿಯು ವರ್ತಮಾನಕಾಲದಮೇಲೆ ಇರುವಾಗ ಮುಖಂಡನ ದೃಷ್ಟಿಯು ಭವಿಷ್ಯತ್ಕಾಲದಮೇಲೆ ಇದ್ದು, ಅದಕ್ಕೆ ಅನುಸರಿಸಿ ದಿಶೆಯನ್ನೂ ಮಾರ್ಗವನ್ನೂ ತೋರಿಸುತ್ತ ಕಾರ್ಯಕ್ರಮವನ್ನು ಆ ಮುಖಂಡನು ಸಿದ್ಧಮಾಡುತ್ತಾನೆಂಬುದು ಎರಡನೆಯದು. ಇದರಿಂದ ಬಹುಶಃ ಜನರಿಗೆ ಒಮ್ಮೆಲೆ ಅವನ ಮಾತು ತಿಳಿಯುವದಿಲ್ಲ. ಮತ್ತೂ ಅವನನ್ನು ಉನ್ಮತ್ತರ ಪಂಕ್ತಿಯಲ್ಲಿ ನೂಕಿಬಿಡುವರು. ಜಗತ್ತಿನಲ್ಲಿ ಇವತ್ತಿನವರೆಗೆ ಎಷ್ಟು ಮಹಾತ್ಮರಾಗಿರುವರೋ ಅವರೆಲ್ಲರ ಹಾಗೂ ಅವರ ವಿಚಾರಗಳ ಇಭ್ರತೆಯು ಮೊದಲು ಮೊದಲು ಜನರಲ್ಲಿ ಇದೇರೀತಿಯಾಗಿ ಕಾಣಲ್ಪಟ್ಟಿರುತ್ತದೆ. ಈ ಅಸಹಕಾರ ಚಳವಳಿಗೆ ಇನ್ನೂ ಎರಡುವರ್ಷಗಳು ಸಹ ಪೂರ್ಣವಾಗಿಲ್ಲ. ಆದ್ದರಿಂದಲೇ ಇದರ ವಿಷಯವಾಗಿ ಮತಭೇದವಾಗುವದು ಏನೂ ಆಶ್ಚರ್ಯದ ಸಂಗತಿಯಲ್ಲ. ಮನುಷ್ಯನಿಗೆ ತನ್ನ ಹೃದಯವನ್ನು ಶೀಳಿ ನೋಡುವ ಸಾಮರ್ಥ್ಯವಿದ್ದಲ್ಲಿ ಜಗತ್ತಿನ ಎಲ್ಲ ಕಲಹಗಳೂ ವ್ಯಸನಗಳೂ, ನಾಶವಾಗುತ್ತಿದ್ದವೆಂದು ಕೆಲವರ ಮತವದೆ. ಇದು ನಿಜವಾದದ್ದೂ ಇರುವದು. ಆದ್ದರಿಂದ ನಾವು ಹಿಂದೆ ಹೇಳಿದ ಎಲ್ಲ ಪಂಗಡದವರಿಗೆ ತಿಳಿಸಿಹೇಳುವ ಕುರಿತು ಈಗ ಅಸಹಯೋಗ ಸಿದ್ಧಾಂತದ ಮತ್ತು ಉಪಸಿದ್ಧಾಂತಗಳ ಮರ್ಮವನ್ನು ತೋರಿಸುವ ಪ್ರಯತ್ನವನ್ನು ಮಾಡಹತ್ತಿದ್ದೇವೆ. ಅವರು ಇದರ ವಿಷಯವಾಗಿ ಪೂರ್ಣವಾಗಿ ನಿರ್ಮಲ ಮನಸ್ಸಿನಿಂದ ವಿಚಾರಮಾಡಬೇಕೆಂದು ನಾವು ಅಪೇಕ್ಷಿಸುತ್ತೇವೆ.

೧ ಯಾವದಾವದೊಂದು ಜಾತಿ, ಸಮಾಜ, ದೇಶ, ಧರ್ಮ, ಭಾಷಾ, ವ್ಯಕ್ತಿ ಅಥವಾ ಸಂಸ್ಥೆಗಳ ವಿಷಯದಗೂಡ ನಮ್ಮ ಅಸಮಾಧಾನವು ಇಲ್ಲ. ಆದರೆ ದುಷ್ಟತನ ಅಥವಾ ಪಾಪ ಮತ್ತು [illegible] ಅಥವಾ ದುಷ್ಟಪದ್ಧತಿಗಳ ಕೂಡ ನಮ್ಮ ಅಸಹಕಾರವಿರುವದು. ಈಗಿನ ಬ್ರಿಟಿಶ ರಾಜ್ಯಪದ್ಧತಿಯು ದುಷ್ಟವಾದದ್ದಿರುವದು. ಪಾಶ್ಚಿಮಾತ್ಯ ಸಂಸ್ಕೃತಿಯೂ ಆದರ್ಶವೂ ಮನುಷ್ಯವರ್ಗಕ್ಕೆ ಅಹಿತಕಾರವಾಗಿವೆ. ಆದ್ದರಿಂದಲೇ ಹಿಂದುಸ್ತಾನವು ಅವುಗಳ ಸಂಗಡ ಅಸಹಯೋಗವನ್ನು ಆಚರಿಸಿದೆ ಹೊರ್ತು ಕೇವಲ ಇಂಗ್ಲಿಷರಿಂದಾಗಲೀ ಅಥವಾ ಪಾಶ್ಚಿಮಾತ್ಯರಿಂದಾಗಲಿ ಅಲ್ಲ.

೨ ಸಜ್ಜನರ ಸಹವಾಸವೂ ದುರ್ಜನರಿಂದ ದೂರ ಇರುವದೂ ಪ್ರತಿಯೊಬ್ಬ ಮನುಷ್ಯನ ಕರ್ತವ್ಯವು. ಕುಟುಂಬದಲ್ಲಿ ಮತ್ತು ಪ್ರತಿನಿತ್ಯದ ವ್ಯವಹಾರದಲ್ಲಿ ಈ ತತ್ವವು ಅನೇಕಸಲ ಅನುಸರಿಸಲ್ಪಡುವದು. ಇಷ್ಟು ದಿವಸಗಳ ವರೆಗೆ ವ್ಯಕ್ತಿಗಳೂ ಕುಟುಂಬದವರೂ ಆಚರಿಸುತ್ತಿದ್ದ ತತ್ವವೇ ಈಗ ಈ ಚಳವಳಿಯಿಂದ ಸಾಮಾಜಿಕ ಮತ್ತು ರಾಷ್ಟ್ರೀಯ ವ್ಯವಹಾರದಲ್ಲಿ ಹಚ್ಚಲ್ಪಟ್ಟಿದೆ.

೩ ನಿರ್ಮಲ ಹೃದಯರಾದವರೇ ಈ ಧರ್ಮವನ್ನು ಪಾಲಿಸಲು ಸಮರ್ಥರಾಗುವರು. ಆದ್ದರಿಂದ ಆತ್ಮಶುದ್ಧಿಯು ಈ ಚಳವಳಿಯ ಮುಖ್ಯವಾದ ಅಂಗವಾಗಿದೆ. ತಪ್ಪುಗಳನ್ನೆಲ್ಲ ಒಪ್ಪಿ, ಅವುಗಳಬಗ್ಗೆ ಪಶ್ಚಾತ್ತಾಪವನ್ನಾಗಲೀ ಪ್ರಾಯಶ್ಚಿತ್ತವನ್ನಾಗಲೀ ಪ್ರಕಟಮಾಡಿ ಪ್ರತಿಪಕ್ಷಿಗಳಿಗೆ ಹಾಗೂ ಶತ್ರುಗಳಿಗೆ ಪ್ರೇಮವನ್ನು ತೋರಿಸುವದು ಆತ್ಮಶುದ್ಧಿಯ ಭಾಗವು. ಅಸಹಯೋಗ ಚಳವಳಿಯು ಕಳೆದ ಕೆಲವು ತಿಂಗಳುಗಳ ಇತಿಹಾಸವನ್ನು ಯಾವಾದರೂ ಅವಲೋಕಿಸಿದಲ್ಲಿ ಅಸಹಯೋಗಿಗಳು ಈ ಸಂಬಂಧದಲ್ಲಿ ಎಷ್ಟು ಪ್ರಗತಿಯನ್ನು ಮಾಡಿಕೊಂಡಿರುವರೆಂಬುದು ಅವರಿಗೆ ಒಮ್ಮೆಲೇ ಕಂಡು ಬರುವದು.

೪ ಇದರಲ್ಲಿ ಅಸಹಯೋಗಿಗಳ ಬಲವು ಆತ್ಮಬಲವೇ. ಇದಕ್ಕೆ ಪ್ರೇಮ ಬಲವೆಂದೂ ಸತ್ಯ ಬಲವೆಂದೂ ಅನ್ನುವರು. ವಿಶ್ವಕುಟುಂಬಭಾವವು ಈ ಆತ್ಮಿಕಬಲದ ವಿಕಾಸಕ್ಕೆ ಒಂದು ಪಾವಟಿಗೆಯಂತೆ ಇರುತ್ತದೆ. ಇನ್ನೂವರೆಗೆ ಹಿಂದುಸ್ತಾನದಲ್ಲಿ ನಿಜವಾದ ರಾಷ್ಟ್ರೀಯ ಭಾವದ ಜಾಗ್ರತೆಯು ಪೂರ್ಣವಾಗಿ ಆಗಿಲ್ಲ. ಈಗಿಂದಲೇ ವಿಶ್ವಕುಟುಂಬ ಭಾವದ ಮಾತುಗಳನ್ನಾಡುವದು ರಮಣೀಯವಾಗಿಯೂ ಬಹಳೇ ದಿವ್ಯವಾಗಿಯೂ ತೋರಬಹುದು. ಆದರೆ ಅದು "वृक्षस्य शाखाग्रा" ಎಂಬಂತೆಯೋ ಇರುವದು. ಕಲ್ಪನೆಯ ಕುದುರೆಗಳನ್ನು ಓಡಿಸಹತ್ತುವದು ಬೇರೆ. ಅವರಂತೆ ನಮ್ಮ ಜೀವನದಲ್ಲಿ ಆಚರಿಸಿ ಚರಿತಾರ್ಥವನ್ನು ಮಾಡಿತೋರಿಸುವದು ಬೇರೆ. ಮೊದಲನೆಯದು ಎಷ್ಟು ಸುಗಮವಾಗಿರುವದೋ ಅಷ್ಟೇ ಎರಡನೆಯದು ಕಠಿಣವಾಗಿದೆ. ಹಿಂದುಸ್ತಾನವು ಎಲ್ಲಿಯ ವರೆಗೆ ಸ್ವತಂತ್ರ ಮತ್ತು ಏಕರಾಷ್ಟ್ರವಾಗುವದಿಲ್ಲವೋ ಅಲ್ಲಿಯವರೆಗೆ ಅದು ಎರಡನೇ ರಾಷ್ಟ್ರಗಳಿಗೆ ಏನು ಉದಾಹರಣೆ ಹಾಕಿಕೊಡಬೇಕು? ತಾನು ಹಸಿವೆಯಿಂದ ಬಳಲುತ್ತಿರುವವನು ಪರರಿಗೆ ಅನ್ನವನ್ನು ಕೊಡಬಲ್ಲನೇ? ದಾಸನಾದವನು ಪರರನ್ನು ಹೇಗೆ ಸ್ವತಂತ್ರರನ್ನಾಗಿ ಮಾಡಬಲ್ಲನು? ಕಾಲ್ಪನಿಕ ಸಂಸಾರದಲ್ಲಿ ಸ್ವತಂತ್ರತೆಯನ್ನೂ ಸುಖವನ್ನೂ ಅನುಭವಿಸುವದು ಬಹಳ ಸುಲಭ. ಆದರೆ ನಾವು ವ್ಯವಹಾರದಲ್ಲಿ ಕೂಡ ಇವನ್ನೆಲ್ಲ ಅನುಭವಿಸಹತ್ತಿದರೆ ಮಾತ್ರ ಅದು ನಿಜ. ಆದರೂ ಮನಸ್ಸಿನಲ್ಲಿ ಯಾಕಾಗದಿರಲಿ [illegible], ಗುಲಾಮನಿರುವೆನೆಂದು ತಿಳಕೊಳ್ಳುವದಕ್ಕಿಂತ ಸ್ವತಂತ್ರನೂ ಸುಖಿಯೂ ಇರುವೆನೆಂದು ತಿಳಕೊಳ್ಳುವದು ಅವಶ್ಯವಾಗಿರುತ್ತದೆ.

೫ ಇದರಲ್ಲಿ ಆತ್ಮಬಲವದೆ, ಪ್ರೇಮಬಲವದೆ, ಅಂದಮೇಲೆ ಹಿಂಸಾಯುತ ರಾಷ್ಟ್ರೀಯ ಧರ್ಮಕ್ಕೆ ಇಲ್ಲಿ ಆಸ್ಪದವಿಲ್ಲ.

೬ ಅಹಿಂಸೆಯು ಇದರ ಮೂಲವು. ಆದ್ದರಿಂದ ಇದ [illegible]

ಲ್ಪು ಕೂಡಾ ಇಲ್ಲ. ಈಗ ಪ್ರಯೋಗಕಾಲವು. ಸಂಕ್ರಮಣ ಕಾಲವು. ಜನರು ಇನ್ನೂ ಅಹಿಂಸಾತತ್ವದ ಮಹತ್ವವನ್ನು ಚನ್ನಾಗಿ ಕಂಡುಹಿಡಿದಿರುವದಿಲ್ಲ. ಇದರಿಂದ ಒಮ್ಮೊಮ್ಮೆ ಶಾಂತಿಯು ಭಂಗವಾದದ್ದೇನೋ ನಿಜ. ಆದರೆ ಇದರ ಆದರ್ಶವು ಮತ್ತು ಅಂತಿಮ ಫಲವು ಪೂರ್ಣ ಶಾಂತಿಯೂ ಎಲ್ಲ ಮಾನವ್ಯಜಾತಿಯಲ್ಲಿ ಐಕ್ಯವೂ ಇವೇ. ಅಹಿಂಸೆಯ ಬಲದಮೇಲಿಂದಲೇ ಇವು ಸಂಭವನೀಯವಿರುವವು.

೭ ಈ ಚಳವಳಿಯ ಉತ್ಪತ್ತಿಯು ಧಾರ್ಮಿಕಭಾವದಿಂದ ಆಗಿರುವದು. ಖಿಲಾಫತ್ ಮತ್ತು ಪಂಜಾಬ ಇವುಗಳ ಸಂಬಂಧಿಯಾದ ಅಧರ್ಮವನ್ನು ದೂರಮಾಡಲಿಕ್ಕೆಂದೇ ಈ ಚಳವಳಿಯು ಜನ್ಮವನ್ನು ತಾಳಿದೆ. ಹಿಂದೆ ಈ ತರದ ಅನುಭವವು ಸಿಕ್ಕಮೇಲಿಂದ, ರಾಜನೈತಿಕ ಸತ್ತೆಯು ದೊರೆಯದಹೊರ್ತು ಮುಂದಾದರೂ ಇಂಥ ಅನ್ಯಾಯಗಳು ಘಟಿಸದೆ ಇರುವದು ಅಸಂಭವವಿರುವದೆಂಬುದು ಕಂಡುಬಂದದ್ದರಿಂದ ಈ ಚಳವಳಿಯು ರಾಜನೈತಿಕ ಸಾಧನವೆಂದು ತಿಳಿಯಲ್ಪಟ್ಟು ಸ್ವರಾಜ್ಯವು ಹಿಂದುಸ್ಥಾನದ ತಾತ್ಕಾಲಿಕ ಧ್ಯೇಯವಾಗಿಟ್ಟಿದೆ. ಯಾವ ಚಳವಳಿಯ ಬುಡಕ್ಕೆ ಧರ್ಮಭಾವನೆ ಉಂಟೋ ಮತ್ತು ಎಲ್ಲಿ ಈಶ್ವರನವಿಷಯವಾಗಿ ಶ್ರದ್ಧೆಯು ಇರುವದೋ ಅಂಥ ಚಳವಳಿಯ ಫಲವು ಅರಾಜಕತೆಯೂ ಅವ್ಯವಸ್ಥೆಯೂ ಆಗುವ ಬಗೆ ಯಂತು?

೮ ಸ್ವಾರ್ಥತ್ಯಾಗವೂ, ಸ್ವತಃ ನೀವೇ ಕಷ್ಟಗಳನ್ನು ಸಹಿಸುವದೂ ನಮ್ಮ ಶಸ್ತ್ರಾಸ್ತ್ರಗಳು. ನಮ್ಮ ಪ್ರತಿಪಕ್ಷಿಗಳನ್ನು ನಿರ್ಜೀವರನ್ನಾಗಲಿ, ಗುಲಾಮರನ್ನಾಗಲಿ, ಮಾಡಬೇಕೆಂದು ನಾವು ಬಯಸುವದಿಲ್ಲ; ಆದರೆ ಅವರ ಹೃದಯದಲ್ಲಿದ್ದ ಆತ್ಮನನ್ನೂ ಉಚ್ಚಭಾವನೆಗಳನ್ನೂ ಜಾಗೃತಮಾಡಿ ಅವರನ್ನು ಪಶುಗಳಿಂದ [illegible] ಸ್ವಕೋಟಿಯಲ್ಲಿ ಸೇರಿಸಿಕೊಳ್ಳಲು ಅಪೇಕ್ಷಿಸುತ್ತೇವೆ. ಇದೇಕಾರಣದಿಂದ ನಾವು ಪಶುಬಲವನ್ನು ಲಕ್ಷಿಸದೆ, ಪ್ರತಿಪಕ್ಷಿಗಳ ಜೀವ ಜಿಂದಗಿಗಳ ನಾಶವನ್ನು ಯಾವರೀತಿಯಿಂದಲೂ ಮಾಡದೆ, ಅವರಿಗೆ ಬಲಿಸ್ವರೂಪರಾಗಿ ಕಷ್ಟಸಹನಮಾಡುತ್ತಿರುತ್ತೇವೆ ಹಾ. ಇದರಿಂದ ಅವರ ಅನ್ಯಾಯ ಮತ್ತು ಸ್ವಾರ್ಥಬುದ್ಧಿಯು ಎಷ್ಟಿರುವದೆಂಬುದು ಸಹಜವಾಗಿ ಲಕ್ಷದಲ್ಲಿ ಬರುವದು. ಆದರೂ ಇದರಲ್ಲಿ ನೈತಿಕ ಲಾಭವಾದರೂ ಇರುವದು. ಅಂದಮೇಲೆ ಇದರಲ್ಲಿ ದ್ವೇಷವು ಎಲ್ಲಿರುವದು? ಸಂಕೀರ್ಣಕಭಾವವು ಎಲ್ಲಿ ಉಳಿಯಿತು?

೯ ಸ್ವದೇಶೀಧರ್ಮ ಅರ್ಥಾತ್ ಶುದ್ಧ ಖಾದಿಯು ಈ ಚಳವಳಿಯ ಮುಖ್ಯ ಆಧಾರವಾಗಿರುವದು. ದರಬೊಸ್ತಿಯು ಸ್ವಾವಲಂಬನವೇ. ಇದು ಬರೇ ಹಿಂದುಸ್ಥಾನದ ಧರ್ಮವಾಗಿರದೆ, ಪ್ರತಿಯೊಂದು ದೇಶದ ಧರ್ಮವಾಗಿರುವದು. ಕೇವಲ ಹಿಂದುಸ್ಥಾನದಲ್ಲಿಯೇ ಮಾತ್ರ ಪರದೇಶೀವಸ್ತುಗಳನ್ನು ಕೊಳ್ಳುವದು ಅಧರ್ಮ ಅಥವಾ ಲಜ್ಜಾಸ್ಪದವಾಗುತ್ತದೆ ಅಂತಲ್ಲ ಆದರೆ ಎಲ್ಲಾ ದೇಶಗಳಿಗೂ ಕೂಡ ಪರದೇಶೀ ವಸ್ತುಗಳನ್ನು ತರಿಸುವದು ಪಾಪ ಅಥವಾ ನಾಚಿಕೆಯ ಮಾತಾಗಿರುತ್ತದೆ. ಆದರೆ ಆ ಪದಾರ್ಥಗಳು ಮಾತ್ರ ಆ ಆ ದೇಶಗಳಲ್ಲಿ ತಯಾರಾಗುತ್ತಿರಲಿಕ್ಕೆಬೇಕು. ಹಿಂದುಸ್ಥಾನದಲ್ಲಿ ಈ ಪ್ರಯೋಗದ ಫಲವು ಲಭಿಸಿತಂದರೆ ಈ ಧರ್ಮವನ್ನು ಅವಲಂಬಿಸಲಿಕ್ಕೆ ಜಗತ್ತಿನಲ್ಲಿ ಸರ್ವಸಾಧಾರಣ ಯೋಗ್ಯವಾಗುವದು. ಆಮೇಲೆ ಜಗತ್ತಿನಲ್ಲಿಯ ಜನರ ಲಕ್ಷ್ಯವು ಇದರಕಡೆಗೆ ಬೀಳುವದು.

೧೦ ಅಸಹಯೋಗದ ಕಾರ್ಯಕ್ರಮದಲ್ಲಿ ಸವಿನಯ ಕಾಯದೇಭಂಗವು ಕಟ್ಟಕಡೆಯು ಹಾಗೂ ಅಮೋಘವಾದ ಶಸ್ತ್ರವಾಗಿರುತ್ತದೆ. ಆದರೆ ಇದಕ್ಕೆ ಅಂಜುವ ಅಥವಾ ಗಾಬರಿಯಾಗುವ ಕಾರಣವಿಲ್ಲ. ಕಾಯದೇಭಂಗದಲ್ಲಿ ಸವಿನಯ ಶಬ್ದದ ಮೇಲೆ ವಿಶೇಷ ಜೋರು ಕೊಟ್ಟಿರುವದು; ಮತ್ತು ಇದು ಅವಿನಯ ಆಗುವ ಲಕ್ಷಣವು ತೋರಹತ್ತಿದಕೂಡಲೇ ಅದನ್ನು ಸ್ಥಗಿತವನ್ನಾದರೂ ಮಾಡಿರುವದು. ಸಿದ್ಧಾಂತದೃಷ್ಟಿಯಿಂದ ಯಾವ ಕಾಯದೆಯು ಅನೀತಿಪರವದೆ, ಯಾವದು ನಮ್ಮ ದೇಶ ಮತ್ತು ಸಮಾಜ, ಪರಂಪರೆ ಅಥವಾ ಹಿತಗಳ ಸಲುವಾಗಿ ಹುಟ್ಟಿರುವದಿಲ್ಲ, ಯಾವದರ ರಚನೆಯು ನಮ್ಮ ಪ್ರತಿನಿಧಿಗಳಿಂದ ಆಗಿಲ್ಲವೋ, ಮತ್ತು ಯಾವದರ ಪ್ರಯೋಗದಿಂದ ನಾವು ಅಂಜುಬುರುಕ ಅಶಕ್ತ ಮತ್ತು ಭೀತರಾಗಿರುವೆವೋ, ಮತ್ತು ಭಯಕಂಪಿತವಾದ ಕರ ಕೊಡುವವರು ಜಬರಿಯಿಂದ ನಮ್ಮ ಧನ ಮತ್ತು ಧರ್ಮಗಳನ್ನು ಯಾವದು ಮಾರಂಗಿಕ್ಕಿರುವದೊ ಅಂಥ ಕಾಯದೆಗಳನ್ನು ಮಾನ್ಯಮಾಡದೆ ಇರುವದು ಯಾವ ಕೆಟ್ಟಮಾತು? ಇದು ಪೌರುಷದ ಹಾಗೂ ಮನುಷ್ಯತ್ವದ ಚಿನ್ಹವಾಗಿರುತ್ತದೆ.

ಅಸಹಯೋಗದ ತತ್ವಗಳ ವಿವೇಚನಮಾಡುವ ಪ್ರಯತ್ನವನ್ನು ನಾವು ಮಾಡಿದೆವು. ಹಾಗು ವಿರುದ್ಧಪಕ್ಷದವರ ನಿಂದೆಯನ್ನು ದೂರಮಾಡುವ ಇಚ್ಛೆಯಾದರೂ ನಮ್ಮದಾಗಿತ್ತು. ಆದರೂ ಇದಕ್ಕೆ ಯೋಗ್ಯವಾದ ಉಪಾಯವೆಂದರೆ ಸ್ವಯಂ ಕಷ್ಟಸಹನಮಾಡಿ, ಆ ಸಿದ್ಧಾಂತದ ಅನುಸಾರವಾಗಿ ಆಚರಣಮಾಡುವದೇ ಆಗಿರುತ್ತದೆ. ಯಾವರೀತಿಯಿಂದ ಸಹಯೋಗವು ಜೀವನದ ಧರ್ಮವೋ ಅದೇರೀತಿಯಿಂದ ಅಸಹಯೋಗವಾದರೂ ಜೀವನದ ಧರ್ಮವಾಗಿದೆ. ಸಜ್ಜನರಸಂಗದ ಸಹಯೋಗವು, ದುರ್ಜನರ ಸಂಗದ ಅಸಹಯೋಗವು, ಇದೇ ಸನಾತನನಿಯಮವಾಗಿದೆ' ಪ್ರತಿಪಕ್ಷಿಗಳಿಗೆ ನಿಜವಾಗಿ ಇದರ ಜ್ಞಾನವಾಗಿದ್ದರೆ, ಅವರು ಅಸಹಯೋಗದಲ್ಲಿ ಏನೂ ದೋಷವಿಲ್ಲೆಂದು ತಿಳಿಯಲಿ

---

## ಟಿಪ್ಪಣಿಗಳು

**ಧಾರವಾಡವೇ ಎಚ್ಚರಾಗು!**

ಧಾರವಾಡದಲ್ಲಿ ಕರ್ನಾಟಕದ ನಿರುಪದ್ರವೀ ವೀರಾಳುಗಳ ಕೊಲೆಯಾಗಿ ನಾಳಿನ ಜುಲೈ ಮೊದಲನೇ ತಾರೀಖಿಗೆ ಸಂಪೂರ್ಣವಾಗಿ ಒಂದು ವರ್ಷವಾಗುವದು. ಸುಪ್ರಸಿದ್ಧವಾದ ಧಾರವಾಡದ ವೀರರ ರಕ್ತವು ಆ ದಿನವೇ ಆಹುತಿಯಾಗಿ ಕ್ಷೇತ್ರದೇವಿಗೆ ಅರ್ಪಿಸಲ್ಪಟ್ಟಿತು ಆ ದಿನವನ್ನು ಪ್ರತಿವರ್ಷವೂ ಎಲ್ಲ ಕರ್ನಾಟಕಸ್ಥರು ರಾಷ್ಟ್ರೀಯದಿನವೆಂದು ಗಣಿಸಿ ಉತ್ಸವವನ್ನು ಮಾಡತಕ್ಕದ್ದು. ಎಪ್ರಿಲ ೬ ನೇ ಮತ್ತು ೧೩ ನೇ ತಾರೀಖುಗಳ, ಹೇಗೆ ಅಖಂಡ ಹಿಂದುಸ್ಥಾನದ ರಾಷ್ಟ್ರೀಯ ದಿನಗಳಾಗಿವೆಯೋ ಹಾಗೆಯೇ ಜುಲೈ ೧ ನೇ ತಾರೀಖು ಅಖಂಡ ಕರ್ನಾಟಕದಲ್ಲಿ ರಾಷ್ಟ್ರೀಯದಿನವಾಗಬೇಕು. ಈ ಬಗ್ಗೆ ಎಲ್ಲ ಕನ್ನಡಿಗರಲ್ಲಿ ಜಾಗ್ರತೆಯನ್ನು ಹುಟ್ಟಿಸುವದು ಮೊದಲು ಧಾರವಾಡದವರ ಕರ್ತವ್ಯವಾಗಿದೆ. ಆದರೆ ಈ ವರ್ಷ ಅಖಂಡ ಕರ್ನಾಟಕದಲ್ಲಿ ರಾಷ್ಟ್ರೀಯ ಉತ್ಸವವನ್ನು ಏರ್ಪಡಿಸುವ ವ್ಯವಸ್ಥೆಯು ಇನ್ನುಮೇಲೆ ಆಗುವದು ಅಶಕ್ಯವು. ಆದುದರಿಂದ ಕನಿಷ್ಠಪಕ್ಷ ಧಾರವಾಡದವರಾದರೂ ಈ ವರುಷ ಆ ದಿನವನ್ನು ರಾಷ್ಟ್ರೀಯದಿನವೆಂದು ಗಣಿಸಿ ಉತ್ಸವವನ್ನು ಮಾಡಬೇಕು. ಮತ್ತು ಈ ವಿಷಯವನ್ನು ಚನ್ನಾಗಿ ವಿಚಾರಿಸಿ, ಪ್ರಾಂತಿಕ ಕಾಂಗ್ರೆಸ ಕಮಿಟಿಯವರಿಗೆ ಅದರ ಮಹತ್ವವನ್ನು ಒಪ್ಪಿಸಿ ಅವರೇ ಈ ದಿನವನ್ನು ಮುಂದಿನ ವರುಷದಿಂದ ಅಖಂಡ ಕರ್ನಾಟಕಕ್ಕೆ ರಾಷ್ಟ್ರೀಯದಿನವಾಗುವಂತೆ ಗೊತ್ತು [illegible]ಂದು ಅತ್ಯಾದರಪೂರ್ವಕವಾಗಿ ಧಾರವಾಡದ ಎಲ್ಲ [illegible] ಸೂಚಿಸುತ್ತೇವೆ.

## ಕನ್ನಡಿಗರ ಏಕೀಕರಣ

ಕರ್ನಾಟಕಕ್ಕೆ ಅತ್ಯಂತ ಮಹತ್ವವಾದ ಈ ಪ್ರಶ್ನೆಯನ್ನು ಬೆಳಗಾವಿಯ 'ವಿಭಾಕರ"ದಲ್ಲಿ ವಿವೇಚಿಸಲ್ಪಡಹತ್ತಿದೆಂದು ಕಳೆದವಾರದಲ್ಲಿ ಬರೆದಿರುವೆವು. ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿಯ ಜನರು ಅಲ್ಲಲ್ಲಿ ಸಭೆಸೇರಿ, ಏಕೀಕರಣದ ಬಗ್ಗೆ ಠರಾವುಗಳನ್ನು ಪಾಸಮಾಡಿ, ಜನಮತವನ್ನು ಸರಕಾರಕ್ಕೆ ತಿಳಿಸಿದರೆ ಕೌನ್ಸಿಲದಲ್ಲಿ ಕಾರ್ಯಮಾಡಲು ಸರಿಯಾಗುತ್ತದೆಂಬ ಅಭಿಪ್ರಾಯವನ್ನು ವಿಭಾಕರವು ೨ ನೇ ಲೇಖಾಂಕದಲ್ಲಿ ಪ್ರಸಿದ್ಧಮಾಡಿದೆ. ಆದರೆ ಇದು ಅನಾವಶ್ಯಕವು. ಕರ್ನಾಟಕದ ಜನಮತವು ಹಿಂದಕ್ಕೆ ಸರಕಾರಕ್ಕೆ ತಿಳಿಸಲ್ಪಟ್ಟಿದೆ ೧೯೧೬ ರಿಂದ ೧೯೨೧ ವರೆಗೆ ಧಾರವಾಡದ ಕರ್ನಾಟಕ ಸಭೆಯು ಈ ವಿಷಯವನ್ನು ಕೈಯ್ಯಲ್ಲಿ ತೆಗೆದುಕೊಂಡು, ಎಡಬಿಡದೇ ಪ್ರಯತ್ನಿಸಿ, ತನ್ನ ಸಭಾಸದರನ್ನು ಕರ್ನಾಟಕದ ಬೇರೆಬೇರೆ ಪಟ್ಟಣಗಳಿಗೆ ಕಳುಹಿಸಿ, ಜನರಲ್ಲಿ ಜಾಗ್ರತಿಯನ್ನುಂಟುಮಾಡಿತು. ಮುಂದೆ ಮೊಂಟೆಗ್ಯೂ ಸಾಹೇಬರು ಹಿಂದುಸ್ಥಾನಕ್ಕೆ ಬಂದಾಗ್ಗೆ ಧಾರವಾಡ, ವಿಜಾಪೂರ, ಗದಗ, ಸವಣೂರ, ಮಂಗಳೂರ, ಬೆಳಗಾಂವ, ಬಳ್ಳಾರಿ, ಮೊದಲಾದ ಸ್ಥಳಗಳಿಂದ ತಂತಿಗಳಾದರೂ ಕಳಿಸಲ್ಪಟ್ಟಿದ್ದವು. ಇದರಿಂದ ಕನ್ನಡಿಗರ ಜನಮತವು ತಾನೇ ಪ್ರಕಟವಾಗುತ್ತದೆ. ಆದುದರಿಂದ ಪುನಃ ಈ ಜನಮತದ ಪ್ರಶ್ನೆಯನ್ನು ಎಬ್ಬಿಸುವ ಆವಶ್ಯಕತೆಯೇ ಇಲ್ಲ. ಇದನ್ನು ಅರಿತುಕೊಂಡು ವಿಭಾಕರದ ಸಂಪಾದಕರು ಕೌನ್ಸಿಲದಲ್ಲಿ ಪ್ರಯತ್ನಿಸಲು ಆರಂಭಿಸಬೇಕು. ಧಾರವಾಡದ ಕರ್ನಾಟಕಸಭೆಯು ಮುಖಾಂತರವಾಗಿ ಈ ಜನಮತದ ವಿಷಯವನ್ನು ತಿಳಿದುಕೊಂಡು, ಶ್ರೀ. ಪಂಡಿತಪ್ಪನವರು ಕೂಡಲೇ ಈ ಅತ್ಯಂತ ಮಹತ್ವದ ಪ್ರಶ್ನೆಯನ್ನು ಕೈಯಲ್ಲಿ ತೆಗೆದುಕೊಳ್ಳಬೇಕು. ಮತ್ತೂ ಧಾರವಾಡದ ಕರ್ನಾಟಕ ಸಭೆಯವರಾದರೂ ಈಗ ಈ ವಿಷಯದಲ್ಲಿ ಶ್ರೀ. ಪಂಡಿತಪ್ಪನವರಿಗೆ ಕೂಡಲೇ ಸಹಾಯಮಾಡಲು ಮುಂದೊರೆದು ಹೋಗಬೇಕು.

## ನಿಖಿಲ ಭಾರತೀಯ ರಾಷ್ಟ್ರೀಯ ಸಭೆಯು.

ಮೊನ್ನೆ ಲಖನೌದಲ್ಲಿ ಜರಗಿದ ನಿಖಿಲ ಭಾರತೀಯ ರಾಷ್ಟ್ರೀಯ ಸಭೆಯಲ್ಲಿ ಆದ ಚರ್ಚೆಯಿಂದ ಅಸಹಕಾರ ಚಳವಳಿಯು ಇನ್ನೂ ಮೃತವಾಗಿಲ್ಲವೆಂದೂ, ನಮ್ಮಲ್ಲಿ ಖಾದಿಯ ಪ್ರಸಾರವು ಸಂಪೂರ್ಣವಾಗಿ ಆಗಿಲ್ಲವೆಂದೂ ಸುಸಂಘಟಿತತನವು ಚನ್ನಾಗಿನೆಲೆಗೊಂಡಿಲ್ಲವೆಂದೂ ಶಾಂತತೆಯ ವಾತಾವರಣವು ಸ್ಥಿರವಾಗಿ ಉಳಿಯುವದೋ ಇಲ್ಲವೋ ಎಂಬಭೀತಿಯು ಹೋಗಿಲ್ಲವೆಂದೂ ತಿಳಿದು ಮುಂದಿನ ಕಾರ್ಯಕ್ರಮವನ್ನು ಸದ್ಯಕ್ಕೆ ಬಂದುಇಟ್ಟಿರುವದೆಂದೂ ಎಲ್ಲರಿಗೂ ಒಡೆದುಕಾಣುತ್ತದೆ. ಬಂಗಾಲ, ಸಂಯುಕ್ತಪ್ರಾಂತ ಪಂಜಾಬ ಮೊದಲಾದ ಪ್ರಾಂತಗಳ ಪ್ರತಿನಿಧಿಗಳು ಸವಿನಯ ಕಾಯದೇಭಂಗವನ್ನು ಈಗಲೇ ಆಚರಿಸಲಿಕ್ಕೆ ತಮಗೆ ಅನುಮತಿಯು ದೊರೆಯಬೇಕೆಂದು ಅಗ್ರಹವನ್ನು ಮಾಡಿದರು. ಆದರೆ ಪಂಡಿತ ಮಾಲವೀಜೀಯವರ ಪ್ರಬಲವಾದ ಇಚ್ಛೆಯನ್ನು ಉಲ್ಲಂಘಿಸುವದು ಯೋಗ್ಯವಲ್ಲೆಂದು ಕಂಡು ಆ ಪ್ರಶ್ನವನ್ನು ಅಗಸ್ಟ ತಿಂಗಳ ವರೆಗೆ ಮುಂದೆಹಾಕಿದರು. ಅಲ್ಲಿಯವರೆಗೆ ಎಲ್ಲರೂ ತಮ್ಮಲ್ಲಿಯ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಬೇಕೆಂಬುವಾಗಿ ನಿರ್ಣಯವಾಯಿತು. ಸೋಲಾಗಿ ರಾಷ್ಟ್ರದ ಮುಖಂಡರಾದ ಪಂಡಿತ ಮೋತೀಲಾಲ ನೆಹರು, ಮಾ... ಜೀ ಮುಂತ... [illegible] ಎ...

ಭಾಗಗಳಲ್ಲಿ ಸಂಚರಿಸಿ ದೇಶದಲ್ಲಿ ಇನ್ನೂ ಜಾಗೃತಿಯನ್ನು ಹೆಚ್ಚಿಸಬೇಕೆಂದಾದರೂ ನಿರ್ಣಯಿಸಲ್ಪಟ್ಟಿದೆ. ಈ ಬಗ್ಗೆ ಕರ್ನಾಟಕಸ್ಥರಿಗೆ ಒಂದು ಸೂಚನೆಯನ್ನು ಮಾಡದೆ ಇರಲಾರೆವು. ಸರಕಾರದವರ ಕೋಪಕ್ಕೆ ಹೆಚ್ಚಿಗೆ ಈಡಾಗಿ ಎಷ್ಟೋ ಕಷ್ಟ ನಷ್ಟಗಳನ್ನು ಅನುಭವಿಸಿದ ಪ್ರಾಂತಗಳು ಅಸಹಕಾರಿತೆಯ ಮುಂದಿನ ಕಾರ್ಯಕ್ರಮಕ್ಕೆ ಉದ್ಯಾಣಗೆಯ್ಯಲು ಹವಣಿಸುತ್ತಿರುವಾಗ ನಿಮ್ಮಅವಸ್ಥೆಯೇನೆಂಬುದರ ಬಗ್ಗೆ ಸ್ವಲ್ಪವಾದರೂ ವಿಚಾರಮಾಡಿರಿ ಕರ್ನಾಟಕದಲ್ಲಿಯ ಅಸಹಕಾರ ಚಳವಳಿಯು 'ಓಂಫಸ್ಸಾ'ಯಿತೆಂದು ಕನ್ನಡಿಗರೇ ಅನ್ನಹತ್ತಿದ್ದನ್ನು ನಾವು ಕೇಳಿದ್ದೇವೆ. ಇದರಲ್ಲಿ ಸ್ವಲ್ಪ ತಥ್ಯಾಂಶವಾದರೂ ಇರುವದೆಂದು ನಮಗೆ ಅನಿಸುತ್ತದೆ. ಕರ್ನಾಟಕವು ಹತ್ತಿಯ ಬೆಳೆಯ ಕೇಂದ್ರವಾಗಿದ್ದು ಇಲ್ಲಿ ಖಾದಿಯ ಪ್ರಸಾರವು ಸಾಕಷ್ಟು ಆಗಿಲ್ಲ ರಾಷ್ಟ್ರೀಯಶಾಲೆಗಳ ಅವಸ್ಥೆಯಂತೂ ಹಾಸ್ಯಾಸ್ಪದವಾಗಿದೆ. ವಿದ್ಯಾರ್ಥಿಗಳ ಸಂಖ್ಯೆಯೇ ಕುಗ್ಗಿಹೋಗಿದೆ. ಹೀಗೆ ವಿಧಾಯಕ ಕಾರ್ಯಕ್ರಮದಲ್ಲಿ ಕರ್ನಾಟಕವು ಹಿಂದೆಬಿದ್ದಿರುವಾಗ ರಾಷ್ಟ್ರದ ಮುಖಂಡರು ಇಲ್ಲಿಗೆ ಬಂದಾಗ ಕರ್ನಾಟಕಸ್ಥರೇ ನೀವು ಏನು ಉತ್ತರಕೊಡುವಿರಿ! ನೀವು ಮಹಾತ್ಮರ ಪ್ರೀತಿಪಾತ್ರರಿದ್ದಿಲ್ಲವೇ? ಆ ಪ್ರೀತಿಯ ಚಿನ್ಹವನ್ನು ನೀವು ಯಾವ ಬಗೆಯಿಂದ ವ್ಯಕ್ತಮಾಡಿರುವಿರೆಂಬುದನ್ನು ವಿಚಾರಿಸಿನೋಡಿರಿ! ಇನ್ನಾದರೂ ಕರ್ತವ್ಯಪರಾಯಣರಾಗಿರಿ !!

---

## ಒಪ್ಪಿಗೆವಿಮರ್ಶೆ.

«ಸ್ವದೇಶೀ» ಅನುವಾದಕ:-- ಉಡುಪಿ ಗೋವಿಂದರಾವ ತಿಲಕ ಮಹಾವಿದ್ಯಾಲಯ ಮಂಗಳೂರ. ಬೆಲೆ ೦-೪-೦.

ಈ ಪುಸ್ತಕವು ನಮ್ಮಕಡೆಗೆ ವಿಮರ್ಶೆಗಾಗಿ ಬಂದಿದೆ. ಮಹಾತ್ಮಾ ಗಾಂಧಿಯವರ ಪರಮ ಶಿಷ್ಯರಾದ ಶ್ರಿ. ಕಾಲೇಲಕರರ ಸ್ವದೇಶೀ ವ್ರತವೆಂಬ ಪುಸ್ತಕದ, ಮಹಾತ್ಮಾಜಿಯವರು ಮದ್ರಾಸದಲ್ಲಿ ಸ್ವದೇಶಿಯ ವಿಷಯವಾಗಿಮಾಡಿದ ಭಾಷಣದ ಹಾಗೂ ನವಜೀವನದಲ್ಲಿ ಪ್ರಸಿದ್ಧಿಸಿದ "ಸ್ವದೇಶಿಯೂ ಖಾದಿಯೂ" ಎಂಬ ಲೇಖನದ ಭಾಷಾಂತರವು ಈ ಚಿಕ್ಕ ಪುಸ್ತಕದಲ್ಲಿ ಉಂಟು. ಅಂದಬಳಿಕ ವಿಷಯದ ಮಹತ್ವವನ್ನು ವಿವರಿಸುವ ಕಾರಣವಿಲ್ಲ. ಮುದ್ರಣವಾದರೂ ಬಲು ಅಂದವಿದ್ದು ಬೆಲೆಯು ಕೂಡ ತೀರಕಡಿಮೆ. ಆದ್ದರಿಂದ ಕನ್ನಡಿಗರೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸತಕ್ಕದ್ದು. ಸ್ವದೇಶಿಯೂ ಖಾದಿಯೂ ಎಂಬ ಲೇಖವು ಕನ್ನಡ ನವಜೀವನದಿಂದ ಆಪತ್ತಿಸಲ್ಪಟ್ಟಿದ್ದು ಆ ಬಗ್ಗೆ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿಲ್ಲವಾದ್ದರಿಂದ ಗ್ರಂಥಕರ್ತರು ನಮ್ಮ ಕ್ಷಮೆಯನ್ನು ಕೇಳಿಕೊಂಡಿದ್ದಾರೆ. ಮ. ಗಾಂಧಿಯವರು ತಮ್ಮ ಲೇಖನಗಳ ಯಾವ ಹಕನ್ನು ಹೇಗೆ ಕಾಯ್ದು ಇಟ್ಟಿಲ್ಲವೋ ಅದರಂತೆಯೇ ಕನ್ನಡ ನವಜೀವನದಲ್ಲಿ ಪ್ರಸಿದ್ಧವಾದ ಲೇಖಗಳ ಬಗ್ಗೆ ಯಾವ ಹಕ್ಕನ್ನೂ ಕಾಯ್ದಿಟ್ಟಿಲ್ಲ. ಆದರೆ ಯಾರಾದರೂ ಅವುಗಳನ್ನು ಉಪಯೋಗಿಸಿಕೊಂಡಲ್ಲಿ ಆ ಬಗ್ಗೆ ಉಲ್ಲೇಖವನ್ನು ಮಾತ್ರ ಮಾಡಿದರೆ ತೀರಿತು. ಇರಲಿ. ಮುದ್ರಣದೋಷಗಳು ಅಲ್ಲಲ್ಲಿಗೆ ಕಂಡುಬರುತ್ತಿದ್ದು ಅವುಗಳನ್ನು ಮುಂದಿನ ಆವೃತ್ತಿಯಲ್ಲಿ ಸುಧಾರಿಸಬೇಕೆಂದು ಗ್ರಂಥಕರ್ತರಿಗೆ ಸೂಚಿಸುವೆವು.

ಸಂಪಾದಕ-

ಎಜಂಟರು ಬೇಕು ! ಏಜಂಟರು ಬೇಕು

ನಂಬರ ೧ ನೇ ನಿರ್ಮಲವಾದ

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಪಸಂದಾದ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳೇ ಸೋಯಿಯುಳ್ಳ ದರದಲ್ಲಿ ತೈಲವು ಸಿಗುವದು ನಿಶ್ಚಯ ೨೪ ಔಂಸ ತೈಲದಬಾಟ್ಲಿ ಅಥವಾ ಗಬ್ಬಿ ೧ ಕ್ಕೆ ರೂಪಾಯಿ [illegible]

ಬಿ. ಎ. ಶೈ ಕಂಪನಿ.
ಪೋಸ್ಟ ಹೊನ್ನಾವರ.
ಜಿಲ್ಹಾ ಉತ್ತರಕಾನಡಾ

## ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರದ್ವಾರದಿಂದ, ಉತ್ತಮವಾದ ಸ್ವದೇಶೀ ಸಾಬಾಣವನ್ನು ಮಾಡುವದಕ್ಕೆ ಕಲಿಸುವೆವು.

ಫೀ. ರೂ. ೫. ಉಪಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು.

ಕಲಾಭುವನ — ರಾಷ್ಟ್ರೀಯ ಶಾಲಾ
ಧಾರವಾಡ.

## ಉತ್ತಮ ಆಯುರ್ವೇದ ಔಷಧಗಳು.

### ಸುವರ್ಣರಾಜವಂಗ ತೊಲಿ ೧ ರೂ. ೫

| | | |
|---|---|---|
| ಸುವೀರಪನ್ನಗ | ತೊಲಿ | ರೂ. ೫ |
| ಪವಾಳ | ” | ರೂ. ೨ |
| ಚಂದ್ರಪ್ರಭಾ | ” | ರೂ. ೧ |
| ಲಘುಮಾಲಿನಿ ವಸಂತ | ” | |
| ಅಮೃತಸತ್ವ | ” | ಆಣೆ ೧ |
| ಸಾಯಿಸ್ ವಾಸರ್ | ಔಂಸ | ರೂ. ೮ |
| ಬ್ರಾಹ್ಮೀ ಸಾಯರಪ್ | ” | ರೂ. ೧ |
| ಪಾಚಕವಟಿ | ನೂರಕ್ಕೆ | ರೂ ೧ |
| ಮೃದುವಿರೇಚಕವಟಿ | ನೂರಕ್ಕೆ | ಆಣೆ ೮ |
| ತಾಳೀಸಾದಿಚೂರ್ಣ | ೧೦ ತೊಲಿ | ರೂ. ೧ |

ಇವಲ್ಲದೇ ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಿದ ಎಲ್ಲ ಔಷಧಗಳು ನಮ್ಮಲ್ಲಿ ಸುಲಭ ದರದಿಂದ ಸಿಗುವವು.

Karnatak Ayurvelic Phar-maceutical Works
Bagalk t Dt- Bijapur

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

## ಏಜಂಟರು) ಅತ್ಯುತ್ತಮ (ಬೇಕು

ಮಸಿ ಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೬—೦ | ಟ. ಖ |
| ೯೦೦ ಚೀಟಿಗಳಿಗೆ | ೦—೧೨—೦ | |
| ೫೦ ಔಂಸ ಮಸಿ ಪುಡಿಗೆ | ೦—೪—೦ | ಬೇರೆ. |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸ— ಕರ್ನಾಟಕ ಇಂಕ ಕಂಪನಿ,
ಬಾಗಲಕೋಟ.

## ಇಂಡಿಯಾ ಪ್ರಾವ್ಹಿಡೆಂಟ ಕಂ. ಲಿ. ಕಲಕತ್ತಾ.

ಮಧ್ಯಮ ಸ್ಥಿತಿಯ ಕುಟುಂಬದವರಿಗೆ ಈ ಕಠಿಣ ಕಾಲದಲ್ಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಬಿಗಿಯಾಗಿರುವದು. ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿ ವರೆಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ.

V. J PARVATIKER.
General Agent BAGALKOT

## ಜಾಹಿರಾತಿನ ದರ.

ಕನ್ನಡ 'ನವಜೀವನ' ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂ. ಕಾಯಂ ಜಾಹಿರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

## ಚಂದಾ ನಿರ್ಣಯ.

| | | |
|---|---|---|
| ವಾರ್ಷಿಕ ವರ್ಗಣಿ ರೂ. | | ೪—೦—೨ |
| ಆರು ತಿಂಗಳಿಗೆ | ” | ೨—೦—೦ |
| ಬಿಡಿಸಂಚಿಕೆ | | ೦—೧—೩ |
| ಮಾದರಿ ಸಂಚಿಕೆ ಬೇಕಾದವರು | | ೦—೧—೬ |

ತಿಕೀಟುಗಳನ್ನು ಕಳಿಸಬೇಕು.

ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ತತ್ವಾರ್ಥ ಜ್ಞಾನ ಪತ್ರಿ ಮುದ್ರಣಾಲಯದಲ್ಲಿ ಶ್ರೀನಿವಾಸ ರಾಜೇರಾವ ಮಂಗಳವೇಡೆ ಇವರು ಮುದ್ರಿಸಿದರು. ಮತ್ತು ಅಲ್ಲಿಯೇ ತಮ್ಮಣ್ಣಾಚಾರ್ಯ ಬಂಡಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ಕರ್ನಾಟಕ ಪ್ರಾಂತಿಕ ಕಮಿಟಿಯು.

R No. B 1589

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೆ ಈ ವಾರಪತ್ರಿಕೆಯ ಮುಖೋದ್ದೇಶವು.

ವರ್ಷ ೯ | ಬಾಗಲಕೋಟೆ [illegible] | ಸಂಚಿಕೆ ೨೮

ಗುರುವಾರ ತಾ ೨೨ ಜೂನ ೧೯೨೨.

## ಮಹಾತ್ಮರ ನುಡಿಯು.

### ಮಹಾಸಭೆಯ (ಕಾಂಗ್ರೆಸದ) ಘಟನೆಯು.

(ಯಂಗ ಇಂಡಿಯಾ ೩೦-೪-೧೯೨೨)

ಹೆಚ್ಚಿಗೇನು ಮಾಡದ ಮಹಾಸಭೆಯ ಘಟನೆಯ ಪ್ರಕಾರವೇ ಕೆಲಸ ಮಾಡುತ್ತ ಹೋದರೆ ನಮ್ಮ [illegible] ಸ್ವರಾಜ್ಯವು ಪ್ರಾಪ್ತವಾಗುವದು ಅದರ ರಚನೆಯೇ [illegible] ಅಖಿಲ ಭಾರತೀಯ ಮಹಾಸಭೆಯ [illegible] ಇಡೀ ಆರ್ಯಾವರ್ತದ ಮೇಲೆಲ್ಲ ಮಹಾಸಭೆಯ ಉಪಶಾಖೆಗಳಾಗಿ ಈ ಮಂಡಲವು ಕಾಲಕಾಲಕ್ಕೆ ತೋರಿಸಿಕೊಡುವ ಹಾದಿಯನ್ನೇ ಹಿಡಿದು ಎಲ್ಲ ಉಪಶಾಖೆಗಳು ಕೆಲಸಮಾಡತಕ್ಕದ್ದೆಂದು ಗೊತ್ತು ಮಾಡಿರುತ್ತದೆ. ವಯಸ್ಸಿಗೆ ಬಂದ ಎಲ್ಲ ಸ್ತ್ರೀ ಪುರುಷರಿಗೂ ಈ ಸಭೆಯ ಕಾರ್ಯಕ್ರಮಗಳಲ್ಲಿ ಮತಕೊಡುವ ಅಧಿಕಾರವಿರಬೇಕೆಂದು ಎಲ್ಲ ಸ್ತ್ರೀ ಪುರುಷರು ೪ ಆಣೆಗಳನ್ನು ಕೊಟ್ಟು ಪ್ರತಿಜ್ಞಾಪತ್ರಕ್ಕೆ ರುಜುಮಾಡಿದಲ್ಲಿ ಈ ಮಹಾಸಭೆಯ ಸಭಾಸದರಾಗುವಂತ ಏರ್ಪಾಡು ಮಾಡಿರುವದು ಇದರಲ್ಲಿ ಎಲ್ಲ ಪಂಗಡಗಳ ಮತ್ತು ವಿವಿಧ ಮತಸ್ಥರ ಸೇರಿಕೆಯಾಗಲಿಕ್ಕೆ ಏನೂ ಅತಂಕ ಉಳಿದಿರುವದಿಲ್ಲ. ಇದರ ರಚನೆಯ [illegible] ಪ್ರಾಮಾಣಿಕತನದಿಂದಲೂ ಮತ್ತು ಖರೇ ಕಳಕಳಿಯಿಂದಲೂ ಇದರಂತೆ ಕೆಲಸ ನಡಿಸಿದರೆ ಮತ್ತು ಇದರ ಮೇಲೆ ಜನರ ಭಕ್ತಿ ವಿಶ್ವಾಸಗಳು ಇದ್ದರೆ ಸ್ವಲ್ಪ ಅವಧಿಯಲ್ಲಿ ಈ [illegible] ಸರಕಾರಪದ್ಧತಿಯನ್ನು ನಾಮಶೇಷ ಮಾಡುವದರಲ್ಲಿ ಏನೂ ಸಂದೇಹವಿಲ್ಲ. ಪ್ರಜೆಗಳಿಗ [illegible] ಸಹಕಾರದ (ಯಾ [illegible] ಇಲ್ಲದು) ಸಹಾಯದ ಹೊರ್ತು ಸರಕಾರವು ಸಾಗಲಾರದು [illegible] ಲುಮೆಯನ್ನು ಮಾಡುವದಾದರೂ ನಮ್ಮ ಜನರ ಸಹಾಯದಿಂದಲೇ ಹೊರತು ಬೇರೆ ಮಾರ್ಗದಿಂದಲ್ಲ. ಯುರೋಪಿಯನ್ ಜನರು ನಮ್ಮ ಸಹಾಯವಿಲ್ಲದೆ ಹಿಂದುಸ್ತಾನದಲ್ಲಿಯ ಆರ್ಥ [illegible] ಗಳನ್ನು ಆಳಲಾರರು. ಹೀಗಾದಲ್ಲಿ ಹಳ್ಳಿಗ [illegible] ಹಳ್ಳಿಯೊಳಗಿನ ನ ನೂರು ಜನರನ್ನು ತಾವು [illegible] ಮಾಡುವದು ಅಶಕ್ಯವಾದ ಮಾತು.

ಆದ್ದರಿಂದ ನಮ್ಮ ಮುಂದಿರುವ ಪ್ರಶ್ನೆ ಯಾವದೆಂದರೆ, ಸರಕಾರವು ನಮ್ಮ ಇಚ್ಛೆಗೆ ಪ್ರತಿಯಾಗಿ ನಡೆಯುವದನ್ನು ನಿಲ್ಲಿಸುವದೇ. ಇದನ್ನು ಬೇರೆ ರೀತಿಯಿಂದ ಹೇಳಬೇಕಾದರೆ 'ಅದರ ಸಂಗಡ ನಮ್ಮ ಸಹಕಾರವನ್ನು ನಿಲ್ಲಿಸುವದು ನಾವು ಈ ಉದ್ದೇಶದಲ್ಲಿ ಏಕಮತದವರಾದರೆ ಸರಕಾರವು ನಮ್ಮ ಇಚ್ಛಾನುವರ್ತಿಯಾಗಬೇಕು, ಇಲ್ಲವೆ ಬಿಟ್ಟು ಹೋಗಬೇಕು. ಬೇರೆ ಗತ್ಯಂತರವಿಲ್ಲ. ಈ ಕಾರ್ಯದಲ್ಲಿ ನಮಗೆ ಅಡ್ಡ ಬರುವವರನ್ನು ಸರಕಾರವು ಕೂಡಿಕೊಂಡು ತನ್ನ ಆಟವನ್ನು ಅವ್ಯಾಹತವಾಗಿ ಸಾಗಿಸುತ್ತದೆ ನಾವು ಅತ್ಯಾಚಾರಗಳನ್ನು ಮಾಡಲು ಪ್ರವರ್ತಿಸಿದರೆ ಅದು ಜನರಲ್ಲಿ ನಿರ್ದಯವಾದ ಹಾಹಾಕಾರ ಎಬ್ಬಿಸುವ ಉದ್ಯೋಗ ನಡಿಸುತ್ತದೆ. ನಮ್ಮನಮ್ಮಲ್ಲಿ ಮತಭೇದ ಕಂಡಾಗ್ಗೆ ಕೆಲವರನ್ನು ಲಂಚಕೊಟ್ಟು [illegible] ತಕೊಳ್ಳುವ ಹವ್ಯಾಸ ಮಾಡುತ್ತದೆ. ನಾವು ಬರೀ ಒದರಾಡಹತ್ತಿದರೆ ಒದರಬಡಕರ ಬಾಯಲ್ಲಿ ನೀರು ಬಿಡುವಂತೆ ಆಸೆ ತೋರಿಸುತ್ತದೆ. ಆದ್ದರಿಂದ ನಾವು ಮಾಡಬೇಕಾದ್ದೇನಂದರೆ– ಶಾಂತರಾಗಿ [illegible] ಯಬೇಕು, ಒಂದಾಗಬೇಕು, ಮತ್ತು ಲಂಡ ಲಬಾಡಿಗಳಿಗೆ ಬಲಿಬೀಳದಂತೆ ಮನೋಬಲವುಳ್ಳವರಾಗಬೇಕು.

ಸುಸಂಸ್ಕೃತಿಯುಳ್ಳವರೂ ಧೀಮಂತರಾದವರೂ ಕುಶಲರೂ ಇಷ್ಟು ಮಾಡಲಿಕ್ಕೆ ಬಹಳವೇನು ಶಿಕ್ಷಣಬೇಕಾಗಿಲ್ಲ. ಆದರೆ ಮನಸ್ಸಿಗೆ ಒಳಿತು ಹೊಳೆಯುವಂತೆಯೂ ಮತ್ತು ಅವರಿಗೆ ಮನವರಿಕೆಯಾಗುವಂತೆಯೂ ಇಷ್ಟೇ ಒಂದು ಮಾರ್ಗವನ್ನು ಗೊತ್ತು ಮಾಡುವದಕ್ಕೆ ಏನು ದೆಚ್ಚಿನ ಶ್ರಮಬೇಕಾಗಿರುವದು. ಆದೆಂದರೆ ವ್ಯರ್ಥ ಬಾಯಿಬಡಿಯುವದನ್ನು ನಿಲ್ಲಿಸಿ ಕೆಲಸಕ್ಕೆ ಹಚ್ಚುವದು ಮತ್ತು ನಮ್ಮಲ್ಲಿ ಸಂಘಶಕ್ತಿಯನ್ನು ಬೆಳಸಬೇಕು ೩೦ನೇ ಜೂನದೊಳಗಾಗಿ ಒಂದು ಕೋಟಿ ಜನರನ್ನು ಮಹಾಸಭೆಯ ಸಭಾಸದರನ್ನಾಗಿ ಮಾಡಬೇಕೆಂದು ನನ್ನ ಸೂಚನೆ ಇರುತ್ತದೆ. ಪ್ರತಿಯೊಬ್ಬ ಸಭಾಸದನು ೪ ಆಣೆಗಳನ್ನು ಕೊಟ್ಟು ಮಹಾಸಭೆಯ ಪ್ರತಿಜ್ಞಾಪತ್ರಕ್ಕೆ ಒಪ್ಪಿ ಸಹಿಮಾಡಲೇಬೇಕು. ಪ್ರತಿಯೊಂದು ಮನೆಯೊಳಗಿನ ದರೊಬ್ಬ ವಯಸ್ಸಿಗೆ ಬಂದವನನ್ನು ಸಭಾಸದನನ್ನಾಗಿ ಮಾಡಲಿಕ್ಕೆ ಹವಣಿಸಬೇಕು. ಗಂಡಸರಷ್ಟೇ ಹೆಂಗಸರಾದರೂ ಸಭಾಸದರಾಗಿರುವದು ನಮಗೆ ಗೌರವದ ಮಾತಾಗಿರುವದೆಂದು ತಿಳಿಯಬೇಕು ಎಲ್ಲ ಮುಸಲ್ಮಾನರು, ಯಾವತ್ತೂ ಜಾತಿಯವರು ಸಕಲ ವ್ಯವಸಾಯದವರೂ ಅಖಿಲ ಅಂತ್ಯಜರೂ ಇವರಲ್ಲಿ ಸೇರುವಂತೆ ಅವರಿಗೆ ತಿಳಿಹೇಳಬೇಕು. ಹೀಗಾದರೆ ಜಗತ್ತಿನೊಳಗಿನ ಎಲ್ಲ ಪ್ರಜಾಸತ್ತಾಯಮುಕ ರಾಜ್ಯಗಳಲ್ಲಿ ನಮ್ಮದೇ ಹೆಚ್ಚಿಗೆ ಪ್ರಜಾಸತ್ತಾತ್ಮಕವಾದ ರಾಜ್ಯವಾಗುವದು. ನಾನು ಮಾಡಿದ ಸೂಚನೆಗಳು ನಿಮಗೆ ಮಾನ್ಯವಿದ್ದಲ್ಲಿ ಜೂನ ೩೦ನೇ ತಾರೀಖಿನ ವರೆಗೆ ನಾವು ನಮ್ಮ ಲಕ್ಷವನ್ನು ಈ ಮೂರು ಕಾರ್ಯಗಳ ಮೇಲೆ ಕೂಡಿಸತಕ್ಕದ್ದು.

(೧) ಟಿಳಕ ಸ್ವರಾಜ್ಯನಿಧಿಯನ್ನು ಕೂಡಿಸುವದು.

(೨) ಮಹಾಸಭೆಗೆ ಒಂದು ಕೋಟಿ ಸಭಾಸದರನ್ನು ಮಾಡುವದು.

(೩) ೨೦ ಲಕ್ಷ ಮನೆಗಳಲ್ಲಿ ರಾಟಿಗಳು ನಡೆಯುವಂತೆ ಮಾಡುವದು.

ಒಂದು ಕೋಟಿ ಸಭಾಸದರನ್ನು ಮಾಡಲಿಕ್ಕೆ ಏನಿಲ್ಲೆಂದರೂ ೨೦ ಲಕ್ಷ ಮನೆಗಳಿಗೆ ಹೋಗಿ ಹೇಳಿಕೊಳ್ಳಬೇಕಾಗುವದು. ಅದರಿಂದ ಕಾರ್ಯ ನಿರ್ವಾಹಕರು ಅಷ್ಟು ಮನೆಯವರನ್ನು ಒಂದೊಂದರಂತೆ ರಾಟಿಯನ್ನು ನಡೆಸಲಿಕ್ಕೆ ಒಪ್ಪಿಸುವದು ದೊಡ್ಡ ಮಾತಲ್ಲ. ಇಪ್ಪತ್ತೊಂದು ಪ್ರಾಂತಗಳಲ್ಲಿ ೨೦ ಲಕ್ಷ ರಾಟಿಗಳು ನಡೆಯಬೇಕೆಂದು ಆಶಿಸಿದರೆ ಅದೇನು ಅತ್ಯಾಶೆಯೆನಿಸಲಾರದು.

ರಾಷ್ಟ್ರದ ಅನೇಕ ಪ್ರಶ್ನೆಗಳನ್ನು ಬಿಡಿಸಬೇಕಾದರೆ ನಾವು ನಮ್ಮ ಶಕ್ತಿಯನ್ನು ಮತ್ತು ಸಾಮರ್ಥ್ಯವನ್ನು ವೆಚ್ಚ ಮಾಡಬೇಕು. ರೋಗಿಯು ತನ್ನ ಎಲ್ಲ ಬೇನೆಗಳನ್ನು ಒಮ್ಮೆಲೇ ಕಳೆದುಕೊಳ್ಳುವ ಹವ್ಯಾಸ ಮಾಡಿದರೆ ಮುಡಿದುಹೋಗುವ ಸಂಭವವೇ ಹೆಚ್ಚು. ವೈದ್ಯನಾದವನು ನಾನಾತರದ ಉಪಾಯಗಳನ್ನು ಒಮ್ಮೆಲೇ ಕೈಕೊಳ್ಳಬಾರದು. ನಮ್ಮ ಕೆಲಸದಲ್ಲಿ ಸಕಲೋದ್ದೇಶ ವ್ಯಾಪ್ತವರೂ ಆಗಿರಬೇಕು. ಅತ್ತಿತ್ತ ಮನಸ್ಸನ್ನು ಹರಿಬಿಡುವದು ತೀರ ಹಾನಿಕರವು. ಇಂದಿನವರೆಗೆ ನಾವು ನಮ್ಮ ಮನಸ್ಸಿನಂತೆ ದಿಕ್ಕಿಗೊಬ್ಬರು ಎಳೆದಾಡಿ ರಾಷ್ಟ್ರ ಬಲವನ್ನು ಹಾಳುಮಾಡಿರುವೆವು. ಒಂದು ವರ್ಷದ ಅವಧಿಯಲ್ಲಿ ನಿಶ್ಚಿತ ಅಂಶವನ್ನು ಒಪ್ಪಿಸುವದು ಸಹಜವಾದ ಮಾತು. ಮಹಾಸಭೆಯು ಪತಿಯಿಂದ ಕೆಲಸಮಾಡುವಂಥ ಸಂಸ್ಥೆಗಳನ್ನು ಸ್ಥಾಪಿಸುವದಾದರೂ ಮನಸ್ಸುಗೊಟ್ಟು ಕೆಲಸಮಾಡುವವರಿಗೆ ಸಾಧ್ಯವಾಗಿರುವದು ಒಂದು ಕೋಟಿ ಟಿಳಕಸ್ವರಾಜ್ಯನಿಧಿಯನ್ನು ವ್ಯವಸ್ಥಿತರೀತಿಯಿಂದ ಕೂಡಿಸುವದರಿಂದ ನಾವು ಮನಃಪೂರ್ವಕವಾಗಿ ದುಡಿಯುತ್ತೇವೆಂದೂ ಮತ್ತು ಅಚಲವಾದ ನಿಶ್ಚಯವುಳ್ಳವರಾಗಿರುವೆವೆಂದೂ ಜನರಿಗೆ ಹೊಳೆದು, ಅವರ ವಿಶ್ವಾಸವು ನಮ್ಮಲ್ಲಿ ಹೆಚ್ಚಿಸುವದು.

ಈ ಕಾರ್ಯಕ್ರಮದಿಂದ ಉಳಿದಿರುವ ಕಾರ್ಯವನ್ನು ಇತರ ಭಾಗಗಳನ್ನು ನಿಲ್ಲಿಸಬೇಕೆಂದಿಲ್ಲ. ಅವು ಯಥಾಪ್ರಕಾರ ಸಾಗತಕ್ಕದ್ದು. ಕುಡಿಯೋಣವೂ ಮುಟ್ಟದ ಇರೋಣವೂ ಇಲ್ಲದಂತೆ ಆಗಲಿಕ್ಕೆಬೇಕು. ಶಿಕ್ಷಣದ ಚಳವಳಿಯಾದರೂ ಮುಂದಕ್ಕೆ ಸಾಗೇ ಇರುವದು. ಅಲ್ಲಲ್ಲಿ ಹುಟ್ಟಿರುವ ರಾಷ್ಟ್ರೀಯ ಶಾಲೆಗಳು ಚನ್ನಾಗಿ ನಡೆಸಲ್ಪಟ್ಟಿಲ್ಲ. ಈಕರೊಯ್ಯಾಡುತ್ತಿರುವಂಥ ಶಾಲೆಗಳೂ ಸಹ ಬಂದುಕೂಡುವವು. ವಕೀಲರು ತಮ್ಮ ವ್ಯವಸಾಯದ ಮೂಲಕ ಬಹಳ ಶಿಕ್ಷಕಾಸುವವರೂ ಇಲ್ಲದ ಎಚ್ಚರಿಕೆಯುಳ್ಳವರೂ, ಇರುವದರಿಂದ ಚಳವಳಿಯು ಹೆಚ್ಚೆಚ್ಚು ಪಸರಿಸುತ್ತ ನಡೆದಂತೆ ಅವರಾದರೂ ನಮ್ಮ ಪಂಕ್ತಿಯನ್ನು ಕೂಡುವರು. ಜನರು ಕೋರ್ಟಿಗೆ ಹೋಗುವದನ್ನು ಬಿಡುತ್ತಿರುವರು. ಇವಕ್ಕಾಗಿ ಎಲ್ಲರೂ ಪ್ರಯತ್ನಿಸಬೇಕಾಗಿಲ್ಲ; ಆದರೆ ನಾನು ಸೂಚಿಸಿದ ಮೂರು ಮಾತುಗಳು ಮಾತ್ರ ಬಹಳ ಮಹತ್ವವುಳ್ಳವುಗಳಾಗಿರುವವು. ಅವುಗಳನ್ನು ಈಗಲೇ ಕೈಕೊಂಡು ತೀರ ಸಾಗಿಸಲಿಕ್ಕೆಬೇಕು. ಇಲ್ಲದಿದ್ದರೆ ಚಳವಳಿಯು ಸಾರ್ವಜನಿಕ ದೃಷ್ಟಿಯಿಂದ ಯಶಸ್ವಿಯಾಗಲಿಲ್ಲವೆಂದು ಹೇಳಬೇಕಾಗುವದು.

**ಮೋಹನದಾಸ ಕರಮಚಂದ ಗಾಂಧಿ**

---

ಉಸಾರಿಯ ಪತ್ರದಲ್ಲಿ ಮಹಾತ್ಮರ ಲೇಖದ ಶೀರ್ಷಕದಲ್ಲಿ ೧-೨ ನೇ ಇಸ್ವಿಯೆಂದು ಇದ್ದಲ್ಲಿ ದಯವಿಟ್ಟು ೧೯೨೧ ಎಂದು ಓದಬೇಕು. ಈ ತಪ್ಪು ಹೋದಸಾರೆಯಷ್ಟೇ ಉಗ್ಗ್ಯಾಮಹತ್ವದ್ದದೆ.

## ಬ್ರಹ್ಮಚರ್ಯವೋ ಅಥವಾ ವೈಧವ್ಯವೋ

(ನವಜೀವನ)

ಪ್ರತಿಯೊಂದು ಧರ್ಮದಲ್ಲಿ ಬ್ರಹ್ಮಚರ್ಯದ ಮಹತ್ವವು ಹೇಳಲ್ಪಟ್ಟಿದೆ. ಬ್ರಹ್ಮಚರ್ಯದಿಂದ ಮೋಕ್ಷವಾದರೂ ಪ್ರಾಪ್ತವಾಗುತ್ತದೆ. ನಮ್ಮ ಶಾಸ್ತ್ರಗಳಲ್ಲಿ ಸಂಪೂರ್ಣ ಬ್ರಹ್ಮಚಾರಿಯವನಿಗೆ ಈ ಜಗತ್ತಿನಲ್ಲಿ ಯಾವದೂ ಅಶಕ್ಯವಿಲ್ಲೆಂದು ಹೇಳಿದೆ.

ಆದರೆ ಬ್ರಹ್ಮಚರ್ಯವು ಕಲ್ಯಾಣಪ್ರದವಿದ್ದಷ್ಟೇ ಕಠಿಣವಾದದ್ದು. ಖಡ್ಗದ ಧಾರೆಯ ಮೇಲೆ ನಡೆಯುವದು ಎಷ್ಟು ಕಠಿಣವೋ ಅಷ್ಟೇ ಬ್ರಹ್ಮಚರ್ಯವನ್ನು ಪಾಲಿಸುವದಾದರೂ ಕಠಿಣ. ಆದ್ದರಿಂದಲೇ ಅದಕ್ಕೆ ಅಸಿಧಾರಾವ್ರತವೆಂದು ಕರೆಯುತ್ತಾರೆ. ವ್ರತವು ಇಷ್ಟು ಕಠಿಣವಾದ್ದರಿಂದಲೇ ಸೌಮ್ಯ ಮತ್ತು ಸಾಧಾರಣವಾದ — ಜನರಿಗೆ ಸಾಧ್ಯವಾಗುವಂಥ - ಅದರ ಸಂಸ್ಕರಣವೊಂದನ್ನು ನಿರ್ಮಾಣಮಾಡಬೇಕಾಯಿತು. ಬೇರೆಬೇರೆ ಸ್ಥಿತಿಯಲ್ಲಿಯ ಜನರ ಸಲುವಾಗಿ ಬ್ರಹ್ಮಚರ್ಯದ ವ್ಯಾಖ್ಯೆಯನ್ನು ಬೇರೆಬೇರೆಯಾಗಿ ಮಾಡಿದ್ದಾರೆ. ವಿಲಾಸದಲ್ಲಿ ಮುಗ್ನರಾದವರನ್ನು ಬ್ರಹ್ಮಚರ್ಯದ ಉಗ್ರದರ್ಶನವು ಹೇಗೆ ಆಕರ್ಷಿಸಬಲ್ಲದು? ಆದ್ದರಿಂದ ಅವರಿಗೆ ಬ್ರಹ್ಮಚರ್ಯವೆಂದರೆ "ಸ್ವದಾರನಿರತಿಃ" ಅಂದರೆ ತಮ್ಮ ಹೆಂಡತಿಯಲ್ಲಿ ಮಾತ್ರ ಅನುರಾಗವಿಡುವದೇ ಎಂದು ವ್ಯಾಖ್ಯೆಯನ್ನು ಕೊಟ್ಟಿರುವರು. ಯಾವ ಸಮಾಜದಲ್ಲಿ ಎಷ್ಟು ಬೇಕಾದಷ್ಟು ಹೆಂಡಂದಿರನ್ನು ಮಾಡಿಕೊಳ್ಳುವ ರೂಢಿಯಿರುವದೋ ಅಂಥವರ ಸಲುವಾಗಿ ನಾಲ್ಕು ಸ್ತ್ರೀಯರಕಿಂತ ಹೆಚ್ಚು ಜನರನ್ನು ಲಗ್ನಮಾಡಿಕೊಳ್ಳದೆ ಇರುವದಕ್ಕೆ ಧಾರ್ಮಿಕ ನಿಬಂಧನೆಯನ್ನು ಹಾಕುವದರಿಂದಲೇ ಬ್ರಹ್ಮಚರ್ಯದ ಉಪದೇಶವನ್ನು ಮಾಡಿದಂತಾಯಿತು.

ವಿಲಾಸಭೋಗವು ಸ್ವಾಭಾವಿಕ ಸ್ಥಿತಿಯಾಗಿರುವದೆಂದು ಹೇಳಬಹುದು. ಆದರೆ ಬ್ರಹ್ಮಚರ್ಯವಾದರೋ ಧಾರ್ಮಿಕಸ್ಥಿತಿಯು. ಗೃಹಸ್ಥಜೀವನವು ಇವೆರಡುಗಳ ನಡುವೆ ಮಧ್ಯದ ಮಾರ್ಗವಿರುವದು. ವಿಲಾಸಿತೆಯು ಒಂದು ದಂಡೆಯು ಇದ್ದರೆ ಬ್ರಹ್ಮಚರ್ಯವು ಮತ್ತೊಂದು ದಂಡೆಯ ಮೇಲೆ ಇರುತ್ತದೆ. ಸಂಯಮಿಯಾದ ಗೃಹಸ್ಥಜೀವನವು ಎರಡೂ ದಂಡೆಗಳ ನಡುವೆ ಇರುವದು. ಇದಕ್ಕಾದರೂ ನಾವು ಸ್ವಾಭಾವಿಕವೆಂದೇ ಕರೆಯುವೆವು ಯಾಕಂದರೆ ಇದರಲ್ಲಿ ಸಾಧ್ಯವಿದ್ದಷ್ಟಿಗೆ ಸ್ವಾಭಾವಿಕವಾಸನೆಯು ಹಾಗೂ ಧಾರ್ಮಿಕ ಆದರ್ಶದ ಮಿಶ್ರಣವು ಮಾಡಲ್ಪಟ್ಟಿರುತ್ತದೆ. ಸಂಯಮಿಯಾದ ಗೃಹಸ್ಥನು ದಿನದಿನಕ್ಕೆ ಬ್ರಹ್ಮಚರ್ಯದ ಆದರ್ಶವನ್ನು ಹೆಚ್ಚು ಹೆಚ್ಚು ಬೆಳಸುತ್ತಿರುವನು.

ಇದರ ವಿರುದ್ಧವಾಗಿ ಬ್ರಹ್ಮಚರ್ಯದ ಇನ್ನೊಂದು ಪ್ರಕಾರವಾದರೂ ಇರುವದು. ಅದನ್ನು ಬ್ರಹ್ಮಚರ್ಯದ ವಿಕೃತಸ್ವರೂಪವೆಂದು ಅನ್ನುವರು. ಅದೇ ವೈಧವ್ಯವು. ವೈಧವ್ಯಕ್ಕೆ ಇಲ್ಲಿಯವರೆಗೆ ವ್ಯಾಪಕವಾದ ಅರ್ಥವು ಕೊಡಲ್ಪಟ್ಟಿದೆ. ಧರ್ಮದ ಬ್ರಹ್ಮಚರ್ಯವು—ನಿರ್ಬಂಧವಿಲ್ಲದ ಪಾಲಿಸಲ್ಪಡುವ ಬ್ರಹ್ಮಚರ್ಯವು ವೈಧವ್ಯದಲ್ಲಿ ಬಹಳ ಪಾಪಸಹಿತ ಸಂಬಂಧ ಹೊಂದಿರುತ್ತದೆ. ಕೇವಲ ಶಾರೀರಿಕ ಬ್ರಹ್ಮಚರ್ಯವು ಇಲ್ಲವಾಗುತ್ತದೆ. ಮತ್ತ ಈ ಕಾರಣದಿಂದಲೇ ಮನಸ್ಸಿನಲ್ಲಿ ವಿಚಾರಗಳಿಂದ ವ್ಯಗ್ರಚಿತ್ತರಾಗುವರು. ಆದ್ದರಿಂದ ಇಂಥ ದಶೆಗೆ ವೈಧವ್ಯವೆಂಬ ಹೆಸರನ್ನು ದಯಪಾಲಿಸಿದ್ದೇವೆ.

ಮನೋವಿಕಾರಗಳಿಗೆ ಪ್ರವಾಹವು ವಿಲಾಸಿತೆಯಾದರೆ, ಹಿಂಸೆಯಾದರೂ ಒಂದು ಪ್ರಕಾರದ ವಿಲಾಸಿತೆಯೇ. ಮತ್ತು ಬೇರೆ ಭಾಷೆಯಲ್ಲಿ ಅಹಿಂಸೆಯು ಬ್ರಹ್ಮಚರ್ಯವೆಂದು ಕರೆಯಲ್ಪಡಬೇಕು. ಹಿಂಸೆಯಲ್ಲಿ ವೀರ್ಯನಾಶವು ಉಂಟು. ಅಹಿಂಸಾರೂಪಿಯಾ

ದ ಬ್ರಹ್ಮಚರ್ಯವನ್ನು ಪಾಲಿಸುವದರಿಂದ ... ದ ವೀರ್ಯವು ಉತ್ಪನ್ನವಾಗುವದು. ಇದರಲ್ಲಿ ಸಂಶಯವಿಲ್ಲ.

ಹಿಂದುಸ್ಥಾನದಲ್ಲಿ ಇಂಗ್ಲಿಷರ ರಾಜ್ಯವು ಸ್ಥಾಪಿತವಾದಂದಿನಿಂದ ಜನರು ಅಹಿಂಸಾವ್ರತದ ಪಾಲನೆಯನ್ನು ಬಹಳವಾಗಿ ಮಾಡುತ್ತ ಬಂದಿರುವರು. ಆದರೆ ಆ ಅಹಿಂಸೆಯು ಮಾನಸಿಕ ಸಂಯಮದಿಂದ ಯುಕ್ತವಾದದ್ದಿದ್ದಿಲ್ಲ. ಅದರಲ್ಲಿ ಕ್ಷೀಣ ವೀರ್ಯತ್ವವಾಗಲಿ, ವೈಧವ್ಯದಶೆಯಾಗಲಿ ಇತ್ತು. ಈಗಾದರೂ ದೇಶದಲ್ಲಿ ಎಷ್ಟೋ ಜನರು ಅಹಿಂಸೆಯ ಪಾಲನೆಯನ್ನು ವೈಧವ್ಯವೃತ್ತಿಯಿಂದ ಮಾಡುತ್ತಿರುವರು. ಇಂಥ ಜನರಿಗೆ ಬಾಹ್ಯಸಂಯಮದ ಲಾಭವು ಅವಶ್ಯವಾಗಿ ದೊರೆಯುವದು. ಆದರೆ ಹಿಂಸೆಯ ಚಿಂತನವು ಅವರ ಮನಸ್ಸಿನಲ್ಲಿ ಇರುವವರೆಗೆ ಬ್ರಹ್ಮಚರ್ಯದ ವೀರ್ಯವಾಗಲಿ ಅಹಿಂಸೆಯ ತೇಜವಾಗಲಿ ಎಂದೂ ಬರಲಾರದು.

ವಾಕ್ಸಂಯಮವಾದರೂ ಒಂದು ತರದ ಬ್ರಹ್ಮಚರ್ಯವೇ. ಹಿಸಲ್‌ಕೋಡುಗಳಿಗೆ ಅಂಜಿ ಬಾಯಿಯನ್ನು ಬಂದು ಇಡುವದು ವೈಧವ್ಯಾವಸ್ಥೆಯೇ ಸರಿ. ನಮ್ಮ ವಿಚಾರಗಳನ್ನೂ ಉದ್ಗಾರಗಳನ್ನೂ ನಮ್ಮ ಅಧೀನದಲ್ಲಿಟ್ಟುಕೊಂಡವರಿಗೆ ಅಂತಸ್ಫೂರ್ತಿಯೂ ವಾಚಾಸಿದ್ಧಿಯೂ ಪ್ರಾಪ್ತವಾಗುವದು.

ಬ್ರಹ್ಮಚರ್ಯ—ಸಾರ್ವಭೌಮ ಬ್ರಹ್ಮಚರ್ಯ-ದಿಂದ ಅಲೌಕಿಕ ವೀರ್ಯಲಾಭವಾಗುವದು. ಅದು ಸ್ವೇಚ್ಛಾಪೂರ್ವಕವಾದ ಬ್ರಹ್ಮಚರ್ಯದಿಂದಲೂ ಆಗುವದು. ಸಮಾಜದಲ್ಲಿ ಬ್ರಹ್ಮಚರ್ಯದ ಸ್ಥಾಪನೆಯನ್ನು ಮಾಡುವ ಕೆಲಸವು ಧರ್ಮದ್ದದೆ. ಸರಕಾರವು—ಯಾವದೇ ಸರಕಾರವು—ಕೇವಲ ವೈಧವ್ಯದಶೆಯನ್ನು ಸ್ಥಾಪಿಸಲಿಕ್ಕೆ ಸಮರ್ಥವಾಗಬಲ್ಲದು.

ಧರ್ಮದ ಜ್ಞಾನದಿಂದಲೂ ಧಾರ್ಮಿಕ ಸಾಧನಗಳ ಆಚರಣೆಯಿಂದಲೂ ಇಡೀ ಸಮಾಜದಲ್ಲಿ ಪ್ರಚಂಡವಾದ ಶಕ್ತಿಯು ಉತ್ಪನ್ನವಾಗಬಹುದು. ಅವುಗಳ ಅಭಾವವಿದ್ದಲ್ಲಿ ಮತ್ಸರವೂ ಅಸೂಯೆಯೂ ನಿಂದೆಯೂ, ದ್ರೋಹವೂ ಮುಂತಾದ ದುರ್ಗುಣಗಳು ನೆಲೆಗೊಳ್ಳುವವು. ಸಮಾಜವು ತನ್ನ ವೀರ್ಯವನ್ನೆಲ್ಲ ಕಳೆದುಕೊಂಡು ನಷ್ಟವಾಗಿ ಹೋಗುವದು.

ಈ ತರದ ನಾಶದಿಂದ ಸಮಾಜವನ್ನು ಉಳಿಸುವದಕ್ಕೆ ಈ ಜಗತ್ತಿನಲ್ಲಿ ಪ್ರತಿಯೊಂದು ಸರಕಾರವು ಕಾಯಿದೆಗಳನ್ನು ರಚಿಸುವದು. ಇವುಗಳಿಂದಲೇ ಸಮಾಜವು ವಿಘಾತಕವಾದ ಮನೋವಿಕಾರಗಳಿಗೆ ಒಳಗಾಗದೆ ಆತ್ಮನಾಶದಿಂದ ರಕ್ಷಿತವಾಗುವದು.

ಆದರೆ ಕಾಯಿದೆಯಾದರೂ ಬಾಹ್ಯಾಚಾರದ ನಿಯಂತ್ರಣವನ್ನು ಮಾಡುವದಕ್ಕೆ ಸಮರ್ಥವಾಗುವದು ಅರ್ಥಾತ್ ಇದು ಸಮಾಜದಲ್ಲಿ ವೈಧವ್ಯದಶೆಯನ್ನು ಪ್ರಸ್ಥಾಪಿಸಲು ಶಕ್ತವಾಗುವದು. ನಿಜವಾದ ಬ್ರಹ್ಮಚರ್ಯವಾದರೋ ಮನುಷ್ಯಜಾತಿಯೆಂಬ ನೌಕೆಯನ್ನು ನಡಿಸುವಂಥ ಹಾಗೂ ಧರ್ಮಬುದ್ಧಿಯನ್ನು ಹುಟ್ಟಿಸುವಂಥ ಧರ್ಮೋಪದೇಶದಿಂದಲೂ ತನ್ನ ಉದಾಹರಣೆಯಿಂದಲೂ ಸಮಾಜದಲ್ಲಿ ನಿರ್ಮಾಣಮಾಡಲು ಸಮರ್ಥವಾಗುವದು.

೨

ಸರಕಾರದಲ್ಲಿ ಮತ್ತು ಅದರ ಕಾಯಿದೆಗಳಲ್ಲಿ ಬ್ರಹ್ಮಚರ್ಯವನ್ನು ಹಬ್ಬಿಸುವ ಶಕ್ತಿಯು ಏಕೆ ಇರುವದಿಲ್ಲ? “**ಕರ್ತುಮಕರ್ತುಮನ್ಯಥಾಕರ್ತುಂ**” ಸಮರ್ಥವಾದ ಸರಕಾರವು ಈ ವಿಷಯದಲ್ಲಿ ಇಷ್ಟು ಅಸಮರ್ಥವೇಕಾಗುವದು? ಇದರ ಉತ್ತರವು ಸ್ಪಷ್ಟವಿದೆ. ಶುದ್ಧ ಸರಕಾರದ ಆಚರಣವೇ ಯಾವಾಗಲೂ ವಿಪರೀತವಾಗಿರುವದು. ಪ್ರಜೆಗಳಲ್ಲಿ ಅಹಿಂಸೆಯನ್ನು ಸ್ಥಾಪಿಸುವ ಕುರಿತು ಪ್ರತಿಯೊಂದು ಆಧುನಿಕ ಸರಕಾರವು ತಾನೇ ಮೇಲಿಂದ ಮೇಲೆ ಹಿಂಸಕವಾಗುವದು, ಈಗಿನಕಾಲದ ಸರಕಾರದ ಹಿಂಸಾವೃತ್ತಿಯಂತೂ ಇಷ್ಟು ಬೆಳೆದಿರುವದಿಲ್ಲ, ಯಾವಾತನೂ “ಎಲ್ಲಕ್ಕೂ ದೊಡ್ಡದಾದ ಹಿಂಸಾಶಕ್ತಿಯು ಸರಕಾರವೇ” ಎಂದು ಹೇಳಹತ್ತಿದರೆ ಅವನೇನೂ ಅಷ್ಟು ಚೂಕ್ಕಿ ತಪ್ಪಾಗಲಿಲ್ಲ. ಒಂದುವೇಳೆ ಸರಕಾರವು ಪರದೇಶೀಯವಾಗಿದ್ದರಂತೂ ಕೇಳುವದೇನು? ಎಲ್ಲಿಯವರೆಗೆ ಪ್ರಜೆಗಳ ಇಚ್ಛೆಯ ವಿರುದ್ಧವಾಗಿ ರಾಜ್ಯವು ನಡಿಸಲ್ಪಡುವದೋ ಅಲ್ಲಿಯವರೆಗೆ ಸರಕಾರವು ಭಯ ಲೋಭ ಮತ್ಸರ ಮೊದಲಾದ ಹೀನವೃತ್ತಿಗಳನ್ನು ಪೋಷಿಸುವದರಿಂದಲೂ ಹಬ್ಬಿಸುವದರಿಂದಲೂ ಜೀವಂತವಾಗಿ ಉಳಿಯಬಲ್ಲದು.

ಯಾವದಾದರೊಂದು ಪರದೇಶದ ಸರಕಾರವು ಯಾವದಾದರೊಂದು ರಾಷ್ಟ್ರದಮೇಲೆ ಅದರ ಇಚ್ಛೆಯ ವಿರುದ್ಧವಾಗಿ ರಾಜ್ಯಮಾಡುವಾಗ ಅದು ನಿಷ್ಕಾಮಭಾವದಿಂದಾಗಲಿ, ಪರೋಪಕಾರವೃತ್ತಿಯಿಂದಾಗಲಿ ಸ್ವಲ್ಪಾದರೂ ಮಾಡುವದೇ? ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಸಲುವಾಗಿಯೇ ಎಲ್ಲ ವ್ಯವಹಾರಗಳು ನಡೆಸಲ್ಪಟ್ಟಿವೆ. ಆದ್ದರಿಂದ ಸ್ವಾರ್ಥಿಯಾದ ಪರದೇಶದ ಸರಕಾರದ ರಾಜ್ಯವಿರುವದು ಜನತೆಗೆ ಎಲ್ಲಕ್ಕೂ ದೊಡ್ಡ ರಾಷ್ಟ್ರೀಯ ಆಪತ್ತಿಯೇ. ಇಂಥ ರಾಜ್ಯದಲ್ಲಿ ಪ್ರತಿಕ್ಷಣಕ್ಕೆ ಪ್ರಜೆಗಳ ನೈತಿಕ ಅಧಃಪತನವು ಬೆಳೆಯುತ್ತ ಹೋಗುವದು. ಇಂಥ ದೊಡ್ಡ ಸಂಕಟದಿಂದ ಉಳಿದುಕೊಳ್ಳುವ ಮಾರ್ಗವು ಒಂದೇ ಇರುವದು. ಆ ಮಾರ್ಗವು ಮೇಲೆ ವ್ಯಕ್ತಮಾಡಿದ ಸಾರ್ವತ್ರಿಕ ಬ್ರಹ್ಮಚರ್ಯವೇ.

— ಕಾಲೇಲಕರ.

## ಇಹವೃತ್ತ.

ಮಳೆಯು ಇಲ್ಲ; ಊರಲ್ಲಿ ಮಾಂಕಾ ಉಪದ್ರವು ಹೆಚ್ಚಾಗಿದೆ; ಬಾಗಲಕೋಟೆಯ ಸುತ್ತಲಿನ ಹಳ್ಳಿಗಳಲ್ಲಿಯೂ ಮಾರಿಕಾದೇವಿಯ ಕಾಟವು ಉದ್ಭವಿಸಿದೆ. ಸೀತಿಮನಿ ಆಲೂರುಗಳಲ್ಲಿ ಸಹ ದೇವಿಯು ಆಹುತಿಯನ್ನು ಎತ್ತಹತ್ತಿರುವಳು. ಕನ್ಯಾಗತದ ವಿಧಿಯ ಮೂಲಕ ಸೀತೀಮನಿಗೆ ಬಂದವರು ಸಹ ಈ ದೇವಿಗೆ ಆಹುತಿಯಾಗಿದ್ದಾರೆಂದು ಕೇಳುತ್ತೇವೆ. ಆದ್ದರಿಂದ ಕನ್ಯಾಗತದ ಸಲುವಾಗಿ ಬೇರೆ ಸ್ಥಳಗಳಿಂದ ಸೀತಿಮನಿಗೆ ಹೋಗತಕ್ಕವರು ಎಚ್ಚರಪಡತಕ್ಕದು.

ದೇಶಭಕ್ತ ಜಯರಾಯರ ಪ್ರಕೃತಿಯು ಸುಧಾರಿಸಹತ್ತಿದೆ. ಈಗ್ಗೆ ಸ್ವಲ್ಪ ಎದ್ದು ಕುಳಿತುಕೊಂಡು ಮಾತನಾಡುತ್ತಾರೆ. ದೇವರು ಅವರನ್ನು ಈ ಪೀಡೆಯಿಂದ ಬೇಗನೇ ಮುಕ್ತಮಾಡಲಿ.

ಸಿಂಧೂರ ಲಕ್ಷ್ಮಣ್ಣನ ಟೋಳಿಯಲ್ಲಿಯ ಕುರ್ವರನ್ನು ಒಯಿದು ಇಲ್ಲಿ ತಾಲೂಕ ಕಚೇರಿಯಲ್ಲಿ ಇಟ್ಟಿರುವರು.

ನಲಗಲಿಯ ಪ್ರಸಿದ್ಧ ಲೇಖಕರಾದ ಶ್ರೀ ಕೇಶವಶರ್ಮರವರು ಈ ವರುಷ ಮೈಸೂರ ಪಂಡಿತ ಪರೀಕ್ಷೆಯಲ್ಲಿ ಕನ್ನಡ, ಮತ್ತು ಸಂಸ್ಕೃತ ಎರಡೂ ಶಾಖೆಗಳಲ್ಲಿ ತೇರ್ಗಡೆ ಹೊಂದಿದರೆಂದು ಕನ್ನಡ ಸಾಹಿತ್ಯದ ಅಭಿಮಾನಿಗಳಿಗೆ ತಿಳಿಸಲಿಕ್ಕೆ ಆನಂದವೆನಿಸುತ್ತದೆ. ಪಂಡಿತ ಪರೀಕ್ಷೆಯ ಅಭ್ಯಾಸಕ್ರಮವು ಮೂರು ವರ್ಷಗಳದಿದ್ದರೂ ಒಂದೇ ವರ್ಷದಲ್ಲಿ ಪಾಸೂಗಿದ್ದು, ಪಾಸಾದದ್ದು ವಿಶೇಷವಾಗಿ ಅಭಿನಂದನೀಯವು. ಇವರು ಮುಂದಿನ ಸಾರ ಇಂಗ್ಲಿಶ ಶಾಖೆಗೂ ಮುದ್ರಾಸ ಯುನಿವರ್ಸಿಟಿಯ ಸಂಸ್ಕೃತ ಸಾಹಿತ್ಯ ಶಿರೋಮಣಿ ಪರೀಕ್ಷೆಗೂ ಕೂಡುತ್ತಿರುವರು. ನಿಜಾಮರ ಪ್ರಾಂತದಿಂದ ಮೈಸೂರಿಗೆ ಹೋಗಿ ಪಂಡಿತ ಎಂಬ ಹೆಸರು ಪಡೆದವರು ಇವರೇ ಮೊದಲು. ಇವರಿಂದ ಕನ್ನಡ ಸಾಹಿತ್ಯದ ಅಭಿವೃದ್ಧಿಯಾಗಲೆಂದು ಈ ಪ್ರಸಂಗದಲ್ಲಿ ಅಪೇಕ್ಷಿಸದಿರಲಾರೆವು. ಶ್ರೀ. ಕೇಶವಶರ್ಮರು ಬಡತನಸ್ಥಿತಿಯಲ್ಲಿಯೇ ಕಷ್ಟದಿಂದ ವಿದ್ಯಾರ್ಜನೆ ಮಾಡಿದ ತರುಣ ವಿದ್ಯಾರ್ಥಿಗಳಾಗಿರುವದು ನಮ್ಮೆಲ್ಲರಿಗೆ ಅಭಿಮಾನಾಸ್ಪದ ಸಂಗತಿಯು. ದೇವರು ಅವರಿಗೆ ಸದಾ ಯಶಸ್ಸನ್ನೀಯಲಿ

ಕನ್ನಡ ನವಜೀವನ

ಜ್ಯೇಷ್ಠ ವದ್ಯ ೧೨ ಗುರುವಾರ ಶಕೆ ೧೮೪೪

## ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು.

ಕರ್ನಾಟಕಪ್ರಾಂತಿಕ ಕಾಂಗ್ರೆಸಕಮಿಟಿಯು ಬೈಠಕ್ಕು [illegible] ತನವು ನಾಳಿನ ೨೫ ನೇ ತಾರೀಖಿನದಿವಸ ಗದಗಿನಲ್ಲಿ ಜರುಗತಕ್ಕದ್ದಿದೆ. ಆ ಸಭೆಯ ಮುಂದೆ ಮಹತ್ವವಾದ ವಿಷಯಗಳು ಚರ್ಚೆಗಾಗಿ ಬರುವವು. ಅವುಗಳಲ್ಲಿ ಸದ್ಯಃಸ್ಥಿತಿಯ ವಿಚಾರವು, ಕರ್ನಾಟಕದಲ್ಲಿ ವಿಧಾಯಕಕಾರ್ಯಕ್ರಮವು ಹೇಗೆ ಯಶಸ್ವಿಯಾಗಬಹುದೆಂಬ ಪ್ರಶ್ನೆಯೂ ಬಹಳೇ ವಿಚಾರಣೀಯವಾಗಿವೆ. ಆ ಬಗ್ಗೆ ನಮಗೆ ತೋರುವ ನಾಲ್ಕು ಮಾತುಗಳನ್ನು ಇಲ್ಲಿ ಬರೆದು ಇವುಗಳ ಕಡೆಗೆ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಲಕ್ಷಗೊಡಬೇಕೆಂದು ಬಿನ್ನವಿಸುತ್ತೇವೆ.

ಸದ್ಯಃಸ್ಥಿತಿಯ ವಿಚಾರಮಾಡಹೋದರೆ ಕರ್ನಾಟಕಪ್ರಾಂತದ ಮಟ್ಟಿಗೆ ಮಾತ್ರ ಹೇಳಬೇಕಾದರೆ ಎಲ್ಲಕಡೆಗೂ ನಿರುತ್ಸಾಹವೇ ವ್ಯಕ್ತವಾಗುತ್ತದೆ. ಬಾರ್ಡೋಲಿಯ ನಿರ್ಣಯವಾದಂದಿನಿಂದ ಜನರಲ್ಲಿ ಪೂರ್ಣ ಆಲಸ್ಯವು ಹುಟ್ಟಿ ಕಾಂಗ್ರೆಸದ ಚಳವಳಿಯು ನಿಸ್ತೇಜವು ಆಗಿಹೋಗಿದೆಯೆಂದು ಹೇಳಲು ಅಭ್ಯಂತರವಿಲ್ಲ. ಕರ್ನಾಟಕದಲ್ಲಿಯ ಅಸಹಕಾರವಾದಿಗಳಾದ ವೀರರು ಸರಕಾರದ ದಬ್ಬಾಳಿಕೆಗೆ ಬಲಿಯಾಗಿ ಕಾರಾಗೃಹವನ್ನು ಸೇರಿದಮೇಲೆ ಅವರ ಸ್ಥಳವನ್ನು ತೆಗೆದುಕೊಳ್ಳಲಿಕ್ಕೆ ಮುಂದೆ ಬರುವವರೇ ಯಾರೂ ಇಲ್ಲದಂತಾಯಿತು. ಇನ್ನು ಕಾರಾಗೃಹದ ಹೊರಗೆ ಉಳಿದ ಕಾರ್ಯನಿರ್ವಾಹಕರಲ್ಲಿ ಕೂಡ ಉತ್ಸಾಹವು ಕುಗ್ಗಿ ದಿನದಿನಕ್ಕೆ ಅವರ ಸಂಖ್ಯೆಯು ಕರಗುತ್ತದೆಂಬದಾದರೂ ಒಡೆದು ಕಾಣುತ್ತದೆ. ಇದು ಸಾಧಾರಣಜನರ ಮಾತಾಯಿತು. ಇನ್ನು ನಮ್ಮ ಕರ್ನಾಟಕದ ಮುಂದಾಳುಗಳಾದವರೋ ಹೋದಸಾರೆಯಂತೆ ಈಸಾರೆ ಕರ್ನಾಟಕದಲ್ಲೆಲ್ಲ ಸಂಚಾರಮಾಡಿ ನಿರುತ್ಸಾಹಿಗಳಾದ ಜನರಲ್ಲಿ ಉತ್ಸಾಹವನ್ನು ಹಚ್ಚಿಸಲು ಪ್ರಯತ್ನವನ್ನು ಮಾಡಿಯೇ ಇಲ್ಲ. ಹೀಗೆಂದಕೂಡಲೇ ಅವರಮೇಲೆ ಆಲಸ್ಯದ ಆರೋಪವನ್ನು ಹೊರಿಸಬೇಕೆಂದು ನಮ್ಮ ಇಚ್ಛೆಯಿರುವದೆಂದು ಯಾರೂ ತಿಳಿಯಕೂಡದು. ಅವರು ಎರಡನೇ ಮಹತ್ವದ ಕಾರ್ಯಗಳಲ್ಲಿ ತೊಡಗಿದ್ದರಿಂದಲೇ ಅವರಿಗೆ ಈ ಸಂಚಾರದಲ್ಲಿ ವೇಳೆಯು ದೊರೆತಿಲ್ಲ. ಕರ್ನಾಟಕವೇ ದುರ್ದೈವಿಯೆಂದು ಹೇಳಬೇಕು. ಇವೆಲ್ಲ ಕಾಂಗ್ರೆಸದ ಕಾರ್ಯನಿರ್ವಾಹಕರ ಮಾತಾಯಿತು.

ಇನ್ನು ಸರಕಾರದವರಾದರೋ ದಬ್ಬಾಳಿಕೆಯ ಸತ್ರವನ್ನು ಅವ್ಯಾಹತವಾಗಿ ನಡೆಸಿರುವರು. ನಮ್ಮಲ್ಲಿ ನಿರುತ್ಸಾಹವು ಹೆಚ್ಚಿದಹಾಗೆಲ್ಲ ಅವರು ಮತ್ತಷ್ಟು ನಮ್ಮಮೇಲೆ ಏರಿಬರುವದು ಸ್ವಾಭಾವಿಕವದೆ. ಜನರಲ್ಲಾದರೋ ಅವರ ದಬ್ಬಾಳಿಕೆಗೆ ಯೋಗ್ಯವಾದ ಉತ್ತರವನ್ನೀಯುವಷ್ಟು ಸಾಮರ್ಥ್ಯವಿಲ್ಲ. ಅವರಲ್ಲಿಯಂತೂ ಸಣ್ಣಪುಟ್ಟ ಅಧಿಕಾರಿಗಳ ಕಾಟವು ಹೆಚ್ಚಾಗಿದೆ. ಕಾಂಗ್ರೆಸಕಮಿಟಿಯ ಮೆಂಬರನಿದ್ದರೆ ಸಾಕು ಅವನ ಬಂದೂಕಿನ ಲಾಯಸೆನ್ಸು ಹೋಯಿತೆಂದೇ ತಿಳಿಯಬೇಕು. ಟಿಳಕಸ್ವರಾಜ್ಯಫಂಡಿಗೆ ಇವನು ಸ್ವಲ್ಪ ಸಹಾಯಮಾಡಿರುವನಲ್ಲವೇ? ಇವನು ಅಸಹಕಾರಿಯಾಗಿರುವನು ಅಂದಮೇಲೆ ಇವನಹತ್ತರ ತುಬಾಕಿಗಳನ್ನು ಹೇಗೆ ಇಡಗೊಡಬೇಕು? ಇವನು ವತನದ [illegible] ಖಾದಿಯನ್ನು ಧರಿಸುತ್ತಿರುವನಲ್ಲವೇ? ಮತ್ತು ಸರಕಾರದ ಜವಾಬ್ದಾರಿಯನ್ನು (ಕಾಂಗ್ರೆಸಕಮಿಟಿಯ ಮೆಂಬರನಾಗುವದರಿಂದ) ತಪ್ಪಿಸುವನಲ್ಲವೇ? ಅಂದಮೇಲೆ ಇವನ ವತನವನ್ನು ಏಕೆ ಕಸಿದುಕೊಳ್ಳಬಾರದು? ಎಂಬ ಅಂಜಿಕೆ ಹಾಕಹತ್ತಿದ್ದಾರೆ. ಈ ಸಂಗತಿಗಳನ್ನು ನೋಡಲಾಗಿ ಸರಕಾರದವರು ನ್ಯಾಯದೇಚ್ಛೆ ಕಾಯದೇ ಮಹತ್ವದ ಸಂಗತಿಗಳನ್ನೆಲ್ಲ ಸಧ್ಯಕ್ಕೆ ಒದಗಿರಿಸಿ ಕಾಂಗ್ರೆಸ ಮತ್ತು ಖಿಲಾಫತ ಚಳವಳಿಗೆ ಸಹಾನುಭೂತಿಯನ್ನು ತೋರಿಸುವವರನ್ನೆಲ್ಲ ಬಗ್ಗುಬಡಿಯುವ ಪ್ರತಿಜ್ಞೆಯನ್ನು ತೊಟ್ಟಂತೆ ಕಾಣುವದು.

ಇಂಥ ಪರಿಸ್ಥಿತಿಯಲ್ಲಿ ನಾವು ಮಾಡಬೇಕಾದದ್ದೇನು? ಎಂಬ ಪ್ರಶ್ನೆಯು ಸಹಜವಾಗಿ ಉಪಸ್ಥಿತವಾಗುವದು. ಈ ಪ್ರಶ್ನೆಯು ಕಠಿಣವಾದದ್ದೇನೋ ನಿಜ. ಆದರೆ ಕಠಿಣ ಕಠಿಣ ಎನ್ನುತ್ತ ಕೈಬಿಟ್ಟುಕೊಡುವದು ಒಳಿತಲ್ಲ. ಇದು ರಣಹೇಡಿಗಳಿಗೆ ಮಾತ್ರ ಶೋಭಿಸುವ ಮಾತು. ಆದ್ದರಿಂದ ಹೋದಸಾರೆಯಂತೆ ಈ ಸಾರೆಯಾದರೂ ಜನರ ವಿಶ್ವಾಸಕ್ಕೆ ಪಾತ್ರರಾದ ಮುಖಂಡರು ಕರ್ನಾಟಕದ ತುಂಬೆಲ್ಲ ಸಂಚರಿಸಲಿಕ್ಕಬೇಕು. ಬಾರ್ಡೋಲಿಯ ಕಾರ್ಯಕ್ರಮದಿಂದ ಜನರಲ್ಲಿ ಉಂಟಾದ ತಪ್ಪು ತಿಳುವಳಿಕೆಯನ್ನು ತೆಗೆದುಹಾಕಲಿಕ್ಕಬೇಕು. ದಬ್ಬಾಳಿಕೆಯ ಅಬ್ಬರದ ಭೀತಿಯನ್ನು ಅಳಿಸಿಬಿಟ್ಟು ರಾಷ್ಟ್ರಕಾರ್ಯಕ್ಕಾಗಿ ಮುಂದೆ ಬರಲು ಉಪದೇಶಿಸಬೇಕು. ಹೀಗೆ ಮಾಡುವದೆಂದರೆ ಒಮ್ಮೆ ಮಾಡಿದ್ದನ್ನೇ ಪುನಃ ಮಾಡಿದಂತಾಗುವದೇನೋ ನಿಜ. ಆದರೆ ಕರ್ನಾಟಕಸ್ಥರ ಉತ್ಸಾಹವೆಲ್ಲ ಮುಖಂಡರ ವ್ಯಕ್ತಿಯ ಮೇಲೆ ಅವಲಂಬಿಸಿರುವದರಿಂದ ಈ ಕಾರ್ಯವನ್ನು ಮುಖಂಡರು ಅವಶ್ಯವಾಗಿ ಕೈಕೊಳ್ಳತಕ್ಕದ್ದು. ಜನರಾದರೂ ಸಂಚಾರಿಯ ಮುಂದೆ ವಿಶ್ರಾಂತಿಯೆಂದು ತಿಳಿದು, ಮುಖಂಡರು ಹೇಳಿದ ವ್ಯಾಖ್ಯಾನವನ್ನಷ್ಟು ಕೇಳಿದರೆ ನಮ್ಮ ಕೆಲಸವು ಮುಗಿಯಿತೆಂದು ತಿಳಿಯದೆ ಅವರ ವ್ಯಾಖ್ಯಾನದಂತೆ ಆಚರಿಸಲು ಪ್ರಯತ್ನಮಾಡಲಿಕ್ಕೆಬೇಕು. ಮೊದಲಿಂದಮೇಲೆ ಎಲ್ಲಿಯವರೆಗೆ ಮುಖಂಡರು ಒದಗುವದು ಶಕ್ಯವಿಲ್ಲವೋ ಅದನ್ನು ಅವರು ಚೆನ್ನಾಗಿ ಕಂಡು ಹಿಡಿಯಲಿಕ್ಕೆಬೇಕು. ಚಳವಳಿಯ ಭಾರವನ್ನೆಲ್ಲ ಮುಖಂಡರ ತಲೆಯ ಮೇಲೆಯೇ ಹೊರಿಸಿ ತಾವು ಸ್ವಸ್ಥವಾಗಿ ಮಲಗಿಕೊಳ್ಳಬಾರದು. ಈ ಚಳವಳಿಯ ಫಲವು ವಿಶೇಷವಾಗಿ ಸಾಮಾನ್ಯ ಜನರಿಗೆ ಆಗುವದೇ ಹೊರತು ಮುಖಂಡರಿಗಲ್ಲವೆಂದು ಅವರು ಚೆನ್ನಾಗಿ ನೆನಪಿನಲ್ಲಿಡತಕ್ಕದ್ದು. ಮೇಲಾಗಿ ಮುಖಂಡರೆನ್ನುವವರನ್ನೆಲ್ಲ ಸರಕಾರದವರು ತುರಂಗಕ್ಕೆ ಕಳಿಸಿದರೆ ಚಳವಳಿಯು ನಿಂತುಹೋಗದ ಪ್ರಸಂಗವಾದರೂ ಹಾಗೆ ಮಾಡುವದರಲ್ಲಿ ಇರುವದು. ಆದ್ದರಿಂದ ಕೇವಲ ಮುಂದಾಳುಗಳ ಮೇಲೆ ಅವಲಂಬಿಸದೆ ತಾನೇ ಮುಂದಾಳುವಾಗಲಿಕ್ಕೆ ಪ್ರತಿಯೊಬ್ಬ ಕನ್ನಡಿಗನು ಹಣಗಾಡತಕ್ಕದ್ದು.

ಇದು ಸಾಮಾನ್ಯವಿವೇಚನೆಯಾಯಿತು. ಕೇವಲ ವ್ಯಾಖ್ಯಾನಗಳಿಂದಲೇ ಪುಷ್ಕಳ ಉದ್ಧಾರವಾಗಲಾರದು. ಸ್ವಾತಂತ್ರ್ಯದೇವತೆಯ ಪ್ರೇಮವನ್ನು ಸಂಪಾದಿಸಬೇಕಾದರೆ ಅವಳಿಗೆ ಆತ್ಮಾರ್ಪಣೆಯನ್ನೇ ಮಾಡಬೇಕಾಗುತ್ತದೆ. ಆತ್ಮಾರ್ಪಣೆಯೆಂದರೆ ನಮ್ಮ ದೇಹವನ್ನೇ ಅವಳ ಚರಣಕ್ಕೆ ಅರ್ಪಿಸಿಬಿಡುವದು. ಅಂದಮೇಲೆ ಉಳಿದ ವಸ್ತುಗಳ ಪಾಡೇನು? ಆತ್ಮಾರ್ಪಣೆಯನ್ನು ಮಾಡಬೇಕಾದರೆ ಮನುಷ್ಯನಲ್ಲಿ ಯೋಗ್ಯತೆಯು ಬರಬೇಕು. ಇಂಥ ಸಿದ್ಧತೆಯು ದೊರೆಯುವದು ಅತಿ ವಿರಳ. ಆದರೆ ತನ್ನ ಕೈಯಿಂದಾದಷ್ಟು ಸ್ವಾರ್ಥತ್ಯಾಗವನ್ನು ಮಾಡಲಿಕ್ಕೆ ಮಾತ್ರ ಪ್ರತಿಯೊಬ್ಬನಿಗೆ ಶಕ್ಯವಿದೆ. ಮಹಾತ್ಮಾ ಗಾಂಧೀ, ಮೌಲಾನಾ, ಶೌಕತಅಲೀ, ಮಹಮದಅಲೀ, ದೇಶಬಂಧು ದಾಸ ಮುಂತಾದ ಲೋಕೈಕವೀರರು ರಾಷ್ಟ್ರಸೇವೆಗಾಗಿ ಆತ್ಮಾರ್ಪಣೆಯನ್ನು ಮಾಡಿದಾಗ ನಾವು ಖಾದಿಯ ಪ್ರಸಾರದಂಥ ಸಣ್ಣಕೆಲಸವನ್ನು ಕೂಡ

ಥ ಆಸ್ಪದವು? ಖಾದಿಯ ಬಗ್ಗೆ ಜನರ ಮನೋಲಕ್ಷ್ಯ ಹತ್ತಿದ್ದರೆ ಆ ದಿನನಿತ್ಯಕ್ಕೂ ಪ್ರೋತ್ಸಾಹಿಸುವಷ್ಟು ಖಾದಿಯು ಕರ್ನಾಟಕದಲ್ಲಿ ಹುಟ್ಟಿಕೊಳ್ಳಬೇಕೆಂಬುದು ವಿಷಾದ ಜನಕ ಮಾತಾಗಿದೆ. ಮಹಾತ್ಮಾ ಗಾಂಧಿಯವರು ಜೇಲಿಗೆ ತೆರಳುವಾಗ "ಖಾದೀ ಖಾದೀ" ಎನ್ನುತ್ತಲೇ ಹೊರಟರೆಂಬುದನ್ನು ಯಾರೂ ಮರೆಯಲಿಕ್ಕಿಲ್ಲ. ಅವರ ಋಣವನ್ನು ಸ್ವಲ್ಪವಾದರೂ ತೀರಿಸಬೇಕಾದರೆ ಪ್ರತಿಯೊಬ್ಬನು ಖಾದೀ ಪ್ರಸಾರದ ಕಾರ್ಯವನ್ನು ಕೈಕೊಳ್ಳಬೇಕು. ಕರ್ನಾಟಕದಲ್ಲಿ ಹತ್ತಿಯು ವಿಪುಲವಾಗಿ ಬೆಳೆಯುತ್ತಿದ್ದು, ನೇಕಾರರ ಸಂಖ್ಯೆಯು ವಿಶೇಷವಾಗಿದ್ದು, ನೂಲುವ ಉದ್ಯೋಗವನ್ನು ಕೈಕೊಳ್ಳಲಿಕ್ಕೆ ಬಡಜನರಾದರೂ ಅವಶ್ಯರಾಗಿದ್ದು ಖಾದೀಪ್ರಸಾರವು ಚನ್ನಾಗಿ ಆಗಬಾರದೆಂದರೆ ಏನು ಕಾರಣವಾಗಿರಬಹುದೋ? ಕರ್ನಾಟಕದಲ್ಲಿಯೇ ೩-೪ ಕೋಟಿ ರೂಪಾಯಿಗಳ ಪರದೇಶೀ ನೂಲು ಬರುತ್ತದೆಂಬ ಸಂಗತಿಯು ಕರ್ನಾಟಕಕ್ಕೆ ಯೋಗ್ಯವೇ? ಆದ್ದರಿಂದ ಈ ಬಗ್ಗೆ ಯೋಗ್ಯವಾಗಿ ವಿಚಾರಮಾಡಿ ಪರದೇಶೀ ನೂಲಿನ ವ್ಯಾಪಾರವನ್ನು ಕರ್ನಾಟಕದಿಂದ ಬಹಿಷ್ಕರಿಸಲಿಕ್ಕೆ ಎಲ್ಲರೂ ಪ್ರಯತ್ನಮಾಡತಕ್ಕದ್ದು. ಹಾಗೆ ಮಾಡಬೇಕಾದರೆ ಇಲಕಲ್ಲ ಸೀರೆಗಳ ಮೇಲಿನ ಸ್ತ್ರೀಯರ ಮೋಹವು ಹೋಗಲಿಕ್ಕೆ ಬೇಕು. ಗುಳೇದಗುಡ್ಡದ ಖಣಗಳು ಬಾಜಾರದಲ್ಲಿ ಮಾರದಂತೆ ಆಗಬೇಕು. ಈ ಸಂದರ್ಭದಲ್ಲಿ ನಮ್ಮ ನೇಕಾರ ಬಾಂಧವರು ಸಹಾಯಮಾಡದೆ ತೀರ ಸ್ವಲ್ಪಾವಧಿಯಲ್ಲಿಯೇ ಕರ್ನಾಟಕವೆಲ್ಲ ಖಾದಿಮಯವಾಗುವದರಲ್ಲಿ ಸಂದೇಹವಿಲ್ಲ. ಆದರೆ ನಮ್ಮ ದುರ್ದೈವದಿಂದ ಅವರಲ್ಲಿ ಭಗವಂತನು ಆ ಪ್ರೇರಣೆಯನ್ನು ಹುಟ್ಟಿಸಿದಂತೆ ತೋರುವದಿಲ್ಲ. ಆದ್ದರಿಂದ ನಮ್ಮ ನೇಕಾರ ಬಾಂಧವರಿಗೆ ನಾವು ಕೈಜೋಡಿಸಿ ಬೇಡಿಕೊಳ್ಳುವದೇನಂದರೆ "ನೀವು ಪರದೇಶೀ ನೂಲಿನ ಬಟ್ಟೆಗಳನ್ನು ತಯಾರಿಸುವದು ಪಾಪವೆಂದು ತಿಳಿಯಿರಿ. ಅಧರ್ಮವೆಂದು ಅರಿಯಿರಿ ದೇಶದ್ರೋಹವೆಂದು ಭಾವಿಸಿರಿ; ಹೀಗೆ ಮಾಡುವದರಿಂದ ನೀವು ದೇಶದ ಏಳಿಗೆಗೆ ಸಹಾಯಮಾಡಿದಂತಾಗುವದು." ಈ ಬಗ್ಗೆ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಒಂದು ಉಪಮಂಡಲವನ್ನು ನೇಮಿಸಿ ಆ ಮಂಡಲದವರು ನೇಕಾರರ ಮುಖಂಡರಿಗೆ ಭೆಟ್ಟಿಯಾಗಿ ಅವರಿಗೆ ವಿನಂತಿ ಮಾಡಿಕೊಂಡು ತಿಳಿಹೇಳಿ, ಅವರೆಲ್ಲ ಖಾದೀಪ್ರಸಾರಕ್ಕೆ ಸಹಾಯಮಾಡಲಿಕ್ಕೆ ಸಿದ್ಧರಾಗುವಂತೆ ಏರ್ಪಾಡು ಮಾಡುವಂತೆ ಮಾಡಬೇಕೆಂದು ನಮ್ಮ ಸೂಚನೆ. ಕಾಂಗ್ರೆಸ ಕಮಿಟಿಗಳಲ್ಲಿ ಹಣದ ಕೊರತೆಯೇನೂ ಇಲ್ಲ. ಕೈನೂಲಾದರೂ ಸಿಗುತ್ತದೆ. ಆದರೆ ನೇಕಾರರಿಲ್ಲದ್ದರಿಂದ ಖಾದಿಯು ತಯಾರಾಗುವದಿಲ್ಲ. ಅವರಿಗೆ ಯೋಗ್ಯವಾದ ಸಂಬಳವು ದೊರೆಯುವದಿಲ್ಲೆಂದು ನೇಕಾರರ ತಕರಾರವಿದ್ದು ಆ ತಕರಾರಗಳನ್ನೆಲ್ಲ ವಿಚಾರಮಾಡಿ ಅವುಗಳನ್ನು ದೂರಮಾಡಿದರೆ ನೇಕಾರರಾದರೂ ಸ್ವದೇಶೀ ಚಳವಳಿಗೆ ಸಹಾಯಮಾಡದೇ ಇರಲಾರರೆಂಬ ಭರವಸೆಯುಂಟು. ಆದ್ದರಿಂದ ಇತ್ತಕಡೆಗೆ ಲಕ್ಷ್ಯ ಕೊಡಬೇಕೆಂದು ನಮ್ಮ ವಿನಂತಿಯು.

ಖಾದಿಯಷ್ಟೇ ಮಹತ್ವವಾದ ಅಥವಾ ಒಂದು ದೃಷ್ಟಿಯಿಂದ ಅದಕ್ಕಿಂತಲೂ ಹೆಚ್ಚು ಮಹತ್ವವಾದ ವಿಷಯವೆಂದರೆ ರಾಷ್ಟ್ರೀಯ ಶಿಕ್ಷಣವೆಂದು ಹೇಳಬಹುದು. ಆದರೆ ರಾಷ್ಟ್ರೀಯ ಶಿಕ್ಷಣದ ವಿಷಯಕ್ಕೆ ಕರ್ನಾಟಕದ ಮುಂದಾಳುಗಳು ಹೆಚ್ಚು ಲಕ್ಷ್ಯವನ್ನು ಕೊಟ್ಟಿಲ್ಲ. ಅವರು ಅಲ್ಲಲ್ಲಿ ರಾಷ್ಟ್ರೀಯ ಶಾಲೆಗಳನ್ನೇನೋ ಸ್ಥಾಪಿಸಿದರು. ಅವು ನಡೆಯುವದಕ್ಕೆ ಬೇಕಾದ ದ್ರವ್ಯಸಹಾಯವನ್ನಾದರೂ ಕೆಲ ಮಟ್ಟಿಗೆ ದೊರೆಯಿಸಿಕೊಟ್ಟರು. ಆದರೆ ಅವು ವ್ಯವಸ್ಥಿತವಾಗಿ ಹೇಗೆ ನಡೆದಾವೆಂಬುದರ ಬಗ್ಗೆ ವಿಚಾರಮಾಡಲಿಲ್ಲ. ಆದ್ದರಿಂದ ಜನರ ವಿಶ್ವಾಸವು ಆ ಶಾಲೆಗಳ ಮೇಲೆ ಚನ್ನಾಗಿ ಕೂಡಲಿಲ್ಲ. ತಮ್ಮ ಮಕ್ಕಳು ಆ ಶಾಲೆಗಳಲ್ಲಿ ಕಲಿಯುವದರಿಂದ ಮುಂದೆ ಹೇಗೆ ತಮ್ಮ ಚರಿತಾರ್ಥವನ್ನು ಸಾಗಿಸಿಕೊಳ್ಳಬೇಕೆಂಬ ಬಹುಮಹತ್ವದ ಪ್ರಶ್ನೆಗಳಿಗೆ ಬಹಳ ಜನರು ಸಾಶಂಕವೃತ್ತಿಗಳಾಗಿರುವರು. ಆದ್ದರಿಂದಲೇ ನಮ್ಮ ರಾಷ್ಟ್ರೀಯ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗಿದೆಯೆಂದು ಹೇಳಬಹುದು. ಈಗಾದರೂ ಆ ಶಾಲೆಗಳಿಗೆ ಊರ್ಜಿತಾವಸ್ಥೆಯನ್ನು ತಂದುಕೊಡಬೇಕಾದರೆ ಆ ಬಗ್ಗೆ ಚಳವಳಿಯನ್ನು ಮಾಡಿ, ಅಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಉದರನಿರ್ವಾಹಕ್ಕೆ ಅನೇಕ ಮಾರ್ಗಗಳನ್ನು ತೋರಿಸಿಕೊಟ್ಟು ಆ ಶಾಲೆಗಳನ್ನು ಆದರ್ಶಭೂತವಾಗಿ ಮಾಡುವದು ಅವರ ಕರ್ತವ್ಯವು. ಈ ಬಗ್ಗೆ ಜನರಾದರೂ ರಾಷ್ಟ್ರೀಯ ಶಿಕ್ಷಣದ ಮಹತ್ವವನ್ನು ಚನ್ನಾಗಿ ಅರಿತು ಸ್ವರಾಜ್ಯಸಂಪಾದನೆಗೆ ಅವು ಅವಶ್ಯವಾದವುಗಳೆಂಬುದನ್ನು ಸ್ಮರಣೆಗೆ ತಂದು ತಮ್ಮ ಮಕ್ಕಳನ್ನೆಲ್ಲ ಆ ಶಾಲೆಗಳಿಗೆ ಕಳಿಸಲಿಕ್ಕೆ ಸಿದ್ಧರಾಗಬೇಕು. ಈ ಬಗ್ಗೆ "ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಮಿತಿ"ಯನ್ನು ಸ್ಥಾಪಿಸುವ ಕುರಿತು ವಿಜಾಪುರದಲ್ಲಿ ಕೂಡಿದ ಪ್ರಾಂತಿಕ ಕಾಂಗ್ರೆಸಕಮಿಟಿಯಲ್ಲಿ ನಿರ್ಣಯವಾಗಿದ್ದು, ಆ ನಿರ್ಣಯದಂತೆ, ಆ ಸಮಿತಿಯ ಘಟನೆ ನಿಯಮ ಮುಂತಾದವುಗಳೆಲ್ಲ ತಯಾರಮಾಡಲ್ಪಟ್ಟಿದ್ದು ಮಂಜೂರಿಗಾಗಿ ಈ ಸಾರೆಯ ಅಧಿವೇಶನದಲ್ಲಿ ಬರುತ್ತವೆ. ಆ ಪ್ರಶ್ನೆಯನ್ನು ಸಂಪೂರ್ಣವಾಗಿ ಚರ್ಚಿಸಿ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ವ್ಯವಸ್ಥೆಯನ್ನು ಈ ಸಾರೆ ಮಾಡಬೇಕೆಂದು ನಮ್ಮ ಆಗ್ರಹದ ಸೂಚನೆಯು.

ಬ್ರಾಹ್ಮಣ ಬ್ರಾಹ್ಮಣೇತರ ವಾದವಾದರೂ ಮಹತ್ವದ್ದಿದ್ದು ಆ ಬಗ್ಗೆ ಸಹ ಪ್ರಾಂತಿಕ ಕಮಿಟಿಯವರು ವಿಚಾರಮಾಡಬೇಕು. ಆದರೆ ಆ ಪ್ರಶ್ನೆಯನ್ನು ನಾವು ಸದ್ಯಕ್ಕೆ ಚರ್ಚಿಸುವದಿಲ್ಲ.

ಈ ಪ್ರಕಾರ ಖಾದೀ ಮತ್ತು ರಾಷ್ಟ್ರೀಯ ಶಿಕ್ಷಣ ಇವೆರಡು ಪ್ರಶ್ನೆಗಳನ್ನು ನಾವು ಚನ್ನಾಗಿ ಬಿಡಿಸಿದರೆ ಮಾತ್ರ ಕರ್ನಾಟಕವು ಅಸಹಕಾರದ ಮುಂದಿನ ಕಾರ್ಯಕ್ರಮಕ್ಕೆ ಅರ್ಹವಾಗುವದು. ಇಲ್ಲವಾದರೆ ಕರ್ನಾಟಕವು ಹಿಂದೆ ಬಿದ್ದು ರಾಷ್ಟ್ರದ ಏಳಿಗೆಗೆ ಅಡ್ಡಬರುವದು. ಆದ್ದರಿಂದ ಈ ಎರಡೂ ಪ್ರಶ್ನೆಗಳನ್ನು ಚನ್ನಾಗಿ ಬಿಡಿಸಬೇಕೆಂದು ಪುನಃ ಪುನಃ ಪ್ರಾರ್ಥಿಸುವೆವು.

---

## ಟಿಪ್ಪಣಿಗಳು

**ಕನ್ನಡ ನಾಡಿಗೆ ದೈನಿಕದ ಕೊರತೆ**

ದೇ. ಛ. ಆಲೂರ ಇವರ ಲೇಖನವನ್ನು ಕಳೆದ ಸಂಚಿಕೆಯಲ್ಲಿ ಪ್ರಸಿದ್ಧಿಸಿದ್ದೆವು. ಅದರಲ್ಲಿಯ ಸೂಚನೆಗಳೆಲ್ಲ ಮನನೀಯವಾಗಿರುವವು. ಅಖಂಡ ಕರ್ನಾಟಕಕ್ಕೆ ಆದರ್ಶಭೂತವಾದ ಒಂದು ದೈನಿಕವು ಬೇಕು. ದೈನಿಕವಿಲ್ಲದೆ ನವಜಾಗೃತಿಯ ಪ್ರಸಾರವು ಕರ್ನಾಟಕದಲ್ಲಿ ಆಗುವದು ತೀರ ಅಸಂಭವವಾದದ್ದು. ಈ ಬಗ್ಗೆ ಹಿಂದಕ್ಕೆ ಶ್ರೀಯುತ ವೆಂಕಟರಾವ ಇವರು ಕೆಲವು ದಿವಸಗಳ ವರೆಗೆ ಪ್ರಯತ್ನ ಮಾಡಿದರು. ಆದರೆ ಕನ್ನಡಿಗರ ದುರ್ದೈವದಿಂದ ಆ ಕಾಲಕ್ಕೆ ಅವರಿಗೆ ಯಶಸ್ಸು ದೊರೆಯಲಿಲ್ಲ. ಆದರೆ ಇನ್ನು ಮೇಲೆ ಅವರು ಈ ಕಾರ್ಯವನ್ನು ಆನಂದದಿಂದ ಸ್ವೀಕರಿಸುವರೆಂದು ಹೇಳುವ ಧಾರ್ಷ್ಟ್ಯವನ್ನು ನಾವು ಮಾಡುವೆವು. ಕೇವಲ ಹಣದ ಕೊರತೆಯೊಂದೇ ಅಡ್ಡವಾಗಿದೆ. ಕರ್ನಾಟಕಸ್ಥರೆಲ್ಲ ಕಲೆತು ದೊಡ್ಡದೊಂದು ಕಂಪನಿಯನ್ನು ಸ್ಥಾಪಿಸಿ, ಅದರ ಮುಖಾಂತರವಾಗಿ ದೈನಿಕ ಪತ್ರದ ಏರ್ಪಾಡು ಮಾಡಿದರೆ ಮಾತ್ರ ಕರ್ನಾಟಕವು ಜಾಗೃತವಾಗುವ ಸಂಭವವಿದೆ. ಆದ್ದರಿಂದ ಇತ್ತ ಕಡೆಗೆ ಎಲ್ಲ ಕನ್ನಡಿಗರೂ ಅವಶ್ಯವಾಗಿ ಲಕ್ಷ್ಯ ಕೊಡಬೇಕೆಂದು ವಿನಂತಿಯಿದೆ.

# ಮಹಾತ್ಮರನ್ನು ಕರ್ನಾಟಕಕ್ಕೆ ತರುವರೆ?

ಬಳ್ಳಾರಿಯಲ್ಲಿ ಒಂದು ಸ್ವತಂತ್ರವಾದ ಬಂಗ್ಲೆಯನ್ನು ಸರಕಾರದವರು ನೋಡಿರುವರೆಂದೂ ಮಹಾತ್ಮರನ್ನು ಅಲ್ಲಿ ತಂದಿಡುವರೆಂದೂ ಕೇಳುತ್ತೇವೆ. ಸುದ್ದಿಯು ನಿಜವಾಗುವದೋ ಹೇಗೆ ನೋಡಬೇಕು

**ಕರ್ನಾಟಕ ವಾರ್ತಾ ಪ್ರಸಾರಕ ಸಂಘ**

ದೇ. ಭ. ಡಾ. ಹರ್ಡೀಕರ ಇವರ ನೇತೃತ್ವದ ಕೆಳಗೆ ಈ ಸಂಘವು ಸ್ಥಾಪಿತವಾಗಿತ್ತೆಂಬ ಸಂಗತಿ, ಆ ಬಗ್ಗೆ ನಮ್ಮ ಕಡೆಗೆ ಬಂದು ಬಂದ ಲೇಖವನ್ನು ಬೇರೆ ಕಡೆಯಲ್ಲಿ ಪ್ರಸಿದ್ಧಿಸಿದ್ದೇವೆ. ಆ ಪತ್ರವನ್ನು ಓದಲು ಮನಸ್ಸಿಗೆ ವಿಷಾದವೆನಿಸದೆ ಇರಲಾರದು. ಆದರೆ ಈ ಒಗೆಯಾಗಿ ಕನ್ನಡಿಗರಲ್ಲಿ ಜಾಗ್ರತೆಯೇಕೆ ಕಡಿಮೆ ಬರುತ್ತದೆಂಬ ಪ್ರಶ್ನೆ ನಮ್ಮನ್ನು ನಮ್ಮ ಕಣ್ಣೆದುರಿಗೆ ಬಂದು ನಿಲ್ಲುವದು. ಕರ್ನಾಟಕದಲ್ಲಿ ಯಾವ ತರದಿಂದ ದೇಶಸೇವೆಯನ್ನು ಮಾಡಹೋದರೂ ಜಗುವ ದೊರೆಯುವದಿಲ್ಲ. ಸಾಹಿತ್ಯ ಪರಿಷತ್ತಿನ ಅನುಭವವನ್ನು ವಿಚಾರಿಸಿರಿ ಅಲ್ಲಿಯೂ ಇದೇ ಸ್ಥಿತಿ. ಕರ್ನಾಟಕ ವಿದ್ಯಾವರ್ಧಕ ಸಂಘದ ಕಡೆಗೆ ನೋಡಿರಿ; ಅಲ್ಲಿಯೂ ಅದೇ ಅವಸ್ಥೆಯು. ಮಹತ್ವದ ರಾಜಕೀಯ ವಿಷಯದಲ್ಲಿಯೂ ಕೂಡ ಜಾಡ್ಯವು. ಈ ಹೊತ್ತಿಗೆ ಕಾಂಗ್ರೆಸ್ಸಿನ ಕೆಲಸವು ನಡೆವ ಕರ್ನಾಟಕದಲ್ಲಿ ಯಾವ ಪ್ರಮಾಣದಿಂದಾಗಿದೆ? ತಾವು ಸ್ವತಃ ತಂತಮ್ಮ ಕಿರಿಯನ್ನು ನೀಗಿಸಿಕೊಳ್ಳುವಷ್ಟು ಶಕ್ತಿಯೋ ಕನ್ನಡಿಗರಲ್ಲಿ ಇಲ್ಲವೆಂದೆನ್ನೋಣ. ಆದರೆ ಈ ತಂಪಾಗಿರುವ ಸ್ಥಿತಿಗೆ ಬೇರೆ ಬಗೆಯ ಕಾರಣವೇನು?

ಇದೊಂದು ಕರ್ನಾಟಕಕ್ಕೆ ಅತಿ ದೊಡ್ಡ ಪ್ರಶ್ನೆಯಾಗಿದೆ. ಈ ಪ್ರಶ್ನೆಯನ್ನು ಬಿಡಿಸಲು ಒಂದೆಂದರೆ ಒಂದೇ ಮಾರ್ಗವಿದೆ. ಆ ಮಾರ್ಗವನ್ನು ಬಿಟ್ಟರೆ ಎರಡನೇ ಮಾರ್ಗವೇ ಇಲ್ಲ. ಆ ಮಾರ್ಗವೆಂದರೆ ಪ್ರತಿಯೊಬ್ಬ ಕನ್ನಡಿಗನಿಗೆ ಕರ್ನಾಟಕದ ಬಗ್ಗೆ ಜಾಗೃತಿ ಹುಟ್ಟಿಸುವದೇ ಸರಿ. ಅಖಂಡ ಕರ್ನಾಟಕದ ಜ್ಞಾನವು ಅವರಲ್ಲಿ ನೆರೆಯಬೇಕು. ಕರ್ನಾಟಕವೆಂದರೆ ಹಿಂದುಸ್ಥಾನದಲ್ಲಿ ಮುಖ್ಯವಾದ ಭಾಗವಿದೆ, ಮತ್ತು ಅದು ಒಂದು ಸ್ವತಂತ್ರವಾದ ಪ್ರಾಂತವಿದೆಂಬ ಅರಿವು ಮೊದಲು ಕನ್ನಡಿಗರಲ್ಲಿ ಉಂಟಾಗಬೇಕು. ಈಗ್ಗೆ ತುಂಡುತುಂಡಾದ ಕರ್ನಾಟಕವು ಒಂದೇ ಇದೆ. ಕನ್ನಡಿಗರು ಓರ್ವ ಮಾತೆಯ ಪುತ್ರರೆಂಬದು ಚೆನ್ನಾಗಿ ಎಲ್ಲರಿಗೂ ಗೊತ್ತಾಗಬೇಕು. ಸ್ವಲ್ಪದರಲ್ಲಿ ಹೇಳಬೇಕಾದರೆ ಕರ್ನಾಟಕತ್ವವು ಪ್ರತಿಯೊಬ್ಬ ಕನ್ನಡಿಗನ ಹೃದಯದಲ್ಲಿ ಒಳನಟ್ಟಿರಬೇಕು. ಅಂದರೆ ಮಾತ್ರ ಕರ್ನಾಟಕದ ಸಾರ್ವಜನಿಕ ಕಾರ್ಯವು ಚೊಕ್ಕಟವಾಗಿ ಆಗಬಲ್ಲದು. ಆದ್ದರಿಂದ ಡಾ. ಹರ್ಡೀಕರರು ಅಖಂಡ ಕರ್ನಾಟಕದ ಜಾಗೃತಿಯು ಕನ್ನಡಿಗರಲ್ಲಿ ಹುಟ್ಟುವಂತೆ ಪ್ರಸಾರ ಮಾಡುವ ಕೆಲಸ ಮಾಡಬೇಕೆಂದು ಸೂಚಿಸುತ್ತೇವೆ

ಕರ್ನಾಟಕತ್ವವು ಪ್ರತಿಯೊಬ್ಬ ಕನ್ನಡಿಗನಲ್ಲಿ ಹರಡಿಕೊಳ್ಳುವಂತೆ ಪ್ರಯತ್ನಿಸಲು ಅನೇಕ ಮಾರ್ಗಗಳಿವೆ. ಕರ್ನಾಟಕದ ಏಕೀಕರಣದ ಬಗ್ಗೆ ಪ್ರಯತ್ನ ನಡೆದರೆ ಸರ್ವ ಪ್ರಾಂತೀಯ ಬಂಧುಗಳೂ ನಮ್ಮ ಸಂಗಡ ಕೆಲಸ ಮಾಡಲು ಮುಂದೆ ಬರುವರು. ಆದ್ದರಿಂದ ಧಾರವಾಡದ "ಕರ್ನಾಟಕ ಸಭೆ" ಯಂಥ ಸಂಸ್ಥೆಯು ಪ್ರಾಂತಿಕ ಪ್ರಯತ್ನ ಮಾಡುವದು ಮೊದಲನೇ ಮಾರ್ಗವು. ಕನ್ನಡನಾಡಿನಲ್ಲಿ ನೇಕಾರಿಕೆಯ ಮೊದಲನೇ ಮಾರ್ಗವು, ಕನ್ನಡನಾಡಿನಲ್ಲಿ ನೇಪಥ್ಯದ ವೈಸಿಕವನ್ನು ತೆಗೆಯುವದು ಮತ್ತೊಂದು ಮಾರ್ಗವು. ಇದರಂತೆ ಇನ್ನೂ ಅನೇಕ ಮಾರ್ಗಗಳಿವೆ. ಆದರೆ ಸಧ್ಯಕ್ಕೆ ಸ್ಥಳಾಭಾವದ ಮೂಲಕ ಇಲ್ಲಿಗೆ ನಿಲ್ಲಬೇಕಾಗಿದೆ.

---

**ಭಾರತಭೂಷಣ ಮಾಲವೀಯರು.**

(ನವಜೀವನ.)

ಶ್ರೀ ಮಾಲವೀಯಜಿಯವರ ದೇಶಭಕ್ತಿಯ ಪ್ರಶಂಸೆಯನ್ನು ಮಹಾತ್ಮಾಜಿಯವರು ಎಷ್ಟೋಸಾರೆ ಮಾಡಿರುವರು. ಅವರ ಹೃದಯವು ಕೋಮಲವದೆ. ಇಂಗ್ಲಿಷರ ರಾಜ್ಯದಿಂದ ಹಿಂದುಸ್ಥಾನಕ್ಕೆ ಭಯಂಕರ ಹಾನಿಯು ತಟ್ಟಿರುವದೆಂಬದನ್ನು ಅವರು ಮನ್ನಿಸುತ್ತಾರೆ. ಆದರೂ ಅಪರಗೂಡ ಸಂಪೂರ್ಣವಾಗಿ ಅಸಹಯೋಗವನ್ನು ಮಾಡುವದು ಕಠೋರ ಕೃತ್ಯವೆಂದು ಮಾಲವೀಯರು ತಿಳಿಯುವರು. ಮತ್ತು ಇದೇ ಕಾರಣದಿಂದ ಅವರು ಅಸಹಯೋಗ ಕಾರ್ಯಕ್ರಮದಲ್ಲಿಯ ಕೆಲವು ಭಾಗಗಳಬಗ್ಗೆ ಮತಭೇದವನ್ನು ತಾಳಿರುವರು. ಆದಾಗ್ಯೂ ರಾಷ್ಟ್ರಸೇವೆಯನ್ನು ಮಾಡಲಿಕ್ಕೆ ಅವರು ಯಾವಾಗಲೂ ತತ್ಪರರಿರುವರು. ಅವರ ಅಂತಃಕರಣವು ನಿರ್ಮಲವೂ, ವಾಣಿಯು ಒಳ್ಳೇ ಮನೋಹರವೂ ಇರುವವು. ಅವರ ಪ್ರೀತಿಯ ಪುತ್ರರೂ, ಅಲ್ಲದೆ ಮಕ್ಕಳೂ ಈಗ ಕಾರಾಗೃಹವಾಸಿಗಳಿರುವರು. ಅವರು ತುರಂಗದಲ್ಲಿ ಹೋದಮೇಲೆ ಪಂಡಿತಜಿಯವರು ಬರೆದ ಸುಂದರ ಪತ್ರವನ್ನು ವಾಚಕರು ಮರೆತಿರಲಿಕ್ಕಿಲ್ಲ. ಮತಭೇದವಿದ್ದರೂ, ಅವರು ಮವಾಳ ಪಕ್ಷದವರಂತೆ ಮಹಾಸಭೆಯನ್ನು ಬಿಟ್ಟುಕೊಟ್ಟು ಹೋಗಿಲ್ಲ. ಆದರೆ ಯಾವಯಾವ ವಿಷಯಗಳಬಗ್ಗೆ ತಮಗೂ ಮಹಾಸಭೆಯ ಮತೈಕ್ಯವಾಗುವದೋ ಆ ಆ ಸಂಗತಿಗಳ ಸಂಬಂಧವಾಗಿ ಮಹಾಸಭೆಯವರಗೂಡ ಕೆಲಸ ಮಾಡಲಿಕ್ಕೆ ಅವರು ಯಾವಾಗಲೂ ಸಿದ್ಧರಿರುವರು. ಇದೇ ಅವರ ಚರಿತ್ರದಲ್ಲಿಯ ರಹಸ್ಯವು. ಈ ಹಿಡಿತವು ಮವಾಳಪಕ್ಷದವರಲ್ಲಿದ್ದರೆ, ಈ ಹೊತ್ತು ಹಿಂದುಸ್ಥಾನದ ಜನರು ಶಿರಬೊಗ್ಗಿಸಿ ನಡೆಯುವ ಪ್ರಸಂಗ ಬರುತ್ತಿದ್ದಿಲ್ಲ.

ಬಾರಡೋಲಿಯ ನಿರ್ಣಯವಾದಂದಿನಿಂದಂತೂ ಅವರು ಮಹಾಸಭೆಯ ವಿಧಾಯಕ ಕಾರ್ಯಕ್ರಮದಬಗ್ಗೆ ಸಂಪೂರ್ಣವಾಗಿ ಸಂಮತಿಸಿರುವರು. ಆಮೇಲೆ ಮಹಾತ್ಮಾಜಿಯವರು ಯಾವಾಗ ಕಾರಾಗೃಹವಾಸವಾದಮೇಲೆ ಅವರಿಗೆ ತಮ್ಮ ಭಾರವು ಬಹಳೇ ಹೆಚ್ಚಾಗಿರುವದೆಂದು ಅನಿಸಹತ್ತಿದೆ. ಮತ್ತು ಅಂದಿನಿಂದ ಅವರು ಆ ವಿಧಾಯಕ ಕಾರ್ಯಕ್ರಮವನ್ನು ಪೂರ್ಣಮಾಡುವದರಲ್ಲಿ ಅವಿಶ್ರಾಂತ ಪರಿಶ್ರಮವನ್ನು ಮಾಡಹತ್ತಿದ್ದಾರೆ. ಪಂಜಾಬದ ಆರ್ತನಾದವನ್ನು ಕೇಳಿ, ಅವರು ಪುನಃ ಮೊದಲನೆ ಆದರ ಸೇವೆಯನ್ನು ಮಾಡಲಿಕ್ಕೆ ಆತುರರಾಗಿ ಅಲ್ಲಿಗೆ ಹೋಗಿದ್ದಾರೆ. ಮತ್ತು ಈ ಹೊತ್ತು ಲಾಹೋರ, ನಾಳೆ ಅಮೃತಸರ, ನಾಡದು ಸಿಯಾಲಕೋಟ, ಈ ಪ್ರಕಾರವಾಗಿ ಲಾಯಲಪೂರ, ವಜೀರಾಬಾದ, ಗುಜರಾನವಾಲಾ ಮೊದಲಾದ ಪಂಜಾಬದ ಎಲ್ಲ ದೊಡ್ಡ ದೊಡ್ಡ ಶಹರಗಳಿಗೆ ಹೋಗಿ ಹೋಗಿ ಅಲ್ಲಿಯ ದುಃಖಿತರ ಸಾಂತ್ವನೆಯನ್ನು ಮಾಡಿಬಂದಿರುವರು.

ಈ ಹೊತ್ತು ಅವರು ಸ್ವದೇಶೀ, ಎಲ್ಲ ಜಾತಿಗಳಲ್ಲಿ ಐಕ್ಯ, ಅಹಿಂಸೆ ಇವುಗಳ ಪ್ರಚಾರದ ಸಲುವಾಗಿ ತಮ್ಮ ಶಕ್ತಿಮೀರಿ ಪ್ರಯತ್ನಿಸಹತ್ತಿದ್ದಾರೆ. ಜನರಿಗೆ ಮಹಾಸಭೆಯ ಸಭಾಸದರಾಗಲಿಕ್ಕೂ, ಟಿಳಕ ಸ್ವರಾಜ್ಯನಿಧಿಗೆ ರೊಕ್ಕವೆಲ್ಲ ದಾನಮಾಡಲಿಕ್ಕೂ, ಭಿನ್ನ ಭಿನ್ನ ಪಂಗಡದವರಗೂಡ ಐಕ್ಯವನ್ನು ಬೆಳೆಸಲಿಕ್ಕೂ ಅವರು ಉಪದೇಶಿಸಹತ್ತಿದ್ದಾರೆ

ಶ್ರೀ ಮಾಲವೀಯರು ಈ ಸಮಯದಲ್ಲಿ ದೇಶಸೇವೆಯೊಳಗೆ ಅಂತಃಕರಣದಿಂದ ತತ್ಪರರಾಗಿರುವಾಗ, ಎರಡನೇಕಡೆಗೆ ಕಾರ್ಯಕ್ರಮದಲ್ಲಿ ಬದಲು ಮಾಡಿಸಬೇಕೆಂಬದಾಗಿಯೂ ಕೌನ್ಸಿಲಗಳಲ್ಲಿ ಸೇರಬೇಕೆಂಬದಾಗಿಯೂ ನಡೆದ ವಾದವಿವಾದದಕಡೆಗೆ ಅವರ ಲಕ್ಷ್ಯವು ಕೂಡ ಬಿದ್ದಿಲ್ಲ. ಈಗ "ಪಿಷ್ಟಪೇಷಣ" "ಹಾಡಿದ್ದೆ ಹಾಡೋ ಕಿಸಬಾಯಿ ದಾಸಾ" ಮಾಡುವ ಸಮಯವಲ್ಲೆಂಬದನ್ನು ಅವರು ಚೆನ್ನಾಗಿ ಕಂಡು ಹಿಡಿದಿರುವರು. ರಾಷ್ಟ್ರದ ನಿಜವಾದ ಹಿತಚಿಂತಕರು ಈ ವೇಳೆಯಲ್ಲಿ ಮನಃಪೂರ್ವಕವಾಗಿ ರಚನಾತ್ಮಕ ಕಾರ್ಯದಲ್ಲಿ ಸಹಾಯ ಮಾಡಬೇಕು. ಮಾಲವೀಯರ ಭಾಷಣದ ಕೆಲವು ಭಾಗವನ್ನು ಕೆಳಗೆ ಕೊಟ್ಟದ್ದು ಅದರಿಂದ ಅವರ ಹೃದಯದ ವ್ಯಾಕುಲತೆಯು ಸ್ಪಷ್ಟವಾಗಿ ಒಡೆದು ಕಾಣುತ್ತದೆ.

"ಮಹಾತ್ಮರನ್ನು ಬಂದಿಯಲ್ಲಿರಿಸಿದ್ದರಿಂದ ತಾವು ಹತೋತ್ಸಾಹಿಗಳಾಗಿರುವರೆಂಬದು ನನಗೆ ತಿಳಿಯುತ್ತದೆ. ಆದರೆ ಈ ನಿಮ್ಮ ದುರವಸ್ಥೆಯನ್ನು ನೋಡಿ ನನಗೆ ಬಹಳೇ ಖೇದವಾಗುತ್ತದೆ. ಮತ್ತು ನಿಮ್ಮಲ್ಲಿಯ ಆಲಸ್ಯವೃತ್ತಿಯನ್ನು ಕಂಡು ನನಗಾಗುವಷ್ಟು ದುಃಖವ ನನ್ನ ಎದೆಯಲ್ಲಿ ಭಾಲೆಯನ್ನು ಚುಚ್ಚಿದರೂ ಆಗುವದಿಲ್ಲ. ನಮ್ಮ ಹೃದಯದೊಡೆಯರಾದ ಮಹಾತ್ಮರಿಂದ ನಮ್ಮನ್ನು ಅಗಲಿಸಿ ಬಿಟ್ಟದ್ದರೊಳಗೂಡ ನಾವು ಮತ್ತಿಷ್ಟು ಸುಸಂಘಟಿತರಾಗಿ ತನುಮನಗಳಿಂದ ಕಾರ್ಯವನ್ನು ಮಾಡಲಿಕ್ಕೆ ಶಕ್ತರಾಗಬಾರದೆನ್ನುವದು ಬಹಳೇ ಲಾಂಛನ ಸ್ಪದವಾಗಿದೆ. ಅವರಿಂದಲೇ (ಮಹಾತ್ಮರಿಂದ) ಹಿಂದುಸ್ಥಾನದಲ್ಲಿ ಇಷ್ಟು ಜಾಗೃತಿಯು ತೋರಿಬರುತ್ತದೆ. ನಾವು ಅವರನ್ನು ಸನ್ಮಾನಮಾಡುವದಂತೂ ಒತ್ತಟ್ಟಿಗಿರಲಿ, ಅವರಬಗ್ಗೆ ಭಕ್ತಿಯನ್ನಾದರೂ ವ್ಯಕ್ತಮಾಡಬೇಕು; ಮತ್ತು ಅವರು ಜೇಲಿನಲ್ಲಿ ಹೋಗುವದರಿಂದ ಅಪೂರ್ಣವಾದ ಕೆಲಸವನ್ನು ಪೂರ್ಣಮಾಡಲಿಕ್ಕೆಬೇಕು. ಹಾಗೂ ಮುಂದೆ ಅವರು ಹೇಳಿದಂತೆ ತನುಮನಧನದಿಂದ ಕರ್ತವ್ಯದಲ್ಲಿ ಮಗ್ನರಾದರೆ ನಾವು ತೀವ್ರದಲ್ಲಿಯೇ ಸ್ವತಂತ್ರರಾಗುವೆವೆಂದು ನನಗೆ ವಿಶ್ವಾಸವುಂಟು.

## ಕರ್ನಾಟಕ ವಾರ್ತಾಪ್ರಸಾರಕ ಸಂಘ

ಕರ್ನಾಟಕ ಪ್ರಾಂತದಲ್ಲಿ ಒಂದು ವಾರ್ತಾ ಪ್ರಸಾರಕ ಸಂಘವನ್ನು ತೆಗೆಯಬೇಕೆಂದು ಗೊತ್ತುಮಾಡಿದ್ದು, ಈ ಮೊದಲೇ ವರ್ತಮಾನಪತ್ರಗಳಲ್ಲಿ ಪ್ರಸಿದ್ಧವಾಗಿದ್ದ ಲೇಖಗಳಿಂದ ಎಲ್ಲರಿಗೂ ತಿಳಿದಿರಬಹುದು. ಆ ಲೇಖಗಳಲ್ಲಿ ಇಂಥ ಸಂಘಗಳ ಸ್ಥಾಪನೆಗಿರುವ ಅವಶ್ಯಕತೆಯನ್ನೂ, ಅದರಿಂದಾಗುವ ಲಾಭಗಳನ್ನೂ, ಅದಕ್ಕೆ ಅವಶ್ಯವಾದ ಜನಸಹಾಯವನ್ನೂ, ಕುರಿತು ವಿವೇಚಿಸಲ್ಪಟ್ಟಿದ್ದು ಇವತ್ತಿನವರೆಗೆ ಈ ಸಂಘವನ್ನು ಸ್ಥಾಪಿಸುವ ಕುರಿತು ಮಾಡಿದ ಪ್ರಯತ್ನಗಳ ಇತಿಹಾಸವನ್ನು ಕೇಳುವ ಜನರಿಗೆ ವಿಷಾದವೆನಿಸದಿರಲಾರದು.

ಈ ಸಂಘದ ಕಾರ್ಯವು ಇದೇ ವರುಷ ಫೆಬ್ರುವರಿ ತಿಂಗಳಲ್ಲಿ ಪ್ರಾರಂಭವಾಯಿತು. ಎಲ್ಲಕ್ಕೂ ಮೊದಲು ಕರ್ನಾಟಕದೊಳಗಿನ ಎಲ್ಲ ವರ್ತಮಾನ ಪತ್ರಗಳಲ್ಲಿ ಈ ಸಂಘದ ಉದ್ದೇಶಗಳನ್ನು ಪ್ರಸಿದ್ಧಿಸುವ ಕುರಿತು ವಿನಂತಿಯನ್ನು ಮಾಡಿಕೊಂಡಿತು. ಅದರಂತೆ ಅವರೆಲ್ಲ ಅವುಗಳನ್ನು ಪ್ರಕಟಿಸಿದರು. ಅದರಲ್ಲಿ ಜನರು ಯಾವರೀತಿಯಿಂದ ಸಂಘಕ್ಕೆ ಸಹಾಯಮಾಡಬೇಕೆಂದು ಸೂಚಿಸಿದ್ದೆವೋ ಅದರಂತೆ ಯಾರೂ ಮಾಡದ್ದರಿಂದ ಎರಡನೇ ಉಪಾಯವಾಗಿ [illegible] ರೀತಿಯಿಂದ ಪ್ರಯತ್ನಿಸಬೇಕೆಂಬ ವಿಚಾರ ಬಂದಿತು. ಕೂಡಲೇ ಎಲ್ಲ ಜಿಲ್ಹಾ ಕಾಂಗ್ರೆಸ್ ಕಮಿಟಿಗಳಿಗೆ ತಮ್ಮ ಜಿಲ್ಹೆಯಲ್ಲಿಯ ಎಲ್ಲ ತಾಲೂಕಾ ಮತ್ತು ಗ್ರಾಮ ಕಾಂಗ್ರೆಸ್ ಸಂಸ್ಥೆಗಳ ಹೆಸರುಗಳನ್ನು ತಿಳಿಸಲಿಕ್ಕೆ ಬಿನ್ನವಿಸಿದೆವು. ಆ ಪ್ರಕಾರ ಧಾರವಾಡ ಬೆಳಗಾಂವ ವಿಜಾಪೂರ ಜಿಲ್ಹೆಗಳವರು ತಮ್ಮಲ್ಲಿದ್ದ ಕಮಿಟಿಗಳ ಹೆಸರುಗಳನ್ನು ತಿಳಿಸಿದರು. ಈ ಎಲ್ಲ ಕಮಿಟಿಗಳಿಗೂ ಕೆಲವು ಮಿತ್ರರಿಗೂ ಖಾಸಗೀ ರೀತಿಯಿಂದ ಪತ್ರಗಳನ್ನು ಹಾಕಿ ಸುದ್ದಿಯನ್ನು ಆದಷ್ಟು ತಿಳಿಸಲಿಕ್ಕೆ ಬರೆದೆವು. ಈ ಮೂರು ಜಿಲ್ಹೆಗಳಲ್ಲದೆ ಕಾರವಾರ, ಮಂಗಳೂರ ಬಳ್ಳಾರಿಯವರೂ ಸಹ ತಮ್ಮಲ್ಲಿದ್ದ ಕಮಿಟಿಗಳ ಹೆಸರುಗಳನ್ನು ತಿಳಿಸದಿದ್ದರೂ ನಮಗೆ ಗೊತ್ತಿದ್ದ ಮಟ್ಟಿಗೆ ಜಿಲ್ಹೆಯವರಿಗೂ ಮತ್ತು ಮೈಸೂರ, ಕೊಡಗು ಮುಂತಾದ ಊರವರಿಗೂ ಪತ್ರಗಳನ್ನು ಹಾಕಿದೆವು. ಬಳ್ಳಾರಿಯವರೊಬ್ಬರೇ ಎರಡು ಮೂರು ಸಲ ತಮ್ಮಲ್ಲಿಯ ಸಾಧಾರಣ ಮಾಹಿತಿಯನ್ನು ಕಳಿಸಿ ಕೊಟ್ಟಿರುವರು. ಮೈಸೂರಿನವರು ಒಂದೆರಡು ಸಹಾನುಭೂತಿ ತೋರುವ ಪತ್ರಗಳನ್ನು ಹಾಕಿದರು. ಎಲ್ಲ ಜಿಲ್ಹಾ ಕಾಂಗ್ರೆಸ್ ಕಮಿಟಿಯವರು ಮಾತ್ರ ಒಂದೊಂದು ಪತ್ರವನ್ನು ಹಾಕುತ್ತಾರೆ.

ಈ ಪ್ರಾಂತದೊಳಗಿನವರಿಗೆಲ್ಲ ಈ ಸಂಘದ ವತಿಯಿಂದ ಎಷ್ಟೋ [illegible] ಪತ್ರಗಳನ್ನು ಹಾಕಿರುವೆವು. ಪ್ರತ್ಯುತ್ತರವೆಂದು ಒಂದು ಹತ್ತಾರ ಪತ್ರಗಳು ಸಹ ಬಂದಿಲ್ಲ. ಇನ್ನು ಮೇಲೆ ಬರುವ ಆಶೆಯೂ [illegible] ಇಲ್ಲ. ಈ ರೀತಿಯಾಗಿ ಎರಡೂ ಪ್ರಯತ್ನಗಳಿಗೆ ಯಶ ದೊರೆ[redacted] ಇಷ್ಟರಿಂದಲೇ ಹತಾಶರಾಗಿ ಸುಮ್ಮನೆ ಕೂಡುವ[redacted]ಯೋಗ್ಯವಲ್ಲ. ಮತ್ತೊಂದಾವುದಾದರೂ ಉಪಾಯವನ್ನು ಶೋಧಿಸಿ ಪ್ರಯತ್ನ ಮಾಡಬೇಕಾಗಿರುವದು. ಅದನ್ನು ಆದಷ್ಟು ತೀವ್ರವೇ ಮುಂದೆ ಪ್ರಕಾಶನದಲ್ಲಿ ಕಾಣಬಹುದು. ಮೇಲಿನ ಸಂಗತಿಯಿಂದ ಕರ್ನಾಟಕದಲ್ಲಿಯ ಜನತೆಯು ಎಷ್ಟು ಜಾಗೃತವಾಗಿರುತ್ತದೆಂಬುವದು ಕಂಡುಬರುತ್ತದೆ. ಇದು ಕರ್ನಾಟಕಸ್ಥ ಜನರು ವಿಚಾರಮಾಡುವಂಥ ಸಂಗತಿಯಾಗಿರುತ್ತದೆ. ಇದರ ಕಡೆಗೆ ಅಲಕ್ಷ್ಯಮಾಡಿದರೆ ಬಹಳ ಹಾನಿಯಾಗುವದು. ಸದ್ಯಕ್ಕೆ ಇಂಥ ಸುಸಂಧಿಯಲ್ಲೇ ಈ ಸಂಘವನ್ನು ಪುನರುದ್ಧರಿಸುವ ವಿಚಾರವಿರುವದು. ಇದನ್ನು ಪ್ರಾರಂಭಿಸುವದು ಅಥವಾ ಬಿಟ್ಟುಬಿಡುವದು [illegible] ಎಲ್ಲ ಕರ್ನಾಟಕ ಮಾತೆಯ ಸುಪುತ್ರರೆನಿಸಿಕೊಳ್ಳುವವರ ಕೈಯಲ್ಲಿ ಇರುತ್ತದೆ. ಎಲ್ಲರೂ ಇದಕ್ಕೆ ಸಹಾಯವನ್ನು ಮಾಡಿದರೆ— ಸಹಾಯವೆಂದರೆ ಈ ಸಂಘಕ್ಕೆ ಆಗಾಗ್ಗೆ ನಿಜವಾದ ಮತ್ತು ತಾಜಾ ಸುದ್ದಿಗಳನ್ನು ಪೂರೈಸಿ ಕೊಡುವದು — ಒಂದು ದೇಶೋದ್ಧಾರದ ಕೆಲಸವನ್ನು ಮಾಡಿದಂತಾಗುತ್ತದೆಂಬುದು ಅದಕ್ಕೆ ಏನೂ ಅಡ್ಡಿ ಇಲ್ಲ. ಹಿಂದುಸ್ಥಾನದಲ್ಲಿಯ ಇತರ ಪ್ರಾಂತಗಳು ಮುಂದಕ್ಕೆ ಬಂದಿರುವ ಸಮಯದಲ್ಲಿ ನಾವೆಲ್ಲರು ಹೀಗೆಯೇ ಕೈಕಟ್ಟಿ ಕೂಡುವದು ಉಚಿತವೇ? ಎಲ್ಲರಿಗೂ ವಿದಿತವಾಗಿರುವ ಸು[illegible]ನೆ ನಾವು ಆಲಸದಲ್ಲಿ ಕಾಲಹರಣ ಮಾಡುವದು ದೇಶದ್ರೋಹವಲ್ಲವೆ? ಈ ಪ್ರಾಂತದಲ್ಲಿ ಇಂಥ ವಾರ್ತಾಪ್ರಸಾರಕ ಸಂಘಗಳ ಅವಶ್ಯಕತೆಯು ಇದುವರೆಗೆ ಇಲ್ಲವೋ ಎಂಬದನ್ನು ವಿಚಾರ ಮಾಡತಕ್ಕದ್ದು. ಅವು ಬೇಕಾಗುವವೆಂದು ನಿಮ್ಮ ಮನಸ್ಸಿಗೆ ಹೊಳೆದರೆ, ಆದಷ್ಟು ಶೀಘ್ರವಾಗಿಯೇ ಕೆಲಸಕ್ಕೆ ಹತ್ತಬೇಕು. ಅಂದರೆ ಸುದ್ದಿಯನ್ನು ಪೂರೈಸಿಕೊಡಲಿಕ್ಕೆ ಸಿದ್ಧರಾಗಬೇಕು. ಎಲ್ಲ ಕೆಲಸವು ತನ್ನಷ್ಟಕ್ಕೆ ತಾನೇ ಆಗಿಹೋಗಬೇಕೆಂದರೆ ಎಂದಿಗೂ ಸಾಧ್ಯವಿಲ್ಲ. ಈ ಸಂಧಿಯನ್ನು ಕರ್ನಾಟಕಸ್ಥ ಜನರು ಎಂದಿಗೂ ಕಳಕೊಳ್ಳಲಿಕ್ಕಿಲ್ಲೆಂದು ತುಂಬಾ ನಂಬಿದ್ದೇನೆ.

ಈ ಸಂಘದ ಉದ್ದೇಶಗಳನ್ನು ಪುನಃ ವಾಚಕರ ನಿದರ್ಶನಕ್ಕಾಗಿ ಕೆಳಗೆ ಕೊಟ್ಟಿರುತ್ತೇವೆ. ಅವುಗಳನ್ನು ಲಕ್ಷ್ಯಗೊಟ್ಟು ಓದಿ, ಈ ಸಂಘದ ಕಾರ್ಯವನ್ನು ಮಾಡುವವರಿಗೆ ಕರ್ನಾಟಕ ಬಂಧು ಭಗಿನಿಯರು ಉತ್ತೇಜನ ಕೊಡುವರೆಂದು ಆಶಿಸುತ್ತೇವೆ. ನಾವು ತೆಗೆಯಲಿಚ್ಛಿಸುವ ವಾರ್ತಾ ಪ್ರಸಾರಕ ಸಂಘದ ಉದ್ದೇಶಗಳು:-

೧ ಕರ್ನಾಟಕದ ಎಲ್ಲ ಭಾಗಗಳಿಂದ ನಿಜವಾದ ಸುದ್ದಿಯನ್ನು ದೊರಕಿಸಿಕೊಂಡು, ಅದನ್ನೇ ವ್ಯವಸ್ಥಿತರೀತಿಯಿಂದ ತಯಾರಿಸಿ, ಎಲ್ಲ ಭಾಗಗಳಿಗೆ ಕಳಿಸುವದು.

೨. ಕರ್ನಾಟಕದಲ್ಲಿ ಸಂಭವಿಸಿದ ಪ್ರತಿಯೊಂದು ಧಾರ್ಮಿಕ ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಖಾದೀ ಮುಂತಾದ ಈಗಿನ ಸಮಯದಲ್ಲಿ ವಿಶೇಷ ಮಹತ್ವವಿರುವ ಸಂಗತಿಗಳನ್ನು ಒಂದು ಮಾಸಿಕ ಅಥವಾ ಸಾಪ್ತಾಹಿಕ ಪತ್ರಿಕೆಯ ರೂಪದಿಂದ ಪ್ರಸಿದ್ಧಿಸಬೇಕೆಂಬುವದು.

೩. ಈ ಪತ್ರಿಕೆಗಳನ್ನು ಈ ಪ್ರಾಂತದ ವರ್ತಮಾನಪತ್ರಗಳಿಗೆಲ್ಲ ಕಳಿಸುವದು

೪ ಕರ್ನಾಟಕದೊಳಗೆ ಸಂಭವಿಸಿದ ಸುದ್ದಿಯು ಹಿಂದುಸ್ಥಾನದ ಇತರ ಪ್ರಾಂತಗಳಿಗೂ ತಿಳಿಯಬೇಕೆಂದು ಈ ಪತ್ರಿಕೆಗಳಲ್ಲಿಯ ಸಂಗತಿಯನ್ನೇ ಇಂಗ್ಲೀಷದಲ್ಲಿ ಭಾಷಾಂತರಿಸಿ, ಆಯಾ ಪ್ರಾಂತದವರ ಕಡೆಗೆ ಕಳಿಸುವದು.

ಈ ಮೇಲ್ಕಾಣಿಸಿದ ಉದ್ದೇಶಗಳು ಕೈಗೂಡಬೇಕಾದಲ್ಲಿ ಮೇಲೆ ಹೇಳಿದಂತೆ ನಮ್ಮೊಬ್ಬರಿಂದಲೇ ಸಾಧ್ಯವಿರದೆ, ಕರ್ನಾಟಕದ ಎಲ್ಲ ಜನತೆಯ ಸಹಾಯವು ಬೇಕೇಬೇಕು. ಆದ್ದರಿಂದ ಕನ್ನಡಿಗರು ಇನ್ನಾದರೂ ಎಚ್ಚತ್ತು ನಮ್ಮ ಪ್ರಾಂತದಲ್ಲಿರುವ ಈ ಸಂಘದ ಕೊರತೆಯನ್ನು ಹೋಗಲಾಡಿಸುವರೆಂದು ನಂಬುತ್ತೇವೆ.

ಬಂಧು ಭಗಿನಿಯರೇ! ಆಲಸ್ಯದಿಂದ ಕಾಲಹರಣಮಾಡುವ ವೇಳೆಯು ಇದಲ್ಲ; ಅತಿ ಜೋರಿನಿಂದ ಕೆಲಸಮಾಡುವ ಸಮಯವು. ಇಂಥ ಸುಸಮಯವು ಇನ್ನು ಮುಂದೆ ಎಂದಿಗೂ ದೊರಕಲಾರದು. ಆದ್ದರಿಂದ ಇದರಬಗ್ಗೆ ಯಾರಿಗೇನಾದರೂ ಸೂಚಿಸುವದಿದ್ದಲ್ಲಿ ಅಗತ್ಯವಾಗಿ ತಿಳಿಸಬೇಕು.

ತಮ್ಮ
ಗು. ಅ. ಹೆಬ್ಬಳ್ಳಿ.
ಹುಬ್ಬಳ್ಳಿ } ಕಾರ್ಯದರ್ಶಿ.
ಕರ್ನಾಟಕ ವಾರ್ತಾ ಪ್ರಸಾರಕ ಸಂಘ

ತಾ. ಕ. ಈ ವಾರ್ತಾಪ್ರಸಾರಕ ಸಂಘದ ಕೆಲಸವು ಡಾ. ಹರ್ಡೀಕರ ಇವರ ಅಧ್ಯಕ್ಷತೆಯ ಕೆಳಗೆ ನಡೆಯುವದು.

ಏಜಂಟರು ಬೇಕು! ಏಜಂಟರು ಬೇಕು

ನಂಬರ ೧ ನೇ ನಿರ್ಮಲವಾದ

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾಗ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳೇ ಸೋಯಿದರದಲ್ಲಿ ತೈಲವು ಸಿಗುವದು. ನಿಕ್ಕಿ ೨೪ ಔಂಸ ತೈಲದಬಾಟ್ಲಿ ಅಥವಾ ಡಬ್ಬ ೧ಕ್ಕೆ ರೂಪಾಯಿ ೩—೦—೦ಡಜನ್ ವಿಶೇಷ ಮಾಹಿತಿ ಪತ್ರದ್ವಾರಾ

ಬಿ. ಎ ಪೈ ಕಂಪನಿ

ಪೋಷ್ಟ ಹೊನ್ನಾವರ

ಜಿಲ್ಹಾ ಉತ್ತರಕಾನಡಾ

## ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ.

ನಮ್ಮಲ್ಲಿ ಎಲ್ಲ ತರದ ಮುದ್ರಣವು ಬಹಳ ಅಂದವಾಗಿಯೂ ಸ್ವಸ್ತ ದರದಿಂದಲೂ ಮಾಡಲ್ಪಡುವದು. ಒಮ್ಮೆ ಅನುಭವ ತೆಗೆದು ಕೊಂಡರೆ ತಮಗೇ ಖಾತ್ರಿಯಾಗುವದು. ಇದಲ್ಲದೆ ನಮ್ಮ ಕಡೆಗೆ ವಕೀಲಿ ಪತ್ರ ದರಖಾಸ್ತ ಮುಂತಾದ ನಮೂನೆಗಳೂ, ಟೋಲ ನಾಕೇದ ಪಾವತಿ ಪುಸ್ತಕಗಳೂ ಉಳಿದ ನಮೂನೆಗಳೂ ಮಾರಲಿಕ್ಕೆ ಸಿಗುತ್ತಿದ್ದು ಬೇಕಾದವರು ತರಿಸಿಕೊಳ್ಳಬಹುದು. ವ್ಹಿ. ಪಿ. ತರಿಸಿಕೊಳ್ಳ ಬೇಕಾದಲ್ಲಿ ಕೆಲವು ಹಣ ಮುಂಗಡ ಕಳಿಸತಕ್ಕದ್ದು.

ವ್ಯವಸ್ಥಾಪಕ

## ಜಾಹಿರಾತಿನ ದರ.

ಕನ್ನಡ 'ನವಜೀವನ'ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂ. ಕಾಯಂ ಜಾಹಿರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

## ಚಂದಾ ನಿರ್ಣಯ.

| | |
|---|---|
| ವಾರ್ಷಿಕ ವರ್ಗಣಿ ರೂ. | ೪—೦—೦ |
| ಆರು ತಿಂಗಳಿಗೆ ,, | ೨—೦—೦ |
| ಬಿಡಿಸಂಚಿಕೆ | ೦—೧—೩ |
| ಮಾದರಿ ಸಂಚಿಕೆ ಬೇಕಾದವರು | ೦—೧—೬ |

ತಿಕೀಟು ಕಳುಹಿಸಬೇಕು.

## ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರದ್ವಾರದಿಂದ, ಉತ್ತಮವಾದ ಸ್ವದೇಶೀ ಸಾಬಾಣವನ್ನು ಮಾಡುವದಕ್ಕೆ ಕಲಿಸುವೆವು.

ಫೀ. ರೂ. ೫. ಉದ್ಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು.

ಕಲಾಭುವನ—ರಾಷ್ಟ್ರೀಯ ಶಾಲಾ

ಧಾರವಾಡ.

## ನೋಟೀಸು

ರಾ॥ ಸಂಗಪ್ಪಾ ತಂದಿ ರುದ್ರಪ್ಪಾ ಚಿತ್ರಗಿ ಸಾಕೀನ ಶಿರೂರ ತಾಲೂಕ ಬಾಗಲಕೋಟ ಇವರಿಗೆ

ಕೆಳಗೆ ಸಹಿ ಮಾಡುವವರ ಕಡಿಂದಾ ಜಾಹೀರ ನೋಟೀಸು ಕೊಡುವದರಲ್ಲಿ ಬರುತ್ತದಲ್ಲಾ—ನಿನ್ನ ಮನೆಯಾದ ಶಿದ್ದಿ ಕೋಂ ಮಲ್ಲಪ್ಪಾ ವ್ಯಾಟಿ ಶೆಟ್ರ ಇವಳು ನನ್ನ ಲಗ್ನದ ಹೆಂಡತಿ ಇದ್ದು ೬ ತಿಂಗಳ ಹಿಂದ ನನ್ನ ಸಂಗಡ ವಾದಿಸ್ಯಾಡಿ ನನಗೆ ಹೇಳದಲೆ ನಿನ್ನ ಮನೆಗೆ ಬಂದಿರುತ್ತಾಳೆ. ನಿನ್ನ ಮನೆಗೆ ಬರುವ ಮುಂದೆ ಗರ್ಭಿಣಿ ಇದ್ದು ಈಗ ಹೆಂಣು ಹಡೆದು ಅಜಮಾಸು ಮೂವತ್ತೈದು ದಿವಸವಾಗಿದವು. ಈಗ ಆ ಹುಡಿಗಿಯನ್ನು ನಿನ್ನ ಮಗನಿಗೆ ತಂದುಕೊಂಡು ಲಗ್ನ ಮಾಡುತೀದಿ ಅಂತಾ ತಿಳಿಯುತ್ತದ. ಆದರೆ ಹೀಗೆ ಮಾಡಲಿಕ್ಕೆ ನಿನಗೆ ಏನೂ ಅಧಿಕಾರವಿಲ್ಲಾ. ಹುಡಿಗಿಯ ಮೇಲೆ ಪೂರ್ಣ ಅಧಿಕಾರ ನನ್ನದೇ ಅದೆ. ಇದು ನನಗೆ ತಿಳಿಸದೆ ಲಗ್ನ ಮಾಡಿದಲ್ಲಿ ನಿನ್ನ ಕಾಯದೆಶೀರ ಯೋಗ್ಯ ಇಲಾಜ ಮಾಡಲಾದೀತು ಆವ ಲಗ್ನ ರದ್ದ ಆದೀತು. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ. ತಿಳಿಯಬೇಕಾದ್ದು. ತಾರೀಖು॥ ೧೯—೬—೧೯೨೨ ಇಸ್ವಿ

ಸಹಿ ಮಲ್ಲಪ್ಪಾ ಚನಗಿರಿಯಪ್ಪಾ ವ್ಯಾಟಿ ಶೆಟ್ರ ದ॥ ಖು॥

## ಇಂಡಿಯಾ ಪ್ರಾವ್ಹಿಡೆಂಟ ಕಂ. ಲಿ. ಕಲಕತ್ತಾ.

ಮಧ್ಯಮ ಸ್ಥಿತಿಯ ಕುಟುಂಬದಾರರಿಗೆ ಈ ಕಠಿಣ ಕಾಲದಲ್ಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಯಾಗಿರುವದು. ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರೆಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ

V. J PARVATIKER

General Agent BAGALKOT,

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಏಜಂಟರು) ## ಅತ್ಯುತ್ತಮ ( ಬೇಕು

ಮಶಿ ಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೪—೦ | ಟ. ಖ. |
| ೧೦೦ ಚೀಟಿಗಳಿಗೆ | ೦—೧೪—೦ | ಬೇರೆ. |
| ೪೦ ಔಂಸ ಮಶಿ ಬುಡಿಕೆಗೆ | ೦—೪—೦ | |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸಃ— ಕರ್ನಾಟಕ ಇಂಕ ಕಂಪನಿ,

ಬಾಗಲಕೋಟೆ.

ಈ ಪತ್ರವನ್ನು ಬಾಗಲಕೋಟ ವೆಂಕಟಪೇಟೆಯಲ್ಲಿ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಶ್ರೀನಿವಾಸ ರಾಜೇರಾವ ಮಂಗಳವೇಢೆ ಇವರು ಮುದ್ರಿಸಿದರು. ಮತ್ತು ಅಲ್ಲಿಯೇ ಕಮಲಾಚಾರ್ಯ ಬಂಡಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ಬೆಲೆ ೬ ಪೈ

R No. B 1589

ಕನ್ನಡ

# ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ ಬಾಗಲಕೋಟೆ ಜ್ಯೇಷ್ಠ ವ|| ೩೦ ಶಕ ೧೮೪೪ ವಿಶೇಷ ಸಂಚಿಕೆ
ರವಿವಾರ ತಾ ೨೫ ಜೂನ ೧೯೨೨

# ದೇಶಭಕ್ತ ಜಯರಾಯರು ಸ್ವರ್ಗಸ್ಥರಾದರು!

## ಹಿಂದಮಾತೆಯು ಸುಪುತ್ರ ಹೀನಳಾದಳು!!

### ಕರ್ನಾಟಕ ದೇವಿಯು ನಿರಾಶ್ರಿತೆಯಾದಳು !!!

### ವಿಜಾಪೂರ ಜಿಲ್ಲೆಯು ವಿಧವೆಯಾಯಿತು !!!!

**ನಿನ್ನಿನ ದಿವಸ ಮಧ್ಯಾಹ್ನದ ಮೂರೂವರೆ ಘಂಟೆಗೆ ಕರ್ನಾಟಕದ ವೀರ ಭಟರಾದ ಜಯರಾವ ದೇಶಪಾಂಡೇಯವರು ಬಾಗಲಕೋಟೆಯಲ್ಲಿ ವೈಕುಂಠವಾಸಿಗಳಾದರು ! ಹಾ! ಶ್ರೀಮನ್ನಾರಾಯಣನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ!**

ಕನ್ನಡ ನವಜೀವನ

ಜ್ಯೇಷ್ಠ ವದ್ಯ ೩೦ ರವಿವಾರ ಶಕ ೧೮೪೪

## ವೈಕುಂಠವಾಸೀ ಜಯರಾವ ದೇಶಪಾಂಡೇಯವರು.

ದೇಶಭಕ್ತ ಜಯರಾವ ದೇಶಪಾಂಡೇಯವರು ಕೆಲ ದಿನಗಳಿಂದ ಬೇನೆಯಿಂದ ಬಳಲುತ್ತ ಕಾಲಕಳೆಯಬೇಕಾಗಿತ್ತೆಂಬ ಸಂಗತಿಯು ಕರ್ನಾಟಕಕ್ಕೆ ಅರಿಯದ್ದಲ್ಲ ಆದರೆ ಅವರನ್ನು ಇಷ್ಟು ಬೇಗನೇ ಆ ಕಾಲನು ತನ್ನ ಆಹುತಿಯನ್ನಾಗಿ ಮಾಡುವನೆಂದು ಯಾರೂ ತಿಳಿದಿರಲಿಲ್ಲ. ಆದರೆ ಕಾಲಗತಿಯೇ ವಿಚಿತ್ರವಿದೆ! ದೇಶಭಕ್ತ ದೇಶಪಾಂಡೆಯವರ ನಿಧನದಿಂದ ಕರ್ನಾಟಕಕ್ಕೆ ಅತ್ಯಂತ ಹಾನಿಯಾಯಿತೆನ್ನುವದರಲ್ಲಿ ಎಳ್ಳಷ್ಟಾದರೂ ಸಂಶಯವಿಲ್ಲ. ಕರ್ನಾಟಕದಲ್ಲಿ ಸಾರ್ವಜನಿಕ ಕಾರ್ಯಮಾಡುವವರೇ ವಿರಳ. ಅದರಲ್ಲಿಯಂತೂ, ಜಯರಾಯರಂಥ ತೀಕ್ಷ್ಣ ಬುದ್ಧಿಯುಳ್ಳ, ಉತ್ಕಟ ಅಭಿಮಾನಶಾಲಿಯಾದ ಮತ್ತು ದೇಶಕಲ್ಯಾಣಕ್ಕಾಗಿ ಸ್ವಸಂತೋಷದಿಂದ ಸೇವಾಬದ್ಧರಾದಂಥ ರಾಷ್ಟ್ರಪುರುಷರು ದೊರೆಯುವದು ಬಹು ಕಠಿಣ.

ಕರ್ನಾಟಕವು ಈಗೀಗ ಚೇತರಿಸಿಕೊಂಡು ಏಳಹತ್ತಿದೆ. ಇಂಥ ಸಮಯದಲ್ಲಿ ಉತ್ಸಾಹದಿಂದ ಕೆಲಸಮಾಡುವಂಥ ಜಯರಾಯರು ಅವಶ್ಯವಾಗಿ ಜೀವಿಸಿಬೇಕಾಗಿತ್ತು. ಅವರು ಇಂದು ಕರ್ನಾಟಕಕ್ಕಾಗಿ ಇಂಥ ಕೆಲಸವನು ಮಾಡುವರು ನಾಳೆ ಮತ್ತೊಂದು ಕೆಲಸವನ್ನು ಪ್ರಾರಂಭಿಸತಕ್ಕವರಿದ್ದಾರೆಂದು ನಾವು ದಿನಾಲು ... ಆದರೆ ಕಾಲನಿಂದ ನಮ್ಮ ಆ ವಿಚಾರಗಳೆಲ್ಲ ಹುಸಿಯಾದವು.

ಅಸಹಕಾರ ಚಳವಳಿಯು ಪ್ರಾರಂಭದಿಂದ ಹಿಂದುಸ್ಥಾನದಲ್ಲಿ ರಾಜಕಾರಣಕ್ಕೆ ಹೆಚ್ಚುಹೆಚ್ಚು ಮಹತ್ವ ಬರುತ್ತಿದೆ ಅದರಂತೆ ಹಿಂದುಸ್ಥಾನವು ಹೆಚ್ಚುಹೆಚ್ಚು ಜವಾಬದಾರಿಯನ್ನು ಹೊತ್ತುಕೊಳ್ಳಬೇಕಾಗಿದೆ ಇಂಥ ಸಮಯದಲ್ಲಿ ನಮ್ಮ ಕರ್ನಾಟಕದ ಪರಿಯಿಂದ ಕೆಲಸಮಾಡಲಿಕ್ಕೆ ಜಯರಾಯರ ಅಕಾಲಿಕ ಮರಣದಿಂದ ಬಹು ಹಾನಿತಟ್ಟಿದಂತಾಯಿತು

ಜಯರಾಯರಂತೆ, ಸ್ವರಾಜ್ಯವು ನಮಗ ... ಗಾಗಿ ನಮ್ಮನ್ನು ಬಿಟ್ಟು ತೆರಳಿದರು. ಇನ್ನು ಮೇಲೆ ಅವರು ಸ್ವರ್ಗದಲ್ಲಿ ನಮ್ಮ ... ಸಮಾಧಾನ ... ಹೊಂದುವಂತೆ

ಸ್ವರಾಜ್ಯ ಸಂಪಾದನೆ [illegible] ಪ್ರತಿಯೊಬ್ಬನ [illegible] ವ್ಯ ಕರ್ತವ್ಯವಾಗಿದೆ [illegible] ಯರು ನಮ್ಮಿಂದ ಮಾಡುದ [illegible] ದು ತೋರಿಸುತ್ತ ಹೋದ್ದಾರೆ [illegible] ಉಚಿತವಲ್ಲ [illegible] ಯರಾಯರು ಯಾವ ಕಾರ್ಯಕ್ಕಾಗಿ [illegible] ಬದ್ಧರಾಗಿದ್ದರೋ ಆ ಕಾರ್ಯವನ್ನು ಜಯರಾಯರ [illegible] ಪೂಜ್ಯಬುದ್ಧಿಯಿಂದ ಪ್ರತಿಯೊಬ್ಬ ಮನುಷ್ಯನು ಒಮ್ಮನಸ್ಸಿನಿಂದ ಮಾಡಬೇಕು [illegible] ಕಾರ್ಯವೇನಂದರೆ:—

೧. ಜಯರಾಯರಂತೆ ಪ್ರತಿಯೊಬ್ಬನು [illegible] ಖಾದಿಯ ಬಟ್ಟೆಯನ್ನು ಧರಿಸುವದು, ಹಾಗು ಕಾಂಗ್ರೆಸದ ಸಭಾಸದನಾಗುವದ.

೨. ಪ್ರತಿಯೊಬ್ಬನ- ತನ್ನ ಯೋಗ್ಯತೆಇದ್ದಂತೆ ಜನರಲ್ಲಿ [illegible] ಯನ್ನು ಹುಟ್ಟಿಸುವದು.

೩. ಕರ್ನಾಟಕದಲ್ಲಿ ನಿವಾಸರಾಗಿದ್ದ ಪ್ರತಿಯೊಬ್ಬ ಕನ್ನಡ ಭಾಷೆಯನ್ನು ತಿರಸ್ಕರಿಸದೆ ಆ ಭಾಷೆಯ ಏಳ್ಗೆಗಾಗಿ ಪ್ರೀತಿಯಿಂದ ಜಯರಾಯರಂತೆ ಪ್ರಯತ್ನ ಪಡುವದು

೪. ಕರ್ನಾಟಕವು ಸ್ವತಂತ್ರವಾದ ಉಪರಾಷ್ಟ್ರವಿದೆಂಬುದನ್ನು ಚನ್ನಾಗಿ ಅರಿತುಕೊಂಡು, ಸ್ವತಂತ್ರಪ್ರಾಂತವು ತನ್ನ ಪಾಲನ್ನು ಕಾಯ್ದುಕೊಳ್ಳುವಂತೆ ಎಚ್ಚರಗಿರತಕ್ಕದ್ದು ಇತ್ಯಾತಿ ಇತ್ಯಾದಿ

ಓಂ ಶಾಂತಿಃ ಶಾಂತಿಃಶಾಂತಿಃ

## ಜಯರಾಯರ ಸಂಕ್ಷಿಪ್ತ ಚರಿತ್ರೆಯು

ಇವರು ಶಕೆ ೧೮೦೮ರಲ್ಲಿ ಹುಟ್ಟಿದರು. ಇವರು ಬಿಜಗಿ ದೇಶಪಾಂಡೆಯವರ ಮನೆತನದವರು ಇವರು ಚಿಕ್ಕಂದಿರಿರುವಾಗಲೇ ಇವರ ತಾಯಿಯು ತೀರಿಕೊಂಡಳು ಜಯರಾಯರ ತಂದೆಯು ಪಂಪ್ಪಿನ ಮುದುಕರಾಗಿದ್ದಾರೆ ಜಯರಾಯರ ನಿಧನದಿಂದ ಮುದುಕರಿಗ ಆದ ದುಃಖವನ್ನು ವರ್ಣಿಸುವದವೇ ಕಷ್ಟವು

ಜಯರಾಯರು ಚಿಮ್ಮಲಗಿ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಿದರು ಇಂಗ್ಲೀಷ ೧-೨-೩ ಈ ಯತ್ತೆಗಳನ್ನು ಬಾಗಲಕೋಟೆಯ ಇಂಗ್ಲೀಷ ಶಾಲೆಯಲ್ಲಿ ಕಲಿತರು. ಮುಂದಿನ ಎರಡು ವರ್ಷಗಳವರೆಗೆ ವಿಜಾಪೂರದಲ್ಲಿದ್ದು ೬-೭ ಈ ಯತ್ತೆಗಳನು ಧಾರವಾಡ ಹಾಯಸ್ಕೂಲದಲ್ಲಿ ಕಳೆದರು ಮ್ಯಾಟ್ರಿಕ್ ಆದನಂತರ ಪುಣೆದ ಫರ್ಗ್ಯೂಸನ್ ಕಾಲೇಜದಲ್ಲಿ ಮೂರು ವರ್ಷಗಳನ್ನು ಕಳೆದು, ನಾಲ್ಕನೇ ವರ್ಷ ಡೆಕ್ಕನ್ ಕಾಲೇಜದಿಂದ ಬಿ. ಎ. ಪಾಸಾದರು ೧೯೧೩ನೆ ಇಸ್ವಿಯಲ್ಲಿ ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಂಡು ಎಮ್. ಏ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

ಶಾಲೆ ಕಾಲೇಜಗಳಲ್ಲಿ ಇರುವಾಗ ಅವರು ಅಭ್ಯಾಸವನ್ನು ಮಾಡುತ್ತಿರಲಿಲ್ಲ ಉಂಡಾಡಿಗನಂತೆ ತಿರುಗಾಡುವದರ ಮೇಲೆ ಇವರ ಪ್ರೀತಿಯು. ಬಹಳ ಹೆಚ್ಚು ಅಭ್ಯಾಸವನ್ನು ಮಾಡದಿದ್ದರೆ ಪರೀಕ್ಷೆಯಲ್ಲಿ ನಾಪಾಸಾಗುವಿ, ಎಂದು ಅವರಿಗೆ ಗುರುಗಳು ಮೇಲಿಂದ ಮೇಲೆ ಹೇಳುತ್ತಿದ್ದರು ಆದರೆ ಅವರು ಪ್ರತಿಯೊಂದು ವಿಷಯದಲ್ಲಿ ಚನ್ನಾಗಿ ಗುಣಗಳನ್ನು ಸಂಪಾದಿಸುತ್ತಿದ್ದರು ನಾಪಾಸ ಎನ್ನುವದು ಇವರಿಗೆ ಗೊತ್ತೇ ಇಲ್ಲ

ಜಯರಾಯರು ಕಾಲೇಜದಲ್ಲಿರುವಾಗಲೇ ತಾವು ಯಾವ ಸರಕಾರಿ ನೌಕರಿಯನ್ನು ಹಂಬಲಿಸದೆ ದೇಶಸೇವೆಗಾಗಿಯೇ ತಮ್ಮ ಮುಂದಣ ಆಯುಷ್ಯವು ಸವಿಸಬೇಕೆಂದು ನಿಶ್ಚಯಿಸಿದ್ದರು ಅದರಂತೆ ಸ್ವತಂತ್ರ ವ್ಯವಸಾಯವಾದ ವಕೀಲಿಯನ್ನೇ ಕಾಲೇಜದಿಂದ ಬಂದ ವೇಳೆ ಪ್ರಾರಂಭಿಸಿದರು ವಕೀಲಿಯಲ್ಲಿ ಇವರು ದಿನೇದಿನೇ ಹೆಸರಾಗುತ್ತ ನಡೆದರು. ಇತ್ತ ದೇಶಕಾರ್ಯವನ್ನು ಅವರು ಎಂದಿಗೂ ಮರೆಯಲಿಲ್ಲ. ವಿಜಾಪುರದ ಎಲ್ಲ ಸಾರ್ವಜನಿಕ ಪ್ರಶ್ನೆಗಳಲ್ಲಿಯೂ ಇವರು ಅಗ್ರಗಣ್ಯರಾಗಿದ್ದರು. ಮುನಸಿಪಾಲಿಟೀ, ಶ್ರೀಕೃಷ್ಣಪಾಠಶಾಲೆಗಳಲ್ಲಿ ಒಳ್ಳೇಮನಸ್ಸನ್ನು ಹಾಕಿ ಕೆಲಸ ಮಾಡಿದರು ಇವರು ಹತ್ತೇ ವರ್ಷಗಳಲ್ಲಿ ವಿಜಾಪುರ ಜಿಲ್ಲೆಯಷ್ಟೇ ಅಲ್ಲದೇ ಕರ್ನಾಟಕಕ್ಕೆಲ್ಲ ಮಂಡಾಳುಗಳಾದರೆಂಬವನ್ನು ಲಕ್ಷ್ಯವಲ್ಲಿ ತಂದರೆ ಇವರ ಯೋಗ್ಯತೆ ಯಷ್ಟಿರಬೇಕೆನ್ನುವದು ತಾನೇ ಗೊತ್ತಾಗುತ್ತದೆ

ಅವರ [illegible] ತಿಳಿವಳಿಕೆಯು [illegible] ಇವರ ವಕೀಲಿಯನ್ನು [illegible] ಅವರು [illegible] ವರ್ಷ [illegible] 'ಕರ್ನಾಟಕವೈಭವ'ವನ್ನು ಕೊಂಡು, ತಾವೇ [illegible] ಸಾಧಕತ್ವವನ್ನು ವಹಿಸಿದರು. ಈ ವ್ಯವಸಾಯದಿಂದ [illegible] ಕಾರದ ವಕ್ರದೃಷ್ಟಿಗೆ ಒಳಗಾಗಲು ಬಲ ಬಂದಿತು

ಜಯರಾಯರು ಮೊದಲಿನಿಂದಲೂ ಅಶಕ್ತ ಪ್ರಕೃತಿಯವರು. ಅಸಹಕಾರದ [illegible] ಅವರು ಊರಿಂದೂರಿಗೆ ತಿರುಗಾಡಬೇಕಾದ್ದರಿಂದ ಅವರು ಹೆಚ್ಚಿಗೆ ಅಶಕ್ತರಾಗಲು ಕಾರಣವಾಯಿತು [illegible] ಕ್ಷಯರೋಗ ಅವರ ಮರಣಕ್ಕೆ ಕಾರಣವಾಯಿತು ಲೋಕಕಲ್ಯಾಣಕ್ಕಾಗಿಯೇ ಇವರು ತಮ್ಮ ದೇಹವನ್ನು ಸವೆಸಿದರೆಂಬುದು ಇದರಿಂದ ತಾನೇ ಗೊತ್ತಾಗುತ್ತದೆ

ಕನ್ನಡನಾಡಿನಲ್ಲಿ ಮೇಲ್ಪಂಕ್ತಿಯ ಒಂದಾದರೂ [illegible] ಇಲ್ಲವಾದ [illegible] ಅವರು ಹಗಲಿರುಳು ಚಿಂತಾಕುಲರಾಗಿದ್ದರು ಕನ್ನಡ ಪತ್ರಿಕೆ ವೈಭವವನ್ನು ದೈನಿಕವನ್ನಾಗಿ ಮಾಡಬೇಕೆಂಬ ಉತ್ಕಟೇಚ್ಛೆಯವರೂ ಅವರಿದ್ದರು ಅದಕ್ಕಾಗಿ ಅವರು ದೊಡ್ಡ ಯಂತ್ರವನ್ನೂ ಹೊಸ [illegible] ವಿನ ಮೊಳೆಗಳನ್ನೂ ಕೂಡಿಸತೊಡಗಿದ್ದರು ಆದರೆ ಏನು ಮಾಡುವದು? ಕರ್ನಾಟಕದ ದೈವವು ಇನ್ನೂ ತೆರೆದಿಲ್ಲ ಕಾಲಾಯ ತಸ್ಮೈ ನಮಃ

## ಜಯರಾಯರ ಮರಣದ ಕಾಲವು

ಶುಕ್ರವಾರ ಮುಂಜಾನೆಯವರೆಗೆ ಜಯರಾಯರ ಪ್ರಕೃತಿಯು ಸಟ್ಟಾಗಿತ್ತು ಆದರೆ ಮಧ್ಯಾಹ್ನಕ್ಕೆ ಹೆಚ್ಚು ಹೆಚ್ಚು ಅಸ್ವಸ್ಥರಾಗಹತ್ತಿದರು ಮರುಸಂಜೆಯ ಮುಂದೆ ಬಾಯಿಯೇ ಹೋಯಿತು, ಎಲ್ಲರೂ ಗಾಬರಿಯಾದರು ಶನಿವಾರ ಮುಂಜಾವಿನಿಂದಂತೂ ಎಲ್ಲರೂ ಗಾಬರಿಯಾಗಲು ಎಷ್ಟು ಚಿನ್ಹೆಗಳು ಬೇಕು ಅಷ್ಟೆಲ್ಲ ದೃಗ್ಗೋಚರವಾದವು ವೈದ್ಯರ ಸ್ವದೇಶಿ ಡಾ, ಜನರ ಮೊದಲಾದವರ ಉಪಚಾರವು ನಡದೇ ಇದ್ದಿತು ಸಾಯಂಕಾಲಕ್ಕೆ ಅವರು ಒಂದಾವರ್ತಿ ಎಲ್ಲರನ್ನೂ ನೋಡಿ ಹೊರಳಿ ಮಲಗಿಕೊಂಡರು ಕೂಡಲೇ ಪ್ರಾಣೋತ್ಕ್ರಮಣವಾಯಿತು! ಬಾಯಿ ಬಂದಾಗಿನ ಮೊದಲು ಅವರು ತಮ್ಮ ಕಡೆಯಮಾತುಗಳೆಂದು ಯಾರಿಗೂ ಏನೂ ಹೇಳಲಿಲ್ಲ, ತಾವು ಸಾಯುವೆವೆಂಬುದು ಅವರಿಗೆ ಶನಿವಾರ ಗೊತ್ತಾದಂತೆ ತೋರಿತು

## ಸ್ಮಶಾನಯಾತ್ರೆಯು

ಜಯರಾಯರು ಊರಹೊರಗೆ ಬಂಗ್ಲೆಯಲ್ಲಿದರು ಅವರ ನಿಧನದ ಸುದ್ದಿಯು ಊರಲ್ಲಿ ಗೊತ್ತಾದಕೂಡಲೇ ಪುರನಿವಾಸಿಗಳು ಓಡೋಡುತ್ತ ಅಲ್ಲಿ ಕಲೆತರು, ಅವರ ಶವವನ್ನು ಊರೊಳಗಿಂದ ಹಾಯಿಸಿ ಸ್ಮಶಾನಕ್ಕೆ ಹೋಗಬೇಕೆಂದು ಮೊದಲಿಗೆ ಗೊತ್ತಾಯಿತು ಆದರೆ ಹಿಂದುಗಳಿಗೆ ಹಾಗೆ ಮಾಡುವದು ಅನುಚಿತವೆಂದು ಅಲ್ಲಿ ನೆರೆದವರು ನಿರ್ಧರಿಸಿದರು ಸ್ಮಶಾನಯಾತ್ರೆಗೆ, ಪ್ರಾರಂಭವಾದಕೂಡಲೇ ಪುಷ್ಪಗಳು ತೂರಾಡಹತ್ತಿದವು ಸಾಸೀ ಎಂದು ಜನರು ಹೆಗಲನ್ನು ಕೊಡಲು ಮುಂದೊರೆದು ಬರುತ್ತಿದ್ದರು ಸ್ಮಶಾನಕ್ಕೆ ತಲ್ಪಿದ ಮೇಲೆ ಕನ್ನಡ ನವಜೀವನದ ಕಾರ್ಯಾಲಯದವರ ಪ್ರಯತ್ನದಿಂದ ಆ ಪೂಜ್ಯ ಶವದ ಫೋಟೋ ತಗೆಯಲ್ಪಟ್ಟಿತು, [ ಇದನ್ನು ನಾವು ಸ್ವಲ್ಪದಿನಗಳಲ್ಲಿಯೇ ನಮ್ಮ ನವಜೀವನದಲ್ಲಿ ಪ್ರಸಿದ್ಧಿಸುವೆವು ] ಅಮೇಲೆ ಅಗ್ನಿಸಂಸ್ಕಾರವಾಗಿ 'ವಂದೇಮಾತರಂ' ದ ಜಯಜಯಕಾರದಲ್ಲಿ ಕೂಡಿದ ಜನರಲ್ಲ ಬಯಲಾಗಹತ್ತಿದರು

---

ನಿನ್ನಿನ ರಾತ್ರಿ ಗೋಪಾಲ ಸಂಗೀತ ನಾಟಕ ಮಂಡಳಿಯವರು 'ಜಯಶಂಕರ" ವೆಂಬ ನಾಟಕವನ್ನು ಹೊಸದಾಗಿ, ರಂಗಭೂಮಿಯ ಮೇಲೆ ತರತಕ್ಕವರಿದ್ದರು. ಆದರೆ ದೇಶಭಕ್ತ ಜಯರಾಯರ ನಿಧನದ ಬಗ್ಗೆ ಕೂಡಲೇ ಬಂದು ಇಟ್ಟರು. ಇದಕ್ಕಾಗಿ ನಾವು ಈ ನಾಟಕ ಮಂಡಳಿಯವರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ.

---

☞ ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಶ್ರೀನಿವಾಸ ರಾಜೇರಾವ ಮಂಗಳವೇಡೆ ಇವರು ಮುದ್ರಿಸಿದರು ಪತ್ರ ಅಲ್ಲಿಯೇ ತಮ್ಮಣಾಚಾರ್ಯ ಬಂಡಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

R No. B 1589

ಮುದ್ರಕ—ಶ್ರೀನಿವಾಸ ರಾಘವೇಂದ್ರರಾವ ಮಂಗಳವೇಢೆ
ಪ್ರಕಾಶಕ - ತರುಣಾಚಾರ್ಯ ಬಂಡಾಚಾರ್ಯ ಪುರೋಹಿತ

ಮುದ್ರಣಸ್ಥಾನ—ವಿದ್ಯಾರಣ್ಯ ಮುದ್ರಣಾಮಂದಿರ
ವೆಂಕಟಪೇಟ, ಬಾಗಲಕೋಟೆ.

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖೋದ್ದೇಶವು.

ಬಾಗಲಕೋಟೆ ಆಷಾಢ ಶುದ್ಧ ೫ ಶಕೆ ೧೮೪೪

ವರ್ಷ ೧ ಸಂಚಿಕೆ ೨೯

ಗುರುವಾರ ತಾ ೨೯ ಜೂನ ೧೯೨೨.

# ದೇಶಭಕ್ತ ಜಯರಾಯರು ಸ್ವರ್ಗಸ್ಥರಾದರು!

## ಹಿಂದಮಾತೆಯು ಸುಪುತ್ರ ಹೀನಳಾದಳು!!

### ಕರ್ನಾಟಕ ದೇವಿಯು ನಿರಾಶ್ರಿತೆಯಾದಳು !!!

### ವಿಜಾಪೂರ ಜಿಲ್ಹೆಯು ವಿಧವೆಯಾಯಿತು !!!!

ಶನಿವಾರ ದಿವಸ ಮಧ್ಯಾನ್ಹದ ಮೂರೂವರಿ ಘಂಟೆಗೆ ಕರ್ನಾಟಕದ ವೀರ ಭಟರಾದ ಜಯರಾವ ದೇಶಪಾಂಡೇಯವರು ಬಾಗಲಕೋಟೆಯಲ್ಲಿ ವೈಕುಂಠವಾಸಿಗಳಾದರು ! ಹಾ ! ಶ್ರೀಮನ್ನಾರಾಯಣನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ !

## ಕನ್ನಡ ನವಜೀವನ.

ಜ್ಯೇಷ್ಠ ವ. ೩೦ ರವಿವಾರ ಶ ೧೮೪೪

### ವೈಕುಂಠವಾಸೀ ಜಯರಾವ ದೇಶಪಾಂಡೇಯವರು.

ದೇಶಭಕ್ತ ಜಯರಾವ ದೇಶಪಾಂಡೇಯವರು ಈ ಅನೇಕ ದಿನಗಳಿಂದ ಬೇನೆಯಿಂದ ಬಳಲುತ್ತ ಕಾಲಕಳೆಯಬೇಕಾಗಿತ್ತೆಂಬ ಸಂಗತಿಯು ಕರ್ನಾಟಕಕ್ಕೆ ಅರಿಯದ್ದಲ್ಲ ಆದರೆ ಅವರನ್ನು ಇಷ್ಟು ಬೇಗನೇ ಆ ಕಾಲನು ತನ್ನ ಆಹುತಿಯನ್ನಾಗಿ ಮಾಡುವನೆಂದು ಯಾರೂ ತಿಳಿದಿರಲಿಲ್ಲ ಆದರೆ ಕಾಲಗತಿಯೇ ವಿಚಿತ್ರವಿದೆ! ದೇಶಭಕ್ತ ದೇಶಪಾಂಡೆಯವರ ನಿಧನದಿಂದ ಕರ್ನಾಟಕಕ್ಕೆ ಅತ್ಯಂತ ಹಾನಿಯಾಯಿತೆನ್ನುವದರಲ್ಲಿ ಎಳ್ಳಷ್ಟಾದರೂ ಸಂಶಯವಿಲ್ಲ ಕರ್ನಾಟಕದಲ್ಲಿ ಸಾರ್ವಜನಿಕ ಕಾರ್ಯಮಾಡುವದೇ ವಿರಳ ಆದ ಸ್ಥಿತಿಯಂತೂ, ಜಯರಾಯರಂಥ ತೀಕ್ಷ್ಣ ಬುದ್ಧಿಯುಳ್ಳ, ಉತ್ಕಟ ಅಭಿಮಾನಶಾಲಿಯಾದ ಮತ್ತು ದೇಶಕಲ್ಯಾಣಕ್ಕಾಗಿ ಸ್ವಸಂತೋಷದಿಂದ ಸೇವಾಬದ್ಧರಾದಂಥ ರಾಷ್ಟ್ರಪುರುಷರು ದೊರೆಯುವದು ಬಹು ಕಠಿಣ.

ಕರ್ನಾಟಕವು ಈಗೀಗ ಚೇತರಿಸಿಕೊಂಡು ಏಳುತ್ತಿದೆ. ಇಂಥ ಸಮಯದಲ್ಲಿ ಉತ್ಸಾಹದಿಂದ ಕೆಲಸಮಾಡುವಂಥ ಜಯರಾಯರು ಅವಶ್ಯವಾಗಿ ಜೀವಿಸಬೇಕಾಗಿತ್ತು ಅವರು ಇಂದು ಕರ್ನಾಟಕಕ್ಕಾಗಿ ಇಂಥ ಕೆಲಸವನ್ನು ಮಾಡುವರು; ನಾಳಿನ ದಿವಸ ಮತ್ತೊಂದು ಕೆಲಸವನ್ನು ಪ್ರಾರಂಭಿಸತಕ್ಕವರಿದ್ದಾರೆಂಬವಾಗಿ ನಾವು ದಿನಾಲು ವಿಚಾರಿಸುತ್ತಲಿದ್ದೆವು. ಆದರೆ ಕಾಲನಿಂದ ನಮ್ಮ ಆ ವಿಚಾರಗಳೆಲ್ಲ ಬಯಲಾದವು

ಅಸಹಕಾರ ಚಳವಳಿಯ ಪ್ರಾರಂಭದಿಂದ ಹಿಂದುಸ್ಥಾನದಲ್ಲಿ ರಾಜಕಾರಣಕ್ಕೆ ಹೆಚ್ಚೆಚ್ಚು ಮಹತ್ವ ಬರಹತ್ತಿದೆ ಆದರಂತೆ ಹಿಂದುಸ್ಥಾನವು ಹೆಚ್ಚೆಚ್ಚು ಜಬಾಬದಾರಿಯನ್ನು ಹೊತ್ತುಕೊಳ್ಳಬೇಕಾಗಿದೆ ಇಂಥ ಸಮಯದಲ್ಲಿ ನಮ್ಮ ಕರ್ನಾಟಕದ ಪತಿಯಿಂದ ಕೆಲಸಮಾಡಲಿಕ್ಕೆ ಜಯರಾಯರ ಅಕಾಲಿಕ ಮರಣದಿಂದ ಬಲು ಹಾನಿತಟ್ಟಿದಂತಾಯಿತು

ಜಯರಾಯರಂತೂ, ಸ್ವರಾಜ್ಯವು ನಮಗೆ ಲಭಿಸುವದರೊಳಗಾಗಿಯೇ ನಮ್ಮನ್ನು ಬಿಟ್ಟು ತೆರಳಿದರು ಇನ್ನು ಮೇಲೆ ಅವರು ಸ್ವರ್ಗದಲ್ಲಿ ನಮ್ಮ ಕಾರ್ಯದಿಂದ ಸಮಾಧಾನ ಹೊಂದುವರೋ

ಸ್ವರಾಜ್ಯ ಸಂಪಾದನೆಗಾಗಿ ಪ್ರಯತ್ನಿಸುವದು ಪ್ರತಿಯೊಬ್ಬನ ಆದ್ಯ ಕರ್ತವ್ಯವಾಗಿದೆ. ಜಯರಾಯರು ನಮ್ಮಿಂದ ದೂರಾದರೆಂದು ಶೋಕಿಸುತ್ತ ಕೂಡ್ರುವದು ಯಾರಿಗೂ ಉಚಿತವಲ್ಲ. ಜಯರಾಯರು ಯಾವ ಕಾರ್ಯಕ್ಕಾಗಿ ಕಂಕಣಬದ್ಧರಾಗಿದ್ದರೋ ಆ ಕಾರ್ಯವನ್ನು ಜಯರಾಯರ ಸಲುವಾಗಿ ಪೂಜ್ಯಬುದ್ಧಿಯುಳ್ಳ ಪ್ರತಿಯೊಬ್ಬ ಮನುಷ್ಯನು ಒಮ್ಮನಸ್ಸಿನಿಂದ ಮಾಡಬೇಕು. ಆ ಕಾರ್ಯವೇನಂದರೆ:—

೧. ಜಯರಾಯರಂತೆ ಪ್ರತಿಯೊಬ್ಬನು ನಖಶಿಖಾಂತವಾಗಿ ಖಾದಿಯ ಬಟ್ಟೆಯನ್ನು ಧರಿಸುವದು, ಹಾಗು ಕಾಂಗ್ರೆಸದ ಸಭಾಸದನಾಗುವದು.

೨. ಪ್ರತಿಯೊಬ್ಬನು- ತನ್ನ ಯೋಗ್ಯತೆಇದ್ದಂತೆ ಜನರಲ್ಲಿ ಜಾಗೃತಿಯನ್ನು ಹುಟ್ಟಿಸುವದು.

೩. ಕರ್ನಾಟಕದಲ್ಲಿ ನಿವಾಸರಾಗಿದ್ದ ಪದವೀಧರರು ಕನ್ನಡ ಭಾಷೆಯನ್ನು ತಿರಸ್ಕರಿಸದೆ ಆ ಭಾಷೆಯ ಏಳ್ಗೆಗಾಗಿ ಪ್ರೀತಿಯಿಂದ ಜಯರಾಯರಂತೆ ಪ್ರಯತ್ನ ಪಡುವದು.

೪. ಕರ್ನಾಟಕವು ಸ್ವತಂತ್ರವಾದ ಉಪರಾಷ್ಟ್ರವಿದೆಂಬದನ್ನು ಚನ್ನಾಗಿ ಅರಿತುಕೊಂಡು, ಸ್ವತಂತ್ರಪ್ರಾಂತವು ತನ್ನ ಮಾನವನ್ನು ಕಾಯ್ದುಕೊಳ್ಳುವಂತೆ ಎಚ್ಚರ ಗಿರತಕ್ಕದ್ದು. ಇತ್ಯಾದಿ ಇತ್ಯಾದಿ

ಓಂ ಶಾಂತಿಃ ಶಾಂತಿಃಶಾಂತಿಃ

## ಜಯರಾಯರ ಸಂಕ್ಷಿಪ್ತ ಚರಿತ್ರೆಯು.

ಇವರು ಶಕೆ ೧೮೦೮ರಲ್ಲಿ ಹುಟ್ಟಿದರು. ಇವರು ಬೀಳಗಿ ದೇಶಪಾಂಡೆಯವರ ಮನೆತನದವರು ಇವರು ಚಿಕ್ಕವರಿರುವಾಗಲೇ ಇವರ ತಾಯಿಯು ತೀರಿಕೊಂಡಳು ಜಯರಾಯರ ತಂದೆಯು ವೃದ್ಧಪ್ಪಿನ ಮುದುಕರಾಗಿದ್ದಾರೆ. ಜಯರಾಯರ ನಿಧನದಿಂದ ಮುದಕರಿಗೆ ಆದ ದುಃಖವನ್ನು ವರ್ಣಿಸುವದೇ ಕಷ್ಟವು

ಜಯರಾಯರು ಚಿಮ್ಮಲಿಗಿ ಗ್ರಾಮದಲ್ಲಿ ಪ್ರಥಮಿಕಶಿಕ್ಷಣವನ್ನು ಪ್ರಾರಂಭಿಸಿದರು ಇಂಗ್ಲೀಷ ೧-೨-೩ ಈ ಯತ್ತೆಗಳನ್ನು ಬಾಗಲಕೋಟೆಯ ಇಂಗ್ಲೀಷ ಶಾಲೆಯಲ್ಲಿ ಕಲಿತರು. ಮುಂದಿನ ಎರಡು ವರ್ಷಗಳವರೆಗೆ ವಿಜಾಪೂರದಲ್ಲಿದ್ದು ೬-೭ ಈ ಯತ್ತೆಗಳನ್ನು ಧಾರವಾಡದ ಹಾಯಸ್ಕೂಲದಲ್ಲಿ ಕಳೆದರು. ಮ್ಯಾಟ್ರಿಕ್ ಆದನಂತರ ಪುಣೆದ ಫರ್ಗ್ಯೂಸನ್ ಕಾಲೇಜದಲ್ಲಿ ಮೂರು ವರ್ಷಗಳನ್ನು ಕಳೆದು ನಾಲ್ಕನೇ ವರ್ಷ ಡೆಕ್ಕನ್ ಕಾಲೇಜದಿಂದ ಬಿ. ಎ. ಪಾಸಾದರು. ೧೯೧೧ನೇ ಇಸ್ವಿಯಲ್ಲಿ ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಂಡು ಎಮ್. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

ಶಾಲೆ ಕಾಲೇಜಗಳಲ್ಲಿ ಇರುವಾಗ ಅವರು ಅಭ್ಯಾಸವನ್ನು ಮಾಡುತ್ತಿರಲಿಲ್ಲ ಉಂಡಾಡಗನಂತೆ ತಿರುಗಾಡುವದರ ಮೇಲೆ ಇವರ ಪ್ರೀತಿಯು ಬಹಳ ಹೆಚ್ಚು ಅಭ್ಯಾಸವನ್ನು ಮಾಡದಿದ್ದರೆ ಪರೀಕ್ಷೆಯಲ್ಲಿ ನಾಪಾಸಾಗುವಿ, ಎಂದು ಅವರಿಗೆ ಗುರುಗಳು ಮೇಲಿಂದ ಮೇಲೆ ಹೇಳುತ್ತಿದ್ದರು. ಆದರೆ ಅವರು ಪ್ರತಿಯೊಂದು ವಿಷಯದಲ್ಲಿ ಚನ್ನಾಗಿ ಗುಣಗಳನ್ನು ಸಂಪಾದಿಸುತ್ತಿದ್ದರು. ನಾಪಾಸ ಅನ್ನುವದು ಇವರಿಗೆ ಗೊತ್ತೇ ಇಲ್ಲ

ಜಯರಾಯರು ಕಾಲೇಜದಲ್ಲಿರುವಾಗಲೇ ತಾವು ಯಾವ ಸರಕಾರಿ ನೌಕರಿಯನ್ನು ಹಂಬಲಿಸದೆ ದೇಶಸೇವೆಗಾಗಿಯೇ ತಮ್ಮ ಮುಂದಣ ಆಯುಷ್ಯವು ಸವಿಯಬೇಕೆಂದು ನಿಶ್ಚಯಿಸಿದ್ದರು. ಅದರಂತೆ, ಸ್ವತಂತ್ರ ವ್ಯವಸಾಯವಾದ ವಕೀಲಿಯನ್ನೇ ಕಾಲೇಜದಿಂದ ಬಂದಮೇಲೆ ಪ್ರಾರಂಭಿಸಿದರು. ವಕೀಲಿಯಲ್ಲಿ ಇವರು ದಿನೇದಿನೇ ಹೆಸರಾಗುತ್ತ ನಡೆದರು. ಇತ್ತ ದೇಶಕಾರ್ಯವನ್ನು ಅವರು ಎಂದಿಗೂ ಮರೆಯಲಿಲ್ಲ. ವಿಜಾಪುರದ ಎಲ್ಲ ಸಾರ್ವಜನಿಕ ಪ್ರಶ್ನೆಗಳಲ್ಲಿಯೂ ಇವರು ಅಗ್ರಗಣ್ಯರಾಗಿದ್ದರು. ಮುನಸಿಪಾಲಿಟೀ, ಶ್ರೀಕೃಷ್ಣವಾಚನಾಲಯಗಳಲ್ಲಿ ಒಳ್ಳೇ ಮನಸ್ಸನ್ನು ಹಾಕಿ ಕೆಲಸ ಮಾಡಿದರು. ಇವರು ಹತ್ತೇ ವರ್ಷಗಳ ಹಿ ವಿಜಾಪುರ ಜಿಲ್ಹೆಯ ಮಟ್ಟಿಗಲ್ಲದೇ ಕರ್ನಾಟಕಕ್ಕೆಲ್ಲ ಮುಂದಾಳುಗಳಾದರೆಂಬದನ್ನು ಲಕ್ಷದಲ್ಲಿ ತಂದರೆ ಇವರ ಯೋಗ್ಯತೆಯು ಎಷ್ಟಿರಬೇಕೆನ್ನುವದು ತಾನೇ ಗೊತ್ತಾಗುತ್ತದೆ.

ಅಸಹಕಾರ ಚಳವಳಿಯು ಪ್ರಾರಂಭವಾದಾಗಿನಿಂದ ಇವರು ವಕೀಲಿಯನ್ನು ಬಿಟ್ಟುಬಿಟ್ಟರು ಆಮೇಲೆ ೩೦ ವರ್ಷಗಳಿಂದ ನಡೆದುಬಂದ "ಕರ್ನಾಟಕವೈಭವ"ವನ್ನು ಕೊಂಡು ತಾವೇ ಅದರ ಸಂಪಾದಕತ್ವವನ್ನು ವಹಿಸಿದರು ಈ ವ್ಯವಸಾಯದಿಂದ ಇವರು ಸರಕಾರದ ವಕ್ರದೃಷ್ಟಿಗೆ ಒಳಗಾಗಲು ಬಲ ಬಂದಿತು.

ಜಯರಾಯರು ಮೊದಲಿನಿಂದಲೂ ಅಶಕ್ತ ಪ್ರಕೃತಿಯವರು ಅಸಹಕಾರದ ಪ್ರಸಾರಕ್ಕಾಗಿ ಇವರು ಊರಿಂದೂರಿಗೆ ತಿರುಗಾಡಬೇಕಾದ್ದರಿಂದ ಅವರು ಹೆಚ್ಚಿಗೆ ಅಶಕ್ತರಾಗಲು ಕಾರಣವಾಯಿತು. ಇದೇ ಅಶಕ್ತತೆಯೇ ಅವರ ಮರಣಕ್ಕೆ ಕಾರಣವಾಯಿತು. ಲೋಕ ಕಲ್ಯಾಣಕ್ಕಾಗಿಯೇ ಇವರು ತಮ್ಮ ದೇಹವನ್ನು ಸವೆಸಿದರೆಂಬದು ಇದರಿಂದ ತಾನೇ ಗೊತ್ತಾಗುತ್ತದೆ.

ಕನ್ನಡನಾಡಿನಲ್ಲಿ ಮೇಲ್ತರದ ಒಂದಾದರೂ ದೈನಿಕವಿಲ್ಲವೆಂಬದಕ್ಕಾಗಿ ಅವರು ಹಗಲಿರಳು ಚಿಂತಾಕುಲರಾಗಿದ್ದರು ಕರ್ನಾಟಕ ವೈಭವವನ್ನು ದೈನಿಕವನ್ನಾಗಿ ಮಾಡಬೇಕೆಂಬ ಉತ್ಕಟೇಚ್ಛೆಯಾದರೂ ಅವರಿಗಿದ್ದಿತು. ಇದಕ್ಕಾಗಿ ಅವರು ದೊಡ್ಡ ಯಂತ್ರವನ್ನೂ ಹೊಸ ಮುಂಗಳೂರಿನ ಮಳಿಗೆಗಳನ್ನೂ ಕೂಡಿಸತೊಡಗಿದ್ದರು ಆದರೆ ಏನುಮಾಡುವದದೆ.? ಕರ್ನಾಟಕದ ದೈವವು ಇನ್ನೂ ತೆರೆದಿಲ್ಲ. कालाय तस्मै नमः

## ಜಯರಾಯರ ಮರಣದಕಾಲವು

ಶುಕ್ರವಾರ ಮುಂಜಾನೆಯವರೆಗೆ ಜಯರಾಯರ ಪ್ರಕೃತಿಯು ನೆಟ್ಟಗಿದ್ದಿತು. ಆದರೆ ಮಧ್ಯಾನ್ಹಕ್ಕೆ ಹೆಚ್ಚು ಹೆಚ್ಚು ಅಸ್ವಸ್ಥರಾಗಹತ್ತಿದರು ಮೂರುಸಂಜೆಯ ಮುಂದೆ ಬಾಯಿಯೇ ಹೋಯಿತು, ಎಲ್ಲರೂ ಗಾಬರಿಯಾದರು ಶನಿವಾರ ಮುಂಜಾವಿನಿಂದಂತೂ ಎಲ್ಲರೂ ಗಾಬರಿಯಾಗಲು, ಎಷ್ಟು ಚಿನ್ಹಗಳು ಬೇಕು ಅಷ್ಟೆಲ್ಲ ದೃಗ್ಗೋಚರವಾದವು. ವೈದ್ಯ ಸಂಭಾರೆ ಡಾ, ಜತಾರ ಮೊದಲಾದವರ ಉಪಚಾರವು ನಡದೇ ಇದ್ದಿತು ಸಾಯಂಕಾಲಕ್ಕೆ ಅವರು ಒಂದಾವರ್ತಿ ಎಲ್ಲರನ್ನೂ ನೋಡಿ ಹೊರಳಿ ಮಲಗಿಕೊಂಡರು ಕೂಡಲೇ ಪ್ರಾಣೋತ್ಕ್ರಮಣವಾಯಿತು ! ಬಾಯಿಬಂದಾಗುವ ಮೊದಲು ಅವರು ತಮ್ಮ ಕಡೆಯಮಾತುಗಳಿಂದು ಯಾರಿಗೂ ಏನೂ ಹೇಳಲಿಲ್ಲ, ತಾವು ಸಾಯುವೆನೆಂಬದು ಅವರಿಗೆ ಶನಿವಾರ ಗೊತ್ತಾದಂತೆ ತೋರಿತು.

## ಸ್ಮಶಾನಯಾತ್ರೆಯು

ಜಯರಾಯರು ಊರಹೊರಗೆ ಬಂಗ್ಲೆಯಲ್ಲಿದ್ದರು. ಅವರ ನಿಧನದ ಸುದ್ದಿಯು ಊರಲ್ಲಿ ಗೊತ್ತಾದಕೂಡಲೇ ಪುರನಿವಾಸಿಗಳು ಓಡೋಡುತ್ತ ಅಲ್ಲಿ ಕಲೆತರು, ಅವರ ಶವವನ್ನು ಊರೊಳಗಿಂದ ಹಾಯಿಸಿ ಸ್ಮಶಾನಕ್ಕೆ ಹೋಗಬೇಕೆಂದು ಮೊದಲಿಗೆ ಗೊತ್ತಾಯಿತು ಆದರೆ ಹಿಂದುಗಡೆಗೆ ಹಾಗೆ ಮಾಡುವದು ಅನುಚಿತವೆಂದು ಅಲ್ಲಿ ನೆರೆದವರು ನಿರ್ಧರಿಸಿದರು. ಸ್ಮಶಾನಯಾತ್ರೆಗೆ, ಪ್ರಾರಂಭವಾದಕೂಡಲೇ ಪುಷ್ಪಗಳು ತೂರಾಡಹತ್ತಿದವು! ನಾನೀ ಎಂದು ಜನರು ಹೆಗಲನ್ನು ಕೊಡಲು ಮುಂದೊರೆದು ಬರುತ್ತಿದ್ದರು. ಸ್ಮಶಾನಕ್ಕೆ ತಲ್ಪಿದ ಮೇಲೆ ಕನ್ನಡ ನವಜೀವನದ ಕಾರ್ಯಾಲಯದವರ ಪ್ರಯತ್ನದಿಂದ ಆ ಪೂಜ್ಯ ಶವದ ಫೋಟೋ ತೆಗೆಯಲ್ಪಟ್ಟಿತು. [ ಇದನ್ನು ನಾವು ಸ್ವಲ್ಪದಿನಗಳಲ್ಲಿಯೇ ನಮ್ಮ ನವಜೀವನದಲ್ಲಿ ಪ್ರಸಿದ್ಧಿಸುವೆವು ] ಆಮೇಲೆ ಅಗ್ನಿಸಂಸ್ಕಾರವಾಗಿ 'ವಂದೇಮಾತರಂ' ದ ಜಯಜಯಕಾರದಲ್ಲಿ ಕೂಡಿದ ಜನರೆಲ್ಲ ಬಯಲಾಗಹತ್ತಿದರು

# ಬಾಗಲಕೋಟೆಯಲ್ಲಿಯ ಅಪೂರ್ವ ಸಭೆಯು.

ಸ್ವರ್ಗವಾಸಿಯಾದ ದೇ. ಭ. ಜಯರಾಯರ ನಿಧನದ ಬಗ್ಗೆ ಆದ ದುಃಖವನ್ನು ವ್ಯಕ್ತಪಡಿಸುವ ಕುರಿತು ಮಂಗಳವಾರ ತಾ. ೨೭-೬-೨೨ನೇ ದಿವಸ ಇಲ್ಲಿಯ ತಾಜಿಧಿಯೇಟರದಲ್ಲಿ ಇಲ್ಲಿಯ ಶಹರನಿವಾಸಿಗಳ ಜಾಹೀರ ಸಭೆಯು ನೆರೆದಿತ್ತು. ಈ ಸಭೆಯನ್ನು ನಾವು ಅಪೂರ್ವ ಸಭೆಯೆಂದು ಬರೆಯಲು ಕಾರಣವೇನೆಂದರೆ ಈ ಸಭೆಯು ನಿಜವಾಗಿ ಅಪೂರ್ವವೇ ಆಗಿತ್ತು. ದೇ. ಭ. ಜಯರಾಯರು ಅಸಹಕಾರಿಗಳಲ್ಲಿ ಅಗ್ರಗಣ್ಯರು. ಈ ಸಭೆಯನ್ನು ನೆರೆಸಿದವರು ಸಂಪೂರ್ಣ ಸಹಕಾರಿಗಳು. ಜಯರಾಯರು ಬ್ರಾಹ್ಮಣರು. ನೆರೆಸಿದವರಲ್ಲಿ ಬ್ರಾಹ್ಮಣೇತರರು ವಿಶೇಷತಃ ವೀರಶೈವರು. ಈಗ ಕರ್ನಾಟಕದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ, ಬ್ರಾಹ್ಮಣ ವೀರಶೈವ, ಇಂಥಾದ ಜಾತಿಗಳಲ್ಲಿ ಪರಸ್ಪರ ಮತಭೇದವು ಕಂಡುಬರುತ್ತಿರುವಾಗ ಜಯರಾಯರಂಥವರ ನಿಧನದ ದುಃಖದಾಯಕವಾದ ಪ್ರಸಂಗದಲ್ಲಿ ನಮ್ಮಲ್ಲಿಯ ವೀರಶೈವ ಬಂಧುಗಳು ಮುಂದೆ ಬಂದದ್ದೆಂದರೆ ಅಪೂರ್ವವಲ್ಲವೆ? ಇಂಥ ಅಪೂರ್ವಸಭೆಯ ಅಧ್ಯಕ್ಷಸ್ಥಾನವನ್ನಾದರೂ ಅಪೂರ್ವವಾಗಿ ಲಿಂಗವಂತ ಗೃಹಸ್ಥರೇ ಸ್ವೀಕರಿಸಿದ್ದರು. ಇರಲಿ. ಹೀಗೆ ಅಪೂರ್ವ ಅಪೂರ್ವವೆಂದು ಹೇಳುವದು ಸಾಕು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಇಲ್ಲಿಯ ವೀರಶೈವ ಸುಪ್ರಸಿದ್ಧ ವ್ಯಾಪಾರಸ್ಥರಾದ ಶ್ರೀ. ಅಯ್ಯಪ್ಪಂಣಾ ಬ್ಯಾಳಿ ಇವರು ಸ್ವೀಕರಿಸಿದ್ದರು. ಮೊದಲು ಇಲ್ಲಿಯ ವಕೀಲರಾದ ರಾ. ರಾಮರಾವ ದಾತಾರ ಇವರು ಕೆಳಗಿನ ಠರಾವನ್ನು ಸಭೆಯ ಮುಂದೆ ಇಟ್ಟರು:—

“ಕರ್ನಾಟಕದ ಪ್ರಸಿದ್ಧ ಮುಂದಾಳುಗಳಲ್ಲೊಬ್ಬರೂ, ಸ್ವಾರ್ಥತ್ಯಾಗದ ಮೂರ್ತಿಗಳೂ, ದೇಶಸೇವೆಯಲ್ಲಿ ಸದಾತತ್ಪರರೂ, ಸದ್ಗುಣಿಗಳೂ, ಉದಾರರೂ ಲೋಕಪ್ರಿಯರೂ, ಆದ ದೇ. ಭ. ಜಯರಾವ ದೇಶಪಾಂಡೆಯವರ ನಿಧನದಿಂದ ಇಡೀ ಕರ್ನಾಟಕಕ್ಕೆ ವಿಶೇಷತಃ ವಿಜಾಪೂರಜಿಲ್ಲೆಗೆ ಅತ್ಯಂತ ಹಾನಿಯು ತಟ್ಟಿದ್ದು, ಆ ಬಗ್ಗೆ ಬಾಗಲಕೋಟೆಯ ನಿವಾಸಿಗಳಿಗೆ ಬಹಳೇ ವ್ಯಸನವಾಗುತ್ತದೆ. ದೇ. ಭ. ಜಯರಾಯರ ವಯೋವೃದ್ಧ ಮಾತಾಪಿತೃಗಳಿಗೂ ಕುಟುಂಬದ ಉಳಿದ ಜನರಿಗೂ ಆದ ಅಪಾರದುಃಖದಲ್ಲಿ ಇಲ್ಲಿಯ ನಿವಾಸಿಗಳು ಭಾಗೀದಾರರಿರುತ್ತಾರೆಂಬುದನ್ನು ಈ ಸಭೆಯು ಅವರ ಕುಟುಂಬದವರಿಗೆ ತಿಳಿಸುತ್ತದೆ; ಮತ್ತು ಪರಮಾತ್ಮನು ದೇ. ಭ. ಜಯರಾಯರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತದೆ”

ಈ ಠರಾವನ್ನು ಸಭೆಯ ಮುಂದೆ ಇಡುವಾಗ ರಾಮರಾಯರು ಜಯರಾಯರ ಚರಿತ್ರೆಯನ್ನು ಸಂಕ್ಷೇಪವಾಗಿ ವರ್ಣಿಸಿದರು. ಆಮೇಲೆ ಇಲ್ಲಿಯ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ. ಮುರಿಗೆಯ್ಯಾ ಜಂಗಿನ ಇವರು ಈ ಠರಾವಿಗೆ ಅನುಮೋದನಕೊಟ್ಟರು. ಅವರು ತಮ್ಮ ಭಾಷಣದಲ್ಲಿ ತಾವು ಜಯರಾಯರ ಬಾಲಮಿತ್ರರಿದ್ದು ತಮ್ಮ ಅವರ ನಡುವೆ ಎಷ್ಟೋ ಸಂಗತಿಗಳಲ್ಲಿ ಮತಭೇದವಿದ್ದರೂ ಅವಿುತ್ರತ್ವವು ಕಡೆತನಕ ಸ್ಥಿರವಾಗಿ ಉಳಿದಿತ್ತೆಂದೂ, ಜಯರಾಯರಿಗೆ ಡಾಕ್ಟರರು ಯಾರಿಗೂ ಮಾತಾಡಬೇಡವೆಂದು ಹೇಳಿದ್ದರೂ ಕೂಡ ತಾವು ಅವರ ಕಡೆಗೆ ಹೋದಾಗ ಜಯರಾಯರು ಅರ್ಧತಾಸಿನವರೆಗೆ ಸಂಭಾಷಣ ಮಾಡಿದ್ದರಮೇಲಿಂದ ತಮ್ಮಮೇಲೆ ಅವರು ಎಷ್ಟು ಅಭಿಮಾನವನ್ನು ತಾಳಿದ್ದರೆಂಬುದನ್ನು ಶ್ರೋತೃವೃಂದವೇ ಊಹಿಸಬೇಕೆಂದೂ, ಜಯರಾಯರಂಥ ಸ್ವಾರ್ಥತ್ಯಾಗಿಗಳೂ, ಸರಳಹೃದಯರೂ ಜಗತ್ತಿನಲ್ಲಿ ದೊರಕುವದು ಅತಿ ವಿರಳವಾಗಿದ್ದು ಅಂಥ ಜಯರಾಯರ ಮರಣದಿಂದ ಕರ್ನಾಟಕದೊಳಗಿನ ಎಲ್ಲ ಜಾತಿಯ ಜನರಿಗೆ ದುಃಖವಾಗಿರುವದೆಂದೂ ಆದ್ದರಿಂದ ಈ ಠರಾವನ್ನು ಎಲ್ಲರೂ ಅನುಮತಿಸಬೇಕೆಂದೂ ಹೇಳಿದರು. ಆಮೇಲೆ ಇಲ್ಲಿಯ ವಕೀಲರಾದ ಶ್ರೀ. ಹಾಲಪ್ಪನವರು ಈ ಠರಾವಿಗೆ ಪುಷ್ಟೀಕರಿಸಿದರು. ಜಯರಾಯರೂ ತಾವೂ ಸಹಪಾಠಿಗಳಾಗಿದ್ದು ಕಾಲೇಜದಲ್ಲಿರುವಾಗಿನಿಂದಲೇ ಅವರು ಯಾವದಾದರೊಂದು ರೀತಿಯಿಂದ ದೇಶಸೇವೆಯನ್ನು ಮಾಡಬೇಕೆಂದು ಯಾವಾಗಲೂ ವಿಚಾರಮಾಡುತ್ತಿದ್ದರೆಂದೂ ಅದರಂತೆ ಪ್ರಸಂಗಬಂದಕೂಡಲೇ ತಕ್ಕಷ್ಟು ಕಾಲದಲ್ಲಿಯೇ ಧಂದೆಗೆ ಶರಣುಹೊಡೆದು ದೇಶಸೇವೆಗಾಗಿ ಕಂಕಣಬದ್ಧರಾಗಿ ನಿಂತರೆಂದೂ ಜಯರಾಯರು ಹೋದದ್ದರಿಂದ ಕರ್ನಾಟಕದಲ್ಲಿ ಒಂದು ಜ್ಯೋತಿಯು ಇಲ್ಲದಂತಾಯಿತೆಂದೂ ಕೇವಲ ಠರಾವನ್ನು ಪಾಸಮಾಡುವದರಿಂದ ಮಾತ್ರ ಜಯರಾಯರ ಆತ್ಮಕ್ಕೆ ಶಾಂತಿಯು ದೊರೆಯದೆ, ಅವರ ಅನುಕರಣವನ್ನು ಮಾಡಲು ಕರ್ನಾಟಕದ ಜನರು ಸಿದ್ಧರಾದರೆ ಮಾತ್ರ ಜಯರಾಯರಿಗೆ ಶಾಂತಿಯು ದೊರೆಯುವದೆಂದೂ, ಒಳ್ಳೇ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಕಡೆಗೆ ದೇಶಭಕ್ತ ಕೌಜಲಗಿಯವರು ಈ ಠರಾವಿಗೆ ಪುಷ್ಟೀಕರಿಸುವಾಗ, ಜಯರಾಯರು ಮರಣಹೊಂದಿದ್ದರಿಂದ ಒಂದು ತರದ ಕಷ್ಟವಾಗಿದ್ದರೂ ಮತ್ತೊಂದುರೀತಿಯಿಂದ ವಿಚಾರಮಾಡಿದರೆ ಆನಂದವಾಗಿದೆಯೆಂದೂ ಯಾವ ಬ್ರಾಹ್ಮಣ-ಬ್ರಾಹ್ಮಣೇತರ - ಲಿಂಗಾಯತರ ನಡುವಿನ ಐಕ್ಯಕ್ಕಾಗಿ ಜಯರಾಯರು ಹಗಲಿರುಳು ಅವಿಶ್ರಾಂತವಾಗಿ ಪ್ರಯತ್ನಿಸಿದರೋ ಅಂಥ ಐಕ್ಯವು ಜಯರಾಯರನಿಧನದಿಂದ ಈಗ ಉಂಟಾಗಿರುವದೆಂಬುದು ಈ ಸಭೆಯಮೇಲಿಂದ ವ್ಯಕ್ತವಾಗುತ್ತಿದ್ದು ಭಾಸೀಸುವದ ಬೀಜವು ಈ ದುಃಖದಲ್ಲಿ ಅಡಕೋಸಿಯಾದದ್ದು ಆನಂದದ ಸಂಗತಿಯೆಂದೂ, ನಮ್ಮನಮ್ಮಲ್ಲಿ ಎಷ್ಟೋ ಮತಭೇದವಿದ್ದರೂ ಆ ಭೇದವನ್ನು ಒತ್ತಟ್ಟಿಗೆ ಇಟ್ಟು ಪರಸ್ಪರ ಮತೈಕ್ಯವಿದ್ದ ಸಂಗತಿಗಳ ಬಗ್ಗೆ ಎಲ್ಲರೂ ಒಮ್ಮನಸ್ಸಿನಿಂದ ಪ್ರಯತ್ನಮಾಡುವದು ಪ್ರತಿಯೊಬ್ಬರ ಕರ್ತವ್ಯವಾಗಿರುವದೆಂದೂ ಶ್ರೀ ಮುರಿಗೆಯ್ಯಾ ಜಂಗಿನ ಮತ್ತು ಹಾಲಪ್ಪಾ ಹಾಸೀಲಿ ಇವರು ಜಯರಾಯರ ಪರಮಮಿತ್ರರಾದ್ದರಿಂದ ಜಯರಾಯರು ಅಪೂರ್ಣವಾಗಿ ಮಾಡಿದ ಕಾರ್ಯವನ್ನು ಪೂರ್ಣಮಾಡುವ ಭಾರವು ಅವರಮೇಲೆ ಬಿದ್ದಿರುವದರಿಂದ ಅವರು ಕರ್ತವ್ಯದಕ್ಷರಾಗಿ ಆ ಕಾರ್ಯವನ್ನು ಕೈಕೊಳ್ಳಬೇಕೆಂದೂ, ಬ್ರಾಹ್ಮಣ ಬ್ರಾಹ್ಮಣೇತರವೆಂಬ ವಾದವನ್ನು ನಾಮಶೇಷವಾಗಿ ಮಾಡಿದರೆ ಕರ್ನಾಟಕದ ಕೀರ್ತಿಯು ಎಲ್ಲಕಡೆಯಲ್ಲಿ ಹಬ್ಬುವದೆಂದೂ, ಅದರಿಂದಲೇ ಶ್ರೀ. ಹಾಲಪ್ಪನವರು ತಮ್ಮ ಭಾಷಣದಲ್ಲಿ “ಕರ್ನಾಟಕದ ಒಂದು ಜ್ಯೋತಿಯು ಹೋಯಿತು” ಎಂದು ಹೇಳಿದ ಮಾತಿನ ವಿರುದ್ಧವಾಗಿ ಆ ಜ್ಯೋತಿಯು ಹೆಚ್ಚು ಹಬ್ಬುವದೆಂದೂ, ಕರ್ನಾಟಕದಲ್ಲಿಯ ತರುಣರು ಜಯರಾಯರ ಸ್ಥಾನವನ್ನು ಆಕ್ರಮಿಸಲಿಕ್ಕೆ ನಾಮುಂದೆ ನೀ ಮುಂದೆ ಎಂದು ಹಾರಿ ದೊರೆದರೆ ಹಾಲಪ್ಪನವರಿಗೆ ಆನಂದವಾಗುವದಲ್ಲದೆ ಜಯರಾಯರ ಆತ್ಮಕ್ಕಾದರೂ ಶಾಂತಿಯು ದೊರೆಯುವದೆಂದೂ ಹೇಳಿ ಈ ಠರಾವನ್ನು ಎಲ್ಲರೂ ಎದ್ದುನಿಂತು ಒಮ್ಮತದಿಂದ ಪಾಸುಮಾಡಬೇಕೆಂದು ಹೇಳಿದರು. ಎಲ್ಲರೂ ಎದ್ದುನಿಂತು ಆ ಠರಾವನ್ನು ಪಾಸುಮಾಡಿದಮೇಲೆ ಸಭೆಯು ವಿಸರ್ಜನವಾಯಿತು.

## ವಿಜಾಪೂರದಲ್ಲಿ ಸಭೆಯು.

ದೇ. ಜಯರಾಯರ ನಿಧನದ ನಿಮಿತ್ತ ವಿಜಾಪೂರದಲ್ಲಿ ರವಿವಾರ ತಾರೀಖು ೨೫—೬—೨೨ನೇದಿನ ಸ. ಭಕ್ತ್ರಿ ಥಿಯೇಟರದಲ್ಲಿ ಶ್ರೀ. ಆಲೂರಕರ ಇವರ ಅಧ್ಯಕ್ಷತೆಯು ಕೆಳಗೆ ಸಭಾ ಕೂಡಿ ದುಃಖ ಪ್ರದರ್ಶನ ಠರಾವು ಪಾಸಾಯಿತು.

## ಗದಗಿನಲ್ಲಿ ಸಭೆಯು.

ಅದೇ ದಿವಸ ಪಂಚರ ಹೊಂಡದ ಬೈಲಿನಲ್ಲಿ ದೇಶಭಕ್ತ ಅನಂತರಾವ ಜಾಲೀಹಾಳ ಇವರ ಅಧ್ಯಕ್ಷತೆಯಲ್ಲಿ ಸಭೆ ನೆರೆದು ಗದಗ ಶಹರ ನಿವಾಸಿಗಳಿಗಾದ ದುಃಖವನ್ನು ವ್ಯಕ್ತಪಡಿಸುವ ಠರಾವು ಪಾಸಾಯಿತು.

## ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯು.

ಜಯರಾಯರ ನಿಧನದಿಂದ ಕರ್ನಾಟಕಕ್ಕೆ ಭಯಂಕರ ಆಘಾತವಾಗಿದ್ದು ಆ ಬಗ್ಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಗೆ ಬಹಳೇ ದುಃಖವಾಗಿರುತ್ತದೆ. ಜಯರಾಯರ ವಯೋವೃದ್ಧ ಮಾತಾಪಿತೃಗಳಿಗೂ, ಇತರ ಜನರಿಗೂ ಆದ ದುಃಖವು ಅಪಾರವಾದದ್ದಿದ್ದು, ಆ ಬಗ್ಗೆ ಕಮೀಟಿಯವರು ಸ್ವಲ್ಪಾದರೂ ಸಾಂತ್ವನಮಾಡುವದು ತಮ್ಮ ಕರ್ತವ್ಯವದೆ. ಈ ಆಶಯದ ಠರಾವು ಸರ್ವಾನುಮತದಿಂದ ಪಾಸಾಯಿತು.

ಎಜಂಟರು ಬೇಕು! ಎಜಂಟರು ಬೇಕು!!

ನಂಬರ ೧ ನೇ ನಿರ್ಮಲವಾದ

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾಗ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಶಿಗುತ್ತದೆ. ವ್ಯಾಪಾರಸ್ಥರಿಗೆ ಬಹಳೇ ಸೋಯಿದರದಲ್ಲಿ ತೈಲವು ಸಿಗುವದು ನಿಕ್ಕಿ ೨೪ ಔಂಸ ತೈಲದಬಾಟ್ಲ ಅಥವಾ ಶಬ್ಬಿ ೧ ಕ್ಕೆ ರೂಪಾಯಿ ೩—೦—೦ಡಜನ್ ವಿಶೇಷ ಮಾಹಿತಿ ಪತ್ರದ್ವಾರಾ

ಬಿ ಎ ಪೈ ಕಂಪನಿ

ಪೋಷ್ಟ ಹೊನ್ನಾವರ

ಜಿಲ್ಹಾ ಉತ್ತರಕಾನಡಾ

॥ ರಾಷ್ಟ್ರದೇವೋ ಭವ ।

## ಕನ್ನಡಿಗರಿಗೆ ಸಂದೇಶ

**ಪ್ರಿಯ ಬಂಧು ಭಗಿನಿಯರೇ,**

೧೯೨೧ ನೇ ಜುಲೈ ೧ ನೇ ತಾರೀಖಿನ ದಿವಸ ಧಾರವಾಡದಲ್ಲಿ ಸಂಭವಿಸಿದ ಹೃದಯದ್ರಾವಕನಾದ ಸಂಗತಿಯನ್ನು ಯಾರೂ ಮರೆಯುವಂತಿಲ್ಲ. ಯಾಕಂದರೆ ಆ ದಿವಸದ ಕೊಲೆಯು ಹಾಗು ಅದರಲ್ಲಿ ಸತ್ತುಳಿದ ರಾಷ್ಟ್ರ ಕಾರ್ಯದಲ್ಲಿ ಸಿಕ್ಕು ಶಿಕ್ಷೆ ಹೊಂದಿದ ಸುಮಾರು ಸಾಲ್ವತ್ತು ನಿರಪರಾಧಿ ಇಡೀ ಕರ್ನಾಟಕವನ್ನೇ ಜಾಗೃತಿಗೊಳಿಸಿದ್ದಾರೆ. ಇದು ನಮ್ಮ ಪ್ರಾಂತದ ಭಾಗ್ಯೋದಯದ ದಿವಸೇ ಸರಿ! ಆ ದಿವಸವನ್ನು ನಾವು ಎಂದೆಂದಿಗೂ ಮರೆಯತಕ್ಕದ್ದಲ್ಲ ಕೊಲೆಯಾದ ಮೂವರು ಮುಸಲ್ಮಾನ ಬಂಧುಗಳ ಆತ್ಮಕ್ಕೆ ಶಾಂತಿನೀಯಲೆಂದು, ನಾಲ್ಲರೂ ಆ ದಿವಸದ ನಮ್ಮ ವ್ಯವಹಾರವೆಲ್ಲವನ್ನು ಬಂದಿಟ್ಟು, ಈಶಪ್ರಾರ್ಥನೆಯಲ್ಲಿಯೂ, ಉಪವಾಸದಲ್ಲಿಯೂ ಕಾಲ ಕಳೆಯತಕ್ಕದ್ದು ಈ ಮಹನೀಯರು ತಮ್ಮ ಸರ್ವಸುಖವನ್ನು ಅದೇಕೆ ಪ್ರಾಣವನ್ನೇ ಅರ್ಪಿಸುವಂಥ ರಾಷ್ಟ್ರ ಕಾರ್ಯಕ್ಕೆ ಕೈಲಾದಷ್ಟು ಹಣ ಸಹಾಯ ಮಾಡಿರಿ. ಈ ದಿನವನ್ನು ಸಾತಂತ್ರ್ಯ ಯುದ್ಧದಲ್ಲಿಯ ಸುವರ್ಣಾಕ್ಷರದಿಂದ ಬರೆಯತಕ್ಕ ದಿನವೆಂದು ಯಾವತ್ತೂ ಆಬಾಲವೃದ್ಧ ಕರ್ನಾಟಕಸ್ಥರು ತಮ್ಮ ಹೃದಯದಲ್ಲಿ ಬರೆದಿಟ್ಟುಕೊಳ್ಳತಕ್ಕದ್ದು. ಕರ್ನಾಟಕಸ್ಥರೆ! ನಿಮ್ಮ ಬಂಧುಗಳ ನಲುವಾಗಿ ಎಳ್ಳಷ್ಟಾದರೂ ಅಭಿಮಾನವಿದ್ದತ್ತಿದ್ದರೆ, ಮತ್ತು ಪ್ರಾಣವನ್ನು ಅರ್ಪಣಮಾಡಿದವರ ಆತ್ಮಕ್ಕೆ ಶಾಂತಿಯನ್ನೀಯಲು ಲವಲೇಶವಾದರೂ ನಿಮ್ಮ ಮನಸ್ಸಿನಲ್ಲಿದ್ದರೆ, ಇನ್ನಾದರೂ ನಿದ್ರೆಯಿಂದೆಚ್ಚತ್ತು ಕನ್ನಡ ನಾಡಿನಲ್ಲಿ ಚೇತನವನ್ನು ಹುಟ್ಟಿಸಲಿಕ್ಕೆ ಉಪಕ್ರಮಿಸುವಿರೆಂದು ನಂಬಿದ್ದೇನೆ. ಇಂಥ ದಿವಸಗಳ ಮೇಲೆಯೇ ಕರ್ನಾಟಕದ ಅಸ್ತಿತ್ವವು ಅವಲಂಬಿಸಿರುವದೆಂಬ ಸಂಗತಿಯನ್ನು ಮರೆಯದೆ ನಿಮ್ಮ ಕರ್ತವ್ಯಕ್ಕಾಗಿ ಚೊಂಕ ಕಟ್ಟಿ ಸಿದ್ಧರಾಗಿರಿ

ನಾ ಸು. ಹರ್ಡೀಕರ.

ಈ ಸಂದೇಶವು "ಕರ್ನಾಟಕ ವಾರ್ತಾ ಪ್ರಸಾರಕ ಸಂಘ ಹುಬ್ಬಳ್ಳಿ" ಇವರ ವತಿಯಿಂದ ಪ್ರಸಿದ್ಧಿಸಲ್ಪಟ್ಟಿರುವದು

ತರುಣ ಕನ್ನಡಿಗರೇ,

ಮುಂದೆ ಬನ್ನಿರಿ! ಎದೆಗುಂದಬೇಡಿರಿ! ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಆಜ್ಞೆಯನ್ನು ಪಾಲಿಸಿರಿ! ಈ ಚಳವಳಿಯು ಯಶಸ್ಸನ್ನು ಹೊಂದುವದಕ್ಕೆ ದೀರ್ಘಪ್ರಯತ್ನಮಾಡದೆ ಇರಬೇಡಿರಿ! ನಿಮ್ಮ ದೀರ್ಘಪ್ರಯತ್ನಗಳಿಗೆ ದೇವರು ಯಶಸ್ಸು ಕೊಟ್ಟೇ ಕೊಡುವನು.

ಶ್ರೀನಿವಾಸರಾವ. ಕೌಜಲಗಿ.

ಇಂಡಿಯಾ ಪ್ರಾವ್ಹಿಡೆಂಟ ಕಂ. ಲಿ. ಕಲಕತ್ತಾ.

ಮಧ್ಯಮ ಸ್ಥಿತಿಯ ಕುಟುಂಬದಾರರಿಗೆ ಈ ಕಠಿಣ ಕಾಲವನ್ನು ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಭಾರವಾಗಿರುವದು ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರೆಗೆ ದೊರಕಿಸಬಹುದು

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ.

V J PARVATIKER
General Agent BAGALKOT,

## ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರದ್ವಾರದಿಂದ, ಉತ್ತಮವಾದ ಸ್ವದೇಶೀ ಸಾಬೂಣವನ್ನು ಮಾಡುವದಕ್ಕೆ ಕಲಿಸುವೆವು.

ಪೀ. ರೂ ೫. ಉದ್ಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು

ಕಲಾಭುವನ—ರಾಷ್ಟ್ರೀಯ ಶಾಲಾ
ಧಾರವಾಡ.

## ಜಾಹೀರ ನೋಟೀಸು.

ಕೆಳಗೆ ಸಹಿ ಮಾಡೋ ಅವರ ಕಡೆಯಿಂದಾ ಯಾವತ್ತು ಜನರಿಗೆ ಜಾಹೀರ ನೋಟೀಸಿನಿಂದಾ ತಿಳಿಸುವದೇನಂದರೆ:—

ಬಾಗಲಕೋಟೆ ತಾಲೂಕಪೈಕಿ ಶಿರಾ ಗ್ರಾಮದಲ್ಲಿ ಇರೋ ರಿವಿಜನ್ ಸರ್ವೆ ನಂಬರ ೭೯ ನೇ ಪಟ್ಟಿಗಳು ಮತ್ತು ಸದರಿ ಗ್ರಾಮದಲ್ಲಿ ಇರೋ ಮನಿ ವ ಬೈಲಜಾಗಾ ವಗೈರೆ ಸ್ಥಾವರ ಮಿಳಕತು ವ ಪುಷ್ಕಳ ಜಂಗಮ ಜಿಂದಗಿ ವಗೈರೆ ಪಿತ್ರಾರ್ಜಿತ ಮಿಳಕತಿಗಳಿದ್ದು ಇವುಗಳನ್ನು ಅಜ್ಞಾನ ಕಲ್ಲಪ್ಪನ ತಂದಿಯಾದ ಗಿರಮಲ್ಲಪ್ಪಾ ಕಂಬಾರ ಸಾಕಿನ ಶಿರಗಿ ಇವನು ಈಗ ವ್ಯಸನಾಧೀನನಾಗಿ ಅವನಿಗೆ ಈಗ ತನ್ನ ಸ್ವಂತ ಫಾಯದೆ ವಗೈರೆ ಏನು ತಿಳಿಯೋ ಸ್ಥಿತಿ ಇಲ್ಲ ಈ ಸ್ಥಿತಿಯಲ್ಲಿ ಮೇಲೆ ಬರೆದ ಸ್ಥಾವರ ಮಿಳಕತಿಗಳನ್ನು ಎರಡನೇ ಜನರು ಅಜ್ಞಾನ ಕಲ್ಲಪ್ಪಾ ಇವನ ಲುಕ್ಸಾನ ಮಾಡೋ ಇರಾದೆಯಿಂದಾ ಭುಲತಾಪಕೊಟ್ಟು ಸದರ ಗಿರಮಲ್ಲಪ್ಪಾ ಮಲ್ಲಪ್ಪಾ ಕುಂಬಾರ ಇವನ ಕಡಿಂದಾ ಪ್ರೋಕಳ ಖರೀದಿ ವ ಬಕ್ಷೀಸ ಅಗರ ವತ್ತಿ ವಗೈರೆ ಕಾಗದಗಳನ್ನು ಬರಿಶಿಕೊಳ್ಳತಕ್ಕವರು ಇದ್ದಂತೆ ತಿಳಿಯುತ್ತದೆ ಮೇಲೆ ಬರೆದ ಸ್ಥಾವರ ಮಿಳಕತಿಗಳು ಪಿತ್ರಾರ್ಜಿತಪೈಕಿ ಇದ್ದು ಅವುಗಳನ್ನು ವ್ಯಸನಾಧೀನ ಸ್ಥಿತಿಯಲ್ಲಿ ಇದ್ದ ಸದರಿ ಅಜ್ಞಾನ ಕಲ್ಲಪ್ಪನ ತಂದಿ ಗಿರಮಲ್ಲಪ್ಪಾ ಈತನ ಕಡಿಯಿಂದಾ ಯಾರು ಖರೀದಿ, ವತ್ತಿ ವ ಬಕ್ಷೀಸ ವಗೈರ ಯಾವದೇ ಕಾಗದಪತ್ರ ಮಾಡಿಶಿಕೊಳ್ಳಬಾರದು. ಜರ ಯಾರಾದರೂ ಇದಕ್ಕೆ ತಪ್ಪಿದರೆ ಮೇಲೆ ಬರೆದ ಯಾವ ಮಿಳಕತಿಗಳಮೇಲೆ ಏನು ಯಾವಪ್ರಕಾರದ ಹಕ್ಕು ಅಗರ ಮಾಲ್ಕಿಯತಿ ಉಳಿಯಲಿಕ್ಕಿಲ್ಲಾ ತಿಳಿಯುವದು. ತಾ॥ ೨೫-೬-೧೯೩೩ ಇಸ್ವಿ

☞ ಈ ಎಡಗೈ ಹೆಬ್ಬಟ್ಟಿನ ಗುರ್ತಾ ಕಲ್ಲಪ್ಪಾ ತಂದಿ ಗಿರಮಲ್ಲಪ್ಪಾ ಕುಂಬಾರ ಅಜ್ಞಾನ ಪಾಲನಕರ್ತಾ ತಾಯಿ ಭಾಗವ್ವಾ ಗಂಡಾ ಗಿರಮಲ್ಲಪ್ಪಾ ಕುಂಬಾರ ಮಾಡಿದ್ದು ಇರುತ್ತದೆ

ಮುಂ ದೊರೆಯಿರಿ.

R No. B 1589

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು

ವರ್ಷ ೧ | ಬಾಗಲಕೋಟ ಆಷಾಢ ಶುದ್ಧ ೧೨ ಶಕೆ ೧೮೪೪ ಗುರುವಾರ ತಾ ೬ ಜುಲೈ ೧೯೨೨. | ಸಂಚಿಕೆ ೩೦

## ಮಹಾತ್ಮರ ನುಡಿಯು

### ಅಹಿಂಸಾ

(ಯಂಗ ಇಂಡಿಯಾ) (೨೮—೬—೨೦.)

ನಾವೆಲ್ಲರು ಅಪೇಕ್ಷಿಸುತ್ತಿರುವಂಥ ಸ್ವರಾಜ್ಯವು ಕಠಿಣತರವಿರು ವದೆಂದು ನನಗೆ ಮನವರಿಕೆಯಾಗಹತ್ತಿರುವದು. ಆದರೆ ನಾವು ಅದನ್ನು ಸಮೀಪಿಸಿದಂತೆ ಅದನ್ನು ಮುಟ್ಟುವದು ಹೆಚ್ಚಿಚ್ಚು ದುಸ್ತರವಾಗಿರುವದು. ಜಯವು ದೊರೆಯಹತ್ತಿದಾಗಲೆ ಗಂಡಾಂತರಗಳು ಮಿಗಿಲಾಗಿರುವವು. ಕೊನೆಯ ಪ್ರಯತ್ನವು ಹೆಚ್ಚು ಬಿಕ್ಕಟ್ಟಿನದಾಗಿರದೆ ಎಂದೂ ಯಾವ ಹೇಳಿಕೊಳ್ಳುವಂಥ ಜಯವು ಪ್ರಾಪ್ತವಾಗಿರುವದಿಲ್ಲ. ದೇವರ ಕಡೆಯ ಪರೀಕ್ಷೆಯು ಎಲ್ಲಕ್ಕೂ ಘೋರತರವಾಗಿರುವದು. ಅಸುರರ ಕಡೆಯ ಮನವೊಲಿಸುವದಾದರೂ ಶೀರ ಮೋಹಕವಾಗಿರುವದು. ನಾವು ಸ್ವತಂತ್ರರಾಗಲಿಚ್ಛಿಸುವದಾದರೆ ರಾಕ್ಷಸರ ಮಾಯಾಮಯವಾದ ಅಘೋರವಾದ ಮೋಹಕ ಬಲೆಗೆ ಬಲೆಬೀಳದೆ ದೇವರ ಕಟ್ಟಕಡೆಯ ಪರೀಕ್ಷೆಯಲ್ಲಿ ಪಾರಾಗಲೇ ಬೇಕಾಗುವದು.

ಅಹಿಂಸೆಯು ಅಸಹಕಾರದ ಜೀವವಾಗಿರುವದು. ನನಗೆ ಎಲ್ಲದರಲ್ಲಿ ಅಪಯಶಸ್ಸು ಒದಗಿದಾಗ್ಯೂ ನಾವು ಹಿಂಸೆಯನ್ನು ಆಶ್ರಯಿಸದಿದ್ದಲ್ಲಿ ಹಿಗೆಯೇ ಈ ಯುದ್ಧವನ್ನು ಸಾಗಿಸಬಹುದು ಆದರೆ ಅಹಿಂಸೆಯನ್ನು ಬಿಟ್ಟರೆ ಮಾತ್ರ ನಮ್ಮ ಗತಿಯು ನೆಟ್ಟಗಾಗಲಾರದು ಸರಕಾರವೆಂಬ ಕಟ್ಟಡಕ್ಕೆ ಹಿಂಸೆಯೆಂಬುವದೇ ಮುಖ್ಯವಾದ ಮೂಲೆಗಲ್ಲಾಗಿರುವದೆಂಬುದನ್ನು ನಾವು ಮರೆಯಬಾರದು. ಜನರನ್ನು ಒತ್ತಿ ಮುರಿಬಡಿಯುವದೇ ಸರಕಾರದ ಕೊನೆಯ ಬಹಾಸ್ತ್ರವಾಗಿರುವದರಿಂದ, ಅದರ ವಿರುದ್ಧ ನಾವು ಹಿಂಸೆ ಪ್ರಯೋಗ ಆಟನಡೆಯೂ ಸಾಗದಂತೆ ಎಲ್ಲ ವ್ಯವಸ್ಥೆಯನ್ನು ಮಾಡಿಕೊಂಡಿರುವರು; ಆದ್ದರಿಂದ ನಾವು ಹಿಂಸಾತ್ಮಕವಾದ ಮಾರ್ಗವನ್ನು ಸ್ವೀಕರಿಸಿದಲ್ಲಿ ಅವರಿಗೆ ನಾವಾಗಿಯೇ ಸಹಾಯವನ್ನು ಮಾಡಿಕೊಟ್ಟಂತಾಗುವದು. ನಮ್ಮಿಂದೇನಾದರೂ ಅತ್ಯಾಚಾರ ಅಥವಾ ಹಿಂಸೆಯು ಘಟಿಸಿದರೆ ಅದು ನಮ್ಮ ಪಡ್ಡತನದ ಮತ್ತು ಮೂರ್ಖತನದ ಲಕ್ಷಣವೇ. ಬೇಕಾದಷ್ಟು ಯಾತನೆ ಕೊಟ್ಟರೂ ಅದನ್ನು ಸಹಿಸು ನಿಲ್ಲುವದೇ ನಿಜವಾದ ದಳವಾಯಿಯ ಲಕ್ಷಣವು ಪೈರಿಗಳು ಬಿಡದೆ ಕಾಡಿಸುವ ಸ್ಥಳಗಳನ್ನು ತಪ್ಪಿಸಬೇಕೆಂಬುದನ್ನು ತಿಳಿಯ ಬೇಕು. ಸರಕಾರವು ನಮಗೆ ಯಾತನೆ ಕೊಡಹತ್ತಿದಾಗೆಲ್ಲ ನಮಗಾಗಿ ಒಲಿ ಬಿಟ್ಟುಕೊಂಡ ಚಾರಿತ್ರ್ಯವೆಂದು ತಿಳಿದುಕೊಂಡು ಬಹು ಜಾಗೃತರಾಗಿರಬೇಕು.

ಚೌರೀಗಡದ ಸಂಗತಿಯನ್ನು ಇಲ್ಲಿ ವಿಚಾರಿಸುವಾ, ಪೋಲೀಸರು ನಿರ್ದಯರಾಗಿ ಯಾತನೆ ಕೊಟ್ಟದ್ದು ಮೇಲೆಯೇ ಕೋರುತ್ತಿರುವಂತೆ ಹಾಗೆ ಮಾಡಿರುವದು ಅವರ ಕರ್ತವ್ಯವಾಗಿರುವದೆಂಬುದು ನನಗೆ ಎಂದೋ ಗೊತ್ತಾಗಿರುವದು. ಅಂದರೂ ಈ ಪ್ರಕಾರ ಹಾಕಿದ ಅವರ ಹವಣಿಕೆಗೆ ಚೌರೀಗಡದ ಜನರು ಬಲಿಬಿದ್ದರು. ತಾವಾಗಿಯೇ ಸಂಕಟವನ್ನು ತಂದುಕೊಂಡು ಹಿಂಸೆಯ ಸ್ವಾತ್ರ್ಯವಹಿಸಿದರು. ಪೋಲೀಸರನ್ನು ಯಾರು ಕೊಂದರೆಂಬುವದು ಇನ್ನೂ ಗೊತ್ತಾಗಿರುವದಿಲ್ಲ. ತಾವು ಘಾತಿಸಿಲ್ಲವೆಂದು ಸಿದ್ಧಮಾಡುವ ಭಾರವು ಜನರಮೇಲೆಯೇ ಇರುವದು

ನಮ್ಮದೇ ತಪ್ಪಾಗಿರುವದೆಂದು ಅಂದುಕೊಳ್ಳೋಣ, ನಾವು ಸರಳವಾದ ಪತ್ತಿಯಾದ ಮತ್ತು ಸಮೀಪವಾದ ಮಾರ್ಗದಿಂದ ಹೋಗಲಿಚ್ಛಿಸಿದರೆ ನಾವು ಉತ್ತರಾವಲಂಬಲರಾಗಿ ನಡೆಯಬಾರದು, ಯಾವದೇ ಘಾತುಕ ತಪ್ಪನ್ನು ತುಂಟಜನರ (ಬಿಡಾಡಿಗಳ) ಮೇಲೆ ಹಾಕಿ ವಾರಾಗಲಿಚ್ಛಿಸಬಾರದು, ಅವರು ಮಾಡಿದ ತಪ್ಪಿಗಾಗಿಯೂ ನಾವೇ ಹೊಣೆಯಾಗಿರಬೇಕು; ಇಲ್ಲವಾದರೆ ಸ್ವರಾಜ್ಯಕ್ಕೆ ನಾವು ಯೋಗ್ಯರಲ್ಲವೆಂದು ನಾವೇ ಹೇಳಿದಂತಾಗುವದು, ಅಂಥ ತುಂಟರನ್ನು ಕೂಡಾ ತಡೆದು ಹಿಡಿಯುವಷ್ಟು ಸಾಮರ್ಥ್ಯವು ನಮ್ಮಲ್ಲಿರಬೇಕು. ನಾವು ನಡಿಸಿರುವ ಧರ್ಮದ ಮತ್ತು ರಾಷ್ಟ್ರದ ಕಾರ್ಯಕ್ಕೆ ತಾವು ಎಷ್ಟು ಗಂಭೀರವೆಂಬ ಜ್ಞಾನವು ಅವರಿಗೂ ಬರಬೇಕು. ಪ್ರತಿಯೊಬ್ಬ ಸ್ತ್ರೀಪುರುಷನ ಈ ಚಳವಳಿಯು ಮುಷ್ಕರನ್ನೂ ಪತಿತರಾದವರನ್ನೂ ಉದ್ಧರಿಸಬೇಕು. ಇದೇ ನಮ್ಮ ಧ್ಯೇಯವಾಗಿದೆಂಬುದನ್ನು ಮರೆಯಬಾರದು. ಇದನ್ನು ನಾವು ಬರೇ ಬಾಯಿಂದ ಅನ್ನುವದಾದಲ್ಲಿ ಈಗಿನ ಅನಿಷ್ಟ ಸರಕಾರಕ್ಕಿಂತಲೂ ಹೆಚ್ಚು ಅನಿಷ್ಟವಾದ ಪದ್ಧತಿಯನ್ನು ಹಾಕಿಕೊಟ್ಟ ದೋಷವು ನಮಗೆ ಹತ್ತದೆ ಇರದು

ಅಷ್ಟರಿಂದ ನಾವು ಅಹಿಂಸಾತ್ಮಕ ಅಸಹಕಾರವನ್ನು ಆಶ್ರಯಿಸಿರುವವರೆಗೆ, ಮನಸ್ಸಿನಿಂದಾಗಲಿ, ಶಬ್ದದಿಂದಾಗಲಿ, ಆಚಾರದ ಕ್ರಿಯೆಯಿಂದಾಗಲಿ ಹಿಂಸೆಯನ್ನು ಆಚರಿಸುವದಿಲ್ಲವೆಂದು ಶಪಥಮಾಡಬೇಕು. ಇದರಲ್ಲಿ ನಮ್ಮ ವಿಶ್ವಾಸವಿರದಿದ್ದರೆ ಅಥವಾ ಇದರಂತೆ ಆಚರಿಸುವ ಶಕ್ತಿಯು ನಮ್ಮಲ್ಲಿರದಿದ್ದರೆ ಅದರಂತೆ ಸ್ಪಷ್ಟವಾಗಿ ಒಡೆದು ಹೇಳಿಬಿಡುವದು ಲೇಸು

ಇಂಥ ಪರೀಕ್ಷೆಯಲ್ಲಿ ನಿಲ್ಲಲು ನಾವು ಸೋಲಬಹುದೆಂದು ನಾನು ಶಂಕಿಸುತ್ತಿರುವೆನೆಂದು ವಾಚಕರು ತಿಳಿಯಕೂಡದು. ಇದಕ್ಕೆ ಒದಲಾಗಿ ಒಂದೇ ಮೇಲಿನ ನಮ್ಮ ಹಿಡತವು ಹೆಚ್ಚಾಗಹತ್ತಿರುವದೆಂದು ನನ್ನ ನಂಬಿಗೆಯಾಗಿರುವದು. ಮತ್ತು ಜನಕ್ಕೆ

ಯಾದರೂ ಅಹಿಂಸೆಯ ಅವಶ್ಯಕತೆಯನ್ನು ಅಪೂರ್ವವಾಗಿ ಕಂಡು ಹಿಡದಿರುವದು.

ಆದರೆ ನಾವಾಗಿಯೇ ಆರಿಸಿ ತೆಗೆದ ಮಾರ್ಗದಿಂದ ತಪ್ಪಿ ಸ್ವಲ್ಪ ಅತ್ತ ಹೋದಾಗೆಲ್ಲ ಮುಂದಾದರೂ ಹೋಗದಹಾಗೆ ಅದರಿಂದಾ ಗೃತರಾಗದಿದ್ದರೆ ಮೂರ್ಖತನವಲ್ಲವೆ? ಮೇಲಾಗಿ ಸರಕಾರವು ಅತ್ಯಂತ ಗಟ್ಟಿ ಯಾತನೆಕೊಡಹತ್ತಿದಾಗ 'ಎತ್ತರಿಕ್ಕ ಎಚ್ಚರಿಕೆ' ಎಂದು ಹೇಳುವದು ಆವಶ್ಯವಾಗಿರುವದು. ಈ ಪೀಡಿಸುವದಕ್ಕೆ ಸಂಯುಕ್ತಪ್ರಾಂತದಲ್ಲಿ ಮಿತಿ ತಪ್ಪಿರುವದು- ಶರವಾಣಿಯನ್ನು ಬ...ಶಿ ಪಂಟಿಗೆ ಹಿಡಿದೊಯ್ದು ಅದೇ ...ವನ ಅವಸರದಿಂದ ನ್ಯಾಯವಿಚಾರಣೆಯನ್ನು ಮುಗಿಸಿ ಅಪರಾಧಿಯೆಂದು ನಿರ್ಣಯಿಸಿ ಶಿಕ್ಷೆಯನ್ನು ಸಾಯಂಕಾಲದೊಳಗಾಗಿ ವಿಧಿಸಿ ಜೇಲಿಗಟ್ಟುವವೆಂದರೆ ಎಂಥ ಶಾಂತಮನುಷ್ಯನಿಗೂ ಸಿಟ್ಟುಬರುವಮಾತು. ಅಪರಾಧಿಯೆಂದು ನಿರ್ಣಯಿಸಿದ ಕ್ರಮವನ್ನು ನೋಡಿದರೆ ಮ್ಯಾಜಿಸ್ಟ್ರೇಟನಿಗೆ ಕಾಯದೇಜ್ಞಾನವೇ ಇಂಲಿಲ್ಲವೆಂದೂ ಇದ್ದರೂ ಅದನ್ನು ಆದರಿಸಲಿಲ್ಲವೆಂತೂ ಕಂಡುಬರುತ್ತದೆ. ಅಪರಾಧಿಯೆಂದು ಠರಾಯಿಸಲಿಕ್ಕೆ ಸಾಕಷ್ಟು ಪುರಾವೆಗಳಿರಲಿಲ್ಲ- ಅಪರಾಧಿಯೆಂದು ಗೊತ್ತುಮಾಡಿ ಶಿಕ್ಷೆಯನ್ನು ಕೊಡಬೇಕೆಂಬುವದು ಮೊದಲೆ ನಿಯಮಿತವಾದಂತೆ ತೋರುತ್ತದೆ ಪುರಾವೆ ಹುಟ್ಟಿಸುವದೊಂದು ತಮಾಷ ಮಾಡಿರುವರು ಅಧಿಕಾರಿಯ ಹುಕುಮಿಗೂ ನ್ಯಾಯಾಧೀಶನ ನ್ಯಾಯನಿರ್ಣಯಕ್ಕೂ ಅಂತರವೇ ಇಲ್ಲದಂತಾಗಿರುವದು. ನ್ಯಾಯಾಧೀಶನ ನ್ಯಾಯನಿರ್ಣಯವೇ ಹೆಚ್ಚು ಘಾತುಕವಾದದ್ದಾಗಿರುವದು ವಿಚಾರಣೆಯಿಲ್ಲದೆ ಶಿಕ್ಷೆ ವಿಧಿಸಿದರೆಂದರೆ ಬಹಳ ಅನ್ಯಾಯ ಕಾಣುವದು ಆದರೆ ನ್ಯಾಯನಿರ್ಣಯದ ಆಟವನ್ನಾಡಿ (ಫಾಸಿ)ಯೇ ಆಗಲಿ ಶಿಕ್ಷೆವಿಧಿಸಿದರೆ ಅಷ್ಟೊಂದು ಅನ್ಯಾಯವೆನಿಸುವದಿಲ್ಲ. ದಬ್ಬಾಳಿಕೆಯ ಕಾಯದೆಗಳನ್ನು ತೆಗೆದೊಗೆಯಬಹುದು ಆದರೆ ದಬ್ಬಾಳಿಕೆಯು ನಿಲ್ಲಲಾರದ ಕೇವಲ ಬಾಹ್ಯಸ್ವರೂಪವು ಬದಲಾದರೂ ತಥ್ಯಾಂಶವು ಅದೇ ಉಳಿದಿರುವದು. ಆದರೆ ನಮಗೆ ಬೇಕಾದದ್ದು ಇಂಥ ಬಾಹ್ಯಬದಲಾವಣೆಯಲ್ಲ. ಕಾಯದೆಯ ತಥ್ಯವು ಬದಲಾಗಬೇಕು; ಅವರ ಅಂತಃಕರಣವು ಬದಲಾಗಬೇಕು.

ಈ ಪ್ರಕಾರದ ಬದಲಾವಣೆಯು ನಮಗೆ ಬೇಕಾದಲ್ಲಿ ಮೊದಲು ನಾವು ಬದಲಾಗಬೇಕು ಅಂದರೆ ದಬ್ಬಾಳಿಕೆಗೆ ಹಣಿಯದವರಾಗಬೇಕು- ದಬ್ಬಾಳಿಕೆಗೆ ಉತ್ತರವಾಗಿ ಹಿಂಸೆಯನ್ನು ಹೇಗೆ ಮಾಡಕೂಡದೋ, ಹಾಗೆಯೇ ಇಂಥ ದಬ್ಬಾಳಿಕೆಗೆ ಎಷ್ಟು ಕಠೋರವಾದಾಗ್ಯೂ ಮೆತ್ತಗಾಗಬಾರದು.

ಸಂಯುಕ್ತಪ್ರಾಂತದಲ್ಲಿ ಮೂರುಜನ ಮುಂದಾಳುಗಳು ಜೇಲಿನ ಯಾತನೆಯನ್ನು ಸಹಿಸಲಾರದೆ, ತಾವು ಮುಂದ ಈ ಪ್ರಕಾರ ವರ್ತಿಸುವದಿಲ್ಲವೆಂದು, ಕ್ಷಮೆಬೇಡಿಕೊಂಡು ಬಿಡುಗಡೆ ಹೊಂದಿದರೆಂದು ಸುದ್ದಿಬಂದಿರುವದು. ಇದು ನಿಜವಾಗಿದ್ದರೆ ಖೇದಜನಕವಾದ ಸಂಗತಿಯು ನಾವು ಕಲ್ಲುಬಂಡೆಯಂತೆ ಸುಸ್ಥಿರರಾಗಿರಬೇಕು; ಒಂದು ಹೆಜ್ಜೆಯನ್ನೂ ಕೂಡ ಹಿಂದೆ ಇಡಕೂಡದು. ಹಿಂದುಸ್ಥಾನ ಜೇಲಿನಲ್ಲಿ ನಮ್ಮ ಪಾಲಿಗೆ ಬಂದ ಯಾವದೇ ಹಿಂಸೆಯನ್ನು ಸಂತೋಷದಿಂದ ಸಹಿಸಬೇಕು ಇಲ್ಲದ ಅಮಾನುಷವಾದ ಯಾತನೆಯನ್ನು ಕೂಡಾ ನಾವು ಸರಕಾರದಿಂದ ನಿರೀಕ್ಷಿಸುತ್ತಿರಬೇಕು. ಅದರ ಉದ್ದೇಶವು ತಾನು ಸುಧಾರಿಸುವವರೆವಿಗೆ ನಮ್ಮನ್ನು ಮಣಿಸಬೇಕೆಂಬದಾಗಿರುವದು.

ಸರಕಾರದ ಮೇಲೆ ನಾನೇನು ಅಷ್ಟು ಕಠೋರನಾಗಿಲ್ಲ ಧಾರವಾಡ ಮತ್ತು ಅಲೀಗಡದಲ್ಲಿಯ ಅದರ ವರ್ತನವೇ ಇದಕ್ಕೆ ಸಾಕ್ಷಿಯು. ಇನ್ನೊಂದು ಸುದ್ದಿಯನ್ನು ನಂಬಬಹುದಾದರೆ-ಸಂಯುಕ್ತಪ್ರಾಂತದಲ್ಲಿಯೇ ಓರ್ವ ಮಹಮ್ಮದೀ ವೀರನನ್ನು ದುರ್ಗಂಧ ನಾರುತ್ತಲಿರುವ ಕೋಣೆಯಲ್ಲಿ ಒಗೆದು ಮೂರು ದಿವಸಗಳ ವರೆಗೆ ಬಿಡದಿದ್ದರಂತೆ ನನಗೆ ಇದನ್ನು ತಿಳಿಸಿದವನು 'ಆ ನಾತವನ್ನು ಅವನು ಏನು ಮಾಡಬೇಕು" ಎಂದು ನನಗೆ ಕೇಳಿದ. ಅಂದರೂ ಜುಲ್ಮಿಗಾರನಿಗೆ ತಲೆಬಾಗಿಸಿ ಕ್ಷಮೆಬೇಡಲಿಲ್ಲ ದ್ದೂ, ಅದಕ್ಕಾಗಿ ಜೇಲಿನ ಗೋಡೆಗಳಿಗೆ ಹೊಡೆದು ತಲೆಬಡಿದು ಪ್ರಾಣಕೊಡುವದು ಲೇಸು' ಎಂದೂ ನಿಶ್ಚಿತವಾದ ಮತ್ತು ... ರವಾದ ಉತ್ತರವನ್ನು ಕೊಟ್ಟಿರುವೆನು ಇದನ್ನು ನಾನು ಸ್ವ... ಪರದುಃಖಶೀತಲನಾಗಿ ನುಡಿಯುವದಿಲ್ಲ, ಆದರೆ ಆ ... ಆಸ್ಥಿತಿಯಲ್ಲಿ ನಾನು ಸ್ವಂತವಾಗಿ ಅನುಭವಿಸಿರುವೆನು ... ಆಫ್ರಿಕಾದಲ್ಲಿಯ ಕಾರಾಗೃಹವಾಸವೇನು ಸುಖಲಾಲಸ... ಯುಕ್ತವಾಗಿರಲಿಲ್ಲ. ಕೆಲವರು ಏಕಾಂತವಾಸವನ್ನನುಭವಿಸಿ ನೂರಾರುಜನರು ಹೆಸಿಗೆ ಉಡುಗುವ ಹೊಲೆಯಂಕ ... ಕಾಯಿತು ಅನೇಕರ ಪಾಲಿಗೆ ಪ್ರತಿನಿತ್ಯ ಏಕ ದತಿ ಪ್ರಾಪ್ತಿ ... ತ್ತು ಅಬಲೆಯೋರ್ವಳು ಬಿಡುಗಡೆ ಹೊಂದಿದಾಗ ಬರಿ ಪಂಜರವಾಗಿದ್ದಳು. ಆದರೂ ಆ ವೀರಾಂಗನೆಯ ಅಭಿಮಾನ ಧೃಡಮನಸ್ಸೂ ಅಚ್ಚಳಿಯದೆ ಉಳಿದಿದ್ದವು. ಮೊಟ್ಟಮೊದಲ ಕಾರಾಗೃಹದಲ್ಲಿ ಬಿದ್ದ ಸಾವಿರಾರು ಜನರಲ್ಲಿ (ಒಬ್ಬರನ್ನು ... ಒಬ್ಬನಾದರೂ ಬಿಡುಗಡೆ ಹೊಂದಬೇಕೆಂದು ಹೇಡಿಯಂತೆ ಬಾಗಿ ಬೇಡಿಕೊಳ್ಳಲಿಲ್ಲ. ಪಾರ್ಸಿ ರುಸ್ತುಮ್‌ಜಿ, ಇಮಾಮ ಅಬ್ದುಲ್‌ಕಾದಿರ ಬವಾಜೀ, ಥಾಂಬಿನಾಯಿಡು ಮೊದಲಾದವರು ಎಂದೂ ಹಿಂದೆಯದೆ ತಿರುತಿರುಗಿ ಸಂತೋಷದಿಂದ ಜೇಲಿಗೆ ಹೋದರು ಸ್ವಾತಂತ್ರ್ಯಮಂದಿರವು ಸ್ವಾರ್ಥತ್ಯಾಗಿಗಳ ರಕ್ತದಿಂದಲೆ, ಕಟ್ಟಲ್ಪಟ್ಟಿ ... ಅಹಿಂಸೆಯ ಮಾರ್ಗವೇ ತೀರ ಸಮೀಪದ್ದೂ ... ಖಂಡಿತ ಫಲದಾಯಕವಾದದ್ದೂ ಆಗಿರುವದು. ಕಾಂಗ್ರೆಸ್ ಮತ್ತು ಖಿಲಾ... ಸಭೆಗಳು ನೆರೆದಾಗ್ಗೆ ಮಾಡಿದ ಶಪಥದಂತೆ ನಡೆಯೋಣ ... ವಿಜಯವು ತಾನೇ ಪ್ರಾಪ್ತವಾಗುವದು

---

## ನಮ್ಮ ಕುಂದು ಕೊರತೆಗಳು.

(ಯಂಗ ಇಂಡಿಯಾ) (೨೩-೬-೩೦)

ಮದ್ರಾಸದಿಂದ ಜಾನ ಬುಲ್‌ನೆಂಬ ಓರ್ವ ಇಂಗ್ಲೀಷ ಗೃಹಸ್ಥನು ನನಗೆ ಬರೆದ ಪತ್ರದಲ್ಲಿ ಕೆಳಗೆ ಕೊಟ್ಟ ಪ್ರಕಾರ ... ಗೆ ಅನಿಸುತ್ತಿರುವದನ್ನು ಬಿಚ್ಚಿ ಬರೆದಿರುವರು ಅದು ಓದುವರಿಗೆ ಸಹಾಯವಾದರೂ ಆಗಬಹುದು:—

ನಿಮ್ಮ ಆಯುಷ್ಯಕ್ರಮದ ಮುಕ್ತ ನೀವು ಮಾಡುತ್ತಿರುವ ಕಾರ್ಯಗಳ ಗುಣಾನುವಾದವನ್ನು ಮಾಡಲಿಕ್ಕೆ ಇಂಗ್ಲೀಷ ಗೃಹಸ್ಥನಾದ ನನಗೆ ಆಜ್ಞೆಯಿರಬೇಕು. ಇದಲ್ಲದೆ ... ಸ್ಥಿತಿಯನ್ನು ತಿಳಿಸುವದಕ್ಕೆ ಮಾತ್ರ ಕೆಲವು ಶಬ್ದಗಳನ್ನು ... ದಲ್ಲಿ ಕ್ಷಮಿಸಬೇಕೆಂದು ಕೇಳಿಕೊಳ್ಳುವೆನು ಲಾರ್ಡ ಇರ್ವಿನ ಭಾಷಣದ ಮೇಲೆ ನೀವು ಮಾಡಿದ ಟೀಕೆಯನ್ನು ಓದಿದನಂತರ ಪತ್ರವನ್ನು ಬರೆಯಬೇಕೆಂಬ ಇಚ್ಛೆಯು ಹುಟ್ಟಿರುವದು. ಈ ರಾಜಕಾರಣಧುರೀಣರೊಳಗೆಲ್ಲ ಅಚ್ಚ ಸತ್ಯವನ್ನು ಶೋಧಿಸಿ ಕಂಡ ... ಯುವ ಗುಣವು ನಿಮ್ಮೊಬ್ಬರಲ್ಲಿ ಮಾತ್ರ ಉಂಟು ಆದರೆ ಕೇವಲ ಸತ್ಯವಿದ್ದಷ್ಟನ್ನೇ ಒಪ್ಪಿಕೊಳ್ಳುವವರಾದರೂ ನೀವೇ ಒಬ್ಬ ... ಇಲ್ಲಿಯ ಯುರೋಪಿಯನ್ ಜನರು ಹಿಂದೀ ಜನರನ್ನು ಕೀಳರೆಂದು ಭಾವಿಸುತ್ತಿರುವ ಸಂಗತಿಯೇ ಹಿಂದುಸ್ಥಾನದ ದುರ್ದೈವಕ್ಕೆ ಮೂಲ ಕಾರಣವಾಗಿರುವದೆಂದು ನೀವು ಕಂಡುಹಿಡಿದಿರುವಿರಿ ... ಗಾದರೂ ಹಾಗೇ ಅನಿಸುವದು ಆದರೆ ಇದು ಯಾರ ತಪ್ಪಿನಿಂದಾಗಿರುವದೆಂಬುದನ್ನು ಮೊದಲು ವಿಚಾರಿಸಿರೆಂದು ನಿಮಗೆ ... ಕೊಳ್ಳುವೆನು. ಆ ಮೂಲ ಕಾರಣವನ್ನು ಸುಧಾರಿಸುವ ಬಗೆಯನ್ನು ಕಾಣಬಹುದು.

ಈ ದೇಶಕ್ಕೆ ಬಂದ ಇಂಗ್ಲೀಷ ಮನುಷ್ಯನು ಇಲ್ಲಿಯ ಸಾಮಾನ್ಯ ಜನರು ತನ್ನ ಇಂಗ್ಲೀಷ ಬಾಂಧವರಿಗಿಂತ ಕೀಳರಿರುವರೆಂದು ಭಾವಿಸದೆ ಇರುವದು ಹೇಗೆ? ಮಾತ್ಸರ್ಯವನ್ನು ತಾಳದೆ ಕೇವಲ ವಸ್ತುಸ್ಥಿತಿಯನ್ನು ತಿಳಿದುಕೊಳ್ಳಬೇಕೆಂಬ ಇಚ್ಛೆಯುಳ್ಳ ನನ್ನಂಥವರ ಕಣ್ಣಿಗೆ ಏನು ಕಾಣುತ್ತದೆ? 'ಸೇವಕ' ಈ ದೃಷ್ಟಿಯಿಂದ ಹಿಂದೀಮನುಷ್ಯನು ಒಬ್ಬ ಇಂಗ್ಲೀಷ ಚಾಕರನಿಗಿಂತ ಕೀಳನಾಗಿರುವನು; ಯಾಕಂದರೆ ಇವನು ಅವನಷ್ಟು ಕರ್ತವ್ಯದಕ್ಷನಾಗಿರುವದಿಲ್ಲ. ಇವನಿಗೆ ಹಬ್ಬಹುಣ್ಣಿವೆಗಳು ಬಹಳ, ಮೇಲಿಂದಮೇಲೆ ರಜೆಬೇಕು, ಇವನನ್ನು ಯಾವಾಗಲೂ ಕಾಯುತ್ತಿರಬೇಕಾಗುವದು. ಇನ್ನು 'ಯಜಮಾನ' ಈ ದೃಷ್ಟಿಯಿಂದ ಇವನು ಒಬ್ಬ ಇಂಗ್ಲೀಷ ಯಜಮಾನನ ಸರಿಹೋಲಲಾರನು: ಇವನು ನ್ಯಾಯಪ್ರಿಯನಿರುವದಿಲ್ಲ; ಮ[illegible] ಅವನಷ್ಟು ಉದಾರ ಬುದ್ಧಿಯುಳ್ಳವನಲ್ಲ. ಪುನಃ "ಮನುಷ್ಯಪ್ರಾಣಿ" ಈ ದೃಷ್ಟಿಯಿಂದ ವಿಚಾರಮಾಡಿದರೆ ಮಹದಂತರವು ಕಂಡುಬರುವದು. ಮೇಲಿಂದಮೇಲೆ ಬೇನೆಬೀಳುವನು; ವ್ಯಾಯಾಮವನ್ನು ತಪ್ಪಿಸಲಿಕ್ಕಂತೂ ಒಳೆ ಹಿಂದು; ನವಯೌವನದ ಸೌಂದರ್ಯಕಾಂತಿಯು ಮೈಯಲ್ಲಿ ಉಕ್ಕುತ್ತಿರಬೇಕಾದ ತಾರುಣ್ಯದಲ್ಲಿ ಮುಪ್ಪಿನ ಮುದುಕನಂತೆ ಜೋಲುಮೋರೆಯುಳ್ಳವನಾಗಿರುವನು. ಅವನ ಮಕ್ಕಳ ಮರಿಗಳು ಅಳತೆಯಿಲ್ಲದೆ ಸಾಯುತ್ತಿರುವರು. ಇಲ್ಲಿ ಮದ್ರಾಸದಲ್ಲಿ ಐದುವರ್ಷಕ್ಕೆ ಕೆಳಗಿನ ಚಿಕ್ಕ ಮಕ್ಕಳು ಹುಟ್ಟುವದರ ಸರಿ ಅರ್ಧ ಪಾಲು ಮಡಿದು ಹೋ[illegible]ವು. ಇನ್ನು "ನಗರನಿವಾಸಿ" ಈ ದೃಷ್ಟಿಯಿಂದ ವಿಚಾರಿಸಿದರೂ ಅದೇ ಪಾಡು. ಲಂಚ ಕೊಡಬೇಕೆಂಬ ಮನಸ್ಸಿನ ಒಲವನ್ನು ಒಮ್ಮೆಯಾದರೂ ತಡೆದುಹಿಡಿಯಲಾರನು. ತಾವು ಬಹಳ ಕರುಣಾಳುಗಳು, ಭೂತದಯೆಯುಳ್ಳವರೆಂದು ಜಂಬ ಹೊಡಿಯುವರು; ಕಾರಣವೇನಂದರೆ ತಾವು ಪ್ರಾಣಿಹಿಂಸೆ ಮಾಡುವದಿಲ್ಲವಂತೆ! ಅವನಿಗೆ ಆಕಳವೇನೋ ಪವಿತ್ರವಾದ ಪ್ರಾಣಿಯಂತೆ. ಆದರೆ ಆ ಆಕಳ ಗೋಳನ್ನೇ ನೋಡಿರಿ. ದಿನಾಲು ಅರ್ಧಪರ್ಧ ಉಪವಾಸವೇ ಅದಕ್ಕೆ. ಎತ್ತು ಆಕಳ ಕುದುರೆಗಳನ್ನು ಜಗತ್ತಿನಲ್ಲಿ ಎಲ್ಲಿಯೂ ಇಷ್ಟು ನಿರ್ದಯದಿಂದ ನಡಿಸಿಕೊಳ್ಳುತ್ತಿರುವದಿಲ್ಲ. ಜನರು ಶುದ್ಧವಾದ ಆಚರಣೆಯುಳ್ಳವರಾಗಬೇಕೆಂದು ಬಾಲವಿವಾಹವನ್ನು —[illegible]ಪಘಾತಘಟಿಸಿದಲ್ಲಿ ಆ ಬಾಲಿಕೆಯರು ಆಮರಣವಿಧವೆಯಾಗಿ ಉಳಿಯಬೇಕಾದ ಘೋರವಾದ ಪದ್ಧತಿಯನ್ನು — ಹಾಕ್ಕಿಕೊಂಡಿದ್ದರೂ ಕೂಡ, ಉಷ್ಣಬಾಧೆಯಿಂದ ಯುರೋಪಿಯನ್ ಜನರಿಗಿಂತ ಹಿಂದೀ ಜನರೇ ಹೆಚ್ಚು ಪೀಡಿತರಾಗಿರುವರು. ಧರ್ಮಾಧರ್ಮವೆಂದು ಕುಮಾರಿಯರನ್ನು ಬಸವಿಯರನ್ನಾಗಿ ಬಿಡುವರು. ಯುದ್ಧದೊಳಗೆ ಪ್ರತಿ ವೈರಿಗಳಾಗಿ ಹೋರಾಡಿದವರ ದೇಶದಲ್ಲಿಯೂ ಸಹ ಇಂಗ್ಲೀಷರು ಈಗ್ಗೆ ಭೂತದಯೆಯ ಕಾರ್ಯವನ್ನು ಅಂಗೀಕರಿಸುವರು. ಹೀಗೆ, ಹಿಂದೀಜನರಲ್ಲದ ಇತರ ಯಾವದೇ ಜನಾಂಗದವರಲ್ಲಿ ಭೂತದಯೆಯನ್ನು ವ್ಯಕ್ತಮಾಡಿದ ಒಂದಾದರೂ ಪ್ರಸಂಗವನ್ನು ಹಿಂದುಸ್ಥಾನವು ತೋರಿಸಬಲ್ಲದೋ? ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವರಾಜ್ಯವು ಸಿಕ್ಕು ಮಹಾಯುದ್ಧದಂಥ ಪ್ರಸಂಗವು ಅವರ ಮೇಲೆ ಒಂದಿದ್ದರೆ, ಪ್ರತಿ ನಾನೂರುಲಕ್ಷ ಜನರೊಳಗೆ ಐವತ್ತುಲಕ್ಷ ಜನರು (ಇಂಗ್ಲಂಡದೊಳಗಿನಂತೆ) ಯುದ್ಧಕ್ಕಾಗಿ ಮುಂದೊರೆದು ಬರುತ್ತಿದ್ದರೋ?

ತನ್ನ ಅಪಾರವಾದ ಜನಸಮುದಾಯದಲ್ಲಿ ವಿಭೂತಿಗಳಾದ ಮಹಾನುಭಾವರು ಎಷ್ಟು ಕಡಿಮೆ!! ಟ್ಯಾಗೂರ, ಘೋಸ, ಗಾಂಧಿ—ಸಧ್ಯಕ್ಕೆ ಮೂವರು ಮಾತ್ರ ಇಡೀ ಹಿಂದುಸ್ಥಾನಕ್ಕೆ ಸೊಗಸಾದ ಬೆಳೆಯುತ್ತಿದ್ದಾರೆ! ಎಲಿಝಾಬೆಥಳ ಕಾಲದಲ್ಲಿ ಇಂಗ್ಲಂಡದ ಜನಸಂಖ್ಯೆಯು ಈಗಿನ ಮೈಸೂರ ಸಂಸ್ಥಾನದಷ್ಟು ಕೂಡ ಇದ್ದಿಲ್ಲ.

ಇದೆಲ್ಲ ನಿಮಗೆ ಏಕಪಕ್ಷವಾಗಿ ತೋರಬಹುದು; ತಪ್ಪಾದದ್ದೆಂದೂ ಅನಿಸಬಹುದು. ಆದರೆ ಇಲ್ಲಿ ಬಂದ ಇಂಗ್ಲೀಷ ಮನುಷ್ಯನು ಸರ್ವಸಾಧಾರಣ ಈ ಪ್ರಕಾರದ ತುಲನೆಯನ್ನು ಮಾಡದೆ ಇರುವದೆಂತು?

ಅಂಥ ವೇಳೆ ಇದರ ಉಪಾಯವು ಕೇವಲ ಹಿಂದೀ ಜನರ ಕೈಯಲ್ಲಿಯೇ ಇರುವದು. ಇದನ್ನೇ ನೀವು ಅವರಿಗೆ ಈ ಮೊದಲಿಗಿಂತಲೂ ಹೇಳುತ್ತಿರುವಿರಿ. ಆದರೆ ನನಗೆ ನಿಮ್ಮ ಅಸಹಕಾರ ಶಬ್ದವು ರುಚಿಸದು; ಮತ್ತು ಆ ಶಬ್ದವಾದರೂ ನಿಮ್ಮ ಅಭಿಪ್ರಾಯವನ್ನು ಪೂರ್ಣ ವ್ಯಕ್ತಮಾಡುವದಿಲ್ಲೆಂದು ತೋರುತ್ತದೆ. ನನಗೆ "ಸ್ವಂತಧಾವತಿ" ಎಂಬುದು ಹೆಚ್ಚು ಸರಿ ತೋರುತ್ತದೆ. ಹಿಂದೂಜನರು ಅಸ್ಪೃಶ್ಯತೆಯನ್ನು ಕಿತ್ತಿಹಾಕಲಿ; ಇಂದ್ರಿಯ ನಿಗ್ರಹವನ್ನು ಮಾಡಲಿ: ಬಾಲ್ಯಾವಸ್ಥೆಯಲ್ಲಿಯೇ ತೀರಿಕೊಳ್ಳುವಂಥ ಮಕ್ಕಳನ್ನು ಹಡಿಯುವದನ್ನು ಒಂದುವಡಲಿ; ಬ್ರಾಹ್ಮಣರಾದವರು ಸಾಲೆಯಲ್ಲಿ ನೂಲುವದನ್ನೂ ನೇಯುವದನ್ನೂ ಕಲಿತು, [illegible] ದುಡಿಯುವದು ಕೀಳು ಕೆಲಸವೆಂದು ಭಾವಿಸುವದನ್ನು ಬಿಡಲಿ; ಕಾಶ್ಮೀರದಿಂದ ಕೋಮಾರಿನ್ ಭೂಶಿರದ ವರೆಗೆ ಎಲ್ಲರಿಗೂ ತಿಳಿಯುವಂಥ (ತಮ್ಮ ಮಾತೃಭಾಷೆಯಲ್ಲದೆ) ಒಂದು ಭಾಷೆಯನ್ನು ಕಲಿತುಕೊಳ್ಳಲಿ; ಏನಾದರೊಂದು ಕಾರ್ಯಮಾಡುವದಿದ್ದಲ್ಲಿ ಹಿಂದೀ ಜನರೇ ಮುಂದೆ ಬಂದು ಅದನ್ನು ನೆರವೇರಿಸಲಿಕ್ಕೆ ಪ್ರಯತ್ನಿಸಲಿ; ಇದನ್ನು ಸರಕಾರವು ಮಾಡತಕ್ಕದ್ದೆಂದು ಕೈಹೊತ್ತುಕೊಂಡು ಕೂಡ್ರುವದನ್ನು ಬಿಟ್ಟುಬಿಡಲಿ. ಇವುಗಳನ್ನೆಲ್ಲ ನೀವು ಹೇಳುತ್ತಿರುವಿರಿ. ಆದರೆ 'ಗಾಂಧಿಕೀಜಯ' ಎಂದು ಕೂಗುವವರೆಲ್ಲರೂ ಇವುಗಳನ್ನು ಕೃತಿಯಲ್ಲಿ ತರದೆ ಹಿಂದೀಜನರ ವಿಷಯಕ್ಕೆ ಇಂಗ್ಲೀಷರಿಗೆ ಹೆಚ್ಚು ಆದರವೆನಿಸದೆ ಇರಲಾರದು. ಇದೆಲ್ಲ ಮುಗಿದ ಮೇಲೆ ಇನ್ನೂ ಮಹತ್ವದ [illegible] ಉಳಿದೇ ಇರುವದು. ಕೆಲವು ಪೂರ್ವಾಚಾರಗಳನ್ನೂ ಮತ್ತು ಸಮಾಜದಲ್ಲಿ ನೆಲೆಗೊಂಡಿರುವ ಕೆಲವು ರೂಢಿಗಳನ್ನೂ - ಯಾವು ನಮ್ಮ ಮನಸ್ಸಿಗೆ ಸರಿದೋರುವದಿಲ್ಲವೋ, ಮತ್ತು ಯಾವುಗಳ ಆವಶ್ಯಕತೆಯು ಈಗ್ಗೆ ಉಳಿದಿರುವದಿಲ್ಲವೋ—ಅಂಥವುಗಳನ್ನು ಕಿತ್ತಿಹಾಕಲಿಕ್ಕೆ ಅವುಗಳ ವಿರುದ್ಧ ಪ್ರಚಂಡಚಳವಳಿಯನ್ನು ನಡಿಸುವದೇ ಎಲ್ಲಕ್ಕೂ ಮಹತ್ವದ ಕಾರ್ಯವಾಗಿರುವದು. ಹೀಗೆ ಒಂದಾದನಂತರ ಮತ್ತೊಂದನ್ನು ನೀವು ತೋರಿಸಿಕೊಡುತ್ತ ಹೋಗಿರಿ. ಇದೆಲ್ಲಕಾಲ ನಾವು ಕಳೆತುಕೊಂಡು ನೋಡುತ್ತಿದ್ದೇವೆ— ೧ ಕೋಟಿ ರೂಪಾಯಿಗಳು ಕೂಡುವವೋ? ೨೦ ಲಕ್ಷ ರಾಟಿಗಳು ನಡಿಸಲ್ಪಡುವವೋ! ಅಸಹಕಾರಿಗಳು ಕೆಲ ಮಾಡುವ ಶಿಕ್ಷಣ ಕಲಿತುಕೊಳ್ಳುವರೋ? ಮತ್ತು ಬಂಡು ದಂಗೆ ಮೊದಲಾದ ಅತ್ಯಾಚಾರಗಳನ್ನು ಮಾಡದೆ ಉಳಿಯುವರೋ? ಹಿಂದುಸ್ಥಾನದ ಸೇವೆಗಾಗಿ ಹಿಂದೀಜನರಿಗಿಂತಲೂ ಹೆಚ್ಚು ಸ್ವಾರ್ಥತ್ಯಾಗಮಾಡಲಿಕ್ಕೆ ಸಿದ್ಧರಾದ ಜನಾಂಗವು ಯುಕ್ತವಾದ ಈ ಸರಕಾರವನ್ನು 'ಸೈತಾನಿ' ಯೆಂದು ಕರೆಯುವದನ್ನು, ಗಾಂಧಿಯು ಬಿಡುವನೇನು? ಕುಡಿಯುವದನ್ನು ಬಿಡಲಿಕ್ಕೆ ಹೊರಟಿರುವ ಚಳವಳಿಯಿಂದ ಜನರು ಕದ್ದು ಕುಡಿಯಲಿಕ್ಕೆ ಕಲಿಯುವದಕ್ಕಿಂತ ಹೆಚ್ಚಿಗೇನಾದರೂ ಪರಿಣಾಮವಾಗಬಹುದೇನು?

ಇವೆಲ್ಲ ಪ್ರಶ್ನೆಗಳಿಗೆ 'ಓಹೋ' ಎಂಬ ಆಶ್ವಾಸನದ ಉತ್ತರವು ದೊರೆತರೆ—ಆದರೆ ದೊರೆಯುವದೇನು?

ಈ ಪ್ರಕಾರದ ಮಾನವನ್ನು ನೀವು ಗಳಿಸಿದ ಮೇಲೆ ಇಂಗ್ಲೀಷರು ಮಾನವನ್ನು ಕೊಡಲಿಕ್ಕೆ ಸಿದ್ಧರಿರುವರು. ಇಂಗ್ಲೀಷ ಜನರು ಹಿಂದೀಜನರಿಗೆ ಆದರವನ್ನು ತೋರಿಸುವದಿಲ್ಲವೆಂದು ದೂಷಿಸುವದಕ್ಕಾಗಿ ಹಿಂದೀಜನರೇ ಅವರ ಆದರಕ್ಕೆ ಪಾತ್ರತೆಯನ್ನು ವ್ಯಕ್ತ ಮಾಡಿಲ್ಲವೆಂದೆನ್ನಬೇಕು.

# ಕನ್ನಡ ನವಜೀವನ.

ಆಷಾಢ ಶುದ್ಧ ೧೨ ಶಕೆ ೧೮೪೪


## ಮುಂದೊರೆಯಿರಿ.

(ಯಂಗ ಇಂಡಿಯಾ)

ಕಾಯದೆ ಭಂಗ ಕಮಿಟಿಯು ದೇಶದಲ್ಲಿ ಪ್ರವಾಸಮಾಡುವ ಕಾಲಕ್ಕೆ ಪ್ರತಿಯೊಂದು ಪ್ರಾಂತವು ತನ್ನ ಪ್ರಗತಿಯ ವಿಷಯವಾಗಿ ನಿಜವಾದ ಅಭಿಪ್ರಾಯವನ್ನು ಕೊಡಲಿಕ್ಕೆ ಶಕ್ಯವಾಗುವದರ ಸಲುವಾಗಿ ಬಹಳ ಪ್ರಯತ್ನ ನಡೆಸಿರುವದು. ಕಮಿಟಿಯ ಮುಖ್ಯ ಕಾರ್ಯವು, ಯಾವ ಯಾವ ಪ್ರಾಂತವು ಸವಿನಯ ಕಾಯದೇಭಂಗ ಮಾಡುವದಕ್ಕೆ ಸಿದ್ಧವಿರುವದೆಂಬದನ್ನು ತಿಳಕೊಳ್ಳುವದಿದ್ದರಿಂದ, ವಿಧಾಯಕ ಕಾರ್ಯಕ್ರಮದಲ್ಲಿಯ ಪ್ರತಿಯೊಂದು ಭಾಗದಲ್ಲಿಯ ಪ್ರಗತಿಯ ವಿಷಯವಾಗಿ ಅದು ಚನ್ನಾಗಿ ವಿಚಾರಮಾಡುತ್ತದೆ. ಹೋದ ವರ್ಷದ ಪರಿಸ್ಥಿತಿಯು ಈ ವರ್ಷಕ್ಕಿಂತ ತೀರ ಭಿನ್ನವಾಗಿತ್ತು. ಒಂದು ವರ್ಷದ ಕಾರ್ಯಕ್ರಮವನ್ನು ಕೈಕೊಂಡು, ಅದನ್ನು ಪೂರ್ಣರೀತಿಯಿಂದ ನೆರವೇರಿಸಿದ ಪರಿಸ್ಥಿತಿಗೂ, ಬಾರಡೋಲಿ ಕಾರ್ಯಕ್ರಮವನ್ನು ಕೈಕೊಂಡ ಪರಿಸ್ಥಿತಿಗೂ ಬಹಳೇ ಭೇದವಿರುತ್ತದೆ.

ಆ ಸಮಯಕ್ಕೆ ಜನರಲ್ಲಿ ಅಪೂರ್ವವಾದ ಉತ್ಸಾಹವು ತುಂಬಿತ್ತು ಇಷ್ಟೇ ಅಲ್ಲದೆ, ಮಹಾತ್ಮರಂಥ ದೊಡ್ಡಮನುಷ್ಯರ ಅವಿರತವಾದ ವಾಣಿಯಿಂದ ನಮ್ಮ ಪ್ರಗತಿಯು ಬಹಳೇ ಜೋರಿನಿಂದ ಸಾಗಿತ್ತು. ಆದರೆ ನಮ್ಮ ಈ ರಾಷ್ಟ್ರಸಂಘಟನವು, ಬಲಿಷ್ಠ ಮತ್ತು ಬಹಳ ಜಾಗರೂಕವಾದಂಥ ಪರದೇಶೀ ಸರಕಾರದ ವಿರುದ್ಧವಾದದ್ದಿರುತ್ತದೆ. ಹಾಗು ಈ ನಮ್ಮ ರಾಷ್ಟ್ರೀಯ ಪುನಃಸಂಘಟನದಿಂದ ಈ ಸರಕಾರಕ್ಕೆ ಹಾನಿಯಾಗುವದೆಂದು ಖಾತ್ರಿಯಾಗಿದ್ದರಿಂದ ನಮ್ಮ ಪ್ರಗತಿಯು ಸುರಳೀತವಾಗಿ ಸಾಗುವದೆಂದು ಯಾರೂ ತಿಳಿಯುತಕ್ಕದ್ದಲ್ಲ. ನಾವು ಯಾವ ಉಪಾಯಗಳ ಯೋಜನೆಯನ್ನು ಮಾಡುವೆವೋ, ಅವುಗಳಲ್ಲಿ ಗುಪ್ತವಾದ ಹಾಗೂ ರಾಜಕುತಂತ್ರದ ಸೆಳೆಗೋಡಂಥಾ ಯಾವ ಉಪಾಯಗಳು ಇರುವದಿಲ್ಲ. ಹಾಗೂ ನಾವು ಚನ್ನಾಗಿ ವಿಚಾರಮಾಡಿ, ಈ ಚಳವಳಿಯಲ್ಲಿ ಯಾವತರಹದ ಹಿಂಸಾಮಾರ್ಗವನ್ನೂ ಅವಲಂಬಿಸಿರುವದಿಲ್ಲ. ಆದ್ದರಿಂದ ನಮ್ಮ ಶತ್ರುಗಳು ಈ ಪ್ರಗತಿಯನ್ನು ಮುಂದೆ ಸಾಗಿಸಿಗೊಡುವದು ಯೋಗ್ಯವಾದದ್ದಲ್ಲವೆಂದು ತಿಳಿದು, ನಮ್ಮ ಮುಖಂಡನನ್ನು ಸ್ವತಂತ್ರವಾಗಿ ಇಡಲು ಇಚ್ಛಿಸದೇ ಇದ್ದರೆ ಅಂಥ ಸಮಯದಲ್ಲಿ ನಾವಾದರೂ ನಮ್ಮ ಮುಖಂಡನನ್ನಪೇಕ್ಷಿಸುವದನ್ನು ಬಿಟ್ಟುಬಿಡಬೇಕು. ನಮ್ಮ ಈ ತರಹದ ಪರಿಸ್ಥಿತಿಯನ್ನು ತಂದುಕೊಡುವದು ನಮ್ಮ ಈ ಚಳವಳಿಯ ಮುಖ್ಯವಾದ ಗುಣವಾಗಿರುವದು. ಹಿಂಸಾಮಯ ಹಾಗೂ, ಕುಟಿಲ ರಾಜನೈತಿಕ ಯುದ್ಧದಲ್ಲಿ ನಮ್ಮ ಸೇನಾಪತಿಯನ್ನು ಎಲ್ಲ ರೀತಿಯಿಂದಲೂ ಕಾಪಾಡುವದಕ್ಕೆ ನಾವು ಪ್ರಯತ್ನಿಸುತ್ತೇವೆ. ಯಾರೂ ಅವನ ಸಂಗಡ ಯುದ್ಧಮಾಡದ ಹಾಗೆ ಹಾಗೂ ಅವನನ್ನು ಪ್ರತಿಬಂಧಿಸದ ಹಾಗೆ ನಾವು ಕೈಲಾದಷ್ಟು ಪ್ರಯತ್ನಮಾಡುತ್ತೇವೆ. ಆದರೆ ನೈತಿಕಯುದ್ಧದಲ್ಲಿ ಈ ಪ್ರಕಾರವಾಗಿ ಸೇನಾಪತಿಯು ಎಂದಿಗೂ ರಕ್ಷಿತನಾಗಲಾರನು. ಇದೇ ಕಾರಣದಿಂದಲೇ ನಮಗೆ ಈ ವರುಷ ಗಾಂಧಿ ನೇತೃತ್ವದ ಕೆಳಗೆ ಕೆಲಸಮಾಡುವಂತಿರದ ಪ್ರತಿಬಂಧಿಸಲ್ಪಟ್ಟ ಗಾಂಧಿಯಿಂದೊಡಗೂಡಿ ಕೆಲಸ ಮಾಡಬೇಕಾಗಿದೆ. ಹಾಗೂ ನಮ್ಮ ಚಳವಳಿಯ ಮುಖ್ಯಾಂಗಳನ್ನು ಚನ್ನಾಗಿ ನಾವು ಮನನಮಾಡಿದರೆ ಈ ಪ್ರಕಾರದ ಪರಿಸ್ಥಿತಿಯಿಂದ ನಮಗೆ ಎಷ್ಟಾದರೂ ದುಃಖ ಆಗತಕ್ಕದ್ದಲ್ಲ. ನಾವು ಕೈಕೊಂಡ ಯುದ್ಧದಲ್ಲಿ ಕಾರ್ಯನಿರ್ವಾಹಕ ಕಮಿಟಿಯಲ್ಲಿ ಕೂತು ಉಪದೇಶ ಮಾಡುವಂಥ ಗಾಂಧಿಗಿಂತಲೂ, ತುರಂಗದಲ್ಲಿಯ ಗಾಂಧಿಯಿಂದಲೇ ಹೆಚ್ಚು ಉಪಯೋಗವಾಗುತ್ತದೆ.

ಈ ಚಳವಳಿಯ ವಿಜಯವು ನಿಸ್ಸೀಮವಾದ ಭಕ್ತಿ ಹಾಗೂ ಸ್ವಾರ್ಥತ್ಯಾಗಗಳ ಮೇಲೆಯೇ ಅವಲಂಬಿಸಿರುವದು. ಕಲ್ಪನಾವೈಚಿತ್ರ್ಯ, ಬುದ್ಧಿವಾದ ಅಥವಾ ಸಂಪತ್ತಿಯ ಮೇಲೆ ನಮ್ಮ ಚಳವಳಿಯ ಫಲವು ಸ್ವಲ್ಪೂ ಅವಲಂಬಿಸಿರುವದಿಲ್ಲ. ಮತ್ತು ಹೀಗಿದ್ದರೆ ನಮ್ಮ ಸೇನಾನಾಯಕನ ವಿರಹದಿಂದ ನಮಗೆ ಅತ್ಯಂತ ದುಃಖವಾಗುತ್ತದೆ. ಆದರೆ ಎಲ್ಲಿಯವರೆಗೆ ನಮ್ಮ ಈ ಯುದ್ಧವು ಅಹಿಂಸಾ ಹಾಗೂ ಕಷ್ಟಸಹನಗಳಮೇಲೆಯೇ ಅವಲಂಬಿಸಿರುವದೋ ಅಲ್ಲಿಯವರೆಗೆ, ಸೇನಾಪತಿಯು ಇಲ್ಲದಿದ್ದರೂ, ನಿರ್ಭಯದಿಂದಲೂ, ಯಾವ ತರಹದ ಸಂಶಯಗ್ರಸ್ತರಾಗದೇ ನಮ್ಮ ಧ್ಯೇಯವನ್ನು ಸಾಧಿಸಲಿಕ್ಕೆ ನಮಗೆ ಶಕ್ಯವಿರುತ್ತದೆ. ಅವನು ನಮಗೆ ದಾರಿಯನ್ನು ತೋರಿಸಿರುವನು. ನಾವು ಮಾತ್ರ ಅದನ್ನನುಸರಿಸಿ ಮುಂದೆ ಸಾಗಬೇಕು. ಸತ್ಯತೆ ಹಾಗೂ ಅಹಿಂಸೆಗಳು ಯಾರಿಂದಲೂ ಅಪಹೃತವಾಗದೇ ಇದ್ದಂಥ ಮಾರ್ಗದರ್ಶಿಗಳಾಗಿರುವವು. ಅಂತೂ ನಾವು ಅವುಗಳನ್ನೇ ಅನುಸರಿಸಿದರೆ ನಿಶ್ಚಯವಾಗಿ ಜಯವನ್ನು ಹೊಂದುವೆವು. ಸ್ವಾರ್ಥತ್ಯಾಗ ಮಾಡುವದು ಬಹಳ ಕಠಿಣವಿದ್ದರೂ ಅದಕ್ಕೆ ಯಾವದೇ ತರಹದ ಬುದ್ಧಿ ಅಥವಾ ಯುಕ್ತಿಗಳ ಅವಶ್ಯಕತೆಯಿಲ್ಲ, ಆದರೆ ಅದು ಮನಸ್ಸಿನ ನಿಶ್ಚಯದಮೇಲೆಯೇ ಅವಲಂಬಿಸಿರುವದು. ಮತ್ತು ಈ ಪ್ರಕಾರದ ನಿಶ್ಚಯದಿಂದ ಸಾದಾ ಹಾಗೂ ಭೋಳೆಸ್ವಭಾವದ ಮನುಷ್ಯನೂ ಕೂಡ ಬುದ್ಧಿವಂತ ಹಾಗೂ ಚತುರಮನುಷ್ಯನಿಗಿಂತಲೂ ಹೆಚ್ಚು ಕಾರ್ಯವನ್ನು ಮಾಡಿ ತೋರಿಸುವನು. ಅಹಿಂಸಾಮಯ ಯುದ್ಧವನ್ನು ಪ್ರತಿಬಂಧಿಸಲು ಬಾರದೇ ಇದ್ದದ್ದಕ್ಕೆ ಇದೇ ಮುಖ್ಯವಾದ ಕಾರಣವು. ನಮ್ಮ ಮುಖಂಡನ ತುರಂಗವಾಸದಿಂದ ನಮ್ಮ ನಿಶ್ಚಯ ಹಾಗೂ ಹೆಚ್ಚು ಸ್ವಾರ್ಥತ್ಯಾಗ ಮಾಡಲು ಉತ್ಸಾಹವು ವರ್ಧಿತವಾಗಲಿಕ್ಕೆಬೇಕು.

ಯುದ್ಧಾರಂಭದಲ್ಲಿಯ ಗಡಿಬಿಡಿ ಹಾಗೂ ಗೊಂದಲವು ಈ ವರುಷ ಇರುವದಿಲ್ಲ. ನಾವು ದಂಡೆಯನ್ನು ಬಿಟ್ಟು ಬಹಳೇ ದೂರ ಬಂದಿರುತ್ತೇವೆ. ನಾವು ಆಳವಾದ ನೀರಿನಲ್ಲಿ ಸಂಚರಿಸುತ್ತಿದ್ದರಿಂದ ಉಂಟಾದ ಸ್ವಸ್ಥತೆಯಿಂದ ನಾವು ಮುಂದಕ್ಕೆ ಸಾಗಿಲ್ಲವೆಂದು ಯಾರೂ ತಿಳಿಯತಕ್ಕದ್ದಲ್ಲ.

ಈ ವರುಷವಾದರೂ ಸರಕಾರವು ನಮ್ಮ ರಾಷ್ಟ್ರೀಯ ಸಂಘಟನಕ್ಕೆ ಮೇಲಿಂದಮೇಲೆ ವಿಘ್ನವನ್ನು ತರುವದೆಂಬುದಾತು ನಿಶ್ಚಿತವಾದದ್ದು. ಹೀಗಿದ್ದರೂ ನಾವು ನಿರ್ಭಯವಾಗಿ ಮುಂದೊರೆಯಲೇಬೇಕಾಗಿದೆ. ಮತ್ತು ಸ್ವರಾಜ್ಯಮಂದಿರವನ್ನು ಕಟ್ಟುವ ಕಾಲಕ್ಕೆ ಪ್ರತಿಯೊಂದು ಇಟ್ಟಂಗಿಯ ಮೇಲೆ, ಕಷ್ಟಸಹನದಾಯಕವಾದಂಥ ಗಚ್ಚನ್ನು ಒರೆಸಲಿಕ್ಕೇಬೇಕು. ಇದರಿಂದಲೇ ಆ ಮಂದಿರವು ಗಟ್ಟಿಯಾಗುವದು. ಆದರೆ ಈಗ ನಮ್ಮನ್ನನುಸರಿಸಿ ಜಯಜಯಕಾರವನ್ನು ಮಾಡುವಂಥ ಜನರ ಅವಶ್ಯಕತೆ ಇರುವದಿಲ್ಲ. ಈ ತರಹದ ಜನರಿಂದ ಕೆಲವುಸಾರೆ ನಮಗೆ ಉತ್ಸಾಹವು ಬರುತ್ತಿದ್ದರೂ ಹಲವುಸಾರೆ ನಮ್ಮ ಪ್ರಗತಿಗೆ ವಿಘ್ನವನ್ನುಂಟುಮಾಡಲಿಕ್ಕೆ ಈ ಸೇನೆಯೇ ಕಾರಣವಾಯಿತು. ಆದರೆ ಈ ಸೇನೆಯಿಂದಲೇ ಇನ್ನುಮೇಲೆ ಕಾರ್ಯವು ಸಾಗಬೇಕಾಗಿದೆ. ನಮಗೆ ಸ್ವಲ್ಪೇ ಜನರ ಅವಶ್ಯಕತೆಯುಂಟು. ಅಂಥ ಜನರು ಯುದ್ಧಸಾಧನ ಮಾಡುವ ಜಾಗೆಯಿಂದ ದೂರ ಸರಿದು ಗಂಭೀರ ಮುದ್ರೆಯಿಂದ ನಮ್ಮಕಡೆಗೆ ನೋ

ಈ ಹೊತ್ತಿನವರೆಗೆ ನಾವು ಕೇವಲ ರಾಜಸ್ಥಿತಿ ಚಳವಳಿಯಲ್ಲಿ ಮೀ ವಿಶೇಷವಾಗಿ ಭಾಗ ತೆಗೆದುಕೊಂಡದ್ದರಿಂದ ರಾಜಸ್ಥಿತಿ ಮತ್ತು ಸಕಲತೆಗಳ ಕಡೆ ನಮಗೆ ವಿಶೇಷ ಲಕ್ಷ್ಯ ಕೊಡಲು ಭಾಗಬೇ ಸತ್ತಿತ್ತು. ಇದೇ ಕಾರಣದಿಂದ ನಮ್ಮಲ್ಲಿಯ ಪಲವರು ಈ ಪ ಡ ... ಹಾಗೂ ಅದರಿಂದಲೇ ಸೃಷ್ಟಿಯ ನಿಯಮಾನುಸಾರ ... ಕಾರ್ಯದ ಫಲವಾಗಿ ಯಾರು ದುಃಖಿತರಾಗಿರುವರೋ ಅಂಥವರು ಬೇರೆಕಡೆಗೆ ಉಳಿಯಲಿ! ಮತ್ತು ದೈವೀ ಚಮತ್ಕಾರ ದ ಕಡೆಗೆ ಲಕ್ಷ್ಯಗೊಡದೆ ಯಾರು ಕೇವಲ ಸ್ವರಾಜ್ಯದ ಸಲುವಾಗಿಯೇ ಅಂಥವರು ಧನಸಹಾಯವನ್ನು ಅವಶ್ಯ ದುವಾದ ತ್ಮಕ ಅಥವಾ ಸಂಶಯಾತ್ಮಕ ವಿ

ಧನದ ಅವಶ್ಯಕತೆ ಇದ್ದಮೇಲೆ ವಿಧಾ ಯಕ ಭಾಗಗಳಾವವು? ಜಾತಿ ಜಾ ಕ್ಯವನ್ನು ನೆಲೆಗೊಳಿಸುವದು ಅಸ್ಪೃ ಗೂ ಅಹಿಂಸಾ ಇವೇ ಆ ಭಾಗಗಳು ದರಗಳಲ್ಲಿ; ಅದ್ದರಿಂದ ಅನ್ಯ ... ಯನ್ನಾದರೂ ತೋರಿಸಹತ್ತಿರು ... ಕೆಲವಾಡುವದರಲ್ಲಿಯೇ ನಮ್ಮ ... ಉಪಯೋಗವನ್ನು ನಿಶ್ಚಿತವಾದ ಕಾ ಮಾಡತಕ್ಕದ್ದು.

ರಾಜಗೋಪಾಲಾಚಾರ್ಯ

---

ಬಾಗಲಕೋಟೆ-ಪುರವಣಿ ಕನ್ನಡನವಜೀವನ ಆಷಾಢ ಶುದ್ಧ ೧೨ ಶಕೆ ೧೮೪೪ ತಾ| ೬-೭-೨೨ ಇಸವಿ

## ನೋಟೀಸು,

ರಾ|ರಾ|| ಮಕ್ತುಮಸಾಹೇಬ ತಂದಿ ಲಾಲಸಾಹೇಬ ಬೆಳ ಕೊಪ್ಪ ಸಾಕೀನ, ಬಾಗಲಕೋಟೆ ಕಿರೋಡು ಕೈನವೀಸ ದುಕಾನ ಕೋಟೆ ಓಣಿ ಇವರಿಗೆ—

ನಾನು ಮಕ್ತುಮಬೀ ಗಂಡ ಮಕ್ತುಮಸಾಹೇಬ ಸಾಕೀನ ಬಾಗಲಕೋಟೆ ನೋಟೀಸದ್ವಾರಾ ನಿನಗೆ ತಿಳಿಸುವದೇನಂದರೆ— ನೀನು ನನ್ನ ಲಗ್ನದ ಗಂಡನಿದ್ದು ನಿನ್ನಲ್ಲಿ ೧೨-೧೩ ವರ್ಷ ಚಾಕ್ರಿ ಮಾಡಿ ನಿನ್ನಿಂದ ಮೂರು ಮಕ್ಕಳನ್ನು ಹಡದೆ. ಇಷ್ಟು ದಿವಸ ತನಕ ಛಲೋ ರೀತಿಯಿಂದ ಚಾಕ್ರಿ ಮಾಡಿ ಈಗ ನೀನು ನನ್ನನ್ನು ಎರಡನೇಯವಳ ಮಾತು ಕೇಳಿ ವಿನಾಕಾರಣ ನನ್ನನ್ನು ಪೀಡಿಸುವದು ಬಡಿಯುವದು ಮಾಡಿ ನನ್ನನ್ನು ಮನಿ ಬಿಟ್ಟು ಉ ಟ್ಟ ತೀರ ವಂಚಲೆ ನನ್ನ ಕೂಡು ಅಂದರೆ ೬ ತಿಂಗಳದ್ದು ಕಡೆಯಿಂ ... ಮನಿ ಬಿಟ್ಟು ಹೊರಗೆ ಹಾಕಿ ಒಂದು ತಿಂಗಳ ಆಗಿದೆ ಇಂತು. ನಾನು ಈಗ ಕುರುಬರ ಓಣಿಯಲ್ಲಿ ... ಮನೆ ಬಾಡಿಗೆ ಹಿಡಕೊಂಡು ಇದ್ದೇನೆ. ನಾನು ನಿನಗೆ ... ರಿ ಕರಕೊಂಡು ಹೋಗೆಲಿಕ್ಕೆ ಹೇಳಿದರೂ ಈ ಹೊತ್ತಿನ ವರೆಗೆ ನನ್ನ ನ್ನು ಕರಕೊಂಡು ಹೋಗಲಿಲ್ಲ. ನನ್ನ ಹೊಟ್ಟೆ ಖರ್ಚಿಗೂ ... ಲ್ಲ ಒಂದು ತಿಂಗಳ ... ಹೊಟ್ಟೆ ... ಕೇಳಿದ ಅವತ್ತಿಗೂ ನೀನು ನನಗೆ ದಾದ ಮಾಡಲಿಲ್ಲ. ಈ ಕಾರಣ ನಿನಗೆ ನೋಟೀಸ ದ್ವಾರದಿಂದ ತಿಳಿಸುವದೇನೆಂದರೆ ಈ ನೋಟೀಸ ಮುಟ್ಟಿದ ೧೫ ದಿವಸದಲ್ಲಿ ನೀನು ನನ್ನನ್ನು ಕರಕೊಂಡು ಹೋಗಿ ಛಲೋ ರೀತಿಯಿಂದ ಚಾಕ್ರಿ ಮಾಡಬೇಕು. ಇಲ್ಲದಿದ್ದರೆ ಮುಂ ದೆ ನನ್ನ ನಿನ್ನ ಏನೂ ಸಂಬಂಧ ಉಳಿಯಲಿಕ್ಕಿಲ್ಲ. ಹದಿನೈದು ದಿವಸದಲ್ಲಿ ನೀನು ನನ್ನನ್ನು ಕರಕೊಂಡು ಹೋಗದಿದ್ದರೆ ನಾನು ಎರಡನೇ ... ಮಾಡಿಕೊಂಡು ಹೋಗತೇನೆ. ಮುಂದೆ ಮೊದಲಿನ ಗಂಡನ ಮೇಲೆ ನಿನ್ನದೇನೂ ಹಕ್ಕು ಉಳಿಯಲಿಕ್ಕಿಲ್ಲ. ಇ ದೇ ನೋಟೀಸಿನಿಂದ ನೀನು ತಿಳಿಯತಕ್ಕದ್ದು. ನೀನು ಕರ ಕೊಂಡು ಹೋದರೆ ಛಲೋ ರೀತಿಯಿಂದ ಚಾಕ್ರಿ ಮಾಡಲಿಕ್ಕೆ ನನ್ನ ದೇನೂ ತಕರಾರ ಇಲ್ಲ. ಕಾರಣ ನೀವು ಈ ನೋಟೀಸು ಮುಟ್ಟಿದ ೧೫ ದಿವಸದಲ್ಲಿ ಕರಕೊಂಡು ಹೋಗದಿದ್ದರೆ ನಿನ್ನದು ನನ್ನ ಮೇಲೆ ಯಾವ ತರದ ಹಕ್ಕು ಉಳಿಯಲಿಕ್ಕಿಲ್ಲ.

ತಾ| ೬-೭-೧೯೨೨.

☞ ಈ ಎಡಕ್ಕೆ ಹೆಬ್ಬೆಟ್ಟಿನ ನಿಶಾನಿ ಮಕ್ತುಂಬಿ ಗಂಡ ಮಕ್ತುಮಸಾಬ ಇವರ ಮಾಡಿದ್ದು ಅದೆ.

---

## ಹೊಗಳು

ನಿರಬೇಕು.

ವನ್ನು ಮಾಡಬೇಕಾದರೆ ಅವರಿಗೆ ಯಾ ಪ್ರೀತಿಯಿತ್ತೋ ಯಾವದರ ಅಭಿಮಾ ಅಂಥದೊಂದು ಸರ್ವೋಪಯೋಗಿ ತಾವಸ್ಥೆಗೆ ತರುವದರಿಂದಲೇ ಮಾ ಯಾಗಿ ವಿಚಾರಿಸಿದಲ್ಲಿ ದೇಶಭಕ್ತ ಜ ಸ್ಮಾರಕವೆಂದರೆ ಅವರ ಪ್ರೀತಿಪಾತ್ರ ಸೇವೆಯನ್ನು ಮಾಡುತ್ತಿರುವಂಥ ದೈನಿಕವನ್ನಾಗಿ ಮಾಡುವದೇ ಎಂ ಬುವು. ನಾವು ವಿಶೇಷ ... ಕೆಂಬುದನ್ನು ಚರ್ಚಿಸಿದ್ದೇವೆ. ಈಗ ದರೂ ನಮಗೆ ಅದೇ ಕಲ್ಪನೆಯು ಪು ಮನಸ್ಸಿನಲ್ಲಿ ಕರ್ನಾಟಕ ವೈಭವವ ...ಕೆಂಬ ಉತ್ಕಟೇಚ್ಛೆಯು ನೆಲೆಗೊಂಡಿ ಲ್ಲಿ ನಿಜವಾದ ಶಾಂತಿಯು ದೊರೆಯು ದನ್ನು ಪೂರ್ಣವಾಗಲಿಕ್ಕೆಬೇಕು. ಅಂ ಟಕಸ್ಥರಿಗೆ ನಿ ವಾಗಿ ಅಭಿಮಾನವಿ ಸಕಾರವನ್ನು ತೀರಿಸಬೇಕೆಂಬ ಅಪೇ ... ಚಿರವಾಗಿ ಇರಬೇಕಾದಲ್ಲಿ ಕರ್ನಾ ದೈನಿಕವನ್ನಾಗಿ ಮಾಡುವಂತೆ ವ್ಯವ ಬಗ್ಗೆ ಒಂದು ಸ್ಮಾರಕ ಫಂಡನ್ನು ತೆ ... ಹಣವು ಕರ್ನಾಟಕದಲ್ಲಿ ದೊರೆತೀ ಸಂಪೂರ್ಣ ವಿಶ್ವಾಸವುಂಟು. ಇನ್ನು ವಿ

ಬಿಸಬೇಕೋ ಅಥವಾ ಸರಕಾರದವರ ಹಾದಿಯನ್ನು ... ಡಿಯಬೇಕೋ ಎಂಬುವದನ್ನು ಜನರು ವಿಚಾರಮಾಡತಕ್ಕದ್ದು. ನಿಜವಾಗಿ ಮೊ ದಲನೇ ಮಾರ್ಗವು ಜನರ ಮನಸ್ಸಿಗೆ ಬರುತ್ತಿದ್ದರೆ ಬಡವರು ಶ್ರೀ ಮಂತರು ಕೂಡಿಯೇ ಟಿಳಕ ಸ್ವರಾಜ್ಯನಿಧಿಗೆ ಸಹಾಯಮಾಡತ ಕ್ಕದ್ದು. ಯಾರು ದೈವೀ ಚಮತ್ಕಾರದ ಮಾರ್ಗ ನಿರೀಕ್ಷಣಮಾ ... ಜಾಪುರದಲ್ಲಿ ದೈನಿಕವು ನಡೆಯುವದು. ಅದು ಕರ್ನಾಟಕದ ಕೇಂ ದ್ರಸ್ಥಾನವಾಗದ್ದರಿಂದ, ಶಕ್ಯವಿಲ್ಲದಿದ್ದಲ್ಲಿ ಆ ಪತ್ರವನ್ನು ಗದಗಿನ ಲ್ಲಾಗಲಿ, ಹುಬ್ಬಳ್ಳಿಯಲ್ಲಾಗಲಿ, ಹೊರಡಿಸ ಬಹುದು, ಸ್ಮಾರಕ ಕಮಿಟಿಯವರು ಈ ಬಗ್ಗೆ ವಿಚಾರಮಾಡಬೇಕೆಂದು ಸೂಚಿಸು ತ್ತೇವೆ.

ಕನ್ನಡ ನವಜೀವ–

೬ ಜ ೮ ಶುದ್ಧ ೧೨ ೧೩

## ಮುಂದೊರೆ

(ಯಂಗ ಇಂಡಿ

ಕಾಯದೆ ಭಂಗ ಕಮಿಟಿಯು ... ಕ್ಕೆ ಪ್ರತಿಯೊಂದು ಪ್ರಾಂತವು ತನ್ನ ... ವಾದ ಅಭಿಪ್ರಾಯವನ್ನು ಕೊಡಲಿಕ್ಕೆ ಗಿ ಬಹಳ ಪ್ರಯತ್ನ ನಡೆಸಿರುವದು-ವು, ಯಾವ ಯಾವ ಪ್ರಾಂತವು ಸವಿನ... ವದಕ್ಕೆ ಸಿದ್ಧವಿರುವದೆಂಬದನ್ನು ತಿ... ಯುಕಕಾಯ ... ಕ್ರಮ ದಲ್ಲಿಯು ... ತಿಯು ವಿಷಯ ವಾಗಿ ಅದು ಚನ್ನಾಗಿ ದ ವರ್ಷದ ಪರಿಸ್ಥಿತಿಯು ಈ ವರ್ಷ ಒದ್ದು ನ ಡಾ ಕಾರ್ಯಕ್ರಮವನ್ನು ... ರೀತಿಯಿಂದ ನೆರವೇರಿಸಿದ ಪರಿಸ್ಥಿತಿಗ ಮುವನ್ನು ಕೈಕೊ ಟ ಪರಿಸ್ಥಿತಿಗೂ ಬ...

ಆ ಸಮಯಕ್ಕೆ ಜನರಲ್ಲಿ ಅಪ... ಬಿ ತು ... ಕ್ತಿತ್ತಲ್ಲದೆ, ಮಹಾತ್ಮರಂ ರತವಾದ ವಾಣಿಯಿಂದ ನಮ್ಮ ಪ್ರಗ... ಸಾಗಿತ್ತು. ಆದರೆ ನಮ್ಮ ಈ ರಾಷ್ಟ್ರ... ಬಹಳ ಜಾಗರೂಕವಾದಂಥ ಪರದೇಶೀ ದ್ದಿರುತ್ತದೆ. ಹಾಗು ಈ ನಮ್ಮ ರಾ ... ವ ಈ ಸರಕಾರಕ್ಕೆ ಹಾನಿಯಾಗುವ... ನಮ್ಮ ಪ್ರಗತಿಯು ಸುರಳೀತವಾಗಿ ಯುತಕ್ಕದ್ದಲ್ಲ. ನಾವು ಯಾವ ಉಪಾಂ ಒರುವೆವೋ, ಅವುಗಳಲ್ಲಿ ಗುಪ್ತವಾ... ನೆಪ್ಪಳಗೋಡಂಥಾ ಯಾವ ಉಪಾಯ ನಾವು ಚನ್ನಾಗಿ ವಿಚಾರಮಾಡಿ, ಈ ... ಹಿಂಸಾಮಾರ್ಗವನ್ನು ಅವಲಂಬಿಸಿರ ವೈರಿಗಳು ಈ ಪ್ರಗತಿಯನ್ನು ಮುಂದ... ಗ್ರವಾದದ್ದಲ್ಲವೆಂದು ತಿಳಿದು, ನವ ವಾಗಿ ಇಡಲು ಇಚ್ಛಿಸದೇ ಇದ್ದ ...ರೂ ನಮ್ಮ ಮುಖಂಡರನ್ನು ಪೇಕ್ಷಿಸುವ ವ್ಯ ಈ ತರಹದ ಪರಿಸ್ಥಿತಿಯನ್ನು ಈ ಚಳವಳಿಯ ಮುಖ್ಯವಾದ ಗುಣ... ಹಾಗೂ, ಕುಟಿಲ ರಾಜನೈತಿಕ ರೀ... ನ್ನು ಎಲ್ಲೀತಿಯಿಂದಲೂ ತ ಪಾತುವದಕ್ಕೆ ನಾವು ಪ್ರಯತ್ನಿಸುತ್ತೇವೆ ಯಾರೂ ಅವನ ಸಂಗಡ ಯುದ್ಧಮಾಡದಹಾಗೆ ಹಾಗೂ ಅವನನ್ನು ಪ್ರತಿಬಂಧಿಸದ ಹಾಗೆ ನಾವು ಕೈಲಾದಷ್ಟು ಪ್ರಯತ್ನಮಾಡುತ್ತೇವೆ. ಆದರೆ ನೈತಿಕ ಯುದ್ಧದಲ್ಲಿ ಈ ಪ್ರಕಾರವಾಗಿ ಸೇನಾಪತಿಯು ಎಂದಿಗೂ ರಕ್ಷಿತನಾಗಲಾರನು. ಇದೇ ಕಾರಣದಿಂದಲೆ ನಮಗ ಈ ವರುಷ ಗಾಂಧಿ ನೇತೃತ್ವದ ಕೆಳಗೆ ಕೆಲಸಮಾಡುವಂತಿರದ ಪ್ರತಿಬಂಧಿಸಲ್ಪಟ್ಟ ಗಾಂಧಿಯಿಂದೊಡಗೂಡಿ ಕೆಲಸ ಮಾಡಲಿಕ್ಕಾಗಿದೆ. ಹಾಗೂ ನಮ್ಮ ಚಳವಳಿಯ ಮುಖ್ಯಾಂಗಳನ್ನು ಚನ್ನಾಗಿ ನಾವು ಮನನಮಾಡಿದರೆ ಈ ಪ್ರಕಾರದ ಪರಿಸ್ಥಿತಿಯಿಂದ ನಮಗೆ ... ... ಕೊಂಡ ಯುದ್ಧದಲಿ

...ಹವ ಜನರಿಂದ ಕೆಲವುಸಾರೆ. ನಮ್ಮ ಉತ್ಸಾಹವು ಬಹುತ್ತದ್ದರೂ ಹಲವುಸಾರೆ ನಮ್ಮ ಪ್ರಗತಿಗೆ ವಿಘ್ನವನ್ನುಂಟುಮಾಡಲಿಕ್ಕೆ ಈ ... ನೆಯೇ ಕಾರಣವಾಯಿತು ಆದರೆ ಈ ಸೇನೆಯಿಂದಲೇ ಇನ್ನು ಮೇ... ಕಾರ್ಯವು ಸಾಗಬೇಕಾಗಿದೆ. ನಮಗ ಸ್ವಲ್ಪೇ ಜನರ ಅವಶ್ಯ... ಯುಂಟು. ಉಳಿದ ಜನರು ಯುದ್ಧನಾಸನ ... ಮಾಡಿದ ... ಯಿಂದ ದೂರ ಸರಿದು ಗಂಭೀರ ಮುದ್ರೆಯಿಂದ ನಮ್ಮ ಕಡೆಗೆ ...

ಈ ಹೊತ್ತಿನವರೆಗೆ ನಾವು ಕೇವಲ ರಾಜನೈತಿಕ ಚಳವಳಿಯಲ್ಲಿಯೇ ವಿಶೇಷವಾಗಿ ಭಾಗ ತೆಗೆದುಕೊಂಡದ್ದರಿಂದ ರಾಜನೀತಿ ಮತ್ತು ಕುಶಲತೆಗಳ ಕಡೆಗೆ ನಮಗೆ ವಿಶೇಷ ಲಕ್ಷ್ಯಕೊಡುವ ಭಾಗಬೀಳುತ್ತಿತ್ತು. ಇದೇ ಕಾರಣದಿಂದ ನಮ್ಮಲ್ಲಿಯ ಪಳವರು ಈ ಸ್ಥಿತಿಯನ್ನು ವಿಪರೀತವಾಗಿ ತಿಳಕೊಂಡದ್ದು ಆಶ್ಚರ್ಯವಲ್ಲ. ಯುದ್ಧದಲ್ಲಿ ರಾಜನೀತಿಗೆ ಸ್ವಲ್ಪಾದರೂ ಆಶ್ರಯವು ದೊರೆಯಲಾರದು. ನಮ್ಮ ಯುದ್ಧದ ಬೀಜಮಂತ್ರವು, ಸ್ವಾರ್ಥತ್ಯಾಗವು ಕೇವಲ ಸ್ವಾರ್ಥತ್ಯಾಗವು. ಮಹಾತ್ಮರು ಕಾರಾಗೃಹಕ್ಕೆ ಹೋದಬಳಿಕ, ವಾದವಿವಾದದಲ್ಲಿಯೇ ಬಹಳ ದಿವಸಗಳನ್ನು ಕಳೆದಿರುವೆವು. ನಾವು ನಿಜವಾಗಿ ಮಾಡತಕ್ಕ ಕೆಲಸವನ್ನು ಮಾಡದೆ ಈ ಪ್ರಕಾರ ಮಾಡಿದರೆ ಒಳಿತೋ ಅಥವಾ ಮತ್ತೊಂದು ತರಹದಿಂದ ಮಾಡಿದರೆ ಹಾನಿಕಾರಕವೋ ಎಂಬ ವಿಚಾರದಲ್ಲಿ ನಾವು ಮಗ್ನರಾಗಿದ್ದೇವೆ. ಬಿರ್ಡೋಲಿ ಕಾರ್ಯಕ್ರಮವನ್ನು ನಿರ್ದಿಷ್ಟಮಾಡಿದ ಕಾಲಕ್ಕೆ ಯಾರೂ ಈ ಪ್ರಕಾರದ ಪ್ರಶ್ನೆಯನ್ನು ಕೇಳಲಿಲ್ಲ. ನಮ್ಮ ಈಗಿನ ಕಾರ್ಯಕ್ರಮವಾದರೂ ನಮ್ಮ ಪ್ರಗತಿಗೆ ಬಿರ್ಡೋಲಿ ಕಾರ್ಯಕ್ರಮದಷ್ಟೇ ಆವಶ್ಯಕವಾಗಿದೆ. ಮತ್ತು ಇದರಬಗ್ಗೆ ಇನ್ನುಮೇಲೆ ಹೆಚ್ಚಿಗೆ ವಾದವಿವಾದವನ್ನು ಬೆಳೆಸುವ ಆವಶ್ಯಕತೆ ಇಲ್ಲ. ಆದರೆ ಸ್ವಾವಲಂಬನಮಾರ್ಗವನ್ನು ಬಿಟ್ಟು ಪರಾವಲಂಬನಮಾರ್ಗವನ್ನು ಸ್ವೀಕರಿಸಿದರೆ ಆ ಮಾತು ಬೇರೆ.

ಈ ಪ್ರಕಾರ ಸಂಶಯಾತ್ಮಕ ಹಾಗೂ ವಾದಗ್ರಸ್ತವಾದ ಕಾರ್ಯಕ್ರಮವಾದರೂ ಯಾವದು? ರಾಷ್ಟ್ರೀಯಸಭೆಯ ಸಭಾಸದನಾಗಲಿಕ್ಕೆ ಹೇಳುತ್ತಾರೆ. ಎಲ್ಲಿಯವರೆಗೆ ಮಹಾಸಭೆಯು ಅಸ್ತಿತ್ವದಲ್ಲಿರುವದೋ ಅಲ್ಲಿಯವರೆಗೆ ಈ ಮಹತ್ವವಾದ ಕೆಲಸವನ್ನು ಮಾಡುವದು ಅತ್ಯವಶ್ಯಕವು. ಬರುವ ಮಹಾಸಭೆಗೆ ಪ್ರತಿನಿಧಿಗಳನ್ನು ಚುನಾಯಿಸಲಿಕ್ಕೂ ಹಾಗು ಜಿಲ್ಲಾ ಹಾಗೂ ಪ್ರಾಂತಿಕ ಕಮಿಟಿಗಳನ್ನು ಸ್ಥಾಪಿಸುವದರ ಸಲುವಾಗಿ ಮಹಾಸಭೆಯ ಸಭಾಸದರನ್ನು ಹೆಚ್ಚಿಸುವದು ಅತ್ಯಾವಶ್ಯವು. ಯಾವದೇ ತರಹದ ಕಾರ್ಯವನ್ನು ಮಾಡಲಿಕ್ಕೆ ಪ್ರತಿಜ್ಞಾಬದ್ಧರಾದಂಥ ಕೆಲವು ಜನರ ಆವಶ್ಯಕತೆಯುಂಟು ಇದರ ಸಲುವಾಗಿ ನಾವು ಹೆಚ್ಚು ವೇಳೆಯನ್ನು ಕಳೆಯತಕ್ಕದ್ದಲ್ಲ.

ಎರಡನೇ ಕೆಲಸವೆಂದರೆ ನಿಧಿಯನ್ನು ಕೂಡಿಸುವದೇ ಆಗಿದೆ. ಇದರ ಹೊರತು ನಾವು ಯುದ್ಧವನ್ನು ಸಾಗಿಸಲಾರೆವು. ಕಟ್ಟಕಡೆಗೆ ನಮ್ಮ ಯುದ್ಧವನ್ನು ಸಾಗಿಸಲಿಕ್ಕೆ ನಿಧಿಯನ್ನು ಕೂಡಿಸಲು ಸಹ ಕಾರಣ ಬೀಳುವದಿಲ್ಲ. ಆದರೆ ಇನ್ನೂ ಅಸ್ಥಿತಿಯು ನಮಗೆ ಪ್ರಾಪ್ತವಾಗಿರುವದಿಲ್ಲ. ಆದ್ದರಿಂದ ನಿಧಿಯನ್ನು ಎತ್ತುವದರ ಸಲುವಾಗಿ ಯಾರದೂ ಭಿನ್ನಭಿಪ್ರಾಯವಿರುವದಿಲ್ಲ. ಮಹಾಸಮಿತಿಯ ಹತ್ತರ ಇದ್ದಷ್ಟು ಹಣವನ್ನು ಖಾದಿಯ ಪ್ರಸಾರದಲ್ಲಿಯೇ ಖರ್ಚುಮಾಡ ನಿರ್ಧರಿಸಿರುತ್ತಾರೆ. ಅಂದಮೇಲೆ ಹೊಸದಾದ ಯಾವದೇ ಕೆಲಸವನ್ನು ಕೈಕೊಳ್ಳಲು ಧನದ ಆವಶ್ಯಕತೆಯು ಬೀಳುವದು ಸ್ವಾಭಾವಿಕವಾಗಿರುತ್ತದೆ. ಮುಂಬಯಿಯ ಸಮಿತಿಯ ಹತ್ತರ ಇದ್ದ ಹಣದ ಕೆಲವು ಭಾಗವು ಅದೇ ಸಮಿತಿಯ ಖರ್ಚಿಗೂ ಉಳಿದದ್ದು ಖಾದೀಪ್ರಸಾರದ ದೆಸೆಯಿಂದಲೂ ಇಡಲ್ಪಟ್ಟಿರುತ್ತದೆ. ಸಂಹಾರ ಮತ್ತು ರಚನೆ ಇವೆರಡೂ ಕೆಲಸದ ಸಲುವಾಗಿಯೂ ದುಡ್ಡಿನ ಆವಶ್ಯಕತೆಯುಂಟು. ಮಹಾತ್ಮರು ಹಾಕಿಕೊಟ್ಟ ಮಾರ್ಗವನ್ನವಲಂಬಿಸಬೇಕೋ ಅಥವಾ ಸರಕಾರದವರ ಹಾದಿಯನ್ನಿಡಿಯಬೇಕೋ ಎಂಬುವದನ್ನು ಜನರು ವಿಚಾರಮಾಡತಕ್ಕದ್ದು. ನಿಜವಾಗಿ ಮೊದಲನೇ ಮಾರ್ಗವು ಜನರ ಮನಸ್ಸಿಗೆ ಬರುತ್ತಿದ್ದರೆ ಬಡವರು ಶ್ರೀಮಂತರು ಕೂಡಿಯೇ ಟಿಳಕ ಸ್ವರಾಜ್ಯನಿಧಿಗೆ ಸಹಾಯಮಾಡತಕ್ಕದ್ದು. ಯಾರು ದೈವೀ ಚಮತ್ಕಾರದ ಮಾರ್ಗ ನಿರೀಕ್ಷಣಮಾಡುವರೋ ಹಾಗೂ ಅದರಂತೆಯೇ ಸೃಷ್ಟಿಯು ನಿಯಮಾನುಸಾರವಾಗಿ ಅದರ ಕಾರ್ಯದ ಸಲುವಾಗಿ ಯಾರು ದುಃಖಿತರಾಗಿರುವರೋ ಅಂಥವರು ಬೇರೆಕಡೆಗೆ ಉಳಿಯಲಿ! ಮತ್ತು ದೈವೀ ಚಮತ್ಕಾರದ ಕಡೆಗೆ ಲಕ್ಷ್ಯಗೊಡದೆ ಯಾರು ಕೇವಲ ಸ್ವರಾಜ್ಯದ ಸಲುವಾಗಿಯೇ ಪ್ರಯತ್ನಮಾಡುವರೋ ಅಂಥವರು ಧನಸಹಾಯವನ್ನು ಅವಶ್ಯವಾಗಿ ಮಾಡಬೇಕು. ಇದು ವಾದಗ್ರಸ್ತ ಅಥವಾ ಸಂಶಯಾತ್ಮಕ ವಿಷಯವಲ್ಲ.

ಈ ಪ್ರಕಾರ ಜನರ ಹಾಗು ಧನದ ಆವಶ್ಯಕತೆ ಇದ್ದಮೇಲೆ ವಿಧಾಯಕ ಕಾರ್ಯಕ್ರಮದಲ್ಲಿಯ ಉಳಿದ ಭಾಗಗಳಾವವು? ಜಾತಿ ಜಾತಿಗಳಲ್ಲಿ ಪ್ರೇಮ ಹಾಗೂ ಐಕ್ಯವನ್ನು ನೆಲೆಗೊಳ್ಳಿಸುವದು ಅಸ್ಪೃಶ್ಯತಾನಿವಾರಣೆ, ಖಾದೀ ಹಾಗೂ ಅಹಿಂಸಾ ಇವೇ ಆ ಭಾಗಗಳು. ಈ ಮಾತುಗಳು ವಾದಗ್ರಸ್ತವಾದವುಗಳಲ್ಲ; ಆದ್ದರಿಂದ ಇವುಗಳಲ್ಲಿ ನಾವು ವಿಶೇಷವಾದ ಪ್ರಗತಿಯನ್ನಾದರೂ ತೋರಿಸಹತ್ತಿರುವೆವು. ಆದ್ದರಿಂದ ನಾವು ಕೇವಲ ಚರ್ಚೆಮಾಡುವದರಲ್ಲಿಯೇ ನಮ್ಮ ವೇಳೆಯನ್ನು ಕಳೆಯದೆ, ಅದರ ಉಪಯೋಗವನ್ನು ನಿಶ್ಚಿತವಾದ ಕಾರ್ಯವನ್ನು ಮಾಡುವದರಲ್ಲಿ ಮಾಡತಕ್ಕದ್ದು.

ಸಿ ರಾಜಗೋಪಾಲಾಚಾರ್ಯ

---

## ಟಿಪ್ಪಣಿಗಳು

**ಜಯರಾಯರ ಸ್ಮಾರಕವೇನಿರಬೇಕು.**

ಯಾರೊಬ್ಬರದೂ ಸ್ಮಾರಕವನ್ನು ಮಾಡಬೇಕಾದರೆ ಅವರಿಗೆ ಯಾವ ಸಂಸ್ಥೆಯಮೇಲೆ ಬಹಳ ಪ್ರೀತಿಯಿತ್ತೋ ಯಾವದರ ಅಭಿಮಾನವು ಅವರಲ್ಲಿ ಬೇರೂರಿತ್ತೋ ಅಂಥದೊಂದು ಸರ್ವೋಪಯೋಗಿಯಾದ ಸಂಸ್ಥೆಯನ್ನು ಊರ್ಜಿತಾವಸ್ಥೆಗೆ ತರುವದರಿಂದಲೇ ಮಾಡಿದಂತಾಗುವದು. ಈ ರೀತಿಯಾಗಿ ವಿಚಾರಿಸಿದಲ್ಲಿ ದೇಶಭಕ್ತ ಜಯರಾಯರ ಯೋಗ್ಯವಾದ ಸ್ಮಾರಕವೆಂದರೆ ಅವರ ಪ್ರೀತಿಪಾತ್ರವಾದ ಅಖಂಡ ಕರ್ನಾಟಕದ ಸೇವೆಯನ್ನು ಮಾಡುತ್ತಿರುವಂಥ "ಕರ್ನಾಟಕವೈಭವ" ವನ್ನು ದೈನಿಕವನ್ನಾಗಿ ಮಾಡುವದೇ ಎಂದು ನಮ್ಮ ಸ್ವಂತ ಅಭಿಪ್ರಾಯವು. ನಾವು ಹಿಂದೆ ಸಲ ಕರ್ನಾಟಕಕ್ಕೆ ದೈನಿಕವು ಬೇಕೆಂಬುದನ್ನು ಚರ್ಚಿಸಿದ್ದೇವೆ. ಈಗ ಜಯರಾಯರ ಮರಣದಿಂದಾದರೂ ನಮಗೆ ಅದೇ ಕಲ್ಪನೆಯು ಪುನಃ ತೋರಿರುವದು. ಅವರ ಮನಸ್ಸಿನಲ್ಲಿ ಕರ್ನಾಟಕ ವೈಭವವನ್ನು ದೈನಿಕವನ್ನಾಗಿ ಮಾಡಬೇಕೆಂಬ ಉತ್ಕಟೇಚ್ಛೆಯು ನೆಲೆಗೊಂಡಿತ್ತು; ಅವರಿಗೆ ಪರಲೋಕದಲ್ಲಿ ನಿಜವಾದ ಶಾಂತಿಯು ದೊರೆಯಬೇಕಾದರೆ ಅವರ ಆ ಮನೋರಥವು ಪೂರ್ಣವಾಗಲಿಕ್ಕೆಬೇಕು. ಅಂದಮೇಲೆ ಅವರ ಬಗ್ಗೆ ಕರ್ನಾಟಕಸ್ಥರಿಗೆ ನಿಜವಾಗಿ ಅಭಿಮಾನವಿದ್ದಲ್ಲಿ ಅವರು ಮಾಡಿದ ಉಪಕಾರವನ್ನು ತೀರಿಸಬೇಕೆಂಬ ಅಪೇಕ್ಷೆಯಿದ್ದಲ್ಲಿ, ಅವರ ಸ್ಮರಣೆಯು ಚಿರವಾಗಿ ಇರಬೇಕಾದಲ್ಲಿ ಕರ್ನಾಟಕ ವೈಭವವನ್ನು ಶೀಘ್ರವೇ ದೈನಿಕವನ್ನಾಗಿ ಮಾಡುವಂತೆ ವ್ಯವಸ್ಥೆಯನ್ನು ಮಾಡಬೇಕು. ಈ ಬಗ್ಗೆ ಒಂದು ಸ್ಮಾರಕ ಫಂಡನ್ನು ತೆಗೆದರೆ ದೈನಿಕಕ್ಕೆ ಬೇಕಾದಷ್ಟು ಹಣವು ಕರ್ನಾಟಕದಲ್ಲಿ ದೊರೆತೀತೆ ರೆಯುವದೆಂದು ನಮಗೆ ಸಂಪೂರ್ಣ ವಿಶ್ವಾಸವುಂಟು. ಇನ್ನು ವಿಜಾಪುರದಲ್ಲಿ ದೈನಿಕವು ನಡೆಯುವದು, ಅದು ಕರ್ನಾಟಕದ ಕೇಂದ್ರಸ್ಥಾನವಾಗದ್ದರಿಂದ, ಶಕ್ಯವಿಲ್ಲದಿದ್ದಲ್ಲಿ ಆ ಪತ್ರವನ್ನು ಗದಗಿನಲ್ಲಾಗಲಿ, ಹುಬ್ಬಳ್ಳಿಯಲ್ಲಾಗಲಿ, ಹೊರಡಿಸಬಹುದು. ಸ್ಮಾರಕ ಕಮಿಟಿಯವರು ಈ ಬಗ್ಗೆ ವಿಚಾರಮಾಡಬೇಕೆಂದು ಸೂಚಿಸುತ್ತೇವೆ.

(೩೬೯ಪುಟದಿಂದ ಮುಂದೆಸಾಗಿದ್ದು.)

ನೀವು ಮಹತ್ವವಾದ ಕಾರ್ಯಗಳನ್ನು ಜರಗಿಸುವಿರೆಂದು ನನಗೆ ವಿಶ್ವಾಸವುಂಟು. ಉತ್ಸಾಹ, ಆಶೆ ಮತ್ತು ಪ್ರೇಮ ಇವು ಮೂರು ಮನುಷ್ಯನ ಜೀವಿತದ ಮೂಲಾಧಾರವಾಗಿರುವವು.' ಇವುಗಳ ಆಧಾರದ ಮೇಲೆಯೇ ದೊಡ್ಡ ರಾಷ್ಟ್ರಗಳು ನಿಲ್ಲಿಸಲ್ಪಡುವವು. ಹಿಂದುಸ್ಥಾನವಾದರೂ ಅವುಗಳಿಂದಲೇ ಆಗಲಿ"

ಜಾನಬುಲ್ಲನ ಪತ್ರದ ಮೇಲಿನ ಈ ಟಿಪ್ಪಣಿಯನ್ನು ತಿಳಿದುಕೊಳ್ಳಲಿಕ್ಕೆ ಅವನು ಪ್ರಯತ್ನಿಸಿರುವನೆಂದು ಹೇಳಬಹುದು. ಅವನು ಬರೆದದ್ದೆಲ್ಲವೂ ತೀರ ತಪ್ಪಾದದು; ಬೇರೆಯಾಗಿ ಜಾನ್‌ಬುಲ್ಲನವರೇ ನಮಗೆ ಒಪ್ಪಲಾರದು. ಎಂದು ಅನ್ನಲಿಕ್ಕೆ ಒರವ... ಸರ್ವಸಾಧಾರಣ ಒಬ್ಬ ಇಂಗ್ಲೀಷ ಮನುಷ್ಯನಿಗೆ ಬರುವ ಅನುಭವವನ್ನು ಬರೆದಿರುವನು. ಆದರೆ ಅನುಭವದ ಮೇಲಿಂದಲೇ ಅವನು ಹಾಕಿರುವ ತರ್ಕವು ವಸ್ತುಸ್ಥಿತಿಯಿಂದ ತೀರಭಿನ್ನವಾಗಿರುವದು. ದ್ರವ್ಯದೊರಕಿಸುವದೊಂದನ್ನೇ ತಮ್ಮ ಆಯುಷ್ಯದ ಧ್ಯೇಯವಾಗಿಟ್ಟುಕೊಂಡು ಕಾಂಪಿನಲ್ಲಿ (ಸಾಹೇಬರು ವಾಸಮಾಡಿಕೊಂಡಿರುವ ಪೇಟೆ) ವಾಸಮಾಡಿಕೊಂಡಿರುವ ಲೋಭಿಗಳ ಅನುಭವವು ಮಾತ್ರ ಈ ಸಾಹೇಬರಿಗೆ ಇರುವದು. ಈ ಲೋಭಿ ಜನರೆಂದರೆ ಸಕಲ ಹಿಂದೀ ಸಮಾಜವಲ್ಲ; ಅವರು ಹಿಂದೀಸಮಾಜದ ಮಾದರಿಯೆಂದು ತಿಳಿಯಲಾಗದು. ಇಂಥ ಜನರಿಂದ ಹಿಂದೀಸಮಾಜದ ಕಲ್ಪನೆಯು ಬರುವಂತಿಲ್ಲ. ಮನುಷ್ಯತ್ವಕ್ಕೆ ಮುಖ್ಯವಾಗಿರುವ ಯಾವ ವಿಷಯದಲ್ಲಿಯೂ, ಹಿಂದೀಮನುಷ್ಯನು, ಜಗತ್ತಿನ ಮೇಲಿನ ಯಾವ ರಾಷ್ಟ್ರದವನಿಗೂ ಎಡವಾಗಿಲ್ಲವೆಂದು, ನಾನು, ನನ್ನ ಎರಡೂ (ದೇಶದವರ) ಜಾತಿಯವರ ವಿಸ್ತಾರವಾದ ಅನುಭವದ ಆಧಾರದಿಂದ, ಎದೆ ತಟ್ಟಿ ಹೇಳುವೆನು. 'ಮನುಷ್ಯಪ್ರಾಣಿ ಈ ದೃಷ್ಟಿಯಿಂದ ನಾವು ಇಂಗ್ಲೀಷರಿಗೆ ಎಡವಾಗಿರುವೆವೆಂದು ಒಪ್ಪಬೇಕು' ಆದರೆ ಇದು ಜನರ ದೋಷವಾಗಿರದೆ, ಇದಕ್ಕೆ ಹವೆಯು ಮಾನವೇ ಕಾರಣವಾಗಿರುವದು. ನಾವು ನಮ್ಮ ದನಕರಗಳನ್ನು ಚನ್ನಾಗಿ ಕಾಪಾಡುವದಿಲ್ಲವೆಂಬ ಆರೋಪವು ಸರಿಯಾದದ್ದೆಂದು ನನಗೆ ತೋರುತ್ತದೆ.

ದೊಡ್ಡ ಪಟ್ಟಣಗಳನ್ನು ಬಿಟ್ಟರೆ, ಉಳಿದ ದೇಶದೊಳಗೆಲ್ಲ ಉಪ್ಪುತಿನ್ನೆಯು ಇತರ ದೇಶದವರಲ್ಲಿಯಕಿಂತಲೂ ಎಂದೂ ಹೆಚ್ಚು ಕಂಡುಬರಲಾರದು. ಹುಡಗಿಯರನ್ನು ಬಸವಿಯರನ್ನಾಗಿ ಬಿಡುವದೊಂದು ನಮ್ಮ ಸಂಸ್ಕೃತಿಗೆ ಕಲಂಕ ತರುವಂಥದಾಗಿರುವದು. ಇಂಗ್ಲಿಷ ಜನರಿಗೆ ಶಿಗುವಂಥ ಶಿಕ್ಷಣವು ಹಿಂದೀಜನರಿಗೆ ಕೊಡಲ್ಪಟ್ಟಿದ್ದರೆ, ಅವರಿಗೆ ಇಂಗ್ಲಂಡದ ಅಭ್ಯುದಯವು ಪ್ರಾಪ್ತವಾಗಿದ್ದರೆ, ಅವರಾದರೂ ತಮ್ಮ ಭೂತದಯೆಯನ್ನೂ ಔದಾರ್ಯವನ್ನೂ ಜಗತ್ತಿಗೆ ತೋರಿಸದೆ ಇರುತ್ತಿದ್ದಿಲ್ಲ. ಆರ್ಯಾವರ್ತದ ಸಂಸ್ಕೃತಿಯೇ ತೀರಭಿನ್ನವಾಗಿರುವದು; ಮತ್ತು ಇದನ್ನು ನಾವು ಕಡೆತನಕ ಕಾಯ್ದುಕೊಳ್ಳುವೆವೆಂದು ನಾನು ಆಶಿಸುತ್ತೇನೆ. ಸ್ವಭಾವದಿಂದ ಹಿಂದುಸ್ಥಾನವು ಯುದ್ಧಪ್ರಿಯವಾಗಿರುವದಿಲ್ಲ. ಆದ್ದರಿಂದ ತನ್ನ ಲಕ್ಷಾವಧಿ ಪುತ್ರರನ್ನೂ ತಮ್ಮ ಬಾಂಧವರ ರುಂಡಗಳನ್ನೂ ಚಂಡಿ ಆಡುವದಕ್ಕೆ ರಣಾಂಗಣಕ್ಕಟ್ಟುವದರಲ್ಲಿ ಗೌರವವನ್ನು ತೆಗೆದುಕೊಳ್ಳಲೊಲ್ಲದು. ಹಿಂದುಸ್ಥಾನವು ತನ್ನ ಮುಸಲ್ಮಾನ ಪುತ್ರರನ್ನೊಡಗೂಡಿಕೊಂಡು, ಎರಡನೆಯವರನ್ನು ದುಃಖಿಸುವದರಕಿಂತಲೂ ತಾನೇ ದುಃಖವನ್ನು ಸಹಿಸುವದಕ್ಕೆ ಹೆಚ್ಚು ಯೋಗ್ಯತೆಯುಳ್ಳವಳಾಗಿರುವಳು. ಅವಳ ಈ ಯೋಗ್ಯತೆಯ ವಿಶ್ವಾಸದ ಮೇಲಿಂದಲೇ ನಾನು ಅವಳಿಗೆ ಅಸಹಕಾರ ಮಾರ್ಗವನ್ನು ತೋರಿಸಿರುವೆನು. ಅವಳು ನಿಜವಾಗಿ ಅದರಂತೆ ನಡೆಯುವಳೋ ಇಲ್ಲವೋ ಎಂಬವದನ್ನು ಇನ್ನು ನೋಡಬೇಕಾಗಿದೆ. ನೀವು ನೀಚ, ಶ್ರೇಗಿ ... ಸ್ವರಾಜ್ಯ... ನಡಿಸಿದ್ದಾದರೆ ಖಚಿತವಾಗಿ ಅವಳಿಗೆ ಜಯದೊರೆಯುದು. ಆದರ ಆತ್ಮಶುದ್ಧಿಯಾಗಬೇಕೆಂದೂ ಸ್ವಾರ್ಥತ್ಯಾಗವನ್ನು ಕಲಿಯಬೇಕೆಂದೂ ಇವನ್ನು ಬಿಟ್ಟರೆ ಜಯದೊರೆಯದೆ ಇರಲಾರದು. ಹಿಂದೀಜನರು ರಣಕ್ಷೇತ್ರಗಳಲ್ಲೆಂಬುದು ಕ್ಷಾತ್ರಧರ್ಮವನ್ನು ಸ್ವೀಕರಿಸಿದ ಪ್ರತಿಜ್ಞೆ. ಹಿಂದೂ, ಮುಸಲ್ಮಾನ, ಶೀಖ ಗುರಖಾ—ಮೊದಲಾದ ಯುತ್ತ... ವಿಷಯದಲ್ಲಿರುವ ಶೌರ್ಯ ಧೈರ್ಯಗಳಿಂದ ಸ್ಪಷ್ಟವಾಗುತ್ತದೆ. ಆದರೆ ನಾನು ಹೇಳುವದು ಇಷ್ಟೇ. ಕಲಹಪ್ರಿಯರಾಗಿ ಹೊಡೆದಾಟಕ್ಕೆ ಹುರಿಗೊಳ್ಳುವದು ಹಿಂದೀಜನರ ಸ್ವಭಾವಕ್ಕೆ ಅಪರಿಚಿತವಾದದ್ದು. ಜಗತ್ತಿನ ಕ್ರಾಂತಿಕ್ರಮದಲ್ಲಿ ಅವಳಿಗೆ ಇಷ್ಟಕ್ಕೂ ಹೆಚ್ಚಿನ ಉದಾತ್ತವಾದ ಕಾರ್ಯವನ್ನು ಜರಗಿಸಬೇಕಾಗಿರುವದು. ಅದಕ್ಕಾಗಿ ಅವಳಿಗೆ ಏನೇನು ಘಟಿಸುವವೆಂದನ್ನು ಕಾಲವೇ ಮಾತ್ರ ತೋರಿಸಬಲ್ಲದು.

ಆದರೆ ಇದಕ್ಕೆ ಜಾನಬುಲ್ಲನು ಒಂದು ಸೂಚನೆ ... ಕೊಟ್ಟ ಪರಾಕಾಷ್ಠವನ್ನಬಹುದು. ಅವನು ಮಾಡಿದ ಟೀಕೆಯನ್ನು ನಮ್ಮ ಒಬ್ಬ ಗೆಳೆಯನು ಕೊಟ್ಟಿರುವನು 'ಎಚ್ಚರಿಕೆ'ಯೆಂದು ತಿಳಿದು ನಮ್ಮ ದೋಷಗಳನ್ನು ತಿದ್ದಿಕೊಳ್ಳುವದು ಲೇಸು. ಜನರು ನಮಗೆ ಮಾನಕೊಡುವದಿಲ್ಲೆಂದು ಪಟಗುಡುವವರಕಿಂತ ಆ ಮಾನಕ್ಕೆ ಅರ್ಹವಾದ ಯೋಗ್ಯತೆಯನ್ನು ತಂದುಕೊಳ್ಳಲು ಪ್ರಯತ್ನಿಸಬೇಕೆಂದು ಜಾನಬುಲ್ಲನು ಹೇಳಿದ್ದಕ್ಕೆ ನಾನು ಒಪ್ಪುವೆನು. ಮತ್ತು ಹಿಂದುಸ್ಥಾನವಾದರೂ ಅದಕ್ಕಾಗಿಯೇ ಅಸಹಕಾರ ವ್ರತವನ್ನು ಸ್ವೀಕರಿಸಿರುವದು. ಅವನಿಗೆ ಅಸಹಕಾರವೆಂಬ ಶಬ್ದವು ರುಚಿಸುವದಿಲ್ಲವಂತೆ. ಅದಕ್ಕೂ ಯೋಗ್ಯವಾದ ಶಬ್ದವು ದೊರೆತರೆ ಅದನ್ನು ಈ ಹೊತ್ತಿಗೆ ಬಿಡಲಿಕ್ಕೆ ಸಿದ್ಧನಿರುವೆನು. ಆದರೆ ಆದರ ಹೊರ್ತು ಮತ್ತಾವದೂ ನಮ್ಮ ಅರ್ಥವನ್ನು ವ್ಯಕ್ತಮಾಡುವಂತಿರುವದಿಲ್ಲ- ನಮ್ಮನ್ನು ಅಧೋಗತಿಗೆ ಮುಟ್ಟಿಸುವ ಕಾರ್ಯದಲ್ಲಿ ನಾವು ಸಾಕಷ್ಟು ವೇಳೆ ಸಹಕಾರ ಮಾಡಿರುವೆವು. ಇನ್ನುಮೇಲೆ ಹಾಗೆ ಮಾಡಲೊಪ್ಪದೇ ಇರುವದು ನಮ್ಮ ಕರ್ತವ್ಯವಾಗಿರುವದು. ಈ ನಿಂದ್ಯವಾದ ಕಾರ್ಯದ ಸೋಂಕು ಸಹ ತಗಲದಂತೆ ಇರತಕ್ಕದ್ದು. ಜಾನಬುಲ್ಲನು ಒಪ್ಪಿದಂತೆ ಇಂಗ್ಲೀಷರು ನಮ್ಮ ಮರ್ಯಾದೆಯನ್ನು ಲಕ್ಷಿಸುವದಿಲ್ಲವೆಂಬುದು ನಿಜವಾದ ಸಂಗತಿಯಾಗಿರುವದು. ಆದ್ದರಿಂದ ನಾವೂ ಅವರೂ ಸಮಾನರಾದವರೆಂದು ಉಭಯತರಿಗೂ ಹೊಳೆಯುವವರೆಗೆ, ಅವರಿಂದ ಸುದ. ದೂರ ನಿಲ್ಲಬೇಕು.

(ಅಪೂರ್ಣ)

## ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯು

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಈ ಮೊದಲೇ ಗೊತ್ತುಪಡಿಸಿದಂತೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯು ...ಷ್ಟ ಅಧಿವೇಶನವು ಗದಗಿನಲ್ಲಿ ೨೫ನೇ ತಾರೀಖಿನ ದಿವಸ ನೆರೆದಿತ್ತು. ಕಮೀಟಿಯ ಅಧ್ಯಕ್ಷರಾದ ಪರಮ ಪೂಜ್ಯ ದೇಶಭಕ್ತ ಗಂಗಾಧರರಾಯರು ೨೪ ನೇ ತಾರೀಖಿನ ದಿವಸವೇ ಸಾಯಂಕಾಲ ೭ ಗಂಟೆಯ ಗಾಡಿಗೆ ಬೆಳಗಾಂವಿಯಿಂದ ಬಂದರು. ಅವರ ಸ್ವಾಗತವನ್ನು ಮಾಡಲಿಕ್ಕೆ— ದೇಶಸೇವೆಗಾಗಿ ತಮ್ಮ ಮುಪ್ಪಿನ ವಯಸ್ಸಿನಲ್ಲಿ ಕೂಡ ಆರು ತಿಂಗಳವರೆಗೆ ಕಾರಾಗೃಹವಾಸವನ್ನು ಅನುಭವಿಸಿ ಬಂದಂಥ ಕರ್ನಾಟಕ ಸುಧಾರಿಗಳ ಸ್ವಾಗತವನ್ನು ಮಾಡಲಿಕ್ಕೆ— ಸಾವಿರಾರು ಜನರು ಸ್ಟೇಶನದಲ್ಲಿ ನೆರೆದಿದ್ದರೆಂದು ಹೇಳುವ ತಕ್ಕ ದರಕಾರಿಲ್ಲ. ಅಲ್ಲಿಯ ಕಾರ್ಯನಿರ್ವಾ

ಹಕರು ಊರಲ್ಲೆಲ್ಲ ಅವರ ಮೆರವಣಿಗೆಯನ್ನು ಹೊರಡಿಸುವ ನಿಶ್ಚಯವನ್ನು ಮಾಡಿದ್ದರು. ಆದರೆ ಮಹಾತ್ಮಾ ಗಾಂಧಿಯವರ ಪ್ರಥಮ ಶಿಷ್ಯರಾದ ಗಂಗಾಧರರಾಯರು ತಮ್ಮ ಒಪ್ಪದೆ ಇದ್ದರಿಂದ ಆ ಪರಕಾರ್ಯಕ್ರಮವೆಲ್ಲ ಬದಲಾಗಿ ಹೋಯಿತು. ಅವತ್ತಿನ ದಿವಸ ರಾತ್ರಿ ೮ ಘಂಟೆಗೆ ಇಲ್ಲಿಯ ಪಂಚ ಹೊಂಡದ ಬೈಲಿನಲ್ಲಿ ದೇಶಭಕ್ತ ಗಂಗಾಧರರಾಯರಿಗೆ ನಗರದ ಜನರ ವತಿಯಿಂದಲೂ ಖಿಲಾಫತ ಕಮೀಟಿಯ ವತಿಯಿಂದಲೂ ಮಾನಪತ್ರಗಳನ್ನು ಸಮರ್ಪಿಸುವ ಸಮಾರಂಭವಾಯಿತು. ಇಲ್ಲಿಯ ಕಾರ್ಯದರ್ಶಿಗಳಾದ ದೇಶಭಕ್ತ ವೆಂಕಟರಾವ ಹುಯಿಲಗೋಳ ಇವರು ತಮ್ಮ ಕೈಯಿಂದ ತೆಗೆದ ನೂಲಿನ ಒಂದು ಧೋತರವನ್ನು ಗಂಗಾಧರರ ಮುಂದೆ ಕಾಣಿಕೆಯಾಗಿ ಸಮರ್ಪಿಸಿದರು. ಮಾನಪತ್ರಗಳಿಗೆ ಉತ್ತರ ಕೊಡುವಾಗ ಗಂಗಾಧರರಾಯರು ಕೆಳಗಿನ ಆಶಯದ ಭಾಷಣವನ್ನು ಮಾಡಿದರು, :— ಕಾರಾಗೃಹದಿಂದ ಮರಳಿ ಬಂದ ಮೇಲೆ ಕರ್ನಾಟಕದಲ್ಲಿ ತಿರುಗಿ, ರಾಷ್ಟ್ರೀಯ ಸಭೆಯ ಕಾರ್ಯವನ್ನು ಪೂರ್ಣಮಾಡುವದನ್ನು ಬಿಟ್ಟುಕೊಟ್ಟು ಇತರ ಪ್ರಾಂತಗಳಲ್ಲಿ ಸಂಚಾರ ಮಾಡುವದರ ಕಾರಣವೆಂದರೆ ತಾವು ತುರಂಗದಲ್ಲಿ ಇದ್ದಾಗ ಬೇರೆ ಪ್ರಾಂತಗಳಲ್ಲಿ ಯಾವ ಸ್ಥಿತಿಯು ಇತ್ತೆಂಬುದು ತಮಗೆ ಗೊತ್ತಾಗದಿರುವದೇ ಎಂದು ಹೇಳಿದರು. ಬಾರ್ಡೋಲಿಯ ನಿರ್ಣಯವಾದ ಬಳಿಕ ಮಿಕ್ಕ ಪ್ರಾಂತದವರ ಅಭಿಪ್ರಾಯವೇನಿರುತ್ತದೆಂಬದನ್ನು ವಿಚಾರಿಸಿಕೊಂಡು ಬಂದು, ಕರ್ನಾಟಕದಲ್ಲಿ ಕೆಲಸ ಮಾಡುವದೇ ತಮ್ಮ ಧ್ಯೇಯವಿರುತ್ತದೆಂದೂ ಆದ್ದರಿಂದ ತಾವು ಮೊದಲು ಮಿಕ್ಕ ಪ್ರಾಂತಗಳಲ್ಲಿ ಸಂಚಾರ ಮಾಡಿದ್ದರ ಬಗ್ಗೆ ಕರ್ನಾಟಕಸ್ಥರು ತಮ್ಮನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದರು. ಎಷ್ಟೋ ಜನರು ಅಸಹಕಾರವು ಮೃತವಾಗಿರುವದೆಂದು ಅನ್ನಹತ್ತಿರುವರು. ಆದರೆ ಚನ್ನಾಗಿ ಪರೀಕ್ಷಿಸಲಾಗಿ ಅಸಹಕಾರವು ಇನ್ನೂ ಜೀವಂತವಿರುವದಲ್ಲದೆ ಹೆಚ್ಚು ಹೆಚ್ಚು ಪ್ರಕಾಶಿಸಹತ್ತಿರುವದು. ಇದರ ಪರೀಕ್ಷೆಯನ್ನು ಮೂರು ತರದಿಂದ ಮಾಡಬಹುದು. ತುರಂಗದಲ್ಲಿ ಹೋದ ದೇಶಭಕ್ತರ ದೃಷ್ಟಿಗೆ ಸ್ವರಾಜ್ಯವು ಸಮೀಪಿಸಿದಂತೆ ತೋರುತ್ತದೆ. ಅದು ಸಮೀಪಿಸಿದ ಮೇಲೆ ಅದಕ್ಕೆ ಕಾರಣವಾದ ಅಸಹಯೋಗವು ಮೃತವಾಗಿದೆಯೆಂದು ಹೇಗೆ ಅನ್ನಬೇಕು. ಇಷ್ಟೇ ಅಲ್ಲ, ಆದರೆ ಆ ದಿವ್ಯ ಪುರುಷರಿಗೆ ತುರಂಗವೆಂದರೆ ತಪೋಭೂಮಿಯಾಗಿಬಿಟ್ಟಿದೆ. ತುರಂಗದ ಕಷ್ಟಗಳು ಅವರಿಗೆ ಏನೂ ಅನಿಸುವದಿಲ್ಲ. ಇದು ಅವರ ಮಾತಾಯಿತು. ಇನ್ನು ತುರಂಗದ ಹೊರಗೆ ಇದ್ದ ಅಸಹಕಾರಿಗಳ ಕಡೆಗೆ ನೋಡಿದರೂ ಇದೇ ಮಾತಿನ ಸತ್ಯತೆಯು ಕಂಡು ಬರುತ್ತದೆ. ಇಷ್ಟು ಜನರು ತುರಂಗವನ್ನು ಸೇರಿದರೂ ಸರಕಾರದವರು ನಾನಾಪ್ರಕಾರದ ದಬ್ಬಾಳಿಕೆಯನ್ನು ಆಚರಿಸಿದರೂ ಅವರು ಎದೆಗುಂದುವದರ ಬದಲು ಮೊದಲಿನಕ್ಕಿಂತ ಹೆಚ್ಚು ಉತ್ಸಾಹದಿಂದ ಕೆಲಸ ಮಾಡತೊಡಗಿದ್ದಾರೆ. ಇತ್ತ ಸರಕಾರದವರ ಕಡೆಗೆ ನೋಡಿದರೂ ಇದೇ ಮಾತು ಒಡೆದು ಕಾಣುತ್ತದೆ. ಅಸಹಕಾರ ಚಳವಳಿಯು ಮೃತವಾಗಿದ್ದರೆ ಅವರು ಇಷ್ಟು ದಬ್ಬಾಳಿಕೆಯ ಸತ್ರವನ್ನು ಹೂಡುವ ಕಾರಣವೇನು? ನ್ಯಾಯಾನ್ಯಾಯಗಳನ್ನು ಕೂಡ ಲಕ್ಷಿಸದಿರಲು ಕಾರಣವೇನು? ಇದರಿಂದ ಅಸಹಕಾರದಿಂದ ತಮ್ಮ ಕೈಯೊಳಗಿನ ಸೂತ್ರಗಳೆಲ್ಲ ಹೋಗುವದು ನಿಶ್ಚಯವೆಂದು ಕಂಡು ಹಿಡಿದು, ಕೈಗೆ ಸಿಕ್ಕ ಆಯುಧಗಳಿಂದ ಅಸಹಯೋಗಿಗಳನ್ನು ಪ್ರತಿರೋಧಿಸುವರೆಂಬದು ಚನ್ನಾಗಿ ತಿಳಿಯುವದು. ಅಂದಮೇಲೆ ಯಾವದೃಷ್ಟಿಯಿಂದ ವಿಚಾರ ಮಾಡಿದರೂ ಅಸಹಕಾರ ಚಳವಳಿಯ ಮಹತ್ವವು ಬೆಳೆಯುತ್ತಿರುವದೆಂದೇ ಹೇಳಬಹುದು. ಇಂಥ ಪರಿಸ್ಥಿತಿಯಲ್ಲಿ ನಮ್ಮ ಕರ್ತವ್ಯವು ಸ್ಪಷ್ಟವಾದ್ದಿರುವದು. ರಾಷ್ಟ್ರೀಯ ಸಭೆಯ ಮಂಡಲದವರು ಹಾಕಿಕೊಟ್ಟ ವಿಧಾಯಕ ಕಾರ್ಯಕ್ರಮವನ್ನು ಯಶಸ್ವೀರೀತಿಯಿಂದ ಪೂರ್ತಿಗೊಳಿಸುವದು ಅವಶ್ಯವು. ಜಾತಿಜಾತಿಗಳಲ್ಲಿ ಐಕ್ಯವನ್ನು ಬೆಳಿಸುವದು ನಮ್ಮ ಕರ್ನಾಟಕಕ್ಕೆ ಅತ್ಯಂತ ಅವಶ್ಯವಾಗಿದೆ. ಆದ್ದರಿಂದ ಎಲ್ಲರೂ ಆ ಕಾರ್ಯವನ್ನು ಕೈಕೊಳ್ಳಬೇಕು. ಈ ಪ್ರಕಾರ ಭಾಷಣವಾದ ಬಳಿಕ ಸಭೆಯ ವಿಸರ್ಜನೆಯಾಯಿತು.

ಮರು ದಿವಸವೇ ಎಂದರೆ ೩ನೇ ತಾರೀಖಿನ ದಿವಸ ಪ್ರಾಂತಿಕ ಕಮೀಟಿಯ ಅಧಿವೇಶನವು ನೆರೆಯತಕ್ಕದ್ದಿತ್ತು. ಸ್ವಯಂಸೇವಕರು ರವಿವಾರ ಮುಂಜಾನೆ ವಿಜಾಪೂರದ ಸಭಾಸದರನ್ನು ಸ್ವಾಗತ ಮಾಡಲಿಕ್ಕೆ ಸ್ಟೇಷನಕ್ಕೆ ಹೋಗಿದ್ದರು. ಆದರೇನು? ವಿಜಾಪೂರದಿಂದ ಒಬ್ಬನೇ ಪ್ರತಿನಿಧಿಯು ಬಂದನು! ಅವನೇ ದೇಶಭಕ್ತ ಜಯರಾಯರ ಮರಣದ ದುಃಖಮಯವಾರ್ತೆಯನ್ನು ತಂದನು. ದೇಶಭಕ್ತ ಜಯರಾಯರ ನಿಧನದ ನಿಮಿತ್ತ ವಿಜಾಪೂರದಲ್ಲಿ ರವಿವಾರ ದಿವಸ ಸಭೆಯು ನೆರೆಯತಕ್ಕದ್ದಿದ್ದದ್ದರಿಂದ ದೇ. ಭ. ಕೌಜಲಗಿ ಮುಂತಾದವರಿಗೆ ಆ ದಿವಸ ಗದಗಿಗೆ ಬರುವದು ಶಕ್ಯವಿಲ್ಲೆಂಬ ವಾರ್ತೆಯನ್ನು ತಂದನು! ಸ್ವಯಂಸೇವಕರ ಮುಖಗಳೆಲ್ಲ ಬಾಡಿ ಹೋದವು. ಸ್ವಲ್ಪ ಹೊತ್ತಿನಲ್ಲಿ ಈ ಸುದ್ದಿಯು ಊರಲ್ಲೆಲ್ಲ ಹಬ್ಬಿತು! ಎಲ್ಲಿ ನೋಡಿದರೂ ಜಯರಾಯರ ವರ್ಣನವೇ ವರ್ಣನೆ. ಎಂಥ ದೇಶಭಕ್ತನು ಮಡಿದನೆಂಬ ಮಾತೇ ಮಾತು! ಇರಲಿ ಪ್ರಾಂತಿಕ ಸಭೆಯು ಕೋರಂ ಆಗದ್ದರಿಂದ ಮರುದಿವಸ ಅಂದರೆ ಸೋಮವಾರಕ್ಕೆ ಬಿದ್ದಿತು. ಸೋಮವಾರ ಮುಂಜಾನೆ ವಿಜಾಪೂರದ ಸಭಾಸದರೂ ಬಂದರು. ಸಭೆಯು ಸರಿಯಾಗಿ ೧ ಘಂಟೆಗೆ ಸುರುವಾಯಿತು. ದೇ. ಭ. ಜಯರಾಯರ ನಿಧನದ ಬಗ್ಗೆ ದುಃಖಪ್ರದರ್ಶನ ನಿರ್ಣಯವಾದ ಮೇಲೆ ಈ ಸಾರೆಯ ಮಹಾಸಭೆಯ ಅಧ್ಯಕ್ಷರನ್ನು ಆರಿಸುವ ನಿರ್ಣಯದ ಚರ್ಚೆಯಾಯಿತು. ದೇ. ಭ. ಕೌಜಲಗಿಯವರು ಮಹಾತ್ಮಾ ಗಾಂಧಿಯವರೇ ಅಧ್ಯಕ್ಷರಾಗಬೇಕೆಂದೂ ಮತ್ತು ಕಾರ್ಯನಿರ್ವಾಹವನ್ನು ಮಾಡಲಿಕ್ಕೆ ಚಿತ್ತರಂಜನ ದಾಸ. ಪಂಡಿತ ಮೋತೀಲಾಲ ನೆಹರು ಮದನಮೋಹನ ಮಾಳವೀಯ ಡಾ ಅನಸಾರಿ, ಸೀ. ರಾಜಗೋಪಾಲಾಚಾರ್ಯ, ಇವರಲ್ಲಿ ಯಾರಾದರೊಬ್ಬರು ಇರಬೇಕೆಂದೂ ಸೂಚನೆಯನ್ನು ತಂದರು. ಸ್ವಲ್ಪ ವಾದವಾದ ಮೇಲೆ ಈ ಠರಾವು ಬಹುಮತದಿಂದ ಪಾಸಾಯಿತು. ಆ ಮೇಲೆ ಸದ್ಯಸ್ಥಿತಿಯ ಚರ್ಚೆಯು ಪ್ರಾರಂಭವಾಯಿತು. ಕರ್ನಾಟಕದಲ್ಲಿ ಕಾಯದೇಭಂಗವನ್ನು ಪ್ರಾರಂಭಿಸುವದು ಶಕ್ಯವಿದೆಯೋ ಹೇಗೆ ಎಂಬದನ್ನು ಗೊತ್ತುಪಡಿಸುವ ಕುರಿತು ಒಂದು ಕಮೀಟಿಯು ನೇಮಿಸಲ್ಪಟ್ಟಿತು. ಆ ಕಮೀಟಿಯವರು ಪ್ರಾಂತದಲ್ಲೆಲ್ಲ ತಿರುಗಾಡಿ ಪರಿಸ್ಥಿತಿಯನ್ನು ನೋಡಿ ತಮ್ಮ ಅಭಿಪ್ರಾಯವನ್ನು ಜುಲೈ ತಿಂಗಳ ೩೦ನೇ ತಾರೀಖಿನೊಳಗಾಗಿ ತಿಳಿಸಬೇಕೆಂದು ಗೊತ್ತಾಯಿತು. ಆ ಕಮೀಟಿಯಲ್ಲಿ ದೇ. ಭ ಕಡಪಾ ವಿಠ್ಠಲರಾವ ಜೋಶಿ ಮತ್ತು ನಾರಾಯಣರಾವ ಡಂಬಳ ಈ ಮೂವರು ಸಭಾಸದರಿರುವರು. ಬ್ರಾಹ್ಮಣ ಬ್ರಾಹ್ಮಣೇತರರ ನಡುವೆ ಇದ್ದ ತಂಟೆಗಳನ್ನೆಲ್ಲ ಮುರಿಯುವ ಕುರಿತು ಒಂದು ಕಮೀಟಿಯು ನೇಮಿಸಲ್ಪಟ್ಟಿತು.

ಇದಲ್ಲದೆ ವೈಯಕ್ತಿಕ ಇಲ್ಲವೆ ಸಾಮುದಾಯಿಕ ಕಾಯದೇಭಂಗವನ್ನು ಆಶ್ರಯಿಸದೆ ವಿಧಾಯಕ ಕಾರ್ಯಕ್ರಮವನ್ನು ಪೂರ್ತಿಗೊಳಿಸುವದು ಶಕ್ಯವಿದ್ದು ಆ ಕಾರ್ಯವನ್ನು ಜೋರಿನಿಂದ ಸಾಗಿಸತಕ್ಕದ್ದೆಂದೂ ಗೊತ್ತಾಯಿತು. ಧಾರವಾಡದ ಕೊಲೆಯ ಸ್ಮರಣೆಗಾಗಿ ೧ನೇ ಜುಲೈ ದಿವಸ ಹರತಾಳವನ್ನು ಮಾಡತಕ್ಕದ್ದೆಂದು ನಿರ್ಣಯವಾಯಿತು. ಅಧ್ಯಕ್ಷರು ತಾವು ಜೇಲಿನಲ್ಲಿದ್ದಾಗ ತಮ್ಮನ್ನು ಅಧ್ಯಕ್ಷರನ್ನಾಗಿ ಆರಿಸಿದ್ದಕ್ಕೆ ಆಭಾರ ಮನ್ನಿಸಿ ತಾವು ಮುಂದಕ್ಕೂ ಅಶಕ್ತರೂ ಆದ್ದರಿಂದ ರಾಜೀನಾಮೆಯನ್ನು ಕೊಡುತ್ತೇವೆಂದು ಹೇಳಿದಕೂಡಲೇ ಎಲ್ಲರೂ ಒಮ್ಮೆಲೇ ಬೇಡೆಂದು ಆಗ್ರಹ ಮಾಡಲು ಅವರು ಒಪ್ಪಿದರು. ನಂತರ ಸಭೆಯ ಕೆಲಸವು ಮುಗಿಯಿತು.

---

(೨೩೦ನೇ ಪಾನಿನಿಂದ ತಪ್ಪಿ ಬಂದದ್ದು.)

ಡುತ್ತ ನಿಲ್ಲುವರು. ಆದರೆ ನಾವು ನಮ್ಮ ತತ್ವಕ್ಕನುಸಾರವಾಗಿಯೇ ಕೆಲಸಮಾಡಿದರೆ, ಅವರ ಸಹಾನುಭೂತಿಯು ಶಾಂತವಾದದ್ದಾದರೂ ನಮಗೆ ಉಪಯೋಗಬೀಳುತ್ತದೆ. ಅಶಾಂತಮಯ ಹಾಗೂ ಗೊಂದಲವನ್ನೆಬ್ಬಿಸುವಂಥ ಸೇನೆಗಿಂತ ಶಾಂತವಾದ ಸೇನೆಯಿಂದ ನಮಗೆ ಯಶಸ್ಸು ದೊರೆಯುವದೆಂದು ನಾವು ಜನರ ನಿದರ್ಶನಕ್ಕೆ ತಂದುಕೊಡಬೇಕಾಗುತ್ತದೆ.

---

ಹೋದ ಅಂಕದ ನೋಟೀಸಿನಲ್ಲಿ ಪೇರಾ ಗ್ರಾಮದಲ್ಲಿ ಅಂತ ಇದ್ದಲ್ಲಿ ಪೇರಾಬೀಳಗಿಗ್ರಾಮದಲ್ಲಿ ಎಂದು ಓದಬೇಕು.

ಏಜಂಟರು ಬೇಕು! ಏಜಂಟರು ಬೇಕು

ನಂಬರ ೧ ನೇ ನಿರ್ಮಲವಾದ

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾಗ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳೇ ಸೋಯಿಯುದರದಲ್ಲಿ ತೈಲವು ಸಿಗುವದು. ಸಿಕ್ಕ ೨೪ ಔಂಸ ತೈಲದಬಾಟ್ಲಿ ಅಥವಾ ಶಬ್ಬಿ ೧ ಕ್ಕೆ ರೂಪಾಯಿ ೬—೦—೦ಡಜನ್ ವಿಶೇಷ ಮಾಹಿತಿ ಪತ್ರದ್ವಾರಾ.

ಬಿ. ಎ. ಪೈ ಕಂಪನಿ.

ಪೋಷ್ಟ ಹೊನ್ನಾವರ.

ಜಿಲ್ಹಾ ಉತ್ತರಕಾನಡಾ.

## ಸರಸ್ವತೀ ವಾಚನಾಲಯ.

ಡಾ. ರವೀಂದ್ರನಾಥ ಟಾಗೋರ ಇವರ (Waterfall.) ವಾಟರಫಾಲ್‌ದ ಕನ್ನಡ ಭಾಷಾಂತರವು.

## ಮುಕ್ತಧಾರಾ.

ಭಾಷಾಂತರಕಾರ (ನಾಟಕ.) ಜಿ. ಆರ್. ಕುಲಕರ್ಣಿ

ಮುದ್ರಣವಾಗುತ್ತಲಿದೆ. { ಕಿಂ ೧ ರೂ. ಪೋಸ್ಟೇಜ ಬೇರೆ.

ವಿಳಾಸಃ— S. N. Hosmani.

ಎಸ್. ಎನ್. ಹೊಸಮನಿ.

ಗುಳೇದಗುಡ್ಡ.

ಇಲ್ಲವೆ, [illegible] ವಿದ್ಯಾರಣ್ಯ ಮುದ್ರಾಮಂದಿರ,

ಬಾಗಲಕೋಟೆ.

## ಇಂಡಿಯಾ ಪ್ರಾವ್ಹಿಡೆಂಟ ಕಂ. ಲಿ. ಕಲಕತ್ತಾ.

ಮಧ್ಯಮ ಸ್ಥಿತಿಯ ಕುಟುಂಬದಾರರಿಗೆ ಈ ಕಠಿಣ ಕಾಲದಲ್ಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಯಾಗಿರುವದು. ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರೆಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ.

V. J. PARVATIKER.
General Agent, BAGALKOT,

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಏಜಂಟರು) **ಅತ್ಯುತ್ತಮ** (ಬೇಕು

ಮಶಿ ಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೮—೦ | ಟ. ಖ. |
| ೧೦೦ ಚೀಟಿಗಳಿಗೆ | ೦—೧೪—೦ | |
| ೪೦ ಔಂಸ ಮಶಿ ಬುಡಿಕೆಗೆ | ೦—೪—೦ | ಬೇರೆ. |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸಃ— ಕರ್ನಾಟಕ ಇಂಕ ಕಂಪನಿ,

ಬಾಗಲಕೋಟೆ.

## ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರವ್ಯಾವಹಾರದಿಂದ, ಉತ್ತಮವಾದ ಸ್ವದೇಶೀ ಸಾಬೂಣವ ಮಾಡುವದಕ್ಕೆ ಕಲಿಸುವೆವು.

ಫೀ. ರೂ. ೫. ಉದ್ಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು.

ಕಲಾಭುವನ—ರಾಷ್ಟ್ರೀಯ ಶಾಲಾ

ಧಾರವಾಡ.

ನಿಟ ಮಲ್ಲಪ್ಪ ಚನಗಿರಿಯಪ್ಪ ಪ್ಯಾಟಿ ಶೆಟ್ರ ದ|| ಖು||

## ವಿದ್ಯಾರಣ್ಯ ಮುದ್ರಾಮಂದಿರ

## ಬಾಗಲಕೋಟೆ

ನಮ್ಮಲ್ಲಿ ಎಲ್ಲ ತರದ ಮುದ್ರಣವು ಬಹಳ ಅಂದವಾಗಿಯ ಸ್ವಸ್ತ ದರದಿಂದಲೂ ಮಾಡಲ್ಪಡುವದು. ಒಮ್ಮೆ ಅನುಭ ತೆಗೆದು ಕೊಂಡರೆ ತಮಗೇ ಖಾತ್ರಿಯಾಗುವದು. ಇದಲ್ಲದೆ ಮ್ಮ ಕಡೆಗೆ ವಕೀಲಿ ಪತ್ರ ದರಖಾಸ್ತ ಮುಂತಾದ ನಮೂನೆ ಳೂ, ಟೋಲ ನಾಕೇದ ಪಾವತಿ ಪುಸ್ತಕಗಳೂ ಉಳಿದ ನಮೂ ನೆಗಳೂ ಮಾರಲಿಕ್ಕೆ ಸಿಗುತ್ತಿದ್ದು ಬೇಕಾದವರು ತರಿಸಿಕೊಳ್ಳಬ ದು. ವ್ಹಿ. ಪಿ. ತರಿಸಿಕೊಳ್ಳ ಬೇಕಾದಲ್ಲಿ ಕೆಲವು ಹಣ ಮುಂಗ ಕಳಿಸತಕ್ಕದ್ದು.

ವ್ಯವಸ್ಥಾಪಕ

## ಜಾಹಿರಾತಿನ ದರ.

ಕನ್ನಡ 'ನವಜೀವನ' ದ ಒಂದು ಕಾಲಮಿನ ಒಂದು ಇಂ ಪ್ರತಿಯೊಂದು ಸಾರೆ ೧ ರೂ. ಕಾಯಂ ಜಾಹಿರಾತುಗಳ ಬಗ್ಗೆ ಸಮಕ್ಷ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

### ಚಂದಾ ನಿರ್ಣಯ.

| | |
|---|---|
| ವಾರ್ಷಿಕ ವರ್ಗಣಿ ರೂ. | ೪—೦—೦ |
| ಆರು ತಿಂಗಳಿಗೆ ,, | ೨—೦—೦ |
| ಬಿಡಿಸಂಚಿಕೆ | ೦—೧—೬ |
| ಮಾದರಿ ಸಂಚಿಕೆ ಬೇಕಾದವರು | ೦—೧—೬ |

☞ ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಶ್ರೀನಿವಾಸ ರಾಘವೇಂದ್ರ ಮಂಗಳವೇಢೆ ಇವರು ಮುದ್ರಿಸಿದರು. ಮತ್ತು ಅಲ್ಲಿಯೇ ದತ್ತಾತ್ರೇಯ ಆಚಾರ್ಯ ಬಿಂದಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ತರುಣರಿಗೆ ವಿನಂತಿ. R. No. B. 1589

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟ ಆಷಾಢ ವದ್ಯ ೪ ಶಕೆ ೧೮೪೩ | ಸಂಚಿಕೆ ೩೧
ಗುರುವಾರ ತಾ. ೧೪ ಜುಲೈ ೧೯೨೧.

## ಮಹಾತ್ಮರ ನುಡಿಯು

### ನಮ್ಮ ಯಶಸ್ಸಿಗೆ ಮುಖ್ಯವಾದವುಗಳು.

(ಯಂಗ ಇಂಡಿಯಾ ೧೧-೮-೨೧)

ಸಪ್ಟೆಂಬರ ೩೦ ನೇ ತಾರೀಖಿನೊಳಗಾಗಿ ಪರದೇಶೀ ಅರಿವೆಗಳ ಬಹಿಷ್ಕರಿಸುವದನ್ನು ಮುಗಿಸಬೇಕಾಗಿದೆ. ಆ ಅರಿವೆಗಳ ರಮಣೀಯತೆಯ ಬಗ್ಗೆ ಈಗಿದ್ದುವ ಮನೋವೃತ್ತಿಯು ಬದಲಾಗುವಂತೆ ನಮ್ಮ ವಿಚಾರಸರಣಿಯನ್ನು ತಿದ್ದಿ ಸರಿಪಡಿಸಬೇಕು; ಬಾಹ್ಯಾಡಂಬರಗಳನ್ನೆಲ್ಲ ಬಿಟ್ಟುಕೊಟ್ಟು ಸಾದಾವೃತ್ತಿಯುಳ್ಳವರಾಗಬೇಕು; ಮತ್ತು ಅನವಶ್ಯಕವಾದ ಎಲ್ಲ ಸುಖಸಾಧನಗಳನ್ನು ತೊರೆದು ನಿಲ್ಲಬೇಕು. ಯಾವ ಅಸಹಕಾರಿಯೂ ಮೂರು ಪೋಷಾಕಿನ ಹೊರ್ತು ಹೆಚ್ಚಿಗೆ ಹಾಕಕೂಡದು. ಬಿಜಾಪುರದ ನಯವಾದ ಖಾದಿಯನ್ನು ಬಯಿಸದೆ ಉರುಟ ಖಾದಿಯಿಂದಲೇ ತೃಪ್ತರಾಗಬೇಕು. ಇಷ್ಟೆಲ್ಲ ಕೇವಲ ಪೂರ್ವತಯಾರಿಯು ಮಾತ್ರಾಯಿತು. ಸ್ವದೇಶೀಕೆಲಸವನ್ನು ವ್ಯವಹಾರ ಅಥವಾ ಧಂದೆ ಈ ದೃಷ್ಟಿಯಿಂದಲೇ ನಡಿಸಲಿಕ್ಕೆಬೇಕು. ಇಲ್ಲವಾದರೆ ಇದರಲ್ಲಿ ಜಯವು ಅಶಕ್ಯವು. ಇಲ್ಲಿಯವರೆಗೆ ನಾವು ವಿದ್ಯಾರ್ಥಿಗಳನ್ನು ಎಚ್ಚರಗೊಳಿಸುವದರಲ್ಲಿ ತೊಡಗಿದ್ದೆವು; ಅವರಾದರೂ ತಮ್ಮ ಯೋಗ್ಯತೆಗೆ ಸರಿಯಾಗಿ ಜಾಗೃತರಾಗಿರುವರು. ಎಷ್ಟೋ ಹುಡುಗರು ಕುಡಕರನ್ನು ಎಚ್ಚರಪಡಿಸುವದರಲ್ಲಿ ಮತ್ತು ಚಳವಳಿಯನ್ನು ಪಸರಿಸುವದರಲ್ಲಿ ವೀರಭಟರಂತೆ ತಮ್ಮ ಆಯುಷ್ಯವನ್ನು ವೆಚ್ಚಮಾಡುತ್ತಿರುವರು. ಈಪ್ರಕಾರ ಅಸಹಕಾರಿ ಶಾಲೆಗಳು ಜನರ ಚಿತ್ತವನ್ನು ಆಕರ್ಷಿಸಿರುವವು. ಆದರೆ ಕೇವಲ ಶಾಲೆಯ ಹುಡುಗರಿಂದಲೇ ಪೂರ್ಣವಾಗಿ ಸ್ವದೇಶಿಯು ಸಾಧ್ಯವಾಗಲಾರದು. ಇದಕ್ಕಾಗಿ ಹಿಂದುಸ್ತಾನದೊಳಗಿನ ನೇಯುವ ಜನರ ಹೃದಯವು ಸ್ಫುರಣಹೊಂದುವಂತೆ ಮಾಡಬೇಕು. ಅಲ್ಲಲ್ಲಿಗೆ ಅವರ ಸಂಘಗಳನ್ನು ಸ್ಥಾಪಿಸಬೇಕು. 'ಇದರಿಂದ ಹೊಟ್ಟೆತುಂಬುವದಿಲ್ಲ'ವೆಂದು ತಮ್ಮ ಧಂದೆಯನ್ನು ಬಿಟ್ಟು ನೌಕರಿಗೆ ಅವರ ವ್ಯವಸಾಯವನ್ನೇ ನಡಿಸಲಿಕ್ಕೆ ಅನುಕೂಲಮಾಡಿಕೊಡಬೇಕು. ಅವರಿಗೆ ಪರದೇಶಿ ನೂಲನ್ನು ಉಪಯೋಗಿಸುವದು ಪಾಪವುಯವೆಂಬದನ್ನೂ, ಎಷ್ಟು ಶ್ರಮವಾದರೂ ಕೈನೂಲನ್ನೇ ಯಾಕೆ ಉಪಯೋಗಿಸಬೇಕೆಂಬದನ್ನೂ ಚನ್ನಾಗಿ ತಿಳಿಸಿ ಹೇಳಬೇಕು. ಇದರಂತೆ ಪಿಂಜಾರರಿಗೆ ನೂಲುವವರಿಗೆ ಅನುಕೂಲವಾಗುವಂತೆ ಹಂಜಿಯನ್ನು ತಯಾರಿಸಲಿಕ್ಕೆ ಹೇಳಿಕೊಳ್ಳಬೇಕು. ಅರಿವೇ ವ್ಯಾಪಾರಸ್ಥರಿಗೆ ತಮ್ಮ ವ್ಯವಹಾರದಲ್ಲಿಯೂ, ಸ್ವದೇಶಾಭಿಮಾನವನ್ನು ತಾಳಿ ಕೈನೂಲಿನ ಬಟ್ಟೆಯ ವ್ಯಾಪಾರಕ್ಕೆ ಉತ್ತೇಜನ ಕೊಟ್ಟು ವಿದೇಶೀ ಅರಿವೆಗಳ ವ್ಯಾಪಾರವನ್ನು ನಿಲ್ಲಿಸಲಿಕ್ಕೆ ಹೇಳಿಕೊಳ್ಳಬೇಕು. ಬಟ್ಟೆಗಳಲ್ಲಿ ಮಾರ್ ನೂಲಿನಲ್ಲಿ 'ಇಂಥದು ಗಿರಣಿಯ ನೂಲಿನದು ಇಂಥದು ಕೈನೂಲಿನದು' ವಿಂಗಡಿಸುವದರಲ್ಲಿ ಜಾಣರಾದವರನ್ನು ಸ್ವದೇಶಿ ಅಂಗಡಿಗಳ ಮೇಲೆ ತಪಾಸಣೆಗಾಗಿ ನೇಮಿಸಬೇಕು. ಇಷ್ಟೆಲ್ಲ ಕಾರ್ಯವು ದೊಡ್ಡಪ್ರಮಾಣದಿಂದ ಸಂಘ ಶಕ್ತಿಯು ನಮ್ಮಲ್ಲಿ ಉಂಟಾಗಿದ್ದರೆ ಹೇಗೆ ನೆರವೇರಬೇಕು. ಕಾಂಗ್ರೆಸದ ಎಲ್ಲ ಶಾಖೆಗಳ ಸ್ವದೇಶಿಯನ್ನೇ ಆದ್ಯಕರ್ತವ್ಯವೆಂದು ಭಾವಿಸದ ಹೊರ್ತು ಇಂಥ ಸಂಘಶಕ್ತಿಯು ಎಲ್ಲಿಂದ ಬರಬೇಕು. ಎಲ್ಲ ಕಾರ್ಯವನು ನಿಲ್ಲಿಸಿ ಕೇವಲ ಖಾದಿಯನ್ನು ಹುಟ್ಟಿಸುವದರಲ್ಲಿಯೂ ಪರದೇಶಿ ಅರಿವೆಯನ್ನು ಬಹಿಷ್ಕರಿಸುವದರಲ್ಲಿಯೂ ನಿರತರಾಗಬೇಕು.

ಎಲ್ಲ ಹಳ್ಳಿಗಳು ತಮತಮಗೆ ಹತ್ತುವಷ್ಟು ನೂಲುವದನ್ನು ನೇಯುವದನ್ನೂ ಮಾಡಿಕೊಳ್ಳುವದು ಅತ್ಯುತ್ತಮ. ಈಗ್ಗೆ ತಮಗೆ ಹತ್ತುವಷ್ಟು ಕಾಳುಗಳನ್ನು ತಾವೇ ಬೆಳೆದುಕೊಳ್ಳುವದಿಲ್ಲವೇ? ತಮಗೆ ಬೇಕಾಗುವ ಎಲ್ಲ ಕಾಳುಗಳನ್ನು ಬಿತ್ತಿ ಬೆಳೆಕೊಳ್ಳುವದಕ್ಕಿಂತಲೂ ತಮಗೆ ಸಾಕಷ್ಟು ಖಾದಿಯನ್ನು ನೇಯು ಕೊಳ್ಳುವದು ಸುಲಭವಾದದ್ದು. ಎಲ್ಲ ಹಳ್ಳಿಗಳಲ್ಲಿ ಅಕ್ಕಿ ಗೋದಿಗಳು ಎಲ್ಲಿ ಬೆಳೆಯುತ್ತವೆ? ಆದರೆ ಎಲ್ಲ ಹಳ್ಳಿಗಳು ತಮಗೆ ಹತ್ತುವಷ್ಟು ಹತ್ತಿಯನ್ನು ಕೂಡಿಹಾಕಿ ನೂಲುವದನ್ನು ನೇಯುದನು ಏನೂ ತೊಂದರೆಇಲ್ಲದೆ ಮಾಡಬಲ್ಲವು. ಆದರೆ ಒಮ್ಮೆಲೆ ಇಂಥ ಸುಖದ ಕಾಲವು ಬರಲಾರದು. ಆದರೆ ಖಾದಿಯ ವಿಷಯದಲಿ ಪಂಜಾಬದಂತೆ ಸುಸಂಘಟಿತವಾದ ಪ್ರಾಂತಗಳು ತಮ್ಮಲ್ಲಿಗೆ ಎರಡನೇ ಕಡೆಯಿಂದ ಅರಿವೆ ಬರುವದನ್ನು ಬಂದುಮಾಡಿ, ತಮಗೆ ಸಾಕಾಗಿ ಹೆಚ್ಚಾದ ಖಾದಿಯನ್ನು ಎರಡನೇ ಪ್ರಾಂತಗಳಿಗೆ ಕಳಿಸಿಕೊಡಬೇಕು. ಖಾದಿಯನ್ನು ಹುಟ್ಟಿಸುವದರಲ್ಲಿ ಪಂಜಾಬ ಆಂಧ್ರ ಮತ್ತು ಗುಜರಾಥ ಪ್ರಾಂತಗಳು ಒಳಿತಾಗಿ ಮುಂದೆ ಬಂದಿರುವವು ಮತ್ತು ಅವು ಖಾದಿಯ ತುಟಾಗ್ರವಿದೆಯೆಂದೇ ಕಲ್ಪಿಸಿ ಹಗಲೀರಾತ್ರಿ ದುಡಿಯುತ್ತ ಇರಬೇಕು.

ಇಂಥ ದೊಡ್ಡ ಕೆಲಸವನ್ನು ನೆರವೇರಿಸಬೇಕಾದರೆ ನಾವು ವಾದಮಾಡುವದನ್ನು ಬಿಡಬೇಕು ಮಾತಾಡಿದರೂ ಖಾದೀ ವ್ಯವಹಾರದ ಮಾತನ್ನೇ ಆಡಬೇಕು- 'ಹೀಗೆ ಮಾಡಿದರೆ ಏನೋ, ಹಾಗೆ ನಡೆದುಕೊಂಡಲ್ಲಿ ಏನೋ" ಎಂದು ಇಲ್ಲದ ತೊಂದರೆಗಳ ವಿಷಯಕ್ಕೆ ವಿಚಾರಮಾಡುವದರಲ್ಲಿ ಕಾಲಕಳೆಯದೆ ಉದ್ಯೋಗಸ್ಥರಾಗಲಿಕ್ಕೆಬೇಕು. ಕಾಂಗ್ರೆಸದ ಶಾಖೆಗಳು ವಕೀಲಿಯನ್ನು ಬಿಡದಿದ್ದ ವಕೀಲರು

ವಾದಹಾಕುತ್ತ ಕೊಡುವ ಮನೆಗಳಾಗದೆ, ಖಾದಿಯನ್ನು ನೇಯುವವರ ಮತ್ತು ಅವರ ಹಿತವನ್ನು ಲಕ್ಷಿಸುವವರ ಸಂಘಗಳಾಗಬೇಕು. ವಕೀಲಿಯನ್ನು ಬಿಡದವರು ದುಡ್ಡಿನಿಂದ ಸಹಾಯಮಾಡಬಹುದು, ಮತ್ತು ಮುಂದೆ ಬಿಟ್ಟು ಕಾರ್ಯಮಾಡುವವರಿಗೆ ಅನಾಂತರ ರೀತಿಯಿಂದ ನೆರವಾಗಬಹುದು. ಪ್ರಸಿದ್ಧಿಗೆ ಬರಬೇಕೆಂಬ ಅವರ ಇಚ್ಛೆಯನ್ನು ನಾನು ಅನುಕಂಪಿಸುವೆನು. ಆದರೆ ತಮ್ಮ ಯೋಗ್ಯತೆಯ ಸೀಮೆಯನ್ನು ತಿಳಿದುಕೊಳ್ಳಲಿಕ್ಕೆ ನಾನು ಅವರಿಗೆ ಹೇಳಿಕೊಳ್ಳುವೆನು. ಕೌನ್ಸಿಲಗಳಿಗೂ ಕೋರ್ಟುಗಳಿಗೂ ಹೋಗುವಂಥ ಸ್ಥಿತಿಯು ಪುನಃ ರಾಷ್ಟ್ರಕ್ಕೆ ಬಂದಿತೆಂದರೆ ಮತ್ತೆ ನಿಮ್ಮ ದಿವಸಗಳು ಉದಯಿಸುವವು. ಈಗ್ಗೆ ಮಾತ್ರ ಅವೆರಡರಲ್ಲಿಯೂ ದೇಶದ ಕೆಲಸವು ಇಲ್ಲವಾಗಿರುವದು. ಅವು ಅಷ್ಟು ಅನೀತಿಮಯವಾಗಿರುವವು. ಸರಕಾರ ಮತ್ತು ಪ್ರಜೆಗಳ ನಡುವೆ ವ್ಯಾಜ್ಯ ಬಂದಾಗ ಇವರ ಕಾಯಿದೆಯಿಂದಾಗಲಿ ಕೋರ್ಟಕಚೇರಿಯಿಂದಾಗಲಿ ನ್ಯಾಯವು ಸಿಗದು. ಇಂಥ ಸಮಯದಲ್ಲಿ ನ್ಯಾಯವರ್ತಿಗಳಾಗಿದ್ದರೆ ಅವುಗಳ ಸಾರ್ಥಕವು. ಹೊರಗಿನವರಿಬ್ಬರು ಬಡಿದಾಡುವಾಗ ನ್ಯಾಯವನ್ನು ಹೇಳುವದೇನು ದೊಡ್ಡ ಮಾತಲ್ಲ. ಈ ಎರಡನೇ ತರದ ಸರಕಾರದ ನ್ಯಾಯ ಹೇಳುವದೂ, ಸಿಂಹವು ಕುರಿಗಳು ತಮ್ಮತಮ್ಮೊಳಗೆ ಹೊಡೆದಾಡಿಯಾಗಲಿ ಬೇನೆಯಿಂದಾಗಲಿ ಸಾಯದ ಹಾಗೆ ಕಾಯುವದೂ ಒಂದೇ ಆಗಿರುವದು. ಹಾಗೆ ಕಾಯ್ದುಕೊಂಡಿರದಿದ್ದರೆ ತನ್ನ ಹೊಟ್ಟೆಗೆ ಕಡಿಮೆ ಆಗುವದಿಲ್ಲವೆ?

* * * *

ಪರದೇಶೀ ವಸ್ತ್ರಗಳು ನಮ್ಮನ್ನು ಸಂಪೂರ್ಣವಾಗಿ ಗುಲಾಮರನ್ನಾಗಿಮಾಡಿರುತ್ತವೆ ಯಾಕಂದರೆ ನಾವು ಅತ್ಯಂತ ಪವಿತ್ರ ಕೆಲಸದಲ್ಲಿ ಅವುಗಳನ್ನು ಉಪಯೋಗಿಸುತ್ತೇವೆ. ಅಯೋಧ್ಯೆ, ಪುರಿ ಹಾಗೂ ಉಳಿದ ಎಲ್ಲ ಪಟ್ಟಣಗಳಲ್ಲಿಯೂ. ದೇವರಮೂರ್ತಿಯನ್ನು ಅಲಂಕರಿಸುವದಕ್ಕೂ ಪರದೇಶೀ ಅರಿವೆಗಳೇ ಉಪಯೋಗಿಸಲ್ಪಡುತ್ತವೆಂದು ನಾನು ಸಂಚಾರಮಾಡುವ ಕಾಲಕ್ಕೆ ನನಗೆ ಕಂಡುಬಂದಿತು. ಪವಿತ್ರ ಯಜ್ಞೋಪವೀತ ವಾದರೂ ಯಾವಾಗಲೂ ಕೈ ಇಂದ ಮಾಡಿದ್ದು ಇರುವದಿಲ್ಲ. ಗುಜರಾಥ ವಿದ್ಯಾಪೀಠದ ಆಚಾರ್ಯ ಗಿಡವಾನಿಯವರು ಸಿಂಧ ಪ್ರಾಂತಕ್ಕೆ ಹೋದಾಗ ಗ್ರಂಥ ಸಾಹೆಬನಿಗೆ (ದೇವರ ಹೆಸರು) ಪರದೇಶೀ ರೇಶಿಮೀ ವಸ್ತ್ರಗಳನ್ನು ಜೀಣಗಿಯಾಗಿಕೊಡದೇ ಖಾದಿಯನ್ನೇ ಅರ್ಪಿಸಿದರೆಂದು ಓರ್ವ ಸಿಂಧದ ಪ್ರತಿನಿಧಿಯು ನನಗೆ ತಿಳಿಸಿದ್ದರಿಂದ ನನಗೆ ಸ್ವಲ್ಪ ಸಮಾಧಾನವಾಗುತ್ತದೆ. ಆದ್ದರಿಂದ ಎಲ್ಲ ಭಕ್ತರು ಇದೇ ರೀತಿಯಿಂದ ಗಿಡವಾನಿಯವರ ಅನುಕರಣ ಮಾಡಿ ಪರದೇಶೀ ಅರಿವೆಗಳನ್ನು ದೇವರಿಗೆ ಅರ್ಪಿಸಲಿಕ್ಕಿಲ್ಲೆಂದು ನನಗೆ ಆಶೆಯದೆ. ಹಾಗೂ ಎಲ್ಲ ದೇವಾಲಯಗಳಲ್ಲಿ ಪರದೇಶೀ ಅರಿವೆಗಳ ಬದಲು ಖಾದಿಯೇ ಉಪಯೋಗದಲ್ಲಿ ಬರಲೆಂದು ನಾನು ಕೋರುತ್ತೇನೆ,

* * * *

ಗಣಿಕೆಯರಿಗೆ ಹಾಗೂ ಕಾಂಗ್ರೆಸದಧ್ಯೇಯಕ್ಕೆ ವಪ್ಪದೇ ಇದ್ದಂಥವರಿಗೆ ಕಾಂಗ್ರೆಸದ ಸಭಾಸದರಾಗಲಿಕ್ಕೆ ಬರುವದೋ ಎಂದು ನಮ್ಮ ಮಿತ್ರರು ಕೇಳಿರುತ್ತಾರೆ. ೪ ಆಣೆ ಕೊಟ್ಟರೆ, ನಮ್ಮ ದುರ್ದೈವಿ ಭಗಿನಿಯರು ಕಾಂಗ್ರೆಸದ ನಿಯಮಗಳಿಗೆ ಸಮ್ಮತಿಯನ್ನು ಕೊಟ್ಟರೆ ಬೇರೆ ಯಾವದೂ ಅವರು ಕಾಂಗ್ರೆಸದ ಸಭಾಸದರಾಗುವದರಿಂದ ಪರಾವೃತ್ತ ಮಾಡಲಿಕ್ಕಿಲ್ಲ. ಕಪ್ಪರಿಗೂ ಸಹ ರಾಷ್ಟ್ರೀಯಸಭೆಯ ಘಟನೆಯ ಒಪ್ಪಿ ಅದರ ಸಭಾಸದನಾಗಲೂ ಅಧಿಕಾರ ಇರುತ್ತದೆ. ಸಂಘದಲ್ಲಿಯ ಅತೀ ನೀಚ ಜನರು, ಸಹ ಕಾಂಗ್ರೆಸದ ಸಭಾಸದರಾಗಲಿಚ್ಛಿಸುವರೆಂಬಗೇ ನಮ್ಮ ಸುಧಾರಣೆಯ ದ್ಯೋತಕವಾಗಿರುತ್ತದೆಂದು ಹೇಳಲಿಕ್ಕೆ ಬರುವಂತಿದೆ ಆಗರೆ, ಹೆಚ್ಚಿಗೇ ಜನರನ್ನು ರಾಷ್ಟ್ರೀಯ ಸಭೆಯಲ್ಲಿ ಸೇರಿಸುವ ದೃಷ್ಟಿಯಿಂದ ಅವರಿಗೆ ಸಭಾಸದರಾಗಲೂ ಮಾತ್ರ ನಾವು ಕೇಳಬಾರದು. ಆದರಂತೆಯೆ ರಾಷ್ಟ್ರೀಯ ಸಭೆಯ ಧ್ಯೇಯಕ್ಕೆ ಒಪ್ಪಿ ಸಮ್ಮತಿ ಪತ್ರಕ್ಕೆ ಸಹಿಮಾಡದವರು ಸಹ ಸಭಾಸದರಾಗಲಾರರೆಂದು ನನ್ನ ಪ್ರಾಂಜಲವಾದ ಮತವಿದೆ. ಪರೀಕ್ಷೆಯು ಸರಳವಾಗಿದ್ದರು ಅತ್ಯಂತ ಅವಶ್ಯವಿರುತ್ತದೆ ಕೆಳಗಿನ ನಿಯಮಗಳನ್ನು ಲಕ್ಷ್ಯದಲ್ಲಿಡಬೇಕು

(೧) ೨೧ ವರ್ಷಗಳು ತುಂಬಿರಲು ಬೇಕು.

(೨) ಎಲ್ಲ ಸನದಶೀರ ಹಾಗೂ ಶಾಂತರೀತಿಯಿಂದ ಸ್ವರಾಜ್ಯವನ್ನು ಸಂಪಾದಿಸಲಿಕ್ಕೆ ಇಚ್ಛೆಯು ಆದರಸಲುವಾಗಿ ಪ್ರಯತ್ನವೂ ಅತ್ಯವಶ್ಯವಾದವುಗಳು

(೩) ೪ ಆಣೆ ಫೀ ಕೊಡಲಿಕ್ಕೆ ಬೇಕು

ಅನಕ್ಷರಿಯು ಅಥವಾ ಸಹಕಾರಿಯು ಸ್ತ್ರೀ ಅಥವಾ ಪುರುಷರು ಯಾವ ವೇಳೆಗೆ ನಿಯಮಗಳಿಗೆ ಸಂಪೂರ್ಣ ರೀತಿಯಿಂದ ತಮ್ಮ ಒಪ್ಪಿಗೆಯನ್ನು ತೋರಿಸುವರೋ, ಅಂಥವರೆಲ್ಲರು ರಾಷ್ಟ್ರೀಯ ಸಭೆಯ ಸಭಾಸದರಾಗಲ್ಲರು. ಉಳಿದ ಯಾವದೇ ಕಾರಣವು ಅವರಿಗೆ ಪ್ರತಿಬಂಧಕವಾಗಲಾರದು,

* * * *

## [illegible]ಕುಂದ ಕೊರತೆಗಳು

(ಯಂಗ ಇಂಡಿಯಾ) (೨೨-೬-೨೧)

(ಹಿಂದಿನ ಸಂಚಿಕೆಯ ೨೩೨ ನೇ ಪಾನಿನಿಂದ ಮುಂದೆ ಸಾಗಿದ್ದು.)

ಆದರೆ ಜಾನಬುಲ್ಲನ ಪತ್ರವು ಅವನ ಇನ್ನೊಂದು ದೋಷವನ್ನು ಹೊರಗೆಡಹುತ್ತದೆ. ಅವನ್ನ ಈ ಮಾದರಿಯ ಟೀಕೆಯಿಂದ ಅವನಲ್ಲಿರುವ ಜಾತಿದ್ವೇಷವು ಕಂಡುಬರುತ್ತದೆ. ಅವನು ಬರೆದಂತೆ ಎಲ್ಲ ದೋಷಗಳು ನಮ್ಮಲ್ಲಿರುವವೆಂದು ಒಮ್ಮೆ ಕಲ್ಪಿಸೋಣ. ಆದರೆ ನಾವು ಹೀನರೆಂದು ನಮ್ಮನ್ನು ತುಚ್ಛಮಾಡಲಿಕ್ಕೆ ಇದೇನು ಕಾರಣವೋ? ತಮ್ಮಲ್ಲಿನ್ನ ಗುಣಗಳು ಒಂದು ವೇಳೆ ಕೆಲವರಲ್ಲಿ ಇರದಿದ್ದರೂ ಒಬ್ಬರನ್ನೊಬ್ಬರು ಮನ್ನಿಸುತ್ತಿರಬೇಕೆಂದು ಎಲ್ಲರೂ ಸಮಾನರೆಂಬ ತತ್ವವು ಸಾರುತ್ತಿರುವದಿಲ್ಲವೊ! ಹಿಂದೂಜನರು ಅಂತ್ಯಜರ ವಿಷಯಕ್ಕೆ ಮಾಡುತ್ತಿರುವ ತಪ್ಪು ಮತ್ತು ಜಾನ್‌ಬುಲ್ಲನ ಈ ದೋಷವು ಒಂದೇ ಮಾದರಿಯವಾಗಿಲ್ಲವೇನು? ಅಸ್ಪೃಶ್ಯತೆಯು ಕಲ್ಪನೆಗೆ ರಾಕ್ಷಸೀ ವಿಚಾರವೆಂದು ಕರೆಯುತ್ತಿರುವಾಗ ತಾವು ಹೆಚ್ಚಿನವರೆಂದು ಇಂಗ್ಲಿಷ ಜನರ ನಡತೆಗೆ ರಾಕ್ಷಸೀ, ಎಂದು ಅನ್ನುವದರಲ್ಲಿ ದೋಷವೆಲ್ಲಿ? ಹಿಂದೀ ಜನರನ್ನು ಹೀಯಾಳಿಸುವಂತೆ ಇಂಗ್ಲೀಷರು ದೈವಹೀನರಾದ ತಮ್ಮ ಜಾತಿಬಾಂಧವರನ್ನು ತುಚ್ಛರೆಂದು ಭಾವಿಸುವರೇನ? ತಾವು ಆಳಲಿಕ್ಕೆ ಹುಟ್ಟಿದವರೆಂದೂ ಹಿಂದೀಜನರು ತಮ್ಮ ಚಾಕರಿಯಲ್ಲಿ 'ಜಿಜೀ' ಅನ್ನುತ್ತ ಕೈಕಟ್ಟಿಕೊಂಡು ಓಡಾಡಲಿಕ್ಕೆ ಹುಟ್ಟಿದವರೆಂದೂ ಇಂಗ್ಲೀಷರು ತಿಳಿಕೊಳ್ಳುವದಿಲ್ಲವೆ? ಹಿಂದೀಜನರು ಅಂತ್ಯಜರನ್ನ ಇದೇ ರೀತಿ ಬಾಳಿಸುವರು. ಇಂಗ್ಲೀಷ ಜನರು ಜನ್ಮದಿಂದಲೂ ವರ್ಣದಿಂದಲೂ ತಾವು ಶ್ರೇಷ್ಠರೆಂಬ ಜಂಭವನ್ನು ಬಿಡದ ವರೆಗೆ ಬ್ರಿಟಿಶರ ಸಂಸರ್ಗದಿಂದ ಹಿಂದುಸ್ಥಾನಕ್ಕೆ ನಿಜವಾದ ಸ್ವಾತಂತ್ರ್ಯ ದೊರೆಯಲಾರದೆಂದು ಪೂರ್ಣಮನಗಂಡು, ಈ ದುಷ್ಟವಾದ ರಾಜ್ಯವ್ಯವಸ್ಥೆಯು ವಿರುದ್ಧ ನನ್ನ ಹೃದಯವೆಲ್ಲ ಉದ್ವೇಗ ಹೊಂದುತ್ತಿರುವದು.

ಇಂಥ ಪರ ಉದ್ದಾಮ ವೃತ್ತಿಯ ಮನುಷ್ಯ ಹಿಂದೀ ಮನುಷ್ಯನು ಎಂಥ ತೇಜಸ್ವಿ ಇದ್ದಾಗ್ಯೂ ತನ್ನ ಪೂರ್ಣತಾವಸ್ಥೆಯನ್ನು ಕಾಣುವದು ದುರ್ಲಭವಾಗಿರುವದು. ಆರಿಸಿದರೆ ವ್ಯಕ್ತಿಶಃ ಸದಿಚ್ಛೆಯುಳ್ಳ ಕೆಲವು ಇಂಗ್ಲೀಷ ಗೃಹಸ್ಥರು ಈ ಸರಕಾರದಲ್ಲಿ ಇರಬಹುದು. ಆದರೆ ಅವರಿಂದ ಪ್ರಯೋಜನವೇನೂ ಆಗದು. ನಾವು ನಮ

ಯೋಗ್ಯತೆಯು ಬಲು ಹೀನವಾದದ್ದೆಂದು ಭಾವಿಸಹತ್ತಿರುವೆವು ನಾವು ಈ ಕ್ಷಣಕ್ಕೆ ನಮ್ಮ ರಾಜ್ಯಭಾರವನ್ನು ನಡೆಸಲು ಸಮರ್ಥರಿದ್ದರೂ, ಇದಕ್ಕೆ ನಮ್ಮಲ್ಲಿ ಅನೇಕರು ನಾವು ರಾಜ್ಯವನ್ನು ನಡೆಸಲಿಕ್ಕೆ ಸಮರ್ಥರಾಗುವೇವೆಂಬುದರ ಇನ್ನೂ ವರ್ಷಾನುವರ್ಷ ಇಂಗ್ಲೀಷರಿಂದ ಕಲಿಸಿಕೊಳ್ಳತಕ್ಕದ್ದೆಂದು ಭ್ರಮೆಯುಳ್ಳವರಾಗಿರುವರು ಆದ್ದರಿಂದ ಸ್ವರಾಜ್ಯಕ್ಕೆ ಕಾಯಿದೆಯಾದ ಯಾವದೇ ಸಂಧಾರಣೆಯು ಆದ ತರುವಲ್ಲಿ ಜನರ ಸಂಗಡ ಸಹಕಾರ ಮಾಡಲಾರೆವೆಂದು ಖಂಡಿತವಾಗಿ ಹೇಳಿಬಿಡಬೇಕು. ನಾವು ಕೆಲವು ವೇಳೆ ತಪ್ಪುಮಾಡುವದು ಆದರೆ ತಪ್ಪುಗಳಿಂದ ನಾವು ಬುದ್ಧಿ ಕಲಿಯುವುದಿಲ್ಲ ತಪ್ಪಿಬಾರದೆಂದು ಗಟ್ಟಿಯಾಗಿ ಹಿಡಿಯುವದರಿಂದ ನಾವು ಎಂದೂ ಸುಧಾರಿಸಲಾರೆವು.

---

## ವ್ಯಾಪಾರಸ್ಥರ ತೊಂದರೆಗಳು.

(ನವಜೀವನ)

ಮಧ್ಯಪ್ರಾಂತ ದಿಂದ ಒಬ್ಬ ವ್ಯಾಪಾರಸ್ಥನು ಬರೆಯುವದೇನಂದರೆ:— ಈಹೊತ್ತು ನಾನು ದುಃಖದ ಸ್ಥಿತಿಯ ವಿಷಯವಾಗಿ ಸ್ವಲ್ಪ ಕೇಳಬೇಕೆಂದು ಬಯಸುವೆನು ತಾವು ನನಗೆ ಯೋಗ್ಯವಾದ ಉತ್ತರಗಳನ್ನು ಕೊಟ್ಟು ನನ್ನನ್ನು ಸಂತೋಷಗೊಳಿಸುವಿರೆಂದು ಆಶಿಸುತ್ತೇನೆ.

ಮೊದಲು ನಾನು ಪರದೇಶೀ ಅರಿವೆಯ ವ್ಯಾಪಾರವನ್ನು ಮಾಡುತ್ತಿದ್ದೆನು ನನ್ನ ವಾರ್ಷಿಕ ಉತ್ಪನ್ನವು ಸರಾಸರಿ ಮೂರು ಸಾವಿರ ರುಪಾಯಿಗಳ ವರೆಗೆ ಇತ್ತು. ಪರದೇಶೀ ಅರಿವೆಯನ್ನು ಕಲಕತ್ತಾ ಮತ್ತು ಮುಂಬಯಿ ಪಟ್ಟಣಗಳಿಂದ ತರಿಸುತ್ತಿದ್ದೆನು ಮಾಲು ಮಾರಿದ ಹಾಗೆ ಆಡತಿಯವರಿಗೆ ರುಪಾಯಿಗಳನ್ನು ಕಳಿಸುತ್ತಿದ್ದೆನು

ಅಸಹಯೋಗವು ಪ್ರಾರಂಭವಾದಕೂಡಲೇ ನಂನಲ್ಲಿಯ ಪರದೇಶೀ ಮಾಲನ್ನೆಲ್ಲ ತೆಗೆದುಹಾಕಿ ಸ್ವದೇಶಿ ವಸ್ತ್ರಗಳನ್ನೇ ಮಾರುವ ಪ್ರತಿಜ್ಞೆಯನ್ನು ಕೈಕೊಂಡೆನು ಈಗ ನನ್ನ ಬಳಿಯಲ್ಲಿ ಸ್ವದೇಶೀ ಗಿರಣಿಗಳ ಹಾಗೂ ಶುದ್ಧ ಖಾದಿಯ ವಸ್ತ್ರಗಳೇ ವಿಶೇಷವಾಗಿರುವವು.

ಈಪ್ರಕಾರ ನಿಜಸ್ಥಿತಿಯು ಇದ್ದು ಇಲ್ಲಿ ದೇಶೀ ವಸ್ತ್ರಗಳ ಪ್ರಚಾರವು ವಿಶೇಷ ಇಲ್ಲದ್ದರಿಂದಎಂದಾದರು ೩—೪ ದಿವಸ ಗಳಿಗೊಮ್ಮೆ ೮—೧೦ ರುಪಾಯಿಗಳ ವ್ಯಾಪಾರ ವಾಗುವದು ಮೇಲಾಗಿ ವಿದೇಶಿ ವಸ್ತ್ರ ಗಳನ್ನು ಮಾರುವದರಿಂದ ಲಾಭವು ಬಹಳ ಮತ್ತು ಸ್ವದೇಶೀ ವಸ್ತ್ರಗಳಲ್ಲಿ ಕಡಿಮೆ.

ನನ್ನ ಹತ್ತರ ಭಾಂಡವಲವಾದರೂ ಇರುವದಿಲ್ಲ ಇದೇಕಾರಣದಿಂದಲೇ ನಾನು ಸ್ವದೇಶೀ ಅರಿವೆ ಗಳನ್ನು ವಿಶೇಷ ಸಂಗ್ರಹ ಮಾಡಿರುವದಿಲ್ಲ. ಒಂದುನಾಲ್ಕಾಂಶ ಹಣವನ್ನು ಮುಂಗಡಕಳಿಸಿದರೆ ದೇಶೀವಸ್ತ್ರಗಳು ಸಿಗುವವು ಉಳಿದದ್ದೆಲ್ಲ ವಾಪದರು ಸ್ಥಿತಿಯಿಂದಲೇ! ಇದಲ್ಲದೇ ಮುಂಗಡ ಕಳಿಸಿದ ರುಪಾಯಿಗಳು ಮುಣಮವೆಂದಜಿಕೆ ಇದ್ದೇ ಇರುವದು ಮತ್ತು, ಇದಕ್ಕಿಂತಲೂ ಹೆಚ್ಚಿನ ಕಠಿಣವಾದ ಮಾತೆಂದರೆ, ಒಂದೇ ಕಡಿಯಿಂದ ಎಲ್ಲ ಪ್ರಕಾರದ ಸ್ವದೇಶೀವಸ್ತ್ರಗಳು ಸಿಗುಸಂಭವಇಲ್ಲ ಒಂದುಪ್ರಕಾರದ್ದು ಒಂದುಕಡೆ ಮತ್ತೊಂದು ತರಹದ್ದು ಇನ್ನೊಂದುಕಡೆ ಮಾಲು ಕೇಳಿಕೊಂಡ ತಿಂಗಳೆರಡುತಿಂಗಳ ಮೇಲೆಮಾಲು ನಮ್ಮ ಕೈ ಸೇರುವದು. ಅವಾದರು ನಾವು ಬೇಡಿದಂತೆಇಲ್ಲ ಅವರೇ ಒಂದು ತಕತಿಯು ಎಷ್ಟೊ ವಾರಿನದು ಇನ್ನೊಂದುತಾಸಡಿಯು ಎಷ್ಟೋ ಅಸಿಯದ. ಕದವಂತಾದ ಎಲ್ಲಖರ್ಚು ಹೋಗಲಾಗಿ ಖಾದಿಯು ಬಹಳ ತುಟ್ಟಿ ಕೂಡಾ ಬೀಳುತ್ತದೆ. ಗಿರಾಕಿಗಳು ಬೆಲೆಯನ್ನು ಕೇಳಿ, 'ಖಾದಿಯು,' ಮೋಲೆಇಷ್ಟಬೆಲೆಯು ಎಂದು ಅನ್ನುವರು.

ಎಷ್ಟೋ ದಿವಸ ಗಳಿಂದ ನನ್ನ ಆರ್ಥಿಕ ಸ್ಥಿತಿಯಾದರು ನೆಟ್ಟಗಿಲ್ಲ. ಮತ್ತು ನಾನು ಸಾಲಗಾರನಾದರೂ ಆಗಿರುವೇನು. ನಾನು ಒಂಟಿಗನಾಗಿದ್ದಲ್ಲಿ ಹೇಗಾದರು ಮಾಡಿ ಹೊಟ್ಟೆ ಹರಕೊಳ್ಳುತ್ತಿದ್ದನು ಆದರೆ ನನ್ನ ಬೆನ್ನಿಗೆ ಹತ್ತು ಜನರ ಕುಟುಂಬವು ಇರುವದು.

ಈಪಟ್ಟಣದಲ್ಲಿ ಅರಿವೆಯ ಅಂಗಡಿಗಳು ೨೫ ಉಂಟು. ಎಲ್ಲ ಅಂಗಡಿಗಳೂ ಪರದೇಶಿ ಮಾಲಿನದೇ ಪರದೇಶಿ ಅರಿವೆಯು ತೋಯಿ ಇದ್ದು ನೋಡಲಿಕ್ಕೆ ಅಂದವಾಗಿರುವದರಿಂದ ಪ್ರತಿಯೊಬ್ಬ ವ್ಯಾಪಾರಸ್ಥನು ದಿನ ೮೦-೧೦೦ ರೂ.ಗಳನ್ನು ಗಳಿಸುವಾಗ ನಾನು ಸುಮ್ಮನೇ ನೊಣಹೊಡೆಯುತ್ತ ಕುಳ್ಳಬೇಕಾಗುವದು ಕನಿಷ್ಠಪಕ್ಷಕ್ಕೆ ೫—೭ ಸ್ವದೇಶಿ ವಸ್ತ್ರದ ಅಂಗಡಿಗಳಿದ್ದರೆ ಅವಮಾತು ಬೇರೆಯಾಗುತ್ತಿತ್ತು.

ಈಗ ನನ್ನ ಸ್ಥಿತಿಯು ತೀರ ವಿಚಿತ್ರವಾಗಿದೆ. ಒತ್ತಟ್ಟಿಗೆ ಭಾವಿ ಮತ್ತೊತ್ತಟ್ಟಿಗೆ ಕೆರೆ ಹೀಗೆ ನನ್ನ ಅವಸ್ಥೆಯು. ಯಾಕಂದರೆ ರಾಷ್ಟ್ರದ ಪ್ರಶ್ನೆ ಒಂದಡೆಯಲ್ಲಿ ಈ ಪಾಪಿಯಾದ ಹೊಟ್ಟೆಯ ಪ್ರಶ್ನೆಯು ಇನ್ನೊಂದುಕಡೆಯಲ್ಲಿ! ಇವೂ ಇಲ್ಲದೆ ನಾನು ಎರಡನೆಯದರಿಂದ ಕೊಡತಕ್ಕದ್ದಾವದೂ ಇದೆ ಈಗ ನಾನು ಅಸಮಂಜಸನಾಗಿ ನನ್ನ ಬುದ್ಧಿಯು ಹರಿಯಲೊಲ್ಲದು ಎಷ್ಟೋ ದೊಡ್ಡ ದೊಡ್ಡ ಜನರು ನನಗೆ ಸ್ವದೇಶೀ ಮತ್ತು ವಿದೇಶೀ ಎರಡೂ ತರದ ಅರಿವೆಗಳನ್ನು ಇಡಲಿಕ್ಕೆ ಹೇಳಹತ್ತಿದ್ದಾರೆ. ಗಿರಾಕಿಗಳಿಗೆ ಮೊದಲು ಸ್ವದೇಶೀ ವಸ್ತ್ರಗಳನ್ನೇ ಕೊಡುವ ಪ್ರಯತ್ನವನ್ನು ಮಾಡತಕ್ಕದ್ದು; ಆದಕ್ಕೆ ಅವರು ಒಪ್ಪದಿದ್ದರೆ ಅನಿವಾರ್ಯಪಕ್ಷವೆಂದು ಪರದೇಶೀ ವಸ್ತ್ರಗಳನ್ನು ಕೊಡತಕ್ಕದ್ದೆಂದು ಅವರ ಅಭಿಪ್ರಾಯವು.

ಇವೆಲ್ಲ ಸಂಗತಿಗಳನ್ನು ಲಕ್ಷ್ಯಕ್ಕೆತಂದು ಈ ಸಮಯದಲ್ಲಿ ನಾನು ಯಾವದು ಮಾಡುವದು ಉಚಿತವು ಮತ್ತು ನನ್ನ ಕರ್ತವ್ಯವು ಎಂಬ ಬಗ್ಗೆ ಸಮರ್ಪಕವಾದ ಉತ್ತರವನ್ನು ಕೊಡತಕ್ಕದ್ದು"

'ಪಾಪೀ ಹೊಟ್ಟೆಯು'

ಪತ್ರವನ್ನು ಓದಲಾಗಿ ಲೇಖಕನ ಬಗ್ಗೆ ಸಹಾನುಭೂತಿಯು ಹುಟ್ಟದೆ ಇರಲಾರದು. ರಾಷ್ಟ್ರದ ಧ್ವನಿಯನ್ನು ಕೇಳಿ, ಲಕ್ಷ್ಯಕ್ಕೆ ತಂದು ಅವನು ಸ್ವದೇಶೀ ವಸ್ತ್ರಗಳನ್ನಿಡುವ ಪ್ರತಿಜ್ಞೆಯನ್ನು ಮಾಡಿದನು: ಇದರಿಂದ ಅವನ ದೇಶಪ್ರೇಮವೂ ಧರ್ಮಭಾವವೂ ಪ್ರಕಟವಾದವು. ಆದರೆ ಜಗತಿನಲ್ಲಿ ಎಲ್ಲರೂ "ಪಾಪೀ ಹೊಟ್ಟೆ" ಯ ತೊಂದರೆಯ ಬಗ್ಗೆ ಎಲ್ಲಕ್ಕಿಂತ ಮುಂತೆ ತರುತ್ತಿರುವದು ಒಳ್ಳೇ ಆಶ್ಚರ್ಯದ ಮಾತು ಪಾಪ! ಆ ಹೊಟ್ಟೆಯು ತನ್ನಸಲುವಾಗಿ ಅನ್ಯಾಯವನ್ನು ಮಾಡುವದಕ್ಕಾಗಲಿ, ಪಾಪವನ್ನು ಆಚರಿಸುವದಕ್ಕಾಗಲಿ, ಅಧರ್ಮವನ್ನು ಮಾಡಲಿಕ್ಕಾಗಲಿ, ಯಾರಿಗೂ ಹೇಳುವದಿಲ್ಲ. ಹೊಟ್ಟೆಯೊಳಗೆ ಹಾಕಿದ್ದನ್ನೆಲ್ಲ ಆ ಬಡಪ್ರಾಣಿಯು ಸುಮ್ಮನೆ ಗ್ರಹಣಮಾಡಿ ಅದರ ರಸವನ್ನೆಲ್ಲ ಎಲ್ಲ ಅವಯವಗಳಿಗೆ ಹಂಚಿಕೊಡುತ್ತದೆ. ಅದು ತನಗೆ ಅಂದವಾದ ರೇಶಿಮೆಯ ವಸ್ತ್ರಗಳನ್ನು ಬೇಡುವದಿಲ್ಲ ಮತ್ತು ನಾವು ತಿನ್ನುವ ತಿಂಡಿ ಹೊಸಲಾದ ಸ್ವಾದಿಷ್ಟಪದಾರ್ಥಗಳಿಲ್ಲ. ನಾಲಿಗೆಯ ರುಚಿಗಾಗಿ; ನಾವು ಧರಿಸುವ ರೇಶಿಮೆಯ ಹಾಗೂ ಜರದ ವಸ್ತ್ರಗಳೆಲ್ಲ ನಮ್ಮ ದೇಹವನ್ನು ಅಲಂಕರಿಸುವದಕ್ಕೂ ನೋಡುವವರ ಕಣ್ಣುಗಳಿಗೆ ಆನಂದವನ್ನೀಯುವದಕ್ಕೂ, ನಿಜವಾಗಿ ಅನ್ನವಸ್ತ್ರಗಳ ಅವಶ್ಯಕತೆಯು ಶರೀರದ ಅತ್ಯವಶ್ಯ ರಕ್ಷಣೆಗಾಗಿ ಇರುತ್ತದೆ. ಆದರೆ ನಾವು ರುಚಿ, ದೃಷ್ಟಿ ಸೌಂದರ್ಯದ ಮೋಹಜಾಲದಲ್ಲಿ ಸಿಕ್ಕು ನಮ್ಮ ನಾಲಿಗೆಯನ್ನು ಮತ್ತು ಶರೀರದ ಅಧೀನದಲ್ಲಿ ದೇಶ ಮತ್ತು ಧರ್ಮಗಳ ಸಲುವಾಗಿ ಸ್ವಲ್ಪ ಕೂಡಾ ತೊಂದರೆಯನ್ನಾಗಲಿ, ಕಷ್ಟವನ್ನಾಗಲಿ, ಸಹಿಸಲಾರದಷ್ಟು ದಾಸರಾಗಿಬಿಟ್ಟಿರುವೆವು. ಈ ನಿಷ್ಕಾರಣ ಖರ್ಚುಗ

ನೆಲ್ಲ ಕಡಿಮೆಮಾಡಿದರೆ, ಹಿಂದೂಸ್ಥಾನದಂಥ ನಿರ್ಧನರ ದೇಶದಲ್ಲಿ ಒಬ್ಬ ಮನುಷ್ಯನ ಖರ್ಚಿಗೆ ಎಷ್ಟು ರೂಪಾಯಿಗಳು ಹತ್ತುವವೆಂಬದನ್ನು ನೋಡುವಾಗ ಇದರಿಂದ ಈ ಪಾಪಿ ಹೊಟ್ಟೆಯ ಚಿಂತೆಯು ಕಡಿಮೆಯಾಗುವದು.

"ಸಾಮಾಜಿಕ ಪ್ರತಿಷ್ಠೆಯು.

ಎಂಬದೇ ಪ್ರಶ್ನೆಯೆಂದರೆ ಸಾಮಾಜಿಕ ಪ್ರತಿಷ್ಠೆಯ ಪ್ರಶ್ನೆಯು ನಮ್ಮನ್ನು ಪೂರ್ಣವಾಗಿ ಆವರಿಸಿಕೊಂಡಿದೆ. ಜಾತಿಯಿಂದಲೂ ಮನೆತನದಿಂದಲೂ ನಾವು ಇಂಥ ರೀತಿಯ ಪ್ರತಿಷ್ಠೆಯಿಂದ ನಾವು ಈ ತರದ ಊಟವನ್ನೇ ಮಾಡಬೇಕು; ಈ ತರದ ಬಟ್ಟೆಯನ್ನೇ ಧರಿಸಬೇಕು ಮತ್ತು ಖರ್ಚಿನಲ್ಲಿಯೇ ಆಯುಷ್ಯವನ್ನು ಕಳೆಯಬೇಕು ಎಂಬ ತಪ್ಪು ತಿಳುವಳಿಕೆಯಲ್ಲಿ ಕಲಿತ ಸಂಗತಿಗಳನ್ನು ಕೂಡ ಮರೆತು ಬಿಟ್ಟಿರುವೆವು. ಯಾವದೇ ದೃಷ್ಟಿಯಿಂದ ವಿಚಾರದ ಡಿದರೂ ಸಮಾಜ ಪ್ರತಿಷ್ಠೆಯು ಬೆಳೆಯಲಿಕ್ಕೆ ನಮ್ಮ ಸದ್ಗುಣಗಳೂ ಸತ್ಕಾರ್ಯಗಳೂ ಸ್ವಾರ್ಥತ್ಯಾಗವೂ ಕರ್ತವ್ಯಪಾಲನೆಯೂ ಧರ್ಮಪ್ರೇಮವೂ ಕಾರಣಗಳಲ್ಲದೆ, ನಮ್ಮ ಶ್ರೀಮಂತಿಕೆಯಾಗಲಿ ಲಕಲಕ ಹೊಳೆಯುವ ವೇಷಭೂಷಣವಾಗಲಿ ಜೈನಿಯಲ್ಲಿ ದುಂದುಗಾರಿಕೆಯಿಂದ ರುಪಾಯಿಗಳನ್ನು ವೆಚ್ಚಮಾಡುವದಾಗಲಿ ಕಾರಣವಲ್ಲ. ನಾವು ಒಳಗಿನ ತತ್ವಗಳನ್ನೇ ಬೇರೆಕಡೆಗಿಟ್ಟು ಬಾಹ್ಯಾಡಂಬರ ಚಕ್ರದಲ್ಲಿ ಶಿಲುಕಿಕೊಂಡಿರುವೆವು. ಇದರಿಂದ ಸ್ವರಾಜ್ಯದಲ್ಲಿ ಧರ್ಮದಿಂದ ವರ್ತಿಸುವದು ಕೂಡ ನಮಗೆ ಕಠಿಣವೆಂದು ಅನಿಸಹತ್ತಿದೆ. ನಮ್ಮ ಹೊಟ್ಟೆಯ ಹಾಗೂ ಸಾಮಾಜಿಕ ಪ್ರತಿಷ್ಠೆಯ ನಿಮಿತ್ತವನ್ನು ಮುಂದೆಮಾಡಿ ನಾವು ಅನ್ಯಾಯ ಮತ್ತು ಪಾಪಕೃತ್ಯಗಳಿಂದ ದ್ರವ್ಯವನ್ನು ಗಳಿಸಲಿಕ್ಕೆ ಸ್ವಲ್ಪಕೂಡ ಸಂಕೋಚವನ್ನು ತರದುಕೊಳ್ಳಲಾರೆವು. ನಮ್ಮ ಧರ್ಮಬುದ್ಧಿಯು ಮಲಿನವಾಗಿದೆ. ಧರ್ಮಪ್ರೇಮವು ಪೂರ್ತಿ ಇದ್ದರೆ, ಧರ್ಮವು ಸಮಾಜ ಹಾಗೂ ದೇಶದ ಮೂಲಸ್ಥ ಆಗಿದ್ದರೆ, ನಮ್ಮ ಹೃದಯದಲ್ಲಿ ಧರ್ಮದ ನಿಜವಾದ ಪ್ರೇಮವೂ ತೇಜವೂ ಜಾಗೃತೆಯಾಗಿದ್ದರೆ ಧರ್ಮಪಾಲನೆಯನ್ನು ಮಾಡುವಾಗ ನಾವು ನಮ್ಮ ಪಾಪೀ ಹೊಟ್ಟೆಯ" "ಪುಷ್ಟ ಶರೀರದ" "ಸಮಾಜದ ಇಭ್ರತಿಯ" ಪ್ರಲೋಭನವನ್ನು ಎಂದೂ ಮುಂದೆ ತರುತ್ತಿದ್ದಿಲ್ಲ. ಧರ್ಮನಿಷ್ಠ ಮನುಷ್ಯನ ಧೃಢ ಹೃದಯದ ಮುಂದೆ ಜಗತ್ತಿನಲ್ಲಿ ಯಾವಬಾಧಕ ಶಕ್ತಿಯೂ ನಿಲ್ಲಬಾರದು.

## ದೊಡ್ಡ ಕುಟುಂಬವು

ಕುಟುಂಬದ ಜನರನ್ನು ನಮ್ಮ ಆಶ್ರಿತರನ್ನಾಗಿ ತಿಳಿದು ಕೊಳುವದೆಂದರೆ ಅವರಿಗೆ ಬಹಳ ಅಪಮಾನವನ್ನು ಮಾಡಿದರೀತಿಯೇ ನಮ್ಮ ಮಾತಾಪಿತೃಗಳನ್ನೂ, ಕಿರಿಯ ಸೋ ಅಣ್ಣತಮ್ಮ ಮೊದಲಾದವರನ್ನೂ ನಾವು ನಮ್ಮ ಆಶ್ರಿತರೆಂದು ತಿಳಿದುಕೊಳ್ಳುವ ವರೆಗೆ ಮತ್ತು ಆ ರೀತಿ ತಿಳಿಯುವವರೆಗ ನಾವು ಸ್ವರಾಜ್ಯಕ್ಕೆ ಎರಡನೆಯವರ ಆಶ್ರಯದಿಂದಹೊರಬೀಳಲಿಕ್ಕೆ ಅಧಿಕಾರಿಗಳೆಂದು ಯಾವ ಮೋರೆಯಿಂದ ಹೇಳಬೇಕು? ವೃದ್ಧಾಪ್ಯದಲ್ಲಿ ದೌರ್ಬಲ್ಯದಲ್ಲಿ ನಾವು ನಮ್ಮ ಕುಟುಂಬದ ಆಶ್ರಯದಿಂದ ಕುಟುಂಬಗಳಾದರೂ ನಾವು ಅವರ ಆಶ್ರಯ ಮಾತ್ರದಿಂದ ತಿಳಿದುಕೊಳ್ಳುವದು ಅಪಮಾನದ ಸಂಗತಿಯಾಗಿಲ್ಲ. ಅಪಮಾನಕರ ಮಾತಾಗಿರುವದೆಂಬ ತಪ್ಪು ತಿಳುವಳಿಕೆಯು ನಮ್ಮ ಮನಸ್ಸಿನಲ್ಲಿ ತುಂಬಿ ಬಿಟ್ಟಿದೆ, ಈ ಅಜ್ಞಾನಾಂಧಕಾರಕ್ಕೆ ಆಶ್ರಯವಲ್ಲ? ನಾವು ಕೇವಲ ಶರೀರರಕ್ಷಣೆಯ ತತ್ವಗಳನ್ನು ಧ್ಯಾನದಲ್ಲಿಟ್ಟುಕೊಂಡರ ಚಿಂತೆಯನ್ನು ಮಾಡುವ ಅವಶ್ಯಕತೆಯು ಉಳಿಯುವದಿಲ್ಲ. ಅತಿ ಸ್ವಲ್ಪ ಪರಿಶ್ರಮದಿಂದ ಅಷ್ಟು ರಕಮನ್ನು ದೊರಕಿಸಲು ಬರುವಂತಿದೆ. ಮನೆಯ ಹೆಂಗಸರು ನೂಲುತೆಗೆಯುವದನ್ನೂ ಹೊಲಿಯುವದನ್ನೂ ಕಲಿತು ಮತ್ತು ಹುಡುಗರಿಗೆ ಬಟ್ಟೆ ನೇಯುವದನ್ನೂ ಕಲಿಸಿ ಮುಂತಾದ ಕೆಲಸಗಳನ್ನು ಬಹಳ ಜಾಣತನದಿಂದ ಮಾಡಬಲ್ಲರು. ಗಂಡಸರು ಅರಳಿಯನ್ನು ಹೊಡೆಯುವದು ಹಂಜಿ ಮಾಡುವದ, ಖಾದಿಯನ್ನು ನೇಯುವದು, ಹತ್ತಿ ಮೊದಲಾದ ಬೆಳೆಗಳನ್ನು ಬೆಳೆಸುವದು ಮೊದಲಾದ ಧರ್ಮ ಮತ್ತು ದೇಶದ ರಕ್ಷಣೆಯ ವಿಷಯಕ್ಕಾಗಿ ಅಂಥ ವ್ಯವಸಾಯಗಳನ್ನು ಮಾಡಿ ಹೊಟ್ಟೆಯನ್ನು ತುಂಬಿಕೊಳ್ಳಬಹುದು. ಸಣ್ಣ ಹುಡುಗರು ಶಾಲೆಗೆ ಹೋಗುವ ಕಾಲವು ಹೊರತು ಉಳಿದ ವೇಳೆಯಲ್ಲಿ ಸ್ವಲ್ಪ ಸಹಾಯ ಮಾಡಬಹುದು. ಇದಲ್ಲದೆ ಹಿರಿಯ ಮನುಷ್ಯರು ಅಸಮರ್ಥರಾದರೂ ಕುಟುಂಬದ ಗೌರವದ, ಒಳ್ಳೆ ಆಧಾರವನ್ನು ಬಿಟ್ಟುಕೊಡುವದು ಜಾತಿ ದೇಶ ಮತ್ತು ಧರ್ಮಗಳ ನಿಜವಾದ ಕಲ್ಯಾಣದ ದೃಷ್ಟಿಯಿಂದ ನೋಡಿದರೆ ಇವುಗಳ ಹೊರತು ಜೀವನ ನಿರ್ವಾಹಕ್ಕೆ ಪವಿತ್ರ ಸಾಧನವು ಬೇರೊಂದಿಲ್ಲ. ಪರಮಾತ್ಮನು ನಮಗೆ ಈ ಬುದ್ಧಿಯನ್ನು ಕೊಡಲಿ!

"ಲಾಭದ ಪ್ರಶ್ನೆಯು."

ಧರ್ಮದ ಸಲುವಾಗಿ ಜೀವನವು ಆದರೆ ಜೀವನದ ಸಲುವಾಗಿ ಧರ್ಮವಲ್ಲ. ಅರ್ಥಾತ್ ಧರ್ಮದ ಸಲುವಾಗಿ ಜೀವನದ ಉಪಯೋಗವನ್ನು ಮಾಡಿಕೊಳ್ಳತಕ್ಕದ್ದು. ಜೀವನದ ರಕ್ಷಣೆಯ ಸಲುವಾಗಿ ಧರ್ಮವನ್ನು ಬಿಡತಕ್ಕದ್ದಲ್ಲ. ಯಾಕಂದರೆ "धर्मो रक्षति रक्षितः" ಧರ್ಮವನ್ನು ನೀವು ರಕ್ಷಿಸಿದರೆ ಅದು ನಿಮ್ಮನ್ನು ರಕ್ಷಿಸುತ್ತದೆ. ಧರ್ಮದ ರಕ್ಷಣೆಯಿಂದ ಜೀವನದ ರಕ್ಷಣೆಯು ತಾನೇ ಆಗುವದು; ಧರ್ಮದ ರಕ್ಷಣವೇ ಜೀವನ ರಕ್ಷಣವು ಧರ್ಮವೇ ಜೀವನವೇ ಜೀವನವು

न जातु कामान्न भयान्न लोभाद्धर्मं त्यजेज्जीवितस्यापि हेतोः।
॥ धर्मो नित्यः सुखदुःखे त्वनित्ये जीवो नित्यो हेतुरस्य त्वनित्यः ॥

ಭಾರತ ವಾಸಿಗಳು ಪ್ರತಿಯೊಂದು ಕೆಲಸವನ್ನು ಧರ್ಮದ ರಕ್ಷಣೆಯ ಬಗ್ಗೆ ಧರ್ಮವೆಂದು ಮಾಡುತ್ತಾರೆ. ವಿದ್ಯಾವಂತನು ವಿದ್ಯಾಬಲ ಮತ್ತು ಜ್ಞಾನಬಲದ ದ್ವಾರದಿಂದ, ಉಪಯೋಗದಿಂದ ತಮ್ಮ ದ್ರವ್ಯ ಬಲದಿಂದ ಮತ್ತು ಉಳಿದವರು ಸೇವೆಯಿಂದ ಧರ್ಮದ ಸೇವೆಯನ್ನೂ, ರಕ್ಷಣೆಯನ್ನೂ ಮಾಡುವರು. ಅವರ ಅಧರ್ಮದ ಸಲುವಾಗಿ ತಮ್ಮ ಈಬಲಗಳ ಉಪಯೋಗವನ್ನು ಮಾಡಿಕೊಳ್ಳತಕ್ಕದ್ದಲ್ಲ. ಯಾಕಂದರೆ ಅದರಿಂದ ಇಡೀ ಮನುಷ್ಯ ಜಾತಿಯ ಹಾನಿಯಾಗುವದು; ಅಧಃಪಾತವಾಗುವದು. ಆದ್ದರಿಂದಲೇ ಭಾರತೀಯ ವ್ಯಾಪಾರಿಯು ಅಧರ್ಮವನ್ನಾಚರಿಸಿ ಲಾಭವನ್ನ ಗಳಿಸಿಕೊಳ್ಳಬಾರದು. ಹಾಗೆ ಮಾಡುವವನು ಸ್ವತಃ ತನ್ನನು ತನ್ನ ಜಾತಿಯನ್ನು ತನ್ನ ದೇಶವನ್ನು ಮತ್ತು ಇಡೀ ಮನುಷ್ಯ ಸಮಾಜವನ್ನು ಪತನ ಮಾರ್ಗಕ್ಕೆ ಹಚ್ಚಿದಂತಾಗುವದು. ಪರದೇಶೀ ವಸ್ತ್ರಗಳನ್ನು ಮಾರುವದರಿಂದ ಸಜ್ಜನರ ಸಹಯೋಗವನ್ನು, ದುರ್ಜನತೆಯ ಕೂಡ ಅಸಹಯೋಗವನ್ನು ನಾವು ಮಾಡಿದಂತಾಗುವದಿಲ್ಲಾ. ಸಜ್ಜನರ ಸಂಗಡ ಸಹವಾಸವನ್ನು ಮಾಡುವದೂ ದುರ್ಜನರ ಸಂಗಡ ಅಸಹಯೋಗವನ್ನಾಚರಿಸುವದೂ ಮನುಷ್ಯನ ಸ್ವಭಾವಿಕ ಧರ್ಮವು ಖಾದಿಯು ಪ್ರಚಾರವನ್ನು ಮಾಡುವ ಮುಂದ ಲಕ್ಷಗಟ್ಟಲೆ ಹಸಿದಂಥ ಮತ್ತು ವಸ್ತ್ರ ರಹಿತರಾದ ಭರತವಾಸಿ ಗಳಿಗೆ ಅನ್ನವನ್ನು ವಸ್ತ್ರವನ್ನು ಕೊಟ್ಟಂತಾಗುವದು. ಇದರಿಂದ ಸಜ್ಜನತೆಯಗೂಡ ಸಹಯೋಗವನ್ನು ಮಾಡಿದಂತೆ, ಪರದೇಶೀ ವಸ್ತ್ರಗಳನ್ನು ತರಿಸಮಾರುವದೆಂದರ ನಮ್ಮನ್ನು ಹಿಡಿಬಿಟ್ಟೆಮಾಡುವದರಲ್ಲಿ ಸ್ವಲ್ಪ ಕೂಡಹೇಸದಂಥ ಪರದೇಶೀ ವ್ಯಾಪಾರಸ್ಥರ ವ

ನೇಗಳನ್ನು ತುಂಬಿದಂತೆ ಬೀಗೆಮಾಡುವದರಿಂದ ದುರ್ಜನತೆಯುಗೂ ಡ ಹೆಚ್ಚಿನ ಮಾಡಿದಂತಾಗುವದು ನಮಗೆ ಧರ್ಮವನ್ನು ಮಾ ಡಗೊಳಿಸಿದ ದ್ರವ್ಯದಿಂದಲೂ ಲಾಭವೇನು ದೊರೆತೀತು ಏನು ಪ್ರಯೋಜನ! ಇಂ ಗ್ಲಂಡವು ಅವರಂತ ಪುಷ್ಟವಾದ ದೇಶವು ನಮ್ಮ ನ ದೇಶ್ಯನ ಬಳಿಯಲ್ಲಿ ಬಹಳದಿವಸ ಬಾಳುವಂಥಯಾವ ವಸ್ತುಗಳನ್ನು ಊದಒಲ್ಲವು? ಇಲ್ಲ ಏನು ಇಲ್ಲ, ಆದರೆ ಅವುರೋಪಕರಂತ ದ ದೇಶ್ಯನ ಧರ್ಮನಿಷ್ಠೆಯ ನ್ನು ಆತ್ಮತೆ ಜನರು ಒಳಗಿಂದೊಳಗೆ ನೆಲ ಗೊಳಿಸಿಬಿಡುವವು ಅ ದು ಪರ್ವ್ರತ್ಸ್ವಯಿತರಾಗಿ ಸರ್ವದಂತಿರುವರ. ಆದ್ದರಿಂದಲೇ ಪ ರದೇಶೀ ವಸ್ತ್ರಗಳಿಂದ ಏದುರಿ ಗೆ ಘವಾಗುತ್ತಿದ್ದರೂ ಅದನ್ನು ಬಿ ಡುವದ, ಉಪೇಕ್ಷೆ ಅವರು ಬಿಡುತ್ತಾರೆ. ಮೇಲಾಗಿ ವ್ಯಾಪಾರ ಸ್ಥರಿಗೆ ಬಹಳ ಲಾಭ ವಾಗುವದನ್ನು ನೋಡಿ,ನಮ್ಮ ಮನಸ್ಸಿನಲ್ಲಿ ಈ ರ್ಷೆ ಹುಟ್ಟತಕ್ಕದ್ದಲ್ಲ ಆದರೆ ಅವರ ಅಜ್ಞಾನವನ್ನು ಕಂಡು ದ ಯು ಹುಟ್ಟತಕ್ಕದ್ದು. ಅವರನ್ನು ಸನ್ಮಾರ್ಗಕ್ಕೆ ತರುವ ಪ್ರಯತ್ನ ವನ್ನು ನಾವು ಮಾಡತಕ್ಕದ್ದು ವ್ಯಾಪಾರೀವರ್ಗದ ಧರ್ಮಬುದ್ಧಿ ಯು ಎಲ್ಲಿಯವರೆಗೆ ಲೋಪವಾಗಿಲ್ಲವೋ ಅಲ್ಲಿಯವರೆಗೆ ಸಂಪೂ ರ್ಣ ಆಳಿಯಂಟು ಮಾತ್ತಿನಾತ್ಮ ವ್ಯಾಪಾರಸ್ಥರಾದವರು ಧನದ ಮಾ ರೆಗೆಯ ಗುಲಾಮರಾಗಿ ಬಿಟ್ಟಿರುವರು ನಿಜ. ಭೋಗವಿಲಾಸ ಗ ಳವರೂ ಅವರಿಗೆ ಇವರಲ್ಲಿ ಬಹಳ ಸಹಾಯಮಾಡಿರುವವು! ಪರ ದೇಶಿಗರಿಗೆ ಈಗ ಸತ್ಯಯುಗದ-ಧರ್ಮ ಯುಗದ ಪ್ರಾರಂಭವಾ ಗಹತ್ತಿರುವದು ಮತ್ತು ಅವರು ನಮ್ಮ ಪ್ರಜೆಯ ಪ್ರತಾಪದಿಂದ ತ ಮ್ಮಲ್ಲಿಯ ಈ ಮಲಿನತೆಯನ್ನು ನಷ್ಟ ಮಾಡಿಕೊಳ್ಳಲಿ ಇದ ಲಾರದು.

## ಧರ್ಮ ಮತ್ತು ಅಧರ್ಮವು ಹತ್ತು?

ನೊಡಲು ಸ್ವದೇಶೀ ವಸ್ತ್ರಗಳೆಂದು ಹೇಳಿ ಹಿಂದಿನಂತ ವಿದೇಶಿ ವಸ್ತ್ರಗಳನ್ನು ಗ್ರಾಹಕರಿಗೆ ತೋರಿಸುವದು, ದೇಶ ಮತ್ತು ಧರ್ಮ ಎರಡೂ ದೃಷ್ಟಿಗಳು ಹಿತಕರವಲ್ಲ ಇದರಿಂದ ಧರ್ಮಹಾನಿಯ ನ್ನು ಮಾಡಿದಂತೂ ಆಗುವದಿಲ್ಲ ದೇಶದ ಅವಶ್ಯಕತೆಯನ್ನು ಪೂರ್ತಿ ಗೊಳಿಸಿದಂತೆಯೂ ಆಗುವದಿಲ್ಲ. ಚುರುಕತನದಿಂದ ರಾಷ್ಟ್ರವನ್ನು ಈಷ್ಟರನನ್ನೂ ರಕ್ಷಿಸುವ ಪ್ರಯತ್ನವನ್ನು ಮಾಡಿ ನಮ್ಮ ನ ಮ್ಮ ಮನಸ್ಸಿನಲ್ಲಿ ಶ್ರೇಷ್ಠರೆಂದು ತಿಳಿದುಕೊಂಡಂತಾಗುವದು ಪಾ ಖಂಡರ ವೃದ್ಧಿಯಾಗುವದು ಧರ್ಮ ಮತ್ತು ಅಧರ್ಮವು ಒಂದೆ ಯಲ್ಲಿ ಇರಲಾರವು ಧರ್ಮ, ಮತ್ತು ಅಧರ್ಮಗಳಲ್ಲಿ ಸೌಮ್ಯ ವಿರುವದು ಶಕ್ಯವಿಲ್ಲ. ಈ ಉಪದೇಶವು, ಭಯಂಕರವಾದದ್ದದೆ ಇ ದರಿಂದ ಧರ್ಮದ ಆಶ್ರಯವನ್ನು ಅಧರ್ಮವನ್ನು ಕಲಿಯುವ ಪ್ರಾರಂಭ ಮಾಡಿದಂತಾಗುವದು. ಇದು ಮೋಹವದೆ. ಧರ್ಮ ನಿಷ್ಠನಾದವನು ಈ 'ದುರಂಗಿ. ನಡತೆ ಎಂದೂ ಸಮ್ಮತಿಸಲಾರನು.

## ಧರ್ಮ ಮತ್ತು ಧನವು.

ಧರ್ಮವು ಮತ್ತು ಧನವು ಕೆಲಮಟ್ಟಿಗೆ ಸರಸ್ಪರ ಸಹಾ ಯಕ ವಾಗಿರುವವು. ಆಸೀಮೆಯನ್ನು ದಾಟಿದರೆ ಅವು ಪರಸ್ಪ ರ ಶತ್ರುಗಳಿರುವವು. ಧರ್ಮಪ್ರೇಮಿಯಾದವನಿಗೆ ಧನದ ಮೋಹ ವನ್ನು ಬಿಟ್ಟುಕೊಡುವದೊಂದೇ ಗತಿಯಿದ್ದು ಧನಪ್ರೇಮಿಯಾದ ವನು ಧರ್ಮಸಂಬಂಧ ಕೂಡಿಕೊಳ್ಳುವ ಹೊರ್ತು ನಿರ್ವಾಹವಿಲ್ಲ! ಧರ್ಮದ ಅಂತಿಮ ಫಲವು ಸುಖಶಾಂತಿಯು. ಧನದ ಪರಿಣಾಮ ವು. ಅಶಾಂತಿಯೂ ಕಲಹವೂ, ರೋಗವೂ, ( ಹೃದ್ರೋಗ ) ಕ ಟ್ಟಕಡೆಗೆ ಪತನವೂ ಆಗಿರುವವು. ಇದು ನಮ್ಮ ಪ್ರತಿನಿತ್ಯದ ಅನು ಭವದ ಮಾತು. ಧನಲೋಭವು ಬಾಹ್ಯದೃಷ್ಟಿಯಿಂದ ನೋಡಲಿ ಕ್ಕೆ ಅಸುವಿನ ಹೂವಿನಂತೆ ಸುಂದರವೂ, ಅಂತರಂಗದಲ್ಲಿ ಅದರ ವಿ ಷದಂತೆ ಮನುಷ್ಯನನನ್ನು ಉನ್ಮತ್ತನನ್ನು ಮಾಡುವಂಥದೂ ಇರು ತ್ತದೆ. ಪರದೇಶೀ ವಸ್ತ್ರಗಳು ನೋಡಲಿಕ್ಕೆ ಚಂದವಿದ್ದು ನೋಯಿ ಲಾಗಿದ್ದರೂ ಅದರಿಂದ ಅವುಗಳನ್ನು ಖರೀದಿಮಾಡುವದು. ಅವ್ಯ ವಸಾಯವನ್ನು ಕೈಕೊಳ್ಳುವದು ನಮಗೆ ಅವಶ್ಯವೇ ? ಮೇಲಾಗಿ ಅವು ಸ್ವದೇಶೀವಸ್ತ್ರಗಳ ಗೂಡ ಎಲ್ಲಿಯವರೆಗೆ ವಿರೋಧಿಸಬಹುದು ನೋಯುಲಾದದ್ದು ಯಾವಾಗಲೂ ತುಟ್ಟಿಯೇ "ಆಗುವದು. ಇದ ಲ್ಲದೆ ಅದರಲ್ಲಿ ನಮ್ಮ ದಾಸ್ಯದ ಬೀಜವು ನಮ್ಮ ಪರಾವಲಂಬಿತೆಯ ಕಾರಣವು ಅಡಕವಾಗಿವೆ ! ಪರದೇಶೀ ವಸ್ತ್ರಗಳನ್ನು ಧರಿಸಿ ಆನಂದ ಪಡುವದರಲ್ಲಿ ಅದರ ವ್ಯಾಪಾರದಿಂದ ಬರುವ ಹಣದ ಮೆರೆಯುವ ದರಲ್ಲಿ, ಪರಕೀಯರ ದ್ರವ್ಯದಿಂದ ಚೈನಿಯನ್ನು ಮಾಡುವವರಲ್ಲಿ ಯೂ, ಎರಡನೆಯವರು ಕೊಟ್ಟ ತುಣುಕುಗಳಿಂದ ಉಪಜೀವಿ ಸುವದರಲ್ಲಿಯೂ, ಎಷ್ಟು ಶೋಭೆಯೂ ಕೀರ್ತಿಯೂ ಉಂಟೋ ಅಷ್ಟೇ ಕೀರ್ತಿಯೂ, ಶೋಭೆಯೂ, ಅದೆ.

ಬಹಳ ಮಾರಾಟವಾಗುವದು ಧರ್ಮದ ಲಕ್ಷಣವಲ್ಲ. ಶರೆ ಮತ್ತು ಮಾಂಸಗಳ ವ್ಯಾಪಾರವು ಬಹಳವಾಗುತ್ತಿದ್ದರೂ ಅದ ನ್ನು ಮಾಡಲಿಕ್ಕೆ ಯಾವನಾದರೂ ಹಿಂದು ವ್ಯಾಪಾರಸ್ಥನು ಸಿದ್ಧ ನಾಗುವನೇ? ಮದ್ಯ ಮಾಂಸಗಳ ನಿಷಿದ್ಧತೆಯು ನಮ್ಮ ರೋಮ ರೋಮಾಂಚಗಳಲ್ಲಿ ತುಂಬಿ ಹೋದಂತೆ ಪರದೇಶೀ ವಸ್ತ್ರಗಳ ಭ ಯಂಕರತೆಯು ಇನ್ನೂ ನಮಗೆ ಚೆನ್ನಾಗಿ ಗೊತ್ತಾಗಿಲ್ಲ. ಸಾಕು, ಎರಡೂ ಒಂದೇ ವರ್ಗದಲ್ಲಿ ಸೇರಿರುವವು. ಪರದೇಶೀ ವಸ್ತ್ರದ ವ್ಯಾಪಾರವು ವ್ಯಭಿಚಾರ ವ್ಯವಸಾಯವು. ವಿದೇಶೀ ಬಟ್ಟೆಗಳ ವ್ಯಾಪಾರ ಮಾಡುವದರಿಂದ ನಮ್ಮ ಬಂಧು ಭಗಿನಿಗಳನ್ನು ನಗೆಗೀ ಡಾಗುವಂತೆ ಮಾಡಿದಂತಾಗುವದು. ವಿದೇಶೀ ಅರಿವೆಯ ವ್ಯಾಪಾ ರ ಮಾಡುವದೆಂದರೆ ನಮ್ಮ ಬಾಂಧವರ ಕುತ್ತಿಗೆಗೆ ಕತ್ತರಿಯ ನ್ನು ಹಾಕಿದಂತೆಯೇ ವಿದೇಶೀ ಅರಿವೆಗಳ ವ್ಯಾಪಾರದಿಂದಾಗುವ ಲಾಭದಿಂದ ಹೊಟ್ಟೆಯನ್ನು ತುಂಬಿಗೂಳ್ಳುವದೆಂದರೆ ನಮ್ಮ ದೇ ಶ ಮತ್ತು ಧರ್ಮವನ್ನು ಮಾರಿ ಉಪಜೀವಿಸದಂತೆಯೇ.ಈ ವೇಳೆ ಯಲ್ಲಿ ಅಂತೂ ಪರದೇಶೀ ವಸ್ತ್ರಗಳ ಮಾರಾಟವು ಮದ್ಯ ಮಾಂ ಸಗಳ ವ್ಯಾಪಾರಕ್ಕಿಂತಲೂ ಹೆಚ್ಚು ನಿಷಿದ್ಧವಾದದ್ದಿರುವದು. ಯಾಕೆಂದರೆ ಇದರಿಂದರೆ ನಮ್ಮ ಬಂಧುಭಗಿನಿಯರ ರಕ್ತಮಾಂಸ ಗಳ ಮಾರಾಟದಂತೆಯೇ ಪರದೇಶೀವಸ್ತ್ರಗಳ ಮಾರಾಟವು.

## ನಮ್ಮ ಉಪದೇಶವು

ಆದ್ದರಿಂದಲೇ ಈ ವ್ಯಾಪಾರಸ್ಥನಿಗೆ ಮತ್ತು ಇತರ ಮುಖಾಂತರ ಉಳಿದ ವ್ಯಾಪಾರಸ್ಥರಿಗೆ ನಮ್ಮ ಉಪದೇಶವೇನಂದ ರೆ " ನೀವು ನಿಮ್ಮ ಅನವಶ್ಯಕ ಖರ್ಚ ಕಡಿಮೆ ಮಾಡಿರಿ. ಸ ತ್ಯವ್ರತಗಳ ಮೇಲೆ ಅವಲಂಬಿಸಿರಿ. ಸ್ವಲ್ಪವಾದರೂ ಚಿಂತೆ ಇಲ್ಲ ಧರ್ಮದಿಂದ ಸಂಪಾದಿಸಿದ' ಲಾಭದಿಂದ ಸಂತುಷ್ಟರಾಗಿರಿ. ಲೋ ಭಕ್ಕೆ ಒಳಗಾಗಿ ದೇಶ ಮತ್ತು ಧರ್ಮದ ಬಲಿದಾನವನ್ನು ಮಾ ಡಬೇಡಿರಿ. ಸಣ್ಣ ದೊಡ್ಡ ಸ್ತ್ರೀ ಪುರುಷರೆಲ್ಲರು ನೂಲು ತೆಗೆ ಯುವದು ನೇಯುವದು ಖಾದೀ ಪ್ರಚಾರಮಾಡುವದು ಮತ್ತು ಖಾದೀ ವ್ಯಾಪಾರವನ್ನೇ ಮಾಡುವದು ಮುಂತಾದ ಉದ್ಯೋಗಗಳಲ್ಲಿ ತೊಡಗಿರಿ. ಎರಡನೆಯವರಮೇಲೆ ಅವಲಂಬಿಸುವಂತೆ ಮಾಡುವ ದಾಗಲಿ, ಪಾಪವೆಂದು ತಿಳಿಯಿರಿ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಧರ್ಮಪೂರ್ವಕವಾಗಿ ಜೀವಿಸುವದು ಶಕ್ಯವಿಲ್ಲದಿದ್ದರೆ ಹಳ್ಳಿಗಳ ನ್ನು ಸೇರಿರಿ. ಸ್ವಲ್ಪ ವೆಚ್ಚದಲ್ಲಿ ನಿಶ್ಚಿಂತೆಯಿಂದ ಧರ್ಮಪೂರ್ವ ಕವಾಗಿ ಜೀವಿಸಲಿಕ್ಕೆ ಪಟ್ಟಣಗಳಿಗಿಂತ ಹಳ್ಳಿಗಳ ಸ್ಥಿತಿಯು ಹೆ ಚ್ಚು ಅನುಕೂಲವದೆ. ಭಯಂಕರವಾಗಿ ಹಬ್ಬಿದ ಪಟ್ಟಣಗಳು ಮಾಯೆಯ ಬಜಾರವಾಗಿರುವವು.

( ಅಪೂರ್ಣ )

ಕನ್ನಡ ನವಜೀವನ.

ಆಷಾಢ ವದ್ಯ ೪ ಗುರುವಾರ ಶಕೆ ೧೮೪೪

## ತರುಣರಿಗೆ ವಿನಂತಿ.

(ನವಜೀವನ.)

ಪ್ರಿಯ ಬಂಧುಗಳೇ,

ಅಖಿಲ ಹಿಂದುಸ್ಥಾನವು ಒಂದು ವಿಶಾಲವಾದ ರಣಕ್ಷೇತ್ರವಾಗಿದೆ. ವೀರಾಗ್ರಣಿಗಳ ಹುಂಕಾರದಿಂದಲೂ ಕ್ಷತ್ರಭಟರ ಗರ್ಜನೆಯಿಂದಲೂ, ವೀರಾಂಗನೆಯವರ ವೀರೋಚಿತ ಸಾಹಸದಿಂದಲೂ ಬಾಲಕರ ಅಪೂರ್ವವಾದ ಉತ್ಸಾಹದಿಂದಲೂ ಭರತಭೂಮಿಯಲ್ಲಿ ಬಹಳ ಕಾಲದಿಂದಲೂ ದೃಷ್ಟಿಗೋಚರವಾಗದೇ ಇದ್ದಂಥ ಅದ್ಭುತವಾದ ನೋಟವು ಕಂಡು ಬರಹತ್ತಿದೆ. ಹಿಂದು ಭೂಮಿಯ ಹೃದಯಾಕಾಶದಲ್ಲಿ ಸ್ವಾತಂತ್ರ್ಯದೇವಿಯ ಪ್ರಭಾತ ಕಾಲೀನ ಅಪೂರ್ವವಾದ ಪ್ರಕಾಶವು ಹಬ್ಬಿರುವದು. ಅಖಿಲ ದೇಶವು ತನು ಮನದಿಂದ ಅವಳ ಸ್ವಾಗತವನ್ನು ಮಾಡುವದರಲ್ಲಿ ತತ್ಪರವಾಗಿರುತ್ತಿದೆ.

ಆದರೆ ಸ್ವಾತಂತ್ರ್ಯದೇವಿಯ ಪಾದಪೂಜೆಗೆ ಅಧಿಕಾರಿಯಾಗುವದಕ್ಕಿಂತ ಮೊದಲು ದೇಶಕ್ಕೆ ಜಗತ್ತಿನಲ್ಲಿಯ ಒಂದು ದೊಡ್ಡ ಪಾಶವೀ ಶಕ್ತಿಯ ಸಂಗಡ ಯುದ್ಧ ಮಾಡಬೇಕಾಗುತ್ತದೆ. ಇದಲ್ಲದೆ ಇನ್ನೊಂದು ಗಂಭೀರವಾದ ಪ್ರಶ್ನೆಯು ದೇಶದ ಎದುರಿನಲ್ಲಿ ಇದೆ. ಅದು ಯಾವದೆಂದರೆ, ಈ ಮಾಯಾವೀ ಶಕ್ತಿಯ ಕೈಯೊಳಗಿಂದ ತಾನು ಪಾರಾಗುವದಲ್ಲದೆ ಭೂತಲದಲ್ಲಿಯ ಉಳಿದ ಎಲ್ಲ ರಾಷ್ಟ್ರಗಳನ್ನಾದರೂ ಮುಕ್ತ ಮಾಡುವದು, ಹಾಗೂ ಅವರ ಅಜ್ಞಾನವನ್ನು ಯಾವ ಪ್ರಕಾರದಿಂದಾದರೂ ನಷ್ಟಮಾಡುವದು, ಇಷ್ಟೇ ಅಲ್ಲ, ಆದರೆ ಅಸತ್ಯದ ನಶ್ವರತ್ವವನ್ನೂ ಸತ್ಯದ ಪ್ರಕಾಶವನ್ನೂ ಜಗತ್ತಿನ ನಿದರ್ಶನಕ್ಕೆ ತಂದು ಕೊಡುವ ಭಾರವಾದರೂ ದೇಶದ ಮೇಲೆಯೇ ಬಿದ್ದದೆ.

ಆ ಮಾಯಾವೀ ಶಕ್ತಿಯು ಹಿಂದುಸ್ಥಾನವನ್ನು ಸುಲಿಯುವದರಲ್ಲಿ ಸಂಪೂರ್ಣವಾಗಿ ನಿರತವಾಗಿರುತ್ತದೆ. ಅದು ಅಖಿಲ ಭರತಭೂಮಿಯ ದೊಡ್ಡ ದೊಡ್ಡ ಮುಖಂಡರನ್ನು ಕಾರಾಗೃಹದಲ್ಲಿರಿಸಿರುವದಲ್ಲದೆ, ಇನ್ನೂ ತನ್ನ ಕಾಯಕವನ್ನು ಬಿಟ್ಟಿರುವದಿಲ್ಲ. ಸಾವಿರಾರು ಕಾರ್ಯನಿರ್ವಾಹಕರು ತುರಂಗದಲ್ಲಿ ವಾಸಮಾಡಹತ್ತಿದ್ದಾರೆ. ನೌಕರಶಾಹಿಯು, ಆಳರಸರು, ಪರದೇಶೀ ವ್ಯಾಪಾರಸ್ಥರು ಹಾಗೂ ಅವರ ದಲಾಲರು, ಇಂದಿನವರೆಗೆ ಯಾವ ರೀತಿಯಿಂದ ದೇಶದ ನಾಶಮಾಡುವದರಲ್ಲಿ ತತ್ಪರರಾಗಿದ್ದರೋ, ಅದೇ ಪ್ರಕಾರ ತಮ್ಮ ಕಾರ್ಯವನ್ನು ಸಾಗಿಸಿರುತ್ತಾರೆ. ಇದೇ ಕಾರಣದಿಂದ ಈ ಹಿಂದುಸ್ಥಾನದಲ್ಲಿ ಲಕ್ಷಾನುಲಕ್ಷ ಪುತ್ರ ಪುತ್ರೀಯರಿಗೆ ಅನ್ನವಸ್ತ್ರಗಳ ಅಭಾವದಿಂದ ಉಪವಾಸ ನಗ್ನರಾಗಿ ಇರಬೇಕಾಗುತ್ತದೆ.

ಈ ಭಿಷಣವಾದ ಪರಿಸ್ಥಿತಿಯನ್ನು ಹೋಗಲಾಡಿಸುವದರ ಸಲುವಾಗಿಯೇ ಈ ಸ್ವಾತಂತ್ರ್ಯ ಯುದ್ಧವು ಇಡೀದೇಶದಲ್ಲೆಲ್ಲ ಪಸರಿಸಿರುವದು. ಇದೇ ಕಾರಣದಿಂದಲೇ ಈಹೊತ್ತು ನಾವೆಲ್ಲರು ನಮ್ಮ ನಮ್ಮ ಬುದ್ಧಿ ಹಾಗು ಶಕ್ತಿಗೆ ತಕ್ಕಂತೆ ಅದರ ಸೇವೆಯನ್ನು ಮಾಡಲು ಹಾತೊರೆಯಹತ್ತಿರುತ್ತೇವೆ ಹಾಗು ಇದರ ಸಲುವಾಗಿಯೇ ನಮ್ಮ ಅಂತರಾತ್ಮನಾದರೂ ಕರ್ತವ್ಯವನ್ನು ಮಾಡಲಿಕ್ಕೆ ನಮಗೆ ಉಪದೇಶಿಸಹತ್ತಿರುತ್ತಾನೆ.

ರಾಷ್ಟ್ರೋನ್ನತಿಯ ಮಾರ್ಗದರ್ಶಕರೆಂದರೆ ವೃದ್ಧ ಅನುಭವಿಕ ಜ್ಞಾನಿಪುರುಷರೇ; ಆದರೆ ರಾಷ್ಟ್ರದ ಸಂಪತ್ತು ಬೆಳೆಯಬೇಕಾದರೆ ತರುಣಜನರಾದರೂ ಬಹಳೇ ಸಹಾಯಕರಾಗಿರುತ್ತಾರೆ. ಅನುಭವಿಕರಾದ ಮುಖಂಡರು ತಮ್ಮ ಜ್ಞಾನದೃಷ್ಟಿಯಿಂದ ರಾಷ್ಟ್ರದ ದೃಷ್ಟಿ ಹಾಗು ಧ್ಯೇಯವನ್ನು ನಿಶ್ಚಿತಮಾಡಿ ಅದರ ಮಾರ್ಗವನ್ನು ತೋರಿಸುತ್ತಾರೆ. ಆದರೆ ತಮ್ಮ ಅದಮ್ಯವಾದ ಉತ್ಸಾಹಶಕ್ತಿ ಹಾಗೂ ಧೈರ್ಯದಿಂದ ಎಷ್ಟೇ ಕಷ್ಟಗಳಿಗೆ ಗುರಿಯಾದರೂ ಅಂಜದೆ, ರಾಷ್ಟ್ರದ ಧ್ಯೇಯವನ್ನು ಸಂಪಾದನೆ ಮಾಡುವಂಥ ಶಕ್ತಿಯು ಕೇವಲ ತರುಣರಲ್ಲಿಯೇ ಇರುವದು. ಯಾಕಂದರೆ ಅವರ ಶರೀರದಲ್ಲಿ ಹೊಸರಕ್ತವು ಸಂಚರಿಸುತ್ತದೆ. ಮತ್ತು ಅವರ ಅಬಾಲತೆಯು ಸಾಂಸಾರಿಕ ಸಂಕಟಗಳ ಬಾಹುಲ್ಯದಿಂದ ಹಾಗೂ ಚಿಂತಾಗ್ನಿಯ ಭಯಂಕರವಾದ ಜ್ವಾಲೆಗಳಿಂದ ನಷ್ಟವಾಗಿರುವದಿಲ್ಲ. ಇದಲ್ಲದೆ ಅವರ ಶರೀರನೌಕೆಯು ಸಂಸಾರಸಾಗರದ ಭಯಂಕರವಾದ ತೆರೆಗಳಲ್ಲಿ ಸಿಕ್ಕು ಒಡ್ಡಾಡಿ ಇನ್ನೂ ಹಣ್ಣಾಗಿರವದಿಲ್ಲ ಆದ್ದರಿಂದ ದೇಶದಲ್ಲಿಯ ತರುಣರು ದೇಶದ ಪ್ರಾಣದಂತೆ ಇರುತ್ತಾರೆ. ಎಲ್ಲಿಯವರೆಗೆ ಅವರು ನಿಷ್ಕ್ರಿಯರಾಗಿರುವರೋ ಅಲ್ಲಿಯವರೆಗೆ, ದೇಶ ಅಥವಾ ರಾಷ್ಟ್ರವು ಜನ್ಮತಾವಸ್ಥೆಯಲ್ಲಿಯೇ ಉಳಿಯಬೇಕಾಗುತ್ತದೆ. ಆದರೆ ಅವರು ಜಾಗೃತರಾದರೆ ದೇಶದಲ್ಲಿ ನವಚೈತನ್ಯಸಂಚಾರವಾದದ್ದು ಕಂಡುಬರುತ್ತದೆ. ಆದ್ದರಿಂದಲೇ ಈ ನಮ್ಮ ದೇಶವು, ಅಖಿಲ ಭೂಮಂಡಲವು ಕೂಡ ಇವರ ಕಡೆಗೆ ನೋಡಿ, ಆಶ್ಚರ್ಯದಿಂದ ಸ್ತಂಭಿತವಾಗುವಂತೆ ಸ್ವಲ್ಪ ಕಾಲದಲ್ಲಿಯೇ ಕಾರ್ಯಮಾಡಿತೋರಿಸಬಲ್ಲರು.

ಭಾರತವಾದರೂ ಈಹೊತ್ತು ತನ್ನ ಹಾಗು ತನ್ನ ಮಕ್ಕಳನ್ನು ಕೂಡಿಯೇ ಕರ್ತವ್ಯ—ಪಾಲನದ ಸಲುವಾಗಿ ಆಹ್ವಾನ ಮಾಡುತ್ತದೆ. ಎಲ್ಲ ಕಾಲದಲ್ಲಿ ಸಕಲ ದೇಶಗಳ ಸ್ವಾತಂತ್ರ್ಯಯುದ್ಧದಲ್ಲಿ ಮುಂದಾಗಿದವರು ಯುವಕರೇ ಎಂದು ಕೇಳಬರುತ್ತದೆ. ತರುಣರು, ಯಾವಾಗಲು ಹೆಚ್ಚು ನಿಸ್ಪೃಹಿಗಳೂ, ತೇಜಸ್ವಿಗಳೂ ಆದದ್ದರಿಂದ ಉತ್ಸಾಹಶೀಲರಿದ್ದದರಿಂದ ಸ್ವಾರ್ಥತ್ಯಾಗ ಮಾಡಲಿಕ್ಕೆ ಹೆಚ್ಚು ತಯಾರ ಹಾಗೂ ಯೋಗ್ಯರಿರುತ್ತಾರೆ. ಆದ್ದರಿಂದಲೇ ಅವರು ಈಕಾಲಕ್ಕೆ ದೇಶದಲ್ಲಿ ನವಜೀವನವನ್ನು ಪ್ರಸರಿಸಲಿಕ್ಕೆ ಸಮರ್ಥರಾದವರಾಗಿರುತ್ತಾರೆ. ಏನು? ಭಾರತೀಯ ತರುಣರು, ಇಂಥ ವಿಷಮ ಪರಿಸ್ಥಿತಿಯಲ್ಲಿ ತಮ್ಮ ಮಾತೃಭೂಮಿಯ ಉದ್ಧಾರದ ಸಲುವಾಗಿ ಮುಂದೆ ಬರುವದಿಲ್ಲವೋ? ದೇಶದಲ್ಲಿ ಮನುಷ್ಯೋಚಿತವಾದಂಥ ಅಧಿಕಾರವನ್ನು ರಕ್ಷಿಸುವದರ ದೆಶೆಯಿಂದ ಪುನಃ ಸವಿನಯ ಕಾಯ್ದೇಭಂಗದ ಪುಕಾರವಾಗಿರುತ್ತದೆ. ಮತ್ತು ತತ್ಪೂರ್ವದಲ್ಲಿ ವಿಧಾಯಕ ಕಾರ್ಯಕ್ರಮವು ಪೂರ್ಣವಾಗಲಿಕ್ಕೆಬೇಕು. ನೀವು ಈ ಸಮಯದಲ್ಲಿ ತನು ಮನದಿಂದ ಈ ಕಾರ್ಯವನ್ನು ಮಾಡಲು ಪ್ರಯತ್ನಿಸುವದಿಲ್ಲವೋ?

ನಮ್ಮ ಸಂಗ್ರಾಮವು ಹಿಂದಿನ ಯುದ್ಧಗಳಂತೆ ಇರುವದಿಲ್ಲ. ಆದ್ದರಿಂದ ಜಗತೀತಲದಲ್ಲಿಯ ಯಾವದೇ ಯುದ್ಧದ ಸಂಗಡ ಇದನ್ನು ಹೋಲಿಸುವ ಸಾಹಸವನ್ನು ಮಾಡುವ ಭ್ರಮೆಯಲ್ಲಿ ನಾವು ಬೀಳತಕ್ಕದ್ದಲ್ಲ. ನಾವು ಭ್ರಮಪರರಾಗಿ ಕೆಟ್ಟ ಸಾಧನಗಳ ಉಪಯೋಗಮಾಡಿ, ನಮ್ಮ ಯುದ್ಧವನ್ನು ಎಂದಿಗೂ ಕೆಡಿಸತಕ್ಕದ್ದಲ್ಲ. ನಮ್ಮ ಧ್ಯೇಯವಾದರೂ ಭಿನ್ನವಾಗಿರುತ್ತದೆ. ಕೇವಲ ಅಧಿಕಾರದ ಪರಿವರ್ತನದ ಸಲುವಾಗಿಯೇ ನಾವು ಯುದ್ಧ ಹೂಡಿರುವದಿಲ್ಲ. ನಮ್ಮ ಯುದ್ಧವು ಸತ್ಯದ ಲಾಭವಾಗಿಯೂ, ಸ್ವ

ರಾಜ್ಯದ ವತಿಯಿಂದಲೂ, ಆತ್ಮಬಲದಸ್ಥಾಪನೆಯ ಸಲುವಾಗಿಯೂ ಪಶುಬಲದ ನಿಃಸಾರತೆಯನ್ನು ಸಿದ್ಧಮಾಡಿ, ಪ್ರೇಮಯುಕ್ತ ಸಾಮ್ರಾಜ್ಯವನ್ನು ಸ್ಥಾಪಿಸುವದರ ಸಲುವಾಗಿಯೂ ಮಾಡಲ್ಪಟ್ಟಿದೆ. ಆದ್ದರಿಂದಲೇ ನಮ್ಮ ಧ್ಯೇಯ-ಸಿದ್ಧಿಯ ಸಾಧನಗಳಾದರೂ ಭಿನ್ನವಾಗಿರುತ್ತವೆ. ಕುಟಿಲನೀತಿ, ಅಸತ್ಯ, ಹಾಗೂ ಪಶುಬಲ ಅಥವಾ ರಾಕ್ಷಸೀಬಲದಿಂದ ನಮ್ಮ ಕಾರ್ಯವು ಸಿದ್ಧಿಯನ್ನು ಹೊಂದುವಂತೆ ಇರುವದಿಲ್ಲ. ನಮಗೆ ಸಂಘಶಕ್ತಿ ಹಾಗೂ ಆತ್ಮಬಲದಿಂದಲೇ ನಮ್ಮ ಕೆಲಸವನ್ನು ಮಾಡಬೇಕಾಗಿದೆ.

ಆದರೆ, ಸತ್ಯ, ಸಂಘಶಕ್ತಿ ಆತ್ಮಬಲನ ಜತೆಗೆ ಸಂಘಟನ ಹಾಗೂ ಐಕ್ಯದ ಅವಶ್ಯಕತೆಯಾದರೂ ಅತ್ಯಂತವಾಗಿದೆ. ಜಗತ್ತಿನಲ್ಲಿ ಪಾಶವೀಶಕ್ತಿಯಿಂದ ಜಯವು ಸುಲಭವಾಗಿ ದೊರೆಯುವದೆಂದು ನಾವು ತಿಳಿದಿರುತ್ತೇವೆ. ಇದು ಕೇವಲ ಭ್ರಮೆಯೇ ಸರಿ! ಆದರೆ ಪಾಶವೀ ಶಕ್ತಿಯಲ್ಲಿ ವಿಜಯಪ್ರಾಪ್ತಿ ಮಾಡಿಕೊಳ್ಳುವಂಥ ಯಾವ ಮಾತು ಇರುತ್ತದೆ, ಎಂಬದನ್ನು ನಮ್ಮಲ್ಲಿ ಯಾರೂ ಅದರ ಅಂಗಾಂಗಗಳನ್ನು ಶೋಧಿಸಿ ಕಂಡುಹಿಡಿದಿರುವದಿಲ್ಲ. ಪಾಶವೀಶಕ್ತಿಯಲ್ಲಿ ತನ್ನಷ್ಟಕ್ಕೆ ತಾನೇ ವಿಜಯಪ್ರಾಪ್ತಮಾಡಿಕೊಳ್ಳುವಂಥ ಶಕ್ತಿಯು ಇರುವದಿಲ್ಲ. ಅದು ಕೇವಲ ಟೊಂಗು ಇರುತ್ತದೆ. ವಿಜಯದ ಮುಖ್ಯಕಾರಣವು ಸಂಘಟನವಿರುತ್ತದೆ.

ಹಿಂದುಸ್ಥಾನದಲ್ಲಿ ಈಗ ಈ ಶಕ್ತಿ ಮತ್ತು ಉತ್ಸಾಹಗಳ ಅಭಾವವಿರುವದಿಲ್ಲ. ಆದರೆ ಸಂಘಟನೆಯು ಮಾತ್ರ ಇರುವದಿಲ್ಲ. ಈ ಮಹತ್ವವಾದಂಥ ಅಂಗವನ್ನು ಪೂರ್ಣಮಾಡುವದರ ಸಲುವಾಗಿ ದೇಶದ ತರುಣವೀರರಾದ ನಾವು ಎಲ್ಲಕಡೆಯಲ್ಲಿ ಸಂಚಾರಮಾಡುವದು ಅತ್ಯವಶ್ಯವಿದೆ. ಸಮಯದ ಮಹತ್ವವನ್ನರಿತು, ಜನರಿಗೆ ರಾಷ್ಟ್ರೀಯಸಭೆಯ ಸಭಾಸದರಾಗಲಿಕ್ಕೆ ಹೇಳಿ, ಟಿಳಕ ಸ್ವರಾಜ್ಯನಿಧಿಯ ಹಣವನ್ನು ಕೂಡಿಸಲಿಕ್ಕೆ ಬೇಕು. ಮಹಾಸಭೆಯ ಎರಡು ಮುಖ್ಯ ಆಜ್ಞೆಗಳು ಇವೆ. ಇವುಗಳ ಹೊರತು ದೇಶಸೇವೆ ಮಾಡುವದರಲ್ಲಿ, ಮುಂದೊರೆಯಲು ನಾವು ಶಕ್ತರಾಗಲಾರೆವು.

ಆದರೆ ಎಲ್ಲಕ್ಕಿಂತಲೂ ಮಹತ್ವವಾದ ಕಾರ್ಯವೆಂದರೆ, ಎಲ್ಲಜನರ ಮನಸ್ಸಿನಲ್ಲಿ ನಮ್ಮ ಯುದ್ಧದ ರಹಸ್ಯವನ್ನು ಚನ್ನಾಗಿ ಬಿಂಬಿಸುವದು, ಇದೇ ನಿಜವಾದ ಸ್ವರಾಜ್ಯದ ತಳಹದಿಯು. ಆದ್ದರಿಂದಲೇ ಜನತೆಗೆ ಅಹಿಂಸೆ ಹಾಗೂ ಸತ್ಯತೆಗಳ ಮಹತ್ವವನ್ನು ಚನ್ನಾಗಿ ತಿಳಿದು ಮನನಮಾಡಬೇಕಾಗಿದೆ. ಹಾಗೂ ಈ ಉಪದೇಶದ ಸಂಗಡಲೇ, ಸಂಘಗಳನ್ನಾದರೂ ಸ್ಥಾಪಿಸಲು ಬೇಕು. ಸಾಧಾರಣವಾಗಿ ಜನರು ಸಿದ್ಧಾಂತದ ಆಂತರಿಕ ಮಹತ್ವದ ಪರೀಕ್ಷೆಯನ್ನು ಮಾಡಿಯೂ, ಉಪದೇಶಮಾಡುವಂಥ ಮನುಷ್ಯನ ಚರಿತ್ರೆಯ ಉದಾಹರಣೆಯನ್ನು ನೋಡಿಯೂ ಕೆಲಸಮಾಡುತ್ತಾರೆ. ಇದೇ ಕಾರಣದಿಂದ ಈ ಚಳವಳಿಯಲ್ಲಿ ಮಹಿಮೆ ಹಾಗೂ ಪವಿತ್ರತೆಯನ್ನು ರಕ್ಷಿಸುವದು ನಮ್ಮ ಕೈಯಲ್ಲಿದೆ. ನಾವು ಮಹಾಸಭೆಯ ಹಾಗೂ ಮುಖಂಡರ ಅಂಗಗಳಂತೆ ಇರುವವು. ಆದ್ದರಿಂದ ದೇಶದ ಸಲುವಾಗಿಯೂ ಮಹಾಸಭೆಯ ಸಲುವಾಗಿಯೂ, ನಮ್ಮ ೩೦ ಕೋಟಿ ಬಾಂಧವರ ಕಲ್ಯಾಣದ ಸಲುವಾಗಿಯೂ, ನಮ್ಮ ಪವಿತ್ರ ಚರಿತ್ರದಿಂದಲೂ ಪ್ರೇಮಪೂರ್ಣ ವ್ಯವಹಾರದಿಂದಲೂ, ಸಹಾನುಭೂತಿಯುಕ್ತವಾದ ಉಪದೇಶದಿಂದಲೂ, ನಮ್ಮ ಎಲ್ಲ ದೇಶಭಾಂಧವರ ಹೃದಯದಲ್ಲಿ ಸ್ವತಂತ್ರತೆಯ ಭಾವನೆಯನ್ನು ಜಾಗೃತಗೊಳಿಸಿ, ಮಹಾಸಭೆಯ ವಿಷಯದಲ್ಲಿ ಆದರವೂ ಶತ್ರುಮಿತ್ರರಲ್ಲಿ ಕರುಣೆಯೂ, ಪ್ರೇಮವನ್ನು ಹುಟ್ಟಿಸತಕ್ಕದ್ದು. ಸ್ವಾವಲಂಬನದ ಪಾಠವನ್ನು ಅವರಿಗೆ ಕಲಿಸತಕ್ಕದ್ದು. **ಸ್ವಾವಲಂಬೀ ಹಿಂದುಸ್ಥಾನವೇ ಸ್ವತಂತ್ರ ಹಿಂದುಸ್ಥಾನವಾಗಲಿಕ್ಕೆ ಶಕ್ತವಾಗುವದು.** ಖಾದಿಯ ಪ್ರಸಾರವೇ, ಸ್ವಾವಲಂಬನದ ಹಾಗೂ ಒಕ್ಕಟ್ಟಿನ ಪಾಠವನ್ನು ಕಲಿಸಲಿಕ್ಕೆ ಅತ್ಯುತ್ತಮ ಸಾಧನವಾಗಿರುತ್ತದೆ. ಖಾದಿಯ ಪ್ರಸಾರದಿಂದಲೇ, ಅಹಿಂಸೆ ಹಾಗೂ ಸತ್ಯದ ಪ್ರಸಾರವಾಗಬಲ್ಲದು.

ನಾವು ಜಯವನ್ನಪೇಕ್ಷಿಸುತ್ತಿದ್ದರೆ, ಅಹಿಂಸೆ ಹಾಗೂ ಸತ್ಯತೆಯುಕ್ತವಾದ ನಮ್ಮ ಈ ಚಳವಳಿಯಲ್ಲಿ ವಿಶ್ವಾಸವನ್ನಿಡಲು ಬೇಕು. ನಾವು ನಮ್ಮ ಸಿದ್ಧಾಂತದಂತೆ ಆಚರಿಸಲು ತಪ್ಪಿದರೆ, ಜನತೆಯು ನಮ್ಮ ಉಪದೇಶದ ಕಡೆಗೆ ಲಕ್ಷ್ಯಕೊಡಲಾರದು. ಆದ್ದರಿಂದ ನಾವು ನಿರ್ಭೀಡಂತ ಹಾಗೂ ನಿಃಶಂಕೆಗಳಾಗಬೇಕು.

ನಿಯಮಗಳಿಗನುಸರಿಸಿ ನಡೆಯುವದಾದರೂ ಅಷ್ಟೇ ಮಹತ್ವದ್ದಾಗಿದೆ. ಸ್ವತಂತ್ರತೆಯ ಅರ್ಥವು, **ಸ್ವಚ್ಛಂದತೆಯಲ್ಲ.** ನಾವು ಕಾಯದೇ ಕಾನೂನುಗಳನ್ನು ಮಾಡಲಿಕ್ಕೆ ಅಧಿಕಾರವನ್ನು ದೊರಕಿಸಲು ಇಚ್ಛಿಸುತ್ತೇವೆ; ಅಂದಮೇಲೆ ಆ ನಿಯಮಗಳನು ಚೆನ್ನಾಗಿ ಪಾಲಿಸಬೇಕು.

ಈ ಸಂಚಿಕೆಯು ನಿಮ್ಮ ಕೈಸೇರುವ ಪೂರ್ವದಲ್ಲಿ, ಸವಿನಯ ಕಾಯದೇ ಭಂಗ ಕಮೀಟಿಯವರು, ದೇಶದ ಪರಿಸ್ಥಿತಿಯನ್ನು ನಿರೀಕ್ಷಿಸಲು ಹೊರಬೀಳುತ್ತಾರೆ. ಅವರಿಗೆ ನಿಜವಾದ ಸ್ಥಿತಿಯನ್ನು ತಿಳಿಸಿರಿ. ನಮ್ಮ ಎದುರಿನಲ್ಲಿ ವಿಶಾಲವಾದ ಕಾರ್ಯಕ್ಷೇತ್ರವು ಬಿದ್ದದೆ ನಮ್ಮ ಪ್ರಾಂತವನ್ನು ದೇಶಕ್ಕೆ ಸಹಾಯಕವಾಗುವಂತೆ ತಯಾರಿಸುವದಾದರೂ ನಮ್ಮನ್ನೇ ಕೂಡಿದೆ.

ಸರಕಾರವು ಮಹಾತ್ಮರನ್ನು ೬ ವರ್ಷಗಳ ವರೆಗೆ ಕಾರಾಗೃಹದಲ್ಲಿಡುವ ನಿಶ್ಚಯ ಮಾಡಿರುತ್ತದೆ. ಆದರೆ ನಾವು ೧ ವರ್ಷ ಆದೇಕೆ! ೬ ತಿಂಗಳ ವರೆಗಾದರೂ ಅವರನ್ನು ತುರಂಗದಲ್ಲಿ ಇರಗೊಡಬಾರದು ಹಿಂದುಸ್ಥಾನದ ತರುಣರಲ್ಲಿ ಅಖಿಲಜಗತ್ತನ್ನು ನಡುಗಿಸುವಂಥ ಶಕ್ತಿಯುಂಟು. ಮಹಾತ್ಮರು ಸರಕಾರಿಶಾಲೆಗಳ ಬಹಿಷ್ಕಾರದ ಸಮಯದಲ್ಲಿ ಕಲಕತ್ತೆಗೆ ಹೋಗಿದ್ದರು. ಆಕಾಲಕ್ಕೆ ಕಲಕತ್ತೆಯಲ್ಲಿ ೧೫೦೦೦ ವಿದ್ಯಾರ್ಥಿಗಳು ಶಾಲೆಗಳನ್ನು ಬಹಿಷ್ಕರಿಸಿದ್ದರು. ಆಗ್ಗೆ ಸ್ವರಾಜ್ಯವು ೧ ವರುಷದಲ್ಲಿ ಏಕೆ! ಒಂದೇ ತಿಂಗಳಲ್ಲಿ ದೊರಕಬಹುದು ಎಂದು ಅನಿಸುತ್ತಿತ್ತು.

ನಮ್ಮ ಧ್ಯೇಯದ-ಸಿದ್ಧಿಯ ಸಲುವಾಗಿ ದೃಢನಿಶ್ಚಯದ ಅವಶ್ಯಕತೆಯಾದರೂ ಅತ್ಯಂತವಾಗಿದೆ. ನಾವು ಇದರ ಸಲುವಾಗಿ ಅಧೀನ ಹಾಗೂ ನಿರಾಶರಾಗುವ ಕಾರಣವಿಲ್ಲ ಅಮೇರಿಕೆಗೆ ಘನಘೋರ ಚಳವಳಿ ಹಾಗೂ ಭಯಂಕರ ಯುದ್ಧವನ್ನು ಮಾಡಿದರೂ ಸಹ ಸ್ವರಾಜ್ಯವನ್ನು ಗಳಿಸಲಿಕ್ಕೆ ೭ ವರ್ಷಗಳು ಬೇಕಾದವು. ಆಯರ್ಲಂಡದ ಬಡದಾಡಹತ್ತಿ ೭೦೦-೮೦೦ ವರ್ಷಗಳಾಗುತ್ತಬಂದವು. ಆದರೆ ಅವು ತಮ್ಮ ನಿಶ್ಚಯದಿಂದ ಪರಾವೃತ್ತವಾದವೋ? ಅಂದಮೇಲೆ ನಮ್ಮ ಯುದ್ಧವಂತೂ ಈಗ ಪ್ರಾರಂಭವಾಗಿದೆ

ಇನ್ನೊಂದು ಮಾತು ನಿಮಗೆ ಹೇಳಬೇಕಾಗಿದೆ. ನೀವು ಒಂದುವೇಳೆ ಸ್ವಾತಂತ್ರ್ಯಪ್ರಿಯರಾಗಿದ್ದರೆ, ಹಾಗೂ ಈ ಚಳವಳಿಯಲ್ಲಿ ಸೇರಲು ನಿಮ್ಮ ಇಚ್ಛೆಯಿದ್ದರೆ, ಚನ್ನಾಗಿ ವಿಚಾರಮಾಡಿ, ಈ ಚಳವಳಿಯಲ್ಲಿ ಕೂಡಿಕೊಳ್ಳಿರಿ. ಭಾವೀ ಆಪತ್ತಿಗಳವಿಚಾರವನು ಚನ್ನಾಗಿಮಾಡಿ, ಮುಂದಕ್ಕೆ ಹೆಜ್ಜೆಯನ್ನಿಡಿರಿ. ಈ ಸಂಸಾರದಲ್ಲಿ ಮನುಷ್ಯನಿಗೆ ಸ್ವಾತಂತ್ರ್ಯಕ್ಕಿಂತಲೂ ಹೆಚ್ಚಿನವಸ್ತುಯಾವದೂ ಇರುವದಿಲ್ಲ ಅದರ ಪ್ರಾಪ್ತಿಯಸಲುವಾಗಿ, ರಾಷ್ಟ್ರಗಳಿಗೆ ಎಷ್ಟೋ ದುಃಖಗಳನ್ನು ಸೋಸಬೇಕಾಗುತ್ತದೆ. ಹಿಂದುಸ್ಥಾನವಾದರೂ ಇದಕ್ಕೆ ಅಪವಾದರೂಪವಾಗಲಾರದು. ತಾಯಿತಂದೆ ಸ್ತ್ರೀಪುತ್ರ ಸಂಬಂಧವರ ವಿಷಯವಾಗಿ ಎಲ್ಲ ಮೋಹವನ್ನು ತ್ಯಾಗಮಾಡಿ, ಕೇವಲ ದೇಶಾರಾಧನೆಯ ಸಲುವಾಗಿಯೇ ನಾವು ಪ್ರಯತ್ನಮಾಡತಕ್ಕದ್ದು, ಖಾದ್ಯ, ಪೇಯ, ಶರೀರಸುಖ ಮುಂತಾದವುಗಳ ಬಗ್ಗೆ ಯಾವರೀತಿಯ ದಮ್ಮ ಅಭಿಲಾಷೆಯನ್ನು ಪೂರ್ತಿಗೆ ಬಿಡಬೇಕಾಗಿದೆ. ಭಾರತದ ಪ

ತಿಯ ಪುತ್ರರು ಆವಳ ರಕ್ಷಣೆಯ ಸಲುವಾಗಿ ಸ್ವಾರ್ಥತ್ಯಾಗ ಕಷ್ಟಸಹನ, ತಪಸ್ಯಾಮಯ ಜೀವನದ ಅಂಗೀಕಾರವನ್ನು ಮಾಡುವದಿಲ್ಲವೋ?

ಛೆ, ಹಾಗೆ ಎಂದಿಗೂ ಆಗದು-ಪ್ರಾಚೀನಕಾಲದಿಂದಲೂ ಜಗವು ಹಿಂದುಸ್ತಾನದ ಗೌರವದ ವರ್ಣನೆಯನ್ನು ಮನವಣಿ ಮಾಡಿರುತ್ತದೆ ಪಶುಬಲ ಹಾಗೂ ಅಸಭ್ಯತನದ ನಿಃಸ್ಸಾರತೆಯಾದರೂ ಅದಕ್ಕೆ ಗೊತ್ತಿದೆ. ಮತ್ತು ಈಗ ಅದು ಈ ನಮ್ಮ ಹಿಂದುಸ್ತಾನದ ಕಡೆಗೆ ಚನ್ನಾಗಿ ನೋಡಹತ್ತಿದೆ. ಪ್ರಾರಂಭದಲ್ಲಿಯ ಈ ಕ್ರಾಂತಿಯಿಂದಲೂ ಅದರ ಹೃದಯದಲ್ಲಿಯ ಸುಂದರ ಸುಖದಾಯಕವಾದ ಆಶಾಲಹರಿಗಳು ಉದಯಿಸಹತ್ತಿವೆ. ಈ ಕ್ರಾಂತಿಯ ಅರುಣೋದಯವೇ ಇಷ್ಟು ಆಶಾಪೂರ್ಣ ಮತ್ತು ಸುಖಶಾಂತಿಯನ್ನೀಯುವಂಥದಿದ್ದ ಮೇಲೆ, ಇದರ ಪೂರ್ಣೋದಯವು ಎಷ್ಟು ಅದ್ಭುತವಾಗಬಹುದೆಂದ ವಿಚಾರದಲ್ಲಿ ಅದು ಮಗ್ನವಾಗಿದೆ. ಈ ಪ್ರಶ್ನೆಯ ಉತ್ತರವು ಭವಿಷ್ಯ ಕಾಲದ ಮೇಲೆಯೇ ಅವಲಂಬಿಸಿರುವದು. ಬಂಧುಗಳೇ, ಬನ್ನಿರಿ; ಕರ್ತವ್ಯಮಗ್ನರಾಗುವಾ. ಪರಮಾತ್ಮನು ನಮಗೆ ಭಕ್ತಿ, ಸತ್ಕೃತಿ. ಬಲ, ಧೈರ್ಯ ಮತ್ತು ನಮ್ರತೆಯನ್ನು ನಮ್ಮ ಕಡೆಯಿಂದ ಮಾತೃಭೂಮಿಯ ಉದ್ಧಾರವನ್ನು ಮಾಡಿಸಲಿ

— ಓರ್ವ ತರುಣಬಂಧು.

## ಟಿಪ್ಪಣಿಗಳು,

### ವಿಜಾಪುರ ಜಿಲ್ಹೆಯ ೧ ನೆ ಪರಿಷತ್ತು

ವಿಜಾಪುರಜಿಲ್ಹೆಯ ಮೊದಲನೆ ಪರಿಷತ್ತನ್ನು ವಿಜಾಪುರದಲ್ಲಿ ಆಕ್ಟೋಬರ ತಿಂಗಳಕಡೆಯವಾರದಲ್ಲಿ ನೆರೆಯಿಸಬೇಕೆಂದು ಗೊತ್ತಾದ ನಿರ್ಣಯವನ್ನು ಜಿಲ್ಹೆಯಲ್ಲಿ ಮುದ್ರಿಸಿದ್ದೇವೆ ಆ ಬಗ್ಗೆ ಸ್ವಾಗತವನ್ನು ಮಾಡುವ ಮಂಡಲವನ್ನು ಏರ್ಪಡು ಮಾಡುವ ಕುರಿತು ಜಿಲ್ಹಾ ಕಾಂಗ್ರೇಸ ಕಮೀಟಿಯ ಅಧಿವೇಶನವು ಆಗಸ್ಟ ತಿಂಗಳ ಮೊದಲನೇ ವಾರದಲ್ಲಿ ನೆರೆಯುವದೆಂಬ ಸಂಗತಿಯನ್ನಾದರೂ ಮುದ್ರಿಸಿರುವೆವು. ಈ ಬಗ್ಗೆ ಈಗಿನಿಂದಲೇ ಎಲ್ಲ ತಾಲೂಕಗಳ ಜನರು ಪರಿಷತ್ತನ್ನು ಯಶಸ್ವಿಯಾಗಿ ಪಾರುಮಾಡುವ ಕುರಿತು, ಯೋಗ್ಯ ವ್ಯವಸ್ಥೆಯನ್ನು ಮಾಡತಕ್ಕದ್ದು. ಇದೇ ವಿಜಾಪುರ ಜಿಲ್ಹೆಯ ಮೊದಲನೇ ಪರಿಷತ್ತು ಇರುವದರಿಂದ ಆ ಬಗ್ಗೆ ಎಲ್ಲರು ಹೆಚ್ಚು ಉತ್ಸಾಹವನ್ನು ತೋರಿಸುವದು ಅವಶ್ಯವಿದೆ. ಕರ್ನಾಟಕದ ಎಲ್ಲ ಜಿಲ್ಹೆಗಳು ಈಗಾಗಲೆ ತಮ್ಮ ಜಿಲ್ಹೆಯ ಪರಿಷತ್ತುಗಳನ್ನು ನೆರವಿಸಿ ಬಿಟ್ಟಿರುವವು ವಿಜಾಪುರ ಜಿಲ್ಹೆಯ ಮಾತ್ರ ಇಂದಿನವರೆಗೆ ಹಿಂದೆಬಿದ್ದರು ಆದರೂ ನಮ್ಮ ಸುದೈವದಿಂದ ಈಗ ಪರಿಷತ್ತನ್ನು ಕೂಡಿಸಬೇಕೆಂದು ಗೊತ್ತಾದ್ದರಿಂದ ಅದನ್ನು ಸಂಪೂರ್ಣವಾಗಿ ಯಶಸ್ವಿಯಾಗಿ ಮಾಡುವ ಭಾರವು ನಮ್ಮ ಮೇಲೆಯೇ ಇರುವದು. ಜಿಲ್ಹೆಯ ಎಲ್ಲ ಭಾಗಗಳಲ್ಲಿ ಯಾವ ಯಾವ ಅಡಚಣಿಗಳುಂಟು? ಯಾವ ಯಾವ ಕಾರ್ಯವನ್ನು ಮಾಡಬೇಕು; ರಾಜಕೀಯ ಜಾಗೃತಿಯು ಜಿಲ್ಹೆಯ ತುಂಬೆಲ್ಲ ಆಗಬೇಕಾದರೆ ಯಾವ ಯಾವ ಪ್ರಯತ್ನಗಳನ್ನು ಮಾಡಬೇಕು ಮುಂತಾದ ಪ್ರಶ್ನೆಗಳನ್ನೆಲ್ಲ ಸಾಂಗೋಪಾಂಗವಾಗಿ ಚರ್ಚಿಸಿ ಆ ಬಗ್ಗೆ ಕೆಲವು ನಿರ್ಣಯಗಳನ್ನು ಮಾಡಿಕೊಂಡು ಅವುಗಳನ್ನು ಅಮಲಿನಲ್ಲಿ ತರಲಿಕ್ಕೆ ಪ್ರಯತ್ನ ಮಾಡದ ಹೊರತು ಜಿಲ್ಹಾ ನಿವಾಸಿಗಳಿಗೆ ಸುಖಶಾಂತಿಗಳು ದೊರೆಯುವದು, ಈಗಿನ ದಿವಸಗಳಲ್ಲಿ ಅಶಕ್ಯವಾದ ಮಾತು ಆದ್ದರಿಂದ ಅವುಗಳನ್ನೆಲ್ಲ ಚರ್ಚಿಸುವ ಕುರಿತು ಈ ಜಿಲ್ಹಾ ಸಭೆಯು ನೆರೆಯುವದರಿಂದ ಎಲ್ಲರೂ ಅವಶ್ಯವಾಗಿ ಇದರ ಬಗ್ಗೆ ಪ್ರಯತ್ನ ಮಾಡಬೇಕು. ಇನ್ನು ಈ ಸಭೆಯ ಅಧ್ಯಕ್ಷ ಸ್ಥಾನದ ಮಾನವನ್ನು ಯಾರಿಗೆ ಕೊಡಬೇಕೆಂಬದನ್ನು ಗೊತ್ತುಪಡಿಸುವದ. ವಿಷಯವಾಗಿ ಕೆಲವು ಎಲ್ಲ ತಾಲೂಕಾ ಕಾಂಗ್ರೆಸ ಕಮೀಟಿಯವರು ಮೊದಲು ಕೆಲವು ಹೆಸರುಗಳನ್ನು ಸೂಚಿಸಬೇಕು. ಆ ಸೂಚನೆಗಳೆಲ್ಲ ಬಂದ ಮೇಲೆ ಎಲ್ಲ ಹೆಸರುಗಳನ್ನು ಪ್ರತಿಯೊಂದು ತಾಲೂಕಾ ಕಮಿಟಿಗೆ ತಿಳಿಸುವದು ನಂತರ ಬಂದೇ ಹೆಸರನ್ನು ಬಹುಮತದಿಂದ ಆ ಮೇಲೆ ಸ್ವಾಗತಕಮೀಟಿಯವರು ಕಡೆಯ ನಿರ್ಣಯವನ್ನು ಮಾಡುವರು. ಆದ್ದರಿಂದ ಈಗಲೇ ಎಲ್ಲ ತಾಲೂಕಿನವರು ಕೆಲವು ಹೆಸರುಗಳನ್ನು ಸೂಚಿಸಬೇಕೆಂದು ಕೋರುತ್ತೇವೆ. ನಾವಂತು ಕೆಳಗಿನ ಸದ್ಗೃಹಸ್ಥರ ಹೆಸರುಗಳನ್ನು ಸೂಚಿಸುತ್ತೇವೆ

(೧) ದೇ. ಭ. ಗಂಗಾಧರರಾವ ದೇಶಪಾಂಡೆ.
(೨) " ವಿನಾಯಕರಾವ ಜೋಶಿ.
(೩) " ರಾಘವೇಂದ್ರರಾವ ಕಡವಾ.
(೪) " ಸದಾಶಿವರಾವ ಕರ್ನಾಡ.

* * * * * * * * * * *

### ಕರ್ನಾಟಕದಲ್ಲಿ ಕೀರ್ತನಾಲಯವು

ಕೀರ್ತನಕೇಸರಿ ಜಯರಾಮಾಚಾರ್ಯರು ಬಳ್ಳಾರಿಯಲ್ಲಿ ಒಂದು ಕೀರ್ತನಾಲಯವನ್ನು ಸ್ಥಾಪಿಸುವವರಿದ್ದಾರೆಂದು ಬೇರೆ ಕಡೆಗೆ ಪ್ರಸಿದ್ಧಿಸಿರುವೆವು. ಕರ್ನಾಟಕದಲ್ಲಿ ಧಾರ್ಮಿಕ ಹಾಗೂ ರಾಜಕೀಯ ಜ್ಞಾನ ಪ್ರಸಾರವನ್ನು ಮಾಡಬೇಕೆಂದೂ, ಸಾಮಾನ್ಯ ಬುದ್ಧಿಯುಳ್ಳ ಅಲ್ಪ ಸ್ವಲ್ಪ ವಿದ್ಯಾರ್ಥಿಗಳನ್ನು ಕೀರ್ತನೆಯಲ್ಲಿ ತಯಾರಮಾಡಬೇಕೆಂದೂ ಅವರ ಉದ್ದೇಶವಿದೆ. ಇದು ಸ್ತುತ್ಯವಾದದ್ದೆಂದು ನಾವು ಬೇರೆ ಹೇಳಬೇಕಾಗಿಲ್ಲ. ನಮ್ಮ ನಮ್ಮ ಪರಿಸ್ಥಿತಿಯು [illegible] ಇಲ್ಲ, ಅದನ್ನು ಸುಧಾರಿಸುವ ಬಗ್ಗೆ, ಯಾವ ಯಾವ ಪ್ರಕಾರದ ಮಾರ್ಗಗಳಿಂದ ಪ್ರಯತ್ನಮಾಡಿದರೂ ಅದು ಬೇಕೇ ಆಗಿದೆ. ನಮ್ಮ ಎಷ್ಟೋ ಧುರೀಣರು ಟೊಂಕ ಕಟ್ಟಿಕೊಂಡು ನಿಂತು, ರಾಜಕಾರಣದಲ್ಲಿ ಧುಮ್ಮಿಕ್ಕಿ, ಜಾಗ್ರತಿಯನ್ನುಂಟುಮಾಡುವ ಪ್ರಯಾಸದ ಕೆಲಸದನ್ನು ವಹಿಸಿರುತ್ತಾರೆ. ಆದರೆ ನಮ್ಮ ದೇಶದಲ್ಲಿಯ ಬಹುಜನ ಸಮಾಜವು ಬಹುಶಃ ಧಾರ್ಮಿಕವೃತ್ತಿಯವರಿದ್ದದರಿಂದ ಕೀರ್ತನದ ಸಹಾಯದಿಂದ ನಮ್ಮ ಪೌರಾಣಿಕ ಭೂತಿಗಳ ಚಿತ್ರವನ್ನು ಮುಂದಿಟ್ಟು ನಮ್ಮ ಏಳಿಗೆಯ ಮಾರ್ಗವನು ತೋರಿಸಿಕೊಟ್ಟರೆ ಅವರ ಮನಸ್ಸಿನ ಮೇಲೆ ಪರಿಣಾಮವಾಗುವಂತಿದೆ. ಲೋಕಮಾನ್ಯರವರೂ ಸಹ ನಮ್ಮಲ್ಲಿಯ ಕೀರ್ತನ ಪದ್ಧತಿಯನ್ನು ಕಿಂಚಿತ್ತಾದರೂ ಧಿಕ್ಕರಿಸದೆ ಅದರ ಯೋಗ್ಯಾಯೋಗ್ಯತೆಯನ್ನೂ ಮಹತ್ವವನ್ನು ಪೂರ್ಣವಾಗಿ ನಮ್ಮ ಮನಸ್ಸಿನ ಮೇಲೆ ಬಿಂಬಿಸುವ ಪ್ರಯತ್ನವನ್ನು ಮಾಡಿದರು. ಅದನ್ನರಿತು ಯಾವತ್ತು ಜನರು ಕೀರ್ತನದ ಬಗ್ಗೆ ಅಲ್ಪ ಸ್ವಲ್ಪ ಅಭಿರುಚಿಯುಳ್ಳವರು ಇದರ ಲಾಭವನ್ನು ಪೂರ್ಣವಾಗಿ ತಕ್ಕೊಳ್ಳುವರೆಂದು ನಾವು ನಂಬಿದ್ದೇವೆ.

### ಗ್ರಾಹಕರಲ್ಲಿ ವಿಜ್ಞಾಪನೆಗಳು.

ನಾವು ಮೊದಲಿಗೆ ತಿಳಿಸಿದಂತೆ ಈ ಸಾರೆಯ ನಮ್ಮ ಪತ್ರಿಕೆಯ ಪುಟಗಳನ್ನು ಹೆಚ್ಚಿಸಿದ್ದೇವೆ. ಪತ್ರಿಕೆಯನ್ನು ವೇಳೆಗೆ ಸರಿಯಾಗಿಯೇ ಹೊರಡಿಸಿದ್ದೇವೆ. ಆದರೆ ಅಂಚೆ ಟಿಕೀಟುಗಳು ದೊರೆಯದ್ದರಿಂದ ಪತ್ರವು ಒಂದು ದಿವಸ ತಡವಾಗಿ ತಮ್ಮ ಕೈ ಸೇರುವದು. ಆದ್ದರಿಂದ ಗ್ರಾಹಕರು ದಯವಿಟ್ಟು ಕ್ಷಮಿಸಬೇಕಾಗಿ ವಿನಂತಿ ಆದೆ.

ವ್ಯವಸ್ಥಾಪಕ.

# ಸಾಮ್ರಾಜ್ಯ ಮತ್ತು ಸಮತೆ.

ಯಂಗ ಇಂಡಿಯಾ

ನೇಶನ ಮರಾರ ರಾತ್ರಿಗಳವರು ಪರದೇಶಗಳಲ್ಲಿ ಆಡ್ಡಾ ...ಲ್ಲಿ ಮಜಲಿಗೆ ಯಾವ ಸಂದೇಶವನ್ನು ಕೊಡಹತ್ತಿರುವರು. ... ಅಲ್ಲಿ ಅವರು ತೋರಿಸಿದ ರಣಪರೇಖವು ಈಗ ಸ್ಪಷ್ಟವಾಗಿದೆ. ...ವರು ಅನ್ನುವದೇನಂದರೆ ಬ್ರಿಟಿಶ ಸಾಮ್ರಾಜ್ಯದೊಳಗಿನ ಕೆಂಪು ...ನಾಂಗದ ದೇಶಗಳಿಗೆ ನಮ್ಮ ಕೂಲೀಜನರು ಅಲ್ಲಿ ವಸಾಹಾತು ಮಾಡಲಿಕ್ಕೆ ಮುಂದೆ ಮಾಡಹತ್ತಿದ್ದರೆಂಬವನಾತು ಹಿಂದುಸ್ತಾನ... ಸಮ್ಮತವದೆ. ಮತ್ತು ಈಗಾಗಲೇ ಅಲ್ಲಿ ಹೋಗಿ ವಸತಿಯು... ಮಾಡಿದ ಹಿಂದೀಜನರಿಗೆ ಪೂರ್ಣನಾಗರಿಕತ್ವದ ಹಕ್ಕುಗಳನ್ನು ...ಮಾತ್ರ ಉಪಭೋಗಿಸಲಿಕ್ಕೆ ಕೊಟ್ಟರೆ ಹಿಂದುಸ್ತಾನವು ತುಷ್ಟವ... ಬ್ರಿಟಿಶ ವಸಾಹಾತುಗಳು ಪೂರ್ಣವಿಂದಾ ... ಯಿಂ...ಲೂ ಕೆಂಪು ಉಳಿಯುವವೇ ಲೇಸೆಂದು ಅವರ ಅಂಬೋಣವು. ...ದರೆ ಈಗ ಏನೋ ತಪ್ಪುಮಾಡಿ ಮುಂದಾಗಿಯೇ ಅಲ್ಲಿ ಹೋ... ಇದ್ದ ಜನರಿಗೆ ನ್ಯಾಯದಿಂದ ಮಾತ್ರ ನಡಿಸಿಕೊಳ್ಳಬೇಕೆಂದು ...ಡಿಕೊಳ್ಳುತ್ತಾರೆ ಇವಕ್ಕೆ ವಕೀಲಿಯನ್ನು ಬಹುದು. ಆದರೆ ಇ...ು ಖರೇ ಹಿಂದುಸ್ತಾನದ ಮತವಲ್ಲ.

ಶಾಸ್ತ್ರಿಗಳವರು ತಮ್ಮ ಸಂದೇಶದಲ್ಲಿ ಪರಾಕಾಷ್ಟೆಯ ... ...ನವನ್ನು ತೊರಿಸುತ್ತಿರುವರು. ಆದರೂ ಸ್ವಂತ ಹಿಂದುಸ್ತಾನ... ಲ್ಲಿಯೇ ಹಿಂದೀ ... ರಿಗೆ ಯಾತರ ಪೂರ್ಣ ಅಧಿಕಾರವಿಲ್ಲವೆಂಬ ...ಕ್ಕೆ ಅವರಿಗೆ ಉತ್ತರ ಕೊಡುವದಾಗಲಿಕ್ಕಿಲ್ಲ. ಯಾವ ಕಾಲಕ್ಕೆ ...ನ್ನ ಪ್ರಜೆಗಳ ಮತಾಧಿಕ್ಯದಿಂದ ರಾಜ್ಯದಾಡಳಿತವನ್ನು ನಡಿಸು...ದು ಹಿಂದುಸ್ತಾನ ಸರಕಾರಕ್ಕೆ ಸುರಕ್ಷಿತವೆನಿಸುವದಿಲ್ಲವೋ ಆ ಕಾಲಕ್ಕೆ ಕಾನಡಾ ಅಥವಾ ಆಸ್ಟ್ರೇಲಿಯಾ ಇವುಗಳ ಆಡಳಿತದಲ್ಲಿ ...ಮ್ಮ ಜನರಿಗೆ ಮತ ಇರಬೇಕೆಂದು ನಮ್ಮ ಸರಕಾರವು ಹೇಗೆ ...ಡೀತು?

ಈಗ ನಮ್ಮ ಸ್ವಂತ ಮನೆಯಲ್ಲಿಯೇ ವ್ಯವಸ್ಥೆಯಿಲ್ಲ; ಮೊ...ದಲು ಅದಾದನಂತರ ಸಮಾನ ಹಕ್ಕುಗಳ ಪ್ರಶ್ನೆ. ಎಲ್ಲಿಯವರೆ...ಗೆ ಹಿಂದುಸ್ತಾನಕ್ಕೆ ಸ್ವರಾಜ್ಯವಿಲ್ಲ ಅಲ್ಲಿಯವರೆಗೆ ಸಾಮ್ರಾಜ್ಯ ಮತ್ತು ಸಮತೆ ಈ ಎರಡು ಭಾವನೆಗಳು ಎಂದೂ ...ಕೂಡಿ ಕಾಣಿಸಲಾರವು. ಮತ್ತು ಎಲ್ಲಿಯ ತನಕ ಹಿಂದುಸ್ತಾನವು ತನ್ನ ಕಾಲ ಮೇಲೆ ನಿಂತಿಲ್ಲವೋ ಅಲ್ಲಿಯ ತನಕ ವಸಾಹತುಗಳಲ್ಲಿ ಹಿಂದೀ ಜನರ ಸಲುವಾಗಿ ಸ...ಮಾನ ಹಕ್ಕುಗಳನ್ನು ದೊರಕಿಸಿ ಕೊಳ್ಳುವ ವಿಷಯದಲ್ಲಿ ಸಾಮ್ರಾ...ಜ್ಯ ಸರಕಾರದ ಜೋರಿನ ಮೇಲೆ ಅವಲಂಬಿಸುವದೊಂದೇ ಮಾ...ರ್ಗವು. ಆದರೆ ವಸಾಹತುಗಳೆಲ್ಲವುಗಳು ಸಂಪೂರ್ಣ ಸ್ವಾತಂತ್ರ್ಯ...ವನ್ನು ಉಪಭೋಗಿಸುತ್ತಿದ್ದವರಿಂದಲೇ ಇಂಗ್ಲಂಡಕ್ಕೆ ಅವುಗಳ ಮೇ...ಲೆ ಯಾವಪ್ರಕಾರದಿಂದಲೂ ಜೋರು ಮಾಡುವಂತಿಲ್ಲ. ಶಾಸ್ತ್ರಿ...ಯವರ ಅಂತಿಮ ಕಾರ್ಯವು ಹಿಂದುಸ್ತಾನದಲ್ಲಿಯೇ ಇರುತ್ತದೆ. ಯಾಕಂದರೆ ಎಂದಿನ ತನಕ ಕೆಂಪು ಜನರು ತಾವು ಶ್ರೇಷ್ಠರೆಂ...ದು ಅಭಿಮಾನ... ತಾಳುವರೋ ಅಲ್ಲಿಯ ತನಕ ಸಾಮ್ರಾ...ಜ್ಯ ಮತ್ತು ಸಮತೆಗಳ ನಡುವಿನ ಬಡಿದಾಟವು ಇದ್ದದ್ದೇ; ಮ...ತ್ತು ಎಲ್ಲಿಯ ವರೆಗೆ ನಮ್ಮ ಸ್ವಂತ ದೇಶದಲ್ಲಿಯೇ ನಮ್ಮ ಜ...ನಾಂಗದ ಮಾನ ಮರ್ಯಾದೆಯನ್ನು ಕಾಯ್ದು ಕೊಳ್ಳುವದಿಲ್ಲ ಅಲ್ಲಿಯ ವರೆಗೆ ಬಿಳೇ ಜನಾಂಗದ ಶ್ರೇಷ್ಠತ್ವದ ಭ್ರಮೆಯನ್ನು ದೂರ ಮಾಡಲು ನಮಗೆ ಶಕ್ಯವಿಲ್ಲ.

ಸಿ. ರಾಜಗೋಪಾಲಾಚಾರ್ಯ.

# ಇಹವೃತ್ತ.

ಮುಳೆಯಲ್ಲಿ, ಮಾರಿಕಾದೇವಿಯು ತ್ರಸ್ತ ಪ್ರಭಾವವನ್ನು ಸ್ವಲ್ಪ ಕಳೆದುಕೊಂಡಿರುತ್ತಾಳೆ. ನೊಪ್ಪಿನ ಮಂಗಳವಾರದದಿವಸ ಊರಜನರ ಗ್ರಾಮದೇವತೆಗೆ ಉಡಿ ತುಂಬಿದರು.

# ಸುದ್ದಿಗಳು

ಕೀರ್ತನಕೇಸರಿ ರಾ. ರಾ. ...ರಾಮಾಚಾರ್ಯರು, ಬಳ್ಳಾರಿಯಲ್ಲಿ ಒಂದು ಕೀರ್ತನಾಲಯವನ್ನು ಸ್ಥಾಪಿಸುವವರಿದ್ದಾರೆ. ಅದಕ್ಕೆ ಪ್ರಸಿದ್ಧ ಕೀರ್ತನಕಾರರು, ಭಾಗವತರು, ಸಂಸ್ಕೃತ ಪಂಡಿತರು ಮುಂತಾದ ಎಲ್ಲ ವಿದ್ವಜ್ಜನರು ಸಹಾಯ ಮಾಡಲು ಒಪ್ಪಿದ್ದಾರೆ. ಅದರ ಉದ್ದೇಶವೇನಂದರೆ, ... ಕೀರ್ತನಶಾಸ್ತ್ರಗಳಲ್ಲಿ ಸಂಪೂರ್ಣ ಜ್ಞಾನವನ್ನು ಕೊಡತಕ್ಕಂಥ, ಧಾರ್ಮಿಕ ಹಾಗೂ ರಾಜಕೀಯ ... ಆಗಿರುತ್ತದೆ. ಹೆಚ್ಚಿನ ಮಾಹಿತಿಯ ಬಗ್ಗೆ. ಮ್ಯಾನೇಜರ ಕೀರ್ತನಾಲಯ ಬಳ್ಳಾರಿ, ಇವರ ಸಂಗಡ ಪತ್ರವ್ಯವಹಾರ ಮಾಡಬೇಕೆಂದು ಕೀರ್ತನಾಲಯದ ವ್ಯವಸ್ಥಾಪಕರ ವಿನಂತಿ ಅದೆ.

ಮಹಾತ್ಮರನ್ನು ಕಾಣುವದಕ್ಕಾಗಿ ಅವರ ಪತ್ನಿಯವರೂ, ಮಕ್ಕಳೂ ಜೇಲಿಗೆ ಹೋಗಿದ್ದರು. ಮಹಾತ್ಮರ ಪ್ರಕೃತಿಯು ಅಶಕ್ತವಾಗಿರದಿದ್ದರೂ ಛಲೋ ಸ್ಥಿತಿಯಲ್ಲಿರುವದಿಲ್ಲ. ಹಾಗೂ ಅವರನ್ನು ಸಾಮಾನ್ಯ ಕೈದಿಗಳಂತೆ ನಡಿಸಿಕೊಳ್ಳುತ್ತಿದ್ದಾರೂ. ತಿನ್ನುವದಕ್ಕೆ ಉತ್ತಮವಾದ ಆಹಾರವನ್ನು ... ಲೇಖನಸಾಮಗ್ರಿಯಾದರೂ ಅವರಿಗೆ ಕೊಡಲ್ಪಟ್ಟಿದೆ. ಅವರು ಒಂದು ಪುಸ್ತಕವನ್ನು ಬರೆದಿದ್ದಾರೆ. ಅದನ್ನು ... ಪ್ರಸಿದ್ಧಿಸಬೇಕೆಂದು ಅವರು ಬಯಸಿದರು. ... ಅದಕ್ಕೆ ಒಪ್ಪಲಿಲ್ಲ. ರಾತ್ರಿಯಲ್ಲಿ ಮಾತ್ರ ಮಹಾತ್ಮರಿಗೆ ದೀಪ ಕೊಡಲ್ಪಡುವದಿಲ್ಲ. ಅವರ ವಿಷಯವಾಗಿ ಎಲ್ಲ ನೋಡಿಕೊಳ್ಳುವದನ್ನು ಸ್ವತಃ ಗವ್ಹರ್ನರ ಸಾಹೇಬರೇ ಮಾಡುವರಂತೆ.

ವಿಜಯದ ಸಂಪಾದಕರಾದ ಶ್ರೀ. ...ಬಹಿರಂಗ ಸಭೆಗೆ, ಹಾಯಕೋರ್ಟಿನ ಅಪಮಾನವಾಡಿದರೆಂಬ ಬಗ್ಗೆ ... ಶಿಕ್ಷೆ ಅಥವಾ ೩೦೦ ರೂಪಾಯಿ ದಂಡವಾಗಿರುತ್ತದೆ. ... ವರು, ದಂಡಕೊಡಲು ಒಪ್ಪದೆ ... ಅಂಗೀಕರಿಸಿದರು. ಅದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ.

ದಿಲ್ಲಿಯಲ್ಲಿ ಕಾಂಗ್ರೆಸ ಎಂಬ ವರ್ತಮಾನಪತ್ರದ ಸಂಪಾದಕರನ್ನು ೧೨೪ ಅ ಕಲಮಿನಪ್ರಕಾರ ಹಿಡಿದಿರು... ಅಂತೂ ವೃತ್ತಪತ್ರಕಾರರ ಮೇಲೆ ಸರಕಾರದ ವಕ್ರದೃಷ್ಟಿಯಿದ್ದಂತೆ ತೋರುತ್ತದೆ.

ಬ್ಯಾರಿಸ್ಟರ ಜಯಾಕರರವರು ಪುನಃ ತಮ್ಮ ವಕೀಲಿಯ ವ್ಯವಸಾಯವನ್ನು ಪ್ರಾರಂಭಮಾಡಿರುತ್ತಾರೆ. ಮೊದಲಿನಿಂದಲೂ ಅಸಹಕಾರಿತೆಯ ಕೆಲವು ಭಾಗಗಳು ನನಗೆ ಮಾನ್ಯವಿಲ್ಲ ಎಂದು ಹೇಳುತ್ತ ಬಂದಿರುವರು. ಅವರು, ತಾವು ವಕೀಲಿಯನ್ನು ನಡೆಸುತ್ತಿದ್ದರೂ ರಾಷ್ಟ್ರೀಯಸಭೆಯನ್ನು ಬಿಟ್ಟಿರುವದಿಲ್ಲ ಹಾಗೂ ನನಗೆ ಸಮ್ಮತವಾದ ಎಲ್ಲ ಕಾರ್ಯಕ್ರಮವನ್ನು ನೆರವೇರಿಸಲು ಸಿದ್ಧನಿದ್ದೇನೆ ಎಂದು ಹೇಳಿರುತ್ತಾರೆ. ಇವರು ವಕೀಲಿಯನ್ನು ಪ್ರಾರಂಭಿಸಿದ್ದಕ್ಕಾಗಿ ಮಹಾರಾಷ್ಟ್ರದಲ್ಲಿ ಪುನಃ ಗದ್ದಲವೆದ್ದಿದೆ.

ಈಚಿಗೆ ... ಕಾನಡಾ ವೃತ್ತಪತ್ರಿಕೆಯ ಮೇಲೆ ಆಡಿನೆಯ ಅಧಿಕಾರಿಗಳ ಮೇಲೆ ಲೇಖ ಬರೆದದ್ದಕ್ಕೆ ಮ್ಯಾಜಿಸ್ಟ್ರೇಟರು ೧೫೦ ರೂಪಾಯಿ ದಂಡವನ್ನು ಹಾಗೂ ಒಂದು ದಿವಸ ಸಾದಾ ಶಿಕ್ಷೆಯನ್ನು ವಿಧಿಸಿದ್ದರು. ಆದರೆ ಜಜ್ಜ ಸಾಹೇಬರು ಅಧಿಕಾರಿಗಳ ಅಪಮಾನವಾಗುವದಿಲ್ಲೆಂದು ಹೇಳಿ ಶಿಕ್ಷೆಯನ್ನು ರದ್ದುಪಡಿಸಿದರು.

# ವಿಜಾಪೂರ ಜಿಲ್ಲೆಯ ೧ನೇ ಪರಿಷತ್ತು

**ವಿಜಾಪೂರ ಜಿಲ್ಲೆಯ ಕಾಂಗ್ರೆಸ ಕಮಿಟಿಯ ಕಾರೀ ಮಂಡಲವು**

(ನಮ್ಮ ಸ್ವಂತ ಪ್ರತಿನಿಧಿಯಿಂದ)

ಸೋಮವಾರ ತಾರೀಖ ೧೦-೭-೨೨ನೇ ದಿವಸ ಸಾಯಂಕಾಲ ೫ ಘಂಟೆಗೆ ದೇ. ಭ, ಕೌಜಲಗಿಯವರ ಅಧ್ಯಕ್ಷತೆಯ ಕೆಳಗೆ ವಿಜಾಪೂರ ಜಿಲ್ಹಾ ಕಾಂಗ್ರೇಸ ಕಮಿಟಿ ಕಾರ್ಯಕಾರಿ ಮಂಡಲವು ನೆರೆದಿತ್ತು. ಆ ಸಭೆಯಲ್ಲಿ ಕೆಳಗೆ ಬರೆದ ಮಹತ್ವದ ಠರಾವಗಳು ಪಾಸಾದವು. ಮೊದಲು ದೇ. ಭ. ಜಯರಾಯರ ನಿಧನದ ಬಗ್ಗೆ ದುಃಖದರ್ಶಕ ಠರಾವು ಪಾಸಾಯಿತು. ಆಮೇಲೆ ವಿಜಾಪೂರ ಜಿಲ್ಹೆಯ ಪರಿಷತ್ತು ನೆರೆಯದೆ ಇದ್ದದ್ದು ಜಿಲ್ಹಾ ನಿವಾಸಿಗಳಿಗೆ ತೀರ ಲಾಂಛನಾಸ್ಪದವಾಗಿದ್ದರಿಂದ ಆ ಕೊರತೆಯನ್ನು ದೂರಮಾಡುವದು ಅತ್ಯವಶ್ಯವಿದ್ದು, ಅದರ ಬಗ್ಗೆ ಈಗಾದರೂ ವಿಚಾರವು ಹೊರಟಿದ್ದು ಸಂತೋಷದ ಮಾತೇ ಸರಿ. ಆ ಪರಿಷತ್ತನ್ನು ವಿಜಾಪೂರದಲ್ಲಿಯೇ ಆಕ್ಟೋಬರ ತಿಂಗಳ ಕಡೆಯ ವಾರದಲ್ಲಿ ನೆರೆಯಿಸುವದು ಗೊತ್ತಾಯಿತು. ಅದರ ಸಲುವಾಗಿ ಸ್ವಾಗತ ಮಂಡಳವನ್ನು ಏರ್ಪಾಡು ಮಾಡುವ ಕುರಿತು ವಿಜಾಪೂರದಲ್ಲಿ ಅಗಸ್ಟ ತಿಂಗಳ ಮೊದಲನೇ ವಾರದಲ್ಲಿ ಜಿಲ್ಹಾ ಕಾಂಗ್ರೆಸ ಕಮಿಟಿಯನ್ನ ಕರೆಯುವದು ಗೊತ್ತಾಯಿತು. ಆಮೇಲೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯಕಾರೀ ಮಂಡಲವು ಇದೇ ತಿಂಗಳ ೨೧ನೇ ತಾರೀಖಿನ ದಿವಸ ಇಲ್ಲಿ ಕೂಡುತ್ತಿದ್ದು ಆಗ ದೇ ಭ ಗಂಗಾಧರರಾವ ದೇಶಪಾಂಡೆಯವರು ಇಲ್ಲಿಗೆ ಬರುವವರಿದ್ದದರಿಂದ ಅವರಿಗೆ ಮಾನಪತ್ರ ಕೊಡಬೇಕೆಂಬದಾಗಿ ಠರಾವನ್ನು ಇಲ್ಲಿಯ ಸುಪ್ರಸಿದ್ಧ ವ್ಯಾಪಾರಸ್ಥರಾದ ಶ್ರೀ. ಚನಮಲ್ಲಪ್ಪ ಕುಲ್ಲೊಳಿಯವರು ಮುಂದೆ ತಂದರು. ಅದು ಸರ್ವಾನುಮತದಿಂದ ಪಾಸಾಯಿತು. ಇಲ್ಲಿಗೆ ಇದೇ ತಿಂಗಳ ೨೩ನೇ ತಾರೀಖಿನ ದಿವಸ ಕಾಂಗ್ರೆಸ ಮತ್ತು ಖಿಲಾಫತ ಕಮಿಟಿಗಳ ಕಾಯದೆಭಂಗ ವಿಚಾರಣಾ ಸಂಘದವರು ಬರುವವರಿದ್ದು ಅವರಿಗೆ ಯೋಗ್ಯವಾದ ಆದರಸತ್ಕಾರವನ್ನು ಮಾಡಬೇಕೆಂಬ ನಿರ್ಣಯವು ಸಹ ಸರ್ವಾನುಮತದಿಂದ ಪಾಸಾಯಿತು. ವಿಜಾಪೂರ ಜಿಲ್ಹಾ ಕಾಂಗ್ರೆಸ ಕಮಿಟಿಯು ಹೋದ ವರ್ಷದ ಜಮಾಖರ್ಚಿನ ಪತ್ರಿಕೆಯನ್ನು ಮುಂಬಯಿ ಕಡೆಗೆ ಮನಮುಟ್ಟಿಗೆ ಕಳಿಸಬೇಕೆಂದು ಗೊತ್ತಾಯಿತು. ಅಗಸ್ಟ ತಿಂಗಳ ಮೊದಲನೇ ವಾರದಲ್ಲಿ ನೆರೆಯುವ ಜಿಲ್ಹಾ ಕಾಂಗ್ರೆಸ ಕಮಿಟಿಯಲ್ಲಿ ಹೋದ ವರ್ಷದ ಲೆಕ್ಕವನ್ನು ಇಡುವದೂ ಈ ಸಾರಿಯ ಹೊಸ ಕಾರ್ಯಕಾರೀ ಮಂಡಲವನ್ನು ಆರಿಸುವದೂ, ಈ ಸಾಲಿಯ ಅಂದಾಜ ಪತ್ರಿಕೆಯನ್ನು ತಯಾರಿಸುವದೂ, ಮುಂತಾದ ಎಲ್ಲ ವಿಷಯಗಳನ್ನು ಚರ್ಚಿಸಬೇಕೆಂದು ಗೊತ್ತಾಯಿತು.

---

**ರಾಜಾ ಮಹೇಂದ್ರಪ್ರತಾಪರವರ ಸಂದೇಶವು.**

ನವಜೀವನ.

ರಾಜರೆ, ಮಹಾರಾಜರೇ, ನವಾಬರೇ, ಜಮೀನದಾರರೇ ಹಾಗೂ ವ್ಯಾಪಾರಸ್ಥರೆ,

ನಾನು ಮನುಷ್ಯತ್ವದ ಹಿತದ ದೃಷ್ಟಿಯಿಂದ, ಸಂಭಾಷಣವನ್ನು ಮಾಡುತ್ತೇನೆ. ನಿಮ್ಮ ಉನ್ನತಿಯ ಸಲುವಾಗಿಯೇ ನಾನು ಮಾತಾಡುತ್ತೇನೆ. ಇದರಲ್ಲಿ ಏನೂ ಸಂದೇಹವಿಲ್ಲ. ನಾನೂ ಜಮೀನದಾರರ ವಂಶದವನೇ. ನೂರು ವರ್ಷಗಳ ಹಿಂದೆ ನಮ್ಮ ಪೂರ್ವಜರು ರಾಜ್ಯವನ್ನಾಳುತ್ತಿದ್ದರು. ನಿಮ್ಮ ಹಿತದ ಸಲುವಾಗಿಯೇ ಹೇ... ಕಾದರೆ, ನೀವು ಬಹಳ ಕಷ್ಟದೆಶೆಯಲ್ಲಿರುತ್ತೀರಿ. ಸಧ್ಯ... ಯ ಮಹತ್ವವಾದರೂ ನನಗೆ ತಿಳಿದದೆ ನಾನು ಅಖಿಲ ಜ... ಲ್ಲಿ ಸಂಚಾರವಮಾಡಿರುವೆನು; ಹಾಗೂ ಅಫಗಾಣಿಸ್ತಾನ ... ರಶಿಯಾಗಳಿಗೆ ಹಲವು ಸಾರೆ ಹೋಗಿರುವೆನು. ಎಲ್ಲಕ್ಕಿಂತಲೂ ... ಜಪಾನ ಸ್ವೇಚ್ಛಾಚಾರ ರಾಜ್ಯಪದ್ಧತಿಯ ಹಾಗೂ ಕ್ರಿಸ್ತ... ಮಾಜಿಕ ಪ್ರಜಾತಂತ್ರ ಪದ್ಧತಿಯ ಅಭ್ಯಾಸವನ್ನು ನಾನು ... ಡಿರುವೆನು.

ನೀವು ನಿಮ್ಮ ಉದಾಸೀನತೆ, ಶೂನ್ಯತೆ ಅಥವಾ ಮೋ... ದಲೇ ಜಗತ್ತಿನಲ್ಲಿ ಬಾಳಿರುವಿರೆಂದು, ಓರ್ವ ಮಿತ್ರನ ಸಹಾ... ದ ನನಗೆ ತಿಳಿದು ಬಂದಿದೆ. ನಿಮ್ಮ ದೇಶಬಂಧುಗಳು ಮು... ಯುವರು. ಪೃಥ್ವಿಯು ಪರಿವರ್ತನವಾಗಿರುವದು. ನೀವು ... ಅಥವಾ ನಿಮ್ಮ ವಿದೇಶಿ ಸರಕಾರ ಜರ್ಮನೀ ಅಥವಾ ಆಸ್ಟ್ರಿ... ದ ಕೈಸರ ಅಥವಾ ರಶಿಯಾದ ಸಾಮ್ರಾಜ್ಯ ಸರಕಾರಕ್ಕಿಂ... ಹೆಚ್ಚಿಗ ಬಲವಂತರಿಲ್ಲ. ಕೈಸರನು ಸಂಸಾರ ಬಿಟ್ಟುಹೋ... ನು. ಝಾರನ ಮರಣದಿಂದ ರಶಿಯಾದಲ್ಲಿ ವ್ಯಾಪಾರಿಗಳ ... ಸ್ವವು ನಷ್ಟವಾಗಿದೆ. ಒಂದು ವೇಳೆ ನಿಮ್ಮ ಬಂಧುಗಳ ... ಡ ಸಹಕಾರವನ್ನು ಮಾಡದಿದ್ದರೆ ಅಥವಾ ಜಗತ್ತಿನ ರಾ... ಯನ್ನು ಅನುಕರಿಸದಿದ್ದರೆ ಇದೇ ತರದ ಅವಸ್ಥೆಯು ನಿ... ಗುವದೆಂದು ಹೇಳಲಿಕ್ಕೆ ನನಗೆ ದುಃಖವೆನಿಸುತ್ತದೆ. ಮ... ಗಾಂಧಿ, ಹಜರತ ಅಲ್ಲಿ ಮತ್ತು ಮಾಲವೀಯರ ಆಜ್ಞೆ... ಪಾಲಿಸಿರೆಂದು ನಾನು ನಿಮಗೆ ಕೈಜೋಡಿಸಿ ಬೇಡಿಕೊಳ್... ನಿಮ್ಮ ಲೋಕಸೇವೆಯಿಂದಲೇ ನಿಮ್ಮ ಭವಿಷ್ಯವು ನಿಶ್ಚಿ... ವದು. ನಾವು ಬೇರೆ ಕಡೆಗೆ ಉವರೆ, ಸತ್ಯದಿ... ಗು ಸುಖದಿಂದ ಉಳಿಯಬಹುದೆಂದು ತಿಳಿಯಬೇಡಿರಿ. ನಿ... ಮನುಷ್ಯಜಾತಿಯಲ್ಲಿಯೇ ಹುಟ್ಟಿರುವಿರಿ.

ಪರಲೋಕದ ಸಲುವಾಗಿ, ದೇಶ ಸೇವೆಯ ಬಗ್ಗೆ ಹಾಗೂ ಕುಟುಂಬ ಸಂರಕ್ಷಣೆಯ ಸಲುವಾಗಿಯಾದರೂ ನೀವು ಜಾ... ರಿರಿ ಮತ್ತು ಕರ್ತವ್ಯ ಮಾಡಹತ್ತಿರಿ. ನೀವು ಬುದ್ಧಿಶೂ... ವರಿಲ್ಲ. ಇಂಗ್ಲಂಡದ ಬುದ್ಧಿವಂತ ಸರದಾರರಿಗಿಂತ ... ಶ್ರೇಷ್ಠರಿರುವಿರಿ. ಆದರೆ ನೀವು ನಿಮ್ಮ ಬುದ್ಧಿಯ ಉ... ವನ್ನು ಮಾಡಿಕೊಳ್ಳುವದಿಲ್ಲ. ನೀವು ಮುಸ್ಸಂಜೆಗಳಂತೆ ... ನ ಘೋರಣವನ್ನು ಕಂಡು ಹಿಡಿಯುವದಿಲ್ಲ. ಹಿಂದು... ಶೀಘ್ರವೇ ಸ್ವತಂತ್ರವಾಗುವದೆಂದು ನನಗೆ ಆಶೆಯುಂಟು... ನಮ್ಮ ಕರ್ತವ್ಯವು ಇಲ್ಲಿಗೆ ಮುಗಿಯಲಿಲ್ಲ. ಹಿಂದು... ಅಂತಿಮ ಧ್ಯೇಯವನ್ನು ನಮಗೆ ಪೂರ್ಣಮಾಡ... ಪೂರ್ವಕಾಲೀನ ಆಚಾರದಿಂದ ಹೊಸದಾಗಿ ಸುಧಾರಿಸಿ... ಗಳಿಗೆ ಬುದ್ಧಿಗಲಿ ಬೇಕಾಗಿದೆ ಮನುಷ್ಯ ಜಾತಿಗೆ ... ಪ್ರೇಮ ಮತ್ತು ಸುಖದ ಪಾಠವನ್ನು ಕಲಿಸಬೇಕಾಗಿದೆ ... ಸಲುವಾಗಿ ಒಕ್ಕಟ್ಟಾಗಿರಿ. ನಾನು ಬರೆದ ಪ್ರೇಮ ಧ... ಗೂ ಸುಖ ಸಂಚಾರಕ ಎಂಬ ಪುಸ್ತಕಗಳನ್ನಾದರೂ ... ರೆಂದು ನನಗೆ ಆಶೆಯುಂಟು.

(ರಾಜಾ) ಮಹೇಂ...

# ಲಾಹೋರದಲ್ಲಿ ಪಂ. ನೆಹರು ಹಾಗೂ ಹಕೀಮಜಿಯವರ ಭಾಷಣವು.

## ಹಕೀಮಜೀಯವರ ಭಾಷಣವು.

ರಾಷ್ಟ್ರೀಯ ಸಭೆಯು, ಲೋಕಸ್ಥಿತಿಯನ್ನು ತಿಳಕೊಂಡು, ಕಾಯಿದೇಭಂಗದ ಸಲುವಾಗಿ ಜನತೆಯು ತಯಾರಿಯು ಎಷ್ಟು ಇರುವದೆಂಬುದನ್ನು ವಿಚಾರಿಸಲು ಕಮಿಟಿಯನ್ನು ನೇಮಿಸಿದೆ. ಕಾಯಿದೇಭಂಗದ ಸಲುವಾಗಿ ಜನರು ತಯಾರಿ ಇದ್ದರೆ (ಒಂದುವೇಳೆ ವಸ್ತುಸ್ಥಿತಿಯು ವಿಪರೀತವಿದ್ದರೆ) ಎಂದು ಧ್ವನಿಮಾಡಲಿಕ್ಕೆ ಉಪಯೋಗವಿಲ್ಲ. ಕಾಯಿದೇಭಂಗ ಕಮಿಟಿಯ ಕರ್ತವ್ಯವು ಎಲ್ಲ ಪ್ರಾಂತಗಳಲ್ಲಿ ಹೋಗಿ ದೊಡ್ಡ ದೊಡ್ಡ ಮುಖಂಡರ ಸಂಗಡ ಚರ್ಚೆಮಾಡಿ ಮೇಲೆ ತನ್ನ ಅಭಿಪ್ರಾಯವನ್ನು ಕೊಡುವದೇ ಆಗಿರುತ್ತದೆ

ಲಾಹೋರಕ್ಕೆ ಬಂದಮೇಲೆ ಇಲ್ಲಿ ಹಿಂದು ಮುಸಲ್ಮಾನರಲ್ಲಿ ಬಡಿದಾಟವಾಗಿದೆಯೆಂದು ನಮಗೆ ತಿಳಿಯಬಂದಿತು. ಕಾಯಿದೇಭಂಗಕಮೀಟಿಯವರಿಗೆ, ಹಿಂದು ಮುಸಲ್ಮಾನರ ಐಕ್ಯಭಂಗದ ವಾರ್ತೆಯನ್ನು ಕೇಳಿ ಏನು ಅನಿಸಿರಬಹುದು. ಎಂಬುವದರ ವಿಚಾರವನ್ನು ನೀವೇ ಮಾಡಿರಿ. ಉಳಿದ ಎಲ್ಲ ವಿಷಯಗಳಲ್ಲಿ ಅತ್ಯಂತ ಮುಂದೆ ಇದ್ದಂಥ ಪಂಜಾಬದಲ್ಲಿ ಹಿಂದುಮುಸಲ್ಮಾನರ ಸಂಪೂರ್ಣ ಐಕ್ಯವು ಪ್ರಸ್ಥಾಪಿತವಾಗಬಾರದೆಂಬದು ದುಃಖದ ಸಂಗತಿಯು. ಹಿಂದುಮುಸಲ್ಮಾನರ ಐಕ್ಯದಮೇಲೆಯೇ ಸ್ವರಾಜ್ಯವು ಅವಲಂಬಿಸಿರುದೆಂಬ ಮಾತನ್ನು ಮರೆಯಕೂಡದು.

ಬಾರಡೋಲಿ ಹಾಗೂ ದಿಲ್ಲಿಯ ಠರಾವುಗಳ ಬಗ್ಗೆ ಜನರಲ್ಲಿ ಉತ್ಸಾಹಶೂನ್ಯತೆಯು ಕಂಡು ಬರಹತ್ತಿದೆ. ದೊಡ್ಡ ಚಳವಳಿಯಲ್ಲಿ; ಈ ಪ್ರಕಾರವಾಗಿ ಔದಾಸೀನ್ಯ ಬಾಧೆಯು ತಗಲತಕ್ಕದ್ದೇ. ಸ್ವರಾಜಸಂಪಾದನೆಯ ಹೊರತು ತರಣೋಪಾಯವಿಲ್ಲ ಎಂಬುವದನ್ನು ಮರೆಯಕೂಡದು. ಅದಕ್ಕೆ ಒಂದು ವರ್ಷ ಬೇಕಾಗಲಿ ೨ ವರ್ಷ ಬೇಕಾಗಲಿ ಅಥವಾ ೧೦ ವರ್ಷಗಳು ಹಿಡಿಯಲಿ ನಮ್ಮ ನಿಶ್ಚಯವನ್ನು ಬಿಡತಕ್ಕವರಲ್ಲ. ನಮ್ಮೆಲ್ಲರ ನಿಶ್ಚಯವು ಢಳಮಳಿಸದಿದ್ದರೆ, ೩೦ ಕೋಟಿ ಜನರ ಪ್ರಯತ್ನದಿಂದ ಸ್ವರಾಜ್ಯ ಸಿಗಲಿಕ್ಕೆ ಬಹಳ ದಿವಸಗಳು ಬೇಕಾಗಲಾರವು.

ಭಾಷಣ ಮುಗಿಸುವ ಕಾಲಕ್ಕೆ ಹಕೀಮಜೀಯವರು ರಾಷ್ಟ್ರೀಯ ಸಭೆಯಲ್ಲಿ ಶ್ರದ್ಧೆಯನ್ನಿಡುವದಕ್ಕೆ ಕಳಕಳಿಯಿಂದ ಉಪದೇಶಿಸಿದರು.

## ಪಂಡಿತಜೀಯವರ ಭಾಷಣವು.

ಹಕೀಮಜೀಯವರು ತಮಗೆ ಹೇಳಿದ್ದನ್ನೇ ನನಗೆ ಪುನಃ ಹೇಳಬೇಕಾಗುತ್ತದೆ. ಆದರೆ ವಿಚಾರವನ್ನು ವ್ಯಕ್ತಮಾಡುವವರಲ್ಲಿ ಮಾತ್ರ ಸ್ವಲ್ಪ ಹೆಚ್ಚುಕಡಿಮೆ ಆಗಬಹುದು. ನನ್ನ ಅಂತಃಕರಣದಲ್ಲಿ ಈಗ ಉದಯಿಸಿದ ವಿಚಾರಗಳನ್ನು ನನಗೆ ಪೂರ್ಣವಾಗಿ ವ್ಯಕ್ತಮಾಡಲಿಕ್ಕೆ ಅಶಕ್ಯವಾಗಿರುವದು. ಹಿಂದಕ್ಕೆ ೧೯೧೯ ರಲ್ಲಿ ನಾನು ತಮಗೆ ಭೆಟ್ಟಿಯನ್ನು ಕೊಟ್ಟಿದ್ದೆನು. ಆಗ ಪಂಜಾಬದ ಅತ್ಯಾಚಾರವು ಸಂಭವಿಸಿ ಬಹಳ ದಿವಸಗಳಾಗಿರಲಿಲ್ಲ. ಮ. ಗಾಂಧಿ ಪಂಡಿತ ಮಾಲವೀಯ ಹಾಗು ನಾನು ಕೂಡ, ಪಂಜಾಬೀಯರಲ್ಲಿ ಅತ್ಯಾಚಾರದ ಹೃದಯದ್ರಾವಕವಾದ ಸ್ಥಿತಿಯು ಎಷ್ಟು ದಿವಸಗಳವರೆಗೆ ಹೊಸದಾಗಿ ಉಳಿಯುವದೆಂಬದು ವಿಚಾರಿಸಲು ಕೂಡಿದ್ದೆವು. ಮತ್ತೆ ಮೂರು ವರ್ಷಗಳ ನಂತರ ಬಂದು ನೋಡಲಾಗಿ ಪಂಜಾಬದ ಅತ್ಯಾಚಾರವನ್ನು ಜನರು ಮರೆತಿಲ್ಲ ಇಷ್ಟೇ ಅಲ್ಲ; ಆದರೆ ಅದು ಹೆಚ್ಚಿಗೆ ಬೆಳೆಯುವ ಸಂಭವನೀಯದೂ ಅದೆ. ಪಂಜಾಬದ ಅತ್ಯಾಚಾರದ ನಿವಾರಣೆಯನ್ನು ಮಾಡಿ, ಇಂಥ ಅತ್ಯಾಚಾರಗಳು ಪುನಃ ಆಗದಂತೆ ವ್ಯವಸ್ಥೆಯನ್ನು ಮಾಡುವದರ ಬದಲು ಸರಕಾರವು ದಬ್ಬಾಳಿಕೆಯ ಸತ್ರವನ್ನು ಭರದಿಂದ ಸಾಗಿಸಿದೆ. ಬ್ರಿಟಿಶ ನ್ಯಾಯದೇವತೆಯಲ್ಲಿ ನನ್ನ ವಿಶ್ವಾಸವು ಅತ್ಯಂತವಾಗಿತ್ತು. ಪಂಜಾಬದ ಅತ್ಯಾಚಾರದ ಸುದ್ದಿಯು ಪಾರ್ಲಿಮೆಂಟಿನವರೆಗೆ ಮುಟ್ಟಿ ಅಲ್ಲಿಯಾದರೂ ಬ್ರಿಟಿಶನ್ಯಾಯದೇವತೆಯು ಯೋಗ್ಯವಾದ ನಿರ್ಣಯವನ್ನು ಕೊಡುವದೆಂದು ' ಮಹಾತ್ಮರಂತೆ ನನಗಾದರೂ ಆಶೆಯಿತ್ತು. ಆದರೆ ನನ ಎಲ್ಲ ಆಶೆಯು ಬಯಲಾಯಿತು- ಪಂಜಾಬದ ಜನರಿಗೆ ಅನುಭವಿಸಬೇಕಾದ ದುಃಖಗಳ ನಿವಾರಣೆಯನ್ನು ಮಾಡಲಿಲ್ಲ ಇಷ್ಟೇ ಅಲ್ಲ, ಆದರೆ ಬ್ರಿಟಿಶಮಂತ್ರಿ ಮಂಡಳಿಯು ಅಮಾನುಷ ಕೃತ್ಯವನ್ನು ಮಾಡಿದ ಡಾಯರನಿಗೆ ಶಾಬಾಸಕಿಯನ್ನು ಕೊಡಲಿಕ್ಕೆ ಸಹ ಹಿಂದೆಮುಂದೆ ನೋಡಲಿಲ್ಲ ಡಾಯರನ ತಪ್ಪು ಪಾರ್ಲಮೆಂಟಿನದೃಷ್ಟಿಯಿಂದ ( **an error of judgment** ) ಎಂದು ನಿರ್ಣಯಿಸಲ್ಪಟ್ಟಿತು.

ಇಂಥಪರಿಸ್ಥಿತಿಯಲ್ಲಿ ಮಹಾತ್ಮರು ಅಸಹಕಾರಿತೆಯನ್ನು ಪುಕಾರಿಸಿದರು. ಅಸಹಯೋಗ ಚಳವಳಿಯು ಒಂದೊಂದು ಮೆಟ್ಟಿಲುಗಳನ್ನು ದಾಟಿ ಈಗಿನಪರಿಸ್ಥಿತಿಗೆ ಬಂದದ್ದು ಎಲ್ಲರಿಗೂ ಗೊತ್ತೇ ಇದೆ ಚಳವಳಿಯು ಸಾಧ್ಯಮಾಡಿಕೊಳ್ಳತಕ್ಕ ಧ್ಯೇಯವು ಇನ್ನೂ ದೂರ ಇರುತ್ತದೆ.

ಅಸಹಯೋಗದಿಂದಲೇ ದೇಶದಎಲ್ಲಭಾಗಗಳಲ್ಲಿಯೂ ಜಾಗ್ರತೆಯು ಉತ್ಪನ್ನವಾಗಿರುವದೆಂದು, ಮವಾಳರು ಒಪ್ಪಿ ಕೊಳ್ಳುವರಲ್ಲದೇ ಖುದ್ದ ಲಾರ್ಡರೀಡಿಂಗರಾದರು ಸಮ್ಮತಿಸಿರುವರೆಂಬದನ್ನು ಮರೆಯ ಕೂಡದು.

ಮಹಾತ್ಮರ ಜಯಜಯಕಾರದ ಗರ್ಜನೆಯನ್ನು ನಾನು ದಿನಾಲೂ ಕೇಳುತ್ತೇನೆ ನಮ್ಮಮುಂದ ಕೊಟ್ಟಪುರಾವೆಗಳಮೇಲಿಂದ, ಮಹಾತ್ಮರಮೇಲೆ ಜನತೆಯಪೂರ್ಣ ವಿಶ್ವಾಸವಿದ್ದು, ಅಸಹಕಾರಿತೆಯ ಕಾರ್ಯಕ್ಷಮತೆಯ ಬಗ್ಗೆ ಅವರಖಾತ್ರಿಯಾಗಿರುವದೆಂದು ನಮಗೆ ಅನಿಸಿತು. ಆದರೆ ಅದರಸಂಗಡಲೆ, ನನಗೆ ಮತ್ತೊಂದು ಮಾತು ಹೇಳಬೇಕಾಗಿದೆ ಅನುಯಾಯಿಗಳು ಕೇವಲ ಗಾಂಧಿಯ ಹೆಸರಿನಿಂದ ಜಯಘೋಷ ಮಾಡಿದರೆ ಕೆಲಸವಾಗಲಾರದು ನಮ್ಮ ಇಷ್ಟಸಿದ್ಧಿಯಾಗಬೇಕಾದರೆ, ಗಾಂಧಿಯವರ ಉಪದೇಶದಂತೆ ನಮ್ಮ ಆಚಾರ ವಿಚಾರಗಳನ್ನು ಇಡಬೇಕು.

ಅಸಹಕಾರಿತೆಯು ಕೇವಲ ಪಂಜಾಬದವರ ಸಲುವಾಗಿಯೇ ಇಟ್ಟಿರುವದೆಂಬದನ್ನು ನೀವು ಮರೆಯತಕ್ಕದ್ದಲ್ಲ. ಈ ಚಳವಳಿಯಿಂದ ಅನುಭವಿಸಬೇಕಾದ ದುಃಖಗಳನ್ನು ಇತರ ಪ್ರಾಂತದವರು ಶಾಂತರೀತಿಯಿಂದ ಸಹನ ಮಾಡಹತ್ತಿರುವರು. ಸಂಯುಕ್ತಪ್ರಾಂತ ಮಹಾರಾಷ್ಟ್ರ ಬಂಗಾಲ ಮದ್ರಾಸ ಮತ್ತು ಉಳಿದ ಎಲ್ಲ ಪ್ರಾಂತಗಳು ' ಮೊದಲು ಪಂಜಾಬದ ಪ್ರಶ್ನೆಯನ್ನು ಬಿಡಿಸುವಾ; ಆಮೇಲೆ ಸ್ವರಾಜ್ಯದ ಪ್ರಶ್ನೆಯನ್ನು ಬಿಡಿಸೋಣ," ಎಂದು ಒಂದೇ ಸ್ವರದಿಂದ ಅನ್ನಹತ್ತಿದ. ದೂರದಲ್ಲಿರುವಂಥ ಆಸಾಮ ಪ್ರಾಂತವದರೂ ಪಂಜಾಬದ ವಿಷಯವಾಗಿ ಹಳಹಳಿಸುತ್ತದೆ. ದೇಶದಲ್ಲಿಯ ೩೫೦೦೦ ವೀರರು ಪಂಜಾಬದ ಸಲುವಾಗಿಯೇ ತುರಂಗದಲ್ಲಿ ವಾಸಮಾಡಹತ್ತಿದ್ದಾರೆ. ಅಸಹಯೋಗ ವೃಕ್ಷವು ಜೋರಿನಿಂದ ಬೆಳೆದಿರುವದಲ್ಲದೆ ಅದರಟೊಂಗೆಗಳು ಎಲ್ಲ ಪ್ರಾಂತಗಳಲ್ಲಿಯೂ ಪಸರಿಸಹತ್ತಿವೆ. ಶರೀರ ಕಷ್ಟಗಳನ್ನು ಸಹಿಸಿ, ಈ ವೃಕ್ಷದ ಬೆಳವಣಿಗೆಗೆ ನಾವು ಸಹಾಯಕರಾಗಬೇಕು.

ನಾವು ಈಗ ಲೋಕಸ್ಥಿತಿಯ ನಿರೀಕ್ಷಣ ಮಾಡುತ್ತ ಹೊರಟ್ಟಿದ್ದೇವೆ. ಜನರಲ್ಲಿ ಕಾಯಿದೇಭಂಗವನ್ನು ಮಾಡುವ ತಯಾರಿಯು ಕಂಡು ಬಂದರೇನೇ ಅದರಂತೆ ರಾಷ್ಟ್ರೀಯ ಸಭೆಗೆ ತಿಳಿಸುತ್ತೇವೆ ಹಿಂದು ಮುಸಲ್ಮಾನರಲ್ಲಿ ಬಡಿದಾಟ ಹುಟ್ಟಿರುತ್ತದೆಂದು ನಮ್ಮ ತಿಳಿವಿಗೆ ಬಂದದೆ. ಮುಸಲ್ಮಾನರಿಗೆ ಹಿಂದುಗಳ ಸಹಾಯದ ಹೊರತು ಸಾಗಲಾರದು- ಅದರಂತೆಯೇ ಹಿಂದುಗಳ ಸಂಗಡ ಸ್ನೇಹಭಾವದಿಂದ ನಡಕೊಳ್ಳ ಹೊರತು ಅವರ ಕಾರ್ಯವು ಕೈಗೂಡಲಾರದು.

ಆಮೇಲೆ ಖಾದಿಯ ಪ್ರಸಾರದ ಬಗ್ಗೆ ಹಾಗೂ ರಾಷ್ಟ್ರೀಯ ಸಭೆಯ ಸಭಾಸದರಾಗುವವರ ಬಗ್ಗೆ ಉಪದೇಶಿಸಿದರು.

ಕಾಯದೇ ಭಂಗ ಕಮಿಟಿಯವರು ಇದೇ ೨೨ನೇ ತಾರೀಖಿನ ದಿವಸ ಮಧ್ಯಾನ್ಹ ಗಾಡಿಯಿಂದ ವಿಜಾಪುರಕ್ಕೆ ದಯಮಾಡಿಸುವರು. ಮರು ದಿವಸ ಅಂದರೆ ೨೩ನೇ ತಾ॥ ರಾತ್ರಿ ಗಾಡಿಯಿಂದ ಹುಬ್ಬಳ್ಳಿ ಮಾರ್ಗವಾಗಿ ಮದ್ರಾಸಕ್ಕೆ ಹೋಗುವರು. ಇವರು ಕರ್ನಾಟಕದಲ್ಲಿ ಮತ್ತಾವ ಸ್ಥಳಕ್ಕೂ ಹೋಗುವದಿಲ್ಲ. ಈ ಕಮಿಟಿಯಲ್ಲಿ ಪ್ರಸಿದ್ಧ ಸುಧಾರಕರಾದ **ಪಂಡಿತ ಮೋತೀಲಾಲ ನೆಹರು, ಹಕೀಮ ಅಜಮಲಖಾನ ಡಾ॥ ಅನಸಾರಿ, ಸಿ. ರಾಜಗೋಪಾಲಾಚಾರ್ಯ, ವಿಠ್ಠಲಭಾಯಿ ಪಟೇಲ, ಕಸ್ತೂರಿರಂಗ ಅಯ್ಯಂಗಾರ, ಮತ್ತು ಶೇರವಾನಿ** ಮುಂತಾದವರು ಇರುತ್ತಾರೆ. ಅದ್ದರಿಂದ ಎಲ್ಲ ಕರ್ನಾಟಕಸ್ಥರು ಈ ಮಹಾ ಪರ್ವಣಿಯನ್ನು ವ್ಯರ್ಥವಾಗಿ ಕಳೆಯದೆ ವಿಜಾಪುರದವರೆಗೆ ಹೋಗಿ ಅವರ ದರ್ಶನಲಾಭವನ್ನು ಪಡೆಯಬೇಕೆಂದು ಕೋರುತ್ತೇವೆ.


ಎಜಂಟರು ಬೇಕು! ಏಜಂಟರು ಬೇಕು!!

ನಂಬರ ೧ ನೇ ನಿರ್ಮಲವಾದ

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾದ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳೇ ಸೋಯಿದರದಲ್ಲಿ ತೈಲವು ಸಿಗುವದು. ನಿಕ್ಕಿ ೨೪ ಔಂಸ ತೈಲದಬಾಟ್ಲಿ ಅಥವಾ ಸಬ್ಬಿ ೧ ಕ್ಕೆ ರೂಪಾಯಿ ೩—ಡಜನ್‌ಕೆ ರು ೩೨ ವಿಶೇಷ ಮಾಹಿತಿ ಪತ್ರದ್ವಾರಾ.

ಬಿ. ಎ. ಪೈ ಕಂಪನಿ.

ಪೋಸ್ಟ ಹೊನ್ನಾವರ.
ಜಿಲ್ಲಾ ಉತ್ತರಕಾನಡಾ


## ಸರಸ್ವತೀ ವಾಚನಾಲಯ.

ಡಾ. ರವೀಂದ್ರನಾಥ ಟಾಗೋರ ಇವರ (Waterfall.) ವಾಟರಫಾಲ್ ದ ಕನ್ನಡ ಭಾಷಾಂತರವು.

## ಮುಕ್ತಧಾರಾ.

**ಭಾಷಾಂತರಕಾರ (ನಾಟಕ.) ಜಿ. ಆರ್. ಕುಲಕರ್ಣಿ**

**ಮುದ್ರಣವಾಗುತ್ತಲಿದೆ.** { **ಬೆಲೆ ೧ ರೂ. ಪೋಸ್ಟೇಜ ಬೇರೆ.**

ವಿಳಾಸಃ— **S. N. Hosmani.**
**ಎಸ್. ಎನ್. ಹೊಸಮನಿ.**
**ಗುಳೇದಗುಡ್ಡ.**

ಇಲ್ಲವೆ, **ವಿದ್ಯಾರಣ್ಯ ಮುದ್ರಾಮಂದಿರ,**
**ಬಾಗಲಕೋಟೆ.**

## ಇಂಡಿಯಾ ಪ್ರಾವ್ಹಿಡೆಂಟ ಕಂ. ಲಿ. ಕಲಕತ್ತಾ.

ಮಧ್ಯಮ ಸ್ಥಿತಿಯ ಕುಟುಂಬದಾರರಿಗೆ ಈ ಕಠಿಣ ಕಾಲದಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಬಿಗಿಯಾಗಿರುವದು ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರೆಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ.

V. J. PARVATIKER.
General Agent, BAGALKOT,

## ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರದ್ವಾರದಿಂದ, ಉತ್ತಮವಾದ ಸ್ವದೇಶೀ ಸಾಬೂನವನ್ನು ಮಾಡುವದಕ್ಕೆ ಕಲಿಸುವೆವು.

ಫೀ. ರೂ. ೫. ಉದ್ಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು.

**ಕಲಾಭುವನ—ರಾಷ್ಟ್ರೀಯ ಶಾಲಾ**
**ಧಾರವಾಡ.**

## ವಿದ್ಯಾರಣ್ಯ ಮುದ್ರಾಮಂದಿರ
## ಬಾಗಲಕೋಟೆ

ನಮ್ಮಲ್ಲಿ ಎಲ್ಲ ತರದ ಮುದ್ರಣವು ಬಹಳ ಅಂದವಾಗಿಯು ಸ್ವಸ್ತ ದರದಿಂದಲೂ ಮಾಡಲ್ಪಡುವದು. ಒಮ್ಮೆ ಅನುಭವ ತೆಗೆದು ಕೊಂಡರೆ ತಮಗೇ ಖಾತ್ರಿಯಾಗುವದು. ಇದಲ್ಲದೆ ನಮ್ಮ ಕಡೆಗೆ ವಕೀಲಿ ಪತ್ರ ದರಖಾಸ್ತ ಮುಂತಾದ ನಮೂನೆಗಳೂ, ಬೋಲ ನಾಕೇದ ಪಾವತಿ ಪುಸ್ತಕಗಳೂ ಉಳಿದ ನಮೂನೆಗಳೂ ಮಾರಲಿಕ್ಕೆ ಸಿಗುತ್ತಿದ್ದು ಬೇಕಾದವರು ತರಿಸಿಕೊಳ್ಳಬಹುದು. ವ್ಹಿ. ಪಿ. ತರಿಸಿಕೊಳ್ಳ ಬೇಕಾದಲ್ಲಿ ಕೆಲವು ಹಣ ಮುಂಗಡ ಕಳಿಸತಕ್ಕದ್ದು.

**ವ್ಯವಸ್ಥಾಪಕ**

## ಜಾಹಿರಾತಿನ ದರ.

ಕನ್ನಡ 'ನವಜೀವನ' ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂ. ಕಾಯಂ ಜಾಹಿರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

**ಚಂದಾ ನಿರ್ಣಯ.**

| | |
|---|---|
| ವಾರ್ಷಿಕ ವರ್ಗಣಿ ರೂ. | ೪-೦-೦ |
| ಆರು ತಿಂಗಳಿಗೆ ,, | ೨-೦-೦ |
| ಬಿಡಿಸಂಚಿಕೆ | ೦-೧-೪ |
| ಮಾದರಿ ಸಂಚಿಕೆ ಬೇಕಾದವರು | ೦-೧-೬ |

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಎಜಂಟರು) **ಅತ್ಯುತ್ತಮ** (ಬೇಕು

ಮಸಿ ಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೪—೦ | ಟ. ಖ. ಬೇರೆ. |
| ೧೦೦ ಚೀಟಿಗಳಿಗೆ | ೦—೧೪—೦ | |
| ೪೦ ಔಂಸ ಮಸಿ ಪುಡಿಗೆ | ೦—೬—೦ | |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸಃ— **ಕರ್ನಾಟಕ ಇಂಕ ಕಂಪನಿ,**
**ಬಾಗಲಕೋಟೆ.**

☞ ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಶ್ರೀನಿವಾಸ ರಾಘವೇಂದ್ರ ಮಂಗಳವೇಢೆ ಇವರು ಮುದ್ರಿಸಿದರು ಮತ್ತು ಅಲ್ಲಿಯೇ ಶಮಾಚಾರ್ಯ ಬಿಂದೂರಾಯರು ಪುರೋಹಿತ ಇವರು ಪ್ರಸಿದ್ಧಿಸಿದರು.

ವೀರಧರ್ಮ.

R. No B. 1589

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟ ಆಷಾಢ ವದ್ಯ ೧೧ ಶಕೆ ೧೮೫೨ ಗುರುವಾರ ತಾ. ೧೦ ಜುಲೈ ೧೯೩೦. | ಸಂಚಿಕೆ ೩೨

## ಮಹಾತ್ಮರ ನುಡಿಯು

### ಪ್ರವೀಣರು ಬೇಕು.

(ಯಂಗ ಇಂಡಿಯಾ ೨೨-೫-೩೦)

ಹಿಂದುಸ್ತಾನದ ಎಲ್ಲ ಭಾಗಗಳಲ್ಲಿಯೂ ಕೈನೂಲಿನ ಪ್ರಸಾರವಾಗದ ಹೊರತು ಸ್ವರಾಜ್ಯವು ದೊರೆಯಲಾರದು ಎಂದು ನನ್ನ ದೃಢವಾದ ವಿಶ್ವಾಸವಿದೆ. ಇದಕ್ಕೆ ಎಷ್ಟೋ ಜನರ ಭಿನ್ನಾಭಿಪ್ರಾಯಗಳುಂಟು. ನನ್ನ ಈ ವಿಶ್ವಾಸವನ್ನು ಪುಷ್ಟೀಕರಿಸಲಿಕ್ಕೆ ಅವಶ್ಯವಾದ ಕಾರಣಗಳಾದರೂ ಬಹಳ ಸರಳವಾಗಿವೆ. ಹಿಂದುಸ್ಥಾನದಲ್ಲಿಯ ಎಲ್ಲ ಕುಟುಂಬಗಳು ಸ್ವಾವಲಂಬಿಗಳಾಗದ ಹೊರತು ಹಿಂದುಸ್ಥಾನಕ್ಕೆ ಅನ್ಯಜೀವನವೇ ಇರುವದಿಲ್ಲ. ಆದರೆ ಆ ಕುಟುಂಬಗಳು ಸ್ವಾವಲಂಬಿಗಳಾಗಬೇಕಾದರೆ ಅವು ನಿತ್ಯದಲ್ಲಿ ಮಾಡುವಂಥ ಕಾರ್ಯವನ್ನು ಎರಡನೇರೀತಿಯಿಂದ ದ್ವಿಗುಣಿತ ಮಾಡುವದು ಅವಶ್ಯವಾದದ್ದು. ಆದ್ದರಿಂದಲೇ ಎಲ್ಲ ನಮ್ಮ ಉಡುಪುಗಳು ಗಿರಣಿಯಲ್ಲಿಯೇ ತಯಾರ ಆದರೆ, ಸಾಗುವಂತಿಲ್ಲ. ಕೈಯಿಂದ ನೂಲುವದು ಎಲ್ಲ ಕುಟುಂಬಗಳಲ್ಲಿಯೂ ನಡೆದರೆ, ಎರಡನೇ ಯಾವ ಯಂತ್ರಗಳ ಸಹಾಯ ವಿಲ್ಲದೆ ಅವುಗಳಿಗೆ ಈಗ ಪರದೇಶಕ್ಕೆ ಹೋಗುವ ಕೋಟ್ಯಾವಧಿ ರೂಪಾಯಿಗಳಲ್ಲಿ ಸ್ವಲ್ಪ ಭಾಗವಾದರೂ ದೊರೆಯುವದು. ಮತ್ತು ಹಿಂದುಸ್ಥಾನವು ತನಗೆ ಹತ್ತುವಷ್ಟು ಅರಿವೆಯನ್ನು ತಯಾರಿಸಬಲ್ಲದು. ನೂಲುವ ಪ್ರಸಾರವು ಚನ್ನಾಗಿ ಆದರೆ ಲಕ್ಷಾವಧಿ ನೇಕಾರರೂ, ಸಾವಿರಗಟ್ಟಲೆ ಪಿಂಜಾರರೂ ತಿರುಗಿ ತಮ್ಮ ಕೆಲಸವನ್ನು ಮಾಡಲು ಪ್ರಾರಂಭಿಸುವರೆಂಬದಾದರೂ ಸಿದ್ಧವಾಗಿದೆ. ಇದು ಆರ್ಥಿಕ ದೃಷ್ಟಿಯಿಂದ ವಿಚಾರಮಾಡಿದ ಹಾಗೆ ಆಯಿತು.

ಇನ್ನು ನೈತಿಕ ದೃಷ್ಟಿಯಿಂದ ವಿಚಾರಮಾಡಬೇಕಾದರೆ, ಇದರಿಂದ ಹಿಂದುಸ್ತಾನದಲ್ಲಿ ಎಷ್ಟೋ ಸ್ತ್ರೀಯರಿಗೆ ತಮ್ಮ ಪಾತಿವ್ರತ್ಯವನ್ನು ರಕ್ಷಿಸುವದಕ್ಕೆ ಸಹಾಯವಾಗುವದು. ಹಾಗೂ ಭಿಕ್ಷುಕ ವರ್ಗವಾದರೂ ಇದರಿಂದ ಬಹಳೇ ಕಡಿಮೆ ಆಗುವದು. ನಮ್ಮ ಆಲಸ್ಯವನ್ನಾದರೂ ಹೋಗಲಾಡಿಸಲಿಕ್ಕೆ ಇದರಿಂದ ಬಹಳ ಸಹಾಯವಾಗುವದು. ನಮ್ಮ ಮನೋನಿಗ್ರಹವನ್ನಾದರೂ ಮಾಡಲು ಇದರಿಂದ ಶಕ್ಯವಿದೆ. ಮತ್ತು ಲಕ್ಷಾವಧಿ ಜನರು ತಮ್ಮ ಕರ್ತವ್ಯವೆಂಬ ಭಾವನೆಯಿಂದ ನೂಲುವದನ್ನು ಕೈಕೊಂಡರೆ, ದೇವರವಿಷಯವಾಗಿ ಭಕ್ತಿಯಾದರೂ ಅವರಲ್ಲಿ ವಿಶೇಷವಾಗಿ ಬೆಳೆಯುತ್ತದೆ.

ನೂಲುವದು ಎಲ್ಲ ಪ್ರಾಂತಗಳಲ್ಲಿಯೂ ನಡದು, ಪರದೇಶೀ ಬಟ್ಟೆಗಳ ವ್ಯಾಪಾರವು ಪೂರ್ಣರೀತಿಯಿಂದ ಬಂದಾದರೆ, ಹಿಂದುಸ್ಥಾನವು ಜಾಗೃತವಾಗಿದ್ದು, ಶಾಂತಿಮಯ ಹಾಗೂ ಧಾರ್ಮಿಕ ಯುದ್ಧದಲ್ಲಿ ಅದರ ವಿಶ್ವಾಸವು ಪೂರ್ಣವಾಗುತ್ತದೆಂಬ ಮಾತು ಅತ್ಯಂತ ಸ್ಪಷ್ಟವಾದದ್ದು.

ನಮ್ಮ ಕಡೆಯಿಂದ ಪರದೇಶೀ ಅರಿವೆಗಳನ್ನು ಬಹಿಷ್ಕರಿಸುವದು ಹಾಗೂ ನಮಗೆ ಹತ್ತುವಷ್ಟು ಅರಿವೆಗಳನ್ನು ಕೈನೂಲಿನಿಂದ ಹಾಗೂ ಕೈಮಗ್ಗಗಳಿಂದ ತಯಾರಿಸುವದು ಆಗಲಾರದೆಂದು, ಸದ್ಯಃಸ್ಥಿತಿಯನ್ನು ನೋಡುವಂಥ ಅನ್ಯದೇಶೀಯರಿಗೆ ಗೊತ್ತಾಗಬಹುದು. ಆದರೆ ಹಿಂದುಸ್ಥಾನವು ಪೂರ್ಣರೀತಿಯಿಂದ ಪರದೇಶೀ ಅರಿವೆಗಳನ್ನು ಬಹಿಷ್ಕರಿಸಿ, ಕೈನೂಲು ಹಾಗೂ ಕೈಮಗ್ಗಗಳಿಂದ ತಯಾರಿಸಿದ ಅರಿವೆಗಳಿಂದ ಉಪಜೀವಿಸಬಲ್ಲದು ಎಂಬುವದು ಸಿದ್ಧವಾದಮೇಲೆ ಹಿಂದುಸ್ಥಾನದ ಶಕ್ತಿಯಾದರೂ ಎರಡನೇದವರಿಗೆ ಹಣಿಯದಂಥದ್ದಾಗುತ್ತದೆ; ಹಾಗೂ ಆ ಮೇಲೆಯೇ ಅದು ಈ ಅನಿರ್ಬಂಧಿತವಾದ ಸರಕಾರವನ್ನು ತನ್ನ ಮನಸ್ಸಿಗೆ ಬಂದಂತೆ ಮಣಿಸಲು ಕಾಯದೇಭಂಗವನ್ನು ಪ್ರಾರಂಭಮಾಡಬಲ್ಲದು. ಇದೇ ರಾಜಕೀಯ ವಿವೇಚನೆಯು.

ಆದ್ದರಿಂದಲೇ, ನೂಲುವದರಲ್ಲಿ ನಿಷ್ಣಾತನಾಗಿ, ತನ್ನ ಎಲ್ಲ ವೇಳೆಯನ್ನು ಕೈಯಿಂದ ನೂಲುವ ಉಪದೇಶ ಮಾಡುವದರಲ್ಲಿಯೂ ಕಲಿಸುವದರಲ್ಲಿಯೂ ಸುವ್ಯವಸ್ಥಿತಿಯಿಂದ ಅದನ್ನು ಪ್ರಸಾರಗೊಳಿಸುವದರಲ್ಲಿಯೂ ಉಪಯೋಗಿಸುವಂಥವನು ಇಡೀ ಬಂಗಾಲದಲ್ಲಿ, ಇಲ್ಲವೆನ್ನು ನೋಡಿ ನನಗೆ ಬಹಳ ಖೇದವಾಗುತ್ತದೆ. ಸಾಮಾನ್ಯ ಜನಸಮೂಹವು ಅದನ್ನು ಕೈಕೊಳ್ಳಲು ಸಿದ್ಧವಿರುತ್ತದೆ. ಆದರೆ ಅದನ್ನು ಯಾವ ರೀತಿಯಿಂದ ಪ್ರಾರಂಭ ಮಾಡಬೇಕೆಂದು ಅದಕ್ಕೆ ಗೊತ್ತು ಇಲ್ಲ. ಬಂಗಾಲದಂತೆಯೇ ಉಳಿದ ಪ್ರಾಂತಗಳ ಸ್ಥಿತಿಯಾದರೂ ಇರಬಹುದು. ಪ್ರತಿಯೊಂದು ಪ್ರಾಂತದಲ್ಲಿ, ಒಂದೊಂದು ಮಾದರಿಯ ಚರಕವು ಹಾಗೂ ನೂಲುವದನ್ನು ಸಂಪೂರ್ಣರೀತಿಯಿಂದ ಬಲ್ಲಂಥ ಜನರ ಒಂದು ಸಂಘವು ಇರುವದು ಅವಶ್ಯವು. ಇವರ ಸಹಾಯವು ಸಾಮಾನ್ಯಜನರಿಗೆ ಆಗಬೇಕು. ಇಂಥ ಕೆಲವು ಜನರು ದೊರೆತರೆ, ಅವರಿಂದ ಎಷ್ಟೋ ಕುಶಲ ಜನರನ್ನು ತಯಾರಿಸಬಹುದು. ಕಲಕತ್ತಾ ರಾಷ್ಟ್ರೀಯ ಕಾಲೇಜಮಂದಿರದಲ್ಲಿ ಪ್ರದರ್ಶನಕ್ಕೆ ತರಲ್ಪಟ್ಟಂಥ ೧೫ ತರದ ಶೋಧಗಳ ಉಪಯೋಗತೆಯನ್ನು ಯಾರು ಕಂಡು ಹಿಡಿಯಬೇಕು? ಎಲ್ಲ ಕಡೆಯಲ್ಲಿಯೂ ಭಿನ್ನ ಭಿನ್ನವಾದ ರಹಟಿಗಳು ಇರುತ್ತವೆ. ಆದರೆ ಇವೆಲ್ಲವುಗಳ ಪರೀಕ್ಷೆಯನ್ನು ಯಾರೂ ಮಾಡಿರುವದಿಲ್ಲ. ಬಂಗಾಲದಲ್ಲಿ ಸಾವಿರಾರು ಜನರು ನೂಲುವರು; ಆದರೆ ತಾವು ನೂಲುವದನ್ನು ಯಾರೂ ತೂಕಮಾಡಿ ನೋಡಿರುವದಿಲ್ಲ. ಆದ್ದರಿಂದ ಎಲ್ಲ ಕಾಂಗ್ರೇಸ ಕಮಿಟಿಗಳು ಈ ಕಾರ್ಯವನ್ನು ಸಾಗಿಸಲಿಕ್ಕೆ ತಯಾರ ಇದ್ದ ವಿದ್ವಾನರ

ಪುರುಷರನ್ನೂ ಓ ಸ್ತ್ರೀಯರನ್ನೂ ನೇಮಿಸಬೇಕೆಂದು ಅವುಗಳಿಗೆ ನನ್ನ ನಮ್ರವಾದ ಸೂಚನೆಯುಂಟು. ಸತ್ಯಾಗ್ರಹಾಶ್ರಮದ ಸಹಾಯವನ್ನಾದರೂ ಅವರು ಅಪೇಕ್ಷಿಸಬಾರದು. ಈ ಪತ್ರಿಕೆಯ ವಿಶಿಷ್ಟ ಲೇಖಗಳಲ್ಲಿ ಅತ್ಯಂತ ಆವಶ್ಯವಿದ್ದ ಸಂಗತಿಯನ್ನು ಮೇಲಿಂದ ಮೇಲೆ ಮುದ್ರಿಸುವೆವು ಯಾರಿಗೆ ನೂಲುವದರಲ್ಲಿ ಹಾಗೂ ನೇಯುವದರಲ್ಲಿ ಸಂಪೂರ್ಣ ಜ್ಞಾನವನ್ನು ಗಳಿಸುವ ಇಚ್ಛೆಯು ಇರುವದೋ ಅಂಥವರೆಲ್ಲರು ಈ ಲೇಖಗಳನ್ನು ಚನ್ನಾಗಿ ಮನನ ಮಾಡಬೇಕು. ಆದರೆ ಈ ಲೇಖಗಳಿಂದಲೇ ಸಂಪೂರ್ಣ ಜ್ಞಾನವನ್ನು ದೊರಕಿಸಬೇಕೆಂದು ಯಾರೂ ಇಚ್ಛಿಸಬಾರದು. ಕೈಯಿಂದ ಕೆಲಸಮಾಡುವದರಿಂದಲೇ ಸಂಪೂರ್ಣ ಜ್ಞಾನವು ಸಿಗಬಹುದು. ಲಕ್ಷಾವಧಿ ಜನರು ಕೇವಲ ದ್ರವ್ಯದ ಸಲುವಾಗಿ ನೂಲುವರು. ಕೆಲರು ತಮ್ಮ ಕರ್ತವ್ಯವೆಂದು ನೂಲುವರು ಮತ್ತು ಹಲವರು ಅದರ ಜ್ಞಾನವನ್ನು ಸಂಪಾದಿಸುವದರ ಸಲುವಾಗಿ ನೂಲುವರು. ಈ ಜನರು ಪ್ರಾರಂಭದಲ್ಲಿ ದಿನಾಲು ೮ ತಾಸಿನಂತೆ ನೂಲಬೇಕು. ಮತ್ತು ನೂಲುತ್ತ ಹೋದಹಾಗೆ ಸೀಳಿನ ನಂಬರವನ್ನಾದರೂ ಪರೀಕ್ಷಿಸಬೇಕು. ದಿನಾಲು ಕೆಲಸ ಮಾಡಿದ ವೇಳೆಯನ್ನು ಹಾಗೂ ತಯಾರಾದ ನೂಲನ್ನು ಅವರು ತೂಗಲಿಕ್ಕೆ ಬೇಕು ಅವರು ಹಿಂಜುವದನ್ನು ಹಾಗೂ ನೇಯುವದನ್ನಾದರೂ ಕಲಿಯಲಿಕ್ಕೆಬೇಕು ಅರಳೆಯಲ್ಲಿಯ ಭೇದಗಳಾದರೂ ಅವರಿಗೆ ಗೊತ್ತಾಗಬೇಕು ಬೇರೆಬೇರೆ ತರಹದ ರಾಟಿಗಳಾದರೂ ಅವರಿಗೆ ಗೊತ್ತಿರಬೇಕು. ಹಾಗೂ ಅವುಗಳಲ್ಲಿ ಏನಾದರೂ ಕೆಟ್ಟರೆ ಸರಿಮಾಡಲಿಕ್ಕೆ ಬರಬೇಕು.

ನಾವು ಸಂಘಗಳನ್ನು ನಿರ್ಮಾಣಮಾಡಿ ಪದ್ಧತಶೀರರೀತಿಯಿಂದ ಇತರ ವ್ಯವಸ್ಥೆಯನ್ನು ಮಾಡದ ಹೊರತು ಸ್ವರಾಜ್ಯವು ನಮಗೆ ದೊರೆಯಲಾರದು. ರಾಷ್ಟ್ರೀಯ ಜೀವನದ ಎರಡನೇ ಮಹತ್ವವಾದ ಸಂಸ್ಥೆಯೇ ಸ್ವದೇಶೀಯಾಗಿರುವದು

ನಾವು ಕೈಯಿಂದ ನೂತು ನೇಯುವದರಲ್ಲಿ ತಯಾರಾಗಿರುವ ಕಾರಣ ವಿದೇಶೀ ವಸ್ತ್ರಗಳನ್ನು ಬಹಿಷ್ಕರಿಸುತ್ತೇವೆ. ಪ್ರತಿಯೊಬ್ಬ ಮನುಷ್ಯನು ತನಗೆ ದೊರೆತ ವೇಳೆಯಲ್ಲಿ ನೂಲುವ ಹೊರತು ಹಾಗೂ ಪ್ರತಿಯೊಂದು ಪ್ರಾಂತವು ತನಗೆ ಹತ್ತುವಷ್ಟು ಖಾದಿಯನ್ನು ತಾನೇ ತಯಾರ ಮಾಡದ ಹೊರತು ನಮಗೆ ವಿದೇಶೀವಸ್ತ್ರಗಳನು ಬಹಿಷ್ಕರಿಸುವದು ಶಕ್ಯವಾಗಲಾರದು; ಮತ್ತು ಪ್ರತಿಯೊಂದು ಪ್ರಾಂತದಲ್ಲಿ ಇದರಲ್ಲಿ ಸಂಪೂರ್ಣ ಜ್ಞಾನವನ್ನು ಸಂಪಾದಿಸಿದಂಥ ಜನರು ಇಲ್ಲದ ಹೊರತು ಇದು ಸಾಧ್ಯವಾಗಲಾರದು.

---

## ವ್ಯಾಪಾರಸ್ಥರ ತೊಂದರೆಗಳು.

(ಹೋದ ಅಂಕಿನ ೨೪೯ನೇ ಪುಟದಿಂದ ಮುಂದೆ ಸಾಗಿದ್ದು.)

ನರಕಕ್ಕೆ ಹೋಗಲಿಕ್ಕೆ ಬೇಕಾಗುವ ಎಲ್ಲ ಸಾಮಗ್ರಿಗಳನ್ನು ಒಂದೇ ಸ್ಥಳದಲ್ಲಿ ನೋಡಬೇಕಾಗಿದ್ದರೆ ಜಗತ್ತಿನಲ್ಲಿಯ ಯಾವದಾದರೊಂದು ದೊಡ್ಡ ಪಟ್ಟಣಕ್ಕೆ ಹೋಗಿ ನೋಡಿರಿ! ಭರತಖಂಡವು ಒಕ್ಕಲತನದ ದೇಶವು ವ್ಯಾಪಾರ ಉದ್ಯೋಗಗಳು ಆದಕ್ಕೆ ಸಹಾಯಕವಾದ ವ್ಯವಸಾಯಗಳು. ಒಕ್ಕಲತನದ ಮೇಲೆ ಧರ್ಮದಿಂದ ಉಪಜೀವಿಸುವವರಿಗೆ ಹಳ್ಳಿಗಳೇ ಉಪಯೋಗವಾಗುವವು. ಭರತ ಭೂಮಿಯ ಶೋಭೆಯು ಅದರ ಪಟ್ಟಣಗಳಲ್ಲಿಲ್ಲ. ಭರತಖಂಡಕ್ಕೆ ಜೀವಾಧಾರವು ಅದರ ಏಳೂವರೆ ಲಕ್ಷ ಹಳ್ಳಿಗಳಲ್ಲಿಯೆ ಉಂಟು ಏಳೂವರೆ ನೂರು ಪಟ್ಟಗಳಾದರೋ ಅದರ ರಕ್ತವನ್ನು ಜಗ್ಗುವ ನಳಗಳಾಗಿರುವವು.

ಹಳ್ಳಿಗಳಲ್ಲಿ ಹೋಗಿ ಖಾದಿಯನ್ನು ಹ ಟ್ಟಿಸುವದನ್ನೂ ಅದರ ವ್ಯಾಪಾರಮಾಡುವವನ್ನೂ ವ್ಯಾಪಾರಸ್ಥರು ಮಾಡಿದರೆ ಅವರು ದೇಶ ಮತ್ತು ಧರ್ಮಗಳ ಸೇವೆಯನ್ನು ಮಾಡಿದಂತಾಗುವದು ಅವರ ಹೃದಯದಲ್ಲಿ ದೇಶ ಮತ್ತು ಧರ್ಮಗಳ ಪ್ರೇಮವು ಜೀವಂತ ಮ[illegible] ಜಾಗೃತವಾಗಿದ್ದರೆ-ಮತ್ತು ಹಾಗಿರುವದೆಂದು ನಮ್ಮ ತಿಳುವಳಿಕೆ [illegible]ದೆ --ಅವರು ನನ್ನ ನಮ್ರ ಸೂಚನೆಯನ್ನು ಅವಶ್ಯವಾಗಿ ಪಾ[illegible] ಮಾಡಬೇಕು ನಮಗೂ ಈ ವ್ಯಾಪಾರಸ್ಥರಿಗೂ ಪ್ರೇಮಸಂಬ[illegible] ವಿರುವದು. ಅವರ ತೊಂದರೆಗಳು ನಮಗೆ ಪೂರ್ಣ ಗೊತ್ತಾಗು[illegible]ವು. ಮತ್ತು ಅದ್ದರಿಂದಲೇ ಅವರ ದುರವಸ್ಥೆಯ ಮೂಲಕಾರಣ[illegible]ನ್ನು ಶೋಧಿಸಿ ಆದಕ್ಕೆ ರಾಮಬಾಣ ಉಪಾಯವನ್ನು ಶೋಧಿಸಿ[illegible]ವು ಅವರು ನಿಶ್ಚಯದಿಂದಲೂ ಧೈರ್ಯದಿಂದಲೂ ಇದರ [illegible]ಯೋಗವನ್ನು ಮಾಡಿಕೊಂಡರೆ ಅವರಿಗೆ ಅವಶ್ಯವಾಗಿ ಲಾಭವಾಗು[illegible]ದಲ್ಲದೆ ಇಡೀ ವ್ಯಾಪಾರೀ ವರ್ಗಕ್ಕೆ ಆದರ್ಶಭೂತರಾಗುವರು.

---

## ನಾಚಿಕೆಗೇಡಿತನವು.

ಯಂಗ ಇಂಡಿಯಾ

ತಲೆಯಿಂದ ಅಂಗಾಲಿನ ವರೆಗೆ ಪರದೇಶೀ ವಸ್ತ್ರಗಳನ್ನು ಧ[illegible]ದ ತನ್ನ ಮಿತ್ರನ ಪರಿಚಯ ಮಾಡಿಕೊಡುವಾಗ ಶ್ರೀ--- ಅ[illegible]ದ್ದೇನೆಂದರೆ-- ಮನೆಯಲ್ಲಿ ಹೇರಳವಾಗಿ ಖಾದಿಯನ್ನು ಇಟ್ಟಿರುವ[illegible] ಅವನಿಗೆ ಖಾದಿಯ ಮೇಲೆ ಸಂಪೂರ್ಣ ವಿಶ್ವಾಸವುಂಟು. ಮದ್ರಾ[illegible] ಕೈವಸ್ತ್ರಗಳನ್ನು ಮೂಲ ಯುರೋಪಿಯನ್ ವ್ಯಾಪಾರಸ್ಥರ [illegible] ಹೋಗಬೇಕಾದ್ದರಿಂದ ಅವನು ಈ ವಸ್ತ್ರಗಳನ್ನು ಧರಿಸಿದ್ದಾನೆ.

ಅವನು ಈ ರೀತಿಯಿಂದ ತನ್ನ ನಾಚಿಕೆಗೇಡಿತನವನ್ನು [illegible] ಕೊಳ್ಳುವದನ್ನು ನೋಡಿ ನಾನು ಬೆರಗಾದೆನು ಈ ಆಘಾತದಿಂದ [illegible]ನ್ನು ಉಳಿಸಿಕೊಳ್ಳುವದಕ್ಕಾಗಿ " ಮದ್ರಾಸದ ಕೈವಸ್ತ್ರಗಳನ್ನು ಅ[illegible] ಎತಿಕೊಳ್ಳುವರು " ಎಂದು ಕೇಳಿದೆನು.

ವಿದೇಶೀ ವಸ್ತ್ರಗಳನ್ನು ಧರಿಸಿದ ಆ ವ್ಯಾಪಾರಸ್ಥನು "ಮ್ಯಾ[illegible]ಚೆಸ್ಟರಕ್ಕೆ ಕಳಿಸುವ ಸಲುವಾಗಿ ಅವುಗಳನ್ನು ಖರೀದಿ ಮಾಡತಕ್ಕವ[illegible] ನಿಜವಾಗಿ ಆಫ್ರಿಕಾ ಖಂಡದ ದೇಶೀಯ ನಿವಾಸಿಗಳು ಆದರೆ ಮ್ಯಾ[illegible]ಚೆಸ್ಟರವು ಅವರ ಬಾಜಾರವು " ಎಂದು ಹೇಳಿದನು. ಆದಕ್ಕೆ ನಾ[illegible] " ನೀವು ಖಾದಿಯ ಉಡುಪನ್ನು ಧರಿಸಿದ್ದರೆ ನಿಮ್ಮಿಂದ ವಸ್ತ್ರಗಳ[illegible] ಅವರು ಕೊಂಡು ಕೊಳ್ಳುವದಿಲ್ಲವೇನು. " ಎಂದು ಕೇಳಿದೆನು ' [illegible]ಕ್ಕೆ ಅವನು " ಅದರ ಪರಿಣಾಮವು ಹಾಗೇ ಆಗುತ್ತದೆಂದು ಉತ್ತರ[illegible]ತ್ತನು.

ನಾನು ನನ್ನ ಮನುಷ್ಯನ ಕಡೆಗೆ ನೋಡಿದೆನು. ದೊರೆತ ನನ[illegible] ಸ್ವಲ್ಪ ಸಮಯದಲ್ಲಿ ಅವನ ಮೇಲೆ ಏನೂ ಪರಿಣಾಮ ವಾಗಲ[illegible]ದೆಂದು ಬಗೆದು ನಿರಾಶೆಯನ್ನು ಹೊಂದಿದೆನು. ನಾನು ನನ್ನ ಮನಸ್ಸಿನ[illegible]ಯೇ ನಿಟ್ಟುಸಿರು ಬಿಟ್ಟು ವಿಷಯವನ್ನು ಬದಲು ಮಾಡಿ, ಎರಡನೆ[illegible] ಸಂಗತಿಗಳ ಬಗ್ಗೆ ಮಾತು ಕಥೆಗಳನ್ನಾಡಿದೆನು.

ಒಬ್ಬ ಕಾಂಗ್ರೆಸದ ಪ್ರಚಾರಕನು ಜೇಲಿಗೆ ಹೊರಟಿದ್ದನು. [illegible]ವನನ್ನು ಕಳಿಸುವದಕ್ಕೆ ನಾವು ಮ್ಯಾಜಿಸ್ಟ್ರೇಟರ ಕಚೇರಿಗೆ ಹೋಗಿ[illegible] ಅಲ್ಲಿ ಬಹಳ ಜನ ಸಮುದಾಯವೇನೂ ಕೂಡಿದ್ದಿಲ್ಲ. ಜಾಮೀನ[illegible] ಕೊಡುವದಿಲ್ಲೆಂದು ಹೇಳಿ, ಒಂದು ವರ್ಷದ ಶಿಕ್ಷೆಯನ್ನು ಹೊಂ[illegible] ಜೇಲಿಗೆ ಹೋಗುವದು ಈಗ ಪ್ರತಿನಿತ್ಯದ ಮಾತಾಗಿ ಬಿಟ್ಟದೆ. ಅದ್ದ[illegible]ದ ಈ ಕಟ್ಟಳೆಗಳನ್ನು ನೋಡುವದಕ್ಕೆ ಈಗ ಜನರು ನೆರೆಯುವದ[illegible] ಪ್ರತಿನಿತ್ಯ ನೋಡಲಿಕ್ಕೆ ಯಾರು ಹೋಗುವರು? ಆದರೆ ಅತ್ತಇತ್ತ [illegible]ಗಳದಲ್ಲಿಯೇ ಸ್ವಲ್ಪಜನರು ಇದ್ದರು. ಅವರಲ್ಲಿ ನಾನು ಒಬ್ಬ [illegible] ತರುಣ ಮನುಷ್ಯನನ್ನು ಸಹಜವಾಗಿ ನೋಡಿದೆನು. ಅವ[illegible] ತಲೆಯ ಮೇಲೆ " ಫೆಲ್ಟ್‌ಕ್ಯಾಪ " ಇಟಾಲಿಯನ್ ಟೊಪ್ಪಿಗೆ[illegible] ಇತ್ತು ಮೈಮೇಲೆ ಒಂದು " ಟ್ವಿಲ ಪೈರಣ ವಿತ್ತು. ಅದರ ಮೇ[illegible] ಒಂದು ಪರದೇಶೀ ಅರವೆಯ ಕೋಟು ಇತ್ತು, ಆದರೆ ಕೆಳಗೆ [illegible]

ಾಗಿ ಖಾದಿಯ ಧೋತರವಿತ್ತು, ನಾನು ಮತ್ತಿಷ್ಟು ಸೂಕ್ಷ್ಮರೀತಿಯಿಂದ ನೋಡಿದೆನು. ಅವರಲ್ಲಿ ಏನೂ ಸಂಶಯವಿದ್ದಿಲ್ಲ. ಅದು ನಿಜವಾಗಿಯೇ ದಪ್ಪವಾದ ಕೈನೂಲಿನ ಖಾದಿಯಾಗಿತ್ತು. ನನಗೆ ಮಿತಿಮೀರಿ ಆಶ್ಚರ್ಯವಾಯಿತು ದಕ್ಷಿಣಹಿಂದುಸ್ಥಾನದಲ್ಲಿ ವಾಸಿಸುತ್ತಿರುವ ಜನರ ಸೂಕ್ಷ್ಮವಾದ ಧೋತರವನ್ನು ನೋಡಿದವರಿಗೆ ನನಗಾದ ಆಶ್ಚರ್ಯದ ಕಲ್ಪನೆಯು ಬರುವದು. ಇಲ್ಲಿ ಎಲ್ಲ ಜನರು ಖಾದಿಯ ಟೊಪ್ಪಿಗೆಯನ್ನೂ, ಖಾದಿಯ ಪೈರಣಗಳನ್ನೂ ಖಾದಿಯ ಕೋಟುಗಳನ್ನೂ ಆನಂದದಿಂದ ಧರಿಸುತ್ತಿರುವರು ಆದರೆ ಕಡೆತನಕ ಪರದೇಶೀ ನೂಲಿನಿಂದ ಮಾಡಿದ ಧೋತರದ ಹಟವನ್ನು ಮಾತ್ರ ಬಿಡುವದಿಲ್ಲ ಇವನ ಕಡೆಗೆ ನೋಡಿದರೆ ಎಲ್ಲವೂ ವಿಪರೀತವೇ. ಅದ್ದರಿಂದಲೇ ನನಗೆ ಇಷ್ಟು ಆಶ್ಚರ್ಯವಾಗಿ ನಾನು ಅವನಿಗೆ ಹೀಗೆ ಆಗಲಿಕ್ಕೆ ಕಾರಣವೇನೆಂದು ಕೇಳಿದೆನು.

ಅದಕ್ಕೆ ಅವನು ಸಂಕೋಚದಿಂದ "ಕ್ಷಮಿಸಿರಿ, ನಾನು ಒಂದು ಆಡತಿಯಲ್ಲಿ ಚಾಕರನಿದ್ದೇನೆ" ಎಂದು ಹೇಳಿದನು "ಹೌದು ಆದರೇನು" ಎಂದು ನಾನು ಕೇಳಿದೆನು. "ನಾನು ಖಾದಿಯನ್ನು ಧರಿಸಿದರೆ ಅವರು ನನ್ನನ್ನು ನೌಕರಿಯಿಂದ ಬಿಡಿಸುವರು." ಎಂದು ಅವನು ಅಂದನು.

"ಆದರೆ ನೀನು ಖಾದಿಯನ್ನೇ ಉಟ್ಟಿರುವಿಯಲ್ಲ!"

ಅವರು ಧೋತರದ ಕಡೆಗೆ ನೋಡುವದಿಲ್ಲ, ಆದರೆ ಖಾದಿಯ ಪೈರಣವನ್ನಾಗಲಿ, ಟೊಪ್ಪಿಗೆಯನ್ನಾಗಲಿ, ಕೋಟನ್ನಾಗಲಿ ಧರಿಸಿದರೆ ಕೂಡಲೆ ನನ್ನ ಕಡೆಗೆ ನೋಡುವರು.

ನಾನು ಆ ತರುಣನ ಸಂಗಡ ಸ್ವಲ್ಪವಾದ ವಿವಾದವನ್ನು ಮಾಡಿದೆನು. ಆದರೆ ಆವನಿಗೆ ದೇಶಭಕ್ತಿ ಅಥವಾ ತತ್ವಗಳ ಬಗ್ಗೆ ಆದರ ಇವುಗಳಕಿಂತ ನೌಕರಿಯಿಂದ ದೂರವಾಗುವ ಹಾಗು ಉಪವಾಸದಿಂದ ಸಾಯುವ ಅಂಜಿಕೆಯು ಬಲವತ್ತರವಾಯಿತು.

ಅಲ್ಲಿಂದ ನಾನು ಸ್ಟೇಶನಕ್ಕೆ ಹೋದೆನು ಆಗ ಗಾಡಿಯಲ್ಲಿ ಕೂಡುವದಕ್ಕೆ ಒಂದು ಚಲೋ ಡಬ್ಬಿಯನ್ನು ಹುಡುಕಹತ್ತಿದ್ದೆನು. ಅಷ್ಟರಲ್ಲಿ ಒಬ್ಬ ತರುಣ ಮುಸಲಮಾನ ಬಾಂಧವನು ಭೆಟ್ಟಿಯಾದನು. ಅವನು ತಾನು ದಯಾಶಾಲಿಯಿದ್ದೇನೆಂಬದನ್ನು ತೋರಿಸುತ್ತ ನನ್ನನ್ನು ತನ್ನ ಡಬ್ಬಿಯೊಳಗೆ ಕರೆದನು. ಅವನು "ನಾನು ಖಿಲಾಫತ ಕಾರ್ಯನಿರ್ವಾಹಕನಿದ್ದೇನೆ" ಎಂದು ಹೇಳಿದನು. ಅವನ ಕೊರಳಿಗೆ ಒಂದು ಮ್ಯಾಂಚೆಸ್ಟರ ಮುಲಮುಲದ ವಸ್ತ್ರವು ಇತ್ತು ಮತ್ತು ಗಿರಣಿಯ ಅರಿವೆಯ ಪಾಟ್ಲೋನುಗಳನ್ನು ಅವನು ಧರಿಸಿದ್ದನು. ಅವನು ನಾನು ಯಾರೆಂದು ಕೇಳಿದನು. ನಾನು ಅದನ್ನೆಲ್ಲ ನೋಡಿ ನೋಡಿ ಬೇಸತ್ತು ಹೋಗಿದ್ದೆನು. ಅದ್ದರಿಂದ ನಾನೊಬ್ಬ ಹುಚ್ಚಮನುಷ್ಯನಿದ್ದೇನೆಂದು ಹೇಳಿದೆನು

ನನ್ನ ಅಭಿಪ್ರಾಯವನ್ನು ಬಹುಶಃ ತಿಳಿದುಕೊಂಡು ತಾನೂ ಒಬ್ಬ ಹುಚ್ಚನಿರುತ್ತೇನೆಂದು ಅವನು ಅಂದನು.

"ನೀನು ಹುಚ್ಚನಲ್ಲ" ಎಂದು ಹೇಳಿ "ಒಳ್ಳೇದು ನೀನು ಧರಿಸಿದ ಪಾಟ್ಲೋನಿನ ಅರಿವೆಯು ಎಲ್ಲಿಯದು" ಎಂದು ನಾನು ಕೇಳಿದೆನು.

ಅವನು "ಏಕೆ ಖಾದೀ" ಎಂದನು. ಇದು ಮಿತಿಮೀರಿತು. ನಾನು ಅವನಿಗೆ ನಗುತ್ತ "ಇದು ನಿಜವಾಗಿ ಖಾದಿಯೇ" ಎಂದು ಕೇಳಿದೆನು.

ಅವನು 'ಹೌದು ಸ್ವಾಮಿ ನಾನು ಸ್ವತಃ ಇದನ್ನು ಕೊಂಡುಕೊಂಡಿರುವೆನು. ಇದು ಅಹಮ್ಮದಾಬಾದದ ಗಿರಣಿಯಲ್ಲಿ ತಯಾರಾಗುತ್ತಿರುವದೆಂದು ನನಗೆ ಗೊತ್ತುಂಟು. ಇದು ಪಕ್ಕಾ ಸ್ವದೇಶೀಯದೆ ಇದರಲ್ಲಿ ಎಳ್ಳಷ್ಟು ಸಂಶಯವಿಲ್ಲ.'

ಅದಕ್ಕೆ ನಾನು "ಗಿರಣಿಯ ಅರಿವೆಯು ಖಾದಿಯಾಗಲಾರದು" ಎಂದು ಅಂದೆನು

ಅದಕ್ಕೆ ಆ ಮುಸಲ್ಮಾನಬಾಂಧವನು "ಹೌದು ಕ್ಷಮಿಸಿರಿ ನಿಮ್ಮ ಮಾತು ನಿಜ ನನ್ನ ಮನೆಯಲ್ಲಿ ಖಾದಿಯು ಬಹಳ ಇರುತ್ತದೆ. ಆದರೆ ನಾನು "ಕಾಂಟ್ರಾಕ್ಟರ" ದಲಾಲನಿದ್ದೇನೆ, ತಿಳಿಯಿತೇ? ರೇಲ್ವೆಯಲ್ಲಿಯ ಯುರೋಪಿಯನ ಅಧಿಕಾರಸ್ಥರಿಗೆ ಖಾದಿಯು ಸೇರುವದಿಲ್ಲ. ನಾವು ಖಾದಿಯನ್ನು ಧರಿಸಿಕೊಂಡು ಅವರ ಬಳಿಗೆ ಹೋದರೆ ಅವರು ನಮ್ಮನ್ನು ಬಹಳ ಪೀಡಿಸುವರು. ಅವರು ನಮ್ಮ ಗುತ್ತಗಳನ್ನೆಲ್ಲ ರದ್ದು ಮಾಡಿ ನಮ್ಮ ಸಂಗಡ ವ್ಯವಹಾರವನ್ನೇ ನಿಲ್ಲಿಸಿ ಬಿಡುತ್ತಾರೆ. ಇದರಿಂದ ಎಷ್ಟೋ ಜನರಿಗೆ ಹಾನಿಯು ತಟ್ಟಿದೆ.

ನಾನು:— ಈಗ ನೋಡಿರಿ, ನೀವು ಹುಚ್ಚರಲ್ಲ ನೀವು ಹುಚ್ಚರೆಂದು ಹೇಳಿಕೊಂಡದ್ದು ತಪ್ಪಾಯಿತು. ನೀವು ಒಳ್ಳೇ ಹುಷಾರ ಜನರು ನಿಮ್ಮ ವ್ಯಾಪಾರವನ್ನೂ ನಿಮಗಾಗುವ ಹಾನಿಯನ್ನೂ ಹೀಗೆ ಉಳಿಸಿಕೊಳ್ಳುವದು ಹೇಗೆ ಎಂಬದು ನಿಮಗೆ ತಿಳಿಯುತ್ತದೆ. ಅಂದ ಮೇಲೆ ನೀವು ಹುಚ್ಚರು ಹೇಗೆ

ಅವನು ತನ್ನ ಅಪರಾಧವನ್ನು ಒಪ್ಪಿಕೊಂಡು ಖಾದಿಯನು ಧರಿಸುವ ಕಂಟ್ರಾಕ್ಟರರಿಗಾಗುವ ಎಲ್ಲ ಗಂಡಾಂತರಗಳನ್ನು ನಿವೇದಿಸಿದನು. ಅದೇ ಡಬ್ಬಿಯಲ್ಲಿ ಇನ್ನೊಬ್ಬ ಮುಸಲ್ಮಾನ ಬಾಂಧವರನ್ನು ಕುಳಿತಿದ್ದನು. ಅವನು ಮುಂಬಯಿಯವನು ಆವನಾದರೂ ರಾಷ್ಟ್ರೀಯ ಸಭೆಯ ಹಾಗು ಖಿಲಾಫತಿನ ಭಕ್ತಿಯುಕ್ತ ಕಾರ್ಯನಿರ್ವಾಹಕನು ಅವನು ಕಂಟ್ರಾಕ್ಟರನೇ ಅವನಿಗಾದರೂ ಯುರೋಪಿಯನ ಕಂಪನಿಗಳ ಸಂಗಡ ವ್ಯವಹಾರ ಮಾಡಬೇಕಾಗುತ್ತಿತ್ತು. ಆದ್ದರಿಂದ ಅವನಾದರೂ ಯುರೋಪದ ಮುಲಮುಲಿನ ಉಡುಪು ಧರಿಸಿದ್ದನು ಖಾದಿಯನ್ನು ಮನೆಯಲ್ಲಿ ಇಟ್ಟು ಬಂದಿದ್ದನು!

ಹಾ! ಈ ನಾಚಿಕೆಗೇಡಿತನದ ವರ್ಣನವನ್ನು ಎಷ್ಟು ಮಾಡಿದರೂ ಶಬ್ದಗಳು ಸಾಲವು. ನಾವು ಮನುಷ್ಯರಿದ್ದರೆ, ಮಾನವನ್ನೂ ಸ್ವಾಭಿಮಾನವನ್ನೂ ಕಾಯ್ದುಕೊಳ್ಳುವಷ್ಟು ನಮ್ಮಲ್ಲಿ ಧೈರ್ಯವಿಲ್ಲದಿದ್ದರೆ ಖಾದಿಯಿಂದಾಗಲೀ ರಾಜನೀತಿಯಿಂದಾಗಲಿ ಧರ್ಮದಿಂದಾಗಲಿ ಏನು ಪ್ರಯೋಜನ; ಖಾದಿಯ ಮೇಲೆ ವಿಶ್ವಾಸವಿದ್ದು ಅದನ್ನು ಕೊಂಡುಕೊಂಡು ಅದನ್ನು ಧರಿಸುವಷ್ಟು ಧೈರ್ಯವಿಲ್ಲದೆ ಇರುವದಕ್ಕಿಂತ ಅವಿಶ್ವಾಸ ಮತ್ತು ದಾಸ್ಯದ ಕಾಲಿವೆಗಳಲ್ಲಿ ಹೊರಳಾಡುತ್ತ ಬೀಳುವದು ಎಷ್ಟೋ ಒಳ್ಳೇದು. ಇದು ಎಂಥ ಆತ್ಮಹತ್ಯೆಯು! ಎಂಥ ದೇಶ ಘಾತವು!!

ಶುಕ್ರಾಚಾರ್ಯ ಗುರುಗಳ ಆಜ್ಞೆಯಾದ ಕೂಡಲೇ ಮೃತನಾದ ಕಚನು ಜೀವಿತನಾಗಿ ಅವರ ಎಮುನಲ್ಲಿ ಕೈಜೋಡಿಸಿನಿಂತಂತೆ ಎಷ್ಟೋ ವರ್ಷಗಳಿಂದ ಮೃತವಾದ ರಾಟಿಯು ಮಹಾತ್ಮಾಜಿಯವರ ಆಜ್ಞೆಯನ್ನು ಮನ್ನಿಸಿ ಪುನಃ ಜೀವಂತವಾಗಿ ತನ್ನ ಮಧುರ ಗಾಯನವನ್ನು ಕಿವಿಗೆ ಇಂಪಾಗುವಂತೆ ಮಾಡಹತ್ತಿರುವದು. ನಷ್ಟವಾಗಿ ಹೋದ ಉದ್ಯೋಗದ ಪುನರ್ಜನ್ಮವಾಗಿದೆ. ಆದರೆ ಇದರಿಂದ ಅಸುರರಿಗೆ ಎಂದಾದರೂ ಸಹನವಾಗುವದೇ? ಅವರು ಆ ಕಚನನ್ನು ಪುನಃ ಕೊಲ್ಲಲಿಕ್ಕೆ ಪ್ರಯತ್ನಮಾಡುತ್ತಿರುವರು.

ನೌಕರರನ್ನು ಇಟ್ಟುಕೊಳ್ಳುವವರು ಈ ರೀತಿಯಾಗಿ ತಿಳಿದೂ ತಿಳಿದು ಕೈನೂಲಿನ ಖಾದಿಯನ್ನು ಧರಿಸುತ್ತಿರುವ ನೌಕರರನ್ನು ಶಿಕ್ಷಿಸುತ್ತಿರುವರೆಂಬದು ನಿಜವಾಗಿರಬಹುದೇ? ಉದ್ಧತವಾದ ಗಾಂಧಿಟೊಪ್ಪಿಗೆಯಿಂದ ಹುಟ್ಟಿದ ಕ್ರೋಧದ ಪ್ರತಿಕ್ರಿಯೆಯು ಇದು ಇರಲಾರದು. ಆದರೆ ಬೇಕೆಂತಲೇ ಪುನರ್ಜೀವಿತವಾದ ಒಂದು ಉದ್ಯೋಗದ ಕುತ್ತಿಗೆಯನ್ನು ಹಿಚಕುವದಕ್ಕೆ ಮಾಡಿದ ಪ್ರಯತ್ನವೆಂಬುವದು ಸ್ಪಷ್ಟವಾಗಿದೆ. ಇದು ನಿಜವಿದ್ದರೆ ಇದು ಇಬ್ಬರಿಗೂ ನಾಚಿಕೆಯ ಮಾತು! ನಾವು ಖಾದಿಯನ್ನು ಧರಿಸಲಿಕ್ಕೆ ಅಂಜುವದರಿಂದ ನಮ್ಮ ಅಂಜುಬುರಕತನಕ್ಕೆ ಧಿಕ್ಕಾರ[illegible] ಪರದೇಶದ ಅಂಗಡಿಕಾ

( ೨೫೩ ನೇ ಪುಟ ನೋಡಿರಿ.)

# ಕನ್ನಡ ನವಜೀವನ.

ಆಷಾಢ ವದ್ಯ ೧೧ ಗುರುವಾರ ಶಕೆ ೧೮೪೪


## ವೀರಧರ್ಮ.

(ನವಜೀವನ.)

ಹಿಂದುಸ್ಥಾನದ ಎಲ್ಲ ಪ್ರಶ್ನೆಗಳಲ್ಲಿ ದಾರಿದ್ರ್ಯದ ಪ್ರಶ್ನೆಯು ಎಲ್ಲಕ್ಕಿಂತಲೂ ದೊಡ್ಡದೂ ಗಡಚಿನದೂ ಇರುತ್ತದೆ. ದಿನದಲ್ಲಿ ಎರಡು ಸಲ ಹೊಟ್ಟೆ ತುಂಬ ಉಣ್ಣುವದಕ್ಕೆ ಕೂಡ ಜನರಿಗೆ ದೈವವಿಲ್ಲದವರೆಗೆ ಅವರ ಮನಸ್ಸು ಎರಡನೇ ವಿಚಾರಗಳ ಕಡೆಗೆ ಹೇಗೆ ಹೋಗಬೇಕು? ಮುಂಜಾನೆಯಿಂದ ಸಂಜೆಯವರೆಗೆ, ಒಂದು ಮಳೆಗಾಲದಿಂದ ಮತ್ತೊಂದು ಮಳೆಗಾಲದ ವರೆಗೆ ಅಥವಾ ಜನ್ಮದಾರಭ್ಯ ಸಾಯುವ ವರೆಗೆ ದರಿದ್ರವಾದ ಭರತಖಂಡದ ಎದುರಿನಲ್ಲಿ ಹೊಟ್ಟೆಯ ಚೀಲವನ್ನು ಹೇಗೆ ತುಂಬಿಕೊಳ್ಳಬೇಕೆಂಬ ಒಂದೇ ಒಂದು ಪ್ರಶ್ನೆಯು ಬಂದು ನಿಲ್ಲುವದು.

ಹಳ್ಳಿಗಳಲ್ಲಿ ಬೇಕಾದ ಸ್ಥಳಕ್ಕೆ ಹೋಗಿ ನೋಡಿರಿ. ಯಾವನಾದರೊಬ್ಬ ಮನುಷ್ಯನು ಬೇನೆ ಬಿದ್ದರೆ, ಅವನು ಒಂದು ದಿವಸವಾದರೂ ಶಾಂತತೆಯಿಂದ ಇರಲಾರನು. ಔಷಧದ ಮಾತಂತೂ ದೂರೇ ಉಳಿಯಿತು. ಯಾಕಂದರೆ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕೆಂದರೆ ಹೊಟ್ಟೆಯ ಗತಿಯೇನು? ಮತ್ತು ಒಂದು ದಿವಸ ಉಪವಾಸ ಮಾಡಿ ಮೂರು ಆಣೆಗಳನ್ನು ಉಳಿಸಿದರೆ ಮಾತ್ರ ಡಾಕ್ಟರಗೆ ಔಷಧದ ಕ್ರಯವನ್ನು ಕೊಡಬಲ್ಲನು. ಈ ದಾರಿದ್ರ್ಯದಿಂದ ಮನುಷ್ಯನ ತೇಜವೆಲ್ಲ ನಷ್ಟವಾಗಿ ಹೋಗುವದು. ಅನ್ಯಾಯವಾಗುತ್ತಿರುವದನ್ನು ಅವನು ಕಣ್ಣಿನಿಂದ ನೋಡಿದರೂ, ಅದನ್ನು ವಿರೋಧಿಸುವದು ಅವನಿಂದಾಗುವದಿಲ್ಲ. ಅವನಿಗೆ ತಾನು ಮೋಸ ಹೋಗುವೆನೆಂದು ಸರಾಸರಿಯಾಗಿ ಗೊತ್ತಾಗುತ್ತದೆ. ಆದರೆ ಅದರಿಂದ ತನ್ನನ್ನು ಹೇಗೆ ಉಳಿಸಿಕೊಳ್ಳಬೇಕೆಂಬುವದು ಅವನಿಗೆ ಗೊತ್ತಾಗುವದಿಲ್ಲ. ಈ ದಾರಿದ್ರ್ಯದಿಂದಲೇ ಅವನು ನಿರುಪಾಯನೂ ನಿಃಸಹಾಯನೂ ಆಗುವನು. ದಯೆ, ಮಾಯೆ, ಮಮತೆ ಮುಂತಾದವುಗಳನ್ನೆಲ್ಲ ಅವನಿಗೆ ಬಿಟ್ಟುಕೊಡಬೇಕಾಗುತ್ತದೆ. ಅವನು ತನ್ನ ಎತ್ತು ಕುಮರಿ ಇತರ ದನಗಳ ಮೇಲೆ ಮಕ್ಕಳಂತೆ ಪ್ರೀತಿ ಮಾಡುತ್ತಾನೆ. ಆದರೆ ಈ ಭಯಂಕರವಾದ ಬಡತನದ ಮೂಲಕ ನಿರ್ದಯನಾಗಿ ಅವು ದಣಿದು ದಣಿದು ಬೇಸರಿಯುವಷ್ಟು ಅವುಗಳಿಂದ ಕೆಲಸ ತೆಗೆದುಕೊಳ್ಳುವನು; ಮತ್ತು ಅವುಗಳನ್ನು ಹೊಡೆಯುವ ಅವಶ್ಯಕತೆಯು ಸಹ ಬೀಳುತ್ತದೆ.

ಆದರೆ ಅವನು ದರಿದ್ರನಿದ್ದದರಿಂದ, ಹಳ್ಳಿಗಾಡವನಿದ್ದದರಿಂದ ಎಷ್ಟೋ ಸಾರೆ ಅವನಿಗೆ ಹೆಚ್ಚು ವೆಚ್ಚಮಾಡಬೇಕಾಗುತ್ತದೆಂಬುವದು ಆಶ್ಚರ್ಯದ ಮಾತು. ಅವನು ಬಡವನಿದ್ದದರಿಂದಲೇ ಅವನಿಗೆ ಪ್ರತಿಯೊಂದು ಪದಾರ್ಥವು ತುಟ್ಟಿಬೀಳುತ್ತದೆ; ಅದರಿಂದಲೇ ಅವನಿಂದ ಹೆಚ್ಚು ಬಡ್ಡಿಯನ್ನು ತೆಗೆದುಕೊಳ್ಳುವದರಲ್ಲಿ ಬರುತ್ತದೆ. ಲದ್ದರಿಂದಲೇ ಲಂಚವನ್ನು ಕೊಟ್ಟೇ ಸುಧಾರಿಸಿದ ಸಂಗತಿಗಳ ಲಾಭವನ್ನು ತೆಗೆದುಕೊಳ್ಳಬೇಕಾಗುವದು. ಸ್ವಲ್ಪದರಲ್ಲಿ ಹೇಳಬೇಕಾದರೆ ಅವನು ಬಡವನಿದ್ದದರಿಂದಲೇ ಮತ್ತಿಷ್ಟು ಬಡವನಾಗಬೇಕಾ

ಆದರೆ ಇದಕ್ಕೆ ಉಪಾಯವು? ಉಪಾಯವೇನು? ಕಾಯದೆಯಿಂದ ಅವನ ರಕ್ಷಣವಂತೂ ಆಗುವದಿಲ್ಲ. ರಾಜಪುತ್ರನನ್ನು ಮೊದಲುಗೊಂಡು ಶಿರಸ್ತೇದಾರನ ವರೆಗೆ ದೊಡ್ಡಸ್ತನದಿಂದ ದೇಶದ ತುಂಬೆಲ್ಲ ತಿರುಗಾಡುತ್ತಿದ್ದರೂ ಅದರಿಂದ ಸಹ ರೈತರ ಗೋಳು ದೂರಾಗುವದಿಲ್ಲ. ಆದರೆ ಇದರ ವಿರುದ್ಧವಾಗಿ ಆ ಬಡ ಪ್ರಾಣಿಗಳು ಅವರಿಗೆ ಬಿಟ್ಟಿಯನ್ನು ಕೊಟ್ಟು ಕೊಟ್ಟು ಬೇಸತ್ತು ಹೋಗಿರುವರು. ಕೋರ್ಟು ಕಚೇರಿಗಳಾದರೂ ಅವರನ್ನು ನಿರ್ವೀರ್ಯರನ್ನಾಗಿ ಮಾಡಿಬಿಟ್ಟಿರುವವು. ಪೋಲೀಸರಂತೂ ಅವರಿಗೆ ಯಮದೂತರಂತೆ ತೋರುತ್ತಿರುವರು. ವಕೀಲರು, ಸಾಲವನ್ನು ಕೊಡುವ ಸಾಹುಕಾರರು, ಅರ್ಜಿ ಬರೆಯುವವರು ಗೌಡ ಕುಲಕರ್ಣಿಯರು ಪ್ರತಿವರ್ಷ ಬಾಬುಗಳನ್ನು ತೆಗೆದುಕೊಳ್ಳುತ್ತಿರುವ ಜೋಶಿಗಳೂ ಪುರೋಹಿತರೂ ಸಾಧು ಸನ್ಯಾಸಿಗಳೂ ಫಕೀರರೂ ಮುಂತಾದವರೆಲ್ಲರೂ ಬಡಒಕ್ಕಲಿಗರ ಮೇಲೆಯೇ ತಮ್ಮ ಹೊಟ್ಟೆಯನ್ನು ಹರಕೊಳ್ಳುತ್ತಿರುವರು. ಇವರು ಜಗತ್ತಿಗೆಲ್ಲ ಅನ್ನವನ್ನು ಕೊಡುತ್ತಿದ್ದರೂ ಇವರಿಗೆ ಅನ್ನವನ್ನು ಹಾಕುವವರು ಒಬ್ಬರೂ ಇಲ್ಲ.

ಅಂದ ಮೇಲೆ ಇದಕ್ಕೆ ಇನ್ನೇನು ಮಾಡಬೇಕು? ಇದರ ಉಪಾಯವನ್ನು ಸ್ವಾವಲಂಬನದ ಹೊರತು ಮತ್ತೊಂದು ಯಾವದನ್ನು ನಾವು ತೋರಿಸಬಲ್ಲೆವು? ಆದರೆ ಯಾವ ಜನರ ಮೇಲೆ ಇಡೀ ಸಮಾಜದ ಭಾರವು ಅವಲಂಬಿಸಿರುವದೋ ಅಂಥವರ ಮುಂದೆ ಸ್ವಾವಲಂಬನವನ್ನು ಹೇಳಹೋದರೆ ನಮಗೆ ನಿಜವಾಗಿ ನಾಚಿಕೆಯು ಬರಬೇಕು. ಅವರಿಗೂ ಸಣ್ಣ ಸಣ್ಣ ಮಕ್ಕಳಿರುವರು. ತಂದೆ ತಾಯಿಗಳಿರುವರು. ಅಣ್ಣ ತಮ್ಮಂದಿರೂ ಅಕ್ಕ ತಂಗಿಯರೂ ಇರುತ್ತಾರೆ. ಅವರಿಗೆ ದುರ್ದಶೆಯಾಗಬಾರದೆಂದು ತಿಳಿದು ಅವರು ಕಷ್ಟಗಳನ್ನೆಲ್ಲ ಸಹಿಸುತ್ತಿರುವರು. ಇಲ್ಲದಿದ್ದರೆ ಅವರು ಎಂದೋ ದಿವಾಳಿಯನ್ನು ತೆಗೆದು ಮನೆ ಮಾರುಗಳನ್ನು ಬಿಟ್ಟುಕೊಟ್ಟು ಮೈಗೆ ಬೂದಿ ಹಚ್ಚಿಕೊಂಡು ಹೋಗುತ್ತಿದ್ದರು. ಆದರೆ ಯಾರಾದರೂ ಅವರ ಸುದ್ದಿಯನ್ನು ತೆಗೆಯುವರೇ? ನಾವು ಮಾಡುವದೆಲ್ಲ ಪಟ್ಟಣಗಳಲ್ಲಿಯೇ! ದೊಡ್ಡ ವ್ಯಾಖ್ಯಾನಗಳಾದರೂ ಶಹರದಲ್ಲಿಯೇ ಆಗುತ್ತವೆ. ಶಿಕ್ಷಣದ ಸಲುವಾಗಿ ರೊಕ್ಕವು ಶಹರಗಳಲ್ಲಿಯೇ ಖರ್ಚಾಗುವದು. ವರ್ತಮಾನಪತ್ರಗಳಾದರೂ ಶಹರಗಳಲ್ಲಿಯೇ ಓದಲ್ಪಡುತ್ತಿರುವವು. ಔಷಧೋಪಚಾರದ ಸುವ್ಯವಸ್ಥೆಯಾದರೂ ಶಹರದಲ್ಲಿಯೇ ಇರುತ್ತದೆ. ಉಳಿದ ಸುಖ ಸಾಮುಗ್ರಿಗಳೆಲ್ಲ ಪಟ್ಟಣಗಳಲ್ಲಿಯೇ ದೊರಕುವವು. ಆದರೆ ಬಡಹಳ್ಳಿಗಾಡಜನರ ಕೈವಾರಿಗಳಾರು?

“ಬಡವರ ಕೈವಾರಿಗಳಾರು?” ಎಂಬದನ್ನು ವಿಚಾರ ಮಾಡೋಣ. ದಾರಿದ್ರ್ಯದ ಔಷಧವು ದಾರಿದ್ರ್ಯವೇ. ರಾಷ್ಟ್ರದಲ್ಲಿ ಕೋಟ್ಯಾವಧಿ ಜನರು ಉಪವಾಸದಿಂದ ಬಳಲುತ್ತಿರುವಾಗ ಅವರ ದಾರಿದ್ರ್ಯದಿಂದೊದಗಿದ ಹಸಿವೆಯನ್ನು ತೆಗೆದುಹಾಕುವದಕ್ಕೆ ಸಾವಿರಾರು ಲಕ್ಷಾವಧಿ ತರುಣರು ಸ್ವೇಚ್ಛೆಯಿಂದ ದಾರಿದ್ರ್ಯವನ್ನು ಸ್ವೀಕರಿಸಲಿಕ್ಕೆಬೇಕು. ಧಾರ್ಮಿಕ ಬುದ್ಧಿಯಿಂದ ದರಿದ್ರರ ಧರ್ಮದ ದೀಕ್ಷೆಯನ್ನು ತೆಗೆದುಕೊಳ್ಳಬೇಕು. ಈ ಇಂಗ್ಲಿಷ ಪದ್ಧತಿಯಿಂದ ನಾವು ಈ ಸಂಗತಿಯಲ್ಲಿ ಬಹಳ ಅಂಜುಬರುಕರಾಗಿಬಿಟ್ಟಿರುವೆವು. ಮನುಷ್ಯನು ಬಡತನಕ್ಕೆ ಅಂಜುವಷ್ಟು ಮರಣ ಅಪಮಾನ ಧರ್ಮದ್ರೋಹ ಅಥವಾ ದೇಶದ್ರೋಹಕ್ಕೆ ಅಂಜುವದಿಲ್ಲ. ಯಾವ ದೇಶದಲ್ಲಿ ಸ್ವೇಚ್ಛಾಪೂರ್ವಕವಾಗಿ ದಾರಿದ್ರ್ಯವನ್ನು ಸ್ವೀಕರಿಸುತ್ತಿದ್ದರೋ ಮತ್ತು ಇಂಥವರಿಗೆ ಪ್ರತಿಷ್ಠೆಯೂ ಸಹ ದೊರೆಯುತ್ತಿತ್ತೋ ಅಂಥ ದೇಶದಲ್ಲಿಯೇ ಈಗ ಪ್ರತಿಯೊಬ್ಬ ಸುಶಿಕ್ಷಿತ ತರುಣನು ಬಡತನಕ್ಕೆ ಅಂಜಿ ದೂರ ಓಡಹತ್ತುತ್ತಿರುವನು.

ರಶಿಯಾ ದೇಶದಲ್ಲಿ ಭಯಂಕರವಾದ ಬರವು ಬಿದ್ದಿತ್ತು. ಜನರು ಅನ್ನವಿಲ್ಲದ್ದರಿಂದ ಒಂದೇ ಸವನೆ ಸಾಯಹತ್ತಿದ್ದರು. ಜನರ

ಕಷ್ಟದಾಯಕವಾದ ದುಃಸ್ಥಿತಿಯನ್ನನುಭೋಗಿಸುವನು ಮಹಾತ್ಮಾ
ಲ ಸಾಯುವಿಂದ ಆಗಲಿಲ್ಲ ಆದ್ದರಿಂದ ಅವನಾದರೂ ಮನೆಮಾ
ಗಳನ್ನು ಬಿಟ್ಟು ಬಿಕ್ಷಾಪಾತ್ರವನ್ನು ಹಿಡಿದನು ಬಾಹ್ಯದೃಷ್ಟಿ
ಂದ ನೋಡಿದರೆ ಇದರಿಂದ ಅವನಿಗ ಏನು ಲಾಭವಾಯಿತು? ತಾ
ದರಿದ್ರನಾಗಿ ದರಿದ್ರರ ಸಂಪದೆಯನು ನಿಜವಾಗಿ ಬೆಳಸಿದನು
ರ್ಥಶಾಸ್ತ್ರ
ರು.
ಸ
ವಿಲ
ತಿ

ಏಕೆ ವಿಚಾರಮಾಡುವದಿಲ್ಲ? "ದಾರಿದ್ರ್ಯದಲ್ಲಿ ಏನು ಅವಸ್ಥೆಯಾ ಗುವದು ಎಷ್ಟು ದಿನಗಳನ್ನು ಕಳೆಯ ಬೇಕು?" ಎಂಬ ವಿಚಾರಕ್ಕೆ ಅಂಜಿ ನಾವು ಎಷ್ಟು ಅಂಜುಬುರಕರಾಗಿದ್ದೇವೆ? ಎಷ್ಟು ನಿರ್ವೀರ್ಯರಾಗಿರುವೆವು? ಮೇಲಿಂದ ಮೇಲೆ ಒದಗುವ ನಮ್ಮ ತೇಜಸ್ಸಿನ ನಾಶ ಕೆ ಈ ಬಡತನದ ಅಂಜಿಕೆಯೇ ಕಾರಣವು. ನಾವು ಸುಮ್ಮನೆ
ಗಳನ್ನು ಸಹಿಸುತ್ತೇವೆ ಅಪಮಾನವನ್ನು ನುಂಗಿಕೊಳ್ಳು
ನಾವು ಸ್ವತಃ ಎರಡನೆಯವರಿಗೆ ಅನ್ಯಾಯಮಾಡಲು ಸಿದ್ಧ
ವೆ, ನಮ್ಮ ಕಣ್ಣು ಮುಚ್ಚಿಕೊಂಡು ಹಗಲಿರಳು ಎರಡನೆಯ
ಡುವ ಅನ್ಯಾಯಗಳಿಗೆ ಸಹಕಾರಿಗಳಾಗಿ ನಮ್ಮ ಆತ್ಮದ
ನವನ್ನು ಮಾಡಿಕೊಳ್ಳುತ್ತೇವೆ. ಇದೆಲ್ಲದರ ಕಾರಣವು
ಬಡತನದ ಅಂಜಿಕೆಯೇ

ಬಾಗಲಕೋಟೆ—ಶುಕ್ರವಾರ ಕನ್ನಡನವಜೀವನ ಆಷಾಢ ವದ್ಯ ೧೧ ಶಕೆ ೧೮೪೪ ತಾ॥ ೨೦-೭-೨೨ ಇಸವಿ

## ನೋಟೀಸು,

ಈ ಕೆಳಗೆ ಎಡಗೈ ಹೆಬ್ಬೆಟ್ಟಿನ ಮುದ್ರೆ ಮಾಡಿದವಳ ಕಡೆಯಿಂದ ನೋಟೀಸಿನಿಂದ ತಿಳಿಸೋದೇನಂದರೆ ಬರುತ್ತದಲ್ಲಾ ನಾನು ಹುಚ್ಚ ಪ್ಪಗೌಡಾ ತಂದೆ ರುದ್ರಪ್ಪಗೌಡಾ ೧೯೮೧ ಸಾ॥ ತುಮ್ಮರಮಟ್ಟಿ ಇವಗೆ ವಳಗಡೆ ವಟ್ಟು ಮುಕ್ತಿಯಾರ ಪತ್ರ ಮಾಡಿಕೊಟ್ಟಿದ್ದೆ. ಈಗ ಅವರ ಒಟ್ಟು ಮುಕ್ತಿಯಾರ ಇವತ್ತಿನಿಂದ ರದ್ದುಪಡಿಸಿರುತ್ತೇನೆ. ಇನ್ನು ಮುಂದೆ ನನ್ನ ಸಂಬಂಧಿ ಆತನ ಏನೂ ಕೆಲಸ ಮಾಡತಕ್ಕದ್ದು ಇರುವದಿಲ್ಲ ಮಾಡಿದರೆ ಆ ವ್ಯವಹಾರ ರದ್ದು ಇರುತ್ತದೆ. ತಿಳಿಯು ವದು. ತಾ॥ ೧೮-೭-೨೨

ಈ ಎಡಗೈ ಹೆಬ್ಬಟ್ಟಿನ ಮುದ್ರೆ ಅಡಿವೆವ್ವಾ ಗಂಡ ಫಕೀರ ಗೌಡಾ ಪಾಟೀಲ ಸಾ॥ ಮುರನಾಳ ಇವಳದು ಅದೆ.

# ಭಾರತೀಯ

# ಸಂಗಮನವು.

ಕೆಲದವರೂ ಸೆಂಟ್ರಲ್ ಖಿಲಾಫತ
ಹಿಡಿದುಕೊಳ್ಳುವದಕ್ಕಾಗಿ ನೇಮಿಸಿದ
ಶನಿವಾರ ಅಂದರೆ ೨೨ ನೇ ತಾ॥
ಮಾಡಿಸುವರು. ಮರುದಿನ ಅಂದರೆ
ಾಗಿ ಮದ್ರಾಸಕ್ಕೆ ಹೋಗುವರು.
ಗುವದಿಲ್ಲ. ಈ ಕಮೀಟಿಯಲ್ಲಿ
ಲ ನೆಹರು, ಹಕೀಮ
ಜಗೋಪಾಲಾಚಾರ್ಯ
ಅಯ್ಯಂಗಾರ ಮತ್ತು
ದ ಎಲ್ಲ ಕರ್ನಾಟಕಸ್ಥರು ಈ
ಜಾಪುರದವರೆಗೆ ಹೋಗಿ ಅವರ

ಇದಕ್ಕೆ ತರುಣರು ಅನ್ನುವದೇನಂದರೆ:– "ನೀವು ಅನ್ನುವ ನಿಜವು. ಆದರೆ ನಮ್ಮ ಮಕ್ಕಳು ಮರಿಗಳ ಗತಿಏನು? ಅವರು ದಿವಸಗಳವರೆಗೆ ಇರುತ್ತಬಂದ ಸ್ಥಿತಿಯಲ್ಲಿ ಅವರನ್ನು ಇಡ ಬೇಕಲ್ಲವೇ? ಅಥವಾ ನಮ್ಮ ವಿಚಾರಗಳ ಸಲುವಾಗಿ ಅವರ ಕಷ್ಟಗಳಿಗೆ ಈಡುಮಾಡುವದು ಉಚಿತವೇ?" ಹೌದು ಅದು ವಾಗಿ ಯೋಗ್ಯವು. ಆದರೆ ನಿಮ್ಮ ದೃಷ್ಟಿಯಿಂದ ನಿಮ್ಮ ರು ಮಕ್ಕಳು ಸತ್ಯವಾಗಿ ತೋರಿ ಉಪವಾಸದಿಂದ ಸಾಯುತ್ತಿ ಕೋಟ್ಯಾವಧಿ ಜನರು ಭ್ರಮೆಯೆಂದು ಅನಿಸಿದರೆ ಅನಾತು . ನಮ್ಮ ವಿಲಾಸೋಪ ಭೋಗಗಳ ಸಲುವಾಗಿ ನಮ್ಮ ಅಸಂಖ್ಯ ಅವರು ಉಪವಾಸ ಸಾಯುವದು ಯೋಗ್ಯವೇ? ನೀವು ಹೀಗೆ

ಎಷ್ಟೋ ಬಾಂಧವರ ಮತವೆಂದರೆ "ಇಷ್ಟು ಸ್ವಾರ್ಥತ್ಯಾಗವು ಎಲ್ಲಿಯೋ ಒಬ್ಬ ಮಹಾತ್ಮನಿಗೆ ಸಾಧ್ಯವಿರುತ್ತದೆ. ಸರ್ವಸಾಧಾರಣ ಜನರು ಇವನ್ನು ಅನುಕರಿಸುವದು ಶಕ್ಯವಿಲ್ಲ. ಮಕ್ಕಳುಮರಿಗಳ ವಿಚಾರದ ಪ್ರಶ್ನೆಯು ಎಂದಾದರೂ ಬಿಡುವದೇ?" ಯುದ್ಧದಲ್ಲಿ ಸಾ ಯರಾರು, ಅದೇಕೆ! ಲಕ್ಷಾವಧಿ ಸೈನಿಕರು ಯುದ್ಧಕ್ಕೆ ಸಿದ್ಧರಾಗಿ ಮನೆಮಾರುಗಳನ್ನು ಬಿಟ್ಟುಕೊಟ್ಟು ಹೋಗುತ್ತಿರುವರು. ಅವರೆ ಲ್ಲರು ಮಹಾತ್ಮರೇನು? ಅವರಿಗೇನು ಮಕ್ಕಳು ಮರಿಗಳಿಲ್ಲವೇ? ಹತ್ತು ಅಥವಾ ಹದಿನೈದು ರೂ. ಗಳನ್ನು ಗಳಿಸುವ ಜನರು ತಮ್ಮ ಮಕ್ಕ ಳಿಗೆ ಏನುಗಳಿಸಿಡುವರು, ನಾವು ನಮ್ಮ ಹೆಂಡರುಮಕ್ಕಳನ್ನು ಅಸ್ಥಿರರ ನ್ನಾಗಿ ಇಡುವ ಅಥವಾ ತಿಳಿದುಕೊಳ್ಳುವ ಕೆಟ್ಟ ರೂಢಿಯು ಬಿದ್ದದೆ.

# ಕನ್ನಡ ನವಜೀವನ.

ಆಷಾಢ ವದ್ಯ ೧೧ ಗುರುವಾರ ಶಕೆ ೧೮೪೪

## ವೀರಧರ್ಮ.

(ನವಜೀವನ.)

ಹಿಂದುಸ್ಥಾನದ ಎಲ್ಲ ಪ್ರಶ್ನೆಗಳಲ್ಲಿ ದಾರಿದ್ರ್ಯದ ಪ್ರಶ್ನೆಯು ಎಲ್ಲಕ್ಕಿಂತಲೂ ದೊಡ್ಡದೂ ಗಡಚಿನದೂ ಇರುತ್ತದೆ. ದಿನದಲ್ಲಿ ಎರಡು ಸಲ ಹೊಟ್ಟೆ ತುಂಬ ಉಣ್ಣುವದಕ್ಕೆ ಕೂಡ ಜನರಿಗೆ ದೈವವಿಲ್ಲದವರೆಗೆ ಅವರ ಮನಸ್ಸು ಎರಡನೇ ವಿಚಾರಗಳ ಕಡೆಗೆ ಹೇಗೆ ಹೋಗಬೇಕು! ಮುಂಜಾನೆಯಿಂದ ಸಂಜೆಯವರೆಗೆ, ಒಂದು ಮಳೆಗಾಲದಿಂದ ಮತ್ತೊಂದು ಮಳೆಗಾಲದ ವರೆಗೆ ಅಥವಾ ಜನ್ಮದಾರಭ್ಯ ಸಾಯುವ ವರೆಗೆ ದರಿದ್ರವಾದ ಭರತಖಂಡದ ಎದುರಿನಲ್ಲಿ ಹೊಟ್ಟೆಯ ಚೀಲವನ್ನು ಹೇಗೆ ತುಂಬಿಕೊಳ್ಳಬೇಕೆಂಬ ಒಂದೇ ಒಂದು ಪ್ರಶ್ನೆಯು ಒಂದು ನಿಲ್ಲುವದು.

ಹಳ್ಳಿಗಳಲ್ಲಿ ಬೇಕಾದ ಸ್ಥಳಕ್ಕೆ ಹೋಗಿ ನೋಡಿರಿ. ಯಾವನಾದರೊಬ್ಬ ಮನುಷ್ಯನು ಬೇನೆ ಬಿದ್ದರೆ, ಅವನು ಒಂದು ದಿನಸವಾದರೂ ಶಾಂತತೆಯಿಂದ ಇರಲಾರನು. ಔಷಧವ ಮಾತಂತು ದೂರೇ ಉಳಿಯಿತು. ಯಾಕೆಂದರೆ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕೆಂದರೆ ಹೊಟ್ಟೆಯ ಗತಿಯೇನು? ಮತ್ತು ಒಂದು ದಿವಸ ಉಪವಾಸ ಮಾಡಿ ಮೂರು ಆಣೆಗಳನ್ನು ಉಳಿಸಿದರೆ ಮಾತ್ರ ಡಾಕ್ಟರಿಗೆ ಔಷಧದ ಕ್ರಯವನ್ನು ಕೊಡಬಲ್ಲನು. ಈ ದಾರಿದ್ರ್ಯದಿಂದ ಮನುಷ್ಯನ ತೇಜವೆಲ್ಲ ನಷ್ಟವಾಗಿ ಹೋಗುವದು. ಅನ್ಯಾಯವಾಗುತ್ತಿರುವದನ್ನು ಅವನು ಕಣ್ಣಿನಿಂದ ನೋಡಿದರೂ, ಅದನ್ನು ವಿರೋಧಿಸುವದು ಅವನಿಂದಾಗುವದಿಲ್ಲ. ಅವನಿಗೆ ತಾನು ಮೋಸಹೋಗುವೆನೆಂಬುದು ಸರಾಸರಿಯಾಗಿ ಗೊತ್ತಾಗುತ್ತದೆ. ಆದರೆ ಅದರಿಂದ ತನ್ನನ್ನು ಹೇಗೆ ಉಳಿಸಿಕೊಳ್ಳಬೇಕೆಂಬುವದು ಅವನಿಗೆ ಗೊತ್ತಾಗುವದಿಲ್ಲ. ಈ ದಾರಿದ್ರ್ಯದಿಂದಲೇ ಅವನು ನಿರುಪಾಯನೂ ನಿಸ್ಸಹಾಯನೂ ಆಗುವನು. ದಯೆ, ಮಾಯಾ, ಮಮತೆ ಮುಂತಾದವುಗಳನ್ನೆಲ್ಲ ಅವನಿಗೆ ಬಿಟ್ಟುಕೊಡಬೇಕಾಗುತ್ತದೆ. ಅವನು ತನ್ನ ಎತ್ತು ಕುದುರೆ ಇತರ ದನಗಳ ಮೇಲೆ ಮಕ್ಕಳಂತೆ ಪ್ರೀತಿ ಮಾಡುತ್ತಾನೆ. ಆದರೆ ಈ ಭಯಂಕರವಾದ ಬಡತನದ ಮೂಲಕ ನಿರ್ದಯನಾಗಿ ಅವು ದಣಿದು ದಣಿದು ಬೀಳುವಷ್ಟು ಅವುಗಳಿಂದ ಕೆಲಸ ತೆಗೆದುಕೊಳ್ಳುವನು; ಮತ್ತು ಅವುಗಳನ್ನು ಹೊಡೆಯುವ ಅವಶ್ಯಕತೆಯು ಸಹ ಬೀಳುತ್ತದೆ.

ಆದರೆ ಅವನು ದರಿದ್ರನಿದ್ದದರಿಂದ, ಹಳ್ಳಿಗಾಡಿನವನಿದ್ದದರಿಂದ ಎಷ್ಟೋ ಸಾರೆ ಅವನಿಗೆ ಹೆಚ್ಚು ವೆಚ್ಚಮಾಡಬೇಕಾಗುತ್ತದೆಂಬುವದು ಆಶ್ಚರ್ಯದ ಮಾತು. ಅವನು ಬಡವನಿದ್ದದರಿಂದಲೇ ಅವನಿಗೆ ಪ್ರತಿಯೊಂದು ಪದಾರ್ಥವು ತುಟ್ಟಿಬೀಳುತ್ತದೆ; ಅದರಿಂದಲೇ ಅವನಿಂದ ಹೆಚ್ಚು ಬಡ್ಡಿಯನ್ನು ತೆಗೆದುಕೊಳ್ಳುವದರಲ್ಲಿ ಬರುತ್ತದೆ. ಅದ್ದರಿಂದಲೇ ಲಂಚವನ್ನು ಕೊಟ್ಟು ಸುಧಾರಿಸಿದ ಸಂಗತಿಗಳ ಲಾಭವನ್ನು ತೆಗೆದುಕೊಳ್ಳಬೇಕಾಗುವದು. ಸ್ವಲ್ಪದರಲ್ಲಿ ಹೇಳಬೇಕಾದರೆ ಅವನು ಬಡವನಿದ್ದದರಿಂದಲೇ ಮತ್ತಿಷ್ಟು ಬಡವನಾಗಬೇಕಾ

ಆದರೆ ಇದಕ್ಕೆ ಉಪಾಯವು? ಉಪಾಯವೇನು? ಕಾಯದೆಯಿಂದ ಅವನ ರಕ್ಷಣವಂತೂ ಆಗುವದಿಲ್ಲ. ರಾಜಪುತ್ರನನ್ನು ಮೊದಲುಗೊಂಡು ಶಿರಸ್ತೇದಾರನ ವರೆಗೆ ದೊಡ್ಡಸ್ತನದಿಂದ ದೇಶದ ತುಂಬೆಲ್ಲ ತಿರುಗಾಡುತ್ತಿದ್ದರೂ ಅದರಿಂದ ಸಹ ರೈತರ ಗೋಳು ದೂರಾಗುವದಿಲ್ಲ. ಆದರೆ ಇದರ ವಿರುದ್ಧವಾಗಿ ಆ ಬಡ ಪ್ರಾಣಿಗಳಿಗೆ ಅ

ಕ್ಷಾಪಥ ... ಸ್ವೇಚ್ಛೆಯಿಂದ ದಾರಿದ್ರ್ಯವನ್ನು ಸ್ವೀಕರಿಸಲಿಕ್ಕೆಬೇಕು. ಧಾರ್ಮಿಕ ಬುದ್ಧಿಯಿಂದ ದರಿದ್ರರ ಧರ್ಮದ ದೀಕ್ಷೆಯನ್ನು ತೆಗೆದುಕೊಳ್ಳಬೇಕು. ಈ ಇಂಗ್ಲಿಷ ಪದ್ಧತಿಯಿಂದ ನಾವು ಈ ಸಂಗತಿಯಲ್ಲಿ ಬಹಳ ಅಂಜುಬುರುಕರಾಗಿಬಿಟ್ಟಿರುವೆವು. ಮನುಷ್ಯನು ಬಡತನಕ್ಕೆ ಅಂಜುವಷ್ಟು ಮರಣ ಅವಮಾನ ಧರ್ಮದ್ರೋಹ ಅಥವಾ ದೇಶದ್ರೋಹಕ್ಕೆ ಅಂಜುವದಿಲ್ಲ. ಯಾವ ದೇಶದಲ್ಲಿ ಸ್ವೇಚ್ಛಾಪೂರ್ವಕವಾಗಿ ದಾರಿದ್ರ್ಯವನ್ನು ಸ್ವೀಕರಿಸುತ್ತಿದ್ದರೋ ಮತ್ತು ಇಂಥವರಿಗೆ ಪ್ರತಿಷ್ಠೆಯು ಸಹ ದೊರೆಯುತ್ತಿತ್ತೋ ಅಂಥ ದೇಶದಲ್ಲಿಯೇ ಈಗ ಪ್ರತಿಯೊಬ್ಬ ಸುಶಿಕ್ಷಿತ ತರುಣನು ಬಡತನಕ್ಕೆ ಅಂಜಿ ದೂರ ಓಡಹತ್ತುತ್ತಿರುವನು.

ರಶಿಯಾ ದೇಶದಲ್ಲಿ ಭಯಂಕರವಾದ ಬರವು ಬಿದ್ದಿತ್ತು. ಜನರು ಅನ್ನವಿಲ್ಲದ್ದರಿಂದ ಒಂದೇ ಸವನೆ ಸಾಯಹತ್ತಿದ್ದರು. ಜನರ

ಕಷ್ಟದಾಯಕವಾದ ದುಃಸ್ಥಿತಿಯನ್ನನೆ ಸೋಡುವದು ಮಹಾತ್ಮಾ ರ ಸಾಯುನಿಂದ ಆಗಲಿಲ್ಲ ಅದ್ದರಿಂದ ಅವನಾದರೂ ಮನೆಮಾ ಗಳನ್ನು ಬಿಟ್ಟು ಭಿಕ್ಷಾಪಾತ್ರವನ್ನು ಹಿಡಿದನು. ಬಾಹ್ಯದೃಷ್ಟಿ ಂದ ನೋಡುವವರ ಇದರಿಂದ ಅವನಿಗೆ ಏನು ಲಾಭವಾಯಿತು? ತಾ ದರಿದ್ರನಾಗಿ ದರಿದ್ರರ ಸಂಪತ್ತಿಯನ್ನು ನಿಜವಾಗಿ ತಿಳಿಸಿದನು. ರ್ಥಶಾಸ್ತ್ರಜ್ಞರು ಇದರ ಉತ್ತರವನ್ನು ಕೊಡಲಿಕ್ಕೆ ಸಮರ್ಥರಾಗ ರು. ಅವರ ಶಾಸ್ತ್ರದಲ್ಲಿ ಆತ್ಮನಿಗೆ ಸ್ಥಾನವೇ ಇಲ್ಲ. ಮಹಾತ್ಮಾ ಲಸ್ಯಾಯನು ಜಗತ್ತಿನ ಆತ್ಮನನ್ನು ಜಾಗೃತಮಾಡಿದನು. ಭೋ ವಿಲಾಸದಲ್ಲಿ ಮಗ್ನರಾದ ಸಾವಿರಾರು ಜನರಿಗೆ ಬರಗಾಲದ ಹಾ ವನರಿಂದ ಉಂಟಾಗುವ ಅನ್ಯಾಯಗಳ ಪ್ರತ್ಯಕ್ಷದರ್ಶನವನ್ನು ಮಾ ಕೊಟ್ಟನು.

ಏಕೆ ವಿಚಾರಮಾಡುವದಿಲ್ಲ? "ದಾರಿದ್ರ್ಯದಲ್ಲಿ ಏನು ಅವಸ್ಥೆಯಾ ಗುವದು. ಎಷ್ಟು ದಿನಗಳನ್ನು ಕಳೆಯ ಬೇಕು?" ಎಂಬ ವಿಚಾರಕ್ಕೆ ಅಂಜಿ ನಾವು ಎಷ್ಟು ಅಂಜುಬುರಕರಾಗಿದ್ದೇವೆ? ಎಷ್ಟು ನಿರ್ವಶರಾ ಗಿರುವೆವು? ಮೇಲಿಂದ ಮೇಲೆ ಒದಗುವ ನಮ್ಮ ತೇಜಸ್ಸಿನ ನಾಶ ಕ್ಕೆ ಈ ಬಡತನದ ಅಂಜಿಕೆಯೇ ಕಾರಣವು. ನಾವು ಸುಮ್ಮನೆ ಅನ್ಯಾಯಗಳನ್ನು ಸಹಿಸುತ್ತೇವೆ ಅಪಮಾನವನ್ನು ನುಂಗಿಕೊಳ್ಳು ತ್ತೇವೆ. ನಾವು ಸ್ವತಃ ಎರಡನೆಯವರಿಗೆ ಅನ್ಯಾಯಮಾಡಲು ಸಿದ್ಧ ರಾಗುತ್ತೇವೆ, ನಮ್ಮ ಕಣ್ಣುಮುಚ್ಚಿಕೊಂಡು ಹಗಲಿರುಳು ಎರಡನೆಯ ವರು ಮಾಡುವ ಅನ್ಯಾಯಗಳಿಗೆ ಸಹಕಾರಿಗಳಾಗಿ ನಮ್ಮ ಆತ್ಮದ ಅಪಮಾನವನ್ನು ಮಾಡಿಕೊಳ್ಳುತ್ತೇವೆ. ಇದೆಲ್ಲದರ ಕಾರಣವು ಕೇವಲ ಬಡತನದ ಅಂಜಿಕೆಯೇ.

# ವಿಜಾಪುರಕ್ಕೆ ಭಾರತೀಯ ಮುಂದಾಳುಗಳ ಆಗಮನವು.

ಸಿವಿಲ ಭಾರತೀಯ ರಾಷ್ಟ್ರೀಯ ಮಂಡಳದವರೂ ಸೆಂಟ್ರಲ್ ಖಿಲಾಫತ ಕಮಿಟಿಯವರೂ ರಾಷ್ಟ್ರದಲ್ಲಿನ ಸಿದ್ಧತೆಯನ್ನು ತಿಳಿದುಕೊಳ್ಳುವದಕ್ಕಾಗಿ ನೇಮಿಸಿದ ಕಾಯದೆಭಂಗ ವಿಚಾರಣಾ ಕಮಿಟಿಯವರು ಬರುವ ಶನಿವಾರ ಅಂದರೆ ೨೨ ನೇ ತಾ॥ ದಿವಸ ಮಧ್ಯಾಹ್ನಗಾಡಿಯಿಂದ ವಿಜಾಪುರಕ್ಕೆ ದಯಮಾಡಿಸುವರು. ಮರುದಿನ ಅಂದರೆ ೨೩ನೇ ತಾ॥ ರಾತ್ರಿ ಗಾಡಿಯಿಂದ ಹುಟಗಿಯ ಮಾರ್ಗವಾಗಿ ಮದ್ರಾಸಕ್ಕೆ ಹೋಗುವರು. ಇವರು ಕರ್ನಾಟಕದಲ್ಲಿ ಮತ್ಯಾವ ಸ್ಥಳಕ್ಕೂ ಹೋಗುವದಿಲ್ಲ. ಈ ಕಮಿಟಿಯಲ್ಲಿ ಪ್ರಸಿದ್ಧ ಪುಢಾರಿಗಳಾದ **ಪಂಡಿತ ಮೋತಿಲಾಲ ನೆಹರು, ಹಕೀಮ ಅಜಮಲಖಾನ, ಡಾ॥ ಅನಸಾರಿ, ಸಿ. ರಾಜಗೋಪಾಲಾಚಾರ್ಯ ವಿಠ್ಠಲಭಾಯಿ ಪಟೇಲ, ಕಸ್ತೂರಿರಂಗ ಅಯ್ಯಂಗಾರ ಮತ್ತು ಶೇರವಾನಿ** ಮುಂತಾದವರು ಇರುತ್ತಾರೆ. ಆದ್ದರಿಂದ ಎಲ್ಲ ಕರ್ನಾಟಕಸ್ಥರು ಈ ವ ಹಾಪುರವಣಿಯನ್ನು ವ್ಯರ್ಥವಾಗಿ ಕಳೆಯದೆ ವಿಜಾಪುರದವರೆಗೆ ಹೋಗಿ ಅವರ ದರ್ಶನಲಾಭವನ್ನು ಪಡೆಯಬೇಕೆಂದು ಕೋರುತ್ತೇವೆ.

ಇದಕ್ಕೆ ತರುಣರು ಅನ್ನುವದೇನಂದರೆ:- "ನೀವು ಅನ್ನುವ ನಿಜವು. ಆದರೆ ನಮ್ಮ ಮಕ್ಕಳು ಮರಿಗಳ ಗತಿಏನು? ಅವರು ದಿವಸಗಳವರೆಗೆ ಇರುತ್ತಬಂದ ಸ್ಥಿತಿಯಲ್ಲಿ ಅವರನ್ನು ಇಡ ಬೇಕಲ್ಲವೇ? ಅಥವಾ ನಮ್ಮ ವಿಚಾರಗಳ ಸಲುವಾಗಿ ಅವರ ಕಷ್ಟಗಳಿಗೆ ಈಡುಮಾಡುವದು ಉಚಿತವೇ?" ಹೌದು ಅದು ವಾಗಿ ಯೋಗ್ಯವು. ಆದರೆ ನಿಮ್ಮ ದೃಷ್ಟಿಯಿಂದ ನಿಮ್ಮ ರು ಮಕ್ಕಳು ಸತ್ಯವಾಗಿ ತೋರಿ ಉಪವಾಸದಿಂದ ಸಾಯುತ್ತಿ ಕೋಟ್ಯಾವಧಿ ಜನರು ಭ್ರಮೆಯೆಂದು ಅನಿಸಿದರೆ ಅವಾತು ನಮ್ಮ ವಿಲಾಸೋಪಭೋಗಗಳ ಸಲುವಾಗಿ ನಮ್ಮ ಅಸಂಖ್ಯ ರು ಉಪವಾಸ ಸಾಯುವದು ಯೋಗ್ಯವೇ? ನೀವು ಹೀಗೆ

ಎಷ್ಟೋ ಬಾಂಧವರ ಮತವೆಂದರೆ "ಇಷ್ಟು ಸ್ವಾರ್ಥತ್ಯಾಗವು ಎಲ್ಲಿಯೋ ಒಬ್ಬ ಮಹಾತ್ಮನಿಗೆ ಸಾಧ್ಯವಿರುತ್ತದೆ. ಸರ್ವಸಾಧಾರಣ ಜನರು ಇದನ್ನು ಅನುಕರಿಸುವದು ಶಕ್ಯವಿಲ್ಲ. ಮಕ್ಕಳುಮರಿಗಳ ವಿಚಾರದ ಪ್ರಶ್ನೆಯು ಎಂದಾದರೂ ಬಿಡುವದೇ?" ಯುದ್ಧದಲ್ಲಿ ಸಾ ವಿರಾರು, ಅದೇಕೆ! ಲಕ್ಷಾವಧಿ ಸೈನಿಕರು ಯುದ್ಧಕ್ಕೆ ಸಿದ್ಧರಾಗಿ ಮನೆಮಾರುಗಳನ್ನು ಬಿಟ್ಟುಕೊಟ್ಟು ಹೋಗುತ್ತಿರುವರು. ಅವರೆ ಲ್ಲರು ಮಹಾತ್ಮರೇನು? ಅವರಿಗೇನು ಮಕ್ಕಳು ಮರಿಗಳಿಲ್ಲವೇ? ಹತ್ತು ಅಥವಾ ಹದಿನೈದು ರೂ. ಗಳನ್ನು ಗಳಿಸುವ ಜನರು ತಮ್ಮ ಮಕ್ಕ ಳಿಗೆ ಏನುಗಳಿಸಿಡುವರು, ನಾವು ನಮ್ಮ ಹೆಂಡರುಮಕ್ಕಳನ್ನು ಆಶ್ರಿತರ ನ್ನಾಗಿ ಇಡುವ ಅಥವಾ ತಿಳಿದುಕೊಳ್ಳುವ ಕೆಟ್ಟ ರೂಢಿಯು ಬಿದ್ದದೆ.

ಆದ್ದರಿಂದ ನಮಗೆ ತಿಳಿಯದಂಥ ಭವಿಷ್ಯಕಾಲದ ಕಡೆಗೆ ದೃಷ್ಟಿಯು ನಿಟ್ಟರೆ ನಮಗೆ ಅಂಜಿಕೆ ಬರುತ್ತದೆ. ದಿನಾಲು ತಮ್ಮ ಅಂಗಶ್ರಮದಿಂದ ರೊಟ್ಟಿಯನ್ನು ಸಂಪಾದಿಸುತ್ತಿರುವ ಮತ್ತು ಭವಿಷ್ಯಕಾಲದ ಚಿಂತೆ ಇಲ್ಲದಂಥ ಮನುಷ್ಯನಲ್ಲಿ ನೆಲೆಗೊಂಡ ವೀರರಸದ ಮಧುರಸ್ವಾದವನ್ನು ಸ್ವಂತ ಅನುಭವವಿಲ್ಲದ ಪ್ರತಿಯೊಬ್ಬ ಮನುಷ್ಯನು ತೆಗೆದುಕೊಳ್ಳಲು ಸಾಧ್ಯವಿಲ್ಲ ನಮ್ಮ ಜೀವನವು ಸುರಕ್ಷಿತವಾಗಿ ನಡೆದರೆ, ನಮ್ಮ ಜೀವಿತವು ಹೀನ ವಾಗುವದು. ಆದ್ದರಿಂದಲೇ ನಮ್ಮ ಜೀವನವು ನಷ್ಟಪ್ರಾಯವಾಗುವದು. ಜೀವಿತದ ಎಲ್ಲ ಆನಂದವು ಭವಿಷ್ಯಕಾಲದಲ್ಲಿ ಒದಗುವ ಹೊಸ ಹೊಸ ಸಂದಿಗ್ಧವಾದ ಜೀವನಕಲಹದಲ್ಲಿಯೆ ಉಂಟು. ಈ ಆನಂದವನ್ನು ಅನುಭವಿಸದಿದ್ದವನಿಗೆ ಹತಭಾಗ್ಯನನ್ನಬೇಕು. ಯಾವನ ಭವಿಷ್ಯಕಾಲವು ನಿಶ್ಚಿತವಿರುವದೋ ಅವನಲ್ಲಿ ಧರ್ಮಬುದ್ಧಿಯ ಉದಯವೂ ವಿಕಾಸವೂ ಆಗುವದು ಕಠಿಣ. ಯಥಾರ್ಥ ಹೇಳಬೇಕಾದರೆ ಸುರಕ್ಷಿತವಾದ ಜೀವನವನ್ನು ಅಪೇಕ್ಷಿಸುವವನಿಗೆ ನಾಸ್ತಿಕನೆಂದು ಹೇಳಬೇಕು. ಬಾಲಕರು ತಮ್ಮ ತಂದೆ ತಾಯಿಗಳ ಮೇಲೆ ವಿಶ್ವಾಸವನ್ನಿಟ್ಟು ನಿಶ್ಚಿಂತರಾಗಿರುವಂತೆ ವೀರಪುರುಷನಾದರೂ ತಮ್ಮ ಸುದೈವದ ಮೇಲೆ ವಿಶ್ವಾಸವನ್ನಿಡತಕ್ಕದ್ದು. ಜೀವನವು ಸುರಕ್ಷಿತವಿದ್ದಲ್ಲಿ ಪುರುಷಾರ್ಥವೂ ಇಲ್ಲ. ಧಾರ್ಮಿಕತೆಯೂ ಇಲ್ಲ. ಕಲೆಯೂ ಇಲ್ಲ; ಕಾವ್ಯವೂ ಇಲ್ಲ.

ಸ್ವೇಚ್ಛಾಪೂರ್ವಕವಾಗಿ ದಾರಿದ್ರ್ಯವನ್ನು ಸ್ವೀಕರಿಸಿದವನು. ಅನ್ಯಾಯಗಳಿಗೆ ಯಮದೂತನಂತೆ ಭಯಂಕರವಾಗಿ ತೋರುವನು. ಪೀಡಿತರಿಗೆ ಕೃಪಾನಿಧಿಯಂತೆ ಕಾಣಿಸುವನು. ದೊಡ್ಡ ದೊಡ್ಡ ರಾಜ್ಯ ಶಕ್ತಿಯಕೂಡ ಹೋರಾಡಲಿಕ್ಕೆ ಸಮರ್ಥನಾಗುವನು. ಅವನಿಗೆ ಧರ್ಮದ ರಹಸ್ಯವು ಚನ್ನಾಗಿ ಪ್ರಕಟವಾಗುವದು. ದಾರಿದ್ರ್ಯವು ವೀರಧರ್ಮದ ಪೋಷಕವಾಗಿದೆ. ಪರಮೇಶ್ವರನ ಪ್ರಸಾದವಿರುತ್ತದೇ ಧರ್ಮದ ಆಧಾರವಾದರೂ ಇರುವದು. ರಾಷ್ಟ್ರದಲ್ಲಿ ಇಂಥ ದರಿದ್ರರ ಸಂಖ್ಯೆಯು ಬೆಳೆದಂತೆ ರಾಷ್ಟ್ರದ ದಾರಿದ್ರ್ಯವು ಕಡಿಮೆಯಾಗುವದು; ಮರ್ಧಿಕ್ಷವು ದೂರವಾಗುವದು; ಜನತೆಯಲ್ಲಿ ಧರ್ಮದ ಉದಯವೂ ವಿಕಾಸವೂ ಆಗುವದು. ಮತ್ತು ಈಗ ನಮಗೆ ಅಸಂಭವವಾಗಿ ತೋರುತ್ತಿದ್ದ ಸಂಗತಿಗಳೆಲ್ಲ ಸಂಭವನೀಯವೂ ಹಗುರವೂ ಆಗುವವು.

ಭಾರತೀಯರಲ್ಲಿ ದೇಶಭಕ್ತಿಯುಂಟು; ದಯಾಧರ್ಮವುಂಟು; ವಿದ್ವತ್ತೆಯೂ ಪರೂ ಇರುತ್ತದೆ. ಧೈರ್ಯಶಾಲಿ, ಹಾಗು ಚತುರ ಪುರುಷರಿಗೆ ಭರತಭೂಮಿಯು ತವರವ ನೆಯಾಗಿದೆ. ಜ್ಞಾನಕ್ಕಂತೂ ಅದು ಆಶ್ರಯಸ್ಥಾನವೇ, ಇವರ ಸಂಸ್ಕೃತಿಯು ಎಲ್ಲಕ್ಕಿಂತ ಉಚ್ಚವಾಗಿದೆ. ಎಲ್ಲ ತರುಣರು ಸ್ವೇಚ್ಛಾಪೂರ್ವಕವಾಗಿ ದಾರಿದ್ರ್ಯವನ್ನು ಸ್ವೀಕರಿಸುವದೊಂದೇ ತಡ. ಇಡೀ ಜಗತ್ತಿನಲ್ಲಿ ಈಗ ಹಿಂದುಸ್ಥಾನದ ಕೀರ್ತಿಯು ಹಬ್ಬಿದ್ದರ ಕಾರಣವು ಅದರ ವ್ಯಾಪಾರವಾಗಲಿ, ಸಂಪತ್ತಿಯಾಗಲಿ, ಅಲ್ಲ ಅದರ ಕಾರಣವೆಂದರೆ ಭಾರತಮಾತೆಯ ಎಷ್ಟೋ ಪುತ್ರರು ಈ ವೀರಧರ್ಮದ ದೀಕ್ಷೆಯನ್ನು ಹೊಂದಿ ದಾರಿದ್ರ್ಯವನ್ನು ಅಂಗೀಕರಿಸಿರುವದೇ. ದೇಶದಲ್ಲಿ ಕೋಟ್ಯಾವಧಿ ಉಪವಾಸದಿಂದ ಸಾಯುತ್ತಿರುವ ಜನರು ಇಂಥ ಬಾಂಧವರ ಮೇಲೆಯೇ ತಮ್ಮ ಉದ್ಧಾರದ ಆಶೆಯನ್ನು ಇಡತಕ್ಕದ್ದು. ದಾರಿದ್ರ್ಯವನ್ನು ಧರಿಸಿದವರು ತಮ್ಮ ಉದ್ಧಾರವನ್ನು ಮಾಡಿಕೊಂಡಿದ್ದರಿಂದ ಎರಡನೆಯವರ ಉದ್ಧಾರವನ್ನು ಮಾಡಲಿಕ್ಕೆ ಸಮರ್ಥರಾಗುವರು.

—ಕಾಲೇಲಕರ

( ೨೪೯ ನೇ ಪುಟದಿಂದ ಬಂದದ್ದು )

ರರ ಸ್ವಾರ್ಥಕ್ಕಾದರೂ ಧಿಃಕಾರವು ! ಇದರ ವರ್ಣನವನ್ನು ಮಾಡುವದು ಅಸಂಭವವು. ತಮ್ಮ ವ್ಯಾಪಾರಸ್ಥರೆಂದೆನಿಸಿಕೊಳ್ಳುವವರನ್ನು ಕಂಕುಳದಲ್ಲಿ ಇಟ್ಟುಕೊಂಡ ಆ ಯುರೋಪಿಯನ್ ಮಾಲಕರು ಮತ್ತು ವ್ಯಾಪಾರ, ಗುತ್ತೇ, ಉದ್ಯೋಗ ಮೊದಲಾದವುಗಳ ಪ್ರಭುಗಳು ತಮ್ಮ ಮಾನವನ್ನು ತಾವು ರಕ್ಷಿಸಿಕೊಳ್ಳಲಿ. ಆದರೆ ನಮ್ಮ ಜನರು ಏಸೂ ಕ್ರಿಸ್ತನ ಕೆಳಗಿನ ಉಪದೇಶವನ್ನು ಲಕ್ಷ್ಯದಲ್ಲಿಡತಕ್ಕದ್ದು.

'ಗೋದಿಯ ಕಾಳು ನೆಲದಮೇಲೆ ಬಿದ್ದು ಮಣ್ಣಿನಲ್ಲಿ ಮುಚ್ಚಿ ನಾಶವನ್ನು ಹೊಂದದವರೆಗೆ ಅದರಿಂದ ಏನೂ ಲಾಭವಾಗುವದಿಲ್ಲ. ಆದರೆ ಅದು ನಾಶ ಹೊಂದಿದಮೇಲೆ ಎಷ್ಟು ಫಲಪ್ರದವಾಗುವದು.' ವ್ಯಾಪಾರ, ಗುತ್ತೆ, ನೌಕರಿ ಮುಂತಾದವುಗಳ ತ್ಯಾಗವನ್ನು ನಾವು ದೇಶದ ಸಲುವಾಗಿ ಮಾಡತಕ್ಕದ್ದು. ಹಾಗೆ ಮಾಡದ ಹೊರತು ನಮ್ಮ ಹೃದಯದಲ್ಲಿ ಸತ್ಯ ಮತ್ತು ನಿರ್ಭಯತೆಗಳ ಉದಯವೂ ವಿಕಾಸವೂ ಆಗುವ ಸಂಭವವಿಲ್ಲ.

ಸಿ. ರಾಜಗೋಪಾಲಾಚಾರ್ಯ.

## ನವಜೀವನದ ಪ್ರಕಾಶಕರ ಮೇಲೆ ಸರಕಾರದ ವಕ್ರದೃಷ್ಟಿಯು.

ವಿಜಾಪುರ ಜಿಲ್ಲೆಯ ದಕ್ಷಿಣಭಾಗದ ಡಿಸ್ಟ್ರಿಕ್ಟ ಡೆಪ್ಯೂಟಿ ಕಲೆಕ್ಟರರು "ಕನ್ನಡ ನವಜೀವನ" ದ ಪ್ರಕಾಶಕರಾದ ಶಮಾಚಾರ್ಯ ಬಂಡಾಚಾರ್ಯ ಪುರೋಹಿತ ಇವರ ಮೇಲೆ "ನೀವು ಅಸಹಕಾರಿತೆಯಲ್ಲಿ ಸೇರಿದ್ದು ನಿಮ್ಮ ಜಾತ ಇನಾಮು ಜಮೀನುಗಳನ್ನು ಯಾಕೆ ಫಾರಫೀಟ ಮಾಡಬಾರದು ಈ ಬಗ್ಗೆ ಜವಾಬ ಕೊಡಬೇಕು." ಅಂತಾ ನೋಟೀಸು ತೆಗೆದಿದ್ದರು. ಅದಕ್ಕೆ ಅವರು ಕೆಳಗಿನ ಉತ್ತರವನ್ನು ಕೊಟ್ಟಿರುವರು. —ಸಂಪಾದಕ.

### ಮೆ॥ ಡಿ॥ ಡೆಪ್ಯೂಟಿ ಕಲೇಕ್ಟರ ದಕ್ಷಿಣ ಭಾಗ ವಿಜಾಪೂರ ಇವರ ಕೋರ್ಟಿನಲ್ಲಿ

ನನ್ನ ಜಾತ ಇನಾಮು ಜಮೀನುಗಳನ್ನು ಯಾಕೆ ಫಾರಫೀಟ ಮಾಡಬಾರದು. ಈ ಬಗ್ಗೆ ಕಾರಣಗಳನ್ನು ತೋರಿಸುವ ಕುರಿತು ನನ್ನ ವಿರುದ್ಧ ತೆಗೆದ ನೋಟೀಸಿಗೆ ನಾನು ಕೆಳಗೆ ಬರೆದಂತೆ ಉತ್ತರಗಳನ್ನು ಕೊಡುವೆನು.

( ೧ ) "ಅಸಹಕಾರಿತೆಯಲ್ಲಿ ಸೇರಿದ್ದು" ಎಂಬ ಶಬ್ದದಿಂದ ಏನು ಅರ್ಥವಾಗುತ್ತದೆಂಬದು ನನಗೆ ತಿಳಿಯುವದಿಲ್ಲವೆಂದು ನಾನು ಒಪ್ಪಲೇಬೇಕು. ನನ್ನ ವಿರುದ್ಧ ತೆಗೆದ ನೋಟೀಸಿನಲ್ಲಿ ಇಂಥ ಇಂಥ ಕೆಲಸಗಳನ್ನು ನಾನು ಮಾಡಿರುವನೆಂಬ ಬಗ್ಗೆ ಏನೂ ನಿರ್ದೇಶವಿಲ್ಲ; ಆದ್ದರಿಂದ ನನಗೆ ನಿಶ್ಚಿತವಾದ ಉತ್ತರವನ್ನು ಕೊಡಲು ಶಕ್ಯವಿಲ್ಲ

(೨) ನಾನು ಕಾಂಗ್ರೆಸದ ಸಭಾಸದನೂ ವಿಜಾಪುರ ಡಿಸ್ಟ್ರಿಕ್ಟ ಕಾಂಗ್ರೆಸ ಕಮಿಟಿಯ ನೇತೃತ್ವದ ಕೆಳಗೆ ಸ್ಥಾಪಿತವಾದ ಬಾಗಲಕೋಟ ರಾಷ್ಟ್ರೀಯಶಾಲೆಯ ಅಧ್ಯಾಪಕನೂ ಇದ್ದದ್ದು ನಿಜ. ನನ್ನ ಸ್ವದೇಶೀ ವ್ರತಕ್ಕೆ ಅನುಸರಿಸಿ ನಾನು ಖಾದಿಯನ್ನಾದರೂ ಧರಿಸುತ್ತೇನೆ. ಅಂತ್ಯಜೋದ್ಧಾರ ಮತ್ತು ಅಸ್ಪೃಶ್ಯತಾ ನಿವಾರಣೆಯ ಕೆಲಸಗಳಲ್ಲಿ ಯಾದರೂ ನಾನು ತೊಡಗಿದ್ದೇನೆ.

(೩) ಇವೆಲ್ಲ ಕೆಲಸಗಳನ್ನು ಮಾಡುವದರಿಂದ ನನ್ನ ಕಡೆಗೆ ಜಾತ ಇನಾಮು ಇದ್ದ ಜಮೀನುಗಳನ್ನು ಕಳೆದುಕೊಳ್ಳಲಿಕ್ಕೆ ಹೇಗೆ ಬಾಧ್ಯನಾಗುವನೆಂಬದು ನನಗೆ ತಿಳಿಯುವದಿಲ್ಲ ಇನಾಮಿನ ಎರಡೇ ಎರಡು ಕರಾರುಗಳೆಂದರೆ ಪ್ರತಿವರ್ಷಕ್ಕೆ ಕೆಲವು ನಿಯಮಿತ ತೆರಿಗೆಯನ್ನು ಕೊಡುವದು. ಮತ್ತು ಬ್ರಿಟಿಶ ಗವ್ಹರ್ನಮೆಂಟಿನ ವಿಶ್ವಾಸಿಕ ಪ್ರಜ Faithful Subject ನಾಗಿರುವದು ಮೊದಲನೇದನ್ನು ಅಂದರೆ ತೆರಿಗೆಯನ್ನು ಕೊಡುವದನ್ನು ನಾನು ನಿಯಮಿತವಾಗಿ ಮಾಡುತ್ತ ಬಂದಿರುವೆನು. ಎರಡನೆಯ ಕರಾರವನ್ನು ನಾನು ಮುರಿದಂತೆ ನನಗೆ ತೋರುವದಿಲ್ಲ. ಕಾಂಗ್ರೆಸವನ್ನು ರಾಜದ್ರೋಹಾತ್ಮಕವೆಂದು ನಿರ್ಣಯಿಸುವವರೆಗೆ ಮತ್ತು ಅದರ ಧ್ಯೇಯವು ಬ್ರಿಟಿಶ ಸರಕಾರದ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಳ್ಳುವದು ಆಗದವರೆಗೆ ಪ್ರತಿಯೊಬ್ಬ ಮನುಷ್ಯನು, ಬ್ರಿಟಿಶ ಸರಕಾರದ ಅವಿಶ್ವಾಸಿಕ ಪ್ರಜೆಯೆಂಬ ಅಪರಾಧಕ್ಕೆ ಗುರಿಯಾಗದೆ ಸ್ವರಾಜ್ಯ ಅಥವಾ ಸೆಲ್ಫ ಗವರ್ನಮೆಂಟದ ವಿಷಯವಾಗಿ ಚಳವಳಿಯನ್ನು ನಡಿಸಲು ಸಂಪೂರ್ಣ ಸ್ವತಂತ್ರನಿರುತ್ತಾನೆಂದು ನನ್ನ ಮನಃಪೂರ್ವಕವಾದ ನಂಬಿಗೆಯದೆ. ಹಿಂದುಸ್ಥಾನದಲ್ಲಿಯ ಬ್ರಿಟಿಶ ಆಳಿಕೆಯ ಧ್ಯೇಯವು ಅದರ ಇತಿಹಾಸದಿಂದಲೂ, ರಾಣಿ ಧಿರಾಜನನ್ನು ಆರಂಭಿಸಿ ಕನಿಷ್ಠ ಜವಾಬದಾರಿಯ ಅಧಿಕಾ

ವರೆಗೆ ಎಲ್ಲರೂ ಮಾಡಿದ ಸಾರ್ವಜನಿಕ ಭಾಷಣಗಳ ಮೇಲಿಂದಲೂ, ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡುವದೇ ಇಟುತ್ತದೆಂದು ನಾನಂತೂ ತಿಳಿದಿದ್ದೇನೆ ಮತ್ತು ರಾಷ್ಟ್ರೀಯ ಸಭೆಯಾದರೂ ಅದರ ಸಲುವಾಗಿಯೇ ಪ್ರಯತ್ನ ಮಾಡುತ್ತಿರುವದು. ನಾನು ರಾಷ್ಟ್ರೀಯಸಭೆಯ ಸಲುವಾಗಿ ಕೆಲಸವನ್ನು ಮಾಡಿದರೂ ಕೂಡ ಬ್ರಿಟಿಶ ಸರಕಾರದ ವಿಶ್ವಾಸಿಕ ಪ್ರಜ Faithful Subject ನಿದ್ದೇನೆನು ನಂನ ಮನಃಪೂರ್ವಕ ಮತ್ತು ದೃಢವಾದ ನಂಬಿಕೆಯುನೆ. ರಾಷ್ಟ್ರೀಯಸಭೆಯ ಈ ಚಳವಳಿಯು ರಾಜದ್ರೋಹಾತ್ಮಕವೆಂದು ತಮಗೆ ಅನಿಸುತ್ತಿದ್ದರೆ ನನ್ನಂಥ ಬಡ ವ್ಯಕ್ತಿಗಳಂನ್ನು, ಇಂಥ ಹೀಮ ಸ್ಥಾನವಲ್ಲಿಯ ಪ್ರಚಲಿತ ಕಾಯಿದೆಗಳಿಗೆ ವಿರುದ್ಧವಾದ ನೋಟೀಸುಗಳಿಂದ ಬೆದರಿಸುವದಕ್ಕಿಂತ ಯೋಗ್ಯವಾದ ಮತ್ತು ಸರಳವಾದ ಮಾರ್ಗವೆಂದರೆ ತಾವು ಸರಕಾರದವರ ಕಡೆಗೆ ದಾದುಮಾಡಿ ಆ ಚಳವಳಿಯು ರಾಜದ್ರೋಹಾತ್ಮಕವಿರುವದೆಂದು ಸಾರಿಸಿ ಅದಂನು ಬಂದುಮಾಡಿಸುವ ಪ್ರಯತ್ನವಂನು ಮಾಡುವದೇ ಸರಿ.

(೪) ನೋಟೀಸಂನು ಲ್ಯಾಂಡ ರೆವ್ಹಿನ್ಯೂ ಕೋಡಿನ ಕಲಮಿನನ್ವಯ ತೆಗೆದಿರುವಿರಿ. ಆದರೆ ಯಾವ ಕಲಮಿನಿಂದ ಈ ವಿಷಯದಬಗ್ಗೆ ಚೌಕಸಿಮಾಡುವ ಅಧಿಕಾರವು ತಮ್ಮ ಕೋರ್ಟಿಗೆ ಉಂಟೆಂಬದಂನ್ನು ಹೇಳಿರುವದಿಲ್ಲ. ಹಾಗೆ ಮಾಡದ ಹೊರತು ನಾನು ಅದಕ್ಕೆ ಸಮರ್ಪಕವಾದ ಉತ್ತರವಂನು ಹೇಗೆ ಕೊಡಬೇಕೆಂಬುವದು ನನಗೆ ತಿಳಿಯುವದಿಲ್ಲ.

(೫) ಮುಂಬಯಿ ಸರಕಾರದವರಿಗೆ ಕೂಡ ರೆವ್ಹಿನ್ಯೂ ಅಧಿಕಾರದಿಂದ ನನ್ನಂಥ ಇನಾಮದಾರರ ಆಸ್ತಿಯ ವಿಷಯವಾಗಿ ಚೌಕಸಿಯನ್ನು ಮಾಡುವ ಅಧಿಕಾರವು ಇಲ್ಲೆಂದು ನಂನ ಅಭಿಪ್ರಾಯವದೆ, ಈ ವಿಷಯವಾಗಿ ಸಿವ್ಹಿಲ್ ಕೋರ್ಟುಗಳಿಂದ ನಿರ್ಣಯವನ್ನು ಪಡೆದುಕೊಳ್ಳುವದೂ, ಇಲ್ಲವೆ ಬ್ರಿಟಿಶ ಪಾರ್ಲಮೆಂಟಿದ ಸಮ್ಮತಿಯನ್ನು ಹೊಂದಿದ ಯಾವದಾದರೊಂದು ಕಾಯಿದೆಯಿಂದ ಕಾಂಗ್ರೆಸ ಚಳವಳಿಯು ಬ್ರಿಟಿಶ ಸರಕಾರದ ವಿಶ್ವಾಸ ವಿರುದ್ಧ Unfaithful ವಿರುತ್ತದೆಂದು ಪ್ರಕಟಿಸುವದೂ, ಇವೆರಡೇ ಮಾರ್ಗಗಳುಂಟು.

(೬) ಈ ಕಾರಣಗಳಿಂದ ಮತ್ತು ಯಾವದೇ ಕಾರಣದಿಂದಾದರೂ ಸರಕಾರಕ್ಕೆ ನಂನ ಕಡೆಗೆ ವಂಶಪರಂಪರೆಯಿಂದ ಜಾತ ಇನಾಮ ಆಗಿದ್ದ ಜಮೀನುಗಳನ್ನೇ ಫಾರಫೀಟ ಮಾಡಲಿಕೆ ಅಧಿಕಾರವಿಲ್ಲ.

ವಿಜಾಪೂರ ತ, ಬ- ಪುರೋಹಿತ.

ತಾ. ಕ. ಪ್ರಜೆಗಳಿಗೆ ಸಂಪೂರ್ಣವಾಗಿ ಜಬಾಬದಾರ ಆಗದೆ ಇದ್ದ ಈಗಿನ ಪ್ರಚಲಿತ ರಾಜ್ಯ ಪದ್ಧತಿಯ ವಿರುದ್ಧವಾಗಿ ಇದನ್ನು ಹಿಂದುಸ್ಥಾನದ ಜನರಿಗೆ ಪೂರ್ಣವಾಗಿ ಜವಾಬದಾರ ಆಗುವಂಥ ಡೋಮಿನಿಯನ್ ಸ್ಟೇಟಸ್– ರಾಜ್ಯ ಪದ್ಧತಿಯ ರೂಪವನ್ನು ಧರಿಸುವ ಹಾಗೆ ಮಾಡಲಿಕ್ಕೆ ನಾನು ಭಾಷಣಗಳನ್ನು ಮಾಡುತ್ತಿರುವೆನು.

ಸಂಪೂರ್ಣ ಸ್ವದೇಶಿ ಅಂದರೆ ಹಿಂದುಸ್ಥಾನದಲ್ಲಿಯ ಪ್ರತಿಯೊಬನು ಹಿಂದುಸ್ಥಾನದಲ್ಲಿಯೇ ನೂಲು ತೆಗೆಯಲ್ಪಟ್ಟ ಹಾಗು ಹಿಂದುಸ್ಥಾನದಲ್ಲಿಯೇ ನೇಯಲ್ಪಟ್ಟ ವಸ್ತ್ರಗಳನ್ನೇ ಧರಿಸಿದ ಹೊರತು ಹಿಂದುಸ್ಥಾನದ ಆರ್ಥಿಕ ಉನ್ನತಿಯಾಗಲಾರದೆಂದು ನಂಬಿದ್ದೇನೆ. ನನ್ನ ಮತವು ಹೀಗೆ ಇದ್ದದರಿಂದ ನಾನು ಪರದೇಶೀ ಅರಿವೆಗಳ ಬಹಿಷ್ಕಾರವನ್ನು ಉಪದೇಶಿಸುವೆನು. ಆದ್ದರಿಂದಲೇ ಹಿಂದುಸ್ಥಾನದ ಅವನತಿಗೆ ಕಾರಣವಾದ ಪರದೇಶೀ ವಸ್ತ್ರಗಳನ್ನು ಸುಡಲಿಕ್ಕೆ ನಾನು ಜನರಿಗೆ ಹೇಳಿರುವೆನು.

ನಾನು ಟಿಳಕ ಸ್ವರಾಜ್ಯ ಫಂಡನ್ನು ವಸೂಲ ಮಾಡಿರುವೆನು. ಮತ್ತು ನಾನಾದರೂ ಅದಕ್ಕೆ ಹಣವನ್ನು ಕೊಟ್ಟಿರುವೆನು.

ತಾ. ೧೩ ೭ ೨೨ ತ ಬ. ಪುರೋಹಿತ

---

## ಹೊಸ ಕರ್ನಾಟಕದ ಇತಿಹಾಸವು.

ಈಗ ಮುನ್ನೂರು ವರ್ಷಗಳಿಂದ ನಿದ್ರೆಯಲ್ಲಿ ಮೈಮರೆತ ಕರ್ನಾಟಕವು ಅಸಹಕಾರವೆಂಬ ತಂಗಾಳಿಯಿಂದ ಎಚ್ಚತ್ತಿರುವದು. ತನಗೆ ವೈಭವವು ಏನಾದರೂ ಉಂಟೋ ತನ್ನ ಪೂರ್ವಜರ ಸ್ಮರಣೆಯಾಗಲು ಇತಿಹಾಸವೇನಿರುವದು ಎಂದು ವಿಚಾರಿಸಿ ತಮ್ಮ ಪೂರ್ವಜರು ಇತಿಹಾಸವನ್ನೇ ಬರೆದು ಇಟ್ಟಿಲ್ಲ ಏನು ಮಾಡಬೇಕು ಎಂದು ಉದ್ಗಾರತೆಯುತ್ತಿರುವದು-

ಅಜಿತರಾಷ್ಟ್ರದ ಸ್ವಾತಂತ್ರ್ಯಮಾರ್ಗಕ್ರಮಣದಲ್ಲಿ ತಮ್ಮ ಪ್ರಾಚೀನ ಇತಿಹಾಸವೇ ದಾರಿಯನ್ನು ತೋರಿಸುವದಾಗಿದೆ ಆದರೆ ನಮ್ಮ ದುರ್ದೈವದಿಂದ ಆ ಸಹಾಯವು ಇಲ್ಲದಂತಾಗಿದೆ. ನಮ್ಮ ಪೂರ್ವಜರ ಈತಪ್ಪನ್ನು ನಾವು ತಿದ್ದಿಕೊಳ್ಳಬೇಕು. ಪಾರತಂತ್ರ್ಯದಲ್ಲಿದ್ದ ರಾಷ್ಟ್ರಗಳು ಸ್ವಾತಂತ್ರ್ಯವನ್ನು ಪಡೆಯಲು ಹೇಗೆಪ್ರಯತ್ನಿಸುತ್ತವೆ? ಕರ್ನಾಟಕವು ಪಾರತಂತ್ರ್ಯದಬೇಡಿಗಳನ್ನು ಹರಿದು ಒಗೆಯಲು ಹೇಗೆ ಪ್ರಯತ್ನಿಸಿತು? ಆಕಾಲದ ಪರಿಸ್ಥಿತಿಯು ಹೇಗಿತ್ತು ಇವೇ ಮೊದಲಾದ ಕರ್ನಾಟಕದ ಸಂಗತಿಗಳನ್ನು ಬರೆಯುವ ಆವಶ್ಯಕತೆ ಇರುವದೆಂಬದನ್ನು ಬೇರೆ ಹೇಳಬೇಕಾಗಿಲ್ಲ ಇಲ್ಲವಿದ್ದರೆ ನಮ್ಮ ಪೂರ್ವಜರಿಗೆ ನಾವು ಹೇಗೆ ಇತಿಹಾಸವನ್ನು ಬರೆದಿಟ್ಟಿಲ್ಲವೆಂದು ತಪ್ಪು ಹೊರಿಸುವೆವೋ ಅದೇ ತಪ್ಪನ್ನು ನಾವು ಮಾಡಿದಂತಾಗುವದು.

ನಮ್ಮ ಮೇಲೆ ಅಪವಾದವು ಉಳಿಯಬಾರದೆಂಬ ಹೇತುವಿನಿಂದ ನಾವು ಅಸಹಕಾರ ಚಳವಳಿಯಿಂದ ಜಾಗೃತವಾದ ಹೊಸ ಕರ್ನಾಟಕದ ಇತಿಹಾಸವನ್ನು ಬರೆಯಬೇಕೆಂದು ಯೋಚಿಸಿದ್ದೇವೆ- ಯಾಕಂದರೆ ಕರ್ನಾಟಕವು ಇದೇ ವರ್ಷ ಚೈತನ್ಯಗೊಂಡಿರುವದು. ಇದೇ ವರ್ಷ ಪಾರತಂತ್ರ್ಯವನ್ನು ಹರಿದೊಗೆಯಲು ನಿಶ್ಚಯಿಸಿ ತನ್ನ ಮೂವರು ಕುವರರನ್ನು ಸ್ವಾತಂತ್ರ್ಯ ದೇವತೆಗೆ ಬಲಿಕೊಟ್ಟಿರುವದು. ಇದೇ ವರ್ಷವೇ ಕಷ್ಟವನ್ನು ಅನುಭವಿಸಲು ಸಿದ್ಧವಾಗಿ ನೂರರ ವರೆಗೆ ಗಂಡುಗಲಿಗಳಂಥ ತನ್ನ ಮಕ್ಕಳನ್ನು ತುರಂಗಕ್ಕೆ ಅಟ್ಟಿರುವದು. ಇದೇವರ್ಷವೇ ಹರಿದು ಹಂಚಿ ಹೋದ ತನ್ನ ದೇಹವನ್ನು ಒಟ್ಟುಗೂಡಿಸಿಕೊಂಡು ಉಳಿದ ಪ್ರಾಂತಗಳಂತೆ ತಾನೊಂದು ಸ್ವತಂತ್ರ ಪ್ರಾಂತವೆಂದು ತೋರಿಸಿಕೊಟ್ಟಿರುವದು. ಆದುದರಿಂದ ಕರ್ನಾಟಕದ ಇತಿಹಾಸವು ಇದೇ ಮೊದಲು.

ಹೊಸ ಕರ್ನಾಟಕದ ಇತಿಹಾಸವು ಸರ್ವಾಂಗ ಸುಂದರವಾಗಬೇಕೆಂಬುದೇ ನಮ್ಮ ಇಚ್ಛೆ. ಇದರಲ್ಲಿ ಇಂದಿನವರೆಗೆ ಕರ್ನಾಟಕದಲ್ಲಿ ಬೆಳೆದು ಬಾಳಿದ ಹಾಗೂ ಹುಟ್ಟಿದ ಎಲ್ಲ ಸಂಸ್ಥೆಗಳ ಇತಿಹಾಸವು ಉಳಿಯಬೇಕೆಂದು ಎಲ್ಲ ಸಂಸ್ಥೆಯವರು ತಮ್ಮ ಸಂಸ್ಥೆಯ ಯಾವತ್ತು ಮಾಹಿತಿಯನ್ನು ಕಳಿಸಿಕೊಡಬೇಕೆಂದು ಬೇಡಿಕೊಳ್ಳುತ್ತೇವೆ. ಹಿಂದುಗಡೆ ತಮ್ಮ ಸಂಸ್ಥೆಯು ಇತಿಹಾಸದಲ್ಲಿ ಬರಲಿಲ್ಲವೆಂದು ಹಳಹಳಿಸಬಾರದೆಂದೇ ನಮ್ಮ ಅಪೇಕ್ಷೆ. ಆದ್ದರಿಂದ ಕರ್ನಾಟಕದಲ್ಲಿರುವ ಪ್ರತಿಯೊಂದು ಸಂಸ್ಥೆಯ ಚಾಲಕರು ತಮ್ಮ ಸಂಸ್ಥೆಯ ಎಲ್ಲಸಂಗತಿಗಳನ್ನು ಬರೆದು ತಿಳಿಸಬೇಕೆಂದು ಮತ್ತೊಮ್ಮೆ ನೆನಪು ಕೊಟ್ಟು ಬರಹವನ್ನು ಮುಗಿಸುತ್ತೇವೆ.

ತಮ್ಮ
ಕನ್ನಡಿಗರ ಆಳುಮಗ
ತಿಸುಂದಿಯ ಬಂಧು.

ಎಲ್ಲಿ ಪತ್ರ ವ್ಯವಹಾರವನ್ನು ಬಿಂದೋ ವೆಂಕಟೇಶ ಬಲ್ಲಿ ರಾಷ್ಟ್ರೀಯ ವಿದ್ಯಾಲಯ ಧಾರವಾಡ ಎಂದು ಮಾಡಬೇಕು.

ಎಜಂಟರು ಬೇಕು! ಏಜಂಟರು ಬೇಕು!!

ನಂಬರ ೧ ನೇ ನಿರ್ಮಲವಾದ

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾದ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳೇ ಸೋಯಿಸ್ಕರದಲ್ಲಿ ತೈಲವು ಸಿಗುವದು. ಸಿಕ್ಕಿ ೨೪ ಔಂಸ ತೈಲದಬಾಟ್ಲ ಅಥವಾ ಗಬ್ಬಿ ೧ ಕ್ಕೆ ರೂಪಾಯಿ ೩—ಡಜನ್‌ಕೆ ರು.೩೦ ವಿಶೇಷ ಮಾಹಿತಿ ಪತ್ರದ್ವಾರಾ.

ಬಿ. ಎ. ಪೈ ಕಂಪನಿ.

ಪೋಷ್ಟ ಹೊನ್ನಾವರ.
ಜಿಲ್ಹಾ ಉತ್ತರಕಾನಡಾ

ಸರಸ್ವತೀ ವಾಚನಾಲಯ.

ಶ್ರೀ. ರವೀಂದ್ರನಾಥ ಟಾಗೋರ ಇವರ (Waterfall.) ವಾಟರಫಾಲ್‌ದ ಕನ್ನಡ ಭಾಷಾಂತರವು.

## ಮುಕ್ತಧಾರಾ.

ಭಾಷಾಂತರಕಾರ (ನಾಟಕ.) ಜಿ. ಆರ್. ಕುಲಕರ್ಣಿ

ಮುದ್ರಣವಾಗುತ್ತಲಿದೆ. { ಬೆಲೆ ೧ ರೂ. ಪೋಸ್ಟೇಜ ಬೇರೆ.

ವಿಳಾಸ:— S. N. Hosmani.
ಎಸ್. ಎನ್. ಹೊಸಮನಿ.
ಗುಳೇದಗುಡ್ಡ.

ಇಲ್ಲವೆ, . ಶ್ರೀವಿದ್ಯಾರಣ್ಯ ಮುದ್ರಾಮಂದಿರ,
ಬಾಗಲಕೋಟೆ.

ಇಂಡಿಯಾ ಪ್ರಾವ್ಹಿಡೆಂಟ ಕಂ. ಲಿ. ಕಲಕತ್ತಾ.

ಸಾಮಾನ್ಯ ಸ್ಥಿತಿಯ ಕುಟುಂಬದಾರರಿಗೆ ಈ ಕಠಿಣ ಕಾಲದಲ್ಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಬಿಗಿಯಾಗಿರುವದು ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರೆಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ.

V. J. PARVATIKER.
General Agent, BAGALKOT.

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಎಜಂಟರು) ## ಅತ್ಯುತ್ತಮ ( ಬೇಕು

ಮಸಿ ಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೮—೦ | ಟ. ಖ. ಬೇರೆ. |
| ೧೦೦ ಚೀಟಿಗಳಿಗೆ | ೦—೧೪—೦ | |
| ೪೦ ಔಂಸ ಮಸಿ ಪುಡಿಕೆಗೆ | ೦—೪—೦ | |

ವ್ಯಾಪಾರಸ್ಥರಿಗೂ, ಎಜಂಟರಿಗೂ ವಿಶೇಷ ಕಮಿಶನ್

ವಿಳಾಸ:— ಕರ್ನಾಟಕ ಇಂಕ ಕಂಪನಿ,
ಬಾಗಲಕೋಟೆ.

## ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರದ್ವಾರದಿಂದ, ಉತ್ತಮವಾದ ಸ್ವದೇಶೀ ಸಾಬಾಣವನ್ನ ಮಾಡುವದಕ್ಕೆ ಕಲಿಸುವೆವು.

ಫೀ. ರೂ. ೫. ಉದ್ಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು.

ಕಲಾಭುವನ—ರಾಷ್ಟ್ರೀಯ ಶಾಲಾ
ಧಾರವಾಡ.

## ವಿದ್ಯಾರಣ್ಯ ಮುದ್ರಾಮಂದಿರ
## ಬಾಗಲಕೋಟೆ

ನಮ್ಮಲ್ಲಿ ಎಲ್ಲ ತರದ ಮುದ್ರಣವು ಬಹಳ ಅಂದವಾಗಿಯು ಸ್ವಸ್ತ ದರದಿಂದಲೂ ಮಾಡಲ್ಪಡುವದು. ಒಮ್ಮೆ ಅನುಭವತೆಗೆದು ಕೊಂಡರೆ ತಮಗೇ ಖಾತ್ರಿಯಾಗುವದು. ಇದಲ್ಲದೆ ನಮ್ಮ ಕಡೆಗೆ ವಕೀಲಿ ಪತ್ರ ದರಖಾಸ್ತ ಮುಂತಾದ ನಮೂನೆಗಳೂ, ಟೋಲ ನಾಕೇದ ಪಾವತಿ ಪುಸ್ತಕಗಳೂ ಉಳಿದ ನಮುನೆಗಳೂ ಮಾರಲಿಕ್ಕೆ ಸಿಗುತ್ತಿದ್ದು ಬೇಕಾದವರು ತರಿಸಿಕೊಳ್ಳಬಹುದು. ವ್ಹಿ. ಪಿ. ತರಿಸಿಕೊಳ್ಳ ಬೇಕಾದಲ್ಲಿ ಕೆಲವು ಹಣ ಮುಂಗಡ ಕಳಿಸತಕ್ಕದ್ದು.

ವ್ಯವಸ್ಥಾಪಕ

### ಜಾಹಿರಾತಿನ ದರ.

ಕನ್ನಡ 'ನವಜೀವನ' ದ ಒಂದು ಕಾಲಮಿನ ಒಂದು ಇಂಚಿಗೆ ಪ್ರತಿಯೊಂದು ಸಾರೆ ೧ ರೂ. ಕಾಯಂ ಜಾಹಿರಾತುಗಳ ಬಗ್ಗೆ ಸಂಪಾದಕರ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

### ಚಂದಾ ನಿರ್ಣಯ.

| | |
|---|---|
| ವಾರ್ಷಿಕ ವರ್ಗಣಿ ರೂ. | ೪—೦—೦ |
| ಆರು ತಿಂಗಳಿಗೆ ,, | ೨—೦—೦ |
| ಬಿಡಿಸಂಚಿಕೆ | ೦—೧—೩ |
| ಮಾದರಿ ಸಂಚಿಕೆ ಬೇಕಾದವರು | ೦—೧—೬ |

☞ ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಶ್ರೀನಿವಾಸ ರಾಜೇರಾವ ಮುಂಗಳವೇಡೆ ಇವರು ಮುದ್ರಿಸಿದರು ಮತ್ತು ಅಲ್ಲಿಯೇ ತಮ್ಮಣಾಚಾರ್ಯ ಬಂಡಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ಧರ್ಮವೋ ಅಧರ್ಮವೋ?

R. No B 1589

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟೆ ಶ್ರಾವಣ ಶುದ್ಧ ೩ ಶಕೆ ೧೮೪೪ ಗುರುವಾರ ತಾ ೨೭ ಜುಲೈ ೧೯೨೨ | ಸಂಚಿಕೆ ೩೩

## ಮಹಾತ್ಮರ ನುಡಿಯು

### ತಪ್ಪು ಒಪ್ಪೋಣ

ಯಂಗ ಇಂಡಿಯಾ ತಾ|| ೧೮ ೮-೨೧

ನಾನು ಎಷ್ಟು ಸಾರೆ ತಪ್ಪು ಮಾಡಿರುವೆನೆಂಬುವದನ್ನು ದೇವರೇ ಬಲ್ಲನು. ನಾನು ಎಂದೂ ತಪ್ಪುವವನಲ್ಲನೆಂದೆನ್ನುವವನು ನಾನು ಎನ್ನನ್ನು ಅರಿಯೆನು. ಮನುಷ್ಯನ ಜನ್ಮವು ತನ್ನ ತಪ್ಪು ತಿದ್ದಿಕೊಳ್ಳುವದರಲ್ಲಿ ಅಥವಾ ತಪ್ಪುಗಳನ್ನು ಮಾಡಬಾರದೆಂದು ಒದ್ದಾಡುವದರಲ್ಲಿಯೇ ಜಾರಿಹೋಗುವಂಥದಾಗಿರುವದೆಂದು ತಿಳಿದು ಕೊಳ್ಳುವಷ್ಟು ವಿನಯವನ್ನು ನಾನು ಮಾಡಿದ ತಪ್ಪುಗಳಿಂದ ಕಲಿತುಕೊಂಡಿರುವೆನು. ೧೯೧೯ ನೇ ಇಸ್ವಿಯಲ್ಲಿ ಕಾಯದೇಭಂಗದ ಚಳವಳಿಯನ್ನು ಅಷ್ಟೊಂದು ವಿಚಾರಮಾಡದೆ ಹೂಡಿದ್ದು ನಾನು ಬಹಳ ತಪ್ಪುಮಾಡಿದನೆಂದು ಅನಿಸಿತ್ತು ಮುಂದೆ ನಡಿಯಾದದಲ್ಲಿರುವಾಗ ನನ್ನ ಧೋರಣವು ತಪ್ಪಾದದ್ದೆಂದು ಪಕ್ಕಾ ಹೊಳೆದ ಕೂಡಲೆ "ನನ್ನಿಂದ ಹಿಮಾಲಯದಷ್ಟು ದೊಡ್ಡ ತಪ್ಪು ಘಟಾಯಿಸಿತೆಂದು" ಸಾರಿ ಹೇಳಿದೆನು ಹಾಗೆ ಹೇಳಿದ್ದರಲ್ಲಿ ಏನು ಅತಿಶಯೋಕ್ತಿ ಇರಲಿಲ್ಲ 'ನನ್ನಿಂದ ತಪ್ಪಾಯಿತೆಂದು' ಸ್ಪಷ್ಟವಾಗಿ ಕೂಡಲೆ ಒಪ್ಪಿಕೊಳ್ಳುವ ಜಾಣತನವನ್ನು ನಾನು ಮಾಡಿದಲ್ಲಿಯೇ ಆವೇಳೆಯಲ್ಲಿ ಓಂಪುಸ್ತಾನದ ನೈತಿಕೋನ್ನತಿಯು ಅಚ್ಚಳಿಯದೆ ಉಳಿಯಿತು. ನಾನು ಮಾಡಿದ ಇನ್ನೊಂದು ತಪ್ಪನ್ನು ಈ ತಿಂಗಳಲ್ಲಿ ಸ್ವದೇಶಕಾರ್ಯದಲ್ಲಿ ಎಲ್ಲರೂ ಮಗ್ನರಾದ ಕಾಲದಲ್ಲಿ- ಒಪ್ಪಬೇಕೆನ್ನುತ್ತೇನೆ ಶಾಲಾಧ್ಯಾಪಕರ ಸಂಗಡಲೂ ವಿದ್ಯಾರ್ಥಿಗಳ ಸಂಗಡಲೂ ಮಾತಾಡುವಾಗ ಇದನ್ನು ಈ ಮೊದಲೇ ಒಪ್ಪಿರುವೆನು. ಆದರೆ ಇದು ಎಲ್ಲರಿಗೂ ತಿಳಿಯಬರುವಂತೆ ಬೈಲಿಗೆ ನಿಂತು ಒಪ್ಪುವನು ನನ್ನ ಮನಸ್ಸಿನ ಶಾಂತಿಗೆ ಅವಶ್ಯವಾಗಿರುವದು. ಸರಕಾರೀ ಶಿಕ್ಷಣ ಸಂಸ್ಥೆಗಳನ್ನು ಬಹಿಷ್ಕರಿಸುವದೇ ಯೋಗ್ಯವಾದದೆಂದು ನನಗೆ ಈ ೧೮ ತಿಂಗಳ ಅನುಭವದಿಂದ ಪೂರ್ಣ ಮನವರಿಕೆಯಾಗಿರುವದು- ಆದರೆ ಅವುಗಳನ್ನು ಬಹಿಷ್ಕರಿಸಿ ಹೊರಗೆ ಬಂದನಂತರ ಮಾಡಬೇಕಾದ ಕರ್ತವ್ಯವನ್ನು ಸೂಚಿಸುವದರಲ್ಲಿ ನಾನು ತಪ್ಪಿದೆನು ಇಂಥದೇ ಮಾಡಬೇಕೆಂದು ಹೇಳುವದು ನನ್ನ ಮನಸ್ಸಿನಲ್ಲಿದ್ದರೂ ಅದು ಜನರಿಗೆ ಸಮಂಜಸ ತೋರುವಷ್ಟು ಜೋರಿನಿಂದ ಹೇಳುವದು ನನ್ನಿಂದ ಆಗಲಿಕ್ಕಿಲ್ಲವೆಂದು ಅಂಜಿ ಅದನ್ನು ಹೇಳದೆ ಇದ್ದೆನು. ಫಲದೊರೆಯುವದು ಅಥವಾ ಬಿಡುವದು ದೇವರನ್ನು ಕೂಡಿರುವದೆಂದು ನೆನೆಸುವೆ ನಾನು. ಪರಿಣಾಮದ ವಿಷಯಕ್ಕೆ ಬಹಳ ಆತುರನಾದೆನು ಹೀಗೆ ವ್ಯಾಕುಲನಾದ ವೇಳೆಯಲ್ಲಿ ತಮ್ಮ ಶಾಲೆಗಳನ್ನು ಬಿಟ್ಟನಂತರ ಹುಡುಗರು ಏನಾದರೂ ಮಾಡಬಹುದು— ಓಣಿಓಣಿ ತಿರುಗಲಿ, ಅದೇ ಶಿಕ್ಷಣವನ್ನು ಎರಡನೇ ಕಡೆಯಿಂದ ದೊರಕಿಸಲಿ ಅಥವಾ ಎಲ್ಲಕ್ಕೂ ಶ್ರೇಷ್ಠವಾದದ್ದೆಂದು ನೂಲು ತೆಗೆಯುವದರಲ್ಲಿ ಕಾಲಕಳೆಯಲಿ-ಎಂದು ಮೂರುನಾಲ್ಕು ಮಾರ್ಗಗಳನ್ನು ಸೂಚಿಸಿದೆನು. ನಾಗಪೂರ ಕಾಂಗ್ರೆಸ ಆದಕೂಡಲೆ ವಿದ್ಯಾರ್ಥಿಗಳಿಗೆ ಹೀಗೆ ಎರಡು ಮೂರು ಮಾರ್ಗಗಳನ್ನು ತೋರಿಸಿದ್ದು ಮೂರ್ಖತನವಾಯಿತೆಂದು ತಿಳಿದು ಬಂದಿತು. ಆದರೆ ಮಾಡುವದೇನು. ಅಷ್ಟರಲ್ಲಿ ಆಗಬಹುದಾದ ಅನಿಷ್ಟವು ಆಗಿಹೋಗಿತ್ತು ಅದು ಸಪ್ಟಂಬರ ತಿಂಗಳಲ್ಲಿಯೇ ಸುರುವಾಗಿತ್ತು. ನಾನು ಮುಂದ ಜಾನೆವಾರಿ ತಿಂಗಳಲ್ಲಿ ತಿದ್ದಿಕೊಳ್ಳಲು ಪ್ರಯತ್ನಿಸಹತ್ತಿದೆನು. ಆದರೆ ಹಿಂದುಗಡೆಯಿಂದ ಸುಧಾರಣೆಹೊಂದಿದ ಎಲ್ಲ ಕೆಲಸಗಳಂತೆ ಇದಾದರೂ ಹರಕುಮುರುಕಾಯಿತು. ಬಹಳವಾದ ಎಲ್ಲ ಅಸಹಕಾರೀ ಶಾಲೆಗಳಲ್ಲಿ ನೂಲುವ ರಾಟಿಯು ಬೇಸರ ಕಳಕೊಳ್ಳುವ ಒಂದು ತಮಾಶೆಯಾಗಿ ಕೂತುಕೊಂಡಿತು. ಶಾಲೆಯನ್ನು ಬಿಟ್ಟವರೆಲ್ಲರೂ ಕೈನೂಲಿನ ಮತ್ತು ಕೈಮಗ್ಗದ ವ್ಯವಸಾಯದಲ್ಲಿಯೇ ಅವಶ್ಯವಾಗಿ ತೊಡಗಬೇಕೆಂದು ಮೊದಲೇ ಸ್ಪಷ್ಟವಾಗಿ ಹೇಳಬೇಕಾಗಿತ್ತು. ಹೀಗೆ ಹೇಳಿದಲ್ಲಿ ಇಷ್ಟು ಹುಡುಗರು ಬಿಡುತ್ತಿದ್ದಿಲ್ಲ ಇದು ನಿಜವು, ಆದರೆ ಎಷ್ಟೇ ಕಡಿಮೆ ಬಿಟ್ಟಿದ್ದರೂ ಅವರೆಲ್ಲರೂ ತಮ್ಮ ಎಲ್ಲ ಉತ್ಸಾಹವನ್ನು ಈ ಖಾದಿಯ ವ್ಯವಸಾಯದಲ್ಲಿಯೇ ವೆಚ್ಚಮಾಡಿದ್ದರೆ, ಈಗ ಬಿಟ್ಟಿರುವ ಅಸಂತುಷ್ಟ ಹುಡುಗರಿಂದ ಆಗದೆ ಇರುವ ಕಾರ್ಯವು ಆ ಸ್ವಲ್ಪೇ ಹುಡುಗರಿಂದ ನಿಂಗವಾಗುತ್ತಿತ್ತು ಮತ್ತು ನಮ್ಮ ಸ್ವದೇಶಿ ಚಳವಳಿಯು ಹೆಚ್ಚು ಬಲಭರವಾಗುತ್ತಿತ್ತು. ಇಷ್ಟು ವೇಳೆಯಲ್ಲಿ ಅವರೆಲ್ಲರು ನೂಲುವದರಲ್ಲಿಯೂ ನೇಯುವದರಲ್ಲಿಯೂ ನಿಷ್ಣಾತರಾಗಬಹುದಾಗಿತ್ತು ಅಸಹಕಾರಿ ಶಾಲೆಗಳ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ತಮ್ಮ ಕೈಲಾದಷ್ಟು ಪ್ರಯತ್ನ ನಡೆಸಿರುವದೇನು ನಿಜವು, ಆದರೆ ಆದ ದೊಡ್ಡ ಅಡಚಣೆಯಿಂದರೆ ಅದರಲ್ಲಿ ಅವರಿಗೆ ಅಷ್ಟು ವಿಶ್ವಾಸವೆನಿಸುವದಿಲ್ಲ ಶಿಕ್ಷಣ ಬಹಿಷ್ಕಾರ ಪ್ರಶ್ನೆಯನ್ನು ಸ್ವಾಭಾವಿಕವಾಗಿ ಅವರು ಕೇವಲ ಶಿಕ್ಷಣ ಇದೊಂದೇ ದೃಷ್ಟಿಯಿಂದ ವಿಚಾರಿಸಿರುವರು ಅವರ ಶಿಕ್ಷಣ ಸಂಸ್ಥೆಗಳನ್ನು ಬಹಿಷ್ಕರಿಸಿ ಸರಕಾರದ ಇಬ್ರತೆಯನ್ನು ಕಳೆಯುವದು ಇಷ್ಟೇ ಅವರಿಗೆ ಬೇಕಾಗಿತ್ತು. ಈ ಬಹಿಷ್ಕಾರದ ಕೆಲಸವು ಪೂರ್ಣವಾಗಬೇಕಾದರೆ ನೂಲುವ ನೇಯುವ ವ್ಯವಸಾಯವನ್ನು ಕೈಕೊಳ್ಳಲೇಬೇಕೆಂದು ಈಗ ಅವರಿಗೆ ಹೇಳಿದರೆ ಅದು ಸ್ವಲ್ಪ ಅವರಿಗೆ ಕಠಿಣವೆನಿಸಹತ್ತಿರುವದು, ಸ್ವರಾಜ್ಯಯುದ್ಧದ ಪೂರ್ವತಯಾರಿ

ಎಂದೂ ಮತ್ತು ಸಂಗ್ರಾಮನಡೆದ ಸಮಯದಲ್ಲಿ ತಿಗಬಹುದಾದ ಶಿಕ್ಷಣವೆಂದರೆ ಖಾದಿಯ ಹುಟ್ಟುವಳಿಯನ್ನು ಹೆಚ್ಚಿಸಲಿಕ್ಕೆ ಕಲಿತು ಕೊಂಡು ಅದೇ ಉದ್ಯೋಗವನ್ನು ಕೈಕೊಳ್ಳುವದಾಗಿರುವದು.

ಈ ಅಸಹಕಾರದೊಳಗೆ, ನೂಲುವ ನೇಯುವ ಕೆಲಸವನ್ನು ಶಿಕ್ಷಣದ ಒಂದು ಅಂಗವಾಗಿಮಾಡುವ ಆವಶ್ಯಕತೆಯ ಬಗ್ಗೆ ಇನ್ನೂ ಸಂಶಯ ಉಳ್ಳವರಿಗೆ ಅದರ ಮನವರಿಕೆಮಾಡಿಕೊಡುವ ಪ್ರಯತ್ನವನ್ನು ನಾನು ಮಾಡಿದ ತಪ್ಪಿನ ಪ್ರಾಯಶ್ಚಿತ್ತೆಂದು ತಿಳಿದು ನಾನಂತೂ ನಡಿಸಲೇಬೇಕು. ಇದರೊಳಗೆ ನನ್ನಂತೆ ವಿಶ್ವಾಸ ಉಳ್ಳವರೆಲ್ಲ ತಾವು ಸುಧಾರಣೆ ಮಾಡಬಹುದಾದ ಶಾಲೆಗಳಲ್ಲಿ ಈ ಕ್ಷಣಕ್ಕೆ ಆ ಉದ್ಯೋಗಕ್ಕೆ ಹತ್ತಬೇಕೆಂದು ನಾನು ಬೇಡಿಕೊಳ್ಳುವೆನು 'ಇವನ್ನೆಲ್ಲ ಕಲಿಸುವವರೆಲ್ಲಿ ಇರುವರು'? ಎಂದು ಅವರು ಕೇಳ ಹತ್ತಬಾರದು. ಅಂಥವರು ನನ್ನಲ್ಲಿ ತೀರ ಸ್ವಲ್ಪೇ ಜನರು ಉಂಟು. ಆದರೆ ಅರಳಿಯಿಂದ ಅರಿವೆ ಆಗುವವರೆಗೆ ಇರುವ ಕ್ರಮವನ್ನೆಲ್ಲ ಇಲ್ಲಿ ನಿವೃತ್ತಿಸಲುವಾಗಿ ಬರೆಯುವೆನು; ಅರಳಿಯನ್ನು ಮೊದಲು ಹಿಂಜಬೇಕು ಈ ಕೆಲಸವನ್ನು ಮಾಡಬಲ್ಲ ಪಿಂಜಾರರು ಇಲ್ಲದ ಹಳ್ಳಿಯೇ ಇರುವದಿಲ್ಲ. ಅವರು ಹಿಂಜುವದನ್ನೂ ಹೊಡೆಯುವದನ್ನೂ ವಂದೆರಡು ದಿವಸ ಬರೆ ನೋಡಿದರೆ ಅದು ಬಂದು ಬಿಡುವದು. ದಿನಾಲು ೬ ತಾಸಿನಂತೆ ಒಂದುವಾರ ಈ ಪ್ರಕಾರ ಅದರಲ್ಲಿ ವೆಚ್ಚ ಮಾಡಿದರೆ ಸಾಧಾರಣವಾಗಿ ಪಿಂಜಾರನ ಉದ್ಯೋಗವು ಸಾಧಿಸುವದು.

ಈ ಪ್ರಕಾರ ಹಿಂಜಿದ ನಂತರ ಆ ಅರಳಿಯನ್ನು ಹಂಜೀಹಾಕಬೇಕು; ಇದಂತೂ ನಂಬಲಾರದಷ್ಟು ಸುಲಭವಾದದ್ದಾಗಿರುವದು.

ಹಂಜೀ ಹಾಕಿದ ನಂತರ ಅರಳಿಯು ನೂಲುವದಕ್ಕೆ ಹದವಾದಂತಾಯಿತು. ಈ ನೂಲು ಕ್ರಿಯೆಯನ್ನು ಯಾರಕಡಿಯಿಂದಾದರೂ ಕಲಿಯಬಹುದು. ನೂಲು ನಿರ್ಮಲವಾಗಿಯೂ ಒಂದೇ ಸವನಾಗಿಯೂ ಮತ್ತು ಒಳ್ಳೇ ಹುರಿಯೂ ಇದ್ದರೇ ಅದಕ್ಕೆ 'ನೂಲು ಎಂದರೆ ಸಲ್ಲುವದು. ಒಂದೇ ಸವನಾಗಿ ಮಾತ್ರ ಹುರಿಯಿರದೆ ಇದ್ದದ್ದನ್ನು ನೇಯಲಿಕ್ಕೆ ಬರುವದಿಲ್ಲ.

ನೂಲುವದಾದ ನಂತರ ಮುಂದಿನ ಕ್ರಮವೆಂದರೆ ಅದನ್ನು 'ಹಾಸು' ಹೊಯಿದು 'ಉಂಕೀ' ಹಾಕುವದು ಇದು ಎಲ್ಲಕ್ಕೂ ಕಠಿಣವಾದದ್ದು. ಉಂಕಿ ಹಾಕಲಿಕ್ಕೆ ಹತ್ತುವ ಸಾಮಾನುಗಳು ಯಾವವು, ಮತ್ತು ಎಷ್ಟೆಷ್ಟು ಹಾಕಬೇಕು ಎಂಬದನ್ನು ನಾನು ಇನ್ನೂ ಗೊತ್ತುಮಾಡಿಕೊಂಡಿಲ್ಲ. ಜಾಣನಾದ ಜಾಡರವನಿಂದ ಇವನ್ನು ಕಲಿತುಕೊಳ್ಳಬಹುದು.

ಉಂಕೀ ಹಾಕಿದ ನಂತರ 'ಕೆಚ್ಚ' ದ ಕೆಲಸವು ಪ್ರಾರಂಭವಾಗುವದ. ಸಾಯಕಲ್ಲಿನ ಮೇಲೆ ಕೂಡುವದು ಒಂದು ತೂಕವಿದಂತೆ ಇದರಲ್ಲಿಯೂ ಒಂದು ಟೊಕಿ ಇರುವದು. ಇನ್ನು ಕಡೆಯದೆಂದರೇ ನೇಯುವದು ಇದಂತೂ ಕೇವಲ ರೂಢಿಯ ಕೆಲಸವು- ಇವೆಲ್ಲವನ್ನು ಸ್ವಲ್ಪಕಾಲದಲ್ಲಿಯೇ ಕಲಿಯುವದು ನಾನು ಬರೆದಷ್ಟೇನು ಹಗರಾಗಿರಲಿಕ್ಕಿಲ್ಲವೆಂದು ಸಂಶಯ ತೆಗೆದುಕೊಳ್ಳುವ ಕಾರಣವಿಲ್ಲ. ಸೃಷ್ಟಿಯಲ್ಲಿ ಅವಶ್ಯವಾದ ಎಲ್ಲ ಕೆಲಸಗಳು ಹೀಗೆ ಸುಲಭವಾದವುಗಳಾಗಿರುವವು. ಅವುಗಳಲ್ಲಿ ಪ್ರಾವೀಣತೆಯನ್ನು ಹೊಂದಬೇಕಾದರೆ ಬಿಟ್ಟುಬಿಡದೆ ಅವುಗಳಲ್ಲಿ, ಅಭ್ಯಾಸಮಾತ್ರ ಇರಬೇಕಾಗುವದು; ಮತ್ತು ಅದಕ್ಕೆ ತಲೆ ಕಟ್ಟಿಕೊಂಡು ಕೂಡ್ರುವ ಗುಣವಿರಬೇಕು. ಹೀಗೆ ಒಂದಕ್ಕೇ ಹತ್ತಿಬೀಳುವ ಸ್ವಭಾವವನ್ನು ಸಂಪಾದಿಸುವದೇ ಸ್ವರಾಜ್ಯವು. ಇದೇ ಯೋಗ್ಯವು- ಇವೆಲ್ಲ ತಲೆ ಎಬ್ಬಿಸುವ ಕೆಲಸಗಳೆಂದು ಇವುಗಳನ್ನು ಹಳಿಯ ಕೂಡದು. ಸೃಷ್ಟಿಕ್ರಮವೇ ಹೀಗೆ ಏಕಪ್ರಕಾರವಾದದ್ದಾಗಿರುವದು. ಸೂರ್ಯನು ದಿನಾಲು ಏಕಪ್ರಕಾರವಾಗಿಯೇ ಉದಯಿಸುತ್ತಿರುವದನ್ನು ನೋಡಿರಿ. ಇದೇ ಸೂರ್ಯನು "ಏನು ದಿನಾಲು ಒಂದೇ ಸವನೆ ಉದಯಿಸುವದು ಬೇಸರ ಬಂದು ಹೋಗಿರುವ" ದೆಂದು ಅದನ್ನು ಬಿಟ್ಟುಗೊಟ್ಟು ಮನಸಿಕರಾಯನಂತೆ ಮನಬಂದದ್ದನ್ನು ಮಾಡಹೋದರೆ ಜಗತ್ತಿಗೆ ಎಂಥ ಅನರ್ಥವಾಗುವದು! ಆದರೆ ಈ ಏಕ ಪ್ರಕಾರತೆಯಾದರೂ ಎರಡುವಿಧವಾಗಿರುವದು- ಒಂದರಿಂದ ಜೀವಧಾರಣವಾಗುತ್ತಿದ್ದರೆ ಮತ್ತೊಂದರಿಂದ ಜೀವ ಹಸಣವಾಗುವದಾದರೂ ನಿಜ. ಆದರೆ ಜೀವಿಸಲಿಕ್ಕೆ ಅಶ್ಯವಾದ ಕೆಲಸಗಳಲ್ಲಿರುವ ಏಕಪ್ರಕಾರತೆಯಿಂದ ಜೀವವು ಉತ್ಸಾಹವನ್ನೇ ಹೊಂದುವದು. ಕಲಾ ನಿಪುಣರು ಎಂದಾದರೂ ತಮ್ಮ ವ್ಯವಸಾಯ ದಲ್ಲಿ ಬೇಸರವನ್ನು ತಳಬಹ ದೋ? ಇದರಂತೆ ನೂಲುವದರಲ್ಲಿ ಪ್ರವೀಣತೆಯನ್ನು ಹೊಂದಿದವನು ಏನೂ ಬೇಸರವಿಲ್ಲದೆ ಬೇಕಾದಷ್ಟು ಕಾಲವವರೆಗೆ ನೂಲು ತೆಗೆಯುತ್ತ ಕೂಡ್ರಬಲ್ಲನು. ಕದರಿನಿಂದ ಹೊರಡುವ ಧ್ವನಿಯ ಮಾಧುರ್ಯವನ್ನು ಅವನೇ ಬಲ್ಲನು ಈ ರೀತಿಯಿಂದ ಏಕಪ್ರಕಾರವಾಗಿ ಬಿಟ್ಟುಬಿಡದೆ ದುಡಿದು ಸ್ವರಾಜ್ಯವನ್ನು ದೊರಕಿಸಿದರೆ ಅದು ಎಲ್ಲರಿಗೂ ಸತತ ಸಂತೋಷವನ್ನು ಬೀರುವಂಥದಾಗಿರುವದು; ಆದರೆ ಅದು ನೂಲುವರಾಟೆಯನ್ನು ಬಿಟ್ಟಿರಲಾರದು; ಆದ್ದರಿಂದ ಹಿಂದುಸ್ಥಾನಕ್ಕೆ ಅತ್ಯುತ್ತಮವಾದ ಶಿಕ್ಷಣವೆಂದರೆ ನೂಲುವ ವಿದ್ಯೆಯನ್ನು ಕಲಿಯುವದಾಗಿರುವದು.

---

## ಚೌಪಾಟಿಯ ಮೇಲೆ.

(ಯಂಗ ಇಂಡಿಯಾ ೪-೮-೨೧)

೧೯೨೧ ನೇ ಇಸ್ವಿ ಆಗಸ್ಟ ೧ನೇ ತಾ. ದಿವಸ ಮುಂಬಯಿ ಪಟ್ಟಣದಲ್ಲಿ ಚೌಪಾಟಿ ಮೇಲೆ ನೆರೆದ ಪ್ರಚಂಡ ಜನಸಮುದಾಯಕ್ಕೆ ಹಂಚಲ್ಪಟ್ಟ ಹಸ್ತಪತ್ರಗಳಲ್ಲಿಯ ಮಹಾತ್ಮರ ಭಾಷಣವು.

ನಿನ್ನಿನ ದಿವಸ ಶ್ರೀಯುತ ಸೊಬಾನಿಯವರ ಪಟಾಂಗಣದ ಮೇಲೆ ಇನ್ನೂರು ಸಹಸ್ರ ಜನರು ಏಕತ್ರ ಕಲೆತಿದ್ದು ಕೇವಲ ಲೋಕಮಾನ್ಯ ಟಿಳಕರ ನಾಮ ಪ್ರಭಾವವೇ. ಆ ಅಪಾರವಾದ ಜನಸಮುದಾಯವನ್ನು ನೋಡಿ ನನ್ನ ಆತ್ಮವು ಚೇತರಿಸಿತು. ನಿನ್ನಿನ ದಿವಸ ಮನೋಹರವಾದ ಮುಂಬಾ ಪಟ್ಟಣವು ಒಂದು ಜ್ವಾಲೆಯನ್ನು ಪ್ರಜ್ವಲಿಸಿರುವದು; ಪಾರ್ಸಿ ಜನರ ದೇವಾಲಯದಲ್ಲಿ ಸತತ ಉರಿಯುತ್ತಿರುವ ಅಗ್ನಿಯಂತೆ ಇದು ಇನ್ನುಮುಂದೆಲ್ಲ ಯಾವಾಗಲೂ ಪ್ರಜ್ವಲಿತವಾಗಿದ್ದು ನಿನ್ನಿನ ದಿವಸ ನಮ್ಮ ಪಾಪಮಯ ಪರದೇಶೀ ಬಟ್ಟೆಗಳನ್ನು ಭಸ್ಮ ಮಾಡಿ ನಮ್ಮ ಬಾಹ್ಯವನ್ನು ಪುನೀತ ಮಾಡಿದಂತೆ ನಮ್ಮ ಅಂತರಂಗವನ್ನಾದರೂ ಶುದ್ಧಿಗೈಯುತ್ತಿರಬೇಕಾಗಿದೆ. ಈ ಜ್ವಾಲೆಯು, ನಾವು ಇನ್ನು ಮುಂದೆ ಎಂದೂ ವಿದೇಶೀ ಅರಿವೆಗಳನ್ನು ಧರಿಸುವವರಲ್ಲೆಂಬ ನಮ್ಮ ದೃಢ ನಿಶ್ಚಯದ ದ್ಯೋತಕವಾಗಿರಲಿ. ಹಿಂದುಸ್ಥಾನವೇ ತಮ ವಾಸಸ್ಥಳವೆಂದು ತಿಳಿದುಕೊಂಡ ಪ್ರತಿಯೊಬ್ಬ ಹಿಂದು ಮುಸಲ್ಮಾನ ಜೈನ, ಸೀಖ, ಪಾರಸಿ, ಕ್ರಿಶ್ಚನ, ಜ್ಯೂ, ಇನ್ನೂ ಉಳಿದ ಅನೇಕ ಧರ್ಮ ಪಂಥದವರು ಪರದೇಶೀ ಅರಿವೆಯನ್ನು ಅಸ್ಪೃಶ್ಯವೆಂದು ತಿಳಿದುಕೊಳ್ಳುವದು ತಮ್ಮ ಧರ್ಮವೆಂದು ಭಾವಿಸಬೇಕು. ಹಿಂದುಸ್ಥಾನದಲ್ಲಿಯ ಎಲ್ಲ ಪಂಥದವರಿಗೂ ಅವಶ್ಯವಾಗಿ ಇದೊಂದು ಸಮಾನಧರ್ಮವಾಗಿರತಕ್ಕದ್ದು ಅಂತ್ಯಜರು ಅಸ್ಪೃಶ್ಯರೆಂದು ತಿಳಿದುಕೊಳ್ಳುವದು ಎಷ್ಟು ಪಾಪಕರವೋ ಪರದೇಶಿ ಅರಿವೆಯು ಅಸ್ಪೃಶ್ಯವಾದದ್ದೆಂದು ಭಾವಿಸುವದು ಅಷ್ಟೇ ಪವಿತ್ರವಾದದ್ದು. ಆದ್ದರಿಂದ ನಿನ್ನಿನ ದಿವಸ ಮುಂಬಯಿಯಲ್ಲಿ ನಾವು ಹೂಡಿದ ಯಜ್ಞವು ದಿವ್ಯವಾದದ್ದು ಲೋಕಮಾನ್ಯರ ಸ್ಮಾರಕದ ಕೆಲಸವನ್ನು ಈ ರೀತಿಯಾಗಿ ಜರಗಿಸಿ ಮುಂಬಾಪಟ್ಟಣವು ಪುನೀತವಾಗಿರುವದು, ಲೋಕಮಾನ್ಯರ ಅತುಲವಾದ ಸ್ವಾರ್ಥತ್ಯಾಗವನ್ನೂ ಅವರ ಅಚಲವಾದ ಧೈರ್ಯವನ್ನೂ ವರ್ಣನೀಯವಾದ ಅವರ ಸಾದಾ ವೃತ್ತಿಯನ್ನೂ ನಾವು ನಮ್ಮ ಹೃತ್ಪಟಲವೊಳಗೆ ಕೊರೆದಿಟ್ಟು ಯಾವಾಗಲೂ ನೆನೆಯುತ್ತಿರಬೇಕು ಲೋಕಮಾನ್ಯರು; ಓಂ ರಾಷ್ಟ್ರದೇವೋಭವ, ಎಂದು ದೇಶಾಭಿಮಾನವನ್ನೂ ಧರ್ಮಬಂಧನದಲ್ಲಿ ಸೇರಿಸಿರುವರು ಅವರು ಕನಕಾಂಕುಶಿದ್ದ

ಸ್ವರಾಜ್ಯ ಸಂಪಾದನೆಗಾಗಿ ನಾವು ನಮ್ಮ ಜೀವನಗಳನ್ನೇ ಅರ್ಪಿಸೋಣ. ಸ್ವರಾಜ್ಯದ ಹೊತ್ತಿಗಾಗಿ ಆವಶ್ಯಕವಾದಂತಹ [illegible] ಒಪ್ಪುವಂತೆ ಅವರ ಸ್ಮಾರಕವು [illegible]

ಮತ್ತು ನಾವು ನಿನ್ನಿನ ದಿವಸ ಹಚ್ಚಿರುವಂತಹ ಹಿಂದುಸ್ಥಾನದ ಸ್ವದೇಶಿಯ ಹೊತ್ತುಗೆ ತರುಣೋಪಾಯವು ಇನ್ನೂ ಬೆಳೆದಿಲ್ಲ [illegible] ವಿದೇಶಿ ಅರಿವೆಯಿಂದ ನಾವು ನಿನ್ನೆ ಪ್ರಜ್ವಲಿಸಿದ ಜ್ಯೋತಿಯು ಜಗತ್ತಿನ ಹೇನಮ್ಮದಿಯನ್ನಾಗಿರುವದು. ನಮ್ಮ ಹೃದಯದೊಳಗಿನ ದೋಷಗಳನ್ನೆಲ್ಲ ಸುಟ್ಟು ಬೂದಿಮಾಡಲಿಕ್ಕೆ ಪ್ರಜ್ವಲಿತವಾಗಿರುವ ಆ ಅಂತರ ಜ್ಯೋತಿಯ ಬಾಹ್ಯ ಚಿಹ್ನವೆಂದು ಈ ನಿನ್ನಿನ ಜ್ವಾಲೆಯನ್ನು ನಾವು ತಿಳಿದಿರುವೆವು. ಈ ಪ್ರಕಾರ ಶುದ್ಧವಾದ ಬುದ್ಧಿಯುಳ್ಳವರಾಗಿ ನಾವು ಅರ್ಥಶಾಸ್ತ್ರದೃಷ್ಟಿಯಿಂದ ಸ್ವದೇಶಿಯು ಎಷ್ಟು ಮಹತ್ವಪೂರ್ಣವಾಗಿರುವದೆಂಬದನ್ನು ಕಂಡು ಹಿಡಿಯಬಹುದು ಮತ್ತು ನಿರ್ಮಲವಾದ ಮನಸುಳ್ಳವರಾಗಿ ಪರದೇಶಿ ಅರಿವೆಯ ಮೋಹಕ್ಕೆ ಬಲಿಬೀಳದಷ್ಟು ಬಲವುಳ್ಳವರಾಗಬೇಕು. ಹಿಂದುಸ್ಥಾನದ ಹೊರಗೆ ಅದು ಎಷ್ಟು ಅಂದ ತೋರಿದರೂ ಅದು ಹಿಂದುಸ್ಥಾನದಲ್ಲಿ ವಿಘಾತಕವಾದದ್ದು.

ನಿನ್ನೆ ಹೊತ್ತಿಸಿದ ಜ್ಯೋತಿಯು ಬೆಟ್ಟ ಆಗದಂತೆಯೂ ಮತ್ತು ಈ ಹೊತ್ತು ಲೋಕಮಾನ್ಯರ ಸ್ಮರಣೆಗಾಗಿ ತೆರೆದಿರುತ್ತಿರುವ ಭಾವನೆಯು ಮೋಸವಾಗದಂತೆಯೂ ನಾವು ಯಾವಾಗಲು ಎಚ್ಚರುಳ್ಳವರಾಗಿರಬೇಕು.

ಖಾದಿಯು ದೊಡ್ಡವರ ಮನೆತನಸ್ಥರ ಮತ್ತು ಮಾನಸ್ಥರ ಪೋಷಾಕವಾಗಹತ್ತಿರುವದು. ಪಟ್ಟೆ ಹುಂಚಿ ಮದುವೆ ಮುಂಜಿವೆ ಮೊದಲಾದ ಸಂಭ್ರಮದ ಸಮಯದಲ್ಲಿ ಧರಿಸಬೇಕಾದ್ದಾದರೂ ಪವಿತ್ರವಾದ ಖಾದಿಯು ಯಾಕಂದರೆ ಖಾದಿಯಿಂದ ಒದಗಿ ಬರುವ ಸಮೃದ್ಧಿಯಿಂದ ದರಿದ್ರನಾದ ಕೂಲಿಯವನಿಗೂ ಕೂಡ ಅದರ ಸಂಸ್ಕಾರದ ಸೌಂದರ್ಯವೂ ಮಾನವೂ ದೊರೆತಕ್ಕದ್ದು. ಆದರೆ ಅದೇ ಮನೋಹರವಾಗಿ ತೋರುವ ಪರದೇಶಿ ಮಸಲಿನ್ ಅರಿವೆಯು ಹಿಂದಿರುವ ಚಿತ್ರವು ಹೃದಯದ್ರಾವಕವಾಗಿರುವದು. ಮೈಮೇಲೆ ಚಿಂದಿಗಳು ಹರಿಯುತ್ತಿದ್ದರೂ ಜುಲುಮೆಗಾರರ ಅಂಜಿಕೆಗಾಗಿ ದುಡಿದು ಹೆಣವಾಗುವವರನ್ನೊಂದು ಮತ್ತು ಹಿಂದುಸ್ಥಾನದಲ್ಲಿ ಲಕ್ಷಾವಧಿ ಜನರು ಕೆಲಸವಿಲ್ಲದೆ ಕಾಲುಚಾಚಿಕೊಳ್ಳಬೇಕಾದ್ದರಿಂದ ಉಪವಾಸ ಬಳಲುತ್ತಿರುವವರನ್ನೊಂದು ನಿನ್ನೆ ನಾವು ಹೋಳಿ ಮಾಡಿದ ಕೃತಿಗೂ ಮತ್ತು ದೇಶೋದ್ಧಾರಕನಾದ ನಮ್ಮ ದೇಶಬಾಂಧವನ ಪವಿತ್ರವಾದ ದೇಹವನ್ನು ಹನ್ನೆರಡು ತಿಂಗಳ ಹಿಂದೆ ದಹನ ಮಾಡಿದ ಸ್ಥಳದಲ್ಲಿಯೇ ಇಂದು ನೆರೆದು ನಮ್ಮ ಪೂಜ್ಯಭಾವನೆಯನ್ನು ವ್ಯಕ್ತಮಾಡುವದಕ್ಕೂ ಏನಾದರೂ ನಿಜವಾದ ಅರ್ಥವಿರಬೇಕಾಗಿದ್ದರೆ ನಾವು ಒಮ್ಮೆ ನಿಶ್ಚಯಿಸಿದ ಮಾರ್ಗದಿಂದ ಎಂದೂ ಪರಾಙ್ಮುಖರಾಗಕೂಡದು, ಜಂಬವನ್ನಾಗಲಿ ಆಡಂಬರವನ್ನಾಗಲಿ ಆಚರಿಸಬಾರದು. ಪರದೇಶದ ಅರಿವೆಯನ್ನು ಧರಿಸುವದನ್ನು ಒಮ್ಮೆ ಬಿಟ್ಟವರು ಅದನ್ನು ಸೂರ್ಯಚಂದ್ರರಿರುವವರೆಗೆ ನಡಿಸಬೇಕು. ನಮ್ಮ ಬಳಿಯಲ್ಲಿದ್ದ ವಿದೇಶಿ ಬಟ್ಟೆಗಳು ನಿರುಪಯೋಗಿಯಾದವುಗಳೆಂದು ಭಾವಿಸಬೇಕು. ಹಾಲು ಎಂಥ ಪೋಷಕವಾದ ಪೇಯವಾಗಿದ್ದರೂ ದೂಷಿತವಾಗಿದ್ದಲ್ಲಿ ಅದನ್ನು ಒಗೆಯುವದೇ ಯೋಗ್ಯವಾದದ್ದೆಂದು ತಿಳಿಯುತ್ತಿರುವದಿಲ್ಲವೋ ನಾವು ಇನ್ನು ಮುಂದೆ ಎಂದೂ ಪರದೇಶೀ ಅರಿವೆಗಳನ್ನು ಧರಿಸುವದಿಲ್ಲದಿದ್ದರೆ ಅವನ್ನೆಲ್ಲ ಟ್ರಂಕಿನಲ್ಲಿ ಹಾಕಿಡುವದು ಒಂದು ಭಾರವೇ ಅಲ್ಲವೆ? ಯುರೋಪದಲ್ಲಿ ಯಾವದೇ ಸೊಬಗಿನ ಬೆಡಗು ಅಡಗಿದ ಕೂಡಲೇ ಅದನ್ನು ಒಗೆದು ಬಿಡುವದಿಲ್ಲವೆ? ಎಷ್ಟೋ ಜನರು ತಮ್ಮ ವಿದೇಶಿ ಪೋಷಾಕಿನ ಕೆಲವು ಭಾಗವನ್ನು ಮಾತ್ರ ಅರ್ಪಿಸಿರುವರು ಉಳಿದದ್ದನ್ನು ಮುಂದೆ ಎಂದಾದರೂ ಉಪಯೋಗಿಸಬೇಕೆಂಬ ಅವರ ವಿಚಾರವು ನನಗೆ ಗೊತ್ತಾದದ್ದಲ್ಲಿಯೇ ಈ ಎಚ್ಚರಿಕೆಯನ್ನು ಈಗಲೇ ಕೊಡಹತ್ತಿರುವೆನು. ಪರದೇಶಿ ಅರಿವೆಗಳನ್ನು ತ್ಯಜಿಸುವದೆಂದರೆ ಫಂಡಿಗಾಗಿ ಎಲ್ಲರೂ ತಮ್ಮ [illegible] ಆಭರಣದ ಕೆಲವು ಅಂಶವನ್ನು [illegible] ಸಂಕೋಚವಿಲ್ಲ. ಪರದೇಶಿ ಅರಿವೆಯನ್ನು ಕೂಡಿಸುವದೆಂದರೆ ನಮ್ಮ [illegible] ಒಪ್ಪಿಸುವಂತಿರುವದು [illegible] ಹೊಲಸನ್ನೆಲ್ಲ ಒಂದು [illegible] ಬಟ್ಟೆಗೆ ಅಟುವಂತೆ ನಾವು ನಮ್ಮ [illegible] ಅರಿವೆಗಳನ್ನು ಒಗೆದು ಬಿಡಬೇಕು. ಪೇಟೆಯೊಳಗಿನ ನಮ್ಮ ವ್ಯಾಪಾರಸ್ಥರು ಇದಕ್ಕೆ ಅಪವಾದವಾಗಿ ಉಳಿದರೆ ಇಷ್ಟೆಲ್ಲ ಮಾಡುವದು ಪರದೇಶೀ ಅರಿವೆಯ ರಮಣೀಯತೆಯ ಬಗೆ ನಮ್ಮಲ್ಲಿರುವ ವಿಚಾರವನ್ನು ಬದಲು ಮಾಡುವದರ ಮೇಲೆ ಅವಲಂಬಿಸಿರುವದು. ಕೇವಲ ತೋರಿಕೆಗೆ ನಾವು ಮರುಳಾಗಬಾರದು. ಯಾಕಂದರೆ ಖಾದಿಯಂತೆ ತೋರುವ ಅರಿವೆಯನ್ನು ಪರದೇಶಿಗರು ಮಾಡಹತ್ತುವರು ಆದ್ದರಿಂದ ಇಂಥ ಸಂಧಿಯ ಕಾಲದಲ್ಲಿ ಗಂಜಿ ಮಾಡದೇ ಇದ್ದ ಉರುಟು ಖಾದಿಯನ್ನೇ ಉಪಯೋಗಿಸುವದು ಕ್ಷೇಮವಾದದ್ದು.

ಸ್ವದೇಶಿಗೆ ನಾನು ಮಹತ್ವ ಕೊಡುವ ಕಾರಣವೇನಂದರೆ, ಆದೊಂದು ವ್ರತವನ್ನು ಕಡೆತನಕ ಪಾಲಿಸಬೇಕಾದರೆ ನಮ್ಮ ಎಲ್ಲ ಸಾಮರ್ಥ್ಯವು ವೆಚ್ಚವಾಗುವದು; ಕೋಟ್ಯಾವಧಿ ಸ್ತ್ರೀಪುರುಷರ ಪರೀಕ್ಷೆಯಾಗುವದು. ಸ್ವದೇಶಿಗೆ ಯಶಬರಬೇಕಾದರೆ ಇಡೀ ಭರತಖಂಡವೆಲ್ಲ ಒಮ್ಮನಸ್ಸಿನಿಂದ ನಡೆಯುವದು ಅವಶ್ಯವಾಗಿರುವದು. ಸ್ವದೇಶೀ ವಿಷಯದಲ್ಲಿ ಈಪ್ರಕಾರ ಒಮ್ಮನಸ್ಸಿನಿಂದ ವರ್ತಿಸಲು ಕಲಿತು ತೋರಿಸಿದರೆ ಸ್ವರಾಜ್ಯದ ಮರ್ಮದನ್ನು ಅರಿತಂತಾಯಿತು. ಅದನ್ನು ಕೆಡಿಸಲಿಕ್ಕೂ ಕಟ್ಟಲಿಕ್ಕೂ ಎರಡೂ ಕಲಿತಂತಾಯಿತು

ನಿನ್ನಿನ ದಿವಸ ನಾವು ವಿದೇಶಿ ಬಟ್ಟೆಗಳನ್ನು ಸುಟ್ಟು ನಮ್ಮ ಪಾಪಗಳನ್ನು ಕಳದುಕೊಂಡ ಸ್ಥಳವು ನಮಗೆ ಪವಿತ್ರವಾಗಿರುವದು. ಶ್ರೀಯುತ ಸೋಬಾನಿಯವರು ಈಮೊದಲೇ ಈ ಚಳವಳಿಗಾಗಿ,ಉದಾರ ಬುದ್ಧಿಯಿಂದ ಸಹಾಯ ಮಾಡುತ್ತ ಬಂದಿದ್ದರೂ ತಮ್ಮ ಹೊಟ್ಟೆಯ ಮಗನನ್ನು ಚಳವಳಿಗೆ ಅರ್ಪಿಸಿದ್ದರೂ, ಇದಿಷ್ಟು ಸ್ಥಳವನ್ನು ಸಮಾಜಕ್ಕೆ ಸ್ವಾರ್ಪಣ ಮಾಡುವರೆಂದು ನಾನು ಆಶಿಸುತ್ತೇನೆ ; ಆ ಮೇಲೆ ನಿನ್ನಿನ ಪವಿತ್ರಹೋಮದ ಸ್ಮಾರಕವನ್ನೊಂದು ಇಲ್ಲಿ ನಿಲ್ಲಿಸಲಿಕ್ಕೆ ರಾಷ್ಟ್ರಕ್ಕೆ ಅನುಕೂಲವಾಗುವದು ಅದರಂತೆ ನಾವು ಈಗ ನೆರೆದಿರುವ ಈ ಸ್ಥಳವನ್ನು ಯಾವಲ್ಲಿ ನಾವು ವರ್ಷದ ಹಿಂದೆ ಲೋಕಮಾನ್ಯರ ದೇಹಕ್ಕೆ ಅಗ್ನಿ ಸಂಸ್ಕಾರ ಮಾಡಿದೆವೋ ದೊರಕಿಸಲು ಪ್ರಯತ್ನಿಸಬೇಕು ಇಲ್ಲಿಯೇ ಪೂಜ್ಯವಾದ ಅವರ ಬೂದಿಯೊಳಗಿಂದಲೇ ಅಸಹಕಾರವು ಸ್ಫೂರ್ತಿಹೊಂದಿತು. ಹೋದ ವರುಷ ಆಗಸ್ಟ ೧ ನೇ ತಾರೀಖಿನ ದಿವಸವೇ ಅಸಹಕಾರವು ಪ್ರಕಟವಾಗಹತ್ತಿತು; ಮತ್ತು ಈವರುಷ ನಿನ್ನಿನ ದಿವಸವೇ ಪರೇಳದಲ್ಲಿ ಶ್ರೀಯುತ ಸೋಬಾನಿಯವರ ಪಟಾಂಗಣದಲ್ಲಿ ಸ್ವರಾಜ್ಯದ ಕಡೆಯ ಪಾವಟಿಗೆಯನ್ನು ಮೆಟ್ಟಿದತ್ತಿರುವದು ಸಪ್ಟಂಬರ ೩೦ ನೇ ತಾರೀಖಿನ ದಿವಸವಾದರೂ ಹಿಂದೀ ಜನರು ದುರ್ಬಲರೆಂದು ಕರಸಿಕೊಳ್ಳದ ಹಾಗೆ ಹಿಂದು ಮಾತೆಗೆ ಶಕ್ತಿಯನ್ನೀಯಲೆಂದು ಪರಮೇಶ್ವರನಿಗೆ ಬೇಡಿಕೊಳ್ಳೋಣ.

ಸ್ವಯಂಸೇವಕರ ಬಗ್ಗೆ ಎರಡು ಶಬ್ದ ಹೇಳಿದರೆ, ಆಯಿತು ನನ್ನದು ಮುಗಿಯಿತು. ನಮ್ಮಲ್ಲಿ ಸಂಘಶಕ್ತಿಯಿಲ್ಲವೆಂದೂ, ಕೂಡಿ ಕೆಲಸ ಮಾಡುವ ಶಿಸ್ತನ್ನು ನಾವು ಅರಿಯೆವೆಂದೂ ಪರಕೀಯರು ದೋಷ ತೆಗೆಯುವರು. ಆದರೆ ನಿನ್ನೆ ಯಾವ 'ಪೋಲೀಸ' ನಿಲ್ಲದೆ ಕೆಲಸವು ಸುಸೂತ್ರವಾಗಿ ಸಾಗುವದಲ್ಲ. ಅರಿವೆಯನ್ನು ಕೂಡ್ರಿಸುವದನ್ನು ಮೊದಲುಗೊಂಡು ಎಲ್ಲವನ್ನು ಸ್ವಯಂಸೇವಕರೆಲ್ಲ ನೆರವೇರಿಸುವರಲ್ಲ. ಇದರ ಶ್ರೇಯವನ್ನು ಸ್ವಯಂಸೇವಕರಿಗೂ ಮತ್ತು ಅವರಿಗೆ ಸಹಾಯಮಾಡಿದವರಿಗೂ ಸಲ್ಲತಕ್ಕದ್ದು. ಇದೇರೀತಿಯಾಗಿ ತಾಳ್ಮೆಯಿಂದಲೂ ಶಾಂತತೆಯಿಂದಲೂ ಮತ್ತು ಏನೂಹಿಂಸೆಯಿಲ್ಲದ ಯತ್ನಗಳಿಂದ ಸ್ವಾತಂತ್ರ್ಯಯುದ್ಧವನ್ನು ಗೆದ್ದುಕೊಳ್ಳುವೆವು

# ಕನ್ನಡ ನವಜೀವನ.

ಶ್ರಾವಣ ಶುದ್ಧ ೩ ಗುರುವಾರ ಶಕೆ ೧೮೪೪


## ಧರ್ಮವೋ? ಅಧರ್ಮವೋ?

(ನವಜೀವನ)

ಧರ್ಮವು ನೀರನಂತಿರುವದು ಆದರೆ ದುಷ್ಟನು ತಮ್ಮ ಕಪಟಕೃತ್ಯಗಳಿಗೆ ಢಾಲಿನಂತೆ ಅದನ್ನು ಉಪಯೋಗಿಸುವನು. ಧರ್ಮವು ನಿರ್ಭಯವಾಗಿದೆ. ಆದರೆ ಅಂಜುಬುರುಕನು ಅದರಿಂದ ತನ್ನ ಜೀವವನ್ನು ಉಳಿಸಿಕೊಳ್ಳುವದಕ್ಕೆ ಉಪಯೋಗವನ್ನು ಮಾಡಿಕೊಳ್ಳುತ್ತಾನೆ. ಧರ್ಮವು ಸ್ವತಂತ್ರವಾಗಿದೆ. ಅದರೆ ಗುಲಾಮನು ಅದರ ಉಪಯೋಗವನ್ನು ತನ್ನ ಶೃಂಖಲೆಗಳನ್ನು ಗಟ್ಟಿಯಾಗಿ ಮಾಡಿಕೊಳ್ಳುವದರಲ್ಲಿ ಮಾಡುವನು. ಧರ್ಮದ ಹೆಸರಿನಿಂದ ಧರ್ಮದ ಆಶ್ರಯದ ಕೆಳಗೆ ಜಗತ್ತಿನಲ್ಲಿ ಯಾವ ಯಾವ ಅನರ್ಥಗಳಾಗುವದಿಲ್ಲ? ಧರ್ಮ ಧರ್ಮವೆಂದು ಹೇಳಿ, ಒಂದು ದೇಶವು ಮತ್ತೊಂದು ದೇಶದ ರಕ್ತವನ್ನು ಹೀರಲು ಪ್ರಯತ್ನ ಮಾಡುತ್ತದೆ. ಧರ್ಮದ ರಕ್ಷಣೆಯ ಸಲುವಾಗಿ ತಮ್ಮತಮ್ಮೊಳಗೆ ಯುದ್ಧಮಾಡುತ್ತವೆ. ಅಣ್ಣತಮ್ಮಂದಿರ ರಕ್ತದ ಕಾಲುವೆಗಳನ್ನು ಹರಿಸುತ್ತವೆ. ಧರ್ಮವಾದರೋ ತಾನು ಲೌಕಿಕ ಹಾಗು ಪರಲೌಕಿಕ ಉನ್ನತಿಯ ಸಲುವಾಗಿ ಇರುತ್ತೇನೆಂದು, ಸುಖಶಾಂತಿಗಳ ಬಗ್ಗೆ ತನ್ನ ಜೀವಿತವೆಂದು, ಪ್ರೇಮ ಹಾಗೂ ಸತ್ಯಗಳ ಸಲುವಾಗಿ ತನ್ನ ಉತ್ಪತ್ತಿಯೆಂದು ಹೇಳುತ್ತದೆ. ಪರಧರ್ಮದವರು ಅದರ ಮಾತನ್ನು ಕೇಳುವರಲ್ಲವೇ? ದೊಡ್ಡ ದೊಡ್ಡ ಪಾಪಾಚರಣೆಗಳನ್ನೂ ಧರ್ಮದ ಬುರುಕೆಯಲ್ಲಿ ಮಾಡುವರು. ಈ ವಿರುದ್ಧವಾದ ಪ್ರವಾಹದಿಂದ ಜಗತ್ತಿನಲ್ಲಿ ಎರಡು ಫಲಗಳು ತೋರಹತ್ತಿರುವವು. (೧) ಜನರಲ್ಲಿ ಧರ್ಮದ ಮೇಲಿನ ಶ್ರದ್ಧೆಯು ಹಾರಹತ್ತಿರುವದು. (೨) ಅಧರ್ಮಕ್ಕೆ ಧರ್ಮವೆಂದು ಗ್ರಹಿಸಹತ್ತಿರುವದು. ಮೊದಲನೇ ವರ್ಗದಲ್ಲಿ ಬಹುಶಃ ಓದು ಬರಹಕೆ ಬಲ್ಲವರು ಸುಶಿಕ್ಷಿತರೆಂದು ಹೇಳಿಕೊಳ್ಳುವವರು ಇರುತ್ತಾರೆ ಎರಡನೇ ಸಮಾಜದಲ್ಲಿ ಸ್ವಲ್ಪ ಓದು ಬರಹವನ್ನು ಕಲಿತ ಹಳ್ಳಿಗಾಡ ಜನರು ಇರುವರು. ಮೇಲೆ ಮೇಲಿನ ಹೊಲಸನ್ನು ನೋಡಿ ಮೊದಲನೇ ವರ್ಗದವರು ಎಲ್ಲವೂ ಹಾಗೆಯೇ ಮಲಿನವಾಗಿರುವದೆಂದು ತಿಳಿದಿದ್ದಾರೆ. ಎರಡನೇ ವರ್ಗದ ಜನರು ಆ ಹೊಲಸು ಪ್ರವಾಹವನ್ನೇ ಧರ್ಮವೆಂದು ನಂಬಿ ಧರ್ಮದ ವಿಡಂಬನೆಯನ್ನು ಮಾಡಹತ್ತಿದ್ದಾರೆ. ಒಬ್ಬರು ಕಾವಿಯ ವಸ್ತ್ರಗಳನ್ನು ಉಟ್ಟುಕೊಂಡವರನ್ನೂ ಗಂಧಾಕ್ಷತೆಗಳನ್ನು ಧರಿಸಿದವರನ್ನೂ ಬಾಹ್ಯಾಡಂಬರವನ್ನು ತೋರಿಸುವವರೆಂದೂ ಪಾಖಂಡಿಗಳೆಂದೂ ತಿಳಿದುಕೊಳ್ಳುತ್ತಾರೆ. ಆದರೆ ಮತ್ತೊಬ್ಬರು ಸಾಕ್ಷಾತ್ ಧರ್ಮ ಅಥವಾ ಈಶ್ವರನ ಅವತಾರವೆಂದೇ ಅವರನ್ನು ಬಗೆಯುವರು ನಿಜವಾಗಿ ನೋಡಿದರೆ ಧರ್ಮವು ಧರ್ಮ ತತ್ವಗಳನ್ನು ಚೆನ್ನಾಗಿ ಅರಿತುಕೊಂಡು ಅದರಂತೆ ಆಚರಣೆಯಲ್ಲಿ ತರುವದರಲ್ಲಿ ಇರುವದು. ಗಂಧಾಕ್ಷತೆ ತುಳಸೀಮಣಿ ಭಸ್ಮ, ಜಟೆ ಮುಂತಾದವುಗಳು ಅದರ ಬಾಹ್ಯಚಿನ್ಹ ಮಾತ್ರ ಇರುವವು. ಧರ್ಮದ ಮಾರ್ಗದಲ್ಲಿ ಮನುಷ್ಯನ ಪ್ರಗತಿಯು ಎಲ್ಲಿಯವರೆಗೆ ಆಗಿದೆಂಬದನ್ನು ಅವೆಲ್ಲ ತೋರಿಸುವವು.

ಈ ಎರಡೂ ಸ್ಥಿತಿಗಳ ಕಾರಣವು ಧರ್ಮ ತತ್ವಗಳ ಅಜ್ಞಾನವೇ. ಪಾಶ್ಚಿಮಾತ್ಯ ಜನರು ಧರ್ಮದ ವ್ಯಾಖ್ಯೆಯನ್ನು "ಪರಮಾತ್ಮನ ಅಥವಾ ಪರಲೋಕದ ವಿಷಯವಾಗಿ ವಿಚಾರ" ಎಂದು ಮಾಡಿ ಅದರ ನಿಮಿತ್ತವಾಗಿ ರವಿವಾರ ದಿವಸ ನಿತ್ಯವ್ಯವಹಾರಗಳಿಗೆ ವಿಶ್ರಾಂತಿಯನ್ನು ಗೊತ್ತುಮಾಡಿದ್ದರಿಂದ ಧರ್ಮಮಾರ್ಗದಲ್ಲಿ ಬಹಳ ಮುಳ್ಳುಗಳನ್ನು ಹಾಕಿ ಬಿಟ್ಟಿರುವರು ಇದರಿಂದ ಅವರ ಧರ್ಮವು ಈಗ ರಾಜನೀತಿಜ್ಞರ ಅಧೀನವಾಗಿಬಿಟ್ಟಿದೆ. ಆದರೆ ಧರ್ಮವು ಆತ್ಮನ ವಿಕಾಸ ಮಾರ್ಗವಾಗಿದೆಂದೂ ಲೌಕಿಕ ಮತ್ತು ಪರಲೌಕಿಕ ಉನ್ನತಿಯ ಸಾಧನವೆಂದೂ ತಿಳಿದುಕೊಂಡಿರುತ್ತದೆ. ಧರ್ಮವು ಆದರ ಜೀವನದ ನಿಯಾಮಕವಾಗಿದೆ; ನೇತೃವಾಗಿದೆ ಧರ್ಮವಿಲ್ಲದೆ ಅದರ ಜೀವನವು ಇಲ್ಲ; ಅದರ ಗತಿಯೂ ಇಲ್ಲ. ಅದರ ಉತ್ಪತ್ತಿ ಸ್ಥಿತಿಲಯಗಳೆಲ್ಲ ಧರ್ಮಮಯವಾಗಿವೆ. ಹಿಂದುಸ್ತಾನದ ಸಮಾಜಶಾಸ್ತ್ರವೂ ಅರ್ಥಶಾಸ್ತ್ರವೂ, ನೀತಿಶಾಸ್ತ್ರವೂ, ರಾಜನೀತಿಯೂ ಎಲ್ಲವೂ ಧರ್ಮದ ಆಧಾರದ ಮೇಲೆಯೇ ನಿಂತಿರುತ್ತವೆ ಎಲ್ಲವುಗಳ ಧ್ಯೇಯವು ಈ ಧರ್ಮದ ಪಾಲನೆಯೇ ಆಗಿರುತ್ತದೆ. ಆದ್ದರಿಂದಲೇ ಈಗಿನ ಸ್ವರಾಜ್ಯ ಸಂಗ್ರಾಮಕ್ಕೆ ಧರ್ಮಯುದ್ಧವೆಂದು ಅನ್ನುತ್ತಾರೆ. ಸ್ವರಾಜ್ಯವು ಸ್ವಧರ್ಮ ಪಾಲನೆಗೆ ಒಂದು ದೊಡ್ಡ ಸಾಧನವು ಈಗ ಸ್ವರಾಜ್ಯದ ಅಭಾವದಿಂದ ಭರತಖಂಡದ ಆತ್ಮವು ಧರ್ಮಹೀನವಾಗಿ ಬಿಟ್ಟಿದೆ. ಸಾರ್ಥಪರಾಯಣತೆಯೂ ನೀತಿಮತ್ತೆಯ ಅಭಾವವೂ, ಪಾಪಾಚರಣೆಯೂ ಧರ್ಮಹೀನತೆಯ ಫಲಗಳೇ. ಸ್ವಾರ್ಥ ಅನೀತಿ ಪಾಪಗಳಲ್ಲಿ ಘೋರವಾದ ಪತನದ ಹೊರ್ತು ಮತ್ತೇನು ಪರಿಣಾಮವು ತೋರಬೇಕು?

ಹಿಂದುಸ್ತಾನದ ಈ ಧರ್ಮಯುದ್ಧವು ಈ ಸ್ವರಾಜ್ಯ ಸಂಗ್ರಾಮವು ಯಾವದರ ನಿರುದ್ಧವಾಗಿದೆ? ಅಧರ್ಮದ ವಿರುದ್ಧವಾಗಿ, ಅಧರ್ಮದ ಪಕ್ಷವನ್ನು ಸ್ವೀಕರಿಸಿದ ಅವರ ಸರಕಾರದ ವಿರುದ್ಧವಾಗಿ ಹಾಗಾದರೆ ಇಷ್ಟಾದರೂ ಈ ಧರ್ಮಪ್ರಾಣವಾದ ಭರತಭೂಮಿಯ ೩೦ ಕೋಟಿ ನರ ನಾರಿಯರು ಈ ಧರ್ಮಯುದ್ಧದಲ್ಲಿ ಅಂಗವನ್ನೇಕೆ ತೆಗೆದುಕೊಂಡಿಲ್ಲ? ಇದಕ್ಕೆ ಮೂರು ಕಾರಣಗಳು ತೋರುತ್ತವೆ. (೧) ಸರಕಾರದವರ ಸಿಟ್ಟಿನ ಅಂಜಿಕೆಯು. (೨) ರಾಜನೀತಿ ಮತ್ತು ಧರ್ಮಗಳು ಭಿನ್ನವೆಂಬ ತಿಳವಳಿಕೆಯು. (೩) ಧರ್ಮದ ಮೇಲೆ ಅಪಶ್ರದ್ಧೆಯು.

ಮೊದಲು ನಾವು ಧರ್ಮದ ಭಿನ್ನ ಭಿನ್ನ ಸಂಪ್ರದಾಯಗಳನ್ನು ತೆಗೆದುಕೊಳ್ಳುವಾ ಸನಾತನ ಧರ್ಮ, ಆರ್ಯಧರ್ಮ, ಜೈನ, ಶೀಖ, ಮುಸಲ್ಮಾನ, ಪಾರ್ಸೀ ಮತ್ತು ಕ್ರಿಶ್ಚನ್ ಇವು ಹಿಂದುಸ್ತಾನದಲ್ಲಿ ಪ್ರಚಲಿತವಾದ ಮುಖ್ಯಧರ್ಮಮತಗಳು ಸನಾತನ ಧರ್ಮಗಳು ರಾಜನೀತಿಯು ಧರ್ಮದಿಂದ ಭಿನ್ನವಾಗಿರುವದೆಂದು ತಿಳಿದುಕೊಳ್ಳುವದು ಶಕ್ಯವಿಲ್ಲ. ಅವರ ಧರ್ಮಗುರುಗಳಾದ ಶಂಕರಾಚಾರ್ಯರು ಧರ್ಮದ ವ್ಯಾಖ್ಯೆಯನ್ನು "

"ಅಂಗರೆಯಾವದರಿಂದ ಸಮಾಜಕ್ಕೆ ಭೌತಿಕ ಉನ್ನತಿಯೂ ಪರಮಾತ್ಮನ ಲಾಭವೂ ದೊರೆಯುವದೋ ಅದೇ ಧರ್ಮವೆಂದು ಮಾಡಿರುವರು ರಾಜ್ಯವು ಸಮಾಜದ ಭೌತಿಕ ಉನ್ನತಿಯ ಮುಖ್ಯ ಸಾಧನವು. ಆದ್ದರಿಂದಲೇ ರಾಜ್ಯವು ಧರ್ಮದ ಒಂದು ಅಂಗವಾಗಿದೆ, ರಾಜ್ಯದ ವ್ಯವಸ್ಥೆಯನ್ನು ನೋಡುವದು ಸಮಾಜದ ಕರ್ತವ್ಯವು. ಸನಾತನಧರ್ಮಿಗಳಾದವರನ್ನ ಧರ್ಮದ ವಿಷಯವಾಗಿ ಶ್ರದ್ಧೆಯಿಲ್ಲದವರೆಂದು ಹೇಳುವ ಸಾಹಸವನ್ನು ಯಾರು ಮಾಡುವರು? ಹಾಗಿದ್ದರೆ ಅವರು ಸರಕಾರದ ರೋಷಕ್ಕೆ ಹೆದರುವರೇ? ಹಾಗೆ ಹೇಳುವದೆಂದರೆ ಈಗ ಇರುವ ದೊಡ್ಡದೊಡ್ಡ ಧರ್ಮಾಚಾರ್ಯರ ಅಪಮಾನವನ್ನು ಮಾಡಿದಂತೆಯೇ. ಧರ್ಮವೂ ಅಂಜಿಕೆಯೂ ಒಂದೇ ಸ್ಥಳದಲ್ಲಿರುವದು ಶಕ್ಯವಿಲ್ಲ ಅವರೇನು ಧರ್ಮದ ತತ್ವಗಳ ತಿಳಿಯುವದಿಲ್ಲವೇ? ಬಾಹ್ಯಾಡಂಬರಕ್ಕೇ ಅವರು ಧರ್ಮವೆಂದು

ಬಿದುಕೊಂಡಿರುವರೇ? ರಾಜನೀತಿಗೂ ಧರ್ಮಕ್ಕೂ ಸಂಬಂಧವಿಲ್ಲವೆಂದು ಅನ್ನುವರೇ? ಹೀಗಾಗಿದ್ದ ಪಕ್ಷದಲ್ಲಿ ನಿಜವಾಗಿ ಇದು ಸನಾತನಧರ್ಮದ ದುರ್ಭಾಗ್ಯದ ಸಂಗತಿಯೇ ಸರಿ.

ಮುಸಲ್ಮಾನ ಧರ್ಮದ ಮೇಲೆ ಮಾಡಿದಂಥ ಕುಠಾರಾಘಾತವು-ಖಿಲಾಫತದ ಕೊರಳಿಗೆ ಚೂರೀ ಹಾಕಿದ ಸಂಗತಿಯು-ಈಗ ಇತಿಹಾಸದಲ್ಲಿ ಒಂದು ಅಜರಾಮರವಾದ ಸಂಗತಿಯಾಗಿ ಬಿಟ್ಟಿದೆ; ಮತ್ತು ಜಗತ್ತಿನಲ್ಲಿಯ ಎಲ್ಲ ಮುಸಲ್ಮಾನ ಬಾಂಧವರು ತಮ್ಮ ಧರ್ಮಸ್ಥಾನವನ್ನು ರಕ್ಷಿಸಿಕೊಳ್ಳುವದಕ್ಕಾಗಿ ಜೀವದ ಹಂಗುತೊರೆದು ನಿಂತಿರುವರು. ಹಿಂದುಸ್ಥಾನದ ಮುಸಲ್ಮಾನ ಬಾಂಧವರು ಒಮ್ಮನಸ್ಸಿನಿಂದ ಈ ಸ್ವರಾಜ-ಸಂಗ್ರಾಮದಲ್ಲಿ ಹೋರಾಡಲು ಸಿದ್ಧರಾಗಿರುವರು.

ವು ಎಂದನೆಯುವರು ಇದು ರಾಜನೈತಿಕ ಸಂಗ್ರಾಮವು ತಮಗೆ ಏನೂ ಉಪಯೋಗವಿಲ್ಲೆಂದು ಅನ್ನುವರು. ಆರ್ಯ ಸಮಾಜವು ಮೊದಲಿನಿಂದಲೇ ಒಂದು ತಿ ಪಸ್ಸಿಯವಾದ ಸಂಸ್ಥೆಯು. ಇಂದು ಜೀವನ ಮರಣದ ಪ್ರಶ್ನೆಯು ಬೀಳಲು ಅವರಲ್ಲಿ ಮತಭೇದ ನಾಪದ್ದನ್ನು ನೋಡಿದರೆ ಯಾವ ಭಾರತವಾಸಿಗೆ ಖೇದವಾಗಲಿಕ್ಕಿಲ್ಲ? ಅವರ ಈ ಸಂಸ್ಥೆಯ ಉಜ್ವಲವಾದ ಭೂತಕಾಲದ ಇತಿಹಾಸವನ್ನು ನೋಡಲಾಗಿ ಅದು ರಾಷ್ಟ್ರದ ಬೆನ್ನು ಎಂದೂ ಬಿಡುವದಿಲ್ಲೆಂದು ಅನಿಸಿದರೆ ವ್ಯರ್ಥವಾಗಲಾರದು. ಇಂಥ ನಿಜವಾದ ಆರ್ಯ ಸಮಾಜದ ಬಳಿಯಲ್ಲಿ ಇರುವ ಬಗೆ ಹೇಗೆ?

ಕೋಟ್ಯಾವಧಿ ಆಕಳುಗಳನ್ನು ಕಡಿಯುತ್ತಿರುವಾಗ ಎಣಿಕೆಯಿಲ್ಲದ ಅಗಣಿತ ಪಶುಗಳ ವಧೆಯು ನಡೆದಿರುವಾಗ, ದುಷ್ಕಾಳ, ರೋಗ-ಪ್ರಕೋ

# ಲೋಕಮಾನ್ಯರ ಪುಣ್ಯದಿನವನ್ನು ಪಾಲಿಸಿರಿ.

ಲೋಕಮಾನ್ಯರು ಕೈಲಾಸವಾಸಿಗಳಾಗಿ ಇದೇ ಅಗಸ್ಟ ತಿಂಗಳ ೧ನೇ ತಾರೀಖಿಗೆ ಎರಡು ವರ್ಷಗಳು ತುಂಬಿದವು. ಇಷ್ಟರಲ್ಲಿಯೇ ನಾವು ಸ್ವರಾಜ್ಯವನ್ನು ಗಳಿಸಿಕೊಂಡಿದ್ದರೆ ಅವರ ಆತ್ಮಕ್ಕೆ ಶಾಂತಿಯು ದೊರೆಯುತ್ತಿತ್ತು. ಆದರೆ ನಮ್ಮ ದುರ್ದೈವದಿಂದ ನಮಗೆ ಸ್ವರಾಜ್ಯವು ಇನ್ನೂ ದೊರೆತಿಲ್ಲ. ಆದ್ದರಿಂದ ಅವರ ಪುಣ್ಯದಿನವನ್ನು ನಾವು ಪಾಲಿಸಬೇಕಾದರೆ ಸ್ವರಾಜ್ಯವು ತೀವ್ರವಾಗಿ ದೊರೆಯುವ ಮಾರ್ಗವನ್ನು ಕೈಕೊಳ್ಳಬೇಕು. ಅದಕ್ಕೆ ಉತ್ತಮವಾದ ತರಣೋಪಾಯವೆಂದರೆ ರಾಷ್ಟ್ರೀಯ ಸಭೆಯು ವಿಧಿಸಿದ ವಿಧಾಯಕ ಕಾರ್ಯಕ್ರಮವೇ ಸರಿ. ಆದ್ದರಿಂದ ಎಲ್ಲರೂ ಆ ದಿವಸ ಖಾದಿಯನ್ನು ಧರಿಸುವೆನೆಂಬ ಪ್ರತಿಜ್ಞೆಯನ್ನು ಮಾಡಿ, ಲೋಕಮಾನ್ಯರ ಸ್ಮಾರಕದ ಸಲುವಾಗಿ ತೆಗೆದ ಟಿಳಕ ಸ್ವರಾಜ್ಯ ಫಂಡಿಗೆ ಶಕ್ತ್ಯನುಸಾರ ಸಹಾಯಮಾಡಬೇಕು. ಅಂದರೆ ಮಾತ್ರ ಲೋಕಮಾನ್ಯರ ಜೀವಿತದ ಧ್ಯೇಯವಾದ ಸ್ವರಾಜ್ಯವು ನಮ್ಮ ಕೈಸೇರುವದು. ಇದಲ್ಲದೆ, ಲೋಕಮಾನ್ಯರು ನಿಧನವನ್ನು ಹೊಂದಿದ ಕೂಡಲೆ ಅವರ ಕಾರ್ಯವನ್ನೇ ಅಭಿವೃದ್ಧಿಗೆ ತರಲು ಮುಂದೆ ಬಂದ ಮಹಾತ್ಮಾ ಗಾಂಧಿಯವರನು ಕಾರಾಗೃಹವಾಸದಿಂದ ಮುಕ್ತಮಾಡಲು ನೀವು ಶಕ್ತರಾಗುವಿರಿ. ಇಂಥ ಪವಿತ್ರ ಕಾರ್ಯದಲ್ಲಿ ಎಲ್ಲರೂ ಒಮ್ಮನಃಸಿನಿಂದ ಸಹಾಯಮಾಡುವಿರೆಂದು ಕೋರಿಕೆಯದೆ.

ಶೀಖರ ಧರ್ಮದ ಮೇಲೆ ಬಿದ್ದ ಗದೆಯು ಹಿಂದುಸ್ಥಾನದ ಸಣ್ಣ ಸಣ್ಣ ಹುಡುಗರಿಗೆ ಕೂಡ ಕಾಣಹತ್ತಿರುವದು. ಅವರಾದರೂ ತಮ್ಮ "ಸಿಂಹ" ವೆಂಬ ಹೆಸರಿಗೆ ಶೋಭಿಸುವಂತೆ ಒಳ್ಳೇ ಧೈರ್ಯದಿಂದ ತಲೆಗೊಟ್ಟು ನಿಂತಿರುವರು.

ಇನ್ನು ಆರ್ಯ ಸಮಾಜ, ಜೈನ ಪಾರ್ಶಿ ಮತ್ತು ಕ್ರಿಶ್ಚನ್ ಇಷ್ಟು ಜನರು ಉಳಿದರು. ಆರ್ಯಸಮಾಜದವರಲ್ಲಿ ಎರಡು ಪಂಗಡಗಳಾಗಿವೆ. ರಾಜನೀತಿಯಲ್ಲಿ ಬೀಳುವದು ಆರ್ಯ ಸಮಾಜದ ಸಿದ್ಧಾಂತಗಳಿಗೆ ಅನುಕೂಲವಾಗಿರುವದೆಂದು ಒಬ್ಬರ ಮತ

ಪ ಮೊದಲಾದ ಅಪ್ರತ್ಯಕ್ಷರೀತಿಯಿಂದ ಲಕ್ಷಾವಧಿ ಜನರು ಆಗುತ್ತಿರುವಾಗ ಸಾವಿರಾರು ಸ್ತ್ರೀ ಪುರುಷರಿಗೆ ಭಯಂಕರ ಕಷ್ಟಗಳು ಒದಗುತ್ತಿರುವಾಗ ಜೈನ ಬಾಂಧವರೇ ನಾವು ಧರ್ಮಗಳಿಗೆ ಎಷ್ಟು ನಿಕಟ ಸಂಬಂಧವಿದೆಯೆಂಬುದನ್ನು-ಸರಕಾರವು ಧರ್ಮದ ಮೇಲೆ ಆಘಾತವನ್ನು ಮಾಡಿದಾಗ ಅದರ ಪ್ರತಿರೋಧವನ್ನು ಮಾಡಿ ಧರ್ಮ ರಕ್ಷಣೆಯನ್ನು ಮಾಡುವದು ಪ್ರತಿಯೊಬ್ಬ ಧರ್ಮನಿಷ್ಠ ಮನುಷ್ಯನ ಎಷ್ಟು ಶ್ರೇಷ್ಠ ಕರ್ತವ್ಯವಿರುತ್ತದೆಂಬದನ್ನು ತೋರಿಸಿಕೊಡುವ ಆವಶ್ಯಕತೆಯಿಲ್ಲ. ಸರಕಾರದ ರೀತಿ ನೀತಿಗಳಿಗೆ

ಅಂಜುವದೆಂದರೆ ನಮ್ಮನ್ನು ಧರ್ಮನಿಷ್ಠರ ಪಂಕ್ತಿಯೊಳಗಿಂದ ಕೆಳಗೆ ದಬ್ಬಿಕೊಂಡಂತೆಯೇ ಸರಿ. ಧರ್ಮದ ಅಪಮಾನಕ್ಕಿಂತ ಸರಕಾರದ ರೋಷವು ಹೆಚ್ಚು ದುಃಖದಾಯಕವಾಗಲಾರದು.

ಪೂಜ್ಯ ಏಸೂ ಕ್ರಿಸ್ತನನ್ನು ಪೂಜಿಸುತ್ತಿರುವ ಈ ಸರಕಾರವು ನಿಜವಾಗಿ ಅವನ ಉಪದೇಶವನ್ನು ಅನುಸರಿಸಿ ನಡೆಯುತ್ತಿರುವದೇ? ಎಂದು ಕ್ರಿಶ್ಚನ ಬಾಂಧವರಿಗೆ ನಮ್ಮ ಸವಾಲು ಇರುತ್ತದೆ, ಕುಟಿಲನೀತಿಯೂ, ಪಾಶವೀ ಶಕ್ತಿಯೂ, ನಿರ್ಬಲರ ಮೇಲೆ ಅತ್ಯಾಚಾರವೂ ನಿಃಸೀಮವಾದ ಸಾಂಪತ್ತಿಕ ಲೂಟಿಯೂ ಮಹಾತ್ಮಾ ಏಸೂ ಕ್ರಿಸ್ತನ ಉಪದೇಶಕ್ಕೆ ಅನುಸರಿಸಿಯೇ ನಡೆದಿರುತ್ತವೆಯೋ? ಹಾಗೆ ಇಲ್ಲದಿದ್ದರೆ ಈ ಕ್ರಿಶ್ಚನ ಬಾಂಧವರು ಈ ಅನ್ಯಾಯದ ಸರಕಾರಕ್ಕೆ ತಮ್ಮ ಸಹಾಯವನ್ನು ಹೇಗೆ ಕೊಡಬಲ್ಲರು. ಸ್ವರಾಜ್ಯದ ಸಂಗ್ರಾಮದಿಂದ ಅಲಿಪ್ತರಾಗಿ ಹೇಗೆ ಉಳಿಯಬಲ್ಲರು? ತನ್ನ ಧರ್ಮಕರ್ಮವನ್ನು ಮನ್ನಿಸದೆ ಅದನ್ನು ಪಾದದ ಕೆಳಗೆ ದಬ್ಬುತ್ತಿರುವಂಥ ಹಾಗು ತನ್ನ ಪ್ರಜೆಗಳ ಧರ್ಮದ ಮೇಲೆ ಸಹ ಆಘಾತವನ್ನು ಮಾಡುವಂಥ ಸರಕಾರವು ಯಾವ ಮೋರೆಯಿಂದ ಒಬ್ಬ ಧರ್ಮನಿಷ್ಠ ಮನುಷ್ಯನ ಸಹಾಯವನ್ನು ಸಹಯೋಗವನ್ನು ಕೇಳಲಿಕ್ಕೆ ಅಧಿಕಾರಿಯಾಗಬಹುದು? ಅದಕ್ಕೆ ಸಹಾಯವನ್ನು ಮಾಡುವದೆಂದರೆ ಅಧರ್ಮವನ್ನು ವೃದ್ಧಿಗೊಳಿಸಲಿಕ್ಕೆ ಸಹಾಯ ಮಾಡಿದಹಾಗಲ್ಲವೆ?

ಪಾರಶೀ ಬಾಂಧವರಿಗೆ ಅವರ ಭಾಗ್ಯವು ಹಿಂದುಸ್ಥಾನದ ಭಾಗ್ಯದ ಮೇಲೆ ಅವಲಂಬಿಸಿರುವದೆಂದು ಇಷ್ಟೇ ನಾವು ಹೇಳುತ್ತೇವೆ. ಅವರ ನೆರೆಯಲ್ಲಿದ್ದ ಧರ್ಮದವರು ಸಂಕಟದಲ್ಲಿದ್ದಾಗ ಅವರ ಧರ್ಮವು ಸುರಕ್ಷಿತವಾಗಿ ಉಳಿಯಲಾರದು. ಈ ಸ್ವರಾಜ್ಯಸಂಗ್ರಾಮದಿಂದ ಅಲಿಪ್ತರಾಗಿ ಉಳಿದರೆ ಸುಖಶಾಂತಿಗಳು ದೊರೆಯಲಾರವು. ಈಗ ಅವರಿಗೆ ತೋರುತ್ತಿರುವ ಕೋಮಲವಾದ ಕಮಲವು ನಾಳೆಗೆ ಸರ್ಪವಾಗಿ ಮೈಮೇಲೆ ಬಂದರೆ ಆಶ್ಚರ್ಯವಲ್ಲ.

ರಾಜಕೀಯ ಪಂಗಡಗಳಲ್ಲಿ ಧರ್ಮದ ಮೇಲೆ ವಿಶ್ವಾಸವನ್ನಿಡುವ ಜನರು ಸ್ವರಾಜ್ಯ ಸಂಗ್ರಾಮದ ಕಡೆಗೆ ಆರ್ಥಿಕ ಮತ್ತು ಸಾಂಸಾರಿಕ ದೃಷ್ಟಿಯಿಂದ ನೋಡುತ್ತಿರುವರು. ಪ್ರಚಲಿತವಾದ ರಾಜ್ಯ ಪದ್ಧತಿಯಿಂದ ಹಿಂದುಸ್ಥಾನದ ನೈತಿಕ ಹಾಗು ಧಾರ್ಮಿಕ ಅಧಃಪಾತವು ಎಷ್ಟು ಆಗಿರುವದೆಂಬದು ಇನ್ನೂ ಅವರಿಗೆ ಕಾಣುವದಿಲ್ಲ. ಅವರ ದೃಷ್ಟಿಗೆ ಹರಿಯುವದು ಇಷ್ಟೇ. ಹಿಂದುಸ್ತಾನವು ಕಂಗಾಲವಾಗಹತ್ತಿದೆ. ಭರತಖಂಡವು ನಿರ್ಬಲವಾಗಹತ್ತಿದೆ. ಹಾಗು ಈಗಿನ ಸರಕಾರದವರು ಇವೆರಡು ಸವಲತ್ತುಗಳನ್ನು ಕೊಟ್ಟುಬಿಟ್ಟರೆ ಸಾಕು. ಅವರು ಸಂತುಷ್ಟರಾಗಿ ಬಿಡುತ್ತಾರೆ. ಆಮೇಲೆ ನೀತಿ ಮತ್ತು ಧರ್ಮಗಳು ಸಾಯಲೊಲ್ಲವೇಕೆ? ನೀತಿ ಮತ್ತು ಧರ್ಮಗಳ ಬಲವು ಅವರ ಹತ್ತರ ಇಲ್ಲ. ಆದ್ದರಿಂದಲೇ ಅವರು ಸ್ವಾರ್ಥತ್ಯಾಗ ಮತ್ತು ಕಷ್ಟಸಹನದ ಮೇಲೆ ಅಷ್ಟು ಭಾರವನ್ನು ಹಾಕುವದಿಲ್ಲ. ತಮ್ಮ ಕೈಶಿಲುಗಳನ್ನು ರಕ್ಷಿಸಿಕೊಂಡು ಮೆತ್ತನ್ನ ಹಸರು ಹುಲ್ಲಿನ ಮೇಲೆ ನಡೆಯುವದೇ ಯಾವಾಗಲೂ ಅವರ ಅಭೀಷ್ಟವು. ಮುಳ್ಳು ಕಲ್ಲುಗಳು ಬಂದ ಕೂಡಲೇ ಅವರಿಗೆ ತಲೆಶೂಲಿಯೇ ಏಳುತ್ತದೆ. ಇವರಲ್ಲಿ ಪುರುಷಾರ್ಥವೂ ಕಡಿಮೆ. ಸರಕಾರದ ಕ್ರೋಧದ ಹಾಗು ಹಾನಿಯ ಅಂಜಿಕೆಯೂ ಬಹಳ. ಆದ್ದರಿಂದಲೇ ಇವರು ರಾಷ್ಟ್ರಕಾರ್ಯಕ್ಕೆ "ಅಜಾಗಲಸ್ತನ" ದಂತೆ ಇರುತ್ತಾರೆ.

ನಿಜವಾದ ಧರ್ಮಜ್ಞನೂ, ಧರ್ಮನಿಷ್ಠನೂ ಸರಕಾರದ ಕೋಪಕ್ಕೆ ಅಂಜತಕ್ಕವನಲ್ಲ. ರಾಜನೀತಿಯಿಂದ ಧರ್ಮವನ್ನು ಅಗಲಿಸತಕ್ಕದ್ದಲ್ಲ. ಧರ್ಮದವಿಷಯವಾಗಿ ಅಶ್ರದ್ಧೆಯಂತೂ ಅವರ ಮನಸ್ಸಿನಲ್ಲಿಕೂಡ ಬರಕೂಡದು. ಅದರಂತೆಯೇ ಧರ್ಮನಿಷ್ಠನೆಂದು ಹೇಳಿಕೊಳ್ಳುವ ಯಾವನಾದರೂ ಹಿಂದನಿವಾಸಿಯು ಪ್ರಚಲಿತ ಧರ್ಮಹೀನವಾದ ರಾಜ್ಯಪದ್ಧತಿಯ ವಿರುದ್ಧವಾಗಿ ಪ್ರಾರಂಭಿಸಲ್ಪಟ್ಟ ಧರ್ಮಯುದ್ಧದಲ್ಲಿ ತಾನೂ ತೊಡಗದೆ ಎಂದೂ ಇರಲಾರನು ಎಂಬ ಮಾತು ಈ ಮೇಲಿನ ವಿವೇಚನೆಯಿಂದ ಸಿದ್ಧವಾಗುತ್ತದೆ. ಒಂದು ಪಕ್ಷವು ಧರ್ಮದ ಪಕ್ಷವು ಇನ್ನೊಂದು ಅಧರ್ಮಪಕ್ಷವು. ಭಾರತನಿವಾಸಿಯು ಪರ್ಮ ಅವರ್ಮಗಳಲ್ಲಿ ಯಾವದು ತನಗೆ ಪ್ರೀತಿಪಾತ್ರವಾಗಿರುವದೋ, ಅಭೀಷ್ಟಕರವಾದದ್ದೋ, ರಕ್ಷಣೀಯವಾದದ್ದೋ ಪೂಜನೀಯವಾಗಿರುವದೋ ಎಂಬದನ್ನು ನಿಶ್ಚಯಿಸಿಕೊಳ್ಳಲಿ.

## ಮಹಾತ್ಮಾಜಿಯವರು ನೂತ ನೂಲು.

(ನವಜೀವನ.)

ಯರವಡೆಯ ಜೇಲಿನಲ್ಲಿ ಮಹಾತ್ಮ ಗಾಂಧಿ ಮತ್ತು ಶ್ರೀ ಶಂಕರಲಾಲಬ್ಯಾಂಕರ ಇವರು ತೆಗೆದ ನೂಲಿನ ಗಂಟುಗಳನ್ನು ಜೇರಿಜೇರಿಯಾಗಿ ಕಟ್ಟಿ ಜೇಲರಸಾಹೇಬರು ಸತ್ಯಾಗ್ರಹಾಶ್ರಮಕ್ಕೆ ಕಳಿಸಿರುವರು. ಆಶ್ರಮದಿಂದ ಶ್ರೀ ಮಹಾದೇವಭಾಯಿ ದೇಸಾಯಿ (ಇಂಡಿಪೆಂಡೆಂಟದ ಪೂರ್ವಸಂಪಾದಕರು) ಯವರ ನೂಲಾದರೂ ಆಶ್ರಮದಲ್ಲಿ ಬಂದಿದೆ. ಈ ಮೂವರು ಜನಮಾನ್ಯ ಕೈದಿಗಳು ತೆಗೆದ ನೂಲು ಪವಿತ್ರವಿದ್ದಷ್ಟೇ ಸುಂದರವಾಗಿರುವದು. ನೂಲು ಒಂದೇಸವನೆ ಇರುತ್ತದೆ. ನೂಲಿನ ಸಣ್ಣ ಸಣ್ಣ ತುಕ್ಕಡಿಗಳನ್ನು ಸುವ್ಯವಸ್ಥಿತವಾಗಿ ಇಟ್ಟಿರುವರು. ಮಹಾತ್ಮಾಜಿಯವರ ನೂಲಿನ ನಂಬರು ೧೨ ಶ್ರೀ. ಶಂಕರಲಾಲ ಭಾಯಿಯವರದು ೧೩ ಮತ್ತು ಮಹಾದೇವಭಾಯಿ ವರದು ೧೨ ಈ ಪ್ರಕಾರ ಇರುತ್ತದೆ. ಮೂವರು ಜನರ ನೂಲು ಉಂಕಿಗೆ ಉತ್ತಮ ತಾಳುತ್ತದೆ. ಅವರು ಅದರ ಆವೆಯನ್ನು ಮಾಡಿ ಅದರಲ್ಲಿಯ ಗುಣದೋಷಗಳನ್ನು ತಿಳಿಸಲಿಕ್ಕೆ ಬರೆದಿರುವರು.

ಮಹಾತ್ಮಾಜಿಯವರು ನೂಲು ತೆಗೆಯುತ್ತಿದ್ದ ಸುದ್ದಿಯು ಈ ಮೊದಲೇ ವೃತ್ತಪತ್ರಗಳಲ್ಲಿ ಪ್ರಸಿದ್ಧವಾಗಿದೆ. ನಾನಾತರದ ಸೂಚನೆಗಳಾದರೂ ಮಾಡಲ್ಪಟ್ಟಿರುವವು. ಪುಣೆಯ ಕೇಸರೀ ಪತ್ರವು ಈ ನೂಲಿನ ಕಿಮ್ಮತ್ತು ಈ ನೂಲಿನ ತೂಕದಷ್ಟು ಬಂಗಾರಕ್ಕಿಂತಲೂ ಹೆಚ್ಚು ಇರುತ್ತದೆಂದು ಅದನ್ನು ಒಂದು ಬೆಳ್ಳಿಯ ಡಬ್ಬಿಯಲ್ಲಿ ಹಾಕಿ ಇಟ್ಟು ಸ್ವದೇಶೀ ಸಮಾರಂಭದಲ್ಲಿಟ್ಟು ಅದರ ಪೂಜೆಯನ್ನು ಮಾಡಬೇಕೆಂದೂ ಸೂಚಿಸಿರುವದು. ಆದರೆ ಯಥಾರ್ಥವಾಗಿ ಹೇಳುವದಾದರೆ ಅದರ ಬೆಲೆಯು ಕೋಟಿಗಟ್ಲೆ ರೂಪಾಯಿಗಳಿಗಿಂತ ಹೆಚ್ಚು ಇರುತ್ತದೆ. ಪರದೇಶೀ ವಸ್ತ್ರಗಳನ್ನು ಕೊಂಡುಕೊಳ್ಳುವದರಲ್ಲಿ ವ್ಯರ್ಥವಾಗಿ ಹಾಳಾಗುತ್ತಿರುವ ಹಣವನ್ನು ರಕ್ಷಿಸಿಕೊಳ್ಳುವದಕ್ಕೆ ಕೈನೂಲಿನ ಬಟ್ಟೆಗಳನ್ನೇ ಧರಿಸಬೇಕೆಂದು ಮಹಾತ್ಮರು ಮಾಡಿದ ಉಪದೇಶವು ಇದರಲ್ಲಿ ಮೂರ್ತಿಮಂತವಾಗಿರುತ್ತದೆ. ಅಲ್ಲದೆ ಸಣ್ಣ ಸಣ್ಣ ತಂತುಗಳನ್ನು ಒಟ್ಟುಗೂಡಿಸಿ ಹುರಿಮಾಡಿ ನೂಲು ಮಾಡುವಂತೆ ಹಿಂದುಸ್ಥಾನದ ಭಿನ್ನ ಭಿನ್ನ ಜಾತಿಗಳಲ್ಲಿ ಅಂದರೆ ಹಿಂದೂ, ಮುಸಲ್ಮಾನ, ಸಿಖ, ಪಾರ್ಸಿ, ಕ್ರಿಶ್ಚನ, ಮೊದಲಾದ ಎಲ್ಲ ಜಾತಿಗಳಲ್ಲಿ ಪರಸ್ಪರ ಐಕ್ಯವನ್ನು ಹುಟ್ಟಿಸಿ ಹಿಂದುಸ್ಥಾನವನ್ನು ಏಕರಾಷ್ಟ್ರವನ್ನಾಗಿ ಮಾಡಬೇಕೆಂಬ ಸಂದೇಶದ ಇಂಗಿತವಾದರೂ ಈ ಮಹಾತ್ಮರು ನೂತ ನೂಲಿನಲ್ಲಿ ಅಡಕಿಕೊಂಡಿರುತ್ತದೆ. ಅಹಿಂಸಾತ್ಮಕ ಅಸಹಯೋಗ ಮಾರ್ಗದಿಂದ ಅನೀತಿ, ಅನ್ಯಾಯ ಮತ್ತು ಅತ್ಯಾಚಾರಗಳನ್ನು ಪ್ರತಿರೋಧಿಸುವವರಿಗೆ ಇದು "ರಕ್ಷಾಬಂಧನ" ವಿರುವದು.

ಮತ್ತು ನಾವು ಈ ನೂಲಿನ ಮೂರೂ ಸಂದೇಶಗಳನ್ನು-ಅಹಿಂಸಾತ್ಮಕ ಅಸಹಯೋಗ, ಐಕ್ಯ ಮತ್ತು ಸ್ವದೇಶೀ-ಹೃದಯದಲ್ಲಿ ಚನ್ನಾಗಿ ಮನನಮಾಡಿಕೊಂಡು ಅದರಂತೆ ಆಚರಿಸಹತ್ತಿದರೆ, ಮ

ಶಾಸ್ತ್ರರು ದೊಡ್ಡ ದೊಡ್ಡ ಕಣ್ಣಿನ ಬಾಗಿಲಗಳುಳ್ಳ ಯರವಡೆಯ ಜೇಲಿನಲ್ಲಿ ಬಂದಿಗಳಾಗಿದ್ದರೂ ಕೂಡ ಇಡೀ ಹಿಂದುಸ್ಥಾನದಲ್ಲಿ ಅವರು ವ್ಯಾಪ್ತರಾಗಿದ್ದಾರೆಂದು ಸಿದ್ಧಮಾಡಿ ತೋರಿಸಿದಂತೆ ಆಗುವದು.

### ಮಗನಲಾಲ ಖುಶಾಲಚಂದ ಗಾಂಧಿ.

---

## ವಿಜಾಪುರದಲ್ಲಿಯ ಅಪೂರ್ವ ಉತ್ಸಾಹವು.

### (ನಮ್ಮ ಪ್ರತಿನಿಧಿಯಿಂದ)

ಈ ಮೊದಲೇ ಪ್ರಸಿದ್ಧಿಸಿದಂತೆ ಕಳೆದ ವಾರದಲ್ಲಿ ಭಾರತೀಯ ಮುಂದಾಳುಗಳ ಆಗಮನದಿಂದ ವಿಜಾಪುರವು ಪುನೀತವಾಯಿತು ಕರ್ನಾಟಕದ ಸುಪ್ರಸಿದ್ಧ ಮುಖಂಡರಾದ ದೇ. ಭ. ಗಂಗಾಧರರಾವರು ಶುಕ್ರವಾರ ತಾ|| ೨೧-೭-೨೨ನೇ ದಿವಸ ಮಧ್ಯಾಹ್ನ ಗಾಡಿಗೆ ಗದಗಿನಿಂದ ವಿಜಾಪುರಕ್ಕೆ ಬಂದರು. ಅದೇ ದಿವಸ ವಿಜಾಪುರದ ನಾಗರಿಕರ ಪರಿಯಿಂದ ಅವರಿಗೆ ಒಂದು ಮಾನಪತ್ರವು ಸಮರ್ಪಿಸಲ್ಪಟ್ಟಿತು. ಮುಪ್ಪಿನ ವಯಸ್ಸಿನಲ್ಲಿ ಕೂಡ ತಮ್ಮ ದೇಹಸ್ವಾಸ್ಥ್ಯದ ಕಡೆಗೆ ಎಳ್ಳಷ್ಟೂ ಲಕ್ಷಕೊಡದೆ ಕೇವಲ ದೇಶಹಿತಕ್ಕಾಗಿ ಆರು ತಿಂಗಳವರೆಗೆ ಕಾರಾಗೃಹ ವಾಸವನ್ನು ಅನುಭವಿಸಿದ ಆ ಪರಮ ಪೂಜ್ಯರಿಗೆ ಹೋದಹೋದಲ್ಲಿ ಈ ರೀತಿಯಾಗಿ ಗೌರವವು ದೊರೆಯುವದು ಯಥಾರ್ಥವಾಗಿರುವದು ಅವರಿಗೆ ಬಾಗಲಕೋಟೆಯ ನಿವಾಸಿಗರಾದರೂ ಆಮಂತ್ರಣವನ್ನು ಕೊಟ್ಟಿದ್ದು ಅದಕ್ಕೆ ಅವರು ಸಂತೋಷದಿಂದ ಒಪ್ಪಿರುವರು. ಸ್ವಲ್ಪದಿನಗಳಲ್ಲಿ ಅವರು ಬಾಗಲಕೋಟೆಗೆ ಆಗಮಿಸುವವರಿದ್ದಾರೆ.

ಮರುದಿವಸವೇ ಅಂದರೆ ಶನಿವಾರ ದಿವಸ ಮಧ್ಯಾಹ್ನ ಗಾಡಿಯಿಂದ ಕಾಯಿದೆಭಂಗ ವಿಚಾರಣಾ ಕಮಿಟಿಯವರು ಇಲ್ಲಿಗೆ ಬಂದರು. ಪಂಡಿತ ಮೋತೀಲಾಲ ನೆಹರು ಇವರು ಅನಾನುಕೂಲತೆಯ ಮೂಲಕ ತಮಗೆ ವಿಜಾಪುರಕ್ಕೆ ಬರಲು ಶಕ್ಯವಿಲ್ಲೆಂಬದಾಗಿ ತಿಳಿಸಿದ್ದರಿಂದ ವಿಜಾಪುರಸ್ಥರಿಗೆ ಸ್ವಲ್ಪ ಅಸಮಾಧಾನವಾಗಿತ್ತು. ಆದರೂ ಮೇಘರಾಜನು ಒಂದೇ ಸಮನೆ ಮಳೆಯನ್ನು ಸುರಿಸುತ್ತಿದ್ದರೂ ಈ ಭಾರತೀಯ ಮುಂದಾಳುಗಳನ್ನು ಆದರಿಸುವದಕ್ಕೆ ಸಾವಿರಾರು ಜನರು ಸ್ಟೇಶನದ ಮೇಲೆ ನೆರೆದಿದ್ದರು. ಅಲ್ಲಿಂದ ಮೋಟಾರಿನಲ್ಲಿ ಕುಳಿತುಕೊಂಡು ಆ ಮುಂದಾಳುಗಳು ದೇ. ಭ ಕೌಜಲಗಿಯವರ ಮನೆಗೆ ಬಂದರು. ಒರುವಾಗ ದಾರಿಯ ಎರಡೂ ಮಗ್ಗಲುಗಳಲ್ಲಿ ಅವರ ದರ್ಶನಾಪೇಕ್ಷೆಯಿಂದ ಜನರು ಸಾಲುಸಾಲಾಗಿ ನಿಂತಿದ್ದರು. ದೇಶಭಕ್ತ ಕೌಜಲಗಿಯವರ ಮನೆಯ ಮುಂದಂತೂ ಒಂದು ದೊಡ್ಡ ಜನಸಮೂಹವೇ ನೆರೆದಿತ್ತು. ಇದರ ಮೇಲಿಂದ ಜನರಲ್ಲಿ ಈ ಮುಂದಾಳುಗಳ ಬಗ್ಗೆ ಎಷ್ಟು ಆದರಭಾವವು ಇರುತ್ತದೆಂಬುವದು ಸ್ಪಷ್ಟವಾಗಿ ಕಾಣುತ್ತದೆ ಇರಲಿ,

ಕಮೀಟಿಯವರು ಬರುವದೊಂದೇ ತಡ, ಸ್ವಲ್ಪ ಉಪಹಾರವನ್ನು ತೆಗೆದುಕೊಂಡಕೂಡಲೇ ತಮ್ಮ ಕಾರ್ಯಕ್ಕೆ ಹತ್ತಿದರು. ಇದಕ್ಕನ್ನಬೇಕು ಕಾರ್ಯದಕ್ಷತೆಯೆಂದು. ಕರ್ನಾಟಕದಲ್ಲಿಯ ಎಲ್ಲ ಸಾಕ್ಷೀದಾರರಲ್ಲಿ ಎರಡು ಪಂಗಡಗಳನ್ನು ಮಾಡಿದರು. ರಾಷ್ಟ್ರೀಯ ಸಭೆಯ ಈಗಿನ ಕಾರ್ಯಕ್ರಮವು ಇದ್ದಂತೆಯೇ ಇದ್ದು ಅದರಲ್ಲಿ ಸ್ವಲ್ಪ ಕೂಡಾ ಬದಲಾವಣೆಗಳನ್ನು ಮಾಡಬಾರದೆಂಬುವವರದು ಒಂದು ಪಂಗಡ; ಇನ್ನೊಂದು ಪಂಗಡದವರು ಈಗಿನ ಕಾರ್ಯಕ್ರಮದ ಎರಡು ವರ್ಷಗಳ ಅನುಭವದ ಮೇಲಿಂದ ನಮಗೆ ತೋರುತ್ತಿರುವ ಕೆಲವು ಭಾಗಗಳನ್ನು ಬದಲುಮಾಡಬೇಕೆಂದು ಅನ್ನುವವರು ಮೊದಲಿಗೆ ಮೊದಲನೇ ಪಂಗಡದವರ ಸಾಕ್ಷಿಗಳು ಪ್ರಾರಂಭವಾದವು. ಶನಿವಾರದಿವಸವೇ ೯ ಘಂಟೆ ರಾತ್ರಿಯಾಗುವದರಲ್ಲಿ ಈ ಸಾಕ್ಷಿಗಳನ್ನು ಮುಗಿಸಿದರು. ಸಾಕ್ಷಿಗಳೆಲ್ಲವೂ ಗುಪ್ತವಾಗಿದ್ದದರಿಂದ ಅವುಗಳನ್ನು ಇಲ್ಲಿ ನಿವೇದಿಸಲು ಶಕ್ಯವಿಲ್ಲ. ಅವತ್ತಿನದಿವಸವೇ ಜಾಹೀರಸಭೆಯನ್ನು ನೆರೆಯಿಸಬೇಕೆಂದು ಗೊತ್ತಾಗಿತ್ತು. ಆದರೆ ಮೇಘರಾಜನು ಕೃಪೆತೋರಿಸದ್ದರಿಂದ ಸಭೆಯನ್ನು ಮರುದಿವಸಕ್ಕೆ ಹಾಕಬೇಕಾಯಿತು.

ಮರುದಿವಸ ಮುಂಜಾನೆ ಮುಂದಾಳುಗಳೆಲ್ಲರೂ ವಿಜಾಪುರದ ಕಟ್ಟಡಗಳನ್ನು ನೋಡುವದಕ್ಕಾಗಿ ಹೋದರು. ಅದೇಕಾಲಕ್ಕೆ ರಾಷ್ಟ್ರೀಯಶಾಲೆಯಲ್ಲಿ ಖಾದಿಯ ಪ್ರದರ್ಶನವು ಏರ್ಪಾಡುಮಾಡಲ್ಪಟ್ಟಿತ್ತು. ಮತ್ತು ಕಾಂಗ್ರೆಸ್ ಕಮಿಟಿಯ ನೇತೃತ್ವದ ಕೆಳಗೆ ನಡೆದಿದ್ದ ಖಾದಿಯ ಕಾರಖಾನೆಗಾದರೂ ಅವರನ್ನು ಕರೆದುಕೊಂಡು ಹೋಗುವದು ಗೊತ್ತಾಗಿತ್ತು. ಈ ಕಾರ್ಯಕ್ರಮಕ್ಕನುಸರಿಸಿ ಮುಂಜಾನೆ ೮ ಘಂಟೆಗೆ ಹೊರಟು ಎಲ್ಲ ಸ್ಥಳಗಳನ್ನು ನೋಡಿಕೊಂಡು ೧೧ ಘಂಟೆಗೆ ತಿರುಗಿಬಂದರು. ಕೂಡಲೆ ಭೋಜನವನ್ನು ತೀರಿಸಿಕೊಂಡು ಸಾಕ್ಷಿಗಳನ್ನು ತೆಗೆದುಕೊಳ್ಳುವ ಉದ್ಯೋಗಕ್ಕೆ ಹತ್ತಿದರು. ಈಗ ಎರಡನೇ ಪಂಗಡದವರು ತಮ್ಮ ಮತವನ್ನು ಕಮಿಟಿಯವರ ಮುಂದೆ ಸ್ಪಷ್ಟವಾಗಿ ಇಟ್ಟರು. ಈ ಕೆಲಸವು ೫ ಘಂಟೆಯವರಿಗೆ ನಡೆಯಿತು. ಆದರೂ ದೇ. ಭ. ಕೌಜಲಗಿಯವರ ಸಾಕ್ಷಿಯನ್ನು ತೆಗೆದುಕೊಳ್ಳುವದು ಇನ್ನೂ ಉಳಿಯಿತು. ಜಾಹೀರಸಭೆಯು ಗೊತ್ತಾದ್ದರಿಂದ ಅವರ ಸಾಕ್ಷಿಯನ್ನು ರಾತ್ರಿಯಲ್ಲಿ ತೆಗೆದುಕೊಳ್ಳುವದನ್ನು ಗೊತ್ತುಪಡಿಸಿ ಸಭೆಯಕಡೆಗೆ ತೆರಳಿದರು ಈ ದಿವಸವಾದರೂ ಮಳೆಯ ಅಂಜಿಕೆಯು ಇದ್ದೇ ಇತ್ತು. ಆದ್ದರಿಂದ ಸಭೆಯನ್ನು ಥಿಯೇಟರದಲ್ಲಿಯೇ ಕೂಡಿಸಬೇಕೆಂದು ಮೊದಲು ಯೋಚಿಸಿದ್ದರು. ಆದರೆ ನಾಲ್ಕುಗಂಟೆಯಾಗುವದರೊಳಗಾಗಿ ಥಿಯೇಟರದಲ್ಲಿ ಕಾಲಿಡಲಿಕ್ಕೆ ಸಹ ಸ್ಥಳವಿಲ್ಲದಂತಾಯಿತು. ಕಟ್ಟಕಡೆಗೆ ದೇವರಮೇಲೆ ಸಂಪೂರ್ಣ ಭಾರವನ್ನು ಹಾಕಿ ಎಡ್ವರ್ಡ ಪಾರ್ಕಿನಲ್ಲಿ ಸಭೆಯನ್ನು ಕೂಡಿಸತಕ್ಕದ್ದೆಂದು ನಿರ್ಣಯವಾಯಿತು. ಸುದೈವದಿಂದ ಮಳೆಯು ನಿಂತಿತು. ಆದರೂ ಕೂಡುವಸ್ಥಳದಲ್ಲೆಲ್ಲ ತೊಯ್ದು ರಾಡಿಯಾಗಿತ್ತು. ಹೀಗಿದ್ದರೂ ಕೂಡ ಸಭೆಗೆ ೬-೭ ಸಾವಿರ ಜನರು ನೆರೆದಿದ್ದರು ಅಹಮದಾಬಾದ ರಾಷ್ಟ್ರೀಯಸಭೆಯ ಅಧ್ಯಕ್ಷರಾದ ದೇ. ಭ. ಹಕೀಮ ಅಜಮಲಖಾನರಿಗೆ ವಿಜಾಪುರ ಮುನಸಿಪಾಲಿಟಿಯ ಪರಿಯಿಂದ ಮಾನಪತ್ರವನ್ನು ಅರ್ಪಿಸಬೇಕೆಂಬ ನಿರ್ಣಯವು ಸರ್ವಾನುಮತದಿಂದ ಪಾಸಾಗಿದ್ದು ಅದರಂತೆ ಮುನಸಿಪಾಲಿಟಿಯ ಉಪಾಧ್ಯಕ್ಷರಾದ ಶ್ರೀ. ನೀಲಕಂಠಪ್ಪಾ ಸುಗಂಧಿಯವರು ಮಾನಪತ್ರವನ್ನು ಓದಿ ದೇ. ಭ. ಹಕೀಮ ಅಜಮಲಖಾನರಿಗೆ ಸಮರ್ಪಿಸಿದರು. ಇದರಿಂದ ಕರ್ನಾಟಕವು ಎಷ್ಟು ಸುದೈವಿಯಾಗಿರುತ್ತದೆಂಬವನ್ನು ವರ್ಣಿಸಲು ಸಾಲದು. ಬ್ರಾಹ್ಮಣ ಲಿಂಗಾಯತರ ವಾದವು ಕರ್ನಾಟಕದಲ್ಲಿ ಉದ್ಭವಿಸಿದ ಸಂಗತಿಯು ಎಲ್ಲರಿಗೂ ಗೊತ್ತಿದ್ದದ್ದೇ. ಹೀಗಿದ್ದರೂ ವಿಜಾಪುರದ ಲಿಂಗಾಯತಬಾಂಧವರು ದೇಶಸೇವೆಯ ಕಡೆಗೆ ಲಕ್ಷ್ಯವನ್ನಿಟ್ಟು ಅಲ್ಲದ ಸಲ್ಲದ ಕ್ಷುದ್ರ ಭಾವನೆಗಳಿಗೆ ಏನೂ ಆಸ್ಪದವನ್ನು ಕೊಡದ ರಾಷ್ಟ್ರಕಾರ್ಯದಲ್ಲಿ ಮುಂಭಾಗವನ್ನು ಸ್ವೀಕರಿಸುತ್ತಿರುವರೆಂಬದು ಅಭಿಮಾನಾಸ್ಪದವಲ್ಲವೇ? ಪರಸ್ಪರರಲ್ಲಿ ಎಷ್ಟು ದೋಷಗಳಿದ್ದರೂ ಅವುಗಳನ್ನೆಲ್ಲ ಬದಿಗಿರಿಸಿ ದೇಶಸೇವೆಯಲ್ಲಿ ಎಲ್ಲರೂ ಒಕ್ಕಟ್ಟನಿಂದ ತೊಡಗುವದೇ ನಿಜವಾದ ಕರ್ತವ್ಯವು. ಇತ್ತಕಡೆಗೆ ಎಲ್ಲರೂ ಲಕ್ಷವನ್ನು ಪೂರೈಸಬೇಕೆಂದು ವಿನಂತಿಸುವೆ ರಾತ್ರಿ ೮ ಘಂಟೆಯವರೆಗೆ ಸಭೆಯ ಕಾರ್ಯವು ನಡೆಯಿತು. ಸಭೆಯಲ್ಲಿ ಮುಖಂಡರ ಭಾಷಣಗಳಾದವು ಅವುಗಳನ್ನೆಲ್ಲ ಸ್ಥಳಸಂಕೋಚದ ಮೂಲಕವಾಗಿ ಇಲ್ಲಿ ಕೊಡಲಿಕ್ಕೆ ಆಸ್ಪದವಿಲ್ಲ. ರಾತ್ರಿಯಲ್ಲಿ ದೇ. ಭ. ಕೌಜಲಗಿಯವರ ಸಾಕ್ಷಿಯಾಯಿತು ಆಮೇಲೆ ಭೋಜನವನ್ನು ತೀರಿಸಿಕೊಂಡು ಕಾಯದೆಭಂಗ ಕಮೀಟಿಯವರು ಗದಿಗಿನಮಾರ್ಗವಾಗಿ ಮದ್ರಾಸದ ಕಡೆಗೆ ತೆರಳಿದರು.

ಸರಸ್ವತೀ ವಾಚನಾಲಯ.

ಶ್ರೀ. ರವೀಂದ್ರನಾಥ ಟಾಗೋರ ಇವರ (Waterfall)

ವಾಟರಫಾಲ್‌ದ

ಕನ್ನಡ ಭಾಷಾಂತರವು.

# ಮುಕ್ತಧಾರಾ.

ನಾಟಕ.

ಭಾಷಾಂತರಕಾರ—ಜಿ ಆರ್. ಕುಲಕರ್ಣಿ.

ಮುದ್ರಣವಾಗುತ್ತಲಿದೆ } ಬೆಲೆ ೧ ರೂ. ಪೋಸ್ಟೇಜ ಬೇರೆ

ವಿಳಾಸಃ— ಎಸ್. ಎನ್. ಜೋಸಮನಿ ಗುಳೇದಗಡ್ಡ.

ಇಲ್ಲವೆ, ಶ್ರೀವಿದ್ಯಾರಣ್ಯ ಮುದ್ರಾಮಂದಿರ,

ಬಾಗಲಕೋಟೆ.



ಎಜಂಟರು ಬೇಕು! ಎಜಂಟರು ಬೇಕು!!

ನಂಬರ ೧ ನೇ ನಿರ್ಮಲವಾದ

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾದ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹ[illegible] ಕಮಿಶನವು [illegible] ಔಂಸ ತೈಲದಬಾಟ್ಲಿ ಅಥವಾ ಗಡ್ಡಿ ೧ ಕ್ಕೆ ರೂಪಾಯಿ ೩—ಡಜನ್‌ಕೆ ರು ೩ತಿ ವಿಶೇಷ ಮಾಹಿತಿ ಪತ್ರದ್ವಾರಾ.

ಬಿ. ಎ ಶೈ ಕಂಪನಿ.

ಪೋಷ್ಟ ಹೊನ್ನಾವರ.

ಜಿಲ್ಲಾ ಉತ್ತರಕಾನಡಾ



ಇಂಡಿಯಾ ಪ್ರಾವ್ಹಿಡೆಂಟ ಕಂ. ಲಿ. ಕಲಕತ್ತಾ.

ಮಧ್ಯಮ ಸ್ಥಿತಿಯ ಕುಟುಂಬದಾರರಿಗೆ ಈ ಕಠಿಣ ಕಾಲದಲ್ಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಬಿಗಿಯಾಗಿರುವದು ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರೆಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ.

V. J PARVATIKER,

General Agent, BAGALKOT



ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಎಜಂಟರು) ಅತ್ಯುತ್ತಮ (ಬೇಕು

ಶಾಯಿ ಗುಳಿಗೆಗಳು ಮತ್ತು ಚೀಟಿಗಳು.

| | | | |
|---|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೪—೦ | } | ಟ. ಖ. ಬೇರೆ. |
| ೧೦೦ ಚೀಟಿಗಳಿಗೆ | ೦—೧೪—೦ | | |
| ೪೦ ಔಂಸ ಶಾಯಿ ಪುಡಿಕೆಗೆ | ೦—೪—೦ | | |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸಃ— ಕರ್ನಾಟಕ ಇಂಕ ಕಂಪನಿ,

ಬಾಗಲಕೋಟೆ.



# NOTICE.

## THE MADRAS & SOUTHERN MAHRTTA RAILWAY COMPANY LIMITED.

(Incorporated in England.)

The public are hereby informed that Platform Tickets at one Anna each will be introduced at Bagalkot and Bijapur Stations on and from 1st August 1922.

H. D. SINCLAIR

DHARWAR

Dist TRAFFIC

21-7-1922

SUPERINTENEDNT



## ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರದ್ವಾರದಿಂದ, ಉತ್ತಮವಾದ ಸ್ವದೇಶೀ ಸಾಬೂನ ಮಾಡುವದಕ್ಕೆ ಕಲಿಸುವೆವು.

ಫೀ. ರೂ. ೫. ಉದ್ಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು.

ಕಲಾಭುವನ—ರಾಷ್ಟ್ರೀಯ ಶಾಲೆ

ಧಾರವಾಡ.



## ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ

ನಮ್ಮಲ್ಲಿ ಎಲ್ಲ ತರದ ಮುದ್ರಣವು ಬಹಳ ಅಂದವಾಗಿ ಸ್ವಸ್ತ ದರದಿಂದಲೂ ಮಾಡಲ್ಪಡುವದು. ಒಮ್ಮೆ ಅನುಭವ ತೆಗೆದು ಕೊಂಡರೆ ತಮಗೇ ಖಾತ್ರಿಯಾಗುವದು. ಇದಲ್ಲದೆ ನಮ್ಮ ಕಡೆಗೆ ವಕೀಲಿ ಪತ್ರ ದರಖಾಸ್ತ ಮುಂತಾದ ನಮೂನೆಗಳೂ, ಟೋಲ ನಾಕೇದ ಪಾವತಿ ಪುಸ್ತಕಗಳೂ ಉಳಿದ ನಮೂನೆಗಳೂ ಮಾರಲಿಕ್ಕೆ ಸಿಗುತ್ತಿದ್ದು ಬೇಕಾದವರು ತರಿಸಿಕೊಳ್ಳಬಹುದು ವ್ಹಿ. ಪಿ. ತರಿಸಿಕೊಳ್ಳ ಬೇಕಾದಲ್ಲಿ ಕೆಲವು ಹಣ ಮುಂಗಡ ಕಳಿಸತಕ್ಕದ್ದು.

ವ್ಯವಸ್ಥಾಪಕ.



ಜಾಹಿರಾತಿನ ದರ.

ಕನ್ನಡ 'ನವಜೀವನ' ದ ಒಂದು ಕಾಲಮಿನ ಒಂದು ಪ್ರತಿಯೊಂದು ಸಾರೆ ೧ ರೂ. ಕಾಯಂ ಜಾಹಿರಾತುಗಳ ಬಗ್ಗೆ ಸಮಕ್ಷಮ ಅಥವಾ ಪತ್ರ ದ್ವಾರದಿಂದ ತಿಳಕೊಳ್ಳಬೇಕು.



☞ ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಶ್ರೀನಿವಾಸ ರಾಜೇರಾವ ಮುಂಗಳ ಇವರು ಮುದ್ರಿಸಿದರು ಮತ್ತು ಅಲ್ಲಿಯೇ ಶಮಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು

ಮಿಥ್ಯಾಸಮಾನತೆ.

R. No B. 1589

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ ' ಯಂಗ ಇಂಡಿಯಾ ' ಮತ್ತು ' ನವಜೀವನ ' ಗಳನ್ನು ಕನ್ನಡಿಸುವದೇ ಈ ವಾರಪತ್ರಿಕೆಯ ಮುಖೋದ್ದೇಶವು.

ವರ್ಷ ೧ | ಬಾಗಲಕೋಟ ಶ್ರಾವಣ ಶುದ್ಧ ೧೧ ಶಕೆ ೧೮೪೪ ಗುರುವಾರ ತಾ. ೩ ಅಗಸ್ಟ ೧೯೨೨. | ಸಂಚಿಕೆ ೩೪

## ಮಹಾತ್ಮರ ನುಡಿಯು.

### ಮಾತೃಭಾಷೆಯು.

**ಶಿಷ್ಟಾಚಾರದಲ್ಲಿ ಹಿಂದೀ ಆಚರಣವನ್ನು ಪಾಲಿಸುವ ರು. ಸಂಭಾಷಣದಲ್ಲಿ ಮಾತೃಭಾಷೆಯನ್ನೇ ಉಪಯೋಗಿಸುವರು.**

**ಗಾಂಧಿ ಚರಿತ್ರ. ೨೪**

ರವೀಂದ್ರನಾಥ ಟ್ಯಾಗೋರ ಇವರ ಮನೋಹರ ಭಾಷಣ ಸರಣಿಯು ಅವರ ಭಾಷಾಭಿಮಾನದಿಂದಲೇ ಉತ್ಪನ್ನವಾಗಿದೆ. ಈ ಮಹಾಕವಿಯು ತನ್ನ ದೇಶದಲ್ಲಿ ತನ್ನ ಮಾತೃಭಾಷೆಯನ್ನೇ ಉಪಯೋಗಿಸುವನು.

ಮಹಾತ್ಮಾ ಮುನಶೀ ರಾಮಜೀಯವರು ಕೂಡ ತಮ್ಮ ಮಾತೃಭಾಷೆಯಲ್ಲಿಯೇ ಮಾತಾಡುವರು. ಮದನಮೋಹನಮಾಲವೀಯವರ ಇಂಗ್ರೇಜಿಯು ಬೆಳ್ಳಿಯಂತೆ ಪ್ರಕಾಶಿಸುತ್ತದೆ. ಅವರು ಮಾಡುವದನ್ನು ತಿಳಕೊಳ್ಳಲಿಕ್ಕೆ ವ್ಹಾಯಿಸರಾಯರಿಗೆ ಕೂಡ ವಿಚಾರ ಮಾಡಬೇಕಾಗುತ್ತದೆ. ಹೀಗಿದ್ದರೂ ಅವರ ಹಿಂದೀ ಭಾಷಣವು ಮಾನಸ ಸರೋವರದಿಂದ ಹೊರಟ ಗಂಗಾ ಪ್ರವಾಹದಂತೆ ಇರುತ್ತದೆ.

ಈ ಮಹನೀಯರ ದೃಷ್ಟಾಂತದ ಮೇಲಿಂದ ಸ್ವಭಾಷೆಯ ವಿಕಾಸವಾಗಬೇಕಾದರೆ ಮಾತೃಭಾಷೆಯ ಮೇಲಿನ ಪ್ರೇಮ ಮತ್ತು ಶ್ರದ್ಧೆ ಇವು ಬೇಕೇ ಹೊರತು ಅನ್ಯ ಭಾಷೆಯ ಜ್ಞಾನದ ಅವಶ್ಯಕತೆಯಿಲ್ಲ.

ಪರಕೀಯ ಭಾಷಣದ ಮೇಲಿಂದ ಶಿಕ್ಷಣವನ್ನು ತಕ್ಕೊಂಡರೆ ಮಿದುಳಿಗೆ ಅತಿಶಯ ತ್ರಾಸವಾಗುವದು. ನಮ್ಮ ಹುಡುಗರಂತೂ ಅದನ್ನು ಸಹಿಸುವವು. ಅದರ ದುಷ್ಪರಿಣಾಮವನ್ನು ಅನುಭವಿಸಬೇಕಾಗುವದು. ಅವರು ಬೌದ್ಧಿಕ ಬೇರೆ ಕೆಲಸಗಳನ್ನು ಮಾಡಲು ಅಸಮರ್ಥರಾಗುವರು. ಇದರಿಂದಲೇ ನಮ್ಮ ಗ್ರ್ಯಾಜ್ಯುವೇಟರು ನಿಃಸತ್ವ, ನಿರ್ಬಲ, ನಿರುತ್ಸಾಹೀ, ರೋಗಿ ಮತ್ತು ಅಂಧಾನುಕರಣಿಗಳು ಆಗುವರು. ಡಾ|| ಭೋಸ ಮತ್ತು ಡಾ|| ರಾಯ ಇವರ ಶೋಧ ನೋಡಿ ನಮಗೆ ಹರ್ಷವಾಯುವಾಗುವದು. ಅವರಿ ಜನ್ಮಭಾಷೆಯಲ್ಲಿಯೇ ಎಸತ್ತು ವರ್ಷ ಶಿಕ್ಷಣ ಕೊಟ್ಟಿದ್ದರೆ ನಮ್ಮಲ್ಲಿ ಅವರ ಅಸ್ತಿತ್ವದ ಕೌತುಕವು ಡವನ್ನು ರಾಯ ಭೋಸರು ಇರುತ್ತಿದ್ದರು.

ಜಪಾನವೂ ಕೂಡ ತನ್ನ ರಾಷ್ಟ್ರಜಾಗೃತಿಯನ್ನು ಸ್ವಭಾಷಾದ್ವಾರದಿಂದಲೇ ಮಾಡಿತು. ಪರಭಾಷೆಯಿಂದ ಶಿಕ್ಷಣ ತಕ್ಕೊಳ್ಳುವದರಿಂದ ತಾಯಿಯ ಹಾಲಿನೊಡನೆ ಬಂದ ಸಂಸ್ಕಾರ, ಮಧುರ ಶಬ್ದ ಮತ್ತು ಶಾಲೆಯಲ್ಲಿ ಸಿಗುವ ಶಿಕ್ಷಣದೊಡನೆ ಇರಬೇಕಾದ ಅನುಸಂಧಾನವು ತಪ್ಪುವದು. ಆದರಿಂದ ಈ ಅನುಸಂಧಾನ ತಪ್ಪಿಸುವವರ ಹೇತುವು ಎಷ್ಟು ಉಚ್ಚವಿದ್ದರೂ ಅವರು ಸಮಾಜ ಶತ್ರುಗಳೇ. ಈ ಪ್ರಕಾರ ಪರಭಾಷೆಯಿಂದ ಶಿಕ್ಷಣ ತಕ್ಕೊಳ್ಳುವ ನಾವು ಮಾತೃದ್ರೋಹವನ್ನು ಮಾಡುತ್ತಿದ್ದೇವೆ. ಮಾತೃಭಾಷೆಯ ಅನಾದರವನ್ನು ನಾವೇನು ಮಾಡುತ್ತಿರುವೆಯೊ ಅದಕ್ಕೆ ಭಯಂಕರ ಪ್ರಾಯಶ್ಚಿತ್ತವನ್ನು ನಮಗೆ ತಕ್ಕೊಳ್ಳಬೇಕಾಗುವದು ಇದರಿಂದ ಸಮಾಜದ ಭಯಂಕರ ಹಾನಿಯನ್ನು ನಾವು ಮಾಡಿದ್ದೇವೆ. ಈಗಾದರೂ ಇದರೊಳಗಿಂದ ಮುಕ್ತಮಾಡುವದು ಸುಶಿಕ್ಷಿತ ಜನರ ಮೊದಲನೇ ಕರ್ತವ್ಯವದೆ.

ನಮ್ಮ ಮಾತೃಭಾಷೆಯಿಂದ ಶಿಕ್ಷಣತಕ್ಕೊಳ್ಳುವದು ನಮ್ಮಿಂದಾಗದಿದ್ದರೆ, ನಮ್ಮಂಥ ಹೇಡಿಗಳಿಂದೇನಾದೀತು ? ಮಾತೃಭಾಷೆಯಿಂದ ಶಿಕ್ಷಣ ತಕ್ಕೊಳ್ಳಬೇಕೋ ಈಗಿದ್ದ ಹಾಗೆ ಇರಬೇಕೋ ಎಂದು ವಿಚಾರಮಾಡಬೇಕಾಗುವ ಪ್ರಸಂಗ ಬಂದದ್ದು ಕೂಡ ಅತ್ಯಂತ ಖೇದಕರವೇ ಸರಿ. ಮಾತೃ ಭಾಷೆಯಿಂದ ಶಿಕ್ಷಣಕೊಡುವದು ಇಷ್ಟವಾದ್ದರಿಂದ ಅದಕ್ಕಾಗಿ ಕೆಳಗೆ ಬರೆದ ಉಪಾಯಮಾಡಬೇಕು.

( ೧ ) ಇಂಗ್ಲಿಷ ( ಪರಭಾಷೆ ) ಭಾಷೆಯನ್ನು ಬಲ್ಲವರು ಪರಸ್ಪರ ವ್ಯವಹಾರದಲ್ಲಿ ಎಂದೂ ಇಂಗ್ಲೀಷ ಮಾತಾಡಬಾರದು.

( ೨ ) ಇಂಗ್ಲೀಷ ಮತ್ತು ಸ್ವಭಾಷೆಯ ಉತ್ತಮ ಜ್ಞಾನವುಳ್ಳವರು ಇಂಗ್ಲೀಷ ಪುಸ್ತಕಗಳನ್ನು ಓದಿ ಅವುಗಳ ವಿಚಾರವನ್ನು ಸ್ವಭಾಷೆಯಿಂದ ಜನರಿಗೆ ಕೊಡಬೇಕು.

( ೩ ) ಶಿಕ್ಷಣ ಸಂಸ್ಥೆಗಳು ಬೇರೆ ಬೇರೆ ವಿಷಯಗಳನ್ನು ದೇಶೀ ಭಾಷೆಯಲ್ಲಿ ತಯಾರಿಸಬೇಕು.

( ೪ ) ಶ್ರೀಮಂತರು ಸ್ವಭಾಷೆಯಲ್ಲಿ ಶಿಕ್ಷಣಕೊಡುವ ಸಂಸ್ಥೆಯನ್ನು ತೆಗೆಯಬೇಕು.

( ೫ ) ಯಾವತ್ತು ಸಂಪತ್ತಿನವರೂ, ಶಿಕ್ಷಣ ಸಂಸ್ಥೆಯವರೂ ಸರಕಾರಕ್ಕೆ ಎಲ್ಲ ಶಿಕ್ಷಣವನ್ನು ಸ್ವಭಾಷೆಯಲ್ಲಿಯೇ ಕೊಡಬೇಕೆಂದು ಅರ್ಜಿಮಾಡಬೇಕು. ಕಚೇರಿ ನ್ಯಾಯದೇಕೌನ್ಸಿಲ್‌ಗಳಲ್ಲಿ ಎಲ್ಲ ವ್ಯವಹಾರವು ದೇಶೀಭಾಷೆಯಿಂದಲೇ ಆಗಬೇಕು. ಪ್ರಜೆಗಳ ಎಲ್ಲ ಕೆಲಸವು ದೇಶಭಾಷೆಯಿಂದಲೇ ಸಾಗಬೇಕು. ಎಲ್ಲ ತರದ ಶಿಕ್ಷಣವು ಸ್ವಭಾಷೆಯಲ್ಲಿಯೇ ಸಿಗುವಂತೆ ಮಾಡಬೇಕು.

ಶಿಕ್ಷಣವನ್ನು ಯಾವ ಭಾಷೆಯಿಂದ ಕೊಡಬೇಕೆಂಬದರ ಮೇಲೆಯೇ ದೇಶದ ಉನ್ನತಿಯು ಅವಲಂಬಿಸಿರುವದು ಎಂದು ನನ್ನ ಧೃಡವಾದ ತಿಳುವಳಿಕೆಯುಂಟು. ಆದ್ದರಿಂದ ನನ್ನ ಸೂಚನೆಗಳು ಬಹಳ ಮಹತ್ವದ್ದೆಂದು ನನಗೆ ಅನಿಸುತ್ತದೆ. ಮಾತೃಭಾಷೆಗೆ ತಕ್ಕ ಬೆಲೆಯು ಬಂದನಂತರ ಅದಕ್ಕೆ ರಾಜ್ಯಪದವು ದೊರೆತ ನಂತರ, ಅದರಲ್ಲಿ ಕಲ್ಪನಾತೀತವಾದ ಶಕ್ತಿಯು ಉದ್ಭೂತವಾದದ್ದು ನಿಮ್ಮ ಕಣ್ಣಿಗೆ ಬೀಳಬಹುದು.

ಗುಜರಾಥದ ಶಿಕ್ಷಣಪರಿಷತದ ಅಧ್ಯಕ್ಷರಿದ್ದಾಗ್ಗೆ ಮಾಡಿದ ಗಾಂಧಿಯವರ ಭಾಷಣ.

( ೧೯೧೭ )

ಯಾವ ರಾಷ್ಟ್ರವು ಸ್ವಭಾಷೆಯ ತ್ಯಾಗಮಾಡಿ ತಮ್ಮ ಉನ್ನತಿ ಮಾಡಿಕೊಂಡಿಲ್ಲ. ಆದ್ದರಿಂದ ಈ ಆಶ್ರಮದಲ್ಲಿ ಸರ್ವಶಿಕ್ಷಣವು ಸ್ವಭಾಷೆಯಲ್ಲಿಯೇ ಕೊಡಲ್ಪಡುವದು.

ಸತ್ಯಾಗ್ರಹ ಆಶ್ರಮದ ನಿಯಮ.

ಸುಶಿಕ್ಷಿತ ಜನರು ಪರಭಾಷೆಯಿಂದ ಶಿಕ್ಷಣತಕ್ಕೊಳ್ಳುವದರಿಂದ ಅವರು ಅಶಕ್ತರಾಗುತ್ತಾರೆ. ಮತ್ತು ಅವರಿಂದ ಜನರಿಗೆ ಲಾಭವಾಗದು.

ಗುಜರಾಥದ ರಾಜಕೀಯ ಪರಿಷತ್ತಿನ ಅಧ್ಯಕ್ಷ ಮ. ಗಾಂಧಿ

ನನ್ನ ದೇಶಬಾಂಧವರ ಮುಂದೆ ಪರಕೀಯ ಭಾಷೆಯಲ್ಲಿ ನನಗೆ ಮಾತಾಡುವ ಪ್ರಸಂಗ ಬಂದದ್ದು ಎಂಥ ನಾಚಿಕೆಗೇಡಿತನದ ಮಾತು ಮುಂಬಯಿಯಲ್ಲಿ ಕೂಡ ರಾಷ್ಟ್ರೀಯ ಸಭೆಯಲ್ಲಿ ಹಿಂದಿಯ ಭಾಷೆಯಿಂದ ಆದ ವ್ಯಾಖ್ಯಾನಗಳೇ ಜನರ ಮನಸ್ಸಿನಲ್ಲಿ ನಟ್ಟವು. ಇಲ್ಲಿಯಂತೂ ಎಲ್ಲರು ಹಿಂದೀ ಮಾತಾಡುವವರು ವಿಶ್ವವಿದ್ಯಾಲಯವು ದೇಶೀಭಾಷೆಯಿಂದಲೇ ಶಿಕ್ಷಣ ಕೊಡುವ ಬಗ್ಗೆ ಲಕ್ಷ್ಯ ಕೊಡುವದೆಂದು ನಾನು ಬಯಸುತ್ತೇನೆ. ಭಾಷೆಯು ಮಾತಾಡುವವರ ಆತ್ಮಗಳ ಪ್ರತಿಬಿಂಬವಿರುವದು. ನಮ್ಮ ಭಾಷೆಗಳು ಉದಾತ್ತ ವಿಚಾರಗಳನ್ನು ಪ್ರಕಟಿಸಲು ಅಸಮರ್ಥವಿರುತ್ತವೆಂದು ನಿಮ್ಮ ತಿಳುವಳಿಕೆ ಇದ್ದರೆ ನಾವು ಜಗತ್ತಿನೊಳಗಿಂದ ಎಷ್ಟು ತೀವ್ರ ಹೋಗುವೆವೋ ಅಷ್ಟು ಒಳ್ಳೇದು ಎಂದೇ ನನ್ನ ಉತ್ತರವು. ನಮ್ಮಲ್ಲಿ ಕರ್ತೃತ್ವವಿಲ್ಲೆಂದು ಅನ್ನುವರು. ಆದರೆ ನಮ್ಮ ಆಯುಷ್ಯದ ಮಹತ್ವದ ಭಾಗವನ್ನು ಪರಕೀಯ ಭಾಷೆಯ ಮೇಲೆ ಪ್ರಭುತ್ವ ಸಂಪಾದಿಸುವದಕ್ಕಾಗಿಯೇ ಕಳೆದರೆ ನಮ್ಮಲ್ಲಿ ಕರ್ತೃತ್ವ ಬರುವದೆಂತ. ಪರಕೀಯ ಭಾಷೆಯಲ್ಲಿ ಮಾತಾಡುವದರಿಂದ ಇಲ್ಲಿ ಮಾತಾಡಿದವರಲ್ಲಿ ಅನೇಕರಿಗೆ ಜನರ ಮನಸ್ಸನ್ನು ಆಕರ್ಷಣ ಮಾಡುವದು ಆಗುವದಿಲ್ಲ. ಈ ೫೦ ವರ್ಷ ಸ್ವಭಾಷೆಯಲ್ಲಿ ಶಿಕ್ಷಣ ಶಿಕ್ಕಿದ್ದರೆ ನಮಗೆ ಸ್ವರಾಜ್ಯ ದೊರೆಯುತ್ತಿತ್ತು. ನಮ್ಮ ಸುಶಿಕ್ಷಿತ ವರ್ಗವು ಈಗಿನಂತೆ ಪರಕೀಯರಂತೆ ಆಗುತ್ತಿದ್ದಿಲ್ಲ ನಮ್ಮ ಹೆಂಗಸರಿಗೂ ಕೂಡ ನಮ್ಮ ಉಚ್ಚ ವಿಚಾರಗಳಲ್ಲಿ ಪಾಲುಗಾರರಾಗಲು ಬರುವದಿಲ್ಲ. ಪ್ರೊ. ಬೋಸ, ರಾಯ ಇವರ ಉಜ್ವಲ ಶೋಧಗಳು ಕೂಡ ಸಾಮಾನ್ಯ ಜನರಿಗೆ ನಿರುಪಯೋಗಿಯಾಗಿಬಿಟ್ಟಿದೆ

ಹಿಂದೀ ಯುನಿವ್ಹರ್ಸಿಟಿಯಲ್ಲಿ ಮಾಡಿದ ಭಾಷಣವು

(ಮಹಾತ್ಮಾಗಾಂಧಿ)

ಸ್ವದೇಶಿಯೆಂದರೆ ಕೇವಲ ಪರಕೀಯ ವಸ್ತ್ರತ್ಯಾಗವಷ್ಟೇ ಅಲ್ಲ. ಅವನ್ನು ಹಾಕಿಕೊಳ್ಳುವ ಪರಕೀಯ ರೀತಿಯನ್ನು ಬಿಡಬೇಕು. ಚೊಣ್ಣ, ವೇಸ್ಟಕೋಟ ನೆಕ್ಟಾಯಿಗಳನ್ನು ಹಾಕಿಕೊಳ್ಳುವದು ಯೋಗ್ಯವಲ್ಲ.

ತಂದೆತಾಯಿಗಳು ತಮ್ಮ ಮಕ್ಕಳಿಗೆ ಯುರೋಪಿಯನ್ ಡ್ರೆಸ್ ಮತ್ತು ವ್ಯಸನಗಳನ್ನು ಹಚ್ಚಿಸಿ, ಕೆಡಗೊಡಬಾರದು. ಅವು ಅವರ ಆಯುಷ್ಯದಲ್ಲಿ ತ್ರಾಸದಾಯಕವಾಗುವವು. ಮತ್ತು ಬ್ರಹ್ಮಚರ್ಯ [illegible]ಕ್ಕೆ ಪ್ರತಿಬಂಧಿಸುವವು. ಈಗಲೇ ನಮ್ಮೆಲ್ಲರಲ್ಲಿ ಸಾಮಾನ್ಯವಾಗಿದ್ದ ದೋಷಗಳಿಗಾಗಿ ನಾವು ಹೆಣಗಾಡಬೇಕಾಗಿರುವದು, ರಲ್ಲಿ ಇವನ್ನಿಷ್ಟು ಕೂಡಿಸಿದರೆ ತೀರಿತು. ಅವನ್ನು ಕಳೆಯುವದು ಸಾಧ್ಯವಾಗುವದು.

ಸುಶಿಕ್ಷಿತ ಜನರೆಲ್ಲರೂ ಇಂಗ್ಲೀಷ ಭಾಷಾದ್ವಾರದಿಂದ [illegible] ಹೊಂದಿರುವರು. ಆದ್ದರಿಂದ ನಾವು ಜನತೆಯ ಮೇಲೆ ಏನೂ [illegible] ಣಾಮ ಮಾಡಲಾರೆವು ಯುರೋಪಿಯನ್ನರಷ್ಟೇ ನಾವು ಜನತೆಗೆ [illegible]ರವಾಗಿರುವೆವು. ಅವರ ಮನಸ್ಸು ನಮಗೆ ಸ್ಪಷ್ಟತೋರುವದಿಲ್ಲ. [illegible]ರ ಉದ್ಗಾರಗಳು ನಮ್ಮವಾಗಿಲ್ಲ ಆದ್ದರಿಂದ ನಾವು ಅವರ ಪ್ರತಿನಿ[illegible]ಳಾಗಲಿಕ್ಕೆ ತಕ್ಕವರಲ್ಲ ೫೦ ವರ್ಷಗಳವರೆಗೆ ನಾವು ದೇಶಭಾಷೆ[illegible]ದ ಶಿಕ್ಷಣವನ್ನು ತಕ್ಕೊಂಡಿದ್ದರೆ ಸಣ್ಣವರು, ದೊಡ್ಡವರು, ಸೇ[illegible]ವರು ಸೇವಕರು ಎಲ್ಲರೂ ನಮ್ಮ ಜ್ಞಾನದ ಲಾಭವನ್ನು ಹೊಂ[illegible]ತ್ತಿದ್ದರು. ಬೋಸರಾಯರ ಶೋಧಗಳು ರಾಮಾಯಣ ಭಾರ[illegible]ಳಂತೆ ಮನೆಮನೆಗಳಲ್ಲಿ ಗೊತ್ತಾಗುತ್ತಿತ್ತು. ಈಗ್ಯೆ ಅವೆಲ್ಲ ಪ[illegible]ಯರಿಂದ ಆದಂತೆ ಅಪರಿಚಿತವೇ ಉಳಿದವೆ. ಎಲ್ಲ ಶಾಸ್ತ್ರಗಳ[illegible] ಸ್ವಭಾಷೆಯಿಂದಲೇ ಕಲ್ಪಿಸಿದರೆ ಅವು ತೀವ್ರವಾಗಿಯೇ ಎಲ್ಲ ಕಡೆ[illegible] ವ್ಯಾಪಿಸುವವೆಂದು ದೃಢವಾಗಿ ಹೇಳುತ್ತೇನೆ.

ಶಿಕ್ಷಣಕ್ಕೆ ಸ್ವಭಾಷೆಯು ದ್ವಾರವಿರುವದು. ರಾಷ್ಟ್ರೀಯ[illegible]ಯಿಂದ ಅತ್ಯಂತ ಮಹತ್ವದ್ದು ಇರುತ್ತದೆ. ಇದರ ಉಪೇಕ್ಷೆಯಿಂ[illegible] ರಾಷ್ಟ್ರೀಯ ಹಾನಿಯಾಗಿರುತ್ತದೆ. ಪರಕೀಯ ಭಾಷೆಯ ದ್ವಾರದಿಂ[illegible] ಶಿಕ್ಷಣತಕ್ಕೊಂಡವರೇ ಈಗ ಹಿಂದುಸ್ಥಾನದಲ್ಲಿ ದೇಶಾಭಿಮಾನ[illegible] ಮತ್ತು ಸಾರ್ವಜನಿಕ ಕೆಲಸಮಾಡುತ್ತಾರೆಂದು ಕೆಲವರು ಹೇ[illegible]ಹುದು. ಇದು ಸತ್ಯವು ಆದರೆ ಆಶ್ಚರ್ಯವೇನು? ಹೀಗಾಗದಿದ್ದ[illegible] ಮಾತ್ರ ವಿಲಕ್ಷಣವಾಗುತ್ತಿತ್ತು, ಯಾಕಂದರೆ ಇಲ್ಲಿ ಎಲ್ಲಕಡೆಗೆ [illegible]ಣವೆಲ್ಲ ಇಂಗ್ಲೀಷದ್ವಾರದಿಂದಲೇ ದೊರೆಯುವದು. ವ್ಹಾಯಿಸ[illegible]ಯರು ಈ ಶಿಕ್ಷಣದ ಪ್ರಶ್ನವನ್ನು ಬಿಡಿಸಲಿಕ್ಕೆ ಅಸಮರ್ಥರಾದಾಗ[illegible] ಸ್ವಭಾಷೆಯಿಂದ ಶಿಕ್ಷಣಕೊಡುವ ಮಹತ್ವದ ವಿಷಯಕ್ಕೆ ಜಾಗ[illegible]ಕರಿದ್ದಾರೆ. ಪೂರ್ವ ಯುರೋಪದಲ್ಲಿ ಯಹುದ್ಯ ಜನರು ಅತ್ತಿತ್ತ [illegible]ವಿದ ತಮ್ಮ ಸಮಾಜದಲ್ಲಿ ಪರಸ್ಪರ ವ್ಯವಹಾರದಲ್ಲಿ ತಮ್ಮ ಕ್ಷ[illegible]ವಾದ ಭಾಷೆಯನ್ನು ಬೇರೆ ಬೇರೆ ಭಾಷೆಯೊಳಗಿನ ಉತ್ತಮ[illegible] ಗ್ರಂಥಗಳನ್ನು ಅದರಲ್ಲಿ ಭಾಷಾಂತರಿಸಿ, ಮುಂದೆ ತಂದರು. [illegible] **ಇತರ ಭಾಷೆಗಳಲ್ಲಿ ಅತ್ಯಂತ ಪ್ರವೀಣರಾಗಿದ್ದೇವೆಂದು [illegible] ತುಷ್ಟರಾಗಿ ತಮ್ಮ ಭಾಷೆಯನ್ನು ದುರ್ಲಕ್ಷಿಸಲಿಲ್ಲ** ಇದು [illegible]ತ ಸ್ಪೃಹಣೀಯ ಕೃತ್ಯವು. ನಮ್ಮ ಭಾಷೆಗಳ ಕುಂದು ಕೊರತೆ[illegible]ನ್ನು ಅನ್ಯಭಾಷೆಗಳಿಂದ ತಂದು ಪೂರೈಸುವದು ಅನ್ಯೋನ್ಯ[illegible] ಯಾದ ಕೆಲಸವಲ್ಲ ಸುಲಭವಾದದ್ದು. ದಕ್ಷಿಣ ಆಫ್ರಿಕೆಯೂ [illegible]ನ್ನೇ ಸಿದ್ಧಮಾಡುತ್ತದೆ. ಡಚ್ಚ ಭಾಷೆಯ ಅಪಭ್ರಂಶವಾದ ಟಾ[illegible] ಮತ್ತು ಇಂಗ್ಲೀಷಗಳ ನಡುವೆ ದ್ವಂದ್ವಯುದ್ಧವು ನಡೆದಿತ್ತು [illegible] ಆರರ ತಂದೆತಾಯಿಗಳು ಬಾಲ್ಯದಲ್ಲಿ ಹುಡುಗರೊಡನೆ ತಾವಾಡು[illegible] ಭಾಷೆಯನ್ನು ( ಟಾಲ ) ಇಂಗ್ಲೀಷದಿಂದ ಶಿಕ್ಷಣ ತಕ್ಕೊಂಡು ಕ[illegible]ಸಲು ಒಪ್ಪಂಬಡಲಿಲ್ಲ ಇಂಗ್ಲೀಷವು ಪ್ರಬಲವಿದ್ದು ಅದನ್ನು ಸ[illegible]ರ್ಥಿಸುವವರೂ ಅಲ್ಲಿ ದೊಡ್ಡ ಮನುಷ್ಯರಾಗಿದ್ದರು. ಆದರೂ ಬೋ[illegible]ರ ಜನರ ಸ್ವದೇಶಾಭಿಮಾನದ ಮುಂದೆ ಈ ಇಂಗ್ಲೀಷ ಭಾಷೆಯು[illegible]ದೆ ಅದು ನಿಸ್ಸಹಾಯವಾಗಬೇಕಾಯಿತು ಇಷ್ಟೇ ಅಲ್ಲ ಉಚ್ಚವಾದ [illegible] ಭಾಷೆಯನ್ನು ಅವರು ಹಿಂದಕ್ಕೆ ನೂಕಿದರು. ಉಚ್ಚ ಡಚ್ಚ ಭಾಷೆ[illegible]ಲ್ಲಿ ಪ್ರವೀಣರಾದ ಶಿಕ್ಷಕರೂ ಕೂಡ ಸುಲಭವಾದ ಟಾಲ ಭಾ[illegible]ಯಲ್ಲಿಯೇ ಶಿಕ್ಷಣಕೊಡುವಂತೆ ನಿರ್ಬಂಧಿಸಿದರು. ಇದರಿಂದ ಗ್ರಾ[illegible] ಆದರೆ ಶೂರ ಜನರ ಆ ಭಾಷೆಯು ಸ್ವಲ್ಪ ದಿವಸಗಳ ಹಿಂ[illegible] ಅತ್ಯಂತ ಕ್ಷುದ್ರವಾಗಿದ್ದರೂ ಈಗ್ಯೆ ಅದರಲ್ಲಿ ಉತ್ತಮವಾದ ವ[illegible]ಯವು ದೃಗ್ಗೋಚರವಾಗುತ್ತದೆ. ನಮ್ಮ ಭಾಷೆಗಳಲ್ಲಿಯ ಪ್ರಧ್ಯೆ[illegible] ಅಭಾವವು ನಮ್ಮಲ್ಲಿಯ [illegible] ವರ್ಷ[illegible]

ಗಳ ಸಂಘವು, ಪರಸ್ಪರ ಮಿತ್ರತ್ವ ಹಾಗೂ ಸಹಾಯದ ಸಂಬಂಧದಿಂದ ಕೂಡಿರಬೇಕು, ಪ್ರತಿ ಹಿಂಸೆಯಿಂದ ಸಂಪಾದಿಸಿದ ಸಮತೂಕದ ಮೇಲೆ ಆ ಸಾಮ್ರಾಜ್ಯ ಕಟ್ಟಡವನ್ನು ನಿಲ್ಲಿಸಲು ಶಕ್ಯವಿಲ್ಲ ಈ ಬಂಧನವು ಹಿಂಸೆಯಿಂದ ಉತ್ಪನ್ನವಾದದ್ದಾಗುವದಲ್ಲದೆ ಪ್ರೇಮದಿಂದ ಉತ್ಪನ್ನವಾದದ್ದಲ್ಲ ಹಿಂಸೆಯಿಂದ ಎಂದಾದರೂ ಐಕ್ಯವು ಸಂಭವಿಸಿದೆಯೇ? ರಾಷ್ಟ್ರಕುಟುಂಬದಲ್ಲಿದ್ದ ಜನರಲ್ಲಿ ಕಸ್ಪೈಸಮಾನತೆಯು ಇರಲಿಕ್ಕೆಬೇಕು ಉಳಿದವುಗಳ ಸಂಬಂಧದ ಪಕ್ಷದಲ್ಲಿ ಪ್ರತಿಹಿಂಸೆಯಿಂದ ಸಂತುಷ್ಟವಾಗಲಿಕ್ಕೆ ಹೇಳಿದರೆ ಅದಕ್ಕೆ ಅಷ್ಟೇನು ಸಮಾಧಾನವಾಗಲಾರದು ಉಳಿದ ಶಿಕ್ಷೆಗಳಂತೆ ಪ್ರತಿಹಿಂಸೆಯನ್ನಾದರೂ, ಸುಧಾರಿಸುವದಕ್ಕಾಗಿ ಉಪಯೋಗಿಸಿದರೆ ಅದರಿಂದ ಸ್ವಲ್ಪ ಹಿತವಾದರೂ ಆಗಬಹುದು ಗೌರವರ್ಣದವರು ಸ್ವಭಾಗಗಳಿಂದ ಹಿಂದುಸ್ಥಾನದ ಜನರನ್ನು ಹೊರನೂಕುವದನ್ನು ಪ್ರತಿಹಿಂಸೆಯಿಂದ ಮಾಡುವದು ಸಾಧ್ಯವಿಲ್ಲ ಹಿಂದುಸ್ಥಾನದವರನ್ನು ತಮ್ಮ ಧೇಶಗಳಲ್ಲಿ ಎ ದಿಗಿ ಬರಗೊಡಲಿಕ್ಕಿಲ್ಲವೆಂದೂ ಹಿಂದುಸ್ತಾನವು ಪ್ರತಿ ಹಿಂಸೆಯಲ್ಲಿ ಮಾತ್ರ ಸಂತೋಷ ತೆಗೆದುಕೊಳ್ಳಬೇಕೆಂದೂ ಅವರು ನಿಶ್ಚಯಸಿದ್ದಾರೆ ಪ್ರತಿ ಹಿಂಸೆಯ ಅಂಜಿಕೆಯಿಂದ ಹಿಂದುಸ್ತಾನವನ್ನು ಉಳಿದ ಗೌರವರ್ಣದ ರಾಷ್ಟ್ರಗಳಂತೆ ನಡೆಸಿಕೊಳ್ಳುವ ಸಂಭವವಿಲ್ಲದಿದ್ದರೆ, ಕೇವಲ ಪ್ರತಿ ಹಿಂಸೆಯಿಂದಲೇ ಹಿಂದುಸ್ತಾನವು ಸಂತುಷ್ಟವಾಗಲಾರದು ಹಿಂದುಸ್ತಾನಕ್ಕೆ ಯಾರನ್ನಾದರೂ ಹೊರಗೆ ಹಾಕಬೇಕೆಂಬ ಇಚ್ಛೆಯಿಲ್ಲ ಎರಡನೇಯವರು ನಮ್ಮನ್ನು ಹೊರಗೆಹಾಕುವರೆಂದು ನಾವು ಎರಡನೇಯವರನ್ನು ಹೊರಗೆ ಹಾಕುವದರಿಂದ ನಮಗೆ ದೊರೆಯುವ ಸುಖವು ಕಾಲ್ಪನಿಕವಾಗಿರುತ್ತದೆ ಸಾಮ್ರಾಜ್ಯದ ಅಥವಾ ಸಾಮ್ರಾಜ್ಯದ ಹೊರಗಿನ ಜನರನ್ನು ಸಾಮ್ರಾಜ್ಯದ ಇತರ ಭಾಗಗಳಲ್ಲಿ ಸ್ವಾಗತ ಮಾಡಿ, ಹಿಂದು ಪುತ್ರರನ್ನು ಮಾತ್ರ ಬಹಿಷ್ಕರಿಸುವದಾದರೆ ಅಂಥ ಸಾಮ್ರಾಜ್ಯದಿಂದ ಹಿಂದುಸ್ತಾನಕ್ಕೆ ಏನು ಲಾಭವು? ಇಂಥಕರಾರಗಳ ಮೇಲೆ ಸಾಮ್ರಾಜ್ಯವು ಹಿಂದುಸ್ತಾನವನ್ನು ತನ್ನಲ್ಲಿ ಕೂಡಿಸಿಕೊಳ್ಳುವ ಅಧಿಕಾರವನ್ನು ತೋರಿಸುವ ಬಗೆ ಹೇಗೆ? ದಕ್ಷಿಣ ಆಫ್ರಿಕೆಯಲ್ಲಿದ್ದ ಹಿಂದೂ ಜನರಿಗೆ ಸಂಪೂರ್ಣವಾದ ನಾಗರಿಕತೆಯ ಹಕ್ಕುಗಳನ್ನು ಸಂಪಾದಿಸುವ ಚಳವಳಿಯು ನಡೆದಾಗ ೧೯೧೪ ನೇ ಇಸ್ವಿಯಲ್ಲಿ ಮಹಾತ್ಮಾಜಿಯವರು ೧೯೧೩ ನೇ ಇಸ್ವಿ "ಇಮಿಗ್ರಂಟ್ಸ್ ರಿಗ್ಯುಲೇಶನ ಆಕ್ಟನ್ನು" ಅನುಮತಿಸಿದ್ದು ಆ ಕಾಯದೆಯಿಂದ ಮುಂದೆ ಹಿಂದುಸ್ತಾನದ ಜನರು ದಕ್ಷಿಣ ಆಫ್ರಿಕೆಯಲ್ಲಿ ಬರಲಾಗದೆಂಬ ತತ್ವಕ್ಕೆ ಒಪ್ಪಿಕೊಂಡತಾಗುವದೆಂದು ಕೆಲವರು ಅನ್ನುತ್ತಿರುವರು ನಿಜವು ಆದರೆ ಆಗ ಆ ಚಳವಳಿಯು ದಕ್ಷಿಣ ಆಫ್ರಿಕೆಯ ಹಿಂದೀ ಜನರ ಸಲುವಾಗಿಯೇ ಇತ್ತು ಮತ್ತು ಅವ್ವರಸಲುವಾಗಿಯೇ ಆ ಕಾಯದೆಗೆ ಮಹಾತ್ಮಾಜಿಯವರು ಸಮ್ಮತಿಸಿದ್ದರು ಇವರಿಂದಲೇ ಮಹಾತ್ಮಾಜಿಯವರು ಹಿಂದವಾಸಿಗಳ, ಪರರಾಷ್ಟ್ರಗಳಲ್ಲಿ ಹೋಗುವ ಅಧಿಕಾರವನ್ನು ಬಿಟ್ಟು ಕೊಟ್ಟಿರುವರೆಂದು ಹೇಳುವದೆಂದರೆ ತೀರ ತಪ್ಪಾಗುವದು ಮಹಾತ್ಮಾ ಗಾಂಧಿಯವರು ಹಿಂದುಸ್ಥಾನದ ಅಧಿಕಾರಿವರ್ಗದ ಅಥವಾ ಜನರ ಪ್ರತಿನಿಧಿಯು ಆಗಿನ ಕಾಲದಲ್ಲಿದ್ದಿಲ್ಲ ಅವರು ದಕ್ಷಿಣ ಆಫ್ರಿಕೆಯಲ್ಲಿ ವಾಸಮಾಡಿಕೊಂಡಿದ್ದ ಹಿಂದೀ ಜನರ ಮುಖಂಡರಾಗಿ ಮಾತ್ರ ನಡೆದರು ಮತ್ತು ಅವರಿಗೆ ಮೊದಲೇ ಆಫ್ರಿಕೆಯಲ್ಲಿ ವಾಸಿಸಿದ್ದ ಹಿಂದೀ ಜನರ ಸಲುವಾಗಿ ಮಾತ್ರ ಆ ಚಳವಳಿಯಲ್ಲಿ ಮಾತಾಡುವದಕ್ಕೆ ಅಧಿಕಾರವಿತ್ತು ಆದರೆ ಮುಂದೆ ಎಂದೂ ಹಿಂದನಿವಾಸಿಗಳು ಅಲ್ಲಿಗೆ ಬರಬಾರದೆಂದು ನಿರ್ಣಯಿಸುವ ಅಧಿಕಾರವು ಅವರಿಗೆ ಇದ್ದಿದ್ದಿಲ್ಲ ಆ ಅಧಿಕಾರವು ಹಿಂದುಸ್ತಾನದ ಜನರಿಗೆ ಮಾತ್ರ ಇದ್ದು ಆಫ್ರಿಕೆಯಲ್ಲಿ ವಾಸಮಾಡಿದ ಹಿಂದನಿವಾಸಿಗಳು ಸ್ವಾರ್ಥಿಗಳಾಗಿದ್ದಲ್ಲಿ ಹೊಸದಾಗಿ ಹಿಂದೀ ಜನರನ್ನು ಬರಮಾಡಿಕೊಳ್ಳುವದಕ್ಕೆ ಗೌರವರ್ಣದವರಷ್ಟೇ ವಿರೋಧಮಾಡುವ ಸಂಭವವಾದರೂ ಅದೆ; ಆದರೂ ಅಷ್ಟರಮೇಲಿಂದಲೇ ಸಾಮ್ರಾಜ್ಯದ ಒಂದು ಘಟಕವಾದ ಹಿಂದುಸ್ತಾನಕ್ಕೆ ಉಳಿದ ಭಾಗಗಳಕೂಡ ಸಮಾನತೆಯ ಅಧಿಕಾರವನ್ನು ಕೇಳುವ ಹಕ್ಕನ್ನು ಬಿಟ್ಟುಕೊಟ್ಟಂತೆ ಆಗುವದಿಲ್ಲ.

೧೯೧೪ನೇ ಇಸ್ವಿಯ ಜೂನ ತಿಂಗಳಲ್ಲಿ ಮಹಾತ್ಮಾ ಗಾಂಧಿಯವರು ಜನರಲ್ ಸ್ಮಟ್ಸರಿಗೆ ಬರೆದ ಪತ್ರದಲ್ಲಿಯ ಒಪ್ಪಿಗೆಗೆ ಅನುಚಿತವಾಗಿ ಪ್ರಾಮುಖ್ಯವನ್ನು ಕೊಟ್ಟು ರಾಷ್ಟ್ರಸಂಘದ ಸಂಬಂಧದಿಂದ ಅನಂತರದಲ್ಲಿ ಒದಗಿದ ಸಂಗತಿಗಳನ್ನೂ ವಿಚಾರಕ್ರಾಂತಿಗಳನೂ ಅಲಕ್ಷಿಸಲಾಗದು. ರಾಷ್ಟ್ರಕುಟುಂಬವು ಬಹಳ ಮಹತ್ವವಾದ ಸಂಸ್ಥೆಯು ಅದರ ಮಹತ್ವವು ಜಗತ್ತಿನಲ್ಲೆಲ್ಲ ಹಬ್ಬಬೇಕು; ಅದನ್ನು ಒಳಗೊಂಡ ರಾಷ್ಟ್ರಗಳಲ್ಲಿ ಕೇವಲ ಒಪ್ಪಂದದಿಂದ ಪರಸ್ಪರ ಬಂಧನವಿದ್ದರೆ ಸಾಲದು; ಆದರೆ ಪ್ರೇಮ ಮತ್ತು ವಿಶ್ವಕಲ್ಯಾಣದ ಉದಾತ್ತವಾದ ಭಾವನೆಗಳಿಂದ ಅವು ಬದ್ಧವಾಗಿರಬೇಕು; ಇಂಥ ಉಚ್ಚ ಸಂಸ್ಥೆಗಳನ್ನು ನಿಯಮಗಳಿಂದ ಹಾಗು ಒಪ್ಪಂದಗಳಿಂದ ನಿಯಂತ್ರಿತ ಮಾಡುವದು ಮಹಾಯುದ್ಧದ ಪೂರ್ವದ ಪರಿಸ್ಥಿತಿಯಲ್ಲಿ ಅವಶ್ಯವಾದದ್ದೆಂಬ ತಿಳುವಳಿಕೆಯಿತ್ತು. ಆದರೆ ಈಗ ಆ ವಿಚಾರವು ಯುಕ್ತಿವಿರುದ್ಧವಾಗಿಯೂ ಹಾನಿಕರವಾಗಿಯೂ ಇರುತ್ತದೆಂಬುದು ಕಂಡುಬಂದಿರುತ್ತದೆ;

೧೯೧೮ ಮತ್ತು ೧೯೨೧ನೇ ಇಸವಿಗಳಲ್ಲಿ ಕೂಡಿದ ಸಾಮ್ರಾಜ್ಯ ಪರಿಷತ್ತುಗಳಲ್ಲಿ ಯಾವದಾದರೊಂದು ವಿಶಿಷ್ಟಜನಾಂಗವನ್ನಾಗಲಿ, ಜಾತಿಯನ್ನಾಗಲಿ ತಮ್ಮ ರಾಜ್ಯದಲ್ಲಿ ಇಟ್ಟುಕೊಳ್ಳುವದಕ್ಕೂ ಬಿಡುವದಕ್ಕೂ ಸಂಪೂರ್ಣ ಸ್ವತಂತ್ರತೆಯು ಸಾಮ್ರಾಜ್ಯದ ಎಲ್ಲ ಭಾಗಗಳಿಗೆ ದೊರೆತಿರುವದರಿಂದ ಹಿಂದುಸ್ತಾನದ ಜನರನ್ನು ಸಾಮ್ರಾಜ್ಯದ ಉಳಿದ ಭಾಗಗಳಲ್ಲಿ ಬರಗೊಡಬಾರದೆಂಬದಾದರೂ ಉಪಸಿದ್ಧಾಂತರೂಪದಿಂದ ಹೇಳಿದಂತಾಗಿದೆ; ಈ ಪ್ರಕಾರದ ವಾಕ್ಚಾತುರ್ಯದಿಂದ ಅವರು ತಮ್ಮ ಹಟವನ್ನು ಚನ್ನಾಗಿ ಸಾಧಿಸಿಕೊಂಡಿರುವರು ಆದರೆ ಕೇವಲ ವಾಕ್ಚಾತುರ್ಯದಿಂದ ಅನ್ಯಾಯಗಳ ಪರಿಮಾರ್ಜನೆಯಾಗಲಾರದು; ಹೀಗೆ ಮಾಡುವದರಿಂದ ಅನ್ಯಾಯವನ್ನು ಧೂರ್ತತೆಯಿಂದ ಬಚ್ಚಿಟ್ಟಂತೆ ಮಾತ್ರ ಆಗುವದಲ್ಲದೆ ಇದಕ್ಕೆ ಸಮಾನತೆಯೆಂದು ಅನ್ನಲಾಗದು ಈ ವರ್ಗೀಕರಣವು ಕೇವಲ ಭಾರತ ವಾಸಿಗಳನ್ನಷ್ಟೇ ಹೊರದೂಡುವದಕ್ಕಾಗಿ ಇರದೆ ಎಲ್ಲ ಜನಾಂಗದವರ ಸಲುವಾಗಿ ಇರುತ್ತದೆಂಬದಾಗಿ ಹಿಂದುಸ್ತಾನಕ್ಕೆ ಮನವರಿಕೆಯಾಗದ ಹೊರತು ಈ ತತ್ವದಿಂದ ಅವರ ಮನಸ್ಸಮಾಧಾನವಾಗುವದಿಲ್ಲ

ಈ ಪ್ರಶ್ನೆಯನ್ನು ಬಿಡಿಸುವದು ಬಹಳ ಕಠಿಣವಿಲ್ಲ. ಹಿಂದವಾಸಿಗಳನ್ನು ಉಳಿದ ಬಾಂಧವರಂತೆ ಪ್ರೇಮಭಾವದಿಂದ ನಡೆಸಿಕೊಳ್ಳಬೇಕೆಂದು ರಾಷ್ಟ್ರಸಂಘದವರು ನಿಶ್ಚಯಿಸಿದರೆ ತೀರಿತ್ತು ಈ ಪ್ರಶ್ನವು ತನ್ನಷ್ಟಕ್ಕೆ ತಾನೇ ಬಿಡುವದು. ಆದರೆ ಹಿಂದುಸ್ತಾನದ ಸೂತ್ರಗಳನ್ನೆಲ್ಲ ತಮ್ಮ ಕೈಯಲ್ಲಿಯೇ ಇಟ್ಟುಕೊಳ್ಳಬೇಕೆಂಬ ಅಭಿಲಾಷೆಯನ್ನು ತಾಳಿದರೆ ಮಾತ್ರ ನೀಗದು. ಸಮಾನತೆಯೂ ಪ್ರಭುತ್ವವೂ ಕೂಡಿಯೇ ಸಮಾವೇಶವಾಗುವಂಥ ರಾಷ್ಟ್ರಕುಟುಂಬದ ಪರಿಭಾಷೆಯನ್ನು ವಾಕ್ಚಾತುರ್ಯದಿಂದ ನಿರ್ಮಿಸಬಹುದು. ಆದರೆ ರಾಷ್ಟ್ರಗಳ ಆಧಾರವು ಶಬ್ದಗಳಲ್ಲ; ಸತ್ಯವಿರುತ್ತದೆ.

**ಸೀ. ರಾಜಗೋಪಾಲಾಚಾರ್ಯ;**

---

ಈ ಊರಲ್ಲಿ ೧ನೇ ಅಗಸ್ಟ ತಾರೀಖಿನಿಂದ ಲೋಕಮಾನ್ಯ [illegible] ಫಂಡಿನ ವಸೂಲಿಯ ಕೆಲಸವು ಒಳ್ಳೇ ಜೋರಿನಿಂದ ನಡೆದು ಇವತ್ತಿವರೆಗೆ ಕೂಡಿದ ಫಂಡು ೬೦೦ ರೂಪಾಯಿ [illegible] ಇನ್ನೂ ವಸೂಲ ಮಾಡುವ ಕೆಲಸವು ನಡೆದಿದೆ.

## ಮಹಾತ್ಮರಿಗೆ ರಾಜನೀತಿಯಲ್ಲಿ ಸ್ಥಾನವಿಲ್ಲವೇ !

ಆಸ್ಟ್ರೇಲಿಯಾದಲ್ಲಿಯ ಒಂದು ಭಾಗದಲ್ಲಿ ಮಾನನೀಯರಾದ ಶ್ರೀನಿವಾಸ ಶಾಸ್ತ್ರಿಯವರು ಮಹಾತ್ಮರ ಉದಾಹರಣೆಯನ್ನು ತೋರಿಸಿ ಅವರಲ್ಲಿಯ ಪಾವಿತ್ರ್ಯ ಮತ್ತು ಉಚ್ಚತೆಯ ಪ್ರಶಂಸೆಯನ್ನು ಬಹಳ ಮಾಡಿದರು. ಆದರೆ ಅದರ ಸಂಗಡದಲ್ಲಿಯೇ ಇಂಥ ಸಾಧು ಪುರುಷನು ಧಾರ್ಮಿಕ ಕ್ಷೇತ್ರದಲ್ಲಿ ಜಗತ್ತಿಗೆ ಹಾಗು ತನ್ನ ದೇಶಕ್ಕೆ ಹೆಚ್ಚಿನ ಲಾಭವನ್ನು ಮಾಡಲಿಕ್ಕೆ ಸಮರ್ಥನಾಗುವನೆಂದು ಪ್ರತಿಪಾದಿಸಿದರು. ಅವರಿಗೆ ರಾಜನೀತಿಯಲ್ಲಿ ಸಾಫಲ್ಯವು ಹೇಗೆ ದೊರೆಯಬೇಕು ? ಆತ್ಮೋತ್ಸರ್ಗವೂ ಸಾಧುಚರಿತ್ರವೂ ರಾಜನೀತಿಗೆ ಅನವಶ್ಯಕವೆಂದು ಶಾಸ್ತ್ರಿಮಹಾಶಯರು ತಿಳಿಯುವರೇನು ? ಧರ್ಮ ಮತ್ತು ರಾಜನೀತಿಗಳ ಸಂಯೋಗದಿಂದ ಅವರು ಈ ರೀತಿ ಬೆದರುವದೇಕೆ ? ಜಗತ್ತಾದರೋ ಶಾಂತತೆಯ ಸಲುವಾಗಿ ಉತ್ಸುಕವಾಗಿರುವದು. ಇಲ್ಲಿಯವರೆಗೆ ಜಗತ್ತಿನ ರಾಜನೀತಿಯಲ್ಲಿ ಸದಸದ್ವಿವೇಕ ಬುದ್ಧಿಗೆ ಆಶ್ರಯವೇ ಇದ್ದಿಲ್ಲ. ಅದು ತನಗೆ ಯೋಗ್ಯಸ್ಥಾನವು ದೊರೆಕಿರುವದೆಂಬದನ್ನು ಕಂಡು ಹಿಡಿದಿರುತ್ತದೆ. ರಾಜನೀತಿಯ ಉದ್ದೇಶವು ಮನುಷ್ಯ ಸಮಾಜದ ಉನ್ನತಿಯೇ ಮತ್ತು ಮಾನವ ಜಾತಿಯ ಉನ್ನತಿಯು ಸತ್ಯ ಮತ್ತು ಸತ್ಕಾರ್ಯಗಳಿಂದ ಆಗುವದೆಂದ ಬಳಿಕ ಸ್ವಾರ್ಥತ್ಯಾಗಿಗಳೂ ಸಾಧು ಪುರುಷರೂ ಮಾತ್ರ ಜಗತ್ತಿನ ಮುಂದಾಳುಗಳಾಗಬೇಕೆಂಬ ಸಂಗತಿಯನ್ನು ಮನ್ನಿಸಲಿಕ್ಕೆ ಬೇಕು. ಈ ಹೊತ್ತು ದಯಾ ಮತ್ತು ಪ್ರೇಮಗಳ ಮೂರ್ತಿಮಂತ ಅವತಾರನಾದ ಇಂಥ ಅಲೌಕಿಕ ಸತ್ಪುರುಷನೋರ್ವನು ನಮ್ಮ ಮುಖಂಡನಾಗಿ ಜಗತ್ತಿಗೆ ನಿರ್ಭಯತೆ, ಸತ್ಯ ಹಾಗು ದಯಾಧರ್ಮದ ಪ್ರತಿಪಾದಕ ಸಂದೇಶವನ್ನು ಬೀರುತ್ತಿರುವದರ ಬಗ್ಗೆ ನಾವಂತೂ ಪರಮಾತ್ಮನ ಧನ್ಯವಾದವನ್ನು ಮಾಡುತ್ತೇವೆ.

ಇಂದಿನವರೆಗೆ ಆಗುತ್ತ ಬಂದಂತೆ, ಜಗತ್ತಿನಲ್ಲಿಯ ರಾಜನೀತಿಯ ಕುಟಿಲ ರೂಢಿಗಳಿಗೆ ಕ್ಷಣಿಕವಿಜಯವು ದೊರೆಯಬಹುದು; ಆದರೆ ಭರತಖಂಡದ ಆದರ್ಶವಾದರೂ ಭಿನ್ನವಾಗಿದೆ. ಅದು ತನ್ನ ರಾಜನೀತಿಯ ಮಂದಿರವನ್ನು ಸತ್ಯ ಮತ್ತು ಪ್ರೇಮದ ತಳಹದಿಯ ಮೇಲೆ ನಿಲ್ಲಿಸುತ್ತದೆ. ಹಳೆಯ ರಾಜನೀತಿಜ್ಞರು ಏನು ಬೇಕಾದ್ದು ಅನ್ನುತ ಕೂಡಲಿ ಹಿಂದುಸ್ಥಾನವು ತನ್ನ ಜೀವನದ ಧ್ಯೇಯವನ್ನು ತಿಳಿದುಕೊಂಡು ಬಿಟ್ಟಿದೆ ಮತ್ತು ಅದಕ್ಕೆ ಅನುರೂಪವಾದ ಮುಂದಾಳುವನ್ನಾದರೂ ಆರಿಸಿಕೊಂಡಿರುವದು. ಮಹಾತ್ಮಾಗಾಂಧಿಯವರೇ ಅದರ ಮುಖಂಡರಾಗಬಲ್ಲರು. ಅವರ ಸತ್ಯ, ನಿರ್ಭಯತೆ ಮತ್ತು ಪ್ರೇಮಮಯ ಸಂದೇಶವೇ ಹಿಂದುಸ್ಥಾನದ ರಾಜನೀತಿಯು. ಅವರು ಅಹಿಂಸಾ ಮತ್ತು ಅಸಹಯೋಗ ಎಂಬ ಎರಡು ಮಹಾ ಮಂತ್ರಗಳನ್ನು ಜಗತ್ತಿಗೆ ಕೊಟ್ಟಿರುವರು. ಇದರಲ್ಲಿ ಎಂದೂ ಬದಲಾಗುವದು ಶಕ್ಯವಿಲ್ಲ. ಪರಕೀಯರಿಂದ ಗಳಿಸಲ್ಪಟ್ಟವರಲ್ಲಿ ಅಜ್ಞಾನಮೂಲಕವಾದ ಸಹಯೋಗದ ಮೇಲೆ ಭರವಸವಿಡುವರು. ಸಹಯೋಗವು ಅದೃಶ್ಯವಾದೊಡನೆಯೇ ಪರರಾಜ್ಯವು ಪತನವಾಗುವದು ನಿಶ್ಚಿತವಾದದ್ದು;

ಹಿಂದುಸ್ಥಾನವು ಅಸಹಯೋಗದಿಂದ ತನ್ನ ದಾಸ್ಯವು ಸಂಪೂರ್ಣವಾಗಿ ಕಡಿದು ಹೋಗುವದೆಂದು ತಿಳಿದುಕೊಂಡಂತೆಯೇ ಅಹಿಂಸೆಯ ಮಹಾಮಂತ್ರದ ಶಕ್ತಿಯನ್ನಾದರೂ ಅದು ಕಂಡುಹಿಡಿದಿದೆ. ಅನ್ಯಾಯದ ಪರಿಮಾರ್ಜನೆಯು ಪ್ರತಿಹಿಂಸೆಯಿಂದಾಗಲಿ ಸೇಡುತೀರಿಸಿಕೊಳ್ಳುವದರಿಂದಾಗಲಿ ಆಗುವದಿಲ್ಲೆಂಬ ಮಾತು ಅದರ ಮನಸ್ಸಿನಲ್ಲಿ ನಟ್ಟುಹೋಗಿದೆ. ಅದರ ಉಪಾಯವು ಕಷ್ಟಸಹನವೇ ಆಗಿರುತ್ತದೆ. ಭಯ, ಮತ್ತು ದ್ವೇಷದ ಬೀಜವು ಇನ್ನು ಮೇಲೆ ಜಗತ್ತಿನಲ್ಲಿ ಕಡೆತನಕ ನಷ್ಟವಾಗಿ ಬಿದ್ದಿರುವದು. ಸತ್ಯ ಮತ್ತು ಪ್ರೇಮದ ಉದಯವು ಆಗಿಬಿಟ್ಟಿದೆ ಅವೇ ಇನ್ನುಮುಂದೆ ಮಾನವ ಜಾತಿಯ ಮಾರ್ಗಪ್ರದರ್ಶಕವಾಗುವವು. ಹಿಂಸೆ ಅಥವಾ ಕೊಲೆಸುಲಿಗೆಗಳ ಆಟವು ಇನ್ನು ಸಾಗಲಾರದು. ಹಿಂದುಸ್ಥಾನದ ಈ ಸ್ವಾತಂತ್ರ್ಯ ಸಂಗ್ರಾಮವು ಜಗತ್ತಿನಲ್ಲಿ ಅಹಿಂಸೆಯೇ ವಿಜಯಶಾಲಿಯಾಗುವದೆಂಬದನ್ನು ಸಿದ್ಧಮಾಡಿ ಜಗತ್ತಿಗೆ ಹೊಸ ಆಶೆಯನ್ನೇ ಉತ್ಪನ್ನಮಾಡುವದು.

ಆದ್ದರಿಂದ ಈಗ ಇಡೀ ಜಗತ್ತಿನಲ್ಲಿಯ ತರುಣರು ಈ ಮಹಾ ದೇಶದ ಕಡೆಗೆ ಒಂದೇಸಮನೇ ನೋಡುತ್ತಿರುವರು ಅವರು ರಾಜನೈತಿಕ ವಿಷಯದ ಕಡೆಗೆ ಅಷ್ಟು ಲಕ್ಷ್ಯವನ್ನು ಕೊಡುವದಿಲ್ಲ ಹಿಂದುಸ್ಥಾನದ ತನ್ನ ಧರ್ಮದ ವಿಷಯವಾಗಿ ಎಷ್ಟರ ಮಟ್ಟಿಗೆ ದೃಢವಾಗಿರುತ್ತದೆಂಬದನ್ನೇ ಅವರು ನಿರೀಕ್ಷಿಸುತ್ತಿರುವರು. ಹಿಂದುಸ್ಥಾನವು ಜಗತ್ತಿನಲ್ಲಿಯ ರಾಷ್ಟ್ರಗಳ ಮುಖಂಡತ್ವವನ್ನು ಸ್ವೀಕರಿಸಲಿಕ್ಕೆ ಎಷ್ಟು ಯೋಗ್ಯವಿರುತ್ತದೆಂಬದರ ಕಡೆಗೆ ಅವರ ಲಕ್ಷವಿರುವದು

ಸ್ವರಾಜ್ಯದಕ್ಕಿಂತ ಹೆಚ್ಚು ಭಾರವನ್ನು ಮಹಾಜಿಯವರು ಅಹಿಂಸೆಯ ಮೇಲೆ ಹಾಕುವದರ ರಹಸ್ಯವಾದರೂ ಇದರಲ್ಲಿಯೇ ಉಂಟು. ಆದರೆ ಇವರಲ್ಲಿ ಅಕ್ಷಾಂತರವಾಗಲಾರದು. ಸಮಾಜ ಹಾಗು ವ್ಯಕ್ತಿಗಳ ಹಿತವು ಹೇಗೆ ಭಿನ್ನ ಭಿನ್ನ ವಾಗಿರುವದಿಲ್ಲವೋ ಅದರಂತೆಯೇ ಭರತಖಂಡದ ಉನ್ನತಿಯ ಮಾರ್ಗವು ಜಗತ್ತಿನ ಉನ್ನತಿಯ ಮಾರ್ಗದಿಂದ ಭಿನ್ನವಿರಲಾರದು- ಈ ಮಾರ್ಗದಲ್ಲಿ ಕಷ್ಟಗಳು ನಿಃಸಂಶಯವಾಗಿ ಇರುತ್ತವೆ. ಆದರೆ ಕೊಲೆ ಸುಲಿಗೆಗಳಿಂದ ಜಗತ್ತನ್ನು ಉಳಿಸಬೇಕಾದರೆ ಇದೊಂದೇ ಮಾರ್ಗವು. ವಿಸ್ತೃತವಾದ ಭೂಪ್ರದೇಶದಲ್ಲಿ ಕುಟಿಲ ರೂಢಿಗಳು ಕೆಲವು ವೇಳೆಯವರೆಗೆ ವಿಜಯಶಾಲಿಗಳಾಗಿ ತೋರಬಹುದು. ಆದರೆ ಜಗತ್ತಿನ ನಿಜವಾದ ಹಿತವು ಸತ್ಯ ಮತ್ತು ಅಹಿಂಸೆಯ ಮಾರ್ಗದಿಂದಲೇ ಆಗುತ್ತದೆ. ಈ ಕಾರಣದಿಂದಲೇ ರಾಜನೈತಿಕ ವಿಷಯಗಳಲ್ಲಿ ಕೂಡ ಚಿರಸ್ಥಾಯಿಯಾಗುವಂಥ ವಿಜಯ ಮತ್ತು ಸುಖಶಾಂತಿಗಳನ್ನು ಸ್ಥಾಪಿಸುವದರ ಸಲುವಾಗಿ ಮಹಾತ್ಮರ ಆವಶ್ಯಕತೆ ಉಂಟು. ಸಂಕೀರ್ಣ ಹೃದಯದ ಧೂರ್ತ ರಾಜನೀತಿಜ್ಞರ ಆವಶ್ಯಕತೆಯು ಇಲ್ಲ.

---

ಶ್ರೀಮಂಗಲಮೂರ್ತಯೇನಮಃ

## ಶ್ರೀಗಣೇಶಮೇಳದ ಪದ್ಯಾವಲಿ.

" ಧಾಟಿ:—ಮುಕುಂದ ಬಾರಯ್ಯ, ಬಾ ಮುರಾರಿ " ಎಂಬಂತೆ

ಗಣೇಶ ಬಾರಯ್ಯ ಬಾ ಸಿಂಧುರಾರಿ।
ಬಾ ಗೌರಿ ನಂದನ ಕಂದನೆ ಬಾ। ನಾಯಕ ಬಾ ಶುಭದಾಯಕ ಬಾ ॥ ಪಲ್ಲ॥
ಬಾ ಬಾರೊ ಪಾಶಾಂಕುಶಭೂಷಾ। ಗುಣತೀತೇಶಾ।
ಗಣೇಶ ಬಾ। ವಿಘ್ನೇಶ ಬಾ।
ಬಾ ಗೌರಿನಂದನ ಕಂದನೆ ಬಾ। ನಾಯಕ ಬಾ ಶುಭದಾಯಕ ಬಾ॥೧

೨

ಶಿವಶಿವಯೂ ವಿಷ್ಣುಹರಾ ಹೇಪ್ರಭೋವರಾ।
ಭವತಾಂವದಿ ರಕ್ಷಿಸಮ್ಮನು ನಿರಂತರಾ। ೧॥
ಖಡ್ಗಚಾಪ ಭೂಷಿತಾಂಗ ವಿಮಲ ಸುಂದರಾ।
ಷಡ್ರಿಪುಗಳ ವಧಿಸಲು ಬಲವಿಯೋ ಸತ್ವರಾ ೨॥
ಪಾರತಂತ್ರ್ಯವೆಂಬುವಿಷ್ಟ ಕಠಿಣ ಶೃಂಖಲೆ।
ದೂರಮಾಡು ಕೃಪೆಯ ನೀಡಿ ಕಾಲ್ಪದೀಗಲೇ ॥೩॥

೩

ಧಾಟಿ— "ಶುಭವಸದಾ ನೀಡೈ" ಎಂಬಂತೆ

ಪಂಕಜಸ್ಮಿತ ವದನಾ ।
ಪಂಕದಿಂದುದ್ಧರಿಸೆಂದು ಬೇಡುವೆನಾ ॥ ಪಲ್ಲ ॥
ಭಕ್ತರಕ್ಷಕ ವಿರಕ್ತಸಂಸಾರನೇ ।
ಯುಕ್ತಿಯಿಂ ಕಾಯಲಾಸಕ್ತ ಶಿರೋಮಣೀ ।
ಮುಕ್ತಿದಾಯಕನೂ ನೀನೇ ।
ಲೀಲೆಯಿಂದಲಿ । ಪಾಲಿಪುದೆನ್ನಾ ॥೧॥

೪

ಧಾಟಿ :—"ಒಜಕೆಗೋಲನೆ ಬನಸಿ ಆಯಾ" ಎಂಬಂತೆ

ಶರಣ್ಯೆ ಭಾರತಮಾತೆಗೆ ಶರಣ್ಯೆ ।
ವೀರಸುಧೀರ ಕುಮಾರ ಜನಿತೆಗೆ ॥ ಪಲ್ಲ ॥
ಕುಸುಮಂಗಳಿಂದಪಾರ ಫಲದಿಂದೆ ಜಲದಿಂದೆ ।
ಶಸ್ಯಸುವಾಸಿತ ಮಧುರವನಿತೆಗೆ ॥ ೧ ॥

೫

ಧಾಟಿ —"ಧನ್ಯ ಪಿನಾಕಿ ತೋರಣಗಾಜ"

ಸನ್ಮಾನ್ಯನೆ, ಸನ್ಮಾರ್ಗದರ್ಶಕನೇ, ಸತ್ಕುಲದೀಪಕನೇ ।
ಸನ್ನುತನೇ ವರಕರ್ನಾಟಕ ಸ್ಥಾಪಕನೇ ॥೧॥
ಪೂರ್ವದ ಸಂಪತ್ ಕೀರ್ತಿಸ್ಫೂರ್ತಿಗಳೆಲ್ಲವು ಹಾಳಾಗಿ ।
ನರರು ಸ್ವಾರ್ಥಪರಾಯಣರಾದರು ಗೇಣು ಹೊಟ್ಟೆಗಾಗಿ ॥೨॥
ಪರಪ್ರೀತ್ಯಭಿಮಾನಗಳಿಲ್ಲದ ಷಂಡರು ನಾವೆಂದು ।
ಬರೆ ಬಿಟ್ಟು ಸ್ವಾತಂತ್ರ್ಯ ಭಗವತೀ ಪೋದಳು ನೆರೆನೊಂದು ॥೩॥
ಸಿರಿಯಾದವು ಸುಖ-ಶಾಂತಿ-ಸಮಾಧಾನಂಗಳು ಒಂದೊಂದು ।
ಹರಹರ! ದೇವಾ! ಬಂದು ತಪ್ಪಿದೆವು ಹೀನತಗಿನ್ನೊಂದು ॥೪॥
ಜುಲುಮಿ, ಅನೀತಿ, ಅನ್ಯಾಯಗಳಿವು ತುಂಬಿಹೋಗಿವೆಲ್ಲಿ ।
ಹೇಳುವದಾಗದು ಅಶ್ರುಬಿಂದುಗಳ ತಾರದೆ ಕಣ್ಣಲ್ಲಿ ॥೫॥
ಪಾರತಂತ್ರ್ಯದಾ ಅಗ್ನಿಜ್ವಾಲೆಯೊಳು ಮುಳುಗಿಹುದು ಧರಣೀ ।
ಪಾರಿಯು ತೋರ್ಪದು ಸ್ವಯಂಪ್ರಕಾಶದಿ ಕರ್ನಾಟಕ ತರಣೀ ॥೬॥
ಓ ಓ ಬಾ ಬಾ ಕುಶಲಕರ್ಮಧಾರನೆ ಬಾ ಬಾ ಬೇಗ ।
ಬಾ ಬಾ ನಮ್ಮೀ ಸ್ವರಾಜ್ಯನೌಕೆಯು ಮುಳುಗುತ್ತಿಹುದೀಗ ॥೭॥

೬

ಧಾಟಿ :—'ಶ್ರೀರಂಗರಾಯರ ನೋಡಿರೈ' ಎಂಬಂತೆ

ನೋಡಿರೈ ನಮ್ಮ ಹ ಕುಶ ಬನ್ನಿರೈ । 'ಬಲವಂತಗೆ' ಜಯವೆನ್ನಿರೈ ॥ಪಲ್ಲ॥
ಪಾರತಂತ್ರ್ಯದ ಘೋರ ಯಾತನೆ । ಯಿಂದ ಭಾರತಮಾತೆಗೆ ॥
ಪಾರಿಸೋರುತ ಭಾರದಮುಖದ । ಭಾರವನುಂ ಪೊಂದಾತಗೆ ॥ ೧ ॥
ಕರ್ಮಯೋಗದ ಮರ್ಮವರಿತಾ । ಕರ್ಮಯೋಗದ ಕರ್ತಗೆ ।
ಧರ್ಮದಾ ನಿಜಮೂರ್ತಿಗೆ ಸತ್ । ಕರ್ಮಸೋಜ್ವಲ ಕೀರ್ತಿಗೆ ॥೨॥
ಸ್ವಾರ್ಥವಂತರ ಸ್ಪರ್ಧಸಮಾಜಿಗೆ । ಧೂರ್ತರಾಜರ ಭೀತಿಗೆ ॥
ಭಕ್ತನಾರಾಯಣಾರ್ಥ ನಾಮಗೆ । ಲೋಕಪಕ್ಷದ ತಾತಗೆ ॥೩॥

೭

ಧಾಟಿ—'ಕಮ್ಮಾರಿಕೆಂದು ಧನ್ಯನಾದೆ ಉಡುಪಿಕೃಷ್ಣನಾ' ಎಂಬಂತೆ

[illegible] ಧನ್ಯನಾದೆ ಗಾಂಧಿರಾಯನ ॥ ಪಲ್ಲ ॥
ಸರಳ ಮಾನವರಿವ ಬಿಟ್ಟು ।
ಅಭಿಮಾನವನ್ನು ಸುಟ್ಟು ॥
ಉರಟು ಖದ್ದರವನೆ ತೊಟ್ಟು ।
ಸರಸನಾಗಿ ಬರುವ ದೊರೆಯ ॥೧॥
ನೂಲಿನಿಂದೆ ಸುಖಸಮೃದ್ಧಿ ।
ನೂಲಿನಿಂದೆ ಕಾರ್ಯಸಿದ್ಧಿ ॥
ನೂಲವೆ ಸ್ವಾತಂತ್ರ್ಯಗಿಡವ ।
ಮೂಲವೆಂದು ಸಾರಿದವನ ॥ ೨ ॥
ಅನಹರಾದ ಅರಸಾಳ್ಗಳ ।
ಮುಸುಕಿದ ದಬ್ಬಾಳಿಕೆಯನು ॥
ಕಸುವಿನಿಂದೆ ಕಿತ್ತೊಗೆಯಲು ।
'ಅಸಹ' ಮಂತ್ರ ಬೀರಿದವನ ॥೩॥
ಪರದಾಸ್ಯವ ಚಲ್ಲಿಕೊಟ್ಟು ।
ಭರದಿ ಬಂದಿವಾಸ ಸೇರಿ ॥
ಮರೆತಿರ್ಪ ಸ್ವರಾಜ್ಯಗೃಹವ ।
ಬೆರಳು ಮಾಡಿ ತೋರಿದವನ ॥೪॥

೮

ಧಾಟಿ—"ಆನಂದಾಬಾ ಕಂದ' ಎಂಬಂತೆ

ಯಾತರನ್ಯಾಯವಾ! ಹೇ ಜಯರಾಯಾ ।
ಕಾತರದಿಂ ತ್ಯಜಿಪುದು ಕಾಯಾ ॥
ಮಾತೆಯು ತಾ ಪರದಾಸ್ಯ ಪಂಕದೊಳು ।
ಯಾತನೆಗೆಯ್ಯುತ ಬಿದ್ದಿರಲು ॥ ೧ ॥
"ವಾಸುದೇವ" ನಾ ನಿಧನ ದುಃಖದಿಂ ।
ಘಾಸಿಯಾದ ಕರ್ನಾಟಕವು ॥
ಆರೆಯಿಂದ ನಿನ್ನನ್ನು ನೋಡುತಿರೆ ।
ಮೋಸದಿ ಕಣ್ಮರೆಯಾಗುವದು ॥ ೨ ॥
ಜಾತಿ ದ್ವೇಷದಾ ಪ್ರಖರ ಜ್ವಾಲೆಯೊಳು ।
ಘಾತಕ ಕರ್ನಾಟಕ ನಾಶದು ॥
ಹತ್ತಿತಾಯಿಯನ್ನೆತ್ತಿ ನೂಕುತಿರೆ ।
ಎತ್ತ ಪೋದಿರೈ ಜಯರಾಯಾ ॥ ೩ ॥

೯

ಧಾಟಿ— 'ಏನುಬೇಡಲಿ ನಿನ್ನ ಬಳಿಗೆಬಂದು' ಎಂಬಂತೆ

ಗಿರಿಜಾತ್ಮಜಾ ಎನ್ನ ಕಣ್ದೆರೆದು ನೋಡೈ ।
ಸೆರಗೊಡ್ಡಿ ಬೇಡುವನು ದುರಿತವನು ದೂಡೈ ॥ ಪಲ್ಲ ॥
ಪನ್ನಂಗ ಭೂಷಣನ ಶಂಭುದೇವರ ನೊಲಿಸಿ ।
ತನ್ನದೊಂದೇ ನೀಚ ಸ್ವಾರ್ಥ ಸಾಧಿಸಲು ॥
ಎನ್ನಾತ್ಮಲಿಂಗವನು ದುರುಳನಪಹರಿಸಿಹನು ।
ಮುನ್ನೀನು ಗತಿದೇವಾ ಘಾತವಾಗಿಹುದೈ ॥ ೧ ॥
ಆತ್ಮಲಿಂಗವದಿರೆ ನಿರಂಕುಶನು ತಾನೆಂದು ।
ಮತ್ತೇಭನಂತಿವನು ಉನ್ಮತ್ತನಾಗಿ ॥
ನಿತ್ಯನಾನಾತರದ ನೃತ್ಯಗಳ ನಡಿಸಿರಲು ।
ಎತ್ತ ಸೈರಿಪೆ? ಗಣಪ ಕಂಗಾಲಳಾದೆ ॥ ೨ ॥
ಈ ಕಾಲವಲ್ಲವಗೆ ಲಘುಶಂಕೆಯಾಗಿಹುದು ।
ಯಾಕೆ ಸುಮ್ಮನೆ ಕುಳಿತೆ? ಹಾಕುವೇಷವನು ॥
ಆ ಕುಹಕ ಲಿಂಗವನು ನಿಶ್ಶಂಕೆಯಲಿ ಕೊಡಲು ।
ಯುಕ್ತಿಯಿಂ ನೆಲಕಿಟ್ಟು ಉದ್ಧರಿಸಬೇಕೈ ॥ ೩ ॥

೧೦

ಧಾಟಿ "ಕುಂಜನಯನ ಕುಂಜರಯು ಗೋಕುಲೇಶ್ವರಾ" ಎಂಬಂತೆ

ಜಯ ಜಯ ಜಯ ವಿಘ್ನೇಶ್ವರ ಜಯ ವಿನಾಯಕಾ ।
ಜಯ ಜಯ ಜಯ ಮಂಗಲನಿಧಿ ಸಿದ್ಧಿದಾಯಕಾ ॥ ಪಲ್ಲ ॥
ಭಂಗಮಾಡು ಹಗೆಗಳನ್ನು ಮಂಗಳಾಕರಾ ।
ಸಂಗವಕೊಡು ಸಜ್ಜನರದು ಅಂಗಸುಂದರಾ ।
ಶೃಂಗರಿಸುವೆನಂದದಿ ನಿಸ್ಸಂಗಧೀವರಾ ।
ಈಶಾ । ಶ್ರೀಶಾ । ಧೀಶಾ ।
ಪೋಷಿಯುನಡೈ । 'ಗುರುಸುತನಂ' ಕರುಣದಲಿ । ಭಕ್ತವತ್ಸಲಾ ॥೧॥

'ಗುರುಸುತ' ನರೇಗಲ್ಲ

ಸರಸ್ವತೀ ವಾಚನಾಲಯ.

ಶ್ರೀ. ರವೀಂದ್ರನಾಥ ಟಾಗೋರ ಇವರ (Waterfall) ವಾಟರಫಾಲ್‌ದ

ಕನ್ನಡ ಭಾಷಾಂತರವು.

# ಮುಕ್ತಧಾರಾ.

ನಾಟಕ.

ಭಾಷಾಂತರಕಾರ—ಜಿ. ಆರ್. ಕುಲಕರ್ಣಿ.

ಮುದ್ರಣವಾಗುತ್ತಲಿದೆ. } ಬೆಲೆ ೧ ರೂ. ಪೋಸ್ಟೇಜ ಬೇರೆ.

ವಿಳಾಸಃ—ಎಸ್. ಎನ್. ಹೊಸಮನಿ ಗುಳೇದಗುಡ್ಡ.

ಏಜಂಟರು ಬೇಕು ! ಏಜಂಟರು ಬೇಕು!!

ನಂಬರ ೧ ನೇ ನಿರ್ಮಲವಾದ

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾದ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳೇ ಸೋಯಿಯದರದಲ್ಲಿ ತೈಲವು ಸಿಗುವದು. ಸಿಕ್ಸ ೨೪ ಔಂಸ ತೈಲದಬಾಟ್ಲಿ ಅಥವಾ ಗಬ್ಬಿ ೧ ಕ್ಕೆ ರೂಪಾಯಿ ೭—ಥಡನ್‌ಕೆ ರು.೩೨ ವಿಶೇಷ ಮಾಹಿತಿ ಪತ್ರದ್ವಾರಾ.

ಬಿ. ಎ. ಪೈ ಕಂಪನಿ.

ಪೋಸ್ಟ ಹೊನ್ನಾವರ.

ಜಿಲ್ಲಾ ಉತ್ತರಕಾನಡಾ

## ಇಂಡಿಯಾ ಪ್ರಾವ್ಹಿಡೆಂಟ ಕಂ. ಲಿ. ಕಲಕತ್ತಾ.

ಮಧ್ಯಮ ಸ್ಥಿತಿಯ ಕುಟುಂಬದಾರರಿಗೆ ಈ ಕಠಿಣ ಕಾಲದಲ್ಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಬಿಗಿಯಾಗಿರುವದು ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರೆಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ.

V. J. PARVATIKER.
General Agent, BAGALKOT.

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಏಜಂಟರು) **ಅತ್ಯುತ್ತಮ** (ಬೇಕು

ಮಶಿ ಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೬—೦ | ಟ. ಖ. |
| ೧೦೦ ಚೀಟಿಗಳಿಗೆ | ೦—೧೪—೦ | ಬೇರೆ. |
| ೫೦ ಔಂಸ ಮಶಿ ಪುಡಿಗೆ | ೦—೪—೦ | |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸಃ—ಕರ್ನಾಟಕ ಇಂಕ ಕಂಪನಿ,
ಬಾಗಲಕೋಟೆ.

## ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರದ್ವಾರದಿಂದ, ಉತ್ತಮವಾದ ಸ್ವದೇಶೀ ಸಾಬಾಣವನ್ನು ಮಾಡುವದಕ್ಕೆ ಕಲಿಸುವೆವು. ಫೀ. ರೂ. ೫. ಉದ್ಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು.

ಕಲಾಭುವನ—ರಾಷ್ಟ್ರೀಯ ಶಾಲಾ ಧಾರವಾಡ.

## ವಜ್ರದ ಉಂಗುರುಗಳು.



ಈ ಉಂಗರಗಳು ವಿಲಾಯತಿಯಲ್ಲಿ ತಯಾರಿಸಿದ್ದು. ಅಸ್ಸಲ ಮಾದ ವಜ್ರದ ಕಲ್ಲುಗಳನ್ನು ಇಟ್ಟು ಸೀಮೆ ಬಂಗಾರದಿಂದ ತಯಾರಿಸಿ ಮೇಲುಗಡೆ ಅಪರಂಜಿ ಬಂಗಾರದ ಗಿಲೀಟುಮಾಡಿದೆ. ನೋಡಲು ಬಹು ಲಕ್ಷಣವಾಗಿ ಕಾಣುವದು. ಇದು ಶ್ರೀಮಂತರಿಗೂ ಗರೀಬರಿಗೂ ಲಾಯಖಾದದುದ್ದು.

ಕ್ರಯ ೧ಕ್ಕೆ ರೂ. ೨—೦—೦. ಕ್ರಯ ೩ಕ್ಕೆ ರೂ. ೫—೮—೦.

ವಿಳಾಸಃ— ವಿ ಎ. ಎಸ್. ಪಾಣಿ ಕಂಪನಿ.

ಸಾಹುಕಾರ ಪೇಟ ಮದರಾಸು.

## ಟಿಕ್ ಟಿಕ್ ಎಂಬ ಶಬ್ದವನ್ನು ಕೊಟ್ಟ ಮಾತ್ರಕ್ಕೆ ಗಡಿಯಾರಗಳೇ.




ಚಕ್ರಗಳಲ್ಲಿಯೂ ಗಂಟೆ ತೋರಿಸುವ ನಂಬರುಗಳ ಮೇಲೆಯೂ ಕೆಂಪು ಕಲ್ಲು ಕೆತ್ತಲ್ಪಟ್ಟಿವೆ ಎಂದು ಇದನ್ನು ತರಿಸುವರಿಗೆ 10-15 ಬಹುಮಾನಗಳೊಡನೆ 5-6 ವರುಷಗಳು ಗ್ಯಾರಂಟಿ ಸಹಿತ 3.4 ರೂಪಾಯಿಗಳಿಗೆ ಕೊಡುವೆವೆಂದು ಪ್ರಚುರವಾಗುವ ಪ್ರಕಟನೆಗಳನ್ನು ನೋಡಿ ಬೇಗಾಗಿ ನಿಮ್ಮ ಹಣವನ್ನು ಕಳಕೊಳ್ಳಬೇಡಿರಿ ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸಗಳಿಂದ ತಯಾರಿಸಿದೆ, ಗಾಳಿಯೂ ಧೂಳೂ ಸೇರದಂತೆ ಗ್ಲಾಸ್‌ಡೋಮು ಇರುವದು. ಸರಿಯಾದ ಕಾಲವನ್ನು ತೋರಿಸುವದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವು ಸರಿಮಾಡಿಕೊಳ್ಳಬಹುದು. ನೋಟಕ್ಕೆ ಗಂಭೀರವಾಗಿಯೂ ಸುಂದರವಾಗಿಯೂ ಇರುವದು. ಇದು ಇಂಗ್ಲೀಷ ನಮೂನೆಯುಳ್ಳದ್ದು. ಈ ಗಡಿಯಾರದಲ್ಲಿ ಯಾರೇ ಆಗಲಿ ಸುಲಭವಾಗಿ ಗಂಟೆ ನೋಡಬಹುದು. ಅಷ್ಟರಿಂದ ಬಹಳಾಗಿ ವರ್ಣನ ಮಾಡುವದೇತಕ್ಕೆ? ಒಂದನ್ನು ತರಿಸಿನೋಡಿರಿ. ತಿಳಿಯುವದು. ೪ ವರುಷಗಳ ಗ್ಯಾರಂಟಿ ಸಹಿತ ಕ್ರಯ ೪—೮—೦


☞ ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಶ್ರೀನಿವಾಸ ರಾಘವೇಂದ್ರ ಮುಂಗಳವೇಡೆ ಅವರು ಮುದ್ರಿಸಿದರು ಮತ್ತು ಅಲ್ಲಿಯೇ ಭೀಮಾಚಾರ್ಯ ಬಂಡಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ಸುತ್ತದೆ. ಇದು ನಮ್ಮ ನಾಶದ ಲಕ್ಷಣವು. ನಮ್ಮ ತಾಯ್ನುಡಿಯಲ್ಲಿ ಅಭಿಮಾನವಿರದಿದ್ದರೆ, ನಮಗೆ ಎಂಥ ಉತ್ತಮವಾದ ಸ್ವರಾಜ್ಯ ಸಿಗಲಿ ನಾವು ಎಂದಿಗೂ ಆ ಸ್ವರಾಜ್ಯಕ್ಕೆ ಪಾತ್ರರಾಗಲಾರೆವು

Introduction of rasuplef.

"Vernaenlars as media of instretion in Indiau schools & colleges"

ನಾವು ಯುರೋಪಿಯನ್ನರ ಅಂಧಾನುಕರಣದಿಂದ ನಮ್ಮ ಸ್ವಾಭಿಮಾನವನ್ನು ಕಳೆದುಕೊಂಡಿದ್ದೇವೆ. ನಾವು ಇಂಗ್ಲೀಷದಲ್ಲಿ ಮಾತಾಡುತ್ತೇವೆ. ಮತ್ತು ವಿಚಾರಮಾಡುತ್ತೇವೆ. ಆದ್ದರಿಂದ ನಮ್ಮ ಸ್ವಭಾಷೆಯನ್ನು ದರಿದ್ರಮಾಡುವೆವು ಜನತೆಯವಿಚಾರದಿಂದ ಅಗಲುವೆವು. ದೇಶಸೇವೆಗೆ ಇಂಗ್ಲೀಷ ಭಾಷೆಯ ಜ್ಞಾನವು ಆವಶ್ಯವಾದದ್ದಲ್ಲ.

ದೇಶಭಾಷೆಯ ವಾಙ್ಮಯವು ಮಹತ್ವದಿರುತ್ತದೆ. ಎಲ್ಲ ತರದ ಗ್ರಂಥಗಳೂ ಗ್ರಂಥಾಲಯಗಳೂ ಬೇಕಾಗಿವೆ. ಲಾಯಬ್ರರಿಗಳನ್ನು ಸ್ಥಾಪಿಸಲಿಕ್ಕೂ ಅವುಗಳ ಪ್ರಸಾರಕ್ಕೂ ಬೇಕಾಗುವ ಧನದ ಸಹಾಯಕ್ಕಾಗಿ ನನ್ನ ಗೆಳೆಯರಿಗೆ ಪ್ರಾರ್ಥಿಸುತ್ತೇನೆ.

ನಾವು ನಮ್ಮ ವಿಚಾರಗಳನ್ನು ದೇಶಭಾಷೆಯಲ್ಲಿ ಸುಲಭವಾಗಿ ಸ್ಪಷ್ಟವಾಗಿ ವ್ಯಕ್ತಮಾಡುವಂತೆ ಅನ್ಯಭಾಷೆಯಲ್ಲಿ ಹೇಗೆ ವ್ಯಕ್ತಮಾಡುವೆವು? ಇಡೀ ಬಾಲ್ಯದಲ್ಲಿಯ ನಮ್ಮ ವ್ಯವಹಾರವನ್ನು ನಮ್ಮ ಸ್ಮೃತಿಗಥದಿಂದ ಹೇಗೆ ಮಾಡಬಲ್ಲೆವು. (ಆದ್ದರಿಂದ ನಾವು ಸ್ವಭಾಷೆಯನ್ನು ಬಿಟ್ಟು ಬಿಡಲಾರೆವು) ಇಂಗ್ಲೀಷ ದ್ವಾರದಿಂದ ಸಿಗುವ ಶಿಕ್ಷಣವು ನಮಗೆ ಬಹಳ ತ್ರಾಸದಾಯಕವು ತುಟ್ಟಿಯೂ ಬೀಳುವದು.

"ಸತ್ಯಾಗ್ರಹಾಶ್ರಮ"

ಮದ್ರಾಸದಲ್ಲಿಯ ಭಾಷಣವು

ಶಾಲೆಕಾಲೇಜಗಳಲ್ಲಿ ಸಿಗುವ ಶಿಕ್ಷಣವು ಉಪಯುಕ್ತವಾದದ್ದು ಇರುವದಿಲ್ಲ; ಉದಾ:— ಹಿಂದುಸ್ಥಾನದ ಭೂಗೋಲಕ್ಕಿಂತ ಇಂಗ್ಲಂಡ ಭೂಗೋಲವೇ ನಮಗೆ ಕಲಿಸಲ್ಪಡುತ್ತದೆ. ವಿಕೃತವಾದ ನಮ್ಮ ಇತಿಹಾಸವು ಕಲಿಸಲ್ಪಡುತ್ತದೆ. ವಿದ್ಯಾರ್ಥಿಗಳ ಮಹತ್ವಾಕಾಂಕ್ಷೆಯೆಂದರೆ ಸೇವೆಯಾಗಿದೆ. ಅತ್ಯುಚ್ಚ ಮಹತ್ವಾಕಾಂಕ್ಷೆಯೆಂದರೆ ಕಾಯದೆ ಕೌನ್ಸಿಲದ ಮೆಂಬರನಾಗುವದು. ತಮ್ಮ ಆನುವಂಶಿಕ ಹೋರೆಗಳನ್ನು ಬಿಟ್ಟಿದ್ದಾರೆ ಮಾತೃಭಾಷೆಯನ್ನು ದೂಡಿದ್ದಾರೆ ಯುರೋಪಿಯನ್ನರ ಭಾಷೆಯನ್ನೂ ವೇಷವನ್ನೂ ವಿಚಾರವನ್ನೂ ಸ್ವೀಕರಿಸಿದ್ದಾರೆ. ಬಹಳವೇನು! ಇಂಗ್ಲೀಷಭಾಷೆಯ ಹೊರತಾಗಿ ನಮಗೆ ಗತಿಯೇ ಇಲ್ಲವೆಂದು ಅವರು ನಂಬಿದ್ದಾರೆ. ಇಂಗ್ಲೀಷದ ದ್ವಾರದಿಂದ ಆದ ಶಿಕ್ಷಣದಿಂದ ಸುಶಿಕ್ಷಿತರ ಮತ್ತು ಜನತೆಯ ನಡುವೆ ದೊಡ್ಡ ತಗ್ಗು ತೆಗೆದಂತೆ ಸಂಬಂಧ ಕಡಿದು ಬಿಟ್ಟಿದೆ; ಇದರಂತೆ ಮುಖ್ಯ ಸ್ಥಿತಿ ಜನಸ್ಥಿತಿ ಬಿಲ್ಲಾದರೂ ಇದೇ. ಆದುದರಿಂದ ಜನತೆಯು ಮತ್ತು ತನ್ನ ಕುಟುಂಬದ ವಿಚಾರಗಳವೇದನೆಗಳೊಡನೆ ಸುಶಿಕ್ಷಿತರ ಬಳಿಕೆಯೇ ಇಲ್ಲದಂತಾಗಿರುವದು. ಈ ವಿಲಕ್ಷಣವಾದವೇಳೆಯಿ ದಯಾನ ಮನುಷ್ಯರೂ ಈ ದೇಶದ ಯಾವತರದ ಸೇವೆಯನ್ನು ಮಾಡಲಾರನು ಇವರ ಮೇಲಿಂದ ಈಗಿನ ಸುಶಿಕ್ಷಿತರು ಜನರ ಕಲ್ಯಾಣಕ್ಕಾಗಿ ಏನೂ ಮಾಡುವದಿಲ್ಲ ಎಂದು ನನ್ನ ಅಭಿಪ್ರಾಯವಲ್ಲ ಕಾಂಗ್ರೆಸ ಮುಂತಾದ ಸಾರ್ವಜನಿಕ ಕೆಲಸಗಳನ್ನು ಈ ಜನರೇ ಮಾಡುವರೆಂಬದನ್ನು ಬಲ್ಲೆನು. ಆದರೆ ಪರಭಾಷೆಯಲ್ಲಿ ಶಿಕ್ಷಣಕೊಡದೆ ದೇಶಭಾಷೆಯಲ್ಲಿಯೇ ಶಿಕ್ಷಣಕೊಟ್ಟಿದ್ದರೆ ಇಷ್ಟು ವರ್ಷಗಳಲ್ಲಿ ಸುಲಭವಾಗಿ ಇದಕ್ಕೂ ಎಷ್ಟೋ ಪಾಲು ಹೆಚ್ಚು ಪ್ರಗತಿಯಾಗುತ್ತಿತ್ತೆಂಬದು ನನ್ನ ಅಭಿಪ್ರಾಯವು. ಎಷ್ಟೋ ಜನರು ಇದಕ್ಕೆ ಉಪಾಯವೇ ಇಲ್ಲೆಂದು ತಿಳಿದಿದ್ದಾರೆ. ಹೀಗೆ ತಿಳಿಯುವದು ಅತ್ಯಂತ ದುಃಖದ ಸಂಗತಿಯಾಗಿದೆ.

Lectoo on education ancient & Modern.

### ರಾಷ್ಟ್ರೀಯ ಉಡುಪು.

ಯುರೋಪಿಯನ್ನರ ವೇಷದ ಅನುಕರಣವು ನಮ್ಮ ನಿರಭಿಮಾನದ ನೀಚತ್ವದ ಮತ್ತು ವಿಚಾರಹೀನತೆಯ ಚಿನ್ಹವಾಗಿದೆ. ನಮ್ಮ ಹಿಂದುಸ್ಥಾನದ ಹವೆಗೆ ಯೋಗ್ಯವಾದ ಸಾದಾ ಮತ್ತು ಅಗ್ಗ ಈ ದೃಷ್ಟಿಯಿಂದ ಇಡೀ ಪೃಥ್ವಿಯಲ್ಲಿದ್ದ ನಮ್ಮ ವೇಷವನ್ನುಳಿದು ಯಾವ ವೇಷವೂ ಸರಿಗಟ್ಟಲಾರದು. ಮತ್ತು ಆರೋಗ್ಯದ ಎಲ್ಲ ನಿಯಮಗಳನ್ನು ಒಳಕೊಂಡ ನಮ್ಮ ವೇಷವನ್ನು ಬಿಡುವದರಿಂದ ನಾವು ರಾಷ್ಟ್ರೀಯ ಪಾತಕವನ್ನು ಮಾಡುತ್ತಿದ್ದೇವೆ. ಇಂಗ್ಲೀಷರಲ್ಲಿ ದುರಭಿಮಾನವೂ ಜಾತಿಯ ಅಸತ್ಯಕಲ್ಪನೆಯೂ ಇಲ್ಲದಿದ್ದರೆ ಅವರು ನಮ್ಮ ಉಡಿಗೆತೊಡಿಗೆಗಳನ್ನು ಎಂದೋ ಸ್ವೀಕರಿಸುತ್ತಿದ್ದರು. ನಾನು ಚಂಪಾರಣ್ಯಕ್ಕೆ ಏನೋ ಒಂದು ಕಾರಣದಿಂದ ಬರೆದಲೆಯಿಂದ ಹೋಗಬಾರದೆಂದು ನಿಶ್ಚಯಿಸಿದೆ. ಒಂದಾನೊಂದು ಪವಿತ್ರಹೇತುವಿಗಾಗಿ ಬರಿಗಾಲಿನಿಂದ ಹೋದೆ ಆದರೆ ಶಕ್ಯವಿದ್ದಾಗ ಹಾಗೆ ಹೋಗುವದು ಯೋಗ್ಯವೆಂದು ಈಗ ನಾನು ಮನಗಂಡಿದ್ದೇನೆ.

ಮೋ. ಗಾಂಧಿ.

(ಅನಂತಾಚಾರ್ಯರ ಅಧ್ಯರಿಂದ ಕನ್ನಡಿಸಿದ್ದು.)

---

## ಒಪ್ಪಿಗೆ ವಿಮರ್ಶೆ

**ಸುಮಿತ್ರ.** ಸದ್ಬೋಧಕ ಗ್ರಂಥಮಾಲೆಯ ಕಾರ್ಯಾಲಯ ಸುರತಕಲ್ಲ ಜಿಲ್ಲಾ ಮಂಗಳೂರದಿಂದ ಪ್ರಸಿದ್ಧವಾದ ೨ ನೇ ಗ್ರಂಥವಿದು. ಇದರಲ್ಲಿ ಸದ್ಗುಣಿಯೂ ಸದಾಚಾರಿಯೂ ಆದ ಸುಮಿತ್ರನನ್ನು ಆದ ನಸ್ಥಳದಿಂದ — ಸ್ವರ್ಣಾಕರ ಸಾಹುಕಾರನ ಮುಖ್ಯಸೇವಕಸ್ಥಾನದಿಂದ — ತಪ್ಪಲಿಕ್ಕೆ ಮತ್ಸರ ಗ್ರಸ್ತನಾದ ಕೇಶವಮಿತ್ರನ ಹಾಗು ಧನಲೋಭಿಯಾದ ಅತಿಕರ್ಮಿಯ ಪ್ರಯತ್ನವು ನಿಷ್ಫಲವಾಗಿ ಕಡೆಗೆ ಅವನಿಗೆ ಹಾನಿಯಾಗಿ ಸುಮಿತ್ರನಿಗೆ ಲಾಭವಾದ ಸಂಗತಿಯನ್ನು ಒಳ್ಳೇ ಮನೋಹರವಾಗಿ ಗ್ರಂಥ ಕರ್ತನು ವರ್ಣಿಸಿರುವನು. ಬೆಲೆಯು ಕಡಿಮೆಯೆಂದರೆ ಮೂರು ಆಣೆಗಳು ಮಾತ್ರ ಶಾಲೆಗಳಲ್ಲಿ ನೀತಿಪಾಠಗಳ ಸಲುವಾಗಿ ಪಠ್ಯಪುಸ್ತಕವನ್ನು ಮಾಡಲು ಯೋಗ್ಯವಾಗಿದೆ.

÷ ÷

**ವಿದ್ಯಾಭಿವೃದ್ಧಿ.** ೫ನೇ ಗ್ರಂಥವಿದು. ಇದರಲ್ಲಿ ಚಿಕ್ಕ ಬಾಲಕರ ವಿದ್ಯಾಭ್ಯಾಸದ ಕಡೆಗೆ ತಂದೆ ತಾಯಿಗಳು ಉಪಾಧ್ಯಾಯರೂ ಹೆಚ್ಚು ಲಕ್ಷವನ್ನು ಪೂರೈಸಬೇಕೆಂದು ಚನ್ನಾಗಿ ವಿವೇಚಿಸಿದ್ದಾರೆ. ಈಗಿನ ತಂದೆತಾಯಿಗಳ ಹಾಗೂ ಉಪಾಧ್ಯಾಯರ ಕಡೆಗೆ ಇದ್ದ ದೋಷಗಳನ್ನು ಅವುಗಳನ್ನು ಸರಿಪಡಿಸಿಕೊಳ್ಳಲಿಕ್ಕಾಗಿ ಉಪಾಯವನ್ನು ಸೂಚಿಸಿರುವವರು. ಪುಸ್ತಕವು ಸಂಗ್ರಾಹ್ಯವಾಗಿ ಬೆಲೆ ೨॥ ಆಣೆಗಳು. ಎರಡೂ ಪುಸ್ತಕಗಳು ಅಂದವಾಗಿ ಮುದ್ರಿಸಲ್ಪಟ್ಟಿವೆ.

ಶ್ರೀಮತ್ಸ್ವಾಮ್ಯ ರಾಮಾಚಾರ್ಯರ ಗಲಗಲಿ ಬೆಲೆ ೧-೩-೦

ಈಪುಸ್ತಕವು ಸಂಸ್ಕೃತ ಭಾಷೆಯಲ್ಲಿ ಬರೆದದೆ. ಇದರಲ್ಲಿ

÷ ÷

ಸ್ವದೇಶ ಲಹರಿ, ಗಾಂಧಿಟೋಪಿ ಲಹರಿ, ಚರಕಲಹರಿ, ಬಹಿಷ್ಕಾರ ಲಹರಿ, ಹಾಗೂ ಕಾರಾಗೃಹ ಲಹರಿ, ಎಂಬ ಐದು ಲಹರಿಗಳು. ಒಳಕೊಂಡಿವೆ. ವಿಷಯ ಮನೋಹರವಿದ್ದು ಚನ್ನಾಗಿ ಇವೆ, ಭಾಷಾಶೈಲಿಯಾದರೂ, ಸಾಧಾರಣ ಸಂಸ್ಕೃತ ಬಲ್ಲವನಿಗೂ ಕೂಡ ತಿಳಿಯುವ ಹಾಗೆ ಸುಲಭವಾಗಿರುವದು. ವಿದ್ಯಾರ್ಥಿಗಳಂತೂ ಈ ಶ್ಲೋಕಗಳನ್ನು ಅವಶ್ಯವಾಗಿ ಓದಿ ಚನ್ನಾಗಿ ಮನನ ಮಾಡಬೇಕು ವಿಷಯ ಮಹತ್ವವನ್ನು ನೋಡಿದರೆ ಬೆಲೆಯಾದರೂ ವಿಶೇಷವಲ್ಲ. ಮುದ್ರಣವಾದರೂ ಅಂದವಾಗಿರುವದು. ಆದ್ದರಿಂದ ಇದನ್ನು ಎಲ್ಲರು ಸಂಗ್ರಹಿಸತಕ್ಕದ್ದು. ಮುದ್ರಣದ ದೋಷಗಳು ಉಳಿದವೆ ಅವುಗಳನ್ನು ಮುಂದಿನ ಆವೃತ್ತಿಯಲ್ಲಿ ಗ್ರಂಥಕರ್ತರೂ ಸರಿಪಡಿಸುವರೆಂದು ನಂಬಿದ್ದೇನೆ.

# ಕನ್ನಡ ನವಜೀವನ.

ಶ್ರಾವಣ ಶುದ್ಧ ೧೧ ಗುರುವಾರ ಶಕೆ ೧೮೪೪


## ಮಿಥ್ಯಾಸಮಾನತೆಯು.

ಯಂಗ ಇಂಡಿಯಾ

ಮಾನನೀಯ ಶ್ರೀನಿವಾಸಶಾಸ್ತ್ರಿಯವರು ಆಸ್ಟ್ರೇಲಿಯಾದಲ್ಲಿ ಮಾಡಿದ ಭಾಷಣಗಳ ವಿಷಯವಾಗಿ ಎಷ್ಟೋ ಅಸಂತುಷ್ಟತೆಯು ವ್ಯಕ್ತಮಾಡಲ್ಪಟ್ಟಿರುವದು. ಅವರು ತಮ್ಮ ಭಾಷಣಗಳಲ್ಲಿ ಇನ್ನು ಮುಂದೆ ಹಿಂದುಸ್ತಾನದ ನಿವಾಸಿಗಳನ್ನು ಅಲ್ಲಿಗೆ ಬರಗೊಡದೆ ಇರುವದು ಸರಿಯಾದದ್ದೆಂದು ಒಪ್ಪಿಕೊಂಡಿದ್ದಾರೆ. ಅಖಿಲ ಜಗತ್ತಿನೊಳಗಿನ ಎಲ್ಲ ಸಾಮ್ರಾಜ್ಯ ರಾಷ್ಟ್ರಸಂಘವೆಂಬ ಕಟ್ಟಡವನ್ನು ನಿಲ್ಲಿಸಬೇಕೆಂಬ ತತ್ವವಿಚಾರದಿಂದ ನೋಡಿದರೆ ಆಸ್ಟ್ರೇಲಿಯಾದವರು ಹಿಂದುಸ್ತಾನನಿವಾಸಿಗಳನ್ನು ತಮ್ಮಲ್ಲಿಗೆ ಬರಗೊಡದೆ ಇರುವದು ತೀರವಿರುದ್ಧವಾದದ್ದಿರುವದು. ಯಾಕಂದರೆ ನಿಜವಾದ ಸಮಾನತೆಯ ಆಧಾರದ ಮೇಲೆಯೇ ಆ ಕಟ್ಟಡವು ನಿಲ್ಲಿಸಲ್ಪಡಬೇಕು. ಸಾಮ್ರಾಜ್ಯದಲ್ಲಿ ಹಿಂದುಸ್ತಾನವು ಉಳಿಯಬೇಕೋ ಇಲ್ಲವೋ ಎಂಬ ಪ್ರಶ್ನವನ್ನು ಬಿಡಿಸುವ ಪ್ರಸಂಗವು ನಮ್ಮ ರಾಷ್ಟ್ರಕ್ಕೆ ಬಂದಾಗ ಅದು ನಿಶ್ಚಿತವಾಗಿ ಸಾಮ್ರಾಜ್ಯದಲ್ಲಿ ಉಳಿಯಬೇಕೆಂದೇ ನಿಶ್ಚಯಿಸುತ್ತದೆ. ಆದರೆ ಕೆಳಗಿನ ಮೂರು ಕರಾರುಗಳು ಮಾತ್ರ ಅಗತ್ಯವಾಗಿರುವವು-

ಗೌರ ಜನಾಂಗಗಳುಳ್ಳ ಭಾಗಗಳಂತೆ ಹಿಂದುಸ್ತಾನಕ್ಕವೂ ಅಂತರ್ಗತ ಪ್ರಶ್ನಗಳ ಸಂಬಧವಾಗಿ ಸಂಪೂರ್ಣವಾದ ಸ್ವತಂತ್ರತೆಯು ಇರಲಿಕ್ಕಬೇಕು. ಹಿಂದುಸ್ತಾನದಲ್ಲಿಯ ಮುಖ್ಯಜಾತಿಗಳಿಗೆ ಧರ್ಮದಿಂದ ಬಂಧನವೂ ಅತಿಶಯವಾದ ಸಹಾನುಭೂತಿಯೂ ಇದ್ದ ಜಾತಿಗಳ ಜನರಗೂಡಾಗಲಿ ರಾಷ್ಟ್ರಗಳ ಗೂಡಾಗಲಿ ನಿಷ್ಕಾರಣವಾಗಿ ಅದರ ಇಚ್ಛೆಯ ವಿರುದ್ಧ ಭಾಗತೆಗೆದುಕೊಳ್ಳಲಿಕ್ಕೆ ಹಚ್ಚುವದಿಲ್ಲೆಂಬ ಬಗ್ಗೆ ವಿಶ್ವಾಸವು ಹುಟ್ಟುವಂತ ಮಾಡಬೇಕು. ಸಾಮ್ರಾಜ್ಯದ ಇತರ ಭಾಗಗಳ ಸಂಗಡ ಸಮಾನವಾದ ಅಧಿಕಾರವೂ ದರ್ಜೆಯೂ ಇರಲಿಕ್ಕೆ ಬೇಕು. ಈ ಮೂರು ಅವಶ್ಯವಾದ ಕರಾರುಗಳ ಸಾರವು ಸ್ವರಾಜ್ಯ, ಖಿಲಾಫತ್ ಸಮಾನತಾ ಎಂಬ ಮೂರು ಸಣ್ಣ ಸಣ್ಣ ಶಬ್ದಗಳಿಂದ ವ್ಯಕ್ತಮಾಡಲ್ಪಡುತ್ತದೆ. ಹಿಂದುಸ್ತಾನವು ಸ್ವೇಚ್ಛಾಪೂರ್ವಕವಾಗಿ ಸಾಮ್ರಾಜ್ಯದಲ್ಲಿ ಅಂತರ್ಗತವಾಗಬೇಕೆಂದರೆ ಈ ಮೂರು ಮಹತ್ವವಾದ ಕರಾರುಗಳು ಪೂರ್ಣವಾಗಲಿಕ್ಕೆ ಬೇಕು-

ಮೊದಲನೇ ಕರಾರ — ಸ್ವರಾಜ್ಯದ ಪೂರ್ಣವಾದ ಅಧಿಕಾರದ ವಿಷಯವಾಗಿ ಯಾರೂ ಪ್ರಶ್ನೆಯನ್ನು ತಗೆಯುವದಿಲ್ಲ. ಅದು ಉನ್ನತಿಯು ಸರ್ವ ಸಮ್ಮತವಾದ ಧ್ಯೇಯವಾಗಿದೆ. ಆದರೆ ಎರಡನೇ ಕರಾರದ ಬಗ್ಗೆ ಭಯಂಕರವಾದ ವಿರೋಧವು ಉಪಸ್ಥಿತವಾಗುತ್ತದೆ. ಈ ಹೊತ್ತಿನ ವರೆಗೆ ಬ್ರಿಟಿಶ್ ಪಾರ್ಲಿಮೆಂಟವು ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದ, ಪರರಾಷ್ಟ್ರಗಳಿಗೆ ಸಂಬಂಧಿಸಿದ ರಾಷ್ಟ್ರದ ಬಾಹ್ಯ ಪ್ರಶ್ನೆಗಳಲ್ಲಿ ಕೈಹಾಕುವ ಅಧಿಕಾರವನ್ನು ಇದರಿಂದ ಬೇಡಿದಂತಾಗುವದು. ಸ್ವತಂತ್ರ ಮತ್ತು ಸಮಾನವಾದ ಅಧಿಕಾರವುಳ್ಳ ರಾಷ್ಟ್ರಗಳು ಅಂತರ್ಭೂತವಾಗಿದ್ದ ಸಾಮ್ರಾಜ್ಯದಲ್ಲಿ ಯಾವದೇ ಒಂದು ರಾಷ್ಟ್ರವು ಸಾಮ್ರಾಜ್ಯದ ಪರರಾಷ್ಟ್ರೀಯ ಪ್ರಶ್ನೆಗಳಲ್ಲಿ ಕೂಡ ಕೈಹಾಕಲಿಚ್ಛಿಸುವದರಲ್ಲಿ ಸಿದ್ಧಾಂತ ದೃಷ್ಟಿಯಿಂದ ಏನೂ ದೋಷವಿಲ್ಲ. ತ್ರಿಕಾಲದಲ್ಲಿಯೂ ಇಂಗ್ಲಂಡ ಸ್ಕಾಟಲಂಡ ಮತ್ತು ವೇಲ್ಸ ಜನತೆಯ ಕೈಯಲ್ಲಿಯೇ ಸಾಮ್ರಾಜ್ಯದ ಸಂಧಿ ವಿಗ್ರಹ ಮೊದಲಾದ ಸಂಗತಿಗಳ ಅಧಿಕಾರವು ಇರಬೇಕೆಂದೂ ಸಾಮ್ರಾಜ್ಯದಲ್ಲಿಯ ಉಳಿದ ಭಾಗದವರು ಕೇವಲ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಬೇಕೆಂದು ಅನ್ನುವದೆಂದರೆ ಈಗಿನ ಸಾಮ್ರಾಜ್ಯ ರಾಷ್ಟ್ರಸಂಘದ ಸಿದ್ಧಾಂತಗಳಿಗೆ ವಿರುದ್ಧವಾಗಿರುವದು. ಅದು ಹಿಂದಿನ ಸಾಮ್ರಾಜ್ಯ ಕಲ್ಪನೆಗೆ ಮಾತ್ರ ಶೋಭಿಸಬಹುದು. ಆದರೂ ವರ್ತಮಾನ ಸಿದ್ಧಾಂತಗಳಿಗೆ ಅನುಸರಿಸಿ ಪರರಾಷ್ಟ್ರೀಯ ಪ್ರಶ್ನಗಳಲ್ಲಿ ಹಿಂದುಸ್ಥಾನವು ಕೈ ಹಾಕುವದಕ್ಕೆ ಕೇಳುವದೆಂದರೆ ಸಾಮ್ರಾಜ್ಯದ ಉಳಿದಭಾಗಗಳು ಕೇಳುವ ಹಕ್ಕುಗಳಿಗಿಂತ ಹೆಚ್ಚು ಕೇಳಿದಂತೆಯೇ ಸರಿ. ಆದರೆ ಇಷ್ಟರ ಮೇಲಿಂದಲೇ ಅದು ಅಯೋಗ್ಯವಾದದ್ದೆಂದು ನಿಷೇಧಿಸುವದು ಸರಿಯಲ್ಲ. ಅದಕ್ಕೆ ಆಂತರಿಕ ಪ್ರಶ್ನೆಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವು ಇನ್ನೂ ದೊರೆಯದಿದ್ದದರಿಂದ ಅದು ಪರರಾಷ್ಟ್ರಗಳ ಸಂಬಂಧದಲ್ಲಿ ಕೈ ಹಾಕುವದರ ಬಗ್ಗೆ ಕೆಲವು ವೇಳೆ ತಡೆಯಬೇಕೆಂದರೆ ಅದಕ್ಕೆ ಶಕ್ಯವಲ್ಲ. ಸಾಮ್ರಾಜ್ಯದ ಉಳಿದ ಭಾಗಗಳಲ್ಲಿ ಹಿಂದುಸ್ಥಾನದ ಕಠಿಣ ಪರಿಸ್ಥಿತಿಯಂತೆ ಪರಿಸ್ಥಿತಿಯು ಇಲ್ಲ. ಆಸ್ಟ್ರೇಲಿಯಾ ನ್ಯೂಝಿಲಂಡ, ಆಫ್ರಿಕಾ, ಅಥವಾ ಕಾನಡಾ ದೇಶಗಳು ಖಿಲಾಫತದಂಥ ಪ್ರಶ್ನೆಯನ್ನು ಬಿಡಿಸಬೇಕಾಗಿಲ್ಲ. ಅಲ್ಲಿಯ ಜನಾಂಗದಲ್ಲಿ ಹಿಂದುಸ್ತಾನದಂತೆ ವಿಶೇಷ ವಾಸ ಮುಸಲ್ಮಾನರಿಲ್ಲ. ಆದದರಿಂದಲೇ ಅಲ್ಲಿಯ. ಜನರ ಧಾರ್ಮಿಕ ಭಾವನೆಗಳಿಗೆ ತುರ್ಕೀ ಸಾಮ್ರಾಜ್ಯದ ನಾಶದಿಂದ ಆಘಾತವಾಗುವಂತಿಲ್ಲ.

ಹಿಂದುಸ್ತಾನದ ಅಂತರ್ಬಾಹ್ಯ ಸುರಕ್ಷಿತತೆ ಹಾಗೂ ಶಾಂತಿಯು, ಏಶಿಯಾ ಖಂಡದ ಮುಸಲ್ಮಾನ ರಾಷ್ಟ್ರಗಳ ಮಿತ್ರತ್ವ ಹಾಗೂ ಸದ್ಭಾವನೆಗಳ ಮೇಲೆಯೇ ಅವಲಂಬಿಸಿರುವದೆಂಬದನ್ನು ಲಕ್ಷದಲ್ಲಿಡಬೇಕು. ಇಂಥ ಪರಿಸ್ಥಿತಿಯು ಸಾಮ್ರಾಜ್ಯದ ಉಳಿದ ಭಾಗಗಳಲ್ಲಿರುವದಿಲ್ಲ. ಅಮೇರಿಕೆಯ, ಸಂಯುಕ್ತ ಪ್ರಾಂತ ಮತ್ತು ಕಾನಡಾ ದೇಶಗಳ ಪರಿಸ್ಥಿತಿಯಲ್ಲಿ ಮಾತ್ರ ಹಿಂದುಸ್ಥಾನದ ಸಾಮ್ಯವಿರುವದು. ಹಿಂದುಸ್ತಾನದ ವಿಶಿಷ್ಟ ಪರಿಸ್ಥಿತಿಯಿಂದಲೇ ಅದು ಪರರಾಷ್ಟ್ರಗಳ ಪ್ರಶ್ನೆಗಳಲ್ಲಿ ಹೆಚ್ಚು ಕೈಹಾಕುವ ಅಧಿಕಾರವನ್ನು ಕೇಳುತ್ತದೆ. ಈ ಅಧಿಕಾರವು ಮೊದಲು ಮೊದಲು ಹೆಚ್ಚು ಎಂದು ತೋರುವದು. ಇನ್ನು ಮೇಲಾದರೂ ಹಿಂದುಸ್ತಾನವು ತನ್ನ ಮುಸಲ್ಮಾನ ಸೈನಿಕರಿಗೆ ತುರ್ಕಸ್ಥಾನದ ಮೇಲೆ ದಾಳಿಯನ್ನು ಮಾಡಲಿಕ್ಕೂ, ಖಿಲಾಫತದ ಅಧಿಕಾರವನ್ನು ನಷ್ಟಭ್ರಷ್ಟ ಮಾಡುವದಕ್ಕೆ ಸಹಾಯ ಮಾಡಲಿಕ್ಕೂ ಹೇಳುವದೆಂದರೆ ಅಸಂಭವನೀಯವಾದ ಸಂಗತಿಯು. ಅಥವಾ ಏಶಿಯಾ ಖಂಡದಲ್ಲಿಯ ತನ್ನ ನೆರೆಹೊರೆಯವರ ಗೂಢ ಅಜ್ಞಾತ ಹಾಗೂ ಅಜ್ಞೇಯ ಕಾರಣಗಳ ಸಲುವಾಗಿ, ಯುದ್ಧಮಾಡಿ ಚಿರಕಾಲ ದ್ವೇಷವನ್ನೂ, ಹೆಚ್ಚು ಶತ್ರುಭಾವವನ್ನೂ, ಕಟ್ಟಿಕೊಳ್ಳಲಿಕ್ಕೆ ಹಿಂದುಸ್ಥಾನಕ್ಕೆ ಹೇಳುವದಾದರೂ ತೀರ ಅಸಂಭವವು.

ಸಾಮ್ರಾಜ್ಯದ ಎಲ್ಲ ಭಾಗಗಳಲ್ಲಿ ಸಮಾನತೆಯಿರುವದು ಮಹತ್ವವಾದ ಮೂರನೇ ಕರಾರವು. ಈ ಸಮಾನತೆಯನ್ನು ಮುಯ್ಯಕ್ಕೆ ಮುಯ್ಯ ತೀರಿಸಬೇಕೆಂಬ ತಪ್ಪು ಮಾರ್ಗದಿಂದ ಸಂಪಾದಿಸಬೇಕೆಂಬ ಪ್ರಯತ್ನವು ನಡೆದಿತ್ತಾಗ ಈ ಸಂಪಾದನೆಯಲ್ಲಿ ಮುಯ್ಯಕ್ಕೆ ಮುಯ್ಯ ತೀರಿಸುವದೆಂದರೆ, ಪ್ರತಿ ಒಂದು ಯಾವನಾದರೊಬ್ಬನು ಗುದ್ದಿದರೆ, ತಿರುಗಿ ಅವನಿಗೆ ಗುದ್ದಬೇಕೆಂಬ ಮಾರ್ಗದಿಂದ ಸಮಾನತೆಯನ್ನು ಸಂಪಾದಿಸುವದು ಸಾಮ್ರಾಜ್ಯದ ಘಟನೆಗಾಗಲೀ ಸಾಮರ್ಥ್ಯಕಕ್ಕಾಗಲೀ, ಎಂದೂ ಉಪಕಾರವಾಗಲಾರದು ರಾಷ್ಟ್ರ

ಲೋಕಮಾನ್ಯರ ತರ್ಪಣವು.

R. No. 1589.

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟೆ ಶ್ರಾವಣ ವದ್ಯ ೩ ಶಕೆ ೧೮೪೩ ಗುರುವಾರ ತಾ. ೧೦ ಆಗಸ್ಟ ೧೯೨೧. | ಸಂಚಿಕೆ ೩೫

## ಮಹಾತ್ಮರ ನುಡಿಯು.

(ಯಂಗ ಇಂಡಿಯಾ ತಾ॥ ೨೭-೭-೨೧.)

### ಹಿಂದೂಮುಸಲ್ಮಾನರ ಐಕ್ಯವು.

ಹಿಂದೂಮುಸಲ್ಮಾನರ ನಡುವೆ ಐಕ್ಯವಿರದಹೊರ್ತು ರಾಷ್ಟ್ರ ಪ್ರಗತಿಯು ಆಗಲಾರದೆಂಬದನ್ನು ಎಲ್ಲರೂ ಬಲ್ಲರು. ಇವೆರಡೂ [ಬಾಂ]ಧವರ ನಡುವೆ ಬೆಳೆಯಹತ್ತಿರುವ ಐಕ್ಯಭಾವವು ಇನ್ನೂ ಹಸಿ[ಯಾ]ದ್ದದರಿಂದ ಗಟ್ಟಿಯಾಗಿಲ್ಲವೆಂದನ್ನಲಿಕ್ಕೆ ಏನೂ ಸಂಶಯವಿಲ್ಲ. [ಇ]ನ್ನೂ ಒಬ್ಬರನ್ನೊಬ್ಬರು ನಂಬದವರಾಗಿರುವರು ಉಭಯ ಧರ್ಮ[ದ]ವರು ಒಬ್ಬರನ್ನೊಬ್ಬರು ನಂಬಿ, ಕೂಡಿಕೊಂಡು ಕೆಲಸಮಾಡದ[ಹೊ]ರ್ತು ಯಾವ ರಾಷ್ಟ್ರಕಾರ್ಯವೂ ನೆರವೇರದೆಂದು ಎಲ್ಲ ಮುಂ[ದಾ]ಳುಗಳು ಕಂಡುಹಿಡಿದಿರುವರು. ಜಪತೆಯಲ್ಲಿ ಇವರಬಗ್ಗೆ ಸುಧಾ[ರಣೆ]ಯು ಕಂಡುಬರುತ್ತಿದ್ದರೂ ಅದಕ್ಕೆ ಇನ್ನೂ ಸ್ಥಿರತ್ವವು ಪ್ರಾಪ್ತವಾ[ಗಿರು]ವದಿಲ್ಲ. ಹಿಂದೂ ಜನರಿಗೆ ಅನಿಸುತ್ತಿರುವಂತೆ ಮುಸಲ್ಮಾನ ಜನ[ಸ]ಮೂಹಕ್ಕೆ ಇನ್ನೂ ಸ್ವರಾಜ್ಯದ ಆವಶ್ಯಕತೆಯು ಅನಿಸಹತ್ತಿರು[ವ]ದಿಲ್ಲ. ಹಿಂದೂಜನರು ಬಂದು ಆಡರುವಷ್ಟು ಮುಸಲ್ಮಾನರು [ಸಭೆ]ಥೆ, ವ್ಯಾಖ್ಯಾನ, ಉಪನ್ಯಾಸಗಳಿಗೆ ಮುಂದೊರದು ಬರುತ್ತಿರುವ[ದಿ]ಲ್ಲ. ಇದು ಒತ್ತಾಯದಿಂದ ಮಾಡಿಸುವಂಥ ಕೆಲಸವಲ್ಲ. ಮುಸ[ಲ್ಮಾ]ನರಲ್ಲಿ ರಾಷ್ಟ್ರದ ವಿಷಯಕ್ಕೆ ಕಳಕಳಿಹುಟ್ಟುವಷ್ಟು ವೇಳೆಯು [ಇ]ನ್ನೂ ಗತಿಸಿರುವದಿಲ್ಲ. ಅವರೂ, ವರ್ಷದಹಿಂದೆ ಯಾವರಾಷ್ಟ್ರ[ಕಾ]ರ್ಯದಲ್ಲಿಯೂ ನೆರವಾಗದಂಥ ಮುಸಲ್ಮಾನ ಸಮಾಜದೊಳ[ಗೆ] ಈಹೊತ್ತಿಗೆ ಸಾವಿರಾರು ಜನರು ಮಹಾಸಭೆಯ ಸಭಾಸದ[ರಾ]ದದ್ದು ವಿಸ್ಮಯಜನಕವಾದ ಮಾತೇ ಆಗಿರುವದು. ಇಷ್ಟೇ [ಒಂ]ದು ದೊಡ್ಡ ಲಾಭವು.

ಆದರೆ ಇನ್ನೂ ಆಗಬೇಕಾದ ಭಾಗವು ಬಹಳ ಉಳಿದಿರು[ವ]ದು. ಅದೆಲ್ಲ ಕೇವಲ ಹಿಂದೂ ಜನರಿಂದೇ ಆಗಬೇಕಾದದ್ದು. [ಮು]ಸಲ್ಮಾನರು ಈ ವಿಷಯದಲ್ಲಿ ಉತ್ಸಾಹವನ್ನು ತೋರಿಸದೆ[ಇ]ರುವ ಸ್ಥಳಗಳಲ್ಲೆಲ್ಲ ಹಿಂದೂಜನರು ಅವರನ್ನು ಆದರದಿಂದ [ಕರೆ]ದು ಕೂಡಿಸಿಕೊಳ್ಳಬೇಕು. ಮುಸಲ್ಮಾನರು ಸ್ವರಾಜ್ಯನಿಧಿಗೆ ಸ[ಹಾ]ಯಮಾಡುವದಿಲ್ಲವೆಂದೂ ಮತ್ತು ಮಹಾಸಭೆಯ ಶಾಖೆಗಳಲ್ಲಿ [ಕೂ]ಡಿಕೊಂಡು ಕೆಲಸ ಮಾಡಲೊಪ್ಪುವದಿಲ್ಲವೆಂದೂ ಅಲ್ಲಲ್ಲಿಗೆ [ಕೇಳ]ಬರುತ್ತದೆ. ಇದಕ್ಕೆ ಸಹಜವಾಗಿ ಹೊರಡುವ ಪ್ರಶ್ನೆಯೆಂದರೆ ನೀವು ಅವರನ್ನು ಚನ್ನಾಗಿ ಈ ರೀತಿಯಾಗಿ ಮಾಡಲಿಕ್ಕೆ ಬೇಡಿ ಕೊಂಡಿರುವಿರೇನು? ಜಿಲ್ಲೆಯಲ್ಲಿಯ ಹಿಂದೂಜನರು ಮುಸಲ್ಮಾನ ಬಾಂಧವರ ವಿಷಯಕ್ಕೆ ವಿಶೇಷ ಪ್ರಯತ್ನ ಮಾಡಲಿಕ್ಕೆ ಬೇಕು. ಒಬ್ಬರು ಶ್ರೇಷ್ಠರು ಒಬ್ಬರು ನೀಚರು ಎಂಬ ಭಾವನೆಯು ಇರುವವರೆಗೆ ಇಬ್ಬರಲ್ಲಿಯೂ ತಾವು ಸಮಾನಸ್ಕಂಧರೆಂಬ ಭಾವನೆಯು ಒಡ ಮೂಡದು. ಸಮಾನಸ್ಕಂಧರೊಳಗೆ ಆಶ್ರಯದಾತೃನೆಂದು ಹೇಳಿಕೊಳ್ಳಲಿಕ್ಕೆ ಯಾರಿಗೂ ಆಸ್ಪದವಿರುವದಿಲ್ಲ. ಹಿಂದೂಜನರಗಿಂತ ಸಂಖ್ಯೆಯಿಂದಲೂ ವಿದ್ಯೆಯಿಂದಲೂ ತಾವು ಕಡಿಮೆ ಇರುವೆವೆಂದು ಮುಸಲ್ಮಾನರಿಗೆ ಕೆಡಕು ಅನಿಸದಂತೆ ನೋಡುತ್ತಿರಬೇಕು. ವಿದ್ಯೆಯು ಕಡಿಮೆಯುಳ್ಳವರಾಗಿದ್ದಲ್ಲಿ ಶಿಕ್ಷಣವನ್ನುಹೊಂದಿ ಅದನ್ನು ಸರಿಮಾಡಿಕೊಳ್ಳಬೇಕು. ಸಂಖ್ಯೆಯಿಂದ ಅಧಿಕರಾಗದೆ ಇರುವದು ಒಂದು ಸುಖವೇ. ಬಹು ಸಂಖ್ಯಾಕರಾದಲ್ಲಿ ತೊಂದರೆಗಳು ಬಹಳ. ಪರಿಣಾಮವು ಸಂಖ್ಯೆಯನ್ನವಲಂಬಿಸದೆ ಅವರ ಗುಣಾಚಾರಗಳನ್ನು ಅವಲಂಬಿಸಿರುವದು. ಇನ್ನೂ ದೂರದಲ್ಲಿರುವ ಭವಿಷತ್ಕಾಲದಲ್ಲಿ ನಾವು ಪರಸ್ಪರರು ಹೇಗೆ ನಡಿಯಬೇಕೆಂಬದರ ವಿಷಯಕ್ಕೆ ಬರೆಯಬೇಕೆಂದು ನಾನು ಇದನ್ನು ಉಪಕ್ರಮಿಸಿರುವದಿಲ್ಲ.

ಆದರೆ ನನ್ನ ಉದ್ದೇಶವು ಈ ಕ್ಷಣಕ್ಕೆ ನಮ್ಮ ಕೈಯಲ್ಲಿದ್ದ ಕಾರ್ಯದ ವಿಷಯಕ್ಕೆ ವಿಚಾರ ಮಾಡುವದಿರುವದು. ತೀವ್ರದಲ್ಲಿಯೇ "ಈದ" ಹಬ್ಬವು ಬರುವದು. ಹಿಂದೂ ಮುಸಲ್ಮಾನರ ನಡುವೆ ಇರುವ ವೈಮನಸ್ಸನ್ನು ಪ್ರಕೋಪಕ್ಕೆ ಎಳೆಯಬೇಕೆಂಬುವ ಪ್ರಯತ್ನಗಳು ನಿಷ್ಫಲವಾಗುವಂತೆ ನಾವು ಏನುಮಾಡಬೇಕಾಗಿರುವದು? ಬಿಹಾರದಲ್ಲಿಯ ಪರಿಸ್ಥಿತಿಯಲ್ಲಿ ಸುಧಾರಣೆಯು ಆಗಿದ್ದರೂ ಇನ್ನೂ ಅಂಜಿಕೆಯು ಹಾರಿಹೋಗುವಂತಿರುವದಿಲ್ಲ. ಹುಕಿಯಿಂದ ತುಂಬಿದ ಮತ್ತು ವ್ಯಾಕುಲರಾದ ಕೆಲವು ಹಿಂದೂ ಜನರು ಇಲ್ಲದ ಪ್ರಸಂಗವನ್ನು ತಂದಿಡುವರು. ಆಗಲಾರದ ಜನರು ಒಮ್ಮೊಮ್ಮೆ ಸರಕಾರವು ಸಹ ಬೇಕಾಗಿ ಹುಟ್ಟಿಸಿದ ಎಲ್ಲ ಸುದ್ದಿಗಳನ್ನು ನಂಬಿ ಇವರು ಹುಚ್ಚೆದ್ದು ಕುಣಿಯಹತ್ತುವರು. ಆಕಳವನ್ನು ಉಳಿಸಿಕೊಳ್ಳುವದು ಹಿಂದುವಿಗೆ ಬಲು ಪವಿತ್ರವಾದ ಕರ್ತವ್ಯವಾಗಿರುವದು. ಆದ್ದರಿಂದಲೇ ಈ ವಿಷಯದಲ್ಲಿ ಒಮ್ಮೊಮ್ಮೆ ತಲೆಯಿಲ್ಲದವರಂತೆ ಆಚರಿಸಹತ್ತಿ ನಾವು ಯಾವ ಕಾರಣದ ಸಲುವಾಗಿ ಹೋರಾಡಹತ್ತಿರುವೆವೋ ಅದನ್ನೇ ಅನೇಕವೇಳೆ ನಾಶಮಾಡಿಬಿಡುವೆವು. ತಮ್ಮ ಬಾಂಧವನಾದ ಹಿಂದುವಿನ ಮನಸ್ಸನ್ನು ನೋಯಿಸಬಾರದೆಂತ ಮುಸಲ್ಮಾನರು ಆಕಳ ಕೊಲ್ಲುವದನ್ನು ನಿಲ್ಲಿಸಲಿಕ್ಕೆ ಬಲು ಪ್ರಯಾಸ ಪಡುತ್ತಿರುವದನ್ನು ನಾವು ಮರೆಯಕೂಡದು. ಈ ಅವರ ಪ್ರಯತ್ನವು ವಾದಪ್ರಿಂದ ಮೂಗೆಳೆಯುವದು ಒಂದು ದೊಡ್ಡ ತಪ್ಪೆ? ಅಲ್ಪ

ಇಷ್ಟೊಂದು ನೀವು ಮಾಡಲೇಬೇಕೆಂದು ನಾವು ಆಗ್ರಹತೊಟ್ಟಾಕ್ಷಣವೆ, ಅವರ ಪ್ರಯತ್ನಗಳನ್ನೆಲ್ಲಿ ಅಲ್ಲಗಳೆದಂತಾಗುವದು. ಎಷ್ಟೋ ವರ್ಷಗಳವರೆಗೆ ಅವರ ಈ ಗೋವಧೆಯನ್ನು ನಾವು ಏನೂ ಗುಣಗುಟ್ಟದೇ ಸಹಿಸುತ್ತ ಬಂದಿರುವೆವು ಬಹಳವಾದರೆ ನಿರುಪಯುಕ್ತವಾದ ರಕ್ತಪಾತವನ್ನು ಮಾಡಿರುವೆವು. ನಮ್ಮ ಮುಸಲ್ಮಾನ ಬಾಂಧವರು ತಾವೇ ತಿಳಿದು ಸ್ವಸ್ಫೂರ್ತಿಯಿಂದ ಈ ಕೃತ್ಯವನ್ನು ನಿಲ್ಲಿಸಲಿಕ್ಕೆ ತಮ್ಮ ಆತ್ಮಸಂಯಮನವನ್ನು ಮಾಡುವಂತೆ ಅವರ ಗೆಳತನವನ್ನು ದೊರಕಿಸಲಿಕ್ಕೆ ನಾವು ಈವರೆಗೆ ಏನು ಮಾಡಿರುವದಿಲ್ಲ. ಇದು ಆಶಕ್ಯವಾದ ಸಂಗತಿಯೆಂದು ನಮ್ಮ ತಲೆಯಲ್ಲಿ ಹಾಕಿಕೊಂಡಿರುವೆವು.

ಆದರೆ ಈಗ್ಗೆ ಅವರ ಆಪತ್ಕಾಲದಲ್ಲಿ ಅವರಿಗೆ ನೆರವಾಗಬೇಕೆಂದು ನಾವು ವಿಚಾರಪೂರ್ವಕವಾಗಿಯೂ ಬುದ್ಧಿಪೂರ್ವಕವಾಗಿಯೂ ಅವರ ಸಹಾಯಕ್ಕೆ ನಿಂತುಕೊಂಡಿರುವೆವು ಈ ನಮ್ಮ ನಿಷ್ಕಾಮಪೂರ್ವಕವಾದ ಕಾರ್ಯದ ಸುಪರಿಣಾಮವನ್ನು ವ್ಯಾಪಾರದಲ್ಲಿರುವ ಕೊಡುತೆಗೆದುಕೊಳ್ಳುವ ಎಣಿಕೆಯಿಂದ ಕೆಡಸಬಾರದು. ವ್ಯವಹಾರದಲ್ಲಿರುವ "ಕೊಡುತಗೊಳ್ಳುವ" ಎಣಿಕೆಯಿಂದ ಈ ನಮ್ಮ ನಿಷ್ಕಾಮಪೂರ್ವಕವಾದ ಸಹಾಯದ ಸುಪರಿಣಾಮವನ್ನು ಕೆಡಿಸಬಾರದು. ಗೆಳೆತನವು ಈತರದ ಗುತ್ತಿಗೆಯ ವ್ಯಾಪಾರವೆಂದು ತಿಳಿಯಕೂಡದು. ಗೆಳೆತನದ ಸಂಬಂಧವು ಇಂಥ ಲೆಕ್ಕ ಹಾಕುವದನ್ನರಿಯದು. ಸೇವೆ ಮಾಡುವದು ನಮ್ಮ ಕರ್ತವ್ಯವು; ಕರ್ತವ್ಯವೆಂದರೆ ಅದೊಂದು ಸಾಲದ ಭಾರವಿದ್ದಂತೆ; ಆದ್ದರಿಂದ ಸಾಲವನ್ನು ತೀರಿಸದಿರುವದು ಪಾಪವಿದ್ದಂತೆ ಕರ್ತವ್ಯವನ್ನು ಮಾಡದೆ ಇರುವದೂ ಪಾಪವೇ ಸರಿ. ನಾವು ನಮ್ಮ ಗೆಳೆತನವು ನಿಜವಾದದ್ದೆಂದು ತೋರಿಸಬೇಕಾಗಿದ್ದರೆ ಅವರು ಆಕಳುಗಳನ್ನು ಕೊಂದರೇನು ಬಿಟ್ಟರೇನು ನಾವು ಅವರಿಗೆ ಸಹಾಯವನ್ನು ಮಾಡಿಯೇ ತೀರಬೇಕು. ನಮ್ಮನ್ನು ಕುರಿತು ಅವರು ಯಾವ ರೀತಿಯಿಂದ ಆಚರಿಸಬೇಕೆಂಬುದರ ಭಾರವನ್ನು ಅವರ ತಲೆಯ ಮೇಲೆಯೇ ಹೊರಿಸಿ ಬಿಡುವದು ಲೇಸು. ನಾವು ಸಹಾಯ ಮಾಡಿದ್ದಕ್ಕಾಗಿ ನೀವು ಹೀಗೆ ಸಹಾಯ ಬೇಕೆಂದು ಅವರಿಗೆ ಹೇಳುವದು ನಮ್ಮ ಧರ್ಮವಲ್ಲ. ಹೀಗೆ ಪ್ರತಿ ಫಲವನ್ನಪೇಕ್ಷಿಸಿ ಸಹಾಯ ಮಾಡಿದವರಲ್ಲಿಯೂ ಮತ್ತು ಕೂಲಿಯನ್ನು ಗೊತ್ತು ಮಾಡಿಕೊಂಡು ನೌಕರನಾಗುವದರಲ್ಲಿಯೂ ಏನೂ ಭೇದವಿರುವದಿಲ್ಲ. ಅದಕ್ಕೆ ಒಪ್ಪದಿದ್ದರೂ ಮುಸಲ್ಮಾನರು ದೋಷಿಯಾಗಲಾರರು. ಆದ್ದರಿಂದ ಬಿಹಾರದಲ್ಲಿಯ ಮತ್ತು ಉಳಿದ ಕಡೆಯಲ್ಲಿಯ ಹಿಂದುಗಳು ಮುಸಲ್ಮಾನರು 'ಬಕರಿ ಈದ' ದಿವಸ ಏನು ಮಾಡಿದರೂ ಅದನ್ನು ಸಹಿಸಿಕೊಂಡು ಹೋಗುವದು ಎಷ್ಟು ಮಹತ್ವದ ಮಾತಾಗಿರುವದೆಂಬದನ್ನು ಅರಿತು ಕೊಳ್ಳಬೇಕು. ಅವರು ತಮ್ಮ ಮನಸಿಗೆ ಬಂದ ಮಾರ್ಗವನ್ನು ಆರಿಸಿಕೊಳ್ಳಲಿ, ಅದರೊಳಗೆ ನಾವು ಕೈ ಹಾಕಕೂಡದು. ಹಕೀಮ ಅಜಮಲ್‌ಖಾನರು ಒಂದು ತಾಸಿನೊಳಗ ಅಮೃತಸರದಲ್ಲಿ ಮಾಡಿದಷ್ಟು ಕೆಲಸವು ಹಿಂದೂಗಳಿಂದ ವರ್ಷಾನು ವರ್ಷ ಪ್ರಯತ್ನ ನಡಿಸಿದ್ದರೂ ಆಗುತ್ತಿದ್ದಿಲ್ಲ. ಕಳೆದ ವರ್ಷ ಬಕರೀ ಈದ ದಿವಸ ಶೇಟ ಛೋಟಾಣಿಯವರು ಮತ್ತು ಶ್ರೀ. ಖಾತ್ರಿ ಇವರು ಉಳಿಸಿದಷ್ಟು ಆಕಳುಗಳನ್ನು, ಮುಂಬಯಿ ಗಿರಣಿಯ ಹಿಂದೂ ಲಕ್ಷಾಧೀಶನಿಗೆ ತನ್ನ ಎಲ್ಲ ದ್ರವ್ಯವನ್ನು ವೆಚ್ಚಮಾಡಿದ್ದರೂ ಆಗುತ್ತಿದ್ದಿಲ್ಲ. ಮುಸಲ್ಮಾನರಿಗೆ ಇಲ್ಲದ ಹೊರಗಿನ ಒತ್ತಾಯವು ಹೆಚ್ಚಾದಂತೆ ಆಕಳುಗಳ ವಧವೂ ಹೆಚ್ಚಾಗುವದು ಅವರ ಧರ್ಮ ಬುದ್ಧಿಗೆ ಅದನ್ನು ಬಿಟ್ಟು ಬಿಡಬೇಕು; ಮತ್ತು ಇದರಿಂದಲೆ ನಾವು ಆಕಳಿಗೆ ಹೆಚ್ಚಿನ ಸೇವೆ ಮಾಡಿದಂತಾಗುವದು.

ಆಕಳವನ್ನು ಉಳಿಸಿಕೊಳ್ಳುವ ಮಾರ್ಗವೆಂದರೆ ಮುಸಲ್ಮಾನ ಸಂಗಡ ಹೊಡದಾಡಿ ಅವನ ಪ್ರಾಣ ತೆಗೆದುಕೊಳ್ಳುವದು; ಆ 'ಆಕಳು'ವೆಂಬ ಶಬ್ದವನ್ನು ಸಹ ಉಚ್ಚರಿಸದೆ ಖಿಲಾಫತವನ್ನು ಸುವದರಲ್ಲಿ ಮಡಿದು ಹೋಗುವದಾಗಿರುವದು- ಆಕಳ ಸಂರಕ್ಷಣೆ ಆತ್ಮಶುದ್ಧಿಯ ಒಂದು ಮಾರ್ಗವಾಗಿರುವದು; ಅದು ತಪಸ್ಸು ರೆ ಒಂದು ಆತ್ಮಯಜ್ಞವಾಗಿರುವದು ನಾವು ಫಲಾಪೇಕ್ಷೆಯಿಲ್ಲ ಸ್ವಸಂತೋಷದಿಂದ ದುಃಖವನ್ನು ಸಹಿಸಹತ್ತಿದ್ದರೆ ನಮ್ಮ ಯಾತನೆಯ ಧ್ವನಿಯು ಸ್ವರ್ಗಕ್ಕೇರುವದು. ಮತ್ತು ಅಲ್ಲಿ ದೇವರು ಆ ಆರ್ತಸ್ವರವನ್ನು ಕೇಳಿ ನಮ್ಮ ಸಹಾಯಕ್ಕಾಗಿ ಇಳಿದು ಬರುವನು. ಇದು ಧರ್ಮದ ಮಾರ್ಗವಾಗಿರುವದು ಮತ್ತು ಇದನ್ನು ವಿಧಿಪೂರ್ವಕ ಇದ ಏನೂ ಕೊರತೆ ಬರದಂತೆ ಒಬ್ಬನೇ ಮಾಡಿದಾಗ್ಯೂ ಸಹ ಫಲದಾಯಕವಾಗಿರುವದು. ಆಕಳವನ್ನು ಉಳಿಸಿಕೊಳುವದಕ್ಕಾಗಿ ತಮ್ಮ ಮಾನವೀ ಬಾಂಧವನನ್ನು ಕೊಲ್ಲುವದು ಹಿಂದೂ ಧರ್ಮಕ್ಕೆ ವಿರೋಧವಾದ್ದೆಂದು ಸಾರಿಸಾರಿ ಹೇಳಲು ನಾನು ಧೈರ್ಯಪಡುತ್ತೇನೆ. ತಮ್ಮ ಧರ್ಮವನ್ನು ಅಥವಾ ಆಕಳವನ್ನು ಕಾಯುವದಕ್ಕೆ ತಮ್ಮ ಪ್ರಾಣವನ್ನು ಕೊಡಬೇಕೆಂದು ಹಿಂದೂ ಧರ್ಮವು ತನ್ನ ಅನುಯಾಯಿಗಳಿಗೆ ಸಾರುತ್ತಿರುವದು. ಮುಸಲ್ಮಾನರಿಂದ ಕರಾರು ಪತ್ರ ಬರೆಯಿಸಿಕೊಳ್ಳದೆ ಅವರ ಧರ್ಮ ಮತ್ತು ಆವನ್ನು ಕಾಯ್ದು ಕೊಳ್ಳುವದಕ್ಕಾಗಿ ಹಿಂದೂ ಜನರ ತಮ್ಮ ಪ್ರಾಣವನ್ನು ಕಳಕೊಳ್ಳಲಿಕ್ಕೆ ಸಿದ್ಧರಿರುವರು ಧರ್ಮ ಬುದ್ಧಿಯಿಂದ ಎಲ್ಲ ಹಿಂದೂ ಜನರು ಇದಕ್ಕೆ ತಕ್ಕ ಕೃತಿ ಪೂರ್ವಕ ಉತ್ತರವನ್ನು ಕೊಟ್ಟರೆ, ಅವರು ಮುಸಲ್ಮಾನರ ಸಖ್ಯವನ್ನು ಗಳಿಸಿದಂತಾಗುವದು. ಇಷ್ಟೇ ಅಲ್ಲ ಆದರೆ ಮುಸಲ್ಮಾನರ ಕೈಯೊಳಗಿಂದ ಆಕಳಗೋಳನ್ನು ತಪ್ಪಿಸಿದಂತಾಗುವದು. ಅವರೊಳಗಿನ ಯಾವ ದುರೀಣನ ಮೇಲೆಯೂ ಭರವಸೆಯಿಂದ ಭಾರವಗೆಯಲಾಗದು. ಪಾಪ, ಅವರೇನು ಇದಕ್ಕಾಗಿ ಸಹಾಯಮಾತ್ರ ಮಾಡಬಲ್ಲರು. ಲಕ್ಷಾವಧಿ ಮುಸಲ್ಮಾನರ ಈಹೊತ್ತಿನವರೆಗೆ ತಮ್ಮ ಹಿಂದೂ ಬಾಂಧವರ ಮನಸ್ತಾಪವನ್ನು ಲಕ್ಷಿಸದೆ ಆಕಳುಗಳನ್ನು ಕಡಿಯುತ್ತ ಬಂದವರ ಅಂತಃಕರಣವನ್ನು ಒಮ್ಮೆಲೆ ಬದಲು ಮಾಡುವಂಥ ಕಾರ್ಯವನ್ನು ಜಯಿಸಿಗುವದೊಂದೇ ಭರವಸೆಯಿಂದ ಯಾರು ತಾನೆ ಕೈಕೊಳ್ಳುವದು. ಆದರೆ ಸರ್ವಶಕ್ತನಾದ ಪರಮೇಶ್ವರನು ಮಾತ್ರ ಅವರ ಹೃದಯವನ್ನು ಒಂದು ಕ್ಷಣದಲ್ಲಿ ಪರವರ್ತಿಸಿ ಅದನ್ನು ಕರುಣೆಯಿಂದ ತುಂಬಿ ಬಿಡಬಲ್ಲನು ಸರಿಯಾದ ಯಾತನೆಯಿಂದೊಡಗೂಡಿದ ಪ್ರಾರ್ಥನೆಯೇ ನಮ್ಮ ಅಂತಃಕರಣದಿಂದ ಹೊರಡುತ್ತದೆ. ದೇವರು ಅಂಥ ಪ್ರಾರ್ಥನೆಯನ್ನೇ ಲಕ್ಷಿಸುವನು ನನ್ನ ಮುಸಲ್ಮಾನ ಮಿತ್ರರಿಗೆ ನಾನು ಒಂದೇ ಮಾತು ಹೇಳುವೆನು. ಪರವೆಯಿಲ್ಲದ ಬುದ್ಧಿಗೇಡಿಗಳಾದ ಕೆಲವು ಹಿಂದೂ ಹುಚ್ಚರು ಮಾಡಿದ ಕೃತಿಗಳಿಂದ ತಾವು ಕ್ಷುಬ್ಧರಾಗಬಾರದು. ಸಿಟ್ಟಿಗೆಬ್ಬಿಸದಾಗ್ಯೆ ಯಾವನು ಆತ್ಮ ಸಂಯಮನವನ್ನು ಮಾಡುತ್ತಾನೊ ಅವನೇ ವಿಜಯಿಯು. ಜವಾಬದಾರಿಯುಳ್ಳ ಯಾವನೇ ಹಿಂದೂ ಗೃಹಸ್ಥನು ಫಲಾಪೇಕ್ಷೆಯ ಬುದ್ಧಿಯಿಂದ ತಮಗೆ ಸಹಾಯ ಮಾಡುತ್ತಿರುವನೆಂದು ಕಲ್ಪಿಸಕೂಡದು. ಆದರೆ ಅವರು ಸಹಾಯ ಮಾಡುವ ಉದ್ದೇಶವೆಂದರೆ; ಮೊದಲು ಖಿಲಾಫತ ಇದು ನ್ಯಾಯವಾದದ್ದೆಂದು ಅವನು ಪಕ್ಕಾನಂಬುವದು; ಮತ್ತು ಯಾವದೆ ನ್ಯಾಯ ಮಾರ್ಗದಲ್ಲಿ ನೆರವಾಗುವದೆಂದರೆ ಹಿಂದುಸ್ಥಾನದ ಸೇವೆ ಮಾಡುವದು; ಯಾಕಂದರೆ ಹಿಂದೂ ಮತ್ತು ಮುಸಲ್ಮಾನರು ಭಾರತ ಮಾತೆಯ ಉದರದಿಂದಲೇ ಜನಿಸಿದವರು.

# ಅಹಿಂಸೆಯ ಆತ್ಮವು.

ಯಂಗ ಇಂಡಿಯಾ

ಈಗಿನ ಮುಖ್ಯವಾದ ನೈತಿಕ ಚಳವಳಿಯಲ್ಲಿ ಕೇಳಿಗಿನ ಮೌಲಾನಾ ಮಹಮ್ಮದಲಿ ಯವರ ಹಕ್ಕರದಷ್ಟು ಜನಾಬಿನಂಥ ಸುಂದರವಾದ ಜವಾಬನ್ನು ಯಾರೂ ಕೊಟ್ಟಿಲ್ಲ. ಮೌಲಾನರು ಅನ್ನುವದೇನಂದರೆ.

ನನ್ನ ಅಲ್ಪವಾದ ಪ್ರಾರ್ಥನೆಗಳಿಂದ ಪರಮಾತ್ಮನು ತುಷ್ಟನಾಗಲಿ ಮತ್ತು ಈ ಮಾಯಾವೀ ಜಗತ್ತಿನಲ್ಲಿ ನಿರುದ್ವೇಶದಿಂದ ಸಂಚಾರ ಮಾಡುವವರ ಸಲುವಾಗಿ ನನ್ನನ್ನು ಬಿಟ್ಟುಬಿಟ್ಟಿದ್ದಾನೆ. ಹೋದ ಶ್ರಾವಣ ದಿವಸ ಸರಕಾರದವರ ಹಸ್ತಗತನಾಗುವ ಕಾಲಕ್ಕೆ ನಾನು ಈ ಪ್ರಕಾರ ವಿಚಾರಮಾಡಿದ್ದೆನು. ನನ್ನ ಶರೀರವು ಪ್ರತಿಬಂಧಿಸಲ್ಪಟ್ಟರೂ, ನನ್ನ ಮನಸು ಹಾಗೂ ಆತ್ಮವು, ಯಾವ ಸ್ವಾತಂತ್ರ್ಯದ ಸಲುವಾಗಿ ನಾನು ಹಾತೊರೆಯುತ್ತಿದ್ದೆನೊ ಅಂಥ ಸ್ವಾತಂತ್ರ್ಯವನ್ನು ಪಡೆಯುವವೆಂದು ತಿಳಿದಿದ್ದೆನು. ಆದರೆ ಈಶ್ವರೇಚ್ಛೆಯು ಇದಕ್ಕೆ ವಿಪರೀತವಾಗಿದ್ದಿರುತ್ತದೆ. ಆದರೆ ನಾವು ಇದಕ್ಕಿರುವದಾದರೂ ಏಕೆ? ಇಚ್ಛೆಯು ಅಜ್ಞಾನಕ್ಕೆ ಕಾರಣವಾಗಿರುತ್ತದೆ ನಿಷ್ಕಾಮಕರ್ಮಿಗಳೇ ಮಹಾತ್ಮರೆಂದೆನಿಸಿಕೊಳ್ಳುವರು. ನನ್ನ ಈ ಅಭಿಪ್ರಾಯವನ್ನು ನೋಡಿದವರು ನನಗೆ ಹುಚ್ಚನೆಂದು ಕರೆಯುವರೆಂಬದಾದರೂ ನನಗೆ ಗೊತ್ತಿರುವದು. ಹೌದು, ಧರ್ಮವನ್ನು ಪ್ರೀತಿಸುವದು ಕೇವಲ ಭ್ರಾಮಕ ಕಲ್ಪನೆಯು. ಹಾಗೂ ದೇಶ ಪ್ರೀತಿಯು ಹುಚ್ಚುತನವು. ನಾನು ಧರ್ಮವನ್ನು ಪ್ರೀತಿಸುವೆನು ಹಾಗೂ ದೇಶ ಭಕ್ತನಾದರೂ ಇರುವೆನು ಇವೆರಡೂ ಆರೋಪಗಳಿಂದ ನಾನು ದೋಷೀ ಇರುತ್ತೇನೆ.

“ಜೇಲಿನ ಇನಸ್ಪೇಕ್ಟರ ಜನರಲನ ಮಾನಹಾನಿ ಮಾಡಿದನೆಂಬ ಆರೋಪವು ನನ್ನ ಮೇಲೆ ಇರುವನು. ಇದನ್ನು ಸಂಪೂರ್ಣವಾಗಿ ನಾನು ನಿಷೇಧಿಸುತ್ತೇನೆ. ನನಗೆ ಯಾರ ಮಾನಹಾನಿಯನ್ನು ಮಾಡುವ ಇಚ್ಛೆಯು ಇದ್ದಿದ್ದಿಲ್ಲ. ಯಾವ ಲೇಖದ ಸಲುವಾಗಿ ನನ್ನ ಮೇಲೆ ಆರೋಪವಿರುವದೋ ಆ ಲೇಖವನ್ನು ಬರೆಯುವ ಉದ್ದೇಶವು ಸರಕಾರ ಜೇಲುಗಳಲ್ಲಿ ಒದಗಿದ ಅಮಾನುಷ ಕೃತ್ಯಗಳನ್ನು ಲೋಕ ನಿದರ್ಶನಕ್ಕೆ ತಂದು ಕೊಟ್ಟು, ಆದರ ದೃಷ್ಟಿಯಿಂದ ಪ್ರಾಂತದಲ್ಲಿ ತುರಂಗಗಳ ವ್ಯವಸ್ಥೆಯನ್ನು ಬದಲಾಯಿಸುವದೇ ಆಗಿತ್ತು. ಇದಲ್ಲದೆ, ನನ್ನ ವಿಶ್ವಾಸಪಾತ್ರನಾದ, ಇಸ್ಲಾಮಿ ಧರ್ಮದ ಮೇಲೆಯಾದರೂ ಹಲ್ಲೆಯಾಗಿರುವದೆಂದು ತಿಳಿದು ಬಂದಿತು. ಅದ್ದರಿಂದ ಅದನ್ನು ಬರೆಯುವ ಕಾಲಕ್ಕೆ ಇಲ್ಲವೆ ಮಾನಹಾನಿಯಾದರೂ ಆಗಿತ್ತು ಹಾಗೂ ನನ್ನ ಮೊದಲಿನ ಸಮಾಚಾರ ಹಾಗು ಹಿಂದುಗಡೆ ತಿಳಿದಂಥ ವೃತ್ತಾಂತಗಳೆಲ್ಲ ಒಂದೇ ಆಗಿರುವವೆಂದು ಹೇಳಲು ನನಗೆ ದುಃಖವಾಗುತ್ತದೆ. ಅದ್ದರಿಂದ ೨-ನೇ ದಿವಸ ಬರವಂಥ ಲೇಖಗಳು ಸಂಪೂರ್ಣವಾಗಿ ನಷ್ಟವಾದವೆಂದು ನನಗೆ ಹೇಳಲೇ ಬೇಕಾಗಿದೆ. ಆದರೆ ನಿಜವಾಗಿ ಹೇಳಬೇಕಾದರೆ, ಆದರಲ್ಲಿ ಅತ್ಯುಕ್ತಿಯೂ ಏನೂ ಇರದೆ ನ್ಯೂನೋಕ್ತಿಯು ಒಳಗೊಂಡಿತ್ತು. ಆದರೆ ಪುನಃ ನನಗೆ ಆದೇ ಲೇಖವನ್ನು ಬರೆಯಲಿಕ್ಕೆ ಹೇಳಿದರೆ, ಇದಕ್ಕಿಂತಲೂ ಕಟುವಾದ ಭಾಷೆಯನ್ನು ನನಗೆ ಉಪಯೋಗಿಸಬೇಕಾಗುತ್ತದೆ. ನಾನು ಆ ಲೇಖವನ್ನು ಪುನಃ ಪುನಃ ಓದಿರುವೆನು. ಆದರೆ ಅದರಲ್ಲಿ ಮಾನಹಾನಿಯನ್ನು ಸೂಚಿಸುವಂಥ ಒಂದೂ ಸಂಗತಿಯು ಇರುವದಿಲ್ಲ. ಈ ಪ್ರಕಾರ ನನ್ನ ಮತವಿದ್ದವರಿಂದ, ನನ್ನ ಮೇಲಿನ ಆರೋಪವು ಯೋಗ್ಯವಿರುವದಿಲ್ಲವೆಂದು ಹೇಳಲು ನನಗೆ ದುಃಖವಾಗುತ್ತದೆ. ಇನಸ್ಪೇಕ್ಟರ ಜನರಲರ ಎದುರಿಗೆ ಹೋಗಿ ನನ್ನ ಅಪರಾಧದ ಸಲುವಾಗಿ ಅವನ ಕ್ಷಮೆಯನ್ನು ಬೇಡುವದರಲ್ಲಿ ನನಗೆ ಅಪರಿಮಿತ ಸುಖ ಸಮಾಧಾನವಾಗುತ್ತಿತ್ತು. ಆದರೆ ನಾನು ಅಷ್ಟು ಸುದೈವಿಯಿಲ್ಲವೆಂದು ದುಃಖದಿಂದ ಹೇಳಬೇಕಾಗುತ್ತದೆ

“ಆದರೂ ನನ್ನ ಅಪರಾಧವನ್ನು ನಾನು ಕಂಡು ಹಿಡಿದಿರುವೆನು ಜೇಲು ಇನಸ್ಪೇಕ್ಟರ ಜನರಲ್ಲನಿಗೆ ದುಃಖಕೊಡಲಿಕ್ಕೆ, ನನ್ನ ಒರಟಾದ ಪದ್ಧತಿಯೇ ಕಾರಣವೆಂಬುದು ಸ್ಪಷ್ಟವಾದದ್ದು; ಇಲ್ಲದಿದ್ದರೆ ಅವನೂ ಕೋರ್ಟಿನ ವರೆಗೆ ಹೋಗುವ ಶ್ರಮವನ್ನು ತಕ್ಕೊಳ್ಳುತ್ತಿದ್ದಿಲ್ಲ ಧರ್ಮ ನಿಂದೆಯನ್ನು ಕೇಳಿ ಸಿಟ್ಟಿಗೆದ್ದ ನಾನು ತಕ್ಕೊಂಡ ಅಹಿಂಸಾ ವ್ರತವನ್ನು ಮರೆತು ಬಿಟ್ಟೆನು ಲೇಖವನ್ನು ಬರೆಯುವ ಕಾಲಕ್ಕೆ ನನಗಾದ ದುಃಖದ ಕಡೆಗೇ ನನ್ನ ಲಕ್ಷವಿತ್ತೇ ಹೊರತು ಮಿಸ್ಟರ ಜಿ ಖನಾತವಾಲಾ ಇವರಿಗೆ ಇದರಿಂದ ದುಃಖವಾಗುವದೆಂದು ನನ್ನ ವಿಚಾರದಲ್ಲಿ ಬರಲಿಲ್ಲ ಆದರೆ ಲೇಖವನ್ನು ಬರೆಯುವ ಕಾಲಕ್ಕೆ ಇದ್ದ ನನ್ನ ಮನಸ್ಸಿನ ಪರಿಸ್ಥಿತಿಯು ಅಹಿಂಸಾ ವ್ರತಕ್ಕೆ ವಿರುದ್ಧ ವಾದದಿತ್ತೆಂದು ನನಗೆ ಹೇಳಲೇ ಬೇಕಾಗುತ್ತದೆ ಅದ್ದರಿಂದ ನಾನು ಕಾಯದೇ ದೃಷ್ಟಿಯಿಂದ ಮುಕ್ತನಾಗಿದ್ದರೂ, ನೈತಿಕ ದೃಷ್ಟಿಯಿಂದ ಅಪರಾಧಿಯಿರುತ್ತೇನೆ ಅದ್ದರಿಂದ ನಾನು ನನಗಾದ ದುಃಖವನ್ನು ವ್ಯಕ್ತ ಮಾಡಲಿಕ್ಕೂ, ಅದರಿಂದ ಒದಗಿದ ಹಾನಿಯನ್ನು ತುಂಬಿಕೊಡಲಿಕ್ಕೂ ಸಿದ್ಧನಿದ್ದೇನೆ ನನ್ನ ಖಟ್ಲೆಯು ಯಾವದೇ ಕಾರಣದಿಂದ ಜೋನ್ಸನ ಕಡೆಗೆ ನಡೆಯುವದದೆ. ಅದ್ದರಿಂದ ಅವರಿಗೆ ಎಷ್ಟು ವರ್ಷಗಳ ವರೆಗೆ ಶಿಕ್ಷೆಯನ್ನು ವಿಧಿಸಲು ಅಧಿಕಾರ ವಿದೆಯೋ ಅಷ್ಟು ವರ್ಷ ಶಿಕ್ಷೆಯನ್ನು ವಿಧಿಸಲಿಕ್ಕೆ ಅವರಿಗೆ ಕೇಳಿಕೊಳ್ಳುವವನಿದ್ದೇನೆ. ಒಬ್ಬನು ಮತ್ತೊಬ್ಬನ ಮನಸ್ಸು ನೋಯಿಸುವಂಥವಾದವು ನೈತಿಕ ದೃಷ್ಟಿಯಿಂದ ಅತ್ಯಂತ ಹೀನವಾದದ್ದು; ‘ಇಂಥ ಪಾಪವನ್ನು ಶಿಕ್ಷೆಯರೂಪದಿಂದ ಭೋಗಿಸಿಕೊಳ್ಳಲಿಚ್ಛಿಸುತ್ತೇನೆ. ಇಂದ್ರಿಯ ಸಂಯಮನ ಮಾಡುವಂಥ ವಯಸ್ಸು ನನಗೆ ಈಗ ಪ್ರಾಪ್ತವಾಗಿರುವದೆಂದು ನನಗೆ ಅನಿಸುತ್ತದೆ. ಯೋಗ್ಯ ಸಮಯದಲ್ಲಿ ಸನ್ಮಾರ್ಗದಿಂದ ವಾರವೃತ್ತನಾಗಲಿಕ್ಕೆ ಬೋಧಿಸಲಿಕ್ಕಾದರೂ ನನ್ನ ಇಂದ್ರಿಯಗಳು ಶಕ್ತವಾಗಲಾರವು.

ನಿಜವಾದ ನನ್ನ ಭಾವನೆಗಳ ವಿರುದ್ಧವಾಗಿ ಎಷ್ಟೋ ಸಲ ಹ ನಾನು ಆಚರಿಸಿದ್ದೇನೆ ಕದಾಚಿತ್ ಈಗಾದರೂ ನನ್ನ ತಲೆಯಲ್ಲಿ ಸೈತಾನನು ಸಂಚರಿಸಬಹುದು. ಆದರೂ ನಾನು ನಿಜವಾಗ ನನ್ನ ಧರ್ಮದ ಸಲುವಾಗಿ ಕಷ್ಟಪಡಲಿಕ್ಕೆ ಹೋಗುವನೆಂದು ಆನಂದವಾಗಿರುವದು

“ನಾನು ಹಿಂದಕ್ಕೆ ಕೋರ್ಟಿಗೆ ಹೋಗುವ ಪೂರ್ವದಲ್ಲಿ ಕೆಳಗಿನ ಸಂದೇಶವನ್ನು ಬರದಿದ್ದೆನು. ಅದರಿಂದ ನನ್ನ ಪ್ರೀತಿಯ ಯಾವ ನಾದರೊಬ್ಬ ದೇಶಬಾಂಧವನು ಪಾಠತಕ್ಕೊಳ್ಳುವನೆಂದು ನನಗೆ ದೃಢವಾದ ಆಶೆಯಿದೆ.”

“ನನ್ನ ಸಲುವಾಗಿ ಯಾವದೇ ತರಹದ ಸಭೆಯನ್ನು ಕೂಡಿಸದೇ, ನೂಲಿನ ರಾಟಿಯನ್ನು ಎಲ್ಲರೂ ತಿರುಗಿರಿ. ಖಾದಿಯನ್ನು ನೈಯ್ದು ಅದನ್ನೇ ಧರಿಸಿರಿ. ಹಿಂದೂ ಮುಸಲ್ಮಾನ ಐಕ್ಯವನ್ನು ಬೆಳೆಸಿರಿ. ಮುಸಲ್ಮಾನ ಬಂಧುಗಳಿಗೆ ನನ್ನ ಉಪದೇಶವೇನಂದರೆ “ಬಂಧುಗಳೇ, ಬರುವ “ಬಕರೆ” ದಲ್ಲಿ ಗೋ-ಹತ್ಯವನ್ನು ಮಾಡದೇ, ಹಿಂದುಗಳು ಬಾಂಧವರೆಂದು ತಿಳಿಯಿರಿ; ಹಾಗು ಅವರನ್ನು ನಿಮ್ಮ ನೆರೆಹೊರೆಯವರಂತೆ ನಡೆಸಿಕೊಳ್ಳಿರಿ. ನನ್ನ ದೇಶಬಾಂಧವರು ಈ ಕೃತ್ಯಗಳನ್ನು ಉತ್ಸಾಹದಿಂದ ಹಾಗೂ ಧಾರ್ಮಿಕ ಬುದ್ಧಿಯಿಂದ ನೆರವೇರಿಸಿದರೆ, ಅವರ ಸ್ವರಾಜ್ಯವು ಎಂದಿಗೂ ದೂರ ಉಳಿಯದು. “ನನ್ನ ಎಲ್ಲ ಅಪರಾಧಗಳನ್ನು ಕ್ಷಮಿಸಲಿಕ್ಕೆ ಕೇಳಿಕೊಂಡು ನನ್ನ ಎಲ್ಲ ಮಿತ್ರರ ನಿರೂಪ ತೆಗೆದು ಕೊಳ್ಳುತ್ತೇನೆ”

# ಕನ್ನಡ ನವಜೀವನ.

ಶ್ರಾವಣ ವದ್ಯ ೩ ಗುರುವಾರ ಶಕೆ ೧೮೪೪


## ಲೋಕಮಾನ್ಯರ ತರ್ಪಣವು.

(ನವಜೀವನ)

ಉನ್ನತಿಯ ನಿಜವಾದ ಮಾರ್ಗವು ಪ್ರಾರಂಭದಲ್ಲಿ ಬಹಳ ಕಷ್ಟಪ್ರದವೂ ನಿರಾಶಾಜನಕವೂ ಇರುತ್ತದೆ. ಆದರೆ ಅದೇ ಪರಿಣಾಮದಲ್ಲಿ ಸರಳ ಸಮೀಪ ಮತ್ತು ಅನ್ಯತೋಷಮವಾದದ್ದಾಗುವದು. ಕಳೆದ ಶತಮಾನದ ಮಧ್ಯಕಾಲದಲ್ಲಿ ಹಿಂದುಸ್ತಾನದೇಶದ ಹಿತೈಷಿಗಳು ಭರತಖಂಡದ ಉನ್ನತಿಯೂ ಕಲ್ಯಾಣವೂ ಯಾವ ಬಗೆಯಿಂದ ಆಗಬಹುದೆಂಬುದಾಗಿ ವಿಚಾರಮಾಡುವಾಗ ಒಹುಶ ಎಲ್ಲರೂ ಆಂಗ್ಲವಿದ್ಯೆಯ ಮೋಹಜಾಲದಲ್ಲಿ ಸಿಲುಕಿ ಮೋಸಹೋಗಿ ಹಿಂದಮಾತೆಯ ಉದ್ಧಾರವು ಇಂಗ್ಲೀಷರಿಂದಲೇ ಆಗುವದೆಂದು ನಿಶ್ಚಯಿಸಿದರು ಮತ್ತು ಅವರ ಕಾರ್ಯಪದ್ಧತಿಯನ್ನು ಅನುಸರಿಸಹತ್ತಿ ರಾಷ್ಟ್ರದ ಉದ್ಧಾರವನ್ನು ರಾಷ್ಟ್ರವು ತನ್ನಷ್ಟಕ್ಕೆ ತಾನೇ ಮಾಡಿಕೊಳ್ಳುವದೆಂಬ ಅರಿವು ಸಹ ಇಲ್ಲದಂತಾಯಿತು. ಆದ್ದರಿಂದಲೇ ಮಹಾಸಭೆಯ ಪ್ರಾರಂಭದಲ್ಲಿ ನಮ್ಮ ಮುಂದಾಳುಗಳು ದೇಶನಿವಾಸಿಗಳಿಗೆ ದೇಶದಲ್ಲಿಯ ಪರಿಸ್ಥಿತಿಯ ಪರಿಚಯವನ್ನು ಮಾಡಿಕೊಡುವ ಕುರಿತು ಸರಕಾರೀ ಹುಕುಮುಗಳನ್ನು ಕೊಡಿಸುವದರ ಪ್ರಯತ್ನವನ್ನೂ ಪಾರ್ಲಮೆಂಟ ಮೆಂಬರರಿಗೂ ಇಂಗ್ಲಂಡದ ಜನತೆಗೂ ಭರತಭೂಮಿಯ ದುಃಸ್ಥಿತಿಯನ್ನು ತಿಳಿಸಿಹೇಳುವ ಪ್ರಯತ್ನವನ್ನೂ ಮಾಡಹತ್ತಿದರು. ಈ ಕೆಲಸವು ನಿಶ್ಚಯವಾಗಿ ರಾಜಭಾಷೆಯಲ್ಲಿಯೇ ಆಗುವದು ಶಕ್ಯವಿತ್ತು. ರಾಷ್ಟ್ರೀಯ ಮಹಾಸಭೆಯವರು ಇಂಗ್ಲಿಶ್ ಭಾಷೆಯಿಂದಲೇ ಮಾತಾಡಹತ್ತಿದರು. ಇಂಗ್ಲಿಷದಲ್ಲಿಯೇ ವಿಚಾರಮಾಡಹತ್ತಿದರು. ಇಂಗ್ಲಿಷರ ಕಡೆಗೆಯೇ ಹೆಚ್ಚು ಹೆಚ್ಚು ನೋಡಹತ್ತಿದರು. ಇಂಗ್ಲಿಷ ಭಾಷೆಯ ದ್ವಾರದಿಂದ ದೇಶಸೇವೆಯನ್ನು ಮಾಡುವವರ ಪ್ರತಿಷ್ಠೆಯು ಬೆಳೆಯಿತು. ಅವರನ್ನೇ ಅಖಿಲ ಹಿಂದುಸ್ಥಾನದ ಮುಂದಾಳುಗಳೆಂದು ತಿಳಿಯಹತ್ತಿದರು.

ಆದರೆ ಹಿಂದುಸ್ತಾನದ ಸುದೈವದಿಂದ ರಾಷ್ಟ್ರದ ಉದ್ಧಾರವು ಜನತೆಯ ದ್ವಾರದಿಂದಲೇ ಆಗುವದೆಂಬ ತತ್ವವನ್ನು ಬಲ್ಲವರು ಕೆಲವರು ಮೊದಲಿನಿಂದಲೇ ಇದ್ದರು. ಜನತೆಯಲ್ಲಿ ಜಾಗೃತಿಯನ್ನು ಹುಟ್ಟಿಸಿ, ಜನತೆಯ ಸ್ವಾಭಿಮಾನವನ್ನೂ, ಆತ್ಮವಿಶ್ವಾಸವನ್ನೂ, ಪೌರುಷವನ್ನೂ, ಹೆಚ್ಚಿಸುವದೇ ನಿಜವಾದ ದೇಶಸೇವೆಯು. ಇಂಥ ಜನರು ದೇಶಭಾಷೆಯಲ್ಲಿಯೇ ತಮ್ಮ ಕಾರ್ಯವನ್ನು ಮಾಡತೊಡಗಿದರು. ಇಡೀ ಹಿಂದುಸ್ಥಾನದಲ್ಲಿ ಒಂದೇಭಾಷೆಯಾಗುವದು ಆ ಕಾಲಕ್ಕೆ ಸಂಭವವಿಲ್ಲದ್ದರಿಂದ ತಮ್ಮ ಕಾರ್ಯಕ್ಷೇತ್ರವನ್ನು ಒಂದು ಪ್ರಾಂತದ ಮಟ್ಟಿಗೆ ವ್ಯಾಪಕಮಾಡಬೇಕೆಂದು ನಿಶ್ಚಯಿಸಿದರು. ಅವರು ಪ್ರಾಂತದ ಮುಖಂಡರೆಂದು ಎಣಿಸಲ್ಪಟ್ಟರು. ಅವರ ಪ್ರತಿಷ್ಠೆಯು ಅಖಿಲ ಹಿಂದುಸ್ತಾನದಲ್ಲಿ ಇಂಗ್ಲಿಷ ಭಾಷೆಯನ್ನು ಆಡುವ ಮುಖಂಡರಕಿಂತ ಸ್ವಲ್ಪ ಕಡಿಮೆಯಾಗಿತ್ತು.

ಹಿಂದುಸ್ಥಾನದಲ್ಲಿ ರಾಜನೀತಿಯು ಪ್ರಾರಂಭವಾದಾಗ ಇದು ಒಂದು ಮುಖ್ಯವಾದ ಭೇದವಿತ್ತು. ಇಂಗ್ಲಿಷರ ರಾಜ್ಯಪದ್ಧತಿಯ ಉದ್ದೇಶ ಮತ್ತು ಹೇತುಗಳ ಸಂಬಂಧದಲ್ಲಿಯೂ ದೊಡ್ಡ ಭೇದವು ತೋರುತ್ತಿತ್ತು. ನಾವು ಹಿಂದುಸ್ತಾನದ ಕಲ್ಯಾಣಕ್ಕಾಗಿಯೇ ಯತ್ನಮಾಡುತ್ತಿರುವೆವೆಂದು ಇಂಗ್ಲಿಷ ಜನರು ಮೊದಲಿನಿಂದ ಹೇಳುತ್ತ ಬಂದಿರುವರು. ಹಿಂದುಸ್ಥಾನದ ನಿವಾಸಿಗಳು ಎಷ್ಟೋ ಸಾರೆ ತಮ್ಮತಮ್ಮೊಳಗೆ ಕಲಹವನ್ನು ಬೆಳಸಿಕೊಂಡು ಇಂಗ್ಲಿಷರ ಸಹಾಯವನ್ನು ಕೇಳಿದ್ದೂ, ಕ್ಷುದ್ರರಾಜರ ಗೂಡ ಜಗಳವಾಡಿ ಬೇಸತ್ತ ಪ್ರಜೆಗಳು ಒಮ್ಮೊಮ್ಮೆ ಇಂಗ್ಲಿಷರ ರಾಜ್ಯಪದ್ಧತಿಯನ್ನು ಅಪೇಕ್ಷಿಸಿದ್ದೂ ನಿಜವು. ಇಂಥ ಪರಿಸ್ಥಿತಿಯಲ್ಲಿ ಇಂಗ್ಲಿಷರು ತಾವು ಹಿಂದುಸ್ಥಾನದ ಕಲ್ಯಾಣಕ್ಕಾಗಿಯೇ ಇಲ್ಲಿಗೆ ಬಂದಿರುವೆವೆಂದು ಹೇಳುವದನ್ನು ಎಷ್ಟೋ ಜನರು ಸಣ್ಣ ಸಣ್ಣ ಬಾಲಕರಂತೆ ನಂಬುತ್ತಿದ್ದರು. ಇದೆಲ್ಲ ಅವರ ಕಪಟನಾಟಕವಿರುತ್ತದೆಂಬದನ್ನು ಬಲ್ಲವರೂ ಕೂಡ ಎಷ್ಟೋ ಜನರು ಇದ್ದರು. ಇಂಗ್ಲಿಷರು ಈ ದೇಶದಲ್ಲಿ ಬರುವದರ ಪ್ರಯೋಜನವು ಕೇವಲ ಸ್ವಾರ್ಥವೆಂಬದು ಅವರಿಗೆ ಗೊತ್ತಿತ್ತು. ಇಂಗ್ಲಿಶರ ರಾಜ್ಯದ ಉಚ್ಚ ಉದ್ದೇಶದಲ್ಲಿ ವಿಶ್ವಾಸವುಳ್ಳವರು ಆಗಿನ ಕಾಲಕ್ಕೆ ಶಿಷ್ಟರೆಂದೆನಿಸಿಕೊಳ್ಳುತ್ತಿದ್ದರು. ಆದರೆ ಆ ಬಗ್ಗೆ ಅವಿಶ್ವಾಸವುಳ್ಳವರು "ಜಹಾಲ" ಅಥವಾ ಉಗ್ರರೆಂದು ಎಣಿಸಲ್ಪಡುತ್ತಿದ್ದರು.

ಲೋಕಮಾನ್ಯ ಟಿಳಕರು ಮೇಲೆ ನಿರ್ದಿಷ್ಟವಾದ ಎರಡು ಪಂಗಡಗಳಲ್ಲಿ ಎರಡನೇ ಬಣಕ್ಕೆ ಸೇರಿದವರಿದ್ದರು. ಅವರು ಜನತೆಯನ್ನು ಮನ್ನಿಸುತ್ತಿದ್ದರು ಮತ್ತು ನೌಕರಶಾಹಿಯ ಹಿತಡವನ್ನೂ ಅರಿತಿದ್ದರು ದೇಶಭಾಷೆಯಲ್ಲಿಯೇ ಅವರು ತಮ್ಮ ಪ್ರಾಂತದಲ್ಲಿ ಕಾರ್ಯವನ್ನು ಪ್ರಾರಂಭಿಸಿದರು. ಮೊದಲಿನಿಂದಲೇ ಆಳರಸರ ಗೂಡ ವಿರೋಧವನ್ನು ಸುರುವುಮಾಡಿದರು. ಇದರ ಪರಿಣಾಮದಿಂದ ಮಹಾರಾಷ್ಟ್ರವನ್ನು ಬಿಟ್ಟುಕೊಟ್ಟು ಉಳಿದ ಭರತಖಂಡದಲ್ಲಿ ಅವರ ಪರಿಚಯವು ವಿಶೇಷವಾಗಿ ಬೆಳೆಯಲಿಲ್ಲ. ಈ ಅಲ್ಪ ಸಲ್ಪ ಪರಿಚಯದಿಂದಾದರೂ, ತಪ್ಪುತಿಳುವಳಿಕೆಯಿಂದ, ಅವರಗೂಡ ವಿರೋಧವೇ ಹಬ್ಬಿತ್ತು. ಲೋಕಮಾನ್ಯರು ಇದನ್ನೆಲ್ಲ ಅರಿತಿದ್ದರು. ಆದರೆ ಅವರ ಸ್ವಭಾವವು ವೀರರಿಗೆ ಉಚಿತವಾದದ್ದೂ, ಧೀರರಂತೆ ಉದಾತ್ತವಾದದ್ದೂ ಇತ್ತು. ಆದ್ದರಿಂದ ಅವರು ಇದನ್ನೆಲ್ಲ ತಾಳುತ್ತಿದ್ದರು. ತಾವು ಹಿಡಿದ ಮಾರ್ಗವೇ ನಿಜವಾದ ಮಾರ್ಗವೆಂದೂ, ರಾಷ್ಟ್ರವಾದರೂ ಕಟ್ಟಕಡೆಗೆ ತಮ್ಮ ಮಾರ್ಗಕ್ಕೆ ಬರಲಿಕ್ಕೆಬೇಕೆಂದೂ ಅವರಿಗೆ ದೃಢವಾದ ನಂಬಿಗೆಯು ಇತ್ತು ಮತ್ತು ನಿಜವಾಗಿ ಅದರಂತೆಯೇ ಆಯಿತು. ೧೯೦೭ ರಲ್ಲಿ ಮಹಾಸಭೆಯ ವಿಧ್ವಂಸಕರೆಂದು ಕರೆಯಲ್ಪಡುತ್ತಿದ್ದ ಲೋಕಮಾನ್ಯರ ಹೆಸರಿನಿಂದಲೇ ೧೯೨೧ ರಲ್ಲಿ ಕೂಡಿದ ವಿಂಟ ಮಹಾಸಭೆಯು ಸ್ವರಾಜ್ಯನಿಧಿಯನ್ನು ಕೂಡಿಸಿತು. ಮಹಾಸಭೆಯ ಕಾರ್ಯವು ಇಂಗ್ಲಿಷ ಅಧಿಕಾರಿಗಳಿಗೆ ಓದುವದಕ್ಕೆ ಸಲುವಾಗಿ ಮಾತ್ರ ಇಲ್ಲ ಆದರೆ, ಜನತೆಗೆ ದೇಶದ ಪರಿಸ್ಥಿತಿಯನ್ನು ತಿಳಿಸಿಹೇಳಿ ಅದರ ಹಕ್ಕು ಹಾಗು ಕರ್ತವ್ಯವನ್ನು ಅದಕ್ಕೆ ಪರಿಚಿತಮಾಡಿಕೊಡುವದೇ ಮಹಾಸಭೆಯ ಕಾರ್ಯವು. ಈ ಮಾತನ್ನಾದರೂ ಮಹಾಸಭೆಯವರು ಈಗ ಅಂಗೀಕರಿಸಿದ್ದಾರೆ.

ಕಮಲದ ಬೇರು ನೀರಿನ ಕೆಳಗಿನ ನೆಲದಲ್ಲಿ ಇರುವಂತೆ ರಾಷ್ಟ್ರದ ಪ್ರಾಣವು ಅದರ ಭೂತಕಾಲದ ಇತಿಹಾಸದಲ್ಲಿ ಅಡಗಿಕೊಂಡಿರುತ್ತದೆ. ಪೂರ್ವಕಾಲದ ಇತಿಹಾಸದಲ್ಲಿಯ ಪೋಷಕದ್ರವ್ಯವನ್ನೆಲ್ಲ ಹೀರಿಕೊಂಡು ವರ್ತಮಾನಕಾಲದ ನವಜೀವನದಿಂದ ಆರ್ದ್ರವಾಗಿ ರಾಷ್ಟ್ರಕಮಲವು ತನ್ನ ಆದರ್ಶರೂಪವಾದ ಸೂರ್ಯನ ಉಪಾಸನೆಯನ್ನು ಮಾಡುತ್ತದೆ. ಈ ತತ್ವವನ್ನು ಅರಿತುಕೊಂಡು

ಲೋಕಮಾನ್ಯ ಟಿಳಕರವರು ಮಹಾರಾಷ್ಟ್ರದಲ್ಲಿ ಶಿವಾಜಿಯ ಉತ್ಸವವನ್ನು ಮಾಡಹತ್ತಿದರು. ಶಿವಾಜಿಯಲ್ಲಿದ್ದ ಧರ್ಮನಿಷ್ಠೆಯನ್ನು, ಅನ್ಯಾಯಗಳ ಸಲುವಾಗಿ ಅವನು ತೋರಿಸುತ್ತಿದ್ದ ತಿರಸ್ಕಾರ ಅಸಹಿಷ್ಣುತೆಗಳನ್ನು ರಾಷ್ಟ್ರದಲ್ಲಿ ಹಬ್ಬಿಸುವದಕ್ಕೆ ಅವರು ಅಪೇಕ್ಷಿಸುತ್ತಿದ್ದರು. ಆದರೆ ದೂರದೃಷ್ಟಿಯಿಲ್ಲದ ಜನರು ಇದರಿಂದ ಪರಸ್ಪರರಲ್ಲಿ ಅವಿಶ್ವಾಸವು ಜನಿಸುವದೆಂದು ತಿಳಿದು ಅವರಸಂಗಡ ವಿರೋಧವನ್ನು ಮಾಡಹತ್ತಿದರು. ಇದರಿಂದ ಧರ್ಮಾಂಧತೆಯು ಹಬ್ಬುವದೆಂದು ಅನ್ನಹತ್ತಿದರು. ಹಿಂದೂಮುಸಲ್ಮಾನರ ನಡುವೆ ಜಗಳವಾಗುವದೆಂದು ಅಭಿಪ್ರಾಯವನ್ನು ತಾಳಿದರು. ಆಯಿತು; ಶಂಕೆಯು ಹುಟ್ಟಿ ಒಮ್ಮೆಲೇ ಪಸರಿಸಹತ್ತಿತು. ಮುಸಲ್ಮಾನರಾದರೂ ಲೋಕಮಾನ್ಯ ಟಿಳಕರು ಪುಣೆಯ ಬ್ರಾಹ್ಮಣರೇ ಆದರೆಂದು ತಿಳಿಯಹತ್ತಿದರು. ಹಿಂದೂಗಳ ಪಕ್ಷಪಾತಿಗಳಾದರೆಂದು ಒಗೆದರು. ಮುಸಲ್ಮಾನರ ದ್ವೇಷವನ್ನು ಮಾಡುವರೆಂದು ಅನ್ನಹತ್ತಿದರು. ಹೊಸಲಿನಿಂದಲೇ ಪರನಿಂದೆಯನ್ನು ಸಹಿಸುವದು ಅವರ ದೈವದಲ್ಲಿ ಬರೆದಿತ್ತು. ಅವರ ಮನಸ್ಸಿನಲ್ಲಿ ಅಖಂಡವಾದ ಹಿಂದುಸ್ಥಾನದ ಕಲ್ಯಾಣದ ಇಚ್ಛೆಯೊಂದೇ ಇದ್ದು, ಅವರು ತಮ್ಮ ಶಬ್ದಗಳಿಂದ ಎರಡನೆಯವರಲ್ಲಿಯ ತಪ್ಪುತಿಳುವಳಿಕೆಯು ದೂರಾಗದಿದ್ದರೂ ತಮ್ಮ ಕಾರ್ಯದಿಂದ ದೂರಾಗುವದೆಂದು ನಂಬಿದ್ದರು. ಮತ್ತು ನಿಶ್ಚಯವಾಗಿ ಅದರಂತೆಯೇ ಆಯಿತು. ಲಖನೌ ರಾಷ್ಟ್ರೀಯಸಭೆಯ ಕಾಲದಲ್ಲಿ ಹಿಂದೂಮುಸಲ್ಮಾನರ ನಡುವಿನ ವಿರೋಧವು ನಾಶವಾದಾಗ ಲೋಕಮಾನ್ಯರು ಮುಸಲ್ಮಾನರು ಕೇಳಿದ ಹಕ್ಕುಗಳನ್ನೆಲ್ಲ ಕೊಡಬೇಕೆಂಬ ನಿರ್ಣಯವನ್ನು ಮುಂದೆ ತಂದರು. ಇಷ್ಟೇ ಅಲ್ಲ ಇದಕ್ಕೂ ಹೆಚ್ಚಿಗೆ ಸಹ ಮುಸಲ್ಮಾನರು ಕೊಡಲಿಕ್ಕೆ ಕೇಳಿದರೆ ನಾನು ಕೊಡಲು ಸಿದ್ಧನಿದ್ದೇನೆಂದು ಅವರು ಹೇಳಿದರು. ಮುಸಲ್ಮಾನರು ನಮ್ಮ ಶತ್ರುಗಳಲ್ಲ. ಅವರ ಕೈಯಲ್ಲಿ ನಮ್ಮ ಸ್ವರಾಜ್ಯವು ಸುರಕ್ಷಿತವಾಗಿದೆ. ಮುಸಲ್ಮಾನರು ತಮ್ಮ ಶತ್ರುಗಳೆಂದು ತಿಳಿಯುತ್ತಿದ್ದ ಲೋಕಮಾನ್ಯರು ನಿಧನಹೊಂದಿದಾಗ ಅವರ ಸ್ಮಶಾನಯಾತ್ರೆಯಲ್ಲಿ ಮುಸಲ್ಮಾನರ ಮುಂದಾಳುಗಳಾದ ಮೌಲಾನಾ ಶೌಕತ ಅಲ್ಲಿಯವರು ತಮ್ಮ ಹೆಗಲನ್ನು ಕೊಟ್ಟಿದ್ದರು. ಮತ್ತು ಪುಣೆಯ ಸಾವಿರಾರು ಬ್ರಾಹ್ಮಣರಲ್ಲಿ ಒಬ್ಬನಾದರೂ ಅದಕ್ಕೆ ವಿರೋಧವನ್ನು ಮಾಡಲಿಲ್ಲ. ಖಿಲಾಫತ ಚಳವಳಿಯಲ್ಲಿ ಲೋಕಮಾನ್ಯರು ಸಂಪೂರ್ಣವಾಗಿ ಅಲ್ಲೀಬಂಧುಗಳ ಜೊತೆಯಲ್ಲಿದ್ದರು. ಖಿಲಾಫತ ಸಂಬಂಧದಿಂದ ಹಿಂದೂಮುಸಲ್ಮಾನರ ನಡುವೆ ಆದ ಐಕ್ಯವು ಮಹಾತ್ಮಾ ಗಾಂಧಿಯವರ ದ್ವಾರದಿಂದ ದೃಢಮೂಲವಾಗಬೇಕೆಂದು ಲೋಕಮಾನ್ಯರಾದರೂ ಅನ್ನುತ್ತಿದ್ದರು ಅವರಲ್ಲಿ ಮಹಾತ್ಮಾಜಿಯವರಿಗೆ, ಅಗ್ರಸ್ಥಾನವು ದೊರೆಯಬೇಕೆಂದು ಅವರ ಅಭಿಪ್ರಾಯವಿತ್ತು.

ಇಡೀ ಆಯುಷ್ಯದಲ್ಲೆಲ್ಲ ಹೋರಾಡಿದರೂ ಹಿಂದುಸ್ಥಾನದಲ್ಲಿ ಅಪೂರ್ಣವಾದ ಜಾಗೃತಿಯಾದದ್ದನ್ನು ಕಂಡು ಅವರು ದೇಹವನ್ನು ಬಿಟ್ಟರು, ಅವರ ದೇಹದಸಂಗಡವೇ ಅವರ ಬಡಿದಾಟಗಳೆಲ್ಲ ಹೋಗಿ ಬಿಟ್ಟವು ಈಗ ಅವರು ಭರತಖಂಡದ ನಿವಾಸಿಗಳ ಮನಸ್ಸಿನಲ್ಲಿ ಪ್ರವೇಶಮಾಡಿ ತಮ್ಮ ಚೈತನ್ಯದ್ವಾರದಿಂದ ಸ್ವರಾಜ್ಯದ ಪ್ರೇರಣೆಯನ್ನು ಮಾಡುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಲೋಕಮಾನ್ಯರಿಗೆ ಸ್ವದೇಶದಮೇಲೆ ಅಪೂರ್ವವಾದ ಶ್ರದ್ಧೆಯಿತ್ತು. ಸರ್ವಸಾಧಾರಣವಾದ ಶ್ರಾದ್ಧದಿಂದ ಅವರ ತರ್ಪಣವಾಗಲಾರದು ಭಾರತವಾಸಿಗಳೆಲ್ಲ ಅವರಂತೆಯೇ ಏಕಚಿತ್ತರಾಗಿ ಸ್ವರಾಜ್ಯವನ್ನು ದೊರಕಿಸಿದರೆಮಾತ್ರ ಲೋಕಮಾನ್ಯರಿಗೆ ನಿಜವಾದ ತರ್ಪಣವಾಗುವದು. ಗಂಗಾನದಿಯ ಜಲದಿಂದಲೇ ಸೂರ್ಯವಂಶದ ತರ್ಪಣವಾದಹಾಗೆ ನಮ್ಮ ಭಗೀರಥ ಪ್ರಯತ್ನದಿಂದ ಪ್ರಾಪ್ತವಾದ ಸ್ವರಾಜ್ಯ ಜಲದ ದ್ವಾರದಿಂದ ಲೋಕಮಾನ್ಯರ ತರ್ಪಣವನ್ನು ನಾವು ಮಾಡಬೇಕಾಗಿದೆ. ಇದು ನಮ್ಮ ರಾಷ್ಟ್ರೀಯ ಕರ್ತವ್ಯವಾಗಿದೆ. ಇದರಲ್ಲಿಯೇ ನಮ್ಮ ಉದ್ಧಾರ ಇರುವದು.

— ಕಾಲೇಲಕರ.

## ಸ್ವರಾಜ್ಯವು ನನ್ನ ಜನ್ಮಸಿದ್ಧವಾದ ಹಕ್ಕು

# ಪುಣ್ಯಶ್ರಾದ್ಧವು.

(ನವಜೀವನ.)

ಲೋಕಮಾನ್ಯರು ಒಂದು ಸಂಸ್ಥೆಯಾಗಿದ್ದರು. ಅವರ ಜೀವನದ ಆದರ್ಶವು ಸ್ವತಂತ್ರತೆಯು-ಸ್ವರಾಜ್ಯವು ಆಗಿತ್ತು. ಅವರ ಮರಣದ ಸಂದೇಶವು ಸ್ವರಾಜ್ಯವೇ ಇರುವದು. "ಸ್ವರಾಜ್ಯವು ನನ್ನ ಜನ್ಮಸಿದ್ಧವಾದ ಹಕ್ಕು" ಎಂಬದೇ ಅವರ ಶ್ವಾಸೋಚ್ಛ್ವಾಸವಾಗಿತ್ತು. ಸ್ವಾರ್ಥತ್ಯಾಗವೂ ಕಷ್ಟಸಹನವೂ ಅವರ ಜೀವನದ ನಿಯಮವಾಗಿದ್ದವು. ದೇಶಭಕ್ತಿಯು ಅವರ ರಕ್ತದ ಧರ್ಮವು. ನಿರ್ಭಯತೆಯೂ ತೇಜಸ್ವಿತೆಯೂ ಅವರ ಆತ್ಮನ ಗುಣಗಳು. ರಾಜನೀತಿಯಲ್ಲಿ ಅವರು ವೀರಭಟರಿದ್ದರು. ಪ್ರತಿಪಕ್ಷಿಗಳಿಗೆ ಅವರು ಗ್ರೀಷ್ಮಕಾಲದ ಸೂರ್ಯನಂತೆ ಅಸಹ್ಯರಾಗಿದ್ದರು. ರಾಜನೈತಿಕ ಯುದ್ಧದಲ್ಲಿಯಾಗಲಿ ಲೇಖನಸಂಗ್ರಾಮದಲ್ಲಾಗಲಿ ಅವರು ತಮ್ಮ ವೈರಿಗಳಮೇಲೆ ಅಗ್ನ್ಯಸ್ತ್ರವನ್ನಾಗಲಿ ಇಲ್ಲವೆ ಸಮ್ಮೋಹನಾಸ್ತ್ರವನ್ನಾಗಲಿ ಬಿಟ್ಟರೆ ಸಾಕು. ಅವರ ಹಂಚಿಕೆಗಳೆಲ್ಲ ಛಿನ್ನವಿಛಿನ್ನವಾಗುತ್ತಿದ್ದವು. ಎಲ್ಲ ಸಂಗತಿಗಳಲ್ಲಿದ್ದ ಪ್ರತಿಭೆಯು ಅವರ ಮಸ್ತಕದ ವೈಭವವಾಗಿತ್ತು. ವಿದ್ವತ್ತೆಯು ಕೂಡಂತೂ ಅವರ ಮಿತ್ರತ್ವವನ್ನು ತಾಳಿದಂತಿತ್ತು. ಸತ್ಯವಂತೂ ಅವರ ಆಚರಣೆಯ ಮೊದಲನೆಯ ಪಾಠವು. ಚಾರಿತ್ರ್ಯವು ಅವರ ಜೀವನದ ವಿಜಯಧ್ವಜವೇ ಆಗಿತ್ತು. ನಿಸ್ಪೃಹತೆಯು ಶಬ್ದವು ಅವರ ರೋಮರೋಮದಲ್ಲಿ ಹಬ್ಬಿಹೋಗಿತ್ತು. ಗೀತಾರಹಸ್ಯವು ಅವರ ಅಧ್ಯಾತ್ಮಜ್ಞಾನದ ಸ್ಮಾರಕವಾಗಿದೆ. ಸ್ವಾತಿ

ಯಂತೂ ಅವರ ಹಿಂದೆ ಹಿಂದೆಯೇ ನಡೆಯುತ್ತಿತ್ತು- ಸ್ವಾಭಿಮಾನವು ಅವರಿಗೆ ಪ್ರಾಣದಷ್ಟು ಪ್ರೀತಿಪಾತ್ರವಾಗಿತ್ತು? ಪ್ರಚಲಿತ ಉಗ್ರವಾದ ರಾಜನೈತಿಕವಾದ ಆದ್ಯಪ್ರವರ್ತಕರೇ ಅವರು. ರಾಷ್ಟ್ರದ ಮುಕುಟಮಣಿಗಳಾಗಿದ್ದರು. ಮಹಾರಾಷ್ಟ್ರಕ್ಕಂತೂ ಅವರು ಆರಾಧ್ಯದೇವತೆಗಳಂತೆ ಇದ್ದರು. ಅವರು ನೂತನವಾದ ಚೈತನ್ಯಯುಗದ ಉತ್ಪಾದಕರೂ ಶಾಸಕರೂ ಆಗಿದ್ದರು. ಮರಣಕಾಲದವರೆಗೆ ಅವರು ತರುಣರಾಗಿಯೇ ಇದ್ದರು. ಆತ್ಮವಿಶ್ವಾಸವು ಅವರ ಹೃದಯದ ಬಲವಾಗಿತ್ತು. ಸ್ವಾವಲಂಬನವು ಅವರ ಇಡೀ ಚರಿತ್ರದ ಉಪದೇಶವಾಗಿದೆ, ಎರಡು ಮೂರು ಸಲ ಕಾರಾಗೃಹಕ್ಕೆ ಹೋಗಿಬಂದು ಅವರು ರಾಷ್ಟ್ರಕ್ಕೆ ಸ್ವರಾಜ್ಯದ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ಅವರು ಸ್ವದೇಶೀಮಯರಾಗಿದ್ದರು. ಅವರ ಆಚಾರವಿಚಾರಗಳು, ಊಟ ಉಪಚಾರವು ವೇಷಭೂಷಣವು ಎಲ್ಲವೂ ಸ್ವದೇಶಿಯಾಗಿದ್ದವು. ಆರ್ಯಸಂಸ್ಕೃತಿಯು, ಹಿಂದುಸ್ಥಾನದ ಪ್ರಾಚೀನ ವೈಭವ ವಿದ್ಯಾಕಲೆಗಳು, ತಮ್ಮ ಪುರುಷಾರ್ಥಿಗಳಾದ ಪೂರ್ವಜರ ಅಭಿಮಾನವು ಅವರಲ್ಲಿ ವಿಶೇಷವಾಗಿತ್ತು ಅವರು ತಮ್ಮ ಜೀವನವನ್ನು ರಾಜನೀತಿಯ ಸಲುವಾಗಿ—ಸ್ವರಾಜ್ಯದ ಸಲುವಾಗಿ ಅರ್ಪಿಸಿಕೊಟ್ಟು ಬಿಟ್ಟಿದ್ದರು. ಕೌಟುಂಬಿಕ ಅಥವಾ ಶಾರೀರಿಕ ಸುಖಗಳು ಅವರಿಗೆ ಉಪನ್ಯಾಸದ ವಸ್ತುಗಳಾಗಿದ್ದವು ಅವರು ಈ ಸಂಗತಿಗಳಲ್ಲಿ ಪೂರ್ಣ ಉದಾಸೀನರಿದ್ದರು; ವಿರಕ್ತರಿದ್ದರು. ಅವರಿಗೆ ತಮ್ಮ ಸ್ವಂತ ಜೀವನವೇ ಇದ್ದಿಲ್ಲ. ಅವರು ರಾಷ್ಟ್ರದ ಸಂಪತ್ತಿಯಾಗಿದ್ದರು. ದೇಶದ ಸಲುವಾಗಿ ಹುಟ್ಟಿದರು; ದೇಶದ ಸಲುವಾಗಿ ಮಡಿದರು., ಹಿಂದೂಮುಸಲ್ಮಾನರ ಐಕ್ಯದ ಸೂತ್ರವು ಲಖನೌದಲ್ಲಿ ಅವರ ದ್ವಾರದಿಂದ ಪೋಣಿಸಲ್ಪಟ್ಟಿತ್ತು. ಹಿಂದೀಭಾಷೆಯನ್ನು ಅವರು ರಾಷ್ಟ್ರಭಾಷೆಯೆಂದು ತಿಳಿಯುತ್ತಿದ್ದರು. ಅವರ "ಕೇಸರೀ" ಯಲ್ಲಿ ಕೆಲವು ದಿವಸಗಳ ವರೆಗೆ ಹಿಂದೀಭಾಷೆಯ ಸಲುವಾಗಿ ಒಂದು "ಕಾಲಮ್" ಕಾಯ್ದು ಇಡಲ್ಪಟ್ಟಿತ್ತು.

ದೇಶಭಾಷೆಯ ಪತ್ರದಲ್ಲಿ ಅವರು ತಮ್ಮ ಕಾಲಕ್ಕೆ ಒಬ್ಬರೇ ಪತ್ರಸಂಪಾದಕರಿದ್ದರು. ಅವರ ನಿರ್ಭೀತವಾದ ಮತ್ತು ಮಾರ್ಮಿಕವಾದ ಅವರ ವಿಚಾರಗಳಲ್ಲಿ ಕ್ರಾಂತಿಯನ್ನು ಮಾಡುವಂಥ ಟಿಪ್ಪಣಿಗಳಿಂದ ಸರಕಾರದವರಿಗೆ ಕೂಡ ದಂಗು ಬಡಿದು ಹೋಗುತ್ತಿತ್ತು ಇಂಗ್ಲೀಷರ ದೃಷ್ಟಿಯಿಂದ ಅವರು "ಹಿಂದುಸ್ಥಾನದಲ್ಲಿಯ ಅಶಾಂತಿಜನಕ" ರಾಗಿದ್ದರು ರಾಜದ್ರೋಹದ ಕಟ್ಲೆಗಳಿಂದ ಅವರು ಕೊಟ್ಟ ಜಬಾಬುಗಳಿಂದ ಅವರ ಕಾಯದೆಯಲ್ಲಿಯ ಚಾತುರ್ಯದ ಐತಿಹಾಸಿಕ ಪ್ರಮಾಣವಾಗಿದೆ. ಅವರ ಕೀರ್ತಿಗೆ ಭೂಗೋಲದಲ್ಲಿ ಸೀಮೆಯೇ ಇದ್ದಿಲ್ಲ. ವಿಪತ್ತುಗಳಿಗೆ ಅವರ ವಿಷಯವಾಗಿ ಬಹಳ ಪ್ರೀತಿ ಇತ್ತು ಮತ್ತು ಅವರಾದರೂ ಆಟವಾಡುವವರಂತೆ ಅವುಗಳಿಗೆ ಆನಂದಪೂರ್ವಕವಾಗಿ ಸ್ವಾಗತವನ್ನೂ, ಆತಿಥಿಸತ್ಕಾರವನ್ನೂ ಮಾಡುತ್ತಿದ್ದರು. ಈ ಜಗತ್ತಿನಲ್ಲಿ ಒಬ್ಬ ದೊಡ್ಡ ಮನಸ್ಸಿನ ಮನುಷ್ಯನಲ್ಲಿ ಆಶ್ರಯ ದೊರೆತದ್ದರಿಂದ ಆ ಸಂಕಟಗಳು ತಾವು ಧನ್ಯ ಧನ್ಯವೆಂದು ತಿಳಿದುಕೊಂಡಿದ್ದವು. ರಾಜಕೋಪವು ಅವರಿಗೆ ನಿತ್ಯದ ಹಾಗೂ ಉಪೇಕ್ಷೆಗೆ ಯೋಗ್ಯವಾದ ವಸ್ತುವಾಗಿತ್ತು. ಅವರು ಸರಕಾರದ ಬಗ್ಗೆ ವಿಚಾರಗಳನ್ನೂ ವಿರೋಧವನ್ನೂ ತಮ್ಮ ಪೂರ್ಣ ಬಲದಿಂದ ಮಾಡುತ್ತಿದ್ದರು. ರ-ರರೂಪವಾದ ಕಲ್ಲುಬಂಡೆಗಳ ಗೋಡೆಯನ್ನು ವಿರೋಧ ಮಾಡಿ ಮಾಡಿ ಅವರ ಶರೀರವು ರಾಜಕೋಪಕ್ಕೆ ನಿಲುಕದಂತೆ ಆಗಿತ್ತು. ಮಳೆಯ ಹನಿಗಳ ಪರಿಣಾಮವು ಪರ್ವತದ ಮೇಲೆ ಆಗಬಲ್ಲದೇ? ಅದ್ದರಿಂದ ಅವರು ರಾಜಮಾನ್ಯರಾಗಲಿಲ್ಲ, ಲೋಕಮಾನ್ಯರಾದರು. ಅವರು ರಾಜಮಾನ್ಯತೆ ಮತ್ತು ಲೋಕಮಾನ್ಯತೆಯನ್ನು ವಿಭಾಗಿಸುವ ರೇಖೆಯನ್ನು ತೆಗೆದುಕೊಟ್ಟರು. ಈ ಭೇದವಾದರೋ ಸ್ವರಾಜ್ಯದಲ್ಲಿಯೇ ಲಯವನ್ನು ಹೊಂದಬಹುದು.

ಲೋಕಮಾನ್ಯರು ಇಂದ್ರಿಯಗಳ ಸೇವಕರಾಗಿದ್ದಿಲ್ಲ, ಒಡೆಯರಾಗಿದ್ದರು. ತಾರುಣ್ಯಾವಸ್ಥೆಯಲ್ಲಿಯ ಅವರ ಉಗ್ರತೆಯು ತಪಸ್ವರೂಪವಾದ ಅಗ್ನಿಯಿಂದ ಸುಟ್ಟು ತೇಜ ಮತ್ತು ಶಾಂತಿಯ ರೂಪದಿಂದ ಪರಿಣಮಿಸಿ ಹೋಗಿತ್ತು, ಗೀತಾರಹಸ್ಯವನ್ನು ಒರೆಯುವ ಟಿಳಕರಲ್ಲಿಯೂ ಗೀತಾರಹಸ್ಯವನ್ನು ಬರೆದು ತೀರಿಸಿದ ಟಿಳಕರಲ್ಲಿಯೂ ಮಹದಂತರವಿತ್ತು. ಮೊದಲನೆಯ ಟಿಳಕರು ರಾಜಸಗಣಕ್ಕೆ ಸೇರಿದವರಿದ್ದರು, ಎರಡನೆಯವರು ಉಗ್ರವಾಗಿಯೂ ಅಸಹ್ಯವಾಗಿಯೂ ತೋರುತ್ತಿದ್ದರು, ಎರಡನೆಯವರು ಶಾಂತವಾಗಿಯೂ ಭಜನೀಯರಾಗಿಯೂ ಕಾಣುತ್ತಿದ್ದರು

ಲೋಕಮಾನ್ಯರ ಸಂಕಟಪೂರ್ಣವಾದ ಅದ್ಭುತ ರಾಷ್ಟ್ರೀಯ ಕಾರ್ಯವನ್ನು ಸಂಕ್ಷೇಪದಲ್ಲಿ ವಿವರಿಸಬೇಕಾದರೆ, ಜಗತ್ತು ಲೋಕಮಾನ್ಯರ ಕೈಯಲ್ಲಿ ೧೮೫೬ ನೇ ಇಸ್ವಿಯ ಹಿಂದುಸ್ಥಾನವನ್ನು ಕೊಟ್ಟಿತು; ಲೋಕಮಾನ್ಯರು ೧೯೨೦ ನೇ ಇಸ್ವಿಯ ಹಿಂದುಸ್ಥಾನವನ್ನು ಜಗತ್ತಿಗೆ ಮರಳಿ ಒಪ್ಪಿಸಿದರು; ಅವರ ನಿಧನದಿಂದ ಜಗತ್ತಿನ ವಿದ್ವತ್ತೆಯಲ್ಲಿಯೂ ರಾಜನೀತಿಯಲ್ಲಿಯೂ ದಾರಿದ್ರ್ಯವು ಅನುಭವವನ್ನು ತಗದುಕೊಂಡಿರುವದು

ನಾಡದು (೧ ನೇ ಅಗಸ್ಟ) ಈ 'ಕರ್ಮಯೋಗಿಯ" ಪುಣ್ಯತಿಥಿಯೇ ಇರುವದು. ಅವರು ಸ್ವರಾಜ್ಯ ಮಂತ್ರದ ಜಪವನ್ನೂ ಧ್ಯಾನವನ್ನೂ ಮಾಡುತ್ತ ಮಡಿದರು, ಅವರ ಚಿತೆಯು ಭಸ್ಮದಿಂದ ಅಸಹಕಾರಚಳವಳಿಯ ಜನ್ಮವಾಗಿದೆ. ಇಂಥ ಮಹಾಪುರುಷರ ಶ್ರಾದ್ಧವನ್ನು ಹಿಂದುಸ್ಥಾನವು ಯಾವರೀತಿಯಿಂದ ಮಾಡಬಲ್ಲದು? ಅವರ ನಿಜವಾದ ಶ್ರಾದ್ಧವು ಸ್ವರಾಜ್ಯಸಾಧನೆಗಳನ್ನು ಬೆಳಿಸುವದರಿಂದಲ್ಲದೆ ಮತ್ತೇತರಿಂದ ಆಗಬಹುದು? ಅವರಿಗೆ ಶೋಭಿಸುವಂಥ ಸ್ಮಾರಕವು ಸ್ವರಾಜ್ಯಪ್ರಾಪ್ತಿಯ ಹೊರತು ಮತ್ತೇನು? ಲೋಕಮಾನ್ಯರು ನಮಗೆ "ಸ್ವರಾಜ್ಯವು ನನ್ನ ಜನ್ಮಸಿದ್ಧಹಕ್ಕು" ಎಂಬ ಮಂತ್ರವನ್ನು ಉಪದೇಶಿಸಿರುವರು; ಮಹಾತ್ಮಾಜಿಯವರು ಅವರ ಮುಂದಿನ ಸೂತ್ರವಾದ "ಸ್ವದೇಶಿಯು ನಮ್ಮ ಜನ್ಮದ ಧರ್ಮವಾಗಿದೆ" ಎಂಬದನ್ನು ತೋರಿಸಿಕೊಟ್ಟಿರುವರು ಇದಲ್ಲದೆ "ಸ್ವದೇಶಿಯಲ್ಲಿಯೇ ಮತ್ತು ಸ್ವದೇಶಿಯಿಂದಲೇ ಸ್ವರಾಜ್ಯವರವದು." ಎಂಬ ಪಾಠವನ್ನು ಕೂಡಾ ಕಲಿಸಿರುವರು. ನಾಳಿನ ಅಗಸ್ಟ ತಿಂಗಳ ಮೊದಲನೇ ತಾರೀಖಿನ ದಿವಸ ಒಬ್ಬರ ಆತ್ಮವು ಅಂತರ್ಧಾನವಾಯಿತು- ಇನ್ನೊಬ್ಬರ ಆತ್ಮವು ದೀವಿಗೆಯಂತೆ ಪ್ರಕಾಶಮಾನವಾಯಿತು. ಹಿಂದುಸ್ಥಾನವು ತನ್ನ ಪೂರ್ವ ಮುಂದಾಳುಗಳ ಉಪದೇಶವನ್ನು ಸ್ಮರಿಸುತ್ತಿದ್ದರೆ ಅದು ಸ್ವದೇಶಿಯನ್ನು ತನ್ನ ಕರ್ತವ್ಯವೆಂದು ಬಗೆದು ಖಾದಿಯನ್ನು ಧರಿಸಿ ಸ್ವರಾಜ್ಯವನ್ನು ಪ್ರಾಪ್ತಮಾಡಿಕೊಳ್ಳುವ ತನ್ನ ಒಂದೇ ಒಂದಾದ ಧರ್ಮವನ್ನು ಆಚರಿಸತಕ್ಕದ್ದು. ಇದೇ ಮಹಾತ್ಮಾಜಿಯವರ ಮುಕ್ತಿ-ಮಂತ್ರವಿರುವದು ಇದರಿಂದಲೇ ಲೋಕಮಾನ್ಯರ ಶ್ರಾದ್ಧವನ್ನು ಮಾಡಿದಂತಾಗುವದು

ಶ್ರೀಧರ ವು ಉಪಾಧ್ಯಾಯ.

---

"ವಿದ್ಯಾಭೂಮಿ" ಎಂಬ ಮಾಸಪತ್ರಿಕೆಯೊಂದು ಇಲ್ಲಿಯೇ ಬಾಗಲಕೋಟೆಯಲ್ಲಿ ಹೊರಡಹತ್ತಿದೆ. ಅದರ ಮೊದಲನೇ ಸಂಚಿಕೆಯು ನಮ್ಮ ಕೈಸೇರಿದ್ದು ನಾವು ನಮ್ಮ ಅಭಿಪ್ರಾಯವನ್ನು ಸ್ಥಳಾವಕಾಶವನ್ನು ನೋಡಿ ಕೊಡುವೆವು.

# ಕರ್ನಾಟಕ ರಾಜಕೀಯ ಪ್ರಗತಿಯು.

## ದೂರದ ಗುಡ್ಡ ಕಣ್ಣಿಗೆ ಚಂದ

( ನಾ. ಸು. ಹರಡಿಕರ )

ಕರ್ನಾಟಕ ಪ್ರಾಂತಿಕ ಕಾಂಗ್ರೇಸ ಕಮಿಟಿಯ ಕಾರ್ಯದರ್ಶಿಗಳು ವಿಸ್ತಾರಪೂರದಲ್ಲಿ ಅಖಿಲ ಭಾರತ ಕಾಯದೆ ಭಂಗ ವಿಚಾರಣೆಯ ಕಮಿಟಿಯ ಸಭಾಸದರಿಗೆ ಸಲ್ಲಿಸಿದ, ಕರ್ನಾಟಕದ ಪ್ರಗತಿಯ ಅಹವಾಲವು, ಪತಿಯೊಬ್ಬ ಕರ್ನಾಟಕಸ್ಥನು ಓದತಕ್ಕಂಥದ್ದಿರುತ್ತದೆ. ಕರ್ನಾಟಕದಲ್ಲಿ ಇಷ್ಟು ವಿಪುಲ ಕೈಮಗ್ಗಗಳಿವೆ, ಇಷ್ಟು ಬಹಳ ರಾಟಿಗಳು ನಡಿಯುತ್ತಲಿವೆ ಇತರ ಪ್ರಾಂತಗಳಗಿಂತ ಕರ್ನಾಟಕವು ಖಾದೀ ಪ್ರಸಾರದಲ್ಲಿ ಇಷ್ಟು ಮುಂಪರಿಯುತ್ತದೆ. ಎಂದು ಜಂಬಹೆಮ್ಮೆಯನ್ನು ತಾಳುವ ಕರ್ನಾಟಕಸ್ಥರು ಆ ರಿಪೋರ್ಟಿನ ಕಡೆಗೆ ಸ್ವಲ್ಪ ದೃಷ್ಟಿಯನ್ನು ಕೊಟ್ಟರೆ ನಿಜವಾದ ಪರಸ್ಥಿತಿಯು ಸ್ಪಷ್ಟವಾಗಿ ಕಂಡು ಬರುವಂತಿದೆ ಸರ್ವರಿಗೂ ತಿಳಿಯಬೇಕೆಂಬದಾಗಿ ಆ ರಿಪೋರ್ಟಿನ ಆವಶ್ಯಕಂಡ ಮುಖ್ಯಮುಖ್ಯ ಭಾಗಗಳನ್ನು ಇದರ ಕೆಳಗೆ ಕೊಟ್ಟಿದ್ದೇನೆ —

( ಅ ) ಇಡಿ. ಕರ್ನಾಟಕದಲ್ಲಿ ಕೂಡಿ ಸುಮಾರು ಇಪ್ಪತ್ತು ಸಾವಿರ ರಾಟಿಗಳು ದಿನಾಲು ಉಪಯೋಗಿಸಲ್ಪಡುತ್ತವೆಂದು ತಿಳಿದು ಬಂದಿವೆ. ಅವುಗಳಲ್ಲಿ ಕಾಂಗ್ರೇಸ ಕಮಿಟಿಗಳ ವತಿಯಿಂದ ಸುಮಾರು ೪೦೦ ರಾಟಿಗಳು ನಡಿಯುತ್ತಿದ್ದು ಉಳಿದವುಗಳೆಲ್ಲ ಖಾಸಗೀ ವ್ಯವಸಾಯದವರೇ ಇಡಲ್ಪಟ್ಟಿರುತ್ತವೆ ಕರ್ನಾಟಕದಲ್ಲಿ ಸುಮಾರು ೬೦ ಲಕ್ಷ ಕುಟುಂಬಗಳಿವೆ ಇವುಗಳಿಗೆ ಸರಾಸರಿ ಮಾನದಿಂದ ೩೦೦ ಕುಟುಂಬಕ್ಕೆ ಒಂದು ರಾಟಿಯಂತೆ ಪ್ರಮಾಣ ಬಿದ್ದಂತಾಯಿತು.

( ಬ ) ಕರ್ನಾಟಕದಲ್ಲಿ ಈಗ್ಗೆ ೬೦ ವರ್ಷಗಳ ಕೆಳಗೆ ಪ್ರತಿಯೊಂದು ಮನೆಯಲ್ಲಿ ರಾಟಿಗಳು ಇದ್ದೇ ಇರುತ್ತಿದ್ದವು ಈಗ್ಯ ಕೆಲಕೆಲವು ಮನೆಗಳ ಸಂದಿಮೂಲೆಗಳಲ್ಲಿ ಮೊದಲಿನ ಮುರುಕ ರಾಟಿಗಳು ದೃಷ್ಟಿಗೆ ಬೀಳುತ್ತವೆ ಪುರಾತನ ವೈಭವವು ತಿರುಗಿ ಬರಬೇಕಾದರೆ ಪ್ರತಿಯೊಂದು ಮನೆಯಲ್ಲಿ ರಾಟಿಗಳ ಪ್ರಸಾರವು ಆಗಲಿಕ್ಕೆಬೇಕು.

### ಮಗ್ಗಗಳು.

ನಮ್ಮ ಪ್ರಾಂತದಲ್ಲಿ ಒಟ್ಟು ೬೬೭೦೦ ಕೈಮಗ್ಗಗಳಿದ್ದು ಅವುಗಳ ಪೈಕಿ ಕೇವಲ ೧೭೦೦ ಮಗ್ಗಗಳೇ ಕೈನೂಲನ್ನು ಉಪಯೋಗಿಸುತ್ತವೆ ಉಳಿದವುಗಳೆಲ್ಲ ಇಲ್ಲಿಯ ಗಿರಣಿಯ ಅಥವಾ ವಿದೇಶೀ ನೂಲನ್ನೇ ಉಪಯೋಗಿಸುತ್ತವೆ ೧೭೦೦ ಮಗ್ಗಗಳು ವ್ಯವಸ್ಥೆಯಿಂದ ನಡೆದರೆ ದಿನಾಲು ೫೦೧ ಗಜ ಖಾದಿಯನ್ನು ಹುಟ್ಟಿಸಬಲ್ಲವು. ಒಬ್ಬ ಮನುಷ್ಯನಿಗೆ ವರ್ಷಕ್ಕೆ ಸರಾಸರಿಯಿಂದ ೧೩ ವಾರ ಅರಿವೆಯು ಹತ್ತುತ್ತದೆಂದು ಹಿಡಿದರೆ ನಮ್ಮ ಕರ್ನಾಟಕದಲ್ಲಿ ಹುಟ್ಟಿದ ಒಂದು ದಿವಸದ ಖಾದಿಯು ೩೯೦ ಜನರಿಗೆ ಒಂದು ವರ್ಷದ ತನಕ ಸಾಕಾಗಬಲ್ಲದು ಅಂದರೆ ವರ್ಷದ ಅಂತ್ಯಕ್ಕೆ ಸುಮಾರ ಹತ್ತುಲಕ್ಷ ಜನರಿಗೆ ಸಾಕಾಗುವಷ್ಟು ಖಾದಿಯು ಮಾತ್ರ ಹುಟ್ಟುವದಲ್ಲದೆ ಉಳಿದವರು ಪರಪ್ರಾಂತದ ಖಾದಿಯನ್ನಾಗಲಿ ಗಿರಣಿಯ ಅಥವಾ ವಿದೇಶೀಯ ಬಟ್ಟೆಗಳನ್ನಾಗಲಿ ಆಶ್ರಯಿಸಬೇಕಾಗುತ್ತದೆ.

### ಖಾದಿಯ ಪ್ರಸಾರ.

ವಿಜಾಪೂರ ಜಿಲ್ಹೆಯಲ್ಲಿ ಶುದ್ಧ ಖಾದಿಯನ್ನು ಜನರು ೧೦೦ ಕ್ಕೆ ೬ ಈ ಪ್ರಮಾಣದಂತೆ ಧರಿಸುತ್ತಾರೆ. ಬೆಳಗಾವ ಜಿಲ್ಹೆಯಲ್ಲಿಯೂ ಧಾರವಾಡ ಜಿಲ್ಹೆಯಲ್ಲಿಯೂ ಖಾದೀ ಧರಿಸುವವರ ಪ್ರಮಾಣವು ಅನುಕ್ರಮವಾಗಿ ೧೦೦ ಕ್ಕೆ ೩ ಮತ್ತು ೨ ಈ ಪ್ರಕಾರ ಇರುತ್ತದೆ. ಬಳ್ಳಾರಿ, ಉತ್ತರ ಕಾನಡಾ ದಕ್ಷಿಣ ಕಾನಡಾ ಜಿಲ್ಹೆಗಳಲ್ಲಿ ಈ ಪ್ರಮಾಣವು ೧೦೦ ಕ್ಕೆ ಒಂದರಂತೆ ಇರುತ್ತದೆ. ಒಂದು ಸಾವಿರಕ್ಕೆ ೫ ರಂತೆ ಮೈಸೂರ ಪ್ರಾಂತದ ಪ್ರಮಾಣವು ಈ ಪ್ರಕಾರ ಯಾವತ್ತು ಜಿಲ್ಹೆಗಳ ಸರಾಸರಿಯನ್ನು ತೆಗೆಯಲು ನಮ್ಮ ಕರ್ನಾಟಕದಲ್ಲಿ ೧೦೦ ಕ್ಕೆ ಇಬ್ಬರು ಮಾತ್ರ ಖಾದಿಯನ್ನು ಧರಿಸುವರಲ್ಲದೇ ಉಳಿದ ೯೮ ಜನರು ಪರದೇಶೀ ಬಟ್ಟೆಗಳನ್ನಾಗಲಿ, ನಮ್ಮಲ್ಲಿಯ ಗಿರಣಿಯ ನೂಲಿನ ಬಟ್ಟೆಗಳನ್ನಾಗಲಿ ಧರಿಸುವರು. ಅಂದಮೇಲೆ ಕರ್ನಾಟಕದಲ್ಲಿಯ ವಿಧಾಯಕ ಕೆಲಸವು ಎಷ್ಟರ ಮಟ್ಟಿಗೆ ಯಶಸ್ವಿಯಾಗಿರುತ್ತದೆಂಬವನ್ನು ವಾಚಕರೇ ಊಹಿಸಬಹುದು.

ಒಂದುವರೆ ವರ್ಷಗಳವರೆಗೆ ಮಹಾತ್ಮರ ಹೃದಯದ್ರಾವಕ ಉಪದೇಶಗಳೂ, ಇತರ ಪ್ರಸಿದ್ಧ ಪುಡಾರಿಗಳ ಮಾರ್ಮಿಕ ಉಪನ್ಯಾಸಗಳೂ, ದೇ. ಭ ಗಂಗಾಧರರಾಯರ ಕಳಕಳಿಯ ಭಾಷಣಗಳೂ, ಬೋರ್ಗಲ್ಲ ಮೇಲೆ ಮಳೆಗರೆದಂತೆ ವ್ಯರ್ಥವಾದವುಗಳೆಂದು ಬಹು ಖೇದದಿಂದ ಹೇಳಬೇಕಾಗುತ್ತದೆ. "ನಿಮ್ಮ ಪ್ರಾಂತದಲ್ಲಿ ಶುದ್ಧ ಖಾದಿಯನ್ನು ಧರಿಸುವವರ ಪ್ರಮಾಣವೇನು" ಎಂದು ಕಾಂಗ್ರೇಸದ ಅಧ್ಯಕ್ಷರಾದ ಹಕೀಮ ಅಜಮಲಖಾನರು ನನ್ನನ್ನು ಕೇಳಿದಾಗ "೧೦೦ ರಲ್ಲಿ ೧೫ ಜನರು" ಎಂದು ನಾನು ತಟ್ಟನೆ ಉತ್ತರವನ್ನು ಕೊಟ್ಟೆನು ಅದಕ್ಕೆ ಅವರು 'ಏನು ೧೦೦ ರಲ್ಲಿ ೧೫ ಜನರೇ ಖಾದಿಯನ್ನು ಧರಿಸುವವರೋ" ಇತರ ಪ್ರಾಂತಗಳಗಿಂತ ಬಹಳೇ ಕಡಿಮೆ ಪ್ರಮಾಣವಿರುಕ್ಕವು ಎಂದು ಉದ್ಗಾರವನ್ನು ತೆಗೆದರು. ಆಗ್ಗೆ ನನಗೆ ಇನ್ನೂ ನಿಜವಾದ ಪ್ರಮಾಣವು ತಿಳಿದಿದ್ದಿಲ್ಲ. ಹಿಂದುಗಡೆ ೧೦೦ ಕ್ಕೆ ಇಬ್ಬರೇ ಖಾದೀ ಧಾರಿಗಳೆಂದು ತಿಳಿದ ಕೂಡಲೆ ನನಗೆ ಅತ್ಯಂತ ಖೇದವೆನಿಸಿತು ಇಂಥ ಸುಲಭವಾದ ಖಾದೀ ಪ್ರಸಾರದ ಕೆಲಸಕ್ಕೆ ಇಷ್ಟು ದೀನಾವಸ್ಥೆಯಾದ ಮೇಲೆ ಉಚ್ಚತರವಾದ ಕಾಯದೇ ಭಂಗದ ಕೆಲಸವನ್ನು ನಾವು ಹೇಗೆ ಸಿದ್ಧಿಗೊಯ್ಯಬಲ್ಲೆವು.

### ದ್ರವ್ಯಸಂಚಯ.

ಹೋದ ವರ್ಷ ಒಟ್ಟಿಗೂಡಿ ಸುಮಾರು ೧,೮೦,೦೦೦ ರೂಪಾಯಿಗಳು ಕರ್ನಾಟಕದಲ್ಲಿ ಟಿಳಕಸ್ವರಾಜ್ಯ ಫಂಡಿಗಾಗಿ ಕೂಡಿದ್ದು ಈ ವರ್ಷ ಜುಲೈ ತಿಂಗಳ ವರೆಗೆ ಕೇವಲ ೨೮,೦೦೦ ರೂಪಾಯಿಗಳು ಮಾತ್ರ ಕೂಡಿರುತ್ತವೆ. ಸುಮಾರು ಎರಡು ವರ್ಷಗಳಿಂದ ಹಲಕೆಲವು ಬಗೆಯಾಗಿ ಕೇಳಿಯೂ, ಓದಿಯೂ, ಅಸಹಕಾರಿತೆಯ ತತ್ವವನ್ನು ಮನಗಂಡವರಿಂದ ನಾವು ನಿಜವಾಗಿ ಈ ವರ್ಷ, ಹೋದ ವರ್ಷಕ್ಕಿಂತ ಹೆಚ್ಚುಧನವನ್ನು ಕೂಡಿಸಬೇಕಾಗಿತ್ತು. ಅಷ್ಟೂ ಆಗದೆ ಹೋದರೆ ನಮ್ಮ ಕರ್ನಾಟಕದ ಪ್ರಗತಿಯಾಗಿರುವದೆಂದು ಯಾವ ಪ್ರಮೇಯದಿಂದ ಸಿದ್ಧವಾಗಬಹುದು

ಕರ್ನಾಟಕದಲ್ಲಿಯ ಪ್ರತಿಯೊಬ್ಬ ವ್ಯಕ್ತಿಯು ಒಂದೊಂದು ದುಡ್ಡಿನಂತೆ ಕೊಟ್ಟರೂ ಎರಡು ಲಕ್ಷಕ್ಕಿಂತ ಹೆಚ್ಚು ರೂಪಾಯಿಗಳು ಸಹಜವಾಗಿ ಕೂಡಬಹುದು ನಾಟಕ, ಸಿನೇಮಾ ಗಳನ್ನು ನೋಡಲಿಕ್ಕೆ ಶ್ರೀಮಂತರೂ ಬಡವರೂ ಕೂಡಿಯೇ ದ್ರವ್ಯವನ್ನು ವೆಚ್ಚ ಮಾಡುತ್ತಾರೆ ಚಹಾ, ಬೀಡಿ ಮುಂತಾದ ಚಟಗಳ ಸಲುವಾಗಿ ವರ್ಷಕ್ಕೆ ನೂರಾರು ರೂಪಾಯಿಗಳ ಅಪವ್ಯಯವಾಗುತ್ತಲಿದೆ. ಯಾವದಾದರೊಂದು ಜಾತ್ರೆಯು ಒಂತೆಂದರೆ ೨೦ ೩೦ ಸಾವಿರ ರೂಪಾಯಿಗಳು ಒಂದೇ ಊರಲ್ಲಿ ಕೂಡಬಹುದು ಆದರೆ ರಾಷ್ಟ್ರೀಯ ಫಂಡಿಗೆ ಕೊಡಿರೆಂದು ಕೇಳಿದರ ಮಾತ್ರ ಏಕೆ ತಲೆನೋವು ಏಳತ್ತದೋ ತಿಳಿಯದು

### ಕಾಂಗ್ರೇಸಭಾಸದರು

ಕರ್ನಾಟಕದಲ್ಲಿ ಕಳೆದ ವರ್ಷ ೭೩,೬೯೪ ಜನರು ಕಾಂಗ್ರೇಸದ ಸಭಾಸದರಾಗಿದ್ದರು ಈ ವರ್ಷ ಇಂದಿನ ವರೆಗೆ ೮,೬೮೫ ಸಭಾಸದರು ದೊರೆಯಬೇಕಾದರೆ ಬಹು ಪ್ರಯಾಸವಾಯಿತು ಹೋದ ವರ್ಷಕ್ಕಿಂತ ಈ ವರ್ಷ ಹೆಚ್ಚು ಜನರು ತುರಂಗದಲ್ಲಿರುತ್ತಾರೆ. ನಮ್ಮ ಹಾರ್ಡೀಕರ ರಂಥವರಲೀ ಮಹಾತ್ಮರಿಗೂ ಸಹ ಬಂದಿವಾಸವನ್ನನುಭವಿಸಬೇಕಾಯಿತು. ಇಷ್ಟಾದರೂ ಸಹ ಕಾಂಗ್ರೇಸ ಸಭಾಸದರಾಗಲಿಕ್ಕೆ ಜನರು ಹಿಂಜರಿಯುತ್ತವದಂದರೆ ಹಾಸ್ಯಾಸ್ಪದವೇಸರಿ.

---

ಸೂಚನೆ:— ಸ್ಥಳಾಭಾವದ ಮೂಲಕ ದೇ. ಭ. ಹಾರ್ಡೀಕರರ ಪತ್ರದ ಉಳಿದ ಭಾಗವ ಮುದ್ರಿಸಲು ಅನುವು ದೊರೆಯದಿದ್ದಕ್ಕಾಗಿ ವಿಷಾದವೆನಿಸುತ್ತದೆ. ಎಲ್ಲರೂ ರಾಷ್ಟ್ರೀಯ ಸಭೆಯ ಕಾರ್ಯವನ್ನು ಯಶಸ್ವಿಯಾಗಿ ಮಾಡುವದಕ್ಕೆ ಪ್ರಯತ್ನಿಸಬೇಕೆಂಬವೇ ಅವರ ಪತ್ರದ ಸಾರವು.

ಸಂಪಾದಕ

ಸರಸ್ವತೀ ವಾಚನಾಲಯ.

ಶ್ರೀ. ರವೀಂದ್ರನಾಥ ಟಾಗೋರ ಇವರ (Waterfall) ವಾಟರಫಾಲ್‌ದ

ಕನ್ನಡ ಭಾಷಾಂತರವು.

# ಮುಕ್ತಧಾರಾ.

ನಾಟಕ.

ಭಾಷಾಂತರಕಾರ—ಜಿ. ಆರ್. ಕುಲಕರ್ಣಿ.

ಮುದ್ರಣವಾಗುತ್ತಲಿದೆ } ಬೆಲೆ ೧ ರೂ. ಪೋಸ್ಟೇಜ ಬೇರೆ.

ವಿಳಾಸ:—ಎಸ್. ಎನ್. ಹೊಸಮನಿ ಗುಳೇದಗುಡ್ಡ.

ಏಜಂಟರು ಬೇಕು! ಏಜಂಟರು ಬೇಕು!!

ನಂಬರ ೧ ನೇ ನಿರ್ಮಲವಾದ

## ನೀಲಗಿರಿ ತೈಲವು.

ನಮ್ಮಲ್ಲಿ ಬಹಳೇ ಹಸನಾಗ ನಂಬರ ೧ ನೇ ಶುದ್ಧ ನೀಲಗಿರಿ ತೈಲವು ಸಿಗುತ್ತದೆ. ವ್ಯಾಪಾರಸ್ಥರಿಗೆ ಬಹಳೇ ಸೋಯಿವರದಲ್ಲಿ ತೈಲವು ಸಿಗುವದು. ನಿಕ್ಕಿ ೨೪ ಔಂಸ ತೈಲದಬಾಟ್ಲಿ ಅಥವಾ ಗಪ್ಪ ೧ ಕ್ಕೆ ರೂಪಾಯಿ ೩—ಡಜನ್‌ಕೆ ರು.೩೦ ವಿಶೇಷ ಮಾಹಿತಿ ಪತ್ರದ್ವಾರಾ.

ಬಿ. ಎ ಪೈ ಕಂಪನಿ.
ಪೋಷ್ಟ ಹೊನ್ನಾವರ.
ಜಿಲ್ಹಾ ಉತ್ತರಕಾನಡಾ

## ಇಂಡಿಯಾ ಪ್ರಾವ್ಹಿಡೆಂಟ ಕಂ. ಲಿ. ಕಲಕತ್ತಾ.

ಮಧ್ಯಮ ಸ್ಥಿತಿಯ ಕುಟುಂಬವಾರರಿಗೆ ಈ ಕಠಿಣ ಕಾಲವಲ್ಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಬಿಗಿಯಾಗಿರುವದು ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರೆಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ.

V. J PARVATIKER.
General Agent, BAGALKOT.

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಏಜಂಟರು) ## ಅತ್ಯುತ್ತಮ (ಬೇಕು

ಮಶಿ ಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೮—೦ | ಟ. ಖ. |
| ೧೦೦ ಚೀಟಿಗಳಿಗೆ | ೦—೧೪—೦ | |
| ೪೦ ಔಂಸ ಮಶಿ ಪುಡಿಗೆ | ೦—೪—೦ | ಬೇರೆ. |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸ:—ಕರ್ನಾಟಕ ಇಂಕ ಕಂಪನಿ, ಬಾಗಲಕೋಟೆ.

## ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರದ್ವಾರದಿಂದ, ಉತ್ತಮವಾದ ಸ್ವದೇಶೀ ಸಾಬೂಣವನ್ನು ಮಾಡುವದಕ್ಕೆ ಕಲಿಸುವೆವು. ಫೀ. ರೂ. ೫. ಉದ್ಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು.

ಕಲಾಭುವನ—ಶಾಸ್ತ್ರೀಯ ಶಾಲಾ ಧಾರವಾಡ.

## ವಜ್ರದ ಉಂಗುರುಗಳು.



ಈ ಉಂಗರಗಳು ವಿಲಾಯತಿಯಲ್ಲಿ ತಯಾರಿಸಿದ್ದು. ಅತ್ಯುತ್ತಮವಾದ ವಜ್ರದ ಕಲ್ಲುಗಳನ್ನು ಇಟ್ಟು ಸೀಮೆ ಬಂಗಾರದಿಂದ ತಯಾರಿಸಿ ಮೇಲುಗಡೆ ಅಪರಂಜಿ ಬಂಗಾರದ ಗಿಲೀಟುಮಾಡಿದೆ. ನೋಡಲು ಬಹು ಲಕ್ಷಣವಾಗಿ ಕಾಣುವದು. ಇದು ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು.

ಕ್ರಯ ೧ಕ್ಕೆ ರೂ. ೨-೦-೦. ಕ್ರಯ ೩ಕ್ಕೆ ರೂ. ೫-೮-೦.

ವಿಳಾಸ:— ವಿ. ಎ. ಎಸ್. ಪಾಣಿ ಕಂಪನಿ.
ಸಾಹುಕಾರ ಪೇಟ ಮದರಾಸು.

## ಟಿಕ್ ಟಿಕ್ ಎಂಬ ಶಬ್ದವನ್ನು ಕೊಟ್ಟ ಮಾತ್ರಕ್ಕೆ ಗಡಿಯಾರಗಳೇ.




ಚಕ್ರಗಳಲ್ಲಿಯೂ ಗಂಟೆ ತೋರಿಸುವ ನಂಬರುಗಳ ಮೇಲೆಯೂ ಕೇವು ಕಲ್ಲು ಕೆತ್ತಲ್ಪಟ್ಟಿವೆ ಎಂದು ಇದನ್ನು ತರಿಸುವರಿಗೆ 10-15 ಬಹುಮಾನಗಳೊಡನೆ 5-6 ವರುಷಗಳು ಗ್ಯಾರಂಟಿ ಸಹಿತ 3-4 ರೂಪಾಯಿಗಳಿಗೆ ಕೊಡುವೆವೆಂದು ಪ್ರಚುರವಾಗುವ ಪ್ರಕಟನೆಗಳನ್ನು ನೋಡಿ ಬೆರಗಾಗಿ ನಿಮ್ಮ ಹಣವನ್ನು ಕಳಕೊಳ್ಳಬೇಡಿರಿ ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸಗಳಿಂದ ತಯರಿಸಿದೆ, ಗಾಳಿಯೂ ಧೂಳೂ ಸೇರದಂತೆ ಗ್ಲಾಸ್‌ಡೋಮು ಇರುವದು. ಸರಿಯಾದ ಕಾಲವನ್ನು ತೋರಿಸುವದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವು ಸರಿಮಾಡಿಕೊಳ್ಳಬಹುದು. ನೋಟಕ್ಕೆ ಗಂಭೀರವಾಗಿಯೂ ಸುಂದರವಾಗಿಯೂ ಇರುವದು. ಇದು ಇಂಗ್ಲೀಷ ನಮೂನೆಯುಳ್ಳದ್ದು. ಈ ಗಡಿಯಾರದಲ್ಲಿ ಯಾರೇ ಆಗಲಿ ಸುಲಭವಾಗಿ ಗಂಟೆ ನೋಡಬಹುದು. ಅಷ್ಟಂತ ಒಹವಾಗಿ ವರ್ಣನೆ ಮಾಡುವದೇತಕ್ಕೆ? ಒಂದನ್ನು ತರಿಸಿನೋಡಿರಿ. ತಿಳಿಯುವದು. ೪ ವರುಷಗಳ ಗ್ಯಾರಂಟಿ ಸಹಿತ ಕ್ರಯ ೪-೮-೦

ಮ್ಯಾನೇಜರ,—

ಧೈರ್ಯ ಲಕ್ಷ್ಮಿ ಅಂಡ ಕೋ;
ಪೋ॥ ಬಾ॥ ನಂಬರು ೨೬೫ ಮದ್ರಾಸು.

☞ ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ವಿದ್ಯಾರಣ್ಯ ಮುದ್ರಾಲಯದಲ್ಲಿ ಶ್ರೀನಿವಾಸ ರಾಜೇರಾವ ಮಂಗಳವೇಡೆ ಇವರು ಮುದ್ರಿಸಿದರು ಮತ್ತು ಅಲ್ಲಿಯೇ ಕಮಲಾಚಾರ್ಯ ಬಂಡಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ಚಿತ್ತರಂಜನದಾಸರು.

R. N. 1589

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟ ಶ್ರಾವಣ ವದ್ಯ ೯ ಶಕೆ ೧೮೪೪ | ಸಂಚಿಕೆ ೩೬
ಗುರುವಾರ ತಾ ೧೭ ಅಗಷ್ಟ ೧೯೨೨.

## ಮಹಾತ್ಮರ ನುಡಿಯು.

### ರಾಷ್ಟ್ರೀಯ ಶಿಕ್ಷಣ.

(ಯಂಗ ಇಂಡಿಯಾ ತಾ॥ ೧-೯-೨೧.)

ರಾಷ್ಟ್ರೀಯ ಶಿಕ್ಷಣದ ಬಗ್ಗೆ ಇರುವ ನನ್ನ ವಿಚಾರಗಳನ್ನು ಕುರಿತು ಅನೇಕರು ಅನೇಕ ಮಾತುಗಳನ್ನು ಆಡಹತ್ತಿರುವದರಿಂದ ಆದರ ಬಗ್ಗೆ ನನ್ನ ನಿಜವಾದ ಅಭಿಪ್ರಾಯವನ್ನು ಇಲ್ಲಿ ಹೇಳುವದು ಯೋಗ್ಯವಾಗದೆ ಇರದು, ಈಗಿನ ಶಿಕ್ಷಣವು ಅನ್ಯಾಯುವಾದ ಸರಕಾರದ ಸಂಸರ್ಗದಿಂದ ನಿಂದ್ಯವಾಗಿರುವದಲ್ಲದೆ ಕೆಳಗಿನ ಮೂರು ಮುಖ್ಯ ಮಾತುಗಳಲ್ಲಿ ದೂಷಿತವಾಗಿರುವದು.

೧ ಚಿರಕಾಲದ ನಮ್ಮ ಸ್ವಂತ ಸಂಸ್ಕೃತಿಯನ್ನು ಬದಿಗೊತ್ತಿ ಕೇವಲ ಪರಕೀಯರ ಸಂಸ್ಕೃತಿಯ ಆಧಾರದ ಮೇಲೆಯೇ ಅದನ್ನು ಸಾಗಿಸುತ್ತಿರುವದು.

೨ ನಮ್ಮ ಅಂತಃಕರಣಗಳನ್ನು ವಿಕಾಸಿಸುವದನ್ನೂ, ಕೈಗಾರಿಕೆಗಳನ್ನು ಮತ್ತು ನಮ್ಮ ಕುಶಲತೆಯನ್ನು ಹೆಚ್ಚಿಸುವದನ್ನೂ ತೀರ ಬಿಟ್ಟು ಗೊಟ್ಟು ಕೇವಲ ಮೇಧಾಶಕ್ತಿಯನ್ನಷ್ಟೇ ವರ್ಧಿಸುತ್ತಿರುವದು.

೩ ಪರಕೀಯರ ಭಾಷೆಯ ಮಧ್ಯಸ್ತಿಕೆಯಿಂದ ನಿಜವಾದ ಶಿಕ್ಷಣವು ಎಂದೂ ದೊರೆಯಲಾರದೆಂಬದನ್ನು ಮರೆತಿರುವದು

ಇನ್ನು ಈ ಮೂರೂ ದೋಷಗಳನ್ನು ಪರೀಕ್ಷಿಸಿ ನೋಡೋಣ. ಮೊದಲಿನಿಂದಲೇ ಕ್ರಮಿಕ ಪುಸ್ತಕಗಳಲ್ಲಿ ಇಲ್ಲಿಯ ಹುಡುಗ ಹುಡುಗಿಯರಿಗೆ ಅವರ ಮನೆಗಳಲ್ಲಿ ಒದಗಬಹುದಾದ ಅಥವಾ ಉಪಯೋಗ ಬೀಳಬಹುದಾದ ಸಂಗತಿಗಳ ಬಗ್ಗೆ ಪಾಠಗಳಿರದೆ, ಅವರು ಕನಸಿನಲ್ಲಿಯೂ ಕಾಣದಾದ ಪರಕೀಯರ ಹರಟೆಯ ಪಾಠಗಳೇ ಅವರಿಂದ ಓದಲ್ಪಡುವವು. ತಮ್ಮ ಪ್ರಪಂಚದಲ್ಲಿಯ ಯುಕ್ತಾಯುಕ್ತತೆಯ ವಿಚಾರವನ್ನು ಹುಡುಗರು ಈ ಕ್ರಮಿಕ ಪುಸ್ತಕಗಳಲ್ಲಿಯ ಪಾಠಗಳಿಂದೇನು ಕಲಿಯುವಂತಿಲ್ಲ. ನೆರೆಹೊರೆಯವರಾದ ತನ್ನ ದೇಶಬಾಂಧವರಲ್ಲಿ ಅಭಿಮಾನವನ್ನು ತಾಳಲಿಕ್ಕೆ ಹೇಳುವದಂತೂ ಇಲ್ಲವೇ ಇಲ್ಲ. ಹುಡುಗನು ಹೆಚ್ಚಿಚ್ಚು ಕಲಿತಂತೆ ತನ್ನ ಊರು ಮನೆಗಳ ಪರಿಚಯವು ಅವನಿಗೆ ಕಡಿಮೆ ಆಗುತ್ತಾ ಗುತ್ತ ಅವನು ಶಿಕ್ಷಣವನ್ನು ಮುಗಿಸಿಬಂದಾಗ್ಯೆ ತನ್ನ ಊರು ಕೇರಿಯವರನ್ನು ತೀರ ಅರಿಯದವನಾಗುವನು. ಪ್ರಪಂಚದ ಮಾಧುರ್ಯವು ಅವನಿಗೆ ತೋರದಾಗುವದು. ತನ್ನ ಹಳ್ಳಿಯ ಆಟ ನೋಟಗಳು ಅವನಿಗೆ ತಿಳಿಯದೆ ಹೋಗುವವು. ಅವರ ಪೂರ್ವಜರ ಸುಧಾರಣೆಯೆಂದರೆ -- ಕಾಡು, ಹೇಡಿ, ಮೂಢಭಾವನೆಯುಳ್ಳದು ಮತ್ತು ಬಾಳಿಗೆ ಬಾರದ್ದು – ಎಂದು ಅವರಿಗೆ ಕಲಿಸಲ್ಪಡುವದು. ಇದರಿಂದ ನಮ್ಮ ಸಂಸ್ಕೃತಿಯ ಮೇಲಿನ ಅವರ ಅಭಿಮಾನವು ನಷ್ಟವಾಗದೆ ಉಳಿಯುವದೆಂತು? ಈಗಿನ ಎಲ್ಲ ಕಲಿತವರೊಳಗೆ ಇನ್ನೂ ಕೆಲವರಲ್ಲಿ ಕಂಡು ಬರುವ ಸ್ವದೇಶಾಭಿಮಾನವು, ಅದನ್ನು ನಿರ್ಮೂಲಮಾಡ ಹೊರಟಿರುವ ಈ ಶಿಕ್ಷಣದ ಪ್ರಘಾತವನ್ನು ತಾಳಿಕೊಂಡು, ಅವರ ಮೇಲಿನ ಹಿಂದಿನ ಸಂಸ್ಕಾರದ ಜೋರಿನಿಂದಲೇ ಉಳಿದಿರುವದು. ಈ ಶಿಕ್ಷಣ ಸುಧಾರಣೆಯ ಕೆಲಸವನ್ನು ನನಗೆ ಒಪ್ಪಿಸಿದಲ್ಲಿ ನಾನು ಮೊಟ್ಟ ಮೊದಲು ಈಗಿನ ಕ್ರಮಿಕ ಪುಸ್ತಕಗಳನ್ನು ಕಿತ್ತಿ ಒಗೆದು ನಮ್ಮ ಊರು, ನಮ್ಮ ಮನೆ, ನಮ್ಮ ನಾಡಿನಲ್ಲಿ ನಡೆದಿರುವ ನಮ್ಮ ಆಯುಷ್ಯ ಕ್ರಮವನ್ನು ಹೋಲುವಂಥ, ಮತ್ತು ನಮ್ಮ ಪ್ರಪಂಚ, ನಮ್ಮ ಬಾಳುವಿಗೆ ಉಪಯುಕ್ತವಾದ ಸಂಗತಿಗಳಿಂದೊಡಗೂಡಿದ ಪುಸ್ತಕಗಳನ್ನು ಬರೆಯಿಸುವದನ್ನು ಮಾಡುವೆನು.

ಇನ್ನು ಎರಡನೇ ದೋಷವೆಂದರೆ, ಇತರ ರಾಷ್ಟ್ರಗಳಲ್ಲಿ ಏನಾದರೂ ಇರಲಿ, ಹಿಂದುಸ್ಥಾನದಲ್ಲಂತೂ — ಎಲ್ಲಿ ೧೦೦ ಕ್ಕೆ ೮೦ ಜನರು ಒಕ್ಕಲತನದಿಂದಲೂ, ಹತ್ತು ಜನರು ಮಿಕ್ಕ ವ್ಯವಸಾಯಗಳಿಂದಲೂ ಹೊಟ್ಟೆ ಹರಕೊಳ್ಳುವಂಥ ದೇಶದಲ್ಲಿ-ಕೇವಲ ನಾಲ್ಕು ಅಕ್ಷರಗಳನ್ನು ಓದು ಬರೆಯಲಿಕ್ಕೆ ಮಾತ್ರ ಕಲಿಸುವದರಲ್ಲಿ ಜನರ ಪೂರ್ವ ವಯಸ್ಸನ್ನೆಲ್ಲ ಹರಣ ಮಾಡುವಂಥ ಶಿಕ್ಷಣ ಪದ್ಧತಿಯಿಂದ ಅವರನ್ನು ಮುಂದೆ ವಯಸ್ಸು ಹೋದ ಮೂಲಕ ಯಾವದೇ ಉದ್ಯೋಗವನ್ನು ಕೈಕೊಳ್ಳುವದಕ್ಕಾಗಿ ಅಸಮರ್ಥರನ್ನಾಗಿ ಮಾಡುವದೆಂದರೆ, ಒಂದು ದೊಡ್ಡ ಘಾತಕವೇ ಸರಿ. ನಮ್ಮ ಆಯುಷ್ಯದ ದೊಡ್ಡ ಭಾಗವು ನಮ್ಮ ಹೊಟ್ಟೆಯ ಉದ್ಯೋಗದಲ್ಲಿಯೇ ವೆಚ್ಚವಾಗುತ್ತಿರುವದರಿಂದ ಚಿಕ್ಕಂದಿನಿಂದಲೇ ಅಂಥ ಉದ್ಯೋಗದ ವಿಷಯಕ್ಕೆ ನಮ್ಮ ಬಾಲ ಬಾಲಿಕೆಯರಲ್ಲಿ ಆದರವನ್ನು ಹುಟ್ಟಿಸುವಂತೆ ಎಚ್ಚರಿಸಬೇಕು. ನಮ್ಮ ಹೊಟ್ಟೆಗಾಗಿ ನಾವು ಮೈಮಣಿಸಿ ದುಡಿಯುವದು ನೀಚವೆಂದೂ ತುಚ್ಛವಾದದ್ದೆಂದೂ ಅವರು ತಿಳಿದುಕೊಳ್ಳದಂತೆ ಎಚ್ಚರ ಪಡಬೇಕು. ಒಕ್ಕಲಿಗನ ಮಗನು ಓದು ಬರೆ ಕಲಿತನಂತರ ತನ್ನ ಒಕ್ಕಲತನಕ್ಕೆ ಈಗಿನಂತೆ ನಿರುಪಯೋಗಿಯಾಗುವದಕ್ಕೆ ಏನೂ ಕಾರಣವಿರುವದಿಲ್ಲ. ಶಾಲೆಗೆ ಹೋಗುತ್ತಿರುವ ನಮ್ಮ ಹುಡುಗ ಹುಡಗಿಯರು ಮೈಮಣಿಸಿ, ಕೆಲಸ

ಎಷ್ಟು ಆದರಭಾವವಿತ್ತೆಂಬುದು ಸ್ಪಷ್ಟವಾಗುತ್ತದೆ. ನಾಗಪುರದ ರಾಷ್ಟ್ರೀಯ ಸಭೆಯ ನಿರ್ಣಯವಾದ ಕೂಡಲೇ ಇವರು ತಮ್ಮ ವಕೀಲಿಯ ಉದ್ಯೋಗಕ್ಕೆ ಶರಣು ಹೊಡೆದರು. ಪ್ರತಿ ತಿಂಗಳಿಗೆ ೧೦-೫೦ ಸಾವಿರ ರೂಪಾಯಿಗಳು ಬರುತ್ತಿರುವಾಗ ಅವುಗಳನ್ನೆಲ್ಲ ತುಚ್ಛೀಕರಿಸಿ ದೇಶಸೇವೆಗಾಗಿ ಇವರ ಮುಂದುವರಿದು ಬಂದರು. ಇದಕ್ಕಿಂತ ಮಹತ್ವದ್ದೆಂದರೆ ಇವರು ವಕೀಲಿಯನ್ನು ಬಿಟ್ಟು ಕೊಡುವಾಗ ಇವರಿಗೆ ೩ ಲಕ್ಷ ರೂಪಾಯಿಗಳ ಸಾಲವಿತ್ತು. ಇಂಥ ಪರಿಸ್ಥಿತಿಯಲ್ಲಿ ಕೂಡ ಇವರು ಏನೂ ವಿಚಾರ ಮಾಡದೆ ತಮ್ಮ ಉದ್ಯೋಗಕ್ಕೆ ಶರಣು ಹೊಡೆದರು. ಕಡೆತನಕ ಶರಣು ಹೊಡೆದರು. ಇದು ದೇಶಭಕ್ತಿಯ ಪರಮಾವಧಿಯಲ್ಲವೇ?

ಇವರ ಸ್ವಾರ್ಥತ್ಯಾಗಕ್ಕಂತೂ ಎಣೆಯೇ ಇಲ್ಲ. ಕಲಕತ್ತೆಯ ಪಿಕೆಟಿಂಗ ನಡೆದಾಗ ಇವರ ಪತ್ನಿಯವರು ಸಹ ತುರಂಗಕ್ಕೆ ಹೋಗಬೇಕಾಯಿತೆಂಬದನ್ನು ಯಾರೂ ಮರೆತಿರಲಿಕ್ಕಿಲ್ಲ. ಕೇವಲ ದ್ರವ್ಯತ್ಯಾಗವನ್ನು ಎಷ್ಟೋ ಜನರು ಮಾಡುತ್ತಿರಬಹುದು, ಆದರೆ ತಮಗೆ ಅಥವಾ ಬಾಂಧವರಿಗೆ ಕಾರಾಗೃಹವಾಸದಂಥ ಆಪತ್ತು ಬಂದರೂ ಸಹ ಅದಕ್ಕೆ ತಲೆಗೊಟ್ಟು ನಿಲ್ಲುವ ಧೈರ್ಯವು ಬಹಳ ಜನರಿಗೆ ಇರುವದಿಲ್ಲ. ಮಹಾತ್ಮಾಜಿಯವರ ಈ ಅಸಹಕಾರ ಚಳವಳಿಯಿಂದ ಆ ಧೈರ್ಯವಾದರೂ ಜನರಲ್ಲಿ ಅಂಕುರಿಸಹತ್ತಿರುವದೆಂಬದಾಗಿ ತೋರುತ್ತದೆ. ಅವರೂ ತಮ್ಮ ಪ್ರಿಯ ಪತ್ನಿಯವರೂ ಒಬ್ಬನೇ ಮಗನೂ ತುರಂಗಕ್ಕೆ ಹೋಗುವಾಗ ದಾಸರು ಏನೂ ಚಿಂತಿಸದೆ ದೇಶಸೇವೆಗಾಗಿ ಎಲ್ಲರೂ ಈ ರೀತಿಯಾಗಿ ವರ್ತಿಸಬೇಕೆಂದು ಅವರು ತಮ್ಮ ಪತ್ನಿ ಪುತ್ರರನ್ನು ಪ್ರೋತ್ಸಾಹಿಸಿದರೆಂದ ಮೇಲೆ ಇವರು ಎಷ್ಟು ಸ್ವಾರ್ಥತ್ಯಾಗಿಗಳಿರಬಹುದು? “ ತಾನು ತನ್ನದು ” ಎಂಬ ಅಭಿಮಾನವೇ ಅವರಲ್ಲಿ ಉಳಿದಿರುವದಿಲ್ಲ. ಕೇವಲ ಶ್ಯಾವಿಯ ಬಟ್ಟೆಗಳನ್ನುಟ್ಟರೆ ತ್ಯಾಗವಾಗಲಾರದು. ನಿಜವಾದ ತ್ಯಾಗವನ್ನು ನೋಡಬೇಕಾದರೆ ದಾಸರ ಕಡೆಗೆ ದೃಷ್ಟಿಯನ್ನು ಚಲ್ಲಬೇಕಾಗ ವದು.

ಈ ಎಲ್ಲ ಸದ್ಗುಣಗಳಿಂದಲೇ ದಾಸರು ಇಷ್ಟು ಲೋಕಪ್ರಿಯರಾಗಿರುವರು. ಇವರ ಆಚರಣೆಯಾದರೂ ಬಹಳ ಪವಿತ್ರವಾದದ್ದು. ಅಸಹಕಾರ ಚಳವಳಿಯು ಬಂಗಾಲದಲ್ಲಿ ಇಷ್ಟು ಪ್ರಸಾರವಾಗಲು ದಾಸರೇ ಕಾರಣರು. ಬಂಗಾಲದಲ್ಲಿಯ ವಿದ್ಯಾರ್ಥಿಗಳಾಗಲಿ, ವಕೀಲರಾಗಲಿ, ತಮ್ಮ ವ್ಯವಸಾಯವನ್ನು ಬಿಟ್ಟುಕೊಟ್ಟು ರಾಷ್ಟ್ರಸೇವೆಗೆ ಮುಂದೆ ಬಂದದ್ದು ದಾಸರಿಂದಲೇ. ಇಂಥ ಮಹಾ ಪುರುಷನನ್ನು ಸರಕಾರದವರು ಕಾರಾಗೃಹದಲ್ಲಿ ಆರುತಿಂಗಳುಗಳವರೆಗೆ ಇರಿಸಿದ್ದರಲ್ಲವೇ? ಅಥವಾ ಪರಮಾತ್ಮನ ಇಚ್ಛೆಯು ಇಂಥ ಸದ್ಗುಣಿಗಳನ್ನು ಪೀಡಿಸುವದರಿಂದಲೇ ಈ ರಾಜ್ಯಪದ್ಧತಿಯ ಅವತಾರ ಸಮಾಪ್ತಿಯಾಗಬೇಕೆಂದು ಇದ್ದಂತೆ ತೋರುತ್ತದೆ.

ಮಹಾತ್ಮಾಗಾಂಧಿಯವರು ಸ್ವರಾಜ್ಯಮಂದಿರದಲ್ಲಿ ಪ್ರವೇಶಿಸಿ ಸ್ವರಾಜ್ಯದೇವತೆಯ ಆರಾಧನೆಯನ್ನು ನಡಿಸಿರುವಾಗ, ಹಿಂದುಸ್ಥಾನಕ್ಕೆ ಮುಖಂಡರು ಇಲ್ಲದಂತಾದ ಕಾಲದಲ್ಲಿ ದೇಶಬಂಧು ದಾಸರು ಮುಕ್ತರಾದದ್ದು ಹಿಂದುಸ್ತಾನದ ಸುದೈವವೇ ಸರಿ. ಇಂಥ ಮಹಾಪುರುಷರಿಗೆ ವೃತ್ತಪತ್ರಗಳ ಪ್ರತಿನಿಧಿಯೋರ್ವನು “ ತಾವು ವಕೀಲಿಯನ್ನು ಪುನಃ ಪ್ರಾರಂಭ ಮಾಡುವಿರೆಂದು ದಟ್ಟವಾರ್ತೆಯದೆ ಇದು ನಿಜವೋ ” ಎಂದು ಕೇಳಲಾಗಿ ನಾನು ಪುನಃ ವಕೀಲಿಯನ್ನು ಮಾಡುವದೆಂದರೆ ತೀರ ಲಾಂಛನಾಸ್ಪದವೆಂದು ಉತ್ತರವನ್ನು ಕೊಟ್ಟರು. ಆದರೆ ಚ[illegible]ರ್ಥವು ಸಾಗದಿದ್ದಲ್ಲಿ ಯಾರಾದರೂ ಅನಿವಾರ್ಯ ಪಕ್ಷಕ್ಕೆ ಆ [illegible]ದ್ಯೋಗವನ್ನು ಕೈಕೊಂಡರೆ ತಾವು ಅವರನ್ನು ದೂಷಿಸಲಾರರೆಂ[illegible] ಹೇಳಿದರು. ಅಂದಮೇಲೆ ಚಿತ್ತರಂಜನರು ಕೆಲವು [illegible]ರವನ್ನು ವಿರೋಧಿಸುತ್ತಾರೆಂಬ

ಗೊಂದಲವನ್ನೆಬ್ಬಿಸಿದ ಜನರ ಪೋರೆಯು ಬಾಡಿಹೋಯಿತು. ಆರುತಿಂಗಳಲ್ಲಿ ಅವರಿಗೆ ದೇಶದ ಪರಿಸ್ಥಿತಿಯು ಗೊತ್ತಿಲ್ಲದ್ದರಿಂದ ಸದ್ಯಸ್ಥಿತಿಯಮೇಲೆ ತಮ್ಮ ಮತವನ್ನು ಪ್ರಕಟಿಸಲು ಅವರು ಸಮರ್ಥರಾಗಲಿಲ್ಲ. ಆದರೆ ಸಾಧಾರಣವಾಗಿ ಅವರ ಅಭಿಪ್ರಾಯವು ಪ್ರಚಲಿತವಾದ ಶಾಂತಿಮಯ ಅಸಹಕಾರವನ್ನು ಮುಂದೆ ಸಾಗಿಸಬೇಕೆಂದೇ ಇರುತ್ತದೆಂಬದಾಗಿ ತರ್ಕ ಮಾಡಿದರೆ ಬಹುಶಃ ತಪ್ಪಾಗಲಿಕ್ಕಿಲ್ಲ. ಇಂಥ ಮುಖಂಡರು ಈಗ ಅಧ್ವರ್ಯುತ್ವವನ್ನು ಸ್ವೀಕರಿಸಿ ದೇಶದಲ್ಲಿ ಕೆಲವೆಡೆಗೆ ಉಂಟಾದ ನಿರುತ್ಸಾಹವನ್ನು ನಾಶಗೊಳಿಸಿ ಸ್ವರಾಜ್ಯ ಸೋಪಾನಗಳನ್ನು ಭರಭರನೆ ಹತ್ತುವಂತೆ ರಾಷ್ಟ್ರವನ್ನು ಪ್ರೋತ್ಸಾಹಗೊಳಿಸುವದು ಅತ್ಯವಶ್ಯವದೆ. ಪರಮಾತ್ಮನು ಇವರ ಆಯುರಾರೋಗ್ಯವನ್ನು ಹೆಚ್ಚಿಸಲೆಂದು ಹಾರೈಸುತ್ತೇವೆ. ಮತ್ತು ಇಂಥ ಮಹನೀಯರು ಉಪದೇಶಿಸುವ ಉಪದೇಶಾಮೃತವನ್ನು ಅನುಸರಿಸುವದಕ್ಕೆ ನಮಗಾದರೂ ಪರಮಾತ್ಮನು ಬುದ್ಧಿಯನ್ನೀಯಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

---

( ೨೮೧ ಪುಟದಿಂದ ಮುಂದೆ ಸಾಗಿದ್ದು. )

ಹೇಳಲು ಅಭ್ಯಂತರವೇನು? ಲೋಕಮಾನ್ಯರು ಸ್ವರ್ಗಾರೋಹಣ ಮಾಡಿದ ಕಾಲಕ್ಕೆ ಮಹಾತ್ಮಾಜಿಯವರು “ ನವಜೀವನ” ದಲ್ಲಿ ಬರೆಯುವದೇನೆಂದರೆ :—

### ಮಹಾತ್ಮಾಜೀಯವರ ಅಭಿಪ್ರಾಯವೇನು?

“ ಲೋಕಮಾನ್ಯರು ಒಬ್ಬರೇ ಇದ್ದರು, ಜನರು ಲೋಕಮಾನ್ಯರಿಗೆ ಕೊಟ್ಟಂಥ ಉಚ್ಚಸ್ಥಾನ ಹಾಗೂ ಪದವಿಯು ರಾಜರು ದಯಪಾಲಿಸುವಂಥ ಪದವಿಯಕಿಂತ ಎಷ್ಟೋ ಹೆಚ್ಚು ಬೆಲೆಯುಳ್ಳದ್ದಿರುವದು ಹಿಂದುಸ್ಥಾನವು ಈ ಮಾತನ್ನು ಸಿದ್ಧಮಾಡಿ ತೋರಿಸಿರುವದು. ಮುಂಬಯಿ ಶಹರವು ಲೋಕಮಾನ್ಯರ ಸ್ಮಶಾನ ಯಾತ್ರೆಯ ಕಾಲಕ್ಕೆ ಅತ್ಯಂತ ವ್ಯಾಕುಲವಾಗಿತ್ತೆಂಬು ಹೇಳಿದರೆ ಅತಿಶಯೋಕ್ತಿಯಾಗಲಾರದು

“ ಅವರ ಅಂತ್ಯಕಾಲೀನ ದೃಶ್ಯವು ಇನ್ನೂ ನಮ್ಮ ಕಣ್ಣು ಮುಂದೆಯೇ ಕಟ್ಟಿರುತ್ತದೆ ಅದು ಎಂದಿಗೂ ಮರೆಯುವಂತಿಲ್ಲ ಜನರ ಅಗಾಧವಾದ ಆ ಪ್ರೇಮದ ವರ್ಣನೆಯನ್ನು ಮಾಡುವದು ಅಸಂಭವವಾಗಿರುತ್ತದೆ

“ ರಾಜನು ಮೃತನಾದನು, ರಾಜನು ಚಿರಂಜೀವನು” ಎಂದು ಫ್ರೆಂಚ ಜನರ ಗಾದಿಮಾತು ಈ ಪ್ರಕಾರದ ಭಾವನೆಯು ಇಂಗ್ಲಂಡ ಮುಂತಾದ ಎಲ್ಲ ಪ್ರಚಲಿತ ರಾಷ್ಟ್ರಗಲ್ಲಿ ಇರುತ್ತದೆ ಹಾಗು ಯಾವನಾದರೂ ರಾಜನು ಮೃತನಾದರೆ ಈ ನಾಣ್ಣುಡಿಯು ಜನರ ಮುಖದಿಂದ ಕೇಳಬರುತ್ತದೆ ಭಾವಾರ್ಥವೆಂದರೆ, ರಾಜನು ಮೃತನಾಗುವದಿಲ್ಲ ರಾಜ್ಯತಂತ್ರವು ಒಂದು ನಿಮಿಷಾದರೂ ಬಂದು ಬೀಳುವದಿಲ್ಲ

“ ಅದರಂತೆಯೇ ಟಿಳಕ ಮಹಾರಾಜರಾದರೂ ಸಾಯಲಿಲ್ಲರರು; ಹಾಗೂ ಸತ್ತಿರುವದಿಲ್ಲ ಅವರು ಬದುಕಿರುವರು ಹಾಗೂ ಇನ್ನು ಬಹಳ ಕಾಲದ ವರೆಗೆ ಬಾಳುವರು ಎಂಬುವದನ್ನು ಮುಂಬಯಿಶಹರ ನಿವಾಸಿಗಳು ಎಲ್ಲರ ನಿದರ್ಶನಕ್ಕೆ ತಂದು ಕೊಟ್ಟಿರುವರು ಅವರ ಸಂಬಂಧಿಕರು ಎಷ್ಟೋ ಜನರು ದುಃಖಮಗ್ನರಾಗಿರುವರು; ಹಾಗೂ ಕಣ್ಣೀರು ಸುರಿಸುವರು ಆದರೆ ಉಳಿದ ಜನರು ಉತ್ಸವವನ್ನು ಮಾಡಲಿಕ್ಕೆ ಬಂದಿದ್ದರು ಬಜಂತ್ರಿ ಹಾಗೂ ಭಜನೆಗಳ ನಿನಾದದಿಂದ ಲೋಕಮಾನ್ಯರು ಮೃತರಾಗಿಲ್ಲವೆಂದು ಸ್ಪಷ್ಟವಾಗಿ ಕಂಡು ಬರುತ್ತಿತ್ತು ” ಲೋಕಮಾನ್ಯ ಟಿಳಕ ಮಹಾರಾಜಕೀಜಯ ಎಂ

ಶಬ್ದದಿಂದ ಆಕಾಶವು ತುಂಬಿ ಹೋಗಿತ್ತು. ಆ ಸಮಯದಲ್ಲಿ ನಾವು ಲೋಕಮಾನ್ಯರ ಸ್ಮಶಾನ ಯಾತ್ರೆಯನ್ನು ನೆರವೇರಿಸಲು ಬಂದಿರುವೆವೆಂಬ ಅರಿವು ಕೂಡ ಆ ಜನರಲ್ಲಿರಲಿಲ್ಲ.

"ಶನಿವಾರ ರಾತ್ರಿ ಲೋಕಮಾನ್ಯರ ಮರಣದ ವಾರ್ತೆಯನ್ನು ಕೇಳಿ ನನ್ನ ಮನಸ್ಸು ವ್ಯಾಕುಲವಾಯಿತು. ಆದರೆ ಈ ಜನರ ಜಯ ಜಯ ಕಾರ ಧ್ವನಿಯಿಂದ ನನ್ನ ಮನೋವ್ಯಾಕುಲತೆಯು ನಷ್ಟವಾಯಿತು. ನನಗಿನ್ನೂ ಲೋಕಮಾನ್ಯರು ಜೀವಂತರಿರುವರೆಂಬ ಭಾವನೆಯಾಯಿತು, ಅವರ ಕ್ಷಣಭಂಗುರವಾದ ದೇಹವು ಕೆಡಿದು ಹೋಗಿ ಅಮರವಾದ ಆತ್ಮವು ಲಕ್ಷಾವಧಿ ಜನರ ಹೃದಯದಲ್ಲಿ ವಿರಾಜಮಾನವಾಗಿರುವದೆಂದು ಅನಿಸ ಹತ್ತಿತು.

ಇಲ್ಲಿಯವರೆಗೆ ಮಡಿದು ಹೋದ ಎಷ್ಟೋ ಲೋಕನಾಯಕರಿಗೆ ಈ ತರದ ಮರಣದ ಸೌಭಾಗ್ಯವು ಪ್ರಾಪ್ತವಾಗಿದ್ದಿಲ್ಲ. ದಾದಾಭಾಯಿ ನೌರೋಜಿಯವರು ಹೋದರು, ಫಿರೋಜಶಹಾ ಮೆಹತಾ, ಗೋಖಲೆಯವರು ಹೋದರು. ಅವರ ಹಿಂದೆ ಸಾವಿರಾರು ಜನರು ಸ್ಮಶಾನದವರೆಗೆ ಹೋಗಿದ್ದರು. ಆದರೆ ಟಿಳಕರ ಮರಣದಿಂದ ಭೂಮಿಯಮೇಲೆ ತಾನೇ ಆದಂತಾಯಿತು. ಅವರ ಹಿಂದೆ ಲೋಕಸಮೂಹವೇ ಹೋಯಿತು. ರವಿವಾರ ದಿವಸ ಮುಂಬಯಿ ಪಟ್ಟಣವು ಜನರಿಗೆಲ್ಲ ಅತ್ಯಂತ ಕ್ಷುಬ್ಧರಾಗಿದ್ದರು.

ಇಂಥ ಚಮತ್ಕಾರವು ಜಗತ್ತಿನಲ್ಲಿ ಚಮತ್ಕಾರವೆಂಬ ಬೇರೆ ಪದಾರ್ಥವಿಲ್ಲ. ಅಥವಾ ಜಗತ್ತೇ ಒಂದು ಚಮತ್ಕೃತಿಯೆಂದು ಭಾವಿಸಬಹುದು. ಕಾರ್ಯಕಾರಣವು ಒಂದನ್ನೊಂದು ಬಿಟ್ಟು ಇರಲಾರವು. ಈ ಸಿದ್ಧಾಂತಕ್ಕೆ ಅಪವಾದವಿಲ್ಲ. ಹಿಂದುಸ್ಥಾನದ ಮೇಲೆ ಲೋಕಮಾನ್ಯರ ನಿಸ್ಸೀಮವಾದ ಪ್ರೀತಿಯು. ಅನೇಕ ಜನರಲ್ಲಿ ಪ್ರೀತಿಮಾಡುವದೇ ಶ್ರೇಷ್ಠತರವಾದ ಯೋಗ್ಯತೆ ಎಂದು ತಿಳಿಯುತ್ತಿದ್ದರು. ಸ್ವರಾಜ್ಯಮಂತ್ರವನ್ನು ಲೋಕಮಾನ್ಯರಷ್ಟು ಯಾರೂ ಜಪಿಸಿರುವದಿಲ್ಲ. ಯಾವ ಸಮಯದಲ್ಲಿ ಉಳಿದ ಜನರು ಹಿಂದುಸ್ಥಾನವು ಇನ್ನೂ ಸ್ವರಾಜ್ಯಕ್ಕೆ ಪಾತ್ರವಾಗುವದೆಂದು ತಿಳಿಯುತ್ತಿದ್ದರೋ, ಆ ಸಮಯದಲ್ಲಿ ಲೋಕಮಾನ್ಯರು ಹಿಂದುಸ್ಥಾನವು ಸ್ವರಾಜ್ಯಕ್ಕೆ ಈ ಹೊತ್ತೇ ಯೋಗ್ಯವಿರುವದೆಂದು ತಿಳಿಯುತ್ತಿದ್ದರು. ಲೋಕಮಾನ್ಯರ ಈ ಪ್ರಕಾರದ ನಿಶ್ಚಯದಿಂದ ಜನರ ಮನಸ್ಸು ಸಂಪೂರ್ಣ ಒಲಿದಿತ್ತು. ಈ ಪ್ರಕಾರ ಅಭಿಮಾನವನ್ನು ತಾಳಿ ಅವರು ಸುಮ್ಮನೇ ಕೂಡ್ರಲಿಲ್ಲ. ಆದರೆ ತಮ್ಮ ಜೀವವಿರುವ ವರೆಗೆ ಅದರಂತೆಯೇ ಕೆಲಸಮಾಡಿದರು. ಅದರಿಂದಲೇ ಜನರ ಮನಸ್ಸಿನಲ್ಲಿ ನವೀನ ಚೈತನ್ಯ ಹಾಗೂ ಹೊಸ ಹುರುಪು ಹುಟ್ಟಿರುವವು. ಅವರು ಸ್ವರಾಜ್ಯ ಪ್ರಾಪ್ತಮಾಡಿಕೊಳ್ಳುವದರಲ್ಲಿ ತಮ್ಮ ಅಧೀರತೆಯನ್ನು ಜನರಿಗೆ ತಿಳಿಸಿದರು. ಹಾಗೂ ಯಾರಿಗೆ ಈ ಅವರ ಸ್ವಪ್ನವು ತಿಳಿಯುತ್ತಿತ್ತೋ ಅಂಥವರೆಲ್ಲರೂ ಅವರ ಅನುಯಾಯಿಗಳಾಗಿ ಕೆಲಸ ಮಾಡಹತ್ತಿದರು.

ಅವರ ಮೇಲೆ ಎಷ್ಟೋ ಕಷ್ಟಗಳು ಸಂಭವಿಸಿದವು. ಆದರೂ ಅವರು ತಮ್ಮ ಮಂತ್ರದ ಅನುಷ್ಠಾನವನ್ನು ಬಿಡಲಿಲ್ಲ. ಈ ಪ್ರಕಾರ ಅತ್ಯಂತ ಕಠಿಣವಾದ ಪರೀಕ್ಷೆಯಲ್ಲಿ ಸಹ ಅವರು ಉತ್ತೀರ್ಣರಾಗಿರುವರು. ಇದೇ ಕಾರಣದಿಂದಲೇ, ಜನತೆಯು ಅವರು ತಮ್ಮ ಹೃದಯದ ಸಮ್ರಾಟರೆಂದು ಭಾವಿಸಿದರು. ಹಾಗೂ ಅವರ ವಚನವೇ ಜನಕ್ಕೆ ಕಾಯಿದೆಯಾಯಿತು.

ದೇಹವು ಭಸ್ಮವಾಗಿರುವದರಿಂದ ಇಂಥ ಮಹಾತ್ಮರ ಜೀವನವು ನಷ್ಟವಾಗುವದಿಲ್ಲ. ಆದರೆ ದೇಹಪಾತದಿಂದಲೇ ಅದು ಪ್ರಾರಂಭವಾಗುವದು.

ಯಾರಿಗೆ ನಾವು ಪೂಜ್ಯರೆಂದು ತಿಳಿಯುತ್ತೇವೋ, ಇಂಥವರ ಪೂಜೆಮಾಡುವದೆಂದರೆ ಅವರ ಗುಣಾನುಕರಣವನ್ನು ಮಾಡುವದು. ಲೋಕಮಾನ್ಯರು ಅತ್ಯಂತ ಸಾದಾ ಇರುತ್ತಿದ್ದರು. ಅವರ ಸ್ಮರಣಾರ್ಥವಾಗಿ ನಾವಾದರೂ ಸಾದಾ ಇರಬೇಕು. ನಮಗೆ ಪ್ರಾಣ ಸಂರಕ್ಷಣೆಗೆ ಅವಶ್ಯವಿದ್ದ ವಸ್ತುಗಳಹೊರತು, ಉಳಿದ ಅನಾವಶ್ಯಕ ಪದಾರ್ಥಗಳ ತ್ಯಾಗವನ್ನು ಮಾಡಬೇಕು. ಅವರು ಶೂರರಿದ್ದರು. ನಾವು ಅವರ ನಿರ್ಭಯತೆಯ ಅನುಕರಣವನ್ನು ಮಾಡಿ, ನಮ್ಮ ಯೋಗ್ಯವಾದ ಕಾರ್ಯವನ್ನು ಮಾಡಬೇಕು. ನಮ್ಮ ನಿಶ್ಚಿತ ಕಾರ್ಯದಿಂದ ನಾವು ಎಂದೂ ಪರಾವೃತ್ತರಾಗತಕ್ಕದ್ದಲ್ಲ. ಅವರು ವಿಚಾರಶೀಲರಾಗಿದ್ದರು. ನಾವಾದರೂ ಅವರಂತೆಯೇ ವಿಚಾರ ಮಾಡಬೇಕು. ಆ ಮೇಲೆ ಕಾರ್ಯವನ್ನು ಮಾಡಬೇಕು. ಅವರು ವಿದ್ವಾಂಸರಿದ್ದರು. ಮಾತೃಭಾಷೆ ಹಾಗೂ ಸಂಸ್ಕೃತದಲ್ಲಿ ಅವರ ಅತ್ಯಂತ ಪ್ರಭುತ್ವವಿತ್ತು. ನಾವಾದರೂ ಅವರಂತೆ ವಿದ್ವಾಂಸರಾಗಲಿಕ್ಕೆ ಪ್ರಯತ್ನಮಾಡತಕ್ಕದ್ದು. ವ್ಯವಹಾರದಲ್ಲಿ ವಿದೇಶೀ ಭಾಷೆಯ ಉಪಯೋಗವನ್ನು ಬಿಟ್ಟು, ಮಾತೃಭಾಷೆಯಲ್ಲಿ ಸಂಪೂರ್ಣ ಗತಿಯನ್ನು ಹೊಂದಿ ಆ ಭಾಷೆಯಲ್ಲಿಯೇ ನಮ್ಮ ವಿಚಾರಗಳನ್ನು ಪ್ರಕಟಮಾಡುವದರಲ್ಲಿ ತತ್ಪರರಾಗಬೇಕು. ನಾವು ಸಂಸ್ಕೃತಾಭ್ಯಾಸವನ್ನು ಮಾಡಿ, ನಮ್ಮ ಧರ್ಮಶಾಸ್ತ್ರದಲ್ಲಿರುವ ಧರ್ಮದ ರಹಸ್ಯವನ್ನು ಪ್ರಕಟಮಾಡಬೇಕು. ಅವರು ಸ್ವದೇಶೀ ಪದಾರ್ಥಗಳನ್ನು ಪ್ರೀತಿಸುತ್ತಿದ್ದರು. ನಾವಾದರೂ ಸ್ವದೇಶೀಯ ಅರ್ಥವನ್ನು ತಿಳಿದುಕೊಂಡು ನಮ್ಮ ವ್ಯವಹಾರವನ್ನು ಸಾಗಿಸಬೇಕು. ಅವರ ಹೃದಯದಲ್ಲಿ ಹಿಂದುಸ್ಥಾನದ ಮೇಲೆ ಅತ್ಯಂತ ಪ್ರೇಮವಿತ್ತು. ಅದರಂತೆಯೇ ನಾವಾದರೂ ನಮ್ಮ ಹೃದಯದಲ್ಲಿ ಪ್ರೇಮವನ್ನು ಧಾರಣಮಾಡಿ ದಿನಾಲು ದೇಶಸೇವೆಯಲ್ಲಿ ಹೆಚ್ಚು ತತ್ಪರರಾಗಬೇಕು; ಇದೇ ಅವರ ನಿಜವಾದ ಪ್ರೀತಿಯು; ಯಾರಿಗೆ ಇದನ್ನು ಮಾಡಲು ಶಕ್ತಿ ಇಲ್ಲವೋ ಅಂಥವರು ಅವರ ಸ್ಮಾರಕ ನಿಧಿಯನ್ನು ಕೊಡಬೇಕು; ಅದಾದರೂ ಸ್ವರಾಜ್ಯಕಾರ್ಯದಲ್ಲಿಯೇ ವೆಚ್ಚ ಮಾಡಲ್ಪಡುವದು.

ಲೋಕಮಾನ್ಯರು ಈ ರಾಜ್ಯಪದ್ಧತಿಯ ಅತ್ಯಂತ ಶತ್ರುವಾಗಿದ್ದರು. ಇದರಿಂದ ಅವರು ಇಂಗ್ಲೀಷರ ದ್ವೇಷಮಾಡುತ್ತಿದ್ದರೆಂದು ಮಾತ್ರ ಯಾರೂ ತಿಳಿಯಬಾರದು. ಯಾರು ಈ ಪ್ರಕಾರ ತಿಳಿಯುವರೋ ಅಂಥವರು ಮೂರ್ಖರಿರುವರು. ಅವರ ಶ್ರೀ-ಮುಖದಿಂದ ಎಷ್ಟೋ ಸಲ ಇಂಗ್ಲೀಷರ ಪ್ರಶಂಸೆಯನ್ನು ಕೇಳಿರುವೆನು; ಅವರು ಇಂಗ್ಲೀಷ ರಾಜ್ಯವಾದರೂ ಅನಿಷ್ಟವೆಂದು ತಿಳಿಯುತ್ತಿದ್ದಿಲ್ಲ; ಆದರೆ ಇಂಗ್ಲೀಷರು ಹಾಗು ನಾವು ಸಮಾನಸ್ಕಂಧರೆಂದು ತಿಳಿಯಲಿಕ್ಕೆ ಇಚ್ಛಿಸುತ್ತಿದ್ದರು; ಗುಲಾಮರಾಗಿ ಇರುವದು ಅವರ ಮನಸ್ಸಿಗೆ ಬರುತ್ತಿದ್ದಿಲ್ಲ;

"ಇಂಥ ಪ್ರೌಢ ದೇಶಭಕ್ತರ ಮರಣೋತ್ಸವವನ್ನು ನಾವು ಚನ್ನಾಗಿ ಮಾಡಿರುತ್ತೇವೆ. ಇಂಥವರ ಶರೀರವು ಜೀವಂತ ಇರಲಿ ಅಥವಾ ಮರಣ ಹೊಂದಿರಲಿ, ಅದು ದೇಶಸೇವೆಯಲ್ಲಿ ತತ್ಪರವಾಗಿರುತ್ತದೆ. ದೇಶವನ್ನಾದರೂ ಮುಂದೊಯಿಸಲು ಪ್ರಯತ್ನಮಾಡುತ್ತ ಯಾರು ತಮ್ಮ ರೂಪರೇಷೆಯನ್ನು ಹಾಕಿಕೊಟ್ಟಿರುವರೋ ಯಾರು ಅದನ್ನೇ ಅನುಸರಿಸಿ, ೪೫ ವರ್ಷಗಳ ವರೆಗೆ ಕಾರ್ಯವನ್ನು ಮಾಡಿರುವರೋ, ಮತ್ತು ಯಾರು ದೇಶಸೇವಾರ್ಥವಾಗಿ ತಮ್ಮ ದೇಹವನ್ನೇ ಅರ್ಪಣಮಾಡಿರುವರೋ ಅಂಥವರ ದೇಹನಾಶವಾದರೂ ಉತ್ಸವವಾಗುವದು. ಅವರ ಸ್ಮರಣವು ಎಂದಿಗೂ ನಷ್ಟವಾಗುವದಿಲ್ಲ. ಹಾಗೂ ಅವರು ಎಂದಿಗೂ ಮೃತರಾಗುವದಿಲ್ಲ. ಆದ್ದರಿಂದಲೇ ಲೋಕಮಾನ್ಯ ಟಿಳಕರು ಈ ದೇಹವನ್ನು ಬಿಟ್ಟು ಹೋಗಿದ್ದರೂ ನಮಗೆ ಜೀವನದ ಮಂತ್ರವನ್ನು ಚನ್ನಾಗಿ ಕಲಿಸಿರುವರು.

**ಹರಿಭಾವು ಉಪಾಧ್ಯಾಯ.**

---

# ಕನ್ನಡ ನವಜೀವನ.

ಶ್ರಾವಣ ವದ್ಯ ೯ ಗುರುವಾರ ಶಕೆ ೧೮೪೪


## ಪೂಜಿಸುವ ಅಧಿಕಾರವು.

( ನವಜೀವನ ತಾ. ೧-೮-೧೯೨೧ )

ಅಧಿಕಾರವಿಲ್ಲದೆ ಯಾವದೊಂದು ಕಾರ್ಯವನ್ನು ಮಾಡಲು ಆ ಕಾರ್ಯವು ಸಫಲವಾಗಲಾರದು. ಅಗಸರವನು ನಾಪಿಕನ ಕೆಲಸವಾಡಹೋದರೆ ತಲೆಯನ್ನೆಲ್ಲ ರಕ್ತಮಯವಾಗಿ ಮಾಡಿಬಿಡುವನು. ವಕೀಲನಾದವನು ವೈದ್ಯಕಾರ್ಯವನ್ನು ಮಾಡಹತ್ತಿದರೆ ರೋಗಿಯು ಯಮಸದನದ ಮಾರ್ಗವನ್ನು ಹಿಡಿಯಬೇಕಾಗುವದು. ಬರಿಗೈಯಿಂದ ದೇವಾಲಯಕ್ಕೆ ಹೋದರೆ ಭಗವಂತನ ಪ್ರಸಾದವು ದೊರೆಯಲಾರದು. ಭಕ್ತಿರಹಿತ ಪೂಜೆಯನ್ನು ಪರಮಾತ್ಮನು ಸ್ವೀಕರಿಸಲಾರನು.

ಇದೇ ರೀತಿಯಾಗಿ ನಾವು ಯೋಗ್ಯತೆಯನ್ನು ಸಂಪಾದಿಸಿಕೊಳ್ಳದೆ ಟಿಳಕ ಮಹಾರಾಜರ ಪೂಜೆಯನ್ನು ಮಾಡಿದರೆ ಅದು ಅವರಿಗೆ ಮುಟ್ಟಲಾರದು. ಯಾವನ ಮನಸಿಗೆ ಹಿಂದುಸ್ಥಾನವು ಸೇರುವದಿಲ್ಲವೋ, ಯಾವನು ಭರತಖಂಡದ ಹವೆಯನ್ನು ಸಹಿಸಲಾರನೋ ಯಾವನಿಗೆ ಹಿಂದುಸ್ಥಾನದ ನಡೆನುಡಿಗಳು ಕಾಡುಜನರ ನಡೆನುಡಿಗಳಂತೆ ತೋರುವವೋ, ಯಾವನು ಭರತ ಭೂಮಿಯ ಊಟವನ್ನು ನೋಡಿ ಮೂಗು ಮುರಿಯುವನೊ, ಯಾವನು ಹಿಂದುಸ್ತಾನದ ಉಡುಪುಗಳನ್ನು ಹರಿದೊಗೆಯಲು ಹಾತೊರೆಯುತ್ತಾನೋ ಇಂಥವನು ಟಿಳಕ ಮಹಾರಾಜರ ಪೂಜೆಯನ್ನು ಹೇಗೆ ಮಾಡಬಲ್ಲನು? ಅವನ ಪೂಜೆಯನ್ನು ಟಿಳಕ ಮಹಾರಾಜರ ಆತ್ಮವಾದರೂ ಹೇಗೆ ಸ್ವೀಕರಿಸಬಹುದು? ಭಕ್ತಿ ಪೂರ್ವಕವಾಗಿ ಪತ್ರ, ಫಲ, ಪುಷ್ಪಪಾನೀಯಗಳನ್ನು ತನ್ನ ಕೈಲಾದ ಮಟ್ಟಿಗೆ ಅರ್ಪಿಸುವವನಿಗೆ ಮಾತ್ರ ಪರಮಾತ್ಮನು ಪ್ರಸನ್ನನಾಗುವನು. ಭಕ್ತಿಯ ಅರ್ಥವೆಂದರೆ ಭಾವನಾಪೂರ್ವಕವಾಗಿ ಅನುಕರಣ ಮಾಡುವದೇಸರಿ.

ಪೂಜಾರಿಯ ಪರೀಕ್ಷೆಯ ಸಮಯವು ಬಂದಿದೆ. ಈ ಹೊತ್ತು ನಾವು ಲೋಕಮಾನ್ಯರ ಪುಣ್ಯತಿಥಿಯನ್ನು ಯಾವ ರೀತಿಯಿಂದ ಪಾಲಿಬೇಕು? ನಾವೇನುಸ್ವರಾಜ್ಯಸ್ಥಾಪನೆಯನ್ನು ಮಾಡುವ ದೃಢನಿಶ್ಚಯವನ್ನು ಮಾಡುವೆವೋ? ಪರದೇಶದ ವಸ್ತುಗಳನ್ನು ತೆಗೆದು ಬಿಸಾಡುವೆವೋ?

ಕರ್ತವ್ಯದ ಜ್ಞಾನವಿಲ್ಲದವನಿಗೆ ತನ್ನ ಹಕ್ಕು ದೊರೆಯಲಾರದು. ಸಾಲವನ್ನು ತೀರಿಸದವನು "ಮುಕ್ತಿ ಪತ್ರ" ಪಾವತಿಯನ್ನು ಹೇಗೆ ಬೇಡಬಲ್ಲನು? ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕು ಇದ್ದಂತೆ ಸ್ವದೇಶಿಯಾದರೂ ನಮ್ಮ ಜನ್ಮನಿರ್ಮಿತ ಕರ್ತವ್ಯವಿರುವದು. ಸ್ವದೇಶಿಯಿಲ್ಲದೆ ಸ್ವರಾಜ್ಯವು ದೊರೆಯಲಾರದು. **ಸ್ವರಾಜ್ಯವು ನಮ್ಮ ಜನ್ಮ ಸಿದ್ಧವಾದ ಅಧಿಕಾರವಿರುವದು- ಎಂಬದು ಟಿಳಕ ಗೀತೆಯ ಪೂರ್ವಾರ್ಧವು. ಸ್ವದೇಶಿಯು ನಮ್ಮ ಜನ್ಮ ನಿರ್ಮಿತ ಕರ್ತವ್ಯ ವಿರುವದು " ಎಂಬದು ಉತ್ತರಾರ್ಧವು.**

ಆದ್ದರಿಂದಲೇ ನಾವು ಲೋಕಮಾನ್ಯರ ಶ್ರಾದ್ಧವನ್ನು ಚನ್ನಾಗಿ ಪಾಲಿಸಬೇಕೆಂದು ಬಯಸುತ್ತಿದ್ದಲ್ಲಿ ನಮ್ಮ ಬಯಕೆಯು ಕೈಗೂಡಬೇಕಾದರೆ ಸ್ವದೇಶೀ ವ್ರತವನ್ನು ಧಾರಣ ಮಾಡಬೇಕಾಗುತ್ತದೆ. ಪರದೇಶೀವಸ್ತ್ರಗಳನ್ನು ಸಂಪೂರ್ಣವಾಗಿ ತ್ಯಜಿಸದ ಹೊರ್ತು ಸ್ವದೇಶೀ ಮಂತ್ರವನ್ನು ಜಪಿಸುವದು ಅಸಂಭವವಾದದ್ದು. ಪರದೇಶೀ ಬಟ್ಟೆಗಳು ಒಂದು ಪ್ರಕಾರದ ಮಲವಿದ್ದಂತೆಯೇ ಈ ಮಲವನ್ನು ನಾವು ಒಗೆದು ಸ್ವಚ್ಛ ಮಾಡುವವರೆಗೆ ನಾವು ಶುದ್ಧ ರಾಗಲಾರೆವು ಶುದ್ಧವಾಗದ ಹೊರ್ತು ಸ್ವರಾಜ್ಯಮಂದಿರದಲ್ಲಿ ಪ್ರವೇಶಿಸುವ ಅಧಿಕಾರವು ನಮಗೆ ಪ್ರಾಪ್ತವಾಗಲಾರದು. ಮೌಲಾನಾ ಮಹಮ್ಮದಅಲ್ಲಿಯವರು ಹೇಳಿದಂತೆ ನಾವು ಶಾಂತಿಯಿಂದ ಸ್ವರಾಜ್ಯವನ್ನು ಪ್ರಾಪ್ತಮಾಡಿಕೊಳ್ಳಬೇಕಾಗಿದೆ. ಇದರ ಅರ್ಥವು ಸ್ವಚ್ಛಂದತೆಯಲ್ಲ;ಮನಬಂದಂತೆ ವರ್ತಿಸುವದಲ್ಲ. ನಾವು ತ್ಯಾಗವನ್ನು ಸ್ವಲ್ಪ ಕೂಡಾ ಮಾಡದೆ, ಶಾಂತಿಯ ಪಾಠವನ್ನು ಸರಿಯಾಗಿ ಕಲಿತರೆ, ಇದು ಆಲಸ್ಯ ಅಥವಾ ಮಾಂದ್ಯವಲ್ಲದೆ ಮತ್ತೇನು? ತ್ಯಾಗವೂ ಉದ್ಯಮವೂ ಇಲ್ಲದಿದ್ದರೆ ಶಾಂತತೆಯು ಮರಣಾವಸ್ಥೆಯ ಸಮಾನವೇ. ಹೆಣದ ಶಾಂತಿಯನ್ನು ಯಾವನು ಅಪೇಕ್ಷಿಸುವನು? ಅಂಜುಬುರುಕ ಮನುಷ್ಯನು ಅಂಜಿಕೆಯು ಬರುತ್ತದೆಂದು ತಿಳಿದ ಕೂಡಲೇ ಮನೆಯೊಳಗೆ ಹೋಗಿ ಅಡಗಿಕೊಳ್ಳುತ್ತಾನೆ. ಇಂಥ ಶಾಂತಿಯಿಂದ ಗೃಹದ ನಾಶವಾಗದೆ ಇರದು. ನಾವು ಪ್ರತಿಜ್ಞೆಯನ್ನು ಮಾಡಿದ ಶಾಂತಿಯು ವೀರತಾಸೂಚಕವಾದ ಶಾಂತಿಯು. ಪರದೇಶೀ ವಸ್ತ್ರಗಳನ್ನು ತ್ಯಜಿಸುವ ಶಕ್ತಿಯು ನಮ್ಮಲ್ಲಿ ಇಲ್ಲದಿದ್ದರೆ, ಅಷ್ಟು ಧೈರ್ಯವು ಕೂಡಾ ಬಾರದಿದ್ದರೆ, ಆ ಇಚ್ಛೆಯಾದರೂ ಆಗದಿದ್ದರೆ, ಈ ನಮ್ಮ ಶಾಂತಿಯು ಕೇವಲ ಢೋಂಗು ಮಾತ್ರ ಇರುತ್ತದೆ. ಢೋಂಗು ಅಂದರೆ ನಾಟಕವು ನಾಟಕದಲ್ಲಿ ಸುರಿಸಿದ ಕಣ್ಣೀರಿನಿಂದ ಜ್ಞಾನ ಪ್ರಾಪ್ತಿ ಯಾಗುವದು ಶಕ್ಯವೇ?

ಆದ್ದರಿಂದಲೇ ಟಿಳಕ ಮಹಾರಾಜರ ಪೂಜೆಯನ್ನು ಮಾಡಲಪೇಕ್ಷಿಸುವವರೆಲ್ಲ ಸ್ವದೇಶಿಯ ಪ್ರತಿಜ್ಞೆಯನ್ನು ಅವಶ್ಯವಾಗಿ ಮಾಡಬೇಕು. ಸ್ವದೇಶೀವಸ್ತ್ರಗಳನ್ನು ಧಾರಣ ಮಾಡದೆ ಲೋಕಮಾನ್ಯರ ಶ್ರಾದ್ಧವನ್ನು ಮಾಡುವವರಿಗೆ ಭಾಗವತವನ್ನು ಪಾಠ ಮಾಡಿದ ಗಿಳಿಗೆ ಶಿಗುವ ಫಲವು ಶಿಗುತ್ತದೆ.

ಮೋಹನದಾಸ ಕರಮಚಂದ,
**ಗಾಂಧಿ**

## ಚಿತ್ತರಂಜನದಾಸರು.

ಅಹಮ್ಮದಾಬಾದ ರಾಷ್ಟ್ರೀಯ ಸಭೆಯ ನಿಯೋಜಿತ ಅಧ್ಯಕ್ಷರಾದ ದೇಶಬಂಧು ಚಿತ್ತರಂಜನದಾಸರು ಇದೇ ಕಾರಾಗೃಹವಾಸದಿಂದ ಬಿಡುಗಡೆಹೊಂದಿ ಬಂದಿರುವರು ಇವರು ಆರು ತಿಂಗಳ ವರೆಗೆ ಉಗ್ರವಾದ ತಪಶ್ಚರ್ಯವನ್ನು ಮಾಡಿ, ಸ್ವರಾಜ್ಯ ದೇವತೆಯ ಅನುಗ್ರಹವನ್ನು ಪಡೆದು, ಉಕ್ಕಿದ ಉತ್ಸಾಹದಿಂದ ದೇಶಸೇವೆಯಲ್ಲಿ ತತ್ಪರರಾಗಲು ಹೊರಗೆ ಬಂದದ್ದಕ್ಕಾಗಿ ಅವರನ್ನು ನಾವು ಅಭಿನಂದಿಸದೆ ಇರಲಾರೆವು. ಇವರಂಥ ಮಹಾನುಭಾವರ ಅಭಿನಂದನೆಯನ್ನು ಮಾಡುವ ಅಧಿಕಾರವೂ ನಮ್ಮದಲ್ಲ ಆ ಯೋಗ್ಯತೆಯೂ ನಮ್ಮಲ್ಲಿಲ್ಲೆಂಬದನ್ನು ನಾವು ಬಲ್ಲೆವು. ಆದರೂ ಅವರಿಗೆ ಕಮಲವನ್ನಿಲ್ಲದಿದ್ದರೂ ಕಮಲದ ಒಂದು ಪಕಳಿಯನ್ನು ಅರ್ಪಿಸುವದು ನಮ್ಮ ಕರ್ತವ್ಯವೆಂದು ಬಗೆದು ಹಾಗೆ ಮಾಡಲು ನಾವು ಉದ್ಯುಕ್ತರಾಗಿದ್ದೇವೆ. ಇನ್ನು ನಾವು ಅವರ ಅಭಿನಂದನೆಯನ್ನು ಯಾವ ರೀತಿಯಿಂದ ಮಾಡಬೇಕು ಎಂಬ ಮಹತ್ವವಾದ ಪ್ರಶ್ನೆಯು ನಮ್ಮೆದುರಿನಲ್ಲಿ ಬಂದು ನಿಲ್ಲುವದು. ಕೇವಲ ವಾಕ್ಯಾಡಂಬರವನ್ನು ಮಾಡಿ

ಶಬ್ದಗಳ ಜಾಲವನ್ನು ರಚಿಸಿ, ನಾಲ್ಕು ಸ್ತುತಿಪರ ಮಾತುಗಳನ್ನು ಬರೆದರೆ ಅವರ ಅಭಿನಂದನೆಯನ್ನು ಮಾಡಿದಂತಾಗುವದಿಲ್ಲ. ಆದರೆ ಅವರಲ್ಲಿದ್ದ ಗುಣಗಳು ಯಾವವು; ಅವರು ಹಿಂದವಾಸಿಗಳ ಹೃದಯದಲ್ಲಿ ಈ ರೀತಿಯಾಗಿ ನಟ್ಟಿರಲು ಕಾರಣವೇನು ಎಂಬ ಸಂಗತಿಗಳನ್ನೆಲ್ಲ ಅವರ ಆಯುಷ್ಯಕ್ರಮದ ಇತಿಹಾಸದಿಂದ ಅರಿತುಕೊಂಡು ಅವರಂತೆ ನಮ್ಮ ಕೈಲಾದ ಮಟ್ಟಿಗೆ ಆಚರಿಸತೊಡಗುವದರಿಂದಲೇ ಅವರ ನಿಜವಾದ ಅಭಿನಂದನೆಯಾಗುವದೆಂದು ಭಾವಿಸಿ, ಆ ಬಗ್ಗೆ ನಾಲ್ಕು ಮಾತುಗಳನ್ನು ಬರೆಯಬೇಕೆಂದು ಮಾಡಿದ್ದೇನೆ ಅವರ ಆಯುಷ್ಯಕ್ರಮದ ಇಡೀ ಇತಿಹಾಸವನ್ನು ಇಂಥ ಸಣ್ಣ ಲೇಖದಲ್ಲಿ ನಿವೇದಿಸುವದು ಅಶಕ್ಯವಾದ್ದರಿಂದ ಅದರಲ್ಲಿಯ ಕೆಲವು ಭಾಗಗಳನ್ನಷ್ಟೇ ಹೇಳಿ ಅದರಿಂದ ನಾವು ಏನು ಬೋಧತೆಗೆದುಕೊಳ್ಳಬೇಕೆಂಬದನ್ನು ಮಾತ್ರ ಇಲ್ಲಿ ನಿವೇದಿಸುವೆವು.

ಇವರು ನ್ಯಾಯ ಪ್ರಿಯರೂ ಸತ್ಯಪಕ್ಷಪಾತಿಗಳೂ ಆಗಿದ್ದರು ಇವರು ಜನ್ಮತಾಳಿದ ವಂಶವು ಬಂಗಾಲದಲ್ಲಿ ಪ್ರಸಿದ್ಧವಾದ ವಂಶವೇನೋ ನಿಜ. ಆದರೆ ದೈವ ದುರ್ವಿಪಾಕದಿಂದ ಇವರ ತಂದೆಯವರು ದಿವಾಳಿಯನ್ನು ತೆಗೆಯಬೇಕಾಯಿತು. ಈ ಸಂಗತಿಯು ದಾಸರ ಮನಸ್ಸಿಗೆ ಎಷ್ಟು ಬರಲಿಲ್ಲ. ಸಾಲುಗಾರರನ್ನು ಮುಳುಗಿಸುವದು ನ್ಯಾಯವಲ್ಲವೆಂದು ಅವರು ತಿಳಿದು ತಮ್ಮ ತಂದೆಯವರನ್ನು ಹೇಗಾದರೂ ಋಣಮುಕ್ತರನ್ನಾಗಿ ಮಾಡಬೇಕೆಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿದ್ದರು. ಆದರೆ ಇವರ ಭಾಗ್ಯವಾದರೂ ಚನ್ನಾಗಿ ಇದ್ದಿಲ್ಲ. ಇವರು ತಂದೆಯ ಸಾಲವನ್ನು ತೀರಿಸುವದಕ್ಕಾಗಿ ಕೆಲವು ದಿವಸಗಳ ತನಕ ಸಮರ್ಥರಾಗಲಿಲ್ಲ. ಇಷ್ಟೇ ಅಲ್ಲ; ಆದರೆ ಇವರಿಗೂ ಸಹ ದಿವಾಳಿಯನ್ನು ತೆಗೆಯುವ ಪ್ರಸಂಗವು ಒದಗಿತು ಆಗ ಅವರ ಮನಃಸ್ಥಿತಿಯು ಹೇಗಾಗಿತ್ತೆಂಬದನ್ನು ಒರೆಯುವದು ಬಹಳ ಕಠಿಣ. ಪರಮಾತ್ಮನು ಈ ಪರಿ ತಮ್ಮನ್ನು ಕಷ್ಟಕ್ಕೆ ಗುರಿಮಾಡಲು ಏನು ಕಾರಣ ಇರಬಹುದೆಂಬದಾಗಿ ಅವರು ವಿಚಾರ ಮಾಡಿರಬಹುದು. ಆದರೆ, ಪರಮಾತ್ಮನ ಪ್ರತಿನಿತ್ಯದ ರೂಢಿಯೇ ಇದು. ಅವನು ತನ್ನ ಭಕ್ತರನ್ನು ಪರೀಕ್ಷಿಸಬೇಕಾದರೆ, ಅವರ ಮೇಲೆ ಸಂಕಟಗಳ ರಾಶಿಯನ್ನು ಸುರುವಿ ಅವರು ಅವುಗಳನ್ನೆಲ್ಲ ಸಹಿಸಿ ಆನಂದದಿಂದ ತನ್ನ ಭಜನೆಯನ್ನು ಮಾಡುವರೋ ಇಲ್ಲವೋ ಎಂಬದನ್ನೇ ನೋಡುತ್ತಿರುವನು. ಇರಲಿ ಆದರೂ ದಾಸರು ಎದೆಗುಂದಲಿಲ್ಲ. ಎಷ್ಟೋ ಜನರು ಇಂಥ ಪ್ರಸಂಗ ಬಂದಾಗ ಉರ್ಲು ಹಾಕಿಕೊಂಡು ಸತ್ತಿರುವದನ್ನು ವಾಚಕರು ಕೇಳಿರಬಹುದು. ಆದರ ದಾಸರು ಅಸಾಮಾನ್ಯ ವಿಭೂತಿಗಳಾದ್ದರಿಂದಲೇ ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ಕೂಡ ಧೈರ್ಯವನ್ನು ತಾಳಿ "ಇಂದಿಲ್ಲ ನಾಳೆ ಆ ಸಾಲವನ್ನೆಲ್ಲ ತೀರಿಸಿ ಬಿಡುವೆನು" ವು ಸಂಕಲ್ಪವನ್ನು ಮಾಡಿದರು. ಇಷ್ಟಾದರೂ ತೀರಲಿಲ್ಲ. ಅವರು ಬ್ಯಾರಿಸ್ಟರರಾಗಿದ್ದರೂ ಅವರಿಗೆ ಮೊದಲಿಗೆ ಅಷ್ಟೇನೂ ಹಣದೊರೆಯಲಿಲ್ಲ. ಪ್ರಪಂಚವನ್ನು ಸಾಗಿಸುವದು ಕೂಡಾ ಕೆಲವು ದಿವಸಗಳ ವರೆಗೆ ಕಷ್ಟವಾಯಿತು. ಈ ಪರಿ ಅನೇಕ ರೀತಿಯಿಂದ ತ್ರಾಸವಾದರೂ ಕೂಡ ಅವರು ಎಳ್ಳಷ್ಟೂ ಧೈರ್ಯಗುಂದಲಿಲ್ಲ. ಕಡೆಗೆ ಪರಮಾತ್ಮನ ಕೃಪಾದೃಷ್ಟಿಯು ಇವರ ಮೇಲಾಯಿತು. ಬಾಬೂ ಅರವಿಂದ ಘೋಸರವರ ಮೇಲೆ ೧೯೦೮ ನೇ ಇಸ್ವಿಯಲಿ ರಾಜದ್ರೋಹದ ಆರೋಪವನ್ನು ಹೊರಿಸಿ ಅವರ ವಿರುದ್ಧ ಸರಕಾರದವರು ಕಟ್ಲೆಯನ್ನು ಹೂಡಿದಾಗ ಚಿತ್ತರಂಜನರು ಅಹೋರಾತ್ರಿ ದುಡಿದು ಘೋಸರವರ ವತಿಯಿಂದ ವಕೀಲಿಯನ್ನು ಮಾಡಿದರು ಆಗ ಇವರ ಕೀರ್ತಿಯು ಎಲ್ಲ ಕಡೆಗೂ ಹಬ್ಬಿತು. ಅಂದಿನಿಂದಲೇ ಇವರ ಭಾಗ್ಯೋದಯವಾಯಿತು. ಇವರು ಸುಪ್ರಸಿದ್ಧ ವಕೀಲರಾದರು. ತಿಂಗಳಿಗೆ ೪೦।೫೦ ಸಾವಿರ ರೂಪಾಯಿಗಳ ವರೆಗೆ ದೊರಕಿಸುವ ಯೋಗ್ಯತೆಯು ಇವರಿಗೆ ಬಂದಿತು. ಇವರಿಗೆ ಹಣವು ಬರಹತ್ತಿದ ಕೂಡಲೇ, ಹಿಂದಕ್ಕೆ ದಿವಾಳಿಯನ್ನು ತೆಗೆದಿದ್ದರೂ ಕೂಡ ತಮ್ಮ ಹಾಗು ತಮ್ಮ ತಂದೆಯವರ ಸಾಲವನ್ನು ಕಾಸು ಸಹ ಬಿಡದೆ ತೀರಿಸಿದರು. ಇಂಥ ಉದಾಹರಣೆಗಳು ಎಲ್ಲಿಯಾದರೂ ದೊರಕುವವೋ? ಇದಕ್ಕೆನ್ನಬೇಕು ನಿಜವಾದ ನ್ಯಾಯ ಪ್ರಿಯತೆಯೆಂದು.

ಇವರ ಔದಾರ್ಯವಾದರೂ ವರ್ಣನೀಯವಾದದ್ದು. ಇವರು ಇಷ್ಟು ಹಣವನ್ನು ಗಳಿಸುತ್ತಿದ್ದರೂ ಇವರ ಹತ್ತರ ಒಂದು ಕವಡಿ ಕೂಡಾ ಇದ್ದಿಲ್ಲವೆಂದ ಬಳಿಕ ಇವರ ಔದಾರ್ಯವೆಷ್ಟು ನೋಡಿರಿ! ಎಷ್ಟೋ ನಿರಾಶ್ರಿತ ಕುಟುಂಬಗಳನ್ನು ಇವರು ಪೋಷಿಸುತ್ತಿದ್ದರೆಂಬದು ಸರ್ವವಿಸ್ತೃತವಾದ ಮಾತಾಗಿದೆ. ಸಾರ್ವಜನಿಕ ನಿಧಿಗಳಿಗಂತೂ ಇವರು ಶಕ್ತಿಮೀರಿ ಸಹಾಯ ಮಾಡುತ್ತಿದ್ದರು. ಹಿಂದುಸ್ಥಾನದಲ್ಲಿ ಎಷ್ಟೋ ಉದಾರರಿರುವರು. ಆದರೆ ದಾಸರಂಥ ಉದಾರರು ಸಿಗುವದು ಅಶಕ್ಯವಿರಲು. ತಾವು ಗಳಿಸುತ್ತಿರುವ ಹಣವು ತಮ್ಮದೆಂಬ ಅಭಿಮಾನವೇ ಇದ್ದಿಲ್ಲವೆಂದ ಬಳಿಕ ಬಹಳ ಹೇಳುವದೇನು?

ಇನ್ನು ಇವರ ದೇಶಪ್ರೇಮವಾದರೋ ಅಗಾಧವಾದದ್ದು. ಇಂಥ ದೇಶಭಕ್ತರು ಹಿಂದುಸ್ಥಾನವನ್ನು ಹೊರತುಪಡಿಸಿ ಬೇರೆ ಯಾವ ರಾಷ್ಟ್ರಗಳಲ್ಲಿಯೂ ದೊರೆಯಲಾರರು. ಅಂತೆಯೇ ನಾಗಪುರದಲ್ಲಿ ಮಹಾತ್ಮಾಜಿಯವರು ದಾಸರವರನ್ನು ತಮ್ಮ ಪಕ್ಷಕ್ಕೆ ಸೇರಿಸಬೇಕೆಂದು ಅವಿಶ್ರಾಂತವಾಗಿ ಪ್ರಯತ್ನಪಟ್ಟರು. ಮತ್ತು ದಾಸರು ಮಾಡಿದ ಕೆಲವು ಸೂಚನೆಗಳನ್ನು ಮನ್ನಿಸಿ ಮಹಾತ್ಮಾಜಿಯವರು ಅಸಹಕಾರದ ಠರಾವನ್ನು ಮುಂದೆ ತಂದರು. ಆ ಕಾಲಕ್ಕೆ ಮಹಾತ್ಮಾಜಿಯವರು ದಾಸರಂಥ ಜನರು ತಮ್ಮ ಪಕ್ಷಕ್ಕೆ ಬರುತ್ತಿದ್ದರೆ ತಾವು ಕೆಲವು ಮಾತುಗಳನ್ನು ಬಿಟ್ಟುಗೊಡಲಿಕ್ಕೆ ಸಿದ್ಧರಿದ್ದೇವೆಂಬದಾಗಿ ಅತಿ ತೋರಿಸಿದರು ಅಂದಮೇಲೆ ಮಹಾತ್ಮಾಜಿಯವರಿಗೆ ದಾಸರವಿಷಯವಾಗಿ

ಮಾಡುವದನ್ನು ಸೇರದೆ ಇರುವದು ದುಃಖದ ಸಂಗತಿಯು. ಹಿಂದುಸ್ಥಾನದೊಳಗಿನ ಚಿಕ್ಕ ಹುಡುಗ ಹುಡಿಗೆಯರೆಲ್ಲರೂ ಶಾಲೆಗೆ ಹೋಗುವಂತೆ ಏರ್ಪಾಡು ಮಾಡುವ ಇಚ್ಛೆ ಇದ್ದರೆ, ಅವರಿಗೆ ಈಗಿನ ಪದ್ಧತಿಯ ಪ್ರಕಾರ ಶಿಕ್ಷಣವನ್ನು ಕೊಡಲಿಕ್ಕೆ ನಮ್ಮಲ್ಲಿ ಸಾಕಷ್ಟು ಧನವಿರುವದಿಲ್ಲ; ಮತ್ತು ಎಷ್ಟೋ ಹುಡುಗರ ಪಾಲಕರಿಗೆ ಈಗಿನ ಶಾಲೆಗಳ 'ಫೀ' ಯು ಹೊರಲಾರದಷ್ಟು ಭಾರವಾಗಿರುವದು. ಆದ್ದರಿಂದ ಎಲ್ಲರೂ ಶಿಕ್ಷಣವನ್ನು ಹೊಂದಬೇಕಾಗಿದ್ದರೆ ಅದು ಪುಕ್ಕಟೆಯಾಗಿ ದೊರೆಯುವಂತೆ ಯೋಜಿಸಬೇಕು. ಹಿಂದುಸ್ಥಾನದೊಳಗಿನ ಎಲ್ಲ ಹುಡುಗರಿಗೆ ಶಾಲೆಗಳನ್ನು ಪೂರೈಸಿಕೊಡಲಿಕ್ಕೆ ಹತ್ತುವ ಇಪ್ಪತ್ತುಕೋಟಿ ರೂಪಾಯಿಗಳನ್ನು ಪೂರೈಸುವದು ಎಂಥ ಸ್ವರಾಜ್ಯದ ಆಡಳಿತೆಯೊಳಗೂ, ಸಾಧ್ಯವಾದದ್ದಲ್ಲೆಂದು ನನ್ನವಿಚಾರವಿರುತ್ತದೆ. ಆದ್ದರಿಂದ ಹುಡುಗರನ್ನೇ ದುಡಿಯ ಹಚ್ಚಿ ಆ ದುಡಿತದ ಆದಾಯದಿಂದಲೇ ಸ್ವಲ್ಪಿಷ್ಟು ಸ್ವಲ್ಪ ಇವರ ಶಿಕ್ಷಣದ ವೆಚ್ಚವನ್ನು ಸಾಗಿಸಬೇಕೆಂಬದು ಇದರಿಂದ ದೃಷ್ಟವಾಗುತ್ತದೆ. ಎಲ್ಲರೂ ಮಾಡಹತ್ತಿದರೂ ಲಾಭದಾಯಕವಾದ ಹೋರೆಗಳೆಂದರೆ, ನೂಲುವದು ಮತ್ತು ನೇಯುವದು. ಆದರೆ ನಾನು ಮೇಲೆ ಮಾಡಿದ ವಿಧಾನಕ್ಕೆ ಯಾವ ವ್ಯವಸಾಯವಾದರೂ ಸಾಗುವದು; ಆದರಿಂದ ಉತ್ಪನ್ನ ಹೊರಡುತ್ತಿದ್ದರಾಯಿತು. ಆದಂಷ್ಟೇ, ಒಟ್ಟಿನಮೇಲೆ ಪರೀಕ್ಷಿಸಿ ನೋಡಲಾಗಿ, ಬಟ್ಟೆಗಳನ್ನು ಹುಟ್ಟಿಸಲಿಕ್ಕೆ ಹತ್ತುವ ವಿವಿಧ ವ್ಯವಸಾಯಗಳಷ್ಟು ಉಳಿದ ಯಾವ ಉದ್ಯೋಗಗಳೂ ಅಷ್ಟು ಸಾಧ್ಯವಾಗಿಯೂ ಲಾಭದಾಯಕವಾಗಿಯೂ ಮತ್ತು ದೊಡ್ಡ ಪ್ರಮಾಣದ ಮೇಲೆ ಸಾಗಿಸಬಹುದಂಥವಾಗಿಯೂ ಇರುತ್ತಿರುವದಿಲ್ಲ; ಆದ್ದರಿಂದ ಅವನ್ನೇ ಹಿಂದುಸ್ಥಾನದ ಎಲ್ಲ ಶಾಲೆಗಳಲ್ಲಿ ಸುರುವು ಮಾಡತಕ್ಕದ್ದು.

ಶಾಲೆಗಳಲ್ಲಿ ಹೀಗೆ ರೊಟ್ಟೀ ಮುರಿದು ದುಡಿಯುವ ಪದ್ಧತಿಯನ್ನು ಅನುಸರಿಸುವದರಿಂದ ನಮ್ಮಂಥ ಬಡದೇಶಕ್ಕೆ ಎರಡು ರೀತಿಯಿಂದ ಲಾಭವಾಗುವದು. ಹುಡುಗರ ಶಿಕ್ಷಣದ ವೆಚ್ಚವು ಉಗಾಯಿಸುವದೊಂದು, ಮತ್ತು ಅವರು ಮುಂದೆ ಪ್ರಸಂಗಬಿದ್ದಲ್ಲಿ ಹೊಟ್ಟೆ ತುಂಬಿಕೊಳ್ಳುವದಕ್ಕೆ ಒಂದು ಉದ್ಯೋಗವನ್ನು ಕಲಿತಂತಾಗುವದು. ಇಂಥ ಪದ್ಧತಿಯಿಂದ ನಮ್ಮ ಹುಡುಗರು ಹೆಚ್ಚು ಆತ್ಮವಿಶ್ವಾಸವುಳ್ಳವರಾಗ[illegible]. ಜನರು ಮೈ ಮುರಿದು ದುಡಿಯುವದನ್ನು [illegible] ಕಲಿಯುವದರಿಂದ ರಾಷ್ಟ್ರವು ಅಧೋಗತಿಗೆ ಹೋಗುವದು [illegible] ನಮ್ಮ ಅಂತಃಕರಣದ ಶಿಕ್ಷಣದ ಬಗ್ಗೆ ಇನ್ನು [illegible] ಇದು ಪುಸ್ತಕಗಳ ದ್ವಾರಾ ದೊರೆಯುವದೆಂದು ನಾ[illegible]ಲ್ಲ. ಇದು ಗುರುಗಳ ಪ್ರೇಮಮಯ ಸಂಸರ್ಗದಿಂದಲೇ [illegible]ವಂಥದು. ನಮ್ಮ ಪ್ರಾಥಮಿಕ ಮತ್ತು ಮಧ್ಯಮ ಶಾಲೆಗಳ[illegible] ಗುರುಗಳ ಸ್ಥಾನವು ಯಾರಿಗೆ ಕೊಡಲ್ಪಟ್ಟಿರುವದು? ಅವರು [illegible]ಸ್ವಭಾವದವರೂ ಸುಶೀಲರೂ, ವಿಶ್ವಾಸಾರ್ಹರೂ [illegible]? ಅವರ ಅಂತಃಕರಣವು ಸುಸಂಸ್ಕೃತವಾದದ್ದಿರುವದೇ[illegible]? [illegible] ತಮಗೊಪ್ಪಿಸಿದ ಮಕ್ಕಳ ಸ್ವಭಾವದ ಜಡಿಗ[illegible] ಕೊಡುವಂಥವರಾಗಿರುವರೋ? ಪ್ರಾಥಮಿಕ ಶಾಲೆಗಳಿಗೆ [illegible] ಗೊತ್ತುಮಾಡುವ ಪದ್ಧತಿಯು ಇದಕ್ಕೆ ಪ್ರ[illegible]ರುವದಿಲ್ಲವೋ? ಅವರಿಗೆ ಹೊಟ್ಟೆ ತುಂಬುವಷ್ಟು ಪಗಾ[illegible]ಯು ದೊರೆಯುತ್ತಿರುವದಿಲ್ಲ. ಪ್ರಾಥಮಿಕ ಶಾಲೆಗಳ [illegible] ಅವರ ದೇಶಾಭಿಮಾನವನ್ನು ನೋಡಿ, ಏನು [illegible]ನೆಂಬುದು ನಮಗೆ ಗೊತ್ತಿದ್ದವಾತು. ಎರಡನೇ ಕದೆಯಲ್ಲಿ [illegible]ದವರು ಇಲ್ಲಿಗೆ ಬರುತ್ತಿರುವರು.

ಇನ್ನು ಕಡೆಯದೆಂದರೆ, ಪರಭಾಷೆಯ ದ್ವಾರಾ ಕೊಡಲ್ಪಡುವ ಶಿಕ್ಷಣದ ಬಗ್ಗೆ. ಇದರ ಸಂಬಂಧಿ ಇರುವ ನನ್ನ ವಿಚಾರಗಳು ಎಲ್ಲರಿಗೂ ಗೊತ್ತಿರುವದರಿಂದ ಇಲ್ಲಿ ಪುನಃ ಹೇಳುವ ಕಾರಣವಿಲ್ಲ. ಈ ಪರಭಾಷೆಯ ಮಧ್ಯಸ್ಥಿಕೆಯಿಂದ ನಮ್ಮ ಹುಡುಗರ ಮೇಲೆ ವಿನಾಕಾರಣ ಒಂದು ಭಾರಹೋರಿಸಿದಂತಾಗುವದು. ಇದರಿಂದ ಅವರಿಗೆ ತಿಳಕೊಳ್ಳದೆ ಪಾರಮಾಡಬೇಕಾಗುತ್ತಿರುವದು. ಇದು ಅವರ ಸ್ವಂತ ವಿಚಾರಶಕ್ತಿಯನ್ನು ಕುಗ್ಗಿಸಿಬಿಟ್ಟಿರುವದು. ಯಾವದೇ ಸಂಶೋಧಕ ಕಾರ್ಯವನ್ನು ಸ್ವತಂತ್ರವಾಗಿ ಕೈಕೊಳ್ಳದಾಗಿರುವರು. ತಾವು ಕಲಿತದ್ದನ್ನು ತಮ್ಮ ಮನೆಯವರಿಗೂ ತಮ್ಮ ಸಮಾಜದವರಿಗೂ ಒಡೆದು ಹೇಳುವದು ಅವರಿಗೆ ಅಸಾಧ್ಯವಾಗಿ ಕೂತಿರುವದು. ಈ ಪರಕೀಯರ ಶಿಕ್ಷಣದಿಂದ ನಮ್ಮ ಹುಡುಗರು ತಮ್ಮ ದೇಶದಲ್ಲಿಯೇ ಪರಸ್ಥಳದವರಂತಾಗಿರುವರು. ಇದು ಬಲು ಶೋಚನೀಯವಾದದ್ದು. ಈ ಪರಭಾಷೆಯ ಮಧ್ಯಸ್ಥಿಕೆಯಿಂದ ನಮ್ಮ ಮಾತೃಭಾಷೆಗಳೆಲ್ಲ ಬೆಳೆಯದಾಗಿರುವವು. ನನ್ನ ಕೈಯಲ್ಲಿಯೇ ಅಧಿಕಾರವಿದ್ದರೆ ನಾನು ಈಕೊತ್ತೇ ಈ ಪದ್ಧತಿಯ ಶಿಕ್ಷಣವನ್ನು ನಿಲ್ಲಿಸುತ್ತಿದ್ದೆನು ಮತ್ತು ಎಲ್ಲ ಅಧ್ಯಾಪಕರಿಗೆ ಈ ಅವಶ್ಯವಾದ ಬದಲಾವಣೆಯನ್ನು ಮಾಡದಿದ್ದಲ್ಲಿ ಮನೆಗೆ ಹೋಗ ಹೇಳುತ್ತಿದ್ದೆನು. ನಾನು ಕ್ರಮಿಕ ಪುಸ್ತಕಗಳು ತಯಾರಾಗುವವರೆಗೆ ದಾರೀ ನೋಡುತ್ತಿದ್ದಿಲ್ಲ; ಈ ಬದಲಾವಣೆಯು ಆದಮೇಲೆ ಅವು ತಾವಾಗಿಯೇ ಇದನ್ನು ಹಿಂಬಾಲಿಸುವವು. ಈ ಅನಿಷ್ಟಕ್ಕೆ ತತ್ಕಾಲ ಉಪಾಯವನ್ನು ಮಾಡಬೇಕು.

ಶಿಕ್ಷಣದಲ್ಲಿ ಇರುವ ಪರಭಾಷೆಯ ಮಧ್ಯಸ್ಥಿಕೆಯನ್ನು ಈ ರೀತಿ ಅಖಂಡವಾಗಿ ನಾನು ವಿರೋಧಿಸುತ್ತಿರುವದರಿಂದ ಕೆಲವರು ನಾನು ಪರ ಸಂಸ್ಕೃತಿಯನ್ನು ದೂಷಿಸುವೆನೆಂದೂ, ಇಂಗ್ಲೀಷ ಭಾಷೆಯನ್ನೇ ಕಲಿಯಬಾರದೆಂದು ಅನ್ನುವೆನೆಂದೂ ನನ್ನ ಮೇಲೆ ದೋಷ ಹೊರಿಸಿರುವರು. ಆದರೆ ಪರದೇಶಗಳಕೂಡ ವ್ಯಾಪಾರ ಮಾಡುವದಕ್ಕೂ, ಪರರಾಷ್ಟ್ರದ ಒಡನೆ ರಾಜ್ಯವ್ಯವಹಾರ ನಡಿಸುವದಕ್ಕೂ ಇಂಗ್ಲೀಷ ಭಾಷೆಯು ಅತ್ಯವಶ್ಯವಾದದ್ದರಿಂದ ನಮ್ಮಲ್ಲಿ ಕೆಲವರು ಅದನ್ನು ಕಲಿಯಲೇ ಬೇಕೆಂದು ನಾನು ಆಗಾಗ್ಗೆ ಹೇಳುತ್ತ ಬಂದಿರುವದನ್ನು 'ಯಂಗ ಇಂಡಿಯಾ' ದ ವಾಚಕರು ಅರಿಯದೆ ಇರರು. ಮತ್ತು ಅದರೊಳಗೆ ಭಾಷಾ ಮತ್ತು ವಿಚಾರ ಭಾಂಡಾರವು ಹೇರಳವಾಗಿರುವದರಿಂದ ಬುದ್ಧಿಶಾಲಿಗಳಾದ ಕೆಲವರು ಚನ್ನಾಗಿ ಅದರ ಅಧ್ಯಯನವನ್ನು ಮಾಡಿ ಅವುಗಳನ್ನು ತಮ್ಮ ಮಾತೃಭಾಷೆಗಳಲ್ಲಿ ಭಾಷಾಂತರಿಸುವದು ಅವಶ್ಯವಾಗಿರುವದು.

ಸಿಡಿದು ಏಕಾಕಿಯಾಗಿ ನಿಲ್ಲುವದೂ, ನಮ್ಮ ಮತ್ತು ಪರರಾಷ್ಟ್ರಗಳ ನಡುವೆ ಬೇಲಿಯನ್ನು ಹಚ್ಚುವದೂ ಎಂದೂ ನನ್ನ ವಿಚಾರವಿರುವದಿಲ್ಲ. ಆದರೆ ನಾನು ಅನ್ನುವದೇನಂದರೆ,— ನಮ್ಮ ಸ್ವಂತ ಸಂಸ್ಕೃತಿಯ ಗುಣಾವಗುಣಗಳನ್ನು ತಿಳಿದು ಕೊಂಡ ನಂತರವೇ ನಾವು ಪರರ ಸಂಸ್ಕೃತಿಯ ಗುಣಗಳನ್ನು ವರ್ಣಿಸ ಬಲ್ಲೆವು. ಮತ್ತು ನಮ್ಮ ಸಂಸ್ಕೃತಿಯಷ್ಟು ಅಪಾರವಾದದ್ದು ಬೇರೆ ಯಾವ ಸಂಸ್ಕೃತಿಯೂ ಇರುವದಿಲ್ಲವೆಂದು ನನ್ನ ದೃಢವಾದ ನಂಬಿಗೆಯಿರುವದು. ಅದನ್ನು ನಾವು ತಿಳಿದುಕೊಂಡಿರುವದಿಲ್ಲ. ವಿಪರೀತವಾಗಿ ಅದನ್ನು ದೂಷಿಸಲಿಕ್ಕೂ ಅದರ ಅಭ್ಯಾಸವು ನಿಂದ್ಯವಾದದ್ದೆಂದೂ ನಾವು ಕಲಿಸಲ್ಪಟ್ಟಿರುವೆವು. ಈಗಿನ ನಮ್ಮ ವರ್ತನವು ಅದರಂತಿರುವದಿಲ್ಲ. ಅದರಂತೆ ನಮ್ಮ ಬಾಳುವೆಯನ್ನು ತಿದ್ದಿಕೊಳ್ಳದೆ ನಾವು ಕೇವಲ ಅದರ ಗುಣವರ್ಣನ ಮಾಡುವದರಿಂದ ಅದು ಶೃಂಗರಿಸಿದ ಹೆಣದಂತೊಪ್ಪುವದು. ತೋರಲಿಕ್ಕೆ ಅಂದವಾಗಿದ್ದರೂ ಆ

ದರಿಂದ ನಾವು ಉಚ್ಚ ಪದವಿಗೇರಲಾರೆವು. ಪ್ರಾಣಹೋದರೂ ಸ್ವಧರ್ಮವನ್ನೇ ಆಚರಿಸಲಿಕ್ಕೆ ಹೇಳುತ್ತಿರುವಂತೆ ನನ್ನ ಧರ್ಮವು ಎರಡನೆಯವರ ಧರ್ಮದ ನಿಂದೆಯನ್ನು ಮಾಡಕೊಡದೆಂದು ಹೇಳುತ್ತಿರುವದು.

## ಲೋಕಮಾನ್ಯರೂ ಮಹಾತ್ಮಾಗಾಂಧಿಯವರೂ

### ಲೋಕಮಾನ್ಯರು ಮೃತರಾಗಿಲ್ಲ, ಜೀವಂತರಾಗಿದ್ದಾರೆ.

( ನವಜೀವನ )

ಲೋಕಮಾನ್ಯರೂ ಮಹಾತ್ಮರೂ ಇಬ್ಬರೂ ಒಂದೇ ಮಹತ್ವದ ಎರಡು ಭಿನ್ನವಾದ ಅಂಗಗಳಾಗಿರುವದು ಎರಡು ಭಿನ್ನತತ್ವಗಳ ಪ್ರತಿನಿಧಿಗಳಾಗಿರುವರು. ಒಬ್ಬರಿಗೆ ಸ್ವರಾಜ್ಯದ ಬ್ರಹ್ಮನೆಂದು ಕರೆದರೆ ಇನ್ನೊಬ್ಬರಿಗೆ ವಿಷ್ಣುವೆಂದು ಕರೆಯಬಹುದು. ಲೋಕಮಾನ್ಯರ ಜೀವನ ಚಕ್ರದ ಕಾರ್ಯವು ಭರತ ಭೂಮಿಯಲ್ಲಿ ಜ್ಯೋತಿಯನ್ನು ಪ್ರಜ್ವಲಿಸಿ ಸ್ವರಾಜ್ಯದ ಸಲುವಾಗಿ ಸಿದ್ಧತೆಯನ್ನು ಮಾಡುವದಾಗಿತ್ತು ಮಹಾತ್ಮಾ ಗಾಂಧಿಯವರ ಜೀವನ ಜಾಹ್ನವಿಯ ಪ್ರವಾಹವು ಈಗ ವೇಗದಿಂದ ಹರಿಯುಹತ್ತಿರುವದು. ಹಿಂದುಸ್ಥಾನದಲ್ಲಿ ಅವರು ಇನ್ನು ಸ್ವಲ್ಪ ಕಾಲವನ್ನು ಕಳೆದರೂ ಇಡೀ ಜಗತ್ತನ್ನು ಚಕಿತ ಮಾಡಿ ಬಿಟ್ಟಿರುವರು. ಲೋಕಮಾನ್ಯರು ಸ್ವರಾಜ್ಯದ ಸ್ಫೂರ್ತಿಯನ್ನು ತೆಗೆದುಕೊಂಡು ಜನ್ಮತಾಳಿದರು. ಮಹಾತ್ಮಾಜಿಯವರು ಸ್ವದೇಶಿಯ ಸಂದೇಶವನ್ನು ತೆಗೆದುಕೊಂಡು ಜಗತ್ತಿನ ಎದುರಿನಲ್ಲಿ ಬಂದಿರುವರು ಪರಿಸ್ಥಿತಿಯಿಂದಲೂ ಸಮಯದ ಆವಶ್ಯಕತೆಯಿಂದಲೂ ಒಬ್ಬರು ಹಿಂದೀ ರಾಷ್ಟ್ರವನ್ನು ದೇವತೆಯನ್ನಾಗಿ ಮಾಡಿಕೊಂಡರು; ಮತ್ತೊಬ್ಬರು ಧರ್ಮವೇ ದೇವರೆಂದು ಭಾವಿಸಿದರು. ; ಸತ್ಯವೇ ದೇವರೆಂದು ತಿಳಿದರು. ಒಬ್ಬರು ಹಿಂದುಸ್ಥಾನಕ್ಕೆ ಅವರ ಉದ್ಧಾರದ ಮೊದಲನೆಯ ಪಾಠವನ್ನು ಹಾಕಿಕೊಟ್ಟರು ಎರಡನೇಯವರು ಅದಕ್ಕೆ ಎರಡನೆಯ, ಬಹುಶಃ ಕಡೆಯ ಪಾಠವನ್ನು ಕಲಿಸಿದರು. ಒಬ್ಬರು ಭಾರತ ಮಾತೆಯ ಪಂಚಪ್ರಾಣಗಳಾಗಿದ್ದರೆ ಇನ್ನೊಬ್ಬರು ಅವನ ಆತ್ಮವಾಗಿರುವರು ಮಹಾಭಾರತದ ಭಾಷೆಯಲ್ಲಿ, ಒಬ್ಬನು ಅರ್ಜುನನಾದರೆ ಇನ್ನೊಬ್ಬನು ಯುಧಿಷ್ಠಿರನಿರುವನು. ಗೀತೆಯ ಶಬ್ದಗಳಲ್ಲಿ ಒಬ್ಬನು ರಾಜಸಮೂರ್ತಿಯಾಗಿದ್ದರೆ ನ್ನೊಬ್ಬನು ಸಾತ್ವಿಕಮೂರ್ತಿಯಾಗಿರುವನು. ಪ್ರಕೃತಿಯ ಸಾಮ್ರಾಜ್ಯದಲ್ಲಿ ಲೋಕಮಾನ್ಯರು ಸೂರ್ಯನಂತೆ ಪ್ರಖರರಾಗಿಯೂ ತೇಜಸ್ವಿಗಳಾಗಿಯೂ ಪ್ರತಿಭಾಶಾಲಿಗಳೂ ಇದ್ದರೆ ಮಹಾತ್ಮಾಜಿಯವರು ಸೂರ್ಯ ಅಥವಾ ಬಿಜಲಿಯಂತೆ ತೇಜೋಮಯರಾಗಿಯೂ, ಚಂದ್ರನಹಾಗೆ ಶಾಂತತೆಯ ಅಮೃತವನ್ನು ಬೀರುವವರಾಗಿಯೂ, ಮೇಘಮಂಡಲದಂತೆ ಜೀವನ–ಮಾಂಗಲ್ಯದಾಯಿಗಳಾಗಿಯೂ ಇರುವರು. ನೌಕರಶಾಹಿಯವರ ದೃಷ್ಟಿಯಿಂದ ಒಬ್ಬರು ತೋಫಿನ ಗುಂಡಗಳಂತೆ ತೋರುತ್ತಿದ್ದರೆ ಇನ್ನೊಬ್ಬರು ಸುರಂಗದ ಬತ್ತಿಯಂತೆ ಕಾಣುವರು. ಟಿಳಕರು ವ್ಯವಹಾರದಲ್ಲಿ ಯೇ ಯಥಾ ಮಾಂ ಪ್ರಪದ್ಯಂತೆ ತಾಂಸ್ತಥೈವ ಭಜಾಮ್ಯಹಂ ಎಂದು ಪೂರ್ಣವಾಗಿ ನಂಬಿದ್ದರು. ಅಕ್ರೋಧೇನ ಜಯೇತ್ಕ್ರೋಧಮಸಾಧುಂ ಸಾಧುನಾ ಜಯೇತ್. ಎಂದು ಗಾಂಧಿಮತವು ಲೋಕಮಾನ್ಯರು ಸ್ವಯಂ ಕಷ್ಟದಲ್ಲಿ ಮುಳುಗಿದ್ದರೂ ಎರಡನೇದವರನ್ನು ಕಷ್ಟನಿವೃತ್ತರನ್ನಾಗಿ ಮಾಡಲು ಇಚ್ಛಿಸುತ್ತಿದ್ದರೆ, ಮಹಾತ್ಮಾಜಿಯವರು ಕಷ್ಟವೇ ಸುಖವೆಂದು ಭಾವಿಸಿ, ಅಂಥ ಕಷ್ಟದ ಯ ಸ್ಥಿತಿಯೊಳಗಿಂದ ಮೇಲಕ್ಕೇಳಲು ಶಕ್ತಿಯ ಅಪೇಕ್ಷೆಯನ್ನು ಮಾಡುತ್ತಾರೆ. ಲೋಕಮಾನ್ಯರು ರಾಷ್ಟ್ರೀಯ ಧರ್ಮದ ಆಚಾರ್ಯರು ಹಾಗೂ ಮಹಾತ್ಮರು ಸತ್ಯಧರ್ಮದ ಅನುಯಾಯಿಗಳಾಗಿ ಒಬ್ಬರು ಹಿಂದುಸ್ಥಾನದ ಬುದ್ಧಿ ಬಲವಿದ್ದರೆ, ಎರಡನೆ ಭಾರತದ ಆತ್ಮಬಲವಿರುತ್ತಾರೆ. ಇಬ್ಬರೂ ಭಾರತ ಮಾತೆಯ ಪ್ರೀತಿಯ ಸುಪುತ್ರರಿರುವರು ಇಬ್ಬರೂ ಭಾರತ ಮಾತೆಯ ಯೋಗ್ಯಪುತ್ರರಿರುವರು. ಇಬ್ಬರೂ ದೇವಾಂಶರಿರುವರು. ಇಬ್ಬರೂ ಸನ್ಮಾನನೀಯರಾಗಿರುವರು ಇಬ್ಬರ ವಿಷಯವಾಗಿಯೂ ಭಾರತಮಾತೆಯು ಅಭಿಮಾನವನ್ನು ತಾಳುವಳು. ಓರ್ವರು ಮರಣಹೊಂದಿದರೆ ಎರಡನೇಯವರು ಮುಂದೆ ಬಂದು ಆಶ್ವಾಸನಕೊಟ್ಟರು. ಆದರೆ ಈಗ ಎರಡನೇಯವರನ್ನು ಸಹ ಭಾರತಮಾತೆಯ ಸೇವೆಯಿಂದ ನಿವೃತ್ತರನ್ನಾಗಿ ಮಾಡಿರ ವರು ಲೋಕಮಾನ್ಯರನ್ನು ಪರಲೋಕದ ನೌಕರಶಾಹಿಯು ಕರಸಿಕೊಂಡು ಹೋಗಿದ್ದರೆ ಮಹಾತ್ಮರನ್ನು ಈ ಲೋಕದ ನೌಕರಶಾಹಿಯು ಕೈದ ಮಾಡಿರುವದು. ಮಹಾತ್ಮರನ್ನು ಮುಕ್ತಮಾಡುವದು ನಮ್ಮ ಕೈಯೊಳಗಿನ ಮಾತಾಗಿರುತ್ತದೆ ಹಾಗೂ ಅದು ನಮ್ಮ ಪರಾಕ್ರಮ ಮತ್ತು ಪುರುಷಾರ್ಥಗಳ ಮೇಲೆಯೇ ಅವಲಂಬಿಸಿರುವದು. " ಯದ್ಗತ್ವಾ ನ ನಿವರ್ತನ್ತೆ " ಇಂಥ ಸ್ಥಾನಕ್ಕೆ ಹೋಗಿ ಮುಟ್ಟಿರುವರು. ಇದೇ ಶರೀರದಿಂದಲೇ ತಿರುಗಿ ಬರಲಿಕ್ಕೆ ಅವರು ಹೋಗಿರುವದಿಲ್ಲ. ಅವರು ಬದುಕಿರುವ ನಮ್ಮಂಥವರ ಪೌರುಷ ಪರಾಕ್ರಮವನ್ನು ನೋಡುವದರಸಲುವಾಗಿ ಹಾಗೂ ಯೋಗ್ಯತೆಯ ಪರೀಕ್ಷೆಯನ್ನು ಮಾಡುವದರ ಸಲುವಾಗಿ ಪರಲೋಕಕ್ಕೆ ತೆರಳಿರುವರು. ಯಾವ ಸ್ವರಾಜ್ಯದ ಸಲುವಾಗಿ ನಾವು ಬದುಕಿರುವ ವರೆಗೆ ಬಡಿದಾಡಿದೆವೋ, ಮತ್ತು ಯಾವ ಸ್ವಾವಲಂಬನದ ತತ್ವದಿಂದ ನಮ್ಮ ಜೀವನವನ್ನು ಸಾಗಿಸಿದ್ದೆವೋ ಮತ್ತು ಯಾವ ಅನ್ಯಾಯದ ಪ್ರತೀಕಾರದ ಸಲುವಾಗಿ ಸರಕಾರದ ವಜ್ರಪ್ರಹಾರವನ್ನು ಸಹನ ಮಾಡಿದೆವೋ, ಅಂಥ ಸ್ವರಾಜ್ಯದ ಹಾಗೂ ಸ್ವಾವಲಂಬನದ ತತ್ವವು ನಮ್ಮ ಭಕ್ತರ ಮನಸ್ಸಿನಲ್ಲಿಯಾವ ರೀತಿಯಿಂದ ನಟ್ಟಿರುವದು, ಎಂಬುದನ್ನು ನೋಡುತ್ತ ಅವರು ಪರಲೋಕದಲ್ಲಿ ನಿಂತಿದ್ದಾರೆ ಈಗ, ಅವರ ಶ್ರಾದ್ಧ ಸಮಯದಲ್ಲಿ, ಈ ಪ್ರಶ್ನೆಗೆ ಹಿಂದುಸ್ಥಾನವ ಉತ್ತರವೇನಿರುವದು. ?

ನಾವು ಲೋಕಮಾನ್ಯರ ಶ್ರಾದ್ಧ ಮಾಡಲು ಇಚ್ಛಿಸುತ್ತೇವೆ; ಅವರ ಪೂಜೆಯನ್ನು ಮಾಡಲು ಬಯಸುತ್ತೇವೆ ಅವರ ಪೂಜೆಯ ನಿಜವಾದ ಹಾಗೂ ಶೋಭನೀಯವಾದ ಮಾರ್ಗವನ್ನು ಮಹಾತ್ಮಾಜಿಯವರು ತೋರಿಸಿಕೊಟ್ಟಿರುವರು. ಅವನ್ನು ಬೇರೆಡೆಯಲ್ಲಿ ಅವರ ಶಬ್ದಗಳಿಂದಲೇ ಮುದ್ರಿಸಿರುವೆವು.

ಲೋಕಮಾನ್ಯರು ಹಾಗೂ ಮಹಾತ್ಮಾಜಿಯವರು ಒಂದು ಮಹತ್ತತ್ವದ ಎರಡು ಅವಯವಗಳಾಗಿರುತ್ತಾರೆಂಬದನ್ನು ನಾವು ಮೊದಲಿಗೆ ಹೇಳಿ ಬಿಟ್ಟಿದ್ದೇವೆ ಈರ್ವರೂ ಮಹಾತ್ಮರು ಇಬ್ಬರೂ ದೇಹಭಾವ ಹಾಗೂ ಅಹಂಭಾವವನ್ನು ಬಿಟ್ಟಿರುವರು ಇಬ್ಬರ ದೃಷ್ಟಿಯೂ ನಿರ್ಮಲವಾದದ್ದಿತ್ತು ಆದ್ದರಿಂದಲೇ ಈರ್ವರೂ ಪರಸ್ಪರ ಶುದ್ಧ ಭಾವ ಹಾಗೂ ಸತ್ಯಭಾವದಿಂದ ನೋಡಲು ಶಕ್ಯರಾಗಿದ್ದರು ಲೋಕಮಾನ್ಯರಾದರೂ ಮಹಾತ್ಮಾಜಿಯವರ ಗುಣಾನುವರ್ಣನೆಯನ್ನು ಅಲ್ಲಲ್ಲಿಗೆ ಮಾಡಿರುವರು, ಮತ್ತು ಮಹಾತ್ಮಾಜಿಯವರಾದರೂ, ಲೋಕಮಾನ್ಯರ ಗುಣವರ್ಣನೆ ಎಂದರೆ, ಸ್ವರಾಜ್ಯದ ಒಂದು ಸಾಧನವೆಂದೇ ತಿಳಿದಿದ್ದರೂ ಅವರು ತಮ್ಮ ಪತ್ರ ಹಾಗೂ ಭಾಷಣಗಳಲ್ಲಿ ಲೋಕಮಾನ್ಯರ ಗುಣ ಕೀರ್ತನವನ್ನು ಯಥಾ ಯೋಗ್ಯವಾಗಿ ಮಾಡಿರುವರು ಜಗತ್ತಿನಲ್ಲಿಯ ಎಲ್ಲ ವಿದ್ವಾಂಸರು, ಮಹಾತ್ಮಾ ಗಾಂಧಿಯವರೆಂದರೆ, ಅಖಿಲ ಭೂಮಂಡಲದಲ್ಲಿ ಸರ್ವಶ್ರೇಷ್ಠ ಪುರುಷರೆಂದು ಭಾವಿಸುತ್ತಾರೆ ಅಂಥ ಮಹಾತ್ಮಾಜಿಯವರು ಯಾವ ಲೋಕಮಾನ್ಯರ ಗುಣಕೀರ್ತನೆಯನ್ನು ಮಾಡುವರೋ, ಅಂಥ ಲೋಕಮಾನ್ಯರ ಜೀವನವು ಶ್ರೇಷ್ಠ, ಪೂಜ್ಯ ಹಾಗೂ ಸ್ಫೂರ್ತಿದಾಯಕ ವಾದದ್ದೆಂದು

( ೨೮೮ ನೇ ಪಾನ ನೋಡಿರಿ. )

**ಟಿಕ್ ಟಿಕ್ ಎಂಬ ಶಬ್ದವನ್ನು ಕೊಟ್ಟ ಮಾತ್ರಕ್ಕೆ ಗಡಿಯಾರಗಳೇ.**




ಚಕ್ರಗಳಲ್ಲಿಯೂ ಗಂಜಿ ತೋರಿಸುವ ಸಂರುಗಳ ಮೇಲೆಯೂ ಕೇವು ಕಲ್ಲು ಕೆತ್ತಲ್ಪಟ್ಟಿವೆ ಎಂದು ಇದನ್ನು ತರಿಸುವವರಿಗೆ 10-15 ಬಹುಮಾನಗಳೊಡನೆ 5-6 ವರುಷಗಳು ಗ್ಯಾರಂಟಿ ಸಹಿತ 3-4 ರೂಪಾಯಿಗಳಿಗೆ ಕೊಡುವೆವೆಂದು ಪ್ರಚುರವಾಗುವ ಪ್ರಕಟನೆಗಳನ್ನು ನೋಡಿ ಬೆರಗಾಗಿ ನಿಮ್ಮ ಹಣವನ್ನು ಕಳೆಕೊಳ್ಳಬೇಡಿ ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ್ ಬಹು ಉತ್ತಮವಾದ ಮೂವ್‌ಮೆಂಟ್ಸ್‌ಗಳಿಂದ ತಯರಿಸಿದ, ಗಾಳಿಯೂ ಧೂಳೂ ಸೇರದಂತೆ ಗ್ಲಾಸ್‌ಡೋಮು ಇರುವದು. ಸರಿಯಾದ ಕಾಲವನ್ನು ತೋರಿಸುವದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವು ಸರಿಮಾಡಿಕೆಳ್ಳೂಬಹುದು. ನೋಟಕ್ಕೆ ಗಂಭೀರವಾಗಿಯೂ ಸುಂದರವಾಗಿಯೂ ಇರುವದು. ಇದು ಇಂಗ್ಲೀಷ ನಮೂನೆಯುಳ್ಳದ್ದು- ಈ ಗಡಿಯಾರದಲ್ಲಿ ಯಾರೇ ಆಗಲಿ ಸುಲಭವಾಗಿ ಗಂಟೆ ನೋಡಬಹುದು. ಅಷ್ಟರಿಂದ ಬಹಳವಾಗಿ ವರ್ಣನ ಮಾಡುವದೇತಕ್ಕೆ? ಒಂದನ್ನು ತರಿಸಿನೋಡಿರಿ ತಿಳಿಯುವದು. ೪ ವರುಷಗಳ ಗ್ಯಾರಂಟಿ ಸಹಿತ ಕ್ರಯ ೪-೮-೦

ಮ್ಯಾನೇಜರ,—

**ಧೈರ್ಯ ಲಕ್ಷ್ಮಿ ಅಂಡ ಕೊ;**

ಪೊ॥ ಬಾ॥ ನಂಬರು ೨೬೫ ಮದ್ರಾಸು.

---

**ವಜ್ರದ ಉಂಗುರುಗಳು.**



ಈ ಉಂಗರಗಳು ವಿಲಾಯತಿಯಲ್ಲಿ ತಯಾರಿಸಿದ್ದು. ಅತ್ಯುತ್ತಮವಾದ ವಜ್ರದ ಕಲ್ಲುಗಳನ್ನು ಇಟ್ಟು ಸೀಮೆ ಬಂಗಾರದಿಂದ ತಯಾರಿಸಿ ಮೇಲುಗಡೆ ಅಪರಂಜಿ ಬಂಗಾರದ ಗಿಲೀಟುಮಾಡಿದೆ. ನೋಡಲು ಬಹು ಲಕ್ಷಣವಾಗಿ ಕಾಣುವದು. ಇದು ಶ್ರೀಮಂತರಿಗೂ ಗರೀಬರಿಗೂ ಲಾಯಖಾದದುದ್ದು.

ಕ್ರಯ ೧ಕ್ಕೆ ರೂ. ೩-೦-೦. ಕ್ರಯ ೩ಕ್ಕೆ ರೂ. ೫-೮-೦.

ವಿಳಾಸ:— **ವಿ. ಎ. ಎಸ್. ಪಾಣಿ ಕಂಪನಿ.**

ಸಾಹುಕಾರ ಪೇಟೆ ಮದರಾಸು.

---

**ಇಂಡಿಯಾ ಪ್ರಾವ್ಹಿಡಂಟ ಕಂ. ಲಿ. ಕಲಕತ್ತಾ.**

ಮಧ್ಯಮ ಸ್ಥಿತಿಯ ಕುಟುಂಬಿದಾರರಿಗೆ ಈ ಕಠಿಣ ಕಾಲದಲ್ಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಬಿಗಿಯಾಗಿರುವದು ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರೆಗೆ ದೊರಕಿಸಬಹುದು.

**ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ.**

V. J. PARVATIKER.
General Agent, BAGALKOT.

---

# ಡಾ. ಇಂಗಳೀಕರ

ಎಲ್. ಸೀ. ಎಚ್. ಸೀ.

ಇವರ

ಹದಿನೇಂಟುವರ್ಷ ಅನುಭವದಿಂದ ಉತ್ತಮವೆಂದು ನಿಶ್ಚಿತವಾದ ಔಷಧಗಳು.

| | | | |
|---|---|---|---|
| ಬಾಲಾಮೃತ ಹುಡುಗರಿಗೆ | ೦ | ೧೨ | ೦ |
| ಹೆಮ್ಯಾಟೋ ಸಾರ್ಸಾಪರಿಲಾ | ೧ | ೦ | ೦ |
| ವೈಜಿಟೇಬಲ್ ಟಾನಿಕ ಸಾಯುರಪ ಶಕ್ತಿವರ್ಧಕ ಮತ್ತು ಸ್ಮರಣಶಕ್ತಿಯಮೇಲೆ | ೧ | ೦ | ೦ |
| ವೀರ್ಯವರ್ಧಕ ಸಾಯುರಪ್ | ೧ | ೦ | ೦ |
| ಗರಮಿಯ ಗುಳಿಗೆಗಳು, ಮಡಿಯು ಮತ್ತು ಅರ್ಕವು | ೧ | ೦ | ೦ |
| ಪರಮಿಯ ಔಷಧಗಳು | ೧ | ೦ | ೦ |
| ಚಟ್ಟೆಗಳ ಮುಲಮು | ೦ | ೮ | ೦ |
| ಚಳಿಜ್ವರ ಗುಳಿಗೆಗಳು | ೦ | ೧೨ | ೦ |
| ಮುಟ್ಟಿನ ಬೇನೆಯ ಗುಳಿಗೆಗಳು | ೧ | ೦ | ೦ |
| ಸುಖಪ್ರಸೂತಿಯ ಗುಳಿಗೆಗಳು | ೧ | ೦ | ೦ |

ಡಾ. ಇಂಗಳೀಕರ, L. C. H. C.
ಬಾಗಲಕೋಟೆ.

---

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಏಜಂಟರು) **ಅತ್ಯುತ್ತಮ** (ಬೇಕು

ಮಸಿ ಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೮—೦ | ಟ. ಖ. |
| ೧೦೦ ಚೀಟಿಗಳಿಗೆ | ೦—೧೪—೦ | |
| ೫೦ ಔನ್ಸ ಮಸಿ ಪುಡಿಕೆಗೆ | ೦—೪—೦ | ಬೇರೆ. |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸ:— **ಕರ್ನಾಟಕ ಇಂಕ ಕಂಪನಿ, ಬಾಗಲಕೋಟೆ.**

---

**ದಿ. ಕರ್ನಾಟಕ ಹೋಮಿಯೋ ಫಾರ್ಮಸೀ**

ಬಾಗಲಕೋಟೆ.

ಕರ್ನಾಟಕದಲ್ಲಿ ಪೂರ್ಣ ವಿಶ್ವಸನೀಯವಾದ ಹೋಮಿಯೋಪಾಥಿಕ ಔಷಧಗಳನ್ನು ಪೂರೈಸುವ ಫಾರ್ಮಸಿಯು ಇದೇ ಮೊದಲನೇಯದು ಈ ಔಷಧಗಳನ್ನು ಅಮೇರಿಕೆಯಿಂದಲೇ ತರಿಸುತ್ತಿದ್ದು, ಅವು ಪದವೀಧರರಾದ ಡಾಕ್ಟರರ ಪ್ರತ್ಯಕ್ಷದಲ್ಲಿ ತಯಾರಾಗುತ್ತಿರುವದರಿಂದ ಅವುಗಳಬಗ್ಗೆ ಯಾರಿಗೂ ಸಂಶಯ ತೆಗೆದುಕೊಳ್ಳಲಿಕ್ಕೆ ಮಾರ್ಗವಿಲ್ಲ ಔಷಧಗಳನ್ನು ತರಿಸಿ ಅನುಭವವನ್ನು ತೆಗೆದುಕೊಳ್ಳಬೇಕು.

ವ್ಯವಸ್ಥಾಪಕ.

---

# ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರದ್ವಾರದಿಂದ, ಉತ್ತಮವಾದ ಸ್ವದೇಶೀ ಸಾಬಾಣವನು ಮಾಡುವದಕ್ಕೆ ಕಲಿಸುವೆವು. ಫೀ. ರೂ. ೫. ಉದ್ಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು

**ಕಲಾಭುವನ—ರಾಷ್ಟ್ರೀಯ ಶಾಲಾ ಧಾರವಾಡ.**


☞ ಈ ಪತ್ರವನ್ನು ಬಾಗಲಕೋಟೆ ಸಂಕಟಪೇಟೆಯಲ್ಲಿ ವಿದ್ಯಾರಣ್ಯ ಮುದ್ರಾಸಂದಿರದಲ್ಲಿ ಶ್ರೀನಿವಾಸ ರಾಜೀರಾವ ಮಂಗಳವೇಡೆ ಇವರು ಮುದ್ರಿಸಿದರು ಮತ್ತು ಅಲ್ಲಿಯೇ ತಮ್ಮಣಾಚಾರ್ಯ ಬಂಡಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

R. N 1568

ಶಾಂತಿಯುದ್ಧಧ್ವಜವು.

ಕನ್ನಡ

# ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟ ಭಾದ್ರಪದ ಶುದ್ಧ ೨ ಶಕೆ ೧೮೪೩ ಗುರುವಾರ ತಾ ೨೫ ಅಗಸ್ಟ ೧೯೨೧. | ಸಂಚಿಕೆ ೩೭

## ಮಹಾತ್ಮರ ನುಡಿಯು

(ಯಂಗ ಇಂಡಿಯಾ ತಾ|| ೬-೯-೨೧)

### ಗೋಗಳನ್ನು ಉಳಿಸುವ ಹಾದಿಯು.

ನಾನು ಮೌಲಾನಾ ಮಹಮುದ ಅಲ್ಲಿ, ಮತ್ತು ಅಝಾದ ಸೋಬಾನಿ ಮೂವರು ಕೂಡಿ ಬಿಹಾರಕ್ಕೆ ಹೋದಾಗ ಅಲ್ಲಿ ಗೋವಧವನ್ನು ಕುರಿತು ಇದ್ದ ತಪ್ಪು ತಿಳವಳಿಕೆಯನ್ನು ಹೋಗಲಾಡಿಸುವದಕ್ಕಾಗಿ ಹೊರಟೆವು ಅಲ್ಲಿ ಅನೇಕ ಸ್ಥಳಗಳಲ್ಲಿ ಭಾಷಣಗಳನ್ನು ಮಾಡಿದೆವು. ಆ ಭಾಷಣಗಳಲ್ಲಿ ಒಂದನ್ನು ವಾಚಕರಿಗೆ ಇಲ್ಲಿ ಕೊಡುವೆನು. ನನ್ನ ಮಿತ್ರನೊಬ್ಬನು ಮಾತಾಡುವಾಗ್ಗೆ ಕ್ರಮ ಬಧ್ಧ ಅದರ ಸಾರವನ್ನು ಬರೆದು ತಕ್ಕೊಂಡಿದ್ದರಿಂದ ಅದನ್ನು ಇಲ್ಲಿ ಕೊಡಲಿಕ್ಕೆ ಶಕ್ಯವಾಗಿರುವದು.

"ಗಾಂಧಿಯು ನಮಗೆ ದಿನಾಲು ಮೈತೊಳೆದುಕೊಳ್ಳಿರೆಂದು ಹೇಳುತ್ತಿರುವನು ಆದರೆ ಇರುವದೊಂದು ಮೈಮೇಲಿನ ಬಟ್ಟೆಯನ್ನು ಒಗೆದು ಒಣಗಿಸಿಕೊಳ್ಳುವ ವರೆಗೆ ದಿಗಂಬರರಾಗಿ ನಿಲ್ಲುವದನ್ನು ಯಾರು ಹೇಳಿದರೂ—ಮಹಾತ್ಮಾ ಗಾಂಧಿಯು ಹೇಳಿದರೂ ನಾವು ಮಾಡಲಾರೆವು" ಬಿಹಾರದಲ್ಲಿಯ ಬಡತನವು ಈ ಪರಿಯಾಗಿರುವದು. ಈ ಹೆಂಗಸರಿಗೆ ರಾಟಿಗಳನ್ನು ಕೊಟ್ಟು ಅವರಿಂದ ನೂಲು ತೆಗೆಯಿಸಿ ದಿನಾಲು ಎರಡು ಆಣೆಗಳನ್ನು ಕೊಡಹತ್ತಿದಲ್ಲಿ ಅವರು ಈ ನೂಲುವ ಕೆಲಸವನ್ನು ತಮ್ಮ ಮನಸ್ಸಿನಿಂದಲೂ ಉತ್ಸಾಹದಿಂದಲೂ ಮಾಡತೊಡಗುವರೆನ್ನಲಿಕ್ಕೆ ನನಗೆ ಏನೂ ಆತಂಕ ತೋರುವದಿಲ್ಲ ನೀಲಿಯನ್ನು ಬೆಳೆದುಕೊಳ್ಳುವ ತೋಟಿಗರು ಇಡೀ ದಿವಸ ದುಡಿಸಿಕೊಂಡು ಇವರಿಗೆ ಅರು ಪುಡ್ಕ ಕೊಡುವದನ್ನು ನಾನು ಬಲ್ಲೆನು ಆದ್ದರಿಂದಲೇ, ನೂಲುವದರಿಂದ ದಿನಾಲು ಎರಡು ಆಣೆ ದೊರೆಯುವವೆಂದು ಅವರಿಗೆ ಗೊತ್ತಾದ ಮೇಲೆ ಅವರು ತಾವಾಗಿಯೇ ರಾಟಿಯ ಕಡೆಗೆ ಧಾವಿಸಿ ಬರುವರು. ಇದರಂತೆ ನಾವು ಈ ಕ್ಷಣಕ್ಕೆ ಕೆಲಸ ಸುರುವು ಮಾಡಬೇಕು. ನಾನು ಬಿಹಾರದಿಂದ ಬಹಳ ಸಹಾಯ ದೊರೆಯಬಹುದೆಂದು ಆಶೆ ಮಾಡಿರುವೆನು ಬಿಹಾರದ ಮೇಲಿನ ನನ್ನ ಹಕ್ಕು ಹೆಚ್ಚಿನದಾಗಿರುವದ.. ಈ ನನ್ನ ಶಕ್ತಿಯನ್ನು ಬಿಹಾರವು ಅಲ್ಲಗಳೆಯಲಿಕ್ಕಿಲ್ಲೆಂದು ನಂಬಿರುವೆನು. ನಾನು ಹೇಳಿದ್ದೆಲ್ಲವನ್ನು ನೀವೆಲ್ಲರೂ ಹಳ್ಳಿಯವರಿಗೆ ಚನ್ನಾಗಿ ತಿಳಿಹೇಳಿರಿ. ಹಳ್ಳೀ ಜನರಿಗೆ ಇವು ಶೀಘ್ರ ತಲೆಯಲ್ಲಿ ಸೇರುವದಿಲ್ಲ. ನೀವು ಪಟ್ಟಣವಾಸಿಗಳಾದದರಿಂದ ಜಗತ್ತಿನ ಅನುಭವವು ನಿಮಗೆ ಹೆಚ್ಚಿಗೆ ಇರುವದು. ಆದ್ದರಿಂದ ಇವೆಲ್ಲವೂ ಅವರ ತಲೆಯಲ್ಲಿ ಬಿಂಬಿಸುವಂತೆ ಮಾಡುವದು ನಿಮ್ಮನ್ನು ಕೂಡಿದೆ. ಈ ಸ್ವರಾಜ್ಯಸಂಗ್ರಾಮಕ್ಕೆ ಇವು ಮೂರು ಅವಶ್ಯದ ದಪ್ಪುಗಳು ಅವಿಲ್ಲದೆ ನಾವು ಒಂದು ಹೆಜ್ಜೆಯನ್ನು ಮುಂದಿಡುವಂತಿಲ್ಲ. ಮೊದಲನೇದು—ಹಿಂದು ಮುಸಲ್ಮಾನರೊಳಗೆ ಗಟ್ಟಿಯಾದ ಐಕ್ಯಭಾವವು ಬೆಳೆಯಬೇಕು. ಅವರಿಬ್ಬರ ನಡುವೆ ಬಂಧುಪ್ರೇಮವು ಹುಟ್ಟಬೇಕು. ಈ ಸ್ವರಾಜ್ಯ ಚಳವಳಿಯು ಯಶಸ್ವಿ

ಯಾಗಲಿಕ್ಕೆ ಇದು ಮೊದಲನೇ ಕಾರಣವು. ಎರಡನೇದು:— ಈ ಶಾಂತವಾದ ಅಹಿಂಸಾ ಚಳವಳಿಯು ಯಾವಾಗಲೂ ಶಾಂತಮಯವಾಗಿಯೇ ಉಳಿಯಬೇಕು. ನಾವು ರಕ್ತಪಾತದ ಮಾರ್ಗದಿಂದ ಗೆದೆಯಲಾರೆವೆಂಬದು ಸ್ವಲ್ಪ ವಿಚಾರಮಾಡಿದಲ್ಲಿ ಎಲ್ಲರಿಗೂ ಹೊಳೆಯುವಂತಿರುವದು. ನಾವು ಶಸ್ತ್ರವನ್ನು ಹಿಡಿದರೆ ನಮ್ಮ ಹಾನಿಯನ್ನು ನಾವೇ ಮಾಡಿಕೊಳ್ಳುವೆವು. ಇದು ಹವೆಯ ಹಡಗದಂಥ ಈಗಿನ ಯುದ್ಧ ಸಾಮುಗ್ರಿಗಳು ನಮ್ಮಲ್ಲಿ ಇಲ್ಲದ ಮೂಲಕ; ಆದ್ದರಿಂದ ಯಾವ ಪ್ರಸಂಗದಲ್ಲಿಯೂ ಶಾಂತತಾಭಂಗ ಮಾಡಕೂಡದು. ನಾವು ಇಂಗ್ಲೀಷರೊಂದಿಗೆಯೂ ಮತ್ತು ನಮ್ಮ ನಮ್ಮೊಳಗೂ— ಸಹಕಾರವಾದಿಗಳು, ಅಸಹಕಾರವಾದಿಗಳು, ಜಮೀನದಾರರು, ರೈತರು— ತಾಳ್ಮೆಯಿಂದ ನಡಕೊಳ್ಳಬೇಕು. ಮೂರನೇದು:— ನಾವು ಕೂಡಲೇ ಪರದೇಶಿಬಟ್ಟೆಯನ್ನು ಬಹಿಷ್ಕರಿಸಿ ನಮ್ಮ ಮನೆಗಳಲ್ಲಿ ಅಥವಾ ಹಳ್ಳಿಗಳಲ್ಲಿ ನಮಗೆ ಹತ್ತುವಷ್ಟು ಅರಿವೆಯನ್ನು ತಯಾರಿಸಹತ್ತಬೇಕು. ಇಷ್ಟಾದ ಮೇಲೆ ನಮ್ಮ ಮೂರು ಧ್ಯೇಯಗಳು ನಮಗೆ ಸಾಧ್ಯವಾಗುವವು.

---

## ಸುಧಾರಣೆಗಳ ಭಾಗ್ಯವು.

(ನವಜೀವನ)

ಸುಮಾರು ಎರಡು ವರ್ಷಗಳ ಹಿಂದೆ ಇಂಗ್ಲೀಷ ಸರಕಾರದವರು ಹಿಂದುಸ್ತಾನದ ರಾಜ್ಯ ಪದ್ಧತಿಯಲ್ಲಿ "ಮಾಂಟೆಗ್ಯೂ ಚೆಮ್ಸ್‌ಫರ್ಡ ಎಂಬ ಹೆಸರಿನ ಸುಧಾರಣೆಯನ್ನು ಮಾಡಿದ ಸಂಗತಿಯು ಸುಪ್ರಸಿದ್ಧವಾಗಿರುವದು. ಇದರಿಂದ ಹಿಂದುಸ್ತಾನವು ಅಸಂತುಷ್ಟವಾಗಿದ್ದರೂ, ಹಿಂದುಸ್ತಾನವು ಈ ಸುಧಾರಣೆಗಳು ಜೊಳ್ಳು ಇರುವವೆಂದು ತಿಳಿಯುತ್ತಿದ್ದರೂ, ಮಾಯಾನಿರ್ಮಿತವಾದ ಹಸರು ತೋಟವೆಂದು ಭಾವಿಸುತ್ತಿದ್ದರೂ, ಆಂಗ್ಲನೌಕರಶಾಹಿಯು ಇಷ್ಟರಿಂದಲೇ ಆಕ್ರೋಶವನ್ನು ಮಾಡಹತ್ತಿರುವದು. ಅವರ ಆ ಆಕ್ರೋಶದಿಂದ ಹಿಂದುಸ್ತಾನದಲ್ಲಿ ನಮ್ಮ ಸ್ಥಿತಿಯು ಭಯಂಕರವಾಗಿದೆ. ನಾವು ನಮ್ಮನ್ನು ಉಳಿಸಿಕೊಳ್ಳಬೇಕಾಗಿದೆ. ಅವರು ಎಬ್ಬಿಸಿದ ಈ ಕೋಲಾಹಲದಿಂದ ಲಾಯಿಡಜಾರ್ಜರ ಆಸನವು ಅಸ್ಥಿರವಾಯಿತು. ಆದ್ದರಿಂದ ಲಾಯಿಡಜಾರ್ಜರು ಅವರಿಗೆ "ನಿಶ್ಚಿಂತರಾಗಿರಿ. ಸುಧಾರಣೆಯಿಂದ ನೀವು ಅಂಜುವದೇಕೆ? ಇದೊಂದು ಆಟವನ್ನು ಒಂದು ಅಭಿಪ್ರಾಯದಿಂದ ಹೂಡಿರುವವು. ನಿಮ್ಮ ಸಹಾಯವಿಲ್ಲದೆ ಇಂಗ್ಲೀಷರ ರಾಜ್ಯವು ಹಿಂದುಸ್ತಾನದಲ್ಲಿ ಉಳಿಯುವ ಬಗೆ ಹೇಗೆ? ಎಂಥ ಪರಿಸ್ಥಿತಿಯಲ್ಲಿಯೂ ನಿಮ್ಮ ಅವಶ್ಯಕತೆಯು ಇದ್ದೇ ಇರುವದು. ಸಾಮ್ರಾಜ್ಯ ಸರಕಾರವು ನಿಮ್ಮ ಪಕ್ಷ ಒಲಿದಿರುವದು. ಆದರೂ ಹಿಂದುಸ್ತಾನದ ಅಸಹಯೋಗವಾದರೂ ನಮಗೆ ಅವಶ್ಯವಾಗಿ ಬೇಕು. ಎಷ್ಟೋ ಜನರು ಈ ನಮ್ಮ ಸರಕಾರವನ್ನು ಬಗ್ಗುಬಡಿಯುವ ಕುರಿತು ಅಥವಾ ಅದರ ಕಾರ್ಯಗಳಿಗೆ ತೊಂದರೆಯನ್ನು ಉಂಟುಮಾಡುವ ಕುರಿತು ಕೌನ್ಸಿಲಗಳಲ್ಲಿ ಸೇರಬೇಕೆಂಬ ಪ್ರಯತ್ನವನ್ನು ನಡಿಸಿರುವದು ನನ್ನ ಕೇಳಿಕೆಯಲ್ಲಿದೆ. ಇಂಥ ಪರಿಸ್ಥಿತಿಯು ಒದಗಿದಲ್ಲಿ ಸರಕಾರವು ನಿಮಗೆ ಎಲ್ಲ ರೀತಿಯಿಂದ ಸಂಪೂರ್ಣ ಸಹಾಯ ಮಾಡುವದೆಂದು ನಾನು ನಿಮಗೆ ಆಶ್ವಾಸನವನ್ನು ಕೊಡುತ್ತೇನೆ" ಎಂದು ಹೇಳಿರುವರು. ಈ ಭಾಷಣದಿಂದ ಅಸಹಯೋಗಿಗಳಿಗೆ ಏನೂ ಆಶ್ಚರ್ಯವಾಗಿಲ್ಲ. ಅವರಿಗೆ ಇಂಗ್ಲೀಷ ಸರಕಾರದ ಮಾಯಾವಿಯಾದ ಲೀಲೆಗಳೆಲ್ಲ ಸಂಪೂರ್ಣವಾಗಿ ತಿಳಿದಿರುತ್ತವೆ. ಅವರ ಈ ಮಾಯಮೋಸಗಳಿಗೆ ಬೇಸತ್ತಿದ್ದರಿಂದಲೇ ಅವರು ಅದರ ಕೂಡ ಅಸಹಯೋಗವನ್ನು ಪ್ರಾರಂಭಿಸಿರುವರು. ಇಂಗ್ಲೀಷರಾಜ್ಯಪದ್ಧತಿಯ ಕಾನೂನುಗಳು ಅವರಿಗೆ ಸಂಪೂರ್ಣವಾಗಿ ಗೊತ್ತಾಗಿರುತ್ತವೆ. ಇಂಗ್ಲೀಷರು ತಮಗೆ ಅವಶ್ಯವಿದ್ದಾಗ, ತಮ್ಮ ಮಂತ್ರಿಗಳಿಂದ ನಾಲ್ಕು ಸವಿನುಡಿಗಳನ್ನು ಆಡಿಸಿ, ಮೆಲ್ಲಗೆ ನಮ್ಮನ್ನು ಮೋಹಗೊಳಿಸಿ, ನಮ್ಮನ್ನು ಮುಷ್ಟಿಗೆ ಹಾಕಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವರೆಂಬುವದನ್ನು ಅಸಹಕಾರಿಗಳು ಮನಗಂಡಿರುವರು. "ನೋವು ಸಾಯ್ದ ಕೂಡಲೇ ವೈದ್ಯನು ಶತ್ರುವಾಗುವನು." ಎಂಬ ನ್ಯಾಯವು! ಮಹಾಯುದ್ಧವು ಪ್ರಾರಂಭವಾದ ಕೂಡಲೇ ಮುಸಲ್ಮಾನರಿಗೆ ಸವಿಮಾತುಗಳನ್ನು ಆಡಿ ಅವರನ್ನು ತುರ್ಕೀಜನರ— ಅವರ ಜಾತಿಬಾಂಧವರ— ಕೂಡ ಯುದ್ಧಮಾಡಹಚ್ಚಿದರು. ಜಯವು ದೊರೆತ ಕೂಡಲೇ ಕಣ್ಣು ನೆತ್ತಿಗೇರಿರುವವು. ಖಿಲಾಫತ್‌ದ ಮಾತುಗಳೆಲ್ಲ ಮರೆತು ಹೋದವು. ಮತ್ತು ಈಗ ಪ್ರಧಾನಮಂತ್ರಿಗಳು ಸುಧಾರಣೆಯ ವಿಷಯದಲ್ಲಿ ತಮ್ಮ ಮನಸ್ಸನ್ನು ಸ್ಪಷ್ಟವಾಗಿ ಬಿಚ್ಚಿಹೇಳಿರುವರು. ಇದರಿಂದ ನಮ್ಮ ಮವಾಳ ಬಂಧುಗಳು ಕ್ರೋಧಾವಿಷ್ಟರಾಗಿರುವರು! ಅವರಿಗೆ ಸುಧಾರಣೆಯ ಬಗ್ಗೆ ಬಹಳ ಆಶೆಯಿದ್ದಿತು. ಇಂಗ್ಲೀಷರ ರಾಜ್ಯವೆಂದರೆ ಅವರಿಗೆ ಸ್ವರ್ಗದ ಸಮಾನವೆಂಬದಾಗಿ ತೋರುತ್ತಿತ್ತು. ಈ ಕಾರಣದಿಂದಲೇ ಅವರು ತಮ್ಮ ಬಾಂಧವರಿಗೆ ಸಹಾಯಮಾಡುವದನ್ನು ಬಿಟ್ಟುಕೊಟ್ಟು ಸರಕಾರಕ್ಕೆ ಸಹಾಯವನ್ನು ಮಾಡಹತ್ತಿದರು. ಈಗ ಅವರ ಆಶೆಗಳೆಲ್ಲ ಕಡಿದು ಹೋದವು. ಈಗ ಅವರ ಮೇಲೆ ಆಕಾಶವೇ ಕಡಿದು ಬಿದ್ದಂತಾಗಿದೆ. ಸುಧಾರಣೆಗಳನ್ನು ತಿರುಗಿ ತೆಗೆದುಕೊಳ್ಳುವರೆಂಬದಾಗಿ ಒಣ ಅಂಜಿಕೆಯು! ಈಗ ಅನಿಭಿರ್ಬೆಸೆಂಟ ಮ್ಮನವರು ತಮಗೆ ಈ ಪ್ರಕಾರ ಆಗುತ್ತದೆಂದು ತಿಳಿದಿದ್ದರೆ ತಾವು ಸರಕಾರದ ಕೂಡ ಸಹಯೋಗವನ್ನು ಮಾಡುತ್ತಿದ್ದಿಲ್ಲವೆಂದು ಅನ್ನಹತ್ತಿರುವರು. ಒಬ್ಬ ದೊಡ್ಡ ಪಕ್ಕಾಸಹಯೋಗಿಯು "ಗಾಂಧಿಜೀಯವರ ಮಾತು ಸತ್ಯವು. ಅವರು ಈ ಸರಕಾರದ ಕೃತ್ಯಗಳನ್ನೆಲ್ಲ ಚನ್ನಾಗಿ ಅರಿತುಕೊಂಡಿದ್ದರು." ಎಂದು ಅನ್ನಹತ್ತಿರುವನು. ಈಗ ಸಭೆಯ ಮೇಲೆ ಸಭೆಯನ್ನು ಕೂಡಿಸಿ, ಠರಾವುಗಳ ಮೇಲೆ ಠರಾವುಗಳನ್ನು ಪಾಸುಮಾಡುತ್ತ ಪ್ರಧಾನ ಮಂತ್ರಿಗಳ ಭಾಷಣದ ಬಗ್ಗೆ ವಿರೋಧವನ್ನೂ ಖೇದವನ್ನೂ ಪ್ರಕಟಮಾಡಹತ್ತಿರುವರು. ಕಾಯಿದೆಕೌನ್ಸಿಲಗಳಲ್ಲಿ ಠರಾವನ್ನು ತರುವ ಸಿದ್ಧತೆಯು ನಡೆದಿರುವದು.

ಆದರೆ ರಾಷ್ಟ್ರಕ್ಕೆ ಈ ಮವಾಳಾಗ್ರಣಿಗಳ ಮಂದ ಸ್ವಭಾವದ ಪರಿಚಯವು ಚನ್ನಾಗಿ ಉಂಟು. ಲಾರ್ಡ ರೀಡಿಂಗ ದೊರೆಗಳು ಸ್ವಲ್ಪ ಸವಿಮಾತುಗಳನ್ನು ಆಡುವದೊಂದೇ ತಡ ಇದೆಲ್ಲ ನಾಟಕದ ಪರಿಸಮಾಪ್ತಿಯಾಗುವದೆಂಬದನ್ನು ರಾಷ್ಟ್ರವು ಬಲ್ಲದು. "ನಾಯಿ ಬೊಗಳುವದು ತುಣುಕು ರೊಟ್ಟಿ ಸಿಗುವವರೆಗೆ." ಮವಾಳಬಂಧುಗಳಿಗೆ ಮಾತಿನ ಹೊರ್ತು ವಿರೋಧಿಸುವ ಬೇರೊಂದು ಮಾರ್ಗವೇ ಗೊತ್ತಿಲ್ಲ. ಸರಕಾರಕ್ಕಾದರೂ ಈ ಅವರ ನಿರ್ಬಲತೆಯು ಚನ್ನಾಗಿ ಗೊತ್ತುಂಟು. ಸರಕಾರದವರು ಇದರ ಲಾಭವನ್ನಾದರೂ ತೆಗೆದುಕೊಳ್ಳಲಿಕ್ಕೆ ಹೇಸುವದಿಲ್ಲ. ಇದೇ ಕಾರಣದಿಂದ ಎಷ್ಟೋ ಜನರು ಮವಾಳ ಬಾಂಧವರಿಗೆ ಪುರುಷಾರ್ಥ ಹೀನರೆಂದೂ, ಕಷ್ಟಗಳಿಗೆ ಅಂಜುವವರೆಂದೂ, ಸ್ವಾರ್ಥತ್ಯಾಗವನ್ನು ಮಾಡಲಿಕ್ಕೆ ಹಿಂದುಮುಂದೆ ನೋಡುವವರೆಂದೂ ಅನ್ನುತ್ತಿರುವರು; ಆದರೆ ಅವರು ಸ್ವಭಾವದಿಂದಲೇ ಸೌಮ್ಯರಿರುತ್ತಾರೆಂದು ನಮ್ಮ ಮತವು; ಹಿಂದುಸ್ತಾನದ ಸೌಮ್ಯ ಗುಣವೆಲ್ಲ ಅವರಲ್ಲಿಯೇ ಮನೆಮಾಡಿಕೊಂಡು ಬಿಟ್ಟಿರುವದೆಂಬದಾಗಿ ತೋರುತ್ತದೆ; ಸೌಮ್ಯಗುಣವು ಏನೂ ಕೆಟ್ಟಗುಣವಲ್ಲ; ಆದರೆ ಅಪಮಾನವನ್ನು ಸಹಿಸಬೇಕಾದರೂ, ನಮ್ಮ ತೇಜವೆಲ್ಲ ನಾಶವಾಗುವದನ್ನು ನೋಡುತ್ತಿದ್ದರೂ, ವೈರಿಗಳ ಸೂರೆಯಾಗುತ್ತಿದ್ದರೂ, ನಮ್ಮ ಸೌಮ್ಯಗುಣವು ನಾಶವಾಗದಿದ್ದರೆ ಆ ಸೌಮ್ಯತೆಯು ನಿಃಸಂಶಯವಾಗಿ ದೌರ್ಬಲ್ಯದ ಲಕ್ಷಣವೆಂದು ತಿಳಿದುಕೊಳ್ಳಬಹುದು.

ದು. ನಮಗೆ ಈ ಸಮಯದಲ್ಲಿ ಮಾಳ ಬಂಧುಗಳನ್ನು ಕಂಡರೆ ಕನಿಕರಬರುತ್ತದೆ; ಅವರ ಈ ಸೌಮ್ಯ ಸ್ವಭಾವದಿಂದ ದೇಶಕ್ಕೆ ಅಪರಿಮಿತವಾದ ಹಾನಿಯು ತಟ್ಟುತ್ತದೆಂದು ನಮಗೆ ಸ್ಪಷ್ಟವಾಗಿ ಕಾಣುತ್ತಿರುವದು; ನಾವು ಅವರ ದೇಶಭಕ್ತಿಯಲ್ಲಿ ವಿಶ್ವಾಸವನ್ನಿಟ್ಟಿರುವೆವು; ಮತ್ತು ವಾಚಕರಾದರೂ ಹಾಗೆಯೇ ಮಾಡಬೇಕೆಂದು ಅವರಿಗೆ ನಾವು ಕೇಳಿಕೊಳ್ಳುತ್ತೇವೆ; ನಾವು ನಮ್ಮ ವ್ರತವನ್ನು ಸಂಪೂರ್ಣವಾಗಿ ಪಾಲಿಸಿದರೆ - ನೌಕರಶಾಹಿಯವರು ಮಾಡುತ್ತಿರುವ ಪಾಪಗಳಿಂದ ಅಲಿಪ್ತರಾಗಿ ಉಳಿಯುವದೊಂದು, ಮತ್ತು ನಾವು ನಮ್ಮೊಳಗೆ ಪರಸ್ಪರ ದ್ವೇಷಮಾಡುವ ದುರ್ಗುಣತೆಯನ್ನು ಬಿಟ್ಟುಕೊಟ್ಟು ಪ್ರೇಮವನ್ನು ಬೆಳಸುತ್ತಿರುವದು ಮತ್ತೊಂದು ಈ ಎರಡು ಕಾರ್ಯಗಳನ್ನು ಮಾಡಹತ್ತಿದರೆ - ಒಂದು ದಿವಸ ಅವರು ತಮ್ಮ ಸೌಮ್ಯಸ್ವಭಾವಕ್ಕೆ ಬೇಸತ್ತು ಅದನ್ನು ಅವಶ್ಯವಾಗಿ ಬಿಟ್ಟು ಬಿಟ್ಟು ನಮ್ಮ ಸಂಗಡ ಮಿತ್ರತ್ವವನ್ನು ವಹಿಸಿ ಪ್ರಚಲಿತ ಸರಕಾರದ ಶತ್ರುಗಳಾಗುವರೆಂಬದರಲ್ಲಿ ಸಂದೇಹವಿಲ್ಲ;

ಈ ಪ್ರಸಂಗದಲ್ಲಿ ಅಸಹಯೋಗದ ಕಾರ್ಯಕ್ರಮದಲ್ಲಿ ಬದಲಾವಣೆಗಳನ್ನು ಮಾಡಿ ಕೌನ್ಸಿಲಗಳಲ್ಲಿ ಸೇರಬೇಕೆಂಬ ಸಿದ್ಧತೆಯನ್ನು ನಡಿಸಿದ ಬಾಂಧವರಿಗೆ ಎಚ್ಚರಿಕೆಯನ್ನು ಕೊಡಬೇಕೆಂದು ನಾವು ಬಯಸುತ್ತೇವೆ; ಪ್ರಧಾನ ಮಂತ್ರಿಗಳಾದ ಲಾಯಡ ಜಾರ್ಜರು ಅವರಿಗೆ ಹೇಳುವದೇನಂದರೆ - "ಸರಕಾರಕ್ಕೆ ಸಹಾಯ ಮಾಡುವಂತಿದ್ದರೆ - ಸರಕಾರದ ಮಾತುಗಳಿಗೆ ಹಾಗು ವಿಚಾರಗಳಿಗೆ ಪುಷ್ಟಿಯನ್ನು ಕೊಡುತ್ತಿದ್ದರೆ ಅವಶ್ಯವಾಗಿ ಬರಬೇಕು; ನಿಮ್ಮ ಸಲುವಾಗಿ ಕೌನ್ಸಿಲದ ಬಾಗಿಲುಗಳನ್ನು ತೆರೆದು ಇಟ್ಟಿದ್ದೇವೆ; ಸರಕಾರವನ್ನು ಕೌನ್ಸಿಲಗಳಲ್ಲಿ ಸೇರಿ ದಂಡಮಾಡಬೇಕೆಂದು ಮಾತ್ರ ನೀವು ಅಪೇಕ್ಷಿಸುತ್ತಿದ್ದರೆ, ಸರಕಾರವು ಅಸಮರ್ಥವಿರುವದೆಂದು ನೀವು ತಿಳಕೊಳ್ಳಬೇಡಿರಿ! ಇದೇ ನೌಕರಶಾಹಿಯು ನಿಮ್ಮ ಮೇಲೆ ಮುಗಿಬೀಳುವದು;"

ಅಸಹಯೋಗಿಗಳ ಕರ್ತವ್ಯವು ಸ್ಪಷ್ಟವಾಗಿದೆ; ಅವರ ತಮ್ಮ ಮಾರ್ಗದಲ್ಲಿ ಸರಿಯಾಗಿ ಲಗುಬಗೆಯಿಂದ ಸಾಗುತ್ತಿರಬೇಕು; ಸುಧಾರಣೆಗಳು ಬದಕಿರಲಿ ಇಲ್ಲವೆ ವ್ಯರ್ಥವಾಗಿ ಹೋಗಲಿ - ಅದರಿಂದ ನಮಗೇನು ಆಗುವದಿಲ್ಲ; ನಮಗಾದರೋ ಭೀಮಸೇನನಷ್ಟು ಹಸಿವೆಯಾಗಿರುವದು; ಸ್ವರಾಜ್ಯವಿಲ್ಲದೆ ಆ ಹಸಿವೆಯು ಹಿಂಗಲಾರದು;

---

## ಋಣ ವಿಮುಕ್ತತೆ.

ಭಾಮಿನಿ ಷಟ್ಪದಿ.

ಮಾನವನು ಪರಮನ ಸೃಜನೆಯೊ ।
ದಾನವನು ಪಾತಕವನೆಂಬುಂ ।
ಮಾನವನು ನೀಗಾಡುತಂ ದುಮ್ಮಾನಕೊಳಗಹನೂ ॥
ಹೀನತೆಯಿಂದೆಸೆನುತೆ ಪೇಳುವ ।
ಜ್ಞಾನಿಗಳ ಸದ್ವಚನ ರಚನೆಯ ।
ನಾನಮತಿಯಿಂ ಯೆಣಿಸಲ್ಕಿಂತೆಂನು ತೋರ್ಪುದುದೂ ॥ ೧ ॥
ಪುಟ್ಟುವಾಗಲೆ ಪರರ ಸ್ತೋತ್ರನು ।
ಕಟ್ಟಿಕೊ ದೈತಂದಿರುವೆನ್ನೈ ।
ಸೃಷ್ಟಿಯೊಳು ಸರ್ವತ್ರ ಜೀವಿಗಳೀತೆರದವಸ್ಥೆಯು ॥
ಬಿಟ್ಟು ಪುಷ್ಟಿಯದಿಲ್ಲನನ್ನಿವ ।
ನಿಷ್ಟುಮನದಿಂದರಿದು ಸಲ್ಲಿಸು ।
ತಿಷ್ಟುವದು ಋಣಬಾಧೆಯಿಂ ಕರ್ತವ್ಯಕರ್ಮವನೊ ॥ ೨ ॥
ಸೃಷ್ಟಿಯಂತರಗತಸ್ಥಿತಮಾಂಸ ಸ ।
ಮಸ್ತ ಘನವಸ್ತುಗಳು ತಿಳಿಯಲು ।
ರಕ್ತಮೊದಲಾಗಿರುವ ದ್ರವಗಳು ನೀರಿನಿಂದೊಗೆದಾ ॥
ಸಪ್ತಕರ ಭಾಗಗಳು, ತೇಜದ ।
ಉತ್ತಮಾಂಶವು ನಯನ ಮಾಯುವ ।
ಚಿತ್ತವುದು ಚರ್ಮವನು ಕಿವಿಯಾಕಾಶದಂಶವದೂ ॥ ೩ ॥
ಪಂಚಭೂತಾಂಶಗಳೊಳುದಿಸುವ ।
ಪಂಚ ಭೂತಗಳಿಂದ ಬಳೆಯುವ ।
ಮಿಂಚುವ ಶರೀರವನು ಹೊಂದಿಹೆವಾದ ಕಾರಣದಿಂ ॥
ವಂಚಿಸದೆ, ತತ್ಪಂಚಭೂತ ಪ್ರ ।
ಪಂಚದುಪಕಾರವನು ಮರೆಯದ ।
ಹೊಂಚಿ ಪ್ರೇಮದಿ ಸೇವೆಗೆಯ್ಯುತೆ ಋಣವ ಸಲ್ಲಿಪುದೂ ॥ ೪ ॥
ಲೋಕಸೇವೆಯೊಳಿಲುಬು ಮಾಂಸ ಸ ।
ಮಾಕಲಿತ ದೇಹವನು ಭಕ್ತ್ಯು ।
ದ್ರೇಕ ಮನದಿಂ ಸವೆಯಿಸುವುದು ಪದಾಂಶವಾದುದರಿಂ ।
ಸ್ವೀಕರಿಸುವುದು ನಿಶ್ಚಲಮತ ।
ವ್ಯಾಕರಿಸೆ ಹುಟ್ಟೂರಿನೇಳ್ಗೆಯ ।
ಶೋಕ ಸುಖಗಳ ಗಣಿಸದಲೆ ನೇತ್ರದನು ನೋಡುವದೂ ॥ ೫ ॥
ತೇಜದಿಂದೊಗೆದಿರ್ಪ ಕಣ್ಗಳ ।
ತೇಜಯುಕ್ತ ಪ್ರಪಂಚ ಕಷ್ಟಂ ।
ಮಾಜಿ ಪೋಪಂತೆನಗೆ ಪೊಡವಿಯ ಪೆಂಪ ನೋಪ್ಪದ ॥
ರಾಜಗೊಳಿಪುದು ಬಳಿಕ ಕಿವಿಯಿಂ ।
ದೀಜಗದ ಯಶ ಸಂಪದದ ಸವಿ ।
ರಾಜತೆಯುಪದಂತನನಕೇಳುತ ದೋಷಗೊಳ್ಳುವದೂ ॥ ೬ ॥
ವಾಯುವಂಶದ ಚರ್ಮವದರಿಂ ।
ದಾಯಕದ ದೇಹೇಂದ್ರಿಯಂಗಳು ।
ಬೇಯುವಷ್ಟನ್ನಿಗ ಬಿಡದೆ ನಿಜ ಜನ್ಮಭೂಮಿಯನು ।
ತಾಯಿಯಿಂ ಮಿಗಿಲೆಣಿಸಿ ಪರಮ ।
ಧ್ಯೇಯ ಮನದಿಂ ಸೇವಿಸುತ್ತ ನಿ ।
ರಾಯಸದಿ ಋಣಮುಕ್ತನಾಗುತೆ ಮುಕ್ತಿಯೊಂದುವದೂ ॥ ೭ ॥
ಇದು ವಿಹಿತ ಕರ್ತವ್ಯಕರ್ಮವು ।
ಇದುವೆ ಶಾಶ್ವತ ಸೌಖ್ಯದಾಯಕ ।
ವಿದುವೆ ಮಾನುಷ ಜನ್ಮ ಧಾರಣೆಯಧಿಕ ಸಾಫಲ್ಯ ।
ಇದನು ತಿಳಿದೇ "ತಿಲಕ" ದೇಹವ ।
ನೊದೆದು ಸದ್ಗತಿಯನೈದುವೆನ್ನಗ ।
ಮೊದಗಿದಾ ಶತ್ರುಗಳ ನಿವಾರಿಸಿ ಲೋಕಸುತನಾದ ॥
ಈ ಮಹತ್ವದ ವರ್ತನೆಗಳಿಂ ।
ದೀ ಮನುಜ ಋಣಮುಕ್ತನಪ್ಪಂ ।
ಭೂಮಿಯೊಳಗುರು ಶ್ಲಾಘ್ಯತಮ ಮತವಪ್ಪು ॥
ಪ್ರೇಮದಿಂ ಕೈಕೊಂಡು ಭಾವನೆ ।
ಕ್ಷೇಮಕಾರಣವಾಗಿ ಸೇವಿಪ ।
ರಾ ಮಹಾತ್ಮರ "ಗಾಂಧಿ" ಪ್ರಮುಖರ ಲೋಕ

ಲೋಕಹಿತವೇ ನಮ್ಮಹಿತವಾ ।
ಲೋಕವೇಳ್ಗೆಯದಾತ್ಮದೇಳಿಗೆ ।
ಲೋಕವೇ ನಮ್ಮನ್ನು ಪ್ರಜಿಸುತೆ ಪೊರೆಯುತಿ
ಲೋಕಸೇವೆ ಪಿನಾಕಿ ಸೇವೆಯು ।
ಲೋಕವೇ ನಿಜದೇಹಮೆಂದುಂ ।
ಲೋಕಕಾಗಿಯೆ ಸವೆಯೆ ಮೆಚ್ಚುವ ಲೋ...

— ಎ. ... ಸು...

ವಿದ್ಯಾದಾಯಿನೀ ಶಾಲಾಧ್ಯಾ...

ಯಾಗಲಿಕ್ಕೆ ಇದು ಮೊದಲನೇ ಕಾರಣವು. ಎರಡನೇದು:- ಈ ಶಾಂತವಾದ ಅಹಿಂಸಾ ಚಳವಳಿಯು ಯಾವಾಗಲೂ ಶಾಂತಮಯವಾಗಿಯೇ ಉಳಿಯಬೇಕು. ನಾವು ರಕ್ತಪಾತದ ಮಾರ್ಗದಿಂದ ಗೆದೆಯಲಾರೆವೆಂಬುದು ಸ್ವಲ್ಪ ವಿಚಾರಮಾಡಿದಲ್ಲಿ ಎಲ್ಲರಿಗೂ ಹೊಳೆಯುವಂತಿರುವದು. ನಾವು ಶಸ್ತ್ರವನ್ನು ಹಿಡಿದರೆ ನಮ್ಮ ಹಾನಿಯನ್ನು ನಾವೇ ಮಾಡಿಕೊಳ್ಳುವೆವು. ಇದು ಹವೆಯ ಹಡಗದಂಥ ಈಗಿನ ಯುದ್ಧ ಸಾಮುಗ್ರಿಗಳು ನಮ್ಮಲ್ಲಿ ಇಲ್ಲದ ಮೂಲಕ; ಆದ್ದರಿಂದ ಯಾವ ಪ್ರಸಂಗದಲ್ಲಿಯೂ ಶಾಂತತಾಭಂಗ ಮಾಡಕೂಡದು. ನಾವು ಇಂಗ್ಲೀಷರೊಂದಿಗೆಯೂ ಮತ್ತು ನಮ್ಮ ನಮ್ಮೊಳಗೂ- ಸಹಕಾರವಾದಿಗಳು, ಅಸಹಕಾರವಾದಿಗಳು, ಜಮೀನದಾರರು, ರೈತರು- ಶಾಂತಿಯಿಂದ ನಡಕೊಳ್ಳಬೇಕು. ಮೂರನೇದು:- ನಾವು ಕೂಡಲೇ ಪರದೇಶಿಬಟ್ಟೆಯನ್ನು ಬಹಿಷ್ಕರಿಸಿ ನಮ್ಮ ಮನೆಗಳಲ್ಲಿ ಅಥವಾ ಹಳ್ಳಿಗಳಲ್ಲಿ ನಮಗೆ ಹತ್ತುವಷ್ಟು ಅರಿವೆಯನ್ನು ತಯಾರಿಸಹತ್ತಬೇಕು. ಇಷ್ಟಾದ ಮೇಲೆ ನಮ್ಮ ಮೂರು ಧ್ಯೇಯಗಳು ನಮಗೆ ಸಾಧ್ಯವಾಗುವವು.

---

## ಸುಧಾರಣೆಗಳ ಭಾಗ್ಯವು.

(ನವಜೀವನ)

ಸುಮಾರು ಎರಡು ವರ್ಷಗಳ ಹಿಂದೆ ಇಂಗ್ಲೀಷ ಸರಕಾರದವರು ಹಿಂದುಸ್ತಾನದ ರಾಜ್ಯ ಪದ್ಧತಿಯಲ್ಲಿ "ಮಾಂಟೆಗ್ಯೂ ಚೆಮ್ಸಫರ್ಡ ಎಂಬ ಹೆಸರಿನ ಸುಧಾರಣೆಯನ್ನು ಮಾಡಿದ ಸಂಗತಿಯು ಸುಪ್ರಸಿದ್ಧವಾಗಿರುವದು. ಇದರಿಂದ ಹಿಂದುಸ್ತಾನವು ಅಸಂತುಷ್ಟವಾಗಿದ್ದರೂ, ಹಿಂದುಸ್ತಾನವು ಈ ಸುಧಾರಣೆಗಳು ಜೊಳ್ಳು ಇರುವವೆಂದು ತಿಳಿಯುತ್ತಿದ್ದರೂ, ಮಾಯಾನಿರ್ಮಿತವಾದ ಪಸರು ತೋಟವೆಂದು ಭಾವಿಸುತ್ತಿದ್ದರೂ, ಆಂಗ್ಲನೌಕರಶಾಹಿಯು ಇಷ್ಟರಿಂದಲೇ ಆಕ್ರೋಶವನ್ನು ಮಾಡಹತ್ತಿರುವದು. ಆದರೆ ಆ ಆಕ್ರೋಶದಿಂದ ಹಿಂದುಸ್ತಾನದಲ್ಲಿ ನಮ್ಮ ಸ್ಥಿತಿಯು ಭಯಂಕರವಾಗಿದೆ. ನಾವು ನಮ್ಮನ್ನು ಉಳಿಸಿಕೊಳ್ಳಬೇಕಾಗಿದೆ. ಅವರು ಎಬ್ಬಿಸಿದ ಈ ಕೋಲಾಹಲದಿಂದ ಲಾಯಿಡಜಾರ್ಜರ ಆಸನವು ಅಸ್ಥಿರವಾಯಿತು. ಆದ್ದರಿಂದ ಲಾಯಿಡಜಾರ್ಜರು ಅವರಿಗೆ "ನಿಶ್ಚಿಂತರಾಗಿರಿ. ಸುಧಾರಣೆಯಿಂದ ನೀವು ಅಂಜುವದೇಕೆ? ಇದೊಂದು ಆಟವನ್ನು ಒಂದು ಅಭಿಪ್ರಾಯದಿಂದ ಹೂಡಿರುವವು. ನಿಮ್ಮ ಸಹಾಯವಿಲ್ಲದೆ ಇಂಗ್ಲೀಷರ ರಾಜ್ಯವು ಹಿಂದುಸ್ತಾನದಲ್ಲಿ ಉಳಿಯುವ ಬಗೆ ಹೇಗೆ? ಎಂಥ ಪರಿಸ್ಥಿತಿಯಲ್ಲಿಯೂ ನಿಮ್ಮ ಆವಶ್ಯಕತೆಯು ಇದ್ದೇ ಇರುವದು. ಸಾಮ್ರಾಜ್ಯ ಸರಕಾರವು ನಿಮ್ಮ ಪಕ್ಕ ಒಲೆದಿರುವದು. ಆದರೂ ಹಿಂದುಸ್ತಾನದ ಅಸಹಯೋಗವಾದರೂ ನಮಗೆ ಅವಶ್ಯವಾಗಿ ಬೇಕು. ಎಷ್ಟೋ ಜನರು ಈ ನಮ್ಮ ಸರಕಾರವನ್ನು ಬಗ್ಗುಬಡಿಯುವ ಕುರಿತು ಅಥವಾ ಅದರ ಕಾರ್ಯಗಳಿಗೆ ತೊಂದರೆಯನ್ನು ಉಂಟುಮಾಡುವ ಕುರಿತು ಕೌನ್ಸಿಲಗಳಲ್ಲಿ ಸೇರಬೇಕೆಂಬ ಪ್ರಯತ್ನವನ್ನು ನಡಿಸಿರುವದು ನನ್ನ ಕೇಳಿಕೆಯಲ್ಲಿದೆ. ಇಂಥ ಪರಿಸ್ಥಿತಿಯು ಒದಗಿದಲ್ಲಿ ಸರಕಾರವು ನಿಮಗೆ ಎಲ್ಲ ರೀತಿಯಿಂದ ಸಂಪೂರ್ಣ ಸಹಾಯ ಮಾಡುವದೆಂದು ನಾನು ನಿಮಗೆ ಆಶ್ವಾಸನವನ್ನು ಕೊಡುತ್ತೇನೆ" ಎಂದು ಹೇಳಿರುವರು. ಈ ಭಾಷಣದಿಂದ ಅಸಹಯೋಗಿಗಳಿಗೆ ಎಷ್ಟು ಆಶ್ಚರ್ಯವಾಗಿಲ್ಲ. ಅವರಿಗೆ ಇಂಗ್ಲೀಷ ಸರಕಾರದ ಮಾಯಾವಿಯಾದ ಲೀಲೆಗಳೆಲ್ಲ ಸಂಪೂರ್ಣವಾಗಿ ತಿಳಿದಿರುತ್ತವೆ. ಅವರ ಈ ಮಾಯ ಮೋಸಗಳಿಗೆ ಬೇಸತ್ತಿದ್ದರಿಂದಲೇ ಅವರು ಅದರ ಕೂಡ ಅಸಹಯೋಗವನ್ನು ಪ್ರಾರಂಭಿಸಿರುವರು. ಇಂಗ್ಲೀಷರಾಜ್ಯಪದ್ಧತಿಯ ಕಾನೂನುಗಳು ಅವರಿಗೆ ಸಂಪೂರ್ಣವಾಗಿ ಗೊತ್ತಾಗಿರುತ್ತವೆ. ಇಂಗ್ಲೀಷರು ತಮಗೆ ಅವಶ್ಯವಿದ್ದಾಗ, ತಮ್ಮ ಮಂತ್ರಿಗಳಿಂದ ನಾಲ್ಕು ಸವಿನುಡಿಗಳನ್ನು ಆಡಿಸಿ, ಮೆಲ್ಲಗೆ ನಮ್ಮನ್ನು ಮೋಹಗೊಳಿಸಿ, ನಮ್ಮನ್ನು ಮುಷ್ಟಿಗೆ ಹಾಕಿ ತಮ್ಮ ಕಾರ್ಯವನ್ನು ಸಾಧಿಕೊಳ್ಳುವರೆಂಬುವದನ್ನು ಅಸಹಕಾರಿಗಳು ಮನಗಂಡಿರುವರು. "ನೋವು ಮಾಯ್ದ ಕೂಡಲೇ ವೈದ್ಯನು ಶತ್ರುವಾಗುವನು." ಎಂಬ ನ್ಯಾಯವು! ಮಹಾಯುದ್ಧವು ಪ್ರಾರಂಭವಾದ ಕೂಡಲೇ ಮುಸಲ್ಮಾನರಿಗೆ ಸವಿಮಾತುಗಳನ್ನು ಆಡಿ ಅವರನ್ನು ತುರ್ಕೀಜನರ- ಅವರ ಜಾತಿಬಾಂಧವರ- ಕೂಡ ಯುದ್ಧಮಾಡಹಚ್ಚಿದರು. ಜಯವು ದೊರೆತ ಕೂಡಲೇ ಕಣ್ಣು ನೆತ್ತಿಗೇರಿರುವವು. ಖಿಲಾಫತ್‌ದ ಮಾತುಗಳೆಲ್ಲ ಮರೆತು ಹೋದವು. ಮತ್ತು ಈಗ ಪ್ರಧಾನಮಂತ್ರಿಗಳು ಸುಧಾರಣೆಯ ವಿಷಯದಲ್ಲಿ ತಮ್ಮ ಮನಸ್ಸನ್ನು ಸ್ಪಷ್ಟವಾಗಿ ಬಿಚ್ಚಿಹೇಳಿರುವರು. ಇದರಿಂದ ನಮ್ಮ ಮವಾಳ ಬಂಧುಗಳು ಕ್ರೋಧಾವಿಷ್ಟರಾಗಿರುವರು! ಅವರಿಗೆ ಸುಧಾರಣೆಯ ಬಗ್ಗೆ ಬಹಳ ಆಶೆಯಿದ್ದಿತು. ಇಂಗ್ಲೀಷರ ರಾಜ್ಯವೆಂದರೆ ಅವರಿಗೆ ಸ್ವರ್ಗದ ಸಮಾನವೆಂಬಂತಾಗಿ ತೋರುತ್ತಿತ್ತು. ಈ ಕಾರಣದಿಂದಲೇ ಅವರು ತಮ್ಮ ಬಾಂಧವರಿಗೆ ಸಹಾಯಮಾಡುವದನ್ನು ಬಿಟ್ಟುಕೊಟ್ಟು ಸರಕಾರಕ್ಕೆ ಸಹಾಯವನ್ನು ಮಾಡಹತ್ತಿದರು. ಈಗ ಅವರ ಆಶೆಗಳೆಲ್ಲ ಕಡಿದು ಹೋದವು. ಈಗ ಅವರ ಮೇಲೆ ಆಕಾಶವೇ ಕಡಿದು ಬಿದ್ದಂತಾಗಿದೆ. ಸುಧಾರಣೆಗಳನ್ನು ತಿರುಗಿ ತೆಗೆದುಕೊಳ್ಳುವರೆಂಬದಾಗಿ ಒಣ ಅಂಜಿಕೆಯು! ಈಗ ಆನಿಬೆಸಂಟಮ್ಮನವರು ತಮಗೆ ಈ ಪ್ರಕಾರ ಆಗುತ್ತದೆಂದು ತಿಳಿದಿದ್ದರೆ ತಾವು ಸರಕಾರದ ಕೂಡ ಸಹಯೋಗವನ್ನು ಮಾಡುತ್ತಿದ್ದಿಲ್ಲವೆಂದು ಅನ್ನಹತ್ತಿರುವರು. ಒಬ್ಬ ದೊಡ್ಡ ಪಕ್ಕಾ ಸಹಯೋಗಿಯು "ಗಾಂಧಿಜೀಯವರ ಮಾತು ಸತ್ಯವು. ಅವರು ಈ ಸರಕಾರದ ಕೃತ್ಯಗಳನ್ನೆಲ್ಲ ಚೆನ್ನಾಗಿ ಅರಿತುಕೊಂಡಿದ್ದರು." ಎಂದು ಅನ್ನಹತ್ತಿರುವನು. ಈಗ ಸಭೆಯ ಮೇಲೆ ಸಭೆಯನ್ನು ಕೂಡಿಸಿ, ಠರಾವುಗಳ ಮೇಲೆ ಠರಾವುಗಳನ್ನು ಪಾಸುಮಾಡುತ್ತ ಪ್ರಧಾನ ಮಂತ್ರಿಗಳ ಭಾಷಣದ ಬಗ್ಗೆ ವಿರೋಧವನ್ನೂ ಖೇದವನ್ನೂ ಪ್ರಕಟಮಾಡಹತ್ತಿರುವರು. ಕಾಯಿದೆಕೌನ್ಸಿಲಗಳಲ್ಲಿ ಠರಾವನ್ನು ತರುವ ಸಿದ್ಧತೆಯು ನಡೆದಿರುವದು.

ಆದರೆ ರಾಷ್ಟ್ರಕ್ಕೆ ಈ ಮವಾಳಾಗ್ರಣಿಗಳ ಮಂದ ಸ್ವಭಾವದ ಪರಿಚಯವು ಚನ್ನಾಗಿ ಉಂಟು. ಲಾರ್ಡ ರೀಡಿಂಗ ದೊರೆಗಳು ಸ್ವಲ್ಪ ಸವಿಮಾತುಗಳನ್ನು ಆಡುವದೊಂದೇ ತಡ ಇವೆಲ್ಲ ನಾಟಕದ ಪರಿಸಮಾಪ್ತಿಯಾಗುವದೆಂಬದನ್ನು ರಾಷ್ಟ್ರವು ಬಲ್ಲದು. "ನಾಯಿ ಬೊಗಳುವದು ತುಣುಕು ರೊಟ್ಟಿ ಸಿಗುವವರೆಗೆ." ಮವಾಳಬಂಧುಗಳಿಗೆ ಮಾತಿನ ಹೊರ್ತು ವಿರೋಧಿಸುವ ಬೇರೊಂದು ಮಾರ್ಗವೇ ಗೊತ್ತಿಲ್ಲ. ಸರಕಾರಕ್ಕಾದರೂ ಈ ಅವರ ನಿರ್ಬಲತೆಯು ಚನ್ನಾಗಿ ಗೊತ್ತುಂಟು. ಸರಕಾರದವರು ಇದರ ಲಾಭವನ್ನಾದರೂ ತೆಗೆದುಕೊಳ್ಳಲಿಕ್ಕೆ ಹೇಸುವದಿಲ್ಲ. ಇದೇ ಕಾರಣದಿಂದ ಎಷ್ಟೋ ಜನರು ಮವಾಳ ಬಾಂಧವರಿಗೆ ಪುರುಷಾರ್ಥ ಹೀನರೆಂದೂ, ಕಷ್ಟಗಳಿಗೆ ಅಂಜುವವರೆಂದೂ, ಸ್ವಾರ್ಥತ್ಯಾಗವನ್ನು ಮಾಡಲಿಕ್ಕೆ ಹಿಂದುಮುಂದೆ ನೋಡುವವರೆಂದೂ ಅನ್ನುತ್ತಿರುವರು; ಆದರೆ ಅವರು ಸ್ವಭಾವದಿಂದಲೇ ಸೌಮ್ಯರಿರುತ್ತಾರೆಂದು ನಮ್ಮ ಮತವು; ಹಿಂದುಸ್ತಾನದ ಸೌಮ್ಯ ಗುಣವೆಲ್ಲ ಅವರಲ್ಲಿಯೇ ಮನೆಮಾಡಿಕೊಂಡು ಬಿಟ್ಟಿರುವದೆಂಬದಾಗಿ ತೋರುತ್ತದೆ; ಸೌಮ್ಯಗುಣವು ಏನೂ ಕೆಟ್ಟಗುಣವಲ್ಲ; ಆದರೆ ಅಪಮಾನವನ್ನು ಸಹಿಸಬೇಕಾದರೂ, ನಮ್ಮ ತೇಜವೆಲ್ಲ ನಾಶವಾಗುವದನ್ನು ನೋಡುತ್ತಿದ್ದರೂ, ವೈರಿಗಳ ಸೂರೆಯಾಗುತ್ತಿದ್ದರೂ, ನಮ್ಮ ಸೌಮ್ಯಗುಣವು ನಾಶವಾಗದಿದ್ದರೆ ಆ ಸೌಮ್ಯತೆಯು ನಿಃಶಂಶಯವಾಗಿ ದೌರ್ಬಲ್ಯದ ಲಕ್ಷಣವೆಂದು ತಿಳಿದುಕೊಳ್ಳಬಹು

ದು ನಮಗೆ ಈ ಸಮಯದಲ್ಲಿ ಮಹಾಳ ಬಂಧುಗಳನ್ನು ಕಂಡರೆ ಕನಿಕರಬರುತ್ತದೆ: ಅವರ ಈ ಸೌಮ್ಯ ಸ್ವಭಾವದಿಂದ ದೇಶಕ್ಕೆ ಅಪರಮಿತವಾದ ಹಾನಿಯು ತಟ್ಟುತ್ತದೆಂದು ನಮಗೆ ಸ್ಪಷ್ಟವಾಗಿ ಕಾಣುತ್ತಿರುವದು; ನಾವು ಅವರ ದೇಶಭಕ್ತಿಯಲ್ಲಿ ವಿಶ್ವಾಸವನ್ನಿಟ್ಟಿರುವೆವು; ಮತ್ತು ನಾಚಿಕೆಗೇಡಿನ ಹಾಗೆಯೇ ಮಾಡಬೇಕೆಂದು ಅವರಿಗೆ ನಾವು ಕೇಳಿಕೊಳ್ಳುತ್ತೇವೆ; ನಾವು ನಮ್ಮ ವ್ರತವನ್ನು ಸಂಪೂರ್ಣವಾಗಿ ಪಾಲಿಸಿದರೆ-ನೌಕರಶಾಹಿಯವರು ಮಾಡುತ್ತಿರುವ ಪಾಪಗಳಿಂದ ಅಲಿಪ್ತರಾಗಿ ಉಳಿಯುವದೊಂದು, ಮತ್ತು ನಮ್ಮ ನಮ್ಮೊಳಗೆ ಪರಸ್ಪರ ದ್ವೇಷಮಾಡುವ ದುರ್ನಡತೆಯನ್ನು ಬಿಟ್ಟುಕೊಟ್ಟು ಪ್ರೇಮವನ್ನು ಬೆಳಸತಕ್ಕದ್ದು ಮತ್ತೊಂದು ಈ ಎರಡು ಕಾರ್ಯಗಳನ್ನು ಮಾಡಹತ್ತಿದರೆ-ಒಂದು ದಿವಸ ಅವರು ತಮ್ಮ ಸೌಮ್ಯಸ್ವಭಾವಕ್ಕೆ ಬೇಸತ್ತು ಅದನ್ನು ಅವಶ್ಯವಾಗಿ ಬಿಟ್ಟು ಬಿಟ್ಟು ನಮ್ಮ ಸಂಗಡ ಮಿತ್ರತ್ವವನ್ನು ವಹಿಸಿ ಪ್ರಚಲಿತ ಸರಕಾರದ ಶತ್ರುಗಳಾಗುವರೆಂಬದರಲ್ಲಿ ಸಂದೇಹವಿಲ್ಲ;

ಈ ಪ್ರಸಂಗದಲ್ಲಿ ಅಸಹಯೋಗದ ಕಾರ್ಯಕ್ರಮದಲ್ಲಿ ಬದಲಾವಣೆಗಳನ್ನು ಮಾಡಿ ಕೌನ್ಸಿಲುಗಳಲ್ಲಿ ಸೇರಬೇಕೆಂಬ ಸಿದ್ಧತೆಯನ್ನು ನಡೆಸಿದ ಬಾಂಧವರಿಗೆ ಎಚ್ಚರಿಕೆಯನ್ನು ಕೊಡಬೇಕೆಂದು ನಾವು ಬಯಸುತ್ತೇವೆ; ಪ್ರಧಾನ ಮಂತ್ರಿಗಳಾದ ಲಾಯಡ ಜಾರ್ಜರು ಅವರಿಗೆ ಹೇಳುವದೇನಂದರೆ-"ಸರಕಾರಕ್ಕೆ ಸಹಾಯ ಮಾಡುವಂತಿದ್ದರೆ-ಸರಕಾರದ ಮಾತುಗಳಿಗೆ ಹಾಗು ವಿಚಾರಗಳಿಗೆ ಪುಷ್ಟಿಯನ್ನು ಕೊಡುತ್ತಿದ್ದರೆ ಅವಶ್ಯವಾಗಿ ಬರಬೇಕು; ನಿಮ್ಮ ಸಲುವಾಗಿ ಕೌನ್ಸಿಲದ ಬಾಗಿಲುಗಳನ್ನು ತೆರೆದು ಇಟ್ಟಿದ್ದೇವೆ; ಸರಕಾರವನ್ನು ಕೌನ್ಸಿಲಗಳಲ್ಲಿ ಸೇರಿ ಹಣ್ಣುಮಾಡಬೇಕೆಂದು ಮಾತ್ರ ನೀವು ಅಪೇಕ್ಷಿಸುತ್ತಿದ್ದರೆ, ಸರಕಾರವು ಅಸಮರ್ಥವಿರುವದೆಂದು ನೀವು ತಿಳಿದುಕೊಳ್ಳಬೇಡಿರಿ! ಇದೇ ನೌಕರಶಾಹಿಯು ನಿಮ್ಮ ಮೇಲೆ ಮುಗಿಬೀಳುವದು;"

ಅಸಹಯೋಗಿಗಳ ಕರ್ತವ್ಯವು ಸ್ಪಷ್ಟವಾಗಿದೆ; ಅವರ ತಮ್ಮ ಮಾರ್ಗದಲ್ಲಿ ಸರಿಯಾಗಿ ಒಗ್ಗುಬಗೆಯಿಂದ ಸಾಗುತ್ತಿರಬೇಕು; ಸುಧಾರಣೆಗಳು ಬದಕಿರಲಿ ಇಲ್ಲವೆ ವ್ಯರ್ಥವಾಗಿ ಹೋಗಲಿ-ಅವರಿಂದ ನಮಗೇನು ಆಗಾಯುವದಿಲ್ಲ; ನಮಗಾದರೋ ಭೀಮಸೇನನಷ್ಟು ಹಸಿವೆಯಾಗಿರುವದು; ಸ್ವರಾಜ್ಯವಿಲ್ಲದೆ ಆ ಹಸಿವೆಯು ಹಿಂಗಲಾರದು;

---

# ಋಣ ವಿಮುಕ್ತತೆ.

ಭಾಮಿನಿ ಷಟ್ಪದಿ.

ಮಾನವನು ಪರಮಪಾವನ ಕೀರ್ತಿಮೊ ।
ದಾನವನು ಪಾತಕವನೆಂಬುಂ ।
ಮಾನವನು ಶ್ರೀಗಾಢಮಂ ದುಃಖ ಸ್ವಾನಕೊಳಗಹನೊ ॥
ಹೀನತೆಯೆಂದೆನುತೆ ವೇಳುವ ।
ಜ್ಞಾನಿಗಳ ಸದ್ವಚನ ರಚನೆಯು ।
ನೂನಮತಿಯಿಂ ಯೆ ಗಣಿಸಲ್ಕಿಂತೆಂದು ತೋರ್ಪುದದೂ ॥ ೧ ॥
ಪುಟ್ಟುವಾಗಲೆ ಪರರ ಸೊತ್ತನು ।
ಕಟ್ಟಿಕೊ ದೈಕಂದಿರುವೆನ್ನೈ ।
ಸೃಷ್ಟಿಯೊಳು ಸರ್ವತ್ರ ಜೀವಿಗಳೀಕೆರವಸ್ಥಿತಿಯು ॥
ಒಟ್ಟು ಪುಟ್ಟುದುದಿಲ್ಲವೆನ್ನಿದ ।
ನಿಷ್ಟುಮನದಿಂದರಿದು ಸಲ್ಲಿಸ ।
ತಿಟ್ಟವನು ಋಣಬಾಧೆಯಿಂ ಕರ್ತವ್ಯಕರ್ಮವಹೊ ॥ ೨ ॥
ಸೃಷ್ಟಿಯಂತರಗಸ್ತಿಮಾಂಸ ಸ ।
ಮಸ್ತ ಘನವಸ್ತುಗಳು ತಿಳಿಯಲು ।
ರಕ್ತಮೊದಲಾಗಿರುವ ದ್ರವಗಳು ನೀರಿನಿಂದೊಗೆದಾ ॥
ಸಕ್ಕರೆ ಭಾಗಗಳು, ತೇಜದ ।
ಉತ್ತಮಾಂಶವು ನಯನ ವಾಯುವ ।
ದಿತ್ತಪುದು ಚರ್ಮವನು ಕಿವಿಯಾಕಾರದಂರವದೂ ॥ ೩ ॥
ಪಂಚಭೂತಾಂಶಗಳೊಳುದಿಸುವ ।
ಪಂಚ ಭೂತಗಳಿಂದ ಬಳೆಯುವ ।
ಮಿಂಚುವ ಶರೀರವನು ಹೊಂದಿಹೆವಾದ ಕಾರಣದಿಂ ॥
ವಂಚಿಸದೆ, ತತ್ಪಂಚಭೂತ ಪ್ರ ।
ಪಂಚಮುಪಕಾರವನು ಮರೆಯದೆ ।
ಹೊಂಚಿ ಪ್ರೇಮದ ಸೇವೆಗೆಯ್ಯುತೆ ಋಣವ ಸಲ್ಲಿಪುದೂ ॥ ೪ ॥
ಲೋಕಸೇವೆಯೊಳಿಟ್ಟು ಮಾಂಸ ಸ ।
ಮಾಕಲಿತ ದೇಹವನು ಭಕ್ತ್ಯಾ ।
ನೇಕ ಮನದಿಂ ಸವೆಯಿಸುವುದು ತದಂಶವಾದುದರಿಂ
ಸ್ವೀಕರಿಸುವುದು ನಿಶ್ಚಲಮತ ।
ವ್ಯಾಕರಿಸೆ ಹುಟ್ಟೂರಿನೇಳ್ಗೆಯ ।
ಶೋಕ ಸುಖಗಳ ಗಣಿಸದಲೆ ನೇತ್ರದನು ನೋಡುವ...
ತೇಜದಿಂದೊಗೆದಿರ್ಪ ಕಣ್ಗಳ ।
ತೇಜಯುಕ್ತ ಪ್ರಪಂಚ ಕಷ್ಟಂ ।
ಮಾಜಿ ಸೋಕಂತೆನಗೆ ಮೊದವಿಯ ಪೆಂಪ ನೋಟ್ಟ...
ಸಾಜಗೊಳಿಪುದು ಬಳಿಕ ಕಿವಿಯಿಂ ।
ದೀಜಗದ ಯಶ ಸಂಪದದ ಸವಿ ।
ರಾಜತೆಯುಮಂತವನು ಕೇಳುತೆ ದೋಷಗೊಳ್ಳುವ...
ವಾಯುವಂಶದ ಚರ್ಮವದರಿಂ ।
ದಾಯಕದ ದೇಹೇಂದ್ರಿಯಂಗಳು ।
ಬೇಯುವನ್ನಸ್ಸೆಗ ಬಿಡದೆ ನಿಜ ಜನ್ಮಭೂಮಿಯನು...
ತಾಯಿಯಿಂ ಮಿಗಿಲೆಣಿಸಿ ಪರಮ ।
ಶ್ರೈಯ ಮನದಿಂ ಸೇವಿಸುತ್ತ ನಿ ।
ರಾಯಸದಿ ಋಣಮುಕ್ತನಾಗುತೆ ವ್ಯಕ್ತಿಯೊಂದು...
ಇದು ವಿಹಿತ ಕರ್ತವ್ಯಕರ್ಮವು ।
ಇದುವೆ ಶಾಶ್ವತ ಸೌಖ್ಯದಾಯಕ ।
ವಿದುವೆ ಮಾನುಷ ಜನ್ಮ ಧಾರಣೆಯಧಿಕ ಸಂಧಿ...
ಇದನು ತಿಳಿದೇ "ತಿಲಕ" ದೇವನ ।
ನೊಪೆದು ಸಗತಿಯ ನೈರು ಮೆನ್ನಗ ।
ನೊದಗಿದಾಪತ್ತುಗಳ ನಿವರಿಸಿ ಲೋಕಸುತನಾ...
ಈ ಮಹತ್ವದ ವರ್ತನೆಗಳಿಂ ।
ದೀ ಮನುಜ ಋಣಮುಕ್ತನಪ್ಪಂ ।
ಭೂಮಿಯೊಳಗುರು ಶ್ಲಾಘ್ಯತಮ ಮತವಪ್ಪು...
ಪ್ರೇಮದಿಂ ಕೈಕೊಂಡು ಭುವನ ।
ಕ್ಷೇಮಕಾರಣವಾಗಿ ಸೇವಿಸ ।
ರಾ ಮಹಾತ್ಮರ "ಗಾಂಧಿ" ಪ್ರಮುಖರು ಲೋ...

ಲೋಕಹಿತವೇ ನಮ್ಮ ಹಿತವಾ ।
ಲೋಕದೇಳ್ಗೆಯದಾತ್ಮದೇಳಿಗೆ ।
ಲೋಕವೇ ನಮ್ಮನ್ನು ಸೃಜಿಸುತೆ ಪೊರೆಯುತಿ...
ಲೋಕಸೇವೆ ಪಿನಾಕಿ ಸೇವೆಯು ।
ಲೋಕವೇ ನಿಜದೇಹವೆಂದುಂ ।
ಲೋಕಕಾರ್ಯದೆ ಸವೆಯೆ ಮೆಚ್ಚುವ ಲೋ...

— ಶ್ರೀ —

ಎ. ಸ. ಸು...

ವಿದ್ಯಾದಾಯಿನೀ ಶಾಲಾಧ್ಯಾ...

# ಕನ್ನಡ ನವಜೀವನ.

ಭಾದ್ರಪದ ಶುದ್ಧ ೯ ಗುರುವಾರ ಶಕೆ ೧೮೪೪


## ಸ್ವರಾಜ್ಯದ ಮೂಲವು.

(ನವಜೀವನ)

ಯಾವದಾದರೊಂದು ವೃಕ್ಷವನ್ನು ರಕ್ಷಿಸಬೇಕಾದರೆ ಅದರ ಬಡ್ಡಿಯನ್ನು ಮೊದಲು ರಕ್ಷಿಸತಕ್ಕದ್ದು; ಅದನ್ನು ಗಟ್ಟಿಮುಟ್ಟಿಯಾಗಿ ಇಡುವ ಪ್ರಯತ್ನವನ್ನು ಮಾಡಬೇಕು. ಈಗ ಹಿಂದುಸ್ಥಾನದ ಎದುರಿನಲ್ಲಿ ಸ್ವರಾಜ್ಯವನ್ನು ಪ್ರಾಪ್ತಮಾಡಿಕೊಳ್ಳುವ ಕಠಿಣವಾದ ಪ್ರಶ್ನೆಯು ಇರುತ್ತದೆ. ಒಂದೊಂದು ಹೆಜ್ಜೆಯನ್ನು ಮುಂದೆ ಇಟ್ಟ ಹಾಗೆಲ್ಲ, ಇನ್ನೊಂದು ಸ್ವಲ್ಪ ಮುಂದೆ ಇನ್ನೊಂದು ಹೆಜ್ಜೆ ಮುಂದೆ ಎಂಬ ಸಮಸ್ಯೆಯು ಮುಂದೆ ಬರುವದು; ಆದರೆ ನಿಜವಾಗಿ ವಿಚಾರಮಾಡಿದರೆ, ನಮ್ಮ ದಾರಿಯು ಸ್ವಚ್ಛವಾಗಿದೆ; ನಮ್ಮ ಮಾರ್ಗವು ಸರಳವಾಗಿದೆ. ಜಗತ್ತಿನಲ್ಲಿ ಇನ್ನೂವರೆಗೆ ಯಾವದೊಂದು ರಾಷ್ಟ್ರಕ್ಕೂ ಅತ್ಯಂತವಾದ ಸ್ವಾರ್ಥತ್ಯಾಗವಿಲ್ಲದಹೊರ್ತು ದಾರುಣವಾದ ತಪಸ್ಸಿಯುಲ್ಲದೆ ಸ್ವರಾಜ್ಯವು ದೊರೆತಿಲ್ಲ. ಬೇಕಾದರೆ ಅಮೇರಿಕೆಯ ಸ್ವಾತಂತ್ರ್ಯದ ಇತಿಹಾಸವನ್ನು ನೋಡಿರಿ; ಇಲ್ಲವೆ ಚೀನವು ದೊರಕಿಸಿದ ಪ್ರಜಾ ತಂತ್ರದ ಕಡೆಗೆ ನೋಡಿರಿ, ಅಥವಾ ಫ್ರಾನ್ಸದಲ್ಲಾದ ರಾಜ್ಯಕ್ರಾಂತಿಯ ಉದಾಹರಣೆಯನ್ನು ತೆಗೆದುಕೊಳ್ಳಿರಿ. ರಸಿಯಾ ದೇಶದ ವರ್ತಮಾನ ಕ್ರಾಂತಿಯ ಕಡೆಗಾದರೂ ನಿಮ್ಮ ದೃಷ್ಟಿಯನ್ನು ತಿರುಗಿಸಿರಿ. ಬೇಕಾದರೆ ಅಯರ್ಲಂಡದ ಕಡೆಗೆ ನೋಡಿರಿ. ಎಲ್ಲ ರಾಷ್ಟ್ರಗಳಿಗೆ ಸ್ವಾತಂತ್ರ್ಯವು ದೊರೆಯಬೇಕಾದರೆ, ಅಸಾಧಾರಣವಾದ ತ್ಯಾಗವನ್ನು ಮಾಡಿ, ಬಲಿದಾನವನ್ನು ಮಾಡಬೇಕಾಯಿತು; ಮತ್ತು ಇನ್ನೂವರೆಗೆ ಮಾಡಬೇಕಾಗುವದು. ಸ್ವಾರ್ಥತ್ಯಾಗವೂ ಬಲಿದಾನವೂ ಸ್ವರಾಜ್ಯ ವೃಕ್ಷದ ಮೂಲಾಧಾರವಾಗಿವೆ. ಆದರೆ ನಮ್ಮ ಸ್ವಾರ್ಥತ್ಯಾಗ ಮತ್ತು ಬಲಿದಾನಗಳು ಉಳಿದ ರಾಷ್ಟ್ರಗಳಿಗಿಂತ ಭಿನ್ನವಾಗಿರುವದು, ಮಾತ್ರ ನಿಜ. ಮಿಕ್ಕ ರಾಷ್ಟ್ರದವರೆಲ್ಲ ತಮ್ಮ ಪ್ರತಿಪಕ್ಷಗಳನ್ನು ಶತ್ರುಗಳೆಂದು ತಿಳಿಯುತ್ತಿದ್ದರು. ಆದರೆ ನಾವು ಮಾತ್ರ ನಮ್ಮ ಪ್ರತಿಪಕ್ಷಗಳನ್ನು ಅಡ್ಡದಾರೀಬಿದ್ದ ಬಾಂಧವರೆಂದು ತಿಳಿಯುವೆವು. ಅವರು ತಮ್ಮ ಪ್ರತಿಪಕ್ಷಗಳಿಗೆ ನಿರ್ದಯತೆಯನ್ನು ತೋರಿಸಿ, ಅವರ ಕೂಡ ದ್ವೇಷಮಾಡುತ್ತಿದ್ದರು. ಆದರೆ, ನಾವು ಅವರನ್ನು ಪ್ರೇಮದಿಂದ ಜಯಿಸಬೇಕೆಂದು ಬಯಸುತ್ತೇವೆ. ಅವರು ತಮ್ಮ ಸಾಧ್ಯವೊಂದು ಶುದ್ಧವಾಗಿರಬೇಕೆಂದೂ ಸಾಧನಗಳು ಬೇಕಾದರೆ ಶುದ್ಧವಿರಲಿ ಇಲ್ಲವೆ ಇರದಿದ್ದರೂ ಚಿಂತೆಯಿಲ್ಲವೆಂದೂ ಅನ್ನುತ್ತಿದ್ದರು. ಆದರೆ ನಮ್ಮ ಸಿದ್ಧಾಂತವು ಶುದ್ಧ ಸಾಧನಗಳಿಂದಲೇ ಶುದ್ಧ ಸಾಧ್ಯವು ದೊರಕುವದೆಂಬದಾಗಿ ಇರುತ್ತದೆ. ಆದ್ದರಿಂದಲೇ ಅವರು ಶಸ್ತ್ರಪ್ರತೀಕಾರವನ್ನು ಮಾಡುತ್ತ ತ್ಯಾಗವನ್ನೂ ಬಲಿದಾನವನ್ನೂ ಮಾಡುತ್ತಿದ್ದರೆ ನಾವು ಸತ್ಯಾಗ್ರಹದ ದ್ವಾರದಿಂದ, ಶಾಂತಿಮಯ ಉಪಾಯಗಳ ಮುಖಾಂತರವಾಗಿ ಎಲ್ಲಕ್ಕಿಂತಲೂ ಉಚ್ಚವಾದ ತ್ಯಾಗವನ್ನೂ ಅತ್ಯಂತ ಶುದ್ಧವಾದ ಬಲಿದಾನವನ್ನೂ ಮಾಡಲಪೇಕ್ಷಿಸುತ್ತೇವೆ. ಈರೀತಿಯಾಗಿ ತ್ಯಾಗವನ್ನೂ ಬಲಿದಾನವನ್ನೂ ಮಾಡುವದರಲ್ಲಿ ಎರಡೂ ಪಕ್ಷಗಳಿಗೆ ವಿಜಯವೂ ಇಬ್ಬರಿಗೂ ಕಲ್ಯಾಣವೂ ಪರಸ್ಪರರಲ್ಲಿ ಸ್ನೇಹಭಾವವೂ ಉಂಟಾಗುವದೆಂಬದಾಗಿ ನಮಗೆ ತೋರುತ್ತದೆ. ನಮ್ಮ ಸ್ವರಾಜ್ಯವು ಅಪೂರ್ವವಾಗಿರುವದು. ಒಂದು ದೃಷ್ಟಿಯಿಂದ ಅಲೌಕಿಕವಾದರೂ ಇರುತ್ತದೆ. ಆದ್ದರಿಂದಲೇ ನಮಗೆ ಈ ಸಂಗ್ರಾಮದಲ್ಲಿ ವಿಜಯವು ದೊರೆಯ. ಬೇಕಾದರೆ ನಮ್ಮ ತ್ಯಾಗವೂ ಬಲಿದಾನವೂ ಅಪೂರ್ವವಾಗಿಯೂ ಅಲೌಕಿಕವಾಗಿಯೂ ಆಗಬೇಕು. ಅರ್ಥಾತ್ ಅತ್ಯಂತ ಶ್ರೇಷ್ಠವಾದ ಮತ್ತು ಪವಿತ್ರವಾದ ತ್ಯಾಗವನ್ನು, ಬಲಿದಾನವನ್ನು ನಾವು ಮಾಡತಕ್ಕದ್ದು. ಇಂಥ ಉಗ್ರವಾದ ತ್ಯಾಗದಿಂದಲೂ ನಿರ್ಮಲವಾದ ಬಲಿದಾನದಿಂದಲೂ ಮನುಷ್ಯರೇ ಪಶುಗಳು ಕೂಡ ತಮ್ಮ ಪಶುಭಾವವನ್ನು ಬಿಟ್ಟುಕೊಡುವವು. ದೇವತೆಗಳ ಹೃದಯವು ಕೂಡ ಕಂಪಿತವಾಗದೆ ಇರದು.

ಆದರೆ ಈ ನಮ್ಮ ತ್ಯಾಗವೂ ಬಲಿದಾನವೂ ಸ್ವದೇಶೀಮಯವಾಗಬೇಕಾಗಿದೆ. ಸ್ವದೇಶೀಯು ಪ್ರತಿಯೊಂದು ರಾಷ್ಟ್ರದ ನಿತ್ಯಧರ್ಮವಾಗಿರುವದು. ಸ್ವದೇಶಿಯು ಇಲ್ಲದೆ ದೇಶಾಭಿಮಾನವು ಉತ್ಪನ್ನವಾಗಲಾರದು. ಸ್ವದೇಶಿಯು ಹೊರ್ತು ತ್ಯಾಗ ಮತ್ತು ಬಲಿದಾನವನ್ನು ಮಾಡುವ ಉಜ್ವಲವಾದ ಪವಿತ್ರ ಭಾವನೆಯು ಎಂದೂ ಉತ್ಪನ್ನವಾಗಲಾರದು ಸ್ವದೇಶೀ—ನಡೆನುಡಿಗಳಲ್ಲಿ ಸ್ವದೇಶಿ ಊಟ ಉಪಚಾರಗಳಲ್ಲಿ ಸ್ವದೇಶೀ, ವ್ಯಾಪಾರ ಉದ್ಯೋಗಗಳಲ್ಲಿ ಸ್ವದೇಶೀ, ಉಡಿಗೆತೊಡಿಗೆಗಳಲ್ಲ ಸ್ವದೇಶೀ ಯಾಗದಿದ್ದರೆ ದೇಶದ ಕಲ್ಪನೆಯು, ದೇಶದಮೇಲೆ ಪ್ರೇಮವು ದೇಶಸೇವೆಯ ಇಚ್ಛೆಯು ಎಲ್ಲಿಂದ ಉತ್ಪನ್ನವಾಗಬೇಕು? ಧಾರ್ಮಿಕ ದೃಷ್ಟಿಯಿಂದ ಸ್ವದೇಶಿಯು ನಿತ್ಯಕರ್ಮವಾಗಿದೆ. ಧರ್ಮಾಚರಣೆಯೂ, ಪುಣ್ಯಕಾರ್ಯವೂ ಸ್ವದೇಶಿಯಲ್ಲಿಯೇ ಇರುತ್ತದೆ. ಶುದ್ಧ ಸ್ವದೇಶೀ ವ್ರತದಿಂದ ನಮ್ಮ ಜೀವನವು ಉಚ್ಚವಾಗುವದಲ್ಲದೆ ನಮ್ಮಲ್ಲಿ ಉಚ್ಚ ಮತ್ತು ನಿರ್ಮಲವಾದ ಮನೋವೃತ್ತಿಯು ಉತ್ಪನ್ನವಾಗುವದು; ಇದು ನೈತಿಕ ದೃಷ್ಟಿಯಿಂದ ಸ್ವದೇಶಿಯಿಂದೊದಗುವ ಲಾಭವು ಇನ್ನು ಆರ್ಥಿಕ ದೃಷ್ಟಿಯಿಂದ ನೋಡಿದರೆ ಸ್ವದೇಶಿಯು ನಮಗೆ ಮಿತವ್ಯಯದ ಮಾರ್ಗವನ್ನು ತೋರಿಸುವದಲ್ಲದೆ ನಮ್ಮನ್ನು ಪಾಪಮಯ ವ್ಯವಹಾರದಿಂದ ಪರಾವೃತ್ತರನ್ನಾಗಿ ಮಾಡಿ ನಮ್ಮಲ್ಲಿಯ ಲೋಭವನ್ನು ನಾಶಗೊಳಿಸುತ್ತದೆ. ರಾಜನೈತಿಕದೃಷ್ಟಿಯಿಂದಾದರೂ, ನಮಗೆ ಸ್ವದೇಶಿಯಿಂದ ಬಹಳ ಲಾಭಗಳುಂಟು. ನಮಗೆ ಪ್ರಿಯವಾದ ಸ್ವರಾಜ್ಯದ ಶುಭದಿವಸವನ್ನು ಬೇಗನೆ ತೋರಿಸಿ, ನಮ್ಮ ದಾಸ್ಯದ ಶೃಂಖಲೆಗಳನ್ನೆಲ್ಲ ಕಡಿದುಹಾಕಿ, ಜಗತ್ತಿನಲ್ಲಿ ನಮ್ಮ ಕೆಳಕ್ಕೆ ಬೊಗ್ಗಿದ ಶಿರವನ್ನು ಮೇಲಕ್ಕೆ ಎತ್ತಲು ಸಹಾಯವಾಗಿ, ನಮ್ಮ ರಾಷ್ಟ್ರವು ಜಗತ್ತಿನೊಳಗೆ ಒಂದು ಉಚ್ಚಸಂಸ್ಕೃತಿಯನ್ನು ಹೊಂದಿದ ಮತ್ತು ಗೌರವಶೀಲವಾದ ಜನಾಂಗವುಳ್ಳ ರಾಷ್ಟ್ರವಾಗಿರುವದೆಂಬದನ್ನು ನಿದರ್ಶನಕ್ಕೆ ತಂದುಕೊಡಲು ಸಹಾಯವಾಗುತ್ತದೆ. ಈ ಎಲ್ಲ ಗುಣಗಳಿಂದ ಮಹಾತ್ಮಾಜಿಯವರು ಮೋಹಿತರಾಗಿ, ಸ್ವದೇಶಿಯು ಸರ್ವದೃಷ್ಟಿಯಿಂದಲೂ ಹಿಂದುಸ್ಥಾನದ ಉದ್ಧಾರದ ಗುರುಕಿಲ್ಲಿಯಾಗಿರುವದೆಂಬದಾಗಿ ಹೇಳಿರುವರು.

ಸ್ವದೇಶೀಯ ಅರ್ಥವೆಂದರೆ, ಖಾದಿಯೇ; ಖಾದಿಯು ಯಾರ ಬಾಯಿಯಲ್ಲಿ ಇಲ್ಲವೋ ಅಂಥವರಲ್ಲಿ ಸ್ವದೇಶಿಯು ಇಲ್ಲ; ಅವರು ಸ್ವದೇಶೀ ಎಂದು ಅನ್ನುತ್ತಿದ್ದರೂ, ಸ್ವದೇಶದಲ್ಲಿ ವಾಸಿಸುತ್ತಿದ್ದರೂ, ವಿದೇಶಿಯರಾಗಿರುವರು. ಯಾವನಿಗೆ ತನ್ನ ತಾಯಿಯ ಕೊರತೆಗಳ ವಿಚಾರವಿಲ್ಲವೋ, ಯಾವನು ಅವುಗಳನ್ನು ಪೂರ್ಣಮಾಡಲು ಯಾವಾಗಲೂ ಚಿಂತಿಸುತ್ತಿರುವದಿಲ್ಲವೋ, ಯಾವನು ತನ್ನ ಪರಿಶ್ರಮದಿಂದ, ತನ್ನ ಪುರುಷಾರ್ಥದಿಂದ ತನ್ನ ತಾಯಿಯ ಹಸಿವೆಯನ್ನು ಹಿಂಗಿಸಲು ಸಮರ್ಥನಾಗುವದಿಲ್ಲವೋ ಅಂಥವನು ತನ್ನ

ಮೋರೆಯನ್ನಾದರೂ ಹೇಗೆ ಮೇಲೆ ಎತ್ತುವನು ? ಅವನಿಗೆ ಮಾತೃಭಕ್ತನೆಂದಾದರೂ ಹೇಗೆ ಅನ್ನಬೇಕು ? ಮೇಲಾಗಿ ಅವನ ವಿಷಯವಾಗಿ ಅವನ ತಾಯಿಯು ಅಭಿಮಾನವನ್ನಾದರೂ ಹೇಗೆ ತಾಳಬೇಕು? ಭಾರತಮಾತೆಯ ಭಾಂಡಾರದಲ್ಲಿ, ಅವಳ ಸಾಮ್ರಾಜ್ಯದಲ್ಲಿ ಬೇಕಾದಷ್ಟು ಕಚ್ಚಾಮಾಲು ಸಿದ್ಧವಾಗಿರುವದು; ಆದ್ದರೆ ಸ್ವಲ್ಪ ಪುರುಷಾರ್ಥವನ್ನು ತೋರಿಸಿ, ಸ್ವಲ್ಪು ಪರಿಶ್ರಮವನ್ನು ಮಾಡಿ, ಕಷ್ಟವನ್ನಾದರೂ ಸ್ವಲ್ಪು ಸಹಿಸಿ, ಆ ಕಚ್ಚಾ ಮಾಲಿನಿಂದ ...

ಗವು ಆಗದ ವರೆಗೆ ಯಾವದೊಂದು ಮಹತ್ಕಾರ್ಯವು ಸಿದ್ಧವಾಗಲಾರದು; ಯಾವನಾದರೊಬ್ಬನಲ್ಲಿ ವೃದ್ಧಾಪ್ಯದ ಅನುಭವವೂ, ಪ್ರೌಢತನದ ಉತ್ಸಾಹವೂ, ತಾರುಣ್ಯದ ಆಶೆಯೂ ಇಲ್ಲದಿದ್ದರೆ, ಅವನು ಎಂದೂ ಪುರುಷಾರ್ಥಿಯಾಗಲಾರನು; ವೃದ್ಧರಂತೆ ಭೂತಕಾಲದ ಅನುಭವದಿಂದ ಶಾಂತಚಿತ್ತರಾಗಿ ವಿಚಾರಮಾಡದೆ ತರುಣರಂತೆ ಭವಿಷತ್ಕಾಲದ ಸ್ವಪ್ನದಿಂದ ಹೃದಯದಲ್ಲಿ ಆಶೆಯನ್ನು ಧರಿಸ ... ಮಾಡತಕ್ಕ ಕರ್ತವ್ಯಗಳ ... ಉತ್ಸಾಹಪೂರ್ವಕವಾ ... ನೇ

SONDUR & JORAPUR.
Ginning Factory, Bagalkot.
Dealers in second-hand Oil-engines, Oil-engine repairers, Crude ... suppliers and General Contractors

ವರ್ತ ... ಭವಿ ... ಮಹ ... ವು; ... ಕ್ಷಿಸಿ, ... ತಪ್ಪು; ... ವನ್ನು ... ಸಿದರೆ, ನನತ್ತ ... ವನು ... ಗ್ಯವಾ ... ಕರೆ ... ಕಾತಿಗ

ಉಪಸ್ಥಿತ ಕಾಲ ಕಾಲವು ; ಸಿಕ್ಕ ... ನೋಡಿ ... ವೃಗತ್ಯ ... ರು; ಭವಿ ... ವಿಹುಟ್ಟು ... ಚಮತ್ಕಾರ; ನನ್ನ ... ಮು ವೃದ್ಧ ಬೀಸತ್ತು ... ಕುವದಿಲ್ಲ; ಇದರಿಂದ ... ನವಾಗಿದೆ; ಯಾವನಾ ... ನೆಯನ್ನು ... ರುವನೋ? ... ಬಲಾವದಿಂ ಮೇಲಕ್ಕೆ

... ಕಾಲವು ಕರ್ಮವೀರರ ದೆಶೆಯಿಂದ ಮತ್ತು ವಿಪತ್ಕಾಲವು ತರು... ... ಎಷ್ಟು ವ್ಯಕ್ತಿಗಳು ವರ್ತಮಾನವನ್ನು ಕೊಲ್ಲುವರೆಂಬುದು ... ದ ಒಂದು
... ರ ಸಲುವಾಗಿ ಉಂಟು; ಭೂತಕಾಲದ ಅನುಭವ ... ವರ್ತಮಾನ ... ಕೇಳಬರುತ್ತದೆ .
ಕಾಲದ ಉತ್ಸಾಹದ ಮತ್ತು ಭವಿಷತ್ಕಾಲದ ಆಕಾಂಕ್ಷೆಯ ಸಂಯೋ...

# ಕನ್ನಡ ನವಜೀವನ.

ಭಾದ್ರಪದ ಶ

ಸ್ವರ

ಯಾವದಾದರೊಂ
ಬಡ್ಡಿಯನ್ನು ಮಾಡಲು
ಇಡುವ ...ಯತ್ನವನ್ನು
ರಿನಲ್ಲಿ ಸ್ವರಾಜ್ಯವನ್ನು ...
ಯು ಇರುತ್ತದೆ. ಒಂದೆ
ಇನ್ನೊಂದು ಸ್ವಲ್ಪ ... ವ
ಸಮಸ್ಯೆಯು ಮುಂದೆ ...
ದರೆ, ನಮ್ಮ ದಾರಿಯು
ವಾಗಿದೆ. ಜಗತ್ತಿನಲ್ಲಿ
ಅತ್ಯಂತವಾದ ಸ್ವಾರ್ಥ
ಸ್ಸಿಯುಲ್ಲದ ಸ್ವರಾಜ್ಯವ
ಸ್ವಾತಂತ್ರ್ಯದ ಇತಿಹಾ
ಸಿಸಿದ ಪ್ರಜಾ ತಂತ್ರದ
ರಾಜ್ಯಕ್ರಾಂತಿಯ ಉ
ದೇಶದ ವರ್ತಮಾನ ...
ತಿರುಗಿಸಿರಿ. ಬೇಕಾದರೆ
ರಾಷ್ಟ್ರಗಳಿಗೆ ಸ್ವಾತಂ
ವಾದ ತ್ಯಾಗವನ್ನು ವ
ಮತ್ತು ಇನ್ನೂವರೆಗೆ
ಬಲಿದಾನವೂ ಸ್ವರಾ
ನಮ್ಮ ಸ್ವಾರ್ಥತ್ಯಾಗ
ಗಿಂತ ಭಿನ್ನವಾಗಿರು...
ತಮ್ಮ ಪ್ರತಿಪಕ್ಷಗಳನ
ನಾವು ಮಾತ್ರ ನಮ್ಮ
ರಿಂದು ತಿಳಿಯುವೆವು
ಯನ್ನು ತೋರಿಸಿ, ...
ನಾವು ಅವರನ್ನು ಪ್ರೇ
ಅವರು ತಮ್ಮ ಸಾಧ
ಬೇಕಾದರೆ ಶುದ್ಧವಿರ
ಅನ್ನುತ್ತಿದ್ದರು. ಆದ
ಲೇ ಶುದ್ಧ ಸಾಧ್ಯವು
ಲೇ ಅವರು ಸಶಸ್ತ್ರ...

ಇಬ್ಬರಿಗೂ ಕಲ್ಯಾಣವೂ ಪರಸ್ಪರರಲ್ಲಿ ಸ್ನೇಹಭಾವವೂ ಉಂಟಾಗು ವದೆಂಬುದಾಗಿ ನಮಗೆ ತೋರುತ್ತದೆ. ನಮ್ಮ ಸ್ವರಾಜ್ಯ ಪ್ರಯತ್ನವು ಅಪೂರ್ವವಾಗಿರುವದು. ಒಂದು ದೃಷ್ಟಿಯಿಂದ ಅಲೌಕಿಕವಾದದ್ದೂ ಇರುತ್ತದೆ. ಆದ್ದರಿಂದಲೇ ನಮಗೆ ಈ ಸಂಗ್ರಾಮದಲ್ಲಿ ವಿಜಯ ವು ದೊರೆಯಬೇಕಾದರೆ ನಮ್ಮ ತ್ಯಾಗವೂ ಬಲಿದಾನವೂ ಅಪೂ ರ್ವವಾಗಿಯೂ ಅಲೌಕಿಕವಾಗಿಯೂ ಆಗಬೇಕು. ಅರ್ಥಾತ್ ...-ತ ಶೇಷವಾದ ಮತ್ತು ಪವಿತ್ರವಾದ ತ್ಯಾಗವನ್ನೂ, ಬಲಿದಾ


ಬಾಗಲಕೋಟೆ— ಕನ್ನಡ ನವಜೀವನ ಭಾದ್ರಪದ ಶುದ್ಧ ೯ ಶಕೆ ೧೮೪೮ ೩೦೩

ಇಮಿಟೇಶನ್ ವಜ್ರದ ಉಂಗುರುಗಳು,

ಈ ಉಂಗುರಗಳು ವಿಲಾಯತಿಯಲ್ಲಿ ತಯಾರಿಸಿದ್ದು; ಅತ್ಯು ತ್ತಮವಾದ ವಜ್ರದ ಕಲ್ಲುಗಳನ್ನು ಇಟ್ಟು ಸೀಮೆ ಬಂಗಾರದಿಂದ ತಯಾ ರಿಸಿ ಮೇಲುಗಡೆ ಅಪರಂಜಿ ಬಂಗಾರದ ಗಿಲೀಟುಮಾಡಿದೆ. ನೋ ಡಲು ಬಹು ಲಕ್ಷಣವಾಗಿ ಕಾಣುವದು. ಇದು ಶ್ರೀಮಂತರಿಗೂ ಗರೀಬರಿಗೂ ಲಾಯಿಖಾದದ್ದು.

ಕ್ರಯ ೧ಕ್ಕೆ ರೂ. ೨-೦-೦. ಕ್ರಯ ೩ಕ್ಕೆ ರೂ. ೫-೮-೦.

ವಿಳಾಸ ವಿ. ಎ. ಎಸ್. ಶಾಹಿ ಕಂಪನಿ ಸಾಹುಕಾರಪೇಟ ಮದ್ರಾಸ

ಈ ತಿಂಗಳ ಕೊನೇ ವರಿಗೂ ಅರ್ಧ ಕ್ರಯ.

ಇದರ ಕ್ರಯ ೨-೦-೦. ಈಗಿನ ಕ್ರಯ ೧-೦-೦.

ಆಶ್ಚರ್ಯ. ಪಾಕೆಟ್ ಸಿನಾಸ್‌ಕೋಪ್ ಯಂತ್ರ.

ಈ ಸಿನಾಸ ಕೋಪ ಯಂತ್ರಗಳು ಜರ್ಮನ್ ದೇಶದಿಂದ ತಯಾ ರಿಸಿ ಈಗಲೆ ನಮಗೆ ಹೊಸದಾಗಿ ಬಂದಿ ರುವವು. ಈ ಯಂತ್ರ ಅಮೇರಿಕನ್ ಬಯಾಸಕೋಪ ನಾಟಕಶಾಲೆಗಳಲ್ಲಿ ಅತಿ ಚಮತ್ಕಾರವಾಗಿ ಆಕ್ಟ್ ಮಾಡುತ್ತಿರುವ ವಿಜಕೆಟ್ ರೋಸ್, ಪರಲ್‌ವೈಟ್‌ಪ್ರಿಡೈ, ಜೇನ್ಸನ್‌ಚಾರ್ಲಿ ಚಾಪ್ಲಿನ್, ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫಗಳು ಈ ಯಂತ್ರದಲ್ಲಿ ಪ್ರಾಣವಿ ರುವವರ ಹಾಗೆಯೆ ಬಯಾಸಕೋಪದಲ್ಲಿ ಕಾಣುವ ದು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ...



ಸ್ವದೇಶೀ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಎಜಂಟರು) ಅತ್ಯುತ್ತಮ (ಬೇಕು

ಮಶಿ ಗುಳಿಗೆಗಳು ಮತ್ತು ಚಾಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦-೮-೦ | ಟ. ಖ. ಬೇರೆ. |
| ೧೦೦ ಚಾಟಿಗಳಿಗೆ | ೦-೧೪-೦ | |
| ೫೦ ಔಂಸ ಮಶಿ ಪುಡಿಗೆ | ೦-೪-೦ | |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸ:—ಕರ್ನಾಟಕ ಇಂಕ ಕಂಪನಿ, ಬಾಗಲಕೋಟೆ.

ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರದ್ವಾರದಿಂದ, ಉತ್ತಮವಾದ ಸ್ವದೇಶೀ ಸಾಬಾಣವನ ಮಾಡುವದಕ್ಕೆ ಕಲಿಸುವೆವು. ಫೀ. ರೂ. ೫. ಉದ್ಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು.

ಕಲಾಭುವನ—ರಾಷ್ಟ್ರೀಯ ಶಾಲಾ ಧಾರವಾಡ.

ಇಂಡಿಯಾ ಪ್ರಾವ್ಹಿಡಂಟ ಕಂ. ಲಿ. ಕಲಕತ್ತಾ.

ಮಧ್ಯಮ ಸ್ಥಿತಿಯ ಕುಟುಂಬದಾರರಿಗೆ ಈ ಕಠಿಣ ಕಾಲದಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಬಿಗಿಯಾಗಿರುವದು ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗ ಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ...


ವಾನವನ್ನೂ ಮಾಡುತ್ತಿದ್ದರೆ ನಾವು ಸತ್ಯಾಗ್ರಹದ ದ್ವಾರದಿಂದ, ಶಾಂತಿಮಯ ಉಪಾಯಗಳ ಮುಖಾಂತರವಾಗಿ ಎಲ್ಲಕ್ಕಿಂತಲೂ ಉಚ್ಚವಾದ ತ್ಯಾಗವನ್ನೂ ಅತ್ಯಂತ ಶುದ್ಧವಾದ ಬಲಿದಾನವನ್ನೂ ಮಾಡಲಪೇಕ್ಷಿಸುತ್ತೇನೆ. ಈರೀತಿಯಾಗಿ ತ್ಯಾಗವನ್ನೂ ಬಲಿದಾನ ವನ್ನೂ ಮಾಡುವವರಲ್ಲಿ ಎರಡೂ ಪಕ್ಷಗಳಿಗೆ ವಿಜಯವೂ

ವಿದೇಶಿಯರಾಗಿಲ್ಲ....

ವಿಚಾರವಿಲ್ಲವೋ, ಯಾವನು ಅವುಗಳನ್ನು ಪೂರ್ಣಮಾಡಲು ಯಾವಾಗಲೂ ಚಿಂತಿಸುತ್ತಿರುವದಿಲ್ಲವೋ, ಯಾವನು ತನ್ನ ಪವಿತ್ರ ಮದಿಂದ, ತನ್ನ ಪುರುಷಾರ್ಥದಿಂದ ತನ್ನ ತಾಯಿಯ ಹಸಿವೆಯ ನ್ನು ಹಿಂಗಿಸಲು ಸಮರ್ಥನಾಗುವದಿಲ್ಲವೋ ಅಂಥವನು ತನ್ನ

ಮೋರೆಯನ್ನಾದರೂ ಹೇಗೆ ಮೇಲೆ ಎತ್ತುವನು ? ಅವನಿಗೆ ಮಾತೃಭಕ್ತನೆಂದಾದರೂ ಹೇಗೆ ಅನ್ನಬೇಕು ? ಮೇಲಾಗಿ ಅವನ ವಿಷಯವಾಗಿ ಅವನ ತಾಯಿಯು ಅಭಿಮಾನವನ್ನಾದರೂ ಹೇಗೆ ತಾಳಬೇಕು? ಭಾರತಮಾತೆಯ ಭಾಂಡಾರದಲ್ಲಿ, ಅವಳ ಸಾಮ್ರಾಜ್ಯದಲ್ಲಿ ಬೇಕಾದಷ್ಟು ಕಚ್ಚಾಮಾಲು ಸಿದ್ಧವಾಗಿರುವದು; ಆದರೆ ಸ್ವಲ್ಪ ಪುರುಷಾರ್ಥವನ್ನು ತೋರಿಸಿ, ಸ್ವಲ್ಪ ಪರಿಶ್ರಮವನ್ನು ಮಾಡಿ, ಕಷ್ಟವನ್ನಾದರೂ ಸ್ವಲ್ಪ ಸಹಿಸಿ, ಆ ಕಚ್ಚಾಮಾಲಿನಿಂದ ಪಕ್ಕಾ ಮಾಲು ತಯಾ...


ಸರಸ್ವತೀ ವಾಚನಾಲಯ.
ಶ್ರೀ. ರವೀಂದ್ರನಾಥ ಟಾಗೋರ ಇವರ (Waterfall) ನಾಟಕಧಾರ್‍ಯ
ಕನ್ನಡ ಭಾಷಾಂತರವು.
# ಮುಕ್ತಧಾರಾ.
ನಾಟಕ.
ಭಾಷಾಂತರಕಾರ— ಜಿ. ಆರ್. ಕುಲಕರ್ಣಿ.
ಮುದ್ರಣವಾಗುತ್ತಲಿದೆ. } ಬೆಲೆ ೧ ರೂ. ಹೋಸ್ಟೇಜ ಬೇರೆ.
ವಿಳಾಸ:— ಎಸ್. ಎಸ್. ಜೋಶಮಣಿ ಗುಳೇದಗುಡ್ಡ.

ಮದನಕಾಮೇಶ್ವರೀ ಮಾತ್ರೆ.
ಕ್ರಯ ೩ ರು॥ ಅಂಚೆ. ವೆಚ್ಚ ಬೇರೆ
ಉತ್ತಮ ಶಕ್ತಿವರ್ಧಕ ಔಷಧ. ಗುಣಬಾರದಿದ್ದರೆ ಹಣ ಪರತ
ಒಮ್ಮೆ ಅನುಭವ ತೆಗೆದುಕೊಳ್ಳಿರಿ; ಕ್ಯಾಟಲಾಗು ತರಿಸಿ ನೋಡಿರಿ.
ಅಂಬುನಾಥ ಕಂಪನಿ, ಬಾಗಲಕೋಟ,

[redacted] ಕಂಪನಿ. ೩ ಯುರೋಪ್ಯನ ದಿದ ಮದ್ರಾಸ್
ಟಿಕ್ ಟಿಕ್ ಎಂಬ ಶಬ್ದವನ್ನು ಕೊಟ್ಟ ಮಾತ್ರಕ್ಕೆ ಗಡಿಯಾರಗಳೇ.




ಚಕ್ರಗಳಲ್ಲಿಯೂ ಗಂಟೆ ತೋರಿಸುವ ಕೇಂಟರುಗಳ ಮೇಲೆಯೂ ಕೆಂಪು ಕಲ್ಲು ಕೆತ್ತಲ್ಪಟ್ಟಿವೆ ಎಂದು ಇದನ್ನು ತರಿಸುವವರಿಗೆ ೧೦–೧೫ ಬಹುಮಾನಗಳೊಡನೆ ೫–೬ ವರುಷಗಳು ಗ್ಯಾರಂಟಿ ಸಹಿತ ೩-೮ ರೂಪಾಯಿಗಳಿಗೆ ಕೊಡುವೆವೆಂದು ಪ್ರಚುರವಾಗುವ ಪ್ರಕಟನೆಗಳನ್ನು ನೋಡಿಬೇರೆಗಾಗಿ ನಿಮ್ಮ ಹಣವನ್ನು ಕಳಕೊಳ್ಳಬೇಡಿ ಈ ನಮ್ಮ ಜಂಟಲ್‌ಮೆನ್ ಲೀವರ ಪಾಕೆಟ ವಾಚ ಬಹು ಉತ್ತಮವಾದ ಮೂವ್‌ಮೆಂಟ್ಸುಗಳಿಂದ ತಯಾರಿಸಿದೆ, ಗಾಳಿಯೂ ಧೂಳೂ ಸೇರದಂತೆ ಗ್ಲಾಸ್‌ಡೋಮು ಇರುವದು. ಸರಿಯಾದ ಕಾಲವನ್ನು ತೋರಿಸುವದು. ಬೇಗನೆ ಅಥವಾ ನಿಧಾನವಾಗಿ ಹೋದರೆ ಸಾವು ಸರಿಮಾಡಿಕೊಳ್ಳಬಹುದು. ನೋಟಕ್ಕೆ ಗಂಭೀರವಾಗಿಯೂ ಸುಂದರವಾಗಿಯೂ ಇರುವದು. ಇದು ಇಂಗ್ಲೀಷ ನಮೂನೆಯುಳ್ಳದ್ದು. ಈ ಗಡಿಯಾರದಲ್ಲಿ ಯಾರೇ ಆಗಲಿ ಸುಲಭವಾಗಿ ಗಂಟೆ ನೋಡಬಹುದು. ಅಕ್ಷರಿಂದ ಇದರ ವರ್ಣನ ಮಾಡುವದೇತಕ್ಕೆ? ಒಂದನ್ನು ತರಿಸಿನೋಡಿರಿ. ತಿಳಿಯಬೇಕು. ೪ ವರುಷಗಳ ಗ್ಯಾರಂಟಿ ಸಹಿತ ಕ್ರಯ ೪–೮–೦
ಸಾಕ್ಷಿಗಳು— ಕ್ಯಾಪ್ಟನ್ ಅಂಡ್ ಕಂ. ನಂಬರು ಮದ್ರಾಸು.


ಗವು ಆಗದ ವರೆಗೆ ಯಾವದೊಂದು ಮಹತ್ಕಾರ್ಯವು ಸಿದ್ಧವಾಗಲಾರದು; ಯಾವನಾದರೊಬ್ಬನಲ್ಲಿ ವೃದ್ಧಾಪ್ಯದ ಅನುಭವವೂ, ಪ್ರೌಢತನದ ಉತ್ಸಾಹವೂ, ತಾರುಣ್ಯದ ಆಶೆಯೂ ಇಲ್ಲದಿದ್ದರೆ, ಅವನು ಎಂದೂ ಪುರುಷಾರ್ಥಿಯಾಗಲಾರನು; ವೃದ್ಧರಂತೆ ಭೂತಕಾಲದ ಅನುಭವದಿಂದ ಶಾಂತಚಿತ್ತರಾಗಿ ವಿಚಾರಮಾಡದೆ ತರುಣರಂತೆ ಭವಿಷತ್ಕಾಲದ ಸ್ವಪ್ನದಿಂದ ಹೃದಯದಲ್ಲಿ ಆಶೆಯನ್ನು ಧರಿಸದೆ ಪ್ರೌಢರಂತೆ ವರ್ತಮಾನ ಕಾಲದಲ್ಲಿ ಮಾಡತಕ್ಕ ಕರ್ತವ್ಯಗಳ ವಿಷಯವನ್ನು ಮಾಡಿಕೊಳ್ಳದೆ ಯಾವನು ಉತ್ಸಾಹಪೂರ್ವಕವಾ... ...ಣೀ

...ವರ್ತ ...ಭವಿ ...ಮಹ ...ಗಪ್ಪು; ...ಕ್ಷಿಸಿ, ...ತಪ್ಪು; ...ವನ್ನು ...ಸಿದರೆ, ...ನನವು ...ವನು ...ಗ್ಯವಾ ...ಕರಿ ...ಕಾತಿಗ

...ಉಪಸ್ಥಿತ ...ಕಾಲ ...ಕಾಲವು ...; ಸಿಕ್ಕ ...ನೋಡಿ ...ವೃಗತ್ಯ ...ರು; ಭವಿ ...ವಿಹುಚ್ಚು ...ಚಮತ್ಕಾರ; ನಮ್ಮ ...ದು ವೃದ್ಧ ...ಬೇಸತ್ತು ...ಕುವದಿಲ್ಲ; ...ಇದರಿಂದ ...ನವಾಗಿದೆ; ...ಯಾವನಾ ...ಮೆಯನ್ನು ...ರುವನೋ? ...ಸುಲಭಾದಿಂ ...ಮೇಲಕ್ಕೆ

ಕಾಲವು ಕರ್ಮವೀರರ ದೆಶೆಯಿಂದ ಮತ್ತು ವಿಷಕಾಲವು ತರು... ...ಎಲ್ಲರಿಗೂ ದರ್ಶನವನ್ನು ಕೊಡುವಳೆಂಬುದು ... ದ ಒಂದು ರ ಸಲುವಾಗಿ ಉಂಟು; ಭೂತಕಾಲದ ಅನುಭವ ವರ್ತಮಾನ ಕಾಲದ ಉತ್ಸಾಹದ ಮತ್ತು ಭವಿಷತ್ಕಾಲದ ಆಶಾಂಕುರದ ಸಂಯೋಗ ... ಕೇಳಬರುತ್ತಿ .

# ಕನ್ನಡ ನವಜೀವನ.

ಭಾದ್ರಪದ ೮

ಬಡ್ಡಿ
ಇರು
ರಿನಲ್ಲಿ
ಯು
ಇನ್ನೊ
ಸಮಸ್ತ
ದರೆ, ನ
ವಾಗಿದ
ಅತ್ಯಂ
ಸ್ಥಿಯಲ್ಲ
ಸ್ವಾತಂ
ಕೆಸಿದ
ರಾಷ್ಟ್ರ
ದೇಶದ
ತಿರುಗಿಸಿ
ರಾಷ್ಟ್ರಗ
ವಾದ ತ
ಮತ್ತು
ಬಲಿದಾನ
ನಮ್ಮ ಸ್ವಾ
ಗಿಂತ ಭ
ತಮ್ಮ ಪ್ರ
ನಾವು ವಸ
ರೆಂದು ತಿಳಿ
ಯನ್ನು ತಿ
ನಾವು ಅವ
ಅವರು ತವ
ಬೇಕಾದರೆ
ಅನ್ನುತ್ತಿದ್ದ
ಲೇ ಶುದ್ಧ
ಲೇ ಅವರು
ದಾನವನ್ನೂ
ಶಾಂತಿಮಯ
ಉಚ್ಚವಾದ
ಮಾಡಲಪೇಕ್ಷಿಸುತ್ತೇನೆ. ಈರೀತಿಯಾಗಿ ತ್ಯಾಗವನ್ನೂ ಬಲಿದಾನವನ್ನೂ ಮಾಡುವವರಲ್ಲಿ ಎರಡೂ ಪಕ್ಷಗಳಿಗೆ ವಿಜಯವೂ

ಇಬ್ಬರಿಗೂ ಕಲ್ಯಾಣವೂ ಪರಸ್ಪರರಲ್ಲಿ ಸ್ನೇಹಭಾವವೂ ಉಂಟಾಗುವದೆಂಬುದಾಗಿ ನಮಗೆ ತೋರುತ್ತದೆ ನಮ್ಮ ಸ್ವರಾಜ್ಯ ಯುದ್ಧವು ಅಪೂರ್ವವಾಗಿರುವದು. ಒಂದು ದೃಷ್ಟಿಯಿಂದ ಅಲೌಕಿಕವಾದದ್ದೂ ಇರುತ್ತದೆ. ಆದ್ದರಿಂದಲೇ ನಮಗೆ ಈ ಸಂಗ್ರಾಮದಲ್ಲಿ ವಿಜಯವು ದೊರೆಯಬೇಕಾದರೆ ನಮ್ಮ ತ್ಯಾಗವೂ ಬಲಿದಾನವೂ ಅಪೂರ್ವವಾಗಿಯೂ ಅಲೌಕಿಕವಾಗಿಯೂ ಆಗಬೇಕು. ಅರ್ಥಾತ್ [illegible] ಕೇವಲವಾದ ಮತ್ತು ಪವಿತ್ರವಾದ ತ್ಯಾಗವನ್ನು, ಬಲಿದಾ

## ಇಹವೃತ್ತ.

ಮಳೆ ಇಲ್ಲ, ಮೊನ್ನೆನದಿನ ಮಳೆಯ ಹನಿಗಳು ಮಾತ್ರ ಉದುರಿದವು.

ಇಲ್ಲಿ ಶ್ರೀ ಗೋಪಾಲ ಸಂಗೀತ ನಾಟಕ ಮಂಡಳಿಯವರು ಮೃಚ್ಛಕಟಿಕ ಪ್ರಯೋಗವನ್ನು ಮೊನ್ನಿನ ಮಂಗಳವಾರ ತಾ॥ ೨೯ ೬ ಇ ನೇ ದಿನ ಆಡಿತೋರಿಸಿದರು. ಈ ಪ್ರಯೋಗವು ಚನ್ನಾಗಿ ಆಯಿತು. ಇಲ್ಲಿಯ ಸುಪ್ರಸಿದ್ಧ ವ್ಯಾಪಾರಸ್ಥರಾದ ಶ್ರೀ ಬಾಬುಶೇಟ ಇವರು ಈ ಮಂಡಳಿಯವರಿಗೆ ನೂರಾರು ರು ಬೆಲೆಬಾಳುವ ತಿರಿಯನ್ನು ಪಾರಿತೋಷಕವಾಗಿ ಕೊಟ್ಟರು ಈ ಕಂಪನಿಯವರ ಮೃಚ್ಛಕಟಿಕ [illegible], ಸಂಶಯಕಲ್ಲೋಲ, ಮೊದಲಾದ ನಾಟಕಗಳು ಬಹಳೇ ಪ್ರೇಕ್ಷಣೀಯವಾಗಿರುವವು; ಶ್ರೀ ಮೋಹನೀ ಭೋಸಲೆ, [illegible] ಗಾಯನದಲ್ಲಿಯೂ ಅಭಿನಯದಲ್ಲಿಯೂ ಒಳ್ಳೇ ಕುಶಲರಾಗಿದ್ದಾರೆ: ಇಲ್ಲಿಂದ ಮಂಡಳಿಯವರು [illegible] ಹೋಗಿದ್ದು ಅಲ್ಲಿ [illegible] ಪ್ರಯೋಗಗಳು ನಡೆದಿವೆ.

ಶ್ರೀ ವೆಂಕಟೇಶ್ವರ [illegible] ನಾಟಕ ಮಂಡಳಿಯವರ ಪ್ರಯೋಗಗಳೂ ನಡೆದಿದ್ದು ಜನರಂಜನೆಯು ಚನ್ನಾಗಿ ಆಗುತ್ತಲಿದೆ;

ವಿಜಯ ಪತ್ರದ ಸಂಪಾದಕರಾದ ಶ್ರೀ ಅಣ್ಣಾಚಾರ್ಯ ಹೊಸಕೇರಿಯವರನ್ನು ಧುಳಿಯಿಂದ ಮೊನ್ನೆನದಿನ ಬಾಗಲಕೋಟ ಮಾರ್ಗವಾಗಿ ಧಾರವಾಡಕ್ಕೆ ಪೋಲೀಸರು ಕರಕೊಂಡು ಹೋದರು:

[illegible] ಸ್ವದೇಶೀ ಪಾಕೀಟಗಳನ್ನು [illegible]
ದೇಶದ ದೊರೆಯುವವು ಒಮ್ಮೆ ಅನುಭವ ತೆಗೆದು ಕೊಂಡಲ್ಲಿ ನಿಮಗೆ ಮಾತ್ರ ಯೋಗ್ಯವದು [illegible] ಪಾಕೀಟಗಳುಳ್ಳ ಒಂದು ಪೆಟ್ಟಿಗೆಗೆ ೧ ರೂಪಾಯಿಗಳು ಮಾತ್ರ ಏಜಂಟರು ಬೇಕಾಗಿದೆ

ವ್ಹಿ ಜೀ ಪರವಶಿಕರ
ಸೋಲ ಏಜಂಟ ಡಿಸ್ಟ್ರಿಕ್ಟ ವಿಜಾಪೂರ
ಬಾಗಲಕೋಟ.

ಶುದ್ಧ ಸ್ವದೇಶೀ!! ಶುದ್ಧ ಸ್ವದೇಶೀ!!

ಶುದ್ಧ ಸ್ವದೇಶೀ ವಸ್ತುಗಳನ್ನು ಸುಲಭವಾದ ಕ್ರಯಕ್ಕೆ ತೆಗೆದುಕೊಳ್ಳುವ ಅಪೇಕ್ಷೆಯು ಇದ್ದಲ್ಲಿ ನಮ್ಮಲ್ಲಿಯೇ ತೆಗೆದು ಕೊಳ್ಳಿರಿ ಬರೇ ಸ್ವದೇಶೀ ಎಂದು ಹೆಸರಿಟ್ಟುಕೊಂಡ ಅನೇಕ ಕಂಪನಿಗಳಲ್ಲಿ ಹೋಗಿ ಮೋಸ ಹೋಗಬೇಡಿರಿ. ನಮ್ಮಲ್ಲಿ ಎಲ್ಲ ತರದ ಸ್ಟೇಶನರೀ ಸಾಮಾನುಗಳೂ ಕಾಗದ ಒದವಗಳೂ, ಸುದರ್ಶನ ಚಕ್ರದಿಂದ ತೆಗೆದ ನೂಲಿನ ಬಟ್ಟೆಗಳೂ. ಎಲ್ಲ ದೇಶ ಭಕ್ತರ ಭಾವಪಟಗಳೂ ದೊರೆಯುತ್ತವೆ ಇದಲ್ಲದೆ ಕನ್ನಡ, ಮರಾಠಿ, ಇಂಗ್ಲೀಷ, ಭಾಷೆಗಳಲ್ಲಿಯ ದೈನಿಕ ಮತ್ತು ವಾರಪತ್ರಗಳು ಮಾರಲಿಕ್ಕೆ ಶಿಗುತ್ತವೆ

ಮಾಲಕ,
ಶ್ರೀನಿವಾಸರಾವ ನೀರಲಕೇರಿ } ಲೋಕಮಾನ್ಯ ಸ್ಟೋರ್ಸ.
ಬಾಗಲಕೋಟ

[illegible] ಜಾತರಾಗಿರುವದಿಲ್ಲವೋ, ಯಾವನು ತನ್ನ ಪವಿತ್ರಮದಿಂದ, ತನ್ನ ಪುರುಷಾರ್ಥದಿಂದ ತನ್ನ ತಾಯಿಯ ಹಸಿವೆಯನ್ನು ಹಿಂಗಿಸಲು ಸಮರ್ಥನಾಗುವದಿಲ್ಲವೋ ಅಂಥವನು ತನ್ನ

ಮೋರೆಯನ್ನಾದರೂ ಹೇಗೆ ಮೇಲೆ ಎತ್ತುವನು ? ಅವನಿಗೆ ಮಾತೃಭಕ್ತನೆಂದಾದರೂ ಹೇಗೆ ಅನ್ನಬೇಕು ? ಮೇಲಾಗಿ ಅವನ ವಿಷಯವಾಗಿ ಅವನ ತಾಯಿಯು ಅಭಿಮಾನವನ್ನಾದರೂ ಹೇಗೆ ತಾಳಬೇಕು? ಭಾರತಮಾತೆಯ ಭಾಂಡಾರದಲ್ಲಿ, ಅವಳ ಸಾಮ್ರಾಜ್ಯದಲ್ಲಿ ಬೇಕಾದಷ್ಟು ಕಚ್ಚಾಮಾಲು ಸಿದ್ಧವಾಗಿರುವದು; ಆದರೆ ಸ್ವಲ್ಪ ಪುರುಷಾರ್ಥವನ್ನು ತೋರಿಸಿ, ಸ್ವಲ್ಪ ಪರಿಶ್ರಮವನ್ನು ಮಾಡಿ, ಕಷ್ಟವನ್ನಾದರೂ ಸ್ವಲ್ಪ ಸಹಿಸಿ, ಆ ಕಚ್ಚಾಮಾಲಿನಿಂದ ಪಕ್ಕಾ ಮಾಲು ತಯಾರಮಾಡಿ, ಭಾರತಮಾತೆಗೆ ಅರ್ಪಿಸುವ ಅವಶ್ಯಕತೆಯು ಮಾತ್ರ ಉಂಟು.

ಸ್ವದೇಶಿಯಲ್ಲಿ ಸ್ವಧರ್ಮವೂ, ಸ್ವದೇಶವೂ, ಸ್ವರಾಜ್ಯವೂ, ಎಲ್ಲವೂ ಅಡಕವಾಗಿರುವವು. ಸ್ವದೇಶಿಯಿಂದ ನಮ್ಮಲ್ಲಿ ಅಂತರ್ವ್ಯವಸ್ಥೆಯುಂಟಾಗಿ, ಸಂಘಶಕ್ತಿಯು ಬೆಳೆದು ನಿಯಮಗಳನ್ನು ಪಾಲಿಸುವ ಶಕ್ತಿಯು ವಿಕಾಸವನ್ನು ಹೊಂದುವದು; ಸ್ವದೇಶಿಯಿಂದ ಭಾರತದ ಭಿನ್ನ ಭಿನ್ನ ಜಾತಿಗಳಲ್ಲಿ ಪ್ರೇಮಬಂಧನವಾಗುವದು; ಸ್ವದೇಶಿಯು ಅಸ್ಪೃಶ್ಯತೆಯ ನಿವಾರಣೆಯನ್ನು ಮಾಡಿ, ಅರ್ಥಾತ್ ನಮ್ಮಲ್ಲಿಯ ಐದು ಕೋಟಿ ಅಸ್ಪೃಶ್ಯಬಾಂಧವರ ಉದ್ಧಾರದ ಸಾಧನವಾಗುವದು. ಸ್ವದೇಶಿಯು ಹಿಂದುಸ್ಥಾನದಲ್ಲಿಯ ಉಪವಾಸದಿಂದ ಬಳಲುವ ಲಕ್ಷಾವಧಿ ಜನರಿಗೆ ಅನ್ನಪಾನವನ್ನು ಕೊಡುವ ಸಾಧನವಾಗಿ, ಅವರ ಕ್ಷುಧೆಯನ್ನು ತೃಪ್ತಿಮಾಡುವದು. ಸ್ವದೇಶಿಯು ಸ್ವರಾಜ್ಯಭಗವಂತನ ವಿರಾಟರೂಪವಾಗಿದೆ. ಸ್ವದೇಶಿಯು ಹಿಂದುಸ್ತಾನಕ್ಕೆ ಸಂಜೀವನಿ ಔಷಧವಾಗಿದೆ. ಭಾರತದ ಪ್ರತಿಯೊಂದು ಮನೆಯಲ್ಲಿ ಸ್ವದೇಶಿಯ ಪ್ರಚಾರವಾಗಲಿಕ್ಕೆ ಬೇಕು. ಪ್ರತಿಯೊಬ್ಬ ಸ್ತ್ರೀ ಪುರುಷನು ತನ್ನ ಪ್ರತಿನಿತ್ಯದ ಧರ್ಮಕೃತ್ಯವೆಂದು ಬಗೆದು ಕೆಲವು ವೇಳೆಯಾದರೂ ರಾಟೆಯಿಂದ ನೂಲು ತೆಗೆಯಬೇಕು. ದ್ವಿಜರಾದವರೋ ಇದು ಒಂದು ರೀತಿಯ ಸಂಧ್ಯಾವಂದನೆಯೆಂದು ತಿಳಿಯತಕ್ಕದ್ದು. ಸ್ವದೇಶಿಯು ಈಗಿನ ಯುಗದ ಧರ್ಮವಾಗಿದೆ. ಈ ವ್ರತವನ್ನು ಪಾಲಿಸದೆ ಮಾಡಿದ ತ್ಯಾಗವೂ ಬಲಿದಾನವೂ ನಿಷ್ಫಲವಾಗುವದು.

ಆದ್ದರಿಂದ ಭಾರತಮಾತೆಯ ವಿಷಯವಾಗಿ ನಮ್ಮ ಮನಸ್ಸಿನಲ್ಲಿ ಪ್ರೇಮವಿದ್ದರೆ, ಕಳಕಳಿಯಿದ್ದರೆ, ನಮ್ಮ ಮುಖಂಡರಾದ ಮಹಾತ್ಮಾ ಗಾಂಧಿ ಮೊದಲಾದ ಮುಂದಾಳುಗಳ ವಿಯೋಗದಿಂದ ನಮ್ಮ ಮನಸ್ಸು ವ್ಯಾಕುಲವಾಗಿದ್ದರೆ, ನಮ್ಮ [illegible] ಬಾಂಧವರ ತಪಸ್ಯೆಯು ಕಷ್ಟವು [illegible] ಅಪೇಕ್ಷಿಸುವದಾದರೆ, ಸ್ವಾತಂತ್ರ್ಯದ ಮೇಲೆ ನಮಗೆ ನಿಜವಾದ ಪ್ರೇಮವಿದ್ದರೆ, [illegible] ಘಟದ ವಿಷಯದಲ್ಲಿ ಪ್ರೀತಿಯಿದ್ದರೆ, ಪಂಜಾಬದ ಅತ್ಯಾಚಾರಗಳ ಸ್ಮರಣೆಯಿದ್ದರೆ ಹಿಂದೆ ಹೇಳಿದ ತ್ಯಾಗ ಮತ್ತು ಬಲಿದಾನದದ್ವಾರದಿಂದ ಬಿತ್ತಿದ ಸ್ವರಾಜ್ಯದ ಬೀಜದ ಮೂಲವನ್ನು ನಾವು ನಮ್ಮ ಸ್ವದೇಶೀಮಯವಾದ ತ್ಯಾಗ ಮತ್ತು ಬಲಿದಾನದಿಂದ ಸುರಕ್ಷಿತವಾಗಿಟ್ಟು ದೃಢಮಾಡಬೇಕು. ಈ ವೇಳೆಯಲ್ಲಿ ಇದಕ್ಕಿಂತ ಹೆಚ್ಚಿನ ಧರ್ಮವು ಬೇರೊಂದಿಲ್ಲ. ಇದರ ಹೊರತಾಗಿ ಬೇರೊಂದು ಕರ್ತವ್ಯವೂ ಇಲ್ಲ.

ಜಮನಾಲಾಲ ಬಜಾಜ.

## ಭಾವೀ ಸ್ವಪ್ನವು.

ನವಜೀವನ

ಭೂತಕಾಲವು ವೃದ್ಧಮನುಷ್ಯರ ಸಲುವಾಗಿ, ವರ್ತಮಾನ ಕಾಲವು ಕರ್ಮವೀರರ ದೆಶೆಯಿಂದ ಮತ್ತು ಭವಿಷತ್ಕಾಲವು ತರುಣರ ಸಲುವಾಗಿ ಉಂಟು; ಭೂತಕಾಲದ ಅನುಭವ ವರ್ತಮಾನ ಕಾಲದ ಉತ್ಸಾಹದ ಮತ್ತು ಭವಿಷತ್ಕಾಲದ ಆಕಾಂಕ್ಷೆಯ ಸಂಯೋಗವು ಆಗದ ವರೆಗೆ ಯಾವದೊಂದು ಮಹತ್ಕಾರ್ಯವು ಸಿದ್ಧವಾಗಲಾರದು; ಯಾವನಾದರೊಬ್ಬನಲ್ಲಿ ವೃದ್ಧಾಪ್ಯದ ಅನುಭವವೂ, ಪ್ರೌಢತನದ ಉತ್ಸಾಹವೂ, ತಾರುಣ್ಯದ ಆಶೆಯೂ ಇಲ್ಲದಿದ್ದರೆ, ಅವನು ಎಂದೂ ಪುರುಷಾರ್ಥಿಯಾಗಲಾರನು; ವೃದ್ಧರಂತೆ ಭೂತಕಾಲದ ಅನುಭವದಿಂದ ಶಾಂತಚಿತ್ತರಾಗಿ ವಿಚಾರಮಾಡದೆ ತರುಣರಂತೆ ಭವಿಷತ್ಕಾಲದ ಸ್ವಪ್ನದಿಂದ ಹೃದಯದಲ್ಲಿ ಆಶೆಯನ್ನು ಧರಿಸದೆ ಪ್ರೌಢರಂತೆ ವರ್ತಮಾನ ಕಾಲದಲ್ಲಿ ಮಾಡತಕ್ಕ ಕರ್ತವ್ಯಗಳ ನಿಶ್ಚಯವನ್ನು ಮಾಡಿಕೊಳ್ಳದೆ ಯಾವನು ಉತ್ಸಾಹಪೂರ್ವಕವಾಗಿ ತನ್ನ ಕಾರ್ಯಕ್ರಮವನ್ನು ಪೂರ್ತಿಮಾಡಲಾರನು; ಈ ತ್ರಿವೇಣೀ ಸಂಗಮವು ಕಾರ್ಯಸಿದ್ಧಿಯ ಮೂಲಮಂತ್ರವು;

ಭೂತಕಾಲದಲ್ಲಿ ಸ್ವಪ್ನದಂತೆ ತೋರುತ್ತಿದ್ದ ಸಂಗತಿಯು ವರ್ತಮಾನ ಕಾಲದಲ್ಲಿ ಸಂಭವನೀಯವಾಗಿ ಕಾಣುವದು; ಮತ್ತು ಭವಿಷತ್ಕಾಲದಲ್ಲಿ ಅದು ಪ್ರತ್ಯಕ್ಷವಾಗುವದು; ವೃದ್ಧರು ತರುಣರ ಮಹತ್ವಾಕಾಂಕ್ಷೆಗಳನ್ನು ಸ್ವಪ್ನಸದೃಶವೆಂದು ತಿಳಿದರೆ ಅದು ಅವರ ತಪ್ಪು; ಅದರಂತೆಯೇ ಯುವಕರು ವೃದ್ಧರ ಅನುಭವವನ್ನು ಉಪೇಕ್ಷಿಸಿ, ಅವರ ಕಡೆಗೆ ತಿರಸ್ಕಾರ ದೃಷ್ಟಿಯಿಂದ ನೋಡುವದು ಅವರ ತಪ್ಪು; ಪ್ರೌಢರಾದವರು ವೃದ್ಧರ ಮತ್ತು ತರುಣರ ಸಂಗಡ ಮಿತ್ರತ್ವವನ್ನು ಕಾಯ್ದುಕೊಳ್ಳದೆ, ಅನುಭವವನ್ನೂ ಆಶೆಯನ್ನೂ ಉಪೇಕ್ಷಿಸಿದರೆ, ಅವರಿಗೆ ಸ್ಫೂರ್ತಿಯೇ ದೊರೆಯುವದಿಲ್ಲ; ಮತ್ತು ಅವರ ಜೀವನವು ವ್ಯರ್ಥವಾಗುವದು. ಇದರಿಂದ ಆತ್ಮಘಾತವಾಗುವದು; ಯಾವನು ತನ್ನ ಜೀವನದಲ್ಲಿ, ತನ್ನ ಚರಿತ್ರೆಯಲ್ಲಿ ಇವೆಲ್ಲವುಗಳ ಯೋಗ್ಯವಾದ ಸಮ್ಮೇಲನ ಮಾಡುವನೋ ಅವನೇ ಪುರುಷಾರ್ಥಿಯೆಂದು ಕರೆಯಲ್ಪಡುವನು; ಅವನೇ ಮುಖಂಡನಾಗುವನು; ಅವನೇ ಜಾತಿಗಳ ಮತ್ತು ರಾಷ್ಟ್ರದ ಭಾಗ್ಯವನ್ನು ಬದಲುಮಾಡಿ ಬಿಡುವನು.

ಹಿಂದುಸ್ತಾನದ ಎದುರಿನಲ್ಲಿ ಈಗ ಈ ಪ್ರಶ್ನೆಯು ಉಪಸ್ಥಿತವಾಗಿದೆ; ಈಗ ಹಿಂದುಸ್ತಾನದ ಜೀವನದಲ್ಲಿ ಇವು ಮೂರು ಕಾಲಗಳು ತಮ್ಮತಮ್ಮೊಳಗೆ ಜಗಳಾಡುತ್ತಿರುವವು; ಭೂತಕಾಲವು "ನೀವು ನಿಂತಲ್ಲಿಯೇ ನಿಂತುಕೊಳ್ಳಿರಿ; ಇದ್ದಂತೆಯೇ ಇರ್ರಿ; ಸಿಕ್ಕಷ್ಟನ್ನು ತೆಗೆದುಕೊಳ್ಳಿರಿ; ಭವಿಷತ್ಕಾಲದಲ್ಲಿಯ ಸುಖದ ಕಡೆಗೆ ನೋಡಿ ಉನ್ಮತ್ತರಾಗಬೇಡಿರಿ; ಭವಿಷತ್ಕಾಲದ ಸುಖವು ಕೇವಲ ಮೃಗತೃಷ್ಣೆಯಂತೆ ಇರುವದು;" ಎಂದು ತರುಣರಿಗೆ ಅನ್ನುತ್ತಿರುವದು; ಭವಿಷ್ಯಕಾಲವು "ನೀವು ವೃದ್ಧರಾಗಿರುವಿರಿ, ನಿಮಗೆ ಮುದಿತುಕ್ಕು ಹಿಡಿದದೆ; ನೀವು ಅಂಜುಬುರುಕರಿರುವಿರಿ; ನಿಮಗೆ ನನ್ನ ಚಮತ್ಕಾರದ ನನ್ನ ಶಕ್ತಿಯ ಅರಿವು ಎಲ್ಲಿದೆ? ಸುಮ್ಮನೆ ಕೂಡಿರಿ; ನನ್ನ ಮಾರ್ಗದ ಮೇಲೆ ಮುಳ್ಳುಗಳನ್ನು ಹರವಬೇಡಿರಿ;" ಎಂದು ವೃದ್ಧರಿಗೆ ಹೇಳಹತ್ತಿದೆ. ಪಾಪ, ವರ್ತಮಾನಕಾಲವಂತೂ ಬೇಸತ್ತು ಹೋಗಿದೆ; ಅದರ ಮಾತನ್ನು ವೃದ್ಧರೂ ತರುಣರೂ ಕೇಳುವದಿಲ್ಲ; ಎಲ್ಲರೂ ತಮ್ಮ ವಿಚಾರದಲ್ಲಿಯೇ ಮಗ್ನರಾಗಿರುವರು; ಇದರಿಂದ ವರ್ತಮಾನ ಕಾಲವು ಕರ್ತವ್ಯಮೂಢವಾಗಿ ಕರ್ತವ್ಯಹೀನವಾಗಿದೆ; ಅದು ಪುರುಷಾರ್ಥನ [illegible] ತೊಡಕಿರುವದು; ಯಾವನಾದರೊಬ್ಬನು ಪುರುಷಾರ್ಥಿಯು ಈ ಮೂವರಲ್ಲಿಯ ಭ್ರಮೆಯನ್ನು ದೂರಮಾಡಿ, ತಿರುಗಿ ಶಾಂತಿಯನ್ನು ಸ್ಥಾಪಿಸಲು ಸಮರ್ಥನಿರುವನೋ? ಭಾರತಮಾತೆಯ ಮುಖವು ಇನ್ನು ಮುಂದೆ ಕೆಳಗೆ ಉಳಿಯಲಾರದೆಂದೂ, ಪೂರ್ವಕಾಲದಂತೆ ಅವಳು ತನ್ನ ಮೋರೆಯನ್ನು ಮೇಲಕ್ಕೆತ್ತಿ ಎಲ್ಲರಿಗೂ ದರ್ಶನವನ್ನು ಕೊಡುವಳೆಂದೂ ಪೂರ್ವದಿಂದ ಒಂದು [illegible] ಕೇಳಬರುತ್ತಿ[illegible].

ಇಂಥ ಕಠಿಣಕಾಲದಲ್ಲಿ ಹಿಂದೀ ನವಜೀವನದ ಎರಡನೇ ವರ್ಷವು ಪ್ರಾರಂಭವಾಗಿದೆ. ತನ್ನ ಮೇಲೆ ಇದ್ದ ಭಾರದ ವಿಚಾರದಿಂದ ಅದರ ಎದೆಯು ಹಾರಹತ್ತಿದೆ. ಆದರೆ ಭವಿಷತ್ಕಾಲದ ಸ್ವಪ್ನದಿಂದ ಅದರ ಹೆಜ್ಜೆಯು ಮುಂದೆ ಮುಂದೆ ಬೀಳಹತ್ತಿದೆ ಅದಕ್ಕೆ ಅಂಜಿಕೆಯು ಇಲ್ಲ; ನಿರಾಶೆಯಿಲ್ಲ; ಖೇದವಿಲ್ಲ; ಆದರೆ ತನ್ನ ಮರ್ಯಾದೆಯನ್ನು ಯಾವರೀತಿಯಿಂದ ಪರಮಾತ್ಮನು ಕಾಪಾಡುವನೆಂಬ ಚಿಂತೆಯು ಮಾತ್ರ ಅದಕ್ಕೆ ಉಂಟು. ಅದರ ಕರ್ತವ್ಯವು ಬಹಳ ಮಹತ್ವದ್ದಾಗಿದೆ. ಅದರ ಮಾರ್ಗವು ಗುಡ್ಡಗಾಡು ಪ್ರದೇಶದಲ್ಲಿರುವದು. ಕಗ್ಗತ್ತಲೆಯ ರಾತ್ರಿಯಾಗಿದೆ. ಧ್ರುವನು ಅರಸಾಳ್ಗಳ ತುರಂಗದಲ್ಲಿರುವನು. ಪರಮಾತ್ಮನೇ! ನಿನ್ನ ಕಾಂತಿಯ ಪ್ರಕಾಶವನ್ನು ಇದಕ್ಕೆ ತೋರಿಸು. ಸತ್ಯಮಾರ್ಗದಿಂದ ಇದನ್ನು ಕದಲಗೊಡಬೇಡ. ಮುಳ್ಳುಗಳು ಇದಕ್ಕೆ ಹೂವಿನಂತೆ ಆಗಲಿ. ಆಶೆಯೂ ವಿಶ್ವಾಸವೂ ಇದರ ಹೃದಯಧರ್ಮವಾಗಲಿ. ಕರ್ತವ್ಯದಾಲನೆಯಿಂದ ಆಗುವ ಶಾಂತಿಯ ಅನುಭವವು ಇದಕ್ಕೆ ದೊರೆಯಲಿ.

ಭಾವೀ ಸ್ವಪ್ನವು—ಭಾರತದ ಭಾವೀ ಸ್ವಪ್ನವು ನಿಶ್ಚಿತವಾಗಿದೆ. ಅದು ಭೂತಕಾಲದ ಮುದುಕ ಮನೆಯೊಳಗಿಂದ ಹೊರಗೆ ಬಂದು ಭವಿಷತ್ಕಾಲದ ಗರ್ಭದಲ್ಲಿ ಲೀನವಾಗತಕ್ಕ ವರ್ತಮಾನಕಾಲದ ಮೇರೆಯಲ್ಲಿ ಬಂದು ನಿಂತಿರುವದು ಸ್ವರಾಜ್ಯವು ಈಗ ಸ್ವಪ್ನದ ಮಾತು ಇರುವದಿಲ್ಲ ಪ್ರತ್ಯಕ್ಷ ಅರುಣೋದಯವಾಗಿರುವದು. ಸೂರ್ಯೋದಯವಾಗುವವರೆ ಮೊದಲು ಅದು ತನ್ನ ವಿರೋಧಿಗಳ ಕೂಡ ಯುದ್ಧವನ್ನು ಮಾಡಬೇಕಾಗಿದೆ. ಅದರ ಯುದ್ಧವು ಪ್ರೇಮ ಯುದ್ಧವು; ಶಾಂತಿಯ ಯುದ್ಧವು. ತನ್ನ ಪುರುಷಾರ್ಥ ತನ್ನ ಸ್ವಾವಲಂಬನದ ಅಭಿವೃದ್ಧಿಯೇ ಅದರ ಮುಖ್ಯ ಶಕ್ತಿಯು. ಸ್ವದೇಶಿಯು, ಅಹಿಂಸೆಯು, ಎಲ್ಲ ಜಾತಿಗಳಲ್ಲಿ ಐಕ್ಯವು, ಅಸ್ಪೃಶ್ಯರ ಉದ್ಧಾರವು ಇವು ನಾಲ್ಕು ಅದರ ಸಾಧನಗಳು. ಇವೇ ವರ್ತಮಾನ ಕಾಲದ ಚತುರ್ವಿಧ ಪುರುಷಾರ್ಥಗಳು ಇವೇ ಸ್ವರಾಜ್ಯದ ಧರ್ಮ, ಅರ್ಥ ಕಾಮ ಮೋಕ್ಷಗಳು-

ಸ್ವರಾಜ್ಯವು ಬುದ್ಧಿ ಯುದ್ಧ ಮತ್ತು ವಾಗ್ಯುದ್ಧದಿಂದ ದೊರೆಯಕಾರದು ಕೌನ್ಸಿಲದ ಬಾಗಿಲುಗಳು ನಿರ್ಬಲತೆಯ ಬಾಗಿಲಗಳು. ಇವುಗಳಿಂದ ನಾವು ಜನತೆಯ ಪ್ರತ್ಯಕ್ಷ ಕಾರ್ಯವನ್ನು ಮಾಡುವದರಿಂದ ಪರಾಙ್ಮುಖರಾಗುವೆವು. ಇವು ನಮ್ಮನ್ನು ನಿರುಪಯೋಗಿಯನ್ನಾಗಿ ಮಾಡುವ ಯಂತ್ರಗಳಾಗಿವೆ. ಶತ್ರುಗಳ ಕೋಟೆಯೊಳಗೆ ಹೋಗಿ, ಯುದ್ಧಮಾಡುವದು ಜಾಣತನವಲ್ಲ. ಕೌನ್ಸಿಲಗಳು ಸ್ವರಾಜ್ಯಕ್ಕೆ ಸಂಕಟವಾಗಿರುವವು. ಸ್ವರಾಜ್ಯವು ಪುರುಷಾರ್ಥದಿಂದ ದೊರೆಯುತ್ತದೆ. ತಪಸ್ಸಿನಿಂದ ಮತ್ತು ತ್ಯಾಗದಿಂದ ದೊರೆಯುವದು ಪುರುಷಾರ್ಥವಿದ್ದಲ್ಲಿ ಸಿದ್ಧಿಯುಂಟು. ಪುರುಷಾರ್ಥದ ಅರ್ಥವು ಮಾಯೆ ಮೋಸವೆಂತಲ್ಲ. ಪುರುಷಾರ್ಥವು ಸತ್ಯ ಮತ್ತು ನಿಷ್ಕಪಟದ ಸಾರವಿರುತ್ತದೆ. ಪುರುಷಾರ್ಥಿಯಾದವನು ತನ್ನ ಕಾರ್ಯವು ಜನರುಚಿಯಿಂದ ಭಿನ್ನವಾಗಿರುತ್ತದೆಂದು ಬೆದರುವದಿಲ್ಲ. ಅವನಾದರೋ ಜನರುಚಿಯನ್ನು ಸುಧಾರಿಸುವನು. ಹುಟ್ಟಿಸುವನು; ಅವನು ಪ್ರಕೃತಿಯ ದಾಸನಲ್ಲ; ಸ್ವಾಮಿಯು ಇರುವನು; ಅವನು ಸಮಯದ ಪ್ರವಾಹವನ್ನು ಬದಲುಮಾಡುತ್ತಾನೆ; ನವೀನ ಯುಗದ ನಿರ್ಮಾಣವನ್ನು ಮಾಡುತ್ತಾನೆ. ಅವನು ಸ್ವಪ್ನವೆಂದು ತೋರಿದ್ದನ್ನು ಪ್ರತ್ಯಕ್ಷವಾಗಿ ಮಾಡುತ್ತಾನೆ. ಅವನು ಭೂತ, ಭವಿಷ್ಯ ಮತ್ತು ವರ್ತಮಾನಕಾಲವೆಂಬ ಮೂರೂ ನದಿಗಳ ನೀರನ್ನು ಕುಡಿಸುವನು. ಭಾರತದ "ಭಾವೀ ಸ್ವಪ್ನ" ವು ಈ ಪುರುಷಾರ್ಥದ ದಾರಿಯನ್ನು ಕಂಡುಹಿಡಿದಿರುವದು; "ಹಿಂದೀ ನವಜೀವನ" ದ ಸಂದೇಶವು ವಾಚಕರಿಗೆ ಒಂದೇ ಇರುತ್ತದೆ; ಅದು 'ಪುರುಷಾರ್ಥ' ವು: ಭಾವೀ ಸ್ವಪ್ನವನ್ನು ಪ್ರತ್ಯಕ್ಷ ಮಾಡಿಕೊಳ್ಳಬೇಕಾದರೆ, ಪುರುಷಾರ್ಥವನ್ನು ಮಾಡಿರಿ. "ಪುರುಷರಾಗಿರಿ; ಪುರುಷಾರ್ಥ ಮಾಡಿರಿ; ಏಳಿರಿ!".

## ಹರಿಭಾವು ಉಪಾಧ್ಯಾಯ

**ಯಶವಂತರಾಯರು.**

ಕರ್ನಾಟಕ ವೈಭವದ ಮುದ್ರಕರೂ ಪ್ರಕಾಶಕರೂ ಆದ ದೇ. ಭ. ಯಶವಂತರಾವ ತಿಳಗೂಳ ಇವರನ್ನು ವಿಜಾಪುರದಲ್ಲಿ ಇಂಡಿಯನ್ ಪಿನಲ್ ಕೋಡಿನ ೧೨೪ ಅ ನೇ ಪ್ರಕಾರ ದಸ್ತಗೀರು ಮಾಡಿರುವರೆಂಬ ವಾರ್ತೆಯು ಒಂದಿದೆ. ವೈ; ದೇ, ಭ; ಜಯರಾಯರಾಯರು ವಿಜಾಪುರದ ಗ್ರಾಮಾಧಿಕಾರಿ ಭಾವಹುದ್ದೆಯನ್ನು ಕೊಂಡುಕೊಂಡ ಕೂಡಲೇ ಕರ್ನಾಟಕ ವೈಭವದ ಮುದ್ರಕ ಮತ್ತು ಪ್ರಕಾಶಕರ ಭಾರವನ್ನು ಯಾರು ತೆಗೆದುಕೊಳ್ಳಬೇಕೆಂದು ವಿಚಾರದಲ್ಲಿದ್ದಾಗ ದೇ, ಭ, ತಿಳಗೂಳ ಇವರು ತಟ್ಟನೆ ಮುಂದೆ ಬಂದು ಜಯರಾಯರ ಚಿಂತೆಯನ್ನು ದೂರಮಾಡಿದರು. ಇವರು ಆಕಾರ್ಯವನ್ನು ಕೈಕೊಂಡ ಕಾಲಕ್ಕೆ ಕರ್ನಾಟಕ ವೈಭವದ ಮೇಲೆ ಸರಕಾರದ ಕೃಪಾದೃಷ್ಟಿಯು ಎಷ್ಟಿತೆಂಬದನ್ನ ಚೆನ್ನಾಗಿ ಅರಿತಿದ್ದರು; ಆ ಪತ್ರದ ಸಂಪಾದಕರಾದ ಜಯರಾಯರನ್ನ ಸರಕಾರದವರು ಆಗಲೇ ತುರಂಗಕ್ಕೆ ಅಟ್ಟಿದ್ದರು; ಮುದ್ರಕರೂ ಪ್ರಕಾಶಕರೂ ಆದ ಗುಂಡೇರಾವ ಮಣ್ಣೂರ ಇವರ ಮೇಲೆ ಪಿನಲ್ ಕೋಡಿನ ೧೨೪ ನೇ ಕಲಮಿನ ಪ್ರಕಾರ ನೋಟಿಸು ಹೊರಟ್ಟಿತ್ತು; ಇಂಥ ಸಮಯದಲ್ಲಿ ಆ ಪತ್ರದ ಜವಾಬದಾರಿಯನ್ನು ಸ್ವಲ್ಪ ಸಹ ವಿಚಾರಕ್ಕೊಳಗಾಗದೆ ಹೊತ್ತರಿಂದ ಮೇಲೆ ಯಶವಂತರಾಯರ ಧೈರ್ಯವು ಎಷ್ಟೆಂಬದನ್ನು ನಾವು ಹೇಳಬೇಕಾಗಿಲ್ಲ. ನಾಗಪೂರದಲ್ಲಿ ರಾಷ್ಟ್ರೀಯ ಸಭೆಯ ನಿರ್ಣಯವಾದ ಕೂಡಲೇ ಇವರು ತಮ್ಮ ವಕೀಲಿ ಉದ್ಯೋಗಕ್ಕೆ ಶರಣುಕೊಡಿದರು. ಇವರು ಮುಂಬಯಿ ಯುನಿವ್ಹರ್ಸಿಟಿಯ ಬೀ. ಎ ಎಲ್. ಎಲ್. ಬೀ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ವಿಜಾಪುರದಲ್ಲಿ ವಕೀಲಿಯನ್ನು ಮಾಡುತ್ತಿದ್ದರು. ಇವರ ವಕೀಲಿಯ ಉತ್ಪನ್ನವು ತಿಂಗಳಿಗೆ ೫೦೦ ರು. ಗಳ ವರೆಗೆ ಇತ್ತು. ಹೀಗಿದ್ದರೂ ಇವರು ವಕೀಲಿಯನ್ನು ಬಿಡುವಾಗ ಹಿಂದೆ ಮುಂದೆ ನೋಡಲಿಲ್ಲ ಇವರು ಹಣವನ್ನೇನೂ ಕೂಡಿ ಹಾಕಿದ್ದಿಲ್ಲ. ತೀರ ಚಿಕ್ಕವರಿರುವವರಿಂದ ಹಾಗೆ ಮಾಡುವದು ಅವರಿಗೆ ಸಾಧ್ಯವಾದರೂ ಇದ್ದಿಲ್ಲ, ಇವರ ಸಾಂಪತ್ತಿಕ ಸ್ಥಿತಿಯು ಅಷ್ಟೇನೂ ಚೆನ್ನಾಗಿ ಇದ್ದಿದ್ದಿಲ್ಲ; ಇವೆಲ್ಲ ಸಂಗತಿಯನ್ನು ನೋಡಿದರೆ, ಇವರ ಸ್ವಾರ್ಥತ್ಯಾಗವು ಯಾವ ಯೋಗ್ಯತೆಯನ್ನು ಪಡೆಯುವ ದೆಂಬದನ್ನು ವಾಚಕರೇ ಕಂಡುಹಿಡಿಯಬೇಕು. ಇವರು ಒಳ್ಳೇ ಉತ್ಸಾಹದಿಂದ ವಿಜಾಪುರ ಜಿಲ್ಹೆಯ ಸಿಂದಗಿ, ಇಂಡಿ ತಾಲೂಕಗಳಲ್ಲಿ ಕಾಂಗ್ರೆಸ ಕಾರ್ಯಕ್ರಮವನ್ನು ಜರಗಿಸುತ್ತಿದ್ದರು. ಆದ್ದರಿಂದ ಇವರ ಮೇಲೆ ಸರಕಾರದವರ ವಕ್ರದೃಷ್ಟಿಯು ಇದ್ದೇ ಇತ್ತು. ಈ ಮೊದಲೇ ಇವರ ಮೇಲೆ ಮೆ॥ ಬಾಳೇಕುಂದ್ರಿ ಸಾಹೇಬ ಇವರು ಇವರ ವತನಕ್ಕೆ ಮೂಣಾ ಜಪ್ತಿಯನ್ನು ಯಾಕೆ ಕೂಡಿಸಬಾರದೆಂದು ಒಂದು ನೋಟೀಸು ತೆಗೆದದ್ದು ಕರ್ನಾಟಕ ವೈಭವದಲ್ಲಿ ಪ್ರಸಿದ್ಧವಾಗಿತ್ತು. ಅದಕ್ಕೆ ತಿಳಗೂಳ ಇವರು ಕೊಟ್ಟ ಉತ್ತರವಾದರೂ ಅದೇ ಪತ್ರದಲ್ಲಿ ಕೆಲವು ದಿವಸಗಳ ಪೂರ್ವದಲ್ಲಿ ಪ್ರಸಿದ್ಧಿಸಲ್ಪಟ್ಟಿತ್ತು. ಆಗಲೇ ಇವರಲ್ಲಿದ್ದ ಮನೋಧೈರ್ಯವು ಸಂಪೂರ್ಣವಾಗಿ ವ್ಯಕ್ತವಾಗಿತ್ತು. ಇಂಥ ಮಹನೀಯರು ಸರಕಾರದ ಈ ದಬ್ಬಾಳಿಕೆಗೆ ಎಂದೂ ಬೆದರುವದಿಲ್ಲೆಂಬದನ್ನು ನಾವು ಉಲ್ಲೇಖಿಸಲು ಕಾರಣವಿಲ್ಲ. ಇಂಥ ಎಷ್ಟೋ ಜನರು ಈಗಲೇ ಸ್ವಾತಂತ್ರ್ಯಮಂದಿರದಲ್ಲಿ ತಪಸ್ಸಿನ ಎತ್ತರ ಕುಳಿತಿರುವರು ಯಶವಂತರಾಯರಾದರೂ ಆನಂದದಿಂದ ತುರುಂಗವನ್ನು ಸೇರಲಿಕ್ಕೆ ಸಿದ್ಧರಿರುವರೆಂದು ನಾವು ನಿಶ್ಚಯದಿಂದ ಹೇಳುತ್ತೇವೆ. ಇಂಥ ಜನರನ್ನು ಕಾರಾಗೃಹವಾಸಕ್ಕೆ ಅಟ್ಟುವದರಿಂದಲೇ ಈ ದುಷ್ಟ ರಾಜ್ಯಪದ್ಧತಿಯು ಅಳಿದು ಹೋಗುವದೆಂಬದರಲ್ಲಿ ಸಂದೇಹವಿಲ್ಲ **ವಂದೆ ಮಾತರಂ** ಸಂಪಾದಕ.

ದೇ. ಭ ಕಿರಸೂರ, ರಾಮಂಣಾನಾಯಿಕ ಸೊಲ್ಲಾಪುರಕರ ಮತ್ತು ಹಣಮಂತರಾವ ಚನಗೇರಿ ಇವರ ಮೇಲೆ ಅಸಹಕಾರದಲ್ಲಿ ಸೇರಿದ್ದರಿಂದ ಇನಾಮು ಜಮೀನುಗಳನ್ನು ಯಾಕೆ ಖಾಲಸೀಟ ಮಾಡಬಾರದೆಂಬ ಬಗ್ಗೆ ಜವಾಬ ಕೊಡಬೇಕೆಂದು ಹಿರೀಮಾರ ಸಾಹೇಬರು ನೋಟೀಸು ತೆಗೆದಿದ್ದರು

## ಶ್ರೀ. ಗಜಾನನ ಪ್ರಸನ್

ಈ ಸಾರೆಯ ಸಾರ್ವಜನಿಕ ಗಜಾನನ ಉತ್ಸವವು ಇಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಮೊದಲು ಇಲ್ಲಿ ಉತ್ಸವವು ಜರಗುವದೋ ಇಲ್ಲವೋ ಎಂಬ ಭೀತಿಯು ಇತ್ತು. ಈ ಭೀತಿಗೆ ಜನರಲ್ಲಿಯ ನಿರುತ್ಸಾಹವೇ ಬಹಳ ಅಂಶದಿಂದ ಕಾರಣವಾಗಿತ್ತು. ಆದರೂ ಈ ಉತ್ಸವವನ್ನು ಮುಗ್ಗಿಸಬಾರದೆಂಬ ಸಂಕಲ್ಪವನ್ನು ಮಾಡಿ, ಎಲ್ಲ ಭಾರವನ್ನು ಆ ವಿಘ್ನೇಶನ ಮೇಲೆಯೇ ಹಾಕಿ ಕಾರ್ಯವನ್ನು ಪ್ರಾರಂಭಿಸಿದೆವು; ವಿನಾಯಕನಾದರೂ ಎಲ್ಲ ವಿಘ್ನಗಳನ್ನು ಪರಿಹರಿಸಿ, ಉತ್ಸವವನ್ನು ಯಥಾಸಾಂಗವಾಗಿ ನೆರವೇರಿಸಿಕೊಂಡನು. ಇಷ್ಟೇ ಅಲ್ಲದೆ ಹೋದಸಾರೆಗಿಂತ ಈ ಸಾರೆಯ ಉತ್ಸಾಹವು ಹೆಚ್ಚಾಗಿತ್ತು; ಪ್ರತಿದಿವಸ ಪುರಾಣ, ವ್ಯಾಖ್ಯಾನ ಮುಂತಾದ ಕಾರ್ಯಗಳು ಜರಗುತ್ತಿದ್ದವು; ಇವಲ್ಲದೆ ಗಜಾನನ ಮೇಳೆಯೊಂದನ್ನು ಸ್ಥಾಪಿಸಿ, ಆ ಮೇಳೆಯವರು ದಿನಾಲು ಒಂದೊಂದು ಓಣಿಯೊಳಗೆ ಹೋಗಿ ಹೊಸದಾಗಿ ತಯಾರ ಮಾಡಿದ ಪದಗಳನ್ನು ಅನ್ನುತ್ತ ಊರಲ್ಲೆಲ್ಲ ಅಪೂರ್ವ ಚಳವಳಿಯನ್ನುಂಟು ಮಾಡಿಬಿಟ್ಟರು. ಈ ಬಗ್ಗೆ ಸ್ವಯಂಸೇವಕರನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸುವೆವು.

ಈ ಉತ್ಸವಕ್ಕೆ ಒಟ್ಟು ೪೬ ರೂಪಾಯಿ ೫ ಆಣೆ ೯ ಪೈ ವರ್ಗಣಿ ಹಣವು ಕೂಡಿರುವದು. ಅದರಲ್ಲಿ ಉತ್ಸವದ ಸಲುವಾಗಿ ೧೮ ರು ೧೩ ಆ ೯ ಪೈ ಖರ್ಚಾಗಿದ್ದು ಉಳಿದ ೨೭॥ ರುಪಾಯಿಗಳು ಶಿಲ್ಕು ಇದ್ದು ಆ ಹಣವನ್ನು ಯುನಿಯನ್ ಬ್ಯಾಂಕಿನಲ್ಲಿ ಜಮಾ ಮಾಡಿರುವದು. ಈ ಸಂದರ್ಭದಲ್ಲಿ ಗಜಾನನ ಉತ್ಸವದ ಬಗ್ಗೆ ವರ್ಗಣಿಯನ್ನು ಕೊಟ್ಟ ಮಹನೀಯರನ್ನು ನಾವು ಅಭಿನಂದಿಸದೆ ಇರಲಾರೆವು.

ಎಷ್ಟೋ ಮಹನೀಯರು ವರ್ಗಣಿಯನ್ನು ಕೊಡುವದಲ್ಲದೆ ತಮ್ಮ ತಮ್ಮ ಮನೆಗೆ ಮೇಳೆಯ ಸ್ವಯಂಸೇವಕರನ್ನು ಕರಿಸಿಕೊಂಡು ಅವರಿಗೆ ಉಪಹಾರವನ್ನು ಕೂಡಾ ಕೊಟ್ಟರು. ಈ ಬಗ್ಗೆ ನಾವು ಆ ಸದ್ಗೃಹಸ್ಥರಿಗೆ ಋಣಿಯಾಗಿದ್ದೇವೆ.

ಕಡೆಗೆ ಇದೇರೀತಿಯಾಗಿ ಪ್ರತಿಯೊಂದು ಸಾರ್ವಜನಿಕ ಕೆಲಸದಲ್ಲಿ ಎಲ್ಲರೂ ಸಹಾಯಮಾಡಬೇಕೆಂದು ಬೇಡಿಕೊಳ್ಳುತ್ತೇವೆ;

ಬಾಗಲಕೋಟ ⎫ ಕಾರ್ಯದರ್ಶಿ
ತಾ ೩೦-೮-೩೩ ⎭ ಸಾರ್ವಜನಿಕ ಗಜಾನನ ಉತ್ಸವ ಕಮಿಟಿ

# ದೇ. ಭ. ಕಡಪಾ ಇವರ ಸುಶ್ರಾವ್ಯ ವ್ಯಾಖ್ಯಾನವು.

(ಬಾಗಲಕೋಟ ತಾ॥ ೨೯-೮-೩೩)

ಮಾನನೀಯರೇ,

ಈ ಹೊತ್ತಿನ ದಿವಸ ತಾಜ ಥಿಯೇಟರದಲ್ಲಿ ಜೈನಮುನಿಗಳಾದ ಜಯಚ-ದಜೀ ಇವರ ಅಧ್ಯಕ್ಷತೆಯ ಕೆಳಗೆ ಸಭೆಗೂಡಿತ್ತು. ಈ ಸಭೆಯು ಗಜಾನನ ಮೇಳೆಯ ವತಿಯಿಂದಲೇ ನೆಗವೇರಿಸಿದ್ದು ಇತ್ತು. ಈ ಸಭೆಯಲ್ಲಿ ಮಾತಾಡಿದ ದೇ॥ ಕಡಪಾ ಇವರ ವ್ಯಾಖ್ಯಾನದ ಸಾರಾಂಶವು ಕೆಳಗೆ ಬರೆದಂತೆ ಅದೆ;

ಜಗತ್ತಿನಲ್ಲಿ ಭಿನ್ನ ಭಿನ್ನ ಜಾತಿಯ ತಗಳು ಇದ್ದಂತೆ ಆ ಆ ಜಾತಿಮತಗಳಿಗೆ ಯೋಗ್ಯವಾದಪ್ರಕೃತಿ ಹಾಗೂ ಸಂಸ್ಕೃತಿಗಳಾದರೂ ಭಿನ್ನವಾಗಿರುವವು; ಈ ಸಂಗತಿಯನ್ನು ಸ್ವಾಮೀ ವಿವೇಕಾನಂದರು ಚನ್ನಾಗಿ ಕಂಡುಹಿಡಿದಿದ್ದಾರೆ;-ಅವರು ನಾಲ್ವತ್ತು ವರ್ಷಗಳ ಹಿಂದೆ ಅಮೇರಿಕೆಯಲ್ಲಿದ್ದಾಗ್ಯೆ ಇದೇ ಮತವನ್ನೇ ಸ್ಪಷ್ಟವಾಗಿ ಹೇಳಿದ್ದಾರೆ; ಅಮೇರಿಕೆ, ಇಂಗ್ಲಂಡಗಳು ಪಾಶ್ಚಿಮಾತ್ಯ ರಾಷ್ಟ್ರಗಳಿದ್ದರೂ, ಅವುಗಳ ಸಂಸ್ಕೃತಿ ಹಾಗು ಪ್ರಕೃತಿಯೂ ಭಿನ್ನವಾಗಿರುವವು; ಅಮೇರಿಕವು ಸಮಾಜ ಸುಧಾರಣೆ ಹಾಗೂ ಸಮಾಜ ಸುಖವೇ ಅತ್ಯಂತ ಮಹತ್ವವಾದವುಗಳೆಂದು ತಿಳಿದರೆ, ಇಂಗ್ಲಂಡದ ರಾಜನೀತಿಯನ್ನು ಉಪಯೋಗಿಸಿ, ಪರರಾಷ್ಟ್ರಗಳನ್ನು ವಶೀಕೃತ ಮಾಡಿಬಿಡುವದರಲ್ಲಿಯೇ ತನ್ನ ಶ್ರೇಯಸ್ಸು ಉಂಟೆಂದು ತಿಳಿಯುವದು; ಯುರೋಪದ ರಾಷ್ಟ್ರಗಳಲ್ಲಿ ಧರ್ಮ ರಾಷ್ಟ್ರೀಯಭಾವನೆಗಳು ಒಂದೇ ಆಗಿದ್ದರೂ ಮುಖ್ಯವಾಗಿ ಆ ಖಂಡದಲ್ಲಿ ಎರಡು ಪಂಗಡಗಳನ್ನು ಮಾಡಬಹುದು; ಟ್ಯೂಟಾನಿಕ ಹಾಗೂ ಲ್ಯಾಟಿನ ಎಂಬ ಎರಡು ಮುಖ್ಯ ಮತಗಳಿರುವವು; ಒಂದು ಪಂಗಡವು ಶಿಸ್ತು, ಕಲಾಭಿಜ್ಞಾನ, ಹಾಗು ಆರಾಮನ್ನು ಬಯಸುತ್ತಿದ್ದರೆ, ಇನ್ನೊಂದು ಎಲ್ಲ ರಾಷ್ಟ್ರಗಳನ್ನು ತನ್ನ ವಶದಲ್ಲಿ ತರಬೇಕೆಂಬದಾಗಿ ... ಕುತೂಹಲವುಳ್ಳದ್ದಾಗಿದೆ; ಈ ಪ್ರಕಾರ ಸ್ವಾಮೀ ವಿವೇಕಾನಂದರ ಅಭಿಪ್ರಾಯವುಂಟು; ಆದ್ದರಿಂದ ನಾವಾದರೂ ಈ ತತ್ವಗಳ ಬಗ್ಗೆ ವಿಚಾರಮಾಡುವದು ಅತ್ಯಂತ ಮಹತ್ವದ್ದಾಗಿದೆ; ನಾಗಪುರ ಕಾಂಗ್ರೆಸದಲ್ಲಿ ಭಾಷಾವಾರ ೨೨ ಪ್ರಾಂತಗಳು ಮಾಡುವದರಲ್ಲಿ ಬಂದಿರುವದು; ಆದರೆ ಈಗಿನ ರಾಷ... ವರೂ ಎಷ್ಟೋ ಭೇದಗಳು ಕಂಡುಬರುವವ... ...ಲ್ಲಿಯೇ ಪ್ರಾಂತಗಳು ಯಾವಾಗಲೂ ... ಬಂಗಾಲ ಅಂಥ ... ತ್ತವೆ; ... (Impulsive) ತೀರೀತಿಯಿಂದ ... ಕಾಯಿದೇಭಂಗ ಮಾಡುವದು ಉತ್ತಮವಾದದ್ದು; ಅದಕ್ಕೆ ಖಾದಿಯೇ ಪೂರ್ವತಯಾರಿಯೆಂದು ಮಹಾತ್ಮರು ಹೇಳಿದರಷ್ಟೇ? ಮಹಾತ್ಮರು ನಮ್ಮಲ್ಲಿರುವ ಕಾಲಕ್ಕೆ ಏನೂ ಮಾತಾಡದೆ ಮಹಾತ್ಮರು ತುರಂಗಕ್ಕೆ ಹೋದಬಳಿಕ ಕಾಯಿದೆಭಂಗಕ್ಕೆ ಖಾದಿಯ ಅವಶ್ಯಕತೆಯು ಏನೂ ಇಲ್ಲ; ಖಾದಿಯಿಲ್ಲದೆ ನಾವು ಕಾಯಿದೇಭಂಗ ಮಾಡಬಹುದು; ಎಂದು ಬಂಗಾಲಿ ಅನ್ನಹತ್ತಿರುವರು. ಇದರ ಕಾರಣವು ಅವರ ಪೂರ್ವ ಸಂಸ್ಕೃತಿಯೇ. ಮಹಾರಾಷ್ಟ್ರವು ಯಾವಾಗಲೂ (Diplomatic) ಒಳಗೊಂದು ಹೊರಗೊಂದು ಈ ಪ್ರಕಾರ ಸ್ವಭಾವದ್ದಿರುವದು; ಆದ್ದರಿಂದಲೇ ಅದು ಕಾಯಿದೇಕೌನ್ಸಿಲಗಳಲ್ಲಿ ಸೇರಿ ಸರಕಾರದ ಸಂಗಡ ಬಡಿದಾಡುವದೇ ಉತ್ತಮವಾದದ್ದೆಂದು ತಿಳಿಯುವದು; ಈ ಪ್ರಕಾರ ಅದರ ಸ್ವಭಾವವಿರುವದಕ್ಕೆ ಅದರ ಪೂರ್ವಸಂಸ್ಕೃತಿಯೇ ಕಾರಣವು; ಆದರೆ ಕರ್ನಾಟಕದ ಸಂಸ್ಕೃತಿಯು ಮಾತ್ರ ಇವುಗಳಗಿಂತ ಭಿನ್ನವಾಗಿರುವದು; ಸರ್ವ ಸಾಧಾರಣವಾಗಿ ಗುಜರಾಥ, ಸಂಯುಕ್ತ ಪ್ರಾಂತ ಹಾಗೂ ಕರ್ನಾಟಕಗಳ ಸಂಸ್ಕೃತಿಯು ಒಂದೇ ಆಗಿರುವದು; ನಾವು ಯಾವಾಗಲೂ ಆಧ್ಯಾತ್ಮ ಹಾಗೂ ಸರಳತನ ಇವುಗಳ ಕಡೆಗೆ ವಿಶೇಷ ಲಕ್ಷಗೊಡುವೆವು, ಆಂಧ್ರದಲ್ಲಿ ಎಷ್ಟೋ ಸಮಾಜ ಸುಧಾರಕರಿರುತ್ತಾರೆ. ಅವರು ಶ್ರಾದ್ಧಮಾಡುವದು ಹಾಗೂ ಯಜ್ಞೋಪವೀತ ಧಾರಣಮಾಡುವದು ಜಾಣತನವಲ್ಲವೆಂದು ತಿಳಿಯುತ್ತಾರೆ. ಆದರೆ ನಮ್ಮ ಕರ್ನಾಟಕದಲ್ಲಿಯೂ ಎಷ್ಟೋ ಜನರು ಸಮಾಜ ಸುಧಾರಣೆಯನ್ನು ಮಾಡಬೇಕೆಂದು ಇಚ್ಛಿಸುತ್ತಿದ್ದರೂ, ಈ ತರಹದ ಅಡ್ಡದಾರಿಯನ್ನು – ಅರ್ಥಾತ್ ಯಜ್ಞೋಪವೀತ ಹಾಕಿಕೊಳ್ಳದೆ ಇರುವದು, ಶ್ರಾದ್ಧಮಾಡದಿರುವದು–ಹಿಡಿಯಲು ಇಚ್ಛಿಸಲಾರರು ಇದಕ್ಕೆ ನಮ್ಮ ಅವರ ಭಿನ್ನ ಸಂಸ್ಕೃತಿಯೇ ಕಾರಣವು, ಆದರೆ ನಾವು ಮೇಲೆ ಹೇಳಿದ ವಿಧಾನಗಳಿಗೆ ಅಪವಾದ ರೂಪವಾಗಿ, ಎಷ್ಟೋ ಜನರಿರಬಹುದು; ಸಾಮಾನ್ಯ ಪರಿಸ್ಥಿತಿಯನ್ನು ವಿವೇಚನೆ ಮಾಡಿದಲ್ಲಿ, ನಮಗೆ ಈ ತರಹದ ಭೇದಗಳು ಕಂಡು ಬರುವವು;

ಬಂಗಾಲವು ಜನ್ಮತಾಳಿ ೪೫ ವರ್ಷಗಳಾಗಿರುವವು, ಪಂಜಾಬದಲ್ಲಿ ರಾಷ್ಟ್ರೀಯ ಜಾಗೃತಿಯು ಪ್ರಾರಂಭವಾಗಿ ೪೦ ವರ್ಷಗಳಾದವು. ಮಹಾರಾಷ್ಟ್ರವು ೩೫ ವರ್ಷದ್ದಿರುವದು. ಆಂಧ್ರವು ಉದಯ ಹೊಂದಿ ೧೫ ವರ್ಷಗಳಾದವು. ಆದರೆ ಹಲವು ಪ್ರಾಂತಗಳು ಮಾತ್ರ

೩೦೫ ನೇ ಪುಟ ನೋಡಿರಿ.

ಕಂಬಳಿಗಳು ! ॥ ಶ್ರೀ ವಿಠ್ಠಲ ಪ್ರಸನ್ನ ॥ ಉತ್ಕೃಷ್ಟ ಕಂಬಳಿಗಳು !!

ಕೋಟುಗಳಿಗೂ ಓವ್ಹರಕೋಟುಗಳಿಗೂ ಉಪಯೋಗವಾಗುವವು.

ಸುಪ್ರಸಿದ್ಧ

# ಬಾಗಲಕೋಟೆಯ ಕಂಬಳಿಗಳು.

ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತವೆ. ಬೆಲೆ ೬ ರೂಪಾಯಿಗಳಿಂದ ೨೫ ರೂ॥ಗಳವರೆಗೆ.

ಈ ಕಂಬಳಿಗಳಿಂದ ಕೋಟಗಳನ್ನು ಹೊಲಿಸಿದರೆ ಪರದೇಶೀ ಸರ್ಜ ಅರಿವೆಗಿಂತ ಶ್ರೇಷ್ಠವಾಗಿ ತೋರುವವು! ನೋಡಲಿಕ್ಕೆ ಬಲು ಅಂದ! ಓವ್ಹರ ಕೋಟುಗಳಿಗಂತೂ ತುಂಬಾ ಒಪ್ಪುತ್ತವೆ! ಈ ದಿನ ಸ್ವದೇಶೀ ಚಳವಳಿಗೆ ಅತಿಶಯ ಅನುಕೂಲ ಯಾಕಂದರೆ ಉಣ್ಣೆಯು ಇಲ್ಲೇ ತಯಾರಾಗಿದ್ದು ಉಣ್ಣೆಯಿಂದ ಕಂಬಳಿಗಳು ಇಲ್ಲೇ ಸಿದ್ಧವಾಗಿವೆ. ಈ ಕಾರಣಕ್ಕೋಸ್ಕರವೇ ಮುಂಬಯಿ ಬೆಳಗಾಂವಿಗಳಿಂದ ಪ್ರತಿ ತಿಂಗಳಿಗೆ ಸಾವಿರಗಟ್ಟಲೇ ಕಂಬಳಿಗಳನ್ನು ವ್ಯಾಪಾರಸ್ಥರು ನಮ್ಮಿಂದ ತರಿಸಿಕೊಳ್ಳುತ್ತಾರೆ. ಪರಸ್ಥಳದಲ್ಲಿರುವ ಜನರು ಅರ್ಧ ಮುಂಗಡ ಹಣವನ್ನು ಕಳಿಸಿ ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಗಿರಾಕಿಗಳು ತಮಗೆ ಕಂಬಳಿಗಳು ಯಾವ ಕಾರಣಕ್ಕಾಗಿ ಬೇಕೆಂಬವನ್ನು ತಿಳಿಸಿದರೆ ಒಳ್ಳೇ ನಮೂನೆಯನ್ನು ಆರಿಸಿ ಕಳುಹುವೆವು. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ್.

ಶ್ಯಾಮರಾವ ಮತ್ತು ರಾಜೇರಾವ ಮಂಗಳವೇಢೇಕರ.
ಜವಳೀ ವ್ಯಾಪಾರಸ್ಥರು. ಬಾಗಲಕೋಟೆ



# ಡಾ. ಇಂಗಳೀಕರ

ಎಲ್. ಸಿ. ಎಚ್. ಸಿ.

ಇವರ

ಹದಿನೆಂಟುವರ್ಷ ಅನುಭವದಿಂದ ಉತ್ತಮವೆಂದು ನಿಶ್ಚಿತವಾದ ಔಷಧಗಳು.

| | | | |
|---|---|---|---|
| ಬಾಲಾಮೃತ ಹುಡುಗರಿಗೆ | ೦ | ೧೨ | ೦ |
| ಹೆಮ್ಯಾಟೋ ಸಾರ್ಸಾಪರಿಲಾ | ೧ | ೦ | ೦ |
| ವ್ಹೆಜಿಟೇಬಲ್ ಟಾನಿಕ ಶಾಯರಪ ಶಕ್ತಿವರ್ಧಕ ಮತ್ತು ಸ್ಮರಣಶಕ್ತಿಯಮೇಲೆ | ೧ | ೧ | ೦ |
| ವೀರ್ಯವರ್ಧಕ ಸಾಯರಪ್ | ೧ | ೦ | ೦ |
| ಗರಮಿಯ ಗುಳಿಗೆಗಳು, ಪುಡಿಯು ಮತ್ತು ಅರ್ಕವು | ೧ | ೦ | ೦ |
| ಪರಮಿಯ ಔಷಧಗಳು. | ೧ | ೦ | ೦ |
| ಹಟ್ಟಿಗಳ ಮಲಮು | ೦ | ೮ | ೦ |
| ಚಳಿಜ್ವರ ಗುಳಿಗೆಗಳು | ೦ | ೧೨ | ೦ |
| ಮುಟ್ಟಿನ ಬೇನೆಯ ಗುಳಿಗೆಗಳು | ೧ | ೦ | ೦ |
| ಸುಖಪ್ರಸೂತಿಯ ಗುಳಿಗೆಗಳು | ೧ | ೦ | ೦ |

ಡಾ. ಇಂಗಳೀಕರ, L. C. H. C.
ಬಾಗಲಕೋಟೆ.



ದಿ. ಕರ್ನಾಟಕ ಹೋಮಿಯೋ ಫಾರ್ಮಸೀ

ಬಾಗಲಕೋಟೆ.

ಕರ್ನಾಟಕದಲ್ಲಿ ಪೂರ್ಣ ವಿಶ್ವಸನೀಯವಾದ ಹೋಮಿಯೋಪಾಥಿಕ ಔಷಧಗಳನ್ನು ಪೂರೈಸುವ ಫಾರ್ಮಸಿಯು ಇದೇ ಮೊದಲನೇಯದು ಈ ಔಷಧಗಳನ್ನು ಅಮೇರಿಕೆಯಿಂದಲೇ ತರಿಸುತ್ತಿದ್ದು ಅವು ಪದವೀಧರರಾದ ಡಾಕ್ಟರರ ಪ್ರತ್ಯಕ್ಷದಲ್ಲಿ ತಯಾರಾಗುತ್ತಿರುವದರಿಂದ ಅವುಗಳಬಗ್ಗೆ ಯಾರಿಗೂ ಸಂಶಯ ತೆಗೆಯಕೊಳ್ಳಲಿಕ್ಕೆ ಮಾರ್ಗವಿಲ್ಲ ಔಷಧಗಳನ್ನು ತರಿಸಿ ಅನುಭವವನ್ನು ತೆಗೆದುಕೊಳ್ಳಬೇಕು

ವ್ಯವಸ್ಥಾಪಕ.



ಶ್ರೀ ಬನಶಂಕರೀಪ್ರಸನ್ನ.

ಸ್ವದೇಶೀ ! ಶುದ್ಧಸ್ವದೇಶೀ !! ಒಡಿವೆಗಳು !!

ಎಲ್ಲ ತರದ ಸ್ವದೇಶೀ - ಶುದ್ಧಸ್ವದೇಶೀ - ಒಡಿವೆಗಳನ್ನು ನಾವು ಸಂಗ್ರಹಿಸಿದ್ದೇವೆ. ನಮ್ಮ ದೇಶದೊಳಗಿನ ಕಲಾನಿಪುಣರು ಮುಂದಕ್ಕೆ ಬರಲು ಉತ್ತೇಜನದೊರೆಯಬೇಕೆಂಬ ಮತ್ತು ನಮ್ಮ ರಾಷ್ಟ್ರದ ಉದ್ಯೋಗವು ಬೆಳೆಯಬೇಕೆಂಬ ಉದ್ದೇಶದಿಂದಲೇ ನಾವು ಈ ಸ್ವದೇಶೀ ಸಂಗ್ರಹಾಲಯವನ್ನು ಸ್ಥಾಪಿಸಿದ್ದೇವೆ ಸ್ವದೇಶೀ ಸಕ್ಕರಿ, ಕೈನೂಲಿನಿಂದ ತಯಾರಾದ ಶುದ್ಧ ಖಾದಿಯ ಶೀರೆ, ಧೋತರ, ಖಣ ಮೊದಲಾದ ವಸ್ತ್ರಗಳೂ, ಕಡ್ಡೀಪೆಟ್ಟಿಗೆ ಸೀಸಪೇನ, ಕಾಗದ ಮತ್ತು ಬೇರೆ ತರದ ಸ್ವದೇಶೀ ಸ್ಟೇಶನರೀ ಸಾಮಾನುಗಳೂ, ಪೇಟೆಂಟ ದೇಶೀ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಭಾರತ ವಸ್ತು ಸಂಗ್ರಹಾಲಯ,

ಮತ್ತು ಮಹಾತ್ಮಾ ವಸ್ತ್ರ ಭಾಂಡಾರ.

ಬಾಗಲಕೋಟೆ.



## *Shree Mahalaxmi Stores,*

BAGALKOT.

Wholesale Dealers in papers, swadeshi slates, and Ogle's glass Wares.

ನಮ್ಮಲ್ಲಿ ಎಲ್ಲ ತರದ ಕಾಗದಗಳೂ, ಸ್ವದೇಶೀ ಪಾಟಿಗಳೂ, ವ್ಹೈಸೂರಿನ ಸಾಬಾಣಗಳೂ ಮತ್ತು ಸುಗಂಧ ದ್ರವ್ಯಗಳೂ, ಬೇರೆ ಬೇರೆ ತರದ ಬಿಳೆ ವಸ್ತ್ರಗಳೂ, ಮತ್ತು ಇತರ ಸ್ಟೇಶನರೀ ಸಾಮಾನುಗಳೂ ಮಾರಲಿಕ್ಕೆ ದೊರೆಯುತ್ತವೆ.

*Proprietors:—*
Parvatikar & Katgeri Bros,
BAGALKOT.

ಶ್ರೀ ಮಹಾಲಕ್ಷ್ಮೀ ಸ್ಟೋರ್ಸ
ಬಾಗಲಕೋಟೆ.


ಈ ಪತ್ರವನ್ನು ಬಾಗಲಕೋಟ ವೆಂಕಟಪೇಟೆಯಲ್ಲಿ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಶ್ರೀನಿವಾಸ ರಾಜೇರಾವ ಮಂಗಳವೇಡೆ ಇವರು ಮುದ್ರಿಸಿದರು ಮತ್ತು ಅಲ್ಲಿಯೇ ಶಮಾಚಾರ್ಯ ಬಿಂದಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ಸುಧಾರಣೆಗಳ ಮುಖವು.

R. N. 1587

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟೆ ಭಾದ್ರಪದ ವದ್ಯ ೧ ಶಕೆ ೧೮೪೫ ಗುರುವಾರ ತಾ ೬ ಸಪ್ಟಂಬರ ೧೯೨೩ | ಸಂಚಿಕೆ ೩೯

## ಮಹಾತ್ಮರ ನುಡಿಗಳು.

### ಅಸಹಕಾರದ ಬೀಜವು.

(ನವಜೀವನ)

ಮಹಾತ್ಮಾಜಿಯವರ ದೂರದೃಷ್ಟಿಯು ಅತ್ಯಂತ ಅದ್ಭುತವಾಗಿರುವದು. ಯಾವ ಅಹಿಂಸಾತ್ಮಕ ಅಸಹಯೋಗದಿಂದ ಈಹೊತ್ತು ಹಿಂದುಸ್ಥಾನದಲ್ಲಿ ಅತ್ಯದ್ಭುತವಾದ ಶಾಂತಿಯುಂಟಾಗಿರುವದೋ, ಯಾವ ಚಳವಳಿಯು ತನ್ನಲ್ಲಿಯ ಅಪೂರ್ವವಾದ ಗುಣಗಳಿಂದ ಇಡೀ ಜಗತ್ತನ್ನೇ ಚಕಿತಮಾಡಿಬಿಟ್ಟಿರುವದೋ ಮತ್ತು ಯಾವ ಅಸಹಯೋಗದ ಅಶ್ರುತಪೂರ್ವವಾದ ಸಾಫಲ್ಯದಿಂದ ಕೇವಲ ಹಿಂದುಸ್ಥಾನದ ಸರಕಾರವಷ್ಟೇ ಅಲ್ಲ; ಬ್ರಿಟಿಶ ಸಾಮ್ರಾಜ್ಯಸರಕಾರವೂ ಕೂಡ ಸ್ತಬ್ಧವಾಗಿ ಬಿಟ್ಟಿರುವದೋ ಅಂಥ ಈ ಚಳವಳಿಯನ್ನು ಮಹಾತ್ಮಾಜಿಯವರು ಒಂದೆರಡು ವರ್ಷಗಳ ಚಿಂತನ ಅಥವಾ ಮನನದಿಂದ ಮಾತ್ರ ಪ್ರಾರಂಭಮಾಡಿರುವದಿಲ್ಲ, ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಯಾವರೀತಿಯಿಂದ ಸಾಧಿಸಿಕೊಳ್ಳಬೇಕೆಂಬದಾಗಿ ಮಹಾತ್ಮಾಜಿಯವರು ಅನೇಕ ವರ್ಷಗಳಿಂದ ಅವಿಚ್ಛಿನ್ನವಾಗಿ ವಿಚಾರಮಾಡುತ್ತ ಬಂದಿರುವರು. ಅವರ ವಿಚಾರ ಕುಶಲತೆಯೂ ಅವರ ದೂರದೃಷ್ಟಿಯೂ ಅವರು ಎಷ್ಟೋ ವರ್ಷಗಳ ಹಿಂದೆ ಬರೆದ ಖಾಸಗೀ ಪತ್ರಗಳ ಮೇಲಿಂದಲೂ ಲೇಖಗಳ ಮೇಲಿಂದಲೂ ಉತ್ತಮರೀತಿಯಿಂದ ವ್ಯಕ್ತವಾಗುತ್ತವೆ. ಅವರು ಆಫ್ರಿಕೆಯಲ್ಲಿದ್ದಾಗ ಹಿಂದಸ್ವರಾಜ್ಯವೆಂಬ ಒಂದು ಸಂವಾದಾತ್ಮಕ ಗ್ರಂಥವನ್ನು ಬರೆದಿರುವರು. ಆ ಪುಸ್ತಕದ ಮೇಲಿಂದ ಅವರು ಎಷ್ಟು ಮೊದಲೇ ಅಸಹಯೋಗದ ಬೀಜವನ್ನು ಊರಿದ್ದರೆಂಬುವದರ ಹಾಗು ಅದರ ಬೇರುಗಳು ಎಷ್ಟು ಕೆಳಗೆ ಹೋಗಿರುವವೆಂಬದರ ಕಲ್ಪನೆಯು ವಾಚಕರಿಗೆ ಚನ್ನಾಗಿ ಬರುತ್ತದೆ. ಆ ಪುಸ್ತಕದ ಒಂದು ಸ್ಥಳದಲ್ಲಿ ಮಹಾತ್ಮಾಜಿಯವರು ಕೆಳಗಿನ ಉದ್ಗಾರಗಳನ್ನು ತೆಗೆದಿರುವರು.

"ತಾವು ನನ್ನ ಶಾಸಕರಾಗಿರುವಿರೆಂದು ನಾನು ಒಪ್ಪುವದಿಲ್ಲವೆಂದು ನಾನು ಅವರಿಗೆ [ ಇಂಗ್ಲಿಷರಿಗೆ ] ಸನ್ಮಾನಪೂರ್ವಕವಾಗಿ ಹೇಳುವೆನು. ಆದರೆ ಈ ಸಮಯದಲ್ಲಿ ತಾವು ತಮ್ಮ ಶಸ್ತ್ರಾಸ್ತ್ರಗಳ ಬಲದ ಮೇಲಿಂದ ಹಿಂದುಸ್ಥಾನದ ರಾಜ್ಯವನ್ನು ಆಳುತ್ತಿರುವಿರೋ ಇಲ್ಲವೆ ನನ್ನ ಸಹಕಾರಿತೆಯ ಮೇಲೆ ಭರತಖಂಡದ ತಮ್ಮ ರಾಜ್ಯಭಾರವು ಅವಲಂಬಿಸಿರುವದೋ ಎಂಬ ಪ್ರಶ್ನೆಯ ಮೇಲೆ ಚರ್ಚೆ ಮಾಡುವ ಅವಶ್ಯಕತೆಯು ಇಲ್ಲ. ತಾವು ನನ್ನ ರಾಷ್ಟ್ರದಲ್ಲಿ ವಾಸಮಾಡಿಕೊಂಡು ಇರುವಿರಿ ಎಂಬದರ ಸಲುವಾಗಿಯೂ ನಾನೇನು ಕಷ್ಟಪಡುವದಿಲ್ಲ. ತಾವು ಒಂದುವೇಳೆ ಶಾಸಕರಿದ್ದರೂ ಕೂಡ ಜನತೆಯ ಸೇವಕರಾಗಿ ನಡೆಯಬೇಕಾಗುತ್ತದೆ. ನಾವು ತಮ್ಮ ಇಚ್ಛೆಯ ಅನುಸಾರವಾಗಿ ಏನೂ ಮಾಡುವವರಲ್ಲ; ಆದರೆ ನೀವು ಮಾತ್ರ ನಮ್ಮ ಇಚ್ಛೆಗಳನ್ನು ಅನುಸರಿಸಿಯೇ ವರ್ತಿಸತಕ್ಕದ್ದು. ಇಷ್ಟು ದಿವಸಗಳವರೆಗೆ ನಮ್ಮ ದೇಶದಿಂದ ಸೆಳೆದುಕೊಂಡು ಹೋದ ಹಣವನ್ನು ಮಾತ್ರ ತಾವು ಒಂದು ವೇಳೆ ಇಟ್ಟುಕೊಂಡರೂ ಇಟ್ಟುಕೊಳ್ಳಬಹುದು; ಆದರೆ ಇನ್ನು ಮುಂದೆ ಮಾತ್ರ ಹೀಗೆ ಎಂದೂ ಆಗತಕ್ಕದ್ದಲ್ಲ. ಮತ್ತು ತಮ್ಮ ಮನಸ್ಸಿಗೆ ಬಂದರೆ ತಾವು ಪೋಲೀಸರಾಗಿ ಹಿಂದುಸ್ಥಾನದಲ್ಲಿ ಉಳಿಯಬಹುದು. ತಾವು ಇನ್ನು ಮುಂದೆ ಹಿಂದುಸ್ಥಾನದಿಂದ ಎಲ್ಲರೀತಿಯ ವ್ಯಾಪಾರದ ಲಾಭದ ಆಶೆಯನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು. ತಾವು ಸಭ್ಯತೆಯೆಂದು ಯಾವದಕ್ಕೆ ಕರೆಯುತ್ತಿರುವಿರೋ ಅದು ನಮಗೆ ತೀರ ವಿರುದ್ಧವಾಗಿ ತೋರುತ್ತಿರುವದು. ತಮ್ಮ ಸಂಸ್ಕೃತಿಯಕಿಂತ ನಮ್ಮ ಸಂಸ್ಕೃತಿಯು ಎಷ್ಟೋ ಪಾಲು ಉಚ್ಚತರವಾಗಿರುವದೆಂದು ನಾವು ಬಗೆಯುತ್ತೇವೆ. ತಾವು ಕೂಡ ಹೀಗೆಯೇ ತಿಳಿದುಕೊಂಡರೆ ಅದರಿಂದ ತಮಗೇ ಕಲ್ಯಾಣವಾಗುವದು. ಆದರೆ ತಾವು ಹಾಗೆ ತಿಳಿಯುತ್ತಿರದಿದ್ದರೆ, ತಮ್ಮ ಭಾಷೆಯಲ್ಲಿಯೇ ಇರುವ ಗಾದೆಯ ಮಾತಿನ ಅನುಸಾರವಾಗಿ ತಾವು ನಮ್ಮ ದೇಶದಲ್ಲಿ ನಮ್ಮ ರೀತಿನೀತಿಗಳನ್ನು ಅನುಸರಿಸಿ, ತಮ್ಮ ವರ್ತನವನ್ನು ಇಟ್ಟುಕೊಳ್ಳತಕ್ಕದ್ದು. ನಮ್ಮ ಧರ್ಮಗಳಿಗೆ ವಿರುದ್ಧವಾದಂಥ ಕೃತ್ಯಗಳನ್ನು ತಾವು ಎಂದೂ ಮಾಡಕೂಡದು; × × × × ತಾವು ನಡೆಸಿದ ಶಾಲೆಕಾಲೇಜುಗಳನ್ನೂ, ಕೋರ್ಟುಕಚೇರಿಗಳನ್ನೂ ನಾವು ನಿರುಪಯೋಗಿಗಳೆಂದು ತಿಳಿಯುತ್ತೇವೆ. ನಾವು ನಮ್ಮ ಪುರಾತನ ಕಾಲದಲ್ಲಿದ್ದಂಥ ಶಾಲೆಗಳನ್ನೂ, ಕಚೇರಿಗಳನ್ನೂ ಸ್ಥಾಪಿಸಬೇಕೆಂದು ಬಯಸುತ್ತೇವೆ. ಅಖಿಲ ಹಿಂದುಸ್ಥಾನದ ಭಾಷೆಯೆಂದರೆ, ಇಂಗ್ಲಿಷ ಭಾಷೆಯಲ್ಲ ಆದರೆ ಆ ಮಾನವು ಹಿಂದೀ ಭಾಷೆಯದು; ಆದ್ದರಿಂದ ತಾವು ಹಿಂದೀ ಭಾಷೆಯನ್ನು ಅವಶ್ಯವಾಗಿ ಕಲಿಯಬೇಕಾಗಿದೆ.

ತಾವು ರೇಲ್ವೆಯ ಸಲುವಾಗಿಯೂ ಸೈನ್ಯದ ಸಲುವಾಗಿಯೂ ವ್ಯರ್ಥವಾಗಿ ಹಣವನ್ನು ಹಾಳುಮಾಡುತ್ತಿರುವಿರಿ- ಈ ತಮ್ಮ ದುಂದುಗಾರಿಕೆಗೆ ನಮ್ಮ ಒಪ್ಪಿಗೆಯು ಸ್ವಲ್ಪ ಕೂಡ ಇರುವದಿಲ್ಲ. ತಾವು ಜೇರಾವದ ರಶಿಯಾ ದೇಶಕ್ಕೆ ಅಂಜಬಹುದು; ಆದರೆ ನಮಗೆ ಮಾತ್ರ ರಶಿಯಾ ದೇಶದ ಅಂಜಿಕೆಯು ಎಳ್ಳಷ್ಟೂ ಇಲ್ಲ. ಅವರು

ನವ್ಮ್ಮ ಮೇಲೆ ಹಲ್ಲೆಯನ್ನು ಮಾಡಲಿಕ್ಕೆ ಬಂದಾಗ ನಾವು ತಮ್ಮ ವಿಚಾರವನ್ನು ಕೇಳಿಕೊಳ್ಳಬಹುದು. ತಾವಾದರೂ ಇಲ್ಲಿಯೇ ಭರತ ಖಂಡದಲ್ಲಿ ಉಳಿದರೆ, ತಮ್ಮ ಸಹಾಯವನ್ನು ತೆಗೆದುಕೊಂಡು ಅವರ ಸಂಗಡ ಯುದ್ಧವನ್ನು ಮಾಡುವೆವು; ನಮಗೆ ಯುರೋಪ ಖಂಡ ದಲ್ಲಿ ಸಿದ್ಧವಾದ ವಸ್ತ್ರಗಳ ಅವಶ್ಯಕತೆಯು ಇಲ್ಲ; ನಮ್ಮ ದೇಶದಲ್ಲಿ ಯೇ ತಯಾರವಾಡಿದ ವಸ್ತ್ರಗಳಿಂದ ನಮ್ಮ ಕೊರತೆಗಳನ್ನು ಪೂರೈಸಿಕೊಳ್ಳುವೆವು; ಹಿಂದುಸ್ಥಾನ ಮತ್ತು ಮ್ಯಾಂಚೆಸ್ಟರ ಇವೆರಡರ ಚಿಂತೆಯಿಂದ ತಾವು ಕೊರಗಹತ್ತಿರುವದು ಏನೂ ಅವಶ್ಯವಿಲ್ಲ. ತಮ್ಮ ಮತ್ತು ನಮ್ಮ ಸ್ವಾರ್ಥವು ಒಂದೇ ಆಗದ ಹೊರತು ತಾವು ಮತ್ತು ನಾವು ಒಕ್ಕಟ್ಟಿಗೆ ಕೂಡಿ ಕೆಲಸಮಾಡುವದು ಶಕ್ಯವಿಲ್ಲ.

ನಾನು ಹೀಗೆ ತಮಗೆ ಹೇಳುತ್ತಿರುವದು ಸೊಕ್ಕಿನಿಂದಲ್ಲ; ತಮ್ಮಹತ್ತರ ಅತುಲವಾದ ಸೈನ್ಯಬಲವು ಇದ್ದದ್ದು ನನಗೆ ಗೊತ್ತುಂಟು. ತಮ್ಮ ... ಯ ಕೋಟೆಯು ದುಸ್ತರವಾಗಿರುವದು; ತಮ್ಮ ಕ್ಷೇತ್ರ ದಲ್ಲಿಯೇ ನಾವು ತಮ್ಮ ಸಂಗಡ ಯುದ್ಧಮಾಡಲು ಅಪೇಕ್ಷಿಸಿದರೆ, ನಾವು ಆ ಯುದ್ಧಕ್ಕೆ ಅಸಮರ್ಥರಿರುವೆವೆಂಬದನ್ನು ನಾವು ಬಲ್ಲೆವು; ಆದರೆ ಹಿಂದೆ ಹೇಳಿದ ಸಂಗತಿಗಳನ್ನು ತಾವು ಸಮ್ಮತಿಸದಿದ್ದರೆ, ನಾವು ತಮ್ಮ ಅಧೀನದಲ್ಲಿ ಉಳಿಯುವದಿಲ್ಲವೆಂದು ಸ್ಪಷ್ಟವಾಗಿ ನಾವು ಹೇಳಿಬಿಡುತ್ತೇವೆ. ತಮಗೆ ಬೇಕಾದರೆ ತಾವು ನಮ್ಮನ್ನು ಚೂರು ಚೂರುಮಾಡಿ ಚಲ್ಲಿಬಿಡಬಹುದು; ತಾವು ನಮ್ಮನ್ನು ತೋಫಿನಬಾಯಿಯಿಂದ ಗುಂಡುಗಳನ್ನು ಹಾರಿಸಿ, ನಾಶಮಾಡಿಬಿಡಬಹುದು; ಆದರೆ ತಾವು ನಮ್ಮ ಇಚ್ಛೆಯನ್ನು ಅನುಸರಿಸಿ ನಡೆಯದಿದ್ದರೆ ನಾವು **ತಮ್ಮ ರಾಜ್ಯದಾಡಳಿತೆಯಲ್ಲಿ ಸಹಾಯವನ್ನು ಮಾಡುವದಿಲ್ಲ; ಮತ್ತು ನಮ್ಮ ಸಹಾಯವಿಲ್ಲದ ಹೊರತು ನಮ್ಮ ಸಹಯೋಗವು ತಮಗೆ ದೊರೆಯದ ಹೊರತು ಹಿಂದುಸ್ಥಾನದಲ್ಲಿ ತಾವು ಒಂದು ಹೆಜ್ಜೆಯನ್ನು ಕೂಡ ಮುಂದೆ ಇಡಲು ಸಮರ್ಥರಾಗುವದಿಲ್ಲೆಂಬದು ನಮಗೆ ಚನ್ನಾಗಿ ಗೊತ್ತುಂಟು.**

ರಾಜ್ಯಸತ್ತೆಯ ಮದದಿಂದ ತಾವು ನಮ್ಮ ಈ ಮಾತುಗಳನ್ನು ಕೇಳಿ ತಿರಸ್ಕಾರದಿಂದ ನಕ್ಕರೂ ನಗಬಹುದು; ನಾವು ಒಮ್ಮೆಲೇ ತಮ್ಮ ಈ ರಾಜ್ಯಮದವನ್ನು ಕುಗ್ಗಿಸಲು ಸಮರ್ಥರಾಗಲಿಕ್ಕಿಲ್ಲ; ಆದರೆ ನಾವು ಏನಾದರೂ ಪೌರುಷವನ್ನು ಇನ್ನೂವರೆಗೆ ಕಾಯ್ದುಕೊಂಡಿದ್ದರೆ, ಆ ತಮ್ಮ ರಾಜ್ಯಮದವು ತಮಗೆ ಆತ್ಮಘಾತಕವಾಗಿರುವದೆಂದೂ ಆ ತಮ್ಮ ನಗೆಯು ಮೂರ್ಖತನದಿಂದ ಸಂಪೂರ್ಣವಾಗಿ ಭರಿತವಾಗಿರುವದೆಂದೂ ತಮಗೆ ಚನ್ನಾಗಿ ತೋರಿಸಿಕೊಡುವೆವು. ತಮ್ಮ ಜನಾಂಗವು ಸ್ವಭಾವದಿಂದ ಧರ್ಮಪ್ರಿಯವಾಗಿರುವದೆಂದು ನಮಗೆ ವಿಶ್ವಾಸವುಂಟು. ಈ ನಮ್ಮ ಮಾತೃಭೂಮಿಯಾದ ಹಿಂದುಸ್ಥಾನವಾದರೂ ಅನೇಕ ಧರ್ಮ ಹಾಗೂ ಸಂಪ್ರದಾಯಗಳಿಗೆ ಆಶ್ರಯವಾಗಿರುವದು. ನಮ್ಮಿಬ್ಬರ ಸಂಯೋಗವು ಯಾವರೀತಿಯಿಂದ ಆಯಿತೆಂಬದನ್ನು ವಿಚಾರಮಾಡುವ ಸಮಯವಿದಲ್ಲ; ಆದರೆ ಈ ಸಂಯೋಗದ ಉಪಯೋಗವನ್ನು ನಾವು ಯಾವರೀತಿಯಿಂದ ಮಾಡಿಕೊಳ್ಳಬೇಕೆಂಬುವದೇ ಈಗ ನಮ್ಮೆದುರಿಗೆ ಇದ್ದ ಪ್ರಶ್ನೆಯು.

ಭರತಖಂಡದ ನಿವಾಸಿಗಳಾದ ಆಂಗ್ಲಜನರೇ ತಾವು ಇಂಗ್ಲೀಷರ ರಾಷ್ಟ್ರದ ನಿಜವಾದ ಆದರ್ಶದ ಪ್ರತಿನಿಧಿಗಳಲ್ಲ. ಮತ್ತು ನಾವಾದರೂ—ಇಂಗ್ಲೀಷರ ಸಂಸ್ಕೃತಿಯಿಂದ ಕೆಟ್ಟುಹೋದ ಭಾರತೀಯರು—ನಿಜವಾದ ಭರತಖಂಡದ ಒಳ್ಳೇ ಆದರ್ಶಭೂತರಾಗಿರುವೆವೆಂದು ಹೇಳಲಾಗದು. ತಾವು ಇಲ್ಲಿಯವರೆಗೆ ಮಾಡುತ್ತ ಬಂದ ಸಂಗತಿಗಳ ನಿಜವಾದ ವೃತ್ತಾಂತವು ತಮ್ಮ ರಾಷ್ಟ್ರಕ್ಕೆ ತಿಳಿದರೆ ತಮ್ಮ ರಾಷ್ಟ್ರವು ಅವುಗಳಲ್ಲಿ ಎಷ್ಟೋ ಸಂಗತಿಗಳನ್ನು ಅವಶ್ಯವಾಗಿ ವಿರೋಧಿಸುವದು. ಹಿಂದುಸ್ಥಾನದಲ್ಲಿಯು ಬಹುಜನರಗೂಡ ತಮಗೆ ಕೆಲಸಮಾಡುವ ಅವಶ್ಯಕತೆಯು ಸ್ವಲ್ಪ ಸಹ ಬದ್ದಿಲ್ಲ; ಮತ್ತು ತಾವು ತಮ್ಮ ಸಂಸ್ಕೃತಿಯನ್ನು ಬಿಟ್ಟುಕೊಟ್ಟು ತಮ್ಮ ಧರ್ಮಗ್ರಂಥಗಳನ್ನು ಓದಿದರೆ, ನಾವು ಬೇಡುತ್ತಿರುವ ಎಲ್ಲ ಅಧಿಕಾರಗಳು ನ್ಯಾಯವಾಗಿರುವವೆಂದು ತಮಗೆ ನಿಃಸಂಶಯದಿಂದ ಕಂಡುಬರುವದು.

ತಾವು ಈ ನಿರ್ಬಂಧಗಳನ್ನು ಅಕ್ಷರಶಃ ಪೂರ್ಣಮಾಡಲಿಕ್ಕೆ ಒಪ್ಪಿದರೆ ಮಾತ್ರ ತಾವು ಭರತಖಂಡದಲ್ಲಿ ಉಳಿಯಬಹುದು; ಮತ್ತು ಈ ನಮ್ಮ ಕರಾರಗಳನ್ನು ಪಾಲಿಸಲು ಸಮ್ಮತಿಯನ್ನು ಕೊಟ್ಟು ತಾವು ಹಿಂದುಸ್ಥಾನದಲ್ಲಿ ಉಳಿದರೆ ಎಷ್ಟೋ ಸಂಗತಿಗಳನ್ನು ನಾವು ತಮ್ಮಿಂದ ಕಲಿತುಕೊಳ್ಳುವೆವು. ಮತ್ತು ತಾವಾದರೂ ನಮ್ಮಿಂದ ಹೊಸ ಹೊಸ ಸಂಗತಿಗಳನ್ನು ಅರಿತುಕೊಳ್ಳುವಿರಿ. ಈ ರೀತಿಯಾಗಿ ನಮ್ಮ ತಮ್ಮ ಸಂಯೋಗದಿಂದ ನಮಗೂ ತಮಗೂ ಕಲ್ಯಾಣವಾವದಲ್ಲದೆ, ಜಗತ್ತಿಗೂ ಕೂಡ ಲಾಭವಾಗುವದು; ಆದರೆ ಹೀಗಾಗ ಬೇಕಾದರೆ ನಮ್ಮ ತಮ್ಮ ಮಿತ್ರತ್ವದ ಆಧಾರವು "ಧರ್ಮಬಂಧನ"ದ ಮೇಲೆ ನಿಲ್ಲಬೇಕು."

ಈ ವಚನಗಳಿಂದ ಮಹಾತ್ಮಾಜಿಯವರಲ್ಲಿದ್ದ ಸ್ವಾಭಾವಿಕವಾದ ದೂರದರ್ಶಿಕತ್ವವೂ, ನಿರ್ಭಯತೆಯೂ, ಸ್ಪಷ್ಟೋಕ್ತಿಯೂ ಸಹಜವಾಗಿ ನಮಗೆ ಕಂಡುಬರುವದು. ಅವರ ಈ ಪುಸ್ತಕದಲ್ಲಿಯ ಪ್ರತಿಯೊಂದು ಅಕ್ಷರದಲ್ಲಿ ಅವರ ನಿಃಸೀಮವಾದ ದೇಶಭಕ್ತಿಯೂ, ಸಾಧುತ್ವವೂ ಒಡೆದುಕಾಣುತ್ತದೆ. ಆ ಪುಸ್ತಕದ ಕೊನೆಯಭಾಗದಲ್ಲಿ ನಿರ್ದಿಷ್ಟವಾದ ಸಿದ್ಧಾಂತಗಳ ಸಾರದಲ್ಲಿಯ ಎಷ್ಟೋಭಾಗವು ಅಸಹಯೋಗದ ಕಾರ್ಯಕ್ರಮದ ಮುಖ್ಯ ಅಂಗವಾಗಿ ಬಿಟ್ಟಿರುವದನ್ನು ನೋಡಿದ ಕೂಡಲೇ ಮಹಾತ್ಮಾಜಿಯವರ ವಿಚಾರಶಕ್ತಿಯು ಎಷ್ಟು ಗಹನವಾಗಿತ್ತೆಂಬದು ಸ್ಪಷ್ಟವಾಗುತ್ತದೆ. ಹಿಂದುಸ್ಥಾನವು ಯಾವ ಪ್ರಕಾರದಿಂದ ಸ್ವರಾಜ್ಯವನ್ನು ಪ್ರಾಪ್ತಮಾಡಿಕೊಳ್ಳಲು ಸಮರ್ಥವಾಗಬಹುದೆಂದು ಅವರು ಬಹಳ ವರ್ಷಗಳ ಹಿಂದೆ ಆಫ್ರಿಕೆಯಲ್ಲಿ ತಮ್ಮ ಕಾರ್ಯಮಯವಾದ ಜೀವನವನ್ನು ಕಳೆಯುತ್ತಿರುವಾಗ ಕೂಡ ವಿಚಾರಮಾಡುತ್ತಿದ್ದರು. ಹಾಗೆಯೇ ಆದೇಶಾಲದಲ್ಲಿ ಹಿಂದುಸ್ಥಾನವು ಯಾವ ಮಾರ್ಗವನ್ನು ಅವಲಂಬಿಸಬೇಕೆಂಬದಾಗಿಯಾದರೂ ವಿಚಾರಮಾಡುತ್ತಿದ್ದರು. ಹೀಗೆ ವರ್ಷಾನುವರ್ಷ ಚನ್ನಾಗಿ ವಿಚಾರಮಾಡಿ, ಮಾರ್ಗವನ್ನು ಹುಡುಕಿತೆಗೆದು ಅವರ ಮಾರ್ಗದರ್ಶಕರಾದರೂ ತಾವೇ ಆದರು.

**ವೈಜನಾಥಮಹೋದಯ.**

ಈ ಲೇಖದಲ್ಲಿಯ ಮಹತ್ವವಾದ ಭಾಗವು ಮಹಾತ್ಮಾಜಿಯವರದೇ ಇರುವದರಿಂದ 'ಮಹಾತ್ಮರ ನುಡಿಯು' ಎಂಬ ಶಿರೋಲೇಖದ ಕೆಳಗೆ ಇದನ್ನು ಪ್ರಕಟಿಸಿದೆ.

**ಸಂಪಾದಕ.**

## ಭಯದ ಭೂತವು.

(ನವಜೀವನ)

ಮನುಷ್ಯನು ನಿರ್ಭಯನಾಗಿರುವನು. ಆದರೆ ಹುಲಿಗಳಂತೆ ಹಿಂಸ್ರನಾಗಲಿ ಕ್ರೂರನಾಗಲಿ ಇರುವದಿಲ್ಲ. ಮನುಷ್ಯನು ಅಹಿಂಸಕನಾಗಿರುವನು; ಆದರೆ ಮೊಲಗಳಂತೆ ತಲೆಯನ್ನು ಎತ್ತುತ್ತ ಅಂಜಿ ಓಡಹತ್ತುವ ಸ್ವಭಾವವಾದರೂ ಅವನದಲ್ಲ. ನಿರ್ಭಯತೆಯೂ ಅಹಿಂಸೆಯೂ ಅವನ ಜನ್ಮಸಿದ್ಧ ಗುಣಗಳಾಗಿರುವವು. ನಿರ್ಭಯನಿಲ್ಲದವನು ಅಹಿಂಸೆಯ ಪರಾಯಣನಾಗಲಾರನು. ನಿರ್ಭಯತೆಯು ಅಹಿಂಸೆಯ ಮೊದಲನೇ ನಿಯಮವು. ಮೊದಲನೇ ಪಾವಟಿಗೆಯು ಭಯಗ್ರಸ್ತವಾದ ಹೆಣ್ಣು ಬೆಕ್ಕಿನ ಅಹಿಂಸೆಯು ಹಿಂದುಸ್ಥಾನಕ್ಕೆ ಅವಶ್ಯವಿಲ್ಲ. ಗಜೇಂದ್ರನಲ್ಲಿರುವ ಅಹಿಂಸೆಯನ್ನು ಅದು ಅಪೇಕ್ಷಿಸುತ್ತಿರುವದು ಹಿಂದುಸ್ಥಾನವು ತನ್ನ ಚಿಕ್ಕ ಚಿಕ್ಕ ಬಾಲಕರೆಲ್ಲ ಪುರುಷ ಸಿಂಹರಾದದನ್ನು ನೋಡಲು ಬಯಸುತ್ತದೆ. ಪುರುಷ ಸಿಂಹವು ನಿರ್ಭಯನಾಗಿ

ರುವನು; ಶೂರನಾಗುತ್ತಾನೆ; ಅಹಿಂಸಕನಾಗಿರುತ್ತಾನೆ, ಹಿಂಸ್ರಕ್ರೂರ ಅಥವಾ ಭಯಾನಕನಾಗಿರದುವದಿಲ್ಲ ಹಿಂಸೆಯೂ ಕ್ರೌರ್ಯವೂ ಭಯಕತೆಯೂ ಪಶುಗಳ ಧರ್ಮವಾಗಿರುವದು. ಮನುಷ್ಯನನ್ನು ನೋಡಿದರೆ ಭಯವು ಬರಕೂಡದು; ಆದರೆ ಪ್ರೇಮ ಅಭಯ ಮತ್ತು ಶಾಂತಿಗಳ ಅನುಭವವು ದೊರೆಯಲಿಕ್ಕೆಬೇಕು

ಆದರೆ ಈಗಿನ ಕಾಲದಲ್ಲಿ ಮಾನವ ಸಮಾಜವು "ಮನುಷ್ಯ" ಎಂಬ ಹೆಸರಿನ ಸಾರ್ಥಕ್ಯವನ್ನು ಸಂಪಾದಿಸಿಕೊಳ್ಳುವ ಪ್ರಯತ್ನವನ್ನು ಎಲ್ಲಿ ಮಾಡುತ್ತಿರುವದು? ಈಗಾದರೋ ಮನುಷ್ಯನು ನರಪಶುವಾಗಿ ಬಿಟ್ಟಿರುವನು. ಆದರೂ ಮನುಷ್ಯತ್ವದ ವಿಕಾಶದೃಷ್ಟಿಯಿಂದ ಮನುಷ್ಯನ ಮಾನಸಿಕ ಮತ್ತು ಆತ್ಮಿಕ ಗುಣಗಳ ಉತ್ಕರ್ಷದ ದೃಷ್ಟಿಯಿಂದ ಎಲ್ಲ ರಾಷ್ಟ್ರಗಳಲ್ಲಿ ಬಲಹೀನವಾದ ಭರತ ಖಂಡವು ಹೆಚ್ಚು ಅಭಿಮಾನವನ್ನು ತಾಳಲಿಕ್ಕೆ ಅಧಿಕಾರಿಯಾಗಿರ ವದು. ಆದರೆ ಈಗಿನ ಅದರ ನಿಕೃಷ್ಟಾವಸ್ಥೆಯನ್ನೂ ವಿಕೃತವಾದ ಅವಸ್ಥೆಯಲ್ಲಿದ್ದ ಅದರ ಎಷ್ಟೋ ಅವಯವಗಳನ್ನೂ ನೋಡಲಾಗಿ ನಮ್ಮ ಹೃದಯವು ಭಯಕಂಪಿತವಾಗುವದು. ಈಹೊತ್ತು ಅದು ದಾಸ್ಯ ಪಂಕದಲ್ಲಿ ಹೊರಳಾಡುತ್ತಿರುವದು. ಅದರ ಭಾಗ್ಯದ ಸೂತ್ರಗಳೆಲ್ಲ ಏಳುಸಮುದ್ರಗಳನ್ನು ಆಚೆಗೆ ಇರುವ ಒಂದು ಸಣ್ಣ ಮಂಡಲದ ಕೈಯಲ್ಲಿ ಇರುತ್ತವೆ. ಹಿಂದುಸ್ತಾನವು ಜೀವಂತವಾಗಿರುವದೋ ಇಲ್ಲವೆ ಮೃತವಾಗಿರುವದೋ, ಭರತ ಭೂಮಿಯು ಶೂರವೀರರ ಭಾರತವಾಗಿರುವದೋ ಅಥವಾ ಅಂಜುಬುರಕರ ಆಶ್ರಯಸ್ಥಾನವಾಗಿರುವದೋ ಎಂದು ಸಂಶಯವು ಬರುವಷ್ಟು ಹಿಂದುಸ್ಥಾನವನ್ನು ನಿರ್ವೀರ್ಯವಾಗಿ ಮಾಡಿಬಿಟ್ಟಿದ್ದಾರೆ. "ಅಹಂಬ್ರಹ್ಮಾಸ್ಮಿ ಮತ್ತು" ಸೋಹಮ್ ಎಂಬ ತತ್ವಗಳ ಆವಿಷ್ಕರಣವನ್ನು ಮಾಡಿದ ಮಹಾಪುರುಷನ ಉತ್ಪತ್ತಿಯು ಈ ಭರತಖಂಡದಲ್ಲಿ ಆಗಿರುವದೇ? ಎಂಬ ಸಂಶಯವು ಬರುವಷ್ಟು, ಹಿಂದುಸ್ತಾನದ ಎಷ್ಟೋ ಅವಯವಗಳಲ್ಲಿ ಭಯದ ಸಂಚಾರವಾಗಿ ಬಿಟ್ಟಿರುವದು. ಮನುಷ್ಯನಿಗೆ ಭಯವು ಕೇವಲ ಪಾಪದಿಂದ ಹುಟ್ಟತಕ್ಕದ್ದು. ಅವನಿಗೆ ಈಶ್ವರನ ಭಯವು ಮಾತ್ರ ಇರತಕ್ಕದ್ದು. ಆದರೆ ನಮ್ಮಲ್ಲಿ ಉತ್ಪವಿಸಿದ ಭಯದ ಕಾರಣವು ನಮ್ಮ ಹಿಂದೆ ಇರುವ ಎಷ್ಟೋ ಭೂತಗಳಾಗಿರುವವು. ರಾಜರಿಂದ ಭಯವು, ಚೋರರ ಭಯವು, ಜನಲಜ್ಜೆಯ ಅಂಜಿಕೆಯು, ಗುರುಜನರಿಂದ ಭೀತಿಯು, ಪೋಲೀಸರ ಅಂಜಿಕೆಯು, ಡಾಕ್ಟರರ ಭಯವು, ಶಸ್ತ್ರಾಸ್ತ್ರಗಳಿಂದ ಭೀತಿಯು, ಸಾಹೇಬರ ಅಂಜಿಕೆಯು, ಸ್ವಾರ್ಥವು ನಾಶವಾಗುವದೆಂಬ ಭೀತಿಯು, ಮರಣದ ಅಂಜಿಕೆಯು, ರೋಗಗಳ ಭಯವು, ಆಪ್ತೇಷ್ಟರ ಹಾಗು ಬಂಧು ಬಳಗದವರ ಭೀತಿಯು ಹೊಟ್ಟೆಯ, ಅಂಜಿಕೆಯು, ಪರರು ಮೋಸಮಾಡಬಹುದೆಂಬದಾಗಿ ಭಯವು. ಸಾರಾಂಶ ನಾನಾತರದ ಭಯಗಳಿಂದ ನಾವು ಬದುಕಿ ಇರುತ್ತಿದ್ದರೂ ಸತ್ತವರ ಅವಸ್ಥೆಯು ನಮ್ಮದಾಗಿರುವಷ್ಟು ನಮ್ಮ ಆತ್ಮವು ನಿರ್ವೀರ್ಯವಾಗಿ ಹೋಗಿ ಬಿಟ್ಟಿರುವದು, ಹೀಗಾಗದಿದ್ದರೆ, ಎಲ್ಲಿಯೋ ನೂರಾರು ಇಂಗ್ಲಿಷ ಜನರು ತಮ್ಮ "ಮಶೀನಗನ್"ಗಳಿಂದ ಬಲದ ಮೇಲಿಂದ ಇಷ್ಟು ದಿವಸಗಳ ವರೆಗೆ ನಮ್ಮ ಮೇಲೆ ರಾಜ್ಯವನ್ನಾಳಲು ಶಕ್ತರಾಗುತ್ತಿದ್ದರೇ? ಅವರು ಎಲ್ಲಕ್ಕೂ ಮೊದಲು ಅಂತರ್ಬಾಹ್ಯ ಪ್ರಯತ್ನಗಳಿಂದ ನಮಗೆ ಭಯಭೀತರಾಗಲಿಕ್ಕೆ ಕಲಿಸಿದರು. ಅವರು ನಮ್ಮ ಬೇರನ್ನು ಕಡಿದಿದ್ದರೂ ಕೂಡ ಅದನ್ನು ಸಂಪೂರ್ಣವಾಗಿ ಕಡಿಯುವ ಸಾಮರ್ಥ್ಯವು ಅದರಲ್ಲಿ ಇಲ್ಲ. ಸಾವಿರಾರು ವರ್ಷಗಳಿಂದ ಬಂದ ಶಿಕ್ಷಣವನ್ನೂ ಸಂಸ್ಕೃತಿಯನ್ನೂ ಕಿತ್ತಿ ಒಗೆಯುವದು ಮನುಷ್ಯರ ಕೈಯಿಂದ ಆಗುವ ಮಾತಲ್ಲ; ಜಗತ್ಸೃಷ್ಟಿವು ತಿರುಗಹತ್ತಿದೆ; ಈಗ ಈ ಸರಕಾರದ ಪಾಪಗಳ ಕೊಡವು ಬಹುಶಃ ತುಂಬಲಿಕ್ಕೆ ಬಂದಿರುವದು. ನಮ್ಮಲ್ಲಿ ಇನ್ನೂ ಎಷ್ಟು ಭಯವು ಉಳಿದಿರುವದೋ ಅಷ್ಟೇ ಆ ಕೊಡವು ತುಂಬಬೇಕಾಗಿದೆ;

ಮನುಷ್ಯ ಮತ್ತು ಭಯ ಇವೆರಡೂ ಶಬ್ದಗಳು ಪರಸ್ಪರ ವಿರೋಧಿಶಬ್ದಗಳಾಗಿರುವವು; ನಾರಾಯಣನ ಅಂಶರಾದ-ಅಲ್ಲ ಸ್ವತಃ ನಾರಾಯಣರಾದ—ನರರ ಸಮೀಪದಲ್ಲಿ ಭಯವು ಹೇಗೆ ಇರುವದು! ಭಯದ ಅಸ್ತಿತ್ವವು ಅಜ್ಞಾನದಲ್ಲಿ ಉಂಟು; ಎಲೈ ಅಜ್ಞಾನಿಯೇ ಸತ್ಸ್ವರೂಪವನ್ನು ಕಂಡುಹಿಡಿ; ನೋಡು! ಸೂರ್ಯನನ್ನು ನೋಡು! ಅವನು ನಿನ್ನ ಪ್ರಕಾಶದಿಂದಲೇ ಪ್ರಕಾಶಮಾನನಾಗಿರುವನು ಅಗ್ನಿಯಲ್ಲಿಯ ಉಷ್ಣತೆಯು ನಿನ್ನ ಚೈತನ್ಯದ ಪ್ರತಿಬಿಂಬವೇ ಆಗಿರುವದು; ಚಂದ್ರನು ನಿನ್ನಲ್ಲಿಯ ಶಾಂತಿಯ ಪ್ರತಿನಿಧಿಯಾಗಿರುವನು; ಎಲೈ, ನೀನು ಪ್ರಕೃತಿಯ—ಸ್ಥಾವರಜಂಗಮ-ಪದಾರ್ಥಗಳ—ರಾಜನಿರುವಿ, ರಾಜನು ದಾಸನಲ್ಲ ತಿಳಿಯಿತೆ? ಜಗತ್ತಿನಲ್ಲಿಯ ದೊಡ್ಡ ದೊಡ್ಡ ಬಾದಶಹರೆಲ್ಲ ನಿನ್ನ ಕೈಯಲ್ಲಿಯ ಆಟದಗೊಂಬೆಗಳಂತಿರುವರು—ರಾಜರು ಬಾದಶಹರ ಭಾಷೆಯಿಂದ ನೀನು ಆಡುವ ಚದರಂಗ ಆಟದಲ್ಲಿಯ ಸೈನಿಕನಂತೆ ಇರುವನು; ಈಗ ನೀನು ಅಂಜುತ್ತಿರುವೆ—ನೀನು ಅತ್ಯಂತ ಭೀಷಣವಾಗಿರುವದೆಂದು ತಿಳಿಯುತ್ತಿರುವ—ಶಕ್ತಿಗಳೆಲ್ಲ ನಿನ್ನ ಹುಂಕಾರಮಾತ್ರದಿಂದಲೇ ಲಯವನ್ನು ಹೊಂದುವವು; ನೀನು ನಿನ್ನನ್ನು ತಿಳಿದುಕೋ; ಇಡೀ ಜಗತ್ತಿನಲ್ಲ ನೀನೇ ನೀನು ಇರುವಿ; ಎಲ್ಲವೂ ನಿನ್ನದೇ ಇರುತ್ತದೆ; ಎಲ್ಲಕ್ಕೂ ನೀನೇ ಇರುತ್ತೀ, ಎಂಬದನ್ನು ನೀನು ಕಂಡುಹಿಡಿಯುವಿ;

ಇದರ ರಹಸ್ಯವನ್ನು ತಿಳಿದುಕೊಳ್ಳಬೇಕೆಂದು ನೀನು ಬಯಸುವಿಯೋ? ಮನುಷ್ಯನಲ್ಲಿಯ ಶಕ್ತಿಯನ್ನೂ ಆ ಅವನ ಶಕ್ತಿಯ ಅದ್ಭುತವಾದ ಚಮತ್ಕಾರವನ್ನು ನೋಡಬೇಕೆಂಬ ಲವಲವಿಕೆಯು ನಿನಗೆ ಉಂಟೋ? ಹಾಗಾದರೆ ಮೊದಲು ನೀನು ನಿರ್ಭಯತೆಯನ್ನು ಕಲಿಯಬೇಕು; ಭಯವು ಭೂತಗಳಿಂದ ಉಂಟಾಗುತ್ತದೆ; ಭೂತಗಳನ್ನು ಮನ್ನಿಸದವನ ಹಿಂದೆ ಭೂತಗಳು ಬೆನ್ನುಹತ್ತುವದಿಲ್ಲ; ಭಯವು ಮನುಷ್ಯಜಾತಿಗೆ ಅಪಮಾನಕಾರಕವಾಗಿದೆ; ಭಯಗ್ರಸ್ತನಾಗುವದು, ಪರರನ್ನು ಭಯಭೀತರನ್ನಾಗಿ ಮಾಡುವದು ಮನುಷ್ಯ ಧರ್ಮದಿಂದ ವಿಪರೀತವಾದ ಧರ್ಮಗಳು; ಎರಡೂ ಅಂಜುಬುರುಕತನದ ಭಿನ್ನಭಿನ್ನ ರೂಪಗಳಾಗಿರುವವು. ಎರಡನೆಯವರ ಮೇಲೆ ಭಯದ ಪ್ರಯೋಗವನ್ನು ಮಾಡುವವನು—ಅವರನ್ನು ಅಂಜಿಸುವವನು ಸ್ವತಃ ನಿರ್ಭಯನಾಗುವದು ಶಕ್ಯವಿಲ್ಲ; ಅವನ ಆತ್ಮದ ಉದ್ಧಾರವು ಎಂದೂ ಆಗುವದಿಲ್ಲ; ಭಯತೋರಿಸುವದು ಪಶುಧರ್ಮವಾಗಿದೆ; ಭಯಗ್ರಸ್ತನಾಗುವದೆಂದರೆ ಪಶುಗಳಕಿಂತಲೂ ನೀಚ ಅವಸ್ಥೆಯನ್ನು ಹೊಂದಿದಂತೆ;

ಆದರೆ ಯಾವದರಿಂದ ನಾವು ನಿಜವಾಗಿ ಭಯಗ್ರಸ್ತರಾಗತಕ್ಕದ್ದೋ ಅದರ ಭಯವು ನಮಗೆ ತಿಲಮಾತ್ರವಿಲ್ಲ; ಮತ್ತು ಯಾವ ಭಯದಿಂದ ನಮ್ಮ ಪತನವು ನಿಶ್ಚಯವಾಗಿ ಆಗುವದೋ, ಯಾವದು ನಮ್ಮ ನಾಶದ ಬೀಜವಾಗಿರುವದೋ ಅದನ್ನು ನಾವು ನಮ್ಮ ಮಿತ್ರನನ್ನಾಗಿ ಮಾಡಿಕೊಂಡಿದ್ದೇವೆ; ಇದು ಆಶ್ಚರ್ಯದ ಸಂಗತಿಯು; ಮನುಷ್ಯ ಸಮಾಜದಲ್ಲಿ ಈಗ ಪಾಪ ಮತ್ತು ಪರಮಾತ್ಮನ ಅಂಜಿಕೆಯು ಎಷ್ಟರಮಟ್ಟಿಗೆ ಇರುತ್ತದೆ! ಉಳಿದ ನೂರಾರು ಭಯಗಳು ಪಾಪ ಮತ್ತು ಪರಮಾತ್ಮನ ಭಯವನ್ನು ಹೊಡಮೋಡಿಸಿ ಬಿಟ್ಟು ಅಲ್ಲಿ ತಾವು ಬಂದು ಚಂದಮಾಡುತ್ತಿರುವವು; ಮನುಷ್ಯನೇ ಚೈತನ್ಯನೇ! ಈಗ ನಿನಗೆ ಕಳವುಮಾಡಲಿಕ್ಕೆ ಅಂಜಿಕೆಬರುವದಿಲ್ಲ: ಅತ್ಯಂತ ಸಭ್ಯ

೩೧೪ ನೇ ಪುಟ ನೋಡಿರಿ.

ಕನ್ನಡ ನವಜೀವನ.

ಭಾದ್ರಪದ ವದ್ಯ ೧ ಗುರುವಾರ ಶಕೆ ೧೮೪೪

## ಸುಧಾರಣೆಗಳ ಮೂಲವು.

(ನವಜೀವನ)

ಉಗೀ-ಡಿಗೆಯಂಥ ಸ್ಥಳಗಳಲ್ಲಿ ಎಷ್ಟೋ ಸಾರೆ ಜನರು ದಟ್ಟಣೆಯಿಲ್ಲದಿದ್ದರೂ ಹೊಡೆದಾಟ ಬಡಿದಾಟಗಳನ್ನು ಕವು ಕೆಸಂ ತೆಗೆಯುತ್ತಿರುವರು. ಪ್ರತಿಯೊಬ್ಬ ಮನುಷ್ಯನು ತನಗೆ ಅವಶ್ಯವಿದ್ದಷ್ಟು ಸ್ಥಳವನ್ನು ಆಕ್ರಮಿಸಿಕೊಂಡು ಕುಳಿತರೆ ಸೌಖ್ಯದಿಂದ ಕೂಡಲಿಕ್ಕೆ ಬರುವಂತೆ ಇರುತ್ತದೆ. ಆದರೆ ಎಷ್ಟೋ ಜನರು ಏನೂ ಕಾರಣವಿಲ್ಲದೆ ವ್ಯರ್ಥವಾಗಿ ಸ್ವಾರ್ಥಕ್ಕೆ ಬಲಿಬೀಳುತ್ತಾರೆ. ನಿಷ್ಕಾರಣದಿಂದ ಕೃತ್ರಿಮವನ್ನು ಸಾಧಿಸುವದರಿಂದ ಅವರಿಗೆ ಏನು ಲಭಿಸುತ್ತಿರುವದೆಂಬುದನ್ನು ಯಾರು ಬಲ್ಲರು? ಜಗಳಾಟವನ್ನು ಮಾಡಿ ತಮಗೆ ಎಷ್ಟು ಸ್ಥಳವನ್ನು ಆಕ್ರಮಿಸಲಿಕ್ಕೆ ಬರುವದೋ ಅಷ್ಟೆಲ್ಲವನ್ನು ತಮ್ಮ ಸ್ವಾಧೀನಮಾಡಿಕೊಂಡು ಆ ಮೇಲೆ ಸ್ವಸ್ಥವಾಗಿ ಕೂಡ್ರಬೇಕೆಂದು ಬಯಸುವಂಥ ಜನರು ಅನೇಕರಿರುತ್ತಾರೆ. ಇತರ ಸಲುವಾಗಿ ಬೇಕಾದಷ್ಟು ತ್ರಾಸವಾದರೂ ಚಿಂತೆಯಿಲ್ಲ, ತಾವು ಕೂತ ಬಾಕಿನ ಮೇಲೆ ಶಕ್ಯವಿದ್ದಷ್ಟು ಹೆಚ್ಚು ಸ್ಥಳವನ್ನು ವ್ಯಾಪಿಸಿಕೊಂಡು ಹೇಗೆ ಬೇಕಾದ ಹಾಗೆ ಕಾಲುಗಳನ್ನು ಚಾಚಿ, ಕಾಲುಗಳು ನೆಟ್ಟು ಹಿಡಿಯುವ ವರೆಗೆ ಸಡಿಲಿಸಿ ಕೂಡ್ರಬೇಕೆನ್ನುವರು! ತಮ್ಮ ಕಾಲುಗಳಿಂದ ಇತರರಿಗೆ ತ್ರಾಸವಾಗದಂತೆ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಬೇಕೆಂದೂ ಅದಕ್ಕೂ ಹೆಚ್ಚಿಗೆ ಪರರನ್ನು ಪೀಡಿಸಬಾರದೆಂದೂ ಅವರು ತಮ್ಮ ಮನಸ್ಸಿನಲ್ಲಿ ವಿಚಾರಮಾಡುವದಿಲ್ಲ. ಈ ಪ್ರಕಾರ ನಿರುಪಯೋಗಿಯಾದ ಸ್ವಾರ್ಥವನ್ನು ಬಿಟ್ಟುಕೊಟ್ಟು ಸೌಜನ್ಯದಿಂದ ಎರಡು ಕಡೆಯ ಸುಖ ಸೋಯಿಗಳ ಕಡೆಗೆ ನೋಡಬೇಕೆಂಬ ವೃತ್ತಿಯು ಹುಟ್ಟಿ ಅದರಿಂದಲೇ ಸಂತೋಷವನ್ನು ಪಡೆದುಕೊಳ್ಳುತ್ತ ಹೋದರೆ, ಯಾರಿಗೂ ಸ್ವಲ್ಪ ಕೂಡ ದುಃಖವಾಗದೆ ಎಲ್ಲರೂ ಸೌಖ್ಯದಿಂದ ಪ್ರವಾಸಮಾಡಬಹುದು.

ಪಟ್ಟಣಗಳಲ್ಲಾಗಲೀ ಹಳ್ಳಿಗಳಲ್ಲಾಗಲೀ ಜನರು ಮನೆಗಳನ್ನು ಕಟ್ಟುವಾಗ ಕೂಡ ನೆರೆಹೊರೆಯವರಲ್ಲಿ ಬಡಿದಾಟವು ತಪ್ಪಿದ್ದಲ್ಲ. ಯಾರಾದರೂ ದುಃಖಗಳ ಅಥವಾ ಅನುವು ಆಪತ್ತುಗಳ ವಿಚಾರವ ಬದಿಗಿಟ್ಟು, ಸ್ವಾರ್ಥಪರಾಯಣತೆಗೆ ಸಂಪೂರ್ಣವಾಗಿ ಅಂಟಿಕೊಂಡು ಕೂಡುವ ಪ್ರಯತ್ನವನ್ನು ನಡಿಸಿದಾಗ, ನನ್ನ ನೆರೆಯವನು ನನ್ನ ಭೂಮಿಯಲ್ಲಿ ಒಂದು ಅಂಗುಲಿಯಷ್ಟು ಸ್ಥಳವನ್ನಾದರೂ ತೆಗೆದುಕೊಳ್ಳಲೊಲ್ಲನೇಕೆ? ಮತ್ತು ಅವರಿಂದ ಅವನಿಗೆ ಬೇಕಾದಷ್ಟು ತೊಂದರೆಯಾಗುತ್ತಿರಲೊಲ್ಲದೇಕೆ? ನಾನು ನನ್ನ ಅಂಗುಲಿ ಭೂಮಿಯ ಮೇಲಿನ ಸ್ವಾರ್ಥವನ್ನಾದರೂ ಏಕೆ ಬಿಟ್ಟುಕೊಡಬೇಕು? ಛೇ, ಎಂದಿಗೂ ಆಗದು. ಅದರ ಸಲುವಾಗಿ ಹೊಡೆದಾಡಬೇಕಾಗಿದ್ದರೆ ನನ್ನ ಮನಸ್ಸು ಹೇಗೆ ಸ್ವಸ್ಥವಿರಬೇಕು? ಒಳ್ಳೇದು, ಒಂದು ವೇಳೆ ಸಮಯವನ್ನು ನೋಡಿಕೊಂಡು ನಾನು ಆ ಸ್ವಾರ್ಥವನ್ನು ಬಿಟ್ಟುಕೊಟ್ಟರೂ ಕೂಡ ಸುತ್ತಮುತ್ತಲಿನ ಜನರು ವ್ಯವಹಾರವನ್ನು ಬಲ್ಲವರು ಯಾವರೀತಿಯಿಂದ ಇರತಕ್ಕದ್ದೆಂಬದಾಗಿ ನನಗೆ ಕಲಿಸಲಿಕ್ಕೆ ಮುಂದೆ ಬಂದು, "ನನಗೇ ಏನು ನಿನಗೆ ಹುಚ್ಚು ಹಿಡಿದಿರುವದೋ ಹೇಗೆ? ದೊಡ್ಡ ದಾನಶೂರನಾದ ಕರ್ಣನಂತೆ ಪರೋಪಕಾರವನ್ನು ಮಾಡಲಿಕ್ಕೆ ಹೊರಟಿರುವನು! ಹೀಗೆ ನೀನು ಮಾಡಿದರೆ ಜನರು ನಿನಗೆ ಮೂರ್ಖನೆನ್ನುವರು. ನಿನಗೆ ನಿನ್ನ ಮಕ್ಕಳು ಮರಿಗಳ ಸಲುವಾಗಿ ಹಿಂದೆ ಏನಾದರೂ ಉಳಿಸಬೇಕೆಂಬ ಚಿಂತೆಯು ಇರುವದೋ ಇಲ್ಲವೋ? ಈಗ ಅವನಿಗೆ ಅಗದೀ ಬರಕತ್ತು ಆಗಿರುವದು. ಅವನ ಕಡೆಯಿಂದ ಏಳೆಂಟು ನೂರು ರೂಪಾಯಿಗಳನ್ನು ಸೆಳೆದುಕೊಳ್ಳಲಿಕ್ಕೆ ಇದೇ ತಕ್ಕ ಸಮಯ! ನಿನ್ನ ಅಧಿಕಾರವನ್ನು ನಡಿಸುವ ವೇಳೆಯಿದು! ಅವನು ನಿನ್ನ ಮಾತಿಗೆ ಒಪ್ಪದಿದ್ದರೆ ಯಾರದೇನು ಗಂಟು ಹೋಗುವದು? ಏಕೆ ಭಯ? ಅವನಿಗೆ ಬೇಕಾದರೆ ನಿನ್ನ ಭೂಮಿಯು ನಿನ್ನ ಹತ್ತರವೇ ಉಳಿಯುವದು!" ಈ ರೀತಿಯಾಗಿ ಉಪದೇಶವನ್ನು ಮಾಡುವರು. ಈ ಪ್ರಕಾರ ಸ್ವಾರ್ಥಧರ್ಮದ ಉಪದೇಶವನ್ನು ಮುರಿಯುವದು ಯಾರ ಕಡೆಯಿಂದ ಆಗುವದು? ಈ ಸ್ವಾರ್ಥಧರ್ಮದಿಂದ ನೆರೆಯವರ ಕೂಡ ಇರತಕ್ಕ ಧರ್ಮವು ಹಿಂದೆ ಅಟ್ಟಲ್ಪಟ್ಟು ಮರಣವನ್ನು ಕೂಡ ಹೊಂದುವದು! ಆದ್ದರಿಂದಲೇ ಈ ಯುಗಕ್ಕೆ ಕಲಿಯುಗವೆಂಬ ಹೆಸರು ಬಂದಿದೆ. ಕಲಿ ಅಂದರೆ ಜಗಳ ಮಾಡುವದು.

ಎರಡು ಕುಟುಂಬಗಳಲ್ಲಿ ಪರಸ್ಪರ ವಿವಾಹ ಸಂಬಂಧವು ನಡೆದಾಗಲೂ ಇದೇ ಅವಸ್ಥೆಯೇ. ಪರಸ್ಪರರು ಪರಕೀಯರಾಗಿದ್ದವರು ಸಂಬಂಧಿಕರಾಗುವರು. ಇಂಥ ಸ್ಥಿತಿಯಲ್ಲಿ ಪರಸ್ಪರರ ನಡವೆ ಪ್ರೇಮಧರ್ಮವು ಪೂರ್ಣವಾಗಿ ಉಕ್ಕೇರಿ ಬರಲಿಕ್ಕೆ ಅವಕಾಶವು ದೊರೆಯತಕ್ಕದ್ದು. ಆದರೇನಿದೆ! ಛೀ! ಪ್ರೇಮವೆಲ್ಲಿರುವದು! ಈ ವಿಷಯದಲ್ಲಿ ವ್ಯವಹಾರದೊಳಗೆ ರೂಢವಾಗಿರುವ ಅಥವಾ ಇಲ್ಲದಿರುವ ಎಲ್ಲ ತರದ ಜಗಳಗಳು ಉಪಸ್ಥಿತವಾಗತಕ್ಕದ್ದೇ. ಮಾನಮರ್ಯಾದೆಗಳಲ್ಲಿ ಒಂದು ಕಡ್ಡಿಯಷ್ಟು ಸಹ ಕೊಂಕಿದರೂ ಕೂಡ ಸಹನವಾಗಲಾರದು. ಸಾವುಕಾರರು ಬಂದು ಪ್ರತಿದಿನದಲ್ಲಿ ಎಷ್ಟೋ ಬೈಗಳನ್ನು ಬೈಯುತ್ತಿದ್ದರೂ ಚಿಂತೆಯಿಲ್ಲ. ಆದರೆ ಬೀಗರ ಕಡೆಯಿಂದ ಮಾನಮರ್ಯಾದೆಗಳು ಸಂಪೂರ್ಣವಾಗಿ ದೊರೆಯತಕ್ಕದ್ದು. ಅದರಲ್ಲಿ ಸ್ವಲ್ಪು ಕೂಡ ಕಡಿಮೆಯಾಗಕೂಡದು. ಸ್ವಲ್ಪ ಕಡಿಮೆಯಾದರೆ ಸಾಕು, ವರನನ್ನು ಲಗ್ನಕ್ಕೆ ಬರಗೊಡುವದಿಲ್ಲೆಂದು ಅಂಜಿಸುವದೇ ವಿವಾಹದ ಮಂಗಲಾಚರಣೆಯು; ಈರ್ಷೆಯಲ್ಲಿಯೂ 'ನಾ ನೀ' ಎಂದು ಒಡಿದಾಡುವವರಲ್ಲಿಯೂ ಆಗುವದು! ಇದೇ ಸ್ಥಿತಿಯು ಜಾತಿ ಜಾತಿಗಳ ಸಂಬಂಧದಲ್ಲಿಯಾದರೂ ಕಂಡುಬರುವದು; ಪರಸ್ಪರರಲ್ಲಿ ಅವಿಶ್ವಾಸವು ಸಂಪೂರ್ಣವಾಗಿ ತುಂಬಿ ಹೋಗಿರುವದು; ಸ್ವಾರ್ಥವನ್ನು ಸಾಧಿಸುವದರಲ್ಲಿ ಎಳ್ಳಷ್ಟೂ ಕಡಿಮೆ ಮಾಡುವಹಾಗಿಲ್ಲ; ಈ ತರದ ಸ್ಥಿತಿಯು ಎಲ್ಲಿ ನೋಡಿದಲ್ಲಿ ಹಬ್ಬಿಕೊಂಡು ಬಿಟ್ಟಿರುವದು.

ಮನೆಗಳಲ್ಲಿಯೂ ಜಾತಿ ಜಾತಿಗಳಲ್ಲಿಯೂ ಈ ರೀತಿಯು ಅವಸ್ಥೆಯು ಇದ್ದಮೇಲೆ ರಾಷ್ಟ್ರ ರಾಷ್ಟ್ರಗಳಲ್ಲಿ ಕೂಡ ಸ್ವಾರ್ಥದ ಹೊರತು ಏನು ಕಾಣಬೇಕು? ಸಮೀಪದಲ್ಲಿಯ ಒಂದು ರಾಷ್ಟ್ರವು ನಿರ್ಬಲವೂ ಅಸಹಾಯವೂ ಇದ್ದರೆ ತೀರಿತು. ಅದರ ಮೇಲೆ ಬಲಿಷ್ಠವಾದ ರಾಷ್ಟ್ರವು ಹಲ್ಲೆಯನ್ನು ಮಾಡತಕ್ಕದ್ದೇ; ಬಲವುಳ್ಳವನ ಮುಂದೆ ನಿರ್ಬಲನಾದವನು ಬಗ್ಗಿ ನಡೆಯಲಿಕ್ಕೆ ಬೇಕು. ನೆರೆಯವನು ಸಮಾನ ಯೋಗ್ಯತೆಯುಳ್ಳವನಾದರೆ, ಅವನೂ ನಡೆಯಲಾರದು; ಯಾಕೆಂದರೆ, ಸಮಾನತೆಯಾದರೂ ಯಾರಿಗೆ ಸೇರುವದು? ಪ್ರತಿಯೊಬ್ಬರಲ್ಲಿ

ಗಡಿಯಾರಗಳು.




ಚಕ್ರಗಳಲ್ಲಿಯೂ ಗಂಟೆ ತೋರಿಸುವ ನಂಬರುಗಳ ಮೇಲೆಯೂ ಕೆಂಪು ಕಲ್ಲ ಕೆತ್ತಲ್ಪಟ್ಟಿವೆ ಎಂದು ಇದನ್ನು ತರಿಸುವವರಿಗೆ ೧೦–೧೫ ಬಹುಮಾನಗಳೊಡನೆ ೫–೬ ವರುಷಗಳು ಗ್ಯಾರಂಟಿ ಸಹಿತ ೩-೪ ರೂಪಾಯಿಗಳಿಗೆ ಕೊಡುವೆವೆಂದು ಪ್ರಚುರವಾಗುವ ಪ್ರಕಟನೆಗಳನ್ನು ನೋಡಿ ಬೆರಗಾಗಿ ನಿಮ್ಮ ಹಣವನ್ನು ಕಳಕೊಳ್ಳಬೇಡಿರಿ ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ ಬಹು ಉತ್ತಮವಾದ ಮೂವ್‌ಮೆಂಟ್ಸಗಳಿಂದ ತಯಾರಿಸಿದೆ, ಗಾಳಿಯೂ ಧೂಳೂ ಸೇರದಂತೆ ಗ್ಲ್ಯಾಸ್‌ಡೋಮು ಇರುವದು. ಸರಿಯಾದ ಕಾಲವನ್ನು ತೋರಿಸುವದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವು ಸರಿಮಾಡಿಕೊಳ್ಳಬಹುದು. ನೋಟಕ್ಕೆ ಗಂಭೀರವಾಗಿಯೂ ಸುಂದರವಾಗಿಯೂ ಇರುವದು. ಇದು ಇಂಗ್ಲೀಷ ನಮೂನೆಯುಳ್ಳದ್ದು. ಈ ಗಡಿಯಾರದಲ್ಲಿ ಯಾರೇ ಆಗಲಿ ಸುಲಭವಾಗಿ ಗಂಟೆ ನೋಡಬಹುದು. ಅಷ್ಟರಿಂದ ಒಹವಾಗಿ ವರ್ಣನ ಮಾಡುವದೇತಕ್ಕೆ? ಒಂದನ್ನು ತರಿಸಿನೋಡಿರಿ ತಿಳಿಯುವದು. ೪ ವರುಷಗಳ ಗ್ಯಾರಂಟಿ ಸಹಿತ ಕ್ರಯ ೪–೮–೦

ಮ್ಯಾನೇಜರ್,— ಧೈರ್ಯಲಕ್ಷ್ಮಿ ಅಂಡ ಕೋ; ನಂಬರು ... ಮದ್ರಾಸು.

ಸರಸ್ವತೀ ವಾಚನಾಲಯ.
ಶ್ರೀ. ರವೀಂದ್ರನಾಥ ಟಾಗೋರರ ಇವರ (Waterfall) ವಾಟರಫಾಲ್‌ದ
ಕನ್ನಡ ಭಾಷಾಂತರವು.
# ಮುಕ್ತಧಾರಾ.
ನಾಟಕ.
ಭಾಷಾಂತರಕಾರ— ಜಿ. ಆರ್. ಕುಲಕರ್ಣಿ.
ಮುದ್ರಣವಾಗುತ್ತಲಿದೆ. } ಬೆಲೆ ೧ ರೂ. ಪೋಸ್ಟೇಜ ಬೇರೆ.
ವಿಳಾಸ— ಎಸ್. ಎನ್. ಹೊಸಮನಿ ಗುಳೇದಗುಡ್ಡ.

ಮದನಕಾಮೇಶ್ವರೀ ಮಾತ್ರೆ.
ಕ್ರಯ ೨ ರು ॥ ಅಂಚೆ ವೆಚ್ಚ ಬೇರೆ
ಉತ್ತಮ ಶಕ್ತಿವರ್ಧಕ ಔಷಧ. ಗುಣಬಾರದಿದ್ದರೆ ಹಣ ವಾಪಸ
ಒಮ್ಮೆ ಅನುಭವ ತೆಗೆದುಕೊಳ್ಳಿರಿ; ಕ್ಯಾಟಲಾಗು ತರಿಸಿ ನೋಡಿರಿ.
ಜಂಬುನಾಥ ಕಂಪನಿ, ಬಾಗಲಕೋಟೆ.


...ದರ ವಿರುದ್ಧವಾಗಿ ನಾವು ಪ್ರೇಮಮಾಡುತ್ತಿರುವ ಮನುಷ್ಯನ ಬಲವು ಕಡಿಮೆಯಾದಷ್ಟು ನಮ್ಮ ಸಾಮರ್ಥ್ಯವೂ ಕಡಿಮೆಯಾಗುತ್ತಿರುವದು.

ಅವಿಶ್ವಾಸದ ವಾತಾವರಣವು ಹಬ್ಬಿಕೊಂಡ ಸ್ಥಳಗಳಲ್ಲೆಲ್ಲ, ಅದನ್ನು ದೂರಮಾಡುವದಕ್ಕೆ ಪ್ರೇಮಧರ್ಮದ ಯೋಜನೆಯನ್ನು ಮಾಡುವದರಿಂದ ಅಸಾಧಾರಣವಾದ ಧೈರ್ಯವೂ ಪರಮತಸಹಿಷ್ಣುತೆಯೂ ಉತ್ಪನ್ನವಾಗದೆ ಇರುವದಿಲ್ಲ. ಪ್ರೇಮಧರ್ಮವನ್ನು ಪಾಲಿಸುತ್ತಿರುವರು ಕೆಲವು ದಿವಸಗಳವರೆಗೆ ಬಗ್ಗಿ ನಡೆದುಕೊಳ್ಳಬೇಕಾದರೂ ಕಟ್ಟಕಡೆಗೆ ಅವರಿಗೇ ವಿಜಯವು ದೊರೆಯುವದು ನಿಶ್ಚಿತವಾಗಿದೆ; ಕುಟುಂಬಗಳಲ್ಲೆಲ್ಲ ಈ ಪ್ರೇಮಧರ್ಮವನ್ನು ಸ್ಥಾಪಿಸಿ, ಆ ಧರ್ಮದ

ಬಂಧುಗಳ ಅಭಿಪ್ರಾಯವು; ಆದರೆ ಇವರ ನಿರ್ಣಯವನ್ನು ಗಯಾ ಕಾಂಗ್ರೆಸ್ಸದ ರಢಾವಿನ ಮೇಲೆಯೇ ಬಿಟ್ಟುಕೊಡತಕ್ಕದ್ದು; ಅಲ್ಲಿಯವರೆಗೆ ಬಾರ್ಡೋಲಿಯ ಕಾರ್ಯಕ್ರಮವನ್ನು ಶಾಂತಿಪೂರ್ವಕವಾಗಿ ಪೂರ್ಣಮಾಡುವದೇ ಉಚಿತವಂತ ದಾಸರವರ ಮತವು; ಬಂಗಾಲ ಪ್ರಾಂತಿಕ ಕಾಂಗ್ರೆಸ್ಸ ಕಮಿಟಿಯು ಸಲವಾಗಿ ಕೆಳಗೆ ಬರೆದ ಸೂಚನೆಗಳನ್ನು ಅವರು ... ರುವರು; ಮತ್ತು ಅವು ... ಗಿರುವವು;

ಜಾತಿಯ ಪ್ರಸಾ ... ವ್ಯಾಪಾರೀ ದೃಷ್ಟಿಯಿಂದ ಮಾಡಬಾರದು; ಪ್ರತಿಯೊಂದ ... ಒದವರು ... ತಮ್ಮ ಬಾದಿಯನ್ನು ತಾವೇ ತಯಾರುಮಾಡ ... ಪ್ರೋತ್ಸಾಹ ಉತ್ತೇಜ

ಹಾಗೆ ಮಾತ್ರಿಯಾಗುವದು ೪೮ ಪಾಟಗಳುಳ್ಳ ಒಂದು ಪೆಟ್ಟಿಗೆಗೆ ರೂಪಾಯಿಗಳು ಮಾತ್ರ ಏಜಂಟರು ಬೇಕಾಗಿದೆ

ವ್ಹಿ ಜೀ ಪರವತಿಕರ
ಕೋಲ ಏಜಂಟ ಡಿಸ್ಟ್ರಿಕ್ಟ ವಿಜಾಪೂರ
ಬಾಗಲಕೋಟ.

---

# ಶುದ್ಧ ಸ್ವದೇಶೀ!! ಶುದ್ಧ ಸ್ವದೇಶೀ!!

ಶುದ್ಧ ಸ್ವದೇಶೀ ವಸ್ತುಗಳನ್ನು ಸುಲಭವಾದ ಕ್ರಯಕ್ಕೆ ತೆಗೆದುಕೊಳ್ಳುವ ಅಪೇಕ್ಷೆಯು ಇದ್ದಲ್ಲಿ ನಮ್ಮಲ್ಲಿಯೇ ತಗದು ಕೊಳ್ಳಿರಿ ಖರೇ ಸ್ವದೇಶೀ ಎಂಬ ಹೆಸರಿಟ್ಟುಕೊಂಡ ಅನೇಕ ಕಂಪನಿಗಳಲ್ಲಿ ಹೋಗಿ ಮೋಸ ಹೋಗಬೇಡಿರಿ. ನಮ್ಮಲ್ಲಿ ಎಲ್ಲ ತರದ ಸ್ಟೇಶನರೀ ಸಾಮಾನುಗಳೂ ಕಾಜಿನ ಒಡವೆಗಳೂ, ಸುದರ್ಶನ ಚಕ್ರದಿಂದ ತೆಗದ ನೂಲಿನ ಬಟ್ಟೆಗಳೂ, ಎಲ್ಲ ದೇಶ ಭಕ್ತರ ಭಾವಪಟಗಳೂ ದೊರೆಯುತ್ತವ ಇವಲ್ಲದೆ ಕನ್ನಡ, ಮರಾಠಿ, ಇಂಗ್ಲೀಷ, ಭಾಷೆಗಳಲ್ಲಿಯ ದೈನಿಕ ಮತ್ತು ವಾರಪತ್ರಗಳುಮಾರಲಿಕ್ಕೆ ಸಿಗುತ್ತವೆ

ಮಾಲಕ, } ಲೋಕಮಾನ್ಯ ಸ್ಟೋಅರ್ಸ.
ಶ್ರೀನಿವಾಸರಾವ ನೀರಲಕೇರಿ } ಬಾಗಲಕೋಟ

---

ಇಂತಹದ್ದಿದ್ದು; ಅಂದರೆ ನಮ್ಮ ವಿದ್ಯಾರ್ಥಿಗಳಲ್ಲ ಧಾರ್ಮಿಕ ಭಾವನೆ ರಾಷ್ಟ್ರೀಯ ಭಾವನೆ, ಹಾಗು ಸದ್ವಿದ್ಯೆಯ ಲಾಭವು ದೊರೆಯುವದು; ಆದ್ದರಿಂದ ಎಲ್ಲ ಕರ್ನಾಟಕಸ್ಥರಿಗ ನನ್ನ ಪ್ರಾರ್ಥನೆಯೇನಂದರೆ, ಎಲ್ಲರೂ ನಾನು ಹೇಳಿದಂತ, ...ಯಲ್ಲಿಯೇ ... ಸಂಸ್ಥೆಗಳನ್ನು ತೆಗೆದು, ತದ್ವಾರಾ ರಾಷ್ಟ್ರೀಯ ಜಾಗೃತೆ, ಇಹಲೋಕದಲ್ಲಿ ಸುಖ, ಆತ್ಮಶುದ್ಧಿ ಹಾಗು ಅಮುತ್ರದಲ್ಲಿಯಾದರೂ ಉತ್ತಮ ಸುಖವನ್ನು ಹೊಂದಬೇಕು;

ಈ ಪ್ರಕಾರ ಭಾಷಣವಾದ ಮೇಲೆ, ಅಧ್ಯಕ್ಷಸಮಾರೋಪ ಭಾಷಣವಾದ ಬಳಿಕ ಸಭೆಯು ವಿಸರ್ಜಿಸಿತು;

ಬಾಗಲಕೋಟ } ರಾಮಭಕ್ತ.
ತಾ ೬ ೯ ೨೨ }

---

## ROYAL DRINK.

**Sovereign Tea! Sovereign Tea!!**

ಲಿಪ್ಟನ್ ಚಹಾಗಿಂತ ಈ ಸಾವ್ಹರಿನ ಚಹವು ಹೆಚ್ಚು ರುಚಿಯಾಗಿರುತ್ತದೆ; ಒಮ್ಮೆಯಾದರೂ ಅನುಭವತೆಗದು ಕೊಳ್ಳಿರಿ; ಅಂದರೆ ನಿಮಗೆ ಬೇರೆ ಚಹವು ಬೇಡವೆಂದೇ ಖಾತ್ರಿಯಾಗುವದು,

ಬೆಲೆ—೧ ಪೌಂಡಿಗೆ ೧-೪-೦ ರುಪಾಯಿ ೪೮ ಡಬ್ಬಿಯ ಪೂರ್ಣ ಪೆಟ್ಟಿಗೆಯನ್ನು ಕೊಂಡರೆ ... ಕಮೀಶನ್.

**ಮೋಹನಲಾಲ ಹರಿಜೀವನದಾಸ ಮೇಹತಾ.**

ಪೋಲೀಸ ಚಾವಡೀ ಎದುರಿಗೆ **ಬಾಗಲಕೋಟ**

---

ಯಾದರೂ ದುಃಖಗಳ ಅಥವಾ ಅನುವು ಆಪತ್ತುಗಳ ನಿವಾರಣ ಬದಿಗಿಟ್ಟು, ಸ್ವಾರ್ಥಪರಾಯಣತೆಗೆ ಸಂಪೂರ್ಣವಾಗಿ ಅಂಟಿಕೊಂಡು ಕೊಡುವ ಪ್ರಯತ್ನವನ್ನು ನಡಿಸಿದಾಗ, ನನ್ನ ನೆರೆಯವನು ನನ್ನ ಭೂಮಿಯಲ್ಲಿ ಒಂದು ಅಂಗುಲಿಯಷ್ಟು ಸ್ಥಳವನ್ನಾದರೂ ತೆಗೆದುಕೊಳ್ಳಲೇಕೆ? ಮತ್ತು ಅದರಿಂದ ಅವನಿಗೆ ಬೇಕಾದಷ್ಟು ...ಯಾಗುತ್ತಿರಬೇಕೋ? ನಾನು ನನ್ನ ಅಂಗುಲಿ ಭೂಮಿಯ ಮೇಲಿನ ಸ್ವಾರ್ಥವನ್ನಾದರೂ ಏಕೆ ಬಿಟ್ಟುಕೊಡಬೇಕು? ಛೀ, ಎಂದಿಗೂ ಆಗದು. ಅದರ ಸಲುವಾಗಿ ಹೊಡೆದಾಡಿದ್ದರೆ ನನ್ನ ಮನಸ್ಸು ಹೇಗೆ ಸ್ವಸ್ಥವಿರಬೇಕು? ಒಳ್ಳೇದು, ಒಂದೇ ತರದ ಸ್ಥಿತಿಯು ಎಲ್ಲಿ ನೋಡಿದಲ್ಲಿ ಹಬ್ಬಿಕೊಂಡು ಬಿಟ್ಟಿರವದು.

ಮನೆಗಳಲ್ಲಿಯೂ ಜಾತಿ ಜಾತಿಗಳಲ್ಲಿಯೂ ಈ ರೀತಿಯ ಅವಸ್ಥೆಯು ಇದ್ದಮೇಲೆ ರಾಷ್ಟ್ರ ರಾಷ್ಟ್ರಗಳಲ್ಲಿ ಕೂಡ ಸ್ವಾರ್ಥದ ಹೊರತು ಏನು ಕಾಣಿಸಬೇಕು? ಸಮೀಪದಲ್ಲಿಯ ಒಂದು ರಾಷ್ಟ್ರವು ನಿರ್ಬಲವೂ ಅಸಹಾಯವೂ ಇದ್ದರೆ ತೀರಿತು. ಅದರ ಮೇಲೆ ಬಲಿಷ್ಠವಾದ ರಾಷ್ಟ್ರವು ಹಲ್ಲೆಯನ್ನು ಮಾಡತಕ್ಕದ್ದೇ; ಬಲವುಳ್ಳವನ ಮುಂದೆ ನಿರ್ಬಲನಾದವನು ಒಗ್ಗಿನಡೆಯಲಿಕ್ಕೆ ಬೇಕು; ನೆರೆಯವನು ಸಮಾನ ಯೋಗ್ಯತೆಯುಳ್ಳವನಿದ್ದರೂ, ಅದೂ ನಡೆಯಲಾರದು; ಯಾಕಂದರೆ, ಸಮಾನತೆಯಾದರೂ ಯಾರಿಗೆ ಸೇರುವದು? ಪ್ರತಿಯೊಬ್ಬರಲ್ಲಿ

# SONDUR & JORAPUR

## Ginning Factory Bagalkot.

Dealers in second-hrnd Oil-engines, Oil-engine repairers, Grinding stones suppliers and General Contractors

ಬೇರೆಬೇರೆ ತರದ ಸೆಕಂಡಹ್ಯಾಂಡ ಆಯಿಲ ಎಂಜಿನಗಳನ್ನು ನಾವು ದೊರಕಿಸಿ ಕೊಡುತ್ತೇವೆ. ಮತ್ತು ಆಯಿಲ ಇಂಜನಗಳನ್ನು ಸೊಯೀದರದಿಂದ ದುರಸ್ತ ಮಾಡಿ ಕೊಡತ್ತೇವೆ. ಇದಲ್ಲದೇ ಹಿಟ್ಟಿನ ಗಿರಣಿಗಳಿಗೆ ಬೇಕಾಗುವ ಬೀಸುವ ಕಲ್ಲುಗಳನ್ನೂ ನಾವು **ಪೂರೈಸಿ** ಕೊಡುವೆವು,

**ಸಂಡೂರ ಮತ್ತು ಜೋರಾಪೂರ**

ಜಿನ್ನಿಂಗ ಫ್ಯಾಕ್ಟರಿ ಬಾಗಲಕೋಟೆ.


# ಮಾರ್ಕಾಪುರ ಸ್ವದೇಶೀ ಪಾಟಿಗಳೂ ಟಾಕಿನ ತುದಿಗಳೂ

ನಾವು ಕೃಷ್ಣಾಸ್ಲೇಟ ವರ್ಕ್ಸ ಮಾರ್ಕಾಪುರ ಇವರಿಂದ ಇಡೀ ವಿಜಾಪೂರ ಜಿಲ್ಹೆಗೆ ಮುಖ್ಯಏಜಂಟರಾಗಿ ನಿಯಮಿಸಲ್ಪಟ್ಟಿದ್ದೇವೆ

೨೧೫ ನೇ ಪುಟ ನೋಡಿರಿ

ಲೆ ಈ ಪ್ರಕಾರವಾಗಿ ಆ ಸಂಸ್ಥೆಗಳನ್ನು ಸ್ಥಾಪಿಸಬೇಕು. ಇವುಗಳ ಮಹತ್ವವು ಅತ್ಯಂತವಾಗಿದೆ. ಇದೇ Decentralized organisation. ಗೋಗಳು ನಮ್ಮಲ್ಲಿರುವದರಿಂದ ನಮ್ಮ ಸರ್ವಪಾಪಗಳು ನಾಶವಾಗುವವು. ನಮಗೆ ದಿನಾಲು ಬೇಕಾಗುವಂಥ ಎಷ್ಟೋ ಪದಾರ್ಥಗಳಾದರೂ ನಮಗೆ ಅದರಿಂದ ಸಿಗುವವು. ಅದರಂತೆ, ನಾವು ನಮ್ಮ ಮನೆಯಲ್ಲಿ ಪಾಕಶಾಲೆಯನ್ನು ಸ್ಥಾಪಿಸಬೇಕು. ಇದೇನು ನಮ್ಮ ಜನರಿಗೆ ಆಶ್ಚರ್ಯದ ಸಂಗತಿಯಲ್ಲ. ಆದರೆ ಇಂಗ್ಲಂಡದಲ್ಲಿ ಈ ಪ್ರಕಾರ ಹೇಳಿದರೆ, ಅವರು ಅತ್ಯಂತ ಆಶ್ಚರ್ಯಪಡುವರು. ಅವರು ಖಾನಾವಳಿಯಿಂದ ತಾಟು ತರಿಸಿ ಭೋಜನ ಮಾಡುವರು. ಆದರೆ ಆ ಅನ್ನವು ನಮ್ಮ ಆರೋಗ್ಯಕ್ಕೆ ಎಷ್ಟು ರೀತಿಯಿಂದಲೂ ಪಥ್ಯವಾಗಲಾರದು. ನಮ್ಮ ತಾಯಿಯು ಅಥವಾ ಹೆಂಡತಿಯು ಪ್ರೀತಿಯಿಂದ ಕೊಟ್ಟಂಥ ಜೋಳ ಬಕ್ಕರಿಯಾದರೂ ನಮಗೆ ಆರೋಗ್ಯಕರವಾದದ್ದಿರುವವು; ಇಂಥ ಖಾನಾವಳಿ, ಉಪಹಾರಶಾಂತಿಗೃಹಗಳನ್ನು ಕೂಡಲೇ ಮುರಿಯಬೇಕು; ಈ ಊರಲ್ಲಿ ೫೦೦೦ ಮನೆಗಳಿದ್ದರೂ, ನೂರಾರು ವಿದ್ಯಾರ್ಥಿಗಳನ್ನು ಭೋಜಿಸುವದು ಆಗದೋ? ಇದೆಂಥ ನಾಚಿಗೇಡಿತನದ ಮಾತು? ಇರಲಿ ಇದರಂತೆಯೇ ಪ್ರತಿಯೊಂದು ಮನೆಯಲ್ಲಿ ಚರಖೆಯು ಇರಬೇಕು; ಇದರ ಮಹತ್ವವಾದರೂ ಅತ್ಯಂತವಾಗಿದೆ; ಯಾವ ಪ್ರಕಾರ ಅನ್ನಪೂರ್ಣಾದೇವಿಯು ಅವಶ್ಯಕ ಇರುವದೋ ಅದರಂತೆಯೇ ವಸ್ತ್ರಪೂರ್ಣಾದೇವಿಯಾದರೂ ಎಲ್ಲಾ ಗೂ ಬೇಕಾದವಳಾಗಿರುತ್ತಾಳೆ; ಆದ್ದರಿಂದ ಎಲ್ಲರೂ ರಾಟಿಯಿಂದ ನೂಲು ತೆಗೆಯಬೇಕು; ಅದರಂತೆಯೇ ಸರ್ವಸಾಧಾರಣ ಅಪಾಯಗಳಿಗೆ ಔಷಧಗಳು, ಪ್ರತಿಯೊಂದು ಮನೆಯ ಯಜಮಾನನಿಗ ಗೊ

ಭಾದ್ರ

ಬಗೆ...
...ಲ್ಲದಿದ್ದರೂ ಹೆ
...ರುವವು. ಪ್ರ
...ಳವನ್ನು ಆಕ್ರಮ
...ರುವಂತೆ ಇರು
...ವೆ ವ್ಯರ್ಥವಾಗಿ
...ತ್ರುತ್ವವನ್ನು ಸ
...ವನ್ನು ಯಾರು
...ಸ್ಥಳವನ್ನು
...ಸ್ವಾಧೀನಪಡಿ
...ಬಹುದಾದನಂ
...ಕಾದಷ್ಟು ತ್ರಾ
...ಲೆ ಶಕ್ತಿವಿಷ್ಟು
...ಕಾವ ಹಾಗೆ ಕ
...ುವ ವರೆಗೆ ವಾ
...ವರಿಗೆ ತ್ರಾ
...ಕೆಂದೂ ಅದಕ
...ತನ್ನ ಮನಸ್ಸಿ
...ಗಿಯಾದ ನ
...ರುವರ ಸುಖ
...ಟ್ಟು ಆದರಿಂದ
...ರಿಗೂ ಸ್ವಲ್ಪ
...ಸವಾಡಬ
... ಪಟ್ಟಣಗಳ
...ವಾಗ ಕೂಡ


ಬಾಗಲಕೋಟೆ — ಕನ್ನಡ ನವಜೀವನ ಭಾದ್ರಪದವದ್ಯ ೧ ಶಕೆ ೧೮೪೪ ೩೫

ಇಮಿಟೇಶನ್ ವಜ್ರದ ಉಂಗುರುಗಳು,

ಈ ಉಂಗುರಗಳು ವಿಲಾಯತಿಯಲ್ಲಿ ತಯಾರಿಸಿದ್ದು; ಅತ್ಯುತ್ತಮವಾದ ವಜ್ರದ ಕಲ್ಲುಗಳನ್ನು ಇಟ್ಟು ಸೀಮೆ ಬಂಗಾರದಿಂದ ತಯಾರಿಸಿ ಮೇಲುಗಡೆ ಅಪರಂಜಿ ಬಂಗಾರದ ಗಿಲೀಟುಮಾಡಿದೆ. ನೋಡಲು ಬಹು ಲಕ್ಷಣವಾಗಿ ಕಾಣುವದು. ಇದು ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು.

ಕ್ರಯ ೧ಕ್ಕೆ ರೂ. ೨-೦-೦. ಕ್ರಯ ೩ಕ್ಕೆ ರೂ. ೫-೮-೦.

ವಿಳಾಸ ವಿ. ಎ. ಎಸ್. ಪಾಣಿ ಕಂಪನಿ ಸಾಹುಕಾರಪೇಟ ಮದ್ರಾಸ

ಈ ತಿಂಗಳ ಕೊನೇ ವರೆಗೂ ಅರ್ಧ ಕ್ರಯ.

ಇದರ ಕ್ರಯ ೨-೦-೦. ಈಗಿನ ಕ್ರಯ ೧-೦-೦.

ಆಶ್ಚರ್ಯ. ಪಾಕೆಟ್ ಸಿನಾಸ್‌ಕೋಪ್ ಯಂತ್ರ.

ಈ ಸಿನಾಸ ಕೋಪ ಯಂತ್ರಗಳು ಜರ್ಮನ್ ದೇಶದಿಂದ ತಯಾರಿಸಿ ಈಗಲೆ ನಮಗೆ ಹೊಸವಾಗಿ ಬಂದಿರುವವು. ಈ ಯಂತ್ರ ಅಮೇರಿಕನ್ ಬಯಾಸಕೋಪ ನಾಟಕಶಾಲೆಗಳಲ್ಲಿ ಅತಿ ಚಮತ್ಕಾರವಾಗಿ ಆಟ ಮಾಡುತ್ತಿರುವ ವಿಜರೇಟ್ ರೋಸ್, ಪರ್ಲ್‌ವೈಟ್‌ಪ್ರಿಡ್ರೊ, ಚೆಸ್ಲಿನ್‌ಚಾರ್ಲಿ ಚಾಪ್ಲಿನ್, ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫಗಳು ಈ ಯಂತ್ರದಲ್ಲಿ ಪ್ರಾಣವಿರುವವರ ಹಾಗೆಯೇ ಬಯಾಸಕೋಪದಲ್ಲಿ ಕಾಣುವವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವವರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ ೫೦ ಫೋಟೋ ಫಿಲಂಗಳು ಸಹ ಯಂತ್ರ

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಏಜಂಟರು) ಅತ್ಯುತ್ತಮ (ಬೇಕು

ಮಸಿ ಗುಳಿಗೆಗಳು ಮತ್ತು ಚೀಟಗಳು.

| | | | |
|---|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೮—೦ | } | ಟ. ಖ. |
| ೧೦೦ ಚೀಟಗಳಿಗೆ | ೦—೧೪—೦ | | |
| ೪೦ ಔಂಸ ಮಸಿ ಪುಡಿಕೆಗೆ | ೦—೪—೦ | | ಬೇರೆ. |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸಃ— ಕರ್ನಾಟಕ ಇಂಕ ಕಂಪನಿ, ಬಾಗಲಕೋಟ.

ಸ್ವಾತಂತ್ರ್ಯವೇ ಸ್ವರಾಜ್ಯ.

ಪತ್ರದ್ವಾರದಿಂದ, ಉತ್ತಮವಾದ ಸ್ವದೇಶೀ ಸಾಬಾಣವನು ಮಾಡುವದಕ್ಕೆ ಕಲಿಸುವೆವು ಫೀ. ರೂ. ೫. ಉದ್ಯೋಗ ಮಾಡಿರಿ. ಅನೇಕರು ಕಲಿತು ಸ್ವತಂತ್ರ ಧಂದೆಯನ್ನು ಮಾಡುತ್ತಿರುವರು

ಕಲಾಭುವನ—ರಾಷ್ಟ್ರೀಯ ಶಾಲಾ ಧಾರವಾಡ.

ಇಂಡಿಯಾ ಪ್ರಾವ್ಹಿಡಂಟ ಕಂ. ಲಿ. ಕಲಕತ್ತಾ.

ಮಧ್ಯಮ ಸ್ಥಿತಿಯ ಕುಟುಂಬದಾರರಿಗೆ ಈ ಕಠಿಣ ಕಾಲದಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಬಿಗಿಯಾಗಿರುವದು. ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನ್ನು ಕೊಡುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರೆಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ.

Y. L. PARVATIKER


ಯಾದರೂ ದುಃಖಗಳ ಅಥವಾ ಅನುವು ಆಪತ್ತುಗಳ ವಿಚಾರವ ಬದಿಗಿಟ್ಟು, ಸ್ವಾರ್ಥಪರಾಯಣತೆಗೆ ಸಂಪೂರ್ಣವಾಗಿ ಅಂಟಿಕೊಂಡು ಕೂಡುವ ಪ್ರಯತ್ನವನ್ನು ನಡಿಸಿದಾಗ, ನನ್ನ ನೆರೆಯವನು ನನ್ನ ಭೂಮಿಯಲ್ಲಿ ಒಂದು ಅಂಗುಲಿಯಷ್ಟು ಸ್ಥಳವನ್ನಾದರೂ ತೆಗೆದುಕೊಳ್ಳಬೇಕೆ? ಮತ್ತು ಅವರಿಂದ ಅವನಿಗೆ ಬೇಕಾದಷ್ಟು ...ಯಿ ಯಾಗುತ್ತಿರಬೇಕೇಕೆ? ನಾನು ನನ್ನ ಅಂಗುಲಿ ...ಮಿಯ ಮೇಲಿನ ಸ್ವಾರ್ಥವನ್ನಾದರೂ ಏಕೆ ಬಿಟ್ಟುಕೊಡಬೇಕು? ಛೇ, ಎಂದಿಗೂ ಆಗದು. ಅದರ ಸಲುವಾಗಿ ಹೊಡೆದಾಡಬೇಕಾಗಿದ್ದರೆ ನನ್ನ ಮನಸ್ಸು ಹೇಗೆ ಸ್ವಸ್ಥವಿರಬೇಕು? ಒಳ್ಳೇದು, ಒಂದು ತರದ ಸ್ಥಿತಿಯು ಎಲ್ಲಿ ನೋಡಿದಲ್ಲಿ ಹಬ್ಬಿಕೊಂಡು ಬಿಟ್ಟಿರುವದು.

ಮನೆಗಳಲ್ಲಿಯೂ ಜಾತಿ ಜಾತಿಗಳಲ್ಲಿಯೂ ಈ ರೀತಿಯ ಅವಸ್ಥೆಯು ಇದ್ದ ಮೇಲೆ ರಾಷ್ಟ್ರ ರಾಷ್ಟ್ರಗಳಲ್ಲಿ ಕೂಡ ಸ್ವಾರ್ಥದ ಹೊರತು ಏನು ಕಾಣಿಸಬೇಕು? ಸಮೀಪದಲ್ಲಿಯ ಒಂದು ರಾಷ್ಟ್ರವು ನಿರ್ಬಲವೂ ಅಸಹಾಯವೂ ಇದ್ದರೆ ತೀರಿತು. ಅದರ ಮೇಲೆ ಬಲಿಷ್ಠವಾದ ರಾಷ್ಟ್ರವು ಹಲ್ಲೆ ಮಾಡತಕ್ಕದ್ದೇ; ಬಲವುಳ್ಳವನ ಮುಂದೆ ನಿರ್ಬಲನಾದವನು ಬಗ್ಗಿ ನಡೆಯಲಿಕ್ಕೆ ಬೇಕು. ನೆರೆಯವನು ಸಮಾನ ಯೋಗ್ಯತೆಯುಳ್ಳವನಿದ್ದರೂ, ಆದೂ ನಡೆಯಲಾರದು; ಯಾಕಂದರೆ ಸಮಾನತೆಯಾದರೂ ಯಾರಿಗೆ ಸೇರುವದು? ಪ್ರತಿಯೊಬ್ಬರಲ್ಲಿ

ನಾವುಗಳು ಹೀನರುಗಳು " ಎಂದು ಹೆಮ್ಮೆಯನ್ನು ತೋರಿಸುವ ಉತ್ಕಟವಾದ ಆಕಾಂಕ್ಷೆಯು ಸುಸ್ಥಿರವಾಗಿ ವಾಸಮಾಡಿಕೊಂಡಿರುವದು ಕಡೆಗೆ ಅಲ್ಲಿ ಕೂಡ ಅವಿಶ್ವಾಸವಿರೋಧಗಳೇ ತೋರುವವು,

ಪ್ರತಿಯೊಬ್ಬ ಮನುಷ್ಯನು ತನ್ನನ್ನು ಉಳಿಸಿಕೊಳ್ಳುವದಕ್ಕಾಗಿ ತನ್ನ ಸ್ವಸಂರಕ್ಷಣೆಯನ್ನು ಮಾಡಿಕೊಳ್ಳುವದಕ್ಕಾಗಿ ಏನಾದರೂ ಮಾಡಲಿಕ್ಕೆ ಬೇಕು. ಎಂದು ಅನ್ನುತ್ತಿರುವನು; ಎರಡು ಪ್ರಬಲವಾದ ರಾಷ್ಟ್ರಗಳ ನೆರೆಯಲ್ಲಿ ಒಂದು ಸಣ್ಣ ರಾಷ್ಟ್ರವಿದ್ದರೆ, ಆ ಪ್ರಬಲವಾದ ರಾಷ್ಟ್ರಗಳು ಪ್ರತ್ಯೇಕವಾಗಿ ಮನಸ್ಸಿನಲ್ಲಿ ಈ ಕೆಳಗಿನ ಉದಾತ್ತವಿಚಾರಗಳನ್ನು ನಡಿಸಿರುವವು; " ಈ ಚಿಕ್ಕ ರಾಷ್ಟ್ರವನ್ನು ನಾನು ನುಂಗಿ ನೀರುಕುಡಿಯದಿದ್ದರೆ, ಎರಡನೆಯವರು ಯಾರಾದರೊಂದು ಆ ಕಾರ್ಯವನ್ನು ಮಾಡತಕ್ಕವರೇ; ಆದರೆ ಈ ರೀತಿಯಿಂದ ಈ ಸಣ್ಣ ರಾಷ್ಟ್ರವು ಪರಾಜಯಹೊಂದಿ ಮೋರೆ ಕೆಳಗೆಮಾಡಿದರೆ, ಆ ರಾಷ್ಟ್ರದ ಪ್ರಾಬಲ್ಯವು ಬೆಳೆಯುವದಲ್ಲ! ಮುಂದೇನು ಗತಿ ? ನನ್ನ ಮೇಲೆ ಹಲ್ಲೆಯನ್ನು ಮಾಡುವ ದುರ್ಬುದ್ಧಿಯು ಆ ರಾಷ್ಟ್ರದಲ್ಲಿ ಹುಟ್ಟಬಹುದಲ್ಲವೇ ? ಅದಕ್ಕಿಂತ ನಾನೇ ಆ ಅನ್ಯಾಯವನ್ನು ಮಾಡಿದರೆ, ಏನು ದೋಷವದೆ ? "ಸಾಮ್ರಾಜ್ಯಗಳ ಬೆಳವಣಿಗೆಯಾಗುತ್ತಿರುವದು ಇದೇ ರೀತಿಯಿಂದಲೇ;

ಈ ಪ್ರಕಾರದ ಸ್ವಾರ್ಥವೂ ಅನ್ಯಾಯವೂ ಯುರೋಪಖಂಡದಲ್ಲಿ ಎಲ್ಲಕಡೆಗೆ ಒಂದೇ ಸವನೆ ನಡೆದಿರುವದು; ಆದರೆ ಎಲ್ಲ ಮಾನವರ ಸ್ವಭಾವವು ಈ ಪ್ರಕಾರದ್ದೇ ಇರುತ್ತದೆಂದು ಬಗೆಯುವದು ಮಾತ್ರ ಮೂರ್ಖತನವು; ಸುವ್ಯವಸ್ಥಿತವಾದ ಪಾರವೀ ಶಕ್ತಿಯನ್ನು ಸುಧಾರಣೆಯೆಂದು ಯುರೋಪಖಂಡವು ತಿಳಿದುಕೊಳ್ಳುತ್ತಿದ್ದರೆ, ಅದು ತನ್ನ ಮನಬಂದಂತೆ ತಿಳಿದುಕೊಳ್ಳಲಿ; ಆದರೆ ನೆರೆಹೊರೆಯವರ ಕೂಡ ಪ್ರೇಮಮಾರ್ಗದಿಂದ ನಡೆದುಕೊಳ್ಳುವದೇ ನಮ್ಮ ಕರ್ತವ್ಯವೆಂದು ತಿಳಿದುಕೊಳ್ಳುವದೇ ನಿಜವಾದ ಸುಧಾರಣೆಯು; ಈ ನೆರೆಹೊರೆಯ ಧರ್ಮವನ್ನು ನಾವು ಉತ್ತಮರೀತಿಯಿಂದ ಪಾಲಿಸಲಿಕ್ಕೆ ಯಾವಾಗಲೂ ಯತ್ನಮಾಡತಕ್ಕದ್ದು. ಸೌಜನ್ಯವನ್ನು ತೋರಿಸುವ ಜನರಕೂಡ ಮಿತ್ರತ್ವದಿಂದ ನಡೆದುಕೊಳ್ಳುವದೂ, ದುಷ್ಟತನದಿಂದ ನಡೆಯುವವರ ಸಂಗಡ ಅಪಕಾರವನ್ನು ಮಾಡದಿರುವದೂ ಪ್ರೇಮಧರ್ಮದ ನಿಯಮವು. ಪ್ರೇಮಧರ್ಮವು ಎರಡನೆಯವರ ಸಂಗಡ ಸಮಾನುಭೂತಿಯಿಂದ ನಡೆದುಕೊಳ್ಳುವದಕ್ಕೂ ಪರರಿಗೆ ಸಹಾಯವನ್ನು ಮಾಡುವದಕ್ಕೂ ಹೇಳುತ್ತದೆ. ಪ್ರೇಮಧರ್ಮವನ್ನು ಆಚರಿಸುವವನು ಹೀನವಾದ ದೌರ್ಬಲ್ಯದಿಂದ ಎರಡನೇಯವರ ಸಹಾಯದ ಅಪೇಕ್ಷೆಯನ್ನು ಎಂದೂ ಮಾಡುತ್ತಿರುವದಿಲ್ಲ; ಪ್ರೇಮಧರ್ಮದಿಂದ ಮನುಷ್ಯನು ನಿರ್ಭೀತನಾಗುವನು. ಮತ್ತು ಇವೆಲ್ಲ ಗುಣಗಳಿಂದಲೇ ಆ ಧರ್ಮದ ವಿಸ್ತಾರಕ್ಕೆ ಮೇರೆಯೇ ಉಳಿಯುವದಿಲ್ಲ; ನಾವು ಪ್ರೇಮವನ್ನು ತೋರಿಸುತ್ತಿದ್ದ ಮನುಷ್ಯನ ಸಾಮರ್ಥ್ಯವು ಬೆಳೆದರೆ ನಮ್ಮ ಎದೆಯು ಹಾಂಹತ್ತುವದಕ್ಕೆ ಏನೂ ಕಾರಣವಿಲ್ಲ; ಆದರೆ ಇದರ ವಿರುದ್ಧವಾಗಿ ನಾವು ಪ್ರೇಮಮಾಡುತ್ತಿರುವ ಮನುಷ್ಯನ ಬಲವು ಕಡಿಮೆಯಾದಷ್ಟು ನಮ್ಮ ಸಾಮರ್ಥ್ಯವೂ ಕಡಿಮೆಯಾಗುತ್ತಿರುವದು

ಅವಿಶ್ವಾಸದ ವಾತಾವರಣವು ಹಬ್ಬಿಕೊಂಡ ಸ್ಥಳಗಳಲ್ಲೆಲ್ಲ, ಅದನ್ನು ದೂರಮಾಡುವದಕ್ಕೆ ಪ್ರೇಮಧರ್ಮದ ಯೋಜನೆಯನ್ನು ಮಾಡುವದರಿಂದ ಅಸಾಧಾರಣವಾದ ಧೈರ್ಯವೂ ಪರಮತಸಹಿಷ್ಣುತೆಯೂ ಉತ್ಪನ್ನವಾಗದೆ ಇರುವದಿಲ್ಲ ಪ್ರೇಮಧರ್ಮವನ್ನು ಪಾಲಿಸುತ್ತಿರುವರು ಕೆಲವು ದಿವಸಗಳವರೆಗೆ ಬಗ್ಗಿ ನಡೆದುಕೊಳ್ಳಬೇಕಾದರೂ ಕಟ್ಟಕಡೆಗೆ ಅವರಿಗೇ ವಿಜಯವು ದೊರೆಯುವದು ನಿಶ್ಚಿತವಾಗಿದೆ; ಕುಟುಂಬಗಳಲ್ಲೆಲ್ಲ ಈ ಪ್ರೇಮಧರ್ಮವನ್ನು ಸ್ಥಾಪಿಸಿ, ಆ ಧರ್ಮದ ಪ್ರಸಾರವನ್ನು ರಾಷ್ಟ್ರರಾಷ್ಟ್ರಗಳಲ್ಲಿ ಮಾಡುವದೇ ಸುಧಾರಣೆಗಳ ಮೂಲಭೂತವಾದ ತತ್ವವಾಗಿರುವದು; ಸುಧಾರಣೆಗಳ ಫಲವಾದರೂ ಇದೇ ಆಗಿರುವದು

---

## ವಿದ್ಯಾರ್ಥಿಗಳಿಗೆ ದೇಶಬಂಧುವಿನ ಉಪದೇಶವು

ಕಲಿಕತ್ತೆಯ ವಿದ್ಯಾರ್ಥಿಗಳು ಹಿಂದಿನ ಆಗಸ್ಟ ೨೬ ನೇ ತಾರೀಖಿನ ದಿವಸ ದೇಶಬಂಧು ದಾಸ ಇವರಿಗೆ ಮಾನಪತ್ರವನ್ನು ಕೊಟ್ಟರು; ಅಗೈ ಉತ್ತರವನ್ನು ಕೊಡುವಾಗ್ಯೆ ದಾಸರವರು ಅಂದದ್ದೇನಂದರೆ, " ಈಗಿನಕಾಲದ ಶಿಕ್ಷಣದಿಂದ ನಮ್ಮ ಅಂತಕರಣದಲ್ಲಿ ಪರಮಾತ್ಮನ ವಿಷಯಕ್ಕೆ ಪ್ರೇಮವು ಹುಟ್ಟುವದಿಲ್ಲವಾದ್ದರಿಂದ ಅಂಥ ಶಿಕ್ಷಣವನ್ನು ಬಿಟ್ಟುಬಿಡಲಿಕ್ಕೆ ಬೇಕು; ತಾವುಗಳು ಸತ್ಯದ ಮೇಲೆ ನಿಶ್ಚಿತವನ್ನಿಡತಕ್ಕದ್ದು; ಮತ್ತು ಹಿಂದೂ ದೇಶದ ವರ್ಚಸ್ಸನ್ನು ಬೆಳೆಸತಕ್ಕದ್ದು; ಯಾವ ದೇಶಸೇವೆಯಲ್ಲಿ ಭಗವಂತನ ವಿಷಯಕ್ಕೆ ಶ್ರದ್ಧೆ ಇಲ್ಲವೋ ಅಂಥ ದೇಶಭಕ್ತಿಯಿಂದ ಏನು ಉಪಯೋಗ ? ನಾನು ಪಾರ್ಲಮೆಂಟರೀ ಸ್ವರಾಜ್ಯವನ್ನೂ ಬೇಡುವದಿಲ್ಲ; ಆರ್ಥಿಕ ಸ್ವರಾಜ್ಯವನ್ನಾದರೂ ಅಲ್ಲ; ನಾನು ಅಂತಃಕರಣದಿಂದ ಅಪೇಕ್ಷಿಸುವದೇನಂದರೆ ಕೇವಲ ಭಾರತಿಯರು ಪುನಃ ನಿಜವಾದ ಭಾರತೀಯರಾಗಲಿ; ಮತ್ತು ತಮಗೆ ಈ ಚಳವಳಿಯು ಅಸತ್ಯವಾಗಿ ಕಾಣುತ್ತಿದ್ದರೆ, ತಮಗೆ ಯಾವದು ಸತ್ಯವಾಗಿ ಕಾಣುವದೋ ಆ ಹಾದಿಯಿಂದ ಹೋಗಬೇಕು; ಆದರೆ ಈ ಚಳವಳಿಯು ಸತ್ಯಮೂಲಕವಾಗಿರುವದೆಂದು ನಿಮಗೆ ನಿಶ್ಚಯವಿದ್ದರೆ ನೀವು ಈ ಚಳವಳಿಯ ಮೇಲೆ ದೃಢವಾಗಿ ನಿಲ್ಲಿರಿ; ಇದರಿಂದ ತಮ್ಮ ದಾರಿಯಲ್ಲಿಯ ಯಾವತ್ತೂ ವಿಘ್ನಗಳು ತಮ್ಮಷ್ಟಕ್ಕೆ ತಾವೇ ದೂರಾಗುವವು; ಕಡೆಗೆ ಸ್ವರಾಜ್ಯವನ್ನು ಇಚ್ಛಿಸುವ ನೀವು ಅಸತ್ಯವನ್ನು ಎಂದೂ ಮಾತಾಡಬೇಡಿರಿ; ಅಸತ್ಯವನ್ನು ಮಾತಾಡುವ ರಾಜನೀತಿಯು ಕುಟಿಲರಾಜನೀತಿಯಾಗುವದು; ಸ್ವರಾಜ್ಯವು ಹಿಂಸೆಯಿಂದ ಲಭ್ಯವದೆಂದು ಅನಿಸುತ್ತಿದ್ದ ಜನರು ತಮ್ಮಲ್ಲಿ ಅಷ್ಟು ನೈತಿಕಬಲವಿದ್ದರೆ ಅದರಂತೆ ಅವರು ಸ್ಪಷ್ಟವಾಗಿ ಆಚರಿಸಬಹುದು; ಆದರೆ ಈ ಚಳವಳಿಯು ಕುಟಿಲರಾಜನೀತಿಯ ತಳಹದಿಯ ಮೇಲೆ ನಿಲ್ಲಿಸಲ್ಪಟ್ಟಿಲ್ಲವೆಂದು ನನ್ನ ಅಭಿಪ್ರಾಯವು; ಜಗತ್ತಿನಲ್ಲಿ ಹಿಂಸೆಯದ್ವಾರದಿಂದ ಸ್ವರಾಜ್ಯವು ಎಂದೆಂದಿಗೂ ಸ್ಥಾಪಿತವಾಗಿಲ್ಲವೆಂಬ ಮಾತು ಸ್ವಯಂಸಿದ್ಧವಾಗಿದೆ;

---

## ದೇಶಬಂಧುವಿನ ಕಾರ್ಯಕ್ರಮವು.

ದೇಶಬಂಧು ದಾಸರವರು ಬಂಗಾಲ ಪ್ರಾಂತಿಕ ಪರಿಷತ್ತಿನಲ್ಲಿ ಹೇಳಿದ ಕಾರ್ಯಕ್ರಮವು ಕೆಳಗೆ ಬರೆದಂತೆ ಇರುವದು;

ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಕೆಲವು ಸಣ್ಣಸಣ್ಣ ಸಂಗತಿಗಳಲ್ಲಿ ಸ್ವಲ್ಪ ಹೆಚ್ಚುಕಡಿಮೆ ಮಾಡುವದು ಅವಶ್ಯವೆಂದು ದೇಶಬಂಧುಗಳ ಅಭಿಪ್ರಾಯವು; ಆದರೆ ಇದರ ನಿರ್ಣಯವನ್ನು ಗಯಾ ಕಾಂಗ್ರೆಸ್ಸದ ಠರಾವಿನ ಮೇಲೆಯೇ ಬಿಟ್ಟುಕೊಡತಕ್ಕದ್ದು; ಅಲ್ಲಿಯವರೆಗೆ ಬಾರ್ಡೋಲಿಯ ಕಾರ್ಯಕ್ರಮವನ್ನು ಶಾಂತಿಪೂರ್ವಕವಾಗಿ ಪೂರ್ಣಮಾಡುವದೇ ಉಚಿತವೆಂದು ದಾಸರವರ ಮತವು; ಬಂಗಾಲ ಪ್ರಾಂತಿಕ ಕಾಂಗ್ರೆಸ್ಸ ಕಮಿಟಿಯ ಸಲುವಾಗಿ ಕೆಳಗೆ ಬರೆದ ಸೂಚನೆಗಳನ್ನು ಅವರು [illegible] ಟ್ಟಿರುವರು; ಮತ್ತು ಅವು ಹೀಗಾಗಿರುವವು;

ಖಾದಿಯ ಪ್ರಸಾರ [illegible] ವ್ಯಾಪಾರೀ ದೃಷ್ಟಿಯಿಂದ ಮಾಡಬಾರದು; ಪ್ರತಿಯೊಂದ [illegible] ಒದವರು — ತಮ್ಮ ಖಾದಿಯನ್ನು ತಾವೇ ತಯಾರಮಾಡ [illegible] ಮಿಲ್ಲಿ ವಿದೇಶಿ ವಸ್ತ್ರಗಳ ಉಪಯೋಗ

ನೆಕೊಡುವದರ ಸಲುವಾಗಿ ಪರದೇಶೀ ಅರಿವೆಗಳ ಅಂಗಡಿಗಳ ದಿಂದ ವರ್ಗಣಿಯನ್ನು ಕೂಡಿಸತಕ್ಕದ್ದು;
ಮುಂದೆ ಶಾಂತಿಮಯ ಪಿಕೆಟಿಂಗ ಮಾಡಬೇಕು; ೩ ಬರುವ ನಾಲ್ಕುತಿಂಗಳಗಳೊಳಗೆ ಬಂಗಾಲದಲ್ಲಿ ಕನಿ[illegible]
೨ ತಿಲಕ ಸ್ವರಾಜ್ಯಫಂಡದದೆಶೆಯಿಂದ ಹೆಚ್ಚು ಉತ್ಸಾಹ ಪಕ್ಷಕ್ಕೆ ಎಂಟು ಲಕ್ಷಕಾಂಗ್ರೆಸಕಮೀಟಿಯಮೆಂಬರರನ್ನು ಮಾಲಬೇ[illegible]

೪ ರಾಷ್ಟ್ರೀಯ ಶಾಲೆಗಳನ್ನು ಪಂಚಾಯತ ಕೋರ್ಟಗಳನು ಮತ್ತು ಅಂತಜೋದ್ಧಾರದ ಕೆಲಸವನ್ನು ಬಹಳ ಉತ್ಸಾಹದಿಂದ ಮಾಡಲಿಕ್ಕೆಬೇಕು;

ದೇಶಬಂಧು ದಾಸರವರು ಸದ್ಯಸ್ಥಿತಿಯ ವಿಷಯಕ್ಕೆ ತಮ್ಮ ಅಭಿಪ್ರಾಯವನ್ನು ಸವಿನಯ ಕಾಯದೇಭಂಗ ಕಮೀಟಿಯ ರಿಪೋರ್ಟ ಪ್ರಸಿದ್ಧವಾದ ನಂತರ ಬರುವ ಅಖಿಲ ರಾಷ್ಟ್ರೀಯ ಮಂಡಲದಲ್ಲಿ ಪ್ರಕಟಮಾಡುವರು;

## ಟಿಪ್ಪಣಿಗಳು,

**ಶ್ರೀನಿವಾಸರಾಯರು.**

ನಾವು ಕಳೆದವಾರದಲ್ಲಿ ದೇ. ಭ. ಯಶವಂತರಾಯರ ವಿಷಯವಾಗಿ ಬರೆದದ್ದು ವಾಚಕರ ಸ್ಮರಣೆಯಲ್ಲಿ ಇನ್ನೂ ಇರಬಹುದು. ಇಷ್ಟರಲ್ಲಿಯೇ ಇನ್ನೊಬ್ಬ ವಿಜಾಪುರದ ವೀರನು ಸರಕಾರಕ್ಕೆ ಆಹುತಿಯಾದ ಸುದ್ದಿಯನ್ನು ವಾಚಕರಿಗೆ ನಿವೇದಿಸುವ ಪ್ರಸಂಗವು ಬಂದಿರುವದು. ಆ ವೀರನೆಂದರೆ ಸಾಮಾನ್ಯ ಪುರುಷನಲ್ಲ. ಅವನು ವಿಜಾಪುರದವನಿದ್ದರೂ, ಇಡೀ ಕರ್ನಾಟಕದಲ್ಲಿಯೇ ಹೆಸರುವಾಸಿ ಯಾಗಿರುವನು. ಆ ವೀರ ಪುರುಷನು ಮೊದಲಿನಿಂದಲೇ ಸಾರ್ವಜನಿಕ ಸೇವೆಯನ್ನು ಮಾಡುತ್ತಬಂದವನು. ಲೋಕಮಾನ್ಯರ ಪಟ್ಟಶಿಷ್ಯನು. ಮಹಾತ್ಮಾ ಗಾಂಧಿಯವರು ಅವನನ್ನು ಪ್ರೀತಿಸುತ್ತಿದ್ದರು. ಅಂಥ ವೀರನು ಯಾರು ಇರಬಹುದೆಂಬದನ್ನು ವಾಚಕರು ಇಷ್ಟರಲ್ಲಿಯೇ ಕಂಡುಹಿಡಿದಿರಬಹುದು. ಆ ವೀರಾಗ್ರೇಸರನು ದೇ. ಭ. ಶ್ರೀನಿವಾಸರಾವ ಕೌಜಲಗಿ ಇವನೇ. ದೇ ಭ ಶ್ರೀನಿವಾಸರಾಯರು ಲಿಂಗಾಯತರ ನಡುವೆ ದ್ವೇಷವಿದ್ದದ್ದು ಎಲ್ಲರಿಗೂ ಗೊತ್ತುಂಟು; ಹೀಗಿದ್ದರೂ ವಿಜಾಪುರದಲ್ಲಿ ಈ ದ್ವೇಷವನ್ನು ಸಂಪೂರ್ಣವಾಗಿ ನಾಶಗೊಳಿಸಿದವರು ದೇ. ಭ. ಶ್ರೀನಿವಾಸರಾಯರೇ, ಕರ್ನಾಟಕಸ್ಥರೆಲ್ಲರೂ ಇವರ ಅನುಕರಣವನ್ನು ಮಾಡಿ ಆ ದ್ವೇಷವನ್ನು ಇಲ್ಲದಂತೆ ಮಾಡಿದರೆ ಶ್ರೀನಿವಾಸರಾಯರ ಆಹುತಿಯಾದದ್ದು ಸಾರ್ಥಕವಾಗುವದು; ಪರಮಾತ್ಮನು ದೇ ಭ. ಶ್ರೀನಿವಾಸರಾಯರ ಕೀರ್ತಿಯನ್ನು ಹಬ್ಬಿಸಲಿ !

**ಜಯಕರ್ನಾಟಕ ಸಂಪಾದಕ;**


**ಸಚಿತ್ರ !** **ಸಚಿತ್ರ !!**

ಕನ್ನಡ

# ನವಜೀವನ.

### ಮಹಾತ್ಮರ ಜಯಂತಿ ಸಂಚಿಕೆ.

ಮಹಾತ್ಮಾ ಗಾಂಧಿಯವರ ಹುಟ್ಟಿದ ದಿನ ಅಂದರೆ ಅಕ್ಟೋಬರ ೨ನೇ ತಾರೀಖಿನ ದಿನ ನಾವು **ಕನ್ನಡ ನವಜೀವನದ** ವಿಶೇಷ ಸಂಚಿಕೆಯನ್ನು ಹೊರಡಿಸುವೆವು; ಸಾಬರಮತಿ ಸತ್ಯಾಗ್ರಹಾಶ್ರಮ ಮಂತ್ರಿಗಳಾದ ಕಾಕಾ ಕಾಲೇಲಕರ, ದೇಶಭಕ್ತ ಗಂಗಾಧರರಾವ ದೇಶಪಾಂಡೆ, ರಾಘವೇಂದ್ರರಾವ ಕಡಪಾ, ವೆಂಕಟರಾವ ಆಲೂರ, ಮಂಜಪ್ಪಾ ಹರಡೇಕರ ಮೊದಲಾದವರು ಈ ಜಯಂತಿಸಂಚಿಕೆಗಾಗಿ ಮುದ್ದಾಂ ಲೇಖಗಳನ್ನು ಬರೆಯಲು ಒಪ್ಪಿಕೊಂಡಿದ್ದಾರೆ; ಇದಲ್ಲದೆ ಶ್ರೀಮತಿ ಕಸ್ತೂರಿಬಾಯಿ ಗಾಂಧಿ, ಚಿತ್ತರಂಜನ ದಾಸ, ಪಂ ಮೋತೀಲಾಲ ನೆಹರು, ಸಿ ಎಫ್ ಆಂಡ್ರ್ಯೂಜ, ಸಿ ರಾಜಗೋಪಾಲಾಚಾರ್ಯ, ರಾಮಾನಂದ ಚತರ್ಜಿ, ಪಂ. ತಾರಾನಾಥ, ಡಾ॥ ಹರಡೀಕರ, ಮೊದಲಾದವರಿಗೂ, ಈ ಜಯಂತಿಸಂಚಿಕೆಗಾಗಿಯೇ ಲೇಖಗಳನ್ನು ಬರೆಯಬೇಕಾಗಿ ವಿನಂತಿಮಾಡಿಕೊಂಡಿರುವೆವು;

ಆದುದರಿಂದ ಈ ಮಹನೀಯರ ಲೇಖಾಮೃತವನ್ನು ಸೇವಿಸಲಿಕ್ಕೆ ಇಚ್ಛಿಸುವವರು ಬೇಗನೇ ಪತ್ರಬರೆದು ನಾಲ್ಕಾಣೆಯ ತಿಕೀಟನ್ನು ಕಳುಹಿಸಿ ತಮ್ಮ ಹೆಸರನ್ನು ಈ ಗಾಗಲೇ ನೊಂದಾಯಿಸಬೇಕು. ನಾವು ನಿಯಮಿತ ಪ್ರತಿಗಳನ್ನು ಹೊರಡಿಸುವೆವು; ಆದುದರಿಂದ ಹಿಂದುಗಡೆಗೆ ನಿರಾಶೆ ಹೊಂದಬಾರದೆಂದು ನಿಮ್ಮ ಇಚ್ಛೆ ಇದ್ದಲ್ಲಿ ಈ ಹೊತ್ತೇ ೪ ಆಣೆ ತಿಕೀಟನೊಂದಿಗೆ ಪತ್ರಬರೆದುಕೊಳ್ಳಿರಿ. ಈ ಜಯಂತೀ ಸಂಚಿಕೆಯ ಮಹಾತ್ಮಾ ಗಾಂಧೀಯವರ ಚಿತ್ರಗಳು ಮಾತ್ರ ಪ್ರಸಿದ್ಧಿಸಲ್ಪಡುವವು, ಮಹಾತ್ಮರ ಆಯುಷ್ಯದೊಳಗಿನ ಬೇರೆ ಬೇರೆ ಕಾಲದ ಚಿತ್ರಗಳು ಇದರಲ್ಲಿ ಮುದ್ರಿಸಲ್ಪಡುವವು ನಮ್ಮ ಚಂದಾದಾರರಿಗೆ ಮಾತ್ರ ನಾವು ಈ ಜಯಂತಿ ಸಂಚಿಕೆಯನ್ನು ಪುಕ್ಕಟೆಯಾಗಿ ಕೊಡುವೆವು;

**ಜಾಹೀರಾತು ಕೊಡಲಿಚ್ಛಿಸುವವರಾದರೂ** ಕೂಡಲೇ ಮುಂಗಡ ಹಣಕಳುಹಿಸಿ ತಮ್ಮ ಜಾಹೀರಾತನ್ನು ಕಳುಹಿಸಿಕೊಡಬೇಕು; ಜಯಂತಿ ಸಂಚಿಕೆಗೆಮಾತ್ರ ಜಾಹೀರಾತಿನ ದರ:—

ನವಜೀವನದ ಒಂದುಕಾಲಮಿನ ಒಂದು ಸಂಚಿಕೆಗೆ ರೂ ೧-೮ ಸಪ್ಟಂಬರ ೨೫ನೇ ತಾರಿಖಿನೊಳಗಾಗಿ ಮುಂಗಡ ಹಣವೂ ಜಾಹೀರಾತೂ ನಮ್ಮ ಕೈಸೇರಿರಬೇಕು; ವ್ಯವಸ್ಥಾಪಕ,

ಕನ್ನಡ ನವಜೀವನ,
ಬಾಗಲಕೋಟೆ,


ವಿಜಾಪುರ ಜಿಲ್ಹಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರೂ, ನಿಖಿಲ ಭಾರತೀಯ ರಾಷ್ಟ್ರೀಯಮಂಡಲದ ಸಭಾಸದರೂ ಆಗಿರುವರು. ದೇ ಭ ಗಂಗಾಧರರಾಯರು ಕಾರಾಗೃಹದಲ್ಲಿದ್ದಾಗ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ ಕಾರ್ಯವನ್ನು ಇವರೇ ನಿರ್ವಹಿಸಿದ್ದಲ್ಲಿ ಕಾಂಗ್ರೆಸದ ವರ್ಕಿಂಗ ಕಮಿಟಿಯಲ್ಲಿ ಸಹ ಇವರೇ ಕಾರ್ಯವನ್ನು ನೆರವೇರಿಸಬೇಕಾಯಿತು. [illegible] ಷ್ಟು ದೇಶಸೇವೆಯಲ್ಲಿ ತತ್ಪರನಾ[illegible] ಮುಖಂಡನನ್ನು ಇಲ್ಲಿಯವರೆಗೆ [illegible] ರಕಾರದವರ ನಿರಂಕುಶವಾಗಿ [illegible] ಟ್ಟದ್ದೇ ಆಶ್ಚರ್ಯದ ಮಾತು! ಅದ[illegible] ಇಂಥ ಮುಂದಾಳುವಿನ ಮೇಲೆ [illegible] ಗ ಇಂಡಿಯನ್ ಪಿನಲ್ ಕೋಡಿ[illegible] ೧೨೪ ನೇ ಕಲಮಿನನ್ವಯ ನೋ[illegible] ಟೀಸು ಹೊರಟಿದ್ದಕ್ಕೆ ಯಾರು [illegible] ಆಶ್ಚರ್ಯ ಹೊಂದಲಾರರು; ಇದ[illegible] ಮೇಲೆ ಇದೇ ತಿಂಗಳ ೫ ನೇ [illegible] ರೀಖಿನ ದಿವಸ ನೋಟೀಸಿನ ಬ[illegible] ವಣೆಯಾಯಿತು; ಮರುದಿವಸ[illegible] ವಿಜಾಪುರ ಮುನಸಿಪಾಲಟಿಯ [illegible] ಭಾಸದರ ಚುನಾವಣೆಯಾಗ[illegible] ದ್ದಿತ್ತು; ಶ್ರೀನಿವಾಸರಾಯರು [illegible] ರೂ ಉಮೇದವಾರರಿದ್ದರು; [illegible] ಥಾರ್ತ್ ಆ ದಿವಸ ಅವರನ್ನು [illegible] ಜಾಪುರದ ನಾಗರಿಕರು ಸಭಾ[illegible] ರನ್ನಾಗಿ ಆರಿಸಿದರು. ಅಂದ ಮೇ[illegible] ಲೋಕಮತದ ಗಾಳಿಯು ಯಾ[illegible] ದಿಕ್ಕಿಗೆ ಬೀಸುತ್ತಿರುವದೆಂಬದ[illegible] ಸರಕಾರದವರು ಚನ್ನಾಗಿ ಅರಿ[illegible] ಕೊಳ್ಳಲಿ; ! ಇನ್ನೂ ಒಂದು ಸಂ[illegible] ತಿಯನ್ನು ಇಲ್ಲಿ ಹೇಳುವದು ಅವ[illegible] ವದೆ; ಕರ್ನಾಟಕದಲ್ಲಿ ಬ್ರಾಹ್ಮ[illegible]

## ಜಾಹೀರ ಸೂಚನೆ.

ನಾಳಿನ ರವಿವಾರ ೧೦-೯-೨೨ ನೇ ದಿವಸ ಬಾಗಲಕೋಟೆ [illegible] ಲೂಕ ಕಾಂಗ್ರೆಸ್ ಕಮಿಟಿಯ ಸಾಧಾರಣ ಸಭೆಯು ಟಿಳಕ ರಾ[illegible] ಯ ವಿದ್ಯಾಲಯದ ಪಟಾಂಗಣದಲ್ಲಿ ಹೋದವರ್ಷದ ರಿಪೋ[illegible] ನ್ನು ಚರ್ಚಿಸುವ ಕುರಿತು ಮತ್ತು ಈ ವರ್ಷದ ಕಾರ್ಯಕಾ[illegible] ಮಂಡಲವನ್ನು ಆರಿಸುವ ಕುರಿತು ನೆರಿಯುವದದೆ. ಆದ್ದ[illegible] ಕಾಂಗ್ರೆಸ್ ಕಮೀಟಿಯ ಎಲ್ಲ ಸಭಾಸದರು ಅವಶ್ಯವಾಗಿ ಸಭೆಗೆ [illegible]

ಬೇಕು. ಇನ್ನೂ ವರೆಗೆ ಸಭಾಸದರಾಗದಿದ್ದವರು ಶೀಘ್ರವೇ ಸಭಾಸದರಾಗಿ ಆ ದಿವಸ ಸಭೆಗೆ ಬಂದು ಈ ಕಾರ್ಯವನ್ನು ನೆರವೇರಿಸಬೇಕೆಂದು ವಿನಂತಿಯದೆ,

ಬಾಗಲಕೋಟ — ಕಾರ್ಯದರ್ಶಿ
ತಾ ೬-೮-೨೨ — ತಾಲೂಕ ಕಾಂ ಕಮಿಟಿ.

---

ಾದ ಜನರನ್ನು ಮೋಸಗೊಳಿಸಲಿಕ್ಕೆ, ಅವರಿಂದ ದ್ರವ್ಯವನ್ನೆಲ್ಲ ಕಸಿದುಕೊಳ್ಳಲಿಕ್ಕೆ ನೀನು ಅಂಜುವದಿಲ್ಲ; ಮದ್ಯವನ್ನು ಮಾರಲಿಕ್ಕೆ ಪಾನಮಾಡಲಿಕ್ಕೂ ಅಂಜಿಕೆಯು ಇಲ್ಲ; ನಿನ್ನ ಅಕ್ಕತಂಗಿಯರ ಪಾತಿವ್ರತ್ಯವನ್ನು ಭಂಗಮಾಡಲಿಕ್ಕೆ ನಿನಗೆ ಭಯವು ಬರುವದಿಲ್ಲ; ಬಡವರನ್ನು ಪೀಡಿಸಲು ಭೀತಿಯಿಲ್ಲ; ಸ್ವಾರ್ಥವನ್ನು ಸಾಧಿಸಿಕೊಳ್ಳಲಿಕ್ಕೆ ಜೀವಂ ಮೇಲೆ ಅತ್ಯಾಚಾರವನ್ನು ಮಾಡುವಾಗ ಕೂಡ ನೀನು ಭಯಭೀತನಾಗುವದಿಲ್ಲ; ಅಸತ್ಯವನ್ನು ಮಾತಾಡಲಿಕ್ಕೆ, ಪ್ರತಿಜ್ಞೆಯ ಭಂಗವನ್ನು ಮಾಡುವದಕ್ಕೆ, ಪರರನ್ನು ಮೋಸಗೊಳಿಸಲಿಕ್ಕೆ, ಅವರ ಅಪಮಾನಮಾಡುವದಕ್ಕೆ ನಿನಗೆ ಅಂಜಿಕೆಯು ಇಲ್ಲ– ಎಲೇ, ಏನು ನಿನಗೆ ನಿನ್ನ ಆತ್ಮನ ಕಲ್ಯಾಣದ ಎಚ್ಚರಿಕೆಯೇ ಇಲ್ಲವೇ? ಏನು, ನಿನಗೆ ನಿಜವಾಗಿ ಕಣ್ಣುಗಳೇ ಇಲ್ಲವೇ? ಆದರೆ ಮಣ್ಣಿನ ಗೊಂಬೆಗಳನ್ನು ನೋಡಿ, ಕಬ್ಬಿಣದ ತುಣುಕುಗಳನ್ನು ಕಂಡು, ಕಲ್ಲಿನ ಸಣ್ಣಸಣ್ಣ ಚೂರುಗಳನ್ನು ನೋಡಿ ನಿರ್ಬಲ ಮತ್ತು ಪಾಪಿಷ್ಟವಾದ ಆತ್ಮಗಳ ನೋಡಿ, ನೀನು ಅಂಜುತ್ತೀಯಲ್ಲ; ! ಎಲೇ ಇವರಲ್ಲಿ ಏನು ಧೈರ್ಯವಿರುತ್ತದೆ; ನೀನು ಸ್ವಲ್ಪ ಊದಿದರೆ ಸಾಕು! ಹುಡಿಯಂತೆ ಹಾರಿ ಹೋಗುವರು! ಆದರೆ ಮೊದಲು ನೀನು ನಿನ್ನ ಅಜ್ಞಾನವನ್ನು ಬಿಟ್ಟುಕೊಡು; ಮನುಷ್ಯತ್ವವನ್ನು ತಿಳಿದುಕೋ, ಅದರ ಅಭಿಮಾನವನ್ನು ತಾಳು; ಭಯವನ್ನು ಮನೆಯ ಹೊರಗೆ ಹೊಡೆದೋಡಿಸು; ಇದರಿಂದ ನಿನಗೆ ಅಹಿಂಸೆಯ ಮರ್ಮದ ಜ್ಞಾನವಾಗುವದು; ನಿನ್ನ ಹೃದಯದಲ್ಲಿ ನಿರ್ಮಲವಾದ ದಿವ್ಯ ಪ್ರೇಮವು ಪ್ರಕಾಶಹೊಂದುವದು; ಜಗತ್ತು ನಿನ್ನನ್ನು ಮಿತ್ರನೆಂದು ತಿಳಿಯುವದು;–ನಿನ್ನ ಪಾದಕಮಲಗಳ ಸೇವೆಯನ್ನು ಮಾಡುವದು, ತನ್ನ ನಾಶಕ ಶಕ್ತಿಗಳನ್ನು ನಿನ್ನ ಛತ್ರಗಳನ್ನಾಗಿ ಮಾಡುವದು ;

ನೀನು ಸ್ವರಾಜ್ಯವನ್ನು ಬಯಸುವಿಯಲ್ಲವೇ! ಇದಕ್ಕಿಂತ ಹೆಚ್ಚಿನ ರಾಜ್ಯವು ಪ್ರಭುತ್ವವು ಐಶ್ವರ್ಯವು ನಿನಗೆ ಇನ್ನೇನು ಬೇಕು? ಸ್ವರಾಜ್ಯವಾದರೋ ನಿನ್ನ ಲೀಲೆಯ ಭ್ರೂಸಂಕೇತಮಾತ್ರ ಆಗಿರುವದು; ನೀನು ನಿನ್ನ ಸ್ವರಾಜ್ಯವನ್ನೇಕೆ? ಇಡೀ ಭೂಮಂಡಲಕ್ಕೆ ಸ್ವರಾಜ್ಯದ ಮಾರ್ಗವನ್ನು ತೋರಿಸುವಿ; ನೀನು ಶತ್ರುಗಳೆಂದು ತಿಳಿಯುವವರು ನಿನ್ನ ಶತ್ರುಗಳಲ್ಲ; ನಿನ್ನ ಹೃದಯದಲ್ಲಿ ವಾಸಮಾಡಿಕೊಂಡಿದ್ದು ನಿನ್ನನ್ನು ಅಂಜುಬುರುಕನನ್ನೂ ನಿರ್ವೀರ್ಯನನ್ನೂ ಮಾಡಿದ್ದಲ್ಲದೆ ನಿನ್ನ ಆತ್ಮವು ಉದ್ಧಾರವಾಗದಂತೆ ಮಾಡಿಬಿಟ್ಟ ಆ ನಿನ್ನ ಭಯವೇ ನಿನಗೆ ಶತ್ರುವು; ನೀನು ಭಯದವಿಚಾರವನ್ನು ಬಿಟ್ಟುಬಿಟ್ಟರೆ ಜಗತ್ತಿನಲ್ಲಿ ಯಾರೂ ನಿನ್ನನ್ನು ಅಂಜಿಸುವಗೋಜಿಗೆ ಹೋಗುವದಿಲ್ಲ; ನೀನು ಶರೀರ ಮತ್ತು ಜೀವನದ ಮೋಹವನ್ನು ಬಿಟ್ಟುಕೊಡುವದೊಂದೇ ತಡ ಭಯವು ನಿನ್ನ ಸಮೀಪದಲ್ಲಿ ಹಾಯಲು ಕೂಡ ಹಿಂಜರಿಯುತ್ತದೆ; ನೀನು ಧನದ ಮೇಲಿನ ಪ್ರೇಮವನ್ನು ತ್ಯಜಿಸಿದರೆ, ಭಯಕ್ಕೇ ನಿನ್ನನ್ನು ಕಂಡರೆ, ಭೀತಿಬರುವದು; ಸ್ವಾರ್ಥವೇ ಭಯದ ಆಶ್ರಯವಾಗಿದ್ದದರಿಂದ ನೀನು ಸ್ವಾರ್ಥವನ್ನು ತ್ಯಾಗಮಾಡು; ನಿನ್ನ ಹೃದಯದಲ್ಲಿಯ ಮಾಲಿನ್ಯವನ್ನು ದೂರಮಾಡಿದರೆ ಸಾಕು; ಭಯವು ನಿನಗೆ ಕಾಮಧೇನುವಾಗುವದು; ನಿನಗೆ ಸ್ವರಾಜ್ಯವು ಬೇಕಾಗಿದ್ದರೆ, ಸ್ವಾತಂತ್ರ್ಯದ ಮೇಲೆ ಪ್ರೇಮವಿದ್ದರೆ ನೀನು ಮೊದಲು ಭಯವನ್ನು ಬಿಟ್ಟುಕೊಡು; ನಿರ್ಭೀತಿಯಿಂದಲೇ ಜಗತ್ತಿನಲ್ಲಿ ವಿಜಯವಾಗುವದು; ನಿರ್ಭಯನಾದವನೇ ಜಗತ್ತಿನಲ್ಲಿ ಜೀವಂತನಾಗಿ ಬಾಳುವದಕ್ಕೆ ಸಮರ್ಥನಾಗುವನು; ನಿರ್ಭೀತನಾದವನಿಗೆ ಜಗತ್ತು ಆದರಸತ್ಕಾರಮಾಡುವದು; ನಿರ್ಭೀತನಾದವನೇ ಪೃಥ್ವಿಯಲ್ಲಿ ನಿಜವಾದ ಮನುಷ್ಯನು; ಅಂಜುಬುರುಕನಿಗೆ ಮಹೀತಲದಲ್ಲಿ ಜೀವಂತನಾಗಿರಲಿಕ್ಕೆ ಅಧಿಕಾರವಿಲ್ಲ; ಅವನು ಬದುಕುವದೂ ಇಲ್ಲ; ಜಗತ್ತಿಗಾದರೂ ಅವನ ಅವಶ್ಯಕತೆಯೇ ಇಲ್ಲ; ಅವನು ಜಗತ್ತಿಗೆ ಭಾರಭೂತನಾಗಿರುವನು;–ಆದ್ದರಿಂದ ನಿರ್ಭಯರಾಗಿರಿ-

**ಹರಿಭಾವು ಉಪಾಧ್ಯಾಯ**

---

# ದೇ. ಭ. ಕಡಪಾ ಇವರ ಸುಶ್ರಾವ್ಯ ವ್ಯಾಖ್ಯಾನವು.

(ಬಾಗಲಕೋಟ ತಾ|| ೧–೯–೨೨)

ಅಯ್ಯಾ ಸಂಪಾದಕರೇ,

ಈ ಕೆಳಗಿನ ನಾಲ್ಕು ಪಂಕ್ತಿಗಳಿಗೆ ತಮ್ಮ ಪತ್ರದಲ್ಲಿ ಇಂಬು ದೊರೆಯುವದೆಂದು ಆಶಿಸುತ್ತೇನೆ.

ಶ್ರೀ ಕೊತ್ತಲೇಶನ ಮಂದಿರದ ಮುಂದೆ ತಾರೀಖು ೧ನೇ ಸೆಪ್ಟಂಬರ ದಿವಸ ದೇ. ಭ. ಸ್ವಾಮಿರಾಚಾರ್ಯ ಕಿರಸೂರ ಇವರ ಅಧ್ಯಕ್ಷತೆಯ ಕೆಳಗೆ ಸಭೆಗೂಡಿತ್ತು. ಜನಸಂದಣಿಯು ಚನ್ನಾಗಿತ್ತು. ಈಸಭೆಯಲ್ಲಿ ದೇಶಭಕ್ತ ಕಡಪಾ ಇವರು ಸುಶ್ರಾವ್ಯವಾದ ಭಾಷಣವನ್ನು ಮಾಡಿದರು. ಅದರ ಸಾರಾಂಶವು ಕೆಳಗೆ ಬರೆದಂತೆ ಇದೆ.

ನಮಗೆ ಪೌರ್ವಾತ್ಯದ ಸಂಸರ್ಗವು ಎಂದಿನಿಂದ ಲಯವಾಗಹತ್ತಿತೋ ಆ ಹೊತ್ತಿನಿಂದಲೇ ನಮಗೆ ಇಂಥ ಹೀನಸ್ಥಿತಿಯು ಪ್ರಾಪ್ತವಾಗಹತ್ತಿದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಫಲವಿದು! ಆದರೂ ನಮ್ಮ ಸ್ತ್ರೀಯರಲ್ಲಿ ಹಾಗೂ ಹಳ್ಳಿಗಾಡ ಜನರಲ್ಲಿ ಇನ್ನೂ ಪಾಶ್ಚಿಮಾತ್ಯ ಸಂಸ್ಕೃತಿಯು ಅಷ್ಟೊಂದು ನಿಕಟವಾಗಿ ಅಂಟಿಕೊಂಡಿಲ್ಲ. ಆದ್ದರಿಂದಲೇ ಅವರಲ್ಲಿ ಧಾರ್ಮಿಕ ಬುದ್ಧಿಯು ಇನ್ನೂ ವರೆಗೆ ಯಥಾಸ್ಥಿತವಾಗಿರುವದು.

ಇಂದಿನ ವರೆಗೆ ನಮ್ಮ ಮಹಾಸಭೆಯು ಪಾಶ್ಚಿಮಾತ್ಯ ಪದ್ಧತಿಯಿಂದಲೇ ನೆರವೇರುತ್ತ ಬಂದಿದೆ. ಆದರೆ ಇನ್ನು ಮೇಲೆ ಅದರಲ್ಲಿ ಧಾರ್ಮಿಕ ಭಾವನೆಯಾದರೂ ಕೂಡುವದು ಅತ್ಯವಶ್ಯವಾಗಿದೆ. ಈ ನಮ್ಮ ಅಸಹಕಾರ ಚಳವಳಿಯಲ್ಲಿ ಧಾರ್ಮಿಕ ತತ್ವವು ವಿಶೇಷವಾಗಿ ಇಲ್ಲದ್ದರಿಂದಲೇ ನಮ್ಮ ಸ್ತ್ರೀಪುರುಷರಲ್ಲಿ ಇನ್ನೂ ವರೆಗೆ ಅದರ ಮಹತ್ವವು ತಿಳಿದಿಲ್ಲ. ನಮ್ಮ ಸ್ತ್ರೀಯರಿಗೆ ರಾಷ್ಟ್ರೀಯ ಪದ್ಯವನ್ನು ಅನ್ನಲಿಕ್ಕೆ ಹೇಳಿದರೆ, ಅವರು ಇದರಲ್ಲಿ ಈಶ್ವರ ಸ್ತೋತ್ರವಿಲ್ಲ ಆದ್ದರಿಂದ ಅನ್ನಲಾರೆವೆಂದು ತಟ್ಟನೇ ಹೇಳುತ್ತಾರೆ. ಆದರೆ ಅದೇ ಪದದಲ್ಲಿಯೇ ನಾವು ಈಶ್ವರನ ಸ್ತೋತ್ರವನ್ನು ತೋರಿಸಿಕೊಟ್ಟರೆ, ಅವರು ಕೂಡಲೇ ಅನ್ನಲಿಕ್ಕೆ ಒಪ್ಪುವರು. ಆದ್ದರಿಂದ ನಾವು ಅದಷ್ಟು ಈಶ್ವರ ಗುಣಾನುವಾದ ರೂಪವಾದಂಥ ರಾಷ್ಟ್ರೀಯ ಪದವನ್ನೇ ಆರಿಸತಕ್ಕದ್ದು. ಮತ್ತು ಮಹಾಸಭೆಯಲ್ಲಿಯಾದರೂ ನಮ್ಮ ಸಂಸ್ಕೃತಿಗೆ ಯೋಗ್ಯವಾದ ಪದ್ಧತಿಯಿಂದಲೇ ಕಾರ್ಯಮಾಡತಕ್ಕದ್ದು.

ಮುಖ್ಯತಃ ನಾವು ಈಗ ಮಾಡಬೇಕಾದ ಕಾರ್ಯವೆಂದರೆ, ನಮ್ಮ ಮನೆಗಳಲ್ಲಿ ಆಗಳು ಒಲಿ, ಚರಕು, ಸರ್ವ ಸಾಧಾರಣ ಬೇನೆಗಳಿಗೆ ಉಪಯುಕ್ತವಾದ ಔಷಧ ಸಂಗ್ರಹ ಹಾಗೂ ರಾಷ್ಟ್ರೀಯ ಶಾ

ಕಂಬಳಿಗಳು ||ಶ್ರೀ ವಿಠ್ಠಲ ಪ್ರಸನ್ನ || ಉತ್ಕೃಷ್ಟ ಕಂಬಳಿಗಳು

ಕೋಟುಗಳಿಗೂ ಓವ್ಹರಕೋಟುಗಳಿಗೂ ಉಪಯೋಗವಾಗುವವು.

ಸುಪ್ರಸಿದ್ಧ

# ಬಾಗಲಕೋಟೆಯ ಕಂಬಳಿಗಳು.

ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತವೆ. ಬೆಲೆ ೭ ರೂಪಾಯಿಗಳಿಂದ ೨೫ ರೂಪಾಯಿಗಳವರೆಗೆ

ಈ ಕಂಬಳಿಗಳಿಂದ ಕೋಟುಗಳನ್ನು ಹೊಲಿಸಿದರೆ ಪರದೇಶೀ ಸರ್ಜ ಅರಿವೆಗಿಂತ ಶ್ರೇಷ್ಠವಾಗಿ ತೋರುವವು! ನೋಡಲಿಕ್ಕೆ ಬಹಳ ಚಂದ ಓವ್ಹರ ಕೋಟುಗಳಿಗಂತೂ ತುಂಬಾ ಒಪ್ಪುತ್ತವೆ! ಈಗಿನ ಸ್ವದೇಶೀ ಚಳವಳಿಗೆ ಅತಿಶಯ ಅನುಕೂಲ. ಯಾಕಂದರೆ ಉಣ್ಣೆಯು ಇಲ್ಲೇ ತಯಾರಾಗಿದ್ದು, ಉಣ್ಣೆಯಿಂದ ಕಂಬಳಿಗಳು ಇಲ್ಲೇ ಸಿದ್ಧವಾಗಿವೆ. ಈ ಕಾರಣಕ್ಕೋಸ್ಕರವೇ ಮುಂಬಯಿ ಬೆಳಗಾಂವಿಗಳಿಂದ ಪ್ರತಿ ತಿಂಗಳಿಗೆ ನೂರಾರು ಗಟ್ಟಿ ಕಂಬಳಿಗಳನ್ನು ವ್ಯಾಪಾರಸ್ಥರು ನಮ್ಮಿಂದ ತರಿಸಿಕೊಳ್ಳುತ್ತಾರೆ. ಪರಸ್ಥಳದಲ್ಲಿರುವ ಜನರು ಅರ್ಧ ಮುಂಗಡ ಹಣವನ್ನು ಕಳಿಸಿ ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಗಿರಾಕಿಗಳು ತಮಗೆ ಕಂಬಳಿಗಳು ಯಾವ ಕಾರಣಕ್ಕಾಗಿ ಬೇಕೆಂಬವನ್ನು ತಿಳಿಸಿದರೆ ಒಳ್ಳೇ ನಮೂನೆಗಳನ್ನು ಆರಿಸಿ ಕಳುಹುವೆವು. ವ್ಯಾಪಾರಸ್ಥರಿಗೆ ಯೋಗ್ಯ ದರ.

ಶ್ಯಾಮರಾವ ಮತ್ತು ರಾಜೇರಾವ ಮಂಗಳವೇಢೇಕರ

ಜವಳೀ ವ್ಯಾಪಾರಸ್ಥರು ಬಾಗಲಕೋಟೆ



# ಡಾ. ಇಂಗಳೀಕರ

ಎಲ್. ಸಿ. ಎಚ್. ಸಿ.

ಇವರ

ಹದಿನೆಂಟುವರ್ಷ ಅನುಭವದಿಂದ ಉತ್ತಮವೆಂದು ನಿಶ್ಚಿತವಾದ ಔಷಧಗಳು.

| | | | |
|---|---|---|---|
| ಬಾಲಾಮೃತ **ಹುಡುಗರಿಗೆ** | ೦ | ೧೨ | ೦ |
| ಕೆಮ್ಯೂಟೋ **ಸಾರ್ಸಾಪರಿಲಾ** | ೧ | ೦ | ೦ |
| ವೆಜಿಟೇಬಲ್ **ಟಾನಿಕ ಸಾಯರಪ** ಶಕ್ತಿವರ್ಧಕ ಮತ್ತು ಸ್ಮರಣಶಕ್ತಿಯಮೇಲೆ | ೧ | ೦ | ೦ |
| ವೀರ್ಯವರ್ಧಕ ಸಾಯರಪ್ | ೧ | ೦ | ೦ |
| ಸರಮಿಯ ಗುಳಿಗೆಗಳು, ಪುಡಿಯು ಮತ್ತು ಅರ್ಕವು | ೧ | ೦ | ೦ |
| ಪರಮಿಯ ಔಷಧಗಳು | ೧ | ೦ | ೦ |
| ಚಟ್ಟೆಗಳ ಸುಲಮ | ೦ | ೮ | ೦ |
| ಚಳಿಜ್ವರ ಗುಳಿಗೆಗಳು | ೦ | ೧೨ | ೦ |
| ಮುಟ್ಟಿನ ಬೇನೆಯ ಗುಳಿಗೆಗಳು | ೧ | ೦ | ೦ |
| ಸುಖಪ್ರಸೂತಿಯ ಗುಳಿಗೆಗಳು | ೧ | ೦ | ೦ |

ಡಾ. ಇಂಗಳೀಕರ, L. C. H. C.

ಬಾಗಲಕೋಟೆ.



ದಿ. ಕರ್ನಾಟಕ ಹೋಮಿಯೋ ಫಾರ್ಮಸೀ

ಬಾಗಲಕೋಟೆ.

ಕರ್ನಾಟಕದಲ್ಲಿ ಪೂರ್ಣ ವಿಶ್ವಸನೀಯವಾದ ಹೋಮಿಯೋಪಾಥೀ ಔಷಧಗಳನ್ನು ಪೂರೈಸುವ ಫಾರ್ಮಸಿಯು ಇದೇ ಮೊದಲನೇಯದು ಈ ಔಷಧಗಳನ್ನು ಅಮೇರಿಕೆಯ ಪದವೀ ಹೊಂದಿದ್ದು ಅಪ್ಪ ಪದವೀಧರರಾದ ಡಾಕ್ಟರರ ಪ್ರತ್ಯಕ್ಷದಲ್ಲಿ ತಯಾರಿಸಲ್ಪಡುತ್ತಿರುವದರಿಂದ ಅವುಗಳಬಗ್ಗೆ ಯಾರಿಗೂ ಸಂಶಯ ತೆಗೆಯುವ ಕಾರಣವಿಲ್ಲ. ಔಷಧಗಳನ್ನು ತರಿಸಿ ಅನುಭವವನ್ನು ತೆಗೆದುಕೊಳ್ಳಬೇಕು ವ್ಯವಸ್ಥಾಪಕ.



ಶ್ರೀ ಬನಶಂಕರೀಪ್ರಸನ್ನ.

ಸ್ವದೇಶೀ ! ಶುದ್ಧಸ್ವದೇಶೀ !! ಒಡವೆಗಳು !!!

ಎಲ್ಲ ತರದ ಸ್ವದೇಶೀ - ಶುದ್ಧಸ್ವದೇಶೀ - ಒಡವೆಗಳನ್ನು ನಾವು ಸಂಗ್ರಹಿಸಿದ್ದೇವೆ. ನಮ್ಮ ದೇಶದೊಳಗಿನ ಕಲಾಕುಶಲತೆಯು ಬೆಳೆದು ಉತ್ತೇಜನದೊರೆಯಬೇಕೆಂಬ ಮತ್ತು ನಮ್ಮ ರಾಷ್ಟ್ರದ ಸ್ವಾತಂತ್ರ್ಯವು ಬೆಳೆಯಬೇಕೆಂಬ ಉದ್ದೇಶದಿಂದಲೇ ನಾವು ಈ **ಸ್ವದೇಶೀ ಸಂಗ್ರಹಾಲಯವನ್ನು** ಸ್ಥಾಪಿಸಿದ್ದೇವೆ ಸ್ವದೇಶೀ ಸಕ್ಕರೆ, ಕೈನೂಲಿನಿಂದ ತಯಾರಾದ ಶುದ್ಧ ಖಾದಿಯ ಸೀರೆ, ಧೋತರ, ಖಣ ಮೊದಲಾದ ವಸ್ತ್ರಗಳೂ, ಕನ್ನಡಿಪೆಟ್ಟಿಗೆ ಸೀಸವೇಸ, ಕಾಗದ ಮತ್ತು ಬೇರೆ ತರದ ಸ್ವದೇಶೀ ಸ್ಟೇಶನರೀ ಸಾಮಾನುಗಳೂ, ಪೇಟೆಂಟ ದೇಶೀ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

ಭಾರತ ವಸ್ತು ಸಂಗ್ರಹಾಲಯ,

ಮತ್ತು ಮಹಾತ್ಮಾ ವಸ್ತ್ರ ಭಾಂಡಾರ.

ಬಾಗಲಕೋಟೆ.



*Shree Mahalaxmi Stores,*

BAGALKOT.

Wholesale Dealers in papers, swadeshi slates, and Ogle's glass Wares.

ನಮ್ಮಲ್ಲಿ ಎಲ್ಲ ತರದ ಕಾಗದಗಳೂ, ಸ್ವದೇಶೀ ಪಾಟಿಗಳೂ, ಮೈ ತೊಳೆಯುವ ಸಾಬಾಣಗಳೂ ಮತ್ತು ಸುಗಂಧ ದ್ರವ್ಯಗಳೂ, ಬೇರೆ ಬೇರೆ ನಮೂನೆಯ ಪಾತ್ರೆಗಳೂ, ಮತ್ತು ಇತರ ಸ್ಟೇಶನರೀ ಸಾಮಾನುಗಳೂ ಮಾರಲಿಕ್ಕೆ ದೊರೆಯುತ್ತವೆ

*Proprietors:—*

Parvatikar & Katgeri Bros, BAGALKOT.

ಶ್ರೀ ಮಹಾಲಕ್ಷ್ಮೀ ಸ್ಟೋರ್ಸ

ಬಾಗಲಕೋಟೆ.


ಈ ಪತ್ರಿಕೆಯನ್ನು ಬಾಗಲಕೋಟೆ ವೆಂಕಟಪೇಟೆಯಲಿ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಶ್ರೀನಿವಾಸ ರಾಜೇರಾವ ಮಂಗಳವೇಢೆ (ಸಂಪಾದಕ) ಇವರು ಮುದ್ರಿಸಿದರು ಮತ್ತು ಅಲ್ಲಿಯೇ ಕನ್ನಡ ನವಜೀವನ ಕಾರ್ಯಾಲಯದಲ್ಲಿ ಪುರೋಹಿತ ಇವರು ಪ್ರಸಿದ್ಧಿಸಿದರು.

ಧೀರರ ವಿಚಾರವು.

R. N. 1589

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ ' ಯಂಗ ಇಂಡಿಯಾ ' ಮತ್ತು ' ನವಜೀವನ ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟೆ ಭಾದ್ರಪದ ವದ್ಯ ೮ ಶಕೆ ೧೮೪೪ | ಗುರುವಾರ ತಾ ೧೪ ಸಪ್ಟಂಬರ ೧೯೨೨ | ಸಂಚಿಕೆ ೪೦

## ಮಹಾತ್ಮರ ನುಡಿಯು.

### ಮ. ಗಾಂಧಿ ಮತ್ತು ಅಸ್ಪೃಶ್ಯ ವರ್ಗವು.

( ಯಂಗ ಇಂಡಿಯಾ ತಾ॥ ೨೭-೪-೨೧ )

ಅಹಮ್ಮದಾಬಾದದಲ್ಲಿ ೧೩ ಮತ್ತು ೧೪ ನೇ ದಿವಸ ಕೂಡಿದ ಹಿಂದುಳಿದ ಜಾತಿಯರ ಸಂಮ್ಮೇಲನದ ಅಧ್ಯಕ್ಷರು ಮ. ಗಾಂಧಿಯವರೇ ಆಗಿದ್ದರು. ಊರೊಳಗಿನ ಅನೇಕ ದೊಡ್ಡ ದೊಡ್ಡ ಗೃಹಸ್ಥರೂ ಗೃಹಿಣೀಯರೂ ಬರಮಾಡಿದ್ದರು; ಆದರೆ ನಿರೀಕ್ಷಿಸಿದಷ್ಟು ಅಂತ್ಯಜರು ಮಾತ್ರ ಬಂದಿರಲಿಲ್ಲ. ಇದಕ್ಕೆ ಕಾರಣವೇನಂದರೆ ಅಲ್ಲಿಗೆ ಹೋದವರನ್ನು ಸರಕಾರದವರು ಹಿಡಿದೊಯ್ಯುವರೆಂಬ ವಾರ್ತೆ ಅವರಲ್ಲಿ ಹಬ್ಬಿತ್ತಂತೆ.

ಬಂದವರ ಈ ಅಲ್ಪ ಸಂಖ್ಯೆಯನ್ನು ಕುರಿತು ಮ. ಗಾಂಧಿಯವರು ಮೊದಲು ತಮ್ಮ ಖೇದವನ್ನು ವ್ಯಕ್ತಮಾಡಿ, ಇಂಥ ಸಮ್ಮೇಲನಗಳಿಂದ ಸಾಮಾಜಿಕಸುಧಾರಣೆಯ ಕಾರ್ಯವು ನೆರವೇರುವದೆಂಬ ತಮ್ಮ ಮತವು. ಇಂಥ ಉದಾಹರಣೆಗಳಿಂದ ಮತ್ತಿಷ್ಟು ಸ್ಥಿರವಾಗುತ್ತಿರುವದೆಂದು ಒಡೆದು ಹೇಳಿದರು; ಆದ್ದರಿಂದ ತಾವು ನಿರೀಕ್ಷಿಸಿದ ವೇಳೆಗಿಂತಲೂ ಕಡಿಮೆವೇಳೆ ಮಾತಾಡಿದರು ' ಇಂಥ ಕಾರ್ಯಗಳಲ್ಲಿಯ ನನ್ನ ಉತ್ಸಾಹವು ಕುಗ್ಗಿರುವದೆಂದು ಯಾರೂ ತಿಳಿಯಕೂಡದು, ಆದರೆ ನಾನು ಹೇಳುವದನ್ನು ಯಾರು ಕೇಳಬೇಕೆಂದು ನನ್ನ ಇಚ್ಛೆ ಇರುವದೋ ಅವರೇ ಇಲ್ಲಿ ಇರುವದಿಲ್ಲವಾದ್ದರಿಂದ ಬಹಳ ಹೇಳಿ ಫಲವೇನು? ಈ ಸಮ್ಮೇಲನದ ನೆವದಿಂದ ನನ್ನ ಮಿತ್ರರೂ ನಾನೂ ಒಂದೇ ವ್ಯಾಸಪೀಠದ ಮೇಲೆ ಕೂಡ್ರಲು ಅನುವಾದ್ದರಿಂದ–ಯಾವ ಮಿತ್ರರ ಸಮಾಗಮವು ನನಗೊಂದು ಸಂಭ್ರಮವೇ ಆಗುತ್ತಿತ್ತೋ ಮತ್ತು ಈಗಿನ ಚಳವಳಿಯ ಮೂಲಕ ದುರ್ದೈವದಿಂದ ಯಾರ ದರ್ಶನವು ದುರ್ಲಭವಾಗಿರುವದೋ – ಅಂಥ ಸ್ನೇಹಿಗಳ ಸಮಾಗಮವನ್ನು ಕೂಡಿಸಿಕೊಟ್ಟದ್ದಕ್ಕಾಗಿ ಸಮ್ಮೇಲನದ ಉಪಕಾರವನ್ನು ಸ್ಮರಿಸುವೆನು. ಅಸ್ಪೃಶ್ಯತೆಯ ವಿಚಾರದಲ್ಲಿ ನಾನೂ ನೀವೂ ಒಂದೇ ಮತದವರಿರುವದರಿಂದ, ಒಳ್ಳೇ ಆನಂದದಿಂದ ಹೇಳುತ್ತೇನೆ" ಆ ಮೇಲೆ ಪ್ರಸ್ತುತ ವಿಷಯವನ್ನು ಕುರಿತು ಅವರು ಅಂದದ್ದೇನಂದರೆ:—

ಈ ಬಗ್ಗೆ ತಮ್ಮ ತಿಳುವಳಿಕೆಯುಳ್ಳವರಿಗೆ ಏನು ಹೇಳಿ ಅವರವನ್ನಿಗೆ ಖಾತ್ರಿಮಾಡಿಕೊಡಬೇಕೆಂಬದು ನನಗೆ ತಿಳಿಯದಾಗಿರುವದು. ಅಂತ್ಯಜನರನ್ನು ಮುಟ್ಟಿದರೆ ಮೈಲಿಗೆ ಆಗುವದೆಂದೂ, ಸ್ನಾನಮಾಡದೆ ಅದು ಹೋಗದೆಂದೂ, ಮುಟ್ಟಿ ಸ್ನಾನಮಾಡದೆ ಇರುವದು ಪಾಪವೆಂದೂ ತಿಳಿದುಕೊಂಡವರ ಸಂಗಡ ಯಾವರೀತಿಯಿಂದ ವಾದಿಸಬೇಕ? ನನ್ನ ಅಂತರಾತ್ಮಕ್ಕೆ ಅನಿಸುತ್ತಿರುವದನ್ನಷ್ಟು ಮಾತ್ರ ನಾನು ಅವರ ಮುಂದೆ ಹೇಳಬಲ್ಲೆನು.

ಅಸ್ಪೃಶ್ಯತೆಯು ಹಿಂದೂ ಧರ್ಮಕ್ಕೆ ಒಂದು ದೊಡ್ಡ ಕಲಂಕವಾಗಿರುವದು; ಆಫ್ರಿಕೆಯೊಳಗಿದ್ದಾಗಿನ ದುಃಖಮಯವಾದ ಅನುಭವದಿಂದೇನೂ ಈ ವಿಚಾರವು ನನ್ನಲ್ಲಿ ಉದ್ಭವಿಸಿರುವದಿಲ್ಲ. ನಾನು ಮೊದಲು ನಾಸ್ತಿಕನಿದ್ದೆನೆಂಬುವದೂ ಇದಕ್ಕೆ ಕಾರಣವಲ್ಲ; ಕ್ರೈಸ್ತೀ ಧರ್ಮ ಗ್ರಂಥಗಳ ಅಧ್ಯಯನದಿಂದ ನನ್ನಲ್ಲಿ ಈ ವಿಚಾರವು ಹುಟ್ಟಿರುವದೆಂದು ಹೇಳುವದೂ ತಪ್ಪು. ಕ್ರೈಸ್ತೀ ಧರ್ಮಕ್ಕೂ ನನಗೂ ಪರಿಚಯವಾಗದೆ ಇರುವದಕ್ಕಿಂತಲೂ ಬಹಳೇ ಮೊದಲು ಈ ವಿಚಾರವು ನನ್ನಲ್ಲಿ ಅಂಕುರಿಸಿತ್ತು.

ಈ ವಿಚಾರವು ನನ್ನಲ್ಲಿ ಉದಯಿಸಿದಾಗ ನನಗೆ ಇನ್ನೂ ಹನ್ನೆರಡು ವರ್ಷಗಳು ಸಹ ಆಗಿರಲಿಲ್ಲ. ಊಕಾನೆಂಬ ಭಂಗಿಯೋರ್ವನು ನಾಯಖಾನೆಯನ್ನು ಬಳಿಯಲಿಕ್ಕೆ ದಿನಾಲು ನಮ್ಮ ಮನೆಗೆ ಬರುತ್ತಿದ್ದನು, ನಾನು ಅವನನ್ನು ಮುಟ್ಟಿದರೆ ದೋಷವೇನು? ನಾನು ಯಾಕೆ ಮುಟ್ಟಬಾರದೆಂದು ನನ್ನ ತಾಯಿಗೆ ಮೇಲಿಂದ ಮೇಲೆ ಕೇಳುತ್ತಿದ್ದೆನು. ಆಕಸ್ಮಾತ್ ನಾನು ಊಕಾನನ್ನು ಮುಟ್ಟಿದರೆ ನನಗೆ ಸ್ನಾನಕ್ಕೆ ಹಾಕುತ್ತಿದ್ದರು. ನಾನು ಅವರ ಆಜ್ಞೆಯನ್ನು ಪಾಲಿಸುತ್ತಿದ್ದರೂ ಧರ್ಮದಲ್ಲಿ ಅಸ್ಪೃಶ್ಯತೆಯ ಬಗ್ಗೆ ಹೇಳಿರುವದಿಲ್ಲ. ಹೀಗೆ ಹೇಳುವದು ಅನೇಕ ಅಸಂಭವವಾದದ್ದು, ಎಂದು ನಗುತ್ತ ಪ್ರತಿಪಾದಿಸುತ್ತಿದ್ದನು. ನಾನು ಬಹಳ ಸಭ್ಯವರ್ತನದವನೂ ಆಜ್ಞಾಧಾರಕನೂ ಆಗಿದ್ದದ್ದರಿಂದ ತಾಯಿತಂದೆಗಳ ವಿಷಯಕ್ಕಿರುವ ನನ್ನ ಆದರಭಾವವನ್ನು ಕಾಯ್ದುಕೊಂಡು ಆದಷ್ಟು ಅವರ ಸಂಗಡ ಇದರ ವಿಷಯಕ್ಕೆ ಮೇಲಿಂದ ಮೇಲೆ ವಾದಿಸುತ್ತಿದ್ದೆನು: ' ಊಕಾ ' ನ ಮೈ ಮುಟ್ಟಿದರೆ ಪಾಪ ಒದಗುವದೆಂದು ನೀನು ಹೇಳುವದು ಸರ್ವಥಾ ತಪ್ಪೆಂದು ನನ್ನ ತಾಯಿಗೆ ನಾನು ಸ್ಪಷ್ಟವಾಗಿ ಹೇಳಿದ್ದೆನು; ಶಾಲೆಯೊಳಗೆ ನಾನು ಅಸ್ಪೃಶ್ಯರನ್ನು ಅನೇಕ ವೇಳೆ ಮುಟ್ಟುತ್ತಿದ್ದೆನು. ಹೀಗೆ ಮುಟ್ಟಿದ್ದನ್ನು ನಾನು ಎಂದೂ ಮುಚ್ಚಿಡುತ್ತಿದ್ದಿಲ್ಲ; ನನ್ನ ತಾಯಿಗೆ ಬಂದು ಹೇಳಲು ಅವಳು ನನಗೊಂದು ಸುಲಭೋಪಾಯವನ್ನು ಹೇಳಿಕೊಟ್ಟಳು. ಅಂತ್ಯಜರ ಪಾಪಮಯವಾದ ಸ್ಪರ್ಶವಾದ ನಂತರ ಅಲ್ಲಿಯೇ ಹಾದುಹೋಗುವ ಒಬ್ಬ ಮುಸಲ್ಮಾನನನ್ನು ಮುಟ್ಟಿಬಿಡುಲಂದರೆ ಆ ಪಾಪವು ನಿನ್ನಿಂದ ಹಾರಿಹೋಗುವದೆಂದು ಸೂಚಿಸಿಕೊಟ್ಟಳು; ಕೇವಲ ತಾಯಿ ಹೇಳಿರುವಳೆಂಬ ಪೂಜ್ಯಭಾವನೆಯಿಂದಲೇ ನಾನು ಅನೇಕ ವೇಳೆ ಹಾಗೆ ಮಾಡಿದೆನು. ಆದರೆ ಅದು

ಧರ್ಮವೆಂದು ಅದರೊಳಗೆ ನನ್ನ ವಿಶ್ವಾಸವು ಎಂದೂ ಇರಲಿಲ್ಲ. ಕೆಲವು ದಿವಸಗಳ ಮೇಲೆ ನಾವು ಪೋರಬಂದರಕ್ಕೆ ಹೋದೆವು. ಸಂಸ್ಕೃತವನ್ನು ನಾನು ಮೊದಲು ಕಲಿಯುತ್ತಿದ್ದೆನು ಅಲ್ಲಿಯ ... ನನ್ನ ... ಇನ್ನೂ ಇಂಗ್ಲಿಷ ಸಾಲೆಗೆ ಹೋಗಿರಲಿಲ್ಲ. ನನ್ನ ಅಣ್ಣನೂ ನಾನೂ ಒಬ್ಬ ಬ್ರಾಹ್ಮಣನ ಬಳಿಯಲ್ಲಿ ಕಲಿಯುತ್ತಿದ್ದೆವು. ಅವನು ನಮಗೆ 'ರಾಮರಕ್ಷಾ' ಮತ್ತು 'ವಿಷ್ಣುಪಂಜರ' ಕಲಿಸುತ್ತಿದ್ದನು. ಅದರೊಳಗಿನ "ಜಲೇ ವಿಷ್ಣುಃ, ಸ್ಥಲೇ ವಿಷ್ಣುಃ" ಇವನ್ನು ಇನ್ನೂ ಮರೆತಿರುವದಿಲ್ಲ. ನಮ್ಮ ಮನೆಯ ಹತ್ತಿರ ಮಾತೃಸಮಾನಳಾದ ಮಾಯಿಯೆಂಬ ವೃದ್ಧ ಕೆಲಸಗಾರಳು ಇರುತ್ತಿದ್ದಳು. ನಾನು ಆಗ ಬಹಳ ಪುಕ್ಕನಿದ್ದೆನು, ರಾತ್ರಿಯಲ್ಲಿ ದೀಪಗಳು ಹೋಗಿ ಕತ್ತಲೆಯಾದಕೂಡಲೆ ದೆವ್ವಗಳು ಬರುವವೆಂದು ಭಯಪಡುತ್ತಿದ್ದೆನು. ನನ್ನ ಅಂಜಿಕೆಯನ್ನು ಕಳೆಯಬೇಕೆಂದು ಈ ವಯೋವೃದ್ಧಳು "ಅಂಜಿಕೆಯುಂಟಾದಾಗೆಲ್ಲ 'ರಾಮರಕ್ಷೆಯನ್ನು' ಜಪಿಸಿದರೆ ದೆವ್ವಗಳು ಓಡಿಹೋಗುವವು" ಎಂದು ಹೇಳಿದಳು. ನಾನು ಹಾಗೆ ಮಾಡಹತ್ತಿದೆನು. ಅದರ ಪರಿಣಾಮವಾ [illegible] ಆಯಿತು. ಅಸ್ಪೃಶ್ಯನನ್ನು ಮುಟ್ಟಿದರೆ ಪಾಪವೆಂದು ರಾಮರಕ್ಷೆಯಲ್ಲಿ ಹೇಳಿರುವದೆಂದು ಆಗ್ಗೆ ನಾನು ಎಂದೂ ನಂಬಿರಲಿಲ್ಲ. ಆಗ್ಗೆ ನನಗೂ ಅದರ ಅರ್ಥವಾಗುತ್ತಿದ್ದಿಲ್ಲ. ತಿಳಿದರೂ ಅರ್ಧಮರ್ಧ ಆಗುತ್ತಿತ್ತು. ಆದರೆ ದೆವ್ವಗಳನ್ನೇ ಓಡಿಸಿಬಿಡುವಂಥ 'ರಾಮರಕ್ಷೆಯು' ಅಂತ್ಯಜರ ಸ್ಪರ್ಶಕ್ಕೆ ಎಂದೂ ಹೆದರುವದಿಲ್ಲವೆಂದು ನನಗೆ ದೃಢವಿಶ್ವಾಸವಿತ್ತು.

ನಮ್ಮ ಮನೆಯಲ್ಲಿ ದಿನಾಲು ರಾಮಾಯಣ ಪುರಾಣವು ನಡೆಯುತ್ತಿತ್ತು. ಲಾಧಾ ಮಹಾರಾಜನೆಂಬ ಬ್ರಾಹ್ಮಣನು ಹೇಳುತ್ತಿದ್ದನು. ಅವನಿಗೆ ಬಿಳಪು ಹತ್ತಿತ್ತು. ದಿನಾಲು ರಾಮಾಯಣ ಓದುವದರಿಂದ ಅದು ಹೋಗುವದೆಂದು ಅವನು ಖಂಡಿತವಾಗಿ ನಂಬಿದ್ದನು. ಅದರಂತೆ ಅದು ಹೋಗಿಯೂ ಹೋಯಿತು. ಯಾವ ರಾಮಾಯಣದಲ್ಲಿ ರಾಮನನ್ನು—ಈಗಿನ ದಿವಸಗಳಲ್ಲಿ ಅಸ್ಪೃಶ್ಯನೆಂದು ತಿಳಿಯಲ್ಪಡುವಂಥವನೇ ಒಬ್ಬನು ಗಂಗೆಯನ್ನು ತನ್ನ ನೌಕೆಯಲ್ಲಿ ದಾಟಿಸಿದನೆಂದು ಕಥೆಯುಂಟೋ? ಅಂಥ ರಾಮಾಯಣವು ಮಾನವ ಪ್ರಾಣಿಯನ್ನು (ಪತಿತನೇ ಆಗಿರಲಿ) ಅಸ್ಪೃಶ್ಯನೆಂದು ತಿಳಿಯಬಲ್ಲದೇ! ನಾವು ದೇವರನ್ನು ಪತಿತಪಾವನನೆಂದೂ ಇದೇ ಅರ್ಥದ ಇನ್ನೂ ಕೆಲವು ಅಭಿಮಾನಗಳಿಂದ ಕರೆಯುತ್ತಿರುವದಿಲ್ಲವೇ? ಹಿಂದೂ ಜಾತಿಯಲ್ಲಿ ಹುಟ್ಟಿದ ಯಾವನೇ ಮಾನವನನ್ನು ಅಸ್ಪೃಶ್ಯನೆಂದು ಭಾವಿಸುವದೇ ಘೋರತರವಾದದೆಂದೂ ರಾಕ್ಷಸಕರವಾದದ್ದೆಂದೂ ಇದರಿಂದ ಗೊತ್ತಾಗುತ್ತದೆ. ಇದು ಪಾಪಮಯವಾದದ್ದೆಂದು ಎಷ್ಟು ಹೇಳಿದರೂ ನನಗೆ ಬೇಸರಬರುದದಿಲ್ಲ. ನಾನು ಹನ್ನೆರಡು ವರ್ಷದವನಿದ್ದಾಗಲೇ ನನಗೆ ಇದರ ವಿಷಯಕ್ಕೆ ಇಷ್ಟು ಖಾತ್ರಿಯಾಗಿತ್ತೆಂದು ನಾನು ಹೇಳಿಕೊಳ್ಳುವದಿಲ್ಲ, ಆದರೆ ಇದು ಪಾಪವೆಂದು ಮಾತ್ರ ಆಗಲೇ ನನಗೆ ಹೊಳೆದಿತ್ತು. ನಾನು ಇಷ್ಟೆಲ್ಲ ಕಥೆಯನ್ನು ವೈಷ್ಣವರಿಗಾಗಿಯೂ ಮತ್ತು ಭಾವಿಕರಾದ ಹಿಂದೂ ಜನರ ಸಲುವಾಗಿಯೂ ಹೇಳುವೆನು.

ನಾನು ಸನಾತನೀ ಹಿಂದೂ ಎಂದು ಯಾವಾಗಲೂ ಹೇಳಿಕೊಳ್ಳುತ್ತಿರುವೆನು, ಧರ್ಮಶಾಸ್ತ್ರವು ನನಗೆ ಅಗದೀ ಗೊತ್ತಿಲ್ಲ, ಹೀಗೇ ನಿಜವದಿಲ್ಲ. ನಾನು ಸಂಸ್ಕೃತದಲ್ಲಿ ದೊಡ್ಡ ಪಂಡಿತನೂ ಅಲ್ಲ. ವೇದ ಉಪನಿಷತ್ತುಗಳ ಭಾಷಾಂತರವನ್ನು ಮಾತ್ರ ನಾನು ಓದಿರುವೆನು, ಆದ್ದರಿಂದ ಸ್ವಾಭಾವಿಕವಾಗಿ ಅವುಗಳ ನನ್ನ ಅಧ್ಯಯನವು ಅಷ್ಟೇನು ಸೂಕ್ಷ್ಮರೀತಿಯಿಂದಾಗಿರುವದಿಲ್ಲ. ಮತ್ತು ಅದು ಸರ್ವಪರಿಪೂರ್ಣವಿದ್ದರೂ ಹಿಂದೂವು ತನ್ನ ಧರ್ಮವನ್ನು ತಿಳಿದುಕೊಳ್ಳುವದಕ್ಕಾಗಿ ಹೇಗೆ ಓದಬೇಕೋ ಹಾಗೆ ಓದಿರುವೆನು, ಮತ್ತು ಅವುಗಳ ಮುದಿತ ಮರ್ಮವು ನನಗೆ ಪೂರ್ಣ ತಿಳಿದಿರುವದೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಇಪ್ಪತ್ತೆಂಟು ವರ್ಷದವನಾಗುವದಕ್ಕೆ ಪೂರ್ವದಲ್ಲಿ ನಾನು ಕೆಲವು ಮತಧರ್ಮಗಳ ವಿಷಯಕ್ಕೆ ಅಭ್ಯಾಸಿಸಿದ್ದೆನು. ಕ್ರಿಸ್ತೀಧರ್ಮವನ್ನು ಸ್ವೀಕರಿಸಬೇಕೋ ಹಿಂದೂ ಧರ್ಮಕ್ಕೆ ಅಂಟಿಕೊಂಡು ಉಳಿಯಬೇಕೋ ಎಂಬ ಸಂಶಯದಿಂದ ಒಮ್ಮೆ ಕೆಲವು ವೇಳೆಯವರೆಗೆ ನನ್ನ ಮನಸ್ಸು ಹೊಯ್ದಾಡುತ್ತಿತ್ತು. ನನ್ನ ಮನಸ್ಸಿಗೆ ಸ್ವಲ್ಪ ಸ್ಥಿರತ್ವವು ಪ್ರಾಪ್ತವಾದ ನಂತರ ಹಿಂದೂ ಧರ್ಮದಿಂದಲೇ ನನಗೆ ಮೋಕ್ಷ ದೊರೆಯಬಹುದೆಂದು ಭಾವಿಸಹತ್ತಿದೆನು ಮತ್ತು ಅಂದಿನಿಂದ ಹಿಂದೂ ಧರ್ಮದಲ್ಲಿ ನನ್ನ ವಿಶ್ವಾಸವು ದೃಢವಾಗಹತ್ತಿರುವದು.

ಇಷ್ಟಾದರೂ ಅಸ್ಪೃಶ್ಯತೆಯು ಹಿಂದೂ ಧರ್ಮದ ಭಾಗವಾಗಿರುವದಿಲ್ಲವೆಂದೇ ನನ್ನ ನಂಬಿಗೆಯು.

ನಿಜವಾದ ಹಿಂದೂ ಧರ್ಮವು ಅಸ್ಪೃಶ್ಯರನ್ನು ಮುಟ್ಟುವದು ಪಾಪವೆಂದು ತಿಳಿಯುವದಿಲ್ಲ. ಶಾಸ್ತ್ರಗಳ ಅರ್ಥಹಚ್ಚುವ ಹವ್ಯಾಸಕ್ಕೆ ನಾನು ಬೀಳುವದಿಲ್ಲ. ಭಾಗವತ ಮತ್ತು ಮನುಸ್ಮೃತಿಗಳೊಳಗಿನ ಆಧಾರ ಕೇಳಿದರೆ ನಾನು ಹೇಳಲಾರೆನು. ಆದರೆ ಹಿಂದೂಧರ್ಮದ ಮರ್ಮವನ್ನು ನಾನು ಪೂರ್ಣ ಬಲ್ಲೆನು. ಅಸ್ಪೃಶ್ಯತೆಯನ್ನು ಒಪ್ಪಿದಲ್ಲಿ ಹಿಂದೂ ಧರ್ಮವು ಪಾಪಮಾಡಿರುವದು. ಅದು ನಮ್ಮನ್ನು ಪದಚ್ಯುತ ಮಾಡಿರುವದು. ಇದರಿಂದ ನಾವು ಸಾಮ್ರಾಜ್ಯದ ಅಸ್ಪೃಶ್ಯರಾಗಿರುವೆವು; ಮುಸಲ್ಮಾನರಿಗೂ ಸಹ ಇದರ ಸೆರಗು ಬಡೆದಿರುವದು. ದಕ್ಷಿಣ ಮತ್ತು ಪೂರ್ವ ಆಫ್ರಿಕೆಯಲ್ಲಿ ಅವರನ್ನು ಹಿಂದುಗಳಂತೆ ಅಸ್ಪೃಶ್ಯರೆಂದು ಭಾವಿಸುವರು. ಇಷ್ಟೆಲ್ಲ ಅನರ್ಥವು ಅಸ್ಪೃಶ್ಯತೆಯಿಂದ ಉದ್ಭವಿಸಿರುವದು.

( ಮುಂದಸಾಗುವದು )

## ಮುಂದಿನ ಬೆದರಗುಂಡು

ಯಂಗಇಂಡಿಯಾ

ಪ್ರಜಾಪ್ರೇಮವನ್ನು ಕಳೆದುಕೊಂಡ ಸರಕಾರಕ್ಕೆ ಶರಣುಬರುವದೊಂದೇ ತರುಣೋಪಾಯ ಆಗದೆ ಮುತ್ಸದ್ದಿಗಳೂ, ಶಾಂತತಾಪ್ರಿಯರೂ ಬಯಸದಂತೆ, ಕಾರ್ಯವು ಸರಪೇರಿದ್ದೇ ಆಗಿದ್ದರೆ, ರಾಷ್ಟ್ರ ರಾಷ್ಟ್ರಗಳಲ್ಲಿಯ ಪರಸ್ಪರ ಅಂತಃಕರಣವನ್ನು ಬೆಳಸಲಿಕ್ಕೂ ಮಿತ್ರತ್ವವನ್ನು ಹುಟ್ಟಿಸಲಿಕ್ಕೂ ಅಮೌಲ್ಯವಾದ ವೇಳೆಯನ್ನು ನಿರರ್ಥಕವಾಗಿ ಕಳೆಯುವ ಪ್ರಸಂಗವೇ ಬರುತ್ತಿದ್ದಿಲ್ಲ. ಆದರೆ ಜಗತ್ತಿನಲ್ಲಿ ಜ್ಞಾನವನ್ನಳಿದು ದುರಭಿಮಾನದ ಮತ್ತು ಅಧಿಕಾರದ ಮೇಲಿರುವ ಕ್ರೂರ ಪ್ರೇಮದಾಟವೇ ಕಂಡುಬರುವದರಿಂದ ಅಧಿಕಾರವನ್ನು ಅನ್ಯರಿಗೊಪ್ಪಿಸುವದು ಅಷ್ಟು ಸುಲಭವಾದದ್ದಿರುವದಿಲ್ಲ. ಜಾಗ್ರತಾವಸ್ಥೆಯುಳ್ಳಿದ್ದ ಯಾವ ರಾಷ್ಟ್ರದಲ್ಲಿಯೂ ಒತ್ತಾಯದಿಂದ ಯಾವ ಕಾರ್ಯವೂ ಆಗದಿದ್ದರೂ ಅದಕ್ಕೆ ಒತ್ತಾಯದ ಅನುಭವವು ಒಮ್ಮೆ ಬಂದೇ ತೀರಬೇಕು. ( ಬರುವದು ) ಒತ್ತಾಯವು ಮುಂದಿನ ಸಂತತಿಯ ಪ್ರೇಮವನ್ನು ಸಂಪಾದಿಸುವದಿಲ್ಲವೆಂಬುದು ಮನವರಿಕೆಯಾದ ಸಂಗತಿಯಾಗಿದ್ದರೂ ದುರಭಿಮಾನವು ದುಃಖವೆಂಬ ಸುಂಕವನ್ನು ತೆಗೆದುಕೊಳ್ಳದೆ, ಇತಿಹಾಸದ ಯಾವ ಬೋಧವನ್ನೂ ನಮಗೆ ಮಾಡಗೊಡುವದಿಲ್ಲ.

...ರಿಗೆ ನೇಕನಾಮದಾರ ಗವ್ಹರ್ನರರಿವನ್
... ಎಫ್. ಆರ್. ಎಸ್. ಆಯ. ಎಂಬವರಿಗೆ
... ) ನೇಮಿಸಿದ್ದರಿಂದ ಅವರು ಯಾವತ್ತು
...ಪಟ್ಟ ಆಸ್ತಿಯುಳ್ಳ ಮಾಲಕರ ಸಭೆಯು
...ನೇ ಸೋಮವಾರ ದಿವಸ ಮುಂಜಾನೆ
...ುನಸಿಪಾಲಿಟಿಯವರು ) ಆಸ್ತಿಯಮದೊಳಗೆ
... ಮಹತ್ವವಾದ ಹೆಚ್ಚು ಕಡಿಮೆಗಳನ್ನು ...

**ಪ್ರಕಟಿಸಿ ಕನ್ನಡ ಜನವಹೀನ ಬಾಗಲಕೋಟಿ. ತಾ. ೩೧ ಆ**
**ಭಾದ್ರಪದ ವದ್ಯ ೮ ಗುರುವಾರ ಶಕೆ ೧೮೪೪.**

## ನೋಟೀಸಿನ ಉತ್ತರವು.

ಬಸವ್ವಾ ಕೊಂ ನಾಗಪ್ಪಾ ಕೊಳ್ಳಿ ಸಾ॥ ಸೂಳೀಕೇರಿ ತಾ॥ ಬದಾ...
...ಇವಳಿಗೆ.

...ಗೆ ಸಹಿ ಮಾಡುವವನ ಕಡೆಯಿಂದ ನೋಟೀಸಿನ ಉತ್ತರ ಕೊಡು... ಏನಂದರೆ ನೀನು ನನ್ನ ಲಗ್ನದ ಹೆಂಡತಿ ಇದ್ದು ಲಗ್ನದವಾದ ಲಾ... ...ಯಿತ ಇವತ್ತಿನವರೆಗೆ ನನ್ನ ಮನೆಯಲ್ಲಿ ಸುರಳೀತ ಪ್ರಪಂಚ ಮಾ...ಡಾಇದ್ದಿ. ಈಗ ಅಜಮಾಸ ೨-೩ ತಿಂಗಳ ಹಿಂದೆ, ನಿಮ್ಮ ತಂದೆ ... ಪಂಚಮಿ ಹಬ್ಬದ ಮೂಲಕ ನಿನ್ನನ್ನು ಕರೆದುಕೊಂಡು ಹೋ...ದನು. ಅಲ್ಲಿ ನೀನು ದುಷ್ಟ ಜನರ ಕಲ್ಪೀ ಮಾತು ಕೇಳಿ ನಿನ್ನ ಮೈ ಮೇಲೆ ಇದ್ದ ದಾಗೀನ ಬಂಗಾರದ ಬಳೀ ಜೋಡು ೧ ತೊಲಿ ೫. ಬಂಗಾರದ ಗುಂಡಿನ ಟಿಕ್ಕಿ ೧ ತೊಲಿ ೨॥, ಬೆಳ್ಳಿ ತೋಳಬಂದಿ ಜೋ...ಡು ೧ ತೊಲಿ ೩೦, ಬೆಳ್ಳಿ ಚೌಕ ೧ ತೊಲಿ ೧೫. ಬಳ್ಳಿಡಾಬ ೧ ತೊ... ...ಪ್ರಕಾರ ಮುಳಗಿಸುವ ಇರಾದೆಯಿಂದ ನೋಟೀಸ ಮಾಡೀ... ಈ ನೋಟೀಸ ಮುಟ್ಟಿದ ೮ ದಿವಸಗಳಲ್ಲಿ ದಾಗೀನೇ ಸಹ ನನ್ನ ಮನೆಗೆ ಬರಬೇಕು. ತಪ್ಪಿ ಹಾಗೆ ಮಾಡದೆ ಇದ್ದರೆ ದಾಗಿನ ಅಪಹಾರ ಮಾಡಿದ ಬಗ್ಗೆ ಮತ್ತು ವಿನಹಕಾರಣ ನೋಟೀಸ ಮಾಡಿ ಬದಲಾ...ಮಮಾಡಿದಬಗ್ಗೆಯೋಗ್ಯ ಇಲಾಜ ಮಾಡುತ್ತೇನೆ. ಲಗ್ನದ ಹಕ್ಕು ಬ...ಟ್ಟುಕೊಡಲಿಕ್ಕೆ ನನ್ನ ಖುಷಿ ಇಲ್ಲ. ನೋಟೀಸ ಖರ್ಚು ನಿನ್ನ ತಲೆಯ ಮೇಲೆ.

ಅದೆ. ಸಹಿ ತಾರೀಖು ೧೧-೯-೧೯೨೨

☞ ಈ ಎಡ್ವೈಸು ಹೆಬ್ಬೆರಳಿನ ಗುರ್ತು ನಾಗಪ್ಪಾ ತಂದೆ ರಾಮಪ್ಪಾ ಕೊಳ್ಳಿ ಸಾ॥ ಸೂಳೀಕೇರಿ ಇವರದು ಇರುತ್ತದೆ.

---

...ಮಾಡಿಕೊ... ...ಎರಡನೆ ...ರಾಜರಂತಿರು ...ತ ತಾಲೂ...
...ಕದಾರ ಗೋಪಾಳ ...ನಸಾಯ ಇವರ ಉವಾತ್ತ ...ಉದಾಹರಣೆಯೇ

---

...ದುಸ್ಥಾನದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡು...ಡಿರುತ್ತದೆ. [illegible] ನಿವಾಸಿಗಳು ವನವಾಸಕ್ಕೆ ಹೋ... [illegible] ಹಿಂಬಾಲಿಸಿದಂತೆ ಪ್ರಜರು ನಮ್ಮ ರಾಮನೆಂ...ತಿಲೂಕದಾರರನ್ನು ಹಿಂಬಾಲಿಸಿದರೆ ಆಸ್ತಿಯ ಮೇಲಿನ ವ್ಯಾ...ಹೆಪ್ಪ ತಾನೇ ಇಲ್ಲದಾಗ ವದು.

[illegible] ಹಾಗೂ ಆಸ್ತಿಯನ್ನು ಕಳೆದು ಕೊಳ್ಳುವ [illegible] ಎಂದು ತೋರು...ತ್ತದೆ. ಆದರೆ [illegible] ಕಡಮೆ ಮಹತ್ವದ ಭಯವಾಗಿ, [illegible] ಗ್ಯಾರಿ...ಥ್ ನಿಮರಿಗೆ [illegible] ಉಗ್ರರೂಪ ಧಾರಣಮಾಡಿ ಬಂದಾಗ್ಯೆ [illegible] ಹಾಕಿಕೊಂಡ ಮುಗ್ಧಜ [illegible] ಕೊನೆಯ ಶಸ್ತ್ರಪ್ರಯೋಗ ಮಾಡಿಕೊಡುವ ಪ್ರಸಂಗವನ್ನು [illegible] ಟ್ಟರೆ [illegible] ನಿಶ್ಚಯವಾದದ್ದು.

ಈ ಬಗೆಯಿಂದ ಸ್ವಂತ [illegible] ಉದಾಹರಣೆಗಳನ್ನು ಹೇಳಿದ ಕಾರಣವೇನು? [illegible] ಮತ್ತು ಶಾಂತಿ [illegible] ಮಾರ್ಗಗಳನ್ನು ಬಿಟ್ಟುಕೊಟ್ಟು, [illegible] ವಿಷಯಕ್ಕೆ ಮಾತಾಡುವ ಕಾರಣವೇನು? ... ಎಂದರೆ ನಾವು ಸ್ವರಾಜ್ಯ ತಗದುಕೊಳ್ಳಲು ನಿಶ್ಚಯಿಸಿದ್ದೇವೆ, ಶಾಂತತಾ ಭಂಗವಾಗಿ ಶಸ್ತ್ರಬಲದಿಂದ ಕಾದುವದು ಹಿಂದುಸ್ಥಾನಕ್ಕೆ ಶಕ್ಯವಿಲ್ಲ. ಅಪರಿಮಿತ ದುಃಖ ಸಹನಮಾಡಿಕೊಳ್ಳುವದು, ಹಾಗೂ ಸಹಕಾರ ಮಾಡದಿರುವದು ಎಂಬ ಎರಡೇ ಮಾರ್ಗಗಳು ನಮಗೆ ಅನುಕೂಲವಾಗಿರುವವು; ರಾಷ್ಟ್ರವು ಮೊದಲನೆಯ ಮಾರ್ಗವನ್ನು ಆರಿಸಿಯದೆ.

---

### ಬಾಗಲಕೋಟೆ ತಾಲೂಕ ಕಾಂಗ್ರೆಸ್ ಕಮೀಟಿಯ ಸಾಧಾರಣ ಸಭೆಯು.

ಮೊದಲೇ ಪ್ರಸಿದ್ಧವಾದಂತೆ ರವಿವಾರ ತಾ॥ ೧೦-೯-೨೨ ಇನ್ನ ದಿವಸ ಇಲ್ಲಿಯ ಟಿಳಕ ರಾಷ್ಟ್ರೀಯ ವಿದ್ಯಾಲಯದ ಪಟಾಂಗಣದಲ್ಲಿ ತಾ॥ಕಾಂಗ್ರೆಸ್ ಕಮೀಟಿಯ ಸಾಧಾರಣ ಸಭೆಯು ನೆರೆದಿತ್ತು; ಸಭೆಗೆ ವಿಶೇಷ ಸಭಾಸದರು ಬಾರದೆ ಇದ್ದದ್ದು ಬಹಳೇ ಖೇದಜನಕವಾದಸಂಗತಿಯು; ಮೇಲಾಗಿ ಈ ಸಭೆಯಲ್ಲಿ ಅತ್ಯಂತ ಮಹತ್ವವಾದ ವಿಷಯಗಳು ಚರ್ಚಿಸತಕ್ಕವುಗಳಿದ್ದರೂ ಸಭಾಸದರು ಇತ್ತಕಡೆ ದುರ್ಲಕ್ಷ ಮಾಡುವದು ಯೋಗ್ಯವಾಗಲಾರದು; ಮೇಲಾಗಿ ಇಲ್ಲಿಯವರಲ್ಲಿ ಪರಸ್ಥಳದ ವ್ಯಾಖ್ಯಾತರು ಬಂದರೆ ಮಾತ್ರ ಸಭೆಗೆ ಬರುವ ಕೆಟ್ಟಚಟವು ನೆಲೆಗೊಂಡಿರುವದು; ಇದರಿಂದ ಕಾಂಗ್ರೆಸ್ದ ಕಾರ್ಯವು ಯಶಸ್ವಿಯಾಗಲಾರದೆಂಬವರ ಅರಿವು ಅವರಲ್ಲಿ ಇದ್ದಂತೆ ತೋರುವದಿಲ್ಲ; ಕೇವಲ ಅವರಿಗೆ ದೂಷಣೆಕೊಡುವದೇ ನಮ್ಮ ಉದ್ದೇಶವಿರದೆ ಅವರಲ್ಲಿ ಕರ್ತವ್ಯಜಾಗೃತಿಯನ್ನು ಹುಟ್ಟಿಸಬೇಕೆಂಬದೇ ನಮ್ಮ ಉತ್ಕಟ ಇಚ್ಛೆಯು. ಇರಲಿ, ಮೊದಲು ಹೋದ ವರ್ಷ ಪ್ರಾಂತಿಕ ಕಾರ್ಯಕಾರಿಣಿಯಾದ ದೇಶಭಕ್ತ [illegible] ಇವರು ಹೊಸ ನಿಯಮ ಗಳನ್ನು ಯ ಸ್ಥಾಪಿತವಾದ ದಿವಸ ಅಂದರೆ ತಾ॥೧೦-೨-೨೧ ದಿಂದ ೩೧-೮-೨೨ ವರೆಗೆ ಬಾಗಲಕೋಟೆಯಲ್ಲಿ ಆದ ಕಾಂಗ್ರೆಸ್ದ ಕಾರ್ಯದ ವರದಿಯನ್ನು ಓದಿದರು; ಬಟ್ಟಿ ೧೧೩೪೨ ರು ೧೩ ಆ ೭ ಪೈ ಟಿಳಕಸ್ವರಾಜ್ಯಫಂಡ ೩೫೮ ನೇ ಪುಟದಲ್ಲಿ ಮುಂದೆ ಸಾಗಿದ್ದು

ಧರ್ಮವೆಂದು ಅದರೊಳಗೆ ನನ್ನ ವಿಶ್ವಾಸವು ಎಂದೂ ಇರಲಿಲ್ಲ, ಕಲವು ದಿವಸಗಳ ಮೇಲೆ ನಾವು ಪೋರಬಂದರಕ್ಕೆ ಹೋದೆವು, ಸಿಂ ಸ್ಕೃತವನ್ನು ನಾನು ಮಾಡಲು ಕಲಿಯುತ್ತಿದ್ದೆನು ಅಲ್ಲಿಯು ನನ್ನ ಇನ್ನೂ ಇಂಗ್ಲಿಷ ನಾಲಿಗೆ ಹಿಡಿದಿರಲಿಲ್ಲ. ನನ್ನ ಅಣ್ಣನೂ ಮತ್ತು ನಾನೂ ಒಬ್ಬ ಬ್ರಾಹ್ಮಣನ ಬಳಿಯಲ್ಲಿ ಕಲಿಯುತ್ತಿದ್ದೆವು ಅವನು ನಮಗೆ 'ರಾಮರಕ್ಷೆ' ಮತ್ತು 'ವಿಷ್ಣುಪಂಜರ' ಕಲಿಸುತ್ತಿದ್ದನು ಅದರೊಳಗಿನ "ಜಲೇ ವಿಷ್ಣು, ಸ್ಥಲೇ ವಿಷ್ಣು," ಇವನ್ನು ಇನ್ನೂ ಮರೆತಿರುವದಿಲ್ಲ ನಮ್ಮ ಮನೆಯ ಹತ್ತಿರ ಮಾತೃಸಮಾನಳಾದ ಮಾಯ ಯುಳ್ಳ ವೃದ್ಧಳೊಬ್ಬಳು ಇರುತ್ತಿದ್ದಳು ನಾನು ಆಗ ಬಹಳ ಪುಕ್ಕನಿದ್ದೆನು, ರಾತ್ರಿಯಲ್ಲಿ ದೀಪಗಳು ಹೋಗಿ ಕತ್ತಲೆಯಾದಕೂಡಲೆ ದೆವ್ವಗಳು ಬರುವವೆಂದು ಭಯಪಡುತ್ತಿದ್ದೆನು. ನನ್ನ ಅಂಜಿಕೆಯನ್ನು ಕಳೆಯಬೇಕೆಂದು ಈ ವಯೋವೃದ್ಧಳು "ಅಂಜಿಕೆಬಂದಾಗೆಲ್ಲ 'ರಾಮರಕ್ಷೆಯನ್ನು' ಜಪಿಸಿದರೆ ದೆವ್ವಗಳು ಓಡಿಹೋಗುವವು" ಎಂದು ಹೇಳಿದಳು, ನಾನು ಹಾಗೆ ಮಾಡಹತ್ತಿದೆನು ಅದರ ಪರಿಣಾಮವಾದರೂ ಅವರಿಯೇ ಆಯಿತು. ಅಸ್ಪೃಶ್ಯನನ್ನು ಮುಟ್ಟಿದರೆ ಪಾಪವೆಂದು ರಾಮರಕ್ಷೆಯಲ್ಲಿ ಹೇಳಿರುವದೆಂದು ಆಗ್ಗೆ ನಾನು ಎಂದೂ ನಂಬಿರಲಿಲ್ಲ ಆಗ್ಗೆ ನನಗೂ ಅದರ ಅರ್ಥವಾಗುತ್ತಿದ್ದಿಲ್ಲ ತಿಳಿದರೂ ಅರ್ಥಮರ್ಥ ತಿಳಿಯುತ್ತಿತ್ತು ಅದರ ದೆವ್ವಗಳನ್ನೇ ಓಡಿಸಿಬಿಡುವಂಥ 'ರಾಮರಕ್ಷೆಯು' ಅಂತ್ಯಜರ ಸ್ಪರ್ಶಕ್ಕೆ ಎಂದೂ ಹೆದರುವದಿಲ್ಲವೆಂದು ನನಗೆ ದೃಢವಿಶ್ವಾಸವಿತ್ತು

ನಮ್ಮ ಮನೆಯಲ್ಲಿ ದಿನಾಲು ರಾಮಾಯಣ ಪುರಾಣವು ನಡೆಯುತ್ತಿತ್ತು; ಲಾಧಾ ಮಹಾರಾಜನೆಂಬ ಬ್ರಾಹ್ಮಣನು ಹೇಳುತ್ತಿದ್ದನು. ಅವನಿಗೆ ಬಿಳಪು ಹತ್ತಿತ್ತು ದಿನಾಲು ರಾಮಾಯಣ ಓದುವದರಿಂದ ಅದು ಹೋಗುವದೆಂದು ಅವನು ಖಂಡಿತವಾಗಿ ನಂಬಿದ್ದನು ಅದರಂತೆ ಅದು ಹೋಗಿಯೂ ಹೋಯಿತು; ಯಾವ ರಾಮಾಯಣದಲ್ಲಿ ರಾಮನನ್ನು—ಈಗಿನ ದಿವಸಗಳಲ್ಲಿ ಅಸ್ಪೃಶ್ಯನೆಂದು ತಿಳಿಯಲ್ಪಡುವಂಥವನೇ ಒಬ್ಬನು ಗಂಗೆಯನ್ನು ತನ್ನ ನೌಕೆಯಲ್ಲಿ ದಾಟಿಸಿದನೆಂದು ಕಥೆಯುಂಟೋ? ಅಂಥ ರಾಮಾಯಣವು ಮಾನವ ಪ್ರಾಣಿಯನ್ನು (ಪತಿತನೇ ಆಗಿರಲಿ) ಅಸ್ಪೃಶ್ಯನೆಂದು ತಿಳಿಯಬಲ್ಲದೇ! ನಾವು ದೇವರನ್ನು ಪತಿತಪಾವನನೆಂದೂ ಇದೇ ಅರ್ಥದ ಇನ್ನೂ ಕೆಲವು ಅಭಿಮಾನಗಳಿಂದ ಕರೆಯುವದಿಲ್ಲವೇ? ಹಿಂದೂ ಜಾತಿಯಲ್ಲಿ ಹುಟ್ಟಿದ ಯಾವನೇ ಮಾನವನನ್ನು ಅಸ್ಪೃಶ್ಯನೆಂದು ಭಾವಿಸುವದೇ ಘೋರತರವಾದದ್ದೆಂದೂ ಪಾಪಕರವಾದದ್ದೆಂದೂ ಇದರಿಂದ ಗೊತ್ತಾಗುತ್ತದೆ. ಇದು ಪಾಪಮಯವಾದದ್ದೆಂದು ಎಷ್ಟು ಹೇಳಿದರೂ ನನಗೆ ಬೇಸರಬರುವದಿಲ್ಲ ನಾನು ಹನ್ನೆರಡು ವರ್ಷದವನಿದ್ದಾಗಲೇ ನನಗೆ ಇದರ ವಿಷಯಕ್ಕೆ ಇಷ್ಟು ಖಾತ್ರಿಯಾಗಿತ್ತೆಂದು ನಾನು ಹೇಳಿಕೊಳ್ಳುವದಿಲ್ಲ; ಆದರೆ ಇದು ಪಾಪವೆಂದು ಮಾತ್ರ ಆಗಲೇ ನನಗೆ ಹೊಳೆದಿತ್ತು; ನಾನು ಇಷ್ಟೆಲ್ಲ ಕಥೆಯನ್ನು ವೈಷ್ಣವರಿಗಾಗಿಯೂ ಮತ್ತು ಭಾವಿಕರಾದ ಹಿಂದೂ ಜನರ ಸಲುವಾಗಿಯೂ ಹೇಳುವೆನು

ನಾನು ಸನಾತನೀ ಹಿಂದೂ ಎಂದು ಯಾವಾಗಲೂ ಹೇಳಿಕೊಳ್ಳುತ್ತಿರುವೆನು, ಧರ್ಮಶಾಸ್ತ್ರವು ನನಗೆ ಅಗದೀ ಗೊತ್ತಿಲ್ಲ; ಹೀಗೇನಿರುವದಲ್ಲ ನಾನು ಸಂಸ್ಕೃತದಲ್ಲಿ ದೊಡ್ಡ ಪಂಡಿತನೂ ಅಲ್ಲ ವೇದ ಉಪನಿಷತ್ತುಗಳ ಭಾಷಾಂತರವನ್ನು ಮಾತ್ರ ನಾನು ಓದಿರುವೆನು, ಆದ್ದರಿಂದ ಸ್ವಾಭಾವಿಕವಾಗಿ ಅವುಗಳ ನನ್ನ ಅಧ್ಯಯನವು ಅಷ್ಟೇನು ಸೂಕ್ಷ್ಮರೀತಿಯಿಂದಾಗಿರುವದಿಲ್ಲ. ಮತ್ತು ಅದು ಸರ್ವಪರಿಪೂರ್ಣವಿದ್ದರೂ ಹಿಂದೂನು ತನ್ನ ಧರ್ಮವನ್ನು ತಿಳಿದುಕೊಳ್ಳುವದಕ್ಕಾಗಿ ಹೇಗೆ ಓದಬೇಕೋ ಹಾಗೆ ಓದಿರುವೆನು, ಮತ್ತು ಅವುಗಳ

ಮಥಿತ ವರ್ಣವು ನನಗೆ ಪೂರ್ಣ ತಿಳಿದಿರುವದೆಂದು ಹೇಳಿಕೊಳ್ಳ ಬಹುದಲ್ಲ, ಇಪ್ಪತ್ತೊಂದು ವರ್ಷದವನಾಗುವದಕ್ಕೆ ಪೂರ್ವದಲ್ಲಿ ನಾನು ಕಲವು ಇತರ ಧರ್ಮಗಳ ವಿಷಯಕ್ಕೆ ಅಭ್ಯಾಸಿಸಿದ್ದೆನು, ಕ್ರಿಸ್ತೀ ಧರ್ಮವನ್ನು ಸ್ವೀಕರಿಸಬೇಕೋ ಹಿಂದೂ ಧರ್ಮಕ್ಕೆ ಅಂಟಿಕೊಂಡು ಉಳಿಯಬೇಕೋ ಎಂಬ ಸಂಶಯದಿಂದ ಒಮ್ಮೆ ಕೆಲವು ವೇಳೆಯವರೆಗ ನನ್ನ ಮನಸ್ಸು ಹೊಯ್ದಾಡುತ್ತಿತ್ತು ನನ್ನ ಮನಸ್ಸಿಗೆ ಸ್ವಲ್ಪ ಸ್ಥಿರತ್ವವು ಪ್ರಾಪ್ತವಾದ ನಂತರ ಹಿಂದೂ ಧರ್ಮದಿಂದಲೇ ನನಗೆ ಮೋಕ್ಷ ದೊರೆಯಬಹುದೆಂದು ಭಾವಿಸಹತ್ತಿದೆನು ಮತ್ತು ಅಂದಿನಿಂದ ಹಿಂದೂ ಧರ್ಮದಲ್ಲಿ ನನ್ನ ವಿಶ್ವಾಸವು ದೃಢವಾಗಹತ್ತಿರುವದು

ಇಷ್ಟಾದರೂ ಅಸ್ಪೃಶ್ಯತೆಯು ಹಿಂದೂ ಧರ್ಮದ ಭಾಗವಾಗಿರುವದಿಲ್ಲವೆಂದೇ ನನ್ನ ನಂಬಿಗೆಯು.

ನಿಜವಾದ ಹಿಂದೂ ಧರ್ಮವು ಅಸ್ಪೃಶ್ಯರನ್ನು ಮುಟ್ಟುವದು

ಪಾ
ಕ್ಕೆ
ಗಿನ
ದ
ಸ್ಪ
ಪ
ಶ್ಯ
ವಿ
ಳಂ
ತೆ

ದು
ತಾ
ದಾ
ಕ
ನಿ
ತ್ತಿ
ಲ
ನ್ನು
ತ
ಕಾ
ಬ
ತಿ
ಸಂ
ತೆಗೆ
ಗೊಡುವದಿಲ್ಲ.

...ನಮಗೆ ಮಾಡ

ರಿಗೆ ನೇಕನಾಮದಾರ ಗವ್ಹರ್ನರ ಜಿನ್
. ಎಫ್. ಆರ್ ಎಸ್. ಆಯ. ಎಂಬವರಿಗೆ
೧) ನೇಮಿಸಿದ್ದರಿಂದ ಅವರು ಯಾವತ್ತು
ವಿಪಟ್ಟ ಆಸ್ತಿಯುಳ್ಳ ಮಾಲಕರ ಸಭೆಯು
೨೨ ನೇ ಸೋಮವಾರ ದಿವಸ ಮುಂಜಾನೆ
ಮುನಸಿಪಾಲಟಿಯವರು ) ಆಸ್ಕೀಮದೊಳಗೆ
ವು ಮಹತ್ವವಾದ ಹೆಚ್ಚು ಕಡಿಮೆಗಳನ್ನು

**ಪುರವಣಿ ಕನ್ನಡ ನವಜೀವನ ಬಾಗಲಕೋಟೆ ತಾ॥ ೩೦**
**ಭಾದ್ರಪದ ವದ್ಯ ೮ ಗುರುವಾರ ಶಕೆ ೧೮೪೪**

## ನೋಟೀಸಿನ ಉತ್ತರವು.

ಬಸಪ್ಪ ಕೆಂಗನಾಗಪ್ಪ ಕೊಳ್ಳಿ ಸಾ॥ ಸೂಳೇಭಾವಿ ತಾ॥ ... ಇವರಿಗೆ,

ಕಳಗೆ ಸಹಿ ಮಾಡುವವನ ಕಡೆಯಿಂದ ನೋಟೀಸಿನ ಉತ್ತರ ಕೊಡುವದೇನೆಂದರೆ ನೀನು ನನ್ನ ಲಗ್ನದ ಹೆಂಡತಿ ಇದ್ದು ಲಗ್ನದವಾಗಿ ... ನಾಯಿತ ... ನನ್ನ ... ನೆಯಲ್ಲಿ ಸುರಳೀತ ಪ್ರಪಂಚ ನಡೆಸುತ್ತಿದ್ದಿ. ಈಗ ಅಜಮಾಸ ೬-೩ ತಿಂಗಳ ಹಿಂದೆ ನಿಮ್ಮ ತಂದೆ ಯು ... ಹಬ್ಬದ ಮೂಲಕ ನಿನ್ನನ್ನು ಕರೆದುಕೊಂಡು ಹೋದನು ಅಲ್ಲಿ ನೀನು ದುಷ್ಟ ಜನರ ಚಲ್ಮೀ ಮಾತು ಕೇಳಿ ನಿನ್ನ ಮೈ ಮೇಲೆ ಇದ್ದ ದಾಗೀನ ಬಂಗಾರದ ಬಳೀ ಜೋಡು ೧ ತೊಲಿ ... ಬಂಗಾರದ ಗುಂಡಿನ ಟಿಕ್ಕಿ ೧ ತೊಲಿ ೨॥, ಬೆಳ್ಳಿ ಎಳೀಬಂದಿ ಜೋಡು ೧ ತೊಲಿ ೩೦, ಬೆಳ್ಳಿ ಚೌಕ ೧ ತೊಲಿ ೧೫ ಬೆಳ್ಳಿ ... ೧ ... ೦ ೧೨೬ ಪ್ರಕಾರ ಮುಳಗಿಸುವ ಇರಾದೆಯಿಂದ ನೋಟೀಸ ಮಾಡಿದಿ. ಈ ನೋಟೀಸ ಮುಟ್ಟಿದ ೮ ದಿವಸಗಳಲ್ಲಿ ದಾಗೀನ ಸಹ ನನ್ನ ಮನಿಗೆ ಬರಬೇಕು. ಇರ ಹಾಗೆ ಮಾಡದೆ ಇದ್ದರೆ ದಾಗಿನೆ ಅಪಹಾರ ಮಾಡಿದ ಬಗ್ಗೆ ಮತ್ತು ವಿನಹಕಾರಣ ನೋಟೀಸ ಮಾಡಿ ಬದಲಾಮಮಾಡಿದಬಗ್ಗೆಯೋಗ್ಯ ಇಲಾಜ ಮಾಡತೀನಿ. ಲಗ್ನದ ಹಕ್ಕು ಬಿಡಲಿಕ್ಕೆ ನನ್ನ ಖುಷಿ ಇಲ್ಲ. ನೋಟೀಸ ಖರ್ಚು ನಿನ್ನ ತಲೆಯ ಮೇಲೆ ಅದ ಸಹಿ ತಾರೀಖು ೧೮-೯-೧೯೨೨.

☞ ಈ ಎಡಗೈ ಹೆಬ್ಬೆರಳಿನ ಗುರ್ತು ನಾಗಪ್ಪ ತಂದಿ ಶಾಮಪ್ಪ ಕೊಳ್ಳಿ ಸಾ॥ ಸೂಳೀಭಾವಿ ಇವನದು ಇರುತ್ತದೆ.

---

... ಕು ರಾಷ್ಟ್ರ ... ಅವನ್ನು ... ಮಾಡಿಕೊ ... ಎರಡನ ... ನಾಜದಂತಿರು ... ಂತ ತಾಲೂ

ಕದಾಂಬ ಗೋವಿಂದ ದೇಸಾಯಿ ಇವರ ಉದಾತ್ತ ಉದಾಹರಣೆಯೇ



ಮಸ್ಥಾನದ ಇತಿಹಾಸವನ್ನು ಸುವರ್ಣಾಕ್ಷರಗಳಿಂದ ಬರೆದಿಡು ... ದ ... ವೈರಿಯ ... ಸಿಗಳು ವನವಾಸಕ್ಕೆ ಹೋಗಿ ... ಲಿಸಿದಂತೆ ಪ್ರಜರು ನಮ್ಮ ರಾಮನೆಂ ... ಕದ ... ಹಿಂಬಾಲಿಸಿದರೆ ಆಸ್ತಿಯ ಮೇಲಿನ ವ್ಯಾಹವು ತಾನೇ ಇಲ್ಲದಾಗುವದ

... ಹಾಗೆ ಆಸ್ತಿಯನ್ನು ಕಳೆದು ... ಎಂದು ತೋರುತ್ತದೆ ... ಕಡಮೆ ಮಹತ್ವದ ... ಗ್ಯಾರಿ ... ನೆದುರಿಗೆ ... ಉಗ್ರ ... ಣವಾಗಿ ಬಂದಾಗ್ಯೂ ... ಹಾಕಿಕೊಂಡ ಮುಗ್ಧ ... ಸರಕಾರಕ್ಕೆ ಕೊನೆಯ ಶಸ್ತ್ರಪ್ರಯೋಗ ಮಾಡಿಕೊಡುವ ಪ್ರಸಂಗವನ್ನು ... ಮಕೊಟ್ಟರೆ ... ನಿಶ್ಚಯವಾದದ್ದು.

ಈ ಬಗೆಯಿಂದ ... ಉದಾಹರಣೆಗಳನ್ನು ಹೇಳಿದ ಕಾರಣವೇನು? ... ಮತ್ತು ... ಮಾರ್ಗಗಳನ್ನು ಬಿಟ್ಟುಕೊಟ್ಟು, ಮಾನಸ ... ವಿಷಯಕ್ಕೆ ಮಾತಾಡುವ ಕಾರಣವೇನು? ... ಎಂದರೆ ನಾವು ಸ್ವರಾಜ್ಯ ತಗದುಕೊಳ್ಳಲು ನಿಶ್ಚಯಿಸಿದ್ದೇವೆ, ಶಾಂತತಾ ಭಂಗ ... ಶಸ್ತ್ರಬಲದಿಂದ ... ಒಂದು ಸ್ಥಾನಕ್ಕೆ ಶಕ್ಯವಿಲ್ಲ ... ದುಃಖ ಸಹನ ಮಾಡಿಕೊಳ್ಳುವದು, ಹಾಗೂ ಸಹಕಾರ ಮಾಡುವದು ಎಂಬ ಎರಡೇ ಮಾರ್ಗಗಳು ನಮಗೆ ಅನುಕೂಲವಾಗಿರುವವು: ರಾಷ್ಟ್ರವು ಮೊದಲನೆಯ ಮಾರ್ಗವನ್ನು ಆರಿಸಿಯದೆ

---

### ಬಾಗಲಕೋಟೆ ತಾಲೂಕ ಕಾಂಗ್ರೆಸ್ ಕಮೀಟಿಯ ಸಾಧಾರಣ ಸಭೆಯು

ಹಿಂದೂ ಮುಸಲ್ಮಾನರ ನಡುವಿನ ವೈಮನಸ್ಸು ಇನ್ನೂ ಬಹಳ ವ್ಯಾಪಕವಾಗಿ ಕೇಳಬರುವದು; ಒಬ್ಬರನ್ನೊಬ್ಬರು ಮುರಿಬಡಿಯಲಿಕ್ಕೆ ಹೇಸದೇ ಇದ್ದ ಇನ್ನೂ ಕೆಲವು ವ್ಯಕ್ತಿಗಳು ಅಲ್ಲಲ್ಲಿ ದೊರೆಯಬಹುದು; ಆದರೂ ಒಟ್ಟಿನ ಮೇಲೆ ನೋಡಲಾಗಿ ಜನರಲ್ಲಿ ಮಮತೆಯೂ, ಉದಾರಭಾವನೆಯೂ ಹೆಚ್ಚುತ್ತಿರುವವೆಂದು ನನಗೆ ಅನಿಸುತ್ತದೆ. ಹಿಂದೂ ಮುಸಲ್ಮಾನರು ಧರ್ಮಭೀರುಗಳಾಗಹತ್ತಿರುವರು. ಸರಕಾರಿ ಶಾಲೆಗಳ ಮತ್ತು ನ್ಯಾಯಕಚೇರಿಗಳ ಹುಚ್ಚು ನಮ್ಮನ್ನು ಬಿಡಹತ್ತಿರುವದು. ನಮ್ಮ ಭ್ರಮಿಷ್ಟತೆಯು ಬಯಲಾಗಿರುವದು, ಯಾರನ್ನು ನಾವು ನಿರಕ್ಷರಿಗಳೆಂದೂ ಅಜ್ಞಾನಿಗಳೆಂದೂ ತಿಳಿದುಕೊಂಡಿ

...ರೋ ಅವರೇ ನಿಜವಾದ ಸುಶಿಕ್ಷಿತರೆಂದು ನನಗೆ ಒಡೆದುಕಾಣ... ...ರುವರು. ಅವರೇ ನಮ್ಮಕಿಂತಲೂ ಹೆಚ್ಚು ಸುಸಂಸ್ಕೃತರಾಗಿರ... ...ರು. ಅವರ ಬಾಳುವೆಯೇ ಹೆಚ್ಚು ಧರ್ಮನಿರತವಾದದ್ದು ಆ... ...ವದು. ಜನರ ಈಗಿನ ಮನೋಭಾವನೆಯನ್ನು ಸ್ವಲ್ಪ ಪರೀಕ್ಷಿ... ...ನೋಡಿದರೆ ಅವರು ಮನಸ್ಸಿನಲ್ಲಿ ಸ್ವರಾಜ್ಯವೆಂದರೆ ರಾಮರಾಜ್ಯವೆ... — ಧರ್ಮಸಾಮ್ರಾಜ್ಯದ ಸಂಸ್ಥಾಪನೆಯೆಂದೇ– ತಿಳಿದು ಕೊ... ...ರುವರೆಂಬುವದು ತೋರಿಬರುವದು.

ನನ್ನ ಅಂತ್ಯಜ ಬಂಧುವರೇ ನಿಮ್ಮ ಸ್ಪೃಶ್ಯತೆಯ ಪ್ರಶ್ನೆಯ... ...ಪರಲ್ಲಿ ಮೊದಲಿನಷ್ಟು ವಿರೋಧವನ್ನು ಎಬ್ಬಿಸುವದಿಲ್ಲವೆಂಬದನ... ...ಳ ನಿಮಗೇನಾದರೂ ಸಮಾಧಾನವೆನಿಸುತ್ತಿದ್ದರೆ ಹಾಗೆ ಹೇಳ... ...ಸು ಸಿದ್ಧನಿದ್ದೇನೆ. ಆದರೆ ಇಷ್ಟರಿಂದಲೇ ನೀವು ಹಿಂದುಗಳ ವಿಷ... ...ರ ನಿಮ್ಮ ಸಂಶಯಗಳನ್ನೆಲ್ಲ ಬಿಟ್ಟುಬಿಡಬಹುದೆಂದು ನಾ... ...ವಂತಿಲ್ಲ. ಅವರು ಈಪರಿ ನಿಮ್ಮ ದ್ರೋಹವನ್ನು ಕಟ್ಟಿಕೊಂ... ನಿಮ್ಮ ಅವಿಶ್ವಾಸಕ್ಕೆ ಅವರು ಪಾತ್ರರಾಗದೆ ಇರುವದೆಂತು? ಹಿ... ...ಜನರು ಅಸ್ಪೃಶ್ಯರನ್ನು ಏಳಗೊಟ್ಟಿಲ್ಲ. ಇಷ್ಟೇ ಅಲ್ಲ ಆದರೆ ಅವ... ...ಒತ್ತಿ ದಬ್ಬಿ ಒಡದಿರುವರು. ಮತ್ತು ಹೀಗೆ ಅವರನ್ನು ಬುಡ... ...ಟ್ಟುವದರಿಂದ ತಮ್ಮನ್ನು ತಾವೇ ಅಧೋಗತಿಗೆ ದಬ್ಬಿಕೊಂಡಿರು... ...ದು ಸ್ವಾಮಿ ವಿವೇಕಾನಂದರು ಅನ್ನುತ್ತಿದ್ದರು.

ಮುಂದಿನ ಸಂಚಿಕೆಯಲ್ಲಿ

---

ಮಂಗಳವಾರ ದಿನ ದೇಶಭಕ್ತ ಶ್ರೀನಿವಾಸರಾವ ಕೌಜಲ... ...ವರ ಅಭಿನಂದನ ಮಾಡುವ ಕುರಿತು ಸಭೆಯಾಯಿತು. ದೇಶ... ...ಪರಾಡಕರರ ವ್ಯಾಖ್ಯಾನ ವಾಯಿತು. ವ್ಯಾಖ್ಯಾನವು ಒಳ್ಳೆ ... ...ಪಕರ ವಾಯಿತು. ಅವರ ವ್ಯಾಖ್ಯಾನದ ಸಾರಾಂಶವನ್ನು ಮು... ...ನ ವಾರದಲ್ಲಿ ಪ್ರಸಿದ್ಧಿಸುವೆವು.

ಸೋಮವಾರ ದಿನ ದೇಶಭಕ್ತ ಕೌಜಲಗಿ ಯವರ ... ...ರ್ಮಾನವು ತಿಳಿದ ಕೂಡಲೆ ಆ ಹೊತ್ತೇ ಕನ್ನಡ ನವಜೀವನ... ...ವಿಶೇಷ ಸಂಚಿಕೆಯು ಹೊರಡಿಸಲ್ಪಟ್ಟಿತು.

"ಕನ್ನಡ ನವಜೀವದ" ಮೊನ್ನಿನ ವಿಶೇಷ ಸಂಚಿಕೆಯಲ್ಲಿ... ...ಭ ಕೌಜಲಗಿ ಶ್ರೀನಿವಾಸರಾಯರಿಗೆ ೪ ತಿಂಗಳ ಕಠಿಣ ಶಿಕ್ಷೆಯಾ... ...ತೆಂದು ಮೊದಲು ಇಲ್ಲಿ ತಾರು ಬಂದಂತೆ ಪ್ರಸಿದ್ಧಿಸಲ್ಪಟ್ಟಿತು. ಆದರೆ ಆತಂತಿಯು ತಪ್ಪುತಿಳುವಳಿಕೆಯಿಂದ ಬಿಡಲ್ಪಟ್ಟಿತ್ತೆಂದು ಹಿಂದ... ...ಗಡಿಗೆ ತಿಳಿದುಬಂತು,

ದೇ. ಭ. ಕೌಜಲಗಿಯವರನ್ನು ಮಂಗಳವಾರ ರಾತ್ರಿ ವಿಜಾಪುರ... ...ದಿಂದ ಯರವಡೆಗೆ ಕರೆದೊಯ್ದರೆಂದು ತಿಳಿಯುತ್ತದೆ

ದೇ. ಭ. ಯಶವಂತರಾವ ತಿಳಗೂಳ ಇವರ ಕಟ್ಲೆಯ ವಿಚಾ... ...ರಣೆಯು ಇವತ್ತಿನ ದಿವಸವೇ ವಿಜಾಪುರ ಸೆಶನ್ ಕೋರ್ಟಿನಲ್ಲಿ ನಡೆ... ...ಯುತಕ್ಕದ್ದಿರುವದು; ಪರಿಣಾಮವು ಏನಾಗುವದೋ!!

...ರಹಟ್ಟಿ ನಾಟಕಮಂಡಳಿಯವರು ಮುಂದಿನವಾರದಲ್ಲಿ ವಿಜಾ... ...ಪುರಕ್ಕೆ ಹೋಗುವರು,

ಇಮಿಟೇಶನ್ ವಜ್ರದ ಉಂಗುರಗಳು,

ಈ ಉಂಗುರಗಳು ವಿಲಾಯತಿಯಲ್ಲಿ ತಯಾರಿಸಿದ್ದು; ಅತ್ಯ ತ್ತಮ ವಜ್ರದ ಕಲ್ಲುಗಳನ್ನು ಇಟ್ಟು ನೀಲಿ ಬಂಗಾರದಿಂದ ಕಟ್ಟ [illegible] ಗಡೆ ಅಪರಂಜಿ ಬಂಗಾರದ ಗಿಲೀಟು ಮಾಡಿದೆ. ನೋ [illegible] ಲು [illegible] ಲಕ್ಷಣವಾಗಿ ಕಾಣುವವು. ಇವು ಶ್ರೀಮಂ ತರಿಗೂ ಬಡವರಿಗೂ ಲಾಯಖಾದದ್ದು.

ಕ್ರಯ ೧ಕ್ಕೆ ರೂ. ೨-೦-೦. [illegible]

ವಿಳಾಸ ವಿ. ಎ. ಎಸ್. ಶಾಣಿ ಕಂಪನಿ ಸಾಹುಕಾರಪೇಟೆ [illegible]



ಈ ತಿಂಗಳ ಕೊನೇ ವರೆಗೆ ಅರ್ಧ ಕ್ರಯ.

ಇದರ ಕ್ರಯ ೨-೦-೦. ಈಗಿನ ಕ್ರಯ ೧-೦-೦.

**ಆಶ್ಚರ್ಯ.** [illegible] ಸಿನಿಮಾಸ್ಕೋಪ್ ಯಂತ್ರ

ಈ ಸಿನಿಮಾಸ ಕೋಪ ಯಂತ್ರ [illegible] ಜರ್ಮನ್ ದೇಶದಿಂದ [illegible] ಈಗಲೆ ನಮಗೆ ಹೊಸದಾಗಿ ಬಂದಿ ರುವವು. ಈ ಯಂತ್ರ ಅಮೇರಿಕಾ ಬಯಾಸ್ಕೋಪ ನಾಟಕಶಾಲೆಗಳಲ್ಲಿ ಅತಿ ಚಮತ್ಕಾರವಾಗಿ ಆಟ ಮಾಡುತ್ತಿರುವ ವಿಜನೆಟ ರೊಸ್, ಪರ್ಲ್‌ವೈಟ್‌ಪ್ರಿಂಸ್ರ, [illegible] ಟಾಮ್ಕಿನ್ಸ್, ಮುಂತಾದವರ ನಿಜಸ್ವರೂಪವಾದ ಫೋಟೋಗ್ರಾಫಗಳು ಈ ಯಂತ್ರದಲ್ಲಿ ಪ್ರಾಣವಿ ರುವವರ ಹಾಗೆಯೇ [illegible] ಕಾಣುವ ವು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವವರಿಂದ ಜಾಗ್ರತೆಯಾಗಿ [illegible] ಕೊಳ್ಳಿರಿ. ಕ್ರಯ ೨ಂ ಫೋಟೋ [illegible] ಸಹ [illegible] ದಕ್ಕೆ ರೂ ೧-೦-೦.

**ರಾಸರಾಜ ಅಂಡ ಕಂಪನಿ.** [illegible] ಯರಳಪ್ಪನ ಬೀದಿ ಮದ್ರಾಸ್.



ಟಿಕ್ [illegible] ಕ್ರಯವನ್ನು ಕೊಟ್ಟ ಮಾತ್ರ [illegible]

ಗಡಿಯಾರಗಳು.



ಚಕ್ರಗಳಲ್ಲಿಯೂ ಗಂಟೆ ತೋರಿ ಪ [illegible] ಗಳ [illegible] ಯೂ ಕೆಂಪು ಕ ಕೆತ್ತಲ್ಪಟ್ಟಿವೆ ಎಂದು ಇದನ್ನು ತರಿಸು ವಂಗೆ ೧೦-೧೫ ಬಹುಮಾನಗಳೊ ೫-೬ ವರುಷಗಳು ಗ್ಯಾರಂಟಿ ಸಹಿತ [illegible] ರೂಪಾಯಿಗಳಿಗೆ ಕೊಡುವೆವೆಂದು ಪ್ರಚ ರವಾಗುವ ಪ್ರಕಟನೆಗಳನ್ನು ನೋಡಿದ ಗಾಗಿ ನಿಮ್ಮ ಹಣವನ್ನು ಕಳಕೊಳ್ಳಬೇ ಡಿ ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ ಬಹು ಉತ್ತಮವಾದ [illegible] ಗಾಳಿಯೂ ಧೂಳೂ ಸೇರದಂತೆ ಗ್ಲಾಸ್‌ಡೋಮು ಇರುವದು. ಸರಿಯಾದ ಕಾಲವನ್ನು ತೋರಿಸುವದು. ಬೇಗನೆ ಅಥವಾ ನಿಧಾ ನವಾಗಿ ಹೋದರೆ ನಾವು ಸರಿಮಾಡಿಕೊಳ್ಳಬಹುದು. ನೋಟಕ್ಕೆ [illegible] ಸುಂದರವಾಗಿಯೂ ಇರುವದು. ಇದು ಇಂ ಗ್ಲೀಷ [illegible] ಯುಳ್ಳದ್ದು. ಈ ಗಡಿಯಾರದಲ್ಲಿ ಯಾರೇ ಆಗಲಿ ಸುಲಭವಾಗಿ ಗಂಟೆ ನೋಡಬಹುದು. ಅಷ್ಟೇಕೆ [illegible] ವರ್ಣನೆ ಮಾಡುವದೇತಕ್ಕೆ? ಒಂದನ್ನು ತರಿಸಿನೋಡಿರಿ ತಿಳಿಯು ವದು. ೪ ವರುಷಗಳ ಗ್ಯಾರಂಟಿ ಸಹಿತ ಕ್ರಯ ೪-೮-೦

ಮ್ಯಾನೇಜರ,— ಧೈರ್ಯ ಲಕ್ಷ್ಮಿ ಅಂಡ ಕೊ;

ಪೋ॥ ಬಾ॥ ನಂಬರು ೨೬೫ ಮದ್ರಾಸು.



ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಎಜಂಟರು) ಆತ್ಮೋತ್ತಮ ( ಬೇಕು

ಮಣಿ ಗುಳಿಗೆಗಳು ಮತ್ತು ಚಟಿಗಳು.


ಹೊರವಾಳಿ ಕನ್ನಡ ನವಜೀವನ ಆಶ್ವಿನ ಶುದ್ಧ ಅಷ್ಟಮಿ

## ನೋಟೀಸು.

ಸಂಗಪ್ಪ ತಂದಿ ಶಿವಪ್ಪ ಮಟ್ಯಾಳ ಸಾ॥ ಇನಾಮ ಗ್ರಾ ಮ ಮನ್ನಿಕೇರಿ ತಾ॥ ಬಾಗಲಕೋಟ ಇವರಿಗೆ—

ಸಿಂಗಪ್ಪ ಗಂ.ಡಾ ಸಿಂಗಪ್ಪ ಮಟ್ಯಾಳ ಸಾ॥ ಇನಾಮು ಗ್ರಾಮ ಮನ್ನಿಕೇರಿ ಇವಳು ನೋಟೀಸಿನಿಂದ ತಿಳಿಸುವದೇನಂದರೆ— ನೀನು ನನ್ನ ಮದಿವೆಯು ಗಂಡನಿರುತ್ತೀದಿ ನಮ್ಮ ಲಗ್ನ ವಾಗಿ ಈಗ ಮಾ ಸು ೨೦,೨೫ ವರ್ಷಗಳಾದವು. ನಾನು ನೆರೆತು ೧೨,೧೪ ವರ್ಷ ಗಳಾದವು ಆದರೂ ಲಗ್ನವಾದಂದಿನಿಂದ ಸಹ ನೀನು ಅಗರ ನಿನ್ನ ತಂದಿ ಮನಿಯವರು ನನ್ನನ್ನು ಇಂದಿನ ವರಿಗೆ [illegible] ಹೋಗಲಿಲ್ಲಾ ಮ ಸಂರಕ್ಷಣ ಮಾಡಲಿಲ್ಲ ಮ. ನನ್ನ ಸಂಗಡ [illegible] ವ. ಮಾತನಲ್ಲಿ [illegible] [illegible]

[illegible]

[illegible]


ಮದನಕಾಮೇಶ್ವರೀ ಮಾತ್ರೆ.

ಕ್ರಯ ೨ ರು॥ ೪೦ಟಿ [illegible] ವೆಚ್ಚ ಬೇರೆ

ಉತ್ತಮ ಶಕ್ತಿವರ್ಧಕ ಔಷಧ. ಗುಣಬಾರದಿದ್ದರೆ ಹಣ ವಾಪಸ ಒಮ್ಮೆ ಅನುಭವ ತೆಗೆದುಕೊಳ್ಳಿರಿ; ಕ್ಯಾಟಲಾಗು ತರಿಸಿ ನೋಡಿರಿ.

ಜಂಬುನಾಥ ಕಂಪನಿ, ಬಾಗಲಕೋಟೆ,

ಕೆ; ಯುಧಿಷ್ಠಿರನು ತನ್ನ [illegible] ಬಿಟ್ಟು ಸ್ವರ್ಗಕ್ಕೆ ಹೋಗಲಿಚ್ಛಿಸಲಿಲ್ಲ; ಅಂದ ಮೇಲೆ ಆ ಯುಧಿಷ್ಠಿರನ ಸಂತತಿಯವರಾದ ನಾವು ಅಸ್ಪೃಶ್ಯರನ್ನು ಕೂಡಿಕೊಳ್ಳದ ಸ್ವರಾಜ್ಯವನ್ನು ದೊರಕಿಸುವದೇತು? ಸರಕಾರದ ಮೇಲೆ ಹೊರಿಸುತ್ತಿರುವ ಯಾವ ಅಪರಾಧವನ್ನು ನಾವು ಅಸ್ಪೃಶ್ಯರ ವಿಷಯದಲ್ಲಿ ಮಾಡದೇ ಇರುವೆವು?

ನಮ್ಮ [illegible]ಂಥವರನ್ನು ದಬ್ಬಿಹಿಡಿಯುತ್ತಾ [illegible] ದ್ರೋಹವನ್ನು ನಾವು ಮಾಡಿರುವೆವು; ಅವರನ್ನು ಹೊಟ್ಟೆ ಸಾರ ಹಚ್ಚುವ[illegible] ಮೂಗನ್ನು ನೆಲಕ್ಕೆ ತಿಕ್ಕ ಹೇಳುವೆವು. [illegible] ಮಾಡಿರಲ್ವೆ ಡಬ್ಬಿಯಿಂದ ಹೊರಗ ದೂಡುವೆವು. ಬ್ರಿಟಿಶ ಸರಕಾರವು ಇದಕ್ಕೂ ಹೆಚ್ಚಿಗೇನು ಮಾಡುವದು? [illegible] ದ್ರೋಹವನ್ನು ನಾವು ಮಾಡುತ್ತ ಬಂದಿರುವೆವೆಂದು ನಮ್ಮ ಜನರೇ ನಮ್ಮ [illegible] ಕಟ್ಟುವಂತಿಲ್ಲವೆ? ಈ ಪಾತಕವನ್ನು ನಾವು ತೊಳೆ[illegible] ಅನಾಥರನ್ನು [illegible] ಕಾಪಾಡಬೇಕೆಂಬ ಬುದ್ಧಿಯೂ, ಅಥವಾ ಒಬ್ಬನು ಮತ್ತೊಬ್ಬನ ಮನಸ್ಸನ್ನು ನೋಯಿಸಬಾರದೆಂಬ ಭಾವನೆಯೂ ನಮ್ಮಲ್ಲಿ ಸ್ಥಿರವಾಗಿ[illegible] ಹೊರತು ಸ್ವರಾಜ್ಯದ ಬಗ್ಗೆ ಮಾತಾಡುವದೆಲ್ಲ ವ್ಯರ್ಥವಾದದ್ದು; ಸ್ವರಾಜ್ಯವೆಂದರೆ ಹಿಂದೂ ಮುಸಲ್ಮಾನರು ಇನ್ನೂ ಬ್ಬ[illegible] [illegible] ಈ [illegible] ನಾವು [illegible] ಗಿಂದ ಜಾರಿಹೋಗುವೆವು. ನಮ್ಮೆಲ್ಲರಂತಲೂ ದುರ್ಬಲರಾದ ನಮ್ಮ [illegible]ಂಥವರ ಬಗ್ಗೆ ಮಾಡುತ್ತ ಬಂದಿರುವ ದ್ರೋಹದ ಪಾತಕವನ್ನು ನಾವು ತೊಳೆದುಕೊಳ್ಳದಿದ್ದರೆ, ಹಿಂದುಗಳಿಗೂ ನಮಗೂ [illegible] [illegible].

ಆದರೂ ನನಗೆ ಇನ್ನು ವಿಶ್ವಾಸವುಂಟು ಯಾಕಂದರೆ ಮಾನವದಯಾರ್ದ್ರತೆಯನ್ನು ಕೀರ್ತಿಕರವಾದ ತುಲಸೀದಾಸನು ಇಷ್ಟೊಂದು ಮನೋಹರವಾಗಿ ಗಾನಮಾಡುವನೋ ಯಾವ ದಯಾರ್ದ್ರತೆಯು ವೈಷ್ಣವ ಮತ್ತು ಜೈನ ಧರ್ಮಗಳ ಮೂಲಗಲ್ಲಾಗಿರುವದೋ, ಯಾವದು ಭಾಗವತದ ಸಾರವಾಗಿರುವದೋ, ಮತ್ತು ಯಾವದು ಭಗವದ್ಗೀತೆಯಲ್ಲಿಯ ಪ್ರತಿಯೊಂದು ಶ್ಲೋಕದಲ್ಲಿ ಅಡಕವಾಗಿರುವದೋ ಆ ದಯಾರ್ದ್ರತೆಯು ಮಾಯಾ ಮಮತೆಗಳು, ಆ ಉದಾರ ಬುದ್ಧಿಯು ಸಾವಕಾಶವಾಗಿಯಾದರೂ ನಿಶ್ಚಿತವಾಗಿ ಭರತವರ್ಷದ ಜನರ ಹೃದಯಗಳಿಗೆಲ್ಲ ಹತ್ತಿರುವದೆಂಬದನ್ನು ನಾನು ಹಿಂದುಸ್ಥಾನದಲಿ ಹೋದ ಹೋದಲ್ಲೆಲ್ಲ ಕಂಡುಹಿಡಿದಿರುವೆನು.

ಹಿಂದೂ ಮುಸಲ್ಮಾನರ ನಡುವಿನ ವೈಮನಸ್ಸು ಇನ್ನೂ ಒಮ್ಮೊಮ್ಮೆ [illegible]ಕಾಣಬರುವದು; ಒಬ್ಬರನ್ನೊಬ್ಬರು ಮುರಿಬಡಿಯಲಿಕ್ಕೆ ಹೇಸದೇ ಇದ್ದ ಇನ್ನೂ ಕೆಲವು ವ್ಯಕ್ತಿಗಳು ಅಲ್ಲಲ್ಲಿ ದೊರೆಯಬಹುದು; ಆದರೂ ಒಟ್ಟಿನ ಮೇಲೆ ನೋಡಲಾಗಿ ಜನರಲ್ಲಿ ಮಮತೆಯೂ, ಉದಾರಭಾವನೆಯೂ ಹೆಚ್ಚುತ್ತಿರುವವೆಂದು ನನಗೆ ಅನಿಸುತ್ತದೆ. ಹಿಂದೂ ಮುಸಲ್ಮಾನರು ಧರ್ಮಭೀರುಗಳಾಗಹತ್ತಿರುವರು. ಸರಕಾರಿ ಶಾಲೆಗಳ ಮತ್ತು ನ್ಯಾಯಕಚೇರಿಗಳ ಹುಚ್ಚು ನಮ್ಮನ್ನು ಬಿಡಹತ್ತಿರುವದು. ನಮ್ಮ ಭ್ರಮಿಷ್ಟತೆಯು ಬಯಲಾಗಿರುವದು. ಯಾರನ್ನು ನಾವು ನಿರಕ್ಷರಿಗಳೆಂದೂ ಅಜ್ಞಾನಿಗಳೆಂದೂ ತಿಳಿದುಕೊಂಡಿದ್ದೆವೋ ಅವರೇ ನಿಜವಾದ ಸುಶಿಕ್ಷಿತರೆಂದು ನನಗೆ ಒಡೆದು ಕಾಣುತ್ತಿರುವರು. ಅವರೇ ನಮ್ಮೆಲ್ಲರಿಂತಲೂ ಹೆಚ್ಚು ಸುಸಂಸ್ಕೃತರಾಗಿರುವರು. ಅವರ ಬಾಳುವೆಯೇ ಹೆಚ್ಚು ಧರ್ಮನಿರತವಾದದ್ದು ಆಗಿರುವದು. ಜನರ ಈಗಿನ ಮನೋಭಾವನೆಯನ್ನು ಸ್ವಲ್ಪ ಪರೀಕ್ಷಿಸಿ ನೋಡಿದರೆ ಅವರು ಮನಸ್ಸಿನಲ್ಲಿ ಸ್ವರಾಜ್ಯವೆಂದರೆ ರಾಮರಾಜ್ಯವೇ ದೇ — ಧರ್ಮಸಾಮ್ರಾಜ್ಯದ ಸಂಸ್ಥಾಪನೆಯೆಂದೇ— ತಿಳಿದು ಕೊಂಡಿರುವರೆಂಬುವದು ತೋರಿಬರುವದು.

ನನ್ನ ಅಂತ್ಯಜ [illegible]ಂಥವರೇ ನಿಮ್ಮ ಸ್ಪೃಶ್ಯತೆಯ ಪ್ರಶ್ನೆಯು ಜನರಲ್ಲಿ ಮೊದಲಿನಷ್ಟು ವಿರೋಧವನ್ನು ಎಬ್ಬಿಸುವದಿಲ್ಲವೆಂಬದನ್ನು ಕೇಳಿ ನಿಮಗೇನಾದರೂ ಸಮಾಧಾನವೆನಿಸುತ್ತಿದ್ದರೆ ಹಾಗೆ ಹೇಳಲು ನಾನು ಸಿದ್ಧನಿದ್ದೇನೆ. ಆದರೆ ಇಷ್ಟರಿಂದಲೇ ನೀವು ಹಿಂದುಗಳ ವಿಷಯದಲ್ಲಿನ ನಿಮ್ಮ ಸಂಶಯಗಳನ್ನೆಲ್ಲ ಬಿಟ್ಟುಬಿಡಬಹುದೆಂದು ನಾನು ಹೇಳುವಂತಿಲ್ಲ. ಅವರು ಇಷ್ಟರಿ ನಿಮ್ಮ ದ್ರೋಹವನ್ನು ಕಟ್ಟಿಕೊಂಡಿರಲು ನಿಮ್ಮ ಅವಿಶ್ವಾಸಕ್ಕೆ ಅವರು ಪಾತ್ರರಾಗದೆ ಇರುವದೆಂತು? ಹಿಂದು ಜನರು ಅಸ್ಪೃಶ್ಯರನ್ನು ಏಳಗೊಟ್ಟಿಲ್ಲ. ಇಷ್ಟೇ ಅಲ್ಲ ಆದರೆ ಅವರನ್ನು ಒತ್ತಿ ದಬ್ಬಿ ಹಿಡಿದಿರುವರು. ಮತ್ತು ಹೀಗೆ ಅವರನ್ನು ಬುಡಕ್ಕೆ ಮುಟ್ಟುವದರಿಂದ ತಮ್ಮನ್ನು ತಾವೇ ಅಧೋಗತಿಗೆ ದಬ್ಬಿಕೊಂಡಿರುವರೆಂದು ಸ್ವಾಮಿ ವಿವೇಕಾನಂದರು ಅನ್ನುತ್ತಿದ್ದರು.

ಮುಂದಿನ ಸಂಚಿಕೆಯಲ್ಲಿ

---

ಮಂಗಳವಾರ ದಿನ ದೇಶಭಕ್ತ ಶ್ರೀನಿವಾಸರಾವ ಕೌಜಲಗಿಯವರ ಅಭಿನಂದನ ಮಾಡುವ ಕುರಿತು ಸಭೆಯಾಯಿತು. ದೇಶಭಕ್ತ ಪರಡೀಕರರ ವ್ಯಾಖ್ಯಾನ ವಾಯಿತು. ವ್ಯಾಖ್ಯಾನವು ಒಳ್ಳೆ ಪರಿಣಾಮಕರ ವಾಯಿತು. ಅವರ ವ್ಯಾಖ್ಯಾನದ ಸಾರಾಂಶವನ್ನು ಮುಂದಿನ ವಾರದಲ್ಲಿ ಪ್ರಸಿದ್ಧಿಸುವೆವು.

ಸೋಮವಾರ ದಿನ ದೇಶಭಕ್ತ ಕೌಜಲಗಿಯವರ [illegible]ಯ ತೀರ್ಮಾನವು ತಿಳಿದ ಕೂಡಲೆ ಆ ಹೊತ್ತೇ ಕನ್ನಡ ನವಜೀವನದ ವಿಶೇಷ ಸಂಚಿಕೆಯು ಹೊರಡಿಸಲ್ಪಟ್ಟಿತು.

“ಕನ್ನಡ ನವಜೀವನದ” ಮೊನ್ನಿನ ವಿಶೇಷ ಸಂಚಿಕೆಯಲ್ಲಿ ದೇ ಭ ಕೌಜಲಗಿ ಶ್ರೀನಿವಾಸರಾಯರಿಗೆ ೪ ತಿಂಗಳ ಕಠಿಣ ಶಿಕ್ಷೆಯಾಯಿತೆಂದು ಮೊದಲು ಇಲ್ಲಿ ತಾರು ಬಂದಂತೆ ಪ್ರಸಿದ್ಧಿಸಲ್ಪಟ್ಟಿತು. ಆದರೆ ಆತಂತಿಯು ತಪ್ಪು ತಿಳುವಳಿಕೆಯಿಂದ ಬಿಡಲ್ಪಟ್ಟಿತ್ತೆಂದು ಹಿಂದುಗಡಿಗೆ ತಿಳಿದುಬಂತು,

ದೇ ಭ ಕೌಜಲಗಿಯವರನ್ನು ಮಂಗಳವಾರ ರಾತ್ರಿ ವಿಜಾಪುರದಿಂದ ಯರವಡೆಗೆ ಕರೆದೊಯ್ದರೆಂದು ತಿಳಿಯುತ್ತದೆ

ದೇ ಭ ಯಶವಂತರಾವ ತಿಳಗೂಳ ಇವರ ಕಟ್ಟಳೆಯ ವಿಚಾರಣೆಯು ಇವತ್ತಿನ ದಿವಸವೇ ವಿಜಾಪುರ ಸೆಶನ್ ಕೋರ್ಟಿನಲ್ಲಿ ನಡೆಯತಕ್ಕದ್ದಿರುವದು; ಪರಿಣಾಮವು ಏನಾಗುವದೋ!!

ಶಿರಹಟ್ಟಿ ನಾಟಕಮಂಡಳಿಯವರು ಮುಂದಿನವಾರದಲ್ಲಿ ವಿಜಾಪುರಕ್ಕೆ ಹೋಗುವರು,

ಕಂಬಳಿಗಳು ! ॥ಶ್ರೀ ವಿಠ್ಠಲ ಪ್ರಸನ್ನ ॥ ಉತ್ಕೃಷ್ಟ ಕಂಬಳಿಗಳು

**ಕೋಟುಗಳಿಗೂ ಓವ್ಹರಕೋಟುಗಳಿಗೂ ಉಪಯೋಗವಾಗುವವು.**

ಸುಪ್ರಸಿದ್ಧ

# ಬಾಗಲಕೋಟೆಯ ಕಂಬಳಿಗಳು.

ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತವೆ. ಬೆಲೆ ೭ ರೂಪಾಯಿಗಳಿಂದ ೨೫ ರೂ॥ಗಳವರೆಗೆ.

ಈ ಕಂಬಳಿಗಳಿಂದ ಕೋಟಗಳನ್ನು ಹೊಲಿಸಿದರೆ ಪರದೇಶೀ ಸರ್ಜ ಅರಿವೆಗಿಂತ ಶ್ರೇಷ್ಠವಾಗಿ ತೋರುವದು! ನೋಡಲಿಕ್ಕೆ ಬಹಳಂದ! ಓವ್ಹರ ಕೋಟುಗಳಿಗಂತೂ ತುಂಬಾ ಒಪ್ಪುತ್ತವೆ! ಈಗಿನ ಸ್ವದೇಶೀ ಚಳವಳಿಗೆ ಅತಿಶಯ ಅನುಕೂಲ ಯಾಕಂದರೆ ಉಣ್ಣೆಯು ಇಲ್ಲೇ ತಯಾರಾಗಿದ್ದು, ಉಣ್ಣೆಯಿಂದ ಕಂಬಳಿಗಳು ಇಲ್ಲೇ ಸಿದ್ಧವಾಗಿವೆ. ಈ ಕಾರಣಕ್ಕೋಸ್ಕರವೇ ಮುಂಬಯಿ ಬೆಳಗಾಂವಿಗಳಿಂದ ಪ್ರತಿ ತಿಂಗಳಿಗೆ ನೂರ ಗಟ್ಲೇ ಕಂಬಳಿಗಳನ್ನು ವ್ಯಾಪಾರಸ್ಥರು ನಮ್ಮಿಂದ ತರಿಸಿಕೊಳ್ಳುತ್ತಾರೆ. ಪರಸ್ಥಳದಲ್ಲಿರುವ ಜನರು ಅರ್ಧ ಮುಂಗಡ ಹಣವನ್ನು ಕಳುಹಿಸಿ ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಗಿರಾಕಿಗಳು ತಮಗೆ ಕಂಬಳಿಗಳು ಯಾವ ಕಾರಣಕ್ಕಾಗಿ ಬೇಕೆಂಬದನ್ನು ತಿಳಿಸಿದರೆ ಒಳ್ಳೇ ನಮೂನೆಯನ್ನು ಆರಿಸಿ ಳುಹುವೆವು. ವ್ಯಾಪಾರಸ್ಥರಿಗೆ ಯೋಗ್ಯ ದರ.

**ಶ್ಯಾಮರಾವ ಮತ್ತು ರಾಜೇರಾವ ಮಂಗಳವೇಢೇಕರ.**
ಜವಳೀ ವ್ಯಾಪಾರಸ್ಥರು. ಬಾಗಲಕೋಟೆ

# ಡಾ. ಇಂಗಳೀಕರ

ಎಲ್. ಸೀ. ಎಚ್. ಸೀ.

**ಇವರ**

**ಹದಿನೆಂಟುವರ್ಷ ಅನುಭವದಿಂದ ಉತ್ತಮವೆಂದು**

## ನಿಶ್ಚಿತವಾದ ಔಷಧಗಳು.

| | | | |
|---|---|---|---|
| ಬಾಲಾಮೃತ **ಹುಡುಗರಿಗೆ** | ೦ | ೧೨ | ೦ |
| ಹೆಪ್ಯಾಟೋ **ಸಾರ್ಸಾಪರಿಲಾ** | ೧ | ೦ | ೦ |
| ವ್ಹೆಜಿಟೇಬಲ್ **ಟಾನಿಕ ಕಾಯುರಸ** ಶಕ್ತಿವ | | | |
| ರ್ಧಕ ಮತ್ತು ಸ್ಮರಣಶಕ್ತಿಯಮೇಲೆ | ೧ | ೦ | ೦ |
| ವೀರ್ಯವರ್ಧಕ ಸಾರ್ಪರಿಪ್ | ೧ | ೦ | ೦ |
| ಗರಮಿಯ ಗುಳಿಗೆಗಳು, ಪುಡಿಯು ಮತ್ತು ಅರ್ಕವು | ೧ | ೦ | ೦ |
| ಶರಮಿಯ ಔಷಧಗಳು | ೧ | ೦ | ೦ |
| ಚಟ್ಟಿಗಳ ಮಲಮು | ೨ | ೮ | ೦ |
| ಚಳಿಜ್ವರ ಗುಳಿಗೆಗಳು | ೦ | ೧೨ | ೦ |
| ಹುಟ್ಟಿನ ಬೇನೆಯ ಗುಳಗೆಗಳು | ೧ | ೦ | ೦ |
| ಸುಖಪ್ರಸೂತಿಯ ಗುಳಿಗೆಗಳು | ೧ | ೦ | ೦ |

**ಡಾ. ಇಂಗಳೀಕರ,** L. C. H. C.
ಬಾಗಲಕೋಟೆ.

### ದಿ. ಕರ್ನಾಟಕ ಹೋಮಿಯೋ ಫಾರ್ಮಸೀ

**ಬಾಗಲಕೋಟೆ.**

ಕರ್ನಾಟಕದಲ್ಲಿ ಪೂರ್ಣ ವಿಶ್ವಸನೀಯವಾದ ಹೋಮಿಯೋಪಾಥಿಕ್ ಔಷಧಗಳನ್ನು ಪೂರೈಸುವ ಫಾರ್ಮಸಿಯು ಇದೇ ಮೊದಲನೇಯದು ಈ ಔಷಧಗಳನ್ನು ಅಮೇರಿಕೆಯಿಂದಲೇ ತರಿಸುತ್ತಿದ್ದು; ಅವು ಪದವೀಧರರಾದ ಡಾಕ್ಟರರ ಪ್ರತ್ಯಕ್ಷದಲ್ಲಿ ತಯಾರಾಗುತ್ತಿರುವದರಿಂದ ಅವುಗಳಬಗ್ಗೆ ಯಾರಿಗೂ ಸಂಶಯ ತೆಗೆದುಕೊಳ್ಳಲಿಕ್ಕೆ ಮಾರ್ಗವಿಲ್ಲ. ಔಷಧಗಳನ್ನು ತರಿಸಿ ಅನುಭವವನ್ನು ತೆಗೆದುಕೊಳ್ಳಬೇಕು

ವ್ಯವಸ್ಥಾಪಕ.

**ಶ್ರೀ ಬನಶಂಕರೀಪ್ರಸನ್ನ.**

ಸ್ವದೇಶೀ ! ಶುದ್ಧಸ್ವದೇಶೀ !! ಒಡಿವೆಗಳು !!!

ಎಲ್ಲ ತರದ ಸ್ವದೇಶೀ - ಶುದ್ಧಸ್ವದೇಶೀ - ಒಡಿವೆಗಳನ್ನು ನಾವು ಸಂಗ್ರಹಿಸಿದ್ದೇವೆ. ನಮ್ಮ ದೇಶದೊಳಗಿನ ಕಲಾನಿಪುಣರು ಮುಂದಕ್ಕೆ ಬರಲು ಉತ್ತೇಜನದೊರೆಯಬೇಕೆಂಬ ಮತ್ತು ನಮ್ಮ ರಾಷ್ಟ್ರದಉದ್ಯೋಗವು ಬೆಳೆಯಬೇಕೆಂಬ ಉದ್ದೇಶದಿಂದಲೇ ನಾವು ಈ ಸ್ವದೇಶೀ ಸಂಗ್ರಹಾಲಯವನ್ನು ಸ್ಥಾಪಿಸಿದ್ದೇವೆ. ಸ್ವದೇಶೀ ಸಕ್ಕರೆ, ಕೃಷ್ಣಾಹುಲಸಿಂದ ತಯಾರಾದ ಶುದ್ಧ ಖಾದಿಯ ಶೀರೆ, ಧೋತರ, ಖಣ ಮುಂತಾದ ವಸ್ತ್ರಗಳೂ, ಕಡ್ಡಿಪೆಟ್ಟಿಗೆ ಸೀಸಪೆನ, ಕಾಗದ ಮತ್ತು ಬರೆ ಯುವ ಸ್ಟೇಶನರೀ ಸಾಮಾನಗಳೂ, ಪೇಟಂಟ ದೇಶೀ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

**ಭಾರತ ವಸ್ತು ಸಂಗ್ರಹಾಲಯ,**

**ಮತ್ತು ಮಹಾಂತಪ್ಪ ಬನ್ನೂರ ...**

ಬಾಗಲಕೋಟೆ.

# *Shree Mahalaxmi Stores,*

BAGALKOT.

Wholesale Dealers in papers, swadeshi slates, and Ogle's glass Wares.

ನಮ್ಮಲ್ಲಿ ಎಲ್ಲ ತರದ ಕಾಗದಗಳೂ, ಸ್ವದೇಶೀ ಪಾಟಿಗಳೂ, ಮೈಸೂರಿನ ಸಾಬೂನುಗಳೂ ಮತ್ತು ಸುಗಂಧ ದ್ರವ್ಯಗಳೂ, ಬಗೆ ಬಗೆಯ ತರದ ಖಾದೀ ವಸ್ತ್ರಗಳೂ, ಮತ್ತು ಇತರ ಸ್ಟೇಶನರೀ ಸಾಮಾನುಗಳೂ ಮಾರಲಿಕ್ಕೆ ದೊರೆಯುತ್ತವೆ.

*Proprietors:—*
Parvatikar & Katgeri Bros, BAGALKOT.

**ಶ್ರೀ ಮಹಾಲಕ್ಷ್ಮೀ ಸ್ಟೋರ್ಸ**

**ಬಾಗಲಕೋಟೆ.**

☞ ಈ ಪತ್ರವನ್ನು ಬಾಗಲಕೋಟೆ ವಂಕಟೇಶಪೇಟೆಯಲ್ಲಿ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಶ್ರೀನಿವಾಸ ರಾಜೇರಾವ ಮಂಗಳವೇಢೆ (ಸಂಪಾದಕ) ಇವರು ಮುದ್ರಿಸಿದರು ಮತ್ತು ಅಲ್ಲಿಯೇ ತಮ್ಮ ನಾಡಿಗೇರ ಬೀಳಗಿಯ ಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

[illegible]

# ಕನ್ನಡ

# ನವಜೀವನ

ಬೆಲೆ ೪ ಆಣೆ.

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು.


[illegible] | ಬಾಗಲಕೋಟೆ ಆಶ್ವಿನ ಶು. ೧೪ ಶಕೆ ೧೮೪೬ ಗುರುವಾರ ತಾ. ೨ ಅಕ್ಟೋಬರ ೧೯೨೪ | ಸಂಚಿಕೆ ೧೩

# ಮಹಾತ್ಮಗಾಂಧಿ

ಇವರ

# ಜಯಂತಿ ಸಂಚಿಕೆಯು.

## ವಿಷಯಾನುಕ್ರಮಣಿಕೆ.


| ವಿಷಯ. | ಲೇಖಕರು. |
|---|---|
| [illegible] | ದತ್ತಾತ್ರೇಯ ಬಾಲಕೃಷ್ಣ ಕಾಲೇಲಕರ. |
| ಮಹಾತ್ಮಾ ಗಾಂಧಿಯವರ ಜನ್ಮದಿನ. | ಗಂಗಾಧರ ಬಾಲಕೃಷ್ಣ ದೇಶಪಾಂಡೆ. |
| ಮಹಾತ್ಮರ ಕಾಣಿಕೆಯು. | ಶ್ರೀನಾಥ ಮಹೋದಯರು. |
| ಮಹಾತ್ಮಾ ಗಾಂಧಿಯವರ ಸಂದೇಶ. | ಪಂಡಿತ ತಾರಾನಾಥ. |
| ಮಹಾತ್ಮರು ಮಾಡಿದ ಮಹತ್ ಕಾರ್ಯವು. | ವೆಂಕಟೇಶ ಭೀಮರಾವ ಆಲೂರ. |
| ಭಾರತಮಾತೆಯ ಭಗವತ್-ಪ್ರಾರ್ಥನೆಯು. | ಭಾರತೀ-ಸುತ. |
| ಕರ್ನಾಟಕದಲ್ಲಿಯ ರಾಷ್ಟ್ರೀಯತ್ವ | ರಾಘವೇಂದ್ರರಾವ ಕಡಕೋಳ. |
| ಮಹಾತ್ಮರ ಅವತಾರ ಕೃತ್ಯ. | ಮಂಜಪ್ಪಾ ಹರ್ಡೇಕರ. |
| ಮಹಾತ್ಮರು ಮಾಡಿದ ಆರ್ಯಸಂಸ್ಕೃತಿಯ ಪುನರುಜ್ಜೀವನ. | ಶಂಕರ [illegible] ಜೋಶಿ. |

[illegible]

[illegible]

# ಕನ್ನಡ ನವಜೀವನ.

ಆಶ್ವಿನ ಶುದ್ಧ ೧೧ ಸೋಮವಾರ ಶ[illegible]

## ಬಹಾದ್ದೂರ ಕರ್ನಾಟಕ.

(ಲೇಖಕ — ದತ್ತಾತ್ರೆಯ ಬಾಳಕೃಷ್ಣ ಕಾಲೇಲಕರ)

ಕನ್ನಡ ನವಜೀವನದಲ್ಲಿ ನಾನು ಏನು ಬರೆಯಬೇಕೆನು?

ಒಂದು ದೃಷ್ಟಿಯಿಂದ ನೋಡಿದರೆ ಮಹಾತ್ಮಾಜಿಯವರ ಜಯಂತಿಯ ಕಾಲದಲ್ಲಿ ಕರ್ನಾಟಕದ ವೃತ್ತಪತ್ರಗಳಲ್ಲಿ ನಾನಾದರೂ ಸ್ವಲ್ಪ ಬರೆಯಬೇಕೆಂಬದು ನನ್ನ ಕರ್ತವ್ಯವಾಗುವದು. ಯಾಕೆಂದರೆ ನಾನು ಕರ್ನಾಟಕದ ನಿವಾಸಿಯಾಗಿರುವದಲ್ಲದೆ ಮಹಾತ್ಮಾಜಿಯವರ ಸಹವಾಸದಲ್ಲಿರುವ ಸೌಭಾಗ್ಯವು ನನಗೆ ದೊರೆತಿದೆ. ಆದರೆ ಬೇರೆ ದೃಷ್ಟಿಯಿಂದ ವಿಚಾರಮಾಡಿದರೆ ಕನ್ನಡ ಭಾಷೆಯ ಗಂಧವನ್ನು ಅರಿಯದಂಥ ನಾನು ನನ್ನ ಆಯುಷ್ಯದ ಬಹುಶಃ ಎಲ್ಲ ಭಾಗ ನನ್ನ ಕರ್ನಾಟಕದ ಹೊರಗೆ ಕಳೆದಿರುವದರಿಂದ ಕರ್ನಾಟಕಕ್ಕೆ ನಾನು ಉಪದೇಶಿಸಬೇಕೆಂಬ ವಿಚಾರವು ನನ್ನಲ್ಲಿ ಬರುತ್ತದೆ.



ಆದರೆ ಬಹು ಕಾಲದ ವಿರಹದಿಂದ ಮಾತೃಭೂಮಿಯ ವಿಷಯವಾಗಿ ಸ್ನೇಹವೂ ಅಭಿಮಾನವೂ ವೃದ್ಧಿಂಗತವಾಗುತ್ತವೆ. ನಾನು ಈ ಕಾರಣದಿಂದಲೇ ಜಯಂತಿ ಸಂಚಿಕೆಯಲ್ಲಿ ಲೇಖವನ್ನು ಬರೆಯಲಿಕ್ಕೆ ಒಪ್ಪಿಕೊಂಡೆನು. ಇದೂ ಅಲ್ಲದೆ ಗುಜರಾಥೀ ನವಜೀವನದಲ್ಲಿ ನಿಯತಲೇಖಕನಾದ ನನಗೆ ಕನ್ನಡ "ನವಜೀವನ"ದ ಆಮಂತ್ರಣವು ಆಜ್ಞಾರೂಪವಾಗಿರುವದು. ಹಾಗಾದರೆ ನಾನು ಏನು ಬರೆಯಬೇಕು?

ಒಂದು ದಿನ ನಾನು ಮಹಾತ್ಮಾಜಿಯವರಿಗೆ ಬೇರೆ ಬೇರೆ ಪ್ರಾಂತಗಳಲ್ಲಿಯ ಲೋಕಸ್ಥಿತಿಯ ಸಂಬಂಧವಾಗಿ ಕೇಳುತ್ತಿದ್ದನು. ಸಂದರ್ಭವಶದಿಂದ "ಕರ್ನಾಟಕದ ವಿಷಯವಾಗಿ ತಮಗೆ ಯಾವ ತರದ ಅನುಭವವು ಉಂಟಾಗಿರುವದು" ಎಂದು ನಾನು ಅವರಿಗೆ ಕೇಳಿದೆನು. ಅದಕ್ಕೆ ಮಹಾತ್ಮಾಜಿಯವರು ಪ್ರಸನ್ನವೃತ್ತಿಯಿಂದ ಕೆಳಗಿನ ಉತ್ತರವನ್ನು ಕೊಟ್ಟರು. "ಕರ್ನಾಟಕದಲ್ಲಿ ವ್ಯಕ್ತವಾದ ಶ್ರದ್ಧೆಯ ಹಾಗು ಬಹಾದ್ದೂರಿತನದ ಪರಿಣಾಮವು ನನ್ನ ಮೇಲೆ ವಿಶೇಷವಾಗಿ ಆಗಿರುವದು. ಬೆಳಗಾಂವದ ಸ್ತ್ರೀಯರು ತೋರಿಸಿದ ಶ್ರದ್ಧೆಯೂ ದೇಶಭಕ್ತಿಯೂ ಅಪೂರ್ವವಾಗಿರುವವು. ಬೆಳಗಾಂವಿಯಲ್ಲಿ ಸ್ವಯಂಸೇವಕರಲ್ಲಿ ಕೂಡ ಉತ್ತಮವಾದ ಶಿಸ್ತು (Discipline) ನ ದರ್ಶನವು ಮತ್ತು ಕರ್ನಾಟಕದ ಬಹದ್ದೂರತನದ ಪರಿಚಯವು ನನಗೆ ಧಾರವಾಡದಲ್ಲಾಯಿತು. ಸಭೆಯಲ್ಲಿ ನನ್ನ ವ್ಯಾಖ್ಯಾನವು ನಡೆಯುತ್ತ ಇದ್ದಾಗ್ಯೂ ಕಲ್ಲುಗಳು ಬೀಳಹತ್ತಿದವು. ಹೀಗಿದ್ದರೂ ಅಂಥ ದೊಡ್ಡ ಸಭೆಯಲ್ಲಿ ಸ್ವಲ್ಪಕೂಡ ಗೊಂದಲವಾಗಲಿಲ್ಲ. ಏನಾದರೂ ಆಗಿರುವದೋ ಇಲ್ಲವೋ ಎಂಬಂತೆ ಜನರು ಶಾಂತತೆಯಿಂದ ವ್ಯಾಖ್ಯಾನವನ್ನು ಕೇಳುತ್ತ ಕುಳಿತಿದ್ದರು. ಯಾವ ಕರ್ನಾಟಕದಲ್ಲಿ ಇಂಥ 'ಬಹದ್ದೂರತನ' ಇರುವದೋ ಅಂಥ ಜನರ ಕಡೆಯಿಂದ ನಾನು ಯಾವ ಅಪೇಕ್ಷೆಯನ್ನು ಬಯಸದಿರೆನು?" ಮಹಾತ್ಮಾಜಿಯವರ ಈ ಅಭಿಪ್ರಾಯವು ನಿಜವಾಗಿ ಇರುತ್ತದೆಂದು ಸಿದ್ಧಮಾಡಿ ತೋರಿಸುವದು 'ಬಹದ್ದೂರ' ಕರ್ನಾಟಕದ ಕಾರ್ಯವಾಗಿರುವದು.

ಸನ್ಮಾನ ಭಾಷಣದಲ್ಲಿ ಮಹಾತ್ಮಾಜಿಯವರು ಪೂಜ್ಯ ಶ್ರೀ ಗಂಗಾಧರರಾವ ದೇಶಪಾಂಡೆ ಮತ್ತು ಬಾಬಾಸಾಹೇಬ ಸೋಮಣ ಇವರ ಸ್ತುತಿಯನ್ನು ಮುಕ್ತಕಂಠದಿಂದ ಮಾಡಿದರು. ಅದನ್ನು ನಾನು ಇಲ್ಲಿ ಬರೆಯಲಾರೆನು. ಯಾಕೆಂದರೆ ಆ ಎರಡು ವಿಭೂತಿಗಳ ಹಾಗು ನನ್ನ ಸಂಬಂಧವು ಗಾಢವಾದ ಪ್ರೇಮ ಮತ್ತು ಭಕ್ತಿಗಳಿಂದ ಯುಕ್ತವಾದದ್ದಾಗಿರುವದು.

ಕರ್ನಾಟಕದಲ್ಲಿ ಪೌರುಷವಿರುವದು. ಅದರಲ್ಲಿ ಜಿಗಟತನವಿರುವದು. ಸಹನಶೀಲತೆಯೂ ತ್ಯಾಗವೂ ಅಲ್ಲಿ ವ್ಯಕ್ತವಾಗುತ್ತವೆ. ಕರ್ನಾಟಕದಲ್ಲಿ ಜಾಗೃತಿಯ ಅವಶ್ಯಕತೆಯು ಮಾತ್ರ ಇರುತ್ತದೆ. ಬಡವರ ಸುಖದುಃಖಗಳ ಅನುಸಾರವಾಗಿ ಸುಖಿಗಳೂ ದುಃಖಿಗಳೂ ಆಗುವಷ್ಟು ಹೃದಯದ ಔದಾರ್ಯವೂ ಸಹಾನುಭೂತಿಯೂ ಅವಶ್ಯವಾಗಿ ಬೇಕಾಗಿರುವವು. ಖಾದಿಯ ದ್ವಾರದಿಂದ ಈ ಕುಂದುಗಳೆಲ್ಲ ದೂರವಾಗಿ ಕಡೆಗೆ ಕರ್ನಾಟಕವು ಭರತಖಂಡಕ್ಕೆ ಒಂದು ಗೌರವದ ಸ್ಥಾನವಾಗಿರುವದು.

**ಟೀಪು:**— ಮೇಲಿನ ಲೇಖದಲ್ಲಿ 'ಬಹದೂರ' ಎಂಬ ಶಬ್ದವನ್ನು ಭಾಷಾಂತರಿಸದೆ ಹಾಗೆಯೇ ಇಟ್ಟಿದೆ. ಅದರ ಅರ್ಥವು ಬಹಳ ಗರ್ಭಿತವಾಗಿದ್ದು ಅದರ ಸಮಾನಾರ್ಥಕವಾದ ಬೇರೊಂದು ಶಬ್ದವು ಕನ್ನಡದಲ್ಲಿ ಹೊಳೆಯದ್ದರಿಂದ ಅದನ್ನೇ ಇಡಬೇಕಾಯಿತು.

**ಸಂಪಾದಕ.**

[illegible]

# ಕನ್ನಡ ನವಜೀವನ.

ಅಶ್ವಿನ ಶುದ್ಧ ೧೨ ಸೋಮವಾರ ಶ [illegible]

## ಬಹಾದೂರ ಕರ್ನಾಟಕ.

(ಲೇಖಕ - ದತ್ತಾತ್ರಯ ಬಾಳಕೃಷ್ಣ ಕಾಲೇಲಕರ)

ಕನ್ನಡ ನವಜೀವನದಲ್ಲಿ ನಾನು ಏನು ಬರೆಯಬಲ್ಲೆನು? ಒಂದು ದೃಷ್ಟಿಯಿಂದ ನೋಡಿದರೆ ಮಹಾತ್ಮಾಜಿಯವರ ಜಯಂತಿಯ ಕಾಲದಲ್ಲಿ ಕರ್ನಾಟಕದ ವೃತ್ತಪತ್ರಗಳಲ್ಲಿ ಏನಾದರೂ ಸ್ವಲ್ಪು ಬರೆಯಬೇಕೆನ್ನುವದು ನನ್ನ ಕರ್ತವ್ಯವಾಗುವದು. ಯಾಕೆಂದರೆ ನಾನು ಕರ್ನಾಟಕದ ನಿವಾಸಿಯಾಗಿರುವೆನಲ್ಲದೆ ಮಹಾತ್ಮಾಜಿಯವರ ಸಹವಾಸದಲ್ಲಿರುವ ಸೌಭಾಗ್ಯವು ನನಗೆ ದೊರೆತಿದೆ. ಆದರೆ ಬೇರೆ ದೃಷ್ಟಿಯಿಂದ ವಿಚಾರಮಾಡಿದರೆ ಕನ್ನಡ ಭಾಷೆಯು ಗಂಧವನ್ನು ಅರಿಯದಂಥ ನಾನು ನನ್ನ ಆಯುಸ್ಯದ ಬಹುಶಃ ಎಲ್ಲ ಭಾಗವನ್ನು ಕರ್ನಾಟಕದ ಹೊರಗೆ ಕಳೆದಿರುವದರಿಂದ ಕರ್ನಾಟಕಕ್ಕೆ ಏನು ಉಪದೇಶಿಸಬೇಕೆಂಬ ವಿಚಾರವು ನನ್ನಲ್ಲಿ ಬರುತ್ತದೆ.

ಆದರೆ ಬಹು ಕಾಲದವಿರಹದಿಂದ ಮಾತೃಭೂಮಿಯ ವಿಷಯವಾಗಿ ಸ್ನೇಹವೂ ಅಭಿಮಾನವೂ ವೃದ್ಧಿಂಗತವಾಗುತ್ತವೆ. ನಾನು ಈ ಕಾರಣದಿಂದಲೇ ಜಯಂತಿ ಸಂಚಿಕೆಯಲ್ಲಿ ಲೇಖವನ್ನು ಬರೆಯಲಿಕ್ಕೆ ಒಪ್ಪಿಕೊಂಡೆನು. ಇದೂ ಅಲ್ಲದೆ ಗುಜರಾಥೀ ನವಜೀವನದಲ್ಲಿ ನಿಯತಲೇಖಕನಾದ ನನಗೆ ಕನ್ನಡ “ನವಜೀವನ”ದ ಆಮಂತ್ರಣವು ಆಜ್ಞಾರೂಪವಾಗಿರುವದು. ಆದರೆ ನಾನು ಏನು ಬರೆಯಬೇಕು?

ಒಂದು ದಿನ ನಾನು ಮಹಾತ್ಮಾಜಿಯವರಿಗೆ ಬೇರೆ ಬೇರೆ ಪ್ರಾಂತಗಳಲ್ಲಿಯ ಲೋಕಸ್ಥಿತಿಯ ಸಂಬಂಧವಾಗಿ ಕೇಳುತ್ತಿದ್ದೆನು. ಸಂದರ್ಭ ವಶದಿಂದ “ಕರ್ನಾಟಕದ ವಿಷಯವಾಗಿ ತಮಗೆ ಯಾವ ತರದ ಅನುಭವವು ಉಂಟಾಗಿರುವದು” ಎಂದು ನಾನು ಅವರಿಗೆ ಕೇಳಿದೆನು. ಅದಕ್ಕೆ ಮಹಾತ್ಮಾಜಿಯವರು ಪ್ರಸನ್ನಮುದ್ರೆಯಿಂದ ಕೆಳಗಿನ ಉತ್ತರವನ್ನು ಕೊಟ್ಟರು. “ಕರ್ನಾಟಕದಲ್ಲಿ ವ್ಯಕ್ತವಾದ ಶ್ರದ್ಧೆಯು ಹಾಗು ಬಹಾದ್ದೂರಿತನದ ಪರಿಣಾಮವು ನನ್ನ ಮೇಲೆ ವಿಶೇಷವಾಗಿ ಆಗಿರುವದು. ಬೆಳಗಾಂವದ ಸ್ತ್ರೀಯರು ತೋರಿಸಿದ ಶ್ರದ್ಧೆಯೂ ದೇಶಭಕ್ತಿಯೂ ಅಪೂರ್ವವಾಗಿರುವವು. ಬೆಳಗಾಂವಿಯಲ್ಲಿ ಸಾಮಾನ್ಯ ಜನರಲ್ಲಿ ಕೂಡ ಉತ್ತಮವಾದ ಶಿಸ್ತು (Discipline) ನ ದರ್ಶನವು ಮತ್ತು ಕರ್ನಾಟಕದ ಬಹದ್ದೂರತನದ ಪರಿಚಯವು ನನಗೆ ಧಾರವಾಡದಲ್ಲಾಯಿತು. ಸಭೆಯಲ್ಲಿ ನನ್ನ ವ್ಯಾಖ್ಯಾನವು ನಡೆದಿತ್ತು. ಇಷ್ಟರಲ್ಲಿಯೇ ಕಲ್ಲುಗಳು ಬೀಳಹತ್ತಿದವು. ಇಷ್ಟಾದರೂ ಅಂಥ ಆ ದೊಡ್ಡ ಸಭೆಯಲ್ಲಿ ಸ್ವಲ್ಪುಕೂಡ ಗೊಂದಲವಾಗಲಿಲ್ಲ. ಏನಾದರೂ ಆಗಿರುವದೋ ಇಲ್ಲವೋ ಎಂಬಂತೆ ಜನರು ಶಾಂತರಾಗಿ ನನ್ನ ವ್ಯಾಖ್ಯಾನವನ್ನು ಕೇಳುತ್ತ ಕುಳಿತಿದ್ದರು. ಯಾವ ಕರ್ನಾಟಕದಲ್ಲಿ ಇಂಥ ‘ಬಹದ್ದೂರತನ’ ವಿರುವದೋ ಅಂಥ ಜನರ ಕಡೆಯಿಂದ ನಾನು ಯಾವ ಅಪೇಕ್ಷೆಯನ್ನು ಒಯಿಸದಿರೆನು?” ಮಹಾತ್ಮಾಜಿಯವರ ಈ ಅಭಿಪ್ರಾಯವೇ ಯಾ ನಿಜವಾಗಿ ಇರುತ್ತದೆಂದು ಸಿದ್ಧಮಾಡಿ ತೋರಿಸುವದು ‘ಬಹದ್ದೂರ’ ಕರ್ನಾಟಕದ ಕರ್ತವ್ಯವಾಗಿರುವದು.

ನನ್ನ ಈ ಭಾಷಣದಲ್ಲಿ ಮಹಾತ್ಮಾಜಿಯವರು ಪೂಜ್ಯ ಶ್ರೀ ಗಂಗಾಧರರಾವ ದೇಶಪಾಂಡೆ ಮತ್ತು ಬಾಬಾಸಾಹೇಬ ಸೋಮಣ ಇವರ ಸ್ತುತಿಯನ್ನು ಮುಕ್ತಕಂಠದಿಂದ ಮಾಡಿದರು. ಅದನ್ನು ನಾನು ಇಲ್ಲಿ ಬರೆಯಲಾರೆನು. ಯಾಕೆಂದರೆ ಆ ಎರಡು ವಿಭೂತಿಗಳ ಹಾಗು ನನ್ನ ಸಂಬಂಧವು ಗಾಢವಾದ ಪ್ರೇಮ ಮತ್ತು ಭಕ್ತಿಗಳಿಂದ ಯುಕ್ತವಾದದ್ದಾಗಿರುವದು.

ಕರ್ನಾಟಕದಲ್ಲಿ ಪೌರುಷವಿರುವದು. ಅದರಲ್ಲಿ ಜಿಗುಟತನವಿರುವದು. ಸಹನಶೀಲತೆಯೂ ತ್ಯಾಗವೂ ಅಲ್ಲಿ ವ್ಯಕ್ತವಾಗುತ್ತವೆ. ಕರ್ನಾಟಕದಲ್ಲಿ ಜಾಗೃತಿಯು ಆವಶ್ಯಕತೆಯು ಮಾತ್ರ ಇರುತ್ತದೆ. ಬಡವರ ಸುಖದುಃಖಗಳ ಅನುಸಾರವಾಗಿ ಸುಖಿಗಳೂ ದುಃಖಿಗಳೂ ಆಗುವಷ್ಟು ಹೃದಯದ ಔದಾರ್ಯವೂ ಸಹಾನುಭೂತಿಯೂ ಅವಶ್ಯವಾಗಿ ಬೇಕಾಗಿರುವವು. ಖಾದಿಯ ದ್ವಾರದಿಂದ ಈ ಕುಂದುಗಳೆಲ್ಲ ದೂರವಾಗಿ ಕಡೆಗೆ ಕರ್ನಾಟಕವು ಭಾರತಖಂಡಕ್ಕೆ ಒಂದು ಗೌರವದ ಸ್ಥಾನವಾಗಿರುವದು.

**ಟೀಪು**:— ಮೇಲಿನ ಲೇಖದಲ್ಲಿ ‘ಬಹದೂರ’ ಎಂಬ ಶಬ್ದವನ್ನು ಭಾಷಾಂತರಿಸದೆ ಹಾಗೆಯೇ ಇಟ್ಟಿದೆ. ಅದರ ಅರ್ಥವು ಬಹಳ ಗಹನವಾಗಿದ್ದು ಅದರ ಸಮಾನಾರ್ಥಕವಾದ ಬೇರೊಂದು ಶಬ್ದವು ಕನ್ನಡದಲ್ಲಿ ಸಿಕ್ಕದ್ದರಿಂದ ಅದನ್ನೇ ಇಡಬೇಕಾಯಿತು.

**ಸಂಪಾದಕ.**

## ಮಹಾತ್ಮಾ ಗಾಂಧಿಯವರ ಜನ್ಮ-ದಿನವು.

(ಲೇಖಕ:— ಗಂಗಾಧರ ಬಾಳಕೃಷ್ಣ ದೇಶಪಾಂಡೆ)

ಮಹಾತ್ಮಾ ಗಾಂಧಿಯವರ ಜನ್ಮದಿನದ ಬಗ್ಗೆ ಲೇಖನವನ್ನು ಬರೆಯಬೇಕೆಂದು "ಕನ್ನಡ ನವಜೀವನದ" ಚಾಲಕರು ನನ್ನನ್ನು ಕೇಳಿಕೊಂಡರು. ಆ ಕಾರಣ ನಾನು ಅವರಿಗೆ ಅತ್ಯಂತ ಋಣಿಯಾಗಿದ್ದೇನೆ. ಕನ್ನಡ ಭಾಷೆಯ ಬಗ್ಗೆ ನನಗೆ ಬಹಳ ಅಭಿಮಾನವಿದ್ದರೂ ನಾನು ಬೆಳೆದ ಪರಿಸ್ಥಿತಿಯ ಮೂಲಕ ಕನ್ನಡ ಭಾಷೆಯಲ್ಲಿ ಬರೆಯುವ ರೂಢಿಯು ನನಗಿಲ್ಲೆಂಬುದು ದುರ್ದೈವದ ಸಂಗತಿಯಾಗಿದೆ. ಆದುದರಿಂದ ಮೇಲ್ಕಾಣಿಸಿದ ವಿಷಯದ ಬಗ್ಗೆ ನನ್ನ ವಿಚಾರಗಳನ್ನು ಸಂಕ್ಷೇಪದಿಂದ ವಿವರಿಸುವೆನು.

ಮಹಾತ್ಮಾ ಗಾಂಧಿಯವರು ಹುಟ್ಟಿದ ದಿವಸವು ಹಿಂದುಸ್ಥಾನದ ಇಷ್ಟೇ ಅಲ್ಲ ಇಡೀ ಜಗತ್ತಿನ ಇತಿಹಾಸದಲ್ಲಿ ಸ್ಮರಣೀಯವಾದದ್ದಾಗುವದು; ಪರಕೀಯ ಜನಾಂಗದ ದಾಸ್ಯದಲ್ಲಿ ಸಾಧನರಹಿತರಾಗಿ ಬಳಲುತ್ತಿರುವ ನಮ್ಮ ಹಿಂದು-ಬಾಂಧವರಿಗೆ ಸ್ವಾತಂತ್ರ್ಯ-ಪ್ರಾಪ್ತಿಯ ಮಾರ್ಗವು ಆ ದಿವಸವೇ ತೆರೆಯಿತು. ಮಾನವಜಾತಿಯ ನಿರ್ಮಾಣದಿಂದಲೇ ಪ್ರಾಪ್ತವಾದ ಸ್ವಾತಂತ್ರ್ಯ, ಸಮತೆ, ಮತ್ತು ಬಂಧುತ್ವ ಇವುಗಳನ್ನು ಸ್ವಾರ್ಥಕ್ಕಾಗಿ ಪಾಶವಿ ಶಕ್ತಿಯಿಂದಲೂ, ಅತ್ಯಾಚಾರಗಳಿಂದಲೂ, ರಕ್ತಪಾತದಿಂದಲೂ ನಾಶಗೊಳಿಸಲು ಎತ್ನಿಸುತ್ತಿರುವ ಪರರಾಜರ ಆಳಿಗಾಲವು ಅಂದಿನಿಂದಲೇ ಆರಂಭವಾಯಿತು. ಶಾಂತಿಯ ದ್ವಾರ ಸ್ವಾತಂತ್ರ್ಯವನ್ನೂ ಸುಖವನ್ನೂ ಪಡೆಯುವ ಮಾರ್ಗದ ಕಲ್ಪನೆಯುದಯವು ಆ ದಿವಸವೇ. ಒಮ್ಮೆ ಹಿಂದು-ಸ್ಥಾನದ ಸ್ಥಿತಿಯನ್ನು ವೈಭವದ ಶಿಖರಕ್ಕೆ ಮುಟ್ಟಿಸಲು ಕಾರಣವಾದ ಆರ್ಯ-ಸಂಸ್ಕೃತಿಯ ಜೀರ್ಣೋದ್ಧಾರದ ತಂಪು ಆ ಹೊತ್ತೇ ಹಾಕಲ್ಪಟ್ಟಿತು. ಪರಭಾಷೆಯ ಹಾಗೂ ಪರನಾಡಿನ ಆಚಾರವಿಚಾರಗಳ ಅಂಧ ಅನುಕರಣೆಯ ಮೂಲಕ ಸ್ವತ್ವವನ್ನು ಮರೆತುಹೋದ ಹಿಂದೀ ಜನತೆ ದೃಷ್ಟಿಯು ಅಂತರ್ಮುಖವಾಗಲು ಆ ದಿವಸವೇ ಪ್ರಾರಂಭವಾಯಿತು. ಒಂದೆಡೆಯಲ್ಲಿ ಕಾಲಕರ್ಮಗಳ ಪರಿಣಾಮದ ಮೂಲಕ ವಿಕಾರ ಹೊಂದಿ ನಿಷ್ಕ್ರಿಯತ್ವದಲ್ಲಿಯೂ ಆಲಸ್ಯದಲ್ಲಿಯೂ ಪರಿಣಮಿಸಿದ ಪೌರ್ವಾತ್ಯ ಆರ್ಯರ ಆಧ್ಯಾತ್ಮಿಕ ಸಂಸ್ಕೃತಿ ಹಾಗೂ ಇನ್ನೊಂದೆಡೆಯಲ್ಲಿ ಐಹಿಕ ಭೋಗಸಾಧನ ಮತ್ತು ಅನುಕೂಲತೆ ಇವುಗಳ ವಿಪುಲತೆ ಇವುಗಳ ಮೂಲಕ ಮನೋವಿಕಾರಗಳಾದ ಲೋಭ ಮತ್ಸರ ಕ್ರೌರ್ಯ ಮೊದಲಾದವುಗಳ ಪ್ರಾಬಲ್ಯದಲ್ಲಿ ಸಿಕ್ಕ ವಿಕೃತವಾದ ಪಾಶ್ಚಾತ್ಯ ಆದಿಭೌತಿಕ-ಸಂಸ್ಕೃತಿ ಇವೆರಡರ ಹಿತವಾದ ಸಮ್ಮಿಶ್ರಣವನ್ನು ಯಾವ ಪ್ರಮಾಣದಿಂದ ಮಾಡಬೇಕೆಂಬ ಶೋಧಕ್ಕೆ ಆ ದಿವಸವೇ ಪ್ರಾರಂಭವಾಯಿತು. ಬಹಳ ಹೇಳುವದೇನು! ಗತವೈಭವಳಾದ ಹಿಂದಮಾತೆಯು ಕಳಕೊಂಡ ತನ್ನ ಸ್ವಾತಂತ್ರ್ಯವನ್ನು ಮತ್ತೆ ದೊರಕಿಸಿ ಜಗತ್ತಿನ ಉದ್ಧಾರಕ್ಕಾಗಿ ಯತ್ನಿಸಲು ಆರಂಭವಾದದ್ದು ಆ ದಿವಸವೇ ಎಂದು ಖಂಡಿತವಾಗಿ ಹೇಳಬಹುದು!

ಮಹಾತ್ಮರ ಆಯುಷ್ಯದಲ್ಲಿ ಮೇಲ್ಕಾಣಿಸಿದ ಸಂಗತಿಗಳ ಸಿದ್ಧಿಗಾಗಿ ನಡೆದಿರುವ ಯತ್ನದ ಹೊರತು ಇನ್ನೇನು ಕಾಣಿಸುತ್ತದೆ! ಈ ಸಂಗತಿಗಳ ಸಿದ್ಧಿಯು ಆಯಿತೆಂಬುದರ ಬಗ್ಗೆ ಮತಭೇದವಿಲ್ಲ. ಅಂದಮೇಲೆ ಮಹಾತ್ಮರ ಆಯುಷ್ಯವು ವ್ಯರ್ಥವಾಯಿತೆನೋ? ಅವರ ಅಸಹಕಾರ ಮಾರ್ಗವು ನಿಷ್ಫಲವಾಯಿತೆಂದು ಕೆಲವರು ಅನ್ನುವರು; ಆದರೆ ಅದು ನಿಜವಲ್ಲ. ದಾನವಲ್ಲಿ ಒಲಿಸಮಾನರಾದ ದೇಶಬಂಧು ದಾಸರೂ, ವಿದ್ವಾನರಾದ ರಾಜಗೋಪಾಲಾಚಾರ್ಯರೂ, ಶೌರ್ಯ ಧೀರರಾದ ಲಜಪತರಾಯರೂ, ಸಂಪತ್ತಿಯ ಉಪಭೋಗದಲ್ಲಿ ಅರಸರನ್ನು ಸಹ ನಾಚಿಸುವ ನೆಹರೂ ಪಿತಾಪುತ್ರರೂ ಅಸಹಕಾರ ಮಾರ್ಗದ ಸತ್ಯತೆಯನ್ನೂ, ಯೋಗ್ಯತೆಯನ್ನೂ, ಯಶಸ್ಸನ್ನೂ ಸಿದ್ಧಪಡಿಸಿರುವರು. ಮಹಾತ್ಮರು ಬೇಡುತ್ತಿರುವ ಸ್ವಾರ್ಥತ್ಯಾಗವು ಅವ್ಯವಹಾರ್ಯವೆಂದು ಕೆಲವರು ಹೆಸರಿಡುವರು; ಆದರೆ ಸಾವಿರಗಟ್ಟಲೆ ಜನರು ನಿರ್ಭಯರಾಗಿ ತುರಂಗಗಳನ್ನು ತುಂಬಿರುವದು, ತಮ್ಮ ಶಸ್ತ್ರವಿಲ್ಲದೆ ಲಕ್ಷಗಟ್ಟಲೆ ರುಪಾಯಿಗಳನ್ನು ಕೊಡುವದೂ, ಮತ್ತು ಸರ್ವಸ್ವ ನಾಶವನ್ನೂ ಲೆಕ್ಕಿಸದೆ ಇಡೀ ಎರಡು ತಾಲೂಕಗಳೂ ಸತ್ಯಾಗ್ರಹಕ್ಕೆ ಸಿದ್ಧರಾಗಿರುವದೂ ಆ ತತ್ವದ ವ್ಯವಹಾರ್ಯತ್ವವನ್ನು ಸಿದ್ಧಪಡಿಸಲಿಲ್ಲವೇ? ಮಹಾತ್ಮರು ಉಪದೇಶಿಸಿದ ಅಹಿಂಸಾ-ವ್ರತವು ಅಶಕ್ಯವೆಂದು ಕೆಲವರು ದೀಕ್ಷೆ ಪಡೆದು ಗುರುಕಾಬಾಗ ಪ್ರಕರಣದಲ್ಲಿ ಶೌರ್ಯಧೈರ್ಯದಲ್ಲಿ ಶೀಖರು ತೋರಿಸಿದ ಅಸಾಮಾನ್ಯವಾದ ಶಾಂತಿಯು ಆ ತತ್ವದ ಶಕ್ಯತೆಯನ್ನು ಸಿದ್ಧಪಡಿಸಲಿಲ್ಲವೋ?

ಇಂಥ ಪವಿತ್ರ ಯೋಜನೆಯಿಂದ ಮಹಾತ್ಮರು ಕೈಕೊಂಡ ಕಾರ್ಯದ ಮಹತ್ವವೂ ಅದನ್ನು ಸಿದ್ಧಿಗೊಯ್ಯುವ ಸಾಧನವೂ ಸ್ಪಷ್ಟವಾಗಿರುವವು. ಆದುದರಿಂದ ಶಾಂತರೀತಿಯಿಂದ ಆಚಾರ ಮಾಡಿ ಅವರು ಸ್ವತಃ ಅಗ್ರಣಿಗಳಾಗಿ ಸಾರಾಗ್ರಹದ ತಪಶ್ಚರ್ಯಕ್ಕೆ ತೊಡಗಿ ಹಾಕಿಕೊಟ್ಟ ಕಾರ್ಯಕ್ರಮವನ್ನು ಪಾರಗಾಣಿಸಲು ಎತ್ನಿಸುವದೇ ಅವರ ಜನ್ಮ ದಿವಸದ ನಿಜಸ್ಮರಣವೆಂತಲೂ ಅವರಂತೆ ಮಾಡಲೆತ್ನಿಸುವದೇ ಕರ್ನಾಟಕಸ್ಥರ ಕರ್ತವ್ಯವೆಂತಲೂ ನನ್ನ ಅಭಿಪ್ರಾಯವಿದೆ.

---

## ಮಹಾತ್ಮರ ಕಾಣಿಕೆಯು.

(ಲೇಖಕ:— ವೈಜನಾಥ ಸುಬೋಧಯ)

(ಉಪಸಂಪಾದಕ ಹಿಂದೀನವಜೀವನ)

ಈ ವಿಶಾಲವಾದ ನಭೋಮಂಡಲದಲ್ಲಿ ಅಸಂಖ್ಯಾತವಾದ ನಕ್ಷತ್ರಗಳು ಪ್ರಕಾಶಿಸುತ್ತಲಿವೆ! ರಾತ್ರಿಯಾದ ಕೂಡಲೇ ಎಷ್ಟೋ ನಕ್ಷತ್ರಗಳು ಉದಯವನ್ನು ಹೊಂದಿ ಕೆಲವು ವೇಳೆಯಾದ ಮೇಲೆ ಪುನಃ ಅಸ್ತವಾಗುತ್ತಿರುವವು; ಆದರೆ ಅವು ಗಾಢ ನಿದ್ರೆಯಲ್ಲಿದ್ದ ಈ ಜನರನ್ನು ಜಾಗೃತಮಾಡಲಿಕ್ಕೆ ಸಮರ್ಥ ಸಮರ್ಥವಾಗಲಾರವು. ಮತ್ತು ಜಾಡ್ಯಾವಸ್ಥೆಯಲ್ಲಿದ್ದ ಜನರನ್ನು ಕಾರ್ಯದಕ್ಷರನ್ನಾಗಿ ಮಾಡುವ ಯೋಗ್ಯತೆಯು ಆ ನಕ್ಷತ್ರಗಳಿಗೆ ಸಮರ್ಥವಿಲ್ಲ. ಜಗತ್ತನ್ನು ಜಾಗೃತ ಮಾಡಿ ಕಾರ್ಯವನ್ನು ಕೈಕೊಳ್ಳುವಂತೆ ಮಾಡಲು ಸಮರ್ಥನಾದವನು ಆ ದಿನಮಣಿಯೊಬ್ಬನೇ. ಆ ದಿನಮಣಿಯು ಉದಯನಾಗುವದೊಂದೇ ತಡ, ಇಡೀ ಜಗತ್ತಿನಲ್ಲಿ ಒಂದು ತರದ ಹೊಸ ಚೈತನ್ಯವೇ ಹುಟ್ಟುತ್ತದೆಯೋ ಏನೋ ಎಂದು ಅನಿಸುತ್ತದೆ. ಜಗತ್ತಿನಲ್ಲಿ ಎಲ್ಲರೂ ಹೊಸ ಹುರುಪಿನಿಂದ ತಮ್ಮ ಕರ್ತವ್ಯಕರ್ಮಗಳಲ್ಲಿ ಮಗ್ನರಾಗುವರು.

ಮಹಾಪುರುಷರ ಮಾತಾದರೂ ಹೀಗೆಯೇ ಇರುತ್ತದೆ. ಯಾಕಂದರೆ ದಿನಾಲು ಎಷ್ಟೋ ಮಾನವರು ಜನ್ಮತಾಳುವರು. ಎಷ್ಟೋ ಜನರು ಮಡಿದುಹೋಗುತ್ತಿರುವರು. ಆದರೆ ಒಬ್ಬ ಮಹಾಪುರುಷನ ಅವತಾರವಾಯಿತೆಂದರೆ ಅವನು ತನ್ನ ಪ್ರಭಾವದಿಂದ ಇಡೀ ಸೃಷ್ಟಿಯ ಮಂಡಲದಲ್ಲಿ ಪ್ರಕಾಶವನ್ನುಂಟು ಮಾಡುತ್ತಾನೆ, ಆಯಾ ದ ಪೃಥ್ವಿಯ ಭಾರವನ್ನು ಹಗುರ ಮಾಡಿ ಬಿಡುತ್ತಾನೆ. ಮರ್ಯಾದೆಯುಳ್ಳ ಪುರುಷೋತ್ತಮ ಶ್ರೀರಾಮನೂ, ಯೋಗೀಂದ್ರನಾದ ಶ್ರೀ ಗೋಪಾಲ ಕೃಷ್ಣನೂ, ಮಹಾತ್ಮರಾದ ಬುದ್ಧ ಏಸೂಕ್ರಿಸ್ತ ಮತ್ತು ಮಹಮ್ಮದ ಪೈಗಂಬರರು ದರೂ. ಆಚಾರ್ಯ ಶ್ರೀಶಂಕರಾಚಾರ್ಯರೂ ಮೊದಲಾದ ಮಹಾಪುರುಷರು ಜಗತ್ತಿನಲ್ಲಿ ಕ್ರಾಂತಿಗಳನ್ನು

ಉಂಟುಮಾಡಿದರು; ಮತ್ತು ಅವರ ಜೀವನೋಪದೇಶದಿಂದ ಈಗ ಎಷ್ಟೋ ಕೋಟ್ಯಾವಧಿ ಜನರು ಜೀವನದ ಮಾರ್ಗವನ್ನು ಕಂಡು ಹಿಡಿದು, ಅವರು ತೋರಿಸಿದ ದಾರಿಯಿಂದ ಸರಸರನೆ ಸಾಗುತ್ತಿರುವರು. ಇನ್ನೂವರೆಗಾದರೂ ಅವರು ಅಜ್ಞಾನಾಂಧಕಾರದಲ್ಲಿ ದಾರಿಗಾಣದೆ ಅತ್ತಿತ್ತ ಹೊಯ್ದಾಡುತ್ತಿರುವ ಜನರಿಗೆ ಸೂರ್ಯಪ್ರಕಾಶದಂಥ ಪ್ರಕಾಶವನ್ನು ತೋರಿಸಿ ಅವರನ್ನು ಸನ್ಮಾರ್ಗಕ್ಕೆ ಹಚ್ಚುತ್ತಿರುವರು; ಸಾವಿರಾರು ವರ್ಷಗಳು ಆಗಿಹೋದರೂ ಇನ್ನೂ ಅವರ ಜೀವನ ಸಂದೇಶವು—ಜಗತ್ತಿಗೆ ಅವರು ಕೊಟ್ಟ ಕಾಣಿಕೆಯು—ಜಗತ್ತು ಕರ್ತವ್ಯಮಾರ್ಗವನ್ನು ಆಗಿನಂತೆಯೇ—ಅದೇಕೆ ಆಗಿನಕ್ಕಿಂತಲೂ ಸ್ವಲ್ಪ ಹೆಚ್ಚಾಗಿಯೇ ಅನುಸರಿಸುವಂತೆ ಮಾಡಲಿಕ್ಕೆ ಸಮರ್ಥವಾಗಿರುವದು.

ಇಂದು ಅದೇ ಕೋಟಿಯಲ್ಲಿ ಸೇರಿದ ಒಬ್ಬ ಅದ್ಭುತ ಅಲೌಕಿಕ ಪುರುಷನು ಈ ಪುಣ್ಯ ಭೂಮಿಯನ್ನು ತನ್ನ ಅಹಿಂಸಾ ವ್ರತದಿಂದ ಶಾಂತಿ ಮತ್ತು ಪ್ರೇಮಮಯವಾದಂಥ ಕಠೋರವಾದ ತಪಸ್ಸಿಯಿಂದ ತಪೋಮಯವಾದಂಥ ಮತ್ತು ಪ್ರಖರವಾದ ಸತ್ಯ ಪ್ರಕಾಶದಿಂದ ತೇಜೋಮಯವಾದಂಥ ವೈಕುಂಠ ಭೂಮಿಯನ್ನಾಗಿ ಮಾಡಿಬಿಟ್ಟಿರುವನು.



ಕೆಲವರು ಅವನನ್ನು ಮರ್ಯಾದಾಪುರುಷೋತ್ತಮ ಶ್ರೀರಾಮಚಂದ್ರನ ಸಾಲಿಯಲ್ಲಿ ಸೇರಿಸುವರು. ಹಲವರು ಯೋಗೀಂದ್ರ ಶ್ರೀ ಗೋಪಾಲ ಕೃಷ್ಣನೇ ಪುನಃ ಅವತಾರವನ್ನು ತಾಳಿಬಂದಿರುವನೆಂದು ಅನ್ನುವರು. ಇನ್ನು ಕೆಲವರು ಅವನು ಭಗವಾನ ಬುದ್ಧನ ಅವತಾರವೆಂದು ಸಿದ್ಧಮಾಡುತ್ತಿರುವರು. ಮತ್ತೆ ಹಲವರು ಏಸೂಕ್ರಿಸ್ತನೇ ಪುನಃ ಪೃಥ್ವಿಯಮೇಲೆ ಜನ್ಮತಾಳಿರುವನೆಂದು ಪ್ರತಿಪಾದಿಸುತ್ತಿರುವರು. ಮತ್ತು ಕೆಲವರು ಇಸ್ಲಾಮೀಧರ್ಮದ ರಕ್ಷಣಾರ್ಥವಾಗಿ ಪರಮಾತ್ಮನು ಕಳಿಸಿಕೊಟ್ಟಿರುವಂಥ ಯಾವನೋ ಮಹಾ ಪುರುಷನು ಇವನು ಎಂದು ಭಾವಿಸುತ್ತಿರುವರು.

ಹೇಗಾದರೂ ಇರಲಿ: ಈ ಮಾತುಗಳನ್ನು ಸಿದ್ಧ ಪಡಿಸುತ್ತ ಕೂಡ್ರುವದರಲ್ಲಿ ಏನೂ ಪ್ರಯೋಜನವಿಲ್ಲ ಅವನು ಅವತಾರೀ ಪುರುಷನಿರಲಿ, ಇಲ್ಲವೆ ಸಾಧಾರಣ ಮನುಷ್ಯನಾಗಿರಲಿ, ಸಾವಿರ ಎರಡು ಸಾವಿರ ವರ್ಷಗಳಲ್ಲಿ ಯಾವಾಗಾದರೊಮ್ಮೆ ಈ ಧರಾತಲದಮೇಲೆ ತೋರುತ್ತಿರುವಂಥ ಮಹಾಪುರುಷರಲ್ಲಿ ಮಾತ್ರ ಅವನ ಗಣಿಕೆಯಾಗುವದರಲ್ಲಿ ಏನೂ ಸಂದೇಹವಿಲ್ಲ. ಹರಿಶ್ಚಂದ್ರನಲ್ಲಿದ್ದ ಸತ್ಯಶೀಲತೆಯೂ, ದಾಶರಥಿ ರಾಮಚಂದ್ರನಲ್ಲಿಯ ಮರ್ಯಾದಾಶೀಲತೆಯೂ, ಕರ್ತವ್ಯಕಠೋರತೆಯೂ, ಯೋಗೀಂದ್ರ ಶ್ರೀಗೋಪಾಲನಲ್ಲಿದ್ದ ನಿರ್ಮೋಹತೆ ಕರ್ಮಯೋಗಿತ್ವ ಮತ್ತು ಗೋಪಾಲತ್ವವೂ, ಮಹಾತ್ಮಾ ಬುದ್ಧನಲ್ಲಿ ವ್ಯಕ್ತವಾಗುತ್ತಿದ್ದ ಅಹಿಂಸೆ ಹಾಗು ವಿರಕ್ತಿಯೂ ಏಸೂಕ್ರಿಸ್ತನ ಗುಣವಾದ ಕ್ಷಮಾಧರ್ಮವೂ, ಪರರ ಸಲುವಾಗಿ ಸ್ವಂತ ಕಷ್ಟ ಸಹನ ಮಾಡುವದರಲ್ಲಿನ ಆತ್ಮಬಲಿದಾನವನ್ನೂ ಕೂಡ ಮಾಡಲು ಸಿದ್ಧತೆಯೂ, ಮಹಮ್ಮದ ಪೈಗಂಬರರಲ್ಲಿದ್ದ ಇಸ್ಲಾಮೀ ಧರ್ಮದ ರಕ್ಷಣೆಯ ವ್ಯಾಕುಲತೆಯೂ ಈ ಮಹಾಪುರುಷನಲ್ಲಿ ಮನೆಮಾಡಿಕೊಂಡಿರುವವೆಂದು ಹೇಳುವದು ನಿರ್ವಿವಾದವಾಗಿ ಸಿದ್ಧವಾದ ಮಾತು.

ಅವರಿ ಮಹಾತ್ಮಾಜಿಯವರು ತಮ್ಮಲ್ಲಿಯ ಈ ಗುಣಗಳ ವಿಕಾಸವನ್ನು ಮಾಡಿದ್ದರಿಂದ ಮಾತ್ರ ಅವರಿಗೆ ಮಹಾತ್ಮ್ಯವು ಬಂದಿರದೆ ಅವರು ಈ ಗುಣಗಳಿಗೆ ಸಾರ್ವಜನಿಕ ಸ್ವರೂಪವನ್ನು ಕೊಟ್ಟಿದ್ದಕ್ಕಾಗಿಯೇ ಬಂದಿರುವದು. ಅವುಗಳ ಪ್ರಚಾರವನ್ನು ಅವರು ಎಷ್ಟೋ ವಿಶಾಲವಾದ ದೊಡ್ಡ ಪ್ರಮಾಣದಿಂದ ಎಷ್ಟು ಶೀಘ್ರಕಾಲದಲ್ಲಿ ಸುಸಂಘಟಿತ ರೀತಿಯಿಂದ ಮಾಡಿದರೋ ಅಷ್ಟು ಮೊದಲು ಯಾರೂ ಮಾಡಿರಲಿಲ್ಲ.

ಅವರ ಅಹಿಂಸಾತ್ಮಕ ಅಸಹಯೋಗವೂ ಸತ್ಯಾಗ್ರಹವೂ ಕೇವಲ ರಾಜನೈತಿಕ ಶಸ್ತ್ರವಾಗಿರುವದಿಲ್ಲ. ಅದರಲ್ಲಿ ಮುಂದೆ ಆಗತಕ್ಕ ವಿಶ್ವಧರ್ಮದ ಬೀಜವು ಅಂಕುರಿತವಾಗಿರುವದು. ಅದಾದರೋ ಪತನವನ್ನು ಹೊಂದಿದ ಜಗತ್ತಿಗೆ ಸಂಜೀವನೀ ಔಷಧದಂತಿರುವದು.

ಅಸಹಯೋಗವು ಪತಿತ ಹಾಗು ಉನ್ಮತ್ತರಿಗೆ, ಪೀಡಿತ ಹಾಗು ಅತ್ಯಾಚಾರಿಗಳಿಗೆ ಇಬ್ಬರಿಗೂ ಸಮಾನವಾಗಿ ಉದ್ಧಾರಕವಾಗಿರುವದು; ಪೀಡಿತ ಮತ್ತು ನಿರ್ಬಲರನ್ನು ಅದು ಅತ್ಯಾಚಾರಿಗಳ ವಿಷಪೂರ್ಣ ಸಂಸರ್ಗದಿಂದ ದೂರ ಉಳಿಯುವಂತೆ ಮಾಡಿ ಅವರಿಗೆ ಶಕ್ತಿಸಂಚಯವನ್ನು ಕೊಡುವದಕ್ಕೆ ಅವಕಾಶವನ್ನು ಕೊಡುತ್ತದೆ; ಮತ್ತು ಮೋಹವಶರಾದ ಅತ್ಯಾಚಾರಿಗಳ ಕಡೆಯಿಂದ ಒದಗತಕ್ಕ ಅತ್ಯಾಚಾರ ಪ್ರಸಂಗಗಳೊಳಗಿಂದ ಅವರನ್ನು ಉಳಿಸಿ ಆತ್ಮನಿರೀಕ್ಷಣೆಯನ್ನು ಮಾಡುವದಕ್ಕೂ ತಮ್ಮ ಪಾಪಗಳಬಗ್ಗೆ ಪಶ್ಚಾತ್ತಾಪವನ್ನು ಪಡೆಯುವದಕ್ಕೂ ಅವರಿಗೆ ಸಂಧಿಯನ್ನು ತಂದುಕೊಡುತ್ತದೆ; ಪೀಡಿತ ಪ್ರಜೆಗಳಿಗಾದರೋ ಅದು ಒಂದು ರಾಮಬಾಣ ಉಪಾಯದಂತಿರುವದು; ಅದರಲ್ಲಿಯ ಅಹಿಂಸಾಧರ್ಮವೂ, ರಚನಾತ್ಮಕ ಕಾರ್ಯಕ್ರಮವೂ ಜಗತ್ತಿಗೆ ಪ್ರೇಮ ಶಾಂತಿಗಳ, ಮತ್ತು ಸ್ವಾವಲಂಬನದ ಜೀವನದಾಯಕವಾದ ದಿವ್ಯ ಸಂದೇಶವಾಗಿರುವದು, ಮತ್ತು ಪ್ರತಿಪಕ್ಷಿಗಳು ನಮ್ಮ ಶತ್ರುಗಳಾಗಿರದೆ ಮಾರ್ಗಭ್ರಷ್ಟರಾದ ಬಾಂಧವರು ಇರುತ್ತಾರೆಂದು ಅಸಹಯೋಗವು ಸಿದ್ಧಮಾಡಿ ಬಿಟ್ಟಿರುವದು; ಆದುದರಿಂದ ಶೇಯಾವ, ಪ್ರೇಮಧರ್ಮ, ಮತ್ತು ಸ್ವಾರ್ಥತ್ಯಾಗದ ಸಿದ್ಧಾಂತಗಳನ್ನು ಅವಲಂಬಿಸಿ ಕುಟುಂಬದೊಳಗಿನ ಕಾರ್ಯಗಳು ಜರುಗುತ್ತಿರುವಂತೆಯೇ ಅದೇ ಸಿದ್ಧಾಂತಗಳ ಅನುಸಾರವಾಗಿ ರಾಷ್ಟ್ರ ಮತ್ತು ಜಗತ್ಪ್ರಪಂಚದ ಕುಟುಂಬದಲ್ಲಿ ಕಾರ್ಯಗಳನ್ನು ಜರುಗಿಸತಕ್ಕದ್ದು. ಮನುಷ್ಯನಿಗೆ ತಾಯಿತಂದೆಗಳ ಹಾಗು ಅಣ್ಣ ತಮ್ಮಂದಿರ ಗೂಡ ಇರುವಾಗ ದೊರೆಯುತಕ್ಕ ಪ್ರೇಮ ಶಾಂತಿ ಮತ್ತು ಆನಂದಗಳ ಅನುಭವವು ಜಗತ್ತಿನಲ್ಲಿ ಯಾವರೂ ದೊರಕುವದು ಶಕ್ಯವಾಗಿರುವದು.

ಮಹಾತ್ಮಾಜಿಯವರ ಸತ್ಯಾಗ್ರಹದಿಂದ ಜಗತ್ತಿಗೆ "**ಶಠಪ್ರತ್ಯಪಿ ಸತ್ಯಂ**" ಎಂಬ ಪುನೀತವಾದ ಸಂದೇಶವು ದೊರಕಿತು ಅವರಲ್ಲಿ ಸಂಚರಿಸಿದ ಸತ್ಯಶೀಲತೆ, ನಿರ್ಭಯತೆ ಹಾಗು ಆತ್ಮೋತ್ಸರ್ಗದ ಪವಿತ್ರವಾದ ಭಾವನೆಗಳು ಕೇವಲ ಅನುಪಮೇಯವಾಗಿರುತ್ತವೆ. ಈಗ ಸತ್ಯವನ್ನಾತ್ಮಕ್ಕಾಗಿಯೇ ಸಾವಿರಾರು ಭಾರತೀಯರು ಧನಧಾನ್ಯದ ಚಿಂತೆಯನ್ನು ಬದಿಗಿರಿಸಿ, ಸತ್ಯರಕ್ಷಣೆಗಾಗಿ ಸಾವಿರ ಸಂಖ್ಯೆಯಿಂದ ನಗುನಗುತ್ತ ಕಾರಾಗೃಹವಾಸಕ್ಕೆ ಹೋಗುವರು. ಈ ರೀತಿಯ ಉದಾಹರಣೆಗಳು ಜಗತ್ತಿನಲ್ಲಿ ದೊರಕುವದು ಕಠಿಣ. ಮಹಾತ್ಮಾಜಿಯವರ ಸತ್ಯಾಗ್ರಹದಿಂದ ನವ್ಯ ಸಿದ್ಧಾಂತಗಳ ಪ್ರಚಾರ

ಕ್ಕಾಗಿಯೂ ರಕ್ಷಣೆಗಾಗಿಯೂ ಅನ್ಯರನ್ನು ವಿವಶರಾಗಿ ಮಾಡುವದಾಗಲಿ ಅವರನ್ನು ಪೀಡಿಸುವದಾಗಲಿ ಪಾಪವಾಗಿರುತ್ತದೆಂಬ ಸಾರವನ್ನು ನಾವು ಸ್ಪಷ್ಟವಾಗಿ ಕಲಿತಿರುವೆವು; ನಮ್ಮ ಸಿದ್ಧಾಂತಗಳ ರಕ್ಷಣೆಯ ಸಲುವಾಗಿ ನಮಗೆ ಪ್ರತ ಕಷ್ಟಗಳನ್ನು ಅನುಭವಿಸುವ ಅಧಿಕಾರವು ಉಂಟು. ನಮ್ಮ ಸಿದ್ಧಾಂತಗಳನ್ನು ಪರರಿಗೆ ಕೇವಲ ಶಾಂತಿಪೂರ್ವಕವಾಗಿ ತಿಳಿಸಿ ಹೇಳುವ ಅಧಿಕಾರವು ಮಾತ್ರ ನಮಗೆ ಇರುತ್ತದೆ. ಇದೇ ಕಾರಣದಿಂದಲೇ ಈಗ ಭರತಖಂಡದ ಪ್ರತಿಯೊಂದು ಧರ್ಮದ ಅನುಯಾಯಿಗಳಲ್ಲಿ ಧರ್ಮಾಂಧತೆ ಮತ್ತು ಅಸಹಿಷ್ಣುತೆಗಳ ಸ್ಥಾನದಲ್ಲಿ ಧಾರ್ಮಿಕ ಗಂಭೀರತೆಯೂ ಪ್ರೇಮಪೂರ್ಣವಾದ ಸಹಿಷ್ಣುತೆಯೂ ತೋರುತ್ತಿರುವವು.

ಈ ಗಹನವಾದ ಸಿದ್ಧಾಂತಗಳ ಮೂಲಕವಾಗಿಯೇ ಇತರ ರಾಷ್ಟ್ರಗಳು ಸಾಧಾರಣವಾಗಿ ಅನುಸರಿಸುತ್ತಿರುವ ಆ ಅನೇಕ ಅಶಾಂತಿ ಮತ್ತು ಹಿಂಸಾಕಾಂಡಗಳ ಅಭಾವವು ಭಾರತೀಯ ಸ್ವಾತಂತ್ರ್ಯ ಯುದ್ಧದಲ್ಲಿ ಕಂಡು ಬರುತ್ತಿರುವದು. ಈ ಶಾಂತಿಮಯವಾದ ಯುದ್ಧವು ಜಗತ್ತಿಗೆ ಅತ್ಯಂತ ಅಪರಿಚಿತವಾದದ್ದಾಗಿರುವದು. ಮತ್ತು ಈಗ ಇದು ಕೇವಲ ಸಿದ್ಧಾಂತಗಳ ಮಾತು ಎಂದು ಅನ್ನಲಿಕ್ಕೆ ಬರುವಂತಿಲ್ಲ.

ಒಂದು ಸ್ಥಾನದಲ್ಲಿ ಇದರಿಂದ ಎರಡೇ ವರ್ಷಗಳಲ್ಲಿ ಅಸಾಧಾರಣವಾದ ಕಾರ್ಯಗಳು ಜರುಗಿರುವವು; ಇದರಿಂದ ಭಾರತದ ಎಷ್ಟೋ ಬಿಕ್ಕಟ್ಟಿನ ಪ್ರಶ್ನೆಗಳು ಒಮ್ಮೆಲೇ ಇಲ್ಲದಂತಾಗಿರುವವು; ಹಿಂದುಸ್ಥಾನದಲ್ಲಿಯ ಆಲಸ್ಯ ದಾರಿದ್ರ್ಯ ಎಂದೂ ಬಂದು ಆಗದಂಥ ಹಿಂದೂ ಮುಸಲ್ಮಾನರ ಸಡಗರ, ಬರ ದುರ್ಭಿಕ್ಷ, ಕೂಲಿಕಾರರ ದುರ್ದಶೆ, ಕೋಟ್ಯಾಧೀಶರ ಮದಾಂಧತೆ, ಒಕ್ಕಲಿಗರ ದೈನ್ಯಾವಸ್ಥೆ, ಸ್ತ್ರೀಯರ ಕಾರುಣ್ಯಜನಕವಾದ ಪತಿತಾವಸ್ಥೆ, ಸಾಧಾರಣವಾಗಿ ಇಡೀ ಹಿಂದುಸ್ಥಾನದ ನೈತಿಕ ಪತನ, ಆಧುನಿಕ ಜಡಸುಧಾರಣೆಯ ಪತನಕಾರಕವಾದ ಮೋಹಜಾಲ, ಇವೆಲ್ಲವುಗಳಿಗಿಂತ ಹೆಚ್ಚಿನದಾದ ಲಜ್ಜಾಜನಕವಾದ ಭರತಖಂಡದ ಪಾರತಂತ್ರ್ಯ ಈ ಎಲ್ಲ ರೋಗಗಳಿಗೆ ಈ ಶಾಂತಿಮಯ ಅಸಹಯೋಗವೂ ಸತ್ಯಾಗ್ರಹವೂ ರಾಮಬಾಣ ಔಷಧವಾಗಿರುವವೆಂದು ಸಿದ್ಧವಾಗಿ ಬಿಟ್ಟಿರುವದು; ಜಗತ್ತಿನಲ್ಲಿ ಕ್ಷೇಮವಾಗಬೇಕಿದ್ದರೆ, ಭಾರತೀಯ ನಾಡ ಈ ಮಹಾತ್ಮನ ಕಾಣಿಕೆಗಳಿಂದ ಅದು ತನ್ನನ್ನು ತಾನೇ ಉದ್ಧಾರಮಾಡಿಕೊಳ್ಳಬೇಕು.

---

## ಮಹಾತ್ಮಾ ಗಾಂಧಿಯವರ ಸಂದೇಶ.

ಬಹುಕಾಲ ಪರಾಧೀನರಾಗಿದ್ದ ಜನರ ಬುದ್ಧಿಯು ಕೂಡ ಪರವಶವಾಗಿ ಹೋಗುತ್ತದೆ. ಚಿತ್ತವೃತ್ತಿ ಸಂಕುಚಿತವಾಗುತ್ತದೆ. ಭಾವನಾ ರಚನಾಶಕ್ತಿಗಳು ಸಂಕುಚಿತವಾಗುತ್ತವೆ. ವಿಚಾರಶಕ್ತಿಯು ಕುಂದಿರುತ್ತದೆ. ಆತ್ಮಜ್ಯೋತಿಯು ನೊಂದಿರುತ್ತದೆ. ಗುಣಕೀರ್ತಿಯು ಯೋಗ್ಯತೆಯೆಂಬ ನಾಮದಿಂದ ಮೆರೆಯುತ್ತದೆ. ನಿಜವಾದ ಯೋಗ್ಯತೆಯು ಕಣ್ಣೀರು ಸುರಿಯುತ್ತದೆ. ಎಲ್ಲಿ ನೋಡಿದರಲ್ಲಿ ಕುಯುಕ್ತಿ, ಸಂಚು, ಒಳಸಂಚು. ರಾಜಾಶ್ರಯ ಸಾಧನವೇ ವಿದ್ಯೆ. ಗುಲಾಮಗಿರಿಯೇ ಮಹಾಮರ್ಯಾದೆ. ಭಿಕ್ಷುಕರ ಗೊಂದಳವೇ ಆಲೋಚನಾಸಭೆ. ನಿರಪರಾಧಿಗಳಾದ ಜನರ ಸಂಪಣಿಯು ಸಂಪುಕಟು, ರಾಜಮರ್ಯಾದೆಯನ್ನು ಪಡೆದವರು ಮಾತ್ರ ವಿದ್ವಾಂಸರು. ಪದಪೀಠರೇ ಪೂಜ್ಯರು. ಪದವಿ ಪ್ರಕ್ಷವೆಂಬ ಹೆಸರು. ಉದ್ದಂಡತನವನ್ನು ತೋರಿಸುವ ಐಹಿಕ ವಿಕೆ ... ಎಂದು ಅನೇಕರು ತಿಳಿಯುವರು. ಲೋಕಹಿತೇಚ್ಛು ... ಗಳಿಂದ ಹಿಂಸಿಸಲ್ಪಡುತ್ತಾರೆ. ವಿಚಾರಶೀಲರು ತಲೆತಿರುಕರೆಂದು ಹೀಯಾಳಿಸಲ್ಪಡುತ್ತಾರೆ. ಅರ್ಥಶೂನ್ಯವಾದ ಯಾವ ಅರ್ಥವಿಲ್ಲದ ರೂಢಿಯಲ್ಲಿ ಸನಾತನವಾದ ಭೂತದಯಾಭರಿತವಾದ ಧರ್ಮವು ಮುಚ್ಚಿಹೋಗಿರುತ್ತದೆ. ಸಂಧಿಸಮೂಹ ಭೇದಕರಿಗೆ ಕಂಡಿಕರೆಂಬ ಮಿಥ್ಯಾ ನಾಮ. ಸ್ವತಂತ್ರ ಬುದ್ಧಿಯಿಂದ ಸಮಾಜದ ಹಿತಕ್ಕಾಗಿ ಉಪದೇಶಿಸುವ ವೈರಾಗಿಗಳು ಸ್ವಾರ್ಥದಿಂದ ತುಂಬಿದ ಜನರ ವೈರಿಗಳಾಗಿ ಹೋಗುತ್ತಾರೆ. ಆಲಸ್ಯಕ್ಕೆ ವೈರಾಗ್ಯವೆಂಬ ಹೆಸರು. ಕ್ರೌರ್ಯಕ್ಕೆ ಶೌರ್ಯವೆಂಬ ಹೆಸರು. ಭೀತಿಗೆ ಭಕ್ತಿಯೆಂಬ ಶುಭನಾಮ. ಧೀರರುಗಳಿಗೆ ಪದವಿ. ವೀರರಿಗೆ ಕಾರಾಗೃಹವಾಸ. ಸ್ತೋತ್ರಪ್ರಿಯರಿಗೆ ಮಾನಮರ್ಯಾದೆ. ಅವರೇ ರಾಷ್ಟ್ರದ ಸೂತ್ರಧಾರರು. ಅವರೇ ಸ್ವೀಕೃತರು. ಅವರ ನುಡಿಯೇ ಧರ್ಮ. ಅವರ ನುಡಿಯೇ ನ್ಯಾಯ. ಅವರ ನಿಘಂಟಿನಲ್ಲಿ ಪುಕ್ಕತನಕ್ಕೆ ವಿನಯವೆಂಬ ಹೆಸರು. ಅಪರಕ್ಷ ಕಸುವಿಲ್ಲದ ಅಡಿಮೆಯೂ ಅಜ್ಞಾನಧಾರಣೆಯೂ ಪರಿಯಾಯ ಶಬ್ದಗಳು. ಅದರಲ್ಲಿ ನಪುಂಸಕತ್ವವೂ ವಿಧೇಯತ್ವವೂ ಏಕಾರ್ಥ 'ಪದಗಳು' ಕೂಡಲಿದ್ದಾಕೆ ಎತ್ತ ಕಟ್ಟಿದರೂ ಚಂದ" ಎಂಬುದೇ ಈ ಜನರ ಕಾರ್ಯಪ್ರಮಾಣ. ಶತಾಬ್ಧಿಗಳ ಪರಾಧೀನತೆಯಿಂದ ಇಂಥ ಅನರ್ಥವಾಗಿರುವದು. ಸಹಜವಲ್ಲವೆ? ತಿಳುವಳಿಕೆಗೆ ಮೋಡ ಕವಿದು ಹೋಗಿ ಜನಾಂಗವೆಲ್ಲ, ಸುಖಶಕ್ತಿಯ ಉಪಶಮನಕ್ಕಾಗಿ ಮೃಗಜಲವನ್ನು ಹಿಂಬಾಲಿಸಿ ನಾಶವಾಗುತ್ತದೆ. ಧರ್ಮ ನ್ಯಾಯದು, "ಧರ್ಮವಾಕ್ಯವು" ಎಂಬ ವಿಚಾರವನ್ನು ಸಿಂಧುಮಾತ್ರವೂ ಮಾಡದೆ ಲೌಕಿಕ ಸುಖಕ್ಕೆ ಮರುಳಾಗಿ ತಮ್ಮ ಬಂಧು ಬಾಂಧವರನ್ನೂ ಇಷ್ಟಮಿತ್ರರನ್ನೂ ನೊಸಗೊಳಿಸಿ ಅನೇಕರು ಕೆಡುತ್ತಾರೆ. ರೂಢಿಭ್ರಷ್ಟರು ಬಡವರು ಮುಂತಾದ ಅನೇಕ ವಿಧವಾದ ಪ್ರಸಂಗಗಳಿಂದ ಪೀಡಿತರಾಗಿ ಪ್ರತಿಯೊಂದು ಲೌಕಿಕ ಸುಖದಲ್ಲಿ ದುಃಖವೂ ಅತಿಶಯವಾಗಿದೆ ಎಂಬ ಸಿದ್ಧಾಂತವನ್ನರಿಯದೆ ಒಂದು ವಿಧವಾದ ಸೂಕ್ಷ್ಮಪೀಡೆಗೆ ಸುಖವೆಂದು ತಾವೂ ಕೆಟ್ಟವರು ದೇಶವನ್ನು ಕೆಡಿಸುವರು. ಅಖಂಡವೂ, ಅನಿರ್ವಾಚ್ಯವೂ ತ್ರಿಕಾಲಬಾಧಿತವೂ ಆದ ಸುಖವನ್ನೀಯುವ ಸಿದ್ಧ ತತ್ವಗಳ ಉಗಮಸ್ಥಾನವಾದ ಈ ನಮ್ಮ ಭಾರತಮಾತೆಗೆ ಈ ದುರ್ಗತಿಯು ಬಂದು ಸಂಪೂರ್ಣವಾಗಿ ಇತ್ತೀಚೆ ಕೆಲವು ವರ್ಷಗಳಿಂದ ಸೇರಿತ್ತು. ಮೊಟ್ಟಮೊದಲು ಕೆಲವರು ಮಾತ್ರ ಪರರಿಗೆ ಮರುಳಾಗಿ ಯುರೋಪ್ಯ ಸಂಸ್ಕೃತಿಯ ಸ್ತೋತ್ರಪಠನವನ್ನು ಪ್ರಾರಂಭಿಸಿದರು. ಅವರ ನ್ಯಾಯದರ್ಶನವು ಅಸಂಪೂರ್ಣವಾಗಿದ್ದರೂ ಅವರ ಐಹಿಕ ಸಂಭ್ರಮವನ್ನು ಕಂಡು ಮರುಳಾಗಿ ಅನೇಕರು ಪರಮಾತ್ಮನು ತಮಗೆ ದಯಪಾಲಿಸಿದ ಗುಣದೋಷವಿವೇಚನಾಶಕ್ತಿಯನ್ನು ಮುಚ್ಚಿಬಿಟ್ಟು ಅವರ ಉಪದೇಶಗಳೇ ಸತ್ಯ ಮತ್ತು ಉಪಯೋಗಕರವಾಗಿರಬೇಕೆಂದು ತಿಳಿದು ಅವರು ಹೇಳಿದಂತೆ ಕುಣಿಯತೊಡಗಿದರು. ಬರಬರುತ್ತಾ ಸ್ವಾರ್ಥಪರಾಯಣರಾದ ಆಂಗ್ಲೇಯರ ಮತಪ್ರಸಾರವು ಅವರಿಂದ ಹುರುಳಿಲ್ಲದ ಹಿತವನ್ನು ಪಡೆದ ಅವರ ಮಾನಸಪುತ್ರರ ಕಡೆಯಿಂದ ಹೆಚ್ಚಾಗುತ ಬಂತು. ನಟ್ಟಿಗೆ ಆಂಗ್ಲೇಯರ ಸಂಗತಿಯಲ್ಲೇ ಕೂತು ಪ್ರಕಲಿತ ಕಲ್ಲವು ಮಾತ್ರ ಜನರ ಸಂಪರ್ಕದಿಂದ ಜನಾಂಗದಲ್ಲಿ ಹೆಚ್ಚಾಗಿ ... ಮತ್ತು ಅವರ ರಾಜ್ಯಭಾರಕ್ರಮದ ಮತ್ತು ಸಂಸ್ಕೃತಿಯ ಕೀರ್ತಿಯನ್ನೇ ಹೊಗಳತೊಡಗಿದರು. ಇದರಿಂದ ಎಲ್ಲಾ ಜನರ ಆತ್ಮಶ್ರದ್ಧೆಯು, ಆತ್ಮಗೌರವ, ಆತ್ಮಾವಲಂಬನ, ಆತ್ಮಾರ್ಪಣ, ಆತ್ಮಸಾಕ್ಷಾತ್ಕಾರ ಮುಂತಾದ ಮಾನುಷಗುಣಾವಳಿಗಳು ಅಧೋಗತಿಯನ್ನು ಹೊಂದಿದುವು. ಪ್ರಜೆಗಳಲ್ಲೆಲ್ಲಾ ದುರ್ಗುಣಗಳು ಹೆಚ್ಚಿ ಒಳಗೆ ಕೇಡು ಭೂಮಿಗೆ ಭಾರವಾಗುವದೇ ಉತ್ತಮ ಬಾಳು ಎಂದು ತಿಳಿದುಬಿಟ್ಟರು. ಕೆಲವರು ತಮ್ಮ ವಿಮಲತೆಯೇ ದೇಶಕಲ್ಯಾಣದ ಚಿಹ್ನೆವೆಂದು ತಿಳಿದು ... ದಕ್ಕಾಗಿ ದೇಶವನ್ನೇ ಆಹುತಿಯಾಗಿ ಕೊಡತೊಡಗಿದರು. ಕೊಡಲಿ

ಕಾವು ಕುಲಕ್ಕೆ ವ್ಯಕ್ತ್ಯ ಎಂಬಂತೆ ದೇಶವೇ ಹಾಳಾಯಿತು. ದೇಶವು ಸರ್ವಸಸ್ಯ ಸಂಪತ್ಸಮೃದ್ಧಿಯಿಂದ ಶೋಭಾಯಮಾನವಾಗಿದ್ದರೂ ಕೆಲವರು ಕೂಲಿಗಳಾಗಿ ಪರದೇಶಗಳನ್ನು ಸೇರಿದರು. ಅನೇಕರು ಕಾಡುಗೋಲುಗಳಾಗಿ ಯಜಮಾನರ ಕೈಯಲ್ಲಿ ತಾವೇ ಸೇರಿರುತ್ತಾರೆ. ಇದಕ್ಕಿಂತ ಹೀನವಾದ ದುರ್ಗತಿಯು ಎಲ್ಲಿಯಾದರೂ ಕಂಡುಬಂದೀತೆ

ಇಂಥಾ ದುರ್ಗತಿಯನ್ನು ಹೋಗಲಾಡಿಸಬೇಕೆಂಬ ಕುತೂಹಲದಿಂದ ಅನೇಕರು ಕಂಕಣಬದ್ಧರಾಗಿ ದೇಶಸೇವೆಮಾಡಿ ಸ್ವಾರ್ಥಿಗಳ ಕೈಯಲ್ಲಿ ಸಿಲುಕಿ ನರಕಯಾತನೆಯನ್ನು ಭೋಗಿಸಿದರೂ ರೋಗದ ನಿದಾನ ಸ್ಪಷ್ಟವಾಗಿರದಿದ್ದುದರಿಂದ ಚಿಕಿತ್ಸಾಸಾಧನವು ಸಫಲವಾಗಲಿಲ್ಲ. ಹೀಗಿದ್ದರೂ ಅಂಥಾ ಸ್ವಾರ್ಥತ್ಯಾಗದ ಸೇವೆಯನ್ನು ಮಾಡಿದವರ ಕಷ್ಟದಿಂದಲೂ ಸಾಹಸದಿಂದಲೂ ದೇಶಕ್ಕಾದ ಉದ್ಧಾರ ಸಾಧಾರಣವೆಂದು ಹೇಳಲಿಕ್ಕೆ ಬರುವದಿಲ್ಲ. ಅಸ್ಥಿಗತಜ್ವರದಿಂದ ಪೀಡಿತರಾದವರಂತೆ ಒಳಗೆ ರೋಗವನ್ನು ಬಚ್ಚಿಟ್ಟುಕೊಂಡು ಹೊರಗೆ ಆರೋಗ್ಯವನ್ನು ಪ್ರದರ್ಶಿಸುವವರಂತಿದ್ದ ಭಾರತನಿವಾಸಿಗಳಲ್ಲನೇಕರಿಗೆ ತಮಗೆ ರೋಗ ಉಂಟೆಂಬ ತಿಳುವಳಿಕೆಯು ಹುಟ್ಟಿತು. ಅದನ್ನು ಕಿತ್ತಿಹಾಕುವದಕ್ಕಾಗಿ ಅನೇಕ ಉಪಾಯಗಳೂ ಜರಗಿದವು. ಜನರಲ್ಲಿ ಸಹನಶಕ್ತಿಯೂ ಹೆಚ್ಚಿತು. ಆದರೆ ಪರದೇಶದಲ್ಲಿ ಪಾತ್ರವಲ್ಲವೆ ಇಲ್ಲಿ ನಡುವೆ ಮಾಡಿದ ಚಿಕಿತ್ಸೆಯು ರೋಗದ ಮೂಲಸ್ಥಾನಕ್ಕೆ ಮುಟ್ಟದೆ ಇದ್ದದರಿಂದ ತೃಪ್ತಿಕರವಾದ ಕಾರ್ಯವು ಆಗಲಿಲ್ಲ; ಇದು ಯಾತಕ್ಕೆ, ರೋಗವು ಇಂಥಿಂಥಾ ಸ್ಥಾನದಲ್ಲಿದೆಯೆಂಬ ಜ್ಞಾನವು ಕೂಡ ಇದ್ದಿಲ್ಲ; ಇತರ ದೇಶ

ದವರು ತಮ್ಮ ಸ್ವಾತಂತ್ರ್ಯ ಯುದ್ಧದಲ್ಲಿ ನಡಿಸಿದ ಉಪಾಯಗಳೇ ಇಲ್ಲಿಯೂ ನಡಿಸಬೇಕೆಂದು ನಿಶ್ಚಯಿಸಿ ಅನೇಕರು ಪ್ರಯತ್ನ ಪಟ್ಟು ನೋಡಿದರು. ಅನೇಕ ಸಭೆಗಳು ಕೂಡಿದವು; ವ್ಯಾಖ್ಯಾನಗಳಾದವು; ಠರಾವುಗಳು ಬರೆಯಲ್ಪಟ್ಟವು; ಅನೇಕ ಆವರ್ತನಗಳನ್ನು ಎಸಗಿಟ್ಟರು; ಅನೇಕಾನೇಕ ಮಾರ್ಗಗಳು ಶೋಧಿಸಲ್ಪಟ್ಟವು; ಆದರೆ ವಿಶೇಷವಾಗಿ ನಡೆದ ಕಾರ್ಯಗಳೆಲ್ಲ ಭಾರತಮಾತೆಯ ಪ್ರಿಯ ಮಕ್ಕಳ ಆತ್ಮತತ್ತ್ವಕ್ಕೆ ಅಂದರೆ ಮನಸ್ಸಿಗೆ ಹೊಂದಿಕೆಯಿಲ್ಲದ್ದಾದುದರಿಂದ ಅವುಗಳಲ್ಲಿ ಸಾಧಾರಣ ಜನತೆಗೆ ಅಭಿರುಚಿ ಹುಟ್ಟದೆ ಹೋಯಿತು; ಆದುದರಿಂದ ರಾಷ್ಟ್ರೀಯ ಸಭೆಯ ಠರಾವುಗಳ ಸುದ್ದಿಯು ಸಹ ಅನೇಕಾನೇಕ ಜನರಿಗೆ ಇಲ್ಲದೆ ಹೋಯಿತು. ದೇಶದಲ್ಲೆಲ್ಲಾ ವರ್ತಮಾನ ಪತ್ರಿಕೆಗಳ ಸುತ್ತ ಉಪನ್ಯಾಸಗಳ ಗದ್ದಲವೇ ಇತ್ತು, ಹೊರತು ಯೋಗ್ಯ ಕಾರ್ಯವು ಇಲ್ಲದಿದ್ದುದರಿಂದ ಸರಕಾರದ ಮೇಲೂ ಏನೂ ಪರಿಣಾಮವಾಗಲಿಲ್ಲ; ರೋಗ ಒಂದಾಯಿತು, ಚಿಕಿತ್ಸೆ ಇನ್ನೊಂದಾಯಿತು; ಅದರ ಸ್ಥಾನವು ಒಂದು ಕಡೆಯಾಯಿತು; ಚಿಕಿತ್ಸೆಯು ಇನ್ನೊಂದು ಕಡೆ ಮಾಡಲ್ಪಟ್ಟಿತು; ಹೀಗಾದುದರಿಂದ ರಾಷ್ಟ್ರೀಯ ಮುಂದಾಳುಗಳು ಪಟ್ಟ ಕಷ್ಟಕ್ಕೆ ತಕ್ಕ ಇಷ್ಟ ಪ್ರಾಪ್ತಿಯಾಗಲಿಲ್ಲ.

ಕಾರ್ಯಕ್ರಮದಲ್ಲಿ ತಪ್ಪಿದ್ದರೆ ತಿಳಿಯುವದು ಸುಲಭ. ಸೂಕ್ಷ್ಮವಾದ ಮನಸ್ಸಿನಿಂದ ವಿಚಾರಮಾಡುವವರ ವಿವೇಚನೆಯಲ್ಲಿ ಹೆಚ್ಚು ಕಡಿಮೆ ತಪ್ಪದೆ ಸುಧಾರಿಸಲ್ಪಡುವದು; ಆದರೆ ಬಹುಗ್ರಾಹಿಯಾದ ವಿವೇಕವಿಲ್ಲದೆ, ತಮ್ಮ ಮನಸ್ಸಿಗೆ ತೋಚಿದ್ದೇ ಯೋಗ್ಯವೆಂದು ತಿಳಕೊಳ್ಳುವವರನ್ನು ಹಾದಿಗೆ ತರುವದು ಕಷ್ಟ; ಅವರಿಗೆ ಒಂದು ವಿಧವಾದ ಶಬ್ದಭ್ರಮೆಯು ಇರುತ್ತದೆ; ಆದರೆ ಶಬ್ದವಿದ್ದಲ್ಲಿ ಅದಕ್ಕೊಪ್ಪುವ ಸ್ಥಿತಿಸಾಮಗ್ರಿಗಳಿದ್ದಾವೋ ಇಲ್ಲವೋ ಎಂಬ ವಿಚಾರವೂ ಸಹ ಅವರ ಮನಸ್ಸಿಗೆ ಬರುವದಿಲ್ಲ; ಅದುಮಾತ್ರವಲ್ಲದೆ ಶಬ್ದವೇ ಅನರ್ಥವಾಗಿ ಉಪಯೋಗಿಸಲೂ ಬಹುದು; ಪಾಶ್ಚಿಮಾತ್ಯ ದೇಶಗಳಲ್ಲಿ ಕೆಲವು ವ್ಯಾಪಾರಸ್ಥರ ಕೈಯಲ್ಲಿದ್ದ ದ್ರವ್ಯದ ವಾರ್ತೆಯನ್ನು ಕೇಳ

ಮತ್ತು ನಮ್ಮ ಉಪೇಕ್ಷೆಯಿಂದ ಆಂಗ್ಲೇಯರಿಗುಂಟಾದ ಪ್ರಭುತ್ವವನ್ನು ನೋಡಿ ಅವರ ದೇಶವೇ ಸ್ವರ್ಗ, ಅವರ ರೂಢಿಪಾಡಿಕೆಗಳೇ ಮೋಕ್ಷಮಾರ್ಗ; ಅವರ ಉಪದೇಶವೇ ವೇದವಾಕ್ಯವೆಂಬ ತಪ್ಪು ತಿಳುವಳಿಕೆಯಿಂದ, ಅವರ ಅನುಸರಣೆಯೇ ನ್ಯಾಯವೆಂದು ತಿಳಿದು ವಿವೇಕಕ್ಕೆ ಬಹಿಷ್ಕಾರವನ್ನೇ ಹಾಕಿದವರನ್ನು ಹ್ಯಾಗೆ ತಿದ್ದಬೇಕು? ಮೊನ್ನೆ ನಡೆದ ಘೋರಯುದ್ಧದಿಂದ ಪಾಶ್ಚಿಮಾತ್ಯ ನಾಗರೀಕತೆಯು ಎಷ್ಟರಮಟ್ಟಿಗೆ ಪೊಳ್ಳು ಮತ್ತು ಭಯಂಕರವೆಂಬುದು ಸಾಧಾರಣ ಬುದ್ಧಿಯುಳ್ಳವರಿಗೂ ತಿಳಿಯದೆ ಹೋಗದು; ಆದರೆ ತಮ್ಮ ಕಣ್ಣು ಕಿವಿಗಳನ್ನೇ ನಂಬಿದವರೆಷ್ಟು ಮಂದಿ ಇಲ್ಲ? ಇಂಗ್ಲೀಷ ವಿದ್ಯೆಯನ್ನು ಕಲಿತವರಾದನೇಕರು ಇಲ್ಲಿ ಸಾವಿರಾರು ಯೋಜನ ದೂರದಲ್ಲಿ ಕುಳಿತು "ಮೊರದ ಬೆಟ್ಟ ಕಣ್ಣಿಗೆ ನುಣ್ಣಗೆ" ಎನ್ನುವವರಂತೆ ದೇಶ ಕಾಲ ವರ್ತಮಾನಗಳ ಯೋಜನೆ ಸಹ ಮಾಡದೆ, ಅವರ ನೀತಿಗಳ ರಕ್ಷಣೆಯೂ ಹುಟ್ಟಿಸಬೇಕು; ಮತ್ತು ಅವರಿದ್ದಂತೆಯೇ ನಾವೂ ಇರಬೇಕು ಎಂದು ಎಷ್ಟೋ ಪ್ರಯತ್ನ ಮಾಡುತ್ತಾ ಇದ್ದಾರೆ; ಎಂದ ಮೇಲೆ ಜನರ ಮನೋವೃತ್ತಿಗಳಲ್ಲಿಯೇ ವಿಕಾರಬಂದಂತಾಯಿತು.

ಆತ್ಮದಿಂದಲ್ಲವೇ ಸಕಲವೂ ನಡಿಯುವಂಥಾದ್ದು? ಅಂದಮೇಲೆ ಅವಿವೇಕದಿಂದ ಆತ್ಮದ ಮೇಲಿದ್ದ ಅಸತ್ಯ ಭಾರವನ್ನು ಆತ್ಮಬಲದಿಂದಲ್ಲವೇ ಎತ್ತಿಹಾಕಬೇಕು? ಅನೇಕ ವರ್ಷಗಳಿಂದ ದುಷ್ಟಜನರ ಸಂಪರ್ಕದಿಂದುಂಟಾದ ಕೆಟ್ಟ ಮನೋಗತಿಯನ್ನು ಆತ್ಮಪ್ರತೀತಿಯಿಲ್ಲದ ಮನುಷ್ಯನಿಂದ ತಿದ್ದಲಿಕ್ಕಾದೀತೇ? ಕೇವಲ ವೈರಾಗ್ಯವಿಲ್ಲದೆ ಆ ಪ್ರತೀತಿಯೂ ಅಸಾಧ್ಯವೆಂದು ಸಕಲ ಮತಗಳ ಶಾ[illegible]ವೂ ಇದೆ; ಸಕಲ ವ್ಯಕ್ತಿಗಳ ಮನಸ್ಸನ್ನು ತಿಳಿದು ಸರ್ವಸಮ್ಮತವಾದ ಸಾಧನಾಪರ್ಯಗಳನ್ನು ತೋರಿಸುವ ಕೆಲಸ ಸಾಧಾರಣ ಮನುಷ್ಯನಿಗೆ ಸಾಧ್ಯವಾದವಲ್ಲ; ರಕ್ತದೋಷದಿಂದುಂಟಾದ ಖಜ್ಜಿಗೆ

ನಿಷ್ಪ್ರಯೋಜಕ ಬಾಹ್ಯ ಚಿಕಿತ್ಸೆಯನ್ನು ಮಾತ್ರ ಮಾಡುವಂತೆ ರಾಷ್ಟ್ರೀಯ ಕಾರ್ಯವನ್ನು ಮಾಡಿ, ಆಯಾಸಪಡುತ್ತಿರುವ ಭಾರತೀಯರ ದುಃಸ್ಥಿತಿಯನ್ನು ಕಂಡು ಪರಮದಯಾಳುವಾದ ಭಗವಂತನಿಗೆ ಕನಿಕರ ಹುಟ್ಟಿ ಆತನು ಅಪ್ರತಿಮವಾದ ಜ್ಞಾನವೈರಾಗ್ಯದಿಂದ ತುಂಬಿತುಳುಕುತ್ತಿರುವ ಮನಸ್ಸುಳ್ಳ ಒಬ್ಬನ ಅವತಾರವನ್ನು ನಮ್ಮಲ್ಲಿ ಸ್ವಲ್ಪ ಮಾಡಿದ್ದಾನೆ; ಯಾವಾತನ ಆತ್ಮಪ್ರಭಾವವು ಪಂಚಖಂಡಗಳಲ್ಲಿಯೂ ಬಿದ್ದಿದೆಯೋ ಅಂಥ ಮಹಾತ್ಮನನ್ನು ಅರಿಯದ ದುರ್ಭಾಗ್ಯರು ಈ ಪುಣ್ಯ ಭೂಮಿಯಲ್ಲಾದರೂ ಇರಲಿಕ್ಕಿಲ್ಲ;

ಯಾವ ದಿವಸ ಮಹಾತ್ಮಾ ಗಾಂಧಿಯವರು ರಾಷ್ಟ್ರೀಯ ಹಡಗದ ಚುಕ್ಕಾಣಿಯನ್ನು ಕೈಕೊಂಡರೋ ಆದಿವಸವೇ ಭಾರತಮಾತೆಯ ಮುಖದ ಮೇಲೆ ಕಾಂತಿಯು ಬೆಳಗಲಿಕ್ಕಾರಂಭಿಸಿತು; ಅವಳ ಸಂಸ್ಕೃತಿಯ ಆಧಾರ ಸ್ತಂಭಗಳಾದ ಋಷಿಮುನಿಯರ ಗಳ ಪ್ರತಿನಿಧಿಗಳಾಗಿ ಮಹಾತ್ಮರು ಉಪದೇಶಿಸತೊಡಗಿದ ಕೂಡಲೇ ಭಾರತ ನಿವಾಸಿಗಳಿಗೆ "ಆಹಾ" ನಾವೂ ಮನುಷ್ಯರು ಎಂದು ಹೇಳುವಷ್ಟು ಎಚ್ಚರಿಕೆ ಹುಟ್ಟಿತು; ಅಹಿಂಸೋಪಾಸಕರಾದ ಮಹಾತ್ಮರ ಪ್ರಭಾವದಿಂದ ನಿರ್ವೀರ್ಯರಾದವರಿಗೆ ಅಜೇಯ ಶಕ್ತಿಯು ಬಂತು; ದ್ರವ್ಯವೇ ಬಲವೆಂದು ತಿಳಿದುಕೊಂಡು ಅದನ್ನು ಪಡೆಯುವುದಕ್ಕಾಗಿ ಸಕಲವನ್ನೂ ತಮ್ಮ ಅಧೀನ ಮಾಡಯತ್ನಿಸುವ ಸಕಲ ಪಾಶ್ಚಿಮಾತ್ಯರಿಗೂ ತಮ್ಮ ಅಪರಾಧವು-ತಾವಾಗಿ ಒಪ್ಪಿಸಿದ್ದರೂ-ನಿಶ್ಚಯವಾಗಿ ಗೋಚರಕ್ಕೆ ಬಿದ್ದಿದೆ; ಪರಮಾತ್ಮನಿಗೂ ಸಕಲ ಅವತಾರಪುರುಷರಿಗೂ ಸಮ್ಮತವಾದ ಆದರ್ಶವು ಪಂಚಖಂಡಗಳಲ್ಲಿಯೂ ಹಬ್ಬುತ್ತಾ ಇದೆ; ಅನ್ಯಾಯ ಕರ್ಮಗಳಲ್ಲಿ ನಿಮಗ್ನರಾಗಿರುವವರಲ್ಲನೇಕರು ಪಶ್ಚಾತ್ತಾಪಪಡುತ್ತಾ ಇದ್ದಾರೆ; ಅವರಲ್ಲನೇಕರು ವೈರಾಗ್ಯದೀಕ್ಷೆಯನ್ನು ವಹಿಸಿ ಸಕಲ ಐಹಿಕ ಆಶೆಗಳನ್ನು ಬಿಟ್ಟು ಭೂತದಯಾ ಭರಿತರಾಗಿ ಅಹಿಂಸಾಯುದ್ಧದ ರಣಭೂಮಿಗೆ ಬಂದಿರುತ್ತಾರೆ; ಆದರೆ ಯಾವುದಾದರೊಂದು ಆದರ್ಶವನ್ನು ಬುದ್ಧಿಬಲದಿಂದ ತಿಳಕೊಳ್ಳುವದು ಸುಲಭವಾಗಿದ್ದರೂ ಅದರ ಸಿದ್ಧಿಗಾಗಿ ಮಾಡತಕ್ಕ ಸಾಧನೆಯು ಕಷ್ಟ, ಅಂದಮೇಲೆ ನಮ್ಮಲ್ಲಿ ಹುಟ್ಟಿ

ನಮ್ಮಲ್ಲಿ ಬೆಳೆಗು ನಮ್ಮ ಪುರಾತನ ಮಹತ್ವವನ್ನೇ ತೋರ್ಗೊಡುಸುವವರಾದ ಮಹಾತ್ಮರ ಮಾರ್ಗವನ್ನು ಹಿಡಿಯಲಿಕ್ಕೆ ನಾವೇ ಕ್ಷಣಿಕ ಸುಖಕ್ಕಾಗಿ ಹಿಂಜರಿದರೆ ಬರದೆ ಬಿಯುರು ಅವರ ಮಾರ್ಗವನ್ನು ಹ್ಯಾಗೆ ಅವಲಂಬಿಸಬೇಕು ? ನಾವು ಬಲಹೀನರು ಹೇಡಿಗಳು ಎಂದು ಅವರೆಲ್ಲರೂ ನಮ್ಮನ್ನು ನಿಂದಿಸುತ್ತಾರೆ; ಆದುದರಿಂದ ಅಹಿಂಸಾಮಾರ್ಗವನ್ನವಲಂಬಿಸಿ ಮಹಾತ್ಮರು ಆಜ್ಞಾನುವರ್ತನೆಗೊಳಪಟ್ಟ ನಮ್ಮ ಕಾರ್ಯವನ್ನು ಮಾಡಿ ನಮ್ಮ ಆದರ್ಶಕ್ಕೆ ನಾವು ಮುಟ್ಟಿದರೆ ಅವರ ಕಣ್ಣುಗಳು ತಾವೇ ತೆರೆಯಲ್ಪಡುವವು. ಮತ್ತು ಯುದ್ಧದಿಂದ ಬೇಸತ್ತ ಜನಾಂಗದವರೆಲ್ಲರೂ ಮಹಾತ್ಮರು ತೋರಿಸಿದ ಮಾರ್ಗವು ಯೋಗ್ಯ ಮತ್ತು ಶ್ಲಾಘ್ಯಮಾತ್ರವೇ ಅಲ್ಲದೆ ಸಾಧ್ಯವೂ ಆಗಿದೆಯೆಂಬುದನ್ನರಿತು ನಮ್ಮ ಮೇಲ್ಪಂಕ್ತಿಯನ್ನನುಸರಿಸಿ ತಾವೂ ವರ್ತಿಸಲಿಕ್ಕೆ ಪ್ರಾರಂಭಿಸಲೇ ಬೇಕು; ಅವರ ಸಂಸ್ಕೃತಿಯಿಂದಾದ ದುರ್ಗತಿಯು ಅವರಿಗೆ ಗೊತ್ತೇ ಇದೆ ಮಹಾತ್ಮರ ತಪಸ್ಸವನ್ನು ಕೇಳಿಯೂ ಬಲ್ಲರು; ಅವರೆ ಮಾಡಿತೋರಿಸುವ ತರಿಸ್ಲಮಿ ನಮ್ಮರೆ ಎಂದೂ ವೈರಾಗ್ಯದ ತತ್ವವನ್ನು ಅನುಭವಿಸದೇ ಇದ್ದ ಆ ಜನರಿಗೆ ಈ ಆದರ್ಶವು ಹ್ಯಾಗೆ ಸಮ್ಮತವಾಗಬೇಕು ? ವೈರಾಗ್ಯವು ಭಾರತೀಯರ ರಕ್ತಗುಣವೆಂದು ಸ್ವಾಮಿ ವಿವೇಕಾನಂದರವರು ಸಾರಿ ಸಾರಿ ಹೇಳಿದ್ದಾರೆ ಆ ವೈರಾಗ್ಯದ ಪ್ರತಿನಿಧಿಗಳು ತಾವೇಯಾಗಿ ಕೇವಲ ದ್ರವ್ಯ ಸಂಪಾದನೆಯ ಕಾಂಕ್ಷೆಯು ಅತಿ ಹೀನವಾದದ್ದೆಂದು ಪಾಶ್ಚಿಮಾತ್ಯರಿಗೆ ತೋರಿಸಿಯೇ ಬಂದರು. ರಕ್ತಗುಣಕ್ಕೆ ವಿರುದ್ಧವಾದ ಸಾಧನೆಯು ಜನಾಂಗದಲ್ಲನೇಕರಿಗೆ ಸಮ್ಮತವಿಲ್ಲವೆಂಬುದೂ ಅನುಭವಸಿದ್ಧಾಂತವಂದ ಮೇಲೆ ನಮ್ಮ ದೇಶದ ಉದ್ಧಾರಕ್ಕಾಗಿಯೂ ಮತ್ತು ಅವರ ಮುಖಾಂತರ ಇಡೀ ಭೂಲೋಕದ ಉದ್ಧಾರಕ್ಕಾಗಿಯೂ ಧೀರ್ಘದರ್ಶಿಗಳಾದ ಮಹಾತ್ಮರವರು ತೋರಿಸಿಕೊಟ್ಟ ಸಾಧನೆಯೇ ಮಾಡಬೇಕಾದ್ದು ಅವಶ್ಯವಿದೆಯಲ್ಲವೇ ?

ಇತರ ದೇಶಗಳಿಗೆ ದುರ್ಗತಿ ದುರ್ಭಿಕ್ಷವನ್ನುಂಟು ಮಾಡಿ, ನಮ್ಮ ದೇಶವನ್ನು ಮುಂದಕ್ಕೆ ತರಬೇಕೆಂಬ ಇಚ್ಛೆಯು ಇವರಿಗಿಲ್ಲ. ಯಾವ ಸಾಧನೆಯಿಂದ ಸಕಲ ಜನಾಂಗಗಳಿಗೂ ಸುಖವಾಗುವದೋ ಅಂತಹ ಸಾಧನೆಯನ್ನೇ ನಾವು ಮಾಡಬೇಕೆಂಬುದೇ ಇವರ ಇಚ್ಛೆ. ಧನಿಕರ ಮತ್ತು ಕೂಲಿಯಾಳುಗಳ ಪರಸ್ಪರ ಜಗಳ, ಗಂಡಹೆಂಡರ ಜಗಳ, ಅರಸು ಪ್ರಜೆಗಳ ಜಗಳ, ಇವೇ ಮೊದಲಾದ ನಾನಾವಿಧವಾದ ತಂಟೆಗಳು ಪರೋಕ್ಷ ಸಂಸ್ಕೃತಿಯಿಂದಲೇ ಉದ್ಭವಿಸಿವೆ. ಆದ್ದದರಿಂದ ಅದರಲ್ಲುತ್ತಮವಾದ ತತ್ವಗಳನ್ನು ಮಾತ್ರ ಅಂಗೀಕರಿಸಿ, ಅವನ್ನು ನಮ್ಮ ಪುರಾತನ ಮತ್ತು ಸನಾತನ ತತ್ವಗಳಿಗೆ ಹೊಂದಿಸಿ ನಮ್ಮ ದೇಶದ ಗತವೈಭವದ ಕಡೆಗೆ ಕಣ್ಣುಮುಚ್ಚದೆ, ದೇಶ, ಕಾಲ ವರ್ತಮಾನವನ್ನು ಮರೆಯದೆ ಪರಮಾತ್ಮನಿಗೆ ಸಮ್ಮತವಾಗಿಯೂ ಜೀವರಾಶಿಗಳಿಗೆಲ್ಲವೂ ಹಿತವಾಗಿಯೂ ಇರುವ ಪ್ರಪಂಚವನ್ನು ಸರ್ವರೂ ಒಳಗೆ ಶಾಂತಿ ಹೊರಗೆ ಪ್ರೇಮಭಾವದಿಂದ ನಡಿಸಬೇಕೆಂಬುದೇ ಮಹಾತ್ಮಾಗಾಂಧಿಯವರ ಮುಖ್ಯ ಸಂದೇಶವು.

ಪ್ರೇಮಾಯತನ ತುಂಗಭದ್ರಾ.

# ಮಹಾತ್ಮರು ಮಾಡಿದ ಮಹತ್ಕಾರ್ಯವು.

(ಲೇಖಕ—ವೆಂಕಟೇಶ ಭೀಮರಾವ ಆಲೂರ)

ಮಹಾತ್ಮಾ ಗಾಂಧಿಯವರ ಚರಿತ್ರೆಯನ್ನು ಅನೇಕರು ಅನೇಕ ವಿಧವಾಗಿ ಬರೆದಿರುವರು. ಯಾರು ಅವರ ಮನೋಧೈರ್ಯವನ್ನು ಬಣ್ಣಿಸಿರುವರು, ಯಾರು ಅವರ ಸರಳತನವನ್ನು ಸ್ತುತಿಸಿರುವರು; ಯಾರು ಅವರ ಸ್ವಾರ್ಥತ್ಯಾಗವನ್ನು ಹೊಗಳಿರುವರು; ಯಾರು ಅವರ ಭೂತದಯೆಯನ್ನು ಕೊಂಡಾಡಿರುವರು; ಇವೇ ಮುಂತಾದ ಗುಣಗಳು ಅವರಲ್ಲಿ ವಿಶೇಷವಾಗಿ ತೋರಿಬರುತ್ತದೆಂಬದೇನೂ ಸುಳ್ಳಲ್ಲ. ಆದರೆ, ನಾವು ಇಂದು ಆ ಗುಣಗಳನ್ನು ಉಲ್ಲೇಖಿಸದೆ, ಅವರು ಮಾಡಿದ ಎಲ್ಲಕ್ಕೂ ಹೆಚ್ಚಿನದೆಂದು ನಮಗೆ ತೋರುವ ಒಂದೇ ಒಂದು ಮಹತ್ಕಾರ್ಯವನ್ನು ಕುರಿತು ಮಾತ್ರ ಇಲ್ಲಿ ಬರೆಯುವೆವು; ಮಹಾತ್ಮರು ಅಹಿಂಸಾವ್ರತವನ್ನು ಪಾಲಿಸುತ್ತಾರೆಂದು ನಾವು ಅವರಿಗೆ ಮಹಾತ್ಮರೆನ್ನುವದಿಲ್ಲ; ಅಹಿಂಸಾವ್ರತವನ್ನು ಅವರಿಗಿಂತಲೂ ಹೆಚ್ಚು ಶ್ರದ್ಧೆಯಿಂದ ಪಾಲಿಸುವವರು ನಮ್ಮಲ್ಲಿ ಅನೇಕರಿರಬಹುದು; ಅವರು ಸತ್ಯಸಂಧರೆಂದು ನಾವು ಅವರಿಗೆ ಮಹಾತ್ಮರೆನ್ನುವದಿಲ್ಲ; ಅವರಂಥ ಸತ್ಯಸಂಧರೂ ನಮ್ಮಲ್ಲಿ ಹಲವರಿರಬಹುದು; ಅವರು ಖಾದಿಯನ್ನು ಅಥವಾ ಕೈರಾಟೆಯನ್ನು ಪುನರುಜ್ಜೀವನ ಮಾಡಿದರೆಂದು ನಾವು ಅವರಿಗೆ ಇಷ್ಟೊಂದು ಬೆಲೆ ಕೊಡುವದಿಲ್ಲ; ಕೈರಾಟೆ ಕೈಮಗ್ಗಗಳ ಮಹತ್ವವನ್ನು ಹಿಂದಕ್ಕೆ ಕೆಲವರು ಹೇಳಿಕೊಟ್ಟಿದ್ದರು; ಮಹಾತ್ಮರು ಅಸಹಕಾರ ತತ್ವವನ್ನು ರಾಷ್ಟ್ರಕ್ಕೆ ಉಪದೇಶಿಸಿದ ಮಾತ್ರದಿಂದಲೇ ಅವರು ಅದ್ವಿತೀಯ ಪುರುಷರೆಂದು ನಾವು ಅವರನ್ನು ಕರೆಯುವದಿಲ್ಲ ಅಸಹಕಾರ ತತ್ವವು ಕೂಡ ಹಿಂದುಸ್ತಾನಕ್ಕೆ ಹೊಸದಲ್ಲ. ಅಸ್ಪೃಶ್ಯತಾ ನಿವಾರಣೆಯನ್ನು ಜನರಲ್ಲಿ ಬೀರಿದರೆಂದು ನಾವು ಅವರನ್ನು ಹೊಗಳೋಣವೇ ? ಅದೂ ಗೌಣವೆಂದೇ ನಮ್ಮ ಅಭಿಪ್ರಾಯವು. ಯಾಕಂದರೆ ಸಮಾಜ ಸುಧಾರಕರು ಅಸ್ಪೃಶ್ಯರನ್ನು ತಮ್ಮ ತಿಳುವಳಿಕೆಯ ಮೇರೆಗೆ ಹೆಚ್ಚು ಶಾಸ್ತ್ರೀಯ ರೀತಿಯಿಂದ ಬಿಡಿಸಲಿಕ್ಕೆ ಪ್ರಯತ್ನಮಾಡುತ್ತಿರುತ್ತಾರೆ ಸಾರಾಂಶ ಮೇಲ್ಕಾಣಿಸಿದ ಗುಣಗಳೆಲ್ಲವೂ ಅವರಲ್ಲಿ ಬಹು ಪ್ರಮಾಣದಲ್ಲಿ ಇದ್ದರೂ ಕೇವಲ ಅವುಗಳ ಮೂಲಕವೇ ಅವರಿಗೆ ಮಹತ್ವವು ಪ್ರಾಪ್ತವಾಗಿರುವದೆಂದು ನಾವು ಬಗೆಯುವದಿಲ್ಲ. ಆದರೆ ರಾಷ್ಟ್ರವು ಮುಂದೇನು ಮಾಡಬೇಕೆಂದು ದಾರಿಗಾಣದೆ ಕಕ್ಕಾವಿಕ್ಕಿಯಾಗಿ ಕುಳಿತಾಗ, ರಾಷ್ಟ್ರಕ್ಕೆ ಹಳ್ಳಿಯಾತ ಜನರ ಮೊದಲುಗೊಂಡು ಅತ್ಯಂತ ಸುಶಿಕ್ಷಿತರಾದವರ ಪರ್ಯಂತ ಸರ್ವರಿಗೂ ದೇಶಕಾರ್ಯವನ್ನು ಮಾಡಲಿಕೆ ಅನುವು ಮಾಡಿಕೊಟ್ಟದ್ದೇ ಅವರು ಮಾಡಿದ ಎಲ್ಲಕ್ಕೂ ಹೆಚ್ಚಿನ ಮಹತ್ಕಾರ್ಯವೆಂದು, ನಮ್ಮ ಮತವು. ಮಹಾತ್ಮರು ಎಂಥ ಸಂಧಿಕಾಲದಲ್ಲಿ ಉದಯವಾದರೆಂಬದನ್ನು ನೋಡಿದರ ನಮ್ಮ ಅಂಬೋಣವು ಹೆಚ್ಚು ಸ್ಪಷ್ಟವಾಗಿ ತಿಳಿಯುವದು. ಸ್ವರಾಜ್ಯದ ಚಳವಳಿಯಲ್ಲಿ, ಈಗ ಪ್ರಚಾರದಲ್ಲಿ ಇರುವ ನಾಲ್ಕು ಶಸ್ತ್ರಗಳೇ ಹೆಚ್ಚು ಕಡಿಮೆ ಪ್ರಮಾಣದಿಂದ ಅಮಲಿನಲ್ಲಿ ತರಲ್ಪಟ್ಟಿದ್ದವು. ಆದಕಾರಣವೇ ಶ್ರೀ. ಬಿಪಿನ ಬಾಬುಗಳು ಈ ನಾಲ್ಕು ಸೂತ್ರಗಳನ್ನೇ ಅಸಹಕಾರವೆಂದು ಕರೆದಿರುವರು. ಅರ್ಥಾತ್, ಆಗಿನ ಅವುಗಳ ಸ್ವರೂಪಕ್ಕೂ ಈಗಿನ ಅವುಗಳ ಸ್ವರೂಪಕ್ಕೂ ಮಹದಂತರವಿರುತ್ತದೆ. ಅದೇನೂ ಸುಳ್ಳಲ್ಲ. ಆದರೂ ಅವೆಲ್ಲವುಗಳ ಬುಡಕ್ಕೆ ಇದೇ ಅಸಹಕಾರದ ಪ್ರವೃತ್ತಿಯೇ ಇರುತ್ತದೆಂಬದನ್ನು ಪ್ರತಿಯೊಬ್ಬರೂ ಒಪ್ಪಲೇಬೇಕಾಗುವದು. ಆಗ ಸಾಮಾನ್ಯ ಸ್ವದೇಶಿಯು ಪ್ರಚಾರದಲ್ಲಿತ್ತು. ಈಗ ಶುದ್ಧ ಖಾದಿಯ ಪ್ರಾಬಲ್ಯವೇ ಹೆಚ್ಚಾಗಿದೆ. ಆಗ ಸಾಮಾನ್ಯತಃ ಯಾವತ್ತು ಪರದೇಶಿಯ ವಸ್ತುಗಳ ಮೇಲೆ ಬಹಿಷ್ಕಾರವು ಬಿದ್ದಿತ್ತು. ಈಗ ವಿಶೇಷತಃ ಕಂಪನಿ, ಶಾಲೆ, ಕೋರ್ಟುಗಳಿಗೆ ಬಹಿಷ್ಕಾರವು ಬಿದ್ದಿದೆಂಬಷ್ಟೇ ಭೇದವು. ಸ್ವದೇಶೀ ಚಳವಳಿಯಲ್ಲಿ ರಾಷ್ಟ್ರೀಯ ಶಿಕ್ಷಣಕ್ಕೆ ಈ ಎಷ್ಟು ವಿಸ್ತೃತ ಸ್ವರೂಪವು ಪ್ರಾಪ್ತವಾಗಿದ್ದಿಲ್ಲ. ಸ್ವರಾಜ್ಯ ಪ್ರಶ್ನೆಯು ಆಗ ಕೇವಲ ದೂರಿನ ಧ್ಯೇಯವಾಗಿ ಸ್ವೀಕರಿಸಲ್ಪಟ್ಟಿತ್ತು. ಹೀಗೆ ಆಗಿನ ವಿಷಯಗಳಲ್ಲಿ ಹಲಕೆಲವು ಬದಲಾವಣೆಗಳನ್ನು ಮಾಡಿದ ಮಾತ್ರಕ್ಕೆ ನಾವು ಅವರಿಗೆ ಇಷ್ಟೊಂದು ಮಹತ್ವವನ್ನು ಯಾಕೆ

ಕೊಡಬೇಕು? ಆದರೆ ಒಂದು ಮಾತನ್ನು ಮಾತ್ರ ತೀರ ಹೊಸದಾಗಿ ಹೂಡಿರುವರು. ಅದೇನಂದರೆ, ರಾಷ್ಟ್ರದಲ್ಲಿ ಪ್ರತಿಯೊಬ್ಬನಿಗೂ ಒಂದಿಲ್ಲೊಂದು ರೀತಿಯಿಂದ ಸ್ವರಾಜ್ಯ ಸಂಪಾದನೆಯ ಮಹಾಕಾರ್ಯದಲ್ಲಿ ತನ್ನ ಕೈಲಾದ ಮಟ್ಟಿಗೆ ಭಾಗವನ್ನು ತೆಗೆದುಕೊಳ್ಳಲಿಕ್ಕೆ ಬರುವಂತೆ ಮೊದಲಿನ ಕಾರ್ಯದಲ್ಲಿ ಬದಲು ಮಾಡಿ, ಅತ್ಯಂತ ವ್ಯಾಪಕವಾದ ದೃಷ್ಟಿಯಿಂದ ಅವರು ತಮ್ಮ ಕಾರ್ಯಕ್ರಮವನ್ನು ಸಿದ್ಧಪಡಿಸಿರುವದೇ ಅವರ ವಿಶೇಷವು. ಸ್ವರಾಜ್ಯದ ಚಳವಳಿಯು ಕೆಲವಂಶದಿಂದ ಜನರ ಅಭಿಮಾನ ಶೂನ್ಯತೆಯಿಂದಲೂ ಕೆಲವಂಶದಿಂದ ಅತ್ಯಾಚಾರವನ್ನು ಮಾಡುವ ಅರಾಜಕ ಜನರನ್ನು ಮುರಿಬಡಿಯುವ ನೆವದಿಂದ, ಸರಕಾರದವರು ಯಾವತ್ತೂ ಬಗ್ಗೆಯ ರಾಜಕೀಯ ಚಳವಳಿಗಳನ್ನು ಮುರಿಬಡೆಗಡ್ಡರಿಂದಲೂ ನಾಶಲಿಗುಂದಾಯಿತು. ಅನಂತರ ಕೆಲವು ವರ್ಷ ರಾಷ್ಟ್ರವು ಮುಂದುಗಾಣದೆ ಮುಳುಗಿಕೊಂಡಿತು. ಲೋಕಮಾನ್ಯ ಸೆರೆಮನೆಯಿಂದ ಮರಳಿ ಬಂದ ಬಳಿಕ, ಸ್ವರಾಜ್ಯಸಂಘಗಳನ್ನು ಸ್ಥಾಪಿಸಿ ಜನರಿಗೆ ಚಳವಳಿಯನ್ನು ಮಾಡಲಿಕ್ಕೆ ಅನುವು ಮಾಡಿಕೊಟ್ಟರು. ಆದರೆ ಅದು ಕೇವಲ ಧ್ಯೇಯವನ್ನು ಮಾತ್ರ ಹೇಳಿದ್ದರಿಂದ, ಅದಕ್ಕೆ ಬೌದ್ಧಿಕ ಚಳವಳಿಗಿಂತ ಹೆಚ್ಚಿನ ಸ್ವರೂಪವು ಪ್ರಾಪ್ತವಾಗುವದು ಶಕ್ಯವಿದ್ದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಮಹಾತ್ಮರು ಆ ಧ್ಯೇಯಕ್ಕೆ ತಕ್ಕ ಸಾಧನವಾವುದೆಂಬದನ್ನು ತಿಳಿಸಿ ಹೇಳಿ ರಾಷ್ಟ್ರಕ್ಕೆ ಆ ಸಾಧನಯೋಗವನ್ನು ಸಾಧಿಸಲಿಕ್ಕೆ ಹಚ್ಚಿದ್ದೇ ಅವರು ಮಾಡಿದ ಮಹತ್ಕಾರ್ಯವು. ಅಹಿಂಸಾ ತತ್ವವನ್ನು ಆಚರಣೆಯಲ್ಲಿ ತಂದು ಸರಕಾರದ ಬಾಯಿಗೆ ಬೀಗ ಜಡಿದರು. ಈಗ ದೇಶದ ದೇಶಭಕ್ತನ ಮೇಲೂ ಪ್ರತ್ಯಕ್ಷವಾಗಿ ಕೈಯಿಕ್ಕಲಿಕ್ಕೆ ಸರಕಾರಕ್ಕೆ ಆಸ್ಪದವೇ ಇಲ್ಲ. ಇನ್ನು ಅವರು ತುಂಟ ನ್ಯಾಯವನ್ನು ತೆಗೆದ ಜನರಿಗೆ ತ್ರಾಸು ಕೊಟ್ಟರೆ, ಆ ಮಾತು ಬೇರೆ. ಮುಸಲ್ಮಾನರ ಧಾರ್ಮಿಕ ವೃತ್ತಿಯ

ವನ್ನು ಮನಗಂಡು, ಹಿಂದೂಮುಸಲ್ಮಾನರಲ್ಲಿ ಐಕ್ಯವನ್ನು ಮಾಡಿದ್ದರಿಂದ. ಸ್ವರಾಜ್ಯ ಮಾರ್ಗದಲ್ಲಿಯ ದೊಡ್ಡ ಮುಳ್ಳು ಬದಿಗಾಯಿತು. ಸಾಮಾನ್ಯತಃ ಸ್ವದೇಶೀ ಚಳವಳಿಯನ್ನು ಕೈಕೊಂಡು, ಖಾದಿಯ ಪ್ರಸಾರವೊಂದನ್ನೇ ವಿಶೇಷವಾಗಿ ಕೈಕೊಂಡಿದ್ದರಿಂದ, ಇಂಗ್ಲಂಡದ ಭದ್ರವಾದ ಪರದೇಶೀ ಕೋಟೆಯ ಮೇಲೆ ನಾಲ್ಕು ಕಡೆಯಿಂದ ಏರಿಹೋಗದೆ, ಅದರಲ್ಲಿ ಒಂದೇ ದೊಡ್ಡ ತೂತನ್ನು ಕೊರೆಯಲಿಕ್ಕೆ ಅವರು ನಮಗೆ ಕಲಿಸಿರುವರು. ಇದು ಮಹಾತ್ಮರು ತೆಗೆದ ಹೊಸ ಯುಕ್ತಿಯು. ಖಾದಿಯಿಂದ ಇತ್ತ ಇಂಗ್ಲಂಡದ ನೇತ್ರಾದ ವ್ಯಾಂಚಿಸ್ಟರದ ಕಣ್ಣುಗಳಲ್ಲಿ ಅಂಜನ ಬೀಳುವದಲ್ಲದೆ ಇತ್ತ ಸುಶಿಕ್ಷಿತರು ಮೊದಲುಗೊಂಡು ಹಳ್ಳಿಗಾಡದವರೂ ಸ್ತ್ರೀಯರೂ ಕೂಡ ಆಚರಿಸಬಹುದಾದ ಸುಲಭಸಾಧನವು ನಮ್ಮ ಕೈಗೆ ಸಿಕ್ಕಂತಾಗಿದೆ. ಇದು ಒಂದು ಮಹಾತ್ಮರ ಕಾರ್ಯಕ್ರಮದಲ್ಲಿಯ ವಿಶೇಷವು. ಅಸಹಕಾರ ಚಳವಳಿಗಿಂತ ಪೂರ್ವದಲ್ಲಿ ಸ್ವರಾಜ್ಯವು ನಮ್ಮ ದೂರದ ಧ್ಯೇಯ ಮಾತ್ರವೇ ಆಗಿತ್ತು. ಒಂದೇ ವರ್ಷದಲ್ಲಿಯ ಸ್ವರಾಜ್ಯವನ್ನು ಸಂಪಾದಿಸುವೆವೆಂದು ಕಂಕಣ ಕಟ್ಟಿದ್ದರಿಂದ, ಅದು ಒಂದು ವರ್ಷದಲ್ಲಿ ಸಿಗದಿದ್ದರೂ ಅತ್ಯಂತ ಅಲ್ಪಕಾಲದಲ್ಲಿಯೇ ನಮ್ಮ ಸ್ವಪ್ರಯತ್ನದಿಂದ ಸಿಗಬಹುದೆಂಬ ಭರವಸವನ್ನು ಮಹಾತ್ಮರು ಹಿಂದೀ ಜನತೆಯಲ್ಲಿ ಹುಟ್ಟಿಸಿರುವರು. ಸಾರಾಂಶ, ಅವರ ಕಾರ್ಯಕ್ರಮದಲ್ಲಿಯ ಪ್ರತಿಯೊಂದು ಅಂಗಕ್ಕೆ ಇಂದಿಗೆ ಹೇಳತಕ್ಕಷ್ಟು ಜಯವು ಪ್ರಾಪ್ತವಾಗದಿದ್ದರೂ ಅಥವಾ ಸಂಪೂರ್ಣವಾಗಿ ಲೋಪವಾಗಿ ಹೋದರೂ ಕೂಡ ಅವರು ಹಿಂದೀ ಜನರ ಕಾರ್ಯಪದ್ಧತಿಯಲ್ಲಿ ಮಾಡಿದ ಕ್ರಾಂತಿಯೂ ಅವರ ಮನಸ್ಥಿತಿಯಲ್ಲಿ ಮಾಡಿದ ಬದಲು ಮಾತ್ರ ಎಂದೆಂದಿಗೂ ನಷ್ಟವಾಗಲಾರವು. ಲೋಕಮಾನ್ಯರ ಪ್ರೀತಿಯೋಗಿ ಅಸಹಕಾರವನ್ನು ರಾಷ್ಟ್ರವು ಸ್ವೀಕರಿಸಿದ್ದರೆ, ಅಥವಾ ಈಗ ಸ್ವೀಕರಿಸಿದರೆ ಇಷ್ಟೊಂದು ವ್ಯಾಪಕವಾ ಅದ್ದರಿಂದದ ಕಾರ್ಯಕ್ಕೆ ಆಸ್ಪದ ದೊರೆಯುವದಕ್ಕೆ ಶಕ್ಯವಿಲ್ಲ ಎಂಬ ನ ಮ. ಮ. ತರು ಮಾಡಿದ ಮಹತ್ಕಾರ್ಯವೆಂದೇ ಇದೇದವ್ಯ ?? ನ್ಯಾಯವು.

# ಭಾರತ ಮಾತೆಯ ಭಗವತ್ ಪ್ರಾರ್ಥನೆ

ಮ. ವೃ. ಮತಿಯೊಳ್ ನಿರ್ಭರಭಕ್ತಿ, ಕಣ್ಗಳೊಳನಂಪಾಶ್ರು. ಮೈಯೊಳ್ ಸಮು— |
[illegible]ತಪೋ[illegible]ಮಂ. ಮುಖದೊಳ್ ವಿಲಾಸವನೆ [illegible], ಜಗನ್ನಾಥ, ಭಾ ||
ರತ ಪುಣ್ಯ[illegible]ತಿಯೊಳ್ ವಿರಾಜಿಸುವ ಶ್ರೀ ಸತ್ಯಾತ್ಮ ಮಾಹಾತ್ಮ್ಯ ಮಾ— |
ದಥಿಕಂ ತನ್ನ ಕುಲೋದ್ಧಾರಂ, ಜನಿಸಿರಲ್ [illegible] ಧನ್ಯೆ[illegible] ಲೋಕದೊಳ್ ||೧||

ಕಂದ. ಶ್ರೀ [illegible]ಮನೆ! ಭರತಕುಲೋ—
[illegible]ರನೆ! [illegible]ಷ್ಣನೆ! ದಶಾವತಾರಿಯೆ! [illegible] ||
[illegible] |
[illegible] ಭಕ್ತರ ಪೊರೆಯೈ ||೨||

ಮ. ವೃ. [illegible] ನನ್ನ ಕಲೆಯಂ ಶೃಂಗಾರಮಂ, ವಸ್ತ್ರಮಂ |
[illegible]ಣಂಗಳ[illegible], ಕುಯುಕ್ತಿಯಿಂ ಹೃದಯಮಂ [illegible] ಮೋಹರಕ್ತಮಂ ||
[illegible], ಪ್ರಾಣದ [illegible] ನಾಂ [illegible] ನನ್ನ ಸತ್‌ಪುತ್ರರಂ |
[illegible]ಕ್ತಂ [illegible]! [illegible] ನೀಂ [illegible]! ಸತ್ಪುತ್ರರಂ || ೩ ||

[illegible] " [illegible] ನೋಡ, " ನೀಂ |
[illegible] ಮಾಹಾತ್ಮನೆ! " [illegible] ||
ಧರಿಸ[illegible] ನಾಂ [illegible]ಲ್ಲವಾದರೂ |
ಹರಿಯೆ! [illegible]! ನಿನಗೆ ಪ್ರಾರ್ಥಿಪೆ: ರಕ್ಷಿಸು! ನನ್ನ ಪುತ್ರರಾ || ೩ ||
[illegible], ನನ್ನ [illegible], ಸದಾ [illegible] ನಿದ್ದೆಗೈ— |
[illegible] ನನ್ನ [illegible], ಮನದೊಳ್ ಜ್ಯೋತನ್ಯಮಂ ತಾಳದೇ! ||
[illegible]ಯ ಕಷ್ಟವನ್ನ[illegible]! ವಿಘ್ನಂಗಳಂ ವರ್ಜಿಸು |
[illegible]ಚರನೆ[illegible]! ವರನೆ! ದೇ[illegible]ರನ್ನೆಬ್ಬಿಸೈ! || ೪ ||
[illegible] ಸತಿ [illegible]ತಂತ್ರ್ಯ [illegible], ಹೇ! ದೇವನೆ! ನನ್ನ ಸ— |
ತ್ಪುತ್ರರೊಳ್ ಜನ್ಮವ[illegible], ರಾಷ್ಟ್ರ [illegible], ಲೋಕಮಾನ್ಯರ್, ಮಹಾ ||
ಕಲಿಗಳ್, ಸತ್ಯರತರ್, [illegible] ಚಕ್ರವ್ಯೂಹಮಂ ಕಟ್ಟಿ[illegible] |
[illegible] ಕಾದುವರ್ಕೈ! ಗಡಾ! ಪೊರೆಯೊ! ನೀಂ ಸ್ವಾತಂತ್ರ್ಯಸಂ ಪ್ರೀತಿಯಿಂ || ೫ ||

[illegible] ಚಕ್ರವ್ಯೂಹವ [illegible] ಭೇರಿಯಂ [illegible] |
[illegible] ಶ್ರೀಕೃಷ್ಣಚಕ್ರಧ್ವಜ ||
ವಿಕ್ರಾಂತರ್ ಕವಚಂಗಳಂ ಧರಿಸಿದರ್ [illegible] ಖಾದಿಯ |
ಶ್ರೀಕೃಷ್ಣಾ! ನರಕಾಸುರಾಂತಕನೆ! ನೀಂ ಸತ್ಯಪ್ರಿಯಾ! ಪಾಲಿಸೊ! || ೬ ||

ಮ, ವೃ. ಸುರಗಂಗಾಜಲಮಂ ಸದಾ ಸುರಿಯದೇ ದುವ್ರ್ಯಾಸದಿಂ ಕ್ಷತ್ರಿಯರ್ |
ಸುರಿಯಂ[illegible]ವರೆಂದು [illegible] ನಡುಗಿಸಲ್, ಸನ್ನಾರ್ಯರ್ ವಿರರ್ ಸುಧಾ— ||
ಕರ ದಿವ್ಯಾತ್ಮಂಸಕ್ತಿ [illegible] ಸುರೆಯಂ [illegible]ರಿಂದುಬ್ಬಿಸಿಂ |
ಹರುಷೋದ್ಗಾರಗಳಿಂದೆ ಶ್ರೀ ಸುರವರಾ! ನಾಂ ಪ್ರಾರ್ಥಿಪೇ; ರಕ್ಷಿಸೈ || ೭ ||
[illegible]ಮಂ ನಿಃಸಹಕಾರದಾ ಪ್ರಭೃತಿಗಳ್ ಸತ್ಯಾತ್ಮಕರ್ ಬಿಟ್ಟಿರ್ಕೈ |
[illegible] ಮಧ್ಯಮೋಳ್, ಕೆಡವಿ[illegible]ರ್ [illegible]ವಸ್ತ್ರಂಗಳಂ ||
ನಕಲಾದ [illegible]ವರ್ತನಕರು [illegible] ಯಂತ್ರಂಗಳೇ |
[illegible], ಸನೀರಸಾರಥಿಯ! ನೀಂ [illegible] ರಕ್ಷಿಸೈ || ೮ ||
ರಣ[illegible], ವಿಜಯ [illegible]ದಿಂ ಪೊಂದುವಾ |
[illegible], ಮಹಾತ್ಮನಂ ನೆನೆಯುತಂ [illegible] ಬಿಟ್ಟಿಸೈ ||
" [illegible] ಸ್ವಾತಂತ್ರ್ಯಮಂ " ಎಂದು ಸ— |
[illegible]! ಕೌಂತನರಪ್ರಿಯಾ! ಜಯಕರಾ! [illegible] ಪ್ರಾರ್ಥಿಪೇಂ! || ೯ ||
ಜಯ! [illegible]! ನವಜೀವನ ಪ್ರಗತಿಕಾ! ಸ್ವಾತಂತ್ರ್ಯ ಸಂಸ್ಥಾಪಕಾ! |
ಜಯ! [illegible]! ಜಗದಾಂತರಾತ್ಮಕನೆ! ದೇಶೋದ್ಧಾರಕಾ! ಪಾಲಕಾ! ||
ಜಯ! ಕಾ[illegible]ವಾಸಿ! ಚಕ್ರಧರನೇ! [illegible]ಂಬರ ಪ್ರಿಯನೇ! |
ಜಯ! ಶ್ರೀ[illegible]ಗಾಂಧಿವರನೇ! [illegible]! ಮಂಗಳಂ! ೧೦ ||

( [illegible] ) [illegible]

ಕೊಡಬೇಕು? ಆದರೆ ಒಂದು ಮಾತನ್ನು ಮಾತ್ರ ತೀರ ಹೊಸದಾಗಿ ಹೂಡಿರುವರು. ಅದೇನಂದರೆ, ರಾಷ್ಟ್ರದಲ್ಲಿ ಪ್ರತಿಯೊಬ್ಬನಿಗೂ ಒಂದಿ

ಸ್ಥಾನಸೇವೆಯಿಂದ ಮರಳಿ ಬಂದ ಬಳಿಕ, ಸ್ವರಾಜ್ಯಸಂಘಗಳನ್ನು ಸ್ಥಾಪಿಸಿ ಜನರಿಗೆ ಚಳವಳಿಯನ್ನು ಮಾಡಲಿಕ್ಕೆ ಅನುವು ಮಾಡಿಕೊ



# ಜಯ ಕರ್ನಾಟಕ.

## ಕರ್ನಾಟಕದಲ್ಲಿ ರಾಷ್ಟ್ರೀಯತ್ವ.

ಮಹಾತ್ಮಾ ಗಾಂಧಿಯವರು ರಾಷ್ಟ್ರೀಯತ್ವವನ್ನು ಹಿಂದುಸ್ಥಾನದಲ್ಲಿ ನೆಲೆಗೊಳಿಸಬೇಕಾದರೆ ಭಾಷಾವಾರ ಪ್ರಾಂತ ರಚನೆಯನ್ನು ಮಾಡುವದು ಅತ್ಯಾವಶ್ಯವೆಂದು ಕಂಡುಹಿಡಿದು, ಇತರ ಪ್ರಾಂತಗಳೊಂದಿಗೆ ಕನ್ನಡ ಭಾಷೆಯವರು ಗನೆಯಾದ ಕರ್ನಾಟಕಕ್ಕೆಸಹ ಒಂದು ಪ್ರತ್ಯೇಕ ಕಾಂಗ್ರೆಸ ಸರ್ಕಲ(ಪ್ರಾಂತ) ಕೊಟ್ಟು ಈ ಠರಾವನ್ನು ನಾಗಪೂರಕಾಂಗ್ರೆಸದಲ್ಲಿ ಪಾಸುಮಾಡಿಕೊಂಡರು. ಈ ಮಾತಿಗೆ ಸ್ವಲ್ಪಕಡಿಮೆ ೨ ವರ್ಷಗಳಾದವು. ಈ ೨ ವರುಷದ ಅವಧಿಯಲ್ಲಿ ಇತರ ಭಾಷಾವಾರ ಪ್ರಾಂತಗಳು ಎಷ್ಟು ಕಾರ್ಯವನ್ನು ಮಾಡಿರುವವೋ ಅಷ್ಟು ರಾಷ್ಟ್ರೀಯಕೆಲಸವು ನಮ್ಮ ಕರ್ನಾಟಕದಲ್ಲಿ ಆಗಿಲ್ಲವೆಂಬುದು ಎಲ್ಲರಿಗೂ ಗೊತ್ತಿದ್ದ ಸಂಗತಿಯು. ಈ ನ್ಯೂನತೆಯ ಕಾರಣಗಳನ್ನು ಹುಡುಕಿ ಅವುಗಳ ಸುಧಾರಣೆಯನ್ನು ಮಾಡುವದೇ ನಮ್ಮ ಆದ್ಯಕರ್ತವ್ಯವಾಗಿರುತ್ತದೆ.

ಅಖಿಲ ಕರ್ನಾಟಕದಲ್ಲಿ ಯಾವ ಯಾವ ಜಿಲ್ಲೆಗಳು ಬಂದಿರುವವೆಂಬುದು ಎಷ್ಟೋ ರಾಷ್ಟ್ರೀಯ ಕೆಲಸ ಮಾಡುವ ಜನರಿಗೆಸಹ ಗೊತ್ತಿರುವದಿಲ್ಲ. ಕರ್ನಾಟಕ ಭೂಗೋಲ ಜ್ಞಾನವು ಇವರಿಗೆ ಇಲ್ಲ. ಇವರು ನೀಲಗಿರಿ ಜಿಲ್ಲೆ ಹಾಗು, ಸೇಲಂ, ಕೊಯಿಮತ್ತೂರು ಜಿಲ್ಲೆಗಳ ಉತ್ತರಾರ್ಧವು ಕನ್ನಡ ನಾಡಿನದಿರುತ್ತದೆಂತಲೂ ಅದನ್ನು ತಮಿಳರ ಕಡೆಯಿಂದ ತೆಗೆದುಕೊಳ್ಳಬೇಕೆಂತಲೂ ಇವರ ಮಹತ್ವಾಕಾಂಕ್ಷೆಯೇ ಇಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ೬ ತಾಲೂಕುಗಳು ನಮ್ಮ ಸ್ವಾಧೀನಕ್ಕೆ ಬರದಂತೆ ಅನಂತಪುರ ಜಿಲ್ಲೆಯಲ್ಲಿ ಕನ್ನಡಮಯವಾಗಿರುವ ೪ ತಾಲೂಕುಗಳನ್ನು ಆಂಧ್ರರಿಂದ ನಮ್ಮ ವಶಕ್ಕೆ ತಕ್ಕೊಳ್ಳಬೇಕೆಂಬ ಲವಲವಿಕೆಯೂ ಇವರಲ್ಲಿಲ್ಲ. ನಮ್ಮ ಕಡೆಗೆ ಬಂದಂಥ ಮೈಸೂರ ಪ್ರಾಂತ್ಯ ಹಾಗು ಕೊಡಗು ಮಂಗಳೂರುಗಳಿಗೆ ಹೋಗಿ ಸರ್ವತೋಮುಖವಾದ ರಾಷ್ಟ್ರಜಾಗೃತಿಯನ್ನು ಮಾಡುವ ಸದುದ್ದೇಶವಾದರೂ ಇವರಲ್ಲಿ ಇಲ್ಲ. ಮತ್ತು ನಿಜಾಮ ಕರ್ನಾಟಕದಲ್ಲಿಯ ಬಿದರ ಗುಲಬುರ್ಗಾ ರಾಯಚೂರು, ಕೊಪ್ಪಳ ಮುಂತಾದವುಗಳು ಹಾಗೂ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳೆಂದು ಅಜ್ಞಾನದಿಂದ ಕರೆಯಲ್ಪಡುವ ಉತ್ತರ ಕರ್ನಾಟಕ ಸಂಸ್ಥಾನಗಳಲ್ಲಿ ಸಂಚಾರಮಾಡಿ ರಾಷ್ಟ್ರಜಾಗೃತಿ ಮಾಡಬೇಕೆಂಬ ಸದಿಚ್ಛೆಯ ಅಂಕುರವಾದರೂ ಇವರಲ್ಲಿ ಉತ್ಪನ್ನವಾಗಿರುವದಿಲ್ಲ. ಮತ್ತು ಕರ್ನಾಟಕ ಪ್ರಾಂ. ಕಾಂ. ಕಮಿಟಿಯಲ್ಲಿ ಇಡೀ ಕರ್ನಾಟಕದ ಕಡೆಗೆ ಲಕ್ಷ್ಯಕೊಟ್ಟು ಕೆಲಸಮಾಡುವ ಸಭಾಸದರೂ ೩-೪ ಜನರು ಸಹ ಇಲ್ಲವೆಂದರೂ ಸಲ್ಲುವಂತಿದೆ. ಸಂಪೂರ್ಣ ಕರ್ನಾಟಕದಲ್ಲಿ ಭಾಷಾ ಸೇವೆಯನ್ನು ಕೈಕೊಂಡ ಸಾಹಿತ್ಯ ಪರಿಷತ್ತು ಕಲ್ಪಾಂತರದವರೆಗೂ ನಡೆಯುವ ಸಾಹಿತ್ಯ ಸಂಮೇಲನಕ್ಕೆ ಬರಲು ಇವರ ಮನಸ್ಸು ಇನ್ನೂ ಒಪ್ಪುವದಿಲ್ಲ. ಇವರು ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಪ್ರವಾಸಮಾಡಿ ಅಲ್ಲಿಯ ಮುಖಂಡರಿಗೆ ಭೆಟ್ಟಿಯಾಗಿ ಅವರ ಪರಿಚಯ ಮಾಡಿಕೊಂಡು ಪರಸ್ಪರ ಸಹಾನುಭೂತಿಯಿಂದ ನಮ್ಮ ಕರ್ನಾಟಕ ಮಾತೆಯ ಸೇವೆಯನ್ನು ಮಾಡಬೇಕೆಂಬ ವಿಚಾರವು ಇವರ ಕನಸು ಮನಸುಗಳಲ್ಲಿ ಕೂಡ ಬರುವದಿಲ್ಲ. ಆದ್ದರಿಂದ ಕರ್ನಾಟಕದಲ್ಲಿ ರಾಷ್ಟ್ರಜಾಗ್ರತಿಯು ಎಷ್ಟುವೇಗದಿಂದ ಸಾಗಬೇಕೋ ಅಷ್ಟು ಸಾಗಿರುವದಿಲ್ಲ. ಕನ್ನಡ ನಾಡಿನ ಭೂಗೋಲಜ್ಞಾನ, ಕರ್ನಾಟಕದಲ್ಲಿ ಪ್ರವಾಸ, ಕನ್ನಡ ಮುಖಂಡರ ಸ್ನೇಹ ಮತ್ತು ಸಹಾಯ, ಹಾಗು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಭಾಸದರಿಗೆ ಕರ್ನಾಟಕದ ಬಗ್ಗೆ ಹೆಚ್ಚಿನ ಮಮತೆ ಇವುಗಳು ಎಲ್ಲಿಯವರೆಗೂ ಸಂಭವಿಸುವದಿಲ್ಲವೋ ಅಲ್ಲಿಯವರೆಗೆ ರಾಷ್ಟ್ರೀಯ ದೃಷ್ಟಿಯಿಂದ 'ನಮ್ಮ ಕರ್ನಾಟಕ' ಸದ್ಗತಿಯಾಗುವದಿಲ್ಲೆಂದು ನನ್ನ ಮನೋದೇವತೆಯು ಹೇಳುತ್ತದೆ.

ಕರ್ನಾಟಕದಲ್ಲಿ ಕೆಲಸ ಮಾಡತಕ್ಕ ಕನ್ನಡ ವಾಙ್ಮಯದ ವಿಷಯುಳ್ಳ ಸಾಧಾರಣಾಭಿರುಚಿಯು ಇದ್ದದ್ದನ್ನು ನೋಡುವದು ಬಹು ವಿರಳ. ಕನ್ನಡ ಭಾಷೆಯನ್ನು ಮಾತಾಡಲಿಕ್ಕೂ ಬರೆಯಲಿಕ್ಕೂ ಇವರಿಗೆ ಇನ್ನೂ ಅಸಾಧ್ಯವಾಗಿಯೇ ತೋರುವದು. ಯಾಕಂದರೆ ಪರಭಾಷಾ ವ್ಯಾಮೋಹವು ಇವರಿಗೆ ತಪ್ಪಿಲ್ಲ. ಮುಂಬಯಿ ಕರ್ನಾಟಕ ಮೊದಲಾದ ಉತ್ತರ ಕರ್ನಾಟಕದವರಿಗೆ ಮಹಾರಾಷ್ಟ್ರ ಭಾಷಾವ್ಯಾಮೋಹವು ಬಿಟ್ಟಿಲ್ಲ. ಬಳ್ಳಾರಿ, ಅನಂತಪುರ ಜಿಲ್ಲೆಯಲ್ಲಿಯ ಕನ್ನಡಿಗರಿಗೆ ಆಂಧ್ರ ಭಾಷೆಯ ಪ್ರೀತಿಯು ಅತಿಶಯವಾಗಿರುವದು. ನೀಲಗಿರಿ, ಸೇಲಂ, ಕೊಯಿಮತ್ತೂರು ಜಿಲ್ಲೆಗಳಲ್ಲಿಯ ಕರ್ನಾಟಕಸ್ಥರು ತಮಿಳ ಭಾಷೆಯ ಮೋಹಬಲೆಯೊಳು ಸಿಲುಕಿರುವರು. ಯಾವನಿಗೆ ಮಾತೃಭಾಷಾಭಿಮಾನವಿರುವದಿಲ್ಲವೋ ಅವನಿಗೆ ನಿಜವಾದ ರಾಷ್ಟ್ರಾಭಿಮಾನವಿರುತ್ತದೆಂದು ನಾನಂತೂ ಒಪ್ಪಲಾರೆನು. ಅದರಂತೆಯೇ ಪ್ರಾಂತಿಕ ಭಾಷಾಭಿಮಾನವು ಯಾರಲ್ಲಿ ಹುಟ್ಟಿಲ್ಲವೋ, ಅಂಥವರು ರಾಷ್ಟ್ರಸೇವೆ ಮಾಡುತ್ತಾರೆಂಬುದು ಸುಳ್ಳು ಮಾತು. ಮಹಾರಾಷ್ಟ್ರ, ಆಂಧ್ರ, ತಮಿಳ, ಭಾಷಾವ್ಯಾಮೋಹಜಾಲದಲ್ಲಿ ಸಿಲುಕಿರುವ ಕನ್ನಡಿಗರ ಆದ್ಯ ಕರ್ತವ್ಯವು ಈ ಪರಭಾಷಾ ವ್ಯಾಮೋಹವನ್ನು ತೊರೆದು, ಕರ್ನಾಟಕ ಮಾತೆಯ ಹಿರಿಮೆ ತಮ್ಮ ವ್ಯಕ್ತಿತ್ವವನ್ನು ತೋರಿಸುವದೇ ಆಗಿರುವದು. ಈ ಕರ್ತವ್ಯವು ನೆರವೇರದಹೊರತು ಕರ್ನಾಟಕಕ್ಕೆ ಸದ್ಗತಿಯಾಗಲಾರದೆಂದು ನನ್ನ ಅಂತರ್ಯಾಮಿಯಾದ ದೇವನು ಹೇಳುವನು.

ಕರ್ನಾಟಕಸ್ಥರಿಗೆ ವಿಶೇಷತಃ ಉತ್ತರ ಕರ್ನಾಟಕದವರಿಗೆ ನಮ್ಮ ಕರ್ನಾಟಕದ ಕಲಾಕೌಶಲ್ಯಗಳ ಕಡೆಗೆ ಅನಾದರವುಂಟು. ಉದಾಹರಣಾರ್ಥ— ಕರ್ನಾಟಕ ಸಂಗೀತವನ್ನು ತಕ್ಕೊಳ್ಳಬಹುದು. ಉತ್ತರಕರ್ನಾಟಕದಲ್ಲಿ ವಿವಾಹ ಮೊದಲಾದ ಮಂಗಲ ಕಾರ್ಯಗಳಲ್ಲಿಯೂ, ಅದರಂತೆಯೇ ದೇವತಾ ಸಂಬಂಧಿ ಮಹೋತ್ಸವಗಳಲ್ಲಿಯೂ ಕರ್ನಾಟಕ ಗಾನವನ್ನೇ ಉಪಯೋಗಿಸಬೇಕೆಂಬ ಲವಲವಿಕೆ ಇಲ್ಲ. ಉತ್ತರಹಿಂದುಸ್ಥಾನೀ ಗಾಯನವನ್ನು ಪ್ರಾರಂಭಿಸಿ ಹೆಚ್ಚು ಪ್ರೀತಿಗೊಳ್ಳುವರು. ಕರ್ನಾಟಕ ಗಾಯನವನ್ನು ಕರ್ನಾಟಕದಲ್ಲಿಯೇ ಹುಟ್ಟಿ ಬೆಳೆದು ಕನ್ನಡ ನಾಡಿನಲ್ಲಿಯೇ ಇರುವ ಕನ್ನಡಿಗರಾದ ನಾವು ಕಾದಿಡದೆ ಮತ್ತ್ಯಾವ ಜನರು ಕಾಯಬೇಕು. ಕನ್ನಡ ಭಾಷೆಯನ್ನು ಕನ್ನಡಿಗರೇ ಆದರಿಸದಿದ್ದರೆ ಬೇರೆ ಯಾರು ಆದರಿಸಬೇಕು. ಕರ್ನಾಟಕ ವಾಙ್ಮಯವನ್ನು ಕರ್ನಾಟಕಸ್ಥರಾದ ನಾವು ಅಭ್ಯಯಿಸ ಮಾಡದಿದ್ದ ಎರಡನೆಯವರಾರು ಕಲಿಯಬೇಕು. ಕರ್ನಾಟಕದಲ್ಲಿ ಪ್ರವಾಸವನ್ನು ಕರ್ನಾಟಕ ಮಾತಾಕನುಜರು ಮಾಡದಿದ್ದರೆ ಇತರರು ಎಂದಿಗೆ ಮಾಡ್ಯಾರು. ಕರ್ನಾಟಕದ ಮುಖ್ಯ ಸಂಸ್ಥೆಗಳಾದ ಸಾಹಿತ್ಯ ಸಮ್ಮೇಲನ ಮತ್ತು ಪ್ರಾಂತಿಕ ಕಾಂ. ಕಮಿಟಿ ಇವುಗಳಲ್ಲಿ ನಾವೇ ಭಕ್ತಿಯನ್ನಿಡದಿದ್ದರೆ ಇತರರು ಪ್ರೀತಿ ತೋರಿಸಬೇಕು? ಸಾರಾಂಶ ಕಂಪೆಯ ಶ್ರೇಯೋಭಿವೃದ್ಧಿಯನ್ನು ಮಕ್ಕಳು ಮಾಡದಿದ್ದರೆ ಪರಕೀಯರಾರು ಮಾಡುವರು. ಮಾತಾಪಿತೃಗಳ ಉಚಿತ ಸೇವೆಯನ್ನು ಮಕ್ಕಳು ಮಾಡದೆ ಮತ್ತ್ಯಾರು ಮಾಡಬೇಕು. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿಯ ಮುಖಂಡರಲ್ಲಿ ತಂಟೆ ಇರದಿದ್ದರೂ ಬ್ರಾಹ್ಮಣ ಬ್ರಾಹ್ಮಣೇತರರಲ್ಲಿ ವಿಶಿಷ್ಟ ತರದ ಜಗಳವಿರುತ್ತದೆ. ಉತ್ತರ ಕರ್ನಾಟಕದಲ್ಲಿ ಬ್ರಾಹ್ಮಣ ಲಿಂಗಾಯತರ ಕಲಹ, ಮೈಸೂರ ಪ್ರಾಂತದಲ್ಲಿ ಬ್ರಾಹ್ಮಣ ಒಕ್ಕಲಿಗ (ಒಕ್ಕಲಿಗರೆಂಬವರೊಂದು ಬೇರೆ ಜಾತಿಯುಂಟು). ಹಳ್ಳಿಜಗಳ ಬಳ್ಳಾರಿ, ಅನಂತಪುರ, ಜಿಲ್ಲೆಗಳಲ್ಲಿ ಬ್ರಾಹ್ಮಣ ಮತ್ತು ನಾಯಡು ರೆಡ್ಡಿ, ಜನರ ವೈಮನಸ್ಯ, ಸೇಲಂ, ಕೊಯಿಮತ್ತೂರ, ನೀಲಗಿರಿ ಜಿಲ್ಲೆಗಳಲ್ಲಿ ಬ್ರಾಹ್ಮಣ ಹಾಗು ಮುದಲಿಯಾರ ನಾಯಕರ, ಶೆಟ್ಟಿಯವರ ಬಡದಾಟ ಕೊಡಗಿನಲ್ಲಿ ಬ್ರಾಹ್ಮಣ ಕೊಡಗು ಜಾತಿಯವರ ಸ್ಪರ್ಧೆ ಕನ್ನಡ ಸಗಳೂರಲ್ಲಿ ಬ್ರಾಹ್ಮಣ ಮತ್ತು ಬಂಟರ ಜಾತಿಯವರ ತಂಟೆ ಈ ಪ್ರಕಾರ ಬೇರೆ ಬೇರೆ ಕಡೆಗೆ ಹಲವು ತರದ ಒಳಜಗಳಗಳು ಬ್ರಾಹ್ಮಣರಲ್ಲಿ ಅನೇಕರ ಸ್ವಾರ್ಥಪರಾಯಣತೆಯು ಹೆಚ್ಚಳದಿಂದಲೂ, ಬ್ರಾಹ್ಮಣೇತರರಲ್ಲಿ ರಾಷ್ಟ್ರೀಯತ್ವಕ್ಕೆ ಪೋಷಕವಾಗುವ ವಿದ್ಯಾಪ್ರಸಾರವು ತಕ್ಕಷ್ಟು ಆಗದ್ದರಿಂದಲೂ ಪ್ರಬಲವಾಗಿ ಕಂಡುಬರುತ್ತವೆ. ಈ ವಿಷಯದಲ್ಲಿ ಬಳ್ಳಾರಿ ಜಿಲ್ಲೆ ಹೊಸಪೇಟೆಯ ಬ್ರಾಹ್ಮಣ ಮುಂದಾಳುಗಳು ತೋರಿಸಿದ ಪದ್ಧತಿಯನ್ನು ಎಲ್ಲರೂ ಅನುಸರಿಸುವಂತಿದೆ. ಈ ರೀತಿ ಬೇರೆ ಬೇರೆ ಭಾಗಗಳಲ್ಲಿಯ ಮುಂದಾಳುಗಳು ಕೆಲಸ ನಡಿಸಿದರೆ ಸ್ವಲ್ಪ ದಿವಸಗಳಲ್ಲಿಯೇ ಬ್ರಾಹ್ಮಣ ಬ್ರಾಹ್ಮಣೇತರರಲ್ಲಿ ಒಕ್ಕಟ್ಟು ನೆಲೆಗೊಂಡು ತಪ್ಪದೆ ಕರ್ನಾಟಕವು ಮುಂದೆ ಬರುವದೆಂಬವರಲ್ಲಿ ಸಂದೇಹವಿಲ್ಲ.

ಕರ್ನಾಟಕದ ಪೂರ್ವೇತಿಹಾಸದ ಸಂಬಂಧಿ ತಜ್ಞರು — [illegible] ರಿಂದ ಕರ್ನಾಟಕಸ್ಥರಲ್ಲಿ ಅಭಿಮಾನದ ಜಾಗೃತಿಯು ಕಂಡುಬರುತ್ತದೆ. ಇತ್ತಕಡೆಗೆ ಮುದ್ರಿಸಲ್ಪಟ್ಟ ಕರ್ನಾಟಕದ ಇತಿಹಾಸಗಳನ್ನು ಕನ್ನಡಿಗರು ಮನನ ಮಾಡುವದು ಅತ್ಯವಶ್ಯಕವು. ಇತಿಹಾಸಜ್ಞಾನದ ಆಧಾರದಮೇಲೆ ಸ್ವಾಭಿಮಾನದ ಕಟ್ಟಡವು ನಿಲ್ಲಲಿಕ್ಕೆ ಬೇಕು. ಇಲ್ಲದಿದ್ದರೆ ಸ್ವಾಭಿಮಾನವು ಚಿರಸ್ಥಾಯಿಯಾಗುವದು ಕಷ್ಟ;

ಈ ರೀತಿಯಾಗಿ ನಮ್ಮ ಕನ್ನಡನಾಡಿನ ಸಂಬಂಧಿಯು ಜ್ಞಾನವನ್ನು ಬೆಳಸಿ ಮೋಹವನ್ನು ತ್ಯಜಿಸಿ ಪಕ್ಷಭೇದವನ್ನು ಮಾಡಿಕೊಂಡು ರಾಷ್ಟ್ರಕಾರ್ಯವನು ಮಾಡಿದರೆ ನಮ್ಮ ಸಂಸ್ಥೆಗಳಾದ ಸಾಹಿತ್ಯ ಸಮ್ಮೇಲನವು ಕರ್ನಾಟಕ ಸಭಾ [illegible] ಕಮೀಟಿ ಸುಂದರ ಸ್ವರೂಪವನ್ನು ಹೊಂದುತ್ತದೆ. ಮತ್ತೂ ಅವುಗಳ ಮುಖಾಂತರ ಕರ್ನಾಟಕದ ಎಲ್ಲ ಭಾಗಗಳು ಒಂದಾಗುತ್ತವೆ ಮತ್ತೂ ಈಗ(ಸ್ವರಾಜ್ಯವಿಲ್ಲದಾಗ) ಎಲ್ಲ ಕರ್ನಾಟಕಕ್ಕೂ ಸಿಕ್ಕಿರುವ ಕಾಂಗ್ರೆಸ ಸರ್ಕಲ್ ಎದಲು ಸ್ವರಾಜ್ಯ ಬಂದಮೇಲೆ ಕರ್ನಾಟಕ ಪ್ರಾಂತಿಕಬಾರ್ಡ ಮೆಂಟು ನಮಗೆ ಸಿಕ್ಕಿ ಸ್ವತಂತ್ರವಾದ ಪ್ರಾವಿನ್ಸಪರರಾಷ್ಟ್ರ ಸಹ ದೇವರ ಅನುಗ್ರಹದಿಂದ ಸಿಗುವದೆಂಬದರಲ್ಲಿ ಸಂದೇಹವಿಲ್ಲ.

"ಜಯ ಜಯ ಕರ್ನಾಟಕ"

ರಾಘವೇಂದ್ರರಾವ ಕಡವಾ ಧಾರವಾಡ.

---

# ಮಹಾತ್ಮರ ಅವತಾರ ಕೃತ್ಯ

**"ಮಹಾತ್ಮ ಗಾಂಧಿಯವರು ಯೇಸುಕ್ರಿಸ್ತರಂತೆಯೇ ಜಗದ್ರಕ್ಷಣೆಯ ಜೀವನಾಮೃತವನ್ನು ತಂದಿದ್ದಾರೆ"**

**ಡಿ. ಹೋಮ್ಸ**

ಮಹಾತ್ಮ ಮೋಹನದಾಸ ಗಾಂಧಿಯವರಿಗೆ ಇಂದಿಗೆ ೫೩ ವರ್ಷಗಳು ತುಂಬಿದವು. ಇದು ೫೪ ನೆಯ ವರ್ಷ ವರ್ಧಂತಿಯ ದಿವಸವು. ಈ ಪುಣ್ಯ ದಿನದಲ್ಲಿ ಆ ಮಹಾತ್ಮರ ಅವತಾರಕೃತ್ಯವನ್ನು ಕುರಿತು ಯೋಚಿಸಿ ನಾವು ನಮ್ಮ ಕರ್ತವ್ಯವನ್ನು ತಿಳಕೊಳ್ಳುವ ಅವಶ್ಯಕತೆಯು ಮಹಾ ಪಂಡಿತರಾದ ಹೋಮ್ಸ ಎಂಬ ಕ್ರಿಸ್ತಧರ್ಮಾಧಿಕಾರಿಗಳು ಮೇಲಿನ ಒಂದೇ ವಾಕ್ಯದಲ್ಲಿ ಮಹಾತ್ಮರ ಅವತಾರ ಕೃತ್ಯವನ್ನು ಸೂಚಿಸಿದ್ದಾರೆ

ಈಗ ಜಗತ್ತಿನಲ್ಲಿ ಅಸತ್ಯ ಮತ್ತು ಹಿಂಸೆಗಳು ಪ್ರಬಲವಾಗಿ ಮಾನವ ಜಾತಿಯು ನಾನಾ ರೀತಿಗಳಿಂದ ಬಳಲುತ್ತಲಿದೆ ಪಾಶ್ಚಾತ್ಯ ಪಾಶವೀ ಸಂಸ್ಕೃತಿಯು ಜಗತ್ತಿನಲ್ಲಿ ಮಹತ್ತರವಾದ ಅಶಾಂತತೆಯನ್ನುಂಟು ಮಾಡಿ ಜನಾಂಗಗಳನ್ನು ಘೋರ ವಿಪತ್ತಿಗೀಡುಮಾಡಿದೆ. ಪ್ರಪಂಚವು ಈ ಭಯಂಕರವಾದ ದುಃಖವನ್ನು ತಾಳಲಾರದೆ ಸುಖಶಾಂತಿಗಳನ್ನೇ ಹಾರೈಸುತ್ತಲಿದೆ. ಜಗತ್ತಿನ ಈ ಅಪೇಕ್ಷೆಯನ್ನು ಪೂರೈಸುವದೇ ಮಹಾತ್ಮರ ಅವತಾರ ಕೃತ್ಯವು. ಈ ಮಹತ್ಕಾರ್ಯವನ್ನು ಆತ್ಮಶಕ್ತಿಗೆ ಮಾತ್ರಸ್ಥಾನವು [illegible] ನಮ್ಮ ಮ[illegible] ತಪಿಂಚದ ಮೂಲಕವಾಗಿಯೇ ಕೊನೆಗಾಣಿಸಲು ಶ್ರಮಿಸಿ

ಈ ಶಾಂತಿಸಾಮ್ರಾಜ್ಯವನ್ನು ಸ್ಥಾಪಿಸಲು ಸತ್ಯ, ಅಹಿಂಸೆ ಬ್ರಹ್ಮಚರ್ಯ, ನಾಶಾತ್ಕಾರ, ಅಸ್ತೇಯ, ಅಪರಿಗ್ರಹ, ಸ್ವದೇಶಿ, ನಿಭಯ ಮತ್ತು ಸ್ಪರ್ಶ ಎಂಬೀ ಸತ್ಯಾಗ್ರಹದ ನವವ್ರತಗಳೇ ರಸಾಯನಗಳು! ಇವೇ ಮಹಾತ್ಮರು ತಂದಿರುವ ಜಗದ್ರಕ್ಷಣೆಯ ಜೀವನಾಮೃತದ ನವಧಾರೆಗಳು! ಇವುಗಳ ಸೇವನೆಯಿಂದಲೇ ಆತ್ಮಜ್ಯೋತಿಯು ಪ್ರದೀಪ್ತಗೊಂಡು ಪಾಶವೀ ಅಂಧಕಾರವು ನಿವಾರಣೆಯಾಗುವುದು ಯಾವ ವ್ಯಕ್ತಿಯಲ್ಲಿ ಅಥವಾ ಯಾವ ಕುಟುಂಬದಲ್ಲಿ ಅಥವಾ ಯಾವ ದೇಶದಲ್ಲಿ ಸತ್ಯಾಗ್ರಹದ ಈ ನವವ್ರತಗಳು ಆಚರಿಸಲ್ಪಡುತ್ತವೆಯೋ ಅಲ್ಲಿ ಸುಖ ಶಾಂತಿಗಳು ನೆಲೆಸುತ್ತವೆ. ಇಷ್ಟಸಿದ್ಧಿಗೆ ಇವೇ ಶ್ರೇಷ್ಠತರವಾದ ಸಾಧನಗಳಾಗಿವೆ.

ಮಹಾತ್ಮರು ಈವರೆಗೂ ದೇಶದೇಶಗಳನ್ನು ಸಂಚರಿಸಿ ಜಗದೋದ್ಧಾರದ ತಮ್ಮ ಪವಿತ್ರಕಾರ್ಯವನ್ನು ಎಷ್ಟು ಮಾಡಿದರೋ ಅದಕ್ಕಿಂತಲೂ ಹೆಚ್ಚಾಗಿ ಈಗ ಚಿಕ್ಕದಾದ ಒಂದು ಕೋಣೆಯಲ್ಲಿ ಕುಳಿತು ಕೈಯಲ್ಲಿ ರಾಟೆಯನ್ನು ಹಿಡಿದುಕೊಂಡು ಮಾಡುತ್ತಿದ್ದಾರೆ. ಸಾಧುವರ್ಯ ಯೇಸುಕ್ರಿಸ್ತನು ಶೂಲವನ್ನೇರಿ ತನ್ನ ಆತ್ಮಪ್ರಭೆಯನ್ನು ತೋರಿಸಿದಂತೆಯೇ ಮಹಾತ್ಮನು ಕಾರಾಗೃಹವನ್ನು ಸೇರಿ ರಾಟೆಯನ್ನು ತಿರುವುತ್ತ ತನ್ನ ಅವತಾರ ಕೃತ್ಯದ ರಹಸ್ಯವನ್ನು ಜಗತ್ತಿಗೆ ತೋರಿಸುತ್ತಿದ್ದಾನೆ ಅದುದರಿಂದ ಭಾಗ್ಯಹೀನರೇ ಎಚ್ಚರಾಗಿರಿ. ದುಃಖಿಗಳೇ ಕಿವಿಗೊಡಿರಿ. ರಾಟೆಯ ದಿವ್ಯ ಪ್ರಭೆಯನ್ನು ನೋಡಿ ಅದರ ಮಂಜುಳ ಸ್ವರವನ್ನು ಕೇಳಿ ತದೇಕಧ್ಯಾನದಲ್ಲಿ ಮಗ್ನರಾಗಿರಿ!

ಸತ್ಯದ ಜಯವೇ ಮಹಾತ್ಮರ ಜಯವು ಮಹಾತ್ಮರ ಜಯವೇ ಸತ್ಯದ ಜಯವು. ಖಾದಿಯೇ ಮಹಾತ್ಮರ ಜಯ ಪತಾಕೆಯು. ಖಾದಿಯೇ ಸತ್ಯಯುಗದ ನಿಶಾನೆಯು. ಖಾದಿಯಲ್ಲಿಯೇ ಸುಖಶಾಂತಿಗಳು ವಾಸವಾಗಿವೆ. ಆದುದರಿಂದ ನಾವೆಲ್ಲರೂ ಇನ್ನು ಮೇಲೆ ಖಾದಿಯನ್ನೇ ಉಪಯೋಗಿಸಿ ಮಹಾತ್ಮರ ಅವತಾರ ಕೃತ್ಯವನ್ನು ಕೊನೆಗಾಣಿಸುವ ಪುಣ್ಯಕ್ಕೆ ಭಾಗಿಗಳಾಗೋಣ.

ಜಯ ಖಾದಿ ಮಾತಾಕಿ ಜಯ!

**ಎಂ. ಮಂಜಪ್ಪ ಹರ್ಡೇಕರ**

---

# ವಿಜ್ಞಾಪನೆ.

ಈ ಜಯಂತಿ ಸಂಚಿಕೆಯು ಈಹೊತ್ತೇ ಹೊರಡಬೇಕಾಗಿದ್ದರಿಂದಲೂ ಲೇಖವು ತಡವಾಗಿ ಸ್ವೀಕರಿಸಲ್ಲಿದ್ದರಿಂದ ಮುದ್ರಿಸಲು ಅವಕಾಶ ವಿಲ್ಲದ್ದರಿಂದಲೂ, ಡಾ. ಪಟ್ಟಾಭಿ ಸೀತಾರಾಮಯ್ಯಾ ಮಾಸಲೀಪಟ್ಟಣ ಇವರ ಲೇಖವು ಹಾಗೆಯೇ ಉಳಿದಿದೆ. ಇದನ್ನು ನಮ್ಮ ವಾರಪತ್ರಿಕೆಯಲ್ಲಿ ಪ್ರಸಿದ್ಧಿಸುವೆವು.

ಮುದ್ರಿಸಲು ಬಹಳೇ ಅವಸರ ವಾದ್ದರಿಂದ ಅಲ್ಲಲ್ಲಿ ಮುದ್ರಣ ದೋಷಗಳು ಉಂಟಾಗಿವೆ, ವಾಚಕರು ಕ್ಷಮಿಸಬೇಕಾಗಿ ವಿನಂತಿ ಮಾಡೆ

ವ್ಯವಸ್ಥಾಪಕ.

# ಮಹಾತ್ಮರು ಮಾಡಿದ ಆರ್ಯಸಂಸ್ಕೃತಿಯ ಪುನರುಜ್ಜೀವನವು.

( ಲೇಖಕ:— ಶಂಕರ ಬಾಳದೀಕ್ಷಿತ ಜೋಶಿ. )

"I do not know, speaking historically a single great conquest of the human spirit, a single important step for the perfecting of human society, which has not had its roots in strong religion faith......" "Politics are the application, religion gives the principle."

Mazzini.

"ಸ್ವದೇಶೀ ಚಳವಳಿ ಸ್ವದೇಶಾಭಿಮಾನ ಮುಂತಾದ ಪ್ರಸಾರಗಳನ್ನು ಮಹಾತ್ಮ ಗಾಂಧಿಯವರಷ್ಟು ಯಾರೂ ಮಾಡಲಿಲ್ಲ. ಆದರೆ ವ್ಯಾಂಚೆಸ್ಟರದ ಮಲಮಲ ಸ್ತ್ರೀಯರು ಮೈಗೆ ಸುತ್ತುವದೆಂಬ ಇಷ್ಟದ ಮುರಕ ಮಾಡುತ್ತಿದ್ದ ಪುರುಷರ ಕಿವಿಯ ಗದ್ದೀ ಕೆತ್ತಿ ಕೈಯಲ್ಲಿ ಕೊಟ್ಟರು." ಎಂದು ಒಬ್ಬ ಸರಕಾರಿ ನವರತ್ನರು ಮುನ್ಸಾದಂಥ ಆದರೂ ಹಳೇ ನಡತೆನಡವಳಿಕೆಗಳ ಒಳ್ಳೇ ಅಭಿಮಾನವುಳ್ಳ ಸೆಸರನ ದಾರನು ಹಣಿಗೆ ಕನ್ನಡಕ ( ಚಾಳೀಸು ) ಏರಿಸಿ ಒಮ್ಮೆ ನನ್ನೊಡನೆ ಒಲಿತಾಗಿ ವಾದಿಸಿದನು. ಆತನೊಡನೆ ಈ ಪ್ರಕಾರ ಚರ್ಚಿಸುವದರೊಳಗಿನ ನನ್ನ ಮುಖ್ಯ ಮಾತು ಇಷ್ಟೇ ಇತ್ತು; ಮಹಾತ್ಮಾಜಿಯವರು ಖಾದೀ ಪ್ರಸಾರಮಾಡಿದ್ದು ನಿಜ. ದೇಶಾಭಿಮಾನದ ಸುಂಕರೋಗವನ್ನು ಹಳ್ಳಿ ಹಳ್ಳಿಗಳಲ್ಲಿಯೂ ಏಕೆ ಸಂಚಾರವು ಸುತ್ತಲೂ ಕಾಯಿದೆಯಿಂದ ಬೇಡಿ ಹಾಕಿ ಅಲ್ಲಿ ಹೊರಗಿನ ಚಳವಳಿಯ ಗಾಳಿಯೂ ತಗಲದಂತೆ ಮಾಡಿದ ಉಪ್ಪರ ಸ್ತ್ರೀ(ಸಹ್ಯಾ)ದ್ರಿಗಳಲ್ಲಿ ಸಹ ಹಚ್ಚಿಸಿದ್ದು ನಿಜ. ರಾಟಿಯನ್ನು ತಿರುಗಿಸಲಿಕ್ಕೆ ಹಚ್ಚಿದ್ದ ಪಂಡಿತರು ಸ್ತ್ರೀಗಳನ್ನು ತಿರುಪ ಹಚ್ಚಿದ್ದು ನಿಜ. ಆದರೆ ಇವುಗಳೇನೂ ಅವರ ಮಹತ್ಕಾರ್ಯಗಳಲ್ಲ. ರಾಜಕಾರಣವೂ ತದಂತರ್ಗತ ಕೆಲವು ಸಾಧನಗಳೂ ಅವರ ಧ್ಯೇಯ ಸಾಧನೆಯ ಉಪಾಯಗಳು. ಉಪಾಯಗಳಿಂದ— ಸಾಧನಗಳಿಂದ ಸಾಧ್ಯವು ಬೇರೆಯಿರುತ್ತದೆ. ಆದುದರಿಂದ ಮಹಾತ್ಮರ ಮಹತ್ಕಾರ್ಯವು ಖಾದೀ ಪ್ರಸಾರ ಮುಂತಾದವುಗಳಲ್ಲಿವೆ ನಮ್ಮ ಸಂಸ್ಕೃತಿಯ ಪುನರುಜ್ಜೀವನೆಯಲ್ಲಿದೆ.

ಬಾಗಾದರೆ ಮಹಾತ್ಮರಿಂದಾದ ಆ ಪುನರುದ್ಧಾರದ ಪ್ರಯತ್ನಯಿಂದ ಹಿಂದೂ ಸಂಸ್ಕೃತಿಗೆ ಚಾಲನೆಯು ಹೇಗೆ ಸಿಕ್ಕಿತೆಂಬದನ್ನು ಸ್ವಲ್ಪದರಲ್ಲಿ ನೋಡುವದವಶ್ಯಕವಿದೆ. ಪರದೇಶದ ವಾಳಿಗರ ಸತತ ಆಘಾತಗಳಿಂದ ಭಾರತೀಯರ ಪಾರತಂತ್ರ್ಯ ಪಂಕದಲ್ಲಿ ಸಿಲುಕಿಕೊಳ್ಳಲು ಅವರ ಅವನತಿಗೆ ಆರಂಭವಾಯಿತು. ಆ ಕಾಲದಿಂದ ಜನರಲ್ಲಿ 'ಸ್ವ' ಅಭಿಮಾನವು ಅಳಿದುಹೋಗಿ ಪರರ ಅನುಕರಣದಲ್ಲಿಯೇ ಅವರು ಆನಂದ ಬಡಹತ್ತಿದರು. ಈ ದುರವಸ್ಥೆಯು ಇಂಗ್ಲೀಷರ ಆಳಿಕೆಯಲ್ಲಂತೂ ಅಳತೆಗೆಟ್ಟು ಏರಿತು. ಗತ ಶತಮಾನದ ಕೊನೆಯ ಭಾಗವು ಹಿಂದುಸ್ಥಾನದ ಇತಿಹಾಸದಲ್ಲಿಯೇ ಬಹು ಆನಿಷ್ಟ ಕಾಲವು. ಯಾಕೆಂದರೆ ಈ ಅವಧಿಯಲ್ಲಿ ಎಲ್ಲ ಪ್ರಾಂತಗಳೂ ಪಾಶ್ಚಿಮಾತ್ಯ ಸಂಸ್ಕೃತಿಯ ಮೋಹದೊಳಗೇ ಇದ್ದವು. ಆಗಿನ ಕಾಂಗ್ರೆಸ್ಸಿಗೆ ಕೂಡಿದ ಪ್ರತಿನಿಧಿಗಳ ಚಿತ್ರವನ್ನು ನೋಡಿದರೆ ಈ ಮಾತು ಮನವರಿಕೆಯಾಗಬಹುದು. ಕಾಂಗ್ರೆಸ್ಸಿನ ಪ್ರತಿನಿಧಿಗಳೆಂದರೆ ಹಿಂದುಸ್ಥಾನದ ಆದರ್ಶಭೂತ ಜನರು. ಆಗಿನ ಜನರಲ್ಲಿ ಆರ್ಯಸಂಸ್ಕೃತಿಯ ರಹಸ್ಯವನ್ನರಿತು ಕಾರ್ಯಮಾಡುವವರೂ, ಆರ್ಯ ಸಂಸ್ಕೃತಿಯ ತತ್ವಗಳನ್ನು ಮೇಲೆಯೇ ಹಿಂದೂದೇಶದ ಭಾವೀ ಸಂಸಾರದ ಮಂದಿರವನ್ನು ಕಟ್ಟಬೇಕೆಂಬ ಕಲ್ಪನೆಯುಳ್ಳವರೂ ಬಹುದಿ ಇದ್ದಿಲ್ಲವೆಂದರೆ ಸಲ್ಲುವದು. ಪ್ರತಿಯೊಂದು ಮಾತಿನಲ್ಲಿಯೂ ಪಾಶ್ಚಾತ್ಯರ ಅನುಕರಣವು. ರಾಜಕಾರಣಕ್ಕೂ ಧರ್ಮಕ್ಕೂ ಸಂಬಂಧವೇ ಇಲ್ಲವೆಂದು ಅವರ ಕಲ್ಪನೆ. ರಾಜಕಾರಣವೆಂದರೆ ಮೋಸಗಾರಿಕೆ. ದಕ್ಷಿಣ ಹಾರ ಮ್ಯಾಕೆವೆಲಿಯ ( ಚಾಣಿಕ್ಯ ನೀತಿ ) ಎಂಬ ಕಲ್ಪನೆ. ಐಹಿಕ ಸೌಖ್ಯವೇ ಅತ್ಯಂತಿಕ ಸಾಧನವೆಂದೂ, ದುಡ್ಡುಳ್ಳವನೇ ದೊಡ್ಡವನೆಂದೂ ಆಗಿನ ಭಾವನೆ. ವ್ಯವಹಾರದಲ್ಲಿ ಶ್ರೀಮಂತನಾಗಲಿಕ್ಕೆ ಧರ್ಮನೀತಿಗಳ ಕಲ್ಪನೆಗಳು ಅಡ್ಡ ಬರುತ್ತಿದ್ದರೆ ಅವನ್ನು ಲೆಕ್ಕಿಸಕೂಡದೆಂದೂ ಆಗಿನ ಸುಶಿಕ್ಷಿತ ಜನರ ತಿಳುವಳಿಕೆ. ಆದುದರಿಂದಲೇ ವಕೀಲಿ, ದಕ್ಕ ವ್ಯಾಪಾರ, ದೇಶವಿಘಾತಕಗಳಾದ ಸರಕಾರಿ ನೌಕರಿಗಳನ್ನೂ, ಇನ್ನೂ ಕೆಲವು ತರದ ನಿಂದ್ಯ ( ಶೆರೆ, ಅಫುಗಳ ವ್ಯಾಪಾರದಿಂದ ದುಡ್ಡು ದೊರಕಿಸುವ ) ಕರ್ಮಗಳನ್ನೂ ಮಾಡಿ ಹಲವರು ಶ್ರೀಮಂತರಾದರು. ಹಿಂದಿನ ಕಾಲದ ಹಿರಿಯರ ಹುಚ್ಚು ನೈತಿಕ ಕಲ್ಪನೆಗಳ ಪ್ರಭಾವಕ್ಕೆ ಬಿದ್ದು ಎಷ್ಟೋ ಕುಲೀನ ( ಆಗಿನ ಕಲ್ಪನೆಯಂತೆ ) ಮನೆತನಗಳು ಹೊಟ್ಟೆಗಿಲ್ಲದೆ ಬಳಲುತ್ತಿದವು. ಧನಿಕನೇ ಕುಲೀನನೆಂಬುದು ಜನರಲ್ಲಿ ರೂಢವಾದ ಬಳಿಕ ಎಲ್ಲರೂ ಏನಕೇನ ಪ್ರಕಾರೇಣ ದುಡ್ಡು ದೊರಕಿಸುವ ಮೋಹಕ್ಕೆ ಬಿದ್ದು ಇದರಿಂದ ಸಮಾಜದಲ್ಲಿ ನೈತಿಕ ಅವನತಿಯಾಯಿತು. ಧರ್ಮದ ಜೀವವು ಹಾರಿಹೋಗಿ ದೇಹರೂಪಿಗಳಾದ ಬಾಹ್ಯ ಆಚಾರಗಳು ಡಂಭಾಚಾರಗಳಾಗಿ ಉಳಿದವು. ಸುಳ್ಳು ಸಾಕ್ಷಿ ಹೇಳಿ ಬಡವ ಕಾರದ ಗೋಣು ಮುರಿದು, ೧೦೦ ರೂ. ಕೊಟ್ಟು ೧೦೦೦೦ ರೂ. ಗಳ ಕತಿಬ ಬರಿಸಿಕೊಂಡು ಲಂಚಗಳ ಅಧಿಕಾರಿಯಾಗಿ, ಮುದ್ದೇ ಮಾಲು ಸಿಗದಂತೆ ಕನ್ನ ಹಾಕಿಸಿ ಹಂಚಿ ಶ್ರೀಮಂತರಾಗುವದೊಂದೇ ಹಾದಿ. ಇಂತು ದುಡ್ಡು ದೊರಕಿಸಿದ ಬಳಿಕ ಸೂಳೆ ಮುಪ್ಪಾಗಿ ಜೋಗತಿಯಾದಳೆಂಬಂತೆ ಆ ಮೇಲೆ ದಾನ ಧರ್ಮ, ತೀರ್ಥಯಾತ್ರೆ ಗುಡಿಗುಂಡಾರಗಳನ್ನು ಕಟ್ಟಿಸಲಿಕ್ಕೆ ಆರಂಭ. ಈಗ ಸಮಾಜದಲ್ಲಿ ಶ್ರೀಮಂತರೆಂದು ಮೆರೆಯುವವರ ಬಹಳಷ್ಟು ಮನೆತನಗಳು ಹೀಗೆ ಹೀನ ತರದಿಂದ ಕಟ್ಟಿರುತ್ತವೆ.

ಈ ಪ್ರಕಾರ ದುಡ್ಡಿದ್ದವನು ಕುಲೀನನೂ, ಸದ್ಗುಣಿಯೂ ಎಂದು ಎಣಿಸಲ್ಪಡಹತ್ತುತ್ತಲೇ ಜನರಲ್ಲಿ ನಿಜವಾದ ಸದ್ಗುಣಗಳಿಂದ ಸದ್ಗುಣಿಯೆನಿಸಿಕೊಳ್ಳುವ ಮಹತ್ವಾಕಾಂಕ್ಷೆಯು ಅಳಿಯಿತು. ಕೃತ್ರಿಮ ಸಾಧನಗಳಿಂದ ಸುಸಂಸ್ಕೃತನೆನಿಸಿಕೊಳ್ಳುವ ಪ್ರಕಾರವು ಬಂದಿತು. ಬೂಟು ಪ್ಯಾಂಟು ಕೋಟು ಹ್ಯಾಟುಗಳೇ ಸಭ್ಯತನದ ಲಕ್ಷಣಗಳಾದವು. ಆರ್ಯ ಋಷಿಗಳ ಪ್ರಾಚೀನ ಆದರ್ಶವು ಕಣ್ಣಿನಿಂದ ಮರೆಯಾಯಿತು. ಆದರೆ ಭಾರತೀಯರ ಪೂರ್ವಪುಣ್ಯದಿಂದ ಮಹಾತ್ಮಾ ಗಾಂಧಿಯವರ ಅವತಾರವಾಗಿ ತಮ್ಮ ಹಾದಿ ತಪ್ಪಿದ ಹಿಂದುಸ್ಥಾನವನ್ನು ತಮ್ಮ ಅಮೋಘ ತಪಃಪ್ರಭಾವದಿಂದ ಸರಿಯಾದ ಮಾರ್ಗಕ್ಕೆ ಹಚ್ಚಿದರು.

ಆರ್ಯ ಸಂಸ್ಕೃತಿಯ ಅಭಿಮಾನವು ಜಾಗೃತವಾಯಿತು. ಪಾಶ್ಚಾತ್ಯ ಡಂಬರದ ಎಬ್ಬಿ ಹಾರಿ ಹೋಯಿತು. ಪಾಶ್ಚಿಮಾತ್ಯರ ಹೊರವಿಂಚಿಗೆ ಮರುಳಾದರೆ ತಮ್ಮ ಕಲ್ಯಾಣ ಎಂದಿಗೂ ಆಗಲರಿಯದೆಂದು ಮನವರಿಕೆಯಾಯಿತು. ಆರ್ಯ ಋಷಿಗಳಂತೆ ಲೋಕಸೇವಕನು ಸಂನ್ಯಾಸಿ ವೃತ್ತಿಯ ತಪಸ್ವಿಯಿರಬೇಕೆಂದು ಎಲ್ಲರೂ ಅರಿತರು. 'ಅಂಧೇನೈವ ನೀಯಮಾನಾ ಯಥಾಂಧಾಃ' ಕುರುಡನು ಕುರುಡನಿಗೇನು ದಾರಿ ತೋರಿಸಬಲ್ಲನು? ಭಗವದ್ಗೀತೆಯಲ್ಲಿ ಹೇಳಿದ

ಅಭಯಂ ಸತ್ವಸಂಶುದ್ಧಿರ್ಜ್ಞಾನಯೋಗವ್ಯವಸ್ಥಿತಿಃ ।
ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್ ॥
ಅಹಿಂಸಾ ಸತ್ಯಮಕ್ರೋಧಸ್ತ್ಯಾಗಃ ಶಾಂತಿರಪೈಶುನಂ ।

ಇತ್ಯಾದಿ ದೈವೀ ಗುಣಗಳಿಗೆ ಜನರು ಮೆಚ್ಚತೊಡಗಿರುವರು. ಹೀಗೆ ಆರ್ಯಸಂಸ್ಕೃತಿಯ ಹಾದಿಗೆ ಹಿಂದುಸ್ಥಾನದ ಪ್ರಗತಿಯ ಪ್ರವಾಹವನ್ನು ತಿರುವಿದ್ದೇ ಮಹಾತ್ಮರ ಮಹತ್ಕಾರ್ಯವಾಗಿದೆ. ಮ. ಗಾಂಧಿಯವರು ಮಾಡಿದ ಹಿಂದೂ ಸಂಸ್ಕೃತಿಯ ಪುನರುಜ್ಜೀವನವೇ ಇದು.

# SONDUR & JORAPUR

## Ginning Factory Bagalkot.

Dealers in second-hand Oil-engines, Oil-engine repairers Grinding stones suppliers and General Contractors

ಬೇರೆಬೇರೆ ತರದ ಸೆಕಂಡಹ್ಯಾಂಡ ಆಯಿಲ ಎಂಜಿನಗಳನ್ನು ನಾವು ದೊರಕಿಸಿ ಕೊಡುತ್ತೇವೆ ಮತ್ತು ಆಯಿಲ ಇಂಜಿನಗಳನ್ನು ಸೊಲ್ಪದರದಿಂದ ದುರಸ್ತ ಮಾಡಿ ಕೊಡುತ್ತೇವೆ. ಇದಲ್ಲದೇ ಹಿಟ್ಟಿನ ಗಿರಣಿಗಳಿಗೆ ಬೇಕಾಗುವ ಬೀಸುವ ಕಲ್ಲುಗಳನ್ನೂ ನಾವು ಪೂರೈಸಿ ಕೊಡುವೆವು.

ಸೊಂಡೂರ ಮತ್ತು ಜೋರಾಪೂರ

ಜಿನಿಂಗ ಫ್ಯಾಕ್ಟರಿ ಬಾಗಲಕೋಟೆ.



# ROYAL DRINK.

**Sovereign Tea!** **Sovereign Tea**

ಲಿಪ್ಟನ್ ಚಹಾಗಿಂತ ಈ ಸಾವ್ಹರೀನ ಚಹವು ಹೆಚ್ಚು ರುಚಿಯಾಗಿರುತ್ತದೆ; ಒಮ್ಮೆ ಇದರ ಅನುಭವ ತಗೆದು ಕೊಳ್ಳಿರಿ. ಇದರ ನಿಮಗೆ ಬೇರೆ ಚಹವು ಬೇಡವೆಂದೇ ಖಾತ್ರಿಯಾಗುವದು.

ಲೆಡ್-ಲೆಗ ಪೌಂಡಿಗೆ ೧-೫-೦ ರುಪಾಯಿ ೧೪ ತಕ್ಷ್ಯಯ ... ಕೊಡಿರಿ ... 

**ಗೋಪಾಲರಾವ ಹರಿ ಬೀ ... ನೋ ...**

ಪೋಲೀಸ ಚಾವಡಿ ಎದುರಿಗೆ ಬಾಗಲಕೋಟೆ



# ಮಾಕಾರ್ಪುರ ಸ್ವದೇಶೀ ಪಾಟಿಗಳೂ ಟಾಕಿನ ತುದಿಗಳೂ

ನಾವು ಕೃಪಾ ಸ್ಲೇಟ ವರ್ಕ್ಸ ಮಾರ್ಕಾಪುರ ಇವರಿಂದ ಇಡೀ ವಿಜಾಪೂರ ಜಿಲ್ಲೆಗೆ ಮುಖ್ಯಏಜಂಟರಾಗಿ ನಿಯಮಿಸಲ್ಪಟ್ಟಿದ್ದೇವೆ ನಮ್ಮ ಹತ್ತರ ಉತ್ತಮ ತರದ ಸಣ್ಣ ದೊಡ್ಡ ಪಾಟಿಗಳು ಶಾಲೆಯಲ್ಲಿ ವಿದೇಶೀ ಪಾಟಿಗಳಿಗಿಂತಲೂ ಹಗುರ ... ಅಗದೀ ಸೋಯಿ ದರದಿಂದ ದೊರೆಯುವವು ಒಮ್ಮೆ ಅನುಭವ ತೆಗೆದು ಕೊಂಡಲ್ಲಿ ನಿಮಗೆ ಖಾತ್ರಿಯಾಗುವದು ೪೮ ಪಾಟಿಗಳುಳ್ಳ ಒಂದು ಪೆಟ್ಟಿಗೆಗೆ ೧೩-೮ ರೂಪಾಯಿಮಾತ್ರ ಏಜಂಟರು ಬೇಕಾಗಿದೆ

ವ್ಹಿ ಜೇ ಪರವತೀಕರ

ಸೋಲ ಏಜಂಟ ಡಿಸ್ಟ್ರಿಕ್ಟ ವಿಜಾಪೂರ

ಬಾಗಲಕೋಟೆ.



# ಶುದ್ಧ ಸ್ವದೇಶೀ!! ಶುದ್ಧ ಸ್ವದೇಶ !!

ಶುದ್ಧ ಸ್ವದೇಶೀ ವಸ್ತುಗಳನ್ನು ಸುಲಭವಾದ ಕ್ರಯಕ್ಕೆ ತೆಗೆದುಕೊಳ್ಳುವ ಅಪೇಕ್ಷೆಯು ಇದ್ದಲ್ಲಿ ನಮ್ಮಲ್ಲಿಯೇ ತೆಗೆದು ಕೊಳ್ಳಿರಿ. ಸ್ವದೇಶೀ ಎಂಬ ಹೆಸರಿಟ್ಟುಕೊಂಡ ಅನೇಕ ಕಂಪನಿಗಳಲ್ಲಿ ಹೋಗಿ ಮೋಸ ಹೋಗಬೇಡಿರಿ. ನಮ್ಮಲ್ಲಿ ಎಲ್ಲ ತರದ ಸ್ವದೇಶೀ ... ನಾಗಳೂ ... ಉಡವೆಗಳೂ, ಸುದರ್ಶನ ಚಕ್ರದಿಂದ ತೆಗೆದ ನೂಲಿನ ಬಟ್ಟೆಗಳೂ ಎಲ್ಲ ದೇಶ ಭಕ್ತರ ಭಾವಪಟಗಳೂ ದೊರೆಯುತ್ತವೆ ಇದಲ್ಲದೆ ಕನ್ನಡ, ಮರಾಠಿ, ಇಂಗ್ಲೀಷ, ಭಾಷೆಗಳಲ್ಲಿಯ ... ಮತ್ತು ... ಸಿಗುತ್ತವೆ

ಮಾಲಕ, ಶ್ರೀನಿವಾಸರಾವ ನೀರಲಗೀ } ಕೆ.ಶಿ.ನಿ. ಸ್ವದೇಶೀ ಸ್ಟೋರ್ಸ ಬಾಗಲಕೋಟೆ



ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

# ಏಜಂಟರು) ಅತ್ಯುತ್ತಮ (ಬೇಕು

ಮಸಿಗ ... ಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೮—೦ | ಟ. ಖ. |
| ೧೦೦ ಚೀಟಿಗಳಿಗೆ | ೦—೧೪—೦ | |
| ೪೦ ಔಂಸ ಮಸಿ ಬುಡ್ಡಿಗೆ | ೦—೪—೦ | ಬೇರೆ. |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

**ವಿಳಾಸ:— ಕರ್ನಾಟಕ ಇಂಕ ಕಂಪನಿ, ಬಾಗಲಕೋಟೆ.**



# ಸುವರ್ಣ ರಾಜವಂಗೇಶ್ವರ

**ಅಸ್ಸಲ** ... ರೂ.೪ ಪತೊ ... ರೂ ... ನಮೂನಾ ...

ಸಾ. ... ಜಹಾಗೀರದಾರ

ರಾಷ್ಟ್ರೀಯ ...

**ಧಾರವಾಡ.**



ಇಂಡಿಯಾ ಪ್ರಾವ್ಹಿಡೆಂಟ ಕಂ. ಲಿ. ಕಲಕತ್ತಾ.

ಮುಪ್ಪಿನ ಸ್ಥಿತಿಯು ಕಠಿಣವಾದಾಗ ಈ ... ದಿನ ಕಾಲದಲಿ ಕುಟುಂಬ ಸಂಸಾರಕ್ಕೂ ಹಣ ಕೂಡಿಸುವದು ಬಿಗಿಯಾಗಿರುವದು ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನು ತುಂಬುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರೆಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ

V. J. PARVATIKER

General Agent, BAGALKOT


# ಖಾದಿ ಪ್ರದರ್ಶನ

ಬೇಗನೆ ನೆರೆಯಲಿಕ್ಕಿರುವ ರಾಣೇಬೆನ್ನೂರ ಪರಿಷತ್ತಿನಲ್ಲಿ ಖಾದೀಪ್ರದರ್ಶನ ಮಾಡುವ ಏರ್ಪಾಡಾಗಿದೆ, ಕಾರಣ ಮನಃಪೂರ್ವಕ ಶುದ್ಧ ಖಾದೀ ತಯಾರ ಮಾಡಿಸುವ ಮಹಾಶಯರಿಗೆ ವಿನಂತಿ ಮಾಡಿಕೊಳ್ಳುವದೇನೆಂದರೆ… ನಿಮ್ಮ ನಿಮ್ಮಲ್ಲಿ ತಯಾರಾದ ಖಾದೀ ಅರಿವೆಯ, ಹ, ರೇಸಿಮೆ ನೂಲಿನ ಮಾದರಿಯನ್ನು ನಮ್ಮ ಕಡೆಗೆ ಬೇಗ ಕಳಿಸಿಕೊಡಿರಿ. ಪರಿಷತ್ತಿನ ನಂತರ ನಿಮ್ಮ ಖಾದಿ ಹ, ನೂಲಿನ ಮಾದರಿಯನ್ನು ನಿಮ್ಮ ಕಡೆಗೆ ಕಳಿಸಿ ಕೊಡುವೆವು ಅವುಗಳನ್ನು ... ಹ, ಕಳಿಸಲಿಕ್ಕೆ ಹತ್ತುವ ಖರ್ಚನ್ನು ನಾವೇ ಕೊಡುತ್ತೇವೆ ನಿಮ್ಮ ಮಾಲಿಗೆ ಏನಾದರೂ ಧಕ್ಕೆ ಆದಲ್ಲಿ ಲುಕ್ಸಾನ ಸಹ ತುಂಬಿ ಕೊಡತಕ್ಕವೆ ಆದುದರಿಂದ ತೀವ್ರ ಕಳಿಸಬೇಕೆಂದು ಕೋರುತ್ತೇವೆ

ತಮ್ಮ

ತಾ|| ೨೬-೯-೨೨ C, R, Joshi

ರಾಣೇಬೆನ್ನೂರ ಕಾರ್ಯದರ್ಶಿ ಸ್ವಾ. ಕ

# ಧಾರವಾಡ ಜಿಲ್ಹಾ ಖಿಲಾಫತ ಪರಿಷತ

ಧಾರವಾಡ ಜಿಲ್ಹಾ ಖಿಲಾಫತ ಪರಿಷತ್ತು ರಾಣೇಬೆನ್ನೂರಿನಲ್ಲಿಯೇ ಜಿಲ್ಹಾಪರಿಷತ್ತಿನ ವೇಳೆಗೆ ನೆರೆಯುವಂತೆ ವ್ಯವಸ್ಥೆ ಮಾಡಿರುವರು ಅಧ್ಯಕ್ಷಸ್ಥಾನಕ್ಕೆ ಮಿರಜದ ಮೌ ಅಬ್ದುಲಸಾಹೇಬ ಸಿದ್ದೀಕಿಯವರನು ಆರಿಸಿರುವರು, ಖಿಲಾಫತದ ಅಭಿಮಾನಿಗಳೆಲ್ಲರೂ ಅವಶ್ಯವಾಗಿ ಬರಬೇಕೆಂದು ಸೆಕ್ರೆಟರಿಯವರು ತಿಳಿಸುತ್ತಾರೆ

ಕಂಬಳಿಗಳು! ॥ಶ್ರೀ ನಿರ್ಮಲ ಪ್ರಸನ್ನ॥ ಉತ್ಕೃಷ್ಟ ಕಂಬಳಿಗಳು

ಕೋಟುಗಳಿಗೂ ಓವ್ಹರಕೋಟುಗಳಿಗೂ ಉಪಯೋಗವಾಗುವ

ಸುಪ್ರಸಿದ್ಧ

# ಬಾಗಲಕೋಟೆಯ ಕಂಬಳಿಗಳು

ನಮ್ಮಲ್ಲಿ ಮಾರಲಿಕ್ಕೆ ಸಿದ್ಧವಿರುವ ... ರೂಪಾಯಿಗಳಿಂದ ೨೫ ರೂ॥ಗಳವರೆಗೆ.

ಈ ಕಂಬಳಿಗಳಿಂದ ಕೋಟುಗಳನ್ನು ಹೊಲಿಸಿ ... ಸಂದೇಶೀ ಸರ್ಜ ಅರಿವೆಗಿಂತ ಶ್ರೇಷ್ಠವಾಗಿ ತೋರುವವು! ನೋಡಲಿಕ್ಕ ... ಓವ್ಹರ ಕೋಟುಗಳಿಗಂತೂ ತುಂಬಾ ಒಪ್ಪುತ್ತವೆ! ... ಚಳಿಗಾಲಕ್ಕೆ ಅತಿಶಯ ಅನುಕೂಲ. ಯಾಕಂದರೆ ಉಣ್ಣೆಯು ಇಲ್ಲೇ ... ರಾಗುತ್ತದೆ. ಉಣ್ಣೆಯಿಂದ ಕಂಬಳಿಗಳು ಇಲ್ಲೇ ... ಈ ಕಾರಣಕ್ಕಾಗಿಯೇ ಮುಂಬಯಿ ಬೆಳಗಾಂವಿಗಳಿಂದ ಪ್ರತಿ ... ಗಳ್ಳೇ ಕಂಬಳಿಗಳನ್ನು ವ್ಯಾಪಾರಸ್ಥರು ನಮ್ಮಿಂದ ತರಿಸಿಕೊಳ್ಳುತ್ತಾರೆ. ಪರಸ್ಥಳದಲ್ಲಿಯ ಜನರು ಅರ್ಧ ಮುಂಗಡ ಹಣವನ್ನು ಕಳಿಸಿ ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಗಿರಾಕಿಗಳು ತಮಗೆ ಕಂಬಳಿಗಳು ಯಾವ ಕಾರಣಕ್ಕಾಗಿ ಬೇಕೆಂಬದನ್ನು ತಿಳಿಸಿದರೆ ಒಳ್ಳೇ ನಮೂನೆಯನ್ನು ಆರಿಸಿ ಕಳುಹುವೆವು. ವ್ಯಾಪಾರಸ್ಥರಿಗೆ ಯೋಗ್ಯ ದರ.

ಶ್ಯಾಮರಾವ ಮುತ್ತು ರಾಜೇರಾವ ಮಂಗಳವೇಢೇಕರ.

ಜವಳೀ ವ್ಯಾಪಾರಸ್ಥರು. ಬಾಗಲಕೋಟೆ

# ಡಾ. ಇಂಗಳೀಕರ

ಎಲ್. ಸೀ. ಎಚ್. ಸೀ.

ಇವರ

## ಹದಿನೆಂಟುವರ್ಷದ ಅನುಭವದಿಂದ ಉತ್ತಮವೆಂದು ನಿಶ್ಚಿತವಾದ ಔಷಧಗಳು.

| | | | |
|---|---|---|---|
| ಬಾಲಾಮೃತ ಹುಡುಗರಿಗೆ | ೦ | ೧೨ | ೦ |
| ಹೆಮ್ಯಾಟೋ ಸಾರ್ಸಾಪರಿಲಾ | ೧ | ೦ | ೦ |
| ವ್ಹೆಜಿಟೇಬಲ್ ಟಾನಿಕ ವಾಯುರಸ ಶಕ್ತಿವರ್ಧಕ ಮತ್ತು ಸ್ಮರಣಶಕ್ತಿಯಮೇಲೆ | ೧ | ೦ | ೦ |
| ವೀರ್ಯವರ್ಧಕ ವಾಯುರಸ | ೧ | ೦ | ೦ |
| ಗರಮಿಯ ಗುಳಿಗೆಗಳು, ಪುಡಿಯು ಮತ್ತು ಅರ್ಕವು | ೧ | ೦ | ೦ |
| ಪರಮಿಯ ಔಷಧಗಳು | ೧ | ೦ | ೦ |
| ಚಟ್ಟಿಗಳ ಮಲಮು | ೦ | ೬ | ೦ |
| ಚಳಿಜ್ವರ ಗುಳಿಗೆಗಳು | ೦ | ೧೨ | ೦ |
| ಮುಟ್ಟಿನ ಬೇನೆಯ ಗುಳಿಗೆಗಳು | ೧ | ೦ | ೦ |
| ಸ್ತ್ರೀಪ್ರಸೂತಿಯ ಗುಳಿಗೆಗಳು | ೧ | ೦ | ೦ |

ಡಾ. ಇಂಗಳೀಕರ, L. C. H. C.

ಬಾಗಲಕೋಟೆ.

ದಿ. ಕರ್ನಾಟಕ ಹೋಮಿಯೋ ಫಾರ್ಮಸೀ

ಬಾಗಲಕೋಟೆ.

ಕರ್ನಾಟಕದಲ್ಲಿ ಪೂರ್ಣ ವಿಶ್ವಸನೀಯವಾದ ಹೋಮಿಯೋ ಔಷಧಗಳನ್ನು ಪೂರೈಸುವ ಫಾರ್ಮಸಿಯು ಇದೇ ಮೊದಲನೇದು. ಈ ಔಷಧಗಳನ್ನು ಅಮೇರಿಕದ ಅವಲೇ ತರಿಸುತ್ತಿದ್ದು ಒಪ್ಪ ... ಡಾಕ್ಟರರ ಪ್ರತ್ಯಕ್ಷದಲ್ಲಿ ತಯಾರಾಗುತ್ತಿರುವದರಿಂದ ಅವುಗಳಬಗ್ಗೆ ಯಾರಿಗೂ ಸಂಶಯ ತೆಗೆಯಕೊಳ್ಳಲಿಕ್ಕೆ ಪೂರ ... ಔಷಧಗಳನ್ನು ತರಿಸಿ ಅನುಭವವನ್ನು ತೆಗೆದುಕೊಳ್ಳಬೇಕು

ವ್ಯವಸ್ಥಾಪಕ.

ಶ್ರೀ ಬನಶಂಕರೀಪ್ರಸನ್ನ.

ಸ್ವದೇಶೀ! ಶುದ್ಧಸ್ವದೇಶೀ!! ಖಾದೀ!!!

ಎಲ್ಲ ತರದ ಸ್ವದೇಶೀ - ಶುದ್ಧಸ್ವದೇಶೀ, ಖಾದಿಗಳನ್ನು ನಾವು ಸಂಗ್ರಹಿಸಿದ್ದೇವೆ. ನಮ್ಮ ದೇಶದೊಳಗಿನ ಕಲಾಕೌಶಲ್ಯವು ಮುಂದಕ್ಕೆ ಬರಲು ಉತ್ತೇಜನದೊರೆಯಬೇಕೆಂಬ ಮತ್ತು ನಮ್ಮ ರಾಷ್ಟ್ರದಲ್ಲಿ ... ವು ಬೆಳೆಯಬೇಕೆಂಬ ... ಇಚ್ಛೆಯಿಂದಲೇ ನಾವು ಈ ... ಲಯವನ್ನು ಸ್ಥಾಪಿಸಿದ್ದೇವೆ. ಸ್ವದೇಶೀ ಸಕ್ಕರೆ, ... ಯಾರಾದ ಶುದ್ಧ ಸಾಬೂನು, ... ಕುಂಕುಮ, ... ಕಡ್ಡಿ ... ಸ್ವದೇಶೀ ಸಾಮಾನುಗಳೂ, ... ಔಷಧಗಳೂ ದೊರೆಯುತ್ತವೆ.

ಭಾರತ ವಸ್ತು ಸಂಗ್ರಹಾಲಯ,

ಮತ್ತು ಮಹಾತ್ಮಾ ವಸ್ತ್ರ ಭಾಂಡಾರ.

ಬಾಗಲಕೋಟೆ.

## Shree Mahalaxmi Stores,

BAGALKOT.

Wholesale Dealers in papers, swadeshi slates and Ogle's glass Wares

ನಮ್ಮಲ್ಲಿ ಎಲ್ಲ ತರದ ಕಾಗದಗಳೂ, ಸ್ವದೇಶೀ ಪಾಟಿಗಳೂ, ಮೈಸೂರಿನ ಸಾಬೂಣಗಳೂ ಮತ್ತು ಸುಗಂಧ ದ್ರವ್ಯಗಳೂ, ಜರ ಜರತರದ ಖಾದೀ ವಸ್ತ್ರಗಳೂ, ಮತ್ತು ಇತರ ಸ್ವದೇಶೀ ಸಾಮಾನುಗಳೂ ಖಾರಲಿಕ್ಕೆ ದೊರೆಯುತ್ತವೆ.

Proprietors:—
Parvatikar & Katgeri Bros, BAGALKOT.

ಶ್ರೀ ಮಹಾಲಕ್ಷ್ಮೀ ಸ್ಟೋರ್ಸ

ಬಾಗಲಕೋಟೆ.

ಈ ಪತ್ರವನ್ನು ಬಾಗಲಕೋಟೆ ವೆಂಕಟೇಶ ... ವಿದ್ಯಾರಣ್ಯ ಮುದ್ರಣಾಲಯದಲ್ಲಿ ಶ್ರೀನಿವಾಸ ರಾಜೇರಾವ ಮಂಗಳವೇಢೆ (ಸಂಪಾದಕ) ಇವರು ಮುದ್ರಿಸಿದರು ಮತ್ತು ಅಲ್ಲಿಯೇ ... ಆಚಾರ್ಯ ಭೀಮಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ಬಹಿಷ್ಕಾರದ ಅವಶ್ಯಕತೆ.

# ಕನ್ನಡ ನವಜೀವನ

R. N.B 1589

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | [illegible] | ಸಂಚಿಕೆ ೪೪

ಗುರುವಾರ ತಾ. ೩ ಅಕ್ಟೋಬರ ೧೯೨೯

## ಮಹಾತ್ಮರ ಸುದ್ದಿಯು

### ಮ. ಗಾಂಧಿ ಮತ್ತು ಅಸ್ಪೃಶ್ಯ ವರ್ಗವು.

(ಯಂಗ ಇಂಡಿಯಾ ತಾ|| ೪-೫ ೨೧.)

ಹಿಂದಿನ ೪೩ ನೇ ಸಂಚಿಕೆಯಿಂದ

ಏಪ್ರೀಲ್ ೬ನೇ ತಾ|| ದಿವಸ ನಾನು ನೆಲ್ಲೂರಲ್ಲಿದ್ದನೆಂದು ತೋರುತ್ತದೆ. ಅಲ್ಲಿಯ ಅಂತ್ಯಜರನ್ನು ಕೂಡಿಕೊಂಡು ನಾನು ಈಗಿನಂತೆ ಜಗದೀಶನನ್ನು [illegible] ನೇರ್ಪತ್ತಿಗಾಗಬೇಕೆಂದು ನನಗೆ ಬೇಕಾಗಿದೆ. ಆದರೆ ಇನ್ನೊಮ್ಮೆ ನಾನು ಹುಟ್ಟಬರುವದೇ ಆಗಿದ್ದರೆ ನಾನು ಅಸ್ಪೃಶ್ಯನಾಗಿ ಹುಟ್ಟಲಿ; ಅಂದರೆ ನಾನು ಅವರ ದುಃಖ ಮತ್ತು ಯಾತನೆ ಹಲವು ಕಾಲವನ್ನು ಸಹಿಸಲು ಶಕ್ತನಾಗುವದು; ಜನರು ಅವರಿಗೆ ಮಾಡುತ್ತಿರುವ ಅಪಮಾನವನ್ನು ನಾನೇ ಹೊತ್ತು ಅಂಥ ಕೀಳ್ಸ್ಥಿತಿಯಿಂದ ಅವರ ಮತ್ತು ನನ್ನ ಮುಕ್ತತೆಯಾಗಲಿಕ್ಕೆ ಪ್ರಯತ್ನ ಮಾಡುವೆನು. ಅದ್ದರಿಂದ ನಾನು ದೇವರಿಗೆ ಬೇಡಿಕೊಂಡಿದ್ದೇನೆಂದರೆ- ನಾನು ತಿರುಗಿ ಹುಟ್ಟಬೇಕಾಗಿದ್ದರೆ ನಾನು ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರನಾಗಿ ಜನಿಸದೆ ಅತಿಶೂದ್ರಜನ್ಮವು ನನಗೆ ಬರಲಿ.

ಈಹೊತ್ತಿನ ದಿವಸವು ೬ ನೇ ತಾರೀಖಿನಕ್ಕಿಂತಲೂ ಶ್ರೇಷ್ಠವಾದದ್ದು; ಸಾವಿರಾರು ನಿರಪರಾಧಿಜನರ ಕೊಲೆಯ ಸ್ಮರಣದಿವಸವಾದ್ದರಿಂದ ಪುಣ್ಯಕರವಾಗಿರುವದು. ಅದ್ದರಿಂದ ನನ್ನ ಇಚ್ಛೆಗಳೆಲ್ಲ ಪೂರ್ಣವಾಗದೆ ನಾನು [illegible] — [illegible] ನನ್ನ ಕರ್ತವ್ಯವು ತೀರದಿದ್ದರೆ ಹಿಂದೂ ಧರ್ಮದ ಬಗ್ಗೆ ಇರುವ ನನ್ನ ವಿಚಾರಗಳು ಕೊನೆಗಾಣದಿದ್ದರೆ—ಅಂಥ ಹಿಂದೂ ಧರ್ಮವನ್ನೇ ಪುನರುಜ್ಜೀವಿಸಲಿಕ್ಕೆ ನಾನು ಅಸ್ಪೃಶ್ಯನಾಗಿಯೇ ಜನಿಸಲೆಂದು ಜಗದೀಶನನ್ನು ಮತ್ತೆ ಈ ಹೊತ್ತು ಬೇಡಿಕೊಳ್ಳುವೆನು.

ಮಲ ಬಳಿಯುವ ಕೆಲಸವು ನನ್ನ ಪ್ರೀತಿಯದು. ಭಂಗೀ ಜನರಿಗೆ ಸ್ವಚ್ಛವಾಗಿ ಕೆಲಸಮಾಡಲಿಕ್ಕೆ ಕಲಿಸುವದಕ್ಕಾಗಿ ನನ್ನ ಆಶ್ರಮದಲ್ಲಿ ೧೮ ವರ್ಷದ ಓರ್ವ ಶಾಲೆಗೆ ಹೋಗುವ ಬ್ರಾಹ್ಮಣ ಕಿಶೋರನು ಈ ಕೆಲಸವನ್ನು ಮಾಡುತ್ತಿರುವನು. ಆ ಹುಡುಗನೇನು ಸುಧಾರಕನಲ್ಲ; ಅವನು ಹುಟ್ಟಿದ್ದು ಬೆಳೆದದ್ದು ಕರ್ಮಠಭಾವಿಕರ ಕುಟುಂಬದಲ್ಲಿಯೇ. ಅವನು ಭಗವದ್ಗೀತೆಯ ಪಾರಾಯಣವನ್ನೂ ತಪ್ಪದೆ ಸಂಧ್ಯಾವಂದನೆಯನ್ನೂ ಪ್ರತಿನಿತ್ಯ ನೇಮದಿಂದ ಮಾಡುತ್ತಿರುವನು; ಅವನ ಸಂಸ್ಕೃತ ಶಬ್ದೋಚ್ಚಾರವು ಅಸ್ಖಲಿತವಾಗಿದ್ದು ನನ್ನ ಉಚ್ಚಾರಗಿಂತಲೂ ಹೆಚ್ಚು ಸ್ಪಷ್ಟವಾಗಿರುವದು. ಅವನು ಪ್ರಾರ್ಥನೆಯನ್ನು ಹೇಳುವಾಗ ಅವನ ಸುಂದರವಾದ ಸ್ವರವು ಪ್ರೇಮಾತಿಶಯದಿಂದ ಭಕ್ತಿರಸದಲ್ಲಿ ಬೆರೆತು ಬಿಡುವದು; ಅಂಥವನು ನಿಷ್ಣಾತನಾದ ಭಂಗಿಯಾಗದೆ ಇಷ್ಟೆಲ್ಲವೂ ಅಪೂರ್ಣವೆಂದು ಅವನಿಗೆ ತಿಳಿದು ಬಂದಿತು; 'ಭಂಗಿಯು ತನ್ನ ಕೆಲಸವನ್ನು ಚನ್ನಾಗಿ ಮಾಡಬೇಕೆಂದು ನನ್ನ ನಿಚ್ಛೆಯಿದ್ದರೆ ಮೊದಲು ನಾನು ಅವನಿಗೆ ಚಲೋ ಉದಾಹರಣೆಯನ್ನು ಹಾಕಿಕೊಡಬೇಕು' ಎಂದು ಅವನು ವಿಚಾರಿಸಿದನು;

ಹಿಂದೂ ಸಮಾಜವನ್ನೇ ಸ್ವಚ್ಛಮಾಡಹತ್ತಿರುವೆವೆಂದು ನೀವು ತಿಳಿದುಕೊಳ್ಳಬೇಕು; ಅದ್ದರಿಂದ ನೀವು ನಿಮ್ಮ ಬಾಳುವೆಯನ್ನು ನಿರ್ಮಲವಾಗಿ ಮಾಡಿ, ನೀವು ನಿರ್ಮಲಸ್ವಭಾವದವರಾಗಲಿಕ್ಕೆ ಪ್ರಯತ್ನಿಸಬೇಕು. ಸರಾಯಿಯನ್ನು ಕೊಳ್ಳುವದಕ್ಕೆ ಹಣ ಇರದಿದ್ದರೆ, ಮದ್ಯವನ್ನಾಗಲೀ 'ತಾಳೆ' ಕೂಡಿಯನ್ನಾಗಲಿ, ಮೈಗೆ ಹಚ್ಚಿಕೊಳ್ಳಲಿಕ್ಕೆ ಉಪಯೋಗಿಸಿರಿ; ನಿಮ್ಮಲ್ಲಿ ಅವರಿಗೆ ಕುಡಿಯುವ ಮತ್ತು ಜೂಜಾಡುವ ಚಟವಿರುವದು; ಅವನ್ನು ಬಿಡಲಿಕ್ಕೆ ಯತ್ನಿಸಿರಿ. ಬ್ರಾಹ್ಮಣರು ಸಹ ಕುಡಿಯುತ್ತಿರುವರಲ್ಲವೆಂದು ನೀವು ತೋರಿಸಬಹುದು. ಅವರನ್ನು ಪತಿತರಾದವರೆಂದು ತಿಳಿಯುವದಿಲ್ಲ; ಆದರೆ, ನಿಮ್ಮನ್ನು ಹಾಗೆ ತಿಳಿಯುವರು. ಹಿಂದೂಗಳು ನಿಮ್ಮನ್ನು ಕೇವಲ ಉಪಕಾರಕ್ಕಾಗಿ ಮುಕ್ತಬೇಡಬೇಕಾಗಿಲ್ಲ; ತಮಗಾಗಿಯೇ ಬೇಕಾಗಿ ಹಾಗೆ ಮಾಡಲೊಲ್ಲರೇಕೆ; ಅದ್ದರಿಂದ ನೀವು ನಿಮ್ಮ ಶುದ್ಧಾಚರಣೆಯಿಂದಲೂ ನಿಮ್ಮ ಸತ್ಯತೆಯಿಂದಲೂ ಅವರನ್ನು ನಾಚಿಸಬೇಕು; ಇನ್ನು ಐದು ತಿಂಗಳುಗಳಲ್ಲಿ ನಾವು ಅಷ್ಟು ಶುದ್ಧರಾಗುವೆವೆಂದು ನಾನು ನಂಬುವೆನು; ಈ ಅವಧಿಯಲ್ಲಿ ಆಗದಿದ್ದರೆ ನನ್ನ ವಿಧಾನವೆಲ್ಲ ಸರಿಯಾದದ್ದು ಆದರೆ ನಾನು ಲೆಖ್ಖಮಾಡುವದರಲ್ಲಿ ತಪ್ಪಿದೆನೆಂದು ತಿಳಿಯುವೆನು.

ನೀವು ಹಿಂದೂಗಳೆಂದು ಹೇಳಿಕೊಳ್ಳುವಿರಿ; ನೀವು ಭಾಗವತವನ್ನು ಓದುವಿರಿ; ಅದ್ದರಿಂದಲೇ, ಹಿಂದೂ ಜನರು ನಿಮ್ಮನ್ನು ಪೀಡಿಸುವದೇ ಈ ರೋಗವು ಹಿಂದೂ ಧರ್ಮದ್ದಾಗಿರದೆ, ಹಿಂದೂಗಳೆಂದು ಹೇಳಿಕೊಳ್ಳುವವರದಾಗಿರುವದೆಂಬುದನ್ನು ನೀವು ತಿಳಿದಿರಬಹುದು. ಅದ್ದರಿಂದ ನಿಮ್ಮ ಉದ್ಧಾರವಾಗಬೇಕೆಂದರೆ ನೀವೇ ಪರಿಶುದ್ಧರಾಗಬೇಕು. [illegible] ಮೊದಲಾದ ವ್ಯಸನಗಳನ್ನು ಬಿಟ್ಟುಬಿಡಬೇಕು.

[ಮುಂದಿನ ಸಂಚಿಕೆಯಲ್ಲಿ]

ನೀವು ನಿಮ್ಮ ಸ್ಥಿತಿಗತಿಯನ್ನು ಸುಧಾರಿಸಬೇಕಾಗಿದ್ದರೆ, ನಿಮಗೆ ಸ್ವರಾಜ್ಯ ಸಂಪಾದನೆಯು ಇಷ್ಟವಿದ್ದರೆ, ನೀವು ಸ್ವಾವಲಂಬಿಗಳಾಗಬೇಕು. ನಿಮ್ಮಲ್ಲಿ ಕೆಲವರು ಅಸಹಕಾರ ಚಳವಳಿಗೆ ವಿರೋಧಿಸುವರೆಂದೂ ನಿಮ್ಮ ಕಲ್ಯಾಣವು ಬ್ರಿಟಿಶ ಆಡಳಿತೆಯಿಂದಲೇ ಆಗುವದೆಂದು ನಂಬಿರುವರೆಂದೂ ನನಗೆ ಮುಂಬಯಿಯಲ್ಲಿ ಹೇಳಿದರು; ಹಿಂದೂಧರ್ಮವನ್ನು ಬಿಟ್ಟು ಪರಧರ್ಮ ಸೇರುವದರಿಂದ ನಿಮ್ಮ ಕಲ್ಯಾಣವು ಎಂದೂ ಆಗದೆಂದು ನಿಮಗೆ ನಾನು ಸ್ಪಷ್ಟ ಹೇಳಿ ಇಡುವೆನು; ನಿಮ್ಮ ಉದ್ಧಾರವು ನಿಮ್ಮ ಕೈಯಲ್ಲಿಯೇ ಇರುವದು.

ದೇಶದಲ್ಲಿಯ ಎಲ್ಲ ಅಸ್ಪೃಶ್ಯರನ್ನು ನಾನು ಕಂಡುಬಂದಿರುವೆನು; ಅವರಿಗೂ ಉಳಿದ ಹಿಂದೂ ಜನರಿಗೂ ಕಾಣಸಿಗದ ಅವರಲ್ಲಿ ಅಡಗಿಕೊಂಡಿರುವ ಎಷ್ಟೋ ಗುಣಗಳನ್ನು ನಾನು ಕಂಡುಹಿಡಿದಿರುವೆನು; ಅವರ ಬುದ್ಧಿ ಶಕ್ತಿಯು ಇದೇ ಫಲಕ್ಕೆ ಬಂದಿರುವ ಸ್ಪಷ್ಟ ಗಂತಿರುವದು; ನಾನು ನಿಮಗೆ ನೂಲುವದಕ್ಕೆ ನೇಯುವದಕ್ಕೂ ಕಲಿಯಿರೆಂದು ಸೂಚಿಸುವೆನು; ಅವುಗಳನ್ನು ನೀವು ನಿಮ್ಮ ವ್ಯವಸಾಯವನ್ನಾಗಿ ಮಾಡಿಕೊಂಡರೆ, ಬಡತನವು ನಿಮ್ಮನ್ನು ಆಶ್ರಯಿಸದು; ಇನ್ನು ಭಂಗಿಜನರನ್ನು ನಡಿಸಿಕೊಳ್ಳುವ ನಿಮ್ಮ ರೀತಿಯ ಬಗ್ಗೆ ನಾನು ಗೋಧ್ರಾದಲ್ಲಿ ಹೇಳಿದ್ದನ್ನೇ ಹೇಳುವೆನು. ನಿಮ್ಮಲ್ಲಿ ನೀವು ಢೇಢ ಮತ್ತು ಭಂಗಿ ಎಂದು ಎರಡು ಬಣಮಾಡಿರುವದು ನನಗೆ ತಿಳಿಯದು; ಅವರಲ್ಲಿ ಏನೂ ಭೇದವಿಲ್ಲ; ಸುಧಾರಿಸಲ್ಪಟ್ಟ ಸಮಾಜದಲ್ಲಿ ಸಹ ಅವರ ವ್ಯವಸಾಯವು ವಕೀಲರು ಮತ್ತು ಸರಕಾರೀ ನೌಕರರಷ್ಟೇ ಗೌರವ ಉಳ್ಳದ್ದಾಗಿರುವದು. ಎಲೆಯೊಳಗಿನ ಎಂಜಲವನ್ನು ( ಅದು ಎಷ್ಟು ಸ್ವಚ್ಛ ತೋರಿದರೂ ) ನೀವು ಹಾಕಿಸಿಕೊಳ್ಳಬಾರದು; ಕೇವಲ ಶುದ್ಧವಾದ ಧಾನ್ಯವನ್ನು ಅದೂ ಆದರದಿಂದ ಕೊಟ್ಟರೇ ತೆಗೆದುಕೊಳ್ಳಿರಿ; ಅಂಥ ಇಂಥ ಕೊಳೆತ ಕಾಳುಕಡಿಗಳನ್ನು ನೀಡಿಸಿಕೊಳ್ಳಬೇಡಿರಿ, ನಾನು ಹೇಳಿದ್ದನ್ನೆಲ್ಲ ದೂಡಲು ನೀವು ಸಮರ್ಥರಾದರೆ ೪-೫ ತಿಂಗಳುಗಳಲ್ಲಿಯೇ ನಿಮ್ಮ ಉದ್ಧಾರವಾಗುವದರಲ್ಲಿ, ೪-೫ ದಿವಸಗಳಲ್ಲಿ ಸಹ ಆಗುವದು;

ಹಿಂದೂ ಜನರು ಸ್ವಭಾವದಿಂದೇನೇ ಪಾಪಬುದ್ಧಿಯವರಲ್ಲ- ಅವರು ಅಜ್ಞಾನಸಾಗರದಲ್ಲಿ ಮುಳುಗಿರುವರು; ಇದೇ ವರುಷದಲ್ಲಿ ಅಸ್ಪೃಶ್ಯತೆಯ ಉದ್ಧಾರ ಮತ್ತು ಗೋಗಳ ಸಂರಕ್ಷಣೆ-ಇವೆರಡರ ಆಶೆಯೇ ನನ್ನ ಜೀವವನ್ನು ಹಿಡಿದಿರುವದು; ಇವೆರಡು ಪೂರ್ಣವಾದರೆ, ಸ್ವರಾಜ್ಯವು ದೊರೆತೇ ದೊರೆಯುವದು. ಅಲ್ಲಿಯೇ ನನ್ನ ಮೋಕ್ಷವಿರುವದು.—ನಿಮ್ಮ ಉದ್ಧಾರವನ್ನು ಮಾಡಿಕೊಳ್ಳುವದಕ್ಕೆ ದೇವರು ನಿಮಗೆ ಸಾಮರ್ಥ್ಯವನ್ನೀಯಲಿ.

---

## ವಿಮರ್ಶೆ.

**ಕರ್ನಾಟಕ ಸತ್-ಶಿಕ್ಷಕ**:…ಈ ಜ್ಞಾನವರ್ಧಕ ಮಾಸ ಪತ್ರಿಕೆಯು ಗದುಗಿನಲ್ಲಿ ಎಫ್ ಬಸವಲಿಂಗ ಸ್ವಾಮಿಯವರಿಂದ ಹೊರಡಿಸಲ್ಪಟ್ಟಿದೆ. ಮಾಸಿಕದ ಧ್ಯೇಯವು ಸ್ತುತ್ಯವಾಗಿದೆ. ಲೇಖಗಳು ಚನ್ನಾಗಿವೆ; 'ಮಾಡುತ್ತಾ' 'ಹೋಗುತ್ತಾ' ಎಂಬ ಪ್ರಯೋಗಗಳನ್ನೂ 'ಲುಕ್ಸಾನ' ದಂಥ ಪಾರಿಭಾಷಿಕ ಶಬ್ದಗಳನ್ನೂ ಮಾತ್ರ ಇನ್ನುಮೇಲೆ ಉಪಯೋಗಿಸಬಾರದೆಂದು ನಾವು ಅವರ ಚಾಲಕರಿಗೆ ಸೂಚಿಸುತ್ತೇವೆ. ವಾರ್ಷಿಕ ವರ್ಗಣಿ ೩ ರೂಪಾಯಿ.

**ಸಂಪಾದಕ**


# SONDUR & JORAPUR

## Ginning Factory Bagalkot.

Dealers in second-hand Oil-engines, Oil-engine repairers, Grinding stones suppliers and General Contractors

ಬೇರೆಬೇರೆ ತರದ ಸೆಕಂಡಹ್ಯಾಂಡ ಆಯಿಲ ಎಂಜಿನಗಳನ್ನು ನಾವು ದೊರಕಿಸಿ ಕೊಡುತ್ತೇವೆ. ಮತ್ತು ಆಯಿಲ ಇಂಜನಗಳನ್ನು ಸೊಯಿಸೇದರದಿಂದ ದುರಸ್ತ ಮಾಡಿ ಕೊಡುತ್ತೇವೆ. ಇದಲ್ಲದೇ ಹಿಟ್ಟಿನ ಗಿರಣಿಗಳಿಗೆ ಬೇಕಾಗುವ ಬೀಸುವ ಕಲ್ಲುಗಳನ್ನೂ ನಾವು ಪೂರೈಸಿ ಕೊಡುವೆವು,

**ಸೊಂಡೂರ ಮತ್ತೂ ಜೋರಾಪೂರ**
ಜಿನಿಂಗ ಫ್ಯಾಕ್ಟರಿ ಬಾಗಲಕೋಟ.

---

# ROYAL DRINK.

**Sovereign Tea!** **Sovereign Tea**

ಲಿಪ್ಟನ್ ಚಹಾಗಿಂತ ಈ ಸಾವ್ಹರಿನ ಚಹವು ಹೆಚ್ಚು ರುಚಿಯಾಗಿರುತ್ತದೆ: ಒಮ್ಮೆಯಾದರೂ ಅನುಭವತೆಗೆದು ಕೊಳ್ಳಿರಿ ಅಂದರೆ ನಿಮಗೆ ಬೇರೆ ಚಹವು ಬೇಡವೆಂದೇ ಖಾತ್ರಿಯಾಗುವದು ೪೦-೫೦ ಪೌಂಡಿಗೆ ೧-೪-೦ ರುಪಾಯಿ ೪೮ ಡಬ್ಬಿಯ ಪೂರ್ಣ ಪೆಟ್ಟಿಗೆಯನ್ನು ಕೊಂಡರೆ ೩ ರೂ ಕಮೀಶನ್

**ಮೋಹನಲಾಲ ಹರಿಜೀವನದಾಸ ಮೇಹತಾ.**
ಪೋಲೀಸ ಚಾವಡೀ ಎದುರಿಗೆ **ಬಾಗಲಕೋಟ**

# ಸಾತಾರಾ ಸ್ವದೇಶೀ ಪಾಟಿಗಳೂ ಟಾಕಿನ ತುದಿಗಳೂ

ನಾವು ಕೃಷ್ಣಾಸ್ಲೇಟ ವರ್ಕ್ಸ ಸಾತಾರಾ ಇವರಿಂದ ಇಡೀ ವಿಜಾಪೂರ ಜಿಲ್ಹೆಗೆ ಮುಖ್ಯಏಜಂಟರಾಗಿ ನಿಯಮಿಸಲ್ಪಟ್ಟಿದ್ದೇವೆ ನಮ್ಮ ಹತ್ತರ ಉತ್ತಮ ತರದ ಸಣ್ಣ ದೊಡ್ಡ ಪಾಟಿಗಳು ಶಾಳೆಯಲ್ಲಿ ವಿದೇಶೀ ಪಾಟಿಗಳಿಗಿಂತಲೂ ಹಗರವಾದವು ಅಗದೀ ಸೊಯಿಸರದಿಂದ ದೊರೆಯುವವು ಒಮ್ಮೆ ಅನುಭವ ತೆಗೆದು ಕೊಂಡಲ್ಲಿ ನಿಮಗೆ ಖಾತ್ರಿಯಾಗುವದು ೪೮ ಪಾಟಿಗಳುಳ್ಳ ಒಂದು ಪೆಟ್ಟಿಗೆಗೆ ೧೩-೮ ರೂಪಾಯಿಮಾತ್ರ ಏಜಂಟರು ಬೇಕಾಗಿದೆ

**ವ್ಹಿ ಜೀ ಪರವತಿಕರ**
ಸೋಲ ಏಜಂಟ ಡಿಸ್ಟ್ರಿಕ್ಟ ವಿಜಾಪೂರ
ಬಾಗಲಕೋಟ.

---

# ಶುದ್ಧ ಸ್ವದೇಶೀ!! ಶುದ್ಧ ಸ್ವದೇಶೀ!!

ಶುದ್ಧ ಸ್ವದೇಶೀ ವಸ್ತುಗಳನ್ನು ಸೋವಿ ದರದ ಕ್ರಯಕ್ಕೆ ತೆಗೆದುಕೊಳ್ಳುವ ಅಪೇಕ್ಷೆಯು ಇದ್ದಲ್ಲಿ ನಮ್ಮಲ್ಲಿಯೇ ತೆಗೆದು ಕೊಳ್ಳಿರಿ ಬರೇ ಸ್ವದೇಶೀ ಎಂದು ಹೆಸರಿಟ್ಟುಕೊಂಡ ಅನೇಕ ಕಂಪನಿಗಳಿಗೆ ಹೋಗಿ ಮೋಸ ಹೋಗಬೇಡಿರಿ. ನಮ್ಮಲ್ಲಿ ಎಲ್ಲ ತರದ ಸ್ಟೇಶನರಿ ಸಾಮಾನುಗಳೂ ಕಾಜಿನ ಒಡವೆಗಳೂ, ಸುದರ್ಶನ ಚಕ್ರದಿಂದ ತೆಗೆದ ನೂಲಿನ ಬಟ್ಟೆಗಳೂ. ಎಲ್ಲ ದೇಶ ಭಕ್ತರ ಭಾವಚಿತ್ರಗಳೂ ದೊರೆಯುತ್ತವೆ ಇದಲ್ಲದೆ ಕನ್ನಡ, ಮರಾಠಿ, ಇಂಗ್ಲೀಷ, ಭಾಷೆಗಳಲ್ಲಿಯ ದೈನಿಕ ಮತ್ತು ವಾರಪತ್ರಗಳು ಮಾರಲಿಕ್ಕೆ ಸಿಗುತ್ತವೆ

ಮಾಲಕ, **ಶ್ರೀನಿವಾಸರಾವ ಸೀರಸೀಕರ** } ಲೋಕಮಾನ್ಯ ಸ್ಟೋರ್ಸ ಬಾಗಲಕೋಟ

# ಕನ್ನಡ ನವಜೀವನ.

ಆಶ್ವಿನ ಶುದ್ಧ ೧೫ ಗುರುವಾರ ಶಕೆ ೧೮೪೪


## ಒಕ್ಕಟ್ಟಿನ ಆವಶ್ಯಕತೆ.

(ನವಜೀವನ)

ಅಸಹಯೋಗದ ಚಳವಳಿಯು ಪ್ರಾರಂಭವಾಗುವದಕ್ಕಿಂತ ಮೊದಲು ಹಿಂದು ಮುಸಲ್ಮಾನರ ಜಗಳವು ಸ್ವಾಭಾವಿಕ ಮತ್ತು ಮಾಮೂಲಿಯದಾಗಿತ್ತು. ಈಗ ಮೊಹರಮ್ ಮೊದಲಾದ ಹಬ್ಬಗಳ ದಂಗೆಯ ಸಮಾಚಾರವು ವರ್ತಮಾನ ಪತ್ರಗಳಲ್ಲಿ ಬರುತ್ತಿತ್ತು. ಆದರೆ ಈಗ ಹಾಗಾಗುವದಿಲ್ಲ. ಈವರುಷ ಹಿಂದುಸ್ತಾನದಲ್ಲಿ ಮುಲ್ತಾನ ಮತ್ತು ಹಡವಾ ಜಿಲ್ಹೆಯೊಳಗಿನ ಕೇವಲ ಎರಡೇ ಸ್ಥಳಗಳಲ್ಲಿ ದಂಗೆಯಾಯಿತೆಂಬ ಸಮಾಚಾರವು ಬಂದಿರುವದು. ಆದರೂ ಇವರ ಸಲುವಾಗಿ ನಾವು ಹೆಚ್ಚು ಸಂತುಷ್ಟರಾಗುವದು ಉಚಿತವಲ್ಲ. ಈ ನಮ್ಮ ಪ್ರಯತ್ನದಿಂದ ಸಫಲತೆಯು ಮತ್ತು ನಾಶವು ಆಗಿರುವದು.

ಕಾರ್ಯ ಕೈಗೊಡುವದು ಬಹಳ ಒಳ್ಳೇದು. ಆದರೆ ಕೈಗೂಡದಿರುವದಾದರೂ ಕಡಿಮೆಯಲ್ಲ. ಎಷ್ಟೋ ಸ್ಥಳಗಳಲ್ಲಿ ಹಿಂದೂ ಮುಸಲ್ಮಾನ ಮುಂದಾಳುಗಳು, ಜನರನ್ನು ಜಗಳಗಳಿಂದ ಬಿಡಿಸುವದಕ್ಕಾಗಿ ಕಲಾಸಂತೀತ ಪರಿಶ್ರಮವನ್ನು ಮಾಡಿರುವರು. ಈ ಸ್ಥಿತಿಯನ್ನು ನಮ್ಮಲ್ಲಿರುವತನಕ, ನಮ್ಮಿಂದ ರಾಷ್ಟ್ರದಯಾವ ಮಹತ್ಕಾರ್ಯವೂ ಪೂರ್ಣವಾಗಲಾರದು. ಪ್ರತಿಒಂದು ಉನ್ನತಿಯ ಮಾರ್ಗದ ಸಲುವಾಗಿ ಮನುಷ್ಯನಿಗೆ ಅಂತರಿಕ ಶಾಂತಿಯು ಅವಶ್ಯಕವದೆ, ಇದರಂತೆ ರಾಷ್ಟ್ರಕ್ಕಾದರೂ ಆಂತರೀಕ ಶಾಂತಿಯ ಹೊರತು ಒಂದು ಹೆಜ್ಜೆಯಾದರೂ ಮುಂದಕ್ಕೆ ಹೋಗಲು ಅಸಮಾಗದು. ಮೇಲೆ ಹೇಳಿದ ದಂಗೆಯ ವರ್ತಮಾನವನ್ನು ಕೇಳಿ ಮುಂಬಯಿ ಸೆಂಟ್ರಲ್ ಖಿಲಾಫತ್ ಕಮೀಟಿಯ ಸಭಾಪತಿಯಾದ ಛೋಟಣಿಸಾಹೇಬರು ಕೆಳಗೆ ಬರೆದಂತೆ ಅಪೀಲು ಮಾಡಿರುವರು

ತುರ್ಕಸ್ತಾನದ ವಿಜಯದ ಶುಭವರ್ತಮಾನವು ಬಂದು ತಲ್ಪಿರುವದು. ಈ ಆನಂದದ ಯಾವತ್ತು ರಸವು, ಈ ದಂಗೆಗಳಿಂದ ಕೊಲ್ಲಲ್ಪಟ್ಟಿತು. ಇವರಲ್ಲಿ ಯಾವಪಕ್ಷದ ದೋಷವು ಎಷ್ಟರಮಟ್ಟಿಗೆ ಅದೆ, ಎಂಬದನ್ನು ಹೇಳುವದು ಕಠಿಣವು. ಆದರೂ ಈ ಸಮಯದಲ್ಲಿ ನನ್ನ ಧರ್ಮವೆಂದು ತಿಳಿದು ನಾನು ನನ್ನ ಮುಸಲ್ಮಾನ ಬಂಧುಗಳಿಗೆ ಪ್ರಾರ್ಥನೆಯನ್ನು ಮಾಡಿಕೊಳ್ಳಬಯಸುತ್ತೇನೆಂದರೆ, ನಮ್ಮ ಮತ್ತು ಹಿಂದೂ ಬಾಂಧವರ ಪ್ರೇಮಭಾವವನ್ನು ಹೆಚ್ಚಿಸುವದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಸವಿಪಕ್ಷದವರ ಸಂಗಡ ಪ್ರೇಮ ಮತ್ತು ಮಿತ್ರತೆಯಿಂದ ನಡೆದುಕೊಳ್ಳಬೇಕು. ಮತ್ತು ಅವರ ಮನಸ್ಸು ನೋಯಿಸದಂತೆ ನಡೆಯುವದು. ನಮ್ಮ ರಾಷ್ಟ್ರೀಯ ಧರ್ಮವು ಧೀರತೆ ಸಹನಶೀಲತೆ ಮತ್ತು ಕ್ಷಮಾ ಇವುಗಳು ಇಸ್ಲಾಮಧರ್ಮದ ಮುಖ್ಯ ಗುಣಗಳು. ನಾವು ಈ ದಂಗೆಯ ಸಮಯದಲ್ಲಿಯಾದರೂ ಆತ್ಮಸಂಯಮವನ್ನು ಮಾಡಲಿಕ್ಕೇ ಬೇಕು.

ಹಿಂದೂ ಮುಸಲ್ಮಾನರ ಐಕ್ಯತೆಯು ನಮ್ಮ ಚಳವಳಿಯ ಆಧಾರಸ್ತಂಭವು ಈ ಐಕ್ಯತೆಯು ಇಲ್ಲದಹೊರತು, ನಮ್ಮ ಉದ್ದೇಶವು ಕೈಗೂಡುವದು ಅಸಂಭವವು. ಈ ಕಾರಣದ ಗೋಸುಗವೇ, ಆಲೀಬಂಧುಗಳು ಮತ್ತು ಮಹಾತ್ಮಾಜಿಯವರು ತುರಂಗದ ಹಾದಿಯನ್ನು ಹಿಡಿದು ಒಂದು ವರ್ಷವಾದ ಆಗಿಲ್ಲ ಇಷ್ಟರಲ್ಲಿಯೇ ಹಿಂದೂ ಮುಸಲ್ಮಾನರಿಗೆ ಜಗಳ ಹುಟ್ಟಿತು. ದೇಶ ಮತ್ತು ದೀನ ಜನದುಃಖದ ಸಲುವಾಗಿ ಸದ್ಯಕ್ಕೆ ಸಾವಿರಾರು ಜನರು ಜೇಲಿನ ದುಃಖವನ್ನು ಅನುಭವಿಸುತ್ತಿರುವರು. ಅವರು ಈ ದಂಗೆಯ ವರ್ತಮಾನವನ್ನು ಕೇಳಿ ದಕ್ಷಣವೇ ಅವರಿಗಾಗುವ ಮರ್ಮಭೇದದ ದುಃಖದ ಕಲ್ಪನೆಯನ್ನು ಮಾಡುವದು ನಮಗೆ ಅಶಕ್ಯವು. ಇದು ಅತ್ಯಂತ ಶೋಚನೀಯವು. ಸ್ಥಾನಿಕ ಕಾಂಗ್ರೆಸ ಕಮೀಟಿಯವರೂ ಖಿಲಾಫತ ಕಮೀಟಿಯವರು ಪ್ರೇಮದಿಂದ ಕೂಡಿ ಎರಡು ಪಕ್ಷಗಳಲ್ಲಿ ಶಾಂತಿಯನ್ನು ಸ್ಥಾಪಿಸುವರೆಂದು ನನ್ನ ನಂಬಿಗೆಯದೆ. ಎಷ್ಟೋ ಸ್ವಾರ್ಥ ಸಾಧುಗಳು ಈ ಜಗಳಗಳನ್ನು ಮುರಿಯಬಾರದೆಂದು ಪ್ರಯತ್ನ ಮಾಡುವ ಸಂಭವ ವದೆ ನಾವು ನಮ್ಮ ದೇಶಬಾಂಧವರ ಸಾಂತ್ವನದ ಸಲುವಾಗಿ ಇಂಥ ಜನರ ಕಡೆಗೆ ಲಕ್ಷ್ಯ ಕೊಡಬಾರದು. ಎರಡು ಜಾತಿಯವರೂ ಪ್ರೇಮದಿಂದಲೂ ಸದ್ಭಾವದಿಂದಲೂ ಇರಬೇಕಾಗಿ ದಯಾಘನ ಪರಮೇಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಛೋಟಣಿಸಾಹೇಬರು ಹೇಳಿದ ಮಾತುಗಳನ್ನು ನಮ್ಮ ಹಿಂದಬಾಂಧವರು ಚನ್ನಾಗಿ ಮನನಮಾಡುವರೆಂದು ಆಶಿಸುತ್ತೇನೆ.

---

## ಪ್ರಾಯಶ್ಚಿತ್ತ.

**ಲೇಖಕ—ಪಟ್ಟಾಭಿಸೀತಾರಾಮಯ್ಯ**

(ಸಂಪಾದಕ ಜನ್ಮಭೂಮಿ.)

ಶಾಸ್ತ್ರಗಳಲ್ಲಿಯ ಭವಿಷ್ಯಗಳು ಪೂರ್ಣವಾಗಲಿಕ್ಕೆಬೇಕು. ಆ ಶಾಸ್ತ್ರಗಳು ನಿಜವಾಗಿ ಒಂದೇ ಕಾಲದ ಸಲುವಾಗಿಯಾಗಲಿ ಒಂದೇ ರಾಷ್ಟ್ರದ ಸಲುವಾಗಿಯಾಗಲಿ ಇರುವದಿಲ್ಲ. ಅವು ಮತ್ತು ಅವುಗಳಲ್ಲಿ ನಿರ್ದಿಷ್ಟವಾದ ಭವಿಷ್ಯಗಳು ಎಲ್ಲ ಜನಾಂಗಗಳಿಗೂ ಎಲ್ಲ ಸಂಸ್ಕೃತಿಗಳಿಗೂ ಎಲ್ಲ ಕಾಲಗಳಿಗೂ ಎಲ್ಲ ಪರಿಸ್ಥಿತಿಗಳಿಗೂ ಸರಿಯಾಗಿ ಹತ್ತುತ್ತವೆ. ಈ ಹೊತ್ತು ಮತ್ತೊಮ್ಮೆ ಮುಖ್ಯ ಮಂತ್ರಿಗಳು ತಮ್ಮ ತಮ್ಮೊಳಗೆ ವಿಚಾರ ಮಾಡಿ ಶಾಸ್ತ್ರಗಳನ್ನು ನೋಡಿ ಹಿರಿಯರನ್ನು ಕೇಳಿ ಗವರ್ನರ ಸಾಹೇಬರಿಗೆ ಮಹಾತ್ಮಾ ಗಾಂಧೀಯವರನ್ನು ಹಿಡಿಯುವ ದಕ್ಕೆ ಆಗ್ರಹ ಮಾಡಹತ್ತಿದ್ದಾರೆ. ಹೀಗೆಯೇ ಹಿಂದಕ್ಕೆ ಕೆಲವು ಮಾಂತ್ರಿಗಳು ಶಾಸ್ತ್ರಗಳನ್ನು ನೋಡಿ ಹಿರಿಯರನ್ನು ಕೇಳಿ ಗವರ್ನರ ಸಾಹೇಬರಾದ ಪಾಂಡಿಯಸ್ ಪಾಯಲೇಟ ದೊರೆಗಳಿಗೆ ಏಸುಕ್ರಿಸ್ತನಲ್ಲಿ ಏನೂ ಅಪರಾಧವು ತೋರಲಿಲ್ಲ. ಆದ್ದರಿಂದ ಅವರು ಹೆರಡ್ ದೊರೆಗಳ ಅಭಿಪ್ರಾಯವನ್ನು ಕೇಳಿದರು. ಈಗ ಜಾರ್ಜ ಲಾಯಿಡ ಸಾಹೇಬರಿಗೆ ಇಷ್ಟು ದಿವಸಗಳ ವರೆಗೆ ಮಹಾತ್ಮರಲ್ಲಿ ಏನೂ ಅಪರಾಧವು ಕಂಡು ಬರಲಿಲ್ಲ. ಆದ್ದರಿಂದ ಅವರು ರೀಡಿಂಗ ದೊರೆಗಳನ್ನು ವಿಚಾರಿಸಿದರು; ಪಾಂಟಿಯಸ್ ಮತ್ತು ಹೆರಡ್ ದೊರೆಗಳ ಅಭಿಪ್ರಾಯವು ಏಸುಕ್ರಿಸ್ತನು ನಿರಪರಾಧಿಯೆಂದೇ ಆಯಿತು ಆದರಂತೆಯೇ ಮಹಾತ್ಮಾ ಗಾಂಧಿಯವರುಸಹ ನಿರಪರಾಧಿಗಳೆರುವರೆಂದು ಜಾರ್ಜಲಾಯಿಡ ಮತ್ತು ರೀಡಿಂಗ ದೊರೆಗಳ ಅಭಿಪ್ರಾಯವಾದರೂ ಆಗಬಹುದು; ಆದರೆ ಶಾಸ್ತ್ರಗಳನ್ನು ನೋಡಲಾಗಿ ಹಿರಿಯರನ್ನು ಕೇಳಲಾಗಿ ರಾಷ್ಟ್ರದ ಮುಂದಾಳುಗಳಾಗಿರುವ ರಾಷ್ಟ್ರದ ಅಧಿಕಾರ ಸೂತ್ರಗಳನ್ನು ಕೈಯಲ್ಲಿ ಹಿಡಿದಿರುವ ಬುದ್ಧಿವಂತರೆಂದು ಹೇಳಿಕೊಳ್ಳುವ ಜನರು ಮಹಾತ್ಮನ ಮಿತ್ರನನ್ನು ಹಿಡಿಯಬೇಕೆಂದು ಆಗಿನವರು ಹಟತೊಟ್ಟಂತೆ ಹಟತೊಟ್ಟಿರುವರು;

ಅವನ ದಂಡವನ್ನು ಪಾರಿಸಬೇಕೆಂದು ಕೆಲಜನರು ಬಡಬಡಿಸುತ್ತಿರುವರು; ತೋಳಗಳು ಒದರುತ್ತಿರುವವು; ಬಚ್ಚಗಳು ಕೂಗುತ್ತಿರುವವು; ಹೀಗಿರುವಾಗ ಪೂರ್ವಕಾಲದ ರೋಮನ್ ಗವ್ಹರ್ನರರಿಗೆ

ಅಥವಾ ಇಗಿನ ಕಾಲದ ಇಂಗ್ಲೀಷ ಗವ್ಹರ್ನರರಿಗೆ ಜನರ ಮುಖಂಡನು ಅಪರಾಧದಿಂದ ಮುಕ್ತನಾದವನೆಂದು ಅನಿಸಿದರೆ ಏನಾಯಿತು? ಹಿಂದಕ್ಕೆ ಎಲ್ಲ ರಾಷ್ಟ್ರಗಳ ಮುಖಂಡರು ಅನುಭವಿಸಿದ ಪರಿಣಾಮದಿಂದ ಪಾರಾಗಲಿಕ್ಕೆ ಗಾಂಧಿಯವರೇನು ಪ್ರಯತ್ನ ಮಾಡಿರುವದಿಲ್ಲ. ಬ್ರಿಟಿಶ್ ಮ್ಯಾಜಿಸ್ಟ್ರೇಟರಿಗೆ ಅವರನ್ನು ಬಂದಿವಾಸದಲ್ಲಿರಿಸಲಿಕ್ಕೆ ಇಲ್ಲವೆ ಗಡೀಪಾರು ಮಾಡಲಿಕ್ಕೆ ಅಧಿಕಾರವುಂಟೆಂಬದರ ಮಹಾತ್ಮಾ ಗಾಂಧಿಯವರು ಅದನ್ನು ಕಸವಾರ್ಥ ವೆಂದು ತಿಳಿದಿರುವರು. ಏಸೂಕ್ರಿಸ್ತನನ್ನು ಪಾಯಲೇಟ ದೊರೆಗಳ ಎದುರಿನಲ್ಲಿ ತಂದು ನಿಲ್ಲಿಸಿದಾಗ ತಾವು ಎಲ್ಲಿಯವರೆಂದು ಆ ದೊರೆಗಳು ಅವರನ್ನು ಕೇಳಿದರು. ಆದರೆ ಏಸೂಕ್ರಿಸ್ತನು ಉತ್ತರವನ್ನು ಕೊಡಲಿಲ್ಲ. ಆಮೇಲೆ ಪಾಯಲೇಟ ದೊರೆಗಳು 'ತಮಗೆ ನಾನು ಯಾರೆಂಬುದು ಗೊತ್ತಿಲ್ಲವೇ ತಾವು ನನ್ನ ಕೂಡ ಮಾತಾಡುವದಿಲ್ಲವೇ ತಮ್ಮನ್ನು ಗಲ್ಲಿಗೇರಿಸಲಿಕ್ಕೆ ಇಲ್ಲವೆ ಬಿಟ್ಟುಕೊಡಲಿಕ್ಕೆ ನನಗೆ ಅಧಿಕಾರವುಂಟೆಂಬದು ತಮಗೆ ಗೊತ್ತಿಲ್ಲವೇ' ಎಂದು ನುಡಿದರು. ಅದಕ್ಕೆ ಏಸೂಕ್ರಿಸ್ತನು 'ಪರಮಾತ್ಮನು ತಮಗೆ ಅಧಿಕಾರವನ್ನು ಕೊಟ್ಟಿರದಹೊರ್ತು ನನ್ನ ವಿರುದ್ಧವಾಗಿ ತಮಗೆ ಏನೂ ಅಧಿಕಾರ ಇರಲಾರದು. ಆದ್ದರಿಂದ ನನ್ನನ್ನು ತಮ್ಮ ಕಡೆಗೆ ಒಪ್ಪಿಸಿದವನೇ ಹೆಚ್ಚು ಪಾಪಿಯು' ಎಂದು ಉತ್ತರವನ್ನು ಕೊಟ್ಟನು. ಪರಮಾತ್ಮನು ಏಸೂಕ್ರಿಸ್ತನನ್ನು ರೋಮನ್ ಗವ್ಹರ್ನರರ ಕೈಯಲ್ಲಿ ಅಥವಾ ಗಾಂಧಿಯವರನ್ನು ಬ್ರಿಟಿಶ ನ್ಯಾಯಾಧೀಶರ ಕೈಯಲ್ಲಿ ಕೊಡು ಸ್ವತಃ ಕೊಟ್ಟಿದ್ದರೆ ಅವನಿಗೇ ಹೆಚ್ಚು ಪಾಪವು" ಬರುತ್ತಿದ್ದಂತಿಲ್ಲ. ಆದರೆ ಶಾಸ್ತ್ರಗಳಲ್ಲಿಯ ಭವಿಷ್ಯಗಳು ನಿಜವಾಗಿ ಪೂರ್ಣವಾಗಬೇಕೆಂದು ಮಾತ್ರ ಈ ಸಂಗತಿಗಳು ಸಂಭವಿಸತಕ್ಕವು. ಎರಡು ಸಾವಿರ ವರುಷಗಳ ಪೂರ್ವದಲ್ಲಿ ಏಸೂಕ್ರಿಸ್ತನ ತಲೆಗೆ ಬಂದ ಕಂಟಕ ಮುಖವಾದ ಕಿರೀಟವು ಮತ್ತು ಶೂಲವು ಎರಡನೇ ಕ್ರಿಸ್ತನ ಪಾಲಿಗಾದರೂ ಬರಲಿಕ್ಕೆ ಬೇಕು.

ಇಪ್ಪತ್ತು ಶತಮಾನಗಳು ಕಳೆದು ಹೋದರೂ ಕೂಡ ಸೀಝರನ ಕಾಲಕ್ಕೆ ಇದ್ದ ಪಾಶ್ಚಿಮಾತ್ಯ ಸಂಸ್ಕೃತಿಯ ರೀತಿ ಭೂತಿಗಳಲ್ಲಿ ಮಹತ್ವವಾದ ತಿದ್ದುಪಡೆಗಳು ಏನೂ ಆಗಿರುವದಿಲ್ಲ. ಎರಡು ಸಾವಿರ ವರ್ಷಗಳ ಹಿಂದೆ ಏಸೂಕ್ರಿಸ್ತನೊಬ್ಬನನ್ನೇ ಶೂಲಕ್ಕೇರಿಸಿದರು. ಆದರೆ ಈ ಮಹಾತ್ಮಾಜಿಯವರ ಮೇಲೆ ಶಸ್ತ್ರವನ್ನು ಎತ್ತುವಪೂರ್ವದಲ್ಲಿಯೇ ಅವರ ಹನ್ನೆರಡು ಪಟ್ಟಶಿಷ್ಯರನ್ನು ತುರಂಗಕ್ಕೆ ಅಟ್ಟಿರುವರು. ಬಂಗಾಲದ ಅಧ್ಯಕ್ಷರಾದ ದಾಸ ಮತ್ತು ಆಝಾದ ಇವರು, ಸಂಯುಕ್ತಪ್ರಾಂತದ ನೆಹರೂ ಇವರು, ಪಂಜಾಬದ ಲಜಪತ ಮತ್ತು ಕಿಚಲೂ ಸಾಹೇಬರು, ಕರ್ನಾಟಕದ ಗಂಗಾಧರರಾಯರು, ಆಂಧ್ರದ ವೆಂಕಟಪ್ಪಯ್ಯನವರು, ದ್ರಾವಿಡದ ಸುಬ್ರಹ್ಮಣ್ಯ ಶಾಸ್ತ್ರಿಗಳು, ಕಲಿಂಗದ ಗೋಪಬಂಧು ದಾಸರವರು, ಸಿಂಧದ ಜಯರಾಮದಾಸರು ಇವರೆಲ್ಲರನ್ನು ಹಿಡಿದು ಅವರಿಗೆ ಮೌನವ್ರತವನ್ನು ಧಾರಣ ಮಾಡಿಸುವದಾಯಿತು. ನಮ್ಮ ರಾಷ್ಟ್ರದಲ್ಲಿ ನಮ್ಮ ಮನಬಿಚ್ಚಿ ಮಾತಾಡುವ ಅಧಿಕಾರವು ನಮಗೆ ಇಲ್ಲವೇ? ನಮ್ಮ ದೇಶದಲ್ಲಿ ನಾವು ಕೈಸೇ ಸೀಝರನಿಗೆ ಕೊಡಬೇಕಾದದ್ದನ್ನು ಕೊಟ್ಟು ಪರಮಾತ್ಮನಿಗೆ ಕೊಡಬೇಕಾದದ್ದನ್ನು ಆತನಿಗೆ ಕೊಡಬಾರದೇ! ಶಕ್ತಿಯ ಕಾಯದೆಯಗಿಂತ ಹೆಚ್ಚಿನ ಕಾಯದೆಯು ಇಲ್ಲವೆ? ಹಣದ ಪೂಜೆಗಿಂತ ಹೆಚ್ಚಿನ ಪೂಜೆಯು ಇಲ್ಲವೇ? ಕಲಹದ ನೀತಿಗಿಂತ ಹೆಚ್ಚಿನ ನೀತಿಯು ಇಲ್ಲವೇ? ಶಸ್ತ್ರಧರ್ಮಕ್ಕಿಂತ ಹೆಚ್ಚಿನ ಧರ್ಮವಿಲ್ಲವೇ?

ಎಷ್ಟೋ ಶತಮಾನಗಳ ಹಿಂದೆ ದಬ್ಬಾಳಿಕೆ ಶೋಷಣೆಯು ಹಾಗು ಕತ್ತಲೆಮಾಡುವದು ಅವ್ಯಾಹತವಾಗಿ ನಡೆದಿದ್ದಾಗ್ಯೂ ಮೋಕ್ಷದ ನಿಜವಾದ ಮಾರ್ಗವನ್ನು ಏಸೂಕ್ರಿಸ್ತನು ಕಲಿಸಿದಂತೆ ಗಾಂಧಿಯವರು ದರೋಡೆಕೋರ ಶೋಷಣೆ ಮತ್ತು ಪೀಡೆಗಳು ಸುಪ್ತವಿಲ್ಲ ಹೆಚ್ಚಿನ ಕಾಯದೆ ಹೆಚ್ಚಿನ ಪೂಜೆ ಹೆಚ್ಚಿನ ನೀತಿ ಮತ್ತು ಹೆಚ್ಚಿನ ಧರ್ಮ ಇವುಗಳ ಪಾಲನೆಗಾಗಿ ಹೋರಾಡುತ್ತಿರುವರು. ಏಳುನೂರು ತಿಂಗಳುಗಳಕಿಂತ ಕಡಿಮೆ ಅವಧಿಯಲ್ಲಿಯೇ ಮಹಾತ್ಮಾಜಿಯವರು ಈಗ ನಂತೆ ಹಿಂದಿನ ಇತಿಹಾಸಗಳಲ್ಲಿ ಎಂದೂ ಪುನೀತವಾಗದಿದ್ದಷ್ಟು ರಾಷ್ಟ್ರವನ್ನು ಪುನೀತ ಮಾಡಿರುವರು; ಅಶಾಂತತೆಯು ಕುರುಹುಗಳು ಎಲ್ಲಿಯಾದರೂ ಸ್ವಲ್ಪ ಉಳಿದಿದ್ದರೆ ಸಲುವಾಗಿಯಾಗಲಿ ಅಥವಾ ಅವರ ಕೆಲವು ಹೇಳಿಕೆಗಳ ನಿಮಿತ್ತವಾಗಿಯಾಗಲಿ ಜನರು ಮೂಕ ಸಂತಿಗ್ಧರ ದಂಡಿಸಲಿ; ಅದು ಶೀಘ್ರವಾಗಿ ನಾಶಹೊಂದ ಪತ್ತಿರುವಂಥ ಕಾಡು ಮುಂಗದ ಗುರುತು ಮಾತ್ರ ಆಗಿರುತ್ತದೆ. ಕೊಲೆಸುಲಿಗೆಗಳಿಂದ ಮೈಯಲ್ಲೆಂಡ ಜನರಿಗೆ ಶಾಂತತೆಯು ತತ್ವವು ಸಹಾನಗೆಗೀಡಾಗಲಿ, ತಿರಸ್ಕರಣೀಯವಾಗಲಿ ಆಗಿರದಿದ್ದರೂ ಬಹಳ ಗೂಢವಾದದ್ದಾಗಿಯೂ, ಬಿಕ್ಕಟ್ಟಿನದಾಗಿಯೂ; ಅಲ್ಲ; ಅನಿವಾರ್ಯವಾದದ್ದಾಗಿಯೂ ತೋರುವದು ಮಾತ್ರ ನಿಜ. ಆಮಾಗ್ಲರ ಅವರ ವಂಶಜರಾಗಲಿ ಮಹಾತ್ಮಾ ಗಾಂಧಿಯವರ ಕಾರ್ಯದ ಬೆಲೆಯನ್ನು ಎಂದಿಗೂ ಅರಿಯಲಾರರು. ಅವರ ಗಂಧವು ಕೂಡ ಅವರಿಗೆ ತಿಳಿಯದು; ಆದರೆ ಮಹಾತ್ಮರ ಕಾರ್ಯದಿಂದ ಉಪವಾಸ ಬೀಳುತ್ತಿರುವ ಲಕ್ಷಾವಧಿ ಜನರಿಗೆ ಶಾಂತಿಯೂ, ತೃಪ್ತಿಯೂ ದೊರೆಯುವವು. ರಾಷ್ಟ್ರೀಯ ಧ್ಯೇಯಗಳನ್ನೆಲ್ಲ ಸರಿಪಡಿಸುವ, ದಾರಿದ್ರ್ಯಕ್ಕೆ ರಾಷ್ಟ್ರೀಯ ಮಹತ್ವವನ್ನು ತಂದುಕೊಡುವ ಹಾಗು "ಉಚ್ಚವಿಚಾರ ಸಾದಾಜೀವನ" ಎಂಬ ಪುರಾತನ ತತ್ವವನ್ನು ಆಚರಣೆಯಲ್ಲಿ ತರುವ ಮಹತ್ಕಾರ್ಯವು ಇದರಿಂದ ಜರಗುವದು. ಮಂದುಗಾರಿಕೆಯಲ್ಲಿ ಮುಳುಗಿರುವ, ವಿಲಾಸಗಳಲ್ಲಿ ಮಗ್ನರಾಗಿರುವ ವಿಷಯವಾಸನೆಗಳಲ್ಲಿ ನಿರತರಾಗಿರುವ ಜನರನ್ನು ಉದ್ಧರಿಸುವ ಕಾರ್ಯವಾದರೂ ಇದರಿಂದ ಆಗಿರುತ್ತದೆ. ಮಹಾತ್ಮಾಗಾಂಧಿಯವರ ಅವಲೋಕನ ಮಾತ್ರದಿಂದಲೇ ಶ್ರೀಮಂತರ ಗರ್ವ ಜೋಕ್ಕನೆ ಬರಿದಾಗಿರುವದು. ಗಾಂಧಿಯವರ ಉಡಿಗೆಯ ಸ್ಪರ್ಶಮಾತ್ರದಿಂದಲೇ ಸ್ತ್ರೀಲೋಲುಪರ ದುರಾಚಾರವು ನಾಶವಾಗಿರುವದು. ಕುಷ್ಟರೋಗಿಯ ರೋಗವು ನಾಶವಾದದ್ದನ್ನಾಗಲಿ, ಅಂಧನಿಗೆ ದೃಷ್ಟಿಯು ಬಂದದ್ದನ್ನಾಗಲಿ, **ಪರಮಾತ್ಮನ ಪುತ್ರನು** ಗ್ಯಾಲಿಲಿಯ ದಂಡೆಯ ಮೇಲೆ ತಿರುಗಾಡುವದನ್ನಾಗಲಿ, ನಾವು ಕಂಡಿಲ್ಲ. ಆದರೆ ನೈತಿಕ ಕುಷ್ಟರೋಗಿಯ ರೋಗವು ಹೋದದ್ದನ್ನು, ಮಾನಸಿಕ ಅಂಧನಿಗೆ ದಿವ್ಯ ದೃಷ್ಟಿಯು ಬಂದದ್ದನ್ನು, **ಪರಮಾತ್ಮನ ಪುತ್ರನು** ಆಚಾರ ವಿಚಾರಗಳಲ್ಲಿ, ಪೂರ್ವಕಾಲದಲ್ಲಿಯ ಅವತಾರೀ ಪುರುಷರು ಕನಸುಮನಸಿನಲ್ಲಿ ಸಹ ತಂದಿರದಂಥ ಕ್ರಾಂತಿಯನ್ನು ಉಂಟುಮಾಡಿದವನನ್ನು ನಾವು ಕಣ್ಣಾರೆ ಕಂಡಿರುವೆವು, ಈಗ ಅವನು ಅವನ ಗೂಡಿಗೆ ನಾವು "ಪಂಜರ ಮುಕ್ತಿಯಾಯಿತು" ಎಂದು ಅನ್ನಬಹುದು. ಗಾಂಧಿಯವರು ತಮ್ಮ ಬಾಂಧವರ ಪಾತಕಗಳಿಗೆ ಪ್ರಾಯಶ್ಚಿತ್ತವನ್ನು ತೆಗೆದುಕೊಂಡಿರುವರು. ಈಗ ಅವನು ಬಂದಿವಾಸದಲ್ಲಿರಿಸಲ್ಪಟ್ಟಿರುವನು; ಮತ್ತು ಅವನ ದೇಶಬಾಂಧವರು ಅವನ ಪುನರುತ್ಥಾನ ಸಮಯವನ್ನು ನಿರೀಕ್ಷಿಸುತ್ತಲಿರುವರು.

## ಗ್ರಹಸಂಸ್ಕಾರ.

ಜಮಖಂಡಿ ಸಂಸ್ಥಾನ ಪೈಕಿ ಹುಣಶೀಕಟ್ಟಿಯ ಗ್ರಾಮದಲ್ಲಿರುವ ರಾಮನಗೌಡಾ ಪಾಟೀಲ ಇವರ ಮಗನಾದ ಅಪ್ಪಾಸಾಹೇಬ ನಿನ್ನೆ ಮೊನ್ನಿನ ಆಶ್ವಿನ ಶುದ್ಧ ೧೦ ಶನಿವಾರ ಶಕೆ ೧೮೪೪ ನೇ ದಿವಸ ಬಾಗಲಕೋಟ ತಾಲೂಕ ಪೈಕಿ ಖಜ್ಜಿಡೋಣಿ ಗ್ರಾಮದ ತಿಪ್ಪವ್ವ ಗಂಡ ರಾಮಪ್ಪಾ ಸುಂಟೂರ ಇವರು ದತ್ತಕ ಮಗನನ್ನಾಗಿ ತೆಗೆದುಕೊಂಡಿರುವರು.

ಇಮಿಟೇಶನ್ ವಜ್ರದ ಉಂಗುರುಗಳು,

ಈ ಉಂಗುರಗಳು ವಿಲಾಯತಿಯಲ್ಲಿ ತಯಾರಿಸಿದ್ದು; ಅತ್ಯುತ್ತಮವಾದ ವಜ್ರದ ಕಲ್ಲುಗಳನ್ನು ಇಟ್ಟು ಕೆಂಪು ಬಂಗಾರದಿಂದ ತಯಾರಿಸಿ ಮೇಲುಗಡೆ ಅಪರಂಜಿ ಬಂಗಾರದ ಗಿಲೀಟು ಮಾಡಿದೆ. ನೋಡಲು ಬಹು ಲಕ್ಷಣವಾಗಿ ಕಾಣುವದು. ಇದು ಶ್ರೀಮಂತರಿಗೂ ಗರೀಬರಿಗೂ ಲಾಯಿಖಾದದ್ದು.

ಕ್ರಯ ೧ಕ್ಕೆ ರೂ. ೨–೦–೦. ಕ್ರಯ ೩ಕ್ಕೆ ರೂ ೫–೨–೦

ವಿಳಾಸ ವಿ. ಎ ಎಸ್. ಪಾಣಿ ಕಂಪನಿ ಸಾಹುಕಾರಪೇಟೆ ಮದ್ರಾಸ

ಈ ತಿಂಗಳ ಕೊನೇ ವರಗೂ ಅರ್ಧ ಕ್ರಯ.

ಖರೆ ಕ್ರಯ ೩–೦–೦ ರಿಯಾಯತಿ ಕ್ರಯ ೧–೦–೦

ಆಶ್ಚರ್ಯ. ಪಾಕೆಟ್ ಸಿನಿಮಾಸ್ಕೋಪ್ ಯಂತ್ರ.

ಈ ಸಿನಿಮಾ ಕೋಪ್ ಯಂತ್ರಗಳು ಜರ್ಮನ್ ದೇಶದಿಂದ ತರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರ ಅಮೂಲ್ಯ ಪ್ರಯೋಗಗಳ ನಾಟಕಗಳ ದೇಶಗಳಲ್ಲಿ ಚಮತ್ಕಾರವಾಗಿ ಆಶ್ಚರ್ಯಕರವಾದ ಬೆಳಕಿನ ರೋಸ್, ಪರಲಾಂಡ್ಸ್ ... ಹ್ಯಾಪ್ಕಿನ್ಸ್, ಮುಂತಾದವರ ... ಫೋಟೋಗ್ರಾಫಗಳು ಈ ಯಂತ್ರದಲ್ಲಿ ಪ್ರಾಣವುಳ್ಳವರ ರೀತಿಯಾಗಿ ... ಕಾಣುವದು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ... ಕೊಳ್ಳಿರಿ. ಕ್ರಯ ... ಫಿಲಿಂಗಳು ಸಹ ಯಂತ್ರಕ್ಕೆ ರೂ ೧–೮–೦,

ರಾಸರಾಜ ... ಕಂಪನಿ. ... ಮುದ್ರಾಸ್

ಟಿಕ್ ಟಿಕ್ ಎಂಬ ಶಬ್ದವನ್ನು ಕೊಟ್ಟ ಮಾತ್ರಕ್ಕೆ ಗಡಿಯಾರಗಳು.



ಪತ್ರಿಕೆಗಳಲ್ಲಿಯೂ ಗಂಟೆ ತೋರಿಸುವ ನಂಬರುಗಳ ಮೇಲೆಯೂ ಕೆಂಪು ಕಲ್ಲು ಇಟ್ಟಿವೆ ಎಂದು ಇದನ್ನು ತರಿಸುವವರಿಗೆ ೧೦–೧೫ ಬಹುಮಾನಗಳೊಡನೆ ೫–೬ ವರುಷಗಳ ಗ್ಯಾರಂಟಿ ಸಹಿತ ೩–೪ ರೂಪಾಯಿಗಳಿಗೆ ಕೊಡುವವೆಂದು ಪ್ರಚುರವಾಗುವ ಪ್ರಕಟನೆಗಳನ್ನು ನೋಡಿಬೆರಗಾಗಿ ನಿಮ್ಮ ಹಣವನ್ನು ಕಳಕೊಳ್ಳಬೇಡಿ ಈ ನಮ್ಮ ಜಂಟಲ್‌ಮನ್ ... ವಾಚ ಬಹು ಉತ್ತಮವಾದ ... ಗಾಳಿಯೂ ಧೂಳೂ ಸೇರದಂತೆ ಗ್ಲಾಸ್ ... ಇರುವದು ಸರಿಯಾದ ಕಾಲವನ್ನು ತೋರಿಸುವದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವು ಸರಿಮಾಡಿಕೊಳ್ಳಬಹುದು ನೋಟಕ್ಕೆ ಗಂಭೀರವಾಗಿಯೂ ಸುಂದರವಾಗಿಯೂ ಇರುವದು. ಇದು ... ಈ ಗಡಿಯಾರದಲ್ಲಿ ... ಸುಲಭವಾಗಿ ಗಂಟೆ ನೋಡಬಹುದು. ಅಸ್ತರಿಂದ ... ವರ್ಣನ ಮಾಡುವದೇತಕ್ಕೆ? ಒಂದನ್ನು ತರಿಸಿನೋಡಿರಿ ತಿಳಿಯುವದು. ೪ ವರುಷಗಳ ಗ್ಯಾರಂಟಿ ಸಹಿತ ಕ್ರಯ ೬–೮–೦

ಮ್ಯಾನೇಜರ,— ಧೈರ್ಯ ಲಕ್ಷ್ಮಿ ಅಂಡ ಕೋ;

ಪೋ|| ಬಾ|| ನಂಬರು ೫೩೪ ಮದ್ರಾಸು.

ಸ್ವದೇಶೀ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ!

ಏಜಂಟರು) ಅತ್ಯುತ್ತಮ (ಬೇಕು

ಮಶಿ ಗುಳಿಗೆಗಳು ಮತ್ತು ಚೀಟಿಗಳು.

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೮—೦ | ಟ. ಖ. |
| ೧೦೦ ಚೀಟಿಗಳಿಗೆ | ೦—೧೪—೦ | |
| ೪೦ ಔಂಸ ಮಶಿ ಬುಡಿಕೆಗೆ | ೦—೪—೦ | ಬೇರೆ. |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸ:— ಕರ್ನಾಟಕ ಇಂಕ ಕಂಪನಿ, ಬಾಗಲಕೋಟೆ.

ಸುವರ್ಣರಾಜವಂಗೇಶ್ವರ

ಅಸ್ಸಲಮಾಲ. ೧ತೊ.ಕಿ.ರೂ.೪ ಇತೊ ಕಿ.ರೂ ... ತೊ.ಕಿ.ರೂ ೧ ... ನಮೂನಾ ೪೮ಆ

ವಾದಿರಾಜ ಜಹಾಗೀರದಾರ

ರಾಷ್ಟ್ರೀಯ ಶಾಳಾ.

ಧಾರವಾಡ.

ಇಂಡಿಯಾ ಪ್ರಾವ್ಹಿಡಂಟ ಕಂ. ಲಿ. ಕಲ್ಕತ್ತಾ.

ಮಧ್ಯಮ ಸ್ಥಿತಿಯ ಕುಟುಂಬದಾರರಿಗೆ ಈ ... ಕಾಲದಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ... ಯಾಗಿರುವದು ಅದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ... ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನು ದುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರಿಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ

V. J. PARVATIKER

General Agent, BAGA

ಸರಸ್ವತೀ ವಾಚನಾಲಯ.

ಶ್ರೀ. ರವೀಂದ್ರನಾಥ ಟಾಗೋರ ಇವರ (Waterfall) ವಾಟರಫಾಲ್‌ದ

ಕನ್ನಡ ಭಾಷಾಂತರವು.

# ಮುಕ್ತಧಾರಾ.

ನಾಟಕ.

ಭಾಷಾಂತರಕಾರ:— ಕೆ. ಆರ್. ಕುಲಕರ್ಣಿ.

ಬೆಲೆ ೧ ರೂ.

ಮುದ್ರಣವಾಗುತ್ತಲಿ

ಪೋಸ್ಟೇಜ ಬೇರೆ.

ವಿಳಾಸ:— ಎಸ್. ಎನ್. ಹೊಸಮನಿ ಗುಳೇದಗುಡ್ಡ.

ಮದನಕಾಮೇಶ್ವರೀ ವಟಿ.

ಕ್ರಯ. ೨ ರೂ || ಅಂಚೆ ವೆಚ್ಚ ಬೇರೆ

ಉತ್ತಮ ಶಕ್ತಿವರ್ಧಕ ಔಷಧ. ಗುಣಬಾರದಿದ್ದರೆ ಹಣ ವಾಪಸ. ಒಮ್ಮೆ ಅನುಭವ ತೆಗೆದುಕೊಳ್ಳಿರಿ; ಕ್ಯಾಟಲಾಗು ತರಿಸಿ ನೋಡಿರಿ.

ಜಂಬುನಾಥ ಕಂಪನಿ, ಬಾಗಲಕೋಟೆ,

ಕಂಬಳಿಗಳು ! ॥ಶ್ರೀ ವಿಠ್ಠಲ ಪ್ರಸನ್ನ ॥ ಉತ್ಕೃಷ್ಟ ಕಂಬಳಿಗಳು

ಕೋಟುಗಳಿಗೂ ಓವ್ಹರಕೋಟುಗಳಿಗೂ ಉಪಯೋಗವಾಗುವವು.

ಸುಪ್ರಸಿದ್ಧ

# ಬಾಗಲಕೋಟೆಯ ಕಂಬಳಿಗಳು.

ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತವೆ. ಬೆಲೆ ೭ ರೂಪಾಯಿಗಳಿಂದ ೨೫ ರೂ॥ಗಳವರೆಗೆ.

ಈ ಕಂಬಳಿಗಳಿಂದ ಕೋಟಗಳನ್ನು ಹೊಲಿಸಿದರೆ ಪರದೇಶೀ ಸರ್ಜ ಅವುಗಳಿಗಿಂತ ಶ್ರೇಷ್ಠವಾಗಿ ತೋರುವವು! ನೋಡಲಿಕ್ಕೆ ಬಹಳಂದ ಓವ್ಹರ ಕೋಟುಗಳಿಗಂತೂ ತುಂಬಾ ಒಪ್ಪುತ್ತವೆ. ಈಗಿನ ಸ್ವದೇಶೀ ಚಳವಳಿಗೆ ಅತಿಶಯ ಅನುಕೂಲ. ಯಾಕಂದರೆ ಉಣ್ಣೆಯು ಇಲ್ಲೇ ತಯಾರಾಗಿದ್ದು, ಉಣ್ಣೆಯಿಂದ ಕಂಬಳಿಗಳು ಇಲ್ಲೇ ಸಿದ್ಧವಾಗಿವೆ. ಈ ಕಾರಣಕ್ಕಾಗಿಯೇ ಮುಂಬಯಿ ಬೆಳಗಾಂವಿಗಳಿಂದ ಪ್ರತಿ ತಿಂಗಳಿಗೆ ನೂರ ಗಟ್ಟಲೇ ಕಂಬಳಿಗಳನ್ನು ವ್ಯಾಪಾರಸ್ಥರು ನಮ್ಮಿಂದ ತರಿಸಿಕೊಳ್ಳುತ್ತಾರೆ. ಪರಸ್ಥಳದಲ್ಲಿರುವ ಜನರು ಅರ್ಧ ಮುಂಗಡ ಹಣವನ್ನು ಕಳುಹಿಸಿ ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಗಿರಾಕಿಗಳು ತಮಗೆ ಕಂಬಳಿಗಳು ಯಾವ ಕಾರಣಕ್ಕಾಗಿ ಬೇಕೆಂಬದನ್ನು ತಿಳಿಸಿದರೆ ಒಳ್ಳೇ ನಮೂನೆಯನ್ನು ಆರಿಸಿ ಕಳುಹುವೆವು. ವ್ಯಾಪಾರಸ್ಥರಿಗೆ ಯೋಗ್ಯ ದರ.

**ಶ್ಯಾಮರಾವ ಮತ್ತು ರಾಜೇರಾವ ಮಂಗಳವೇಢೇಕರ.**
ಜವಳೀ ವ್ಯಾಪಾರಸ್ಥರು. ಬಾಗಲಕೋಟೆ

# ಡಾ. ಇಂಗಳೀಕರ

ಎಲ್. ಸಿ. ಎಚ್. ಸಿ.

**ಇವರ**

## ಹದಿನೆಂಟುವರ್ಷ ಅನುಭವದಿಂದ ಉತ್ತಮವೆಂದು ನಿಶ್ಚಿತವಾದ ಔಷಧಗಳು.

| | | | |
|---|---|---|---|
| ಬಾಲಾಮೃತ **ಹುಡುಗರಿಗೆ** | ೦ | ೧೨ | ೦ |
| **ಹೆಮ್ಯಾಟೋ ಸಾರ್ಸಾಪರಿಲಾ** | ೧ | ೦ | ೦ |
| ವ್ಹೆಜಿಟೇಬಲ್ **ಟಾನಿಕ ಜಾಯರಪ** ರಕ್ತವ ರ್ಧಕ ಮತ್ತು ಸ್ಮರಣಶಕ್ತಿಯುವರ್ಧಕ | ೧ | ೦ | ೦ |
| ವೀರ್ಯವರ್ಧಕ ಸಾಯರಪ್ | ೧ | ೦ | ೦ |
| ಗರಮಿಯ ಗುಳಿಗೆಗಳು, ಪುಡಿಯು ಮತ್ತು ಅರ್ಕವು | ೧ | ೦ | ೦ |
| ಪರಮಿಯ ಔಷಧಗಳು | ೧ | ೦ | ೦ |
| ಚಟ್ಟಿಗಳ ಮಲಮು | ೦ | ೮ | ೦ |
| ಜಳಿಜ್ವರ ಗುಳಿಗೆಗಳು | ೦ | ೧೨ | ೦ |
| ಮುಟ್ಟಿನ ಬೇನೆಯ ಗುಳಿಗೆಗಳು | ೧ | ೦ | ೦ |
| ಸುಖಪ್ರಸೂತಿಯ ಗುಳಿಗೆ | ೧ | ೦ | ೦ |

**ಡಾ. ಇಂಗಳೀಕರ,** L. C. H. C.
ಬಾಗಲಕೋಟೆ.

## ದಿ. ಕರ್ನಾಟಕ ಹೋಮಿಯೋ ಫಾರ್ಮಸೀ

**ಬಾಗಲಕೋಟೆ.**

ಕರ್ನಾಟಕದಲ್ಲಿ ಪೂರ್ಣ ವಿಶ್ವಸನೀಯವಾದ ಹೋಮಿಯೋಪಾಥಿಕ್ ಔಷಧಗಳನ್ನು ಪೂರೈಸುವ ಫಾರ್ಮಸಿಯು ಇದೇ ಮೊದಲನೇಯದು ಈ ಔಷಧಗಳನ್ನು ಅಮೇರಿಕೆಯಿಂದಲೇ ತರಿಸುತ್ತಿದ್ದು ಅನುಭವಿ ಪದವೀಧರರಾದ ಡಾಕ್ಟರರ ಪ್ರತ್ಯಕ್ಷದಲ್ಲಿ ತಯಾರಾಗುತ್ತಿರುವದರಿಂದ ಅವುಗಳ ಬಗ್ಗೆ ಯಾರಿಗೂ ಸಂಶಯ ತೆಗೆದುಕೊಳ್ಳಲಿಕ್ಕೆ ಮಾರ್ಗವಿಲ್ಲ ಔಷಧಗಳನ್ನು ತರಿಸಿ ಅನುಭವವನ್ನು ತೆಗೆದುಕೊಳ್ಳಬೇಕು

**ವ್ಯವಸ್ಥಾಪಕ.**

**ಶ್ರೀ ಬನಶಂಕರೀಪ್ರಸನ್ನ.**

ಸ್ವದೇಶೀ ! ಶುದ್ಧಸ್ವದೇಶೀ !! ಒಡಿವೆಗಳು !!!

ಎಲ್ಲ ತರದ ಸ್ವದೇಶೀ - ಶುದ್ಧಸ್ವದೇಶೀ - ಒಡಿವೆಗಳನ್ನು ನಾವು ಸಂಗ್ರಹಿಸಿದ್ದೇವೆ. ನಮ್ಮ ದೇಶದೊಳಗಿನ ಕಲಾಕೌಶಲ್ಯಗಳು ಮುಂದಕ್ಕೆ ಬರಲು ಉತ್ತೇಜನದೊರೆಯಬೇಕೆಂಬ ಮತ್ತು ನಮ್ಮ ರಾಷ್ಟ್ರದ ಉದ್ಯೋಗವು ಬೆಳೆಯಬೇಕೆಂಬ ಉದ್ದೇಶದಿಂದಲೇ ನಾವು ಈ **ಸ್ವದೇಶೀ ಸಂಗ್ರಹಾಲಯವನ್ನು** ಸ್ಥಾಪಿಸಿದ್ದೇವೆ ಸ್ವದೇಶೀ ಸಕ್ಕರೆ, ಕೈನೂಲಿನಿಂದ ತಯಾರಾದ ಶುದ್ಧ ಖಾದಿಯ ಶೀರೆ, ಧೋತರ, ಖಣ ಮೊದಲಾದ ವಸ್ತ್ರಗಳೂ, ಕಡ್ಡೀಪೆಟ್ಟಿಗೆ ಸೀಸಪೇನ, ಕಾಗದ ಮತ್ತು ಬೇರೆ ತರದ ಸ್ವದೇಶಿ ಸ್ಟೇಶನರೀ ಸಾಮಾನುಗಳೂ, ಪೇಟೆಂಟ ದೇಶೀ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

**ಭಾರತ ವಸ್ತು ಸಂಗ್ರಹಾಲಯ,**
**ಮತ್ತು ಮಹಾತ್ಮಾ ವಸ್ತ್ರ ಭಾಂಡಾರ.**
ಬಾಗಲಕೋಟೆ.

## *Shree Mahalaxmi Stores,*

BAGALKOT.

Wholesale Dealers in papers, swadeshi slates, and Ogle's glass Wares

ನಮ್ಮಲ್ಲಿ ಎಲ್ಲ ತರದ ಕಾಗದಗಳೂ, ಸ್ವದೇಶೀ ಪಾಟಿಗಳೂ, ಮೈಸೂರಿನ ಸಾಬೂಣಗಳೂ ಮತ್ತು ಸುಗಂಧ ದ್ರವ್ಯಗಳೂ, ಬೇರೆ ಬೇರೆ ಪಕ್ಷದ ಖಾದಿ ವಸ್ತ್ರಗಳೂ, ಮತ್ತು ಇತರ ಸ್ಟೇಶನರೀ ಸಾಮಾನುಗಳೂ ಮಾರಲಿಕ್ಕೆ ದೊರೆಯುತ್ತವೆ.

*Proprietors:—*
Parvatikar & Katgeri Bros, BAGALKOT. } **ಶ್ರೀ ಮಹಾಲಕ್ಷ್ಮೀ ಸ್ಟೋರ್ಸ**

**ಬಾಗಲಕೋಟೆ.**

ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಶ್ರೀನಿವಾಸ ರಾಜೇರಾವ ಮಂಗಳವೇಢೇ (ಸಂಪಾದಕ) ಇವರು ಮುದ್ರಿಸಿದರು ಮತ್ತು ಅಲ್ಲಿಯೇ ಕನಕಾಚಾರ್ಯ ಬಂಡಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ಆದರ್ಶಸತ್ಯಾಗ್ರಹ.

K. N. B 1589

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟ ಆಶ್ವಿನ ವದ್ಯ ೩ ಶಕೆ ೧೮೪೩ ಗುರುವಾರ ತಾ ೧೩ ಅಕ್ಟೋಬರ ೧೯೨೧ | ಸಂಚಿಕೆ ೪೫

## ಮಹಾತ್ಮರ ನುಡಿಯು.

**ರಾಜಕುಲೋತ್ಪನ್ನರಾದ ಡ್ಯೂಕ ಕನಾಟ ಮಹಾಶಾಲಿಗಳಿಗೆ ಕಳಗೆಕೊಟ್ಟ ಪತ್ರವನ್ನು ಮಹಾತ್ಮಾ ಗಾಂಧಿಯವರು ಅರಸುಮನೆತನಸ್ಥರಾದ ಡ್ಯೂಕ ಕನಾಟ ಪ್ರಭುಗಳಿಗೆ ಕಳಿದ ವಾರ ಬರೆದು ಕಳಿಸಿರುವರು.**

[ಯಂಗ ಇಂಡಿಯಾ ತಾ|| ೯-೨-೧೯೨೧ ಇಸ್ವಿ.)

ಮಹನೀಯರೆ, ಅಸಹಕಾರ ಚಳವಳಿಯ ವಿಷಯಕ್ಕೂ ಮತ್ತು ಅಸಹಕಾರವಾದಿಗಳ ಬಗ್ಗೆ ಹಾಗೆಯೇ ಅದರ ನಿವ್ರ ಪ್ರವರ್ತಕನಾದ ನನ್ನ ವಿಷಯಕ್ಕೂ ಮಹಾಪ್ರಭುಗಳು ಸಾಕಷ್ಟು ಕೇಳಿರಬಹುದು. ಆದರೆ ಮಹಾಪ್ರಭುಗಳ ಕರ್ಣಪಥಕ್ಕೆ ಬರುತ್ತಿರುವ ಸುದ್ದಿಯು ಸಹಜವೇ ಏಕಪಕ್ಷದ್ದಾಗಿರಲಿಕ್ಕೆ ಬೇಕು; ಆದ್ದರಿಂದ, ನಾನೂ ಮತ್ತು ಮಹಮ್ಮದ ಅಲ್ಲಿ ಶೌಕತ ಅಲ್ಲಿ ಮೊದಲಾದ ನನ್ನ ಪರಮ ಸಹಕಾರಿಗಳು ನಡಿಸಿರುವ ಈ ಅಸಹಕಾರ ಚಳವಳಿಯ ನಿಜವಾದ ಧ್ಯೇಯವನ್ನೂ ಮತ್ತು ಅದರ ಸಾಧನಗಳನ್ನೂ ತಮಗೆ ತಿಳಿಸುವದೊಂದು ಕರ್ತವ್ಯವೇ ಎಂದು ಭಾವಿಸಿರುವೆನು.

ಅರಸುಮನೆತನದವರಾದ ತಮ್ಮಂಥ ಮಹಾನುಭಾವರ ಆಗಮನವನ್ನು ನಿಷೇಧಿಸುವದರಲ್ಲಿ ಮುಖ್ಯಾಂಗವನ್ನು ತೊಗೆದುಕೊಳ್ಳಲಿಕ್ಕೆ ನನಗೆ ತಿಳಮಾತ್ರವೂ ಸಂತೋಷವೆನಿಸದೆ ಸರಕಾರಕ್ಕೆ ಸಹಾಯಮಾಡುವದೇ ನನ್ನ ಜನ್ಮಭೂಮಿಯ ಸ್ವಾತಂತ್ರ್ಯದ ಮಾರ್ಗವೆಂದು ನಂಬಿ ಅಖಂಡ ಮೂವತ್ತು ವರ್ಷಗಳವರೆಗೆ ಸತತವಾಗಿ ಈ ಸರಕಾರಕ್ಕೆ ರಾಜನಿಷ್ಠೆಯಿಂದಲೂ ಸಂತೋಷದಿಂದಲೂ ಸಹಾಯ ಮಾಡುತ್ತ ಬಂದೆನು. ಆದ್ದರಿಂದ ರಾಜಕುಲಭೂಷಣರಾದ ತಮ್ಮ ಸ್ವಾಗತ ಸಮಾರಂಭವನ್ನು ನೆರವೇರಿಸಬಾರದೆಂದು ಈಗ ಹೇಳುತ್ತಿರುವದು ನನಗೇನು ಸಣ್ಣಮಾತಾಗಿಲ್ಲ. ನೀವು ಇಂಗ್ಲೀಶ ಗೃಹಸ್ಥರೆಂದು ನಮ್ಮಲ್ಲಿ ಯಾರೂ ನಿಮ್ಮನ್ನು ವಿರೋಧಿಸುವದಿಲ್ಲ. ವ್ಯಕ್ತಿಶಃ ನೀವು ನಮಗೆ ನಮ್ಮ ಓರ್ವ ಪರಮ ಮಿತ್ರನಷ್ಟೇ ಪೂಜ್ಯರಾಗಿರುವಿರಿ. ನಿಮ್ಮ ಜೀವದ ಮೇಲೆ ಬಂದಾಗ್ಯೆ ತನ್ನ ಜೀವದ ಹಂಗುದೊರೆದು ನಿಮ್ಮನ್ನು ರಕ್ಷಿಸಿಕೊಳ್ಳಲಿಕ್ಕೆ ಪ್ರಯತ್ನಿಸಲಾರದಂಥವರು ನನ್ನ ಮಿತ್ರರಲ್ಲಿ ಯಾರೂ ಇಲ್ಲ. ವ್ಯಕ್ತಿಶಃ ಇಂಗ್ಲೀಶ ಜನರ ವಿರುದ್ಧ ನಮ್ಮ ಜಗಿದಾಟವಿರುವದಿಲ್ಲ. ಇಂಗ್ಲೀಶರ ಪ್ರಾಣಹಾನಿಯನ್ನು ಮಾಡಲಿಕ್ಕೆ ನಮ್ಮ ಪ್ರಯತ್ನವಿರುವದಿಲ್ಲ. ಆದರೆ ಶರೀರದಿಂದಲೂ ಮಾನಸಿಕ ಮತ್ತು ಆಧ್ಯಾತ್ಮಿಕತೆಯೂ ನಮ್ಮನ್ನು ಹಿಂಡಿ ನಿರ್ಬಲರನ್ನಾಗಿ ಮಾಡಿದ ಈ ರಾಜ್ಯಪದ್ಧತಿಯನ್ನು ಧ್ವಂಸಿಸುವದಕ್ಕೆ ನಾವು ಪ್ರವರ್ತರಾಗಿರುವದೇನು ನಿಜವು. ಪಂಜಾಬದ ಕೊಲೆಗೂ ಇಸ್ಲಾಮು ಧರ್ಮದ ಮಾನಹಾನಿಗೂ ಕಾರಣೀಭೂತವಾಗಿರುವ ಇಂಗ್ಲೀಷರ ಸ್ವಭಾವದಲ್ಲಿಯ ಡಾಯರ ಒಡ್ವಾಯರತ್ವದ ವಿರುದ್ಧ ನಮ್ಮ ಎಲ್ಲ ಸಾಮರ್ಥ್ಯದಿಂದ ಹೋರಾಡಲಿಕ್ಕೆ ನಿಶ್ಚಿತರಾಗಿರುವೆವು. ನೀವು ಮೆರಸುತ್ತಿರುವ ನಿಮ್ಮ ಶ್ರೀಷ್ಠತ್ವವನ್ನೂ ಮತ್ತು ಮೂವತ್ತು ಕೋಟಿ ಹಿಂದೀ ಜನರ ಇಚ್ಛೆಯ ಮನಸನ್ನು ಮುರಿದು ಎಲ್ಲರಲ್ಲಿಯೂ ನಿಮ್ಮ ಪ್ರಾಧಾನ್ಯವನ್ನೇ ಬೀರುತ್ತಿರುವದನ್ನೂ ಸಹಿಸುವದೆಂದರೆ ನಮ್ಮ ಸ್ವಾಭಿಮಾನಕ್ಕೆ ... ಆಗಿರುವದು; ಇದು ಮೇಲಾಗಿ ಅಪಮಾನಕಾರಕವಾಗಿಯೂ ಇರುವದು. ಮೂವತ್ತು ಲಕ್ಷ ಹಿಂದೀ ಪ್ರಜಾ ಜನರು ಒಂದು ಲಕ್ಷ ಇಂಗ್ಲೀಶ ಜನರಿಗೆ ಅಧೀನರಾಗಿ ಹಗಲಿರಳು ಅವರ ಅಂಜಿಕೆಯಿಂದ ಆಂಗ್ಲೈಯಲ್ಲಿ ತಮ್ಮ ಜೀವವನ್ನು ಹಿಡಿದು ಕೊಂಡು ಬಾಳುತ್ತಿರುವದು ನಿಮಗಾದರೂ ಗೌರವದ ಮಾತಲ್ಲ. ಭೂಷಣವೂ ಅಲ್ಲ.

ರಾಜಕುಲೋತ್ಪನ್ನರಾದ ತಾವು ಇಂಥ ಪದ್ಧತಿಯನ್ನು ಮುರಿಯಲಿಕ್ಕಲ್ಲದೆ ಅದಕ್ಕೆ ನಿಮ್ಮ ಆಶ್ರಯವನ್ನು ಕೊಡಲಿಕ್ಕೆ ಬಂದಿರುವಿರಿ. ನಿಮ್ಮ ಮೊದಲನೇ ಭಾಷಣದಲ್ಲಿಯೇ ವಿಲಿಂಗಡನ್ ದೊರೆಗಳನ್ನು ಯಥೇಚ್ಛ ಸ್ತುತಿಸುವದಾಯಿತು. ನಾನಾದರೂ ಅವರನ್ನು ಬಲ್ಲೆನು. ಅವರು ಸಗೃಹಸ್ಥರೂ ಪ್ರಾಮಾಣಿಕರೂ ಮತ್ತು ಸುಸ್ವಭಾವದವರೂ ಇದ್ದು ತಾವಾಗಿ ಒಂದು ನೊಣವನ್ನು ಸಹ ಪೀಡಿಸದವರಾಗಿರುವರು. ಆದರೂ ಅವರ ರಾಜ್ಯವಾಳುವದು ಯಶಸ್ವಿಯಾಗಿರುವದಿಲ್ಲ. ತನ್ನ ಪ್ರವಿಶ ಪ್ರಾಂತದ ಜನರ ಆಕಾಂಕ್ಷೆಗಳನ್ನು ಚನ್ನಾಗಿ ತಿಳಿದುಕೊಂಡಿರುವದಿಲ್ಲ. ಇಲ್ಲಿ ಮತ್ತೆ ಬಂಗಾಲದ ಗವ್ಹರ್ನರಿನಿಗೊಂದು ಶಿಫಾರಿಸಿನ ಪತ್ರವನ್ನು ಬರೆಯುತ್ತಿರುವಿರಿ. ಅವರಾದರೂ—ನಾನು ತಿಳಿದರ ಮಟ್ಟಿಗಂತೂ ಮಾನನೀಯರಾದ ಸಗೃಹಸ್ಥರಾಗಿದ್ದರೂ ಬಂಗಾಲ ಜನರ ಹೃದ್ಗತವನ್ನೂ ಅವರ ಇಚ್ಛೆಗಳನ್ನೂ ಏನೂ ಅರಿಯರು. ಕಲಕತ್ತೆಯೆಂದರೆ ಎಲ್ಲ ಬಂಗಾಲವಲ್ಲ. ಫೋರ್ಟ ಉಯಲಿಯಮ್ ಮತ್ತು ಕಲಕತ್ತೆಯೊಳಗಿನ ಅರಮನೆಗಳು— ಈ ಫಲದ್ರೂಪವಾದ ಪ್ರಾಂತದ ಸುಸಂಸ್ಕೃತರಾದ ಒಕ್ಕಲಿಗರಿಂದ ಅವರ ಮರಗನ್ನು ಲೆಕ್ಕಿಸದೆ ಅವರ ಆಸ್ತಿಯನ್ನು ಅಪಹರಿಸಿದರ ಕುರುಹುಗಳಾಗಿರುವವು.

ಮುಂದಿನ ಸಂಚಿಕೆಯಲ್ಲಿ

# ಕನ್ನಡ ನವಜೀವನ.

ಆಶ್ವಿನ ವದ್ಯ ೬ ಗುರುವಾರ ಶಕೆ ೧೮೪೪


## ಆದರ್ಶ ಸತ್ಯಾಗ್ರಹ.

(ನವಜೀವನ)

ಪಂಜಾಬದಲ್ಲಿ ಅಕಾಲೀ ಶೀಖಬಂಧುಗಳ ಸತ್ಯಾಗ್ರಹವು ಮೊದಲಿನಂತೆಯೇ ಈ ವರೆಗೂ ನಡೆದಿರುವದು. ಅವರ ಉತ್ಸಾಹವು ತಿಲ ಮಾತ್ರವಾದರೂ ಕಡಿಮೆಯಾಗಿಲ್ಲ. ಇಂದಿನವರೆಗೆ ೧೧೩೬ ಅಕಾಲೀ ಜನರು ಘಾಯ ಹೊಂದಿದರು ಪಂಜಾಬ ಸರಕಾರದವರು ಈಗ ಅತ್ಯಾಚಾರದಿಂದ ಅವರನ್ನು ಹಿಂದಕ್ಕಟ್ಟುವದನ್ನು ನಿಲ್ಲಿಸಿರುವರು. ಆದರೂ ಪೋಲೀಸರ ಪಶುತುಲ್ಯವರ್ತನವು ಅವರ್ಣನೀಯವಾದದ್ದು. ಎರಡೂ ಕಡೆಯ ಜನರು ತಮ್ಮ ಕೆಲಸವನ್ನು ವ್ಯವಸ್ಥೆಯಿಂದ ನಡೆಸಿದ್ದಾರೆ. ಮತ್ತು ಎರಡೂ ಕಡೆಯವರು ತಮ್ಮ ತಮ್ಮ ಕರ್ತವ್ಯದ ಆದರ್ಶರಾಗಿದ್ದಾರೆ. ಶೀಖರ ಸತ್ಯಾಗ್ರಹವೂ ಅಲ್ಲ; ಸರಕಾರದ ದುರಾಗ್ರಹವೂ ಅಲ್ಲ; ಆದರೆ ಜಗತ್ತಿನಲ್ಲಿ ಇವರ ಉದಾಹರಣೆಯು ಮಾತ್ರ ಅದ್ಭುತವಾಗಿದೆ; ದೇವಾಸುರರ ಕಾಳಗವು ಪುನಃ ಪ್ರಾರಂಭವಾಗಿದೆಯೋ ಏನೋ ಅನ್ನುವಹಾಗೆ ಆದೆ. ಒಂದು ಪಕ್ಷದವರಿಗೆ ಅಹಿಂಸೆ, ಆತ್ಮಾ ಮತ್ತು ಸತ್ಯದ ಬಲವು; ಎರಡನೇ ಪಕ್ಷದವರಿಗೆ ಅನ್ಯಾಯ ಮತ್ತು ಪಶುಬಲ. ಒಬ್ಬರಿಗೆ ಅಖಂಡ ಜನತೆಯ ಶಕ್ತಿಯು ಎರಡನೇಯವರಿಗೆ ಭಾರತೀಯ ನೌಕರಶಾಹಿಯ-ಅಧಿಕಾರ-ಸಾಮ್ರಾಜ್ಯ ಸರಕಾರದ ಸಹಾಯವು; ವಿಜಯಶ್ರೀಯು ಸತ್ಯ ಮತ್ತು ಧರ್ಮದ ಕಡೆಗೇ ಹೋಗುವಳು ಶ್ರೀಯುತ ಚಿತ್ತರಂಜನ ದೇಶಬಂಧು ದಾಸ, ಶ್ರೀ. ಪಟೇಲ ಶ್ರೀಮತಿ ಸರೋಜಿನಿ, ಹಕೀಮ ಸಾಹೇಬ ಮೊದಲಾದ ಕಾಂಗ್ರೆಸ ಮತ್ತು ಖಿಲಾಫತ ಕಮೀಟಿಗಳ ಪ್ರಾಯಃ ಎಲ್ಲ ಮುಂದಾಳುಗಳು ಅಲ್ಲಿಗೆ ಹೋಗಿರುವರು ಕಾರ್ಯಕಾರೀ ಮಂಡಲದ ಸಭೆಯು ಅಲ್ಲಿಯೇ ೨೭-೨೮ ನೇ ತಾರೀಖಿಗೆ ಕೂಡುವದು; ಈ ಪ್ರಶ್ನೆಯು ಕೇವಲ ಒಂದು ಜಾತಿಯ ಅಥವಾ ಒಂದು ಪ್ರಾಂತದ್ದಲ್ಲ ಶೀಖರ ಉಜ್ವಲ ಮತ್ತು ಆದರ್ಶಸತ್ಯಾಗ್ರಹವು ಸರ್ವ ಹಿಂದೂದೇಶದ್ದಾಗಿದೆ; ಶೀಖ ಜಾತಿಯು ಬಹಳ ದಿಟ್ಟವಾದದ್ದಿರುವದು, ಇಂದಿನವರೆಗೆ ಅವರ ಶಸ್ತ್ರಯುದ್ಧವನ್ನು ನೋಡಿ ಜನರು ಅವರನ್ನು ಅಭಿನಂದಿಸುತ್ತಿದ್ದರು; ಆದರೆ ಈಗ ಅವರ ಸತ್ಯ, ಆತ್ಮಿಕಬಲ, ಅಹಿಂಸಾ ಧರ್ಮಗಳಿಂದ ಹಿಂದಮಾತೆಯನ್ನೇ ಮುಗ್ಧಮಾಡಿರುವರು; ಪಂಡಿತ ಮಾಲವೀಯರು ಜಾಲಿಯನವಾಲಾದ ಭಾಷಣದಲ್ಲಿ ಅಂದದ್ದೇನೆಂದರೆ, ಇವರ ಮನೋಧೈರ್ಯ ಮತ್ತು ಆತ್ಮಿಕಬಲದ ತೇಜವು ಜಗತ್ತಿನಲ್ಲಿ ಎಲ್ಲಿಯೂ ಸಿಗಲಾರದು; ಯಾವ ಜನರು ಮಹಾತ್ಮಾಜಿಯ ಅಹಿಂಸಾ ಧರ್ಮ ಮತ್ತು ಕಷ್ಟ ಸಹನಮಾಡುವ ಅವರ ಸಿದ್ಧಾಂತಗಳನ್ನು ಕೇಳಿ, ಮೋಹಿತರಾಗುತ್ತಾರೋ, ಅವರು ಈ ಶೀಖ ಜನರ ಕಡೆಗೆ ಬಂದು ಜನತೆಯು ಯಾವ ಪ್ರಕಾರದಿಂದ ಅವರ ಉಪದೇಶವನ್ನು ಪಾಲನಮಾಡುತ್ತಿರುವದೆಂಬದನ್ನೂ ಮತ್ತು ಅವರು ಎಷ್ಟು ವಿನೀತರೂ ತೇಜಸ್ವಿಗಳಾಗಿರುವದೆಂಬದನ್ನೂ ನೋಡಬೇಕು. ಸತ್ಯ, ಅಹಿಂಸಾಧರ್ಮ ಮತ್ತು ಖಾದಿಯು, ಅವುಗಳ ಮರ್ಮ ಎಂದೇನೆಂಬವರು ಮತ್ತು ಸ್ವರಾಜ್ಯವನ್ನು, ವ್ಯವಹಾರದಾಚರಣೆ ತಿಳಿಯಬಯಸುವ ಜನರು ಈ ಸಮಯದಲ್ಲಿ ಪಂಜಾಬದ ಸಂಚಾರವನ್ನು ಅವಶ್ಯವಾಗಿ ಮಾಡಿ ಬರಬೇಕು; ಖಾದೀಮಯ ಶೀಖರನ್ನೂ ಅವರ ಪವಿತ್ರ ಆಚರಣೆಯನ್ನೂ ನೋಡಿದವರಿಗೆ ಅಹಿಂಸಾ ಮತ್ತು ಸತ್ಯದ ಯಥಾರ್ಥವು ಕಂಡುಬರುವದು.

"ಖಾದಿಯನ್ನು ಧರಿಸಿದರೆ ಮಾತ್ರ ಒಳಗೆ ಪ್ರವೇಶವು;" ಎಂಬ ಮಾತುಗಳು ಶೀಖವೀರರ ಖಾದಿಯ ಮಹತ್ವವನ್ನೂ, ವ್ಯವಹಾರಿಕತೆಯನ್ನೂ ತೋರಿಸುವವು. ಆಗ ಅವರ ಕಣ್ಣುತೆರೆಯುವವು ಇಷ್ಟು ಸ್ತ್ರೀಯರು ವರ್ಷಗಳಿಂದ ಸತತ ಚಿಂತನ, ಮನನ ಮತ್ತು ದೇಶದ ಮೂಲೆ ಮೂಲೆಗಳಲ್ಲೆಲ್ಲ ತಿರುಗಾಡಿ ದೇಶಸ್ಥಿತಿಯನ್ನು ಪೂರ್ಣವಾಗಿ ಅಭ್ಯಾಸಮಾಡಿ ಮಹಾತ್ಮಾಜಿಯವರು ಯಾವ ದಂಡೆಗೆ ಬಂದು ಮುಟ್ಟಿರುವರೋ ಅದೇ ಒಳಿತೋ? ಅಥವಾ ಯಾರು ತಮ್ಮ ಮನೆಯಲ್ಲಿಯೇ ಸ್ವಸ್ಥವಾಗಿ ಕುಳಿತುಕೊಂಡು ವರ್ತಮಾನಪತ್ರದ ವಾಲಿಗಳನ್ನು ತಿರುವಿ ತಿರುವಿ ಮತಕೊಡುತ್ತಿರುವರೋ ಅದು ಒಳಿತೋ!

---

## ಡಾಕ್ಟರ ನಾರಾಯಣರಾವ ಹರ್ಡೀಕರ ಇವರ ಭಾಷಣವು.

ಬಾಗಲಕೋಟೆ ತಾ॥ ೨೬-೯-೨೨ ಇಸ್ವಿ

ನನ್ನ ಪ್ರಿಯಬಂಧುಗಳೇ.

ಯವಾದದ್ದನ್ನೇ ಅನುಸರಿಸಿದ ಸತ್ಯಾಗ್ರಹದ ಉದಾಹರಣೆಗಳು ಇಂಗ್ಲೀಷ ಫ್ರೆಂಚ ಜನರ ಇತಿಹಾಸಗಳಲ್ಲಿ ಅಡಿಗಡಿಗೆ ಕಂಡು ಬರುವವು. ಯಾವನನ್ನೂ ತಿಳಿಯದ ಜನರಿಗೂ ಸಹ ತಮ್ಮ ಕೃತಿಗಳಿಂದ ತಾವು ಸಹಿಸಬೇಕಾಗುವದಲ್ಲವೆಂದು ವಿಚಾರಿಸಿ ಈ ಕರ್ತಾ ಪುರುಷರು ಮಾರ್ಗದಿಂದ ಪರಾವೃತ್ತರಾಗಲಿಲ್ಲ. ನಮ್ಮ ದೇಶದ ಇತಿಹಾಸವಾದರೂ ಇಂಥದೇ ಆಗಬೇಕಲ್ಲವೆ. ಹಿಂದೆ ಆಗಿ ಹೋದ ಉದಾಹರಣೆಗಳಿಂದ ನಾವು ಕಲಿವುದರಲ್ಲಿ ಬುದ್ಧಿ ಗಲಿಯಬಹುದು. ಆದರೆ ನಾವು ಮೊಂಡಾಕ್ಷ್ಯ ಹೋಗಲು ಮುಂದುವರಿಯಬೇಕೆಂಬುದನ್ನು ಮರೆತು ನಡೆಯಲಾಗದು. ಕಷ್ಟ ಸಹಿಸುವದು ನಮ್ಮ ಜೀವಿತದ ಆಧಾರವಾಗಿರುವದು ಇದನ್ನು ಇದರಲ್ಲಿ ಸುಧಾರಿಸುವದೆಂದರೆ ನಾನಾಗಿ ಹಿಂಸೆ ಮಾಡಬಾರದು. ಹಿಂಸೆ ಮಾಡುವದರಿಂದ ನಮ್ಮ ಸಹಿಸೋಣವು ಹೆಚ್ಚು ರುಚಿಯಾದದ್ದಾಗಿ ಯಶಸ್ಸು ತೀವ್ರವೇ ದೊರೆಯುವದು. ನಾವು ಹಿಂದಿನಲ್ಲಿ ಸಿನ್ ಫಿನ್‌ರಂತೆ ಶಾರೀರಿಕ ಬಲವನ್ನುಪಯೋಗಿಸಿ ಜನರನ್ನು ನಮ್ಮ ಮಾರ್ಗಕ್ಕೆ ತರಬಲ್ಲೆವು, ಶಕದ ಪುರುಷ ಹರಿಶ್ಚಂದ್ರನು ಮಾಡಿದಂತೆ ಮುಂಗೈ ಜೋರಿನಿಂದ ಜನರನ್ನು ನಮ್ಮಂತೆ ನಡೆಯ ಹತ್ತಬಾರದು ಗುಲಾಮನನ್ನಾದರೂ. ಹೇಕ್ಕುಚ್ಚು ಕಷ್ಟವನ್ನು ಅನುಭೋಗಿಸುವದು ನೋಡಿದ ಅವನ ಪ್ರಗತಿಯನ್ನು ಗೊತ್ತು ಹಿಡಿಯಬೇಕು. ಅನುಭೋಗಿಸುವದು ಬಾಳಿದಾದ ಹಾಗೆ ಪ್ರಗತಿಯು ಹೆಚ್ಚಿನದಾಗುವದು ಅದ್ಭುತವಲ್ಲೆ. ಒಬ್ಬ ನ್ಯೂವೇರ ನ ಆತ್ಮ ಯಜ್ಞದಿಂದ ಅರ್ಜಿತವಾಗಿದ್ದ ಜಾತ್ರೀಯ ಉದ್ಧಾರವಾಯಿತು ಅವನು ಹೀಗೆ ತನ್ನ ಜಗದುದ್ಧಾರ ಕಾರ್ಯವನ್ನು ಜರಗಿಸುತ್ತಿರುವಾಗ ತನ್ನ ನೆರೆ ಹೊರೆಯವರಿಗೆ ಎಷ್ಟು ಕಷ್ಟವಾಗುತ್ತಿರಬಹುದೆಂದು ಲೆಕ್ಕಾ ಮಾಡುತ್ತಿರಲಿಲ್ಲ ಇದರಂತೆಯೇ ಸಂತ್ರಾಂಪ್ರಜನ ಆತ್ಮಯಜ್ಞದಿಂದಲ್ಲವೆ ಸತ್ಯ [illegible] ಸ್ಥಾಪನೆಗೊಂಡದ್ದು! ತನ್ನ ಸ್ವಾರ್ಥತ್ಯಾಗದಿಂದ ತನ್ನ ಬಂಧುಗಳಿಗೆ ಅನೇಕ ದುಃಖಗಳು ಒದಗಬಹುದೆಂಬುದನ್ನು ಅವನೇನು ಅರಿತಿರಲಿಲ್ಲವೆಂತಲ್ಲ; ಆದರೆ ಅವನು ಸತ್ಯವನ್ನಲ್ಲದೆ ಇನ್ನೊಂದು ಪ್ರಾಡಲರಿಯನು.

ನಮ್ಮ ಕೃತಿಯಿಂದಲೇ ಒದಗಿದ ಇಂಗ್ಲೀಷ ಜನರ ಪ್ರಾಣದಾನಿಯಿಂದಾದದ್ದನ್ನು ದುಃಖವು ಬಾಲಿಯಾದವಾಲಬಾಗದ ಸ್ವಜನರ ಕೊಲೆಯಿಂದಲೂ ನನಗಾಗಿರುವದಿಲ್ಲವೆಂದು ನಾನು ಈ ಮೊದಲೇ ವ್ಯಕ್ತ ಮಾಡಿರುವೆನು ಜನರನ್ನು ಅರೆದು ಸಂಣ ಮಾಡಿ ಅವರನ್ನು ಕೇವಲ ಜೀವನ್ಮೃತರಾಗಿ ಮಾಡಬೇಕೆಂದು ಲಾಹೋರದಲ್ಲಿ ನಡೆವಿರುವ ಯತ್ನದಿಂದ ಜನರ ಲವು ಒಪ್ಪಿಲೆ ಅಮೃತಸರದ ಭೀಕರ ಸ್ಥಿತಿಯು ಕಡೆಗೆ ತಲುಗಿರುವದು; ಆದರೆ ನಾವು ಏಳಿಗೆಯನ್ನು ಹೊಂದುವ ಮೊದಲು ಇಂಥ ಎಷ್ಟೋ ಕಷ್ಟಗಳಿಗೆ ಎದುರಾಗಿ ನಿಂತು ಅವುಗಳನ್ನು ತಾಳ್ಮೆಯಿಂದ ಸಹಿಸಿ ಅದರಲ್ಲಿಯೇ ಸಂತೋಷ ಪಡೆಯಲಿಕ್ಕೆ ಕಲಿಯಬೇಕಾಗಿರುವದು. ಇಷ್ಟು ನೀಚವಾದ ಅಪಮಾನವನ್ನು ಹೊಂದಲು ಲಾಹೋರದ ಜನರು ಅಂಥದೇನು ತಪ್ಪು ಮಾಡಿರಲಿಲ್ಲವೆಂದು ನಾನು ಮನಗಂಡಿರುವೆನು; ಅವರು ಇಂಗ್ಲೀಷ ಮನುಷ್ಯನನ್ನು ನೋಯಿಸಿರಲಿಲ್ಲ. ಅವರ ವಸ್ತು ಒಡವೆಗಳಿಗೆ ಕೈ ಹಚ್ಚಿರುವದಿಲ್ಲ. ಆದರೆ ತಲೆಗೆ ಮೇಲೆ ಕೂತು ತನ್ನ ಚಂಡನ್ನು ಬಾಗಿಸುತ್ತಿರುವ, ನನ್ನ ದನ್ನು ಹಾರಿಸಿ ಒಗೆಯಬೇಕೆಂದು ಯತ್ನಿಸುತ್ತಿರುವ ಜನರನ್ನು ಒತ್ತಿಯೇ ಹಿಡಿಯಬೇಕೆಂದು ಅಲ್ಲಿಯ ಅಧಿಕಾರಿಯು ನಿಶ್ಚಯಿಸಿದಂತೆ ತೋರುತಿರುವದು. ಇಷ್ಟೆಲ್ಲ ಅನರ್ಥವು ಸತ್ಯಾಗ್ರಹವನ್ನು ಘಾತಿಸಿರೆಂದು ನನ್ನ ಉಪದೇಶದ ಮೂಲಕವೇ ಎಂದು ಯಾರು ಹೇಳಬಂದರೆ ಅವರಿಗೆ ನಾನು ಹೀಗೆ ಪ್ರತ್ಯುತ್ತರ ಕೊಡುವೆನು ಅದರಿಂದಲೇ ಸತ್ಯಾಗ್ರಹವನ್ನು ಅವಲಂಬಿಸಿರೆಂದು ನಾನು ಪ್ರಾಣ ಬಿಡುವ ವರೆಗೂ ಘಟ ಘೋಷಿಸಿ ಹೇಳುತ್ತ ಹೋಗುವೆನು ಮತ್ತು ಇನ್ನೊಮ್ಮೆಗೆ ಇಂಥ ಅನ್ಯಾಯರನ ಉದ್ದಾಮತನಕ್ಕೆ ಜನರು ನನ್ನ ಸಾಹಸಗಳನ್ನು ಜುಲುಮೆಯಿಂದ ಲಾಡಿಗ ಹಚ್ಚುರುವರೆಂಬ ಅಂಜಿಕೆಯಿಂದ ಅಂಗಡಿಗಳನ್ನು ತೆಗೆದುಕೊಂಡು ಕೂಡವೆ ಅವನಿಂದ ಬೇರಾದ ಯಾತನೆಯನ್ನು, ಹೊಂದಲಿಕ್ಕೂ ನನ್ನ ಅಂಜಿಕ್ಕವಾದ ಆತ್ಮಗಳೊಂದು ಬಿಟ್ಟು ಬೇರಾದದ್ದನ್ನು ಅವನಿಗೆ ಮಾರುಗೊಡಲಿಕ್ಕೆ ಸಿದ್ಧರಾಗಿರೆಂದು ಜನರಿಗೆ ಹೇಳುವೆನು ಅಂತರಾತ್ಮವು ಮುಕ್ತವಾಗಿರಬೇಕೆಂದು ನಮ್ಮ ಹಾವ ಕಾಲದ ಋಷಿಗಳು ತಮ್ಮ ದೇಹ ನಾನಾ ರೀತಿಯಿಂದ ಖಂಡಿಸುತ್ತಿದ್ದರು. ಹೀಗಾಗುವದರಿಂದ ಅವರ ವಿರುದ್ಧವಾಗಿ ಅವರ ಮೇಲೆ ಯಾವನಾದರೂ ತನ್ನ ಇಚ್ಛೆಯನ್ನು ನಡಿಸಬಹುದು ಯಾವ ಯಾತನೆಯನ್ನೂ ಕೊಟ್ಟರೂ ಅವರು ಲಕ್ಷಿಸುತ್ತಿದ್ದಿಲ್ಲ ಹಿಂದುಸ್ತಾನವು ತನ್ನ ಪ್ರಾಚೀನ ವರ್ಚಸ್ಸನ್ನು ದೊರಕಿಸಬೇಕಾದರೆ ಯುರೋಪ ಖಂಡದೊಳಗೆ ನಡೆದಿರುವ ದೋಷಗಳನ್ನು ತಪ್ಪಿಸಬೇಕಾಗಿದ್ದರೆ ಮತ್ತು ಯುರೋಪವನ್ನೆಲ್ಲ ಆವರಿಸಿಕೊಂಡಿರುವ ಆಸುರೀ ಸಾಮ್ರಾಜ್ಯವನ್ನು ತಪ್ಪಿಸಿ ರಾಮರಾಜ್ಯವನ್ನು ಸ್ಥಾಪಿಸಬೇಕೆಂದರೆ ಭಾರತ ಪುತ್ರ ಪುತ್ರಿಯರಲ್ಲಿ ಒಬ್ಬರೂ ಕಷ್ಟ ಸಹಿಸುವದಕ್ಕೆ ಹೆದರ [ **ಬೆಲ್ಲವಂಥ ಸವಿ ಮಾತಿಗೆ ಮೋಸ ಹೋಗ** ] ಕೂಡದು ಆದರೆ ಯುರೋಪದೊಳಗೆ ಈಗ ನಡೆದಿರುವ ಕೋಲಾಹಲವನ್ನು ನೋಡಿಕೊಂಡ ಮೇಲಾದರೂ ಅವರಂತೆ ನಾವಾದರೂ ಕಷ್ಟ ಸಹಿಸಲೇಬೇಕೆಂಬುದನ್ನು ಕಲಿತುಕೊಳ್ಳಬೇಕು ಆದರೆ ಅವರಂತೆ ನಾವು ಪರರನ್ನು ಪೀಡಿಸಕೂಡದು. ಜರ್ಮನಿಗೆ ಅಖಿಲ ಯುರೋಪ ಖಂಡದ ಮೇಲೆ ಆಧಿಪತ್ಯವು ಬೇಕಾಗಿತ್ತು. ಅವರ ಇದಿರು ನಿಂತವರಾದ ಇಂಗ್ಲೀಷ ಮೊದಲಾದವರಿಗೆ ಆ ಜರ್ಮನಿಯನ್ನು ಮುರಿ ಬಡೆದು ಅದನ್ನೇ ತಾವು ಸಾಧಿಸಿಕೊಳ್ಳಬೇಕಾಗಿತ್ತು. ಜರ್ಮನ್ನರು ಸೋತದ್ದು ಯುರೋಪಕ್ಕೇನು ಹಿತವಾಗಿರುವದಿಲ್ಲ; ಕಳ ಜಯಶಾಲಿಗಳಾದ ಪಕ್ಷದವರಾದರೂ ಜರ್ಮನ್ನರಷ್ಟೇ ಸ್ವಾರ್ಥ ಪರಾಯಣರೂ ನಿಷ್ಕರುಣರೂ ಆತಿಭುಂಜಕರೂ ರಕ್ತ ಶೋಷಕರೂ ಆಗಿರುವರು ನ್ಯಾಯನ್ನು ಹಚ್ಚಿದ ಘೋರವು ತಪ್ಪಿತೆಂದು ನಾನು ಹೋದ ವರುಷ ಮರುಗಿದ್ದು ಜನರಿಗೆ ಬಹಳ ಕಷ್ಟವಾಗುವದೆಂದಲ್ಲ; ಆದರೆ ಅವರು ಸತ್ಯಾಗ್ರಹದ ಅರ್ಥವನ್ನು ಪೂರ್ಣ ತಿಳಿಯದೆ ಪರರ ಹಾನಿಯನ್ನು ಮಾಡಲಾರಂಭಿಸಿದ್ದರಿಂದ ನಾನು ಹಾಕಿದ ಲೆಕ್ಕವು ತಪ್ಪಾದದ್ದರಿಂದ ದುಃಖದಿಂದ ಒಪ್ಪಿಕೊಂಡೆನು. ಇನ್ನು ಕಷ್ಟ ಸಹನ ಮಾಡುವವರ ಇಂಗಿತವನ್ನು ಲಕ್ಷದಲ್ಲಿಟ್ಟು ಈ ಅಸಹಕಾರ ಚಳವಳಿಯ ಅರ್ಥವನ್ನು ತಿಳಿದುಕೊಳ್ಳಿರಿ. ನಮ್ಮ ಇಚ್ಛೆಯ ವಿರುದ್ಧ ನಮ್ಮನ್ನು ಆಳುತ್ತಿರುವಂಥ ಈ ಸರಕಾರಕ್ಕೆ ಸಹಾಯ ಮಾಡದೇ ಇರುವದರಿಂದ ಒದಗಿ ಬರುವ ಎಲ್ಲ ತರಹದ ಸಂಕಟಗಳನ್ನು ನಾವು ನಮಗೆ ಬೇಕಾಗಿಯೇ ಸಂತೋಷದಿಂದ ಅನುಭೋಗಿಸಲಿಕ್ಕೆ ಬೇಕು. ಇಂಥ ಅನ್ಯಾಯದ ರಾಜ್ಯದಲ್ಲಿ ಅಧಿಕಾರ ಮಾನ್ಯತೆ, ಸಂಪತ್ತು ನ

# ಧೂರ್ತ ಚರಿತ್ರಂ

॥ ಕಂದಂಗಳ್ ॥

ಪರಹಿತ ವೆಳ್ವನಿತಾದರು ।
ವಿರಚಿಸದಿರ್ದರು ಪರೋಪ ಹತಿಯುಂ ಖತಿಯುಂ ॥
ನೆರೆ ಸಮನಿಸುತಾವಗಮೊ ।
ಪರಿಯಿಂ ತೋಷಿಸನಿದಲೆ ಧೂರ್ತ ಚರಿತ್ರಂ ॥ ೧ ॥

ಪರ ದ್ರವ್ಯಂ ಲೋಷ್ಟಮದೆಂ-।
ದರಿದುಂ ವರ್ಜಿಸಲುದಾರ ಚರಿತಂ ಸತತಂ ॥
ಪರ ದ್ರವ್ಯಮ ಲೋಷ್ಟ ದೊಲಪ-।
ಹರಿಸುತ ದುರ್ವ್ಯಯ ಮೆಸಗುತೆ ಮೆರೆವಂ ಧೂರ್ತಂ ॥ ೨ ॥

ಪರರವಗುಣ ಲೇಶಮನುಂ ।
ಸಿರಿದಾಗಿ ಕಪ್ಪೋಷಮೆಂದು ದೂಷಿಪ ಕುಜನಂ ॥
ನಿರುತಂ ತನ್ನೊಳೆ ನೆಲೆಗೊಂ-।
ಡಿರುವವ ಗುಣರಾಶಿ ರಾಶಿಯುಂ ಕಂಡರಿಯಂ ॥ ೩ ॥

ಪರರುನ್ನತಿ ಸಿರಿ ಸಂಪದ-।
ಕಿರದೆಂದುಂ ಕರುಬುತನ್ಯರವನತಿಗೆಳಸೀ ॥
ನರಿ ಪರಿಯಿಂದನ್ನೆ ಗೈದುಂ ।
ಕೊರಗುವ ನಿಜೋನ್ನತಿ ಕುತಾರ ಸದ್ಭಕಂ ಧೂರ್ತಂ ॥ ೪ ॥

ಪರರಾಶ್ರಯ ಪಡೆವೆಡೆಯೊಳ್ ।
ಧರೆಗೆಗೆ ಸಮ ಬಾಗುತ್ತೈತ ನಮಿಸುವನೆನಿತೋ ॥
ಸಿರಿಯುಂ ಸೇರ್ದೊಡನದ ।
ಮೆರೆವಂ ಜರೆವಂ ಮದಾಂಧ ಧೂರ್ತಂ ನಿರುತಂ ॥ ೫ ॥

—ಶ್ರೀ—

ಎಸ್ ಸುಬ್ಬರಾವ
ಕರ್ನಾಟಕಾಧ್ಯಾಪಕ ವಿದ್ಯಾದಾಯಿನಿ ಶಾಲಾ,
ಸುರತಕಲ್

# ನೀತಿ ವಲ್ಲರಿ.

(ಮೂರ್ಖ ಪದ್ಧತಿ)

ಕಂದಂ—ಮಳಲಿಂದೆ ಘೃತಮುಂ ಮೃಗಜಲ ।
(೧)
ಸಲಿಲಮನಾ ಶಶ ವಿಷಾಣಗಳನುಂ ಕ್ರಮದಿಂ ॥
ಸಲೆ ಪೊಂದಲಕ್ಕು ಖಲ ಜನ ।
ದೊಲವಂ ಪಡೆಯಲ್ಕೆ ಬಾರದಿದ ತಿಳಿ ಸ್ವಾಮೀ ॥ ೧ ॥

— ಉತ್ಪಲ ಮಾಲಾ —

ಶೀಕರ ನಕ್ರವಂ ಪ್ರಪಡೆಯುಂ ಸಲೆ ರನ್ನಮ ನಿನ್ನು ಪೊಂದಲೂ ।
ಶೋಕದಪಾರವಾರ್ಧಿಯ ವಿಸ್ತೋವದೆ ದಾಂಟಲು
ಮತ್ತಮಾ ವಿಷ ॥
ಕ್ಷ್ವೇಳತ ಘೋರ ಸರ್ಪನ ವಿಲಾಸದೆ ಪೂ ಮುಡಿಯಲ್ಕ
ಮಂತು ವಿಹ ।
ಸೋಕಲ ಸಾಧ್ಯ ಮಪ್ಪಿದು ಸುಸಾಧ್ಯಮು
(೨)
ಮೂರ್ಖ ರಾಗವೂ ॥ ೨ ॥

ಚಂಪಕ ಮಾಲಾ

ಮದನಜ ಬಂಧ ಕಾರ್ಯದೊಳ್ ದಾವರೆ ದಂಟನದೆಂತ ಸಾಧ್ಯಮೋ ।
ಹೃದಯುತಮಾ ಶಿರೀಷಮದಿಂ ಪವಿ ಛೇದನ ಮೆಂತು
(೩) ಸಾಗದೋ ॥
ಮಧು ಲವವಾರ್ಧಿಯುಪ್ಪನು ಮಲಂ ಮಿನಿಗೆಯ್ಯದವೆಂತೊ
(೪)
ಮಂತು ವಿಹ ।
ದಯುರಮುರ್ದ ಮಾಂಗಿನವಚಂ ಕ್ರಮಗೆಯ್ಯದು ಮೂರ್ಖ
ಮಾರ್ಗಮರಿ ॥ ೩ ॥

—ಕಂದ—

ತುಸಮುಂ ಕೊಡನೆಬ್ಬಮನರಿ । ।
(೫)
ದೆಸೆವಂಪದೆ ಬೀಗುಗಂ ಮದಗಜ ನಿಭ ಮಾನಂ ॥
ಒಸೆದಾ ಬುಧ ಜನ ಮೃದು ವಚ ।
ರಸಗರೆದಂತಂತೆ ನಲಿ ಪ ದಾನು ವಿರೋಗಂ ॥ ೪ ॥

ಮತ್ತೇಭ ವಿಕ್ರೀಡಿತ

(೧)
ಕ್ರಿಮಿ ಕೀಟಂಗಳ ವಿವ ಮಾಗಿಗೆನಸುಂ ದುರ್ಗಂಧಮುಂ
(೭) ಬೀರುತಂ ।
ಕ್ರಮದಿಂ ಚೊಲ್ಲಿಲಿ ನಾಂದ ಮಾನವನೆಲುಂ ಪ್ರೀತ್ಯಾಸ್ಪದಂ
ಶಿಷ್ಟನಲೇ ॥
ಮಮತಾಧಿಕ್ಯದೆ ತಾನದಂ ಸವಿದಿರಲ್ ಗೋತ್ರಾರಿಯೈ
(೮) ದಿರ್ದೊಡಂ ।
ಆಮಮಾ ಲಜ್ಜೆಯ ನಾನದಿರ್ದ ಕುಜನಂ ನಾಣ್ವ
(೯) ಕುಕಾಯ ನಳಿಗಂ ॥
ಸುರಗೂಳಂ ಜಲದಿಂದೆ ತಪ್ಪವಡೆವಂ ಸೂರ್ಯಾತಪಂ ಛತ್ರದಿಂ
ಪರಿಹಾರ್ಯಂ ಕರಿಗಂಕುಶಂ ತುರುಗಳಂ ದಂಡಾದಿಗಳ್
ರೋಗಮಾ ॥
ಪರಿಸಿರ್ದಂದು ಯಥೌಷಧ ಪ್ರತತಿಯುಂ ಸರ್ಪಂಗಳಂ
ಮಂತ್ರಮುಂ ।
ಮೆರೆವೀ ಸರ್ವ ನಿವಾರಣೌಷಧಮದೋ ! ಮೂರ್ಖಂಗೆ
ನಾಸ್ತ್ಯೌಷಧಂ ॥ ೬ ॥

—ಶ್ರೀ—

ಎಸ್ ಸುಬ್ಬರಾವ
ಕರ್ನಾಟಕಾಧ್ಯಾಪಕ, ವಿದ್ಯಾದಾಯಿನಿ ಶಾಲಾ
ಸುರತಕಲ್

೧ ಮೊಸಳೆ ಕೆಸರು ೨ ಮೂರ್ಖ ಪ್ರೀತಿ ೩ ಶಿರೀಷ ಪುಷ್ಪ ೪ ಅನ್ಯಕ್ಕೆ ಸಮಾನವಾದ ಮಾತು ೫ ಬೇಯು ೬ ವಿಶೇಷವಾಗಿ ೭ ಒಡೆದ ೮ ನಾಚಿಕೆ ೯ ಅಗ್ನಿ

## ಚಂದಾದಾರರಿಗೆ ವಿನಂತಿ.

ನವಜೀವನವು ಪ್ರಾರಂಭವಾಗಿ ಮುಂದಿನ ತಿಂಗಳ ೨೩ ನೇ ತಾರೀಖಿಗೆ ಒಂದು ವರ್ಷವಾಗುವದು. ಇಷ್ಟು ಅವಧಿಯಲ್ಲಿ ಅದು ಕರ್ನಾಟಕ ಮಾತೆಯ ಹಾಗು ಕನ್ನಡಿಗರ ಸೇವೆಯನ್ನು ತನ್ನ ಕೈಲಾದ ಮಟ್ಟಿಗೆ ಮಾಡಿರುವದು. ಇದೇ ಪ್ರಕಾರವಾಗಿ ಹೆಚ್ಚು ಉತ್ಸಾಹದಿಂದ ಮುಂದಾದರೂ ಮಾಡಲಿಕ್ಕೆ ಸಿದ್ಧವಿರುವದೆಂಬದನ್ನು ಕನ್ನಡಿಗರಿಗೆ ತಿಳಿಸಲಿಕ್ಕೆ ಅತ್ಯಂತ ಆನಂದವಾಗುತ್ತದೆ. ಆದ್ದರಿಂದ ಕರ್ನಾಟಕಸ್ಥರೆಲ್ಲರೂ ಎಂದಿನಂತೆ ಪ್ರೇಮದಿಂದ ಆಶ್ರಯವನ್ನು ಕೊಡುವರೆಂದು ತುಂಬಾ ನಂಬಿಗೆಯಿದೆ. ಈಗಿನ ಚಂದಾದಾರರೆಲ್ಲ ಬೇಗನೆ ಚಂದಾ ಹಣವನ್ನು ಮನಿಯಾರ್ಡರದಿಂದ ಸಲ್ಲಿಸಬೇಕಾಗಿ ವಿನಂತಿಯಿದೆ; ಪತ್ರವು ಬೇಡಾದವರು ದಯವಮಾಡಿ ನಮಗೆ ತಿಳಿಸಿದರೆ ನೆಟ್ಟಗಾಗುವದು. ಇಲ್ಲದಿದ್ದರೆ ನಿಷ್ಕಾರಣವಾಗಿ ಅಂಚೆ ವೆಚ್ಚವು ನಮ್ಮ ಮೇಲೆ ಬೀಳುತ್ತದೆ;

ವ್ಯವಸ್ಥಾಪಕ.

# ಕನ್ನಡ ನವಜೀವನ.

ಕಾರ್ತಿಕ ಶುದ್ಧ ೬ ಗುರುವಾರ ಶಕೆ ೧೮೪೬

## ನಿಜವಾದ ಉತ್ಸವವು.

( ನವಜೀವನ )

ಗಾಂಧೀಜಿಯವರ ಜನ್ಮ ದಿವಸದ ಸಮಯದಲ್ಲಿ ನನ್ನ ಹೃದಯವು ಎಲ್ಲಕ್ಕೂ ಮೊದಲು ಗುರುಕಾಬಾಗದಲ್ಲಿ ಗಾಯವನ್ನು ಹೊಂದಿರುವ ವೀರ ಅಕಾಲಿಗಳ ಕಡೆಗೆ ಎಳೆಯುವದು. ಈ ಪ್ರಸಂಗದಲ್ಲಿ ಕಾರಾಗೃಹವಾಸಿಗಳಾದ ಇಪ್ಪತ್ತೈದು ಸಾವಿರ ಬಾಂಧವರ ಸ್ಮರಣೆಯು ಮನಸ್ಸಿನಲ್ಲಿ ಬರುತಿತ್ತುವದು. ಈ ತಪಸ್ವಿಯ ವಿಷಯವಾಗಿ ವಿಚಾರ ಮಾಡ ಹತ್ತಲು ನಮ್ಮ ವಿಜಯದ ದಿನಗಳು ದೂರಿಲ್ಲವೆಂಬ ವಿಶ್ವಾಸವು ಹುಟ್ಟಹತ್ತುತ್ತದೆ. ಶೀಖರಂಥ ಬಲಿಷ್ಠ ಮತ್ತು ಶಸ್ತ್ರಧಾರಿಗಳಾದ ಜನರು ಈ ಪ್ರಕಾರ ಅತ್ಯಾಚಾರಗಳಾಗುವದನ್ನು ನೋಡುತ್ತ ಹೊಡೆತಗಳನ್ನು ತಿನ್ನುತ್ತ ತಮ್ಮ ಜೀವನದಲ್ಲಿ ಅಹಿಂಸಾ ವೃತ್ತಿಯನ್ನು ತೋರಿಸ ಹತ್ತಿರುವರೆಂದ ಮೇಲೆ ನಮಗೆ ವಿಜಯವು ದೊರೆಯುವದರಲ್ಲಿ ಸಂದೇಹವೇ? ಖಾದಿಯನ್ನು ಧರಿಸುವದು ಇದಕ್ಕಿಂತಲೂ ಹೆಚ್ಚು ಕಠಿಣವಾದದ್ದಾಗಲಿ, ಕಷ್ಟ ಸಾಧ್ಯವಾದದ್ದಾಗಲಿ ಇರುವದೇ? ಇಷ್ಟಾದರೂ ಖಾದಿಯ ಪ್ರಸಾರದ ವಿಷಯವಾಗಿಯೂ ಅಹಿಂಸೆಯ ಪಾಲನೆ ಸಂಬಂಧವಾಗಿಯೂ ಸಂಶಯವನ್ನು ತೆಗೆದುಕೊಳ್ಳುವ ಜನರನ್ನು ಕಂಡ ಕೂಡಲೆ ನನಗೆ ಅತ್ಯಂತ ಆಶ್ಚರ್ಯವಾಗುತ್ತದೆ. ನಮ್ಮ ಜೀವನದ ಮೂಲಾಧಾರವಾದ ಸಂಗತಿಗಳನ್ನು ಕೂಡ ನಾವು ಕೊನೆಗಾಣಿಸದಷ್ಟು ನಮ್ಮ ಚಿತ್ತ ಹಾಗು ಹೃದಯವು ನಿರ್ಮಲವಾಗಿರಬಹುದೇ ಎಂಬ ವಿಚಾರವು ನನ್ನ ಮನಸ್ಸಿನಲ್ಲಿ ಬರುತ್ತದೆ. ಹಿಂದುಸ್ತಾನದಲ್ಲಿಯ ಪ್ರತಿಯೊಂದು ಕುಟುಂಬದಲ್ಲಿ ನನಗೆ ಅಹಿಂಸೆಯ ಸಿದ್ಧಾಂತವೇ ಸ್ಥಾಪಿಸಲ್ಪಡುತ್ತದೆಂದು ಕಂಡು ಬರುತ್ತದೆ. ಬಹುಶಃ ಪ್ರತಿಯೊಂದು ಮನೆಯಲ್ಲಿ ಸ್ವದೇಶದ ಸಂಗತಿಗಳ ಬಗ್ಗೆ ಪ್ರೀತಿಯು ಇರುವದೆಂಬದಾಗಿ ತೋರಿ ಬರುತ್ತದೆ, ಕೇವಲ ಅವುಗಳ ತಾತ್ಪರ್ಯಗಳನ್ನು ರಾಷ್ಟ್ರದ ಸ್ವರೂಪವನ್ನೂ ತಿಳಿದುಕೊಳ್ಳುವದಷ್ಟೇ ಅವಶ್ಯವಿದೆ. ಈ ಸಂಗತಿಯನ್ನು ಗಾಂಧಿಜೀಯವರು ಹಿಂದುಸ್ತಾನಕ್ಕೆ ತೋರಿಸಿ ಕೊಟ್ಟು ಬಿಟ್ಟಿರುವರು ಹಿಂಸೆಯನ್ನಾಗಲಿ, ಖಾದಿಯನ್ನಾಗಲೀ, ಬಿಟ್ಟು ಕೊಟ್ಟರೆ ಸ್ವರಾಜ್ಯವು ದೊರೆಯಲಾರದೆಂದೂ, ಬಹು ದಿವಸ ಬಾಳಲಾರದೆಂದೂ ಹೇಳುವದಕ್ಕೇನೂ ಸಂಶಯವಿಲ್ಲ. ಮತ್ತು ಸ್ವರಾಜ್ಯದ ಹೊರತು ಖಿಲಾಫತ ಮತ್ತು ಪಂಜಾಬದ ಅತ್ಯಾಚಾರಗಳು ದೂರವಾಗುವ ಸಂಭವವಿಲ್ಲ. ಇದೇ ಸ್ವರಾಜ್ಯದ ಸಲುವಾಗಿಯೇ ಗಾಂಧಿಜಿಯವರು ಕಾರಾಗೃಹದಲ್ಲಿರುವರು ಅಲ್ಲಿ ಬಂಧುಗಳಾದವರೂ ಈ ಸ್ವರಾಜ್ಯಕ್ಕಾಗಿಯೇ ತುರಂಗದಲ್ಲಿ ಇರುವರು. ಈ ಸ್ವರಾಜ್ಯದ ಸಲುವಾಗಿಯೇ ಲಾಲಾಜಿಯವರು ಜೇಲಿನಲ್ಲಿರುವರು ಗಾಂಧಿಜಿಯವರ ಜನ್ಮ ದಿವಸದ ಮಹತ್ವವಾದರೂ ಈ ಸ್ವರಾಜ್ಯದಲ್ಲಿಯೇ ಉಂಟು. ಗಾಂಧಿಜಿಯವರು ತಮ್ಮ ಅಲ್ಪ ಸ್ವಲ್ಪ ಸೇವೆಯನ್ನು ಮಾಡಿದ್ದಾರೆ ಅವರ ಬಗ್ಗೆ ತಮ್ಮಲ್ಲಿ ನಿಜವಾದ ಪ್ರೇಮವಿದ್ದರೆ ಅವರ ಜನ್ಮ ದಿವಸವಾದ " ಇವತ್ತಿನಿಂದ ನಾನು ಪರದೇಶ ಬಟ್ಟೆಗಳನ್ನು ಮುಟ್ಟುವದಿಲ್ಲ, ನಾನು ಸ್ವತಃ ನೂಲು ತೆಗೆದು ಇಲ್ಲವೆ ನನ್ನ ಮನೆಯಲ್ಲಿಯೇ ನೂಲು ತೆಗೆಯಿಸಿ ಅದರಿಂದಲೇ ಕೈಮಗ್ಗದ ಮೇಲಿಂದ ವಸ್ತ್ರವನ್ನು ತಯಾರಿಸಿ ಅದನ್ನೇ ಧರಿಸುವೆನು " ಎಂಬದಾಗಿ ಪ್ರತಿಜ್ಞೆಯನ್ನು ಮಾಡತಕ್ಕದ್ದು. "ಎಂಥ ಘೋರವಾದ ಅತ್ಯಾಚಾರಗಳ ಪ್ರಸಂಗವು ಬಂದರೂ ಕೂಡ ನಾನೂ ಶಾಂತನಾಗಿಯೇ ಉಳಿಯುವೆನು ಮತ್ತು ಎರಡನೆಯವರು ಶಾಂತರಾಗಿ ಉಳಿಯುವದಕ್ಕೆ ಪ್ರಯತ್ನ ಮಾಡುವೆನು. ಎಂಬ ನಿಶ್ಚಯವನ್ನು ಮಾಡತಕ್ಕದ್ದು. ಹಿಂದುಸ್ತಾನದ ಜನರು ಗಾಂಧಿಜಿಯವರ ವಿಷಯವಾಗಿ ಬಹಳ ಪ್ರೇಮವನ್ನು ತೋರಿಸುತ್ತಿರುವದನ್ನು ನಾನು ಕಂಡಿದ್ದೇನೆ. ಆದರೆ ಅವರು ತೋರಿಸಿ ಕೊಟ್ಟ ಮಾರ್ಗದಿಂದ ನಡಿಯಲಿಕ್ಕೆ ಎಷ್ಟು ಜನರು ಹಿಂದೆ ಮುಂದೆ ನೋಡುತ್ತಿರುವರೆಂಬದಾಗಿ ತೋರುತ್ತದೆ. ನಿಃಶಂಕರಾಗಿ ಸ್ವರಾಜ್ಯದ ಮಾರ್ಗದಲ್ಲಿ ಸಿದ್ಧರಾಗಿ ಮುಂದೆ ಬರತಕ್ಕದ್ದು, ಸ್ವರಾಜ್ಯವು ನಮ್ಮ ಬಲದಿಂದಲೇ ದೊರೆಯುವದೆಂಬದನ್ನು ನಾವು ಲಕ್ಷ್ಯದಲ್ಲಿಡತಕ್ಕದ್ದು. ಕೌನ್ಸಿಲದಲ್ಲಿ ಹೋಗುವ ಆಗ್ರಹವು ಒಳ್ಳೇದಲ್ಲ ಅದರಲ್ಲಿ ರಾಷ್ಟ್ರದ ಶಕ್ತಿಯೇ ಕುಗ್ಗಿ ಹೋಗುವದು. ಗಾಂಧಿಜಿಯವರು ತುರಂಗದಲ್ಲಿ ಹೋಗಿ ಬಿಟ್ಟರೆಂದು ನಾವು ಗಾಬರಿಯಾಗಿ ನಮ್ಮ ಮಾರ್ಗವನ್ನು ಬಿಟ್ಟು ಕೊಡತಕ್ಕದ್ದಲ್ಲ. ಆಫ್ರಿಕೆಯಲ್ಲಿ ಗಾಂಧಿಯವರಿಗೆ ೩ ಸಾರೆ ಜೇಲಿಗೆ ಹೋಗಬೇಕಾಯಿತು. ಆದರೆ ಅದರಿಂದ ಅ

ವರು ಬಿಡಲಿಲ್ಲ. ಬೇಸರಿಯಲಿಲ್ಲ ತಡೆಸಿ ವಿಜಯವು ದೊರೆಯಿತು. ಈ ಹೊತ್ತು ಗಾಂಧಿಯವರೂ ಉಳಿದ ಸಾವಿರಾರು ದೇಶ ಬಾಂಧವರೂ ಕಾರಾಗೃಹದಲ್ಲಿ ಇರುವದರಿಂದ ನನಗೆ ಶೋಕವು ಉಕ್ಕೇರಿ ಬರುತ್ತಿರುವದು, ಆದರೆ ನಾನು ನನ್ನ ಹಿಂದೂ ಮುಸಲ್ಮಾನ ಬಾಂಧವರು ಮತ್ತು ಭಗಿನಿಯರು ಅಹಿಂಸೆ ಹಾಗೂ ಖಾದಿಯ ರಹಸ್ಯವನ್ನು ಅರಿತುಕೊಂಡಿರುವರೆಂದೂ ತಮ್ಮ ನಿಶ್ಚಯ ಹಾಗೂ ಪುರುಷಾರ್ಥದ ಬಲದಿಂದ ಸ್ವರಾಜ್ಯವನ್ನು ಸಂಪಾದಿಸಿ ಎಲ್ಲರನ್ನು ಬೇಗನೆ ಕಾರಾಗೃಹದಿಂದ ಮುಕ್ತ ಮಾಡುವರೆಂದೂ ಆಶೆಯನ್ನು ಮಾಡಿ ಮನಸ್ಸಿನಲ್ಲಿ ಧೈರ್ಯವನ್ನು ತಾಳಿ ಒಂದು ರೀತಿಯಿಂದ ಸಾಂತ್ವನ ಮಾಡಿಕೊಂಡಿದ್ದೇನೆ ಆ ದಿವಸವೆ ಗಾಂಧೀಜಿಯವರ ಜನ್ಮ ದಿನವು ಆ ಹೊತ್ತೇ ನನಗೆ ನಿಜವಾದ ಆನಂದವಾಗುವದು ಮತ್ತು ಅದೇ ದಿವಸವೇ ಈ ಉತ್ಸವವು ನಿಜವಾದ ಉತ್ಸವವಾಗುವದು.

ಕಸ್ತೂರಿಬಾಯಿ ಗಾಂಧಿ

---

# ಟಿಪ್ಪಣಿಗಳು.

( ಯಂಗ ಇಂಡಿಯಾ )

**ಶ್ರೀ ಕೌಜಲಗಿಯವರು.**

ಮಹಾ ರಾಷ್ಟ್ರದಲ್ಲಿ ಬಹಳೇ ಖ್ಯಾತಿಯನ್ನು ಪಡೆದ ರಾಷ್ಟ್ರೀಯ ಪಕ್ಷದ ಮುಂದಾಳುಗಳಲ್ಲಿಯ ಸ್ವಲ್ಪವರು ಒಂದೇ ಸವನೆ ಸಂಸ್ಥಾಗ್ನಿಯನ್ನು ಹೊತ್ತಿಸ ಹತ್ತಿರುವಾಗ ಕೂಡ ನಮ್ಮಲ್ಲಿಯ [illegible]ವು ಇನ್ನೂ ಗಟ್ಟಿಯಾಗಿಯೂ ಅಚಲವಾಗಿಯೂ ಇರುತ್ತದೆಂಬ[illegible]ಗಿ ಶ್ರೀ ಶ್ರೀನಿವಾಸರಾವ ಕೌಜಲಗಿಯವರು ಸಿದ್ಧ ಪಡಿಸಿರುವ[illegible]. ಶ್ರೀ ಕೌಜಲಗಿಯವರು ಜಾಮೀನು ಕೊಡುವದನ್ನು ನಿರಾಕರಿಸಿ ಯರವಡೆಯ ಕಾರಾಗೃಹದಲ್ಲಿ ಹನ್ನೆರಡು ತಿಂಗಳುಗಳ ವರೆಗೆ [illegible]ಣ ಶಿಕ್ಷೆಯನ್ನು ಅನುಭವಿಸುವದನ್ನೇ ಆರಿಸಿದರು. ಗಂಗಾಧರರಾವ ದೇಶಪಾಂಡೆಯವರ ತರುವಾಯದಲ್ಲಿ ಕರ್ನಾಟಕದ ಮೊದಲ ಮುಖಂಡರು ಶ್ರೀ ಕೌಜಲಗಿಯವರೇ. ಕಾಯದೆಯ ದುರುಪಯೋಗದ ರೀತಿಯನ್ನು ಅರಿಯದ ಜನರು ಒಬ್ಬ ರಾಜಕೀಯ [illegible]ವಳಿಯಲ್ಲಿ ಸೇರಿದ ಪ್ರಸಿದ್ಧ ವಕೀಲನಿಗೆ ತನ್ನ ರಾಜಕೀಯ [illegible]ಾರಗಳನ್ನು ಪ್ರಕಟಗೊಳಿಸಿದ್ದಕ್ಕಾಗಿ ಇಂಥ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿದ್ದನ್ನು ಕಂಡು ಆಶ್ಚರ್ಯ ಭರಿತರಾಗಬಹುದು. ಒಂದು [illegible] ಹೇಗಾದರೂ ಮಾಡಿ ಇದನ್ನು ಸಹಿಸಿಕೊಂಡರೂ ಕೂಡ [illegible] ಸಂಬಳ ತಿನ್ನುವ ವ್ಯಾಜಿ ಸ್ಟೇಟನಿಗೆ ಇಂಗ್ಲಂಡದಲ್ಲಿ ವ[illegible]ಯನ್ನು ಮಾಡುತ್ತಿರುವ ಬ್ಯಾರಿಸ್ಟರರ ಯೋಗ್ಯತೆಯುಳ್ಳ ಗೃಹಸ್ಥರಿಗೆ "ಒಳ್ಳೇ ನಡತೆ" ಯ ಸಲುವಾಗಿ, ಇಂಥ ಉದಾ[illegible]ಗಳಲ್ಲಿ ಒಳ್ಳೇ ನಡತೆಯೆಂದರೆ ರಾಷ್ಟ್ರೀಯ ಸಭೆಯ ಕಾರ್ಯವನ್ನು ಸಮರ್ಥಿಸುವಂಥ ಭಾಷಣವನ್ನು ಮಾಡುವದಿಲ್ಲವೆಂಬ ವಚನವನ್ನು ಕೊಡುವದೇ ! ಜಾಮೀನು [illegible]ಮ ಹೇಳಿದ್ದಕ್ಕೆ ಸಶ್ರಮ ಶಿಕ್ಷೆಯನ್ನು ವಿಧಿಸಲು ಅಧಿಕಾರವನ್ನು ಕೊಟ್ಟಂಥ ಕಾಯದೆಗಳ ದಂಡ ನೀತಿಯನ್ನು ತಿಳಿದು ಕೊಳ್ಳುವದು ಬಹಳ ಕಠಿಣವಾದ ಮಾತು.

ಆದರೆ ಶ್ರೀ ಕೌಜಲಗಿಯವರು ತಾವಾಗಿಯೇ ಸ್ವೀಕರಿಸಿದ ಕಷ್ಟವು ಕರ್ನಾಟಕದಲ್ಲಿಯ ಸ್ವಾರ್ಥತ್ಯಾಗದ ಜ್ಯೋತಿಯನ್ನು ಪ್ರಜ್ವಲಿಸಲು ಸಮರ್ಥವಾಗುತ್ತದೆ. ಸರಕಾರದವರು ನಮ್ಮನ್ನು ನಮ್ಮ ಧ್ಯೇಯದಿಂದ ಅಗಲಿಸಬೇಕೆನ್ನುವ ಪ್ರಯತ್ನವನ್ನು ನಡೆಸಿರುವವರಿಗೆ ಎರವಡೆಯ ತುರಂಗದಲ್ಲಿ ಕಠಿಣ ಕೆಲಸವನ್ನು ಮಾಡುವದಕ್ಕಿಂತ ಬೇರೊಂದು ಶ್ರೇಷ್ಠವಾದ ರಾಷ್ಟ್ರ ಸೇವೆಯ ಮಾರ್ಗವಿಲ್ಲ ನನ್ನ ದೇಶ ಬಾಂಧವರಿಗೆ ಅವರ ಜನ್ಮಸಿದ್ಧವಾದ ಹಕ್ಕುಗಳನ್ನು ತಿಳಿಸಿ ಹೇಳಿ ಅವರಲ್ಲಿ ಜಾಗೃತಿಯನ್ನುಂಟು ಮಾಡುವದು ಸ್ವರಾಜ್ಯವನ್ನು ಸಂಪಾದಿಸಲಿಕ್ಕೆ ಪ್ರಯತ್ನ ಮಾಡಬೇಕೆಂದೂ ಅವರಿಗೆ ಉಪದೇಶಿಸುವದೂ ರಾಜದ್ರೋಹವಾಗಿದ್ದರೆ ನಾನು ಸ್ವತಂತ್ರನಾಗಿರುವ ವರೆಗೆ ಈ ತರದ ರಾಜದ್ರೋಹವನ್ನೇ ಉಪದೇಶಿಸುವೆನು, ಮತ್ತು ನನ್ನ ದೇಶ ಬಾಂಧವರಿಗೆ ಇದೇ ಮಾರ್ಗವನ್ನು ಅನುಸರಿಸಲಿಕ್ಕೆ ಹೇಳುವೆನು. ಹೀಗೆ ಹೇಳಿ ಸ್ವತಂತ್ರತೆಯನ್ನು ಬಯಸುವ ಹಿಂದೀ ಮನುಷ್ಯರಾದ ಅಪರಾಧಕ್ಕಾಗಿ ಶ್ರೀ ಕೌಜಲಗಿಯವರು ಶಿಕ್ಷೆಯನ್ನು ಅನುಭವಿಸಲು ಹೋಗಿರುವರು. [illegible] ಪಾತ್ರನಾದ ಮುಖಂಡನು [illegible]ವನ್ನು ವಹಿಸಿರುವನಿಷ್ಟೇ ಅಲ್ಲದೆ ತಮ್ಮ ಸಲುವಾಗಿ ಕಷ್ಟವನ್ನು ಕೂಡ ಅನುಭವಿಸುತ್ತಿರುವಾಗ ಕರ್ನಾಟಕದ ಜನರು ತಮ್ಮ ಕೆಲಸವನ್ನು ಹೆಚ್ಚು ಧೈರ್ಯದಿಂದಲೂ ದೀರ್ಘ ಪ್ರಯತ್ನದಿಂದಲೂ ಮುಂದೆ ಸಾಗಿಸತಕ್ಕದ್ದು. ಕಷ್ಟ ಸಹನವು ಎಂದಿಗೂ ನಿಷ್ಫಲವಾಗಲಾರದು. ಕಷ್ಟ ಸಹನದಿಂದ ಕಷ್ಟವನ್ನು ಸಹಿಸುವವನಿಗೂ ಕಲ್ಯಾಣವಾಗುವದು. ಯಾರ ಸಲುವಾಗಿ ಅವನು ಕಷ್ಟ ಸಹಿಸುವನೋ ಅವರಿಗೂ ಹಿತವಾಗುವದು.

---

**ರಾಜ ಮನೆತನದ ಉಪದೇಶಗಳು.**

ಅಫಗಾಣಿಸ್ತಾನದ ಅಮೀರ ಮಹಾರಾಜರು ಅಫಗಾಣಿಸ್ತಾನದ " ಸ್ವಾತಂತ್ರ್ಯದ ದಿವಸ " ಮಾಡಿದ ಭಾಷಣದಲ್ಲಿ ಅಫಗಾಣಿಸ್ತಾನದಲ್ಲಿಯೇ ನಿರ್ಮಿತವಾದ ವಸ್ತುಗಳನ್ನು-ಪರದೇಶದ ವಸ್ತುಗಳಿಗಿಂತ ಅವು ಎಷ್ಟೋ ಕಡಿಮೆ ತರದವು. ಆಗಿದ್ದರೂ ಅವುಗಳನ್ನೇ ಉಪಯೋಗಿಸಲಿಕ್ಕೆ ಅಲ್ಲಿ ನೆರೆದ ಶ್ರೋತೃವೃಂದಕ್ಕೆ ಉಪದೇಶಿಸಿದರೆಂಬದಾಗಿ ವೃತ್ತಾಂತವು ಬಂದಿದೆ. ಅವರು ನೀವು ಪರದೇಶೀ ಒಡವೆಗಳನ್ನು ಉಪಯೋಗಿಸಿದರೆ ನಿಮ್ಮ ಹಣವೆಲ್ಲ ನಿಮ್ಮ ವೈರಿಗಳ ಕೈ ಸೇರುವದು ಮತ್ತು ಮದ್ದು ಗುಂಡುಗಳ ರೂಪವನ್ನು ತಾಳಿ ಅದು ಮರಳಿ ನಿಮ್ಮ ಕಡೆಗೆ ಬರುವದು. ಎಂದು ಹೇಳಿರುವರು. ಅವರು ಖಾದಿಯ ಸಂಬಂಧದಲ್ಲಿ ವಿಶೇಷ ಆಗ್ರಹವನ್ನು ಮಾಡಿದರೂ ಎಷ್ಟೋ ಜನರು ತಮ್ಮನ್ನು ಮೂರ್ಖರೆಂದು ಭಾವಿಸುತ್ತಿದ್ದರೂ ಖಾದಿಯ ಉಡುಪನ್ನೇ ಸ್ವೀಕರಿಸುವ ಚಟವು ತಮಗೆ ಇರುವದೆಂದು ಹೇಳಿದರು ಇಷ್ಟೇ ಅಲ್ಲದೆ ಅಫಗಾಣಿಸ್ತಾನದಲ್ಲಿಯೇ ಸಿದ್ಧವಾದ [illegible] ಖಾದಿಯ [illegible] ಪ್ರಮಾಣದಿಂದಲೂ

ಹೆಚ್ಚು ಅಂದವಾಗಿಯೂ ಪ್ರಸಾರವಾಗುತ್ತಿರುವದೆಂಬದಾಗಿ ಸಿದ್ಧಮಾಡಿಕೊಟ್ಟರು. ಅವರು ತಾವು ಧರಿಸಿದ ಖಾದೀಬಟ್ಟೆಯನ್ನು ತೋರಿಸಿ ಅವರಿಂದ ತಾವು ಕಡಿಮೆ ತರದವರಂತೆ ಕಾಣಿಸುವದಿಲ್ಲವೆಂಬದಾಗಿಯೂ ಅದರಿಂದ ತಮ್ಮ ಮಾನಮರ್ಯಾದೆಗಳಿಗೆ ಏನೂ ಕುಂದು ತಗಲಿಲ್ಲೆಂಬದಾಗಿಯೂ ಪ್ರತಿಪಾದಿಸಿದರು. ಎಲ್ಲರೂ ತಮ್ಮನ್ನು ಅನುಸರಿಸುವದರಿಂದ ಎಷ್ಟೋ ಹಣವನ್ನು ಉಳಿಸುವದಲ್ಲದೆ ತಮ್ಮಲ್ಲಿಯ ಸಾವಿರಾರು ದೇಶಬಾಂಧವರಿಗೆ ಅನ್ನದಾನವನ್ನೂ ಉದ್ಯೋಗವನ್ನೂ ಕೊಟ್ಟಂತೆ ಆಗುವದೆಂದು ಅವರು ಬಹಳ ಆಗ್ರಹದಿಂದ ಹೇಳಿದರು. ನಮ್ಮಲ್ಲಿಯ ರಾಜರೂ, ಸರದಾರರೂ, ಕೋಟ್ಯಾಧೀಶರೂ, ಜಮೀನದಾರರೂ, ವಕೀಲರೂ, ಉಳಿದ ದೊಡ್ಡ ದೊಡ್ಡ ರಾಜಕೀಯ ಮುಂದಾಳುಗಳೂ ಅಫಗಾನಿಸ್ತಾನದ ಅಮೀರರ ಈ ಮಹತ್ವಪೂರ್ಣವಾದ ಭಾಷಣವನ್ನು ಅತ್ಯಂತ ಕಳಕಳಿಯಿಂದ ಮನನಮಾಡಬೇಕೆಂದು ಯಾರು ಅಪೇಕ್ಷಿಸಲಾರರು? ನಮ್ಮಲ್ಲಿಯ ಅಧಿಕಾರಿಗಳಿಗೆ ಧೈರ್ಯವು ಬಂದು ಅವರು ಅಮೀರರಂತೆ ಬಟವನ್ನು ಪ್ರೀತಿಸಲು ಎಷ್ಟು ಅವಧಿಯು ಬೇಕು?

ಸೀ. ರಾಜಗೋಪಾಲಾಚಾರ್ಯ

---

## ಮಂತ್ರಿ ಪದಕ್ಕೆ ರಾಜೀನಾಮೆಯು

ಇಂಗ್ಲಂಡದ ಮುಖ್ಯಮಂತ್ರಿಗಳು ಕಟ್ಟಕಡೆಗೆ ತಮ್ಮ ರಾಜೀನಾಮೆಯನ್ನು ಕೊಟ್ಟರೆಂಬ ಸಂಗತಿಯು ಒಂದು ದೃಷ್ಟಿಯಿಂದ ಆನಂದದಾಯಕವಾದದ್ದೇನೋ ನಿಜ. ಲಾಯಿಡ ಜಾರ್ಜರ ಪ್ರಭುತ್ವವು ಎಂದಿಗೋ ಇಷ್ಟರಲ್ಲಿಯೇ ಹೋಗತಕ್ಕದ್ದು. ಆದರೆ [illegible] ದಲ್ಲಿ ಜಯವನ್ನು [illegible] ಶಾಂತತೆಯನ್ನು ಪ್ರಸ್ಥಾಪಿಸಲಿಕ್ಕೆ ಇವರೇ ಯೋಗ್ಯರೆಂದು ಬಗೆದು ಇವರನ್ನೇ ಮಂತ್ರಿಗಳನ್ನಾಗಿ ಮಾಡಿದರು. ಆದರೆ ಈ ಮಾತು ಎಷ್ಟರ ವ[illegible] ಹೇಗೆಯೋ ಸಾಗತಕ್ಕದ್ದು? ವಿಶೇಷತಃ ಲಾಯಿಡ ಜಾರ್ಜರ [illegible] ದೇಶದ ಸಂಬಂಧದ ನೀತಿಯು ಇಂಗ್ಲಂಡದಲ್ಲಿಯ ಬಹು ಜನ [illegible] ಸೇರಿ ಬರಲಿಲ್ಲ. ಲಾಯಿಡ ಜಾರ್ಜರು ಗ್ರೀಕರ ಪಕ್ಷ [illegible] ತುರ್ಕರನ್ನು [illegible] ದೆ ಹಾಕಿಕೊಳ್ಳುತ್ತಿದ್ದ ಸಂಗತಿಯು [illegible] ಘೋರಣೆಯನ್ನು ಇಂಗ್ಲಂಡದ ಬಹು ಜನ [illegible] ಇವರು [illegible] ಗಳಾದ್ದರಿಂದ [illegible] ಸೇರೂ ಮಾಡಿ ಯುನಿಯನ್ [illegible] ಕಾಯ್ದುಕೊಂಡಿದ್ದರು. [illegible] ಹತ್ತಿರದ [illegible] ಒಂದಲ್ಲೊಂದು [illegible] ಕೋಯ. [illegible] ತಾಳೆ ತೀರದೆ [illegible] ಯೆಂಬ ನ್ಯಾಯಕ್ಕೆ [illegible] ಲಾಯಿಡ ಜಾರ್ಜ ಸಾಹೇಬರು ತಮ್ಮ ಅಧಿಕಾರ [illegible] ಇಡುವ ಪ್ರಸಂಗ ಬಂದೊದಗಿತು. [illegible] ಯದೇಕೆಂದು ಹೇಳಬಲ್ಲೆ [illegible] ಪಕ್ಷಗಳಲ್ಲಿ [illegible] ವು ಸ್ವತಂತ್ರತೆಯಿಂದ [illegible] ಒಂದು ನಿಶ್ಚಯಮಾಡಿ [illegible]

ರಲಾ ಇವರಿಗೆ ಮಂತ್ರಿಮಂಡಲವನ್ನು ಏರ್ಪಾಡು ಮಾಡುವದಕ್ಕೆ ಚಾರ್ಜಬಾದಶಹರು ಅಪ್ಪಣೆ ಕೊಟ್ಟಿರುವರು. ಚುನಾವಣೆಯು ನವ್ಹೆಂಬರ ೧೫ನೇ ತಾರೀಖಿನ ಸುಮಾರಕ್ಕೆ ಆಗಬಹುದೆಂಬದಾಗಿ ಪ್ರಸಿದ್ಧವಾಗಿದೆ.

ಈ ಎಲ್ಲ ಸಂಗತಿಗಳನ್ನು ಲಕ್ಷಪೂರ್ವಕವಾಗಿ ಅವಲೋಕಿಸಿದರೆ ಬಿಲ ಘತದ ಪ್ರಶ್ನೆಯನ್ನು ಬಿಡಿಸುವದು ಇನ್ನು ಮುಂದೆ ಅಷ್ಟು ಕಠಿಣವಾಗಲಾರದೆಂದು ನಂಬಿಗೆಯದೆ. ಕಾಂಝರ್ವೇಟಿವ್ಹ ಪಕ್ಷದವರು ಗ್ರೀಕರನ್ನು ಎತ್ತಿಹಿಡಿಯುವ ಸಂಭವವು ಇಲ್ಲವೆಂದು ಅವರ ಪಕ್ಷದ ವೃತ್ತಪತ್ರಗಳನ್ನು ನೋಡಿದರೆ ತಿಳಿದು ಬರುತ್ತದೆ. ಮಂತ್ರಿಮಂಡಲದಲ್ಲಿ ಗ್ರೀಕರ ಪಕ್ಷವನ್ನು ವಹಿಸಿದವರು ಲಾಯಿಡ ಜಾರ್ಜರೇ ಎಂದು ಹೇಳಬಹುದು. ಆದರೆ ಆ ತಮ್ಮ ಅಧಿಕಾರವನ್ನು ಬಿಟ್ಟುಕೊಟ್ಟರೆಂದ ಬಳಿಕ [illegible] ವರು ಏನು ಮಾಡಬಹುದು? ಯುರೋಪಖಂಡದ ಎಲ್ಲ ರಾಷ್ಟ್ರಗಳಲ್ಲಿ ಖಿಲಾಫತದ ಪ್ರಶ್ನೆಗೆ ಅಡ್ಡಬರುವ ರಾಷ್ಟ್ರವೆಂದರೆ ಇಂಗ್ಲಂಡವೇ ಆಗಿತ್ತು. ಅದೂ ಇಂಗ್ಲಂಡದ ಮುಖ್ಯ ಮಂತ್ರಿಗಳೇ ಮುಖ್ಯವಾಗಿ ಗ್ರೀಕರನ್ನು ಹುರಿದುಂಬಿಸುವರು. ಫ್ರಾನ್ಸ ಮೊದಲಾದ ಇತರ ರಾಷ್ಟ್ರಗಳು ತುರ್ಕರ ಎಲ್ಲ ಬೇಡಿಕೆಗಳನ್ನು ಸ್ವೀಕರಿಸಲು ಸಿದ್ಧವಾಗಿದ್ದವು. ಈಗ ಲಾಯಿಡ ಜಾರ್ಜರು ಹೋದದ್ದರಿಂದ ಇಂಗ್ಲಂಡದವರೂ ಹಾಗೆಯೇ ಮಾಡುವರೆಂದು ತಿಳಿಯಬಹುದು. ಪೋಲಾಗಿ ಯುದ್ಧಮಾಡುವದು ಯಾವ ರಾಷ್ಟ್ರಕ್ಕೂ ಬೇಡಾಗಿದೆ. ಎಲ್ಲ ರಾಷ್ಟ್ರಗಳೂ ಶಾಂತತೆಯನ್ನು ಬಯಸುತ್ತವೆ. ಇನ್ನು ಮೇಲಾದರೂ ಜಗತ್ತಿನಲ್ಲಿ ನಿಜವಾದ ಶಾಂತತೆಯು ಉಂಟಾಗಲೆಂದು ಕೋರುತ್ತೇವೆ.

ಆದರೆ ಈ ರಾಜೀನಾಮೆಯಿಂದ ಹಿಂದುಸ್ತಾನಕ್ಕೆ ಮಾತ್ರ ಯಾವತರದ ಲಾಭವು ಆಗಲಾರದೆಂದು ಹೇಳಲು ಏನೂ ಅಭ್ಯಂತರವಿಲ್ಲ. ಯಾವ ಪಕ್ಷದವರ ಕೈಯಲ್ಲಿ ಅಧಿಕಾರವು ಬಂದರೂ ಹಿಂದುಸ್ತಾನಕ್ಕೆ ಇಂಗ್ಲಂಡದಿಂದ ಸ್ವರಾಜ್ಯವು ದೊರೆಯುವದೆಂಬ ಮಾತು ಸುಳ್ಳು. ಹಿಂದುಸ್ತಾನಕ್ಕೆ ಸ್ವರಾಜ್ಯವನ್ನು ಕೊಟ್ಟರೆ ಎಲ್ಲ ಪಕ್ಷದವರಿಗೂ ಹಾನಿ ತಟ್ಟುತ್ತದೆಂಬ ಭೀತಿಯು ಇದ್ದೇ ಇರುತ್ತದೆ. ಆದ್ದರಿಂದ ಹಿಂದುಸ್ತಾನಕ್ಕೆ ಸ್ವರಾಜ್ಯವು ಬೇಕಾದರೆ ಹಿಂದೀ ಜನರು ಸ್ವಾವಲಂಬಿಗಳಾಗಬೇಕು. ಮಹಾತ್ಮಾ ಗಾಂಧಿಯವರು ಆ ಸ್ವಾವಲಂಬನದ ಮಾರ್ಗವನ್ನು ನಮಗೆ ತೋರಿಸಿಕೊಟ್ಟಿರುವರು. ಆ ಅಸಹಕಾರ ಕಾರ್ಯದಲ್ಲಿ ನಾವು ಹೆಚ್ಚು ಜೋರಿನಿಂದ ಮುಂದೆ ಸಾಗಿದ ಹಾಗೆಲ್ಲ ನಮಗೆ ಸ್ವರಾಜ್ಯವು ದೊರೆಯುವದು. ಆದ್ದರಿಂದ ಲಾಯಿಡ ಜಾರ್ಜರು ರಾಜೀನಾಮೆಯನ್ನು ಕೊಟ್ಟರೆಂಬ ಬಗ್ಗೆ ವ್ಯರ್ಥವಾಗಿ ಹಿಗ್ಗುತ್ತ ಕೂಡ್ರುವದರಲ್ಲಿ ಏನೂ ಅರ್ಥವಿಲ್ಲದ್ದರಿಂದ ರಾಷ್ಟ್ರೀಯ ಸಭೆಯು [illegible] ನಿರ್ದಿಷ್ಟಮಾಡಿದ ಕಾರ್ಯಕ್ರಮವನ್ನು ಹೆಚ್ಚು ಉತ್ಸಾಹದಿಂದ ಕೊನೆಗಾಣಿಸಬೇಕೆಂದು ಎಲ್ಲರಿಗೂ ನಮ್ಮ ಸೂಚನೆ.

ಸಂಪಾದಕ.

ನೆಂದು ಕೊಡುವೆವು. ಮಹದಪರಾಧವೆಂದೂ ಬಿಡತನವೆಂದರು ವದೇ ಒಂದು ಸದ್ಗುಣವೆಂದು ಘೋರರೂಪವು ಹೇಳುವನು ಇಂಥ ಕ್ರಾಂತಿ ಸಮಯದಲ್ಲಿ ನಾವು ತಪ್ಪು ಮಾಡಬಹುದು; ಹಲವು ಹೆಚ್ಚಿನ ಕಷ್ಟಗಳನ್ನು ಸುಮ್ಮನೆ ತಂದುಕೊಳ್ಳುತ್ತಿರಬಹುದು; ಆ ವರೆ ಇಡೀ ರಾಷ್ಟ್ರವು ಜೀವನ್ಮೃತಾವಸ್ಥೆಯನ್ನು ಹೊಂದಿ ಬಾಳು ವದಕ್ಕಿಂತಲೂ ಈ ಸ್ಥಿತಿಯು ಸರಿಯಾದದ್ದು.

ಅಪರಾಧಿಯಾದವನು ತಾನಾಗಿಯೇ ಎಷ್ಟು ತಾನು ಮಾಡಿದ್ದನ್ನು ತಿದ್ದಿಕೊಳ್ಳುವ ವರೆಗೆ ನಾವು ಸುಮ್ಮನೆ ಕೂಡ್ರಬಾರದು ನಾವೇ ಆಗಲಿ, ಇನ್ನೊಬ್ಬರೇ ಆಗಲಿ, ಕಷ್ಟ ಅನುಭೋಗಿಸಬೇಕಾಗುವದೆಂಬ ಅಂಜಿಕೆಯಿಂದ ಆ ಅನ್ಯಾಯಕ್ಕೆ ಭಾಗೀದಾರರಾಗಿ ಬಾಳಿಯು ಕೂಡದು. ಇದರ ತಪ್ಪುಗಾರನಿಗೆ ಎಲ್ಲ ರೀತಿಯಿಂದಲೂ ಸಹಾಯ ಮಾಡುವದನ್ನು ಬಿಟ್ಟು ಕೊಟ್ಟು ಆ ಅನ್ಯಾಯವನ್ನು ಸರಿಪಡಿಸಲಿಕ್ಕೆ ಪ್ರಯತ್ನಿಸಬೇಕು.

ಸಾಕ್ಷಾತ್ ಹಡೆದ ತಂದೆಯೇ ಅನ್ಯಾಯವನ್ನು ಆಚರಿಸುತ್ತಿದ್ದರೆ ಅವನ ಹೊಟ್ಟೆ ಮಕ್ಕಳು ಸಹ ಅವನ ಮನೆಯನ್ನು ಬಿಟ್ಟು ನಡೆಯಬೇಕು: ಶಾಲಾಧ್ಯಾಪಕರು ಅನೀತಿಯಿಂದ ಆ ಸಂಸ್ಥೆಯನ್ನು ನಡೆಸುತ್ತಿದ್ದಲ್ಲಿ ವಿದ್ಯಾರ್ಥಿಗಳು ಆ ಶಾಲೆಗೆ ರಾಜೀನಾಮೆ ಕೊಡಬೇಕು. ಮ್ಯುನಿಸಿಪಾಲ್ಟಿಯ ಅಧ್ಯಕ್ಷನು ಲಂಚ ತಿನ್ನುವವನಿದ್ದರೆ ಮೆಂಬರ ಜನರು ರಾಜೀನಾಮೆಯನ್ನು ಕೊಟ್ಟು ಆ ದೋಷದಿಂದ ದೂರ ಉಳಿಯಬೇಕು. ಇದರಂತೆಯೇ ಯಾವದೇ ಸರಕಾರವು ಸುಖದ ನ್ಯಾಯವನ್ನು ಮಾಡ ಹತ್ತಿದರೆ ಅದರ ಪ್ರಜೆಗಳು ಅದಕ್ಕೆ ಸಹಾಯ ಮಾಡುವದನ್ನು ಅವಶ್ಯ ಬಿಟ್ಟು ಕೊಟ್ಟು ಅದು ಸನ್ಮಾರ್ಗಕ್ಕೆ ಬರುವಂತೆ ಯತ್ನಿಸಬೇಕು. ಇವೆಲ್ಲ ಉದಾಹರಣಗಳಲ್ಲಿಯೂ ಕಷ್ಟ ಸಹಿಸುವದು ಶಾರೀರಿಕವೇ ಆಗಿರಲಿ ಅಥವಾ ಮಾನಸಿಕವೇ ಇರಲಿ— ಉಂಟೇ ಉಂಟೆಂದು ನಾನು ಮನಗಂಡಿದೆನು; ಇಂತಿಷ್ಟು ದುಃಖವನ್ನು ಅನುಭವಿಸದೆ ಸ್ವಾತಂತ್ರ್ಯವ ಪಡೆಯುವದು ಸಾಧ್ಯವಾಗುವದಿಲ್ಲ.

---

## ಸ್ವದೇಶೀ ಸೈನ್ಯ

( ನವಜೀವನ )

ದೇವರ ಇಚ್ಛೆಗನುಸಾರವಾಗಿ ಹಿಂದುಸ್ತಾನದಲ್ಲಿ ಅನೇಕ ಧರ್ಮಗಳೂ ಅನೇಕ ಮತಗಳೂ ಅನೇಕ ಜಾತಿಗಳ ಜನರೂ ಹುಟ್ಟಿಗೂಡಿದ್ದಾರೆ. ಹಿಂದುಸ್ತಾನದ ಜನರಲ್ಲಿ ಆಚಾರ ವಿಚಾರಗಳಾದರೂ ಅನೇಕ ಉಂಟು. ಅದರಂತೆ ಮತಭೇದಗಳಾದರೂ ಇರುತ್ತವೆ. ಇಂಥ ಸ್ಥಿತಿಯಲ್ಲಿ ನಾವು ಒಬ್ಬರು ಮತ್ತೊಬ್ಬರ ಕಡೆಗೆ ಕ್ಷಮಾ ಮತ್ತು ಸಹನಶೀಲತೆಗಳನ್ನು ಪ್ರಕಟಗೊಳಿಸಿ ಪ್ರೇಮಭಾವದಿಂದ ನಡೆಕೊಳ್ಳಲಿಕ್ಕೆ ಬೇಕು; ಇದೇ ದೇವರ ಆಜ್ಞೆಯೆಂದು ಸ್ಪಷ್ಟವಾಗಿ ಕಂಡು ಬರುತ್ತದೆ.

ನಮ್ಮ ನಮ್ಮೊಳಗೆ ಸ್ನೇಹಭಾವದಿಂದ ಒಕ್ಕಟ್ಟಿನಿಂದ ಇರುವದೇ ನಮ್ಮ ಉದ್ಧಾರಕ್ಕೆ ಕಾರಣವು; ಒಂದುವೇಳೆ ಅದು ಸಾಧ್ಯವಾಗದಿದ್ದರೆ ನಮಗೆ ಸ್ವರಾಜ್ಯವು ಎಂದೂ ಸಿಗದು; ಸ್ವರಾಜ್ಯವು ನಮಗೆ ಸಿಗದಿದ್ದರೆ ಈ ಸ್ವಾತಂತ್ರ್ಯ ಜನರ ಕೈಕೆಳಗೆ ಇರುವದೂ ಅಶಕ್ಯ; ಪಾಶ್ಚಿಮಾತ್ಯ ಜನರ ಸಭ್ಯದ ಸಂಸ್ಥೆಯೇ ಎರಡನೇ ರಾಜ್ಯಗಳಲ್ಲಿ ಪ್ರವೇಶವನ್ನು ಹೊಂದಿ ಅವುಗಳ ಮೇಲೆ ತಮ್ಮ ಅಧಿಕಾರವನ್ನು ನಡಿಸುವದೇ ಆಗಿರುತ್ತದೆ.

ಆದ್ದರಿಂದ ಹಿಂದುಸ್ತಾನವನ್ನು ಜೀವಂತ ಉಳಿಸಿಕೊಳ್ಳಬೇಕಾಗಿದ್ದರೆ ಹಿಂದುಸ್ತಾನದ ಜನರು ಪರಸ್ಪರ ಬಂಧುಭಾವದಿಂದ ನಡಕೊಳ್ಳಲಿಕ್ಕೆ ಬೇಕು; ಆ ಬಂಧುಭಾವದ ಆರ್ಥಿಕ ಸ್ವರೂಪವೇ ಸ್ವದೇಶಿಯು; ಸ್ವದೇಶಿಯನ್ನು ತ್ಯಾಗಮಾಡುವದೆಂದರೆ ಜನ್ಮಭೂಮಿಗೂ ದೇಶಬಾಂಧವರಿಗೂ ಅತಿ ದೊಡ್ಡ ದ್ರೋಹವನ್ನು ಮಾಡಿದಂತಾಗುವದು; ಆದ್ದರಿಂದಲೇ ದಾದಾಭಾಯಿ ನವರೋಜಿ, ಲೋಕಮಾನ್ಯ ತಿಲಕ, ಮಹಾತ್ಮಾ ಗಾಂಧಿಯವರಂಥ ದೊಡ್ಡ ದೊಡ್ಡ ದೇಶಭಕ್ತರು ಸ್ವದೇಶಿಯ ಮೇಲೆ ಇಷ್ಟು ಭಾರವನ್ನು ಹಾಕುತ್ತ ಬಂದಿದ್ದಾರೆ.

ಸ್ವದೇಶಿಯ ಉಪದೇಶವು ಎರಡು ತಲೆಗಳಿಂದ ನಡೆಯುತ್ತ ಬಂದದೆ ಇನ್ನೂ ನಮ್ಮ ಜನರು ಸ್ವದೇಶಿ ಸ್ವೀಕಾರ ಮಾಡದಿದ್ದರೆ ಈ ರಾಜಕೀಯ ರಾಷ್ಟ್ರದ ಜೀವದ ಆಶೆ ಹಿಡಿಯುವಂತಿಲ್ಲ. ಭಾರತ ಮಾತೆಯ ಹಿತವನ್ನು ಬಯಸುವ ಪ್ರತಿಯೊಬ್ಬ ಮನುಷ್ಯನು ಸ್ವದೇಶೀ ಪ್ರಚಾರದ ಸಲುವಾಗಿ ತನ್ನ ಸರ್ವಸ್ವವನ್ನು ಅರ್ಪಿಸಬೇಕು; ಪ್ರಸಂಗ ಬಂದರೆ ತನ್ನ ಪ್ರಾಣವನ್ನು ಸಹ ಆಹುತಿ ಕೊಡಬೇಕು;

ಪರದೇಶೀ ಅರಿವೆಯ ಮೂಲವನ್ನು ಕಿತ್ತಿ ಹಾಕುವದು ಸ್ವದೇಶೀ ಮಹತ್ವವನ್ನು ಅರಿತಂಥ ಜನರ ಮುಖ್ಯ ಕರ್ತವ್ಯಕರ್ಮವಾಗಿರುತ್ತದೆ. ಆಲಸ್ಯದಿಂದಾಗಲಿ ಅಥವಾ ಭಯದಿಂದಾಗಲಿ, ದ್ರವ್ಯಲೋಭದಿಂದಾಗಲಿ, ಅಥವಾ ದುರ್ಲಕ್ಷ್ಯದಿಂದಾಗಲೀ, ನಾವು ಈ ಧರ್ಮದ ತ್ಯಾಗವನ್ನು ಮಾಡಕೂಡದು.

ಮುಂದಿನ ಸಂಚಿಕೆಯಲ್ಲಿ

## ಇಹವೃತ್ತ.

ಈ ಊರಲ್ಲಿ ಈ ಸಾರೆಯ ಬಾಲಿಕೆಯರ ದೀಪಾವಳಿಯ ಕೋಲಿನ ಆಟದಲ್ಲಿ ಸ್ವದೇಶೀ ಪದಗಳನ್ನು ಸುಸ್ವರದಿಂದ ಗಾಯನ ಮಾಡುತ್ತ ಹೋಗುವದನ್ನು ಕಂಡು ಯಾರಿಗೆ ಆನಂದವಾಗದೆ ಇದ್ದೀತು! ಆದರೆ ಪಾಲಕರು ಮಾತ್ರ ಇನ್ನೂ ಅವರಿಗೆ ಖಾದಿಯ ವಸ್ತ್ರಗಳನ್ನು ಕೊಟ್ಟಿರುವದಿಲ್ಲ.

## ಸುದ್ದಿಗಳು.

ದೇ. ಭ. ಹಣಮಂತರಾವ ಕೌಜಲಗಿಯವರನ್ನು ಸೋಮವಾರ ಮಹಾರಾಷ್ಟ್ರ ಗಾಡಿಗೆ ಧಾರವಾಡದಿಂದ ವಿಜಾಪೂರಕ್ಕೆ ತಂದರು ಅವರನ್ನು ಸ್ವಾಗತ ಮಾಡಲಿಕ್ಕೆ ವಿಜಾಪೂರದ ಸ್ಟೇಶನದ ಮೇಲೆ ಜನ ದಟ್ಟಣೆಯು ವಿಶೇಷವಾಗಿತ್ತು, ಅವರನ್ನು ಬೇಗನೆ ಬಿಡುವವರಿದ್ದಾರೆ.

× × ×

ಶ್ರೀ ಎಸ್ ಪೀ ದೇಸಾಯಿ ಇವರು ಬಹು ಮತದಿಂದ ವಿಜಾಪುರ ಮುನಸಿಪಾಲಿಟಿಯ ಅಧ್ಯಕ್ಷರಾಗಿ ನಿಯೋಜಿಸಲ್ಪಟ್ಟರು ಈ ಮಾತ. ನಮ್ಮ ಕಲೆಕ್ಟರ ಸಾಹೇಬರ ಮನಸಿಗೆ ಬಂದಂತೆ ತೋರುವದಿಲ್ಲ ಅವರು ಈ ಚುನಾವಣೆಯು ಸ್ಥಿರ ಕಾಯದೇಶೀರ ಇರುವದರಿಂದ ಅದನ್ನು ತಳಕೂಬ ಮಾಡಬೇಕೆಂದು ಕಮೀಶನರ್ ಸಾಹೇಬರ ಕಡೆಗೆ ಬರೆದಿರುವರಂತೆ!

× × ×

ಬರುವ ನೊವ್ಹೆಂಬರ ೨೩ ತಾ|| ಗಳಲ್ಲಿ ಕರ್ನಾಟಕ ಪ್ರಾಂತಿಕ ಶಿಕ್ಷಣ ಪರಿಷತ್ತು ಹುಬ್ಬಳ್ಳಿಯಲ್ಲಿ ಕೂಡುವದಿದ್ದು ಎಲ್ಲ ಶಿಕ್ಷಣಾಭಿಮಾನಿಗಳು ಬರಬೇಕೆಂದೂ ಬರುವದಕ್ಕೆ ಸಾಧ್ಯವಿಲ್ಲದವರು ತಮ್ಮ ಅಭಿಪ್ರಾಯವನ್ನು ಬರೆದು ತಿಳಿಸಬೇಕಾಗಿಯೂ ಹುಬ್ಬಳ್ಳಿಯ ರಾಷ್ಟ್ರೀಯ ಶಾಲೆಯ ಅಧ್ಯಾಪಕರೂ ಪರಿಷತ್ತಿನ ಕಾರ್ಯದರ್ಶಿಗಳೂ ಆದ ಆ. ನಾ. ಸಾಬಳೆ ಯವರು ತಿಳಿಸುತ್ತಾರೆ.

# SONDUR & JORAPUR

## Ginning Factory Bagalkot.

Dealers in second-hand Oil-engines, Oil engine repairers, Grinding stones suppliers and General Contractors

ಬೇರೆಬೇರೆ ತರದ ಸೆಕಂಡಹ್ಯಾಂಡ ಆಯಿಲ ಎಂಜಿನಗಳನ್ನು ನಾವು ದೊರಕಿಸಿ ಕೊಡುತ್ತೇವೆ ಮತ್ತು ಆಯಿಲ ಇಂಜಿನಗಳನ್ನು ಸೊಯೀದರದಿಂದ ದುರಸ್ತ ಮಾಡಿ ಕೊಡುತ್ತೇವೆ. ಇವಲ್ಲದೇ ಹಿಟ್ಟಿನ ಗಿರಣಿಗಳಿಗೆ ಬೇಕಾಗುವ ಬೀಸುವ ಕಲ್ಲುಗಳನ್ನೂ ನಾವು ಪೂರೈಸಿ ಕೊಡುವೆವು,

**ಸೊಂಡೂರ ಮತ್ತು ಜೋರಾಪೂರ**

ಜಿನಿಂಗ ಫ್ಯಾಕ್ಟರಿ ಬಾಗಲಕೋಟೆ.



# ಮೂರ್ಕಾಪುರ ಸ್ವದೇಶೀ ಪಾಟಿಗಳೂ ಬಾಕಿನ ಕುದಿಗಳೂ

ನಾವು ಕ್ಷನಾಸ್ಕೀಟ ವರ್ಷ ಮಾರ್ಕಾಪುರ ಇವರಿಂದ ಇಡೀ ವಿಜಾಪೂರ ಜಿಲ್ಹೆಗೆ ಸೋಲ್ಪ್ಪ ಏಜಂಟರಾಗಿ ನೇಮಿಸಲ್ಪಟ್ಟಿದ್ದೇವೆ ನಮ್ಮ ಹತ್ತರ ಉತ್ತಮ ತರಗ ಸಣ್ಣ ದೊಡ್ಡ ಪಾಟಿಗಳುಬಾಕಿಕೆಯಲ್ಲಿ ವಿದೇಶೀ ಪಾಟಿಗಳಿಗಿಂತಲೂ ಕಡಿಮೆಯಾದದ್ದು ಅಗದೀ ಸೋಯಿ ದರದಿಂದ ದೊರೆಯುವವು ಒಮ್ಮೆ ಅನುಭವ ತೆಗೆದು ಕೊಂಡಲ್ಲಿ ನಿಮಗೆ ಖಾತ್ರಿಯಾಗುವದು ೮೦ ಪಾಟಿಗಳುಳ್ಳ ಒಂದು ಪೆಟ್ಟಿಗೆಗೆ ೧೩-೮ ರೂಪಾಯಿ ಮಾತ್ರ ಏಜಂಟರು ಬೇಕಾಗಿದೆ

**ವ್ಹಿ. ಜೀ. ಚಿರವತ್ತೀಕರ**

**ಸೋಲ ಏಜಂಟ ಡಿಸ್ಟ್ರಿಕ್ಟ ವಿಜಾಪೂರ**

**ಬಾಗಲಕೋಟೆ.**



# ಡಾ. ಇಂಗಳೀಕರ

ಎಲ್. ಸಿ. ಎಚ್. ಸಿ.

**ಇವರ**

## ಹದಿನೆಂಟುವರ್ಷ ಅನುಭವದಿಂದ ಉತ್ತಮವೆಂದು ನಿಶ್ಚಿತವಾದ ಔಷಧಗಳು.

| | | | |
|---|---|---|---|
| **ಬಾಲಾಮೃತ ಹುಡಿ ೩೦ಗೆ** | ೦ | ೧೨ | ೦ |
| **ಹೆಮ್ಮಾಟೋ ಸೇಸಾಪರಿಲಾ** | ೧ | ೦ | ೦ |
| ಸ್ತ್ರೀಯರ **ಟಾನಿಕ ಕಾಯುರವ** ಶಕ್ತಿವರ್ಧಕ ಮತ್ತು ಸ್ಮರಣಶಕ್ತಿಯಮೇಲೆ | ೧ | ೦ | ೦ |
| ವೀರ್ಯವರ್ಧಕ ಕಾಯುರವ | ೧ | ೦ | ೦ |
| ಗರಮಿಯ ಗುಳಿಗೆಗಳು, ಪುಡಿ ಮತ್ತು ಲೇಪವು | ೧ | ೦ | ೦ |
| ಪರಮಿಯ ಔಷಧಗಳು | ೧ | ೦ | ೦ |
| **ಚಿಟ್ಟಗಳ ಮಲಮು** | ೦ | ೮ | ೦ |
| **ಅತಿಸಾರ ಗುಳಿಗೆಗಳು** | ೦ | ೧೨ | ೦ |
| ಮುಟ್ಟಿನ ಬೇನೆಯ ಗುಳಿಗೆಗಳು | ೧ | ೦ | ೦ |
| ಸುಖಪ್ರಸೂತಿಯ ಗುಳಿಗೆಗಳು | ೧ | ೦ | ೦ |

**ಡಾ. ಇಂಗಳೀಕರ,** L. C. H. C.

**ಬಾಗಲಕೋಟೆ.**



## ದಿ. ಕರ್ನಾಟಕ ಹೋಮಿಯೋ ಫಾರ್ಮಸಿ

**ಬಾಗಲಕೋಟೆ.**

ಕರ್ನಾಟಕದಲ್ಲಿ ಪೂರ್ಣ ವಿಶ್ವಸನೀಯವಾದ ಹೋಮಿಯೋಪಾಥಿ ಔಷಧಗಳನ್ನು ಪೂರೈಸುವ ಫಾರ್ಮಸಿಯು ಇದೇ ಮೊದಲನೆಯದು ಈ ಔಷಧಗಳನ್ನು ಅಮೇರಿಕೆಯಿಂದಲೇ ತರಿಸುತ್ತಿದ್ದು; ಅವು ಅಪರೀಕ್ಷಿತರಿಂದ ಈ ತರದ ಪ್ರತ್ಯಕ್ಷದಲ್ಲಿ ತಯಾರಾಗುತ್ತಿರುವದರಿಂದ ಅವುಗಳ ಬಗ್ಗೆ ಯಾರಿಗೂ ಸಂಶಯ ತೆಗೆಯಲಿಕ್ಕೆ ಕಾರಣವಿಲ್ಲ ಔಷಧಗಳ ತರಿಸಿ ಅನುಭವವನ್ನು ತೆಗೆದುಕೊಳ್ಳಬೇಕು

**ವ್ಯವಸ್ಥಾಪಕ.**



# Vidyaranya Mudra Mandir

## Bagalkot.

ನಮ್ಮಲ್ಲಿ ಕನ್ನಡ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಎಲ್ಲ ತರದ ಮುದ್ರಣ ಕೆಲಸವು ಒಳ್ಳೇ ಅಂದವಾಗಿಯೂ ಸ್ವಸ್ತ ದರದಿಂದಲೂ ಮಾಡಲ್ಪಡುವದು. ಅಲ್ಲದೇ ವಕೀಲೀಪತ್ರ, ದಸ್ತಾಸ, ಮೊದಲಾದ ನಮೂನೆಗಳೂ, ಶಾಲಾ ನಾಟಕದ ಪಾಠ ಪುಸ್ತಕಗಳೂ ಬೇರೆ ನಮೂನೆಗಳೂ ಮಾರಲಿಕ್ಕೆ ದೊರೆಯುತ್ತವೆ. ಪರಸ್ಥಳದವರು ವ್ಹಿ. ಪಿ. ಕಳಿಸುವಾಗ ಕೆಲ ಮುಂಗಡ ಹಣವನ್ನು ಕಳಿಸಲಿ ಬೇಕು.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಾಮಂದಿರ

**ಬಾಗಲಕೋಟೆ**



# Shree Mahalaxmi Stores,

## BAGALKOT.

**Wholesale Dealers in papers, swadeshi slates, and Oglo'- glass Ware**

ನಮ್ಮಲ್ಲಿ ಎಲ್ಲ ತರದ ಕಾಗದಗಳೂ, ಸ್ವದೇಶೀ ಪಾಟಿಗಳೂ ಮೈಸೂರಿನ ಸಾಬೂಣಗಳೂ ಮತ್ತು ಸುಗಂಧ ದ್ರವ್ಯಗಳೂ, ಬೇರೆ ಬೇರೆ ತರದ ಬಂದಿ ವಸ್ತ್ರಗಳೂ, ಮತ್ತು ಇತರ ಸ್ವದೇಶೀ ಸಾಮಾನುಗಳೂ ಯೋಗ್ಯ ದರದಿಂದ ದೊರೆಯುತ್ತವೆ.

*Proprietors:—*

Parvatikar & K.tgeri Bros, BAGALKOT.

**ಪರ್ವತೀಕರ ಕಟಗೇರ**

**ಬಾಗಲಕೋಟೆ.**


ಈ ಪತ್ರವನ್ನು ಬಾಗಲಕೋಟೆ ಪಂಚಲಿಂಗೇಶ್ವರ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಶ್ರೀನಿವಾಸ ರಾಘವೇಂದ್ರ ಬೆಂಗೇರಿ ಇವರು ಮುದ್ರಿಸಿದರು ಮತ್ತು ಇಲ್ಲಿಯೇ ಕನ್ನಡ ನವಜೀವನ ಕಾರ್ಯಾಲಯದಲ್ಲಿ ಪ್ರಕಾಶಕ ಪ್ರಸಿದ್ಧಪಡಿಸಿದರು.

ಯುರೋಪಿಡಾದ ಸಂದೇಶವು. ಕನ್ನಡ

R. N.B 1589

# ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು.

| | | |
|---|---|---|
| ವರ್ಷ ೧ | ಬಾಗಲಕೋಟೆ ಕಾರ್ತಿಕ ಶುದ್ಧ ೧೩. ಶಕೆ ೧೮೫೫<br>ಗುರುವಾರ ತಾ. ೩ ನವ್ಹಂಬರ ೧೯೩೩ | ಸಂಚಿಕೆ ೪೯ |

## ಮಹಾತ್ಮರ ನುಡಿಯು.

### ನಾನು ಸನ್ಯಾಸಿಯೂ ಅಲ್ಲ ಮುತ್ಸದ್ದಿಯೂ ಅಲ್ಲ.

(ಯಂಗ ಇಂಡಿಯಾ ತಾ|| ೧೨-೫-೧೯೨೦ ಇಸ್ವಿ)

ಈ "ಸ್ಕಾಟ್ಲ್ಯಾಂಡ ವೆಸ್ಟದ,, ಎಪ್ರಿಲ್ ಸಂಚಿಕೆಯೊಳಗೆ ಪ್ರಕಾಶವಾದ ಈ ಕೆಳಗೆ ಕೊಟ್ಟಿರುವ ಲೇಖಾಂಶವನ್ನು ಮಿತ್ರ ನೋರ್ವನು ನನ್ನ ಕಡೆಗೆ ಕಳಿಸಿ ಕೊಟ್ಟಿರುವನು.–

"ಗಾಂಧಿಯು ಸನ್ಯಾಸಿಯಂತಿರುವವನೆಂಬ ಪ್ರಸಿದ್ಧಿಯನ್ನು ಹೊಂದಿದ್ದರೂ ಬಹಶಃ ಅವನ ಕೃತಿಗಳಲ್ಲಿ ರಾಜ್ಯತಂತ್ರ ಕೋವಿದರ ವಿಚಾರಗಳೇ ವ್ಯಕ್ತವಾಗುವವು. ಅವನು ಹರತಾಳದ ಉಪಯೋಗವನ್ನು ಯಥೇಚ್ಛ ಮಾಡ ಹತ್ತಿರುವನು. ದೇಶದೊಳಗಿನ ಸುಶಿಕ್ಷಿತರೂ ಅಶಿಕ್ಷಿತ ಪ್ರಚಲಿತ ಚಳವಳಿಯಲ್ಲಿ ಏಕ ಮನಸ್ಸಿನಾಗಿ ನಡಿಯಬೇಕೆಂದು ಇಚ್ಛಿಸಿದ ಇದೊಂದು ಬಲವಾದ ರಾಜನೀತಿಯ ತಂತ್ರವಾಗಿರುವದನ್ನು ಲಕ್ಷ್ಯ ಯಾರೂ ಸಂಶಯ ಪಡರು. ಹರತಾಳದಲ್ಲಿ ಕೆಲವು ದುಷ್ಪರಿಣಾಮಗಳಾದರೂ ಉಂಟು; ಹರತಾಳವು ಪ್ರಸ್ತುತ ಕಾರ್ಯವನ್ನು ಮಾಡಿಯೇ ತೀರಲಿಕ್ಕೆ ಹಚ್ಚುತ್ತದೆ. ಈ ರೀತಿಯ ಪ್ರತ್ಯಕ್ಷ ಕಾರ್ಯದಿಂದ ಅದು ಎಷ್ಟೇ ಪರಿಣಾಮ ಕಾರಿಯಾಗಿದ್ದರೂ ಐಕ್ಯವುಂಟಾಗಲಾರದು. ಇಂಥ ಹರತಾಳಗಳಿಂದ ಅಹಿಂಸೆಯ ಉದಾತ್ತ ತತ್ವಗಳನ್ನು ಪ್ರಸಾರ ಗೊಳಿಸಲನುವುಂಟೆಂದು ಗಾಂಧಿಯು ಮನಗಂಡಿರುವನೇನು? ಜಾಲಿಯಾನವಾಲಾ ಬಾಗದಲ್ಲಿಯಾದ ಕೊಲೆಯ ಸ್ಮರಣೆಯು ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಬೇಕೆಂದು ಅವನು ಸೂಚಿಸಿರುವನು. ಇದರಿಂದೆಂದಿಗೂ ಶುದ್ಧ ಭಾವನೆಯು ಅಂಕುರಿಸಲಾರದು. ಕೊಲೆಯಾದದ್ದೊಂದು ನಮ್ಮ ಸರಕಾರದಿಂದ ಸಂಭವಿಸಿದ ಅನಾಹುತವು. ಆ ಕಾಲಕ್ಕೆ ನಮ್ಮಲ್ಲಿ ಹುಟ್ಟಿರುವ ಸಿಟ್ಟನ್ನು ಅಥವಾ ವೈಮನಸ್ಸನ್ನು ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡುವದುಚಿತವೇ? ಅನಾಥರಾದ ವಿಧವೆಯರ ಮತ್ತು ಪರದೇಶಿ ಮಕ್ಕಳ ರಕ್ಷಣೆಗಾಗಿಯೂ, ಏನೊಂದು ತಿಳಿಯದೇ ಮಡಿದ ಹೋದವರ ಆತ್ಮಗಳಿಗೆ ಶಾಂತಿಯನ್ನೀಯುವದಕ್ಕೂ, ಪ್ರಶಾಂತತೆಯ ದೇಗುಲವನ್ನೊಂದು ನಿರ್ಮಿಸಿ, ಅದರ ಸ್ಮಾರಕವನ್ನು ನೆರವೇರಿಸುವದು ಹೆಚ್ಚು ಶ್ರೇಯಸ್ಕರವಲ್ಲವೋ? ದೇಶಾಭಿಮಾನದ ಸೋಗಿನಿಂದ ಜನರ ಮನಸ್ಸನ್ನು ಕಲುಷಿತ ಮಾಡಿ ಹೆಚ್ಚಿನ ಯುದ್ಧಗಳನ್ನೂ ಜಾಲಿಯಾನವಾಲಾ ಬಾಗದಲ್ಲಿಯಂಥಹ ಕೊಲೆ ಸುಲಿಗೆಗಳನ್ನೂ ಎಬ್ಬಿಸುತ್ತಿರುವ ವ ರಾಜನೀತಿಜ್ಞರೂ ದೇಶ ಕಂಟಕರೂ ಜಗತ್ತಿನಲ್ಲಿ ತುಂಬೇ ಇರುವರು. ಬುದ್ಧನೂ ಕ್ರೈಸ್ತನೂ ಉಪದೇಶಿಸಿದಂತೆ ವಿಶ್ವ ವ್ಯಾಪಿಯಾದ ಶಾಂತತೆಯು ಸಲುವಾಗಿ ನಾವೆಲ್ಲರೂ ಹೆಣಗಾಡಿ, ಇಡಿ ಭೂಖಂಡವನ್ನೇ ಹೆಚ್ಚು ಸುಖಮಯವಾಗಿ ಮಾಡುವದು ಸರಿಯಲ್ಲವೇ? ಗಾಂಧಿಯೇ ಇಂಥ ಚಳವಳಿಯ ಪುರಸ್ಕರ್ತನಾಗಬಹುದೆಂದು ತೋರುತ್ತಿತ್ತು. ಆದರೆ ಪರಿಸ್ಥಿತಿಯ ಪೇಚಿನಲ್ಲಿ ಸಿಲುಕಿ ಸಂಕುಚಿತವಾದ ಐಕ್ಯವನ್ನು ಹುಡುಕುತ್ತಿ ಅವನು ಸಹ ಇಂಥ ಪ್ರಗತಿಗೆ ಅಡ್ಡ ಬರಬೇಕಾಗಿರುವದ."

ನನಗೆ ಕಳಿಸಿಕೊಡಲ್ಪಟ್ಟ ಸಮಗ್ರ ಲೇಖಾಂಶವನ್ನು ಇಲ್ಲಿ ಮುದ್ರಿಸಿರುವೆನು, ನನ್ನ ಕೆಲಸ ಮಾಡುವವರ ಮೇಲೆಯೂ ಮತ್ತು ನನ್ನ ಮೇಲೆಯೂ ಮಾಡಲ್ಪಡುವ ಟೀಕೆಗಳ ನಾನು ಬಹುಶಃ ಲಕ್ಷ ಕೊಡುವದು ಕಡಿಮೆ ಅವರೂ ನನ್ನ ತಪ್ಪು ಒಪ್ಪಬೇಕಾದಾಗ್ಯೂ ಮತ್ತು ನಾನು ಅನುಸರಿಸುತ್ತ ಬಂದಿರುವ ತತ್ವಗಳು ಚರ್ಚಿಲಿಸಲ್ಪಟ್ಟಲ್ಲಿ ಅವುಗಳನ್ನೇ ಹೆಚ್ಚು ಜೋರಿನಿಂದ ಸಾಧಿಸಬೇಕಾದ ವೇಳೆಯಲ್ಲಿಯೂ ಇಂಥ ಟೀಕೆಗಳನ್ನು ನಾನು ಅವಲೋಕಿಸುವದುಂಟು, ಅದರಂತೆ ಈ ಮೇಲಿನ ಟೀಕಾಂಶವನ್ನು ಪರ್ಯಾಲೋಚಿಸಲಿಕ್ಕೆ ಎರಡೊಂದು ಕಾರಣಗಳುಂಟು. ನನಗೆ ಪ್ರಿಯವಾಗಿರುವ ತತ್ವಗಳನ್ನು ಹೆಚ್ಚಿಗೆ ವಿಶದವಾಗಿ ಹೇಳುವ ಉದ್ದೇಶ ಒಂದಲ್ಲದೇ ಈ ಟೀಕಾಕಾರನನ್ನು ನಾನು ಬಲ್ಲೆನೆಂದೂ, ಅವನು ಒಳ್ಳೇ ಸುಶೀಲನಾಗಿರುವದರಿಂದ ಅವನ ಬಗ್ಗೆ ನನಗಿರುವ ಬಹು ದಿವಸದ ಆದರವನ್ನು ವ್ಯಕ್ತ ಮಾಡಬೇಕೆಂಬದಾಗಿರುವದು. ಟೀಕಾಕಾರನು ನನ್ನಲ್ಲಿ ಶರಣಾಗತಿಯುಚಿತವಾದ ಶರಣಯಿಲ್ಲದೆ ರಾಜನೀತಿಯ ವಿಚಾರಗಳೇ ಪ್ರಚುರವಾಗಿರುವದೊಂದನ್ನು ಕಂಡು ಮರುಗುತ್ತಿರುವನು. 'ಶರಣ' ಶಬ್ದವು ಈಗಿನವರ ಜೀವಿತಕ್ಕೂ ಸರಿಬಾರದು. ಅಂದ ಮೇಲೆ ನನ್ನಂಥವನ ಪಾಡೇನು? ಅದು ಅಂಥ ಪವಿತ್ರವಾದ ಶಬ್ದವಾಗಿರುವದು. ನಾನು ಕೇವಲ

ಸತ್ಯವನ್ನು ಹುಡುಕುತ್ತಿರುವ ಓರ್ವ ಹಾದಿಕಾರನು; ನನಗೆ ಶಕ್ಯಾಶಕ್ಯವಾಗಿರುವದನ್ನು ನಾನು ಅರಿತಿರುವೆನು ಆಗಾಗ್ಯೆ ತಪ್ಪುತ್ತಿರುವೆನು; ಅವುಗಳನ್ನು ಒಪ್ಪಲಿಕ್ಕೆ ಹಿಂಜರಿಯುವದಿಲ್ಲ. ಶಾಸ್ತ್ರಜ್ಞನಂತೆ ನಾನಾದರೂ ತ್ರಿಕಾಲದಲ್ಲಿಯೂ ಸತ್ಯವಾಗಿರುವ ನಮ್ಮ ಜೀವನದ ತತ್ವಗಳ ಅನುಭವಕ್ಕಾಗಿ ಕೇವಲ ಪ್ರಯೋಗಗಳನ್ನು ನಡಿಸಿರುವೆನೆಂದು ಮನಸು ಬಿಚ್ಚಿ ಹೇಳುವೆನು. ಆದರೆ ಅಶಾಸ್ತ್ರಜ್ಞನ ಬಿರುದು ನನಗೆ ಸಲ್ಲಲಾರದು. ಯಾಕಂದರೆ ಅವನಂತೆ ನಾನು ನನ್ನ ಪ್ರಯೋಗಗಳ ಅನುಭವದ ಬಗ್ಗೆ ನಿಶ್ಚಯಾತ್ಮಕವಾದ ಜ್ಞಾನವನ್ನು ಕೊಡಲಾರೆನು. ನಾನು ಸನ್ಯಾಸಿಯಲ್ಲೆಂದು ಈಪ್ರಕಾರ ನಿರಾಕರಿಸಿದ್ದು ಕಂಡು ನನ್ನ ಟೀಕೆ ಮಾಡಿದವನಿಗೆ ಖೇದವಾಗದೆ ಇರದು. ಆದಾಗ್ಯೂ ನನ್ನ ಯಾವ ಆಚಾರದಲ್ಲಿಯೂ ನಾನು ರಾಜ ನೀತಿಯ ಕುಟಿಲ ವಿಚಾರಕ್ಕೆ ಪ್ರಾಧಾನ್ಯವನ್ನು ಕೊಡುತ್ತಿರುವದಿಲ್ಲವೆಂಬದನ್ನು ಕೇಳಿ ಅವನು ಸಮಾಧಾನ ತಂದುಕೊಳ್ಳಬೇಕು. ರಾಜಕೀಯ ವಿಷಯದಲ್ಲಿ ಅಂಗ ತೆಗೆದು ಕೊಳ್ಳುವದು ನನಗೆ ಅಪರಿಹಾರ್ಯವಾಗಿರುವದು. ಯಾಕೆಂದರೆ ಅದು ಈಗ ನಮ್ಮನ್ನು ಒಂದು ಘಟಸರ್ಪದಂತೆ ಹೆಡ ಮುರಿಗೆ ಸುತ್ತಿರುವದು ಏನು ಪ್ರಯತ್ನ ಮಾಡಿದರೂ ಇದನ್ನು ತಪ್ಪಿಸಲಾಗದು. ೧೮೯೪ರಿಂದ ನಾನು ಬುದ್ಧಿಪೂರ್ವಕವಾಗಿ ಈ ಹಾವಿನ ಸಂಗಡ ಹೆಣಗಾಡ ಹತ್ತಿರುವೆನು. ಅದಕ್ಕೂ ಮೊದಲಿನಿಂದಲೂ ಅಂದರೆ ಸಾಧಾರಣ ನಾನು ವಯಸ್ಸಿಗೆ ಬಂದ ಕಾಲದಿದಲೇ ಈ ಗುದುಮುರುಗಿಯು ಸುರುವಾಗಿರುವದು. ಆದರೆ ಆಗ್ಗೆ ನನಗೆ ಅಷ್ಟೊಂದು ಅದರ ಪ್ರತೀಜ್ಞೆಯಿರಲಿಲ್ಲ. ನನ್ನ ಸುತ್ತಲೂ ಬಿರುಗಾಳಿಯು ಅಬ್ಬರವು ನಡಿದಾಗ್ಗೆಯು ನಾನು ಶಾಂತತನದಿಂದಲೇ ಕಾಲ ಕಳೆಯಬೇಕೆಂಬ ಸ್ವಾರ್ಥ ಬುದ್ಧಿಯಿಂದ ನಾನು ನನ್ನ ಕೆಲವು ಮಿತ್ರರನ್ನೊಡಗೂಡಿ ರಾಜ ನೀತಿಯಲ್ಲಿಯೂ ಧರ್ಮ ನೀತಿಯು ಪ್ರವೇಶವಾಗಬೇಕೆಂದು ಪ್ರಯೋಗಗಳನ್ನು ನಡಿಸಿರುವೆವು ಧರ್ಮವೆಂದರೇನೆಂಬದನ್ನು ನಾನು ಇಲ್ಲಿ ಹೇಳುವೆನು. ಹಿಂದೂ ಧರ್ಮವು ಎಲ್ಲ ಧರ್ಮಗಳಿಗೂ ಶ್ರೇಷ್ಠವಾದದ್ದೆಂದು ನನ್ನ ಖಚಿತ ಮತವಾಗಿದ್ದರೂ ಈ ಧರ್ಮವೆಂದರೆ ಆ ಹಿಂದೂ ಧರ್ಮವಲ್ಲ. ಇದು ಹಿಂದೂ ಧರ್ಮಕ್ಕೂ ಮಿಗಿಲಾಗಿರುವದು. ಈ ಧರ್ಮವು ಮಾನವೀ ಪ್ರಾಣಿಯ ಸ್ವಭಾವವನ್ನೇ ಬದಲು ಮಾಡುವದು ಅವನನ್ನು ಅವನಲ್ಲಿರುವ ಸತ್ಯವೆಂಬುವದಕ್ಕೆ ಘಟ್ಟಿಯಾಗಿ ಗಂಟು ಹಾಕಿ ಬಿಡುವದು, ಮತ್ತು ಅವನನ್ನು ಯಾವಾಗಲೂ ನಿರ್ಮಲನನ್ನಾಗಿ ಮಾಡುತ್ತಿರುವದು. ಇದೇ ಮಾನವೀ ಜೀವನದ ಶಾಶ್ವತವಾದ ಆಧಾರವು ಮತ್ತು ಅಧಃ ಪೂರ್ಣ ವಿಕಾಸ ಹೊಂದುವದಕ್ಕೆ ಯಾವ ತೊಂದರೆಯನ್ನು ಲೆಕ್ಕಿಸುವದಿಲ್ಲ; ತನ್ನನ್ನೂ ಪರಮಾತ್ಮನನ್ನೂ ಕಂಡು ತಿಳಿದು ತಮ್ಮಿಬ್ಬರೊಳ ನಿಜವಾದ ಸಂಬಂಧವನ್ನರಿಯದ ಹೊರ್ತು ಅದಕ್ಕೆ ಶಾಂತಿಯೇ ಇಲ್ಲದಾಗುವದು.

---

ವಿಜಾಪೂರ ಜಿಲ್ಹೆಯ ಶಿಕ್ಷಕ ಸಮ್ಮೇಲನವು ಕಾ॥ಶು ೩೦ ಈ ಎರಡು ದಿವಸ ಈ ಊರಲ್ಲಿ ನಡೆಯಿತು. ಶಿಕ್ಷಕರ ಸಂಖ್ಯೆಯು ವಿಶೇಷವಾಗಿಲ್ಲದಿದ್ದರೂ? ಸಮ್ಮೇಲನವು ಯಶಸ್ವೀಯಾಯಿತೆಂದೆನ್ನಲಿಕ್ಕೆ ಅಡ್ಡಿ ಇಲ್ಲ. ಸ್ಥಳ ಸಂಕೋಚದ ಮೂಲಕ ವಿಸ್ತಾರವಾಗಿ ಬರೆಯಲಾರೆವು.

# ಸ್ವದೇಶೀ ಸೈನ್ಯ.

( ನವಜೀವನ )

( ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು. )

ನಾವು ನಮ್ಮ ಮಕ್ಕಳ ಮರಿಗಳ ಹಿತವನ್ನು ಬಯಸಿದ... ಅವರ ಸರ್ವದ ನಾಶವನ್ನು ಮಾಡಲಿಕ್ಕೆ ಇಚ್ಛಿಸದಿದ್ದ... ಹಿಂದುಸ್ಥಾನದ ತೇಜಸ್ವಿ ಧರ್ಮದ ನಾಶ ಮಾಡಲಿಕ್ಕೆ ಬಯ... ದಿದ್ದರೆ ಮತ್ತು ಪಾರತಂತ್ರ್ಯದಿಂದ ನಾವು ತೊಳಲುತ್ತಿದ್ದರೆ ... ಧು ಧರ್ಮವನ್ನು ನಾಶ ಮಾಡುವಂಥ ಕೊಟ್ಯಾವಧಿ ದೇ... ಬಾಂಧವರನ್ನು ಉಪವಾಸ ಸಾವಿಗೆ ಗುರಿ ಮಾಡುವಂಥ ದೇ... ವನ್ನು ಯಾವಾಗಲೂ ಪಾರತಂತ್ರ್ಯದಲ್ಲಿಯೇ ಇಡುವಂಥ ಮ... ತ್ತು ಭರತ ಖಂಡವನ್ನು ನಿರ್ವೀರ್ಯ ಮಾಡುವಂಥ ಪರದೇ... ಶಿಯ ಮೇಲಿನ ಮೋಹವನ್ನು ಬೇರು ಸಹ ಕಿತ್ತು ಹಾ... ಲಿಕ್ಕೆ ಬೇಕು.

ಪರದೇಶಿಯೇ ಹಿಂದುಸ್ತಾನದ ಪೂರ್ಣ ನಾಶವನ್ನು ಮಾಡಿರುತ್ತದೆ ಮತ್ತು ಸ್ವದೇಶಿಯೇ ಹಿಂದುಸ್ತಾನ ಉದ್ಧಾರಕವೆಂದು ಈಗ ಎಲ್ಲ ಜನರು ತಿಳಿದಿದ್ದಾರೆ ಎಲ್ಲಿಯ ತನಕ ಜನರು ಅಜ್ಞಾನದಲ್ಲಿದ್ದರೋ ಅಷ್ಟು ದಿವಸ ದೇಶಪಮುಖಂಡರು ಜ್ಞಾನವನ್ನು ಕೊಡುವ ಕೆಲಸ ಮಾಡಿದರು; ಈಗ ಆ ಕೆಲಸವು ಪೂರ್ಣವಾಗಿರುತ್ತದೆ. ಇನ್ನೂ ಸ್ವದೇಶಿಯ ಕೆಲಸವು ಪೂರ್ಣವಾಗದಿದ್ದರೆ ಅದು ಜನರ ಅಜ್ಞಾನವಲ್ಲ. ಅದ... ಜನರಲ್ಲಿ ನೆಲೆಗೊಂಡ ಮೋಹವೂ ನಿರ್ಬಲತನವೂ ಕ್ಷುದ್ರ ಬಡಿವಾರ ವ್ಯವಸಾಯವೂ ದೇಶ ಹಿತದ ಕಡೆಗೆ ದುರ್ಲಕ್ಷವೂ ಮತ್ತು ... ಮ್ಮ ಮಕ್ಕಳ ಮೇಲಿನ ಶುದ್ಧ ಪ್ರೀತಿಯ ಅಭಾವವೂ ಇವೇ ಕಾರಣವಾಗಿರುತ್ತವೆ.

ಇಂಥ ಹೀನ ಸ್ಥಿತಿಯಲ್ಲಿ ಕೇವಲ ಮಾತಿನಿಂದೇನಾಗುವದು ವೀರ ಜನರ ಬಲಿದಾನದಿಂದಲೇ ಸಮಾಜದ ಪಾಮರತ್ನವು ನಷ್ಟವಾಗುವದೆಂದು ಇತಿಹಾಸದ ಹಳೇ ಅನುಭವಗಳುಂಟು. ಸ್ವದೇಶಿಯಲ್ಲಿ ವಿಶ್ವಾಸವಿದ್ದಂಥವನು ಮತ್ತು ಪರದೇಶಿಯನ್ನು ತಮ್ಮ ಮತ್ತು ತಮ್ಮ ಮಕ್ಕಳ ಶತ್ರುವೆಂದು ತಿಳಿಯುವಂಥವರು ಈ ಪರದೇಶಿಯ ವಿರುದ್ಧ ಧರ್ಮ ಯುದ್ಧವನ್ನು ಹೂಡಲಿಕ್ಕೆ ಬೇಕು ಯಾಕಂದರೆ ಪರದೇಶಿಯಲ್ಲಿ ದೇಶದ್ರೋಹವು ಧರ್ಮದ್ರೋಹವು ಮತ್ತು ಬಂಧು ದ್ರೋಹವು ತುಂಬಿರುತ್ತವೆ.

ಪರದೇಶಿಯಲ್ಲಿ ಬಂಧು ದ್ರೋಹವಿರುತ್ತದೆ. ಅಂದ ಮೇ... ಪರದೇಶಿಯನ್ನು ಹಪ್ಪ ಪಾರು ಮಾಡುವ ಕೆಲಸದಲ್ಲಿ ನಾವು ... ಮ್ಮೊಳಗೇ ಬಂಧು ದ್ರೋಹವನ್ನು ತಂದು ಕೊಳ್ಳುವಂಥ ಒಂ... ದು ಹೆಜ್ಜೆಯನ್ನು ಸಹ ಮುಂದೆ ಇಡಬಾರದೆಂದು ಹೇಳಲಿ... ಆಸ್ಪದವೇ ಇಲ್ಲ.

ಸ್ವಾರ್ಥ್ಯದಿಂದಾಗಲೀ, ಅಥವಾ ಅಜ್ಞಾನದಿಂದಾಗಲೀ ದೇ... ದ್ರೋಹ ಮಾಡಿದಂಥವರ ಕಡೆಗೆ ಸಹ ನಾವು ಕ್ಷಮಾ ವೃತ್ತಿಯನ್ನು ಧಾರಣ ಮಾಡಬೇಕು. ಯಾವ ಪ್ರಕಾರ ರೋಗಿಯ ರೋ... ಗವನ್ನು ನಾವು ದೂರ ಮಾಡುತ್ತೇವೋ ಅದೇ ಪ್ರಕಾರ ನಮ್ಮ ... ಪ್ಪು ಮಾಡುವ ದೇಶ ಬಾಂಧವರನ್ನು ಪರದೇಶಿ ಪಾಪದಿಂದ ಮು... ಕ್ತರನ್ನಾಗಿ ಮಾಡಬೇಕು.

ಬಾಗಲಕೋಟೆ— ಪುರವಣಿ ಕನ್ನಡ ನವಜೀವನ ೪೦೦ ಅ
ಕಾರ್ತಿಕ ಶುದ್ಧ ೧೩ ಶಕೆ ೧೮೪೪

# ಜಾಹೀರ ನೋಟೀಸ.

ರಾ॥ ರಾ॥ ನಾಗಪ್ಪಾ ತಂದಿ ರಾಚಪ್ಪಾ ಮಾಗಡದ ಸಾ॥ ಇನಾಮಗ್ರಾಮ ನರಸಾಪುರ ತಾಲೂಕ ಬದಾಮಿ ಇವರಿಗೆ

ಕೆಳಗೆ ಸಹಿ ಮಾಡುವವರು ಸಾ॥ ಹೊಸಕೇರಿ ಸಂಸ್ಥಾನ ರಾವ ದುರ್ಗ ಹಾಲವಸ್ತಿ ಗುಳೇದಗುಡ್ಡ ಈಗ ನೋಟಿಸಿನಿಂದ ತಿಳಿಯ ಪಡಿಸುವದೇನಂದರೆ ನೀನು ನನ್ನ ಉಡಕಿಯ ಗಂಡನಿದ್ದು ಉಡಕಿ ಮಾಡಿಕೊಂಡನಂತರ ಸ್ವಲ್ಪ ದಿವಸಗಳಲ್ಲಿಯೇ ನಿನ್ನ ಖುಷಿಯಿಲ್ಲವಲೇ ಅಥವಾ ನನ್ನ ಹೊಟ್ಟಿಗೆ ಹಾಕುದದು ನಿಂನ ಕಡಿಯಿಂದ ಆಗದ್ದರಿಂದ ನೀನಾಗಿ ನಂನ್ನನ್ನು ತವರ ಮನಿಗೆ ಕಳಿಸಿಕೊಟ್ಟಿ. ಆನಂತರ ನಾನು ನಂನ ತಾಯಿಯನ್ನು ಕರಕೊಂಡು ನಿಂನ ಹತ್ತರ ಇದ್ದು ಪ್ರಪಂಚ ಮಾಡಿಕೊಂಡು ಹೋಗುವ ಇರಾದೆಯಿಂದ ಮೂರಾವರ್ಷ ದಾರಿ ಜತಿಗಾಗಿ ನಂನ ತಾಯಿಯುನ್ನು ಕರಕೊಂಡು ನಿಂನ ಹತ್ತರ ಇರಲಿಕ್ಕೆ ಬಂದೆ ಆದರೆ ನನ್ನನ್ನ ಇಟ್ಟುಕೊಳ್ಳದೆ ಮೂರೂ ಸಾರೆ ಪರತ ಕಳಿಸಿ ಕೊಟ್ಟಿ ಇದರ ಮೇಲಿಂದ ಹೀಗೆ ಕಂಡು ಬರುವದಲ್ಲಾ. ನೀನು ಕೈಲಾಗದವನೂ ಮತ್ತು ಹೆಂಡತಿಯನ್ನು ಸಂರಕ್ಷಣ ಮಾಡಲಿಕ್ಕೆ ಶಕ್ತಿಯಿಲ್ಲದವನು ಅಂತಾ ಕಂಡು ಬರುತ್ತದೆ. ಆದ್ದರಿಂದ ಇಂಥವನ ಸಂಗಡ ಇರಲಿಕ್ಕೆ ನಂನ ಖುಷಿ ಇರುವದಿಲ್ಲ. ಅಲ್ಲದೆ ಇನ್ನು ಮುಂದೆ ನಂನಂನು ಕರಿಯಲಿಕ್ಕೆ ಬಂದರೂ ನಾನು ನಿನ್ನ ಸಂಗಡ ಬರುವದಿಲ್ಲ ಕಾರಣ ಈ ನೋಟೀಸು ಮುಟ್ಟಿದ ೮ ದಿವಸದಲ್ಲಿ ನೀನು ಇಲ್ಲಿಯ ವರಿಗೆ ಬಂದು ನನಗೆ ಸೋಡ ಚೀಟಿಯನ್ನು ಕೊಟ್ಟು ಹೋಗಬೇಕು. ಜರ ಇದಕ್ಕೆ ತಪ್ಪಿದಲ್ಲಿ ಈ ನೋಟಿಸನೇ ಸೋಡ ಚಿಟಿಯಂದು ತಿಳಕೊಳ್ಳತಕ್ಕದ್ದು. ನಿನಗೆ ಈ ನೋಟಿಸು ಮುಟ್ಟಿದಂದಿನಿಂದ ನನ್ನ ಮೇಲೆ ನಿನ್ನದು ಯಾವ ರೀತಿಯಿಂದಲೂ ಸತ್ತಾ ಮಾಲಕಿ ನಡಿಯುಲಿಕ್ಕಿಲ್ಲ. ನಾನು ನನ್ನ ಮರಜಿಯ ಪ್ರಕಾರ ವರ್ತನೂಕ ಮಾಡತಕ್ಕವಳು ಈ ನೋಟಿಸಿನ ಖರ್ಚು ನಿಂನ ಮೇಲೆಯೇ ಆದೆ ತಿಳಿಯುವದು.

ಈ ಹೆಬ್ಬಟ್ಟಿನ ಗುರ್ತಾ ಬಸವ್ವಾ ಕೊಂ ನಾಗಪ್ಪ ಮಾಗಡದ ಈಕೆಯದು ಅದೆ.

ಷ್ಟರೆ ಅವರು ಮನೆಯಲ್ಲಿಯೇ ಕೂತು ಭೂತಿಯನ್ನು ತೋರಿಸಬಹುದು. ಪರೀಕ್ಷಿಸಬಹುದು. ಆದರೆ ಅವರು ಈ ಧರ್ಮಕ್ಕೂ ಬರಲಾರರು. ಯಾರಲ್ಲಿಯಾದರೂ

ವ.

ದರ್ಶನ ಮಾಡುವದೇತಕ್ಕೆ? ಒಂದನ್ನು ತರಿಸಿನೋಡಿರಿ. ಕಳಿಯ ಗತಿಯನ್ನು ನಮಗೆ ತಿಳಿಸಬೇಕು

ವದು. ೪ ವರುಷಗಳ ಗ್ಯಾರಂಟಿ ಸಹಿತ ಕ್ರಯ ೪-೮-೦

ವ್ಯಾಪಾರಸ್ಥ— ಧೈರ್ಯ ಲಕ್ಷ್ಮಿ ಅಂಡ ಕೊ॥
ಹೊ॥ ಬಾ॥ ಶೆಣವರು ಆಟಿ ಮುದ್ರಿತ

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಣಾಲಯ ಬಾಗಲಕೋಟ

ಸತ್ಯವನ್ನು ಹುಡುಕುತ್ತಿರುವ ಓರ್ವ ಹ
ಶಕ್ಯವಾಗಿರುವದನ್ನು ನಾನು ಅರಿತಿರು
ವೆನು, ಅವುಗಳನ್ನು ಒಪ್ಪಲಿಕ್ಕೆ ಹಿಂಜರಿ
ತಿ ನಾನಾದರೂ ತ್ರಿಕಾಲದಲ್ಲಿಯೂ
ವನದ ತತ್ವಗಳ ಅನುಭವಕ್ಕಾಗಿ ಕೇವ
ಡಿಸಿರುವೆನೆಂದು ಮನಸು ಬಿಚ್ಚಿ ಹೇ
ಜ್ಞನ ಬಿರುದು ನನಗೆ ಸಲ್ಲಲಾರದು.
ನಾನು ನನ್ನ ಪ್ರಯೋಗಗಳ ಅನುಭವದ
ಜ್ಞಾನವನ್ನು ಕೊಡಲಾರೆನು. ನಾನು ಸನ
ನಿರಾಕರಿಸಿದ್ದು ಕಂಡು ನನ್ನ ಟೀಕೆ ವ
ದೆ ಇರದು. ಆದಾಗ್ಯೂ ನನ್ನ ಯಾವ
ರಾಜ ನೀತಿಯ ಕುಟಿಲ ವಿಚಾರಕ್ಕೆ ಪ
ರುವದಿಲ್ಲವೆಂಬದನ್ನು ಕೇಳಿ ಅವನು ಸ
ಬೇಕು. ರಾಜಕೀಯ ವಿಷಯದಲ್ಲಿ ಅ
ನನಗೆ ಅಪರಿಹಾರ್ಯವಾಗಿರುವದು. ೦
ಮ್ಮನ್ನು ಒಂದು ಘಟಿ ಸರ್ಪದಂತೆ ಕ
ವಿನು ಪ್ರಯತ್ನ ಮಾಡಿದರೂ ಇದನ್ನು ತ
ದ ನಾನು ಬುದ್ಧಿಪೂರ್ವಕವಾಗಿ ಈ
ಗಾಢ ಹತ್ತಿರುವನು ಅದಕ್ಕೂ ಮೊದ
ಕಾರಣ ನಾನು ವಯಸ್ಸಿಗೆ ಬಂದ ಕಾ
ಡುಗೆಯು ಸುರುವ ಗಿರುವದು. ಆದರೆ ಆ
ಆದರ ಪ್ರತಿಜ್ಞೆಯಿರಲಿಲ್ಲ. ನನ್ನ ಸುತ್ತ
ರವು ನಡಿದಾಗ್ಗೆಯು ನಾನು ಶಾಂತತ
ಬೇಕೆಂಬ ಸ್ವಾರ್ಥ ಬುದ್ಧಿಯಿಂದ ನಾ
ರನ್ನೊಡಗೂಡಿ ರಾಜ ನೀತಿಯಲ್ಲಿಯೂ
ಶವಾಗಬೇಕೆಂದು ಪ್ರಯೋಗಗಳನ್ನು ನ
ದರೇನೆಂಬದನ್ನು ನಾನು ಇಲ್ಲಿ ಹೇಳುವ
ವು ಎಲ್ಲ ಧರ್ಮಗಳಿಗೂ ಶ್ರೇಷ್ಠವಾದ
ತನಾಗಿದ್ದರೂ ಈ ಧರ್ಮವೆಂದರೆ ಆ ಹಿ
ಹಿಂದೂ ಧರ್ಮಕ್ಕೂ ಮಿಗಿಲಾಗಿರುವದ
ವೀ ಪ್ರಾಣಿಯ ಸ್ವಭಾವವನ್ನೇ ಬದಲು
ಅವನಲ್ಲಿರುವ ಸತ್ಯವೆಂಬುವದಕ್ಕೆ ಘಟ್ಟ
ತುವದು, ಮತ್ತು ಅವನನ್ನು ಯಾರಾಗಲ
ಸುತ್ತಿರುವದು. ಇದೇ ಮಾನವೀ ಜೀವ
ಕವು ಮತ್ತು ಅದು ಪೂರ್ಣ ವಿಕಾಸ
ಕೊಂದರೆಯನ್ನು ಲೆಕ್ಕಿಸುವದಿಲ್ಲ; ತನ್ನನ
ತು ತಿಳಿದು ತಮ್ಮಲ್ಲಿರುವ ನಿಜವಾದ ಸ
ರ್ತ ಅದಕ್ಕೆ ಶಾಂತಿಯೇ ಇಲ್ಲದಾಗು

---

ವಿಜಾಪೂರ ಜಿಲ್ಹೆಯ ಶಿಕ್ಷಕ ಸ
ಈ ಎರಡು ದಿವಸ ಈ ಊರಲ್ಲಿ ನಡೆಯಿ
ವಿಶೇಷವಾಗಿಲ್ಲದಿದ್ದರೂ? ಸಮ್ಮೇಲನವು
ಲಿಕ್ಕೆ ಅಡ್ಡೀ ಇಲ್ಲ. ಸ್ಥಳ ಸಂಕೋಚದ
ಬರೆಯಲಾರೆವು.

ಈಗ ದೇಶದಲ್ಲಿ ಯಾವತ್ತೂ ಸ್ಥಳಗಳಲ್ಲಿ ಖಾದಿಯು ಸಿದ್ಧವಾಗ ...ಗುತ್ತದೆ ಖಾದಿಯಿಂದಲೇ ನಮ್ಮ ಅರಿವೆಯ ಖರ್ಚಿನಲ್ಲಿ ಬ...ಳ ಉಳಿತಾಯವಾಗಿರುತ್ತದೆ ನಮ್ಮ ಇರುವಿಕೆಯು ಸಾದಾ Simple ) ಆಗಿ ಇರುತ್ತದೆ. ಇಂಥ ಸ್ಥಿತಿಯಲ್ಲಿ ಸಹ...ಯದಲ್ಲಿ ಕುಂದುಗಳು ಇದ್ದರೆ ಅವರು ಮನೆಯಲ್ಲಿಯೇ ಕೂತು ಈ ಯುದ್ಧಕ್ಕೆ ಸಹಾನುಭೂತಿಯನ್ನು ತೋರಿಸಬಹುದು. ಪರೋಕ್ಷ ಸಹಾಯವನ್ನು ಮಾಡಬಹುದು. ಆದರೆ ಅವರು ಈ ಧರ್ಮಯುದ್ಧದ ಸೈನ್ಯದಲ್ಲಿಯಂತೂ ಬರಲಾರರು. ಯಾರಲ್ಲಿಯಾದರೂ

# ಕನ್ನಡ ನವಜೀವನ.


...ದಕ್ಕೆ ರೂ ೧-೮-೦

**ರಾಸರಾಜ ಅಂಡ ಕಂಪನಿ.** ೩ ಯರಳಪ್ಪನ ಬೀದಿ ಮದ್ರಾಸ್.

## ಟಿಕ್ ಟಿಕ್ ಎಂಬ ಶಬ್ದವನ್ನು ಕೊಟ್ಟ ಮಾತ್ರಕ್ಕೆ ಗಡಿಯಾರಗಳೇ.



ಚಕ್ರಗಳಲ್ಲಿಯೂ ಗಂಟೆ ತೋರಿವ ನಂಬರುಗಳ ಮೇಲೆಯೂ ಕೆಂಪು ಕಲ್ಲ ಕೆತ್ತಲ್ಪಟ್ಟಿವೆ ಎಂದು ಇದನ್ನು ತರಿಸುವರಿಗೆ ೧೦-೧೫ ಬಹುಮಾನಗಳೊಡನೆ ೫-೬ ವರುಷಗಳ ಗ್ಯಾರಂಟಿ ಸಹಿತ ೩-೪ ರೂಪಾಯಿಗಳಿಗೆ ಕೊಡುವೆವೆಂದು ಪ್ರಚುರವಾಗುವ ಪ್ರಕಟನೆಗಳನ್ನು ನೋಡಿ ಬೆರಗಾಗಿ ನಿಮ್ಮ ಹಣವನ್ನು ಕಳಕೊಳ್ಳಬೇಡಿ ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ ಬಹು ಉತ್ತಮವಾದ ಮೂವ್‌ಮೆಂಟ್ಸಗಳಿಂದ ತಯಾರಿಸಿದೆ. ಗಾಳಿಯೂ ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವದ ಸರಿಯಾದ ಕಾಲವನ್ನು ತೋರಿಸುವದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವು ಸರಿಮಾಡಿಕೊಳ್ಳಬಹುದು. ನೋಟಕ್ಕೆ ಗಂಭೀರವಾಗಿಯೂ ಸುಂದರವಾಗಿಯೂ ಇರುವದು. ಇದು ಇಂಗ್ಲೀಷ ನಮೂನೆಯುಳ್ಳದ್ದು. ಈ ಗಡಿಯಾರದಲ್ಲಿ ಯಾರೇ ಆಗಲಿ ಸುಲಭವಾಗಿ ಗಂಟೆ ನೋಡಬಹುದು. ಅಷ್ಟರಿಂದ ಬಹಳಾಗಿ ವರ್ಣನ ಮಾಡುವದೇತಕ್ಕೆ? ಒಂದನ್ನು ತರಿಸಿ ನೋಡಿರಿ. ತಿಳಿಯಬಹುದು. ೪ ವರುಷಗಳ ಗ್ಯಾರಂಟಿ ಸಹಿತ ಕ್ರಯ ೪-೮-೦

ಪ್ರಾಪ್ತಿಸ್ಥಳ,— **ಧೈರ್ಯ ಲಕ್ಷ್ಮಿ ಅಂಡ ಕೊ|**

ಪೋ|| ಬಾ|| ನಂಬರು ೨೬೫ ಮದ್ರಾಸು.



... ರವೀಂದ್ರನಾಥ ಠಾಕೂರ, ... ಪಂಡಿತ ಮಾಲವೀಯ ... ಮೋತೀಲಾಲ ನೆಹರು. ... ಮಹಾನ್ ತತ್ವವೇತ್ತಾ ಅರವಿಂದಘೋಷ ೧೦ ವೀರ ಆಲ್ಲಿ ಬಂಧು ಪ್ರಬಂಧಗಳಿಗೆ ಅಂದವಾದ ಬಣ್ಣದ ಹೊದಿಕೆ ಚರಿತ್ರನಾಯಕರ ಸುಂದರವಾದ ಛಾಯಾಪಟ, ಕ್ರೌನ ಸೈಜ ೫೦ ಪುಟ ಅಜಮಾಸು.

ಜಾಹೀರಾತ ಕೊಡುವವರಿಗೆ ಬಲು ಸೌಕರ್ಯ, ದರವು ತೀರ ಸ್ವಲ್ಪು ವಾರ್ಷಿಕ ವರ್ಗಣಿ... ೨ರೂ, ೮ ಆಣೆ ಮಾತ್ರ. [ಅಂಚೆ ವೆಚ್ಚ ಬೇರೆ ಇದಕ್ಕೂ ಹೆಚ್ಚಿಗೆ ವೃತ್ತಾಂತ ಬೇಕಾದರೆ ಕೆಳಗಿನ ವಿಳಾಸದವರಿಗೆ ಬರೆಯಿರಿ.

ಕೃಷ್ಣ ಗುರು ಸಂಗಮ,
ಸಂಪಾದಕ, ಸ, ಭಾ, ಭ. ಗಂಧಮಾಲಿ.
ಹುಬ್ಬಳ್ಳಿ,

## ಬೇಕಾಗಿವೆ! ಬೇಕಾಗಿವೆ!!

ಕಟಿಂಗ ಮಶಿನ್, ಪರ್ಫೋರೇಟಿಂಗ ಮಶಿನ್, ಸಿಪಿಂಗ ಪ್ರೆಸ್ ಮೊದಲಾದ ಮುದ್ರಾಮಂದಿರಕ್ಕೆ ಬೇಕಾಗುವ ಸೆಕೆಂಡಹ್ಯಾಂಡ ಸಾಮಾನುಗಳು ಬೇಕಾಗಿವೆ, ಸೆಕೆಂಡಹ್ಯಾಂಡಾದರೂ ಎಲ್ಲ ಸಾಮಾನುಗಳ ಒಳ್ಳೇ ಸ್ಥಿತಿಯ ಕೆಲಸವನ್ನು ಕೊಡಬೇಕು, ಯಾರಾದರೂ ಈ ಸಾಮಾನುಗಳನ್ನು ಮಾರತಕ್ಕವರಿದ್ದರೆ, ಆ ಸಾಮಾನುಗಳ ಸಿದ್ಧವಾದ ಕಂಪನಿಯ ಹೆಸರು, ಆಕಾರ ವಯ ಮತ್ತು ಈಗಿನ ಸ್ಥಿತಿ ಮೊದಲಾದ ಸಂಗತಿಗಳನ್ನು ನಮಗೆ ತಿಳಿಸಬೇಕು

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ

ಸತ್ಯವನ್ನು ಹುಡುಕುತ್ತಿರುವ ಓರ್ವ ಹ
ಶಕ್ಯವಾಗಿರುವದನ್ನು ನಾನು ಅರಿತಿರು
ವೆನು; ಅವುಗಳನ್ನು ಒಪ್ಪಲಿಕ್ಕೆ ಹಿಂಜರಿ
ತೆ ನಾನಾದರೂ ತ್ರಿಕಾಲದಲ್ಲಿಯೂ
ವನದ ತತ್ವಗಳ ಅನುಭವಕ್ಕಾಗಿ ಕೇವ
ಡಿಸಿರುವೆನೆಂದು ಮನಸು ಬಿಚ್ಚಿ ಹೇ
ಜ್ಞನ ಬಿರುದು ನನಗೆ ಸಲ್ಲಲಾರದು.
ನಾನು ನನ್ನ ಪ್ರಯೋಗಗಳ ಅನುಭವ

ಶ್ರೀ ಶಿವಾಜಿರಾವ ಸೀರಲಕೇರಿ
ಬಾಗಲಕೋಟ

For Sale! For Sale!!

ಮಾರತಕ್ಕದ್ದಿದೆ!

ಫಿಲ್ಮ್ ಆರ್ಕರ ಸಿಲಿಂಡರ ಪ್ರೆಸ್, ಸುಮಾರು ೧೫ ಹ್ಯಾಂಡಪ್ರೆಸ್ ಮತ್ತು ಪ್ರೂಫಪ್ರೆಸ್ ಇವು ನಾವು ಮಾರತಕ್ಕವಾಗಿದ್ದೇವೆ. ಮೂರು ಯಂತ್ರಗಳು ಒಳ್ಳೇ ಸ್ಥಿತಿಯಲ್ಲಿದ್ದು ಕೇಸವನ್ನು ಉತ್ಕೃಷ್ಟರೀತಿಯಿಂದ ಕೊಡುತ್ತವೆ. ಬೇಕಾದವರು ನಮಗೆ ಸಮಕ್ಷಮ ಭೆಟ್ಟಿಯಾಗಿ, ಮತಿನಗಳನ್ನು ನೋಡಿಕೊಳ್ಳಬಹುದು. ಏನಾದರೂ ಮಾಹಿತಿ ಬೇಕಾದಲ್ಲಿ ಪತ್ರವ್ಯವಹಾರವನ್ನು ಮಾಡಬಹುದು.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟ

ಬೇಕಾಗಿದ್ದಾರೆ.

ಕಂಪೋಜಿಟರರೂ

ಮಶೀನ್ ಟ್ರೆಡಲ್‌ಗಳಮೇಲೆ ಕೆಲಸಮಾಡುವ ಕುಶಲರಾದ ಪ್ರೆಸ್‌ಮನ್‌ರೂ.

ಯೋಗ್ಯತೆಗೆ ತಕ್ಕಂತೆ ಸಂಬಳವು ದೊರೆಯುವದು. ಇಚ್ಛೆ ಇದ್ದವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟ

ಶ್ರೀಯುತ ಜನಾರ್ದನ ಹಣಮಂತ ಪರ್ವತೀಕರ
V. J. PARVATIKE:
General Agent, BAGALKOT

ಶ್ರೀ ಬನಶಂಕರೀ ಪ್ರೆಸನ್.

ಹೊಸದಾಗಿ ತಯಾರಿಸಿದೆ.

ನಾವು ಇದೇ ಒಬ್ಬ ಡಾಕ್ಟರರಿಂದ ಉತ್ತಮವೆಂದು ತರಾಯಿಸಿ ಖಾಸ್ ತ್ರಿಕ್ಷ ಬ್ರಾಹ್ಮಿ ಸಾಯರಪ್ ಪ್ರಿಸ್ಕ್ರೈಲ ವಾತಶಮನಟಿಸಾಯುರ ವಾಸಕ ಮುಂತಾದ ಆಯುರ್ವೇದಿಕ ಔಷಧಗಳನ್ನು ತಯಾರಿಸಿದ್ದೇವೆ ಬೆಲೆ ತೀರ ಸುಲಭ . ನಮ್ಮಲ್ಲಿ ಎಲ್ಲ ತರದ ಸ್ವದೇಶಿ ಸ್ಟೇಶನರಿ ಸಾಮಾನ ಕಟ್ಟಿಗೆ ಖಾದಿ ಯೋಗ್ಯ ಕ್ರಯಕ್ಕೆ ದೊರೆಯುತ್ತವೆ.

Managing Agents:– Nargundkar Bros. BAGALKOT. } ಭಾರತ ವಸ್ತುಸಂಗ್ರಹಾಲಯ. ಬಾಗಲಕೋಟೆ.

ಶುದ್ಧ ಸ್ವದೇಸಿ ಬಟ್ಟೆಗಳು.

ಸ್ವದೇಸಿ ಹ್ಯಾಂಡಲೂಮ ಆ್ಯಂಡ ಡಾಯಿಂಗ ಫ್ಯಾಕ್ಟರಿ
ಧಾರವಾಡ.

ನಮ್ಮಲ್ಲಿ ತಯಾರಾಗುವ ನೂಲು ಉಣಿಮಿಶ್ರವಾದ ಅರಿವೆ(ಸೂತಿಖಾದ)ನೂಲು ಅಂಚಿನಸೀರೆ ತಯಾರಾಗುತ್ತವೆ, ಬಣ್ಣ ಪಕ್ಕಾ ಕಟ್ಟಿರೆ ಪರತ ತೆಗೆದುಕೊಳ್ಳುತ್ತೇವೆ. ಪರಸ್ಥಳದವರ ಸೋಯಿಗಾಗಿ ಒಂದು ಕೋಟಿನ ಅರವಿ ಸಹ ವ್ಹಿ. ಪಿ. ಯಿಂದ ಕಳಿಸಿಕೊಡುವೆವು.ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರದಿಂದ ತಿಳಕೊಳ್ಳಬೇಕು.

ಕಲಾಲ ಗೋವಿಂದಪ್ಪ ವಿರಬಸಪ್ಪ ಹಳಕಟ್ಟಿ
ಧಾರವಾಡ

ಬರಯಲಾರೆವು.

ಈಗ ದೇಶದಲ್ಲಿ ಯಾವತ್ತೂ ಸ್ಥಳಗಳಲ್ಲಿ ಖಾದಿಯು ಸಿದ್ಧವಾಗ(ು)ತ್ತದೆ ಖಾದಿಯಿಂದಲೇ ನಮ್ಮ ಅರಿವೆಯ ಖರ್ಚಿನಲ್ಲಿ ಬ(ಹ)ಳ ಉಳಿತಾಯವಾಗಿರುತ್ತದೆ ನಮ್ಮ ಇರುವಿಕೆಯು ಸಾದಾ (Simple) ಆಗಿ ಇರುತ್ತದೆ. ಇಂಥ ಸ್ಥಿತಿಯಲ್ಲಿ ಸಹ ಅದು ನಮ್ಮ ಬಂಧು ದ್ರೋಹ ಮತ್ತು ಅಧಾರ್ಮಿಕತನದ (ಕೆ)ಲಸವು ಆಗಿರುತ್ತದೆ. ಹಿಂದುಸ್ಥಾನವು ಈಗ ಪರದೇಶಿಯ ವಿರುದ್ಧ ಯುದ್ಧದ ಡಂಗುರವನ್ನು ಸಾರಲಿಕ್ಕೆ ಬೇಕು.

ಈ ಮಹಾ ಯುದ್ಧದ ದೆಶೆಯಿಂದ ನಮ್ಮ ಸಿದ್ಧತೆಯಾದ(ದ್ದೂ) ದೊಡ್ಡದೇ ಇರತಕ್ಕದ್ದು. ಯಾರು ಸ್ವತಃ ಶುದ್ಧರಾಗಿರು(ತ್ತಾ)ರೋ ಮತ್ತು ತಮ್ಮ ಕುಟುಂಬದ ಮೇಲೆ ತಮ್ಮ ಪೂರ್ಣ (ವ)ರ್ಚಸ್ಸನ್ನು ಕಾಯ್ದುಕೊಂಡಿರುತ್ತಾರೋ ಅವರೇ ಧರ್ಮವೀರ(ರ)ಾಗಲಿಕ್ಕೆ ತಕ್ಕವರಿದ್ದಾರೆ ಯಾರಲ್ಲಿ ಯಾರಾದರೂ ಈ ವಿಷ(ಯದಲ್ಲಿ ಖ)ಾದಿಯನ್ನು ಕೊಳ್ಳಲಿಕ್ಕೆ ಗತಿಯಿಲ್ಲದ ಕಂಗಾಲನಿದ್ದರೆ ಅವನ(ಿಗೆ) ದೇಶೀ ಗಿರಣಿಯ ಅರಿವೆಯು ಸಾಕಾಗುವದು ಅಂದ ಮೇಲೆ (ಈ)ಗ ದೇಶದಲ್ಲಿ ಒಂದು ತುಣುಕು ಸಹ ಪರದೇಶೀ ಅರಿವೆಯು (ಇ)ರಲಿಕ್ಕೆ ಕಾರಣವಿಲ್ಲ. ಅಂದರೂ ಸಕಲ ದೇಶದಲ್ಲಿ ಪರದೇಶೀ ಅ(ರಿ)ವೆಯು ಹೇರಳವಾಗಿ ಬಿದ್ದಿರುತ್ತದೆ. ()

ಯದಲ್ಲಿ ಕುಂದುಗಳು ಇದ್ದರೆ ಅವರು ಮನೆಯಲ್ಲಿಯೇ ಕೂತು ಈ ಯುದ್ಧಕ್ಕೆ ಸಹಾನುಭೂತಿಯನ್ನು ತೋರಿಸಬಹುದು. ಪರೋಕ್ಷ ಸಹಾಯವನ್ನು ಮಾಡಬಹುದು. ಆದರೆ ಅವರು ಈ ಧರ್ಮಯುದ್ಧದ ಸೈನ್ಯದಲ್ಲಿಯಂತೂ ಬರಲಾರರು. ಯಾರಲ್ಲಿಯಾದರೂ ಕ್ಷುದ್ರ ದ್ವೇಷ ಭಾವ (Desire to avengpersonal hatred) ಇದ್ದರೆ ಅದನ್ನು ಅವರು ಮೊದಲೇ ತೊಳೆದು ಹಾಕಲಿಕ್ಕೆಬೇಕು. ತನ್ನ ವೈರಿಯ ಕ್ಷಮೆ ಬೇಡಬೇಕು ಆ ಮೇಲೆ ಈ ಸೈನ್ಯದಲ್ಲಿ ಸೇರಬೇಕು.

ಈ ಸೈನ್ಯದಲ್ಲಿ ಸೇರಿದಂಥವರು ಈ ಪವಿತ್ರ ದೀಕ್ಷೆಯಿಂದ ಧರ್ಮ ಬಂಧುಗಳಾಗುತ್ತಾರೆ. ಒಬ್ಬರು ಮತ್ತೊಬ್ಬರ ಕಡೆಗೆ ಪ್ರೇಮ ಮತ್ತು ಆದರ ಭಾವದಿಂದ ವರ್ತಿಸಬೇಕು. ಯಾರಾದರೂ ಯಾವದೇ ಕಾರಣದಿಂದ ಈ ಯುದ್ಧದಲ್ಲಿ ವಿಘ್ನವನ್ನುಂಟು ಮಾಡಿದರೂ ಸಹ ಅವರ ಕಡೆಗೂ ನಾವು ಪೂರ್ಣ ಅಹಿಂಸಾ ವೃತ್ತಿಯನ್ನು ಧಾರಣ ಮಾಡಲಿಕ್ಕೆ ಬೇಕು.

ಸ್ವದೇಶೀ ಸೈನ್ಯದಲ್ಲಿ ಸೇರಿದನಂತರ ಸಹ ಯಾರಿಗಾದರೂ ಅನುಭವದಿಂದ ತೀವ್ರ ಅಹಿಂಸಾ ವೃತ್ತಿಯಿಂದ ಇರಲಾರೆವೆಂದು ಕಂಡು ಬಂದರೆ ಅಹಿಂಸಾ ಈಗಲೇ ಈ ಸೈನ್ಯದಿಂದ ಹೊರಬೀ(ಳಬೇಕು)


# ಕನ್ನಡ ನವಜೀವನ.

## ನೂತನ ವರ್ಷಾರಂಭ!

### ಹೊಸ ವ್ಯವಸ್ಥೆ!!

ಮಹಾತ್ಮಾ ಗಾಂಧೀಯವರ ಶಿಷ್ಯರೂ ಕರ್ನಾಟಕದ ಸುಪ್ರಸಿದ್ಧ ಮುಂದಾಳುಗಳೂ ಆದ ಶ್ರೀಯುತ ಪಿ. ಜಪ್ಪಂಣಾ ಹರ್ಡೇಕರ ದಾವಣಗೆರಿ ಇವರ ಲೇಖಗಳು ಪ್ರತಿವಾರ ತಪ್ಪದೇ ಪ್ರಸಿದ್ಧವಾಗುವವು.

ಇನ್ನು ಮೂರು ಸಂಚಿಕೆಗಳು ಮಾತ್ರ ಹೊರಬಿದ್ದರೆ ಕನ್ನಡ ನವಜೀವನದ ಮೊದಲನೇ ವರ್ಷವು ಮುಗಿಯುವದಷ್ಟೆ? ಎರಡನೇ ವರ್ಷಾರಂಭಕ್ಕೆ ಡಬಲ್ ಡೆಮಿ ಆಕಾರ (ಅಂದರೆ ಕರ್ನಾಟಕ ಪತ್ರದ ಅಥವಾ ನವೀನ ಭಾರತ ಎರಡರಷ್ಟು ೮ ಪುಟಗಳುಳ್ಳದ್ದು) ವೃದ್ಧಿಯಾಗುವದು. ಈಗಿನಂತೆಯೇ ಮೊದನೇ ಪುಟಕ್ಕೆ ಮಹಾತ್ಮರ ನುಡಿಯು ಪ್ರತಿವಾರ ಪ್ರಕಟವಾಗುವದು. ಉಳಿದ ಪುಟಗಳಲ್ಲಿ ಅಹಿಂಸೆ, ಸತ್ಯಾಗ್ರಹ, ಸಾತ್ವಿಕ ಬುದ್ಧಿ ಮೊದಲಾದ ಮಹಾತ್ಮರ ತತ್ವಗಳನ್ನನುಸರಿಸಿ ಪ್ರಚಲಿತ ವಿಷಯಗಳೆಲ್ಲವೂ ಸ್ವತಂತ್ರ ರೀತಿಯಿಂದ ವಿವೇಚಿಸಲ್ಪಡುವವು ಈ ಮಹತ್ವದ ಕಾರ್ಯವನ್ನು ಶ್ರೀಯುತ ಮಂಜಪ್ಪಾ ಹರ್ಡೇಕರರೇ ವಹಿಸಿ ಕೊಂಡಿದ್ದಾರೆ ಇವಲ್ಲದೆ ವೃತ್ತಸಾರ, ಉಪವೃತ್ತ, ಪರದೇಶಿಗಳ ಸುದ್ದಿ ಪತ್ರವ್ಯವಹಾರಗಳಿಗೂ ಸ್ಥಳವನ್ನು ಕಾದಿಡುವೆವು. ಸ್ವಲ್ಪದರಲ್ಲಿ ಹೇಳಬೇಕೆಂದರೆ ಕನ್ನಡ ನವಜೀವನ ವನ್ನೋದುವವರಿಗೆ ಎಲ್ಲ ವಿಷಯದ ಜ್ಞಾನವಾಗುವ ಹಾಗೆ ನಡಿಸಬೇಕೆಂಬುದೇ ನಮ್ಮ ಉದ್ದೇಶವು ಈ ಕಾರ್ಯದಲ್ಲಿ ಎಂದಿನಂತೆ ಕನ್ನಡಿಗರ ಸಹಾಯವು ನಮಗೆ ದೊರೆಯುವದೆಂದು ಕೋರುತ್ತೇವೆ.

ಚಂದಾ ಹಣವು:— ಸ್ಥಳದವರಿಗೆ ೩ ರೂ ೮ ಆಣೆ!

" ಪರ ಸ್ಥಳದವರಿಗೆ ಅಂಚೆ ವೆಚ್ಚ ಸೇರಿ ೪ ರೂ. ಮಾತ್ರ

## ಚಂದಾದಾರರಿಗೆ ವಿನಂತಿ.

ನವಜೀವನವು ಪ್ರಾರಂಭವಾಗಿ ಇದೇ ತಿಂಗಳ ೨೩ ನೇ ತಾರೀಖಿಗೆ ಒಂದು ವರ್ಷವಾಗುವದು, ಇಷ್ಟು ಅವಧಿಯಲ್ಲಿ ಅದು ಕರ್ನಾಟಕ ಮಾತೆಯ ಹಾಗು ಕನ್ನಡಿಗರ ಸೇವೆಯನ್ನು ತನ್ನ ಕೈಲಾದ ಮಟ್ಟಿಗೆ ಮಾಡಿರುವದು ಇದೇ ಪ್ರಕಾರವಾಗಿ ಹೆಚ್ಚು ಉತ್ಸಾಹದಿಂದ ಮುಂದಾದರೂ ಮಾಡಲಿಕ್ಕೆ ಸಿದ್ಧವಿರುವದೆಂಬವನ್ನು ಕನ್ನಡಿಗರಿಗೆ ತಿಳಿಸಲಿಕ್ಕೆ ಅತ್ಯಂತ ಆನಂದವಾಗುತ್ತದೆ. ಆದ್ದರಿಂದ ಕರ್ನಾಟಕಸ್ಥರೆಲ್ಲರೂ ಎಂದಿನಂತೆ ಪ್ರೇಮದಿಂದ ಆಶ್ರಯವನ್ನು ಕೊಡುವರೆಂದು ತುಂಬಾ ನಂಬಿಗೆಯುಂಟು. ಈಗಿನ ಚಂದಾದಾರರೆಲ್ಲ ಬೇಗನೆ ಚಂದಾ ಹಣವನ್ನು ಮನಿಯಾರ್ಡರದಿಂದ ಸಲ್ಲಿಸಬೇಕಾಗಿ ವಿನಂತಿಯುಂಟು; ಪತ್ರವು ಬೇಡಾದವರು ದಯಮಾಡಿ ನಮಗೆ ತಿಳಿಸಿದರೆ ನೆಟ್ಟಗಾಗುವದು ಇಲ್ಲದಿದ್ದರೆ ನಿಷ್ಕಾರಣವಾಗಿ ಅಂಚೆ ವೆಚ್ಚವು ನಮ್ಮ ಮೇಲೆ ಬೀಳುತ್ತದೆ. ಚಂದಾದಾರರು ತಮ್ಮ ರಜಿಸ್ಟರ ನಂಬರವನ್ನು ತಿಳಿಸಬೇಕೆಂದು ವಿನಂತಿಯು.

ವ್ಯವಸ್ಥಾಪಕ.

# ಕನ್ನಡ ನವಜೀವನ.

ಕಾರ್ತೀಕ ಶುದ್ಧ ೧೩ ಗುರುವಾರ ಶಕೆ ೧೮೪೪

## ಯರೋಡಾದ ಸಂದೇಶವು.

(ಯಂಗ ಇಂಡಿಯಾ)

ರಾಷ್ಟ್ರೀಯ ಕಾರ್ಯನಿರ್ವಾಹಕರು ಏನು ಮಾಡುತ್ತಿರುವರು? ಈ ಯುದ್ಧದ ಪರಿಣಾಮವು ಇದರ ಮೇಲೆಯೇ ಅವಲಂಬಿಸಿರುತ್ತದೆ. ಅಲ್ಲದೆ ಅವರು ಏನು ವಿಚಾರ ಮಾಡುತ್ತಿರುವರು ಅಥವಾ ಏನು ಮಾತಾಡುತ್ತಿರುವರು ಇದರ ಮೇಲೆ ಅಲ್ಲ. ನಮ್ಮ ಮತಗಳಾಗಲಿ ಅಥವಾ ನಾವು ಮಾಡುವ ನಿಷೇಧಗಳಾಗಲೀ ಉಪಯೋಗ ಬೀಳಲಾರವು. ಆದ್ದರಿಂದ ನಮ್ಮ ಕೃತಿಗಳೇ ಮಹತ್ವವಾದವುಗಳು. ಮಹಾತ್ಮಾಜಿಯವರು ಧ್ಯೇಯತತ್ವವನ್ನು ವಹಿಸಿ ಪ್ರಾರಂಭ ಮಾಡಿದ ಸ್ವಾತಂತ್ರ್ಯ ಯುದ್ಧಕ್ಕು ಮತ್ತು ಹಿಂದೂಸ್ಥಾನದಲ್ಲಿ ಈಗಲೇ ಆಗಿ ಹೋದ ರಾಜಕೀಯ ಚಳವಳಿಗೂ ಇದೇ ಮುಖ್ಯವಾದ ಭೇದವು. ರಾಷ್ಟ್ರಕ್ಕೆ ಅದರ ಧ್ಯೇಯವಾದ ಸ್ವರಾಜ್ಯವು ದೊರೆಕಬೇಕೆಂದು ಬಯಸುವ ಪ್ರತಿಯೊಬ್ಬ ಮನುಷ್ಯನು ತಾನು ಏನು ಮಾಡುತ್ತಿರುವೆನು ಎಂದು ತನ್ನಷ್ಟಕ್ಕೆ ತಾನೇ ಪ್ರಶ್ನೆ ಮಾಡಿಕೊಳ್ಳತಕ್ಕದ್ದು. ಈ ಪ್ರಶ್ನಕ್ಕೆ ಸಮರ್ಪಕವಾದ ಉತ್ತರವು ದೊರೆಯುವದರ ಮೇಲೆಯೇ ಯಾವನಾದರೊಬ್ಬನು ನಿಜವಾಗಿ ರಾಷ್ಟ್ರ ಸೇವೆಯನ್ನು ಮಾಡುತ್ತಿರುವನೋ ಇಲ್ಲವೆ ಕಾಲವನ್ನು ಕಳೆಯುತ್ತಿರುವನೋ ಎಂಬ ಮಾತು ಅವಲಂಬಿಸಿರುತ್ತದೆ. ಸರಕಾರಕ್ಕೆ ಕೇವಲ ವಿರೋಧಿಸುವದೇ ಒಂದು ರಾಷ್ಟ್ರ ಕ್ರಮವಾಗಲಾರದು. ಆವರಲ್ಲಿಯು ಹುಳಕನ್ನು ನಾವು ಎಷ್ಟು ಪರಿಯಿಂದ ಮುಚ್ಚ ಹೋದರೂ ಈ ವಿರೋಧದ ಮಾತ್ರ ಕಾರ್ಯಕ್ರಮದಿಂದ ಸ್ವಲ್ಪ ಕೂಡ ಉಪಯೋಗವಾಗಲಾರದು. ವಿರೋಧಿಸುವದೆಂದರೆ ಕೇವಲ ತಿಕ್ಕಾಟವು. ಈ ಸರಕಾರವೆಂಬ ಯಂತ್ರದ ಗಾಲಿಗಳನ್ನೇ ಮುರಿದು ಸ್ವರಾಜ್ಯವನ್ನು ಸ್ಥಾಪಿಸಬೇಕಾದರೆ ತಿಕ್ಕಾಟವು ಅವಶ್ಯವಿದ್ದೇ ಯಾವದಾದರೊಂದು ರಥವು ಸಾಗಬೇಕಾದರೆ ಅದರ ಗಾಲಿಗಳು ಬೀದಿಗೆ ತಗುಲಿಕ್ಕೆ ಬೇಕು. ಲಗಾಮು ಇಲ್ಲದೆ ಕುದುರೆಯು ಮನುಷ್ಯನನ್ನು ಒಯ್ಯಲಾರದು ಅಥವಾ ಗಾಡಿಯನ್ನು ಜಗ್ಗಲಾರದು. ಈ ತರದ ಅವಶ್ಯ ಸಾಮಗ್ರಿಗಳಿಂದ ನಮ್ಮ ಕಾರ್ಯವನ್ನು ಪೂರ್ತಿಗೊಳಿಸಲಿಕ್ಕೆ ಹೆಚ್ಚು ಸಹಾಯವಾಗುವದಲ್ಲದೆ ಅದರಿಂದ ನಮಗೆ ಅಡ್ಡಿಯಾಗಲಾರದು. ಶಸ್ತ್ರ ಕ್ರಿಯೆಯಲ್ಲಿಯೂ ಕೃಷಿಕರ್ಮದಲ್ಲಿಯೂ ಕತ್ತರಿಸುವದರಿಂದ ಸಹಾಯವಾಗುವಂತೆ ಈ ವಿರೋಧದಿಂದ ನಮಗೆ ಸಹಾಯವಾಗುವದು.

ನಮ್ಮ ಎದುರಿನಲ್ಲಿದ್ದ ಧ್ಯೇಯವನ್ನು ಸಂಪಾದಿಸಲಿಕ್ಕೆ ಈ ಅಸಹಕಾರ ಚಳವಳಿಯ ಕಾರ್ಯಕ್ರಮದಷ್ಟು ಸುಲಭವಾದ ಸುರಕ್ಷಿತವಾದ ಮತ್ತು ಪರಿಣಾಮಕಾರಕವಾದ ಬೇರೊಂದು ಕಾರ್ಯಕ್ರಮವು ಯಾರಿಗೂ ತೋರಲಿಲ್ಲ. ಆದರೆ ರಾಷ್ಟ್ರಕ್ಕೂ ಈ ಚಳವಳಿಗೂ ಅಷ್ಟು ನಿಕಟದಿಂದ ಸಂಬಂಧವು ಉಂಟಾಗಿರುವದಿಲ್ಲ. ರಾಷ್ಟ್ರವು ತನ್ನ ಶಕ್ತಿಯನ್ನು ನೋಡಿ ಅದನ್ನು ಉಪಯೋಗದಲ್ಲಿ ತರುವದಕೆ ಪ್ರಯತ್ನ ಮಾಡುತ್ತಿರುವಾಗ ನಮಗೆ ಏರಿಕೆ ಇಳಿಕೆಗಳು ತೋರುತ್ತಿರುವವು. ಆದರೆ ಈ ಚಳವಳಿಯು ಯಾವದೇ ಸ್ವರೂಪವನ್ನು ಹೊಂದಲೆಲ್ಲದೇಕೆ ಚಿರಕಾಲ ಬಾಳುವದಕ್ಕೆ ಜನಿಸಿರುವದು ಮತ್ತು ನಾವು ನಮ್ಮ ಮನಸ್ಸಿನಲ್ಲಿ ನಿಶ್ಚಯ ಮಾಡಲಿಕ್ಕೆ ಪ್ರಯತ್ನವನ್ನು ಎಷ್ಟು ಶೀಘ್ರವಾಗಿ ಮಾಡುವೆವೋ ಅಷ್ಟೇ ಶೀಘ್ರವಾಗಿ ನಮಗೆ ಫಲವು ದೊರಕುವದು. ಕಡೆಗೆ ಜಯವು ಆಗುವದೆಂಬದರಲ್ಲಿ ಏನೂ ಸಂದೇಹವಿಲ್ಲ. ನಮ್ಮ ದಾಸ್ಯವು ಹೋಗಿ ಚಿರಸ್ಥಾಯಿಯಾದ ಮತ್ತು ನಿಜವಾದ ಸಂಪೂರ್ಣ ಸ್ವರಾಜ್ಯವು ದೊರತೆ ದೊರೆಯುವದು. ಸರಕಾರದವರು ಈ ಅಸಹಕಾರ ಚಳವಳಿಯನ್ನು ಮುರಿಬಡಿಯುವದಕ್ಕೆ ಮಾಡುವ ಪ್ರಯತ್ನಗಳು ಅಥವಾ ನಾವು ಈ ರಾಜಕೀಯ ಚಳವಳಿಯಲ್ಲಿ ಇವಕ್ಕಿಂತಲೂ ಸುಲಭವಾದ ಬೇರೆ ಮಾರ್ಗಗಳನ್ನು ಹುಡುಕಲು ಮಾಡುವ ಪ್ರಯತ್ನಗಳೂ ನಿಷ್ಫಲವಾಗುವವು. ಎಷ್ಟು ನಿಲ್ಲ ಹತ್ತಿ ನಡೆಯಲಿಕ್ಕೆ ಪ್ರಯತ್ನ ಮಾಡಿದ ಕೂಸು ಎಂದಾದರೂ ತಿರುಗಿ ಅಂಬೆಗಾಲು ಹಚ್ಚುವದೇ? ಅದರಂತೆಯೇ ರಾಷ್ಟ್ರವು ತನ್ನ ಧ್ಯೇಯವನ್ನು ಸಂಪಾದಿಸಲಿಕ್ಕೆ ಇಂದಿನ ವರೆಗೆ ಪಾರ್ಲಿಮೆಂಟದ ಕೃತಿಗಳ ಅನುಭವವನ್ನು ತೆಗೆದುಕೊಂಡ ಮೇಲೆ ಪುನಃ ಅದರ ಮೇಲೆ ವಿಶ್ವಾಸವಿಟ್ಟು ಅದರ ಸಂಗಡ ಸಹಕಾರಿತೆಯಿಂದ ವರ್ತಿಸಲಾರದು.

ಮಹಾತ್ಮಾಜಿಯವರಿಗೆ ಇಷ್ಟು ಮಹತ್ವವೂ ಇಷ್ಟು ವಿಜಯವೂ ದೊರೆಯಲಿಕ್ಕೆ ಮುಖ್ಯಕಾರಣವೆಂದರೆ ಅವರು ಮುಖ್ಯ ತತ್ವಗಳನ್ನು ಬೇಗನೆ ಕಂಡು ಹಿಡಿದು ತಮಗೆ ಯೋಗ್ಯವೆಂದು

ತೋರಿದಂತೆ ಅವರಿನಲ್ಲಿ ಸ್ವಲ್ಪ ಕೂಡ ಹೆದರವೆ ಇರುವದೂ ಹಾಗೂ ಮಹತ್ವಾಕಾಂಕ್ಷೆ ಸ್ವಾರ್ಥಗಳಿಂದ ಸ್ವಾಭಾವಿಕವಾಗಿ ಉಂಟಾಗುವ ತಪ್ಪುಗಳಾಗಲಿ ಪೂರ್ವಗ್ರಹಗಳಾಗಲಿ ಅವರಲ್ಲಿ ಏನೂ ಇಲ್ಲದೆ ಇರುವದೂ ಎಂದು ಹೇಳಬಹುದು;

ನೀಚ ಸ್ವಾರ್ಥಸಾಧಿಸುವದರ ಸಲುವಾಗಿಯಾಗಲಿ ಅಧಿಕಾರಲೋಲುಪತೆ ಹಾಗೂ ಕೀರ್ತಿಯನ್ನು ಸಂಪಾದಿಸುವದಕ್ಕಾಗಲಿ ಲಾಲಸೆಯು ಮನುಷ್ಯನಲ್ಲಿ ಹುಟ್ಟ ಹತ್ತಿದ ಕಾಲಕ್ಕೆ ದೊಡ್ಡ ದೊಡ್ಡ ಮನುಷ್ಯರ ಬುದ್ಧಿಯಾದರೂ ನಾಶವಾಗಿ ಅವರು ದೇಶಕ್ಕೆ ದೊಡ್ಡ ಭಯಂಕರ ವೈರಿಗಳಾಗುತ್ತಾರೆ ಹಾಗೂ ದೇಶದ ಮುಖಂಡರಾಗಲಿಕ್ಕೆ ಅಯೋಗ್ಯರಾಗುತ್ತಾರೆ ಮಹಾತ್ವಾಕಾಂಕ್ಷೆ ಹಾಗೂ ಸ್ವಾರ್ಥ ಇವುಗಳ ಹೊರ್ತು ಆಲಸ್ಯ ಮತ್ತು ಭಯ ಇವುಗಳಿಂದಾದರೂ ಮನುಷ್ಯನ ಅಂತರಾತ್ಮವು ನಷ್ಟವಾಗಿ ತಾನು ಕೈಕೊಂಡ ಕಾರ್ಯವನ್ನು ಮಾಡಲು ಅವನು ಅಸಮರ್ಥನಾಗುತ್ತಾನೆ ಮತ್ತು ಎಷ್ಟೋ ಪ್ರಸಂಗಗಳಲ್ಲಿ ಅವನಿಗೆ ತಾನು ಮಾಡತಕ್ಕದ್ದನ್ನು ನಿರ್ಣಯಿಸಲಿಕ್ಕೆ ಸಹ ಆಗುವದಿಲ್ಲ ಅವರು ಎಲ್ಲ ಮುಖಂಡರ ಹಾಗೂ ದೊಡ್ಡ ಮನುಷ್ಯರ ವರ್ಗದಿಂದ ಭಿನ್ನರಾಗಿ ಉಳಿಯಲಿಕ್ಕೆ ಅವರಲ್ಲಿಯ ಮುಖ್ಯವಾದ ಗುಣಗಳೇ ಕಾರಣವಾಗಿರುತ್ತವೆ ಅವರು ಮಹತ್ವಾಕಾಂಕ್ಷ ಅಥವಾ ಸ್ವಾರ್ಥ ಮತ್ತು ಆಲಸ್ಯ ಅಥವಾ ಭಯ ಇವುಗಳಿಂದ ನಿರ್ಲಿಪ್ತರಾಗಿರುತ್ತಾರ ಸ್ವಾರ್ಥತ್ಯಾಗ ಹಾಗೂ ನಿರ್ಭಯತೆಗಳಿಂದಲೇ ಮಹಾತ್ಮರು ಎಲ್ಲ ಜನರಿಗೆ ಅಪೇಕ್ಷಿತವಾದ ವಸ್ತುಗಳನ್ನು ತಿಳಿದುಕೊಳ್ಳಲು ಸಮರ್ಥರಾಗುತ್ತಾರೆ ಹಾಗೂ ತಮ್ಮ ನಿರ್ಣಯದಂತೆ ವರ್ತಿಸಲು ಅವರು ಶಕ್ತರಾಗುತ್ತಾರೆ ಆದರೆ ಈ ಗುಣಗಳು ಮಹಾತ್ಮರಲ್ಲಿ ಇದ್ದಂತೆ ಉಳಿದ ಮುಖಂಡರಲ್ಲಿ ವಿಶೇಷವಾಗಿ ಇಲ್ಲದ್ದರಿಂದಲೇ ಅಖಿಲ ಹಿಂದುಸ್ತಾನದ ಸ್ತ್ರೀ ಪುರುಷ ಬಾಲಕರ ವರ್ಗದಲ್ಲಿ ಮಹಾತ್ಮರ ವಿಷಯವಾಗಿ ಇದ್ದಷ್ಟು ಪ್ರೇಮ ಹಾಗೂ ಭಕ್ತಿಯು ಉಳಿದ ಮುಖಂಡರಲ್ಲಿ ಇರುವದಿಲ್ಲ.

ಅಜ್ಞಾನಿ ಜನರು ಮಹಾತ್ಮರಿಗೆ ಈ ಕಾರಣದಿಂದಲೇ ದೈವೀ ಈಶ್ವರೀ ಅವತಾರವೆಂದು ತಿಳಿಯುತ್ತಾರೆ ಆದರೆ ಶಕ್ತಿಯಿಂದರೆ ಆತ್ಮ ಶುದ್ಧಿ ಮತ್ತು ಆತ್ಮಶುದ್ಧಿಯಿಂದಲೇ ಸಣ್ಣ ಮನುಷ್ಯನು ಕೂಡಾ ಈಶ್ವರನ ಸಮಾನನಾಗುತ್ತಾನೆ.

ಇನ್ನೂ ಜನರು ಎರವಡೇ ಜೇಲಿನ ಕಡೆಗೆ ಸ್ಫೂರ್ತಿ ಹಾಗು ನೇತೃತ್ವದ ಸಲುವಾಗಿ ಆತುರರಾಗಿರುತ್ತಾರೆ ಎಂಬುವದರಲ್ಲಿ ಆಶ್ಚರ್ಯವೇನೂ ಇಲ್ಲ ನಮ್ಮ ಮಾರ್ಗವು ಸಂಶಯ ಹಾಗು ವಿಘ್ನಗಳಿಂದ ಆಚ್ಛಾದಿಸಲ್ಪಟ್ಟಿರುತ್ತವೆ ಅವುಗಳನ್ನು ದೂರ ಮಾಡಲು ಎಷ್ಟೋ ಉಪಾಯಗಳನ್ನು ತೋರಿಸಿ ಕೊಟ್ಟರೂ ಅವುಗಳ ಮೇಲೆ ಜನರ ವಿಶ್ವಾಸವಿರುವದಿಲ್ಲ; ಅವರ ವಿಶ್ವಾಸವು ಕೇವಲ ಎರವಡೆಯ ಸುರಂಗದ ಅಭೇದ್ಯವಾದ ಕೋಣೆಯಲ್ಲಿ ಕೂತಂಥ ಆ ಮಹಾತ್ಮರ ಕಡೆಗೆ ಇರುವದು ಈ ವಿಶ್ರಾಮಸ್ಥಾನದಲ್ಲಿ ಕೂತು ವಿಚಾರ ಮಾಡುವ ಕಾಲಕ್ಕೆ ಮಹಾತ್ಮರಿಗೆ ತಾವು ಪ್ರಾರಂಭ ಮಾಡಿದಂಥಾ ಚಳವಳಿಯು ಅನವಶ್ಯಕವಾಗಿತ್ತು ಎಂದು ಕಂಡು ಬಂದರೆ ಅವರು ಭಯ ಅಥವಾ ಅಪಮಾನಕ್ಕೆ ಯಾವ ತರದಿಂದಲೂ ಅಂಜದೆ ಆ ತಪ್ಪನ್ನು ಒಪ್ಪಿ ಪ್ರಾಯಶ್ಚಿತ್ತವನ್ನು ತಕ್ಕೊಳ್ಳಲು ಸಹ ಅವರು ಶಕ್ತರಾಗುವರು ಈ ಚಳವಳಿಯನ್ನು ನಿಲ್ಲಿಸುವದೆ ಯೋಗ್ಯವಾದ್ದದೆಂದು ಅವರಿಗೆ ಕಂಡು ಬಂದರೆ ಸರಕಾರದ ಮುಖಾಂತರವಾಗಿ ಒಂದು ಜಾಹೀರ ಪತ್ರವನ್ನು ಪ್ರಕಟಿಸಲು ಅವರಿಗೆ ಅಪಮಾನ ಅಥವಾ ಯಾವದೇ ತರದ ಮಿಥ್ಯಾಕಲ್ಪನೆಯು ಅಡ್ಡ ಬರಲಿಕ್ಕಿಲ್ಲ. ಸರಕಾರದವರೂ ಪರಿಸ್ಥಿತಿಯನ್ನು ಸುಧಾರಿಸುವದರ ಸಲುವಾಗಿ ಅವರಿಗೆ ಈ ಪ್ರಕಾರ ಮಾಡಲು ಆನಂದದಿಂದ ಒಪ್ಪಿಕೊಳ್ಳುವರು. ಆದ್ದರಿಂದಲೇ ನಾವು ಹಿಡಿದಂಥ ಧರ್ಮ ಯುದ್ಧವನ್ನೇ ಮುಂದೆ ಸಾಗಿಸಬೇಕೆಂದು ಮಹಾತ್ಮರ ಇಚ್ಛೆಯು ಇದೆ ಎಂಬದರಲ್ಲಿ ಏನೂ ಸಂದೇಹವಿಲ್ಲ ಹಾಗೂ ಪರಮಾತ್ಮನ ಕೃಪೆಯಿಂದ ನಾವಾದರೂ ಮುಂದೆ ಸಾಗುವೆವು. ನಮ್ಮ ವಿಜಯವು ತೀರ ಸಮೀಪಿಸಿವೆ. ಪ್ರತಿ ಪಕ್ಷಗಳ ನೈತಿಕ ಬಲವು ಅತ್ಯಂತ ಜರ್ಜರವಾಗಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ನಾವು ದೃಢ ವಿಶ್ವಾಸದಿಂದ ಪ್ರಯತ್ನ ಮಾಡಹತ್ತಿದರ ಸ್ವಾತಂತ್ರ್ಯ ದೇವಿಯು ನಿಜವಾಗಿ ನಮಗೆ ಜಯ ಪ್ರಾಪ್ತಿಯನ್ನು ಮಾಡಿ ಕೊಡುವಳು.

ಸಿ. ರಾಜಗೋಪಾಲಾಚಾರ್ಯ

---

# ಟಿಪ್ಪಣಿಗಳು.

**ಅಭಿನಂದನ.**

... ಗುಳಿಗೆಗಳು ಮತ್ತು ಚೀಟಿಗಳು

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೮—೦ | ಟ. ಖ |
| ೧೦೦ ಚೀಟಗಳಿಗೆ | ೦—೧೪—೦ | |
| ೪೦ ಔಂಸ ... | ೦—೪—೦ | |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮೀಶನ್

ವಿಳಾಸ—ಕರ್ನಾಟಕ ಇಂಕ ಕಂಪನಿ, ಬಾಗಲಕೋಟ.

ಸುವರ್ಣ ರಾಜವಂಗೇಶ್ವರ

... ೧ತೊ.ಕಿ.ರೂ.೪ ... ಕಿ.ರೂ ... ನಮೂನಾ ... 

ವಾದಿರಾಜ ಜಹಾಗೀರದಾರ
ರಾಷ್ಟ್ರೀಯ ಶಾಳಾ.
ಧಾರವಾಡ.

ಇಂಡಿಯಾ ಫ್ರಾವ್ಹಿಡಂಟ ಕಂ. ಲಿ. ಕಲಕತ್ತಾ.

ಮಧ್ಯಮಸ್ಥಿತಿಯ ಕುಟುಂಬದಾರರಿಗೆ ಈ ... ಕಾಲದಲಿ ... ಹಣ ಕೂಡಿಸುವದು ಬಗಿಯಾಗಿರುವದು ... ಸ್ತ್ರೀ ಪುರುಷರು ವಿಮೆ ... ಮತ್ತು ... ಕೂಡಲೆ ... ಕರಿಗೆ ದೊರಕಿಸಬಹುದು.

ತ್ತ ಉಚಿತಸಮಯದಲ್ಲಿ ಅವುಗಳ ವಿಚಾರವನ್ನಾದರೂ ನಾವು ಮಾಡುವೆವು. ಈ ಸಮಯದಲ್ಲಿಯಂತೂ ನಾವು ಅದರ ಶಿಫಾರಸ್ಸನ್ನೊಪ್ಪಿ ಮಾಡುತ್ತೇವೆ ಈ ಅಂಕಿದಲ್ಲಿ ಆ ಕಮಿಟಿಯ ಶಿಫಾರಸದ ಸಾರಾಂಶವನ್ನು ನಮ್ಮ ಭಾಷೆಯಲ್ಲಿ ಕೊಟ್ಟು ನಮ್ಮ ಲೇಖವನ್ನು ಮುಗಿಸುತ್ತೇವೆ ಮುಂದಿನಸಂಚಿಕೆಯಲ್ಲಿ ಕ್ರಮಶಃ ಎಲ್ಲ ಪದದಿಯ ವಿಷಯವಾಗಿಯೂ, ಕೌನ್ಸಿಲ ಪ್ರವೇಶದ ವಿಷಯವಾಗಿಯೂ ನಮ್ಮ ಮತವನ್ನು ಕೊಡುವೆವು ಮಹಾತ್ಮಾಜಿಯವರು ಕೌನ್ಸಿಲಪ್ರವೇಶದ ವಿಷಯವಾಗಿ ತಮ್ಮ ಭಾಷಣ ಲೇಖನಗಳಿಂದ ಸಂಪೂರ್ಣ ವಿವರಿಸಮಾಡಿದ್ದಾರೆ; ಹಾಗೂ ನಾವು ಆ ವಿಚಾರಗಳನ್ನು ಜನರ ಮುಂದೆ ಇಟ್ಟಿದ್ದೇವೆ ಅದರೂ ಹೆಚ್ಚಿನ ಸಂಗತಿಯ ವಿಷಯವಾಗಿ ಪುನಃ ಈ ಪ್ರಶ್ನದ ಬಗ್ಗೆ ಭಿನ್ನ ಭಿನ್ನ ದೃಷ್ಟಿಯಿಂದ ಸಾಂಗೋಪಾಂಗ ವಿಚಾರಮಾಡುವೆವು.

## ಶಿಫಾರಶಿನ ಸಾರಾಂಶವು.

### ೧ ಸವಿನಯಭಂಗ

(ಅ) ಈಗ ಸಾರ್ವತ್ರಿಕ ಕಾಯದೇಭಂಗಕ್ಕೆ ದೇಶವು ತಯಾರಾಗಿರುವದಿಲ್ಲ. ಆದರೆ ದೇಶದ ಯಾವದೇ ಭಾಗದಲ್ಲಿ ಮರ್ಯಾದಿತ ರೂಪದಲ್ಲಿ ತುರಂತ ಸಾಮುದಾಯಿಕ ಭಂಗವನ್ನು ಪ್ರಾರಂಭಮಾಡುವ ಅವಶ್ಯಕತೆಯು ಬಿದ್ದರೆ, ಯಾವದೇತರದ ಕಾಯದೇ ವಿಷಯವಾಗಿ ಅಥವಾ ಕರಕೊಡುವದರ ಸಲುವಾಗಿ ಇದರ ಅವಶ್ಯಕತೆಯು ಹಾಗೂ ಜನರ ಸಿದ್ಧತೆಯು ಕಂಡುಬಂದರೆ ಇಂಥ ಸಮಯದಲ್ಲಿ, ಪ್ರಾಂತಿಕ ಕಮಿಟಿಯವರಿಗೆ ಸಾರ್ವತ್ರಿಕ ಕಾಯದೇಭಂಗ ಮಾಡುವದಕ್ಕೆ ಅಧಿಕಾರ ಕೊಡುವದರ ಬಗ್ಗೆ ಈ ಸಂಬಂಧವಾಗಿ ಮಹಾಸಮಿತಿಯು ಹೇಳಿದ ಕರಾರುಗಳನ್ನು ಪಾಲನಮಾಡಿದರೆ ಮಾತ್ರ—ಈ ಕಮಿಟಿಯವರು ಶಿಫಾರಸ ಮಾಡುತ್ತಾರೆ

(ಕ) ಹೋದ ೪ನೇ ೫ನೇ ನವಂಬರದಲ್ಲಿ ದಿಲ್ಲಿಯಲ್ಲಿ ಕೂಡಿದ ಮಹಾಸಮಿತಿಯು ಸ್ವೀಕಾರಮಾಡಿದ ಠರಾವು ನಂಬರ ೩.—ಈ ಠರಾವಿನಿಂದ ಪ್ರಾಂತಿಕ ಕಮಿಟಿಗೆ ಕಾಯದೇಭಂಗದ ನಿಶ್ಚಯಮಾಡುವ ಅಧಿಕಾರ ಕೊಟ್ಟಿದ್ದು—ಈ ಕಮಿಟಿಯು ಮಂಜೂರಮಾಡುತ್ತದೆ. ಮತ್ತು ಫೆಬ್ರುವಾರಿ ೨೪-೨೫ ತಾರೀಖುಗಳಲ್ಲಿ ಆದಾದ ೧ನೇ ಠರಾವದ ಮೊದಲನೇ ಉಪಸೂಚನೆಯನ್ನು ಎಲ್ಲಿಯವರೆಗೆ ಸಾರ್ವತ್ರಿಕ ಕಾಯದೇಭಂಗಮಾಡುವ ಅಜ್ಞೆಯನ್ನು ಕೊಡದಿದ್ದರೆ ಪೂರ್ವೋಕ್ತ ಠರಾವಿಗೆ ವಿರೋಧ ಬರುವದಿಲ್ಲವೋ ಅಲ್ಲಿಯವರೆಗೆ ರದ್ದು ಮಾಡಬೇಕೆಂದು ಈ ಕಮಿಟಿಯು ಶಿಫಾರಸಮಾಡುತ್ತದೆ.

### ೨ ಕೌನ್ಸಿಲುಗಳ ವಿಚಾರವು.

ಗಯಾದಲ್ಲಿ ಕೂಡುವ ರಾಷ್ಟ್ರೀಯ ಸಭೆಯು ಖಿಲಾಫತ್ ಕಮಿಟಿಯೂ ಕೌನ್ಸಿಲಗಳಮೇಲೆ ಹಾಕಿದ ಬಹಿಷ್ಕಾರವನ್ನು ತೆಗೆದು ಹಾಕಬೇಕಾಯಿತೆ ಕೌನ್ಸಿಲಗಳು ಸ್ವರಾಜ್ಯದ ಮಾರ್ಗವನ್ನು ಸುಗಮವಾಗಿ ಮಾಡುವದರ ಬದಲು ಅನೇಕ ತೊಂದರೆಗಳನ್ನುಂಟು ಮಾಡಿರುತ್ತವೆ. ಜನರಿಗೆ ಕಷ್ಟವನ್ನುಂಟು ಮಾಡಿರುತ್ತವೆ. ಅದ್ದರಿಂದ ಕೆಳಗಿನ ಸೂಚನೆಗಳನ್ನು ಅಮಲಿನಲ್ಲಿ ತರಬೇಕು.

[೧] ಅಸಹಕಾರವಾದಿಗಳು ಸ್ವರಾಜ್ಯದೊರಕಿಸುವದರ ಸಲುವಾಗಿಯೂ ಪಂಜಾಬ ಖಿಲಾಫತ ಪ್ರಕರ್ಣಗಳ ನಿಕಾಲೆ ಮಾಡುವದರ ಸಲುವಾಗಿಯೂ ಕೌನ್ಸಿಲಗಳನ್ನು ಸೇರಬೇಕು.

[೨] ಬಹುಸಂಖ್ಯಾಕರಾಗಿ ಆರಿಸಿಬಂದರೆ ಕೌನ್ಸಿಲಕ್ಕೆ ಹೋಗಿ ತಿರುಗಿ ಬರಬೇಕು ಅಸಹಕಾರಿವಾದಿಗಳ ಹೊರ್ತು ಕೋರಮ್ ಆಗದಂತೆ ವ್ಯವಸ್ಥೆ ಮಾಡಬೇಕು.

[೩] ಅಸಹಕಾರವಾದಿಗಳನ್ನು ಬಿಟ್ಟು ಕೋರಮ್ ಆಗುತ್ತಿದ್ದರೆ ಕೌನ್ಸಿಲಕ್ಕೆ ಹೋಗಿ ಸರಕಾರದ ಪ್ರತಿಯೊಂದು ಠರಾವನ್ನು ವಿರೋಧಿಸಬೇಕು.

೧೯೨೩ನೇ ಇಸವಿಯ ಜಾನೇವಾರೀ ತಿಂಗಳಲ್ಲಿ ಹೊಸಕಾದೆಮಂಡಲಗಳು ಕೂಡುವದರಿಂದ ೧೯೨೨ನೇ ಇಸವಿಯ ರಾಷ್ಟ್ರೀಯ ಸಭೆಯನ್ನು ಡಿಸೆಂಬರತಿಂಗಳ ಮೊದಲನೇ ವಾರದಲ್ಲಿ ಕೂಡಿಸಬೇಕು ಆ ಕಾಂಗ್ರೆಸದ ನಿರ್ಣಯವನ್ನು ನೋಡಿಕೊಂಡು ಮುಂದಿನ ಧೋರಣವನ್ನು ನಿರ್ಣಯಿಸಿ ಕೊಳ್ಳಬೇಕು.

ಹಕೀಮ ಅಜಮಲಖಾನ
ಮೋತೀಲಾಲ ನೆಹರು
ವ್ಹಿ. ಜೆ. ಪಟೇಲ

ಕಾಂಗ್ರೆಸ್ಸಕಾರ್ಯಕ್ರಮದಲ್ಲಿ ಹೆಚ್ಚುಕಡಿಮೆ ಮಾಡಬಾರದು ಕೌನ್ಸಿಲ ಬಹಿಷ್ಕಾರ್ಯವನ್ನು ಹಾಗೇ ಇಡಬೇಕು. ಡಾ. ಅನಸಾರಿ
ರಾಜಗೋಪಾಲಾಚಾರ್ಯ
ಕಸ್ತೂರೀರಂಗ ಅಯ್ಯಂಗಾರ

### ೩—ಸ್ಥಾನಿಕಸಂಸ್ಥೆಗಳು

ನಮ್ಮ ಸ್ಥಿತಿಯನ್ನು ಸ್ಪಷ್ಟಮಾಡುವದರ ಸಲುವಾಗಿ, ಅಸಹಕಾರೀ ಜನರು ಮುನಸಿಪಾಲಿಟಿ ಹಾಗೂ ತಾಲೂಕ, ಜಿಲ್ಹಾ ಲೋಕಲಬೋರ್ಡಗಳಲ್ಲಿ ಸೇರಿ ಅಲ್ಲಿ ರಚನಾತ್ಮಕ ಕಾರ್ಯವನ್ನು ಚೆನ್ನಾಗಿ ಅಮಲಿನಲ್ಲಿ ತರಬೇಕು. ಆದರೆ ಇದರ ಸಂಬಂಧ ಅಸಹಕಾರಿಗಳು ಅಲ್ಲಿ ಯಾವ ಯಾವ ಪ್ರಕಾರ ಕೆಲಸಮಾಡಬೇಕು ಎಂಬದನ್ನು ಇನ್ನೂ ಹೇಳಲಿಕ್ಕೆ ಬರುವಂತಿಲ್ಲ ಆದರೆ ತುರ್ತಿಗೆ ಅವರು ಸ್ಥಾನಿಕ ಅಥವಾ ಪ್ರಾಂತಿಕ ಮಹಾಸಭೆಗಳ ಅನುಸರಿಸಿ ಅಲ್ಲಿ ಕೆಲಸಮಾಡತಕ್ಕದ್ದು.

(ಎಲ್ಲರ ಸಮ್ಮತಿಯಿಂದ)

### ೪—ಸರಕಾರೀ ಶಿಕ್ಷಣಸಂಸ್ಥೆಗಳ ಬಹಿಷ್ಕಾರ.

ಈ ಸಂಬಂಧದಲ್ಲಿ ನಾವು ಬಾರಡೋಲೀ ಠರಾವನ್ನೇ ಮಂಜೂರ ಮಾಡುತ್ತೇವೆ ಅಂದರೆ ನಾವು ವಿದ್ಯಾರ್ಥಿಗಳು ಶಾಲೆಕಾಲೇಜುಗಳನ್ನು ಬಹಿಷ್ಕರಿಸುವದರ ಸಲುವಾಗಿ ಅಲ್ಲಿ ಹೋಗಿ ಉಪದೇಶ ಮಾಡಬಾರದು ಆದರೆ ಪೂರ್ವೋಕ್ತ ಪ್ರಸಂಗಾನುಸಾರವಾಗಿ. ರಾಷ್ಟ್ರೀಯ ಶಾಲೆಗಳನ್ನು ಸುವ್ಯವಸ್ಥಿತರೀತಿಯಿಂದ ನಡೆಸಿದಲ್ಲಿ ವಿದ್ಯಾರ್ಥಿಗಳು ತಮ್ಮಷ್ಟಕ್ಕೆ ತಾವೇ ಈ ಶಾಲೆ ಕಾಲೇಜಗಳನ್ನು ಬಿಡುವರು ಪಿಕೆಟಿಂಗ ಮಾಡತಕ್ಕದ್ದಲ್ಲ. [ಸರ್ವಾನುಮತದಿಂದ]

### ೫— ಕೋರ್ಟುಗಳನ್ನು ಬಹಿಷ್ಕರಿಸುವದು.

ಪಂಚಾಯತ ಕೋರ್ಟುಗಳನ್ನು ಸ್ಥಾಪನಮಾಡಿ ಅವುಗಳ ಲಾಭವನ್ನು ತಕ್ಕೊಳ್ಳುವಹಾಗೆ ಜನಮತವನ್ನು ತಯಾರ ಮಾಡಬೇಕು. ಮತ್ತು ವಕೀಲಿ ಮಾಡುವಂಥ ವಕೀಲರಿಗೆ ಅಯೋಗ್ಯ ಮತ್ತು ಅಪಮಾನಕಾರಕವಾದ ಸಂಗತಿಗಳನ್ನು ತೆಗೆದು ಹಾಕುವದರ ಬಗ್ಗೆಯೂ ದರೂ ನಾವು ಶಿಫಾರಸ ಮಾಡುತ್ತೇವೆ. (ಎಲ್ಲರಸಮ್ಮತಿಯಿಂದ)

### ೬ ಕೂಲಿಕಾರರ ಸಂಗಠನೆ

ನಾಗಪೂರ ಮಹಾಸಭೆಯಲ್ಲಿ ಪಾಸಾದ ೮ನೇ ಠರಾವನ್ನು ಸ್ವಲ್ಪ ತಡಮಾಡದೆ ಅಮಲಿನಲ್ಲಿ ತರತಕ್ಕದ್ದು ಸರ್ವಾನುಮತದಿಂದ

### ೭ ಆತ್ಮಸಂರಕ್ಷಣ ಅಧಿಕಾರವು.

೭ ಸಾಕ್ಷ್ಯ ಕಾಂಗ್ರೆಸದ ಕೆಲಸವನ್ನು ಮಾಡುತ್ತಿರುವಾಗ್ಗೆ, ಇಲ್ಲವೇ ಕಾಂಗ್ರೆಸ ಕೆಲಸದ ಸಂಬಂಧದಿಂದ ಉತ್ಪನ್ನವಾದ ಪ್ರಸಂಗಗಳು ಉಂಟಾದಾಗ್ಗೆ, ಬೇಕಾಯದೇಶೀರ ಆಗದಂತೆ ಆತ್ಮಸಂರಕ್ಷಣೆ ಮಾಡಿಕೊಳ್ಳುವ ಅಧಿಕಾರವು ಪ್ರತಿಯೊಂದು ವ್ಯಕ್ತಿಗೆ ಇರತಕ್ಕದ್ದು; ಆದರೆ ಹಿಂಸಾಯುಕ್ತವಾದ ಸರ್ವಸಾಧಾರಣ ದಂಗೆಗಳಿಗೆ ಮಾತ್ರ ಈ ಕೃತಿಯಿಂದ ಎಳ್ಳಷ್ಟಾದರೂ ಆಸ್ಪದ ದೊರೆಯಕೂಡದು.

ಧರ್ಮದ ಅಪಮಾನವಾಗುವಾಗ್ಗೆ. ಸ್ತ್ರೀಯರ ಮಾನಹಾನಿಯಾಗುವಾಗ್ಗೆ, ಹುಡುಗರ ಅಥವಾ ನಿರ್ಬಲರಾದ ಮನುಷ್ಯರ ಕುತ್ಸಿತವಾದ ನಿಂದೆಯು ಮಾಡಲ್ಪಟ್ಟಾಗ್ಗೆ ವ್ಯಕ್ತಿಸ್ವಾತಂತ್ರ್ಯತೆಯಿಂದ, ತನ್ನನ್ನು ರಕ್ಷಿಸಿಕೊಳ್ಳಲು ಬಲಾತ್ಕಾರವನ್ನು ಉಪಯೋಗಿಸಲಿಕ್ಕೆ ಏನೂ ಅಡ್ಡಿಇಲ್ಲ

[ಶ್ರೀ ವ್ಹಿ. ಜೆ. ಪಟೇಲರನ್ನು ಬಿಟ್ಟು ಎಲ್ಲರಮತವಿದೆ.)

ಕಾಯದೇಕ್ಕೆ ಸಮ್ಮತವಿದ್ದ ಪದ್ಧತಿಯಂತೆ ತನ್ನನ್ನು ಸಂರಕ್ಷಿಸಿಕೊಳ್ಳುವ ಅಧಿಕಾರವು ಪ್ರತಿಯೊಂದು ವ್ಯಕ್ತಿಗೆ ಸಂಪೂರ್ಣವಾಗಿರತಕ್ಕದ್ದು ಸರ್ವಸಾಧಾರಣವಾದ ಹಿಂಸಾಯುಕ್ತ ದಂಗೆಗಳಾಗದಂತೆ ಮಾತ್ರ ಜಾಗ್ರತರಾಗಿದ್ದರೆ ಸಾಕಿದೆ: ಇದರ ಹೊರ್ತು ಉಳಿದ ಅತಂಕಗಳಾವೂ ಇರತಕ್ಕದಲ್ಲ. ಶ್ರೀ. ವ್ಹಿ ಜೆ. ಪಟೇಲ.

### ೮—ಬ್ರಿಟೀಶವಸ್ತುಗಳನ್ನು ಬಹಿಷ್ಕರಿಸುವದು.

[ಅ] ಇದರಸಂಬಂಧವಾಗಿ ವಿಚಾರಮಾಡಿ ಶಾಸ್ವಂತ ವರದಿಯನ್ನು ಗಯೆಯಲ್ಲಿ ಕೂಡುವ ಮಹಾಸಭೆಗೆ ಒಪ್ಪಿಸುವದರ ಸಲುವಾಗಿ ಒಂದು ಕಮಿಟಿಯನ್ನು ನೇಮಿಸಲಿಕ್ಕೆ ನಾವು ಶಿಫಾರಸಮಾಡುತ್ತೇವೆ. (ರಾಜಗೋಪಾಲಾಚಾರ್ಯರ ಹೊರತು ಎಲ್ಲ ಸದ್ಗೃಹಸ್ಥರ ಮತವು.)

[ಕ] ಅನುಭವಿಕ ಜನರು ಇದರ ಸಂಬಂಧವಾಗಿ ವಿಚಾರಮಾಡುವದಕ್ಕೆ ಏನೂ ಅತಂಕವಿಲ್ಲ ಆದರೆ ಅಲ ಇಂಡಿಯಾ ಕಾಂಗ್ರೆಸ ಕಮಿಟಿಯವರು ಅದಕ್ಕೆ ಒಪ್ಪಿದಲ್ಲಿ ಅದರಿಂದ ದೇಶವು ದುರ್ಮಾರ್ಗಕ್ಕೆ ಹೋಗಿ ಈ ಚಳವಳಿಗಾದರೂ ಹಾನಿಯಾಗುವ ಸಂಭವವಿದೆ.

[ಸಿ. ರಾಜಗೋಪಾಲಾಚಾರ್ಯ]

**ಹರಿಭಾವು ಫಾಟಕ**

## ಚಂದಾದಾರರಿಗೆ ವಿನಂತಿ.

ನವಜೀವನವು ಪ್ರಾರಂಭವಾಗಿ ಇದೇ ತಿಂಗಳ ೨೩ ನೇ ತಾರೀಖಿಗೆ ಒಂದು ವರ್ಷವಾಗುವದು, ಇಷ್ಟು ಅವಧಿಯಲ್ಲಿ ಇದು ಕರ್ನಾಟಕ ಮಾತೆಯ ಹಾಗು ಕನ್ನಡಿಗರ ಸೇವೆಯನ್ನು ತನ್ನ ಕೈಲಾದ ಮಟ್ಟಿಗೆ ಮಾಡಿರುವದು. ಇದೇ ಪ್ರಕಾರವಾಗಿ ಹೆಚ್ಚು ಉತ್ಸಾಹದಿಂದ ಮುಂದಾದರೂ ಮಾಡಲಿಕ್ಕೆ ಸಿದ್ಧವಿರುವದೆಂಬದನ್ನು ಕನ್ನಡಿಗರಿಗೆ ತಿಳಿಸಲಿಕ್ಕೆ ಅತ್ಯಂತ ಆನಂದವಾಗುತ್ತದೆ. ಆದ್ದರಿಂದ ಕರ್ನಾಟಕಸ್ಥರೆಲ್ಲರೂ ಎಂದಿನಂತೆ ಪ್ರೇಮದಿಂದ ಆಶ್ರಯವನ್ನು ಕೊಡುವರೆಂದು ತುಂಬಾ ನಂಬಿಗೆಯದೆ. ಈಗಿನ ಚಂದಾದಾರರೆಲ್ಲ ಬೇಗನೆ ಚಂದಾ ಹಣವನ್ನು ಮನಿಯಾರ್ಡರದಿಂದ ಸಲ್ಲಿಸಬೇಕಾಗಿ ವಿನಂತಿಯದೆ; ಪತ್ರವು ಬೇಡಾದವರು ದಯಮಾಡಿ ನಮಗೆ ತಿಳಿಸಿದರೆ ನೆಟ್ಟಗಾಗುವದು ಇಲ್ಲದಿದ್ದರೆ ಸಿಧಾರಣವಾಗಿ ಅಂಚೆ ವೆಚ್ಚವು ನಮ್ಮ ಮೇಲೆ ಬೀಳುತ್ತದೆ; ಚಂದಾದಾರರು ತಮ್ಮ ರಜಿಸ್ಟರ ನಂಬರವನ್ನು ತಿಳಿಸಬೇಕಾಗಿ ವಿನಂತಿಯು.

ವ್ಯವಸ್ಥಾಪಕ.

---

# ಕನ್ನಡ ನವಜೀವನ.

ಕಾರ್ತಿಕ ವದ್ಯ ೫ ಗುರುವಾರ ಶಕೆ ೧೮೪೪

---

## ಸ್ವಾತಂತ್ರ್ಯತೆಯ ಅಪಮಾನವು.

( ನವಜೀವನ )

ಮಾನವರೆಲ್ಲರೂ ಸುಖವನ್ನು ಬಯಸುವರು; ಆದರೆ ಹಲವು ಜನರು ಮಾತ್ರ ಸುಖಿಗಳಾಗುವರು. ಇದರಂತೆಯೇ ಎಲ್ಲರೂ ಸ್ವತಂತ್ರತೆಯನ್ನು ಇಚ್ಛಿಸುವರು; ಆದರೆ ಜಗತ್ತಿನಲ್ಲಿ ಕೆಲವು ಸ್ಥಳಗಳಲ್ಲಿಯೇ ಸ್ವಾತಂತ್ರ್ಯದೇವಿಯು ಪ್ರಸಾದವನ್ನೀಯುವಳು. ಹೀಗಾಗಲು ಕಾರಣವೇನಂದರೆ ಸ್ವಾರ್ಥಿಜನರು ಎರಡನೇಯವರ ಸ್ವಾತಂತ್ರ್ಯವನ್ನು ಕಸಕೊಳ್ಳಲು ಪ್ರಯತ್ನಮಾಡುವದೇ ಆಗಿದೆ. ಮನುಷ್ಯನು ಸ್ವತಂತ್ರವಾಡುವ ಯೋಗ್ಯತೆಯು ಯಾರಕೈಯಲ್ಲಿ ಇಲ್ಲದ್ದರೂ, ಅವರು ನಿದಾನ ಎರಡನೇಯವರ ಸುಖವನ್ನು ಅಪಹರಿಸಬಾರದು.

ಎಷ್ಟೋ ಜನರು ತಾವು ಸ್ವಾತಂತ್ರ್ಯದೇವಿಯ ಉಪಾಸಕರೆಂದು ತಿಳಿಯುತ್ತಾರೆ. ಆದರೆ ಯಾವಮನುಷ್ಯನು ನಿಜವಾಗಿ ಉಪಾಸಕನಾಗುವನೋ, ಅವನು ಆ ದೇವಿಯ ರಾಜ್ಯವು ಸರ್ವತ್ರದಲ್ಲಿ ಇರಲು ಇಚ್ಛಿಸುವನು. ಅವನು ನೆರೆಹೊರೆಯವರ ಮನೆಯನ್ನು ತನ್ನಮನೆಯೆಂದು ಭಾವಿಸುವನು. ಆದರಂತೆಯೇ ಜಗತ್ತಿನಲ್ಲಿಯ ಎಲ್ಲಗ್ರಹಗಳು ತನ್ನವುಗಳೆಂದು ಅವನು ತಿಳಿಯುವನು. ಯಾವನು ತನ್ನ ಮಿತ್ರನು ಸ್ವತಂತ್ರನಾಗಲಿ, ಹಾಗು ವೈರಿಯು ಪರತಂತ್ರ ಆಗಲಿ ಎಂದು ಇಚ್ಛಿಸುವನೋ, ಅವನು ನಿಜವಾಗಿ ಆ ಸ್ವಾತಂತ್ರ್ಯದೇವಿಯ ಭಕ್ತನಲ್ಲ. ಅವನು ಆ ಸ್ವಾತಂತ್ರ್ಯದೇವಿಯನ್ನು ತನ್ನ ಮನೆಗೆ ಹೋಗಲಾಗದ ದಾಸಿಯನ್ನಾಗಿ ಮಾಡಲು ಇಚ್ಛಿಸುವವನು.

ಓರ್ವಕವಿಯು ಹೇಳುವದೇನಂದರೆ " ನಾನು ಸ್ವಾತಂತ್ರ್ಯಪ್ರಿಯನು. ಈ ಪ್ರಪಂಚದಲ್ಲಿ ಸ್ವತಂತ್ರತೆಯನ್ನು ಕಸಕೊಳ್ಳಲು ಸಾಧನವಾದ ಪದಾರ್ಥವು ಇರುವದಿಲ್ಲ. ಅದಾಗ್ಯೂ ಎರಡನೇಯವರನ್ನು ಗುಲಾಮರನ್ನಾಗಿಮಾಡುವದಕ್ಕಿಂತ ನಾನೇ ಗುಲಾಮನಾಗಿ ಉಳಿಯುವದು ಸಾವಿರಪಾಲಿಗೆ ಲೇಸು. ಎರಡನೇಯವರ ಕಾಲೊಳಗೆ ಬೇಡಿಗಳನ್ನು ಹಾಕುವದಕ್ಕಿಂತ ನಾನೇ ಬಂಧನದಲ್ಲಿರುವದು ಹೆಚ್ಚು ಶ್ರೇಯಸ್ಕರವು "

ಇದೇ ಸ್ವಾತಂತ್ರ್ಯ ದೇವಿಯ ನಿಜವಾದ ಉಪಾಸನೆಯು. ಭಾರತವರ್ಷವು ಎಂದಿನಿಂದ ಈ ಅಭಿಪ್ರಾಯದಿಂದ ಸ್ವಾತಂತ್ರ್ಯದೇವಿಯ ಉಪಾಸಕವಾಗುವದೋ, ಆ ಹೊತ್ತು ಸಂಸಾರದಲ್ಲಿಯ ಯಾವ ರಾಷ್ಟ್ರವು, ಅದನ್ನು ಬಂಧನದಲ್ಲಿಡುವದಕ್ಕೆ ಶಕ್ತವಾಗಲಾರದು. ಈ ಮೋಕ್ಷಭೂಮಿಯಲ್ಲಿ ನಾವು ಎಷ್ಟೋ ಜನರನ್ನು ಬಂಧನದಲ್ಲಿಟ್ಟಿರುವೆವು. ಜ್ಞಾನದ ಸೋಂಗು ಹಾಕಿಕೊಂಡು ಸ್ತ್ರೀಯರನ್ನು ಅಜ್ಞಾನಿ ಹಾಗೂ ಆಶ್ರಿತರನ್ನಾಗಿ ಮಾಡಿರುವೆವು. ಧರ್ಮದ ನಿಮಿತ್ಯದಿಂದ ಎಷ್ಟೋ ಜಾತಿಗಳ ಸ್ವಾತಂತ್ರ್ಯವನ್ನು ಮರ್ಯಾದಿತ ಮಾಡಿ ಬಿಟ್ಟಿರುವೆವು. ಶುದ್ಧಿ ಮತ್ತು ಅಶುದ್ಧಿಯ ನೆಪದಿಂದ, ಅಂತ್ಯಜರನ್ನು ಸಾಮಾಜಿಕ ಪುರುಷಾರ್ಥದ ಲಾಭದಿಂದ ವಂಚಿತರನ್ನಾಗಿ ಮಾಡಿರುವೆವು. ನಮ್ಮಲ್ಲಿ ದ್ರವ್ಯ ಇರುವದರಿಂದ, ದಿನಾಲು ೧೨ ತಾಸು ಕೆಲಸಮಾಡುವಂಥ ನೌಕರನು ಕೇವಲ ೨ ರೊಟ್ಟಿಗೆ ಮಾಲಕನಾಗಿರುವನು, ಎಂದು ತಿಳಿಯುತ್ತೇವೆ. ಪರಿಸ್ಥಿತಿಯು ಅನುಚಿತ ಲಾಭತಕ್ಕೊಂಡು ಎರಡನೇಯವರನ್ನು ಆಶ್ರಿತರನ್ನಾಗಿ ಮಾಡಲಿಚ್ಛಿಸುವೆವು.

ಯಾವನ ಮನೆಯೊಳಗೆ ಹೆಚ್ಚು ಜನ ನೌಕರರಿರುವರೋ, ಆ ಮಾನದಿಂದ ಅವನು ಶ್ರೀಂತ ಅಥವಾ ಸಾವುಕಾರನೆಂದು ತಿಳಿಯಲ್ಪಡುವನು. ಆದರೆ ಸ್ವಲ್ಪ ವಿಚಾರಮಾಡಿದಲ್ಲಿ, ನಮಗೆ ಕಂಡುಬರುವದೇನಂದರೆ, ಯಾವನು ಸೇವಕರಮೇಲೆ ತನ್ನ ಆಶ್ರಯವನ್ನು ಇಟ್ಟಿರುವನೋ, ಯಾವನು ಎರಡನೇಯವರ ಸೇವೆಯನ್ನು ಇಚ್ಛಿಸುವನೋ, ಅವನೇ ನಿಜವಾಗಿ ಆಶ್ರಿತನು. ಭಾರತವು ಈ ಹೊತ್ತು ಆಶ್ರಿತರ ರಾಷ್ಟ್ರವಾಗಿರುವದು. ಸ್ವತಂತ್ರತೆಯ ವಿಷಯವಾಗಿ ನಿಜವಾಗಿ ನಮ್ಮ ಹೃದಯದಲ್ಲಿ ಪ್ರೇಮ ಉತ್ಪನ್ನವಾಗಿದ್ದರೆ ನಾವು ಯಾರ,ಯಾರ ಮೇಲೆ ಅನ್ಯಾಯಮಾಡುತ್ತೇವೆ ಇದನ್ನು ತಿಳಕೊಳ್ಳತಕ್ಕದ್ದು. ಇದು ಆತ್ಮಶುದ್ಧಿಯು. ನಾವು ಯಾರನ್ನೂ ನಮ್ಮ ಆಶ್ರಿತರನ್ನಾಗಿ ಮಾಡದಿದ್ದಪಕ್ಷದಲ್ಲಿ ನಮಗಾದರೂ ಎರಡನೇಯವರ ಆಶ್ರಿತರಾಗಿ ಉಳಿಯುವ ದುರ್ದಶೆಯು ಬರಲಿಕ್ಕಿಲ್ಲ. ಮನುಷ್ಯನು ಯಥೇಚ್ಛ ದ್ರವ್ಯ ಸಂಪಾದನೆ ಮಾಡುವನು. ದುಡ್ಡಿನಿಂದಲೇ ಎಷ್ಟೋ ಜನರನ್ನು ಸೇವಕರನ್ನಾಗಿ ಮಾಡಲು ಅನುಕೂಲವಾಗುವದು. ಜನರು ಯಾವನ ಹತ್ತರ ದ್ರವ್ಯವಿರುವದೋ ಅಂಥವನನ್ನು ಆಶ್ರಯಿಸುವ ಅಭ್ಯಾಸವನ್ನು ಮಾಡುತ್ತಾರೆ; ಮತ್ತು ನಾವು ಸ್ವಾತಂತ್ರ್ಯವನ್ನಪೇಕ್ಷಿಸುವೆವು ಎಂದೆನ್ನುತ್ತಾರೆ.

ಇದರಮೇಲೆ ಎಷ್ಟೋ ಜನರು ಸಂಸಾರದಲ್ಲಿ " ಒಬ್ಬರಿಗೊಬ್ಬರು ನೆರವಾಗಬಾರದೇ ? ಸಂಸಾರದಲ್ಲಿ ಧನಿಕ ಹಾಗೂ ನೌಕರ ಈಪ್ರಕಾರ ಎರಡು ವರ್ಗಗಳು ಸರ್ವಕಾಲದಲ್ಲಿಯೂ ...

ಅವುಗಳನ್ನು ಹೇಗೆ ಕಳೆಯಬೇಕು" ಎಂದು ಕೇಳುವದುಂಟು. ಈ ಮಾತು ನಿಜವಾದದ್ದು. ಒಬ್ಬನು ಇನ್ನೊಬ್ಬನ ಸಹಾಯಕನಾದರೆ, ಯಾವನು ಯಾವನ ಸೇವಕನಾಗುವನು? ನಾವು ವಕೀಲ ಹಾಗೂ ಡಾಕ್ಟರರ ಸಹಾಯವನ್ನು ತಕ್ಕೊಳ್ಳುವೆವು. ಇದರಲ್ಲಿ ಯಾರು ಯಾರ ಆಶ್ರಿತರಾದರು? ಗೃಹಾವಸ್ಥೆಯಲ್ಲಿ ಪ್ರೇಮ ಮತ್ತು ಆದರಗಳುಂಟಾಗಿ ಅವುಗಳಿಂದ ಸೇವೆಯ ವಿನಿಮಯವಾಗುವದು. ಈ ಸಂಬಂಧವು ಪ್ರತಿಯೊಂದು ಜಾತಿ ಹಾಗೂ ರಾಷ್ಟ್ರಗಳನಡುವೆ ಆಗಬೇಕಾಗಿದೆ.

ಆದರೆ ಜನರಿಗೆ ಇಂಥ ಸ್ವತಂತ್ರತೆಯು ಬೇಡ. ಅವರಿಗೆ ಸ್ವತಂತ್ರತೆಯ ಹೆಸರಿನಿಂದ ಅಧಿಕಾರ—ಸತ್ತೆಯು ಬೇಕು. ಎರಡನೇಯವರ ಸ್ವಾತಂತ್ರ್ಯ ಹಾಗೂ ಸುಖವನ್ನು ಕಳೆಯಲು ಬೇಕು. ಇದರಸಲುವಾಗಿ ಉನ್ಮತ್ತರಾಗಿ ಈಪ್ರಕಾರ ಅನ್ನುವರು "ನಮಗೆ ರಾಜನೈತಿಕ-ಸ್ವಾತಂತ್ರ್ಯ ಬೇಕು? ನಾವೇನು ಸಜ್ಜನ ಸಾಧುಗಳಾಗಬೇಕೊ? ನಿಮ್ಮ ಸಂಗಡ ನಾವೇನು ಈ ಪ್ರಕಾರ ಕರಾರ ಮಾಡಿಲ್ಲ. ನಾವು ಇದ್ದಹಾಗೆಯೇ ಇರಲು ಅಪೇಕ್ಷಿಸುವೆವು. ಸಾಯುವದು—ಕೊಲ್ಲುವದು, ಇದರ ವಿಷಯವಾಗಿ ನಮಗೆ ಜ್ಞಾನವುಂಟು. ಸ್ವಾತಂತ್ರ್ಯದಸಲುವಾಗಿ ಅದನ್ನು ಉಪಯೋಗಿಸಲು ನಾವು ಶಕ್ತರಿರುವೆವು. ಆದರೆ ನಿಷ್ಪಾಪಿಗಳಾಗಲಿಕ್ಕೆ ಹೇಳಿದರೆ ಮಾತ್ರ ಅದು ಮೃಕಡೆಯಿಂದ ಆಗದಮಾತು." ಬಹ ಸ್ವತಂತ್ರತೆಯು ಕಣ್ಣು. "ಬಿಟ್ಟಿಕೋಟ ಥ್ರೋಟರಿಂಗ ಈ ಪ್ರಕಾರ ಹೇಳುವದು" ಪವಿತ್ರತೆಯಂದರೆ ಸ್ವತಂತ್ರತೆಯು. ಪವಿತ್ರತೆಯನ್ನು ಧಿಃಕರಿಸಿ ನಿಮ್ಮ ಜನರು ನನ್ನ ಅಪಮಾನವನ್ನಾದರೂ ಮಾಡಿರುವರು."

**ದತ್ತಾತ್ರಯ ಬಾಳಕೃಷ್ಣ ಕಾಲೇಲಕರ**

---

## ಟಿಪ್ಪಣಿಗಳು.

**ಜಿಲ್ಲಾ ಕಾನಫರನ್ಸ,**

ಬರುವ ದಿಶಂಬರ ೩ ನೇ ತಾರೀಖಿನದಿವಸ ವಿಜಾಪೂರಜಿಲ್ಲೆಯ ೧ನೇ ಕಾನಫರನ್ಸ ಕೂಡಿಸಬೇಕೆಂದು ಮೊನ್ನೆ ೩೧ ನೇ ತಾರೀಖಿನದಿವಸ ಕೂಡಿದ ಜಿಲ್ಲಾ ಕಾರ್ಯಕಾರೀಮಂಡಲದವರು ನಿರ್ಣಯಿಸಿರುವರು ಹಾಗೂ ಇದೇ ೧೭ ನೇ ತಾರೀಖಿನ ದಿವಸ ಸ್ವಾಗತ ಮಂಡಳದ ಸಭೆಯನ್ನು ಕೂಡಿಸುವದಾದರೂ ನಿಶ್ಚಿತವಾಗಿದೆ. ಆ ಹೊತ್ತು ಸ್ವಾಗತ ಕಮಿಟಿಯ ಅಧ್ಯಕ್ಷ, ಚಿಟಣೀಸ ಹಾಗೂ ಇತರ ಕಾರ್ಯಕಾರೀ ಮಂಡಲದವರ ಚುನಾವಣೆಯಾಗತಕ್ಕದ್ದಿರುವದು. ಈಗ್ಗೆ ವಿಜಾಪೂರ ಜಿಲ್ಲೆಯ ಪರಿಸ್ಥಿತಿಯು ಬಿಕ್ಕಟ್ಟಿನದಾಗಿದೆ. ಅತ್ಯಂತ ಉತ್ಸಾಹ ಹಾಗೂ ಸ್ವಾರ್ಥತ್ಯಾಗದಿಂದ ಕೆಲಸಮಾಡತಕ್ಕಂಥ ವೀರ ಜಯರಾಯರು ಸ್ವರ್ಗಸ್ಥರಾಗಿರುವರು. ಹಾಗೂ ವಿಜಾಪೂರ ಜಿಲ್ಲೆಯಲ್ಲಿ ಪ್ರಖ್ಯಾತರಾದ, ದೇಶಭಕ್ತ ಶ್ರೀನಿವಾಸರಾಯರು ಆಳರಸರ ದಬ್ಬಾಳಿಕೆಗೆ ತುತ್ತಾಗಿರುತ್ತಾರೆ. ಈ ಪ್ರಕಾರವಾಗಿ ಮುಂದಾಳುಗಳೀರ್ವರ ಸಹಾಯವು ಈ ಪರಿಷತಿಗೆ ಸಿಗುವಂತಿಲ್ಲ. ಇದೇ ಒಂದು ರೀತಿಯಿಂದ ವಿಚಾರಮಾಡಿದರೆ

---

# ಕನ್ನಡ ನವಜೀವನ.

## ನೂತನ ವರ್ಷಾರಂಭ!

### ಹೊಸ ವ್ಯವಸ್ಥೆ!!

ಮಹಾತ್ಮಾ ಗಾಂಧೀಯವರ ಶಿಷ್ಯರೂ ಕರ್ನಾಟಕದ ಸುಪ್ರಸಿದ್ಧ ಮುಂದಾಳುಗಳಲ್ಲೊಬ್ಬರಾದ ಶ್ರೀಯುತ ಮಂಜಪ್ಪಂದಾ ಹಾರ್ಡೇಕರ ದಾವಣಗೇರಿ ಇವರ ಲೇಖಗಳು ಪ್ರತಿವಾರ ತಪ್ಪದೇ ಪ್ರಸಿದ್ಧವಾಗುವವು.

ಇನ್ನು ಎರಡು ಸಂಚಿಕೆಗಳು ಮಾತ್ರ ಹೊರಬಿದ್ದರೆ **ಕನ್ನಡ ನವಜೀವನದ** ಮೊದಲನೇ ವರ್ಷವು ಮುಗಿಯುವದಷ್ಟೆ! ಎರಡನೇ ವರ್ಷಾರಂಭಕ್ಕೆ ಡಬಲ್ ಡೆಮಿ ಆಕಾರ (ಅಂದರೆ **ಕರ್ನಾಟಕ ವೃತ್ತದ** ಅಥವಾ **ನವೀನ ಭಾರತದ** ಎರಡರಷ್ಟು ೮ ಪುಟಗಳುಳ್ಳದ್ದು) ಪ್ರಸಿದ್ಧವಾಗುವದು. ಈಗಿನಂತೆಯೇ ಮೊದಲನೇ ಪುಟಕ್ಕೆ ಮಹಾತ್ಮರ ನುಡಿಯು ಪ್ರತಿವಾರ ಪ್ರಕಟವಾಗುವದು. ಉಳಿದ ಪುಟಗಳಲ್ಲಿ ಅಹಿಂಸೆ, ಸತ್ಯಾಗ್ರಹ, ನಾಸ್ತಿಕ ಬುದ್ಧಿ ಮೊದಲಾದ ಮಹಾತ್ಮರ ತತ್ವಗಳನ್ನನುಸರಿಸಿ ಪ್ರಚಲಿತ ವಿಷಯಗಳೆಲ್ಲವೂ ಸ್ವತಂತ್ರ ರೀತಿಯಿಂದ ವಿವೇಚಿಸಲ್ಪಡುವವು ಈ ಮಹತ್ವದ ಕಾರ್ಯವನ್ನು ಶ್ರೀಯುತ ಮಂಜಪ್ಪಾ ಹರ್ಡೇಕರರೇ ವಹಿಸಿ ಕೊಂಡಿದ್ದಾರೆ ಇದಲ್ಲದೆ ವೃತ್ತಸಾರ, ಇಹವೃತ್ತ, ಪರದೇಶಗಳ ಸುದ್ದಿ ಪತ್ರವ್ಯವಹಾರಗಳಿಗೂ ಸ್ಥಳವನ್ನು ಕಾದಿಡುವೆವು. ಸ್ವಲ್ಪದಲ್ಲಿ ಹೇಳಬೇಕೆಂದರೆ **ಕನ್ನಡ ನವಜೀವನ** ವನ್ನೋದುವವರಿಗೆ ಎಲ್ಲ ವಿಷಯದ ಜ್ಞಾನವಾಗುವ ಹಾಗೆ ನಡಿಸಬೇಕೆಂಬುವೇ ನಮ್ಮ ಉದ್ದೇಶವು. ಈ ಕಾರ್ಯದಲ್ಲಿ ಎಂದಿನಂತೆ ಕನ್ನಡಿಗರ ಸಹಾಯವು ನಮಗೆ ದೊರೆಯುವದೆಂದು ಕೋರುತ್ತೇವೆ.

**ಚಂದಾ ಹಣವು:**— ಸ್ಥಳದವರಿಗೆ ೩ ರೂ ೮ ಆ!

,, ಪರಸ್ಥಳದವರಿಗೆ ಅಂಚೆ ವೆಚ್ಚ ಸೇರಿ ೪ ರೂ ಮಾತ್ರ ವ್ಹಿ.ಪಿ.ಯಿಂದ ೪ ರೂ. ೩ ಆಣೆ.

ಶೋಚನೀಯವಾಗುವದು. ಆದರೆ ಹೀಗೆ ಬಿಸ್ತರಾಗಿ ವಿಚಾರಿಸುತ್ತ ಕೂಡುವ ಸಮಯವಿದಲ್ಲ ಯಾರೊಬ್ಬರಿಂದಲೇ ಈ ಕಾರ್ಯವು ಜರುಗುವಂತಿಲ್ಲ. ಈ ಕಾರ್ಯವು ಯಶಸ್ವಿಯಾಗಬೇಕಾದರೆ ಎಲ್ಲ ತಾಲೂಕಿನವರು ಒಮ್ಮನಸ್ಸಿನಿಂದ ಕೆಲಸಮಾಡಬೇಕಾಗುತ್ತದೆ. ವಿಧಾಯಕ ಕಾರ್ಯಕ್ರಮದಲ್ಲಿ ಹಲವು ಪ್ರಾಂತದವರ ವಿಶ್ವಾಸವು ಇಲ್ಲದಂತಾಗಿದೆ. ಅವರು ಕೌನ್ಸಿಲ್ಲುಗಳಲ್ಲಿಸೇರಿ, ಸರಕಾರದವರಿಗೆ ಎದುರಾಗುವದೇ ರಾಷ್ಟ್ರಕ್ಕೆ ಹಿತಕರವಾದದ್ದೆಂದು ಭಾವಿಸುವರು. ಹಲವರು ಸ್ವರಾಜ್ಯ, ಸಿಗದಹೊರತು ರಾಷ್ಟ್ರೀಯ, ಶಿಕ್ಷಣವನ್ನು ಸಾರ್ವತ್ರಿಕ ಮಾಡುವದು ಸಾಧ್ಯವಾದದ್ದಲ್ಲ ಎಂದೆನ್ನುತ್ತಾರೆ ಹಲಪ್ರಕಾರವಾಗಿ ಭಿನ್ನಾಭಿಪ್ರಾಯಗಳು ದೇಶದಲ್ಲಿ ಹಬ್ಬಿರುತ್ತವೆ ಇಂಥ ಪ್ರಸಂಗದಲ್ಲಿ ನಮ್ಮ ಜಿಲ್ಲೆಯವರು ಯೋಗ್ಯ ರೀತಿಯಿಂದ ವಿಚಾರಮಾಡಿ, ತಮಗೆ ಇಷ್ಟವಾದ ಮಾರ್ಗವನ್ನು ಅವಲಂಬಿಸಬೇಕಾಗಿದೆ. ವಿಶೇಷತಃ ಕೌನ್ಸಿಲಗಳಲ್ಲಿ ಸೇರುವ ವಿಷಯವಾಗಿಯಂತೂ ನಮ್ಮ ಜಿಲ್ಲೆಯವರು ಏನೂ ವಿಚಾರಮಾಡತಕ್ಕದ್ದಿಲ್ಲ ಯಾಕಂದರೆ, ಕೌನ್ಸಿಲಗಳ ಪ್ರಶ್ನೆಯನ್ನು ತೆಗೆದು ಕೂಡಲೇ ಬ್ರಾಹ್ಮಣಬ್ರಾಹ್ಮಣೇತರವಾದವು ಮತ್ತೆ ಉಪಸ್ಥಿತವಾಗುವದು. ಇನ್ನು ರಾಷ್ಟ್ರೀಯಶಿಕ್ಷಣವಂತೂ ನಮಗೆ ಅವಶ್ಯವಾದದ್ದು. ಹಾಗೂ ಖಾದಿಯ ಪ್ರಚಾರಕ್ಕಾಗಿ, ಹುಟ್ಟುವಳಿ ಮುಂತಾದವ ಅತ್ಯವಶ್ಯಕತೆಯಾದರೂ ನಮ್ಮ ಜಿಲ್ಲೆಯವರಿಗೆ ಅತ್ಯಂತವಾಗಿದೆ. ಇಲ್ಲಿ ಹತ್ತಿಯು ವಿಪುಲವಾಗಿ ಬೆಳೆಯುತ್ತದೆ. ಮತ್ತು ಕಲಿಯಾದರೂ, ಇನ್ನೂ ನಾಮಶೇಷವಾಗಿಲ್ಲ. ವಿಧಾಯಕ, ಕಾರ್ಯಕ್ರಮವೆಂದರೆ, ಇದೇ ಆಗಿದೆ. ಅಂದಮೇಲೆ ಇದರಲ್ಲಿ ಮತಭೇದವಾಗಲು ಕಾರಣವಿಲ್ಲ. ಈ ನಮ್ಮ ಪರಿಷತ್ತಿನ ಮುಖಾಂತರವಾಗಿ, ಮಹಾಸಭೆಗೆ ನಮ್ಮ ಜಿಲ್ಲೆಯ ನಿರ್ಣಯವನ್ನು ತಿಳಿಸಬೇಕಾಗುತ್ತದೆ. ಆದ್ದರಿಂದ ಎಲ್ಲಾ ತಾಲೂಕಿನವರು ಈ ಪರಿಷತ್ತಿನಲ್ಲಿ ಭಾಗತೆಗೆದುಕೊಂಡು, ಪರಿಷತ್ತು ಎಲ್ಲರೀತಿಯಿಂದ ಯಶಸ್ವಿಯಾಗುವಂತೆ ಮಾಡಬೇಕು. ಮತ್ತು, ಯಾವತರದ ಮತಭೇದವು ಆಗದೆ ಪರಿಷತ್ತಿನ, ಕಾರ್ಯವನ್ನು ಯಶಸ್ವಿಯಾಗಿ ಮಾಡಲೆಂದು ಅಪರಮಾತ್ಮನಿಗೆ ನಾವು ಅತ್ಯಂತ ಆದರಪೂರ್ವಕವಾಗಿ ಬೇಡಿಕೊಳ್ಳುತ್ತೇವೆ.

---

**ವಾಣೀವಿಲಾಸ ಸಂಸ್ಕೃತ ಪಾಠಶಾಲೆಯು.**

ಈ ಪಾಠಶಾಲೆಯ ದ್ವೈವಾರ್ಷಿಕ ವರದಿಯು ನಮ್ಮ ಕೈಸೇರಿದೆ ಅದನ್ನು ಬೇರೆಕಡೆಗೆ ಮುದ್ರಿಸಿದ್ದೇವೆ. ಆ ವರದಿಯನ್ನು ನೋಡಲಾಗಿ ಶ್ರೀಮತ್ಪರಮಪೂಜ್ಯ ವೇದವ್ಯಾಸಾಚಾರ್ಯರವರು ಮಾಧ್ವಶಾಸ್ತ್ರೋನ್ನತಿಗಾಗಿ ಎಷ್ಟು ಶ್ರಮ ತಕ್ಕೊಳ್ಳುತ್ತಿದ್ದಾರೆಂಬದು ಸ್ಪಷ್ಟವಾಗುತ್ತದೆ ಆದರೆ ಅವರಿಗೆ ಜನರ ಬೆಂಬಲವು ಯಾವಪ್ರಕಾರವಾಗಿ ಸಿಗತಕ್ಕದ್ದೋ, ಅಷ್ಟು ಸಿಗುವದಿಲ್ಲೆಂಬದು ಖೇದಜನಕವಾದದ್ದು. ಆ ಪಾಠಶಾಲೆಯು ಪ್ರಾರಂಭವಾದಕಾಲಕ್ಕೆ ಈ ಊರಿಂದಲೇ ಪ್ರತಿತಿಂಗಳ ೫೦-೬೦ ರೂಪಾಯಿಗಳು ಸಿಗುತ್ತಿದ್ದವು. ಆದರೆ ಸದ್ಯಕ್ಕೆ ೩೫-೩೦ ರೂಪಾಯಿಗಳು ಮಾತ್ರ ದೊರೆಯುತ್ತವೆ. ಇದರಿಂದ ನಮ್ಮಲ್ಲಿ ಧರ್ಮಜಾಗೃತೆಯು ಎಷ್ಟು ಅವೆ ಎಂಬುವದು ಗೊತ್ತಾಗುತ್ತದೆ ಅವರಲ್ಲಿ ಅಧ್ಯಯನಮಾಡುವಂಥ ವಿದ್ಯಾರ್ಥಿಗಳೆಲ್ಲರು, ಪರಗ್ರಾಮನಿವಾಸಿಗಳೇ ಆಗಿರುವರೇ ಹೊರತು, ಈ ಊರವರು ಯಾರೂ ಇರುವದಿಲ್ಲ. ಈ ಊರಲ್ಲಿದ್ದಷ್ಟು ಬ್ರಾಹ್ಮಣ ಸಂಖ್ಯೆಯು ಮತ್ತಾವಸ್ಥಳದಲ್ಲಿ ಇರುವದಿಲ್ಲೆಂದರೂ ವಿಶೇಷ ತಪ್ಪಾಗಲಿಕ್ಕಿಲ್ಲ! ಹೀಗಿದ್ದೂ ನಮ್ಮ ಶಾಸ್ತ್ರಾಧ್ಯಯನಮಾಡಲಿಕ್ಕೆ ವಿದ್ಯಾರ್ಥಿಗಳು ಸಿಗಬಾರದೇ? ಇದು ವಿದ್ಯಾರ್ಥಿಗಳ ತಪ್ಪಲ್ಲ. ಆದರೆ ಪಾಲಕರ ತಪ್ಪು ಯಾಕಂದರೆ ಪಾಲಕರೇ ಪಾಶ್ಚಿಮಾತ್ಯ ವಿದ್ಯೆಗೆ ಮೋಹಿಸಿ ತಮ್ಮ ವಿದ್ಯಾರ್ಥಿಗಳಿಗೆ ಆ ಆಸುರೀ ಶಿಕ್ಷಣವನ್ನು ಕೊಡುತ್ತಾರೆ. ಎಲ್ಲಿಯವರೆಗೆ ಪಾಲಕರು ಈ ಪಾಶ್ಚಿಮಾತ್ಯ ವಿದ್ಯೆಯ ಮೋಹವನು ಬಿಡುವದಿಲ್ಲವೋ, ಅಲ್ಲಿಯವರೆಗೆ ನಮ್ಮ ಶಾಸ್ತ್ರಾಧ್ಯಯನಮಾಡಲು ವಿದ್ಯಾರ್ಥಿಗಳು ದೊರೆಯಲಾರರು! ಇದು ಖಂಡಿತವಾದ ಮಾತು ಇನ್ನು ಇದೇಪ್ರಕಾರವಾಗಿ ವೇದಾಧ್ಯಯನಮಾಡುವದಕ್ಕಾದರೂ ಈ ಊರಲ್ಲಿ ಎಲ್ಲತರದ ಸೌಕರ್ಯಗಳುಂಟು ಆದರೆ ಅತ್ತಕಡೆಗೆ ಲಕ್ಷ್ಯ ಕೊಡುವವರಾರು? ಗುರುವರ್ಗವೆಂದೆನಿಸಿದ ಆಚಾರ್ಯವೃಂದವೇ, ಅದರಲ್ಲಿ ವಿಶೇಷ ಮನಸ್ಸು ಹಾಕುವವಿಲ್ಲ. ಅಂದಮೇಲೆ ವೇದಾಧ್ಯಯನವನ್ನು ಮಾಡುವವರಾರು? ಈಪ್ರಕಾರ ನಮ್ಮ ಸ್ಥಿತಿಯಾಗಲು ನಮ್ಮ ಪಾರತಂತ್ರ್ಯವೇ ಕಾರಣವು! ಇನ್ನುಮೇಲಾದರೂ ಬ್ರಾಹ್ಮಣವರ್ಗವು ತನ್ನದೊಂದು ಸಂಸ್ಥೆಯನ್ನು ಮಾಡಿ ಆ ಸಂಸ್ಥೆಯ ದ್ವಾರಾ ಬ್ರಾಹ್ಮಣರ ನಿಜವಾದ ಕರ್ತವ್ಯವನ್ನು ಎಲ್ಲ ಜನರಿಗೆ ತಿಳಿಸಬೇಕೆಂದು ಬೇಡಿಕೊಳ್ಳುತ್ತೇವೆ. ಇಂಥ ಸಂಘದಲ್ಲಿ ಯಾವತರದ ಅಂತಃಕಲಹವನ್ನು ಮುಂದೆ ಮಾಡದೆ, ಕಾರ್ಯ ಗೌರವದಕಡೆಗೆ ಲಕ್ಷ್ಯ ಕೊಡಬೇಕು. ಅಂದರೇನೇ ನಮ್ಮ ಉದ್ಧಾರವಾಗುವದು. ಈಗ ಶ್ರೀಮತ್ಪೂಜ್ಯ ವೇದವ್ಯಾಸಾಚಾರ್ಯರು ಕೈಕೊಂಡ ಧಾರ್ಮಿಕ ಕಾರ್ಯಕ್ಕೆ ಎಲ್ಲಜನರು ತನುಮನಧನದಿಂದ ಸಹಾಯಮಾಡಬೇಕೆಂದು ಪ್ರಾರ್ಥಿಸುತ್ತೇವೆ.

---

**ಬಾಗಲಕೋಟೆಯ ಬೆಂಚಕಚೇರಿಯು.**

ಸಾಧಾರಣತಃ ಬೆಂಚಕಚೇರಿಗಳೆಂದರೆ ಯಾವೂರಲ್ಲಿ ನೋಡಿದರೂ, ಜನರಿಗೆ ತ್ರಾಸದಾಯಕ ಸಂಸ್ಥೆಗಳಾಗಿರುವವೆಂಬದು ಅನುಭವಸಿದ್ಧವಾದ ಮಾತಾಗಿದೆ. ಬೆಂಚಮ್ಯಾಜಿಸ್ಟ್ರೇಟರು ಕಾಲಕ್ಕೆ ಸರಿಯಾಗಿ ಕಚೇರಿಗೆ ಬಾರದಿರುವದು, ಒಬ್ಬರು ಬಂದರೆ ಮತ್ತೊಬ್ಬರು ಬಾರದಿರುವದು, ಅಕಸ್ಮಾತ್ತಾಗಿ ಎಲ್ಲರೂ ಬಂದರೆ ಅವರಲ್ಲಿಯೇ ತಾಳೆ ಕೂಡದೇ ಇರುವದು. ಇವೇ ಮೊದಲಾದ ಸಂಗತಿಗಳಿಂದ ಜನರಿಗೆ ಅತಿಶಯ ತ್ರಾಸವಾಗುತ್ತದೆ ಬಾಗಲಕೋಟೆಯಲ್ಲಿಯಂತೂ ಈ ತರದ ತ್ರಾಸವು ಅತಿಶಯವಾಗಿದ್ದಿತು ಮೇಲಾಗಿ ಕಾಯದೆಜ್ಞಾನವಿಲ್ಲದ ಜನರೂ ಮ್ಯಾಜಿಸ್ಟ್ರೇಟರಾಗಿದ್ದರು. ಅಂದಮೇಲೆ ಜನರಿಗೆ ತ್ರಾಸವಾಗುವದೇನೂ ಆಶ್ಚರ್ಯವಲ್ಲ ಆದರೆ ಈಗ್ಗೆ ಸರಕಾರದವರು ಈ ಬೆಂಚನ್ನೇ ತೆಗೆದುಬಿಟ್ಟಿರುವದಾಗಿ ತಿಳಿಯುತ್ತದೆ. ಇದು ನಿಜವಾಗಿ ಸಂತೋಷದ ಸುದ್ದಿಯು.

× × ×

ಇನ್ನು, ಜನರು ಈ ತರದ ಕಷ್ಟವನ್ನನುಭವಿಸುತ್ತಿದ್ದರು ಸಹ ಈ ಬೆಂಚಕೋರ್ಟಿನ ಹಂಬಲವನ್ನು ಬಿಟ್ಟಿರಲಿಲ್ಲನೆಂಬದನ್ನು ಕಂಡ ನಮಗೆ ಖೇದವೆನಿಸುತ್ತದೆ. ನ್ಯಾಯವನ್ನು ಮೊದಲು ವಿಕೋಪಕೆ ಹೋಗಗೊಡದಂತೆ ಜನರು ಜಾಗರೂಕರಾಗತಕ್ಕದ್ದು. ಅದು ಅತಿಕ್ಕೆ ಮೀರಿಹೋದದ್ದೇ ಆದರೆ ತಮ್ಮತಮ್ಮೊಳಗೇ ತೀರಿಸಿಕೊಳ್ಳುವದೇ ಉತ್ತಮ ಪಕ್ಷವು ಇದರಿಂದ ಇಲ್ಲದ ಮಾನಾಪಮಾನಗಳಿಗೆ ಗುರಿಯಾಗುವ ಪ್ರಸಂಗವು ಬೀಳುವದಿಲ್ಲ. ಇತ್ತ ಹಣದ ವ್ಯಯವೂ ಆಗುವದಿಲ್ಲ ಇದಕ್ಕಾಗಿಯೇ ಮಹಾತ್ಮಾಗಾಂಧಿಯವರು ಪಂಚಾಯತುಗಳನ್ನು ಸ್ಥಾಪಿಸಬೇಕೆಂದೂ, ಕೋರ್ಟುಗಳಿಗೆ ಬಹಿಷ್ಕಾರ ಹಾಕಬೇಕೆಂದೂ ಹೇಳುತ್ತಲಿರುವರಲ್ಲವೆ?

---

ದೇಶಭಕ್ತ ಮುಜಲೀ ದತ್ತೋಪಂತರು ನಾಳಿನದಿವಸ ಇಲ್ಲಿಗೆ ಬರುತ್ತಾರೆ. ಅವರ ವ್ಯಾಖ್ಯಾನವು ನಾಳೆ ಸಂಜೆಗೆ ಆಗುವದು. ಕಾಂಗ್ರೆಸಕಮಿಟಿಯವರು ಅವರಿಗೆ ಒಂದು ಮಾನಪತ್ರವನ್ನರ್ಪಿಸತಕ್ಕವರಿದ್ದಾರೆ.

## ಬಾಗಲಕೋಟ ಶ್ರೀ ವಾಣೀವಿಲಾಸ ಸಂಸ್ಕೃತಪಾಠಶಾಲೆಯ ದ್ವೈವಾರ್ಷಿಕರಿಪೋರ್ಟ್.

ವಿ. ವಿ. ಈ ಊರಲ್ಲಿ ವಾಣೀವಿಲಾಸವೆಂಬ ಸಂಸ್ಕೃತ ಪಾಠಶಾಲೆಯು ಸ್ಥಾಪಿತವಾಗಿ, ಎರಡು ವರ್ಷ ಆಯಿತು, ಈ ಅವಧಿಯಲ್ಲಿ ...

Agents — Nargundkar Bros. BAGALKOT

| | |
|---|---|
| ೭ ಯಲಗುರ್ದರಾವ ದಾ॥ವಾಡ. | ೨-೦-೦ |
| ೫ ದುರ್ಗೋಪಂತ ಪಟವರ್ಧನ. | ೨-೦-೦ |
| ೬ ತವಪ್ಪಣ್ಣಾಯಿಕ ಸವನೂರ, | ೨-೦-೦ |
| ೭ ಸ್ವಾಮಿರಾಚಾರ್ಯ ಕಿತ್ತೂರ | ೨-೦-೦ |
| ೮ ಜಯರಾವ ನರಗುಂದ. | ೧-೦-೦ |
| | ೧-೦-೦ |
| | ೧-೦-೦ |
| | ೧-೦-೦ |
| | ೧-೦-೦ |
| | ೧-೦-೦ |
| | ೧-೦-೦ |
| | ೧-೦-೦ |
| | ೧-೦-೦ |
| | ೧-೦-೦ |
| | ೧-೦-೦ |
| | ೧-೦-೦ |
| | ೦-೮-೦ |
| | ೧-೦-೦ |

...ಶಾಲೆಗೆ ಬರುತ್ತಾ ಅದೆ ...ಇತ್ತ. ಈಗ್ಗೆ ಕಡಿಮೆ ...ಕರೂ ಆದ ಧನಿಕರು ...ಮಕೊಡಬೇಕು.

...ಹೆಸರು.

...ರ್ಗ ಕಾಖಂಡಕಿ,
...ಚಾರ್ಯ ಗಾತ್ತಲ,
ಮನಗೂಳಿ,
ನಾಗಸಂಪಿಗಿ

೧ ಚೀಲ ಜೋಳಾ
...
೧ ಶಿಕ್ಷಿರುತ್ತದೆ ಸಹಾ...ಣೀವೆ, ಆವಲಿ, ಪಾ...ಶೆಯು ದೀಕ್ಷೆಯಿಂ ಅಭಿ...

ಭೀಮರಾವ ಜೋರಾಪುರ ಕೊಟ್ಟದ್ದು ೧ ಚೀಲ ಜೋಳಾ,

ಜಯತೀರ್ಥಾಚಾರ್ಯ ಹುಲಿಗಿ ಕೊಪ್ಪಳ ಇವರು ಕೊಟ್ಟದ್ದು, ೧ ಖಾಪಿ ಬೆಲ್ಲಾ,

ಸಹಾಯಮಾಡಿಕೆಯೆಂಬ ಆಶ್ವಾಸನ ಕೊಟ್ಟವರು.

ಜೀವಂದರಾವ ನರಗುಂದ, ಬಿ, ಎ, ಎಲ್, ಎಲ್, ಬಿ,

...ಲಕ್ಷಿಸಿರುವವರಿಂದ ಯಾವತ್ತೂ ಸದ್ಗೃಹಸ್ಥರು ಉತ್ತಮವಾದ ಆಶ್ರಯಕೊಟ್ಟು ಈ ಪಾಠಶಾಲೆಯನ್ನು ಅಭಿವೃದ್ಧಿಗೆ ತರಬೇಕೆಂದು ನಮ್ಮ ಅಪೇಕ್ಷೆಯಿರುತ್ತದೆ.

ರಾಮಣ್ಣಾನಾಯಕ ಸೊಲ್ಲಾಪಟ್ಟಿ

ಅಧ್ಯಕ್ಷ ವಾಣೀವಿಲಾಸ ಸಂಸ್ಕೃತ ಪಾಠಶಾಲಾ

ಶೋಚನೀಯ ವಾಗುವದು
ಕೂಡವ ಸಮಯವಿದಲ್ಲ
ವಂತಿಲ್ಲ. ಈ ಕಾರ್ಯವು
ಕಿನವರು ಒಮ್ಮನಸ್ಸಿನಿ
ಕ ಕಾರ್ಯ ಕ್ರಮದಲ್ಲಿ
ದಂತಾಗಿದೆ. ಅವರು ಕ
ರಾಗುವದೇ ರಾಷ್ಟ್ರಕ್ಕೆ
ವರು ಸ್ವರಾಜ್ಯ, ಶಿಗದ
ತ್ರಿಕ ಮಾಡುವದು ಸಾ
ವಾಗಿ ಭಿನ್ನಾಭಿಪ್ರಾಯ
ಸಂಗದಲ್ಲಿ ನಮ್ಮ ಜಿಲ್ಲೆ
ಮಾಡಿ, ತಮಗೆ ಇ
ಗಿಸಿ. ವಿಶೇಷತಃ ಕಾ
ನಮ್ಮ ಜಿಲ್ಲೆಯವರು
ರಿ. ಕಾನ್ಸಿಲಗಳ ಪ್ರಶ್ನೆ
ಹ್ಮಣೇತರವಾದವು
ಸ್ತ್ರೀಯುಶಿಕ್ಷಣವಂತೂ
ಪಟ್ಟಿನಪ್ರಸಾರ, ಹುಟ್ಟ
ನಮ್ಮ ಜಿಲ್ಲೆಯವರಿಗೆ
ಬೆಳೆಯುತ್ತದೆ. ಮತ್ತು
ಲ್ಲ. ವಿಧಾಯಕ, ಕಾ
ಇವರಲ್ಲಿ ಮತಭೇದವ
ನ ಸುಮುಂತರವಾಗಿ
ವನ್ನು ತಿಳಿಸಬೇಕಾ
ಈ ಪರಿಷತ್ತಿನಲ್ಲಿ ಭಾ
ಯಪಕ್ಷ ಯಾಗುವಂ
ತಭೇದವು ಆಗದೆ
ಮಾಡಲೆಂದು ಅವರ
ವಾಗಿ ಬೇಡಿಕೊಳ್ಳುತ್ತೆ

**ವಾಣೀವಿಲಾಸ ಸಂ**

**ಈ ಪಾಠಶಾಲೆ**
ಅವನ್ನು ಬೇಕಿಕಡೆಗೆ
ಲಾಗಿ ಶ್ರೀಮತ್ಪರಮ
ಶಾಸ್ತ್ರೋನ್ನತಿಗಾಗಿ
ವಾಗುತ್ತದೆ ಅದೇ
ಗಿ ತಿಗತಕ್ಕದ್ದೋ, ಆ
ಆ ಪಾಠಶಾಲೆಯು ಪ್ರಾರಂಭವಾದಕಾಲಕ್ಕೆ ಈ ಊರಿಂದಲೇ ಪ್ರತಿ ತಿಂಗಳ ೫೦-೬೦ ರೂಪಾಯಿಗಳು ಸಿಗುತ್ತಿದ್ದವು. ಆದರೆ ಸದ್ಯಕ್ಕೆ ೩೫-೩೦ ರೂಪಾಯಿಗಳು ಮಾತ್ರ ದೊರೆಯುತ್ತವೆ. ಇದರಿಂದ ನಮ್ಮಲ್ಲಿ ಧರ್ಮಜಾಗೃತೆಯು ಎಷ್ಟು ಅದೆ ಎಂಬುವದು ಗೊತ್ತಾಗುತ್ತದೆ ಆದರಲ್ಲಿ ಅಧ್ಯಯನಮಾಡುವಂಥ ವಿದ್ಯಾರ್ಥಿಗಳೆಲ್ಲರು, ಪರಗ್ರಾಮನಿವಾಸಿಗಳೇ ಆಗಿರುವರೇ ಹೊರತು. ಈ ಊರವರು ಯಾರೂ ಇರುವದಿಲ್ಲ. ಈ ಊರಿನಷ್ಟು ಬ್ರಾಹ್ಮಣ ಸಂಖ್ಯೆಯು ಮತ್ತಾವ ಸ್ಥಳದಲ್ಲಿ ಇರುವದಿಲ್ಲೆಂದರೂ ವಿಶೇಷ ತಪ್ಪಾಗಲಿಕ್ಕಿಲ್ಲ! ಹೀಗಿದ್ದು ನಮ್ಮ ಶಾಸ್ತ್ರಾಧ್ಯಯನಮಾಡಲಿಕ್ಕೆ ವಿದ್ಯಾರ್ಥಿಗಳು ದೊರೆಯಬಾರದೇ? ಇದು ವಿದ್ಯಾರ್ಥಿಗಳ ತಪ್ಪಲ್ಲ. ಆದರೆ ಪಾಲಕರದೇ ಉತ್ತರವ ಪಪ್ಪವು ಇದರಿಂದ ಇಲ್ಲದ ಮಾನಾಪಮಾನಗಳಿಗೆ ಗುರಿಯಾಗುವ ಪ್ರಸಂಗವು ಬೀಳುವದಿಲ್ಲ. ಇತ್ತ ಹಣದ ವ್ಯಯವೂ ಆಗುವದಿಲ್ಲ. ಇವಕ್ಕಾಗಿಯೇ ಮಹಾತ್ಮಾಗಾಂಧಿಯವರು ಪಂಚಾಯತುಗಳನ್ನು ಸ್ಥಾಪಿಸಬೇಕೆಂದೂ, ಕೋರ್ಟುಗಳಿಗೆ ಬಹಿಷ್ಕಾರ ಹಾಕಬೇಕೆಂದೂ ಹೇಳುತ್ತಲಿರುವರಲ್ಲವೆ?

ದೇಶಭಕ್ತ ಮುಜಲೀ ದತ್ತೋಪಂತರು ನಾಳಿನದಿವಸ ಇಲ್ಲಿಗೆ ಬರುತ್ತಾರೆ. ಅವರ ವ್ಯಾಖ್ಯಾನವು ನಾಳೆ ಸಂಜೆಗೆ ಆಗುವದು. ಇಲ್ಲಿಯ ಗ್ರಂಥಕಪೀಠಿಯವರು ಅವರಿಗೆ ಒಂದು ಮಾನಪತ್ರವನ್ನರ್ಪಿಸತಕ್ಕವರಿದ್ದಾರೆ.


**ಗಡಿಯಾರಗಳು.**




ಚಿತ್ರಗಳಲ್ಲಿಯೂ ಗಂಟೆ ತೋರಿಸ ನಂಬರುಗಳ ಮೇಲೆಯೂ ಕೆಂಪು ಕಲ್ಲ ಕೆತ್ತಲ್ಪಟ್ಟಿವೆ ಎಂದು ಇದನ್ನು ತರಿಸುವರಿಗೆ ೧೧-೧೫ ಬಹುಮಾನಗಳೊಡನೆ ೫-೬ ವರುಷಗಳು ಗ್ಯಾರಂಟಿ ಸಹಿತ ೩-೪ ರೂಪಾಯಿಗಳಿಗೆ ಕೊಡುವೆವೆಂದು ಪ್ರಚುರವಾಗುವ ಪ್ರಕಟನೆಗಳನ್ನು ನೋಡಿ ಬೆಗಾಗಿ ನಿಮ್ಮ ಹಣವನ್ನು ಕಳಕೊಳ್ಳಬೇಡಿರಿ ಈ ನಮ್ಮ ಜಂಟಲ್‍ಮೆನ್ ಲೀವರ್ ಪಾಕೆಟ್ ವಾಚ ಬಹು ಉತ್ತಮವಾದ ಮೂವ್‍ಮೆಂಟ್ಸಗಳಿಂದ ತಯರಿಸಿದೆ. ಗಾಳಿಯೂ ಧೂಳೂ ಸೇರದಂತೆ ಗ್ಲಾಸ್ ಡೋಮು ಇರುವದ ಸರಿಯಾದ ಕಾಲವನ್ನು ತೋರಿಸುವದು. ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವು ಸರಿಮಾಡಿಕೆಳ್ಳಬಹುದು. ನೋಟಕೆ ಗಂಭೀರವಾಗಿಯೂ ಸುಂದರವಾಗಿಯೂ ಇರುವದು. ಇದು ಇಂಗ್ಲೀಷ ನಮೂನೆಯುಳ್ಳದ್ದು. ಈ ಗಡಿಯಾರದಲ್ಲ ಯಾರೇ ಆಗಲಿ ... ಒಂದನ್ನು ತರಿಸಿನೋಡಿರಿ. ತಿಳಿಯುವದು. ೪ ವರುಷಗಳ ಗ್ಯಾರಂಟಿ ಸಹಿತ ಕ್ರಯ ೪-೮-೦

ಮ್ಯಾನೇಜರ್—ಕೃಷ್ಣಲಕ್ಷ್ಮಿ ಅಂಡ ಕೋ.

... ಮದ್ರಾಸ

... ಜಾಹೀರಾತ ಕೊಡುವವರಿಗೆ ಬಲು ಸೌಕರ್ಯ, ದರವು ತೀರ ಸ್ವಲ್ಪ

ವಾರ್ಷಿಕ ವರ್ಗಣಿ ... ೧ ಆಣೆ ಮಾತ್ರ. [ಅಂಚೆ ವೆಚ್ಚ ಬೇರೆ ...

ಇನ್ನೆಷ್ಟು ಹೆಚ್ಚಿಗೆ ವೃತ್ತಾಂತ ಬೇಕಾದರ ಕೆಳಗಿನ ವಿಳಾಸದವರಿಗೆ ಬರೆಯಿರಿ.

ಕೃಷ್ಣ ಗುರು ಸಂಗನು,
ಸಂಪಾದಕ, ಸ, ಭಾ, ಫ. ಗಂಥಮಾಲೆ,
ಹುಬ್ಬಳ್ಳಿ.

**ಬೇಕಾಗಿವೆ! ಬೇಕಾಗಿವೆ!!**

ಕಟಿಂಗ ಮಶಿನ್, ಪರ್ಫೋರೇಟಿಂಗ ಮಶಿನ್ ನಿಪಿಂ ಪ್ರೆಸ್ ಮೊದಲಾದ ಮುದ್ರಣಮಂದಿರಕ್ಕೆ ಬೇಕಾಗುವ ಸೆಕಂಡಹ್ಯಾಂಡ ಸಾಮಾನುಗಳು ಬೇಕಾಗಿವೆ, ಸೆಕಂಡಹ್ಯಾಂಡಾದರೂ ಎಲ್ಲ ಸಾಮಾನುಗಳು ಒಳ್ಳೆ ಸ್ಥಿತಿಯ ಕೆಲಸವನ್ನು ಕೊಡಬೇಕು, ಯಾರಾದರೂ ಈ ಸಾಮಾನುಗಳನ್ನು ಮಾರತಕ್ಕವರಿದ್ದರೆ, ಆ ಸಾಮಾನುಗಳು ಸಿದ್ಧವಾದ ಕಂಪನಿಯು ಹೆಸರು, ಆಕಾರ ವಯ ಮತ್ತು ಈಗಿನ ಸ್ಥಿತಿಮೊದಲಾದ ಸಂಗತಿಗಳನ್ನು ನಮಗೆ ತಿಳಿಸಬೇಕು

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಣಮಂದಿರ ಬಾಗಲಕೋಟೆ

## ಬಾಗಲಕೋಟೆ ಶ್ರೀ ವಾಣೀವಿಲಾಸ ಸಂಸ್ಕೃತಪಾಠಶಾಲೆಯ ದ್ವೈವಾರ್ಷಿಕರಿಪೋರ್ಟ.

ವಿ- ವಿ ಈ ಊರಲ್ಲಿ ವಾಣೀವಿಲಾಸವೆಂಬ ಸಂಸ್ಕೃತ ಪಾಠಶಾಲೆಯು ಸ್ಥಾಪಿತವಾಗಿ, ಎರಡು ವರ್ಷ ಆಯಿತ, ಈ ಅವಧಿಯಲ್ಲಿ ಪಾಠಶಾಲೆಯು ಕಾರ್ಯವು ಉತ್ತಮರೀತಿಯಿಂದ ನಡೆಯುತ್ತದೆ, ಸದ್ಯಕ್ಕೆ ಈ ಪಾಠಶಾಲೆಯಲ್ಲಿ ಅನೇಕ ವಿದ್ಯಾರ್ಥಿಗಳು, ವ್ಯಾಸಂಗಮಾಡುತ್ತಾ ಇದ್ದು ಅವರಲ್ಲಿ ಶಾಸ್ತ್ರಾಧ್ಯಯನಕ್ಕೆ ಅರ್ಹರೆಂದು ವ್ಯವಸ್ಥೆಯಾದವರು ೮ ವಿದ್ಯಾರ್ಥಿಗಳು, ಅವರೆಲ್ಲರಿಗೂ. ಸ್ನಾನ ಭೋಜನ ಮುಂತಾದ ಸೌಕರ್ಯವು, ಪಾಠ ಶಾಲಾಧ್ಯಾಪಕರಾದ ಶ್ರೀಮತ್ಪೂಜ್ಯ ವೇದವ್ಯಾಸಾಚಾರ್ಯ ಮಳಗಿ ಇವರ ಮನೆಯಲ್ಲಿಯೇ ಆಗುತ್ತಲಿದೆ. ಈ ಉತ್ತಮವಾದ ಕಾರ್ಯಕ್ಕೆ ಸ್ಥಳ ಪರಸ್ಥಳದ ಅನೇಕ ಜನರು ಸಹಾಯ ಮಾಡುತ್ತಾ ಇದ್ದಾರೆ, ಇದಕ್ಕೂ ಹೆಚ್ಚಾದ ಸಹಾಯವನ್ನು ಮಾಡಿ, ಈ ಪಾಠಶಾಲೆಯನ್ನು ಅಭಿವೃದ್ಧಿಗೆ ತರುವದು, ನಮ್ಮೆಲ್ಲರ ಮುಖ್ಯಕರ್ತವ್ಯವೆಂದು ಬೇರೆ ಹೇಳಬೇಕಾಗಿಲ್ಲ, ಆದ್ದರಿಂದ ಯಾವತ್ತೂ ಸದ್ಗೃಹಸ್ಥರು, ಸಹಾಯಮಾಡಿ ಈ ಸಂಸ್ಥೆಯನ್ನು ಸ್ಥಿರವಾಗಿ ಮಾಡಬೇಕೆಂದು ಪ್ರಾರ್ಥನೆಯುದೆ

### ಈ ಪಾಠಶಾಲೆಗೆ ಸಹಾಯ (ಮಾಸಿಕ) ಮಾಡುವ ಸದ್ಗೃಹಸ್ಥರು

| ಹೆಸರು | ರೂ |
|---|---|
| ೧ ಹಣಮಂತರಾವ ಛಬ್ಬಿ | ೨-೦-೦ |
| ೨ ಶಾಮರಾವ ದಾತಾರ. | ೨-೦-೦ |
| ೩ ರಾಮಣ್ಣಾ ನಾಯಿಕ ಸೊಲ್ಲಾಪೂರ. | ೩-೦-೦ |
| ೪ ಯಲಗುರ್ದರಾವ ಧಾರವಾಡ. | ೨-೦-೦ |
| ೫ ದುರ್ಗೋಪಂತ ಪಟವರ್ಧನ. | ೨-೦-೦ |
| ೬ ತಮ್ಮಣ್ಣಾಯಿಕ ಸವನೂರ. | ೨-೦-೦ |
| ೭ ಸ್ವಾಮಿರಾಚಾರ್ಯ ಕಿತನೂರ. | ೨-೦-೦ |
| ೮ ಜಯರಾವ ನರಗುಂದ. | ೧-೦-೦ |
| ೯ ಕೃಷ್ಣರಾವ ಮಂಗಳವೇಡೆ. | ೧-೦-೦ |
| ೧೦ ಕೃಷ್ಣಪ್ಪನಾಯಿಕ ಜೋರಾಪೂರ. | ೧-೦-೦ |
| ೧೧ ವಿಠ್ಠಲರಾವ ಗಿರಣಿ. | ೧-೦-೦ |
| ೧೨ ಶ್ರೀನಿವಾಸರಾವ ಭಜಂಗ. | ೧-೦-೦ |
| ೧೩ ಶ್ರೀನಿವಾಸರಾವ ಮುಳಗುಂದ. | ೧-೦-೦ |
| ೧೪ ಡಾಕ್ಟರ ಜಠಾರ. | ೧-೦-೦ |
| ೧೫ ವೈದ್ಯ ಮಧ್ವಾಚಾರ್ಯ. | ೧-೦-೦ |
| ೧೬ ಸೋಬಣ್ಣಾ ಕೊರ್ಲಾ. | ೧-೦-೦ |
| ೧೭ ನಾರಾಯಣರಾವ ಗುಡುರ. | ೧-೦-೦ |
| ೧೮ ವೆಂಕಣ್ಣಾಯಿಕ ಜೋರಾಪೂರ ಬ್ಯಾಂಕ್. | ೧-೦-೦ |
| ೧೯ ನಾರಾಯಣರಾವ ನರಗುಂದ. | ೧-೦-೦ |
| ೨೦ ಅನಂತರಾವ ಗುಳೇದಗುಡ್ಡ. | ೦-೮-೦ |
| ೨೧ ರಾಮಾಚಾರ್ಯ ಹಗಕಲ್ಲ. | ೧-೦-೦ |

ಈ ಪ್ರಕಾರ ಮಾಸಿಕಸಹಾಯವು ಪಾಠಶಾಲೆಗೆ ಬರುತ್ತಾ ಆದಿ ಹೋದವರ್ಷ ಈ ಸಹಾಯವು ಹೆಚ್ಚು ಇತ್ತು. ಈಗ್ಯೆ ಕಡಿಮೆ ಆಗೇದ ಆದ್ದರಿಂದ ಉದಾರರೂ ಧಾರ್ಮಿಕರೂ ಆದ ಧನಿಕರು ಉಪೇಕ್ಷೆ ಮಾಡದೆ ಈ ಸಂಸ್ಥೆಗೆ ಹೆಚ್ಚು ಆಶ್ರಯಕೊಡಬೇಕು.

### ವಾರ್ಷಿಕಸಹಾಯ

| ಗ್ರಾಮ, | ವಸೂಲ, | ಬಾಕಿ, |
|---|---|---|
| ವಡವಿ, (ಗದಗ) | ೧೩ | ೦ |
| ಕಿನ್ನಾಳ (ಸ್ಟೇಜಿ.) | ೨೨ | ೦ |
| ಹಾವೇರಿ, | ೧೨೫ | ೦ |
| ಗಲಗಲಿ, | ೬೬ | ೯ |
| ಹೊಸಪೇಟೆ, | ೧ | ೦ |
| ಚೆಂನ್ನಾಳ | ೫೪ | ೬ |
| ಧಾರವಾಡ | ೫೩ | ೧೬ |
| ಬಾಗಲಕೋಟೆ, | ೧೦೭ | ೦ |
| | ೭೪ | ೧೫ |
| ಮುರನಾಳ, | ೧೦ | ೦ |
| | ೪ | ೬ |

### ವಿಶೇಷಸಹಾಯಮಾಡಿದವರ ಹೆಸರು.

ಶ್ರೀಮತ್ಪೂಜ್ಯ ಕೂರ್ಮಾಚಾರ್ಯ ಗಲಗಲಿ.
ಮಧ್ವಾಚಾರ್ಯ ಗಲಗಲಿ,
ಕೃಷ್ಣಾಚಾರ್ಯ ಗಲಗಲಿ,
ಬಳವಂತರಾವ ದೇಶಪಾಂಡೆ, ಕೃಷ್ಣಾಚಾರ್ಯ ಕಾಖಂಡಕಿ,
ಶ್ರೀನಿವಾಸಾಚಾರ್ಯ ಹೂವಿನಹಳ್ಳಿ, ರಂಗಾಚಾರ್ಯ ಗುತ್ತಲ,
ದುರ್ಮತಿಸಂವತ್ಸರ) ರಾಮಾಚಾರ್ಯ ಮುನಗೋಳ,
ದುಂದುಭಿಸಂವತ್ಸರ) ರಾಮಾಚಾರ್ಯ ನಾಗಸಂಪಿಗಿ
„
„

ರಾಮಾಚಾರ್ಯ ಕೊಳ್ಳಿ ರಾಯಚೂರ ಇವರು ಪಾಠಶಾಲೆಯನ್ನು ನೋಡಿ ಉದಾರ ಬುದ್ಧಿಯಿಂದ ೫೧ ರೂ, ಕೊಟ್ಟು ಪ್ರತಿವರ್ಷ ಇಷ್ಟು ಸಹಾಯ ಮಾಡುತ್ತೇವಂತ, ಆಶ್ವಾಸನ ಕೊಟ್ಟಿದ್ದಾರೆ-

ಶ್ರೀನಿವಾಸಾಚಾರ್ಯ ಕಟ್ಟೀ ಇವರದ್ವಾರಾ ೩ ಜೀಲಜೋಳ ೫ ರೂ

ರಾಮಾಚಾರ್ಯ ಉಮರ್ಜಿ ಇವರು ಕೊಟ್ಟಿದ್ದು ೧ ಚೀಲ ಜೋಳಾ

ಭೀಮರಾವ ಜೋರಾಪೂರ ಕೊಟ್ಟಿದ್ದು ೧ ಚೀಲ ಜೋಳಾ,

ಜಯರಾಮಾಚಾರ್ಯ ಹುಲಿಗೀ ಕೊಪ್ಪಳ ಇವರು ಕೊಟ್ಟಿದ್ದು, ೧ ಚಾಪಿ ಬೆಲ್ಲಾ,

ಸಹಾಯಮಾಡಕೇವೆಂತಾ ಆಶ್ವಾಸನಕೊಟ್ಟವರು.

ಜಿಂದೂರಾವ ನರಗುಂದ, ಬಿ, ಎ, ಎಲ್, ಎಲ್. ಬಿ,

ಪಾಠಶಾಲೆಗೆ ಸ್ಥಳ

ರಾಘವೇಂದ್ರಾಚಾರ್ಯ ಮೂಲಿಮನಿ, ೧ ಚೀಲ ಜೋಳಾ

ಕೃಷ್ಣರಾವ ಚಾಟಿ. ಬೀಳಗಿ, ೧ ಚೀಲ ಜೋಳ.

ಈ ಪಾಠಶಾಲೆಗೆ, ಈ ಪ್ರಕಾರ ಸಹಾಯ ಶಿಕ್ಕಿರುತ್ತದೆ ಸಹಾಯಮಾಡಿದವರನ್ನು, ತುಂಬಾ ಅಭಿನಂದಿಸುತ್ತೇವೆ, ಆದರೆ; ಪಾಠಶಾಲೆಯು ಕಾರ್ಯವು ಇದಕ್ಕೂ ಹೆಚ್ಚಾಗಿ ನಡೆಯಬೇಕೆಂದು ಅಭಿಲಷಿಸುವವರಿಂದ ಯಾವತ್ತೂ, ಸದ್ಗೃಹಸ್ಥರು ಉತ್ತಮವಾದ ಆಶ್ರಯಕೊಟ್ಟು ಈ ಪಾಠಶಾಲೆಯನ್ನು ಅಭಿವೃದ್ಧಿಗೆ ತರಬೇಕೆಂದು ನಮ್ಮ ಅಪೇಕ್ಷೆ ಇರುತ್ತದೆ.

ರಾಮಣ್ಣಾನಾಯಕ ಸೊಲ್ಲಾಪೂರ

ಅಧ್ಯಕ್ಷ ವಾಣೀವಿಲಾಸ ಸಂಸ್ಕೃತ ಪಾಠಶಾಲಾ

# SONDUR & JORAPUR
## Ginning Factory Bagalkot.

Dealers in second-hand Oil-engines, Oil engine repairers, Grinding stones suppliers and General Contractors.

ಬೇರೆಬೇರೆ ತರದ ಸೆಕೆಂಡಹ್ಯಾಂಡ ಆಯಿಲ ಎಂಜಿನಗಳನ್ನು ನಾವು ದೊರಕಿಸಿ ಕೊಡುತ್ತೇವೆ. ಮತ್ತು ಆಯಿಲ ಇಂಜನಗಳನ್ನು ಸೊಯೀದರದಿಂದ ದುರಸ್ತ ಮಾಡಿ ಕೊಡುತ್ತೇವೆ. ಇದಲ್ಲದೇ ಹತ್ತಿಯ ಗಿರಣಿಗಳಿಗೆ ಬೇಕಾಗುವ ಬೀಸುವ ಕಲ್ಲುಗಳನ್ನೂ ನಾವು ಪೂರೈಸಿ ಕೊಡುವೆವು,

ಸೊಂಡೂರ ಮತ್ತು ಜೋರಾಪೂರ
ಜಿನಿಂಗ ಫ್ಯಾಕ್ಟರಿ ಬಾಗಲಕೋಟೆ.

# ಡಾ. ಇಂಗಳೀಕರ
ಎಲ್. ಸೀ. ಎಚ್. ಸೀ.
ಇವರ
# ಬಾಲಾಮೃತವು.

[illegible]

ಚಿಕೆ ಬಾಟ್ಲಿ ೧ ಕ್ಕೆ ೧೨ ಆಣೆ ಅಂಚೆವೆಚ್ಚ ಬೇರೆ

**ಡಾ. ಇಂಗಳೀಕರ,** L. C. H. C. ಬಾಗಲಕೋಟೆ

## ದಿ. ಕರ್ನಾಟಕ ಹೋಮಿಯೊ, ಫಾರ್ಮಸೀ
ಬಾಗಲಕೋಟೆ

ಕರ್ನಾಟಕದಲ್ಲಿ ಪೂರ್ಣ ವಿಶ್ವಸನೀಯವಾದ ಹೋಮಿಯೋಪಾಥಿಕ್ ಔಷಧಗಳನ್ನು ಪೂರೈಸುವ ಫಾರ್ಮಸಿಯು ಇದೇ ಮೊದಲನೇಯದು ಈ ಔಷಧಗಳನ್ನು ಅಮೇರಿಕೆಯಿಂದಲೇ ತರಿಸುತ್ತಿದ್ದು ಅನುಭವಿಕರಾದ ಡಾಕ್ಟರ ಪ್ರತ್ಯಕ್ಷದಲ್ಲಿ ತಯಾರಾಗುತ್ತಿರುವದರಿಂದ ಅವುಗಳಬಗ್ಗೆ ಯಾರಿಗೂ ಸಂಶಯ ತೆಗೆದುಕೊಳ್ಳಲಿಕ್ಕೆ ಕಾರಣವಿಲ್ಲ. ಔಷಧಗಳ [illegible] ತೆಗೆದುಕೊಳ್ಳಬೇಕು

ವ್ಯವಸ್ಥಾಪಕ

# ಮಾರ್ಕಾಪುರ ಸ್ವದೇಶೀ ಪಾಟಿಗಳೂ ಟಾಕಿನ ತುದಿಗಳೂ

ನಾವು ಕೃಷ್ಣಾಸ್ಲೇಟ ವರ್ಕ್ಸ ಮಾರ್ಕಾಪೂರ ಇವರಿಂದ ಇಡೀ ವಿಜಾಪೂರ ಜಿಲ್ಲೆಗೆ ಮುಖ್ಯ ಏಜಂಟರಾಗಿ ನಿಯಮಿಸಲ್ಪಟ್ಟಿದ್ದೇವೆ. ನಮ್ಮ ಹತ್ತರ ಉತ್ತಮ ತರದ ಸಣ್ಣ ದೊಡ್ಡ ಪಾಟಿಗಳು ಬಾಳಿಕೆಯಲ್ಲಿ ವಿದೇಶೀ ಪಾಟಿಗಳಿಗಿಂತಲೂ ತಾಳಿಕೆಯಾದದ್ದು ಅಗದೀ ಸೋವಿ ದರದಿಂದ ದೊರೆಯುವವು ಒಮ್ಮೆ ಅನುಭವ ತೆಗೆದು ಕೊಂಡಲ್ಲಿ ನಿಮಗೆ ಖಾತ್ರಿಯಾಗುವದು ೪೮ ಪಾಟಿಗಳುಳ್ಳ ಒಂದು ಪೆಟ್ಟಿಗೆಗೆ ೧೩-೮ (ರೂಪಾಯಿ) ಮಾತ್ರ. ಏಜಂಟರು ಬೇಕಾಗಿದೆ.

ವ್ಹಿ ಜೇ ಪರವತಿಕರ
ಸೋಲ ಏಜಂಟ ಡಿಸ್ಟ್ರಿಕ್ಟ ವಿಜಾಪೂರ
ಬಾಗಲಕೋಟೆ.

# *Vidyaranya Mudra Mandir Bagalkot.*

ನಮ್ಮಲ್ಲಿ ಕನ್ನಡ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಎಲ್ಲ ತರದ ಮುದ್ರಣ ಕೆಲಸವು ಒಳ್ಳೇ ಅಂದವಾಗಿಯೂ ಸ್ವಸ್ತ ದರದಿಂದಲೂ ಮಾಡಲ್ಪಡುವದು. ಅಲ್ಲದೇ ವಕೀಲಪತ್ರ, ದರಖಾಸ್ತ ಮೊದಲಾದ ನಮೂನೆಗಳೂ, ಟೊಲನಾಕೇದ ಪಾವತಿ ಪುಸ್ತಕಗಳೂ ಉಳಿದ ನಮೂನೆಗಳೂ ಮಾರಲಿಕ್ಕೆ ದೊರೆಯುತ್ತವೆ. ಪರಸ್ಥಳದವರು ವ್ಹಿ ಪಿ ತರಿಸುವಾಗ, ಕೆಲ ಮುಂಗಡ ಹಣವನ್ನು ಕಳಿಸಲೇ ಬೇಕು.

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಾಮಂದಿರ
ಬಾಗಲಕೋಟೆ

# *Shree Mahalaxmi Stores,*
BAGALKOT.

Wholesale Dealers in papers, swadeshi slates, and Ogle's glass Wares.

ನಮ್ಮಲ್ಲಿ ಎಲ್ಲ ತರದ ಕಾಗದಗಳೂ, ಸ್ವದೇಶೀ ಪಾಟಿಗಳೂ ಮೈಸೂರಿನ ಸಾಬಾಣಗಳೂ ಮತ್ತು ಸುಗಂಧ ದ್ರವ್ಯಗಳೂ, ಬೇರೆ ಬೇರೆ ತರದ ಖಾದೀ ವಸ್ತ್ರಗಳೂ, ಮತ್ತು ಇತರ ಸ್ಟೇಶನರೀ ಸಾಮಾನುಗಳೂ ಮಾರಲಿಕ್ಕೆ ದೊರೆಯುತ್ತವೆ.

*Proprietors:—*
Parvatikar & Katgeri Bros,
BAGALKOT.

ಶ್ರೀ ಮಹಾಲಕ್ಷ್ಮೀ ಸ್ಟೋರ್ಸ
ಬಾಗಲಕೋಟೆ.


ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಶ್ರೀನಿವಾಸ ರಾಜೇರಾವ ಮಂಗಳವೇಡೆ (ಸಂಪಾದಕ) ಇವರು ಮುದ್ರಿಸಿದರು ಮತ್ತು ಅಲ್ಲಿಯೇ ಕನಾಟಾಯಿ ಬಂಡಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ಪವಿತ್ರ ದಿನವು. [illegible]

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು.

ವರ್ಷ ೧ | ಬಾಗಲಕೋಟೆ ಕಾರ್ತಿಕ ವದ್ಯ ೧೨ ಶಕೆ ೧೮೪೪ ಗುರುವಾರ ತಾ. ೨೮ ನವ್ಹೆಂಬರ ೧೯೨೨ | ಸಂಚಿಕೆ [illegible]

## ಮಹಾತ್ಮರ ನುಡಿಯು.

### ನಾನು ಸನ್ಯಾಸಿಯೂ ಅಲ್ಲ ಮುತ್ಸದ್ದಿಯೂ ಅಲ್ಲ.

( ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿಸಲ್ಪಟ್ಟಿದೆ. )

'ನವಜೀವನ

ಇನ್ನು ಬುದ್ಧನೂ ಕ್ರಿಸ್ತನೂ ಸಾರಿದ ವಿಶದವಾದ ತತ್ವ ಯಾವದು? ಬುದ್ಧನು ತನ್ನ ಶತ್ರುಗಳೊಡನೆ ಧೈರ್ಯದಿಂದ ಹೋರಾಡಿ ಪ್ರಮತ್ತರಾದ ಆ ವೈದಿಕ ಧರ್ಮದವರನ್ನು ತನ್ನ ಮಕಕ್ಕೆ ತಲೆ ಬಾಗಿ ನಡಿಯುವಂತೆ ಮಾಡಿದನು. ಕ್ರಿಸ್ತನಾದರೂ ಇದರಂತೆ ಜರೂಸಲೆಮದ ದೇವಾಲಯದಿಂದ ಆ ಧನ ಲೋಭಿಗಳನ್ನು ಹೊರಗೆ ನೂಕಿ ಢೋಂಗಿಗಳು ಠಕ್ಕರು ಅವರ ಮೇಲೆ ದೇವರ ಕ್ಷೋಭೆ ಯಾಗುವಂತೆ ಮಾಡಿದನು. ಬುದ್ಧನು ಮತ್ತು ಕ್ರಿಸ್ತನೂ ಈ ಪ್ರಕಾರ ದುಷ್ಟರನ್ನು ಶಿಕ್ಷಿಸುತ್ತಿದ್ದರೂ ಅವರ ಪ್ರತಿಒಂದು ಕೃತಿಯಲ್ಲಿ ದಾಕ್ಷಿಣ್ಯವೂ ಅಂತಃಕರುಣವೂ ತೋರದೆ ಇರುವದಿಲ್ಲ. ಅವರು ತಮ್ಮ ಶತ್ರುಗಳ ಮೇಲೆ ಎಂದೂ ಕೈಯೆತ್ತಹೋಗಲಿಲ್ಲ ಆದರೆ ಸತ್ಯವನ್ನು ಬಿಡುವದಕಿಂತ ಸಂತೋಷದಿಂದ ತಮ್ಮ ದೇಹವನ್ನೇ ಅವರಿಗೆ ಒಪ್ಪಿಸುತ್ತಿದ್ದರು. ಬುದ್ಧನು ತನ್ನಲ್ಲಿರುವ ಭೂತ ದಯೆ ಅಂತಃಕರುಣಗಳ ಪ್ರಭಾವದಿಂದಲೇ ವೈದಿಕ ಧರ್ಮವನ್ನು ಹಾದಿಗೆ ತರುವವನಾಗಿದ್ದರೆ ಆ ಕಾರ್ಯ ಮಾಡುತ್ತಲೇ ಸತ್ತು ಹೋಗುತ್ತಿದ್ದನೇ ಹೊರತು ಅನ್ಯ ಘಾತುಕ ಉಪಾಯಗಳನ್ನು ಯೋಚಿಸುತ್ತಿದ್ದಿಲ್ಲ. ಇಡೀ ಸಾಮ್ರಾಜ್ಯದ ಸಾಮರ್ಥ್ಯವನ್ನೇ ಧಿಕ್ಕರಿಸುವಂತೆ ಮುಳ್ಳಿನ ಮುಕುಟದೊಂದಿಗೆ ವಧ ಸ್ತಂಭದ ಮೇಲೆ ಸಮಾಧಾನದಿಂದ ಪ್ರಾಣವನ್ನು ಬಿಟ್ಟನಲ್ಲವೆ! ಅದರಂತೆ ಅಹಿಂಸಾ ಮಯವಾದ ವಿರೋಧವನ್ನು ಸೂಚಿಸುವವರಿಂದ ನಾನಾದರೂ ಯಥಾ ಶಕ್ತಿ ನನ್ನ ... ... ... ... ... ಮಾರ್ಗವನ್ನೇ ... ಇಲ್ಲವೆ? ಇನ್ನು ಕಡೆಯ ಮಾತೆಂದರೆ ನಾನು ರಾಷ್ಟ್ರ ರಾಷ್ಟ್ರಗಳ ಐಕ್ಯವನ್ನು ನೋಡದೆ ಕೇವಲ ಸಂಪೂರ್ಣ ಪಂಗಡಗಳಲ್ಲಿ ಐಕ್ಯವನ್ನು ಲಕ್ಷಿಸುತ್ತಿರುವೆನೆಂದು ಆ ಟೀಕಾಕಾರನು ನನ್ನ ಮೇಲೆ ತಪ್ಪು ಹೊರಿಸುವನು. ನಾವು ಒಮ್ಮೊಮ್ಮೆ ಒತ್ತಟ್ಟಿಗೆ ಮಾತಾಡುತ್ತ ಕುಳಿತ ವೇಳೆಯಲ್ಲಿ ಬಹುಶಃ ನಿನಗಿಂತಲೂ ನನ್ನ ದೃಷ್ಟಿಯು ಹೆಚ್ಚು ವಿಶಾಲವಾಗಿರುವದೆಂದು ಅವನಿಗೆ ನಾನು ಹೇಳಿದ್ದು ನನಗೆ ಇನ್ನೂ ನೆನಪುಂಟು. ಆದರೆ ಪಂಗಡ ಪಂಗಡಗಳಲ್ಲಿ ಐಕ್ಯವನ್ನು ಹೆಚ್ಚು ಬೆಳಸದೆ ಇಡಿ ಜಗತ್ತನ್ನೆ ಒಂದು ಮಾಡಲಿಕ್ಕೆ ನನಗೆ ಬರುವಂತಿಲ್ಲ. ನಾವು ನಮ್ಮ ನೆರೆ ಹೊರೆಯವರ ಜನ್ನು ಮೇಲೆ ಜಿಗಿದು ಕೊಳ್ಳುವದನ್ನೊಂದು ಬಿಟ್ಟರೆ ನಾವು ಹೆಚ್ಚಿಗೇನೂ ಶ್ರಮ ಪಡದೆ ಜಗತ್ತು ಸುರಳಿತವಾಗಿ ಸಾಗುವದೆಂದು ... ಸ್ವಾಮಿಯು ಅಂದಿರುವನು. ನಾವು ನಮ್ಮ ನೆರೆ ಹೊರೆಯವರನ್ನು ಸುಲಿಯುವದನ್ನು ಬಿಟ್ಟು ಅವರಿಗೆ ನೆರವಾಗಹತ್ತಿದರೆ ಈ ನಮ್ಮ ನೆರೆ ಹೊರೆಯವರ ಸಂಗಡಿರುವ ಐಕ್ಯ ಭಾವವು ಬೆಳೆಯುತ್ತ ಬೆಳೆಯುತ್ತ ಅದು ಜಗತ್ತನ್ನೇ ವ್ಯಾಪಿಸ ಬಲ್ಲದು. ಅದ್ದರಿಂದ ತನ್ನ ನೆರೆ ಹೊರೆಯವರಿಗೆ ನೆರವಾಗುವದಕ್ಕಿಂತಲೂ ಹೆಚ್ಚಿನದನ್ನು ಮಾಡಲಿಕ್ಕೆ ಯಾರಿಗೂ ಸಾಧ್ಯವಿರುವದಿಲ್ಲ. "ಯಥಾ ಪಿಂಡೆ ತಥಾ ಬ್ರಹ್ಮಾಂಡೆ!! ಎಂಬುವದು ಈವತ್ತಿಗೂ ನಿಜವಾಗಿಯೇ ಇರುವದು.

---

### ಕೌನ್ಸಿಲಗೇ ಬಹಿಷ್ಕಾರವು.

( ಯಂಗ ಇಂಡಿಯಾ )

ಮೊದಲನೇ ಟಿಪ್ಪಣಿಯಲ್ಲಿ ನಿರ್ದಿಷ್ಟವಾದ ಮಹಾತ್ಮರ ಭಾಷಣದಲ್ಲಿಯ ಭಾಗವು ಕೆಳಗೆ ಕಾಣಿಸಿದಂತೆ ಇರುವದು.

"ಅಸಹಕಾರ ಚಳವಳಿಯ ಅಂಗಗಳಲ್ಲಿ ಕೌನ್ಸಿಲಗಳ ಬಹಿಷ್ಕಾರಕ್ಕೆ ನಾನು ಅಗ್ರ ಸ್ಥಾನವನ್ನು ಕೊಟ್ಟಿರುವೆನು. ಬ್ರಿಟಿಷ ವಸ್ತುಗಳ ಬಹಿಷ್ಕಾರವನ್ನೂ ಅಷ್ಟೇಕೆ ಯಾವದಾದರೊಂದು ವಿಶಿಷ್ಟ ರಾಷ್ಟ್ರದ ಪದಾರ್ಥಗಳ ಬಹಿಷ್ಕಾರವನ್ನೂ ಈಗ ಸಹ ನಾನು ನಿಷೇಧಿಸುವದರಿಂದ ಬಹಿಷ್ಕಾರ ಶಬ್ದವನ್ನೇ ನಾನು ನಿಷೇಧಿಸುತ್ತೇನೆ ಎಂದು. ನನ್ನ ಎಷ್ಟೋ ಮಿತ್ರರು ಈ ಬಹಿಷ್ಕಾರ ಶಬ್ದವನ್ನು ನಾನು ಉಪಯೋಗಿಸಿದ್ದಕ್ಕೆ ನನ್ನ ಸಂಗಡ ಜಗಳಾಡುತ್ತಿರುವರು. ಆದರೆ ಅಲ್ಲಿಯ ಬಹಿಷ್ಕಾರಕ್ಕೆ ಬೇರೆ ಅರ್ಥವುಂಟು ಇಲ್ಲಿಯ ಬಹಿಷ್ಕಾರ ಶಬ್ದದ ಅರ್ಥವಾದರೂ ಬೇರೆ ಇರುತ್ತದೆ. ಮುಂದಿನ ವರ್ಷ

ಸ್ಥಾಪಿತ ಸಂಗಲಿಕ್ಕೆ, ಕೌನ್ಸಿಲಗಳ ಬಹಿಷ್ಕಾರಕ್ಕೆ ನಾನ ವಿರುದ್ಧ ವಿರುವದಿಲ್ಲಷ್ಟೇ ಅಲ್ಲ ನಾನು ಆ ಬಹಿಷ್ಕಾರಕ್ಕೆ ಸಂಪೂರ್ಣ ಒಪ್ಪಿಗೆಯನ್ನು ಕೊಡುತ್ತೇನೆ. ನಾನು ಹಾಗೆ ಮಾಡುವದಕ್ಕೆ ಕಾರಣವೇನು? ಜನರು ಇಡೀ ಸಾಮಾನ್ಯ ಜನತೆಯು ನಮ್ಮಂಥ ಮುಂದಾಳುಗಳು ಮುಂದಣ ಮಾರ್ಗವನ್ನು ತೋರಿಸಬೇಕೆಂದು ಬಯಸುತ್ತದೆ. ನಮ್ಮಿಂದ ಅವರು ಕೇವಲ ಸ್ವಂದ್ವಾರ್ಥವುಳ್ಳ ಮಾರ್ಗವನ್ನು ಅಪೇಕ್ಷಿಸುವದಿಲ್ಲ- ಮೊದಲು ನಾವು ಚುನಾವಣೆಗೆ ನಿಂತು ಆ ಮೇಲೆ ರಾಜನಿಷ್ಠೆಯ ಪ್ರತಿಜ್ಞಾ ಪತ್ರಕ್ಕೆ ಸಮ್ಮತಿಯನ್ನು ಕೊಡುವದಿಲ್ಲೆಂದು ಹೇಳಬೇಕೆಂಬ ಸೂಚನೆಯಿಂದ ಮುಂದಾಳುಗಳಲ್ಲಿಯ, ವಿಶ್ವಾಸವು ಹಾರಿ ಹೋಗಿರುತ್ತದೆ. ರಾಷ್ಟ್ರಕ್ಕೆ ಇದು ಸ್ಪಷ್ಟವಾದ ಮಾರ್ಗವಾಗಲಾರದು. ಆದ್ದರಿಂದ ನನ್ನ ದೇಶ ಬಾಂಧವರೇ ನೀವು ಆ ಬಲಿಯಲ್ಲಿ ಬೀಳಬೇಡಿರೆಂದು ನಾನು ನಿಮಗೆ ಸ್ಪಷ್ಟವಾಗಿ ಹೇಳುತ್ತಿರುವೆನು. ನಾವು ಚುನಾವಣೆಗೆ ನಿಂತು ಮುಂದೆ ರಾಜನಿಷ್ಠೆಯ ಪ್ರತಿಜ್ಞೆಯನ್ನು ತೆಗೆದುಕೊಳ್ಳಲಿಕ್ಕೆ ಒಪ್ಪದೆ ಇರುವದರಿಂದ ನಾವು ನಮ್ಮ ರಾಷ್ಟ್ರವನ್ನು ಮಾರಿಕೊಂಡಂತಾಗುವದು. ಆ ದಾರಿಯು ಕಷ್ಟಮಯವಾದದ್ದಿರುವದು. ಮತ್ತು ಇಷ್ಟು ಹಿಂದೀ ಜನರು ಈ ರೀತಿಯಾಗಿ ನಿಶ್ಚಯವನ್ನು ಮಾಡಿ ಅದರಂತೆ ನಡೆದು ಕೊಳ್ಳುವರೆಂದು ನನಗೆ ನಂಬಿಗೆಯು ಇಲ್ಲವೆಂದು ನಾನು ಸ್ಪಷ್ಟವಾಗಿ ಒಪ್ಪುವೆನು. ಮೊದಲು ಚುನಾವಣೆಯಲ್ಲಿ ನಿಂತು ಆ ಮೇಲೆ ರಾಜನಿಷ್ಠೆಯ ಪ್ರತಿಜ್ಞೆಯನ್ನು ತೆಗೆದು ಕೊಳ್ಳತಕ್ಕದ್ದಲ್ಲವೆಂದು ಪ್ರಾಮಾಣಿಕ ಮತವುಳ್ಳ ಜನರಿಗೆ ಅವರು ಹಾಗೆ ಮಾಡುವದರಿಂದ ತಮ್ಮ ಸಲುವಾಗಿ ಹಾಗು ರಾಷ್ಟ್ರದ ಸಲುವಾಗಿ ಒಂದು ದೊಡ್ಡ ಬಲಿಯನ್ನು ಸಿದ್ಧ ಮಾಡಿ ಅದರಲ್ಲಿ ಬೀಳಲಿಕ್ಕೆ ಯತ್ನಿಸಿದಂತಾಗುವದೆಂದು ನಾನು ಅವರಿಗೆ ಸೂಚಿಸುತ್ತೇನೆ. ನಂನ ಅಭಿಪ್ರಾಯವು ಈ ರೀತಿಯಾಗಿ ಇದೆ. ಈಗ ರಾಷ್ಟ್ರಕ್ಕೆ ಅತಿ ಸ್ಪಷ್ಟವಾದ ಮಾರ್ಗವನ್ನು ನಾವು ತೋರಿಸಬೇಕಾಗಿದ್ದರೆ ಈ ಪ್ರಚಂಡ ರಾಷ್ಟ್ರದ ಗೂಡ ಕೇವಲ ಚಪಲಾಟ ಮಾಡಬಾರದೆಂದು ನಾವು ಅಪೇಕ್ಷಿಸುತ್ತಿದ್ದರೆ, ಹಿಂದುಸ್ಥಾನಕ್ಕೆ ಮಾಡಿದ ಅಪರಾಧ ದ್ವಯಗಳ ಕ್ಷಾಲನೆಯಾಗದೆ ಇರುವ ವರೆಗೆ ಆ ಅನ್ಯಾಯದಿಂದ ಯುಕ್ತವಾದ ಉಪಕೃತಿಗಳು ಅವು ಎಷ್ಟೇ ಮಹತ್ವವಾದವುಗಳಾಗಿದ್ದರೂ ನಮ್ಮಿಂದ ಸ್ವೀಕಾರ ಮಾಡಲಿಕ್ಕೆ ಯೋಗ್ಯವಾದವುಗಳಲ್ಲವೆಂಬ ಸಂಗತಿಯನ್ನು ನಾವು ರಾಷ್ಟ್ರಕ್ಕೆ ಸ್ಪಷ್ಟವಾಗಿ ತಿಳಿಸಿ ಹೇಳಬೇಕು. ನಾವು ಅವರು ಕೊಟ್ಟ ಉಪಕೃತಿಗಳನ್ನು ಸ್ವೀಕರಿಸುವದಕ್ಕಿಂತ ಮೊದಲು ನಮಗಾದ ಅಪರಾಧ ದ್ವಯಗಳನ್ನು ಸರಿಪಡಿಸುವದು ಅತ್ಯಂತ ಅವಶ್ಯವಾಗಿರುವದು. "ಗ್ರೀಕರ ಗೂಡ ಬಹು ಎಚ್ಚರದಿಂದ ಇರ್ರಿ ವಿಶೇಷತಃ ಅವರು ಕಾಣಿಕೆಯನ್ನು ಕೊಡಲಿಕ್ಕೆ ಬಂದಾಗ ಬಹು ಜೋಕೆ" ಎಂದು ಅಭಿಪ್ರಾಯವುಳ್ಳ ಒಂದು ಗ್ರೀಕ ಜನರ ಗಾದೆಯ ಮಾತು ಉಂಟು; ಪಂಜಾಬ ಮತ್ತು ಖಿಲಾಫತದ ವಿಷಯದಲ್ಲಿ ಮಾಡಿದ ಅನ್ಯಾಯಗಳನ್ನು ನಿಶ್ಚಿತವಾಗಿ ಮಾಡಲಿಕ್ಕೆ ಪ್ರತಿಜ್ಞೆಯನ್ನು ಮಾಡಿದ ಮಂತ್ರಿ ಮಂಡಲದವರು ಕೊಡುವ ಕಾಣಿಕೆಗಳನ್ನು ನಾವು ಎಂದೂ ಸ್ವೀಕರಿಸ ಕೂಡದು, ಇಷ್ಟೇ ಅಲ್ಲ ಅವರು ಪಸರಿಸಬೇಕೆನ್ನುವ ಜಾಳಿಗೆಯಲ್ಲಿ ಸಿಕ್ಕು ಕೊಳ್ಳಬಾರದಂತೆ ಎಚ್ಚರಿಕೆಯಿಂದ ಇರಬೇಕು.

ಆದ್ದರಿಂದಲೇ ಕೌನ್ಸಿಲಗಳ ಮೋಹಕ್ಕೆ ನಾವು ಎಷ್ಟು ಬೀಳದೆ ಅವುಗಳ ಸಂಗಡ ಯಾವ ತರದ ಸಂಬಂಧವನ್ನು ಇಟ್ಟುಕೊಳ್ಳತಕ್ಕದ್ದಲ್ಲವೆಂದು ನಾನು ಸೂಚಿಸುತ್ತೇನೆ. ರಾಷ್ಟ್ರದ ಭಾವನೆಯ ಪ್ರತಿನಿಧಿಗಳಾದ ನಾವು ಕೌನ್ಸಿಲ್ಲಗಳಲ್ಲಿ ಸೇರುವದನ್ನು ಬಿಟ್ಟುಕೊಟ್ಟರೆ ಮವಾಳ ಬಾಂಧವರು-ರಾಷ್ಟ್ರೀಯ ಭಾವನೆಯ ಪ್ರತಿನಿಧಿಗಳಲ್ಲದವರು-ಅಲ್ಲಿ ಸೇರುವರೆಂದು ಕೆಲವರು ನನಗೆ ಹೇಳುತ್ತಿರುವರು. ಮವಾಳ ಬಾಂಧವರು ಯಾರ ಪ್ರತಿನಿಧಿಗಳೆಂಬುವದೂ ನನಗೆ ಗೊತ್ತಿಲ್ಲ ರಾಷ್ಟ್ರೀಯ ಪಕ್ಷದವರಾದರೂ ಯಾರ ಪ್ರತಿನಿಧಿಗಳೆಂಬುವದೂ ನಾನು ಅರಿಯೆನು. ಮವಾಳರಲ್ಲಿ ಕೆಲವರು ಸಜ್ಜನರು ಕೆಲವರು ದುರ್ಜನರು ಇರುವದನ್ನು ನಾನು ಬಲ್ಲೆನು- ರಾಷ್ಟ್ರೀಯ ಪಕ್ಷದವರಲ್ಲಿಯೂ ಕೆಲವರು ಸಜ್ಜನರು ಕೆಲವರು ದುರ್ಜನರು ಇರುತ್ತಾರೆಂಬುವದೂ ನನಗೆ ಗೊತ್ತುಂಟು. ಮವಾಳ ಬಾಂಧವರಲ್ಲಿ ಎಷ್ಟೋ ಜನರು ಅಸಹಕಾರ ಮಾರ್ಗವನ್ನು ಅನುಸರಿಸುವದು ಪಾಪವೆಂದು ಪ್ರಾಮಾಣಿಕತನದಿಂದ ಬಗೆಯುವರು ಇರುವರೆಂಬುದು ನನ್ನ ಅರಿಕೆಯಿಲ್ಲದೆ. ನಾನು ಅವರ ಮತದ ವಿರುದ್ಧ ನಿರುವನೆಂದು ಅವರಿಗೆ ಸನ್ಮಾನ ಪೂರ್ವಕವಾಗಿ ಹೇಳುತ್ತೇನೆ ಅವರು ಚುನಾವಣೆಯಲ್ಲಿ ತೊಡಗಿದರೆ, ಅವರು ಪಸರಿಸಿದ ಜಾಳಿಗೆಯಲ್ಲಿ ಸಿಗುವರೆಂದು ಕೂಡ ನಾನು ಅವರಿಗೆ ಹೇಳುತ್ತೇನೆ. ಆದರೆ ಹೀಗೆ ಆಗುವದರಿಂದ ನನ್ನಲ್ಲಿ ಭಿನ್ನ ಪರಿಸ್ಥಿತಿಯುಂಟಾಗುವ ಕಾರಣವಿಲ್ಲ. ನನ್ನ ಮನಸ್ಸಿನಲ್ಲಿ ಕೌನ್ಸಿಲಗಳಿಗೆ ಹೋಗತಕ್ಕದ್ದಲ್ಲವೆಂದು ಸ್ಪಷ್ಟವಾಗಿ ಅನಿಸುತ್ತಿದ್ದರೆ ಉಳಿದ ಕೋಟ್ಯವಧಿ ಜನರು ಚುನಾವಣೆಯಲ್ಲಿ ನಿಂತರೂ ನನ್ನಷ್ಟಕ್ಕೆ ನಾನು ಮಾತ್ರ ನನ್ನ ಮನೋನಿರ್ಣಯದಂತೆ ನಡೆಯಲಿಕ್ಕೇ ಬೇಕು. ಯಾವದಾದರೊಂದು ಸಾರ್ವಜನಿಕ ಕಾರ್ಯವನ್ನು ಮಾಡಬೇಕಾದರೆ ಇದೇ ಪದ್ಧತಿಯು ಇರತಕ್ಕದ್ದು. ಈ ಮಾರ್ಗದಿಂದಲೇ ಸಾರ್ವಜನಿಕ ಅಭಿಪ್ರಾಯದ ತಳಹದಿಯನು ಹಾಕಬೇಕು. ಈ ಮಾರ್ಗದಿಂದಲೇ ನಮಗೆ ಸುಧಾರಣೆಗಳನ್ನು ದೊರಕಿಸಲಿಕ್ಕೆ ಬರಬಹುದು. ಇದರಿಂದಲೇ ನಮ್ಮ ಧರ್ಮರಕ್ಷಣೆಯಾಗುವದು. ಧರ್ಮದ ಮಾನಾಪಮಾನದ ಪ್ರಶ್ನೆಯು ಬಂದಾಗ ನಾನು ಒಬ್ಬನಿರಲಿ ಇಲ್ಲವೆ ನಂನ ಅಭಿಪ್ರಾಯದಂತೆ ಬಹಳ ಜನರು ಇರಲಿ ನನ್ನ ತತ್ವದಂತೆ ನಾನು ವರ್ತಿಸಬೇಕಾದದ್ದು. ನಾನು ನಂನ ತತ್ವದಂತೆ ನಡೆದು ಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವಾಗ ನಾನು ಮಡಿದರೂ ಆ ನನ್ನ ಮರಣವು ನನ್ನ ತತ್ವವನ್ನು ಬಿಟ್ಟು ಕೊಟ್ಟು ನಾನು ಜೀವಿಸುವ ಜೀವನಕ್ಕಿಂತ ಹೆಚ್ಚು ಶ್ರೇಯಸ್ಕರವಾದದ್ದು- ಈ ಕೌನ್ಸಿಲಗಳ ಚುನಾವಣೆಗೆ ನಿಲ್ಲುವದು ಅನ್ಯಾಯವೆಂದು ನಾನು ಪ್ರತಿಯೊಬ್ಬನಿಗೆ ಹೇಳುವೆನು. ಈ ಸರಕಾರದ ಸಂಗಡ ನಾವು ಸಹಕಾರವನ್ನು ಮಾಡತಕ್ಕದ್ದಲ್ಲವೆಂದು ನಮಗೆ ಒಮ್ಮೆ ಅನಿಸಿದ ಬಳಿಕ ನಾವು ಅದನ್ನು ಮೊದಲಿನಿಂದಲೇ ಪ್ರಾರಂಭಿಸಬೇಕು. ನಾವು ಸ್ವಾಭಾವಿಕವಾದ ರಾಷ್ಟ್ರದ ಮುಂದಾಳುಗಳಾಗಿದ್ದದರಿಂದ ನಾವು ಕೊಟ್ಟ ಅಸಹಕಾರ ಮಂತ್ರವನ್ನು ರಾಷ್ಟ್ರಕ್ಕೆ ಉಪದೇಶಿಸುವ ಅಧಿಕಾರವು ನಮಗೆ ಉಂಟು; ಆದ್ದರಿಂದ ಯಾವ ಬಗೆಯಾಗಿ ನಿರೀಕ್ಷಿಸಿದರೂ ಕೌನ್ಸಿಲಗಳಲ್ಲಿ ಸೇರುವದಕ್ಕೆ ಚುನಾವಣೆಗೆ ನಿಲ್ಲುವದು ಅಸಹಕಾರ ತತ್ವಕ್ಕೆ ವಿರುದ್ಧವಾದದ್ದೆಂದು ನಂನ ಪ್ರಾಂಜಲ ಅಭಿಪ್ರಾಯವು.

---

## ದೇಶಭಕ್ತರ ಭಾಷಣವು.

ತಾ॥ ೧೧—೧೧—೨೨ ನೇ ದಿವಸ ಸಾಯಂಕಾಲ ೬ ಘಂಟೆಯ ಗಾಡಿಯಿಂದ ದೇಶಭಕ್ತ ಗಂಗಾಧರರಾವ ದೇಶಪಾಂಡೆ, ಮುಜಲಿ, ಹಾಗು ಹಣಮಂತರಾವ ಕೌಜಲಗಿಯವರು ವಿಜಾಪೂರದಿಂದ ಬಂದರು. ಸ್ಟೇಶನದಲ್ಲಿ ಅವರ ಸ್ವಾಗತ ಮಾಡುವ ಕುರಿತು, ಊರೊಳಗಿನ ಪ್ರಮುಖ ಜನರೂ ಸ್ವಯಂಸೇವಕರೂ ನೆರೆದಿದ್ದರು. ಅವರು ಸ್ಟೇಶನದಿಂದ ಊರೊಳಗೆ ಬಂದರು. ಆಮೇಲೆ ೭ ಘಂಟೆಗೆ ಶೇಟ ರಾಮದಾಸ ದರಬಾರ ಇವರ ಬಂಗ್ಲೆಯಲ್ಲಿ ಸಭೆಗೂಡಿತ್ತು ಸುಮಾರು ೫೦೦೦ ಜನರು ಕೂಡಿದ್ದರು. ಮೊದಲು ಇಲ್ಲಿಯ ಕಾಂಗ್ರೇಸ ಹಾಗೂ ಖಿಲಾಫತ ಕಮಿಟಿಗಳ ವತಿಯಿಂದ ದೇಶಭಕ್ತರಿಗೆ ಮಾನಪತ್ರವನ್ನು ಅರ್ಪಿಸುಗದಲ್ಲಿ ಬಂದಿತು. ಅದನ್ನು ಬೇರೆಕಡೆಗೆ ಕೊಟ್ಟಿದ್ದೇವೆ. ಆಮೇಲೆ ದೇಶಭಕ್ತ ಹಣಮಂತರಾಯರು ಭಾಷಣ ಪ್ರಾರಂಭಮಾಡಿದರು. ಅವರು ತಾವು ಜೇಲಿನಲ್ಲಿದ್ದಾಗ ಬಹಳ ಸ್ವತಂತ್ರ ಇದ್ದೆವು. ಅಲ್ಲಿ ತಮಗೆ ಎಂದೂ ಅಂಜಿಕೆಇದ್ದಿಲ್ಲ. ಆದರೆ ಈಗ್ಗೆ ಹೊರಗೆಬಂದಮೇಲೆ ಪೋಲೀಸರ ಅಂಜಿಕೆ, ಮಾಮಲೇದಾರರ ಅಂಜಿಕೆ. ಈ ಪ್ರಕಾರ ನಾವು ಎಲ್ಲರಿಗೂ ಅಂಜಬೇಕಾಗುತ್ತದೆ. ಆದ್ದರಿಂದ ನಿದಾನ ಈ ಅಂಜಿಕೆಯನ್ನು ಹೋಗಲಾಡಿಸುವ ಕುರಿತು ನೀವು ಜೇಲಿಗೆ ಹೋಗಿರಿ ಎಂದು ಹೇಳಿದರು. ಮತ್ತು ಜೇಲಿನಲ್ಲಿದ್ದಾಗ ಹೊರಗಿನವರು ಅಂಜಿ ಕೆಲಸಮಾಡುವದನ್ನು ಬಿಟ್ಟಿರುವರೋ ಹೇಗೆ ಎಂಬದೊಂದೇ ಚಿಂತೆ ಇತ್ತು. ಹೊರತು ಉಳಿದ ಯಾವ ಕಾರಣದ ಸಲುವಾಗಿಯೂ ನಾವು ಚಿಂತೆ ಮಾಡುತ್ತಿದ್ದಿಲ್ಲವೆಂದು ಹೇಳಿದರು ಮತ್ತು ಮಹಾತ್ಮರ ಬಿಟ್ಟ ಆಜ್ಞೆ ಈ ಚಳವಳಿಯಿಂದಲೇ ಸ್ವರಾಜ್ಯ ಸಿಗುವದು; ಆದ್ದರಿಂದ ಈ ಚಳವಳಿಯನ್ನೇ ವಿಶೇಷ ಜೋರಿನಿಂದ ನಡೆಸಲಿಕ್ಕೆ ಉಪದೇಶಿಸಲಿಕ್ಕೆ ಹೇಳಿದ್ದನ್ನಾದರೂ ಅವರು ಹೇಳಿದರು.

ಆ ಮೇಲೆ ದೇಶಭಕ್ತ ಮುಜಲಿಯವರು ಭಾಷಣಮಾಡಿದರು ಅವರು ತಾವು ಜೇಲಿಗೆ ಹೋಗಿಬಂದದ್ದಕ್ಕೆ ನೀವು ನನಗೆ ಮಾನಪತ್ರವನ್ನು ಕೊಡದೇ ಅಸಹಕಾರ ತತ್ವಕ್ಕೆ ಮಾನಮಾಡುತ್ತೀರಿ ಇದರ ಮೇಲಿಂದಲೇ ಅಸಹಕಾರ ಚಳವಳಿಯ ಮಹತ್ವವು ಎಷ್ಟು ಇರುವದೆಂಬದು ತಿಳಿಯುತ್ತದೆ. ಅಸಹಯೋಗ ಚಳವಳಿಯ ಮುಖ್ಯಾಂಗವಾದ ಖಾದೀ ಚಳವಳಿಯನ್ನು ಎಲ್ಲರೂ ಬಹಳ ಜೋರಿನಿಂದ ಮಾಡತಕ್ಕದ್ದು ಅದರಿಂದಲೇ ಹಿಂದುಸ್ಥಾನವು ಸ್ವರಾಜ್ಯವನ್ನು ಗಳಿಸುತ್ತದೆ. ಎರಡು ವರ್ಷಗಳವರೆಗೆ ನಾವು ಅಖಂಡ ಉಪದೇಶಮಾಡುತ್ತಿದ್ದರೂ ಇನ್ನು ಎಷ್ಟೋ ಜನರು ಗಿರಣೀನೂಲಿನ ಅರಿವೆಯನ್ನು ಉಪಯೋಗಿಸುತ್ತಾರೆ. ಇದನ್ನು ನೋಡಿ ನನಗೆ ಬಹಳ ದುಃಖವಾಗುತ್ತದೆ. ಇನ್ನು ಮೇಲಾದರೂ ನೀವೆಲ್ಲರೂ ಕೈನೂಲಿನ ಖಾದಿಯನ್ನು ಉಪಯೋಗಿಸಿರಿ. ಹಾಗೂ ಎಲ್ಲರೂ ಈ ಹೊತ್ತಿನಿಂದ ನೂಲುತ್ತಿರಿ ಈ ಪ್ರಕಾರವಾಗಿ ಉಪದೇಶಮಾಡಿದರು

ಆಮೇಲೆ ದೇಶಭಕ್ತ ಗಂಗಾಧರರಾಯರು ತಮ್ಮ ಸುಪ್ರಾಸ್ಯವಾದ ಭಾಷಣ ಪ್ರಾರಂಭಮಾಡಿದರು. ಅವರು ಹೇಳಿದ್ದೇನಂದರೆ ಈಗ ದೇಶದಲ್ಲಿ ಕೌನ್ಸಿಲದಲ್ಲಿ ಸೇರಬೇಕೋ ಸೇರಬಾರದೋ ಎಂಬುವ ಪ್ರಶ್ನವು ಉಪಸ್ಥಿತವಾಗಿರುವದು. ಎಷ್ಟೋ ಜನರು ಲೋಕಮಾನ್ಯರ ಮಾರ್ಗವನ್ನೇ ನಾವು ಅನುಸರಿಸಹತ್ತಿದ್ದೇವೆ ಹಾಗೂ ಮಹಾತ್ಮರ ಮತದಲ್ಲಿಯೂ ಲೋಕಮಾನ್ಯರ ಮತದಲ್ಲಿಯೂ ದ್ವೈತವು ಉಂಟು ಎಂದು ಹೇಳುತ್ತಾರೆ. ಆದರೆ ಇಂಥ ಶುದ್ಧ ಭ್ರಮವದೆ. ಮಹಾತ್ಮರಲ್ಲಿ ಹಾಗೂ ಲೋಕಮಾನ್ಯರಲ್ಲಿ ಯಾವತರದ ಭೇದವು ನನಗಂತೂ ಕಂಡುಬರುವದಿಲ್ಲ ನಾನು ನಿಮ್ಮ ಮಾನಪತ್ರದಲ್ಲಿ ಅಂದಂತೆ, ಲೋಕಮಾನ್ಯರ ಶಿಷ್ಯ ಇದ್ದದ್ದು ನಿಜ ಲೋಕಮಾನ್ಯರ ಸಂಗತ ಎಷ್ಟೋ ದಿವಸಗಳ ವರೆಗೆ ಕೂಡಿ ಇರುವ ಭಾಗ್ಯವು ನನ್ನ ಪಾಲಿಗೆ ಬಂದದೆ. ಆದ್ದರಿಂದಲೇ ಲೋಕಮಾನ್ಯರ ಚಳವಳಿಯ ರಹಸ್ಯವು ನನಗೆ ಗೊತ್ತಿದೆ. ನೀವು ಮಾನಪತ್ರದಲ್ಲಿ ಅಂದಂತೆ ಕಾಂಗ್ರೆಸದಲ್ಲಿ ಮತಭೇದವಾಗದಂತೆ ನಾವೆಲ್ಲರೂ ಪ್ರಯತ್ನಮಾಡುತ್ತೇವೆ. ಮತ್ತು ಆ ತರದ ಮತಭೇದವಾಗುವ ಸಂಭವವಾದರೂ ಇರುವದಿಲ್ಲ. ಕಾಂಗ್ರೆಸಿನ ಠರಾವಿನಂತೆ ಮುಂದೆ ಎಲ್ಲ ಜನರು ಕೂಡಿಯೇ ಕೆಲಸಮಾಡಹತ್ತುತ್ತಾರೆ. ಇದರಲ್ಲಿ ಏನೂ ಸಂದೇಹವಿಲ್ಲ ಆದ್ದರಿಂದ ನೀವು ಈಗ್ಗೆ ಯಾವತರಹದ ಭಯವನ್ನು ಮನಸ್ಸಿನಲ್ಲಿ ತರದೇ ವಿಧಾಯಕ ಕಾರ್ಯಕ್ರಮವನ್ನು ಅಮಲಿನಲ್ಲಿ ತರಬೇಕು. ಮತ್ತು ವರ್ಕಿಂಗ ಕಮಿಟಿ ಹಾಗೂ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಿ ಕೌನ್ಸಿಲದ ಬಹಿಷ್ಕಾರದ ವಿಷಯವಾಗಿ ಕರ್ನಾಟಕದ ಅಭಿಪ್ರಾಯವೇನಿರುವದನ್ನು ನನಗೆಹೇಳಬೇಕಾಗುತ್ತದೆ. ಆದ್ದರಿಂದ ನೀವೆಲ್ಲರೂ ನನಗೆ ಯಾವರೀತಿಯಿಂದ ಹೇಳಲು ಆಜ್ಞಾಪಿಸುವಿರೋ ಅದರಂತೆ ಹೇಳುತ್ತೇನೆ. ಎಲ್ಲರೂ ಪೂರ್ಣ ವಿಚಾರಮಾಡಿ ಉತ್ತರವನ್ನು ಕೊಡಿರಿ. ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ನೆರೆದ ಎಲ್ಲ ಜನರು ಕೌನ್ಸಿಲಗಳಿಗೆ ಸಂಪೂರ್ಣವಾಗಿ ಬಹಿಷ್ಕಾರ ಹಾಕುವದೇ ದೇಶಕ್ಕೆ ಹಿತಕರವಾದದ್ದೆಂದು ತಮ್ಮ ಅಭಿಪ್ರಾಯ ಇರುವದೆಂದು ಹೇಳಿದರು.

ಆಮೇಲೆ ಹಾರ ಸಮರ್ಪಣವಾದಬಳಿಕ ಮಹಾತ್ಮರ ಜಯಜಯಕಾರದೊಂದಿಗೆ ಸಭೆಯು ವಿಸರ್ಜಿತವಾಯಿತು.

ಅ ಹೊತ್ತು ಬೆಳಗಿನ ಗಾಡಿಗೆ ದೇ. ಗಂಗಾಧರರಾವ ಹಾಗೂ ಮುಜಲಿಯವರು ಗದಗಿಗೆ ಪ್ರಯಾಣಮಾಡಿದರು

---

### ವಿಮರ್ಶೆ.

ಶ್ರೀ ಆಲೂರ ವೆಂಕಟರಾಯರು ಹೊಸದಾಗಿ ಪ್ರಾರಂಭಮಾಡಿದ "ಜಯಕರ್ನಾಟಕವು" ನಮ್ಮ ಕೈಸೇರಿದೆ. ಅದರ ಸ್ಥಳಸಂಕೋಚದ ಮೂಲಕ ಅದರ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ಕೊಡಲು ಶಕ್ಯವಿಲ್ಲ. ಮುಂದಿನ ಸಂಚಿಕೆಯಲ್ಲಿ ಇದರ ವಿಷಯವಾಗಿ ಸಂಪೂರ್ಣ ಅಭಿಪ್ರಾಯವನ್ನು ಕೊಡುವೆವು. ಸಂಪಾದಕ.

## ಸುದ್ದಿಗಳು.

ವಿಜಾಪುರಜಿಲ್ಹೆಯ ೧ ನೇ ಪರಿಷತ್ತಿಗೆ, ಬೆಳಗಾಂವಿಯ ಪ್ರಸಿದ್ಧ ದೇಶಭಕ್ತರಾದ ಗಂಗಾಧರರಾಯರು ಆಧ್ಯಕ್ಷರಾಗಬೇಕೆಂದು ೧೩ ನೇ ತಾರೀಖಿನ ದಿವಸ ಕೂಡಿದ ವಿಜಾಪೂರ ಜಿಲ್ಹೆಯ ಸ್ವಾಗತ ಕಮಿಟಿಯಲ್ಲಿ ಪಾಸಾಗಿರುತ್ತದೆ. ಸ್ವಾಗತ ಕಮಿಟಿಯ ಅಧ್ಯಕ್ಷರು ಶೇಟ ನಾರಾಯಣದಾಸ ದರಬಾರ, ಹಾಗೂ ಉಪಾಧ್ಯಕ್ಷರು ಹಣಮಂತರಾವ ಕೌಜಲಗಿ ಹಾಗೂ ಚನಮಲ್ಲಪ್ಪಾ ಕುರ್ಲಿಯವರು ಆರಿಸಿಬಂದಿದ್ದಾರೆ. ಈ ಪರಿಷತ್ತಿನಕಾಲಕ್ಕೆ ನೂಲಿನ ಶರ್ಯತ್ತು ಹಾಗೂ ಕೈನೂಲಿನ ಸೀರಿ, ಧೋತರ ಮಾಡಿ ತಂದವರಿಗೆ ಪಾರಿತೋಷಕಗಳು ಕೊಡಲ್ಪಡುವವು.

ಇದೇತಿಂಗಳ ೧೯ ನೇ ತಾರೀಖಿಗೆ ಕಲಕತ್ತೆಯಲ್ಲಿ ವರ್ಕಿಂಗ ಕಮಿಟಿಯು ಕೂಡತಕ್ಕದ್ದದೆ. ಹಾಗೂ ೨೦ ನೇ ತಾರೀಖಿನದಿವಸ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯಾದರೂ ಅಲ್ಲಿಯೇ ಕೂಡುವದು. ಕಾಯದೇಭಂಗ ಕಮಿಟಿಯ ಠರಾವುಗಳ ಬಗ್ಗೆ ಈ ಕಮಿಟಿಗಳಲ್ಲಿ ವಿಚಾರವಾಗುವದು

## ಚಂದಾದಾರರಿಗೆ ವಿನಂತಿ.

ನವಜೀವನವು ಪ್ರಾರಂಭವಾಗಿ ಇದೇ ತಿಂಗಳ ೨೩ ನೇ ತಾರೀಖಿಗೆ ಒಂದು ವರ್ಷವಾಗುವದು, ಇಷ್ಟು ಅವಧಿಯಲ್ಲಿ ಅದು ಕರ್ನಾಟಕ ಪಾತಿಕ ಮತ್ತು ಕನ್ನಡಿಗರ ಸೇವೆಯನ್ನು ತನ್ನ ಶೈಲಿಯ ಮಟ್ಟಿಗೆ ಮಾಡಿರುವದು. ಇದೇ ಪ್ರಕಾರವಾಗಿ ಹೆಚ್ಚು ಉತ್ಸಾಹದಿಂದ ಮುಂದಾದರೂ ಮಾಡಲಿಕ್ಕೆ ಸಿದ್ಧವಿರುವದೆಂಬುವದನ್ನು ಕನ್ನಡಿಗರಿಗೆ ತಿಳಿಸಲಿಕ್ಕೆ ಅತ್ಯಂತ ಸಂತೋಷಾಗುತ್ತದೆ ಅದ್ದರಿಂದ ಕರ್ನಾಟಕದಲ್ಲಿರುವ ಎಲ್ಲರಂತೆ ಶ್ರೀ ಗುರುವಿನ ಆಶ್ರಯವನ್ನು ಕೊಡುವರೆಂದು ತುಂಬಾ ನಂಬಿಗೆಯದೆ. ಈಗ ಚಂದಾದಾರರೆಲ್ಲ ಬೇಗನೆ ಚಂದಾ ಹಣವನ್ನು ಮನಿಯಾರ್ಡರದಿಂದ ಸಲ್ಲಿಸಬೇಕೆಂಗ ವಿನಂತಿಯದೆ; ಪತ್ರವು ಬೇಡಾದವರು ದಯತಾಗಿ ನಮಗೆ ತಿಳಿಸಿದರೆ ನೆಟ್ಟಗಾಗುವದು ಇದರಿಂದ್ದರೆ ವಿಪ್ಪಾರಣವಾಗಿ ಹಿಂದೆ ಪತ್ರವು ನಮ್ಮ ಮೇಲೆ ಬೀಳದು. ಚಂದಾದಾರರು ತಮ್ಮ ರಜಿಸ್ಟರ ನಂಬರವನ್ನು ತಿಳಿಸಬೇಕಾಗಿ ವಿನಂತಿಯು.

---

# ಕನ್ನಡ ನವಜೀವನ.

ಕಾರ್ತಿಕ ವದ್ಯ ೧೨ ಗುರುವಾರ ಶಕೆ ೧೮೪೪

## ಪವಿತ್ರ ದಿನವು.

ಕಳೆದ ಶುಕ್ರವಾರ ದಿವಸವು ನಿಜವಾಗಿ ಬಾಗಲಕೋಟೆಗೆ ಪವಿತ್ರ ದಿನವೆಂದು ಹೇಳಬಹುದು. ಆ ದಿವಸವೇ ಬಹಳ ದಿವಸಗಳ ವರೆಗೆ ಯಾರ ಪವಿತ್ರ ದರ್ಶನ ಲಾಭವನ್ನು ಇಲ್ಲಿಯ ನಾಗರಿಕರು ಹೊಂದಬೇಕೆಂದು ಅತ್ಯಂತ ಉತ್ಸುಕರಾಗಿದ್ದರೋ ಅಂಥ ದೇಶಭಕ್ತ ಗಂಗಾಧರರಾವ ದೇಶಪಾಂಡೆಯವರು ತಮ್ಮ ಶಿಷ್ಯರಾದ ಮಜಲಿ ಮತ್ತು ಕೌಜಲಗಿ ಹಣಮಂತರಾಯರನ್ನು ಕರೆದುಕೊಂಡು ಇಲ್ಲಿಗೆ ಆಗಮಿಸಿದ್ದರು. ಇದೇ ತಿಂಗಳ ಮೊದಲನೇ ತಾರೀಖಿನ ದಿವಸವೇ ಈ ಮೂರ್ತಿಗಳು ಇಲ್ಲಿಗೆ ಬರುವದು ಗೊತ್ತಾಗಿತ್ತು. ಆದರೆ ನಮ್ಮ ದೈವ ದುರ್ವಿಪಾಕದಿಂದಲೂ ಕರ್ನಾಟಕದ ದುರ್ದೈವದಿಂದಲೂ ದೇಶಭಕ್ತ ಕರಗುಪ್ಪಿಕರ ಕೃಷ್ಣರಾಯರ ಮರಣದಿಂದ ಮೊದಲಿನ ಕಾರ್ಯಕ್ರಮವೆಲ್ಲ ಬದಲಾಗಿ ಹೋಯಿತು ಆ ಮೇಲೆ ದೇ. ಭ. ಮಜಲಿಯವರೊಬ್ಬರೇ ಬರುವರೆಂದು ಪ್ರಕಟಿಸುವದರಲ್ಲಿ ಬಂದಿತು. ಗಂಗಾಧರರಾಯರಿಗೆ ಅನೇಕ ಕಾರ್ಯ ಗೌರವದ ಮೂಲಕ ಬರುವದಾಗುವದಿಲ್ಲೆಂದು ತಿಳಿದದರಿಂದ ಎಷ್ಟೋ ಜನರು ಖಿನ್ನ ಮನಸ್ಕರಾಗಿದ್ದರು ಆದರೆ ಮೊನ್ನೆ ಗುರುವಾರ ದಿವಸ ಗಂಗಾಧರರಾಯರು, ಮಜಲಿಯವರು ಮತ್ತು ಕೌಜಲಗಿ ಹಣಮಂತರಾಯರೂ ಎಲ್ಲರೂ ಒರುವರೆಂಬದಾಗಿ ತಂತಿಯು ಬಂದು ತಲ್ಪಿದ ಕೂಡಲೆ ಎಲ್ಲರಿಗೂ ಅತ್ಯಂತ ಆನಂದವಾಯಿತು ಹಸ್ತ ಪತ್ರಿಕೆಗಳ ಮುಖಾಂತರವಾಗಿ ಎಲ್ಲ ಕಡೆಗೆ ಈ ಆನಂದ ದಾಯಕ ಸುದ್ದಿಯನ್ನು ಪ್ರಕಟಿಸುವದಾಯಿತು ಈ ಮಹಾತ್ಮರಿಗೆ ತಕ್ಕಂತೆ ಸ್ವಾಗತ ಮಾಡುವದಕ್ಕೆ ತೀರ ಸ್ವಲ್ಪ ಅವಕಾಶವು ದೊರೆತರೂ ಇಲ್ಲಿಯ ಸ್ವಯಂ ಸೇವಕರ ಸಹಾಯದಿಂದ ಎಲ್ಲ ಸಿದ್ಧತೆಯು ತಕ್ಕ ಮಟ್ಟಿಗೆ ಆಯಿತು. ಇವರನ್ನು ಸ್ಟೇಶನದಲ್ಲಿ ಸ್ವಾಗತ ಮಾಡಲಿಕ್ಕೆ ಜನರು ನೆರೆದಿದ್ದರು ರಾತ್ರಿ ಎಂಟು ಗಂಟೆಗೆ ಜಾಹೀರ ಸಭೆಯು ನೆರೆಯಿತು. ೫೦೦೦ ಜನರು ನೆರೆದಿದ್ದರು. ಇಲ್ಲಿಯ ಕಾಂಗ್ರೆಸ ಮತ್ತು ಖಿಲಾಫತ ಕಮಿಟಿಗಳ ವತಿಯಿಂದ ಇವರಿಗೆ ಮಾನ ಪತ್ರವನ್ನು ಸಮರ್ಪಿಸುವದಲ್ಲಿ ಬಂದಿತು. ಆ ಮಾನ ಪತ್ರವನ್ನೂ ಅದಕ್ಕೆ ಈ ಮಹನೀಯರು ಕೊಟ್ಟ ಉತ್ತರದ ಸಾರಾಂಶವನ್ನೂ ಬೇರೆಡೆಯಲ್ಲಿ ಮುದ್ರಿಸಿದ್ದೇವೆ.

ಈಗ ರಾಷ್ಟ್ರದಲ್ಲಿ ಕೌನ್ಸಿಲಗಳಲ್ಲಿ ಸೇರಬೇಕೋ ಬೇಡವೋ ಎಂಬ ವಿಷಯವಾದ ಪ್ರಶ್ನೆಯ ಸಂಬಂಧದಿಂದ ಭಿನ್ನ ಮತವು ಉಂಟಾಗಿದ್ದು ದೇಶಬಂಧು ದಾಸ, ಪಂಡಿತ ಮೋತೀಲಾಲ ನೇಹರು, ಹಕೀಮ ಅಜಮಲಖಾನರಂಥ ಮುಂದಾಳುಗಳು ಈ ಕೌನ್ಸಿಲಗಳನ್ನು ನಾಶ ಮಾಡುವದಕ್ಕಾಗಿ—ಸ್ವರಾಜ್ಯವನ್ನು ಸಂಪಾದಿಸುವದಕ್ಕಾಗಿ—ಕೌನ್ಸಿಲಗಳಲ್ಲಿ ರಾಷ್ಟ್ರೀಯ ಪಕ್ಷದವರು ಹೋಗಬೇಕೆಂಬ ಅಭಿಪ್ರಾಯವನ್ನು ತಾಳಿರುವರು. ಇತ್ತ ಮಹಾತ್ಮರ ಪಟ್ಟ ಶಿಷ್ಯರಾದ ರಾಜಗೋಪಾಲಾಚಾರ್ಯರು, ಅನಸಾರಿ ಮುಂತಾದವರು ಹಾಗೆ ಮಾಡುವದು ಯೋಗ್ಯವಲ್ಲವೆಂದು ಹೇಳುತ್ತಿರುವರು ಇಂಥ ಸಮಯದಲ್ಲಿ—ರಾಷ್ಟ್ರವು ಯಾರನ್ನು ಹಿಂಬಾಲಿಸತಕ್ಕದ್ದೆಂಬವನ್ನು ಆತುರತೆಯಿಂದ ವಿಚಾರಿಸುವ ಕಾಲದಲ್ಲಿ—ದೇ. ಭ. ಗಂಗಾಧರರಾಯರು— ಲೋಕಮಾನ್ಯರ ಪಟ್ಟ ಶಿಷ್ಯರೂ ಮಹಾತ್ಮರ ಪ್ರೀತಿ ಪಾತ್ರರೂ ಆದ ಗಂಗಾಧರರಾಯರು—ಮಹಾತ್ಮರು ತಮ್ಮ ದಿವ್ಯ ದೃಷ್ಟಿಯಿಂದ ಕಂಡು ಹಿಡಿದ, ಸ್ವರಾಜ್ಯ ಸಂಪಾದನೆಗೆ—ರಾಮ ರಾಜ್ಯ ಸ್ಥಾಪನೆಗೆ—ಒಂದೇ ಒಂದಾದ ಅಸಹಯೋಗದ ಮಾರ್ಗವನ್ನೇ ನಾವು ಈಗ ಅನುಸರಿಸುವದು. ಅವಶ್ಯವೆಂದು ಸ್ಪಷ್ಟವಾಗಿ ಸಿದ್ಧ ಮಾಡಿ ಕೊಟ್ಟರು, ಮತ್ತು ಇಲ್ಲಿ ನೆರೆದ ಜನರು ಸಹ ಗಂಗಾಧರರಾಯರ ಅಭಿಪ್ರಾಯವೇ ತಮಗೆ ಮಾನ್ಯವಿದ್ದು ಅವರನ್ನು ಅತ್ಯಂತ ಶ್ರದ್ಧೆಯಿಂದ ಹಿಂಬಾಲಿಸುವದಕ್ಕೆ ಸಿದ್ಧರಾಗಿರುವೆವೆಂದು ಆಶ್ವಾಸನವನ್ನಿತ್ತರು. ಇಂದು ಮಹಾತ್ಮರು ಈಗ ತುರಂಗದಲ್ಲಿದ್ದರೂ ಅವರ ಆತ್ಮವು ಹಿಂದುಸ್ತಾನದ ಎಲ್ಲ ಭಾಗಗಳನ್ನು ವ್ಯಾಪಿಸಿ ಕೊಂಡಿರುವದೆಂಬದು ಸಿದ್ಧವಾದಂತಾಗಲಿಲ್ಲವೇ! ಈ ಧಾರ್ಮಿಕ ಚಳವಳಿಯನ್ನು ಯಶಸ್ವಿಯನ್ನಾಗಿ ಮಾಡಲಿಕ್ಕೆ ಟೊಂಕ ಕಟ್ಟಿ ಕೊಂಡು ನಿಂತಂಥ ಗಂಗಾಧರರಾಯರಂಥ ಮುಂದಾಳುಗಳ ಉಪದೇಶಾಮೃತದಿಂದ ನಮ್ಮ ಮನಸ್ಸಿನಲ್ಲಿಯ ಭ್ರಾಮಕ ಕಲ್ಪನೆಗಳೆಲ್ಲ ದೂರವಾದ ದಿವಸವು ಪವಿತ್ರ ದಿನವಲ್ಲದೆ ಮತ್ತೇನು. ಈ ಪವಿತ್ರ ದಿನವನ್ನು ಸ್ಮರಣೆಯಲ್ಲಿಟ್ಟುಕೊಂಡು ಗಂಗಾಧರರಾಯರಿಗೆ ಕೊಟ್ಟ ಆಶ್ವಾಸನೆಯಂತೆ ನಡೆದು ಕೊಳ್ಳುವ ಸದ್ಬುದ್ಧಿಯನ್ನು ಬಾಗಲಕೋಟೆಯ ಶಹರ ನಿವಾಸಿಗಳ ಮುಖಾಂತರವಾಗಿ ಕರ್ನಾಟಕ ನಿವಾಸಿಗರಿಗೆ ಕೊಡಲೆಂದು ಪರಮಾತ್ಮನನ್ನು ಅನನ್ಯ ಭಾವದಿಂದ ಬೇಡಿಕೊಳ್ಳುತ್ತೇವೆ.

---

ವಂದೇಮಾತರಂ ! ಅಲ್ಲಾಹೋ ಅಕಬರ !!

ದೇಶಭಕ್ತ ಮಹಾಶಯರೇ —

ಸ್ವಾರ್ಥತ್ಯಾಗದ ಮೂರ್ತಿಗಳಾದ ತಮ್ಮ ಸ್ವಾಗತವನ್ನು ಇಲ್ಲಿಯ ಖಿಲಾಫತ ಮತ್ತು ಕಾಂಗ್ರೆಸ ಕಮಿಟಿಗಳ ಪರಿಯಿಂದ ಬಾಗಲಕೋಟೆಯ ನಿವಾಸಿಗಳಾದ ನಾವು ಅತಿ ವಿಜೃಂಭಣೆಯಿಂದ ಮಾಡಬೇಕೆಂಬ ಕೂತೂಹಲವನ್ನು ತಾಳಿದ್ದರೂ ತಮ್ಮ ಯೋಗ್ಯತೆಗೆ ಸರಿಯಾಗಿ ಆತಿಥ್ಯವನ್ನು ಮಾಡುವ ಸಾಮರ್ಥ್ಯವು ನಮ್ಮಲ್ಲಿ ಇರುವದಿಲ್ಲ. ನಮ್ಮ ಊರಲ್ಲಿ ಅಸಹಕಾರದ ಸ್ಫೂರ್ತಿಯನ್ನು ಹುಟ್ಟಿಸಿದ ದೇ. ಭ. ಜಯರಾಯರ ನಿಧನದಿಂದ ನಮಗುಂಟಾದ ಹಾನಿಯನ್ನು ತಮ್ಮಮುಂದೆ ನಿವೇದಿಸದೆ ಇರಲಾರೆವು ನವಕ ... ಕಳಿಸಲಿಟ, ನಮ್ಮ ಜಿಲ್ಲೆಯ ಮುಖಂಡರಾದ ದೇ. ಭ. ಶ್ರೀನಿವಾಸರಾಯರು ಉಜ್ವಲ ಬಾ... ತರ ಸ... ಣಿಗಳಾ ... ಗೆ ಅತಿ ... ತರವಾ ... ಸುವದು. ... ಟಿಕರ ... ಯಶಸ್ವಿ ... ದರ ಚಳ ... ರ್ಣಾವಾ ... ವಹಿಸು ... ಕವಾದ ... ಕಂಡ ... ಕ ಹೊಂ ... ವ್ಯವಧಿ ... ರಾಷ್ಟ್ರದ ... ರುವದು ... ರವಾದ ... ವದೆಂ ... ಮುಖಂ ... ದ ಪೂ ... ರ್ಲಕ್ಷಿಸಿ ... ರ್ಣವಾಗಿ ... ಅನುಪ ... ಯನ್ನು ... ಸಾಹಸದ ಅನುಭ ... ಪದಿಯ ಕರ್ತವ್ಯ ದಕ್ಷತೆ ...



ವು ಆಶ್ಚರ್ಯವ ... ವಂತರು ಸ್ವಾರಾಜ್ಯವನ್ನು ತೀವ್ರ ದೊರಕಿಸಲಿಕ್ಕೆ ತಮ್ಮ ಗುರುವರ್ಯ ಗಂಗಾಧರರಾಯರಿಗೆ ಸಹಾಯ ಕರಾಗುವರೆಂದು ನಂಬಿದ್ದೇವೆ, ತಮ್ಮಂಥ ಮುಖಂಡರನ್ನು ಹಿಂಬಾಲಿಸುವಷ್ಟು ಧೈರ್ಯವನ್ನು ನಮಗೆ ಕೊಡಲೆಂತಲೂ ಕರ್ನಾಟಕದ ಜಾಗೃತಿಯ ತ್ರಿಮೂರ್ತಿಗಳಾದ ತಮಗೆ ಆಯುರಾರೋಗ್ಯವನ್ನು ಕೊಡಲೆಂತಲೂ ಪರಮೇಶ್ವರನನ್ನು ಅನನ್ಯ ಭಾವದಿಂದ ಬೇಡಿಕೊಳ್ಳುತ್ತೇವೆ.

ಬಾಗಲಕೋಟೆ ತಮ್ಮ ಅನುಯಾಯಿಗಳಾದ,

ತಾ|| ೧೧-೧೧-೨೧. ಬಾಗಲಕೋಟೆಯ ನಿವಾಸಿಗಳು

## ಇಮಿಟೇಶನ್ ವಜ್ರದ ಉಂಗುರುಗಳು,

ಈ ಉಂಗುರಗಳು ವಿಲಾಯತಿಯಲ್ಲಿ ತಯಾರಿಸಿದ್ದು; ಅತ್ಯುತ್ತಮವಾದ ವಜ್ರದ ಕಲ್ಲುಗಳನ್ನು ಇಟ್ಟು ಸೀಮೆ ಬಂಗಾರದಿಂದ ತಯಾರಿಸಿ ಮೇಲುಗಡೆ ಅಪರಂಜಿ ಬಂಗಾರದ ಗಿಲೀಟು ಮಾಡಿದೆ ನೋಡಲು ಬಹು ಲಕ್ಷಣವಾಗಿ ಕಾಣುವದು. ಇದು ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು.

ಕ್ರಯ ಗಕ್ಕೆ ರೂ ೨-೦-೦ ಕ್ರಯ ೩ಕ್ಕೆ ರೂ. ೫-೮-೦

ವಿಳಾಸ ವಿ. ಎ ಎಸ್. ಪಾಣಿ ಕಂಪನಿ ಸಾಹುಕಾರಪೇಟ ಮದ್ರಾಸ

---

ಈ ತಿಂಗಳ ಕೊನೇ ವರೆಗೂ ಅರ್ಧ ಕ್ರಯ.

ಇದರ ಕ್ರಯ ೨-೦-೦ ಈಗಿನ ಕ್ರಯ ೧-೦-೦

## ಆಶ್ಚರ್ಯ. ಪಾಕೆಟ್ ಸಿನಾಸ್‌ಕೋಪ್ ಯಂತ್ರ.

೧ ಈ ಸಿನಾಸ ಕೋಪ ಯಂತ್ರಗಳು ಜರ್ಮನ್ ದೇಶದಿಂದ ತರಿಸಲಾಗಲಿ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರ ಅಮೇರಿಕನ್ ಬಯಾಸ್ಕೋಪ ನಾಟಕಶಾಲೆಗಳಲ್ಲಿ ಪ್ರತಿ [illegible] ಆಶ್ಚರ್ಯಕರವಾಗಿ ಆಕ್ಟ್ [illegible] ಮಾಡುತ್ತಿರುವ [illegible] ಕ್ರಾಸ್, ಪರ್ಲ್‌ವೈಟ್‌ಪ್ರಿಡ್ರಾ [illegible] ವ್ ಬರ್ಟ್ಲನ್, ಮುಂತಾದವರ ನಿಜನ್ಸ [illegible] ಫೋಟೋಗ್ರಾಫಗಳು ಈ ಯಂತ್ರದಲ್ಲಿ ಪ್ರಾಣಿ [illegible] ಡುವವರ ಹಾಗೆಯೇ ಬಯಾಸಕೋಪಿನಲ್ಲಿ ಕಾಣುವದು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಕ್ರಯ ೩೦ ಫೋಟೋ ಫಿಲಂಗಳು ಸೇರಿ ಯಂತ್ರಕ್ಕೆ ರೂ ೧-೪ [illegible]

ಕಾಸರಾಜ ಅಂಡ ಕಂಪನಿ ೩ ಯರಲಪ್ಪನ [illegible] ಮದ್ರಾಸ

## ಟಿಕ್ ಟಿಕ್ ಎಂಬ ಶಬ್ದವನ್ನು ಕೊಟ್ಟ ಮಾತ್ರಕ್ಕೆ ಗಡಿಯಾರಗಳು.



ಚಕ್ರಗಳಲ್ಲಿಯೂ ಗಂಟೆ ತೋರಿಸುವ ನಂಬರುಗಳ ಮೇಲೆಯೂ ಕೆಂಪು ಕಲ್ಲ ಕೆತ್ತಲ್ಪಟ್ಟಿವೆ ಎಂದು ಇವನ್ನು ತರಿಸುವರಿಗೆ ೧೦-೧೫ ಬಹುಮಾನಗಳೊಡನೆ ೫-೬ ವರುಷಗಳು ಗ್ಯಾರಂಟಿ ಸಹಿತ [illegible] ರೂಪಾಯಿಗಳಿಗೆ ಕೊಡುವೆವೆಂದು ಪ್ರಚುರವಾಗುವ ಪ್ರಕಟನೆಗಳನ್ನು ನೋಡಿ ಬೇರೆಯಾಗಿ ನಿಮ್ಮ ಹಣವನ್ನು ಕಳಕೊಳ್ಳಬೇಡಿ. ಈ ನಮ್ಮ ಜಂಟಲ್‌ಮನ್ ಲೀವರ್ ಪಾಕೆಟ್ ವಾಚ ಬಹು ಉತ್ತಮವಾದ ಮೂವ್‌ಮೆಂಟ್ಸಗಳಿಂದ ತಯಾರಿಸಿದೆ. ಸಿಗಾಳಿಯೂ ಧೂಳೂ ಸೇರದಂತೆ ಗ್ಲಾಸ್ ಡ್ಡೋಮು ಇರುವದರಿಂದ ಸರಿಯಾದ ಕಾಲವನ್ನು ತೋರಿಸುವದು. ಬೇಗನೆ ಅಥವಾ ನಿಧಾನವಾಗಿ ಹೋದರ ನಾವು ಸರಿಮಾಡಿಕೊಳ್ಳಬಹುದು. ನೋಟಕೆ ಗಂಭೀರವಾಗಿಯೂ ಸುಂದರವಾಗಿಯೂ ಇರುವದು. ಇದು ಇಂಗ್ಲೀಷ ನಮೂನೆಯುಳ್ಳದ್ದು. ಈ ಗಡಿಯಾರದಲ್ಲಿ ಯಾರೇ ಆಗಲಿ ಸುಲಭವಾಗಿ ಗಂಟೆ ನೋಡಬಹುದು. ಅಷ್ಟರಿಂದ ಬಹಳಾಗಿ [illegible] ಮಾಡುವದೇತಕ್ಕೆ? ಒಂದನ್ನು ತರಿಸಿನೋಡಿರಿ. [illegible] ೪ ವರುಷಗಳ ಗ್ಯಾರಂಟಿ ಸಹಿತ ಕ್ರಯ ೪-೮-೦

[illegible] ಐಶ್ವರ್ಯ ಲಕ್ಷ್ಮಿ ಅಂಡ ಕೋ [illegible]

---

## ಮದನಕಾಮೇಶ್ವರೀ ಮಾತ್ರೆ.

ಕ್ರಯ. ೨ ರು ॥ ಅಂಚೆ ವೆಚ್ಚ ಬೇರೆ

ಉತ್ತಮ ಶಕ್ತಿವರ್ಧಕ ಔಷಧ. [illegible] ಒಮ್ಮೆ ಅನುಭವ ತೆಗೆದು [illegible], [illegible]

ಜಂಬುನಾಥ ಕಂಪನಿ ಬಾಗಲಕೋಟೆ,

---

॥ಶ್ರೀ॥

## ಸರಸ್ವತೀ ಭಾರತಭಕ್ತ ಗ್ರಂಥಮಾಲ ಹುಬ್ಬಳ್ಳಿ

ತ್ವರೆಮಾಡಿರಿ! [illegible] !! [illegible] ಸಾಂಪ್ರತಕ್ಕೆ ಐತಿಹಾಸಿಕ, [illegible], ತತ್ವಾಶ್ರಯ [illegible] ವಾಗುವದು.

ಸಾಧು, ಸತ್ತು [illegible] ಸ್ವರಾಜ್ಯ [illegible] ಸ್ವತಂತ್ರ [illegible] (ಪ್ರಕಟವಾಗಿರುವವು)

೧ ಲೋಕಮಾನ್ಯ ಟಿಳಕ ೨ ಸರೂ [illegible] ೩ ಮಹಾತ್ಮಾ ಗಾಂಧಿ

ಲೋಕನಾಯಕ ಲಾಲಾಜಿ. ೫ ದೇಶಬಂಧು ದಾಸ.

ದ್ವಿತೀಯ ಐತಿಹಾಸಿಕ ಕುಸುಮಗಳು, (ಜತ್ತಿನಲ್ಲಿ [illegible]) ಶೀಘ್ರದಲ್ಲಿ ಪ್ರಸಿದ್ಧವಾಗುವವು.

೩ ರವೀಂದ್ರನಾಥ ಠಾಕೂರ, ೭ ಪಂಡಿತ ಮಾಲವೀಯ [illegible] ಸಿವರು [illegible] ಒಂದು ಪ್ರಬಂಧಗಳಿಗೆ ಅಂದವಾದ ಒಣ್ಣದ ಮೊದಿ [illegible] ಸುಂದರವಾದ ಭಾವಚಿತ್ರ, [illegible]

ಜಾಹೀರಾತ ಕೊಡುವವರಿಗೆ [illegible], [illegible] ವಾರ್ಷಿಕ ವರ್ಗಣಿ... ೨ ರೂ, ೮ ಆಣೆ ಮಾತ್ರ. [ಅಂಚೇ ವೆಚ್ಚ ಬೇರೆ ಇದಕ್ಕೂ ಹೆಚ್ಚಿಗೆ ವೃತ್ತಾಂತ ಬೇಕಾದರೆ ಕೆಳಗಿನ ವಿಳಾಸದವರಿಗೆ ಬರೆಯಿರಿ.

ಕೃಷ್ಣ ಗುರು ಸಂಗಮ,
ಸಂಪಾದಕ, ಸ, ಭಾ, ಭ. ಗ್ರಂಥಮಾಲೆ
ಹುಬ್ಬಳ್ಳಿ,

---

## ಬೇಕಾಗಿವೆ! ಬೇಕಾಗಿವೆ!!

ಕಟಿಂಗ ಮಶಿನ್, ಪರ್ಫೋರೆಟಿಂಗ ಮಶಿನ್ ಸಿಲಿಂಗಪ್ರೆಸ್ ಮೊದಲಾದ ಮುದ್ರಣಾಲಯಕ್ಕೆ [illegible] ಸಾಮಾನಗಳು [illegible] ಒಳ್ಳೇ ಸ್ಥಿತಿಯ [illegible], ಯಾರಾದರೂ ಈ ಸಾಮಾನುಗಳನ್ನು ಮಾರತಕ್ಕವರಿದ್ದರೆ, ಆ ಸಾಮಾನಗಳು ಸಿದ್ಧವಾದ ಕಂಪನಿಯ ಹೆಸರು, [illegible] ಗಳನ್ನು ನಮಗೆ ತಿಳಿಸಬೇಕು

ವ್ಯವಸ್ಥಾಪಕ
ವಿದ್ಯಾರಣ್ಯ ಮುದ್ರಣಾಲಯ ಬಾಗಲಕೋಟೆ

---

ಬಾಗಲಕೋಟೆ - ಕನ್ನಡ ನವಜೀವನ ವಾರ್ಷಿಕ ವರ್ಷ ೧೩ ಶಕೆ ೧೮೪೪ ೪೧೫

ಅಲ್ಲಾಹೋ ಅಕಬರ !!

ವಂದೇಮಾತರಂ !

ದೇಶಭಕ್ತ ಮಹಾಶಯರೇ —

ಸ್ವಾರ್ಥತ್ಯಾಗದ ಮೂರ್ತಿಗಳಾದ ತಮ್ಮ ಸ್ವಾಗತವನ್ನು ಇಲ್ಲಿಯ ಖಿಲಾಫತ ಮತ್ತು ಕಾಂಗ್ರೆಸ ಕಮಿಟಿಗಳ ವತಿಯಿಂದ ಬಾಗಲಕೋಟೆಯ ನಿವಾಸಿಗಳಾದ ನಾವು ಅತಿ ವಿಜೃಂಭಣೆಯಿಂದ ಮಾಡಬೇಕೆಂಬ ಕುತೂಹಲವನ್ನು ತಾಳಿದ್ದರೂ ತಮ್ಮ ಯೋಗ್ಯತೆಗೆ ಸರಿಯಾಗಿ ಆತಿಥ್ಯವನ್ನು ಮಾಡುವ ಸಾಮರ್ಥ್ಯವು ನಮ್ಮಲ್ಲಿ ಇರುವದಿಲ್ಲ. ನಮ್ಮ ಊರವರಿಗೆ ಅಸಹಕಾರದ ಸ್ಫೂರ್ತಿಯನ್ನು ಹುಟ್ಟಿಸಿದ ದೇ. ಭ. ಜಯರಾಯರ ನಿಧನದಿಂದ ನಮಗುಂಟಾದ ಹಾನಿಯನ್ನು ತಮ್ಮಮುಂದೆ ನಿವೇದಿಸದೆ ಇರಲಾರೆವು ನಮ್ಮ ಜಿಲ್ಲೆಯ ಮುಖಂಡರಾದ ದೇ. ಭ ಶ್ರೀನಿವಾಸರಾಯರು ಉಜ್ವಲ ಬಾ[illegible] ಕಾರಾಗಹಕ್ಕೆ ಕಳಿಸಲ್ಪಟ್ಟ [illegible]

[illegible] ಗುರುವರ್ಯ ಗಂಗಾಧರರಾಯರಿಗೆ ಸಹಾಯ [illegible] ಪಂಡಿತರು ಸ್ವಾತಂತ್ರ್ಯವನ್ನು ತೀವ್ರ ದೊರಕಿಸಲಿಕ್ಕೆ ತಂವು ಗುರುವರ್ಯ ಗಂಗಾಧರರಾಯರಿಗೆ [illegible] ಧೈರ್ಯವನ್ನು ನಮಗೆ ಕೊಡಲೆಂತಲೂ ಕರ್ನಾಟಕದ ಜಾಗೃತಿಯು ತಂಮಂಥ ಮುಖಂಡರನ್ನು ಹಿಂಬಾಲಿಸುವಷ್ಟು ಧೈರ್ಯವನ್ನು ನಮಗೆ ಕೊಡಲೆಂತಲೂ ಕರ್ನಾಟಕದ ಜಾಗೃತಿಯು ತಂಮಂಥ ಮುಖಂಡರನ್ನು ಹಿಂಬಾಲಿಸುವದು [illegible] ಅನನ್ಯಭಾವದಿಂದ ಬೇಡಿಕೊಳ್ಳುತ್ತೇವೆ. ಶ್ರೀ [illegible] ತಮಗೆ [illegible] ಕೊಡಲೆಂತಲೂ ಪರಮೇಶ್ವರನನ್ನು ಅನನ್ಯಭಾವದಿಂದ ಬೇಡಿಕೊಳ್ಳುತ್ತೇವೆ.

ತಮ್ಮ ಅನುಯಾಯಿಗಳಾದ
ಬಾಗಲಕೋಟೆಯ ನಿವಾಸಿಗಳು

ಬಾಗಲಕೋಟೆ
ತಾ॥ ೧೦-೧೧-೨೨

## ROYAL DRINK

**Sovereign Tea!** **Sovereign Tea**

ಲಿಪ್ಟನ್ ಚಹಾಗಿಂತ ಈ ಸಾವ್ವರಿನ ಚಹವು ಹೆಚ್ಚು ರುಚಿಯಾಗಿರುತ್ತದೆ. ಒಮ್ಮೆ [illegible] ಅನುಭವತೆಗದ್ದು ಕೊಂಡರೆ ನಿಮಗೆ ಬೇರೆ ಚಹವು ಬೇಡವೆಂದೇ ಖಾತ್ರಿಯಾಗುವದು [illegible]

ಮೋಹನಲಾಲ ಹರಿಜೀ ಪದಾಸ ಮೇಹತಾ. [illegible] ಬಾಗಲಕೋಟ

(ಏಜಂಟರು)

[illegible]

೧ ಗ್ರೋಸ್ ಗುಳಿಗೆಗಳಿಗೆ ೧—೮—೦

೧೦೦ ಚೀಟಿಗಳಿಗೆ [illegible]

೪೦ ಔಂಸ ಪುಡಿ ಪ್ರತಿಕೆಗೆ [illegible]

ವಿಳಾಸ— ಕರ್ನಾಟಕ [illegible]

## ಶುದ್ಧ ಸ್ವದೇಶಿ ಶುದ್ಧ ಸ್ವದೇಶಿ !!

[illegible] ಸ್ವದೇಶಿ [illegible] ಕನ್ನಡ, ಮರಾಠಿ, ಇಂಗ್ಲೀಷ, ಭಾಷೆಗಳಲ್ಲಿಯು [illegible]

ಮಾಲಿಕ, [illegible] ಬಾಗಲಕೋಟ

## ಕ್ಯಾಲೆಂಡರ [illegible]

[illegible]

ಇಂಡಿಯಾ [illegible]

[illegible]

V. J. LANVATI [illegible]

(General [illegible] BAGALKOT)

## For Sale! For Sale!!

### ಮಾರಾಟಕ್ಕಿದೆ!

[illegible] ಆಕಾರದ ಸಿಲೆಂಡರ ಪ್ರೆಸಗಳು, [illegible] ಹ್ಯಾಂಡಪ್ರೆಸ್ ಮತ್ತು ಪ್ರೂಫಪ್ರೆಸ್‌ಗಳನ್ನು ನಾವು ಮಾರತಕ್ಕವರಿದ್ದೇವೆ. ಮೂರು ಯಂತ್ರಗಳು ಒಳ್ಳೇ ಸ್ಥಿತಿಯಲ್ಲಿದ್ದು ಕೆಲಸವನ್ನು ಉತ್ಕೃಷ್ಟರೀತಿಯಿಂದ ಕೊಡುತ್ತವೆ. ಬೇಕಾದವರು ನಮಗೆ ಸಮಕ್ಷಮ ಭೆಟ್ಟಿಯಾಗಿ, ಮಶಿನಗಳನ್ನು ನೋಡಿಕೊಳ್ಳಬಹುದು. ಏನಾದರೂ ಮಾಹಿತಿ ಬೇಕಾದಲ್ಲಿ ಪತ್ರವ್ಯವಹಾರವನ್ನು ಮಾಡಬಹುದು.

ವ್ಯವಸ್ಥಾಪಕ

[illegible] ವಿದ್ಯಾರಣ್ಯ ಮುದ್ರಣಮಂದಿರ, ಬಾಗಲಕೋಟ.

## ಹೊಸದಾಗಿ ತಯಾರಿಸಿದೆ.



(ನಾವು ಇದೇ [illegible] ದಿನ ದಾಕ್ಷ್ಯದಿಂದ [illegible] ಶಾಸ್ತ್ರೋಕ್ತ [illegible] ಆಯುರ್ವೇದ [illegible] ಚಿಕಿತ್ಸ ಶುಲಭ [illegible]

Managing Agents [illegible]

Nargundkar Bros.

BAGALKOT. ಬಾಗಲಕೋಟ.

## ಬೇಕಾಗಿದ್ದಾರೆ

### ಕಂಪೋಜಿಟರರೂ

ಮಶೀನ್ ಟ್ರೆಡಲ್‌ಗಳಮೇಲೆ ಕೆಲಸಮಾಡುವ ಎರಡು ಪ್ರೆಸಮನ್‌ರು.

ಯೋಗ್ಯತೆಯಂತೆ ಸಂಬಳವು ದೊರೆಯುವದು. [illegible] ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಣಮಂದಿರ ಬಾಗಲಕೋಟ

## ಶುದ್ಧ ಸ್ವದೇಶಿ [illegible]

[illegible]

ಧಾರವಾಡ



## ಚಂದಾದಾರರಿಗೆ ವಿನಂತಿ.

ನವಜೀವನವು ಪ್ರಾರಂಭವಾಗಿ ಈ [illegible] ತಿಂಗಳ [illegible] ನೇ ತಾರೀಖಿಗೆ ಒಂದು ವರ್ಷವಾಗುವದು. ಇಷ್ಟು ಅವಧಿಯಲ್ಲಿ ಅದು ಕರ್ನಾಟ [illegible]

ಮತ್ತು ಕೌಜಲಗಿ ಹಣಮಂತರಾಯರೂ ಎಲ್ಲರೂ ಬರುವರೆಂದಾಗಿ ತಂತಿಯು ಬಂದು ತಪ್ಪಿದ ಕೂಡಲೆ ಎಲ್ಲರಿಗೂ ಅತ್ಯಂತ ಆನಂದವಾಯಿತು. ಹಸ್ತ ಪತ್ರಿಕೆಗಳ ಮುಖಾಂತರವಾಗಿ ಎಲ್ಲ ಕಡೆಗೆ ಈ ಆನಂದ ದಾಯಕ ಸುದ್ದಿಯನ್ನು ಪ್ರಕಟಿಸುವದಾಯಿತು. [illegible] ಸ್ವಾಗತ ಮಾಡುವದಕ್ಕೆ ತೀರ ಸ್ವಲ್ಪ [illegible]

[illegible] ಗೌರವದ ಮೂಲಕ ಬರುವವರಾಗುವದಿಲ್ಲೆಂದು ತಿಳಿದದರಿಂದ ಐವತ್ತರ ಜನರು ವಿನ್ನ ಮನಸ್ಕರಾಗಿದ್ದರು. ಆದರೆ [illegible] ನೈ ಗುರುವಾರ ದಿವಸ ಗಂಗಾಧರರಾಯರು, ಮುಜಲಿಯವರು [illegible] ಗೆ ಕೊಡಲೆಂದು ಪರಮಾತ್ಮನನ್ನು ಅನನ್ಯ ಭಾವದಿಂದ [illegible] ಕೊಳ್ಳುತ್ತೇವೆ.

## ಚಂದಾದಾರರಿಗೆ ವಿನಂತಿ.

ನವಜೀವನವು ಪ್ರಾರಂಭವಾಗಿ ಇದೇ ತಿಂಗಳ ೨೩ ನೇ ತಾರೀ ಖಿಗೆ ಒಂದು ವರ್ಷವಾಗುವದು, ಇಷ್ಟು ಅವಧಿಯಲ್ಲಿ ಅದು ಕರ್ನಾಟ [illegible]

ಮತ್ತು ಕೌಜಲಗಿ ಹಣಮಂತರಾಯರೂ ಎಲ್ಲರೂ ಒರುವರೆ ಒದಾಗಿ ತಂಶಿಯು ಬಂದು ತಪ್ಪಿದ ಕೂಡಲೆ ಎಲ್ಲರಿಗೂ ಅತ್ಯಂ ತ ಆನಂದವಾಯಿತು ಹಸ್ತ ಪತ್ರಿಕೆಗಳ ಮುಖಾಂತರವಾಗಿ ಎಲ್ಲ ಕಡೆಗೆ ಈ ಆನಂದ ದಾಯಕ ಸ ವ್ಯಿಯನ್ನು ಪ್ರಕಟಿಸುವದಾಯಿತು [illegible] ಸ್ವಾಗತ ಮಾಡುವದಕ್ಕೆ ತೀರ ಸ್ವಲ್ಪ

ಇಂಡಿಯಾ ಪ್ರಿಂಟಿಂಗ ವರ್ಕ್ಸ [illegible]

V. J. [illegible]

For Sale! For Sale!!

ಮಾರತಕ್ಕದ್ದು!

ಫುಲ್‌ಸ್ಕ್ಯಾಪ ಆಕಾರದ ಸಿಲಿಂಡರ ಪ್ರಿಂಟರ್ಸ್, ಸುಪರ ರಾಯಲ್ ಹ್ಯಾಂಡಪ್ರೆಸ್ ಮತ್ತು ಪ್ರೂಫಪ್ರೆಸ್‌ಗಳನ್ನು ನಾವು ಮಾರತಕ್ಕವರಿದ್ದೇವೆ. ಮೂರು ಯಂತ್ರಗಳು ಒಳ್ಳೆ ಸ್ಥಿತಿಯಲ್ಲಿದ್ದು ಕೆಲಸವನ್ನು ಉತ್ಕೃಷ್ಟರೀತಿಯಿಂದ ಕೊಡುತ್ತವೆ. [illegible] ನಮಗೆ ಸಮಕ್ಷಮ ಭೆಟ್ಟಿಯಾಗಿ ಮಶಿನಗಳನ್ನು ನೋಡಿಕೊಳ್ಳಬಹುದು. ಏನಾದರೂ ಮಾ ಹಿತಿ ಬೇಕಾದಲ್ಲಿ ಪತ್ರವ್ಯವಹಾರವನ್ನು ಮಾಡಬಹುದು.

ವ್ಯವಸ್ಥಾಪಕ

[illegible] ವಿದ್ಯಾರಣ್ಯ ಮುದ್ರಣಾಲಯ, ಬಾಗಲಕೋಟೆ.

ಮಾಲಿಕ, ಶ್ರೀನಿವಾಸರಾವ ಶಿರಹಟ್ಟಿ [illegible] ಬಾಗಲಕೋಟ

ಹೊಸತಾಗಿ ತಯಾರಿಸಿದೆ.

ನಾವು ಇದೇ [illegible] ಶಾಸ್ತ್ರೋಕ್ತ [illegible] ಆಯುರ್ವೇದಿಕ ಔಷಧ [illegible] ತೀರ ಕುಲಭ [illegible]

Managing Agents [illegible]

Nargundkar Bros.

BAGALKOT. ಬಾಗಲಕೋಟ.

## ಬೇಕಾಗಿದ್ದಾರೆ

ಕಂಪೋಜಿಟರರೂ

ಮಶಿನ್ ಟ್ರೆಡಲ್‌ಗಳಮೇಲೆ ಕೆಲಸಮಾಡುವ ಎರಡು ಪ್ರೆಸ್‌ಮನ್‌ರೂ.

[illegible] ಸಂಬಳವು ದೊರೆಯುವದು. [illegible] ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಣಮಂದಿರ ಬಾಗಲಕೋಟೆ

[illegible]

ರ್ಮ ಗೌರವದ ಮೂಲಕ ಬರುವದಾಗುವದಿಲ್ಲೆಂದು ತೀಡದ [illegible] ಗೆ ಕೊಡಲೆಂದು ಪರಮಾತ್ಮನನ್ನು ಅನನ್ಯ ಭಾವದಿಂದ ಶಿಂದ. ಎಷ್ಟೋ ಜನರು ಖಿನ್ನ ಮನಸ್ಕರಾಗಿದ್ದರು ಆದರೆ [illegible] ಕೊಳ್ಳುತ್ತೇವೆ. ನ್ನೆ ಗುರುವಾರ ದಿವಸ ಗಂಗಾಧರರಾಯರು, ಮಜಲಿಯವರು

**ವಂದೇಮಾತರಂ !** **ಅಲ್ಲಾಹೋ ಅಕಬರ !!**

**ದೇಶಭಕ್ತ ಮಹಾಶಯರೇ —**

ಸ್ವಾರ್ಥತ್ಯಾಗದ ಮೂರ್ತಿಗಳಾದ ತಮ್ಮ ಸ್ವಾಗತವನ್ನು ಇಲ್ಲಿಯ ಖಿಲಾಫತ ಮತ್ತು ಕಾಂಗ್ರೆಸ ಕಮಿಟಿಗಳ ಪರಿಯಿಂದ ಬಾಗಲಕೋಟೆಯ ನಿವಾಸಿಗಳಾದ ನಾವು ಅತಿ ವಿಜೃಂಭಣೆಯಿಂದ ಮಾಡಬೇಕೆಂಬ ಕುತೂಹಲವನ್ನು ತಾಳಿದ್ದರೂ ತಮ್ಮ ಯೋಗ್ಯತೆಗೆ ಸರಿಯಾಗಿ ಆತಿಥ್ಯವನ್ನು ಮಾಡುವ ಸಾಮರ್ಥ್ಯವು ನಮ್ಮಲ್ಲಿ ಇರುವದಿಲ್ಲ. ನಮ್ಮ ಊರಲ್ಲಿ ಅಸಹಕಾರದ ಸ್ಫೂರ್ತಿಯನ್ನು ಹುಟ್ಟಿಸಿದ ದೇ. ಭ. ಜಯರಾಯರ ನಿಧನದಿಂದ ನಮಗುಂಟಾದ ಹಾನಿಯನ್ನು ತಮ್ಮಮುಂದೆ ನಿವೇದಿಸದೆ ಇರಲಾರೆವು. ನವಕರಶಾಹಿಯ ಕುತಂತ್ರದಿಂದ ಕಾರಾಗೃಹಕ್ಕೆ ಕಳಿಸಲ್ಪಟ್ಟ ನಮ್ಮ ಜಿಲ್ಲೆಯ ಮುಖಂಡರಾದ ದೇ. ಭ. ಶ್ರೀನಿವಾಸರಾಯರು ಉಜ್ವಲ ಬಾಲಮೂರ್ತಿಗಳಾದ ಜಯರಾಯರು ಈ ಸಮಯದಲ್ಲಿದ್ದರೆ ತಮ್ಮ ಸ್ವಾಗತಕ್ಕೆ ವಿಶೇಷವಾದ ಶೋಭೆ ಬರುತ್ತಿತ್ತು. ಉಭಯತರ ಸಹಾಯವು ನಮಗೆ ತಪ್ಪಿದ್ದರಿಂದ ತಮ್ಮ ಸ್ವಾಗತದಲ್ಲಿ ಏನಾದರೂ ಕುಂದು ಕೊರತೆಗಳು ಉಂಟಾದರೆ ಉದಾರ ಅಂತಃಕರಣಿಗಳಾದ ತಾವು ಅವುಗಳನ್ನು ಕ್ಷಮಿಸುವಿರೆಂದು ನಂಬಿದ್ದೇವೆ.

**ದೇಶಭಕ್ತ ಗಂಗಾಧರರಾಯರೇ—**

ತಮ್ಮಂಥ ಗರ್ಭ ಶ್ರೀಮಂತರು ದೇಶ ಹಿತಕ್ಕಾಗಿ ನಾನಾ ತರದ ಕಷ್ಟಗಳನ್ನು ಅನುಭವಿಸುವದನ್ನು ನೋಡಿ ನಮಗೆ ಅತಿ ವ್ಯಸನವಾಗುತ್ತಿದ್ದರೂ ತಮ್ಮಂಥ ಸತ್ಪುರುಷರಲ್ಲಿ ಪರಮಾತ್ಮನು ದೇಶ ಸೇವೆಯ ವ್ರತದ ಪ್ರೇರಣೆಯನ್ನು ಮಾಡಿ ತಮ್ಮ ಮುಖಾಂತರವಾಗಿ ಕರ್ನಾಟಕದ ಹೆಸರನ್ನು ಇಡಿ ಹಿಂದುಸ್ಥಾನದಲ್ಲೆಲ್ಲ ಮುಂದೆ ತಂದದ್ದಕ್ಕಾಗಿ ವಿಶೇಷ ಆನಂದವೂ ಅಭಿಮಾನವೂ ಅನಿಸುತ್ತಿರುವದು. ಕರ್ನಾಟಕವು ಮೊದಲೇ ಹಿಂದುಳಿದ ಪ್ರಾಂತವು. ಜಾತಿ ದ್ವೇಷ ಮತ್ತು ಸ್ವಾರ್ಥಗಳಿಂದ ಸಂಪೂರ್ಣವಾದದ್ದು. ಇಂಥ ಕರ್ನಾಟಕದಲ್ಲಿ ಅಸಹಕಾರ ಚಳವಳಿಯನ್ನು ಯಶಸ್ವಿಯಾಗಿ ಮಾಡುವದೆಂದರೆ ಸಾಮಾನ್ಯ ಕೆಲಸವಲ್ಲ. ಇದನ್ನು ಕರ್ನಾಟಕದಲ್ಲಿ ಯಶಸ್ವಿಯಾಗಿ ಮಾಡಿದ್ದರ ಕೀರ್ತಿಯು ತಮಗೆ ಸಂಪೂರ್ಣವಾಗಿ ಇರುವದು. ತಾವು ಲೋಕಮಾನ್ಯರ ಮುಖ್ಯ ಶಿಷ್ಯರು ಅವರ ಚಳವಳಿಯ ರಹಸ್ಯವನ್ನು ಚನ್ನಾಗಿ ಅರಿತವರು ಮಹಾತ್ಮರ ಪಟ್ಟ ಶಿಷ್ಯರು ಅವರ ಚಳವಳಿಯ ರಹಸ್ಯವನ್ನಾದರೂ ಪೂರ್ಣವಾಗಿ ತಿಳಿದವರು. ಉಭಯ ಮಹಾ ವಿಭೂತಿಗಳ ಪರಮಾನುಗ್ರಹಕ್ಕೆ ಪಾತ್ರರಾದ ತಮಗೆ ಕರ್ನಾಟಕದ ಧುರೀಣತ್ವವನ್ನು ವಹಿಸುವ ಸದ್ಬುದ್ಧಿಯನ್ನು ಪರಮೇಶ್ವರನು ಕೊಡುವದೆಂದರೆ ಕರ್ನಾಟಕದ ಭಾಗ್ಯವಂತಲೇ ತಿಳಿಯಬೇಕು. ತಮ್ಮಲ್ಲಿ ಅಲೌಕಿಕವಾದ ಧೈರ್ಯವಿದ್ದು ತಾವು ಸ್ಥಿರ ಬುದ್ಧಿಗಳಾಗಿರುವಿರಿ. ಇದರಿಂದ ತಮ್ಮಲ್ಲಿ ಆತ್ಮ ವಿಶ್ವಾಸವು ದೃಢವಾಗಿರುವದು. ನಮ್ಮಲ್ಲಿ ಕಂಡುಬರುವ ಜಾತಿ ಜಾತಿಗಳಲ್ಲಿಯ ದ್ವೇಷವೂ ಮತಭೇದಗಳೂ ಮುಖಂಡರ ಸ್ವಾರ್ಥತ್ಯಾಗದಿಂದ ಸ್ವಲ್ಪ ಅವಧಿಯಲ್ಲಿಯೇ ನಾಶ ಹೊಂದುವವೆಂದು ತಮಗೆ ವಿಶ್ವಾಸವಿರುವದು ಅದ್ದರಿಂದಲೇ ಬೇರೆ ಎಷ್ಟು ಪ್ರಾಂತಗಳು ಹಿಂದೆ ಸರಿಯುವದನ್ನು ನೋಡುತ್ತಿದ್ದರೂ ಮಹಾತ್ಮರ ಚಳವಳಿಗೆ ಕರ್ನಾಟಕವು ಉತ್ಕೃಷ್ಟವಾದ ಭೂಮಿಕೆಯಾಗಿರುವದೆಂಬ ನಂಬಿಗೆಯಿಂದ ಧೈರ್ಯ ಮಾಡಿ ಈ ಪ್ರಾಂತದಲ್ಲಿ ಮಹಾತ್ಮರ ಸಂಚಾರ ಮಾಡಿಸಿ ಕರ್ನಾಟಕದಲ್ಲಿ ಪ್ರತಿ ಒಂದು ಸ್ಥಳದಲ್ಲಿ ಅಸಹಕಾರ ಚಳವಳಿಯು ಫಲದ್ರೂಪವಾಗಿ ನಡೆವದಕ್ಕೆ ಸಹಾಯಕರಾದವರೂ ತಾವೇ ಇದ್ದದ್ದಕ್ಕಾಗಿ ಕರ್ನಾಟಕವು ತಮಗೆ ತುಂಬಾ ಋಣಿಯಾಗಿರುವದು.

ತಮ್ಮಂಥ ಮುಖಂಡರ ಪ್ರಯತ್ನದಿಂದ ಅಸಹಕಾರದ ರಹಸ್ಯವು ಹಿಂದುಸ್ಥಾನದಲ್ಲೆಲ್ಲ ತಿಳಿದು ಹೋಗಿದ್ದು ಅಲ್ಪಾವಧಿಯಲ್ಲಿಯೇ ರಾಷ್ಟ್ರದಲ್ಲಿ ಉಂಟಾದ ಜಾಗೃತಿಯು ಈ ಚಳವಳಿಯ ಪ್ರಭಾವದ ದ್ಯೋತಕವಾಗಿರುವದು. ಆದರೆ ಇತ್ತಲಾಗಿ ರಾಷ್ಟ್ರದ ಮುಖಂಡರಲ್ಲಿ ಮತ ಭೇದ ಉಂಟಾಗ ಹತ್ತಿದ್ದು ನಮ್ಮ ವೈರಿಗಳು ಇದರ ಲಾಭವನ್ನು ತೆಗೆದುಕೊಳ್ಳಬೇಕೆಂದು ಹವಣಿಸುತ್ತಿರುವದು. ಇಂಥ ಪ್ರಸಂಗದಲ್ಲಿ ಜಾತಿ ಭೇದ ಉಂಟಾಗದಂತೆ ಜಾಗೃತಿಯಿಂದ ನಡೆಯುವದು ಅವಶ್ಯವಾಗಿರುವದು. ಅವತಾರೀ ಪುರುಷರಾದ ಮಹಾತ್ಮರ ಪ್ರಭಾವದಿಂದಲೂ ಅಲ್ಲೀ ಬಂಧುಗಳ ಪ್ರಯತ್ನದಿಂದಲೂ ರಾಷ್ಟ್ರದಲ್ಲಿ ಇಷ್ಟು ಅದ್ಭುತವಾದ ಜಾಗೃತಿಯುಂಟಾಗಿರುವದೆಂಬ ಆದರ ಮೂಲ ಕಾರಣವನ್ನು ಲಕ್ಷದಲ್ಲಿಟ್ಟು ಮಹಾತ್ಮರ ಅಸಹಕಾರ ತತ್ವಕ್ಕೆ ಬಾಧೆ ಬರದಂತೆ ಕಾಂಗ್ರೆಸ ಕಾರ್ಯಕ್ರಮದಲ್ಲಿ ಏನು ಬದಲು ಹೆಚ್ಚು ಕಡಿಮೆ ಮಾಡುವದು ಕಂಡರೆ ಹಾಗೆ ಮಾಡಬಹುದು. ಆದರೆ ಕಾಂಗ್ರೆಸದಲ್ಲಿ ಮತ ಭೇದವಾಗದಂತೆ ತಾವೆಲ್ಲ ಮುಖಂಡರು ಪ್ರಯತ್ನ ಬಟ್ಟು ಏಕಮತದಿಂದ ನಿರ್ಣಯಿಸುವಿರೆಂದು ನಂಬಿದ್ದೇವೆ. ಗಂಗಾಧರರಾಯರೇ ತಮ್ಮ ಮೇಲೆ ಕರ್ನಾಟಕದ ಪೂರ್ಣ ನಂಬಿಗೆಯದೆ. ತಾವು ತೋರಿಸಿದ ಮಾರ್ಗದಿಂದ ನಡೆಯಲಿಕ್ಕೆ ನಾವು ಸಿದ್ಧರಿರುವೆವು.

**ದೇಶಭಕ್ತ ದತ್ತೋಪಂತ ಮಜಲೀಯ ವರೇ—**

ಕರ್ನಾಟಕದ ಜನರು ತಮಗೆ ವಿಶೇಷವಾಗಿ ಉಪಕೃತರಾಗಿರುವರು ಚಿಕ್ಕ ವಯಸ್ಸಿನಲ್ಲಿ ಐಹಿಕ ಸುಖವನ್ನು ದುರ್ಲಕ್ಷಿಸಿ ಇಂಥ ಕಷ್ಟಮಯವಾದ ವ್ರತವನ್ನು ಸ್ವೀಕರಿಸುವದೆಂದರೆ ಸಣ್ಣ ಕೆಲಸವಲ್ಲ. ತಮ್ಮಲ್ಲಿ ಮಹಾತ್ಮರ ತತ್ವಗಳು ಸಂಪೂರ್ಣವಾಗಿ ಭೇದಿಸಿದ್ದು ಕರ್ನಾಟಕದಲ್ಲಿ ವಿಚಾರ ಕ್ರಾಂತಿಯನ್ನುಂಟು ಮಾಡಿದ ಶ್ರೇಯಸ್ಸು ತಮಗಿರುವದು. ವಕೀಲಿಯನ್ನು ಬಿಟ್ಟು ಆಯುಷ್ಯವನ್ನೆಲ್ಲ ದೇಶ ಸೇವೆಯಲ್ಲಿಯೇ ಕಳೆಯುವೆನೆಂಬ ದೃಢನಿಶ್ಚಯವನ್ನು ಮಾಡಿ ತರುಣ ಜನರಿಗೆ ಸ್ವಾರ್ಥತ್ಯಾಗದ ಉದಾಹರಣೆಯನ್ನು ಹಾಕಿಕೊಟ್ಟಿದ್ದಕ್ಕಾಗಿ ನಿಮ್ಮನ್ನು ಎಷ್ಟು ಹೊಗಳಿದರೂ ತೀರದು.

**ದೇಶಭಕ್ತ ಹಣಮಂತರಾಯರೇ—**

ವಿಜಾಪೂರ ಜಿಲ್ಲೆಯಲ್ಲಿ ವಿಶೇಷತಃ ನಮ್ಮ ಭಾಗದಲ್ಲಿ ಕಂಡು ಬರುವ ಜಾಗೃತಿಯು ಖಾದೀ ಪ್ರಸಾರವು ತಮ್ಮ ಸಾಹಸದ ಫಲವೆಂಬದು ಬೇರೆ ಹೇಳಬೇಕಾಗಿಲ್ಲ. ವಕೀಲಿಯಂಥ ಮೋಹಕ ವ್ಯವಸಾಯವನ್ನು ಬಿಟ್ಟು ಕಾರಾಗೃಹದ ಯಾತನೆಗಳನ್ನು ಅನುಭವಿಸಲಿಕ್ಕೆ ಸಿದ್ಧರಾಗುವದೆಂದರೆ ನಿಮ್ಮ ಉಜ್ವಲವಾದ ದೇಶಾಭಿಮಾನವನ್ನು ವ್ಯಕ್ತ ಪಡಿಸುತ್ತದೆ, ಇಂಗ್ಲಿಷ ಶಿಕ್ಷಣವನ್ನು ಪಡೆಯುವದೆಂದರೆ ದ್ರವ್ಯ ಸಂಪಾದನೆಯ ಸಾಧನವೆಂಬ ನಮ್ಮ ಜನರಲ್ಲಿ ಬೇರೊಂದು ತಿಳವಳಿಕೆಯು ತಪ್ಪಾಗಿದ್ದು ಸುಶಿಕ್ಷಿತರ ಕರ್ತವ್ಯವು ಅಶಿಕ್ಷಿತರನ್ನು ಉದ್ಧಾರ ಮಾಡುವದೇ ಆಗಿದೆ ಎಂದು ತಾವು ಎಲ್ಲರ ನಿದರ್ಶನಕ್ಕೆ ತಂದು ಕೊಟ್ಟಿರುವಿರಿ. ತಾವು ಮತ್ತು ದತ್ತೋಪಂತರು ಸ್ವರಾಜ್ಯವನ್ನು ತೀವ್ರ ದೊರೆಕಿಸಲಿಕ್ಕೆ ತಮ್ಮ ಗುರುವರ್ಯ ಗಂಗಾಧರರಾಯರಿಗೆ ಸಹಾಯಕರಾಗುವಿರೆಂದು ನಂಬಿದ್ದೇವೆ,

ತಮ್ಮಂಥ ಮುಖಂಡರನ್ನು ಹಿಂಬಾಲಿಸುವಷ್ಟು ಧೈರ್ಯವನ್ನು ನಮಗೆ ಕೊಡಲೆಂತಲೂ ಕರ್ನಾಟಕದ ಜಾಗೃತಿಯ ತ್ರಿಮೂರ್ತಿಗಳಾದ ತಮಗೆ ಆಯುರಾರೋಗ್ಯವನ್ನು ಕೊಡಲೆಂತಲೂ ಪರಮೇಶ್ವರನನ್ನು ಅನನ್ಯ ಭಾವದಿಂದ ಬೇಡಿಕೊಳ್ಳುತ್ತೇವೆ.

ಬಾಗಲಕೋಟಿ
ತಾ॥ ೧೦—೧೦—೨೨.

ತಮ್ಮ ಅನುಯಾಯಿಗಳಾದ.
ಬಾಗಲಕೋಟೆಯ ನಿವಾಸಿಗಳು

# ಟಿಪ್ಪಣಿಗಳು.

## ಬಲಿಯಲ್ಲಿ ಬೀಳಬೇಡಿರಿ.

( ಯಂಗ ಇಂಡಿಯಾ )

ಮದ್ರಾಸದಲ್ಲಿ ೧೯೨೦ ನೇ ಇಸ್ವಿಯ ಆಗಷ್ಟ ೧೨ ನೇ ತಾರೀಖಿನ ದಿವಸ ೫೦೦೦೦ ಶ್ರೋತೃಗಳ ಎದುರಿನಲ್ಲಿ ಮಹಾತ್ಮಾಜಿಯವರು ಭಾಷಣ ಮಾಡುವಾಗ ಉಳಿದ ವಿಷಯಗಳ ಸಂಗಡ ಕೌನ್ಸಿಲಗಳ ಬಹಿಷ್ಕಾರದ ಸಂಬಂಧವಾಗಿ ಹೇಳಿದರು. ವಿಶೇಷತಃ ಆ ಪ್ರಸಂಗದಲ್ಲಿ ಚುನಾವಣೆಗೆ ನಿಂತು ಆ ಮೇಲೆ ರಾಜನಿಷ್ಠೆಯ ಪ್ರತಿಜ್ಞೆಯನ್ನು ತೆಗೆದುಕೊಳ್ಳಬಾರದೆಂಬ ಅಭಿಪ್ರಾಯದ ಸಂಬಂಧದಿಂದ ಅವರು ತಮ್ಮ ಭಾಷಣದಲ್ಲಿ ನಿರ್ದಿಷ್ಟ ಮಾಡಿದರು. ಆ ಸಂದರ್ಭದಲ್ಲಿ ಮಹಾತ್ಮರು ಹೇಳಿದ್ದು ಇಷ್ಟು: ಈ ಜೋಡಿನಿಂದ ಕೌನ್ಸಿಲಗಳಲ್ಲಿ ಹೋಗಿ ವಿರೋಧ ಮಾಡಬೇಕೆಂದಾಗಲಿ ಇಲ್ಲವೆ ಕೌನ್ಸಿಲಗಳನ್ನು ನಾಶ ಪಡಿಸಬೇಕೆಂದಾಗಲಿ ಚುನಾವಣೆಯಲ್ಲಿ ನಿಲ್ಲುವ ವಿಷಯಕ್ಕೆ ಹತ್ತುತ್ತವೆ. ' ಇದು ರಾಷ್ಟ್ರಕ್ಕೆ ಸ್ವಸ್ಥವಾದ ದಾರಿಯಲ್ಲ. ದೇಶ ಬಾಂಧವರೇ ಅದ್ದರಿಂದ ತಾವು ಆ ಬಲಿಯಲ್ಲಿ ಬೀಳಬಾರದೆಂದು ನಾನು ಬೇಡಿಕೊಳ್ಳುತ್ತೇನೆ. ನಾವು ಮೊದಲು ಚುನಾವಣೆಗೆ ನಿಂತು ಆ ಮೇಲೆ ರಾಜನಿಷ್ಠೆಯನ್ನು ತೆಗೆದುಕೊಡದೆಂದು ಪ್ರಾಮಾಣಿಕ ಅಭಿಪ್ರಾಯವುಳ್ಳ ಜನರಿಗೆ ನಾನು ತಾವು ತಮ್ಮ ಸಲುವಾಗಿ ಹಾಗು ತಮ್ಮ ರಾಷ್ಟ್ರದ ಸಲುವಾಗಿ ಸಿದ್ಧ ಪಡಿಸಿರುವ ಬಲಿಯಲ್ಲಿ ಬೀಳುವಿರೆಂದು ಹೇಳುತ್ತೇನೆ. ಕೌನ್ಸಿಲಗಳಲ್ಲಿ ಹೋಗಿ ಕುಳಿತು ಕೊಳ್ಳದೆ ಕೇವಲ ಚುನಾವಣೆಗೆ ನಿಲ್ಲುವದರ ಸಂಬಂಧದಿಂದಲೇ ಈ ರೀತಿ ಹೇಳಿದ ಮೇಲೆ ಒಳಗೆ ಹೋಗಿ ಸಹಕಾರವನ್ನು ಮಾಡುವದಿಲ್ಲೆಂದು ಅನ್ನುವವರಿಗೆ ಏನು ಹೇಳಬೇಕು?

ಶ್ರೀ ರಾಜಗೋಪಾಲಾಚಾರ್ಯ

---

## ಸ್ಥಾನಿಕ ಮುನಸಿಪಾಲಟಿಯು

ಆಚೆಯ ವಾರ ಇಲ್ಲಿಯ ಮುನಸಿಪಾಲಟಿಯ ವ್ಯವಸ್ಥೆಯ ಸಂಬಂಧದಿಂದ ನಾವು ಬರೆದ ಟಿಪ್ಪಣಿಯು ಇನ್ನೂ ವಾಚಕರ ಸ್ಮರಣೆಯಲ್ಲಿರಬಹುದು. ಅದರಲ್ಲಿ ಕಿಲ್ಲೆಯಲ್ಲಿಯ ಅರವತ್ತು ಓಣಿಯ ಜನರು ಮುನಸಿಪಾಲಿಟಿಯ ಅಧ್ಯಕ್ಷರ ಕಡೆಗೆ ಕಳಿಸಿದ ಅರ್ಜಿಯ ನಿವಾರಣೆಯ ದಾರಿಯನ್ನು ನೋಡಿ ಆ ಬಗ್ಗೆ ಹೆಚ್ಚಿಗೆ ಬರೆಯುವೆವೆಂದು ಆಶ್ವಾಸನೆಯನ್ನು ಕೊಟ್ಟಿದ್ದೆವಷ್ಟೇ! ಈಗ ಆ ಅರ್ಜಿಗೆ ಚೀಫ ಆಫೀಸರರು ಕೊಟ್ಟ ಉತ್ತರವನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ಮುದ್ರಿಸಿರುವೆವು. ಆ ಉತ್ತರವನ್ನು ನೋಡಿದರೆ ನಾವು ಬರೆದ ಸಂಗತಿಯಲ್ಲ ಸಂಪೂರ್ಣ ನಿಜವಾಗಿರುವವೆಂದು ಚೀಫ ಆಫೀಸರರು ಒಪ್ಪಿದಂಗಿದೆ. ಅಂದ ಮೇಲೆ ನಮ್ಮ ದೂರುಗಳನ್ನು ಹೆಚ್ಚಿಗೆ ಹೇಳುವದು ಅವಶ್ಯವಿಲ್ಲ ಆದರೆ ಆ ದೂರುಗಳ ನಿವಾರಣೆಯ ಬಗ್ಗೆ ಚೀಫ ಆಫೀಸರರು ಕೊಟ್ಟ ಉತ್ತರವನ್ನು ನೋಡಲಾಗಿ 'ಈ ರೀತಿಯ ಅನ್ಯವಸ್ಥಿತತನದ ವಿಷಯವಾಗಿ ವಿಷಾದವೆನಿಸುತ್ತದೆ ಕಂದೀಲಗಳು ಕೆಟ್ಟಿದ್ದು ಅವುಗಳನ್ನು ತಿದ್ದಿಸುವ ವ್ಯವಸ್ಥೆಯನ್ನು ಮಾಡುತ್ತೇನೆಂದು ಬರೆದಿರುವರು. ಅದರಂತೆ ದೀವಿಗೆಗಳನ್ನು ಹಚ್ಚುವದೇನೋ ನಿಜ. ಆದರೆ ಎಣ್ಣೆಯ ಅಭಾವದಿಂದ ಒಂದು ತಾಸು ಆಗುವಷ್ಟರಲ್ಲಿಯೇ ದೀಪವು ನಂದಿ ಹೋಗುವದು. ಕೃಷ್ಣ ಪಕ್ಷದ ದಿವಸಗಳಲ್ಲಿ ರಾತ್ರಿ ಚಂದ್ರೋದಯವಾಗುವ ವರೆಗೆ ದೀವಿಗೆಗಳು ಉರಿಯುವಂತೆ ವ್ಯವಸ್ಥೆ ಮಾಡುವ ರೂಢಿಯು ಉಂಟು ಆದರಂತೆ ಎಣ್ಣೆಯನ್ನು ಹಾಕುವದಕ್ಕೆ ಆಜ್ಞೆಯು ಮಾಸ್ತರಗಳಿಗೆ ಮಾಡಿರುವರು, ಅಷ್ಟು ಉರಿಯಲಿಕ್ಕೆ ಬೇಕಾಗುವ ಎಣ್ಣೆಯನ್ನು ಹಾಕುವರಾರು? ಮುನಸಿಪಾಲಟಿಯಲ್ಲಿ ಎಣ್ಣೆಯು ಅಳತೆಯಂತೆ ವೆಚ್ಚವಾಗುತ್ತಿದ್ದರೂ ಆಗಬಹುದು. ಆದರೆ ಎಣ್ಣೆಯು ಎಲ್ಲಿ ಹೋಗುವದೋ ಯಾರಿಗೆ ಗೊತ್ತು? ಇದು ದೀವಿಗೆಗಳ ಮಾತಾಯಿತು. ಇನ್ನು ಬೀದಿಗಳ ದುರಸ್ತಿಯ ಸಂಬಂಧವಾಗಿ ಬೇಗನೆ ದುರಸ್ತಿ ಮಾಡಲಾದೀತು ಎಂದು ಕೌನ್ಸಿಲ ಪದ್ಧತಿಯ ಅನುಸಾರವಾಗಿ ಉತ್ತರವು ದೊರೆತಿರುವದು ಈಗ ಮಳೆಗಾಲವು ಪ್ರಾರಂಭವಾಗುತ್ತ ಬಂದದ್ದರಿಂದ ಇನ್ನು ಮೇಲೆ ಮುಂದಿನ ಮಳೆಗಾಲದ ವರೆಗೆ ಈ ಕಾರ್ಯವನ್ನು ಕೈಕೊಳ್ಳುವದು ನಮಗಂತೂ ಶಕ್ಯವಾಗಿ ತೋರುವದಿಲ್ಲ. ಮೇಲಾಗಿ ಸಂಣ ಸಂದಿಯೊಳಗಿರುವ ಅಲ್ಲಿ ಗಾಡಿಗಳನ್ನು ತೆಗೆದು ಕೊಂಡು ಹೋಗಿ ನೀರು ಹಾಕಿ ದುರಸ್ತು ಮಾಡಲಿಕ್ಕೆ ಬರುವಂತೆ ಕೂಡ ಇಲ್ಲ ಆದ್ದರಿಂದ ಇನ್ನೂ ಒಂದು ವರ್ಷದ ವರೆಗೆ ಆ ಬೀದಿಯಲ್ಲಿ ಅಡ್ಡಾಡುವ ಜನರು ಕಾಲುಗಳನ್ನು ಮುರಿದುಕೊಳ್ಳುವದಕ್ಕೆ ಅನುಕೂಲವೇ ಆಗುವದು. ಕಾಲುವೆಗಳ ಸಂಬಂಧದಲ್ಲಿ ಕೊಟ್ಟ ಉತ್ತರವನ್ನು ನೋಡುವಾಗ ಮಳೆಯ ನೀರು ಹರಿದು ಹೋಗುವದಕ್ಕೆ ಮಾತ್ರ ಕಾಲುವೆಗಳಿದ್ದು ಮಲ ವಿಸರ್ಜನ ಮುಂತಾದ ಕೆಲಸಗಳಿಗೆ ಅಲ್ಲವೆಂಬದಾಗಿ ಉತ್ತರವು ದೊರೆತಿದೆ, ಯೋಗ್ಯವದೆ ಮನೆಯಲ್ಲಿಯ ಕಸ ಕಡ್ಡಿಯನ್ನೂ ಪತ್ರಾವಳಿಗಳನ್ನೂ ಓಣಿಯಲ್ಲಿಯ ಜನರು ತಮ್ಮ ಮನೆಯಲ್ಲಿಯೇ ಇಟ್ಟು ಕೊಂಡು ಕೂಡಬೇಕು! ಯಾಕಂದರೆ ಅವುಗಳನ್ನು ಎಲ್ಲಿಯಾದರೂ ಚಲ್ಲಲಿಕ್ಕೆ ಬೇರೆ ಸ್ಥಳವೆಲ್ಲಿರುವದ? ಅಲ್ಲಲ್ಲಿಗೆ ಸಂಣ ಕುಂಡೆಗಳನ್ನಿಟ್ಟು ಜನರು ಅಲ್ಲಿ ಕಸ ಕಡ್ಡಿ ಮುಂತಾದವುಗಳನ್ನು ಚಲ್ಲಲಿಕ್ಕೆ ಮುನಸಿಪಾಲಿಟಿಯವರು ವ್ಯವಸ್ಥೆಯನ್ನು ಮಾಡದ ಹೊರ್ತು ಆ ದೋಷವನ್ನು ಜನರ ಮೇಲೆಯೇ ಹೇರುವದಕ್ಕೆ ಮಾಡಿದ ಪ್ರಯತ್ನವು ಎಷ್ಟು ಯೋಗ್ಯವಾಗಿರುವದು! ಅದರಂತೆಯೇ ಸಾರ್ವಜನಿಕ ಶೌಚ ಕೂಪಗಳ ವ್ಯವಸ್ಥೆಯೂ ಇಲ್ಲ. ಪ್ರತಿಯೊಂದು ಮನೆಯಲ್ಲಿ ಶೌಚ ಕೂಪವಿರಬೇಕೆಂಬ ನಿಯಮವೂ ಇಲ್ಲ. ಭಂಗಿಗಳ ವ್ಯವಸ್ಥೆಯೂ ಇಲ್ಲ. ತೆಗ್ಗಿನ ಶೌಚ ಕೂಪಗಳನ್ನು ಕಟ್ಟಿಸುವದಕ್ಕೆ ಪರವಾನಗೆಯೂ ದೊರೆಯುವದಿಲ್ಲ. ಸಮೀಪದಲ್ಲಿ ಒಂದು ಸಂಣ ಸಂಣ ಗಿಡಗಂಟೆಗಳುಳ್ಳ ಬೈಲು ಕೂಡ ಇಲ್ಲ. ಅಂದ ಮೇಲೆ ಹೆಂಗಸರು ಹುಡುಗರು ಶೌಚ ವಿಧಿಯನ್ನು ಮಾಡೇ ಕೂಡದು! ಆದ್ದರಿಂದ ಇವೆಲ್ಲ ಅತ್ಯಂತ ಆವಶ್ಯಕವಾದ ದೂರುಗಳನ್ನು ನಿವಾರಿಸದ ಹೊರ್ತು ಮುನಸಿಪಾಲಟಿಯವರಿಗೆ ಮನಿ ಪಟ್ಟಿ ಮುಂತಾದವುಗಳನ್ನು ವಸೂಲ ಮಾಡುವದಕ್ಕೆ ಅಧಿಕಾರವೆಲ್ಲಿರುವದು? ಈ ರೀತಿಯ ಅವ್ಯವಸ್ಥೆಯಿದ್ದರೂ ಮುನಸಿಪಾಲಟಿಯವರು ಕರವನ್ನು ಇಮ್ಮಡಿ ಮುಮ್ಮಡಿ ಹೆಚ್ಚಿಸುವ ಧಾರ್ಷ್ಟ್ಯವನ್ನು ಮಾಡುವರು! ಇದೆಲ್ಲ ಯಾತರ ಪರಿಣಾಮವು! ಮತದಾರರಾದ ಕರದಾತರೂ ತಮ್ಮ ಹಕ್ಕುಗಳ ಕಡೆಗೆ ದುರ್ಲಕ್ಷ್ಯ ಮಾಡುವದೇ'

ಇದಕ್ಕೆ ಕಾರಣವು ಇದ್ದರಿಂದ ಮತದಾರರು ತಾವು ಮತವನ್ನು ಕೊಟ್ಟ ಸಭಾಸದರಿಗೆ ತಮ್ಮ ದೂರುಗಳನ್ನು ನಿವೇದಿಸಿ ಅವು ಸರಿಯಾಗುವಂತೆ ಪ್ರಯತ್ನ ಮಾಡಬೇಕೆಂದು ಅಧಿಕಾರ ವಾಣಿಯಿಂದ ಹೇಳುವದಲ್ಲದೆ ಹಾಗೆ ಮಾಡುವದು ಆ ಸಭಾಸದರ ಕಡೆಯಿಂದ ಆಗದಿದ್ದರೆ ಮುನಸಿಪಾಲಿಟಿಯ ಸಭಾಸದ ಸ್ಥಳಕ್ಕೆ ರಾಜೀನಾಮೆಯನ್ನು ಕೊಡಲಿಕ್ಕೆ ಹೇಳಬೇಕು ಮತ್ತು ಇವುಗಳನ್ನು ದೂರ ಮಾಡಿಕೊಳ್ಳುವದಕ್ಕೆ ಮುನಸಿಪಾಲಟಿಯವರ ಸಂಗಡ ದಿಟ್ಟತನದಿಂದ ಹೋರಾಡಲಿಕ್ಕೆ ಬೇಕು. ಈಗಿನ ಕಾಲವು ಚಳವಳಿಯ ಕಾಲವಿದ್ದುದರಿಂದ ಸುಮ್ಮನೆ ಮನೆಯಲ್ಲಿ ಕುಳಿತರೆ ಯಾರೂ ಕೇಳುವದಿಲ್ಲ. ಆದ್ದರಿಂದ ಈ ಬಗ್ಗೆ ಎಲ್ಲರೂ ಯೋಗ್ಯ ಚಳವಳಿಯನ್ನು ಮಾಡಬೇಕೆಂದು ಸೂಚಿಸುತ್ತೇನೆ,

---

**ಖಬರದಾರ್ !!**

ಈ ವಿಚಿತ್ರ ಹೆಸರಿನ ಸಾಪ್ತಾಹಿಕ ವೃತ್ತಪತ್ರವೊಂದು ಧಾರವಾಡದಲ್ಲಿ ಶ್ರೀ. ಪದಕೀಯವರಿಂದ ಪ್ರಕಟಿಸಲ್ಪಡುತ್ತದೆ. ಇದರ ಎರಡು ಸಂಚಿಕೆಗಳು ನಮ್ಮೆಡೆಗೆ ಬಂದಿವೆ ಈ ಪತ್ರದ ಮುಖ್ಯ ಉದ್ದೇಶವೇನದಿಯೋ ನಮಗೆ ಸ್ಪಷ್ಟವಾಗಿ ತಿಳಿಯದು. ಇರಲಿ. ಇದರ ಮೂರನೇ ಸಂಚಿಕೆಯಲ್ಲಿ ಇಲಕಲ್ಲ ಸೀರೆಗಳ ಬಗ್ಗೆ, ಇಲಕಲ್ಲಿನ ಎಸ್. ಬಿ ಮುಜುಮದಾರ ಇವರ ಹೆಸರಿನಿಂದ ಒಂದು ಜಾಹಿರಾತು ಪ್ರಕಟವಾಗಿದೆ. ಶುದ್ಧ ಕೈನೂಲಿನ ಇಲಕಲ್ಲ ಸೀರೆಗಳು ತಮ್ಮಲ್ಲಿ ಮಾರಲಿಕ್ಕೆ ದೊರೆಯುವವೆಂದು ಶ್ರೀ ಮುಜುಮದಾರರು ಅದರಲ್ಲಿ ಪ್ರಕಟಪಡಿಸಿದ್ದಾರೆ. ಆದರೆ ಇಲಕಲ್ಲ ಸಮೀಪದಲ್ಲಿದ್ದರೂ, ಬಾಗಲಕೋಟೆಯ ರಹಿವಾಸಿಗಳಾಗಿದ್ದರೂ ನಮಗಂತೂ ಈ ಸಂಗತಿಯ ಬಗ್ಗೆ ಏನೂ ಗೊತ್ತಿರುವದಿಲ್ಲ ಆದ್ದರಿಂದ ಶುದ್ಧ ಕೈನೂಲಿನ ಬಗ್ಗೆ ಜನರಲ್ಲ ಜಾಹಿರಾತಿನ ಮೇಲಷ್ಟೇ ವಿಶ್ವಾಸವನ್ನಿಡದೇ; ಸ್ವತಃ ಪರೀಕ್ಷೆಮಾಡಿ, ನಿಜವಾದ ಕೈನೂಲಿನದೆಂಬದನ್ನು ಮನಗಂಡು, ಆಮೇಲೆ ವಿಶ್ವಾಸವನ್ನಿಡಬೇಕೆಂದು ಸೂಚಿಸುತ್ತೇವೆ.

---

**ತಟ್ಟೀ ಮಾಸ್ತರರು.**

ಪ್ರಸಿದ್ಧ ಶಿಕ್ಷಕರಾದ ಶ್ರೀ ವಲ್ಲಭ ಮಹಾಲಿಂಗ ತಟ್ಟೀಯವರು ಕೆಲವು ದಿನಸಗಳ ಹಿಂದೆ ಸ್ವರ್ಗಸ್ಥರಾದರೆಂದು ತಿಳಿಸಲು ನಮಗೆ ಅತ್ಯಂತ ವಿಷಾದವೆನಿಸುತ್ತದೆ. ಇವರು ಕನ್ನಡ ಕವಿತೆ ಮಾಡುವದರಲ್ಲಿ ಒಳ್ಳೆ ಪ್ರಸಿದ್ಧರಾಗಿದ್ದರು. ಗದ್ಯವನ್ನು ಬರೆಯುವದರಲ್ಲಿಯಾದರೂ ಇವರು ನಿಷ್ಣಾತರಿದ್ದರೆಂಬದನ್ನು ಹೇಳಲಿಕ್ಕೆ ಇವರು ಬರೆಯುತ್ತ ಬಂದ "ಬಾಲಮಿತ್ರ" ಎಂಬ ಮಾಸಿಕ ಪತ್ರವೇ ಸಾಕ್ಷಿಯಾಗಿರುತ್ತದೆ. ಇವರು ಕಲಿಸುವದರಲ್ಲಿಯೂ ನಿಪುಣರಿದ್ದರೆಂಬುದು ಇವರ ಕೈಯಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಗೊತ್ತಿರಬಹುದು. ಇವರು ಎಷ್ಟೋ ವರ್ಷಗಳ ವರೆಗೆ ಧಾರವಾಡ ಪ್ರಾಕ್ಟೀಸಿಂಗ ಸ್ಕೂಲದಲ್ಲಿಯೇ ಶಿಕ್ಷಕರಾಗಿದ್ದರು; ಆದರೆ ಕೆಲವು ತಿಂಗಳ ಹಿಂದೆ ಇವರಿಗೆ ಬೇರೆ ಕಡೆಗೆ ವರ್ಗ ಆಗಿತ್ತು. ಇವರ ಮರಣದಿಂದ ಕರ್ನಾಟಕದ ಓರ್ವ ಪ್ರಸಿದ್ಧ ಶಿಕ್ಷಕನೂ ಗದ್ಯ ಪದ್ಯಾತ್ಮಕ ಲೇಖಕನೂ ಇಲ್ಲದಂತಾಯಿತೆಂದು ಖಂಡಿತವಾಗಿ ಹೇಳಬಹುದು; ಪರಮಾತ್ಮನು ಗುರುವರ್ಯರ ಆತ್ಮಕ್ಕೆ ಶಾಂತಿಯನ್ನೀಯಲಿ!

ಸಂಪಾದಕ

## ಜಾ. ಸ. ಹರಕಿ

ಬಾಗಲಕೋಟೆ ಮುನಸಿಪಾಲಟಿ ಕಚೇರಿಯಿಂದ ಅರ್ಜದಾರ ತಮಣಾಚಾರ್ಯ ಬಂಡಾಚಾರ್ಯ ಪುರೋಹಿತ ವಗೈರೆ ಜನರು ಅರವತ್ತು ಓಣಿ ಕಿಲ್ಲಿ ಸಾಕೀನ ಬಾಗಲಕೋಟೆ ಇವರಿಗೆ—

ನಿಮ್ಮ ಓಣಿಯಲ್ಲಿ ದೀಪಾ ಹಚ್ಚುವದಿಲ್ಲ; ರಸ್ತೆ ದುರಸ್ತು ಮಾಡಿಸಿಲ್ಲ ಗಟಾರಗಳು ಹೊಲಸು ಇರುತ್ತವೆ. ವಗೈರೆ ಅಂತ ದೂರಿನ ಅರ್ಜಿಯನ್ನು ಮಾಡಿದ್ದಕ್ಕೆ ತಿಳುಹಿಸುವದೇನಂದರೆ

ನಿಮ್ಮ ದೂರುಗಳ ಬಗ್ಗೆ ಸಮಕ್ಷಮ ತಪಾಸ ಮಾಡಲಾಗಿ ಭಾವಿ ಹತ್ತಿರವಿರುವ ಕಂದೀಲಿನ ಗ್ಲಾಸು ಒಡೆದದೆ ಹಳೇ ಕಚೇರಿಯ ಹತ್ತಿರವಿರುವ ಕಂದಿಲಿನ ಬರ್ನರ ನಾದುರಸ್ತ ಆಗಿದೆ ಎಂದು ಕಂಡು ಬಂತು ಇವೆರಡನ್ನು ಈಗಿಂದೀಗ ದುರೋಸ್ತಿ ಮಾಡಿಸುತ್ತದೆ.

ರಸ್ತೆ ದುರಸ್ತಿ ಕೆಲಸ ನಡಿದದೆ ನಿಮ್ಮ ಓಣಿಯ ದುರಸ್ತಿ ಕೆಲಸವನ್ನಾದರೂ ತೀವ್ರವೇ ಕೈಕೊಳ್ಳುವದರಲ್ಲಿ ಬರುವದು

ಗಟಾರಗಳನ್ನು ದರ ದಿವಸ ಉಡುಗಿಸುತ್ತದೆ ಗಟಾರುಗಳು ಮಳಿ ನೀರಿನ ದೇಶೆಯಿಂದ ಮಾಡಿವೆ ಪತ್ರಾವಳಿಗಳನ್ನು ಒಗಿಯಲಿಕ್ಕೆ ಆಗರ ಕಸ ಕಡ್ಡಿಯನ್ನು ಚಲ್ಲಲಿಕ್ಕೆ ಆಗರ ಶೌಚ ಮಾಡಲಿಕ್ಕೆ ಮಾಡಿಲ್ಲ. ಈ ಕಾರ್ಯಗಳನ್ನು ಬಂದು ಮಾಡಲಿಕ್ಕೆ ತಜವೀಜ ಇಟ್ಟದೆ. ಈ ಕೆಲಸದಲ್ಲಿ ನಿಮ್ಮೆಲ್ಲರ ಬೆಂಬಲವಿದ್ದಲ್ಲಿ ಅದು ತೀವ್ರವೇ ಬಂದು ಆಗುವದೆಂದು ಆಶಾ ಅದೆ.

ತಾ॥ ೩೦-೧೦-೩೨

V. S. Havargi

ಚೀಫಆಫೀಸರ

---

## ಸ್ಥಳವೃತ್ತ.

ಮಳೆಯಾದ್ದರಿಂದ ಜನರ ರೋಗವು ಮೇಲೆ ಕಳೆಯು ಬರಹತ್ತಿದೆ.

ತಾ॥ ೧೪-೧೧-೩೨ ನೇ ದಿವಸ ಸಂಜೆಯ ೫ ಗಂಟೆಗೆ ಹುಂಡೇಕಾರ ಅವರ ದಿವ್ಯಯಲ್ಲಿ ವೀರಶೈವ ತರುಣ ಸಂಘದ ವತಿಯಿಂದ ಸಭೆಗೂಡಿ ಇಲ್ಲಿಯ ಪೆಂಚ ಕಚೇರಿಯನ್ನು ತೆಗೆದದ್ದಕ್ಕಾಗಿ ನಿಷೇಧ ಪರ ಠರಾವು ಪಾಸು ಮಾಡಲ್ಪಟ್ಟಿತು.

---

ವಿಜಾಪೂರದಲ್ಲಿ ದೇಶಭಕ್ತ ಗಂಗಾಧರರಾವ ಹಾಗೂ ದತ್ತೋಪಂತ ಮಜಲಿಯವರ ಸುಶ್ರಾವ್ಯ ಭಾಷಣಗಳಾದವು ದೇಶಭಕ್ತ ಗಂಗಾಧರರಾಯರು ವಿಶೇಷತಃ ಕೌನ್ಸಿಲ ಬಹಿಷ್ಕಾರ ವಿಷಯವಾಗಿ ಕಳಕಳಿಯಿಂದ ಹೇಳಿದರು ಈಗ ಎರಡು ವರ್ಷಗಳಿಂದ ಎಲ್ಲ ಜನರಿಗೆ ಕೌನ್ಸಿಲ್‌ಗಳಿಗೆ ಸಂಪೂರ್ಣ ಬಹಿಷ್ಕಾರ ಹಾಕಲಿಕ್ಕೆ ಹೇಳಿ ಈಗ ಪುನಃ ಕೌನ್ಸಿಲ್‌ಗಳಿಗೆ ನಮ್ಮ ಅಸಹಕಾರೀ ಜನರಿಗೆ ಹೋಟ ಹಾಕರಿ ಅಂತಾ ಹೇಳುವದು ಯೋಗ್ಯವಾದದ್ದಲ್ಲ. ಮತ್ತು ಕೌನ್ಸಿಲ್‌ಗಳಲ್ಲಿ ಪ್ರವೇಶ ಮಾಡುವದರಿಂದ ನಮಗೆ ಯಾವತರಹದ ಲಾಭ ವಾಗದೆ, ನಮ್ಮನಮ್ಮೊಳಗೆ ಪುನಃ ಕಲಹ ಹುಟ್ಟಾಗುವದು, ಆದ್ದರಿಂದ ಕೌನ್ಸಿಲದ ಮೋಹಕ್ಕೆ ಬೀಳಬಾರದೆಂದು ಹೇಳಿದರು. ನೆರೆ ಜನರು ಅದಕ್ಕೆ ತಮ್ಮ ಸಂಪೂರ್ಣ ಸಂಮತಿಯನ್ನಿತ್ತರು.

## SONDUR & JORAPUR
## Ginning Factory Bagalkot.

Dealers in second-hand Oil-engines Oil engine repairers, Grinding stones suppliers and General Contractors.

ಬೇರೆಬೇರೆ ತರದ ಸೆಕಂಡಹ್ಯಾಂಡ ಆಯಿಲ ಎಂಜಿನಗಳನ್ನು ನಾವು ದೊರಕಿಸಿ ಕೊಡುತ್ತೇವೆ. ಮತ್ತು ಆಯಿಲ ಇಂಜನಗಳನ್ನು ಸೊಯೀಪರರಿಂದ ದುರಸ್ತ ಮಾಡಿ ಕೊಡುತ್ತೇವೆ. ಇದಲ್ಲದೇ ಹಿಟ್ಟಿನ ಗಿರಣಿಗಳಿಗೆ ಬೇಕಾಗುವ ಬೀಸುವ ಕಲ್ಲುಗಳನ್ನೂ ನಾವು ಸಪ್ಲೈಸಿ ಕೊಡುವೆವು,

**ಸೊಂಡೂರ ಮತ್ತು ಜೋರಾಪೂರ**
ಜಿನಿಂಗ ಫ್ಯಾಕ್ಟರಿ ಬಾಗಲಕೋಟೆ.

## ಡಾ: ಇಂಗಳೀಕರ
ಎಲ್. ಸಿ. ಎಚ್. ಸಿ.
ಇವರ
## ಬಾಲಾಮೃತವು.

Sole Agent—The Karnatak L... Agency

ಬೆಲೆ ಬಾಟ್ಲಿ ೧ ಕ್ಕೆ ೧೨ ಆಣೆ. ಅಂಚೆವಚ್ಚ ಬೇರೆ

**ಡಾ. ಇಂಗಳೀಕರ,** L. C. H. C. ಬಾಗಲಕೋಟೆ

### ದಿ. ಕರ್ನಾಟಕ ಹೋಮಿಯೋ ಫಾರ್ಮಸೀ
**ಬಾಗಲಕೋಟೆ**

ಕರ್ನಾಟಕದಲ್ಲಿ ಪೂರ್ಣ ವಿಶ್ವಸನೀಯವಾದ ಹೋಮಿಯೋಪಾಥಿಕ್ ಔಷಧಗಳನ್ನು ಪೂರೈಸುವ ಫಾರ್ಮಸಿಯು ಇದೇ ಮೊದಲನೇಯದು ಈ ಔಷಧಗಳನ್ನು ಅಮೇರಿಕೆಯಿಂದಲೇ ತರಿಸುತ್ತಿದ್ದು ಅವು ಪದವೀಧರರಾದ ಡಾಕ್ಟರರ ಪ್ರತ್ಯಕ್ಷದಲ್ಲಿ ತಯಾರಾಗುತ್ತಿರುವದರಿಂದ ಅವುಗಳ ಗುಣದ ಬಗ್ಗೆ ಯಾರಿಗೂ ಸಂಶಯ ತೆಗೆದುಕೊಳ್ಳಲಿಕ್ಕೆ ಕಾರಣವಿಲ್ಲ. ಔಷಧಗಳ ಕ್ಯಾಟಲಾಗು ನಮ್ಮನ್ನು ತೆಗೆದುಕೊಳ್ಳಬೇಕು.

ವ್ಯವಸ್ಥಾಪಕ

## ಮಾರ್ಕಾಪುರ ಸ್ವದೇಶೀ ಪಾಟಿಗಳೂ
## ಬಾಕಿನ ತುದಿಗಳೂ

ನಾವು ಶ್ಲೇಟ ಸ್ಲೇಟ ವರ್ಕ್ಸ ಮಾರ್ಕಾಪುರ ಇವರಿಂದ ಇಡೀ ವಿಜಾಪೂರ ಜಿಲ್ಹೆಗೆ ಮುಖ್ಯಏಜಂಟರಾಗಿ ನಿಯಮಿಸಲ್ಪಟ್ಟಿದ್ದೇವೆ ನಮ್ಮ ಹತ್ತರ ಉತ್ತಮ ತರದ ಸಣ್ಣ ದೊಡ್ಡ ಪಾಟಿಗಳುಬಾಳಿಕೆಯಲ್ಲಿ ವಿದೇಶೀ ಪಾಟಿಗಳಿಗಿಂತಲೂ ಹೆಚ್ಚಿನವು ಇದ್ದು ಅಗದೀ ಸೋವಿ ದರದಿಂದ ದೊರೆಯುವವು ಒಮ್ಮೆ ಅನುಭವ ತೆಗೆದು ಕೊಂಡಲ್ಲಿ ನಿಮಗೆ ಖಾತ್ರಿಯಾಗುವದು ೧೪ ಪಾಟಿಗಳುಳ್ಳ ಒಂದು ಪೆಟ್ಟಿಗೆಗೆ ೧೩॥ (ರೂಪಾಯಿ)ಮಾತ್ರ. ಏಜಂಟರು ಬೇಕಾಗಿವೆ.

**ವ್ಹಿ ಜೀ ಪರವತೀಕರ**
ಸೋಲ ಏಜಂಟ ಡಿಸ್ಟ್ರಿಕ್ಟ ವಿಜಾಪೂರ
ಬಾಗಲಕೋಟ.

## *Shree Mahalaxmi Stores,*
BAGALKOT.

Wholesale Dealers in papers, swadeshi slates, and Ogle's glass Wares.

ನಮ್ಮಲ್ಲಿ ಎಲ್ಲ ತರದ ಕಾಗದಗಳೂ, ಸ್ವದೇಶೀ ಪಾಟಿಗಳೂ ಮೈಸೂರಿನ ಸಾಬಾಣಗಳೂ ಮತ್ತು ಸುಗಂಧ ದ್ರವ್ಯಗಳೂ, ಬೇರೆ ಬೇರೆ ತರದ ಕಾಚಿನ ವಸ್ತುಗಳೂ, ಮತ್ತು ಇತರ ಸ್ಟೇಶನರೀ ಸಾಮಾನುಗಳ ವಾರಲಿಕೆ ದೊರೆಯುತ್ತವೆ.

*Proprietors:—*
Parvatikar & Katgeri Bros,
BAGALKOT.

**ಶ್ರೀ ಮಹಾಲಕ್ಷ್ಮೀ ಸ್ಟೋರ್ಸ**
ಬಾಗಲಕೋಟ.


## ಜಾಹೀರ ನೋಟೀಸ.

ಕೆಳಗೆ ಸಹಿ ಮಾಡಿದ ನನಕಡೆಯಿಂದ ಯಾವತ್ತು ಜನರಿಗೆ ತಿಳಿಸೋದು ಏನಂದರೆ:—

ನಾನು ೫ ವರ್ಷದ ಹಿಂದೆ ಯಿತ್ತ ತಿಮ್ಮನಗೌಡಾ ಪಾಟೀಲ ಶಿರೂರ ಇವರ ಜೋಡಾ ಪಾತ್ತಿಲೆ ವ್ಯಾಪಾರ ಮಾಡುತ್ತಿದ್ದೆ. ಈಗ ಆ ಪಾತೀ ವ್ಯವಹಾರ ಹಾಲು ಕಾರ್ತೀಕ ಶು॥ ೧ ಕ್ಕೆ ತೀರಿಸಿ ಕೊಂಡಿದ್ದೇನೆ. ಈಗ ಸದರ ತಿಮ್ಮನಗೌಡಾ ಈತನ ಮಗಾ ಶಂಕರಗೌಡ್ರು ಇವರು ತಮ್ಮ ಸ್ವತಂತ್ರದಿಂದ ವ್ಯವಹಾರ ಮಾಡತಾರೆ. ಆದರೆ ಸದರ ಅಂಗಡಿಗೆ ನಮ್ಮ ಸಮ್ಮಂಧ ಇಲ್ಲಾ ಸದರ ಪಾತ್ತಿ ಅಂಗಡಿ ಸಮ್ಮಂಧಿ ಯಾವತ್ತು ಲೆಖ್ಖಪತ್ರ ನಿಕಾಲೆಯಾಗಿರುತ್ತದೆ. ಇನ್ನು ಮುಂದೆ ಸದರ ಪಾತ್ತಿ ಅಂಗಡಿ ಸಮ್ಮಂಧಿ ಕೊಡತಗೊಳ್ಳುವದು ಇದ್ದರೆ ಅದಕ್ಕೆ ಸದರ ತಿಮ್ಮನಗೌಡಾ ಪಾಟೀಲ ಈ ಹೆಸರಿನ ಅಂಗಡಿ ಅವರೆ ಜಬಾಬದಾರ ಇರತಾರೆ. ತಿಳಿಯಲಿ.

ತಾ॥ ೧೩-೧೧-೧೯೨೨

ಸಹಿ ಲಕ್ಷ್ಮಣ ಅರವಣಗೊಡ.

ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಶ್ರೀನಿವಾಸ ರಾಘವೇಂದ್ರ ಮಾಂಗಲವೇಢೆ (ಸಂಪಾದಕ) ಇವರು ಮುದ್ರಿಸಿದರು ಮತ್ತು ಅಲ್ಲಿಯೇ ಕೃಷ್ಣಾಚಾರ್ಯ ಬಂಡಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

ಕನ್ನಡ ನವಜೀವನದ ಅವತಾರ ಸಮಾಪ್ತಿಯು.

R. N. B 1509

# ಕನ್ನಡ ನವಜೀವನ

ಮಹಾತ್ಮಾ ಗಾಂಧಿಯವರ 'ಯಂಗ ಇಂಡಿಯಾ' ಮತ್ತು 'ನವಜೀವನ' ಗಳನ್ನು ಕನ್ನಡಿಸುವದೇ
ಈ ವಾರಪತ್ರಿಕೆಯ ಮುಖ್ಯೋದ್ದೇಶವು

ವರ್ಷ ೧ | ಬಾಗಲಕೋಟ ಮಾರ್ಗಶೀರ್ಷ ಶುದ್ಧ ೫ ಶಕೆ ೧೮೪೪ | ಸಂಚಿಕೆ ೫೨
ಗುರುವಾರ ತಾ. ೨೩ ನವ್ಹಂಬರ ೧೯೨೨

## ಕನ್ನಡ ನವಜೀವನ.

ಮಾರ್ಗಶೀರ್ಷ ಶುದ್ಧ ೫ ಗುರುವಾರ ಶಕೆ ೧೮೪೪

## ಕನ್ನಡ ನವಜೀವನದ ಅವತಾರ ಸಮಾಪ್ತಿಯು.

'ಈಶ್ವರೇಚ್ಛಾ ಬಲೀಯಸಿ" ಎಂಬ ಮಾತು ನಮಗೆ ಕಳೆದವಾರದಿಂದ ಬಲವತ್ತರವಾಗಿ ನೆನಪಾಗ ಹತ್ತಿದೆ. ಯಾಕಂದರೆ ಕನ್ನಡ ನವಜೀವನದ ಮೊದಲನೇ ವರ್ಷವು ಮುಗಿಯುತ್ತ ಬಂದಿತು. ಎರಡನೇ ವರ್ಷದಿಂದ ಹೆಚ್ಚಿಗೆ ಹುರುಪಿನಿಂದ ಕನ್ನಡಿಗರ ಸೇವೆ ಮಾಡಬೇಕು, ಮೊದಲಿನೇ ವರ್ಷದಲ್ಲಿ **ಯಂಗ ಇಂಡಿಯಾ ನವಜೀವನ** ಗಳನ್ನು ಕನ್ನಡಿಸುವದಿಷ್ಟೇ ನಮ್ಮ ಉದ್ದೇಶವಾಗಿ[ತ್ತು] ಆದರೆ ಎರಡನೇ ವರ್ಷದಿಂದ ಪ್ರಚಲಿತ ವಿಷಯಗಳನ್ನೆಲ್ಲ [ಪ್ರ]ತಿಪಾದಿಸಿ ಕರ್ನಾಟಕದ ಸೇವೆಯನ್ನು ಮಾಡಬೇಕಾಗಿದ್ದರಿಂದ [ಹೆ]ಚ್ಚಿನ ತರದ ಉತ್ಸಾಹವನ್ನು ತೋರಿಸಿ ಅಂತರಂಗ ಬಹಿರಂಗಗಳು [ಎರಡ]ನ್ನೂ ಆಕರ್ಷಿಸುವಂತೆ ಮಾಡಬೇಕೆಂದೆಣಿಸಿ ಉಬ್ಬಿಕೊಂಡು [ದಾ]ವಣಗೇರಿಯ ಮಂಜಪ್ಪಣ್ಣಾ ಹರ್ಡೇಕರ ಇವರಿಗೂ ಬೇಡಿಕೊಂ[ಡು] ಅವರ ಸವಿಯಾದ ಲೆಕ್ಕಣಿಕೆಯ ಮಾಧುರ್ಯವನ್ನು ಕನ್ನ[ಡಿಗ]ರಿಗೆ ಒದಗಿಸಿ ಕೊಡುವ ಏರ್ಪಾಡನ್ನು ಮಾಡಿದ್ದೆವು ಇದಕ್ಕಾ[ಗಿ] ಡಬಲ್ ಡೆಮಿ ಆಕಾರವನ್ನೂ ಮಾಡಬೇಕೆಂದು ನಿಶ್ಚಯಿಸಿ[ದ್ದೆವು]. ಆದರೆ ನಮ್ಮ ಇಚ್ಛೆಯೆಲ್ಲ ಬಯಲಾಯಿತು. ಈ ಬಗೆ[ಯಾಗಿ ನಮ]ಗೆ ಉಂಟಾದ ಖೇದದಿಂದ ನಮ್ಮ ಎದೆಯು ಇಬ್ಭಾಗವಾ[ಗಿದೆ]. ಈ ವಿಷಯವಾಗಿ ಈ ಲೇಖನವನ್ನು ಬರೆಯಲಿಕ್ಕೂ ವಾಚಕ[ರಿಗೆ] ಈ ಸಂಗತಿಯನ್ನು ಅರುಹಲಿಕ್ಕೂ ನಮಗೆ ಅತ್ಯಂತ ಖೇದವೆನಿಸುತ್ತದೆ. ಆದರೆ 'ಈಶ್ವರೇಚ್ಛಾ ಬಲೀಯಸೀ,, ಎಂಬ ವಾಕ್ಯದಿಂದಲೇ ನಾವು ಸಮಾಧಾನ ಹೊಂದಬೇಕಾಗಿದೆ

ಇನ್ನು **ಕನ್ನಡ ನವಜೀವನ** ಕ್ಕೆ ಈ ತರದ ಸಂಕಟವು ಒದಗಿದ್ದೊದನ್ನು ಏಕೆ ಬಂತೆಂಬುದನ್ನು ಅರಿತು ಕೊಳ್ಳಲು ನಮ್ಮ ವಾಚಕರು ಆತುರರಾಗಿರುವರು. ಸ್ವಾಭಾವಿಕವಾಗಿದ್ದರಿಂದ ನಾವು ತಡಮಾಡದೇ ಇಲ್ಲಿ ಆ ಮಾತನ್ನು ಎತ್ತುವೆವು. ಇದಕ್ಕೆ ಮುಖ್ಯವಾದ ಕಾರಣವೇನಂದರೆ ಕನ್ನಡಿಗರ ಸಹಾಯದ ಕೊರತೆಯೇ. ಕರ್ನಾಟಕದ ದುರ್ದೈವವು ದೂರಾಗುವ ಸಚಿಹ್ನೆಗಳು ಅಲ್ಲಲ್ಲಿ ತೋರ ಹತ್ತಿದ್ದರೂ ಆ ದುರ್ದೈವವು ಕೂಡಲೇ ದೂರಾಗುವ ಕಾಲವು ಇನ್ನೂ ಬಂದಿರುವದಿಲ್ಲ ಕರ್ನಾಟಕದ ರಾಜಕೀಯ ವಿಭಾಗಗಳೇ ಇದಕ್ಕೆ ಕಾರಣವೆಂಬುದರಲ್ಲಿ ಸಂಶಯವಿಲ್ಲ. ಯಾಕಂದರೆ ಉತ್ತರ ಕರ್ನಾಟಕದವರಿಗೆ ಮರಾಠಿ ಪತ್ರಗಳೇ ಇನ್ನೂ ಪ್ರಾಮುಖ್ಯವಾಗಿ ಜ್ಞಾನ ಜನನಿಗೆ ಸಾಧನವಾಗಿವೆ. ಅತ್ತ ಮೈಸೂರವರಿಗೆ ನಮ್ಮ ಭಾಷೆಯು ರುಚಿಸುವದಿಲ್ಲ. ಇತ್ತ ನಿಜಾಮ ಕರ್ನಾಟಕದವರಲ್ಲಿ ಜಾಗೃತಿಯಿಲ್ಲ. ಮಂಗಳೂರವರಲ್ಲಿ ಮಾತ್ರ ವಾಚನಾಭಿರುಚಿಯೂ ಇದೆ. ಕನ್ನಡ ವೃತ್ತ ಪತ್ರಗಳಿಗೆ ಪ್ರೋತ್ಸಾಹವನ್ನೂ ಕೊಡುತ್ತಾರೆಂಬುದು ಆನಂದದ ಸಂಗತಿಯು ಆದರೆ ಕೇವಲ ಒಂದೇ ಜಿಲ್ಲೆಯವರು ಎಲ್ಲ ಜಿಲ್ಲೆಗಳ ವೃತ್ತ ಪತ್ರಗಳಿಗೆ ಹೇಗೆ ಸಹಾಯವನ್ನು ಕೊಟ್ಟಾರು ?

**ಕನ್ನಡ ನವಜೀವನ** ಕ್ಕೆ ಹೆಚ್ಚಿಗೆ ಸಹಾಯವು ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಂದ ಕಳೆದ ವರ್ಷ ದೊರೆಯಿತು. ಆದರೆ ಅಷ್ಟೇ ಸಹಾಯದಿಂದ ನಮ್ಮ ಪತ್ರವು ನಡೆಯುವದು ಶಕ್ಯವಿಲ್ಲ. ಉಳಿದ ಅಲ್ಪ ಸ್ವಲ್ಪ ಸಹಾಯವು ಉತ್ತರ ಕರ್ನಾಟಕ ಮತ್ತು ನಿಜಾಮ ಕರ್ನಾಟಕದಿಂದ ದೊರೆಯಿತು. ಆದರೆ ಈ ವರ್ಷ ಎಲ್ಲ ಕಡೆಯಿಂದಲೂ ಸಹಾಯವು ಕಡಿಮೆಯಾಯಿತು. ನಾವು **ಚಂದಾದಾರರಿಗೆ ವಿನಂತಿ** ಯೆಂಬದಾಗಿ ೩—೪ ವಾರಗಳಿಂದಲೂ ನಮ್ಮ ಅಗ್ರಲೇಖದ ಮೇಲೆ ಪ್ರಕಟಿಸುತ್ತ ಬಂದಿರುವೆವಷ್ಟೇ? ಈ ವಿನಂತಿಯು ಪ್ರಕಟವಾದ ಮೊದಲನೇ ವಾರದಲ್ಲಿ ಯಾವ ಚಂದಾದಾರರಿಂದಲೂ **ಕನ್ನಡ ನವಜೀವನ** ವು ತಮಗೆ ಬೇಡವೆಂದು ಉತ್ತರವು ಬರಲಿಲ್ಲ ಎರಡನೇ ವಾರದಲ್ಲಿ ಹಲಕೆಲವರು ಬೇಡವೆಂದು ಬರೆದರು. ಮೂರನೇ ವಾರದಲ್ಲಿ ಇಮ್ಮಡಿಯಾಯಿತು. ಕಳೆದ ವಾರದಲ್ಲಿಯಂತೂ ನಮ್ಮ ಚಂದಾದಾರರಲ್ಲಿ ಅರ್ಧಕ್ಕಿಂತ

ಹೆಚ್ಚು ಜನರು ತಮಗೆ ಕನ್ನಡ ನವಜೀವನವು ಬೇಡವೆಂದು ಬರೆದಿರುವರು ಇದರಿಂದ ನಾವು ಹತಾಶರಾಗಿ **ಕನ್ನಡ ನವಜೀವನ**ವನ್ನು ಬಂದು ಮಾಡಬೇಕೆಂದು ನಿರ್ಧರಿಸಿದ್ದೇವೆ ಯಾಕೆಂದರೆ ಜನರಿಗೇ ಬೇಡಾದ ಮೇಲೆ ನಾವು ಮುಂದೆ ಸಾಗಿಸಿ ಫಲವೇನು? ಹಿಂದಕ್ಕೆ ಅಹಮ್ಮದಾಬಾದಿನಲ್ಲಿ ಮಹಾತ್ಮರ ಭೆಟ್ಟಿಯದಾಗ "ನೀವು **ಕನ್ನಡ ನವಜೀವನ**ದಲ್ಲಿ ಜಾಹೀರಾತನ್ನು ಏಕೆ ಹಾಕುತ್ತೀರೆಂದು ನಮಗ ಕೇಳಲು" ಹಾಗೆ ಜಾಹೀರಾತನ್ನು ಹಾಕದಿದ್ದರೆ **ಕನ್ನಡ ನವಜೀವನ**ದ ಪೋಷಣೆಯು ಆಗುವಂತಿಲ್ಲ ಯಾಕೆಂದರೆ ಚಂದಾದಾರರ ಸಂಖ್ಯೆಯು ತೀರ ಸ್ವಲ್ಪವೆಂದು ನಾವು ಹೇಳಿದ ಕೂಡಲೇ "ಜನರಿಗೆ ಬೇಡಾಗಿದ್ದರೆ ನೀವು ನಿಮ್ಮ ನವಜೀವನವನ್ನು ಬಂದು ಮಾಡತಕ್ಕದ್ದೆಂದು" ಉಪದೇಶಿಸಿದರು. ಆದರೆ ನಾವು ಒಂದು ವರ್ಷವಾದರೂ ಕೈಯಲ್ಲಿ ತಗೆದು ಕೊಂಡ ಮೇಲೆ ನಡಿಸಬೇಕೆಂದು ನಿಶ್ಚಯಿಸಿ ಹಾಗೆಯೇ ರಥವನ್ನು ಸಾಗಿಸಿದೆವು. ಮಹಾತ್ಮರನ್ನು ಹಿಡಿದಾಗ್ಗೆ ನವಜೀವನದ ೮೦೦ ಪ್ರತಿಗಳು ಹೊರಡುತ್ತಿದ್ದವು ಆದರ ಮುಂದೆ ಮಹಾತ್ಮರು ಸೆರೆಮನೆಗೆ ಹೋದ ಮೇಲೆ ದಿನೇ ದಿನೇ ಚಂದಾದಾರರ ಸಂಖ್ಯೆಯು ಕಡಿಮೆಯಾಗುತ್ತ ನಡೆಯಿತು ಮೊದಲೇ ಮೂರು ನೂರು ಜನ ಚಂದಾದಾರರು ಕೂಡದೇ ನಾವು ಕನ್ನಡ ನವಜೀವನವನ್ನು ಹೊರಡಿಸಬಾರದೆಂದು ನ್ಯಶ್ಚಿದ ಮಾಡಿಸಿದ್ದೆವಷ್ಟೇ? ಅದರಂತೆ ಮೂರು ನೂರು ಜನರು ಕೂಡುತ್ತಲೇ ಹೊರಡಿಸಿದೆವು ಆ ಮೇಲೆ ಚಂದಾದಾರರ ಸಂಖ್ಯೆಯು ಹಿಂದೆ ಹೇಳಿದಂತೆ ೮೦೦ ವರೆಗೆ ಆಯಿತು. ಆದರೆ ಈಗ್ಗೆ ಕಡಿಮೆಯಾಗುತ್ತ ಯಾಗುತ್ತ ೨೦೦ಕ್ಕೆ ಹೋಗಿದೆ. ಮಹಾತ್ಮರ ಲೇಖವ ಹೊರ್ತಾಗಿ ಉಳಿದವರ ಲೇಖವು ಕನ್ನಡಿಗರಿಗೆ ಬೇಡಾಗಿದೆಂಬದು ಈ ಚಂದಾದಾರರ ಸಂಖ್ಯೆಯು ಪರಿಳತದಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ ಕನ್ನಡಿಗರ ಈ ಕೃತ್ಯತವನ್ನು ಅರಿತುಕೊಂಡು ನಾವು ಈಗ್ಗೆ ಈ **ಕನ್ನಡ ನವಜೀವನದ ಅವತಾರವನ್ನು ಸಮಾಪ್ತಗೊಳಿಸು**ವದಾಗಿ ನಿಶ್ಚಯಿಸಿದ್ದೇವೆ. ಇನ್ನು ಮಹಾತ್ಮರು ಮರಳಿ ಬಂದ ಮೇಲೆ ಕನ್ನಡಿಗರಿಗೆ ಅವರ ಲೇಖಾಮೃತವು ಪುನಃ ಬೇಕಾದರೆ ಆಗ್ಗೆ ಮತ್ತೆ **ಕನ್ನಡ ನವಜೀವನ**ವನ್ನು ಹೊರಡಿಸುವ ಬಗ್ಗೆ ವಿಚಾರಿಸುವೆವೆಂದು ಆಶ್ವಾಸನವನ್ನಿತ್ತು ಸಾರ್ವಜನಿಕ ರೀತಿಯಿಂದ ನಾವು ಕನ್ನಡಿಗರ ಅಪ್ಪಣೆಯನ್ನು ತೆಗೆದು ಕೊಳ್ಳುತ್ತೇವೆ.

---

# ಟಿಪ್ಪಣಿಗಳು.

## ಲೆಖ್ಖ ಪತ್ರವು.

**ಕನ್ನಡ ನವಜೀವನದ** ಕಳೆದ ವರ್ಷದ ಲೆಖ್ಖ ಪತ್ರವನ್ನು ನಾವು ಈ ಸಂಚಿಕೆಯಲ್ಲಿ ಬೇರೆ ಕಡೆಗೆ ಕೊಟ್ಟಿದ್ದೇವೆ. ಆದರಿಂದ ಮೊದಲನೇ ವರ್ಷದಲ್ಲಿ ನಮಗೆ ಲಾಭವಾಗಿದೆಯೋ ಅಥವಾ ಹಾನಿಯಾಗಿದೆಯೋ ಎಂಬದನ್ನು ಕನ್ನಡಿಗರೇ ನೋಡಿ ಕೊಳ್ಳಬೇಕಾಗಿ ವಿನಂತಿಯದೆ. ಹೀಗೆ ಲೆಖ್ಖ ಪತ್ರವನ್ನ ಸಾಧರಣವಾಗಿ ಯಾರೂ ಪ್ರಸಿದ್ಧಿಸುವದಿಲ್ಲ. ಆದರೂ ಕೂಡ ಕನ್ನಡಿಗರಿಗೆ **ಕನ್ನಡ ನವಜೀವನ**ದ ಕಳೆದ ವರ್ಷದ ಸ್ಥಿತಿಯು ಗೊತ್ತಾಗಬೇಕೆಂದು ನಾವು ಬೇಕೆಂತಲೆ ಪ್ರಕಟ ಮಾಡಿರುವೆವು ಸಂಪಾದಕರೂ ವ್ಯವಸ್ಥಾಪಕರೂ ಕೂಡಿ ಕಳೆದ ವರ್ಷ ಪ್ರತಿ ತಿಂಗಳಿಗೆ ೩೦ ರೂ॥ ಗಳನ್ನೇ ತಮ್ಮ ಪಾಲಿಗೆ ಬಂದದ್ದರಲ್ಲಿ ಹಂಚಿಕೊಂಡು ಧೈರ್ಯಗುಂದದೇ ಅಖಂಡ ಒಂದು ವರ್ಷದ ವರೆಗೆ ಕೆಲಸ ಮಾಡಿದರು ಹಗಲು ರಾತ್ರಿ ಕೆಲಸ ಮಾಡಿದರು ಸಂಪಾದಕರಿಗೆ ೧೫ ರೂ॥ ವ್ಯವಸ್ಥಾಪಕರಿಗೆ ೧೫ ರೂ॥ ಗಳು ಸಾಕಾಗುವವೋ ಹೇಗೆಂಬದನ್ನು ವಾಚಕರೇ ವಿಚಾರ ಮಾಡಬೇಕು ಇನ್ನು ದೊರೆತಷ್ಟು ದೊರೆಯಲಿ ಎಂದರೆ ಅದೂ ಇಲ್ಲ ಯಾಕೆಂದರೆ ಲೆಕ್ಕದ ಕಡೆಗೆ ನೋಡಿದರೆ ಎಷ್ಟು ಹಣವು ವರ್ಷದ ಕೊನೆಗೆ ಕಡಿಮೆ ಬಿದ್ದಿತೆಂಬದು ಗೊತ್ತಾಗುತ್ತದೆ ಅಂಥ ವರ್ಷದ ವರೆಗೆ ಶ್ರಮ ಬಿಟ್ಟು ವರ್ಷದ ಕೊನೆಗೆ ಕೈಯಿಂದಲೇ ಸರಾಸರಿ ೩೦೦ ರೂ॥ ಗಳನ್ನು ಹಾಕಬೇಕಾಗಿದೆ ಇದರ ಮೇಲಿಂದ ಕರ್ನಾಟಕದಲ್ಲಿ ವೃತ್ತ ಪತ್ರಕಾರರ ಸ್ಥಿತಿಯು ಹೇಗಿರಬಹುದೆಂಬದನ್ನು ವಾಚಕರು ಅವಶ್ಯವಾಗಿ ತಿಳಿದು ನೋಡಿಕೊಳ್ಳಬೇಕು, ಇದರಿಂದ ಒಬ್ಬನಾದರೂ ಕನ್ನಡಿಗನು ಮರುಗಿ ಕರ್ನಾಟಕದ ನಿಜ ಸ್ಥಿತಿಯನ್ನರಿತು ಕರ್ನಾಟಕದ ಈ ಹೀನ ಸ್ಥಿತಿಯನ್ನು ದೂರ ಮಾಡಲು ಟೊಂಕ ಕಟ್ಟಿ ನಿಂತು ಕೊಂಡರೆ ನಾವು ವರ್ಷದ ವರೆಗೆ ಶ್ರಮ ಬಟ್ಟ ಫಲವು ದೊರೆತಂತಾಯಿತೆಂದು ಭಾವಿಸುವೆವು.

× × ×

## ಚಂದಾದಾರರ ಹಣವು.

ನಮಗೆ ಯಾವದೇ ಬಗೆಯ ಹಾನಿ ತಪ್ಪಿದರೂ ನಾವು ಚಂದಾದಾರರ ಹಾನಿಯನ್ನು ಯತ್ಕಿಂಚಿತ್ತಾದರೂ ಮಾಡಲಿಚ್ಛಿಸುವದಿಲ್ಲ. ಯಾಕೆಂದರೆ ಅವರು ಪ್ರೀತಿಯಿಂದ **ಕನ್ನಡ ನವಜೀವನ**ಕ್ಕೆ ಚಂದಾದಾರರಾದರು. ತಾವಾಗಿಯೇ ಉತ್ಸಾಹದಿಂದ ಚಂದಾ ಹಣವನ್ನು ಸಲ್ಲಿಸಿದರು. ಅಲ್ಲದೇ ಕನ್ನಡ ನಾಡಿನಲ್ಲಿ ವೃತ್ತ ಪತ್ರಕಾರರ ವ್ಯವಸಾಯವೆಂದರೆ ಮೊದಲು ಜಾಹೀರಾತು ಕೊಟ್ಟು ಪತ್ರಿಕೆಗಳನ್ನು ತೆಗೆಯುವ ಹಾಗೆ ಮಾಡುವೆವು ಹೀಗೆ ಮಾಡುವೆವು ಎಂಬದಾಗಿ ವಚನ ಕೊಟ್ಟು ಜನರನ್ನು ಆಕರ್ಷಿಕೊಂಡು ಬಂದಷ್ಟು ಹಣವನ್ನು ಸೆಳೆದು ಮಧ್ಯದಲ್ಲಿ ಪತ್ರಿಕೆಯನ್ನು ನಿಲ್ಲಿಸಿ ಬಿಡುವದು. ಇತ್ಯಾದಿ, ಇತ್ಯಾದಿ, ಅಪವಾಕ್ಯಗಳು ದಿನಾಲು ಕೇಳ ಬರುತ್ತವೆ, ಇದರಲ್ಲಿ ಸತ್ಯಾಂಶವಿಲ್ಲವೆಂದು ನಾವೇನು ಅನ್ನುವದಿಲ್ಲ. ಹಲ ಕೆಲವ ಪತ್ರಿಕಾಕರ್ತರು ಹೀಗೆ ಮಾಡಿರುವದು ನಿಜವು, ಆದರೆ ಆ ಬಗೆಯ ಕಲಂಕವು ಮಹಾತ್ಮರ ಅನುಯಾಯಿಗಳಾದ ನಮಗೆ ಎಳ್ಳಷ್ಟಾದರೂ ಬೇಡಾಗಿದೆ. ಆದ್ದರಿಂದಲೇ **ಕನ್ನಡ ನವಜೀವನ**ವನ್ನು ಬಂದು ಮಾಡುವದು ಆಕಸ್ಮಾತ್ತಾಗಿ ಇದೇ ವಾರದಲ್ಲಿಯೇ ಗೊತ್ತಾಗಿದ್ದರೂ ಕೂಡ ವಿಲಂಬ ಮಾಡದೆ ಹಗಲು ರಾತ್ರಿ ಕುಳಿತು ಲೆಕ್ಕ ಮಾಡಿ ಜಾನೇವಾರಿ ಫೇಬ್ರುವಾರಿ ಮೊದಲಾದ ತಿಂಗಳುಗಳಲ್ಲಿ ಚಂದಾದಾರರಾದವರಲ್ಲಿ ಯಾರಿಗೆ ಎಷ್ಟು ಹಣವು ಸಲ್ಲತಕ್ಕದ್ದೆಂಬದನ್ನು ಸ್ಪಷ್ಟವಾಗಿ ಪ್ರಸಿದ್ಧ ಮಾಡಿದ್ದೇವೆ ಲಕ್ಷ್ಯ ಮಾಡುವದರಲ್ಲಿ ಎಲ್ಲಿಯಾದರೂ ತಪ್ಪು ತಡೆಗಳಾಗಿದ್ದರೆ ಕೂಡಲೇ ತಿಳಿಸಬೇಕಾಗಿ ಚಂದಾದಾರರಿಗೆ ಬೇಡಿಕೊಳ್ಳುತ್ತೇವೆ. ಇನ್ನು ಒಂದು ದಿನಗಳಲ್ಲಿ ಚಂದಾದಾರರ ಪಾಲಿನ ಹಣವು ಅವರವರಿಗೆ ಕಳಿಸಲ್ಪಡುವವು. ನಮಗೆ ಈಗ್ಗೆ ಒದಗಿದ ಹಾನಿಯನ್ನು ಕಂಡು ಯಾರಾದರೂ ತಮಗೆ ಈ ಹಣವು ಮರಳಿ ಬೇಡವೆಂದಿದ್ದರೆ ತಿಳಿಸು

ಮಾತ್ರ ಬೇಗನೇ ನಮಗೆ ಉತ್ತರ ಬರೆದು ತಿಳಿಸಬೇಕಾಗಿ ಕೋರುತ್ತೇವೆ. ಚಂದಾದಾರರಂತೆಯೇ ಜಾಹೀರಾತ ಕೊಟ್ಟವರಿಗಾದರೂ ಅವರ ಹೆಸರಿನ ಮುಂದೆ ತೋರಿಸಿದಂತೆ ಅವರ ಪಾಲಿನ ಹಣವು ಮರಳಿ ಕಳಿಸಲ್ಪಡುವದು. ಅವರಲ್ಲಿಯೂ ಯಾರಿಗಾದರೂ ನಮ್ಮ ಹಾನಿಯ ಬಗ್ಗೆ ಕನಿಕರ ಹುಟ್ಟಿದರೆ ಅವರೂ ದಯಮಾಡಿ ನಮಗೆ ಕೂಡಲೇ ಪತ್ರ ಬರೆದು ತಿಳುಹಬೇಕಾಗಿ ಪ್ರಾರ್ಥನೆಯಿದೆ.

× × ×

ಮೇಲೆ ಚಂದಾದಾರರಿಗೂ ಜಾಹೀರಾತು ಕೊಟ್ಟವರಿಗೂ ನಾವು ಕೊಡುವ ಹಣದ ಬಗ್ಗೆ ಬರೆದಂತೆ ಚಂದಾದಾರರಿಂದಲೂ ಜಾಹೀರಾತು ಕೊಟ್ಟವರಿಂದಲೂ ನಮಗಾದರೂ ಹಲಕೆಲವು ಹಣವು ಬರಬೇಕಾಗಿದೆಯೆಂದು ಪ್ರಸಿದ್ಧವಾದ ಲೆಕ್ಕದ ಪಟ್ಟಿಯಿಂದ ಕಂಡು ಬರುವದು. ಆ ಪ್ರಕಾರ ಈ ಮಹನೀಯರೆಲ್ಲ ಸದಯಾಂತಃಕರಣದಿಂದ ನಮಗೆ ಸಲ್ಲತಕ್ಕ ಹಣವನ್ನು ಬೇಗನೇ ಕಳುಹಿಸಿ ಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

---

# ಆತ್ಮ ನಿವೇದನ

ಈ ಹೊತ್ತಿನ ಅಗ್ರಲೇಖ ಟಿಪ್ಪಣಿ ಕನ್ನಡ ನವಜೀವನದ ಲೆಕ್ಕದ ಪಟ್ಟಿಗಳನ್ನೋದಿ ಎಲ್ಲ ಸಮಾಚಾರವನ್ನು ನನ್ನ ಮುದ್ದು ಕನ್ನಡಿಗರು ಅರಿತು ಕೊಂಡಿರಬಹುದು. ಒಂದು ವರ್ಷವಂತೂ ಸಾರ್ವಜನಿಕ ಸೇವೆಯನ್ನು **ಕನ್ನಡ ನವಜೀವನ** ಮತ್ತು **ವಿದ್ಯಾರಣ್ಯ ಮುದ್ರಾ ಮಂದಿರ** ಗಳ ಮುಖಾಂತರವಾಗಿ ನನ್ನ ಅಲ್ಪ ಯೋಗ್ಯತೆಯ ಪ್ರಕಾರ ಮಾಡಿದೆನು. ಈ ಕಾರ್ಯದಲ್ಲಿ ಅಲ್ಪ ಯೋಗ್ಯತೆಯವನಾದ ನಾನು ಎಷ್ಟೋ ತಪ್ಪುಗಳನ್ನು ಮಾಡಿದ್ದರೂ ಸಹ ಉದಾರ ಹೃದಯರಾದ ಕನ್ನಡಿಗರು ಅದನ್ನು ಕ್ಷಮಿಸಿ ನನ್ನ ಅಲ್ಪ ಸೇವೆಯನ್ನೇ ಅರ್ಪಿಸಲು ಆಸ್ಪದ ಕೊಟ್ಟಿದ್ದಕ್ಕಾಗಿ ಋಣಿಯಾಗಿದ್ದೇನೆ.

ಕಳೆದ ವರ್ಷ ಸರಾಸರಿ ೩೫೦ ರೂ|| ಗಳ ಹಾನಿ ತಟ್ಟಿದರೂ ಕೂಡ ಮುಂದಿನ ವರ್ಷ ಡಬಲ್ ಡೇಮಿ ಆಕಾರವನ್ನು ಹೊರಡಿಸುವ ಧೈರ್ಯವನ್ನು ಮಾಡಲು ಮೊದಲು ಮೂರು ಕಾರಣಗಳಿದ್ದವು.

(೧) ಈಗಿನ ಚಂದಾದಾರರೆಲ್ಲ ಮುಂದಿನ ವರ್ಷ ಉಳಿಯುವರೆಂಬ ವಿಶ್ವಾಸ.

(೨) ಮಂಜಪ್ಪನವರ ಹರಡಿಕರರ ಸವಿ ಕಟ್ಟಾದ ಲೇಖಗಳಿಂದ ಚಂದಾದಾರರು ಹೆಚ್ಚಾಗುವರೆಂಬ ತರ್ಕ

ಮತ್ತು (೩) ಕನ್ನಡ ನವಜೀವನದ ಮೊದಲಿನ ಉದ್ದೇಶದೊಂದಿಗೆ ಸ್ವತಂತ್ರ ವಿಷಯ ವಿವೇಚನೆಯನ್ನೂ ಮಾಡಿದರೆ ಕನ್ನಡ ನವಜೀವನವು ಕನ್ನಡಿಗರ ಪ್ರೀತಿಗೆ ಹೆಚ್ಚಿಗೇ ಪಾತ್ರವಾಗುವದೆಂಬ ಮತ್ತೊಂದು ನಂಬಿಗೆ.

ಈ ಮೂರೂ ಕಾರಣಗಳು ಸಯುಕ್ತವಾಗಿ ತೋರಿದ್ದರಿಂದ ನೂತನ ವರ್ಷಾರಂಭಕ್ಕೆ ಹೊಸ ರೀತಿಯಿಂದ ಪ್ರಯತ್ನಿಸಿ ಪುನಃ ಇನ್ನೊಂದು ವರ್ಷ ಪ್ರಯತ್ನ ಮಾಡಬೇಕೆಂದು ಗೊತ್ತು ಪಡಿಸಿದ್ದೆನು. ಆದರೆ ನನ್ನ ಮೊದಲನೇ ವಿಶ್ವಾಸವೇ ಸುಳ್ಳಾಗಿದೆಂಬದು ಅನುಭವದಿಂದ ಕಂಡು ಬಂದಿತು. ಮೊದಲಿನ ಕಂಬವೇ ಕಡಿದುಕೊಂಡು ಬಿದ್ದದರಿಂದ ಮುಂದಿನ ಆಧಾರವು ಇಲ್ಲದಂತಾಯಿತು. ಕನ್ನಡ ನಾಡಿನಲ್ಲಿ ಸ್ವತಂತ್ರವಾದ ವಾರ ಪತ್ರಿಕೆಗಳು ಅನೇಕ ಇರುವದರಿಂದ ಪುನಃ ಮತ್ತೊಂದು ವಾರ ಪತ್ರಿಕೆಯು ಕನ್ನಡಿಗರಿಗೆ ಬೇಕಾಗಿಲ್ಲವೆಂಬದು ಇದರಿಂದ ಸ್ಪಷ್ಟವಾಗುತ್ತದೆ ಮತ್ತು ವಿಜಾಪೂರದಲ್ಲಿಯೂ ಬಾಗಲಕೋಟೆಯಲ್ಲಿಯೂ ಈಗಾಗಲೇ ಎರಡು ವಾರ ಪತ್ರಿಕೆಗಳಿದ್ದದರಿಂದ ಈ ಜಿಲ್ಲೆಗೂ ಇನ್ನೊಂದು ವಾರ ಪತ್ರಿಕೆಯ ಅವಶ್ಯಕತೆ ಕಾಣುವದಿಲ್ಲ. ಯಾವದು ಅವಶ್ಯಕವಾಗಿಲ್ಲವೋ ಅದರಲ್ಲಿ ಉತ್ಸಾಹವನ್ನು ಹಾಕುವದೂ ಯೋಗ್ಯ ಕಾಣುವದಿಲ್ಲ. ಆದ್ದರಿಂದ ನಾನು ಸದ್ಯಕ್ಕೆ **ವಿದ್ಯಾರಣ್ಯ ಮುದ್ರಾಮಂದಿರದ** ಮುಖಾಂತರವಾಗಿಯೂ ಮಾತ್ರ ನನ್ನ ಅಲ್ಪ ಯೋಗ್ಯತೆಯ ಪ್ರಕಾರ ಕರ್ನಾಟಕದ ಸೇವೆಯನ್ನು ಮಾಡುವೆನು ಮುಂದೆ ಕರ್ನಾಟಕ ದೇವಿಯು ಆಶೀರ್ವದಿಸಿದರೆ ಪುನಃ ಮತ್ತೊಂದು ರೂಪದಿಂದ ಕರ್ನಾಟಕದ ಸೇವೆಗೆ ಕಂಕಣ ಬದ್ಧನಾಗಿ ನಿಲ್ಲುವೆನು. ಆಗ್ಗೆ ಕನ್ನಡಿಗರ ಸೇವೆ ಮಾಡಲು ಪುನಃ ಆಸ್ಪದ ದೊರೆಯುವದೆಂದು ನೆರೆ ನಂಬಿದ.

ಕನ್ನಡಿಗರ
ಮುದ್ದು ಆಳು ಮಗನಾದ
ಶ್ರೀನಿವಾಸರಾವ ರಾಜೇರಾವ ಮಂಗಳವೇಡೆ.

---

# ಇಹವೃತ್ತ.

ಶ್ರೀಮಂತ ಬಾಳಕೃಷ್ಣದಾಸ ವೆಂಕಟದಾಸ ಇವರು ಈ ಊರಲ್ಲಿಯ "ವಾಣೀ ವಿಲಾಸ ಸಂಸ್ಕೃತ ಪಾಠ ಶಾಲೆಗೆ" ೧೦೦ ರೂಪಾಯಿ ದೇಣಗಿಯಾಗಿ ಕೊಟ್ಟದ್ದಲ್ಲದೆ ಪ್ರತಿ ವರುಷ ೧೦೦ ರೂಪಾಯಿ ಕೊಡುತ್ತೇವೆಂದು ಆಶ್ವಾಸನವನ್ನಿತ್ತಿದ್ದಾರೆ. ಸ್ತುತ್ಯ! ಉಳಿದ ಧನಿಕರಾದರೂ ಶೇಟಜಿಯವರ ಅನುಕರಣ ಮಾಡಿ ಜನರ ಪ್ರೀತಿಗೆ ಪಾತ್ರರಾಗಬೇಕೆಂದು ಬೇಡಿಕೊಳ್ಳುತ್ತೇವೆ.

* * *

ರಾ|| ರಾ|| ಬಿಳಂದರಖಾನ ಪಠಾಣ ಇವರ ವಾಣಿಯ ಲಗ್ನದಲ್ಲಿ ಎಲ್ಲರೂ ಖಾದಿಯ ವಸ್ತ್ರವನ್ನೇ ಧಾರಣ ಮಾಡಿದ್ದರು. ಅನುಕರಣನೀಯವಾದದ್ದು.

ಇಲ್ಲಿ ಕಳೆದ ರವಿವಾರ ಹೊಸ ದವಾಖಾನೆಯ ಅನಾವರಣ ಸಮಾರಂಭವು ಕಲೆಕ್ಟರ ಹಸ್ತದಿಂದ ಆಯಿತು. ಆ ಕಾಲಕ್ಕೆ ಮುನಸಿಪಾಲಟಿಯ ಅಧ್ಯಕ್ಷರಾದ ಘಟಪಪ್ಪನವರಾ ಮೋಟಗಿ ಇವರು ಶೇಟ ರಾಮದಾಸ ದರಬಾರ ಇವರು ದವಾಖಾನೆಯ ಸಲುವಾಗಿ ವಚನ ಕೊಟ್ಟ ೧೦೦೦೦ ರೂಪಾಯಿಗಳನು ಈಗ ಕೊಡುವದಿಲ್ಲೆಂದು ಹೇಳುವದು ಅವರಿಗೆ ಯೋಗ್ಯವಲ್ಲವಾದ್ದರಿಂದ ಅವರ ಈ ಕೃತಿಯನ್ನು ನಾಗರಿಕರ ವತಿಯಿಂದ ನಿಷೇಧಿಸುತ್ತೇವೆಂದು ಹೇಳಿದರಂತೆ! ಕಡೆಗೆ ವಾಸುದೇವಾಚಾರ್ಯ ಜಹಾಗೀರದಾರರೂ ಇದೇ ಆಶಯದ ಭಾಷಣವನ್ನು ಮಾಡಿದರಂತೆ! ಹೀಗೆ ಮಾಡಲು ಇವರಿಗೆ ಬಾಗಲಕೋಟೆಯವರು ಅಧಿಕಾರ ಪತ್ರವನ್ನು ಕೊಟ್ಟಿದ್ದರೇನು? ಈ ಪ್ರಕಾರ ಇವರು ಮಾಡಿದ್ದು "ಅವ್ಯಾಪಾರೇಷು ವ್ಯಾಪಾರಃ" ಎಂದು ಅನ್ನಲಿಕ್ಕೆ ಏನೂ ಅಡ್ಡಿಯಿಲ್ಲ.

| ಚಂದಾದಾರರಿಗೆ ಸಲ್ಲಸತಕ್ಕ ಸಂಚಿಕೆಗಳು. | ಚಂದಾದಾರರ ರಜಿಷ್ಟರ ನಂಬರ |
|---|---|
| ೧ | ೮೫, ೮೮, ೧೩೯, ೧೪೫ ರಿಂದ ೧೪೭ ಪೂರ್ತಿ ಅ ೯೫ |
| ೨ | ೫೧ ರಿಂದ ೫೩, ೮೬, ೯೨, ೯೪, ೯೫, ೧೩೪, ೧೩೭, ೧೪೦ ರಿಂದ ೧೪೩. ೧೫೦, ೨೫೮ |
| ೩ | ೮೪, ೮೭, ೮೯ ರಿಂದ ೯೧. ೯೭ ರಿಂದ ೧೦೨, ೧೩೩, ೧೫೧, ೧೫೨, ೧೫೫ ರಿಂದ ೧೫೭ ೧೬೦ ರಿಂದ ೧೬೮ ೧೭೪, ೧೭೫, ೧೮೫. |
| ೪ | ೯೬, ೧೦೫, ೧೮೧ ರಿಂದ ೧೮೩ |
| ೫ | ೧೦೩, ೧೦೪, ೧೦೬ ರಿಂದ ೧೧೪, ೧೧೭ ರಿಂದ ೧೨೩. ೧೪೮, ೧೪೯, ೧೫೩, ೧೫೪, ೧೭೧ ರಿಂದ ೧೭೩. ೧೮೭, ೧೮೮, ೨೫೮, ೨೬೯. |
| ೬ | ೧೧೫, ೧೧೬, ೧೨೪, ೧೨೫, ೧೩೦, ೧೯೫, ೧೯೬, |
| ೭ | ೧೨೬ ರಿಂದ ೧೩೧. ೧೬೯, ೧೭೬ ರಿಂದ ೧೭೯. ೧೯೦ ರಿಂದ ೧೯೪, ೨೦೬ |
| ೮ | ೧೪೪, ೧೯೭, ೨೧೬, ೨೨೬, ೨೨೭, ೨೪೭, ೨೪೯, ೨೬೨, ೨೬೩, ೨೬೫, ೮/೯೬ |
| ೯ | ೧೯೮ ರಿಂದ ೨೦೫, ೨೩೨, |
| ೧೦ | ೨೦೭ ರಿಂದ ೨೧೬ ೮/೧೦೦ |
| ೧೧ | ೨೪೮, |
| ೧೨ | ೨೩೫, ೨೩೬, ೨೪೪ ರಿಂದ ೨೪೬, ೨೫೧, |
| ೧೪ | ೨೫೨, ೨೬೧, |
| ೧೫ | ೨೫೩, |
| ೧೬ | ೨೫೫, ೨೫೬, ೨೫೭, ೨೫೯, ೨೬೦, |
| ೧೭ | ೦ |
| ೧೮ | ೮/೯೭ ೮/೯೮ |
| ೧೯ | ೦ |
| ೨೦ | ೨೬೪, |
| ೨೧ | ೦ |
| ೨೨ | ೦ |
| ೨೩ | ೦ |
| ೨೪ | ೦ |
| ೨೫ | ೨೬೮ |
| ೨೬ | ೦ |
| ೨೭ | ೦ |
| ೨೮ | ೦ |
| ೨೯ | ೨೭೧, ೨೭೩, |
| ೩೦ | ೨೭೪, |
| ೩೧ | ೨೭೮, ೨೭೯, |
| ೩೨ | ೦ |
| ೩೩ | ೨೮೦ |
| ೩೪ | ೨೭೬, ೨೭೭, ೨೮೧, ೨೮೪, |
| ೩೫ | ೦ |
| ೩೬ | ೨೮೬ ರಿಂದ ೨೮೯ |
| ೩೭ | ೦ |
| ೩೮ | ೦ |
| ೩೯ | ೦ |
| ೪೦ | ೦ |
| ೪೧ | ೦ |
| ೪೨ | ೦ |

| | |
|---|---|
| ೪೩ | ೨೯೦, ೨೯೧, ೨೯೩, ೨೯೪ |
| ೪೪ | ೦ |
| ೪೫ | ೨೯೬, ೨೯೭ |
| ೪೬ | ೦ |
| ೪೭ | ಬ/೧ |
| ೪೮ | ೦ |
| ೪೯ | ಬ/೩ ಬ/೪ ಬ/೫ |

**ಟೀಪು:** —ಇದರಲ್ಲಿ ೦-೮-೦ ಆಣೆ ಒಳಗಿನ ರಕಮು ಚಂದಾದಾರರಿಗೆ ಕಳಿಸುವದು ಶಕ್ಯವಿಲ್ಲ. ಅವರಿಗೆ ಹಿಂದಿನ ಉಳಿದ ಸಂಚಿಕೆಗಳು ಬೇಕಾದಲ್ಲಿ ಅದರಂತೆ ಇತ್ತ ಕಡೆಗೆ ತಿಳಿಸಿದರೆ ಕಳಿಸುವದರಲ್ಲಿ ಬರುವದು.

---

# ಕನ್ನಡ ನವಜೀವನದ ಕಳೆದ ವರ್ಷದ

## ಆದಾಯ ವೆಚ್ಚಗಳ ಪಟ್ಟಿಯು.

**ಆದಾಯ**

| ರು. ಆ. ಪೈ. | |
|---|---|
| ೧೩೫೧-೦-೯ | ಚಂದಾದಾರರಿಂದ ಬಂದದ್ದು. |
| ೨೩೬-೧೪-೬ | ಎಜಂಟರ ಮುಖಾಂತರ ಬಂದದ್ದು |
| ೧೭೬-೧೨-೦ | ಜಾಹೀರಾತಿನಿಂದ ಬಂದದ್ದು. |
| ೧೭೬೪-೧೧-೩ | |

**ವೆಚ್ಚ**

| ರು. ಆ. ಪೈ. | |
|---|---|
| ೬೫೨-೮-೦ | ಮುದ್ರಣ |
| ೩೨೫-೧೫-೦ | ಕಾಗದ |
| ೩೩೯-೩-೯ | ಅಂಚೆಯ ಬಗ್ಗೆ |
| ೭೨-೪-೦ | ಜಾಹೀರಾತು. |
| ೯೭-೦-೦ | ಪ್ರವಾಸ |
| ೧೧೬-೦-೦ | ಕಾರಕೂನನ ವೇತನ |
| ೩೬೦-೦-೦ | ಸಂಪಾದಕ ಮತ್ತು ವ್ಯವಸ್ಥಾಪಕ |
| ೫೧-೨-೦ | ಕಿರಕೋಳ. |
| ೧೦೦-೦-೦ | ಚಂದಾದಾರರಿಗೆ, ಜಾಹೀರಾತಿನವರಿಗೆ ವಗೈರೆ ಪರತ ಕೊಡತಕ್ಕ ಬಗ್ಗೆ. |
| ೨೧೧೪-೦-೯ | |

---

ಒಟ್ಟು ೧೭೬೪ ರು. ೧೧ ಆ ೩ ಪೈಗಳ ಆದಾಯವಿದ್ದು ವೆಚ್ಚವು ೨೧೧೪ ರು. ೦ ಆ ೯ ಪೈಗಳು ಆಗಿರುವದರಿಂದ ನಮಗೆ ೩೪೯ ರು. ೫ ಆ. ೬ ಪೈಗಳ ಹಾನಿಯು ತಗಲಿರುವದು.

**ಟೀಪು:**—ನಮಗೆ ಇಲ್ಲಿಯ ಜನರ ಕಡೆಯಿಂದಲೇ ಬಹಳ ರಕಮು ಬರತಕ್ಕದ್ದಿದ್ದರಿಂದ ಅದನ್ನು ಮುದ್ರಿಸಿಲ್ಲ. ಅದ್ದರಿಂದ ಈ ಊರವರು ನಮಗೆ ಎಷ್ಟು ಕೊಡತಕ್ಕದ್ದೆಂಬದನ್ನು ವಿಚಾರ ಮಾಡಿ ನಮ್ಮ ಕಡೆಗೆ ಕೊಡಬೇಕಾಗಿ ವಿನಂತಿ. ಹಾಗೂ ಜಾಹೀರಾತದಾರರ ಕಡೆಯಿಂದ ಬರತಕ್ಕ ರಕಮು ಹಾಗೂ ಅವರಿಗೆ ನಾವು ಕೊಡತಕ್ಕ ರಕಮಿನಲ್ಲಿ ವಿಶೇಷವಾಗಿ ನಮ್ಮ ಊರವರ ಸಂಬಂಧವೇ ಇದ್ದದರಿಂದ ಅದನ್ನಾದರೂ ಮುದ್ರಿಸಿರುವದಿಲ್ಲ.

ವ್ಯವಸ್ಥಾಪಕ.

## ROYAL DRINK

**Sovereign Tea! Sovereign Tea**

ಲಿಪ್ಟನ್ ಚಹಾಗಿಂತ ಈ ಸಾವ್ಹರಿನ ಚಹವು ಹೆಚ್ಚು ರುಚಿಯಾಗಿರುತ್ತದೆ; ಒಮ್ಮೆಯಾದರೂ ಅನುಭವತೆಗೆದು ಕೊಳ್ಳಿರಿ ಅಂದರೆ ನಿಮಗೆ ಬೇರೆ ಚಹವು ಬೇಡವೆಂದೇ ಖಾತ್ರಿಯಾಗುವದು

ಬೆಲೆ—೮೧ ಪೌಂಡಿಗೆ ೧-೫-೦ ರುಪಾಯಿ ೪೮ ಡಬ್ಬಿಯ ಪೂರ್ಣ ಪೆಟ್ಟಿಗೆಯನ್ನು ಕೊಂಡರೆ ೩ ರೂ ಕಮೀಶನ್

**ಮೋಹನಲಾಲ ಹರಿಜೀವನದಾಸ ಮೋಹತಾ.**

ಪೋಲೀಸ ಚಾವಡೀ ಎದುರಿಗೆ ಬಾಗಲಕೋಟ

---

# ಶುದ್ಧ ಸ್ವದೇಶೀ ಶುದ್ಧ ಸ್ವದೇಶಿ !!

ಶುದ್ಧ ಸ್ವದೇಶೀ ವಸ್ತುಗಳನ್ನು ಸುಲಭವಾದ ಕ್ರಯಕ್ಕೆ ತೆಗೆದುಕೊಳ್ಳುವ ಅಪೇಕ್ಷೆಯು ಇದ್ದಲ್ಲಿ ನಮ್ಮಲ್ಲಿಯೇ ತೆಗೆದು ಕೊಳ್ಳಿರಿ ಬರೇ ಸ್ವದೇಶೀ ಎಂದು ಹೆಸರಿಟ್ಟುಕೊಂಡ ಅನೇಕ ಕಂಪನಿಗಳಲ್ಲಿ ಹೋಗಿ ಮೋಸ ಹೋಗಬೇಡಿರಿ. ನಮ್ಮಲ್ಲಿ ಎಲ್ಲ ತರದ ಸ್ಟೇಶನರೀ ಸಾಮಾನುಗಳೂ ಕಾಜಿನ ಬಳಿಗಳೂ, ಸುದರ್ಶನಚಕ್ರದಿಂದ ತೆಗೆದನೂಲಿನ ಬಟ್ಟೆಗಳೂ, ಎಲ್ಲ ದೇಶ ಭಕ್ತರ ಭಾವಪಟಗಳೂ ದೊರೆಯುತ್ತವೆ ಇದಲ್ಲದೆ ಕನ್ನಡ, ಮರಾಠಿ, ಇಂಗ್ಲೀಷ, ಭಾಷೆಗಳಲ್ಲಿಯ ದೈನಿಕ ಮತ್ತು ವಾರಪತ್ರಗಳು ಮಾರಲಿಕ್ಕೆ ಸಿಗುತ್ತವೆ

ಮಾಲಕ; ಶ್ರೀನಿವಾಸರಾವ ವೀರಲಕೇರಿ } ಲೋಕಮಾನ್ಯ ಸ್ಟೋರ್ಸ ಬಾಗಲಕೋಟ

---

## For Sale! For Sale!!

**ಮಾರತಕ್ಕದ್ದದೆ!**

ಫುಲ್‌ಸ್ಕ್ಯಾಪ ಆಕಾರದ ಸಿಲೆಂಡರ ಟ್ರೇಡಲ್, ಸುಪರ ರಾಯಲ್ ಹ್ಯಾಂಡಪ್ರೆಸ್ ಮತ್ತು, ಪ್ರೂಫಪ್ರೆಸ್‌ಗಳನ್ನು ನಾವು ಮಾರತಕ್ಕವರಿದ್ದೇವೆ. ಮೂರು ಯಂತ್ರಗಳು ಒಳ್ಳೇ ಸ್ಥಿತಿಯಲ್ಲಿದ್ದು ಕೆಲಸವನ್ನು ಉತ್ಕೃಷ್ಟರೀತಿಯಿಂದ ಕೊಡುತ್ತವೆ. ಬೇಕಾದವರು ನಮಗೆ ಸಮಕ್ಷಮ ಭೆಟ್ಟಿಯಾಗಿ, ಮಶಿನಗಳನ್ನು ನೋಡಿಕೊಳ್ಳಬಹುದು. ಏನಾದರೂ ಮಾಹಿತಿ ಬೇಕಾದಲ್ಲಿ ಪತ್ರವ್ಯವಹಾರವನ್ನು ಮಾಡಬಹುದು.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ

# ಬೇಕಾಗಿದ್ದಾರೆ

## ಕಂಪೋಜಿಟರರೂ

### ಮಶಿನ್ ಟ್ರೇಡಲ್‌ಗಳಮೇಲೆ ಕೆಲಸಮಾಡುವ ಎಲ್ಲ ತರದ ಪ್ರೆಸ್‌ಮನ್‌ರ.

ಯೋಗ್ಯತೆಯಂತೆ ಸಂಬಳವು ದೊರೆಯುವದು ಇಚ್ಛೆ ಇದ್ದವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟ

ಸ್ವದೇಶಿ ಕಾರಖಾನೆಗಳಿಗೆ ಉತ್ತೇಜನ ಕೊಡಿರಿ'

ಎಜಂಟರು) **ಅತ್ಯುತ್ತಮ** ( ಬೇಕು

ಮಶಿ ಗುಳಿಗೆಗಳು ಮತ್ತು ಚೀಟಿಗಳು

| | | |
|---|---|---|
| ೧ ಗ್ರೋಸ ಗುಳಿಗೆಗಳಿಗೆ | ೦—೮—೦ | ಟ. ಖ. |
| ೧೦೦ ಚೀಟಿಗಳಿಗೆ | ೦—೧೪—೦ | |
| ೪೦ ಔಂಸ ಮಶಿ ಭುಡಿಕೆಗೆ | ೦—೪—೦ | ಬೇರೆ. |

ವ್ಯಾಪಾರಸ್ಥರಿಗೂ, ಏಜಂಟರಿಗೂ ವಿಶೇಷ ಕಮಿಶನ್

ವಿಳಾಸ—ಕರ್ನಾಟಕ ಇಂಕ ಕಂಪನಿ, ಬಾಗಲಕೋಟ.

---

# ತಾಲೂಕಾ ಕಾಂಗ್ರೆಸ್ ಕಮಿಟಿ

## ಖಾದೀ ಭಾಂಡಾರ

ಬಾಗಲಕೋಟೆ.

ನಮ್ಮಲ್ಲಿ ಶುದ್ಧ ಕೈನೂಲಿನ ಮತ್ತು ಕೈಮಗ್ಗದ ಖಾದೀ ಬಟ್ಟೆಗಳು ದೊರೆಯುತ್ತವೆ. ಧೋತರ, ಖಣ, ಸೀರಿ ಮುಂತಾದವುಗಳು ಕೂಡ ಯೋಗ್ಯ ಬೆಲೆಗೆ ಸಿಗುತ್ತವೆ.

ವ್ಯವಸ್ಥಾಪಕ.

## ಇಂಡಿಯಾ ಪ್ರಾವ್ಹಿಡಂಟ ಕಂ. ಲಿ. ಕಲಕತ್ತ.

ಮಧ್ಯಮ-ಸ್ಥಿತಿಯ ಕುಟುಂಬದಾರರಿಗೆ ಈ ರಿಣ ಕಾಲದಲ್ಲಿ ಕುಟುಂಬ ಸಾಗಿಸಿಕೊಂಡು ಹಣ ಕೂಡಿಸುವದು ಬಿಗಿಯಾಗಿರುವದು ಆದ್ದರಿಂದ ಈ ಕಂಪನಿಯಲ್ಲಿ ಸ್ತ್ರೀ ಪುರುಷರು ವಿಮೆ ಇಳಿಸಿ ತಿಂಗಳೊಂದಕ್ಕೆ ಒಂದೇ ರೂಪಾಯಿಯನು ತುಂಬುತ್ತಾ ಹೋಗಿ ೧೪ ವರ್ಷದಲ್ಲಿ ೫೦೦ ರೂಪಾಯಿವರೆಗೆ ದೊರಕಿಸಬಹುದು.

ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳಿರಿ

V. J. PARVATIKER

General Agent, BAGALKOT

---

ಶ್ರೀಬನಶಂಕರೀ ಪ್ರಸನ್.

## ಹೊಸದಾಗಿ ತಯಾರಿಸಿದೆ.

ನಾವು ಇದೇ ಎಷ್ಟು ಜನ ಡಾಕ್ಟರರಿಂದ ಉತ್ತಮವೆಂದು ಠರಾಯಿಸಿ ಶಾಸ್ತ್ರೋಕ್ತ ಬ್ರಾಹ್ಮಿ ಸಾಯರಪ್ ಬ್ರಾಹ್ಮಿತೈಲ ಪಾಚಕವಟಿಸಾಯರ ವಾಸಕ ಮುಂತಾದ ಆಯುರ್ವೇದಿಕ ಔಷಧಗಳನ್ನು ತಯಾರಿಸಿದ್ದೇವೆ ಬೆಲೆ ತೀರ ಸುಲಭ . ನಮ್ಮಲ್ಲಿ ಎಲ್ಲ ತರದ ಸ್ವದೇಶಿ ಸ್ಟೇಶನರಿ ಸಾಮಾನ ಕಕ್ಕಟ್ಟಿಗೆ ಖಾದಿ ಯೋಗ್ಯ ಕ್ರಯಕ್ಕೆ ದೊರೆಯುತ್ತವೆ.

Managing Agents
Nargundkar Bros.
BAGALKOT. } ಭಾರತ ವಸ್ತುಸಂಗ್ರಹಾಲಯ — ಬಾಗಲಕೋಟೆ.

## ಶುದ್ಧ ಸ್ವದೇಸಿ ಬಟ್ಟೆಗಳು.

ಸ್ವದೇಸಿ ಹ್ಯಾಂಡಲೂಮ ಟ್ರೇಡ ಡಯಿಂಗ ಫ್ಯಾಕ್ಟರಿ

ಧಾರವಾಡ.

ನಮ್ಮಲ್ಲಿ ತಯಾರಾಗುವ ಗೋಲು ಉಣ್ಣೆಕಿಸ್ತ್ರ ವಾದಿ ಆರವಿ(ಸ ... ದ)ನೂಲು ಅಂಚುಸಹಿರಿ ದಿಯಾರಾಗ ಇವು. ಒಣ ಪಕ್ಕಾ ಕಟ್ಟೆ ... ತೆಗೆದುಕೊಳ್ಳುತ್ತೇವೆ. ಪರಸ್ಥಳದವರ ಸೋಗಿಗಾಗಿ ಒಂದು ಕ ... ರವ ಸಹ ವ್ಹಿ. ಪಿ. ಯಿಂದ ಕಳಿಸಿಕೊಡುವವು ಹೆಚ್ಚಿನ ಮಾಹಿ ... ಕ್ಷಮ ಅಥವಾ ಪತ್ರದ್ವಾರಿಂದ ತಿಳಕೊಳ್ಳಬೇಕು.

ಮಾಲಕ ಸೋಮಪ್ಪಾ ವಿರಬಸಪ್ಪಾ ...

ಧಾರವಾಡ

## ಇಮಿಟೇಶನ್ ವಜ್ರದ ಉಂಗುರುಗಳು,

ಈ ಉಂಗುರಗಳು ವಿಲಾಯತಿಯಲ್ಲಿ ತಯಾರಿಸಿದ್ದು; ಅತ್ಯುತ್ತಮವಾದ ವಜ್ರದ ಕಲ್ಲುಗಳನ್ನು ಇಟ್ಟು ಸೀಮೆ ಬಂಗಾರದಿಂದ ತಯಾರಿಸಿ ಮೇಲುಗಡೆ ಅಪರಂಜಿ ಬಂಗಾರದ ಗಿಲೀಟುಮಾಡಿದೆ. ನೋಡಲು ಬಹು ಲಕ್ಷಣವಾಗಿ ಕಾಣುವವು. ಇದು ಶ್ರೀಮಂತರಿಗೂ ಗರೀಬರಿಗೂ ಲಾಯಖಾದದ್ದು.

ಕ್ರಯ ೧ಕ್ಕೆ ರೂ. ೩-೦-೦. ಕ್ರಯ ೩ಕ್ಕೆ ರೂ. ೫-೮-೦

ವಿಳಾಸ ಪಿ ಎ. ಎಸ್. ಪಾಣಿ ಕಂಪನಿ ಸಾಹುಕಾರಪೇಟ ಮದ್ರಾಸ

**ಈ ತಿಂಗಳ ಕೊನೇ ವರೆಗೂ ಅರ್ಧ ಕ್ರಯ.**

ಇದರ ಕ್ರಯ ೨-೦-೦. ಈಗಿನ ಕ್ರಯ ೧-೦-೦.

**ಆಶ್ಚರ್ಯ. ಪಕೆಟ್ ಸಿನಾಸ್ಕೋಪ್ ಯಂತ್ರ.**

ಈ ಸಿನಾಸ ಕೋಪ ಯಂತ್ರಗಳು ಜರ್ಮನ್ ದೇಶದಿಂದ ತರಿಸಿ ಈಗಲೇ ನಮಗೆ ಹೊಸದಾಗಿ ಬಂದಿರುವವು. ಈ ಯಂತ್ರ ಅಮೇರಿಕನ್ ಬಯಾಸ್ಕೋಪ ನಾಟಕಶಾಲೆಗಳಲ್ಲಿ ಅತಿ ಚಮತ್ಕಾರವಾಗಿ ಆಕ್ಟ ಮಾಡುತ್ತಿರುವ ವಿಜೀಟಾರ್ರಿಸ್, ಪರಲ್‌ವೈಟ್‌ಪ್ರಿಡ್ಡೊ ಡೇವ್ಸನ್‌ಚಾರ್ಲಿನ ಚಾಪ್ಲಿನ್ ಮುಂತಾದವರ ನಿಜಸ್ವರೂಪವಾದ ಪೋಟೋಗ್ರಾಫಗಳು ಈ ಯಂತ್ರದಲ್ಲಿ ವರ್ತಿಸುವವರ ಹಾಗೆಯೇ ಬಯಾಸಕೋಪಿನಲ್ಲಿ ಕಾಣುವಯು. ಈ ಅದ್ಭುತವಾದ ಯಂತ್ರಗಳು ನಮ್ಮಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಿರಿ- ಕ್ರಯ- ೩೦ ಪೋಟೊ ಫಿಲಿಂಗಳು ಸೇರಿ ಯಂತ್ರ ೧ ಕ್ಕೆ ರೂ ೧-೦-೦,

**ರಾಸರಾಜ ಅಂಡ ಕಂಪನಿ.** ೩ ಯರಳಪ್ಪನ ಬೀದಿ ಮದ್ರಾಸ್.

**ಟಿಕ್ ಟಿಕ್ ಎಂಬ ಶಬ್ದವನ್ನು ಕೊಟ್ಟ ಮಾತ್ರಕ್ಕೆ ಗಡಿಯಾರಗಳೇ.**

ಚಕ್ರಗಳಲ್ಲಿಯೂ ಗಂಟೆ ತೋರಿಪ ನಂಬರುಗಳ ಮೇಲೆಯೂ ಕೆಂಪು ಕಲ್ಲ ಕೆತ್ತಲ್ಪಟ್ಟವೆ ಎಂದು ಇದನ್ನು ತರಿಸುವರಿಗೆ ೧೦-೧೫ ಬಹುಮಾನಗಳೊಡ ೫-೬ ವರುಷಗಳು ಗ್ಯಾರಂಟಿ ಸಹಿತ ೩-೪ ರೂಪಾಯಿಗಳಿಗೆ ಕೊಡುವೆವೆಂದು ಪ್ರಚಾರವಾಗುವ ಪ್ರಕಟನೆಗಳನ್ನು ನೋಡಿ ಬೆರಗಾಗಿ ನಿಮ್ಮ ಹಣವನ್ನು ಕಳಕೊಳ್ಳಬೇಡರಿ ಈ ನಮ್ಮ ಜಂಟಲ್‌ಮೆನ್ ಲೀವರ್ ಪಾಕೆಟ್ ವಾಚ ಬಹು ಉತ್ತಮವಾದ ಮೂವ್‌ಮೆಂಟ್ಸಗಳಿಂದ ತಯರಿಸಿದೆ ಗಾಳಿಯೂ ಧೂಳೂ ಸೇರದಂತೆ ಗ್ಲಾಸ್‌ಡೋಮು ಇರುವ- ಸರಿಯಾದ ಕಾಲವನ್ನು ತೋರಿಸುವದು ಬೇಗನೆ ಅಥವಾ ನಿಧಾನವಾಗಿ ಹೋದರೆ ನಾವು ಸರಿಮಾಡಿಕೊಳ್ಳಬಹುದು. ನೋಟಕೆ ಗಂಭೀರವಾಗಿಯೂ ಸುಂದರವಾಗಿಯೂ ಇರುವದು. ಇದು ಇಂಗ್ಲೀಷ ನಮೂನೆಯುಳ್ಳದ್ದು- ಈ ಗಡಿಯಾರದಲ್ಲಿ ಯಾರೇ ಆಗಲಿ ಸುಲಭವಾಗಿ ಗಂಟೆ ನೋಡಬಹುದು. ಅಷ್ಟರಿಂದ ಬಹುವಾಗಿ ವರ್ಣನ ಮಾಡುವದೇತಕ್ಕೆ? ಒಂದನ್ನು ತರಿಸಿನೋಡಿರಿ ತಿಳಿಯುವದು. ೪ ವರುಷಗಳ ಗ್ಯಾರಂಟಿ ಸಹಿತ ಕ್ರಯ ೪-೮-೦

ಮ್ಯಾನೇಜರ,— ಐಶ್ವರ್ಯ ಲಕ್ಷ್ಮಿ ಅಂಡ ಕೊ;

ಪೋ ಬಾ ನಂಬರ ೨೦೫ ಮದ್ರಾಸು

## ಮದನಕಾಮೇಶ್ವರೀ ಮಾತ್ರಾ

**ಕ್ರಯ** ೨ ರು ॥ ಅಂಚೆ ವೆಚ್ಚ ಬೇರೆ

ಉತ್ತಮ ಶಕ್ತಿವರ್ಧಕ ಔಷಧ. ಗುಣಬಾರದಿದ್ದರೆ ಹಣ ಪರತ. ನಿಮ್ಮ ಅನುಭವ ತೆಗೆದುಕೊಳ್ಳಿರಿ; ಕ್ಯಾಟಲಾಗು ತರಿಸಿ ನೋಡಿರಿ.

ಜಂಬುನಾಥ ಕಂಪನಿ **ಬಾಗಲಕೋಟೆ,**

॥ಶ್ರೀ॥

## ಸರಸ್ವತೀ ಭಾರತಭಕ್ತ ಗ್ರಂಥಮಾಲೆ

## ಹುಬ್ಬಳ್ಳಿ.

ತ್ವರೆಮಾಡಿರಿ! ರಾಷ್ಟ್ರ ಜೀವನದ ಕಾಲವು !! ಜಾಗ್ರತರಾಗಿ ಸಂಪ್ರತಕ್ಕೆ ಮಾಸಿಕಕ್ಕೆ ತಿಮ್ಮಪ್ಪ, ತಮ್ಮ ಆಶ್ರಯ ದೊರೆತರೆ ಮಾಸಿಕವಾಗುವದು.

ಸಾಧು, ಸತ್ಪುರುಷ ಹಾಗೂ ಸ್ವದೇಶಾಭಿಮಾನಿಗಳ ಅತ್ಯುಜ್ವಲ ಸ್ವರಿತ್ರ ಪುಷ್ಟ ಪ್ರಬಂಧಗಳು ಪ್ರಥಮ ಷಾಣ್ಮಾಸಿಕ ಕುಸುಮಗಳು (ಪ್ರಕಟವಾಗಿರುವವು)

೧ ಲೋಕಮಾನ್ಯ ಟಿಳಕ ೨ ಸರೋಜಿನಿ ದೇವಿ ೩ ಮಹಾತ್ಮಾ ಗಾಂಧಿ ೪ ಲೋಕನಾಯಕ ಲಾಲಾಜಿ. ೫ ದೇಶಬಂಧು ದಾಸ.

ದ್ವಿತೀಯ ಷಾಣ್ಮಾಸಿಕ ಕುಸುಮಗಳು, (ಅಚ್ಚಿನಲ್ಲಿ ಅವೆ. ಜಾನೇವಾರಿಯಲ್ಲಿ ಪ್ರಸಿದ್ಧವಾಗುವವು.

೬ ರವೀಂದ್ರನಾಥ ಠಾಕುರ, ೭ ಪಂಡಿತ ಮಾಲವೀಯ ೮ ಮೋತೀಲಾಲ ನೆಹರು. ೯ ಸುಭಾನ್ ತತ್ವವೇತ್ತಾ ಅರವಿಂದಘೋಷ ೧೦ ವೀರ ಅಲ್ಲಿ ಬಂಧು ಪ್ರಬಂಧಗಳಿಗೆ ಅಂದವಾದ ಒಣ್ಣದ ಹೊದಿಕೆ ಚರಿತ್ರನಾಯಕ ಸುಂದರವಾದ ಭಾವಪಟ, ಕ್ರೌನ ಸೈಜ ೫೦ ಪುಟ ಅಜಮಾಸು

ಜಾಹೀರಾತ ಕೊಡುವವರಿಗೆ ಬಲು ಸೌಕರ್ಯ, ದರವು ತೀರ ಸ್ವಲ್ಪ ವಾರ್ಷಿಕ ವರ್ಗಣಿ... ೨ ರೂ. ೮ ಆಣೆ ಮಾತ್ರ. [ಅಂಚೇ ವೆಚ್ಚ ಬೇರೆ

ಇನ್ನೂ ಹೆಚ್ಚಿಗೆ ವೃತ್ತಾಂತ ಬೇಕಾದರೆ ಕೆಳಗಿನ ವಿಳಾಸದವರಿಗೆ ಬರೆಯಿರಿ.

ಕೃಷ್ಣ ಗುರು ಸಂಗಮ.

ಸಂಪಾದಕ, ಸ, ಭಾ, ಭ. ಗ್ರಂಥಮಾಲೆ,

ಹುಬ್ಬಳ್ಳಿ.

## ಬೇಕಾಗಿವೆ! ಬೇಕಾಗಿವೆ!!

ಅಟಿಂಗ ಮಶಿನ್, ಪ್ಲೋರಟೆಟಿಂಗ ಮಶಿನ್ ಪಿಂಗಪ್ರೆಸ್ ಮೊದಲಾದ ಮುದ್ರಾಮಂದಿರಕ್ಕೆ ಬೇಕಾಗುವ ಸಾಮಾನುಗಳು ಬೇಕಾಗಿವೆ, ಈ ಸಾಮಾನುಗಳು ಒಳ್ಳೇ ಸ್ಥಿತಿಯ ಕೆಲಸವನ್ನು ಕೊಡಬೇಕು, ಯಾರಾದರೂ ಈ ಸಾಮಾನಗಳನ್ನು ಮಾರತಕ್ಕವರಿದ್ದರೆ ಆ ಸಾಮಾನಗಳ ಸಿದ್ಧವಾದ ಕಂಪನಿಯ ಹೆಸರು, ಆಕಾರ ವಯಸ್ಸು ಮತ್ತು ಈಗಿನ ಸ್ಥಿತಿಮೊದಲಾದ ಸಂಗತಿಗಳನ್ನು ನಮಗೆ ತಿಳಿಸಬೇಕು

ವ್ಯವಸ್ಥಾಪಕ

ವಿದ್ಯಾ.. ಮುದ್ರಾಮಂದಿರ ಬಾಗಲಕೋಟೆ

# SONDUR & JORAPUR
## Ginning Factory Bagalkot.

Dealers in second hand Oil engines, Oil engine repairers, Grinding stones suppliers and General Contractors.

ಬೇರೆಬೇರೆ ತರದ ಸೆಕಂಡಹಾಂಡ ಆಯಿಲ ಎಂಜಿನಗಳನ್ನು ನಾವು ದೊರಕಿಸಿ ಕೊಡುತ್ತೇವೆ. ಮತ್ತು ಆಯಿಲ ಇಂಜನಗಳನ್ನು ಸೋಯೀದರದಿಂದ ದುರಸ್ತ ಮಾಡಿ ಕೊಡುತ್ತೇವೆ ಇದಲ್ಲದೇ ಹಿಟ್ಟಿನ ಗಿರಣಿಗಳಿಗೆ ಬೇಕಾಗುವ ಬೀಸುವ ಕಲ್ಲುಗಳನ್ನೂ ನಾವು ಪೂರೈಸಿ ಕೊಡುವೆವು, ಸೊಂಡೂರ ಮತ್ತೂ ಜೋರಾಪೂರ

ಜಿನಿಂಗ ಫ್ಯಾಕ್ಟರಿ ಬಾಗಲಕೋಟೆ



# ಡಾ. ಇಂಗಳೀಕರ

ಎಲ್. ಸೀ. ಎಚ್. ಸೀ.

ಇವರ

# ಬಾಲಾಮೃತವು.

ಸೋಲ ಏಜಂಟ:— ದಿ ಕರ್ನಾಟಕ ಲಕ್ಷ್ಮಿ ಏಜನ್ಸಿ
ಮಿಲ್‌ರೋಡ ಗದಗ

Sole Agent – The Karnatak Laxmi Agency
mill road
GADAG

ಬೆಲೆ ಬಾಟ್ಲಿ ೧ಕ್ಕೆ ೧೨ ಆಣೆ ಅಂಚೆಯಿಂದ ಬೇರೆ

ಡಾ. ಇಂಗಳೀಕರ, L. C. H. C. ಬಾಗಲಕೋಟೆ



## ದಿ. ಕರ್ನಾಟಕ ಹೋಮಿಯೋ ಫಾರ್ಮಸೀ
### ಬಾಗಲಕೋಟೆ

ಕರ್ನಾಟಕದಲ್ಲಿ ಪೂರ್ಣ ವಿಶ್ವಸನೀಯವಾದ ಹೋಮಿಯೋಪಾಥಿಕ್ ಔಷಧಗಳನ್ನು ಪೂರೈಸುವ ಫಾರ್ಮಸಿಯು ಇದೇ ಮೊದಲನೇಯದು ಈ ಔಷಧಗಳನ್ನು ಅಮೇರಿಕೆಯಿಂದಲೇ ತರಿಸುತ್ತಿದ್ದು; ಅವು ಪದವೀಧರರಾದ ಡಾಕ್ಟರರ ಪ್ರತ್ಯಕ್ಷದಲ್ಲಿ ತಯಾರಾಗುತ್ತಿರುವದರಿಂದ ಅವುಗಳಬಗ್ಗೆ ಯಾರಿಗೂ ಸಂಶಯ ತೆಗೆದುಕೊಳ್ಳಲಿಕ್ಕೆ ಮಾರ್ಗವಿಲ್ಲ ಔಷಧಗಳನ್ನು ತರಿಸಿ ಅನುಭವವನ್ನು ತೆಗೆದುಕೊಳ್ಳಬೇಕು

ವ್ಯವಸ್ಥಾಪಕ



# ಮಾರ್ಕಾಪುರ ಸ್ವದೇಶೀ ಪಾಟಿಗಳೂ ಬಾಕಿನ ತುದಿಗಳೂ

ನಾವು ಕೃಷ್ಣಾಸ್ಲೇಟ ವರ್ಕ್ಸ ಮಾರ್ಕಾಪುರ ಇವರಿಂದ ಇಡೀ ವಿಜಾಪೂರ ಜಿಲ್ಹೆಗೆ ಮುಖ್ಯಏಜಂಟರಾಗಿ ನಿಯಮಿಸಲ್ಪಟ್ಟಿದ್ದೇವೆ ನಮ್ಮ ಹತ್ತರ ಉತ್ತಮ ತರದ ಸಣ್ಣ ದೊಡ್ಡ ಪಾಟಿಗಳು ಬಾಳಿಕೆಯಲ್ಲಿ ವಿದೇಶೀ ಪಾಟಿಗಳಿಗಿಂತಲೂ ಬಾಳಿಕೆಯಾದದ್ದು ಅಗದೀ ಸೋಯಿ ದರದಿಂದ ದೊರೆಯುವವು ಒಮ್ಮೆ ಅನುಭವ ತೆಗೆದು ಕೊಂಡಲ್ಲಿ ನಿಮಗೆ ಖಾತ್ರಿಯಾಗುವದು ೪ [illegible] ಪಾಟಿಗಳುಳ್ಳ ಒಂದು ಪೆಟ್ಟಿಗೆಗೆ ೧೩-೮ (ರೂಪಾಯಿ) ಮಾತ್ರ. ಏಜಂಟರು ಬೇಕಾಗಿವೆ

ವ್ಹಿ ಜೇ ಪರವತಿಕರ
ಸೋಲ ಏಜಂಟ ಡಿಸ್ಟ್ರಿಕ್ಟ ವಿಜಾಪೂರ
ಬಾಗಲಕೋಟೆ.



# Shree Mahalaxmi Stores,

BAGALKOT.

Wholesale Dealers in papers, swadeshi slates, and Ogale's glass Wares

ನಮ್ಮಲ್ಲಿ ಎಲ್ಲ ತರದ ಕಾಗದಗಳೂ, ಸ್ವದೇಶಿ ಪಾಟಿಗಳೂ ಮೈಸೂರಿನ ಸಾಬೂನುಗಳೂ ಮತ್ತು ಸುಗಂಧ ದ್ರವ್ಯಗಳೂ, ಬೇರೆ ಬೇರೆ ತರದ ಬ ದಿ ಪಸ್ತ [illegible] ಮತ್ತು ಇತರ ಸ್ವದೇಶೀ ಸಾಮಾನುಗಳ ಯಾವಲಿಕ್ಕೆ ದೊರೆಯುತ್ತವೆ

Proprietors—
Parvatikar & Katt[illegible] Bros,
BAGALKOT

ಶ್ರೀಮಹಾಲಕ್ಷ್ಮೀ
ಸ್ಟೋರ್ಸ
ಬಾಗಲಕೋಟೆ.


ಈ ಪತ್ರವನ್ನು ಬಾಗಲಕೋಟೆ ವೆಂಕಟಪೇಟೆಯಲ್ಲಿ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಶ್ರೀನಿವಾಸ ರಾಜೇರಾವ ಮಂಗಳವೇಢೆ (ಸಂಪಾದಕ) ಇವರು ಮುದ್ರಿಸಿದರು ಮತ್ತು ಅಲ್ಲಿಯೇ ತಮ್ಮ ಕಾರ್ಯಾಲಯ ಬಂದಾಚಾರ್ಯ ಪುರೋಹಿತ ಇವರು ಪ್ರಸಿದ್ಧಿಸಿದರು.

# FLASH NO 1